ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೧೮

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೨೦೧
ವಿಚಾರ ಸಾಹಿತ್ಯಮಾಲೆ - ೯೯

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

## ಮತ್ತು

# ಭಾಷಣಗಳು

## ಸಂಪುಟ ೧೮

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೮

## ಡಾ. ಬಾಬಾಸಾಹೇಬ್ ಅಂಬೇಡ್ಕರ್
## ಅವರ ಪತ್ರಿಕಾ ಬರೆಹಗಳು
## ಲೇಖನಗಳು, ಸಂದೇಶಗಳು, ಮುನ್ನುಡಿಗಳು


ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 18** –– Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; First Edition : 2015; Pp. xxvi+ 787; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೊದಲ ಮುದ್ರಣ : ೨೦೧೫
ಪುಟಗಳು : xxvi + ೭೮೭
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

# ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

# ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೪೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಮೊದಲ ಮಾತು

ಕರ್ನಾಟಕ ಸರಕಾರವು ಭಾರತರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಎಲ್ಲ ಬರಹ ಮತ್ತು ಭಾಷಣಗಳ ಸಂಕಲನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಆರಂಭಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಮೊದಲ ಹಂತದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತನ್ನ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ನಿರ್ವಹಿಸುತ್ತಿತ್ತು. ಬಳಿಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಕಾರ್ಯನಿರ್ವಹಿಸಲು ಮೊದಲು ಮಾಡಿದಾಗ ಅದರ ಅನುವಾದ ಮತ್ತು ಪ್ರಕಟಣೆಯ ಹೊಣೆಯನ್ನು ವಹಿಸಿತು. ಪ್ರಾಧಿಕಾರವು ಮೊದಲು ಪ್ರಕಟವಾಗಿದ್ದ ಸಂಪುಟಗಳ ಪರಿಷ್ಕರಣ ಮತ್ತು ಉಳಿದ ಸಂಪುಟಗಳ ಅನುವಾದ ಇದೆಲ್ಲ ಕೆಲಸವನ್ನು ಈಗ ಪೂರೈಸಿದೆ. ಇಪ್ಪತ್ತು ಸಂಪುಟಗಳಲ್ಲಿ ಹರಡಿರುವ ಈ ಬರಹಗಳೀಗ ಕನ್ನಡ ಓದುಗರ ಕೈಸೇರಿವೆ. ಒಂದು ಸಂಪುಟ (೧೮) ಬಾಬಾಸಾಹೇಬ್ ಅವರ ಮರಾಠಿ ಬರಹ ಮತ್ತು ಭಾಷಣಗಳ ಸಂಕಲನವಾಗಿದೆ. ಮರಾಠಿಯಿಂದ ನೇರವಾಗಿ ಕನ್ನಡಕ್ಕೆ ಅನುವಾದಗೊಂಡಿದೆ. ಈಗಾಗಲೇ ಹೊರಬಂದಿರುವ ಸಂಪುಟಗಳು ಅಪಾರವಾದ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಮೊದಲ ಹದಿನೈದು ಸಂಪುಟಗಳು ಮರುಮುದ್ರಣಗೊಳ್ಳುತ್ತಿವೆ. ಈ ಸಂಪುಟವು ಮೊದಲ ಬಾರಿಗೆ ಹೊರಬರುತ್ತಿದೆ. ಈ ಸಂಪುಟದ ಬರಹಗಳನ್ನು ಅನುವಾದಿಸಿಕೊಟ್ಟ ಎಲ್ಲರಿಗೂ ನಮ್ಮ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಯೋಜನೆಗೆ ಬೇಕಾದ ಅನುದಾನ, ಆಡಳಿತಾತ್ಮಕ ಒತ್ತಾಸೆಯನ್ನು ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀಮತಿ ಉಮಾಶ್ರೀ ಅವರಿಗೆ, ಸರ್ಕಾರದ ಕಾರ್ಯದರ್ಶಿಗಳಾದ ಡಾ.ಎನ್.ಎಸ್. ಚನ್ನಪ್ಪಗೌಡ ಅವರಿಗೆ, ನಿರ್ದೇಶಕರಾದ ಶ್ರೀ ಕೆ.ವಿ. ದಯಾನಂದ್ ಅವರಿಗೆ ಕೃತಜ್ಞತೆಗಳು. ಪ್ರಾಧಿಕಾರದ ಸಹೋದ್ಯೋಗಿಗಳು ಈ ಕೆಲಸದಲ್ಲಿ ಪೂರ್ಣವಾಗಿ ಸಹಕರಿಸಿದ್ದಾರೆ. ಸಂಪಾದನ ಸಮಿತಿಯ ಸದಸ್ಯರು ಉದ್ದಕ್ಕೂ ಸೂಕ್ತ ಸಲಹೆಗಳನ್ನು ನೀಡುತ್ತ ಈ ಕೆಲಸ ಸರಿದಿಕ್ಕಿನಲ್ಲಿ ನಡೆಯುವಂತೆ ನೋಡಿಕೊಂಡಿದ್ದಾರೆ. ಎಲ್ಲರಿಗೂ ಪ್ರಾಧಿಕಾರದ ಪರವಾಗಿ ನಮಸ್ಕಾರಗಳು.

ಮೆ. ರಾಜಾ ಪ್ರಿಂಟರ್ಸ್ ಅವರು ಈ ಸಂಪುಟಗಳ ಅಚ್ಚು ಕೆಲಸವನ್ನು ಮುಗಿಸಿಕೊಟ್ಟಿದ್ದಾರೆ. ಸಂಪುಟಗಳು ಚಂದವಾಗಿ ಕಾಣಲು ಅವರೆಲ್ಲರ ಶ್ರಮವೂ ಕಾರಣವಾಗಿದೆ. ಅವರಿಗೆ ವಂದನೆಗಳು.

**ಕೆ. ವಿ. ನಾರಾಯಣ**

ಅಧ್ಯಕ್ಷ

ಸಂಪಾದನ ಸಮಿತಿ

# ಸಂಪಾದಕೀಯ

ಮಹಾರಾಷ್ಟ್ರ ಸರಕಾರವು ಡಾ. ಬಾಬಾಸಾಹೇಬ ಅಂಬೇಡ್ಕರ್ ಚರಿತ್ರ ಸಾಧನಗಳ ಪ್ರಕಾಶನ ಸಮಿತಿಯನ್ನು ಸ್ಥಾಪಿಸಿತು. ಅದರ ಮೂಲಕ ಈವರೆವಿಗೆ ಪ್ರಕಟವಾಗಿರುವ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಲೇಖನಗಳು ಮತ್ತು ಭಾಷಣಗಳು ಎಂಬ ಈ ಮಾಲಿಕೆಯಲ್ಲಿನ ಹದಿನೆಂಟನೆಯ ಸಂಪುಟವನ್ನು ಓದುಗರ ಕೈಗೆ ಕೊಡುತ್ತಿರುವುದಕ್ಕೆ ಆಗುತ್ತಿರುವ ಆನಂದವು ಅವರ್ಣನೀಯ. ಮಾತ್ರವಲ್ಲ ಜೀವನದ ಕೃತಾರ್ಥತೆ ಮತ್ತು ಸಮಾಧಾನಕರ ಸಂಗತಿಯೂ ಹೌದು.

ಪ್ರಸ್ತುತ ಸಂಪುಟದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ತಮ್ಮ ಜೀವಿತಾವಧಿಯಲ್ಲಿ ನೀಡಿದ ಭಾಷಣಗಳಲ್ಲಿನ ಅಂತರ್ಭಾವವು ಅಡಗಿದೆ. ಅವರು ಈ ದೇಶದಲ್ಲಿ ಮಾಡಿದ ಮಹಾನ್ ಕ್ರಾಂತಿಯಲ್ಲಿ ಅವರ ಭಾಷಣಗಳ ಯೋಗದಾನವು ಅಭೂತಪೂರ್ವವಾದುದು. ಈ ಮಾಧ್ಯಮದಿಂದ ಲಕ್ಷಾಂತರ ಜನರ ಸಂಬಂಧವು ಅವರಿಗೆ ಬಂದಿತು. 'ಗುಲಾಮನಿಗೆ ಅವನ ಗುಲಾಮಗಿರಿಯ ಬಗೆಗೆ ಅರಿವನ್ನು ತಂದುಕೊಡಿ. ಅನಂತರ ಅವನು ಅದರ ವಿರುದ್ಧ ಬಂಡಾಯವೇಳುತ್ತಾನೆ' ಎಂಬುದಾಗಿ ಅವರು ಉದ್ಧೃತಗೊಳಿಸಿದ ಸುಪ್ರಸಿದ್ಧ ಮಾತಿನಂತೆ ಭಾರತದಲ್ಲಿ ಗುಲಾಮಗಿರಿಯಂತಹ ಸಂಕೋಲೆಯಲ್ಲಿ ಸಿಲುಕಿಕೊಂಡಿದ್ದಂತಹ ದಲಿತರಿಗೆ, ಯಾರು ಕರ್ಮವಿಪಾಕದಂತಹ ಸಿದ್ಧಾಂತಕ್ಕೆ ಮಾನ್ಯತೆ ನೀಡಿರುವರೋ ಅವರಿಗೆ, ಸ್ವತಃ ತಮ್ಮ ಅದೃಷ್ಟವನ್ನೇ ಹಳಿದು ಕೊಳ್ಳುತ್ತಾ ಗುಲಾಮಗಿರಿಯನ್ನು ನಿರಂತರವಾಗಿ ಅನುಭವಿಸುತ್ತಾ ಬಂದಿದ್ದರೋ ಅಂಥವರಿಗೆ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಅವರಿಗೆ ಅದರ ಅರಿವನ್ನು ಈ ಮೂಲಕವಾಗಿಯೇ ತಂದುಕೊಟ್ಟರು. ಅದರ ವಿರುದ್ಧ ಸಂಘರ್ಷ ಮಾಡುವಂತೆ ಈ ಮಾಧ್ಯಮದ ಮೂಲಕವೇ ಅವರಿಗೆ ಉದ್ಯುಕ್ತಗೊಳಿಸಿದರು. ತಮ್ಮ ಭಾಷಣಗಳ ಮಹತ್ವಪೂರ್ಣ ಯೋಗದಾನದ ಬಗೆಗೆ ಬಣ್ಣಿಸುತ್ತಾ ೧೪ನೆಯ ಜನವರಿ ೧೯೫೫ರಂದು ಮುಂಬಯಿಯಲ್ಲಿನ ಒಂದು ಭಾಷಣದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಹೀಗೆ ಹೇಳಿದ್ದಾರೆ. "ಬಹಳಷ್ಟು ದಿನಗಳಿಂದ ನಾನು ಒಂದು ನಿರ್ಣಯ ಮಾಡಿಕೊಂಡಿದ್ದೆನು, ಇನ್ನು ಮುಂದೆ ಯಾವುದೇ ಸಾರ್ವಜನಿಕ ಕಾರ್ಯಕ್ರಮದಲ್ಲಿ ನಾನು ಕೇವಲ ಭಾಷಣಕ್ಕಾಗಿ ಆಹ್ವಾನಿಸಿದರೆ ಯಾವತ್ತು ಹೋಗಬಾರದು. ಕಾರಣ ಭಾಷಣಗಳನ್ನು ಮಾಡುವುದು ನನಗೆ ಕಿರಿಕಿರಿಯನ್ನು ಉಂಟುಮಾಡುವ ಕೆಲಸವಾಗಿದೆ. ಇಂಥ ಭಾಷಣಗಳಲ್ಲಿಯೇ ನನ್ನ ಆಯುಷ್ಯವು ಸರಿದುಹೋಗಿದೆ. ಹಾಗೆಂದ ಮಾತ್ರಕ್ಕೆ ನನ್ನ ಭಾಷಣಗಳಿಂದ ಸಮಾಜದ ಮೇಲೆ ಯಾವುದೇ ಪರಿಣಾಮವೂ ಆಗಿಲ್ಲವೆಂದಲ್ಲ. ಇಂದು ನನ್ನ ಎದುರು ಅಸ್ಪೃಶ್ಯ ಸಮಾಜದಲ್ಲಿ ಎಂಥ ಜಾಗೃತಿಯು ಉಂಟಾಗಿರುವುದು ಕಾಣಿಸುತ್ತಿದೆ ಎಂದರೆ, ಅದೆಲ್ಲವೂ ನನ್ನ ಭಾಷಣಗಳ ಫಲವೇ ಎಂಬುದಾಗಿ ಭಾವಿಸುತ್ತೇನೆ. ಅದನ್ನು ತುಂಬು ಅಭಿಮಾನದಿಂದಲೇ ಹೇಳುವುದಕ್ಕೆ ಇಚ್ಛಿಸುತ್ತೇನೆ."

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ತಮ್ಮ ಆರಂಭದ ಹೊತ್ತಿನ ಸಾರ್ವಜನಿಕ ಜೀವನವನ್ನು ಕುರಿತು ಹೀಗೆ ಹೇಳಿದ್ದಾರೆ. "ಯಾವ ಕಾಲದಲ್ಲಿ ನಾನು ಚಳವಳಿಯನ್ನು ಆರಂಭಿಸಿದ್ದೆನೋ ಆಗ ನಾನು, ಅಧ್ಯಕ್ಷ ಮತ್ತು ಟೇಬಲ್ ಅಷ್ಟೇ ಇದ್ದವು. ಆದರೆ ಅದರಿಂದ ನಾನು ಯಾವತ್ತು ಹತಾಶನಾಗಲಿಲ್ಲ." ಯಾರ ಸಾರ್ವಜನಿಕ ಜೀವನವು ಈ ರೀತಿಯಲ್ಲಿ ಆರಂಭವಾಗಿತ್ತೋ, ಆ ಮನುಷ್ಯನೇ ಮುಂದೆ ಸ್ವತಃ ತನ್ನ

ಕರ್ತೃತ್ವದಿಂದ ಕಾಲಕ್ಕೆ ಒಂದು ಹೊಸ ದಿಶೆಯನ್ನು ತಂದುಕೊಟ್ಟನು. ಆತನ ಸಭೆಗೆ ಲಕ್ಷಾಂತರ ಸಂಖ್ಯೆಯಲ್ಲಿ ಜನರು ಬರಲಾರಂಭಿಸಿದರು. ಅದೂ ಕೂಡ ತುಂಬು ಉತ್ಸಾಹದಿಂದ, ದೂರ ದೂರದ ಊರುಗಳಿಂದ ಬರಿಗಾಲುಗಳಲ್ಲಿ ನಡೆದುಕೊಂಡು ಬರುತ್ತಿದ್ದರು. ಯಾರು ಆವರ ಭಾಷಣಗಳನ್ನು ಕೇಳಿದರೋ ಆ ದಿನವನ್ನು ಅವರು ತಮ್ಮ ಜೀವನದ ಅತ್ಯಮೂಲ್ಯ ದಿನವೆಂದು ಭಾವಿಸಿದರು. ಅದನ್ನು ಅವರು ತಮ್ಮ ಜೀವನದ ಕೊನೆಯ ಕ್ಷಣದವರೆಗೂ ನೆನಪಿನಲ್ಲಿ ಇಟ್ಟುಕೊಂಡಿದ್ದರು.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಅಮೋಘ ವಕ್ತೃತ್ವದಿಂದ ಈ ದೇಶದಲ್ಲಿ ಸಮೂಲ ನೆಲೆಯ ಕ್ರಾಂತಿಯು ಸಾಧ್ಯವಾಯಿತು. ಭಾರತೀಯ ಸಮಾಜದ ಯಾವುದೇ ಒಂದು ಅಂಗವೂ ಉಳಿದಿಲ್ಲ; ಅವರು ಇದನ್ನು ಸ್ಪರ್ಶಿಸಿಲ್ಲ ಎಂಬುದಾಗಿ ಹೇಳುವುದಕ್ಕೆ. ಇಂತಹ ಸರ್ವಕರ್ಷನಮಯ ಕ್ರಾಂತಿಗಾಗಿ ಅವರು ಎಂಥ ಆಯುಧಗಳನ್ನು ಬಳಸಿದ್ದರೋ ಅವುಗಳಲ್ಲಿ ಅವರ ಓಜಸ್ವಿ ವಾಣಿಯು ಅತ್ಯಂತ ಪ್ರಭಾವಶಾಲಿಯಾದ ಆಯುಧವಾಗಿತ್ತು. ಅದನ್ನು ಅವರು ಪೂರ್ಣೋಪಪೂರ್ಣವಾಗಿ ಬಳಸಿಕೊಂಡರು. ಹಾಗಾಗಿಯೇ ಭಾರತೀಯ ಸಮಾಜವು ಕ್ರಾಂತಿಸನ್ಮುಖಿಗೊಳ್ಳುವುದಕ್ಕೆ ಸಾಧ್ಯವಾಯಿತು ಎಂಬ ವಾಸ್ತವದ ವಿಚಾರವನ್ನು ಯಾರೂ ಅಲ್ಲಗಳೆಯಲಾರರು. ಎಲ್ಲಕ್ಕಿಂತಲೂ ಮಹತ್ವದ ಸಂಗತಿಯೆಂದರೆ, ದೇಶದಲ್ಲಿನ ಕೆಳಸ್ತರದಲ್ಲಿನ ಜನರ ಮನಸ್ಸಿನಲ್ಲಿ ಜ್ವಲಂತವಾಗಿ ಸ್ವಾಭಿಮಾನದ ಭಾವನೆಗಳನ್ನು ನಿರ್ಮಾಣ ಮಾಡಿ, ಜೀವನದ ಕಡೆಗೆ ನೋಡುತ್ತಿದ್ದಂತಹ ಅವರ ದೃಷ್ಟಿಕೋನವನ್ನೇ ಸಂಪೂರ್ಣವಾಗಿ ಬದಲಾಯಿಸಿದುದು. ಹಳೆಯ ಪರಂಪರಾಗತ ವಿಚಾರಗಳನ್ನು ಮತ್ತು ಆಚರಣೆಗಳನ್ನು ಲಕ್ಷಾಂತರ ಜನರು ಕ್ಷಣದಲ್ಲಿಯೇ ತ್ಯಜಿಸಿಬಿಟ್ಟರು. ಪ್ರತಿಯೊಬ್ಬ ಮನುಷ್ಯನು ಸ್ವತಃ ತನ್ನ ಜೀವನದ ಶಿಲ್ಪಕಾರನಾಗಿದ್ದಾನೆ. ನನ್ನ ಜೀವನವನ್ನು ನಾನು ಯಾರಿಗೋ ಒಪ್ಪಿಸುವುದಿಲ್ಲ. ಬದಲಾಗಿ ಅದನ್ನು ನಾನು ಸ್ವತಃ ರೂಪಿಸಿಕೊಳ್ಳುತ್ತೇನೆ ಎಂಬ ಭಾವನೆಗಳು ದಲಿತರ ಮನಸ್ಸಿನಲ್ಲಿ ನಿರ್ಮಾಣವಾದುದು, ಕೇವಲ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಭಾಷಣಗಳ ಪರಿಣಾಮಗಳಿಂದಲೇ ಎಂಬುದನ್ನು ಮರೆಯುವಂತಿಲ್ಲ. ಒಬ್ಬ ಮನುಷ್ಯನು ತನ್ನ ಭಾಷಣಗಳ ಮೂಲಕವೇ ಅಸಂಖ್ಯಾತ ಜನರ ಜೀವನದಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ಉಂಟುಮಾಡಿದನು. ಇಂಥದನ್ನು ಬಹುಶಃ ಕೇವಲ ಡಾ. ಬಾಬಾಸಾಹೇಬ ಅಂಬೇಡ್ಕರ್‌ರು ಮಾತ್ರವೇ ಮಾಡಿದರು. ಜಗತ್ತಿನ ಈವರೆಗಿನ ಇತಿಹಾಸದಲ್ಲಿ ಇಂಥ ಘಟನೆಯನ್ನು 'ನ ಭೂತೋ ನ ಭವಿಷ್ಯತಿ' ಎಂಬುದಾಗಿಯೇ ಹೇಳಬಹುದು.

ಅವರ ಭಾಷಣಗಳಿಂದ ದೇಶದಲ್ಲಿನ ಕೆಳಸ್ತರದ ಜನರು ಮತ್ತು ಶೋಷಿತರ ಜೀವನವು ಬೆಳಗಿತು. ಅವರ ಜೀವಕ್ಕೆ ಮಾನ್ಯತೆಯು ದೊರೆಯಿತು. ಮಾತ್ರವಲ್ಲ ಅವರಿಗೆ ಪ್ರತಿಷ್ಠೆಯೂ ಲಭಿಸುವಂತಾಯಿತು.

ಲಾರ್ಡ್ ಮೌಂಟ್‌ಬ್ಯಾಟನ್ ಒಂದೆಡೆಯಲ್ಲಿ ಬಾಬಾಸಾಹೇಬ ಅಂಬೇಡ್ಕರ್‌ರನ್ನು ಕುರಿತು ವರ್ಣನೆ ಮಾಡುತ್ತಾ, ಒಬ್ಬ ವೀರ ಯೋಧ (Brave Fighter) ಎಂಬುದಾಗಿ ಹೇಳಿದ್ದು, ಅದು ಯಥಾರ್ಥವಾದುದಾಗಿದೆ. ಬಾಬಾಸಾಹೇಬ ಅಂಬೇಡ್ಕರ್ ಅವರು ಈ ದೇಶದಲ್ಲಿ ಘನಘೋರವೆನಿಸುವಂತಹ ರೀತಿಯಲ್ಲಿ ಸಂಗ್ರಾಮ ಮಾಡಿದ್ದಾರೆ. ಅದರಿಂದಾಗಿಯೇ ಆಧುನಿಕ ಭಾರತದ ಮುಹೂರ್ತವು ರೂಪುಗೊಂಡಿತೆಂದು ಹೇಳಬಹುದು.

ಇಟಲಿಯಲ್ಲಿನ ಮ್ಯಾಝಿನಿಯ ವಿಚಾರಗಳು ಅಮರವಾದುವು. ಅದೇ ರೀತಿಯಲ್ಲಿ ತಮ್ಮ ಪ್ರತಿಕ್ರಿಯೆಗಳ ಬಗೆಗೆ ಆಲೋಚನೆ ಮಾಡುತ್ತಾ, ಬಾಬಾಸಾಹೇಬ ಅಂಬೇಡ್ಕರ್‌ರು ವಿಚಾರಗಳೂ ಕೂಡ ಮರ್ತ್ಯವಾದುವು ಎಂಬುದಾಗಿ ಹೇಳಿದ್ದಾರೆ. ಸಸಿಗಳಿಗೆ ನೀರಿನ ಆವಶ್ಯಕತೆಯು ಇರುವುದು, ಇಲ್ಲದೆ ಇದ್ದರೆ ಅವು ಸುಟ್ಟು ಹೋಗುತ್ತವೆ. ಅದರಂತೆಯೇ ವಿಚಾರಗಳಿಗೂ ಕೂಡಾ ಪ್ರಚಾರ ಮತ್ತು ಪ್ರಸಾರಗಳ ಆವಶ್ಯಕತೆಯು ಅತ್ಯಗತ್ಯವಾಗಿದೆ. ಅನ್ಯಥಾ ಈ ವಿಚಾರ ಪ್ರಚಾರ ಮತ್ತು ಪ್ರಸಾರಗಳಿಲ್ಲದೆಯೇ ನಷ್ಟವಾಗಿ ಹೋಗುತ್ತವೆ. ಡಾ. ಬಾಬಾಸಾಹೇಬ

ಅಂಬೇಡ್ಕರ್ ಅವರ ವೈಶಿಷ್ಟ್ಯವೆಂದರೆ, ಅವರು ಕೇವಲ ಮೂಲಭೂತ ವಿಚಾರಗಳನ್ನಷ್ಟೇ ನೀಡಿ ಸುಮ್ಮನಾಗಲಿಲ್ಲ. ಆ ವಿಚಾರದ ಸಸಿಗಳನ್ನು ಅವರು ಸ್ವತಃ ತಮ್ಮ ಭಾಷಣಗಳಂತಹ ಮಾಧ್ಯಮದ ಮೂಲಕ ಅಸಂಖ್ಯಾತ ಜನರ ಮುಂದೆ ಇರಿಸಿ– ಅವರ ಮನಸ್ಸಿನಲ್ಲಿ ಅದು ನೆಲೆಗೊಂಡು ಚಿರಕಾಲ ಉಳಿದುಕೊಳ್ಳುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿದರು. ಇಂದು ಅಸಂಖ್ಯಾತ ಜನರು ಅವರ ವಿಚಾರಗಳಿಂದ ಸ್ವತಃ ತಮ್ಮ ಜೀವನ ಮಾರ್ಗವನ್ನು ಅರಿತುಕೊಂಡು ತಮ್ಮ ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಾರೆ. ರಾಷ್ಟ್ರವನ್ನು ನಿರ್ಮಿಸುವ ಕಾರ್ಯದಲ್ಲಿ ಅವರ ವಿಚಾರಗಳು ಬಹಳ ಮಹತ್ವದವಾಗಿವೆ ಎಂಬುದು ವಿಚಾರವಂತರಿಗೆ ಅರಿವಾಗಿದೆ. ದಿನದಿನಕ್ಕು ಆ ವಿಚಾರಗಳ ಆವಶ್ಯಕತೆಯು ಹೆಚ್ಚಾಗುತ್ತಲಿರುವುದು ಅನೇಕ ನಿದರ್ಶನಗಳಿಂದ ತಿಳಿದುಬರುತ್ತದೆ.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಭಾಷಣಗಳಲ್ಲಿನ ವಿಷಯಗಳ ಮೌಲ್ಯವು ಬಹಳ ಮಹತ್ವದುವಾಗಿದ್ದವು. ಅಸ್ಪೃಶ್ಯರಿಗೆ ಮನುಷ್ಯ ಜೀವನವನ್ನು ಪ್ರಾಪ್ತಗೊಳಿಸಿಕೊಡುವುದು; ದಲಿತರು, ಶೋಷಿತರು ಮತ್ತು ವಂಚಿತರಿಗೆ ತಮ್ಮ ಭವಿಷ್ಯದಲ್ಲಿ ಹೋರಾಟವನ್ನು ಮಾಡುವುದಕ್ಕೆ ಪ್ರೇರಣೆ ನೀಡಿದುದು; ದೇಶದಲ್ಲಿನ ಸಾಮಾಜಿಕ, ರಾಜಕೀಯ ಪ್ರವಾಹದಲ್ಲಿ ಅವರನ್ನು ಶಾಮೀಲಾಗುವಂತೆ ಮಾಡಿ ಅವರ ಅಧಿಕಾರವನ್ನು ಅವರಿಗೆ ಪ್ರಾಪ್ತಗೊಳಿಸಿಕೊಡುವುದು; ಬಹುಜನ ಸಮಾಜ ವರ್ಗದವರಿಗೆ ಧಾರ್ಮಿಕ ಗುಲಾಮಗಿರಿಯಿಂದ ಮುಕ್ತಿ ನೀಡಿದುದು; ರಾಷ್ಟ್ರ ನಿರ್ಮಿತಿಗೆ ಆವಶ್ಯಕವಾಗಿರುವ ಮಾರ್ಗಗಳನ್ನು ಸ್ವೀಕಾರ ಮಾಡುವುದಕ್ಕೆ ಕರೆ ನೀಡುವುದರೊಂದಿಗೆ ದೇಶದ ವಿಕಾಸಕ್ಕೆ ನವೀನ ದಿಶೆಯನ್ನು ಶೋಧಿಸುವುದೇ ಮೊದಲಾದ ಹಲವಾರು ವಿಷಯಗಳನ್ನು ಅವರು ತಮ್ಮ ಭಾಷಣಗಳ ಮೂಲಕ ಪ್ರೇರೇಪಿಸಿರುವಂತಹ ಸಂಗತಿಗಳು ಈ ಸಂಪುಟಲ್ಲಿನ ಭಾಷಣಗಳ ಪದಪದಗಳಲ್ಲಿಯೂ ಎದ್ದು ಕಾಣಿಸು ವುದು. ಮಾನವೀಯ ಜೀವನಕ್ಕೆ ಸಂಬಂಧಿಸಿದ, ಮಾನವೀಯ ಜೀವನಕ್ಕೆ ಆಕಾರ ನೀಡುವ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ವಿಷಯಗಳ ಮೇಲೆ ತಮ್ಮ ಜೀವನದ ಅನೇಕ ಪ್ರಸಂಗಗಳಲ್ಲಿ ಅವರು ಭಾಷಣ ನೀಡಿದ್ದಾರೆ. ಸರ್ವಧರ್ಮಗಳನ್ನು ತಲಸ್ಪರ್ಶಿಯಾಗಿ ಅಭ್ಯಾಸ ಮಾಡಿ ಸಂಪೂರ್ಣ ಮಾನವ ಜಾತಿಗೆ ಯಾವ ಧರ್ಮವು ಕಲ್ಯಾಣಕಾರಕವಾಗಿದೆ ಎಂಬುದನ್ನು ಕೇವಲ ನಿರ್ಧರಿಸಿ ಸುಮ್ಮನಾಗುವುದಿಲ್ಲ. ಆ ದಿಶೆಯಲ್ಲಿ ಹೆಜ್ಜೆ ಹಾಕಿದಂತಹ ಒಬ್ಬ ಕೃತಿಶೀಲ ಧರ್ಮಜ್ಞ, ಅಮಾನವೀಯ ವಿಚಾರಗಳ ಬಗೆಗೆ ಎಗರಿ ಬೀಳುವಂತಹವರು ಮತ್ತು ಆ ವಿಚಾರಗಳ ಜಾಗದಲ್ಲಿ ಸ್ವಾತಂತ್ರ್ಯ, ಸಮಾನತೆ, ಬಂಧುತ್ವ ಮತ್ತು ನ್ಯಾಯಗಳಂತಹ ಮಾನವೀಯ ಮೌಲ್ಯಗಳನ್ನು ಪ್ರತ್ಯಕ್ಷವಾಗಿ ಪ್ರಸ್ಥಾಪನೆಗೊಳಿಸಿದಂತಹ ಮಹಾನ್ ಕ್ರಾಂತಿಕಾರಕ ಭಾರತದ ಆರ್ಥಿಕ ವಿಕಾಸಕ್ಕಾಗಿ ಯಾವ ಆರ್ಥಿಕ ಧೋರಣೆಗಳನ್ನು ಸ್ವೀಕಾರ ಮಾಡಿದರೆ ಯೋಗ್ಯವಾಗುವುದು ಎಂಬುದನ್ನು ಖಚಿತವಾಗಿ ಹೇಳುವಂತಹ ಆರ್ಥಿಕತಜ್ಞ, ರಾಜಕೀಯ ಜೀವನದಲ್ಲಿ 'ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ' ಎಂಬ ಸಿದ್ಧಾಂತವನ್ನು ಮಂಡಿಸಿದ್ದರು. ಅಲ್ಲದೆ, ರಾಜಕೀಯ ಪ್ರಜಾಪ್ರಭುತ್ವವು ಸಾಮಾಜಿಕ ಪ್ರಜಾಪ್ರಭುತ್ವವಾಗಿ ರೂಪಾಂತರ ಹೊಂದಬೇಕು ಎಂದು ಒತ್ತಿ ಒತ್ತಿ ಹೇಳಿದವರು. ತಮಗೆ ಸಂವಿಧಾನ ರಚನೆಯ ಅಧ್ಯಕ್ಷ ಪದವು ಲಭ್ಯವಾದಾಗ ಅಲ್ಲಿ ಅದನ್ನು ಅತ್ಯಂತ ಆಗ್ರಹ ಪೂರ್ವಕವಾಗಿಯೇ ಪ್ರತಿಪಾದಿಸಿದಂತಹ ರಾಜಕೀಯ ವಿಚಾರವಂತ, ಪ್ರಸಂಗ ಬಂದಾಗ ಸ್ವತಃ ತಮ್ಮ ಸಮಾಜಹಿತವನ್ನು ಬಲಿಕೊಟ್ಟು ದೇಶದ ಹಿತಕ್ಕಾಗಿ ಪ್ರಾಧಾನ್ಯತೆ ನೀಡಿದಂತಹ ಶ್ರೇಷ್ಠ ರಾಷ್ಟ್ರಭಕ್ತರೂ ಹೌದು. ಭಾರತಕ್ಕೆ ಆವಶ್ಯಕವಾಗಿ ಬೇಕಾದಂತಹ ಶೈಕ್ಷಣಿಕ ಧೋರಣೆಗಳ ಬಗೆಗೆ ಸ್ವತಃ ತಾವೇ ಗಂಭೀರವಾಗಿ ವಿಚಾರ ಮಾಡಿ ವಂಚಿತರಿಗೆ ಶಿಕ್ಷಣದ ಅವಕಾಶವನ್ನು ಉಪಲಬ್ಧಗೊಳಿಸಿದಂತಹ ಶ್ರೇಷ್ಠ ಶಿಕ್ಷಣತಜ್ಞರೂ ಆಗಿದ್ದರು. ಹೀಗೆ ಜೀವನದ ಹಲವಾರು ವಿಷಯಗಳನ್ನು ಸಾಕಾರಗೊಳಿಸಿದಂತಹ ಡಾ. ಅಂಬೇಡ್ಕರ್ ಅವರ ವಿಲೋಭನೀಯ ವ್ಯಕ್ತಿಮತ್ತೆಯು ಪ್ರಸ್ತುತ ಸಂಪುಟದ ಮೂಲಕ ವಾಚಕರ ಎದುರು ಮಂಡಿತವಾಗಿದೆ. ಸಾಮಾಜಿಕ ಪರಿವರ್ತನೆಯ

ಸಂಘರ್ಷದಲ್ಲಿ ಸಹಭಾಗಿಗಳಾದ ಮತ್ತು ಹಾಗೆ ಆಗಬೇಕೆಂದು ಇಚ್ಛಿಸುವ ಕಾರ್ಯಕರ್ತರಿಗಾಗಿಯೇ ಮತ್ತು ಭಾರತದ ಉಜ್ವಲ ಭವಿಷ್ಯಕ್ಕಾಗಿ ಚಡಪಡಿಸುತ್ತಿದ್ದಂತಹ ಮನಸ್ಸನ್ನು ಹೊಂದಿದ್ದರು. ಅವರು ಸದಾ ಎಲ್ಲಾ ಭಾರತೀಯರ ಉದ್ಧಾರಕ್ಕಾಗಿಯೇ ಹಂಬಲಿಸುತ್ತಿದ್ದರು. ಈ ಸಂಪುಟದಲ್ಲಿ ಅಂತರ್ಭೂತವಾಗಿರುವ ಭಾಷಣಗಳಲ್ಲಿನ ವಿಚಾರಗಳು ದೀಪಸ್ತಂಭದ ಹಾಗೆ ಸದಾಕಾಲವೂ ಮಾರ್ಗದರ್ಶಕವಾಗುತ್ತವೆ ಎಂಬ ಬಗೆಗೆ ತುಂಬು ವಿಶ್ವಾಸವಿದೆ.

ಸಮಿತಿಯು ಸಂಪಾದಕ ಮಂಡಳಿಯ ಮೇಲೆ ಸಂಪಾದನೆಯ ಜವಾಬ್ದಾರಿಯನ್ನು ಒಪ್ಪಿಸಿದ ಮೇಲೆ ವಿವಿಧ ದಿನಪತ್ರಿಕೆಗಳು, ನಿಯತ ಕಾಲಿಕೆಗಳು ಮತ್ತು ಗ್ರಂಥಗಳಿಂದ ೧೭೧ ಭಾಷಣಗಳನ್ನು ಶೋಧಿಸಿ ಈ ಸಂಪುಟದಲ್ಲಿ ಸೇರಿಸಲಾಗಿದೆ. ಈ ಸಂಪುಟದಲ್ಲಿನ ಒಟ್ಟಾರೆ ಭಾಷಣಗಳ ಸಂಖ್ಯೆಯು ಈಗ ೩೫೧ ಆಗಿದೆ. ಇದರಲ್ಲಿನ ಅನೇಕ ಭಾಷಣಗಳು ವಿವಿಧ ಸಭೆ ಸಮಾರಂಭಗಳಲ್ಲಿ ನೀಡಿದಂಥವುಗಳಾಗಿವೆ. ಕೆಲವು ಸಮಾರಂಭಗಳು, ಅಧಿವೇಶನಗಳ ನಿಮಿತ್ತವಾಗಿ ಅವರು ಸಂಕ್ಷಿಪ್ತವಾಗಿ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅಂಥವುಗಳಿಗೆ ಸ್ವತಂತ್ರ ಭಾಷಣಗಳ ಸ್ವರೂಪವನ್ನು ಕೊಡದೆ ಮುಖ್ಯವಾದ ಭಾಷಣಗಳ ಹಿನ್ನೆಲೆಯಲ್ಲಿ ಅವುಗಳನ್ನು ಅಂತರ್ಭಾವಗೊಳಿಸಲಾಗಿದೆ.

ಪ್ರಸ್ತುತ ಸಂಪುಟದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಎಲ್ಲಾ ಪ್ರಕಟಿತ ಭಾಷಣಗಳು ಸಮಾವೇಶಗೊಂಡಿಲ್ಲ ಎಂಬುದರ ಅರಿವು ಸಂಪಾದಕರಿಗೆ ಇದೆ. ಅಂಥವನ್ನು ಒದಗಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಯಿತು. ಆದರೆ ಅವುಗಳಲ್ಲಿ ಕೆಲವನ್ನು ದೊರಕಿಸಿಕೊಳ್ಳುವುದು ಸಾಧ್ಯವಾಗಲಿಲ್ಲ ಎಂಬುದರ ಬಗೆಗೆ ನಮಗೆ ಖೇದವಿದೆ. ಒಂದೊಮ್ಮೆ ಯಾರ ಹತ್ತಿರದಲ್ಲಿಯಾದರೂ ಇಲ್ಲಿರುವುದಕ್ಕಿಂತ ಬೇರೆ ಭಾಷಣಗಳು ಇದ್ದರೆ ಅವುಗಳನ್ನು ಅವರು ಕಾರ್ಯಾಲಯಕ್ಕೆ ತಂದುಕೊಡಬೇಕು. ಅಂಥವನ್ನು ಈ ಸಂಪುಟದ ಪುನರ್ಮುದ್ರಣದ ಸಮಯದಲ್ಲಿ ಸೇರಿಸಲಾಗುವುದು.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ತಮ್ಮ ಮುಂಬಯಿಯ ವಾಸ್ತವ್ಯದಲ್ಲಿ ಮತ್ತು ಇತರೆಡೆಗಳಲ್ಲಿ ತಮ್ಮ ಸಹವರ್ತಿಗಳು ಮತ್ತು ಕಾರ್ಯಕರ್ತರೊಂದಿಗೆ ಚರ್ಚೆ ಮಾಡುತ್ತಿದ್ದರು ಮತ್ತು ಅವರಿಗೆ ಮಾರ್ಗದರ್ಶನವನ್ನೂ ಮಾಡುತ್ತಿದ್ದರು. ಅಂತಹ ಕೆಲವಾರು ಪ್ರಸಂಗಗಳ ವೃತ್ತಾಂತಗಳು ವರ್ತಮಾನ ಪತ್ರಿಕೆಗಳಲ್ಲಿ ತತ್ಕಾಲದಲ್ಲಿಯೇ ಪ್ರಕಟವಾಗುತ್ತಿದ್ದವು. ಒಂದೊಮ್ಮೆ ಕೆಲವೇ ಕೆಲವು ಜನರ ಎದುರಿನಲ್ಲಿ ಇಂಥ ವಿಚಾರಗಳನ್ನು ಮಂಡಿಸಿದ್ದಾಗಲೂ ಅವು ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾದಾಗ ಅದಕ್ಕೆ ಸಾರ್ವಜನಿಕ ಸ್ವರೂಪವು ಪ್ರಾಪ್ತವಾಗಿತ್ತು. ಇಂತಹ ಚರ್ಚೆಗಳನ್ನು ಸಹ ಈ ಸಂಪುಟದಲ್ಲಿ ಅಂತರ್ಭಾವಗೊಳಿಸಲಾಗಿದೆ. ಆದರೆ ಇಂಥವುಗಳ ಸಂಖ್ಯೆ ಬಹಳ ಕಡಿಮೆ.

ಕೆಲವಾರು ಭಾಷಣಗಳು ವೃತ್ತಾಂತಗಳ ಸ್ವರೂಪದಲ್ಲಿ ಪ್ರಕಟವಾಗಿದ್ದವು. ಅವುಗಳಿಗೆ ಭಾಷಣದ ಸ್ವರೂಪ ವನ್ನು ನೀಡಲಾಗಿದೆ. ಆದರೆ ಮತ್ತೆ ಕೆಲವಕ್ಕೆ ಅಪವಾದಾತ್ಮಕ ಪ್ರಸಂಗಗಳಿಂದಾಗಿ ಹಾಗೆ ಮಾಡಲಾಗಲಿಲ್ಲ.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಸಂವಿಧಾನ ಸಭೆಯಲ್ಲಿನ ಮಹತ್ವಪೂರ್ಣ ಭಾಷಣಗಳ ಪೈಕಿ ಮೂರನ್ನು ಇದರಲ್ಲಿ ಸೇರ್ಪಡೆ ಮಾಡಲಾಗಿದೆ. ಅವುಗಳಲ್ಲಿ ಸಂವಿಧಾನದ ಮಸೂದೆಯನ್ನು ಸಂವಿಧಾನ ಸಭೆಯಲ್ಲಿ ಸಾದರಪಡಿಸುವಾಗ ದಿನಾಂಕ ೪ನೆಯ ನವೆಂಬರ್ ೧೯೪೮ರಂದು ಮಾಡಿದ ಮತ್ತು ೨೫ನೆಯ ನವೆಂಬರ್ ೧೯೪೯ರಂದು ಸಂವಿಧಾನ ಸಭೆಯಲ್ಲಿ ಮಾಡಿದ ಕೊನೆಯ ಭಾಷಣದ ಮರಾಠಿ ಅನುವಾದವು ಜನತಾ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಹಾಗೆಯೇ ೧೭ನೆಯ ಡಿಸೆಂಬರ್ ೧೯೪೬ರಂದು ಸಂವಿಧಾನ ಸಭೆಯಲ್ಲಿ ಅವರು ಮಾಡಿದ್ದ ಮೊದಲ ಭಾಷಣದ ವೃತ್ತಾಂತವನ್ನು ಸಾರಾಂಶರೂಪದಲ್ಲಿ ಜನತಾದಲ್ಲಿ ಬಂದಿತ್ತು. ಈ ವೃತ್ತಾಂತದೊಂದಿಗೆ ಇತರೆ ಉಪಲಬ್ಧ ಅನುವಾದಗಳನ್ನೂ ಸಹ ಸಂಪಾದಕರು ಅವಲೋಕನ ಮಾಡಿದ್ದರು.

ಆದರೆ ಅದು ಅಪೂರ್ಣವಾಗಿದ್ದುದು ತಿಳಿದುಬಂದಿತು. ಹಾಗಾಗಿ ಆ ಭಾಷಣಗಳು ಹಾಗೆಯೇ ಇಂಥದೇ ಕಾರಣಕ್ಕಾಗಿ ದುಂಡುಮೇಜು ಪರಿಷತ್ತಿನಲ್ಲಿ ಅವರ ಮೂರು ಭಾಷಣಗಳ ಮರಾಠಿ ಅನುವಾದಗಳು ಸ್ವತಹದ್ದಾಗಿ ಮಾಡಿಕೊಳ್ಳಬೇಕು ಎಂಬ ನಿರ್ಣಯವನ್ನು ಸಂಪಾದಕರು ತೆಗೆದುಕೊಂಡಿದ್ದಾರೆ. ಆ ಅನುವಾದವು ಈ ಸಂಪುಟದಲ್ಲಿ ಅಂತರ್ಭೂತಗೊಂಡಿದೆ. ಇತರೆ ಉಪಲಬ್ಧ ಅನುವಾದಗಳ ತುಲನೆಯಿಂದಾಗಿ ಅದು ಬಹಳ ಯೋಗ್ಯವಾದುದು ಎಂಬ ಧೋರಣೆಯನ್ನು ತಾಳಲಾಗಿದೆ.

ಮೂಲ ಪ್ರಕಾಶಿತ ಭಾಷಣಗಳಿಗೆ ಊರಿನ, ಪರಿಷತ್ತಿನ, ಪರ್ಯಟನದ ಎಂದು ಮುಂತಾಗಿ ಶೀರ್ಷಿಕೆಗಳನ್ನು ಕೊಡಲಾಗಿತ್ತು. ಡಾ. ಬಾಬಾಸಾಹೇಬರು ನಿಪ್ಪಾಣಿಯಲ್ಲಿ ಮಾಡಿದ ಭಾಷಣ, 'ನಗರದಲ್ಲಿನ ವಾರ್ತಾಪತ್ರ', 'ಅಖಿಲ ಭಾರತೀಯ ದಲಿತ ವರ್ಗ ಪರಿಷತ್ತು','ಹಿಂದಿ ಸಮಾಜ ಸುಧಾರಣ', 'ಕಟ್ಟಡದ ಫಂಡಿನ ಸಭೆ' ಇತ್ಯಾದಿ. ಹೀಗೆ ಇಂತಹ ಬಗೆಯ ಎಲ್ಲ ಶೀರ್ಷಿಕೆಗಳನ್ನು ಬದಲಿಸಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಆಯಾಯ ಭಾಷಣಗಳಿಗೆ ಅನುರೂಪವಾದ ಶೀರ್ಷಿಕೆಗಳನ್ನು ಕೊಡಲಾಗಿದೆ.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಭಾಷಣಗಳಲ್ಲಿನ ವಿಚಾರಗಳಿಗೆ ಐತಿಹಾಸಿಕ ಮಹತ್ವವಿದೆ. ಅವರು ತಮ್ಮ ಭಾಷಣಗಳಿಂದ ಇತಿಹಾಸವನ್ನು ರೂಪಿಸಿದರು ಎಂಬ ಸತ್ಯವನ್ನು ಮಾತ್ರ ಯಾರೂ ಅಲ್ಲಗಳೆಯಲಾರರು. ಯಾವ ಯಾವ ಪ್ರಸ್ತಾಪಿತ ಭಾಷಣಗಳನ್ನು ಮಾಡಿರುವರೋ ಅವುಗಳಿಗೆಲ್ಲ ಒಂದು ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂದರ್ಭದಂತೆ ಮೌಲ್ಯಗಳ ಮಹತ್ವವಿದೆ. ಯಾವ ಸಂದರ್ಭದಲ್ಲಿ ಅವರು ಭಾಷಣಗಳನ್ನು ಮಾಡಿದ್ದಾರೆಯೋ ಆ ಪ್ರಸಮ್ಗಗಳೆಲ್ಲವೂ ಚಳವಳಿಯ, ಆಂದೋಲನದ ಅಭಿನ್ನ ಭಾಗಗಳೂ ಆಗಿವೆ. ಆ ಪ್ರಸಂಗಗಳು ವಸ್ತುನಿಷ್ಠವಾಗಿ ವಾಚಕರ ಎದುರು ತರುವ ಉದ್ದೇಶದಿಂದಲೇ ಆ ಭಾಷಣಗಳಿಗೆಲ್ಲ ಹಿನ್ನೆಲೆಯನ್ನು ಒದಗಿಸುವಂತಹ ಧೋರಣಾತ್ಮಕ ನಿರ್ಣಯವನ್ನು ಸಂಪಾದಕ ಮಂಡಳಿಯು ತೆಗೆದುಕೊಂಡಿತು. ಹೀಗೆ ಒಂದು ಹಿನ್ನೆಲೆಯನ್ನು ಕೊಡುವಾಗ ಅದಕ್ಕೆ ಒಂದು ನಿರ್ದಿಷ್ಟ ಸ್ವರೂಪವನ್ನು ತರಬೇಕು ಎಂಬ ಕಾರಣದಿಂದ ಸಂಪಾದಕ ಮಂಡಳಿಯು ತಮ್ಮ ದೃಷ್ಟಿಕೋನದ ಯಾವುದೇ ಶಬ್ದವನ್ನು ಇಲ್ಲಿ ಬಳಸಿರುವುದಿಲ್ಲ. ಪ್ರಕಟಗೊಂಡಿರುವ ಸಾಹಿತ್ಯವನ್ನೇ ಇಲ್ಲಿ ಉಪಯೋಗಿಸಿಕೊಂಡು ಅದಕ್ಕೆ ಒಂದು ಆಕಾರವನ್ನು ಕೊಡಲಾಗಿದೆ. ಯಾವ ಭಾಷಣಗಳಿಗೆ ಒಂದು ಹಿನ್ನೆಲೆಯು ಪ್ರಾಪ್ತವಾಗಲಿಲ್ಲವೋ ಅಂಥವುಗಳಿಗೆ ಹಿನ್ನೆಲೆಯನ್ನು ಕೊಟ್ಟಿರುವುದಿಲ್ಲ. ಆದರೆ ಇಂಥ ಭಾಷಣಗಳೂ ಸಹ ತೀರಾ ಅಪವಾದಾತ್ಮಕವಾಗಿವೆ. ಭಾಷಣಗಳನ್ನು ಪ್ರಕಟಣೆ ಮಾಡಿರುವ ವೃತ್ತಪತ್ರಿಕೆಗಳಲ್ಲಿ ಕೆಲವು ಭಾಷಣಗಳಿಗೆ ಯಾವುದೇ ಹಿನ್ನೆಲೆಯು ಇರಲಿಲ್ಲ; ಮತ್ತೆ ಕೆಲವು ಭಾಷಣಗಳಲ್ಲಿ ಅದು ಎದ್ದುಕಾಣಿಸುತ್ತಿತ್ತು. ಅಂಥವುಗಳನ್ನೆಲ್ಲ ಇತರೆಡೆಗಳಲ್ಲಿ ಶೋಧಿಸಿ ಅವುಗಳಿಗೆ ಸಂಬಂಧಿಸಿದ ಭಾಷಣಗಳಲ್ಲಿ ಅಂತರ್ಭಾವಗೊಳಿಸಲಾಗಿದೆ. ಕೆಲವಾರು ಭಾಷಣಗಳಲ್ಲಿ ಹಿನ್ನೆಲೆಯ ಜೊತೆಗೆ ಸನ್ಮಾನಪತ್ರಗಳು, ಪತ್ರಗಳು, ಪತ್ರಿಕೆಗಳು ಮುಂತಾದುವು ಇಂಗ್ಲಿಷ್ ಭಾಷೆಯಲ್ಲಿವೆ. ಅವುಗಳಲ್ಲಿ ಹಾಗೆ ತತ್ಕಾಲೀನವಾಗಿ ಇಂಗ್ಲಿಷಿನಲ್ಲಿ ಬರೆದಿರುವಂತಹ ಸ್ವರೂಪದಲ್ಲಿಯೂ ಯಾವುದೇ ಬದಲಾವಣೆಯನ್ನು ಮಾಡದೆ ಹೇಗಿದ್ದಿತೋ ಹಾಗೆಯೇ ಇಟ್ಟುಕೊಳ್ಳಲಾಗಿದೆ.

ಪ್ರಸ್ತುತ ಸಂಪುಟದ ಸಂಪಾದನೆಯ ಜವಾಬ್ದಾರಿಯನ್ನು ಸಂಪಾದಕ ಮಂಡಳಿಯ ಮೇಲೆ ಒಪ್ಪಿಸಿಕೊಟ್ಟ ಆರಂಭ ಕಾಲದಲ್ಲಿ ಇದ್ದು ಈಗ ನಮ್ಮ ಜೊತೆಯಲ್ಲಿ ಇಲ್ಲದಿರುವ ಶ್ರೀ ವಸಂತಮೂನ್ ಅವರ ಮೌಲ್ಯಯುತ ಸಹಕಾರವು ಪ್ರಾಪ್ತವಾಯಿತು. ಅವರು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಚರಿತ್ರೆಯ ಸಾಧನಗಳನ್ನು ಪ್ರಕಟಣೆ ಮಾಡಿದ್ದಂತಹ ಸಮಿತಿಯ ವಿಶೇಷ ಕಾರ್ಯಾಧಿಕಾರಿಗಳಾಗಿದ್ದರು. ಅವರ ನಿಧನದ ಸಂತಾಪದಿಂದಾಗಿ ಈ ಸಂಪುಟವನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಒಂದು ಶೂನ್ಯತೆಯನ್ನು ಉಂಟುಮಾಡಿತು. ಸಂಪಾದಕ

ಮಂಡಳಿಗೆ ಅದು ಅರಿವಿಗೆ ಬಂದಿತ್ತು. ಅಂದರೆ ಈ ಸಂಪುಟವನ್ನು ರೂಪಿಸುವಲ್ಲಿ ಅವರ ಯೋಗದಾನವು ಅಮೂಲ್ಯವಾದುದಾಗಿತ್ತು ಎಂಬುದು ಇದರಿಂದ ಅಭಿಪ್ರೇತವಾಗುತ್ತದೆ.

ಪ್ರಸ್ತುತ ಸಂಪುಟವು ಪೂರ್ಣಸ್ವರೂಪವನ್ನು ಪಡೆಯುವಲ್ಲಿ ಅನೇಕರ ಸಹಕಾರವಿದೆ. ಅದರಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಚರಿತ್ರ ಸಾಧನಗಳ ಪ್ರಕಟಣ ಸಮಿತಿಯ ಅಧ್ಯಕ್ಷರಾದ ನಾ. ದಿಲೀಪ ವಳಸೆ–ಪಾಟೀಲ, ಉನ್ನತ ಮತ್ತು ತಂತ್ರಶಿಕ್ಷಣ ಮಂತ್ರಿಗಳು, ನಾ. ಅನಿಸ್ ಅಹಮದ್, ಉನ್ನತ ಮತ್ತು ತಂತ್ರಶಿಕ್ಷಣ ರಾಜ್ಯ ಮಂತ್ರಿಗಳು, ಮುಖ್ಯ ಸಚಿವೆ ಶ್ರೀಮತಿ ಚಂದ್ರ ಅಯ್ಯಂಗಾರ್, ಸಂಚಾಲಕರಾದ ಡಾ. ಎಸ್. ಎನ್. ಪಠಾಣ್ ಮತ್ತು ಶಾಸಕೀಯ ಪ್ರಕಟಣಾಲಯದ ವಿಭಾಗದ ಉಪಸಂಚಾಲಕ ಶ್ರೀ ಉತ್ತಮ ಸೋನಾವಣೆ ಅವರ ಮೌಲಿಕ ಮಾರ್ಗದರ್ಶನಗಳ ಅಡಿಯಲ್ಲಿ ಈ ಗ್ರಂಥದ ಪ್ರಕಟಣೆಯು ಸಾಧ್ಯವಾಯಿತು. ಹಾಗೆಯೇ ಸಮಿತಿಯ ಜೇಷ್ಠ ಸದಸ್ಯರಾದ ರಾ. ಸು. ಗವಾಯಿ, ಶಾಸಕರು ಅವರನ್ನೂ ಅವಶ್ಯವಾಗಿ ಉಲ್ಲೇಖ ಮಾಡಲೇಬೇಕು. ಅವರ ಪ್ರಯತ್ನದಿಂದಾಗಿಯೇ ಈ ಸಂಪುಟಕ್ಕೆ ಒಂದು ದಿಶೆಯು ಪ್ರಾಪ್ತವಾಯಿತು.

ಈ ಸಂಪುಟವು ಎಲ್ಲಾ ರೀತಿಯಿಂದಲೂ ಪರಿಪೂರ್ಣತ್ವವನ್ನು ಪಡೆಯುವಲ್ಲಿ ಪ್ರಾ. ಡಾ. ಗಂಗಾಧರ ಪಾನತಾವಣೆ ಮತ್ತು ಪ್ರಾ. ಕೇಶವ ಮೇಶ್ರಾಮ ಅವರ ಮೌಲ್ಯಯುತ ಕೊಡುಗೆಯೂ ಇದೆ.

ಈ ಸಂಪುಟದ ನಿರ್ಮಾಣ ಪ್ರಕ್ರಿಯೆಯಲ್ಲಿ ಸರ್ವಶ್ರೀ ಪ್ರಾ. ಡಾ. ಶ್ರೀನಿವಾಸ ಖಾಂದೇವಾಲೆ, ಪ್ರಾ. ಡಾ. ವಿಜಯ ಕವಿಮಂಡನ, ಪ್ರಾ. ಡಾ. ಭಾ. ಲ. ಭೋಳೆ, ಪ್ರಾ. ಗೌತಮ ಖು. ಕಾಂಬಳೆ, ಪ್ರಾ. ದತ್ತಾನಂದ ಇಂಗೋಲೆ, ಪ್ರಾ. ಖ. ಎಸ್. ಮೂನ್, ಪ್ರಾ. ಆರ್. ಕೆ. ತುಪೆ, ಸಂಜಯ ಎನ್. ಕಾಂಬಳೆ ಮತ್ತು ಬಿ. ಎನ್. ಬಾಗಡೆ ಅವರುಗಳ ಸಹಕಾರವೂ ಪ್ರಾಪ್ತವಾಯಿತು.

ವಸಂತ ಮೂನ್ ಅವರ ಡಾ. ಬಾಬಾಸಾಹೇಬ ಅಂಬೇಡ್ಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್, 'ನಲಂದಾ' ೪೪೭, ಹನುಮಾನನಗರ, ನಾಗಪುರ ಇಲ್ಲಿಂದ ಬಹುತೇಕ ಭಾಷಣಗಳು ಉಪಲಬ್ಧವಾದವು. ಭಾಲಚಂದ್ರ ಲೋಖಂಡೆ, ಮಹೇಂದ್ರ ಗಾಂಜರೆ, ರಮೇಶ್ ಕೋಸಾರೆ ಮತ್ತು ಪ್ರಹಾದ ಮೇಂಢೆ ಅವರುಗಳಿಂದಲೂ ಒಂದಷ್ಟು ಪ್ರಮಾಣದಲ್ಲಿ ಸಾಹಿತ್ಯವು ಉಪಲಬ್ಧವಾಯಿತು. ಪ್ರದೀಪ ಗಾಯಕವಾಡ ಮತ್ತು ವಿನೋದ ಆಟೆ, ಫೋಟೋಗ್ರಾಫರ್ ಅವರುಗಳಿಂದ ಛಾಯಾಚಿತ್ರಗಳು ಪ್ರಾಪ್ತವಾದವು. ಅವರುಗಳಿಗೆಲ್ಲ ಆಭಾರಿಗಳಾಗಿದ್ದೇವೆ.

ಶ್ರೀ ಕೃಷ್ಣಾ ಎಂ. ಕಾಂಬಳೆ ಮತ್ತು ಡಾ. ಸಿದ್ಧಾರ್ಥ ಜೆ. ಕಾಂಬಳೆ ಅವರು ಕಾಲಕಾಲಕ್ಕೆ ನೀಡಿದಂತಹ ಮೌಲಿಕ ಸೂಚನೆಗಳು ಮತ್ತು ಸಹಕಾರವನ್ನು ಮರೆಯುವುದಕ್ಕೆ ಸಾಧ್ಯವಿಲ್ಲ.

ಸರ್ಕಾರಿ ಮುದ್ರಣಾಲಯ, ನಾಗಪುರದ ತತ್ಕಾಲೀನ ವ್ಯವಸ್ಥಾಪಕ ಶ್ರೀ ರು. ದಿ. ಮೋರೆ ಮತ್ತು ವಿದ್ಯಮಾನ ವ್ಯವಸ್ಥಾಪಕ ಶ್ರೀ ಮಿಲಿಂದ ಶಿಂಧೆ ಮತ್ತು ಶ್ರೀ ಸು. ಪ್ರ. ಮೇಶ್ರಾಮ, ಕಿರಿಯ ಸಹಾಯಕ ವ್ಯವಸ್ಥಾಪಕ ಅವರು ಈ ಸಂಪುಟವು ವ್ಯವಸ್ಥಿತವಾಗಿಯೂ ಸುಂದರವಾಗಿಯೂ ಮುದ್ರಿಸುವುದರಲ್ಲಿ ಪರಾಕಾಷ್ಠೆಯ ಪ್ರಯತ್ನ ಮಾಡಿದ್ದಾರೆ. ಹಾಗೆಯೇ ಈ ಮುದ್ರಣಾಲಯದಲ್ಲಿನ ಸಂಬಂಧಿತ ಸಿಬ್ಬಂದಿಗಳೆಲ್ಲರೂ ಶ್ರದ್ಧೆಯಿಂದ ಮಾಡಿದ ಸಹಕಾರದಿಂದಾಗಿ ಈ ಸಂಪುಟವು ನಿಯೋಜಿತ ಸಮಯದಲ್ಲಿ ಪ್ರಕಟಣೆಗೊಳ್ಳುವುದಕ್ಕೆ ಸಾಧ್ಯವಾಯಿತು.

ಡಾ. ಬಾಬಾಸಾಹೇಬ ಅಂಬೇಡ್ಕರ್ ಚರಿತ್ರೆ ಸಾಧನ ಪ್ರಕಟಣಾ ಸಮಿತಿ ಸಂಪಾದಕ ಮಂಡಳಿಯು ನಮಗೆ ಬೆಂಬಲವಾಗಿ ಇದ್ದುದರಿಂದ ನಮಗೆ ನಿಶ್ಚಿತ ಉತ್ಸಾಹವು ಹೆಚ್ಚಾಗಲು ಕಾರಣವಾಯಿತು.

ಹರಿ ನರಕೆ | ಎನ್. ಈ. ಕಾಂಬಳೆ
ಡಾ. ಮ. ಲ. ಕಾಸಾರೆ | ಪ್ರಾ. ಅಶೋಕ್ ಗೋಡಘಾಟೆ

## ಪರಿವಿಡಿ


ಸಂದೇಶಗಳು v

ಮೊದಲ ಮಾತು x

ಸಂಪಾದಕೀಯ xi

I

**ರಾಷ್ಟ್ರದ ನಿರ್ಮಾಣ ಮತ್ತು ಅದರಲ್ಲಿನ ಪ್ರಜಾಪ್ರಭುತ್ವ ೧**

೧ ರಾಷ್ಟ್ರದ ನಿರ್ಮಾಣ ಮತ್ತು ಅದರಲ್ಲಿನ ಪ್ರಜಾಪ್ರಭುತ್ವ ೩

೨ ಸಂಯುಕ್ತ ಮತ್ತು ಪ್ರತ್ಯೇಕ ಮತಕ್ಷೇತ್ರಗಳು ೪

೩ ಆಶ್ವಾಸನೆಗಳಿಂದ ಗವರ್ನರ್ ಅವರಿಗೆ ನಷ್ಟವಿಲ್ಲ, ಕಾಂಗ್ರೆಸ್ಸಿಗೆ ಲಾಭವಿಲ್ಲ ೮

೪ ಇದೊಂದು ಪಕ್ಷಕ್ಕೆ ಸಂಬಂಧಿಸಿದ ನಡೆಯೇ ಹೊರತು ರಾಷ್ಟ್ರೀಯ ಉದ್ದೇಶವನ್ನುಳ್ಳದ್ದಲ್ಲ ೧೩

೫ ವಯಸ್ಕ ಮತದಾನವನ್ನು ಜಾರಿಗೆ ತರುವುದಕ್ಕಾಗಿ ನಾವು ಉಗ್ರವಾದ ಹೋರಾಟವನ್ನು ಕೈಗೊಳ್ಳುತ್ತೇವೆ ೧೪

೬ ಒಕ್ಕೂಟದ ವ್ಯವಸ್ಥೆಯ ವಿರುದ್ಧ ಸಂಘಟಿಸಿ – ರಾಷ್ಟ್ರದ ಚರಿತ್ರೆಯಲ್ಲಿನ ಸಂಧಿಯ ಸಮಯ ೧೬

೭ ವಿತರಣಾತ್ಮಕ ಮತದಾನ ಪದ್ಧತಿ – ಡಾ. ಅಂಬೇಡ್ಕರ್ ಅವರ ವಿರೋಧ ೧೯

೮ ಗ್ರೇಟ್ ಬ್ರಿಟನ್ನಿಗೆ ಬೆಂಬಲವನ್ನು ನೀಡಬೇಕು ೨೦

೯ ಭಾರತವನ್ನು ಎರಡು ರಾಷ್ಟ್ರವಾಗಿ ಒಡೆಯುವುದನ್ನು ತಡೆಯಲು ಕಾಂಗ್ರೆಸ್‌ನವರಿಗೆ ವಿವೇಕದ, ಮುತ್ಸದ್ದತನದ ಉದಯವಾಗುತ್ತದೆ : ಡಾ. ಅಂಬೇಡ್ಕರ್ ಆಶಯ. ೨೮

೧೦ ಬಹಳ ಅಸ್ಪಷ್ಟವಾಗಿರುವ ಯೋಜನೆ ೩೦

೧೧ ಸಾಮಾಜಿಕ ಏಕೀಕರಣದ ಮೂಲಕ ಮಾತ್ರ ನಾವು ಒಂದು ರಾಷ್ಟ್ರವಾಗಬಹುದು ೩೨

೧೨ ಸುಭಾಷ್ಚಂದ್ರ ಬೋಸ್ ಹಾಗೂ ಡಾ.ಅಂಬೇಡ್ಕರ್ ಅವರ ಪರಸ್ಪರ ಭೇಟಿ ೩೩

೧೩ ಕಾಂಗ್ರೆಸ್ ಪಕ್ಷದ ನಿರ್ಣಯದ ಅರ್ಥ ೩೪

೧೪ ಭಾರತದ ಬಿಕ್ಕಟ್ಟನ್ನು ಪರಿಹರಿಸಲು ಡಾ. ಅಂಬೇಡ್ಕರ್ ಅವರ ಯೋಜನೆ ೩೮

೧೫ ಪ್ರಜಾಪ್ರಭುತ್ವದ ಯಶಸ್ಸಿನ ಮೇಲೆ ಭಾರತೀಯರ ಭವಿಷ್ಯವು ನಿಂತಿದೆ ೪೨

೧೬ ಭಾರತೀಯ ರಾಜಕೀಯ ಬಿಕ್ಕಟ್ಟಿನ ಪರಿಹಾರ ಹೇಗೆ? ೪೭

೧೭ ಜಿನ್ನಾ ಅವರ ಭಯವನ್ನು ನಿವಾರಿಸಬೇಕು ೪೯

೧೮ ಕೇಂದ್ರೀಯ ನೀರಾವರಿ ಮತ್ತು ಜಲಮಾರ್ಗಗಳ ಸಲಹಾ ಮಂಡಲಿಯ ಮೊದಲ ಪ್ರಸ್ತಾಪ ೫೧

೧೯ ಉಭಯತ್ರರೂ ಗಂಭೀರವಾದ ತಪ್ಪುಗಳನ್ನೆಸಗುತ್ತಿದ್ದಾರೆ ೫೩

೨೦ ಸಪ್ರು ಅವರ ತಪ್ಪು ೫೭

೨೧ ಮಹಾನದಿಯ ನಿಯಂತ್ರಣ ಹಾಗೂ ಅದರಿಂದ ಅತ್ಯುತ್ತಮ ಉಪಯೋಗವನ್ನು ಪಡೆಯುವುದು ೫೯

೨೨ ಭಾರತದಲ್ಲಿ ಎಲ್ಲಾ ಪಕ್ಷಗಳ ನಡುವೆ ಸಹಕಾರ ಮನೋಭಾವವು ಮೂಡುವಂತೆ ಮಾಡಲು ನಾವು ಕಾರ್ಯನಿರತರಾಗಬೇಕು ೬೧

೨೩ ಈ ಅಂಶಗಳು ಸ್ಪಷ್ಟವಾಗುವವರೆಗೆ ದೇಶದ ವಿಭಜನೆಯ ವಿಷಯದಲ್ಲಿ ಯಾವುದೇ ಮಾರ್ಗದರ್ಶನವನ್ನು ನೀಡುವುದು ಸಾಧ್ಯವಿಲ್ಲ ೬೩

೨೪ ಯಾವುದೇ ಸಂಸ್ಥಾನಗಳನ್ನೂ ಭಾರತ ಸರಕಾರವು ಸ್ವತಂತ್ರ ಸಾರ್ವಭೌಮ ಸರಕಾರವೆಂದು ಮಾನ್ಯಮಾಡುವುದಿಲ್ಲ ೬೪

೨೫ ಆಗಸ್ಟ್ ೧೫ರಂದು ಬೆರಾರ್ ಪ್ರಾಂತವು ಮರಳಿ ನಿಜಾಮರ ಸ್ವಾಧಿನಕ್ಕೆ ಮರಳುತ್ತದೆ ೬೭

೨೬ ಎಳೆದ ಗಡಿರೇಖೆಗಳು ಸಹಜವಾಗಿರದಿದ್ದರೆ, ಅದು ಭಾರತದ ಜನತೆಯ ರಕ್ಷಣೆಗೆ ಗಂಡಾಂತರವನ್ನು ಒಡ್ಡುತ್ತದೆ ೬೯

೨೭ ಕಾನೂನಿನ ಮುಂದೆ ಭಾರತೀಯ ಪ್ರಜೆಗಳು ಸಮಾನ ಹಕ್ಕನ್ನು ಹೊಂದಿದ್ದಾರೆ ೭೨

೨೮ ಕೇಂದ್ರ ಮತ್ತು ಪ್ರಾಂತಗಳಿಗೆ ಒಂದೇ ಅಧಿಕೃತ ಭಾಷೆ ೭೪

೨೯ ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್ ೭೫

೩೦ ಸಂವಿಧಾನ ಮತ್ತು ಸಾಂವಿಧಾನಿಕ ತತ್ತ್ವಗಳು ೮೭

೩೧ ಭಾರತದ ಜನತೆಯು ತನ್ನ ಮೂಲಭೂತ ಹಕ್ಕುಗಳನ್ನು ಅರಿತುಕೊಳ್ಳುತ್ತದೆ ೯೧

೩೨ ದೃಢವಾಗಿರಿ ಮತ್ತು ಪ್ರಾಮಾಣಿಕವಾಗಿರಿ ಎಂದು ನಾನು ಹೇಳುತ್ತೇನೆ ೯೪

೩೩ ಆಕ್ರಮಣಕಾರೀ ಶಕ್ತಿಯಿಲ್ಲದಿದ್ದರೆ, ಸ್ವತಂತ್ರ ವಿದೇಶಾಂಗ ನೀತಿಯಿಂದ ಏನೂ ಪ್ರಯೋಜನವಿಲ್ಲ ೯೬

೩೪ ಪಾಕಿಸ್ತಾನದ ಬಗ್ಗೆ ಅಮೇರಿಕದ ಒಲವು ೯೭

೩೫ ಏನೇ ಆದರೂ, ಇಂಗ್ಲಿಷ್ ಭಾಷೆಯನ್ನು ಉಳಿಸಿಕೊಳ್ಳಿ ೯೮

೩೬ .....ಸಾರ್ವಜನಿಕ ವ್ಯವಹಾರಗಳಲ್ಲಿ ಒಬ್ಬನೇ ವ್ಯಕ್ತಿಯ ಕೈವಾಡ ೯೯

೩೭ ಪ್ರವಾಹ ನಿಯಂತ್ರಣ – ಅಣುಶಕ್ತಿಯ ಬಳಕೆ ೧೦೦

೩೮ ಕಬಂಧರೂಪೀ ರಾಜ್ಯಗಳ ಸೃಷ್ಟಿಗೆ ಉಗ್ರವಾದ ವಿರೋಧ ೧೦೩

೩೯ ಮಹಾರಾಷ್ಟ್ರಕ್ಕೆ ಅಂಬೇಡ್ಕರ್ ಅವರ ಸೂತ್ರ ೧೦೪

**II**


**ಸಂಸ್ಥೆಗಳು, ಸಂಘಟನೆಗಳು ಮತ್ತು ಅವುಗಳ ಸಂವಿಧಾನ** ೧೦೭

೧ ಬಹಿಷ್ಕೃತ ಹಿತಕಾರಿಣಿ ಸಭೆ ೧೦೯

೨ ದಲಿತವರ್ಗಗಳ ಸಂಸ್ಥೆ ೧೨೦

೩ ಸ್ವತಂತ್ರ ಕಾರ್ಮಿಕ ಪಕ್ಷ ೧೨೬

೪ ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ವ್ಯಾಪಕ ಬೆಂಬಲ ೧೩೨

೫ ಮೂರು ಕಾರಣಗಳಿಂದ ಕಾಲೇಜನ್ನು ಸ್ಥಾಪಿಸಲು ನಾನು ಬಾಂಬೆಯನ್ನು ಆಯ್ದುಕೊಂಡಿದ್ದೇನೆ ೧೩೫

೬ ಮುಂಬಯಿಯ ದ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯ ಸಂಸ್ಥಾಪನಾ ವಿವರಣ ಪತ್ರ ೧೪೧

೭ ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ ಅವರು ದ ಪೀಪಲ್ಸ್ ಎಜ್ಯುಕೇಷನ್ ಸಂಸ್ಥೆಯ ಪರವಾಗಿ ಮಾಡಿದ ಮನವಿ ೧೫೨

೮ ಅಸ್ಪೃಶ್ಯರಿಗಾಗಿ ಬಾಂಬೆಯಲ್ಲಿ ಒಂದು ಸಾಮಾಜಿಕ ಕೇಂದ್ರ ೧೫೫

೯ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಸಂವಿಧಾನ ೧೬೪

೧೦ ಭಾರತೀಯ ಬೌದ್ಧಸಂಘ ೧೮೪

**ಪರಿಶಿಷ್ಟಗಳು** ೧೯೧

೧ ಅಖಿಲ ಭಾರತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟದ ಸಂವಿಧಾನ ೧೯೩

೨ ಹಿಂದೂ ಹಾಗೂ ಬೌದ್ಧಧರ್ಮಗಳಲ್ಲಿ ಮಹಿಳೆಯ ಸ್ಥಾನ ೨೦೧

೩ ಕ್ಯಾಬಿನೆಟ್ ಮಿಷನ್ ೨೦೫

೪ ಕ್ಯಾಬಿನೆಟ್ ಮಿಷನ್‌ನೊಂದಿಗೆ ನಡೆದ ಜಗಜೀವನ ರಾಮ್, ರಾಧಾನಾಥ್ ದಾಸ್ ಮತ್ತು ಪೃಥ್ವೀಸಿಂಗ್ ಅವರ ಸಂದರ್ಶನ ೨೦೯

೫ ಪೂನಾ ಸತ್ಯಾಗ್ರಹ : ಸತ್ಯಾಗ್ರಹಗಳ ಬಂಧನ ೨೧೦

೬ ಪೂನಾ ಒಪ್ಪಂದವನ್ನು ಬಲವಂತವಾಗಿ ಹೇರುವ ಮೂಲಕ ಶ್ರೀ ಗಾಂಧಿಯವರು ಅಸ್ಪೃಶ್ಯರಿಗೆ ಪ್ರಾತಿನಿಧ್ಯದ ಅವಕಾಶವನ್ನು ತಪ್ಪಿಸಿದ್ದಾರೆ ೨೨೨

೭ ದಮನಮಾಡುವವರ ಕರುಣೆಯಲ್ಲಿ ಸೌಲಭ್ಯವಂಚಿತರು ೨೨೫

೮ ಬಿಹಾರ ಪ್ರಾಂತೀಯ ದಲಿತವರ್ಗಗಳ ಕೂಟ ೨೩೦

೯ ರಾಜ್ಯಗಳ ಬಗ್ಗೆ ೨೩೪

೧೦ ಸಂಯುಕ್ತ ಭಾರತದಲ್ಲಿ ವಿಲೀನವಾಗಲು ರಾಜ್ಯಗಳಿಗೆ ಅಂಬೇಡ್ಕರ್ ಅವರ ಒತ್ತಾಯ ೨೩೭

೧೧ ಬಾಂಬೆಯ ಬಹಿಷ್ಕೃತ ಹಿತಕಾರಿಣಿ ಸಭೆಯ ಕಾರ್ಯಚಟುವಟಿಕೆಗಳು ೨೪೧

೧೨ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯ ಸಂಸ್ಥೆಗಳು ೨೪೫

೧೩ ಮಹಾಪ್ರಭು ಸಯ್ಯಾಜಿರಾವ್ ಗಾಯಕ್‌ವಾಡ್ ಅವರಿಗೆ ಬರೆದ ಪತ್ರ ೨೪೭

೧ ಮಹಾ ಹೋರಾಟ ೨೪೯

೨ ಮಾನವನೊಬ್ಬನ ಮೌಲ್ಯ ಸ್ವತಃಸಿದ್ಧ ಪ್ರಮಾಣವಾದುದು ಮತ್ತು ಸ್ವಯಂವೇದ್ಯವಾದುದು ೨೫೪

೩ ನಾವು ಯೋಧರ ವಂಶಕ್ಕೆ ಸೇರಿದವರು ೨೫೬

೪ ಶಾಸನ ಸಭೆಗಳಿಗೆ ಸೂಕ್ತವಾದ ಜನಗಳನ್ನು ಕಳುಹಿಸಿ ೨೫೮

೫ ಒಂದು ದೇಶ, ಒಂದು ಸಂವಿಧಾನ, ಒಂದೇ ಭವಿಷ್ಯ ಈ ಭಾವನೆಗಳಿಂದ ಬೆಸೆದುಕೊಂಡ
ಜನರು ಸ್ವಾತ್ಯಂತ್ರದಿಂದ ಇರುವುದಾದರೆ, ಗಂಡಾಂತರವನ್ನು ಎದುರಿಸುತ್ತಾರೆ. ೨೫೯

೬ ಸಂವಿಧಾನದತ್ತ ರಕ್ಷಣೆಗಳನ್ನು ಮತ್ತು ಖಾತರಿಗಳನ್ನು ನಿಮ್ಮದಾಗಿಸಿಕೊಳ್ಳುವ ಬಗ್ಗೆ ೩೦೦

೭ ಹೆಚ್ಚು ಹೆಚ್ಚಾಗಿ ಚಳುವಳಿ ಮಾಡಿ, ಈಗಿನದ್ದಕ್ಕಿಂತ ಉತ್ತಮವಾಗಿ ವ್ಯವಸ್ಥೆ ಮಾಡಿ ೩೦೧

೮ ಇಲ್ಲದೇ ಹೋದರೆ ಮುಂದುವರೆದ ಹಿಂದೂ ಜಾತಿಗಳವರು ಅಧಿಕಾರದಲ್ಲಿ
ಉಳಿದುಕೊಂಡು ಅಲ್ಪಸಂಖ್ಯಾತರುಗಳನ್ನು ಆಳುತ್ತಾರೆ ೩೦೨

೯ ಹೋರಾಟದಿಂದ ನಿಮಗೆ ಅಧಿಕಾರ ಮತ್ತು ಗೌರವ ಸಿಗುತ್ತದೆ ೩೦೪

೧೦ ಮುಂದಿನ ತಲೆಮಾರಿನ ಹಿಂದೂಗಳು ನನ್ನ ಸೇವೆಯನ್ನು ಮೆಚ್ಚಿಕೊಳ್ಳುತ್ತಾರೆ ೩೦೫

೧೧ ಗೌತಮಬುದ್ಧ ಮತ್ತು ರಾಮಾನುಜರ ಹೋರಾಟವನ್ನು ನಿಮ್ಮ ಕಣ್ಣು ಮುಂದೆ ಇಟ್ಟುಕೊಳ್ಳಿ ೩೧೪

೧೨ ಅಸ್ಪೃಶ್ಯರಿಗೆ ರಾಜಕೀಯ ಅಧಿಕಾರ ಇರಲೇಬೇಕು ೩೧೫

೧೩ ನಾನು ನನ್ನ ನ್ಯಾಯಯುತವಾದ ಬೇಡಿಕೆಯಿಂದ ಒಂದಂಗುಲದಷ್ಟೂ
ಹಿಂದೆ ಸರಿಯುವುದಿಲ್ಲ ೩೧೯

೧೪ ಸಾಮಾಜಿಕ ಸುಧಾರಣೆ ಆಗುವುದಕ್ಕಿಂತ ಮುಂಚೆ ರಾಜಕೀಯ
ಸುಧಾರಣೆ ಬರಲೇಬೇಕು ೩೨೧

೧೫ ಅಧ್ಯಾತ್ಮಿಕ ಆಹಾರಕ್ಕಿಂತ ಪ್ರಾಪಂಚಿಕ ಒಳಿತಿಗೆ ಹೆಚ್ಚು ಗಮನ ಮಾಡಬೇಕು ೩೨೨

೧೬ ಕ್ರಿಯಾಶೀಲರಾಗಿ, ನಿಮ್ಮ ಕೈಗಳಿಗೆ ಬರುವ ಅಧಿಕಾರವನ್ನು ಉಪಯೋಗಿಸಿಕೊಳ್ಳಿ ೩೨೩

೧೭ ಗುಲಾಮಗಿರಿಯ ಯೋಚನೆಯನ್ನೇ ತೊಡೆದು ಹಾಕಿ ೩೨೪

೧೮ ಅದೃಷ್ಟದ ಮೇಲೆ ನಂಬಿಕೆ ಬೇಡ, ನಿಮ್ಮ ಶಕ್ತಿಯ ಮೇಲೆ ನಂಬಿಕೆ ಇಡಿ ೩೨೫

೧೯ ಯಾರು ಪರಿಶ್ರಮಪಡುತ್ತಾರೋ ಅವರು ಮಾತ್ರ ಮೇಲಕ್ಕೆ ಬರುತ್ತಾರೆ ೩೨೬

೨೦ ದೇವರ ಮೇಲಾಗಲೀ, ಅತಿ ಮಾನವನ ಮೇಲಾಗಲೀ ಭರವಸೆ ಇಟ್ಟುಕೊಳ್ಳಬೇಡಿ ೩೨೭

೨೧ ನಾನು ದೇಶಕ್ಕಾಗಿ ಎಷ್ಟು ಸಾಧ್ಯವೋ ಅಷ್ಟೂ ಅಧಿಕಾರವನ್ನು
ಬಲವಂತವಾಗಿ ಪಡೆದುಕೊಳ್ಳುತ್ತೇನೆ ೩೨೯

೨೨ ನಿಮ್ಮ ಹಿತಾಸಕ್ತಿಗಳನ್ನು ಮುಂದು ಮಾಡಬಲ್ಲ ಜನಗಳನ್ನು ಹುಡುಕಿಕೊಳ್ಳಿ ೩೩೦

೨೩ ದುರಾದೃಷ್ಟವಶಾತ್ ನಾನು ಒಬ್ಬ ಹಿಂದೂವಾಗಿ ಹುಟ್ಟಿದೆ, ಆದರೆ ನಾನು ಹಿಂದುವಾಗಿ ಸಾಯುವುದಿಲ್ಲ ೩೩೩

೨೪ ನನ್ನ ಸಾಮರ್ಥ್ಯ ಮತ್ತು ಹಿರಿಮೆ ನನ್ನ ತಾಳ್ಮೆಯ ಪರಿಶ್ರಮ ಮತ್ತು ಬುದ್ಧಿವಂತಿಕೆಯ ಫಲಶೃತಿ ೩೩೮

೨೫ ನಾವು ಎಲ್ಲೇ ಹೋಗಲಿ, ನಮ್ಮ ಕಲ್ಯಾಣಕ್ಕಾಗಿ ಹೋರಾಡಲೇಬೇಕು ೩೩೯

೨೬ ಹಿಂದೂ ಧರ್ಮವನ್ನು ತ್ಯಜಿಸಲು ತೀರ್ಮಾನಿಸಿದೆ ೩೪೧

೨೭ ಜಯವನ್ನು ಸಾಧಿಸುವುದಕ್ಕೋಸ್ಕರ ನನ್ನ ಆತ್ಮಸಾಕ್ಷಿಯನ್ನು ನಾನು ಬಲಿ ಕೊಡಲಾರೆ ೩೪೨

೨೮ ನಿಮ್ಮ ದಾಸ್ಯ ವಿಮೋಚನೆಗೆ ಮತ್ತು ಉದ್ಧಾರಕ್ಕೆ ಮತಾಂತರದ ಆವಶ್ಯಕತೆ ಇದೆ ೩೪೪

೨೯ ವಿಮೋಚನೆಯ ದಾರಿ ಯಾವುದು? ೩೪೯

೩೦ ಮಹರ್ ಮತ್ತು ಪೂಂಗ್‌ಗಳ ಮಧ್ಯೆ ಯಾವ ಭೇದವೂ ಇಲ್ಲ ೩೮೧

೩೧ ನಿಮ್ಮ ನಾಚಿಕೆಗೇಡಿನ ವೃತ್ತಿಯನ್ನು ನೀವು ಬಿಟ್ಟುಬಿಡಬೇಕು ೩೮೨

೩೨ ಒಳಸಂಚಿಗೆ ಬಲಿಯಾಗಬೇಡಿ ೩೮೩

೩೩ ನಮ್ಮ ಕುಂದುಕೊರತೆಗಳನ್ನು ಮುಂದುವರೆಯುವುದಕ್ಕೆ ನಾವು ಬಿಡಬಾರದು ೩೮೮

೩೪ ನಿಮ್ಮ ವರ್ಗಗಳ ಯಾವ ಸಚಿವನೂ ಇರಲಿಲ್ಲ ೩೮೯

೩೫ ಹಿಂದೂ ಧರ್ಮಕ್ಕೆ ಸೇರಿದ ದೇವರುಗಳನ್ನು ಪೂಜಿಸಬೇಡಿ ೩೯೦

೩೬ ಕಾರ್ಮಿಕರನ್ನು ಕಮ್ಯುನಿಸ್ಟರು ಶೋಷಣೆ ಮಾಡಿದರು ೩೯೩

೩೭ ಶೋಷಣೆ ಮಾಡುವವರ ವಿರುದ್ಧ ಎಚ್ಚರಿಕೆಯಿಂದ ಇರಿ ೩೯೪

೩೮ ಆತ್ಮಗೌರವ ಮತ್ತು ಸ್ವಸಹಾಯ ಚಳುವಳಿಯಲ್ಲಿ ಕಳೆದುಕೊಳ್ಳುವುದು ಏನೂ ಇಲ್ಲ. ಆದರೆ ಎಲ್ಲವನ್ನು ಪಡೆದುಕೊಳ್ಳಬಹುದು ೩೯೫

೩೯ ರಾಜಕೀಯವಾಗಿ ಕ್ರಿಶ್ಚಿಯನ್ನರು ಹಿಂದೆ ಬಿದ್ದಿದ್ದಾರೆ ೩೯೬

೪೦ ಅಸ್ಪೃಶ್ಯರ ಉದ್ಧಾರಕ್ಕೆ ಕೆಲಸ ಮಾಡಿ ೩೯೭

೪೧ ಕಿವಿಗೊಡುವುದಕ್ಕೆ ಅರ್ಹರಾದವರೆಲ್ಲರನ್ನೂ ಪ್ರಜಾಪ್ರಭುತ್ವ ಗೌರವದಿಂದ ಕೇಳಲೇಬೇಕು ೩೯೮

೪೨ ತಮ್ಮ ಬಡತನಕ್ಕೆ ಕಾರಣವೇನೆಂದು ರೈತರು ಮತ್ತು ಕಾರ್ಮಿಕರು ಯೋಚಿಸಲೇಬೇಕು ೪೦೦

೪೩ ನಿಮ್ಮವರ್ಗಗಳ ಹಿತಾಸಕ್ತಿಯನ್ನು ರಕ್ಷಣೆ ಮಾಡಿ ೪೦೨

೪೪ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಕಾರ್ಮಿಕರ ಯೂನಿಯನ್‌ಗಳು (ಸಂಘಗಳು) ರಾಜಕೀಯ ಪ್ರವೇಶ ಮಾಡಬೇಕು ೪೦೩

೪೫ ನಡತೆ ಮತ್ತು ವಿನೀತ ಭಾವ ಇಲ್ಲದ ವಿದ್ಯಾವಂತ ಮನುಷ್ಯ ಕಾಡುಪ್ರಾಣಿಗಿಂತ ಹೆಚ್ಚು ಅಪಾಯಕಾರಿ ೪೨೧

೪೬ ಅಸ್ಪೃಶ್ಯರು ತಾವೇ ಹೆಣಗಾಡಬೇಕು ೪೨೨

೪೭ ಸಭ್ಯತೆಯಿಂದ ಕೂಡಿದ ಜೀವನ ಮಾಡಿ ೪೨೩

೪೮ ನಿಮ್ಮ ವರ್ಗಗಳವರನ್ನು ಸರ್ಕಾರ ಲಕ್ಷ್ಯವೇ ಮಾಡಲಿಲ್ಲ ೪೨೪

೪೯ ಸರ್ವರಿಗೂ ವಿರೋಧಿಯಾದ ವಿದೇಶೀ ಸಾಮ್ರಾಜ್ಯಶಾಹಿಯೊಂದಿಗೆ ಹೋರಾಡಲು ಸಂಯುಕ್ತ ರಾಜಕೀಯ ಸಂಘಟನೆಯ ಆವಶ್ಯಕತೆ ಇದೆ ೪೨೫

೫೦ ಕುಂದುಕೊರತೆಗಳನ್ನು ನನಗೆ ತಿಳಿಸಿ ೪೨೮
೫೧ ಅತ್ಯುತ್ತಮ ನಡತೆಯುಳ್ಳ ಮನುಷ್ಯರಾಗಿ ೪೨೯
೫೨ ಭಾರತದ ರಾಜಕೀಯ ವಿಕಾಸದ ಗುರಿಯೇನು? ೪೩೧
೫೩ ಯಾವುದೇ ರೂಪದಲ್ಲಾಗಲೀ ಫೆಡರೇಷನ್ ಅನ್ನು ಒಪ್ಪಿಕೊಳ್ಳಲು
ಗಾಂಧಿ ಸಿದ್ಧವಾಗಿದ್ದರು ೪೩೫
೫೪ ನಿಮ್ಮ ಮಕ್ಕಳನ್ನು ಸಂಕಷ್ಟಭರಿತ ಜೀವನದಿಂದ ಕಾಪಾಡಿ ೪೩೬
೫೫ ನಾನು ಇಡೀ ಸಮುದಾಯದ ಒಳಿತಿಗಾಗಿ ಕೆಲಸ ಮಾಡಿದೆ, ಕೇವಲ ಅದರ
ಒಂದು ಭಾಗಕ್ಕಾಗಿ ಮಾತ್ರವಲ್ಲ ೪೩೭
೫೬ ತೆರಿಗೆಗಳನ್ನು ರೈತರಿಗಾಗಿ ಮಾತ್ರ ಉಪಯೋಗಿಸಬೇಕು ೪೩೯
೫೭ ಮದರ್ ವತನ್ ಎನ್ನುವುದು ಒಂದು ಹೃದಯಶೂನ್ಯ ಶೋಷಣೆ ೪೪೦
೫೮ ನಿಮ್ಮ ವರ್ಗಗಳವರಿಗೆ ಸರ್ಕಾರ ಏನನ್ನೂ ಮಾಡಿಲ್ಲ ೪೪೨
೫೯ ಅಸ್ಪೃಶ್ಯತೆಯ ಪಾಪಕ್ಕೆ ಹಿಂದೂಗಳೇ ಹೊಣೆಗಾರರು ೪೪೨
೬೦ ಸೇನೆಯಲ್ಲಿ ಮೊದಲಿನ ಸ್ಥಾನವನ್ನು ಪುನಃ ಪಡೆದುಕೊಳ್ಳಿ ೪೪೩
೬೧ ಭಾರತ ಸರ್ಕಾರದ ಅಧಿನಿಯಮ ಮತ್ತು ಪೂನಾ ಕೌಲಿನ ಕೆಳಗೆ ಕೊಟ್ಟಿರುವ
ರಕ್ಷಣೋಪಾಯಗಳು ಸಾಕಷ್ಟು ಇಲ್ಲ ೪೪೪
೬೨ ಹಿಂದೂ ಸಮಾಜ ತನ್ನ ಪುರಾತನ ಚೌಕಟ್ಟನ್ನು ಕಿತ್ತುಹಾಕಿ ಆಧುನಿಕ
ರೀತಿಯಲ್ಲಿ ವ್ಯವಸ್ಥೆಗೊಳ್ಳಬೇಕು ೪೪೫
೬೩ ಗಾಂಧಿಯವರ ಪರಿಶ್ರಮಗಳು ಅಸಮರ್ಪಕವಾಗಿವೆ ೪೪೬
೬೪ ನಮ್ಮ ಸಾಮಾಜಿಕ ಪರಿಸ್ಥಿತಿ ಕಠಿಣ ಪರಿಶ್ರಮವಿಲ್ಲದೆ ಇನ್ನೂ ಹೆಚ್ಚಾಗಿ ಹದಗೆಡಬಹುದು ೪೪೭
೬೫ ನಿಮಗೆ ಎಂಥ ಅಗಾಧವಾದ ಶಕ್ತಿ ಇದೆ ಎಂದು ನೀವೇ ಮನಗಂಡಿಲ್ಲ ೪೪೯
೬೬ ವತನ್‌ದಾರಿ ಮಹರ್‌ಗಳಿಗೆ ಒಂದು ಶಾಪ ೪೫೧
೬೭ ಗಮನಾರ್ಹವಾದ ಬದಲಾವಣೆ ಆಗಿದೆ ೪೫೪
೬೮ ವಿದ್ಯಾವಂತರು ಮಿಲಿಟರಿಯನ್ನು ಸೇರಲೇಬೇಕು ೪೫೫
೬೯ ನಮ್ಮ ನಾಡಿನ ರಕ್ಷಣೆಗಾಗಿ ನನ್ನ ಪ್ರಾಣವನ್ನು ಕೊಡುತ್ತೇನೆ ೪೫೬
೭೦ ನಿಮ್ಮ ಮುಕ್ತಿ ನಿಮ್ಮ ಕೈಗಳಲ್ಲೇ ಇರಬೇಕು ೪೫೭
೭೧ ನನ್ನ ಮನೆಯ ಬಾಗಿಲು ನನ್ನ ಸ್ನೇಹಿತರಿಗಾಗಿ ಯಾವಾಗಲೂ ತೆರೆದಿರುತ್ತದೆ ೪೬೦
೭೨ ಕನಿಷ್ಠ ಮಟ್ಟದ ಸಮಾಜದ ಹೋರಾಟ ಕಾರ್ಮಿಕ ವರ್ಗಗಳ ಎಲ್ಲಾ ಭಾಗಗಳಿಗೂ
ಸಹಾಯಕವಾಗಿಯೇ ತೀರುತ್ತದೆ ೪೬೧
೭೩ ಅತ್ಯಂತ ತಳಮಟ್ಟದಲ್ಲಿರುವ ಕಲ್ಲನ್ನು ಜರುಗಿಸಿದರೆ ಅದರ
ಮೇಲಿರುವುದೆಲ್ಲಾ ಅಲ್ಲಾಡುತ್ತವೆ ೪೬೨
೭೪ ಪ್ರಜಾಪ್ರಭುತ್ವದ ಅವಸಾನವಾದರೆ ಅದೇ ನಮ್ಮ ಸರ್ವನಾಶ ೪೬೪
೭೫ ವಿದ್ಯಾವಂತರಾಗಿ, ಚಳುವಳಿ ಮಾಡಿ, ಸಂಘಟಿತರಾಗಿ, ನಂಬಿಕೆ ಇಟ್ಟುಕೊಳ್ಳಿ
ಮತ್ತು ನಿರಾಸೆ ಹೊಂದದಿರಿ ೪೯೦

೭೬ ಸಮುದಾಯದ ಪ್ರಗತಿಯನ್ನು ಮಹಿಳೆಯರ ಪ್ರಗತಿಯಿಂದ ಅಳೆಯಲಾಗುತ್ತದೆ ೪೯೩
೭೭ ನಾನು ಅಹಿಂಸೆ ಮತ್ತು ದೈನ್ಯತೆಯ ನಡುವೆ ವ್ಯತ್ಯಾಸವನ್ನು ಗುರುತಿಸುತ್ತೇನೆ ೪೯೯
೭೮ ನಾನು ನಿಮ್ಮೊಂದಿಗೆ ಇರುತ್ತೇನೆ ೫೦೫
೭೯ ಈ ದೇಶದ ಸ್ವಾತಂತ್ರ್ಯ ನನ್ನ ಮಹದಾಸೆಯಾಗಿದ್ದು ನಾನು ಯಾರಿಗೂ
ತಲೆ ಬಾಗುವುದಿಲ್ಲ ೫೦೬
೮೦ ಸರ್ಕಾರದ ಕಡಿವಾಣಗಳು ನಿಮ್ಮ ಕೈಲಿರಬೇಕೆಂದು ನಾನು ಬಯಸುತ್ತೇನೆ ೫೦೭
೮೧ ಪ್ರಸ್ತುತ ಅವ್ಯವಸ್ಥೆಗಳು ಭಾರತೀಯರಿಗೆ ಮಾತ್ರ ಕೆಡಕನ್ನುಂಟುಮಾಡುತ್ತಿವೆ ೫೦೯
೮೨ ಬ್ರಾಹ್ಮಣೇತರರ ಪಕ್ಷ ತಾನೇ ಪುನರ್ ನಿರ್ಮಾಣವಾಗಬೇಕು ೫೧೧
೮೩ ಸೇನೆ, ನೌಕಾಪಡೆ ಮತ್ತು ವಾಯುಪಡೆಗಳಿಗೆ ಸೇರಿಕೊಳ್ಳಿ ೫೧೨
೮೪ ಗಾಂಧಿ ಮತ್ತು ಜಿನ್ನಾ ನಿವೃತ್ತಿ ಆಗಬೇಕು ೫೧೩
೮೫ ಯುದ್ಧಾನಂತರದ ಕಾಲದಲ್ಲಿ ಬಡತನವನ್ನು ಸಹಿಸಲಾಗುವುದಿಲ್ಲ ೫೧೫
೮೬ ಸ್ವರಾಜ್ಯ ಕಾರ್ಮಿಕರ ಕೈಗಳಲ್ಲಿ ಇರಬಹುದಾಗಿದೆ ೫೧೬
೮೭ ಹಕ್ಕುಗಳನ್ನು ಅನುಭವಿಸುವುದಕ್ಕೆ ಅರ್ಹತೆಯನ್ನು ಪಡೆಯಿರಿ ೫೧೭
೮೮ ಪರಿಶಿಷ್ಟ ಜಾತಿಗಳವರು ಹಿಂದುತ್ವವನ್ನು ತ್ಯಜಿಸಲೇಬೇಕು ೫೧೮
೮೯ ಈಗ ಅಥವಾ ಇನ್ನಾವಾಗಲೂ ಇಲ್ಲ ಎಂಬ ಪ್ರಶ್ನೆ
ಪರಿಶಿಷ್ಟ ಜಾತಿಗಳ ಮುಂದೆ ಇದೆ ೫೨೦
೯೦ ನಿಮ್ಮ ವರ್ಗಗಳವರು ಹಿದೂ ಸಮುದಾಯದ ಭಾಗವಲ್ಲ ೫೨೨
೯೧ ನಾನೇನೂ ರಾಷ್ಟ್ರೀಯತೆಯ ವಿರೋಧಿಯಲ್ಲ, ಆದರೆ..... ೫೨೫
೯೨ ಒಗ್ಗಟ್ಟಿನಿಂದ ಇರುವುದು ಅತಿ ಮಹತ್ವದ್ದಾಗಿದೆ ೫೩೦
೯೩ ನಾನು ಭಾರತ ದೇಶದ ಭಕ್ತರುಗಳಿಗಿಂತ ಬಹಳ ಬಹಳ ಮುಂದೆ ಇದ್ದೆ ೫೩೩
೯೪ ಭಾರತದ ಚರಿತ್ರೆ ಬೌದ್ಧಮತ ಮತ್ತು ಬ್ರಾಹ್ಮಣತ್ವದ ನಡುವಿನ ಸೆಣಸಾಟವಲ್ಲದೆ
ಬೇರೇನೂ ಇಲ್ಲ ೫೪೪
೯೫ ಪ್ರಾಂತೀಯ ಸ್ವಾಯತ್ತತೆಗೆ ಗಾಂಧೀಜಿ ತೃಪ್ತಿಪಟ್ಟುಕೊಂಡಿದ್ದರು ೫೪೭
೯೬ ನಾವೇ ಈ ದೇಶದ ಭವಿಷ್ಯವನ್ನು ರೂಪಿಸುವವರು ೫೪೮
೯೭ ಪದವಿಗಳಲ್ಲಿ ಧನಾತ್ಮಕವಾದ ಜ್ಞಾನವಿರುತ್ತದೆಯೇ ಎಂದು
ವಿದ್ಯಾರ್ಥಿಗಳು ನೋಡಲೇಬೇಕು ೫೫೦
೯೮ ಈ ದೇಶದ ದಾರಿದ್ರ್ಯಪೀಡಿತ ಲಕ್ಷಾಂತರ ಮಂದಿಯ ಅಭ್ಯುಯದಕ್ಕಾಗಿ
ಒಂದು ಆಡಳಿತ ವ್ಯವಸ್ಥೆಗೆ ಅಸ್ತಿಭಾರವನ್ನು ಹಾಕೋಣ ೫೫೨
೯೯ ಆಧುನಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವರ್ತಮಾನ ಪತ್ರಿಕೆಗಳು ಒಳ್ಳೆಯ
ಸರ್ಕಾರದ ಮೂಲ ಭೂತ ತಳಹದಿಯಾಗಿರುತ್ತವೆ ೫೫೪
೧೦೦ ಪರಿಶಿಷ್ಟ ಜಾತಿಗಳು ಸಂಘಟಿತರಾಗಬೇಕು ೫೫೮
೧೦೧ ಮೂಲ ನಿವಾಸಿ ಪಂಗಡಗಳಿಗೆ ಶಾಸನಬದ್ಧ ಆಯೋಗವಿರಲೇಬೇಕು ೫೫೯
೧೦೨ ಭಾರತದ ಗುರಿಯಾದ ಸ್ವಾತಂತ್ರ್ಯದ ಬಗ್ಗೆ ಯಾವ ವಿವಾದವೂ ಇಲ್ಲ ೫೬೩

೧೦೩ ಮನುಷ್ಯನಿಗೆ ರಾಜಕೀಯವಾಗಿ ಅರಿವನ್ನುಂಟುಮಾಡಲು
ಬುದ್ಧಿಪೂರ್ವಕ ಪ್ರಯತ್ನವನ್ನು ಮಾಡಿ ೫೬೫
೧೦೪ ಸರ್ಕಾರ ೧೯೪೨ರಲ್ಲಿ ತೆಗೆದುಕೊಂಡ ಕ್ರಮ ನ್ಯಾಯಯುತವಾಗಿಯೇ ಇತ್ತು ೫೬೭
೧೦೫ ಗಾಂಧೀಜಿಯವರು ನಿರಾಕರಿಸಿದರು ೫೬೭
೧೦೬ ಪರಿಶಿಷ್ಟ ಜಾತಿಗಳವರ ಆಗ್ರಹದ ಬೇಡಿಕೆಗಳನ್ನು ಒಂದು ನಿಷ್ಪಕ್ಷಪಾತವಾದ
ಅಂತಾರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಒಪ್ಪಿಸಬೇಕು ೫೬೮
೧೦೭ ನಿಮ್ನವರ್ಗಗಳವರನ್ನು ಕಡೆಗಣಿಸಲಾಗಿದೆ ೫೭೧
೧೦೮ ಪರಿಶಿಷ್ಟ ಜಾತಿಗಳವರನ್ನು ಎಲ್ಲಿದ್ದರೋ ಅಲ್ಲಿಯೇ ಬಿಡಲಾಗಿದೆ ೫೭೨
೧೦೯ ನನಗೆ ನಮ್ಮ ಜನಗಳಿಗೂ ಮತ್ತು ಈ ದೇಶಕ್ಕೂ ಸಹ ನಿಷ್ಠೆ ಇದೆ ೫೭೩
೧೧೦ ಅಲ್ಪಸಂಖ್ಯಾತರನ್ನು ಯಾವಾಗಲೂ ಮನ ಒಲಿಸಿಕೊಳ್ಳಬೇಕೇ ವಿನಃ
ಯಾವತ್ತೂ ಅವರ ಮೇಲೆ ಒತ್ತಾಯ ಹೇರಬಾರದು ೫೭೭
೧೧೧ ಭಾಷಣ ಮಾಡುವ ಕಲೆಯನ್ನು ಬೆಳೆಸಿಕೊಳ್ಳಬಹುದು ೫೮೬
೧೧೨ ಮನುವಿನ ಅಥವಾ ಯಾಜ್ಞವಲ್ಕ್ಯನ ದೈವೀ ಕಾನೂನಿಂದ ಹಿಂದೂ
ಸಮಾಜ ತನ್ನನ್ನು ತಾನು ದುರಸ್ತುಮಾಡಿಕೊಳ್ಳಲು ಆಗಲೇ ಇಲ್ಲ ೫೮೭
೧೧೩ ಒಬ್ಬ ನಾಯಕನ ಕೆಳಗೆ; ಒಂದು ಪಕ್ಷದ ಕೆಳಗೆ, ಒಂದು ಕಾರ್ಯಕ್ರಮದ
ಕೆಳಗೆ ಸಂಘಟಿತರಾಗಿ ೫೯೦
೧೧೪ ಸಮುದಾಯದ ಪುರೋಭಿವೃದ್ಧಿ ಯಾವಾಗಲೂ
ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ ೫೯೬
೧೧೫ ನಾಗರಿಕ ಸಂಹಿತೆಯ ಕಡೆಗೆ, ಹಿಂದು ಸಂಹಿತೆ ಒಂದು ಸರಿಯಾದ ಹೆಜ್ಜೆ ೫೯೭
೧೧೬ ಭಾರತ ಪುನಃ ಗುಲಾಮಗಿರಿಗೆ ಹೋಗದಂತೆ ನಾವು ಖಾತರಿಪಡಿಸಿಕೊಳ್ಳಬೇಕು ೫೯೯
೧೧೭ ಮಹಾರಾಷ್ಟ್ರ ಜನರು ದೇಶಕ್ಕೆ ಹೆಚ್ಚು ಪ್ರಾಮಾಣಿಕರೂ ಮತ್ತು ಹೆಚ್ಚುಕರ್ತವ್ಯನಿಷ್ಠರೂ
ಆಗಿದ್ದಾರೆ ೬೦೨
೧೧೮ ಧರ್ಮವನ್ನು ವಾರಸುದಾರಿಕೆಯ ಮೂಲಕ ಅನುಸರಿಸುವುದನ್ನು ಬಿಟ್ಟು
ಪ್ರತಿಯೊಬ್ಬರೂ ವೈಚಾರಿಕವಾಗಿ ಪರೀಕ್ಷಿಸಿ ಅನುಸರಿಸಬೇಕು ೬೦೩
೧೧೯ ನಾಸ್ತಿಕರನ್ನು ಅಷ್ಟ ಪಥಕ್ಕೆ ಪರಿವರ್ತಿಸಬೇಕು ೬೦೬
೧೨೦ ಬೌದ್ಧಮತ ಪ್ರಜಾಸತ್ತೆಗೆ ಮತ್ತು ಸಮಾಜವಾದಕ್ಕೆ ದಾರಿ ಮಾಡಿಕೊಟ್ಟಿತು ೬೦೮
೧೨೧ ನನ್ನ ಉಳಿದಿರುವ ಜೀವನವನ್ನು ಬೌದ್ಧಧರ್ಮವನ್ನು ಪುನರುಜ್ಜೀವನ
ಗೊಳಿಸುವುದಕ್ಕೆ ಮತ್ತು ಹರಡುವುದಕ್ಕೆ ಮೀಸಲಿಡುತ್ತೇನೆ ೬೧೨
೧೨೨ ಮಸೂದೆಯ ಉದ್ದೇಶ ಮಹಿಳೆಯರ ಸಾಮಾಜಿಕ ಪ್ರಗತಿಗೋಸ್ಕರವಾಗಿದೆ ೬೧೩
೧೨೩ ಪರಿಶಿಷ್ಟ ಜಾತಿಗಳು ರಾಜಕೀಯ ತಾಟಸ್ಥ್ಯವನ್ನು ಬಿಟ್ಟುಬಿಡಬೇಕು ೬೧೪
೧೨೪ ನಾನು ಕರಗದೆ ಇರುವ ಒಂದು ಬಂಡೆಯ ಹಾಗೆ, ಆದರೆ
ಅದು ನದಿಗಳು ಹರಿಯುವ ದಿಕ್ಕನ್ನೇ ತಿರುಗಿಸುತ್ತದೆ ೬೧೬

೧೨೫ ಸಂಸದೀಯ ಪ್ರಜಾಸತ್ತೆಗೆ ಸೋಲುಂಟಾದರೆ, ಅದು ದಂಗೆ, ಅರಾಜಕತೆ ಮತ್ತು
ಕಮ್ಯೂನಿಸಂನಲ್ಲೆ ಪರ್ಯವಸಾನವಾಗುತ್ತದೆ ೬೨೩
೧೨೬ ನಮ್ಮ ನೈಜ ಪ್ರತಿನಿಧಿಗಳನ್ನು ಚುನಾಯಿಸದಿದ್ದರೆ, ಆಗ ಪ್ರಜಾಪ್ರಭುತ್ವ
ಎನ್ನುವುದು ಒಂದು ಪರಿಹಾಸ್ಯವಾಗುತ್ತದೆ ೬೩೦
೧೨೭ ಬಡವರು ತಮ್ಮ ಉದ್ದೇಶವನ್ನು ಸಾಧಿಸುವುದಕ್ಕಾಗಿ ಪ್ರತ್ಯೇಕವಾಗಿ ಒಗ್ಗಟ್ಟಾಗಬೇಕು ೬೩೯
೧೨೮ ನಮ್ಮ ಬಂಧುಬಳಗವನ್ನು ಕಾಪಾಡೋಣ ೬೪೭
೧೨೯ ನಾನು ಇದಕ್ಕೆ ಮುಂಚೆಯೇ ಏಕೆ ರಾಜಿನಾಮೆ ಕೊಡಲಿಲ್ಲ ೬೪೮
೧೩೦ ತನ್ನ ಪ್ರತ್ಯೇಕ ರಾಜಕೀಯ ಅಸ್ತಿತ್ವವನ್ನು ಫೆಡರೇಷನ್ ಬಿಟ್ಟುಬಿಡುವುದಿಲ್ಲ ೬೫೧
೧೩೧ ಹಿಂದೂ ಸಂಹಿತೆ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುತ್ತದೆ ೬೫೨
೧೩೨ ಜನಗಳು ಸೋಮಾರಿಯಾಗಿರುವುದು, ಉದಾಸೀನದಿಂದ ಇರುವುದು ಒಳ್ಳೆಯದಲ್ಲ ೬೫೩
೧೩೩ ಆಡಳಿತದಲ್ಲಿನ ಪರಿಶುದ್ಧತೆ ಜನಗಳ ಕಲ್ಯಾಣಕ್ಕಾಗಿ ಆವಶ್ಯಕವಾಗಿದೆ ೬೫೬
೧೩೪ ಪ್ರಶ್ನಿಸುವುದಕ್ಕೆ ಸ್ನೇಹಬಂಧ ೬೫೮
೧೩೫ ಸದಾಕಾಲ ನನ್ನ ಹೃದಯದಲ್ಲಿ ದೇಶದ ಹಿತಾಸಾಕ್ತಿಯೇ ಇರುತ್ತ್ತದೆ ೬೫೯
೧೩೬ ನನ್ನ ಗಮನವೆಲ್ಲ ಫೆಡರೇಷನ್ನಿಗೆ ಸಭಾಭವನವನ್ನು ಕಟ್ಟುವುದರಲ್ಲಿ ಕೇಂದ್ರೀಕೃತವಾಗಿದೆ ೬೬೫
೧೩೭ ಆಧುನಿಕ ಪ್ರಪಂಚದ ಆವಶ್ಯಕತೆಗಳನ್ನು ಪೂರೈಸಲು ವಿಶ್ವವಿದ್ಯಾಲಯದ
ಶಿಕ್ಷಣವನ್ನು ಮಾನ್ಯ ಮಾಡಿ ೬೬೬
೧೩೮ ಪ್ರಜಾಪ್ರಭುತ್ವ ಜಯಪ್ರದವಾಗಿ ಕಾರ್ಯನಿರ್ವಹಿಸಲು
ಇರುವ ಪೂರ್ವಭಾವಿ ನಿಯಮಗಳು ೬೬೭
೧೩೯ ಜ್ಞಾನವೇ ಮನುಷ್ಯ ಜೀವನದ ಬುನಾದಿ ೬೮೧
೧೪೦ ಮಹಿಳೆಯರ ಸಾಮಾಜಿಕ ಮುನ್ನಡೆಯಲ್ಲಿ ಮಹಿಳಾ
ನಾಯಕಿಯರುಗಳಿಗೆ ಆಸಕ್ತಿ ಇಲ್ಲ ೬೮೨
೧೪೧ ..ನಾನು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ ೬೮೩
೧೪೨ ಉಸ್ಮಾನಿಯ ವಿಶ್ವವಿದ್ಯಾಲಯ ಡಾ: ಅಂಬೇಡ್ಕರ್ ಅವರನ್ನು ಗೌರವಿಸಿತು ೬೮೪
೧೪೩ ಬುದ್ಧನ ಬೋಧನೆಯನ್ನು ಅಳವಡಿಸಿಕೊಳ್ಳದಿದ್ದರೆ ಯೂರೋಪಿನಲ್ಲಿ ನಡೆದ
ಸಂಘರ್ಷ ಏಷ್ಯಾದಲ್ಲೂ ಪುನರಾವರ್ತನೆಯಾಗುತ್ತದೆ ೬೮೭
೧೪೪ ಮೇಲ್ವರ್ಗದ ಜನಗಳು ತಾವು ಎಂದು ಹೇಳಿಕೊಳ್ಳುವವರ
ಅಸ್ತಿತ್ವವನ್ನೇ ಅಳಿಸಿ ಹಾಕಲಾಗುತ್ತದೆ ೬೮೮
೧೪೫ ಜಾತಿರಹಿತ, ವರ್ಗರಹಿತ ಸಮಾಜವನ್ನು ಅಸ್ತಿತ್ವಕ್ಕೆ ತರದ
ಹೊರತು ಭಾರತದಲ್ಲಿ ಅಭಿವೃದ್ಧಿ ಇರುವುದಿಲ್ಲ ೬೮೪
೧೪೬ ಟೀಕೆಯಿಂದ ತಪ್ಪುದಾರಿಗೆ ಎಳೆಯಲ್ಪಡಬೇಡಿ ೬೯೦
೧೪೭ ರಾಜಕೀಯವೆಂಬುದೇ ರಾಷ್ಟ್ರ ಜೀವನದ ಹುಟ್ಟೂ ಅಲ್ಲ ಕೊನೆಯೂ ಅಲ್ಲ ೬೯೧
೧೪೮ ನಾವು ಕೇಂದ್ರ ಸರ್ಕಾರದ ವಿರುದ್ಧವೂ ಸಹ ಭಾರತದ
ಭೂ ಸತ್ಯಾಗ್ರಹವನ್ನು ನಡೆಸಿಯೇ ನಡೆಸುತ್ತೇವೆ ೬೯೨

೧೪೯ ಧರ್ಮದ ಹೆಸರಿನಲ್ಲಿ ಹಣಸಂಗ್ರಹ ಮಾಡಿ ಅದನ್ನು
ಪೋಲು ಮಾಡುವುದು ಅಪರಾಧಿಕ ಕೃತ್ಯವಾಗುತ್ತದೆ ೯೯೪
೧೫೦ ನನ್ನ ಜೀವನದ ತತ್ತ್ವ ೯೯೭
೧೫೧ ನಾನೊಬ್ಬ ಗೌತಮ ಬುದ್ಧನ, ಕಬೀರನ, ಮಹಾತ್ಮ ಫುಲೆಯವರ ಭಕ್ತನಾಗಿದ್ದು
ಜ್ಞಾನ, ಆತ್ಮ ಗೌರವ ಮತ್ತು ಸಚ್ಚಾರಿತ್ರ್ಯದ ಆರಾಧಕನಾಗಿದ್ದೇನೆ ೯೯೮
೧೫೨ ಭಾರತದಲ್ಲಿ ಬೌದ್ಧ ಚಳುವಳಿ, ಒಂದು ನೀಲನಕ್ಷೆ ೨೦೦
೧೫೩ ಪಾಂಡುರಂಗನು ಬೇರಾರೂ ಅಲ್ಲದೆ ಬುದ್ಧನೇ ಆಗಿದ್ದಾನೆ ೨೦೬
೧೫೪ ಬೌದ್ಧಧರ್ಮ ಬೋಧಿಸುವ ಅಹಿಂಸೆಗೂ ಜೈನ ಧರ್ಮ
ಬೋಧಿಸುವ ಅಹಿಂಸೆಗೂ ವ್ಯತ್ಯಾಸವಿದೆ ೨೦೭
೧೫೫ ನಾನೇಕೆ ಭೌದ್ಧಧರ್ಮವನ್ನು ಇಷ್ಟಪಡುತ್ತೇನೆ ೨೦೮
೧೫೬ ಬೌದ್ಧಧರ್ಮದ ಅಲೆ ಭಾರತದಲ್ಲಿ ಎಂದಿಗೂ ಹಿಂದೆ ಸರಿಯುವುದಿಲ್ಲ ೨೧೦
೧೫೭ ಭಾರತದಲ್ಲಿ ಪ್ರಜಾಪ್ರಭುತ್ವದ ಭವಿಷ್ಯ ೨೧೨
೧೫೮ ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ೨೩೮

**ಅನುಬಂಧ I**

ಡಾ. ಅಂಬೇಡ್ಕರ್ ಅವರ ಮತಾಂತರದ ಘೋಷಣೆಯ ಮೇಲೆ
ಗಾಂಧೀಜಿಯವರ ಲೇಖನಗಳು ೨೪೮

**ಅನುಬಂಧ II**

ಸಮತಾ ಸೈನಿಕ ದಳದ ಅಂಗ ರಚನೆ ಸೈನಿಕನ ಪ್ರಮಾಣ ವಚನ ೨೫೨

**ಅನುಬಂಧ III**

ಒಂದು ಬಿಚ್ಚು ಮಾತಿನ ಉದ್ಗಾರ ೨೫೮

ಗ್ರಂಥಋಣ ೨೬೨

ವಿಷಯಸೂಚಿ ೨೬೫

# I

# ರಾಷ್ಟ್ರದ ನಿರ್ಮಾಣ ಮತ್ತು ಅದರಲ್ಲಿನ ಪ್ರಜಾಪ್ರಭುತ್ವ

# ೧
# ಹೊಣೆಗಾರಿಕೆಯಿಲ್ಲದ ಪ್ರಾಂತೀಯ ಸ್ವಾಯತ್ತತೆ ಅವಿವೇಕವಾಗುತ್ತದೆ

ಡಾ. ಬಿ.ಆರ್. ಅಂಬೇಡ್ಕರ್ ಅವರು ೧೯೩೨ರ ನವೆಂಬರ್ ೭ರಂದು ಇಂಗ್ಲೆಂಡಿಗೆ ಹೊರಟರು. ಹೊರಡುವ ಸಮಯದಲ್ಲಿ ನೀಡಿದ ಸಂದರ್ಶನದಲ್ಲಿ ಅವರು ಕೇಂದ್ರದಲ್ಲಿ ಹೊಣೆಗಾರಿಕೆಯಿಲ್ಲದ ಪ್ರಾಂತೀಯ ಸ್ವಾಯತ್ತತೆಯು ಅವಿವೇಕವಾಗುತ್ತದೆ ಎಂದು ಹೇಳಿದರು. ಅಲ್ಲದೆ, ಬ್ರಿಟಿಷ್ ಭಾರತದ ಕೇಂದ್ರೀಯ ಹೊಣೆಗಾರಿಕೆಯು ಸಂಯುಕ್ತ ಭಾರತದ ಮೇಲೆ ಅವಲಂಬಿತವಾಗಿರುವುದನ್ನು ತಾವು ಇಷ್ಟಪಡುವುದಿಲ್ಲ ಎಂದರು. ಗಾಂಧಿಯವರ ಅಸಹಕಾರ ಚಳವಳಿಯ ಬಗ್ಗೆ ಮಾತನಾಡುತ್ತಾ, ಅದಕ್ಕೆ ಬ್ರಿಟಿಷ್ ನೌಕರಶಾಹಿಯನ್ನು ಕಿತ್ತೊಗೆಯಲಾಗದುದರಿಂದ ಅದನ್ನು ಬಂಡಾಯವೆಂದು ಕರೆಯಲಾಗುವುದಿಲ್ಲ ಎಂದರು.

* * * * *

---

(ಕೀರ್. ಪುಟ ೨೧೯)

# ೨

# ಸಂಯುಕ್ತ ಹಾಗೂ ಪ್ರತ್ಯೇಕ ಮತಕ್ಷೇತ್ರಗಳು ಡಾ. ಅಂಬೇಡ್ಕರ್ ಅವರ ಮಧ್ಯಮಾರ್ಗ

ಈ ವಿಷಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಹೇಳಿಕೆಯನ್ನು ದ ಟೈಮ್ಸ್ ಆಫ್ ಇಂಡಿಯಾ ಹೀಗೆ ವರದಿಮಾಡಿತ್ತು –

"ಪಂಡಿತ್ ಮದನ ಮೋಹನ ಮಾಳವೀಯ ಮತ್ತು ಜಿನ್ನಾ ಅವರ ನಡುವೆ ನಡೆದ ಅಭಿಪ್ರಾಯ ವಿನಿಮಯ ಹಾಗೂ ಔಪಚಾರಿಕ ಮಾತುಕತೆಗಳು ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಎರಡೂ ಪಕ್ಷಗಳವರು ಸಮ್ಮತಿಸಬಹುದಾದ ಒಪ್ಪಂದವೊಂದು ನಡೆದು ಮಹಾಪ್ರಭುಗಳ ಸರಕಾರದ ಕೋಮುಗಳ ವಿಷಯದ ನಿರ್ಣಯವನ್ನು ಬದಲಿಸಿ ಅದರ ಸ್ಥಾನವನ್ನು ತುಂಬುವಂತೆ ಮಾಡುವ ಅವಕಾಶವು ಸದ್ಯದಲ್ಲಿ ಸಾಧ್ಯವಿಲ್ಲ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ. ಈಗಿನ ಪರಿಸ್ಥಿತಿಯಲ್ಲಿ ಎರಡೂ ಸಮುದಾಯಗಳವರು ಪ್ರತ್ಯೇಕವಾಗಿಯೇ ಮುಂದುವರಿಯಬೇಕೆಂದು ಹೇಳಿ ಪಂಡಿತ್ ಮಾಳವೀಯ ಅವರು ತಮ್ಮ ಕರ್ತವ್ಯವನ್ನು ಮುಗಿಸಿ ಹಿಂದಿರುಗಿದರು. ಹೀಗಿರುವಾಗ, ಈ ಎರಡು ಸಮುದಾಯಗಳು ಪ್ರತ್ಯೇಕವಾಗಿಯೇ ಮುಂದುವರಿಯುವ ವಿಷಯದಿಂದ ಎಷ್ಟು ಜನಕ್ಕೆ ಸಂತೃಪ್ತಿಯಾಗುತ್ತದೆಯೆಂಬುದು ನನಗೆ ತಿಳಿದಿಲ್ಲ. ಏನೇ ಆದರೂ, ಎರಡೂ ಪಕ್ಷಗಳ ದಾರಿಯು ಪ್ರತ್ಯೇಕವಾಗಿರುವವರೆಗೆ, ಅವೆರಡೂ ಪರಸ್ಪರ ವಿರುದ್ಧವಾಗಿಯೇ ವರ್ತಿಸುತ್ತಿರುತ್ತಾರೆಂದು ನನಗೆ ತೋರುತ್ತದೆ.

ನಾನು ಹಿಂದುವೂ ಅಲ್ಲ, ಮುಸ್ಲಿಮನೂ ಅಲ್ಲ. ನಾನು ಈ ಸಲಹೆಯನ್ನು ಪಕ್ಷಪಾತಿಯಾಗಿ ಮಾಡುತ್ತಿಲ್ಲ, ಬದಲಿಗೆ ಈ ಸಮಸ್ಯೆಯನ್ನು ಅಧ್ಯಯನಮಾಡುತ್ತಿರುವ ವ್ಯಕ್ತಿಯಾಗಿ ಮಾಡುತ್ತಿದ್ದೇನೆ.

ನನ್ನ ಸಲಹೆಯನ್ನು ವಿವರಿಸುವುದಕ್ಕಿಂತ ಮೊದಲು, ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಬೇಕು. 'ಅಲ್ಪಸಂಖ್ಯಾತರು' ಎನ್ನುವ ಪದವನ್ನು ಸರಿಯಾದ ಲಕ್ಷ್ಯವಿಲ್ಲದೆ ಸಡಿಲವಾಗಿ ಬಳಸಲಾಗುತ್ತಿದೆ. ಇದರಿಂದ ಆಗಿರುವ ಅತಿ ಕೆಟ್ಟ ಪರಿಣಾಮವೆಂದರೆ, ಒಂದು ನಿರ್ದಿಷ್ಟ ಪ್ರಾಂತ ಅಥವಾ ಮತಕ್ಷೇತ್ರಕ್ಕೆ ಸಾಪೇಕ್ಷವಾಗಿಯಲ್ಲದೆ ಈ ಪದವನ್ನು ವ್ಯಾಪಕಾರ್ಥದಲ್ಲಿ ಬಳಸಲಾಗುತ್ತಿದೆ. ಆದರೆ, ರಾಜಕೀಯದಲ್ಲಿ ಈ ಪದಕ್ಕೆ ಏನಾದರೂ ಅರ್ಥವಿರಬೇಕಾದರೆ ಅದು ಪ್ರಾಂತ ಅಥವಾ ಮತಕ್ಷೇತ್ರಕ್ಕೆ ಸಾಪೇಕ್ಷವಾಗಿದ್ದಾಗ ಮಾತ್ರ ಸಾಧ್ಯ. ಒಂದು ಸಮುದಾಯವು 'ಅಲ್ಪಸಂಖ್ಯಾತ' ಎಂದು ಗುರುತಿಸಿಕೊಳ್ಳಬೇಕಾದರೆ ಮತ್ತು ಅಲ್ಪಸಂಖ್ಯಾತರಿಗೆ ದೊರಕುವ ಸೌಲಭ್ಯಗಳಿಗೆ ಅರ್ಹವಾಗಬೇಕಾದರೆ, ಅದು ತನ್ನ ಪ್ರಾಂತದಲ್ಲಿ, ಅದಕ್ಕಿಂತ ಮುಖ್ಯವಾದ ನಿರ್ದಿಷ್ಟಾರ್ಥದಲ್ಲಿ ಹೇಳಬೇಕಾದರೆ, ತನ್ನ ಮತಕ್ಷೇತ್ರದಲ್ಲಿ ಅಲ್ಪಸಂಖ್ಯಾತವಾಗಿರಬೇಕು ಎಂಬುದು ನನ್ನ ಅಭಿಪ್ರಾಯ. ಪ್ರಾಂತ ಅಥವಾ ಮತಕ್ಷೇತ್ರಗಳಿಗೆ ಅದು ಸಾಪೇಕ್ಷವಾಗಿಲ್ಲದಿದ್ದರೆ ಅದಕ್ಕೆ ರಾಜಕೀಯವಾಗಿ ಯಾವ ಅರ್ಥವೂ ಇರುವುದಿಲ್ಲ.

## ಸಲಹೆ

ನಾನು ಅತ್ಯಂತ ಮುಖ್ಯವೆಂದು ಪರಿಗಣಿಸುವ ಈ ಅಂಶದಿಂದ ಪ್ರಾರಂಭಿಸುತ್ತಾ, ಕೋಮು ನಿರ್ಣಯದಲ್ಲಿ ಒಳಗೊಂಡಿರುವ ಎರಡು ಪ್ರಶ್ನೆಗಳನ್ನು ನಾವು ಮೊದಲು ಪ್ರತ್ಯೇಕಿಸಬೇಕು – ಒಂದು ಸ್ಥಾನಗಳಿಗೆ, ಮತ್ತೊಂದು ಮತಕ್ಷೇತ್ರಗಳಿಗೆ ಸಂಬಂಧಿಸಿದವುಗಳು. ಈ ಎರಡೂ ಸಮಸ್ಯೆಗಳು ಪ್ರತ್ಯೇಕವಾದವು ಮತ್ತು ಅವುಗಳ ಪರಿಹಾರಕ್ಕಾಗಿ ಪರಿಗಣಿಸಬೇಕಾದ ವಿಷಯಗಳೂ ಸಂಪೂರ್ಣವಾಗಿ ಪ್ರತ್ಯೇಕವಾದವು. ಇವೆರಡೂ ಪ್ರಶ್ನೆಗಳನ್ನು ಪ್ರತ್ಯೇಕಿಸಿದ ಮೇಲೆ, ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ನಾನು ಮಾಡುವ ಸಲಹೆಯೆಂದರೆ ಸ್ಥಾನಗಳಿಗೆ ಸಂಬಂಧಿಸಿದಂತೆ ಇರುವ ಕೋಮು ನಿರ್ಣಯವನ್ನು ಒಪ್ಪಿಕೊಳ್ಳಿ. ಇದು ಶಾಶ್ವತವಾದ ಒಪ್ಪಂದವಾಗಿರಬೇಕೆಂದೇನೂ ಅಲ್ಲ, ಬದಲಿಗೆ ಭವಿಷ್ಯದಲ್ಲಿ ನ್ಯಾಯಯುತವಾಗಿ ತೀರ್ಮಾನವನ್ನು ತೆಗೆದುಕೊಳ್ಳಲು ಬಿಟ್ಟು, ತಾತ್ಕಾಲಿಕವಾಗಿ ಇದನ್ನು ಒಪ್ಪಿಕೊಳ್ಳಿ. ಎರಡನೆಯ ಪ್ರಶ್ನೆಯ ವಿಷಯಕ್ಕೆ ಬಂದರೆ, ಕೋಮು ನಿರ್ಣಯವನ್ನು ಹಿಂದೂ ಮತ್ತು ಮುಸ್ಲಿಮರ ಒಪ್ಪಿಗೆಗೆ ಒಳಪಟ್ಟು ಮುಂದಿನಂತೆ ತಿದ್ದುಪಡಿಮಾಡಬೇಕು. ಆಯಾ ಪ್ರಾಂತಗಳಲ್ಲಿ, ಅಥವಾ ಅದಕ್ಕಿಂದ ಮುಖ್ಯವಾಗಿ ಮತಕ್ಷೇತ್ರಗಳಲ್ಲಿ, ಅಲ್ಪಸಂಖ್ಯಾತರಾಗಿರುವವರು ಚುನಾವಣೆಗಳಲ್ಲಿ ನಿರ್ಣಾಯಕವಾಗಿರಬೇಕು ಮತ್ತು ಅವರ ನಿರ್ಣಯಕ್ಕೆ ಬಹುಸಂಖ್ಯಾತರು ತಲೆಬಾಗಬೇಕು.

## ನಿರ್ಣಯಿಸುವವರು ಅಲ್ಪಸಂಖ್ಯಾತರು

ಅಲ್ಪಸಂಖ್ಯಾತರು ತಮಗೆ ಪ್ರತ್ಯೇಕ ಮತಕ್ಷೇತ್ರಗಳು ಅಗತ್ಯವೆಂದರೆ ಬಹುಸಂಖ್ಯಾತರು ಅದರ ವಿರುದ್ಧ ಏನನ್ನೂ ಹೇಳುವಂತಿರಬಾರದು. ಹಾಗೆಯೇ, ಅಲ್ಪಸಂಖ್ಯಾತರು ತಮಗೆ ಸಂಯುಕ್ತ ಮತಕ್ಷೇತ್ರಗಳು ಅಗತ್ಯವೆಂದರೂ ಬಹುಸಂಖ್ಯಾತರು ಅದನ್ನು ಒಪ್ಪಿಕೊಳ್ಳಲೇಬೇಕು.

ಯಾವುದೇ ಒಂದು ಮತಕ್ಷೇತ್ರದಲ್ಲಿ ಹಲವು ಅಲ್ಪಸಂಖ್ಯಾತ ಸಮುದಾಯಗಳಿದ್ದು, ಮತಕ್ಷೇತ್ರಗಳ ವಿಷಯದಲ್ಲಿ ಅವರ ಅಭಿಪ್ರಾಯಗಳು ಬೇರೆಬೇರೆಯಾಗಿದ್ದರೂ ಈ ಸಲಹೆಯನ್ನು ಅನ್ವಯಿಸಬಹುದು. ಅಂತಹ ಪರಿಸ್ಥಿತಿಯಲ್ಲಿ, ಪ್ರತ್ಯೇಕ ಮತಕ್ಷೇತ್ರಗಳು ಬೇಕೆಂಬ ಅಪೇಕ್ಷೆಯುಳ್ಳ ಅಲ್ಪಸಂಖ್ಯಾತ ಸಮುದಾಯಗಳವರಿಗಾಗಿ ಪ್ರತ್ಯೇಕ ಯಾದಿಯನ್ನೂ ಮತ್ತು ಸಂಯುಕ್ತ ಮತಕ್ಷೇತ್ರವು ಬೇಕೆಂಬ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ಸಂಗಡ ಸೇರಿಸಿ ಬೇರೆ ಯಾದಿಯನ್ನೂ ಸಿದ್ಧಗೊಳಿಸಬಹುದು. ಮತಕ್ಷೇತ್ರಗಳ ವಿಷಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವ ಹಕ್ಕು ಪ್ರತಿಕ್ಷೇತ್ರದ ಅಲ್ಪಸಂಖ್ಯಾತರಿಗೇ ಇರಬೇಕೆಂಬುದನ್ನು ಒಪ್ಪಿಕೊಂಡರೆ, ಅದಕ್ಕಿಂತ ಉತ್ತಮವಾದುದು ಬೇರಾವುದೂ ಇರುವುದಿಲ್ಲ. ಅದು ಸಾಧ್ಯವಾಗದಿದ್ದರೆ, ಮತಕ್ಷೇತ್ರಗಳ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಪ್ರತಿ ಪ್ರಾಂತದಲ್ಲಿರುವ ಅಲ್ಪಸಂಖ್ಯಾತರಿಗೆ ಬಿಡಬೇಕು.

ಇಂತಹ ಒಪ್ಪಂದವು ಏರ್ಪಟ್ಟರೆ, ಹಿಂದೂಗಳು ಬಹುಸಂಖ್ಯಾತರಾಗಿರುವ ಬಾಂಬೆ, ಮದರಾಸು, ಮಧ್ಯಪ್ರಾಂತಗಳು ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರು, ಅವರು ಬಯಸಿದರೆ, ಪ್ರತ್ಯೇಕ ಮತಕ್ಷೇತ್ರಗಳನ್ನು ಹೊಂದಬಹುದು. ಅದೇ ಸಮಯದಲ್ಲಿ, ಮುಸ್ಲಿಮರು ಬಹುಸಂಖ್ಯಾತರಾಗಿರುವ ಪಂಜಾಬ್, ಸಿಂಧ್, ಬಂಗಾಳ ಮತ್ತು ವಾಯವ್ಯ ಪ್ರಾಂತಗಳಲ್ಲಿ ಹಿಂದೂಗಳು ಅಪೇಕ್ಷಿಸಿದರೆ ಅವರು ಪ್ರತ್ಯೇಕ ಮತಕ್ಷೇತ್ರಗಳನ್ನು ಪಡೆಯಬಹುದು. ಅಂದರೆ, ಇದರಲ್ಲಿರುವ ಮುಖ್ಯ ಅಂಶವೆಂದರೆ ಇಡೀ ವಿಷಯದಲ್ಲಿ ಅಲ್ಪಸಂಖ್ಯಾತರೇ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಪ್ರತ್ಯೇಕ ಅಥವಾ ಸಂಯುಕ್ತ ಮತಕ್ಷೇತ್ರಗಳು ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ರೂಪಿಸಲ್ಪಡುತ್ತವೆ ಮತ್ತು ಅಲ್ಪಸಂಖ್ಯಾತರು ತಮ್ಮ ಹಿತವು ಯಾವುದರಲ್ಲಿ

ಅಡಗಿದೆ ಎಂಬುದನ್ನು ಉತ್ತಮವಾಗಿ ನಿರ್ಣಯಿಸಬಲ್ಲರು.

ಈ ಸಲಹೆಯು ದೋಷಗಳಿಂದ ಕೂಡಿದ್ದರೆ, ಅದನ್ನು ಜಿನ್ನಾ ಅವರಾಗಲೀ ಪಂಡಿತ್ ಮದನ ಮೋಹನ ಮಾಳವೀಯರಾಗಲೀ ಒಪ್ಪಲೇಬೇಕಾಗಿಲ್ಲ. ಆದರೆ, ಇದು ದೋಷಮುಕ್ತವಾಗಿದ್ದರೆ, ನ್ಯಾಯಯುತವಾಗಿದ್ದರೆ, ಜಿನ್ನಾ ಅವರು ಇದನ್ನು ಒಪ್ಪಿಕೊಳ್ಳುವ ಧೈರ್ಯವನ್ನು ತೋರಿಸಿ ತಮ್ಮ ಸಮುದಾಯದವರೂ ಒಪ್ಪಿಕೊಳ್ಳುವಂತೆ ಮಾಡಬೇಕು, ಹಾಗೂ ಪಂಡಿತ್ ಮಾಳವೀಯರೂ ಇದಕ್ಕೆ ಸಮ್ಮತಿಸುವ ವಿವೇಕವನ್ನು ಹೊಂದಿರಬೇಕು.

### ಮಧ್ಯದ ಹಂತ

ಭಾರತಾದ್ಯಂತ ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ಸಂಯುಕ್ತ ಮತಕ್ಷೇತ್ರಗಳು ಇರಬೇಕೆಂಬ ಗುರಿಯನ್ನು ಇಟ್ಟುಕೊಂಡಿರುವ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಗಳವರು ತಮ್ಮ ಆ ಗುರಿಯನ್ನು ಒಂದೇ ಬಾರಿಗೆ ಸಾಧಿಸುವುದಕ್ಕೆ ಈ ಸಲಹೆಯು ನೆರವಾಗುವುದಿಲ್ಲ. ಆದರೆ, ತಮಗೆ ಸಂಯುಕ್ತ ಕ್ಷೇತ್ರಗಳೇ ಬೇಕೆಂದು ಪಟ್ಟು ಹಿಡಿದಿರುವ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆ ಹಾಗೂ ಪ್ರತ್ಯೇಕ ಕ್ಷೇತ್ರಗಳಿಗೇ ಗಂಟುಬಿದ್ದಿರುವ ಮುಸ್ಲಿಮರ ನಡುವೆ ಒಂದು ಮಧ್ಯದ ಹಂತವನ್ನು ಈ ಸಲಹೆಯು ನಿರ್ಮಿಸುತ್ತದೆ. ಕೆಲವು ಪ್ರಾಂತಗಳಲ್ಲಿ ಸಂಯುಕ್ತ ಕ್ಷೇತ್ರಗಳ ಮತ್ತೆ ಕೆಲವದರಲ್ಲಿ ಪ್ರತ್ಯೇಕ ಕ್ಷೇತ್ರಗಳ ವ್ಯವಸ್ಥೆಯಿರುವ ಈ ಮಧ್ಯದ ಹಂತದಿಂದ ಎಲ್ಲಾ ಕಡೆಯಲ್ಲಿಯೂ ಸಂಯುಕ್ತ ಕ್ಷೇತ್ರಗಳೇ ಇರುವ ಅಂತಿಮ ಹಂತಕ್ಕೆ ಪ್ರಯಾಣಮಾಡುವುದು ಬಹಳ ಸುಲಭವಾಗುತ್ತದೆ. ಸಂಯುಕ್ತ ಮತಕ್ಷೇತ್ರವನ್ನು ಸಮರ್ಥಿಸುವವರಲ್ಲಿರುವ ಅಸಹಿಷ್ಣು ಧ್ಯೇಯವಾದಿಗಳು ಮಾತ್ರ ಈ ಸಲಹೆಯನ್ನು ತಿರಸ್ಕರಿಸುತ್ತಾರೆ." (ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ– ೧೯೩೪ರ ಏಪ್ರಿಲ್ ೯)

ಇದರ ಹೊರತಾಗಿ, 'ಜನತಾ' ವರದಿಮಾಡಿದ ಹಾಗೆ ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಹೇಳಿಕೆಗೆ ಇನ್ನೂ ಹಲವು ಆಯಾಮಗಳು ಇವೆ. ಈ ಆಯಾಮಗಳು ಹೀಗಿವೆ –

"ಕ್ಷೇತ್ರಗಳ ಸಂಯೋಜನೆಯು ಅಲ್ಪಸಂಖ್ಯಾತರಿಗೆ ಪ್ರಮುಖವಾದ ವಿಷಯವಾಗುವುದಿಲ್ಲ. ಇಡೀ ರಾಷ್ಟ್ರದ ಹಿತಾಸಕ್ತಿಗಳು ಅಡಗಿರುವ ಈ ವಿಷಯವು ಸಂವಿಧಾನ ರಚನೆಯಲ್ಲಿ ಎದುರಾಗುವ ಸಮಸ್ಯೆ. ರಾಷ್ಟ್ರೀಯ ಸಮಸ್ಯೆಯೊಂದರ ಒಂದು ಭಾಗವನ್ನು ಹೀಗೆ ಮತ್ತು ಇನ್ನೊಂದು ಭಾಗವನ್ನು ಮತ್ತೊಂದು ರೀತಿಯಲ್ಲಿ ಪರಿಹರಿಸುವುದನ್ನು ನಿರ್ಣಯಿಸಲು ಕೆಲವೇ ಕ್ಷೇತ್ರಗಳವರಿಗೆ ಬಿಡುವುದು ಅಸಂಗತವಾಗುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಭಿನ್ನಾಭಿಪ್ರಾಯಗಳೇ ಸಾಮಾನ್ಯವಾಗಿರುವಾಗ, ಯಾವುದೇ ಸಮಸ್ಯೆಯ ಮೇಲೆ ಒಮ್ಮತವು ಅಸಾಧ್ಯವಾದುದರಿಂದ, ಜನತೆಯ ಅಭಿಪ್ರಾಯವನ್ನು ನಿರ್ಧರಿಸಲು ಬಹುಮತದ ಅಭಿಪ್ರಾಯವನ್ನು ಪರಿಹಾರದ ಮಾರ್ಗವೆಂದು ಪರಿಗಣಿಸುವ ರೂಢಿ ಚಾಲ್ತಿಗೆ ಬಂದಿದೆ.

ಅಲ್ಪಸಂಖ್ಯಾತರನ್ನು, ಅವರು ಅಲ್ಪಸಂಖ್ಯಾತರು ಎಂಬ ಒಂದೇ ಕಾರಣದಿಂದ ಬಹುಸಂಖ್ಯಾತರು ಹೊಂದಿರುವ ಅಧಿಕಾರದ ತುತ್ತತುದಿಗೆ ಏರಿಸುವುದು ಮತ್ತು ಬಹುಸಂಖ್ಯಾತರ ತಲೆಯಮೇಲೆ ಅವರನ್ನು ಕೂರಿಸುವುದು, ಪ್ರಜಾಪ್ರಭುತ್ವದ ಸರಕಾರದ ಮೂಲಭೂತ ನೀತಿಯ ಬುಡಕ್ಕೇ ಕೊಡಲಿಯನ್ನು ಹಾಕಿದಂತೆ. ರಾಜಕೀಯ ಆಲೋಚನೆಗಳು ಒಂದು ಪೂರ್ವನಿದರ್ಶನದಿಂದ ಇನ್ನೊಂದಕ್ಕೆ ಚಲಿಸುತ್ತಿರುತ್ತವೆ. ಆಕ್ಷೇಪಾರ್ಹವಾದ ನೀತಿಯೊಂದಕ್ಕೆ ಒಮ್ಮೆ ಮಣೆಯನ್ನು ಹಾಕಿದರೆ, ಅದು ಪಟ್ಟದಭದ್ರ ಹಿತಾಸಕ್ತಿಯಾಗಿ ಪರಿವರ್ತಿತವಾಗುತ್ತದೆ. ಒಮ್ಮೆ ಪಡೆದ ಅಧಿಕಾರವು ತನ್ನನ್ನು ಕಿತ್ತುಹಾಕುವ ಎಲ್ಲಾ ಪ್ರಯತ್ನಗಳನ್ನೂ ವಿರೋಧಿಸುತ್ತದೆ. ಈ ಕಾರಣದಿಂದಾಗಿ, ಮುಂದೊಂದು ದಿನ ನ್ಯಾಯಯುತವಾದ ವ್ಯವಸ್ಥೆಯು

ದೊರಕಬಹುದು ಎಂಬ ಆಶಯದಿಂದ ಮಾಡಿಕೊಂಡ ತಾತ್ಕಾಲಿಕ ರಾಜಿಪ್ರಕರಣಗಳು ಕಾಲಕಳೆದಂತೆ ಪ್ರಗತಿಯ ಹಾದಿಯಲ್ಲಿ ಎದುರಿಸಲಾಗದಷ್ಟು ಭಯಾನಕವಾದ ಅಡೆತಡೆಗಳನ್ನು ಒಡ್ಡುತ್ತವೆ.

ಅಲ್ಪಸಂಖ್ಯಾತರ ದೌರ್ಜನ್ಯಕ್ಕೆ ಒತ್ತುಕೊಡುವಂತಹ ಅಥವಾ ಬಹುಸಂಖ್ಯಾತರ ಅಭಿಪ್ರಾಯವನ್ನು ಅಲ್ಪಸಂಖ್ಯಾತರ ಅಭಿಪ್ರಾಯಗಳಿಗೆ ಅಡಿಯಾಳನ್ನಾಗಿಸುವ ಯಾವುದೇ ಕ್ರಮವೂ ಸಮರ್ಥನೀಯವಾಗುವುದಿಲ್ಲ.
– ಫ್ರೀ ಪ್ರೆಸ್"

* * * * *

೩

# ಆಶ್ವಾಸನೆಗಳಿಂದ ಗವರ್ನರ್ ಅವರಿಗೆ ನಷ್ಟವಿಲ್ಲ, ಕಾಂಗ್ರೆಸ್ಸಿಗೆ ಲಾಭವಿಲ್ಲ

ಬಾಂಬೆ, ೧೯೩೭ರ ಏಪ್ರಿಲ್ ೮

ಭಾರತದಲ್ಲಿನ ಸಾಂವಿಧಾನಿಕ ಬಿಕ್ಕಟ್ಟನ್ನು ಕುರಿತು ಡಾ. ಅಂಬೇಡ್ಕರ್, ಬ್ಯಾರಿಸ್ಟರ್–ಅಟ್–ಲಾ, ಅವರು ಈ ಹೇಳಿಕೆಯನ್ನು ನೀಡಿದ್ದಾರೆ.

"ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಗೊತ್ತುವಳಿಯ ಪ್ರಕಾರ ಕಾಂಗ್ರೆಸ್ಸಿಗೆ ವಾಗ್ದಾನವನ್ನು ನೀಡಲು ಗವರ್ನರ್ ಅವರು ನಿರಾಕರಿಸಿದ ಪರಿಣಾಮವಾಗಿ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ, ಕಾಂಗ್ರೆಸ್ಸಿನಿಂದ ಪರಾಜಿತನಾಗಿರುವ ನಾನು ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಅಗತ್ಯವಿಲ್ಲವೆಂದು ಭಾವಿಸಿದ್ದೆ. ಆದರೆ ನನ್ನ ಕೆಲವು ಮಿತ್ರರು ಈ ಪರಿಸ್ಥಿತಿಯನ್ನು ಕುರಿತು ನನ್ನ ಅಭಿಪ್ರಾಯಗಳನ್ನು ತಿಳಿಸುವಂತೆ ಒತ್ತಾಯಮಾಡಿದಾಗ, ಈ ವಿವಾದಿತ ವಿಷಯದೊಳಕ್ಕೆ ನಾನೂ ಪ್ರವೇಶಿಸಲು ತೀರ್ಮಾನಮಾಡಿದೆ.

ತಾತ್ಕಾಲಿಕ ಸಂಪುಟವನ್ನು ರಚಿಸಿದುದಕ್ಕಾಗಿ ಗವರ್ನರ್ ಅವರನ್ನು ಕಾಂಗ್ರೆಸ್ ಏಕೆ ದೂಷಿಸುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನನಗೆ ಆಶ್ಚರ್ಯವಾದುದೇನೆಂದರೆ, ಅಧಿಕಾರವನ್ನು ಸ್ವೀಕರಿಸಲು ಇಚ್ಛೆಯನ್ನು ಹೊಂದಿರದಿದ್ದ, ಮತ್ತು ಸಂವಿಧಾನವನ್ನು ತಲೆಕೆಳಗುಮಾಡುವುದೇ ಉದ್ದೇಶವುಳ್ಳ ಕಾಂಗ್ರೆಸ್, ತಾತ್ಕಾಲಿಕ ಸರಕಾರಗಳನ್ನು ಸ್ಥಾಪಿಸಿದುದಕ್ಕಾಗಿ ಸಮಾಧಾನದ ನಿಟ್ಟುಸಿರನ್ನು ಬಿಡದೆ, ತಮಗೆ ಅವಕಾಶ ತಪ್ಪಿದುದಕ್ಕೆ ಕೋಪಗೊಂಡು ಅತಿಯಾದ ನಾಟಕವಾಡುವುದಕ್ಕೆ ತೊಡಗಿದೆ. ಇದನ್ನು ನೋಡಿದವರಿಗೆ ಕಾಂಗ್ರೆಸ್ ಸಂವಿಧಾನವನ್ನು ನಾಶಮಾಡುವ ನಾಟಕವನ್ನು ಆಡುತ್ತಿದೆ ಎಂಬ ಭಾಸವಾಗುತ್ತದೆ.

**ಗವರ್ನರ್ ಅವರನ್ನು ದೂಷಿಸಬಾರದು**

ಬಹುಮತವನ್ನು ಪಡೆದ ಪಕ್ಷವು ಅಧಿಕಾರವನ್ನು ಒಲ್ಲೆನೆಂದರೆ, ಆಗ ತಮ್ಮ ನೀತಿಗಳಿಗೆ ಬೆಂಬಲವನ್ನು ನೀಡುವಂತಹವರಿಂದ ಸಹಾಯವನ್ನು ಪಡೆದು ಸರಕಾರವನ್ನು ರಚಿಸಿ ಬಹುಮತವನ್ನು ಸಾಬೀತುಪಡಿಸುತ್ತೇವೆಂದು ಗವರ್ನರ್ ಅವರಿಗೆ ಆಶ್ವಾಸನೆಯನ್ನು ನೀಡುವವರಿಗೆ ಅವಕಾಶವನ್ನು ಕೊಡುವುದು ಗವರ್ನರ್ ಅವರ ಕರ್ತವ್ಯ. ದೂಷಿಸಬೇಕಾಗಿರುವುದು ಗವರ್ನರ್ ಅವರನ್ನಲ್ಲ, ಬದಲಿಗೆ ಅಧಿಕಾರವನ್ನು ಸ್ವೀಕರಿಸಿದ ವ್ಯಕ್ತಿಗಳನ್ನು. ಸದನದಲ್ಲಿ ತಮಗೆ ಅಗತ್ಯವಾಗಿರುವ ಬಹುಮತವನ್ನು ಸಾಬೀತು ಪಡಿಸಲು ವಿಫಲರಾಗಬೇಕಾದ ಸಂದರ್ಭವು ಒದಗಿ, ತಾವು ಗವರ್ನರ್ ಅವರನ್ನು ವಂಚಿಸುತ್ತಿದ್ದೇವೆ ಎಂಬ ತಪ್ಪಿತಸ್ಥ ಮನೋಭಾವವು ತಮ್ಮನ್ನು ಪೀಡಿಸಬಾರದು ಎಂಬುದು ಅವರಿಗೆ ತೋರಿರಬೇಕು. ಗವರ್ನರ್ ಅವರು ಸಂವಿಧಾನದತ್ತವಾದ ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸಿ ಶಾಸನಸಭೆಯಲ್ಲಿ ಬಹುಮತವನ್ನು ಕಳೆದುಕೊಂಡ ಸಚಿವರನ್ನು ಅಧಿಕಾರದಲ್ಲಿ ಮುಂದುವರೆಯಲು ಬಿಟ್ಟರೆ ಮಾತ್ರ ಗವರ್ನರ್ ಅವರು ದೂಷಣೆಗೆ ತುತ್ತಾಗುತ್ತಾರೆ. ಏಕೆಂದರೆ, ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸಚಿವರು ತಮ್ಮ ವಿಶೇಷ ಅಧಿಕಾರದ ಮೇಲೆ ಅವಲಂಬಿಸದ ಹಾಗೆ ಮಾಡಲು, ಗವರ್ನರ್ ಅವರು ತಮ್ಮ ವಿಶೇಷ

ಅಧಿಕಾರವನ್ನು ಅತ್ಯಂತ ಜಾಗರೂಕತೆಯಿಂದ ಉಪಯೋಗಿಸಬೇಕು ಎಂಬ ನಿಯಮವನ್ನು ಅವರ ಮೇಲೆ ವಿಧಿಸಲಾಗಿದೆ.

### ಪರಿಸ್ಥಿತಿ ಉದ್ಭವವಾಗಿಲ್ಲ

ಆ ಪರಿಸ್ಥಿತಿಯು ಇನ್ನೂ ಉದ್ಭವವಾಗಿಲ್ಲ ಮತ್ತು ಗವರ್ನರ್ ಅವರ ಕ್ರಮದ ಬಗ್ಗೆ ಯಾವುದೇ ಟೀಕೆಯನ್ನು ಮಾಡುವುದಕ್ಕಿಂತ ಮೊದಲು, ಈಗ ಅಧಿಕಾರದಲ್ಲಿರುವ ಸಚಿವರು ಶಾಸನ ಸಭೆಯಲ್ಲಿ ಬಹುಮತವನ್ನು ಪಡೆಯಲು ವಿಫಲರಾದಾಗ, ಗವರ್ನರ್ ಅವರು ಏನು ಮಾಡುತ್ತಾರೆ ಎಂಬುದನ್ನು ನಾವು ಕಾದು ನೋಡಬೇಕು.

### ಆಶ್ವಾಸನೆಯ ಬೇಡಿಕೆ

ತಮ್ಮ ಬಹುಮತದಿಂದಾಗಿ ಪಡೆಯಬಹುದಿದ್ದ ಅಧಿಕಾರವನ್ನು ಸ್ವೀಕರಿಸುವ ಮೊದಲು, ಕಾಂಗ್ರೆಸ್ಸಿನವರು ಗವರ್ನರ್ ಅವರನ್ನು ವಾಗ್ದಾನವನ್ನು ನೀಡುವಂತೆ ಕೇಳುವುದರಲ್ಲಿ ಕಾಂಗ್ರೆಸ್ಸಿಗೆ ಸಮರ್ಥನೆಯಿದೆಯೇ ಎಂಬುದು ಈಗಿನ ಮುಖ್ಯ ಪ್ರಶ್ನೆ. ತಮಗೆ ಕಾಯಿದೆಯನ್ನು ತಿದ್ದುಪಡಿಮಾಡುವುದು ಬೇಕಿಲ್ಲ ಎಂದು ಕಾಂಗ್ರೆಸ್ಸಿನವರೇ ಒಪ್ಪಿಕೊಂಡಿದ್ದಾರೆ. ಭಾರತ ಸರಕಾರದ ಅಧಿನಿಯಮವನ್ನು ಯಾವುದೇ ರೀತಿಯಲ್ಲಿ ರದ್ದುಪಡಿಸದೆ, ತಮಗೆ ತಾವು ಕೇಳಿರುವ ವಾಗ್ದಾನವನ್ನು ಗವರ್ನರ್ ಅವರು ನೀಡಬಹುದಿತ್ತು ಎಂಬುದು ಕಾಂಗ್ರೆಸ್ಸಿನವರ ವಾದ. ಆದರೆ ಅಧಿನಿಯಮವನ್ನು ರದ್ದುಮಾಡದೆ ಕಾಂಗ್ರೆಸ್ಸಿನವರು ಕೇಳಿದ ವಾಗ್ದಾನವನ್ನು ಗವರ್ನರ್ ಅವರು ನೀಡಬಹುದೇ ಎಂಬುದು ಪ್ರಶ್ನೆ.

### ಮಹಾಪ್ರಭುಗಳು ಮತ್ತು ಗವರ್ನರ್

ಕಾಂಗ್ರೆಸ್ ತೆಗೆದುಕೊಂಡಿರುವ ನಿಲುವನ್ನು ಪ್ರಬಲವಾಗಿ ಸಮರ್ಥಿಸುತ್ತಾ ಶ್ರೀ ಭೂಲಾಭಾಯಿ ದೇಸಾಯಿಯವರು ಮತ್ತು ಶ್ರೀ ಸಿ. ರಾಜಗೋಪಾಲಾಚಾರಿಯವರು ಗವರ್ನರ್ ಅವರು ವಾಗ್ದಾನವನ್ನು ನೀಡದಂತೆ ಅಧಿನಿಯಮದಲ್ಲಿ ಯಾವುದೇ ನಿರ್ಬಂಧವಿಲ್ಲ ಮತ್ತು ಅವರು ನೀಡದಿದ್ದರೆ ಅವರಿಗೆ ನೀಡಲು ಮನಸ್ಸಿಲ್ಲ ಎಂದಾಗುತ್ತದೆ ಎಂದು ಉದ್ದುದ್ದವಾದ ಭಾಷಣವನ್ನು ಮಾಡಿದ್ದಾರೆ.

ನಾವು ಇಲ್ಲಿ ವಿಚಾರಮಾಡಬೇಕಾಗಿರುವ ಪ್ರಶ್ನೆಯೆಂದರೆ, ಭಾರತ ಸರಕಾರದ ಅಧಿನಿಯಮದ ವಿಧಿಗಳನ್ನು ತಿದ್ದುಪಡಿಮಾಡದೆ, ತಮ್ಮ ವಿಶೇಷ ಅಧಿಕಾರಗಳನ್ನು ಅಮಾನತ್ತಿನಲ್ಲಿ ಗವರ್ನರ್ ಅವರು ಇಡಬಹುದೇ? ಭಾರತ ಸರಕಾರದ ಅಧಿನಿಯಮದಡಿ ಗವರ್ನರ್ ಅವರಿಗೆ ನೀಡಿರುವ ವಿಶೇಷ ಅಧಿಕಾರಗಳ ಮತ್ತು ಮಹಾಪ್ರಭುಗಳಿಗೆ ನೀಡಿರುವ ಶಾಸನಪ್ರತಿಷೇಧಾಧಿಕಾರಗಳ ನಡುವೆ ಯಾವುದೇ ವ್ಯತ್ಯಾಸವು ಇಲ್ಲವೆಂಬ ನಂಬಿಕೆಯ ಮೇಲೆ ಶ್ರೀ ಭೂಲಾಭಾಯಿ ದೇಸಾಯಿಯವರ ವಾದವು ಅವಲಂಬಿಸಿದೆ. ಇಂಗ್ಲಿಷ್ ಸಂವಿಧಾನದಲ್ಲಿ ಮಹಾಪ್ರಭುಗಳಿಗೆ ನೀಡಿರುವ ಶಾಸನಪ್ರತಿಷೇಧಾಧಿಕಾರದ ಲಕ್ಷಣಕ್ಕೂ ಗವರ್ನರ್ ಅವರಿಗೆ ನೀಡಿರುವ ವೈಯಕ್ತಿಕ ಯುಕ್ತಾಯುಕ್ತ ಪರಿಜ್ಞಾನ ಮತ್ತು ವೈಯಕ್ತಿಕ ವಿವೇಚನಾಧಿಕಾರದ ಲಕ್ಷಣಕ್ಕೂ ಅಜಗಜಾಂತರವಿದೆ ಎಂದು ನಾನು ವಾದಿಸುತ್ತೇನೆ.

ಮಹಾಪ್ರಭುಗಳಿಗೆ ನೀಡಿರುವ ಶಾಸನಪ್ರತಿಷೇಧಾಧಿಕಾರದ ಅಡಿಯಲ್ಲಿ ಅವರು ತಮ್ಮ ಸಂಪುಟದ ಸಚಿವರೊಬ್ಬರು ತೆಗೆದುಕೊಂಡ ಕ್ರಮವನ್ನು ಪ್ರತಿಷೇಧಿಸಬಹುದು. ಆದರೆ ಇದು ಮಹಾಪ್ರಭುಗಳಿಗೆ ಸಚಿವರ ಸಲಹೆಯಿಲ್ಲದೆ ನಿರ್ದಿಷ್ಟವಾದ ರೀತಿಯಲ್ಲಿ ವರ್ತಿಸುವ ಅಧಿಕಾರವನ್ನು ನೀಡುವುದಿಲ್ಲ.

ಗವರ್ನರ್ ಅವರಿಗೆ ನೀಡಿರುವ ವೈಯಕ್ತಿಕ ಯುಕ್ತಾಯುಕ್ತ ಪರಿಜ್ಞಾನ ಮತ್ತು ವೈಯಕ್ತಿಕ ವಿವೇಚನಾಧಿಕಾರವು ಅವರು ಸಚಿವರ ಸಲಹೆಯನ್ನು ಒಪ್ಪದೇ ಇರುವ ಮತ್ತು ಸಚಿವರ ಸಲಹೆಯಿಲ್ಲದ

ನಿರ್ದಿಷ್ಟವಾದ ರೀತಿಯಲ್ಲಿ ವರ್ತಿಸುವ ಎರಡೂ ಬಗೆಯ ಹಕ್ಕುಗಳನ್ನು ಕೊಡುತ್ತದೆ. ಮಹಾಪ್ರಭುಗಳ ವಿಷಯದಲ್ಲಿ, ಒಬ್ಬ ಸಚಿವರ ಸಲಹೆಯ ವಿರುದ್ಧವಾಗಿ ವರ್ತಿಸಲು ಮತ್ತೊಬ್ಬ ಸಚಿವರ ಸಲಹೆಯು ಅವರಿಗೆ ಆವಶ್ಯಕವಾಗಿರುತ್ತದೆ. ಆದರೆ ತಾವು ತೆಗೆದುಕೊಳ್ಳುವ ಕ್ರಮಕ್ಕೆ ಗವರ್ನರ್ ಅವರಿಗೆ ಬೇರೆ ಒಬ್ಬ ಸಚಿವರ ಸಲಹೆಯನ್ನು ಪಡೆಯಬೇಕಾದ ಅಗತ್ಯವಿರುವುದಿಲ್ಲ. ಇದು ಪ್ರತಿಷೇಧಾಧಿಕಾರ ಹಾಗೂ ವೈಯಕ್ತಿಕ ವಿವೇಚನಾಧಿಕಾರ ಇವೆರಡರ ನಡುವೆಯಿರುವ ವ್ಯತ್ಯಾಸ.

### ಸೀಮಿತ ಸಚಿವ ಸಂಪುಟ

ಭಾರತದಲ್ಲಿನ ಸಚಿವರು ಸಂಸದೀಯ ವ್ಯವಸ್ಥೆಯಲ್ಲಿನ ಜನಪ್ರಿಯ ಸರಕಾರಗಳ ಸಚಿವರುಗಳು ಹೊಂದಿರುವ ಅಧಿಕಾರವನ್ನು ಹೊಂದಿರುತ್ತಾರೆ ಎಂಬ ಶ್ರೀ ರಾಜಗೋಪಾಲಾಚಾರಿಯವರ ವಾದವು ಭಾರತ ಸರಕಾರದ ಅಧಿನಿಯಮದ ಪ್ರಕಾರ ಇರಬೇಕಾದ ಸರಕಾರದ ವ್ಯವಸ್ಥೆಯನ್ನು ತಪ್ಪಾಗಿ ತಿಳಿದುಕೊಂಡಿರುವುದರಿಂದ ಮೂಡಿದುದಾಗಿದೆ. ಭಾರತ ಸರಕಾರದ ಅಧಿನಿಯಮದ ಪ್ರಕಾರ ಇರುವ ಸರಕಾರದ ವ್ಯವಸ್ಥೆಯಲ್ಲಿನ ಸಚಿವ ಸಂಪುಟವು ಸೀಮಿತವಾದದ್ದಾಗಿದೆ. ಇದು ಸೀಮಿತವಾದ ರಾಜಪ್ರಭುತ್ವದ ವ್ಯವಸ್ಥೆಯಲ್ಲ. ಸೀಮಿತ ರಾಜಪ್ರಭುತ್ವದಲ್ಲಿ, ರಾಜನ ಅಧಿಕಾರವು ಆತನ ಸಚಿವ ಸಂಪುಟದ ಅಧಿಕಾರಕ್ಕಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸೀಮಿತವಾದ ಸಚಿವ ಸಂಪುಟವಿರುವ ಸರಕಾರದಲ್ಲಿ ಸಚಿವರ ಅಧಿಕಾರವು ಗವರ್ನರ್ ಅವರಿಗೆ ಇರುವ ಅಧಿಕಾರಕ್ಕಷ್ಟೇ ಸೀಮಿತವಾಗಿರುತ್ತದೆ. ನಾನು ಹೇಳಬಯಸುತ್ತಿರುವ ಈ ವ್ಯತ್ಯಾಸಗಳನ್ನು ಅಂದರೆ, ಪ್ರತಿಷೇಧಾಧಿಕಾರ ಹಾಗೂ ವೈಯಕ್ತಿಕ ವಿವೇಚನಾಧಿಕಾರಕ್ಕೂ ಇರುವ ವ್ಯತ್ಯಾಸವನ್ನು ಮತ್ತು ಸೀಮಿತಾಧಿಕಾರವುಳ್ಳ ಸಚಿವ ಸಂಪುಟಕ್ಕೂ ಹಾಗೂ ಸೀಮಿತ ರಾಜಪ್ರಭುತ್ವಕ್ಕೂ ಇರುವ ವ್ಯತ್ಯಾಸವನ್ನು, ಮನಸ್ಸಿನಲ್ಲಿಟ್ಟುಕೊಂಡರೆ, ಮಹಾಪ್ರಭುಗಳು ಹೇಗೆ ತಮ್ಮ ಪ್ರತಿಷೇಧಾಧಿಕಾರವನ್ನು ಉಪಯೋಗಿಸದೆ ಇರಬಹುದು ಮತ್ತು ಗವರ್ನರ್ ಅವರು ಅದನ್ನು ಹೇಗೆ ಮಾಡಲಾರರು ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಗವರ್ನರ್ ಅವರು ತಮ್ಮ ವಿಶೇಷಾಧಿಕಾರವನ್ನು ಚಲಾಯಿಸದೆ ಇರುವುದು ಸಾಧ್ಯವಿಲ್ಲ. ಕಾನೂನಿನ ಪ್ರಕಾರ ತಮ್ಮ ಸಚಿವ ಸಂಪುಟವು ಮಾಡುವ ಎಲ್ಲಾ ಕಾರ್ಯಗಳಿಗೂ, ಅದರ ಕೆಡುಕಿನ ಪರಿಣಾಮಗಳಿಗೂ, ಗವರ್ನರ್ ಅವರು ಹೊಣೆಗಾರರಾಗಿರುತ್ತಾರೆ. ಸಂವಿಧಾನದ ವಿಷಯದಲ್ಲಿ ತಕರಾರನ್ನು ಎತ್ತಿ, ಹೊಣೆಗಾರಿಕೆಯೆಲ್ಲವೂ ಸಚಿವರ ಮೇಲಿರುತ್ತದೆ, ಗವರ್ನರ್ ಅವರ ಮೇಲಲ್ಲ ಎಂದು ಹೇಳಬಹುದು, ಆದರೆ ಮೂಲಭೂತ ವಿಷಯವನ್ನೇ ಮರೆಯುವ ಹಾಗಿಲ್ಲ. ಸಂವಿಧಾನವನ್ನು ಈಗಿರುವ ರೀತಿಯಲ್ಲಿಯೇ ತೆಗೆದುಕೊಂಡು ಅದರ ಮತ್ತು ಇಂಗ್ಲಿಷ್ ಸಂವಿಧಾನಗಳ ನಡುವೆ ಇರುವ ವ್ಯತ್ಯಾಸವನ್ನು ಗಮನಿಸಿದರೆ, ಗವರ್ನರ್ ಅವರು ತಮ್ಮ ವಿಶೇಷಾಧಿಕಾರವನ್ನು ತ್ಯಜಿಸಲು ಅವರಿಗೆ ಅಧಿಕಾರವೇ ಇಲ್ಲವೆಂಬ ವಿಷಯದಲ್ಲಿ ನನ್ನ ಮನಸ್ಸಿನಲ್ಲಿ ಯಾವುದೇ ಸಂದೇಹವೂ ಇಲ್ಲ. ತಮಗೆ ಅಧಿಕಾರವನ್ನು ನೀಡಿರುವ ಸಂವಿಧಾನದ ಕಾನೂನನ್ನು ಮೀರಿ ತಮ್ಮ ಕರ್ತವ್ಯವನ್ನು ಅವರು ಬಿಡುವ ಹಾಗಿಲ್ಲ. ಇದನ್ನೇ ಇನ್ನೂ ಸರಳವಾಗಿ ಹೇಳಬೇಕೆಂದರೆ, ಹೊಣೆಗಾರಿಕೆಯಿಲ್ಲದಿದ್ದರೆ ಅಧಿಕಾರವನ್ನು ತ್ಯಜಿಸಬಹುದು, ಆದರೆ ಹೊಣೆಗಾರಿಕೆಯಿದ್ದಾಗ ಅಧಿಕಾರವನ್ನು ತ್ಯಜಿಸುವುದು ಸಾಧ್ಯವಿಲ್ಲ.

ವಿಶೇಷಾಧಿಕಾರಗಳು ಇರುವುದು ಸಂವಿಧಾನದ ನಿರ್ವಹಣೆಯಲ್ಲಿ ಗಂಭೀರವಾದ ಆಕ್ಷೇಪಣೆಗೆ ಕಾರಣವಾಗುತ್ತದೆ ಎಂದು ವಾದಿಸುವುದು ನನ್ನ ವಿವೇಚನೆಯ ಪ್ರಕಾರ ಸಮಂಜಸವೆನಿಸುವುದಿಲ್ಲ.

## ಮಹಾತ್ಮರು ನೀಡಿರುವ ಕಾರಣಗಳು

ಆಶ್ವಾಸನೆಯನ್ನು ಕೋರಲು ಮಹಾತ್ಮ ಗಾಂಧಿಯವರು ಬೇರೆಯದೇ ಆದ ಕಾರಣವನ್ನು ಕೊಟ್ಟಿದ್ದಾರೆ. ಅವರು ಕೊಡುವ ಆಧಾರಗಳು ಎಷ್ಟು ದುರ್ಬಲವಾಗಿವೆಯೆಂದರೆ, ಸಂವಿಧಾನಗಳ ಕಾರ್ಯಾಚರಣೆಯ ಜ್ಞಾನವಿರುವ ಯಾರಾದರೂ ಇಂತಹ ಆಧಾರಗಳನ್ನು ಮುಂದಿಡುತ್ತಾರೆಯೇ ಎಂದು ಆಶ್ಚರ್ಯಪಡಬೇಕಾಗುತ್ತದೆ. "ನಿರ್ಣಾಯಕವಾಗಿ ಚುನಾಯಿತವಾದ ಪ್ರಬಲವಾದ ಪಕ್ಷವೊಂದು ಯಾವಾಗಲೂ ಗವರ್ನರ್ ಅವರ ಭಯದ ನೆರಳಿನಲ್ಲಿಯೇ ಇರಬೇಕಾದಂತಹ ಅಭದ್ರತೆಯ ಪರಿಸ್ಥಿತಿಯನ್ನು ಬಯಸುವುದಿಲ್ಲ". ಆತ್ಮಗೌರವವುಳ್ಳ ಸಚಿವರು ತಮ್ಮ ಸಂಪೂರ್ಣ ಬಹುಮತದ ಬಗ್ಗೆ ಅರಿವನ್ನು ಹೊಂದಿರುತ್ತಾರೆ. ತಾನು ಗಳಿಸಿದ ಬಹುಮತದ ಮತಗಳ ಬಗ್ಗೆ ಅರಿವಿರುವ ಸಚಿವ ಸಂಪುಟವು ಆಶ್ವಾಸನೆಗಾಗಿ ಹಲ್ಲುಗಿಂಜುವ ಬದಲು ನೇರವಾಗಿ ತನ್ನ ಕಾರ್ಯಕ್ಷೇತ್ರವನ್ನು ಪ್ರವೇಶಿಸಿ ಗವರ್ನರ್ ಅವರನ್ನು ಧಿಕ್ಕರಿಸಿ ಅವರ ವಿರುದ್ಧ ತನಗಿರುವ ಅಧಿಕಾರವನ್ನು ಬಳಸುತ್ತಿತ್ತು. ನಿಜವಾಗಿ ಅಂತಹ ಆಶ್ವಾಸನೆ ಅಗತ್ಯವಾಗಿರುವುದು, ಮತದಾರರ ಬೆಂಬಲವಿಲ್ಲದ ದುರ್ಬಲ ಸಚಿವ ಸಂಪುಟಕ್ಕೆ. ಕಾಂಗ್ರೆಸ್‌ನಂತಹ ಪ್ರಬಲ ಪಕ್ಷಕ್ಕೆ ಯಾವುದೇ ಆಶ್ವಾಸನೆಯ ಅಗತ್ಯವಿಲ್ಲ. ಗವರ್ನರ್ ಅವರಿಂದ ಅವರ ಒಳ್ಳೆಯ ವರ್ತನೆಯ ಬಗ್ಗೆ ಆಶ್ವಾಸನೆಯನ್ನು ಕಾಂಗ್ರೆಸ್ಸಿನವರು ಏಕೆ ಬೇಡಿಕೊಳ್ಳುತ್ತಿದ್ದಾರೆ? ಅದರ ಬದಲಿಗೆ ಅವರು ಗವರ್ನರ್ ಅವರನ್ನು ಸರಿಯಾಗಿ ವರ್ತಿಸುವಂತೆ ನಿರ್ಬಂಧಿಸಬಹುದು.

## ಗವರ್ನರ್ ಅವರು ಆಶ್ವಾಸನೆಯನ್ನು ನೀಡಬಹುದು

ನಾವು ತುಂಟ ಮಕ್ಕಳಿಗೆ ಮಾಡುವ ರೀತಿಯಲ್ಲಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಗೊತ್ತುವಳಿಯನ್ನು ಓದಿ, ಆಶ್ವಾಸನೆಗಾಗಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆಂಬುದನನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಆಶ್ವಾಸನೆಗಾಗಿ ಅಳುತ್ತಾ ತೊಂದರೆಯನ್ನುಂಟುಮಾಡುತ್ತಿರುವ ಕಾಂಗ್ರೆಸ್ ಪಕ್ಷದವರಿಗೆ ಗವರ್ನರ್ ಅವರು ಆಶ್ವಾಸನೆಯನ್ನು ನೀಡಿ ಸಮಾಧಾನಪಡಿಸಬಾರದೇ? ಅಂತಹ ಆಶ್ವಾಸನೆಯನ್ನು ನೀಡಿದ್ದಿದ್ದರೆ, ಯಾವ ನಷ್ಟವೂ ಆಗುತ್ತಿರಲಿಲ್ಲ ಎಂಬುದು ನನ್ನ ನಂಬಿಕೆ. ಕಾಂಗ್ರೆಸ್ ಸಚಿವರು ತಾವು ಸಂವಿಧಾನದ ಚೌಕಟ್ಟಿನೊಳಗೆ ಕೆಲಸ ನಿರ್ವಹಿಸಲು ಬದ್ಧರಾಗಿರುತ್ತೇವೆ ಎಂದು ಹೇಳಿರುವುದು ಸ್ಪಷ್ಟವಾಗಿರುವಾಗ, ಅದಕ್ಕೆ ಪ್ರತಿಯಾಗಿ ತಾವು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸುವುದಿಲ್ಲವೆಂಬ ಆಶ್ವಾಸನೆಯನ್ನು ಗವರ್ನರ್ ಅವರು ನೀಡದಿರುವುದಕ್ಕೆ ಯಾವ ಸಮಜಾಯಿಷಿಯೂ ಇಲ್ಲ.

## ಲಾಭವೂ ಇರುತ್ತಿರಲಿಲ್ಲ, ನಷ್ಟವೂ ಆಗುತ್ತಿರಲಿಲ್ಲ

ನಾನು ಕಾಂಗ್ರೆಸ್ಸಿನವರನ್ನು ಕೇಳಬಯಸುವ ಪ್ರಶ್ನೆ ಇದು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಗೊತ್ತುವಳಿಯ ಪ್ರಕಾರ ತಾವು ಬಯಸಿದ ಆಶ್ವಾಸನೆಯನ್ನು ಗವರ್ನರ್ ಅವರು ನೀಡಿದ್ದಿದ್ದರೆ ಅದರಿಂದ ಕಾಂಗ್ರೆಸ್ ಪಕ್ಷವು ಗಳಿಸುತ್ತಿದ್ದುದು ಏನು? ಗವರ್ನರ್ ಅವರು ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸುವಂತೆ ಮಾಡುವ ಸನ್ನಿವೇಶವು ಉದ್ಭವವಾಗಿದೆಯೆಂದು ನಿರ್ಧರಿಸುವವರು ಯಾರು ಎಂಬುದು ಇಲ್ಲಿನ ಮುಖ್ಯವಾದ ಪ್ರಶ್ನೆ. ಗವರ್ನರ್ ಅವರು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸುತ್ತಾರೆಯೋ ಅಥವಾ ಇಲ್ಲವೋ ಎನ್ನುವತಂಹ ಸನ್ನಿವೇಶವು ಉಂಟಾಗಿದೆಯೆಂದು ಸಚಿವ ಸಂಪುಟವು ನಿರ್ಧರಿಸುವ ಹಾಗಿದ್ದಿದ್ದರೆ ಕಾಂಗ್ರೆಸ್ ಈಗ ಬಯಸುತ್ತಿರುವ ಆಶ್ವಾಸನೆಯನ್ನು ಕೇಳಿ ಪಡೆಯುವ ಮೂಲಕ ಏನನ್ನಾದರೂ ಗಳಿಸಬಹುದಿತ್ತು ಎಂದು ಹೇಳಬಹುದಿತ್ತು. ಅಂತಹ ಪರಿಸ್ಥಿತಿಯಲ್ಲಿ ಆಶ್ವಾಸನೆಗೆ ಸ್ವಲ್ಪ ಬೆಲೆಯಿರುತ್ತಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ. ಅಂತಹ ಆಶ್ವಾಸನೆಯನ್ನು ನೀಡಿದ ನಂತರವೂ, ಸಚಿವ

ಸಂಪುಟವು ಯಾವುದಾದರೂ ಒಂದು ವಿಷಯದಲ್ಲಿ ಸಲ್ಲದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂಬ ದೂರು ತಮಗೆ ಬಂದು ಅದು ನಿಜವೆಂದು ತಾವು ಮನಗಂಡರೆ ಗವರ್ನರ್ ಅವರು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸುವುದಕ್ಕೆ ಯಾವ ನಿರ್ಬಂಧವೂ ಇರುವುದಿಲ್ಲ. ಆಶ್ವಾಸನೆಯನ್ನು ನೀಡುವ ಮೂಲಕ ಗವರ್ನರ್ ಅವರು ಏನನ್ನು ಕಳೆದುಕೊಳ್ಳುತ್ತಿದ್ದರು ಮತ್ತು ಅಂತಹ ಆಶ್ವಾಸನೆಯನ್ನು ಪಡೆಯುವ ಮೂಲಕ ಕಾಂಗ್ರೆಸ್ ಏನನ್ನು ಗಳಿಸುತ್ತಿದ್ದರು ಎಂಬುದನ್ನು ನಾನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

* * * * *

(ದ ಬಾಂಬೆ ಕ್ರಾನಿಕಲ್, ದಿ. ೧೯೩೭ರ ಏಪ್ರಿಲ್ ೯)

೪

# ಇದೊಂದು ಪಕ್ಷಕ್ಕೆ ಸಂಬಂಧಿಸಿದ ನಡೆಯೇ ಹೊರತು ರಾಷ್ಟ್ರೀಯ ಉದ್ದೇಶವನ್ನುಳ್ಳದ್ದಲ್ಲ

ಬಾಂಬೆ ಪ್ರಾಂತೀಯ ಶಾಸನಸಭೆಯಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷದ ನೇತಾರರಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರು ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ಬಿ.ಜಿ. ಖೇರ್ ಅವರಿಗೆ ವೈಯಕ್ತಿಕವಾಗಿ ಹಾಗೂ ತಮ್ಮ ಪಕ್ಷದ ಸದಸ್ಯರ ಪರವಾಗಿ ಪತ್ರವೊಂದನ್ನು ಬರೆದು, ಬಾಂಬೆಯ ಗವರ್ನರ್ ಅವರು ಸಚಿವ ಸಂಪುಟವನ್ನು ನೇಮಿಸಿರುವುದಕ್ಕೆ ತಮ್ಮ ಸಮ್ಮತಿಯಿಲ್ಲ ಎಂಬ ಕಾಂಗ್ರೆಸ್ ಪಕ್ಷದ ವಾದಕ್ಕೆ ತಾವು ಬೆಂಬಲವನ್ನು ನೀಡುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸದ್ಯದ ಪರಿಸ್ಥಿತಿಗೆ ಕಾಂಗ್ರೆಸ್ ಪಕ್ಷವನ್ನೇ ದೂಷಿಸಿರುವ ಡಾ. ಅಂಬೇಡ್ಕರ್ ಅವರು ತಮ್ಮ ಪಕ್ಷದ ಅಭಿಪ್ರಾಯದ ಪ್ರಕಾರ ಗವರ್ನರ್ ಅವರಿಂದ ಆಶ್ವಾಸನೆಯನ್ನು ಕಾಂಗ್ರೆಸ್ ಪಕ್ಷವು ಕೇಳುತ್ತಿರುವುದು ಅನಗತ್ಯ ಮತ್ತು ಅಂತಹ ಆಶ್ವಾಸನೆಯನ್ನು ಗವರ್ನರ್ ಅವರು ನೀಡುವುದು ಅಸಾಧ್ಯವೆಂದು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ.

ಶಾಸನ ಸಭೆಯ ಸಮಾವೇಶವನ್ನು ಗವರ್ನರ್ ಅವರು ಕರೆಯದೆ ಇರುವುದನ್ನು ಈ ವೇಳೆಯಲ್ಲಿ ಪ್ರಶ್ನಿಸುವುದು ತರವಲ್ಲ ಎಂದು ಡಾ. ಅಂಬೇಡ್ಕರ್ ಅವರು ವಾದಿಸುತ್ತಾರೆ. ಎರಡು ಸಮಾವೇಶಗಳ ನಡುವಿನ ಅಂತರವು ಆರು ತಿಂಗಳಿಗೂ ಹೆಚ್ಚಿದ್ದರೆ ಮಾತ್ರ ಗವರ್ನರ್ ಅವರ ನಡವಳಿಕೆಯು ಸಂವಿಧಾನವಿರೋಧಿಯಾಗಿರುತ್ತಿತ್ತು.

ಸಂವಿಧಾನವು ಈಗ ಚಾಲ್ತಿಯಲ್ಲಿ ಇರುವಾಗ, ಸಾಂವಿಧಾನಿಕ ವಿಧಾನಗಳ ಪ್ರಕಾರವಿರುವ ಎಲ್ಲಾ ಮಾರ್ಗಗಳನ್ನೂ ಪ್ರಯತ್ನಿಸಿ ಅವೆಲ್ಲದರಲ್ಲೂ ವಿಫಲರಾದ ಮೇಲೆ ಮಾತ್ರ ಸಂವಿಧಾನೇತರ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಸ್ವತಂತ್ರ ಕಾರ್ಮಿಕ ಪಕ್ಷವು ಅಭಿಪ್ರಾಯವನ್ನು ಪಡುತ್ತದೆ.

ಕಾಂಗ್ರೆಸ್ ಪಕ್ಷದ ಈ ನಡೆಯು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕಾಗಿ, ತನ್ನ ಅಧಿಕಾರವನ್ನು ಮತ್ತು ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮಾತ್ರ ಉದ್ದೇಶಿತವಾಗಿದೆ ಎಂದೂ ಡಾ. ಅಂಬೇಡ್ಕರ್ ಅವರು ಹೇಳಿದರು. ಇದು ಕೇವಲ ಪಕ್ಷದ ನಡೆಯಾಗಿದ್ದು ಅದರಲ್ಲಿ ಯಾವುದೇ ರಾಷ್ಟ್ರೀಯ ಉದ್ದೇಶವೂ ಸೇರಿಲ್ಲ.

* * * * *

---

(ದ ಟೈಮ್ಸ್ ಆಫ್ ಇಂಡಿಯಾ, ೧೯೩೭ರ ಮೇ ೧೭)

(ಪಾಟ್ನಾದಲ್ಲಿರುವ ಬಿಹಾರ ಪ್ರಾಂತೀಯ ದಲಿತವರ್ಗಗಳ ಕೂಟದ ಅಧ್ಯಕರಾದ ಜಗಜ್ಜೀವನ ರಾಮ್ ಅವರು ೧೯೩೭ ಮಾರ್ಚ್ ೮ರಂದು ಬರೆದ ಪತ್ರವನ್ನು ೮ನೆಯ ಪರಿಶಿಷ್ಟದಲ್ಲಿ ನೋಡಬಹುದು)

೫

# ವಯಸ್ಕ ಮತದಾನವನ್ನು ಜಾರಿಗೆ ತರುವುದಕ್ಕಾಗಿ ನಾವು ಉಗ್ರವಾದ ಹೋರಾಟವನ್ನು ಕೈಗೊಳ್ಳುತ್ತೇವೆ

"ವಯಸ್ಕ ಮತದಾನದ ಆಧಾರದ ಮೇಲೆ ಚುನಾಯಿತವಾದ ಸಂವಿಧಾನ ಸಭೆಯ ಮೂಲಕ ರಾಷ್ಟ್ರೀಯ ಸಂವಿಧಾನವನ್ನು ರಚಿಸುವ ಕಾರ್ಯಕ್ರಮವನ್ನು ಆಡಂಬರದಿಂದ ಪ್ರಕಟಿಸಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಟಿಕೆಟ್ಟಿನಿಂದ ಗೆದ್ದು ಅಧಿಕಾರಗ್ರಹಣ ಮಾಡಿರುವ ಬಾಂಬೆ ಸರಕಾರವು ಬಾಂಬೆ ಪುರಸಭೆಯ ತಿದ್ದುಪಡಿ ಮಸೂದೆಯ ಮಂಡನೆಯಲ್ಲಿ ವಯಸ್ಕ ಮತದಾನ ಪದ್ಧತಿಯನ್ನು ಜಾರಿಗೆ ತರುವಲ್ಲಿ ಅನುಸರಿಸುತ್ತಿರುವ ನೀತಿ ಹಾಗೂ ಅದು ಅಂತಹ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿರುವ ರೀತಿ ಆಶ್ಚರ್ಯಕರವಾಗಿದೆ." ಎಂದು ಡಾ. ಅಂಬೇಡ್ಕರ್ ಅವರು 'ಸೆಂಟಿನೆಲ್' ಪತ್ರಿಕೆಯ ಪ್ರತಿನಿಧಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಕಾಂಗ್ರೆಸ್ ತನ್ನ ಅಕ್ಕರೆಯನ್ನು ತೋರದ ಲೋಥಿಯಾನ್ ಸಮಿತಿಯ ಕೆಲವು ಸದಸ್ಯರು ವಯಸ್ಕ ಮತದಾನವನ್ನು ಪ್ರಾಂತದಲ್ಲೆಲ್ಲಾ ಜಾರಿಗೆ ತರಲು ಸಿದ್ಧವಿದ್ದಾರೆ ಮತ್ತು ಅವರಿಗಿರುವ ಏಕಮಾತ್ರ ತೊಂದರೆಯೆಂದರೆ, ಮತದಾನದ ದಿನ ಮತಗಳನ್ನು ನೊಂದಾಯಿಸಿಕೊಳ್ಳಲು ಸಾಕಷ್ಟು ಜನರು ದೊರಕದಿರುವುದು' ಎಂದು ಅಂಬೇಡ್ಕರ್ ಅವರು ತಿಳಿಸಿದರು.

"ಹಲವು ವರ್ಷಗಳಿಂದ ವಯಸ್ಕ ಮತದಾನದ ಬಗ್ಗೆ ಹುಯಿಲೆಬ್ಬಿಸುತ್ತಿರುವ ಕಾಂಗ್ರೆಸ್ ಪಕ್ಷವು ಜಿಲ್ಲೆ, ತಾಲ್ಲೂಕು ಮತ್ತು ಪುರಸಭೆಗಳ ಮಟ್ಟದಲ್ಲಿ ವಯಸ್ಕ ಮತದಾನವನ್ನು ಜಾರಿಗೆ ತರುವ ಮೊದಲ ಅವಕಾಶವನ್ನು ಬಳಸಿಕೊಳ್ಳಬೇಕಿತ್ತು. ಆದರೆ, ಮೊದಲ ಹಂತದಲ್ಲಿಯೇ ಅವರು ತಮ್ಮ ಜವಾಬ್ದಾರಿಯಿಂದ ಜಾರಿಕೊಂಡಿದ್ದಾರೆ.

ಬಾಂಬೆ ಪುರಸಭೆಯ ಚುನಾವಣೆಯಲ್ಲಿ ವಯಸ್ಕ ಮತದಾನವನ್ನು ಜಾರಿಗೆ ತರಲು ಹಿಂದೆಮುಂದೆ ನೋಡಬೇಕಾದ ಸಂದರ್ಭವೇ ಇರಲಿಲ್ಲ. ವಯಸ್ಕ ಮತದಾನದ ಪದ್ಧತಿಯನ್ನು ಜಾರಿಗೆ ತರುವ ಪ್ರಯೋಗವನ್ನು ನಡೆಸಲು ಇಡೀ ಪ್ರಾಂತದಲ್ಲಿ ಬಾಂಬೆಗಿಂತ ಉತ್ತಮವಾದ ಜಾಗ ಮತ್ತೊಂದಿಲ್ಲ. ಬೇರೆ ಎಲ್ಲಾ ಕಡೆಗಳಿಗಿಂತಲೂ ಇಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಿನದಾಗಿದೆ. ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಬಹುಶಃ ಬೇರೆಡೆಗಳಲ್ಲಿರುವುದಕ್ಕಿಂತ ಹೆಚ್ಚಿನ ಪ್ರಜ್ಞೆ ಇಲ್ಲಿದೆ. ವಯಸ್ಕ ಮತದಾನವನ್ನು ಜಾರಿಗೆ ತರಲು ಮೊದಲ ಪ್ರದೇಶವನ್ನಾಗಿ ಬಾಂಬೆಯನ್ನು ಆಯ್ಕೆಮಾಡಿಕೊಳ್ಳಲು ಅನೇಕ ಕಾರಣಗಳು ಇವೆ. ಆದರೂ ವಯಸ್ಕ ಮತದಾನವನ್ನು ಜಾರಿಗೆ ತರಲು ಕಾಂಗ್ರೆಸ್ ಸರಕಾರವು ೧೯೪೨ರ ಮುಹೂರ್ತವನ್ನು ನಿಗದಿಮಾಡಿದೆ, ಅದೂ ಪುರಸಭೆಯು ಅದಕ್ಕೆ ಒಪ್ಪಿದರೆ ಮಾತ್ರ ಎಂಬ ಷರತ್ತಿನ ಮೇಲೆ.

"ಶ್ರೀ ಎನ್. ಎಂ. ಜೋಷಿಯವರು ಹೇಳಿರುವ ಹಾಗೆ ಇದೊಂದು ಅಸಂಬದ್ಧ ಷರತ್ತು. ತಮ್ಮ ಅಸ್ತಿತ್ವವನ್ನೇ ಇಡಿಯಾಗಿ ನಾಶಮಾಡುವ ಮತದಾರರಿಗೆ ಮತನೀಡುವ ಹಕ್ಕನ್ನು ಕೊಡುವಂತಹ ಆತ್ಮಘಾತುಕ ಕ್ರಮವನ್ನು ಪುರಸಭೆಯು ಎಂದೂ ಒಪ್ಪುವುದಿಲ್ಲ.

**ಕಾಂಗ್ರೆಸ್ ಸರಕಾರದ ನೀತಿಯು ಯಾವುದೇ ಇರಲಿ, ಸಮಾಜದ ಅತ್ಯಂತ ದಲಿತವರ್ಗದವರನ್ನು ಪ್ರತಿನಿಧಿಸುತ್ತಿರುವ ನಾನು ಮತ್ತು ನನ್ನ ಪಕ್ಷವು ನಗರದಲ್ಲಿ ವಯಸ್ಕ ಮತದಾನವನ್ನು ಜಾರಿಗೆ ತರುವ ಮತ್ತು ಅಂತಹ ಪ್ರಯತ್ನವನ್ನು ಮುಂದುವರೆಸುವ ಯಾವುದೇ ಚಳವಳಿಯನ್ನು ಸೇರಿಕೊಳ್ಳುತ್ತೇವೆ.**

ಪ್ರಜಾಪ್ರಭುತ್ವದ ಪ್ರಮುಖ ಅಗತ್ಯವಾಗಿರುವ ಈ ಹಕ್ಕನ್ನು ಪಡೆದುಕೊಳ್ಳಲು ಸದನದಲ್ಲಿ ನಾವು ಉಗ್ರವಾಗಿ ಹೋರಾಟವನ್ನು ವ್ಯವಸ್ಥೆಗೊಳಿಸುತ್ತೇವೆ ಮತ್ತು ಸಾಧ್ಯವಾದರೆ, ಇದಕ್ಕೆ ಸರಕಾರವು ಸಮ್ಮತಿಸುವಂತೆ ನಿರ್ಬಂಧಿಸುತ್ತೇವೆ.

**ಸಾರ್ವಜನಿಕವಾಗಿ ನೀಡಿದ ವಾಗ್ದಾನಗಳನ್ನು, ಪ್ರಕಟಿಸಿದ ನೀತಿಗಳನ್ನು ಜಾರಿಗೆ ತರುವಲ್ಲಿರುವ ಮೌಲ್ಯಗಳಿಗಾಗಿ ಒತ್ತಾಯಮಾಡುವ ಸಾರ್ವಜನಿಕರ ಬಲವು ಎಷ್ಟಿರುತ್ತದೆ ಎಂಬುದನ್ನು ಸರಕಾರದ ಅರಿವಿಗೆ ಬರುವಂತೆ ಮಾಡಲು ಸದನದ ಹೊರಗೆ ಸಭೆಗಳನ್ನು ನಡೆಸಲು ಸಹಾಯವನ್ನು ಮಾಡುತ್ತೇವೆ**

ಆದರೆ ತಾನು ಮಂಡಿಸಲು ಉದ್ದೇಶಿಸಿರುವ ಮಸೂದೆಯಲ್ಲಿನ ದೋಷಗಳನ್ನು ಸರಕಾರವು ತಿಳಿದುಕೊಳ್ಳುವಷ್ಟು ವಿವೇಕವನ್ನು ಹೊಂದಿದೆ ಎಂದು ನಾನು ಭಾವಿಸುತ್ತೇನೆ. ಈ ಮಸೂದೆಯನ್ನು ಮಂಡಿಸುವ ಮೊದಲು, ಸರಕಾರದವರು ತಾವು ಜನತೆಗೆ ನೀಡಿದ ವಚನಗಳನ್ನು ಜ್ಞಾಪಿಸಿಕೊಳ್ಳುತ್ತಾರೆ ಮತ್ತು ಮಸೂದೆಯಲ್ಲಿ ಅಗತ್ಯವಾದ ತಿದ್ದುಪಾಡುಗಳನ್ನು ಮಾಡುತ್ತಾರೆ ಅಲ್ಲದೆ, ಅದನ್ನು ಜಾರಿಗೆ ತರಲು ೧೯೪೨ರವರೆಗೆ ಹಾಗೂ ಪುರಸಭೆಯ ಸಮ್ಮತಿಗೆ ಕಾಯದೆ, ತಕ್ಷಣವೇ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ಆಶಿಸುತ್ತೇನೆ."

* * * * *

(ದ ಟೈಮ್ಸ್ ಆಫ್ ಇಂಡಿಯಾ, ೧೯೩೮ರ ಜನವರಿ ೩೧)

` ´ ` ´

## ೬

# ಒಕ್ಕೂಟದ ವ್ಯವಸ್ಥೆಯ ವಿರುದ್ಧ ಸಂಘಟಿಸಿ ರಾಷ್ಟ್ರದ ಚರಿತ್ರೆಯಲ್ಲಿನ ಸಂಧಿಯ ಸಮಯ

ಬಾಂಬೆ, ೧೮೩೮ರ ಜುಲೈ ೨೦

"ಪಕ್ಷಭೇದವನ್ನು ತೊರೆದು, ಎಲ್ಲಾ ಪ್ರಗತಿಪರ ಸಂಘಟನೆಗಳೂ ಒಕ್ಕೂಟದ ವಿಷಯದಲ್ಲಿ ತಮ್ಮೆಲ್ಲಾ ಶಕ್ತಿಗಳನ್ನೂ ಒಂದುಗೂಡಿಸಬೇಕಾಗಿದೆ. ಹಾಗೆ ಮಾಡುವುದರಿಂದ ದೇಶದ ಭವಿಷ್ಯವು ಗಂಡಾಂತರಕ್ಕೆ ಸಿಲುಕುವುದಿಲ್ಲ. ಇದೊಂದು ಸಂಧಿಯ ಸಮಯವಾಗಿದ್ದು ಎಲ್ಲರಿಂದಲೂ ಹೆಚ್ಚಿನ ತ್ಯಾಗವನ್ನು ಅದು ಬಯಸುತ್ತದೆ' ಎಂದು ಬಾಂಬೆಯ ಸ್ವತಂತ್ರ ಕಾರ್ಮಿಕ ಪಕ್ಷದ ಮುಖಂಡರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಒಕ್ಕೂಟ ಮತ್ತು ಅದರ ಬಗ್ಗೆ ತಮ್ಮ ಪಕ್ಷದ ಅಭಿಪ್ರಾಯದ ವಿಷಯದಲ್ಲಿ ಪ್ರಸಕ್ತ ಎದ್ದಿರುವ ವಿವಾದಗಳನ್ನು ಕುರಿತು 'ಯುನೈಟೆಡ್ ಪ್ರೆಸ್' ಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

### ಕಾಂಗ್ರೆಸ್ ಮತ್ತು ಒಕ್ಕೂಟ

ಮುಂದುವರಿಸುತ್ತಾ ಡಾ. ಅಂಬೇಡ್ಕರ್ ಅವರು "ಇಂದು ರಾಷ್ಟ್ರದಲ್ಲಿ ಅತಿ ಪ್ರಮುಖವಾದ ರಾಜಕೀಯ ವಿಷಯವೆಂದರೆ ೧೯೩೫ರ ಭಾರತ ಸರಕಾರದ ಅಧಿನಿಯಮದಲ್ಲಿ ಸೇರಿಸಿರುವ ಒಕ್ಕೂಟದ ಯೋಜನೆಯನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು. ಒಕ್ಕೂಟವನ್ನು ಆದಷ್ಟು ಶೀಘ್ರವಾಗಿ ಸ್ಥಾಪಿಸಲು ಬಿಹಾರ ಸರಕಾರದ ಪ್ರತಿನಿಧಿಗಳು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಭಾರತ ಸರಕಾರದ ಅಧಿನಿಯಮದಲ್ಲಿ ಒಕ್ಕೂಟಕ್ಕೆ ಸಂಬಂಧಿಸಿದ ಭಾಗವನ್ನು ಇಡೀ ದೇಶವೇ ವಿರೋಧಿಸುತ್ತಿದೆ. ವಿರೋಧ ಪಕ್ಷಗಳಲ್ಲಿಯೂ ಅಭಿಪ್ರಾಯಭೇದವಿದೆ. ಒಕ್ಕೂಟ ಯೋಜನೆಯನ್ನು ತಿರಸ್ಕರಿಸಲೇಬೇಕೆಂದು ಪಟ್ಟುಹಿಡಿದಿರುವ ಕಾಂಗ್ರೆಸ್ ಪಕ್ಷದ ಒಳಗೇ ಒಕ್ಕೂಟದ ಬಗೆಗೆ ಅನುಸರಿಸಬೇಕಾದ ಧೋರಣೆಯನ್ನು ಕುರಿತು ತೀವ್ರವಾದ ಅಭಿಪ್ರಾಯಭೇದಗಳಿವೆ. ಕಾಂಗ್ರೆಸ್ ವೇದಿಕೆಯ ಮೇಲಿನಿಂದ ಅಂಗೀಕೃತವಾದ ಗೊತ್ತುವಳಿಯಲ್ಲಿನ ಭಾಷೆಯನ್ನು ನೋಡಿದರೆ, ಹಳೆಯ ತಲೆಮಾರಿನ ಮುಖಂಡರಿಗೆ ತೀವ್ರವಾದ ವಿರೋಧವೇನೂ ಇಲ್ಲವೆಂಬುದು ಕಾಣಿಸುತ್ತದೆ, ಮತ್ತು ಅವರಲ್ಲಿ ಕೆಲವರಿಗೆ ಒಕ್ಕೂಟದ ವ್ಯವಸ್ಥೆಯು ಸ್ವಾಗತಿಸಬಹುದಾದ ವಿಷಯವಾಗಿದೆ" ಎಂದು ಹೇಳಿದರು.

"ಪಕ್ಷದ ಹಳೆಯ ತಲೆಮಾರಿನ ಮುಖಂಡರು ಈ ವ್ಯವಸ್ಥೆಯಲ್ಲಿರಬಹುದಾದ ಒಳ್ಳೆಯ ಅಂಶಗಳಿಗಾಗಿ ಅಥವಾ ಒಪ್ಪಿದಂತೆ ಮಾಡಿ ಅದನ್ನು ಮುರಿಯುವುದಕ್ಕಾಗಿ ಇದನ್ನು ಒಪ್ಪಬಹುದು, ಎಂಬ ಭಯವನ್ನು ತಾಳುವುದಕ್ಕೆ ಇಂತಹ ವಿಷಯಗಳ ಚರಿತ್ರೆಯು ಕುಮ್ಮಕ್ಕನ್ನು ನೀಡುತ್ತದೆ. ಈ ಎಲ್ಲಾ ನಟನೆಯ ಹೊರತಾಗಿಯೂ, ಭಾರತದಲ್ಲಿ ಮತ್ತು ಇಂಗ್ಲೆಂಡಿನಲ್ಲಿ ಇತ್ತೀಚೆಗೆ ಕೆಲವು ಗೋಪ್ಯ ಸಂಧಾನಗಳು ನಡೆದಿವೆ ಎಂಬುದನ್ನು ನಂಬಲು ಸಾಕಷ್ಟು ಸಾಂದರ್ಭಿಕಸಾಕ್ಷ್ಯಗಳು ದೊರಕುತ್ತವೆ. ಈ ಸಂಧಾನಗಳ ಪರಿಣಾಮವಾಗಿ, ಸಂವಿಧಾನಕ್ಕೆ

ಹಲವು ತಿದ್ದುಪಡಿಗಳನ್ನು ಮಾಡಿ ಅದನ್ನು ಸ್ವೀಕರಿಸಲು ಅರ್ಹವಾಗಿದೆ ಎಂದು ಸಾರಲಾಗುವುದು ಎಂಬಂತೆ ತೋರುತ್ತಿದೆ".

**ಸಂಧಿಕಾಲ**

ಸ್ವತಂತ್ರ ಕಾರ್ಮಿಕ ಪಕ್ಷದ ನೀತಿಯನ್ನು ಕುರಿತು ಡಾ. ಅಂಬೇಡ್ಕರ್ ಅವರು ಹೀಗೆ ಹೇಳಿದರು – 'ಈ ಘಟ್ಟವು ರಾಷ್ಟ್ರಜೀವನದಲ್ಲಿ ಒಂದು ಸಂಧಿಕಾಲವಾಗಿದೆ ಮತ್ತು, ದೇಶದಲ್ಲಿರುವ ಪ್ರತಿಯೊಂದು ಪಕ್ಷವೂ ಈ ಸಮಸ್ಯೆಯನ್ನು ಪಕ್ಷದ ದೃಷ್ಟಿಯಿಂದ ನೋಡದೆ ದೇಶದ ಹಿತದೃಷ್ಟಿಯಿಂದ ನೋಡಬೇಕಾಗಿದೆ ಎಂದು ಸ್ವತಂತ್ರ ಕಾರ್ಮಿಕ ಪಕ್ಷವು ಭಾವಿಸುತ್ತದೆ. ಭಾರತ ಸರಕಾರದ ಅಧಿನಿಯಮದಲ್ಲಿರುವ ಒಕ್ಕೂಟ ವ್ಯವಸ್ಥೆಯ ಪ್ರತಿಗಾಮಿ ಲಕ್ಷಣವನ್ನು ಹಲವು ಜನರು ಸರಿಯಾಗಿ ಮತ್ತು ಪೂರ್ಣವಾಗಿ ಅರ್ಥಮಾಡಿಕೊಂಡಿಲ್ಲ. ತಮ್ಮದೇ ಆದ ಸರಕಾರಕ್ಕೆ ಅಡಚಣೆಯನ್ನುಂಟುಮಾಡುತ್ತದೆ ಮತ್ತು ಅದರ ಎಲ್ಲಾ ಅಧಿಕಾರಗಳನ್ನೂ ಕಿತ್ತುಕೊಂಡುಬಿಡುತ್ತದೆ ಎಂಬ ದೃಷ್ಟಿಯಿಂದಷ್ಟೇ ಬಹಳಷ್ಟು ಭಾರತೀಯ ರಾಜಕಾರಣಿಗಳು ಅದರ ಬಗ್ಗೆ ಅತೃಪ್ತಿಯನ್ನು ಹೊಂದಿದ್ದಾರೆ. ಅದರಿಂದೊದಗುವ ಅಪಾಯವನ್ನು ಇನ್ನೂ ಅವರು ಅರಿವಿಗೆ ಸಾಕಷ್ಟು ತಂದುಕೊಂಡಿಲ್ಲ. ಈ ಮುಖಂಡರ ವಿಷಯದಲ್ಲಿ ಸಂವಿಧಾನದ ಕಾರ್ಯಾಚರಣೆಯನ್ನು ತಡೆಯುವ ಭಯವು ಕೇವಲ ಗೊಡ್ಡುಬೆದರಿಕೆಯಾಗಿದೆ ಎನ್ನಬಹುದು. ಕಾಂಗ್ರೆಸ್ಸಿನ ಬಹುತೇಕ ಜನರು ಅಥವಾ ಮುಖಂಡರಲ್ಲಿ ಹೆಚ್ಚಿನವರು ಈ ವರ್ಗಕ್ಕೆ ಸೇರುತ್ತಾರೆಂದು ಹೇಳುವುದಕ್ಕೆ ನನಗೆ ವಿಷಾದವೆನಿಸುತ್ತದೆ.

ಎಂತಹ ದೊಡ್ಡ ಹೆಸರಿನಿಂದ ಕರೆದರೂ ಒಂದು ತುತ್ತು ಕೂಳಿಗಾಗಿ ದೇಶವು ಪೂರ್ಣ ರಾಷ್ಟ್ರವಾಗಿ ಅರಳುವ ತನ್ನ ಸ್ವಾತಂತ್ರವನ್ನು ಎಂದಿಗೂ ಮಾರಿಕೊಳ್ಳುವುದಿಲ್ಲ. ವಿಕಾಸದ ಹಾದಿಯಲ್ಲಿ ಒಕ್ಕೂಟದ ವ್ಯವಸ್ಥೆಯು ಅನಿವಾರ್ಯವಾಗಬಹುದು. ಆದರೆ ಅಂತಹ ವ್ಯವಸ್ಥೆಯು ಕಂಡಿತವಾಗಿಯೂ ಭಾರತ ಸರಕಾರದ ಅಧಿನಿಯಮದಲ್ಲಿ ರೂಪಿಸಿರುವಂತಹ ವ್ಯವಸ್ಥೆಯಲ್ಲ".

**ಒಕ್ಕೂಟ ವ್ಯವಸ್ಥೆಯಲ್ಲಿನ ದೋಷಗಳು**

ಒಕ್ಕೂಟ ವ್ಯವಸ್ಥೆಯ ಬಗ್ಗೆ ತಮ್ಮ ಪಕ್ಷದ ಆಕ್ಷೇಪಣೆಗಳ ಆಧಾರವನ್ನು ಕುರಿತು ಡಾ.ಅಂಬೇಡ್ಕರ್ ಅವರು ಹೀಗೆ ಹೇಳಿದರು: "ಆಕ್ಷೇಪಣೆಗೆ ಇರುವ ಆಧಾರಗಳನ್ನು ಎರಡು ಭಾಗವಾಗಿ ಮಾಡಬಹುದು (೧) ಅಸಮರ್ಪಕತೆಗಳು ಮತ್ತು (೨) ಕಾಯಿದೆಯಲ್ಲಿ ಅಂತರ್ಗತವಾಗಿರುವ ದೋಷಗಳು. ಮೊದಲನೆಯದು ಪ್ರಾತಿನಿಧ್ಯದಲ್ಲಿ ರಾಜ್ಯಗಳಿಗೆ ಕೊಟ್ಟಿರುವ ಪ್ರಾಮುಖ್ಯ, ನಾಮಕರಣಗಳ ಮೂಲಕ ರಾಜ್ಯಗಳ ಪ್ರತಿನಿಧಿಗಳನ್ನು ನೇಮಕಮಾಡುವುದು, ಬ್ರಿಟಿಷ್ ಭಾರತ ಮತ್ತು ರಾಜ್ಯಗಳ ನಡುವೆ ಅಸಮರ್ಪಕವಾಗಿ ಆರ್ಥಿಕ ಹೊರೆಗಳನ್ನು ವಿಂಗಡಿಸಿರುವುದು, ಕೇಂದ್ರ ಶಾಸನ ಸಭೆಗೆ ಪರೋಕ್ಷ ಚುನಾವಣೆಗಳು ಮತ್ತು ಗವರ್ನರ್ ಜನರಲ್ ಅವರ ವಿಶೇಷ ಹೊಣೆಗಾರಿಕೆ. ಎರಡನೆಯದರಲ್ಲಿ ಈ ಮುಂದಿನವನ್ನು ಸೇರಿಸಬಹುದು (೧) ಸಾರ್ವಭೌಮತೆಯನ್ನು ಮೀಸಲಿನ ವಿಷಯವನ್ನಾಗಿ ಪರಿಗಣಿಸಿರುವುದು, (೨) ಸೈನ್ಯದ ಮೇಲೆ ಸಂಪೂರ್ಣ ಹಿಡಿತವನ್ನು ಇಟ್ಟುಕೊಳ್ಳಲು ಸಾಧ್ಯವಾಗದಿರುವುದು, ಮತ್ತು (೩) ಆರ್ಥಿಕತೆಯ ಮೇಲೆ ಸಂಪೂರ್ಣವನ್ನು ಹಿಡಿತವನ್ನು ಹೊಂದಲು ಅಸಾಧ್ಯವಾಗಿರುವುದು. ಮೇಲೆ ಹೇಳಿದ ಅಸಮರ್ಪಕತೆಗಳು ಗಂಭೀರವಾಗಿದ್ದರೂ, ಕಾಲಾನುಕ್ರಮದಲ್ಲಿ ಇವು ಮರೆಯಾಗಬಹುದು ಅಥವಾ ಅವುಗಳನ್ನು ಕಡಿಮೆ ಮಾಡಬಹುದು. ಆದರೆ ಕಾಯಿದೆಯಲ್ಲಿ ಅಂತರ್ಗತವಾಗಿರುವ ದೋಷಗಳು ಹಾಗಲ್ಲ. ಒಕ್ಕೂಟ ವ್ಯವಸ್ಥೆಯ ಸಂವಿಧಾನವನ್ನು ತಿರಸ್ಕರಿಸಿದಲ್ಲದೆ ಈ ದೋಷಗಳ ನಿವಾರಣೆ ಸಾಧ್ಯವಿಲ್ಲ. ಅಸಮರ್ಪಕ ದೋಷಗಳಿದ್ದ ಮಾತ್ರಕ್ಕೆ ಸಂವಿಧಾನದೊಂದಿಗೆ ತಕರಾರು ಮಾಡುವುದು ಯಾರಿಗೇ ಆದರೂ ತರವಲ್ಲ. ವಾಸ್ತವವಾಗಿ ಈ

ಅಸಮರ್ಪಕ ದೋಷಗಳನ್ನು ಪರಸ್ಪರ ಅರ್ಥಮಾಡಿಕೊಳ್ಳುವ ಮೂಲಕ ತೆಗೆದುಹಾಕಬಹುದು ಮತ್ತು ಇದು ಅಸಾಧ್ಯವೇನಲ್ಲವೆಂಬುದನ್ನು ನಮ್ಮ ಅನುಭವವು ತೋರಿಸಿಕೊಡುತ್ತದೆ. ಅವುಗಳನ್ನು ತೆಗೆದುಹಾಕುವುದು ಸಾಧ್ಯವಿಲ್ಲದಿದ್ದರೂ, ತಿದ್ದುಪಡಿಮಾಡಬಹುದಾದಾಗ ಅವನ್ನು ತಿದ್ದಬಹುದು. ಆದರೆ ಸಂವಿಧಾನವು ಮೂಲತಃ ದೋಷಯುಕ್ತವಾದ ನೀತಿಗಳ ಮೇಲೆ ರಚಿತವಾಗಿದ್ದರೆ, ಅಂತಹ ನೀತಿಗಳು ಸಂವಿಧಾನವನ್ನು ಪ್ರಗತಿಯ ಹಾದಿಯಲ್ಲಿ ನಡೆಯಲು ಅಡಚಣೆಯನ್ನುಂಟುಮಾಡುವಂತಹವುಗಳಾಗಿದ್ದರೆ, ಪರಿಸ್ಥಿತಿಯು ಸಂಪೂರ್ಣವಾಗಿ ಬೇರೆಯದೇ ಆಗಿರುತ್ತದೆ. ಒಕ್ಕೂಟದ ಸಂವಿಧಾನವು ತಪ್ಪಾದ ಯುಕ್ತಿಗಳ ಮೇಲೆ, ಸಡಿಲ ತಳಹದಿಯ ಮೇಲೆ ರಚಿತವಾಗಿದೆ.

### ಪ್ರಾಣಾಂತಿಕ ವಿಷ

"ಸ್ವತಂತ್ರ ಕಾರ್ಮಿಕ ಪಕ್ಷದ ಅಭಿಪ್ರಾಯದಲ್ಲಿ, ಭಾರತ ಸರಕಾರದ ಅಧಿನಿಯಮದಡಿಯಲ್ಲಿ ಜಾರಿಗೆ ತರಬೇಕೆಂದಿರುವ ಒಕ್ಕೂಟ ವ್ಯವಸ್ಥೆಯ ಯೋಜನೆಯನ್ನು ಜಾರಿಗೆ ತರುವುದನ್ನು ಸಾಧ್ಯವಾದ ಎಲ್ಲಾ ಕ್ರಮಗಳಿಂದಲೂ ವಿರೋಧಿಸಬೇಕು. ಅದನ್ನು ಪ್ರಾಣಾಂತಿಕವಾದ ಘೋರ ವಿಷವೆಂದು ಪರಿಗಣಿಸಿ ಹೊಸ ಸಂವಿಧಾನದಿಂದ ತೆಗೆದುಹಾಕಬೇಕು. ಕಾಂಗ್ರೆಸ್ ಪಕ್ಷದ ಬಹುಸಂಖ್ಯಾತರು ಈ ಸಂವಿಧಾನದ ವಿರುದ್ಧ ಹೋರಾಡಲು ಬಯಸಿದರೆ, ಸ್ವತಂತ್ರ ಕಾರ್ಮಿಕ ಪಕ್ಷವು ಅವರಿಗೆ ಬೆಂಬಲವನ್ನು ನೀಡುತ್ತದೆ. ಹಾಗಿಲ್ಲದೆ, ಕಾಂಗ್ರೆಸ್ಸಿನಲ್ಲಿ ಬಹುಸಂಖ್ಯಾತರು ಪ್ರತಿಗಾಮಿಗಳತ್ತ ಓಲಿದರೆ ಮತ್ತು ಶ್ರೀ ಸುಭಾಷ್ಚಂದ್ರ ಬೋಸ್ ಅವರು ಅಚಲವಾಗಿ ತಮ್ಮ ನಿರ್ಧಾರಕ್ಕೇ ಅಂಟಿಕೊಂಡರೆ, ಸ್ವತಂತ್ರ ಕಾರ್ಮಿಕ ಪಕ್ಷವು ಬೋಸ್ ಅವರೊಡನೆ ಕೈಜೋಡಿಸುತ್ತದೆ. ಹೊಸ ಸಂವಿಧಾನದ ಒಕ್ಕೂಟ ವ್ಯವಸ್ಥೆಯ ವಿಧಿಗಳ ವಿರುದ್ಧ ಹೋರಾಡುವ ಯಾವುದೇ ಪಕ್ಷಕ್ಕೆ ಅಥವಾ ಪಕ್ಷಗಳಿಗೆ ನಮ್ಮ ಪಕ್ಷವು ಸಾಧ್ಯವಾದ ಎಲ್ಲಾ ವಿಧಗಳಿಂದಲೂ ಸಹಕಾರವನ್ನು ನೀಡುತ್ತದೆ" ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು.

* * * * *

---

ಯುನೈಟೆಡ್ ಪ್ರೆಸ್

# ೭

# ವಿತರಣಾತ್ಮಕ ಮತದಾನ ಪದ್ಧತಿ – ಡಾ. ಅಂಬೇಡ್ಕರ್ ಅವರ ವಿರೋಧ

ಬಾಂಬೆ, ಗುರುವಾರ* (೧೯೩೯ರ ಮಾರ್ಚ್ ೯)

ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಅವರಿಗೆ ಮತ್ತು ವಿರೋಧಪಕ್ಷದ ನಾಯಕರಾದ ಮೇಜರ್ ಅಟ್ಲಿಯವರಿಗೆ ಕಾರ್ಮಿಕ ನಾಯಕರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಒಂದು ತಂತಿ ಸಂದೇಶವನ್ನು ಕಳುಹಿಸಿ, ಉದ್ದೇಶಿತ ವಿತರಣಾತ್ಮಕ ಮತದಾನ ಪದ್ಧತಿಗೆ ಇರುವ ಅಸ್ಪೃಶ್ಯರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಅವರು ಕಳುಹಿಸಿದ ತಂತಿ ಸಂದೇಶದ ಪಾಠ ಹೀಗಿದೆ:

"ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಅವರಿಗೆ,

ಪೂನಾ ಒಪ್ಪಂದಕ್ಕೆ ವಿರೋಧವಾಗಿ ಜಾರಿಗೆ ತರುವ ವಿತರಣಾತ್ಮಕ ಮತದಾನ ಪದ್ಧತಿಯನ್ನು ನಾನು ಅಸ್ಪೃಶ್ಯರ ಪರವಾಗಿ ಪ್ರಬಲವಾಗಿ ವಿರೋಧಿಸುತ್ತೇನೆ.

**ಅಂಬೇಡ್ಕರ್**

ಮೇಜರ್ ಅಟ್ಲೀ,
ಸಂಸತ್ ಸದಸ್ಯರು,
ಸಂಸತ್ತಿನ ಕೆಳಮನೆ, ಲಂಡನ್

ಅಸ್ಪೃಶ್ಯರಿಗೆ ಹಾನಿಕಾರಕವಾಗಿರುವ ವಿತರಣಾತ್ಮಕ ಮತದಾನ ಪದ್ಧತಿಯ ಮಸೂದೆಯನ್ನು ಮಂಡಿಸುವುದಕ್ಕೆ ನಮ್ಮ ವಿರೋಧವಿದೆ.

**ಅಂಬೇಡ್ಕರ್**

* * * * *

---

(ದ ಫ್ರೀ ಪ್ರೆಸ್ ಜರ್ನಲ್, ದಿನಾಂಕ ೧೯೩೯ರ ಮಾರ್ಚ್ ೧೦)

# ೮
# ಗ್ರೇಟ್ ಬ್ರಿಟನ್ನಿಗೆ ಬೆಂಬಲವನ್ನು ನೀಡಬೇಕು

ಗ್ರೇಟ್ ಬ್ರಿಟನ್ನಿಗೆ ಯುದ್ಧದಲ್ಲಿ ಬೆಂಬಲವನ್ನು ನೀಡಬೇಕು ಎಂಬ ಅಭಿಪ್ರಾಯವನ್ನು ಸ್ವತಂತ್ರ ಕಾರ್ಮಿಕ ಪಕ್ಷದ ಅಧ್ಯಕ್ಷರಾದ ಡಾ. ಅಂಬೇಡ್ಕರ್ ಅವರು ಈ ಮುಂದಿನ ತಮ್ಮ ಹೇಳಿಕೆಯಲ್ಲಿ ವ್ಯಕ್ತಪಡಿಸಿದ್ದಾರೆ. – ಸಂಪಾದಕರು.

ಯೂರೋಪಿಯನ್ ಯುದ್ಧವನ್ನು ಕುರಿತಂತೆ ಪಕ್ಷದ ನಿಲುವನ್ನು ಸ್ಪಷ್ಟಪಡಿಸುವ ಈ ಹೇಳಿಕೆಯನ್ನು ನೀಡಲು, ಸ್ವತಂತ್ರ ಕಾರ್ಮಿಕ ಪಕ್ಷದ ಕಾರ್ಯಕಾರಿ ಸಮಿತಿಯು ತನ್ನ ಅಧ್ಯಕ್ಷರಿಗೆ ಅಧಿಕಾರವನ್ನು ನೀಡಿದೆ.

ಯುದ್ಧವು ಪ್ರಾರಂಭವಾದಾಗಿನಿಂದ ಅದರ ಬಗ್ಗೆ ಭಾರತೀಯ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ಕುರಿತು ನೀಡುತ್ತಿರುವ ಹೇಳಿಕೆಗಳ ಪ್ರವಾಹವೇ ಹರಿದುಬರುತ್ತಿದೆ. ಈ ಹೇಳಿಕೆಗಳಲ್ಲಿ ಭಾರತವು ಯುದ್ಧದಲ್ಲಿ ಗ್ರೇಟ್ ಬ್ರಿಟನ್ನಿನ ಪಕ್ಷವನ್ನು ವಹಿಸಬೇಕೆಂದು ಕೇಳಿಬರುತ್ತಿರುವ ಹೇಳಿಕೆಗಳ ಪ್ರಾಬಲ್ಯವೇ ಅಧಿಕವಾಗಿದ್ದರೂ, ಅದರಲ್ಲಿ ಸಾಕಷ್ಟು ಉತ್ಸಾಹವು ಕಂಡುಬರುತ್ತಿಲ್ಲ. ಗ್ರೇಟ್ ಬ್ರಿಟನ್ನಿಗೆ ಬೆಂಬಲವನ್ನು ನೀಡುವಲ್ಲಿ ಇನ್ನೂ ಹಿಂದುಮುಂದು ನೋಡುವ ಪ್ರವೃತ್ತಿ ಹಾಗೂ ಒಲ್ಲದ ಮನಸ್ಸುಗಳೇ ಕಂಡುಬರುತ್ತಿವೆ. ಬೆಂಬಲವನ್ನು ನೀಡಬೇಕು ಎಂದಾದರೆ ಅದರಲ್ಲಿ ಔದಾಸೀನ್ಯವಾಗಲೀ ಸ್ನೇಹಾಭಾವವಾಗಲೀ, ಇರಬಾರದು.

ಕ್ರಿಯಾಶೂನ್ಯ ರಕ್ಷಣೆಯ ದೃಷ್ಟಿಯಿಂದ ಮಾತ್ರ ಸಹಕರಿಸುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಬಯಸದ ಔದಾಸೀನ್ಯ ಹಾಗೂ ಜಡವಾದ ಅಡಚಣೆಗಳನ್ನು ಒಡ್ಡುವ ಸ್ನೇಹಾಭಾವ ಇವುಗಳ ಮಧ್ಯೆ ನೀಡಿದ ನಿಜವಾದ ಸಹಾಯವು ಶೂನ್ಯವಾಗುತ್ತದೆ. ಆದ್ದರಿಂದ ಎಲ್ಲಾ ವರ್ಗಗಳ ಮತ್ತು ವಿಭಾಗಗಳ ಬೆಂಬಲವನ್ನೂ ಕ್ರೋಢೀಕರಿಸುವುದು ಅಗತ್ಯವಾಗಿದೆ ಮತ್ತು ಇದಕ್ಕಾಗಿ ಈಗಿರುವ ಉತ್ಸಾಹಶೂನ್ಯತೆಯ ಕಾರಣಗಳನ್ನು ಕಂಡುಹಿಡಿಯುವುದೂ ಆವಶ್ಯಕವಾಗಿದೆ.

### ಛೇಂಬರ್ಲಿಯನ್ ನಿರುತ್ಸಾಹ

ಈ ಉತ್ಸಾಹಶೂನ್ಯತೆಗೆ ಇರಬಹುದಾದ ಕಾರಣಗಳನ್ನು ವಿಶ್ಲೇಷಿಸಿದಾಗ, ಗ್ರೇಟ್ ಬ್ರಿಟನ್ ಹಾಗೂ ಫ್ರಾನ್ಸ್ ದೇಶಗಳು ಹಿಂದೆ ನಡೆದುಕೊಂಡ ರೀತಿಯಿಂದಾಗಿ ಈ ಪರಿಸ್ಥಿತಿಯುಂಟಾಗಿದೆ ಎಂದು ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ತೋರುತ್ತದೆ. ಈ ಎರಡೂ ದೇಶಗಳು ಜರ್ಮನಿಯ ವಿರುದ್ಧ ಕ್ರಮತೆಗೆದುಕೊಳ್ಳುವಲ್ಲಿ ಬಹಳ ವಿಳಂಬಮಾಡಿದವು.

ದೊರೆತ ಪ್ರಥಮ ಅವಕಾಶದಲ್ಲಿಯೇ ಸಾಮೂಹಿಕ ಕ್ರಮದಿಂದ ಜರ್ಮನಿಯ ಆಕ್ರಮಣವನ್ನು ತಡೆಯುವ ಬದಲು, ಜರ್ಮನಿಯು ಒಂದಾದ ಮೇಲೊಂದರಂತೆ ಆಕ್ರಮಣಗಳನ್ನು ನಡೆಸಲು ಅವಕಾಶವನ್ನು ಈ ದೇಶಗಳು ಕೊಟ್ಟು, ಜರ್ಮನಿಯನ್ನು ಓಲೈಸುವ ಪ್ರಯತ್ನವನ್ನು ಮಾಡಿದವು. ಈ ಮೂಲಕ ಯಾವ ದೇಶಗಳ ರಕ್ಷಣೆಯು ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್‌ಗಳ ಪವಿತ್ರ ಕರ್ತವ್ಯವಾಗಿದ್ದಿತೋ ಅಂತಹ ಹಲವು ದೇಶಗಳು, ಅದರಲ್ಲಿಯೂ ಜೆಕೋಸ್ಲೋವಾಕಿಯಾ, ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವಂತೆ, ತಮ್ಮ ಜನತೆಯ ಜೀವಗಳನ್ನು ಬಲಿದಾನ ನೀಡುವಂತೆ ಮಾಡಿದವು. ಇದುವರೆಗೂ ಹಿಟ್ಲರ್ ಐದು ಜಯಗಳನ್ನು ಗಳಿಸಿದ್ದಾನೆ, ಬಹುಶಃ, ಪೋಲೆಂಡ್ ಆರನೆಯದಾಗಬಹುದು.

ಈಗ ಅವನನ್ನು ವಿರೋಧಿಸಲು ಮುಂದೆ ಬಂದಿರುವವರು ಅವನ ಬಗ್ಗೆ ಸರಿಯಾದ ಕ್ರಮವನ್ನು ಬಹಳ ಹಿಂದೆಯೇ ತೆಗೆದುಕೊಳ್ಳಬೇಕಾಗಿತ್ತು ಎಂದು ಸ್ವತಂತ್ರ ಕಾರ್ಮಿಕ ಪಕ್ಷವು ಭಾವಿಸುತ್ತದೆ.

ಜರ್ಮನಿಯೊಂದಿಗೆ ಶಾಂತಿಸಂಧಾನವನ್ನು ನಡೆಸುತ್ತಾ ಸಣ್ಣ ದೇಶಗಳ ಸ್ವಾತಂತ್ರ್ಯ ಮತ್ತು ಅಲ್ಲಿನ ಜನತೆಯ ಪ್ರಾಣಗಳನ್ನು ಬಲಿಕೊಡುವಂತೆ ಮಾಡಿದುದು ಈಗ ಯುದ್ಧಸಿದ್ಧತೆಗೆ ಇರಬೇಕಾಗಿದ್ದ ನೈತಿಕ ನೆಲೆಗಟ್ಟಿನಲ್ಲಿ ಬಹುಪಾಲನ್ನು ನಾಶಮಾಡಿಕೊಂಡಂತೆ ಆಗಿದೆ.

ಮುಂದೊಂದು ದಿನ ಅತಿಕ್ರಮಣಕ್ಕೆ ಒಳಗಾಗದಂತೆ ಶಾಂತಿಯನ್ನು ನ್ಯಾಯಯುತವಾದ ಹಾಗೂ ಶಾಶ್ವತವಾದ ನೆಲೆಯ ಮೇಲೆ ಸ್ಥಾಪಿಸುವ ಪ್ರಾಮಾಣಿಕ ಪ್ರಯತ್ನವಿಲ್ಲದೆ ಯುದ್ಧವನ್ನು ಕೈಗೊಳ್ಳಲಾಗಿದೆಯೆಂದು ಸ್ವತಂತ್ರ ಕಾರ್ಮಿಕ ಪಕ್ಷವು ಭಾವಿಸುತ್ತದೆ.

## ಮೂರು ಅತ್ಯಾವಶ್ಯಕ ನಿಬಂಧನೆಗಳು

ಸಾಮೂಹಿಕ ಭದ್ರತೆಯು ಒಳ್ಳೆಯದೇ ಆದರೂ, ಅದಷ್ಟೇ ಸಾಲದು ಎಂಬುದನ್ನು ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಅರಿತುಕೊಳ್ಳಲಿಲ್ಲ. ೧೯೧೪ರ ಯುದ್ಧದಲ್ಲಿ ಸಾಮೂಹಿಕ ಭದ್ರತೆಯ ಅಭಾವವೇನೂ ಇರಲಿಲ್ಲ. ಆಕ್ರಮಣಕಾರನನ್ನು ಮಟ್ಟಹಾಕಲು ರಾಷ್ಟ್ರಗಳ ಸಮೂಹವೇ ಇದ್ದಿತು ಮತ್ತು ಹಾಗೆಯೇ ಆಕ್ರಮಣಕಾರನನ್ನು ಮಟ್ಟಹಾಕಿದವು. ಆದರೆ ಸಮಾಧಿಯಿಂದ ಹೊರಬಂದ ಆ ಆಕ್ರಮಣಕಾರ ಈಗ ಎಲ್ಲರ ಹೆಗಲಮೇಲೂ ಕುಳಿತಿದ್ದಾನೆ.

ಯುದ್ಧದಲ್ಲಿ ಸಾಧಿಸುವ ಜಯವು ಮಾತ್ರ ಆಕ್ರಮಣಕಾರನನ್ನು ಹದ್ದುಬಸ್ತಿನಲ್ಲಿ ಇಡಲು ಸಾಕಾಗುವುದಿಲ್ಲ. ಯುದ್ಧದ ಪರಿಣಾಮವಾಗಿ ಶಾಂತಿಯು ಶಾಶ್ವತವಾಗಿ ನೆಲಸಬೇಕಾದರೆ, ಈ ಮುಂದಿನ ಎಚ್ಚರಿಕೆಯ ಕ್ರಮಗಳೂ ಅಗತ್ಯವೆಂಬುದು ಸ್ವತಂತ್ರ ಕಾರ್ಮಿಕ ಪಕ್ಷದ ಭಾವನೆ.

ಮೊದಲನೆಯದು – ವಿಜಯವು ನ್ಯಾಯಯುತವಾದ ಶಾಂತಿಯನ್ನು ತರಬೇಕು,

ಎರಡನೆಯದು – ಸಾಮೂಹಿಕ ಕ್ರಮಗಳಿಂದ ಶಾಂತಿಯನ್ನು ಕಾಪಾಡಬೇಕು,

ಮೂರನೆಯದು – ಶಾಂತಿಯನ್ನು ಸ್ಥಾಪಿಸಲು ಹೊರಟ ಮುಂದಾಳುಗಳು ಶಾಂತಿಯ ಭಂಗವು ದೂರದಲ್ಲಿಯೇ ಆಗಲಿ, ಹತ್ತಿರದಲ್ಲಿಯೇ ಆಗಲಿ – ಎಲ್ಲೇ ಆದರೂ, ಅದಕ್ಕೆ ಬಲಿಯಾದವರು ಯಾರೇ ಆಗಿರಲಿ, ಅದರ ವಿರುದ್ಧ ಕ್ರಮಕೈಗೊಳ್ಳಲು ಸಿದ್ಧವಾಗಿರಬೇಕು.

ಈ ಮುನ್ನೆಚ್ಚರಿಕೆಗಳನ್ನು ಅನುಸರಿಸದೆ ಇದ್ದರೆ ಯುದ್ಧಕ್ಕೆ ಮಂಗಳವನ್ನು ಹಾಡುವುದು ಸಾಧ್ಯವಿಲ್ಲ. ಈ ಮುನ್ನೆಚ್ಚರಿಕೆಯ ಕ್ರಮಗಳ ಪರಿಣಾಮವನ್ನು ಸ್ವತಂತ್ರ ಕಾರ್ಮಿಕ ಪಕ್ಷವು ಎಷ್ಟು ಚೆನ್ನಾಗಿ ಮನಗಂಡಿದೆಯೆಂದರೆ, ಅದು ಯುದ್ಧದ ಮೊದಲು ಶಾಂತಿಯ ನಿಬಂಧನೆಗಳನ್ನು ರೂಪಿಸಲು ತನ್ನ ಪರವಾಗಿ ಹೋರಾಡಲು ಸಜ್ಜಾಗಿರುವ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳ ಒಂದು ಸಮಿತಿಯನ್ನು ರಚಿಸಬೇಕು ಮತ್ತು ಆ ನಿಬಂಧನೆಗಳನ್ನು ಎಲ್ಲರ ಗಮನಕ್ಕೂ, ಜರ್ಮನಿಯ ಜನತೆಯ ಗಮನಕ್ಕೂ ಸಹ, ತರಬೇಕು.

ಸ್ನೇಹಪರ ರಾಷ್ಟ್ರಗಳ ಉದ್ದೇಶವನ್ನು ಜಗತ್ತಿಗೆ ಮನಗಾಣಿಸಲು ಇಂತಹ ಪ್ರಕಟಣೆಗಿಂತ ಹೆಚ್ಚು ಯುಕ್ತವಾದ ಬೇರೆಯ ಮಾರ್ಗವು ಇಲ್ಲವೆಂಬುದು ಸ್ವತಂತ್ರ ಕಾರ್ಮಿಕ ಪಕ್ಷದ ಅಭಿಪ್ರಾಯವಾಗಿದೆ. ಇದರಿಂದ ಈ ಮಿತ್ರರಾಷ್ಟ್ರಗಳ ಉದ್ದೇಶವು ನ್ಯಾಯಯುತವಾದ ಶಾಂತಿಯೆಂದೂ, ಒಮ್ಮೆ ಅದನ್ನು ಸಾಧಿಸಿದರೆ ಅದನ್ನು ಪಾಲಿಸಿಕೊಂಡು ಹೋಗುವುವೆಂದೂ ಎಲ್ಲರಿಗೂ ಮನದಟ್ಟಾಗುತ್ತದೆ. ಯುದ್ಧವನ್ನು ನಿಲುಗಡೆಗೆ ತರುವ ಯುದ್ಧವೇ ನಿಜವಾದ ಯುದ್ಧ. ಅಂತಹ ಯುದ್ಧದಲ್ಲಿ ಭಾಗವಹಿಸಲು ಯಾರೂ ಹಿಂದೆಮುಂದೆ ನೋಡುವುದಿಲ್ಲ.

## ಭಾರತ ಮತ್ತು ಸಾಮ್ರಾಜ್ಯದ ವಿದೇಶಾಂಗ ನೀತಿ

ಭಾರತೀಯರು ಗ್ರೇಟ್ ಬ್ರಿಟನ್ನಿಗೆ ಸಹಾಯಮಾಡಲು ಒಪ್ಪದಿರುವುದಕ್ಕೆ ಸನ್ನಿವೇಶದಲ್ಲಿರುವ ಮತ್ತೊಂದು ದೋಷವೂ ಕಾರಣವೆಂದು ಸ್ವತಂತ್ರ ಕಾರ್ಮಿಕ ಪಕ್ಷವು ಭಾವಿಸುತ್ತದೆ. ಈಗಿರುವ ಪರಿಸ್ಥಿತಿಯಲ್ಲಿ ಭಾರತವು ಬ್ರಿಟಿಷ್ ಸರಕಾರದ ರಥದ ಚಕ್ರಕ್ಕೆ ಕಟ್ಟಲ್ಪಟ್ಟಿದೆ. ಬ್ರಿಟಿಷ್ ರಾಜಕೀಯ ಧುರೀಣರು ಯಾವುದೇ ವಿದೇಶಾಂಗ ನೀತಿಯನ್ನು ಅನುಸರಿಸಬಹುದು ಮತ್ತು ಅಂತಾರಾಷ್ಟ್ರೀಯವಾಗಿ ಯಾವುದೇ ರೀತಿಯ ವಾಗ್ದಾನಗಳನ್ನು ಬೇಕಾದರೂ ಮಾಡಬಹುದು. ಅವರು ಯುದ್ಧವನ್ನು ಸಾರಬಹುದು ಅಥವಾ ಯುದ್ಧವನ್ನು ಸಾರದೇ ಇರಬಹುದು. ಯಾವುದೇ ರೀತಿಯಲ್ಲಿ ಶಾಂತಿಯನ್ನು ಸ್ಥಾಪಿಸಬಹುದು. ಇವೆಲ್ಲಕ್ಕೂ ಅವರು ಸ್ವತಂತ್ರರು. ಆದರೆ ಅವರು ಯುದ್ಧವನ್ನು ಸಾರುವ ವಿಷಯಕ್ಕೆ ಸಂಬಂಧಿಸಿದ ಹಾಗೆ ಅಥವಾ ಶಾಂತಿ ಸಂಧಾನವನ್ನು ನಡೆಸುವ ಪ್ರಕ್ರಿಯೆಗೆ ಸಂಬಂಧಿಸಿದ ಹಾಗೆ ಅವರ ವಿದೇಶಾಂಗ ನೀತಿಯನ್ನು ಕುರಿತು ಭಾರತವು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗದ ಸ್ಥಿತಿಯಲ್ಲಿದೆ.

ಒಂದು ನಿರ್ದಿಷ್ಟ ವಿದೇಶಾಂಗ ನೀತಿಯು ಯಶಸ್ವಿಯಾದರೆ ಭಾರತಕ್ಕೆ ದೊರಕುವ ಲಾಭ ಏನೂ ಇರುವುದಿಲ್ಲ. ಆದರೆ, ಅದೇ ನೀತಿಯು ಅಯಶಸ್ವಿಯಾಗಿ ಅದರ ಪರಿಣಾಮವಾಗಿ ಯುದ್ಧವು ಸಂಭವಿಸಿದರೆ, ಅದಕ್ಕೆ ಭಾರತವು ಜನಬಲ ಹಾಗೂ ಧನಬಲವನ್ನು ನೀಡಬೇಕಾಗುತ್ತದೆ. ಯುದ್ಧಕ್ಕೆ ಕಾರಣವಾಗುವ ವಿಷಯಗಳಲ್ಲಿ ಮಧ್ಯೆ ಪ್ರವೇಶಿಸುವ ಹಕ್ಕು ಭಾರತಕ್ಕೆ ಇಲ್ಲ. ಯುದ್ಧವನ್ನು ನಿಲ್ಲಿಸುವ ವಿಷಯದಲ್ಲಿಯೂ ಅದು ಮಧ್ಯೆ ಪ್ರವೇಶಿಸುವ ಹಾಗಿಲ್ಲ. ಯುದ್ಧವು ನಡೆಯುತ್ತಿದ್ದಾಗ ಮಾತ್ರ ಹೊಡೆದಾಡಲು ಭಾರತವು ಬೇಕಾಗುತ್ತದೆ. ಅಂತಹ ಪರಿಸ್ಥಿತಿಯು ಭಾರತದ ಪಾಲಿಗೆ ಅಸಂಗತವೂ, ಅನ್ಯಾಯಯುತವೂ ಆಗಿರುತ್ತದೆ.

## ಪ್ರಶ್ನಾತೀತವಾದ ಹಕ್ಕು

ವರ್ಸೈಲೆಸ್ ಒಪ್ಪಂದದ ಸಮಯದಲ್ಲಿ ಭಾರತೀಯ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿಹಾಕುವ ಅವಕಾಶವನ್ನು ಕಲ್ಪಿಸಲಾಗಿತ್ತು ಎಂಬುದು ನಿಜ. ಆದರೆ, ಶಾಂತಿ ಒಪ್ಪಂದಕ್ಕೆ ಸಹಿಹಾಕುವ ಸಮಯದಲ್ಲಿಯೂ ಭಾರತವು ಪಡೆಯಬೇಕಾಗಿದ್ದ ಗೌರವಕ್ಕೆ ಅದು ಬದಲಿಯಾಗಲಾರದು. ಬ್ರಿಟಿಷ್ ಸಾಮ್ರಾಜ್ಯದ ವಿದೇಶಾಂಗನೀತಿಯಲ್ಲಿ ಮತ್ತು ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುವ ಸಂದರ್ಭಗಳಲ್ಲಿ ತಾನೂ ಭಾಗವಹಿಸಲು ಸಾಮ್ರಾಜ್ಯದ ಇತರ ಯಾವುದೇ ದೇಶಗಳಿಗಿಂತ ಭಾರತವು ಹೆಚ್ಚಿನ ಹಕ್ಕನ್ನು ಹೊಂದಿದೆ.

ಬ್ರಿಟಿಷ್ ಸಾಮ್ರಾಜ್ಯದ ದೇಶಗಳಿಗೆ ತಾವು ಅಲಿಪ್ತವಾಗಿ ಉಳಿಯುವ ಹಕ್ಕು ಉಂಟು. ಯಾವುದೇ ವಿದೇಶಾಂಗ ನೀತಿಯನ್ನು ಅದು ಅನ್ಯಾಯಯುತವಾದುದು ಎಂದಾಗಲೀ, ಅನೌಚಿತ್ಯವೆಂದಗಾಲಿ ಆ ದೇಶಗಳು ಒಪ್ಪದೇ ಇದ್ದಲ್ಲಿ, ಅಂತಹ ನೀತಿಯಿಂದ ಉದ್ಭವಿಸುವ ಯುದ್ಧದ ಪರಿಣಾಮಗಳನ್ನು ಅವು ಅನುಭವಿಸಬೇಕಾಗಿಲ್ಲ. ಬ್ರಿಟಿಷ್ ಸರಕಾರವು ಯುದ್ಧವನ್ನು ಆರಿಸಿಕೊಂಡಲ್ಲಿ, ಅದರಿಂದ ತಪ್ಪಿಸಿಕೊಳ್ಳುವ ಅವಕಾಶವು ಭಾರತಕ್ಕೆ ಇಲ್ಲ. ಭಾರತವು ಯುದ್ಧದಲ್ಲಿ ಭಾಗವಹಿಸಲೇಬೇಕಾಗಿದ್ದಲ್ಲಿ, ಯುದ್ಧವನ್ನು ಕುರಿತ ಸಮಾಲೋಚನೆಗಳಲ್ಲಿ ಭಾಗವಹಿಸಲು ಅದಕ್ಕೆ ಅವಕಾಶವನ್ನು ನೀಡಬೇಕಾಗಿತ್ತು, ಆದರೆ, ಇಂದು ದುರದೃಷ್ಟದಿಂದ ಅದು ಹಾಗಾಗಿಲ್ಲ.

## ಎಲ್ಲಾ ರಾಷ್ಟ್ರಗಳಿಗೂ ಒದಗಿರುವ ವಿಪತ್ತು

ಈ ಡೋಲಾಯಮಾನ ಸ್ಥಿತಿಯ ಹಿಂದಿರುವ ಎಲ್ಲಾ ಕಾರಣಗಳನ್ನೂ ಸ್ವತಂತ್ರ ಕಾರ್ಮಿಕ ಪಕ್ಷವು ಪರಿಗಣಿಸಿದೆ. ಪ್ರಭಾವವನ್ನು ಬೀರುವ ಈ ಕಾರಣಗಳ ಸಾಮರ್ಥ್ಯವನ್ನು ಅಲ್ಲಗಳೆಯಲಾಗದು. ಪೋಲೆಂಡನ್ನು ರಕ್ಷಿಸುವುದು ಮಾತ್ರ ಈ ಯುದ್ಧದ ಉದ್ದೇಶವಾಗಿದ್ದಿದ್ದರೆ ಅವರು ನಿರ್ಣಾಯಕವಾದ

ಸೈನ್ಯವನ್ನು ಇನ್ನೂ ಅಧಿಕ ಸಂಖ್ಯೆಯಲ್ಲಿ ಹೊಂದಬಹುದಿತ್ತು. ಸ್ವತಂತ್ರ ಕಾರ್ಮಿಕ ಪಕ್ಷದ ಅಭಿಪ್ರಾಯದಲ್ಲಿ ಪೋಲೆಂಡಿನ ಪಕ್ಷದಲ್ಲಿ ಹೇಳಿಕೊಳ್ಳುವಂತಹ ಸದ್ಗುಣಗಳಾವುದೂ ಇಲ್ಲ. ಪೋಲೆಂಡ್ ಬಹಳ ಹಿಂದೆಯೇ ಪ್ರಜಾಪ್ರಭುತ್ವದ ಕೊಲೆಯನ್ನು ಮಾಡಿತು. ಜರ್ಮನರು ಯಹೂದಿಗಳಿಗೆ ನೀಡಿದ ಕಷ್ಟಗಳಿಗಿಂತ ಪೋಲೆಂಡ್ ಯಹೂದಿಗಳಿಗೆ ನೀಡಿದ ಕಷ್ಟಗಳು ಕಡಿಮೆ ಕ್ರೌರ್ಯದವುಗಳಾಗಿರಲಿಲ್ಲ. ಈ ತುರ್ತುಪರಿಸ್ಥಿತಿಯಲ್ಲಿಯೂ ರಷ್ಯನ್ನರಿಂದ ಸಹಾಯಪಡೆದು ತನ್ನನ್ನು ತಾನು ರಕ್ಷಿಸಿಕೊಳ್ಳುವುದರ ಬದಲು ನಾಶಹೊಂದುವುದನ್ನೇ ಆಯ್ಕೆಮಾಡಿಕೊಂಡಿದೆ. ಆದರೆ ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ತೋರುವ ಹಾಗೆ, ಇದು ಪೋಲೆಂಡನ್ನು ಮಾತ್ರ ರಕ್ಷಿಸುವ ಉದ್ದೇಶವನ್ನು ಹೊಂದಿರುವ ಯುದ್ಧವಲ್ಲ.

ಪೋಲೆಂಡಿನ ಕಾರಣವು ಯುದ್ಧಕ್ಕೆ ನೀಡಬಹುದಾಗಿರುವ ತೋರಿಕೆಯ ಕಾರಣವಷ್ಟೆ. ಜರ್ಮನಿ ಮತ್ತು ಪೋಲೆಂಡುಗಳ ನಡುವಿನ ಯುದ್ಧವು ಇನ್ನಿತರ ಆಯಾಮಗಳನ್ನೂ ಮತ್ತು ಆಳವಾದ ಮರ್ಮಗಳನ್ನೂ ಒಳಗೊಂಡಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಜರ್ಮನಿಯು ತನ್ನನ್ನು ತಾನು ಕೇವಲ ಒಂದು ದೇಶವೆಂದು ಅಥವಾ ಹಲವು ದೇಶಗಳಲ್ಲಿ ತಾನೂ ಒಂದು ಎಂಬುದನ್ನು ಪರಿಗಣಿಸಿಕೊಳ್ಳದೆ, ಮಿಕ್ಕೆಲ್ಲಾ ದೇಶಗಳಿಗೂ ತಾನು ಮಿಗಿಲು, ಮತ್ತು ಬಲಾಢ್ಯ ರಾಷ್ಟ್ರವೆಂಬುದನ್ನು ಎಲ್ಲ ದೇಶಗಳೂ ಒಪ್ಪಿಕೊಳ್ಳಬೇಕು ಎಂದು ಬಯಸುತ್ತದೆ, ಅವುಗಳು ತನ್ನ ಆಜ್ಞಾನುವರ್ತಿಯೇ ಆಗಿರಬೇಕು, ತನ್ನ ಆಜ್ಞೆಯನ್ನು ಯಾರೂ ಪ್ರಶ್ನಿಸಬಾರದು, ಹಾಗೂ ಯಾರಾದರೂ ಅವಿಧೇಯತನವನ್ನು ತೋರಿದರೆ ಅಂತಹ ದೇಶವನ್ನು ಶಿಕ್ಷಿಸಲು ಹಿಂಸೆಯನ್ನು ಕೈಗೆತ್ತಿಕೊಳ್ಳುವ ಅಧಿಕಾರವು ತನಗೆ ಉಂಟು ಎಂದು ಭಾವಿಸಿರುವುದರಿಂದ ಈ ಯುದ್ಧವು ಸಂಭವಿಸಿದೆ. ಅಂತಹ ಮನೋಭಾವು ಪೋಲೆಂಡಿಗೆ ಮಾತ್ರವಲ್ಲ ಎಲ್ಲಾ ದೇಶಗಳಿಗೂ ವಿಪತ್ಕಾರಕವಾಗಿದೆ.

### ಭಾರತಕ್ಕೆ ಅಪಮಾನ

ಇಂತಹ ಸಂದರ್ಭದಲ್ಲಿ, ಎಲ್ಲಾ ರಾಷ್ಟ್ರಗಳು ಸಮಾನವಾದವು, ಪ್ರತಿಯೊಂದು ರಾಷ್ಟ್ರಕ್ಕೂ ಬದುಕುವ ಹಕ್ಕು ಇದೆ, ಇತರರ ಅಡ್ಡಿ ಆತಂಕಗಳಿಗೆ ಒಳಗಾಗದೆ ತನ್ನ ಸುಖ ಸಂತೋಷಗಳನ್ನು ಗಳಿಸಿಕೊಳ್ಳುವ ಮಾರ್ಗದಲ್ಲಿ ನಡೆಯಲು ಅವುಗಳಿಗೆ ಸಂಪೂರ್ಣ ಹಕ್ಕು ಇದೆ, (ಇಲ್ಲಿ ಕೆಲವು ಪದಗಳು ಸರಿಯಾಗಿ ಓದಲಾಗುವಂತಿಲ್ಲ) ಆದ್ದರಿಂದ ಅತ್ಯಂತ ಅವಿವೇಕ ಮಾರ್ಗವನ್ನು ಅನುಸರಿಸುತ್ತಿರುವ ಜರ್ಮನಿಯ ಈ ನೀತಿಯನ್ನು ಎಲ್ಲಾ ಮಾನವ ಜನಾಂಗಗಳೂ ಒಟ್ಟಾಗಿ ಎದುರಿಸಬೇಕಾಗಿದೆ.

ಜರ್ಮನಿಯ ಪರವಾಗಿ ಮಂಡಿಸುವ ವಾದಗಳು ಇತರ ದೇಶಗಳಿಗೆ ಮಾಡುವ ಅವಮಾನವಾಗಿದೆ. ಅದರಲ್ಲಿಯೂ ಭಾರತಕ್ಕೆ ಅದು ಅಸಹ್ಯಕರವಾಗಿದೆ. ಅದು ಭಾರತೀಯರ ನಿರೀಕ್ಷೆ ಮತ್ತು ಆಸೆಗಳಿಗೆ ವಿರುದ್ಧವಾಗಿದೆ ಮತ್ತು ಅವರನ್ನು ನಾಶಮಾಡುವ ಯೋಜನೆಯನ್ನು ಹೊಂದಿದೆ. ಭಾರತವು ಸ್ವತಂತ್ರವಾಗುವ ಕನಸುಗಳನ್ನು ಕಟ್ಟಿಕೊಂಡಿದೆ ಮತ್ತು ತನ್ನ ಕನಸಸುಗಳನ್ನು ನನಸಾಗಿಸಿಕೊಂಡ ನಂತರ ಅದನ್ನು ಕಾಪಾಡಿಕೊಂಡು ಹೋಗುವ ಆಶಾಭಾವನೆಯನ್ನೂ ಹೊಂದಿದೆ.

ತನ್ನ ನಾರ್ಡಿಕ್ ಕುಲವದವರು ಮಾತ್ರವೇ ಜಗತ್ತನ್ನು ಆಳಬೇಕು ಮತ್ತು ಮಿಕ್ಕೆಲ್ಲಾ ಜನಾಂಗಗಳೂ ತನಗೆ ಅಡಿಯಾಳಾಗಿರಬೇಕೆಂಬುದು ಜರ್ಮನಿಯ ಅಭಿಲಾಷೆ. ಇದನ್ನು ಸಾಧಿಸುವುದಕ್ಕಾಗಿ ಇಡೀ ವಿಶ್ವಕ್ಕೇ ಅದು ಸವಾಲನ್ನು ಹಾಕುತ್ತಿದೆ.

ಭಾರತದ ಜನತೆಯ ಹೆಬ್ಬಯಕೆಗಳನ್ನು ಮತ್ತು ಭಾರತ ಮತ್ತು ಜರ್ಮನಿಯ ನಡುವೆ ಇರುವ ಮೂಲಭೂತ ಘರ್ಷಣೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡಿದರೆ, ಜರ್ಮನಿಯ ಸವಾಲನ್ನು ಭಾರತ ತಾನೇ ಸ್ವತಃ ಎದುರಿಸಲಾರದು ಮತ್ತು ತನ್ನ ಹಕ್ಕುಗಳನ್ನು ಸಮರ್ಥಿಸಿಕೊಂಡು ತನ್ನ ಗುರಿಯನ್ನು

ಸಾಧಿಸಲಾರದು.

ಪರಿಸ್ಥಿತಿಯು ಹೀಗಿರುವಾಗ, ಈ ಯುದ್ಧದಲ್ಲಿ ಭಾರತದ ಜನತೆಯು ತನ್ನ ಹಿತವನ್ನೇ ಗಮನದಲ್ಲಿಟ್ಟುಕೊಂಡು ಗ್ರೇಟ್ ಬ್ರಿಟನ್ನಿಗೆ ತನ್ನ ಬೆಂಬಲವನ್ನು ನೀಡಬೇಕು ಎಂದು ಹೇಳುವುದಕ್ಕೆ ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ಯಾವ ಹಿಂಜರಿಕೆಯೂ ಇಲ್ಲ.

**ಶಬ್ದಾಡಂಬರ**

ಇತರ ರಾಜಕೀಯ ಪಕ್ಷಗಳಲ್ಲಿ ಸ್ವಲ್ಪಮಟ್ಟಿನ ಹಿಂಜರಿಕೆ ಇರುವುದು ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ತಿಳಿದಿದೆ. ಆದರೆ ಆ ಹಿಂಜರಿಕೆಯು ತಾತ್ವಿಕ ತಳಹದಿಯ ಮೇಲೆ ನಿಂತಿಲ್ಲ, ಬದಲಿಗೆ ಅದು ನಿಂತಿರುವುದು ತಂತ್ರಗಾರಿಕೆಯ ಮೇಲೆ. ಇಂಗ್ಲೆಂಡಿನ ಸದ್ಯದ ಪರಿಸ್ಥಿತಿಯ ಲಾಭವನ್ನು ಪಡೆಯುವುದು ಅವರ ಎಣಿಕೆ. ಭಾರತದ ಸಂವಿಧಾನದಲ್ಲಿ ತಮಗೆ ಹೆಚ್ಚಿನ ಹಕ್ಕು ಮತ್ತು ಅಧಿಕಾರವನ್ನು ಗಳಿಸಿಕೊಳ್ಳುವ ತಂತ್ರಕ್ಕಾಗಿ ಮುಸ್ಲಿಮ್ ಲೀಗ್ ಮತ್ತು ಹಿಂದೂ ಮಹಾಸಭೆಗಳು ಇಂಗ್ಲೆಂಡಿನ ಸ್ಥಿತಿಯನ್ನು ಉಪಯೋಗಿಸಿಕೊಳ್ಳಬಯಸುತ್ತವೆ. ಈ ವಿಭಾಜಕ ಪ್ರವೃತ್ತಿಯನ್ನು ಅನುಸರಿಸುವುದು ಅನಗತ್ಯವಾಗಿದೆ.

ಇಂಗ್ಲೆಂಡಿನ ದರದನ್ನು ಭಾರತದ ವಿಮೋಚನೆಗಾಗಿ ಉಪಯೋಗಿಸಿಕೊಳ್ಳುವ ಅವಕಾಶವನ್ನಾಗಿ ಬದಲಾಯಿಸಿಕೊಳ್ಳಬಯಸುವ ವಿಭಾಗವೇ ಇಲ್ಲಿ ಪ್ರಾಮುಖ್ಯವನ್ನು ಪಡೆದಿದೆ. ಆದರೆ 'ಭಾರತಕ್ಕೆ ಅನುಕೂಲಕರವಾದ ಅವಕಾಶ' ಎಂಬುದನ್ನು ಅರ್ಥೈಸುವುದು ಬಹಳ ಕಷ್ಟ.

ತನ್ನ ಅಂತರ್ಗತ ಶಕ್ತಿಯಿಂದಲೇ ಬ್ರಿಟನ್ನಿನ ಮೇಲೆ ತನ್ನ ಷರತ್ತುಗಳನ್ನು ಯಶಸ್ವಿಯಾಗಿ ಹೇರಬಲ್ಲುದು ಎಂಬುದು ಇದರ ಅರ್ಥವಾದರೆ, ಭಾರತಕ್ಕೆ ಅನುಕೂಲಕರವಾದ ಅವಕಾಶ ಎಂಬುದು ಅಂತಸ್ಸತ್ವವಿಲ್ಲದ ಕೇವಲ ಶಬ್ದಾಡಂಬರ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಗಾಂಧಿಯವರ ನಾಗರಿಕ ಶಾಸನಭಂಗ ಚಳವಳಿಯು ತನ್ನ ಅಂತ್ಯವನ್ನು ಮುಟ್ಟುತ್ತಿದೆ. ಯಾರೂ ಅದನ್ನು ಪುನರಾವರ್ತನೆಗೊಳಿಸಲು ಬಯಸುತ್ತಿಲ್ಲ.

ಗ್ರೇಟ್ ಬ್ರಿಟನ್ನಿನ ಶತ್ರುವೊಬ್ಬರು ಬಂದು ತಮ್ಮನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಗೊಳಿಸುತ್ತಾರೆಂದು ಇದರ ಅರ್ಥವಾದರೆ, ಅದು ಮತ್ತೊಂದು ಉರುಳಿಗೆ ತಲೆಕೊಟ್ಟಂತೆ ಆಗುತ್ತದೆ. ಹೊರಗಿನಿಂದ ಬಂದ ಅತಿಥಿಯೇ ಮನೆಯೊಳಕ್ಕೆ ಬಂದು ಮನೆಯೊಡೆಯನಿಗೇ ಆತಿಥ್ಯವನ್ನು ನೀಡುವಂತೆ ಆಗುತ್ತಾನೆ ಎಂಬುದರ ಅರಿವಿರುವುದರಿಂದ, ಭಾವಾವೇಶಕ್ಕೆ ಒಳಗಾಗದ ಯಾವುದೇ ವಿವೇಕಯುಕ್ತ ವ್ಯಕ್ತಿಯೂ ಇಂತಹ ಕ್ರಮವನ್ನು ವಿವೇಚನೆ ಮತ್ತು ದೂರದೃಷ್ಟಿಯುಳ್ಳದ್ದೆಂದು ಹೇಳುವುದಿಲ್ಲ.

**ಹೊಸ ದಣಿಗಳು ಬೇಡ!**

ಭವಿಷ್ಯವನ್ನು ಕುರಿತು ಯೋಚಿಸಿ ಅದನ್ನು ಕಲ್ಪಿಸಿಕೊಳ್ಳುವ ಶಕ್ತಿಯುಳ್ಳವರಿಗೆ ಹಾಗೂ ರಾಜಕೀಯ ರಂಗದಲ್ಲಿನ ವಾಸ್ತವತೆಯಲ್ಲಿ ಮಾತ್ರ ತನ್ನ ನೆಲೆಯನ್ನು ಕಂಡುಕೊಳ್ಳುವವರಿಗೆ ಭಾರತವು ಬ್ರಿಟಿಷ್ ಕಾಮನ್ವೆಲ್ತ್‌ನ ಒಳಗೇ ಇರಬೇಕು ಮತ್ತು ಅಲ್ಲಿಯ ಸದಸ್ಯರೆಲ್ಲರೊಡನೆ ಸಮಾನ ಪಾಲುದಾರನ ಸ್ಥಾನವನ್ನು ಗಳಿಸಿಕೊಳ್ಳಲು ಹೋರಾಟ ನಡೆಸಬೇಕು ಎಂಬುದು ಸುಲಭವಾಗಿ ತಿಳಿಯುತ್ತದೆ ಎಂದು ಸ್ವತಂತ್ರ ಕಾರ್ಮಿಕ ಪಕ್ಷವು ಭಾವಿಸುತ್ತದೆ.

ನಾವು ಕ್ರಮಿಸಬೇಕಾಗಿರುವ ಮಾರ್ಗದ ಬಹುಭಾಗವನ್ನು ಕ್ರಮಿಸಿಯಾಗಿದೆ. ಉಳಿದಿರುವ ಭಾಗ ಸ್ವಲ್ಪಮಾತ್ರ ಮತ್ತು ಇನ್ನೇನು ನಾವು ನಮ್ಮ ಗುರಿಯನ್ನು ಮುಟ್ಟಲಿದ್ದೇವೆ. ಇಂತಹ ಸಂದರ್ಭದಲ್ಲಿ ಈ ಗುರಿಯನ್ನು ಮುಟ್ಟಲು, ಭಾರತವನ್ನು ದಾಸ್ಯದಿಂದ ಬಿಡುಗಡೆ ಮಾಡಲು, ಭಾರತದ ಮಿತ್ರನಿಗಾಗಿ ಬಯಸುವುದು

ರಾಜಕೀಯ ಆತ್ಮಹತ್ಯೆಯಲ್ಲದಿದ್ದರೂ, ಮೂರ್ಖತನವಾಗುತ್ತದೆ. ಹೊಸ ಆಳುವ ವರ್ಗದ ಅಡಿಯಲ್ಲಿ ಭಾರತದ ಹಣೆಯಬರಹವು ಹೇಗಿರುತ್ತದೆ ಎಂದು ಅರಿತುಕೊಳ್ಳುವುದು ಸಾಧ್ಯವಿಲ್ಲ. ಇಂತಹ ಅನಿಶ್ಚಿತ ಪರಿಸ್ಥಿತಿಗೆ ದೂಡುವಂತಹ ಯಾವ ನೀತಿಯನ್ನೂ ಅನುಸರಿಸುವಂತೆ ತಮ್ಮ ದೇಶಬಾಂಧವರಿಗೆ ಯಾವ ಭಾರತೀಯನೂ ಸಲಹೆಯನ್ನು ನೀಡಲು ಸಾಧ್ಯವಿಲ್ಲ.

## ಭಾರತದ ವಿಷಯದಲ್ಲಿ ಬ್ರಿಟನ್ನಿನ ಕರ್ತವ್ಯ

ಭಾರತೀಯರು ತಮ್ಮ ಸ್ವಂತ ಹಿತದೃಷ್ಟಿಯಿಂದಲೇ ಜರ್ಮನಿಯ ವಿರುದ್ಧದ ಈ ಯುದ್ಧದಲ್ಲಿ ಗ್ರೇಟ್ ಬ್ರಿಟನ್ನಿನೊಂದಿಗೆ ಸಹಕರಿಸಬೇಕು ಎನ್ನುವುದು ನಿಜವಾದರೂ, ಬ್ರಿಟಿಷರೂ ಸಹ, ಭಾರತದ ವಿಷಯದಲ್ಲಿ ತಮಗಿರುವ ಕರ್ತವ್ಯಗಳನ್ನು ಹೆಚ್ಚುಕಾಲ ಮುಂದೂಡದೆ ಪೂರೈಸಲೇ ಬೇಕು.

ಅವುಗಳಲ್ಲಿ ಮೊದಲನೆಯದು ಮತ್ತು ಅತಿಮುಖ್ಯವಾದುದೆಂದರೆ, ಭಾರತೀಯರನ್ನು ಅವರು ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು ಸಿದ್ಧವಾಗಿರುವಂತೆ ಮಾಡುವುದು.

ಇತರ ದೇಶಗಳು ಯಾವ ಕಡೆಯಿಂದ ಬೇಕಾದರೂ ಆಕ್ರಮಿಸಬಹುದಾದ ಸ್ಥಿತಿಯಲ್ಲಿ ಭಾರತವು ಇದೆ. ಆದರೂ ಭಾರತವು ಇಂದು ಪ್ರಪಂಚದಲ್ಲಿಯೇ ಅತ್ಯಂತ ರಕ್ಷಣಾರಹಿತ ದೇಶವಾಗಿದೆ. ಇತರ ದೇಶಗಳ ಭೂಸೇನೆ, ನೌಕಾಬಲ ಮತ್ತು ವಾಯುಸೇನೆಗಳ ಆಕ್ರಮಣದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬಹುದಾದ ಸಾಧನಸಂಪತ್ತು ಭಾರತಕ್ಕೆ ಇಲ್ಲ. ತನ್ನ ರಕ್ಷಣೆಗಾಗಿ ಅದು, ಸಂಪೂರ್ಣವಾಗಿಯಲ್ಲದಿದ್ದರೂ, ಬಹುತೇಕವಾಗಿ ಬ್ರಿಟಿಷ್ ಭೂಸೇನೆ, ನೌಕಾಬಲ ಹಾಗೂ ವಾಯುಸೇನೆಯನ್ನು ಅವಲಂಬಿಸಿದೆ. ಭಾರತದ ರಕ್ಷಣಾ ವಿಷಯವು ಭಾರತದ ಜವಾಬ್ದಾರಿಯಾಗಿರುತ್ತದೆ ಎಂದು ದುಂಡು ಮೇಜಿನ ಸಮ್ಮೇಳನದಲ್ಲಿ ತೀರ್ಮಾನಿಸಲಾಗಿತ್ತು. ಆದರೂ ಇಲ್ಲಿಯವರೆಗೂ ಈ ನೀತಿಯನ್ನು ಕಾರ್ಯಗತಗೊಳಿಸಲು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಮಿಲಿಟರಿ ಕಾಲೇಜುಗಳನ್ನು ತೆರೆಯುವ ಮತ್ತು ಅಧಿಕಾರಿವರ್ಗವನ್ನು ಭಾರತೀಕರಣಗೊಳಿಸುವ ನಿಟ್ಟಿನಲ್ಲಿ ಬಹಳಷ್ಟು ಮಾತುಕತೆಗಳಾಗಿದ್ದವು. ದೇಶದ ರಕ್ಷಣೆಯ ದೃಷ್ಟಿಯಿಂದ ಕನಿಷ್ಠಪಕ್ಷ, ಇವಿಷ್ಟನ್ನಾದರೂ ಮಾಡುವುದು ಅಗತ್ಯವೆಂಬುದು ಸ್ವತಂತ್ರ ಕಾರ್ಮಿಕ ಪಕ್ಷದ ನಿರ್ಭೀತ ಅಭಿಪ್ರಾಯ.

ಒಂದು ನಿರ್ದಿಷ್ಟ ವಯಸ್ಸಿನ ಒಳಗೆ ಇರುವ ಎಲ್ಲರಿಗೂ, ಅವರ ಜಾತಿ, ಮತ ಅಥವಾ ವರ್ಗಗಳನ್ನು ಪರಿಗಣಿಸದೆ, ಕಡ್ಡಾಯ ಮಿಲಿಟರಿ ಸೇವೆಯನ್ನು ನಿಗದಿಗೊಳಿಸುವುದು ಈ ದಿಕ್ಕಿನಲ್ಲಿ ಬಹುಮುಖ್ಯವಾದ ಅಂಶವಾಗಿದೆ. ಭಾರತೀಯರಿಗೆ ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು ಅಗತ್ಯವಾದ ತರಬೇತಿಯನ್ನು ನೀಡುವಲ್ಲಿ ಇಂತಹ ನೀತಿಯು ಮಾತ್ರ ಯಶಸ್ವಿಯಾಗುತ್ತದೆ.

ಭಾರತದಲ್ಲಿನ ಜನಸಂಖ್ಯಾ ಬಲವು ಅಸಂಖ್ಯವಾಗಿದೆ. ಉತ್ತಮವಾದ ತರಬೇತಿಯು ದೊರಕಿದರೆ, ಅದು ಭಾರತವನ್ನು ಮಾತ್ರವಲ್ಲ, ಇಡೀ ಬ್ರಿಟಿಷ್ ಸಾಮ್ರಾಜ್ಯವನ್ನು ಎಂತಹ ಪ್ರಬಲ ಆಕ್ರಮಣಕಾರರಿಂದಲೂ ರಕ್ಷಿಸಬಲ್ಲಷ್ಟು ಬಲಯುತವಾಗುತ್ತದೆ. ರಾಷ್ಟ್ರೀಯ ರಕ್ಷಣೆಗಾಗಿ ಭಾರತೀಯ ಜನತೆಯನ್ನು ಸಿದ್ಧಗೊಳಿಸಲು ಬ್ರಿಟಿಷ್ ಸರಕಾರವು ಇನ್ನೂ ಯೋಚಿಸದಿರುವುದು ಆಶ್ಚರ್ಯಕರವಾಗಿದೆ. ಯುದ್ಧವು ಸಂಭವಿಸಿದಾಗ ಮಾತ್ರ ಭಾರತೀಯರನ್ನು ಯುದ್ಧದಲ್ಲಿ ಪಾಲುಗೊಳ್ಳಲು ಆಹ್ವಾನಿಸುವ ಸರಕಾರವು, ಯುದ್ಧವು ಮುಗಿದ ತಕ್ಷಣವೇ ಅವರನ್ನು ಅನುಪಯುಕ್ತ ಯೋಧರನ್ನಾಗಿಸುವುದು ಆಶ್ಚರ್ಯಕರವಾಗಿದೆ.

## ಕಡ್ಡಾಯ ಮಿಲಿಟರಿ ಶಿಕ್ಷಣ

ಯುದ್ಧದ ಸಮಯದಲ್ಲಿಯಂತೆಯೇ ಶಾಂತಿಯ ಸಮಯದಲ್ಲಿಯೂ ಭಾರತೀಯರನ್ನು ಮಿಲಿಟರಿ ದೃಷ್ಟಿಯಿಂದ ಯುದ್ಧ ಸನ್ನದ್ಧ ಸ್ಥಿತಿಯಲ್ಲಿ ಇಡಲು ಬ್ರಿಟಿಷ್ ಸರಕಾರವು ಏಕೆ ಸಿದ್ಧವಿಲ್ಲ ಎಂಬುದು ಎಲ್ಲ ಕಡೆಯಿಂದಲೂ ಕೇಳಿಬರುತ್ತಿರುವ ಪ್ರಶ್ನೆ. ಮಿಲಿಟರಿ ಶಿಕ್ಷಣವನ್ನು ಪಡೆದ ಭಾರತೀಯರ ಮೇಲೆ ವಿಶ್ವಾಸವನ್ನು ಇರಿಸಲು ಬ್ರಿಟಿಷರು ಹಿಂದುಮುಂದು ನೋಡುತ್ತಿದ್ದಾರೆಂಬ ಭಾವನೆಯು ಜನರಲ್ಲಿ ಇದೆ. ಭಾರತೀಯರಿಗೆ ನಿಜವಾಗಿಯೂ ಸಹಾಯಮಾಡಬೇಕೆಂಬ ಇಚ್ಛೆಯು ಬ್ರಿಟಿಷರಿಗೆ ಇದ್ದರೆ, ಅವರು ಭಾರತೀಯರ ಮೇಲೆ ವಿಶ್ವಾಸವನ್ನು ಇರಿಸಲೇಬೇಕು ಮತ್ತು ಅವರಿಗೆ ಮಿಲಿಟರಿ ಶಿಕ್ಷಣದ ಅವಕಾಶವನ್ನು ನೀಡಲೇಬೇಕು. ವಿಶ್ವಾಸದಿಂದ ಮಾತ್ರ ವಿಶ್ವಾಸವು ಹುಟ್ಟುತ್ತದೆ.

ಯುದ್ಧದಲ್ಲಿ ನೇರವಾಗಿ ಭಾಗವಹಿಸುವ ಮತ್ತು ನೇರವಾಗಿ ಭಾಗವಹಿಸದ ವರ್ಗಗಳನ್ನು ಬೇರ್ಪಡಿಸುವುದನ್ನು ತ್ಯಜಿಸಿ, ಸ್ಥಾಯೀ ಸೇನೆಯ ನೇಮಕಾತಿಯು ಎಲ್ಲಾ ಸಮುದಾಯಗಳವರಿಗೂ ಮುಕ್ತವಾಗಿರಬೇಕು. ಸೇನಾಧಿಕಾರಿಗಳ ವರ್ಗವನ್ನು ಭಾರತೀಕರಣಗೊಳಿಸುವ ಪ್ರಕ್ರಿಯೆಯು ಪ್ರಾಮಾಣಿಕ ಹಾಗೂ ನ್ಯಾಯಯುತವಾಗಿರಬೇಕು.

ಈಗ ಕೇವಲ ಶ್ರೀಮಂತರ ಮಕ್ಕಳುಗಳು ಮಾತ್ರ ನೌಕಾ ಹಾಗೂ ಮಿಲಿಟರಿ ಶಾಲೆಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಇದರ ಅರ್ಥ ಅವರು ಈ ವೃತ್ತಿಗೆ ಅತ್ಯಂತ ಅರ್ಹರಾದವರು ಎಂದಲ್ಲ ಆದರೆ, ಈ ಶಿಕ್ಷಣವನ್ನು ಪಡೆಯಲು ಅಗತ್ಯವಾದ ವೆಚ್ಚವನ್ನು ಹೊರುವ ಆರ್ಥಿಕಬಲವನ್ನು ಅವರು ಹೊಂದಿದ್ದಾರೆ ಎಂಬುದು. ಬ್ರಿಟಿಷ್ ಸರಕಾರದ ಮೇಲಿನ ವಿಶ್ವಾಸವನ್ನು ವೃದ್ಧಿಗೊಳಿಸುವ ಸಲುವಾಗಿ, ಕೇವಲ ಶ್ರೀಮಂತರು ಹಾಗೂ ಆಯ್ದ ಕೆಲವೇ ಸಮುದಾಯಗಳವರು ಮಿಲಿಟರಿಯಲ್ಲಿ ಉನ್ನತ ಹುದ್ದೆಗಳ ಮೇಲೆ ತಮ್ಮ ಏಕಸ್ವಾಮ್ಯವನ್ನು ಸಾಧಿಸಿಕೊಳ್ಳುವುದನ್ನು ತಡೆಯಬೇಕು.

## ಸಾಮ್ರಾಜ್ಯದ ಒಳಗೆ ಭಾರತದ ಸ್ಥಾನ

ಭಾರತಕ್ಕೆ ಬ್ರಿಟಿಷರು ಮಾಡಬೇಕಾದ ಎರಡನೆಯ ಕರ್ತವ್ಯವೆಂದರೆ ಬ್ರಿಟಿಷ್ ಸಾಮ್ರಾಜ್ಯದೊಳಗೆ ಭಾರತದ ಸ್ಥಾನದ ಬಗ್ಗೆ ಭಾರತಕ್ಕೆ ಆಶ್ವಾಸನೆಯನ್ನು ನೀಡುವುದು. ಭಾರತ ಸರಕಾರದ ಅಧಿನಿಯಮದ ಪೂರ್ವಪೀಠಿಕೆಯಲ್ಲಿ ಭಾರತವು ಅಂತಿಮವಾಗಿ ತನ್ನ ಸ್ವಂತ ಪ್ರಭುತ್ವವನ್ನು ಹೊಂದುತ್ತದೆ ಎಂಬುದನ್ನು ಒಳಗೊಳ್ಳುವ ಹಾಗೆ ಮಾಡುವಲ್ಲಿ ಬ್ರಿಟಿಷ್ ಸಂಸತ್ತು ಒಲವನ್ನು ತೋರದಿರುವುದು ನಮಗೆ ಹೊಟ್ಟೆಯಲ್ಲಿ ಕಿಚ್ಚನ್ನು ಹೊತ್ತಿಸಿದೆ.

ಲಾರ್ಡ್ ಇರ್ವಿನ್ ಅವರು ೧೯೨೯ರಲ್ಲಿ ಅನೌಪಚಾರಿಕವಾಗಿ ಘೋಷಿಸಿದ್ದರೂ, ೧೯೩೫ರಲ್ಲಿ ಸಂಸತ್ತು ಅಧಿಕೃತವಾಗಿ ಭಾರತವು ಸ್ವತಂತ್ರ ಪ್ರಭುತ್ವವನ್ನು ಹೊಂದುವ ರಾಷ್ಟ್ರವೆಂದು ಘೋಷಿಸುವುದನ್ನು ನಿರಾಕರಿಸಿರುವುದನ್ನು ಗಮನಿಸಿದಾಗ, ಬ್ರಿಟಿಷ್ ಸರಕಾರದಲ್ಲಿ ವಿಶ್ವಾಸವನ್ನಿಟ್ಟುಕೊಂಡಿದ್ದವರಿಗೂ ಅದು ಒಂದು ಕ್ರೂರ ಆಘಾತವೆನಿಸುತ್ತದೆ. ತಮ್ಮ ಬಗೆಗೆ ಮೂಡಿರುವ ಈ ಅವಿಶ್ವಾಸವನ್ನು ಬ್ರಿಟಿಷರು ಆದಷ್ಟು ಬೇಗ ಹೋಗಲಾಡಿಸಿಕೊಳ್ಳಬೇಕು. ಯಾವ ನೀತಿಗಳಿಗಾಗಿ ಪ್ರಸಕ್ತ ಯುದ್ಧದಲ್ಲಿ ಹೋರಾಡಬೇಕಾಗಿದೆಯೋ ಅಂತಹ ನೀತಿಗಳ ಲಾಭವು ಯುದ್ಧಾನಂತರ ತಮಗೂ ದೊರಕದಿದ್ದರೆ ಮನಃಪೂರ್ವಕವಾಗಿ ಯುದ್ಧದಲ್ಲಿ ಭಾಗವಹಿಸುವುದು ಭಾರತಕ್ಕೆ ಸಾಧ್ಯವಾಗುವುದಿಲ್ಲ.

ಈ ವಿವರಣೆಯು ಸ್ವತಂತ್ರ ಕಾರ್ಮಿಕ ಪಕ್ಷದ ನಿಲುವನ್ನು ಸ್ಪಷ್ಟಪಡಿಸುತ್ತದೆ. ಬ್ರಿಟಿಷರಿಗೆ ಸಹಾಯಮಾಡಬೇಕೆಂಬ ವೈಸ್‌ರಾಯ್ ಅವರ ಕೋರಿಕೆಯನ್ನು ಈ ಹೇಳಿಕೆಯಲ್ಲಿ ನೀಡಿರುವ ಕಾರಣಗಳಿಗಾಗಿ

ಸ್ವತಂತ್ರ ಕಾರ್ಮಿಕ ಪಕ್ಷವು ಬೆಂಬಲಿಸುತ್ತದೆ.

ಇದು ಷರತ್ತುಗಳನ್ನು ವಿಧಿಸುವ ಸಮಯವಲ್ಲವೆಂದು ಸ್ವತಂತ್ರ ಕಾರ್ಮಿಕ ಪಕ್ಷವು ಭಾವಿಸುತ್ತದೆ. ಯಾವ ಕಾರಣಕ್ಕಾಗಿ ಯುದ್ಧದಲ್ಲಿ ತೊಡಗಿದ್ದೇವೆ ಮತ್ತು ಪರಸ್ಪರರಿಂದ ಏನನ್ನು ಬಯಸುತ್ತೇವೆ ಎಂಬುದು ಬ್ರಿಟಿಷರಿಗೆ ಮತ್ತು ಭಾರತೀಯರಿಗೆ ತಿಳಿದಿರುವುದು ಮತ್ತು ಅದು ಇಬ್ಬರಿಗೂ ಚೆನ್ನಾಗಿ ಅರ್ಥವಾಗಿರುವುದು ಅಗತ್ಯವೆಂದು ಸ್ವತಂತ್ರ ಕಾರ್ಮಿಕ ಪಕ್ಷವು ಭಾವಿಸುತ್ತದೆ.

* * * * *

---

(ವಿವಿಧ್ ವೃತ್ತಾ, ೧೯೩೯ರ ಸೆಪ್ಟೆಂಬರ್ ೧೭)

# ೯

# ಭಾರತವನ್ನು ಎರಡು ರಾಷ್ಟ್ರವಾಗಿ ಒಡೆಯುವುದನ್ನು ತಡೆಯಲು ಕ್ರಾಂಗ್ರೆಸ್‌ನವರಿಗೆ ವಿವೇಕದ, ಮುತ್ಸದ್ದಿತನದ ಉದಯವಾಗುತ್ತದೆ : ಡಾ. ಅಂಬೇಡ್ಕರ್ ಅವರ ಆಶಯ

೧೯೩೯ರ ಅಕ್ಟೋಬರ್ ೭ರಂದು ಸ್ವೀಕರಿಸಿದ ಸಂದೇಶದ ಪ್ರಕಾರ ಡಾ. ಬಿ.ಆರ್. ಅಂಬೇಡ್ಕರ್ ಅವರು ವೈಸ್‌ರಾಯ್ ಅವರನ್ನು ೧೯೩೯ರ ಅಕ್ಟೋಬರ್ ೯ರಂದು* ಭೇಟಿಮಾಡಲು ಆಹ್ವಾನಿಸಲ್ಪಟ್ಟಿದ್ದರು. ಅದರ ಪ್ರಕಾರ ೧೯೩೯ರ ಅಕ್ಟೋಬರ್ ೯ರಂದು ವೈಸ್‌ರಾಯ್ ಅವರು ಡಾ. ಅಂಬೇಡ್ಕರ್ ಅವರಿಗೆ ಭೇಟಿಯ ಅವಕಾಶವನ್ನು ನೀಡಿದರು. ಅದರ ಜೊತೆಗೇ ಶ್ರೀ ವಿ.ಡಿ. ಸಾವರ್ಕರ್ ಮತ್ತು ಸರ್ ಮೊಹಮ್ಮದ್ ಯಾಕೂಬ್ ಅವರಿಗೂ ಭೇಟಿಯ ಅವಕಾಶಗಳನ್ನು ನೀಡಿದರು**.

ತದನಂತರ ಡಾ. ಅಂಬೇಡ್ಕರ್ ಅವರು ತಮ್ಮ ಈ ಹೇಳಿಕೆಯನ್ನು ನೀಡಿದರು:

ನವ ದೆಹಲಿ, ಅಕ್ಟೋಬರ್ ೧೦, ೧೯೩೯

"ಕಾಂಗ್ರೆಸ್ಸಿನ ಹೊರಗೆ ಇರುವವರ ಬಗೆಗೆ, ಇರುವ ಪಕ್ಷಗಳ ಬಗೆಗೆ ಶ್ರೀ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷವು ತಳೆದಿರುವ ಅಹಂಕಾರಯುಕ್ತ ಹಾಗೂ ತಿರಸ್ಕಾರದ ಭಾವನೆಯನ್ನು ತ್ಯಜಿಸುವವರೆಗೂ ಅಲ್ಪಸಂಖ್ಯಾತರ ಸಮಸ್ಯೆಗೆ ಪರಿಹಾರವು ದೊರೆಯುವುದಿಲ್ಲ. ರಾಷ್ಟ್ರಪ್ರೇಮವೆಂಬುದು ಕಾಂಗ್ರೆಸ್ಸಿನವರ ಏಕಸ್ವಾಮ್ಯವಲ್ಲ. ಕಾಂಗ್ರೆಸ್ಸಿಗೆ ಪ್ರತಿಕೂಲವಾಗಿರುವ ಅಭಿಪ್ರಾಯಗಳನ್ನು ಹೊಂದಿರುವ ವ್ಯಕ್ತಿಗಳಿಗೂ ಅಸ್ತಿತ್ವದ ಸ್ವಾತಂತ್ರ್ಯ ಹಾಗೂ ಮಾನ್ಯತೆಯನ್ನು ಪಡೆಯುವ ಹಕ್ಕು ಇದೆ" ಎಂದು ಇಂದು ಪ್ರಾತಃಕಾಲ ಬಾಂಬೆಗೆ ತೆರಳುವ ಮೊದಲು ಡಾ. ಅಂಬೇಡ್ಕರ್ ಅವರು ಅಸೋಸಿಯೇಟೆಡ್ ಪ್ರೆಸ್‌ಗೆ ತಾವು ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಿನ್ನೆಯ ದಿನ ದೆಹಲಿಗೆ ಬಂದ ಡಾ. ಅಂಬೇಡ್ಕರ್ ಅವರು ವೈಸ್‌ರಾಯ್ ಅವರೊಡನೆ ದೀರ್ಘ ಚರ್ಚೆಯನ್ನು ನಡೆಸಿದರು. ಸಂವಿಧಾನ ರಚನೆಗೆ ಸಂಬಂಧಿಸಿದಂತೆ ತಮ್ಮ ಸಮುದಾಯದವರ ಅಭಿಪ್ರಾಯವನ್ನು ಅವರು ವೈಸ್‌ರಾಯ್ ಅವರಿಗೆ ಮನದಟ್ಟುಮಾಡಿದರು ಎಂದು ತಿಳಿದುಬಂದಿದೆ. ಈ ಸಂದರ್ಭದಲ್ಲಿ ಪೂನಾ ಒಪ್ಪಂದವು ತಮಗೆ ಯಾವುದೇ ತೃಪ್ತಿಯನ್ನು ತಂದಿಲ್ಲವೆಂದು ಅವರು ಹೇಳಿದರು. ಪ್ರತ್ಯೇಕ ಮತಕ್ಷೇತ್ರಗಳಿಲ್ಲದ ಪ್ರಯುಕ್ತ, ಬಹುಮಂದಿ ಸ್ಪರ್ಧಿಸಿದ ಮತಕ್ಷೇತ್ರಗಳಿಂದಾಗಿ ಶಾಸನಸಭೆಯ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗಳವರ ನಿಜವಾದ ಪ್ರತಿನಿಧಿಗಳು ಜಯಗಳಿಸುವುದು ಸಾಧ್ಯವಾಗಲಿಲ್ಲ. ತಾವು ಈ ಮೊದಲು ಭಾವಿಸಿದುದಕ್ಕಿಂತ ಮೊದಲೇ ಬರುವ ಸಂಭವವಿರುವ ಈ ನೀತಿಯನ್ನು ಮತ್ತೆ ಪರಿಷ್ಕರಿಸುವ ಸಮಯದಲ್ಲಿ ತಾವು ಈ ಪ್ರಶ್ನೆಯನ್ನು ಎತ್ತುವುದಾಗಿ ಅವರು ಹೇಳಿದರು. ಪರಿಶಿಷ್ಟ ಜಾತಿಗಳವರ

---

*ದ ಬಾಂಬೆ ಕ್ರಾನಿಕಲ್, ೧೯೩೯ರ ಅಕ್ಟೋಬರ್ ೭

**ದ ಬಾಂಬೆ ಕ್ರಾನಿಕಲ್, ೧೯೩೯ರ ಅಕ್ಟೋಬರ್ ೧೦.

ನಿಜವಾದ ಪ್ರತಿನಿಧಿಗಳನ್ನು ಆಯ್ಕೆಮಾಡುವ ರೀತಿಯನ್ನು ಆವಿಷ್ಕರಿಸುವವರೆಗೆ ತಮ್ಮ ಸಮುದಾಯಗಳವರಿಗಾಗಿ ಪ್ರತ್ಯೇಕ ಮತಕ್ಷೇತ್ರಗಳಿಗಾಗಿ ವಿಷಾದದಿಂದ ಒತ್ತಾಯಮಾಡಬೇಕಾಗುತ್ತದೆ ಎಂದು ಅವರು ಹೇಳಿದರು.

## ಹಿಂದೂ ಮುಸ್ಲಿಂ ಸಮಸ್ಯೆಗಳು

ಹಿಂದೂ ಮುಸ್ಲಿಂ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ ಡಾ. ಅಂಬೇಡ್ಕರ್ ಅವರು, ಕಾಂಗ್ರೆಸ್ ಆಡಳಿತವಿರುವ ಪ್ರಾಂತಗಳಲ್ಲಿ ಮುಸ್ಲಿಮರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ ಮತ್ತು ಅವರಿಗೆ ಬೆದರಿಕೆಗಳಿವೆ ಎಂಬ ಆಪಾದನೆಗಳನ್ನು ತಾವು ಒಪ್ಪುವುದಿಲ್ಲವೆಂದು ಹೇಳಿದರು. ಇಂದು ಮುಸ್ಲಿಂ ಮತ್ತು ಇತರ ಅಲ್ಪಸಂಖ್ಯಾತರು ಬಯಸುವುದು ದೇಶದ ಆಡಳಿತದಲ್ಲಿ ತಮ್ಮ ಪಾಲನ್ನು ಮತ್ತು ಆಳುವ ವರ್ಗಗಳೊಡನೆ ಸಮಾನತೆಯನ್ನು. ತನ್ನ ಸಂಸ್ಥೆಯ ಹೊರಗೆ ಯಾವ ವರ್ಗವನ್ನೂ ಮತ್ತು ಸಮುದಾಯವನ್ನೂ ಮಾನ್ಯಮಾಡಲು ಒಪ್ಪದ ಕಾಂಗ್ರೆಸ್ ಅಲ್ಪಸಂಖ್ಯಾತರ ಈ ಬಯಕೆಯನ್ನು ನಿರಾಕರಿಸಿತು.

ಮುಸ್ಲಿಮರು ತಮಗೆ ಸಂರಕ್ಷಣೆಯು ಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದರು. ಅದು ತಮಗೆ ದೊರೆತರೆ ತಾವು ಯಾವ ಸಮುದಾಯದ ಸಂಗಡವಾದರೂ ಸಹಬಾಳ್ವೆಮಾಡುವುದಕ್ಕೆ ಸಿದ್ಧರಾಗಿದ್ದರು. ಇಂದು ಭಾರತವನ್ನು ಹಿಂದೂ ಭಾರತ ಮತ್ತು ಮುಸ್ಲಿಮ್ ಭಾರತ ಎಂದು ವಿಭಜಿಸುವ ಬೇಡಿಕೆಯು ಮುಂದಿಡಲ್ಪಟ್ಟಿದೆ. ಇಂತಹ ಬೇಡಿಕೆಗಳಿಗೆ ಅವಕಾಶವನ್ನೀಯುತ್ತಾ ಹೋದರೆ, ಸಂಯುಕ್ತ ಭಾರತದ ನಿರ್ಮಾಣವು ಆಸೆಯಾಗಿಯೇ ಉಳಿಯುತ್ತದೆ. ಇಂದು ಸಮಸ್ಯೆಯ ಪರಿಹಾರವು ಕಾಂಗ್ರೆಸ್ ಮತ್ತು ಬಹುಸಂಖ್ಯಾತ ಸಮುದಾಯದ ಬಳಿ ಇದೆ. ಈಗ ಬೇಕಾಗಿರುವುದು ಹೃದಯವೈಶಾಲ್ಯ, ಮುತ್ಸದ್ಧಿತನ ಮತ್ತು ವಾಸ್ತವತೆಯ ಅರಿವು.

## ಬಹಳ ವಿಳಂಬವಾಗಬಹುದು

ನಾಳೆಯೆಂದರೆ ಬಹಳ ವಿಳಂಬವಾಗಬಹುದು ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು. ಈ ಸಮಸ್ಯೆಯನ್ನು ಪರಿಹರಿಸಬಹುದು ಮತ್ತು ಪರಿಹರಿಸಲೇಬೇಕು. ಅಲ್ಪಸಂಖ್ಯಾತರನ್ನು ನ್ಯಾಯಯುತವಾಗಿ ಮತ್ತು ಪ್ರಾಮಾಣಿಕವಾಗಿ ನಡೆಸಿಕೊಳ್ಳಬೇಕೆಂಬುದು ಸಮಸ್ಯೆಯಾಗಿರಲೇ ಅಲ್ಲ. ತಾವು ಈ ದೇಶದ ಸರಕಾರದ ಅವಿಭಾಜ್ಯ ಭಾಗವೆಂಬ ಭಾವವನ್ನು ಅಲ್ಪಸಂಖ್ಯಾತರಲ್ಲಿ ಮೂಡಿಸಬೇಕು. ಈಗ ಅದು ಪ್ರತಿಷ್ಠೆ ಮತ್ತು ಆತ್ಮಗೌರವದ ಪ್ರಶ್ನೆಯಾಗಿದೆ.

ತಮ್ಮ ಮಾತನ್ನು ಮುಗಿಸುತ್ತಾ ಡಾ. ಅಂಬೇಡ್ಕರ್ ಅವರು, "ಇತರ ಯಾವುದಾದರೂ ದೊಡ್ಡ ಸಮುದಾಯದೊಡನೆ ಒಂದಾಗಬೇಕು ಎಂಬ ತಮ್ಮ ಸಮುದಾಯವು ಬಯಸುವುದರ ವಿರುದ್ಧ ಒತ್ತಾಯವನ್ನು ಹೇರುವುದು ಬಹಳ ಕಷ್ಟ. ಆದರೆ, ಕಾಂಗ್ರೆಸ್ಸಿನ ಈಗಿನ ಧೋರಣೆಯು ತಮ್ಮ ದನಿಯನ್ನು ನಿರುಪಯುಕ್ತಗೊಳಿಸಬಹುದು. ಬೇರೆ ಧರ್ಮಗಳ ಮಡಿಲಿನಲ್ಲಿ ಆಶ್ರಯವನ್ನು ಪಡೆದುಕೊಳ್ಳುವಂತೆ ಮಾಡುವ ಹೊಣೆಯು ಈಗ ಕಾಂಗ್ರೆಸ್ಸಿನ ಮೇಲಿದೆ. ದೇಶವಿಭಜನೆಯನ್ನು ತಪ್ಪಿಸಲು ಮತ್ತು ಪರಿಶಿಷ್ಟ ವರ್ಗಗಳವರು ಇತರ ಪ್ರಭಾವೀ ಅಲ್ಪಸಂಖ್ಯಾತರೊಡನೆ ಒಂದಾಗುವುದನ್ನು ತಡೆಯಲು ಕಾಂಗ್ರೆಸ್ಸಿನವರಿಗೆ ಸಕಾಲದಲ್ಲಿ ಮುತ್ಸದ್ಧಿತನ ಹಾಗೂ ಜ್ಞಾನದ ಉದಯವಾಗುತ್ತದೆ ಎಂಬ ಆಶಯ ನನ್ನದು" ಎಂದು ಹೇಳಿದರು.*

* * * * *

---

* ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೧೯೩೯ರ ಅಕ್ಟೋಬರ್ ೧೪

# ೧೦

# ಬಹಳ ಅಸ್ಪಷ್ಟವಾಗಿರುವ ಯೋಜನೆ

## ಸಲಹಾ ಸಮಿತಿಯ ಬಗ್ಗೆ ಡಾ. ಅಂಬೇಡ್ಕರ್

ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಈ ಹೇಳಿಕೆಯನ್ನು ನೀಡಿದ್ದಾರೆ:

ಡಾ. ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ ೨೧ರಂದು ನಡೆದ ಸ್ವತಂತ್ರ ಕಾರ್ಮಿಕ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ಮುಂದಿನ ಗೊತ್ತುವಳಿಯನ್ನು ಅಂಗೀಕರಿಸಲಾಯಿತು

ಪ್ರಸಕ್ತ ನಡೆಯುತ್ತಿರುವ ಯುದ್ಧದಿಂದ ಉದ್ಭವವಾಗುವ ಪರಿಸ್ಥಿತಿಯನ್ನು ಕುರಿತು ನೀಡಿರುವ ಹೇಳಿಕೆಯನ್ನು ಸ್ವತಂತ್ರ ಕಾರ್ಮಿಕ ಪಕ್ಷದ ಕಾರ್ಯಕಾರಿ ಸಮಿತಿಯು ಸ್ಥಿರೀಕರಿಸುತ್ತದೆ.

ವೈಸ್‌ರಾಯ್ ಅವರು ಅಕ್ಟೋಬರ್ ೨೭ರಂದು ಮಾಡಿದ ಘೋಷಣೆಯನ್ನು ಪಕ್ಷದ ಕಾರ್ಯಕಾರಿ ಸಮಿತಿಯು ತನ್ನ ಪರಿಗಣನೆಗೆ ತಂದುಕೊಂಡಿದೆ.

ಕಾಂಗ್ರೆಸ್ ಪಕ್ಷವು ದೇಶದ ವಿವಿಧ ಸಮುದಾಯ ಹಾಗೂ ಪಂಗಡಗಳ ನಡುವೆ ಐಕಮತ್ಯವನ್ನು ತರಲು ಪ್ರಯತ್ನಿಸಿದ್ದಿದ್ದರೆ ಭಾರತದ ಜನರ ಆಶೋತ್ತರಗಳ, ಬೇಡಿಕೆಗಳ ವಿಷಯದಲ್ಲಿ ಮಹಾಪ್ರಭುಗಳ ಸರಕಾರದಿಂದ ಇನ್ನೂ ಉತ್ತಮವಾದ, ಇದಕ್ಕಿಂತಲೂ ಹೆಚ್ಚು ತೃಪ್ತಿಕರವಾದ ಪ್ರತಿಕ್ರಿಯೆಯು ಬರುವ ಸಾಧ್ಯತೆಯಿತ್ತು ಎಂದು ಕಾರ್ಯಕಾರಿ ಸಮಿತಿಯು ಭಾವಿಸುತ್ತದೆ.

ಯುದ್ಧವು ಮುಗಿದ ತಕ್ಷಣ ಮಹಾಪ್ರಭುಗಳ ಸರಕಾರವು ಭಾರತದ ಸಂವಿಧಾನವನ್ನು ರೂಪಿಸಲು ವಿವಿಧ ಸಮುದಾಯಗಳ, ಪಕ್ಷಗಳ ಮತ್ತು ಸಮಾಜದ ವಿವಿಧ ಹಿತಾಸಕ್ತಿಗಳ ಪ್ರತಿನಿಧಿಗಳೊಂದಿಗೆ ಚರ್ಚಿಸುವುದಾಗಿ ವೈಸ್‌ರಾಯ್ ಅವರು ಆಶ್ವಾಸನೆಯನ್ನು ಕೊಟ್ಟಿರುವುದರಿಂದ ಸ್ವಾಯತ್ತ ಪರಮಾಧಿಕಾರವನ್ನು ಹೊಂದುವುದು ಭಾರತದ ಗುರಿಯೆನ್ನುವ ವಿಷಯದಲ್ಲಿ ತಮ್ಮ ಸಹಮತವಿದೆಯೆಂದು ಮಹಾಪ್ರಭುಗಳ ಸರಕಾರವು ಘೋಷಿಸಿರುವುದರಿಂದ, ಹಾಗೂ ಯುದ್ಧದ ಪರಿಣಾಮವಾಗಿ, ಗ್ರೇಟ್ ಬ್ರಿಟನ್ನಿಗೆ ಸಹಾಯಮಾಡುವುದಕ್ಕಿಂತ ಹೆಚ್ಚಾಗಿ ಭಾರತದ ರಕ್ಷಣಾ ವಿಷಯವು ಪ್ರಮುಖವಾಗಬಹುದಾದ್ದರಿಂದ, ಇದು ಗ್ರೇಟ್ ಬ್ರಿಟನ್ನಿಗೆ ಸಹಾಯಮಾಡುವುದನ್ನು ತಡೆಹಿಡಿಯುವ ಯೋಚನೆಯನ್ನು ಮಾಡಲು ಪ್ರಸಕ್ತ ಸಮಯವಲ್ಲವೆಂದು ಕಾರ್ಯಕಾರಿ ಸಮಿತಿಯು ಭಾವಿಸುತ್ತದೆ.

ಆದಾಗ್ಯೂ, ಕಾರ್ಯಕಾರಿ ಸಮಿತಿಯ ದೃಷ್ಟಿಯಲ್ಲಿ ಸಲಹಾ ಸಮಿತಿಯನ್ನು ರಚಿಸುವ ಸಲಹೆಯು ಅತೃಪ್ತಿಕರವಾಗಿದೆ. ನಿರ್ಣಯಗಳನ್ನು ತೆಗೆದುಕೊಳ್ಳಲು ಹಾಗೂ ನಿರ್ದೇಶನಗಳನ್ನು ನೀಡಲು ಅಧಿಕಾರವು ಈ ಸಮಿತಿಗೆ ಇಲ್ಲದಿರುವುದಷ್ಟೇ ಅಲ್ಲದೆ ಇದರ ಸಂಯೋಜನೆಯಲ್ಲಿ ಕೇವಲ ಬಂದು ಹೋಗಿ ಮಾಡುವಂತಹ ವ್ಯಕ್ತಿಗಳು ಇರುತ್ತಾರೆ. ವ್ಯಕ್ತಿಗಳ ಇಂತಹ ಸಂಯೋಜನೆಯ ವ್ಯವಸ್ಥೆಯು ಸಮಿತಿಯ ಮುಖ್ಯ ದೋಷಗಳಲ್ಲಿ ಒಂದು ಎಂದು ಪಕ್ಷದ ಕಾರ್ಯಕಾರಿ ಸಮಿತಿಯು ಭಾವಿಸುತ್ತದೆ. ಉದ್ದೇಶಿತ ಯೋಜನೆಯ ಬಗ್ಗೆ ತನ್ನ

ಇನ್ನೂ ಹೆಚ್ಚಿನ ವಿಶ್ಲೇಷಣೆಯನ್ನು ನೀಡುವ ಮೊದಲು, ಇತರ ವಿವರಗಳನ್ನೂ, ಮತ್ತು ಸಂವಿಧಾನಕ್ಕೆ ಸಂಬಂಧಿಸಿದಂತೆ ಸಲಹಾ ಸಮಿತಿಯ ಕಾರ್ಯನೀತಿ, ಅಧಿಕಾರ ಮತ್ತು ವ್ಯಾಪ್ತಿಗಳನ್ನು ಪರಿಶೀಲಿಸುವುದು ಅಗತ್ಯವೆಂದು ಕಾರ್ಯಕಾರಿ ಸಮಿತಿಯು ಬಯಸುತ್ತದೆ. (ಅಸೋಸಿಯೇಟೆಡ್ ಪ್ರೆಸ್)[೧]

---

(ದ ಬಾಂಬೆ ಕ್ರಾನಿಕಲ್, ದಿನಾಂಕ ೧೯೩೯ರ ಅಕ್ಟೋಬರ್ ೨೪)

## ೧೧
# ಸಾಮಾಜಿಕ ಏಕೀಕರಣದ ಮೂಲಕ ಮಾತ್ರ ನಾವು ಒಂದು ರಾಷ್ಟ್ರವಾಗಬಹುದು

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ೧೯೪೦ರ ಫೆಬ್ರವರಿ ೫ರಂದು ಹೊರಡಿಸಿರುವ ಜ್ಞಾಪನಾಪತ್ರದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯದ ಬಗ್ಗೆ ಮಾತನಾಡುತ್ತಾ ಡಾ. ಅಂಬೇಡ್ಕರ್ ಅವರು ಹೀಗೆ ಹೇಳಿದರು –

"ಶ್ರೀ ಗಾಂಧಿಯವರು ಮತ್ತು ಕಾಂಗ್ರೆಸ್‌ನವರು ಭಾರತವು ಒಂದು ರಾಷ್ಟ್ರವೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಹಿಂದೂಗಳು ಮತ್ತು ಮುಸ್ಲಿಮರು ಒಂದು ರಾಷ್ಟ್ರದ ಪ್ರಜೆಗಳಾಗಿ ಒಂದುಗೂಡುವುದು ಸಾಧ್ಯವೇ ಇಲ್ಲವೆಂದು ಮುಸ್ಲಿಮ್ ಲೀಗಿನ ಅಂತಾರಾಷ್ಟ್ರೀಯ ಸಂಬಂಧಗಳ ಸಮಿತಿಯು ಹೇಳಿರುವುದನ್ನೂ ನಾನು ಒಪ್ಪುವುದಿಲ್ಲ.

ನನ್ನ ಅಭಿಪ್ರಾಯದಲ್ಲಿ ನಾವು ಒಂದು ರಾಷ್ಟ್ರವಲ್ಲ. ಆದರೆ, ಎಲ್ಲಾ ಸಮುದಾಯ ಮತ್ತು ವರ್ಗಗಳ ಸಮ್ಮಿಳನಕ್ಕೆ ಯೋಗ್ಯವಾದ ಪ್ರಕ್ರಿಯೆಯೊಂದನ್ನು ರೂಪಿಸಿದರೆ ನಾವು ಒಂದು ರಾಷ್ಟ್ರವಾಗುತ್ತೇವೆ ಎನ್ನುವುದು ನನ್ನ ವಿಶ್ವಾಸಪೂರ್ಣ ನಂಬಿಕೆ."[1]

* * * * *

---

೧. ದ ಟೈಮ್ಸ್ ಆಫ್ ಇಂಡಿಯಾ, ಮಂಗಳವಾರ, ೧೯೪೦ರ ಫೆಬ್ರವರಿ ೬; ಖೈರ್‌ಮೋಡೆ – ಸಂಪುಟ ೯, ಪುಟ ೩೧ರಲ್ಲಿ ಪುನರ್ಮುದ್ರಿತ

# ೧೨
# ಸುಭಾಶ್ಚಂದ್ರ ಬೋಸ್ ಹಾಗೂ ಡಾ. ಅಂಬೇಡ್ಕರ್ ಅವರ ಪರಸ್ಪರ ಭೇಟಿ

ತಮ್ಮನ್ನು ಕಾಂಗ್ರೆಸ್ ಅಧ್ಯಕ್ಷ ಪದದಿಂದ ಕಿತ್ತುಹಾಕಿದ ನಂತರದ ಸಮಯದಲ್ಲಿ ಸುಭಾಶ್ಚಂದ್ರ ಬೋಸರು ಚಡಪಡಿಸುತ್ತಿದ್ದರು. ಯೂರೋಪಿನಲ್ಲಿ ಬ್ರಿಟಿಷರ ವಿರುದ್ಧ 'ಮಾಡು ಇಲ್ಲವೇ ಮಡಿ' ಎನ್ನುವಂತಹ ಹೋರಾಟಕ್ಕಾಗಿ ಭಾರತದ ಸೇನೆಯನ್ನು ಜಮಾಯಿಸುವ ಕಾರ್ಯದಲ್ಲಿ ತೊಡಗಿದ್ದರು. ಅವರು ಬಾಂಬೆಗೆ ಬಂದು ೧೯೪೦ರ ಜುಲೈ ೨೨ರಂದು ಜಿನ್ನಾ, ಅಂಬೇಡ್ಕರ್ ಮತ್ತು ಸಾವರ್ಕರ್ ಅವರನ್ನು ಸಂದರ್ಶಿಸಿದರು.

ಉದ್ದೇಶಿತ ಸಂಯುಕ್ತ ರಾಷ್ಟ್ರಕ್ಕೆ ಸುಭಾಶ್ಚಂದ್ರ ಬೋಸ್ ಅವರು ಶತಾಯಗತಾಯ ವಿರೋಧಿಯಾಗಿದ್ದರು. ಡಾ. ಅಂಬೇಡ್ಕರ್ ಅವರೂ ಅದನ್ನು ವಿರೋಧಿಸುತ್ತಿದ್ದುದರಿಂದ ತಮ್ಮ ಮತ್ತು ಅವರ ನಡುವೆ ಇದು ಸಮಾನ ಅಂಶವೆಂಬುದು ಅವರಿಗೆ ತೋರಿದ್ದಿರಬಹುದು.

ಸಂಯುಕ್ತ ರಾಷ್ಟ್ರದ ವಿಷಯವಾಗಿ ಚರ್ಚಿಸಿದ ನಂತರ, ಡಾ. ಅಂಬೇಡ್ಕರ್ ಅವರು ಸುಭಾಶ್ಚಂದ್ರ ಬೋಸರನ್ನು, ಚುನಾವಣೆಗಳಲ್ಲಿ ಕಾಂಗ್ರೆಸ್ ವಿರುದ್ಧ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುತ್ತೀರಾ ಎಂದು ಪ್ರಶ್ನಿಸಿದರು. ಆದರೆ ಸುಭಾಶ್ಚಂದ್ರ ಬೋಸರು ತಾವು ಹಾಗೆ ಮಾಡುವುದಿಲ್ಲವೆಂದು ಉತ್ತರಿಸಿದರು. ನಂತರ ಡಾ. ಅಂಬೇಡ್ಕರ್ ಅವರು ಅಸ್ಪೃಶ್ಯರ ಬಗ್ಗೆ ಅವರ ಅಭಿಪ್ರಾಯವೇನೆಂದು ಕೇಳಿದರು. ಆದರೆ ಅದಕ್ಕೆ ಬೋಸರಿಂದ ಯಾವುದೇ ತೃಪ್ತಿಕರ ಉತ್ತರವು ಬರಲಿಲ್ಲ. ಸಂದರ್ಶನವು ಮುಕ್ತಾಯವಾಯಿತು.

* * * * *

(ಕೀರ್. ಪುಟ ೩೩೨)

## ೧೩

# ಕಾಂಗ್ರೆಸ್ ಪಕ್ಷದ ನಿರ್ಣಯದ ಅರ್ಥ

## ಶ್ರೀ ಗಾಂಧಿಯವರ ಆಕ್ಷೇಪಣೆಗಳ ಬಗ್ಗೆ ಡಾ. ಅಂಬೇಡ್ಕರ್

ಸಂಪಾದಕರಿಗೆ,
ದ ಟೈಮ್ಸ್ ಆಫ್ ಇಂಡಿಯಾ,

ಮಾನ್ಯರೆ,

ಬಾಂಬೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಗಾಂಧಿಯವರ ಸಾಧನೆಗಳ ಬಗ್ಗೆ ಬಾಂಬೆಯಲ್ಲಿ ಎರಡು ಅಭಿಪ್ರಾಯಗಳು ಕೇಳಿಬರುತ್ತಿವೆ.

ಮೊದಲನೆಯದು, ಅವರ ನಡವಳಿಕೆಗಳು ಸಾಮಾನ್ಯ ಮರ್ತ್ಯರ ಆಲೋಚನೆಗಳಿಗೆ ಮೀರಿದಂತಹ ಅತಿ ಬುದ್ಧಿವಂತಿಕೆಯಿಂದ ಕೂಡಿದವಾಗಿದ್ದವು ಮತ್ತು ಎರಡನೆಯದು, ಶ್ರೀ ಗಾಂಧಿಯವರು ತಮ್ಮ ಕ್ರಮಗಳಿಂದ ನಾಗರಿಕ ಅಸಹಕಾರ ಚಳವಳಿಯಿಂದ ಉಂಟಾದ ಕ್ಷೋಭೆಯು ಹೊರಹೊಮ್ಮುವುದನ್ನು ಯಶಸ್ವಿಯಾಗಿ ತಡೆದರು. ನನಗೆ ಇವೆರಡೂ ಅಭಿಪ್ರಾಯಗಳು ಅತ್ಯಾಶ್ಚರ್ಯಕರವಾಗಿ ಕಾಣಿಸುತ್ತವೆ. ಸಾರ್ವಜನಿಕರು, ಅದರಲ್ಲಿಯೂ ಹಿಂದೂಗಳು, ಇಂತಹ ಪ್ರಮುಖವಾದ ವಿಷಯಗಳಲ್ಲಿ, ಹೀಗೆ ಅತ್ಯಂತ ಸರಳವಾದ ತೀರ್ಮಾನಗಳಿಗೆ ಬರುವುದು ಅವರ ಚಿಂತನಾ ಶಕ್ತಿಯ ಮೇಲೆ ಬರೆಯಬಹುದಾದ ಕೆಟ್ಟ ಭಾಷ್ಯವಾಗುತ್ತದೆ. ಶ್ರೀ ಗಾಂಧಿಯವರು ತಮ್ಮ ಕ್ರಮಗಳಿಂದ ಅಸಹಕಾರ ಚಳುವಳಿಯನ್ನು ಹೇಗೆ ತಡೆದರು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಯುದ್ಧದ ವಿರುದ್ಧವಾಗಿ ಪ್ರಚಾರ ಮಾಡಲು, ಯುದ್ಧದಲ್ಲಿ ಸದ್ಯಕ್ಕೆ ಹಾಗೂ ಅದರ ಮುಂದುವರಿಕೆಯಲ್ಲಿ ಭಾಗವಹಿಸದಂತೆ ಮತ್ತು ಅದಕ್ಕೆ ಯಾವ ವಿಧದಲ್ಲಿಯೂ ಅಂದರೆ ಜನ ಹಾಗೂ ಧನದ ಬೆಂಬಲವನ್ನು ನೀಡದಂತೆ ಜನರಿಗೆ ತಿಳಿಸಲು, ತಮಗೆ ಸ್ವಾತಂತ್ರ್ಯವಿರಬೇಕೆಂದು ಅವರು ಕೇಳುತ್ತಿರುವುದು ಸತ್ಯ. ಆದರೆ, ಇದರ ಅರ್ಥವೇನು? ಶ್ರೀ ಗಾಂಧಿಯವರ ಈ ಕ್ರಮವು ನಾಗರಿಕ ಅಸಹಕಾರ ಚಳವಳಿಯಾಗುವುದಿಲ್ಲವೇ ಎಂಬುದು ನನ್ನ ಅರಿವಿಗೆ ಮೀರಿದ ಪ್ರಶ್ನೆಯಾಗಿದೆ.

### ದಿಗ್ಭ್ರಮಾಕಾರಕ

ಈ ಸನ್ನಿವೇಶದಲ್ಲಿ ಎಲ್ಲಕ್ಕೂ ಹೆಚ್ಚು ದಿಗ್ಭ್ರಮೆಯನ್ನುಂಟುಮಾಡುವ ವಿಷಯವೆಂದರೆ ಶ್ರೀ ಗಾಂಧಿಯವರು ವೈಸ್‌ರಾಯ್ ಅವರನ್ನು ಭೇಟಿಯಾಗುವ ಎದೆಗಾರಿಕೆಯನ್ನು ತೋರಿಸಿದ್ದು ಮತ್ತು ಅವರಿಗೆ ವೈಸ್‌ರಾಯ್ ಅವರು ಸಂದರ್ಶನವನ್ನು ನೀಡಿದ್ದು. ಭಾರತದ ರಕ್ಷಣಾ ಕಾನೂನನ್ನು ಉಲ್ಲಂಘಿಸಲು ವೈಸ್‌ರಾಯ್ ಅವರ ಅನುಮತಿಯನ್ನು ಕೇಳುವುದು ಶ್ರೀ ಗಾಂಧಿಯವರಿಗಿಂತ ಕಡಿಮೆ ಬುದ್ಧಿಶಕ್ತಿಯ ಯಾವ ವ್ಯಕ್ತಿಗೇ ಆದರೂ ಹಾಸ್ಯಾಸ್ಪದವೆಂದು ಭಾಸವಾಗದೇ ಇರದು. ಪ್ರಜ್ಞಾಪೂರ್ವಕವಾಗಿ ಪ್ರತಿಭಟಿಸುವವರಿಗೆ ಇಂಗ್ಲೆಂಡಿನಲ್ಲಾಗಲೀ, ಅಮೆರಿಕಾದಲ್ಲಾಗಲೀ ನೀಡಿರುವ ಸ್ವಾತಂತ್ರ್ಯಕ್ಕಿಂತ ತಾವು ಕೇಳುತ್ತಿರುವುದು ಅತಿಯಾಯಿತು

ಎನ್ನುವುದು ಶ್ರೀ ಗಾಂಧಿಯವರಿಗೆ ತಿಳಿಯದ ವಿಷಯವೇನಲ್ಲ. ಆ ದೇಶಗಳಲ್ಲಿ ಪ್ರಜ್ಞಾಪೂರ್ವಕ ಪ್ರತಿಭಟನಕಾರರಿಗೆ ಅನುಮತಿಯನ್ನು ನೀಡುವುದು ಅವರು ರಾಷ್ಟ್ರವಿರೋಧಿ ಬಣದೊಂದಿಗೆ ಕೈಜೋಡಿಸಬಾರದು ಎಂಬ ಷರತ್ತಿನ ಮೇಲೆ ಅಂತಹವರಿಗೆ ಪ್ರಸಕ್ತ ನಡೆಯುತ್ತಿರುವ ಯುದ್ಧದ ವಿರುದ್ಧವಾಗಿ ಪ್ರಚಾರಮಾಡುವ ಸ್ವಾತಂತ್ರ್ಯವನ್ನು ನೀಡುವುದಿಲ್ಲ. ಚಿಂತನಶೀಲರಾದ ವ್ಯಕ್ತಿಗಳು ಶಕ್ತಿಪ್ರಯೋಗವನ್ನು ಮಾಡುವುದನ್ನು ದ್ವೇಷಿಸಬೇಕು ಎಂಬುದರ ಅರಿವಿರುವ ಶ್ರೀ ಗಾಂಧಿಯವರಿಗೆ ಹಿಂಸೆಯನ್ನು ಹತ್ತಿಕ್ಕಲು ಬಲಪ್ರಯೋಗವನ್ನು ಮಾಡುವುದು ಹಾಗೂ ಬಲಪ್ರಯೋಗದಿಂದ ಸಾಧಿಸಿದ ವಿಜಯವನ್ನು ಪರಾಜಿತರ ಮೇಲೆ ಅನ್ಯಾಯಯುತವಾದ ಮತ್ತು ಅವಮಾನಕರವಾದ ಷರತ್ತುಗಳನ್ನು ಹೇರುವುದು – ಇವೆರಡರ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಕಷ್ಟದ ಕಾರ್ಯವೇನಲ್ಲ.

ಬಲವನ್ನು ಉಪಯೋಗಿಸುವುದು ಹೇಯವಾದುದಲ್ಲ, ಆದರೆ ಸಾಧಿಸಿದ ವಿಜಯದ ದುರುಪಯೋಗವು ಹೇಯವಾಗಿರುತ್ತದೆ ಎಂದು ನನಗನ್ನಿಸುತ್ತದೆ. ಪರಾಜಿತರಿಗೆ ಕೊಡಮಾಡುವ ಶಾಂತಿಯು ಅನ್ಯಾಯಯುತ ಹಾಗೂ ಅವಮಾನಕರವಾಗಿದ್ದರೆ ಅದರ ವಿರುದ್ಧ ಪ್ರತಿಭಟಿಸಲು ಶ್ರೀ ಗಾಂಧಿಯವರಾಗಲೀ, ಶಾಂತಿವಾದಿಗಳಾಗಲೀ ಅಥವಾ ಅಹಿಂಸೆಯಲ್ಲಿ ನಂಬಿಕೆಯುಳ್ಳವರಾಗಲೀ ಆಮರಣಾಂತ ಉಪವಾಸವನ್ನು ಆಚರಿಸಿದರೆ ಅವರು ಮಾನವ ಜನಾಂಗಕ್ಕೆ ಶಾಶ್ವತವಾದ ಸೇವೆಯನ್ನು ಮಾಡಿದಂತೆ ಆಗುತ್ತದೆ. ಶಾಂತಿವಾದಿಗಳು ತಮ್ಮ ಧ್ಯೇಯವನ್ನು ಸರಿಯಾಗಿ ಅರ್ಥಮಾಡಿಕೊಂಡ ಹಾಗೆ ಕಾಣುವುದಿಲ್ಲ. ಅವರ ಹೋರಾಟವು ಬಲಪ್ರಯೋಗದ ವಿರುದ್ಧವಾಗಿರಬಾರದು, ಬದಲಿಗೆ ಅಪಮಾನಕರವಾದ ಶಾಂತಿಯ ವಿರುದ್ಧವಾಗಿರಬೇಕು. ಜನತೆಯು ಬಲಪ್ರಯೋಗವನ್ನು ಮಾಡಬಾರದು ಎಂದು ಕರೆಕೊಡುವ ಮೂಲಕ ಶಾಂತಿವಾದಿಗಳು, ವಿಜಯವನ್ನು ಸಾಧಿಸಲು ಬಲಪ್ರಯೋಗವನ್ನು ಉಪಯೋಗಿಸಲೇಬೇಕೆಂಬುವವರಿಗೆ ಮಾತ್ರ ಉತ್ತೇಜನವನ್ನು ನೀಡುತ್ತಾರೆ. ಇವೆಲ್ಲವೂ ಶ್ರೀ ಗಾಂಧಿಯವರ ಬುದ್ಧಿಗೆ ನಿಲುಕುವಂತಿದೆ.

ಇಂತಹ ವ್ಯರ್ಥವಾದ ಉದ್ದೇಶದಿಂದ ವೈಸ್‌ರಾಯ್ ಅವರನ್ನು ನೋಡಲು ಶ್ರೀ ಗಾಂಧಿಯವರು ಹೋಗುತ್ತಿಲ್ಲ ಬದಲಿಗೆ ಅವರಿಗೆ ಬೇರೆ ಯಾವುದೋ ಉದ್ದೇಶವಿದೆ. ತಮಗೆ ಅಧಿಕಾರವನ್ನು ನೀಡದಿದ್ದರೂ ಕಾಂಗ್ರೆಸ್ಸಿಗೆ ಚಿಂತೆಯಿಲ್ಲ. ವೈಸ್‌ರಾಯ್ ಅವರು ಅಧಿಕಾರವನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರೂ, ಅಥವಾ ನೌಕರಶಾಹಿಗೇ ಕೊಟ್ಟಿದ್ದರೂ ಕಾಂಗ್ರೆಸ್ ಅದನ್ನು ಒಪ್ಪಿಕೊಳ್ಳುತ್ತದೆ. ಆದರೆ ಅಲ್ಪಸಂಖ್ಯಾತರಿಗೆ ಅಥವಾ ಭಾರತದ ಕಾಂಗ್ರೆಸ್ಸೇತರ ಪಕ್ಷಗಳಿಗೆ ಬ್ರಿಟಿಷ್ ಸರಕಾರವೇನಾದರೂ ಅಧಿಕಾರವನ್ನು ಹಸ್ತಾಂತರಗೊಳಿಸುವ ಯೋಚನೆಯನ್ನು ಮಾಡಿದರೆ, ಆಗ ಬ್ರಿಟಿಷ್ ಸರಕಾರದ ವಿರುದ್ಧ ಅಸಹಕಾರ ಚಳುವಳಿಯನ್ನು ಪ್ರಾರಂಭಿಸುತ್ತದೆ. ಇದು ಕಾಂಗ್ರೆಸ್ ಪಕ್ಷಕ್ಕೆ ಬಲವನ್ನು ತುಂಬುತ್ತದೆ ಎಂಬುದು ಸೆಪ್ಟೆಂಬರ್ ೯ರಂದು ಮದರಾಸಿನಲ್ಲಿ ಶ್ರೀ ರಾಜಗೋಪಾಲಾಚಾರಿಯವರು ಮಾಡಿದ ಭಾಷಣದಿಂದ ಗೋಚರವಾಗುತ್ತದೆ. 'ಹಿಂದೂ' ಪತ್ರಿಕೆಯಲ್ಲಿನ ವರದಿಯು ಶ್ರೀ ರಾಜಗೋಪಾಲಾಚಾರಿಯವರ ಭಾಷಣವನ್ನು ವರದಿಮಾಡಿದಂತೆ 'ತಾವೇನಾದರೂ, ತಮ್ಮ ದುರದೃಷ್ಟದಿಂದ ವೈಸ್‌ರಾಯ್ ಅವರ ಸ್ಥಾನದಲ್ಲಿದ್ದಿದ್ದರೆ ಅಲ್ಪಸಂಖ್ಯಾತರು ಬಹುಸಂಖ್ಯಾತರನ್ನು ಆಳುವಂತೆ ಮಾಡುವ ಯೋಜನೆಯಿಂದ ಉಂಟಾಗುವ ಹೊಸ ಪರಿಣಾಮಗಳನ್ನು ಎದುರಿಸುವುದಕ್ಕಿಂತ ಹಿಂದೆ ಜಾರಿಯಲ್ಲಿದ್ದ ಆಡಳಿತಪದ್ಧತಿಯನ್ನೇ ಮುಂದುವರೆಸುವಂತೆ ಮಾಡುತ್ತಿದ್ದೆ' ಎಂದು ಅವರು ಹೇಳಿದ್ದಾರೆ.

### ಕಾಂಗ್ರೆಸ್ಸಿನ ಉದ್ದೇಶ

ವಿಸ್ತರಿಸಲಾಗುತ್ತಿರುವ ಕಾರ್ಯಾಂಗ ಸಮಿತಿಯಲ್ಲಿ ಅಲ್ಪಸಂಖ್ಯಾತರಿಗೆ ಮತ್ತು ಕಾಂಗ್ರೆಸ್ಸೇತರ ಪಕ್ಷಗಳಿಗೆ

ಸ್ಥಾನವನ್ನು ಕಲ್ಪಿಸುವ ತಮ್ಮ ಯೋಜನೆಯನ್ನು ಕೈಬಿಡುವಂತೆ ಮಾಡುವ ಉದ್ದೇಶವು ಬಲಪ್ರಯೋಗಕ್ಕೆ ನೀಡಿರುವ ಕಾಂಗ್ರೆಸ್ಸಿನ ಕರೆಯ ಹಿಂದೆ ಇದೆ. ಅವರ ಈ ಅಸಹಕಾರ ಚಳವಳಿಯ ಬೆದರಿಕೆಯ ಹಿಂದೆ ಬೇರೆ ಯಾವ ಉದ್ದೇಶವೂ ಇಲ್ಲ. ಕಾಂಗ್ರೆಸ್ ದೇಶಕ್ಕಾಗಿ ಹೋರಾಡುತ್ತಿದೆಯೆಂಬುದು ಕೇವಲ ಠಕ್ಕು. ಅಧಿಕಾರದ ಕೀಲಿಕೈಯನ್ನು ತನ್ನ ಕೈಗೆ ತೆಗೆದುಕೊಳ್ಳಲು ಹೋರಾಡುತ್ತಿದೆ. ವಾಕ್ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಹೋರಾಡುತ್ತಿದೆಯೆಂಬುದೂ ಅಷ್ಟೇ ಠಕ್ಕು. ಭಾರತ ರಕ್ಷಣಾ ಅಧಿನಿಯಮವು ಒಂದುವರ್ಷದಿಂದಲೂ ಜಾರಿಯಲ್ಲಿದೆ. ಅದರಿಂದ ಇಲ್ಲಿಯವರೆಗೆ ಆಗಿರುವ ಅನಾಹುತವನ್ನು ನಾಗರಿಕ ಸ್ವಾತಂತ್ರ್ಯ ಸಂಘವು ತನ್ನ ಇತ್ತೀಚಿನ ವರದಿಯಲ್ಲಿ ನೀಡಿದೆ. ಈ ಅಧಿನಿಯಮವು ದೇಶದಲ್ಲಿನ ವಾಕ್ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿದೆ ಎಂದು ಶ್ರೀ ಗಾಂಧಿಯವರು ಅರಿತಿದ್ದರೆ ಅಧಿನಿಯಮವನ್ನು ಅಂಗೀಕರಿಸಿದಾಗಲೇ ನಾಗರಿಕ ಕಾನೂನು ಉಲ್ಲಂಘನಾ ಚಳವಳಿಯನ್ನು ಏಕೆ ಪ್ರಾರಂಭಿಸಲಿಲ್ಲ? ಅವರು ಇದಕ್ಕಾಗಿ ಒಂದು ವರ್ಷ ಏಕೆ ನಿಧಾನಮಾಡಿದರು? ಅಲ್ಪಸಂಖ್ಯಾತರ ಮತ್ತು ಇತರ ಪಕ್ಷಗಳ ಪ್ರತಿನಿಧಿಗಳು ಸರಕಾರ ನಡೆಸುವಲ್ಲಿ ಪಾತ್ರವಹಿಸಿಬೇಕೆಂದು ವೈಸ್‌ರಾಯ್ ಅವರು ಪ್ರಕಟಿಸಿದ ನಂತರವೇ ಏಕೆ ಈ ಪ್ರತಿಭಟನೆಯನ್ನು ಕೈಗೆತ್ತಿಕೊಳ್ಳಲಾಗಿದೆ? ಇದಕ್ಕೆ ಉತ್ತರವಿಲ್ಲ. ವೈಸ್‌ರಾಯ್ ಅವರ ಉದ್ದೇಶವನ್ನು ಬುಡಮೇಲು ಮಾಡುವ, ಮತ್ತು ಅಲ್ಪಸಂಖ್ಯಾತರು ಮತ್ತು ಇತರರು ಅಧಿಕಾರವನ್ನು ಪಡೆಯುವುದನ್ನು ತಪ್ಪಿಸುವ ತಮ್ಮ ಉದ್ದೇಶವನ್ನು ಮರೆಮಾಚಲು ಭಾರತ ರಕ್ಷಣಾ ಅಧಿನಿಯಮವು ಉಂಟುಮಾಡಿರುವ ಅನಾಹುತದ ಕಾರಣವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

## ಬ್ರಿಟಿಷರ ಉದಾಹರಣೆ

ಇದು ಕಾಂಗ್ರೆಸ್ಸಿನವರ ಕಾರ್ಯದ ಹಿಂದಿರುವ ಮೂಲಪ್ರೇರಣೆ. ಇದು ಒಂದು ಒಳ್ಳೆಯ ಕಾರ್ಯತಂತ್ರ. ಇದರಲ್ಲಿ ಕಾಂಗ್ರೆಸ್ ಯಶಸ್ವಿಯಾದರೆ, ಸಂಸದೀಯ ಸರಕಾರದ ವ್ಯವಸ್ಥೆಯನ್ನು ಸ್ಥಾಪಿಸಿದ ಬ್ರಿಟಿಷರು ಜನಪ್ರಿಯವಾದ ಪಕ್ಷದ ವಿಶ್ವಾಸವನ್ನು ಕಳೆದುಕೊಳ್ಳುವಂತಹ ಅಪಾಯವನ್ನು ತಮ್ಮ ಮೇಲೆ ಎಳೆದುಕೊಳ್ಳುವಂತೆ ಮಾಡಿದಹಾಗೆ ಆಗುವುದಿಲ್ಲವೆ? ಆದರೆ, ಇದು ರಾಜಕೀಯ ಮುತ್ಸದ್ದಿತನವೇ? ೧೯೨೩ರಲ್ಲಿ ಆಸ್ಕ್ವಿಥ್ ಅವರು ತೆಗೆದುಕೊಂಡ ಕ್ರಮಗಳನ್ನು ಇದು ಜ್ಞಾಪಕಕ್ಕೆ ತರುತ್ತದೆ. ೧೯೨೩ರ ಚುನಾವಣೆಯಲ್ಲಿ ಯಾವ ಪಕ್ಷವೂ ಬಹುಮತವನ್ನು ಗಳಿಸಿರಲಿಲ್ಲ. ಪಕ್ಷಗಳ ಬಲಗಳು ಹೀಗಿದ್ದವು – ಕನ್ಸರ್ವೇಟಿವ್ ೨೫೫, ಲೇಬರ್ ೧೯೧ ಮತ್ತು ಲಿಬರಲ್ಸ್ ೧೫೮. ಲಿಬರಲ್ ಪಕ್ಷದ ನಾಯಕರಾಗಿದ್ದ ಆಸ್ಕ್ವಿಥ್ ಅವರ ಮುಂದೆ ಮೂರು ದಾರಿಗಳಿದ್ದವು – (೧) ಕನ್ಸರ್ವೇಟಿವ್ ಪಕ್ಷಕ್ಕೆ ಬೆಂಬಲವನ್ನು ನೀಡುವುದು, (೨) ಲೇಬರ್ ಪಕ್ಷಕ್ಕೆ ಬೆಂಬಲವನ್ನು ನೀಡುವುದು, ಅಥವಾ (೩) ಕನ್ಸವೇಟಿವ್ ಪಕ್ಷದ ಬೆಂಬಲವನ್ನು ಪಡೆದು ತಾನೇ ಅಧಿಕಾರವನ್ನು ವಹಿಸಿಕೊಳ್ಳುವುದು. ಕನ್ಸರ್ವೇಟಿವ್ ಪಕ್ಷದೊಡನೆ ಒಪ್ಪಂದವೊಂದನ್ನು ಮಾಡಿಕೊಂಡು ಲೇಬರ್ ಪಕ್ಷವು ಅಧಿಕಾರವನ್ನು ಹಿಡಿಯುವುದನ್ನು ತಪ್ಪಿಸಿ ಎಂಬ ಮನವಿಗಳನ್ನು ಅವರಿಗೆ ಮಾಡಿಕೊಳ್ಳಲಾಯಿತು. ಆದರೆ ಈ ಆಮಿಷಗಳಿಂದ ಬಹಳ ದೂರವಿದ್ದ ಆಸ್ಕ್ವಿಥ್ ಅವರು ಕೂಟವನ್ನು ರೂಪಿಸುವ ಇಂತಹ ಸಲಹೆಗಳಿಗೆ ವಿರುದ್ಧವಾಗಿದ್ದರು. ಹಾಗೆ ಮಾಡಿದರೆ ಅದು ರಾಷ್ಟ್ರದ ಹಿತಾಸಕ್ತಿಗೆ ತೀವ್ರ ಧಕ್ಕೆಯನ್ನು ತರುತ್ತದೆ ಮತ್ತು ಎರಡು ಮಧ್ಯಮ ವರ್ಗಗಳ ಪಕ್ಷಗಳು ಒಂದಾಗಿ ಲೇಬರ್ ಪಕ್ಷವನ್ನು ಅಧಿಕಾರದಿಂದ ವಂಚಿತವನ್ನಾಗಿಸಿದಂತೆ ಮಾಡಿ ವರ್ಗ–ವರ್ಗಗಳ ನಡುವೆ ಕಲಹವನ್ನು ಹುಟ್ಟುಹಾಕಿದ ಹಾಗೆ ಆಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರನ್ನು ಅಧಿಕಾರವಂಚಿತರನ್ನಾಗಿಸಿದರೆ, ಅವರು ತಮ್ಮ ವಿಜಯಕ್ಕೆ ಅಪಾರವಾದ ಬೆಲೆಯನ್ನು ಕೊಡಬೇಕಾಗುತ್ತದೆ. ಅವರು ಇದನ್ನು ಈಗ ಅರಿತುಕೊಳ್ಳದಿದ್ದರೆ, ಸಂವಿಧಾನವನ್ನು ಪುನಾರೂಪಿಸಲು ಪಕ್ಷಗಳು ಸೇರಿದಾಗ

ಅರಿತುಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದ ಕ್ರಮದಿಂದ ಎರಡು ವಿಷಯಗಳು ಬಹಳ ಸ್ಪಷ್ಟವಾಗಿ ಗೋಚರಿಸುತ್ತವೆ. ಮೊದಲನೆಯದು, ಬ್ರಿಟಿಷ್ ಸಂಸದೀಯ ಸರಕಾರದ ವ್ಯವಸ್ಥೆಯು ಈ ದೇಶಕ್ಕೆ ಸೂಕ್ತವಾದುದಲ್ಲ. ಎರಡನೆಯದು, ಕಾನೂನಿನ ಪ್ರಕಾರ ರೂಪಿತವಾಗಿರುವ ಒಪ್ಪಂದಕ್ಕೆ ಕೆಲವೊಂದು ರಕ್ಷಣಾ ಕ್ರಮವನ್ನು ಸೇರಿಸಬಯಸುವವರು ವಿನಾಶವನ್ನು ತಮ್ಮ ತಲೆಯಮೇಲೆ ಎಳೆದುಕೊಳ್ಳುತ್ತಾರೆ.

**ಡಾ. ಬಿ.ಆರ್. ಅಂಬೇಡ್ಕರ್**

* * * * *

---

(ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೧೯೪೦ರ ಸೆಪ್ಟೆಂಬರ್ ೨೪)

## ೧೪

# ಭಾರತದ ಬಿಕ್ಕಟ್ಟನ್ನು ಪರಿಹರಿಸಲು ಡಾ. ಅಂಬೇಡ್ಕರ್ ಅವರ ಯೋಜನೆ ಮುಸ್ಲಿಮ್ ಬೇಡಿಕೆಗಳ ಬಗ್ಗೆ ಟೀಕೆ

"ಭಾರತದ ಜನತೆಗೆ ನಿಜವಾದ ರಾಜಕೀಯ ಅಧಿಕಾರವನ್ನು ಅತಿ ಶೀಘ್ರವಾಗಿ ನೀಡಬೇಕೆಂದು ಬ್ರಿಟಿಷ್ ಸರಕಾರಕ್ಕೆ ಜನರಲ್ ಚಿಯಾಂಗ್ ಕೈ–ಷೆಕ್ ಅವರು ಮನವಿ ಮಾಡಿಕೊಂಡಿದ್ದಾರೆ. ಇದು ಸಂಪೂರ್ಣವಾಗಿ ಸಾಧ್ಯವಾಗಬೇಕಾದರೆ ಅದರ ಹಾದಿಯಲ್ಲಿ ನಮಗೆ ಎದುರಾಗಿರುವ ಸಮಸ್ಯೆಗಳ ನಿವಾರಣೆಗೆ ಪರಿಹಾರವನ್ನು ಅವರು ಸೂಚಿಸಿಲ್ಲ" ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಸಮಸ್ಯೆಯು ಉದ್ಭವಿಸಲು ಇರುವ ಕಾರಣವೆಂದರೆ, ರೂಪಿಸಲಾಗುತ್ತಿರುವ ಸಂವಿಧಾನಕ್ಕೆ ಭಾರತೀಯ ರಾಷ್ಟ್ರೀಯ ಜೀವನದಲ್ಲಿನ ಕೆಲವೊಂದು ನಿರ್ದಿಷ್ಟ ಅಂಗಗಳ ಸಮ್ಮತಿಯಿರಬೇಕೆಂದು ತಮ್ಮ ಆಗಸ್ಟ್ ಪ್ರಕಟಣೆಯಲ್ಲಿ ವೈಸ್‌ರಾಯ್ ಅವರು ತಿಳಿಸಿರುವ ಮೂಲಭೂತ ಅಂಶಕ್ಕೆ ಕಾಂಗ್ರೆಸ್ ಅಡ್ಡಗಾಲು ಹಾಕಿರುವುದು. ಅಷ್ಟೇ ಮುಖ್ಯವಾದ ಇನ್ನೊಂದು ಕಾರಣವೆಂದರೆ, ಬ್ರಿಟಿಷರಿಗೆ ತಮ್ಮ ಜವಾಬ್ದಾರಿಯೇನೆಂಬುದು ತಿಳಿಯದೆ ಇರುವುದು.

ಭಾರತದ ಪರಿಸ್ಥಿತಿಯ ಅರಿವಿರುವ ವಿಚಾರಮಾಡಬಲ್ಲ ಯಾವನೇ ವ್ಯಕ್ತಿಯು ಬಹುಮತವಿದೆಯೆಂಬ ಒಂದೇ ಕಾರಣದಿಂದ ಬಹುಸಂಖ್ಯಾತ ಹಿಂದೂಗಳ ಕೈಯಲ್ಲಿ ದೇಶದ ಆಡಳಿತಾಧಿಕಾರವನ್ನು ಒಪ್ಪಿಸುವುದನ್ನು ಒಪ್ಪಿಕೊಳ್ಳುತ್ತಾನೆ ಎಂದು ಕಾಂಗ್ರೆಸ್ ನಿರೀಕ್ಷಿಸಬಾರದು. ಹಿಂದೂಯಿಸಂ ಎಂದರೆ ಅದೊಂದು ಫ್ಯಾಸಿಸ್ಟ್ ಅಥವಾ ನಾಜಿ ಸಿದ್ಧಾಂತದ ರೀತಿಯಲ್ಲಿರುವ ರಾಜಕೀಯ ಸಿದ್ಧಾಂತವೆಂಬುದನ್ನು ಬುದ್ಧಿಪೂರ್ವಕವಾಗಿ ಕಾಂಗ್ರೆಸ್ ಮರೆತುಬಿಡುತ್ತದೆ. ಹಿಂದೂ ಬಹುಸಂಖ್ಯಾತರು ಬಯಸುವ ಹಾಗೆ, ಅವರಿಗೆ ಸ್ವಾತಂತ್ರ್ಯವನ್ನು ನೀಡಿದರೆ ಅದು ಹಿಂದೂಧರ್ಮದ ಪರಿಧಿಯ ಹೊರಗೆ ಇರುವವರ ಮತ್ತು ಹಿಂದೂಧರ್ಮವನ್ನು ದೂಷಿಸುವವರ ಅಭಿವೃದ್ಧಿಗೆ ಮಾರಕವಾಗುತ್ತದೆ. ಇದು ಮುಸ್ಲಿಮರ ಅಭಿಪ್ರಾಯ ಮಾತ್ರವಲ್ಲ. ದಲಿತವರ್ಗಗಳವರೂ ಮತ್ತು ಬ್ರಾಹ್ಮಣೇತರರೂ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ.

### ಅಧಿಕಾರವನ್ನು ಹಂಚಿಕೊಳ್ಳುವುದರ ಆವಶ್ಯಕತೆ

ಈ ಪರಿಸ್ಥಿತಿಯ ಪರಿಹಾರಕ್ಕಿರುವ ಏಕೈಕ ಉಪಾಯವೆಂದರೆ ಬ್ರಿಟಿಷ್ ಭಾರತದ ರಾಷ್ಟ್ರೀಯ ಜೀವನದಲ್ಲಿರುವ ವಿವಿಧ ಅಂಗಗಳಿಗೂ ರಾಜಕೀಯ ಅಧಿಕಾರವನ್ನು ಹಂಚಿಕೊಡುವಂತಹ ಸಂವಿಧಾನವನ್ನು ರಚಿಸಿಕೊಳ್ಳುವುದು. ಭಾರತವನ್ನು ಪ್ರಜಾಪ್ರಭುತ್ವವನ್ನು ಬೆಳೆಸಲಿಕ್ಕೆ ಸೂಕ್ತವಾದ ರಾಷ್ಟ್ರವನ್ನಾಗಿಸಲು, ಬ್ರಿಟಿಷರು ಭಾರತೀಯರಿಗೆ ಅಧಿಕಾರವನ್ನು ಹಸ್ತಾಂತರಗೊಳಿಸುವ ಮೊದಲು ಅಧಿಕಾರದ ನೇರ ಹಂಚಿಕೆಗಾಗಿ ಒಂದು ವ್ಯವಸ್ಥೆಯನ್ನು ರೂಪಿಸುವ ಕ್ರಮಕ್ಕೆ ಒಮ್ಮತವು ಸಿಗಬೇಕು. ಇದರಿಂದ ಅಧಿಕಾರದ ಬಳಕೆಯಲ್ಲಿ ಇತಿ–ಮಿತಿಗಳನ್ನು ವಿಧಿಸಿದಂತೆ ಆಗುತ್ತದೆ. ಅಧಿಕಾರ ಹಸ್ತಾಂತರಕ್ಕೆ ಒತ್ತಾಯ ಮಾಡುವ ಮೊದಲು,

ಸಾಂವಿಧಾನಿಕ ಸಮಸ್ಯೆಗಳ ಬಗ್ಗೆ ಒಮ್ಮತಕ್ಕೆ ಬರುವಂತೆ ಭಾರತೀಯರಿಗೆ ಬ್ರಿಟಿಷ್ ಸರಕಾರವು ಸೂಚಿಸುವುದು ಸರ್ವಥಾ ಸೂಕ್ತವಾಗಿರುತ್ತದೆ.

ಆದರೆ ಅಮೆರಿಯವರು ತಾವು ಇಲ್ಲಿಯೇ ನಿಂತುಬಿಡಬೇಕೆಂದು ಯೋಚಿಸುತ್ತಾರೆ. ಭಾರತದ ರಾಜಕೀಯ ಪಕ್ಷಗಳ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಉಪಯೋಗಿಸಿಕೊಂಡು ಭಾರತದ ಪ್ರಗತಿಯನ್ನು ಕುಂಠಿತಗೊಳಿಸುತ್ತಿದ್ದಾರೆ ಎಂಬ ಆಪಾದನೆಯನ್ನು ಹೊತ್ತಿರುವ ಅವರು, ಅದರ ಜೊತೆಗೆ ತಮ್ಮ ಹೊಣೆಗಾರಿಕೆಯನ್ನು ಅರ್ಥಮಾಡಿಕೊಳ್ಳುವಲ್ಲಿಯೂ ವಿಫಲರಾಗಿದ್ದಾರೆ ಎಂದು ನನಗೆ ತೋರುತ್ತದೆ. ತಮ್ಮ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡು ಒಮ್ಮತಕ್ಕೆ ಬರಬೇಕೆಂದು ಭಾರತೀಯರಿಗೆ ಸೂಚಿಸುವ ಹಕ್ಕನ್ನು ಹೊಂದಿರುವುದರ ಜೊತೆಗೇ, ಬ್ರಿಟಿಷ್ ಸರಕಾರವು ಅಂತಹ ಒಮ್ಮತಕ್ಕೆ ಅವರು ಬರಲು ಸಾಧ್ಯವಾಗದಿದ್ದರೆ, ಅದಕ್ಕೆ ಪರಿಹಾರದ ವಿಷಯದಲ್ಲಿ ತೀರ್ಮಾನವನ್ನು ನೀಡಬೇಕಾದ ಹೊಣೆಯನ್ನೂ ಹೊತ್ತುಕೊಂಡಿದ್ದಾರೆ. ಬ್ರಿಟಿಷ್ ಸರಕಾರವು ಭಾರತೀಯರನ್ನು ಸಾಂವಿಧಾನಿಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಇರುವ ಅಂತಿಮ, ಏಕೈಕ ಸಾಧನದಿಂದ ವಂಚಿತರನ್ನಾಗಿಸಿರುವ ಕಾರಣದಿಂದ, ಬ್ರಿಟಿಷ್ ಸರಕಾರದ ಮೇಲೆಯೇ ಈ ಹೊಣೆ ಇದೆ. ಈ ಸಾಧನವೆಂದರೆ ಯುದ್ಧವೊಂದೇ. ಹೀಗೆ ಹೇಳಿದಾಗ ಕೆಲವರಿಗೆ ಆಘಾತವಾಗಬಹುದು. ಆದರೆ, ಇಂಗ್ಲಿಷ್ ಕ್ರಾಂತಿ, ಫ್ರೆಂಚ್ ಕ್ರಾಂತಿ ಹಾಗೂ ಅಮೆರಿಕಾದ ಅಂತರ್ಯುದ್ಧ ಇವುಗಳೆಲ್ಲವೂ ಸಾಂವಿಧಾನಿಕ ಬಿಕ್ಕಟ್ಟನ್ನು ಪರಿಹರಿಸುವ ಮಾರ್ಗವಾಗಿದ್ದವು ಎಂಬುದನ್ನು ನಾವು ಮರೆಯುವ ಹಾಗಿಲ್ಲ. ಇಂತಹ ಸಾಧನದ ಬಳಕೆಯ ಅರ್ಥ, ಬ್ರಿಟಿಷ್ ಸರಕಾರವು ಎಲ್ಲಾ ಪ್ರತಿರೋಧಗಳಿಗೂ ಪರಿಹಾರವನ್ನು ನೀಡಬೇಕಾಗುತ್ತದೆ. ಮೊಂಡು ಹಟಗಳಿಂದಾಗಲೀ, ಅಥವಾ ಸ್ವೇಚ್ಛಾಮನೋವೃತ್ತಿಯಿಂದಾಗಲೀ ಪರಿಹಾರಕ್ಕೆ ಅಡ್ಡಿಯಾಗುತ್ತಿರುವಂತಹ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ತೀರ್ಮಾನವನ್ನು ತೆಗೆದುಕೊಳ್ಳಲು ಮುಂದಾಗಬೇಕು.

ಪರಿಸ್ಥಿತಿ ಹೀಗಿರುವಾಗ, ಬ್ರಿಟಿಷ್ ಸರಕಾರವು ಪಲಾಯನವಾದವನ್ನು ಅನುಸರಿಸಿ, ಸಾಂವಿಧಾನಿಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸದೆ ಅದರ ಹೊಣೆಯನ್ನು ಭಾರತೀಯರ ಹೆಗಲಿಗೆ ಜಾರಿಸಬಾರದು. ತನ್ನ ಅಂತಿಮ ಹೊಣೆಗಾರಿಕೆಯ ಅರಿವು ಅದಕ್ಕೆ ಇರಬೇಕು. ಇದು ನನ್ನ ಅಭಿಪ್ರಾಯ. ಈ ಮುಂದಿನ ಘೋಷಣೆಗಳನ್ನು ಮಾಡುವುದು ಬ್ರಿಟಿಷ್ ಸರಕಾರಕ್ಕೆ ಸಾಧ್ಯವಿದೆಯೆಂಬುದು ನನ್ನ ಅಭಿಪ್ರಾಯ.

೧. ಶಾಂತಿಯು ಸ್ಥಾಪನೆಯಾದ ಮೂರುವರ್ಷಗಳ ಒಳಗೆ ಭಾರತವನ್ನು ಸ್ವತಂತ್ರ ರಾಷ್ಟ್ರದ ಮಟ್ಟಕ್ಕೆ ಏರಿಸುವ ತನ್ನ ಉದ್ದೇಶ
೨. ಈ ಉದ್ದೇಶವನ್ನು ಸಾಧಿಸಲು ತಮ್ಮಲ್ಲಿರುವ ಸಾಂವಿಧಾನಿಕ ಭಿನ್ನಾಭಿಪ್ರಾಯಗಳನ್ನು ವಿವಾದಗಳ ವಿಷಯದಲ್ಲಿ ಕದನವಿರಾಮದ ಒಪ್ಪಂದಕ್ಕೆ ಸಹಿಹಾಕಿದ ಒಂದು ವರ್ಷದ ಒಳಗೆ ನಿವಾರಿಸಿಕೊಂಡು ಒಮ್ಮತಕ್ಕೆ ಬರುವಂತೆ ಭಾರತದ ರಾಷ್ಟ್ರೀಯ ಜೀವನದಲ್ಲಿರುವ ಎಲ್ಲಾ ಅಂಗಗಳಿಗೂ ವಿಧಿಸುವುದು,
೩. ಅಂತಹ ಒಪ್ಪಂದಕ್ಕೆ ಬರಲು ಅವರು ವಿಫಲರಾದಲ್ಲಿ, ಬ್ರಿಟಿಷ್ ಸರಕಾರವು ಈ ವಿವಾದವನ್ನು ಅಂತಾರಾಷ್ಟ್ರೀಯ ಪಂಚಾಯತಿಯ ತೀರ್ಮಾನಕ್ಕೆ ಒಪ್ಪಿಸುವುದು,
೪. ಅಂತಾರಾಷ್ಟ್ರೀಯ ಪಂಚಾಯತಿಯ ತೀರ್ಮಾನವು ದೊರಕಿದಾಗ ಬ್ರಿಟಿಷ್ ಸರಕಾರವು ಸ್ವತಂತ್ರ ದೇಶದ ಸಂವಿಧಾನದ ಭಾಗವಾಗಿ ಅದನ್ನು ಜಾರಿಗೆ ತರುವುದಕ್ಕೆ ಬದ್ಧವಾಗಿರುತ್ತದೆ.

ಅಂತಹ ಘೋಷಣೆಯು ಎಲ್ಲಾ ವಿಚಾರವಂತರಿಗೂ ತೃಪ್ತಿಕರವಾಗಿರುತ್ತದೆ. ಕೋಮುವಾರು ಸಮಸ್ಯೆಗೆ ಸಮ್ಮತವಾದ ಪರಿಹಾರವಿರಬೇಕೆಂಬುದು ಜಿನ್ನಾ ಅವರ ದೃಷ್ಟಿಗೆ ಹಾಗೂ ದಲಿತವರ್ಗಗಳ ದೃಷ್ಟಿಗೆ

ಸರಿಹೊಂದುತ್ತದೆ ಎಂದು ನನಗೆ ಭಾಸವಾಗುತ್ತದೆ. ಬ್ರಿಟಿಷ್ ಭಾರತದ ರಾಷ್ಟ್ರೀಯ ಜೀವನದ ಯಾವುದೇ ಅಂಗವೂ ಸ್ವತಂತ್ರ ರಾಷ್ಟ್ರದ ಸಂವಿಧಾನದ ಹುಟ್ಟಿಗೆ ಪ್ರತಿಷೇಧವನ್ನು ಮಾಡುವ ಅಧಿಕಾರವಿಲ್ಲದಿರುವುದರಿಂದ, ಇದು ಕಾಂಗ್ರೆಸ್ಸಿನ ದೃಷ್ಟಿಕೋನಕ್ಕೂ ಸರಿಹೊಂದುತ್ತದೆ. ನಾವು ಯುದ್ಧದಲ್ಲಿ ತೊಡಗಿಕೊಂಡಿದ್ದೇವೆ ಎಂಬ ವಾದವು (ಇಂತಹ) ಘೋಷಣೆಯನ್ನು ಮಾಡಲು ಅನುಕೂಲಕರವಾದ ಪರಿಸ್ಥಿತಿಯಲ್ಲಿ ಇಲ್ಲ ಎಂದು ವಾದಿಸುವುದಿಲ್ಲ, ಬದಲಿಗೆ ಆ ವಾದವು ಘೋಷಣೆಯ ಪರವಾಗಿ ಮಾಡಿದ ವಾದವಾಗಿದೆ.

ಯುದ್ಧಕ್ಕೆ ಸಂಬಂಧಪಟ್ಟ ಪ್ರಯತ್ನಗಳು ಮೂರು ವಿಧವಾಗಿವೆ – (೧) ಸದ್ಯದಲ್ಲಿರುವ ತುರ್ತು ಅಗತ್ಯದ ಪ್ರಜ್ಞೆ, (೨) ಯುದ್ಧದ ಉದ್ದೇಶದ ಅರಿವು, ಮತ್ತು (೩) ಯುದ್ಧವನ್ನು ಜಯಿಸಲು ಅಗತ್ಯವಾದ ವಾಸ್ತವಿಕ ಯೋಜನೆಗಳ ಕಲ್ಪನೆ – ವಾಸ್ತವಿಕ ಹಾಗೂ ಮನಸ್ಸಿಗೆ ಒಪ್ಪುವಂತಹ ಯೋಜನೆಯ ಅಗತ್ಯ. ಈ ಯುದ್ಧದಲ್ಲಿ ಜಪಾನ್ ದೇಶವೂ ಪ್ರವೇಶಿಸಿರುವುದನ್ನು ಭಾರತೀಯರು ತುರ್ತಾಗಿ ಪರ್ಯಾಲೋಚಿಸಬೇಕಾಗಿ ಬಂದಿದೆ. ಈ ಭಾವನೆಯು ನಮ್ಮ ಅಂತಿಮ ಗುರಿಗಿಂತ ಇಂದು ನಾವು ಬದುಕುಳಿಯುವುದನ್ನು ನಾವು ಚಿಂತಿಸಬೇಕಾಗಿದೆ ಎಂದು ಭಾವಿಸುವವರಿಗಂತೂ ಮುಖ್ಯವಾಗಿದೆ. ಯುದ್ಧದ ಉದ್ದೇಶದ ಅರಿವಿನ ಅಭಾವ ಎದ್ದುಕಾಣುತ್ತಿದೆ. ಭಾರತೀಯರ ಪರವಾಗಿ ತನ್ನ ಅಧಿಕಾರವನ್ನು ಹಿಂತೆಗೆದುಕೊಳ್ಳುವಂತಹ ಘೋಷಣೆಯನ್ನು ಬ್ರಿಟಿಷ್ ಸರಕಾರವು ಮಾಡಿದರೆ, ಈ ಅರಿವನ್ನು ಮೂಡಿಸುವಲ್ಲಿ ಸಹಾಯಕವಾಗುತ್ತದೆ.

ಈ ಘೋಷಣೆಯೊಂದಿಗೇ ರಾಷ್ಟ್ರೀಯ ಸರಕಾರವೂ ಅಸ್ತಿತ್ವಕ್ಕೆ ಬರಬೇಕೇ? ಹಾಗಾದರೆ ಉತ್ತಮವಾದೀತು. ಆದರೆ ಜಿನ್ನಾ ಅವರು ಎರಡು ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಅವುಗಳಲ್ಲಿ ಒಂದಂತೂ ಅಂತಿಮವಾದುದು, ಅದು ಪಾಕಿಸ್ತಾನದ ಉದಯ. ಇನ್ನೊಂದು ಸದ್ಯದಲ್ಲಿ ಆಗಬೇಕೆಂದು ಒತ್ತಾಯಿಸುತ್ತಿರುವಂತಹುದು. ಅದೆಂದರೆ, ಸಚಿವ ಸಂಪುಟದಲ್ಲಿ ಶೇ. ೫೦ರಷ್ಟು ಪ್ರಾತಿನಿಧ್ಯವನ್ನು ತಮಗೆ ನೀಡುವುದು. ಅವರ ಪಾಕೀಸ್ತಾನದ ಬೇಡಿಕೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಜಿನ್ನಾ ಅವರು ಮುಸ್ಲಿಮರೇ ಒಂದು ರಾಷ್ಟ್ರವೆಂದು ಹೇಳಿದರೆ, ಅದಕ್ಕೆ ನನ್ನ ತಕರಾರೇನೂ ಇರುವುದಿಲ್ಲ. ತಾವು ಮುಸ್ಲಿಮರೇ ಒಂದು ರಾಷ್ಟ್ರವಾಗಿರುವುದರಿಂದ ತಮಗೆ ಪಾಕಿಸ್ತಾನವು ಬೇಕು ಎಂದು ಅವರು ಕೇಳಿದರೆ ಮತ್ತು ಹಾಗೆ ಮಾಡುವಾಗ ಅವರ ಪ್ರಕಾರವೇ ಬೇರೆಯ ರಾಷ್ಟ್ರವಾಗಿರುವ ಹಿಂದೂಗಳ ಪ್ರದೇಶವನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಹೇಳಿದರೆ, ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ.

ಪಾಕಿಸ್ತಾನದ ವಿಷಯಕ್ಕೆ ಬಂದರೆ, ಜಿನ್ನಾ ಅವರು ಕೂಸು ಹುಟ್ಟುವ ಮುನ್ನವೇ ಕುಲಾವಿಯನ್ನು ಹೊಲಿಯುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ಹೇಳಬಯಸುತ್ತೇನೆ. ವಾಯವ್ಯ ಸರಹದ್ದಿನ ಯಜಮಾನರಾಗಿರುವವರು ಖಾನ್ ಅಬ್ದುಲ್ ಗಫಾರ್ ಖಾನ್ ಅವರೇ ಹೊರತು ತಾವಲ್ಲ ಎಂಬುದನ್ನು ಜಿನ್ನಾ ಅವರು ತಿಳಿದುಕೊಳ್ಳಬೇಕು. ಗಫಾರ್ ಖಾನ್ ಅವರ ಒಪ್ಪಿಗೆಯಿಲ್ಲದೆ ಪಾಕಿಸ್ತಾನವಿಲ್ಲ. ಪಾಕಿಸ್ತಾನಕ್ಕಾಗಿ ಸುಂಟರಗಾಳಿಯಂತೆ ಸುತ್ತಾಡುತ್ತಾ ಪ್ರಚಾರಮಾಡುವ ಬದಲು ಜಿನ್ನಾ ಅವರು ಖಾನ್ ಅಬ್ದುಲ್ ಗಫಾರ್ ಖಾನ್ ಅವರ ಮನಸ್ಸನ್ನು ಬದಲಿಸಲು ತಮ್ಮ ಸಮಯ ಮತ್ತು ಶಕ್ತಿಯನ್ನು ಕರ್ಚುಮಾಡಬೇಕು. ಆದರೆ ಈ ವಿಷಯದ ಬಗ್ಗೆ ಜಿನ್ನಾ ಅವರೇ ಚಿಂತಿಸಬೇಕು.

## ಪಾಕಿಸ್ತಾನಕ್ಕಾಗಿ ಬೇಡಿಕೆ

ನಾನು ಈಗಾಗಲೇ ಹೇಳಿದಂತೆ ಪಾಕಿಸ್ತಾನಕ್ಕಾಗಿರುವ ಬೇಡಿಕೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ, ಮುಸ್ಲಿಂ ಸಮುದಾಯಕ್ಕೆ ಶೇ. ೫೦ರಷ್ಟು ಪ್ರಾತಿನಿಧ್ಯಕ್ಕಾಗಿರುವ ಬೇಡಿಕೆಯು ನನಗೆ ಅರ್ಥವಾಗದು. ಸದ್ಯದ ಬೇಡಿಕೆಯಾದ ಶೇ. ೫೦ರ ಪ್ರಾತಿನಿಧ್ಯ ಅವರ ಅಂತಿಮ ಗುರಿಯಾದ ಪಾಕಿಸ್ತಾನದ ಬೇಡಿಕೆಗೆ ಹೇಗೆ

ಸಂಬಂಧಿಸಿದೆ ಎಂಬುದೂ ನನಗೆ ತಿಳಿಯುವುದಿಲ್ಲ. ಮುಸ್ಲಿಮರ ಈ ಬೇಡಿಕೆಯು ಅತ್ಯಂತ ಕ್ರೂರವಾದುದು ಎಂಬುದು ನಿಶ್ಚಯ. ಈ ಬೇಡಿಕೆಯನ್ನು ತಿರಸ್ಕರಿಸಿ ಲಾರ್ಡ್ ಲಿನ್‌ಲಿಥ್‌ಗ್ಲೋ ಅವರು ಭಾರತಕ್ಕೆ ಅತ್ಯುತ್ತಮವಾದ ಸೇವೆಯನ್ನು ಮಾಡಿದ್ದಾರೆ ಎಂಬುದರಲ್ಲಿ ನನಗೆ ಸಂಶಯವೇ ಇಲ್ಲ. ಜಿನ್ನಾ ಅವರು ಕೇಳಿರುವಂತೆ ಶೇ. ೫೦ರಷ್ಟು ಪ್ರಾತಿನಿಧ್ಯವನ್ನು ನೀಡಲೇಬೇಕಾದರೆ, ಮಧ್ಯಂತರದ ಕ್ರಮವಾಗಿ ಭಾರತದಲ್ಲಿ ಒಂದು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲೇ ಬಾರದೆಂಬುದು ನನ್ನ ನಿಶ್ಚಿತವಾದ ಅಭಿಪ್ರಾಯ. ತಾನು ಈಗ ಮಾಡುತ್ತಿರುವುದಕ್ಕಿಂದ ಹೆಚ್ಚಿನದೇನನ್ನೂ ಈ ವಿಷಯದಲ್ಲಿ ರಾಷ್ಟ್ರೀಯ ಸರಕಾರವು ಮಾಡಬಲ್ಲದು ಎಂಬುದರಲ್ಲಿ ನನಗೆ ನಂಬಿಕೆಯಿಲ್ಲ.

ಭಾರತವು ನಿಜವಾಗಿ ಇದಕ್ಕಿಂತ ಹೆಚ್ಚಿಗೆ ಏನೂ ಮಾಡಲಾರದು. ಭಾರತದ ಸಾಮರ್ಥ್ಯ ಇನ್ನೂ ವೃದ್ಧಿಯಾಗಿಲ್ಲ. ಈ ತಪ್ಪಿನ ಹೊಣೆ ಬ್ರಿಟಿಷ್ ಸರಕಾರದ್ದೇ ಆಗಿದೆ. ಶಾಂತಿಯ ಸಮಯದಲ್ಲಿ ಭಾರತದಲ್ಲಿನ ಸಂಪತ್ತನ್ನು ಅಭಿವೃದ್ಧಿಪಡಿಸದೆ ಇರಲು ಅವರು ನಿಶ್ಚಯಿಸಿದ್ದರು. ಆದ್ದರಿಂದ ಈ ಸರಕಾರಕ್ಕಾಗಲೀ ಅಥವಾ ರಾಷ್ಟ್ರೀಯ ಸರಕಾರಕ್ಕಾಗಲೀ, ಈಗ ಮಾಡುತ್ತಿರುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಲು ಸಾಧ್ಯವಾಗದು. ಭಾರತವು ಸಂಪೂರ್ಣವಾಗಿ ಅಭಿವೃದ್ಧಿಯನ್ನು ಹೊಂದಿದ್ದರೆ, ಆಗ ಅದು ಸಾಮ್ರಾಜ್ಯದ ನೆರವಿಗೆ ನಿಲ್ಲಬಹುದಿತ್ತು. ಭಾರತವು ಹಾಗೆ ಮಾಡಬೇಕಾಗಿಯೂ ಇತ್ತು. ಈಗ ಸಂಭವನೀಯವಾಗಿರುವ ಜಪಾನೀಯರ ಆಕ್ರಮಣದಿಂದ ತನ್ನನ್ನು ರಕ್ಷಿಸಿಕೊಳ್ಳಲು ಮತ್ತು ಅದನ್ನು ತಡೆಗಟ್ಟಲು ಇಂಗ್ಲೆಂಡಿನತ್ತ ಅದು ಮುಖಮಾಡಬೇಕಾಗಿದೆ. ಅಂತಹ ಅಸಹಾಯಕ ಸ್ಥಿತಿಯಲ್ಲಿದೆ ಭಾರತ.

ಭಾರತೀಯನೊಬ್ಬನನ್ನು ರಕ್ಷಣಾ ಸದಸ್ಯನನ್ನಾಗಿ ನೇಮಕಮಾಡಿರುವುದು ಒಳ್ಳೆಯದೇ, ಆದರೆ ಅಷ್ಟು ಮಾತ್ರ ಸಾಕೇ? ಸಾಕಷ್ಟು ಸಾಧನ ಸಂಪತ್ತು ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಇಲ್ಲದಿದ್ದರೆ, ರಕ್ಷಣಾ ಸಚಿವರು ಏನು ಮಾಡಬಹುದು ಎಂಬುದು ಅರ್ಥವಾಗವುದು ಬಹಳ ಕಷ್ಟ. ಇಂಗ್ಲೆಂಡ್ ತನ್ನ ರಕ್ಷಣೆಗಾಗಿ ಸಂಚಯಿಸಿ ಇಟ್ಟುಕೊಂಡಿರುವ ರಕ್ಷಣಾ ಸಾಧನಗಳನ್ನು ಭಾರತಕ್ಕೆ ಕಳುಹಿಸಿ ಎಂದು ಕೇಳುವುದು ವಿವೇಕಯುತವಾಗುತ್ತಿತ್ತು ಎಂದೆನಿಸುತ್ತಿದೆ. ಇದರಲ್ಲಿ ಭಾರತದ ಹಿತಾಸಕ್ತಿಗಳು ಅಡಗಿವೆ, ಇದರಲ್ಲಿಯೇ ಇಂಗ್ಲೆಂಡಿನ ಕರ್ತವ್ಯವೂ ಸಹ ಸೇರಿದೆ. (ಅಸೋಸಿಯೇಟೆಡ್ ಪ್ರೆಸ್)

* * * * *

---

(ದ ಟೈಮ್ಸ್ ಆಫ್ ಇಂಡಿಯಾ, ೧೯೪೨ರ ಫೆಬ್ರವರಿ ೨೭)

# ೧೫
# ಪ್ರಜಾಪ್ರಭುತ್ವದ ಯಶಸ್ಸಿನ ಮೇಲೆ ಭಾರತೀಯರ ಭವಿಷ್ಯವು ನಿಂತಿದೆ

'ಶ್ರೀ ಗಾಂಧಿಯವರಿಂದ ಯಾರೂ ಸ್ಥಿರತೆಯನ್ನು ನಿರೀಕ್ಷಿಸಲಾರರು. ಆದರೆ ಪ್ರತಿಯೊಬ್ಬರೂ ಅವರಲ್ಲಿ ಹೊಣೆಗಾರಿಕೆಯ ಪ್ರಜ್ಞೆಯನ್ನು ನಿರೀಕ್ಷಿಸಬಹುದಾದ ಹಕ್ಕನ್ನು ಹೊಂದಿದ್ದಾರೆ. ಶ್ರೀ ಗಾಂಧಿಯವರು ಈಗ ಕೈಗೆತ್ತಿಕೊಂಡಿರುವ ಕ್ರಮವು ಬೇಜವಾಬ್ದಾರಿಯುತವಾಗಿದೆ ಮತ್ತು ತಿಳಿಗೇಡಿತನದಿಂದ ಕೂಡಿದೆ ಆಗಿದೆ ಎನ್ನುವುದರಲ್ಲಿ ಸಂಶಯವೇನೂ ಇಲ್ಲ' ಎಂದು ಸೋಮವಾರ ದೆಹಲಿಗೆ ತೆರಳುವ ಮೊದಲು ದ ಟೈಮ್ಸ್ ಆಫ್ ಇಂಡಿಯಾದ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ ಭಾರತ ಸರಕಾರದ ಕಾರ್ಮಿಕ ಸದಸ್ಯರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದರು (೧೯೪೨ರ ಜುಲೈ ೨೭).

ವಿವಿಧ ಜನಗಳ ಮಧ್ಯೆ ಏಕತೆಯನ್ನು ತರುವಂತಹ ಬೇರೆ ಕ್ರಮವನ್ನು ಶ್ರೀ ಗಾಂಧಿಯವರು ಏಕೆ ಕೈಗೆತ್ತಿಕೊಳ್ಳುವುದಿಲ್ಲ? ಬೇರೆ ಬೇರೆ ಪಕ್ಷಗಳ ಮುಖಂಡರ ಸಭೆಯನ್ನು ಕರೆದು, ಅವರುಗಳ ಬೇಡಿಕೆಯೇನು ಎಂಬುದನ್ನು ತಿಳಿದುಕೊಂಡು ಅವರ ಮಧ್ಯೆ ಇರಬಹುದಾದ ಭಿನ್ನಾಭಿಪ್ರಾಯವನ್ನು ಪರಿಹರಿಸಲು ಏಕೆ ಪ್ರಯತ್ನಮಾಡುವುದಿಲ್ಲ?

ಡಾ. ಅಂಬೇಡ್ಕರ್ ಅವರು ಈ ಪ್ರಶ್ನೆಗಳನ್ನು ಕೇಳುತ್ತಾ, 'ಶ್ರೀ ಗಾಂಧಿಯವರು ತಾವು ತೆಗೆದುಕೊಳ್ಳುತ್ತೇನೆಂದು ಬೆದರಿಕೆ ಹಾಕಿರುವ ಕ್ರಮಗಳನ್ನು ತಡೆಯಬೇಕಾದುದು ಅವರ ಚಳವಳಿಯಲ್ಲಿ ವಿಶ್ವಾಸವಿಟ್ಟಿರದವರ ಕರ್ತವ್ಯವಾಗಿದೆ" ಎಂದು ಹೇಳಿದರು.

ಭಾರತದ ಚರಿತ್ರೆಯಲ್ಲಿ ಅತ್ಯಂತ ಕಷ್ಟಕರವಾಗಿರುವ ಈ ಸಮಯದಲ್ಲಿ, ಅನಾಹುತಕಾರಿಯಾದ ಇಂತಹ ಕ್ರಮವನ್ನು ಕೈಗೆತ್ತಿಕೊಳ್ಳುವ ಯೋಚನೆಯನ್ನು ಮಾಡುವ ಗಾಂಧಿಯವರ ನಡೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಎಂದು ಅವರು ಹೇಳಿದರು.

'ನನಗೆ ವಿಷಯವು ಸ್ಪಷ್ಟವಾಗಿದೆ. ಭಾರತದ ರಾಜಕೀಯ ಗುರಿಗಳನ್ನು ಕುರಿತು ಹೇಳುವುದಾದರೆ, ಬ್ರಿಟಿಷರಿಂದ ಭಾರತೀಯರಿಗೆ ಅಧಿಕಾರದ ಹಸ್ತಾಂತರದ ಪ್ರಕ್ರಿಯೆಯು ನಡೆಯುತ್ತಲೇ ಇದೆ ಮತ್ತು ಇತ್ತೀಚೆಗೆ ಅದರ ವೇಗವು ಹೆಚ್ಚಾಗುತ್ತಿದೆ. ಭಾವಾತಿರೇಕದಿಂದ ಮಾತನಾಡುವವರಿಗೆ ಮಾತ್ರ ಇದು ಕಾಣಿಸದೆ ಇರಬಹುದು. ಇಂತಹ ಭಾವಾತಿರೇಕದ ರಾಷ್ಟ್ರಪ್ರೇಮಿಗಳನ್ನು ಹೊರತುಪಡಿಸಿದರೆ, ಬ್ರಿಟಿಷರು ಮತ್ತು ಭಾರತೀಯರು ಪರಸ್ಪರ ಮುಖಾಮುಖಿಯಾಗುವುದು ಅಂತಿಮ ಹೋರಾಟಕ್ಕೆ ಸಿದ್ಧವಾದಂತೆ. ಆದರೆ ಬ್ರಿಟಿಷರು ಭಾರತೀಯರು ತಮ್ಮ ಅಂತಿಮ ಗುರಿಯತ್ತ ಸಾಗುವುದನ್ನು ತಡೆಯಲು ಮತ್ತು ಇಂತಹ ಅಂತಿಮ ಹೋರಾಟದಲ್ಲಿ ಸಿಕ್ಕಿಕೊಳ್ಳಲು ಇಷ್ಟಪಡುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಇದಕ್ಕೆ ಪುರಾವೆಗಳು ಅಗತ್ಯವಾದರೆ, ಕ್ರಿಪ್ಸ್ ಯೋಜನೆಯು ಎದುರಿಗೇ ಇದೆ. ಕಾಂಗ್ರೆಸ್‌ನವರು ಬೇಕೆಂದು ಇಲ್ಲಿಯವರೆಗೆ ತಗಾದೆ ಮಾಡುತ್ತಿದ್ದ ಸ್ವಾತಂತ್ರ್ಯ ಮತ್ತು ಸಂವಿಧಾನ ಸಭೆಯನ್ನು ನೀಡಲು ಅವರು ಒಪ್ಪಿಕೊಂಡಿದ್ದಾರೆ.

ಕ್ರಿಪ್ಸ್ ಅವರ ಸಲಹೆಗಳು ಹೊರಬಂದನಂತರವೂ, ಬ್ರಿಟಿಷರು ಭಾರತೀಯರಿಗೆ ಅಧಿಕಾರವನ್ನು ಹಸ್ತಾಂತರಗೊಳಿಸುವ ಇಚ್ಛೆಯನ್ನು ಹೊಂದಿಲ್ಲ ಎಂದು ಮಾಡಿರುವ ಶ್ರೀ ಗಾಂಧಿಯವರ ಆಪಾದನೆಗಳನ್ನು ನಂಬುವುದು ಸಾಧ್ಯವಿಲ್ಲ. ನಿಜವಾಗಿಯೂ ಇದು ಅಸತ್ಯದಿಂದ ಕೂಡಿದೆ.

ಕ್ರಿಪ್ಸ್ ಸಮಿತಿಯ ಸಲಹೆಗಳು ವಿಫಲವಾದರೂ, ಭಾರತೀಯರಿಗೆ ಅವರು ಸ್ವತಂತ್ರ ರಾಷ್ಟ್ರದ ಸ್ಥಾನಮಾನಗಳನ್ನು ಬಯಸಿದರೆ ಅದನ್ನು ಕೊಡುವ ಬದ್ಧತೆಯಿಂದ ಬ್ರಿಟಿಷ್ ಸರಕಾರವು ಯಾವ ವಿಧದಲ್ಲಿಯೂ ಹಿಂದೆಹೋಗಿಲ್ಲ ಎಂದು ನನಗೆ ತೋರುತ್ತಿದೆ".

**ದೂರದೃಷ್ಟಿರಹಿತ ಅಭಿಪ್ರಾಯ**

'ಸ್ವಾತಂತ್ರ್ಯವನ್ನು ನೀಡಲು ಸಿದ್ಧವಿದ್ದರೂ ಕ್ರಿಪ್ಸ್ ಯೋಜನೆಯನ್ನು ಕಾಂಗ್ರೆಸ್ ತಿರಸ್ಕರಿಸುವುದಕ್ಕೆ ಕಾರಣಗಳೇನು ಎನ್ನುವುದು ಯಾರಿಗೂ ತಿಳಿದಿಲ್ಲ. ರಕ್ಷಣಾ ವಿಷಯದಲ್ಲಿನ ಅಧಿಕಾರವನ್ನು ಹಸ್ತಾಂತರಗೊಳಿಸದೆ ಇರುವುದು ಜನಾಂದೋಲನಕ್ಕೆ ಕಾರಣವಾಗಿದ್ದರೆ, ಕಾಂಗ್ರೆಸ್ಸಿನ ದೂರದೃಷ್ಟಿರಾಹಿತ್ಯವನ್ನು ಯಾರಾದರೂ ಒಪ್ಪುತ್ತಾರೆಂಬುದು ಸಂಶಯಾಸ್ಪದವೇ ಸರಿ. ಮೊದಲನೆಯದಾಗಿ, ಯುದ್ಧದ ಉದ್ದೇಶವನ್ನು ಘೋಷಿಸುವಂತೆ ಮಾತ್ರ ಕಾಂಗ್ರೆಸ್ ಪಕ್ಷವು ಬ್ರಿಟಿಷರನ್ನು ಕೇಳಿತ್ತೇ ಹೊರತು ಅದನ್ನು ಜಾರಿಗೊಳಿಸುವಂತೆ ಅಲ್ಲ. ಎರಡನೆಯದಾಗಿ, ರಕ್ಷಣಾ ಇಲಾಖೆಯ ತಾಂತ್ರಿಕ ಮತ್ತು ಮಿಲಿಟರಿ ವಿಭಾಗವನ್ನು ನಡೆಸಿಕೊಂಡುಹೋಗುವಂತಹ ಸಮರ್ಥರಾರನ್ನೂ ಭಾರತೀಯ ರಾಜಕೀಯ ವಲಯದಲ್ಲಿ ನಾನು ನೋಡಿಲ್ಲ. ಭಾರತೀಯರು ಈ ವಿಷಯವನ್ನು ಅರಿತುಕೊಳ್ಳುವುದರಲ್ಲಿ ಸಂಪೂರ್ಣವಾದ ನಿರ್ಲಕ್ಷ್ಯವನ್ನು ತೋರಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರಕ್ಷಣಾ ಇಲಾಖೆಯನ್ನು ಭಾರತೀಯರಿಗೆ ವಹಿಸಿಕೊಡಬೇಕೆಂದು ಕೇಳುವುದು ಮೂರ್ಖತನ. ಹಾಗೇನಾದರೂ ಅರಿಯದವರ ಕೈಗೆ ಈ ಇಲಾಖೆಯ ಜವಾಬ್ದಾರಿಯು ಬಂದರೆ ಅದು ಕೇವಲ ಹೆಸರಿಗೆ ಮಾತ್ರವಿರುತ್ತದೆ. ಮೂರನೆಯದಾಗಿ, ಕ್ರಿಪ್ಸ್ ಯೋಜನೆಯ ಪ್ರಕಾರ ಎಲ್ಲಾ ಇಲಾಖೆಗಳನ್ನೂ ಹಸ್ತಾಂತರಮಾಡುವುದಾಗಿ ಯೋಚಿಸಿರುವಾಗ, ರಕ್ಷಣಾ ಇಲಾಖೆಯನ್ನೂ ಹಸ್ತಾಂತರಗೊಳಿಸಬೇಕೆಂದು ತಕರಾರು ತೆಗೆಯುವುದು ಮಕ್ಕಳ ಜಗಳದ ಹಾಗೆ ಕಾಣಿಸುತ್ತದೆ. ಹಸ್ತಾಂತರಗೊಳಿಸುವುದರಲ್ಲಿ ತೊಂದರೆಯಿದ್ದಲ್ಲಿ, ರಕ್ಷಣಾ ಇಲಾಖೆಯಂತಹ ಸೂಕ್ಷ್ಮವಾದ ಇಲಾಖೆಯನ್ನು ಹಸ್ತಾಂತರಗೊಳಿಸಲು ಸಿದ್ಧವಿರುವ ಇಲಾಖೆಗಳ ಜೊತೆಯಲ್ಲಿ ಸೇರಿಸಬಾರದು ಎಂಬುದನ್ನು ಸಾಮಾನ್ಯಜ್ಞಾನವಿರುವ ಯಾರೂ ಒಪ್ಪುತ್ತಾರೆ. ೧೯೩೭ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಮಯದಲ್ಲಿಯೂ ಗವರ್ನರ್ ಅವರ ವಿಶೇಷ ಅಧಿಕಾರದ ಬಗ್ಗೆಯೂ ಇದೇ ರೀತಿಯ ವಿವಾದವು ನಡೆದಿತ್ತು. ತನ್ನ ಅನುಭವವನ್ನು ಕಾಂಗ್ರೆಸ್ ಮರೆತಿರುವುದು ಆಶ್ಚರ್ಯಕರವಾಗಿದೆ.

ಅವ್ಯವಸ್ಥೆಯನ್ನು ಉಂಟುಮಾಡುವ ಕಾಂಗ್ರೆಸ್ಸಿನ ಕ್ರಮವು ಅನುಕಂಪಕ್ಕೆ ಅರ್ಹವಾಗಿಲ್ಲವೆಂಬುದು ನನ್ನ ಸ್ಪಷ್ಟ ಅಭಿಪ್ರಾಯ. ದೇಶದ ಸೇವೆಯನ್ನು ಮಾಡಲು ತನಗೆ ದೊರಕಿದ್ದ ಅತ್ಯುತ್ತಮ ಅವಕಾಶವನ್ನು ಅದು ತಿರಸ್ಕರಿಸಿದೆ. ಈ ದೃಷ್ಟಿಯಿಂದ ನೋಡಿದಾಗ, ಶ್ರೀ ಗಾಂಧಿಯವರು ಉದ್ದೇಶಿಸಿರುವ ಈ ಕ್ರಮವು ದೇಶದ ಹಿತಾಸಕ್ತಿಯನ್ನು ಹೇಗೆ ಒಳಗೊಂಡಿದೆ ಎಂಬುದು ನನಗೆ ತೋರುತ್ತಿಲ್ಲ.

ಯುದ್ಧವು ಪ್ರಾರಂಭವಾದ ನಂತರ ಶ್ರೀ ಗಾಂಧಿಯವರು ಮತ್ತು ಕಾಂಗ್ರೆಸ್ ಕಳೆದುಕೊಂಡ ಪ್ರತಿಷ್ಠೆಯನ್ನು ಮರಳಿ ಗಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದು ನನಗೆ ಕಾಣುತ್ತದೆ.

ತನ್ನ ಪ್ರತಿಷ್ಠೆಯನ್ನು ಉಳಿಸಿಕೊಂಡು ಹೋಗಲು ಕಾಂಗ್ರೆಸ್ಸಿಗೆ ಎರಡು ಮಾರ್ಗಗಳಿವೆ. ನೇರ ಕ್ರಮಗಳ ಪ್ರಭಾವಳಿಯಲ್ಲಿ ಅದು ಮೆರೆಯಬಹುದು ಅಥವಾ ಅಧಿಕಾರದ ಪ್ರಭಾವದಲ್ಲಿ ಬದುಕಿರಬಹುದು. ಕಾಂಗ್ರೆಸ್ ಅಧಿಕಾರವನ್ನು ತೊರೆಯುವಂತೆ ಶ್ರೀ ಗಾಂಧಿಯವರು ಒತ್ತಾಯಮಾಡಿದರು ಮತ್ತು ನೇರಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಭಾಗವಹಿಸುವುದನ್ನೂ ತಿರಸ್ಕರಿಸಿದರು. ಕಾಂಗ್ರೆಸ್ಸಿನ ಈ ನಿಷ್ಕ್ರಿಯತೆಯಿಂದಾಗಿ ಅದರ ಪ್ರತಿಷ್ಠೆಯು ಮುಕ್ಕಾಯಿತು, ಮತ್ತು ಶ್ರೀ ಗಾಂಧಿಯವರ ನೀತಿಯು ಅವರಿಗೂ ಮತ್ತು ಅವರ ಪಕ್ಷಕ್ಕೂ ವಿನಾಶಕಾರಿಯಾಯಿತು. ಅವರ ಕ್ರಮಗಳು ತಮ್ಮ ಪ್ರತಿಷ್ಠೆಯನ್ನು ಪುನಃ ಗಳಿಸಿಕೊಂಡು ತಾವು

ಹುತಾತ್ಮರಾಗುವಂತಹ ಹತಾಶ ಭಾವನೆಯಿಂದ ಕೂಡಿವೆ.

ಅವರ ಕ್ರಮಗಳು ಕಾಂಗ್ರೆಸ್ ಪಕ್ಷದ ಹಿತಾಸಕ್ತಿಗಳಿಗೆ ಒಳ್ಳೆಯದಾಗಿರಬಹುದು, ಆದರೆ, ಕಂಡಿತವಾಗಿಯೂ ದೇಶಕ್ಕೆ ಅದರಿಂದ ಯಾವ ಉಪಯೋಗವೂ ಇಲ್ಲ. ಈ ಸಂಧಿಯ ಸಮಯದಲ್ಲಿ ಅವರ ಕ್ರಮಗಳು ಕುತಂತ್ರಗಳಿಂದ ತುಂಬಿದೆ ಮತ್ತು ದೇಶಕ್ಕೆ ಅತ್ಯಂತ ಅಪಾಯಕಾರಿಯಾಗಿವೆ ಎಂದು ಹೇಳಬೇಕು.

ಈ ದೇಶದ ರಾಜಕೀಯ ಪ್ರಗತಿಯಲ್ಲಿ ಎರಡು ದಾರಿಗಳು ಕಾಂಗ್ರೆಸ್ಸಿನ ಮುಂದಿವೆ. ಕಾಂಗ್ರೆಸ್ ಪಕ್ಷವು ನೇರಕ್ರಮವನ್ನು ತೆಗೆದುಕೊಳ್ಳುವುದು ಮತ್ತು ಭಾರತದ ರಾಷ್ಟ್ರೀಯ ಜೀವನದಲ್ಲಿನ ಎಲ್ಲಾ ಅಂಗಗಳನ್ನೂ ಪ್ರತಿನಿಧಿಸುವ ಪಕ್ಷಗಳೆಲ್ಲವೂ ಒಟ್ಟಿಗೆ ಸೇರಿ ಬೇಡಿಕೆಗಳನ್ನು ಮುಂದಿಡುವುದು. ಇವುಗಳಲ್ಲಿ ಮೊದಲನೆಯದರ ಬಗ್ಗೆ ಶ್ರೀ ಗಾಂಧಿಯವರು ಮತ್ತು ಅವರ ಕಾಂಗ್ರೆಸ್ ಪಕ್ಷ ಬಹಳ ಆಸಕ್ತಿಯನ್ನು ಹೊಂದಿದ್ದಾರೆ. ಆದರೆ ಇದೊಂದು ಆಘಾತಕಾರಿ ಯೋಜನೆ. ಈ ಯೋಜನೆಯು ಒಂದು ಮಿತಿಯ ನಂತರ ಕೆಲಸಕ್ಕೆ ಬಾರದುದಾಗುತ್ತದೆ ಎಂಬುದು ಗಾಂಧಿಯವರನ್ನು ಹೊರತುಪಡಿಸಿದರೆ ಎಲ್ಲರಿಗೂ ತಿಳಿದಿದೆ ಒಂದುವೇಳೆ ಈ ಕ್ರಮಗಳು ಯಶಸ್ವಿಯಾದರೂ, ಅದಕ್ಕೆ ಕಾರಣ, ನಾಜಿ಼ ಸರಕಾರದಂತಲ್ಲದೆ, ಬ್ರಿಟಿಷ್ ಸರಕಾರವು ನೈತಿಕ ಉದ್ದೇಶಗಳನ್ನು ಮಟ್ಟಹಾಕಲು ಅನೈತಿಕ ಕ್ರಮಗಳನ್ನು ಬಳಸುವುದಿಲ್ಲ, ಪಾಶವೀ ಬಲವನ್ನು ಉಪಯೋಗಿಸುವುದಿಲ್ಲ ಎಂಬುದು. ಇದನ್ನು ಶ್ರೀ ಗಾಂಧಿಯವರು ಒಪ್ಪಿಕೊಳುವುದಿಲ್ಲ. ಏಕೆಂದರೆ, ಅದೃಷ್ಟವಶಾತ್, ಅವರ ನಾಗರಿಕ ಕಾಯಿದೆಭಂಗ ಚಳುವಳಿಯನ್ನು ನಾಜಿ಼ ಸರಕಾರವು ಹೇಗೆ ನಿಭಾಯಿಸುತ್ತಿತ್ತು ಎನ್ನುವ ಅನುಭವವು ಗಾಂಧಿಯವರಿಗೆ ಇಲ್ಲ. ನಾಜಿ಼ಗಳು ಗಾಂಧಿಯವರನ್ನು ಅಲಕ್ಷಿಸಿ, ಅವರ ಕ್ರಮಗಳನ್ನು ಪ್ರಾರಂಭದಲ್ಲಿಯೇ ಚಿವುಟಿಹಾಗುತ್ತಿದ್ದರು ಎಂಬುದು ನಿಸ್ಸಂಶಯ.

### ಪಕ್ಷಗಳ ನಡುವೆ ಏಕತೆ

ನೇರಕ್ರಮಗಳು ವಿಫಲವಾಗುತ್ತವೆ ಎಂದು ತಿಳಿದೂ ಶ್ರೀ ಗಾಂಧಿಯವರು ತಮ್ಮ ಪಕ್ಷವು ಏಕಾಂಗಿಯಾಗಿ ಈ ಕ್ರಮಗಳನ್ನು ತೆಗೆದುಕೊಳ್ಳುವಂತೆ ಏಕೆ ಮಾಡುತ್ತಾರೆ ಎಂಬುದು ನನ್ನ ಮನಸ್ಸನ್ನು ಕೊರೆಯುವ ಪ್ರಶ್ನೆ. ಅವರು ಎಲ್ಲಾ ಪಕ್ಷಗಳನ್ನೂ ಒಟ್ಟಿಗೆ ಸೇರಿಸುವಂತೆ ಬೇರೆಯ ಕ್ರಮಗಳನ್ನೇಕೆ ಕೈಗೊಳ್ಳುವುದಿಲ್ಲ? ಇತರ ಎಲ್ಲಾ ಪಕ್ಷಗಳ ಮುಖಂಡರ ಸಮಾವೇಶವೊಂದನ್ನು ಸಂಘಟಿಸಿ ಅವರುಗಳ ನಡುವೆ ಏನಾದರೂ ಭಿನ್ನಾಭಿಪ್ರಾಯಗಳಿವೆಯೆ ಎಂಬುದನ್ನು ಏಕೆ ನೋಡುವುದಿಲ್ಲ ಮತ್ತು ಇರಬಹುದಾದ ಸಮಸ್ಯೆಗಳನ್ನು ಏಕೆ ಶ್ರೀ ಗಾಂಧಿಯವರು ಬಗೆಹರಿಸುವುದಿಲ್ಲ? ಇದು ನಿಜವಾಗಿಯೂ ಮಾಡಬೇಕಾದ ಪ್ರಯತ್ನ. ಇದು ಮುತ್ಸದ್ಧಿಗಳು ಮಾಡಬೇಕಾದ ಕೆಲಸ ಮತ್ತು ಇದರಿಂದ ಸಮುದಾಯಗಳ ನಡುವೆ ಶಾಶ್ವತವಾದ ಶಾಂತಿಯು ನೆಲಸಲು ಸಹಾಯವಾಗುತ್ತದೆ. ಆದರೆ ಇಂತಹ ಪ್ರಯತ್ನಗಳನ್ನು ಅವರು ಎಂದೂ ಮಾಡಿಲ್ಲ. ಸಮಸ್ಯೆಗಳನ್ನು ಪರಿಹರಿಸಬಲ್ಲ ಈ ಮಾರ್ಗವನ್ನು ಅವರು ಏಕೆ ಅನುಸರಿಸುವುದಿಲ್ಲವೆಂಬುದು ನನಗೆ ಅರ್ಥವಾಗುವುದಿಲ್ಲ. ಬ್ರಿಟಿಷರು ಇರುವವರೆಗೆ ಯಾವ ಪರಿಹಾರವೂ ಸಾಧ್ಯವಿಲ್ಲವೆಂಬುದರ ಹಿಂದೆ ಎರಡು ವಿಷಯಗಳಿರುವುದು ಕಾಣಿಸುತ್ತದೆ – ಅಲ್ಪಸಂಖ್ಯಾತರ ಮುಖಂಡರು ಬ್ರಿಟಿಷರ ಕೈಗೊಂಬೆಗಳು ಎಂಬ ಭಾವನೆ, ಮತ್ತು ಕೋಮುಗಳಿಗೆ ಸಂಬಂಧ ಪಟ್ಟ ವಿಷಯಗಳನ್ನು ಬ್ರಿಟಿಷ್ ಸರಕಾರವು ನಿರ್ಗಮಿಸಿದ ನಂತರ ಕೈಗೆತ್ತಿಕೊಳ್ಳುವುದು ಉತ್ತಮ ಎಂದು ಕಾಂಗ್ರೆಸ್ ಭಾವಿಸುವುದು. ಎರಡನೆಯದಕ್ಕೆ ಕಾರಣವೆಂದರೆ, ಕಾನೂನು ಮತ್ತು ಸುವ್ಯವಸ್ಥೆಯ ಅಧಿಕಾರವು ತನ್ನ ಕೈಯಲ್ಲಿರುವಾಗ ತಾನು ತನ್ನ ನೀತಿಯನ್ನು ಅಲ್ಪಸಂಖ್ಯಾತರ ಮೇಲೆ ಹೇರುವ ಸ್ಥಿತಿಯಲ್ಲಿ ಇರುತ್ತೇನೆಂಬುದು ಕಾಂಗ್ರೆಸ್ಸಿನವರ ಲೆಕ್ಕಾಚಾರ. ಇವೆರಡರಲ್ಲಿ ಮೊದಲನೆಯದು ಅಲ್ಪಸಂಖ್ಯಾತ ಸಮುದಾಯದ ಮುಖಂಡರ ಚಾರಿತ್ರ್ಯದ ಮೇಲೆ ಮಾಡುವ ಕುತ್ಸಿತ ಹಾಗೂ ಬೇಜವಾಬ್ದಾರಿಯುತ ಆಪಾದನೆ. ತಾನು

ಮಾತ್ರ ನ್ಯಾಯನಿಷ್ಠವೆಂದು ಕರೆದುಕೊಳ್ಳುವ ಚಟವನ್ನು ಕಾಂಗ್ರೆಸ್ ನಿಲ್ಲಿಸಬೇಕು. ಇತರರೂ ತನಗಿಂತ ಹೆಚ್ಚಲ್ಲದಿದ್ದರೂ, ತನ್ನಷ್ಟೇ ದೇಶಭಕ್ತರು ಎಂಬುದನ್ನು ಒಪ್ಪಿಕೊಳ್ಳಬೇಕು. ಕಾಂಗ್ರೆಸ್ ಪಕ್ಷವಾಗಲೀ, ಅಥವಾ ಅದರ ಹಿಡಿತದಲ್ಲಿರುವ ಪತ್ರಿಕೆಗಳಾಗಲೀ ಅಲ್ಪಸಂಖ್ಯಾತ ಸಮುದಾಯಗಳ ಮುಖಂಡರ ಮೇಲೆ ಇಂತಹ ಮೂರ್ಖತನದ ಮತ್ತು ಆಧಾರರಹಿತವಾದ ಆಪಾದನೆಗಳನ್ನು ಮುಂದುವರೆಸುತ್ತಿರುವವರೆಗೂ, ಕೋಮುಸಮಸ್ಯೆಗಳನ್ನು ಪರಿಹರಿಸುವುದು ಕಷ್ಟವಾಗುತ್ತದೆ ಎಂಬುದು ನನಗೆ ನಿಶ್ಚಯವಾಗಿದೆ. ಎರಡನೆಯ ವಿಷಯವು ಮೋಸದಿಂದ ಕೂಡಿದೆಯೆಂಬುದರಲ್ಲಿ ಸಂದೇಹವಿಲ್ಲ. ಇವೆರಡರಲ್ಲಿ ಯಾವುದನ್ನು ಪರಿಶೀಲಿಸಿದರೂ, ಶ್ರೀ ಗಾಂಧಿಯವರಲ್ಲಿ ರಾಜಕೀಯ ಮುತ್ಸದ್ಧಿತನವು ದಿವಾಳಿಯಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

ಇಲ್ಲಿ ಒಂದು ವಿಷಯವನ್ನು ಶ್ರೀ ಗಾಂಧಿಯವರು ಅರಿತುಕೊಂಡಿಲ್ಲ, ಅದನ್ನು ಎಷ್ಟು ಬೇಗ ಅರಿತುಕೊಳ್ಳುತ್ತಾರೆಯೇ ಅಷ್ಟೂ ಒಳ್ಳೆಯದು. ಅತಿ ಪ್ರಚಾರಕ್ಕೆ ಸಿಕ್ಕಿರುವ ಅವರ ಎರಡು ರಾಜಕೀಯ ಗುಣಗಳು ಎಂದರೆ ಹಿಂದೂ–ಮುಸ್ಲಿಂ ಬಾಂಧವ್ಯವನ್ನು ವೃದ್ಧಿಪಡಿಸುವುದು ಮತ್ತು ಅಸ್ಪೃಶ್ಯರ ಸೇವೆಯನ್ನು ಮಾಡುವುದು.

೨೦ ವರ್ಷಗಳ ನಂತರವೂ ಮುಸ್ಲಿಮರಾಗಲೀ, ಅಸ್ಪೃಶ್ಯರಾಗಲೀ ಶ್ರೀ ಗಾಂಧಿಯವರನ್ನು ನಂಬುವುದಿಲ್ಲ. ಇದು ಅವರ ಜೀವನದ ಅತಿ ದೊಡ್ಡ ದುರಂತ.

ಅವರು ಎಷ್ಟು ಬೇಗ ಇದನ್ನು ಅರಿತುಕೊಳ್ಳುತ್ತಾರೆಯೋ ಅಷ್ಟೂ ಅವರಿಗೇ ಒಳ್ಳೆಯದು. ಈಗಲೂ, ಶ್ರೀ ಗಾಂಧಿಯವರು ಅಲ್ಪಸಂಖ್ಯಾತ ಸಮುದಾಯಗಳವರ ಮುಖಂಡರನ್ನು ಚರ್ಚೆಗೆ ಆಹ್ವಾನಿಸಬಹುದು. ಈ ಮುಖಂಡರು ಅಸಾಧ್ಯವಾದ ಬೇಡಿಕೆಯನ್ನು ಮುಂದಿಡುತ್ತಾರೆ ಎಂದೇನೂ ಅಲ್ಲ. ಹಾಗಾನಾದರೂ ಆದರೆ, ಅಂತಾರಾಷ್ಟ್ರೀಯ ಪಂಚಾಯತಿಗೆ ಈ ಸಮಸ್ಯೆಗಳನ್ನು ಒಪ್ಪಿಸುವ ಅವಕಾಶ ಶ್ರೀ ಗಾಂಧಿಯವರಿಗೆ ಇದ್ದೇ ಇದೆ.

ಸಾಮಾನ್ಯ ನಾಗರಿಕರು ಗಾಂಧಿಯವರಿಗೆ ಈ ವಿಷಯದಲ್ಲಿ ಬೆಂಬಲವನ್ನು ನೀಡುವ ಉದ್ದೇಶವನ್ನೇನನ್ನೂ ಹೊಂದಿಲ್ಲ. ಹೊಸ ಸಂವಿಧಾನದಲ್ಲಿ ಸ್ಪಷ್ಟವಾದ ವಿಧಿಗಳನ್ನು ಅಳವಡಿಸಿ ತಮಗೆ ರಕ್ಷಣೆಯ ಬಗ್ಗೆ ಯಾವ ಭರವಸೆಯನ್ನೂ ಕೊಡಲು ನಿರಾಕರಿಸುವ ಶ್ರೀ ಗಾಂಧಿಯರ ಜೊತೆ ಸೇರಲು ಅಲ್ಪಸಂಖ್ಯಾತರಿಗೆ ಯಾವ ಕಾರಣವೂ ಇಲ್ಲ.

ನಾವು ಎಂತಹ ವಿನಾಶಕಾರೀ ಸಮಯದಲ್ಲಿ ಇದ್ದೇವೆಂದರೆ, ಶ್ರೀ ಗಾಂಧಿಯವರ ವಿಷಯದಲ್ಲಿ ನಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸುವಷ್ಟಕ್ಕೇ ನಮ್ಮ ಕರ್ತವ್ಯವನ್ನು ಸೀಮಿತಗೊಳಿಸಿಕೊಳ್ಳಲಾಗುವುದಿಲ್ಲ. ಅವರ ಕ್ರಮಗಳನ್ನು ಒಪ್ಪದಿರುವವರಿಗೆ ಆ ಕ್ರಮಗಳನ್ನು ತಡೆಯುವುದು ಕೂಡ ಕರ್ತವ್ಯವಾಗಿರುತ್ತದೆ. ೧೯೩೦ರ ಕಾನೂನುಭಂಗ ಚಳವಳಿಯಲ್ಲಿ ಮುಸ್ಲಿಮರು ಮತ್ತು ದಲಿತವರ್ಗಗಳವರು ಭಾಗವಹಿಸಲಿಲ್ಲ. ತಾವು ಅದರಲ್ಲಿ ಭಾಗವಹಿಸದಿದ್ದರೂ, ಆ ಚಳವಳಿಯ ಬಗ್ಗೆ ಒಂದು ಬಗೆಯ ನಿರ್ಭಾವದ ಸಹಕಾರವನ್ನು ನೀಡಿದರು. ೧೯೩೦ರಲ್ಲಿ ಇದ್ದ ಪರಿಸ್ಥಿತಿಯು ಇಂದು ಇರುವ ಪರಿಸ್ಥಿತಿಗಿಂತ ಭಿನ್ನವಾಗಿತ್ತು. ೧೯೩೦ರ ಚಳವಳಿಯಲ್ಲಿ ಕೇವಲ ಎರಡು ಸಾಧ್ಯತೆಗಳಿದ್ದವು – ರಾಜಕೀಯ ಅಧಿಕಾರವು ಬ್ರಿಟಿಷರ ಕೈಯಲ್ಲಿಯೇ ಉಳಿಯುವುದು ಅಥವಾ ಅದನ್ನು ಭಾರತೀಯರಿಗೆ ವರ್ಗಾಯಿಸುವುದು. ಜಪಾನ್ ಆಗಲೀ, ಜರ್ಮನಿಯೇ ಆಗಲೀ ಇಲ್ಲಿಗೆ ಬಂದು ಭಾರತದ ಯಜಮಾನರಾಗುವ ಸಾಧ್ಯತೆಯಿರಲಿಲ್ಲ. ಈ ಸಾಧ್ಯತೆಯು ಈಗ ನಮ್ಮ ಮೋರೆಯ ಮುಂದೆಯೇ ಧುತ್ತೆಂದು ಕುಳಿತಿದೆ. ಅನ್ಯದೇಶೀಯರು ನಮ್ಮ ಹೊಸ್ತಿಲ ಬಳಿ ನಿಂತುಕೊಂಡು,

ಬ್ರಿಟಿಷರನ್ನು ಸೋಲಿಸುವುದಷ್ಟೇ ಅಲ್ಲದೇ ನಮ್ಮನ್ನು ಎಂದೆಂದಿಗೂ ಅವರ ಜೀತದಾಳುಗಳನ್ನಾಗಿ ಮಾಡಿಕೊಳ್ಳುವಂತಿರುವ ಈ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ದುರ್ಬಲಗೊಳಿಸುವಂತಹ ಕ್ರಮಗಳು ಹುಚ್ಚುತನವಾಗಿರುತ್ತವೆ. ಆದ್ದರಿಂದ ೧೯೩೦ರ ಕಾನೂನುಭಂಗ ಚಳವಳಿಗೂ ಇಂದು ಶ್ರೀ ಗಾಂಧಿಯವರು ನಡೆಸುತ್ತೇನೆಂದು ಬೆದರಿಸುತ್ತಿರುವ ಸಾಮೂಹಿಕ ಚಳವಳಿಗೂ ಬಹಳಷ್ಟು ವ್ಯತ್ಯಾಸಗಳಿರುವುದು ನನಗೆ ತೋರುತ್ತಿದೆ.

**ಹುಸಿ ಸಮರ್ಥನೆ**

ಕಾಂಗ್ರೆಸ್ ಪಕ್ಷ ಮತ್ತು ಶ್ರೀ ಗಾಂಧಿಯವರು ದೇಶದ ಪರವಾಗಿ ಮಾತನಾಡುವ ಇಲ್ಲದ ಹಕ್ಕನ್ನು ತಮ್ಮದೆಂದು ಸಾಧಿಸಿಕೊಳ್ಳುತ್ತಿದ್ದಾರೆ. ಇದೊಂದು ಹುಸಿ ಸಮರ್ಥನೆ ಮತ್ತು ಯಾರೂ ಅದರ ವಿರುದ್ಧ ಸವಾಲನ್ನು ಹಾಕುವ ಗೋಜಿಗೆ ಹೋಗಿಲ್ಲ. ಏಕೆಂದರೆ, ಕಾಂಗ್ರೆಸ್ ಪಕ್ಷವು ದೇಶದ ಹಿತಾಸಕ್ತಿಗೆ ಧಕ್ಕೆ ತರದವರೆಗೂ ಹಾಗೆ ಅವರು ದೇಶದ ಪರವಾಗಿ ಮಾತನಾಡುವುದಾಗಲೀ, ಅಥವಾ ತಮ್ಮ ಪಕ್ಷದ ಪರವಾಗಿಯಾಗಲೀ ಮಾತನಾಡುವುದನ್ನು ಸಮರ್ಥಿಸಿಕೊಳ್ಳುವುದು ಒಂದು ಸಣ್ಣ ವಿಷಯ. ಆದರೆ ಆ ಪಕ್ಷವು ದೇಶದ ರಕ್ಷಣೆ, ಹಿತ ಮತ್ತು ಸ್ವಾತಂತ್ರ್ಯವನ್ನು ಪಡೆಯುವ ಅವಕಾಶಗಳಿಗೆ ಹಾನಿಯಾಗುವ ರೀತಿಯಲ್ಲಿ ತನ್ನ ಕಾರ್ಯನೀತಿಯನ್ನು ರೂಪಿಸಕೊಂಡರೆ, ಆಗ ಇತರ ಪಕ್ಷಗಳಿಗೆ ತಮ್ಮ ನಿರ್ಭಾವುಕತೆಯನ್ನು ತೊರೆದು ದೇಶವನ್ನು ಅಸ್ತವ್ಯಸ್ತತೆಯತ್ತ ಕೊಂಡೊಯ್ಯುವ ಮತ್ತು ಇನ್ನೇನು ದೊರಕಬಹುದು ಎನ್ನಬಹುದಾದ ದೇಶದ ಗಮ್ಯವನ್ನು ಮುಟ್ಟುವುದನ್ನು ಹಾಳುಮಾಡಿ ಹತಾಶೆಗೆ ಕಾರಣವಾಗುವ ಕಾಂಗ್ರೆಸ್ ಪಕ್ಷವನ್ನು ವಿರೋಧಿಸುವುದು ಕರ್ತವ್ಯವಾಗುತ್ತದೆ. ಭಾರತೀಯರು ಎರಡು ವಿಷಯಗಳನ್ನು ಅರಿತುಕೊಳ್ಳಬೇಕೆಂದು ನಾನು ಬಯಸುತ್ತೇನೆ. ಅವುಗಳಲ್ಲಿ ಮೊದಲನೆಯದು, ನಾಜಿಸಂ ವಿರುದ್ಧ ಪ್ರಜಾಪ್ರಭುತ್ವವು ಗಳಿಸಬಹುದಾದ ವಿಜಯದ ಮೇಲೆ ಅವರ ಭವಿಷ್ಯವು ನಿಂತಿದೆ, ಮತ್ತು ಎರಡನೆಯದು, ಒಮ್ಮೆ ಪ್ರಜಾಪ್ರಭುತ್ವವು ವಿಜಯವನ್ನು ಸಾಧಿಸಿದರೆ, ಎಲ್ಲ ಭಾರತೀಯರು ಒಂದಾದರೆ, ಭಾರತವು ಸ್ವಾತಂತ್ರ್ಯವನ್ನು ಗಳಿಸುವುದನ್ನು ಯಾರೂ ತಡೆಯಲಾರರು. ಇಂತಹ ಸಂದರ್ಭದಲ್ಲಿ, ಶ್ರೀ ಗಾಂಧಿಯವರ ಕ್ರಮಗಳು ನಿಜವಾಗಿಯೂ ಅನಾವಶ್ಯಕವೆಂದು ನನ್ನ ನಿಶ್ಚಿತ ಅಭಿಪ್ರಾಯ.

ಪ್ರಜಾಪ್ರಭುತ್ವವು ವಿಜಯಶಾಲಿಯಾದರೆ, ಯಾರೂ ಭಾರತವು ಸ್ವಾತಂತ್ರ್ಯವನ್ನು ಗಳಿಸುವ ಹಾದಿಯಲ್ಲಿ ಅಡ್ಡಬರಲಾಗುವುದಿಲ್ಲ. ಪ್ರಜಾಪ್ರಭುತ್ವವು ವಿಜಯವನ್ನು ಗಳಿಸುವಂತೆ ಮಾಡಬೇಕಾದುದು ಪ್ರಸಕ್ತ ಸಮಯದಲ್ಲಿ ಎಲ್ಲರ ಮುಂದಿರುವ ಅತ್ಯಗತ್ಯವಾದ ಕಾರ್ಯ. ಕೇವಲ ಇದರ ಹಿಂದಿರುವ ತತ್ತ್ವದ ಮೇಲಿನ ಪ್ರೀತಿಯಿಂದ ನಾವಿದನ್ನು ಮಾಡಬೇಕಾಗಿಲ್ಲ. ನಮ್ಮ ದೇಶದ ಭವಿಷ್ಯವು ನಮ್ಮ ಕರ್ತವ್ಯವನ್ನು ನಾವು ಮಾಡುವಂತೆ ಪ್ರೇರೇಪಿಸುತ್ತಿದೆ. ಶ್ರೀ ಗಾಂಧಿಯವರು ಅವಸರದಲ್ಲಿರುವ ಮುದುಕ. ಭವಿಷ್ಯದಲ್ಲಿ ವಿಷಾದ ಪಡಬೇಕಾಗುವಂತಹ ಯಾವುದನ್ನೂ ಈಗ ಆತುರದಲ್ಲಿ ಮಾಡದಂತೆ ಭಾರತೀಯರು ಜಾಗೃತವಾಗಿರಬೇಕು."

ಡಾ. ಅಂಬೇಡ್ಕರ್ ಅವರು ಸೋಮವಾರ ರಾತ್ರಿ ಫ್ರಾಂಟಿಯರ್ ಮೇಯ್ಲ್‌ನಲ್ಲಿ ದೆಹಲಿಗೆ ತೆರಳಿದರು. ಪರಿಶಿಷ್ಟ ವರ್ಗಗಳವರು, ಸ್ವತಂತ್ರ ಕಾರ್ಮಿಕ ಪಕ್ಷದವರು, ಪೌರಸಭೆಯ ಕಾರ್ಮಿಕ ಸಂಘದವರು ಮತ್ತು ಇತರ ಹಲವಾರು ಸಂಘಸಂಸ್ಥೆಗಳವರು, ಅವರ ಹಲವಾರು ಸ್ನೇಹಿತರು ಮತ್ತು ಅಭಿಮಾನಿಗಳಿದ್ದ ಸುಮಾರು ೪೦೦ ಜನರ ಗುಂಪು ಡಾ. ಅಂಬೇಡ್ಕರ್ ಅವರನ್ನು ಆತ್ಮೀಯವಾಗಿ ಬೀಳ್ಕೊಟ್ಟಿತು.

* * * * *

## ೧೬
## ಭಾರತೀಯ ರಾಜಕೀಯ ಬಿಕ್ಕಟ್ಟಿನ ಪರಿಹಾರ ಹೇಗೆ?

ಭಾರತದಲ್ಲಿನ ರಾಜಕೀಯ ಬಿಕಟ್ಟನ್ನು ಪರಿಹರಿಸಿ ಪಾಕೀಸ್ತಾನದ ವಿಚಾರವು ಕಗ್ಗಂಟಾಗಿಸಿರುವ ಸಮಸ್ಯೆಯನ್ನು ಬಿಡಿಸುವ, ಯುದ್ಧದ ಸಮಯದಲ್ಲಿ ಹೊಸ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಮಾರ್ಗವನ್ನು ರೂಪಿಸುವ ಯೋಜನೆಯೊಂದರ ಸ್ಥೂಲ ಚಿತ್ರಣವನ್ನು ಭಾರತದ ಕಾರ್ಮಿಕ ಸದಸ್ಯರಾಗಿರುವ ಮಾನ್ಯ ಡಾ. ಅಂಬೇಡ್ಕರ್ ಅವರು ನೀಡಿದರು. ಅವರು ಬುಧವಾರದಂದು (೧೯೪೩ರ ಮೇ ೧೨) ದ ಟೈಮ್ಸ್ ಆಫ್ ಇಂಡಿಯಾದ ಪ್ರತಿನಿಧಿಯು ನಡೆಸಿದ ಸಂದರ್ಶನದಲ್ಲಿ ಮಾತನಾಡುತ್ತಿದ್ದರು.

"ಪಾಕಿಸ್ತಾನದ ಪ್ರಕರಣವನ್ನು ಪ್ರಾಥಮಿಕ ವಿಷಯವೆಂದು ಪರಿಗಣಿಸಬೇಕು. ಈ ಸಮಸ್ಯೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಪರಿಹರಿಸುವವರೆಗೆ ಸಂವಿಧಾನವನ್ನು ರಚಿಸುವ ಕಾರ್ಯವನ್ನು ಪ್ರಾರಂಭಿಸಬಾರದು. ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಲು ಇದುವರೆಗೆ ನಾವು ಗಾಂಧಿ ಹಾಗೂ ಜಿನ್ನಾ ಅವರನ್ನು ಅವಲಂಬಿಸಿದ್ದೆವು. ಆದರೆ ಅವರು ವಿಫಲರಾದರು. ಜನತೆಯೇ ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾದ ಸಮಯ ಬಂದಿದೆ.

ಪಾಕಿಸ್ತಾನದ ಸಮಸ್ಯೆಯು ಬ್ರಿಟಿಷರು ಪರಿಹರಿಸುವಂತಹುದಲ್ಲ ಎಂದು ನನಗೆ ಅನ್ನಿಸುತ್ತಿದೆ. ಅವರನ್ನು ಈ ಕಾರ್ಯವನ್ನು ಬಗೆಹರಿಸುವಂತೆ ಕೇಳುವುದು ಸರಿಯಲ್ಲ ಮತ್ತು ಅವರು ಈ ವಿಷಯದಲ್ಲಿ ತೀರ್ಮಾನವನ್ನು ನೀಡುವುದೂ ಸಮರ್ಥನೀಯವಲ್ಲ. ಇದು ನಾವೇ ಆಂತರಿಕವಾಗಿ ತೀರ್ಮಾನಿಸಬೇಕಾದ ವಿಷಯ ಮತ್ತು, ಇದರಿಂದ ಪೀಡಿತರಾಗಿರುವ ಜನರೇ ಇದನ್ನು ತೀರ್ಮಾನಿಸಬೇಕು. ಇದನ್ನು ಒಪ್ಪಿಕೊಂಡರೆ, ಸಂಸತ್ತಿನಲ್ಲಿ 'ಭಾರತೀಯ ಸಂವಿಧಾನದ ಪೂರ್ವಭಾವಿ ವಿಧಿಗಳ ಅಧಿನಿಯಮ' ಎಂಬ ಅಧಿನಿಯಮವನ್ನು ಅಂಗೀಕರಿಸಬೇಕೆಂದು ತೋರುತ್ತದೆ.

### ಮುಸ್ಲಿಮ್ ಜನಮತಗಣನೆ

ಈ ಅಧಿನಿಯಮದಲ್ಲಿ ಕೆಳಕಂಡ ವಿಧಿಗಳನ್ನು ಅಳವಡಿಸಬೇಕು:

(ಅ) ಮುಸ್ಲಿಮರು ಬಹುಸಂಖ್ಯಾತರಾಗಿರುವ ಪ್ರದೇಶದಲ್ಲಿ, ಅಲ್ಲಿನ ಜನರು ಭಾರತದ ಇತರ ಭಾಗದಿಂದ ಪ್ರತ್ಯೇಕವಾಗಿರಲು ಬಯಸುತ್ತಾರೆಯೇ ಎಂಬುದನ್ನು ತಿಳಿದುಕೊಳ್ಳಲು ಪ್ರತ್ಯೇಕವಾಗಿ ಮುಸ್ಲಿಮ್ ಜನಮತಗಣನೆಯನ್ನು ನಡೆಸಬೇಕು. (ಆ) ಹಾಗೆಯೇ, ಪಾಕೀಸ್ತಾನದ ಪ್ರದೇಶದಲ್ಲಿರುವ ಮುಸ್ಲಿಮೇತರ ಜನತೆಯು ಪಾಕಿಸ್ತಾನದಲ್ಲಿಯೇ ಇರಬೇಕೆಂದು ಬಯಸುತ್ತಾರೆಯೇ ಅಥವಾ ಹಿಂದೂಸ್ಥಾನಕ್ಕೆ ಬರಲು ಬಯಸುತ್ತಾರೆಯೇ ಎಂಬುದನ್ನು ತಿಳಿದುಕೊಳ್ಳಲು ಮತ್ತೊಂದು ಪ್ರತ್ಯೇಕವಾದ ಮುಸ್ಲಿಮೇತರ ಜನತೆಯ ಮತಗಣನೆಯನ್ನೂ ನಡೆಸಬೇಕು. (ಇ) ಮುಸ್ಲಿಮೇತರ ಜನತೆಯು ಪಾಕಿಸ್ತಾನಕ್ಕೆ ಸೇರುವುದನ್ನು ಬಯಸದೇ ಇದ್ದಲ್ಲಿ, ಮುಸ್ಲಿಮೇತರರೇ ಬಹುಸಂಖ್ಯೆಯಲ್ಲಿರುವ ಜಿಲ್ಲೆಗಳನ್ನು ಮುಸ್ಲಿಮರೇ ಬಹುಸಂಖ್ಯೆಯಲ್ಲಿರುವ ಜಿಲ್ಲೆಗಳಿಂದ ವಿಭಾಗಿಸಲು ಸೀಮಾಸಮಿತಿಯೊಂದನ್ನು ರಚಿಸಬೇಕು.

ಸೀಮಾ ಸಮಿತಿಯು ಮುಸ್ಲಿಮರು ಹೆಚ್ಚಾಗಿರುವಂತಹ ಜಿಲ್ಲೆಗಳ ಯಾದಿಯೊಂದನ್ನು ತಯಾರಿಸಬೇಕು. ಅದನ್ನು ಪರಿಶಿಷ್ಟ ಜಿಲ್ಲೆಗಳು ಎಂದು ಕರೆಯಬೇಕು.

ಈ ಕಾರ್ಯವು ಮುಗಿದ ಮೇಲೆ, ಮುಂದಿನ ಹೆಜ್ಜೆಯೆಂದರೆ, ಜನಮತಗಣನೆಯ ಮೂಲಕ ಕೆಳಗಿನ ಪರ್ಯಾಯಗಳಲ್ಲಿ ಒಂದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ಮುಸ್ಲಿಮರಿಗೆ ನೀಡಬೇಕು –

'ಪರಿಶಿಷ್ಟ ಜಿಲ್ಲೆಗಳು ಹತ್ತುವರ್ಷಗಳವರೆಗೆ ಅವಿಭಾಜ್ಯ ಭಾರತದ ಅಂಗವಾಗಿ ಮುಂದುವರೆಯತಕ್ಕದ್ದು ಮತ್ತು ಈ ಅವಧಿಯ ನಂತರ ಭಾರತದಿಂದ ಬೇರೆಯಾಗಿ ಪಾಕೀಸ್ತಾನವನ್ನು ರಚಿಸಿಕೊಳ್ಳಲು ಈ ಜಿಲ್ಲೆಗಳಿಗೆ ಅನುಮತಿಯಿರತಕ್ಕದ್ದು. ಅಥವಾ, ಈಗಲೇ ಪರಿಶಿಷ್ಟ ಜಿಲ್ಲೆಗಳನ್ನು ಭಾರತದಿಂದ ಪ್ರತ್ಯೇಕಿಸಿ ಪಾಕಿಸ್ತಾನ ರಾಷ್ಟವನ್ನು ರಚಿಸಿಕೊಳ್ಳಲು ಮತ್ತು ಹತ್ತುವರ್ಷಗಳ ನಂತರ ಮತ್ತೆ ಜನಮತಗಣನೆಯನ್ನು ನಡೆಸಿ ಅದರ ಆಧಾರದ ಮೇಲೆ ಪಾಕಿಸ್ತಾನವನ್ನು ಪುನಃ ಭಾರತದೊಂದಿಗೆ ಒಂದುಗೂಡಿಸುವ ಅವಕಾಶವನ್ನು ಇಟ್ಟಿರತಕ್ಕದ್ದು. ಹೀಗೆ ಒಂದುಗೂಡಿಸುವ ಕಾರ್ಯವು ಭಾರತ ಹಾಗೂ ಪಾಕಿಸ್ತಾನಗಳು ಸಮ್ಮತಿಸಿದ ಷರತ್ತುಗಳ ಮೇಲೆ ನಡೆಯತಕ್ಕದ್ದು.

**ಭಾರತ ಪರಿಷತ್ತು**

ಪ್ರತ್ಯೇಕ ಪಾಕಿಸ್ತಾನವನ್ನು ತಕ್ಷಣವೇ ಹೊಂದಲು ಮುಸ್ಲಿಮರು ತೀರ್ಮಾನಿಸಿದ್ದೇ ಆದಲ್ಲಿ, ಎರಡೂ ರಾಷ್ಟ್ರಗಳಿಗೆ ಸಮಾನವಾದ ಅಂಶಗಳನ್ನು ಚರ್ಚಿಸಲು ಭಾರತ ಮತ್ತು ಪಾಕಿಸ್ತಾನಗಳೆರಡರ ಸಮಪ್ರಮಾಣದ ಪ್ರತಿನಿಧಿಗಳೂ ಇರುವ ಭಾರತ ಪರಿಷತ್ತೊಂದನ್ನು ರಚಿಸಬಹುದು. ಹತ್ತುವರ್ಷಗಳ ನಂತರ ಪಾಕಿಸ್ತಾನವು ಭಾರತದೊಡನೆ ಮತ್ತೆ ಒಂದಾಗುವ ನಿರ್ಣಯವನ್ನು ತೆಗೆದುಕೊಂಡರೆ, ಈ ಪರಿಷತ್ತನ್ನು ವಿಸರ್ಜಿಸಬೇಕು."

ತಾವು ಸಲಹೆಮಾಡಿರುವ ಅಧಿನಿಯಮವು ಅಂಗೀಕಾರವಾದ ತಕ್ಷಣವೇ ಜನಮತಗಣನೆಯನ್ನು ನಡೆಸಬೇಕಾದ ಅಗತ್ಯವಿರುವುದಿಲ್ಲ. ಅದನ್ನು ಯುದ್ಧಾನಂತರ ನಡೆಸಬಹುದು. ಅಳವಡಿಸಿಕೊಳ್ಳಬಹುದಾದ ಯಾವುದೇ ಸಂವಿಧಾನವಾಗಲೀ, ಅದು ಜನತೆಯ ಸಮ್ಮತಿಯನ್ನು ಪಡೆದಿರುತ್ತದೆ ಎಂದು ಹಿಂದೂಗಳು ಮತ್ತು ಮುಸ್ಲಿಮರಿಬ್ಬರಿಗೂ ಮನವರಿಕೆಯಾಗಿರುವುದರಿಂದ, ಈ ಅಧಿನಿಯಮವು ಒಂದು ರೀತಿಯ ಆರೋಗ್ಯಕರ ವಾತಾವರಣವನ್ನು ನಿರ್ಮಿಸುತ್ತದೆ ಎಂಬುದು ತಮ್ಮ ಅಭಿಪ್ರಾಯವೆಂದು ಅವರು ತಿಳಿಸಿದರು. ಈ ಎಲ್ಲಾ ವಿಷಯಗಳೂ ಅನುಕೂಲಕರ ಸನ್ನಿವೇಶವನ್ನು ನಿರ್ಮಿಸಿದರೆ, ಅದು ಯುದ್ಧದ ಸಮಯದಲ್ಲಿ ರಾಷ್ಟ್ರೀಯ ಸರಕಾರವನ್ನು ರಚಿಸುವುದಕ್ಕೆ ಮಾರ್ಗವನ್ನು ರೂಪಿಸಲು ಸಹಾಯಮಾಡುತ್ತದೆ ಎಂದೂ ಅವರು ಹೇಳಿದರು.

"ಇಂತಹ ಅಧಿನಿಯಮವನ್ನು ಅಂಗೀಕರಿಸುವುದಕ್ಕೆ ಅಡ್ಡಿಗಳೇಕಿರಬೇಕೆಂಬುದು ತಮಗೆ ತಿಳಿಯುತ್ತಿಲ್ಲ. ಈ ಅಧಿನಿಯಮವನ್ನು, ಈಗಲೇ ಆದರೂ ಅಥವಾ ಶಾಂತಿಸಮಯದಲ್ಲಿಯಾದರೂ ಅಂಗೀಕರಿಸಲೇಬೇಕು. ಆದರೆ ಸಂವಿಧಾನದ ರಚನಾಕಾರ್ಯವನ್ನು ಪ್ರಾರಂಭಿಸುವ ಮೊದಲೇ ಇದನ್ನು ಅಂಗೀಕರಿಸುವುದು ಉತ್ತಮ. ಮುಸ್ಲಿಮ್ ಪ್ರದೇಶಗಳ ಶಾಸನಸಭೆಯಲ್ಲಿ ಪ್ರತ್ಯೇಕತೆಯನ್ನು ಬಯಸಿ ನಿರ್ಣಯವನ್ನು ಅಂಗೀಕರಿಸಿದ ನಂತರವೇ ಮೊದಲನೆಯ ಜನಮತಗಣನೆಯನ್ನು ನಡೆಸಬೇಕು."

* * * * *

---

(ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೧೯೪೩ರ ಮೇ ೧೩)

## ೧೭
# ಜಿನ್ನಾ ಅವರ ಭಯವನ್ನು ನಿವಾರಿಸಬೇಕು

ನವದೆಹಲಿ, ೧೯೪೪ರ ಜುಲೈ ೧೨

ಭಾರತ ಸರಕಾರದ ಕಾರ್ಮಿಕ ಸದಸ್ಯರಾದ ಡಾ. ಅಂಬೇಡ್ಕರ್ ಅವರು ಶ್ರೀ ರಾಜಗೋಪಾಲಾಚಾರಿಯವರ ಸೂತ್ರವನ್ನು ಸ್ವಾಗತಿಸಿದರೂ ಪಾಕಿಸ್ತಾನವನ್ನು ಹತ್ತುವರ್ಷಗಳವರೆಗೆ ಪ್ರಾಯೋಗಿಕವಾಗಿ ಪ್ರತ್ಯೇಕ ರಾಷ್ಟ್ರವನ್ನಾಗಿ ಮಾಡಿ, ಹತ್ತು ವರ್ಷಗಳ ಅಂತ್ಯದಲ್ಲಿ ಪಾಕೀಸ್ತಾನದ ಮುಸ್ಲಿಮರು ಭಾರತದೊಂದಿಗೆ ಮತ್ತೆ ಒಂದಾಗಬೇಕು ಎಂದು ಬಯಸಿದರೆ ಹಾಗೆ ಮಾಡಲು ಅವರು ಸ್ವತಂತ್ರರಾಗಿರಬೇಕೆಂದು ತಾವು ೧೯೪೩ರಲ್ಲಿ ಸೂಚಿಸಿದ ಯೋಜನೆಯೇ ಇದಕ್ಕಿಂತ ಉತ್ತಮವಾದುದು ಎಂದು ಅವರು ಅಭಿಪ್ರಾಯಪಟ್ಟರು.

ಸೀಮಾ ನಿರ್ಣಯ ಸಮಿತಿಯನ್ನು ಸ್ಥಾಪಿಸಲು ಹಾಗೂ ಮುಸಲ್ಮಾನರು ದೇಶದ ವಿಭಜನೆಯನ್ನು ಬಯಸುತ್ತಾರೆಯೇ, ಇಲ್ಲವೇ ಎಂಬುದನ್ನು ತಿಳಿಯಲು ಮತ್ತು ಮುಸ್ಲಿಮೇತರರು ಪಾಕಿಸ್ತಾನದಲ್ಲಿಯೇ ಉಳಿಯಬಯಸುತ್ತಾರೆಯೇ ಎಂಬುದನ್ನು ಅರಿಯಲು ಎರಡು ಜನಮತಗಣನೆಯನ್ನು ನಡೆಸಲು ಬ್ರಿಟಿಷ್ ಸಂಸತ್ತು ಒಂದು ಅಧಿನಿಯಮವನ್ನು ಅಂಗೀಕರಿಸಬೇಕು ಎಂಬುದನ್ನೂ ಅವರ ಯೋಜನೆಯು ಪರಿಭಾವಿಸುತ್ತದೆ.

### ಸೀಮಾ ಸಮಿತಿ

ಮುಸ್ಲಿಮೇತರರು ಪಾಕಿಸ್ತಾನದಲ್ಲಿಯೇ ಉಳಿಯ ಬಯಸಿದರೆ, ಈಗಿರುವ ಪ್ರಾಂತೀಯ ಗಡಿರೇಖೆಗಳೇ ಪಾಕಿಸ್ತಾನದ ಗಡಿಗಳಾಗಿರುತ್ತವೆ. ಆದರೆ, ಮುಸ್ಲಿಮೇತರರು ಪಾಕಿಸ್ತಾನದಲ್ಲಿರುವುದನ್ನು ವಿರೋಧಿಸಿದರೆ, ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಜಿಲ್ಲೆಗಳನ್ನು ಹಾಗೂ ಮುಸ್ಲಿಮೇತರರು ಅಧಿಕವಾಗಿರುವ ಜಿಲ್ಲೆಗಳನ್ನು ಪ್ರತ್ಯೇಕಿಸಿ ಅವುಗಳ ನಡುವಿನ ಗಡಿರೇಖೆಯನ್ನು ನಿರ್ದಿಷ್ಟಗೊಳಿಸಲು ಸೀಮಾ ಸಮಿತಿಯೊಂದನ್ನು ರಚಿಸಬೇಕಾಗುತ್ತದೆ.

ಜನತೆಯೇ ಸ್ವತಃ ತೀರ್ಮಾನಿಸುವ ತತ್ತ್ವವನ್ನು ಗಾಂಧೀಜಿಯವರು ಒಪ್ಪಿರುವುದನ್ನು ಡಾ. ಅಂಬೇಡ್ಕರ್ ಅವರು ಸ್ವಾಗತಿಸಿದರು. ಆದರೆ, ಈ ಸೂಚನೆಯನ್ನು ಗಾಂಧೀಜಿಯವರೇ ಮಾಡಿದ್ದಿದ್ದರೆ ಇನ್ನೂ ಉತ್ತಮವಾಗಿರುತ್ತಿತ್ತು. ಈ ಪ್ರಸ್ತಾಪವು ಸ್ವಾತಂತ್ರ್ಯಕ್ಕಾಗಿ ಸಲ್ಲಿಸಬೇಕು ಮತ್ತು ಪರಿಪೂರ್ಣವಾದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಒಟ್ಟಾಗಿ ಬೇಡಿಕೆಯನ್ನು ಮುಂದಿಡಬೇಕು ಎಂಬ ಷರತ್ತುಗಳಿಲ್ಲದೆ, ಬೇಷರತ್ತಾಗಿದ್ದಿದ್ದರೆ ಮತ್ತೂ ಉತ್ತಮವಾಗಿರುತ್ತಿತ್ತು ಎಂದು ಡಾ. ಅಂಬೇಡ್ಕರ್ ಅವರು ತಿಳಿಸಿದರು.

### ಜಿನ್ನಾ ಅವರ ಭಯ

ಈ ಪ್ರಸ್ತಾಪವನ್ನು ಜಿನ್ನಾ ಅವರು ಯಾವ ಆಧಾರದ ಮೇಲೆ ತಿರಸ್ಕರಿಸುತ್ತಾರೆ ಎಂಬುದನ್ನು ಡಾ. ಅಂಬೇಡ್ಕರ್ ಅವರು ಅರಿತುಕೊಳ್ಳಲಾಗಿಲ್ಲ. ಜನಮತಗಣನೆಯಲ್ಲಿ ಮುಸ್ಲಿಮರ ಮೇಲೆ ಪ್ರಭಾವವನ್ನು ಬೀರಿ ಪಾಕಿಸ್ತಾನದ ವಿರುದ್ಧ ಮತಗಳನ್ನು ಚಲಾಯಿಸುವಂತೆ ಮಾಡಬಹುದು ಎಂಬ ಆಶಂಕೆಯ ಮೇಲೆ

ಜಿನ್ನಾ ಅವರು ಈ ವಾದವನ್ನು ತಿರಸ್ಕರಿಸಿದ್ದಾರೆಂದು ತೋರುತ್ತದೆ. ಆದರೆ, ಈ ರೀತಿಯ ಸಮಸ್ಯೆಗಳನ್ನು ಪರಿಹರಿಸಲು ಜನಮತಗಣನೆಯು ಏಕಮಾತ್ರ ಮಾರ್ಗ. ಇಂತಹ ಸಮಸ್ಯೆಗಳನ್ನು ಜನಮತಗಣನೆಯಿಲ್ಲದೆ ಪರಿಹರಿಸಲಾಗಿರುವ ಯಾವುದೇ ಪ್ರಕರಣವನ್ನೂ ಡಾ. ಅಂಬೇಡ್ಕರ್ ಅವರು ಚರಿತ್ರೆಯಲ್ಲಿ ಕಾಣರು.

## ಮುಸ್ಲಿಮರನ್ನು ಕಾಂಗ್ರೆಸ್ ಒಲಿಸಿಕೊಳ್ಳುವುದೇ?

"ಜನಮತಗಣನೆಯಲ್ಲಿ ಕೆಲವು ಅಪಾಯಗಳು ಇವೆ. ಆದರೆ ಅಂತಹ ಅಪಾಯಗಳನ್ನು ಜಿನ್ನಾ ಅವರು ಒಪ್ಪಿಕೊಳ್ಳಬೇಕು. ಮಾಡಿರುವ ಪ್ರಸ್ತಾಪದ ಹಿಂದೆ ಇರುವ ಪ್ರಾಮಾಣಿಕತೆಯು ಪ್ರಸ್ತಾಪಕ್ಕಿಂತ ಮುಖ್ಯವಾದುದು. ಶ್ರೀ ರಾಜಗೋಪಾಲಾಚಾರಿಯವರನ್ನು ಅರಿತಿರುವುದರಿಂದ ಜಿನ್ನಾ ಅವರು ಈ ಪ್ರಸ್ತಾಪವನ್ನು ಒಪ್ಪಿಕೊಳ್ಳುವ ಇಚ್ಛೆಯನ್ನು ಹೊಂದಿರಲಾರರು ಮತ್ತು ಈ ವಿಷಯದಲ್ಲಿ ಕಾಂಗ್ರೆಸ್ ಜಿನ್ನಾ ಅವರನ್ನು ಕಷ್ಟದ ಪರಿಸ್ಥಿತಿಯಲ್ಲಿ ಸಿಕ್ಕಿಸಿರಬಹುದು ಮತ್ತು ಮುಸ್ಲಿಮರನ್ನು ಒಲಿಸಿಕೊಂಡು ಅವರ ಮತಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ಯೋಜಿಸಿರಬಹುದು. ಪಾಕಿಸ್ತಾನವನ್ನು ಮುಸ್ಲಿಮರಿಗೆ ನೀಡುವ ವಿಷಯದಲ್ಲಿ ತಮ್ಮ ವಿರುದ್ಧ ಮಾಡಿರುವ ಮಾನನಷ್ಟ ಹೇಳಿಕೆಗಳಲ್ಲಿ ಹಾಗೂ ಮತ್ತು ಈ ಪ್ರಸ್ತಾಪವನ್ನು ಮಾಡಿ ಹಿಂದುಗಡೆಯಿಂದ ಮುಸ್ಲಿಮರನ್ನು ಒಲಿಸಿಕೊಂಡು ಅವರ ಮತಗಳನ್ನು ಪಡೆಯಲು ಆಮಿಷ ಒಡ್ಡಲಾಗಿದೆಯೇ ಎಂಬುದರಲ್ಲಿ ಏನಾದರೂ ಸತ್ಯವಿದೆಯೇ ಎಂದು ಜಿನ್ನಾ ಅವರು ರಾಜಗೋಪಾಲಾಚಾರಿಯವರನ್ನು ಕೇಳಬಹುದು" ಎಂದು ಡಾ. ಅಂಬೇಡ್ಕರ್ ಅವರು ತಿಳಿಸಿದರು.

'ಗಾಂಧೀಜಿಯವರು ಈ ಪ್ರಸ್ತಾಪದ ಹಿಂದೆ ಇರುವ ತಮ್ಮ ಪ್ರಾಮಾಣಿಕತೆಯನ್ನು ಸಾಬೀತುಗೊಳಿಸಬೇಕು ಮತ್ತು ಮುಸ್ಲಿಮರು ಸ್ವತಂತ್ರವಾಗಿ ಮತಹಾಕುವುದನ್ನು ಹಿಂದೂಗಳು ತಡೆಯದ ಹಾಗೆ ಭರವಸೆಯನ್ನೂ ಅವರು ನೀಡಬೇಕು" ಎಂದು ಡಾ. ಅಂಬೇಡ್ಕರ್ ಅವರು ಒತ್ತಾಯಪಡಿಸಿದರು.

* * * * *

(ಫ್ರೀ ಪ್ರೆಸ್ ಆಫ್ ಇಂಡಿಯಾ, ದಿನಾಂಕ ೧೯೪೪ರ ಜುಲೈ ೧೩)

# ೧೮

# ಕೇಂದ್ರೀಯ ನೀರಾವರಿ ಮತ್ತು ಜಲಮಾರ್ಗಗಳ ಸಲಹಾ ಮಂಡಲಿಯ ಮೊದಲ ಪ್ರಸ್ತಾಪ

"ಕೇಂದ್ರೀಯ ನೀರಾವರಿ ಮತ್ತು ಜಲಮಾರ್ಗಗಳ ಸಲಹಾ ಮಂಡಲಿಯನ್ನು ಸ್ಥಾಪಿಸುವುದು ಅಗತ್ಯವೆಂದು ಕಾರ್ಮಿಕ ಇಲಾಖೆಯು ಅಭಿಪ್ರಾಯಪಟ್ಟಿದೆ. ಅಗತ್ಯವಾದ ಅಧಿಕಾರವನ್ನು ಸತತವಾಗಿ ಹೊಂದಿರುವಂತಹ ಮಂಡಲಿಯೊಂದು ಇರಬೇಕೆಂದು ನಾವು ಇಚ್ಛಿಸುತ್ತೇವೆ. ನಾವು ಯೋಚಿಸಿರುವ ಪ್ರಕಾರ ಈ ಮಂಡಲಿಯ ಸಂರಚನೆಯು ಹೀಗಿರಬೇಕು –

ಅಧ್ಯಕ್ಷರು – ಭಾರತ ಸರಕಾರದ ಜಲಮಾರ್ಗ ಮತ್ತು ನೀರಾವರಿ ಆಯುಕ್ತರು. ಇವರು ಭಾರತದ ಬಗ್ಗೆ ಹೆಚ್ಚಿನ ಅನುಭವವನ್ನು ಹೊಂದಿದವರಾಗಿರಬೇಕಾಗಿರುವುದರಿಂದ ಅವರು ಭಾರತೀಯ ಇಂಜಿನಿಯರ್‌ಗಳ ಸೇವೆಗೆ ಸೇರಿದವರಾಗಿರಬೇಕು. ಅವರಿಗೆ ನೀರಾವರಿ ಹಾಗೂ ಜಲಮಾರ್ಗಗಳ ಬಗ್ಗೆ ಅಗತ್ಯ ತಿಳಿವಳಿಕೆಯಿರಬೇಕು. ಆದರೂ, ಮಂಡಲಿಯ ಶಕ್ತಿಯು ಅದರ ಅಧ್ಯಕ್ಷ ಹಾಗೂ ಸದಸ್ಯರ ಒಟ್ಟು ಶಕ್ತಿಯಾಗಿರಬೇಕೇ ಹೊರತು, ಅಧ್ಯಕ್ಷರ ವೈಯಕ್ತಿಕ ಶಕ್ತಿಯು ಮಾತ್ರವಲ್ಲ. (ಆದಾಗ್ಯೂ, ಅವರು ಭಾರತೀಯ ಜಲಮಾರ್ಗ ಸಂಶೋಧನಾ ಸಂಸ್ಥೆಯ ಕೆಲಸಕಾರ್ಯಗಳ ಉಸ್ತುವಾರಿ ಮಾಡುವಂತಹ ವೈಯಕ್ತಿಕ ಸಾಮರ್ಥ್ಯವನ್ನು ಹೊಂದಿರಬೇಕು).

ಸದಸ್ಯರು – ಮೂವರು ಸದಸ್ಯರಿರಬೇಕು – ೧) ಜಲಮಾರ್ಗಗಳ ಸದಸ್ಯರು, ೨) ನೀರಾವರಿ ಸದಸ್ಯರು, ೩) ಜಲವಿದ್ಯುತ್ ಸದಸ್ಯರು.

ಅಲ್ಲದೆ, ಇವರ ಜೊತೆಗೆ ಅರೆಕಾಲಿಕ ಸದಸ್ಯರೂ ಇರಬೇಕು. ಅವರೆಂದರೆ, ಯಾವ ಪ್ರಾಂತಗಳ ವಿಷಯದಲ್ಲಿ ಕಾರ್ಯವನ್ನು ಕೈಗೆತ್ತಿಕೊಳ್ಳುವ ಯೋಜನೆಯಿದೆಯೋ ಆ ಪ್ರಾಂತದ ಮುಖ್ಯ ಇಂಜನಿಯರ್, ಕೃಷಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಭಾರತ ಸರಕಾರದ ಕೃಷಿ ಸಲಹಾಕಾರರು. ಆವಶ್ಯಕತೆಯಿರುವಂತಹ ಸಂದರ್ಭದಲ್ಲಿ ಸದಸ್ಯರನ್ನು ನಾಮಕರಣಮಾಡಿಕೊಳ್ಳುವ ಅಧಿಕಾರವನ್ನು ಮಂಡಲಿಗೆ ನೀಡಬೇಕು.

ಟಿಪ್ಪಣಿ: ಗುರುತ್ವ ನೀರಾವರಿಯ ಬಗ್ಗೆ ಸದಸ್ಯರೊಬ್ಬರು ಅಗತ್ಯವಿದ್ದರೂ ಅದನ್ನು ಇಲ್ಲಿ ಪರಿಗಣಿಸಿಲ್ಲ, ಅಧ್ಯಕ್ಷರೇ ಇದರ ಜವಾಬ್ದಾರಿಯನ್ನು ನೋಡಿಕೊಳ್ಳಬಹುದು.

ಕೇಂದ್ರೀಯ ನೀರಾವರಿ ಮತ್ತು ಜಲಮಾರ್ಗಗಳ ಮಂಡಲಿಯ ಜವಾಬ್ದಾರಿಗಳು ಹೀಗಿರುತ್ತವೆ –

೧) ಈ ಮುಂದಿನ ಉದ್ದೇಶಗಳಿಗಾಗಿ ನದಿ ಮತ್ತು ಜಲಮಾರ್ಗಗಳ ನಿಯಂತ್ರಣದ ಬಗ್ಗೆ ಯೋಜನೆಗಳನ್ನು ಸಿದ್ಧಪಡಿಸುವುದು, ಸಮನ್ವಯಗೊಳಿಸುವುದು ಮತ್ತು ಮುಂದುವರಿಯುವಂತೆ ಮಾಡುವುದು –

ಅ) ಪ್ರವಾಹಗಳನ್ನು ತಡೆಯುವುದು,

ಆ) ಭೂಕೊರೆತವನ್ನು ತಡೆಯುವುದು,

ಇ) ನೀರು ನಿಲ್ಲುವುದನ್ನು ತಡೆಯುವುದು,

ಈ) ನೀರಾವರಿಯ ಉದ್ದೇಶಕ್ಕೆ ನೀರನ್ನು ನಿಯಂತ್ರಿಸುವುದು,

ಉ) ವಿದ್ಯುದುತ್ಪಾದನೆಯ ಉದ್ದೇಶಕ್ಕೆ ನೀರನ್ನು ನಿಯಂತ್ರಿಸುವುದು,

ಊ) ಹೆಚ್ಚು ವೆಚ್ಚವಿಲ್ಲದೆ ದೊರೆಯುವ ಅಂತರ್ಜಲವನ್ನು ನೀರಾವರಿಗೆ ಬಳಸಿಕೊಳ್ಳುವುದು,

ಋ) ವಿದ್ಯುತ್ತನ್ನು ಬಳಸಿ ನೀರು ನಿಂತ ಪ್ರದೇಶಗಳಿಂದ ನೀರನ್ನು ಹೊರಹಾಕುವುದು.

ೠ) ಜಲಮಾರ್ಗಗಳನ್ನು ಬಳಸುವ ಉದ್ದೇಶಕ್ಕಾಗಿ ನೀರಿನ ಪ್ರವಾಹಗಳನ್ನು ನಿಯಂತ್ರಿಸುವುದು.

೨) ಪ್ರಾಂತಗಳಲ್ಲಿರುವ ಸರಕಾರದ ಜೊತೆ ಸಮಾಲೋಚನೆ ನಡೆಸಿ, ಎಲ್ಲಾ ಪ್ರಮುಖ ಜಲಮಾರ್ಗಗಳನ್ನು ನಿಯಂತ್ರಿಸುವ ಯೋಜನೆಗಳನ್ನು ಸಿದ್ಧಪಡಿಸುವುದು, ಅವುಗಳ ಯೋಜನಾ ವರದಿಯನ್ನು ತಯಾರುಮಾಡುವುದು.

೩) ಜಲಮಾರ್ಗಗಳ ಬಗ್ಗೆ ಅಂಕಿಅಂಶಗಳನ್ನು ಪಡೆಯಲು ವ್ಯವಸ್ಥೆಮಾಡುವುದು ಮತ್ತು ಅಂತರ್ಜಲ ಸರ್ವೇಕ್ಷಣೆಯನ್ನು ವ್ಯವಸ್ಥೆಗೊಳಿಸಿ ಅದನ್ನು ನಿಯಂತ್ರಣಮಾಡುವುದು.

೪) ವಿವಿಧ ಪ್ರಾಂತಗಳ ನಡುವೆ ಉದ್ಭವಿಸುವ ಸಮಸ್ಯೆಗಳ ನಿರ್ವಹಣೆಗಾಗಿ ನಿಯಮಗಳನ್ನು ರೂಪಿಸುವ ಬಗ್ಗೆ ಭಾರತ ಸರಕಾರಕ್ಕೆ ಸಲಹೆಗಳನ್ನು ನೀಡುವುದು.

ಮಂಡಲಿಗೆ ಮುಂದೆ ಹೇಳಿರುವ ವಿಷಯಗಳಲ್ಲಿ ಸಲಹಾ ಇಂಜಿನಿಯರುಗಳ ಆವಶ್ಯಕತೆಯೂ ಇದೆ.

ಅ) ಅಣೆಕಟ್ಟುಗಳನ್ನು ನಿರ್ಮಾಣ,

ಆ) ತಡೆಗೋಡೆಗಳ ನಿರ್ಮಾಣ.

ಎಚ್. ಸಿ. ಪ್ರೈಯರ್
ಕಾರ್ಯದರ್ಶಿ
ದಿ. ೧೯೪೪ರ ಆಗಸ್ಟ್ ೩೧

ಇದಕ್ಕೆ ನನ್ನ ಸಮ್ಮತಿಯಿದೆ. ಆದರೆ ಸದ್ಯದಲ್ಲಿಯೇ ಪ್ರಾಂತಗಳ ಸಲಹೆಯನ್ನು ಕೇಳಬೇಕೆನ್ನುವುದಾದರೆ, ಅದು ಹೆಚ್ಚಿನ ವಿಳಂಬಕ್ಕೆ ಕಾರಣವಾಗುವುದಿಲ್ಲವೇ ಎಂಬುದು ನನ್ನ ಪ್ರಶ್ನೆ. ನಾವು ಅವರ ಸಲಹೆಯನ್ನು ಮುಂದೆ ಅಗತ್ಯವಿದ್ದಾಗ ಕೇಳಬಹುದಲ್ಲವೇ?

ಬಿ.ಆರ್. ಅಂಬೇಡ್ಕರ್
ದಿ. ೧೯೪೪ರ ಸೆಪ್ಟೆಂಬರ್ ೯

* * * * *

(ಥೊರಾಟ್, ಪು. ೧೫೦–೧೫೧)

# ೧೯
# ಉಭಯತ್ರರೂ ಗಂಭೀರವಾದ ತಪ್ಪುಗಳನ್ನೆಸಗುತ್ತಿದ್ದಾರೆ

ವೈಸ್‌ರಾಯ್ ಅವರ ಕಾರ್ಯಾಂಗ ಸಮಿತಿಯಲ್ಲಿ ಕಾರ್ಮಿಕ ಸದಸ್ಯರಾಗಿರುವ ಡಾ. ಭೀಮರಾವ್ ಆರ್. ಅಂಬೇಡ್ಕರ್ ಅವರು ಮಂಗಳವಾರ (೧೯೪೪ರ ಅಕ್ಟೋಬರ್ ೩) ಸಾಯಂಕಾಲ ಪೂನಾ ಎಕ್ಸ್‌ಪ್ರೆಸ್‌ನಲ್ಲಿ ವಿಕ್ಟೋರಿಯಾ ಟರ್ಮಿನಸ್‌ಗೆ ಬಂದಿಳಿದಾಗ ಅವರಿಗೆ ಸ್ವಾಗತವನ್ನು ನೀಡಲು ಅವರ ಅನುಯಾಯಿಗಳು ಮತ್ತು ಅಭಿಮಾನಿಗಳ ಒಂದು ದೊಡ್ಡ ಬಳಗವು ಅಲ್ಲಿ ನೆರೆದಿತ್ತು.

ಡಾ. ಅಂಬೇಡ್ಕರ್ ಅವರು ಪ್ಲಾಟ್‌ಫಾರ್ಮಿನಲ್ಲಿ ಬಂದಿಳಿದಾಗ ಅವರಿಗೆ ಪರಿಶಿಷ್ಟ ಜಾತಿಗಳ ಹಾಗೂ ಇತರ ಸಂಸ್ಥೆಗಳ ಪ್ರತಿನಿಧಿಗಳು ಅಧಿಕ ಸಂಖ್ಯೆಯಲ್ಲಿ ಹೂಹಾರಗಳನ್ನು ಹಾಕಿದರು.

ರೈಲ್ವೆ ಸ್ಟೇಷನ್ನಿನಿಂದ ದಾದರಿನಲ್ಲಿರುವ ರಾಜಗೃಹದವರೆಗೆ ಅವರನ್ನು ಗೌರವಪೂರ್ವಕವಾಗಿ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

(ದ ಬಾಂಬೆ ಕ್ರಾನಿಕಲ್, ದಿನಾಂಕ ೧೯೪೪ರ ಅಕ್ಟೋಬರ್ ೪)

ದ ಟೈಮ್ಸ್ ಆಫ್ ಇಂಡಿಯಾದ ಪ್ರತಿನಿಧಿಗೆ ನೀಡಿದ ಸಂದರ್ಶನದಲ್ಲಿ (೧೯೪೪ರ ಅಕ್ಟೋಬರ್ ೪) ಮಾನ್ಯ ಬಿ.ಆರ್. ಅಂಬೇಡ್ಕರ್ ಅವರು "ಜಿನ್ನಾ ಮತ್ತು ಗಾಂಧಿಯವರ ಮಾತುಕತೆಯಿಂದ ವೈಫಲ್ಯವನ್ನಲ್ಲದೆ ಬೇರೇನನ್ನೂ ಆಶಿಸಲಾಗದು. ಮುಕ್ತ ಮನಸ್ಸಿನಿಂದ ಅವರು ಪರಸ್ಪರ ಮಾತುಕತೆಯನ್ನು ನಡೆಸಲಿಲ್ಲ ಎಂಬುದು ನಿಜ" ಎಂದು ಹೇಳಿದರು.

ಡಾ. ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ ಈ ವೈಫಲ್ಯಕ್ಕೆ ಇತರ ಕಾರಣಗಳಿದ್ದರೂ ಗಾಂಧಿಯವರ ಮತ್ತು ಜಿನ್ನಾ ಅವರ ಹಠಮಾರಿತನ ಹಾಗೂ ರಾಜಗೋಪಾಲಾಚಾರಿಯವರ ಸೂತ್ರದಲ್ಲಿದ್ದ ಮೂಲಭೂತ ದೋಷಗಳೇ ಮುಖ್ಯ ಕಾರಣಗಳು. ಪರಿಶಿಷ್ಟ ವರ್ಗಗಳವರ ಒಪ್ಪಿಗೆಯಿಲ್ಲದೆ ಭಾರತದ ಯಾವುದೇ ಸಮಸ್ಯೆಯನ್ನೂ ಸಂಪೂರ್ಣವಾಗಿ ಪರಿಹರಿಸಲು ಸಾಧ್ಯವಿಲ್ಲ ಎಂದೂ ಅವರು ಹೇಳಿದರು. ಪರಿಶಿಷ್ಟ ವರ್ಗಗಳವರ ಪರವಾಗಿ ಮಾತನಾಡಲು ಗಾಂಧಿಯವರಿಗಾಗಲೀ ಅಥವಾ ಜಿನ್ನಾ ಅವರಿಗಾಗಲೀ ಹಕ್ಕು ಇಲ್ಲ ಎಂದೂ ಅವರು ತಿಳಿಸಿದರು.

"ಗಾಂಧಿ ಹಾಗೂ ಜಿನ್ನಾ ಅವರು ಕೋಮು ಸಮಸ್ಯೆಗಳ ಪರಿಹಾರವನ್ನು ಕಂಡುಹಿಡಿಯಲು ಸಭೆಸೇರಿದ್ದರೆಂದು ನಂಬುವುದು ಸಾಧ್ಯವಿಲ್ಲ. ಜಿನ್ನಾ ಅವರೊಂದಿಗಿನ ಸಂದರ್ಶನದಲ್ಲಿ ಗಾಂಧಿಯವರು ಉತ್ತರಿಸಲು ಗುಜರಾತಿ ಭಾಷಯನ್ನು ಆಯ್ದುಕೊಂಡಿದ್ದೇ ಮಾತುಕತೆಗಳು ವಿಫಲವಾಗುತ್ತವೆ ಎಂಬ ಭಾವನೆಯನ್ನು ನನ್ನಲ್ಲಿ ಉಂಟುಮಾಡಿತು. ಗುಜರಾತಿಯಲ್ಲಿ ಬರೆಯುವ ಮೂಲಕ ತಮ್ಮ ಗುಜರಾತಿ ಮಾತೃಭಾಷೆಯ ಪ್ರೇಮವನ್ನು ಜಿನ್ನಾ ಅವರಿಗೆ ತಿಳಿಸಿದ ಹಾಗೆ ಆಯಿತು ಅಷ್ಟೇ.

ಹಾಗೆಯೇ, ಲಾಹೋರಿನ ಸಮ್ಮೇಳನದಲ್ಲಿ ಮುಸ್ಲಿಮರು ನಿರ್ಣಯಿಸಿದ ಗೊತ್ತುವಳಿಗಿಂತ ರಾಜಗೋಪಾಲಾಚಾರಿಯವರ ಸೂತ್ರವು ಭಿನ್ನವಾಗಿರುವುದನ್ನು ಜಿನ್ನಾ ಅವರು ಬಲ್ಲರು. ಅಲ್ಲದೆ, ಗಾಂಧಿಯವರು ತಮ್ಮನ್ನು ವೈಯಕ್ತಿಕ ನೆಲೆಯಲ್ಲಿ ಭೇಟಿಯಾಗಲಿದ್ದಾರೆಂಬುದನ್ನೂ ಜಿನ್ನಾ ಅವರು ಬಲ್ಲರು. ಗಾಂಧಿಯವರು ಹಿಂದೂಗಳ ಪ್ರತಿನಿಧಿಯಾಗಿ ಬರುವವರಲ್ಲವೆಂಬುದೂ ಅವರಿಗೆ ಗೊತ್ತು. ಲಾಹೋರಿನಲ್ಲಿ ತಾವು ವೈಫಲ್ಯವನ್ನು

ಕಾಣುವ ಮೊದಲು ಜಿನ್ನಾ ಅವರು ಒತ್ತಾಯಿಸುತ್ತಿದ್ದ ಷರತ್ತುಗಳಿಗೆ ಈಗಿನ ಎಲ್ಲಾ ಸನ್ನಿವೇಶಗಳೂ ತದ್ವಿರುದ್ಧವಾಗಿದ್ದವು.

### ನಾಯಕರ ಹಠಮಾರಿತನ

ವೈಫಲ್ಯವು ಅನಿವಾರ್ಯವಾಗಿದ್ದಿತು. ಅದು ಅನಿವಾರ್ಯವಾಗಿದ್ದುದು ಇಬ್ಬರ ಹಠಮಾರಿತನದ ಫಲ, ಅದು ಅನಿವಾರ್ಯವಾಗಿದ್ದುದು ರಾಜಾಜಿಯವರ ಸೂತ್ರದಲ್ಲಿದ್ದ ಮೂಲಭೂತ ದೋಷದ ಫಲ. ಸೂತ್ರವು ದೋಷಪೂರ್ಣವಾಗಿದ್ದುದು ಕೋಮುಸಮಸ್ಯೆಯನ್ನು ರಾಜಕೀಯ ಸಮಸ್ಯೆಗೆ ಗಂಟುಹಾಕಿದ್ದರಿಂದ ಉಂಟಾದದ್ದು. ಆ ಸೂತ್ರವು ರಾಜಕೀಯ ಸಮಸ್ಯೆಯನ್ನಾಗಲೀ, ಕೋಮುಸಮಸ್ಯೆಯನ್ನು ಪರಿಹರಿಸುವತ್ತ ಹೆಜ್ಜೆಯಿಟ್ಟಿರಲಿಲ್ಲ. ಅದು ಯಾವ ಪರಿಹಾರವನ್ನೂ ಸೂಚಿಸಿರಲಿಲ್ಲ. ಅದು ಜಿನ್ನಾ ಅವರನ್ನು ಒಪ್ಪಂದವೊಂದಕ್ಕೆ ಬರುವಂತೆ ಆಹ್ವಾನಿಸಿತು. ಅದು 'ನೀವು ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ನಮಗೆ ಸಹಾಯಮಾಡಿದರೆ, ನಾವು ನಿಮ್ಮ ಪಾಕಿಸ್ತಾನದ ಪ್ರಸ್ತಾಪವನ್ನು ಪರಿಶೀಲಿಸುತ್ತೇವೆ' ಎಂಬಂತಹ, ಕೇವಲ ಕೊಡುಕೊಳ್ಳುವ ವ್ಯಾಪಾರವಾಗಿದ್ದಿತು.

ರಾಜಾಜಿಯವರ ಸೂತ್ರದಲ್ಲಿದ್ದ ಎರಡನೆಯ ದೋಷವೆಂದರೆ, ಸಹಮತವನ್ನು ಸಾಧಿಸುವುದಕ್ಕಾಗಿ ಒಂದು ವ್ಯವಸ್ಥೆಯನ್ನು ರೂಪಿಸುವುದಕ್ಕೆ ಸಂಬಂಧಪಟ್ಟಿದ್ದಾಗಿತ್ತು. ರಾಜಾಜಿಯವರ ಸೂತ್ರವು ಸೂಚಿಸಿದ್ದ ಸಾಧನವೆಂದರೆ ತಾತ್ಕಾಲಿಕ ಸರಕಾರ.

ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಲು ಸಮ್ಮತಿಯನ್ನು ಸೂಚಿಸಿದ್ದರೆ, ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯವನ್ನು ಗಳಿಸಲು ಮುಸ್ಲಿಂ ಲೀಗ್ ಸಹಾಯಮಾಡುವುದಾಗಿ ಒಪ್ಪಂದವನ್ನು ಮಾಡಿಕೊಂಡ ಹಾಗಾಗುತ್ತಿತ್ತು. ಕಾಂಗ್ರೆಸ್ಸಿನ ವಾಗ್ದಾನದ ಪ್ರಕಾರ ಪಾಕಿಸ್ತಾನದ ನಿರ್ಮಾಣವು ಕಾಂಗ್ರೆಸ್ ನಿರ್ವಹಿಸಬೇಕಾದ ಕರ್ತವ್ಯವಾಗುತ್ತಿತ್ತು. ಒಪ್ಪಂದಗಳು ಉಭಯತ್ರರ ಸಮ್ಮತಿಯನ್ನು ಪಡೆದಿರಬೇಕೆಂದು ಸರಿಯಾಗಿಯೇ ಒತ್ತಾಯಮಾಡುವ ಜಿನ್ನಾ ಅವರು ಇಂತಹ ಪರಿಸ್ಥಿತಿಯಲ್ಲಿ ತಮ್ಮನ್ನು ತಾವೇ ಸಿಕ್ಕಿಹಾಕಿಸಿಕೊಳ್ಳುವುದಕ್ಕೆ ಒಪ್ಪುವುದಿಲ್ಲವೆಂಬ ನಿರೀಕ್ಷೆಯಿತ್ತು.

ಒಪ್ಪಂದದಲ್ಲಿ ಹಿಂದೂಗಳು ಒಪ್ಪಿಕೊಂಡಿರುವ ಭಾಗವನ್ನು ನಿರ್ವಹಿಸಲು ತಾತ್ಕಾಲಿಕ ಸರಕಾರವು ಒಪ್ಪದೇ ಹೋದರೆ ಏನಾಗುತ್ತದೆ ಎಂಬುದನ್ನು ರಾಜಗೋಪಾಲಾಚಾರಿಯವರು ಲಕ್ಷಿಸದೆ ಇರುವುದು ಎರಡನೆಯ ದೋಷ. ಅದನ್ನು ಜಾರಿಗೆ ತರುವವರು ಯಾರು? ತಾತ್ಕಾಲಿಕ ಸರಕಾರವು ಸಾರ್ವಭೌಮ ಸರಕಾರವಾಗಿದ್ದು, ಅದರ ಮೇಲೆ ಯಾರ ಅಧಿಕಾರವೂ ನಡೆಯವ ಹಾಗಿರುವುದಿಲ್ಲ. ಅದು ಒಪ್ಪಂದವನ್ನು ಜಾರಿಗೆ ತರಲು ಒಪ್ಪದೆ ಹೋದಲ್ಲಿ, ಮುಸ್ಲಿಮರಿಗೆ ಇರುವ ಒಂದೇ ಮಾರ್ಗವೆಂದರೆ ಬಂಡಾಯವೇಳುವುದು. ಪಾಕಿಸ್ತಾನದ ನಿರ್ಮಾಣದ ಜವಾಬ್ದಾರಿಯನ್ನು ತಾತ್ಕಾಲಿಕ ಸರಕಾರದ ಮೇಲೆ ಹೊರಿಸುವುದನ್ನು ಯಾರೂ ಒಪ್ಪುವುದಿಲ್ಲ. ಅದು ಮತ್ತೆ ಸಮಸ್ಯೆಯೊಳಕ್ಕೇ ಸೆಳೆದುಕೊಳ್ಳುವ ಕುಣಿಕೆಯೇ ಹೊರತು ಪರಿಹಾರವಲ್ಲ. ಸಾಂವಿಧಾನಿಕ ಬದಲಾವಣೆಗಳನ್ನು ತರಲು ಇರುವ ಒಂದೇ ಹಾದಿಯೆಂದರೆ ಬ್ರಿಟಿಷ್ ಭಾರತದ ರಾಷ್ಟ್ರೀಯ ಜೀವನದಲ್ಲಿನ ಎಲ್ಲಾ ಪ್ರಮುಖ ಅಂಗಗಳೂ ಸಮ್ಮತಿಸಿದ ವಿಧಿಗಳನ್ನೊಳಗೊಂಡ ಅಧಿನಿಯಮವನ್ನು ಸಂಸತ್ತು ಅಂಗೀಕರಿಸುವುದು. ಇದಕ್ಕೆ ಯಾವುದೇ ಪರ್ಯಾಯ ಮಾರ್ಗವಿಲ್ಲ.

ಇವಲ್ಲದೆ ರಾಜಾಜಿಯವರ ಸೂತ್ರದಲ್ಲಿ ಮೂರನೆಯ ದೋಷವೂ ಇದೆ. ಅದೆಂದರೆ, ಸಾಮಾನ್ಯ ಆಸಕ್ತಿಗಳಿರುವ ರಕ್ಷಣೆ, ವಿದೇಶಾಂಗ ಮತ್ತು ಸೀಮಾಶುಂಕ – ಈ ವಿಷಯಗಳಲ್ಲಿನ ಹಿತಸಂರಕ್ಷಣೆಗಾಗಿ ಭಾರತ ಮತ್ತು ಪಾಕಿಸ್ತಾನಗಳು ಮಾಡಿಕೊಳ್ಳಬೇಕಾದ ಒಪ್ಪಂದಕ್ಕೆ ಸಂಬಂಧಿಸಿದ ವಿಧಿಗಳು. ಎದುರಾಗುವ ವಾಸ್ತವ ಸಮಸ್ಯೆಗಳನ್ನು ರಾಜಗೋಪಾಲಾಚಾರಿಯವರು ಮನಗಂಡಿರುವ ಹಾಗೆ ತೋರುವುದಿಲ್ಲ.

ಮಾತುಕತೆಗಳು ವಿಫಲವಾಗಿರುವುದಕ್ಕೆ ಯಾರೂ ವ್ಯಥೆಪಡುವುದಿಲ್ಲ. ಯಾರಿಗೇ ಆದರೂ ಚಿಂತೆಯ ವಿಷಯವಾಗಿರುವುದು, ಸಾಮಾನ್ಯವಾಗಿ ವೈಯಕ್ತಿಕವಾಗಿ ನೇರನುಡಿಗೆ ಹೆಸರಾಗಿರುವ ಜಿನ್ನಾ ಅವರು ಸಾರ್ವಜನಿಕವಾಗಿ ಮಾತನಾಡುವಾಗ, ಮಾತುಕತೆಗಳು ವಿಫಲವಾಗಿರುವುದರ ವಿಷಯದಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ನೀಡದೆ ಅತ್ಯಂತ ಜಾಗರೂಕತೆಯಿಂದ ತಮ್ಮ ಮೌನವನ್ನು ಕಾಯ್ದುಕೊಂಡು ಬರುತ್ತಿರುವುದು.

**ಉತ್ತರವನ್ನು ಬಯಸುವ ಪ್ರಶ್ನೆಗಳು**

"ಈ ಪ್ರಶ್ನೆಗಳು ಇವು –

೧) ಮುಸ್ಲಿಂ ಲೀಗ್ ಗೊತ್ತುವಳಿಯೊಂದನ್ನು ಅಂಗೀಕರಿಸಿದುದರಿಂದ ಪಾಕಿಸ್ತಾನದ ನಿರ್ಮಾಣಕ್ಕೆ ಒಪ್ಪಲಾಯಿತೇ?

೨) ಮುಸ್ಲಿಂ ಲೀಗಿನಿಂದ ಹೊರಗಿರುವ ಮುಸ್ಲಿಮರು ಈ ವಿಷಯದಲ್ಲಿ ಏನನ್ನೂ ಹೇಳುವ ಹಾಗಿಲ್ಲವೇ?

೩) ಪಾಕಿಸ್ತಾನದ ಗಡಿಗಳು ಯಾವುದಾಗಿರುತ್ತವೆ? ಅವು ಈಗಿನ ಪಂಜಾಬ್ ಮತ್ತು ಬಂಗಾಳ ಪ್ರಾಂತಗಳ ಗಡಿಗಳಾಗಿರುತ್ತವೆಯೇ ಅಥವಾ ಜನಾಂಗೀಯ ಗಡಿಗಳನ್ನು ಪಾಕಿಸ್ತಾನವು ಬಯಸುತ್ತದೆಯೇ?

೪) ಗಡಿಗಳ ಹೊಂದಾಣಿಕೆಗೆ ಸಂಬಂಧಿಸಿದಂತೆ ಲಾಹೋರ್ ನಿರ್ಣಯದಲ್ಲಿ ಉಪಯೋಗಿಸಿರುವ ಪದಗಳ ಅರ್ಥವೇನು? ಗಡಿಗಳ ಹೊಂದಾಣಿಕೆಯ ಬಗ್ಗೆ ಮುಸ್ಲಿಂ ಲೀಗಿನ ಮನಸ್ಸಿನಲ್ಲಿ ಇರುವುದೇನು?

೫) ಲಾಹೋರ್ ನಿರ್ಣಯದ ಕಡೆಯ ಭಾಗದಲ್ಲಿ ಉಪಯೋಗಿಸಿರುವ 'ಅಂತಿಮವಾಗಿ' ಎಂಬ ಪದದ ಅರ್ಥವೇನು? ಮಧ್ಯಂತರ ಸಮಯದಲ್ಲಿ ಪಾಕಿಸ್ತಾನವು ಸ್ವತಂತ್ರವಾಗಿರದ, ಸಾರ್ವಭೌಮತ್ವವನ್ನು ಪಡೆದಿರದ ರಾಷ್ಟ್ರವಾಗಿರುವುದೆಂದು ಮುಸ್ಲಿಂ ಲೀಗ್ ಭಾವಿಸುತ್ತದೆಯೇ?

೬) ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನದ ಗಡಿಗಳು ಈಗಿರುವ ಬಂಗಾಳ ಹಾಗೂ ಪಂಜಾಬಿನ ಗಡಿಗಳೇ ಆಗಿರುತ್ತವೆ ಎಂದು ಜಿನ್ನಾ ಅವರ ಪ್ರಸ್ತಾಪಗಳು ಹೇಳಿದರೆ, ಈ ಪ್ರದೇಶಗಳಲ್ಲಿರುವ ಪರಿಶಿಷ್ಟ ಜನಾಂಗಗಳವರು, ಅಥವಾ ನಾನು ಹೀಗೆ ಹೇಳಬಹುದಾದರೆ, ಮುಸ್ಲಿಮರಲ್ಲದ ಜನಾಂಗದವರು ತಮ್ಮನ್ನು ಜಿನ್ನಾ ಅವರ ಪಾಕಿಸ್ತಾನದಲ್ಲಿ ಸೇರಿಸಬೇಕೆ ಅಥವಾ ಬೇಡವೇ ಎಂಬುದನ್ನು ಜನಮತಗಣನೆಯ ಮೂಲಕ ನಿರ್ಧರಿಸಬಹುದೇ? ಬಂಗಾಳ ಮತ್ತು ಪಂಜಾಬ್‌ಗಳಲ್ಲಿಯ ಮುಸ್ಲಿಮರಲ್ಲದವರ ಅಭಿಪ್ರಾಯಗಳನ್ನು ಜಿನ್ನಾ ಅವರು ಗೌರವಿಸಿ ಅದರಂತೆ ನಡೆದುಕೊಳ್ಳಲು ಸಿದ್ಧರಿದ್ದಾರೆಯೇ?

೭) ಪೂರ್ವ ಹಾಗೂ ಪಶ್ಚಿಮ ಪಾಕಿಸ್ತಾನಗಳ ಮಧ್ಯೆ, ಸಂಯುಕ್ತ ಪ್ರಾಂತ ಮತ್ತು ಬಿಹಾರಗಳು ಮೂಲಕ ಹಾದುಹೋಗುವ ಮಾರ್ಗವೊಂದನ್ನು ಜಿನ್ನಾ ಅವರು ಬಯಸುತ್ತಾರೆಯೇ? ಜಿನ್ನಾ ಅವರಿಗೆ ನೇರವಾಗಿ ಪ್ರಶ್ನೆಗಳನ್ನು ಕೇಳಿ ಅವರಿಂದ ಅಸಂಧಿಗ್ಧವಾದ ಉತ್ತರಗಳನ್ನು ಪಡೆಯುವ ಹಾಗಿದ್ದಿದ್ದರೆ ಬಹಳಷ್ಟು ಉಪಯೋಗವಾಗುತ್ತಿತ್ತು."

ಪಾಕಿಸ್ತಾನದ ಪ್ರಶ್ನೆಯು ಕೇವಲ ಬೌದ್ಧಿಕವಾದದಲ್ಲ, ಬದಲಿಗೆ ಅದರ ಮೇಲೆ ಮರುಚರ್ಚೆಯಾಗಬೇಕು ಎಂದು ಹೇಳಿದ ಡಾ. ಅಂಬೇಡ್ಕರ್ ಅವರು 'ಗಾಂಧಿ ಮತ್ತು ಜಿನ್ನಾ ಅವರ ನಡುವೆ ವ್ಯವಹರಿಸಲ್ಪಟ್ಟಿರುವ ಪತ್ರಗಳು ಪಾಕಿಸ್ತಾನದ ವಿಷಯದ ಒಪ್ಪಂದಕ್ಕೆ ಹಿಂದೂಗಳು ಮತ್ತು ಮುಸ್ಲಿಮರು ಎರಡು ಪಕ್ಷಗಳಾಗಿರಬೇಕು ಎಂದು ಅವರಿಬ್ಬರೂ ಅಭಿಪ್ರಾಯಪಟ್ಟಿದ್ದಾರೆ ಎಂಬುದನ್ನು ಸೂಚಿಸುತ್ತವೆ. ಅಷ್ಟೇ ಅಲ್ಲದೆ, ಈಗಿರುವ ಬಂಗಾಳ ಮತ್ತು ಪಂಜಾಬ್ ಪ್ರಾಂತಗಳ ಗಡಿಗಳೇ ಪಾಕಿಸ್ತಾನದ ಗಡಿಗಳಾಗಿರಬೇಕು ಎಂದು ಹೇಳುವ ಜಿನ್ನಾ ಅವರು ಪಾಕಿಸ್ತಾನದಲ್ಲಿನ ಮುಸ್ಲಿಮರಲ್ಲದ ಜನತೆಯ ಬಗ್ಗೆ ಏನನ್ನೂ ಹೇಳುವುದಿಲ್ಲ.

ಈ ಪೂರ್ವನಿರ್ಣಯಗಳನ್ನು ಇಟ್ಟುಕೊಂಡು, ಗಾಂಧಿ ಹಾಗೂ ಜಿನ್ನಾ ಇಬ್ಬರೂ ಗಂಭೀರವಾದ ತಪ್ಪನ್ನೆಸಗುತ್ತಿದ್ದಾರೆ ಎಂದು ನಾನು ಹೇಳಲೇಬೇಕಾಗಿದೆ. ಹಿಂದೂಗಳು ಮತ್ತು ಮುಸ್ಲಿಮರಲ್ಲದೆ ಪರಿಶಿಷ್ಟ ಜನಾಂಗದವರೂ ಇದಕ್ಕೆ ಮೂರನೆಯ ಪಕ್ಷದವರಾಗುತ್ತಾರೆ. ಅವರು ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವಲ್ಲಿ ಅತ್ಯಗತ್ಯವಾಗಿ ಇರಲೇಬೇಕಾದ ಪಕ್ಷದವರಾಗಿದ್ದಾರೆ. ಅವರ ಪರವಾಗಿ ಮಾತನಾಡಲು, ಗಾಂಧಿಯವರಿಗಾಗಲೀ, ಕಾಂಗ್ರೆಸ್ ಪಕ್ಷಕ್ಕಾಗಲೀ ಅಥವಾ ಹಿಂದೂ ಮಹಾಸಭಾಕ್ಕಾಗಲೀ ಯಾವ ಹಕ್ಕೂ ಇಲ್ಲ. ಅಷ್ಟೊಂದು ಪ್ರಮಾಣದ ಪರಿಶಿಷ್ಟ ಜಾತಿಗಳವರನ್ನು ಅವರ ಸಮ್ಮತಿಯಿಲ್ಲದೇ ಪಾಕಿಸ್ತಾನದ ಪ್ರಜೆಗಳನ್ನಾಗಿಸುವುದು ತಮಗೆ ಸಾಧ್ಯವಿಲ್ಲ ಎಂಬುದನ್ನು ಜಿನ್ನಾ ಅವರು ತಿಳಿದುಕೊಳ್ಳಬೇಕು.

ಈ ವಿಷಯಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಗಳವರನ್ನು, ಅವರ ಸಂಪೂರ್ಣ ಸಮ್ಮತಿಯಿಲ್ಲದೆ, ಪೂರ್ವ ಅಥವಾ ಪಶ್ಚಿಮ ಪಾಕಿಸ್ತಾನದಲ್ಲಿ ಸೇರಿಸಬಾರದೆಂದು ನಾನು ಹೇಳುತ್ತೇನೆ. ಹಾಗೆ ಅವರು ನೀಡಬಹುದಾದ ಸಮ್ಮತಿಯು ಸ್ವತಂತ್ರ ಜನಾಭಿಪ್ರಾಯದಂತಹವುಗಳ ಮೂಲಕ ನಿಸ್ಸಂದಿಗ್ಧವಾಗಿ ವ್ಯಕ್ತಪಡಿಸಲ್ಪಡಬೇಕು"[1]

* * * * *

---

(ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ: ೧೯೪೪ರ ಅಕ್ಟೋಬರ್ ೫)

# ೨೦
# ಸಪ್ರು ಅವರ ತಪ್ಪು

ನವದೆಹಲಿ, ೧೯೪೪ರ ಡಿಸೆಂಬರ್ ೩೧

ಸಮನ್ವಯ ಸಮಿತಿಗೆ ಪರಿಶಿಷ್ಟ ಜಾತಿಗಳವರ ಸಹಕಾರದ ಬಗ್ಗೆ ಸರ್ ತೇಜ್ ಬಹಾದೂರ್ ಸಪ್ರು ಅವರು ಎತ್ತಿದ್ದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಹೇಳಿಕೆಯಲ್ಲಿ ಹೀಗೆ ಹೇಳಿದರು:

"ನಾನು ಈ ಸಮಿತಿಯೊಂದಿಗೆ ಸಹಕರಿಸಲು ನಿರಾಕರಿಸಿದುದರಿಂದ ಸರ್ ತೇಜ್ ಬಹಾದೂರ್ ಸಪ್ರು ಅವರಿಗೆ ಅಸಮಾಧಾನವಾಗಿದೆಯೆಂದರೆ ನನಗೆ ಆಶ್ಚರ್ಯವಾಗುತ್ತದೆ. ಯಾರಿಗಾದರೂ ಅಸಮಾಧಾನವಾಗಿದ್ದರೆ ಅದು ನನಗೆ ಆಗಿರಬೇಕು, ಸರ್ ತೇಜ್ ಬಹಾದೂರ್ ಸಪ್ರು ಅವರಿಗಲ್ಲ.

ಅವರು ತಮ್ಮ ಕಾರ್ಯವನ್ನು ಪ್ರಾರಂಭಿಸುವಲ್ಲಿಯೇ ಎಡವಿದ್ದಾರೆ. ಕೋಮು ಸಮಸ್ಯೆಗೆ ಸಂಬಂಧಪಟ್ಟ ವಿವಿಧ ಪಕ್ಷಗಳೂ ಸಮಿತಿಯ ಮುಂದೆ ಹಾಜರಾಗಬೇಕೆಂದು ಅವರು ಬಯಸಿದ್ದಿದ್ದರೆ, ಸಮಿತಿಯ ಸದಸ್ಯರ ಹೆಸರುಗಳನ್ನು ಅಂತಿಮಗೊಳಿಸುವುದಕ್ಕೆ ಮೊದಲು ಸಂಬಂಧಪಟ್ಟ ಪಕ್ಷಗಳ ಮುಖಂಡರನ್ನು ಕರೆದು ಈ ಸದಸ್ಯರುಗಳ ಪಟ್ಟಿಯನ್ನು ಅವರಿಗೆ ತೋರಿಸಿ ಅದು ಅವರಿಗೆ ಒಪ್ಪಿಗೆಯಾಗಿದೆಯೇ ಎಂದು ಕೇಳಬೇಕಾಗಿತ್ತು. ನ್ಯಾಯಯುತವಾಗಿ ಈ ಕ್ರಮವು ಅಪೇಕ್ಷಣೀಯವೂ, ಅಗತ್ಯವೂ ಆಗುತ್ತಿತ್ತು. ಅದನ್ನು ಬಿಟ್ಟು, ಮೊದಲು ತಮ್ಮ ಮನಸ್ಸಿಗೆ ಹಿತವಾದ ಹೆಸರುಗಳನ್ನು ಸಮಿತಿಗೆ ಸೇರಿಸಿ, ನಂತರ ಪಕ್ಷಗಳವರಿಗೆ ಚರ್ಚೆಮಾಡುವುದಕ್ಕೆ ಅವಕಾಶವನ್ನೇ ಕೊಡದೆ, ಬೇಕಾದರೆ ಒಪ್ಪಿಕೊಳ್ಳಬಹುದು, ಇಲ್ಲವಾದರೆ ಬಿಟ್ಟುಬಿಡಬಹುದು ಎಂಬಂತೆ ನಡೆದುಕೊಂಡಿದ್ದಾರೆ. ಸಮಿತಿಯನ್ನು ರಚಿಸಿ ಜನರಿಂದ ಅದರ ಬಗ್ಗೆ ವಿಶ್ವಾಸವನ್ನು ನಿರೀಕ್ಷಿಸುವ ಈ ಕ್ರಮವು ವಿವೇಚನಾರಹಿತವೆಂದು ತಳ್ಳಿಹಾಕಲಾಗದಿದ್ದರೂ, ಅನ್ಯಾಯಯುತವಾಗಿದೆಯೆಂದು ಹೇಳದೆ ವಿಧಿಯಿಲ್ಲ.

### ಹೆಸರುಗಳನ್ನು ಸಲ್ಲಿಸಲಾಗಿಲ್ಲ

ಸರ್ ತೇಜ್ ಬಹಾದೂರ್ ಸಪ್ರು ಅವರು ನನ್ನನ್ನು ಭೇಟಿಯಾದಾಗ ತಾವು ಸಮಿತಿಗೆ ನೇಮಿಸಿಕೊಳ್ಳಲಿರುವ ವ್ಯಕ್ತಿಗಳ ಹೆಸರುಗಳನ್ನು ಬಿಟ್ಟುಕೊಡಲಿಲ್ಲ. ವಿವಿಧ ಸಮುದಾಯಗಳವರು ಮುಂದಿಟ್ಟಿರುವ ಬೇಡಿಕೆಗಳನ್ನು ಪರಿಶೀಲಿಸಲು, ಅವುಗಳನ್ನು ಪರೀಕ್ಷಿಸಲು ಮತ್ತು ಅವುಗಳಲ್ಲಿ ನ್ಯಾಯಬದ್ಧವಾಗಿರುವುವು ಯಾವುವು ಅಲ್ಲದವು ಯಾವುವು ಎಂಬುದನ್ನು ವಿಂಗಡಿಸಲು ಒಂದು ನಿಷ್ಪಕ್ಷಪಾತ ಸಮಿತಿಯನ್ನು ರಚಿಸುವುದು ಅಪೇಕ್ಷಣೀಯವೇ ಎಂಬ ಬಗ್ಗೆ ಅಂದು ನಾವು ಚರ್ಚಿಸಿದೆವು. ಸರ್ ತೇಜ್ ಬಹಾದೂರ್ ಸಪ್ರು ಅವರು ತಾವು ಸಮಿತಿಯಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಬೇಕೆಂದಿರುವ ವ್ಯಕ್ತಿಗಳ ಹೆಸರನ್ನು ನನಗೆ ತಿಳಿಸುತ್ತಾರೆಂದು ನಾನು ಎಣಿಸಿದ್ದೆ. ಆದರೆ ಅವರು ಹಾಗೆ ಮಾಡಲಿಲ್ಲ.

ಇಂತಹ ಸನ್ನಿವೇಶದಲ್ಲಿ ನಾನು ಸರ್ ತೇಜ್ ಬಹಾದೂರ್ ಸಪ್ರು ಅವರಿಗೆ ನಾನು ಸಮಿತಿಯ ಸದಸ್ಯರುಗಳ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸಿದರೆ ಮತ್ತು ಅಂತಹ ಸದಸ್ಯರು ಇರುವ ಸಮಿತಿಯೊಂದಿಗೆ

ನಾನು ಸಹಕರಿಸುವುದಿಲ್ಲವೆಂದರೆ, ನಾನು ಯಾವ ತಪ್ಪನ್ನೂ ಮಾಡುತ್ತಿಲ್ಲವೆಂದು ನಾನು ಭಾವಿಸುತ್ತೇನೆ.

**ಸೈಮನ್ ಸಮಿತಿಯ ಉದಾಹರಣೆ**

ನನ್ನ ನಿಲುವನ್ನು ಸರ್ ತೇಜ್ ಬಹಾದೂರ್ ಸಪ್ರು ಅವರು ಬೇಜವಾಬ್ದಾರಿಯದೆಂದು ಹೇಳುವ ಹಾಗೆಯೇ ಇಲ್ಲ. ಸರ್ ತೇಜ್ ಬಹಾದೂರ್ ಸಪ್ರು ಅವರೇ ೧೯೨೯ರಲ್ಲಿ ಈ ದೇಶದ ಜನತೆಯ ಭಾವನೆಗೆ ಸ್ಪಂದಿಸದೆ ಸದಸ್ಯರನ್ನು ಸೈಮನ್ ಸಮಿತಿಗೆ ನೇಮಕಮಾಡಿಕೊಂಡಿದೆ ಎಂದು ಪ್ರತಿಭಟಿಸಿ ಅದಕ್ಕೆ ಅಸಹಕಾರವನ್ನು ತೋರಿದವರಲ್ಲಿ ಮುಂಚೂಣಿಯಲ್ಲಿದ್ದರು ಎಂಬುದನ್ನು ಪ್ರತಿಯೊಬ್ಬರೂ ಬಲ್ಲರು.

ನಾನು ಸಮಿತಿಯೊಂದಿಗೆ ಸಹಕರಿಸುತ್ತಿಲ್ಲವೆಂದು ಸರ್ ತೇಜ್ ಬಹಾದೂರ್ ಸಪ್ರು ಅವರು ಹೇಳಿದಾಗ, ಅವರು ನಾನು ಬಯಸಿದ ಹಾಗೆ ಸಮಿತಿಯನ್ನು ಪುನಾರಚಿಸಲು ಸಿದ್ಧರಾಗಿದ್ದರೆ ಅವರಿಗೆ ಸಂಪೂರ್ಣ ಸಹಕಾರವನ್ನು ನೀಡುತ್ತೇನೆಂದು ನಾನು ಬರೆದಿರುವ ಪತ್ರದಲ್ಲಿನ ಇನ್ನೊಂದು ಭಾಗದ ಬಗ್ಗೆ ಮೌನವಾಗಿದ್ದರು. ವಿವಿಧ ಸಮುದಾಯಗಳವರು ನೀಡಿರುವ ಬೇಡಿಕೆಯ ಪಟ್ಟಿಯಿರುವ ಗೊತ್ತುವಳಿಗಳನ್ನು ಪರಿಶೀಲಿಸಿ, ವಿವಿಧ ಸಮುದಾಯಗಳ ಹಲವು ಪಂಗಡಗಳ ಸಹಕಾರವನ್ನು ಪಡೆದು ತಮ್ಮ ಕಾರ್ಯವನ್ನು ನಿಭಾಯಿಸಿಕೊಳ್ಳುವೆನೆಂದು ಸರ್ ತೇಜ್ ಬಹಾದೂರ್ ಸಪ್ರು ಅವರು ಭಾವಿಸಿರುವ ಹಾಗೆ ಕಾಣುತ್ತದೆ. ಅವರು ಹಾಗೆ ಮಾಡುವುದಕ್ಕೆ ಅಭ್ಯಂತರವೇನೂ ಇಲ್ಲ. ಅವರಿಗೆ ನನ್ನ ಮೇಲೆ ಅಸಮಾಧಾನವಾಗಿದ್ದರೆ ಅದಕ್ಕೆ ಕಾರಣವೇನೂ ಇಲ್ಲವೆಂಬುದು ನನಗೆ ತಿಳಿದಿದೆ. ಹಾಗೂ ಅಂತಹುದೇನಾದರೂ ಇದ್ದರೆ, ಅದಕ್ಕೆ ಅವರೇ ಹೊಣೆಗಾರರಾಗಿದ್ದಾರೆ ಎಂಬುದನ್ನಷ್ಟೇ ನಾನು ಹೇಳಬಯಸುವುದು. – (ಅಸೋಸಿಯೇಟೆಡ್ ಪ್ರೆಸ್)

* * * * *

(ದ ಫ್ರೀ ಪ್ರೆಸ್ ಆಫ್ ಇಂಡಿಯಾ, ದಿನಾಂಕ ೧೯೪೫ರ ಜನವರಿ ೧)

# ೨೧

# ಮಹಾನದಿಯ ನಿಯಂತ್ರಣ ಹಾಗೂ ಅದರಿಂದ ಅತ್ಯುತ್ತಮ ಉಪಯೋಗವನ್ನು ಪಡೆಯುವುದು

## ಹಿರಾಕುಡ್ ಅಣೆಕಟ್ಟಿನ ಬಗ್ಗೆ ಕಾರ್ಮಿಕ ಇಲಾಖೆಯ ಸದಸ್ಯರಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪತ್ರ

ಕಾರ್ಮಿಕ ಇಲಾಖೆ

ಪ್ರಿಯ ಲಾರ್ಡ್ ವೇವೆಲ್,

ಜನವರಿ ೨೦ರ ತಮ್ಮ ಪತ್ರದ ಎರಡನೆಯ ಪ್ಯಾರಾವನ್ನು ತಾವು ಒಮ್ಮೆ ಪರಿಶೀಲಿಸುವಿರಾ? ಈ ವಿಚಾರದ ಬಗ್ಗೆ ನನ್ನ ಇಲಾಖೆಯು ಹಣಕಾಸು ಇಲಾಖೆಯೊಂದಿಗೆ ವಿಚಾರವಿನಿಮಯವನ್ನು ನಡೆಸಿದೆ. ಸಂಬಲ್‌ಪುರದ ಅಣೆಕಟ್ಟು ಮಹಾನದಿ ಯೋಜನೆಯ ಒಂದು ಭಾಗವೆಂಬುದು ನಿಶ್ಚಯವಾಗಿದೆ, ಭೂಗರ್ಭ ಇಲಾಖೆಯ ವರದಿಯು ತೃಪ್ತಿಕರವಾಗಿದೆ, ಎಂದು ವರದಿ ಮಾಡಿರುವ ಖೋಸ್ಲಾ ಅವರು, ಈ ಅಣೆಕಟ್ಟಿನಿಂದ ಅಥವಾ ಇಡೀ ಯೋಜನೆಯಿಂದ ಬರಬಹುದಾದ ವರಮಾನವನ್ನು ಅಂದಾಜುಮಾಡಲು ತಮಗೆ ಇನ್ನೂ ಸಾಧ್ಯವಾಗಿಲ್ಲವೆಂದು ತಿಳಿಸಿದ್ದಾರೆ. ಸಂಬಲ್‌ಪುರದ ಅಣೆಕಟ್ಟು ನಿಶ್ಚಯವಾಗಿಯೂ ಮಹಾನದಿ ಯೋಜನೆಯ ಭಾಗವಾಗಿರುವುದರಿಂದ, ಮಾರ್ಚ್ ತಿಂಗಳಿನಲ್ಲಿ ಅದರ ಶಿಲಾನ್ಯಾಸವನ್ನು ನೆರವೇರಿಸುವುದು ಸಮಂಜಸವಾಗಿದೆಯೆಂದು ಅವರು ಭಾವಿಸುತ್ತಾರೆ. ಹಣಕಾಸು ಇಲಾಖೆಯ ಸದಸ್ಯರೂ ಈ ರೀತಿಯ ಯೋಜನೆಗಳಿಗೆ ಶಿಲಾನ್ಯಾಸಮಾಡುವುದರ ಪರವಾಗಿದ್ದಾರೆ. ಹೀಗೆ ಶಿಲಾನ್ಯಾಸಮಾಡುವುದಷ್ಟರಿಂದ ನಾವು ಯಾವುದಕ್ಕೂ ಕಟ್ಟುಬೀಳುವಂತಹುದೇನೂ ಇಲ್ಲ ಎಂಬುದು ಅವರ ಅಭಿಪ್ರಾಯ. ನಾವು ಶಿಲಾನ್ಯಾಸ ಮಾಡುವುದಾದರೆ, ನಾವು ಈ ಮಹಾನದಿಯ ಪ್ರವಾಹವನ್ನು ನಿಯಂತ್ರಿಸಲು ಮತ್ತು ಅಲ್ಲಿ ನಿರ್ಮಾಣ ಮಾಡುವ ಅಣೆಕಟ್ಟಿನಿಂದ ಹೆಚ್ಚಿನ ಉಪಯೋಗವನ್ನು ಪಡೆಯಲಿದ್ದೇವೆ ಎಂಬುದನ್ನು ಪ್ರಕಟಿಸುವಂತೆ ಸಂಬಂಧಪಟ್ಟ ಗವರ್ನರ್ ಅವರಿಗೆ ತಿಳಿಸಬೇಕೆಂಬ ನನ್ನ ಅಭಿಪ್ರಾಯದೊಂದಿಗೆ ಅವರೂ ದನಿಗೂಡಿಸುತ್ತಾರೆ. ಈಗ ಇನ್ನೂ ಶೈಶವಾವಸ್ಥೆಯಲ್ಲಿರುವ ಯೋಜನೆಯು ಕಾರ್ಯಸಾಧ್ಯವೆಂದು ತಿಳಿದುಬಂದರೆ, ಈ ಯೋಜನೆಗೆ ಸಂಬಂಧಿಸಿದಂತೆ ಸಾಧ್ಯವಿರುವ ಎಲ್ಲಾ ಸಹಾಯಗಳನ್ನೂ ಪ್ರಾಂತೀಯ ಸರಕಾರಕ್ಕೆ ಕೇಂದ್ರ ಸರಕಾರವು ನೀಡುತ್ತದೆ ಎಂಬುದನ್ನೂ ಅವರಿಗೆ ತಿಳಿಸಬೇಕು.

ಲೂಯಿಸ್ ಅವರು ತಮ್ಮ ಅಧಿಕಾರವನ್ನು ಹಸ್ತಾಂತರಗೊಳಿಸುವ ಮೊದಲೇ, ಅವರಿಂದ ಶಿಲಾನ್ಯಾಸವನ್ನು ನೆರವೇರಿಸುವುದಕ್ಕಾಗಿ, ನಾವು ಈ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಅಂತಿಮಗೊಳಿಸಬೇಕೆಂದು ತಾವು ತಮ್ಮ ಪತ್ರದಲ್ಲಿ ತಿಳಿಸಿದ್ದೀರಿ. ನಾವು ಈಗ ತೆಗೆದುಕೊಳ್ಳಬೇಕಾಗಿರುವ ಏಕಮಾತ್ರ ನಿರ್ಧಾರವೆಂದರೆ, ಮೇಲೆ ಸೂಚಿಸಿದ ಷರತ್ತಿಗೆ ಒಳಪಟ್ಟು, ಮಹಾನದಿ ಯೋಜನೆಯನ್ನು ಮುಂದುವರೆಸಲು ಒರಿಸ್ಸಾ ಸರಕಾರಕ್ಕೆ ಸಹಾಯವನ್ನು ನೀಡುವ ವಿಷಯ. ಒರಿಸ್ಸಾ ಸರಕಾರದ

ದೃಷ್ಟಿಕೋನದಿಂದ ಗವರ್ನರ್ ಅವರೇ ಆಶ್ವಾಸನೆಯನ್ನು ನೀಡಿದರೆ, ಈ ನಮ್ಮ ನಿರ್ಧಾರವು ಶಿಲಾನ್ಯಾಸಮಾಡುವುದಕ್ಕೆ ಸಮರ್ಥನೆಯನ್ನು ನೀಡುತ್ತದೆ ಎಂದು ನಾನು ಭಾವಿಸುತ್ತೇನೆ.

ಈ ಪತ್ರದಲ್ಲಿರುವ ವಿಷಯವನ್ನು ಹಣಕಾಸು ಇಲಾಖೆಯವರೊಂದಿಗೆ ಚರ್ಚಿಸಲಾಗಿದೆ ಮತ್ತು ಅವರೂ ಇದಕ್ಕೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದಾರೆ.

ತಮ್ಮ ವಿಶ್ವಾಸಿ,<br>
ಬಿ.ಆರ್. ಅಂಬೇಡ್ಕರ್<br>
ಕಾರ್ಮಿಕ ಸದಸ್ಯ,<br>
೧೯೪೬ರ ಫೆಬ್ರವರಿ....

(ಥೊರಾಟ್, ಪುಟಗಳು ೧೭೨-೧೭೪)

ಮಾನ್ಯ ರೈಟ್ ಆನರಬಲ್ ವಿಸ್ಕೌಂಟ್ ವೇವೆಲ್ ಅವರಿಗೆ.

* * * *

ಡಾ. ಅಂಬೇಡ್ಕರ್ ಅವರ ಪತ್ರವು ಈ ಮುಂದೆ ಕೊಟ್ಟಿರುವ ವೈಸ್‌ರಾಯ್ ವಿಸ್ಕೌಂಟ್ ವೇವೆಲ್ ಅವರ ಪತ್ರಕ್ಕೆ ಉತ್ತರವಾಗಿ ಬರೆಯಲ್ಪಟ್ಟಿತ್ತು.

ವೈಸ್‌ರಾಯ್ ಭವನ<br>
೧೯೪೬ರ ಜನವರಿ ೨೦

ಪ್ರಿಯ ಡಾ. ಅಂಬೇಡ್ಕರ್,

ಮುಚುಕುಂದ ಪ್ರಕರಣದಲ್ಲಿ ಮದರಾಸು ಮತ್ತು ಒರಿಸ್ಸಾ ಪ್ರಾಂತಗಳು ಒಮ್ಮತಕ್ಕೆ ಬಂದಿರುವುದು ಅತ್ಯಂತ ಸಂತೋಷಕರವಾಗಿದೆ. ಈ ಒಪ್ಪಂದವನ್ನು ಆದಷ್ಟು ಬೇಗ ಔಪಚಾರಿಕವಾಗಿ ಸ್ಥಿರೀಕರಿಸುವಂತೆ ಎರಡೂ ಪ್ರಾಂತಗಳ ಗವರ್ನರುಗಳಿಗೆ ನಾನು ತಂತಿ ಸಂದೇಶವನ್ನು ಕಳಿಸಿದ್ದೇನೆ.

ಮಹಾನದಿ ಯೋಜನೆಯನ್ನು ಪ್ರಾರಂಭಿಸುವ ಅಂಗವಾಗಿ ಸಂಬಲ್‌ಪುರದ ಅಣೆಕಟ್ಟೆಯ ಕಾರ್ಯವನ್ನು ಶೀಘ್ರವಾಗಿ ಆರಂಭಿಸುವುದು ಅಪೇಕ್ಷಣೀಯವೆಂದು ಮಾತುಕತೆಯ ವೇಳೆಯಲ್ಲಿ ತೀರ್ಮಾನಿಸಲಾಯಿತು ಎಂಬುದನ್ನು ಮೆನನ್ ಅವರು ನನಗೆ ತಿಳಿಸಿದರು. ಒರಿಸ್ಸಾ ಪ್ರಾಂತವು ಅತ್ಯಂತ ಹಿಂದುಳಿದ ಮತ್ತು ಬಡ ಪ್ರಾಂತವಾಗಿದೆ. ತಾಂತ್ರಿಕವಾಗಿ ಸಂಬಲ್‌ಪುರ ಅಣೆಕಟ್ಟು ಕಾರ್ಯಸಾಧ್ಯವೆಂದು ನಮಗೆ ಮನದಟ್ಟಾಗುವುದು ಆವಶ್ಯಕ. ಅದು ಹಾಗಿದ್ದರೆ, ರೌಲಾಂಡ್ಸ್ ಒಪ್ಪಂದಕ್ಕೆ ಒಳಪಟ್ಟು, ನಾವು ತಕ್ಷಣವೇ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದು ಎಂದು ನಾನು ಭಾವಿಸುತ್ತೇನೆ. ನನಗೆ ನೀರಾವರಿ ಮತ್ತು ಪ್ರವಾಹ ನಿಯಂತ್ರಣದಲ್ಲಿರುವ ಆಸಕ್ತಿಯನ್ನು ನೀವು ಬಲ್ಲಿರಿ. ಈ ವಿಷಯದಲ್ಲಿ ಹಂತಹಂತವಾಗಿ ಆಗುವ ಪ್ರಗತಿಯು ನನ್ನ ಗಮನಕ್ಕೆ ಬರಬೇಕೆಂದು ನಾನು ಬಯಸುತ್ತೇನೆ. ನಾವು ಮುಂದುವರೆಯಲು ನಿಶ್ಚಯಿಸಿದರೆ, ಲೂಯಿಸ್ ಅವರು ತಮ್ಮ ಅಧಿಕಾರವನ್ನು ಹಸ್ತಾಂತರಗೊಳಿಸುವ ಮಾರ್ಚ್ ೩೧ಕ್ಕಿಂತ ಮೊದಲೇ ಅವರಿಂದಲೇ ಶಿಲಾನ್ಯಾಸ ಮಾಡಿಸಲು ಅನುಕೂಲವಾಗುವಂತೆ ಯೋಜನೆಯ ಬಗ್ಗೆ ನಾವು ಒಂದು ನಿರ್ಧಾರವನ್ನು ತೆಗೆದುಕೊಳ್ಳಬಹುದು.

ನಿಮ್ಮ ವಿಶ್ವಾಸಿ<br>
ವೇವೆಲ್

ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ.

# ೨೨

# ಭಾರತದಲ್ಲಿ ಎಲ್ಲಾ ಪಕ್ಷಗಳ ನಡುವೆ ಸಹಕಾರ ಮನೋಭಾವವು ಮೂಡುವಂತೆ ಮಾಡಲು ನಾವು ಕಾರ್ಯನಿರತರಾಗಬೇಕು

ಲಂಡನ್, ೧೯೪೬ರ ಅಕ್ಟೋಬರ್ ೨೨ (ರಾಯ್ಟರ್)

ರಾಯ್ಟರ್ ಪ್ರತಿನಿಧಿಯೊಂದಿಗೆ ನಡೆದ ಸಂದರ್ಶನವೊಂದರಲ್ಲಿ ಭಾರತದಲ್ಲಿರುವ ಸಾಂವಿಧಾನಿಕ ಸಂದರ್ಭಗಳ ಬಗ್ಗೆ ಮಾತನಾಡುತ್ತಾ ಡಾ. ಅಂಬೇಡ್ಕರ್ ಅವರು ಹೀಗೆ ಹೇಳಿದರು:

"ನಾವುಗಳು ಮಿತ್ರರಂತೂ ಅಲ್ಲವೆಂಬುದು ನಿಶ್ಚಯ, ಅವರು ನಮ್ಮ ಸಹಯೋಗೀ ಪಕ್ಷದವರೂ ಅಲ್ಲ. ಮಿತ್ರರಲ್ಲದಿದ್ದರೂ ಸಹಯೋಗೀ ಪಕ್ಷಗಳವರಾಗಿರುವವರ ಬಗ್ಗೆ ನಮಗೆ ತಿಳಿದಿದೆ. ಆದರೆ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಪಕ್ಷಗಳು ತಾತ್ಕಾಲಿಕ ಸರಕಾರದ ವಿಷಯದಲ್ಲಿ ಶತ್ರುಗಳಂತೆ ವರ್ತಿಸುತ್ತಿದ್ದಾರೆ. ಅವರಿಂದ ನಾವು ಏನನ್ನು ನಿರೀಕ್ಷಿಸಬಹುದು? ಅದನ್ನು ಒಂದು ಕೂಟ ಅಥವಾ ನಿಜವಾದ ಅರ್ಥದಲ್ಲಿ ಒಂದೇ ದೇಶದಲ್ಲಿರುವ ಎರಡು ರಾಷ್ಟ್ರಗಳಾಗಿವೆ ಎಂದು ಕರೆಯಬಹುದು ಅಷ್ಟೆ."

"ಇದು ಪಕ್ಷಗಳು ನಡೆಸುವ ಸರಕಾರವನ್ನು ರಚಿಸುವ ಸಮಯವಲ್ಲ. ಇದನ್ನೊಂದು ಅಂತರ್ಯುದ್ಧವೆಂದು ನೀವು ಕರೆಯದಿರಬಹುದು, ಆದರೆ ಅದರ ಹಿಂದಿರುವ ಮನೋಭಾವವು ಅದೇ. ಯುದ್ಧದ ಸಮಯದಲ್ಲಿ ಬ್ರಿಟನ್ನಿನಲ್ಲಿ ನೀವು ಹೊಂದಿದ್ದ ಸರಕಾರದ ಹಾಗೆ ಭಾರತದಲ್ಲಿಯೂ ಒಂದು ಎಲ್ಲಾ ಪಕ್ಷಗಳವರನ್ನೂ ಒಳಗೊಂಡ ನಿಜವಾದ ಸಮ್ಮಿಶ್ರ ಸರಕಾರವೊಂದು ಇರಬೇಕು.

ಮುಂದಿನ ಹತ್ತುವರ್ಷಗಳು ಭಾರತದ ಭವಿಷ್ಯದಲ್ಲಿ ಅತ್ಯಂತ ನಿರ್ಣಾಯಕ ಅವಧಿಯಾಗಿರುತ್ತವೆ. ಎಲ್ಲಾ ಪಕ್ಷಗಳೂ ಒಂದುಗೂಡಿ ಕೆಲಸ ಮಾಡದಿದ್ದರೆ, ನೀವು ಬಯಸುವ ಹಾಗೆ ನಾವು ನಮ್ಮ ದೇಶವನ್ನು ನಡೆಸಲು ಸಾಧ್ಯವಾಗುವುದಿಲ್ಲ.

ಭಾರತದಲ್ಲಿ ಇಂತಹ ಮನೋಭಾವವನ್ನು ಸೃಷ್ಟಿಸಬೇಕಾಗಿದೆಯೆಂಬುದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು.

ಇಲ್ಲಿಂದ ಮುಂದಕ್ಕೆ ೧೯೩೫ರ ಭಾರತ ಸರಕಾರದ ಅಧಿನಿಮಯದಲ್ಲಿನ ೯೩ನೆಯ ವಿಧಿಯಂತಹವುಗಳು ಇರುವುದಿಲ್ಲ. ಜನರು ಅದನ್ನು ಎಷ್ಟೇ ವಿರೋಧಿಸಲಿ, ೯೩ನೆಯ ವಿಧಿಯು ಅನಾಯಕತ್ವದ ಮೇಲೆ ಸಾಂವಿಧಾನಿಕ ಅಂಕುಶದಂತೆ ಇತ್ತು. ಇನ್ನು ಮುಂದೆ ಬ್ರಿಟಿಷ್ ಸೈನ್ಯವಿರುವುದಿಲ್ಲ. ಈ ಸನ್ನಿವೇಶದಲ್ಲಿ ಭಾರತದಲ್ಲಿನ ಎಲ್ಲಾ ಪಕ್ಷಗಳ ನಡುವೆ ಸಹಕಾರದ ಮನೋಭಾವವನ್ನು ಸೃಷ್ಟಿಸಲು ನಾವು ಕಾರ್ಯನಿರತರಾಗಬೇಕಾಗಿದೆ. ಈ ವಿಷಯದಲ್ಲಿ ಜನತೆಯು ಮಾತ್ರ ನಮಗೆ ಸಹಾಯ ಮಾಡಬಹುದು."

ತಾವು ಈಗಿನ ಪರಿಸ್ಥಿತಿಯ ಬಗ್ಗೆಯೇ ಆಗಲೀ ಅಥವಾ ಭವಿಷ್ಯದ ಬಗ್ಗೆಯೇ ಆಗಲೀ ತೃಪ್ತಿಯನ್ನು ಹೊಂದಿಲ್ಲವೆಂಬುದನ್ನು ಡಾ. ಅಂಬೇಡ್ಕರ್ ಅವರು ಒಪ್ಪಿಕೊಂಡರು. "ನಾವು ಇಲ್ಲಿಯವರೆಗೆ ಸಾಧಿಸಿರುವುದಾದರೂ ಏನು? ಎರಡು ರಾಷ್ಟ್ರಗಳು ದೇಶವನ್ನು ಮೂರು ಚೂರುಗಳನ್ನಾಗಿ ಮಾಡಿವೆ

ಅಷ್ಟೆ." ಎಂದು ಅವರು ಹೇಳಿದರು. ನಾವು ಮುಂದಿನ ಆಸೆಯನ್ನು ಎಲ್ಲಿ ಮತ್ತು ಹೇಗೆ ಇರಿಸಿಕೊಳ್ಳಬೇಕು ಎಂದು ಪತ್ರಿಕಾ ಪ್ರತಿನಿಧಿಯು ಅವರನ್ನು ಕೇಳಿದರು.

"ನನಗೆ ಗೊತ್ತಿಲ್ಲ. ನಾನೇದರೂ ವ್ಯವಸ್ಥೆಯನ್ನು ಮಾಡಿದ್ದರೆ, ೧೯೩೫ರ ಭಾರತ ಸರಕಾರದ ಅಧಿನಿಯಮವನ್ನು ಮತ್ತೆ ಜಾರಿಗೆ ತರಬೇಕೆಂದು ಸಲಹೆಮಾಡುತ್ತಿದ್ದೆ" ಎಂದು ಡಾ. ಅಂಬೇಡ್ಕರ್ ಅವರು ಉತ್ತರಿಸಿದರು.

"ಈ ಅಧಿನಿಯಮವು ಸಂಯುಕ್ತ ಭಾರತದ ಕಲ್ಪನೆಯನ್ನು ಹೊಂದಿತ್ತು. ಕೋಮು ಸಮಸ್ಯೆಗಳಿಗೆ ಸಂಬಂಧಿಸಿದ ಸನ್ನಿವೇಶಗಳನ್ನು ಬದಲಾಯಿಸಿ, ತಮಗೆ ಸಾಕಷ್ಟು ರಕ್ಷಣೆಸಿಗುತ್ತಿಲ್ಲವೆಂದು ಹೇಳುತ್ತಿರುವ ಕೆಲವು ನಿರ್ದಿಷ್ಟ ಸಮುದಾಯಗಳವರಿಗೆ ಹೆಚ್ಚಿನ ರಕ್ಷಣೆಯನ್ನು ನೀಡುತ್ತಿತ್ತು.

ನಂತರ, ಹತ್ತು ವರ್ಷಗಳ ಅವಧಿಗಾಗಿ ಒಂದು ಸಂಯುಕ್ತ ಸಂವಿಧಾನವನ್ನು ರೂಪಿಸಲು ನಾವೀಗ ಕಾರ್ಯಪ್ರವೃತ್ತರಾಗೋಣ ಮತ್ತು ಹತ್ತನೆಯ ವರ್ಷದ ಅಂತ್ಯದಲ್ಲಿ ವಿಧಾಯಕ ಸಭೆಯನ್ನು ರಚಿಸಿ ನಿಮಗೆ ಬೇಕಾದ ಹಾಗೆ ದೇಶವನ್ನು ವಿಭಜಿಸಿ ಎಂದು ನಾನು ಹೇಳುತ್ತಿದ್ದೆ.

ಬ್ರಿಟಿಷರೇನಾದರೂ ಇದನ್ನು ಮಾಡಿದ್ದಿದ್ದರೆ ಅವರು 'ನಮ್ಮ ಅತ್ಯಂತ ದೊಡ್ಡ ಸಾಧನೆಯೆಂದರೆ ಭಾರತವನ್ನು ಒಂದು ದೇಶವನ್ನಾಗಿ ಒಂದುಗೂಡಿಸಿದ್ದು. ನಾವು ಕಳೆದ ೧೫೦ ವರ್ಷಗಳಲ್ಲಿ ಕೆಲವೊಂದು ತಪ್ಪುಗಳನ್ನು ಮಾಡಿರಬಹುದು, ಅನ್ಯಾಯಗಳನ್ನೆಸಗಿರಬಹುದು. ಆದರೆ ನಾವು ಈ ದೇಶಕ್ಕೆ ತಂದ ಏಕತೆಯು ನಾವು ಮಾಡಿದ ತಪ್ಪುಗಳೆಲ್ಲವನ್ನೂ ಮತ್ತು ಅನ್ಯಾಯಗಳೆಲ್ಲವನ್ನೂ ಹೊಡೆದುಹಾಕಿದೆ. ನಾವೀಗ ದೇಶವನ್ನು ಇಡಿಯಾಗಿ ಹಸ್ತಾಂತರಗೊಳಿಸುವ ಇಚ್ಛೆಯನ್ನು ಹೊಂದಿದ್ದೇವೆ' ಎಂದು ಹೇಳಬಹುದಿತ್ತು.

ನಾನೀಗ ರಾಜಕೀಯ ಧ್ಯೇಯವೊಂದನ್ನು ಹೊತ್ತುಕೊಂಡು ಪ್ರಧಾನ ಮಂತ್ರಿ ಕ್ಲೆಮೆಂಟ್ ಅಟ್ಲೀಯವರನ್ನು ಮತ್ತು ವಿನ್‌ಸ್ಟನ್ ಚರ್ಚಿಲ್ ಅವರನ್ನು ಕಾಣಲು ಬಂದಿದ್ದೇನೆ. ಕ್ಯಾಬಿನೆಟ್ ಕಮಿಷನ್ ಮತ್ತು ಲೇಬರ್ ಪಕ್ಷವು ಪರಿಶಿಷ್ಟ ವರ್ಗಗಳವರಿಗೆ ಮಾಡಿರುವ ಅನ್ಯಾಯದ ಬಗ್ಗೆ ನನ್ನ ಅಭಿಪ್ರಾಯವನ್ನು ಅವರ ಮುಂದಿಡಲು ಬಯಸುತ್ತೇನೆ. ಇದು ಎಷ್ಟು ಫಲಕಾರಿಯಾಗುವುದೆಂಬುದು ನನಗೆ ತಿಳಿದಿಲ್ಲ. ವಸ್ತುಸ್ಥಿತಿಯನ್ನು ಕ್ಯಾಬಿನೆಟ್ ಮಿಷನ್ನಿಗೆ ಸರಿಯಾದ ರೀತಿಯಲ್ಲಿ ಪರಿಚಯಿಸಲಿಲ್ಲವೆಂಬುದು ನನ್ನ ಅನಿಸಿಕೆ.

ಈಗ, ಲೇಬರ್ ಸರಕಾರವು ಪರಿಶಿಷ್ಟ ಜಾತಿಗಳವರಿಗೆ ತಾತ್ಕಾಲಿಕ ಸರಕಾರದಲ್ಲಿ ಪ್ರಾತಿನಿಧ್ಯವನ್ನು ನೀಡದೆ, ಅವರನ್ನು ಪೋಷಣೆಗಾಗಿ ಅವರ ತಾಯಿಯ ಮಡಿಲಿನಿಂದ ಕಿತ್ತುಕೊಂಡು ಜಿನ್ನಾ ಮತ್ತು ಗಾಂಧಿ ಎಂಬ ದಾದಿಯರ ಕೈಯಲ್ಲಿ ಇಟ್ಟಿದೆ." ಎಂದು ಅವರು ಅಂತಿಮವಾಗಿ ಹೇಳಿದರು.

ಡಾ. ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಗಳವರ ಸ್ಥಿತಿಗಳ ಬಗ್ಗೆ, ಒಂದು ಜ್ಞಾಪನಾ ಪತ್ರವನ್ನು ಸಿದ್ಧಪಡಿಸಿದ್ದು ಅದು ಮುದ್ರಣದ ಹಂತದಲ್ಲಿದೆ. ಅದು ಸಿದ್ಧವಾದ ನಂತರ ರಾಜಕೀಯ ಮುಖಂಡರನ್ನು ಭೇಟಿಯಾಗುತ್ತಾರೆ.[೧]

* * * * *

೧. ದ ಬಾಂಬೆ ಕ್ರಾನಿಕಲ್, ದಿನಾಂಕ ೧೯೪೬ರ ಅಕ್ಟೋಬರ್ ೨೪

# ೨೩

# ಈ ಅಂಶಗಳು ಸ್ಪಷ್ಟವಾಗುವವರೆಗೆ ದೇಶದ ವಿಭಜನೆಯ ವಿಷಯದಲ್ಲಿ ಯಾವುದೇ ಮಾರ್ಗದರ್ಶನವನ್ನು ನೀಡುವುದು ಸಾಧ್ಯವಿಲ್ಲ

ನವದೆಹಲಿ, ೧೯೪೭ರ ಏಪ್ರಿಲ್ ೨೭

ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂದರ್ಶನವೊಂದರಲ್ಲಿ, ತಮ್ಮ ಒಕ್ಕೂಟವು ಬಂಗಾಳವನ್ನು ಮತ್ತು ಪಂಜಾಬ್ ಪ್ರಾಂತಗಳನ್ನು ವಿಭಜಿಸುವ ವಿಷಯದಲ್ಲಿ ಯಾವುದೇ ತೀರ್ಮಾನಕ್ಕೆ ಇನ್ನೂ ಬಂದಿಲ್ಲ ಹಾಗೂ ಈ ವಿಷಯದ ಬಗ್ಗೆ ಪೂರ್ವಭಾವಿಯಾಗಿ ಯಾವುದೇ ತೀರ್ಮಾನವನ್ನೂ ತೆಗೆದುಕೊಳ್ಳುವ ಇಚ್ಛೆಯನ್ನೂ ಹೊಂದಿಲ್ಲ ಎಂದು ತಿಳಿಸಿದರು.

ಹಿಂದೂಗಳು ದೇಶದ ವಿಭಜನೆಯನ್ನು ಬಯಸಿದರೆ, ಅವರು ಪರಿಶಿಷ್ಟ ಜಾತಿಗಳವರಿಗೆ ಈ ಮುಂದಿನ ಅಂಶಗಳ ಬಗ್ಗೆ ತೃಪ್ತಿಕರವಾಗಿ ಉತ್ತರವನ್ನು ನೀಡಬೇಕು –

ಮೊದಲನೆಯದಾಗಿ, ಹೊಸ ಸಂವಿಧಾನದಲ್ಲಿ, ಪರಿಶಿಷ್ಟ ಜಾತಿಗಳವರಿಗೆ ಮುಸ್ಲಿಮರು ನೀಡುವ ರಕ್ಷಣೆಗೆ ಪ್ರತಿಯಾಗಿ ಹಿಂದೂಗಳು ಯಾವ ರಕ್ಷಣೆಗಳನ್ನು ನೀಡಲು ಸಿದ್ಧರಿದ್ದಾರೆ? ಎರಡನೆಯದಾಗಿ, ಗಡಿರೇಖೆಗಳನ್ನು ಎಲ್ಲಿ ಎಳೆಯಬೇಕು? ಮೂರನೆಯದಾಗಿ, ವಿವಿಧ ಸಮುದಾಯಗಳ ಜನರನ್ನು ಪರಸ್ಪರ ವಿನಿಮಯಮಾಡಿಕೊಳ್ಳಲು ಅವಕಾಶಗಳಿರುತ್ತವೆಯೇ? ನಾಲ್ಕನೆಯದಾಗಿ, ವಿಭಜನೆಯ ಪರಿಣಾಮವಾಗಿ ಮುಸ್ಲಿಂ ಪ್ರದೇಶದಲ್ಲಿಯೇ ಉಳಿದುಕೊಂಡು ನಂತರ ವಿನಿಮಯದ ಅಂಗವಾಗಿ ಸ್ಥಳಾಂತರಗೊಳ್ಳುವ ಪರಿಶಿಷ್ಟ ಜಾತಿಗಳವರ ಪುನರ್ವ್ಯವಸ್ಥೆಗಾಗಿ ಯಾವ ಆರ್ಥಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಿಂದೂಗಳು ಯೋಚಿಸುತ್ತಾರೆ?

ಈ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರಗಳು ಸಿಗದೆ ಇರುವವರೆಗೆ ಬಂಗಾಳ ಮತ್ತು ಪಂಜಾಬ್ ಪ್ರಾಂತಗಳ ವಿಭಜನೆಯ ವಿಷಯದಲ್ಲಿ ಯಾವುದೇ ಮಾರ್ಗದರ್ಶನವನ್ನು ನೀಡುವುದು ಒಕ್ಕೂಟಕ್ಕೆ ಸಾಧ್ಯವಾಗುವುದಿಲ್ಲ ಎಂದು ಡಾ. ಅಂಬೇಡ್ಕರ್ ಅವರು ತಿಳಿಸಿದರು. – ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ.[೧]

* * * * *

---

ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೧೯೪೭ರ ಏಪ್ರಿಲ್ ೨೮

## ೨೪

# ಯಾವುದೇ ಸಂಸ್ಥಾನಗಳನ್ನೂ ಭಾರತ ಸರಕಾರವು ಸ್ವತಂತ್ರ ಸಾರ್ವಭೌಮ ಸರಕಾರವೆಂದು ಮಾನ್ಯಮಾಡುವುದಿಲ್ಲ

ಭಾರತವನ್ನು ಸ್ವತಂತ್ರ ಸಾರ್ವಭೌಮ ರಾಷ್ಟ್ರವೆಂದು ಘೋಷಿಸಲು ಸಿದ್ಧತೆಗಳು ನಡೆಯುತ್ತಿವೆ ಮತ್ತು ಅದೇ ಸಮಯದಲ್ಲಿ, ರಾಜಪ್ರಭುತ್ವವಿರುವ ಸಂಸ್ಥಾನಗಳ ಸ್ಥಾನವೇನಾಗಿರುತ್ತದೆ ಎಂಬ ಪ್ರಶ್ನೆಯು ಈಗ ಕೇಳಿಬರುತ್ತಿದೆ. ತಾವೂ ಬ್ರಿಟಿಷ್ ಸರಕಾರದ ಅಧೀನದಲ್ಲಿರುವುದರಿಂದ ತಾವು ಕೂಡ ಸ್ವತಂತ್ರ ಸಾರ್ವಭೌಮ ದೇಶಗಳಾಗಬಹುದೆಂಬುದು ಸಂಸ್ಥಾನಗಳ ಅಭಿಪ್ರಾಯ. ತಿರುವಾಂಕೂರು ಮತ್ತು ಹೈದರಾಬಾದ್ ರಾಜಪ್ರಭುತ್ವವಿರುವ ಪ್ರಮುಖವಾದ ಸಂಸ್ಥಾನಗಳು. ಕ್ಯಾಬಿನೆಟ್ ಮಿಷನ್ ಈ ಅಭಿಪ್ರಾಯವನ್ನು ಎತ್ತಿಹಿಡಿಯಿತು ಆದರೆ ಅದನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ವಿರೋಧಿಸಿ, ಕ್ಯಾಬಿನೆಟ್ ಮಿಷನ್ನಿನ ಅಭಿಪ್ರಾಯವು ದೇಶಕ್ಕೆ ಹೇಗೆ ಮಾರಕವಾಗುತ್ತದೆ ಎಂಬ ಹೇಳಿಕೆಯೊಂದನ್ನು ಬಿಡುಗಡೆಮಾಡಿದರು. ದೇಶದ ಸಾರ್ವಭೌಮತ್ವದ ದೃಷ್ಟಿಯಿಂದ ರಾಜಪ್ರಭುತ್ವವಿರುವ ಎಲ್ಲಾ ಸಂಸ್ಥಾನಗಳನ್ನೂ ಭಾರತದಲ್ಲಿ ವಿಲೀನಗೊಳಿಸಬೇಕು ಎಂದು ಅವರು ಒತ್ತಾಯಿಸಿದರು. ಅವರ ಹೇಳಿಕೆಯ ಪಾಠ ಹೀಗಿದೆ. – ಸಂಪಾದಕರು

"ಭಾರತದ ರಾಜ್ಯಗಳು ತಮ್ಮನ್ನು ತಾವು ಸಾಮ್ರಾಜ್ಯದ ದಾಸ್ಯದಿಂದ ಬಿಡುಗಡೆ ಪಡೆಯಬೇಕಾದರೆ ಇರುವ ಮಾರ್ಗ ಒಂದೇ, ಅದು, ದೇಶದ ಸಾರ್ವಭೌಮತ್ವದೊಡನೆ ಅಥವಾ ಆಧಿಪತ್ಯದೊಡನೆ ಒಂದಾಗುವುದು. ಭಾರತದ ರಾಜ್ಯಗಳು ಸಂಯುಕ್ತ ಭಾರತದಲ್ಲಿ ಅಂಗರಾಜ್ಯಗಳಾಗಿ ವಿಲೀನವಾದರೆ ಮಾತ್ರ ಇದು ಸಾಧ್ಯವಾಗುತ್ತದೆ" ಎಂದು ವೈಸ್‌ರಾಯ್ ಅವರ ಕಾರ್ಯಾಂಗದಲ್ಲಿ ಹಿಂದೆ ಸದಸ್ಯರಾಗಿದ್ದ ಹಾಗೂ ಪ್ರಮುಖ ಸಂವಿಧಾನತಜ್ಞರಾದ ಡಾ. ಅಂಬೇಡ್ಕರ್ ಅವರು ಕೆಲವು ರಾಜ್ಯಗಳಿಗೆ ಸ್ವಾತಂತ್ರ್ಯವನ್ನು ನೀಡುವುದನ್ನು ವಿರೋಧಿಸಿ ಒಂದು ಹೇಳಿಕೆಯನ್ನು ನೀಡುವಾಗ ಹೇಳಿದರು. ಭಾರತೀಯ ರಾಜ್ಯಗಳು ಈಗ ಇರುವಷ್ಟು ಮಟ್ಟಿಗೆ ಸಾರ್ವಭೌಮತ್ವವನ್ನು ಹೊಂದಿರಬಹುದು, ಆದರೆ, ಅವುಗಳು ಬ್ರಿಟಿಷ್ ರಾಜಪ್ರಭುತ್ವದ ಆಧಿಪತ್ಯದಲ್ಲಿರುವವರೆಗೆ, ಭಾರತವು ಸ್ವತಂತ್ರವಾದರೂ, ಸ್ವತಂತ್ರವಾಗಲಾರವು. ತಾವು ಸ್ವತಂತ್ರ ಭಾರತದ ಆಧಿಪತ್ಯದ ಅಡಿಯಲ್ಲಿ ಸಾರ್ವಭೌಮ ರಾಷ್ಟ್ರವಾಗಿರುವುದರಲ್ಲಿ ಯಾವ ಅರ್ಥವೂ ಇರುವುದಿಲ್ಲವೆಂಬುದನ್ನು ಈ ರಾಜ್ಯಗಳು ಅರ್ಥಮಾಡಿಕೊಳ್ಳಬೇಕು ಎಂದು ಅವರು ಹೇಳಿದರು. ತನ್ನ ಎಲ್ಲಾ ಪರಮಾಧಿಕಾರಗಳನ್ನೂ ಭಾರತ ಸರಕಾರಕ್ಕೆ ವಹಿಸಿಕೊಡಲಾಗುವುದಿಲ್ಲ, ಅಂದರೆ ತಾವು ದೇಶೀಯ ಸಂಸ್ಥಾನಗಳ ಮೇಲೆ ಹೊಂದಿರುವ ಅಧಿಕಾರಗಳು ಇನ್ನು ಮುಂದೆ ಇರುವುದಿಲ್ಲ ಮತ್ತು ಈ ಅಧಿಕಾರಗಳು ಮತ್ತೆ ದೇಶೀಯ ಸಂಸ್ಥಾನಗಳಿಗೇ ಪುನಃ ವರ್ಗಾಯಿಸಲ್ಪಡುತ್ತವೆ ಎಂದು ಕ್ಯಾಬಿನೆಟ್ ಮಿಷನ್ ೧೯೪೬ರ ಮೇ ೧೨ರಂದು ನೀಡಿದ ಹೇಳಿಕೆಯನ್ನೇ ದೇಶೀಯ ಸಂಸ್ಥಾನಗಳು ತಾವು ಸರ್ವಸ್ವತಂತ್ರರಾಗಲು ಆಧಾರವನ್ನಾಗಿಸಿಕೊಂಡಿವೆ.

### ಕಿಡಿಗೇಡಿತನದ ನೀತಿ

ಪರಮಾಧಿಕಾರವನ್ನು ಭಾರತ ಸರಕಾರಕ್ಕೆ ವಹಿಸಿಕೊಡಲಾಗುವುದಿಲ್ಲವೆಂಬ ನೀತಿಯು ಅತ್ಯಂತ

ಕಿಡಿಗೇಡಿತನದಿಂದ ಕೂಡಿದೆ ಮತ್ತು ಇದು ಸಮಸ್ಯೆಯು ಒಳಗೊಂಡಿರುವ ವಿಷಯಗಳನ್ನು ಅಪಾರ್ಥಮಾಡಿಕೊಂಡಿರುವುದರಿಂದ ಉಂಟಾಗಿದೆ. ವೆಸ್ಟ್‌ಮಿನ್ಸ್ಟರ್ ಕಾಯಿದೆಯನ್ನು ಅಂಗೀಕರಿಸಿದ ಮೇಲೆ ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಮತ್ತು ಐರ್ಲೆಂಡ್‌ಗಳು ಪ್ರತ್ಯೇಕವಾದ ಸ್ವತಂತ್ರರಾಷ್ಟ್ರಗಳಾದವು. ಇವುಗಳ ವಿಷಯದಲ್ಲಿ ರಾಜಪ್ರಭುತ್ವವು, ತನ್ನ ಪರಮಾಧಿಕಾರವನ್ನು ಆಯಾ ರಾಷ್ಟ್ರಗಳ ಸಚಿವ ಸಂಪುಟದ ಸಲಹೆಯ ಪ್ರಕಾರವೇ ಬಳಸಬೇಕು. ಅದು ಹಾಗೆಯೇ ವರ್ತಿಸಬೇಕು, ಅದಕ್ಕೆ ಪರ್ಯಾಯವೇ ಇಲ್ಲ. ಹಾಗೆಯೇ, ಭಾರತವು ಸ್ವತಂತ್ರ ರಾಷ್ಟ್ರವಾದಮೇಲೆ, ಭಾರತ ಸರಕಾರದ ಸಚಿವ ಸಂಪುಟದ ಸಲಹೆಯ ಪ್ರಕಾರವೇ ಬ್ರಿಟಿಷ್ ರಾಜಪ್ರಭುತ್ವವು ವರ್ತಿಸಬೇಕು. ಸಂಪೂರ್ಣವಾಗಿ ಪರಮಾಧಿಕಾರವನ್ನು ಹಸ್ತಾಂತರಗೊಳಿಸುವುದರ ವಿರುದ್ಧ ಪ್ರತಿಪಾದನೆಯನ್ನು ಮಾಡುವವರು, ಮುಖ್ಯವಾಗಿ ತಮ್ಮ ವಾದಕ್ಕೆ ೧೮೫೮ರ ಭಾರತ ಸರಕಾರದ ಅಧಿನಿಯಮದ ೩೯ನೆಯ ವಿಧಿಯನ್ನು ೧೯೩೫ರ ಭಾರತ ಸರಕಾರದ ಅಧಿನಿಯಮದಿಂದ ಕೈಬಿಟ್ಟಿರುವುದನ್ನು ಆಧಾರವಾಗಿ ತೆಗೆದುಕೊಳ್ಳುತ್ತಾರೆ. ೧೮೫೮ರ ಭಾರತ ಸರಕಾರದ ಅಧಿನಿಯಮದಲ್ಲಿ ಸೇರಿಸಲಾಗಿದ್ದ ೩೯ನೆಯ ವಿಧಿಯು ೧೯೧೫–೧೯ರ ಭಾರತ ಸರಕಾರದ ಅಧಿನಿಯಮದ ೩೩ನೆಯ ವಿಧಿಯ ನಕಲಾಗಿದ್ದಿತು. ಈ ವಿಧಿಯ ಪ್ರಕಾರ, ಭಾರತ ಸರಕಾರದ ನಾಗರಿಕ ಮತ್ತು ಮಿಲಿಟರಿ ಸರಕಾರವು (ಬ್ರಿಟಿಷ್ ಭಾರತದ ನಾಗರಿಕ ಮತ್ತು ಮಿಲಿಟರಿ ಸರಕಾರದಂತಲ್ಲದೆ) ಗವರ್ನರ್ ಜನರಲ್–ಇನ್–ಕೌನ್ಸಿಲ್ ಅವರ ಅಧೀನದಲ್ಲಿತ್ತು. ಮೇಲಿನ ವಾದದ ಪ್ರತಿಪಾದಕರು ಈ ವಿಧಿಯನ್ನು ಕೈಬಿಟ್ಟಿರುವುದರಿಂದ, ಪರಮಾಧಿಕಾರವನ್ನು ಭಾರತ ಸರಕಾರಕ್ಕೆ ಹಸ್ತಾಂತರಗೊಳಿಸಲಾಗುವುದಿಲ್ಲವೆಂದು ಹೇಳುತ್ತಾರೆ.

ಸಾಮ್ರಾಜ್ಯದ ಸಾಂವಿಧಾನಿಕ ಕಾನೂನಿನ ಪ್ರಕಾರ, ಒಂದು ದೇಶವು ಸ್ವತಂತ್ರವಾದಾಗ ಮಾತ್ರ, ಆ ದೇಶವು ಬ್ರಿಟಿಷ್ ರಾಜಪ್ರಭುತ್ವಕ್ಕೆ ಸಲಹೆಯನ್ನು ನೀಡಬಹುದಾದ ಹಕ್ಕನ್ನು ಹೊಂದುತ್ತದೆ. ಹಾಗೆ ಆಗುವುದಕ್ಕೆ ಮೊದಲು ಪರಿಸ್ಥಿತಿ ಬೇರೆಯ ರೀತಿ ಇತ್ತು ಎಂಬುದು ಇಲ್ಲಿ ಪರಿಗಣನೆಗೆ ಬರುವುದಿಲ್ಲ. ಇಲ್ಲಿಯವರೆಗೂ ಭಾರತ ಸರಕಾರವು ರಾಜಪ್ರಭುತ್ವಕ್ಕೆ ತನ್ನ ಪರಮಾಧಿಕಾರವನ್ನು ಚಲಾಯಿಸುವ ವಿಷಯದಲ್ಲಿ ಸಲಹೆಯನ್ನು ನೀಡುವ ಅಧಿಕಾರವನ್ನು ಹೊಂದಿರಲಿಲ್ಲವೆಂಬುದರಿಂದ ಈ ಅಂಶವು ಅದರ ಸಾಂವಿಧಾನಿಕ ಕುಂದು ಮತ್ತು ಇದರಿಂದ ಅದಕ್ಕೆ ಸಲಹೆಯನ್ನು ನೀಡುವ ಅಧಿಕಾರವಿಲ್ಲವೆಂಬುದು ಅರ್ಥರಹಿತವಾಗಿರುತ್ತದೆ.

**ಪರಮಾಧಿಕಾರವು ಕೊನೆಗೊಳ್ಳುವುದಿಲ್ಲ**

ಬ್ರಿಟಿಷ್ ರಾಜಪ್ರಭುತ್ವವು ಭಾರತಕ್ಕೆ ತನ್ನ ಪರಮಾಧಿಕಾರವನ್ನು ಹಸ್ತಾಂತರಗೊಳಿಸುವುದು ಸಾಧ್ಯವಿಲ್ಲವೆಂಬ ಕ್ಯಾಬಿನೆಟ್ ಮಿಷನ್ನಿನ ಹೇಳಿಕೆಯನ್ನು ಕುರಿತು ಇಲ್ಲಿಯವರೆಗೆ ನಾನು ಪ್ರಸ್ತಾಪಿಸಿದ್ದೇನೆ. ಕ್ಯಾಬಿನೆಟ್ ಮಿಷನ್ನಿನ ಪ್ರಕಾರ ಪರಮಾಧಿಕಾರವು ಕೊನೆಗೊಳ್ಳುತ್ತದೆ. ಇದೊಂದು ಅತ್ಯಾಶ್ಚರ್ಯಕರವಾದ ವಾದ ಮತ್ತು ಇದು ಬಳಕೆಯಲ್ಲಿರುವ ಸಾಂವಿಧಾನಿಕ ಕಾನೂನುಗಳ ನೀತಿಗೆ ವಿರುದ್ಧವಾಗಿದೆ. ಇದರ ಪ್ರಕಾರ ರಾಜನು ತನ್ನ ಪರಮಾಧಿಕಾರವನ್ನು ಬೇರೆಯವರಿಗೆ ಒಪ್ಪಿಸಲು ಅಥವಾ ಅದನ್ನು ತ್ಯಜಿಸಲು ಸಾಧ್ಯವಿಲ್ಲ. ಇದರ ಸಿಂಧುತ್ವವನ್ನು ೧೮೪೦ರಲ್ಲಿ ತೀರ್ಮಾನವಾದ ಮಹಾರಾಣಿ ಮತ್ತು ಎಡುಲ್ಜಿ ಬೈರಾಮ್‌ಜಿ ಪ್ರಕರಣದಲ್ಲಿ ಪ್ರೈವಿ ಕೌನ್ಸಿಲ್ ಎತ್ತಿಹಿಡಿದಿದೆ. ಇದು ೫ ಮೂರ್ ಅವರ ಪ್ರೈವಿ ಕೌನ್ಸಿಲ್ ಪ್ರಕರಣಗಳ ೨೭೬ನೆಯ ಪುಟದಲ್ಲಿ ವರದಿಯಾಗಿದೆ. ಇದರಲ್ಲಿ ರಾಜಪ್ರಭುತ್ವವು ತನ್ನ ಪರಮಾಧಿಕಾರವನ್ನು ತನ್ನ ಸನ್ನದಿನ ಮೂಲಕವೂ ಬೇರೆಯವರಿಗೆ ವರ್ಗಾಯಿಸಲಾಗುವುದಿಲ್ಲ ಎಂದು ಹೇಳಿದೆ. ಪರಮಾಧಿಕಾರವು ಕೊನೆಗೊಳ್ಳುತ್ತದೆ ಎಂದು ಕ್ಯಾಬಿನೆಟ್ ಮಿಷನ್ ನೀಡಿರುವ ಹೇಳಿಕೆಯು ಸಾಮ್ರಾಜ್ಯದ ಆಡಳಿತಕ್ಕೆ ಅನ್ವಯವಾಗುವ ಸಾಂವಿಧಾನಿಕ ಕಾನೂನಿಗೆ ವ್ಯತಿರಿಕ್ತವಾಗಿದೆ.

**ಅಂತಿಮ ಶಿಕ್ಷಾಶಕ್ತಿ**

ಪರಮಾಧಿಕಾರವನ್ನು ರದ್ದುಗೊಳಿಸಲು ಗ್ರೇಟ್ ಬ್ರಿಟನ್ನಿನ ಸಂಸತ್ತು ಅಂಗೀಕರಿಸಿದ ಕಾನೂನಿನ ಹಿಂದೆ ಸರಿಯಾದ ಚಿಂತನೆಯು ನಡೆದಿಲ್ಲ. ಹೀಗೆ ಹೇಳಲು ಕಾರಣಗಳು ಸ್ಪಷ್ಟವಾಗಿವೆ. ಸೈನ್ಯವು ಪರಮಾಧಿಕಾರದ ಅಂತಿಮ ಶಿಕ್ಷಾಶಕ್ತಿ. ಈ ದೇಶದ ಸನ್ನಿವೇಶದಲ್ಲಿ ಸೈನ್ಯವೆಂದರೆ ಇಲ್ಲಿಯವರೆಗೂ ಬ್ರಿಟಿಷ್ ಭಾರತವು ನಿರ್ವಹಿಸುತ್ತಿದ್ದ ಭಾರತ ಸೈನ್ಯ. ಬ್ರಿಟಿಷ್ ಭಾರತವು ನಿರ್ವಹಿಸುತ್ತಿದ್ದ, ಹಾಗೂ ಬ್ರಿಟಿಷ್ ರಾಜಪ್ರಭುತ್ವದ ಆಜ್ಞಾನುವರ್ತಿಯಾಗಿ, ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಅವರ ಕೈಕೆಳಗೆ ಇರಿಸಿದ್ದ ಈ ಬೃಹತ್ ಸೈನ್ಯದ ಬೆಂಬಲವಿಲ್ಲದಿದ್ದರೆ ಬ್ರಿಟಿಷ್ ರಾಜಪ್ರಭುತ್ವವು ತನ್ನ ಪರಮಾಧಿಕಾರವನ್ನು ಕಾಪಾಡಿಕೊಂಡುಬರಲು ಶಕ್ತವಾಗುತ್ತಿರಲಿಲ್ಲ. ಈ ಬಲವನ್ನು ರಾಜಪ್ರಭುತ್ವವು ಒಂದು ವಿಶ್ವಸ್ಥ ಮಂಡಲಿಯಂತೆ ಹೊಂದಿದೆ. ಇಂತಹ ಪರಮಾಧಿಕಾರವನ್ನು ಹಾಳುಮಾಡುವಂತಹ ಕಾನೂನನ್ನು ಅಂಗೀಕರಿಸುವುದರಿಂದ ತಮ್ಮಲ್ಲಿಟ್ಟಿರುವ ವಿಶ್ವಾಸವನ್ನು ಬ್ರಿಟಿಷ್ ಸಂಸತ್ತು ದುರುಪಯೋಗಪಡಿಸಿಕೊಂಡಂತೆ ಆಗಿದೆ.

ಕೊನೆಯಲ್ಲಿ ಅಂಬೇಡ್ಕರ್ ಅವರು 'ಭಾರತೀಯ ಸಂಸ್ಥಾನಗಳ ಆಯ್ಕೆಯು ಹೇಗೇ ಇದ್ದರೂ, ಭಾರತದ ಜನತೆಯ ಕರ್ತವ್ಯವು ಸ್ಪಷ್ಟವಾಗಿದೆ. ಅವರ ಪರವಾಗಿ ತಾತ್ಕಾಲಿಕ ಸರಕಾರವು ಪರಮಾಧಿಕಾರವನ್ನು ರದ್ದುಗೊಳಿಸುವ ಯಾವುದೇ ಕಾನೂನನ್ನು ಅಂಗೀಕರಿಸುವ ಹಕ್ಕು ಬ್ರಿಟಿಷ್ ಸರಕಾರಕ್ಕೆ ಇರುವುದಿಲ್ಲವೆಂಬುದನ್ನು ಮಹಾಪ್ರಭುಗಳ ಸರಕಾರಕ್ಕೆ ನಿವೇದಿಸಬೇಕು. ಭಾರತದ ಸಂಸ್ಥಾನಗಳಿಗೆ ಪರಮಾಧಿಕಾರವುಳ್ಳ ರಾಜ್ಯಗಳೆಂಬ ಪಟ್ಟವನ್ನು ಕಟ್ಟುವಂತಹ ಯಾವುದೇ ಕಾನೂನನ್ನು ಅಂಗೀಕರಿಸುವುದು ತಮ್ಮ ಸಾರ್ವಭೌಮತ್ವಕ್ಕೆ ವಿರುದ್ಧವಾದುದು ಎಂದು ಭಾರತದ ಜನತೆಯು ಭಾವಿಸುತ್ತದೆ ಎಂಬುದನ್ನೂ ತಿಳಿಸಬೇಕು. ಈ ಕಾರಣದಿಂದ ಅಂತಹ ಕಾನೂನು ಅಸಿಂಧುವಾಗುತ್ತದೆ. ಅಲ್ಲದೆ ಭಾರತ ಸರಕಾರವು, ರಾಜ್ಯಗಳ ಸ್ವತಂತ್ರ ಸಾರ್ವಭೌಮತ್ವವನ್ನು ಮಾನ್ಯಮಾಡುವುದಿಲ್ಲ ಎಂಬುದನ್ನೂ ಅವರ ಗಮನಕ್ಕೆ ತರಬೇಕು'.[೧*]

* * * * *

೧. ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೧೯೪೭ರ ಜೂನ್ ೧೮. ಖೈರ್‌ಮೋಡೆ ಸಂಪುಟ ೮, ಪುಟಗಳು ೧೯೫ರಿಂದ ೧೯೮ರಲ್ಲಿ ಪುನರ್ಮುದ್ರಿತ.

* ಇದರ ಮೇಲಿನ ಟಿಪ್ಪಣಿಗಳಿಗಾಗಿ ೯ ಮತ್ತು ೧೦ನೆಯ ಪರಿಶಿಷ್ಟಗಳನ್ನು ನೋಡಿ.

## ೨೫

# ಆಗಸ್ಟ್ ೧೫ರಂದು ಬೆರಾರ್ ಪ್ರಾಂತವು ಮರಳಿ ನಿಜಾಮರ ಸ್ವಾಧೀನಕ್ಕೇ ಮರಳುತ್ತದೆ

## ಡಾ. ಅಂಬೇಡ್ಕರ್ ಅವರಿಂದ ಹೊಸ ಭಾರತ ಮಸೂದೆಯ ವಿಶ್ಲೇಷಣೆ

ಸುಧಾರಣಾ ಆಯುಕ್ತರಾದ ಶ್ರೀ ವಿ.ಪಿ. ಮೆನನ್ ಅವರು ಕಳೆದ ವಾರ ದೆಹಲಿಯ ಪತ್ರಿಕಾಗೋಷ್ಠಿಯಲ್ಲಿ ನೀಡಿದ ಉತ್ತರಗಳನ್ನು ಕುರಿತು ಡಾ. ಬಿ.ಆರ್. ಅಂಬೇಡ್ಕರ್ ಅವರು 'ಮಹಾಪ್ರಭುಗಳ ಆಧಿಪತ್ಯವು ಭಾರತದಲ್ಲಿ ಕೊನೆಗೊಂಡ ಬಳಿಕ ಬೆರಾರ್ ಪ್ರಾಂತವನ್ನು ಇಂಗ್ಲಿಷರಿಗೆ ವರ್ಗಾಯಿಸುವ ಒಪ್ಪಂದವು ಕೊನೆಗೊಂಡು ಆ ಪ್ರಾಂತವು ಪುನಃ ನಿಜಾಮರ ಸ್ವಾಧೀನಕ್ಕೇ ಆಗಸ್ಟ್ ೧೫ರಂದು ಮರಳುತ್ತದೆ ಎಂಬ ಮೆನನ್ ಅವರ ಹೇಳಿಕೆಯು ಸರಿಯಾಗಿ ವರದಿಯಾಗಿದ್ದರೆ, ಅದು ಹೊಸ ವ್ಯವಸ್ಥೆಯಲ್ಲಿ ತಮ್ಮ ಸ್ಥಿತಿ ಏನಾಗುತ್ತದೆ ಎಂದು ಕಾತರದಿಂದ ಕಾಯುತ್ತಿರುವ ಬೆರಾರ್‌ನ ಜನತೆಗೆ ಅತ್ಯಂತ ಸಮಾಧಾನವನ್ನು ತರುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಡಾ. ಅಂಬೇಡ್ಕರ್ ಅವರು ಹೇಳಿದರು.

"ಆದರೆ, ಇಲ್ಲಿರುವ ಪ್ರಶ್ನೆಯೆಂದರೆ, ಮೆನನ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯವು ಸರಿಯಾಗಿದೆಯೇ ಎಂಬುದು. ಈ ಮಸೂದೆಯ ೨ನೆಯ ವಿಧಿಯ ೭ನೆಯ ಪರಿಚ್ಛೇದದ ಪ್ರಕಾರ ಮೆನನ್ ಅವರ ಅಭಿಪ್ರಾಯವು ಅಸಿಂಧುವಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

೭ನೆಯ ಪರಿಚ್ಛೇದದ ೧(ಬಿ) ಉಪವಾಕ್ಯಖಂಡದ ಪ್ರಕಾರ ನಿಗದಿಯಾದ ದಿನಾಂಕವಾದ ಆಗಸ್ಟ್ ೧೫ರಿಂದ ಭಾರತದ ಮೇಲಿನ ಮಹಾಪ್ರಭುಗಳ ಆಧಿಪತ್ಯವು ಕೊನೆಗೊಳ್ಳುವುದಷ್ಟೇ ಅಲ್ಲದೆ, ಅವರ ಎಲ್ಲಾ ಅಧಿಕಾರಗಳು, ಹಕ್ಕುಗಳೂ, ಭಾರತೀಯ ರಾಜ್ಯಗಳ ಮೇಲೆ ಒಪ್ಪಂದ, ಅನುದಾನ, ಪರಂಪರೆ, ಮೌನಸಮ್ಮತಿ ಅಥವಾ ಇನ್ನಾವುದೇ ರೀತಿಗಳ ಪ್ರಕಾರ ಅವರಿಗಿದ್ದ ಅಧಿಕಾರವ್ಯಾಪ್ತಿಗಳೂ ಕೊನೆಗೊಳ್ಳುತ್ತವೆ. ಇದನ್ನು ಬೆರಾರ್ ಪ್ರಾಂತದ ವಿಷಯದಲ್ಲಿ ಮಾಡಿಕೊಂಡಿರುವ ಒಪ್ಪಂದಕ್ಕೂ ಅನ್ವಯಮಾಡಿದರೆ ಏನಾಗುತ್ತದೆ? ಬ್ರಿಟಿಷರಿಗೆ ವರ್ಗಾಯಿಸಲು ಮಾಡಿಕೊಂಡಿದ್ದ ಒಪ್ಪಂದವೂ ಸಹಜವಾಗಿಯೇ ಕೊನೆಗೊಳ್ಳುತ್ತದೆ ಎಂಬುದು ಸ್ಪಷ್ಟವಾಗಿದೆ.

### ೨ನೆಯ ವಿಧಿಯು ಬೆರಾರಿಗೆ ಅನ್ವಯವಾಗುತ್ತದೆ

ಈ ವಿಧಿಯ ಬಗ್ಗೆ ನೀಡಿರುವ ವ್ಯಾಖ್ಯಾನವು ಸರಿಯಾಗಿದ್ದರೆ, ಬೆರಾರ್ ಪ್ರಾಂತವು ಆಗಸ್ಟ್ ೧೫ರಂದು ನಿಜಾಮರ ಸ್ವಾಧೀನಕ್ಕೇ ಮರಳುತ್ತದೆ. ಈ ವಿಧಿಯಲ್ಲಿ ಬೆರಾರ್ ಪ್ರಾಂತವನ್ನು ನಿರ್ದಿಷ್ಟವಾಗಿ ಹೆಸರಿಸದಿರುವುದರಿಂದ, ಇದು ಬೆರಾರ್ ಪ್ರಾಂತಕ್ಕೆ ಅನ್ವಯವಾಗುವುದಿಲ್ಲವೆಂದು ವಾದಿಸಿದರೆ, ಈ ವಿಧಿಗೆ ಇಲ್ಲದ ಸೀಮಿತತೆಯನ್ನು ಆರೋಪಿಸಿದಂತೆ ಆಗುತ್ತದೆ. ಈ ವಿಧಿಯು ಸಾಮಾನ್ಯವಾಗಿ ಎಲ್ಲಾ ಪ್ರಾಂತಗಳಿಗೂ ಅನ್ವಯವಾಗುವುದರಿಂದ ಬೆರಾರ್ ಪ್ರಾಂತವನ್ನು ವಿಶೇಷವಾಗಿ ಅದರಲ್ಲಿ ನಮೂದಿಸುವುದು ಅನಗತ್ಯ. ಈ ವಿಧಿಯಲ್ಲಿರುವ ಸಾಮಾನ್ಯವಾದ ಅನ್ವಯತೆಯಿಂದ ಬೆರಾರ್ ಪ್ರಾಂತಕ್ಕೆ ವಿನಾಯತಿಯನ್ನು ನೀಡಬೇಕಾಗಿದ್ದಲ್ಲಿ ಮಾತ್ರ ಅದರ ಹೆಸರನ್ನು ವಿಶೇಷವಾಗಿ ನಮೂದಿಸುವ ಅಗತ್ಯವಿರುತ್ತಿತ್ತು. ಹಾಗೆ ಯಾವುದೇ ವಿನಾಯತಿಯನ್ನು ಈ ಮಸೂದೆಯಲ್ಲಿ ಸೇರಿಸಿಲ್ಲವಾಗಿರುವುದರಿಂದ, ಈ ವಿಧಿಯು ಬೆರಾರ್ ಪ್ರಾಂತವನ್ನೂ ಸೇರಿಸಿಕೊಂಡಂತೆ

ಒಪ್ಪಂದ ಅಥವಾ ಕರಾರುಗಳ ಮೂಲಕ ಬ್ರಿಟಿಷ್ ಭಾರತಕ್ಕೆ ಸೇರಿರುವ ಎಲ್ಲಾ ಪ್ರಾಂತಗಳಿಗೂ ಸಮಾನವಾಗಿ ಅನ್ವಯವಾಗುತ್ತದೆ. ಇದನ್ನೆಲ್ಲಾ ಗಮನಿಸಿದರೆ, ೭ನೆಯ ಪರಿಚ್ಛೇದದ ೧(ಬಿ)_ ಉಪವಾಕ್ಯಖಂಡವನ್ನು ವಿ.ಪಿ. ಮೆನನ್ ಅವರು ಪರಿಗಣಿಸಿಲ್ಲವೆಂಬುದು ಯಾರಿಗಾದರೂ ಹೊಳೆಯುತ್ತದೆ ಮತ್ತು ಹೀಗೆ ಮಾಡುವುದರಿಂದ ಅವರು ತಮ್ಮ ಪತ್ರಿಕಾಗೋಷ್ಠಿಯಲ್ಲಿ ತಪ್ಪು ಅಭಿಪ್ರಾಯವೊಂದನ್ನು ಸೃಷ್ಟಿಸಿದ್ದಾರೆ.

**ರಾಜ್ಯಗಳ ವರ್ಗಾವಣೆ**

ನಿಜಾಮರೊಂದಿಗೆ ಹೊಸ ಒಪ್ಪಂದವನ್ನು ಮಾಡಿಕೊಳ್ಳುವವರೆಗೆ ಬೆರಾರ್‌ನ ಸ್ಥಾನಮಾನಗಳು ಈಗಿರುವ ಹಾಗೆಯೇ ಇರುತ್ತದೆ ಎಂದು ಸರ್ದಾರ್ ಪಟೇಲರು ಪತ್ರಿಕಾಗೋಷ್ಠಿಯಲ್ಲಿ ಹೇಳಿರುವುದು ಕೂಡ ತಪ್ಪಾಗಿದೆ. ಸೀಮಾಶುಂಕ, ಸಾಗಾಣಿಕೆ, ಸಂಪರ್ಕ, ಅಂಚೆ ಮತ್ತು ತಂತಿ ಮತ್ತಿತರ ವಿಷಯಗಳ ವರ್ಗಾವಣೆಗೆ ಸಂಬಂಧಿಸಿದ ಕರಾರು ಮತ್ತು ಒಪ್ಪಂದಗಳ ನಡುವೆ ವ್ಯತ್ಯಾಸವನ್ನು ೭ನೆಯ ಪರಿಚ್ಛೇದದ ೧(ಬಿ)(ಸಿ) ಉಪವಾಕ್ಯಖಂಡವು ಮಾಡುತ್ತದೆ ಎಂಬುದು ಇದಕ್ಕೆ ಕಾರಣ. ಕೆಲವು ಕರಾರುಗಳಿಗೆ ಇದು ವಿನಾಯತಿಯನ್ನು ನೀಡುತ್ತದೆ. ಆದರೆ ಇದು ರಾಜ್ಯಗಳ ವರ್ಗಾವಣೆಗೆ ಯಾವುದೇ ವಿನಾಯತಿಯನ್ನೂ ನೀಡುವುದಿಲ್ಲ. ಬೆರಾರ್ ಒಪ್ಪಂದವು ರಾಜ್ಯದ ವರ್ಗಾವಣೆಗೆ ಸಂಬಂಧಪಟ್ಟಿರುವುದರಿಂದ ಮೇಲೆ ಹೇಳಿದ ವಿಧಿಯಿಂದ ಅದಕ್ಕೆ ವಿನಾಯತಿಯು ದೊರಕುವ ಹಾಗಿಲ್ಲ.

ನಾನು ೭ನೆಯ ಪರಿಚ್ಛೇದಕ್ಕೆ ನೀಡಿರುವ ವಿವರಣೆಯನ್ನು ತಪ್ಪು ಎಂದು ಯಾರಾದರೂ ಸಾಧಿಸಿ ತೋರಿಸಿದರೆ, ನನಗಿಂತ ಸಂತೋಷಪಡುವವರು ಯಾರೂ ಇರುವುದಿಲ್ಲ. ನಾನು ಹೇಳಬಯಸುವುದು ಇಷ್ಟೇ, ಭಾರತದ ಹಾಗೂ ಬೆರಾರಿನ ಜನತೆ ೭ನೆಯ ಪರಿಚ್ಛೇದವನ್ನು ಈಗಿರುವ ಹಾಗೆಯೇ ಅರ್ಥೈಸಿಕೊಂಡು, ಮಸೂದೆಯು ಬ್ರಿಟನ್ನಿನ ಕೆಳಮನೆಯ ಮುಂದೆ ಬಂದಾಗ, ಈ ವಿಷಯದಲ್ಲಿ ಸ್ಪಷ್ಟನೆಯನ್ನು ನೀಡಬೇಕೆಂದು ಪ್ರಧಾನ ಮಂತ್ರಿ ಅಟ್ಲೀಯವರನ್ನು ಒತ್ತಾಯಿಸಬೇಕು. (ಅಸೋಸಿಯೇಟೆಡ್ ಪ್ರೆಸ್)

* * * * *

(ದ ಟೈಮ್ಸ್ ಆಫ್ ಇಂಡಿಯಾ, ದಿನಾಂಕ ೧೯೪೭ರ ಜುಲೈ ೮)

# ೨೬

# ಎಳೆದ ಗಡಿರೇಖೆಗಳು ಸಹಜವಾಗಿರದಿದ್ದರೆ, ಅದು ಭಾರತದ ಜನತೆಯ ರಕ್ಷಣೆಗೆ ಗಂಡಾಂತರವನ್ನು ಒಡ್ಡುತ್ತದೆ

ನವದೆಹಲಿ, ೧೯೪೭ರ ಜುಲೈ ೨೦

"ಪಂಜಾಬ್ ಮತ್ತು ಬಂಗಾಳ ಪ್ರಾಂತಗಳ ವಿಭಜನೆಯು ಆ ಎರಡು ಪ್ರಾಂತಗಳವರಿಗೇ ಬಿಡುವುದಕ್ಕೆ ಅದು ಸ್ಥಳೀಯ ಸಮಸ್ಯೆಯಲ್ಲ. ಅದೊಂದು ರಾಷ್ಟ್ರೀಯ ಸಮಸ್ಯೆಯಾಗಿದ್ದು, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಗಡಿರೇಖೆಯನ್ನು ಗುರುತಿಸಬೇಕಾಗಿದೆ ಮತ್ತು ರಕ್ಷಣೆ ಹಾಗೂ ಆಡಳಿತಾತ್ಮಕ ಪರಿಗಣನೆಯನ್ನೂ ಒಳಗೊಂಡಿದೆ." ಎಂದು ಡಾ. ಅಂಬೇಡ್ಕರ್ ಅವರು ಇಂದು ನೀಡಿದ ತಮ್ಮ ಹೇಳಿಕೆಯಲ್ಲಿ ತಿಳಿಸಿದರು.

"ಪಶ್ಚಿಮ ಪಂಜಾಬ್ ಮತ್ತು ಪೂರ್ವ ಪಂಜಾಬ್‌ಗಳ ಮಧ್ಯೆ, ಹಾಗೂ ಪೂರ್ವ ಬಂಗಾಳ ಮತ್ತು ಪಶ್ಚಿಮ ಬಂಗಾಳಗಳ ನಡುವೆ ಗಡಿರೇಖೆಯನ್ನು ನಿಗದಿಗೊಳಿಸುವ ವಿಷಯದಲ್ಲಿ ಪತ್ರಿಕೆಗಳಲ್ಲಿ ಎದ್ದಿರುವ ವಾದ–ವಿವಾದಗಳನ್ನು ಗಮನಿಸಿದಾಗ, ಹಾಗೂ ಮುಸ್ಲಿಮರು ಮತ್ತು ಮುಸ್ಲಿಮೇತರರು ಸೀಮಾ ಆಯೋಗಕ್ಕೆ ಸಲ್ಲಿಸಿರುವ ಜ್ಞಾಪನಾಪತ್ರಗಳನ್ನು ಗಮನಿಸಿದಾಗ, ಸೀಮಾ ಆಯೋಗದ ವರದಿಯ ಪರಿಣಾಮವು ದೇಶಕ್ಕೆ ವಿನಾಶಕಾರಿಯಾಗಿರುತ್ತದೆ ಎಂಬುದು ಸ್ಪಷ್ಟವಾಗಿದೆ.

ಮೊದಲನೆಯದಾಗಿ ಈ ಸಮಸ್ಯೆಯನ್ನು ಸ್ಥಳೀಯ ಸಮಸ್ಯೆಯೆಂದು ಪರಿಗಣಿಸಿ ಅದನ್ನು ತಾವೇ ಹೊಡೆದಾಡಿ ಪರಿಹರಿಸಿಕೊಳ್ಳಲು ಪಂಜಾಬ್ ಮತ್ತು ಬಂಗಾಳ ಪ್ರಾಂತಗಳ ಜನರಿಗೇ ಬಿಡಬೇಕೆಂಬಂತೆ ಭಾವಿಸಲಾಗಿದೆ. ಎರಡನೆಯದಾಗಿ, ಸ್ಥಳೀಯರು ಈ ಸಮಸ್ಯೆಯನ್ನು ಭೂಮಿಯನ್ನು ಕಬಳಿಸುವ ಅವಕಾಶವೆಂದು ಭಾವಿಸಿದ್ದಾರೆ. ಈ ಕಚ್ಚಾಟದಲ್ಲಿ, ಭಾವೋದ್ರೇಕಗೊಂಡು ಮುಸ್ಲಿಮೇತರರನ್ನು ಮುಸ್ಲಿಮೇತರ ಪ್ರದೇಶಗಳಿಗೆ ಕರೆದೊಯ್ಯಲು ಮುಸ್ಲಿಮರ ಪ್ರದೇಶಗಳನ್ನೂ, ಮುಸ್ಲಿಮರನ್ನು ಮುಸ್ಲಿಮರ ಪ್ರದೇಶಗಳಿಗೆ ಕೊಂಡೊಯ್ಯಲು ಮುಸ್ಲಿಮೇತರ ಪ್ರದೇಶಗಳನ್ನೂ ಬೆದಕಿಬೆದಕಿ ನೋಡಲಾಗುತ್ತಿದೆ ಮತ್ತು ಈ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಗಡಿಗಳನ್ನು ಹಿಂದಕ್ಕೆ ಮತ್ತು ಮುಂದಕ್ಕೆ ತಳ್ಳುವ ಪ್ರಯತ್ನಗಳು ನಡೆಯುತ್ತಿವೆ.

ನನ್ನ ಮನಸ್ಸಿಗೆ ಈ ಎರಡೂ ಮಾರ್ಗಗಳೂ ತಪ್ಪಾಗಿವೆ ಮತ್ತು ದಾರಿತಪ್ಪಿಸುವಂತಿವೆ. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಂಪೂರ್ಣ ಹೊಂದಾಣಿಕೆಗಳಿದ್ದಿದ್ದರೆ ಗಡಿರೇಖೆಗಳನ್ನು ಸಮುದಾಯಗಳ ಪ್ರದೇಶಗಳ ಆಧಾರದ ಮೇಲೆ ಹಿಂದೆ ಮುಂದೆ ಸರಿಸುವುದನ್ನು ಸಮರ್ಥಿಸಬಹುದಿತ್ತು. ಆದರೆ ಇದನ್ನು ದೇಶದ ವಿಭಜನೆಗೆ ಆಧಾರವನ್ನಾಗಿ ತೆಗೆದುಕೊಂಡಿರಲಿಲ್ಲ. ಕಾಂಗ್ರೆಸ್ ಪಕ್ಷವಾಗಲೀ, ಮುಸ್ಲಿಂ ಲೀಗಾಗಲೀ ಜನತೆಯ ವರ್ಗಾವಣೆಯನ್ನು ವಿಭಜನೆಯ ಒಂದು ಷರತ್ತನ್ನಾಗಿ ಒಪ್ಪಿಕೊಂಡಿರಲಿಲ್ಲ. ರಾಷ್ಟ್ರೀಯ ಗಡಿಗಳನ್ನು ಯಾವುದೇ ರೀತಿಯಲ್ಲಿ ಹಿಂದೆಮುಂದೆ ತಳ್ಳಿದರೂ, ಬಹು ದೊಡ್ಡ ಪ್ರಮಾಣದ ಮುಸ್ಲಿಮೇತರರು ಪಾಕಿಸ್ತಾನದಲ್ಲಿಯೂ, ಹಾಗೆಯೇ ಬಹು ದೊಡ್ಡ ಪ್ರಮಾಣದ ಮುಸ್ಲಿಮರು ಭಾರತದಲ್ಲಿಯೂ ಉಳಿದುಕೊಂಡಿರುತ್ತಾರೆ. ತಮ್ಮವರನ್ನು ಸೇರಿಸಿಕೊಳ್ಳಲು ಗಡಿಯನ್ನು ಮುಂದಕ್ಕೆ ನೂಕುವುದು ಅಡ್ಡದಾರಿ

ಹಿಡಿಸುವಂತಹುದು ಎಂದು ನನಗೆ ತೋರುತ್ತದೆ.

**ರಕ್ಷಣೆ**

ಎರಡನೆಯದಾಗಿ, ಭಾರತ ಮತ್ತು ಪಾಕಿಸ್ತಾನಗಳು ಎರಡು ಪ್ರತ್ಯೇಕ ಸಾರ್ವಭೌಮ ರಾಷ್ಟ್ರಗಳಾಗಿರದಿದ್ದರೆ ಈ ಸಮಸ್ಯೆಯು ಸ್ಥಳೀಯವಾಗಬಹುದಿತ್ತು. ಆದರೆ, ಪರಿಸ್ಥಿತಿಯು ಹಾಗೆ ಬಂದರೆ, ಎರಡು ರಾಷ್ಟ್ರಗಳೂ ಪರಸ್ಪರರ ಅತಿಕ್ರಮಣದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕಾಗುವುದು ವಾಸ್ತವ ಅಂಶವಾಗಿದೆ.

ಈ ದೃಷ್ಟಿಯಿಂದ ಪಂಜಾಬ್ ಮತ್ತು ಬಂಗಾಳ ಪ್ರಾಂತಗಳ ವಿಭಜನೆಯು ಸ್ಥಳೀಯ ಸಮಸ್ಯೆಯಾಗುವುದು ಸಾಧ್ಯವಿಲ್ಲ. ಎರಡು ರಾಷ್ಟ್ರಗಳ ನಡುವಿನ ಗಡಿಯನ್ನು ನಿಗದಿಗೊಳಿಸಬೇಕಾಗಿರುವುದರಿಂದ ಹಾಗೂ ಈ ಪ್ರಕ್ರಿಯೆಯು ಎರಡೂ ದೇಶಗಳ ರಕ್ಷಣೆ ಹಾಗೂ ಆಡಳಿತದ ದೃಷ್ಟಿಯಿಂದ ನಡೆಯಬೇಕಾಗಿರುವುದರಿಂದ, ಇದು ಅಖಿಲ ಭಾರತದ ಸಮಸ್ಯೆಯಾಗಿದೆ.

ಈ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನದ ಸರಕಾರಗಳು ಸೀಮಾ ಆಯೋಗದ ಮುಂದೆ ನಿಲ್ಲಬೇಕಾಗಿರುವ ಪಕ್ಷಗಳಷ್ಟೇ ಅಲ್ಲದೆ, ಅವುಗಳು ಅಗತ್ಯ ಪಕ್ಷಗಳೂ ಆಗಿವೆ. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಗಡಿಯು ಭಾರತದ ಗಡಿಯಾಗಿರುವುದರಿಂದ, ಎರಡು ದೇಶಗಳ ನಡುವಿನ ಇಂತಹ ಗಡಿಗಳನ್ನು ನಿರ್ದಿಷ್ಟಗೊಳಿಸುವ ಪ್ರಕ್ರಿಯೆಯಲ್ಲಿ ಸಾಮಾನ್ಯವಾಗಿ ನಡೆಯುವಂತೆ, ಭಾರತ ಸರಕಾರದ ರಕ್ಷಣಾ ಇಲಾಖೆಯು ತನ್ನ ಅಧಿಕಾರಿಗಳನ್ನು ಸೀಮಾ ನಿರ್ಣಾಯಕರನ್ನಾಗಿ ನೇಮಿಸಬೇಕೆಂದು ಒತ್ತಾಯಪಡಿಸುವ ಅವಕಾಶವನ್ನು ಹೊಂದಿರಬೇಕಾಗಿತ್ತು.

ಭಾರತ ಸರಕಾರದ ರಕ್ಷಣಾ ಇಲಾಖೆಯು ಹಾಗೆ ಮಾಡುವಲ್ಲಿ ವಿಫಲವಾದುದಷ್ಟೇ ಅಲ್ಲದೆ, ಸೀಮಾ ಸಮಿತಿಯ ಮುಂದೆ ರಕ್ಷಣೆ ಮತ್ತು ಆಡಳಿತದ ದೃಷ್ಟಿಯಿಂದ ತನ್ನ ವಾದವನ್ನು ಮಂಡಿಸುವ ಪ್ರಯತ್ನವನ್ನು ಮಾಡಲೇ ಇಲ್ಲ. ಗಡಿಗಳ ನಿರ್ವಹಣೆಯು ಪೂರ್ವ ಪಂಜಾಬ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಹೊಣೆಯಲ್ಲ ಎಂಬುದನ್ನು ಭಾರತದ ರಕ್ಷಣಾ ಇಲಾಖೆಯು ಮರೆತುಬಿಟ್ಟಿರುವಂತೆ ಕಾಣಿಸುತ್ತದೆ. ಗಡಿಯನ್ನು ನಿಗದಿಗೊಳಿಸುವುದರಲ್ಲಿ ತನ್ನ ಮಾತು ನಡೆಯುವಂತೆ ನೋಡಿಕೊಳ್ಳಬೇಕಾಗಿರುವುದು ಮೊದಲಿನಿಂದ ಕೊನೆಯವರೆಗೂ ಭಾರತ ಸರಕಾರದ, ಅದರಲ್ಲೂ ಮೂಲಭೂತವಾಗಿ ರಕ್ಷಣಾ ಇಲಾಖೆಯ ಹೊಣೆಯಾಗಿರುತ್ತದೆ.

**ಸಹಜ ಗಡಿಗಳು**

ರಕ್ಷಣೆಯ ಹಾಗೂ ಆಡಳಿತದ ದೃಷ್ಟಿಯಿಂದ ನೋಡಿದರೆ, ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಗಡಿಗಳು ಸಹಜ ಗಡಿಗಳಾಗಿರಬೇಕು ಎಂಬುದನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ಅಂದರೆ, ಈ ಗಡಿಗಳು ನದಿಗಳ ಅಥವಾ ಪರ್ವತಗಳ ಸಾಲಿನ ಗುಂಟ ಸಾಗಬೇಕು. ಈ ವಿಷಯದ ಗಂಭೀರತೆಯನ್ನು ತೇಲಿಸಿಬಿಟ್ಟಿರುವುದಷ್ಟೇ ಅಲ್ಲದೆ, ಅದನ್ನು ಸರಿಯಾಗಿ ಪರಿಗಣಿಸಿಯೂ ಇಲ್ಲ. ಸೀಮಾ ಆಯೋಗದ ಪರಿಶ್ರಮದಿಂದ ನಿಗದಿಗೊಳಿಸಲ್ಪಡುವ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಗಡಿಯು ತಕ್ಷಣಕ್ಕೆ ಈ ಸಮಸ್ಯೆಯಿಂದ ಬಾಧಿತರಾಗಿರುವ ಸಮುದಾಯಗಳವರ ದೃಷ್ಟಿಯಿಂದ ತೃಪ್ತಿಕರವಾಗಿದ್ದರೂ, ಭಾರತದ ದೃಷ್ಟಿಯಿಂದ ತೀವ್ರವಾಗಿ ಅತೃಪ್ತಿಕರವಾಗಿಯೇ ಇರುತ್ತದೆ.

ನನ್ನ ಭಯವು ಸಾಕಾರಗೊಂಡರೆ ಮತ್ತು ಸೀಮಾ ಆಯೋಗವು ಗುರುತಿಸುವ ಗಡಿಗಳು ಸಹಜವಾದ ಗಡಿಗಳಾಗಿರದೆ ಇದ್ದರೆ, ಗಡಿರಕ್ಷಣೆಯ ವೆಚ್ಚವು ಭಾರತದ ಪಾಲಿಗೆ ಅತ್ಯಧಿಕವಾಗಿರುತ್ತದೆ ಮತ್ತು ಭಾರತದ ರಕ್ಷಣೆ ಮತ್ತು ಕ್ಷೇಮವನ್ನು ಅದು ಗಂಡಾಂತರಕ್ಕೆ ಸಿಲುಕಿಸುತ್ತದೆ. ಈಗಾಗಲೇ ಸಾಕಷ್ಟು ತಡವಾಗಿದ್ದರೂ,

ಅತಿ ವಿಳಂಬವಾಗುವ ಮೊದಲೇ, ರಕ್ಷಣಾ ಇಲಾಖೆಯು ತನ್ನ ಜಡತೆಯಿಂದ ಮೈಕೊಡವಿಕೊಂಡು ಎದ್ದು ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ ಎಂದು ಆಶಿಸುತ್ತೇನೆ.

– ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ

* * * * *

(ದ ಫ್ರೀ ಪ್ರೆಸ್ ಆಫ್ ಇಂಡಿಯಾ, ದಿನಾಂಕ ೧೯೪೭ರ ಜುಲೈ ೨೧.)

# ೨೭

# ಕಾನೂನಿನ ಮುಂದೆ ಭಾರತೀಯ ಪ್ರಜೆಗಳು ಸಮಾನ ಹಕ್ಕನ್ನು ಹೊಂದಿದ್ದಾರೆ

## ಅಲನ್ ಕ್ಯಾಂಪ್‌ಬೆಲ್ ಅವರೊಂದಿಗೆ ಡಾ. ಅಂಬೇಡ್ಕರ್ ಅವರ ಸಂದರ್ಶನ

ಸರಕಾರೀ ಭವನ, ನವದೆಹಲಿ
ಶನಿವಾರ, ೧೯೪೮ರ ಏಪ್ರಿಲ್ ೨೪

ಈ ರಾತ್ರಿ ಅವರು ಮತ್ತು ನಾನು ದೆಹಲಿಯ ಜಿಮ್‌ಖಾನಾ ಕ್ಲಬ್‌ನ ಹುಲ್ಲು ಹಾಸಿನ ಮೇಲೆ ಕುಳಿತುಕೊಂಡು, ಸುಂದರವಾದ ಮತ್ತು ಪುಟ್ಟ ದೀಪಗಳ ಬೆಳಕಿನಲ್ಲಿ ಊಟಮಾಡಿದೆವು. ಕಾನೂನು ಸಚಿವರು, ಅಸ್ಪೃಶ್ಯರ ನಾಯಕರು ಮತ್ತು ಕಳೆದ ೨೦ ವರ್ಷಗಳಿಂದ ಭಾರತದ ರಾಜಕೀಯದಲ್ಲಿ ವರ್ಣರಂಜಿತ ವ್ಯಕ್ತಿತ್ವದಿಂದ ಪ್ರಕಾಶಿಸುತ್ತಿರುವ ಡಾ. ಅಂಬೇಡ್ಕರ್ ಅವರು ನಮ್ಮ ಮುಖ್ಯ ಅತಿಥಿಗಳಾಗಿದ್ದರು. ಕಾನೂನಿನ ಪುಸ್ತಕಗಳಿಂದ ಅಸ್ಪೃಶ್ಯತೆಯನ್ನು ಅಂತಿಮವಾಗಿ ತೆಗೆದುಹಾಕುವ ಭಾರತದ ನೂತನ ಸಂವಿಧಾನದ ಮುಖ್ಯ ಕರ್ತೃಗಳಲ್ಲಿ ಅವರೂ ಒಬ್ಬರು. ಈ ವಿಮೋಚನೆಯ ಅಂಗವಾಗಿ, ಅಸ್ಪೃಶ್ಯ ಜಾತಿಗೆ ಸೇರಿದವರಾಗಿರುವ ಡಾ. ಅಂಬೇಡ್ಕರ್ ಅವರು ಇತ್ತೀಚೆಗೆ ಬ್ರಾಹ್ಮಣ ವೈದ್ಯೆಯೊಬ್ಬರನ್ನು ಮದುವೆಯಾದರು. ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯಗಳನ್ನು ತಕ್ಷಣವೇ ಬದಲಾಯಿಸಲು ಸಾಧ್ಯವಾಗದೆ ಇದ್ದರೂ, ಈ ಘಟನೆಯು ಸಮಾಜದಲ್ಲಿ ಸಾಕಷ್ಟು ಸಂಚಲನವನ್ನು ಉಂಟುಮಾಡಿದೆ. ಇಂದಿನ ರಾತ್ರಿಯ ಭೋಜನಕೂಟದ ವೇಳೆ ಅವರ ಪತ್ನಿಯೂ ಅವರ ಸಂಗಡ ಇದ್ದರು, ಆದರೆ, ಭಾರತೀಯ ಸ್ತ್ರೀಯರಲ್ಲಿ ಸಾಮಾನ್ಯವಾಗಿರುವ ಪದ್ಧತಿಯಂತೆ, ಆಕೆಯೂ ಇಂದಿನ ಕೂಟದಲ್ಲಿ ಹೆಚ್ಚು ಮಾತನಾಡಲಿಲ್ಲ.

ಬಹು ಉಲ್ಲಸಿತ ಮನೋಭಾವದಲ್ಲಿದ್ದ ಡಾ. ಅಂಬೇಡ್ಕರ್ ಅವರು ಹೊಸ ಸಂವಿಧಾನದ ಕೆಲವು ಲಕ್ಷಣಗಳನ್ನು ವಿಶ್ಲೇಷಿಸಿದರು. ಭಾರತದ ನ್ಯಾಯಾಂಗಕ್ಕೆ ಮೀಸಲಾಗಿರಿಸಿರುವ ವಿಶೇಷ ಅಧಿಕಾರಗಳು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರ್ವೋಚ್ಚ ನ್ಯಾಯಾಲಯಗಳ ಅಧಿಕಾರಕ್ಕಿಂತಲೂ ಹೆಚ್ಚಿನ ವೈಶಾಲ್ಯವುಳ್ಳದ್ದು ಎಂಬುದನ್ನು ಅವರು ವಿವರಿಸಿದರು. ಇದಕ್ಕೆ ಉದಾಹರಣೆಗಾಗಿ, ಈಗಲೂ ಜಾರಿಯಲ್ಲಿರುವ ೧೯೩೫ರ ಅಧಿನಿಯಮಕ್ಕೆ ಹೊಸ ಸಂವಿಧಾನದ ಅಡಿಯಲ್ಲಿ ಸುಮಾರು ಇನ್ನೂರೈವತ್ತು ಪರಿಚ್ಛೇದಗಳನ್ನು ಸೇರಿಸಲಾಗಿದೆ ಎಂದು ಅವರು ಹೇಳಿದರು.

ನಾವು ಸಚಿವ ಸಂಪುಟವುಳ್ಳ ಸರಕಾರದ ಬಗ್ಗೆ ಮಾತನಾಡಿದೆವು. ಡಾ. ಅಂಬೇಡ್ಕರ್ ಅವರು ಭಾರತದಲ್ಲಿನ ಸದ್ಯದ ವ್ಯವಸ್ಥೆಯು ಬಹಳ ಮಂದಗತಿಯಿಂದ ಸಾಗುತ್ತಿದೆಯೆಂಬ ಆಕ್ಷೇಪಣೆಯ ಬಗ್ಗೆಯೂ ಮಾತನಾಡಿದರು. ಸಮಸ್ಯಾತ್ಮಕ ವಿಷಯಗಳು ಎರಡು ಇಲಾಖೆಗಳಿಗೆ ಸಂಬಂಧಿಸಿದ್ದರೆ, ಅಂತಹ ವಿಷಯಗಳನ್ನು ಸಂಬಂಧಪಟ್ಟ ಇಲಾಖೆಯ ಸಚಿವರಿಬ್ಬರೂ ಚರ್ಚಿಸಿ ತಕ್ಷಣವೇ ಪರಿಹರಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ಸೆಡ್ ಅವರು ಸಲಹೆಮಾಡಿರುವ 'ಇಲಾಖಾ-ರಹಿತ ಮುಖಂಡರುಗಳ ಅಧೀನದಲ್ಲಿ

ಇಲಾಖೆಯ ಉಪಮುಖ್ಯಸ್ಥರುಗಳು ಕಾರ್ಯನಿರ್ವಹಿಸುವಂತಹ ವ್ಯವಸ್ಥೆ'ಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೊರಗೆಡಹಿದರು. ಹೊಸ ಸಂವಿಧಾನವು ಅಂತಿಮವಾಗಿ ಅಂಗೀಕರಿಸಲ್ಪಡುವ ಮೊದಲೇ ಮೌಂಟ್ ಬೇಟನ್ ಅವರು ತೆರಳುತ್ತಿರುವುದರ ಬಗ್ಗೆ ಅವರು ವಿಷಾದವನ್ನು ವ್ಯಕ್ತಪಡಿಸಿದರು. ಕಾಮನ್‌ವೆಲ್ತ್‌ಗೆ ಸಂಬಂಧಪಟ್ಟ ವಿಷಯಗಳು ವಿಧಾಯಕ ಸಭೆಯ ಹೊರಗೆ ಚರ್ಚಿಸಲ್ಪಡುವ ಅವಕಾಶಗಳಿವೆಯೆಂದು ಅವರು ಭಾವಿಸಿದರು. (ಮೌಂಟ್‌ಬೇಟನ್ ಅವರೊಂದಿಗಿನ ಪಯಣ – ಪುಟಗಳು ೩೧೮–೩೨೦, ಅಲನ್ ಕ್ಯಾಂಪ್‌ಬೆಲ್ – ಜಾನ್ಸನ್)

ಪ್ರಕೃತ ರಚನೆಯ ಹಂತದಲ್ಲಿರುವ ಭಾರತದ ಸಂವಿಧಾನವು ಮತ್ತು ಲಾರ್ಡ್ ಮೌಂಟ್‌ಬೇಟನ್ ಅವರ ಅಧಿಕಾರಾವಧಿ –ಇವೆರಡೂ ಪಾಶ್ಚಿಮಾತ್ಯ ಸ್ವಾತಂತ್ರ್ಯದ ಸನ್ನದಿನ ಬಹು ದೊಡ್ಡ ಸಂಶ್ಲೇಷಣೆಯಾಗಿದೆ. ಸಂವಿಧಾನದ ದೃಷ್ಟಿ ಮತ್ತು ವಾಸ್ತವಿಕ ಭಾರತೀಯ ಜೀವನ ಇವುಗಳ ನಡುವೆ ಇರುವ ಅಗಾಧವಾದ ಅಂತರವು ಹೊಸ ದೃಷ್ಟಿಯನ್ನು ಅನುಪಯುಕ್ತವನ್ನಾಗಿ ಮಾಡುವುದಿಲ್ಲ. ಇದು ಬ್ರಿಟಿಷ್ ಚಿಂತನೆಗಳು ಸ್ವತಂತ್ರ ಮನೋಭಾವದ ಮೇಲೆ ಮತ್ತು ಕೋಮುಮನೋಭಾವದ ಬೇರಿಗೆ ಹೇಗೆ ಕೊಡಲಿಯ ಪೆಟ್ಟನ್ನು ನೀಡುವ ಉದ್ದೇಶಗಳ ಮೇಲೆ ಅದ್ಭುತವಾದ ಪ್ರಭಾವವನ್ನು ಬೀರಿದೆ ಎಂಬುದಕ್ಕೆ ಉದಾಹರಣೆಯಾಗಿದೆ. ಹಿಂದೂ ಧಾರ್ಮಿಕ ನೀತಿಯಡಿಯಲ್ಲಿ ಇಲ್ಲಿಯವರೆಗೂ ತಮ್ಮ ನೆರಳಿನಿಂದಲೇ ಆಹಾರವನ್ನು ಮೈಲಿಗೆಯನ್ನಾಗಿಸುವಂತಹ ಜೀವನವನ್ನು ನಡೆಸುತ್ತಿದ್ದ ಸುಮಾರು ಎಂಟು ಕೋಟಿ ಅಸ್ಪೃಶ್ಯರಿಗೆ ಹೊಸ ಆಸೆಯನ್ನು ಈ ಸಂವಿಧಾನವು ನೀಡುತ್ತದೆ ಮತ್ತು ಕಾನೂನಿನ ಮುಂದೆ ಅವರನ್ನು ಇತರರಿಗೆ ಸಮಾನವಾದ ಪ್ರಜೆಗಳನ್ನಾಗಿ ಮಾಡುತ್ತದೆ. ನೆಹರೂ ಸರಕಾರದಲ್ಲಿನ ಪ್ರಮುಖರಲ್ಲಿ ಒಬ್ಬರಾಗಿರುವ ಮತ್ತು ಅಸ್ಪೃಶ್ಯರ ವಿಖ್ಯಾತ ಮುಖಂಡರೂ ಆಗಿರುವ ಅಂಬೇಡ್ಕರ್ ಅವರು ಈ ಸಂವಿಧಾನವನ್ನು ರೂಪಿಸುವವರಲ್ಲಿ ಮುಖ್ಯರಾಗಿದ್ದಾರೆ ಎನ್ನುವುದು ಬಹಳ ಗಮನಾರ್ಹವಾಗಿದೆ.

* * * * *

(ಮೌಂಟ್‌ಬೇಟನ್ ಅವರೊಂದಿಗಿನ ಪಯಣ – ಪುಟಗಳು ೩೬೧–೩೬೨, ಅಲನ್ ಕ್ಯಾಂಪ್‌ಬೆಲ್ – ಜಾನ್ಸನ್; ಖೈರ್ಮೋಡೆ –ಸಂಪುಟ ೧೦, ಪುಟ ೩೬–೩೮ರಲ್ಲಿ ಪುನರ್ಮುದ್ರಿತ)

# ೨೮
# ಕೇಂದ್ರ ಮತ್ತು ಪ್ರಾಂತಗಳಿಗೆ ಒಂದೇ ಅಧಿಕೃತ ಭಾಷೆ

ಬಾಂಬೆ, ೧೯೪೮ರ ಅಕ್ಟೋಬರ್ ೧೫,

ರಾಜ್ಯಗಳನ್ನು ಭಾಷೆಯ ಆಧಾರದ ಮೇಲೆ ಪುನರ್ವಿಂಗಡಣೆ ಮಾಡುವುದನ್ನು ಅಂಗೀಕರಿಸಬೇಕು ಮತ್ತು ರಾಜ್ಯಗಳ ಅಧಿಕೃತ ಭಾಷೆಗಳಿಗೆ ಕೇಂದ್ರದ ಅಧಿಕೃತ ಭಾಷೆಯ ಸ್ಥಾನಮಾನಗಳೇ ಇರಬೇಕು ಎಂದು ಭಾರತ ಸರಕಾರದ ಕಾನೂನು ಮಂತ್ರಿಗಳಾದ ಡಾ. ಅಂಬೇಡ್ಕರ್ ಅವರು ಭಾಷಾವಾರು ಪ್ರಾಂತ ರಚನಾ ಆಯೋಗಕ್ಕೆ ಸಲ್ಲಿಸಿರುವ ತಮ್ಮ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಏಕತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಮಾತ್ರ ತಾವು ಭಾಷಾವಾರು ಪ್ರಾಂತಗಳ ರಚನೆಗಾಗಿ ಎದ್ದಿರುವ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಸಿದ್ಧರಿರುವುದಾಗಿ ತಿಳಿಸಿದರು.

ಪ್ರಜಾಪ್ರಭುತ್ವವು ಬಯಸುವ ಸಾಮಾಜಿಕ ಹೊಂದಾಣಿಕೆಯನ್ನು ಭಾಷಾವಾರು ರಾಜ್ಯಗಳು ಮಾತ್ರ ನೀಡುತ್ತವೆ. ಹೊಂದಾಣಿಕೆಯಿಲ್ಲದ ಸಮಾಜದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗದಿರುವ ಕಾರಣವೆಂದರೆ ಅಧಿಕಾರವು ನಿಷ್ಪಕ್ಷಪಾತವಾಗಿ ಉಪಯೋಗಿಸಲ್ಪಡುವ ಬದಲು ಒಬ್ಬರು ಇನ್ನೊಬ್ಬರನ್ನು ತುಳಿಯಲು ಸಹಾಯಮಾಡುತ್ತದೆ.

ಮಹಾರಾಷ್ಟ್ರ ಪ್ರಾಂತದ ಬಗೆಗಿನ ಪ್ರಶ್ನೆಗೆ ಉತ್ತರಿಸುತ್ತಾ ಡಾ. ಅಂಬೇಡ್ಕರ್ ಅವರು ಅದರ ವೈಶಾಲ್ಯ, ಜನಸಂಖ್ಯೆ ಇವುಗಳ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟು, ಈ ಅಂಕಿಅಂಶಗಳ ಪ್ರಕಾರ ಮಹಾರಾಷ್ಟ್ರದ ನಿರ್ಮಾಣವು ಕಾರ್ಯಸಾಧ್ಯವಾಗಿರುವುದಷ್ಟೇ ಅಲ್ಲದೆ, ಅದರ ಜನಸಂಖ್ಯೆ ಮತ್ತು ಆದಾಯದ ದೃಷ್ಟಿಯಿಂದ ಕೂಡ ಬಲಾಢ್ಯ ಪ್ರಾಂತವಾಗುತ್ತದೆ ಎಂದು ಹೇಳಿದರು. ಮಹಾರಾಷ್ಟ್ರದ ಒಳಗೆ ಉಪ ಪ್ರಾಂತಗಳನ್ನು ನಿರ್ಮಿಸುವ ಯೋಚನೆಯನ್ನು ತಿರಸ್ಕರಿಸುತ್ತಾ ಅವರು, ಅವು ಸಾಮಾನ್ಯ ಸಮಯದಲ್ಲಿ ಹೊರೆಯಾಗಿಯೂ ಮತ್ತು ತುರ್ತುಪರಿಸ್ಥಿತಿಗಳಲ್ಲಿ ದುರ್ಬಲತೆಯ ಮೂಲವಾಗಿಯೂ ಇರುತ್ತದೆ ಎಂದು ಹೇಳಿದರು.

ಕೆಲವು ಪತ್ರಿಕೆಗಳಲ್ಲಿ ಬಾಂಬೆಯನ್ನು ಮಹಾರಾಷ್ಟ್ರದೊಳಗೆ ಸೇರಿಸುವುದರ ವಿರುದ್ಧ ಹಲವಾರು ಲೇಖನಗಳನ್ನು ಪ್ರಸ್ತಾಪಿಸಿ, ಡಾ. ಅಂಬೇಡ್ಕರ್ ಅವರು "ಮಹಾರಾಷ್ಟ್ರ ಮತ್ತು ಬಾಂಬೆ ಇವು ಬೇರೆಬೇರೆಯಾದವುಗಳಲ್ಲ, ಬದಲಿಗೆ ಅವು ಅವಿಭಾಜ್ಯವಾಗಿವೆ. ಅಲ್ಲದೆ, ಇವುಗಳನ್ನು ಪ್ರತ್ಯೇಕಿಸುವುದು ಎರಡೂ ಪ್ರದೇಶಗಳಿಗೆ ಮಾರಕವಾಗುತ್ತದೆ. ಆಯೋಗವು ಬಾಂಬೆಯನ್ನು ಮಹಾರಾಷ್ಟ್ರದಿಂದ ಪ್ರತ್ಯೇಕಿಸುವುದನ್ನು ಒಪ್ಪಿಕೊಂಡರೆ, ಕಲ್ಕತ್ತಾವನ್ನು ಕೂಡ ಪಶ್ಚಿಮ ಬಂಗಾಳದಿಂದ ಪ್ರತ್ಯೇಕಿಸಬೇಕು ಎಂದು ಶಿಫಾರಸ್ಸು ಮಾಡುವುದಕ್ಕೆ ಸಿದ್ಧವಿರಬೇಕು. ಏಕೆಂದರೆ, ಮಹಾರಾಷ್ಟ್ರೀಯರು ಬಾಂಬೆಯ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಬಂಡವಾಳವನ್ನಲ್ಲದಿದ್ದರೂ ಕಾರ್ಮಿಕ ಬಲವನ್ನಾದರೂ ಕೊಡುತ್ತೇವೆಂದು ಹೇಳಬಹುದು ಆದರೆ ಬಂಗಾಳಿಗಳು ಅಷ್ಟನ್ನೂ ಹೇಳಿಕೊಳ್ಳಲಾಗುವುದಿಲ್ಲ" ಎಂದು ವಾದಿಸಿದರು.

* * * * *

---

ದ ಸಂಡೇ ಕ್ರಾನಿಕಲ್, ದಿನಾಂಕ ೧೯೪೮ರ ಅಕ್ಟೋಬರ್ ೧೭.

# ೨೯
# ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್

ಹಣಕಾಸಿನ ಮಂತ್ರಿಗಳು — ಸಂ. ೮೯೫೫–ಆಫ್/೪೮
ಭಾರತ — ನವದೆಹಲಿ
೧೯೪೮ರ ನವೆಂಬರ್ ೧೯

ಪ್ರಿಯ ಅಂಬೇಡ್ಕರ್,

ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್‌ನ ಬಗ್ಗೆ ಟಿಪ್ಪಣಿಯೊಂದನ್ನು ನನಗೆ ಕಳುಹಿಸಿದ್ದಕ್ಕೆ ನಿಮಗೆ ಕೃತಜ್ಞತೆಗಳು. ಕ್ಲಿಷ್ಟವಾದ ಸಮಸ್ಯೆಯೊಂದರ ಶಕ್ತವಾದ, ಆದರೆ ಸುಲಲಿತವಾದ ವಿಶ್ಲೇಷಣೆಯಾಗಿರುವ ಅದನ್ನು ನಾನು ಆಸಕ್ತಿಯಿಂದ ಓದಿದೆ.

ನಿಮ್ಮ ಟಿಪ್ಪಣಿಯನ್ನು ಹಿಂದುರಿಗಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ,
ಸಹಿ (ಅಸ್ಪಷ್ಟವಾಗಿದೆ)

ಮಾನ್ಯ ಡಾ. ಬಿ.ಆರ್. ಅಂಬೇಡ್ಕರ್,
ಕಾನೂನು ಸಚಿವರು, ಭಾರತ ಸರಕಾರ,
ನವದೆಹಲಿ

---

ವಿಶೇಷಾಧಿಕಾರಿಗಳು ಈ ಲೇಖನವು ಮಹಾರಾಷ್ಟ್ರದ ಅಡ್ಮಿನಿಸ್ಟ್ರೇಟರ್ ಜನರಲ್ ಅವರು ೧೯೭೭ರಲ್ಲಿ ಕಳುಹಿಸಿದ ದಾಖಲೆಗಳಲ್ಲಿ ದೊರೆಯಿತೆಂದು ಬರೆದಿದ್ದಾರೆ.

'ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್' ಲೇಖನವು ಡಾ. ಅಂಬೇಡ್ಕರ್ ಅವರಿಂದ ಭಾರತದ ಹಣಕಾಸು ಸಚಿವರಿಗೆ ಕಳುಹಿಸಲ್ಪಟ್ಟಿತ್ತು ಮತ್ತು ಅದನ್ನು ಹಣಕಾಸು ಸಚಿವರು ಮೇಲಿನ ಪತ್ರದೊಂದಿಗೆ ಹಿಂದುರಿಗಿಸಿದ್ದರು. ಪತ್ರದಲ್ಲಿನ ಸಹಿಯು ಅಸ್ಪಷ್ಟವಾಗಿದೆ – ಸಂಪಾದಕರು

# ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್

## ೧. ಸಂಬಂಧದ ಆವಶ್ಯಕತೆ

ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್‌ಗಳ ನಡುವೆ ಒಂದು ಸಂಬಂಧವನ್ನು ಸ್ಥಾಪಿಸುವ ಪ್ರಶ್ನೆಯನ್ನು ಪರಿಶೀಲಿಸುವಾಗ ಎರಡು ಪ್ರಶ್ನೆಗಳು ಪರಿಗಣನೆಗೆ ಬರುತ್ತವೆ. ಮೊದಲನೆಯದು, ಭಾರತವು ಬ್ರಿಟಿಷ್ ಕಾಮನ್‌ವೆಲ್ತ್‌ನೊಂದಿಗಿನ ಎಲ್ಲಾ ಸಂಬಂಧಗಳನ್ನೂ ಕಡಿದುಕೊಂಡು, ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಬೇಕೇ ಎಂಬುದು. ಎರಡನೆಯದು, ಭಾರತವು ಬ್ರಿಟಿಷ್ ಕಾಮನ್‌ವೆಲ್ತ್‌ನೊಂದಿಗಿನ ಎಲ್ಲಾ ಸಂಬಂಧಗಳನ್ನೂ ಕಡಿದುಕೊಳ್ಳಬಯಸದಿದ್ದರೆ, ಇವೆರಡರ ನಡುವೆ ಇರಬೇಕಾದ ಸಂಬಂಧವು ಯಾವ ರೀತಿಯದಾಗಿರಬೇಕು ಎಂಬುದು.

೨ ಮೊದಲನೆಯ ಪ್ರಶ್ನೆಯ ಉತ್ತರದ ಬಗ್ಗೆ ಹೆಚ್ಚಿಗೆ ಭಿನ್ನಾಭಿಪ್ರಾಯಗಳು ಇರುವ ಹಾಗೆ ಕಾಣುವುದಿಲ್ಲ. ತೀವ್ರವಾದಿಗಳನ್ನು ಹೊರತು ಪಡಿಸಿದರೆ, ಬಹುಸಂಖ್ಯಾತರು ಭಾರತವು ಬ್ರಿಟಿಷ್ ಕಾಮನ್‌ವೆಲ್ತ್‌ನೊಂದಿಗಿನ ಸಂಬಂಧವನ್ನು ಕಡಿದುಕೊಳ್ಳುವುದರ ವಿರುದ್ಧವಾಗಿದ್ದಾರೆ. ಈ ಸಂಬಂಧವನ್ನು ಮುಂದುವರೆಸಿಕೊಂಡು ಹೋಗುವುದು ಭಾರತದ ಬಯಕೆ ಮಾತ್ರವಲ್ಲ, ಕಾಮನ್‌ವೆಲ್ತ್ ಕೂಡ ಹಾಗೆಯೇ ಬಯಸುತ್ತದೆ. ಕಾಮನ್‌ವೆಲ್ತ್‌ನ ಹಿತದ ದೃಷ್ಟಿಯಿಂದ ಭಾರತವು ಅದರೊಂದಿಗಿನ ಸಂಬಂಧವನ್ನು ಕಡಿದುಕೊಳ್ಳಬಾರದು. ಭಾರತ ಮತ್ತು ಕಾಮನ್‌ವೆಲ್ತ್‌ಗಳ ನಡುವಿನ ಸಂಬಂಧವು ಕಾಮನ್‌ವೆಲ್ತ್‌ಗೆ ಅತ್ಯಾವಶ್ಯಕವಾಗಿದೆ. ಕಾಮನ್‌ವೆಲ್ತ್‌ನ ರಕ್ಷಣೆಯು ಅದು ಭಾರತದೊಂದಿಗಿನ ಸಂಬಂಧದ ಮೇಲೆ ನಿಂತಿದೆ. ಅದೇ ಸಮಯದಲ್ಲಿ ಭಾರತವು ಈ ವಿಷಯದಲ್ಲಿ ಉದಾಸೀನತೆಯನ್ನು ತೋರುವ ಹಾಗಿಲ್ಲ. ಕಾರಣ, ಕಾಮನ್‌ವೆಲ್ತ್‌ನೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳದಿರುವುದು ಭಾರತಕ್ಕೂ ಅಸಾಧ್ಯವಾಗಿರುತ್ತದೆ. ಸ್ವತಂತ್ರ ದೇಶವಾಗಿ ತನ್ನ ಭವಿಷ್ಯವನ್ನು, ಇತರ ದೇಶಗಳನ್ನು ಅವಲಂಬಿಸದೆ ತಾನೇ ಸ್ವತಂತ್ರವಾಗಿ ರೂಪಿಸಿಕೊಳ್ಳುವಲ್ಲಿ ಮತ್ತು ವಿಶ್ವದ ವ್ಯವಹಾರಗಳಲ್ಲಿ ತನ್ನ ಅಭಿಪ್ರಾಯಗಳನ್ನು ಅಧಿಕಾರಯುಕ್ತವಾಗಿ ಮಂಡಿಸಲು ಭಾರತಕ್ಕೆ ಎರಡು ಅಂಶಗಳ ಆವಶ್ಯಕತೆಯಿದೆ. ಸ್ವತಂತ್ರ ಭಾರತವು ಈ ಸ್ಥಿತಿಯನ್ನು ತಲುಪುವವರೆಗೆ ಸ್ವತಂತ್ರವಾಗಲು ಸಾಧ್ಯವಿಲ್ಲ. ಕೈಗಾರಿಕೀಕರಣದಲ್ಲಿ ಉನ್ನತಿಯನ್ನು ಸಾಧಿಸುವುದು ಸಿದ್ಧ ಅಂಶವಾಗುವವರೆಗೆ ಮತ್ತು ರಕ್ಷಣೆ ಮತ್ತು ಆಕ್ರಮಣಗಳೆರಡಕ್ಕೂ ಸಮರ್ಥವಾಗಿರುವ ಮಿಲಿಟರಿ ಬಲವನ್ನು ಅಭಿವೃದ್ಧಿಪಡಿಸುವವರೆಗೆ ಈ ಸ್ಥಿತಿಯನ್ನು ತಲುಪುವುದು ಸಾಧ್ಯವಿಲ್ಲ. ಈ ಉದ್ದೇಶವನ್ನು ಸಾಧಿಸಲು ತನ್ನಲ್ಲಿ ಈಗ ಇಲ್ಲದಿರುವ ತಾಂತ್ರಿಕ ಉಪಕರಣಗಳನ್ನು ಪಡೆಯುವುದು ಅಗತ್ಯ ಮತ್ತು ಬಾಹ್ಯ ಸಹಾಯವಿಲ್ಲದೆ ಇದನ್ನು ಗಳಿಸುವುದು ಅಸಾಧ್ಯ. ಇಂತಹ ಬಾಹ್ಯ ಸಹಾಯವು ಬೇರೆಯ ದೇಶಗಳಿಂದ ದೊರೆಯುವುದಕ್ಕಿಂತ ಸುಲಭವಾಗಿ ಬ್ರಿಟಿಷ್ ಕಾಮನ್‌ವೆಲ್ತ್‌ನಿಂದ ದೊರಕುವ ಸಾಧ್ಯತೆಯಿದೆ. ಆದ್ದರಿಂದ, ತನ್ನ ಹಿತದೃಷ್ಟಿಯಿಂದಲೇ ಭಾರತವು ಕಾಮನ್‌ವೆಲ್ತ್‌ನೊಂದಿಗೆ ಸಂಬಂಧವನ್ನು ಹೊಂದಿರಬೇಕು.

## ೨. ರಾಷ್ಟ್ರೀಯ ಹಾಗೂ ಸ್ವತಂತ್ರ ದೇಶದ ಸ್ಥಾನಗಳು

೩. ಎರಡನೆಯ ಪ್ರಶ್ನೆಯ ಪರಿಹಾರವು ಇಷ್ಟು ಸುಲಭವಾಗಿಲ್ಲ. ಇದು ಇನ್ನಷ್ಟು ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಭಾರತವು ರಾಷ್ಟ್ರದ ಸ್ಥಾನವನ್ನು ಸಾಧಿಸಿದೆ. ಸ್ವತಂತ್ರ ದೇಶದ ಸ್ಥಾನವನ್ನು ಇದರೊಂದಿಗೆ ವಿನಿಮಯಮಾಡಿಕೊಳ್ಳಬೇಕೆ? ನಾವು ಪರಿಹರಿಸಬೇಕಾಗಿರುವ ಮೊದಲ ಸಮಸ್ಯೆ ಇದು. ಕೇವಲ ತರ್ಕದ

ದೃಷ್ಟಿಯಿಂದ ನೋಡಿದಾಗ ಇದರಲ್ಲಿ ಕಷ್ಟವೇನೂ ಇಲ್ಲ. ಅಂತಹ ದೃಷ್ಟಿಗೆ ರಾಷ್ಟ್ರೀಯ ಹಾಗೂ ಸ್ವತಂತ್ರದೇಶಗಳ ಸ್ಥಾನಗಳಲ್ಲಿ ವ್ಯತ್ಯಾಸವೂ ಕಾಣುವುದಿಲ್ಲ. ಸ್ವತಂತ್ರ ಸ್ಥಾನವೆಂದರೆ, ಯಾವುದೇ ರೀತಿಯಲ್ಲಿಯೂ ಪರಾಧೀನವಾಗದಿರುವುದು. ಪ್ರತಿಯೊಂದು ಸ್ವತಂತ್ರ ದೇಶವು ಸ್ವಾಯತ್ತವಾಗಿರುವುದಷ್ಟೇ ಅಲ್ಲದೆ ಮತ್ತೊಂದು ಸ್ವತಂತ್ರ ದೇಶಕ್ಕೆ ಸಮಾನವಾಗಿರುವುದು. ಕಾಮನ್‌ವೆಲ್ತ್ ಯೋಜನೆಯಡಿಯಲ್ಲಿ ಯುನೈಟೆಡ್ ಕಿಂಗ್‌ಡಮ್ ಅಂತಹ ಒಂದು ದೇಶ ಮಾತ್ರ. ಇತ್ತೀಚಿನ ಎರಡು ಘಟನೆಗಳ ನೆರಳಿನಲ್ಲಿ ವಿಚಾರಿಸಿದಾಗ ಯಾವುದೇ ದೇಶವು ಎಷ್ಟು ಸ್ವಾಯತ್ತ ಮತ್ತು ಸ್ವತಂತ್ರವೆಂಬುದನ್ನು ತಿಳಿದುಕೊಳ್ಳಬಹುದು. ಮೊದಲನೆಯದು ದಕ್ಷಿಣ ಆಫ್ರಿಕಾಕ್ಕೆ ಸಂಬಂಧಿಸಿದುದು. ಕಾಮನ್‌ವೆಲ್ತ್‌ನ ಇತರ ದೇಶಗಳಿಗೆ ರಾಜರಾಗಿರುವುದು ಮುಕ್ತಾಯವಾದ ನಂತರವೂ ಕಿಂಗ್ ಎಡ್ವರ್ಡ್ ದಕ್ಷಿಣ ಆಫ್ರಿಕಾಕ್ಕೆ ಎರಡು ದಿನಗಳ ಮಟ್ಟಿಗೆ ರಾಜರಾಗಿಯೇ ಮುಂದುವರೆದಿದ್ದರು. ಇನ್ನೊಂದು ಪ್ರಕರಣವೆಂದರೆ ಐರ್ಲೆಂಡಿನದು. ಎಲ್ಲಾ ಸ್ವತಂತ್ರ ದೇಶಗಳೂ ಯುದ್ಧದಲ್ಲಿ ಭಾಗವಹಿಸುತ್ತಿದ್ದಾಗ, ಐರ್ಲೆಂಡ್ ತಟಸ್ಥವಾಗಿರಲು ನಿರ್ಧರಿಸಿದ್ದಿತು. ಕಾಮನ್‌ವೆಲ್ತ್‌ನ ಅಡಿಯಲ್ಲಿ ಸ್ವತಂತ್ರ ದೇಶಗಳು ಎಷ್ಟು ಸ್ವಾಯತ್ತ ಹಾಗೂ ಸ್ವತಂತ್ರವಾಗಿರಬಲ್ಲವು ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಬೂತಿನ ಆವಶ್ಯಕತೆಯಿಲ್ಲವೆಂಬದು ನನ್ನ ಅಭಿಪ್ರಾಯ. ಇದು ಎಲ್ಲಾ ವಿಧದಲ್ಲಿಯೂ ರಾಷ್ಟ್ರೀಯ ಸ್ಥಾನಕ್ಕೆ ಸಮಾನವಾದುದು.

ಈಗಿನ ಪ್ರಶ್ನೆ – ರಾಷ್ಟ್ರೀಯ ಸ್ಥಾನವನ್ನು ಗಳಿಸಿದ ನಂತರ ಸ್ವತಂತ್ರ ದೇಶದ ಸ್ಥಾನವನ್ನು ಭಾರತವು ಒಪ್ಪಿಕೊಳ್ಳಬಹುದೇ?. ನನ್ನ ಪ್ರಕಾರ ಹಾಗೆ ಆಗುವುದು ಸಾಧ್ಯವಿಲ್ಲ. ಕಾರಣಗಳು ಸ್ಪಷ್ಟವಾಗಿಯೇ ಇವೆ. ಇವೆರಡೂ ಸ್ಥಿತಿಗಳು ಸಾಂವಿಧಾನಿಕವಾದವು ಮತ್ತು ಭಾವನಾತ್ಮಕವಾದವು. ಸ್ವತಂತ್ರ ದೇಶದ ಲಕ್ಷಣಗಳು ಮೂರು – ೧) ರಾಜರಲ್ಲಿ ಇರಬೇಕಾದ ನಿಷ್ಠೆ, ೨) ಅವರೇ ನೇಮಿಸಿದ ಗವರ್ನರ್ ಜನರಲ್ ಅವರ ಮೂಲಕ ರಾಜರನ್ನು ದೇಶದ ಮುಖ್ಯ ಆಡಳಿತಗಾರನೆಂಬುದನ್ನು ಮಾನ್ಯಮಾಡುವುದು, ೩) ಆ ದೇಶದ ಸಂಸತ್ತಿನ ಸದಸ್ಯರು ರಾಜನಿಷ್ಠೆಯ ಪ್ರಮಾಣವನ್ನು ಸ್ವೀಕರಿಸುವುದು. ಈ ದೇಶಗಳ ಸಂವಿಧಾನವನ್ನು ಪರಿಶೀಲಿಸಿದರೆ, ಅದರಲ್ಲಿ ಈ ಮೂರೂ ಅಂಶಗಳಿರುವುದನ್ನು ಕಾಣಬಹುದು.

೫. ಸ್ವತಂತ್ರ ಭಾರತದ ಸಂವಿಧಾನದ ಕರಡು ಈ ಯಾವ ಲಕ್ಷಣಗಳನ್ನೂ ಒಳಗೊಂಡಿಲ್ಲ. ಸಂವಿಧಾನದ ಕರಡಿನಲ್ಲಿ ಭಾರತವನ್ನು ಸರ್ವತಂತ್ರ ಸ್ವತಂತ್ರ ಗಣರಾಜ್ಯವೆಂದು ವರ್ಣಿಸಲಾಗಿದೆ. ಅಲ್ಲಿ ಉಪಯೋಗಿಸಿರುವ 'ಗಣರಾಜ್ಯ'ವೆಂಬ ಪದವು ರಾಜನನ್ನು ದೇಶದ ಮುಖ್ಯಸ್ಥನೆಂದು ಪರಿಗಣಿಸುವುದಕ್ಕೆ ವಿರುದ್ಧವಾಗಿದೆ. ಸಂವಿಧಾನದ ಕರಡು, ಅಧ್ಯಕ್ಷನನ್ನು ದೇಶದ ಮುಖ್ಯಸ್ಥನೆಂದು ಪರಿಗಣಿಸುತ್ತದೆಯೇ ಹೊರತು ರಾಜನನ್ನಲ್ಲ. ಅದರಲ್ಲಿ ಹೇಳಿರುವ ಅಧ್ಯಕ್ಷನು ರಾಜನ ಪ್ರತಿನಿಧಿಯೂ ಅಲ್ಲ. ಆತ ಭಾರತದ ಜನತೆಯ ಪ್ರತಿನಿಧಿ. ಸಂಸತ್ತಿನ ಸದಸ್ಯರು ರಾಜನ ಹೆಸರಿನಲ್ಲಿ ಪ್ರಮಾಣವನ್ನು ಸ್ವೀಕರಿಸಬೇಕಾಗಿಲ್ಲ, ಬದಲಿಗೆ ದೇಶದ ಮತ್ತು ಸಂವಿಧಾನದ ಹೆಸರಿನಲ್ಲಿ ಪ್ರಮಾಣವನ್ನು ಸ್ವೀಕರಿಸಬೇಕು. ಈ ರೀತಿಯಾಗಿ, ಸಂವಿಧಾನದ ಕರಡು, ಕಾಮನ್‌ವೆಲ್ತ್ ದೇಶಗಳ ಸಂವಿಧಾನದ ಅಗತ್ಯಗಳಿಗಿಂತ ಮೂಲಭೂತವಾಗಿ ಬೇರೆಯಾಗಿದೆ. ಕಾಮನ್‌ವೆಲ್ತ್ ದೇಶವಾಗಿರುವುದಕ್ಕೆ ಒಪ್ಪಿಕೊಳ್ಳಲು ಭಾರತಕ್ಕೆ ಇರುವ ಸಮಸ್ಯೆ ಇದು. ಗಾಡಿಯನ್ನು ಹಿಮ್ಮೊಗವಾಗಿ ಚಲಿಸುವಂತೆ ಮಾಡುವುದು ಯಾವಾಗಲೂ ಕಷ್ಟ. ಗಾಡಿಯು ಇಳಿಜಾರಿನಲ್ಲಿ ಓಡುತ್ತಿರುವಾಗ ಇದು ಮತ್ತೂ ಕಷ್ಟ.

೬. ಇಲ್ಲಿ ಎದುರಾಗುವ ಮತ್ತೊಂದು ಸಮಸ್ಯೆಯು ಭಾವನಾತ್ಮಕವಾದುದು. ಹೊರದೇಶದ ರಾಜನನ್ನು ನಮ್ಮ ರಾಜನನ್ನಾಗಿ ಒಪ್ಪಿಕೊಳ್ಳುವುದು ನಮಗೆ ಸಾಧ್ಯವೇ? ಕಾಮನ್‌ವೆಲ್ತ್ ದೇಶಗಳ ಮತ್ತು ಭಾರತದ ನಡುವೆ ಸಾಂಸ್ಕೃತಿಕವಾಗಿ ಅಥವಾ ಸಾಮಾಜಿಕವಾಗಿ ಸಮಾನವಾದುದು ಏನಾದರೂ ಇದೆಯೇ? ಬ್ರಿಟಿಷ್

ಕಾಮನ್‌ವೆಲ್ತ್ ಎಂಬ ಹೆಸರಿನಿಂದ ಬ್ರಿಟಿಷ್ ಎಂಬ ಪದವನ್ನು ತೆಗೆದುಹಾಕಿದರೂ, ಕಾಮನ್‌ವೆಲ್ತ್ ಬ್ರಿಟಿಷ್ ಆಗಿಯೇ, ಮತ್ತು ಅದು ತನ್ನ ಛಾಯೆಯಲ್ಲಿ ಬ್ರಿಟಿಷ್‌ನ ಬಿಳಿಯ ಬಣ್ಣವನ್ನು ಹೊಂದಿಯೇ ಇರುತ್ತದೆ. ಅಂತಹ ಸನ್ನಿವೇಶದಲ್ಲಿ ಭಾರತವು ಸಂಕೋಚರಹಿತವಾಗಿ ಅದರ ಸದಸ್ಯನಾಗಿರಬಹುದೇ? ಕಾಮನ್‌ವೆಲ್ತ್‌ನೊಂದಿಗೆ ಹೇಗಾದರೂ ಸಂಬಂಧವನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಎಷ್ಟೇ ಬಯಸಿದರೂ, ಭಾರತವು ಕಾಮನ್‌ವೆಲ್ತ್‌ನ ಸದಸ್ಯ ರಾಷ್ಟ್ರವಾಗಿ ಮುಜುಗರವಿಲ್ಲದೆ ಮುಂದುವರೆಯುವುದು ಕಷ್ಟವೆಂಬುದರಲ್ಲಿ ಸಂಶಯವೇ ಇಲ್ಲ.

**೩. ಕಾಮನ್‌ವೆಲ್ತ್ ಸದಸ್ಯ ಸ್ಥಾನದ ಪರಿಷ್ಕೃತ ರೂಪ**

೭. ಭಾರತವು ಕಾಮನ್‌ವೆಲ್ತ್‌ನೊಂದಿಗೆ ಅದರ ನಿಯಮಗಳ ಪ್ರಕಾರ ಯಾವುದೇ ಸಂಬಂಧವನ್ನು ಇಟ್ಟುಕೊಳ್ಳಲು ಸಾಧ್ಯವಾಗದೆ ಇದ್ದ ಪಕ್ಷದಲ್ಲಿ ನಮಗಿರುವ ಪರ್ಯಾಯವೇನು? ಈ ಪರ್ಯಾಯವು ೧೯೪೮ರ ಬ್ರಿಟಿಷ್ ರಾಷ್ಟ್ರೀಯತ್ವದ ಅಧಿನಿಯಮ ಹಾಗೂ ೧೯೪೬ರ ಕೆನಡಾ ರಾಷ್ಟ್ರೀಯತ್ವದ ಅಧಿನಿಯಮದಲ್ಲಿ ಇರುವುದನ್ನು ಕಾಣಬಹುದು. ಈ ಬ್ರಿಟಿಷ್ ಅಧಿನಿಯಮದಲ್ಲಿನ ೧ನೆಯ ಪರಿಚ್ಛೇದವು ಹೀಗೆ ಹೇಳುತ್ತದೆ –

"ಬ್ರಿಟಿಷ್ ನಾಗರಿಕರಾಗಿರುವುದರಿಂದ ಬ್ರಿಟಿಷ್ ರಾಷ್ಟ್ರೀಯತೆಯು –

೧) ಈ ಅಧಿನಿಯಮದ ಪ್ರಕಾರ ಇಂಗ್ಲೆಂಡಿನ ಅಥವಾ ಅದರ ವಸಾಹತುಗಳ ಅಥವಾ, ಮುಂದಿನ ಉಪ–ಪರಿಚ್ಛೇದದಲ್ಲಿ ನಮೂದಿಸಿರುವ ಯಾವುದೇ ದೇಶಗಳ ಕಾನೂನಿನ ಪ್ರಕಾರ ಆ ದೇಶದ ರಾಷ್ಟ್ರೀಯತ್ವವನ್ನು ಯಾವುದೇ ವ್ಯಕ್ತಿಯು ಪಡೆದಿದ್ದರೆ, ಅದರ ಮೂಲಕ ಅಂತಹ ವ್ಯಕ್ತಿಯು ಬ್ರಿಟಿಷ್ ಪ್ರಜೆಯ ಸ್ಥಾನಮಾನಗಳನ್ನು ಹೊಂದಿರುತ್ತಾನೆ. ಅಂತಹ ಸ್ಥಾನಮಾನಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯನ್ನು ಬ್ರಿಟಿಷ್ ಪ್ರಜೆ ಅಥವಾ ಕಾಮನ್‌ವೆಲ್ತ್ ಪ್ರಜೆಯೆಂದು ಕರೆಯಬಹುದು. ಅದರ ಪರಿಣಾಮವಾಗಿ ಈ ಅಧಿನಿಯಮದ ಅಡಿಯಲ್ಲಿ, ಅಥವಾ ಈ ಅಧಿನಿಯಮಕ್ಕೆ ಮೊದಲು ಅಂಗೀಕರಿಸಿರುವ ಯಾ ಇನ್ನು ಮುಂದೆ ಅಂಗೀಕರಿಸಬಹುದಾದ ಕಾನೂನುಗಳ ಅಡಿಯಲ್ಲಿ ಹೇಳಿರುವ ಯಾ ಹೇಳಲಾಗುವ ಬ್ರಿಟಿಷ್ ಪ್ರಜೆ ಮತ್ತು ಕಾಮನ್‌ವೆಲ್ತ್ ಪ್ರಜೆ ಎಂಬ ಪದಗುಚ್ಛಗಳು ಸಮಾನಾರ್ಥಕವಾಗಿರುತ್ತವೆ.

೨) ಈ ಹಿಂದೆ ಹೇಳಿರುವ ದೇಶಗಳು – ಕೆನಡಾ, ಆಸ್ಟ್ರೇಲಿಯಾ, ನ್ಯೂ ಜೀಲ್ಯಾಂಡ್, ದಕ್ಷಿಣ ಆಫ್ರಿಕಾ ಒಕ್ಕೂಟ, ನ್ಯೂಫೌಂಡ್ ಲ್ಯಾಂಡ್, ಭಾರತ, ಪಾಕಿಸ್ತಾನ, ದಕ್ಷಿಣ ರೊಡೀಷಿಯಾ ಮತ್ತು ಶ್ರೀಲಂಕಾ.

ಕೆನಡಾದ ರಾಷ್ಟ್ರೀಯತಾ ಅಧಿನಿಯಮದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಪರಿಚ್ಛೇದಗಳೆಂದರೆ ೪, ೫ ಮತ್ತು ೨೬ –

೪) **ಈ ಅಧಿನಿಯಮವು ಜಾರಿಗೆ ಬರುವ ಮೊದಲು:–** ಈ ಅಧಿನಿಯಮವು ಜಾರಿಗೆ ಬರುವ ಮೊದಲು ಹುಟ್ಟಿದ ವ್ಯಕ್ತಿಯನ್ನು –

ಅ) ಆ ವ್ಯಕ್ತಿಯು ಕೆನಡಾ ದೇಶದಲ್ಲಿ ಹುಟ್ಟಿದ್ದು ಅಥವಾ ಈ ದೇಶೀಯತ್ವವನ್ನು ಹೊಂದಿದ್ದರೆ, ಈ ಅಧಿನಿಯಮವು ಜಾರಿಗೆ ಬರುವಷ್ಟರಲ್ಲಿ ಪರರಾಷ್ಟ್ರವೊಂದರ ಪೌರತ್ವವನ್ನು ಪಡೆಯದಿದ್ದರೆ, ಅಥವಾ

ಆ) ಕೆನಡಾ ದೇಶೀಯತ್ವವಿರದ ಕೆನಡಾದ ಹೊರಗಿನ ದೇಶದಲ್ಲಿ ಹುಟ್ಟಿದ್ದು, ಈ ವ್ಯಕ್ತಿಯ

ತಂದೆಯು ಅಥವಾ ಕ್ರಮಬದ್ಧ ವಿವಾಹದಿಂದ ಜನಿಸಿದವರ ವಿಷಯದಲ್ಲಿ ಆತನ ತಾಯಿಯು ಕೆನಡಾದಲ್ಲಿ ಹುಟ್ಟಿದ್ದರೆ ಅಥವಾ ಈ ದೇಶೀಯತ್ವವನ್ನು ಹೊಂದಿದ್ದರೆ ಹಾಗೂ ಈ ವ್ಯಕ್ತಿಯ ಜನನ ಸಮಯದಲ್ಲಿ ಪರರಾಷ್ಟ್ರವೊಂದರ ಪೌರತ್ವವನ್ನು ಪಡೆಯದಿದ್ದರೆ; ಅಥವಾ ಈ ವ್ಯಕ್ತಿಯ ಜನನದ ಸಮಯದಲ್ಲಿ ಬ್ರಿಟಿಷ್ ಪ್ರಜೆಯಾಗಿದ್ದು ಕೆನಡಾದಲ್ಲಿ ನೆಲೆಸಿದ್ದರೆ,

ಹಾಗೂ, ಈ ಅಧಿನಿಯಮವು ಜಾರಿಗೆ ಬರುವ ಸಮಯದಲ್ಲಿ, ಈ ವ್ಯಕ್ತಿಯು ಪರರಾಷ್ಟ್ರದ ಪೌರತ್ವವನ್ನು ಪಡೆಯದೆ ಕಾನೂನುಬದ್ಧವಾಗಿ ಕೆನಡಾದಲ್ಲಿ ಶಾಶ್ವತವಾಗಿ ವಾಸಿಸಲು ಅನುಮತಿಯನ್ನು ಪಡೆದಿದ್ದರೆ ಅಥವಾ ಅಪ್ರಾಪ್ತ ವಯಸ್ಕನಾಗಿದ್ದರೆ –

– ಜನ್ಮತಃ ಕೆನಡಾ ಸಂಜಾತ ಪ್ರಜೆಯೆಂದು ಪರಿಗಣಿಸಲಾಗುವುದು.

೫) **ಈ ಅಧಿನಿಯಮವು ಜಾರಿಗೆ ಬಂದಮೇಲೆ**: – ಈ ಅಧಿನಿಯಮವು ಜಾರಿಗೆ ಬಂದಮೇಲೆ ಹುಟ್ಟಿದ ವ್ಯಕ್ತಿಯು –

ಅ) ಕೆನಡಾ ದೇಶದಲ್ಲಿ ಹುಟ್ಟಿದ್ದು ಅಥವಾ ಈ ದೇಶೀಯತ್ವವನ್ನು ಹೊಂದಿದ್ದರೆ, ಅಥವಾ

ಆ) ಕೆನಡಾ ದೇಶೀಯತ್ವವಿರದ ಕೆನಡಾದ ಹೊರಗಿನ ದೇಶದಲ್ಲಿ ಹುಟ್ಟಿದ್ದು, ಈ ವ್ಯಕ್ತಿಯ ತಂದೆಯು ಅಥವಾ ಕ್ರಮಬದ್ಧ ವಿವಾಹದಿಂದ ಜನಿಸಿದವರಾಗಿದ್ದರೆ, ಆತನ ತಾಯಿಯು ಈ ವ್ಯಕ್ತಿಯ ಜನನ ಸಮಯದಲ್ಲಿ ಕೆನಡಾ ದೇಶದಲ್ಲಿ ಜನಿಸಿದ ಕಾರಣದಿಂದಾಗಿ ಅಥವಾ ಕೆನಡಾ ದೇಶೀಯತ್ವವನ್ನು ಹೊಂದಿದ್ದ ಕಾರಣದಿಂದಾಗಿ ಕೆನಡಾ ದೇಶದ ಪ್ರಜೆಯಾಗಿದ್ದರೆ, ಅಥವಾ ಕೆನಡಾ ದೇಶದ ಪ್ರಜೆಯೆಂಬ ಪ್ರಮಾಣಪತ್ರವನ್ನು ಹೊಂದಿದ್ದರೆ, ಅಥವಾ ಈ ಅಧಿನಿಯಮವು ಜಾರಿಗೆ ಬರುವ ಸಮಯದಲ್ಲಿ ಕೆನಡಾದ ಪ್ರಜೆಯಾಗಿದ್ದರೆ, ಮತ್ತು ಈ ವ್ಯಕ್ತಿಯ ಜನನವನ್ನು ಜನನವಾದ ಎರಡು ವರ್ಷಗಳ ಒಳಗೆ, ಅಥವಾ ನಿಯಮಗಳಿಗೆ ಅನುಸಾರವಾಗಿ ಸಂಬಂಧಪಟ್ಟ ಸಚಿವರ ಅನುಮತಿಯ ಮೇರೆಗೆ ವಿಸ್ತರಿಸಿದ ಅವಧಿಯ ಒಳಗೆ ಕೆನಡಾದ ದೂತಾವಾಸದಲ್ಲಿ ಅಥವಾ ಸಂಬಂಧಪಟ್ಟ ಸಚಿವಾಲಯದಲ್ಲಿ ನೋಂದಣಿ ಮಾಡಿಸಿದ್ದರೆ,

– ಜನ್ಮತಃ ಕೆನಡಾ ಸಂಜಾತ ಪ್ರಜೆಯೆಂದು ಪರಿಗಣಿಸಲಾಗುವುದು.

**೨೬) ಬ್ರಿಟಿಷ್ ಪ್ರಜೆ ಮತ್ತು ಕೆನಡಾದ ಪೌರತ್ವ** : – ಕೆನಡಾದ ಪೌರನು ಬ್ರಿಟಿಷ್ ಪ್ರಜೆಯಾಗಿರುತ್ತಾನೆ.

೮) ಈ ಅಧಿನಿಯಮಗಳ ಹಿಂದಿರುವ ಯೋಜನೆಯು ಎರಡು ರೀತಿಯ ಪೌರತ್ವವನ್ನು ಸೃಷ್ಟಿಸುವುದಾಗಿದೆ – ೧) ಕಾಮನ್‌ವೆಲ್ತ್ ಪೌರತ್ವ, ಮತ್ತು ೨) ಕಾಮನ್‌ವೆಲ್ತ್‌ನ ಅಂತರ್ಗತವಾಗಿರುವ ನಿರ್ದಿಷ್ಟ ದೇಶದ ಪೌರತ್ವ. ಕಾಮನ್‌ವೆಲ್ತ್ ಪೌರತ್ವವು ತಾನಾಗಿಯೇ ಬರುತ್ತದೆ. ಕಾಮನ್‌ವೆಲ್ತ್‌ನ ಅಂತರ್ಗತವಾಗಿರುವ ಯಾವುದೇ ದೇಶದ ಪ್ರತಿಯೊಬ್ಬ ಪೌರರೂ ಈ ಕಾರಣದಿಂದಲೇ ಕಾಮನ್‌ವೆಲ್ತ್ ಪೌರರಾಗಿರುತ್ತಾರೆ. ಬ್ರಿಟಿಷ್ ಮತ್ತು ಕೆನಡಾ ದೇಶದ ರಾಷ್ಟ್ರೀಯತೆಯ ಅಧಿನಿಯಮಗಳು ಮಾಡಿರುವುದನ್ನು ಇತರ ಯಾವುದೇ ಸ್ವತಂತ್ರ ದೇಶಗಳು ಮಾಡಬಹುದಾದರೆ, ಗಣರಾಜ್ಯವಾಗಿರುವ ದೇಶಕ್ಕೂ ಕಾಮನ್‌ವೆಲ್ತ್‌ನ ಸದಸ್ಯದೇಶವಾಗುವ ಸಾಧ್ಯತೆಗಳು ಉಂಟು ಎಂದು ಹೇಳಲಾಗಿದೆ.

೯) ಈ ಸಲಹೆಗೆ ನಾವು ಸಮ್ಮತಿಯನ್ನು ಸೂಚಿಸುವ ಮೊದಲು ಮೂರು ವಿವಿಧ ದೃಷ್ಟಿಕೋನಗಳಿಂದ ಇದನ್ನು ನಾವು ಪರೀಕ್ಷಿಸಬೇಕು. ಈ ಸಲಹೆಯು ಕಾಮನ್‌ವೆಲ್ತ್ ದೇಶಗಳಲ್ಲಿ ಜಾರಿಯಲ್ಲಿರುವ ಪೌರತ್ವದ

ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರುತ್ತದೆಯೇ? ಈ ಸಲಹೆಯು ಹಾಗೆ ಯಾವುದಾದರೂ ಬದಲಾವಣೆಯನ್ನು ತರುವುದಾದರೆ, ಅದು ಭಾರತಕ್ಕೆ ಅನುಕೂಲಕರವಾಗಿರುತ್ತದೆಯೇ ಅಥವಾ ಪ್ರತಿಕೂಲಕರವಾಗಿರುತ್ತದೆಯೇ? ಮೂರನೆಯದಾಗಿ, ಭಾರತವು ಕಾಮನ್‌ವೆಲ್ತ್ ಕೂಟದೊಂದಿಗೆ ಸಂಬಂಧವನ್ನು ಮುಂದುವರೆಸಿಕೊಂಡು ಹೋಗಲು ಬಯಸಿದರೂ ತನ್ನ ಕರಡು ಸಂವಿಧಾನದ ವಿಧಿಗಳಿಗೆ ಹೊಂದಿಕೊಳ್ಳುವಂತೆ ಈ ಸಲಹೆಯನ್ನು ಒಪ್ಪಿಕೊಳ್ಳಬಹುದೆ?

೧೦. ಕಾಮನ್‌ವೆಲ್ತ್ ಕೂಟವು ಮೂರು ದೋಷಗಳಿಂದ ಬಾಧಿತವಾಗಿದೆ. ಮೊದಲನೆಯದು, ಅದರ ವಿದೇಶಾಂಗ ವ್ಯವಹಾರಗಳನ್ನು ಕುರಿತದ್ದು. ಯುದ್ಧಗಳ ಜನ್ಮಸ್ಥಾನವೇ ವಿದೇಶಾಂಗ ವ್ಯವಹಾರದ ಕ್ಷೇತ್ರದಲ್ಲಿದ್ದರೂ, ಯುದ್ಧ ಸಂದರ್ಭದಲ್ಲಿನ ನಿರ್ಣಯಗಳನ್ನೆಲ್ಲಾ ಯುನೈಟೆಡ್ ಕಿಂಗಡಮ್ ಮಾತ್ರ ತೆಗೆದುಕೊಳ್ಳುತ್ತದೆಯೇ ಹೊರತು ಬೇರೆ ಯಾವ ಕಾಮನ್‌ವೆಲ್ತ್ ದೇಶಕ್ಕೂ ಆ ವಿಷಯದಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವ ಅವಕಾಶವೇ ಇರುವುದಿಲ್ಲ. ಈ ದೇಶಗಳು ತಟಸ್ಥವಾಗಿರುವ ಅಧಿಕಾರವನ್ನು ಹೊಂದಿವೆ ಎಂಬುದು ನಿಜ. ಆದರೆ ಇದು ಪರಿಹಾರವಲ್ಲ, ಇದು ಕಾಮನ್‌ವೆಲ್ತ್ ಕೂಟದ ನೀತಿಯನ್ನು ಸರಿಪಡಿಸುವಂತಹ ಪರಿಹಾರವಲ್ಲ. ಎರಡನೆಯ ದೋಷವೆಂದರೆ ಕಾಮನ್‌ವೆಲ್ತ್ ದೇಶಗಳ ನಡುವೆ ಉದ್ಭವಿಸಬಹುದಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದಾದ ವಿಧಾನಗಳನ್ನು ಒಳಗೊಂಡಿಲ್ಲ. ಕೂಟದಲ್ಲಿ ಅಂತರ್ಗತವಾಗಿರುವ ದೇಶಗಳನ್ನು ಪರಸ್ಪರ ಅನ್ಯದೇಶಗಳೆಂದು ಪರಿಗಣಿಸುವ ಹಾಗಿಲ್ಲ. ಆದ್ದರಿಂದ ಅವುಗಳು ತಮ್ಮ ನಡುವಿನ ವ್ಯಾಜ್ಯವನ್ನು ಅಂತಾರಾಷ್ಟ್ರೀಯ ನ್ಯಾಯಾಲಕ್ಕೆ ಕೊಂಡೊಯ್ಯುವ ಹಾಗೂ ಇಲ್ಲ. ಹಾಗಿದ್ದರೂ, ಕೂಟದ ದೇಶಗಳ ನಡುವಿನ ವ್ಯಾಜ್ಯವನ್ನು ಪರಿಹರಿಸಲು ಯಾವುದೇ ಪಂಚಾಯತಿಯನ್ನೂ ಈ ವ್ಯವಸ್ಥೆಯು ಹೊಂದಿಲ್ಲ. ಮೂರನೆಯ ದೋಷವೆಂದರೆ, ಈ ಎಲ್ಲಾ ದೇಶಗಳಿಗೂ ಅನ್ವಯವಾಗುವಂತಹ ಸಾಮಾನ್ಯ ಪೌರತ್ವವಿಲ್ಲ. ಕೂಟದ ಒಂದು ದೇಶದ ಪೌರರು ಕೂಟದ ಇನ್ನೊಂದು ದೇಶದ ಪೌರನಾಗುವುದು ಸಾಧ್ಯವಿಲ್ಲ. ವಾಸ್ತವವಾಗಿ, ಕಾಮನ್‌ವೆಲ್ತ್ ಪೌರತ್ವವನ್ನು ಕಾಮನ್‌ವೆಲ್ತ್ ವಿರೋಧಿಸಿತು. ತನ್ನ ಪೌರರು ಯಾರಾಗಿರಬೇಕೆಂದು ತೀರ್ಮಾನಿಸುವ ವಿಷಯದಲ್ಲಿ ಕೂಟದ ಪ್ರತಿ ದೇಶವೂ ಸ್ವತಂತ್ರವಾಗಿರಬೇಕು ಮತ್ತು ಅನ್ಯ ದೇಶದ ಪೌರರು ತಮ್ಮ ದೇಶದ ಪೌರರಲ್ಲವೆಂದು ಹೇಳಲು ಪ್ರತಿದೇಶವೂ ಸ್ವತಂತ್ರವಾಗಿರಬೇಕು ಎಂದು ಅದು ವಾದಿಸಿತು. ನಮಗೆ ಇಲ್ಲಿ ಸಂಬಂಧಿಸಿದುದು ಮೂರನೆಯ ದೋಷ. ಮುಂದೆ ಇಟ್ಟಿರುವ ಸಲಹೆಯು ಈ ವ್ಯವಸ್ಥೆಯಲ್ಲಿ ಏನಾದರೂ ಬದಲಾವಣೆಯನ್ನು ತರಬಯಸುತ್ತದೆಯೇ? ನನಗೆ ಕಾಣುವ ಹಾಗೆ, ಯಾವ ಬದಲಾವಣೆಯನ್ನೂ ಅದು ಮಾಡುವುದಿಲ್ಲ. ಕಾಮನ್‌ವೆಲ್ತ್ ಕೂಟದ ಇತರ ದೇಶಗಳು ಇಲ್ಲಿಯವರೆಗೆ ಅನುಸರಿಸಿಕೊಂಡು ಬಂದಿರುವ ಹಾಗೆ, ಈಗಲೂ ಮತ್ತು ಇನ್ನು ಮುಂದೆಯೂ ತಮ್ಮಲ್ಲಿರುವ ಭಾರತೀಯರಿಗೆ ಪೌರತ್ವದ ಹಕ್ಕನ್ನು ನಿರಾಕರಿಸುತ್ತವೆ ಮತ್ತು ತಮ್ಮ ಪೌರರು ಯಾರಾಗಿರಬೇಕು ಮತ್ತು ಯಾರು ಆಗಿರಬಾರದು ಎಂಬುದನ್ನು ತೀರ್ಮಾನಿಸುವ ಹಕ್ಕನ್ನು ಮುಂದುವರೆಸಿಕೊಂಡು ಹೋಗುತ್ತವೆ.

೧೧. ಕೂಟದ ಇತರ ದೇಶಗಳಿಗೆ ಹೋಲಿಸಿದಾಗ, ಈ ಬದಲಾವಣೆಯಿಂದ ಭಾರತಕ್ಕೆ ಲಾಭವೂ ಇಲ್ಲ ಮತ್ತು ನಷ್ಟವೂ ಇಲ್ಲ. ಭಾರತೀಯರಿಗೆ ಇತರ ದೇಶಗಳು ಪೌರತ್ವವನ್ನು ಎಂದೂ ನೀಡುವುದೇ ಇಲ್ಲವೆಂಬುದು ನಿಶ್ಚಯವಾಗಿರುವುದರಿಂದ ಭಾರತವೂ ಇತರ ದೇಶಗಳವರಿಗೆ ಪೌರತ್ವವನ್ನು ನೀಡುವ ಯೋಚನೆಯನ್ನು ಮಾಡಬೇಕಾಗಿಲ್ಲ. ಆದರೆ ಭಾರತ ಮತ್ತು ಇಂಗ್ಲೆಂಡಿನ ನಡುವೆ ಇರುವ ಸಂಬಂಧವು ಬೇರೆಯ ರೀತಿಯದು. ಏಕೆಂದರೆ, ತನ್ನ ರಾಷ್ಟ್ರೀಯತ್ವದ ಅಧಿನಿಯಮದ ಅಡಿಯಲ್ಲಿ ಇಂಗ್ಲೆಂಡ್ ಭಾರತೀಯರನ್ನು ತನ್ನ ಪೌರರೆಂದು ಪರಿಗಣಿಸುತ್ತದೆ. ಹಾಗೆಯೇ, ತನ್ನ ಪೌರರನ್ನು ಭಾರತೀಯ ಪೌರರು ಎಂದು ಭಾರತವು

ಪರಿಗಣಿಸಬೇಕೆಂದು ಅದು ಬಯಸುತ್ತದೆ. ಆದರೆ, ಭಾರತಕ್ಕೆ ಹಾಗೆ ಮಾಡಲು ಸಾಧ್ಯವೇ? ಸಾಧ್ಯವಿಲ್ಲವೆಂಬುದು ನನ್ನ ಅಭಿಪ್ರಾಯ. ಒಮ್ಮೆ ಭಾರತ ಮತ್ತು ಇಂಗ್ಲೆಡ್‌ಗಳ ನಡುವೆ ಸಾಮಾನ್ಯ ಪೌರತ್ವವನ್ನು ಸ್ಥಾಪಿಸಿದರೆ, ಈ ದೇಶಗಳ ಜನರು ಎರಡೂ ದೇಶಗಳ ಪೌರರಾಗಿರುವುದರಿಂದ ಭಾರತೀಯರು ಮತ್ತು ಬ್ರಿಟಿಷರ ನಡುವೆ ವ್ಯತ್ಯಾಸವನ್ನು ಮಾಡುವುದು ನಮಗೆ ಸಾಧ್ಯವೇ ಆಗುವುದಿಲ್ಲ. ನಾವೀಗ ೧೯೩೫ರ ಭಾರತ ಸರಕಾರದ ಅಧಿನಿಯಮದ ೧೧೧ ಮತ್ತು ೧೧೨ನೆಯ ವಿಧಿಗಳಲ್ಲಿ ಅಡಗಿರುವ ನಿಬಂಧನೆಗಳನ್ನು ನೋಡಬೇಕು. ಇಂತಹ ಯಾವುದೇ ವ್ಯತ್ಯಾಸವನ್ನು ಮಾಡುವುದನ್ನು ಇವು ಪ್ರತಿಬಂಧಿಸುತ್ತವೆ. ಆದರೆ ಇವುಗಳಿಂದ ತಪ್ಪಿಸಿಕೊಳ್ಳಬಯಸುವ ಪ್ರಯತ್ನವನ್ನು ನಾವು ಮಾಡುತ್ತಲೇ ಇದ್ದೇವೆ. ಆದ್ದರಿಂದ, ಭಾರತವನ್ನು ಕಾಮನ್‌ವೆಲ್ತ್ ಕೂಟದ ಸದಸ್ಯವನ್ನಾಗಿಸುವಲ್ಲಿ ಕಾಮನ್‌ವೆಲ್ತ್ ಪೌರತ್ವವು ಬಹು ಅಪಾಯಕಾರಿಯಾಗಿದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೧೨. ಈ ಸಲಹೆಯು ಒಳಗೊಂಡಿರುವ ದೋಷಗಳ ಹೊರತಾಗಿ, ನಾನೀಗಾಗಲೇ ಹೇಳಿರುವಂತೆ, ಭಾರತವು ತನ್ನ ಕರಡು ಸಂವಿಧಾನಕ್ಕೆ ವಿರೋಧವಿಲ್ಲದಂತೆ, ಕಾಮನ್‌ವೆಲ್ತ್ ಕೂಟದೊಂದಿಗೆ ತನ್ನ ಸಂಬಂಧವನ್ನು ಇಟ್ಟುಕೊಳ್ಳಲು ಈ ಸಲಹೆಯನ್ನು ಒಪ್ಪಿಕೊಳ್ಳಬಹುದೇ? ಇಂಗ್ಲೆಂಡಿನ ರಾಜರ ಸಂಬಂಧವನ್ನು ಇನ್ನುಮುಂದೆ ಇಲ್ಲದಂತೆ ಮಾಡಲು ಮತ್ತು ಗಣರಾಜ್ಯಗಳೂ ಕಾಮನ್‌ವೆಲ್ತ್‌ನ ಸದಸ್ಯರಾಗಿ ಮುಂದುವರೆಯಲು ಸಹಾಯಕವಾಗುವಂತೆ ಮಾಡಲು, ಕಾಮನ್‌ವೆಲ್ತ್ ಪೌರತ್ವವನ್ನು ಹೊಂದುವ ಸಲಹೆಯನ್ನು ಶಿಫಾರಸ್ಸುಮಾಡಲಾಗಿತ್ತು. ಆದರೆ ಹಾಗಾಗುವುದು ಸಾಧ್ಯವೇ? ಈ ವಿಷಯದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುವ ಮೊದಲು ಕಾಮನ್‌ವೆಲ್ತ್ ಪೌರತ್ವವೆಂದರೆ ಏನು ಎಂಬುದನ್ನು ತಿಳಿದುಕೊಳ್ಳಬೇಕು. ಪೌರತ್ವವೆನ್ನುವುದು ಕೆಲವೊಂದು ಹಕ್ಕು ಮತ್ತು ಬಾಧ್ಯತೆಗಳನ್ನು ಒಳಗೊಂಡಿರುತ್ತದೆ. ಕಾಮನ್‌ವೆಲ್ತ್‌ನ ಪೌರರ ಹಕ್ಕುಗಳು ಏನು ಎಂಬ ಪ್ರಶ್ನೆಗೆ ಸುಲಭವಾಗಿ ಉತ್ತರಿಸಬಹುದು. ಒಬ್ಬ ವ್ಯಕ್ತಿಯು ಪೌರನಾಗಿರುವ ದೇಶದ ಕಾನೂನುಗಳು ಆ ವ್ಯಕ್ತಿಗೆ ಕೊಡಮಾಡಿರುವ ಹಕ್ಕುಗಳೇ ಕಾಮನ್‌ವೆಲ್ತ್ ಪೌರನ ಹಕ್ಕುಗಳಾಗಿರುತ್ತವೆ. ಆದರೆ ಕಾಮನ್‌ವೆಲ್ತ್ ಪೌರರ ಬಾಧ್ಯತೆಗಳೇನು? ಈ ವಿಷಯವು ಹೊಸದಾಗಿದ್ದು ಪರಿಶೀಲನೆಗೆ ಅರ್ಹವಾದುದಾಗಿದ್ದರೆ, ಉತ್ತರಕ್ಕಾಗಿ ನಾವು ಬ್ರಿಟಿಷ್ ಮತ್ತು ಕೆನಡಾ ದೇಶಗಳ ಪೌರತ್ವವನ್ನು ವಿವರಿಸುವ ಎರಡು ಅಧಿನಿಯಮಗಳತ್ತ ನೋಡಬೇಕು. ಆದರೆ ಈ ಎರಡೂ ಅಧಿನಿಯಮಗಳು ಈ ವಿಷಯದಲ್ಲಿ ಮೌನವಾಗಿವೆ. ಈ ಕಾರಣಗಳಿಂದ ಕಾಮನ್‌ವೆಲ್ತ್ ಪೌರನೆಂಬುದು ಅರ್ಥವಿಲ್ಲದ ವಾದವಾಗಿದೆ.

೧೩. ಕಾಮನ್‌ವೆಲ್ತ್ ಪೌರ ಎಂಬ ಮಾತು ಒಂದು ಜೊಳ್ಳುಮಾತು. ಅದರಲ್ಲಿ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಹಾಗೆ ಯಾವುದೇ ಅಂಶವೂ ಇಲ್ಲ. ಆದರೆ ರಾಜ್ಯವೊಂದರ ಪೌರತ್ವದಿಂದ ಬೇರೆಯಾಗಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪೌರತ್ವಕ್ಕೆ ಹೋಲಿಸಿದಾಗ ಅದರಲ್ಲಿ ನ್ಯಾಯಶಾಸ್ತ್ರದ ವಾಸ್ತವ ಅಂಶಗಳನ್ನು ಕಾಣಬಹುದು. ಅದು ಕೆಲವೊಂದು ಸವಲತ್ತುಗಳನ್ನೂ ವಿನಾಯತಿಗಳನ್ನೂ ಒಳಗೊಂಡಿದೆ. ಇವಾವುದನ್ನೂ ಕಾಮನ್‌ವೆಲ್ತ್ ಪೌರತ್ವದಲ್ಲಿ ನಾವು ಕಾಣಲಾರೆವು. ಹಾಗಾದರೆ, ಕಾಮನ್‌ವೆಲ್ತ್ ಪೌರ ಎಂಬ ಮಾತು ಏಕೆ ಉಪಯೋಗಿಸಲ್ಪಡುತ್ತಿದೆ? ಅದರ ನಿಜವಾದ ಅರ್ಥವೇನು? ನಾವೀಗಾಗಲೇ ನೋಡಿದ ಬ್ರಿಟಿಷ್ ರಾಷ್ಟ್ರೀಯತೆಯ ಅಧಿನಿಯಮದ ೧ನೆಯ ವಿಧಿಯು ಹೇಳುವಂತೆ ಬಹಳ ಹಿಂದಿನಿಂದ ನಡೆದುಕೊಂಡು ಬಂದಿರುವಂತೆ, ಅದರ ಅರ್ಥ ಕೇವಲ 'ಬ್ರಿಟಿಷ್ ಪ್ರಜೆ' ಎಂದು. ಇದನ್ನು ತಿಳಿದೂ ಭಾರತವು ಈ ಸೂಚನೆಯನ್ನು ಒಪ್ಪಿಕೊಳ್ಳಬೇಕೇ? ಕಾಮನ್‌ವೆಲ್ತ್ ಪೌರತ್ವವೆಂದರೆ ಬ್ರಿಟಿಷ್ ಪ್ರಜೆ ಎಂದರ್ಥವಾದರೆ, ಅಂತಹ ಪೌರತ್ವವನ್ನು ಪಡೆದಿರುವವರೆಲ್ಲರೂ ಇಂಗ್ಲೆಂಡಿನ ರಾಜನಿಗೆ ನಿಷ್ಠೆಯನ್ನು ತೋರಬೇಕು ಎಂದಾಗುತ್ತದೆ.

ನಾನಾಗಲೇ ಹೇಳಿದಂತೆ, ರಾಜನಿಗೆ ನಿಷ್ಠೆ ತೋರುವುದು ಎಂಬ ಭಾವನೆಯೇ, ಗಣರಾಜ್ಯದ ಮೂಲತತ್ತ್ವಕ್ಕೆ ವಿರೋಧವಾದುದು. ಭಾರತವು ಗಣರಾಜ್ಯವಾಗಿರಬೇಕೆಂದರೆ, ಕಾಮನ್‌ವೆಲ್ತ್ ಪೌರತ್ವವೆನ್ನುವುದನ್ನು ಭಾರತವು ಒಪ್ಪಿಕೊಳ್ಳಬಾರದು ಎಂಬುದು ಸ್ಪಷ್ಟವಾಗಿದೆ.

## ೪. ಒಂದು ಹೊಸ ಮಾರ್ಗ

೧೪. ಕಾಮನ್‌ವೆಲ್ತ್ ಕೂಟದಲ್ಲಿರುವುದಕ್ಕಾಗಿ ರಾಜನಿಗೆ ನಿಷ್ಠೆಯನ್ನು ತೋರುವುದಾಗಲೀ, ಕಾಮನ್‌ವೆಲ್ತ್ ಪೌರತ್ವದ ಸಲಹೆಗಳಿಗೆ ಒಪ್ಪಿಗೆಯನ್ನು ಕೊಡುವುದಾಗಲೀ ತನ್ನ ಕರಡು ಸಂವಿಧಾನದ ಪ್ರಕಾರ ಭಾರತಕ್ಕೆ ಸಾಧ್ಯವಾಗುವುದಿಲ್ಲ. ಬೇರೆಯ ಮಾರ್ಗವೊಂದನ್ನು ನಾವು ಕಂಡುಹಿಡಿಯಬೇಕು. ಐರಿಷ್ ಸಮಸ್ಯೆಯನ್ನು ಪರಿಹರಿಸಲು ೧೯೨೧ರಲ್ಲಿ ಡಿ ವಲೇರಾ ಅವರು ಅನುಸರಿಸಿದ ಮಾರ್ಗವನ್ನು ನಾವೂ ಅನುಸರಿಸುವುದು ಸರಿಯಾದುದೆಂದು ನನಗೆ ತೋರುತ್ತದೆ. ಈ ಲೇಖನದ ೪ನೆಯ ಪ್ಯಾರಾದಲ್ಲಿ ಸೂಚಿಸಿರುವಂತೆ, ಸ್ವತಂತ್ರದೇಶದ ಚಿಹ್ನೆಗಳನ್ನು ಹೊಂದಿ, ಐರ್ಲೆಂಡ್ ಕಾಮನ್‌ವೆಲ್ತ್‌ನ ಸದಸ್ಯ ರಾಷ್ಟ್ರವಾಗಲು ಡಿ ವಲೇರಾ ಅವರು ಒಪ್ಪದಿದ್ದುದನ್ನು ಈ ಸಮಸ್ಯೆಯನ್ನು ಅಧ್ಯಯನಮಾಡಿದವರೆಲ್ಲರೂ ಬಲ್ಲರು. ಅವರು ಐರ್ಲೆಂಡ್ ಕಾಮನ್‌ವೆಲ್ತ್ ಕೂಟದ ಸದಸ್ಯ ದೇಶವಾಗುವ ಬದಲು ಸಹರಾಷ್ಟ್ರವಾಗಿರುವುದನ್ನು ಬಯಸಿದರು. ಸಹರಾಷ್ಟ್ರದ ಕಲ್ಪನೆಯನ್ನು ಈಗ ಡಾಕ್ಯುಮೆಂಟ್ ಸಂಖ್ಯೆ ೨ ಎಂದು ಐರಿಷ್ ಪರಿಹಾರದ ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವ ತಮ್ಮ ಲೇಖನದಲ್ಲಿ ಅವರು ವಿವರಿಸಿದ್ದಾರೆ.

೧೫. ಓದುಗರ ಅನುಕೂಲಕ್ಕಾಗಿ ಡಾಕ್ಯುಮೆಂಟ್ ಸಂಖ್ಯೆ ೨ರಿಂದ ಸಂಬಂಧಪಟ್ಟ ಭಾಗಗಳನ್ನು ಉದ್ಧರಿಸುತ್ತಿದ್ದೇನೆ. ಡಿ ವಲೇರಾ ಅವರು ಸಹರಾಷ್ಟ್ರ ಎಂಬುದರ ಬಗ್ಗೆ ವಿವರಿಸಿರುವುದನ್ನು ಇದರಿಂದ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು.

### ಐರ್ಲೆಂಡ್‌ನ ರಾಜ್ಯಗಳು

೧. ಐರ್ಲೆಂಡಿನ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಐರ್ಲೆಂಡಿನ ಜನರಿಂದಲೇ ಅಸ್ತಿತ್ವಕ್ಕೆ ಬರುತ್ತವೆ.

### “ಸಹಯೋಗದ ನಿಬಂಧನೆಗಳು

೨. ಸಾಮಾನ್ಯ ಹಿತಾಸಕ್ತಿಗಳ ಉದ್ದೇಶಕ್ಕಾಗಿ ಐರ್ಲೆಂಡ್ ದೇಶವು ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ, ನ್ಯೂ ಝೀಲ್ಯಾಂಡ್ ಮತ್ತು ದಕ್ಷಿಣ ಆಫ್ರಿಕಾ ಒಕ್ಕೂಟ ಇವುಗಳನ್ನೊಳಗೊಂಡಿರುವ ಬ್ರಿಟಿಷ್ ಕಾಮನ್‌ವೆಲ್ತ್ ಕೂಟದ ಸಹರಾಷ್ಟ್ರವಾಗಿರುತ್ತದೆ.

೩. ಸಹರಾಷ್ಟ್ರವಾಗಿ ಭಾಗವಹಿಸುವ ಐರ್ಲೆಂಡಿನ ಹಕ್ಕುಗಳು, ಸ್ಥಾನ ಮತ್ತು ಸವಲತ್ತುಗಳು ಯಾವ ವಿಧದಲ್ಲಿಯೂ ಬ್ರಿಟಿಷ್ ಕಾಮನ್‌ವೆಲ್ತ್ ಕೂಟದ ಇತರ ದೇಶಗಳವುಗಳಿಗಿಂತ ಕಡಿಮೆಯಿರುವುದಿಲ್ಲ.

೪. ಸಾಮಾನ್ಯ ಹಿತಾಸಕ್ತಿಯ ವಿಷಯಗಳು ರಕ್ಷಣೆ, ಶಾಂತಿ ಮತ್ತು ಯುದ್ಧ, ರಾಜಕೀಯ ಕರಾರುಗಳು ಮತ್ತು ಬ್ರಿಟಿಷ್ ಕಾಮನ್‌ವೆಲ್ತ್ ಸದಸ್ಯರ ನಡುವೆ ಪ್ರಕೃತ ಸಾಮಾನ್ಯವೆಂದು ಪರಿಗಣಿಸಲ್ಪಟ್ಟಿರುವ ಎಲ್ಲಾ ವಿಷಯಗಳನ್ನೂ ಒಳಗೊಂಡಿರಬೇಕು. ಈ ವಿಷಯಗಳಲ್ಲಿ ಸಂಯೋಜಿತ ಕಾರ್ಯಚಟುವಟಿಕೆಗಳು ‘ಐರ್ಲೆಂಡ್ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್ ದೇಶಗಳ ನಡುವೆ’ ನಡೆಯುವ ವಿಚಾರವಿನಿಮಯವನ್ನು ಅವಲಂಬಿಸಿ ನಡೆಯುವಂತಿರಬೇಕು.

೫. ಐರ್ಲೆಂಡ್ ಬ್ರಿಟಿಷ್ ಕಾಮನ್‌ವೆಲ್ತ್ ದೇಶಗಳೊಂದಿಗೆ ಸಹರಾಷ್ಟ್ರವಾಗಿ ಕೂಡಿಕೊಂಡಿದೆ ಎಂದ ಮಾತ್ರಕ್ಕೆ, ಐರ್ಲೆಂಡಿನ ಪ್ರಜೆಯು ಬ್ರಿಟಿಷ್ ಕಾಮನ್‌ವೆಲ್ತ್ ದೇಶಗಳಲ್ಲಿ ಯಾವುದೂ ದೇಶದ ಪ್ರಜೆಗಳು ಹೊಂದಿರದ ಅನರ್ಹತೆಯನ್ನು ಹೊಂದಿರತಕ್ಕದ್ದಲ್ಲ. ಹಾಗೆಯೇ ಐರ್ಲೆಂಡಿನ ಪ್ರಜೆಗಳು ಹೊಂದಿರದ ಅನರ್ಹತೆಯನ್ನು ಈ ಇತರ ದೇಶಗಳ ಪ್ರಜೆಗಳೂ ಹೊಂದಿರತಕ್ಕದ್ದಲ್ಲ.

೬. ಸಹಯೋಗದ ದೃಷ್ಟಿಯಿಂದ ಮಾತ್ರ ಬ್ರಿಟನ್ನಿನ ಮಹಾಪ್ರಭುಗಳನ್ನು ಕೂಟದ ಮುಖ್ಯಸ್ಥರನ್ನಾಗಿ ಐರ್ಲೆಂಡ್ ಮಾನ್ಯಮಾಡುತ್ತದೆ"

ಕಾಮನ್‌ವೆಲ್ತ್ ಕೂಟದೊಂದಿಗೆ ಸಂಬಂಧವನ್ನು ಸ್ಥಾಪಿಸುವುದಕ್ಕಾಗಿ ಇಲ್ಲಿ ಒಂದು ನೂತನ ಮಾರ್ಗವಿದೆ. ಈ ಸಂದರ್ಭದಲ್ಲಿ ೬, ೫ ಮತ್ತು ೪ ನೆಯ ಪ್ಯಾರಾಗಳನ್ನು ಪರಿಶೀಲಿಸುವ ಆವಶ್ಯಕತೆಯಿದೆ.

**ಪ್ಯಾರಾ–೬:** ಈ ಪ್ಯಾರಾವನ್ನು ಕೂಟದ ಸದಸ್ಯ ದೇಶಗಳು ಮತ್ತು ಸಹರಾಷ್ಟ್ರಗಳ ನಡುವಿನ ಸಂಬಂಧದ ವಿಷಯದಲ್ಲಿ ಸುಲಭವಾಗಿ ಬಿಟ್ಟುಬಿಡಬಹುದು. ಈ ಡಾಕ್ಯುಮೆಂಟಿನ ಹಿಂದಿರುವ ನೀತಿಗಳನ್ನು ಜಾರಿಗೆ ತರುವಾಗ, ೧೯೩೬ ಕಾರ್ಯಾಂಗ ಪ್ರಾಧಿಕಾರ (ವಿದೇಶ ವ್ಯವಹಾರ)ದ ಅಧಿನಿಯಮವನ್ನು ಅಂಗೀಕರಿಸಿ, ಈ ಪ್ಯಾರಾವನ್ನು ಬಿಟ್ಟುಬಿಟ್ಟರು.

**ಪ್ಯಾರಾ–೫:** ಈಗಿರುವ ಹಾಗೆ ಪ್ಯಾರಾ ೫ನ್ನು ನಾವು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಅದನ್ನು ಉಳಿಸಿಕೊಳ್ಳಲೇಬೇಕಾದರೆ, ಅದರ ಭಾಷೆಯನ್ನು ನಾವು ಎಚ್ಚರಿಕೆಯಿಂದ ಪರಿಷ್ಕರಿಸಬೇಕು. ಅನರ್ಹತೆ ಮತ್ತು ಸವಲತ್ತು ಹಾಗೂ ವಿನಾಯತಿಗಳ ನಡುವೆ ಅಂತರವನ್ನು ಸರಿಯಾಗಿ ಗುರುತಿಸಬೇಕು. ಭಾರತದಲ್ಲಿರುವ ಕಾಮನ್‌ವೆಲ್ತ್ ನಿವಾಸಿಗಳನ್ನು ಯಾವುದೇ ಅನರ್ಹತೆಗಳಿಗೆ ಒಳಪಡಿಸುವುದನ್ನು ನಾವು ಒಪ್ಪಿಕೊಳ್ಳುವಾಗ, ಭಾರತದ ಪ್ರಜೆಗಳಿಗೆಂದೇ ಗುರುತಿಸಲ್ಪಟ್ಟಿರುವ ಸವಲತ್ತುಗಳನ್ನು ಮತ್ತು ವಿನಾಯತಿಗಳನ್ನು ಅವರು ತಮ್ಮ ಹಕ್ಕುಗಳಂತೆ ಪ್ರತಿಪಾದಿಸುವ ಅವಕಾಶವನ್ನು ನಾವು ಅವರಿಗೆ ನೀಡಬಾರದು.

**ಪ್ಯಾರಾ–೪:** ಈ ಪ್ಯಾರಾವು ಸದರಿ ಡಾಕ್ಯುಮೆಂಟಿನಲ್ಲಿರುವ ಅತ್ಯಂತ ಪ್ರಮುಖವಾದ ಭಾಗ. ಇದು ಡಾಕ್ಯುಮೆಂಟಿನ ಅತ್ಯುತ್ತಮ ಭಾಗವೂ ಹೌದು. ಅದು ಸಹರಾಷ್ಟ್ರವೊಂದರ ವಿವರಣೆಯನ್ನು ಒಳಗೊಂಡಿದೆ ಮತ್ತು ಆ ರಾಷ್ಟ್ರವು ಕಾಮನ್‌ವೆಲ್ತ್ ಕೂಟದೊಂದಿಗೆ ಹೇಗೆ ಮತ್ತು ಎಷ್ಟರ ಮಟ್ಟಿನ ಸಂಬಂಧವನ್ನು ಹೊಂದಿರಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ನಮ್ಮ ಉದ್ದೇಶಕ್ಕೆ ಇದು ಸಾಕು. ಕಾಮನ್‌ವೆಲ್ತ್ ಕೂಟದೊಂದಿಗೆ ಅತಿಯಾದ ಸಂಬಂಧವನ್ನು ಹೊಂದಿರುವುದಕ್ಕೆ ನಮ್ಮ ಸಂವಿಧಾನವು ಅವಕಾಶವನ್ನು ನೀಡುವುದಿಲ್ಲ. ನಮ್ಮ ಆವಶ್ಯಕತೆಗಳು ಕಾಮನ್‌ವೆಲ್ತ್ ಕೂಟದೊಂದಿಗೆ ಜಾಳುಜಾಳಾದ ಸಂಬಂಧವನ್ನು ಹೊಂದಿರುವುದಕ್ಕೆ ಬಿಡುವುದಿಲ್ಲ.

೧೬. ಈ ನಿಬಂಧನೆಗಳ ಮೇಲೆ ಭಾರತವನ್ನು ಕಾಮನ್‌ವೆಲ್ತ್ ದೇಶಗಳ ಕೂಟದ ಸದಸ್ಯ ದೇಶವನ್ನಾಗಿ ಒಪ್ಪಿಕೊಳ್ಳಲ್ಪಡುತ್ತದೆಯೇ ಎಂಬುದು ಇಲ್ಲಿನ ಪ್ರಶ್ನೆ. ನಾನಾಗಲೇ ಹೇಳಿದಂತೆ, ೧೯೩೭ರಲ್ಲಿ ಐರ್ಲೆಂಡಿನ ಸಂವಿಧಾನವನ್ನು ಪರಿಷ್ಕರಿಸಿ ಅಂಗೀಕರಿಸಿದಾಗ ಡಾಕ್ಯುಮೆಂಟ್ ಸಂ. ೨ರಲ್ಲಿನ ಈ ವಿಧಿಗಳನ್ನು ಅದರಲ್ಲಿ ಸೇರಿಸಲಾಯಿತು. ಈ ಬದಲಾವಣೆಗಳನ್ನು ಮಾಡಿದ ಮೇಲೆಯೂ ಐರ್ಲೆಂಡ್ ಬ್ರಿಟಿಷ್ ಕಾಮನ್‌ವೆಲ್ತ್ ಕೂಟದ ಸದಸ್ಯ ರಾಷ್ಟ್ರವಾಗಿ ಉಳಿದುಕೊಂಡಿರುತ್ತದೆಯೇ ಎಂಬ ಪ್ರಶ್ನೆಯನ್ನು ಎತ್ತಲಾಯಿತು. ಇದಕ್ಕೆ ಉತ್ತರವಾಗಿ ಬ್ರಿಟಿಷ್ ಸರಕಾರವು ೧೯೩೭ರ ಡಿಸೆಂಬರ್ ೩೦ರಂದು ಈ ಮುಂದಿನ ಹೇಳಿಕೆಯನ್ನು ನೀಡಿತು –

"೧೯೩೭ರ ಜೂನ್‌ನಲ್ಲಿ ಐರಿಷ್ ಸಂಸತ್ತಿನಿಂದ ಅಂಗೀಕರಿಸಲ್ಪಟ್ಟು ಡಿಸೆಂಬರ್ ೨೯ರಂದು

ಜಾರಿಗೆ ಬಂದ ಐರ್ಲೆಂಡಿನ ಸಂವಿಧಾನದಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಬ್ರಿಟನ್ನಿನ ಮಹಾಪ್ರಭುಗಳ ಸರಕಾರವು ಗಮನಿಸಿದೆ.

ಇನ್ನುಮುಂದೆ ಐರ್ ಅಥವಾ ಐರ್ಲೆಂಡ್ ಎಂದು ಕರೆಯಲ್ಪಡುವ ಸ್ವತಂತ್ರ ಐರ್ಲೆಂಡ್ ದೇಶವು ಬ್ರಿಟಿಷ್ ಕಾಮನ್‌ವೆಲ್ತ್ ಕೂಟದ ಸದಸ್ಯವಾಗುವಲ್ಲಿನ ಸ್ಥಿತಿಯಲ್ಲಿ ಹೊಸ ಸಂವಿಧಾನವು ಯಾವುದೇ ಮೂಲಭೂತ ಬದಲಾವಣೆಯನ್ನು ತರುವುದಿಲ್ಲವೆಂಬುದನ್ನು ಮಹಾಪ್ರಭುಗಳ ಸರಕಾರವು ಪರಿಗಣಿಸುತ್ತದೆ.

ಕೆನಡಾದಲ್ಲಿರುವ ಮಹಾಪ್ರಭುಗಳ ಸರಕಾರ, ನ್ಯೂ ಜೀಲ್ಯಾಂಡ್ ಮತ್ತು ದಕ್ಷಿಣ ಆಫ್ರಿಕಾ ಒಕ್ಕೂಟಗಳೂ ಐರ್ಲೆಂಡಿನ ಹೊಸ ಸಂವಿಧಾನವನ್ನು ಗೌರವಿಸುತ್ತವೆ ಎಂಬುದನ್ನು ಬ್ರಿಟನ್ನಿನಲ್ಲಿರುವ ಮಹಾಪ್ರಭುಗಳ ಸರಕಾರವು ಖಾತರಿಪಡಿಸಿಕೊಂಡಿದೆ"

ಭಾರತ ಹಾಗೂ ಐರ್ಲೆಂಡ್‌ಗಳ ನಿಬಂಧನೆಗಳು ಹೆಚ್ಚುಕಡಿಮೆ ಒಂದೇ ಆಗಿರುವುದರಿಂದ, ಐರ್ಲೆಂಡ್ ದೇಶವನ್ನು ಕಾಮನ್‌ವೆಲ್ತ್ ಕೂಟದ ಸದಸ್ಯ ದೇಶವನ್ನಾಗಿ ಸ್ವೀಕರಿಸಿದ ಮೇಲೆ ಬ್ರಿಟಿಷ್ ಸರಕಾರವು ಭಾರತದ ವಿಷಯದಲ್ಲಿಯೂ ಅದೇ ರೀತಿಯಾಗಿ ನಡೆದುಕೊಳ್ಳಬೇಕು. ಸಹರಾಷ್ಟ್ರವಾಗುವುದಕ್ಕೆ ಬ್ರಿಟಿಷ್ ಸರಕಾರವಾಗಲೀ, ಕೂಟದ ಇತರ ದೇಶಗಳಾಗಲೀ ಇದಕ್ಕಿಂತ ಹೆಚ್ಚಿನದೇನನ್ನೂ ಬೇಡಲಾಗುವುದಿಲ್ಲ. ಇದೇ ನಮಗೆ ಬೇಕಾಗಿರುವುದು.

## ೫. ಹೊಸ ಸಲಹೆಗಳ ಲಕ್ಷಣ ಹಾಗೂ ಪ್ರಯೋಜನಗಳು

೧೭. ಹೊಸ ಸಲಹೆಗಳ ಪ್ರಕಾರ ಕಾಮನ್‌ವೆಲ್ತ್ ಎರಡು ವಿಧವಾದ ಸದಸ್ಯ ರಾಷ್ಟ್ರಗಳನ್ನು ಹೊಂದಿರುತ್ತದೆ – ೧) ಸದಸ್ಯ ರಾಷ್ಟ್ರಗಳು ಮತ್ತು ೨) ಸಹರಾಷ್ಟ್ರಗಳು. ಮೊದಲನೆಯ ವರ್ಗಕ್ಕೆ ಸೇರಿದವುಗಳು ಬ್ರಿಟಿಷ್ ರಾಜನೇ ಮುಖ್ಯಸ್ಥನ್ನಾಗಿ ಉಳ್ಳ ಹಳೆಯ ವಸಾಹತಿನ ದೇಶಗಳು ಸೇರುತ್ತವೆ. ಎರಡನೆಯ ವರ್ಗವು ರಾಜನನ್ನು ತಮ್ಮ ಮುಖ್ಯಸ್ಥನೆಂದು ಒಪ್ಪಿಕೊಳ್ಳದ ಭಾರತದಂತಹ ದೇಶಗಳನ್ನು ಒಳಗೊಂಡಿರುತ್ತದೆ. ಈ ಸಲಹೆಯಲ್ಲಿ ಎರಡು ಪ್ರಯೋಜನಗಳಿವೆ. ಇದು ಭಾರತವು ತೀರ್ಮಾನಿಸಿರುವಂತೆ ಅದನ್ನು ಗಣರಾಜ್ಯವಾಗಿಯೆ ಇರಲು ಸಹಾಯಮಾಡುತ್ತದೆ. ಭಾರತ ಮತ್ತು ಕಾಮನ್‌ವೆಲ್ತ್ ದೇಶಗಳ ನಡುವೆ ಬಹು ಮುಖ್ಯವಾದ ವಿಷಯಗಳಲ್ಲಿ ಪರಸ್ಪರ ಕೊಡುಕೊಳ್ಳುವಿಕೆಯ ವ್ಯವಸ್ಥೆಯನ್ನು ಹೊಂದಿರುವುದಕ್ಕೂ ಸಹಾಯಮಾಡುತ್ತದೆ. ಕೊನೆಯದಾಗಿ, ವಾಣಿಜ್ಯ ಮತ್ತು ವ್ಯಾಪಾರದಲ್ಲಿ ಬ್ರಿಟಿಷ್ ಮತ್ತು ಭಾರತೀಯ ಪ್ರಜೆಗಳಿಗೆ ಸಮಾನಾವಕಾಶಗಳನ್ನು ನೀಡುವಂತಹ ಕಾಮನ್‌ವೆಲ್ತ್ ಪೌರತ್ವದ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ಈ ಅಪಾಯವನ್ನು ತಪ್ಪಿಸಲು ಇದು ಅನುವಾಗುತ್ತದೆ.

## ೬–ವಿವರಣೆಗಳು

ಭಾರತವನ್ನು ಕಾಮನ್‌ವೆಲ್ತ್ ಕೂಟದ ಸಹರಾಷ್ಟ್ರವನ್ನಾಗಿಸುವಲ್ಲಿ ನಾವು ಎರಡು ವಿಷಯಗಳನ್ನು ಸ್ಪಷ್ಟಗೊಳಿಸುವುದನ್ನು ಬಿಡುವಹಾಗಿಲ್ಲ. ಭಾರತವು ಕಾಮನ್‌ವೆಲ್ತ್ ಕೂಟದ ಸದಸ್ಯತ್ವವನ್ನು ಪಡೆಯಬೇಕೇ, ಬೇಡವೇ ಎಂಬುದು ಕಾಮನ್‌ವೆಲ್ತ್ ಕೂಟದ ಇಚ್ಛೆಗೆ ಒಳಪಡುವಂತಹುದಲ್ಲ. ಅದು, ಭಾರತವು ಈ ನಿಟ್ಟಿನಲ್ಲಿ ಮಾಡಬಹುದಾದ ಘೋಷಣೆಯ ಮೇಲೆ ಅವಲಂಬಿತವಾಗಿರಬೇಕು. ಇನ್ನೊಂದು ವಿಷಯವೆಂದರೆ, ಕೂಟದ ಸದಸ್ಯತ್ವವನ್ನು ತ್ಯಜಿಸುವುದು ಕೂಡ ಭಾರತವು ಮಾಡಬಹುದಾದ ಘೋಷಣೆಯ ಮೇಲೆಯೇ ಅವಲಂಬಿತವಾಗಿರಬೇಕು. ಐರ್ಲೆಂಡಿನ ಪ್ರಕರಣವನ್ನು ಅಧ್ಯಯನ ಮಾಡಿರುವ ಯಾರೇ ಆದರೂ ಈ ವಿವರಣೆಯ ಪ್ರಾಮುಖ್ಯವನ್ನು ತಿಳಿದುಕೊಳ್ಳುತ್ತಾರೆ. ಐರ್ಲೆಂಡಿನ ಸಂವಿಧಾನವು ವಸಾಹತುರಾಷ್ಟ್ರವಾಗಿ

ಕಾಮನ್‌ವೆಲ್ತ್ ಸದಸ್ಯವಾಗುವುದೇ ಬೇಡವೆಂದು ತೀರ್ಮಾನಿಸಿದ ಮೇಲೂ ಆ ದೇಶವನ್ನು ವಸಾಹತು ರಾಷ್ಟ್ರದಂತೆಯೇ ಹಿಡಿದಿಟ್ಟುಕೊಳ್ಳಲಾಗಿದೆ. ಕಾಮನ್‌ವೆಲ್ತ್ ಕೂಟದ ಇತರ ಸದಸ್ಯ ರಾಷ್ಟ್ರಗಳು ಐರ್ಲೆಂಡನ್ನು ವಿದೇಶವೆಂದು ಪರಿಗಣಿಸದಿರುವುದರಿಂದ ಕಾಮನ್‌ವೆಲ್ತ್ ಕೂಟವನ್ನು ತ್ಯಜಿಸಲು ಆ ದೇಶಕ್ಕೆ ಅನುಮತಿಯನ್ನು ನೀಡುತ್ತಿಲ್ಲ.

೧೯. ಮರ್‍ರೆ ಹಾಗೂ ಪಾರ್ಕೆಸ್ ನಡುವಿನ ಪ್ರಕರಣದಲ್ಲಿ ಕಿಂಗ್ಸ್ ಬೆಂಚ್ ಡಿವಿಷನ್ ನೀಡಿದ ನಿರ್ಣಯವನ್ನು (ಎ.ಇ.ಆರ್. ೧೯೪೨– ಸಂಪುಟ ೧, ೫೩೪) ಗಮನಿಸಿದಾಗ, ಈ ವಿವರಣೆಗಳ ಅಗತ್ಯವು ತುರ್ತಾಗಿರುವುದು ಕಂಡುಬರುತ್ತದೆ. ಐರ್ಲೆಂಡ್ ದೇಶವನ್ನು ಸ್ವತಂತ್ರ ದೇಶವೆಂದು ಪರಿಗಣಿಸಬಹುದೆ ಅಥವಾ ಇಲ್ಲವೆ ಎಂಬುದು ಇಲ್ಲಿನ ಸಮಸ್ಯೆ. ಲಾರ್ಡ್ ಮುಖ್ಯ ನ್ಯಾಯಾಧೀಶರು ಐರ್ಲೆಂಡ್ ಸ್ವತಂತ್ರ ದೇಶವಲ್ಲವೆಂಬ ತೀರ್ಪನ್ನಿತ್ತರು. ಅದಕ್ಕೆ ಅವರು ಎರಡು ಕಾರಣಗಳನ್ನು ನೀಡಿದರು –

೧) ಐರ್ಲೆಂಡ್ ಹಿಂದೆ ಯಾವಾಗಲಾದರೂ ವರ್ಗಾವಣೆಯ ಹಕ್ಕನ್ನು ಚಲಾಯಿಸಿದ ಪ್ರಕರಣವು ತಮ್ಮ ಗಮನಕ್ಕೆ ಬಂದಿಲ್ಲ, ಮತ್ತು
೨) ಒಂದು ವೇಳೆ ಅಂತಹ ಹಕ್ಕನ್ನು ಚಲಾಯಿಸಿದ್ದರೂ, ಕಾಮನ್‌ವೆಲ್ತ್ ಕೂಟದ ಸದಸ್ಯ ದೇಶಗಳು ಐರ್ಲೆಂಡನ್ನು ಸ್ವತಂತ್ರವಾಗಿರುವ ಪರದೇಶವೆಂದು ಪರಿಗಣಿಸುವವರೆಗೆ ಈ ಪ್ರಶ್ನೆಯು ಹಾಗೆಯೇ ಉಳಿದುಕೊಂಡಿರುತ್ತದೆ.

ಇದೊಂದು ಕೇಡಿಗತನದ ತೀರ್ಪು ಎಂಬುದರಲ್ಲಿ ನನಗೆ ಸಂಶಯವಿಲ್ಲ. ಅದರಲ್ಲಿರುವುದು ರಾಜಕೀಯವೇ ಹೊರತು ಕಾನೂನಿನ ಪ್ರಮೇಯವಿಲ್ಲ. ಆದ್ದರಿಂದ ನಾವು ಕಾಮನ್‌ವೆಲ್ತ್ ಕೂಟದ ಸದಸ್ಯರಾಷ್ಟ್ರವಾಗವುದು ಅಥವಾ ಅದನ್ನು ತ್ಯಜಿಸುವುದು ನಮ್ಮ ನಿರ್ಣಯದ ಅನುಸಾರವಾಗಿರಬೇಕು. ಅದಕ್ಕೆ ಕಾಮನ್‌ವೆಲ್ತ್ ಕೂಟದ ಇಚ್ಛೆಯಾಗಲೀ, ಸಮ್ಮತಿಯಾಗಲೀ ಅಗತ್ಯವಿಲ್ಲ ಮತ್ತು ಅದು ಅಪ್ರಸ್ತುತ ಕೂಡ.

### ೭. ಕಾರ್ಯಗತಗೊಳಿಸುವಿಕೆ

೨೦. ಇದನ್ನು ಕಾರ್ಯಗತಗೊಳಿಸುವ ವಿಷಯಕ್ಕೆ ಈಗ ನಾನು ಬರುತ್ತೇನೆ. ಎಲ್ಲಿ ನಮಗೆ ಎರಡು ಪ್ರಶ್ನೆಗಳು ಎದುರಾಗುತ್ತವೆ. ನಮ್ಮ ನಿರ್ಣಯದ ಸ್ವರೂಪ ಹೇಗಿರಬೇಕು ಮತ್ತು ಅದಕ್ಕೆ ಕಾನೂನಿನ ಸ್ವರೂಪವನ್ನು ಹೇಗೆ ನೀಡುವುದು? ಸ್ವರೂಪವನ್ನು ಕುರಿತು ನಾನು ನೀಡುವ ನಿರ್ಣಯದ ಕರಡು ಹೀಗಿರುತ್ತದೆ.

"ಸಾಮಾನ್ಯ ಹಿತಾಸಕ್ತಿಗಳ ಉದ್ದೇಶಕ್ಕಾಗಿ ಭಾರತ ದೇಶವು ಬ್ರಿಟಿಷ್ ಕಾಮನ್‌ವೆಲ್ತ್ ಕೂಟದ ಸಹರಾಷ್ಟ್ರವಾಗಿರುತ್ತದೆ. ಹಾಗೆ ಮಾಡುವಾಗ ವ್ಯಾಪಾರ, ವಾಣಿಜ್ಯ ರಕ್ಷಣೆ, ಶಾಂತಿ ಮತ್ತು ಯುದ್ಧ ಮೊದಲಾದ ಸಾಮಾನ್ಯ ಹಿತಾಸಕ್ತಿಯ ವಿಷಯಗಳಲ್ಲಿ ತನ್ನ ಸ್ವತಂತ್ರ ಚಿಂತನೆಗಳನ್ನು ಕಾಪಾಡಿಕೊಂಡಿರುತ್ತದೆ. ಸಹರಾಷ್ಟ್ರವಾಗಿ ಭಾಗವಹಿಸುವ ಭಾರತದ ಹಕ್ಕುಗಳು, ಸ್ಥಾನ ಮತ್ತು ಸವಲತ್ತುಗಳು ಯಾವ ವಿಧದಲ್ಲಿಯೂ ಬ್ರಿಟಿಷ್ ಕಾಮನ್‌ವೆಲ್ತ್ ಕೂಟದ ಇತರ ದೇಶಗಳವುಗಳಿಗಿಂತ ಕಡಿಮೆಯಿರುವುದಿಲ್ಲ."

ಮೇಲೆ ಸೂಚಿಸಿದ ವಿವರಣೆಗಳನ್ನೊಳಗೊಂಡ ಈ ನಿರ್ಣಯವು ನಮ್ಮ ಉದ್ದೇಶಕ್ಕೆ ಸಾಕಾಗುತ್ತದೆ. ಈ ವಿವರಣೆಯನ್ನು ನೀಡಿದ ಮೇಲೆ ಸಂವಿಧಾನದ ಪೂರ್ವಪೀಠಿಕೆಯಲ್ಲಿರುವ ಗಣರಾಜ್ಯ ಎಂಬ ಪದಕ್ಕೆ ದೇಶವೆಂಬ ಪದವನ್ನು ಆದೇಶಮಾಡಬೇಕಾದ ಆವಶ್ಯಕತೆಯಿರುವುದಿಲ್ಲ. ಗಣರಾಜ್ಯವೆಂಬ ಪದವನ್ನು

ನಾವು ಮುಂದುವರೆಸಿಕೊಂಡು ಹೋಗಬಹುದು.

೨೧. ಮುಂದಿನ ಪ್ರಶ್ನೆಯೆಂದರೆ ಅದನ್ನು ಕಾರ್ಯಗತಗೊಳಿಸುವುದು. ಕಾರ್ಯಗತಗೊಳಿಸುವಲ್ಲಿ ನಮಗೆ ಎರಡು ದಾರಿಗಳಿವೆ. ಒಂದನೆಯದು ಕರಾರಿನ ಮೂಲಕ. ಎರಡನೆಯದು ಸಂವಿಧಾನದಲ್ಲಿ ಒಂದು ಪರಿಚ್ಛೇದವನ್ನು ಅಂತರ್ಗತಗೊಳಿಸುವುದರ ಮೂಲಕ. ನಾನು ಇವೆರಡರಲ್ಲಿ ಎರಡನೆಯದನ್ನು ಆಯ್ದುಕೊಳ್ಳುತ್ತೇನೆ.

೨೨. ನಾನು ಸಂವಿಧಾನದ ಪೂರ್ವಪೀಠಿಕೆಗೆ ಸೂಚಿಸಿರುವ ತಿದ್ದುಪಡಿಗೆ ನನ್ನ ಈ ಹೇಳಿಕೆಯು ವಿರೋಧವಾಗಿದೆಯೆಂದು ತೋರಬಹುದು. ನನ್ನ ಚಿಂತನೆಗಳಲ್ಲಿ ಮಾರ್ಪಾಟಾಗಿದೆಯೆಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಇದಕ್ಕೆ ಕಾರಣವೆಂದರೆ, ಸ್ವತಂತ್ರ ರಾಷ್ಟ್ರಗಳಿಗಾಗಿ (ಅಂದರೆ ಕಾಮನ್‌ವೆಲ್ತ್ ಪೌರತ್ವಕ್ಕಾಗಿ) ಸೂಚಿಸಿರುವ ಹೊಸ ನಿಬಂಧನೆಗಳು. ನಾನು ಸ್ವತಂತ್ರ ರಾಷ್ಟ್ರದ ಸ್ಥಾನದ ಪರವಾಗಿದ್ದೇನೆ. ಏಕೆಂದರೆ, ತನ್ನ ಪೌರತ್ವದ ಬಗ್ಗೆ ಪ್ರತಿಯೊಂದು ಸ್ವತಂತ್ರ ರಾಷ್ಟ್ರವೂ ತಾನೇ ನಿರ್ಧರಿಸಬಹುದು. ಕಾಮನ್‌ವೆಲ್ತ್ ದೇಶಗಳ ನಡುವೆ ಸಾಮಾನ್ಯ ಪೌರತ್ವವೆನ್ನುವುದು ಭಾರತದ ಆರ್ಥಿಕ ಸ್ವಾತಂತ್ರ್ಯಕ್ಕೆ ಅಪಾಯಕಾರಿಯಾದುದು ಎಂದು ನನಗೆ ತೋರುತ್ತದೆ. ಕಾರಣ, ಕಾಮನ್‌ವೆಲ್ತ್ ದೇಶಗಳ ಹಿತಾಸಕ್ತಿಯನ್ನು ಕಾಪಾಡಲು ಭಾರತದ ಈ ಸ್ವಾತಂತ್ರ್ಯದ ಹರಣವಾಗುವ ಸಂಭವವೂ ಇರುತ್ತದೆ. ಸ್ವತಂತ್ರ ರಾಷ್ಟ್ರಗಳು ಹೊಂದಿರಬೇಕೆಂದು ಈ ಮೊದಲು ಯೋಚಿಸಿದ್ದ ರಾಜನಿಗೆ ನಿಷ್ಠೆಯನ್ನು ತೋರಿಸಬೇಕೆಂಬ ಪ್ರಸ್ತಾಪವು ಕಾಮನ್‌ವೆಲ್ತ್‌ನ ಸಾಮಾನ್ಯ ಪೌರತ್ವದ ಪ್ರಸ್ತಾಪಕ್ಕಿಂತ ಕಡಿಮೆ ಅಪಾಯಕಾರಿಯಾಗಿತ್ತೆಂದು ನನಗೆ ತೋರುತ್ತದೆ.

* * * * *

# ೩೦
# ಸಂವಿಧಾನ ಮತ್ತು ಸಾಂವಿಧಾನಿಕ ತತ್ತ್ವಗಳು

**ಭಾರತದ ಸಂವಿಧಾನ ಮತ್ತು ಅದರ ತತ್ತ್ವಗಳ ವಿವರಣೆ**

**ಪ್ರಸ್ತಾವನೆ : –** ಸಂವಿಧಾನದ ಪ್ರಾರಂಭ ಮತ್ತು ಬೆಳವಣಿಗೆ

**ಭಾಗ ೧**

**ಸಾಂವಿಧಾನಿಕ ವ್ಯವಸ್ಥೆಯ ಹಿಂದಿರುವ ತತ್ತ್ವಗಳು**

ಪ್ರಕರಣ ೧ – ಪ್ರಜಾಪ್ರಭುತ್ವದ ತತ್ತ್ವಗಳು

ಪ್ರಕರಣ ೨ – ಸಂಯುಕ್ತ ರಾಜ್ಯಗಳ ತತ್ತ್ವಗಳು

ಪ್ರಕರಣ ೩ – ಅಧಿಕಾರದ ವರ್ಗೀಕರಣದ ತತ್ತ್ವಗಳು

**ಭಾಗ ೨**

**ಸರಕಾರದ ಅಂಗಗಳು**

ಪ್ರಕರಣ ೪ – ಶಾಸಕಾಂಗ

ಪ್ರಕರಣ ೫ – ಕಾರ್ಯಾಂಗ

ಪ್ರಕರಣ ೬ – ನ್ಯಾಯಾಂಗ

**ಭಾಗ ೩**

**ಕೇಂದ್ರ ಮತ್ತು ರಾಜ್ಯಗಳು**

ಪ್ರಕರಣ ೭ – ವಿಧಾಯಕ ಸಂಬಂಧಗಳು

ಪ್ರಕರಣ ೮ – ಆಡಳಿತಾತ್ಮಕ ಸಂಬಂಧಗಳು

ಪ್ರಕರಣ ೯ – ಆರ್ಥಿಕ ಸಂಬಂಧಗಳು

ಪ್ರಕರಣ ೧೦ – ತುರ್ತುಪರಿಸ್ಥಿತಿಯಲ್ಲಿನ ಸಂಬಂಧಗಳು

**ಭಾಗ ೪**

**ಸರಕಾರ ಮತ್ತು ಪ್ರಜೆ**

ಪ್ರಕರಣ ೧೧ – ಕಾನೂನು ಪ್ರಕ್ರಿಯೆ

ಪ್ರಕರಣ ೧೨ – ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು

ಪ್ರಕರಣ ೧೩ – ವಾಕ್ಸ್ವಾತಂತ್ರ್ಯದ ಹಕ್ಕು

ಪ್ರಕರಣ ೧೪ – ಸಾರ್ವಜನಿಕ ಸಭೆನಡೆಸುವ ಹಕ್ಕು

ಪ್ರಕರಣ ೧೫ – ಸಂಘಟನೆಯ ಹಕ್ಕು

ಪ್ರಕರಣ ೧೬ – ಸ್ವತಂತ್ರವಾಗಿ ಚಲಿಸುವ ಹಕ್ಕು

ಪ್ರಕರಣ ೧೭ – ಆಸ್ತಿಯನ್ನು ಹೊಂದುವ ಹಕ್ಕು

# ಪ್ರಸ್ತಾವನೆ

## ಸಾಂವಿಧಾನಿಕ ಕಾನೂನಿನ ಲಕ್ಷಣಗಳು ಮತ್ತು ವ್ಯಾಪ್ತಿ

ಸಂವಿಧಾನದ ವಿಧಿಗಳನ್ನು ನಾನು ಇಲ್ಲಿ ನೀಡುತ್ತಿಲ್ಲ. ಹಾಗೆ ನೀಡುವುದು ಸಂವಿಧಾನದಲ್ಲಿರುವ ವಿಧಿಗಳ ಬಗೆಗೆ ಹಾಗೂ ಅದರ ಹಿಂದಿರುವ ತತ್ತ್ವಗಳ ಬಗೆಗೆ ತಿಳಿದುಕೊಳ್ಳ ಬಯಸುವ ವಿದ್ಯಾರ್ಥಿಗಳಿಗೆ ಸಹಾಯಕವಾಗುತ್ತಿರಲಿಲ್ಲ ಮತ್ತು ಅನುಪಯುಕ್ತವಾಗಿರುತ್ತಿತ್ತು ಎಂಬುದು ನನ್ನ ಯೋಚನೆಯಾಗಿತ್ತು. ನಾನು ಇಲ್ಲಿ ಮಾಡಿರುವುದು ಕೆಲವು ಪ್ರಕರಣಗಳನ್ನು ಆಯ್ದುಕೊಂಡು ಅವುಗಳನ್ನು ಒಟ್ಟುಗೂಡಿಸಿ ಅವುಗಳಲ್ಲಿನ ವಿಧಿಗಳ ವಿಷಯವಾಗಿ ಚರ್ಚಿಸುವುದು ಮತ್ತು ಅವುಗಳಿಗೆ ವಿವರಣೆಗಳನ್ನು ನೀಡುವಂತಹ ಕೆಲಸ. ಇದು ಕೇವಲ ನಾನು ಕೊಟ್ಟಿರುವ ಪಟ್ಟಿಯಲ್ಲಿನ ಪ್ರಕರಣಗಳಿಂದ ಇದು ಸ್ಪಷ್ಟವಾಗುತ್ತದೆ. ಸಂವಿಧಾನದ ಒಂದು ಸ್ಥೂಲ ಚಿತ್ರಣವನ್ನು ನೀಡುವಂತಹ ಹಾಗೂ ಇತರ ದೇಶಗಳ ಸಂವಿಧಾನದಲ್ಲಿ ತತ್ಸಂಬಂಧಿ ವಿಧಿಗಳ ವಿಶ್ಲೇಷಣಾತ್ಮಕ ಅಧ್ಯಯನದ ಪ್ರಯತ್ನ ಮಾತ್ರ ಇದು.

ಯಾವ ಆಧಾರದ ಮೇಲೆ ನಾನು ಈ ಪ್ರಕರಣಗಳನ್ನು ಆಯ್ದುಕೊಂಡೆ ಎಂದು ಯಾರಾದರೂ ಪ್ರಶ್ನಿಸುವ ಸಾಧ್ಯತೆಯಿದೆ. ಈ ಪ್ರಕರಣಗಳು ಸಾಮಾನ್ಯವಾಗಿ ಸಾಂವಿಧಾನಿಕ ಕಾನೂನಿನ ಅಡಿಯಲ್ಲಿ ಬರುತ್ತವೆ ಎಂದು ನಾನು ಹೇಳಬಯಸುತ್ತೇನೆ. ನಾನು ಹೀಗೆ ಹೇಳಿದರೆ, ಮತ್ತೆ ಕೆಲವು ಪ್ರಶ್ನೆಗಳು ಉದ್ಭವಿಸಬಹುದು. ಸಂವಿಧಾನವೆಂದರೇನು? ಸಾಂವಿಧಾನಿಕ ಕಾನೂನಿನ ಲಕ್ಷಣಗಳು ಮತ್ತು ವ್ಯಾಪ್ತಿಯೇನು? ಈ ವಿಷಯಗಳ ಬಗ್ಗೆ ಕೆಲವೊಂದು ವಿವರಣೆಗಳು ಅನಿವಾರ್ಯವಾಗಿವೆ. ಆದರೆ ಅವುಗಳನ್ನು ಆದಷ್ಟು ಸಂಕ್ಷಿಪ್ತವಾಗಿ ಉತ್ತರಿಸುವೆ.

'ಸಂವಿಧಾನ' ಎಂದರೇನು? ಕಾನೂನಿನ ವ್ಯಾಪ್ತಿಯಲ್ಲಿ ಸಂವಿಧಾನ ಎಂಬುದು ವ್ಯವಸ್ಥೆಯನ್ನು ಮಾಡುವುದು ಅಥವಾ ವ್ಯವಸ್ಥೆಯನ್ನು ವಿಧಿಪೂರ್ವಕಗೊಳಿಸುವುದು, ಅಥವಾ ಈ ಪ್ರಕ್ರಿಯೆಯಲ್ಲಿ ನೀಡುವ ಆಜ್ಞೆಗಳು ಮತ್ತು ನಿಬಂಧನೆಗಳು ಎಂಬ ಅರ್ಥವನ್ನು ನೀಡುತ್ತದೆ. ಪ್ರೊ. ಮ್ಯಾಕ್ ೨ ಅವರ ಪ್ರಕಾರ –

ರೋಮನ್ ಚಕ್ರಾಧಿಪತ್ಯದಲ್ಲಿ ಈ ಲ್ಯಾಟಿನ್ ಪದವು ತಾಂತ್ರಿಕ ಪರಿಭಾಷೆಯ ಪದವಾಗಿ ಚಕ್ರವರ್ತಿಯ ಹೊರಡಿಸುವ ಶಾಸನಗಳು ಎಂಬ ಅರ್ಥವನ್ನು ಪಡೆಯಿತು. ರೋಮನ್ ಆಡಳಿತದಿಂದ ಚರ್ಚ್ ಆಡಳಿತವು ಈ ಪದವನ್ನು ಆಮದುಮಾಡಿಕೊಂಡು ತನ್ನ ವ್ಯಾಪ್ತಿಯಲ್ಲಿ ಬರುವ ಇಡೀ ಚರ್ಚ್‌ಗಳ ಸಮುದಾಯದ ಅಥವಾ ಕೆಲವೊಂದು ನಿರ್ದಿಷ್ಟ ವಿಭಾಗಗಳ ಧಾರ್ಮಿಕ ಆಡಳಿತಕ್ಕೆ ಉಪಯೋಗಿಸಿಕೊಂಡಿತು. ಮಧ್ಯಯುಗದಲ್ಲಿ ಈ ಪದವು ಚರ್ಚಿನಿಂದ ಅಥವಾ ನೇರವಾಗಿ ರೋಮನ್ ಕಾನೂನು ಪುಸ್ತಕಗಳಿಂದ ಬಂದು ಧರ್ಮನಿರಪೇಕ್ಷ ಆಡಳಿತದಲ್ಲಿಯೂ ಸೇರಿಕೊಂಡಿತು.

ಶತಮಾನಗಳಿಂದಲೂ ಸಂವಿಧಾನವೆಂಬ ಪದವು ಆಡಳಿತಾತ್ಮಕ ಕಾನೂನುಗಳ ರಚನೆ ಎಂಬ ಅರ್ಥದಲ್ಲಿಯೇ ಉಳಿದುಕೊಂಡಿತು. ರೋಮನ್ ವಕೀಲರುಗಳ ಅರ್ಥವೇ ಈಗಲೂ ಚಾಲ್ತಿಯಲ್ಲಿದೆ. ಅವರು ಈ ಪದವನ್ನು ಪರಂಪರೆಯಿಂದ ಬಂದ ಸಂಪ್ರದಾಯಗಳಿಗಿಂತ ಭಿನ್ನವಾದ ಅರ್ಥದಲ್ಲಿ ಉಪಯೋಗಿಸುತ್ತಿದ್ದರು. ಕಾನೂನಿನಿಂದ ರೂಪಿತವಾದ ನಾಗರಿಕ ಸರಕಾರದ ವ್ಯವಸ್ಥೆ ಅಥವಾ ಸರಕಾರದ

ಕಾನೂನಿನ ಚೌಕಟ್ಟು ಎಂಬ ಆಧುನಿಕ ಅರ್ಥವು ೧೬೧೦ರವರೆಗೆ ಆ ಪದಕ್ಕೆ ಬಂದಿರಲೇ ಇಲ್ಲ.

ಇದಾದ ಸುಮಾರು ನೂರು ವರ್ಷಗಳ ನಂತರ ಸರಕಾರದ ಕಾನೂನಿನ ಚೌಕಟ್ಟು ಎಂಬ ಅರ್ಥವ್ಯಾಪ್ತಿಯನ್ನು ಮೀರಿ ಸಂವಿಧಾನ ಎಂಬ ಪದವು ಇನ್ನೂ ಹೆಚ್ಚಿನ, ವಿಶೇಷವಾದ ಅರ್ಥಗಳನ್ನು ಒಳಗೊಂಡುದನ್ನು ಕಾಣಬಹುದು. ೧೭೭೩ರಲ್ಲಿ ಬೋಲಿಂಗ್‌ಬ್ರೋಕ್ ಬರೆದಿರವ ಪ್ರಕಾರ

> "ಸಂವಿಧಾನ ಎಂದು ನಾವು ಔಚಿತ್ಯವನ್ನು ಅರಿತು ನಿಷ್ಕೃಷ್ಟವಾಗಿ ಹೇಳಬೇಕೆಂದರೆ, ಸಮುದಾಯವು ಸಮುದಾಯದ ಎಲ್ಲರ ಹಿತಕ್ಕಾಗಿ, ಮತ್ತು ಕೆಲವೊಂದು ಗುರಿಗಳನ್ನು ಸಾಧಿಸುವ ಸಲುವಾಗಿ ತನ್ನನ್ನು ತಾನು ಆಡಳಿತದ ಸುವ್ಯವಸ್ಥೆಗೆ ಒಪ್ಪಿಸಿಕೊಳ್ಳಲು ಮಾಡಿಕೊಂಡಿರುವ ಕಾನೂನುಗಳ ಕಂತೆ, ಕೆಲವೊಂದು ನಿರ್ದಿಷ್ಟವಾದ ತಾರ್ಕಿಕ ನೀತಿಗಳಿಂದ ತಾನೇ ಕಟ್ಟಿಕೊಂಡ ಸಂಸ್ಥೆಗಳ ಮತ್ತು ಸಂಪ್ರದಾಯಗಳ ಕೂಟ."

ಈ ವಿವರಣೆಯೂ ಆಧುನಿಕ ಸಂದರ್ಭದಲ್ಲಿ ಉಪಯೋಗಿಸುತ್ತಿರುವ ಆ ಪದದ ಅರ್ಥವ್ಯಾಪ್ತಿಯನ್ನು ಹೊಂದಿಲ್ಲ. ಸರಕಾರದ ವಿವಿಧ ಅಂಗಗಳ ಅಧಿಕಾರ ಮತ್ತು ಕರ್ತವ್ಯಗಳನ್ನು ನಿಗದಿಗೊಳಿಸುವ ಮತ್ತು ಪರಿಮಿತಿಗೊಳಿಸುವ ಮೂಲಭೂತ ಕಾನೂನುಗಳು ಎಂಬ ಅರ್ಥವು ಇಂದಿನ ದಿನಗಳಲ್ಲಿ ಅದಕ್ಕೆ ಬಂದಿದೆ. ಸಂವಿಧಾನ ಎಂಬ ಪದದ ಅರ್ಥವನ್ನು ಸ್ಪಷ್ಟಗೊಳಿಸಿದ ಥಾಮಸ್ ಪೆಯ್ನ್ ಅವರು–

> "ಸಂವಿಧಾನವು ಸರಕಾರದ ಕಾನೂನುಗಳಲ್ಲ ಬದಲಿಗೆ ಸರಕಾರವನ್ನು ಮಾಡುವ ಜನತೆಯ ಕಾನೂನುಗಳು ಮತ್ತು ಸಂವಿಧಾನವಿಲ್ಲದ ಸರಕಾರವೆಂದರೆ, ಹಕ್ಕುಗಳಿಲ್ಲದ ಅಧಿಕಾರದಂತೆ" ಎಂದು ವಾದಿಸುತ್ತಾರೆ.

ಇದೆಲ್ಲಾ ಸಂವಿಧಾನ ಎಂಬ ಪದದ ಅರ್ಥವನ್ನು ಕುರಿತು ಹೇಳಿದ ಮಾತುಗಳು.

ಸಾಂವಿಧಾನಿಕ ಕಾನೂನಿನ ಲಕ್ಷಣ ಮತ್ತು ವ್ಯಾಪ್ತಿಗಳೇನು? ಸಾಂವಿಧಾನಿಕ ಕಾನೂನಿನ ಲಕ್ಷಣಗಳನ್ನು ಅರಿಯಲು ಸುಲಭವಾದ ಉಪಾಯವೆಂದರೆ, ಅದರ ವ್ಯಾಪ್ತಿಯನ್ನು ತಿಳಿದುಕೊಳ್ಳುವುದು. ಆದ್ದರಿಂದ ಮೊದಲು ಅದರ ವ್ಯಾಪ್ತಿಯನ್ನು ವಿವರಿಸುವುದು ಉತ್ತಮ. ಪ್ರಜಾಪ್ರಭುತ್ವವು ಜಾರಿಯಲ್ಲಿರುವ ಜಗತ್ತಿನ ಎಲ್ಲಾ ಕಡೆಗಳಲ್ಲಿಯೂ, ಸರಕಾರಗಳು ತಮ್ಮ ನಾಗರಿಕರ ವಿರುದ್ಧ ಚಲಾಯಿಸುವ ಹಕ್ಕುಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳೂ ಸಂವಿಧಾನದ ವ್ಯಾಪ್ತಿಯಲ್ಲಿ ಬರುತ್ತವೆ, ಅಂದರೆ, (೧) ಎಲ್ಲರನ್ನೂ ಕಾನೂನಿಗೆ ಬದ್ಧರನ್ನಾಗಿ ಮಾಡುವುದು, (೨) ಕಾನೂನುಗಳನ್ನು ಜಾರಿಗೆ ತರುವುದು, ಮತ್ತು (೩) ಕಾನೂನುಗಳನ್ನು ಮತ್ತು ಸರಕಾರದ ವಿರುದ್ಧ ನಾಗರಿಕರಿಗೆ ಇರುವ ಹಕ್ಕುಗಳನ್ನು ಅರ್ಥೈಸುವುದು. ದೇಶವು ಸಂಯುಕ್ತ ರಾಷ್ಟ್ರವಾಗಿದ್ದರೆ, ಸಾಂವಿಧಾನಿಕ ಕಾನೂನಿನ ವ್ಯಾಪ್ತಿಯು, ಮೇಲೆ ಹೇಳಿದವುಗಳನ್ನಲ್ಲದೆ, ಕೇಂದ್ರ ಮತ್ತು ರಾಜ್ಯಗಳ, ರಾಜ್ಯ–ರಾಜ್ಯಗಳ ನಡುವಿನ ಆಡಳಿತ ವ್ಯವಸ್ಥೆಯನ್ನೂ – ನ್ಯಾಯಾಂಗ, ಕಾರ್ಯಾಂಗ ಹಾಗೂ ಆರ್ಥಿಕ ವಿಷಯಗಳನ್ನೂ – ಒಳಗೊಳ್ಳುತ್ತದೆ.

ವ್ಯಾಪ್ತಿಯನ್ನು ವಿವರಿಸಿದ ಮೇಲೆ, ನ್ಯಾಯಶಾಸ್ತ್ರದ ದೃಷ್ಟಿಯಲ್ಲಿ ಸಾಂವಿಧಾನಿಕ ಕಾನೂನಿನ ಸ್ಥಾನವೇನು? ಅದನ್ನು ದೇಶದ ಸಾರ್ವಜನಿಕ ಕಾನೂನಿನ ಭಾಗವೆಂದು ಪ್ರೊ. ಹಾಲಂಡ್ ಅವರು ಹೇಳುತ್ತಾರೆ. ಇದು ಸರಿಯಾದ ದೃಷ್ಟಿಯೆನ್ನುವುದನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಅವರ ತಾರ್ಕಿಕ ಪ್ರತಿಪಾದನೆ ಈ ನಿರ್ಣಯಕ್ಕೆ ನಮ್ಮನ್ನು ಕರೆದುತರುತ್ತದೆ. ಕಾನೂನು ಎಂಬುದು ಹಕ್ಕುಗಳಿಗೆ ಸಂಬಂಧಿಸಿದ ವರ್ತನೆಗಳನ್ನು ನಿಯಂತ್ರಿಸುವ ನಿಯಮಗಳ ಚಲಾವಣೆ. ಈ ನಿಯಮಗಳ ಚಲಾವಣೆಯು ಸಂಬಂಧಿಸಿದ ಸರಕಾರ ಮತ್ತು ಅದರ ಪ್ರಜೆಗಳಿಗೆ ಸಂಬಂಧಪಟ್ಟಿದ್ದರೆ ಅದು ಸ್ಥಳೀಯ ಕಾನೂನುಗಳಾಗುತ್ತದೆ. ವಿವಿಧ ಸರಕಾರಗಳ

ನಡುವೆ ನಿಯಮಗಳ ಚಲಾವಣೆಯಾದರೆ ಅದನ್ನು ಅಂತಾರಾಷ್ಟ್ರೀಯ ಕಾನೂನು ಎನ್ನುತ್ತಾರೆ. ಸರಕಾರದ ಸ್ಥಳೀಯ ಕಾನೂನುಗಳನ್ನು ಎರಡು ವರ್ಗಗಳನ್ನಾಗಿ ಮಾಡಬಹುದು. ಒಂದು ಖಾಸಗೀ ಕಾನೂನಾದರೆ, ಇನ್ನೊಂದು ಸಾರ್ವಜನಿಕ ಕಾನೂನು. ಪ್ರಜೆಗಳ ನಡುವೆ ಪರಸ್ಪರ ಚಲಾಯಿಸಬಹುದಾದ ಹಕ್ಕುಗಳಿಗೆ ಸಂಬಂಧಿಸಿದವುಗಳು ಖಾಸಗೀ ಕಾನೂನುಗಳ ವ್ಯಾಪ್ತಿಯಲ್ಲಿ ಬರುತ್ತವೆ. ತನ್ನ ಪ್ರಜೆಗಳ ಮೇಲೆ ಸರಕಾರವು ಚಲಾಯಿಸಬಹುದಾದ ಕಾನೂನುಗಳನ್ನು ಸಾರ್ವಜನಿಕ ಕಾನೂನುಗಳು ಎನ್ನುತ್ತಾರೆ. ಹಾಗೆಯೇ, ಸಂಯುಕ್ತ ರಾಷ್ಟ್ರಗಳಲ್ಲಿ ಕೇಂದ್ರವು ರಾಜ್ಯಗಳ ಮೇಲೆ ಚಲಾಯಿಸಬಹುದಾದ ಕಾನೂನುಗಳು ಸಾರ್ವಜನಿಕ ಕಾನೂನುಗಳ ವ್ಯಾಪ್ತಿಗೆ ಬರುತ್ತವೆ. ಯಾವುದೇ ರೀತಿಯಲ್ಲಿ ನೋಡಿದರೂ, ಅವು ಖಾಸಗೀ ಕಾನೂನುಗಳ ವ್ಯಾಪ್ತಿಗೆ ಬರುವುದಿಲ್ಲ.

ರಾಜ್ಯ ರಾಜ್ಯಗಳ ನಡುವೆ, ರಾಜ್ಯ ಮತ್ತು ಅದರ ಪ್ರಜೆಗಳ ನಡುವೆ ಚಲಾಯಿಸಬಹುದಾದ ಸಾಂವಿಧಾನಿಕ ಕಾನೂನುಗಳನ್ನು ಸಾರ್ವಜನಿಕ ಕಾನೂನುಗಳ ಶಾಖೆಯೆಂದೇ ಪರಿಗಣಿಸಬೇಕು. ಮೇಲೆ ನೀಡಿರುವ ಸಾಂವಿಧಾನಿಕ ಕಾನೂನಿನ ಲಕ್ಷಣಗಳ ಹಾಗೂ ಅದರ ಬಗೆಗಿನ ವಿವರಣೆಯು, ಚರ್ಚೆಗಾಗಿ ಮತ್ತು ವ್ಯಾಪ್ತಿಯ ವಿವರಣೆಗೆ ಕೆಲವೇ ನಿರ್ದಿಷ್ಟ ಪ್ರಕರಣಗಳನ್ನು ನಾವು ಏಕೆ ಆಯ್ದುಕೊಂಡೆವು ಎಂಬುದರ ಉದ್ದೇಶವನ್ನು ವಿವರಿಸುತ್ತದೆ. ಭಾರತದಲ್ಲಿ ಸಾರ್ವಜನಿಕ ಕಾನೂನಿನ ಭಾಗ ಎಂಬುದರ ಚರ್ಚೆಯನ್ನು ವಿಷದವಾಗಿ ಮಾಡಲು ಈ ಆಯ್ದ ಪ್ರಕರಣಗಳು ಭಾರತದ ಸಂವಿಧಾನವನ್ನು ಅರ್ಥೈಸಲು ಮತ್ತು ಅದರ ವೈಶಿಷ್ಟ್ಯಗಳನ್ನು ಬೆಳಕಿಗೆ ತರಲು ಉತ್ತಮ ಮಾರ್ಗವನ್ನು ಸೂಚಿಸುತ್ತವೆ.

* * * * *

# ೩೧
# ಭಾರತದ ಜನತೆಯು ತನ್ನ ಮೂಲಭೂತ ಹಕ್ಕುಗಳನ್ನು ಅರಿತುಕೊಳ್ಳುತ್ತದೆ

ಭಾರತ ಸರಕಾರದ ಕಾನೂನು ಸಚಿವರಾದ ಡಾ. ಅಂಬೇಡ್ಕರ್ ಅವರು ಹೈದರಾಬಾದಿಗೆ ಭೇಟಿನೀಡಿದ್ದರು. ಹೈದರಾಬಾದ್ ಪ್ರೊಗ್ರೆಸ್ಸೀವ್ ಗ್ರೂಪ್‌ನ ಆಶ್ರಯದಲ್ಲಿ ಬೋಟ್ ಕ್ಲಬ್‌ನಲ್ಲಿ ಅವರು ೨೪.೫.೧೯೫೦ರಂದು ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪತ್ರಿಕಾ ಪ್ರತಿನಿಧಿಗಳು ಮತ್ತು ವೀಕ್ಷಕರಲ್ಲಿ ಕೆಲವರು ಅವರಿಗೆ ಸಂವಿಧಾನ, ಪ್ರಜಾಪ್ರಭುತ್ವ, ಅಸ್ಪೃಶ್ಯತೆ – ಇವುಗಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿದರು.

### ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ

ಕೆಲವೊಂದು ಕ್ಷಣಗಳಲ್ಲಿ ನಾನು ಭಾರತದಲ್ಲಿ ಪ್ರಜಾಪ್ರಭುತ್ವದ ಭವಿಷ್ಯದ ಬಗ್ಗೆ ನಿರಾಶಾವಾದವನ್ನು ತಾಳುತ್ತೇನೆ. ಆದರೆ, ಸಾಂವಿಧಾನಿಕ ನೈತಿಕತೆಗೆ ನಾವೆಲ್ಲರೂ ಹೆಗಲುಕೊಟ್ಟರೆ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಉಳ್ಳ ಪಕ್ಷಗಳ ಪದ್ಧತಿಯನ್ನು ಜಾರಿಗೆ ತರುವಲ್ಲಿ ಯಶಸ್ವಿಯಾಗುತ್ತೇವೆ ಎಂಬ ಆಶಾವಾದವು ಮತ್ತೆ ಕೆಲವು ಕ್ಷಣಗಳಲ್ಲಿ ನನ್ನ ಮನಸ್ಸಿನಲ್ಲಿ ಬರುವದೇ ಇಲ್ಲವೆಂದು ನಾನು ಹೇಳುವುದಿಲ್ಲ.

### ಸಂವಿಧಾನದಲ್ಲಿ ಅಳವಡಿಸಲಾಗಿರುವ ಮೂಲಭೂತ ಹಕ್ಕುಗಳು

ಮೂಲಭೂತ ಹಕ್ಕುಗಳು ವ್ಯಕ್ತಿಗಳಿಗೆ ನಿರಂಕುಶವಾದ ಹಕ್ಕುಗಳನ್ನು ತಂದುಕೊಡುತ್ತವೆ ಎಂಬುದು ಸರಿಯಾದ ತಿಳಿವಳಿಕೆಯಲ್ಲ. ರಾಷ್ಟ್ರದ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೋಸ್ಕರ ಮೂಲಭೂತ ಹಕ್ಕುಗಳ ಮೇಲೆ ಕೆಲವು ಮಿತಿಗಳು ಇರುತ್ತವೆ. ನಾವು ಸಂವಿಧಾನವನ್ನು ರಚಿಸುವಾಗ, ಮೂಲಭೂತ ಹಕ್ಕುಗಳ ಮೇಲಿನ ಮಿತಿಯು ವೈಯಕ್ತಿಕ ಸ್ವಾತಂತ್ರವನ್ನು ನ್ಯಾಯವಲ್ಲದ ರೀತಿಯಲ್ಲಿ ಮೊಟಕುಗೊಳಿಸದ ಹಾಗೆ ಎಚ್ಚರಿಕೆಯನ್ನು ವಹಿಸಿದ್ದೇವೆ.

ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಇರುವ ಉತ್ತಮ ವಿಧಾನವೆಂದರೆ, ಸಮರ್ಥವಾದ ವಿರೋಧಪಕ್ಷವನ್ನು ಹೊಂದಿರುವುದು. ಆಗ ಸರಕಾರವು ಉಚಿತವಾದ ರೀತಿಯಲ್ಲಿ ವರ್ತಿಸುತ್ತದೆ.

ಎರಡನೆಯ ವಿಧಾನವೆಂದರೆ ಕಾನೂನು ವ್ಯವಸ್ಥೆ. ಸಿ.ಐ.ಡಿ.ಯು ಸಲ್ಲಿಸಿದ ವರದಿಯ ಆಧಾರದ ಮೇಲೆ ಒಬ್ಬ ಸಚಿವರು ಒಬ್ಬ ವ್ಯಕ್ತಿಯನ್ನು ಬಂಧಿಸಿ ಪ್ರತಿಬಂಧಕ ಜೈಲುವಾಸವನ್ನು ವಿಧಿಸಿದರು ಎಂದು ಊಹಿಸಿಕೊಳ್ಳಿ. ಆಗ ಉದ್ಭವಿಸುವ ಪ್ರಶ್ನೆಯೆಂದರೆ ಸಿ.ಐ.ಡಿ.ಯ ವರದಿಯು ಎಷ್ಟರ ಮಟ್ಟಿಗೆ ನ್ಯಾಯಯುತವಾಗಿತ್ತು ಎಂಬುದು. ಇದೊಂದು ಪರಿಹರಿಸಲು ಕಷ್ಟವಾದ ಪ್ರಶ್ನೆ.

ಇಂತಹ ಸಂದರ್ಭದಲ್ಲಿ, ಕಾನೂನಿನ ವಿವೇಕವು ಸಚಿವರ ವರ್ತನೆಯ ಮೇಲೆ ಕೆಲವು ಮಿತಿಯನ್ನು, ಪ್ರತಿಬಂಧಕಗಳನ್ನು ವಿಧಿಸುವಂತೆ ಇರಬೇಕು. ಇದರಿಂದ ಸಂಬಂಧಿಸಿದ ಸಚಿವರು ತಮಗೆ ಬಂದ ವರದಿಗಳಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾದರೆ ಇರಬೇಕಾದಷ್ಟು ನ್ಯಾಯಪೂರ್ಣವಾಗಿ ಆ ವರದಿಯು ಇದೆಯೆಂಬುದನ್ನು ನಿರ್ದಿಷ್ಟಪಡಿಸಿಕೊಳ್ಳುತ್ತಾರೆ. ಸಂವಿಧಾನದಲ್ಲಿ ಇಂತಹ ಅವಕಾಶಗಳನ್ನು ಕಲ್ಪಿಸಿದರೆ, ಮುಂದಿನ ಹಂತದಲ್ಲಿ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಸರ್ವೋಚ್ಚ ನ್ಯಾಯಾಲಯವು ಇರುತ್ತದೆ.

ಭಾರತವು ಈಗ ಸಂಕ್ರಮಣಕಾಲದಲ್ಲಿದೆ. ಅಮೆರಿಕಾ ಸಂಯುಕ್ತ ಸಂಸ್ಥಾನವು ತನ್ನ ಸಂವಿಧಾನವನ್ನು

ರೂಪಿಸಿ ಅದರಲ್ಲಿ ಮೂಲಭೂತ ಹಕ್ಕುಗಳನ್ನು ಅಳವಡಿಸಿದಾಗ ಅಲ್ಲಿನ ಜನತೆಗೆ ಆ ಹಕ್ಕುಗಳ ಲಕ್ಷಣ, ವ್ಯಾಪ್ತಿ ಮತ್ತು ಮಿತಿಗಳ ಬಗ್ಗೆ ತಿಳಿವಳಿಕೆಯಿರಲಿಲ್ಲ. ನಂತರ ಹಲವಾರು ವರ್ಷಗಳಲ್ಲಿ ಅಲ್ಲಿನ ಸರ್ವೋಚ್ಚ ನ್ಯಾಯಾಲಯವು ತಾನು ನ್ಯಾಯ ಪ್ರಕರಣಗಳಲ್ಲಿ ನೀಡಿದ ತೀರ್ಪುಗಳ ಮೂಲಕ ಮೂಲಭೂತ ಹಕ್ಕುಗಳ ಬಗ್ಗೆ, ಅವುಗಳ ಲಕ್ಷಣ, ವ್ಯಾಪ್ತಿ ಮತ್ತು ಮಿತಿಗಳ ಬಗ್ಗೆ ನಿರ್ದಿಷ್ಟತೆಯನ್ನು ತಂದುಕೊಟ್ಟಿತು. ಹಾಗೆಯೇ ಐದು ಅಥವಾ ಹತ್ತು ವರ್ಷಗಳ ನಂತರ ಭಾರತದ ಜನರು ಸಂವಿಧಾನವು ತಮಗೆ ಕೊಡಮಾಡಿದ ಮೂಲಭೂತ ಹಕ್ಕುಗಳನ್ನು ಮತ್ತು ಹಾಗೆ ಕೊಡುವಲ್ಲಿ ಸಂವಿಧಾನದ ಆಶಯಗಳು ಏನಿದ್ದವು ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.

### ವಯಸ್ಕಮತದಾನ

ಪ್ರಶ್ನೆ: ಕ್ರಮಕ್ರಮವಾಗಿ ಜಾರಿಗೆ ತರುವ ಬದಲು ಒಮ್ಮೆಲೇ ವಯಸ್ಕ ಮತದಾನವನ್ನು ಏಕೆ ಜಾರಿಗೆ ತರಲಾಯಿತು?

ಉತ್ತರ: ಅಧಿಕಾರದಲ್ಲಿರುವ ಪಕ್ಷವು ಈ ತತ್ತ್ವವನ್ನು ಜಾರಿಗೆ ತರಲು ಎಷ್ಟು ಬದ್ಧವಾಗಿತ್ತೆಂದರೆ, ಅದರ ಉಪಯುಕ್ತತೆಯು ಸ್ವಲ್ಪ ಸಂಶಯಾಸ್ಪದವಾಗಿದೆಯೆಂದು ಕೊನೆಕೊನೆಗೆ ತೋರಿದ ಮೇಲೂ, ಮುಂದೆ ಇಟ್ಟ ಹೆಜ್ಜೆಯನ್ನು ಹಿಂದೆ ತೆಗೆದುಕೊಳ್ಳಲು ಅದಕ್ಕೆ ಸಾಧ್ಯವಾಗಲಿಲ್ಲ.

ವೈಯಕ್ತಿಕವಾಗಿ ನನಗೆ ವಯಸ್ಕಮತದಾನದ ವಿಷಯದಲ್ಲಿ ಯಾವ ಭಯವೂ ಇಲ್ಲ. ಜನತೆಯ ಜೊತೆಯಲ್ಲಿ ಸಂಪರ್ಕವಿಟ್ಟುಕೊಂಡಿರುವವರಲ್ಲಿ ನಾನೂ ಒಬ್ಬನಾಗಿದ್ದು, ವಯಸ್ಕಮತದಾನ ಪದ್ಧತಿಯನ್ನು ಜನರು ಅಪಾರ್ಥಮಾಡಿಕೊಳ್ಳುತ್ತಾರೆ ಅಥವಾ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬ ಭಯವು ನನಗಿಲ್ಲ. ಇಡೀ ದೇಶದಲ್ಲಿರುವ ಅಪಾರ ಜನಸಂಖ್ಯೆಯ ಮತದಾರರಿಂದ ಮತದಾನ ಮಾಡಿಸುವ ಕಾರ್ಯವನ್ನು ನಮ್ಮ ದುರ್ಬಲ ಆಡಳಿತ ವ್ಯವಸ್ಥೆಯು ನಡೆಸಿಕೊಡುವಷ್ಟು ಸಮರ್ಥವಾಗಿದೆಯೇ ಎಂಬುದು ನನಗೆ ವಯಸ್ಕ ಮತದಾನದ ವಿಷಯದಲ್ಲಿ ಕಾಣುವ ಸಮಸ್ಯೆ. ನನ್ನ ದೃಷ್ಟಿಯ ಪ್ರಕಾರ ಈ ಸಮಸ್ಯೆಗೆ ಇರುವ ಪರಿಹಾರವೆಂದರೆ, ಇಡೀ ದೇಶದಲ್ಲಿರುವ ಎಲ್ಲಾ ಮತಕ್ಷೇತ್ರಗಳಲ್ಲಿ ಒಂದೇ ದಿನ ಚುನಾವಣೆಯನ್ನು ನಡೆಸುವ ಬದಲು, ಅದನ್ನು ಹಲವು ದಿನಗಳು ನಡೆಯುವಂತೆ ಮಾಡಿದರೆ, ನಮ್ಮ ಆಡಳಿತ ವ್ಯವಸ್ಥೆಯು ಚುನಾವಣೆಯನ್ನು ಸಮರ್ಥವಾಗಿ ನಡೆಸಬಲ್ಲುದು.

ಪ್ರಶ್ನೆ: ಸವರ್ಣೀಯ ಹಿಂದೂಗಳು ಪರಿಶಿಷ್ಟ ಜಾತಿಗಳವರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸದಿದ್ದರೆ ಮತ್ತು ಅವರ ಹಕ್ಕುಗಳನ್ನು ಮಾನ್ಯಮಾಡದಿದ್ದರೆ ಈ ವಿಷಯವನ್ನು ಅಂತಾರಾಷ್ಟ್ರೀಯ ಸಂಸ್ಥೆಗೆ ತೆಗೆದುಕೊಂಡು ಹೋಗುವುದಾಗಿ ಅಂತಿಮ ಎಚ್ಚರಿಕೆಯನ್ನು ಹೈದರಾಬಾದಿನಲ್ಲಿ ನಡೆದ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನೀಡಲು ತೀರ್ಮಾನಿಸಲಾಯಿತೆನ್ನುವುದು ನಿಜವೇ?

ಉತ್ತರ: ಈ ವಿಷಯವು ಕಾರ್ಯಕ್ರಮದ ಪಟ್ಟಿಯಲ್ಲಿ ಇರಲಿಲ್ಲ ಮತ್ತು ಇದರ ಬಗ್ಗೆ ಯಾವ ಗೊತ್ತುವಳಿಯನ್ನೂ ಅಂಗೀಕರಿಸಲಿಲ್ಲ. ಆದರೆ, ತನ್ನನ್ನು ಇತರ ಸಮುದಾಯಗಳು ದಮನಿಸುತ್ತಿವೆ ಎಂದು ಯಾವುದೇ ದೇಶದ ಯಾವುದೇ ಸಮುದಾಯವು ಭಾವಿಸಿದರೆ, ಅದಕ್ಕೆ ಮಾನವ ಹಕ್ಕುಗಳ ಆಯೋಗಕ್ಕೆ ತನ್ನ ಅಹವಾಲನ್ನು ಸಲ್ಲಿಸಲು ಮುಕ್ತ ಅವಕಾಶಗಳಿರುತ್ತವೆ.

### ಅಸ್ಪೃಶ್ಯತೆ

ಭಾರತದಲ್ಲಿ ಅಸ್ಪೃಶ್ಯತೆಯ ಸಮಸ್ಯೆಗೆ ಹಿಂದೆ ಇರದ ಆರ್ಥಿಕ ಆಯಾಮವೂ ಈಗ ಸೇರಿಕೊಳ್ಳುತ್ತಿದೆ. ದೇಶದಲ್ಲಿನ ಅಸ್ಪೃಶ್ಯರು ಐದು ಅಥವಾ ಆರು ವರ್ಷಗಳ ಹಿಂದೆ ಇದ್ದುದಕ್ಕಿಂತ ಈಗ ಉತ್ತಮ ಸ್ಥಿತಿಯಲ್ಲಿ

ಇದ್ದಾರೆ. ಆದರೆ, ಅವರ ಹಾದಿಯಲ್ಲಿ ಕೆಲವು ಅಡೆತಡೆಗಳು ಇಲ್ಲದಿದ್ದಿದ್ದರೆ, ಅವರ ಪ್ರಗತಿಯ ವೇಗವು ಇನ್ನೂ ಹೆಚ್ಚುತ್ತಿತ್ತು ಮತ್ತು ಅವರು ಇನ್ನೂ ಉತ್ತಮ ಸ್ಥಿತಿಯಲ್ಲಿ ಇರುತ್ತಿದ್ದರು.

**ದೇಶದ ಎಲ್ಲಾ ಸಮುದಾಯಗಳವರಿಗೂ ಒಂದೇ ನಾಗರಿಕ ಸಂಹಿತೆಯನ್ನು ಹೊಂದಿರುವ ಬಗ್ಗೆ**

ಪ್ರಶ್ನೆ: ದೇಶದಲ್ಲಿರುವ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಪಾರ್ಸಿ ಮೊದಲಾದ ಎಲ್ಲಾ ಸಮುದಾಯಗಳವರಿಗೆ ಅನ್ವಯವಾಗುವಂತಹ ಒಂದೇ ನಾಗರಿಕ ಸಂಹಿತೆಯು ಇರುವುದು ಸಾಧ್ಯವೇ?

ಉತ್ತರ: ದೇಶದಲ್ಲಿರುವ ವಿವಿಧ ಜಾತಿ, ಮತ ಇವುಗಳಿಗೆ ನಿರಪೇಕ್ಷವಾಗಿರುವಂತಹ ಒಂದೇ ನಾಗರಿಕ ಸಂಹಿತೆಯನ್ನು ಹೊಂದುವುದು ಸುಲಭವಾದ ಕೆಲಸವಲ್ಲ. ಹೊರದೇಶಗಳ ಕಾನೂನು ತತ್ತ್ವಗಳನ್ನು ಹೊಸದಾಗಿ ನಾವು ಆಮದುಮಾಡಿಕೊಂಡು ನಮ್ಮಲ್ಲಿ ಅಳವಡಿಸಿಕೊಳ್ಳುವುದು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿದೆ. ನಮ್ಮಲ್ಲಿನ ಪರಿಸ್ಥಿತಿಯು ಈಗಾಗಲೇ ಕಲಸುಮೇಲೋಗರವಾಗಿದೆ. ಎಲ್ಲರಿಗೂ ಸಮಾನ ಅವಕಾಶಗಳನ್ನು ಕೊಡಲು, ನಾವು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಇತರ ಧಾರ್ಮಿಕ ಸಮುದಾಯಗಳವರಿಗೆ ಅನ್ವಯವಾಗುವ ಕಾನೂನುಗಳನ್ನು ಪರಿಗಣಿಸಬೇಕು. ದೇಶದಲ್ಲಿ ಏಕರೂಪದ ಕಾನೂನಿನ ಅಗತ್ಯತೆಯ ದೃಷ್ಟಿಯಿಂದ ಒಂದೇ ನಾಗರಿಕ ಸಂಹಿತೆಗೆ ಒಳಪಡಲು ಒಪ್ಪಿಕೊಳ್ಳುವಂತೆ ನಾವು ಎಲ್ಲಾ ಸಮುದಾಯಗಳವರ ಮನವೊಲಿಸಬೇಕು.

ಅದಕ್ಕೆ ಮೊದಲು, ನಾವು ನಮ್ಮ ಕಾನೂನು ಏನು ಹೇಳುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಉದಾಹರಣೆಗೆ, ಹಿಂದೂ ಕಾನೂನು ಎಂಬುದು ಒಂದು ಕಗ್ಗಾಡಾಗಿದೆ. ಸಾಮಾನ್ಯ ನಾಗರಿಕ ಸಂಹಿತೆಗೆ ಒಪ್ಪಿಕೊಳ್ಳುವ ಮೊದಲು ಹಿಂದೂಗಳು ತಮಗೆ ಅನ್ವಯವಾಗುವ ಕಾನೂನನ್ನು ಅರಿತುಕೊಳ್ಳಲು ಅನುಕೂಲವಾಗುವ ಹಾಗೆ ಹಿಂದೂ ಕಾನೂನನ್ನು ಕ್ರಮಬದ್ಧಗೊಳಿಸಬೇಕು.

* * * * *

# ೩೨

# ದೃಢವಾಗಿರಿ ಮತ್ತು ಪ್ರಾಮಾಣಿಕವಾಗಿರಿ ಎಂದು ನಾನು ಹೇಳುತ್ತೇನೆ

ಜಲಂಧರ್‌ನಲ್ಲಿ ೧೯೫೧ರ ಅಕ್ಟೋಬರ್ ೨೭ರಂದು ನಡೆದ ಸಂದರ್ಶನವೊಂದರಲ್ಲಿ, ಪತ್ರಿಕಾ ಪ್ರತಿನಿಧಿಗಳು ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಕಾಶ್ಮೀರ, ಕಾಮನ್‌ವೆಲ್ತ್‌ನೊಂದಿಗಿನ ಭಾರತದ ಸಂಬಂಧ, ಮೊದಲಾದ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಡಾ. ಅಂಬೇಡ್ಕರ್ ಅವರು ನೀಡಿದ ಉತ್ತರಗಳನ್ನು ಕೆಳಗೆ ಕೊಡಲಾಗಿದೆ. – ಸಂಪಾದಕರು

ಪ್ರಶ್ನೆ: – ಕಾಶ್ಮೀರದ ಸಮಸ್ಯೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: – ಜಮ್ಮು ಮತ್ತು ಕಾಶ್ಮೀರದಲ್ಲಿನ ಜನಮತಗಣನೆಯು ಭಾರತದ ವಿರುದ್ಧವಾಗಿರಬಹುದು ಎಂಬುದು ನನ್ನ ಹೆದರಿಕೆ. ಜಮ್ಮು ಮತ್ತು ಲಡಾಖ್ ಪ್ರದೇಶಗಳ ಹಿಂದೂ ಮತ್ತು ಬೌದ್ಧಮತಗಳವರು ಪಾಕಿಸ್ತಾನಕ್ಕೆ ಹೋಗುವುದನ್ನು ತಪ್ಪಿಸಲು, ಅಲ್ಲಿ ಜಮ್ಮು, ಲಡಾಖ್ ಮತ್ತು ಕಾಶ್ಮೀರ ಪ್ರದೇಶಗಳಿಗೆ ಪ್ರಾದೇಶಿಕ ಜನಮತಗಣನೆಯನ್ನು ಏರ್ಪಡಿಸಬೇಕು.

ಪ್ರಶ್ನೆ: – ಬ್ರಿಟನ್ನಿನಲ್ಲಿ ಚರ್ಚಿಲ್ ಮತ್ತೆ ಅಧಿಕಾರಕ್ಕೆ ಹೇಗೆ ಬಂದರು?

ಉತ್ತರ: – ಅನಿರೀಕ್ಷಿತವಾಗಿ ಉದ್ಭವಿಸಿದ ತೈಲದ ಸಮಸ್ಯೆ ಹಾಗೂ ಈಜಿಪ್ಟಿನ ಸಮಸ್ಯೆಗಳು ಲೇಬರ್ ಪಕ್ಷದ ಸೋಲಿಗೆ ಬಹುಶಃ ಕಾರಣವಾಗಿರಬಹುದು.

ಲೇಬರ್ ಪಕ್ಷವು ಮತ್ತೆ ಅಧಿಕಾರಕ್ಕೆ ಬಂದರೆ, ಬೆವನ್ ಅವರು ಸರಕಾರದಲ್ಲಿ ಪ್ರಮುಖಪಾತ್ರವನ್ನು ವಹಿಸುತ್ತಾರೆ, ಅದರಿಂದ ಗ್ರೇಟ್ ಬ್ರಿಟನ್ನಿನ ರಕ್ಷಣೆಯು ದುರ್ಬಲವಾಗುತ್ತದೆ ಎಂದು ಬ್ರಿಟಿಷ್ ಮತದಾರರು ಭಾವಿಸಿದ್ದರಬಹುದು.

ಪ್ರಶ್ನೆ: ಕನ್ಸರ್ವೇಟಿವ್ ಪಕ್ಷವು ಅಧಿಕಾರಕ್ಕೆ ಮರಳಿರುವುದು ಭಾರತದ ಮೇಲೆ ಯಾವ ಪರಿಣಾಮವನ್ನು ಬೀರಬಹುದು?

ಉತ್ತರ: ಇದರಿಂದ ಏನಾದರೂ ಪರಿಣಾಮವಾಗುತ್ತದೆ ಎಂದು ನನಗೆ ಅನಿಸುವುದಿಲ್ಲ. ಬಹುಶಃ, ಚರ್ಚಿಲ್ ಅವರು ಸ್ಟರ್ಲಿಂಗ್ ಶಿಲ್ಕಿನ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬಹುದು, ಮತ್ತು ಪಾಕಿಸ್ತಾನದ ಬಗ್ಗೆ ಬ್ರಿಟನ್ನಿನ ನಿಲವು ಬದಲಾಗಬಹುದು. ಚರ್ಚಿಲ್ ಅವರಿಗೆ ಹಿಂದೂಗಳ ಬಗ್ಗೆ ಅಂತಹ ಆತ್ಮೀಯವಾದ ಭಾವನೆಯೇನೂ ಇಲ್ಲ, ಹಾಗಾಗಿ ಸಹಜವಾಗಿಯೇ ಅವರು ಪಾಕಿಸ್ತಾನದ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸಬಹುದು.

ಪ್ರಶ್ನೆ: – ಚರ್ಚಿಲ್ ಅವರು ಅಧಿಕಾರದಲ್ಲಿರುವುದರಿಂದ, ಭಾರತವು ಕಾಮನ್‌ವೆಲ್ತ್‌ನಲ್ಲಿ ಮುಂದುವರೆಯಬೇಕೇ?

ಉತ್ತರ: ನಾವು ಕಾಮನ್‌ವೆಲ್ತ್‌ನಲ್ಲಿದ್ದೇವೆಯೇ? ನಾನು ನಮ್ಮ ಪ್ರಧಾನಮಂತ್ರಿಯವರನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗಿಲ್ಲ. ಭಾರತವು ಸ್ವತಂತ್ರ ದೇಶವಾದರಷ್ಟೇ ಸಾಲದು ಎಂದು ೧೯೨೯ರಲ್ಲಿ ಅವರು ಗಟ್ಟಿಯಾಗಿ ಹೇಳುತ್ತಿದ್ದರು. ೧೯೪೨ರಲ್ಲಿ 'ಭಾರತವನ್ನು ಬಿಟ್ಟು ತೊಲಗಿ' ಚಳವಳಿಯು ಪ್ರಾರಂಭವಾದಾಗ, ಅವರೇ ಆ ಚಳವಳಿಯನ್ನು ವಿರೋಧಿಸಿದರು. ಅವರ ಈ ಚಿಂತನೆಯು, ಲಾಹೋರಿನಲ್ಲಿನ ಅವರ

ನಿಲುವಿಗೆ ವಿರೋಧವಾಗಿತ್ತು. ನಾನು ಸಂವಿಧಾನವನ್ನು ರಚಿಸಿದಾಗ, ಅವರು ಭಾರತವು ಸ್ವತಂತ್ರ ದೇಶವಾಗುವುದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದರು. ಅನಿರೀಕ್ಷಿತವಾಗಿ ಅವರು ಮಾತುಕತೆಗಾಗಿ ಲಂಡನ್ನಿಗೆ ಹೋದರು ಮತ್ತು ಹಿಂತಿರುಗಿ ಬಂದ ನಂತರ ಭಾರತವು ಕಾಮನ್‌ವೆಲ್ತ್ ಕೂಟವನ್ನು ಸೇರಬೇಕು ಎಂದು ಘೋಷಿಸಿದರು.

ಪ್ರಶ್ನೆ: ಭಾರತವು ಸದ್ಯದ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂದು ನೀವು ಸಲಹೆಯನ್ನು ನೀಡುತ್ತೀರಿ?

ಉತ್ತರ: ನನಗೆ ಏನನ್ನೂ ಹೇಳಲಾಗುವುದಿಲ್ಲ. ಇದು ಬಹಳ ಸಂಕೀರ್ಣವಾದ ಪ್ರಶ್ನೆ. ಭಾರತವು ತನ್ನ ಅನುಕೂಲಕ್ಕಾಗಿ ಏನೇನನ್ನು ಮಾಡಬಹುದೋ ಅದನ್ನು ಮಾಡಬೇಕು. ದೇಶವು ತಾನು ಕಾಮನ್‌ವೆಲ್ತ್ ಕೂಟದಲ್ಲಿ ಇರಬಾರದೆಂದು ಯೋಚಿಸಿದರೆ, ಅದು ಅಲ್ಲಿಂದ ಹೊರನಡೆಯಬೇಕು. ನಾನು ಹೇಳುವುದೇನೆಂದರೆ, ದೃಢವಾಗಿರಿ ಮತ್ತು ಪ್ರಾಮಾಣಿಕವಾಗಿರಿ.

* * * * *

೩೩

# ಆಕ್ರಮಣಕಾರೀ ಶಕ್ತಿಯಿಲ್ಲದಿದ್ದರೆ, ಸ್ವತಂತ್ರ ವಿದೇಶಾಂಗ ನೀತಿಯಿಂದ ಏನೂ ಪ್ರಯೋಜನವಿಲ್ಲ

ಡಾ. ಅಂಬೇಡ್ಕರ್ ಅವರಿಗೆ ಪತ್ರಕರ್ತರು ಎಂದರೆ ಸರಿಬೀಳುವುದಿಲ್ಲ. ಹಾಗೆಂದು ಅವರು ಬಾಂಬೆಯಲ್ಲಿ ಶನಿವಾರ (೧೯೫೧ರ ನವೆಂಬರ್ ೨೪) ನಡೆದ ಅನೌಪಚಾರಿಕ ಸಭೆಯೊಂದರಲ್ಲಿ ತಿಳಿಸಿದರು. ಪತ್ರಕರ್ತರು ತಮ್ಮ ಸಹಕಾರವನ್ನು ಅವರಿಗೆ ನೀಡುತ್ತೇವೆಂದಾಗ ಅವರು ಅದನ್ನು ನಿರಾಕರಿಸಿದರು.

ಅವರು ಮಾತನಾಡಿದುದರಲ್ಲಿ ಬಹುಪಾಲು 'ಅನಧಿಕೃತಹೇಳಿಕೆ'ಗಳಾಗಿದ್ದವು. ನೆಹರೂ ಅವರು ತಮ್ಮ ದುಡುಕು ಸ್ವಭಾವದಿಂದಾಗಿ ಭಾರತವನ್ನು ವಿನಾಶದತ್ತ ಕೊಂಡೊಯ್ಯುತ್ತಿದ್ದಾರೆ. ಬೇರೆಯವರ ವ್ಯವಹಾರಗಳಲ್ಲಿ ನಾವು ಮೂಗು ತೂರಿಸುವ ಬದಲು, ನಮ್ಮ ಪಾಡಿಗೆ ನಾವಿದ್ದುಕೊಂಡು ಕುಸಿಯುತ್ತಿರುವ ನಮ್ಮ ಆರ್ಥಿಕತೆಯನ್ನು ಭದ್ರವಾಗಿ ಕಟ್ಟಬೇಕು. ಚೀನಾ ದೇಶವು ಆಕ್ರಮಣಮಾಡಬಹುದೆಂಬ ಭೀತಿಯು ಡಾ. ಅಂಬೇಡ್ಕರ್ ಅವರನ್ನು ಕಾಡುತ್ತಿರುವಂತೆ ಕಾಣಿಸುತ್ತಿದೆ. ಚೀನಾ ದೇಶವು ನಮ್ಮ ಮನೆಯ ಹೊಸ್ತಿಲಿನವರೆಗೆ ಬಂದಿದೆ ಆದರೆ ನಾವು ನಮ್ಮನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅವರು ಹೇಳಿದರು. ಆಕ್ರಮಣಕಾರೀ ಶಕ್ತಿಯಿಲ್ಲದಿದ್ದರೆ, ಸ್ವತಂತ್ರ ವಿದೇಶಾಂಗ ನೀತಿಯಿಂದ ಯಾವುದೇ ಪ್ರಯೋಜನವೂ ಇಲ್ಲ.

ಡಾ. ಅಂಬೇಡ್ಕರ್ ಅವರು ಅಗಾಧವಾದ ಬುದ್ಧಿಮತ್ತೆಯನ್ನು ಹೊಂದಿದ್ದಾರೆ. ಅವರ ನಿಲುವನ್ನು ಸಂಪೂರ್ಣವಾಗಿ ವಿರೋಧಿಸುವವರೂ ಅವರ ಪ್ರಭಾವಕ್ಕೆ ಒಳಗಾಗದೆ ಇರಲಾರರು. ಅವರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಮಂಡಿಸುತ್ತಾರೆ ಮತ್ತು ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸುತ್ತಾರೆ. ಕಟಕಿ ನುಡಿಯಲ್ಲಿ ಅವರು ನಿಸ್ಸೀಮರು.

* * * * *

---

(ದ ನ್ಯಾಷನಲ್ ಸ್ಟಾಂಡರ್ಡ್, ದಿನಾಂಕ ೧೯೫೧ರ ನವೆಂಬರ್ ೨೫)

## ೩೪

## ಪಾಕಿಸ್ತಾನದ ಬಗ್ಗೆ ಅಮೇರಿಕದ ಒಲವು

ಪರಿಶಿಷ್ಟ ಜಾತಿಗಳ ನಾಯಕರೂ, ಕೇಂದ್ರದ ಮಾಜಿ ಕಾನೂನು ಸಚಿವರೂ ಆದ ಡಾ. ಬಿ.ಆರ್. ಅಂಬೇಡ್ಕರ್ ಅವರು, ಕೊಲಂಬಿಯಾ ಯೂನಿವರ್ಸಿಟಿಯಿಂದ ಗೌರವ ಡಾಕ್ಟರೇಟ್ ಪದವಿಯನ್ನು ಸ್ವೀಕರಿಸಿ, ಟಿ.ಡಬ್ಲ್ಯೂ.ಎ. ಕಾನ್ಸ್ಟಲೇಷನ್ ಮೂಲಕ ಶನಿವಾರ ಅಮೇರಿಕಾದಿಂದ ಬಾಂಬೆಗೆ ಮರಳಿದರು.

ಅವರು ಭಾರತದ ಸಂವಿಧಾನಕ್ಕೆ ನೀಡಿರುವ ಕೊಡುಗೆಯನ್ನು ಮನ್ನಿಸಿ ಡಾ. ಅಂಬೇಡ್ಕರ್ ಅವರಿಗೆ ಜೂನ್ ೫ರಂದು ನಡೆದ ವಿಶೇಷ ಘಟಿಕೋತ್ಸವದಲ್ಲಿ ಈ ಪದವಿಯನ್ನು ನೀಡಲಾಯಿತು. (ದ ಸಂಡೆ ಸ್ಟಾಂಡರ್ಡ್, ದಿನಾಂಕ ೧೯೫೨ರ ಜೂನ್ ೧೬)

ಬಾಂಬೆ, ೧೯೫೨ರ ಜೂನ್ ೧೪ (ಪಿ.ಟಿ.ಐ)

ಅಮೆರಿಕಾ ದೇಶದ ಸಾಮಾನ್ಯ ಜನರು ಭಾರತದ ವಿಷಯಗಳಿಂದ ಪ್ರಭಾವಿತವಾಗಿರುವುದಕ್ಕಿಂತ ಹೆಚ್ಚಾಗಿ ಪಾಕಿಸ್ತಾನ ಮತ್ತು ಅದರ ನೀತಿಗಳ ವಿಷಯಗಳ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂದು ಪರಿಶಿಷ್ಟ ಜಾತಿಗಳ ಮುಖಂಡರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಇಂದು ಇಲ್ಲಿ ಹೇಳಿದರು. ಅಮೆರಿಕಾ ದೇಶಕ್ಕೆ ಪಾಕಿಸ್ತಾನದ ಬಗ್ಗೆ ಹೆಚ್ಚಿನ ಒಲವಿದೆ ಎಂದೂ ಅವರು ಹೇಳಿದರು.

* * * * *

---

(ದ ಬಾಂಬೆ ಕ್ರಾನಿಕಲ್, ದಿನಾಂಕ ೧೯೫೨ರ ಜೂನ್ ೧೫)

# ೩೫
# ಏನೇ ಆದರೂ, ಇಂಗ್ಲಿಷ್ ಭಾಷೆಯನ್ನು ಉಳಿಸಿಕೊಳ್ಳಿ

ಔರಂಗಾಬಾದ್, ೧೯೫೩ರ ಜುಲೈ ೩

ಶಾಲೆ ಮತ್ತು ಕಾಲೇಜುಗಳಲ್ಲಿ ಏನೇ ಆದರೂ ಇಂಗ್ಲಿಷ್ ಭಾಷೆಯನ್ನು ಬೋಧನಾ ಮಾಧ್ಯಮವನ್ನಾಗಿ ಉಳಿಸಿಕೊಳ್ಳಬೇಕೆಂದು ಭಾರತದ ಮಾಜಿ ಕಾನೂನು ಸಚಿವ ಡಾ. ಬಿ.ಆರ್. ಅಂಬೇಡ್ಕರ್ ಅವರು ವಾದಿಸಿದರು.

ಡಾ. ಅಂಬೇಡ್ಕರ್ ಅವರು ಸಂದರ್ಶನವೊಂದರಲ್ಲಿ ಇಂಗ್ಲಿಷ್ ಭಾಷೆಯು ಅತ್ಯಂತ ಶ್ರೀಮಂತ ಭಾಷೆಯೆಂದು ಹೇಳುತ್ತಾ 'ಶಾಲೆ ಮತ್ತು ಕಾಲೇಜುಗಳಲ್ಲಿ ಇಂಗ್ಲಿಷ್ ಭಾಷೆಯ ಬದಲಾಗಿ ಹಿಂದಿಯನ್ನೂ ಸೇರಿದಂತೆ ಬೇರೆ ಯಾವ ಭಾಷೆಯನ್ನೂ ಬಳಸಲು ಸಾಧ್ಯವಿಲ್ಲ ಎಂಬುದು ನನ್ನ ನಂಬಿಕೆ' ಎಂದರು.

ಔರಂಗಾಬಾದಿನ ಪೀಪಲ್ಸ್ ಎಡ್ಯುಕೇಷನ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷರೂ ಆದ ಡಾ. ಅಂಬೇಡ್ಕರ್ ಅವರು ಔರಂಗಾಬಾದಿನ ಕಾಲೇಜಿನಲ್ಲಿ ಹಿಂದಿಯನ್ನಾಗಲೀ ಅಥವಾ ಇನ್ನಾವುದೇ ಸ್ಥಳೀಯ ಭಾಷೆಯನ್ನು ಬೊಧನಾ ಭಾಷೆಯನ್ನಾಗಿ ಬಳಸಲು ಅವಕಾಶವನ್ನು ನೀಡುವುದಿಲ್ಲ ಎಂದು ಹೇಳಿದರು. ಇಂಗ್ಲಿಷ್ ಭಾಷೆಯೇ ಬೋಧನಾ ಭಾಷೆಯಾಗಿ ಮುಂದುವರಿಯುವುದು ಎಂದು ಅವರು ತಿಳಿಸಿದರು.

ಭಾರತೀಯ ಭಾಷೆಗಳ ಬಗ್ಗೆ ಮಾತನಾಡುತ್ತಾ ಹಿಂದಿ ಭಾಷೆಯ ಸ್ಥಾನವನ್ನು ಬೇರಾವ ಭಾರತೀಯ ಭಾಷೆಯೂ ಆಕ್ರಮಿಸಲು ಸಾಧ್ಯವಿಲ್ಲ ಎಂದರು. ಹಿಂದಿ ಭಾಷೆಗೆ ಇನ್ನೂ ಅಭಿವೃದ್ಧಿಯಾಗುವ ಅವಕಾಶವಿರುವುದರಿಂದ ಅದನ್ನು ತಾವು ಆಯ್ದುಕೊಂಡಿರುವುದಾಗಿ ಡಾ. ಅಂಬೇಡ್ಕರ್ ಅವರು ಹೇಳಿದರು.

ಆದರೂ ಇಂಗ್ಲಿಷ್ ಭಾಷೆಗೆ ಇರುವ ಸಾಹಿತ್ಯವಾಗಲೀ, ಆಳವಾಗಲೀ ಹಿಂದಿ ಭಾಷೆಗೆ ಇಲ್ಲ ಎಂದು ಅವರು ಹೇಳಿದರು.

ಹಿಂದಿ ಭಾಷೆಯನ್ನು ಶ್ರೀಮಂತಗೊಳಿಸಲು ಮತ್ತು ಅದರ ಪದಸಂಪತ್ತನ್ನು ಹೆಚ್ಚಿಸಲು, ಸಮರ್ಥರಾದ ವ್ಯಕ್ತಿಗಳನ್ನೊಳಗೊಂಡ ಹಿಂದಿ ಅಕಾಡೆಮಿಯೊಂದನ್ನು ಸ್ಥಾಪಿಬೇಕು ಎಂದೂ ಅವರು ನುಡಿದರು. – ಯುಪಿಐ.

* * * * *

---

(ದ ನ್ಯಾಷನಲ್ ಸ್ಟಾಂಡರ್ಡ್, ದಿನಾಂಕ ೧೯೫೩ರ ಜುಲೈ ೪)

## ೩೬
## ...ಸಾರ್ವಜನಿಕ ವ್ಯವಹಾರಗಳಲ್ಲಿ ಒಬ್ಬನೇ ವ್ಯಕ್ತಿಯ ಕೈವಾಡ

ಪೂನಾದ ಕೇಸರಿ ಮತ್ತು ಮರಾಠ ಪತ್ರಿಕೆಗಳ ಸಂಪಾದಕರು, ೧೯೫೪ರ ಜುಲೈ ೫ರಂದು ತಮಗೆ ಬರೆದಿದ್ದ ಪತ್ರಕ್ಕೆ ಡಾ. ಅಂಬೇಡ್ಕರ್ ಅವರು ೧೯೫೪ ಜುಲೈ ೧೫ರಂದು ಉತ್ತರಿಸಿದ್ದರು. ಅವರ ಉತ್ತರವು ಕೆಳಕಂಡಂತೆ ಇತ್ತು – ಸಂಪಾದಕರು

೨೬, ಆಲಿಪುರ ರಸ್ತೆ,
ದೆಹಲಿ,
ದಿನಾಂಕ ೧೯೫೪ರ ಜುಲೈ ೧೫

ಸಂಪಾದಕರಿಗೆ,
ಕೇಸರಿ ಮತ್ತು ಮರಾಠ ಪತ್ರಿಕಾ ಕಚೇರಿ, ಪೂನಾ.

ಪ್ರಿಯ ಸಂಪಾದಕರೇ,

ತಾವು ನನಗೆ ಕೆಲವೊಂದು ಪ್ರಶ್ನೆಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಕೇಳಿ ೧೯೫೪ರ ಜುಲೈ ೫ರಂದು ಬರೆದ ಪತ್ರವು ನನಗೆ ತಲುಪಿದೆ. ನನಗೆ ಪತ್ರವು ತಲುಪಿದಾಗ ನಾನು ಬಾಂಬೆಯಲ್ಲಿದ್ದೆ ಹಾಗೂ ಕಾಲೇಜಿನ ವಿಷಯಕವಾದ ಕಾರ್ಯಬಾಹುಳ್ಯವು ಬಹಳವಾಗಿದ್ದರಿಂದ ನಾನು ತಮ್ಮ ಪತ್ರಕ್ಕೆ ಗಮನವನ್ನು ನೀಡಲಾಗದುದಕ್ಕೆ ವಿಷಾದಿಸುತ್ತೇನೆ. ತಕ್ಷಣವೇ ನಾನು ಅಲ್ಲಿಂದ ಕೂನೂರಿನ ಮಿಲಿಟರಿ ಕಾಲೇಜಿನಲ್ಲಿ ಸಂವಿಧಾನವನ್ನು ಕುರಿತು ಭಾಷಣವನ್ನು ನೀಡಬೇಕಾಗಿದ್ದುದರಿಂದ ಅಲ್ಲಿಗೆ ತೆರಳಿದೆ. ಕೂನೂರಿನಿಂದ ನಿನ್ನೆಯ ದಿನವಷ್ಟೇ ಹಿಂದಿರುಗಿದೆ.

ಎಲ್ಲಾ ವ್ಯವಹಾರಗಳೂ ಒಬ್ಬನೇ ವ್ಯಕ್ತಿಯ ಕೈವಾಡಕ್ಕೆ ಒಳಪಟ್ಟಿರುವ ಇಂದಿನ ದಿನಗಳಲ್ಲಿ, ಪ್ರಧಾನ ಮಂತ್ರಿಗಳ ಅಭಿಪ್ರಾಯಕ್ಕಿಂತ ಬೇರೆಯಾದ ಯಾವ ಅಭಿಪ್ರಾಯವನ್ನೂ ದೇಶವು ಕೇಳದಿರುವುದರಿಂದ, ತಮ್ಮ ಆಸಕ್ತಿಯನ್ನು ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ಮುಂದುವರೆಸಿಕೊಂಡು ಹೋಗುವುದು ಯಾರಿಗೇ ಆದರೂ ಬಹಳ ಕಷ್ಟವಾಗಿದೆ. ನನ್ನ ಪರಿಸ್ಥಿತಿಯೂ ಹೆಚ್ಚೂಕಡಿಮೆ ಇದೇ ಆಗಿದೆ. ಒಂದು ಕಾಲದಲ್ಲಿ ತೆಗೆದುಕೊಳ್ಳುತ್ತಿದ್ದಷ್ಟು ಆಸಕ್ತಿಯನ್ನು ದೇಶದ ವಿದೇಶಾಂಗ ವ್ಯವಹಾರಗಳಲ್ಲಿ ನಾನು ತೆಗೆದುಕೊಳ್ಳುವುದನ್ನು ಈಗ ನಿಲ್ಲಿಸಿಬಿಟ್ಟಿದ್ದೇನೆ. ವಿಷಯವು ಹಾಗಿರುವಾಗ, ತಾವು ಕೇಳಿರುವ ವಿಷಯಗಳ ಬಗ್ಗೆ ಮಾತನಾಡಲು ನಾನು ಸಾಕಷ್ಟು ಸಮರ್ಥನಲ್ಲವೆಂದು ನಾನು ಭಾವಿಸಿದ್ದೇನೆ.

ಗೌರವಪೂರ್ವಕ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಸಹಿ) ಬಿ.ಆರ್. ಅಂಬೇಡ್ಕರ್

---

(ಖೈರ್ಮೋಡೆಯಲ್ಲಿ ಪುನರ್ಮುದ್ರಿತ, ಸಂಪುಟ ೧೧, ಪುಟ ೬೯)

## ೩೭

# ಪ್ರವಾಹ ನಿಯಂತ್ರಣ – ಅಣುಶಕ್ತಿಯ ಬಳಕೆ

### ಡಾ. ಬಿ.ಆರ್. ಅಂಬೇಡ್ಕರ್

ಭಾರತದಲ್ಲಿ ನಾವು ಇತ್ತೀಚಿನ ದಿನಗಳಲ್ಲಿ ಪ್ರವಾಹಗಳ ಬಗ್ಗೆ ಮತ್ತು ಅವುಗಳ ನಿಯಂತ್ರಣದ ಬಗ್ಗೆ ವಿಶೇಷವಾಗಿ ಕೇಳುತ್ತಿದ್ದೇವೆ ಮತ್ತು ಓದುತ್ತಿದ್ದೇವೆ. ವೈಸ್‌ರಾಯ್ ಅವರ ಕಾರ್ಯಾಂಗದಲ್ಲಿನ ಸದಸ್ಯನಾಗಿ ನಾನು ನೀರಾವರಿ ಇಲಾಖೆಯ ಮುಖ್ಯಸ್ಥನಾಗಿದ್ದೆ. ಆ ಸಮಯದಲ್ಲಿ ನಾನು ನೀರಾವರಿ ಮತ್ತು ಜಲಯಾನ ಆಯೋಗವೆಂಬ ಇಲಾಖೆಯೊಂದನ್ನು ಪ್ರಾರಂಭಿಸಿದ್ದೆ. ಅದು ಈಗ ನದಿ ನಿಯಂತ್ರಣ ಮಂಡಲಿ, ಕೇಂದ್ರ ಜಲವಿದ್ಯುತ್ ಆಯೋಗ ಎಂದೇನೋ ಕರೆಯಲ್ಪಡುತ್ತಿದೆ.

ಈ ಸಂಸ್ಥೆಗಳು ಪ್ರವಾಹ ನಿಯಂತ್ರಣದ ಬಗ್ಗೆ ನೀಡಿದ ಸಲಹೆಗಳು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಈ ಸಂಸ್ಥೆಗಳಿಂದ ಕೆಲವು ನಿಶ್ಚಿತವಾದ ಪರಿಹಾರಗಳು ದೊರಕುವ ನಿರೀಕ್ಷೆಯಿತ್ತು. ಅವುಗಳ ಸಲಹೆಗಳು ಏನೇ ಇದ್ದರೂ, ಪ್ರವಾಹ ನಿಯಂತ್ರಣದ ಆ ಸಲಹೆಗಳು ಕಾರ್ಯಗತಗೊಳಿಸುವಲ್ಲಿ ವಿಫಲವಾಗಿವೆ ಎಂಬುದು ನಮಗೆ ಕಾಣಬರುತ್ತಿದೆ. ಬ್ರಹ್ಮಪುತ್ರಾ ನದಿಯ ಪ್ರವಾಹವನ್ನು ಯಶಸ್ವಿಯಾಗಿ ನಿಯಂತ್ರಿಸಲು ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದನ್ನು ಹೇಳಲೂ ಇಂಜಿನಿಯರುಗಳಿಗೆ ಕಷ್ಟವಾಗುತ್ತಿದೆ ಎಂದು ಷಿಲ್ಲಾಂಗಿನಿಂದ ವರದಿಯಾಗುತ್ತಿದೆ. ಅಲ್ಲದೆ, ೧೪ ಲಕ್ಷ ರೂಗಳ ವೆಚ್ಚದಲ್ಲಿ ನಿರ್ಮಿಸಿದ್ದ ಪ್ರಾಯೋಗಿಕ ತಡೆಗೋಡೆಯು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದೆ ಎಂದೂ ಹೇಳಲಾಗಿದೆ.

### ಒಡ್ಡುಗಳು

ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟುವ ಯೋಚನೆಯನ್ನು ಬಿಟ್ಟು, ಪ್ರವಾಹವನ್ನು ನಿಯಂತ್ರಿಸುವ ದಿಸೆಯಲ್ಲಿ ಸರಕಾರವು ಪ್ರಾಚೀನ ಪದ್ಧತಿಯಾದ ಒಡ್ಡುಗಳನ್ನು ನಿರ್ಮಿಸುವ ಯೋಚನೆಯಲ್ಲಿದೆಯೆಂಬುದನ್ನೂ, ತನ್ಮೂಲಕ ಉದ್ಯೋಗವನ್ನು ನಿರ್ಮಿಸುವ ಹಾದಿಯಲ್ಲಿದೆ ಎಂಬುದನ್ನೂ ನಾವು ಕೇಳುತ್ತಿದ್ದೇವೆ.

ಈ ಸಂದರ್ಭದಲ್ಲಿ, ೧೯೫೪ರ ಸೆಪ್ಟೆಂಬರ್ ೧೦ರಂದು ಬಾಂಬೆಯ ಅಬ್ಸರ್ವರ್ ಎಂಬ ಪತ್ರಿಕೆಯಲ್ಲಿ 'ಅಣುವಿಜ್ಞಾನದ ಸಹಾಯ' ಎಂದು ಪ್ರಕಟವಾದ ಸಮರ್ಥ ಇಂಜಿನಿಯರೊಬ್ಬರು ನೀಡಿದ ಸಲಹೆಯತ್ತ ನಾನು ಭಾರತ ಸರಕಾರದ ಮತ್ತು ಈ ವಿಷಯಕ್ಕೆ ಸಂಬಂಧಪಟ್ಟ ಇಂಜಿನಿಯರುಗಳ ಗಮನವನ್ನು ಸೆಳೆಯಬಯಸುತ್ತೇನೆ.

ನಾನು ಗಮನಸೆಳೆಯಬಯಸುವ ಸಲಹೆಯು ಅತ್ಯಂತ ಸರಳವಾಗಿದೆ, ಅಂದರೆ ಪ್ರವಾಹ ನಿಯಂತ್ರಣಕ್ಕೆ ಅಣುಶಕ್ತಿಯನ್ನು ಬಳಸಿಕೊಳ್ಳುವುದು. ಅಬ್ಸರ್ವರ್ ಪತ್ರಿಕೆಯಲ್ಲಿನ ಈ ಲೇಖನವನ್ನು ಓದಿ ಅದರತ್ತ ನಾನು ಬಹಳ ಆಕರ್ಷಿತನಾದೆ. ಇದರ ಲೇಖಕರು ಯಾರು ಎಂಬ ಬಗ್ಗೆ ನಾನು ವಿಚಾರಿಸಿದಾಗ, ಅವರ ಹೆಸರು ಶ್ರೀ ಸಿ.ಎಸ್. ಪಿಳ್ಳೈ ಎಂಬುದು ತಿಳಿದುಬಂದಿತು. ಅವರು ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಆಗಿ ಮೂವತ್ತು ವರ್ಷಗಳಿಗೂ ಮೀರಿ ಸೇವೆಯನ್ನು ಸಲ್ಲಿಸಿದ್ದಾರೆಂಬುದನ್ನೂ, ಮತ್ತು ಇಂತಹ ಕಾರ್ಯಗಳಲ್ಲಿ ಸ್ವಲ್ಪ ಅನುಭವವನ್ನು ಹೊಂದಿದ್ದಾರೆಂಬುದನ್ನೂ ಪತ್ತೆಹಚ್ಚಿದೆ. ಅಣುಶಕ್ತಿಯ ಅಭಿವೃದ್ಧಿಯು ಈಗಿನ ಹಂತವನ್ನು ತಲುಪುವವರೆಗೂ, ಪ್ರವಾಹನಿಯಂತ್ರಣಗಳ ವಿಷಯವು ಬಂದಾಗ ಸಾಮಾನ್ಯವಾದ ಒಡ್ಡುಗಳನ್ನು,

ಕಲ್ಲಿನ ಆಸರೆಗೋಡೆಗಳನ್ನು ನಿರ್ಮಿಸುವುದರತ್ತಲೆ ನಮ್ಮ ಯೋಚನೆಗಳು ಗಿರಕಿಹೊಡೆಯುತ್ತಿದ್ದವು ಎಂದು ಅವರು ಹೇಳುತ್ತಾರೆ. ಜಲನಿಯಂತ್ರಣ ವಿಜ್ಞಾನದಲ್ಲಿ ಆಗಿರುವ ಇತ್ತೀಚಿನ ಬೆಳವಣಿಗೆಗಳು ನಮಗೆ ನೀಡಿರುವ ಹಲವು ತಂತ್ರಜ್ಞಾನವನ್ನು ವರ್ಷವರ್ಷವೂ ದುಃಖ, ಸಂಕಟಗಳನ್ನು ಹೊತ್ತುತರುವ ನದಿಗಳ ಪ್ರವಾಹವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನಾವು ಸಮರ್ಥವಾಗಿ ಉಪಯೋಗಿಸಿಕೊಳ್ಳಬಹುದು. ಅವರು ಮುಂದುವರೆದು ಈ ವಿಧಾನಗಳನ್ನು ತಾತ್ಕಾಲಿಕ ಪರಿಹಾರಗಳಿಗಾಗಿ ನಾವು ಉಪಯೋಗಿಸಿಕೊಳ್ಳಬಹುದು, ಆದರೆ ಶಾಶ್ವತವಾದ ಪರಿಹಾರವು ಬೇರೆಯೇ ಇದೆ ಎಂದು ಹೇಳುತ್ತಾರೆ.

ಪ್ರವಾಹವನ್ನು ನಿಯಂತ್ರಿಸಲು ಇರುವ ಶಾಶ್ವತವಾದ ಪರಿಹಾರಗಳನ್ನು ವಿವರಿಸುವಂತೆ ನಾನು ಅವರನ್ನು ಕೇಳಿದೆ. ಅವರು ನನಗೆ ತಿಳಿಸಿದುದನ್ನು ಇಲ್ಲಿ ಕೊಡುತ್ತಿದ್ದೇನೆ.

'ಅಣುವಿಜ್ಞಾನದಲ್ಲಿನ ಪ್ರಗತಿಯು ಇದರ ಪರಿಹಾರವು ತನ್ನಲ್ಲಿದೆಯೆಂಬ ಆಸೆಯನ್ನು ನಮ್ಮಲ್ಲಿ ಬಿತ್ತಿದೆ. ಅಣುವಿದಳನದ ಉಪಯೋಗವನ್ನು ಬಳಸಿಕೊಂಡು ನಾವು ಈಗ ಸಂಕಟದ ಪ್ರವಾಹವನ್ನು ತರುವ ಈ ನದಿಗಳನ್ನು ನಿಯಂತ್ರಿಸಿ, ಪಳಗಿಸಿ, ನಮಗೆ ಬೇಕಾದ ಹಾಗೆ ತರಬೇತಿಕೊಟ್ಟು ಅವುಗಳಿಂದ ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ನ್ಯೂಟ್ರಾನ್‌ಗಳ ಚಲನೆಯಿಂದ ಉಂಟಾಗುವ ವಿಕ್ಷೇಪ ಪಥಗಳ ಮೇಲೆ ಬಲವರ್ಧನೆ ಮತ್ತು ವಿಚ್ಛಿದ್ರಕಾರಕ ವಿದ್ಯುತ್ ವಿಸರ್ಜನಗಳು ಮತ್ತು ಓಮ್ಸ್ ನಿಯಮಗಳನ್ನು ಉಪಯೋಗಿಸಿ ಕಾರ್ಯನಿರ್ವಹಿಸಿರುವವರಿಗೆ ಇದರ ಬಳಕೆಯು ಬಹಳ ಸುಲಭವಾಗಿ ಅರ್ಥವಾಗುತ್ತದೆ'.

ಓಮ್ಸ್ ನಿಯಮವು ಹೇಗೆ ಕಾರ್ಯನಿರ್ವಹಿಸುತ್ತದೆ ಮತ್ತು ಅಣುವಿಜ್ಞಾನದೊಂದಿಗೆ ಅದಕ್ಕಿರುವ ಸಂಬಂಧವೇನು?'

## ನ್ಯೂಟ್ರಾನ್‌ಗಳು

ಅಣುವಿಜ್ಞಾನಿಗಳು ಈ ಪ್ರಶ್ನೆಗೆ ಸರಿಯಾಗಿ ಉತ್ತರಿಸಬಲ್ಲರು. ನ್ಯೂಕ್ಲಿಯರ್ ರಿಯಾಕ್ಟರ್‌ಗಳಿಂದ ನ್ಯೂಟ್ರಾನ್‌ಗಳ ಪ್ರವಾಹವನ್ನು ಉತ್ಪಾದಿಸುವುದು ಇಂದು ಸಾಧ್ಯ. ನ್ಯೂಟ್ರಾನ್‌ಗಳ ನದಿಯ ಪ್ರವಾಹದ ಆಳಕ್ಕೆ ನುಗ್ಗಿ ಪ್ರವಾಹದ ಪರಿಮಾಣವನ್ನು ಹಾಗೂ ಜಲಾನಯನ ಪ್ರದೇಶಗಳನ್ನು ನಿಯಂತ್ರಿಸಬಹುದು. ಹೀಗೆ ಮಾಡುವುದರಿಂದ ಪ್ರವಾಹವನ್ನು ನಿಯಂತ್ರಿಸಿ ನೀರಾವರಿ ಮತ್ತು ವಿದ್ಯುತ್ ಯೋಜನೆಗಳಿಗೆ ನೀರನ್ನು ನಾವು ಕ್ಷೇಮವಾಗಿ ಬಳಸಿಕೊಳ್ಳಬಹುದು. ಬಳಕೆಯಾಗದೆ ಉಳಿದ ನೀರು ಆವಿಯಾಗಿ ಮೋಡವನ್ನು ಸೇರುವಂತೆ ಮಾಡಬಹುದು.

ನ್ಯೂಟ್ರಾನ್‌ಗಳು ಈ ವಿಷಯದಲ್ಲಿ ಅಷ್ಟು ಪರಿಣಾಮಕಾರಿಯಾಗಿ ಕೆಲಸಮಾಡುವುದು ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಕೇಳಬಹುದು. ಇದರ ಉತ್ತರವು ಬಹಳ ಸರಳವಾಗಿದೆ. ನ್ಯೂಟ್ರಾನ್‌ಗಳಲ್ಲಿ ವಿದ್ಯುದಾವೇಶವಿರುವುದಿಲ್ಲ. ಎಲೆಕ್ಟ್ರಾನ್‌ಗಳ ಸುತ್ತ ಕವಿದಿರುವ ಋಣವಿದ್ಯುತ್ತಿನಿಂದ ಬಾಧಿತವಾಗದ ನ್ಯೂಟ್ರಾನುಗಳು ಸುಲಭವಾಗಿ ನೀರಿನೊಳಕ್ಕೆ ನುಗ್ಗಿ ತಳದ ಹೂಳನ್ನು ಮತ್ತು ಬಂಡೆಗಳ ಹಾಸನ್ನು ಕಿತ್ತು ನಮಗೆ ಅಗತ್ಯವಾಗಿರುವಷ್ಟು ಆಳವನ್ನು ನಿರ್ಮಿಸುತ್ತವೆ. ಹಾಗೆ ಮಾಡಿದ ನಂತರ ಹೂಳು ಮತ್ತು ಕಲ್ಲುಗಳ ಚೂರುಗಳನ್ನು ಎರಡೂ ದಂಡೆಯ ಮೇಲಕ್ಕೆ ಹಾಕುತ್ತವೆ ಅಥವಾ ಸಮುದ್ರಕ್ಕೆ ಕೊಂಡೊಯ್ಯುತ್ತವೆ. ಈ ಕ್ರಿಯೆಯು ನಮ್ಮ ಅಭೀಷ್ಟದಂತೆ ನಡೆಯುವ ಹಾಗೆ ನಾವು ಮಾಡಿಕೊಳ್ಳಬಹುದು. ಗಂಟೆಗಳಲ್ಲಲ್ಲದಿದ್ದರೂ ಕೆಲವೇ ದಿನಗಳಲ್ಲಿ ಇದನ್ನು ನಾವು ಸಾಧಿಸಬಹುದು. ಈ ಪ್ರಕ್ರಿಯೆಯಲ್ಲಿ ನದಿಗಳ ತಳವು ಗಟ್ಟಿಯಾಗುತ್ತದೆ ಮತ್ತು ವಿಕ್ಷೇಪ ಪಥದ ಗುಂಟ ಇರುವ ನದಿದಂಡೆಗಳೂ ಹಾಗೆಯೇ ಗಟ್ಟಿಯಾಗುತ್ತವೆ.

ಪ್ರವಾಹಗಳಿಂದಾಗುವ ಕಷ್ಟ–ನಷ್ಟಗಳು ಮತ್ತೆ ಮತ್ತೆ ಸಂಭವಿಸುತ್ತಲೇ ಇರುವಂತಹವು. ಇದಕ್ಕಿಂತ

ಹೆಚ್ಚಿನ ವಿನಾಶಕಾರಿ ಶಕ್ತಿಗಳು ಇಲ್ಲ. ಇದಕ್ಕೆ ಪರಿಹಾರವನ್ನು ಕಂಡುಹಿಡಿಯುವಲ್ಲಿ ಸರಕಾರದ ಅವಲಂಬನವು ಅದರ ಸ್ವಂತ ಅಥವಾ ಅದರ ಅಧಿಕಾರಿಗಳ ಜ್ಞಾನಸಂಪತ್ತಿಗೆ ಮಾತ್ರ ಸೀಮಿತವಾಗಬಾರದು.

ಸಲಹೆ ಸೂಚನೆಗಳು ಯಾವ ಕಡೆಯಿಂದ ಬಂದರೂ ಅದನ್ನು ಸ್ವಾಗತಿಸಿ, ಅವುಗಳ ಸತ್ತ್ವವನ್ನು ಪರಿಶೀಲಿಸುವುದು ಸರಕಾರದ ಕರ್ತವ್ಯವಾಗಿದೆ. ಸಲಹೆಗಳ ಆಧಿಕ್ಯದಲ್ಲಿ ಸುರಕ್ಷತೆಯು ಅಡಗಿರುತ್ತದೆ.[೧]

* * * * *

## ೩೮
# ಕಬಂಧರೂಪೀ ರಾಜ್ಯಗಳ ಸೃಷ್ಟಿಗೆ ಉಗ್ರವಾದ ವಿರೋಧ

ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಪಂಡಿತ್ ಜವಹರ ಲಾಲ್ ನೆಹರೂ ಅವರಿಗೆ ಒಂದು ತಂತಿ ಸಂದೇಶವನ್ನು ಕಳುಹಿಸದರು. ಅವರು ಕಳುಹಿಸಿದ ಸಂದೇಶವು ಹೀಗಿತ್ತು – ಸಂಪಾದಕರು

೧೭.೧.೧೯೫೬

**ತಂತಿಸಂದೇಶ**

ಪಂ. ಜವಹರ ಲಾಲ್ ನೆಹರೂ,
ನವದೆಹಲಿ

ಸಂಸತ್ತಿನಲ್ಲಿ ಹಾಜರಿಲ್ಲದುದಕ್ಕಾಗಿ ವಿಷಾದಿಸುತ್ತೇನೆ. ದೆಹಲಿಗೆ ನಾನು ಪ್ರಯಾಣಮಾಡುವುದಕ್ಕೆ ವೈದ್ಯರು ಸುತರಾಂ ಒಪ್ಪುತ್ತಿಲ್ಲ. ಭಾಷಾವಾರು ಪ್ರಾಂತಗಳ ರಚನೆಯ ವಿಷಯದಲ್ಲಿ ನಾನು ಸಂಸತ್ತಿನಲ್ಲಿ ನನ್ನ ಅಭಿಪ್ರಾಯಗಳನ್ನು ಮಂಡಿಸಬೇಕೆಂದಿದ್ದೆ. ಆದರೆ ಅದು ನನಗೆ ಸಾಧ್ಯವಾಗಲಿಲ್ಲ. ನನ್ನ ಅಭಿಪ್ರಾಯಗಳನ್ನು ಈ ತಂತಿ ಸಂದೇಶದ ಮೂಲಕ ತಿಳಿಸುತ್ತಿದ್ದೇನೆ. (ಪರಿಶಿಷ್ಟ ಜಾತಿಗಳ) ಒಕ್ಕೂಟವು ಬಾಂಬೆಯು ಮಹಾರಾಷ್ಟ್ರಕ್ಕೆ ಸೇರುವುದನ್ನು ಒಪ್ಪುತ್ತದೆ. ಅಥವಾ ಬಾಂಬೆಯನ್ನು ಪ್ರತ್ಯೇಕ ರಾಜ್ಯವನ್ನಾಗಿಯೂ ಮಾಡಬಹುದು. ಆದರೆ, ಉತ್ತರ ಪ್ರದೇಶ, ಬಿಹಾರ, ಮಹಾರಾಷ್ಟ್ರಗಳಂತಹ ಅಗಾಧವಾದ ವೈಶಾಲ್ಯವುಳ್ಳ ರಾಜ್ಯಗಳ ರಚನೆಗೆ ನನ್ನ ಪ್ರಬಲವಾದ ಪ್ರತಿರೋಧವಿದೆ. ಇಂತಹ ದೊಡ್ಡ ರಾಜ್ಯಗಳು ಕೇಂದ್ರ ಸರಕಾರಕ್ಕೆ ಅಪಾಯವನ್ನುಂಟುಮಾಡುತ್ತವೆ, ಅಷ್ಟೇ ಅಲ್ಲದೆ, ಅವು ಅಲ್ಪಸಂಖ್ಯಾತರಿಗೆ ಮತ್ತು ಪರಿಶಿಷ್ಟ ಜಾತಿಗಳವರಿಗೆ ಅತಿಯಾಗಿ ಅಪಾಯಕಾರಿಯಾಗುತ್ತವೆ. ಉತ್ತರ ಪ್ರದೇಶ ಮತ್ತು ಬಿಹಾರವನ್ನು ಮೂರು ರಾಜ್ಯಗಳನ್ನಾಗಿ ವಿಭಜಿಸಬೇಕೆಂದು ಒಕ್ಕೂಟವು ಬಯಸುತ್ತದೆ. ಮಹಾರಾಷ್ಟ್ರವನ್ನೂ ಮೂರು ರಾಜ್ಯಗಳನ್ನಾಗಿ ವಿಭಜಿಸಬೇಕು. ಪರಿಶಿಷ್ಟ ಜಾತಿಗಳವರನ್ನು ಮಾನವರೆಂದು ಪರಿಗಣಿಸದವರೇ ಬಹುಸಂಖ್ಯಾತರಾಗಿರುವ ರಾಜ್ಯಗಳ ಆಶ್ರಯದಲ್ಲಿ, ಪರಿಶಿಷ್ಟ ಜಾತಿಗಳವರಿಗೆ ಸುರಕ್ಷತೆಯಿರುವುದಿಲ್ಲ. ಈ ಸಮಸ್ಯೆಯನ್ನು ತಾವು ಗಂಭೀರವಾಗಿ ಪರಿಗಣಿಸಬೇಕು. ಪರಿಣಾಮಗಳು ಬಹಳ ಗಂಭೀರವಾಗಿರುತ್ತವೆ ಎಂದು ಭಯವಾಗುತ್ತಿದೆ. ಪರಿಶಿಷ್ಟ ಜಾತಿಗಳವರಿಗೆ ಈಗ ರಾಜಕೀಯ ರಕ್ಷಣೆಯೇ ಇಲ್ಲವಾಗಿದೆ. ಹತಾಶ ಭಾವನೆಯಿಂದ ಅವರು ಯಾವುದೇ ರೀತಿಯ ಹಿಂಸಾಮಾರ್ಗಕ್ಕೆ ಇಳಿಯಬಹುದು.

**ಅಂಬೇಡ್ಕರ್**

* * * * *

---

(ಖೈರ್ಮೋಡೆ, ಸಂಪುಟ ೧೦, ಪುಟಗಳು ೫೬–೫೭)

# ೩೯

# ಮಹಾರಾಷ್ಟ್ರಕ್ಕೆ ಅಂಬೇಡ್ಕರ್ ಅವರ ಸೂತ್ರ ಜನಗಳ ಮತ

ನಾನು ಮಹಾರಾಷ್ಟ್ರ ಮತ್ತು ಬಾಂಬೆಯ ವಿಷಯದಲ್ಲಿ ರಾಜ್ಯಸಭೆಯಲ್ಲಿ ಮಾಡಿದ ಸಲಹೆಗಳ ಬಗ್ಗೆ ಮಹಾರಾಷ್ಟ್ರೀಯರು ಅತೃಪ್ತರಾಗಿದ್ದಾರೆಂದು ನನಗೆ ಬಂದಿರುವ ಸುದ್ದಿಯು ತಿಳಿಸುತ್ತದೆ. ಬಾಂಬೆಯಲ್ಲಿ ತಮಗೆ ಬಹುಮತವು ದೊರಕುವುದಿಲ್ಲವೆಂದು ಅವರು ಹೆದರಿದ್ದಾರೆ. ನೂರು ಸದಸ್ಯರಿರುವ ಸದನದಲ್ಲಿ ಶೇ ೧೫ರಷ್ಟಿರುವ ಗುಜರಾತಿಗಳು ತಮಗೆ ೨ರಿಂದ ೪ ಸ್ಥಾನಗಳೂ ದೊರಕುವುದಿಲ್ಲವೆಂದು ಮನಗಂಡಿದ್ದಾರೆ. ಎರಡು ಸಮುದಾಯಗಳವರೂ ಅಸಹಾಯಕರಾಗಿದ್ದಾರೆ ಮತ್ತು ಚಡಪಡಿಸುತ್ತಿದ್ದಾರೆ. ಆದ್ದರಿಂದ ನಾನು ಈಗ ಮತ್ತೊಂದು ಸಲಹೆಯನ್ನು ನೀಡುತ್ತೇನೆ.

ಮಹಾರಾಷ್ಟ್ರ ರಾಜ್ಯವು ಎರಡು ಭಾಗಗಳಾಗಿ ವಿಭಜಿಸಲ್ಪಡಬೇಕು – ಇವುಗಳಲ್ಲಿ ಒಂದು (೧) ಗ್ರೇಟರ್ ಬಾಂಬೆ, (೨) ಥಾಣೆ ಜಿಲ್ಲೆ, (೩) ಕೊಲಾಬಾ; (೪) ರತ್ನಗಿರಿ, (೫) ಕೊಲ್ಲಾಪುರ ಮತ್ತು ಸೂರತ್, ಬೆಳಗಾಂ ಮತ್ತು ಕಾರವಾರ ಜಿಲ್ಲೆಗಳಲ್ಲಿನ ಮರಾಠಿ ಮಾತನಾಡುವ ಭಾಗಗಳು – ಇವುಗಳನ್ನು ಒಳಗೊಂಡಿರಬೇಕು. ಸಹ್ಯಾದ್ರಿ ಬೆಟ್ಟದ ಸಾಲು ಗಡಿರೇಖೆಯಾಗಬೇಕು.

ಈ ರೀತಿ ವಿಭಜನೆ ಮಾಡುವುದರಿಂದ ಆಗುವ ಲಾಭಗಳು – (೧) ಬಾಂಬೆ ಮತ್ತು ಬಾಂಬೆಯ ಉತ್ತರ ಪ್ರದೇಶಗಳಲ್ಲಿ ಮಹಾರಾಷ್ಟ್ರೀಯರೇ ಅಧಿಕ ಸಂಖ್ಯೆಯಲ್ಲಿರುತ್ತಾರೆ. (೨) ಅದೊಂದು ಪ್ರತ್ಯೇಕವಾದ ಸಾಂಸ್ಕೃತಿಕ ಘಟಕವಾಗುತ್ತದೆ. (೩) ಅದೊಂದು ಪ್ರತ್ಯೇಕ ಭಾಷಾಘಟಕವೂ ಆಗುತ್ತದೆ. (೫) ಅದರ ಒಟ್ಟು ವಿಸ್ತೀರ್ಣ ೧೯,೮೦೦ ಚದರ ಮೈಲಿಗಳಿದ್ದು, ಅಲ್ಲಿನ ಜನಸಂಖ್ಯೆಯು ೯,೦೬೭,೪೧೩ ಇರುತ್ತದೆ. ಹಾಗಿದ್ದಾಗ ಇದು ಸಾಕಷ್ಟು ವಿಶಾಲವಾದ ರಾಜ್ಯವೇ ಆಗುತ್ತದೆ.

ಸಂಯುಕ್ತ ಮಹಾರಾಷ್ಟ್ರಕ್ಕಾಗಿ ಬ್ರಾಹ್ಮಣರು ಏಕೆ ಒತ್ತಾಯಮಾಡುತ್ತಿದ್ದಾರೆಂಬುದು ನನಗೆ ತಿಳಿಯುತ್ತಿಲ್ಲ. ಅಲ್ಲಿಯೂ ಸಹ, ಇಬ್ಬರು ವಿರೋಧಿಗಳು ಅಧಿಕಾರಕ್ಕಾಗಿ ಕಾಯುತ್ತಿದ್ದಾರೆ –ಶ್ರೀ ಬಿ.ಎಸ್. ಹಿರೇ ಅವರು ಮತ್ತು ಶ್ರೀ ರಾಮರಾವ್ ಎಮ್. ದೇಶ್‌ಮುಖ್ ಅವರು. ಡಾ. ಪಂಜಬ್‌ರಾವ್ ದೇಶ್‌ಮುಖ್ ಅವರು ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿದ್ದಾರೆ.

ಸಂಕಷ್ಟಗಳನ್ನು ತಂದೊಡ್ಡುವ ಇನ್ನೊಂದು ಅಂಶವೂ ಇದೆ. ಅದೆಂದರೆ ಎರಡನೆಯ ವಿಭಾಗಕ್ಕೆ ರಾಜಧಾನಿ ಯಾವುದಾಗಬೇಕೆಂಬುದು. ದಕ್ಖನ್ನಿನ ಬ್ರಾಹ್ಮಣರಿಗೆ ಪೂನಾ ಬೇಕಾಗಿದ್ದರೆ, ಮಧ್ಯ ಪ್ರದೇಶದ ಬ್ರಾಹ್ಮಣರು ತಮಗೆ ನಾಗಪುರವೇ ರಾಜಧಾನಿಯಾಗಬೇಕೆಂದು ಹೇಳುತ್ತಾರೆ. ಶಾಸಕಾಂಗದ ಸಭೆಯು ಇವೆರಡೂ ಸ್ಥಳಗಳಲ್ಲಿ ಸಮಾವೇಶಗೊಳ್ಳುವಂತೆ ಮಾಡಬೇಕೆಂದು ಇನ್ನು ಕೆಲವರು ಸಲಹೆಯನ್ನು ನೀಡುತ್ತಾರೆ. ನಾನು ಈ ಮೂರೂ ಸಲಹೆಗಳನ್ನು ಖಂಡಿಸುತ್ತೇನೆ. ಸಂಯುಕ್ತ ಮಹಾರಾಷ್ಟ್ರದ ಹೆಸರಿನಲ್ಲಿ ನಾವು ಪೇಶ್ವೆಗಳನ್ನು ಮತ್ತೆ ಬರಮಾಡಿಕೊಳ್ಳುತ್ತಿಲ್ಲವೆಂಬುದು ನನಗೆ ನಿಶ್ಚಯವಾಗಿದೆ. ಸಂಯುಕ್ತ ಮಹಾರಾಷ್ಟ್ರದ

ರಾಜಧಾನಿಯು ಔರಂಗಾಬಾದ್ ಆಗಿರಬೇಕೆಂದು ನಾನು ಸಲಹೆಯನ್ನು ನೀಡುತ್ತೇನೆ. ಮುಸ್ಲಿಮರು ನಾಶಮಾಡುವ ತನಕ ಮಹಾರಾಷ್ಟ್ರದ ರಾಜಧಾನಿಯಾಗಿದ್ದ ದೌಲತಾಬಾದ್ ಪಕ್ಕದಲ್ಲಿಯೇ ಇದೆ. ಅದರ ವಾತಾವರಣವೂ ಹಿತಕರವಾಗಿದೆ.

ಅ ಸಮಸ್ಯೆಗೆ ಪರಹಾರವನ್ನು ಕೂಡಲೇ ಕಂಡುಹಿಡಿಯಬೇಕು. ಕಾಂಗ್ರೆಸ್ಸಿನ ಹೈ ಕಮಾಂಡ್ ಏನೇ ಹೇಳಲಿ, ಗುಜರಾತಿಗಳು ಮಹಾರಾಷ್ಟ್ರೀಯ ಅಭ್ಯರ್ಥಿಗೆ ಹಾಗೂ ಮಹಾರಾಷ್ಟ್ರೀಯನ್ನರು ಗುಜರಾತೀ ಅಭ್ಯರ್ಥಿಗೆ ಮತಹಾಕುವ ಸಂಭಾವ್ಯತೆಯು ಬಹಳ ಕಡಿಮೆ ಇರುತ್ತದೆ.

ಡಾ. ಬಿ.ಆರ್. ಅಂಬೇಡ್ಕರ್, ನವದೆಹಲಿ[೧]

* * * * *

(ದ ಫ್ರೀ ಪ್ರೆಸ್ ಜರ್ನಲ್, ದಿನಾಂಕ ೧೯೫೬ರ ಮೇ ३೧)

# II
# ಸಂಸ್ಥೆಗಳು, ಸಂಘಟನೆಗಳು ಮತ್ತು ಅವುಗಳ ಸಂವಿಧಾನ

# ೧
# ಬಹಿಷ್ಕೃತ ಹಿತಕಾರಿಣಿ ಸಭೆ

ಅಸ್ಪೃಶ್ಯರ ಕುಂದುಕೊರತೆಗಳನ್ನು ಸರಕಾರದ ಮುಂದೆ ಮಂಡಿಸಲು ಒಂದು ಕೇಂದ್ರ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ ೧೯೨೪ರ ಮಾರ್ಚ್ ೯ರಂದು ಬಾಂಬೆಯ ದಾಮೋದರ್ ಹಾಲಿನಲ್ಲಿ ಒಂದು ಸಭೆಯನ್ನು ಡಾ. ಅಂಬೇಡ್ಕರ್ ಅವರು ವ್ಯವಸ್ಥೆಮಾಡಿದ್ದರು. ಹಲವು ಸುತ್ತಿನ ಚರ್ಚೆಗಳಾದ ಮೇಲೆ ಅಂತಹ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು. ಅವರು ಆ ಸಂಸ್ಥೆಗೆ 'ಬಹಿಷ್ಕೃತ ಹಿತಕಾರಿಣಿ ಸಭೆ' ಎಂಬ ಹೆಸರನ್ನು ಸೂಚಿಸಿದಾಗ ಎಲ್ಲರೂ ಅದಕ್ಕೆ ಒಪ್ಪಿಗೆಯನ್ನು ಸೂಚಿಸಿದರು. 'ವಿದ್ಯಾವಂತರಾಗಿ, ಮಥನಮಾಡಿ, ಮತ್ತು ಸಂಘಟಿಸಿ' ಎಂಬುದನ್ನು ಸಂಸ್ಥೆಯ ಧ್ಯೇಯವಾಕ್ಯವನ್ನಾಗಿ ಹೊಂದಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಶ್ರೀ ಸರ್ ಚಿಮನ್‌ಲಾಲ್ ಹರಿಲಾಲ್ ಸೆಟಲ್ವಾಡ್ ಎಲ್.ಎಲ್. ಡಿ., ಅವರು ಬಹಿಷ್ಕೃತ ಹಿತಕಾರಿಣಿ ಸಭೆಯ ಅಧ್ಯಕ್ಷರಾದರು, ಶ್ರೀ ನೆಯೆರ್ ನಿಸ್ಸೀಮ್ ಜೆ.ಪಿ ಅವರು ಉಪಾಧ್ಯಕ್ಷರಾಗಿಯೂ, ಸೊಲಿಸಿಟರ್ ಶ್ರೀ ರುಸ್ತಮ್‌ಜೀ ಜಿನ್‌ವಾಲಾ, ಶ್ರೀ ಜಿ.ಕೆ. ನಾರಿಮನ್, ಡಾ. ಆರ್.ಪಿ. ಪರಾಂಜಪೆ, ಡಾ. ವಿ.ಪ. ಚವಾಣ್, ಸಾಲಿಸಿಟರ್ ಶ್ರೀ ಬಿ.ಜಿ. ಖೇರ್ – ಇವರುಗಳನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಲಾಯಿತು. ಡಾ. ಬಿ.ಆರ್. ಅಂಬೇಡ್ಕರ್ ಅವರು ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದರು, ಶ್ರೀ ಎಸ್.ಎನ್. ಶಿವತರ್ಕರ್ ಅವರು ಕಾರ್ಯದರ್ಶಿಯೂ, ಶ್ರೀ ಎನ್. ಟಿ. ಜಾಧವ್ ಅವರು ಖಜಾಂಚಿಯೂ ಆದರು. ಬಹಿಷ್ಕೃತ ಹಿತಕಾರಿಣಿ ಸಭೆಯು ೧೯೨೪ರ ಜುಲೈ ೨೦ರಂದು ಸ್ಥಾಪಿತವಾಗಿ, ೧೮೬೦ರ ೨೧ನೆಯ ಅಧಿನಿಯಮದ ಪ್ರಕಾರ ನೊಂದಾಯಿತವಾಯಿತು.

ಈ ಸಭೆಯ ಸಂವಿಧಾನವನ್ನು ಡಾ. ಅಂಬೇಡ್ಕರ್ ಅವರು ರಚಿಸಿದರು. ಅದನ್ನು ಈ ಕೆಳಗೆ ನೀಡಲಾಗಿದೆ – ಸಂಪಾದಕರು.

**ಬಹಿಷ್ಕೃತ ಹಿತಕಾರಿಣಿ ಸಭೆ**

(ಸೊಸೈಟಿ ನೊಂದಾವಣೆಯ ಅಧಿನಿಯಮದ ಪ್ರಕಾರ ನೊಂದಾಯಿತವಾಗಿದೆ)

**ಸಂವಿಧಾನದ ನಿಯಮಗಳು**

**೧೯೨೪ರ ಜುಲೈ ೨೦ರಂದು ಸ್ಥಾಪಿತ**

**ಪ್ರಧಾನ ಕಚೇರಿ**

**ದಾಮೋದರ್ ಹಾಲ್, ಪರೇಲ್**

**ಬಾಂಬೆ–೧೨**

**(ಬಾಂಬೆಯ ಚಿಂಚ್‌ಪೋಕ್ಲಿಯಲ್ಲಿನ ವೀನಸ್ ಸಿನೆಮಾ ಹತ್ತಿರ ಪರೇಲ್ ರಸ್ತೆಯ ೯೧/ಬಿ ನಂಬರಿನಲ್ಲಿರುವ ಕೋ–ಆಪರೇಟೀವ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಿತ)**

**ಬಹಿಷ್ಕೃತ ಹಿತಕಾರಿಣಿ ಸಭೆ**

**ಸಂಘಟನೆಯ ನಿಯಮಾವಳಿಗಳು**

೧. ಸಂಸ್ಥೆಯ ಹೆಸರು – **ಬಹಿಷ್ಕೃತ ಹಿತಕಾರಿಣಿ ಸಭೆ** ಎಂದಾಗಿರುತ್ತದೆ.

೨. ಈ ಸಭೆಯ ಕಾರ್ಯಚಟುವಟಿಕೆಗಳು ಬಾಂಬೆ ಪ್ರಾಂತಕ್ಕೆ ಸೀಮಿತವಾಗಿರುತ್ತದೆ.

೩. ಸಭೆಯ ಪ್ರಧಾನ ಕಚೇರಿಯು ಬಾಂಬೆಯಲ್ಲಿ ಇರುತ್ತದೆ.

೪. ಸಭೆಯ ಧ್ಯೇಯ ಮತ್ತು ಉದ್ದೇಶಗಳು ಹೀಗಿರುತ್ತವೆ –

ಅ) ವಿದ್ಯಾರ್ಥಿನಿಲಯಗಳನ್ನು ತೆರೆದು, ಅಥವಾ ಇನ್ನಾವುದಾದರೂ ಅಗತ್ಯ ಅಥವಾ ಅಪೇಕ್ಷಣೀಯ ಮಾರ್ಗಗಳನ್ನನುಸರಿಸಿ ದಲಿತ ವರ್ಗಗಳ ಜನರಲ್ಲಿ ವಿದ್ಯಾಭ್ಯಾಸದ ಪ್ರಸಾರವನ್ನು ಮಾಡುವುದು.

ಆ) ಗ್ರಂಥಾಲಯಗಳು, ಸಾಮಾಜಿಕ ಕೇಂದ್ರಗಳು ಮತ್ತು ತರಗತಿ ಯಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ ದಲಿತವರ್ಗಗಳವರಲ್ಲಿ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವುದು.

ಇ) ಕೈಗಾರಿಕಾ ಮತ್ತು ಕೃಷಿ ಶಾಲೆಗಳನ್ನು ತೆರೆದು ದಲಿತ ವರ್ಗಗಳವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಮತ್ತು ಅಭಿವೃದ್ಧಿಗೊಳಿಸುವುದು

ಈ) ದಲಿತವರ್ಗಗಳವರ ಕುಂದುಕೊರತೆಗಳನ್ನು (ಸರಕಾರದ) ಮುಂದಿಡುವುದು.

ಉ) ದಲಿತವರ್ಗಗಳವರ ಜ್ಞಾನಾಭಿವೃದ್ಧಿಗಾಗಿ, ಸಾಮಾಜಿಕ ಅಭಿವೃದ್ಧಿಗಾಗಿ, ಆರ್ಥಿಕ ಸುಧಾರಣೆಗಾಗಿ ಕಾರ್ಯನಿರತವಾಗಿರುವ ಸಂಘ, ಸಂಸ್ಥೆಗಳು ಅಥವಾ ಚಳವಳಿಗಳಿಗೆ ಸಹಾಯವನ್ನು ನೀಡುವುದು ಅವುಗಳನ್ನು ಸಂಘಟಿಸುವುದು.

೫) ಈ ಉದ್ದೇಶಗಳನ್ನು ಈಡೇರಿಸಲು –

ಅ) ಸಭೆಯ ಉದ್ದೇಶಕ್ಕಾಗಿ ಮತ್ತು ಅನುಕೂಲಕ್ಕಾಗಿ ಖರೀದಿಮಾಡುವ, ಬಾಡಿಗೆಗೆ ತೆಗೆದುಕೊಳ್ಳುವ ಭೋಗ್ಯದ ಮೇಲೆ ತೆಗೆದುಕೊಳ್ಳುವ ಅಥವಾ ಇನ್ನಾವುದೇ ರೀತಿಯಲ್ಲಾದರೂ ಆಸ್ತಿಯನ್ನು ಪಡೆಯುವ ಹಕ್ಕುಗಳನ್ನು ಹೊಂದಿರುವುದು,

ಆ) ಸಭೆಯ ಉದ್ದೇಶಕ್ಕೆ ಅಥವಾ ಕಾರ್ಯನಿರ್ವಹಣೆಗೆ ಅಗತ್ಯವಿರುವ ಕಟ್ಟಡ ಅಥವಾ ಕಟ್ಟಡಗಳನ್ನು ಕಟ್ಟುವುದು, ಬದಲಾಯಿಸುವುದು ಮತ್ತು ನಿರ್ವಹಿಸುವುದು,

ಇ) ಸಭೆಯ ಯಾವುದೇ ಅಥವಾ ಎಲ್ಲಾ ಆಸ್ತಿಗಳನ್ನು, ಹಕ್ಕುಗಳನ್ನು ಮತ್ತು ಸವಲತ್ತುಗಳನ್ನು

ಮಾರುವ, ಅಭಿವೃದ್ಧಿಗೊಳಿಸುವ, ಬದಲಾಯಿಸುವ, ಬಾಡಿಗೆ ಅಥವಾ ಭೋಗ್ಯದ ಮೇಲೆ ನೀಡುವ, ವಿಲೇವಾರಿ ಮಾಡುವ, ನಿರ್ವಹಿಸುವ ಅಥವಾ ಇನ್ನಾವುದೇ ವಿಧದಲ್ಲಿ ವ್ಯವಹರಿಸುವ ಅಧಿಕಾರವನ್ನು ಹೊಂದಿರುವುದು,

ಈ) ಸಭೆಯ ಧ್ಯೇಯೋದ್ದೇಶಗಳಿಗೆ ವಿರೋಧವಿಲ್ಲದ ರೀತಿಯಲ್ಲಿ, ಷರತ್ತಿನಿಂದ ಕೂಡಿ ಅಥವಾ ಬೇಷರತ್ತಾಗಿ ವಂತಿಕೆಗಳನ್ನು, ಆಸ್ತಿಗಳನ್ನು ಸ್ವೀಕರಿಸುವುದು

ಉ) ಸಮಾನ ಧ್ಯೇಯ ಮತ್ತು ಉದ್ದೇಶಗಳಿರುವ ಯಾವುದೇ ಸಂಘ ಅಥವಾ ಸಂಸ್ಥೆಯನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳುವುದು,

೬) ಸಭೆಯ ಆಡಳಿತವು ಸಭೆಯ ನಿಯಮ ನಿಬಂಧನೆಗಳಿಗನುಸಾರವಾಗಿ ಸ್ಥಾಪಿತವಾದ –

ಅ) ವಿಶ್ವಸ್ಥ ಮಂಡಲಿಯಿಂದ,

ಆ) ನಿರ್ವಹಣಾ ಮಂಡಲಿಯಿಂದ,

ಇ) ನಿಯಂತ್ರಣ ಮಂಡಲಿಯಿಂದ

ನಡೆಯತಕ್ಕದ್ದು.

೭) ವಿಶ್ವಸ್ಥ ಮಂಡಲಿ, ನಿರ್ವಹಣಾ ಮಂಡಲಿ ಅಥವಾ ನಿಯಂತ್ರಣ ಮಂಡಲಿಯ ಸಭೆಗಳಲ್ಲಿ ಕ್ರಮವಾಗಿ ೧೦, ೭, ಮತ್ತು ೧೫ ಸದಸ್ಯರ ಕನಿಷ್ಠ ಹಾಜರಿಯ ಅಗತ್ಯವಿರಬೇಕಾಗುತ್ತದೆ. ಸಭೆಯನ್ನು ಮುಂದೂಡಲು ಕನಿಷ್ಠ ಸಂಖ್ಯೆಯ ಸದಸ್ಯರ ಹಾಜರಾತಿಯ ಆವಶ್ಯಕತೆಯಿರುವುದಿಲ್ಲ.

೮) ವಿಶ್ವಸ್ಥ ಮಂಡಲಿ, ನಿರ್ವಹಣಾ ಮಂಡಲಿ ಅಥವಾ ನಿಯಂತ್ರಣ ಮಂಡಲಿಯ ಸದಸ್ಯರುಗಳು, ಅವುಗಳ ಸದಸ್ಯರಾಗಿರುವ ಒಂದೇ ಕಾರಣದಿಂದ ಸಭೆಯ ಆಸ್ತಿಯಿಂದಾಗಲೀ, ನಿಧಿಯಿಂದಾಗಲೀ ಯಾವುದೇ ರೀತಿಯಲ್ಲಿ ಹಣವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

## ನಿಬಂಧನೆಗಳು

೧. ೧೮ ವರ್ಷಗಳ ಪ್ರಾಯವನ್ನು ದಾಟಿದ ಯಾವ ಪುರುಷರೇ ಆಗಲೀ, ಸ್ತ್ರೀಯರೇ ಆಗಲೀ, ಸಭೆಯ ಸದಸ್ಯರಾಗಲು ಅರ್ಹರಾಗಿರುತ್ತಾರೆ.

೨. ಸದಸ್ಯನಾಗಲು ಬಯಸುವ ವ್ಯಕ್ತಿಯು ಈ ಉದ್ದೇಶಕ್ಕಾಗಿ ಇರುವ ಅರ್ಜಿ ನಮೂನೆಯಲ್ಲಿ ತನ್ನ ಅರ್ಜಿಯನ್ನು ಸಲ್ಲಿಸಬೇಕು.

೩. ಯಾರನ್ನೇ ಆಗಲೀ ಸದಸ್ಯರನ್ನಾಗಿ ಸ್ವೀಕರಿಸುವ ಅಥವಾ ಅವರ ಸದಸ್ಯತ್ವದ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರವು ನಿರ್ವಹಣಾ ಮಂಡಲಿಗೆ ಇರುತ್ತದೆ.

೪. ಯಾವುದೇ ಸದಸ್ಯನು ಸಭೆಯ ಹಿತಾಸಕ್ತಿಗಳಿಗೆ ಅಪಾಯವನ್ನು ತರುವ ರೀತಿಯ ದುರ್ವರ್ತನೆಯಲ್ಲಿ ತೊಡಗಿದ್ದರೆ, ಆತನನ್ನು ಹಿತಕಾರಿಣಿ ಸಭೆಯ ಸರ್ವಸದಸ್ಯರ ಸಭೆಯಲ್ಲಿ ಹಾಜರಿರುವ ಸದಸ್ಯರ ನಾಲ್ಕನೆಯ ಮೂರರ ಬಹುಮತದಿಂದ ಉಚ್ಚಾಟಿಸಬಹುದಾಗಿದೆ.

೫. ಸಭೆಯ ಸದಸ್ಯರನ್ನು ಕೆಳಕಂಡ ರೀತಿಯಲ್ಲಿ ವರ್ಗೀಕರಿಸಲಾಗುತ್ತದೆ –

ಅ) ಪೋಷಕರು – ೩,೦೦೦ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಒಂದೇ ಕಂತಿನಲ್ಲಿ ಅಥವಾ ನಿರ್ವಹಣಾ ಮಂಡಲಿಯ ಅನುಮತಿಯ ಮೇರೆಗೆ ನಿರ್ದಿಷ್ಟ ಕಂತುಗಳಲ್ಲಿ ನೀಡುವವರು,

ಆ) ಬೆಂಬಲಿಗರು – ೨,೦೦೦ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಒಂದೇ ಕಂತಿನಲ್ಲಿ

ಅಥವಾ ನಿರ್ವಹಣಾ ಮಂಡಲಿಯ ಅನುಮತಿಯ ಮೇರೆಗೆ ನಿರ್ದಿಷ್ಟ ಕಂತುಗಳಲ್ಲಿ ನೀಡುವವರು,

ಇ) ಸಹಾನುಭೂತಿಯುಳ್ಳ ಸದಸ್ಯರು – ೧,೦೦೦ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಒಂದೇ ಕಂತಿನಲ್ಲಿ ಅಥವಾ ನಿರ್ವಹಣಾ ಮಂಡಲಿಯ ಅನುಮತಿಯ ಮೇರೆಗೆ ನಿರ್ದಿಷ್ಟ ಕಂತುಗಳಲ್ಲಿ ನೀಡುವವರು,

ಈ) ಆಜೀವ ಸದಸ್ಯರು – ೫೦೦ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಒಂದೇ ಕಂತಿನಲ್ಲಿ ಅಥವಾ ನಿರ್ವಹಣಾ ಮಂಡಲಿಯ ಅನುಮತಿಯ ಮೇರೆಗೆ ನಿರ್ದಿಷ್ಟ ಕಂತುಗಳಲ್ಲಿ ನೀಡುವವರು,

ಉ) ಸಹಸದಸ್ಯರು – ೨೦೦ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಒಂದೇ ಕಂತಿನಲ್ಲಿ ಅಥವಾ ನಿರ್ವಹಣಾ ಮಂಡಲಿಯ ಅನುಮತಿಯ ಮೇರೆಗೆ ನಿರ್ದಿಷ್ಟ ಕಂತುಗಳಲ್ಲಿ ನೀಡುವವರು,

ಊ) ಸಾಮಾನ್ಯ ಸದಸ್ಯರು – ಇವರುಗಳಲ್ಲಿ ಕೆಳಕಂಡ ವರ್ಗಗಳಿರುತ್ತವೆ –

೧) ವಾರ್ಷಿಕ ೨೫ ರೂಗಳನ್ನು ನೀಡುವವರು

೨) ವಾರ್ಷಿಕ ೧೦ ರೂಗಳನ್ನು ನೀಡುವವರು

೩) ವಾರ್ಷಿಕ ೫ ರೂಗಳನ್ನು ನೀಡುವವರು

೪) ವಾರ್ಷಿಕ ೩ ರೂಗಳನ್ನು ನೀಡುವವರು

೫) ವಾರ್ಷಿಕ ೧ ರೂಗಳನ್ನು ನೀಡುವವರು

## ವಿಶ್ವಸ್ಥ ಮಂಡಲಿ

೬. ಸಭೆಯ ವಿಶ್ವಸ್ಥ ಮಂಡಲಿಯಲ್ಲಿ ೧೬ ಆಜೀವ ಸದಸ್ಯರಿರುತ್ತಾರೆ. ಯಾವುದೇ ರೂಪದಲ್ಲಿರುವ ಸಭೆಯ ಸಮಸ್ತ ಚರ ಹಾಗೂ ಸ್ಥಿರ ಆಸ್ತಿಗಳೂ, ಎಲ್ಲಾ ನಿಧಿಗಳೂ ಅವರ ಅಧೀನದಲ್ಲಿರುತ್ತವೆ. ಈ ಹದಿನಾರು ಸದಸ್ಯರಲ್ಲಿ ಕನಿಷ್ಠ ನಾಲ್ಕು ಮಂದಿಯಾದರೂ ಬಾಂಬೆಯ ನಿವಾಸಿಗಳಾಗಿರಬೇಕು.

೭. ಮೊದಲ ಬಾರಿಗೆ ವಿಶ್ವಸ್ಥ ಮಂಡಲಿಯ ಸದಸ್ಯರನ್ನು ಹಿತಕಾರಿಣಿ ಸಭೆಯ ಸರ್ವ ಸದಸ್ಯರ ಸಭೆಯು ಆಯ್ಕೆಮಾಡುತ್ತದೆ. ಸದಸ್ಯರ ಸಾವು, ಅಶಕ್ತತೆ, ರಾಜೀನಾಮೆ ಅಥವಾ ಪರದೇಶದಲ್ಲಿ ನೆಲಸುವ ಕಾರಣಗಳಿಂದ ಖಾಲಿಬಿದ್ದ ಸ್ಥಾನಗಳಿಗೆ ಬೇರೆಯವರನ್ನು ಸರ್ವಸದಸ್ಯರ ಸಭೆಯು ಹಾಜರಿರುವ ಸದಸ್ಯರ ಮೂರನೇ ನಾಲ್ಕರಷ್ಟು ಬಹುಮತದಿಂದ ಆಯ್ಕೆಮಾಡಬೇಕು.

೮. ಯಾವುದೇ ಸಂದರ್ಭದಲ್ಲಿಯಾದರೂ ಮಂಡಲಿಯು ಮಹರ್, ಚಂಭರ್, ಮಾಂಗ್ ಮತ್ತು ದೇಡ್ ಸದಸ್ಯರಿಂದ ರಚಿತವಾಗಿರಬೇಕು. ಅವರುಗಳಲ್ಲಿ ೪ ಸದಸ್ಯರು ಕೊಂಕಣದಿಂದಲೂ, ಇಬ್ಬರು ಗುಜರಾತ್, ಇಬ್ಬರು ಕರ್ನಾಟಕ ಮತ್ತು ಎಂಟು ಜನರು ಬಾಂಬೆ ಪ್ರಾಂತದ ಇತರ ಪ್ರದೇಶಗಳಿಂದಲೂ ಆಯ್ಕೆಯಾಗಿರಬೇಕು.

೯. ಸಭೆಯ ಎಲ್ಲಾ ಸ್ಥಿರ ಮತ್ತು ಚರ ಆಸ್ತಿಗಳನ್ನೂ ಹಾಗೂ ಎಲ್ಲಾ ನಿಧಿಗಳನ್ನು ವಿಶ್ವಸ್ಥ ಮಂಡಲಿಯ ಸದಸ್ಯರು ತಮ್ಮ ಅಧೀನದಲ್ಲಿ ಇಟ್ಟುಕೊಂಡಿರಬೇಕು.

೧೦. ನಿರ್ವಹಣಾ ಮಂಡಲಿಯು ವಾರ್ಷಿಕ ವೆಚ್ಚದ ಲೆಕ್ಕವನ್ನು ಅನುಕೂಲಕರವಾದ ಶೀರ್ಷಿಕೆ, ಉಪ–ಶೀರ್ಷಿಕೆಗಳ ಅಡಿಯಲ್ಲಿ ವಿಭಾಗಿಸಿ ಮುಂದಿನ ವರ್ಷದ ಅಂದಾಜು ವೆಚ್ಚದ ವರದಿಯೊಡನೆ ವಿಶ್ವಸ್ಥ ಮಂಡಲಿಯ ಮುಂದೆ ಮಂಡಿಸಬೇಕು. ವಿಶ್ವಸ್ಥ ಮಂಡಲಿಯು ಅನುಮೋದಿಸಿದ ಮೇಲೆ ಮುಂದಿನ

ವರ್ಷದ ವೆಚ್ಚದ ವರದಿಯನ್ನು ಜಾರಿಗೊಳಿಸಬೇಕು. ಅಗತ್ಯಬಿದ್ದಾಗ, ನಿರ್ವಹಣಾ ಮಂಡಲಿಯು ವರ್ಷದ ಮಧ್ಯದಲ್ಲಿ ಯಾವಾಗಲಾದರೂ ಪೂರಕ ಆಯವ್ಯಯವನ್ನು ವಿಶ್ವಸ್ಥ ಮಂಡಲಿಯ ಅನುಮತಿಗಾಗಿ ಮಂಡಿಸಬಹುದು.

೧೧. ವರ್ಷವು ಮುಗಿದ ಮೂರುತಿಂಗಳ ಒಳಗಾಗಿ ಕನಿಷ್ಠ ಒಮ್ಮೆಯಾದರೂ ವಿಶ್ವಸ್ಥ ಸಮಿತಿಯು ಸಭೆಸೇರಿ, ವಾರ್ಷಿಕ ಆಯವ್ಯಯವನ್ನು ಅನುಮೋದಿಸಬೇಕು. ನಂತರ ನಿರ್ವಹಣಾ ಮಂಡಲಿಯು ಪೂರಕ ಆಯವ್ಯಯವನ್ನು ಮಂಡಿಸ ಬಯಸಿದಾಗಲೆಲ್ಲಾ ಸಭೆಸೇರಿ ಅದನ್ನು ಪರಿಶೀಲಿಸಬೇಕು. ವಿಶ್ವಸ್ಥ ಮಂಡಲಿಯ ಎಲ್ಲಾ ನಿರ್ಣಯಗಳೂ ಬಹುಮತದ ಆಧಾರದ ಮೇಲೆ ಅಂಗೀಕೃತವಾಗಬೇಕು.

೧೨. ವಿಶ್ವಸ್ಥ ಮಂಡಲಿಯು ವಾರ್ಷಿಕ ಆಯವ್ಯಯವನ್ನು ಪರಿಶೀಲಿಸುವ ಸಭೆಯಲ್ಲಿ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು, ಸಭೆಯ ಕಾರ್ಯದರ್ಶಿ ಮತ್ತು ಖಜಾಂಚಿಯವರು ಹೆಚ್ಚುವರಿ ಸದಸ್ಯರಾಗಿ ಸಭೆಯಲ್ಲಿ ಭಾಗವವಹಿಸುತ್ತಾರೆ. ಆದರೆ, ಅವರು ವಿಶ್ವಸ್ಥ ಸಮಿತಿಯ ಸದಸ್ಯರಾಗಿರದೇ ಇದ್ದರೆ, ಅವರಲ್ಲಿ ಯಾರಿಗೂ ಮತಹಾಕುವ ಅಧಿಕಾರವಿರುವುದಿಲ್ಲ.

೧೩. ವಿಶ್ವಸ್ಥ ಮಂಡಲಿಯ ಎಲ್ಲಾ ಸಭೆಗಳಿಗೂ ಹಾಗೂ ವಿಶ್ವಸ್ಥ ಮಂಡಲಿಯ ಸದಸ್ಯರನ್ನು ಆಯ್ಕೆಮಾಡಲು ಸೇರುವ ಹಿತಕಾರಿಣಿ ಸಭೆಯ ಸರ್ವಸದಸ್ಯರ ಸಭೆಗೂ ಒಂದು ತಿಂಗಳ ಮೊದಲು ಸಭೆಯ ತಿಳಿವಳಿಕೆಯ ಪತ್ರವನ್ನು ಕಳುಹಿಸಬೇಕು.

೧೪. ವಿಶ್ವಸ್ಥ ಮಂಡಲಿಯು ಅಧಿಕೃತವಾಗಿ ಗೊತ್ತುವಳಿಯೊಂದನ್ನು ಅಂಗೀಕರಿಸುವ ಮೂಲಕ, ಸಭೆಯ ಆಸ್ತಿಯನ್ನು, ನಿಧಿಯನ್ನು, ಇಡುವ, ಮತ್ತು ಅದನ್ನು ಸೂಕ್ತವಾಗಿ ವಿತರಣೆ ಮಾಡುವ ತನ್ನ ಅಧಿಕಾರವನ್ನು ತಮ್ಮಲ್ಲೇ ಒಬ್ಬ ಸದಸ್ಯರ ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಸದಸ್ಯರ ಹೆಸರಿಗೆ ವರ್ಗಾಯಿಸುವ ಅಧಿಕಾರವನ್ನು ವಿಶ್ವಸ್ಥ ಮಂಡಲಿಯು ಹೊಂದಿರುತ್ತದೆ.

೧೫. ಮಹಾ ಕಾರ್ಯದರ್ಶಿಯು ಸುತ್ತೋಲೆಯ ಮೂಲಕ ನೀಡುವ ಯಾವುದೇ ಯೋಜನೆಯ ಅಥವಾ ಸಮಸ್ಯೆಯ ಮೇಲೆ ಮತನೀಡುವ ಹಕ್ಕು ವಿಶ್ವಸ್ಥ ಮಂಡಲಿಯ ಸದಸ್ಯರಿಗೆ ಇರುತ್ತದೆ. ಹಾಗೆ ಮತನೀಡಿದ ಎಲ್ಲಾ ಗೊತ್ತುವಳಿಗಳೂ ವಿಶ್ವಸ್ಥ ಮಂಡಳಿಯ ನಡಾವಳಿಯ ಪುಸ್ತಕದಲ್ಲಿ ನಮೂದಾಗಬೇಕು.

೧೬. ವಿಶ್ವಸ್ಥ ಮಂಡಳಿಯ ಸದಸ್ಯರು ತಮ್ಮಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿಕೊಳ್ಳಬೇಕು ಮತ್ತು ಹಾಗೆ ಚುನಾಯಿತರಾದ ಅಧ್ಯಕ್ಷರೇ ಸಭೆಯ ಮುಕ್ತಾಯದ ಮೊದಲು ನಡಾವಳಿಯ ಪುಸ್ತಕದಲ್ಲಿ ತಮ್ಮ ಸಹಿಯನ್ನು ಹಾಕಬೇಕು.

೧೭. ಹಿತಕಾರಿಣಿ ಸಭೆಯ ಕಾರ್ಯದರ್ಶಿಯೇ ವಿಶ್ವಸ್ಥ ಮಂಡಳಿಯ ಪದ–ನಿಮಿತ್ತ ಕಾರ್ಯದರ್ಶಿಯೂ ಆಗಿದ್ದು ಅವರೇ ಮಂಡಳಿಯ ಸಭೆಯ ನಡಾವಳಿಯನ್ನು ಸಿದ್ಧಪಡಿಸಬೇಕು.

**ನಿರ್ವಹಣಾ ಮಂಡಳಿ**

೧೮. ನಿರ್ವಹಣಾ ಮಂಡಳಿಯು ಪ್ರತಿ ಅಧಿಕೃತ ವರ್ಷಕ್ಕೆ ಸಭೆಯ ಕಾರ್ಯಕಾರಿ ಸಮಿತಿಯಾಗಿದ್ದು, ಕೆಳಕಂಡಂತೆ ೨೦ ಮಂದಿ ಸದಸ್ಯರನ್ನು ಒಳಗೊಂಡಿರುತ್ತದೆ.

ಅ) ನಾಲ್ಕು ಸದಸ್ಯರು ಬಾಂಬೆಯ ನಿವಾಸಿಗಳಾಗಿದ್ದು, ಅವರು ಪ್ರತಿ ವರ್ಷವೂ ವಿಶ್ವಸ್ಥ ಮಂಡಳಿಯಿಂದ ಆಯ್ಕೆಯಾಗಿರಬೇಕು.

ಆ) ಹನ್ನೆರಡರು ಸದಸ್ಯರು ಸರ್ವಸದಸ್ಯರ ಸಭೆಯಿಂದ ಪ್ರತಿ ವರ್ಷವೂ ಆಯ್ಕೆಯಾಗಿರಬೇಕು,

ಇ) ಮೇಲಿನ (ಅ) ಮತ್ತು (ಆ) ನಲ್ಲಿ ಹೇಳಿದ ಹದಿನಾರು ಸದಸ್ಯರನ್ನು ಬಿಟ್ಟು ಉಳಿದ ನಾಲ್ವರು

ಸದಸ್ಯರು ದಲಿತ ವರ್ಗಗಳ ಸದಸ್ಯರಿಂದ ಆಯ್ಕೆಯಾಗಿರಬೇಕು.

೧೯. ನಿರ್ವಹಣಾ ಮಂಡಲಿಯ ಯಾವುದೇ ಸದಸ್ಯರ ಸಾವು, ಅಶಕ್ತತೆ, ರಾಜೀನಾಮೆ ಅಥವಾ ಪರದೇಶದಲ್ಲಿ ನೆಲಸುವ ಕಾರಣಗಳಿಂದ ಸ್ಥಾನವು ಖಾಲಿಬಿದ್ದರೆ, ಆ ಸ್ಥಾನಕ್ಕೆ ಸದಸ್ಯರೊಬ್ಬರನ್ನು ಈ ಉದ್ದೇಶಕ್ಕಾಗಿ ಕರೆದ ನಿರ್ವಹಣಾ ಮಂಡಲಿಯ ಉಳಿದ ಸದಸ್ಯರ ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆಮಾಡಬೇಕು.

೨೦. ನಿರ್ವಹಣಾ ಮಂಡಲಿಯ ಅಧಿಕಾರಗಳು ಹೀಗಿರುತ್ತವೆ –

ಅ) ವಿಶ್ವಸ್ಥ ಮಂಡಳಿಯ ಪರವಾಗಿ ಸಭೆಯ ಆಸ್ತಿ, ನಿಧಿ ಮೊದಲಾದವುಗಳನ್ನು ನಿರ್ವಹಿಸುವುದು,

ಆ) ಸಭೆಗೆ ಸೇರಿದ ಸಂಸ್ಥೆಗಳಿಗೆ ಮತ್ತು ಸಭೆಯ ಕಾರ್ಯಚಟುವಟಿಕೆಗಳಿಗೆ ಅಗತ್ಯವಾದ ಆಸ್ತಿ, ಸಲಕರಣೆಗಳನ್ನು ಕೊಳ್ಳುವುದು, ಬಾಡಿಗೆಗೆ ತೆಗೆದುಕೊಳ್ಳುವುದು ಅಥವಾ ಇನ್ನಿತರ ವಿಧಾನಗಳಿಂದ ಪಡೆದುಕೊಳ್ಳುವುದು ಮತ್ತು ಅವುಗಳನ್ನು ವಿಲೇವಾರಿ ಮಾಡುವುದು.

ಇ) ಸಭೆಯ ಧ್ಯೇಯೋದ್ದೇಶಗಳಿಗೆ ಒಳಪಟ್ಟಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸಂಸ್ಥೆಗಳನ್ನು ಪ್ರಾರಂಭಿಸುವುದು,

ಈ) ಯಾವುದೇ ಸಂಸ್ಥೆಯನ್ನು ಅಥವಾ ಕಾರ್ಯಕ್ರಮವನ್ನು ರದ್ದುಮಾಡುವುದು. ಆದರೆ, ಯಾವುದೇ ವಿದ್ಯಾರ್ಥಿನಿಲಯವನ್ನು ರದ್ದುಮಾಡುವುದಕ್ಕೆ ವಿಶ್ವಸ್ಥ ಮಂಡಲಿಯ ಐದನೇ ನಾಲ್ಕು ಬಹುಮತದ ನಿರ್ಣಯವು ಅಗತ್ಯವಾಗಿರುತ್ತದೆ.

ಉ) ಅಗತ್ಯಕ್ಕೆ ತಕ್ಕ ಹಾಗೆ ಸಭೆಯ ಶಾಖಾಕಚೇರಿಗಳನ್ನು ತೆರೆಯುವುದು ಅಥವಾ ಮುಚ್ಚುವುದು.

ಊ) ಕಾಲಕಾಲಕ್ಕೆ ಅಗತ್ಯವಿರುವ ಸಿಬ್ಬಂದಿಗಳನ್ನು ನೇಮಕಮಾಡಿಕೊಳ್ಳುವುದು, ಅವರ ಸಂಬಳ ಮತ್ತು ಇತರ ಸೇವಾ ನಿಬಂಧನೆಗಳನ್ನು ನಿಗದಿಗೊಳಿಸುವುದು ಮತ್ತು ಪರಿಸ್ಥಿತಿಯು ಹಾಗೆ ಬಂದರೆ ಅವರನ್ನು ಸೇವೆಯಿಂದ ವಜಾಗೊಳಿಸುವುದು,

ಋ) ಸಭೆಯ ವಿವಿಧ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ನಿಬಂಧನೆಗಳನ್ನು ರಚಿಸುವುದು, ರಚಿಸಿದ ನಿಯಮಗಳನ್ನು ತಿದ್ದುಪಡಿಮಾಡುವುದು. ಹಾಗೆ ರಚಿಸಿದ ನಿಬಂಧನೆಗಳು, ಅವುಗಳನ್ನು ನಿಯಂತ್ರಣ ಮಂಡಳಿಯು ತಿದ್ದುಪಡಿ ಅಥವಾ ರದ್ದು ಮಾಡುವವರೆಗೆ, ಸಭೆಯ ನಿಯಮಗಳಾಗಿ ಇರುತ್ತವೆ.

ೠ) ಸಮಿತಿಯ ಯಾವುದಾದರೂ ಸದಸ್ಯನು ಒಂದೇ ಸಮನೆ ನಾಲ್ಕು ಸಭೆಗಳಿಗೆ ಗೈರುಹಾಜರಾದರೆ, ಅಂತಹ ಸದಸ್ಯನ ಸ್ಥಾನವು ಖಾಲಿಯಾಗಿದೆಯೆಂದು ಘೋಷಿಸುವುದು,

ಎ) ವಂತಿಗೆದಾರರ ಪಟ್ಟಿಯನ್ನು ಸಿದ್ಧಮಾಡಿ ಸುಸ್ಥಿತಿಯಲ್ಲಿಟ್ಟುಕೊಂಡಿರುವುದು,

ಏ) ಸರ್ವಸದಸ್ಯರ, ವಿಶ್ವಸ್ಥ ಮಂಡಳಿಯ ಹಾಗೂ ನಿಯಂತ್ರಣ ಮಂಡಳಿಯ ಸಭೆಗಳನ್ನು ಕರೆಯುವುದು.

೨೧. ನಿರ್ವಹಣಾ ಮಂಡಳಿಯು ತನ್ನ ಮೊದಲನೆಯ ಸಭೆಯಲ್ಲಿ ಸದಸ್ಯರುಗಳ ಮಧ್ಯದಿಂದ ಅಧ್ಯಕ್ಷರನ್ನು, ಮಹಾಕಾರ್ಯದರ್ಶಿಯವರನ್ನು ಹಾಗೂ ಖಜಾಂಚಿಯವರನ್ನು ಆಯ್ಕೆಮಾಡಬೇಕು. ಇವರಲ್ಲದೆ, ಕೆಲವೊಂದು ನಿರ್ದಿಷ್ಟ ಚಟುವಟಿಕೆಗಳಿಗಾಗಿ ಸಹಾಯಕ ಕಾರ್ಯದರ್ಶಿ ಅಥವಾ ಸಂಘಟನಾ

ಕಾರ್ಯದರ್ಶಿಗಳನ್ನು ನಿರ್ವಹಣಾ ಮಂಡಳಿಯು ನೇಮಕಮಾಡಬಹುದು. ನಿರ್ವಹಣಾ ಮಂಡಳಿಯಲ್ಲಿ ಖಾಲಿಯಾದ ಸದಸ್ಯರ ಸ್ಥಾನಗಳನ್ನು ಈ ಉದ್ದೇಶಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಗೊತ್ತುವಳಿಯೊಂದನ್ನು ಅಂಗೀಕರಿಸುವ ಮೂಲಕ ನಿರ್ವಹಣಾ ಮಂಡಳಿಯು ತುಂಬಬಹುದು.

೨೨. ಸಭೆಗೆ ಸೇರಿದ ಹಣಕಾಸಿನ ವ್ಯವಹಾರಕ್ಕೆ ಅಧ್ಯಕ್ಷರು, ಮಹಾಕಾರ್ಯದರ್ಶಿ ಮತ್ತು ಖಜಾಂಚಿಗಳು ಜಂಟಿಯಾಗಿ ಜವಾಬ್ದಾರರಾಗಿರುತ್ತಾರೆ. ಸಭೆಗೆ ಸೇರಿದ ಹಣವನ್ನು ವಿಶ್ವಸ್ಥ ಮಂಡಳಿಯ ಸದಸ್ಯರ ಹೆಸರಿನಲ್ಲಿ ಬ್ಯಾಂಕ್ ಅಥವಾ ಬ್ಯಾಂಕುಗಳಲ್ಲಿ ಜಮಾಮಾಡಬೇಕು.

೨೩. ಬ್ಯಾಂಕಿನಿಂದ ಹೊರತೆಗೆಯುವ ಹಣವು ಆಯವ್ಯಯದಲ್ಲಿ ಅನುಮೋದನೆಯನ್ನು ಪಡೆದಿರುವಂತಹ ಕಾರ್ಯಕ್ರಮಗಳಿಗೆ ಸೀಮಿತವಾಗಿರತಕ್ಕದ್ದು ಮತ್ತು ಬ್ಯಾಂಕ್ ಖಾತೆಗಳನ್ನು ನಡೆಸಲು ಅಧ್ಯಕ್ಷ, ಮಹಾಕಾರ್ಯದರ್ಶಿ ಮತ್ತು ಖಜಾಂಚಿಯವರು ಎಲ್ಲರೂ ಒಟ್ಟಿಗೇ ಸಹಿಮಾಡಬೇಕು.

೨೪. ನಿರ್ವಹಣಾ ಮಂಡಳಿಯ ಸಭೆಗಳು ಸಾಮಾನ್ಯವಾದದ್ದಾಗಿರಬಹುದು ಅಥವಾ ವಿಶೇಷವಾದದ್ದಾಗಿರಬಹುದು.

೨೫. ಹಣಕಾಸಿನ ಎಲ್ಲಾ ವ್ಯವಹಾರಗಳನ್ನೂ ನಿರ್ವಹಣಾ ಮಂಡಳಿಯ ಮುಂದಿನ ಮಾಸಿಕ ಸಭೆಯ ಮುಂದೆ ಮಂಡಿಸಬೇಕು.

೨೬. ನಿರ್ವಹಣಾ ಮಂಡಳಿಯ ಸಾಮಾನ್ಯ ಸಭೆಗಳು ಪ್ರತಿ ತಿಂಗಳ ೧೫ರಂದು ಅಥವಾ ಅದರ ಆಸುಪಾಸಿನಲ್ಲಿ ನಡೆಯಬೇಕು.

೨೭. ಯಾವುದಾದರೂ ಸಭೆಯು ಕನಿಷ್ಠ ಹಾಜರಾತಿಯ ಅಭಾವದಿಂದ ಮುಂದೂಡಲ್ಪಟ್ಟರೆ, ಮತ್ತೆ ಆ ಸಭೆಯನ್ನು ಐದು ದಿನಗಳ ಪೂರ್ವಸೂಚನೆಯೊಂದಿಗೆ ಅಧ್ಯಕ್ಷರು ಅಥವಾ ಅವರ ಗೈರುಹಾಜರಿಯಲ್ಲಿ ಮಹಾಕಾರ್ಯದರ್ಶಿಯವರು ನಿಗದಿಮಾಡಬಹುದು.

೨೮. ಸಾಮಾನ್ಯ ಸಭೆಯನ್ನು ಕರೆಯಲು ಕನಿಷ್ಠ ಏಳು ದಿನಗಳ ಪೂರ್ವಸೂಚನೆಯನ್ನು ನೀಡಬೇಕು ಮತ್ತು ಕಾರ್ಯಕ್ರಮಪಟ್ಟಿಯನ್ನು ಎಲ್ಲಾ ಸದಸ್ಯರಿಗೂ ಮುಂಚಿತವಾಗಿಯೇ ತಲುಪಿಸಬೇಕು.

೨೯. ಸಾಮಾನ್ಯ ಸಭೆಯು ಈ ಮುಂದಿನ ವ್ಯವಹಾರಗಳನ್ನು ಮಾಡಬಹದು –

ಅ) ಹಿಂದಿನ ಸಭೆಯ ನಡಾವಳಿಗಳನ್ನು ಓದುವುದು,

ಆ) ಹಿತಕಾರಿಣಿ ಸಭೆಯ ಶಾಖೆಗಳ, ಅಂಗಸಂಸ್ಥೆಗಳ ಲೆಕ್ಕಪತ್ರಗಳನ್ನು, ವರದಿಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು.

ಇ) ಕಾರ್ಯದರ್ಶಿಗಳು ಸಲ್ಲಿಸಿದ ಪತ್ರಗಳು, ಯೋಜನೆಗಳು ಮತ್ತು ಇತರ ವಿಷಯಗಳ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದು.

ಈ) ಹಿತಕಾರಿಣಿ ಸಭೆಯ ಸಾಮಾನ್ಯ ವ್ಯವಹಾರ ಹಾಗೂ ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಬಗೆಹರಿಸುವುದು

ಉ) ಸಭೆಯ ಖರ್ಚುಗಳನ್ನು ಅನುಮೋದಿಸುವುದು.

ಊ) ಅಧ್ಯಕ್ಷರ ಅನುಮತಿಯನ್ನು ಪಡೆದು ಇನ್ನಾವುದಾದರೂ ವ್ಯವಹಾರಗಳನ್ನು ನಡೆಸುವುದು.

### ನಿರ್ವಹಣಾ ಮಂಡಳಿಯ ವಿಶೇಷ ಸಭೆ

೩೦. ನಿರ್ವಹಣಾ ಮಂಡಳಿಯ ವಿಶೇಷ ಸಭೆಗಳನ್ನು ಮೂರು ದಿನಗಳ ಪೂರ್ವಸೂಚನೆಯೊಂದಿಗೆ ಅಧ್ಯಕ್ಷರಾಗಲೀ ಅಥವಾ ಕಾರ್ಯದರ್ಶಿಯವರಾಗಲೀ ಕರೆಯಬಹುದು.

೩೧. ನಿರ್ವಹಣಾ ಮಂಡಲಿಯ ಯಾರಾದರೂ ನಾಲ್ಕು ಸದಸ್ಯರು ನಿರ್ವಹಣಾ ಮಂಡಲಿಯ ವಿಶೇಷ ಸಭೆಯನ್ನು ಕರೆಯಬೇಕೆಂದು ಮಹಾಕಾರ್ಯದರ್ಶಿಯವರಿಗೆ ಲಿಖಿತ ಬೇಡಿಕೆಯನ್ನು ಸಲ್ಲಿಸಿದರೆ, ಅಂತಹ ಬೇಡಿಕೆಯು ಬಂದ ಹತ್ತು ದಿನಗಳ ಒಳಗಾಗಿ ವಿಶೇಷ ಸಭೆಯನ್ನು ಮಹಾಕಾರ್ಯದರ್ಶಿಯು ಕರೆಯಬೇಕು.

೩೨. ವಿಶೇಷ ಸಭೆಗಾಗಿ ಬಂದ ಕೋರಿಕೆಯು ಅದರ ನಿರ್ದಿಷ್ಟಕಾರಣಗಳನ್ನು ತಿಳಿಸಿರಬೇಕು ಮತ್ತು ಇವುಗಳನ್ನು ಸಭೆಯ ಸೂಚನಾ ಪತ್ರದೊಂದಿಗೆ ಎಲ್ಲಾ ಸದಸ್ಯರಿಗೂ ಕಳುಹಿಸಬೇಕು.

೩೩. ಸಾಮಾನ್ಯ ಸಭೆಗೆ ಅನ್ವಯವಾಗುವ ಕನಿಷ್ಠ ಹಾಜರಾತಿಯ ನಿಯಮವು ವಿಶೇಷ ಸಭೆಗೂ ಅನ್ವಯವಾಗುತ್ತದೆ.

## ಅಧ್ಯಕ್ಷರು

೩೪. ಅಧ್ಯಕ್ಷರು –

ಅ) ನಿರ್ವಹಣಾ ಮಂಡಳಿಯ ಎಲ್ಲಾ ಸಭೆಗಳ ಅಧ್ಯಕ್ಷತೆಯನ್ನು ಮಂಡಳಿಯ ಅಧ್ಯಕ್ಷರೇ ವಹಿಸುತ್ತಾರೆ ಮತ್ತು ಮತಗಳು ಸಮನಾಗಿದ್ದಾಗ ಅವರು ಮಂಡಳಿಯ ಸದಸ್ಯರಾಗಿ ತಮ್ಮ ಮತವನ್ನು ಚಲಾಯಿಸಬಹುದು.
ಅಧ್ಯಕ್ಷರ ಅನುಪಸ್ಥಿತಿಯಲ್ಲಿ, ಮಂಡಳಿಯ ಸದಸ್ಯರು ಚುನಾಯಿಸಿದ ಸದಸ್ಯರೊಬ್ಬರು ಅಧ್ಯಕ್ಷರ ಸ್ಥಾನದಲ್ಲಿ ಕೆಲಸವನ್ನು ನಿರ್ವಹಿಸುತ್ತಾರೆ ಮತ್ತು ಸಭೆಯ ಕಲಾಪಗಳನ್ನು ನಡೆಸುವಲ್ಲಿ ಅಧ್ಯಕ್ಷರಿಗೆ ಇದ್ದ ಎಲ್ಲಾ ಅಧಿಕಾರಗಳನ್ನೂ ಅವರು ಚಲಾಯಿಸಬಹುದು.

ಆ) ಸಭೆಯ ಕಲಾಪಗಳ ವ್ಯವಸ್ಥೆಯನ್ನು ನಿರ್ವಹಿಸುವುದು. ಅವರ ತೀರ್ಮಾನವೇ ಅಂತಿಮವಾಗಿರುತ್ತದೆ.

ಇ) ಎಲ್ಲಾ ಕಾಗದ ಪತ್ರಗಳಿಗೆ ಸಹಿಯನ್ನು ಹಾಕುವುದು,

ಈ) ಹಿತಕಾರಿಣಿ ಸಭೆಯು ನಡೆಸುವ ಹೊರಜಗತ್ತಿನೊಂದಿಗೆ ಎಲ್ಲಾ ಪತ್ರವ್ಯವಹಾರಗಳನ್ನೂ ನಡೆಸುವುದು.

ಉ) ಹಿತಕಾರಿಣಿ ಸಭೆಯ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ನಿರ್ವಹಣಾ ಮಂಡಲಿಯ ಸಾಮಾನ್ಯ ಮತ್ತು ವಿಶೇಷ ಸಭೆಗಳ ನಡಾವಳಿಗಳನ್ನು ವರದಿಮಾಡುವುದು.

## ಮಹಾಕಾರ್ಯದರ್ಶಿ

೩೫. ಮಹಾಕಾರ್ಯದರ್ಶಿಯು

ಅ) ಸಭೆಯ ಎಲ್ಲಾ ದಾಖಲೆಗಳ ಪ್ರಭಾರಿಯಾಗಿರುತ್ತಾರೆ ಮತ್ತು ಅವುಗಳಿಗೆ ಜವಾಬ್ದಾರರಾಗಿರುತ್ತಾರೆ,

ಆ) ಸಭೆಯ ನಿಯಮಗಳಿಗನುಸಾರವಾಗಿ ನಿರ್ವಹಣಾ ಮಂಡಳಿಯ, ವಿಶ್ವಸ್ಥ ಮಂಡಳಿಯ ಹಾಗೂ ನಿಯಂತ್ರಣ ಮಂಡಳಿಯ ಎಲ್ಲಾ ಸಭೆಗಳನ್ನೂ ಕರೆಯುತ್ತಾರೆ ಮತ್ತು ಈ ಎಲ್ಲಾ ಸಭೆಗಳ ನಡಾವಳಿಗಳನ್ನು ದಾಖಲಿಸುತ್ತಾರೆ.

ಇ) ಸಭೆಯ ಶಾಖಾ ಕಚೇರಿಗಳಿಂದ ಮತ್ತು ಅಂಗ ಸಂಸ್ಥೆಗಳ ಮುಖ್ಯಸ್ಥರಿಂದ ವರದಿಗಳನ್ನು, ಲೆಕ್ಕಪತ್ರಗಳನ್ನು ತರಿಸಿಕೊಂಡು, ಅ ಸಂಸ್ಥೆಗಳ ನಡಾವಳಿಗಳನ್ನು ದಾಖಲಿಸುತ್ತಾರೆ.

ಈ) ಸಭೆಯ ಎಲ್ಲಾ ಪತ್ರವ್ಯವಹಾರಗಳನ್ನೂ ನಿಭಾಯಿಸುತ್ತಾರೆ.

ಉ) ಸಭೆಯ ಎಲ್ಲಾ ಸದಸ್ಯರ ಹೆಸರುಗಳನ್ನೂ ಮತ್ತು ಅವರ ಸರಿಯಾದ ವಿಳಾಸಗಳನ್ನೂ ದಾಖಲಿಸಿಕೊಳ್ಳುತ್ತಾರೆ,

ಊ) ಹಿತಕಾರಿಣಿ ಸಭೆಯ ಸರ್ವಸದಸ್ಯರ ಸಭೆಯಲ್ಲಿ ವಾರ್ಷಿಕ ವರದಿಯನ್ನು ಸಲ್ಲಿಸುತ್ತಾರೆ.

**ಖಜಾಂಚಿ**

೩೬. ಖಜಾಂಚಿಯು

ಅ) ಎಲ್ಲಾ ಚಂದಾ ಹಣವನ್ನು ಮತ್ತು ವಂತಿಕೆಗಳನ್ನೂ ಸಭೆಯ ಪರವಾಗಿ ಸ್ವೀಕರಿಸಿ ಹಣವನ್ನು ನೀಡಿದವರಿಗೆ ರಶೀತಿಗಳನ್ನು ನೀಡುತ್ತಾರೆ,

ಆ) ಲೆಕ್ಕ ಪತ್ರಗಳ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಳ್ಳುತ್ತಾರೆ,

ಇ) ಹಣದ ಎಲ್ಲಾ ವಿತರಣೆಗಳನ್ನೂ ಮಾಡುತ್ತಾರೆ,

ಈ) ನಿರ್ವಹಣಾ ಮಂಡಲಿಗೆ ಪ್ರತಿ ವರ್ಷವೂ ಸಭೆಯ ಆಯವ್ಯಯದ ವರದಿಯನ್ನು ಹಾಗೂ ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ನಿಯಮಿತರಾದ ಲೆಕ್ಕ ಪರಿಶೋಧಕರಿಂದ ಅನುಮೋದಿತವಾದ ಇತರ ಸಂಸ್ಥೆಗಳ ಲೆಕ್ಕಪತ್ರಗಳ ಪ್ರತ್ಯೇಕವಾದ ವರದಿಗಳನ್ನು ಸಭೆಯ ವಾರ್ಷಿಕ ವರದಿಯಲ್ಲಿ ಸೇರಿಸುವ ಸಲುವಾಗಿ ಕಾರ್ಯದರ್ಶಿಯವರಿಗೆ ಸಲ್ಲಿಸುತ್ತಾರೆ.

**ನಿಯಂತ್ರಣ ಮಂಡಲಿ**

೩೭. ನಿಯಂತ್ರಣ ಮಂಡಲಿಯು ಕೆಳಕಂಡವರನ್ನು ಒಳಗೊಂಡಿರುತ್ತದೆ –

ಅ) ವಿಶ್ವಸ್ಥ ಮಂಡಳಿಯ ಸದಸ್ಯರು,

ಆ) ಸಭೆಯ ನೌಕರರು,

ಇ) ಪೋಷಕರು,

ಈ) ಆಜೀವ ಸದಸ್ಯರು,

ಉ) ಸಹಾನುಭೂತಿ ಸದಸ್ಯರು,

ಊ) ಸಹಸದಸ್ಯರು,

ಋ) ಪ್ರತಿಯೊಂದು ಶಾಖೆಯಿಂದಲೂ ಒಬ್ಬೊಬ್ಬ ಪ್ರತಿನಿಧಿ,

ೠ) ನಿರ್ವಹಣಾ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿಯಂತ್ರಣ ಮಂಡಲಿಯ ಅಧ್ಯಕ್ಷರು, ಮಹಾಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿಗಳು, ಸಂಘಟನಾ ಕಾರ್ಯದರ್ಶಿಗಳು ಮತ್ತು ಖಜಾಂಚಿ.

೩೮. ನಿರ್ವಹಣಾ ಮಂಡಳಿಯು ಸಭೆಯ ವ್ಯವಹಾರವನ್ನು ನಡೆಸುತ್ತಿರುವ ರೀತಿಯನ್ನು, ಮತ್ತು ಅದು ಸಭೆಯ ನಿಯಮಗಳಿಗೆ ಅನುಸಾರವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿಯಂತ್ರಣ ಮಂಡಳಿಯು ಪರಿಶೀಲಿಸುತ್ತದೆ ಮತ್ತು, ಗಂಭೀರವಾದ ಉಲ್ಲಂಘನೆಗಳು ಕಂಡುಬಂದಲ್ಲಿ, ಅದಕ್ಕಾಗಿ ಸರಿಯಾದ ವಿವರಣೆಯನ್ನು ನೀಡುವಂತೆ ನಿರ್ವಹಣಾ ಮಂಡಳಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷರನ್ನು ಕೇಳಬಹುದು.

೩೯. ನಿಯಂತ್ರಣ ಮಂಡಳಿಯ ಅಧ್ಯಕ್ಷರು ತಾವಾಗಿಯೇ ಅಥವಾ ಕನಿಷ್ಠ ಹತ್ತು ಸದಸ್ಯರ ಲಿಖಿತ

ಬೇಡಿಕೆಯ ಆಧಾರದ ಮೇಲೆ ನಿಯಂತ್ರಣ ಮಂಡಳಿಯ ಸಭೆಯನ್ನು ಕರೆಯುವಂತೆ ಕಾರ್ಯದರ್ಶಿಯವರಿಗೆ ಸೂಚಿಸಬಹುದು. ಅಧ್ಯಕ್ಷರಿಂದ ಸೂಚನೆಯು ಬಂದ ಒಂದೂವರೆ ತಿಂಗಳಿನ ಒಳಗೆ ಕಾರ್ಯದರ್ಶಿಯವರು ಸಭೆಯನ್ನು ಅಧ್ಯಕ್ಷರ ಪರವಾಗಿ ವ್ಯವಸ್ಥೆಗೊಳಿಸಬೇಕು. ನಿಯಂತ್ರಣ ಮಂಡಳಿಯ ಸಭೆಯಲ್ಲಿ ಹಾಜರಿರುವ ಎರಡನೇ ಮೂರರಷ್ಟು ಸದಸ್ಯರ ಬಹುಮತದೊಂದಿಗೆ ಪರಿಶೀಲನೆಯಲ್ಲಿರುವ ವಿಷಯದಲ್ಲಿ ಅಂಗೀಕರಿಸಿದ ಗೊತ್ತುವಳಿಗೆ ನಿರ್ವಹಣಾ ಮಂಡಳಿಯು ಬದ್ಧವಾಗಿರುತ್ತದೆ.

೪೦. ನಿರ್ವಹಣಾ ಮಂಡಳಿಯ ಪ್ರತಿ ಸಭೆಗೂ ಒಂದು ತಿಂಗಳ ಪೂರ್ವಸೂಚನೆಯ ಅಗತ್ಯವಿರುತ್ತದೆ.

೪೧. ಹಿತಕಾರಿಣಿ ಸಭೆಯ ಅಧ್ಯಕ್ಷರು ನಿಯಂತ್ರಣಾ ಮಂಡಳಿಯ ಪ್ರತಿ ಸಭೆಯಲ್ಲಿಯೂ ಉಪಸ್ಥಿತರಿರಬೇಕು. ಅವರ ಅನುಪಸ್ಥಿತಿಯಲ್ಲಿ ಹಾಜರಿರುವ ಉಪಾಧ್ಯಕ್ಷರಲ್ಲಿ ಒಬ್ಬರನ್ನು ಸಭೆಯ ಅಧ್ಯಕ್ಷರನ್ನಾಗಿ ಆಯ್ಕೆಮಾಡಬಹುದು.

೪೨. ನಿಯಮಾವಳಿಯಲ್ಲಿ ನಿರ್ದಿಷ್ಟವಾಗಿ ಸೂಚಿಸಿರದಿದ್ದರೆ, ನಿಯಂತ್ರಣ ಮಂಡಳಿಯ ಎಲ್ಲಾ ಸಭೆಗಳಲ್ಲಿಯೂ ನಿರ್ಣಯಗಳನ್ನು ಬಹುಮತದ ಆಧಾರದ ಮೇಲೆ ತೆಗೆದುಕೊಳ್ಳಬೇಕು.

೪೩. ಮಹಾಕಾರ್ಯದರ್ಶಿಯು ಪದನಿಮಿತ್ತ ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯೂ ಆಗಿದ್ದು, ನಿಯಂತ್ರಣ ಮಂಡಳಿಯ ಎಲ್ಲಾ ಸಭೆಗಳ ನಡಾವಳಿಯನ್ನು ದಾಖಲಿಸಬೇಕು ಮತ್ತು ನಿಯಂತ್ರಣ ಮಂಡಳಿಯ ಅಧ್ಯಕ್ಷರು ಸಭೆಯು ಮುಕ್ತಾಯವಾಗುವ ಮೊದಲು ನಡಾವಳಿಗೆ ಸಹಿಯನ್ನು ಹಾಕಬೇಕು.

## ಹಿತಕಾರಿಣಿ ಸಭೆಯ ಸರ್ವಸದಸ್ಯರ ಸಭೆ

೪೪. ಹಿತಕಾರಿಣಿ ಸಭೆಯ ಸರ್ವ ಸದಸ್ಯರ ಸಭೆಯು ಪ್ರತಿವರ್ಷ ಫೆಬ್ರವರಿಯಲ್ಲಿ ನಡೆಯುತ್ತದೆ.

೪೫. ಹಿತಕಾರಿಣಿ ಸಭೆಯ ಅಧಿಕೃತ ವರ್ಷವು ಡಿಸೆಂಬರ್ ೩೧ರಂದು ಕೊನೆಗೊಳ್ಳುತ್ತದೆ ಮತ್ತು ಪ್ರತಿವರ್ಷವೂ ಸರ್ವಸದಸ್ಯರ ವಾರ್ಷಿಕ ಸಭೆಯು ಅಧಿಕೃತ ವರ್ಷವು ಕೊನೆಗೊಂಡ ಎರಡು ತಿಂಗಳಿನ ಒಳಗೆ ನಡೆಯಬೇಕು.

೪೬. ತಮ್ಮ ಸದಸ್ಯತ್ವದ ಶುಲ್ಕವನ್ನು ಕಟ್ಟಿರುವ ಸದಸ್ಯರು ಮಾತ್ರ ಸಭೆಯಲ್ಲಿ ಮತದಾನಮಾಡುವ ಹಕ್ಕನ್ನು ಹೊಂದಿರುತ್ತಾರೆ.

೪೭. ಸರ್ವಸದಸ್ಯರ ಸಭೆಗೆ ಒಂದು ತಿಂಗಳ ಪೂರ್ವಸೂಚನೆಯು ಅಗತ್ಯವಾಗಿರುತ್ತದೆ.

೪೮. ಸಭೆಯ ಅಧ್ಯಕ್ಷರು ಸರ್ವಸದಸ್ಯರ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಅವರ ಅನುಪಸ್ಥಿತಿಯಲ್ಲಿ ಆಯ್ಕೆಯಾದ ಉಪಾಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಬಹುದು.

೪೯. ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ಕೆಳಕಂಡ ವ್ಯವಹಾರಗಳನ್ನು ನಡೆಸಬಹುದು –

ಅ) ಹಿಂದಿನ ವರ್ಷಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯನ್ನು ಪರಶೀಲಿಸಿ ಅನುಮೋದಿಸುವುದು,

ಆ) ಮುಂದಿನ ವರ್ಷಕ್ಕಾಗಿ ನಿರ್ವಹಣಾ ಮಂಡಳಿಗೆ ಹನ್ನೆರಡು ಸದಸ್ಯರನ್ನು ಚುನಾಯಿಸುವುದು,

ಇ) ಮುಂದಿನ ವರ್ಷಕ್ಕಾಗಿ ಲೆಕ್ಕಪತ್ರ ಪರಿಶೋಧಕರನ್ನು ನೇಮಿಸುವುದು,

ಈ) ಮುಂದಿನ ವರ್ಷಕ್ಕಾಗಿ ಅಧ್ಯಕ್ಷರು, ಮತ್ತು ಆರಕ್ಕೇ ಮೀರದಂತೆ ಉಪಾಧ್ಯಕ್ಷರನ್ನು ಚುನಾಯಿಸುವುದು.

೫೦. ಸಂಘಟನೆಯ ಈ ನಿಯಮಗಳನ್ನು ಈ ಉದ್ದೇಶಕ್ಕಾಗಿಯೇ ಕರೆದ ಸಭೆಯಲ್ಲಿ ಹಾಜರಿರುವ ಸದಸ್ಯರಲ್ಲಿ ಐದನೇ ನಾಲ್ಕರಷ್ಟು ಬಹುಮತದ ಆಧಾರದ ಮೇಲೆ ಬದಲಾಯಿಸಬಹುದು, ತಿದ್ದುಪಡಿಮಾಡಬಹುದು, ಹಿಂತೆಗೆದುಕೊಳ್ಳಬಹುದು, ಹೆಚ್ಚುವರಿಯಾಗಿ ನಿಯಮಗಳನ್ನು ಸೇರಿಸಬಹುದು. ಆದರೆ, ಈ ಬದಲಾವಣೆಗಳು, ತಿದ್ದುಪಡಿಗಳು, ಇತ್ಯಾದಿಗಳು ವಿಶ್ವಸ್ಥ ಮಂಡಳಿಯ ಸಭೆಯಲ್ಲಿ ನಾಲ್ಕನೇ ಮೂರರಷ್ಟು ಬಹುಮತದಿಂದ ಅನುಮೋದನೆಯನ್ನು ಪಡೆಯದಿದ್ದರೆ ಜಾರಿಗೆ ಬರುವಂತಿಲ್ಲ.

* * * * *

---

(ಬಾಂಬೆಯ ಬಹಿಷ್ಕೃತ ಹಿತಕಾರಿಣಿ ಸಭೆಯ ಕಾರ್ಯಚಟುವಟಿಕೆಗಳಿಗೆ ಹನ್ನೊಂದನೆಯ ಪರಿಶಿಷ್ಟವನ್ನು ನೋಡಿ)

## ೨
# ದಲಿತವರ್ಗಗಳ ಸಂಸ್ಥೆ

ಡಾ. ಅಂಬೇಡ್ಕರ್ ಅವರು ೧೯೩೦ರಲ್ಲಿ ಲಂಡನ್ನಿನಲ್ಲಿ ಜರುಗಿದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಅವರು ಲಂಡನ್ನಿನಲ್ಲಿ ಇದ್ದಾಗ ದಲಿತ ವರ್ಗಗಳ ಸಂಸ್ಥೆಯ ಪರವಾಗಿ, ಅಸ್ಪೃಶ್ಯರ ಅಭಿವೃದ್ಧಿಗಾಗಿ ಭಾರತೀಯ ರಾಜಸಂಸ್ಥಾನಗಳ ಪ್ರಮುಖರಿಂದ ಆರ್ಥಿಕ ಸಹಾಯವನ್ನು ಸಂಗ್ರಹಿಸುವ ಸಲುವಾಗಿ ಒಂದು ಮನವಿಯನ್ನು ಸಿದ್ಧಪಡಿಸಿದ್ದರು. ತಮ್ಮ ಪ್ರಯತ್ನದ ಫಲವಾಗಿ ಅವರು ಆರ್ಥಿಕ ಸಹಾಯವನ್ನು ಪಡೆಯುವಲ್ಲಿ ಸಫಲರಾದರು. ಅವರು ತಮ್ಮ ಈ ಕಾರ್ಯವನ್ನು ಬಹಳ ಬಿರುಸಿನಿಂದ ನಡೆಸಿದರು. ಹಾಗೆಯೆ ೧೯೩೧ ರ ನವೆಂಬರ್‌ನಲ್ಲಿ ನಡೆದ ಎರಡನೆಯ ದುಂಡುಮೇಜಿನ ಸಮ್ಮೇಳನದ ಸಮಯದಲ್ಲಿ ಕೂಡ ಅಂತಹುದೇ ಒಂದು ಮನವಿಯನ್ನು ಸಿದ್ಧಪಡಿಸಿ ವಿತರಿಸಿದ್ದರು.

ಈ ಮನವಿಯನ್ನು ಕೆಳಗೆ ನೀಡಲಾಗಿದೆ.

### ದಲಿತ ವರ್ಗಗಳ ಸಂಸ್ಥೆಯ ಪರವಾಗಿ ಮನವಿ

#### ಸಂಘಟನೆ

ದಲಿತ ವರ್ಗಗಳ ಸಂಸ್ಥೆಯು ದಲಿತವರ್ಗಗಳವರ ಸಂಸ್ಥೆಯಾಗಿದ್ದು, ದಲಿತ ವರ್ಗಗಳವರ ಹಿತಾಸಕ್ತಿಯನ್ನು ಕಾಪಾಡಲು ದಲಿತ ವರ್ಗಗಳ ಸದಸ್ಯರಿಂದ ನಿರ್ವಹಿಸಲ್ಪಡುತ್ತಿದೆ. ಈ ಸಂಸ್ಥೆಯ ಮುಖ್ಯ ಧ್ಯೇಯ – ದಲಿತ ವರ್ಗಗಳವರನ್ನು ಅವರ ಸದ್ಯದ ತುಳಿಯಲ್ಪಟ್ಟಿರುವ ಸ್ಥಿತಿಯಿಂದ ಮೇಲೆತ್ತಿ, ಅವರಿಗೆ ಭಾರತೀಯ ಸಮಾಜದಲ್ಲಿ ಇತರರಿಗೆ ಸಮಾನವಾದ ಸಾಮಾಜಿಕ ಮತ್ತು ರಾಜಕೀಯ ಸ್ಥಾನವನ್ನು ಗಳಿಸಿಕೊಡುವುದು ಹಾಗೂ ಅವರ ಆರ್ಥಿಕ ಮುನ್ನಡೆಗೆ ಸಹಾಯಮಾಡುವುದು.

ಈ ಸಂಸ್ಥೆಯು ೧೯೨೪ರ ಜೂನ್‌ನಲ್ಲಿ ಸ್ಥಾಪಿತವಾಯಿತು ಮತ್ತು ಅಂದಿನಿಂದ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ತಾನು ಅಖಿಲ ಭಾರತ ಮಟ್ಟದ ಸಂಸ್ಥೆಯಾಗಿ ಭಾರತದೆಲ್ಲೆಡೆ ತನ್ನ ಶಾಖೆಗಳನ್ನು ಹೊಂದುವ ಅಪೇಕ್ಷೆಯನ್ನು ಹೊಂದಿದೆ. ಆದರೆ ಆರ್ಥಿಕ ಮುಗ್ಗಟ್ಟಿನಿಂದಾಗಿ, ಅದು ತನ್ನ ಕಾರ್ಯಚಟುವಟಿಕೆಗಳನ್ನು ಬಾಂಬೆ ಪ್ರಾಂತಕ್ಕೆ ಸೀಮಿತಗೊಳಿಸಿಕೊಂಡಿದೆ. ಸಂಸ್ಥೆಯು, ದಲಿತವರ್ಗಗಳ ಮುನ್ನಡೆಗಾಗಿ ಪಣತೊಟ್ಟು ದುಡಿಯುತ್ತಿರುವ ಸಾಮಾಜಿಕ ಕಾರ್ಯಕರ್ತರ ಮೂಲಕ ತನ್ನ ಕಾರ್ಯಗಳನ್ನು ನಡೆಸಿಕೊಂಡುಹೋಗುತ್ತಿದೆ. ಅವರುಗಳನ್ನು ದಲಿತವರ್ಗಗಳಿಂದ ಆಯ್ದುಕೊಳ್ಳಲಾಗಿದೆ ಮತ್ತು ಅವರು ಬಾಂಬೆ ಪ್ರಾಂತದ ವಿವಿಧ ಜಿಲ್ಲೆಗಳಿಂದ ಬಂದವರಾಗಿದ್ದಾರೆ. ಈ ಕಾರ್ಯಕರ್ತರ ಚಟುವಟಿಕೆಗಳು ಬಾಂಬೆಯಲ್ಲಿ ತನ್ನ ಮುಖ್ಯ ಕಚೇರಿಯನ್ನು ಹೊಂದಿರುವ ಈ ಸಂಸ್ಥೆಯ ನಿರ್ವಹಣಾ ಮಂಡಲಿಯಲ್ಲಿರುವ ದಲಿತ ವರ್ಗಕ್ಕೆ ಸೇರಿದ ಪ್ರಮುಖ ಸದಸ್ಯರ ಪರಿಶೀಲನೆಗೆ, ಮಾರ್ಗದರ್ಶನಕ್ಕೆ ಒಳಪಟ್ಟಿರುತ್ತವೆ

## ಸಂಸ್ಥೆಯ ಚಟುವಟಿಕೆಗಳು

ತನ್ನ ಉದಯದಿಂದ ಇಲ್ಲಿಯವರೆಗಿನ ಐದು ವರ್ಷಗಳಲ್ಲಿ ಸಂಸ್ಥೆಯು ತನ್ನ ಕಾರ್ಯಚಟುವಟಿಕೆಗಳನ್ನು ಯಾವ ಪ್ರಮಾಣದಲ್ಲಿ ಹೆಚ್ಚಿಸಿಕೊಂಡಿದೆಯೆಂದರೆ, ಆ ಎಲ್ಲಾ ಚಟುವಟಿಕೆಗಳ ಸಾರಾಂಶವನ್ನು ಕೂಡ ಈ ಕರಪತ್ರದಲ್ಲಿ ನೀಡುವುದು ಸಾಧ್ಯವಾಗುವುದಿಲ್ಲ. ಇಲ್ಲಿ ನಾವು ಮಾಡಬಹುದಾದುದೆಂದರೆ ಸಂಸ್ಥೆಯು ತನ್ನ ಮುಖ್ಯ ಉದ್ದೇಶವಾದ ದಲಿತರ ಉದ್ಧಾರದ ದಿಕ್ಕಿನಲ್ಲಿ ಕೈಗೊಂಡಿರುವ ಚಟುವಟಿಕೆಗಳ ಸ್ಥೂಲ ಚಿತ್ರಣವನ್ನು ನೀಡುವುದು. ಈ ಚಟುವಟಿಕೆಗಳನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು.

೧. **ಪ್ರಚಾರ** :– ದಲಿತ ವರ್ಗಗಳವರಿಗೆ ಅವರು ಎದುರಿಸುತ್ತಿರುವ ಸಮಸ್ಯೆಗಳ ಮತ್ತು ಅವರನ್ನು ದಿನನಿತ್ಯದಲ್ಲಿ ಸಾಮಾನ್ಯವಾಗಿ ಬಾಧಿಸುವ ವಿಷಯಗಳ ಬಗ್ಗೆ ಅರಿವನ್ನು ಮೂಡಿಸುವುದಕ್ಕಾಗಿ ಜನತಾ ಎಂಬ ಹೆಸರಿನ ಒಂದು ಪತ್ರಿಕೆಯನ್ನು ಸಂಸ್ಥೆಯು ಪ್ರಕಟಿಸುತ್ತಿದೆ. ಅವರು ತಮ್ಮ ಪೌರ ಹಕ್ಕುಗಳನ್ನು ಅರಿತುಕೊಂಡು, ತಮ್ಮ ಸಂಕಷ್ಟಗಳನ್ನು ಜನರ ಮುಂದೆ ಇಡುವುದಕ್ಕೆ ಮತ್ತು ಇವುಗಳ ಶೀಘ್ರ ಪರಿಹಾರಕ್ಕಾಗಿ ಜನಾಭಿಪ್ರಾಯವನ್ನು ಸಂಘಟಿಸುವುದಕ್ಕಾಗಿ ಅವರಿಗೆ ಈ ಪತ್ರಿಕೆಯು ಶಿಕ್ಷಣವನ್ನು ನೀಡುತ್ತಿದೆ. ಕಳೆದ ತಿಂಗಳಿನವರೆಗೆ ಅದು ಪಕ್ಷಪತ್ರಿಕೆಯಾಗಿತ್ತು. ಈಗ ಅದನ್ನು ವಾರಪತ್ರಿಕೆಯನ್ನಾಗಿ ಮಾಡಲಾಗಿದೆ. ಸಂಸ್ಥೆಯು, ದಲಿತವರ್ಗಗಳವರ ಶಿಕ್ಷಣಕ್ಕಾಗಿ ವಿವಿಧ ವಿಷಯಗಳ ಮೇಲಿನ ಸಾಹಿತ್ಯವನ್ನು ಕೂಡ ಪ್ರಕಟಿಸುತ್ತದೆ.

೨. **ಪೌರ ಹಕ್ಕುಗಳ ಚಳವಳಿ** :– ಕಾನೂನು ದಲಿತವರ್ಗಗಳವರಿಗೆ ಪೌರ ಹಕ್ಕುಗಳನ್ನು ಹಲವಾರು ಪ್ರಕರಣಗಳಲ್ಲಿ ನೀಡಿದೆಯಾದರೂ, ಸಂಪ್ರದಾಯಗಳು ಅದರ ಹಾದಿಯಲ್ಲಿ ಅಡ್ಡಗಾಲನ್ನು ಹಾಕುವ ಅಸಂಖ್ಯಾತ ಸಂದರ್ಭಗಳು ಇವೆ. ಸಂಸ್ಥೆಯ ಮುಖ್ಯ ಉದ್ದೇಶಗಳಲ್ಲಿ ದಲಿತ ವರ್ಗಗಳವರು ತಮ್ಮ ಪೌರಹಕ್ಕನ್ನು ಅನುಭವಿಸುವಂತೆ ಮಾಡುವುದು. ಕಾನೂನು ಎಲ್ಲಾ ದಲಿತವರ್ಗಗಳವರಿಗೆ ಯಾವ ವಿಧವಾದ ಸೀಮಿತತೆಯನ್ನೂ ಕಲ್ಪಿಸದೆ ನೀಡಿರುವ ಹಕ್ಕುಗಳನ್ನು ಅವರಿಗೆ ಸಿಗುವಂತೆ ಮಾಡುವಲ್ಲಿ ಸಾಧ್ಯವಾದ ಎಲ್ಲಾ ಕ್ರಮಗಳನ್ನೂ ಸಂಸ್ಥೆಯು ಮಾಡುತ್ತಿದೆ. ಆದರೆ, ಇಂತಹ ಪ್ರಕರಣಗಳಲ್ಲಿ ಬಹುಸಂಖ್ಯಾತ ಸವರ್ಣೀಯ ಹಿಂದೂಗಳು, ದಲಿತ ವರ್ಗಗಳವರಿಗೆ ಹಿಂದೂ ಸಮಾಜವು ನೀಡಿರುವ ಸ್ಥಾನಮಾನಗಳ ಉಲ್ಲಂಘನೆಯಾಗುತ್ತದೆ ಮತ್ತು ಸಮಾಜದ ಗೌರವಕ್ಕೆ ಕುಂದು ಎಂಬ ಕಾರಣವನ್ನು ನೀಡಿ ಈ ಹಕ್ಕುಗಳು ದಲಿತವರ್ಗಗಳವರಿಗೆ ಸಿಗದಂತೆ ಮಾಡುತ್ತಿದ್ದಾರೆ. ದಲಿತವರ್ಗಗಳು ತಮಗೆ ಈ ಹಕ್ಕುಗಳನ್ನು ಅನುಭವಿಸುವಲ್ಲಿ ಆಗುತ್ತಿರುವ ತೊಂದರೆಗಳನ್ನು ಕುರಿತು ಸಂಸ್ಥೆಗೆ ನೀಡಿರುವ ದೂರುಗಳು ಅಗಣಿತವಾಗಿವೆ. ದಲಿತ ವರ್ಗಗಳವರಿಗೆ ಶಾಲೆಗಳಲ್ಲಿ, ಬಸ್ಸುಗಳಲ್ಲಿ, ದೋಣಿಗಳಲ್ಲಿ, ರಸ್ತೆಬದಿಯ ಖಾನಾವಳಿಗಳಲ್ಲಿ ಪ್ರವೇಶವನ್ನು ನಿರಾಕರಿಸುವುದು, ಮುಂತಾದ ಹಲವಾರು ಹಕ್ಕು ಉಲ್ಲಂಘನಾ ಪ್ರಕರಣಗಳಲ್ಲಿ ನಮ್ಮ ಸಂಸ್ಥೆಯು ಮಾಡಿರುವ ಕೆಲಸವು ಅಗಾಧವಾಗಿದೆ. ಹಕ್ಕುಗಳ ಉಲ್ಲಂಘನೆಯ ವೈಯಕ್ತಿಕ ಪ್ರಕರಣಗಳಲ್ಲಲ್ಲದೆ, ಸಂಸ್ಥೆಯು ದಲಿತ ವರ್ಗಗಳವರಿಗೆ ಕಾನೂನು ನೀಡಿರುವ ನಿರ್ದಿಷ್ಟ ಹಕ್ಕುಗಳ ಪ್ರಕರಣಗಳನ್ನು ಕೂಡ ಪರೀಕ್ಷಾರ್ಥವಾಗಿ ಕೈಗೆತ್ತಿಕೊಳ್ಳುತ್ತದೆ. ಮೂರು ವರ್ಷಗಳ ಹಿಂದೆ ದಲಿತ ವರ್ಗಗಳವರಿಗೆ ಸಾರ್ವಜನಿಕ ನಾಲೆಗಳಿಂದ ನೀರನ್ನು ತೆಗೆದುಕೊಳ್ಳುವ ಒಂದು ಪ್ರಕರಣವನ್ನು ಸಂಸ್ಥೆಯು ಅತ್ಯಂತ ದುಬಾರಿ ವೆಚ್ಚದಲ್ಲಿ ಕೈಗೆತ್ತಿಕೊಂಡು ನ್ಯಾಯಾಲಯದಲ್ಲಿ ಹೋರಾಟವನ್ನು ಮಾಡಿತು. ಇದರಲ್ಲಿ ಪ್ರಥಮ ಪ್ರಕರಣದ ನ್ಯಾಯಾಲಯದಲ್ಲಿ ದಲಿತ ವರ್ಗಗಳವರಿಗೇ ಜಯವಾಯಿತು. ಮೇಲ್ಜಾತಿಯ ಹಿಂದೂಗಳು ಈ ತೀರ್ಪಿನ ವಿರುದ್ಧ ಮೇಲಿನ ನ್ಯಾಯಾಯಲದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು ಈ ಪ್ರಕರಣವು ಇನ್ನೂ ನ್ಯಾಯಾಲಯದಲ್ಲಿ ನಡೆಯುತ್ತಿದೆ. ದೇವಸ್ಥಾನಗಳಲ್ಲಿ ಅರ್ಚನೆಯನ್ನು ಮಾಡುವ ಅಧಿಕಾರವನ್ನು ದಲಿತರಿಗೆ ಗಳಿಸಿಕೊಡುವುದಕ್ಕಾಗಿ ಸಂಸ್ಥೆಯು ಹೋರಾಟವನ್ನು ಮಾಡುತ್ತಿದೆ. ಈ ವಿಷಯದಲ್ಲಿ

ಒಂದು ಅಂತಿಮ ತೀರ್ಮಾನವನ್ನು ಪಡೆಯುವುದಕ್ಕಾಗಿ ನ್ಯಾಯಾಲಯದ ಮೆಟ್ಟಿಲನ್ನೇರುವ ವಿಷಯವನ್ನು ಸಂಸ್ಥೆಯು ಚಿಂತಿಸುತ್ತಿದೆ.

೩. **ಅನ್ಯಾಯಗಳಿಗೆ ಪರಿಹಾರ** :– ದಲಿತರಿಗೆ ಆಗುತ್ತಿರುವ ಅನ್ಯಾಯಗಳಲ್ಲಿ ಬಹಳಷ್ಟು ಸರಕಾರದ ಇಲಾಖೆಗಳು ತೆಗೆದುಕೊಳ್ಳುವ ಕ್ರಮದಿಂದ ಉದ್ಭವಿಸುತ್ತವೆ. ಸಾರ್ವಜನಿಕ ಸೇವೆಯ ಕ್ಷೇತ್ರದಲ್ಲಿ ಮೇಲ್ಜಾತಿಯ ಹಿಂದೂಗಳೇ ಬಹುಸಂಖ್ಯೆಯಲ್ಲಿದ್ದಾರೆಂಬುದನ್ನು ನಾವು ಗಮನಿಸಬೇಕು. ದಲಿತ ವರ್ಗಗಳವರ ಬಗ್ಗೆ ಅವರಿಗಿರುವ ದ್ವೇಷವು ಕುಖ್ಯಾತವಾದ್ದದ್ದು. ಆಡಳಿತ ಹಾಗೂ ನ್ಯಾಯಾಂಗ ಇಲಾಖೆಗಳಲ್ಲಿರುವ ಅಧಿಕಾರಿಗಳು ಮೇಲ್ಜಾತಿಯ ಹಿಂದೂಗಳ ಮತ್ತು ದಲಿತವರ್ಗಗಳವರ ನಡುವೆ ನಡೆಯುವ ನ್ಯಾಯಪ್ರಕರಣಗಳಲ್ಲಿ ಮೇಲ್ಜಾತಿಯ ಹಿಂದೂಗಳ ಪರವಹಿಸಲು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವ ಸಂದರ್ಭಗಳ ಸಂಖ್ಯೆ ಕಡಿಮೆಯೇನೂ ಇಲ್ಲ. ಸಂಸ್ಥೆಯು ಈ ವಿಷಯಗಳಲ್ಲಿ ವಿಶೇಷವಾದ ಗಮನವನ್ನು ನೀಡುತ್ತಿದೆ ಮತ್ತು ದಲಿತ ವರ್ಗಗಳವರ ವಿರುದ್ಧ ಸರಕಾರೀ ಅಧಿಕಾರಿಗಳು ಎಸಗುವ ಅನ್ಯಾಯದ ಪ್ರಕರಣಗಳನ್ನು ಸರಕಾರದ ಗಮನಕ್ಕೆ ತರುವುದಕ್ಕಾಗಿ ಒಂದು ವಿಶೇಷ ವಿಭಾಗವನ್ನೇ ಸಂಸ್ಥೆಯು ಸ್ಥಾಪಿಸಿದೆ. ಹಲವಾರು ಪ್ರಕರಣಗಳಲ್ಲಿ ಮೇಲಿನ ನ್ಯಾಯ ಪಂಚಾಯತಿಗೆ ಮೇಲ್ಮನವಿಯನ್ನು ಸಲ್ಲಿಸುವ ಜವಾಬ್ದಾರಿಯನ್ನು ಸಂಸ್ಥೆಯು ತಾನೇ ಹೊತ್ತುಕೊಂಡಿದೆ. ಅಲ್ಲದೆ, ಕೆಳನ್ಯಾಯಾಲಯಗಳಲ್ಲಿ ತೀರ್ಪು ನೀಡುವಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸಂಬಂಧಪಟ್ಟವರಿಗೆ ನ್ಯಾಯ ಪ್ರಕ್ರಿಯೆಯನ್ನು ಮುಂದುವರಿಸಲು ವೈಯಕ್ತಿಕವಾಗಿ ಸಾಧ್ಯವಾಗದೆ ಬೇರೆ ಯಾರಾದರೂ ಖಾಸಗೀ ವ್ಯಕ್ತಿಗಳು ಈ ಕಾರ್ಯದಲ್ಲಿ ಮುಂದಾದರೆ ಅಂತಹವರಿಗೆ ಸಂಸ್ಥೆಯು ಸಹಾಯವನ್ನು ಮಾಡುತ್ತದೆ.

೪. **ಕಲ್ಯಾಣ ಕಾರ್ಯಕ್ರಮಗಳು** :– ದಲಿತ ವರ್ಗಗಳವರನ್ನು ಸುತ್ತುವರಿದು ಕಾಡುವ ಸಮಸ್ಯೆಗಳಲ್ಲಿ ಅವರ ಬಡತನವೂ ಒಂದು. ಅವರ ಬಡತನದ ಹತ್ತು ಕಾರಣಗಳಲ್ಲಿ ಒಂಬತ್ತು ಅವರ ಅಸ್ಪೃಶ್ಯತೆಯಿಂದಾಗಿ ಒದಗಿರುವಂತಹವುಗಳು. ಅವರು ಅಸ್ಪೃಶ್ಯರಾಗಿರುವುದರಿಂದ ಅವರಿಗೆ ಉದ್ಯೋಗದ ಎಲ್ಲಾ ಬಾಗಿಲುಗಳೂ ಮುಚ್ಚಿರುತ್ತವೆ. ತನ್ನ ಅಸ್ತಿತ್ವದ ಮೊದಲ ದಿನಗಳಿಂದಲೂ ಸಂಸ್ಥೆಯು ದಲಿತ ವರ್ಗಗಳವರ ಆರ್ಥಿಕ ಅಭಿವೃದ್ಧಿಗಾಗಿ ಸತತವಾಗಿ ಶ್ರಮಪಡುತ್ತಿದೆ. ರಾಜ್ಯದ ಇಲಾಖೆಗಳಲ್ಲಿ ದಲಿತವರ್ಗಗಳವರನ್ನು ಸೇರಿಸಲು ಸಂಸ್ಥೆಯು ಬಹಳ ಕಷ್ಟಪಡಬೇಕಾಯಿತು, ಅದರೆ ಇಲ್ಲಿಯವರೆಗೆ ಇಲ್ಲಿಯೂ ದಲಿತರಿಗೆ ಅವಕಾಶಗಳ ಬಾಗಿಲು ಮುಚ್ಚಿಹೋಗಿತ್ತು. ಈ ವಿಷಯದಲ್ಲಿ ಸಂಸ್ಥೆಯ ಶ್ರಮಕ್ಕೆ ತಕ್ಕ ಪ್ರತಿಫಲವು ದೊರೆತಿದೆ. ಸರಕಾರದ ವಿವಿಧ ಇಲಾಖೆಗಳಲ್ಲಿ ದಲಿತವರ್ಗಗಳವರನ್ನು ಸಾಕಷ್ಟು ಸಂಖ್ಯೆಯಲ್ಲಿ ನೇಮಿಸಿಕೊಳ್ಳುವಂತೆ ಮಾಡಿದುದಷ್ಟೇ ಅಲ್ಲದೆ, ಅವರು ಅಸ್ಪೃಶ್ಯರಾಗಿರುವ ಕಾರಣಗಳಿಂದ ಇಲ್ಲಿಯವರೆಗೆ ಅವರಿಗೆ ಅವಕಾಶಗಳನ್ನು ನಿರಾಕರಿಸಿದ್ದ ಇಲಾಖೆಗಳಲ್ಲಿಯೂ ಅವರ ನೇಮಕಾತಿಯನ್ನು ಮಾಡುವುದು ಸಾಧ್ಯವಾಗಿದೆ. ಇದಕ್ಕೆ ರಾಜ್ಯ ಪೋಲಿಸ್ ಇಲಾಖೆಯ ನೇಮಕಾತಿಗಳನ್ನು ಉದಾಹರಣೆಯನ್ನಾಗಿ ನೀಡಬಹುದು. ದಲಿತ ವರ್ಗಗಳವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಇನ್ನೊಂದು ಮಾರ್ಗವಾಗಿ, ಅವರಿಗೆ ಸ್ವಂತವಾಗಿ ದುಡಿಯಲು ಜಮೀನನ್ನು ಒದಗಿಸಿಕೊಡುವಲ್ಲಿ ಕೂಡ ಸಂಸ್ಥೆಯು ತನ್ನ ಪ್ರಯತ್ನಗಳನ್ನು ಮಾಡುತ್ತಿದೆ. ಬಾಂಬೆ ಪ್ರಾಂತದ ಬೇರೆಬೇರೆಯ ಭಾಗಗಳಲ್ಲಿ ಪಾಳು ಜಮೀನುಗಳು ಇವೆ. ಇಂತಹ ಜಮೀನುಗಳನ್ನು ಆಸಕ್ತಿಯಿರುವವರಿಗೆ ಗುತ್ತಿಗೆಯ ಆಧಾರದ ಮೇಲೆ ಸರಕಾರವು ನೀಡುತ್ತದೆ. ಈ ಸಂಸ್ಥೆಯು ಅಸ್ತಿತ್ವಕ್ಕೆ ಬರುವ ಮೊದಲು, ಇವುಗಳನ್ನು ಸವರ್ಣೀಯ ಹಿಂದೂಗಳಿಗೆ ನೀಡುತ್ತಿತ್ತು. ಜಮೀನನ್ನು ನೀಡುವ ಅಧಿಕಾರವುಳ್ಳ ಕಂದಾಯ ಇಲಾಖೆಯ ಅಧಿಕಾರಿಗಳಿಂದ ದಲಿತ ವರ್ಗದ ಅಭ್ಯರ್ಥಿಗಳಲ್ಲಿ ಯಾರೊಬ್ಬರಿಗೂ ಇದು ದೊರೆತಿರಲಿಲ್ಲ. ತಾನು

ಅಸ್ತಿತ್ವಕ್ಕೆ ಬಂದಂದಿನಿಂದಲೂ, ನಮ್ಮ ಸಂಸ್ಥೆಯು ಕೃಷಿ ಉದ್ದೇಶಗಳಿಗಾಗಿ ದಲಿತವರ್ಗಗಳವರೂ ಇದಕ್ಕೆ ಹಕ್ಕುದಾರರಾಗಿದ್ದಾರೆಂದು ಹೋರಾಟವನ್ನು ನಡೆಸುತ್ತಿದೆ ಮತ್ತು ಈ ನಿಟ್ಟಿನಲ್ಲಿ ಸರಕಾರದ ನೀತಿಯನ್ನು ಬದಲಾಯಿಸುವಂತೆ ಮಾಡಿ ದಲಿತವರ್ಗಗಳವರು ಈ ಜಮೀನನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ತಮ್ಮ ಜೀವನ ನಿರ್ವಹಣೆಗಾಗಿ ಕೃಷಿಕಾರ್ಮಿಕರಾಗಿ ದುಡಿಯುತ್ತಿದ್ದ ಸಾಕಷ್ಟು ದಲಿತ ವರ್ಗಗಳ ಕುಟುಂಬದವರು, ಈಗ ತಾವೇ ಸ್ವತಂತ್ರ ರೈತರಾಗಿ ಮಾರ್ಪಟ್ಟಿರುವುದು ಸಂಸ್ಥೆಯ ಪ್ರಯತ್ನದ ಫಲವೆಂದು ಹೇಳಲು ಹೆಮ್ಮೆಯಾಗುತ್ತದೆ.

## ಸಂಸ್ಥೆಯ ಅಗತ್ಯಗಳು

ಸಂಸ್ಥೆಯ ಮುಖ್ಯ ಅಗತ್ಯಗಳು ಮೂರು. ಮೊದಲನೆಯದು, ತನ್ನಲ್ಲಿರುವ ಮುದ್ರಣದ ವ್ಯವಸ್ಥೆಯನ್ನು ವಿಸ್ತರಿಸುವುದು. ಭಾರತ್ ಭೂಷಣ್ ಮುದ್ರಣಾಲಯ ಎಂಬ ಹೆಸರಿನ ಮುದ್ರಣಾಲಯವೊಂದನ್ನು ಸಂಸ್ಥೆಯು ನಿರ್ವಹಿಸುತ್ತಿದೆ. ಸ್ವಂತ ಮುದ್ರಣಾಲಯವನ್ನು ಹೊಂದಿರುವುದರ ಹಿಂದೆ ಎರಡು ಉದ್ದೇಶಗಳಿವೆ. ಮೊದಲನೆಯದು ತನ್ನ ಪತ್ರಿಕೆ 'ಜನತಾ'ವನ್ನು ಮುದ್ರಿಸುವುದು ಮತ್ತು ಆಗಿಂದಾಗ್ಗೆ ನೀಡುವ ಪ್ರಚಾರ ಸಾಹಿತ್ಯವನ್ನು ಪ್ರಕಟಿಸುವುದು. ಪ್ರಮುಖವಾದ ಎರಡನೆಯ ಉದ್ದೇಶವೆಂದರೆ, ಈ ಮುದ್ರಣಾಲಯವನ್ನು ಸಂಸ್ಥೆಯ ಇತರ ಕಾರ್ಯಕ್ರಮಗಳಿಗಾಗಿ ಹಣವನ್ನು ಸಂಪಾದಿಸುವುದಕ್ಕಾಗಿ ಬಳಸಿಕೊಳ್ಳುವುದು. ನಮ್ಮ ಮುದ್ರಣಾಲಯದಲ್ಲಿರುವ ಯಂತ್ರಸಾಮಗ್ರಿಗಳು ಅಲ್ಪಪ್ರಮಾಣದವು. ಇವುಗಳನ್ನು ಉಪಯೋಗಿಸಿಕೊಂಡು ಪುಸ್ತಕಗಳನ್ನು ಮುದ್ರಿಸುವ ಕಾರ್ಯವನ್ನು, ಉಳಿದ ಮುದ್ರಣಾಲಯಗಳಿಗೆ ಹೋಲಿಸಿದರೆ, ಕಡಿಮೆ ವೆಚ್ಚದಲ್ಲಿ ಕೈಗೆತ್ತಿಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ, ನಮ್ಮ ಉತ್ಪಾದನಾ ವೆಚ್ಚವು ಇತರ ಮುದ್ರಣಾಲಯಗಳಿಗಿಂತ ಬಹಳ ಹೆಚ್ಚಾಗಿರುತ್ತದೆ. ಸಂಸ್ಥೆಯು ತನ್ನ ಮುದ್ರಣಾಲಯವನ್ನು ವಿಸ್ತರಿಸಬೇಕು ಇಲ್ಲವೇ ಮುದ್ರಣಾಲಯದ ಯೋಚನೆಯನ್ನೇ ಬಿಟ್ಟುಬಿಡಬೇಕು ಎಂಬ ಪರಿಸ್ಥಿತಿ ಇದೆ. ಎರಡನೆಯದು ಸಾಧ್ಯವಿಲ್ಲ, ಏಕೆಂದರೆ, ಭಾರತದಲ್ಲಿ ಈಗಿರುವ ಸನ್ನಿವೇಶದಲ್ಲಿ ಬಹುತೇಕ ಸವರ್ಣೀಯ ಹಿಂದೂಗಳ ಮಾಲಿಕತ್ವದಲ್ಲಿರುವ ಇತರ ಮುದ್ರಣಾಲಯಗಳು ದಲಿತ ವರ್ಗದವರು ನಡೆಸುವ ಪತ್ರಿಕೆಗಳನ್ನು ಮುದ್ರಿಸುವುದಿಲ್ಲ.

ಎರಡನೆಯ ಅಗತ್ಯವೆಂದರೆ, ಮುಂಬೈ ನಗರದಲ್ಲಿ ಸಂಸ್ಥೆಯು ತನ್ನ ಮುಖ್ಯ ಕಚೇರಿಯನ್ನು ಹೊಂದುವುದು. ಸದ್ಯದಲ್ಲಿ, ಸಂಸ್ಥೆಯು ಒಂದೇ ಸೂರಿನಡಿಯಲ್ಲಿ ಇಲ್ಲ. ಸಂಸ್ಥೆಗಾಗಿ ದುಡಿಯುತ್ತಿರುವ ಸದಸ್ಯರ ಮನೆಗಳಲ್ಲಿ ಸಂಸ್ಥೆಯ ವಿವಿಧ ಕಚೇರಿಗಳು ಹಂಚಿಹೋಗಿವೆ. ಸಂಸ್ಥೆಯ ಕಚೇರಿಗಳನ್ನು ಬಾಡಿಗೆಯ ನಿವಾಸಗಳಲ್ಲಿ ನಡೆಸುವಲ್ಲಿ ಹಲವಾರು ತೊಂದರೆಗಳಿವೆ. ಅವುಗಳ ಬಾಡಿಗೆಯ ಕರ್ಚನ್ನು ನಿಭಾಯಿಸುವುದು ಸಂಸ್ಥೆಗೆ ಕಷ್ಟವಾಗುತ್ತಿದೆ. ಇದಲ್ಲದೆ, ಅಸ್ಪೃಶ್ಯರು ಎಂಬ ಕಾರಣದಿಂದ ಬಾಡಿಗೆ ನಿವಾಸಗಳನ್ನು ಪಡೆಯುವುದೂ, ಪಡೆದರೂ ಇತರ ಸಂಪ್ರದಾಯಸ್ಥರು ಮಾಡುವ ಪ್ರತಿಭಟನೆಯಿಂದಾಗಿ ಆಗಿಂದಾಗ್ಗೆ ಅಲ್ಲಿಂದ ಎತ್ತಂಗಡಿ ಮಾಡಿಸಲ್ಪಡುವುದೂ ಸಂಸ್ಥೆಯು ಒಂದು ಗೌರವಯುತವಾದ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಳ್ಳುವುದರಲ್ಲಿ ತ್ರಾಸದಾಯಕವಾದವುಗಳಾಗಿವೆ. ಸಂಸ್ಥೆಯ ಕಚೇರಿಗಳು ನಗರದಲ್ಲಿ ಹರಿದು ಹಂಚಿಹೋಗಿರುವುದರಿಂದ ಅವುಗಳ ನಡುವೆ ಹೊಂದಾಣಿಕೆ ಮತ್ತು ಸಹಕಾರಗಳನ್ನು ತರುವುದು ಕಷ್ಟಕರವಾಗಿದ್ದು, ಅವುಗಳ ಸೇವೆಯಲ್ಲಿ ದಕ್ಷತೆಯು ಕಡಿಮೆಯಾಗಿದೆ.

ಮೂರನೆಯ ಅಗತ್ಯವೆಂದರೆ, ಸಂಸ್ಥೆಯ ಕೆಲಸ ಕಾರ್ಯಗಳಿಗಾಗಿ ಪೂರ್ಣಕಾಲದ ಕಾರ್ಯಕರ್ತರನ್ನು ನೇಮಿಸಿಕೊಳ್ಳುವುದು. ಈಗ, ಸಾಮಾಜಿಕ ಉದ್ಧಾರಕ್ಕಾಗಿ ತಮ್ಮ ಬಿಡುವಿನ ವೇಳೆಯಲ್ಲಿ ಕೆಲಸಮಾಡಬಲ್ಲಂತಹ ಅರೆಕಾಲಿಕ ಕಾರ್ಯಕರ್ತರನ್ನು ನೇಮಿಸಿಕೊಂಡಿದ್ದೇವೆ. ಅವರಿಗೆ ಈ ಕೆಲಸವು ಆತ್ಮಸಂತೋಷಕ್ಕಾಗಿ

ಮಾಡುವಂತಹುದಾಗಿದೆ. ಪೂರ್ಣ ಕಾಲದ ಕೆಲಸಗಾರರನ್ನು ನೇಮಿಸಿಕೊಂಡು ಅವರಿಗೆ ಸಂಬಳ–ಸಾರಿಗೆಗಳನ್ನು ನೀಡುವಷ್ಟು ಆರ್ಥಿಕ ಚೈತನ್ಯವು ಸಂಸ್ಥೆಗೆ ಇಲ್ಲ. ಇದು ಸಂಸ್ಥೆಗೆ ಇರುವ ಬಹುದೊಡ್ಡ ಕೊರತೆ. ನಮ್ಮ ಕಾರ್ಯಕರ್ತರು ತಮ್ಮ ಬಿಡುವಿನ ವೇಳೆಯಲ್ಲಿ ಮಾತ್ರ ಸಂಸ್ಥೆಗಾಗಿ ಕೆಲಸಮಾಡುವಂತಹ ಪರಿಸ್ಥಿತಿಯಿರುವುದರಿಂದ ನಾವು ಯೋಜಿಸಿದಷ್ಟು ಪರಿಹಾರ ಕಾರ್ಯಗಳನ್ನು ಮಾಡುವುದು ಸಾಧ್ಯವಾಗುತ್ತಿಲ್ಲ ಹಾಗೂ ದಲಿತವರ್ಗಗಳಿಗೆ ಅಗತ್ಯವಿರುವ ನೆರವನ್ನು ನೀಡುವಲ್ಲಿನ ನಮ್ಮ ಸಾಮರ್ಥ್ಯದ ಪ್ರಮಾಣವು ಸಾಕಷ್ಟು ಕುಸಿಯುತ್ತಿದೆ. ಇದಕ್ಕಿರುವ ಒಂದೇ ಪರಿಹಾರಮಾರ್ಗವೆಂದರೆ, ನಿಯತವಾದ ಸಂಬಳದ ಮೇಲೆ ಈ ಸಾಮಾಜಿಕ ಕಾರ್ಯಗಳನ್ನು ಮಾಡುವಂತಹ ಒಂದು ಪೂರ್ಣಕಾಲಿಕ ಕಾರ್ಯಕರ್ತರ ಪಡೆಯನ್ನು ನೇಮಿಸಿಕೊಳ್ಳುವುದು.

## ನಮ್ಮ ಅಗತ್ಯವಿರುವುದು ೪೦,೦೦೦ ಡಾಲರ್‌ಗಳು

ನಮ್ಮ ಅಗತ್ಯಗಳಾದ (೧) ಮುದ್ರಣಾಲಯದ ನಿಧಿ, (೨) ಕಟ್ಟಡದ ನಿಧಿ ಮತ್ತು (೩) ನಿರ್ವಹಣಾ ನಿಧಿ – ಇವುಗಳಿಗಾಗಿ ಬೇಕಿರುವುದೆಂದು ಅಂದಾಜು ಮಾಡಲಾದ ಹಣದ ಮೊತ್ತವು ೪೦,೦೦೦ ಡಾಲರ್‌ಗಳು. ಭಾರತದಲ್ಲಿನ ದಲಿತ ವರ್ಗಗಳವರ ಉದ್ಧಾರದಂತಹ ಉದ್ದೇಶಗಳಿಗಿಂತಲೂ ಕಡಿಮೆ ಪ್ರಾಮುಖ್ಯವಿರುವ ಮತ್ತು ಕಡಿಮೆ ಮಾನವೀಯ ಉದ್ದೇಶಗಳಿರುವ ಪ್ರಸಂಗಗಳಿಗೆ ಇದಕ್ಕಿಂತಲೂ ಹೆಚ್ಚಿನ ಮೊತ್ತವನ್ನು ದೊರೆಯುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಉದಾರ ಮನೋಭಾವದ ಸಾರ್ವಜನಿಕರ ಸಹಾಯದೊಂದಿಗೆ ಈ ಮೊತ್ತದ ಹಣವನ್ನು ಸಂಗ್ರಹಿಸುವುದು ಕಷ್ಟಕರವಲ್ಲವೆಂದು ಸಂಸ್ಥೆಯು ಭಾವಿಸುತ್ತದೆ. ಬಹಳಷ್ಟು ಇತರ ಮಾನವೀಯ ಉದ್ದೇಶಗಳಲ್ಲಿ, ಇಲ್ಲಿಯವರೆಗೂ ನಿಂತ ನೀರಾಗಿರುವ ಜೀವನವನ್ನು ನಡೆಸುತ್ತಿರುವ, ಆಶ್ರಯರಹಿತರಾಗಿರುವವರ ಹಾಗೂ ದುಷ್ಟ ಶಕ್ತಿಗಳ ವಿರುದ್ಧ ಹೋರಾಡುತ್ತಿರುವವರ ಬದುಕಿನಲ್ಲಿ ಆಸೆಯ ಹೊಂಗಿರಣಗಳನ್ನು ಮೂಡಿಸುವಂತಹ ಈ ಪ್ರಯತ್ನವೂ ಒಂದಾಗಿದೆ. ಆದರೆ ದಲಿತ ವರ್ಗಗಳವರ ಉದ್ದೇಶದ ಇಂತಹ ಕಾರ್ಯಕ್ರಮಗಳಲ್ಲಿಯೇ ಅವುಗಳನ್ನು ವಿಷಣ್ಣತೆಗೆ ಕೊಂಡೊಯ್ಯುವ ಸಂದರ್ಭಗಳು ಅಂತರ್ಗತವಾಗಿ ಇವೆ. ಮಾನವೀಯತೆಯ ಪ್ರಯತ್ನಗಳನ್ನು ಅದರ ವಿರೋಧಿಗಳು ಅವಮಾನಕರವಾದ ಆಳಕ್ಕೆ ತುಳಿಯುತ್ತಿದ್ದಾರೆ ಮತ್ತು ತುಳಿಯಲ್ಪಟ್ಟವರು ಮೇಲೇರುವ ಪ್ರಯತ್ನವನ್ನು ಮಾಡಿದ ಹಾಗೆಲ್ಲ ಅವರ ಪ್ರಯತ್ನಗಳನ್ನು ಸಂಪ್ರದಾಯಸ್ಥ ಹಿಂದೂಗಳು ಚಿವುಟಿಹಾಕುತ್ತಲೇ ಇದ್ದಾರೆ. ದಲಿತ ವರ್ಗಗಳವರ ಹಿತಾಸಕ್ತಿಗಳನ್ನು ರಕ್ಷಿಸಲು ಮಾಡಿರುವ ಈ ಮನವಿಯನ್ನು ಕೇವಲ ಹಿಂದೂಗಳಿಗಷ್ಟೇ ಅಲ್ಲ ಮತ್ತು ಭಾರತೀಯರಿಗಷ್ಟೇ ಅಲ್ಲ, ದಲಿತ ವರ್ಗಗಳವರ ಹಿತವನ್ನು ರಕ್ಷಿಸುವ ಮೂಲ ಜವಾಬ್ದಾರಿಯನ್ನು ಹೊತ್ತಿರುವ ಬ್ರಿಟಿಷ್ ಸಾಮ್ರಾಜ್ಯದ ಎಲ್ಲರಿಗೂ ಮಾಡಲಾಗಿದೆ. ಯೂರೋಪಿಯನ್ನರು ಮತ್ತು ಅಮೇರಿಕನ್ನರಿಗೂ ಈ ಮನವಿಯನ್ನು ಮಾಡಲಾಗಿದೆ. ಕೆಳಗೆ ಬಿದ್ದಿರುವವರ, ಅಥವಾ ಇನ್ನೂ ಅನ್ವರ್ಥಕವಾಗಿ ಹೇಳಬೇಕೆಂದರೆ, ಕೆಳಗೆ ಬೀಳಿಸಲ್ಪಟ್ಟ ಮಾನವ ಜನಾಂಗದ ಉದ್ಧಾರಕ್ಕಾಗಿ, ಈ ಉದ್ದೇಶದೊಡನೆ ಸ್ನೇಹಯುತ ಭಾವನೆಯನ್ನು ಉಳ್ಳವರೆಲ್ಲರಿಗೂ ಈ ಮನವಿಯನ್ನು ಮಾಡಲಾಗಿದೆ. ಈ ಮನವಿಯು ಅರಣ್ಯರೋಧನವಾಗುವುದಿಲ್ಲವೆಂಬ ಆಸೆ ನಮ್ಮ ಸಂಸ್ಥೆಯದು. ನಾವು ಮನವಿಮಾಡಿರುವ ಹಣದ ಮೊತ್ತ ದೊಡ್ಡದೇ ಹೌದು. ಆದರೆ, ಈ ಹೊರೆಯನ್ನು ಹಂಚಿಕೊಂಡರೆ ಅದು ಬಹಳಷ್ಟು ಜನರ ನೀಡುವ ಸಾಮರ್ಥ್ಯವನ್ನು ಮೀರುವಷ್ಟು ದೊಡ್ಡ ಮೊತ್ತವಲ್ಲ.

ಕಳೆದ ವರ್ಷ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕೆಳಗಿನ ಮೊತ್ತವನ್ನು ಸಂಗ್ರಹಿಸಲು ನಾವು ಶಕ್ತರಾಗಿದ್ದೆವು

| | | |
|---|---|---|
| ೧. | ಮಹಾಪ್ರಭು ಸರ್. ತುಕೋಜಿರಾವ್ ಹೋಳ್ಕರ್, ಇಂದೋರಿನ ಮಾಜಿ ಮಹಾರಾಜರು | ೩೬೦ ಡಾಲರುಗಳು |
| ೨. | ಮಹಾಪ್ರಭು ಭೋಪಾಲದ ನವಾಬರು | ೨೦೦ " |
| ೩. | ಮಹಾಪ್ರಭು ದ ಆಗಾ ಖಾನ್ ಅವರು | ೧೭೫ " |
| ೪. | ಮಹಾಪ್ರಭು ಬರೋಡದ ಮಹಾರಾಜರು | ೧೫೦ " |
| ೫. | ಮಹಾಪ್ರಭು ಬಿಕಾನೇರಿನ ಮಹಾರಾಜರು | ೧೦೦ " |
| ೬. | ಮಹಾಪ್ರಭು ಕಾಶ್ಮೀರದ ಮಹಾರಾಜರು | ೧೦೦ " |
| ೭. | ಮಹಾಪ್ರಭು ಪಾಟಿಯಾಲದ ಮಹಾರಾಜರು | ೧೦೦ " |
| ೮. | ಸರ್ ಕೊವಾಸ್‌ಜಿ ಜೆಹಂಗೀರ್ | ೭೫ " |
| ೯. | ದರ್ಭಾಂಗದ ಮಹಾರಾಜ್‌ಧೀರಜ್ ಅವರು | ೫೦ " |
| ೧೦. | ಸಾಂಗ್ಲಿಯ ಮುಖ್ಯಸ್ಥರು | ೨೫ " |

ಈ ಎಲ್ಲಾ ಧನಸಹಾಯವನ್ನೂ ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಮತ್ತು ಹಿಂದಿನ ವರ್ಷದ ಈ ಉದಾರ ಸಹಾಯವು ಈ ವರ್ಷದ ಸಹಾಯದಲ್ಲಿನ ಉದಾರತೆಯನ್ನು ಇನ್ನೂ ಹೆಚ್ಚಿಸುತ್ತದೆ ಎಂದು ನಾವು ನಂಬಿದ್ದೇವೆ.

**ಬಿ.ಆರ್. ಅಂಬೇಡ್ಕರ್**
ದಲಿತವರ್ಗಗಳ ಸಂಸ್ಥೆಯ

ಅಧ್ಯಕ್ಷರು

ವಿಳಾಸ:
ದಾಮೋದರ್ ಹಾಲ್, ಪರೇಲ್,
ಬಾಂಬೆ ೧೨.

ನವೆಂಬರ್, ೧೯೩೧

* * * * *

(ಬೆಡ್‌ಫೋರ್ಡ್ ಮತ್ತು ಡಬ್ಲ್ಯುಸಿ. ಐ ಮತ್ತು ವಿಯರ್, ಲಂಡನ್ನಿನ ಗೋರ್ಡನ್ ರಸ್ತೆಯಲ್ಲಿರುವ ದೆಲ್ ಮುದ್ರಣಾಲಯದಲ್ಲಿ ಮುದ್ರಿತವಾದ ಕಿರುಹೊತ್ತಗೆಯ ಮರುಮುದ್ರಣ.)

# ೩
# ಸ್ವತಂತ್ರ ಕಾರ್ಮಿಕ ಪಕ್ಷ

ತಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಸ್ವತಂತ್ರ ಕಾರ್ಮಿಕ ಪಕ್ಷ ಎಂಬ ಹೆಸರಿನ ಒಂದು ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಈ ಪಕ್ಷದ ಸ್ಥಾಪನೆಯ ಹಿಂದಿನ ಉದ್ದೇಶ ಭೂರಹಿತರ, ಬಡ ಗೇಣಿದಾರರ, ವ್ಯವಸಾಯಗಾರರ ಮತ್ತು ಕಾರ್ಮಿಕರ ಸಮಸ್ಯೆಗಳು ಮತ್ತು ಕುಂದುಕೊರತೆಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಅವುಗಳನ್ನು ಪರಿಹರಿಸುವುದು. ಈ ಹಿನ್ನೆಲೆಯಲ್ಲಿ ಡಾ. ಅಂಬೇಡ್ಕರ್ ಅವರನ್ನು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಸಂದರ್ಶಿಸಿದಾಗ ಅವರು, ತಮ್ಮ ಪಕ್ಷದ ಧ್ಯೇಯ ಮತ್ತು ಉದ್ದೇಶಗಳನ್ನು ವಿವರಿಸಿದರು.

ಸ್ವತಂತ್ರ ಕಾರ್ಮಿಕ ಪಕ್ಷದ ಮುಖ್ಯವಾದ ಲಕ್ಷಣಗಳು ಹೀಗಿವೆ – ಸಂಪಾದಕರು.

## ಸ್ವತಂತ್ರ ಕಾರ್ಮಿಕ ಪಕ್ಷ

## ಸ್ಥಾಪನೆ ಮತ್ತು ಉದ್ದೇಶಗಳು

**(೧೯೩೬ರ ಆಗಸ್ಟ್ ೧೫ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಿಂದ ಪುನರ್ಮುದ್ರಿತ)**

## ಸ್ವತಂತ್ರ ಕಾರ್ಮಿಕ ಪಕ್ಷದ ಪ್ರಕಟಣೆಗಳು
## ಸಂ. ೧

ಹೊಸ ಸಂವಿಧಾನದ ಅಡಿಯಲ್ಲಿ ಬಾಂಬೆ ಪ್ರಾಂತದಲ್ಲಿ ಶಾಸಕಾಂಗದ ಎರಡೂ ಸದನಗಳಿಗೆ ನಡೆಯಲಿರುವ ಚುನಾವಣೆಗಳಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಬಾಂಬೆಯಲ್ಲಿ ಒಂದು ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಲಾಗಿದೆ. ಸ್ವತಂತ್ರ ಕಾರ್ಮಿಕ ಪಕ್ಷವೆಂಬ ಹೆಸರಿನಲ್ಲಿ ದಲಿತ ವರ್ಗಗಳ ನಾಯಕರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು ಈ ಪಕ್ಷವನ್ನು ಸ್ಥಾಪಿಸಿದ್ದಾರೆ.

ದಲಿತರಿಗಾಗಿಯೇ ಪ್ರತ್ಯೇಕವಾದ ಪಕ್ಷವೊಂದನ್ನು ಸ್ಥಾಪಿಸುವ ಆಲೋಚನೆ ಡಾ. ಅಂಬೇಡ್ಕರ್ ಅವರಿಗೆ ಈ ಮೊದಲು ಇದ್ದ ಹಾಗೆ ಕಾಣಿಸುತ್ತದೆ. ಈ ವರ್ಗಗಳವರ ಅಗತ್ಯಗಳಿಗೆ ಅನುವಾಗುವ ಭಾಷೆಯನ್ನೇ ಈ ಕಾರ್ಯಕ್ರಮಕ್ಕೆ ಬಳಸಲಾಗಿತ್ತು. ಆದರೆ ಉಳಿದ ವರ್ಗಗಳಲ್ಲಿರುವ ಅವರ ಸ್ನೇಹಿತರ ಅಪೇಕ್ಷೆಯಂತೆ ತಮ್ಮ ಪಕ್ಷಕ್ಕೆ ಒಂದು ಸಾಮಾನ್ಯ ಹೆಸರನ್ನು ಇಡಲು ಮತ್ತು ತಮ್ಮ ಕಾರ್ಯಕ್ರಮದ

ಭಾಷೆಯನ್ನು ಸಾಮಾನ್ಯಗೊಳಿಸಲು ಡಾ. ಅಂಬೇಡ್ಕರ್ ಅವರು ಒಪ್ಪಿಕೊಂಡರು. ತಮ್ಮ ಪಕ್ಷದ ಕಾರ್ಯಕ್ರಮಗಳಿಗೆ ಬದ್ಧವಾಗಿ ಶಾಸಕಾಂಗದಲ್ಲಿ ಕಾರ್ಯವನ್ನು ನಿರ್ವಹಿಸುವ ಯಾರಿಗೇ ಆದರೂ ತಮ್ಮ ಪಕ್ಷದ ವತಿಯಿಂದ ಸ್ಪರ್ಧಿಸುವ ಅವಕಾಶವು ತೆರೆದಿಡಲ್ಪಟ್ಟಿದೆ.

## ಕಾರ್ಯಕ್ರಮಗಳ ಸ್ಥೂಲ ರೂಪರೇಷೆ

ದ ಟೈಮ್ಸ್ ಆಫ್ ಇಂಡಿಯಾದ ಪ್ರತಿನಿಧಿಗೆ ನೀಡಿದ ಸಂದರ್ಶನದಲ್ಲಿ ಡಾ. ಅಂಬೇಡ್ಕರ್ ಅವರು, ಈಗ ಪಕ್ಷಗಳನ್ನು ಕೋಮುಗಳ ಆಧಾರದ ಮೇಲೆ ವ್ಯವಸ್ಥೆಮಾಡಲು ಸರಿಯಾದ ಪರಿಸ್ಥಿತಿಯಿಲ್ಲದಿರುವುದರಿಂದ ತಮ್ಮ ಪಕ್ಷದ ಹೆಸರು ಮತ್ತು ಕಾರ್ಯಕ್ರಮಗಳನ್ನು ವಿಶಾಲ ತಳಹದಿಯ ಮೇಲೆ ನಿಲ್ಲಿಸಬೇಕೆಂದು ಹಾಗೂ ದಲಿತರು ಮತ್ತು ಇತರ ವರ್ಗಗಳ ನಡುವೆ ರಾಜಕೀಯ ಸಹಕಾರವನ್ನು ಏರ್ಪಡಿಸಬೇಕೆಂದು ತಮ್ಮ ಮಿತ್ರರ ಸಲಹೆಗಳಿಗೆ ತಾವು ಒಪ್ಪಿದುದಾಗಿ ತಿಳಿಸಿದರು. ಪಕ್ಷದ ಕೇಂದ್ರಬಿಂದುವು ಈಗಲೂ ಹದಿನೈದು ದಲಿತ ಸದಸ್ಯರಿರುವ ಸಮಿತಿಯೇ ಆಗಿರುತ್ತದೆ. ಆದರೆ ಉಳಿದ ವರ್ಗಗಳವರೂ ಸದಸ್ಯರಾಗಿ ತಮ್ಮ ಪಕ್ಷಕ್ಕೆ ಸೇರಬಹುದು ಎಂದು ಅವರು ತಿಳಿಸಿದರು.

ತಮಗೆ ಸ್ಥಾನಗಳನ್ನು ಮೀಸಲಿಡದಿದ್ದ ಕ್ಷೇತ್ರಗಳಲ್ಲಿ ದಲಿತವರ್ಗಗಳ ಮತದಾರರ ಸಂಖ್ಯೆ ಅಧಿಕವಾಗಿದೆ. ಈ ಬಲವನ್ನು ತಮ್ಮ ಪಕ್ಷದ ಪರವಾಗಿ ಸ್ಪರ್ಧಿಸುವ ಯಾವುದೇ ವ್ಯಕ್ತಿಗೆ ಅನುಕೂಲವಾಗುವ ಹಾಗೆ ಉಪಯೋಗಿಸಿಕೊಳ್ಳಬಹುದು ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು.

ದಲಿತ ವರ್ಗಗಳವರ ಮತವು ಸಾಮಾನ್ಯ ಮತದಾರರ ಪಟ್ಟಿಯಲ್ಲಿ ಸೇರಿಸಿರುವ ಸಮುದಾಯಗಳಿಗೆ ದೊರಕುತ್ತದೆಯಾದರೂ, ತಮ್ಮ ಪಕ್ಷದ ಸದಸ್ಯತ್ವವು ಎಲ್ಲಾ ಸಮುದಾಯ, ಪಂಗಡಗಳವರಿಗೆ ಮುಕ್ತವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಇತರ ಸಮುದಾಯದ ಹಲವಾರು ವ್ಯಕ್ತಿಗಳು ತಮ್ಮ ಪಕ್ಷಕ್ಕೆ ಸೇರುವ ಇಚ್ಛೆಯನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ ಮತ್ತು ಈಗಿನ ಸನ್ನಿವೇಶದ ಲಾಭವನ್ನು ಪಡೆಯಲು ಬಯಸುವ ಯಾರು ಬೇಕಾದರೂ ತಮ್ಮ ಪಕ್ಷದ ಕಾರ್ಯದರ್ಶಿಯವರೊಡನೆ ಪತ್ರವ್ಯವಹಾರವನ್ನು ಮಾಡಬಹುದು ಎಂದು ಅವರು ಹೇಳಿದರು.

ಸ್ವತಂತ್ರ ಕಾರ್ಮಿಕ ಪಕ್ಷದಲ್ಲಿ ಯಾವ ರೀತಿಯ ಒಗ್ಗಟ್ಟಾಗಿರುವ ಪ್ರವೃತ್ತಿಯು ಇರಬಲ್ಲುದು ಎಂಬ ಪ್ರಶ್ನೆಯನ್ನು ಕೇಳಿದಾಗ, ಡಾ. ಅಂಬೇಡ್ಕರ್ ಅವರು ತಮ್ಮ ಪಕ್ಷವು ಸದಸ್ಯರ ಕಲಬೆರಕೆಯ ಪಕ್ಷವಾಗಿರುವುದಿಲ್ಲ ಮತ್ತು ಅದರಲ್ಲಿನ ಸದಸ್ಯರು ತಮ್ಮ ಬಲದ ಮೇಲೆ ಚುನಾಯಿತರಾಗಿ ತಮ್ಮ ತಮ್ಮಲ್ಲಿಯೇ ಮಾತನಾಡಿಕೊಂಡು ಮತ ಚಲಾಯಿಸುವಂತಿಲ್ಲ. ತಮ್ಮ ಪಕ್ಷದ ಬೇರುಗಳು ಮತದಾರರಲ್ಲಿರುತ್ತವೆ ಮತ್ತು ಪಕ್ಷದ ಸದಸ್ಯರು ತಮ್ಮ ಕಾರ್ಯವನ್ನು ಮತದಾರರಿಗಾಗಿ ಮತ್ತು ಪಕ್ಷವು ನಿರ್ದಿಷ್ಟಪಡಿಸಿದ ಸಾಮಾನ್ಯ ಕಾರ್ಯಕ್ರಮಗಳಿಗಾಗಿ ಮುಡಿಪಿಡಬೇಕು, ಅಲ್ಲದೆ ಎಲ್ಲಾ ಸದಸ್ಯರೂ ಪಕ್ಷದ ಶಿಸ್ತಿಗೆ ತಲೆಬಾಗಲೇಬೇಕು ಎಂದು ಅವರು ಹೇಳಿದರು.

## ಎಲ್ಲರಿಗೂ ಮುಕ್ತ

ತಮ್ಮ ಪಕ್ಷಕ್ಕೆ ಈ ಹೆಸರನ್ನೇ ಇಡಲು ಇದ್ದ ಕಾರಣಗಳು ಏನು ಎಂದು ಡಾ. ಅಂಬೇಡ್ಕರ್ ಅವರನ್ನು ಪ್ರಶ್ನಿಸಿದುದಕ್ಕೆ ಉತ್ತರವಾಗಿ ಅವರು, ತಮ್ಮ ಪಕ್ಷವು ಬೇರೆ ಎಲ್ಲಾ ಪಕ್ಷಗಳಿಂದ ಸ್ವತಂತ್ರವಾಗಿರುತ್ತದೆಯಾದರೂ, ಸಹಕಾರವು ಅಗತ್ಯವಾಗಿರುವ ಸನ್ನಿವೇಶಗಳಲ್ಲಿ ಇತರ ಪಕ್ಷಗಳಿಗೆ ಸಹಕಾರವನ್ನು ನೀಡುತ್ತದೆ ಎಂದರು. ತಮ್ಮ ಉದ್ದೇಶಿತ ಸಮುದಾಯಗಳ ಹಿತಾಸಕ್ತಿಗಳನ್ನು ಪರಮೋಚ್ಚವೆಂದು ಪರಿಗಣಿಸಿ ಈ ಉದ್ದೇಶಗಳನ್ನು ಸಾಧಿಸುವುದಕ್ಕಾಗಿಯೇ ಸಿದ್ಧಾಂತಗಳನ್ನು ರೂಪಿಸಿಕೊಳ್ಳುವುದರಲ್ಲಿ ತಮ್ಮ ಪಕ್ಷವು ನಂಬಿಕೆಯನ್ನಿಟ್ಟುಕೊಂಡಿದೆ.

'ದಲಿತ ವರ್ಗಗಳು' ಎಂಬುದರ ಬದಲಾಗಿ 'ಕಾರ್ಮಿಕರು' ಎಂಬ ಪದವನ್ನು ಉಪಯೋಗಿಸಿಕೊಳ್ಳಲಾಗಿದೆ, ಏಕೆಂದರೆ ಕಾರ್ಮಿಕರು ದಲಿತ ವರ್ಗಗಳನ್ನೂ ಒಳಗೊಳ್ಳುತ್ತಾರೆ.

**ಪಕ್ಷದ ಗುರಿಗಳು**

**ದೋಷಗಳಿದ್ದಾಗ್ಯೂ ಸಂವಿಧಾನವನ್ನು ಅನುಸರಿಸಬೇಕು**

ಪಕ್ಷದ ಕಾರ್ಯಕ್ರಮಗಳನ್ನು ವಿವರಿಸುತ್ತಾ ಡಾ. ಅಂಬೇಡ್ಕರ್ ಅವರು ಹೊಸ ಸಂವಿಧಾನದ ಅಡಿಯಲ್ಲಿ, ತಮ್ಮ ಕಾರ್ಯಕ್ರಮಗಳನ್ನು ವಿವೇಕಯುತವಾಗಿ ಆಲೋಚಿಸಿ, ಆಸಕ್ತಿಯುಳ್ಳವರೊಡನೆ ಸಮಾಲೋಚಿಸಿ ರೂಪಿಸಲಾಗಿದೆ ಎಂದರು.

"ಪಕ್ಷವು ಹೊಸ ಸಂವಿಧಾನವು ಬಹಳಷ್ಟು ದೋಷಗಳಿಂದ ಕೂಡಿದೆ ಮತ್ತು ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವಲ್ಲಿ ವಿಫಲವಾಗುತ್ತದೆ ಎಂದು ಭಾವಿಸುತ್ತದೆ. ಸಂವಿಧಾನದಲ್ಲಿರುವ ಹಲವಾರು ವಿಧಿಗಳನ್ನು, ಅದರಲ್ಲಿಯೂ ಎರಡನೆಯ ಸದನವನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದ ವಿಧಿಗಳನ್ನು, ಪಕ್ಷವು ವಿರೋಧಿಸುತ್ತದೆ. ಇಷ್ಟಾದರೂ, ತಮ್ಮ ಪಕ್ಷವು ಸಂವಿಧಾನದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದೆ. ಆದರೆ ಸಂವಿಧಾನವನ್ನು ಅನುಸರಿಸಿ ನಡೆಯುವಾಗಲೂ, ಜವಾಬ್ದಾರಿ ಸರಕಾರದ ವ್ಯವಸ್ಥೆಯನ್ನು ಶೂನ್ಯಗೊಳಿಸುವಂತೆ ರಾಜ್ಯಪಾಲರು ತಮಗೆ ದತ್ತವಾಗಿರುವ ತುರ್ತು ಪರಿಸ್ಥಿತಿಯ ವಿಶೇಷ ಅಧಿಕಾರಗಳನ್ನು ಬಳಸುವುದನ್ನು ತಪ್ಪಿಸಲು ಶ್ರಮಿಸುತ್ತದೆ".

ಆರ್ಥಿಕ ಕಾರ್ಯಕ್ರಮಗಳನ್ನು ಕುರಿತಂತೆ ತಮ್ಮ ಪಕ್ಷದ ನಿಲುವನ್ನು ಡಾ. ಅಂಬೇಡ್ಕರ್ ಅವರು ಹೀಗೆ ವಿವರಿಸಿದರು –

(೧) ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸುವ ಉದ್ದೇಶದಿಂದ ಭೂ ಅಡಮಾನ ಬ್ಯಾಂಕ್, ವ್ಯವಸಾಯೋತ್ಪನ್ನ ಸಹಕಾರ ಸಂಘಗಳು ಮತ್ತು ಮಾರಾಟ ಸಂಘಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ.

(೨) ಬಂಡವಾಳವನ್ನು ಹೂಡಲು ಮತ್ತು ಸುಧಾರಿತ ಕೃಷಿ ಉತ್ಪಾದನಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಭೂಹಿಡುವಳಿಗಳ ಗಾತ್ರವು ಚಿಕ್ಕದಾಗಿರುವುದು ಬಹು ದೊಡ್ಡ ಅಡಚಣೆಗಳಾಗುತ್ತವೆ ಮತ್ತು ಬಡತನಕ್ಕೆ ನೇರವಾಗಿ ಕಾರಣವಾಗುತ್ತದೆ ಎಂದು ಪಕ್ಷವು ಭಾವಿಸುತ್ತದೆ.

**ಜನಸಂಖ್ಯೆಯ ಒತ್ತಡ**

ದೇಶದಲ್ಲಿನ ಜನಸಂಖ್ಯೆಯ ಒತ್ತಡದ ಕಾರಣದಿಂದ ಭೂಹಿಡುವಳಿಗಳ ಗಾತ್ರವು ಚಿಕ್ಕದಾಗುತ್ತಿದೆ ಮತ್ತು ಅದರ ಪರಿಣಾಮವಾಗಿ ಬಡತನವು ಬೆಳೆಯುತ್ತಿದೆ ಎಂದು ಪಕ್ಷವು ಭಾವಿಸಿದೆ. ಕೃಷಿ ಜಮೀನಿನ ಮೇಲೆ ಇರುವ ಅತಿಯಾದ ಜನಸಂಖ್ಯೆಯ ಒತ್ತಡವನ್ನು ನಿವಾರಿಸುವವರೆಗೂ ಭೂಹಿಡುವಳಿಗೆ ವಿಭಜನೆ ನಿಲ್ಲುವುದಿಲ್ಲ ಮತ್ತು ವ್ಯವಸಾಯಗಾರರ ಈಗಿನ ಬಡತನವು ಕೂಡ ಕಡಿಮೆಯಾಗದೇ ಮುಂದುವರೆಯುತ್ತಲೇ ಇರುತ್ತದೆ. ಪಕ್ಷದ ಅಭಿಪ್ರಾಯದಲ್ಲಿ, ವ್ಯವಸಾಯಗಾರರಿಗೆ ಸಹಾಯವನ್ನು ಮಾಡಲು ಮತ್ತು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಇರುವ ಒಂದೇ ಮಾರ್ಗವೆಂದರೆ ಪ್ರಾಂತದಲ್ಲಿ ಕೈಗಾರಿಕೀಕರಣವನ್ನು ಜಾರಿಗೆ ತರುವುದು. ಆದ್ದರಿಂದ ಹಳೆಯ ಉದ್ದಿಮೆಗಳನ್ನು ಪುನಃ ಸುವ್ಯವಸ್ಥೆಗೆ ತರುವುದಕ್ಕೆ ಮತ್ತು ಪ್ರಾಂತದಲ್ಲಿನ ಪ್ರಾಕೃತಿಕ ಸಂಪತ್ತಿಗೆ ಅನುಗುಣವಾಗಿ ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ಪ್ರೋತ್ಸಾಹವನ್ನು ನೀಡುವುದಕ್ಕೆ ಪ್ರಯತ್ನಿಸುತ್ತದೆ.

(೩) ಜನರಲ್ಲಿರುವ ಸಾಮರ್ಥ್ಯವನ್ನು ಮತ್ತು ಆರ್ಥಿಕ ವಸ್ತುಗಳ ಉತ್ಪಾದನಾ ಕೌಶಲ್ಯವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಜನರಿಗೆ ದೊಡ್ಡ ಪ್ರಮಾಣದಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡಲು ಪಕ್ಷವು

ಪ್ರಯತ್ನಿಸುತ್ತದೆ.

(೪) ಜನತೆಯ ಹಿತದೃಷ್ಟಿಯಿಂದ ಅಗತ್ಯವಿರುವ ಸಂದರ್ಭದಲ್ಲಿ, ಕೈಗಾರಿಕೆಗಳ ಮೇಲೆ ಸರಕಾರದ ಒಡೆತನವನ್ನು ಮತ್ತು ಕೈಗಾರಿಕೆಗಳಲ್ಲಿ ಸರಕಾರದ ಆಡಳಿತವನ್ನು ಪಕ್ಷವು ಸಮರ್ಥಿಸುತ್ತದೆ.

(೫) ಜನತೆಯ ಸ್ವತಂತ್ರ ಮತ್ತು ದೀರ್ಘಾವಧಿಯ ಜೀವನದ ಮಾರ್ಗದಲ್ಲಿರುವ ಎಲ್ಲಾ ಅಡಚಣೆಗಳನ್ನೂ ನಿವಾರಿಸಲು, ಮತ್ತು ಅದಕ್ಕೆ ಸಹಾಯಕವಾಗುವಂತೆ ಆರ್ಥಿಕ ವ್ಯವಸ್ಥೆಗೆ ಸೂಕ್ತ ಬದಲಾವಣೆಗಳನ್ನು ತರುವುದಕ್ಕೆ, ಮತ್ತು ಯಾವುದೇ ಸಮುದಾಯಕ್ಕೆ ಅಥವಾ ಪಂಗಡಕ್ಕೆ ನ್ಯಾಯವನ್ನು ನೀಡದ ವ್ಯವಸ್ಥೆಗಳನ್ನು ರದ್ದುಮಾಡುವುದಕ್ಕೆ ಪಕ್ಷವು ಶ್ರಮಿಸುತ್ತದೆ.

(೬) ಭೂಮಾಲೀಕರು ಗೇಣಿದಾರರನ್ನು ಸುಲಿಗೆಮಾಡುವುದನ್ನು ಮತ್ತು ಗೇಣಿಯಿಂದ ಅವರನ್ನು ಬಿಡಿಸುವುದನ್ನು ಸಾಮಾನ್ಯವಾಗಿ ಅದರಲ್ಲಿಯೂ ಖೋತಿ ಪದ್ಧತಿಯ ಪ್ರಕಾರ ಮತ್ತು ತಾಲೂಕದಾರಿ ಪದ್ಧತಿಯ ಪ್ರಕಾರ, ತಡೆದು ಗೇಣಿದಾರರಿಗೆ ರಕ್ಷಣೆಯನ್ನು ನೀಡಲು ಸೂಕ್ತ ಶಾಸನಗಳನ್ನು ರೂಪಿಸುತ್ತದೆ.

(೭) ನಾಗರಿಕ ಸಮಾಜದಲ್ಲಿ ಗೌರವಯುತವಾಗಿ ಜೀವನವನ್ನು ನಡೆಸುವ ಕನಿಷ್ಠ ಜೀವನಮಟ್ಟವನ್ನು ಕೃಷಿ ಹಾಗೂ ಕಾರ್ಖಾನೆಗಳ ಕೆಲಸಗಾರರಿಗೆ ದೊರಕಿಸಲು ಪಕ್ಷವು ಶ್ರಮಿಸುತ್ತದೆ.

(೮) ಕೈಗಾರಿಕಾ ಕಾರ್ಮಿಕರ ಅನುಕೂಲಕ್ಕಾಗಿ, ನೇಮಕಾತಿ, ವಜಾ, ಬಡ್ತಿ, ಕೆಲಸದ ಅವಧಿ, ಕನಿಷ್ಠ ವೇತನ, ಸಂಬಳದ ಸಹಿತವಾದ ರಜೆ, ಸಾಧ್ಯವಾದ ಎಲ್ಲಾ ಅನುಕೂಲಗಳು, ಬೋನಸ್ ನೀಡಿಕೆ, ನಿವೃತ್ತಿವೇತನ ಮತ್ತು ಇತರ ನಿವೃತ್ತಿಗೆ ಸಂಬಂಧಿಸಿದ ವಿಷಯಗಳು – ಇವುಗಳಿಗೆ ಸಂಬಂಧಿಸಿದ ಹಾಗೆ ಶಾಸನಗಳನ್ನು ಜಾರಿಗೆ ತರಲು ಪಕ್ಷವು ಪ್ರಯತ್ನಿಸುತ್ತದೆ. ಕೆಲಸಗಾರರಿಗೆ ಖಾಯಿಲೆ, ನಿರುದ್ಯೋಗ ಮತ್ತು ಅಪಘಾತಗಳ ವಿರುದ್ಧ ಸಾಮಾಜಿಕ ವಿಮಾ ಯೋಜನೆಯನ್ನು ಜಾರಿಗೆ ತರಲೂ ಪ್ರಯತ್ನಿಸುತ್ತದೆ.

(೯) ಕೈಗಾರಿಕಾ ಕಾರ್ಮಿಕರಿಗೆ ನೀಡಿದಷ್ಟೇ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು, ಕೃಷಿ ಕ್ಷೇತ್ರಕ್ಕೆ ಅನುಗುಣವಾಗಿ ಮಾಡಬೇಕಾದ ಬದಲಾವಣೆಗಳೊಂದಿಗೆ, ಕೃಷಿಕಾರ್ಮಿಕರಿಗೂ ವಿಸ್ತರಿಸಲು ಪಕ್ಷವು ಪ್ರಯತ್ನವನ್ನು ಮಾಡುತ್ತದೆ.

(೧೦) ನಿರುದ್ಯೋಗವನ್ನು ನಿವಾರಿಸುವುದು ಸರಕಾರದ ಜವಾಬ್ದಾರಿಯೆಂಬುದನ್ನು ಪಕ್ಷವು ಒಪ್ಪಿಕೊಳ್ಳುತ್ತದೆ, ಮತ್ತು ಈ ಉದ್ದೇಶದ ಈಡೇರಿಕೆಗಾಗಿ, ಭೂವರ್ಗಾವಣೆಯನ್ನು ಜಾರಿಗೆ ತರುವ ಮತ್ತು ನಿರುದ್ಯೋಗಿ ಹಾಗೂ ಭೂರಹಿತ ಕಾರ್ಮಿಕರಿಗಾಗಿ ಲೋಕೋಪಯೋಗಿ ಕಾರ್ಯಗಳನ್ನು ಜಾರಿಗೆ ತರುವ ನೀತಿಯನ್ನು ಪಕ್ಷವು ಒಪ್ಪಿಕೊಳ್ಳುತ್ತದೆ.

(೧೧) ಸಾಲ ನೀಡಿದವರು ಸಾಲಗಾರರಿಂದ ಸಾಲವನ್ನು ವಸೂಲಿ ಮಾಡಲು ನ್ಯಾಯವಲ್ಲದ ಮಾರ್ಗಗಳನ್ನು ಅನುಸರಿಸುವುದನ್ನು, ದುಬಾರಿ ಬಡ್ಡಿಯನ್ನು ವಿಧಿಸುವುದನ್ನು, ವಂಚನೆಯ ಮಾರ್ಗಗಳನ್ನು ಅನುಸರಿಸುವುದನ್ನು ತಡೆಯಲು ಮತ್ತು ಗ್ರಾಮಾಂತರಗಳಲ್ಲಿರುವ ಋಣಭಾರದ ಸಮಸ್ಯೆಯನ್ನು ನಿವಾರಿಸಲು ಪಕ್ಷವು ಶಾಸನಗಳನ್ನು ಜಾರಿಗೆ ತರುತ್ತದೆ.

(೧೨) ದೊಡ್ಡ ನಗರಗಳ ಮತ್ತು ಪಟ್ಟಣ ಪ್ರದೇಶಗಳ ಕೈಗಾರಿಕಾ ಕೇಂದ್ರಗಳಲ್ಲಿ ವಾಸಿಸುತ್ತಿರುವ ಕೆಳ ಮಧ್ಯಮವರ್ಗಗಳವರಿಗೆ ಸೂಕ್ತ ರಕ್ಷಣೆಯನ್ನು ನೀಡಲು ಶಾಸನಗಳನ್ನು ಜಾರಿಗೆ ತರಲು ಪಕ್ಷವು ಬದ್ಧವಾಗಿರುತ್ತದೆ.

**ತೆರಿಗೆಯ ಸಮಸ್ಯೆಗಳು**

ತೆರಿಗೆಗಳ ವಿಷಯದಲ್ಲಿ ಪಕ್ಷದ ನಿಲುವು ಹೀಗಿದೆ:

ಜನತೆಯ ಕಲ್ಯಾಣದಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಪ್ರತಿ ಸರಕಾರವೂ ರಾಷ್ಟ್ರನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು ಮತ್ತು ಸರಕಾರವು ಈ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸರಕಾರದ ಖಜಾನೆಯಲ್ಲಿ ಹಣವಿರಬೇಕು. ಈ ಹಣವು ಬರುವ ಮಾರ್ಗಗಳಲ್ಲಿ ಒಂದು ಎಂದರೆ ಜನರ ಮೇಲೆ ತೆರಿಗೆಯನ್ನು ವಿಧಿಸುವುದು. ಆರ್ಥಿಕವಾಗಿ ಯಶಸ್ವಿಯಾಗುವ ಹಾದಿಯಲ್ಲಿರುವ ಸರಕಾರವೇ ಅತ್ಯುತ್ತಮ ಸರಕಾರವಾಗಿರುತ್ತದೆ.

ತೆರಿಗೆಯ ದರದಲ್ಲಿ ಕಡಿಮೆ ಮಾಡುವ ನೀತಿಯು ಮತ್ತು ಅತ್ಯಗತ್ಯವಾದ ರಾಷ್ಟ್ರನಿರ್ಮಾಣದ ಕಾರ್ಯಗಳಿಗೆ ತೊಂದರೆಯಾದರೂ, ಜನತೆಯ ಹಿತದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದೇವೆಂದು ಜನರಿಗೆ ಹೇಳುವುದು ಅವರನ್ನು ತಪ್ಪುದಾರಿಗೆ ಎಳೆಯುವಂತಹುದು ಮತ್ತು ಬಡಜನತೆಗೆ ಮೋಸ ಮಾಡುವಂತಹುದು ಎಂದು ಪಕ್ಷವು ಯೋಚಿಸುತ್ತದೆ. ಅಂದ ಮಾತ್ರಕ್ಕೆ, ಈಗಿರುವ ತೆರಿಗೆ ಪದ್ಧತಿಯನ್ನೇ ಮುಂದುವರೆಸಿಕೊಂಡು ಹೋಗುವುದನ್ನು ಪಕ್ಷವು ಬಯಸುತ್ತದೆ ಎಂಬುದು ಅರ್ಥವಲ್ಲ. ಬದಲಿಗೆ, ಈಗ ಚಾಲ್ತಿಯಲ್ಲಿರುವ ತೆರಿಗೆ ಪದ್ಧತಿಯ ಬಗ್ಗೆ ಪಕ್ಷಕ್ಕೆ ತೀವ್ರವಾದ ಆಕ್ಷೇಪಣೆಯಿದೆ. ಈ ತೆರಿಗೆ ಪದ್ಧತಿಯಲ್ಲಿರುವ ಅನ್ಯಾಯವನ್ನು ಮತ್ತು ಅದು ಬಡವರ ಮೇಲೆ ಅತಿಯಾದ ಹೊರೆಯನ್ನು ಹೊರಿಸುತ್ತಿರುವ ವಾಸ್ತವತೆಯನ್ನು ಪಕ್ಷವು ನಿರ್ದಿಷ್ಟವಾಗಿ ಗುರುತಿಸುತ್ತದೆ. ಈ ದೋಷಗಳ ಪರಿಹಾರಕ್ಕೆ ಪಕ್ಷವು ಪ್ರಯತ್ನಿಸುತ್ತದೆ. ಹಾಗೆಯೇ ಈಗಿರುವ ಭೂಕಂದಾಯವನ್ನು ವಿಧಿಸುವ ವ್ಯವಸ್ಥೆಯನ್ನೂ ಪಕ್ಷವು ತೀವ್ರವಾಗಿ ವಿರೋಧಿಸುತ್ತದೆಯಾದ್ದರಿಂದ ಈ ವ್ಯವಸ್ಥೆಯನ್ನು ನ್ಯಾಯಯುತವನ್ನಾಗಿ ಮತ್ತು ಅದು ಅಗತ್ಯಗಳಿಗೆ ತಕ್ಕಷ್ಟು ನಮ್ಯತೆಯನ್ನು ಹೊಂದಿರುವ ಹಾಗೆ ಮಾಡಲು ಪಕ್ಷವು ಉದ್ದೇಶಿಸಿದೆ.

## ಸಾಮಾಜಿಕ ಸುಧಾರಣೆ

## ಶಾಸನಾತ್ಮಕ ಯೋಜನೆಗಳು

ಸಾಮಾಜಿಕ ಸುಧಾರಣೆಯ ನಿಟ್ಟಿನಲ್ಲಿ ಪಕ್ಷವು ಕೆಳಕಂಡ ಉದ್ದೇಶಗಳನ್ನು ಹೊಂದಿದೆ –

(೧) ಅಗತ್ಯವಿರುವ ಎಲ್ಲಾ ಸಾಮಾಜಿಕ ಸುಧಾರಣೆಗಳನ್ನು (ಅ) ಸಂಪ್ರದಾಯಸ್ಥರು ಸಮಾಜ ಸುಧಾರಕರನ್ನು ಬಹಿಷ್ಕರಿಸುವುದನ್ನು ತಪ್ಪಿಸಲು, (ಆ) ತಮಗೆ ಕಾನೂನು ನೀಡಿರುವ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಯಾವುದೇ ವರ್ಗವಾಗಲೀ, ವ್ಯಕ್ತಿಯಾಗಲೀ ಬಳಸಿಕೊಳ್ಳುವುದನ್ನು ತಡೆಯಲು ಇತರರು ಉಂಟುಮಾಡುವ ಭಯೋತ್ಪಾದನೆಯನ್ನು, ಹಾಕುವ ಸಾಮಾಜಿಕ ಬಹಿಷ್ಕಾರ ಮೊದಲಾದ ವ್ಯವಸ್ಥಿತ ಪ್ರಯತ್ನಗಳನ್ನು ನಿವಾರಿಸುವ ನಿಟ್ಟಿನಲ್ಲಿ ಶಾಸನಗಳನ್ನು ರಚಿಸುವ ಉದ್ದೇಶವನ್ನು ಪಕ್ಷವು ಹೊಂದಿದೆ.

(೨) ಜನಕಲ್ಯಾಣಾರ್ಥವಾಗಿ ಸಂಗ್ರಹಿಸಲಾದ ನಿಧಿಗಳ ದುರುಪಯೋಗವಾಗದಂತೆ ನೋಡಿಕೊಳ್ಳಲು ಹಾಗೂ ನಿಗದಿತ ಉದ್ದೇಶಗಳಿಗೆ ಅಗತ್ಯವಾದುದಕ್ಕಿಂತ ಹೆಚ್ಚಿನ ಹಣವನ್ನು ವಿದ್ಯಾಭ್ಯಾಸದಂತಹ ಧರ್ಮನಿರಪೇಕ್ಷ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಸಹಾಯವಾಗುವಂತೆ ಮಾಡಲು ಪಕ್ಷವು ಶಾಸನಗಳನ್ನು ರೂಪಿಸುತ್ತದೆ.

(೩) ಭಿಕ್ಷುಕರು ಮತ್ತಿತರ ನಿರ್ಗತಿಕರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸೂಕ್ತ ಶಾಸನಗಳನ್ನು ಜಾರಿಗೆ ತರಲು ಪಕ್ಷವು ಉದ್ದೇಶಿಸಿದೆ

## ಗ್ರಾಮಾಂತರಗಳ ಪುನಾರಚನೆ

ಗ್ರಾಮಾಂತರಗಳ ಪುನಾರಚನೆಯ ವಿಷಯದಲ್ಲಿ ಪಕ್ಷದ ಧೋರಣೆಯು ಹೀಗಿದೆ –

(೧) ಗ್ರಾಮಾಂತರಗಳಲ್ಲಿನ ಜನಜೀವನ ಉಲ್ಲಾಸಕರವಾಗಿರುವಂತೆ ಮಾಡಲು ಬೇಕಾದ ಸವಲತ್ತುಗಳನ್ನು ಕಲ್ಪಿಸಲು ಪಕ್ಷವು ಹೆಣಗುತ್ತದೆ.

(೨) ಗ್ರಾಮಗಳಲ್ಲಿನ ನೈರ್ಮಲ್ಯ ಹಾಗೂ ವಸತಿ ಸೌಕರ್ಯಗಳನ್ನು ಒದಗಿಸಲು ನಗರ ಯೋಜನೆಯಂತೆಯೇ ಗ್ರಾಮಯೋಜನೆಗಳನ್ನು ಜಾರಿಗೆ ತರುವುದಕ್ಕಾಗಿ ಪಕ್ಷವು ಶ್ರಮಿಸುತ್ತದೆ.

೩) ಗ್ರಾಮಗಳಲ್ಲಿ ಆಧುನಿಕ ಮನೋಭಾವವನ್ನು ಹುಟ್ಟಿಸಲು ಮತ್ತು ಅಲ್ಲಿನ ಜನರಲ್ಲಿ ಪ್ರಗತಿಪರ ಆಲೋಚನೆಗಳನ್ನು ಮೂಡಿಸಲು ಗ್ರಂಥಾಲಯಗಳನ್ನು, ಗ್ರಾಮಭವನಗಳನ್ನು, ಗ್ರಾಮಗಳಲ್ಲಿ ರೇಡಿಯೋಗಳನ್ನು ಮತ್ತು ಸಿನೆಮಾಗಳನ್ನು ಸ್ಥಾಪಿಸಲು ಪಕ್ಷವು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತದೆ.

**ಶಿಕ್ಷಣ**

(೧) ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಯೋಜನೆಯನ್ನು ಜಾರಿಗೆ ತರಲು ಪಕ್ಷವು ಶ್ರಮಿಸುತ್ತದೆ,

(೨) ಎಲ್ಲಾ ಜನತೆಗೂ ಶಿಕ್ಷಣವು ದೊರಕುವಂತೆ ಮಾಡಲು ಪಕ್ಷವು ವಯಸ್ಕರ ಶಿಕ್ಷಣ ಯೋಜನೆಯನ್ನು ಜಾರಿಗೆ ತರಲು ಪಕ್ಷವು ಪ್ರಯತ್ನಿಸುತ್ತದೆ.

(೩) ತಾಂತ್ರಿಕ ಶಿಕ್ಷಣವನ್ನು ನೀಡುವಲ್ಲಿ ಪಕ್ಷವು ವಿಶೇಷ ಗಮನವನ್ನು ಹರಿಸುತ್ತದೆ.

(೪) ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಲ್ಲಿನ ಯೋಗ್ಯ ವ್ಯಕ್ತಿಗಳಿಗೆ ಭಾರತದಲ್ಲಿ ಅಥವಾ ಹೊರದೇಶಗಳಲ್ಲಿ ಉನ್ನತ ಶಿಕ್ಷಣವನ್ನು ದೊರಕಿಸಿಕೊಡಲು ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸಲು ಪಕ್ಷವು ಪ್ರಯತ್ನಪಡುತ್ತದೆ.

(೫) ಪ್ರಾಂತದಲ್ಲಿ ಸ್ಥಳೀಯ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ಮತ್ತು ಅವುಗಳನ್ನು ಬೋಧಕ ವಿಶ್ವವಿದ್ಯಾನಿಲಯಗಳನ್ನಾಗಿಸಿ ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ಮಾನ್ಯಮಾಡಲು ಅಗತ್ಯವಾದ ಕಾನೂನುಗಳನ್ನು ರೂಪಿಸಲು ಪಕ್ಷವು ಪ್ರಯತ್ನಿಸುತ್ತದೆ. ವಿದ್ಯಾರ್ಥಿಗಳ ಬುದ್ಧಿವಂತಿಕೆ ಮತ್ತು ಶ್ರಮವನ್ನು ವ್ಯರ್ಥಮಾಡುವ ಪರೀಕ್ಷಾ ಕ್ರಮವನ್ನು ತೆಗೆದುಹಾಕಲು ಇದೊಂದೇ ಸೂಕ್ತ ಮಾರ್ಗವೆಂದು ಪಕ್ಷವು ಭಾವಿಸುತ್ತದೆ

**ಆಡಳಿತ**

ಆಡಳಿತಾತ್ಮಕ ವಿಷಯಗಳಲ್ಲಿ ಪಕ್ಷದ ನಿಲುವು ಹೀಗಿದೆ –

(೧) ಆಡಳಿತವು ಉತ್ತಮವಾಗಿ, ಸಮರ್ಥವಾಗಿ ಮತ್ತು ಭ್ರಷ್ಟಾಚಾರದಿಂದ ಮುಕ್ತವಾಗಿ ಇರುವಂತೆ ಪಕ್ಷವು ಪ್ರಯತ್ನಿಸುತ್ತದೆ.

(೨) ಉತ್ತಮ ಆಡಳಿತವನ್ನು ನೀಡುವ ಉದ್ದೇಶದಿಂದ (ಅ) ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲು ಮತ್ತು (ಆ) ಈಗಿರುವ ವತನ್‌ದಾರಿ ವ್ಯವಸ್ಥೆಯನ್ನು ಆಧುನಿಕ ಕಾಲಕ್ಕೆ ಹೊಂದುವಂತೆ ಬದಲಾಯಿಸಲು ಪಕ್ಷವು ಶ್ರಮಿಸುತ್ತದೆ.

(೩) ಆಡಳಿತವು ಯಾವುದೇ ಜಾತಿಯ ಅಥವಾ ಸಮುದಾಯದ ಏಕಸ್ವಾಮ್ಯಕ್ಕೆ ತುತ್ತಾಗದಂತೆ ಮಾಡಲು ಪಕ್ಷವು ಶ್ರಮಪಡುತ್ತದೆ. ಪ್ರಾಂತದ ಆಡಳಿತದಲ್ಲಿ ಎಲ್ಲಾ ಜಾತಿ ಮತ್ತು ಸಮುದಾಯಗಳವರ ಸಮುಚಿತವಾದ ಮಿಶ್ರಣವಿರುವಂತೆ ನೋಡಿಕೊಳ್ಳಲು ಪಕ್ಷವು ತನ್ನ ಅಧಿಕಾರದ ಪೂರ್ಣಾವಧಿಯಲ್ಲಿ ಸಂಪೂರ್ಣ ಸಾಮರ್ಥ್ಯದಿಂದ ಪ್ರಯತ್ನಿಸುತ್ತದೆ.

* * * * *

---

(ಶ್ರೀ ಲಕ್ಷ್ಮಿನಾರಾಯಣ ಮುದ್ರಣಾಲಯ, ಬಾಂಬೆ ೨)

೪

# ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ವ್ಯಾಪಕ ಬೆಂಬಲ

## ಪಕ್ಷದ ಗುರಿಯ ಬಗ್ಗೆ ಡಾ. ಅಂಬೇಡ್ಕರ್

ಕಳೆದ ಬುಧವಾರ ಲಾಯ್ಡ್ ಟ್ರೈಸ್ಟಿನೊ ಸ್ಟೀಮರ್ ಕಾಂಟೆ ವರ್ಡೆ ಮೂಲಕ ಜಿನಿವಾಕ್ಕೆ ತೆರಳುವ ಮುನ್ನ ದ ಟೈಮ್ಸ್ ಆಫ್ ಇಂಡಿಯಾ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ ಡಾ. ಅಂಬೇಡ್ಕರ್ ಅವರು ತಮ್ಮ ಪಕ್ಷವು ಹೊಂದಿರುವ ಪ್ರಭಾವವನ್ನು ಮತ್ತು ಅದು ಬಾಂಬೆ ಪ್ರಾಂತದಲ್ಲಿ ಮತ್ತು ಪ್ರಾಂತದ ಹೊರಗೆ ಪ್ರಗತಿಪರರಿಂದ ಪಡೆಯುತ್ತಿರುವ ವ್ಯಾಪಕ ಬೆಂಬಲವನ್ನು ಒತ್ತಿ ಹೇಳಿದರು.

ಇತ್ತೀಚೆಗೆ ಬಾಂಬೆಯಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿದ ದಲಿತ ವರ್ಗಗಳ ನಾಯಕರಾದ ಡಾ. ಅಂಬೇಡ್ಕರ್ ಅವರ ಪ್ರಕಾರ ಮುಂಬರುವ ಸ್ಥಳೀಯ ಶಾಸಕಾಂಗದ ಚುನಾವಣೆಯಲ್ಲಿ ಯಶಸ್ಸನ್ನು ಗಳಿಸಲು ಅವರ ಪಕ್ಷಕ್ಕೆ ಉಜ್ವಲವಾದ ಅವಕಾಶವಿದೆ.

ತಾನು ಜನತೆಯ ಹಿತರಕ್ಷಣೆಯನ್ನು ಮಾಡುತ್ತೇನೆ ಎಂಬ ಕಾಂಗ್ರೆಸ್ ಪಕ್ಷದ ಹೇಳಿಕೆಯನ್ನು ಡಾ. ಅಂಬೇಡ್ಕರ್ ಅವರು ಗೇಲಿಮಾಡಿದರು ಮತ್ತು ಆ ಪಕ್ಷದಲ್ಲಿರುವ ಲೂಟಿಕೋರರು ಜನತೆಗೆ ಅನುಕೂಲವಾಗುವಂತಹ ಪ್ರಯತ್ನಗಳನ್ನು ಮಾಡುವುದಕ್ಕೆ ಪಕ್ಷಕ್ಕೆ ಅವಕಾಶಗಳನ್ನು ನೀಡುವುದಿಲ್ಲ ಎಂದು ಬಲವಾಗಿ ಹೇಳಿದರು.

ಪಕ್ಷದ ಮುಂದಿನ ಕಾರ್ಯಕ್ರಮಗಳ ಬಗ್ಗೆ ಈಗ ಅಸಂಖ್ಯಾತ ಜನರು ಆಸಕ್ತರಾಗಿದ್ದಾರೆ ಎಂಬುದನ್ನು ಕುರಿತು ಮಾತನಾಡುತ್ತಾ ಸ್ವತಂತ್ರ ಕಾರ್ಮಿಕ ಪಕ್ಷವು ಪ್ರಕಟಿಸಿದ ಪಕ್ಷದ ಧ್ಯೇಯೋದ್ದೇಶಗಳು ಸಾಮಾನ್ಯ ಜನತೆಯಲ್ಲಿ ಸಾಕಷ್ಟು ಆಸಕ್ತಿಯನ್ನು ಹುಟ್ಟಿಸಿದೆ ಎಂಬುದು ತಿಳಿದು ತಮಗೆ ಅತ್ಯಾಶ್ಚರ್ಯವಾಯಿತು ಎಂದು ಅವರು ಹೇಳಿದರು.

### ಮಧ್ಯಪ್ರಾಂತಗಳಲ್ಲಿ ಪಕ್ಷದ ಹಲವಾರು ಶಾಖೆಗಳು

ಮಧ್ಯಪ್ರಾಂತಗಳಲ್ಲಿ ಈಗಾಗಲೇ ಒಂದು ಶಾಖೆಯನ್ನು ತಮ್ಮ ಪಕ್ಷವು ತೆರೆದಿದೆ ಎಂದು ಅವರು ಹೇಳಿದರು. ಬಾಂಬೆ ಪ್ರಾಂತದಲ್ಲಿ ವಿವಿಧ ವರ್ಗ ಮತ್ತು ಸಮುದಾಯಗಳಿಗೆ ಸೇರಿದ ಜನರು ತಮ್ಮ ಪಕ್ಷಕ್ಕೆ ಸೇರಲು ವ್ಯಾಪಕವಾಗಿ ಬಯಸುತ್ತಿದ್ದಾರೆ ಎಂದೂ ಅವರು ತಿಳಿಸಿದರು.

ತಮ್ಮ ಪಕ್ಷದ ಆರ್ಥಿಕ ಕಾರ್ಯಕ್ರಮಗಳು, ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳು ಹಾಗೂ ಪಕ್ಷವು ಯಾವುದೇ ಕೋಮುಗಳಿಗೆ ಸೀಮಿತವಾಗದಿರುವುದನ್ನು ಎಲ್ಲಾ ಕಡೆಯ ಜನರೂ ಸ್ವಾಗತಿಸಿದ್ದಾರೆ, ಮತ್ತು ಪಕ್ಷವು ಇನ್ನೂ ಶೈಶವಾವಸ್ಥೆಯಲ್ಲಿದ್ದರೂ, ಪ್ರಾಂತದ ವಿವಿಧ ಪ್ರಗತಿಪರ ಶಕ್ತಿಗಳಿಂದ ವ್ಯಾಪಕವಾದ ಬೆಂಬಲವನ್ನು ಗಳಿಸಿಕೊಳ್ಳುತ್ತಿದೆ ಎಂದು ಅವರು ಹೇಳಿದರು.

## ಮೂಲಭೂತ ವ್ಯತ್ಯಾಸಗಳು

ಕಾಂಗ್ರೆಸ್ ಮತ್ತು ಸ್ವತಂತ್ರ ಕಾರ್ಮಿಕ ಪಕ್ಷಗಳ ಕಾರ್ಯಕ್ರಮಗಳು ಮತ್ತು ನೀತಿಗಳ ವಿಷಯದಲ್ಲಿ ಎರಡು ಮೂಲಭೂತವಾದ ವ್ಯತ್ಯಾಸಗಳು ಇವೆ. ಹೊಸ ಸಂವಿಧಾನವನ್ನು ನಾಶಮಾಡುವ ಉದ್ದೇಶದಿಂದ ಅಧಿಕಾರವನ್ನು ಕಬಳಿಸಲು ಕಾಂಗ್ರೆಸ್ ಸನ್ನಾಹವನ್ನು ನಡೆಸುತ್ತಿದೆ. ಆದರೆ, ಇದಕ್ಕೆ ವಿರುದ್ಧವಾಗಿ ಸ್ವತಂತ್ರ ಕಾರ್ಮಿಕ ಪಕ್ಷವು ಸಂವಿಧಾನದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಶಾಸನಸಭೆಯನ್ನು ಪ್ರವೇಶಿಸಬಯಸುತ್ತದೆ.

ಕಾಂಗ್ರೆಸ್ ಪಕ್ಷವು ತಾನು ಜನತೆಯ ಹಿತಾಸಕ್ತಿಗಳನ್ನು ಕಾಪಾಡುತ್ತೇನೆಂದು ಹೇಳಿಕೊಳ್ಳುತ್ತದೆ. ಸ್ವತಂತ್ರ ಕಾರ್ಮಿಕ ಪಕ್ಷವೂ ಇದನ್ನೇ ಹೇಳಿಕೊಳ್ಳುತ್ತದೆ. ಆದರೆ ಅದರ ಸಂಯೋಜನೆಯೇ ಕಾಂಗ್ರೆಸ್ ಪಕ್ಷಕ್ಕೆ ಜನತೆಯ ಸೇವೆಯನ್ನು ಮಾಡುವ ಉದ್ದೇಶಕ್ಕೆ ಮುಳುವಾಗಿದೆ. ಕಾಂಗ್ರೆಸ್ ಪಕ್ಷವು ಲೂಟಿಕೋರರ ಮತ್ತು ಲೂಟಿಮಾಡಲ್ಪಟ್ಟವರ ಕಲಬೆರಕೆ ಪಕ್ಷವಾಗಿದ್ದು, ಆ ಪಕ್ಷದಲ್ಲಿರುವ ಲೂಟಿಕೋರರು ಆ ಪಕ್ಷವನ್ನು ಜನತೆಗಾಗಿ ಕೆಲಸಮಾಡಲು ಬಿಡುವುದಿಲ್ಲ.

ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಲು ಲೂಟಿಕೋರರ ಮತ್ತು ಲೂಟಿಮಾಡಲ್ಪಟ್ಟವರ ಸಹಯೋಗವು ಅಗತ್ಯವಾಗಿರಬಹುದು. ಆದರೆ, ಎರಡು ವಿರುದ್ಧ ಧ್ರುವಗಳಲ್ಲಿರುವವರನ್ನೂ ಕೂಡಿಸಿ, ಸಾಮಾಜಿಕ ಪುನಾರಚನೆಗಾಗಿ ಪಕ್ಷವನ್ನು ಕಟ್ಟುವುದು ಎಂದರೆ ಜನತೆಯನ್ನು ಮೋಸಗೊಳಿಸಿದಂತೆ ಆಗುತ್ತದೆ ಎಂದು ದಲಿತ ವರ್ಗಗಳವರ ನಾಯಕರಾದ ಡಾ. ಅಂಬೇಡ್ಕರ್ ಅವರು ಹೇಳಿದರು.

## ಪಕ್ಷದ ಸದಸ್ಯತ್ವ

ಯಾರೇ ಬಂದರೂ ಅವರನ್ನೆಲ್ಲಾ ಪಕ್ಷಕ್ಕೆ ಸೇರಿಸಿಕೊಂಡು, ಶಾಸನಸಭೆಯಲ್ಲಿ ತನ್ನ ಸಂಖ್ಯಾಬಾಹುಳ್ಯವನ್ನು ಹೆಚ್ಚಿಸಿಕೊಳ್ಳುವುದನ್ನು ಸ್ವತಂತ್ರ ಕಾರ್ಮಿಕ ಪಕ್ಷವು ಇಷ್ಟಪಡುವುದಿಲ್ಲ ಎಂದು ಡಾ. ಅಂಬೇಡ್ಕರ್ ಅವರು ಅಭಿಪ್ರಾಯಪಟ್ಟರು. ಹೊಂದಾಣಿಕೆಯಿಲ್ಲದ ಅಸಂಗತ ಶಕ್ತಿಗಳನ್ನು ಹೊಂದಿರುವುದನ್ನು ತಪ್ಪಿಸಲು ಪಕ್ಷವು ಬಯಸುತ್ತದೆ.

ಪಕ್ಷದ ಸಿದ್ಧಾಂತಗಳನ್ನು ಮುಕ್ತವಾಗಿ ಸ್ವೀಕರಿಸುವ ಮತ್ತು ಇತರ ಪಕ್ಷಗಳೊಡನೆ ಸಂಬಂಧವಿರದ ಯಾರಿಗೇ ಆದರೂ ತಮ್ಮ ಪಕ್ಷದ ಸದಸ್ಯತ್ವವನ್ನು ನೀಡುವುದಾಗಿ ಹೇಳಿದ ಅವರು, ತಮ್ಮ ಪಕ್ಷವು ಹೆಚ್ಚು ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ನಿಲ್ಲಿಸಲು ಸಮರ್ಥವಾಗಿದ್ದರೂ, ಕೆಲವೇ ಅಭ್ಯರ್ಥಿಗಳನ್ನು ನಿಲ್ಲಿಸಲು ತೀರ್ಮಾನಿಸಿದೆ ಎಂದರು.

ಶಾಸನಸಭೆಯಲ್ಲಿ ಮಾಡಬೇಕಾದ ಕರ್ತವ್ಯಗಳಿದ್ದರೂ, ಶಾಸನಸಭೆಯ ಹೊರಗೆ ಬಹು ಮುಖ್ಯವಾದ ಇತರ ಕೆಲವು ಕಾರ್ಯಗಳು ಇವೆ. ಅವುಗಳೆಂದರೆ, ಜನತೆಯನ್ನು ವಿದ್ಯಾವಂತರನ್ನಾಗಿ ಮಾಡುವುದು, ಅವರ ಮುಂದೆ ಯೋಗ್ಯವಾದ ಸಿದ್ಧಾಂತಗಳನ್ನಿರಿಸುವುದು, ಮತ್ತು ಅವರನ್ನು ಶಾಸನಸಭೆಗಳ ಮೂಲಕ ರಾಜಕೀಯದಲ್ಲಿ ತೊಡಗಿಕೊಳ್ಳುವಂತೆ ಮಾಡುವುದು ಮೊದಲಾದವುಗಳು.

## ಸಾರ್ವಜನಿಕರಲ್ಲಿ ಮನವಿ

ಸ್ವತಂತ್ರ ಕಾರ್ಮಿಕ ಪಕ್ಷದಂತಹ ಪಕ್ಷಗಳ ಅಗತ್ಯವು ಈಗ ಇದೆ ಎಂದು ಡಾ.ಅಂಬೇಡ್ಕರ್ ಅವರು ಭಾವಿಸುತ್ತಾರೆ. ಎಲ್ಲಾ ಕಾರ್ಮಿಕರೂ, ರೈತರು ಮತ್ತು ಕೆಳ ಹಾಗೂ ಮಧ್ಯಮ ವರ್ಗದ ಜನರೂ ತಮ್ಮ

ಪಕ್ಷಕ್ಕೆ ಸೇರಿ ಅದನ್ನು ಒಂದು ಜನತೆಯ ಪಕ್ಷವನ್ನಾಗಿ ಮಾಡಬೇಕೆಂದು ಅವರು ಸಾರ್ವಜನಿಕರಲ್ಲಿ ಮನವಿಯನ್ನು ಮಾಡಿದರು. ಜನತೆಗೆ ಈ ವಿಷಯದಲ್ಲಿ ಶಿಕ್ಷಣವನ್ನು ನೀಡಲು ಮತ್ತು ಪ್ರಚಾರ ಕಾರ್ಯವನ್ನು ನಡೆಸಿಕೊಂಡು ಹೋಗಲು ಎಂಟು ಜನರ ಒಂದು ಸಮಿತಿಯನ್ನು ನೇಮಿಸಲಾಗಿದೆಯೆಂದು ಅವರು ಹೇಳಿದರು.

ಪರಿಶಿಷ್ಟ ಜಾತಿಗಳವರಿಗಾಗಿ ಮೀಸಲಿಟ್ಟ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ನೇಮಿಸುವುದರ ಜೊತೆಗೆ, ಈಗ ನಡೆಯಲಿರುವ ಬಾಂಬೆಯ ಶಾಸನಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಲು ಈ ಮುಂದಿನ ಅಭ್ಯರ್ಥಿಗಳನ್ನು ಆಯ್ಕೆಮಾಡಿದೆ. ಅವರೆಂದರೆ – ಶ್ರೀ ಎಂ.ವಿ. ಚಿತ್ರೆ (ರತ್ನಗಿರಿ ಉತ್ತರ), ಶ್ರೀ ಎಸ್. ವಿ. ಪರುಲೇಕರ್ (ರತ್ನಗಿರಿ ದಕ್ಷಿಣ), ಶ್ರೀ ಎಸ್.ಜಿ. ಟಿಪ್ನಿಸ್ (ಕೊಲಾಬಾ), ಶ್ರೀ ವಿ.ಎ. ಗಡ್ಕರಿ (ಪೂನಾ ಪೂರ್ವ), ಶ್ರೀ ಸಿ.ಟಿ. ರಣದಿವೆ (ಥಾಣೆ–ದಕ್ಷಿಣ) ಮತ್ತು ಶ್ರೀ ಬಿ.ವಿ. ಪ್ರಧಾನ್ (ಖಾಂದೇಶ್ ಪೂರ್ವ).*

* * * * *

---

ದ ಟೈಮ್ಸ್ ಆಫ್ ಇಂಡಿಯಾ, ೧೯೩೬ರ ನವೆಂಬರ್ ೧೨

*ಖೈರ್‌ಮೊಡೆ, ಸಂಪುಟ ೭, ಪುಟಗಳು ೫೦ರಿಂದ ೫೩

೫

# ಕಾಲೇಜನ್ನು ಸ್ಥಾಪಿಸಲು ನಾನು ಮೂರು ಕಾರಣಗಳಿಂದ ಬಾಂಬೆಯನ್ನು ಆಯ್ದುಕೊಂಡಿದ್ದೇನೆ

ಬಾಂಬೆಯಲ್ಲಿ ಕಾಲೇಜೊಂದನ್ನು ಸ್ಥಾಪಿಸಲು ಸಾಲಕ್ಕಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಒಂದು ಅರ್ಜಿಯನ್ನು ಭಾರತ ಸರಕಾರಕ್ಕೆ ಸಲ್ಲಿಸಿದರು. ಅವರ ಅರ್ಜಿಯ ಪಾಠ ಕೆಳಕಂಡಂತೆ ಇದೆ. – ಸಂಪಾದಕರು.

ಮಾನ್ಯ ಸರ್ದಾರ್ ಸರ್ ಜೋಗೇಂದ್ರ ಸಿಂಗ್,
ಶಿಕ್ಷಣ ಇಲಾಖೆಯ ಪ್ರಭಾರಿ ಸದಸ್ಯರು,
ಹೆಲ್ತ್ ಅಂಡ್ ಲ್ಯಾಂಡ್ಸ್, ನವದೆಹಲಿ.

ಮಾನ್ಯರೆ,

ಪರಿಶಿಷ್ಟ ಜಾತಿಗಳವರಿಗೆ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಬಾಂಬೆಯಲ್ಲಿ ಕಾಲೇಜನ್ನು ಸ್ಥಾಪಿಸಲು ಭಾರತ ಸರಕಾರದಿಂದ ೬,೦೦,೦೦೦ (ಆರು ಲಕ್ಷ) ರೂಗಳ ಬಡ್ಡಿರಹಿತವಾದ ಸಾಲವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ. ಇದನ್ನು ಕೃಪೆಯಿಂದ ಪರಾಮರ್ಶಿಸಬೇಕೆಂದು ಕೋರುತ್ತೇನೆ.

೨. ಭಾರತದಲ್ಲಿ ಶಿಕ್ಷಣದ ಸ್ಥಿತಿ ಮತ್ತು ವಿವಿಧ ಸಮುದಾಯಗಳಲ್ಲಿ ಅದರ ಪ್ರಸಾರವನ್ನು ಪರಿಶೀಲಿಸಲು ೧೯೩೦ರಲ್ಲಿ ನೇಮಕವಾದ ಹಾರ್ಟಾಗ್ ಸಮಿತಿಯು ಆಗ ಅವನ್ನು ದಲಿತ ವರ್ಗಗಳೆಂದು ಕರೆಯುತ್ತಿದ್ದ ಪರಿಶಿಷ್ಟ ಜಾತಿಗಳವರಲ್ಲಿ ವಿದ್ಯಾಪ್ರಸಾರದ ಅಂಕಿಅಂಶಗಳನ್ನು ಎರಡು ತಃಖ್ತೆಗಳಲ್ಲಿ ಸಂಕ್ಷೇಪವಾಗಿ ತಿಳಿಸಿದ್ದಾರೆ. ಅವರ ವರದಿಯ ೨೨೦ನೆಯ ಪುಟದಿಂದ ಈ ಕೆಳಕಂಡ ತಃಖ್ತೆಗಳನ್ನು ತೆಗೆದುಕೊಳ್ಳಲಾಗಿದೆ.

**ತಃಖ್ತೆ – ೯೪**

ದಲಿತವರ್ಗಗಳ ಕಲಿಕೆಯ ವಿವಿಧ ಹಂತಗಳಲ್ಲಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರಾಂತವಾರು ಸಂಖ್ಯೆಗಳು

| ಪ್ರಾಂತ | ಪ್ರಾಥಮಿಕ ಹಂತ | ಮಾಧ್ಯಮಿಕ ಹಂತ | ಪ್ರೌಢ ಹಂತ | ಕಾಲೇಜು ಹಂತ |
|---|---|---|---|---|
| (೧) | (೨) | (೩) | (೪) | (೫) |
| ಮದರಾಸು | ೨೨೪,೮೭೩(ಅ) | ೨,೬೪೭(ಆ) | – | ೪೭ |
| ಬಾಂಬೆ | ೫೮,೬೫೧(ಅ) | ೭೩೦(ಇ) | – | ೯ |
| ಬಂಗಾಳ* | ೩,೧೦,೩೯೮ | ೮,೭೮೭ | ೫೪೯೬ | ೧,೬೭೦ |
| ಸಂಯುಕ್ತ ಪ್ರಾಂತಗಳು | ೮೮,೩೮೩ | ೧,೩೬೭ | ೪೨ | ೧೦ |

| | | | | |
|---|---|---|---|---|
| ಪಂಜಾಬು | ೧೪,೨೮೪ | ೯೧೪ | ೧೧೦ | – |
| ಇಲ್ಲ– | | | | |
| ಬಿಹಾರ ಮತ್ತು ಒರಿಸ್ಸಾ | ೨೪,೫೭೪ | ೫೨ | ೭ | – |
| ಇಲ್ಲ– | | | | |
| ಮಧ್ಯ ಪ್ರಾಂತಗಳು | ೩೩,೧೨೩ | ೧,೦೨೨ | ೫೯ | ೧೬ |

(ಅ) ಸಂಖ್ಯೆಗಳು ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ

(ಆ) ಸಂಖ್ಯೆಗಳು ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳವು

(ಇ) ಸಂಖ್ಯೆಗಳು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳವು

**ತಃಖ್ತೆ – ೯೫**

ದಲಿತವರ್ಗಗಳ ಕಲಿಕೆಯ ವಿವಿಧ ಹಂತಗಳಲ್ಲಿರುವ ವಿದ್ಯಾರ್ಥಿನಿಯರ ಪ್ರಾಂತವಾರು ಸಂಖ್ಯೆಗಳು

| ಪ್ರಾಂತ | ಪ್ರಾಥಮಿಕ ಹಂತ | ಮಾಧ್ಯಮಿಕ ಹಂತ | ಪ್ರೌಢ ಹಂತ | ಕಾಲೇಜು ಹಂತ |
|---|---|---|---|---|
| (೧) | (೨) | (೩) | (೪) | (೫) |
| ಮದರಾಸು | ೭,೨೭೬ | ೨೩೦ | ೧೪ | ೨ |
| ಬಾಂಬೆ | ೫,೭೩೯(ಅ) | ೧೫೯(ಅ) | ೧(ಅ) | –ಇಲ್ಲ– |
| ಬಂಗಾಳ | ೨೮,೦೮೬ | ೪೯(ಆ) | ೫(ಆ) | ೩(ಆ) |
| ಸಂಯುಕ್ತ ಪ್ರಾಂತಗಳು | ೨,೨೦೪ | ೮ | ೧ | –ಇಲ್ಲ– |
| ಪಂಜಾಬು | ೩೯೮ | ೨ | –ಇಲ್ಲ– | –ಇಲ್ಲ– |
| ಬಿಹಾರ ಮತ್ತು ಒರಿಸ್ಸಾ | ೨,೨೧೦(ಇ) | –ಇಲ್ಲ– | –ಇಲ್ಲ– | –ಇಲ್ಲ– |
| ಮಧ್ಯ ಪ್ರಾಂತಗಳು | ೫೨೧(ಇ) | ೩(ಇ) | –ಇಲ್ಲ– | –ಇಲ್ಲ– |

(ಅ) ಆದಿವಾಸಿಗಳು, ಪರ್ವತವಾಸಿಗಳು ಮತ್ತು ಅಪರಾಧೀ ಪಂಗಡಗಳನ್ನು ಒಳಗೊಂಡಿದೆ

(ಆ) ಎಲ್ಲಾ ಹಿಂದುಳಿದ ವರ್ಗಗಳನ್ನೂ ಒಳಗೊಂಡಿದೆ

(ಇ) ಬಾಲಕರ ಮತ್ತು ಬಾಲಿಕೆಯರ ಶಾಲೆಗಳಲ್ಲಿರುವ ಬಾಲಿಕೆಯರು

೩. ಇದೊಂದು ಅತ್ಯಂತ ವಿಷಾದಕರ ಸ್ಥಿತಿ. ೧೯೨೯ರಿಂದ ಇಲ್ಲಿಯವರೆಗೆ ಸ್ವಲ್ಪ ಪ್ರಗತಿಯು ಈ ವಿಷಯದಲ್ಲಿ ಆಗಿರಬಹುದು, ಆದರೆ ಅದನ್ನು ಅಳೆಯುವುದಕ್ಕೆ ಕರಾರುವಾಕ್ಕಾದ ಅಂಕಿಅಂಶಗಳು ನಮಗೆ ಸಿಗುವುದಿಲ್ಲ. ಆದರೆ, ಭಾರತ ಸರಕಾರದ ೧೯೪೩ರ ಗೊತ್ತುವಳಿಯ ಪ್ರಕಾರ ಪರಿಶಿಷ್ಟ ಜಾತಿಗಳವರಿಗೆ ಮೀಸಲಾದ ಶೇ. ೮.೫ ರಷ್ಟು ಸ್ಥಾನಗಳನ್ನು ತುಂಬುವುದು ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭಾರತದ ಸರಕಾರದ ಇಲಾಖೆಗಳಿಗೆ ಸಾಧ್ಯವಾಗಲಿಲ್ಲ ಎಂಬ ಅಂಶವೇ, ಪರಿಶಿಷ್ಟ ಜಾತಿಗಳಲ್ಲಿ ವಿದ್ಯಾಭ್ಯಾಸದ ಮಟ್ಟವು ೧೯೨೦ರ ಮಟ್ಟಕ್ಕಿಂತ ಮೇಲೇರಿಲ್ಲ ಎಂಬುದನ್ನು ಸೂಚಿಸುತ್ತದೆ.

೪. ಪರಿಶಿಷ್ಟ ಜಾತಿಗಳವರ ಸ್ಥಾನವನ್ನು ಮೇಲೆತ್ತುವ ದೃಷ್ಟಿಯಿಂದ ಹಾಗೂ ಅವರು ಉನ್ನತ ಶಿಕ್ಷಣವನ್ನು ಪಡೆಯುವುದರ ವಿರುದ್ಧ ಭಾರತೀಯ ಸಮಾಜದಲ್ಲಿ ಇರುವ ವಿರೋಧವನ್ನು ಪ್ರತಿರೋಧಿಸಿ

ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ದೃಷ್ಟಿಯಿಂದ ಪರಿಶಿಷ್ಟ ಜಾತಿಗಳವರಿಗೆ ಪ್ರಾಥಮಿಕ ಶಿಕ್ಷಣಕ್ಕಿಂತ ಉನ್ನತ ಶಿಕ್ಷಣವು, ಅದರಲ್ಲಿಯೂ ಕಾಲೇಜು ಶಿಕ್ಷಣವು, ಅತ್ಯಂತ ಪ್ರಮುಖವಾಗುತ್ತದೆ. ಅವರ ಕಲ್ಯಾಣವನ್ನು ಸಾಧಿಸಲು ಅವರ ಬಗ್ಗೆ ಕಾಳಜಿಯಿರುವಂತಹ ಲೋಕಸೇವಾ ನೌಕರರ ಅಗತ್ಯವಿದೆ. ಲೋಕಸೇವೆಯ ನೌಕರರಲ್ಲಿ ಅಂತಹ ಕಾಳಜಿಯು ಮೂಡಬೇಕಾದರೆ ಅದು ಸಮಾಜದ ಎಲ್ಲಾ ಸಮುದಾಯಗಳ, ಅದರಲ್ಲಿಯೂ ಪರಿಶಿಷ್ಟ ಜಾತಿಗಳ, ಪ್ರತಿನಿಧಿಗಳನ್ನು ಒಳಗೊಂಡಿರುವುದು ಅನಿವಾರ್ಯವಾಗುತ್ತದೆ. ಆದರೆ ಪರಿಶಿಷ್ಟ ಜಾತಿಗಳವರ ಪ್ರಗತಿಯ ಉದ್ದೇಶದಿಂದ ಅವರಿಗೆ ನೀಡುವ ಮೀಸಲಾತಿಯು ಕೇವಲ ಸಚಿವ ಸ್ಥಾನಗಳಿಗೆ ಮಾತ್ರ ಸೀಮಿತವಾದರೆ ಸಾಲದು, ಅದರಿಂದ ಆ ಸಮುದಾಯಕ್ಕೆ ಯಾವ ವಿಧವಾದ ಸಹಾಯವೂ ಸಾಧ್ಯವಿಲ್ಲ. ವೈಯಕ್ತಿಕವಾಗಿ ಒಂದು ನೌಕರಿಯನ್ನು ಗಿಟ್ಟಿಸಿಕೊಳ್ಳಲು, ತಮ್ಮ ಬದುಕಿನ ದಾರಿಯನ್ನು ಕಂಡುಕೊಳ್ಳಲು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಅವರಿಗೆ ಸಹಾಯವನ್ನು ಮಾಡಬಲ್ಲುದು. ಆದರೆ ಇಷ್ಟರಿಂದಲೇ ಪರಿಶಿಷ್ಟ ಜಾತಿಗಳವರನ್ನು ಮೇಲೆತ್ತಲು ಸಾಧ್ಯವಾಗುವುದಿಲ್ಲ. ಸಚಿವ ಸ್ಥಾನಗಳನ್ನು ಮಾತ್ರವಲ್ಲದೆ, ಕಾರ್ಯಾಂಗದಲ್ಲಿಯೂ ಅವರು ಹಲವು ಸ್ಥಾನಗಳನ್ನು ಪಡೆಯಲು ಶಕ್ಯರಾದರೆ ಮಾತ್ರ ಪರಿಶಿಷ್ಟ ಜಾತಿಗಳ ಸ್ಥಾನ ಮತ್ತು ಪರಿಸ್ಥಿತಿಯು ಉನ್ನತವಾಗಲು ಸಾಧ್ಯ. ಸರಕಾರದ ವ್ಯವಹಾರಗಳಿಗೆ ಹೊಸ ದಿಕ್ಕನ್ನು ತೋರಿಸಲು ಶಕ್ತವಾಗಿರುವುದರಿಂದ ಕಾರ್ಯಾಂಗದಲ್ಲಿನ ಸ್ಥಾನಗಳು ಸಶಕ್ತವಾಗಿರುವುದರಿಂದ ಮತ್ತು ಆ ಸ್ಥಾನಗಳು ಸೂಕ್ಷ್ಮವಾಗಿರುವುದರಿಂದ ಅವು ಬಹು ಪ್ರಮುಖವಾಗಿರುತ್ತವೆ. ಇಂತಹ ಸ್ಥಾನಗಳು, ಸಹಜವಾಗಿಯೇ ಉನ್ನತ ಶಿಕ್ಷಣದ ಹಿನ್ನೆಲೆಯನ್ನು ಅಪೇಕ್ಷಿಸುತ್ತವೆ. ಆದ್ದರಿಂದ ಪರಿಶಿಷ್ಟ ಜಾತಿಗಳವರಿಗೆ ನೀಡುವ ಶಿಕ್ಷಣದ ಮೂಲ ಉದ್ದೇಶವು ಅವರಿಗೆ ಕಾಲೇಜು ಶಿಕ್ಷಣದ ಹಂತವನ್ನು ತಲುಪುವ ವಿದ್ಯಾರ್ಥಿಗಳಿಗೆ ಅವರು ಈ ಹಂತದ ಶಿಕ್ಷಣವನ್ನು ಪೂರೈಸಲು ಅವಕಾಶಗಳನ್ನು ಮಾಡಿಕೊಡುವಂತಹುದಾಗಿರಬೇಕು ಮತ್ತು ಕಾರ್ಯಾಂಗದ ಸ್ಥಾನಗಳನ್ನು ತುಂಬಲು ಅವರನ್ನು ಅರ್ಹರನ್ನಾಗಿ ಮಾಡುವಂತಿರಬೇಕು.

೫. ಕಾಲೇಜು ಹಂತವನ್ನು ತಲುಪಿದ ನಂತರ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳು ಏಕೆ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುತ್ತಾರೆಂಬುದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದು ಮತ್ತು ಅತ್ಯಂತ ಪ್ರಮುಖವಾದುದು ಅವರ ಬಡತನ. ಎರಡನೆಯದು ಕಾಲೇಜುಗಳಲ್ಲಿ ಪ್ರವೇಶವನ್ನು ಪಡೆಯುವುದರಲ್ಲಿ ಅವರು ಎದುರಿಸಬೇಕಾಗಿರುವ ತೊಂದರೆಗಳು. ಮೂರನೆಯದು ಅವರಿಗೆ ಶುಲ್ಕದಿಂದ ವಿನಾಯತಿಯು ದೊರೆಯದಿರುವುದು ಮತ್ತು, ನಾಲ್ಕನೆಯದು ವಿದ್ಯಾರ್ಥಿನಿಲಯಗಳ ಅಭಾವ. ಇವುಗಳಲ್ಲಿ ಕೆಲವನ್ನು ಸರಕಾರದ ಆರ್ಥಿಕ ಸಹಾಯದಿಂದ ಪರಿಹರಿಸಬಹುದು. ಆದರೆ, ಆರ್ಥಿಕ ನೆರವಿನಿಂದ ಪರಿಹರಿಸಲಾಗದ ಒಂದು ಸಮಸ್ಯೆಯಿದೆ. ಅದೆಂದರೆ ಕಾಲೇಜುಗಳಲ್ಲಿ ಪ್ರವೇಶವನ್ನು ದೊರಕಿಸಿಕೊಳ್ಳುವುದು. ಕಾಲೇಜುಗಳಲ್ಲಿ ದೊರಕಬಹುದಾದ ಪ್ರವೇಶಗಳ ಸಂಖ್ಯೆಯು ವಿಶ್ವವಿದ್ಯಾನಿಲಯಗಳಿಂದ ಅಥವಾ ಸರಕಾರದಿಂದ ನಿಗದಿಗೊಳಿಸಲ್ಪಟ್ಟಿರುತ್ತದೆ. ಅದರ ಪ್ರಕಾರ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವು ದೊರೆಯುತ್ತದೆ. ಇದರಿಂದ ತಮ್ಮ ಕಾಲೇಜು ವಿದ್ಯಾಭ್ಯಾಸವನ್ನು ಮುಂದುವರಿಸಬಯಸುವ ಪರಿಶಿಷ್ಟ ಜಾತಿಗಳವರಿಗೆ ತೊಂದರೆಯಾಗುತ್ತದೆ. ಇದು ಒಂದು ಸಾಮಾನ್ಯ ತೊಂದರೆಯೆಂದು ಭಾವಿಸಬಹುದು. ಆದರೆ ಇದು ಇತರ ಸಮುದಾಯಗಳ ವಿದ್ಯಾರ್ಥಿಗಳಿಗಿಂತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಮೀರಲು ಕಷ್ಟಕರವಾದ ತೊಂದರೆಯಾಗಿರುತ್ತದೆ. ಏಕೆಂದರೆ, ಕಾಲೇಜು ಶಿಕ್ಷಣವು ಖಾಸಗಿಯವರ ಒಡೆತನದಲ್ಲಿದೆ ಮತ್ತು, ಬಹುತೇಕ ಕಾಲೇಜುಗಳು ಕೋಮುಭಾವನೆಗಳಿಂದ ಕೂಡಿರುವಂತಹ ಸಂಸ್ಥೆಗಳಿಂದ ನಡೆಸಲ್ಪಡುತ್ತಿವೆ

ಹಾಗೂ ಅಂತಹ ಮನೋಭಾವವನ್ನೇ ಉಳ್ಳ ಸಿಬ್ಬಂದಿ ವರ್ಗಗಳನ್ನು ಹೊಂದಿರುತ್ತವೆ. ಕಾಲೇಜುಗಳ ದೃಷ್ಟಿಕೋನವೇ ಬಹುತೇಕವಾಗಿ ಕೋಮುಭಾವನೆಯಿಂದ ಕೂಡಿರುತ್ತದೆ. ಕೋಮುಭಾವನೆಯನ್ನು ಹೊಂದಿರುವ ದೃಷ್ಟಿಕೋನವು ಪ್ರವೇಶಾವಕಾಶಗಳನ್ನು ದಯಪಾಲಿಸುವುದರ ಮೇಲೆ ಪ್ರಭಾವವನ್ನು ಬೀರುತ್ತವೆ. ಪರಿಣಾಮವಾಗಿ, ಕೆಲವು ವಿಶೇಷ ಸಮುದಾಯಗಳವರು ಅಥವಾ ಮೇಲಿನ ಸಮುದಾಯಗಳವರು ಪ್ರವೇಶದಲ್ಲಿ ಪಕ್ಷಪಾತದ ಲಾಭವನ್ನು ಪಡೆಯುತ್ತಾರೆ. ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಇರುವ ಸ್ಥಾನಗಳೆಲ್ಲಾ ಭರ್ತಿಯಾದವೆಂಬ ಕಾರಣದಿಂದ ಪ್ರವೇಶವನ್ನು ನಿರಾಕರಿಸಲಾಗುತ್ತದೆ ಅಥವಾ ಅಲ್ಪಸ್ವಲ್ಪ ಸ್ಥಾನಗಳು ಉಳಿದಿದ್ದರೆ ಮಾತ್ರ ಅವನ್ನು ನೀಡುವ ಔದಾರ್ಯವನ್ನು ತೋರಿಸಬಹುದು. ಕಾಲೇಜುಗಳ ಸಂಖ್ಯೆಯು ಅಧಿಕವಾಗಿರುವ ನಗರ ಪ್ರದೇಶಗಳತ್ತ ಜನರ ಮಹಾಪೂರವು ಹರಿಯುತ್ತಿರುವುದರಿಂದ ಪರಿಸ್ಥಿತಿಯು ಇನ್ನಷ್ಟು ಹದಗೆಟ್ಟಿದೆ. ಕಾಲೇಜು ಪ್ರವೇಶಗಳನ್ನು ಬಯಸುವ ವಿದ್ಯಾರ್ಥಿಗಳ ಸಂಖ್ಯೆಯು ಹಿಂದಿಗಿಂತ ಬಹುಪಾಲು ಅಧಿಕವಾಗಿರುವುದರಿಂದ, ಕಾಲೇಜುಗಳಲ್ಲಿ ಪ್ರವೇಶವನ್ನು ಪಡೆಯುವುದು ಬಹಳ ತ್ರಾಸದಾಯಕ ವಿಷಯವಾಗಿದೆ.

೬. ಇಂತಹ ಪರಿಸ್ಥಿತಿಯನ್ನು ಮುಂದುವರಿಯಲು ಬಿಡುವಂತಿಲ್ಲ. ಇದಕ್ಕೆ ಪರಿಹಾರವನ್ನು ಸಾಧ್ಯವಾದಷ್ಟು ಶೀಘ್ರವಾಗಿ ಕಂಡುಹಿಡಿಯಲೇಬೇಕು. ಇದಕ್ಕಿರುವ ಒಂದೇ ಪರಿಹಾರವೆಂದರೆ, ಆಯ್ದ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸುವ ಪ್ರಮುಖ ಉದ್ದೇಶದಿಂದ ಕಾಲೇಜುಗಳನ್ನು ತೆರೆಯುವುದು. ತಮ್ಮ ಸಮುದಾಯಗಳವರಿಗಾಗಿ ತಮ್ಮದೇ ಕಾಲೇಜುಗಳನ್ನು ಹೊಂದಿರುವುದರಿಂದ, ಈ ವಿಷಯದಲ್ಲಿ ಇತರ ಸಮುದಾಯಗಳವರು ಹೆಚ್ಚಾಗಿ ತಲೆಯನ್ನು ಕೆಡಿಸಿಕೊಳ್ಳುವುದಿಲ್ಲ. ಇದು ಇತರ ಅಲ್ಪಸಂಖ್ಯಾತ ಸಮುದಾಯಗಳಾದ ಸಿಕ್ಖರು, ಮುಸ್ಲಿಮರು, ಭಾರತೀಯ ಕ್ರಿಶ್ಚಿಯನ್ನರು ಮೊದಲಾದವರ ವಿಷಯದಲ್ಲಿಯೂ ಸತ್ಯವಾಗಿದೆ. ಏಕೆಂದರೆ ಅವರು ತಮ್ಮ ಸಮುದಾಯಗಳ ವಿದ್ಯಾರ್ಥಿಗಳಿಗಾಗಿ ಹಲವಾರು ಶಾಲೆ ಮತ್ತು ಕಾಲೇಜುಗಳನ್ನು ತಮ್ಮ ಮುಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆ. ತಮ್ಮ ನಿಯಂತ್ರಣದಲ್ಲಿ ಯಾವುದೇ ವಿದ್ಯಾಸಂಸ್ಥೆಗಳನ್ನು ಹೊಂದಿಲ್ಲದ ಪರಿಶಿಷ್ಟ ಜಾತಿಗಳವರಿಗೆ ಪ್ರವೇಶಾವಕಾಶವನ್ನು ಪಡೆಯುವಲ್ಲಿ ಇರುವ ಪೈಪೋಟಿಯಲ್ಲಿ ಗೆಲ್ಲುವುದರಲ್ಲಿ ಬಹಳ ಹಿನ್ನಡೆಯನ್ನು ಅನುಭವಿಸುತ್ತಾರೆ. ಅಂತಹ ಉದ್ದೇಶವನ್ನು ಮೂಲ ಆಶಯವನ್ನಾಗಿ ಹೊಂದಿರುವಂತಹ ಮತ್ತು ಅದೇ ಉದ್ದೇಶವನ್ನು ಮುಂದುವರೆಸಿಕೊಂಡು ಹೋಗುವಂತಹ ಒಂದು ಕಾಲೇಜನ್ನು ಬಾಂಬೆಯಲ್ಲಿ ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ನನ್ನ ಅಂದಾಜಿನ ಪ್ರಕಾರ ಕಾಲೇಜೊಂದನ್ನು ಪ್ರಾರಂಭಿಸಲು ಸುಮಾರು ಆರು ಲಕ್ಷ ರೂಪಾಯಿಗಳ ಆವಶ್ಯಕತೆಯಿದೆ. ಯುದ್ಧ-ಪೂರ್ವದ ದಿನಗಳಲ್ಲಿ ಇದರ ವೆಚ್ಚವು ಸಾಕಷ್ಟು ಕಡಿಮೆಯಿರಬಹುದಿತ್ತು. ಆದರೆ ಬೆಲೆಗಳು ಏರುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಈ ಮೊತ್ತಕ್ಕಿಂತ ಕಡಿಮೆ ವೆಚ್ಚದಲ್ಲಿ ಕಾಲೇಜನ್ನು ಪ್ರಾರಂಭಿಸುವುದು ಸಾಧ್ಯವಾಗಲಿಕ್ಕಿಲ್ಲವೆಂಬುದು ನನ್ನ ಭಾವನೆ. ಭಾರತದಲ್ಲಿ ಅತ್ಯಂತ ಬಡತನದಲ್ಲಿರುವ ಪರಿಶಿಷ್ಟ ಜಾತಿಗಳವರಿಗೆ ಈ ಮೊತ್ತವನ್ನು ಸಂಗ್ರಹಿಸುವುದು ಅಸಾಧ್ಯವಾದ ಕಾರ್ಯವೇ ಸರಿ. ಆದ್ದರಿಂದ, ನಾನು ಭಾರತ ಸರಕಾರವನ್ನು ಈ ಉದ್ದೇಶಕ್ಕಾಗಿ ಬಡ್ಡಿಯಿಲ್ಲದ, ಸೂಕ್ತ ಕಂತುಗಳಲ್ಲಿ ಮರುಪಾವತಿಮಾಡಬಹುದಾದಂತಹ ಸಾಲದ ರೂಪದಲ್ಲಿ ಈ ಮೊತ್ತವನ್ನು ನೀಡಬೇಕೆಂದು ಕೋರಿಕೊಳ್ಳುತ್ತೇನೆ. ಈ ಸಾಲಕ್ಕೆ ಹೊಣೆಯಾಗಿ ಉದ್ದೇಶಿತ ಕಾಲೇಜಿನ ಆಸ್ತಿಗಳನ್ನು ಸರಕಾರಕ್ಕೆ ಅಡಮಾನಮಾಡಲಾಗುತ್ತದೆ.

೭. ಉದ್ದೇಶಿತ ಕಾಲೇಜು ಹಾಕಿಕೊಂಡಿರುವ ಕಾರ್ಯಕ್ರಮಗಳ ಪ್ರಮುಖ ಅಂಶಗಳನ್ನು ನಾನು

ಈ ಮುಂದೆ ನೀಡಿದ್ದೇನೆ.

ಅ) ನಿಯಮಾನುಸಾರವಾಗಿ ನೇಮಿಸಲ್ಪಟ್ಟ ವ್ಯವಸ್ಥಾಪಕಮಂಡಲಿಯಿಂದ ನಡೆಸಲ್ಪಡುವ ಈ ಸಂಸ್ಥೆಯು ಚಾರಿಟಬಲ್ ಸಂಸ್ಥೆಗಳ ಅಧಿನಿಯಮದ ಪ್ರಕಾರ ನೊಂದಾಯಿಸಲ್ಪಟ್ಟಿರುತ್ತದೆ.

ಆ) ಇದು ಕಲಾ ವಿಭಾಗ ಮತ್ತು ವಿಜ್ಞಾನ ವಿಭಾಗಗಳನ್ನು ಹೊಂದಿರುತ್ತದೆ.

ಇ) ಈ ಮುಂದೆ ಹೇಳಿರುವಂತೆ ಇದು ಜಾತ್ಯತೀತವಾಗಿರುತ್ತದೆ –

೧) ಕಾಲೇಜು ಎಲ್ಲಾ ಜಾತಿ, ಪಂಗಡಗಳ ವಿದ್ಯಾರ್ಥಿಗಳಿಗೆ ಮುಕ್ತವಾಗಿರುತ್ತದೆ. ಆದರೆ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅಗತ್ಯಗಳಿಗೆ ಹೆಚ್ಚಿನ ಒತ್ತನ್ನು ನೀಡುತ್ತದೆ.

೨) ಬೋಧಕ ಸಿಬ್ಬಂದಿ ವರ್ಗವು ಎಲ್ಲಾ ಸಮುದಾಯಗಳವರನ್ನೂ ಒಳಗೊಂಡಿರುತ್ತದೆ ಮತ್ತು ಯಾವುದೇ ರೀತಿಯ ಜನಾಂಗೀಯ, ಧಾರ್ಮಿಕ ಅಥವಾ ಸಾಮುದಾಯಿಕ ಸಂಗತಿಗಳನ್ನೂ ಈ ವಿಷಯದಲ್ಲಿ ಗಮನಿಸುವುದಿಲ್ಲ.

೩) ವಿಶ್ವವಿದ್ಯಾನಿಲಯಗಳ ನಿಬಂಧನೆಗಳಿಗೆ ಒಳಪಟ್ಟು, ಕಾಲೇಜಿನ ಪ್ರವೇಶವು ಎಲ್ಲಾ ಪ್ರಾಂತಗಳ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಯಾವುದೇ ಭೇದಭಾವವಿಲ್ಲದೆ ಮುಕ್ತವಾಗಿರುತ್ತದೆ.

೮. ಕಾಲೇಜನ್ನು ಸ್ಥಾಪಿಸಲು ನಾನು ಬಾಂಬೆಯನ್ನು ಮೂರು ಕಾರಣಗಳಿಗಾಗಿ ಆಯ್ದುಕೊಂಡಿದ್ದೇನೆ. ಮೊದಲನೆಯದಾಗಿ, ಕಾಲೇಜಿನ ಆಡಳಿತವನ್ನು ಸ್ವತಃ ನಾನೇ ವಹಿಸಿಕೊಳ್ಳಲು ಉದ್ದೇಶಿಸಿದ್ದೇನೆ ಮತ್ತು ಪ್ರಕೃತವಿರುವ ನನ್ನ ಹೊಣೆಗಾರಿಕೆಯನ್ನು ಮುಗಿಸಿದ ತಕ್ಷಣವೇ ನಾನು ಬೋಧನಾಕಾರ್ಯವನ್ನು ಈ ಕಾಲೇಜಿನಲ್ಲಿ ತೆಗೆದುಕೊಳ್ಳುತ್ತೇನೆ. ಕಾಲೇಜಿನ ಪ್ರಾರಂಭಿಕ ಹಂತದಲ್ಲಿ ಸಂಸ್ಥೆಯ ಹೊಣೆಯನ್ನು ನನ್ನ ಹೆಗಲಿನ ಮೇಲೆಯೇ ಹೊತ್ತುಕೊಳ್ಳಬೇಕೆಂಬುದು ನನ್ನ ಭಾವನೆ. ಕಾಲೇಜನ್ನು ಬಾಂಬೆಯಲ್ಲಿ ಸ್ಥಾಪಿಸಿದರೆ ಈ ಕಾರ್ಯವನ್ನು ಮಾಡುವುದು ನನಗೆ ಸುಲಭವಾಗುತ್ತದೆ. ಎರಡನೆಯದಾಗಿ, ಬಾಂಬೆಯಲ್ಲಿ ಕಾಲೇಜು ಶಿಕ್ಷಣವನ್ನು ಅಪೇಕ್ಷಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ಅತ್ಯಧಿಕವಾಗಿರುವುದರಿಂದ ಮತ್ತು ಅವರಿಗೆ ಹಾಲಿ ಇರುವ ಕಾಲೇಜುಗಳಲ್ಲಿ ಪ್ರವೇಶಗಳನ್ನು ದೊರಕಿಸಿಕೊಳ್ಳುವುದು ಅಸಾಧ್ಯವಾಗಿರುವುದರಿಂದ ಬಾಂಬೆಯಲ್ಲಿ ಹೊಸ ಕಾಲೇಜುಗಳ ಆವಶ್ಯಕತೆಯು ಬಹಳವಾಗಿದೆ. ಬಾಂಬೆ ವಿಶ್ವವಿದ್ಯಾನಿಲಯದ ಸೆನೇಟಿನ ಮುಂದೆ ಈಗಾಗಲೇ ಹತ್ತು ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿ ಬಂದ ಅರ್ಜಿಗಳು ಇವೆ ಎಂಬ ಪತ್ರಿಕಾವರದಿಗಳೇ ಕಾಲೇಜು ಮೆಟ್ಟಿಲನ್ನು ಹತ್ತಲು ಕಾತರರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯ ಬಹುಳತೆಗೆ ಸಾಕ್ಷಿಯಾಗಿದೆ. ಇವರಲ್ಲಿ ಬಹುತೇಕರಿಗೆ ಪ್ರವೇಶಾವಕಾಶಗಳನ್ನು ನೀಡುವ ಅವಕಾಶವಿರುವುದರಿಂದ ಕಾಲೇಜುಗಳನ್ನು ಪ್ರಾರಂಭಿಸುವ ಮಾರ್ಗವು ಸುಕರವಾಗಿರುತ್ತದೆ ಮತ್ತು ಅವುಗಳು ಲಾಭಕರವಾಗಿ ನಡೆಸಲ್ಪಡುತ್ತವೆ ಎಂಬ ವಿಷಯದಲ್ಲಿ ನನಗೆ ವಿಶ್ವಾಸವಿದೆ. ಮೂರನೆಯದಾಗಿ, ಬಾಂಬೆಯ ಸೈಡೆನ್‌ಹ್ಯಾಮ್ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರೊಫೆಸರ್ ಅಗಿ, ಸರಕಾರೀ ಕಾನೂನು ಕಾಲೇಜಿನಲ್ಲಿ ಪ್ರಿನ್ಸಿಪಾಲನಾಗಿ, ಬಾಂಬೆ ವಿಶ್ವವಿದ್ಯಾನಿಲಯದ ಸೆನೇಟ್ ಸದಸ್ಯನಾಗಿ ಕಾರ್ಯನಿರ್ವಹಿಸಿದ ನನಗೆ ಬಾಂಬೆ ವಿಶ್ವವಿದ್ಯಾನಿಲಯದಿಂದ ಮಾನ್ಯತೆಯನ್ನು ಪಡೆದುಕೊಳ್ಳುವುದು ಹೊರ ಪ್ರಾಂತಗಳ ವಿಶ್ವವಿದ್ಯಾನಿಲಯದಿಂದ ಮಾನ್ಯತೆಯನ್ನು ಪಡೆದುಕೊಳ್ಳುವುದಕ್ಕಿಂತ ಸುಲಭವಾಗುತ್ತದೆ.

೯. ಕಾಲೇಜನ್ನು ಸ್ಥಾಪಿಸಲು ಸುಮಾರು ಆರು ಎಕರೆಯಷ್ಟು ವಿಸ್ತೀರ್ಣವುಳ್ಳ ಒಂದು ನಿವೇಶನವನ್ನು ನಾನು ಗುರುತಿಸಿದ್ದೇನೆ. ಅದು ಬಾಂಬೆ ಪುರಸಭೆಗೆ ಸೇರಿದೆ. ಕಾಲೇಜನ್ನು ಸ್ಥಾಪಿಸಲು ಅನುಕೂಲಕರವಾಗಿರುವ ನಿವೇಶನವೆಂದರೆ ಇದೊಂದೇ. ಈ ನಿವೇಶನವು ನನ್ನ ಕೈತಪ್ಪಿದರೆ, ನಾನು ನನ್ನ ಯೋಜನೆಯನ್ನೇ ಕೈಬಿಡಬೇಕಾಗುತ್ತದೆ, ಹಾಗಾದರೆ ಅದೊಂದು ದೊಡ್ಡ ಅನಾಹುತವಾಗುತ್ತದೆ. ನನಗೆ ಈ ಮೊತ್ತದ ಹಣವು ದೊರಕುವ ಆಶ್ವಾಸನೆಯು ಸಿಕ್ಕಿದರೆ ಮಾತ್ರ ನಾನು ಈ ನಿವೇಶನವನ್ನು ಖರೀದಿಸಲು ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳುತ್ತೇನೆ. ಈ ಮೊತ್ತವನ್ನು ಪಡೆಯುವುದು ಭಾರತ ಸರಕಾರದ ಸಾಲದ ರೂಪದಲ್ಲಿ ಮಾತ್ರ ಸಾಧ್ಯ. ಈ ಹಣವನ್ನು ನಾನು ತಕ್ಷಣವೇ ಪಡೆದುಕೊಳ್ಳುವುದಿಲ್ಲ. ಮಂಜೂರಾದ ಹಣವು ಭಾರತ ಸರಕಾರದ ಬಳಿಯೇ ಇರುತ್ತದೆ. ಹಣದ ಅಗತ್ಯ ಬಿದ್ದಾಗ, ಅಗತ್ಯವಿದ್ದಷ್ಟನ್ನು ಮಾತ್ರ ತೆಗೆದುಕೊಳ್ಳುತ್ತೇನೆ.

೧೦. ನಾನು ಈಗ ನೋಡಿರುವ ನಿವೇಶನವನ್ನು ಖರೀದಿಸಲು ಕಾತರನಾಗಿರುವುದರಿಂದ, ಈ ಸಾಲವನ್ನು ತಾವು ಆದಷ್ಟು ಶೀಘ್ರವಾಗಿ ಮಂಜೂರುಮಾಡಿದರೆ ತಮಗೆ ಅತ್ಯಂತ ಕೃತಜ್ಞನಾಗಿರುತ್ತೇನೆ.

೧೯೪೫ರ ಫೆಬ್ರವರಿ ೧, ತಮ್ಮ ವಿಶ್ವಾಸಿ.
೨೨, ಪೃಥ್ವಿರಾಜ್ ರಸ್ತೆ ಸಹಿ (ಬಿ.ಆರ್. ಅಂಬೇಡ್ಕರ್)
ನವದೆಹಲಿ

* * * * *

೬

# ಮುಂಬಯಿಯ ದ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯ ಸಂಸ್ಥಾಪನಾ ವಿವರಣಪತ್ರ

(ಸ್ಥಾಪನೆ: ೧೯೪೫ರ ಜುಲೈ ೮)

**ಸಂಸ್ಥಾಪಕರು:**

**ಡಾ. ಬಿ.ಆರ್. ಅಂಬೇಡ್ಕರ್**

ಎಂ.ಎ. ಪಿ.ಎಚ್.ಡಿ., ಡಿ.ಎಸ್.ಸಿ.,ಎಲ್.ಎಲ್.ಡಿ (ಕೊಲಂಬಿಯಾ), ಡಿ.ಲಿಟ್(ಉಸ್ಮಾನಿಯಾ),
ಬ್ಯಾರಿಸ್ಟರ್–ಅಟ್–ಲಾ

ಮುಖ್ಯ ಕಚೇರಿ
ಆನಂದ ಭವನ,
ಡಾ.ದಾದಾಭಾಯಿ ನವರೋಜಿ ರಸ್ತೆ,
ಕೋಟೆ, ಮುಂಬೈ ೪೦೦ ೦೨೩

ನೊಂದಾವಣೆ:
೧೮೬೦ರ ೨೧ನೆಯ ಸೊಸೈಟಿ ನೊಂದಾವಣೆಯ ಅಧಿನಿಯಮದ ಅಡಿಯಲ್ಲಿ ನೊಂದಾಯಿತವಾಗಿದೆ
ನೊಂದಾವಣೆ ಸಂಖ್ಯೆ: ೧೯೪೫–೪೬ರ ೧೩೭೫, ದಿನಾಂಕ ೧೯೪೫ರ ಜುಲೈ ೯
ಮತ್ತು
೧೯೫೦ರ ಬಾಂಬೆ ಪಬ್ಲಿಕ್ ಟ್ರಸ್ಟ್ (೧೯೫೦ ಬಾಂಬೆಯ ೨೯ನೆಯ) ಅಧಿನಿಯಮದ ಪ್ರಕಾರ ನೊಂದಾಯಿತವಾಗಿದೆ
ನೊಂದಾವಣೆ ಸಂಖ್ಯೆ: ಎಫ್ ೩೦೩ (ಬಾಮ್)

ದಿನಾಂಕ ೧೯೫೩ರ ಜೂನ್ ೨.

# ಪೀಪಲ್ಸ್ ಎಜ್ಯುಕೇಷನ್ ಸೊಸೈಟಿ, ಮುಂಬಯಿ

## ವಿಶ್ವಸ್ಥ ಸಮಿತಿಯ ಸದಸ್ಯರು

೧. ಶ್ರೀ. ಕೆ.ಬಿ. ತಲ್ವಾಟ್ಕರ್ .... .... (ವಿಶ್ವಸ್ಥ)
೨. ಆನರಬಲ್ ಶ್ರೀ ಕೆ.ಎಚ್. ರಂಗನಾಥ್ ... .... (ವಿಶ್ವಸ್ಥ)
೩. ಶ್ರೀ ಎಸ್.ಎಸ್. ರೇಗೆ .... .... (ವಿಶ್ವಸ್ಥ)

## ಆಡಳಿತ ಮಂಡಳಿಯ ಸದಸ್ಯರು

೧. ಡಾ. ಎಸ್.ಪಿ. ಗಾಯಕ್‌ವಾಡ್, ಜಿ.ಸಿ.ಎ.ಎಮ್. .... .... (ಅಧ್ಯಕ್ಷರು)
೨. ಶ್ರೀ ಎಸ್. ಎಸ್. ರೇಗೆ, ಬಿ.ಎ., ಡಿಪ್. ಲೈಬ್. ವಿ .... .... (ಉಪಾಧ್ಯಕ್ಷರು)
೩. ಶ್ರೀ ಕೆ.ಬಿ. ತಲ್ವಾಟ್ಕರ್, ಎಂ.ಎ., ಎಲ್.ಎಲ್.ಎಮ್. ಎಸ್.ಇ.ಎಮ್.
೪. ಡಾ. ಪಿ.ಟಿ. ಬೋರಾಲೆ, ಬಿ.ಎ., ಎಲ್.ಎಲ್.ಬಿ., ಪಿ.ಎಚ್.ಡಿ (ಕಾನೂನು)
೫. ಶ್ರೀ ಎಂ.ಎಸ್. ಮೋರೆ, ಬಿ.ಎ., ಎಲ್.ಎಲ್. ಎಮ್.
೬. ಪ್ರೊ. ಎಸ್.ಕೆ.ಮೊಹಗಾಂವ್‌ಕರ್, ಎಂ.ಕಾಂ.
೭. ಆನರಬಲ್. ಶ್ರೀ ಕೆ.ಎಚ್.ರಂಗನಾಥ್, ಬಿ.ಎಸ್.ಸಿ., ಬಿ.ಎಲ್.
೮. ಪದ್ಮಶ್ರೀ ಡಾ. ಎಂ.ಎಲ್. ಶಹರೆ, ಎಂ.ಎಸ್.ಸಿ., ಪಿ.ಎಚ್.ಡಿ
೯. ಪ್ರೊ. ಎಸ್.ಎಲ್. ಖೋತ್, ಎಂ.ಎ., ಎಲ್.ಎಲ್.ಎಮ್.
೧೦. ಪ್ರೊ. ಅರುಣ್ ಎಂ. ದೊಂಡೆ, ಎಂ.ಎ., ಎಲ್.ಎಲ್.ಬಿ., ಮಾಜಿ ವಿಧಾನ ಪರಿಷತ್ತಿನ ಸದಸ್ಯರು

## ಆಡಳಿತಾಧಿಕಾರಿ

ಪ್ರಿನ್. ಡಿ.ಜೆ. ಗಂಗುರ್ಡೆ, ಎಂ.ಕಾಂ., ಎಲ್.ಎಲ್.ಎಂ., ಕಾರ್ಯದರ್ಶಿ

## ಮುಂಬಯಿಯ ದ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯ ಸಂಸ್ಥಾಪನಾ ವಿವರಣಪತ್ರ

ಸಂಸ್ಥೆಯ ಹೆಸರು ಮತ್ತು ಉದ್ದೇಶಗಳು:

೧. ಸಂಸ್ಥೆಯ ಹೆಸರು ದ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿ ಎಂದಾಗಿರುತ್ತದೆ. ಮತ್ತು ಇದರ ವ್ಯವಸ್ಥೆ ಮತ್ತು ಆಡಳಿತವನ್ನು ಬೌದ್ಧರು ನೋಡಿಕೊಳ್ಳುತ್ತಾರೆ.

೨. ಸಂಸ್ಥೆಯ ಕಚೇರಿಯು ಬಾಂಬೆಯಲ್ಲಿ ಅಥವಾ ಇನ್ನು ಮುಂದೆ ಕಾಲ ಕಾಲಕ್ಕೆ ತೀರ್ಮಾನಿಸಲ್ಪಡುವ ಬೇರಾವುದೇ ಸ್ಥಳದಲ್ಲಿ ಇರತಕ್ಕದ್ದು.

೩. ಸಂಸ್ಥೆಯ ಉದ್ದೇಶವು ಹೀಗಿರುತ್ತವೆ –

ಅ) ಪ್ರಾಥಮಿಕ, ಕಾಲೇಜು, ತಾಂತ್ರಿಕ ಹಾಗೂ ಶಾರೀರಿಕ ಶಿಕ್ಷಣಕ್ಕೆ ಅನುಕೂಲವನ್ನು ಮಾಡಿಕೊಡುವುದು,

ಆ) ಶಾಲೆಗಳು, ಕಾಲೇಜುಗಳು, ವಿಹಾರಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಆಟದ ಮೈದಾನಗಳು, ಬೌದ್ಧ ಸಂಸ್ಥೆಗಳು ಮೊದಲಾದವುಗಳನ್ನು ಮಹಾರಾಷ್ಟ್ರ ರಾಜ್ಯದಲ್ಲಿ ಹಾಗೂ ಭಾರತದ ವಿವಿಧ ಭಾಗಗಳಲ್ಲಿ ಸ್ಥಾಪಿಸುವುದು, ಪ್ರಾರಂಭಿಸುವುದು, ನಡೆಸಿಕೊಂಡುಹೋಗುವುದು ಮತ್ತು ಶೈಕ್ಷಣಿಕ ಅಥವಾ ಬೌದ್ಧ ಧಾರ್ಮಿಕ ಸಂಸ್ಥೆಗಳಿಗೆ ಸಹಾಯಮಾಡುವುದು, ಇತ್ಯಾದಿ.

ಇ) ಬಡವರ ಮತ್ತು ಬೌದ್ಧರ ಶಿಕ್ಷಣಕ್ಕೆ ಅನುಕೂಲಗಳನ್ನು ಮಾಡಿಕೊಡುವುದು,

ಈ) ಪರಿಶಿಷ್ಟ ಜಾತಿಗಳವರಿಗೆ ಮತ್ತು ಪರಿಶಿಷ್ಟ ಜಾತಿಗಳಿಂದ ಬೌದ್ಧ ಧರ್ಮಕ್ಕೆ ಮತಾಂತರಗೊಂಡವರಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಮೂಡಿಸುವುದು ಮತ್ತು ಅವರಿಗೆ ಉನ್ನತ ಶಿಕ್ಷಣಕ್ಕಾಗಿ ವಿಶೇಷ ಸೌಲಭ್ಯಗಳನ್ನು, ವಿದ್ಯಾರ್ಥಿವೇತನವನ್ನು, ಶಾಲಾಶುಲ್ಕ ವಿನಾಯಿತಿ, ಮೊದಲಾದವುಗಳನ್ನು ನೀಡುವುದು.

ಉ) ವಿಜ್ಞಾನ, ಬೌದ್ಧ ಮತ್ತು ಇತರ ಧರ್ಮಗಳ ಅಧ್ಯಯನ, ಅವುಗಳ ತೌಲನಿಕ ಅಧ್ಯಯನ, ಕುಶಲ ಕಲೆ ಮತ್ತು ಇತರ ಉಪಯೋಗೀ ಜ್ಞಾನಗಳ ಅಧ್ಯಯನವನ್ನು ಪ್ರೋತ್ಸಾಹಿಸುವುದು,

ಊ) ಸಂಸ್ಥೆಗಾಗಿ ಆಸ್ತಿಯನ್ನು ಖರೀದಿಸುವುದು, ಬಾಡಿಗೆಗೆ ತೆಗೆದುಕೊಳ್ಳುವುದು, ಅಥವಾ ಇನ್ನಾವುದಾದರೂ ರೀತಿಯಲ್ಲಿ ಪಡೆಯುವುದು, ಹಾಗೂ ಸಂಸ್ಥೆಯ ನಿಧಿಯನ್ನು ಕಾಲದಿಂದ ಕಾಲಕ್ಕೆ ತೆಗೆದುಕೊಳ್ಳುವ ನಿರ್ಧಾರದಂತೆ ತೊಡಗಿಸುವುದು,

ಎ) ಸಂಸ್ಥೆಯ ಉದ್ದೇಶಕ್ಕಾಗಿ ನಿವಾಸಗಳು, ವಿಹಾರಗಳು, ಕಟ್ಟಡಗಳು – ಇವುಗಳನ್ನು ನಿರ್ಮಿಸುವುದು, ನಿರ್ವಹಿಸುವುದು, ರಿಪೇರಿ ಮಾಡುವುದು, ಪುನರ್ನಿರ್ಮಿಸುವುದು, ಬದಲಾಯಿಸುವುದು, ಮೊದಲಾದವನ್ನು ಮಾಡುವುದು,

ಏ) ಸಂಸ್ಥೆಯ ಯಾವುದೇ ಆಸ್ತಿಯನ್ನು ಅಥವಾ ಎಲ್ಲಾ ಆಸ್ತಿಗಳನ್ನು ಮಾರುವುದು, ವಿಲೇವಾರಿಮಾಡುವುದು, ಉತ್ತಮಗೊಳಿಸುವುದು, ವಿಸ್ತರಿಸುವುದು. ಬದಲಾಯಿಸುವುದು, ಬಾಡಿಗೆಗೆ ಅಥವಾ ಭೋಗ್ಯಕ್ಕೆ ನೀಡುವುದು, ಪರಾಧೀನಗೊಳಿಸುವುದು,

ಐ) ಸಂಸ್ಥೆಯ, ಅದರಲ್ಲಿಯೂ ಬೌದ್ಧರ ಧ್ಯೇಯೋದ್ದೇಶಗಳನ್ನು ಹೆಚ್ಚಾಗಿ ಮುಂದುವರಿಸಲು ಸಂಸ್ಥೆಯನ್ನು ಅಥವಾ ಸಂಸ್ಥೆಯು ನಡೆಸುವ ಅಥವಾ ಸಂಸ್ಥೆಗೆ ಸೇರಿದ ಯಾವುದೇ ಸಂಸ್ಥೆಯನ್ನು/ ಸಂಸ್ಥೆಗಳನ್ನು ಬೇರೆ ಸಂಸ್ಥೆಯೊಂದಿಗೆ ಐಕ್ಯಗೊಳಿಸುವುದು, ಬೇರೆ ಸಂಸ್ಥೆಯ ಆಶ್ರಯವನ್ನು ಪಡೆದುಕೊಳ್ಳುವುದು.

ಒ) ಸಂಸ್ಥೆಯ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು ನಿಧಿಯನ್ನು, ಭದ್ರತೆಯನ್ನು ನೀಡಿ ಅಥವಾ ನೀಡದೆ, ಸಂಗ್ರಹಿಸುವುದು,

ಓ) ಸಂಸ್ಥೆಯನ್ನು ಭಾರತದ ಯಾವುದೇ ರಾಜ್ಯದಲ್ಲಿ ನೊಂದಾಯಿಸುವುದು ಅಥವಾ ಅಲ್ಲಿ ಸಂಸ್ಥೆಗೆ ಮಾನ್ಯತೆಯನ್ನು ಪಡೆಯುವುದು,

ಔ) ಮೇಲೆ ಹೇಳಿದ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಅಗತ್ಯವಾಗಿರುವ ಅಥವಾ ಅದಕ್ಕೆ ಆನುಷಂಗಿಕವಾಗಿರುವ ಏನನ್ನಾದರೂ ನ್ಯಾಯಸಮ್ಮತವಾಗಿ ಮಾಡುವುದು.

**೨ – ಚಂದಾದಾರರು ಮತ್ತು ಪೋಷಕರು**

೪. ಸಂಸ್ಥೆಗೆ ೧೦ ರೂಗಳ ವಾರ್ಷಿಕ ಚಂದಾವನ್ನು ನೀಡುವ ಯಾರೇ ಆಗಲೀ, ಸಂಸ್ಥೆಯ ಚಂದಾದಾರರಾಗಿ ನೊಂದಾಯಿಸಿಕೊಳ್ಳಲು ಮತ್ತು ಚಂದಾದಾರರ ಸವಲತ್ತುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

೫. ಸಂಸ್ಥೆಗೆ ೫೦೦ ರೂ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಹಣವನ್ನು ನೀಡುವ ಯಾರೇ ಆಗಲಿ, ಸಂಸ್ಥೆಯ ಪೋಷಕರಾಗಲು ಮತ್ತು ಪೋಷಕರ ಸವಲತ್ತುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

**೩ – ನಿಯಂತ್ರಣ ಮತ್ತು ಆಡಳಿತ**

೬. ಸಂಸ್ಥೆಯು ಕೆಳಕಂಡ ಅಂಗಗಳನ್ನು ಹೊಂದಿರುತ್ತದೆ –

ಅ) ಆಡಳಿತ ಮಂಡಳಿ,

ಆ) ವಿಶ್ವಸ್ಥ ಮಂಡಳಿ,

ಇ) ಮಹಾ ಸಮಿತಿ, ಮತ್ತು

ಈ) ಪ್ರತಿ ಕಾಲೇಜು, ವಿಹಾರ, ಶಾಲೆ ಅಥವಾ ಇನ್ನಾವುದೇ ಸಂಸ್ಥೆಗೂ, ಅದರದರ ಆಡಳಿತ ವ್ಯವಹಾರಗಳನ್ನು ನಿರ್ವಹಿಸಲು ಒಂದು ಆಡಳಿತ ಮಂಡಳಿ ಇರುತ್ತದೆ.

೭. ಆಡಳಿತ ಮಂಡಳಿಯು ಹನ್ನೊಂದು ಸದಸ್ಯರನ್ನು ಹೊಂದಿರುತ್ತದೆ. ಈ ಹನ್ನೊಂದು ಮಂದಿ ಸದಸ್ಯರಲ್ಲಿ, ಕನಿಷ್ಠ ಏಳು ಸದಸ್ಯರಾದರೂ ಪರಿಶಿಷ್ಟ ಜಾತಿಗಳಿಂದ ಬೌದ್ಧ ಧರ್ಮಕ್ಕೆ ಮತಾಂತರಗೊಂಡವರಾಗಿರತಕ್ಕದ್ದು.

೭(ಅ) ಆಡಳಿತ ಮಂಡಳಿಯು ವಿಶೇಷ ಗೊತ್ತುವಳಿಯಲ್ಲಿ ನಮೂದಿಸದ ಯಾವುದಾದರೂ ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಪದನಿಮಿತ್ತ ಸದಸ್ಯರನ್ನಾಗಿ ನೇಮಿಸಲ್ಪಡಲು ಆಹ್ವಾನಿಸಬಹುದು. ಅಂತಹ ವ್ಯಕ್ತಿಗಳಿಗೆ ಅವರು ನೇಮಕವಾದ ಉದ್ದೇಶದಿಂದ ಹೊರತಾದ ಯಾವುದೇ ವಿಷಯಗಳ ಚರ್ಚೆಯಲ್ಲಿ ಮತವನ್ನು ಚಲಾಯಿಸಲು ಹಕ್ಕು ಇರುವುದಿಲ್ಲ.

ಅಂತಹ ವ್ಯಕ್ತಿಗಳು ನೇಮಕವಾದ ಉದ್ದೇಶವನ್ನು ಮತ್ತು ಅದರ ವ್ಯಾಪ್ತಿಯನ್ನು ಕುರಿತು ಭಿನ್ನಾಭಿಪ್ರಾಯಗಳು ಮೂಡಿದಾಗ, ಅಧ್ಯಕ್ಷರ ನಿರ್ಣಯವೇ ಅಂತಿಮವಾಗಿರುತ್ತದೆ.

೮. ಆಡಳಿತ ಮಂಡಳಿಯು ಅದರ ಸದಸ್ಯರುಗಳ ಪೈಕಿ ಆಯ್ದ ಮೂರು ಜನರನ್ನು ವಿಶ್ವಸ್ಥ ಮಂಡಳಿಯು ಹೊಂದಿರುತ್ತದೆ. ಈ ಮೂವರಲ್ಲಿ ಕನಿಷ್ಠ ಇಬ್ಬರಾದರೂ ಬೌದ್ಧ ಮತಕ್ಕೆ ಮತಾಂತರಗೊಂಡ ಪರಿಶಿಷ್ಟ ಜಾತಿಗಳವರಾಗಿರತಕ್ಕದ್ದು.

೯. ಈ ಕೆಳಗೆ ಹೇಳಿರುವುದನ್ನು ಹೊರತುಪಡಿಸಿ ಇತರ ಎಲ್ಲಾ ಸಂದರ್ಭದಲ್ಲಿಯೂ, ಸಂಸ್ಥೆಯ ಆಸ್ತಿ ಮತ್ತು ನಿಧಿಗಳ ಜವಾಬ್ದಾರಿಯು ವಿಶ್ವಸ್ಥ ಮಂಡಳಿಯ ಮೇಲೆ ಇರುತ್ತದೆ.

೯(ಅ) ಸಂಸ್ಥೆಯ ಆಸ್ತಿ ಮತ್ತು ನಿಧಿಗಳ ವಿಷಯದಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಹೂಡಲು ವಿಶ್ವಸ್ಥ ಮಂಡಳಿಯು ಅಧಿಕಾರವನ್ನು ಹೊಂದಿರುತ್ತದೆ ಮತ್ತು ಇತರರು ವಿಶ್ವಸ್ಥ ಮಂಡಳಿಯ ಮೇಲೆ

ತತ್ಸಂಬಂಧಿ ವ್ಯಾಜ್ಯಗಳನ್ನು ಹೂಡಬಹುದು.

೧೦(೧) ಸಂಸ್ಥೆಯ ಎಲ್ಲಾ ಅಂಗಸಂಸ್ಥೆಗಳ ಮೇಲ್ವಿಚಾರಣೆ ನಡೆಸಲು ಮತ್ತು ಅವುಗಳ ಕಾರ್ಯಗಳಲ್ಲಿ ಸಮನ್ವಯವನ್ನು ಸಾಧಿಸಲು ಒಂದು ಮಹಾ ಸಮಿತಿಯು ಅಸ್ತಿತ್ವದಲ್ಲಿ ಇರುತ್ತದೆ. ಕನಿಷ್ಠ ೧೫ ಸದಸ್ಯರನ್ನು ಮಹಾಸಮಿತಿಯು ಒಳಕೊಂಡಿರುತ್ತದೆ ಮತ್ತು ಈ ಸದಸ್ಯರನ್ನು ಆಡಳಿತ ಮಂಡಳಿಯು ನಾಮಕರಣಮಾಡುತ್ತದೆ. ಈ ಹದಿನೈದು ಸದಸ್ಯರಲ್ಲಿ, ಹನ್ನೊಂದು ಸದಸ್ಯರು ಆಡಳಿತ ಮಂಡಳಿಯಿಂದ ಬಂದವರಾಗಿದ್ದು ಅವರಲ್ಲಿ ಎಂಟು ಸದಸ್ಯರು ಪರಿಶಿಷ್ಟ ಜಾತಿಗಳಿಂದ ಮತಾಂತರಗೊಂಡ ಬೌದ್ಧರಾಗಿರುತ್ತಾರೆ. ಉಳಿದ ಸದಸ್ಯರು ಚಂದಾದಾರರು ಮತ್ತು ಪೋಷಕರ ವಿಭಾಗದಿಂದ ಆಯ್ಕೆಯಾದವರಾಗಿರುತ್ತಾರೆ.

(೨) ಆಡಳಿತ ಮಂಡಳಿಯು ಬೇರೆಯ ರೀತಿಯನ್ನು ನಿಯಮಿಸದಿದ್ದರೆ, ಪ್ರತಿ ಅಂಗಸಂಸ್ಥೆಯ ಮುಖ್ಯಸ್ಥರೂ ಪದನಿಮಿತ್ತ ಮಹಾಸಮಿತಿಯ ಸದಸ್ಯರಾಗಿರುತ್ತರೆ.

(೩) ಮಹಾಸಮಿತಿಯ ಗೊತ್ತುವಳಿಗಳು ಕೇವಲ ಶಿಫಾರಸ್ಸುಗಳಾಗಿರುತ್ತವೆ.

೧೧. ಆಡಳಿತ ಮಂಡಳಿಯು ತೀರ್ಮಾನಿಸುವಂತೆ, ಪ್ರತಿ ಕಾಲೇಜು, ವಿಹಾರ, ಶಾಲೆ ಅಥವಾ ಇತರ ಅಂಗಸಂಸ್ಥೆಗೆ ಒಂದೊಂದು ಕಾರ್ಯನಿರ್ವಾಹಕ ಮಂಡಳಿಯಿರುತ್ತದೆ. ಈ ಕಾರ್ಯನಿರ್ವಾಹಕ ಮಂಡಳಿಯು ಆಡಳಿತ ಮಂಡಳಿಯು ನೇಮಕ ಮಾಡಿದ ಕನಿಷ್ಠ ಐದು ಮತ್ತು ಗರಿಷ್ಠ ಏಳು ಸದಸ್ಯರನ್ನು ಒಳಗೊಂಡಿರುತ್ತದೆ. ಅವರಲ್ಲಿ ಒಬ್ಬರು ಕಾಲೇಜು, ಶಾಲೆ, ಅಥವಾ ಸಂಸ್ಥೆಯ ಡೀನ್, ಪ್ರಿನ್ಸಿಪಾಲ್ ಅಥವಾ ರಿಜಿಸ್ಟ್ರಾರ್ ಆಗಿರುತ್ತಾರೆ. ಸದಸ್ಯರಲ್ಲಿ ಕನಿಷ್ಠ ಇಬ್ಬರಾದರೂ ಪರಿಶಿಷ್ಟ ಜಾತಿಗಳಿಂದ ಮತಾಂತರಗೊಂಡ ಬೌದ್ಧರಾಗಿರುತ್ತಾರೆ ಮತ್ತು ಒಬ್ಬರು ಆಡಳಿತ ಮಂಡಳಿಯಿಂದ ನೇಮಕಗೊಂಡ ಶಿಕ್ಷಣತಜ್ಞರಾಗಿರುತ್ತಾರೆ.

೧೨. ಆಡಳಿತ ಮಂಡಳಿಯ ಅಧ್ಯಕ್ಷರು ಬೌದ್ಧರಾಗಿರಬೇಕು. ಅವರು ವಿಶ್ವಸ್ಥ ಮಂಡಳಿ, ಮಹಾಸಮಿತಿ ಮತ್ತು ಎಲ್ಲಾ ಕಾರ್ಯಕಾರಿ ಸಮಿತಿಗಳ ಪದನಿಮಿತ್ತ ಸದಸ್ಯರೂ ಹಾಗೂ ಅಧ್ಯಕ್ಷರೂ ಆಗಿರುತ್ತಾರೆ. ಮೇಲೆ ಹೇಳಿದ ಖಂಡಗಳಲ್ಲಿ ಹೇಳಿರುವ ಹಲವಾರು ಸದಸ್ಯರ ಜೊತೆಗೆ ಇವರೂ ಈ ಎಲ್ಲಾ ಅಂಗಸಂಸ್ಥೆಗಳ ಸದಸ್ಯರಾಗಿರುತ್ತಾರೆ.

೧೨(ಅ)(೧) ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಗಳು ಅಧ್ಯಕ್ಷರಿಗೆ ಇರುತ್ತವೆ.

(೨) ಸಂಸ್ಥೆಯ ಪರವಾಗಿ ಎಲ್ಲಾ ದಸ್ತಾವೇಜು ಪತ್ರಗಳು ಮತ್ತು ಸಂಸ್ಥೆಯು ನೀಡಬೇಕಾದ ಖಾತರಿ ಪತ್ರಗಳು – ಇವುಗಳಿಗೆ ಅಧ್ಯಕ್ಷರು ಮಾತ್ರ ಅಧಿಕೃತವಾಗಿ ಸಹಿಹಾಕಬಹುದು ಮತ್ತು ಇಂತಹ ಪತ್ರಗಳಿಗೆ ಸಂಸ್ಥೆಯು ಬದ್ಧವಾಗಿರುತ್ತದೆ.

೧೩. ಸಂಸ್ಥೆಯ ಸಂಪೂರ್ಣ ನಿಯಂತ್ರಣ, ಆಡಳಿತ, ಸಂಸ್ಥೆಯ ಎಲ್ಲಾ ಅಂಗಸಂಸ್ಥೆಗಳು, ಸಂಸ್ಥೆಯ ಆಸ್ತಿ ಮತ್ತು ನಿಧಿಗಳು – ಎಲ್ಲವೂ ಆಡಳಿತ ಮಂಡಳಿಯ ಸ್ವಾಧೀನದಲ್ಲಿ ಇರುತ್ತವೆ.

೧೪. ಈ ಮುಂದೆ ಹೆಸರಿಸಿರುವವರು ಪ್ರಥಮ ಆಡಳಿತ ಮಂಡಳಿಯ ಸದಸ್ಯರಾಗಿರುತ್ತಾರೆ:

೧. ಆನರಬಲ್ ಡಾ. ಬಿ.ಆರ್. ಅಂಬೇಡ್ಕರ್, ಎಂ.ಎ., ಪಿ.ಎಚ್.ಡಿ., ಡಿ.ಎಸ್‌ಸಿ., ಬ್ಯಾರಿಸ್ಟರ್–ಅಟ್–ಲಾ, ನವದೆಹಲಿ,

೨. ರಾವ್ ಬಹದ್ದೂರ್ ಎನ್. ಶಿವರಾಜ್, ಬಿ.ಎ., ಬಿ.ಎಲ್., ಎಂ.ಎಲ್.ಎ., ಮದರಾಸು,

೩. ದೌಲತ್ ರಾವ್ ಗುಲಾಜಿ ಜಾಧವ್, ಬಿ.ಎ., ಎಲ್.ಎಲ್.ಬಿ., ಬಾಂಬೆ,

೪. ರಾಜ್ ರಾಮ್ ಭೋಲೆ, ಬಿ.ಎಸ್‌ಸಿ., ಎಲ್.ಎಲ್.ಬಿ., ಪೂನಾ.,

೫. ಜೆ.ಎಚ್. ಸುಬ್ಬಯ್ಯ.,ಬಿ.ಎ., ಸಿಕಂದರಾಬಾದ್,

೬. ಹೀರ್‌ಜಿಭಾಯ್ ಕುಶಾಲ್‌ಭಾಯ್ ಪಟೇಲ್, ಬಿ.ಎ., ಎಲ್.ಎಲ್.ಬಿ., ಬಾಂಬೆ,

೭. ಜಿ.ಟಿ. ಮೆಶ್‌ರಾಮ್, ನವದೆಹಲಿ,

೮. ರಾವ್ ಬಹದ್ದೂರ್ ಎಸ್.ಕೆ. ಬೋಲೆ, ಬಾಂಬೆ,

೯. ಎಮ್.ವಿ. ದೊಂಡೆ, ಬಿ.ಎ., ಪ್ರಿನ್ಸಿಪಾಲ್, ಗೋಖಲೆ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆ., ಪರೇಲ್, ಬಾಂಬೆ,

೧೦. ಎಸ್.ಸಿ. ಜೋಷಿ, ಎಮ್.ಎ., ಎಲ್.ಎಲ್.ಬಿ., ನವದೆಹಲಿ,

೧೨. ಎಂ.ಬಿ. ಸಮರ್ಥ್, ಬ್ಯಾರಿಸ್ಟರ್–ಅಟ್–ಲಾ, ಬಾಂಬೆ.

ಆನರಬಲ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಆಡಳಿತ ಮಂಡಳಿಯ ಪ್ರಥಮ ಅಧ್ಯಕ್ಷರಾಗಿರುತ್ತಾರೆ. ಅವರ ನಂತರ ಯಾವಾಗಲೂ ಬೌದ್ಧರೇ ಆಡಳಿತ ಮಂಡಳಿಯ ಅಧ್ಯಕ್ಷರಾಗಿರಬೇಕು.

೧೫. ಸಾವು, ದೈಹಿಕ ದೌರ್ಬಲ್ಯ, ರಾಜೀನಾಮೆ ಅಥವಾ ವಜಾ – ಇವುಗಳ ಕಾರಣದಿಂದಾಗಿ ಆಡಳಿತ ಮಂಡಳಿಯ ಮತ್ತು ವಿಶ್ವಸ್ಥ ಮಂಡಳಿಯ ಸದಸ್ಯತ್ವವು ಕೊನೆಗೊಳ್ಳುತ್ತದೆ.

೧೬. ಸಾವು, ದೈಹಿಕ ದೌರ್ಬಲ್ಯ, ರಾಜೀನಾಮೆ ಅಥವಾ ವಜಾ – ಇವುಗಳ ಕಾರಣದಿಂದಾಗಿ ಆಡಳಿತ ಮಂಡಳಿಯ ಮತ್ತು ವಿಶ್ವಸ್ಥ ಮಂಡಳಿಯ ಸದಸ್ಯತ್ವವು ಕೊನೆಗೊಳ್ಳದಿದ್ದರೆ, ಡೀನ್, ಅಥವಾ ಪ್ರಿನ್ಸಿಪಾಲ್ ಮತ್ತು ರಿಜಿಸ್ಟ್ರಾರ್‌ರನ್ನು ಹೊರತು ಪಡಿಸಿ ಉಳಿದ ಸದಸ್ಯರ ಸದಸ್ಯತ್ವದ ಅವಧಿಯು ಮೂರುವರ್ಷವಾಗಿರುತ್ತದೆ. ಸದಸ್ಯತ್ವವು ಕೊನೆಗೊಂಡ ಸದಸ್ಯರು ಮತ್ತೆ ನಾಮಕರಣಗೊಳ್ಳಲು ಅರ್ಹರಾಗಿರುತ್ತಾರೆ. ಡೀನ್, ಅಥವಾ ಪ್ರಿನ್ಸಿಪಾಲ್ ಮತ್ತು ರಿಜಿಸ್ಟ್ರಾರ್ ಅವರು ತಮ್ಮ ಡೀನ್, ಅಥವಾ ಪ್ರಿನ್ಸಿಪಾಲ್ ಮತ್ತು ರಿಜಿಸ್ಟ್ರಾರ್ ಪದವಿಯಲ್ಲಿ ಮುಂದುವರೆಯುವವರೆಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮುಂದುವರೆಯುತ್ತಾರೆ.

೧೭. ಆಡಳಿತ ಮಂಡಳಿ, ವಿಶ್ವಸ್ಥಮಂಡಳಿ, ಮಹಾಸಮಿತಿ, ಕಾರ್ಯಕಾರಿ ಸಮಿತಿಯ ಯಾವುದೇ ಸದಸ್ಯರನ್ನು ವಜಾಮಾಡಲು, ಅದೇ ಉದ್ದೇಶಕ್ಕಾಗಿ ಕರೆದಿರುವ ಆಡಳಿತ ಮಂಡಳಿಯ ಸಭೆಯಲ್ಲಿ ಹಾಜರಿರುವ ಸದಸ್ಯರಲ್ಲಿ ನಾಲ್ಕನೆಯ ಮೂರರಷ್ಟು ಸದಸ್ಯರ ಬಹುಮತದಿಂದ ಆಡಳಿತ ಮಂಡಳಿಯು ಅಧಿಕಾರವನ್ನು ಹೊಂದಿರುತ್ತದೆ.

೧೮. ಆಡಳಿತ ಮಂಡಳಿಯ ಅಧ್ಯಕ್ಷರು ತನ್ನ ಉತ್ತರಾಧಿಕಾರಿಯನ್ನು ನೇಮಕ ಅಥವಾ ನಾಮಕರಣಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

೧೯. ಹಾಲಿ ಅಧ್ಯಕ್ಷರ ಉತ್ತರಾಧಿಕಾರಿಯ ಸ್ಥಾನಕ್ಕೆ ಅರ್ಹ ನಾಮಕರಣಪತ್ರಗಳು ಸಲ್ಲಿಸಲ್ಪಡದಿದ್ದರೆ, ಅಥವಾ ನಾಮಕರಣಗೊಂಡವರು ಒಪ್ಪಿಕೊಳ್ಳದಿದ್ದರೆ ಅಥವಾ ಆ ಪದವನ್ನು ಯಾವುದೇ ಕಾರಣಕ್ಕೆ ತ್ಯಜಿಸಿದರೆ, ಅಧ್ಯಕ್ಷರು ಆಡಳಿತ ಮಂಡಳಿಯ ಉಳಿದ ಸದಸ್ಯರಿಂದ ಚುನಾಯಿತರಾಗಬೇಕು.

೨೦. ಈ ನಿಬಂಧನೆಗಳಲ್ಲಿ ಉಕ್ತವಾಗಿರುವ ಕಟ್ಟುಪಾಡುಗಳಿಗೆ ಒಳಪಟ್ಟು, ಆಡಳಿತ ಮಂಡಳಿ, ವಿಶ್ವಸ್ಥ ಮಂಡಳಿ, ಮಹಾಸಮಿತಿ, ಅಥವಾ ಕಾರ್ಯಕಾರಿ ಸಮಿತಿಯಲ್ಲಿ ಉಳಿದೆಲ್ಲಾ ಸದಸ್ಯರ ಖಾಲಿ ಇರುವ ಸ್ಥಾನಗಳನ್ನು ಆಡಳಿತ ಮಂಡಳಿಯು ಭರ್ತಿಮಾಡುತ್ತದೆ. ಆದರೆ, ಪರಿಶಿಷ್ಟ ಜಾತಿಯಿಂದ ಮತಾಂತರಗೊಂಡ ಬೌದ್ಧ ಸದಸ್ಯರ ಸ್ಥಾನಕ್ಕೆ ಪರಿಶಿಷ್ಟ ಜಾತಿಯಿಂದ ಮತಾಂತರಗೊಂಡ ಬೌದ್ಧ ಸದಸ್ಯರನ್ನೇ ನೇಮಿಸಬೇಕು.

೨೧. ಆಡಳಿತ ಮಂಡಳಿಯ ಅಧ್ಯಕ್ಷರು ಆಡಳಿತ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ

ಅಧಿಕಾರಿಯಾಗಿರುತ್ತಾರೆ ಮತ್ತು ಸಾಮಾನ್ಯ ನೀತಿಗಳ ಮತ್ತು ಹಣಕಾಸು ನಿರ್ವಹಣೆಯ ವಿಷಯದಲ್ಲಿ ಆಡಳಿತ ಮಂಡಳಿಯ ಸದಸ್ಯರೊಡನೆ ಚರ್ಚಿಸಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ.

೨೨. (೧) ತಮ್ಮ ಅನುಪಸ್ಥಿತಿಯಲ್ಲಿ ಅಧ್ಯಕ್ಷರು ಆಡಳಿತ ಮಂಡಳಿಯ ಸದಸ್ಯರೊಬ್ಬರನ್ನು ಉಪಾಧ್ಯಕ್ಷರನ್ನಾಗಿ ತಮ್ಮ ಕೆಲವು ನಿರ್ದಿಷ್ಟ ಕೆಲಸಕಾರ್ಯಗಳನ್ನು ನಿರ್ವಹಿಸಲು ನೇಮಿಸಿ ಅವರಿಗೆ ಸೂಕ್ತ ಅಧಿಕಾರಗಳನ್ನು ನೀಡಬಹುದು.

(೨) ಅಧ್ಯಕ್ಷರು ಸಂಸ್ಥೆಯ ಕಾರ್ಯದರ್ಶಿಯನ್ನಾಗಿ ಒಬ್ಬ ವ್ಯಕ್ತಿಯನ್ನು ನೇಮಿಸಬಹುದು ಮತ್ತು ಅವರ ಕರ್ತವ್ಯ, ಸಂಬಳ ಮತ್ತಿತರ ನಿಬಂಧನೆಗಳನ್ನು ನಿಗದಿಗೊಳಿಸಿ ಲಿಖಿತದ ಮೂಲಕ ಅವರಿಗೆ ನೀಡಬಹುದು.

(೩) ಆಡಳಿತ ಮಂಡಳಿಯು ತಮ್ಮ ಸದಸ್ಯರಲ್ಲಿ ಒಬ್ಬರನ್ನು ಸಂಸ್ಥೆಯ ಮಹಾಕಾರ್ಯದರ್ಶಿಯನ್ನಾಗಿ ನೇಮಿಸಬಹುದು. ಅವರ ಅಧಿಕಾರದ ಅವಧಿಯು ಮೂರು ವರ್ಷಗಳದ್ದಾಗಿರುತ್ತದೆ.

೨೩. ಆಡಳಿತ ಮಂಡಳಿಯು ತನ್ನ ಕೆಲಸಕಾರ್ಯಗಳನ್ನು ನಡೆಸಿಕೊಂಡುಹೋಗಲು ಅಗತ್ಯವಾದ ಸಿಬ್ಬಂದಿಗಳನ್ನು ನೇಮಿಸಿಕೊಂಡು, ಅವರಿಗೆ ಸಂಬಳ ಯಾ ವೇತನ, ಅವರ ಸೇವೆಯ ಕರಾರುಗಳು, ಅವರ, ಅಧಿಕಾರಗಳ ಮತ್ತು ತನ್ನ ಅಂಗಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುವ ಸಲುವಾಗಿ ಸ್ಥಾಯೀ ಆದೇಶಗಳು ಅಥವಾ ಸೇವಾ ನಿಬಂಧನೆಗಳು ಮೊದಲಾದವುಗಳನ್ನು ನಿರ್ದಿಷ್ಟಗೊಳಿಸಬಹುದು.

೨೪. ಪ್ರತಿ ಕಾಲೇಜು, ವಿಹಾರ, ಶಾಲೆ ಅಥವಾ ಅಂಗಸಂಸ್ಥೆಗಳಿಗೆ, ಆಡಳಿತ ಮಂಡಳಿಯು ತನ್ನ ನಿರ್ಧಾರದ ಮೇಲೆ, ರಿಜಿಸ್ಟ್ರಾರ್ ಅವರನ್ನು ನೇಮಿಸಬಹುದು.

೨೫. ಅಧ್ಯಕ್ಷರ ಮೇಲ್ವಿಚಾರಣೆ ಮತ್ತು ಒಟ್ಟಾರೆಯಾದ ನಿಯಂತ್ರಣಕ್ಕೆ ಒಳಪಟ್ಟು, ಪ್ರತಿ ಅಂಗಸಂಸ್ಥೆಯ ರಿಜಿಸ್ಟ್ರಾರ್ ಅವರು ಆಯಾ ಅಂಗಸಂಸ್ಥೆಯ ಮುಖ್ಯಾಧಿಕಾರಿಯ ಅಡಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾರೆ. ತನ್ನ ಸಂಸ್ಥೆಯ ಸ್ಥಾಯೀ ಆದೇಶ ಅಥವಾ ನಿಬಂಧನೆಗಳ ಅನ್ವಯ ರಿಜಿಸ್ಟ್ರಾರರು ಆ ಸಂಸ್ಥೆಯ ದೈನಂದಿನ ಕೆಲಸಕಾರ್ಯಗಳನ್ನು ನಡೆಸಿಕೊಂಡುಹೋಗುತ್ತಾರೆ.

## ೪ – ಸಂಸ್ಥೆಯ ಹಣಕಾಸು

೨೬. ಸಂಸ್ಥೆಯ ಹಣಕಾಸಿನ ಮೂಲವು ಕಾಲದಿಂದ ಕಾಲಕ್ಕೆ ಪಡೆಯುವ ಅನುದಾನ, ದೇಣಿಗೆ, ವಂತಿಗೆ, ಶುಲ್ಕ, ದಾನ ಮುಂತಾದವುಗಳಾಗಿರುತ್ತವೆ.

೨೭. ಕಾರ್ಯದರ್ಶಿಯು ಸಂಸ್ಥೆಯ ಹಣಕಾಸಿನ ಲೆಕ್ಕಪತ್ರಗಳನ್ನು, ಆಯವ್ಯಯಗಳನ್ನು ವ್ಯವಸ್ಥಿತವಾಗಿ ನೋಡಿಕೊಳ್ಳಬೇಕು. ಭಾರತೀಯ ಕಂಪೆನಿಗಳ ಅಧಿನಿಯಮದ ಪ್ರಕಾರ ಮಾನ್ಯಮಾಡಲ್ಪಟ್ಟಿರುವ ಮತ್ತು ಆಡಳಿತ ಮಂಡಳಿಯು ನೇಮಕಮಾಡಿದ ಲೆಕ್ಕಪತ್ರ ಪರಿಶೋಧಕರಿಂದ ನಿಗದಿತ ಕಾಲಾವಧಿಯಲ್ಲಿ ಸಂಸ್ಥೆಯ ಲೆಕ್ಕ ಪತ್ರಗಳು ಪರಿಶೋಧಿಸಲ್ಪಡಬೇಕು.

೨೮. ಮಹಾಸಮಿತಿಯ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳಲ್ಲಿ ಒಬ್ಬರನ್ನು ಆಯಾ ಸಮಿತಿಯ ಕಾರ್ಯದರ್ಶಿಯನ್ನಾಗಿ ನೇಮಿಸಬಹುದು. ಹಾಗೆ ನೇಮಿಸಲ್ಪಟ್ಟ ಕಾರ್ಯದರ್ಶಿಯು ಆಯಾ ಸಂಸ್ಥೆಗಳ ದೈನಂದಿನ ಸಾಮಾನ್ಯ ಕೆಲಸಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗತಕ್ಕದ್ದು ಮತ್ತು ಅವರ ಸೇವಾವಧಿಯು ಮೂರು ವರ್ಷಗಳದ್ದಾಗಿರುತ್ತದೆ.

೨೯. ಆಯವ್ಯಯಗಳ ವಾರ್ಷಿಕ ಲೆಕ್ಕಪತ್ರಗಳನ್ನು ಸೂಕ್ತರೀತಿಯಲ್ಲಿ ಬರೆದು ತಮ್ಮ ಕಚೇರಿಯಲ್ಲಿ

ಕಾರ್ಯದರ್ಶಿಯು ಇಟ್ಟುಕೊಂಡಿರತಕ್ಕದ್ದು. ಮತ್ತು ಅವುಗಳ ಗೋಷ್ವಾರೆಯನ್ನು ಆಡಳಿತ ಮಂಡಳಿ, ವಿಶ್ವಸ್ಥ ಮಂಡಳಿ, ಮಹಾಸಮಿತಿ, ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಹಾಗೂ ಪೋಷಕರ, ವಂತಿಗೆದಾರರ ಪರಾಮರ್ಶೆಗೆ ಸದಾಕಾಲವೂ ತೆರೆದಿಟ್ಟಿರತಕ್ಕದ್ದು.

**೫–ಇತರೆ**

ಈ ವಿವರಣ ಪತ್ರಕ್ಕೆ ಅನುಬಂಧಿಸಿರುವ ನಿಬಂಧನೆಗಳ(ಪರಿಶಿಷ್ಟ – ಅ) ಪ್ರಕಾರ ಆಡಳಿತ ಮಂಡಳಿ ಹಾಗೂ ಮತ್ತಿತರ ಸಮಿತಿಗಳು ತಮ್ಮ ಕಾರ್ಯವನ್ನು, ಕರ್ತವ್ಯವನ್ನು ನಿರ್ವಹಿಸಬೇಕು ಮತ್ತು ತಮ್ಮ ಅಧಿಕಾರಗಳನ್ನು ಚಲಾಯಿಸಬೇಕು.

೩೧. ಮೇಲೆ ಹೇಳಿದ ನಿಬಂಧನೆಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ ಬದಲಾಯಿಸಲು, ತಿದ್ದುಪಡಿಮಾಡಲು, ನಿಬಂಧನೆಗಳಿಗೆ ಅಧಿಕವಾಗಿ ಕೆಲವು ನಿಬಂಧನೆಗಳನ್ನು ಸೇರಿಸಲು ಆಡಳಿತ ಮಂಡಳಿಗೆ ಅಧಿಕಾರವಿರುತ್ತದೆ. ಆದರೆ, ಅಂತಹ ಬದಲಾವಣೆಗಳು, ತಿದ್ದುಪಡಿಗಳು, ಹೆಚ್ಚುವರಿಯಾಗಿ ರಚಿಸಿದ ನಿಬಂಧನೆಗಳು ಮೊದಲಾದವು ಸಂಸ್ಥೆಯ ಸಂಸ್ಥಾಪನಾ ವಿವರಣಪತ್ರಕ್ಕೆ ಯಾವ ರೀತಿಯಲ್ಲಿಯೂ ವಿರೋಧವಾಗಿರತಕ್ಕದ್ದಲ್ಲ.

೩೨. ಈ ವಿವರಣಪತ್ರವನ್ನು ಬದಲಾಯಿಸಲು, ಹೆಚ್ಚುಕಡಿಮೆ ಮಾಡಲು, ತಿದ್ದುಪಡಿಮಾಡಲು, ಅದಕ್ಕೆ ಅಧಿಕವಾಗಿ ನಿಬಂಧನೆಗಳನ್ನು ಸೇರಿಸಲು ಆಡಳಿತ ಮಂಡಳಿಗೆ ಅಧಿಕಾರವಿರುತ್ತದೆ, ಆದರೆ, ಆಡಳಿತ ಮಂಡಳಿ ವಿಶ್ವಸ್ಥ ಸಮಿತಿ ಹಾಗೂ ಮಹಾಸಮಿತಿಗಳ ಸಂಯೋಜನೆ, ಅವುಗಳಲ್ಲಿ ಪರಿಶಿಷ್ಟ ಜಾತಿಗಳಿಂದ ಬೌದ್ಧ ಮತಕ್ಕೆ ಮತಾಂತರಗೊಂಡವರ ಪ್ರಾತಿನಿಧ್ಯದ ಅನುಪಾತ, ಪ್ರಥಮ ಅಧ್ಯಕ್ಷರ ಹಾಗೂ ಮೇಲೆ ೭, ೮, ೯, ೧೦, ೧೧, ೧೨, ೧೪, ೨೦ ಮತ್ತು ೨೧ನೆಯ ಖಂಡಗಳಲ್ಲಿ ಹೇಳಿರುವ ರೀತ್ಯಾ ಪದನಿಮಿತ್ತ ಅಧಿಕಾರದಲ್ಲಿರುವ ಇತರ ಅಂಗಸಂಸ್ಥೆಗಳ ಅಧ್ಯಕ್ಷರುಗಳ ಅಧಿಕಾರಾವಧಿ, ಇವುಗಳನ್ನು ಆಡಳಿತ ಮಂಡಳಿಯು ಇಂತಹ ಬದಲಾವಣೆಯನ್ನು ಮಾಡುವ ಉದ್ದೇಶಕ್ಕಾಗಿ ಕರೆದಿರುವ ಸಭೆಯಲ್ಲಿ ಹಾಜರಿರುವ ಸದಸ್ಯರುಗಳಲ್ಲಿ ನಾಲ್ಕನೆಯ ಮೂರು ಬಹುಮತವಿಲ್ಲದಿದ್ದರೆ, ಯಾವ ಬದಲಾವಣೆಯನ್ನೂ ಮಾಡಲು ಆಡಳಿತ ಮಂಡಳಿಗೆ ಅಧಿಕಾರವಿರುವುದಿಲ್ಲ.

ಸಹಿ:
ಬಿ.ಆರ್. ಅಂಬೇಡ್ಕರ್,
ಎಸ್.ಕೆ. ಬೋಲೆ,
ಎಮ್.ವಿ. ದೋಂಡೆ,
ಎಸ್.ಸಿ. ಜೋಷಿ,
ಎಂ.ಬಿ. ಸಮರ್ಥ್,
ಡಿ.ಜಿ. ಜಾಧವ್,
ಎಚ್.ಕೆ. ಪಟೇಲ್

೧೯೫೫ರ ಜುಲೈ ೯,

## ಪರಿಶಿಷ್ಟ "ಅ"

## ಪೀಪಲ್ಸ್ ಎಜ್ಯುಕೇಷನ್ ಸಂಸ್ಥೆಯ ಆಡಳಿತ ಮತ್ತು ನಿರ್ವಹಣೆಗಾಗಿ ಮಾಡಿರುವ ನಿಬಂಧನೆಗಳು

೧. ಈ ನಿಬಂಧನೆಗಳನ್ನು ಪೀಪಲ್ಸ್ ಎಜ್ಯುಕೇಷನ್ ಸಂಸ್ಥೆಯ ನಿಬಂಧನೆಗಳು ಎಂದು ಕರೆಯತಕ್ಕದ್ದು.

೨. ತನ್ನ ಅಧೀನದಲ್ಲಿರುವ ಎಲ್ಲಾ ಅಂಗಸಂಸ್ಥೆಗಳ ವರದಿಗಳನ್ನು ಪರಿಶೀಲಿಸಲು ಆಡಳಿತ ಮಂಡಳಿಯು ಪ್ರತಿ ಆರು ತಿಂಗಳಿಗೊಮ್ಮೆ ಸಭೆಸೇರಬೇಕು. ಇತರ ಸಮಿತಿಗಳು ಮೂರು ತಿಂಗಳಿಗೊಮ್ಮೆ, ಅಥವಾ ಆಯಾ ಸಂಸ್ಥೆಯ ವ್ಯವಹಾರಗಳಿಗೆ ಅಗತ್ಯವಾದಾಗಲೆಲ್ಲಾ ಸಭೆ ಸೇರತಕ್ಕದ್ದು.

೩. ಪ್ರತಿ ವರ್ಷದ ಏಪ್ರಿಲ್ ತಿಂಗಳಿನಲ್ಲಿ ಆಡಳಿತ ಮಂಡಳಿಯು ಸರ್ವಸದಸ್ಯರ ಸಭೆಯನ್ನು ನಡೆಸತಕ್ಕದ್ದು. ಈ ಸಭೆಯಲ್ಲಿ ಮಹಾಕಾರ್ಯದರ್ಶಿಯವರು ಸಂಸ್ಥೆಯ ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಒಂದು ವರದಿಯನ್ನು ಮಂಡಿಸತಕ್ಕದ್ದು.

೪. ಅಧ್ಯಕ್ಷರು ತಮ್ಮ ವಿವೇಚನೆಯ ಪ್ರಕಾರ ಅಥವಾ ಆಡಳಿತ ಮಂಡಳಿ, ವಿಶ್ವಸ್ಥ ಮಂಡಳಿ, ಮಹಾಮಂಡಳಿ, ಅಥವಾ ಕಾರ್ಯಕಾರಿ ಸಮಿತಿಯ ಕನಿಷ್ಠ ಮೂರು ಸದಸ್ಯರಿಗೆ ತಮ್ಮ ಉದ್ದೇಶವು ಸಭೆಯಲ್ಲಿ ಚರ್ಚಿಸುವುದು ಅಗತ್ಯವೆಂದು ಕಂಡುಬಂದಲ್ಲಿ, ಅಧ್ಯಕ್ಷರ ಮೂಲಕ, ತಮಗೆ ಸಂಬಂಧಿಸಿದ ಸಮಿತಿಯ ವಿಶೇಷ ಸಭೆಯನ್ನು ಕರೆಯಬಹುದು.

೫. ಸಾಮಾನ್ಯ, ವಿಶೇಷ ಅಥವಾ ಮುಂದೂಡಿದ ಸಭೆಗಳ ಸೂಚನಾಪತ್ರಗಳನ್ನು ಸಂಬಂಧಪಟ್ಟ ಎಲ್ಲಾ ಸದಸ್ಯರಿಗೂ ಸಭೆಯು ನಡೆಯುವ ಏಳುದಿನಗಳ ಮೊದಲು ನೀಡಬೇಕು ಅಥವಾ ಅಂಚೆಯ ಮೂಲಕ ಕಳುಹಿಸಬೇಕು. ಆದರೆ, ಮುಂದೂಡಲ್ಪಟ್ಟ ಸಭೆಯು ಪುನಃ ವ್ಯವಸ್ಥೆಗೊಂಡರೆ, ಅಂತಹ ಸಭೆಯ ಸೂಚನಾ ಪತ್ರವನ್ನು ಮೊದಲು ನಿಗದಿಗೊಳಿಸಿದ್ದ ದಿನಾಂಕ ಮತ್ತು ಮತ್ತೆ ಸಭೆಸೇರಲು ಉದ್ದೇಶಿಸಿರುವ ದಿನಾಂಕಗಳ ನಡುವೆ ಇರುವ ದಿನಗಳ ಸಂಖ್ಯೆಯ ಮೇಲೆಯೂ ಅವಲಂಬಿತವಾಗಿರುತ್ತದೆ. ಸಭೆಯ ಸೂಚನಾಪತ್ರವು ಸಾಮಾನ್ಯವಾಗಿ, ಸಭೆಯು ನಡೆಯುವ ಸ್ಥಳ, ದಿನಾಂಕ, ಕಾಲ ಹಾಗೂ ನಡೆಸಲು ಉದ್ದೇಶಿಸಿರುವ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ವಿಶೇಷ ಸಭೆಯ ಸೂಚನಾಪತ್ರವು ಉದ್ದೇಶಿತ ವಿಶೇಷ ಸಭೆಯಲ್ಲಿ ಚರ್ಚಿತವಾಗಬೇಕಾದ ವಿಷಯಗಳನ್ನು ಒಳಗೊಂಡಿರಬೇಕು.

೬. ಈ ಯಾವುದೇ ಸಭೆಯನ್ನು ನಡೆಸಲು ಬೇಕಾದ ಕನಿಷ್ಠ ಸದಸ್ಯರ ಸಂಖ್ಯೆಯು ಸದ್ಯಕ್ಕೆ ನಾಲ್ಕು ಆಗಿರುತ್ತದೆ.

ಈ ಯಾವುದೇ ಸಭೆಯನ್ನು ನಡೆಸಲು ಬೇಕಾದ ಕನಿಷ್ಠ ಸದಸ್ಯರ ಸಂಖ್ಯೆಯು ಸದ್ಯಕ್ಕೆ ಆ ಸಮಿತಿಯ ಸದಸ್ಯರ ಸಂಖ್ಯೆಯ ಅರ್ಧದಷ್ಟು ಇರಬೇಕು.

೬(ಅ). ಆಡಳಿತ ಮಂಡಳಿಯ ಅಥವಾ ಯಾವುದೇ ಅಂಗಸಂಸ್ಥೆಯ ಸಮಿತಿಯ ಪ್ರತಿ ಸದಸ್ಯರೂ ಆಯಾ ಮಂಡಳಿ ಯಾ ಅಂಗಸಂಸ್ಥೆಯ ಸಭೆಗಳಿಗೆ ತಪ್ಪದೆ ಹಾಜರಾಗತಕ್ಕದ್ದು. ಒಂದು ವೇಳೆ, ಹಾಜರಾಗಲು ಯಾವುದಾದರೂ ಸದಸ್ಯರಿಗೆ ಸಾಧ್ಯವಾಗದೇ ಇದ್ದರೆ, ಅಂತಹ ಸದಸ್ಯರು ಸಭೆಗೆ ಹಾಜರಾಗದೆ ಇರಲು ಲಿಖಿತದ ಮೂಲಕ ತಿಳಿಸಿ ಅನುಮತಿಯನ್ನು ಪಡೆಯತಕ್ಕದ್ದು.

೭. ಯಾವುದೇ ಸಭೆಯನ್ನು ನಡೆಸಲು ಅಗತ್ಯವಾದ ಕನಿಷ್ಠ ಸಂಖ್ಯೆಯ ಸದಸ್ಯರು ಸಭೆಯನ್ನು ಪ್ರಾರಂಭವಾಗಬೇಕಾದ ಸಮಯದಿಂದ ಅರ್ಧಗಂಟೆಯವರೆಗೂ ಬಾರದೇ ಇದ್ದರೆ, ಹಾಜರಿರುವ ಸದಸ್ಯರು ಆ ಸಭೆಯನ್ನು ಮುಂದೂಡಬಹುದು. ಅಧ್ಯಕ್ಷರು ಒಂದು ಗೊತ್ತುವಳಿಯನ್ನು ಅಂಗೀಕರಿಸುವ ಮೂಲಕ ಸಭೆಯನ್ನು ಮುಂದೂಡಬಹುದು. ಹಾಗೆ ಮುಂದೂಡಿದ ಸಭೆಯಲ್ಲಿಯೂ ಅಗತ್ಯವಾದ ಕನಿಷ್ಠ ಸಂಖ್ಯೆಯ

ಸದಸ್ಯರು ಹಾಜರಿರದಿದ್ದ ಪಕ್ಷದಲ್ಲಿ ಹಾಜರಿರುವ ಸದಸ್ಯರ ಸಂಖ್ಯೆಯಷ್ಟನ್ನೇ ಪರಿಗಣಿಸಿ ಸಭೆಯನ್ನು ನಡೆಸಬಹುದು.

೮. ಆಡಳಿತ ಮಂಡಳಿಯ ಅಧ್ಯಕ್ಷರು ಎಲ್ಲಾ ಸಮಿತಿಗಳ ಸಭೆಗಳ ಅಧ್ಯಕ್ಷತೆಯನ್ನು ವಹಿಸಿಕೊಳ್ಳಬೇಕು. ಪ್ರತಿ ಸಂಸ್ಥೆಯೂ ತನ್ನ ಏಪ್ರಿಲ್ ತಿಂಗಳ ಸಭೆಯಲ್ಲಿ ಉಪಾಧ್ಯಕ್ಷರೊಬ್ಬರನ್ನು ಆಯ್ಕೆಮಾಡಬೇಕು ಮತ್ತು ಈ ಉಪಾಧ್ಯಕ್ಷರು ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರೂ ಹಾಜರಿರದ ಸಂದರ್ಭದಲ್ಲಿ ಹಾಜರಿರುವ ಸದಸ್ಯರು ಆ ಸಭೆಗೆ ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಬೇಕು.

೯. ಬೇರೆಯ ರೀತಿಯನ್ನು ವಿವರಣಾಪತ್ರದಲ್ಲಿ ಸೂಚಿಸಿರದಿದ್ದರೆ, ಸಭೆಯಲ್ಲಿನ ಎಲ್ಲಾ ವಿಷಯಗಳೂ ಸಭೆಯಲ್ಲಿ ಹಾಜರಿರುವ ಸದಸ್ಯರ ಬಹುಮತದಿಂದ ತೀರ್ಮಾನವಾಗಬೇಕು. ಸಭೆಯ ಅಧ್ಯಕ್ಷರು ತಾವು ಹಿಂದೆ ಮತವನ್ನು ಚಲಾಯಿಸಿದ್ದರೂ, ಅಂತಿಮವಾಗಿ ತಮ್ಮ ನಿರ್ಣಾಯಕ ಮತವನ್ನು ಚಲಾಯಿಸಬಹುದು. ಆದರೆ ಇತರ ಯಾವ ಸದಸ್ಯರಿಗೂ ಒಂದು ಮತಕ್ಕಿಂತ ಹೆಚ್ಚು ಮತವನ್ನು ಚಲಾಯಿಸುವ ಅಧಿಕಾರವಿರುವುದಿಲ್ಲ.

೧೦. ಆಡಳಿತ ಮಂಡಳಿ, ಮಹಾ ಮಂಡಳಿ ಅಥವಾ ಕಾರ್ಯಕಾರಿ ಸಮಿತಿಯು ತಾನು ಹಿಂದೆ ಅಂಗೀಕರಿಸಿದ್ದ ಯಾವುದೇ ಗೊತ್ತುವಳಿಯನ್ನು ಮುಂದಿನ ತನ್ನ ಯಾವುದೇ ಸಭೆಯಲ್ಲಿ ರದ್ದುಮಾಡಬಹುದು ಅಥವಾ ಕಾಲದಿಂದ ಕಾಲಕ್ಕೆ ಅದರಲ್ಲಿ ಬದಲಾವಣೆಗಳನ್ನು ಮಾಡಬಹುದು.

೧೧. ಯಾವುದಾದರೂ ವ್ಯವಹಾರವನ್ನು ನಡೆಸಲು ಅಥವಾ ವಿಚಾರಣೆಯನ್ನು ನಡೆಸಲು ವ್ಯಕ್ತಿಯೊಬ್ಬರನ್ನು ಅಥವಾ ಸಮಿತಿಯೊಂದನ್ನು ಆಡಳಿತ ಮಂಡಳಿಯು ತನ್ನ ಯಾವುದೇ ಸಭೆಯಲ್ಲಿ ನೇಮಿಸಬಹುದು. ಅಂತಹ ವ್ಯಕ್ತಿಯ ಅಥವಾ ಸಮಿತಿಯ ಪ್ರತಿ ಕಾರ್ಯಚಟುವಟಿಕೆಯ ಬಗ್ಗೆ, ನಡಾವಳಿಯ ಬಗ್ಗೆ ವರದಿಯನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸತಕ್ಕದ್ದು ಮತ್ತು ಆಡಳಿತ ಮಂಡಳಿಯು ಅಂತಹ ವರದಿಯನ್ನು ಅಂಗೀಕರಿಸುವವರೆಗೂ, ಆ ವರದಿಗೆ ಸಂಸ್ಥೆಯು ಬದ್ಧವಾಗಿರಬೇಕಾಗಿಲ್ಲ.

೧೨. ಪ್ರತಿ ಅಂಗಸಂಸ್ಥೆಯೂ ಒಂದು ನಡಾವಳಿಯ ದಾಖಲೆ ಪುಸ್ತಕವನ್ನು ಅಧಿಕೃತವಾಗಿ ಇಟ್ಟುಕೊಂಡಿರಬೇಕು ಮತ್ತು ಅದರಲ್ಲಿ ಅಧಿಕಾರವನ್ನು ಸ್ವೀಕರಿಸಿದ ಪ್ರತಿಯೊಬ್ಬ ಸದಸ್ಯರ ವಿವರಗಳನ್ನು ಹಾಗೂ ತಮ್ಮ ಸಂಸ್ಥೆಯ ಪ್ರತಿ ಸಭೆಯ ನಡಾವಳಿಗಳನ್ನು ದಾಖಲಿಸಬೇಕು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದವರು, ಈ ನಡಾವಳಿ ಪುಸ್ತಕದಲ್ಲಿ ವಿಷಯಗಳನ್ನು ದಾಖಲಿಸಿದ ನಂತರ ಸಭೆಯ ಕೊನೆಯಲ್ಲಿ ಅಥವಾ ನಡಾವಳಿಗಳು ದೃಢೀಕರಿಸಲ್ಪಟ್ಟಿದ್ದರೆ ಸಭೆಯ ನಂತರ ಸಹಿಯನ್ನು ಹಾಕಬೇಕು.

೧೩. ಸಂಸ್ಥೆಯ ಹಣಕಾಸಿನ ಎಲ್ಲಾ ವ್ಯವಹಾರಗಳನ್ನು, ಅಂದರೆ, ಸಂಸ್ಥೆಯ ಪರವಾಗಿ ಸ್ವೀಕರಿಸಲಾದ ಮತ್ತು ಕರ್ಚುಮಾಡಿದ ವಿವರಗಳನ್ನು ಸೂಕ್ತವಾಗಿ ಪುಸ್ತಕಗಳಲ್ಲಿ ದಾಖಲಿಸಬೇಕು. ಪ್ರತಿವರ್ಷಕ್ಕೂ ಪ್ರತ್ಯೇಕ ದಾಖಲೆಗಳ ಪುಸ್ತಕಗಳನ್ನು ತೆರೆಯಬೇಕು ಮತ್ತು ಅವುಗಳು ಅರ್ಹ ಲೆಕ್ಕಪತ್ರ ಪರಿಶೋಧಕರಿಂದ ಪರಿಶೋಧಿಸಲ್ಪಡಬೇಕು. ನಂತರ ಅವುಗಳನ್ನು ಆಡಳಿತ ಮಂಡಳಿಯು ಮುಂದಿನ ವರ್ಷ ತನ್ನ ಸಾಮಾನ್ಯ ಸಭೆಯಲ್ಲಿ ಅಥವಾ ಇದೇ ಉದ್ದೇಶಕ್ಕಾಗಿ ಕರೆದಿರುವ ಬೇರೆ ಯಾವುದಾದರೂ ಸಭೆಯಲ್ಲಿ ಅಂಗೀಕರಿಸಬೇಕು. ಸಭೆಯು ಅಂಗೀಕರಿಸಿದ ನಂತರ, ಅಧ್ಯಕ್ಷರು ಆ ಲೆಕ್ಕಪತ್ರಗಳಿಗೆ ತಮ್ಮ ಸಹಿಯನ್ನು ಹಾಕಬೇಕು.

೧೪. ಸಂಸ್ಥೆಯ ವಂತಿಗೆದಾರರ ಮತ್ತು ಪೋಷಕರ ವಿವರಗಳನ್ನೊಳಗೊಂಡ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಇಟ್ಟುಕೊಂಡಿರಬೇಕು.

೧೫. ಆಡಳಿತ ಮಂಡಳಿಯು ಆಯ್ಕೆ ಮಾಡಿದ ಬ್ಯಾಂಕಿನಲ್ಲಿ ಸಂಸ್ಥೆಯು ಒಂದು ಖಾತೆಯನ್ನು

ತೆರೆದು ಅದನ್ನು ನಿರ್ವಹಿಸಿಕೊಂಡು ಹೋಗತಕ್ಕದ್ದು. ಸಂಸ್ಥೆಯು ಸ್ವೀಕರಿಸಿದ ಪ್ರತಿಯೊಂದು ಮೊತ್ತವನ್ನೂ, ಅಧ್ಯಕ್ಷರು ಅನ್ಯಥಾ ಆದೇಶ ಮಾಡಿರದೇ ಇದ್ದರೆ, ಅನಾವಶ್ಯಕವಾಗಿ ವಿಳಂಬಮಾಡದೆ, ಈ ಬ್ಯಾಂಕಿನ ಖಾತೆಗೆ ಜಮಾ ಮಾಡಬೇಕು.

೧೬. ಎಲ್ಲಾ ಚೆಕ್ಕುಗಳೂ, ಹಣವನ್ನು ನೀಡುವ ಆದೇಶಗಳೂ ಆಡಳಿತ ಮಂಡಳಿಯ ಅಧ್ಯಕ್ಷರಿಂದ, ಅಥವಾ ಆಡಳಿತ ಮಂಡಳಿಯು ಈ ಉದ್ದೇಶಕ್ಕಾಗಿ ತನ್ನ ಪರವಾಗಿ ನೇಮಿಸಿದ ವ್ಯಕ್ತಿಯಿಂದ, ರುಜುಮಾಡಲ್ಪಟ್ಟಿರಬೇಕು.

ಇದು ಸಂಸ್ಥಾಪನಾ ವಿವರಣ ಪತ್ರದ ಸರಿಯಾದ ನಿಬಂಧನೆಗಳೆಂದು ಪ್ರಮಾಣೀಕರಿಸಲಾಗಿದೆ.

ಜುಲೈ ೫, ೧೯೪೫

ಬಿ.ಆರ್. ಅಂಬೇಡ್ಕರ್,
ಡಿ.ಜಿ. ಜಾಧವ್,
ಎಸ್.ಸಿ. ಜೋಷಿ

* * * * *

---

(ವಿವಿಧ ಸ್ಥಳಗಳಲ್ಲಿರುವ ಶಾಖೆಗಳಿಗಾಗಿ ೧೨ನೆಯ ಪರಿಶಿಷ್ಟವನ್ನು ನೋಡಿ)

## ೭
# ಡಾ. ಬಿ.ಆರ್. ಅಂಬೇಡ್ಕರ್

ಎಂ.ಎ. ಪಿ.ಎಚ್.ಡಿ., ಡಿ.ಎಸ್.ಸಿ., ಬ್ಯಾರಿಸ್ಟರ್–ಅಟ್–ಲಾ
ಗವರ್ನರ್ ಜನರಲ್ಲರ ಕಾರ್ಯಾಂಗ ಸಮಿತಿಯ ಸದಸ್ಯರು

### ದ ಪೀಪಲ್ಸ್ ಎಜ್ಯುಕೇಷನ್ ಸಂಸ್ಥೆಯ ಪರವಾಗಿ ಮಾಡಿದ ಮನವಿ

*****

ಇತ್ತೀಚಿನ ವರದಿಯ ಪ್ರಕಾರ, ಸಾಮಾನ್ಯವಾಗಿ ಅಸ್ಪೃಶ್ಯರೆಂದು ಕರೆಯಲ್ಪಡುವ, ಪರಿಶಿಷ್ಟ ಜಾತಿಗಳವರ ಸಂಖ್ಯೆಯು ಸುಮಾರು ೫೦ ದಶಲಕ್ಷವಿದೆಯೆಂಬುದು ಸ್ಪಷ್ಟವಾಗಿದೆ. ಭಾರತದ ಯಾವುದೇ ಭಾಗವನ್ನು ನೋಡಿದರೂ, ಪರಿಶಿಷ್ಟ ಜಾತಿಗಳವರ ಶಿಕ್ಷಣದ ಮಟ್ಟವು ಬಹಳ ಕೆಳಗೆ ಇದೆ ಎಂಬುದು ಮತ್ತು ಉನ್ನತ ಶಿಕ್ಷಣವನ್ನು ಗಮನಿಸಿದಾಗ ಅವರು ಮೇಲ್ಜಾತಿಯರಿಗಿಂತ ಬಹಳ ಹಿಂದೆ ಉಳಿದಿದ್ದಾರೆಂಬುದು ಎಲ್ಲರಿಗೂ ವಿದಿತವಾಗಿರುವ ಅಂಶಗಳು. ಅವರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಭಾರತದೆಲ್ಲೆಡೆ ಶೋಚನೀಯವಾಗಿದೆ ಎಂಬುದು ಎಲ್ಲರೂ ಒಪ್ಪಿರುವಂತಹವುಗಳು. ಪರಿಶಿಷ್ಟ ಜಾತಿಗಳವರು ಈ ಹಿಂದುಳಿದ ಪರಿಸ್ಥಿತಿಯಿಂದ ಮೇಲೇಳಲು ಮತ್ತು ತಮ್ಮ ಅಸಹಾಯಕತೆಯನ್ನು ಮೀರಲು ಸಾಧ್ಯವಾಗದಿರುವುದಕ್ಕೆ ಇರುವ ಮುಖ್ಯವಾದ ಕಾರಣವೆಂದರೆ ಅವರು ಶಿಕ್ಷಣದಲ್ಲಿ ಹಿಂದುಳಿದಿರುವುದು. ಇದರಿಂದ ಪರಿಶಿಷ್ಟ ಜಾತಿಗಳವರ ಸಮಸ್ಯೆಯನ್ನು ಪರಿಹರಿಸಲು ಈ ಕಾರ್ಯಕ್ಕೇ ತೆತ್ತುಕೊಂಡಿರುವಂತಹ ಒಂದು ವಿಶೇಷ ಸಂಸ್ಥೆಯ ಆವಶ್ಯಕತೆಯು ಇದೆಯೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ಸದ್ಯದಲ್ಲಿ ಅಂತಹ ಯಾವುದೇ ಸಂಸ್ಥೆಯು ಇಲ್ಲದಿರುವುದರಿಂದ, ಪೀಪಲ್ಸ್ ಎಡ್ಯುಕೇಷನ್ ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಈ ಸಂಸ್ಥೆಯು, ೧೮೬೦ರ (೨೧ನೆಯ) ಸಂಸ್ಥೆಗಳ ನೊಂದಣಿ ಅಧಿನಿಯಮದ ಪ್ರಕಾರ ನೊಂದಾಯಿಸಲ್ಪಟ್ಟಿದೆ ಮತ್ತು ಭಾರತ ಸರಕಾರದಿಂದ ಮಾನ್ಯಮಾಡಲ್ಪಟ್ಟಿದೆ. ಅದರ ಸಂವಿಧಾನದಿಂದ ಸ್ಪಷ್ಟವಾಗಿರುವಂತೆ, ಈ ಸಂಸ್ಥೆಯ ಮುಖ್ಯ ಉದ್ದೇಶವು ಭಾರತದಲ್ಲಿರುವ ಪರಿಶಿಷ್ಟ ಜಾತಿಗಳವರಲ್ಲಿ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವುದಾಗಿದೆ.

ವಿಜ್ಞಾನ ಮತ್ತು ಕಲೆಯ ಎರಡೂ ವಿಭಾಗಗಳನ್ನು ಬೋಧಿಸುವ ಮತ್ತು ಅವುಗಳಲ್ಲಿ ಆನರ್ಸ್ ಪರೀಕ್ಷೆಗಳನ್ನೂ ನಡೆಸುವಂತಹ ಪೂರ್ಣಮಟ್ಟದ ಕಾಲೇಜೊಂದನ್ನು ಬಾಂಬೆಯಲ್ಲಿ ಸದ್ಯದಲ್ಲಿಯೇ ತೆರೆಯುವ ಉದ್ದೇಶವನ್ನು ಸಂಸ್ಥೆಯು ಹೊಂದಿದೆ. ಈ ಸಂಸ್ಥೆಯು ಯಾವುದೇ ಸಮುದಾಯಕ್ಕೆ ಸೀಮಿತವಾಗಿರುವುದಿಲ್ಲ. ಅದರಲ್ಲಿನ ಪ್ರವೇಶವು ಎಲ್ಲಾ ಸಮುದಾಯ, ಪಂಗಡಗಳವರಿಗೂ, ಎಲ್ಲಾ ಪ್ರಾಂತ ಮತ್ತು ರಾಜ್ಯಗಳವರಿಗೂ ಮುಕ್ತವಾಗಿರುತ್ತದೆ. ಸಿಬ್ಬಂದಿ ವರ್ಗವು ಕೂಡ, ಸಾಧ್ಯವಾದಷ್ಟು ಮಟ್ಟಿಗೆ, ಯಾವುದೇ ಸಮುದಾಯ, ಪ್ರಾಂತ, ಅಥವಾ ರಾಜ್ಯಕ್ಕೆ ಸೇರಿದವರಾಗಿರಬೇಕೆಂಬ ನಿಬಂಧನೆಯಿರುವುದಿಲ್ಲ. ಈ ಕಾಲೇಜಿನ ಮುಖ್ಯ ಲಕ್ಷಣವೆಂದರೆ, ಇದು ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ವಿಶೇಷ ಗಮನವನ್ನು ಹಾಗೂ ಪ್ರವೇಶದಲ್ಲಿ, ಶುಲ್ಕವಿನಾಯತಿಯಲ್ಲಿ, ಶಿಷ್ಯವೇತನದಲ್ಲಿ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಆದ್ಯತೆಯನ್ನು ನೀಡುತ್ತದೆ. ಈ

ಕಾಲೇಜನ್ನು ಉನ್ನತ ಶಿಕ್ಷಣದ ಕ್ಷೇತ್ರದಲ್ಲಿ ಒಂದು ಮಾದರಿ ಶಿಕ್ಷಣ ಸಂಸ್ಥೆಯನ್ನಾಗಿ ಮಾಡುವ ಧ್ಯೇಯವನ್ನು ಆಡಳಿತ ಮಂಡಳಿಯು ಹೊಂದಿದೆ. ಭಾರತ ಸರಕಾರದಿಂದ ಈ ಕಾಲೇಜನ್ನು ಬಾಂಬೆಯಲ್ಲಿ ಸ್ಥಾಪಿಸಲು ಅನುಮತಿ ಹಾಗೂ ಪ್ರಾಥಮಿಕ ವೆಚ್ಚಗಳನ್ನು ಸರಿದೂಗಿಸಲು ಸಾಕಷ್ಟು ಧನಸಹಾಯವೂ ದೊರೆತಿರುವುದರಿಂದ ಸಂಸ್ಥೆಗೆ ಅತ್ಯಂತ ಸಂತಸವಾಗಿದೆ. ಭಾರತ ಸರಕಾರವು ಆರು ಲಕ್ಷ ರೂ.ಗಳ ನಿಧಿಯನ್ನು ನೀಡಲು ಒಪ್ಪಿಕೊಂಡಿದ್ದು, ಅದರಲ್ಲಿ ಅರ್ಧಭಾಗವು ಅನುದಾನವನ್ನಾಗಿಯೂ, ಉಳಿದರ್ಧವು ಬಡ್ಡಿರಹಿತ ಸಾಲವನ್ನಾಗಿಯೂ ನೀಡುತ್ತದೆ.

ಭೂಮಿ, ಕಟ್ಟಡದ ಸಾಮಗ್ರಿಗಳು ಮತ್ತು ವೈಜ್ಞಾನಿಕ ಹಾಗೂ ಮತ್ತಿತರ ಉಪಕರಣಗಳ ಬೆಲೆಗಳು ತೀವ್ರವಾಗಿ ಏರಿರುವ ಇಂದಿನ ಪರಿಸ್ಥಿತಿಯಲ್ಲಿ ಭಾರತ ಸರಕಾರವು ನೀಡಿರುವ ಮೊತ್ತವು ವಾಸ್ತವ ವೆಚ್ಚಕ್ಕಿಂತ ಕಡಿಮೆಯಾಗಿರುತ್ತದೆ. ಕಾಲೇಜು ಸ್ಥಾಪನೆಯ ವೆಚ್ಚವು ಕನಿಷ್ಟ ೧೫ ಲಕ್ಷ ರೂ.ಗಳಾಗಿದೆ. ಭಾರತ ಸರಕಾರದ ನೀಡಿಕೆಯನ್ನು ಲೆಕ್ಕಕ್ಕೆ ತೆಗೆದುಕೊಂಡ ಮೇಲೂ ಇನ್ನೂ ೯ ಲಕ್ಷಗಳ ಕೊರತೆಯಿರುವುದು ಕಂಡುಬರುತ್ತದೆ. ಈ ಹಣವನ್ನು ದೇಣಿಗೆಗಳ ಮೂಲಕ ನಾವು ಸಂಗ್ರಹಿಸಬೇಕಾಗಿದೆ. ಸಂಸ್ಥೆಯು ಇತರ ನೆರವಿನ ಮೂಲಗಳತ್ತ ಸಹಾಯಕ್ಕಾಗಿ ತನ್ನ ಕೈಯನ್ನು ಚಾಚಬೇಕಾಗಿದೆ. ಸಾಮಾನ್ಯವಾಗಿ ಶಿಕ್ಷಣದ ಪ್ರಸಾರದಲ್ಲಿ ಆಸಕ್ತಿಯಿರುವ ಮತ್ತು ಅಸ್ಪೃಶ್ಯರ ಶಿಕ್ಷಣದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿರುವ ಎಲ್ಲರಿಂದಲೂ ತನ್ನ ಈ ಮನವಿಯು ಸಹಾನುಭೂತಿಯನ್ನು ಪಡೆಯುತ್ತದೆಯೆಂಬ ನಂಬಿಕೆ ಮತ್ತು ತನ್ನ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಅಗತ್ಯವಾದ ಆರ್ಥಿಕ ನೆರವು ಸಂಸ್ಥೆಗೆ ಹರಿದು ಬರುತ್ತದೆಯೆಂಬ ವಿಶ್ವಾಸವು ಸಂಸ್ಥೆಗೆ ಇದೆ.

ಕೆಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳವರ ಜನಸಂಖ್ಯೆಯು ಬಹಳ ದೊಡ್ಡದಾಗಿದೆ ಮತ್ತು ಈ ರಾಜ್ಯಗಳ ಆಡಳಿತಗಾರರು ಸಂಸ್ಥೆಯ ಇಂತಹ ಉದಾತ್ತ ಧ್ಯೇಯಕ್ಕಾಗಿ ತಮ್ಮ ಉದಾರವಾಗಿ ನೆರವನ್ನು ನೀಡಬೇಕೆಂದು ಸಂಸ್ಥೆಯು ಮನವಿಮಾಡಿಕೊಳ್ಳುತ್ತದೆ. ಕಾಲೇಜಿಗೆ ಪ್ರವೇಶವಕಾಶವನ್ನು ನೀಡುವಲ್ಲಿ ಸಹಾಯವನ್ನು ನೀಡಿದ ರಾಜ್ಯಗಳ ಪರಿಶಿಷ್ಟ ಹಾಗೂ ಇತರ ಜಾತಿಗಳ ವಿದ್ಯಾರ್ಥಿಗಳಿಗೆ ಕೆಳಕಂಡ ವಿಶೇಷ ಸವಲತ್ತುಗಳನ್ನು ನೀಡಲು ಸಂಸ್ಥೆಯು ಸಂತೋಷದಿಂದ ಮುಂದೆಬರುತ್ತದೆ.

೧) ಕಾಲೇಜಿನ ಕಲಾ ಹಾಗೂ ವಿಜ್ಞಾನ ವಿಭಾಗದಲ್ಲಿ ವಿವಿಧ ಸಮುದಾಯಗಳವರ ಪ್ರವೇಶದಲ್ಲಿ ನಿರ್ದಿಷ್ಟ ಸ್ಥಾನಗಳನ್ನು ಮೀಸಲಿಡುವುದು,

೨) ಕಾಲೇಜು ಕಟ್ಟಡದ ಅಂಗವಾಗಿ ನಿರ್ಮಿಸುತ್ತಿರುವ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಮೀಸಲಿಡುವುದು, ಮತ್ತು

೩) ವಿದ್ಯಾರ್ಥಿ ಶುಲ್ಕದಲ್ಲಿ ವಿನಾಯತಿ ಮತ್ತು ವಿದ್ಯಾರ್ಥಿ ವೇತನಗಳನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಮೀಸಲಿಡುವುದು.

ಧನಸಹಾಯವನ್ನು ನೀಡುವ ರಾಜ್ಯಗಳು ಮಾಡಬಹುದಾದ ನ್ಯಾಯಸಮ್ಮತವಾದ ಯಾವುದೇ ನಿಬಂಧನೆಗಳನ್ನು ಒಪ್ಪಿಕೊಳ್ಳಲು ಸಂಸ್ಥೆಯು ಸಿದ್ಧವಿರುತ್ತದೆ.

ತಮ್ಮಿಂದ ಪಡೆಯಬಹುದಾದ ಧನಸಹಾಯದಿಂದ ಸಂಸ್ಥೆಯು ಬಹಳಷ್ಟು ಉಪಕೃತವಾಗಿರುತ್ತದೆ ಎಂಬುದನ್ನು ಸಂಸ್ಥೆಯು ಒಪ್ಪಿಕೊಳ್ಳುತ್ತದೆ. ಅದೇ ಸಮಯದಲ್ಲಿ, ಶಿಕ್ಷಣದಲ್ಲಿ ಪರಿಶಿಷ್ಠ ಜಾತಿಗಳವರಿಗೆ ವಿಶೇಷ ಗಮನವನ್ನು ನೀಡುವ ನಮ್ಮ ಕಾಲೇಜಿನ ವಿಶೇಷತೆಯನ್ನು ತಮ್ಮ ರಾಜ್ಯದ ಎರಡನೆಯ ದರ್ಜೆಯ ಪ್ರಜೆಗಳಾಗಿ ಬದುಕುತ್ತಿರುವ ಪರಿಶಿಷ್ಟ ಜಾತಿಗಳವರು ಅರಿತುಕೊಳ್ಳಲಿದ್ದಾರೆಂಬುದು ತಮ್ಮ ರಾಜ್ಯವು ನಮ್ಮ

ಸಂಸ್ಥೆಯಿಂದ ಪಡೆಯುವ ಪ್ರತಿಫಲವಾಗಿದೆ.

ಆದ್ದರಿಂದ, ಸಂಸ್ಥೆಯ ಈ ಉದ್ದೇಶದ ಸಾಫಲ್ಯಕ್ಕಾಗಿ ಉದಾರವಾಗಿ ಧನಸಹಾಯವನ್ನು ಮಾಡುವಂತೆ ಮತ್ತು ತನ್ಮೂಲಕ ಭಾರತದ ಉದ್ದಗಲದಲ್ಲಿ ಇರುವ ಪರಿಶಿಷ್ಟ ಜಾತಿಗಳವರ, ಅದರಲ್ಲೂ ತಮ್ಮ ತಮ್ಮ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಗಳವರ, ಕಲ್ಯಾಣಕ್ಕೆ ನೆರವಾಗಬೇಕೆಂದು ಭಾರತೀಯ ಸಂಸ್ಥಾನದ ಆಡಳಿತಗಾರರಿಗೆ ಸಂಸ್ಥೆಯು ಮನವಿಯನ್ನು ಮಾಡುತ್ತದೆ.*

* * * * *

---

(ನವದೆಹಲಿಯ ಡೆಲ್ಲಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿದೆ)

*ದಲಿತವರ್ಗಗಳವರ ಉಪಯೋಗಕ್ಕಾಗಿ ಬಾಂಬೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕಾಲೇಜಿಗೆ ಅಗತ್ಯವಾದ ಧನಸಹಾಯಕ್ಕಾಗಿ ಬರೋಡದ ಮಹಾರಾಜರನ್ನು ಮತ್ತೆ ಸಂಪರ್ಕಿಸಲಾಯಿತು. ಡಾ. ಅಂಬೇಡ್ಕರ್ ಅವರ ಪರವಾಗಿ ಶ್ರೀ ಕೆ.ಎ. ಕೆಲುಸ್ಕರ್ ಅವರು ಒಂದು ಮನವಿಯನ್ನು ಸಿದ್ಧಪಡಿಸಿದ್ದರು. ಅದನ್ನು ೧೩ನೆಯ ಪರಿಶಿಷ್ಟದಲ್ಲಿ ನೀಡಲಾಗಿದೆ.

## ೮

# ಅಸ್ಪೃಶ್ಯರಿಗಾಗಿ ಬಾಂಬೆಯಲ್ಲಿ ಒಂದು ಸಾಮಾಜಿಕ ಕೇಂದ್ರ

ಭಾರತೀಯ ಸಮುದಾಯಕ್ಕೆ ಮಾನವೀಯ ಘನತೆಯನ್ನು ತಂದುಕೊಡಲು ಅಸ್ಪೃಶ್ಯರ ಪರವಾಗಿ ನಡೆಸುತ್ತಿದ್ದ ಹೋರಾಟಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಧನಸಂಗ್ರಹ ಮಾಡುವುದಕ್ಕಾಗಿ ಸತತವಾಗಿ ಪ್ರಯತ್ನಿಸುತ್ತಿದ್ದರು. ಅಸ್ಪೃಶ್ಯರ ಕಾರ್ಯಕ್ರಮಗಳನ್ನು ಜಾರಿಗೆ ತರಲು ಮತ್ತು ಅವುಗಳ ಮೇಲ್ವಿಚಾರಣೆ ನಡೆಸಲು ಒಂದು ಕೇಂದ್ರವನ್ನು ಸ್ಥಾಪಿಸಲು ಅವರು ಯೋಚಿಸುತ್ತಿದ್ದರು. ಬಹುಶಃ ೧೯೪೪ರಲ್ಲಿ, ಅವರು ಭಾರತದ ಸಂಸ್ಥಾನಗಳ ರಾಜರುಗಳಿಗೆ ಮತ್ತು ಜನತೆಗೆ ಒಂದು ಮನವಿಯನ್ನು ಮಾಡಿದ್ದರು – ಸಂಪಾದಕರು

**ಭಾರತದ ರಾಜರುಗಳಿಗೆ ಮತ್ತು ಜನತೆಗೆ**

**ಅಸ್ಪೃಶ್ಯರಿಗಾಗಿ ಬಾಂಬೆಯಲ್ಲಿ ಉದ್ದೇಶಿಸಿರುವ ಒಂದು ಸಾಮಾಜಿಕ ಕೇಂದ್ರಕ್ಕೆ ಧನಸಹಾಯ**

**ಈ ಯೋಜನೆಯ ಅಗತ್ಯ ೩,೨೫,೦೦೦ ರೂ.ಗಳು.**

**ನೀವು ಸಹಾಯಮಾಡುವುದಿಲ್ಲವೇ?**

**ಆನರಬಲ್ ಡಾ. ಬಿ.ಆರ್. ಅಂಬೇಡ್ಕರ್, ಎಂ.ಎ., ಪಿ.ಎಚ್.ಡಿ., ಡಿ.ಎಸ್.ಸಿ, ಬಾರ್–ಅಟ್–ಲಾ, ಗವರ್ನರ್ ಜನರಲ್ ಅವರ ಕಾರ್ಯಾಂಗ ಸಮಿತಿಯ ಸದಸ್ಯರು – ಇವರ**

**ಮನವಿ**

**ಅಸ್ಪೃಶ್ಯರ ಹೊಸ ಚಳವಳಿ**

ಭಾರತದ ಜನಸಂಖ್ಯೆಯಲ್ಲಿ ೬೦ ದಶಲಕ್ಷದಷ್ಟು ಇರುವ, ತುಳಿಯಲ್ಪಟ್ಟಿರುವ ಮತ್ತು ಕೆಳದರ್ಜೆಯ ಜೀವನವನ್ನು ನಡೆಸುತ್ತಿರುವ ಅಸ್ಪೃಶ್ಯರ ಪರಿಸ್ಥಿತಿಯು ಭಾರತದ ಪ್ರಮುಖ ಸಮಸ್ಯೆಗಳಲ್ಲಿ ಒಂದು. ಅವರನ್ನು ಇತರ ಸಮುದಾಯಗಳವರ ಮಟ್ಟಕ್ಕೆ ಏರಿಸುವ ಪ್ರಯತ್ನಗಳತ್ತ ಹಲವಾರು ಹಿಂದೂ ಸಮಾಜಸುಧಾರಕರು ತಮ್ಮ ಗಮನವನ್ನು ಹರಿಸಿದ್ದಾರೆ. ಆದರೆ ತಮ್ಮ ಉದ್ಧಾರದ ಹೊಣೆಯನ್ನು ತಾವೇ ಹೊತ್ತುಕೊಳ್ಳಲು ಅಸ್ಪೃಶ್ಯರು ಮಾಡುತ್ತಿರುವ ಪ್ರಯತ್ನವು ಅಭೂತಪೂರ್ವವಾದದ್ದು. ಸಮಾನತೆಗಾಗಿ ಅವರು ನಡೆಸುತ್ತಿರುವ ಹೋರಾಟವು ೨೫ ವರ್ಷಗಳ ಹಿಂದೆ ಪ್ರಾರಂಭವಾಯಿತು.

ಈ ಹೋರಾಟವು ಹಲವು ಮಜಲುಗಳನ್ನು ದಾಟಿ ಬರುತ್ತಿದೆ ಮತ್ತು ಮತ್ತೆ ಮತ್ತೆ ಸಂಭವಿಸುತ್ತಿರುವ ಮುಖಭಂಗಗಳು ಮತ್ತು ಒಂದೇ ಸಮನೆ ಎದುರಾಗುತ್ತಿರುವ ವಿರೋಧಗಳ ಹೊರತಾಗಿಯೂ, ಈ ಚಳವಳಿಯು ಕಾಲದಿಂದ ಕಾಲಕ್ಕೆ ಬಲವನ್ನು ಒಗ್ಗೂಡಿಸಿಕೊಂಡು ಮುನ್ನಡೆಯುತ್ತಿದೆ. ಸ್ವಾವಲಂಬನೆಯ ಸಂದೇಶವು ಸಮುದಾಯದ ಅತ್ಯಂತ ಕೆಳ ಮಟ್ಟದವರೆಗೂ ತಲುಪಿದೆ. ಹಳ್ಳಿಗಳ ಹೊರಭಾಗದಲ್ಲಿ ನಿಂತನೀರಾಗಿದ್ದ ಅಸ್ಪೃಶ್ಯರ ಬದುಕಿನಲ್ಲಿ ಮತ್ತು ಕಗ್ಗಾಡಾಗಿದ್ದ ಅವರ ಬದುಕಿನಲ್ಲಿ ಈಗ ಪ್ರಚೋದನೆಯನ್ನು ಕಾಣಬಹುದು. ವರ್ಗಗಳ ಮೂಢನಂಬಿಕೆಯಿಂದ, ತಮ್ಮನ್ನು ತಾವೇ ಕೀಳಾಗಿ ಕಾಣುವ ಸ್ವಭಾವದಿಂದ ಮತ್ತು ಅಜ್ಞಾನದ ಹೊರೆಯಿಂದಾಗಿ ಸುಪ್ತತೆಯ ಆಳದಲ್ಲಿ ಮುಳುಗಿದ್ದವರ ದೇಹದಲ್ಲಿ ಹೊಸ ಬದುಕಿನ ಸೆಲೆಯು ಒಡೆದು ತೋರುತ್ತಿದೆ. ನಿಜವಾದ ಹುಮ್ಮಸ್ಸು ಮೂಡಿದೆ ಮತ್ತು ಸರಿಯಾದ ಚಳವಳಿಯು ಪ್ರಾರಂಭವಾಗಿದೆ. ಆತ್ಮಗೌರವ ಮತ್ತು ಸ್ವಾವಲಂಬನೆಯನ್ನೇ ಮಂತ್ರವಾಗಿಸಿಕೊಂಡಿರುವ ಈ ಚಳವಳಿಯನ್ನು

ವ್ಯವಸ್ಥಿತವಾಗಿ ಪೋಷಿಸಿದರೆ ಅದು ಅಸ್ಪೃಶ್ಯರ ಮತ್ತು ಇಡೀ ದೇಶದ ಸ್ಥಾನವನ್ನು ಉನ್ನತಿಗೆ ಕೊಂಡೊಯ್ಯುವ ಒಂದು ಅದ್ಭುತವಾದ ಶಕ್ತಿಯಾಗುತ್ತದೆ. ಈ ಚಳವಳಿಯ ಪರವಾಗಿ ನಾನೀಗ ಈ ಮನವಿಯನ್ನು ಮಾಡುತ್ತಿದ್ದೇನೆ.

ನನ್ನ ಕಾರ್ಯಚಟುವಟಿಕೆಯ ಜೊತೆ ಹತ್ತಿರದ ಮತ್ತು ಆತ್ಮೀಯ ಸಂಬಂಧವನ್ನು ಹೊಂದಿರದವರು ಸಾಮಾಜಿಕ ಚಳವಳಿಯ ಪರವಾಗಿ ನಾನು ಮಾಡುತ್ತಿರುವ ಕೆಲಸದ ಬಗ್ಗೆ ಆಶ್ಚರ್ಯವನ್ನು ತಾಳಬಹುದು. ಅವರು ನನ್ನನ್ನು ರಾಜಕಾರಣಿಯೆಂಬಂತೆ ನೋಡುತ್ತಿದ್ದಾರೆ. ವಾಸ್ತವವಾಗಿ, ರಾಜಕೀಯವು ನನಗೆ ಎಂದೂ ಗೀಳಾಗಿರಲಿಲ್ಲ. ಜನತೆಯ ಸುಧಾರಣೆಗಾಗಿ ರಾಜಕೀಯ ಶಕ್ತಿಗಳು ಎಷ್ಟೇ ಪ್ರಮುಖವಾದವುಗಳಾದರೂ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಶಕ್ತಿಗಳು ಸಮಾಜಕ್ಕೆ ಅತ್ಯಂತ ಪ್ರಾಣಾಧಾರವಾದವುಗಳು ಹಾಗೂ ಈ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸುಧಾರಣೆಗಳಿಗೆ ರಾಜಕೀಯ ಶಕ್ತಿಯು ಕೇವಲ ಒಂದು ಸಾಧನ ಎಂಬುದು, ಚರಿತ್ರೆಯ ವಿದ್ಯಾರ್ಥಿಯಾದ ನನ್ನ ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟಿದೆ. ರಾಜಕೀಯ ಚಳವಳಿಗಿಂತಲೂ ಹೆಚ್ಚಿನ ಒತ್ತನ್ನು ಸಾಮಾಜಿಕ ಚಳವಳಿಗೆ ನಾನು ಮೊದಲಿನಿಂದಲೂ ಕೊಡುತ್ತಾ ಬಂದಿದ್ದೇನೆ. ನನ್ನ ೨೫ ವರ್ಷಗಳ ಸಾರ್ವಜನಿಕ ಜೀವನದಲ್ಲಿ ಬಹು ಪಾಲನ್ನು ಅಸ್ಪೃಶ್ಯರ ಸಾಮಾಜಿಕ ಉದ್ಧಾರಕ್ಕಾಗಿ ಮೀಸಲಾಗಿಟ್ಟಿದ್ದೇನೆ. ನನ್ನನ್ನು ಕೇವಲ ಒಬ್ಬ ರಾಜಕಾರಣಿ ಎಂಬ ದೃಷ್ಟಿಯಿಂದ ನೋಡುವುದನ್ನು ತಪ್ಪಿಸಲು ಮಾತ್ರ ಈ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ಅದೊಂದು ತಪ್ಪು ಅಭಿಪ್ರಾಯ. ಹೊಸ ಚಳವಳಿಗೆ ಹೊಸ ಶಕ್ತಿಯನ್ನು ತುಂಬುವಲ್ಲಿ ಮತ್ತು ಅದರ ಬೆಳವಣಿಗೆಯನ್ನು ಪೋಷಿಸುವಲ್ಲಿ ನನ್ನ ಪಾತ್ರವು ಅಮುಖ್ಯವಾದುದೇನೂ ಅಲ್ಲ. ನನ್ನ ಈ ಹೇಳಿಕೆಯ ಸಮರ್ಥನೆಗೆ ಬಾಂಬೆಯ ಪ್ರಧಾನಮಂತ್ರಿಗಳಾಗಿದ್ದ ಕಾಂಗ್ರೆಸ್ಸಿನ ಶ್ರೀ ಬಿ.ಜಿ. ಖೇರ್ ಅವರ ಮಾತುಗಳನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ. ಸಚಿವರ ವೇತನದ ಮಸೂದೆಯ ಮೇಲೆ ನಾನು ಬಾಂಬೆ ಶಾಸನ ಸಭೆಯಲ್ಲಿ ಮಾಡಿದ ಭಾಷಣಕ್ಕೆ ಉತ್ತರವಾಗಿ ೧೯೩೭ರ ಆಗಸ್ಟ್ ೨೩ರಂದು ಉತ್ತರಿಸುತ್ತಿದ್ದರು.

"ಡಾ. ಅಂಬೇಡ್ಕರ್ ಅವರು ಸಚಿವರ ಸಾಮರ್ಥ್ಯದ ಬಗ್ಗೆ ಮಂಡಿಸಿದ ತಮ್ಮ ವಾದದ ಬಗ್ಗೆ ಎರಡು ಅಭಿಪ್ರಾಯಗಳಿರುವುದು ಸಾಧ್ಯವೇ ಇಲ್ಲ. ಈ ಸಚಿವ ಸಂಪುಟದ ಸದಸ್ಯರ ಸಾಮರ್ಥ್ಯದ ವಿಷಯದಲ್ಲಿ ಮಾಡಿರುವ ಟೀಕೆಗಳ ಬಗ್ಗೆ ಮತ್ತು ಅವರು ನೀಡಿದ ನೈಜ ಅಭಿಪ್ರಾಯಗಳ ಬಗ್ಗೆ ನಾನು ಸನ್ಮಾನ್ಯ ಸದಸ್ಯರಿಗೆ ಕೃತಜ್ಞನಾಗಿದ್ದೇನೆ. ಅವರ ಯೋಗ್ಯತೆಯ ಬಗ್ಗೆ ನನಗೆ ಬಹಳ ಗೌರವವಿದೆ. ದಲಿತ ವರ್ಗಗಳವರಿಗೆ ಬೇರೆ ಯಾರೂ ಮಾಡಲಾಗದಷ್ಟು ಸೇವೆಯನ್ನು ಅವರು ಮಾಡುತ್ತಿದ್ದಾರೆ. (ಚಪ್ಪಾಳೆ). ಈ ಸೇವೆಗಾಗಿ ಅವರು ಎಷ್ಟು ವೇತನವನ್ನು ಪಡೆಯುತ್ತಿದ್ದಾರೆ ಎಂದು ನಾನು ಮಾನ್ಯ ಸದಸ್ಯರನ್ನು ಕೇಳಬಹುದೇ? ಅವರು ದಲಿತ ವರ್ಗಗಳವರಿಗಾಗಿ ಮಾಡುತ್ತಿರುವ ಸೇವೆಯನ್ನು ಅವರಿಗೆ ನೀಡುವ ಹಣದಿಂದ ಖರೀದಿಸಲು ಸಾಧ್ಯವಿಲ್ಲವೆಂಬುದನ್ನು ನಾನು ಬಲ್ಲೆ. (ಚಪ್ಪಾಳೆ). ಅವರು ತಮ್ಮ ಸಮುದಾಯದವರಿಗಾಗಿ ಮಾಡುತ್ತಿರುವ ಸೇವೆಯ ಬೆಲೆಯನ್ನು ಹಣದ ದೃಷ್ಟಿಯಿಂದ ಅಳೆಯುವುದು ಸಾಧ್ಯವಿಲ್ಲ. ಯಾವುದೇ ವ್ಯಕ್ತಿಯು ಪಡೆಯುವ ವೇತನದ ಮೇಲೆ ಆತನ ಸಾಮರ್ಥ್ಯವು ಅವಲಂಬಿತವಾಗಿರುವುದಿಲ್ಲ. ತಮ್ಮ ಸಮುದಾಯಗಳವರಿಗೆ ಸಲ್ಲಿಸುತ್ತಿರುವ ಸೇವೆಗಾಗಿ ಆರ್ಥಿಕವಾಗಿ ಎಂತಹ ಪ್ರತಿಫಲವನ್ನು ಪಡೆಯುತ್ತಿದ್ದೀರೆಂದು ನಾನು ನನ್ನ ಮಾನ್ಯ ಮಿತ್ರರಿಂದ ತಿಳಿದುಕೊಳ್ಳಬಹುದೇ? (ಬಾಂಬೆ ಶಾಸನ ಸಭೆಯ ಚರ್ಚೆಗಳು, ೧೯೩೭, ಸಂಪುಟ ೧, ಪುಟ ೨೭೨).

ಕಾಂಗ್ರೆಸ್ ಪಕ್ಷದವರಿಂದ ಬಂದ ಈ ಟೀಕೆಗಳನ್ನು ನಾನು ಆಧಾರವಾಗಿ ತೆಗೆದುಕೊಳ್ಳಬೇಕಾಗಿ

ಬಂದುದಕ್ಕೆ ನನಗೆ ಅತೀವ ಸಂತೋಷವಾಗುತ್ತಿದೆ. ಈ ಹಿಂದೆ ಮುಖ್ಯವಾಗಿ ಸಾಮಾಜಿಕ ಕೆಲಸಗಳಲ್ಲಿ ತೊಡಗಿಕೊಂಡಿದ್ದೆ ಎಂಬುದನ್ನು ಇದು ತೋರಿಸಿಕೊಡುತ್ತದೆ.

## ಸಾಮಾಜಿಕ ಕೇಂದ್ರದ ಆವಶ್ಯಕತೆ

ಶ್ರೀ ಖೇರ್ ಅವರು ಹೇಳಿದ ಈ ಪವಿತ್ರ ಕಾರ್ಯವನ್ನು ಸುಭದ್ರವಾದ ಮತ್ತು ಶಾಶ್ವತವಾದ ತಳಹದಿಯ ಮೇಲೆ ನಿಲ್ಲಿಸಬೇಕೆಂಬುದು ನನ್ನ ಅಪೇಕ್ಷೆ. ಅಸ್ಪೃಶ್ಯರ ಪ್ರಗತಿಯ ವಿಷಯದಲ್ಲಿ ಕಾಳಜಿಯಿರುವವರೆಲ್ಲರ ಅಪೇಕ್ಷೆಯೂ ಅದೇ ಆಗಿದೆ ಎಂಬುದರಲ್ಲಿ ನನಗೆ ವಿಶ್ವಾಸವಿದೆ. ಈ ಚಳವಳಿಯು ಯಶಸ್ವಿಯಾಗಬೇಕಾದರೆ ಮುಂದಿನ ಮೂರು ಸಾಧನಗಳು ಅದರ ಬಳಿಯಲ್ಲಿರಬೇಕೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿರುವುದು ಸಾಧ್ಯವಿಲ್ಲ – (೧) ಕೇಂದ್ರ ಕಚೇರಿ, (೨) ಒಳ್ಳೆಯ ತರಬೇತಿಯನ್ನು ಪಡೆದ ನಿಷ್ಠಾವಂತ ಕಾರ್ಯಕರ್ತರು ಮತ್ತು (೩) ಆರ್ಥಿಕ ಸುಭದ್ರತೆ. ಈ ಸಾಧನಗಳು ದೊರಕಿದರೆ ಮಾತ್ರ ದಲಿತ ಚಳವಳಿಯನ್ನು ಒಂದು ಸುರಕ್ಷಿತವಾದ ಮತ್ತು ಶಾಶ್ವತವಾದ ತಳಹದಿಯ ಮೇಲೆ ನಿಲ್ಲಿಸಲು ಸಾಧ್ಯವಾಗುತ್ತದೆ.

ಈ ಮೂರರಲ್ಲಿ, ಕೇಂದ್ರ ಕಚೇರಿಯನ್ನಾಗಿ ಸಾಮಾಜಿಕ ಕೇಂದ್ರವೊಂದನ್ನು ಸ್ಥಾಪಿಸುವುದನ್ನು ಮೂಲಭೂತವಾದದ್ದು ಎಂದು ಪರಿಗಣಿಸಲೇಬೇಕು. ಒಮ್ಮೆ ಸಾಮಾಜಿಕ ಕೇಂದ್ರವೊಂದನ್ನು ಸ್ಥಾಪಿಸಿದರೆ, ಎಲ್ಲಾ ಸಾಮಾಜಿಕ ಚಟುವಟಿಕೆಗಳನ್ನೂ ಸಮನ್ವಯಗೊಳಿಸಿ, ನಾನು ರೂಪಿಸಿರುವ ಯೋಜನೆಯ ಅಡಿಯಲ್ಲಿ ಚಳವಳಿಯನ್ನು ಮುಂದುವರೆಸುವುದಕ್ಕೆ ಸಹಾಯಕವಾಗುತ್ತದೆ. ಅಷ್ಟೇ ಅಲ್ಲದೆ ಸಾಮಾಜಿಕ ಚಟುವಟಿಕೆಗಳನ್ನು ನಡೆಸುವುದಕ್ಕೆ ಮತ್ತು ಪೂರ್ಣಕಾಲಿಕ ನಿಷ್ಠಾವಂತ ಕಾರ್ಯಕರ್ತರ ಪಡೆಗೆ ಸಂಬಳ ಸಾರಿಗೆಗಳನ್ನು ನೀಡುವುದಕ್ಕೆ ಅಗತ್ಯವಾದ ಹಣಕಾಸನ್ನು ಪಡೆಯಲು ಅದು ಸಹಾಯವನ್ನು ಮಾಡುತ್ತದೆ.

## ಬಾಂಬೆಯನ್ನು ಆಯ್ದುಕೊಂಡಿರುವದರಲ್ಲಿರುವ ಯುಕ್ತತೆ

ಪ್ರತಿ ಪ್ರಾಂತದಲ್ಲಿರುವ ಅಸ್ಪೃಶ್ಯರೂ ಒಂದೊಂದು ಸಾಮಾಜಿಕ ಕೇಂದ್ರವನ್ನು ಹೊಂದಿರಬೇಕು ಎನ್ನುವುದರಲ್ಲಿ ಸಂಶಯವಿಲ್ಲ. ಹಾಗೆ ಪ್ರತಿಯೊಂದು ಪ್ರಾಂತಕ್ಕೂ ಒಂದೊಂದು ಕೇಂದ್ರವನ್ನು ಸ್ಥಾಪಿಸಿವುದು ನನ್ನ ಯೋಜನೆಯಲ್ಲಿದೆ. ಆದರೆ ಪ್ರಾರಂಭವು ಯಾವುದೋ ಒಂದು ಕಡೆ ಆಗಬೇಕು. ಈ ಪ್ರಯತ್ನದ ಪ್ರಾರಂಭವು ಬಾಂಬೆಯಲ್ಲಿ ಆದರೆ ಉತ್ತಮವಾಗಿರುತ್ತದೆ ಎಂಬುದು ನನ್ನ ನಿರ್ಣಯ. ಈ ವಿಷಯದಲ್ಲಿ ಬಾಂಬೆಯು ಮುಂದಾಳತ್ವವನ್ನು ನೀಡಿದೆ. ಆದ್ದರಿಂದ ಈ ಕೇಂದ್ರಕ್ಕೆ ವ್ಯವಸ್ಥಿತವಾದ ಹಾಗೂ ಶಾಶ್ವತವಾದ ಬುನಾದಿಯನ್ನು ಬಾಂಬೆಯಲ್ಲಿಯೇ ಹಾಕಬೇಕು. ಹೀಗಾಗಿ ಬಾಂಬೆಯೇ ನನ್ನ ಪ್ರಾರಂಭಿಕ ಸ್ಥಳ. ಬಾಂಬೆಯಲ್ಲಿ ಸ್ಥಾಪಿಸುವ ಈ ಕೇಂದ್ರದ ಉದ್ದೇಶವು ಅಸ್ಪೃಶ್ಯರ ಸಾಮಾಜಿಕ. ಆರ್ಥಿಕ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಸೇವೆ ಸಲ್ಲಿಸುವಲ್ಲಿ ಒಂದು ಮಾದರಿಯಾಗಿರುವುದಷ್ಟೇ ಅಲ್ಲದೆ ವಿವಿಧ ಚಟುವಟಿಕೆಗಳನ್ನು ಮತ್ತು ಹೊಸ ಹೊಸ ವಿಚಾರಗಳನ್ನು ಸಮಂಜಸವಾಗಿ ಪ್ರಸಾರಮಾಡುವುದೂ ಆಗಿದೆ.

ಅಸ್ಪೃಶ್ಯರ ಜೀವನದ ಸಂಪ್ರದಾಯ ಮತ್ತು ಜೀವನದ ಸಾಮಾನ್ಯ ದೃಷ್ಟಿಯನ್ನು ಆರೋಗ್ಯಕರವಾಗಿ ಬದಲಾಯಿಸಿ, ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಟ್ಟವನ್ನು ಮೇಲಕ್ಕೆ ಏರಿಸಿ, ಪಾಶ್ಚಾತ್ಯ ದೇಶಗಳಲ್ಲಿರುವ ಸಾಮಾಜಿಕ ನಿವಾಸಸ್ಥಾನಗಳ ಮಾದರಿಯಲ್ಲಿಯೇ, ಉದ್ದೇಶಿತ ಕೇಂದ್ರವನ್ನು ಅಸ್ಪೃಶ್ಯರಿಗಾಗಿ ಒಂದು ಜನಪ್ರಿಯ ತಾಣವನ್ನಾಗಿಸಲು ಅಗತ್ಯವಾಗಿರುವ ಎಲ್ಲಾ ವಿಷಯಗಳನ್ನೂ ಈ ಮನವಿಯ ಅಂತ್ಯದಲ್ಲಿ ನೀಡಲಾಗಿರುವ ಉದ್ದೇಶಿತ ಕೇಂದ್ರದ ಯೋಜನೆಯ ರೂಪುರೇಷೆಗಳು ನೀಡುತ್ತವೆ. ಇದು ಅವರ ಉದ್ದೇಶ ಮತ್ತು ಕಾರ್ಯಚಟುವಟಿಕೆಗಳಲ್ಲಿ ಏಕತೆಯನ್ನು ತರುತ್ತದೆ ಮತ್ತು ಸಾಮಾಜಿಕ ಪುನರುಜ್ಜೀವನದ

ಕಾರ್ಯವನ್ನು ಒಂದು ಶಾಶ್ವತವಾದ ನೆಲಗಟ್ಟಿನ ಮೇಲೆ ನಿಲ್ಲಿಸುತ್ತದೆ. ಅಸ್ಪೃಶ್ಯರು ಈಗ ಬಾಂಬೆಯಲ್ಲಿ ಕೈಗೊಂಡು ನಡೆಸುತ್ತಿರುವ ಮುಖ್ಯ ಕಾರ್ಯಚಟುವಟಿಕೆಗಳನ್ನು ಈ ಕೇಂದ್ರದಲ್ಲಿ ಸಂಯೋಜಿಸಬಹುದು. ಅಸ್ಪೃಶ್ಯರ ಎಲ್ಲಾ ಕಾರ್ಯಕ್ರಮಗಳನ್ನೂ ಸೂಕ್ತವಾದ ಒಂದೇ ಸೂರಿನಡಿ ನಡೆಸಲು ಇಲ್ಲಿಯವರೆಗೆ ಇದ್ದ ಅಡಚಣೆಗಳು ಈ ಕೇಂದ್ರದ ಉದಯದೊಂದಿಗೆ ನಿವಾರಣೆಯಾಗಲಿವೆ.

## ಈ ಕೇಂದ್ರವು ಸಾರ್ವಜನಿಕ ವಿಶ್ವಸ್ಥ ಮಂಡಳಿಯಾಗಲಿದೆ

ಉದ್ದೇಶಿತ ಕೇಂದ್ರದ ವ್ಯಾಪ್ತಿ ಮತ್ತು ಕಾರ್ಯಚಟುವಟಿಕೆಗಳು ನೊಂದಾಯಿತ ವಿಶ್ವಸ್ಥ ಸನ್ನದಿನ ಮೂಲಕ ನಡೆಯಲಿವೆ ಮತ್ತು ಹಣಕಾಸಿನ ವ್ಯವಹಾರವನ್ನು ವಿಶ್ವಸ್ಥ ಮಂಡಳಿಯು ನಿರ್ವಹಿಸುತ್ತದೆ.

ಕೇಂದ್ರದ ಧ್ಯೇಯ ಮತ್ತು ಉದ್ದೇಶಗಳನ್ನು ಮುಂದೆ ಕೊಡಲಾಗಿದೆ –

ಅ) ಬಡತನ ಮತ್ತು ಸಂಕಷ್ಟಗಳಿಗೆ ಪರಿಹಾರ,

ಆ) ಶಿಕ್ಷಣದ ಪ್ರಗತಿ,

ಇ) ಕ್ರೌರ್ಯ ಮತ್ತು ತುಳಿತಗಳಿಂದ ಮುಕ್ತಿ,

ಈ) ಸಾಮಾಜಿಕ ಹಕ್ಕುಗಳು ಮತ್ತು ಸವಲತ್ತುಗಳನ್ನು ಪಡೆದುಕೊಳ್ಳುವುದು ಮತ್ತು ಕಾಪಾಡಿಕೊಂಡು ಹೋಗುವುದು,

ಉ) ಸಾಮಾಜಿಕ ಉಪದ್ರವಗಳನ್ನು ನಿವಾರಿಸುವುದು,

ಊ) ಮೂಢನಂಬಿಕೆಗಳ ಆಚರಣೆಗಳನ್ನು ಮತ್ತು ನಂಬಿಕೆಗಳನ್ನು ನಿವಾರಿಸಲೋಸುಗ ಸಾಮಾನ್ಯಜ್ಞಾನ ಮತ್ತು ಅರಿವನ್ನು ಪ್ರಸಾರಮಾಡುವುದು,

ಋ) ಸಾಮಾಜಿಕ ಮತ್ತು ಧಾರ್ಮಿಕ ಕಲ್ಯಾಣಗಳನ್ನು ಪಡೆಯುವುದು ಮತ್ತು ಕಾಪಾಡಿಕೊಂಡು ಹೋಗುವುದು,

ೠ) ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗಾಗಿ ವ್ಯವಸ್ಥಿತ ಪ್ರಯತ್ನಗಳನ್ನು ಪ್ರೋತ್ಸಾಹಿಸುವುದು,

ಎ) ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ತೊಂದರೆಗಳನ್ನು, ಅನನುಕೂಲಗಳನ್ನು ಮತ್ತು ತಾರತಮ್ಯವನ್ನು ತೊಡೆದುಹಾಕಲು ಶಾಸನಾತ್ಮಕವಾದ ಬಲವನ್ನು ಪಡೆಯುವುದು,

ಏ) ಅಸ್ಪೃಶ್ಯತೆಯ ನಿವಾರಣೆ ಮಾಡುವುದು,

## ಕೇಂದ್ರದ ಕಾರ್ಯಚಟುವಟಿಕೆಗಳು

ಅಸ್ಪೃಶ್ಯರ ಉದ್ದೇಶಗಳಿಗೆ ನಿಷ್ಠೆಯಿಂದ ದುಡಿಯುವ ಕಾರ್ಯಕರ್ತರ ಒಂದು ಪಡೆಯನ್ನು ಕಟ್ಟಿ, ತನ್ನ ಧ್ಯೇಯ ಮತ್ತು ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅನುವಾಗುವಂತೆ ಅವರ ಚಟುವಟಿಕೆಗಳನ್ನು ಯೋಜಿಸಲು ಕೇಂದ್ರವು ಉದ್ದೇಶಿಸಿದೆ. ಕೇಂದ್ರದ ಕಾರ್ಯಚಟುವಟಿಕೆಗಳ ಸ್ಥೂಲ ಚಿತ್ರಣವನ್ನು ಮುಂದೆ ನೀಡಲಾಗಿದೆ.

### ೧. ಕಚೇರಿಗಳು

ತಮ್ಮ ತಮ್ಮ ಕಾರ್ಯಗಳನ್ನು ಇಲ್ಲಿಯವರೆಗೆ ಬಾಡಿಗೆ ಕಟ್ಟಡದಿಂದಲೋ ಅಥವಾ ತಮ್ಮ ಸ್ವಂತ ಮನೆಗಳಿಂದಲೋ ನಮ್ಮ ಕಾರ್ಯಕರ್ತರು ನಿರ್ವಹಿಸುತ್ತಿದ್ದರು. ಇಂತಹ ಕಾರ್ಯಕರ್ತರಿಗೆಲ್ಲರಿಗೂ ಅವರ ಚಟುವಟಿಕೆಗಳಿಗೆ ಸೌಕರ್ಯವನ್ನು ಒದಗಿಸುವ ಮತ್ತು ಅವುಗಳನ್ನು ಸಮನ್ವಯಗೊಳಿಸುವ ಉದ್ದೇಶದಿಂದ ಈ ಎಲ್ಲಾ ಕಾರ್ಯಕರ್ತರ ಕಚೇರಿಗಳಿಗೂ ಇನ್ನು ಮುಂದೆ ಈ ಕೇಂದ್ರದಲ್ಲಿ ಕಾರ್ಯವನ್ನು ನಿರ್ವಹಿಸಲು ಅವಕಾಶವನ್ನು ಮಾಡಿಕೊಡಲಾಗುವುದು.

**೨. ಕೇಂದ್ರದ ಕಾರ್ಯಕರ್ತರಿಗೆ ವಸತಿಗಳು**

ಇಲ್ಲಿಯವರೆಗೆ ತಮ್ಮ ಬಿಡುವಿನ ವೇಳೆಯಲ್ಲಿ ಅಸ್ಪೃಶ್ಯರ ಪ್ರಗತಿಗೆ ಸಂಬಂಧಿಸಿದ ಕಾರ್ಯಗಳನ್ನು ಸ್ವಾರ್ಥರಹಿತವಾಗಿ ಮಾಡಿಕೊಂಡು ಬಂದಿರುವವರ ಒಂದು ಪಡೆಯೇ ಇದೆ. ಅವರ ಹಾದಿಯಲ್ಲಿದ್ದ ತೊಂದರೆಗಳನ್ನು ನಿವಾರಿಸಲು, ಮತ್ತು ಅವರು ಇನ್ನು ಮುಂದೆ ತಮ್ಮ ಪೂರ್ಣವೇಳೆ ಮತ್ತು ಶಕ್ತಿಯನ್ನು ತಮ್ಮ ಉದ್ದೇಶಕ್ಕಾಗಿ ಮುಡಿಪಿಡುವಂತೆ ಮಾಡಲು, ಅವರ ಸೇವಾಜಾಲವನ್ನೆಲ್ಲಾ ಒಟ್ಟಿಗೆ ಸೇರಿಸಲು ಮತ್ತು ಅವರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಲು ಚಿಂತನೆಗಳನ್ನು ನಡೆಸಲಾಗುತ್ತದೆ.

**೩. ಸಾರ್ವಜನಿಕ ಸಭಾಭವನ**

ಅಸ್ಪೃಶ್ಯರಿಗಾಗಿ ಒಂದು ಸಾರ್ವಜನಿಕ ಭವನದ ತೀವ್ರ ಆವಶ್ಯಕತೆಯಿದೆ. ಸುಮಾರು ೨,೫೦೦ ಜನರು ಸೇರಲು ಸಾಧ್ಯವಾಗುವಷ್ಟು ದೊಡ್ಡ ಭವನವನ್ನು ಕಟ್ಟಲು ಉದ್ದೇಶಿಸಲಾಗಿದೆ. ಈ ಭವನವನ್ನು ಸಾರ್ವಜನಿಕ ಸಭೆಗಳನ್ನು ನಡೆಸಲು, ಮಹಿಳೆಯರ ಹಾಗೂ ವಿದ್ಯಾರ್ಥಿಗಳ ಸಭೆಗಳನ್ನು ನಡೆಸಲು ಮತ್ತು ಮನರಂಜನೆ, ಶಿಕ್ಷಣ ಹಾಗು ಇನ್ನಿತರ ಸಾಮಾಜಿಕ ಸಮಾರಂಭಗಳನ್ನು ನಡೆಸಲು ಉಪಯೋಗಿಸಲಾಗುವುದು.

**೪. ಗ್ರಂಥಾಲಯ ಮತ್ತು ವಾಚನಾಲಯ**

ಅಸ್ಪೃಶ್ಯರಲ್ಲಿ ಕಲೆ, ಸ್ಥೂಲವಾಗಿ ಮಾನವೀಯ ಆಸಕ್ತಿಗಳು ಇವುಗಳ ಬಗ್ಗೆ ಅಭಿರುಚಿಯನ್ನು ಮೂಡಿಸಲು ಅನುವಾಗುವಂತೆ ಅವರಿಗೆ ಸೂಕ್ತ ಸಂಸ್ಕಾರಗಳನ್ನು ನೀಡಲು ಕೆಲವು ಸೌಲಭ್ಯಗಳನ್ನು ಒದಗಿಸುವುದು ಅಗತ್ಯವಾಗಿದೆ. ಅವರ ಉತ್ಸಾಹಶೂನ್ಯವಾದ, ಬೇಸರತರಿಸುವ ಬದುಕಿನ ವಿರಾಮದ ವೇಳೆಯಲ್ಲಿ ಅವರ ಮನಸ್ಸನ್ನು ಹಿಡಿದಿಡುವಂತಹ ವಿಷಯಗಳ ಮೇಲೆ ಕೂರುವಂತೆ ಮಾಡುವ ಸಾಧನಗಳನ್ನು ಅವರಿಗೆ ಒದಗಿಸುವುದು ಆವಶ್ಯಕವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಅಸ್ಪೃಶ್ಯರ ವಸತಿಕ್ಷೇತ್ರದಲ್ಲಿ ಮಾಡುವ ಗ್ರಂಥಾಲಯದ ವ್ಯವಸ್ಥೆಗಿಂತ ಹೆಚ್ಚಿನ ಸಾಮರ್ಥ್ಯವುಳ್ಳ ಬೇರೆ ಯಾವ ಸಾಧನಗಳೂ ಇಲ್ಲ. ಇದು ಕೇಂದ್ರದ ಬಹು ಪ್ರಮುಖವಾದ ಚಟುವಟಿಕೆಗಳಲ್ಲಿ ಒಂದಾಗಿದೆ. ಇದರ ಜೊತೆಗೆ, ಅಸ್ಪೃಶ್ಯರ ಸಮಸ್ಯೆಗಳನ್ನು ಅಧ್ಯಯನಮಾಡಲು ಬಯಸುವ ವಿದ್ಯಾರ್ಥಿಗಳಿಗಾಗಿ ಒಂದು ಕೇಂದ್ರ ಗ್ರಂಥಾಲಯವನ್ನು ಹೊಂದಲೂ ಉದ್ದೇಶಿಸಲಾಗಿದೆ. ಅಸ್ಪೃಶ್ಯರ ಸಮಸ್ಯೆಗಳು ಎಷ್ಟು ಅಗಾಧವಾಗಿದೆಯೆಂದರೆ, ಅವುಗಳ ಅಧ್ಯಯನ ಮತ್ತು ವಿಶ್ಲೇಷಣೆಗಾಗಿ ನಮ್ಮ ಗಮನ ಮತ್ತು ಶಕ್ತಿಗಳನ್ನು ಹಲವಾರು ವರ್ಷಗಳವರೆಗೆ ನಾವು ಮೀಸಲಿಡಬೇಕಾಗುತ್ತದೆ. ಆದರೆ, ಈ ಅಗಾಧ ಸಮಸ್ಯೆಯ ಶಾಖೋಪಶಾಖೆಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲು ಯಾವ ಸೌಲಭ್ಯಗಳೂ ಇಂದು ದೊರಕುತ್ತಿಲ್ಲ. ಉದ್ದೇಶಿತ ಕೇಂದ್ರದಲ್ಲಿ ಒಂದು ಸುಸಜ್ಜಿತ ಗ್ರಂಥಾಲಯ ಮತ್ತು ವಾಚನಾಲಯಗಳನ್ನು ಸ್ಥಾಪಿಸಿ, ಅಗತ್ಯವಾದ ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಿಕೊಡಲು ಯೋಜಿಸಲಾಗಿದೆ.

**೫. ಪ್ರಕಟಣಾ ವಿಭಾಗ**

ಅಸ್ಪೃಶ್ಯರು ಅಜ್ಞಾನ ಮತ್ತು ಮೂಢನಂಬಿಕೆಗಳ ಆಳದಲ್ಲಿ ಮುಳುಗಿದ್ದಾರೆ. ಅವರು ಅನುಸರಿಸುತ್ತಿರುವ ಕೆಟ್ಟ ಸಂಪ್ರದಾಯಗಳು ಮತ್ತು ಪದ್ಧತಿಗಳು ನಮ್ಮನ್ನು ದಂಗುಬಡಿಸುತ್ತವೆ. ಇವುಗಳ ನಿರ್ಮೂಲನೆಗೆ ಇರುವ ಉತ್ತಮ ಮಾರ್ಗವೆಂದರೆ ರ್‍ಯಾಷನಲಿಸ್ಟ್ ಅಸೋಸಿಯೇಷನ್ ಅವರು ಪ್ರಕಟಿಸುವಂತಹ ಸಾಹಿತ್ಯ ಸಾಮಗ್ರಿಗಳನ್ನು ಅವರಿಗೆ ಒದಗಿಸುವುದು. ಈ ಉದ್ದೇಶದಿಂದ ಒಂದು ಸಣ್ಣ ಮುದ್ರಣಾಲಯವನ್ನು ಹೊಂದಲು ಯೋಜಿಸಲಾಗಿದೆ.

**೬. ಸ್ವಯಂಸೇವಕರ ಸಂಸ್ಥೆ**

ದೇಶದ ಎಲ್ಲಾ ಭಾಗಗಳಲ್ಲಿಯೂ, ಅದರಲ್ಲಿಯೂ ಬಾಂಬೆ ಪ್ರಾಂತ ಮತ್ತು ಮಧ್ಯಪ್ರಾಂತಗಳಲ್ಲಿ, ಸಾವಿರಾರು ಅಸ್ಪೃಶ್ಯ ಯುವಕರು ತಾವಾಗಿಯೇ ಒಂದು ವ್ಯವಸ್ಥಿತವಾದ ಸಂಘವನ್ನು ಸಮತಾ ಸೈನಿಕ ದಳ ಎಂಬ ಹೆಸರಿನಲ್ಲಿ ಕಟ್ಟಿಕೊಂಡಿದ್ದಾರೆ. ಅಸ್ಪೃಶ್ಯರಲ್ಲಿ ಒಂದು ಬಗೆಯ ಶಿಸ್ತಿನ ಭಾವನೆಯನ್ನು ಮೂಡಿಸುವುದು ಮತ್ತು ಹೊಸ ಯುಗದ ಸಂದೇಶವನ್ನು ಅವರಲ್ಲಿ ಬೀರುವುದು ಈ ಸಂಘದ ಉದ್ದೇಶವಾಗಿದೆ. ಸಂಘದ ಈ ಎಲ್ಲಾ ಮುಖ್ಯ ಚಟುವಟಿಕೆಗಳನ್ನು ಒಟ್ಟುಗೂಡಿಸಿ ಅವನ್ನು ದೇಶದ ಎಲ್ಲಾ ಭಾಗಗಳಿಗೂ ಹರಡಲು ಯೋಜಿಸಲಾಗಿದೆ.

**೭. ಪ್ರಚಾರೋದ್ದೇಶದ ಪ್ರದರ್ಶನಗಳು**

ಸಮತಾ ಸೈನಿಕ ದಳದ ಹಲವಾರು ಅಸ್ಪೃಶ್ಯ ಯುವಕರು ಬಾಂಬೆ ಪ್ರಾಂತದಲ್ಲಿ ತಮ್ಮ ಕೂಟಗಳನ್ನು ರಚಿಸಿಕೊಂಡು, ವಿವಾಹ ಮತ್ತು ಇತರ ಧಾರ್ಮಿಕ, ಸಾಮಾಜಿಕ ಸಂದರ್ಭಗಳಲ್ಲಿ ನಾಟಕಗಳ ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ. ಇದಕ್ಕೆ ಅವರು ಜಲ್ಸಾ ಮಂಡಲಗಳೆಂಬ ಹೆಸರನ್ನು ಇಟ್ಟುಕೊಂಡಿದ್ದಾರೆ. ಇವು ಹವ್ಯಾಸಿ ನಾಟಕಗಳನ್ನು ಮಾಡುವವರ ಕೂಟವಾಗಿದ್ದು, ಸ್ವಲ್ಪ ಅಭಿವೃದ್ಧಿಪಡಿಸಿದ ರಂಗಗಳ ಮೇಲೆ, ಅನಕ್ಷರಸ್ಥ ಹಳ್ಳಿಗರ ಮುಂದೆ ತಾವೇ ರಚಿಸಿದ ನಾಟಕಗಳ ಮೂಲಕ ಅನರ್ಥಕರ ಪದ್ಧತಿಗಳ ದುಷ್ಪ ಪರಿಣಾಮಗಳನ್ನು ಬಿಂಬಿಸುತ್ತಾರೆ. ಹಳೆಯ ಪದ್ಧತಿಗಳನ್ನು ತೊಡೆಯಲು ಮತ್ತು ಹೊಸ ವಿಚಾರಗಳನ್ನು ಜನತೆಯಲ್ಲಿ ಬಿತ್ತಲು ಮತ್ತು ಅವುಗಳ ಮೂಲಕ ಅವರಿಗೆ ಮಾರ್ಗದರ್ಶನ ಮಾಡಲು ಪರಿಣಾಮಕಾರಿಯಾಗಿರುವ ಈ ಚಟುವಟಿಕಗಳನ್ನು ಇನ್ನೂ ಹೆಚ್ಚು ವ್ಯವಸ್ಥಿತಗೊಳಿಸಲು ಉದ್ದೇಶಿಸಲಾಗಿದೆ.

**ಕೇಂದ್ರ ನಿರ್ಮಾಣದ ವೆಚ್ಚ**

ಹಾಕಿಕೊಂಡಿರುವ ಯೋಜನೆಯ ಪ್ರಕಾರ ಕೇಂದ್ರದ ಅಗತ್ಯಗಳ ವಿವರಗಳು ಕೆಳಕಂಡಂತೆ ಇವೆ.

| | | ರೂ. |
|---|---|---|
| ೧) | ೧೫೬', ೧೩೨' ಅಳತೆಯ<br>(ಸುಮಾರು ೨,೨೮೦ ಚದರ ಗಜಗಳ) ಭೂಮಿಯ<br>(ಗುತ್ತಿಗೆಯ ಆಧಾರದ ಮೇಲೆ) – | ೩೭,೦೦೦/– |
| | ವಾರ್ಷಿಕ ಬಾಡಿಗೆ | ೨,೨೦೦/– |
| ೨) | ಕಟ್ಟಡಗಳು: | |
| | ಅ) ನೆಲಮಹಡಿ ಮತ್ತು ಎರಡು ಮೇಲ್ಮಹಡಿಗಳಿರುವ ಸಭಾಭವನ–<br>ನೆಲಮಹಡಿ – ೧೨೦' , ೬೨' ಅಳತೆ,<br>(೧೦' ಅಗಲವಿರುವ ಹಜಾರ ಮತ್ತು ೨,೫೦೦ ಜನರಿಗೆ ಒಳಗೆ<br>ಕೂರಲು ಆಸನವ್ಯವಸ್ಥೆಯನ್ನು ಹೊಂದಿರುತ್ತದೆ) –<br>ಅಂದಾಜು ವೆಚ್ಚ | ೭೫,೦೦೦/– |
| | ಎರಡು ಮೇಲ್ಮಹಡಿಗಳು– ೩೨ ಕೋಣೆಗಳಿರುವ ವಠಾರ<br>(ಪ್ರತಿ ಮಹಡಿಯಲ್ಲಿ ಹದಿನಾರು) | ೭೫,೦೦೦/– |
| | ಆ) ಪೂರ್ವ ವಿಭಾಗದ ಕಟ್ಟಡ – ನೆಲಮಹಡಿ ಮತ್ತು<br>ಎರಡು ಮೇಲ್ಮಹಡಿ – ಪ್ರತಿ ಮಹಡಿಯಲ್ಲಿ ೩ | |

| | | |
|---|---|---|
| | (ಅಂದರೆ, ಒಟ್ಟು ೯) ದೊಡ್ಡ ಕೊಠಡಿಗಳು | ೨೬,೫೦೦/– |
| ಇ) | ಪಶ್ಚಿಮ ವಿಭಾಗದ ಕಟ್ಟಡ – ನೆಲಮಹಡಿ ಮತ್ತು ಎರಡು ಮೇಲ್ಮಹಡಿ – ಪ್ರತಿ ಮಹಡಿಯಲ್ಲಿ ೩ (ಅಂದರೆ, ಒಟ್ಟು ೯) ದೊಡ್ಡ ಕೊಠಡಿಗಳು | ೨೬,೫೦೦/– |
| ಈ) | ಮುಂಭಾಗದ ಕಟ್ಟಡ – ನೆಲಮಹಡಿ ಮತ್ತು ಎರಡು ಮೇಲ್ಮಹಡಿಗಳು – ನೆಲಮಹಡಿಯಲ್ಲಿ – ಮುದ್ರಣಾಲಯ, ವ್ಯಾಯಾಮಶಾಲೆ ಮತ್ತು ಕಚೇರಿ ಮೇಲಿನ ಮೂರು ಮಹಡಿಗಳಲ್ಲಿ – ಮೊದಲನೆಯದರಲ್ಲಿ ಕಚೇರಿಗಳು ಮತ್ತು ಉಳಿದೆರಡರಲ್ಲಿ ಪ್ರತಿ ಮಹಡಿಯಲ್ಲಿಯೂ ೧೩ ಕೊಠಡಿಗಳ ಸಮುಚ್ಚಯ | ೮೫,೦೦೦/– |
| | **ಒಟ್ಟು ವೆಚ್ಚ** | **೨,೮೮,೦೦೦/–** |
| | ಭೂಮಿಯ ಬೆಲೆ | ೩೭,೦೦೦/– |
| | ಆಖೈರು ಜುಮ್ಲಾ | ೩,೨೫,೦೦೦/– |

ಕೇಂದ್ರದ ವೆಚ್ಚವು ೩,೨೫,೦೦೦ ರೂಗಳಾಗಬಹುದೆಂದು ಅಂದಾಜುಮಾಡಲಾಗಿದೆ. ಸಾಮಾನ್ಯ ಕಾಲದಲ್ಲಿ ಇರಬಹುದಾದ ಬೆಲೆಗಳ ಮೇಲೆ ಈ ಅಂದಾಜನ್ನು ಸಿದ್ಧಪಡಿಸಲಾಗಿದೆ.

ಯೋಜಿತ ಕಟ್ಟಡವು ಮೂರು ಉದ್ದೇಶಗಳನ್ನು ಸಾಧಿಸಲು ಅನುವಾಗುತ್ತದೆ. ಮೊದಲನೆಯದು, ಅಸ್ಪೃಶ್ಯರ ಕ್ಷೇಮಕ್ಕಾಗಿ ನಡೆಸುತ್ತಿರುವ ಎಲ್ಲಾ ಚಟುವಟಿಕೆಗಳನ್ನೂ ಒಂದೇ ಸೂರಿನಡಿ ತಂದು ಅವುಗಳಲ್ಲಿ ಸಮನ್ವಯವನ್ನು ಸಾಧಿಸುವುದು ಮತ್ತು ಈ ಪ್ರಯತ್ನಗಳ ಹಿಂದಿರುವ ಶಕ್ತಿಯ ಅಪವ್ಯಯವಾಗದಂತೆ ನೋಡಿಕೊಳ್ಳುವುದು. ಎರಡನೆಯದು, ಜ್ಞಾನದ ಕೇಂದ್ರವಾಗಿರುವಂತಹ, ತಮ್ಮ ಅನಿಸಿಕೆಗಳನ್ನು ಇತರರೊಡನೆ ಹಂಚಿಕೊಳ್ಳಲು ಸಹಾಯಕವಾಗುವ ಮತ್ತು ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳನ್ನು ಹೆಮ್ಮೆಯಿಂದ ನಡೆಸಲು ಅನುಕೂಲವಾಗಿರುವಂತಹ ಒಂದು ಜಾಗವನ್ನು ಪರಿಶಿಷ್ಟ ಜಾತಿಗಳವರಿಗೆ ಒದಗಿಸುವುದು. ಮೂರನೆಯದು ಮತ್ತು ಮುಖ್ಯವಾದದುದು, ತನ್ನೆಲ್ಲಾ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ನೆರವಾಗಲು ಒಂದು ಶಾಶ್ವತವಾದ ಆದಾಯದ ಸೆಲೆಯನ್ನು ಸೃಷ್ಟಿಸುವುದು. ಕಟ್ಟಡಗಳ ಹೆಚ್ಚಿನ ಭಾಗಗಳನ್ನು ಬಾಡಿಗೆ ನೀಡಲಾಗುವಂತೆ ಅವುಗಳನ್ನು ರೂಪಿಸಲಾಗಿದೆ. ಇವುಗಳ ಬಾಡಿಗೆಯಿಂದ ಬರುವ ಹುಟ್ಟುವಳಿಯು ಕೇಂದ್ರವು ತನ್ನ ವೆಚ್ಚಗಳನ್ನು ಸರಿದೂಗಿಸಿಕೊಂಡು ಹೋಗಲು ಮತ್ತು ತನ್ನ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವನ್ನು ಮಾಡಿಕೊಡುತ್ತದೆ.

**ಭಾರತೀಯ ಸಂಸ್ಥಾನಗಳ ರಾಜರುಗಳಿಗೆ ಮತ್ತು ಜನತೆಗೆ ಮನವಿ**

ಮಾನವೀಯ ದೃಷ್ಟಿಯಿಂದ ನೋಡಿದಾಗ, ಅಸ್ಪೃಶ್ಯರ ಜೀವನದ ಪರಿಸ್ಥಿತಿಯು ಹಿಂದೂ ಸಂಸ್ಕೃತಿಗೆ ಅಂಟಿರುವ ಒಂದು ಗಂಭೀರವಾದ ಕಳಂಕವಾಗಿದೆ ಮತ್ತು ಭಾರತ ದೇಶದ ಸರ್ವಾಂಗೀಣ ಪ್ರಗತಿಗೆ ಇರುವ ದೊಡ್ಡ ಅಡಚಣೆಯೆಂಬುದು ಇಡೀ ಪ್ರಪಂಚಕ್ಕೇ ತಿಳಿದಿರುವ ಸಂಗತಿ. ಈ ಸಮಸ್ಯೆಯ ಪರಿಹಾರಕ್ಕೆ ಸಂಬಂಧಪಟ್ಟ ಎಲ್ಲಾ ಪಕ್ಷಗಳವರ ಧೈರ್ಯ, ಕೌಶಲ, ಧನಬಲ ಮತ್ತು ವ್ಯವಸ್ಥೆಯನ್ನು ಮಾಡುವ ಶಕ್ತಿಯ ಆವಶ್ಯಕತೆಯಿದೆ. ಸಮಾಜ ಸುಧಾರಕರು ಮತ್ತು ರಾಜಕಾರಣಿಗಳು ಈ ದಿಸೆಯಲ್ಲಿ ಬಹಳಷ್ಟು ಪ್ರಯತ್ನಪಟ್ಟಿದ್ದರೂ, ಆಗಿರುವ ಸಾಧನೆ ಸಾಕಷ್ಟು ತೃಪ್ತಿಯನ್ನು ನೀಡುವುದಿಲ್ಲ. ಇಲ್ಲಿಯವರೆಗೂ ಮಾಡಲ್ಪಟ್ಟಿರುವ ಪ್ರಯತ್ನಗಳು

ಅಸ್ಪೃಶ್ಯರ ಸಮಸ್ಯೆಯ ಸಾಗರದ ಅಂಚನ್ನು ಮುಟ್ಟಿವೆ ಎಂದಷ್ಟೇ ಹೇಳಬಹುದು. ಅಸ್ಪೃಶ್ಯರನ್ನು ಒಂದು ಸಮುದಾಯವನ್ನಾಗಿ ತೆಗೆದುಕೊಂಡರೆ, ಅವರು ಎಂದಿನಿಂದಲೂ ಹಿಂದುಳಿದವರಾಗಿಯೇ ಇದ್ದಾರೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅವರ ಪ್ರಗತಿಯ ಬಯಕೆಯನ್ನು ಪ್ರತಿಹಂತದಲ್ಲಿಯೂ ಮುರಿಯಲಾಗುತ್ತಿದೆ. ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವುದಕ್ಕೆ ಬೇರೆಯವರನ್ನು ಅವಲಂಬಿಸುವ ಪ್ರವೃತ್ತಿಯು ಅಸ್ಪೃಶ್ಯರಲ್ಲಿ ರಕ್ತಗತವಾಗಿ ಬಂದಿದೆ. ಇದು ತಮ್ಮ ಉದ್ಧಾರಕ್ಕೆ ತಾವೇ ನಡೆಸುವ ಹೋರಾಟದಲ್ಲಿ ಅವರನ್ನು ಬಲಹೀನರನ್ನಾಗಿಸುತ್ತದೆ. ಅವರ ಹಾದಿಯಲ್ಲಿರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವ, ಮತ್ತು ಪರಂಪರಾಗತವಾಗಿ ಬಂದಿರುವ ದಾಸ್ಯ ಶೃಂಖಲೆಗಳನ್ನು ಕಿತ್ತೆಸೆಯುವ ಶಕ್ತಿ ಅವರಿಗೆ ಅವರ ಒಳಗಿನಿಂದಲೇ ಬರಬೇಕು ಎಂಬುದು ನನ್ನ ನಿಶ್ಚಿತವಾದ ಅಭಿಪ್ರಾಯ. ಈ ಹೊಸ ಚಳವಳಿಯು ಅವರ ಆಂತರ್ಯದಿಂದ ಮೂಡಿಬಂದಿರುವ ಕಾರಣದಿಂದ, ಇದಕ್ಕೆ ನಾವು ಸಹಾಯಮಾಡಿದರೆ, ಪ್ರೋತ್ಸಾಹವನ್ನು ನೀಡಿದರೆ, ಇದು ಅದ್ಭುತವಾದ ಯಶಸ್ಸನ್ನು ಸಾಧಿಸುತ್ತದೆಂದು ನಾನು ನಂಬುತ್ತೇನೆ.

ಅಸ್ಪೃಶ್ಯರು ತಮ್ಮ ಮುಕ್ತಿಯನ್ನು ಸಾಧಿಸಿಕೊಳ್ಳಲು ಬಯಸಿದರೆ, ಅದರ ಆರ್ಥಿಕ ಹೊಣೆಯನ್ನೂ ಅವರೇ ಹೊರಬೇಕೆಂದು ಯಾರಾದರೂ ಹೇಳಬಹುದು. ಬಾಂಬೆಯಲ್ಲಿರುವ ಅಸ್ಪೃಶ್ಯರು ಈ ವಿಷಯದ ಬಗ್ಗೆ ಸಂಪೂರ್ಣವಾಗಿ ಎಚ್ಚೆತ್ತುಕೊಂಡಿದ್ದಾರೆ. ತಮ್ಮತಮ್ಮಲ್ಲೇ ಚಂದಾ ಎತ್ತುವ ಮೂಲಕ ಹಣವನ್ನು ಸಂಗ್ರಹಿಸಿ ಸಾಮಾಜಿಕ ಕೇಂದ್ರದ ಸ್ಥಾಪನೆಗೆ ಅವರು ಈಗಾಗಲೇ ಮುಂದೆ ಬಂದಿದ್ದಾರೆ. ಈ ದೊಡ್ಡ ಉದ್ದೇಶಕ್ಕಾಗಿ ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಯೂ ತಮ್ಮ ಕೈಲಾದಷ್ಟು ವಂತಿಕೆಗಳನ್ನು ನೀಡಲು ಸಿದ್ಧರಿದ್ದಾರೆ. ಕೆಲವರು ಈಗಾಗಲೇ ಹಣವನ್ನು ನೀಡಿದ್ದಾರೆ ಮತ್ತು ಸದ್ಯದಲ್ಲಿಯೇ ಹಲವಾರು ಮಂದಿ ನೀಡಲಿದ್ದಾರೆ. ಆದರೆ ತಮ್ಮ ಹಣದಲ್ಲಿಯೇ ಕೇಂದ್ರದ ನಿರ್ಮಾಣವನ್ನು ಪೂರೈಸುವುದನ್ನು ಅಸ್ಪೃಶ್ಯರಿಗೇ ಬಿಟ್ಟುಬಿಟ್ಟರೆ, ಅದಕ್ಕೆ ಅಗತ್ಯವಾಗಿರುವಷ್ಟು ಹಣವನ್ನು ಅವರು ಸಂಗ್ರಹಿಸಲಾರರು ಎಂಬುದೂ ಸತ್ಯವಾದ ಸಂಗತಿಯೇ. ಅವರಿಗೆ ಈ ವಿಷಯದಲ್ಲಿ ಸ್ವಾವಲಂಬನೆಯ ಪಾಠವನ್ನು ಹೇಳುವುದು ಕ್ರೌರ್ಯವೇ ಸರಿ. ಈ ಕೇಂದ್ರವನ್ನು ನಿರ್ಮಾಣಮಾಡುವ ಕೆಲಸವು ಭಾರತದ ರಾಜರುಗಳ ಮತ್ತು ಜನತೆಯ ಸಹಾಯವಿಲ್ಲದೆ ನಡೆಯುವುದು ಅಸಾಧ್ಯ. ನಿಮ್ಮ ಹೊರೆಯನ್ನು ನೀವೇ ಹೊರಬೇಕು ಎಂದು ಅಸ್ಪೃಶ್ಯರಿಗೆ ಹೇಳುವುದು ಸರಿಯೆನ್ನಿಸಬಹುದು. ಆದರೆ ಹಾಗೆ ಹೇಳುವುದು ವಿಚಾರಪೂರ್ಣವೆನಿಸುವುದೇ? ಭಾರತೀಯ ಸಂಸ್ಥಾನದ ರಾಜರು ಮತ್ತು ಭಾರತದ ಜನತೆಯು ಅಸ್ಪೃಶ್ಯರ ಇಂದಿನ ಹೀನಸ್ಥಿತಿಗೆ ಹೊಣೆಗಾರರಾಗಿಲ್ಲವೇ? ಹಾಗೆ ಹೊಣೆಗಾರರಾಗಿದ್ದರೆ, ಅಸ್ಪೃಶ್ಯರನ್ನು ನಿಮ್ಮ ಉದ್ಧಾರದ ಹೊರೆಯನ್ನು ನೀವೇ ಹೊತ್ತುಕೊಳ್ಳಿ ಎಂದು ಹೇಳುವುದು ಸಮಂಜಸವೆನಿಸುವುದೇ? ಇಂತಹ ನಿಲುವನ್ನು ತಾಳದೆ, ಅಸ್ಪೃಶ್ಯರ ಸ್ವಾಭಿಮಾನಕ್ಕೆ ಗೌರವವನ್ನು ಭಾರತೀಯ ಸಂಸ್ಥಾನದ ರಾಜರುಗಳು ಮತ್ತು ಭಾರತದ ಪ್ರಜೆಗಳು ತೋರುತ್ತಾರೆಂದು ನಾನು ನಂಬುತ್ತೇನೆ. ಅಸ್ಪೃಶ್ಯರ ಮೇಲೆ ಹೇರಲಾಗಿರುವ ಅಸಮಾನತೆಯ ಹೊರೆಯ ಬಗ್ಗೆ ಅವರಲ್ಲಿ ನೈತಿಕ ಕ್ರೋಧ ಮತ್ತು ಅವರಿಗೆ ಈ ಹೊರೆಯನ್ನು ಕಿತ್ತೆಸೆಯಲು ಅಗತ್ಯವಾದ ಸಾಧನಗಳನ್ನು ನೀಡುವ ತೀವ್ರವಾದ ಅಪೇಕ್ಷೆಯು ರಾಜರುಗಳಿಗೆ ಮತ್ತು ಜನತೆಗೆ ಇದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ.

ಅಸ್ಪೃಶ್ಯರನ್ನು ಉದ್ಧರಿಸುವ ಈ ಕಾರ್ಯದಲ್ಲಿ, ಎರಡೂ ಕಡೆಯವರ ಜಂಟಿ ಪ್ರಯತ್ನವು ಆವಶ್ಯಕವಾಗಿದೆ. ಇದಕ್ಕೆ ಅಸ್ಪೃಶ್ಯರು ಚಳವಳಿಗೆ ಬೇಕಾದ ಸ್ಫೂರ್ತಿಯನ್ನು ತುಂಬಿ ಶ್ರಮವನ್ನು ಧಾರೆಯೆರೆದರು, ಅದಕ್ಕೆ ಅಗತ್ಯವಾದ ಧನಸಹಾಯವನ್ನು ಭಾರತದ ಜನತೆ ಮಾಡಬೇಕಾಗುತ್ತದೆ. ಈ ಹಿನ್ನೆಲೆಯ ಕಾರಣದಿಂದಲೇ, ನಾನು ಭಾರತೀಯ ಸಂಸ್ಥಾನಗಳ ರಾಜರುಗಳಿಗೆ ಮತ್ತು ಭಾರತದ ಜನತೆಗೆ ಈ ಚಳವಳಿಗಾಗಿ ಧನಸಹಾಯವನ್ನು

ಮಾಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಅಸ್ಪೃಶ್ಯರ ಉದ್ಧಾರವು ರಾಷ್ಟ್ರೀಯ ಪುನರುಜ್ಜೀವನಕ್ಕೆ ಎಂತಹ ಪ್ರಚಂಡ ಮತ್ತು ಅದಮ್ಯ ಶಕ್ತಿಯನ್ನು ನೀಡುತ್ತದೆ ಎಂಬುದನ್ನು ಅರಿಯುವಲ್ಲಿ ಭಾರತೀಯ ಸಂಸ್ಥಾನದ ರಾಜರು ಮತ್ತು ಭಾರತದ ಜನತೆ ವಿಫಲರಾಗುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಅಸ್ಪೃಶ್ಯರು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಈಗಿರುವ ಸ್ಥಿತಿಯಿಂದ ಮೇಲೆ ಎದ್ದು, ಮನುಷ್ಯರ ಹಂತವನ್ನು ತಲುಪಿ ಭಾರತದ ಇತರ ಸಮುದಾಯಗಳವರಿಗೆ ಸರಿಸಮಾನವಾಗಿ ಬಾಳುವಂತೆ ಅವರನ್ನು ನಮ್ಮ ಕೇಂದ್ರವು ಸಿದ್ಧಗೊಳಿಸಲು ಯೋಜನೆಯನ್ನು ರೂಪಿಸಿದೆ. ಆದರೆ, ಇದೊಂದೇ ನಮ್ಮ ಸಾಮಾಜಿಕ ಕೇಂದ್ರದಿಂದ ಆಗುವ ಲಾಭವಲ್ಲ. ಇದರ ಜೊತೆಗೆ, ಅವರನ್ನು ಕ್ರಿಯಾಶೀಲರನ್ನಾಗಿಸಿ, ನಿಜವಾದ ದೇಶಭಕ್ತರನ್ನಾಗಿಸಿ ದೇಶಕ್ಕಾಗಿ ಏನೇ ಮಾಡಬೇಕಾದರೂ ಎದೆಗೊಟ್ಟು ನಿಲ್ಲುವ ಹಾಗೆ ನಮ್ಮ ಕೇಂದ್ರವು ಮಾಡುತ್ತದೆ.

ನಮ್ಮ ಸಾಮಾಜಿಕ ಕೇಂದ್ರದ ನಿರ್ಮಾಣಕ್ಕೆ ಈ ಕಾರಣಗಳಿಗಾಗಿ ಎಲ್ಲರೂ ನನಗೆ ಸಹಾಯಮಾಡಬೇಕೆಂದು ನಾನು ಮನವಿಮಾಡಿಕೊಳ್ಳುತ್ತಿದ್ದೇನೆ. ಅಸ್ಪೃಶ್ಯರನ್ನು ಮೇಲೆತ್ತದೆ ಇದ್ದರೆ ದೇಶವು ಉನ್ನತಿಗೇರುವ ಸಾಧ್ಯತೆಗಳಿರುವುದಿಲ್ಲ ಮತ್ತು ಅವರ ಮುಕ್ತಿಯಲ್ಲಿಯೇ ದೇಶದ ಸಮಸ್ಯೆಗಳಿಗೆ ಮುಕ್ತಿ ಎಂಬುದು ಎಲ್ಲರಿಗೂ ತಿಳಿದಿರುವ ಸಾಮಾನ್ಯ ಸತ್ಯ. ಈ ಹಳಸಲು ಸತ್ಯಗಳನ್ನೇ ಮತ್ತೆಮತ್ತೆ ಹೇಳಿ ನಾನು ಸೋತಿದ್ದೇನೆ. ಇಂತಹ ಹೇಳಿಕೆಗಳನ್ನು ಪುನರುಚ್ಚರಿಸುತ್ತಾ ಕೂರುವ ಕಾಲವು ಮುಗಿಯಿತು. ಈಗ ಬಂದಿರುವುದು ನಾವು ಸಕ್ರಿಯರಾಗಬೇಕಾಗಿರುವ ಕಾಲ. ನಮಗೆ ಬೇಕಾಗಿರುವುದು ಭಾಷಣಗಳಲ್ಲ, ಬದಲಿಗೆ ಕೃತಿ. ನಾನು ರಾಜರುಗಳಲ್ಲಿ ಮತ್ತು ಜನತೆಯಲ್ಲಿ ನನ್ನ ಮನವಿಯನ್ನು ಶ್ರದ್ಧಾಪೂರ್ವಕವಾಗಿ ಮಾಡಿದ್ದೇನೆ ಮತ್ತು ಎಲ್ಲರೂ ಇದಕ್ಕೆ ಉದಾರ ಹೃದಯದಿಂದ ಪ್ರತಿಕ್ರಿಯಿಸುತ್ತಾರೆಂಬುದರ ಬಗ್ಗೆ ನನಗೆ ವಿಶ್ವಾಸವಿದೆ.

೨೨, ಪೃಥ್ವಿರಾಜ್ ರಸ್ತೆ, ಸಹಿ
ನವದೆಹಲಿ ಬಿ. ಆರ್. ಅಂಬೇಡ್ಕರ್

* * * * *

# ೯
# ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಸಂವಿಧಾನ

ಅಖಿಲ ಭಾರತ ದಲಿತವರ್ಗಗಳ ಸಮ್ಮೇಳನವು ೧೯೪೨ರ ಜುಲೈ ೧೭ರಿಂದ ೨೦ರ ವರೆಗೆ ನಾಗಪುರದಲ್ಲಿ ನಡೆಯಿತು. ಡಾ. ಅಂಬೇಡ್ಕರ್ ಅವರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. 'ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ'ವನ್ನು ಸ್ಥಾಪಿಸಲು ಒಂದು ಸರ್ವಾನುಮತದ ನಿರ್ಣಯವನ್ನು ೧೯೪೨ರ ಜುಲೈ ೧೯ರಂದು ತೆಗೆದುಕೊಳ್ಳಲಾಯಿತು. ಈ ಕುರಿತು ಹಾಗೂ ಇದರ ಸಂವಿಧಾನವನ್ನು ಕುರಿತು ೧೯೪೨ರ ಸೆಪ್ಟೆಂಬರ್ ೭ರಂದು ಒಂದು ಪ್ರಕಟಣೆಯನ್ನು ನೀಡಲಾಯಿತು.[೧]

ಈ ಸಂವಿಧಾನವನ್ನು ಮತ್ತೆ ಪರಿಶೀಲಿಸಿ, ತಿದ್ದುಪಡಿಗಳೊಂದಿಗೆ ೧೯೫೫ರ ಜನವರಿಯಲ್ಲಿ ಪ್ರಕಟಿಸಲಾಯಿತು – ಸಂಪಾದಕರು

**ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ[೨]**

**ಸಂವಿಧಾನ**

**ಅಧ್ಯಕ್ಷರು**
**ಬಿ.ಆರ್. ಅಂಬೇಡ್ಕರ್**
**ಎಂ.ಎ.,ಪಿ.ಎಚ್.ಡಿ., ಡಿ.ಎಸ್.ಸಿ. ಎಲ್.ಎಲ್.ಡಿ., ಡಿಲಿಟ್., ಬ್ಯಾರಿಸ್ಟರ್ ಅಟ್ ಲಾ**
**ಸದಸ್ಯರು, ರಾಜ್ಯಗಳ ಪರಿಷತ್ತು**

ವಿಳಾಸ:
೨೬, ಅಲಿಪೊರ್ ರಸ್ತೆ,
ಸಿವಿಲ್ ಲೈನ್ಸ್, ಡೆಲ್ಲಿ

ಜನವರಿ ೧೯೫೫

## ಪರಿವಿಡಿ


ಭಾಗ – ೧ – ಸಂವಿಧಾನ: ಜಾರಿಗೆ ಬರುವ ದಿನಾಂಕ

ಭಾಗ – ೨ – ಒಕ್ಕೂಟ: ಧ್ಯೇಯ ಮತ್ತು ಉದ್ದೇಶ

ಭಾಗ – ೩ – ಸ್ಥಳೀಯ

ಭಾಗ – ೪ – ಕೇಂದ್ರೀಯ

ಭಾಗ – ೫ – ಪದಾಧಿಕಾರಿಗಳ ಕರ್ತವ್ಯ, ಅಧಿಕಾರ ಮತ್ತು ಕಾರ್ಯಚಟುವಟಿಕೆಗಳು

ಭಾಗ – ೬ – ಸ್ಥಳೀಯ ಹಾಗೂ ಕೇಂದ್ರೀಯ ಕಾರ್ಯಕಾರಿ ಸಮಿತಿಗಳ ನಡುವಿನ ಸಂಬಂಧ

ಭಾಗ – ೭ – ಹಣಕಾಸು

ಭಾಗ – ೮ – ಚುನಾವಣೆ

ಭಾಗ – ೯ – ಚುನಾವಣಾ ತಕರಾರುಗಳು

ಭಾಗ – ೧೦ – ಅಭ್ಯರ್ಥಿಗಳ ಆಯ್ಕೆ

ಭಾಗ – ೧೧ – ಇತರ

ಭಾಗ – ೧೨ – ಸಂವಿಧಾನದ ತಿದ್ದುಪಡಿ

ಭಾಗ – ೧೩ – ಶಿಸ್ತಿಗೆ ಸಂಬಂಧಿಸಿದ ನಿಯಮಗಳು

ಭಾಗ – ೧೪ – ಪರಿವರ್ತನಾ ಉಪಬಂಧಗಳು

## ಭಾಗ – ೧
## ಜಾರಿಗೆ ಬರುವ ದಿನಾಂಕ
### ವಿಧಿ–೧

೧. ಈ ಸಂವಿಧಾನವನ್ನು 'ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಸಂವಿಧಾನ' ಎಂದು ಹೆಸರಿಸತಕ್ಕದ್ದು,

೨. ಈ ಸಂವಿಧಾನವು ಇಲ್ಲಿ ಅಂತರ್ಗತವಾಗಿರುವ ಭಾಗ ೯ ಹಾಗೂ ೧೦ರ ಹೊರತಾಗಿ ೧೯೫೭ರ ಮೇ ೧ರಿಂದ ಜಾರಿಗೆ ಬರುತ್ತದೆ.

## ಭಾಗ – ೨
## ಧ್ಯೇಯೋದ್ದೇಶಗಳು ಮತ್ತು ಅಧಿಕಾರ
### ವಿಧಿ ೨

೧. ಒಕ್ಕೂಟದ ಧ್ಯೇಯ ಮತ್ತು ಉದ್ದೇಶಗಳು ಹೀಗಿರುತ್ತವೆ –

ಅ) ಭಾರತದ ಪರಿಶಿಷ್ಟ ಜಾತಿಗಳವರನ್ನು ಸಂಘಟಿಸುವುದು, ಅವರನ್ನು ವಿದ್ಯಾವಂತರನ್ನಾಗಿಸುವುದು, ಅವರಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯವನ್ನು ಉದ್ದೀಪಿಸುವುದು ಮತ್ತು ತಮ್ಮ ಕಲ್ಯಾಣ ಮತ್ತು ಅಭಿವೃದ್ಧಿಗಳಿಗಾಗಿ ಪರಿಶ್ರಮಪಡುವಂತೆ ಮಾಡುವುದು.

ಆ) ಅವರು ಅವಕಾಶಗಳಲ್ಲಿ ಸಮಾನತೆಯನ್ನು ಪಡೆದುಕೊಳ್ಳುವಂತೆ ಮಾಡುವುದು, ಮತ್ತು ತನ್ಮೂಲಕ ಸಮಾಜದ ಇತರ ನಾಗರಿಕರೊಂದಿಗೆ ಸಮಾನ ಅಂತಸ್ತನ್ನು ಹಂಚಿಕೊಳ್ಳುವಂತೆ ಮಾಡುವುದು,

ಇ) ತಮ್ಮ ಜಾತಿಗಳವರಲ್ಲಿ ಕೃಷಿಯಲ್ಲಿ ನಿರತರಾಗಿರುವವರನ್ನು, ಭೂಹೀನ ಶ್ರಮಿಕರನ್ನು ಹಾಗೂ ಕಾರ್ಖಾನೆಗಳ ಕೆಲಸಗಾರರನ್ನು ಸಂಘಟಿಸುವುದು,

ಈ) ಶಾಲೆಗಳನ್ನು ತೆರೆಯುವುದು ಮತ್ತು ಕಲೆ ಮತ್ತು ಕುಶಲ ಕಸುಬುಗಳನ್ನು ಬೋಧಿಸುವುದು ಇತ್ಯಾದಿ ವಿದ್ಯಾಭ್ಯಾಸ ಕ್ಷೇತ್ರದ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು.

ಉ) ಪರಿಶಿಷ್ಟ ಜಾತಿಗಳವರ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯವಾಗುವ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

ಊ) ದೇಶ ವಿವಿಧ ಭಾಗಗಳಲ್ಲಿ ಪರಿಶಿಷ್ಟ ಜಾತಿಗಳವರ ಮೇಲೆ ನಡೆಯುವ ದೌರ್ಜನ್ಯ ಹಾಗೂ ತುಳಿತಗಳನ್ನು ದಾಖಲುಮಾಡುವುದು.

೨) ಒಕ್ಕೂಟದ ಅಧಿಕಾರವು ಹೀಗಿರುತ್ತವೆ –

ಅ) ಒಕ್ಕೂಟಕ್ಕಾಗಿ ಆಸ್ತಿಯನ್ನು ಕೊಳ್ಳಲು, ಭೋಗ್ಯದ ಆಧಾರದ ಮೇಲೆ ತೆಗೆದುಕೊಳ್ಳುವುದು, ಹಾಗೂ ಒಕ್ಕೂಟದ ಹಣವನ್ನು ಕಾಲದಿಂದ ಕಾಲಕ್ಕೆ ನಿರ್ಧರಿಸಿದ ಹಾಗೆ, ತೊಡಗಿಸುವುದು

ಅಥವಾ ವಿನಿಯೋಗ ಮಾಡುವುದು,

ಆ) ಒಕ್ಕೂಟಕ್ಕಾಗಿ ಮನೆಗಳು, ಕಟ್ಟಡಗಳು ಅಥವಾ ಇತರ ಕಾಮಗಾರಿಗಳನ್ನು ಕಟ್ಟುವುದು, ದುರಸ್ತುಮಾಡುವುದು, ಪುನರ್ನಿರ್ಮಾಣಮಾಡುವುದು, ಬದಲಾವಣೆ ಮಾಡುವುದು ಅಥವಾ ಪುರುಜ್ಜೀವನಗೊಳಿಸುವುದು – ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು.

ಇ) ಒಕ್ಕೂಟದ ಎಲ್ಲಾ ಆಸ್ತಿಗಳನ್ನು ಅಥವಾ ಯಾವುದೇ ಆಸ್ತಿಯನ್ನು ಮಾರುವುದು, ವಿಲೇವಾರಿ ಮಾಡುವುದು, ಅಭಿವೃದ್ಧಿಗೊಳಿಸುವುದು, ಬದಲಾಯಿಸುವುದು, ಭೋಗ್ಯಕ್ಕೆ ನೀಡುವುದು, ಆಧಾರವಾಗಿ ನೀಡುವುದು, ಪರಭಾರೆ ಮಾಡುವುದು ಇತ್ಯಾದಿ,

ಈ) ಒಕ್ಕೂಟದ ಯಾವುದೇ ಉದ್ದೇಶ, ಗುರಿ ಹಾಗೂ ಧ್ಯೇಯವನ್ನು ಸಾಧಿಸಲು ಹಣವನ್ನು ಆಸ್ತಿಯ ಆಧಾರದ ಮೇಲೆ ಅಥವಾ ಯಾವುದೇ ಆಧಾರವಿಲ್ಲದೆ ಪಡೆಯುವುದು,

ಉ) ಭಾರತದ ಯಾವುದೇ ಭಾಗದಲ್ಲಾಗಲೀ ಒಕ್ಕೂಟವನ್ನು ನೋಂದಣಿ ಮಾಡಿಸುವುದು ಅಥವಾ (ಸಂಬಂಧಪಟ್ಟ ಪ್ರಾಧಿಕಾರದಿಂದ) ಮಾನ್ಯತೆಯನ್ನು ಪಡೆಯುವುದು,

ಊ) ಮೇಲೆ ಹೇಳಿದ ಧ್ಯೇಯೋದ್ದೇಶಗಳನ್ನು ಸಾಧಿಸಲು ಅಗತ್ಯವಾದ, ಆನುಷಂಗಿಕವಾದ, ಸಹಾಯಕವಾದ ಯಾವುದೇ ಅಥವಾ ಎಲ್ಲಾ ನ್ಯಾಯಸಮ್ಮತ ಕಾರ್ಯಗಳನ್ನು ಮಾಡುವುದು.

## ಭಾಗ ೩
## ಸಂಘಟನೆ – ಸ್ಥಳೀಯ
## ವಿಧಿ ೩

೧) ಸ್ಥಳೀಯ ಸಂಘಟನೆಗಳು:

ಅ). ಪರಿಶಿಷ್ಟ ಜಾತಿಗಳನ್ನು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಡಿಯಲ್ಲಿ ಸಂಘಟಿಸುವ ಉದ್ದೇಶಕ್ಕಾಗಿ ಮುಂದೆ ಸೂಚಿಸಿರುವ ಸ್ಥಳೀಯ ಸಂಘಗಳನ್ನು ಸ್ಥಾಪಿಸಬೇಕು.

೧. ಗ್ರಾಮ ಒಕ್ಕೂಟದ ಸಮಿತಿ,

೨. ತಾಲ್ಲೂಕು ಒಕ್ಕೂಟದ ಸಮಿತಿ,

೩) ಜಿಲ್ಲಾ ಒಕ್ಕೂಟದ ಸಮಿತಿ,

೪) ರಾಜ್ಯ ಒಕ್ಕೂಟದ ಸಮಿತಿ.

ವಿವರಣೆ: ಎರಡು ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿರುವ ನಗರಗಳ ಒಕ್ಕೂಟ ಸಮಿತಿಗಳು ಜಿಲ್ಲಾ ಸಮಿತಿಯ ಸ್ಥಾನಮಾನಗಳನ್ನು ಹೊಂದಿರುತ್ತವೆ.

ಆ). ಜಿಲ್ಲೆಯೆಂದರೆ ರಾಜ್ಯದ ಶಾಸನ ಸಭೆಗಾಗಿರುವ ಮತಕ್ಷೇತ್ರವೆಂದು ತಿಳಿಯತಕ್ಕದ್ದು.

೨) ಕೇಂದ್ರೀಯ ಸಂಘಟನೆ:

ಅ). ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕೇಂದ್ರ ಸಮಿತಿಯು ಕೆಳಕಂಡವುಗಳನ್ನು ಒಳಗೊಂಡಿರುತ್ತದೆ

೧) ಒಕ್ಕೂಟದ ಅಖಿಲ ಭಾರತ ಸಮಿತಿ,

೨) ಒಕ್ಕೂಟದ ಕೇಂದ್ರೀಯ ಕಾರ್ಯಕಾರಿ ಸಮಿತಿ,

೩) ಒಕ್ಕೂಟದ ಸಾಮಾನ್ಯ ಅಥವಾ ವಿಶೇಷ ಸಮಾವೇಶಗಳು

೪) ಎಲ್ಲಾ ಸ್ಥಳೀಯ ಸಂಸ್ಥೆಗಳು ಮತ್ತು ಕೇಂದ್ರೀಯ ಸಂಸ್ಥೆಗಳು

### ವಿಧಿ ೪

೧) ಮುಂದೆ ಸೂಚಿಸಿರುವ ವಿವರಣೆಗಳಿಗೆ ಒಳಪಟ್ಟು ಪರಿಶಿಷ್ಟ ಜಾತಿಗೆ ಸೇರಿದ ಯಾವುದೇ ವ್ಯಕ್ತಿ (೧) ಆತನ/ಆಕೆಯ ಹೆಸರು ಮತದಾರರ ಪಟ್ಟಿಯಲ್ಲಿ ಸೇರಿದ್ದರೆ, ಮತ್ತು (೨) ಒಕ್ಕೂಟದ ಸಂವಿಧಾನವನ್ನು ಒಪ್ಪಿಕೊಳ್ಳುವಂತಹವನಾ/ಳಾಗಿದ್ದರೆ – ಒಕ್ಕೂಟದ ಸದಸ್ಯನಾ/ಳಾಗಬಹುದು. ಅಂತಹ ವ್ಯಕ್ತಿಗೆ ಒಕ್ಕೂಟದ ಅಂಗಸಂಸ್ಥೆಗಳ ಅಥವಾ ತನ್ಮೂಲಕ ಒಕ್ಕೂಟದ ಚುನಾವಣೆಗಳಲ್ಲಿ ನಿಯಮದ ಪ್ರಕಾರ ಮತದಾನ ಮಾಡುವ ಹಕ್ಕು ಇರುತ್ತದೆ.

ವಿವರಣೆ: ೧. ಒಕ್ಕೂಟದ ಕೇಂದ್ರೀಯ ಕಾರ್ಯಕಾರಿ ಸಮಿತಿಯು ಒಪ್ಪಿಗೆ ನೀಡಿರದಿದ್ದ ಉದ್ದೇಶ, ಧ್ಯೇಯಗಳನ್ನು ಹೊಂದಿರುವ ಯಾವುದೇ ರಾಜಕೀಯ ಪಕ್ಷಗಳಿಗೆ ಅಥವಾ ಮತಸಂಬಂಧಿ ಸಂಸ್ಥೆಗಳಿಗೆ ಸೇರಿರದ ಪರಿಶಿಷ್ಟ ಜಾತಿಯ ವ್ಯಕ್ತಿಯು ಆತ/ಆಕೆ ಒಕ್ಕೂಟದ ಸದಸ್ಯನಾ/ಳಾಗಲು ತನ್ನ ಮಾತಿನಿಂದಾಗಲೀ, ಕ್ರಿಯೆಯಿಂದಾಗಲೀ ನಿರಾಕರಿಸಿರದ ಹೊರತು ಆತನನ್ನು/ಆಕೆಯನ್ನು ಒಕ್ಕೂಟದ ಸದಸ್ಯನೆಂದು/ಸದಸ್ಯಳೆಂದು ಪರಿಗಣಿಸಲಾಗುವುದು.

೨. ಒಕ್ಕೂಟದ ಸಹ–ಸದಸ್ಯರನ್ನಾಗಿ ನಾಮಕರಣಮಾಡಲು ಮತ್ತು ಅಂತಹ ಸಹ–ಸದಸ್ಯರ ಹಕ್ಕುಗಳನ್ನು ಸೂಚಿಸುವ ನಿಯಮಗಳನ್ನು ಮಾಡತಕ್ಕದ್ದು. ಸಹ–ಸದಸ್ಯರು ಪರಿಶಿಷ್ಟ ಜಾತಿಗೆ ಸೇರಿದವರೇ ಆಗಿರಬೇಕಾಗಿಲ್ಲ.

### ವಿಧಿ ೫

೧) ಶಾಸನಸಭೆಯ ಪರಿಶಿಷ್ಟ ಜಾತಿಗಳವರ ಚುನಾವಣಾ ಮತದಾರರ ಪಟ್ಟಿಯನ್ನು ಒಕ್ಕೂಟದ ಸದಸ್ಯರ ಪಟ್ಟಿಯೆಂದು ಪರಿಗಣಿಸಲಾಗುವುದು ಮತ್ತು ಇದರ ಆಧಾರದ ಮೇಲೆ ಅಂಗಸಂಸ್ಥೆಗಳ ಚುನಾವಣೆಯನ್ನು ನಡೆಸಲಾಗುವುದು.

೨) ಒಕ್ಕೂಟದ ಪರವಾಗಿ ಅಥವಾ ಅದರ ಅಧಿಕಾರವ್ಯಾಪ್ತಿಯ ಅಡಿಯಲ್ಲಿ ಮಾಡಿರುವ ನಿಯಮಗಳ ಪ್ರಕಾರ ಅನರ್ಹಗೊಳಿಸದೆ ಇರುವ ಎಲ್ಲಾ ಪರಿಶಿಷ್ಟ ಜಾತಿಗಳ ಸದಸ್ಯರೂ ಮತದಾನ ಮಾಡಲು ಮತ್ತು ಚುನಾವಣೆಗೆ ನಿಲ್ಲಲು ಅರ್ಹರಾಗಿರುತ್ತಾರೆ.

### ವಿಧಿ ೬

೧) ಭಾರತದ ಸಂವಿಧಾನವು ರಾಜ್ಯವೆಂದು ಮಾನ್ಯಮಾಡಿರುವ ಪ್ರತಿಯೊಂದು ರಾಜ್ಯದಲ್ಲಿಯೂ, ಸದ್ಯಕ್ಕೆ ಒಂದು ರಾಜ್ಯ ಒಕ್ಕೂಟ ಸಮಿತಿ ಇರತಕ್ಕದ್ದು ಮತ್ತು ಆ ರಾಜ್ಯದ ರಾಜಧಾನಿಯಲ್ಲಿ ಆ ಒಕ್ಕೂಟದ ಪ್ರಧಾನಕಾರ್ಯಾಲಯವು ಇರತಕ್ಕದ್ದು.

೨) ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಪ್ರಾಥಮಿಕ ಘಟಕವು ಒಕ್ಕೂಟದ ಗ್ರಾಮ ಸಮಿತಿಯಾಗಿರತಕ್ಕದ್ದು.

೩) ಒಕ್ಕೂಟದ ಸದಸ್ಯರಾಗಿರುವ ಸಂಬಂಧಪಟ್ಟ ಗ್ರಾಮದ ಪರಿಶಿಷ್ಟ ಜಾತಿಗಳ ಮತದಾರರನ್ನು ಗ್ರಾಮ ಒಕ್ಕೂಟ ಸಮಿತಿಯು ಒಳಗೊಂಡಿರುತ್ತದೆ.

೪) ಆಯಾ ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿಗಳ ಜನಸಂಖ್ಯೆಯ ಆಧಾರದ ಮೇಲೆ ನಿಗದಿಗೊಳಿಸಿದ ಕೋಟಾದ ಪ್ರಕಾರ ಸದರಿ ತಾಲ್ಲೂಕಿನಲ್ಲಿರುವ ಗ್ರಾಮ ಒಕ್ಕೂಟ ಸಮಿತಿಯಿಂದ ಆಯ್ದ ಸದಸ್ಯರನ್ನು ತಾಲ್ಲೂಕು ಒಕ್ಕೂಟ ಸಮಿತಿಯು ಒಳಕೊಂಡಿರುತ್ತದೆ.

೫) ತನ್ನ ವ್ಯಾಪ್ತಿಯೊಳಗೆ ಇರುವ ಪ್ರತಿ ತಾಲ್ಲೂಕಿನ ಪರಿಶಿಷ್ಟ ಜಾತಿಗಳವರ ಸಂಖ್ಯೆಗೆ ಅನುಗುಣವಾಗಿ ಪ್ರತಿ ತಾಲ್ಲೂಕು ಒಕ್ಕೂಟ ಸಮಿತಿಯಿಂದ ನಿರ್ದಿಷ್ಟ ಕೋಟಾದ ಪ್ರಕಾರ ಆಯ್ದ ಸದಸ್ಯರನ್ನು ಜಿಲ್ಲಾ ಒಕ್ಕೂಟ ಸಮಿತಿಯು ಒಳಕೊಂಡಿರುತ್ತದೆ.

೬) ತನ್ನ ವ್ಯಾಪ್ತಿಯೊಳಗೆ ಇರುವ ಪ್ರತಿ ಜಿಲ್ಲೆಯ ಪರಿಶಿಷ್ಟ ಜಾತಿಗಳವರ ಸಂಖ್ಯೆಗೆ ಅನುಗುಣವಾಗಿ ಪ್ರತಿ ಜಿಲ್ಲಾ ಒಕ್ಕೂಟ ಸಮಿತಿಯಿಂದ ನಿರ್ದಿಷ್ಟ ಕೋಟಾದ ಪ್ರಕಾರ ಆಯ್ದ ಸದಸ್ಯರನ್ನು ರಾಜ್ಯ ಒಕ್ಕೂಟ ಸಮಿತಿಯು ಒಳಗೊಂಡಿರುತ್ತದೆ.

೭) ತನ್ನ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಗ್ರಾಮ ಒಕ್ಕೂಟ ಸಮಿತಿಯು ಆಯ್ಕೆ ಮಾಡುತ್ತದೆ. ಆ ಅಧ್ಯಕ್ಷರು ಒಕ್ಕೂಟದ ಸದಸ್ಯರಲ್ಲಿ ಕೆಲವರನ್ನು ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡುತ್ತಾರೆ. ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಕಾರ್ಯದರ್ಶಿಯನ್ನಾಗಿ ಮತ್ತು ಇನ್ನೊಬ್ಬರನ್ನು ಖಜಾಂಚಿಯನ್ನಾಗಿ ಅಧ್ಯಕ್ಷರು ನಾಮಕರಣಮಾಡುತ್ತಾರೆ.

೮) ತನ್ನ ಸದಸ್ಯರಲ್ಲಿ ಒಬ್ಬರನ್ನು ಜಿಲ್ಲಾ ಒಕ್ಕೂಟ ಸಮಿತಿಯು ಆಯ್ಕೆಮಾಡುತ್ತದೆ. ಆ ಅಧ್ಯಕ್ಷರು ಒಕ್ಕೂಟದ ಸದಸ್ಯರಲ್ಲಿ ಕೆಲವರನ್ನು ಕಾರ್ಯಕಾರಿ ಸಮಿತಿಗೆ ಆಯ್ಕೆಮಾಡುತ್ತಾರೆ. ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಕಾರ್ಯದರ್ಶಿಯನ್ನಾಗಿ ಮತ್ತು ಇನ್ನೊಬ್ಬರನ್ನು ಖಜಾಂಚಿಯನ್ನಾಗಿ ಅಧ್ಯಕ್ಷರು ನಾಮಕರಣಮಾಡುತ್ತಾರೆ.

೯) ತನ್ನ ಸದಸ್ಯರೊಳಗಿನಿಂದ ಒಬ್ಬರನ್ನು ಜಿಲ್ಲಾ ಒಕ್ಕೂಟ ಸಮಿತಿಯು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತದೆ. ಆ ಅಧ್ಯಕ್ಷರು ಒಕ್ಕೂಟದ ಸದಸ್ಯರಲ್ಲಿ ಕೆಲವರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸುತ್ತಾರೆ ಹಾಗೂ ಕಾರ್ಯಕಾರಿ ಸದಸ್ಯರಲ್ಲಿ ಒಬ್ಬರನ್ನು ಕಾರ್ಯದರ್ಶಿಯನ್ನಾಗಿಯೂ ಇನ್ನೊಬ್ಬರನ್ನು ಖಜಾಂಚಿಯನ್ನಾಗಿಯೂ ಅಧ್ಯಕ್ಷರು ನೇಮಿಸುತ್ತಾರೆ. ಜಿಲ್ಲಾ ಒಕ್ಕೂಟವು ಅಸ್ತಿತ್ವದಲ್ಲಿಲ್ಲದ ಎಡೆಗಳಲ್ಲಿ ರಾಜ್ಯ ಕಾರ್ಯಕಾರಿ ಸಮಿತಿಯು ಆ ಜಿಲ್ಲೆಯ ವ್ಯವಹಾರವನ್ನು ನೋಡಿಕೊಳ್ಳುತ್ತದೆ.

೧೦) ತನ್ನ ಸದಸ್ಯರೊಳಗಿನಿಂದ ಒಬ್ಬರನ್ನು ರಾಜ್ಯ ಒಕ್ಕೂಟ ಸಮಿತಿಯು ಅಧ್ಯಕ್ಷರನ್ನಾಗಿ ಆಯ್ಕೆಮಾಡುತ್ತದೆ. ಆ ಅಧ್ಯಕ್ಷರು ಒಕ್ಕೂಟದ ಸದಸ್ಯರಲ್ಲಿ ಕೆಲವರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸುತ್ತಾರೆ ಹಾಗೂ ಕಾರ್ಯಕಾರಿ ಸದಸ್ಯರಲ್ಲಿ ಒಬ್ಬರನ್ನು ಕಾರ್ಯದರ್ಶಿಯನ್ನಾಗಿಯೂ, ಇನ್ನೊಬ್ಬರನ್ನು ಖಜಾಂಚಿಯನ್ನಾಗಿಯೂ ಅಧ್ಯಕ್ಷರು ನೇಮಿಸುತ್ತಾರೆ.

## ಭಾಗ ೪
## ಸಂಘಟನೆ – ಕೇಂದ್ರೀಯ

### ವಿಧಿ ೭

೧. ಒಕ್ಕೂಟದ ಕೇಂದ್ರೀಯ ಸಂಸ್ಥೆಯು ಕೆಳಕಂಡವುಗಳನ್ನು ಒಳಕೊಂಡಿರುತ್ತದೆ –

ಅ) ಒಕ್ಕೂಟದ ಅಧ್ಯಕ್ಷರು,

ಆ) ಒಕ್ಕೂಟದ ಮಹಾಕಾರ್ಯದರ್ಶಿ

ಇ) ಒಕ್ಕೂಟದ ಖಜಾಂಚಿ,

ಈ) ಒಕ್ಕೂಟದ ಅಖಿಲ ಭಾರತ ಸಮಿತಿ,

ಉ) ಒಕ್ಕೂಟದ ಕೇಂದ್ರೀಯ ಕಾರ್ಯಕಾರಿ ಸಮಿತಿ,

ಊ) ಒಕ್ಕೂಟದ ಸಾಮಾನ್ಯಾಧಿವೇಶನ ಅಥವಾ ವಿಶೇಷ ಅಧಿವೇಶನ

### ವಿಧಿ ೮

೧) ಪ್ರತಿರಾಜ್ಯಗಳ ಪರಿಶಿಷ್ಟ ಜಾತಿಗಳ ಸಂಖ್ಯೆಗೆ ಅನುಗುಣವಾಗಿ ಎಲ್ಲಾ ರಾಜ್ಯ ಒಕ್ಕೂಟ ಸಮಿತಿಗಳ ಸದಸ್ಯರಿಂದ ಆಯ್ಕೆಯಾದ ವ್ಯಕ್ತಿಗಳನ್ನು, ಕೇಂದ್ರೀಯ ಕಾರ್ಯಕಾರಿ ಸಮಿತಿಯು ನಿರ್ಧರಿಸಿದ ಪ್ರಕಾರ, ಒಕ್ಕೂಟದ ಅಖಿಲ ಭಾರತ ಸಮಿತಿಯು ಒಳಗೊಂಡಿರುತ್ತದೆ.

೨) ಪ್ರತಿ ಎರಡು ವರ್ಷಗಳಿಗೊಮ್ಮೆ, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಸಮ್ಮೇಳನಗಳನ್ನು ನಡೆಸಬೇಕು. ಅಂತಹ ಸಮ್ಮೇಳನದ ಅಧ್ಯಕ್ಷರನ್ನು ರಾಜ್ಯ ಒಕ್ಕೂಟದ ಸಮಿತಿಗಳ ಸದಸ್ಯರು ಚುನಾಯಿಸಬೇಕು.

೩) ಅಧ್ಯಕ್ಷರು ತಾವಾಗಿಯೇ ಅಥವಾ ಮೂರನೆಯ ಒಂದರಷ್ಟು ರಾಜ್ಯ ಒಕ್ಕೂಟ ಸಮಿತಿಗಳ ಮನವಿಯ ಮೇರೆಗೆ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ವಿಶೇಷ ಸಮ್ಮೇಳನವನ್ನು ಕರೆಯಬಹುದು.

೪) ಒಕ್ಕೂಟದ ಅಧಿವೇಶನದ ಅಧ್ಯಕ್ಷತೆಯನ್ನು ಅಧ್ಯಕ್ಷರು ವಹಿಸಬೇಕು.

೫) ಪ್ರತಿ ರಾಜ್ಯ ಒಕ್ಕೂಟದ ಸಮಿತಿಯಿಂದ ಒಬ್ಬೊಬ್ಬರನ್ನು ಆಯ್ದು ಕೇಂದ್ರೀಯ ಕಾರ್ಯಕಾರಿ ಸಮಿತಿಯನ್ನು ರಚಿಸಬೇಕು.

೬) ಅಖಿಲ ಭಾರತ ಒಕ್ಕೂಟದ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರು ಮಹಾಕಾರ್ಯದರ್ಶಿಯನ್ನಾಗಿ ನೇಮಿಸಬೇಕು.

೭) ಅಖಿಲ ಭಾರತ ಒಕ್ಕೂಟದ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರು ಖಜಾಂಚಿಯನ್ನಾಗಿ ನೇಮಿಸಬೇಕು.

### ವಿಧಿ ೯

೧) ಒಕ್ಕೂಟದ ಸದಸ್ಯರು ಮತ್ತು ರಾಜ್ಯ ಒಕ್ಕೂಟದ ಸದಸ್ಯರನ್ನು ಒಕ್ಕೂಟದ ಅಖಿಲ ಭಾರತ ಸಮಿತಿಯು ಒಳಕೊಂಡಿರುತ್ತದೆ.

೨) ಒಕ್ಕೂಟದ ಅಧ್ಯಕ್ಷರೇ ಒಕ್ಕೂಟದ ಅಖಿಲ ಭಾರತ ಸಮಿತಿಯ ಅಧ್ಯಕ್ಷರೂ ಆಗಿರುತ್ತಾರೆ.

೩) ಒಕ್ಕೂಟದ ಅಧಿವೇಶನವು ನಿರೂಪಿಸಿರುವ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಕ್ಕೆ ಅಗತ್ಯವಾದ

ಕ್ರಮಗಳನ್ನು ಒಕ್ಕೂಟದ ಅಖಿಲ ಭಾರತ ಸಮಿತಿಯು ತೆಗೆದುಕೊಳ್ಳುತ್ತದೆ ಮತ್ತು ತನ್ನ ಅಧಿಕಾರಾವಧಿಯಲ್ಲಿ ತಲೆದೋರಬಹುದಾದ ಸನ್ನಿವೇಶಗಳನ್ನು ನಿರ್ವಹಿಸುವ ಅಧಿಕಾರವನ್ನು ಈ ಸಮಿತಿಯು ಹೊಂದಿರುತ್ತದೆ.

೪) ಸಂವಿಧಾನಕ್ಕೆ ವಿರೋಧವಾಗದ ರೀತಿಯಲ್ಲಿ ನಿಯಮಗಳನ್ನು ರೂಪಿಸುವುದಕ್ಕೆ ಮತ್ತು ಒಕ್ಕೂಟಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿಯಂತ್ರಿಸಲು ಒಕ್ಕೂಟದ ಅಖಿಲ ಭಾರತ ಸಮಿತಿಗೆ ಅಧಿಕಾರವಿರುತ್ತದೆ. ಇಂತಹ ನಿಯಮಗಳಿಗೆ ಒಕ್ಕೂಟದ ಅಧೀನ ಸಮಿತಿಗಳಿಗೆ ಒಳಪಟ್ಟಿರುತ್ತವೆ.

೫) ಕೇಂದ್ರೀಯ ಕಾರ್ಯಕಾರಿಗೆ ಅಗತ್ಯವೆಂದು ತೋರಿದಾಗ ಅಥವಾ ಕನಿಷ್ಠ ೫೦ ಸದಸ್ಯರು ಕೇಂದ್ರೀಯ ಸಮಿತಿಗೆ ಜಂಟಿಯಾಗಿ ಮನವಿಯನ್ನು ಸಲ್ಲಿಸಿದಾಗ ಒಕ್ಕೂಟದ ಅಖಿಲ ಭಾರತ ಸಮಿತಿಯು ಸಭೆ ಸೇರಬೇಕು. ಸಭೆಯನ್ನು ಕರೆಯಲು ಮನವಿ ಸಲ್ಲಿಸಿದ ಸದಸ್ಯರು ಸಭೆಯಲ್ಲಿ ತಾವು ಚರ್ಚಿಸಲು ಉದ್ದೇಶಿಸಿರುವ ವಿಷಯಗಳನ್ನು ನಿರ್ದಿಷ್ಟಗೊಳಿಸಿರಬೇಕು. ಇಂತಹ ಮನವಿಯನ್ನು ಸ್ವೀಕರಿಸಿದ ಎರಡು ತಿಂಗಳ ಒಳಗಾಗಿ ಸಭೆಯನ್ನು ಕರೆಯಬೇಕು. ಮನವಿಯ ಮೇರೆಗೆ ಕರೆಯಲಾದ ಸಭೆಯಲ್ಲಿ ಕೇಂದ್ರೀಯ ಕಾರ್ಯಕಾರಿ ಸಮಿತಿಯು ಯಾವುದೇ ವಿಷಯವನ್ನು ಮೊದಲಿನ ವಿಷಯದ ಜೊತೆಗೆ ಚರ್ಚಿಸುವ ಸಲುವಾಗಿ ಸೇರಿಸಬಹುದು.

೬) ಮನವಿಯ ಮೇರೆಗೆ ಕರೆಯಲಾದ ಸಭೆಗಳನ್ನು ಹೊರತುಪಡಿಸಿ, ಇತರ ಸಭೆಗಳಲ್ಲಿ ಅಖಿಲ ಭಾರತ ಒಕ್ಕೂಟ ಸಮಿತಿಯು ಸದಸ್ಯರಿಗೆ ನೀಡಿದ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಲಾಗಿದ್ದ ವಿಷಯಗಳ ಬಗ್ಗೆ ಚರ್ಚಿಸಲು ಕನಿಷ್ಠ ನಾಲ್ಕು ಗಂಟೆಗಳ ಅವಧಿಯನ್ನು ಮೀಸಲಿಡಬೇಕು.

೭) ಒಕ್ಕೂಟದ ಅಖಿಲ ಭಾರತ ಸಮಿತಿಯ ಸಭೆಯಲ್ಲಿ ಅಗತ್ಯವಾದ ಕೋರಂಗೆ ಕನಿಷ್ಠ ೨೫ ಮಂದಿ ಇರಬೇಕು.

## ವಿಧಿ ೧೦

೧) ಒಕ್ಕೂಟದ ಅಖಿಲ ಭಾರತ ಸಮಿತಿಯು ಅಥವಾ ಕೇಂದ್ರ ಕಾರ್ಯಕಾರಿ ಸಮಿತಿಯು ನಿರ್ಧರಿಸಿದ ದಿನಾಂಕ ಮತ್ತು ಸ್ಥಳದಲ್ಲಿ ಹಾಗೆ ಒಕ್ಕೂಟದ ಸಾಮಾನ್ಯ ಅಧಿವೇಶನವು ಸಾಮಾನ್ಯವಾಗಿ ಎರಡು ವರ್ಷಗಳಿಗೆ ಒಮ್ಮೆ ನಡೆಯಬೇಕು.

೨) ಒಕ್ಕೂಟದ ಸಾಮಾನ್ಯ ಅಧಿವೇಶನವು ಕೆಳಕಂಡವರನ್ನು ಒಳಕೊಂಡಿರಬೇಕು –

ಅ) ಒಕ್ಕೂಟದ ಅಧ್ಯಕ್ಷರು,

ಅ) ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರು,

ಇ) ಒಕ್ಕೂಟದ ಅಖಿಲ ಭಾರತ ಸಮಿತಿಯ ಸದಸ್ಯರು,

ಈ) ಕೇಂದ್ರಕಾರ್ಯಕಾರೀ ಸಮಿತಿಯ ಸದಸ್ಯರು,

ಉ) ಗ್ರಾಮ ಸಮಿತಿ, ತಾಲ್ಲೂಕು ಸಮಿತಿ, ಜಿಲ್ಲಾ ಸಮಿತಿ ಮತ್ತು ರಾಜ್ಯ ಸಮಿತಿಗಳ ಕಾರ್ಯಕಾರಿ ಸಮಿತಿಯ ಸದಸ್ಯರು,

೩) ಅ) ವಿಷಯ ಸಮಿತಿಯು ಶಿಫಾರಸ್ಸು ಮಾಡಿದ ಗೊತ್ತುವಳಿಗಳನ್ನು ಅಧಿವೇಶನವು ಪರಿಶೀಲಿಸಬೇಕು,

ಆ) ನಂತರ ಮೇಲಿನ (ಅ) ಉಪಬಂಧದಲ್ಲಿ ಸೇರಿಸದೆ ಇರುವ, ಆದರೆ ಕನಿಷ್ಠ ೪೦ ಮಂದಿ ಸದಸ್ಯರಿಂದ ಲಿಖಿತ ರೂಪದಲ್ಲಿ ಅಂದಿನ ಸಮ್ಮೇಳನವು ಪ್ರಾರಂಭವಾಗುವುದಕ್ಕೆ ಮೊದಲು ಅಧ್ಯಕ್ಷರಿಗೆ ನೀಡಲ್ಪಟ್ಟ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಬಹುದು. ಇಂತಹ ವಿಷಯಗಳು ಈ ಹಿಂದಿನ ವಿಷಯ ಸಮಿತಿಯ ಮುಂದೆ ಚರ್ಚಿತವಾಗಿದ್ದು ಹಾಜರಿದ್ದ ಸದಸ್ಯರಲ್ಲಿ ಮೂರನೇ ಒಂದರಷ್ಟು ಜನಗಳಿಂದ ಅದು ಬೆಂಬಲಿತವಾಗಿರಬೇಕು.

೪) ತನ್ನ ವ್ಯಾಪ್ತಿ ಪ್ರದೇಶದಲ್ಲಿ ನಡೆಯುತ್ತಿರುವ ಸಮ್ಮೇಳನದ ಯಶಸ್ಸಿಗೆ ಅಗತ್ಯವಾದ ಎಲ್ಲಾ ಸ್ಥಿತಿಗಳನ್ನು ಸಂಬಂಧಪಟ್ಟ ರಾಜ್ಯ ಒಕ್ಕೂಟ ಸಮಿತಿಯು ಮಾಡತಕ್ಕದ್ದು. ಸಂಬಂಧಪಟ್ಟ ರಾಜ್ಯ ಒಕ್ಕೂಟ ಸಮತಿಯು ಈ ಉದ್ದೇಶಕ್ಕಾಗಿ ತನ್ನ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವ ಒಂದು ಸ್ವಾಗತ ಸಮಿತಿಯೊಂದನ್ನು ರಚಿಸಬೇಕು. ಈ ಸ್ವಾಗತ ಸಮಿತಿಯು ರಾಜ್ಯ ಸಮಿತಿಯ ಸದಸ್ಯರಲ್ಲದವರನ್ನೂ ಒಳಕೊಂಡಿರಬಹುದು.

೫) ಸ್ವಾಗತ ಸಮಿತಿಯು ತನ್ನ ಅಧ್ಯಕ್ಷರನ್ನೂ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುತ್ತದೆ.

೬) ಸ್ವಾಗತ ಸಮಿತಿಯು ಸಮ್ಮೇಳನದ ವೆಚ್ಚಕ್ಕಾಗಿ ಅಗತ್ಯವಿರುವ ಹಣವನ್ನು ಸಂಗ್ರಹಿಸಿ ಸಮ್ಮೇಳನದ ಸದಸ್ಯರನ್ನು ಸ್ವಾಗತಿಸುವುದಕ್ಕೆ ಮತ್ತು ಅವರಿಗೆ ವಸತಿ ಸೌಕರ್ಯಗಳಿಗೆ ಎಲ್ಲಾ ಏರ್ಪಾಡುಗಳನ್ನು ಮಾಡತಕ್ಕದ್ದು. ಸಮ್ಮೇಳನಕ್ಕೆ ಬರುವ ಇತರ ಅತಿಥಿಗಳಿಗೂ ಅಗತ್ಯ ಏರ್ಪಾಡನ್ನು ಮಾಡತಕ್ಕದ್ದು.

೭) ರಾಜ್ಯ ಒಕ್ಕೂಟ ಸಮಿತಿಯು ನೇಮಿಸಿದ ಲೆಕ್ಕಪತ್ರ ಪರೀಕ್ಷಕರು ಸ್ವಾಗತ ಸಮಿತಿಯ ಲೆಕ್ಕಪತ್ರಗಳನ್ನು ಪರೀಕ್ಷಿಸಬೇಕು ಮತ್ತು ಸಮ್ಮೇಳನವು ನಡೆದ ಆರು ತಿಂಗಳಿನ ಒಳಗಾಗಿ ರಾಜ್ಯ ಒಕ್ಕೂಟ ಸಮಿತಿಯು ತನ್ನ ಲೆಕ್ಕಪತ್ರಗಳನ್ನು ಲೆಕ್ಕಪತ್ರಪರೀಕ್ಷಕರ ವರದಿಯೊಂದಿಗೆ ಕೇಂದ್ರೀಯ ಕಾರ್ಯಕಾರಿ ಸಮಿತಿಗೆ ಸಲ್ಲಿಸಬೇಕು. ಸಂಗ್ರಹಿಸಿದ ಹಣದಲ್ಲಿ ಉಳಿತಾಯವಾಗಿದ್ದರೆ, ಅದನ್ನು ಒಕ್ಕೂಟದ ಅಖಿಲ ಭಾರತ ಸಮಿತಿ ಹಾಗೂ ರಾಜ್ಯ ಒಕ್ಕೂಟ ಸಮಿತಿಗಳಿಗೆ ಸಮನಾಗಿ ಹಂಚಬೇಕು.

## ವಿಧಿ ೧೧

೧) ಅಧಿವೇಶನಕ್ಕೆ ಕನಿಷ್ಠ ಎರಡು ದಿನಗಳ ಮೊದಲು ವಿಷಯ ಸಮಿತಿಯಂತೆಯೇ ಒಕ್ಕೂಟದ ಅಖಿಲಭಾರತ ಸಮಿತಿಯು ತನ್ನ ಅಧ್ಯಕ್ಷರ ನೇತೃತ್ವದಲ್ಲಿ ಸಭೆ ಸೇರಬೇಕು. ಕೇಂದ್ರೀಯ ಕಾರ್ಯಕಾರಿ ಸಮಿತಿ, ಅಥವಾ ಸಮಾವೇಶಕ್ಕೆ ಮೊದಲು ಅಧ್ಯಕ್ಷರು ಆಯ್ಕೆಯಾಗಿದ್ದರೆ ಮತ್ತು ಅವರಿಂದ ನೇಮಕವಾದ ಕೇಂದ್ರೀಯ ಕಾರ್ಯಕಾರಿ ಸಮಿತಿಯು ತನ್ನ ಕಾರ್ಯಾರಂಭ ಮಾಡಿರದಿದ್ದರೆ, ಅಧ್ಯಕ್ಷರು ಒಂದು ಸಂಚಾಲಕ ಸಮಿತಿಯನ್ನು ರಚಿಸಬೇಕು ಮತ್ತು ಆ ಸಮಿತಿಯು ವಿಷಯ ಸಮಿತಿಗೆ ಸಮಾವೇಶದ ಕಾರ್ಯಕ್ರಮಗಳ ಪಟ್ಟಿಯನ್ನು ಮತ್ತು ತೆಗೆದುಕೊಳ್ಳಬೇಕಾದ ನಿರ್ಣಯಗಳನ್ನು ಸಲ್ಲಿಸಬೇಕು. ಕಾರ್ಯಕ್ರಮವನ್ನು ನಿರ್ಣಯಿಸುವಾಗ ರಾಜ್ಯ ಒಕ್ಕೂಟ ಸಮಿತಿ ಹಾಗೂ ಅಖಿಲಭಾರತ ಒಕ್ಕೂಟದ ಸದಸ್ಯರು ನೀಡಿರುವ ನಿರ್ಣಯಗಳನ್ನು ಪರಿಗಣಿಸಬೇಕು.

೨) ವಿಷಯ ಸಮಿತಿಯು ಕಾರ್ಯಕ್ರಮಗಳನ್ನು ಕುರಿತು ಚರ್ಚಿಸಬೇಕು ಮತ್ತು ಸಮಾವೇಶದಲ್ಲಿ ತೆಗೆದುಕೊಳ್ಳಬಹುದಾದ ನಿರ್ಣಯಗಳನ್ನು ಅಂತಿಮವಾಗಿ ರೂಪಿಸಬೇಕು. ರಾಜ್ಯ ಒಕ್ಕೂಟ ಸಮಿತಿಗಳು ಅಥವಾ ಅಖಿಲ ಭಾರತ ಸಮಿತಿಯ ಸದಸ್ಯರು ಸೂಚಿಸಿರುವ ವಿಷಯಗಳನ್ನು

ಚರ್ಚಿಸಲು ಸಾಧ್ಯವಾದಷ್ಟು ಮಟ್ಟಿಗೆ ನಾಲ್ಕುಗಂಟೆಗಳ ಕಾಲವನ್ನು ಮೀಸಲಿಡಬೇಕು.

### ವಿಧಿ ೧೨

೧) ಒಕ್ಕೂಟದ ಅಖಿಲ ಭಾರತ ಸಮಿತಿಯು ಇಚ್ಛಿಸಿ ಅಥವಾ ರಾಜ್ಯ ಒಕ್ಕೂಟ ಸಮಿತಿಗಳು ನಿಶ್ಚಯಿಸಿ ಅಧ್ಯಕ್ಷರಿಗೆ ಒಂದು ವಿಶೇಷ ಸಮಾವೇಶವನ್ನು ಕರೆಯಬೇಕೆಂದು ಬೇಡಿಕೆಯನ್ನು ಸಲ್ಲಿಸಿದರೆ, ಅಂತಹ ವಿಶೇಷ ಅಧಿವೇಶನವನ್ನು ನಡೆಸಬೇಕು.

೨) ಸಮಾವೇಶಕ್ಕೆ ಆಯ್ಕೆಯಾದ ರಾಜ್ಯದಲ್ಲಿರುವ ರಾಜ್ಯ ಒಕ್ಕೂಟದ ಸಮಿತಿಯು ಅಂತಹ ವಿಶೇಷ ಸಮಾವೇಶವನ್ನು ನಡೆಸಬೇಕು.

### ವಿಧಿ ೧೩

೧) ಕೇಂದ್ರೀಯ ಕಾರ್ಯಕಾರಿ ಸಮಿತಿಯು ಒಕ್ಕೂಟದ ಅಖಿಲ ಭಾರತ ಸಮಿತಿಯ ಸದಸ್ಯರೊಬ್ಬರನ್ನು ಅಧ್ಯಕ್ಷರ ಚುನಾವಣೆಯನ್ನು ನಡೆಸಲು ಚುನಾವಣಾಧಿಕಾರಿಯನ್ನಾಗಿ ನೇಮಿಸಬೇಕು. ಆದರೆ, ಅಧ್ಯಕ್ಷ ಸ್ಥಾನಕ್ಕೆ ಚುನಾವಣಾ ಅಭ್ಯರ್ಥಿಯಾಗಿರುವ ಮಹಾಕಾರ್ಯದರ್ಶಿಯು ಚುನಾವಣಾಧಿಕಾರಿಯ ಹುದ್ದೆಗೆ ಅರ್ಹನಾಗಿರುವುದಿಲ್ಲ.

೨) ಒಕ್ಕೂಟದ ಅಧ್ಯಕ್ಷರ ಸ್ಥಾನಕ್ಕೆ ಹೆಸರನ್ನು ಒಕ್ಕೂಟದ ಯಾವುದೇ ಸದಸ್ಯನಾದರೂ ಸೂಚಿಸಬಹುದು. ಇಂತಹ ಪ್ರತಿಯೊಂದು ಸೂಚನೆಯೂ ಇತರ ಮೂವರು ಸದಸ್ಯರಿಂದ ಅನುಮೋದಿಸಲ್ಪಡಬೇಕು. ಅಂತಹ ಸೂಚನೆಯನ್ನು ಕೇಂದ್ರೀಯ ಕಾರ್ಯಕಾರಿ ಸಮಿತಿಯು ನಿಗದಿಗೊಳಿಸಿರುವ ದಿನಾಂಕದೊಳಗೆ ಚುನಾವಣಾಧಿಕಾರಿಗೆ ಸಲ್ಲಿಸಬೇಕು.

೩) ಚುನಾವಣಾಧಿಕಾರಿಯು ತಾವು ಸ್ವೀಕರಿಸಿದ ಸೂಚನೆಗಳಲ್ಲಿರುವ ಎಲ್ಲಾ ಹೆಸರುಗಳನ್ನೂ ಪ್ರಕಟಿಸಬೇಕು. ಈ ಸೂಚನೆಯಲ್ಲಿ ತಮ್ಮ ಹೆಸರಿರುವ ಸದಸ್ಯರು ಪ್ರಕಟಣೆಯಾದ ಏಳು ದಿನಗಳ ಒಳಗಾಗಿ ತಮ್ಮ ಹೆಸರನ್ನು ಕೈಬಿಡುವಂತೆ ಕೋರಿ ಲಿಖಿತದ ಮೂಲಕ ಚುನಾವಣಾಧಿಕಾರಿಗಳಿಗೆ ಸಲ್ಲಿಸಲು ಅವಕಾಶವಿರುತ್ತದೆ.

೪) ತಮ್ಮ ಹೆಸರುಗಳನ್ನು ಹಿಂತೆಗೆದುಕೊಳ್ಳಲು ನೀಡಿರುವ ಅವಧಿಯು ಮುಗಿದ ತಕ್ಷಣ ಅಂತಹ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಿ ಉಳಿದಿರುವ ಅಭ್ಯರ್ಥಿಗಳ ಹೆಸರುಗಳನ್ನು ಚುನಾವಣಾಧಿಕಾರಿಗಳು ಎಲ್ಲಾ ರಾಜ್ಯಗಳ ಒಕ್ಕೂಟದ ಎಲ್ಲಾ ಸಮಿತಿಗಳಿಗೆ ಕಳುಹಿಸಿಕೊಡಬೇಕು. ಇಂತಹ ಪರಿಷ್ಕೃತ ಪಟ್ಟಿಯಲ್ಲಿ ಒಬ್ಬರೇ ಅಭ್ಯರ್ಥಿಯ ಹೆಸರು ಉಳಿದಿದ್ದರೆ, ಅಂತಹ ಅಭ್ಯರ್ಥಿಯನ್ನು ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆಂದು ಒಕ್ಕೂಟದ ಮುಂದಿನ ಅಧಿವೇಶನದಲ್ಲಿ ಪ್ರಕಟಿಸಬೇಕು.

೫) ಕೇಂದ್ರೀಯ ಕಾರ್ಯಕಾರಿ ಸಮಿತಿಯು ನಿಗದಿಪಡಿಸಿದ ದಿನದಂದು (ಅಂತಹ ದಿನವು ಸಾಮಾನ್ಯವಾಗಿ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಿದ ದಿನಕ್ಕಿಂತ ಏಳು ದಿನಗಳ ಒಳಗಾಗಿ ಇರಬಾರದು) ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುವ ಪ್ರತಿಯೊಬ್ಬರೂ ಅಧ್ಯಕ್ಷರ ಆಯ್ಕೆಗಾಗಿ ತಮ್ಮ ಮತವನ್ನು ಕೆಳಕಂಡ ರೀತಿಯಲ್ಲಿ ಚಲಾಯಿಸಬೇಕು

ಅ) ಅಭ್ಯರ್ಥಿಗಳೆಲ್ಲರ ಹೆಸರೂ ಇರುವ ಮತಪತ್ರದ ಮೇಲೆ ಮತದಾರನು ತನ್ನ ಆಯ್ಕೆಯನ್ನು

ಗುರುತುಮಾಡಬೇಕು,

ಆ) ಪ್ರತಿಯೊಬ್ಬ ಮತದಾರರಿಗೂ ಒಂದು ಮತವಿರುತ್ತದೆ.

ಇ) ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಲು ಸರಳ ಬಹುಮತವು ಸಾಕಾಗುತ್ತದೆ.

ಈ) ರಾಜ್ಯ ಒಕ್ಕೂಟ ಸಮಿತಿಯು, ಚುನಾವಣೆಯು ಮುಗಿದ ತಕ್ಷಣ ಮತಪೆಟ್ಟಿಗೆಗಳನ್ನು ಒಕ್ಕೂಟದ ಅಖಿಲ ಭಾರತ ಸಮಿತಿಗೆ ಕಳುಹಿಸಿಕೊಡಬೇಕು.

ಉ) ಮತಪೆಟ್ಟಿಗೆಗಳು ತಲುಪಿದ ಮೇಲೆ, ಚುನಾವಣಾಧಿಕಾರಿಯು ಸಾಧ್ಯವಾದಷ್ಟು ಬೇಗ ಪ್ರತಿಯೊಬ್ಬ ಅಭ್ಯರ್ಥಿಯೂ ಪಡೆದಿರುವ ಮತಗಳನ್ನು ಎಣಿಸಬೇಕು. ಅತ್ಯಂತ ಹೆಚ್ಚು ಮತವನ್ನು ಗಳಿಸಿದ ಅಭ್ಯರ್ಥಿಯನ್ನು ಅಧ್ಯಕ್ಷ ಪದವಿಯ ವಿಜೇತರೆಂದು ಘೋಷಿಸಬೇಕು.

ಊ) ಹಾಲಿ ಅಧ್ಯಕ್ಷರ ಮರಣ ಅಥವಾ ರಾಜೀನಾಮೆಯಿಂದ ಉದ್ಭವಿಸುವ ತುರ್ತು ಸಮಯದಲ್ಲಿ ಕೇಂದ್ರೀಯ ಕಾರ್ಯಕಾರಿ ಸಮಿತಿಯು ಹೊಸದಾಗಿ ಚುನಾವಣೆಯನ್ನು ನಡೆಸಲು ಒಂದು ದಿನಾಂಕವನ್ನು ಮೇಲೆ ತಿಳಿಸಿದ ಪ್ರಕಾರ ನಿಗದಿಪಡಿಸತಕ್ಕದ್ದು. ಈ ವಿಧಾನವನ್ನು ಅನುಸರಿಸುವುದು ಅಸಾಧ್ಯವೆಂದು ಕೇಂದ್ರೀಯ ಕಾರ್ಯಕಾರಿ ಸಮಿತಿಗೆ ತೋರಿದಲ್ಲಿ, ಅದು ಅಧ್ಯಕ್ಷರನ್ನು ಆಯ್ಕೆಮಾಡುವುದಕ್ಕಾಗಿ ಒಕ್ಕೂಟದ ಅಖಿಲಭಾರತ ಸಮಿತಿಯ ಸಭೆಯನ್ನು ಕರೆಯಬೇಕು.

ಋ) ಚುನಾಯಿತರಾದ ನಂತರ ಅಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಒಕ್ಕೂಟದ ಎಲ್ಲಾ ಸಭೆಗಳ ನೇತೃತ್ವವನ್ನು ವಹಿಸಬೇಕು. ಕೇಂದ್ರೀಯ ಕಾರ್ಯಕಾರಿ ಸಮಿತಿಯು ಸಭೆ ಸೇರಿರದ ಎಲ್ಲಾ ಸಂದರ್ಭಗಳಲ್ಲಿಯೂ ಸಮಿತಿಯ ಸಂಪೂರ್ಣ ಅಧಿಕಾರವನ್ನು ಅಧ್ಯಕ್ಷರು ಚಲಾಯಿಸಬಹುದು.

## ಭಾಗ ೫

## ಪದಾಧಿಕಾರಿಗಳ ಕರ್ತವ್ಯ, ಕಾರ್ಯನೀತಿ ಮತ್ತು ಅಧಿಕಾರವ್ಯಾಪ್ತಿಗಳು

### ವಿಧಿ ೧೪

೧) ಕೇಂದ್ರೀಯ ಕಾರ್ಯಕಾರಿ ಸಮಿತಿಯು ಒಕ್ಕೂಟದ ಅಧ್ಯಕ್ಷರು ಹಾಗೂ ಅವರು ನೇಮಿಸಿದ ಖಜಾಂಚಿ ಮತ್ತು ಮಹಾಕಾರ್ಯದರ್ಶಿಯವರನ್ನು ಒಳಕೊಂಡಂತೆ ಒಟ್ಟು ಇಪ್ಪತ್ತು ಸದಸ್ಯರನ್ನು ಒಳಕೊಂಡಿರುತ್ತದೆ. ಸಾಮಾನ್ಯವಾಗಿ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಒಕ್ಕೂಟದ ಅಖಿಲ ಭಾರತ ಸಮಿತಿಯಿಂದ ಆಯ್ದಿರಬೇಕು. ವಿಶೇಷ ಸಂದರ್ಭಗಳಲ್ಲಿ ಒಕ್ಕೂಟದ ಅಖಿಲ ಭಾರತ ಸಮಿತಿಯ ಸದಸ್ಯರಲ್ಲದವರನ್ನು ನೇಮಿಸಬಹುದು. ಆದರೆ ಹಾಗೆ ನೇಮಕಗೊಂಡ ಸದಸ್ಯರು ನೇಮಕಗೊಂಡ ಆರು ತಿಂಗಳ ಒಳಗಾಗಿ ಒಕ್ಕೂಟದ ಅಖಿಲ ಭಾರತ ಸಮಿತಿಯ ಸದಸ್ಯನಾಗಿ ಚುನಾಯಿತರಾಗದಿದ್ದರೆ, ಅವರ ನೇಮಕಾತಿಯು ರದ್ದಾಗುತ್ತದೆ.

೨) ಕೇಂದ್ರೀಯ ಕಾರ್ಯಕಾರಿ ಸಮಿತಿಯ ಸಭೆಗೆ ಹಾಜರಿರಬೇಕಾದ ಕನಿಷ್ಠ ಸದಸ್ಯರ ಸಂಖ್ಯೆ ಏಳು.

೩) ಕೇಂದ್ರೀಯ ಕಾರ್ಯಕಾರಿ ಸಮಿತಿಯು ಅತ್ಯುನ್ನತ ಕಾರ್ಯಕಾರೀ ಅಧಿಕಾರವನ್ನುಳ್ಳ ಸಮಿತಿಯಾಗಿರುತ್ತದೆ. ಅದಕ್ಕೆ ಒಕ್ಕೂಟವು, ಒಕ್ಕೂಟದ ಅಖಿಲ ಭಾರತ ಸಮಿತಿಯು ನಿರೂಪಿಸಿದ ನೀತಿ ಮತ್ತು ಕಾರ್ಯಕ್ರಮಗಳನ್ನು ಜಾರಿಗೆ ತರುವ ಅಧಿಕಾರವನ್ನು ಹೊಂದಿರುತ್ತದೆ ಮತ್ತು ಒಕ್ಕೂಟದ ಅಖಿಲ ಭಾರತ ಸಮಿತಿಗೆ ಜವಾಬ್ದಾರವಾಗಿರುತ್ತದೆ. ಈ ಸಂವಿಧಾನದ ಎಲ್ಲಾ ವಿಧಿಗಳನ್ನು ಅರ್ಥೈಸುವ, ಅನ್ವಯಗೊಳಿಸುವ ಅಂತಿಮ ಅಧಿಕಾರ ಅದಕ್ಕಿರುತ್ತದೆ.

೪) ಕೇಂದ್ರೀಯ ಕಾರ್ಯಕಾರಿ ಸಮಿತಿಯು ಒಕ್ಕೂಟದ ಅಖಿಲ ಭಾರತ ಸಮಿತಿಯ ಸಭೆಯ ಮುಂದೆ ಒಕ್ಕೂಟದ ಅಖಿಲ ಭಾರತ ಸಮಿತಿ ಸಭೆಯ ನಡಾವಳಿಗಳನ್ನು, ಪ್ರಸಕ್ತ ಸಭೆಯ ಕಾರ್ಯಕ್ರಮವನ್ನು ಹಾಗೂ ನಿಯಮಗಳ ಪ್ರಕಾರ ಒಕ್ಕೂಟದ ಅಖಿಲ ಭಾರತ ಸಮಿತಿಯ ಸದಸ್ಯರು ಪೂರ್ವಾನುಮತಿ ಪಡೆದು ಮಂಡಿಸಿದ ಅನೌಪಚಾರಿಕ ಗೊತ್ತುವಳಿಗಳಿಗೆ ನಿರ್ಧರಿಸಿದ ವೇಳಾಪಟ್ಟಿಯನ್ನು ಮಂಡಿಸಬೇಕು.

೫) ಒಕ್ಕೂಟದ ಎಲ್ಲಾ ಸಮಿತಿಗಳ ಮತ್ತು ಇತರ ಸಂಸ್ಥೆಗಳ ಲೆಕ್ಕಪತ್ರವನ್ನು ಪರಿಶೀಲಿಸಲು ಕೇಂದ್ರೀಯ ಕಾರ್ಯಕಾರಿ ಸಮಿತಿಯು ಒಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಲೆಕ್ಕಪತ್ರ ಪರಿಶೋಧಕರನ್ನು ಅಥವಾ ತನಿಖಾಧಿಕಾರಿಗಳನ್ನು ನೇಮಿಸಬಹುದು. ಹಾಗೆ ನೇಮಕಗೊಂಡ ಪರಿಶೋಧಕರಿಗೆ, ತನಿಖಾಧಿಕಾರಿಗಳಿಗೆ ಅಥವಾ ಇತರ ಅಧಿಕಾರಿಗಳಿಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು, ಹಾಗೂ ಅವರಿಗೆ ಯಾರನ್ನಾದರೂ ವಿಚಾರಿಸುವ, ಅಗತ್ಯವಾದ ಯಾವುದೇ ಲೆಕ್ಕಪತ್ರಗಳನ್ನು, ದಾಖಲೆಗಳನ್ನು ನೋಡುವ ಅವಕಾಶವನ್ನು ಕಲ್ಪಿಸಿಕೊಡುವುದಕ್ಕೆ ಎಲ್ಲಾ ಸಮಿತಿಗಳೂ, ಸಂಸ್ಥೆಗಳೂ ಬದ್ಧವಾಗಿರುತ್ತವೆ.

೬) ಕೇಂದ್ರೀಯ ಕಾರ್ಯಕಾರಿ ಸಮಿತಿಯ ಅಧಿಕಾರಗಳು ಹೀಗಿರುತ್ತವೆ –

ಅ) ಸಂಸ್ಥೆಯ ಕಾರ್ಯಕ್ರಮಗಳು ಸರಿಯಾಗಿ ನಡೆದುಕೊಂಡು ಹೋಗಲು ಅಗತ್ಯವಾದ ನಿಯಮಗಳನ್ನು ರೂಪಿಸುವುದು. ಆ ನಿಯಮಗಳನ್ನು ಆದಷ್ಟು ಶೀಘ್ರವಾಗಿ ಒಕ್ಕೂಟದ ಅಖಿಲ ಭಾರತ ಸಮಿತಿಯ ಮುಂದೆ ಇಡಬೇಕು.

ಆ) ನಿಯಮಗಳನ್ನು ರೂಪಿಸಿಲ್ಲದ ವಿಷಯಗಳಿಗೆ, ಸಂವಿಧಾನಕ್ಕೆ ವಿರೋಧವಾಗದಂತೆ ನಿಯಮಗಳನ್ನು ರೂಪಿಸುವುದು.

ಇ) ಎಲ್ಲಾ ಸಮಿತಿಗಳ, ಸ್ಥಳೀಯ ಸಮಿತಿಗಳ, ಅಧೀನ ಸಮಿತಿಗಳ ಹಾಗೂ ಸ್ವಾಗತ ಸಮಿತಿಗಳ ಕಾರ್ಯಚಟುವಟಿಕೆಗಳನ್ನು ಪರಿವೀಕ್ಷಿಸುವುದು, ಸೂಕ್ತ ನಿರ್ದೇಶನವನ್ನು ನೀಡುವುದು.

ಈ) ಒಕ್ಕೂಟದ ಅಖಿಲ ಭಾರತ ಸಮಿತಿಯ ಅಧ್ಯಕ್ಷರನ್ನು ಹೊರತುಪಡಿಸಿ ಇತರ ಸಮಿತಿಗಳ ಅಧ್ಯಕ್ಷರ ಮೇಲೆ ತನಗೆ ಸರಿಕಂಡಂತೆ ಶಿಸ್ತುಕ್ರಮವನ್ನು ಜರುಗಿಸುವುದು.

ಉ) ವಿಶೇಷ ಸಂದರ್ಭಗಳಲ್ಲಿ, ಒಕ್ಕೂಟದ ಹಿತರಕ್ಷಣೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವುದು. ಆದರೆ, ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಇಂತಹ ಸಂದರ್ಭಗಳಲ್ಲಿ ತಾನು ತೆಗೆದುಕೊಂಡ ಕ್ರಮಗಳನ್ನು ಆದಷ್ಟು ಶೀಘ್ರವಾಗಿ ಒಕ್ಕೂಟದ ಅಖಿಲ ಭಾರತ ಸಮಿತಿಯ ಮುಂದೆ, ಅದರ ಒಪ್ಪಿಗೆಗಾಗಿ ಮಂಡಿಸಬೇಕು.

ಊ) ಒಕ್ಕೂಟದಲ್ಲಿ ಶಿಸ್ತನ್ನು ಕಾಪಾಡಿಕೊಂಡು ಬರುವ ಉದ್ದೇಶದಿಂದ ಸದಸ್ಯರ ಪ್ರಾತಿನಿಧ್ಯವನ್ನು

ರದ್ದುಮಾಡಲು ಅಥವಾ ಪ್ರಾತಿನಿಧ್ಯದ ಹಕ್ಕುಗಳನ್ನು ನೀಡಲು ಅಗತ್ಯವಾದ ನಿಯಮಗಳನ್ನು ರೂಪಿಸುವುದು.

೭) ಕೆಲವು ವಿಶೇಷ ಸಂದರ್ಭಗಳಲ್ಲಿ, ಸಂವಿಧಾನಕ್ಕೆ ಭಂಗಬಾರದ ಹಾಗೆ ನಿಯಮಗಳನ್ನು ಅನುಸರಿಸುವಲ್ಲಿ ಅಗತ್ಯವಾದ ರಿಯಾಯತಿಗಳನ್ನು ತೋರಿಸುವುದು.

೮) ಒಕ್ಕೂಟದ ಅಖಿಲ ಭಾರತ ಸಮಿತಿಯು ನೇಮಿಸಿದ ಲೆಕ್ಕಪತ್ರ ಪರಿಶೋಧಕರಿಂದ ಪ್ರತಿವರ್ಷವೂ ಒಕ್ಕೂಟದ ಅಖಿಲ ಭಾರತ ಸಮಿತಿಯ ಲೆಕ್ಕಪತ್ರಗಳನ್ನು ಪರಿಶೀಲಿಸಿಕೊಳ್ಳುವುದು.

## ಭಾಗ ೬

## ಸ್ಥಳೀಯ ಸಂಸ್ಥೆಗಳು ಮತ್ತು ಕೇಂದ್ರೀಯ ಕಾರ್ಯಕಾರಿ ಸಮಿತಿಯ ನಡುವಿನ ಸಂಬಂಧ

### ವಿಧಿ ೧೫

೧) ಅಧ್ಯಕ್ಷರ ಅಧಿಕಾರಗಳಿಗೆ ಒಳಪಟ್ಟು, ಮಹಾಕಾರ್ಯದರ್ಶಿಯು ಒಕ್ಕೂಟದ ಅಖಿಲ ಭಾರತ ಸಮಿತಿಯ ಕಚೇರಿಯ ಮುಖ್ಯಸ್ಥನಾಗಿರುತ್ತಾನೆ.

೨) ಪರಿಶೀಲಿಸಿದ ಲೆಕ್ಕಪತ್ರಗಳನ್ನು ಒಳಕೊಂಡಂತೆ, ಒಕ್ಕೂಟದ ಸಮಾವೇಶದ ನಡಾವಳಿಗಳನ್ನು ಸಮಾವೇಶದ ನಂತರ ಆದಷ್ಟು ಶೀಘ್ರವಾಗಿ ಪ್ರಕಟಿಸುವುದು ಮಹಾಕಾರ್ಯದರ್ಶಿಯ ಹೊಣೆಯಾಗಿರುತ್ತದೆ.

೩) ಒಕ್ಕೂಟದ ಅಖಿಲ ಭಾರತ ಸಮಿತಿಯ ಹಾಗೂ ಕೇಂದ್ರೀಯ ಕಾರ್ಯಕಾರಿ ಸಮಿತಿಯ ವರದಿಗಳ ಲೆಕ್ಕಪತ್ರಗಳನ್ನು ಒಳಕೊಂಡಂತೆ ಕಳೆದ ಅವಧಿಯಲ್ಲಿ ಒಕ್ಕೂಟದ ಅಖಿಲ ಭಾರತ ಸಮಿತಿಗೆ ಸಲ್ಲಿಸಿದ ನಂತರದ ಒಕ್ಕೂಟದ ಮುಂದಿನ ಅಧಿವೇಶನಕ್ಕೆ ಮೊದಲು ಮಹಾಕಾರ್ಯದರ್ಶಿಯು ಸಿದ್ಧಪಡಿಸಬೇಕು.

### ವಿಧಿ ೧೬

೧. ಕೇಂದ್ರ ಸಂಸ್ಥೆಯ ಪರವಾಗಿ ಒಕ್ಕೂಟಕ್ಕಾಗಿ ಸ್ವೀಕರಿಸಿದ ಹಣವನ್ನು ಅಧ್ಯಕ್ಷರ ಹೆಸರಿನಲ್ಲಿ ತನ್ನ ಸುಪರ್ದಿನಲ್ಲಿ, ಒಕ್ಕೂಟದ ಉಪಯೋಗಕ್ಕಾಗಿ ಆತ ಇಟ್ಟುಕೊಂಡಿರಬೇಕು.

೨) ಖಜಾಂಚಿಯು ಅಧ್ಯಕ್ಷರ ಒಪ್ಪಿಗೆಯನ್ನು ಪಡೆದ ಉದ್ದೇಶಗಳಿಗಾಗಿ ಈ ಹಣವನ್ನು ತೆಗೆದುಕೊಳ್ಳಬಹುದು.

೩) ತಮ್ಮ ಬಳಿ ಇರುವ ಹಣವನ್ನು ಖರ್ಚುಮಾಡಿದ ಪ್ರತಿ ಬಾಬ್ತುಗಳಿಗೆ ರಸೀದಿಯನ್ನು ಖಜಾಂಚಿಯಾಗಲೀ ಅಥವಾ ಒಕ್ಕೂಟದ ಹಣವನ್ನು ವ್ಯಯಮಾಡುವ ಇತರರಾಗಲೀ, ಪಡೆದು ಜೋಪಾನವಾಗಿ ಇರಿಸತಕ್ಕದ್ದು.

### ವಿಧಿ ೧೭

೧) ಕೇಂದ್ರೀಯ ಕಾರ್ಯಕಾರಿ ಸಮಿತಿಯ ಒಪ್ಪಿಗೆಗೆ ಒಳಪಟ್ಟು, ರಾಜ್ಯ ಒಕ್ಕೂಟ ಸಮಿತಿಗಳು ಸಾಮಾನ್ಯವಾಗಿ ತನ್ನ ಜಿಲ್ಲಾ ಒಕ್ಕೂಟ ಸಮಿತಿಗಳ ಮೂಲಕ ಕಾರ್ಯನಿರ್ವಹಿಸಬೇಕು.

೨) ಅಖಿಲ ಭಾರತ ಒಕ್ಕೂಟ ಸಮಿತಿಯ ಸಾಮಾನ್ಯ ಉಸ್ತುವಾರಿ ಮತ್ತು ಅಧೀನಕ್ಕೆ ಒಳಪಟ್ಟು,

ರಾಜ್ಯ ಒಕ್ಕೂಟ ಸಮಿತಿಯು ತನ್ನ ರಾಜ್ಯದಲ್ಲಿನ ಕಾರ್ಯಗಳನ್ನು ನಿರ್ವಹಿಸಬೇಕು.

೩) ಸ್ಥಳೀಯ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನೊಳಗೊಂಡ ತನ್ನ ವಾರ್ಷಿಕ ವರದಿಯನ್ನು ರಾಜ್ಯ ಒಕ್ಕೂಟ ಸಮಿತಿಯು ಕೇಂದ್ರೀಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು.

೪) ಸಂವಿಧಾನಕ್ಕೆ ಅನುಗುಣವಾಗಿ ಅಥವಾ ರಾಜ್ಯ ಒಕ್ಕೂಟದ ನಿರ್ದೇಶನಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸದ ರಾಜ್ಯ ಒಕ್ಕೂಟ ಸಮಿತಿಯನ್ನು ಕೇಂದ್ರೀಯ ಒಕ್ಕೂಟ ಸಮಿತಿಯು ಅಮಾನತ್ತುಗೊಳಿಸಿ ರಾಜ್ಯದಲ್ಲಿ ಕಾರ್ಯನಿರ್ವಹಿಸಲು ತಾತ್ಕಾಲಿಕ ಸಮಿತಿಯೊಂದನ್ನು ನೇಮಿಸಬಹುದು.

## ಭಾಗ ೭

## ಹಣಕಾಸು

### ವಿಧಿ ೧೮

೧) ತನ್ನ ಮೇಲೆ ವಿಧಿಸಿದ ಹಣದ ಮೊತ್ತವನ್ನು ಪ್ರತಿ ಒಕ್ಕೂಟದ ಗ್ರಾಮ ಸಮಿತಿಯು ಕೇಂದ್ರ ಒಕ್ಕೂಟಕ್ಕೆ ನೀಡಬೇಕು.

೨) ಹೀಗೆ ನೀಡಬೇಕಾದ ಹಣವನ್ನು ರಾಜ್ಯ ಒಕ್ಕೂಟ ಸಮಿತಿಯು, ಆ ಗ್ರಾಮ ಒಕ್ಕೂಟದ ಪರಿಶಿಷ್ಟ ಜಾತಿಗಳ ಸದಸ್ಯರ ಸಂಖ್ಯೆಯ ಮೇಲೆ ನಿರ್ಧರಿಸುತ್ತದೆ.

೩) ರಾಜ್ಯ ಒಕ್ಕೂಟ ಸಮಿತಿಗೆ ತಮ್ಮ ಸಮಿತಿಯ ಲೆಕ್ಕಪತ್ರಗಳನ್ನು ಸಲ್ಲಿಸುವುದು ಗ್ರಾಮ ಒಕ್ಕೂಟ ಸಮಿತಿಯ ಅಧ್ಯಕ್ಷನ ಕರ್ತವ್ಯವಾಗಿರುತ್ತದೆ.

೪) ಹೀಗೆ ರಾಜ್ಯ ಒಕ್ಕೂಟ ಸಮಿತಿಯು ಸಂಗ್ರಹಿಸಿದ ಹಣವನ್ನು ಕೆಳಕಂಡಂತೆ ಹಂಚಬೇಕು:

ಅ) ಎಂಟನೇ ಒಂದು ಭಾಗವನ್ನು ಗ್ರಾಮ ಒಕ್ಕೂಟ ಸಮಿತಿಗೆ ನೀಡಬೇಕು.

ಆ) ಎಂಟನೇ ಒಂದು ಭಾಗವನ್ನು ತಾಲ್ಲೂಕು ಒಕ್ಕೂಟ ಸಮಿತಿಗೆ ನೀಡಬೇಕು.

ಇ) ಎಂಟನೇ ಒಂದು ಭಾಗವನ್ನು ಜಿಲ್ಲಾ ಒಕ್ಕೂಟ ಸಮಿತಿಗೆ ನೀಡಬೇಕು.

ಈ) ಹದಿನಾರರಲ್ಲಿ ಐದು ಭಾಗವನ್ನು ರಾಜ್ಯ ಒಕ್ಕೂಟ ಸಮಿತಿಗೆ ನೀಡಬೇಕು.

ಉ) ಹದಿನಾರರಲ್ಲಿ ಐದು ಭಾಗವನ್ನು ಕೇಂದ್ರಕ್ಕೆ ನೀಡಬೇಕು.

೫) ಒಕ್ಕೂಟದ ಕೇಂದ್ರೀಯ ಕಾರ್ಯಕಾರಿ ಸಮಿತಿಯ, ಒಕ್ಕೂಟದ ಅಖಿಲ ಭಾರತ ಸಮಿತಿಯ ಚುನಾಯಿತ, ಪದನಿಮಿತ್ತ, ಸಹ ಅಥವಾ ನಾಮಕರಣಗೊಂಡ ಪ್ರತಿಯೊಬ್ಬ ಸದಸ್ಯನೂ ಪ್ರತಿವರ್ಷಕ್ಕೆ ೧೦ ರೂಗಳ ಶುಲ್ಕವನ್ನು ಒಕ್ಕೂಟಕ್ಕೆ ಕಟ್ಟಬೇಕು.

೬) ಗ್ರಾಮ ಸಮಿತಿಯ, ತಾಲ್ಲೂಕು ಸಮಿತಿಯ, ಜಿಲ್ಲಾ ಸಮಿತಿಯ ಮತ್ತು ರಾಜ್ಯ ಸಮಿತಿಯ ಪ್ರತಿಯೊಬ್ಬ ಸದಸ್ಯನೂ ತಮ್ಮತಮ್ಮ ಸಮಿತಿಗಳಿಗೆ ೫ ರೂ.ಗಳ ಶುಲ್ಕವನ್ನು ಕಟ್ಟತಕ್ಕದ್ದು.

೭) ಕೇಂದ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರ ಶುಲ್ಕವು ಒಕ್ಕೂಟದ ಆದಾಯದ ಭಾಗವಾಗಿರುತ್ತದೆ. ಗ್ರಾಮ ಸಮಿತಿಗಳ ಸದಸ್ಯರಿಂದ ವಸೂಲಾಗುವ ಶುಲ್ಕವು ಗ್ರಾಮ ಸಮಿತಿಗಳ ಆದಾಯಕ್ಕೂ, ತಾಲ್ಲೂಕು ಕಾರ್ಯಕಾರಿ ಸಮಿತಿಯ ಸದಸ್ಯರ ಶುಲ್ಕವು ತಾಲ್ಲೂಕು ಸಮಿತಿಯ ಆದಾಯಕ್ಕೂ, ಜಿಲ್ಲಾ ಸಮಿತಿಯ ಸದಸ್ಯರ ಆದಾಯವು ಜಿಲ್ಲಾ ಸಮಿತಿಗೂ ಹಾಗೆಯೇ, ರಾಜ್ಯ ಸಮಿತಿಯ ಸದಸ್ಯರ ಶುಲ್ಕವು ರಾಜ್ಯ ಸಮಿತಿಯ ಆದಾಯಕ್ಕೂ ಸೇರುತ್ತದೆ.

೮) ಯಾವುದೇ ಸದಸ್ಯರಿಂದ ಬರಬೇಕಾಗಿದ್ದ ಶುಲ್ಕವು ಬಾಕಿ ಉಳಿದಿದ್ದರೆ, ಅಂತಹ ಸದಸ್ಯರು

ಸಾಮಾನ್ಯವಾಗಿ ಭಾಗವಹಿಸಬಹುದಾಗಿದ್ದ ಸಮಿತಿಯಲ್ಲಿ ಭಾಗವಹಿಸಲು ಅವರಿಗೆ ಅವಕಾಶವಿರುವುದಿಲ್ಲ.

## ಭಾಗ ೮
## ಚುನಾವಣೆ
### ವಿಧಿ ೧೯

೧) ಗ್ರಾಮ ಒಕ್ಕೂಟದ ಸಮಿತಿಗೆ, ತಾಲ್ಲೂಕು ಒಕ್ಕೂಟದ ಸಮಿತಿಗೆ ಮತ್ತು ಜಿಲ್ಲಾ ಒಕ್ಕೂಟದ ಸಮಿತಿಗೆ ಹಾಗೂ ಅವುಗಳ ಅಧ್ಯಕ್ಷರ ಆಯ್ಕೆಗೆ ಸರಳ ಬಹುಮತವು ಸಾಕಾಗುತ್ತದೆ.

೨) ಒಕ್ಕೂಟದ ಅಖಿಲ ಭಾರತ ಸಮಿತಿಗೆ ಮತ್ತು ಅದರ ಅಧ್ಯಕ್ಷರ ಆಯ್ಕೆಗೆ ಸರಳ ಬಹುಮತವು ಸಾಕಾಗುತ್ತದೆ.

### ವಿಧಿ ೨೦

೧) ಯಾವುದೇ ಸಮಿತಿಯ, ಮಂಡಲಿಯ ಅಥವಾ ಪಂಚಾಯತಿಯ ಸದಸ್ಯರ ಸ್ಥಾನವು ಸದರಿ ಹಾಲಿ ಸದಸ್ಯರ ರಾಜೀನಾಮೆಯಿಂದ, ಅವರನ್ನು ತೆಗೆದು ಹಾಕಲ್ಪಡುವುದರಿಂದ ಅಥವಾ ಅವರ ಸಾವಿನಿಂದ ತೆರವಾಗುತ್ತದೆ.

೨) ಸದರಿ ಸದಸ್ಯರು ಆಯ್ಕೆಯಾದ ರೀತಿಯನ್ನೇ ಅವರ ಸ್ಥಾನವನ್ನು ತುಂಬಲೂ ಅನುಸರಿಸಬೇಕು. ಹಾಗೆ ಆಯ್ಕೆಯಾದ ಸದಸ್ಯರು ತಮ್ಮ ಹಿಂದಿನ ಸದಸ್ಯರ ಅವಧಿಯಲ್ಲಿ ಉಳಿದಿರುವಷ್ಟು ಸಮಯದಲ್ಲಿ ಮಾತ್ರ ಆ ಸ್ಥಾನವನ್ನು ಹೊಂದಿರುತ್ತಾರೆ.

೩) ಸದಸ್ಯ ಸ್ಥಾನಗಳು ಖಾಲಿಯಾಗಿದ್ದರೆ, ಕೇವಲ ಹಾಗೆ ಖಾಲಿಯಾಗಿರುವ ಕಾರಣದಿಂದ, ಇದಕ್ಕೆ ವಿರೋಧವಾದ ಯಾವ ನಿಯಮಗಳೂ ಇಲ್ಲದಿದ್ದರೆ, ಅಂತಹ ಸಂಸ್ಥೆಗಳು ತಮ್ಮ ಕಾರ್ಯವನ್ನು ಅನಿರ್ಬಾಧಿತವಾಗಿ ನಿರ್ವಹಿಸಿಕೊಂಡು ಹೋಗತಕ್ಕದ್ದು.

### ವಿಧಿ ೨೧

ಎಲ್ಲಾ ಸಮಿತಿಗಳ ಹಾಗೂ ಪದಾಧಿಕಾರಿಗಳ ಕಾರ್ಯಾವಧಿ ಎರಡು ವರ್ಷಗಳಾಗಿರುತ್ತವೆ.

## ಭಾಗ ೯
## ಚುನಾವಣಾ ತಕರಾರುಗಳು
### ವಿಧಿ ೨೨

೧) ರಾಜ್ಯ ಒಕ್ಕೂಟ ಸಮಿತಿಯು ತನ್ನ ಪ್ರಥಮ ಸರ್ವಸದಸ್ಯರ ಸಭೆಯಲ್ಲಿ ಕನಿಷ್ಠ ನಾಲ್ಕನೇ ಮೂರು ಭಾಗದ ಸದಸ್ಯರ ಬಹುಮತದ ಬಲದಿಂದ ಮೂರು ಜನರಿಗಿಂತ ಕಡಿಮೆಯಿಲ್ಲದ, ಐದು ಜನರಿಗಿಂತ ಹೆಚ್ಚು ಇಲ್ಲದ ಒಂದು ರಾಜ್ಯ ಚುನಾವಣಾ ಪಂಚಾಯತಿಯನ್ನು ನೇಮಿಸಬೇಕು.

೨) ಮೇಲೆ ಹೇಳಿದ ಹಾಗೆ ಚುನಾವಣಾ ಪಂಚಾಯತಿಯನ್ನು ನೇಮಿಸಲು ಯಾವುದಾದರೂ ರಾಜ್ಯ ಒಕ್ಕೂಟ ವಿಫಲವಾದರೆ, ಆ ರಾಜ್ಯದ ಕಾರ್ಯಕಾರಿ ಸಮಿತಿಯು ಆ ರಾಜ್ಯಕ್ಕೆ ಚುನಾವಣಾ ಪಂಚಾಯತಿಯನ್ನು ನೇಮಿಸಬೇಕು.

೩) ಪ್ರತಿ ರಾಜ್ಯ ಚುನಾವಣಾ ಪಂಚಾಯತಿಯ ಕಾರ್ಯಾವಧಿ ಸಾಮಾನ್ಯವಾಗಿ ಎರಡು ವರ್ಷಗಳಾಗಿರುತ್ತದೆ. ಆದರೆ, ಅವಧಿ ಮುಗಿದ ನಂತರವೂ ಹೊಸ ಪಂಚಾಯತಿಯನ್ನು ನೇಮಿಸುವವರೆಗೂ ಅದರ ಕಾರ್ಯಾವಧಿಯು ಮುಂದುವರಿಯುತ್ತದೆ.

೪) ಚುನಾವಣಾ ಪಂಚಾಯತಿಯ ಸದಸ್ಯನು, ಸದಸ್ಯನಾಗಿ ಮುಂದುವರಿಯುತ್ತಿರುವವರೆಗೂ, ಯಾವುದೇ ಚುನಾಯಿತ ಪದವಿಯಲ್ಲಿ ಮುಂದುವರಿಯುವ ಹಾಗಿಲ್ಲ ಮತ್ತು ಯಾವುದೇ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲುವ ಹಾಗಿಲ್ಲ.

೫) ಕೇಂದ್ರೀಯ ಕಾರ್ಯಕಾರಿ ಸಮಿತಿಯು ರಾಜ್ಯ ಚುನಾವಣಾ ಪಂಚಾಯತಿಯ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಯನ್ನು ನಡೆಸುತ್ತದೆ.

೬) ಚುನಾವಣಾ ಪಂಚಾಯತಿಗಳ ಕಾರ್ಯನೀತಿಯ ಬಗ್ಗೆ ಕೇಂದ್ರೀಯ ಕಾರ್ಯಕಾರಿ ಸಮಿತಿಯು ನಿಯಮಗಳನ್ನು ರೂಪಿಸುತ್ತದೆ. ಚುನಾವಣಾ ಪಂಚಾಯತಿಯೂ ಸಹ ತನ್ನ ಕಾರ್ಯನಿರ್ವಹಣೆಗೆ ಅಗತ್ಯವಾದ ನಿಯಮಗಳನ್ನು, ಕೇಂದ್ರೀಯ ಕಾರ್ಯಕಾರಿ ಸಮಿತಿಯ ನಿಯಮಗಳಿಗೆ ವಿರುದ್ಧವಾಗದ ರೀತಿಯಲ್ಲಿ ರೂಪಿಸಿಕೊಳ್ಳಬಹುದು.

## ವಿಧಿ ೨೩

೧) ಪ್ರತಿಯೊಂದು ರಾಜ್ಯಕ್ಕೂ ಪ್ರತ್ಯೇಕವಾದ ಚುನಾವಣಾ ಪಂಚಾಯತಿ ಇರಬೇಕು.

೨) ಯಾವುದೇ ಅಭ್ಯರ್ಥಿಯು, ತನ್ನ ಚುನಾವಣಾ ಕ್ಷೇತ್ರದ ವಿಷಯದಲ್ಲಿ, ಚುನಾವಣೆಯು ನಡೆದ ೧೫ ದಿನಗಳ ಒಳಗೆ, ಈ ದಿಸೆಯಲ್ಲಿ ಮಾಡಿರುವ ನಿಯಮಗಳಿಗೆ ಅನುಗುಣವಾಗಿ, ತನ್ನ ತಕರಾರು ಅರ್ಜಿಯನ್ನು ರಾಜ್ಯ ಚುನಾವಣಾ ಪಂಚಾಯತಿಗೆ ಸಲ್ಲಿಸಬಹುದು. ನಂತರ ಜಿಲ್ಲಾ ಚುನಾವಣಾ ಪಂಚಾಯತಿಯು ತಕರಾರು ಅರ್ಜಿಯ ಬಗ್ಗೆ ನಿರ್ಣಯವನ್ನು ತೆಗೆದುಕೊಂಡು, ಆ ನಿರ್ಣಯವನ್ನು ಸಂಬಂಧಪಟ್ಟ ಪಕ್ಷಗಳವರಿಗೆ ಆದಷ್ಟು ಶೀಘ್ರವಾಗಿ ತಿಳಿಸಬೇಕು.

೩) ಚುನಾವಣಾ ಪಂಚಾಯತಿಯು ಚುನಾವಣೆಯ ಫಲಿತಾಂಶವನ್ನು ರದ್ದು ಮಾಡುವವರೆಗೆ, ಚುನಾಯಿತನಾಗಿದ್ದ ಸದಸ್ಯನು, ತನ್ನ ಸದಸ್ಯತ್ವದಲ್ಲಿ ಮುಂದುವರಿಯುತ್ತಿರುತ್ತಾನೆ.

೪) ರಾಜ್ಯ ಚುನಾವಣಾ ಪಂಚಾಯತಿಯು ತಾನಾಗಿಯೇ, ಅಥವಾ ರಾಜ್ಯ ಒಕ್ಕೂಟ ಸಮಿತಿಯ ಗೊತ್ತುವಳಿಯ ಪ್ರಕಾರ ಅಥವಾ ಸಂಬಂಧಪಟ್ಟ ವ್ಯಕ್ತಿಯ ಅಹವಾಲಿನ ಪ್ರಕಾರ, ಯಾವುದೇ ವ್ಯಕ್ತಿಯು ಚುನಾವಣೆಗಳಿಗೆ ಸಂಬಂಧಿಸಿದ ಹಾಗೆ ಅನ್ಯಾಯವಾಗಿ ನಡೆದುಕೊಂಡಿದ್ದರೆ, ಸದಸ್ಯರ ಪಟ್ಟಿಯನ್ನು, ದಾಖಲಾತಿಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡಿದ್ದರೆ, ಸುಳ್ಳು ಆಪಾದನೆಗಳನ್ನು ತಿಳಿದೂ ದಾಖಲು ಮಾಡಿದ್ದರೆ, ಅಂತಹವನನ್ನು ಒಂದು ನಿರ್ದಿಷ್ಟ ಅವಧಿಯವರೆಗೆ ಅನರ್ಹಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

೫) ಚುನಾವಣೆಗಳಲ್ಲಿ ನಡೆದ ಅನ್ಯಾಯಗಳನ್ನು ಎಲ್ಲಿಂದಲೇ ಅವು ವರದಿಯಾಗಿದ್ದರೂ, ಸಂಬಂಧಪಟ್ಟ ಕಾರ್ಯಕಾರಿ ಸಮಿತಿಯು ವಿಚಾರಣೆ ನಡೆಸಿ, ಸೂಕ್ತ ಕಂಡ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

### ವಿಧಿ ೨೪

೧) ಪ್ರತಿವರ್ಷ ಜೂನ್ ೩೦ರ ನಂತರ ನಡೆಯುವ ತನ್ನ ಪ್ರಥಮ ಸಭೆಯಲ್ಲಿ, ರಾಜ್ಯ ಒಕ್ಕೂಟವು ಹಾಜರಿದ್ದ ಸದಸ್ಯರಲ್ಲಿ ನಾಲ್ಕನೆಯ ಮೂರು ಸದಸ್ಯರಿಗೆ ಕಡಿಮೆಯಿಲ್ಲದ ಬಹುಮತದಿಂದ ರಾಜ್ಯ ಚುನಾವಣಾ ಅಧಿಕಾರಿಯನ್ನು ನೇಮಿಸಬೇಕು.

೨) ಮೇಲೆ ಹೇಳಿದ ವಿಧಿಯ ಪ್ರಕಾರ ರಾಜ್ಯ ಒಕ್ಕೂಟವು ರಾಜ್ಯ ಚುನಾವಣಾಧಿಕಾರಿಯನ್ನು ನೇಮಿಸಲು ವಿಫಲವಾದರೆ, ಕೇಂದ್ರೀಯ ಕಾರ್ಯಕಾರಿ ಸಮಿತಿಯು ರಾಜ್ಯ ಚುನಾವಣಾಧಿಕಾರಿಯನ್ನು ನೇಮಿಸಬೇಕು.

೩) ರಾಜ್ಯ ಚುನಾವಣಾಧಿಕಾರಿಯು, ರಾಜ್ಯ ಒಕ್ಕೂಟದ ಎಲ್ಲಾ ಅಂಗ ಸಂಸ್ಥೆಗಳಿಗೂ ಚುನಾವಣೆಯನ್ನು ನಡೆಸಬೇಕು. ರಾಜ್ಯ ಚುನಾವಣಾಧಿಕಾರಿಯು ರಾಜ್ಯ ಒಕ್ಕೂಟ, ಜಿಲ್ಲಾ ಒಕ್ಕೂಟದ ಸಮಿತಿಗಳೊಡನೆ ಸಮಾಲೋಚಿಸಿ ಜಿಲ್ಲಾ ಚುನಾವಣಾಧಿಕಾರಿಗಳನ್ನು, ತಾಲ್ಲೂಕು ಚುನಾವಣಾಧಿಕಾರಿಗಳನ್ನು, ಗ್ರಾಮ ಚುನಾವಣಾಧಿಕಾರಿಗಳನ್ನು ಮತ್ತು ಇತರ ಅಧಿಕಾರಿಗಳನ್ನು, ಚುನಾವಣೆಗಳು ಸುಸೂತ್ರವಾಗಿ ನಡೆಯುವಂತೆ ಮಾಡಲು ನೇಮಿಸಬೇಕು. ರಾಜ್ಯ ಚುನಾವಣಾಧಿಕಾರಿಯು ತನಗೆ ಕೇಂದ್ರೀಯ ಕಾರ್ಯಕಾರಿ ಸಮಿತಿಯು ನೇಮಿಸಿದ ಇತರ ಕಾರ್ಯಗಳನ್ನೂ ನಿರ್ವಹಿಸಬೇಕು.

## ಭಾಗ ೧೦
## ಅಭ್ಯರ್ಥಿಗಳ ಆಯ್ಕೆ

### ವಿಧಿ ೨೫

೧) ಕೇಂದ್ರೀಯ ಕಾರ್ಯಕಾರಿ ಸಮಿತಿಯು ತನ್ನ ಅಧ್ಯಕ್ಷರನ್ನು ಹಾಗೂ ಇತರ ಐದು ಮಂದಿ ಸದಸ್ಯರನ್ನುಳ್ಳ ಒಂದು ಮಂಡಲಿಯನ್ನು ರಚಿಸಬೇಕು. ಒಕ್ಕೂಟದ ಅಧ್ಯಕ್ಷರೇ ಆ ಮಂಡಲಿಗೆ ಅಧ್ಯಕ್ಷರಾಗಿರುತ್ತಾರೆ ಮತ್ತು ಆ ಮಂಡಲಿಯು ಕೇಂದ್ರ ಹಾಗೂ ರಾಜ್ಯ ಶಾಸನಸಭೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕು ಮತ್ತು ತತ್ಸಂಬಂಧಿ ನಿಯಮಗಳನ್ನು ರೂಪಿಸಬೇಕು.

೨) ಚುನಾವಣಾ ಮಂಡಲಿಯು ಅಭ್ಯರ್ಥಿಗಳ ಹೆಸರನ್ನು ಸೂಚಿಸಲು ಒಕ್ಕೂಟದ ಸ್ಥಳೀಯ ಸಮಿತಿಗಳಿಗೆ ಆಹ್ವಾನವನ್ನು ನೀಡಬೇಕು. ಅಭ್ಯರ್ಥಿಗಳು ಪಡೆದ ಬೆಂಬಲವನ್ನು ಆಧರಿಸಿ, ಮಂಡಲಿಯು ಅಭ್ಯರ್ಥಿಗಳ ಕ್ರಮವಾದ ಪಟ್ಟಿಯನ್ನು ಸಿದ್ಧಪಡಿಸಬೇಕು.

೩) ಮಂಡಲಿಯು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಪ್ರತಿ ಅಭ್ಯರ್ಥಿಗೂ ಇರುವ ಬೆಂಬಲವನ್ನು ಗಮನದಲ್ಲಿಟ್ಟುಕೊಂಡಿರಬೇಕು. ಆದರೆ ಅತಿ ಹೆಚ್ಚು ಬೆಂಬಲವಿರುವ ಅಭ್ಯರ್ಥಿಯನ್ನೇ ಆಯ್ಕೆಮಾಡಬೇಕೆಂಬುದಕ್ಕೆ ಕಟ್ಟುಬೀಳಬೇಕಾಗಿಲ್ಲ.

೪) ಕೇಂದ್ರ ಚುನಾವಣಾ ಮಂಡಲಿಯು ಪ್ರತಿ ರಾಜ್ಯಕ್ಕೂ ಒಂದು ಚುನಾವಣಾ ಸಮಿತಿಯನ್ನು ನೇಮಿಸಬೇಕು. ಈ ಸಮಿತಿಯು ಅಭ್ಯರ್ಥಿಗಳ ಆಯ್ಕೆಯೂ ಸೇರಿದಂತೆ, ಸ್ಥಳೀಯ ಸಂಸ್ಥೆಗಳ ಚುನಾವಣಾ ವಿಷಯಗಳನ್ನು ನಿರ್ವಹಿಸುತ್ತದೆ.

೫) ರಾಜ್ಯ ಚುನಾವಣಾ ಸಮಿತಿಯು ಕೇಂದ್ರ ಚುನಾವಣಾ ಮಂಡಲಿಗೆ ರಾಜ್ಯ ಹಾಗೂ ಕೇಂದ್ರ ಶಾಸನಸಭೆಗಳ ಅಭ್ಯರ್ಥಿಗಳನ್ನು ಶಿಫಾರಸ್ಸು ಮಾಡುತ್ತದೆ.

## ಭಾಗ ೧೧
## ಇತರೆ

### ವಿಧಿ ೨೬

೧) ಒಕ್ಕೂಟದ ಬಾವುಟವು ತ್ರಿಕೋನಾಕೃತಿಯ ನೀಲಿ ಬಣ್ಣದ ಬಟ್ಟೆಯ ಮೇಲೆ ನಕ್ಷತ್ರಗಳ ಗುರುತನ್ನು ಹೊಂದಿರುತ್ತದೆ

೨) ಏಕ ಕಾಲದಲ್ಲಿ ಯಾವ ಒಬ್ಬ ವ್ಯಕ್ತಿಯೂ ಒಕ್ಕೂಟದ ಎರಡು ಸಂಸ್ಥೆಗಳಿಗೆ ಸದಸ್ಯನಾಗಿರುವ ಹಾಗಿಲ್ಲ.

೩) ಒಕ್ಕೂಟದ ಸಮಿತಿಯು ತನ್ನ ಅಧಿಕಾರವನ್ನು ತನ್ನ ಅಧೀನದಲ್ಲಿರುವ ಯಾವುದಾದರೂ ಸಮಿತಿಗೆ ಅಥವಾ ಯಾವುದೇ ವ್ಯಕ್ತಿಗೆ ವಹಿಸಿಕೊಡಬಹುದು.

೪) ಒಕ್ಕೂಟವು ತನ್ನ ಅಗತ್ಯಗಳಿಗೆ ಇತ್ತೀಚಿನ ಜನಗಣತಿಯನ್ನು ಆಧಾರವನ್ನಾಗಿಟ್ಟುಕೊಳ್ಳಬಹುದು.

೫) ಭಿನ್ನ ರಾಶಿಯಲ್ಲಿರುವ ಸಂಖ್ಯೆಗಳು ಅರ್ಧ ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಒಂದು (೧) ಎಂದೂ, ಅರ್ಧಕ್ಕಿಂತ ಕಡಿಮೆಯಿದ್ದರೆ ಸೊನ್ನೆ (೦) ಎಂದೂ ಪರಿಗಣಿಸಬೇಕು.

೬) ಈ ಸಂವಿಧಾನದಲ್ಲಿ ಎಲ್ಲಿಯಾದರೂ 'ಮತ' ಎಂಬ ಪದವು ಪ್ರಯೋಗಿಸಲ್ಪಟ್ಟಾಗ ಅದರ ಅರ್ಥ 'ಅರ್ಹವಾದ ಮತ' ಎಂದಾಗುತ್ತದೆ.

೭) ಈ ಸಂವಿಧಾನದ ವಿಧಿಗಳು, ವಿಷಯಗಳು, ಅರ್ಥವಿವರಣೆಗಳು ಅಥವಾ ಇಲ್ಲಿ ಸೇರಿಸಿರುವ ನಿಯಮಗಳು – ಇವುಗಳ ಬಗ್ಗೆ ಯಾವುದೇ ಪ್ರಶ್ನೆ ಅಥವಾ ತಕರಾರುಗಳು ಯಾವುದೇ ಇಬ್ಬರು ಸದಸ್ಯರ ನಡುವೆ ಅಥವಾ ಎರಡು ಸಮಿತಿಯ ನಡುವೆ ಎದುರಾದಲ್ಲಿ ಸಂವಿಧಾನದಲ್ಲಿ ಹೇಳಿರುವ ಪ್ರಾಧಿಕಾರವು ಅಥವಾ ಪ್ರಾಧಿಕಾರಗಳು ಆ ಸಮಸ್ಯೆಗಳನ್ನು ಪರಿಶೀಲಿಸುತ್ತವೆ. ಇಂತಹ ಪ್ರಾಧಿಕಾರವನ್ನು ಸಂವಿಧಾನದಲ್ಲಿ ಹೆಸರಿಸಿರದಿದ್ದ ಪಕ್ಷದಲ್ಲಿ ಕೇಂದ್ರೀಯ ಕಾರ್ಯಕಾರಿ ಸಮಿತಿಯು ಆ ಕಾರ್ಯವನ್ನು ನೆರವೇರಿಸುತ್ತದೆ. ಈ ಪ್ರಾಧಿಕಾರವು/ಸಮಿತಿಯು ಕೈಗೊಳ್ಳುವ ನಿರ್ಣಯವು ಅಂತಿಮವಾಗಿದ್ದು, ಅದಕ್ಕೆ ಪರಿಶಿಷ್ಟ ಜಾತಿಗಳ ಒಕ್ಕೂಟದ ಎಲ್ಲಾ ಸದಸ್ಯರೂ, ಸಮಿತಿಗಳೂ ಬದ್ಧವಾಗಿರಬೇಕು. ಆ ನಿರ್ಣಯವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಹಾಗಿಲ್ಲ.

## ಭಾಗ ೧೨
## ಸಂವಿಧಾನಕ್ಕೆ ತಿದ್ದುಪಡಿ

### ವಿಧಿ ೨೭

೧) ಒಕ್ಕೂಟದ ಅಖಿಲ ಭಾರತ ಸಮಿತಿಯ ಮೂರನೇ ಎರಡರಷ್ಟು ಸದಸ್ಯರ ಮತದಿಂದ ಈ ಸಂವಿಧಾನಕ್ಕೆ ತಿದ್ದುಪಡಿ ಮಾಡಬಹುದು, ಬದಲಾಯಿಸಬಹುದು ಅಥವಾ ಹೆಚ್ಚುವರಿಯಾಗಿ ಏನನ್ನಾದರೂ ಸೇರಿಸಬಹುದು. ಅಂತಹ ಬದಲಾವಣೆಗಳನ್ನು ರಾಜ್ಯ ಒಕ್ಕೂಟಗಳು ಬಹುಮತದಿಂದ ಒಪ್ಪಬೇಕು.

೨) ಬದಲಾವಣೆಯನ್ನು ತರುವಂತಹ ಅಥವಾ ಹೆಚ್ಚುವರಿಯಾಗಿ ಸೇರಿಸಬಹುದಾದಂತಹ

ಅಂಶಗಳನ್ನು ಒಳಗೊಂಡಿರುವ ಸೂಚನಾಪತ್ರವನ್ನು ಪ್ರತಿ ರಾಜ್ಯದ ರಾಜ್ಯ ಒಕ್ಕೂಟ ಸಮಿತಿಗಳ ಅಧ್ಯಕ್ಷರಿಗೆ ನೀಡಿ ಅವರ ಒಪ್ಪಿಗೆಯನ್ನು ಪಡೆಯತಕ್ಕದ್ದು.

೩) ಸಮಿತಿಗಳು ಬಹುಮತದಿಂದ ನಿರ್ಣಯಗಳನ್ನು ಅಂಗೀಕರಿಸಬೇಕು.

೪) ರಾಜ್ಯ ಸಮಿತಿಗಳಿಂದ ನಿರ್ಣಯಗಳನ್ನು ಪಡೆದ ನಂತರ ಅಧ್ಯಕ್ಷರು ಸಂಬಂಧಪಟ್ಟ ತಿದ್ದುಪಡಿಗಳು ಸ್ವೀಕರಿಸಲ್ಪಟ್ಟಿವೆಯೇ, ಅಥವಾ ಇಲ್ಲವೇ ಎಂಬುದನ್ನು ಪ್ರಕಟಿಸಬೇಕು.

## ಭಾಗ ೧೩
## ಶಿಸ್ತು ಸಂಹಿತೆ

### ವಿಧಿ ೨೮

೧) ಒಕ್ಕೂಟದ ಯಾವುದಾದರೂ ಸದಸ್ಯರು ಈ ಮುಂದಿನ ವರ್ತನೆಗಳಲ್ಲಿ ಪ್ರವೃತ್ತರಾಗಿದ್ದರೆ, ಅಂತಹವರನ್ನು ಶಿಸ್ತನ್ನು ಉಲ್ಲಂಘಿಸಿದವರು ಎಂದು ಪರಿಗಣಿಸಲಾಗುವುದು.

ಅ) ಒಕ್ಕೂಟದ ಘೋಷಿತ ನೀತಿಗೆ ವಿರುದ್ಧವಾಗಿ ವರ್ತಿಸುವುದು,

ಆ) ಒಕ್ಕೂಟದ ನೀತಿಯನ್ನು ಮುಕ್ತವಾಗಿ ಮತ್ತು ಬಹಿರಂಗವಾಗಿ ಟೀಕಿಸುವುದು,

ಇ) ಒಕ್ಕೂಟದ ಬೇರೆಯ ಸದಸ್ಯರನ್ನು ಮುಕ್ತವಾಗಿ ಮತ್ತು ಬಹಿರಂಗವಾಗಿ ಟೀಕಿಸುವುದು,

ಈ) ಒಕ್ಕೂಟದ ಚುನಾಯಿತ ನಾಯಕರಿಗೆ ಸವಾಲನ್ನು ಹಾಕಿ ಬೇರೆಯವರಿಗೆ ಬೆಂಬಲವನ್ನು ನೀಡುವ ಸಲುವಾಗಿ ಸದಸ್ಯರಲ್ಲಿ ಗುಂಪುಗಾರಿಕೆಯನ್ನು ನಡೆಸುವುದು,

ಉ) ಇತರ ಯಾವುದೇ ಸದಸ್ಯರ ವಿರುದ್ಧ ಕೆಟ್ಟ ಭಾವನೆಗಳು ಮೂಡುವಂತೆ ಮಾಡುವುದು ಮತ್ತು ಅವರ ಹೆಸರನ್ನು ಕೆಡಿಸುವುದು,

ಊ) ಒಕ್ಕೂಟದ ಅಥವಾ ಅದರ ಅಂಗಸಂಸ್ಥೆಗಳ ಕಾರ್ಯಾಚರಣೆಗೆ ಅಡ್ಡಿಯನ್ನುಂಟುಮಾಡುವುದು,

ಋ) ಒಕ್ಕೂಟದ ಹಣವನ್ನು ದುರುಪಯೋಗಪಡಿಸಿಕೊಳ್ಳುವುದು,

ೠ) ಒಕ್ಕೂಟವು ಮಾನ್ಯಮಾಡಿರದ ಪಕ್ಷ ಅಥವಾ ಗುಂಪುಗಳ ಸಂಗಡ ಸೇರಿಕೊಳ್ಳುವುದು,

ಎ) ಒಕ್ಕೂಟದ ಪದಾಧಿಕಾರಿ ಸ್ಥಾನದಲ್ಲಿದ್ದು ಆ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವುದು ಅಥವಾ ನಿಗದಿತ ಕರ್ತವ್ಯವನ್ನು ಅಲಕ್ಷಿಸಿ ತನ್ಮೂಲಕ ಒಕ್ಕೂಟದ ಕಾರ್ಯ ನಿರ್ವಹಣೆಯಲ್ಲಿ ವೈಫಲ್ಯಕ್ಕೆ ಕಾರಣವಾಗುವುದು,

ಏ) ಒಕ್ಕೂಟದ ಉದ್ದೇಶ, ಧ್ಯೇಯ ಅಥವಾ ಅಧಿಕಾರದ ವ್ಯಾಪ್ತಿಯ ಹೊರಗೆ ಕಾರ್ಯನಿರತನಾಗುವುದು,

ಐ) ಒಕ್ಕೂಟವು ಯಾವುದಾದರೂ ಚುನಾವಣಾ ಕ್ಷೇತ್ರಕ್ಕೆಂದು ಆಯ್ದಿರುವ ಅಭ್ಯರ್ಥಿಯ ವಿರುದ್ಧ ಚಟುವಟಿಕೆಗಳನ್ನು ನಡೆಸುವುದು.

೨) ಅಶಿಸ್ತಿನ ಆರೋಪಕ್ಕೆ ಗುರಿಯಾಗಿರುವ ಯಾವುದೇ ಸದಸ್ಯನು ಸಂಬಂಧಪಟ್ಟ ರಾಜ್ಯ ಒಕ್ಕೂಟದ ಅಧ್ಯಕ್ಷರು ವಿಧಿಸುವ ಶಿಕ್ಷೆಗೆ ಬದ್ಧನಾಗಿರಬೇಕು. ಆದರೆ ಅಂತಹ ಸದಸ್ಯನು ಕೇಂದ್ರೀಯ ಕಾರ್ಯಕಾರಿ ಸಮಿತಿಗೆ ತನ್ನ ಮೇಲ್ಮನವಿಯನ್ನು ಸಲ್ಲಿಸಬಹುದು. ಕೇಂದ್ರೀಯ ಕಾರ್ಯಕಾರಿ

ಸಮಿತಿಯ ತೀರ್ಮಾನವು ಅಂತಿಮವಾಗಿರುತ್ತದೆ.

೩) ಅಶಿಸ್ತಿನ ವರ್ತನೆಗೆ ವಿಧಿಸುವ ಶಿಕ್ಷೆಗಳು ಹೀಗಿರಬಹುದು –

ಅ) ಒಕ್ಕೂಟದಿಂದ ಉಚ್ಚಾಟನೆ. ಹೀಗೆ ವಿಧಿಸಿದ ಉಚ್ಚಾಟನೆಯು ಶಾಶ್ವತವಾಗಿರಬಹುದು,

ಆ) ಒಕ್ಕೂಟದಿಂದ ಒಂದು ನಿರ್ದಿಷ್ಟ ಅವಧಿಯವರೆಗೆ ಉಚ್ಚಾಟಿಸುವುದು,

ಇ) ಸದ್ಯದ ಅಧಿಕಾರದಿಂದ ಕಿತ್ತುಹಾಕುವುದು,

ಈ) ಎಲ್ಲಾ ಅಧಿಕಾರದಿಂದಲೂ ಅನರ್ಹಗೊಳಿಸುವುದು.

## ಭಾಗ ೧೪

## ಪರಿವರ್ತನಾ ಸಮಯದಲ್ಲಿನ ವಿಧಿಗಳು

### ವಿಧಿ ೨೯

ಸಂವಿಧಾನದ ಯಾವ ವಿಧಿಗಳನ್ನು ತಕ್ಷಣವೇ ಜಾರಿಗೊಳಿಸಬೇಕೆಂದು ನಿರ್ಧರಿಸುವ ಅಧಿಕಾರವನ್ನು ಅಧ್ಯಕ್ಷರು ಹೊಂದಿರುತ್ತಾರೆ.

ವಿವರಣೆ: ಈ ಉದ್ದೇಶಕ್ಕಾಗಿ 'ಅಧ್ಯಕ್ಷ'ರು ಎಂದರೆ ಒಕ್ಕೂಟದ ಪ್ರಕೃತ ಅಧ್ಯಕ್ಷರಾಗಿರುವವರು ಎಂದು ತಿಳಿಯಬೇಕು.

### ವಿಧಿ ೩೦

ಪ್ರಕೃತ ಇರುವ ವ್ಯವಸ್ಥೆಯಿಂದ ಈ ಸಂವಿಧಾನದ ಪ್ರಕಾರ ಇರಬೇಕಾದ ವ್ಯವಸ್ಥೆಗೆ ಬದಲಾಗುವ ಸಮಯದಲ್ಲಿ ಎದುರಾಗಬಹುದಾದ ತೊಂದರೆಗಳನ್ನು ನಿವಾರಿಸಲು, ಸಂವಿಧಾನದ ಕೆಲವು ವಿಧಿಗಳನ್ನು ಅಗತ್ಯಕ್ಕೆ ತಕ್ಕಂತೆ ತಾತ್ಕಾಲಿಕವಾಗಿ ಮಾರ್ಪಡಿಸಲು, ಕೈಬಿಡಲು, ಅಥವಾ ಅದಕ್ಕೆ ಹೆಚ್ಚುವರಿಯಾಗಿ ಏನನ್ನಾದರೂ ಸೇರಿಸಲು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ. ಅಧ್ಯಕ್ಷರಿಗೆ ಇರುವ ಅಧಿಕಾರದ ಪ್ರಕಾರ ಅವರು ಯಾವುದೇ ಪದಾಧಿಕಾರಿಯನ್ನು ಅವರ ಸ್ಥಾನದಿಂದ ತೆಗೆಯಬಹುದು ಮತ್ತು ಆ ಸ್ಥಾನಕ್ಕೆ ಬೇರೆಯವರನ್ನು ನೇಮಕಮಾಡಬಹುದು.

### ವಿಧಿ ೩೧

೧೦ನೆಯ ಭಾಗದಲ್ಲಿರುವ ವಿಧಿಗಳಿಗೆ ಚ್ಯುತಿಬಾರದಂತೆ, ಅಧ್ಯಕ್ಷರು ಅಮಾನತ್ತಿನಲ್ಲಿರುವ ಅಥವಾ ಸೂಕ್ತವಾಗಿ ಕಾರ್ಯ ನಿರ್ವಹಿಸದ ರಾಜ್ಯ ಒಕ್ಕೂಟವನ್ನು ಪುನಃ ಸಂಘಟಿಸಬಹುದು.

* * * * *

# ೧೦
# ಭಾರತೀಯ ಬೌದ್ಧ ಸಂಘ

ಭಾರತೀಯ ಬೌದ್ಧ ಸಂಘವು ಡಾ. ಬಿ.ಆರ್. ಅಂಬೇಡ್ಕರ್ ಅವರಿಂದ, ಕಂಪನಿ ನೋಂದಣಿ ಅಧಿಕಾರಿಗಳ ಬಳಿ ೧೯೫೫ರ ಮೇ ೪ರಂದು ನೊಂದಾಯಿಸಲ್ಪಟ್ಟಿತು.

"೧೯೫೫ರ ಮೇ ೮ರಂದು ಬಾಂಬೆಯ ನಾರೆ ಪಾರ್ಕಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಅವರು ಬೌದ್ಧಮತದ ಪ್ರಸಾರಮಾಡುವ ಉದ್ದೇಶದಿಂದ ಈ ಸಂಘವನ್ನು ಪ್ರಾರಂಭಿಸಿರುವ ಬಗ್ಗೆ ಔಪಚಾರಿಕವಾಗಿ ಘೋಷಿಸಿದರು. ಸಂಘದ ಸಂವಿಧಾನವು ಈ ರೀತಿಯಾಗಿದ್ದಿತು. – ಸಂಪಾದಕರು

**ಭಾರತೀಯ ಬೌದ್ಧ ಸಂಘದ ಸಂವಿಧಾನ**
**(ಡಾ. ಬಿ.ಆರ್. ಅಂಬೇಡ್ಕರ್ ಅವರು ನೊಂದಾಯಿಸಿದಂತೆ)**
**೧೯೫೫ರ ಮೇ ೪ರಂದು ನೋಂದಾಯಿತವಾಗಿದೆ**

**ಸಹಿ/– ಕಂಪನಿ ರಿಜಿಸ್ಟ್ರಾರ್, ಮುಂಬಯಿ**
**ಸಂಸ್ಥಾಪನಾ ವಿವರಣಪತ್ರ**

೧. ಸಂಘದ ಹೆಸರು:
ಸಂಘದ ಹೆಸರು 'ಭಾರತೀಯ ಬೌದ್ಧ ಸಂಘ' ಎಂದಿರುತ್ತದೆ.

೨. ಧ್ಯೇಯ ಮತ್ತು ಉದ್ದೇಶಗಳು:
ಸಂಘದ ಧ್ಯೇಯಗಳು ಹೀಗಿರುತ್ತವೆ:
ಅ) ಬೌದ್ಧ ಧರ್ಮದ ಪ್ರಸಾರಕ್ಕೆ ಸಹಾಯಮಾಡುವುದು,
ಆ) ಬೌದ್ಧರ ಪೂಜೆಗಳಿಗಾಗಿ ಗುಡಿಗಳನ್ನು ನಿರ್ಮಿಸುವುದು,
ಇ) ಧಾರ್ಮಿಕ ಹಾಗೂ ವೈಜ್ಞಾನಿಕ ವಿಷಯಗಳ ಬೋಧನೆಗಾಗಿ ಶಾಲೆ, ಕಾಲೇಜುಗಳನ್ನು ಸ್ಥಾಪಿಸುವುದು,
ಈ) ಅನಾಥಾಶ್ರಮ, ಆಸ್ಪತ್ರೆ ಮತ್ತು ಪರಿಹಾರ ಕೇಂದ್ರಗಳನ್ನು ಸ್ಥಾಪಿಸುವುದು,
ಉ) ಬೌದ್ಧಧರ್ಮವನ್ನು ಪ್ರಚಾರಮಾಡುವ ಉದ್ದೇಶಕ್ಕಾಗಿ ಬೌದ್ಧಧರ್ಮೋಪದೇಶಗಳನ್ನು ವ್ಯವಸ್ಥೆಗೊಳಿಸುವುದು,
ಊ) ಎಲ್ಲಾ ಧರ್ಮಗಳ ತೌಲನಿಕ ಅಧ್ಯಯನಗಳನ್ನು ಪ್ರೋತ್ಸಾಹಿಸುವುದು,
ಋ) ಬೌದ್ಧಧರ್ಮದ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ಜನಸಾಮಾನ್ಯರಿಗೆ ನೀಡುವ ಸಲುವಾಗಿ ಬೌದ್ಧಸಾಹಿತ್ಯ, ಪುಸ್ತಿಕೆಗಳು ಮತ್ತು ಕರಪತ್ರಗಳನ್ನು ಪ್ರಕಟಿಸುವುದು,
ೠ) ಅಗತ್ಯವಿದ್ದಲ್ಲಿ, ಹೊಸ ಬೌದ್ಧ ಪುರೋಹಿತರ ತಂಡವನ್ನು ತಯಾರುಮಾಡುವುದು,
ಎ) ಪ್ರಕಟಣಾಕಾರ್ಯಕ್ಕೆ ಅನುವಾಗಲು ಮುದ್ರಣಶಾಲೆ/ಶಾಲೆಗಳನ್ನು ತೆರೆಯುವುದು,

ಏ) ಸಮಾನ ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಭ್ರಾತೃಭಾವವನ್ನು ಬೆಳೆಸಲು, ಭಾರತದ ಬೌದ್ಧರ ಸಭೆ, ಸಮಾರಂಭಗಳನ್ನು ನಡೆಸುವುದು.

೩) ಈ ಸಂಘದ ಕಾರ್ಯ ಚಟುವಟಿಕೆಗಳನ್ನು ವ್ಯವಸ್ಥೆಮಾಡಲು ನಿಯಮಿತವಾಗಿರುವ ಅಧ್ಯಕ್ಷರ ಹೆಸರು, ವಿಳಾಸ ಮತ್ತು ವೃತ್ತಿಗಳನ್ನು ಈ ಕೆಳಗೆ ಕೊಡಲಾಗಿದೆ –

| **ಹೆಸರು** | **ವಿಳಾಸ** | **ವೃತ್ತಿ** |
|---|---|---|
| ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ | ೨೬, ಅಲಿಪುರ್ ರಸ್ತೆ, ಸಿವಿಲ್ ಲೇನ್, ಡೆಲ್ಲಿ | ಬಾರ್–ಅಟ್–ಲಾ |

ಸಂಘದ ಸದಸ್ಯರ ಹೆಸರು, ವಿಳಾಸ ಮತ್ತು ವೃತ್ತಿಗಳನ್ನು ಈ ಕೆಳಗೆ ಕೊಡಲಾಗಿದೆ

| **ಹೆಸರು** | **ವಿಳಾಸ** | **ವೃತ್ತಿ** |
|---|---|---|
| ಸಹಿ–ಭೀಮರಾವ್ ರಾಮ್‌ಜಿ ಅಂಬೇಡ್ಕರ್ | ೨೬, ಅಲಿಪುರ್ ರಸ್ತೆ, ಸಿವಿಲ್ ಲೇನ್, ಡೆಲ್ಲಿ | ಬ್ಯಾರಿಸ್ಟರ್–ಅಟ್–ಲಾ |
| " ಮಾಧವ ಜಿ ಮಾಲ್ವಂಕರ್ | ೬೮, ಹ್ಯೂಸ್ ರಸ್ತೆ, ಬಾಂಬೆ ೭ | ವೈದ್ಯಕೀಯ ಸಲಹೆಗಾರರು |
| " ಸಿ.ಎಸ್. ಪಿಳ್ಳೈ | ಮೆರ್ವಾನ್ ಕಟ್ಟಡ (೨ನೆಯ ಅಂತಸ್ತು) ಸರ್ ಮೆಹ್ತಾ ರಸ್ತೆ, ಬಾಂಬೆ ೧ | ವಾಸ್ತುಶಿಲ್ಪಿ |
| " ಬಾಲಚಂದರ್ ಕೆ ಕಬೀರ್ | ೫೯, ಪೋರ್ಚುಗೀಸ್ ಚರ್ಚ್ ರಸ್ತೆ ದಾದರ್, ಬಾಂಬೆ ೨೮ | ಸೇವೆ |
| " ಭಗವಂತ್ ಸಯ್ಯಾಜಿ ಗಾಯಕ್‌ವಾಡ್ | ಪ್ಲಾಟ್ ಸಂ. ೧೦. ರಸ್ತೆ ಸಂ. ೧೯, ಖರ್, ಬಾಂಬೆ ೨೧ | ಸೇವೆ |
| " ಎಸ್.ಡಿ. ಗಾಯಕ್ ವಾಡ್ | ಸಿದ್ಧಾರ್ಥ ಕಾಲೇಜು, ಆನಂದ ಭವನ, ಡಾ. ಡಿ. ನವರೋಜಿ ರಸ್ತೆ, ಬಾಂಬೆ ೧ | ಸೇವೆ |
| " ಕಾಶೀರಾಂ ವಿಶ್ರಮ್ ಸವಾಡ್ಕರ್ | ಬಿ.ಡಿ.ಡಿ.ಚಾಲ್ – ೧೫, 'ಬಿ' ರೂಮ್ ಸಂ. ೩೨ ನಾಯ್ಗಮ್, ಬಾಂಬೆ ೧೪ | ಸೇವೆ |

## ಭಾರತೀಯ ಬೌದ್ಧಸಂಘ

ಸಂಘದ ಸಂವಿಧಾನದ ನಿಯಮಗಳು ಮತ್ತು ನಿಬಂಧನೆಗಳು :

೧) ಸಂಘದ ಹೆಸರು 'ಭಾರತೀಯ ಬೌದ್ಧ ಸಂಘ' ಎಂದಿರಬೇಕು,

೨) ಸಂಘದ ನೋಂದಾಯಿತ ಕಚೇರಿಯು ಬಾಂಬೆಯಲ್ಲಿರಬೇಕು,

೩) ಸಂಘದ ಧ್ಯೇಯಗಳು ಹೀಗಿರಬೇಕು –

ಅ) ಬೌದ್ಧಧರ್ಮದ ಪ್ರಚಾರ ಮತ್ತು ಪ್ರಸಾರ ಮಾಡುವುದು,

ಆ) ಪೂಜೆ ಮಾಡುವುದರ ಸಲುವಾಗಿ ಗುಡಿಗಳನ್ನು ನಿರ್ಮಿಸುವುದು,

ಇ) ಧಾರ್ಮಿಕ ಮತ್ತು ವೈಜ್ಞಾನಿಕ ವಿಷಯಗಳ ಬೋಧನೆಗಾಗಿ ಶಾಲೆ, ಕಾಲೇಜುಗಳನ್ನು ಸ್ಥಾಪಿಸುವುದು,

ಈ) ಅನಾಥಾಶ್ರಮ, ಆಸ್ಪತ್ರೆ ಮತ್ತು ಪರಿಹಾರ ಕೇಂದ್ರಗಳನ್ನು ಸ್ಥಾಪಿಸುವುದು,

ಉ) ಬೌದ್ಧಧರ್ಮವನ್ನು ಪ್ರಚಾರ ಮಾಡಲು ಕಾರ್ಯಕರ್ತರನ್ನು ತಯಾರು ಮಾಡಲು ಬೌದ್ಧಧರ್ಮದಲ್ಲಿ ವೃತ್ತಿನಿರತ ಶಿಕ್ಷಣವನ್ನು ನೀಡುವ ಶಾಲೆಗಳನ್ನು ಪ್ರಾರಂಭಿಸುವುದು,

ಊ) ಎಲ್ಲಾ ಧರ್ಮಗಳ ತೌಲನಿಕ ಅಧ್ಯಯನವನ್ನು ಪ್ರೋತ್ಸಾಹಿಸುವುದು,

ಋ) ಬೌದ್ಧಧರ್ಮದ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ಜನಸಾಮಾನ್ಯರಿಗೆ ನೀಡುವ ಸಲುವಾಗಿ ಬೌದ್ಧ ಸಾಹಿತ್ಯ, ಪುಸ್ತಿಕೆಗಳು ಮತ್ತು ಕರಪತ್ರಗಳನ್ನು ಪ್ರಕಟಿಸುವುದು,

ೠ) ಅಗತ್ಯವಿದ್ದಲ್ಲಿ, ಹೊಸ ಬೌದ್ಧ ಪುರೋಹಿತರ ತಂಡವನ್ನು ತಯಾರುಮಾಡುವುದು,

ಎ) ಪ್ರಕಟಣಾಕಾರ್ಯಕ್ಕೆ ಅನುವಾಗಲು ಮುದ್ರಣಶಾಲೆ/ಶಾಲೆಗಳನ್ನು ತೆರೆಯುವುದು,

ಏ) ಸಮಾನ ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಭ್ರಾತೃಭಾವವನ್ನು ಬೆಳೆಸಲು, ಭಾರತದ ಬೌದ್ಧರ ಸಭೆ, ಸಮಾರಂಭಗಳನ್ನು ನಡೆಸುವುದು.

೪) ಸಂಘದ ಅಧಿಕಾರಗಳು ಹೀಗಿವೆ –

ಅ) ಸಂಘಕ್ಕಾಗಿ ಚಂದಾಗಳನ್ನು ಮತ್ತು ಧನಸಹಾಯವನ್ನು ಪಡೆಯುವುದು,

ಆ) ಪುರೋಹಿತರನ್ನು ಸಲಹುವುದು,

ಇ) ಸಂಘದ ಉದ್ದೇಶಗಳಿಗಾಗಿ, ಅಗತ್ಯವಿದ್ದರೆ, ಸಂಘದ ಆಸ್ತಿಗಳನ್ನು ಮಾರುವುದು ಅಥವಾ ಅಡಮಾನವಿಡುವುದು,

ಈ) ಆಸ್ತಿ ಹೊಂದಿರುವುದು ಮತ್ತು ತನ್ನ ಅಧೀನದಲ್ಲಿಟ್ಟುಕೊಳ್ಳುವುದು,

ಉ) ಸಂಘಕ್ಕಾಗಿ ಆಸ್ತಿಯನ್ನು ಖರೀದಿಸುವುದು, ಭೋಗ್ಯಕ್ಕೆ ತೆಗೆದುಕೊಳ್ಳುವುದು, ಹಾಗೂ, ಕಾಲಕಾಲಕ್ಕೆ ನಿರ್ಣಯಿಸಿದಂತೆ, ಸಂಘದ ಹಣವನ್ನು ಹೂಡುವುದು ಅಥವಾ ಇತರ ಬಗೆಯಲ್ಲಿ ವಿತರಣೆಮಾಡುವುದು,

ಊ) ಸಂಘದ ಉದ್ದೇಶಕ್ಕಾಗಿ ಮನೆಗಳನ್ನು, ಕಟ್ಟಡಗಳನ್ನು ಕಟ್ಟುವುದು, ಸುಸ್ಥಿತಿಯಲ್ಲಿಟ್ಟುಕೊಳ್ಳುವುದು, ದುರಸ್ತುಮಾಡಿಸುವುದು, ಬದಲಾವಣೆಗಳನ್ನು ಮಾಡುವುದು, ಪುನರ್ನಿರ್ಮಾಣಮಾಡುವುದು,

ಋ) ಸಂಘದ ಯಾವುದೇ ಆಸ್ತಿಯನ್ನು ಮಾರುವುದು, ವಿಲೇವಾರಿ ಮಾಡುವುದು, ಉತ್ತಮಗೊಳಿಸುವುದು, ಅಭಿವೃದ್ಧಿಗೊಳಿಸುವುದು, ಭೋಗ್ಯಕ್ಕೆ ತೆಗೆದುಕೊಳ್ಳುವುದು, ಇನ್ನಾವುದೇ ರೀತಿಯಲ್ಲಾದರೂ ಪರಭಾರೆಮಾಡುವುದು,

ೠ) ಸಂಘದ ಧ್ಯೇಯೋದ್ದೇಶಗಳ ಸಾಧನೆಗಾಗಿ ತಾನು ನಡೆಸುತ್ತಿರುವ ಯಾವುದೇ ಸಂಸ್ಥೆಯನ್ನು, ಅಂಗಸಂಸ್ಥೆಯನ್ನು ಮತ್ತೊಂದರೊಡನೆ ಏಕೀಭವಿಸುವುದು, ಸಹಯೋಗವನ್ನು ಮಾಡುವುದು,

ಎ) ಸಂಘದ ಧ್ಯೇಯೋದ್ದೇಶಗಳನ್ನು ಸಾಧಿಸುವ ಸಲುವಾಗಿ ಆಧಾರವನ್ನು ನೀಡಿ ಅಥವಾ ಆಧಾರವಿಲ್ಲದೆ ಧನಸಂಗ್ರಹಣೆ ಮಾಡುವುದು,

ಏ) ಮೇಲೆ ಹೇಳಿದ ಕಾರ್ಯಗಳನ್ನು ನೆರವೇರಿಸಲು ಅಗತ್ಯವಾದ ಯಾವುದೇ ನ್ಯಾಯಸಮ್ಮತ ಕಾರ್ಯಗಳನ್ನು ಮಾಡುವುದು,

೫) ಸಂಘದ ಸದಸ್ಯತ್ವ:

ಸಂಘದ ಸದಸ್ಯತ್ವ ಕೆಳಕಂಡವರ್ಗಗಳನ್ನೊಳಗೊಂಡಿರಬೇಕು

ಅ) ಸದಸ್ಯರು,

ಆ) ಸಹಸದಸ್ಯರು.

(೧) ಸದಸ್ಯತ್ವದ ನಿಬಂಧನೆಗಳು –

ಸಂಘವು ವಿಧಿಸಿರುವ ರೀತಿಯಲ್ಲಿ ಬೌದ್ಧಧರ್ಮದ ದೀಕ್ಷೆಯನ್ನು ಪಡೆದು ವಾರ್ಷಿಕ ಚಂದಾವನ್ನು ಕಟ್ಟಿದ ಯಾರೇ ಆದರೂ ಸಂಘದ ಸದಸ್ಯರಾಗಲು ಅರ್ಹರಾಗಿರುತ್ತಾರೆ.

(೨) ಸಹಸದಸ್ಯತ್ವದ ನಿಬಂಧನೆಗಳು –

ಬೌದ್ಧಧರ್ಮಕ್ಕೆ ವಿರೋಧವನ್ನು ವ್ಯಕ್ತಪಡಿಸದ, ಸಂಘದ ಧ್ಯೇಯೋದ್ದೇಶಗಳ ಬಗ್ಗೆ ಅನುಕಂಪವಿರುವ ಯಾರೇ ಆದರೂ ವಾರ್ಷಿಕ ಚಂದಾವನ್ನು ನೀಡುವ ಮೂಲಕ ಸಂಘದ ಸಹಸದಸ್ಯರಾಗಬಹುದು.

(೩) ಸದಸ್ಯತ್ವದ ಮಿತಿ –

ಯಾವುದೇ ಸದಸ್ಯನು, ಈ ಮೊದಲೇ ಧಮ್ಮದೀಕ್ಷೆಯನ್ನು ಪಡೆದಿದ್ದಾಗ್ಯೂ, ಅಧ್ಯಕ್ಷರು ತೀರ್ಮಾನಿಸಿದರೆ, ಹಾಗೆ ತೀರ್ಮಾನಿಸಿದ ಅವಧಿಪೂರ್ತಿ ಪ್ರಾಥಮಿಕ ಅಭ್ಯಾಸಿಯಾಗಿಯೇ ಇರಬೇಕು.

(೪) ಪ್ರಾಥಮಿಕ ಅಭ್ಯಾಸಿಯ ಹಂತದಲ್ಲಿರುವವರು ಮತ್ತು ಸಹಸದಸ್ಯರು ಸಲಹಾ ಸಮಿತಿಯ ಮತ್ತು ಮಹಾ ಸಮಿತಿಯ ಸದಸ್ಯರಾಗಲು ಅರ್ಹರಾಗಿರುವುದಿಲ್ಲ ಮತ್ತು ಅವರಿಗೆ ಮತದಾನದ ಹಕ್ಕೂ ಇರುವುದಿಲ್ಲ.

೬) ವಿವರಣೆ:

ಕಾರ್ಪೊರೇಷನ್ನುಗಳು, ಸಂಸ್ಥೆಗಳು ಮತ್ತು ಸಂಘಗಳು ಈ ಸಂಘದ ಸದಸ್ಯರಾಗಲು ಅಧ್ಯಕ್ಷರು ಅನುಮತಿಯನ್ನು ನೀಡಬಹುದು,

೭) ಸದಸ್ಯರಾಗಿರಲಿ ಅಥವಾ ಸಹಸದಸ್ಯರಾಗಿರಲಿ ಪ್ರತಿಯೊಬ್ಬರೂ ಕನಿಷ್ಠ ೧ರೂಪಾಯಿಯನ್ನಾದರೂ ಸದಸ್ಯತ್ವದ ವಾರ್ಷಿಕ ಶುಲ್ಕವನ್ನಾಗಿ ನೀಡಬೇಕು. ಅಧ್ಯಕ್ಷರು ವಿನಾಯತಿಯನ್ನು ನೀಡದಿದ್ದರೆ, ಸದಸ್ಯತ್ವದ ಶುಲ್ಕವನ್ನು ಪಾವತಿಮಾಡದಿರುವವರ ಸದಸ್ಯತ್ವವು ಮತ್ತು ಅವರ ಮತದಾನದ ಹಕ್ಕುಗಳು ಅನೂರ್ಜಿತವಾಗುತ್ತವೆ.

೮) ಅಧ್ಯಕ್ಷರು –

ಅ) ಸಂಘವು ಒಬ್ಬ ಅಧ್ಯಕ್ಷರನ್ನು ಹೊಂದಿರತಕ್ಕದ್ದು. ಆ ಅಧ್ಯಕ್ಷರ ಅಧಿಕಾರಾವಧಿಯು ಅವರ ಜೀವಿತಾವಧಿಯವರೆಗೆ ಇರುತ್ತದೆ.

ಆ) ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್, ಎಂ.ಎ., ಪಿ.ಎಚ್.ಡಿ., ಡಿ.ಎಸ್.ಸಿ., ಬ್ಯಾರಿಸ್ಟರ್–ಅಟ್–ಲಾ ಇವರು ಸಂಘದ ಪ್ರಥಮ ಅಧ್ಯಕ್ಷರಾಗಿರುತ್ತಾರೆ.

ಇ) ಖಜಾಂಚಿ ಹಾಗೂ ಕಾರ್ಯದರ್ಶಿಗಳನ್ನು ಅಧ್ಯಕ್ಷರು ನೇಮಕಮಾಡುತ್ತಾರೆ.

ಈ) ಅಧ್ಯಕ್ಷರ ಅಧಿಕಾರವು ಹೀಗಿರುತ್ತವೆ –

ಅ) ಸಂಘದ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರಲು ಅಗತ್ಯವಾದ ಕಚೇರಿಗಳನ್ನು ತೆರೆಯುವುದು,

ಆ) ಅವುಗಳಿಗೆ ತಮಗೆ ಸೂಕ್ತವೆಂದು ತೋರಿದವರನ್ನು ನೇಮಕಮಾಡುವುದು,

ಇ) ಆಡಳಿತಾತ್ಮಕ ಕಾರ್ಯಗಳಿಗೆ ನೇಮಕವಾದವರಿಗೆ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ವಿಧಿಸುವುದು

ಉ) ಸಂಘದ ಕಾರ್ಯಕ್ರಮಗಳನ್ನು ನಿರ್ವಹಿಸಲು ಮತ್ತು ವಿಸ್ತರಿಸಲು ಭಾರತದ ವಿವಿಧ ಭಾಗಗಳಲ್ಲಿ ಕೇಂದ್ರಗಳನ್ನು ತೆರೆಯುವುದು ಮತ್ತು ಅವುಗಳಿಗೆ ಪದಾಧಿಕಾರಿಗಳನ್ನು ನೇಮಿಸುವುದು.

೯) ಕಾರ್ಯದರ್ಶಿ ಹಾಗೂ ಖಜಾಂಚಿಯ ಕರ್ತವ್ಯಗಳು –

ಅ) ಸಂಘದ ಕಾಗದಪತ್ರಗಳ ವ್ಯವಹಾರ ಮತ್ತು ನಿರ್ವಹಣೆಯು ಕಾರ್ಯದರ್ಶಿಯ ಕರ್ತವ್ಯವಾಗಿರುತ್ತದೆ.

ಆ) ಸಂಘದ ಲೆಕ್ಕಪತ್ರಗಳ ವ್ಯವಹಾರ ಮತ್ತು ನಿರ್ವಹಣೆಯು ಖಜಾಂಚಿಯ ಕರ್ತವ್ಯವಾಗಿರುತ್ತದೆ.

೧೦) ಸಂಘಕ್ಕೆ ಸೇರಿದ ಎಲ್ಲಾ ಹಣವನ್ನೂ ಸಂಘದ ಬ್ಯಾಂಕಿನಲ್ಲಿ ಇಡಬೇಕು. ಸಂಘದ ಅಗತ್ಯಗಳಿಗಾಗಿ ಅಧ್ಯಕ್ಷರು ಬ್ಯಾಂಕಿನಿಂದ ಹಣವನ್ನು ಹಿಂಪಡೆಯಬಹುದು.

೧೧) ಉಸ್ತುವಾರಿಯ ನಿರ್ವಹಣೆ –

ಅ) ಸಂಘದ ಎಲ್ಲಾ ವ್ಯಹಾರವನ್ನೂ ಅಧ್ಯಕ್ಷರು ನಿರ್ವಹಿಸಬೇಕು,

ಆ) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಗಳೂ ಅಧ್ಯಕ್ಷರಲ್ಲಿ ಇರಬೇಕು.

ಇ) ಅಧ್ಯಕ್ಷರಿಗೆ ಅವರ ಕೆಲಸ ಕಾರ್ಯಗಳಲ್ಲಿ ನೆರವಾಗಲು ಒಂದು ಸಲಹಾಸಮಿತಿಯನ್ನು ವ್ಯವಸ್ಥೆಗೊಳಿಸಬೇಕು.

ಈ) ಸಲಹಾ ಸಮಿತಿಯಲ್ಲಿ ಹತ್ತು ಸದಸ್ಯರಿರಬೇಕು. ಈ ಸದಸ್ಯರು ಪ್ರತಿವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲಿ ಆಯ್ಕೆಯಾಗಬೇಕು.

ಉ) ಪ್ರಥಮ ಸಲಹಾ ಸಮಿತಿಯ ಸದಸ್ಯರನ್ನು ಅಧ್ಯಕ್ಷರು ನೇಮಿಸಬೇಕು.

ಊ) ಅಧ್ಯಕ್ಷರಿಗೆ ಅಗತ್ಯಕಂಡಾಗ ಸಲಹಾ ಸಮಿತಿಯು ಸಭೆಸೇರಬೇಕು,

ಋ) ಸಭೆಯ ಕಾರ್ಯಕ್ರಮದ ಪಟ್ಟಿಯನ್ನು ಅಧ್ಯಕ್ಷರು ಸಿದ್ಧಪಡಿಸಬೇಕು.

ೠ) ಅಧ್ಯಕ್ಷರು ಅನುಮತಿಯನ್ನು ನೀಡಿದರೆ, ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿರದ ವಿಷಯವನ್ನು ಚರ್ಚಿಸಲು ಯಾವ ಸದಸ್ಯರು ಬೇಕಾದರೂ ಸಭೆಯ ಮುಂದಿಡಬಹುದು.

ಎ) ಸಲಹಾ ಸಮಿತಿಯ ನಿರ್ಣಯವು ಕೇವಲ ಶಿಫಾರಸುಗಳಾಗಿರುತ್ತವೆ.

೧೨) ಮಹಾಸಭೆ

ಅ) ಸಂಘದಲ್ಲಿ ಒಂದು ಮಹಾಸಭೆಯು ಇರತಕ್ಕದ್ದು. ಸಂಘದ ಸದಸ್ಯರೆಲ್ಲರೂ ಮಹಾಸಭೆಯ ಸದಸ್ಯರಾಗಿರಬಹುದು. ಮಹಾಸಭೆಯು ಎರಡು ವರ್ಷಕ್ಕೊಮ್ಮೆ ಸಭೆಸೇರಬೇಕು ಮತ್ತು ಆ ಸಭೆಯಲ್ಲಿ ಅಧ್ಯಕ್ಷರು ಸಮಿತಿಯು ನಡೆಸಿದ ಕಾರ್ಯಕ್ರಮಗಳ ಬಗ್ಗೆ ವರದಿಯನ್ನು

ಮಂಡಿಸಬೇಕು. ಪ್ರವೇಶಕಾಲದ ತರಬೇತಿಯಲ್ಲಿರುವ ಸದಸ್ಯರನ್ನು ಬಿಟ್ಟು ಉಳಿದ ಎಲ್ಲಾ ಸದಸ್ಯರೂ ಮಹಾಸಭೆಯಲ್ಲಿ ಭಾಗವಹಿಸಬಹುದು

ಆ) ಅಧ್ಯಕ್ಷರು ಹಣದ ದುರಪಯೋಗ ಅಥವಾ ದುರ್ವರ್ತನೆಗಳಿಗಾಗಿ ಯಾವುದಾದರೂ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿದ್ದರೆ, ಅವರನ್ನು ಮಹಾಸಭೆಯಲ್ಲಿ ಅಂದು ಹಾಜರಿದ್ದ ಸದಸ್ಯರಲ್ಲಿ ನಾಲ್ಕನೇ ಮೂರರಷ್ಟು ಸದಸ್ಯರ ಬಹುಮತದಿಂದ ಅಧ್ಯಕ್ಷ ಪದವಿಯಿಂದ ಉಚ್ಚಾಟಿಸುವ ಅಧಿಕಾರ ಮಹಾಸಭೆಗೆ ಇರುತ್ತದೆ.

೧೩) ಸಂವಿಧಾನಕ್ಕೆ ತಿದ್ದುಪಡಿ

ಅ) ಈ ಮುಂದಿನ ನಿಬಂಧನೆಗಳಿಗೆ ಒಳಪಟ್ಟು ಸಂವಿಧಾನವನ್ನು ತಿದ್ದುಪಡಿಮಾಡಬಹುದು –

೧) ತಿದ್ದುಪಡಿಮಾಡುವ ಸಲಹೆಯು ಸಲಹಾಸಮಿತಿಯಲ್ಲಿ ಮೂರನೇ ಎರಡರ ಬಹುಮತದಿಂದ ಒಪ್ಪಿತವಾಗಿಬೇಕು,

೨) ಇಂತಹ ತಿದ್ದುಪಡಿಗಳನ್ನು ಸಭೆಯ ಸೂಚನಾ ಪತ್ರದೊಂದಿಗೆ ಸದಸ್ಯರಿಗೆ ಒದಗಿಸತಕ್ಕದ್ದು.

೩) ಸಭೆ ಸೇರುವ ದಿನಾಂಕದಿಂದ ಕನಿಷ್ಠ ಮೂರು ತಿಂಗಳುಗಳ ಮೊದಲು ಸಭೆಯ ಸೂಚನಾ ಪತ್ರವನ್ನು ರವಾನಿಸಬೇಕು.

ಆ) ಸಭೆಯಲ್ಲಿ ಹಾಜರಿರುವ ಸದಸ್ಯರ ಮೂರನೇ ಎರಡು ಭಾಗದಷ್ಟು ಸದಸ್ಯರ ಮತವನ್ನು ಪಡೆಯಲು ವಿಫಲವಾದ ಯಾವ ತಿದ್ದುಪಡಿಯನ್ನೂ ಸಂಘದ ಅಂತಿಮ ನಿರ್ಣಯವೆಂದು ಒಪ್ಪಲಾಗದು.

ಇದನ್ನು ಸಂಘದ ನಿಯಮ ನಿಬಂಧನೆಗಳ ಅಧಿಕೃತ ಪ್ರತಿಯೆಂದು ಘೋಷಿಸಲಾಗಿದೆ.

ಸಹಿ/–

(೧) ಬಿ.ಆರ್. ಅಂಬೇಡ್ಕರ್

(೨) ಮಾಧವ ಜಿ. ಮಾಲ್ವಂಕರ್

(೩) ಸಿ.ಎಸ್. ಪಿಳ್ಳೈ

* * * * *

# ಪರಿಶಿಷ್ಟಗಳು

## ಪರಿಶಿಷ್ಟ – ೧

# ಅಖಿಲ ಭಾರತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟದ ಸಂವಿಧಾನ ಹೆಸರು

### ವಿಧಿ ೧

ಅ) ಈ ಸಂಸ್ಥೆಯ ಹೆಸರು 'ಅಖಿಲ ಭಾರತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಒಕ್ಕೂಟ' ಎಂದಿರಬೇಕು,

ಆ) ಈ ಹೆಸರಿನ ಸಂಕ್ಷಿಪ್ತ ರೂಪ ಅ.ಭಾ.ಪ.ಜಾ.ವಿ.ಒ. ಎಂದಿರಬೇಕು.

ಇ) ಸಂಸ್ಥೆಯ ಎಲ್ಲಾ ಶಾಖೆಗಳ ಹೆಸರೂ "....(ಇಂತಹ).....ಪರಿಶಿಷ್ಟ ಜಾತಿಗಳ ವಿದ್ಯಾಥಿಗಳ ಒಕ್ಕೂಟ" ಎಂದಿರಬೇಕು.

### ವಿಧಿ ೨

ಅ.ಭಾ.ಪ.ಜಾ.ವಿ.ಒ.ದ ಮುಖ್ಯ ಕಚೇರಿಯು ಮಹಾಕಾರ್ಯದರ್ಶಿಯವರು ಇರುವ ನಗರದಲ್ಲಿಯೇ ಇರತಕ್ಕದ್ದು.

### ವಿಧಿ ೩

ಅ.ಭಾ.ಪ.ಜಾ.ವಿ.ಒ.ದ ಕಾರ್ಯಚಟುವಟಿಕೆಗಳು ಕೆಳಕಂಡ ಅಂಶಗಳನ್ನು ಮುನ್ನಡೆಸುವತ್ತ ಇರಬೇಕು.

ಅ) ಭಾರತದ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಂದು ಸಂಯುಕ್ತ ಮಂಡಲಿಯನ್ನು ಸಂಘಟಿಸುವುದು,

ಆ) ಅವರಲ್ಲಿ ಜಾತಿಪ್ರಜ್ಞೆಯನ್ನು ಮೂಡಿಸುವಂತಹ ಎಲ್ಲಾ ಚಟುವಟಿಕೆ ಮತ್ತು ಕಾರ್ಯಗಳನ್ನು ತ್ಯಜಿಸುವಂತೆ ಮಾಡಿ ಸಾಂಘಿಕ ಜೀವನವನ್ನು ಬೆಳೆಸುವುದು.

ಇ) ಭಾರತದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವುದು,

ಈ) ಅವರಲ್ಲಿ ನೈತಿಕ ಮತ್ತು ಬೌದ್ಧಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿ ಮತ್ತು ಇಂದಿನ ಸಾಂಸ್ಕೃತಿಕ ಮತ್ತು ರಾಜಕೀಯ ಚಳವಳಿಗಳ ಸಂಪರ್ಕಕ್ಕೆ ಬರುವ ಹಾಗೆ ಮಾಡುವಂತಹ ಸಾಂಸ್ಕೃತಿಕ ವಾತಾವರಣವನ್ನು ಸೃಷ್ಟಿಸುವುದು.

ಉ) ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ದೇಹ ಹಾಗೂ ಆರೋಗ್ಯವನ್ನು ಉತ್ತಮಗೊಳಿಸುವುದಕ್ಕಾಗಿ ವ್ಯಾಯಾಮಗಳನ್ನು ಪ್ರೋತ್ಸಾಹಿಸುವುದು

ಊ) ಪರಿಶಿಷ್ಟ ಜಾತಿಗಳ ಜನರ ಹಿತಾಸಕ್ತಿಯನ್ನು ಕಾಪಾಡುವುದು,

ಋ) ಪರಿಶಿಷ್ಟ ಜಾತಿಗಳ ಜನರ ಮತ್ತು ದೇಶದ ಕಲ್ಯಾಣಕ್ಕಾಗಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಚಟುವಟಿಕೆಯನ್ನು ಸಮನ್ವಯಗೊಳಿಸುವುದು,

ೠ) ಸಾರ್ವಜನಿಕ ಅಭಿಪ್ರಾಯವು ಪರಿಶಿಷ್ಟ ಜಾತಿಗಳ ಚಳವಳಿಯ ಪರವಾಗಿ ಮೂಡುವಂತೆ ಮಾಡುವುದು,

ಎ) ಕಾರ್ಯಕಾರಿ ಸಮಿತಿಯ ಒಪ್ಪಿಗೆಗೆ ಒಳಪಟ್ಟಂತೆ, ಸಾಮಾನ್ಯವಾಗಿ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಕ್ಷೇತ್ರಕ್ಕೆ ನೇರವಾಗಿ ಸೇರಿದ ಯಾವುದೇ ವಿಷಯಗಳನ್ನು ಕೈಗೆತ್ತಿಕೊಳ್ಳುವುದು.

## ಸಂಸ್ಥೆಯ ರಚನೆ
## ವಿಧಿ ೪

ಅ.ಭಾ.ಪ.ಜಾ.ವಿ.ಒ.ವು ಮುಂದಿನವುಗಳನ್ನು ಒಳಕೊಂಡಿರುತ್ತದೆ –

ಅ) ಅ.ಭಾ.ಪ.ಜಾ.ವಿ.ಒ.ದ ವಾರ್ಷಿಕ ಮತ್ತು ವಿಶೇಷ ಅಧಿವೇಶನಗಳು

ಆ) ಅ.ಭಾ.ಪ.ಜಾ.ವಿ.ಒ.ದ ಪರಿಷತ್ತು,

ಇ) ಅ.ಭಾ.ಪ.ಜಾ.ವಿ.ಒ.ದ ಕಾರ್ಯಕಾರಿ ಸಮಿತಿ,

ಉ) ಅ.ಭಾ.ಪ.ಜಾ.ವಿ.ಒ.ದೊಂದಿಗೆ ಸಹಯೋಗ ಹೊಂದಿರುವ ಭಾರತದ ಸ್ಥಳೀಯ ರಾಜ್ಯಗಳ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಗಳು,

ಊ) ಪ್ರಾಂತೀಯ ಅಥವಾ ಭಾರತೀಯ ಸ್ಥಳೀಯ ರಾಜ್ಯಗಳ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಗಳ ಸಹಯೋಗವನ್ನು ಹೊಂದಿರುವ ಶಾಖಾ ಸಂಸ್ಥೆಗಳು.

## ಸದಸ್ಯತ್ವ
## ವಿಧಿ ೫

ಅ) ಪರಿಶಿಷ್ಟ ಜಾತಿಗಳ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಅ.ಭಾ.ಪ.ಜಾ.ವಿ.ಒ.ದ ಸದಸ್ಯನೆಂದು ಪರಿಗಣಿಸತಕ್ಕದ್ದು –

೧) ಅ.ಭಾ.ಪ.ಜಾ.ವಿ.ಒ.ದ ಸಹಯೋಗ ಹೊಂದಿರುವ ಯಾವುದೇ ಶಾಖಾ ಸಂಸ್ಥೆಗಳಿಗೆ ಆತ/ಆಕೆ ನಿರ್ದಿಷ್ಟಪಡಿಸಿದ ಶುಲ್ಕವನ್ನು ನೀಡಿರಬೇಕು.

೨) ಆತ/ಆಕೆ ಹನ್ನೆರಡು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವನಾ/ಳಾಗಿದ್ದು, ಮಾಧ್ಯಮಿಕ ಶಾಲೆಯಲ್ಲಿ ಅಭ್ಯಾಸಮಾಡುತ್ತಿರಬೇಕು.

೩) ಅ.ಭಾ.ಪ.ಜಾ.ವಿ.ಒ.ದ ಧ್ಯೇಯ ಮತ್ತು ಉದ್ದೇಶಗಳಲ್ಲಿ ನಂಬಿಕೆಯನ್ನು ಹೊಂದಿದ್ದೇನೆ ಮತ್ತು ಅದರ ನಿಯಮ ಮತ್ತು ನಿಬಂಧನೆಗಳಿಗೆ ಬದ್ಧನಾ/ಳಾಗಿರುತ್ತೇನೆ ಎಂಬ ಘೋಷಣೆಯನ್ನು ಲಿಖಿತರೂಪದಲ್ಲಿ ನೀಡಿರಬೇಕು.

ಆ) ಇಂತಹ ಸದಸ್ಯನ/ಳನ್ನು 'ಸಾಮಾನ್ಯ ಸದಸ್ಯ'ನೆಂ/ಳೆಂದು ಹೆಸರಿಸಬೇಕು.

## ವಿಧಿ ೬

ಸಂಸ್ಥೆಯ ಈ ಸಂವಿಧಾನದ ಉದ್ದೇಶಕ್ಕಾಗಿ 'ವಿದ್ಯಾರ್ಥಿ' ಎಂದರೆ –

ಅ) ಮಾನ್ಯತೆ ಪಡೆದ ಯಾವುದೇ ಅಥವಾ ಕ್ರಮವಾದ ವಿದ್ಯಾಶಾಲೆಗೆ ಸೇರಿದವನಾ/ಳಾಗಿರಬೇಕು.

ಆ) ವಿಧಿ ೬(ಅ)ದಲ್ಲಿ ವಿಧಿಸಿರುವ ಪ್ರಕಾರ ವಿದ್ಯಾರ್ಥಿಯೆಂದು ಪರಿಗಣಿಸಲಾಗದವನು, ಆ ವಿಧಿಯಲ್ಲಿನ ಅಭಿಪ್ರಾಯಕ್ಕೆ ಮೌಲ್ಯಯುತ ಸಹಾಯ ಮತ್ತು ಸೇವೆಯನ್ನು ಸಲ್ಲಿಸಿದ್ದಲ್ಲಿ, ೫ನೆಯ ವಿಧಿಯ(ಅ) ಉಪವಿಧಿಯ (೧), (೨) ಮತ್ತು (೩)ನೆಯ ಅಧೀನ ವಿಧಿಗಳಿಗೆ ಒಳಪಟ್ಟು ಸದಸ್ಯನಾಗಬಹುದು.

ಅಂತಹವರು ೫ರೂ.ಗಳನ್ನು ಸದಸ್ಯತ್ವದ ವಾರ್ಷಿಕ ಶುಲ್ಕವಾಗಿ ಕಟ್ಟತಕ್ಕದ್ದು.

ಇ) ಅಂತಹ ಸದಸ್ಯರನ್ನು 'ಸಹಸದಸ್ಯ'ರೆಂದು ಕರೆಯಲಾಗುವುದು. ಅವರು ಕಾರ್ಯಕಾರಿ ಸಮಿತಿಯಲ್ಲಿ ಮತ್ತು ಅಖಿಲ ಭಾರತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿ ಒಕ್ಕೂಟದ ಪರಿಷತ್ತಿನ ಸಭೆಯಲ್ಲಿ ಹಾಜರಿರಬಹುದು. ಆದರೆ ಅವರಿಗೆ ಮತದಾನದ ಹಕ್ಕು ಇರುವುದಿಲ್ಲ ಹಾಗೂ ಖಜಾಂಚಿಯ ಸ್ಥಾನವನ್ನು ಬಿಟ್ಟು ಬೇರೆ ಯಾವುದೇ ಪದಾಧಿಕಾರಿಗಳ ಸ್ಥಾನವನ್ನು ಪಡೆಯುವ ಅರ್ಹತೆಯು ಇರುವುದಿಲ್ಲ.

**ವಿಧಿ ೭**

ಯಾವುದೇ ಪದಾಧಿಕಾರಿಯು ಅಥವಾ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಸಮಿತಿಯ ಸದಸ್ಯನಾಗಿದ್ದು, ಮಧ್ಯದಲ್ಲಿ ವಿದ್ಯಾರ್ಥಿವೇತನದಿಂದ ಹೊರಗೆ ಬಂದಿದ್ದರೆ, ಅಂತಹವನು ತಮ್ಮ ಸ್ಥಾನದ ಆ ಪ್ರಸಕ್ತ ಅವಧಿಯು ಪೂರ್ಣವಾಗುವವೆಗೆ ಆ ಸ್ಥಾನದಲ್ಲಿ ಮುಂದುವರಿಯಬಹುದು.

**ಸದಸ್ಯತ್ವದ ಶುಲ್ಕ**

**ವಿಧಿ ೮**

ಅ) ಸಾಮಾನ್ಯ ಸದಸ್ಯತ್ವದ ಶುಲ್ಕವು ವಾರ್ಷಿಕ ೪ (ನಾಲ್ಕು) ಆಣೆಯಾಗಿದ್ದು, ಅದನ್ನು ಸದಸ್ಯರು ತಾವು ಸದಸ್ಯರಾಗಿರುವ ಮಾನ್ಯತೆ ಪಡೆದ ಪ್ರಾಂತೀಯ, ಸಂಸ್ಥೆಗಳ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಕ್ಕೆ ನೀಡಬೇಕು.

ಆ) ಪರಿಷತ್ತಿನ ಸದಸ್ಯರ ಶುಲ್ಕವು ವಾರ್ಷಿಕ ೨ ರೂ (ಎರಡು ರೂಗಳು ಮಾತ್ರ) ಇರುತ್ತದೆ.

ಇ) ಪರಿಷತ್ತಿನ ಶುಲ್ಕವಲ್ಲದೆ ಕಾರ್ಯಕಾರಿ ಸಮಿತಿಯ ಪ್ರತಿ ಸದಸ್ಯರೂ ಮೂರು ರೂಗಳನ್ನು ಪ್ರತಿ ವರ್ಷವೂ ಕಟ್ಟಬೇಕು.

ಈ) ಪ್ರತಿ 'ಸಹ–ಸದಸ್ಯ'ರೂ ವಾರ್ಷಿಕ ಐದು (೫) ರೂಗಳನ್ನು ಕಟ್ಟಬೇಕು.

ಉ) ಪ್ರತಿ ಪ್ರತಿನಿಧಿಯೂ ಮೂರು (೩) ರೂಗಳ ಶುಲ್ಕವನ್ನು ಕಟ್ಟಬೇಕು.

ಊ) ಸ್ವಾಗತ ಸಮಿತಿಯ ಪ್ರತಿ ಸದಸ್ಯರೂ ಮೂರು (೩) ರೂಗಳ ಶುಲ್ಕವನ್ನು ಕಟ್ಟಬೇಕು.

ಋ) ಪ್ರತಿ ಸದಸ್ಯರೂ ತಾವು ಕಟ್ಟಬೇಕಾಗಿರುವ ಶುಲ್ಕವನ್ನು ತಾವು ಮತದಾನ ಮಾಡುವುದಕ್ಕೆ ಮುಂಚೆ ಕಟ್ಟಿರಬೇಕು.

**ವಿಧಿ ೯**

ಅ) ಭಾರತೀಯ ಸಂಸ್ಥಾನಗಳ ಮತ್ತು ಪ್ರಾಂತೀಯ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಗಳು ಮಾತ್ರ ಅಖಿಲ ಭಾರತ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರಾಗಬಹುದು.

ಆ) ಯಾವುದನ್ನು ಸಂಸ್ಥೆಯ ಪ್ರಾಥಮಿಕ ಘಟಕವನ್ನಾಗಿ ಮಾಡಿಕೊಳ್ಳಬೇಕೆಂಬುದನ್ನು ಭಾರತೀಯ ಸಂಸ್ಥಾನಗಳಲ್ಲಿರುವ ಅಥವಾ ಪ್ರಾಂತೀಯ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟವು ನಿರ್ಧರಿಸಬಹುದು ಮತ್ತು ಅಂತಹ ಸಂಸ್ಥೆಗಳನ್ನು ತನ್ನ ಅಂಗಸಂಸ್ಥೆಗಳನ್ನಾಗಿ ಮಾಡಿಕೊಳ್ಳುವ ಅಧಿಕಾರವನ್ನು ಅದು ಹೊಂದಿರುತ್ತದೆ.

## ವ್ಯವಸ್ಥಾಪನೆ

### ವಿಧಿ ೧೦

ಅ) ಅ.ಭಾ.ಪ.ಜಾ.ವಿ.ಒ.ದ ವ್ಯವಸ್ಥಾಪನಾಧಿಕಾರವು, ಭಾರತೀಯ ಸಂಸ್ಥಾನಗಳ ಮತ್ತು ಪ್ರಾಂತೀಯ ಪ.ಜಾ.ವಿ.ಒ.ದ ಪ್ರತಿನಿಧಿಗಳಿಂದ ಕೂಡಿದ ಪರಿಷತ್ತಿಗೆ ಇರುತ್ತದೆ.

### ವಿಧಿ ೧೧

ಅ.ಭಾ.ಪ.ಜಾ.ವಿ.ಒ.ದ ಪ್ರತಿ ಅಂಗಸಂಸ್ಥೆಯು ತನ್ನ ೧೦೦ ಸದಸ್ಯರಿಗೆ ಒಬ್ಬರಂತೆ, ಆದರೆ ಒಟ್ಟು ೧೫ಕ್ಕಿಂತ ಹೆಚ್ಚಿಲ್ಲದಂತೆ ಪ್ರತಿನಿಧಿಗಳನ್ನು ಕೇಂದ್ರ ಪರಿಷತ್ತಿಗೆ ಕಳುಹಿಸತಕ್ಕದ್ದು.

### ವಿಧಿ ೧೨

ಅ) ಪರಿಷತ್ತಿನ ಸದಸ್ಯರ ಸದಸ್ಯತ್ವದ ಅವಧಿ ಒಂದು ವರ್ಷವಾಗಿದ್ದು, ಸದಸ್ಯರು ಮರು–ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಾಗಿರುತ್ತಾರೆ.

ಆ) ಕಾರ್ಯಕಾರಿ ಸಮಿತಿಯು ಅ.ಭಾ.ಪ.ಜಾ.ವಿ.ಒ.ದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಪರಿಷತ್ತಿನ ಮುಂದಿಡಬೇಕು ಮತ್ತು ಪರಿಷತ್ತಿನ ನೀತಿ ನಿರೂಪಣೆ ಮತ್ತು ಕಾರ್ಯಾಚರಣೆಗಳನ್ನು ಜಾರಿಗೆ ತರುವುದು ಕಾರ್ಯಕಾರಿ ಸಮಿತಿಯ ಕರ್ತವ್ಯವಾಗಿರುತ್ತದೆ.

### ವಿಧಿ ೧೩

ಅ) ಪರಿಷತ್ತು ವರ್ಷಕ್ಕೆ ಕನಿಷ್ಠ ಎರಡು ಬಾರಿಯಾದರೂ ಸಭೆ ಸೇರಬೇಕು. ಮೊದಲನೆಯ ವರ್ಷ ಅದರ ಸ್ಥಾಪನೆಯಾದ ನಂತರ ಮತ್ತು ಕೊನೆಯದು, ಅ.ಭಾ.ಪ.ಜಾ.ವಿ.ಒ.ದ ವಾರ್ಷಿಕ ಮತ್ತು ವಿಶೇಷ ಅಧಿವೇಶನಕ್ಕೆ ಸ್ವಲ್ಪವೇ ಮುಂಚೆ ನಡೆಯುವುದು ಅಪೇಕ್ಷಣೀಯ.

ಆ) ಪರಿಷತ್ತಿನ ಪ್ರಥಮ ಸಭೆಯನ್ನು ಹೊರತಾಗಿಸಿ, ಉಳಿದಂತೆ ಎಲ್ಲಾ ಸಭೆಗಳಿಗೂ ಕನಿಷ್ಠ ಒಂದು ತಿಂಗಳ ಪೂರ್ವಸೂಚನೆಯನ್ನು ನೀಡಬೇಕು.

ಇ) ಪರಿಷತ್ತಿನ ಸಭೆಗಳನ್ನು ಕರೆಯುವುದು ಮಹಾಕಾರ್ಯದರ್ಶಿಯ ಹೊಣೆಯಾಗಿರುತ್ತದೆ. ಅವರು ಹಾಗೆ ಮಾಡಲು ವಿಫಲರಾದಲ್ಲಿ ಆ ಹೊಣೆಯು ಜಂಟಿಕಾರ್ಯದರ್ಶಿಗಳ ಮೇಲೆ ಇರುತ್ತದೆ.

### ವಿಧಿ ೧೪

ಅ) ಕಾರ್ಯಕಾರಿ ಸಮಿತಿಯು ೧೫ ರಿಂದ ೧೭ (ಹದಿನೈದರಿಂದ ಹದಿನೇಳು) ಸದಸ್ಯರನ್ನು ಹೊಂದಿರಬೇಕು, ೩(ಮೂರು) ಸ್ಥಾನಗಳು ಮಹಿಳೆಯರಿಗೂ, ೩ (ಮೂರು) ಸ್ಥಾನಗಳು ಸ್ಥಳೀಯ ರಾಜ್ಯಗಳವರಿಗೂ ಮೀಸಲಾಗಿರಬೇಕು. ಅಧ್ಯಕ್ಷರು ಮತ್ತು ಮಹಾಕಾರ್ಯದರ್ಶಿಯವರು ಸಮತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಆ) ಕಾರ್ಯಕಾರಿ ಸಮಿತಿಯ ಸಭೆಯನ್ನು ನಡೆಸಲು ಕನಿಷ್ಠ ೫ (ಐದು) ಸದಸ್ಯರ ಹಾಜರಿ ಅಗತ್ಯ.

ಇ) ಪರಿಷತ್ತು ತನ್ನ ಮೊದಲ ಅಧಿವೇಶನದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡುತ್ತದೆ.

ಈ) ಸಾಮಾನ್ಯಸಭೆಗೆ ೨೦ ದಿನಗಳ ಪೂರ್ವಸೂಚನೆಯೂ, ತುರ್ತುಸಭೆಗಳಿಗೆ ೭ ದಿನಗಳ ಪೂರ್ವಸೂಚನೆಯೂ ಸಾಕಾಗುತ್ತದೆ.

**ವಿಧಿ ೧೫**

ಸಂಸ್ಥೆಯ ಪದಾಧಿಕಾರಿಗಳಾಗಿ ಒಬ್ಬರು ಅಧ್ಯಕ್ಷರು, ಇಬ್ಬರು ಉಪಾಧ್ಯಕ್ಷರು, ಒಬ್ಬರು ಮಹಾಕಾರ್ಯದರ್ಶಿಯೂ, ಇಬ್ಬರು ಜಂಟಿ ಕಾರ್ಯದರ್ಶಿಗಳೂ (ಇವರಲ್ಲಿ ಒಬ್ಬರು ಸ್ತ್ರೀಯರಿಂದ ಆಯ್ಕೆಯಾದವರು), ಒಬ್ಬರು ಖಜಾಂಚಿಯೂ ಇರತಕ್ಕದ್ದು.

**ವಿಧಿ ೧೬**

ಅಗತ್ಯವಿದ್ದಲ್ಲಿ ಕಾರ್ಯಕಾರಿ ಸಮಿತಿಯು ಒಬ್ಬರು ಅಥವಾ ಇಬ್ಬರು ಸದಸ್ಯರನ್ನು ಸಮಿತಿಗೆ ಹೆಚ್ಚುವರಿಯಾಗಿ ಸೇರಿಸಿಕೊಳ್ಳಬಹುದು.

**ವಿಧಿ ೧೭**

ತನಗೆ ಉಪಸಮಿತಿಗಳ ಅಗತ್ಯವಿದ್ದಲ್ಲಿ, ಕಾರ್ಯಕಾರಿ ಸಮಿತಿಯು ಸದಸ್ಯರಲ್ಲದವರನ್ನೂ ಅಂತಹ ಉಪಸಮಿತಿಗಳಿಗೆ ನೇಮಿಸಬಹುದು.

**ವಿಧಿ ೧೮**

ಸಂಸ್ಥೆಯ ಎಲ್ಲಾ ಶಾಖೆಗಳೂ ಪ್ರತಿ ಮೂರು ತಿಂಗಳಿಗೊಮ್ಮೆ ತಮ್ಮ ಕಾರ್ಯ ಚಟುವಟಿಕೆಗಳ ವರದಿಯನ್ನು ತಮತಮಗೆ ನಿಕಟವಾದ ಮೇಲಿನ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಕ್ಕೆ ಸಲ್ಲಿಸತಕ್ಕದ್ದು.

**ವಿಧಿ ೧೯**

ತನ್ನ ಕಾರ್ಯಾವಧಿಯಲ್ಲಿ ಖಾಲಿಬೀಳುವ ಎಲ್ಲಾ ಸ್ಥಾನಗಳನ್ನೂ ಕಾರ್ಯಕಾರಿ ಸಮಿತಿಯು ಭರ್ತಿಮಾಡತಕ್ಕದ್ದು.

**ವಿಧಿ ೨೦**

ಸಂಸ್ಥೆಯ ವ್ಯವಸ್ಥಾಪನೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳಿಗೂ ಕಾರ್ಯಕಾರಿ ಸಮಿತಿಯೇ ಹೊಣೆಗಾರವಾಗಿರುತ್ತದೆ.

**ಅಂಗಸಂಸ್ಥೆಗಳ ಸ್ಥಾನ**

**ವಿಧಿ ೨೧**

ಅ) ಅ.ಭಾ.ಪ.ಜಾ.ವಿ.ಒ.ವು ಭಾರತೀಯ ಸಂಸ್ಥಾನಗಳ ಹಾಗೂ ಸ್ಥಳೀಯ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಗಳಿಗೆ ಅಂಗಸಂಸ್ಥೆಗಳ ಸ್ಥಾನವನ್ನು ನೀಡಬಹುದು.

ಆ) ಸಂಬಂಧಿಸಿದ ಭಾರತೀಯ ಸಂಸ್ಥಾನಗಳ ಹಾಗೂ ಸ್ಥಳೀಯ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟಗಳು ತಮ್ಮ ಸಂವಿಧಾನದಲ್ಲಿರುವ ನಿಬಂಧನೆಗಳಿಗೆ ಒಳಪಟ್ಟು ತಮ್ಮ ಕೆಳಗಿನ ಪ್ರಾಥಮಿಕ

ಘಟಕಗಳಿಗೂ ಮತ್ತು ಇತರ ಘಟಕಗಳಿಗೂ ಅಂಗಸಂಸ್ಥೆಯ ಸ್ಥಾನವನ್ನು ನೀಡಬಹುದು.

ಇ) ಪರಿಷತ್ತಿನ ಅನುಮತಿಯು ಸ್ಪಷ್ಟವಾಗಿ ದೊರೆಯದಿದ್ದರೆ, ಕಾರ್ಯಕಾರಿ ಸಮಿತಿಗೆ ಯಾವುದೇ ಪ್ರಕರಣದಲ್ಲಿಯೂ ಅಂಗಸಂಸ್ಥೆಗಳ ಸ್ಥಾನವನ್ನು ರದ್ದುಪಡಿಸಲು ಅಧಿಕಾರವಿರುವುದಿಲ್ಲ.

## ಅಂಗಸಂಸ್ಥೆಗಳ ಶುಲ್ಕ

### ವಿಧಿ ೨೨

ಅಂಗಸಂಸ್ಥೆಗಳ ಶುಲ್ಕವಾಗಿ ಪ್ರತಿ ಭಾರತೀಯ ಸಂಸ್ಥಾನಗಳ ಮತ್ತು ಸ್ಥಳೀಯ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ಒಕ್ಕೂಟವು ಅ.ಭಾ.ಪ.ಜಾ.ವಿ.ಒ.ಕ್ಕೆ ೧೫ ರೂ.ಗಳನ್ನು (ಹದಿನೈದು ರೂ.ಗಳನ್ನು) ಕಟ್ಟಬೇಕು. ಇದಲ್ಲದೆ, ೨೫ ರೂಗಳನ್ನು (ಇಪ್ಪತ್ತೈದು ರೂ.ಗಳನ್ನು) ಅಖಿಲ ಭಾರತ ಸಂಸ್ಥೆಗೆ ವಾರ್ಷಿಕವಾಗಿ ಕಟ್ಟಬೇಕು.

## ಸಮಾವೇಶ

### ವಿಧಿ ೨೩

ಅ) ಅ.ಭಾ.ಪ.ಜಾ.ವಿ.ಒ.ವು. ಪ್ರತಿ ವರ್ಷದ ಡಿಸೆಂಬರ್ ತಿಂಗಳಿನ ಕೊನೆಯ ವಾರದಲ್ಲಿ ತನ್ನ ವಾರ್ಷಿಕ ಸಮಾವೇಶವನ್ನು ನಡೆಸಬೇಕು.

ಆ) ಪರಿಷತ್ತಿನ ಸದಸ್ಯರು ಈ ಸಮಾವೇಶದಲ್ಲಿ ಹಾಗೂ ವಾರ್ಷಿಕ ಸಮಾವೇಶದಲ್ಲಿ ಭಾಗವಹಿಸಿರುವ ಪ್ರತಿನಿಧಿಗಳಿಂದ ಆಯ್ಕೆಯಾಗುತ್ತಾರೆ

ಇ) ಸಮಾವೇಶವನ್ನು ನಡೆಸಲು ಉದ್ದೇಶಿಸಿರುವ ಸ್ಥಳದ ವಿದ್ಯಾರ್ಥಿಗಳು ಸ್ವಾಗತ ಸಮಿತಿಯನ್ನು ರಚಿಸಬೇಕು.

ಈ) ಕಾರ್ಯಕಾರಿ ಸಮಿತಿಯು ಸಮಾವೇಶವು ನಡೆಯುವ ಸ್ಥಳವನ್ನು ನಿರ್ಧರಿಸುತ್ತದೆ.

### ವಿಧಿ ೨೪

ಪ್ರತಿ ಸ್ಥಳೀಯ ಹಾಗೂ ಭಾರತೀಯ ಸಂಸ್ಥಾನಗಳ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿ ಒಕ್ಕೂಟವೂ ಸಮಾವೇಶಕ್ಕೆ ಹಾಗೂ ವಾರ್ಷಿಕ ಅಧಿವೇಶನಕ್ಕೆ ತನ್ನ ಸದಸ್ಯರ ಸಂಖ್ಯೆಗೆ ಅನುಗುಣವಾಗಿ, ಅಂದರೆ, ನೂರು ಸದಸ್ಯರಿಗೆ ಮೂವರಂತೆ ಪ್ರತಿನಿಧಿಗಳನ್ನು ಕಳುಹಿಸಲು ಅಧಿಕಾರವನ್ನು ಹೊಂದಿರುತ್ತದೆ.

### ವಿಧಿ ೨೫

ಖಜಾಂಚಿಯು ಅ.ಭಾ.ಪ.ಜಾ.ವಿ.ಒ.ಕ್ಕೆ ಸಂದಾಯವಾದ ಎಲ್ಲಾ ಹಣವನ್ನು ಅ.ಭಾ.ಪ.ಜಾ.ವಿ.ಒ.ದ ಬ್ಯಾಂಕ್ ಖಾತೆಗೆ ಜಮಾಮಾಡತಕ್ಕದ್ದು.

### ವಿಧಿ ೨೬

ಸಾಮಾನ್ಯವಾಗಿ ಎಲ್ಲಾ ಖರ್ಚುಗಳಿಗೂ ಅದಕ್ಕೆ ಹಣ ಪಾವತಿ ಮಾಡುವ ಮುನ್ನವೇ ಕಾರ್ಯಕಾರಿ ಸಮಿತಿಯು ಒಪ್ಪಿಗೆಯನ್ನು ನೀಡಬೇಕು. ಆದರೆ, ತುರ್ತು ಅಗತ್ಯವಿದ್ದಲ್ಲಿ ಮಹಾಕಾರ್ಯದರ್ಶಿಯು ಅಥವಾ ಅವರ ಗೈರುಹಾಜರಿಯಲ್ಲಿ ಜಂಟಿ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದಶಿಗಳು ೩೦ ರೂಗಳ ವರೆಗೆ

ಖರ್ಚುಮಾಡಬಹುದು. ಇಂತಹ ಖರ್ಚುಗಳಿಗೆ ನಂತರ ಅವರು ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆಯಬೇಕು.

**ವಿಧಿ ೨೭**

ಮಹಾಕಾರ್ಯದರ್ಶಿಯವರು, ಅವರ ಗೈರುಹಾಜರಿಯಲ್ಲಿ ಜಂಟಿಕಾರ್ಯದರ್ಶಿಗಳು ಖಜಾಂಚಿಯಿಂದ ಹಣವನ್ನು ಪಡೆದುಕೊಳ್ಳುವ ಅಧಿಕಾರವನ್ನು ಹೊಂದಿರುತ್ತಾರೆ.

**ಶಿಸ್ತು**

**ವಿಧಿ ೨೮**

ಅ) ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು ಹೊರತುಪಡಿಸಿ, ಬೇರೆ ಯಾವ ರಾಜಕೀಯ ಸಂಸ್ಥೆಗಳ ಸದಸ್ಯನಾಗಲು ಅಥವಾ ಅಂತಹ ಸಂಸ್ಥೆಗಳ ಸದಸ್ಯತ್ವವನ್ನು ಯಾವ ರೀತಿಯಲ್ಲಿಯೇ ಆದರೂ ಅನುಭವಿಸಲು ಅ.ಭಾ.ಪ.ಜಾ.ವಿ.ಒ.ದ ಯಾವ ಸದಸ್ಯನಿಗೂ ಅವಕಾಶವಿರುವುದಿಲ್ಲ.

ಆ) ಕೆಳಕಂಡ ವಿಷಯಗಳಲ್ಲಿ ಯಾವುದೇ ಸದಸ್ಯರ ವಿರುದ್ಧ ಕಾರ್ಯಕಾರಿ ಸಮಿತಿಯು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬಹುದು.

- ಅ) ನಿಗದಿತ ಶುಲ್ಕವನ್ನು ಕಟ್ಟುವುದರಲ್ಲಿ ವಿಫಲರಾಗಿರುವುದು,
- ಆ) ಒಕ್ಕೂಟದ ನೀತಿಗಳನ್ನು ಹಾಗೂ ಕಾರ್ಯಕಾರಿಯ ನಡಾವಳಿಗಳನ್ನು ಉಲ್ಲಂಘಿಸುವುದು,
- ಇ) ಅ.ಭಾ.ಪ.ಜಾ.ವಿ.ಒ.ದ ನಿಯಮ, ನಿಬಂಧನೆಗಳನ್ನು ಉದ್ದೇಶಪೂರ್ವಕವಾಗಿ ಮೀರುವುದು,
- ಈ) ಈ ನಿಯಮಗಳ ಅಡಿಯಲ್ಲಿ ಸೇರಿಸಿರದ, ಆದರೆ, ಅ.ಭಾ.ಪ.ಜಾ.ವಿ.ಒ.ದ ವ್ಯವಸ್ಥೆ ಅಥವಾ ಶಿಸ್ತಿಗೆ ಭಂಗತರುವ ಸಂಭಾವ್ಯತೆಯಿರುವ ಸನ್ನಿವೇಶಗಳಿಗೆ ಕಾರಣವಾಗುವುದು.

**ಅಧಿವೇಶನ**

**ವಿಧಿ ೨೯**

ಅ.ಭಾ.ಪ.ಜಾ.ವಿ.ಒ.ದ ಪರಿಷತ್ತು ವಾರ್ಷಿಕ ಹಾಗೂ ವಿಶೇಷ ಅಧಿವೇಶನಗಳ ಅಧ್ಯಕ್ಷರನ್ನು ಆಯ್ಕೆಮಾಡುತ್ತದೆ. ಈ ಉದ್ದೇಶಕ್ಕಾಗಿ ಸಭೆಯನ್ನು ಕರೆಯದೆಯೆ, ತನ್ನ ಸದಸ್ಯರಿಂದ ಅಧ್ಯಕ್ಷರ ಹೆಸರನ್ನು ಲಿಖಿತವಾಗಿ ಪಡೆಯಬಹುದು.

**ವಿಧಿ ೩೦**

ಸ್ಥಳೀಯ ಹಾಗೂ ಭಾರತೀಯ ಸಂಸ್ಥಾನಗಳ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿ ಒಕ್ಕೂಟಗಳು ತಮ್ಮದೇ ಆದ ಸಂವಿಧಾನವನ್ನು ಹೊಂದಬಹುದು. ಆದರೆ, ಈ ಸಂವಿಧಾನಗಳು ಅ.ಭಾ.ಪ.ಜಾ.ವಿ.ಒ.ದ ಸಂವಿಧಾನಕ್ಕೆ ಯಾವ ವಿಧದಲ್ಲಿಯೂ ವಿರೋಧವಾಗಿರಕೂಡದು.

**ನಿರ್ದಿಷ್ಟಪಡಿಸಿರದ ಅಧಿಕಾರಗಳು**

**ವಿಧಿ ೩೧**

ಈ ಸಂವಿಧಾನದಲ್ಲಿ ನಿರ್ದಿಷ್ಟಪಡಿಸಿರದ ಅಧಿಕಾರಗಳನ್ನು ಕಾರ್ಯಕಾರಿ ಸಮಿತಿಯು ಚಲಾಯಿಸಬಹುದು. ಆದರೆ ಸಂವಿಧಾನದಲ್ಲಿ ನಿರೂಪಿತವಾಗಿರದ ವಿಷಯಗಳ ಬಗ್ಗೆ ಅಧಿಕಾರವನ್ನು ಚಲಾಯಿಸಬೇಕಾದರೆ ಕಾರ್ಯಕಾರಿ ಸಮಿತಿಯು ಬಹಳ ಎಚ್ಚರಿಕೆಯಿಂದ ಅಂತಹ ಅಧಿಕಾರದ ಚಲಾವಣೆಯನ್ನು ಮಾಡಬೇಕು.

**ವಿಧಿ ೩೨**

ಪರಿಷತ್ತಿನ ಮೂರನೇ ಎರಡು ಭಾಗದಷ್ಟು ಸದಸ್ಯರಿಂದ ಮಾತ್ರ ಅಥವಾ ಮುಕ್ತ ಅಧಿವೇಶನದಲ್ಲಿನ ಪ್ರತಿನಿಧಿಗಳ ಸರಳ ಬಹುಮತದಿಂದ ಮಾತ್ರ ಈ ಸಂವಿಧಾನಕ್ಕೆ ತಿದ್ದುಪಡಿಯನ್ನು ಮಾಡಬಹುದು.

* * * * *

# ಪರಿಶಿಷ್ಟ ೨
# ಹಿಂದೂ ಹಾಗೂ ಬೌದ್ಧಧರ್ಮಗಳಲ್ಲಿ ಮಹಿಳೆಯ ಸ್ಥಾನ

**(ಈವ್ಸ್ ವೀಕ್ಲಿಯಲ್ಲಿ ೧೯೫೦ರ ಜನವರಿ ೨೧ರಂದು 'ನಮ್ಮ ಹೊಸ ಗಣರಾಜ್ಯ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾದ ಲೇಖನವೊಂದಕ್ಕೆ ಉತ್ತರ)**

**ಲಾಮಗೋವಿಂದ**

"ಯೂರೋಪಿಗಿಂತ ಬಹಳ ಹಿಂದೆಯೆ, ಭಾರತದಲ್ಲಿ ಸ್ತ್ರೀಯರನ್ನು ರಾಜತಂತ್ರದಲ್ಲಿ ದಾಳವನ್ನಾಗಿ ಬಳಸಿಕೊಳ್ಳಲಾಗುತ್ತಿತ್ತು. ರಾಮಾಯಣ ಮತ್ತು ಮಹಾಭಾರತಗಳಲ್ಲಿ ಇಂತಹ ಹಲವಾರು ಪ್ರಕರಣಗಳು ಇವೆ" – ಈ ಸಾಲುಗಳನ್ನು ಈವ್ಸ್ ವೀಕ್ಲಿಯ ೧೯೫೦ರ ಜನವರಿ ೨೧ರ ಸಂಚಿಕೆಯಲ್ಲಿ

ಪ್ರಕಟವಾದ 'ನಮ್ಮ ಹೊಸ ಗಣರಾಜ್ಯ' ಎಂಬ ಲೇಖನದಲ್ಲಿ ದಪ್ಪ ಅಕ್ಷರಗಳಲ್ಲಿ ಮುದ್ರಿಸಿದ್ದರು.

ಬುದ್ಧಿವಂತರಾದ ಈ ಲೇಖನದ ಕರ್ತೃವು ತನ್ನ ಗಂಡನಿಂದ (ಅಥವಾ ಗಂಡಂದಿರಿಂದ) ಪಣಕ್ಕಿಡಲ್ಪಟ್ಟ ದ್ರೌಪದಿಯ ಬಗ್ಗೆ ಹೇಳುತ್ತಿದ್ದಾರೆಯೋ ಅಥವಾ ರಾವಣನನ್ನು ಸಶಕ್ತಳಾಗಿ ತಿರಸ್ಕರಿಸಿದರೂ ಸಂಶಯ, ಅವಿಶ್ವಾಸಗಳಿಗೆ ಬಲಿಯಾಗಿ ಅಗ್ನಿಪ್ರವೇಶ ಮಾಡಿ ತನ್ನ ಪಾವಿತ್ರ್ಯವನ್ನು ತೋರಿಸಿಕೊಡಬೇಕಾಗಿ ಬಂದ ಮತ್ತು ನಂತರದ ದಿನಗಳಲ್ಲಿ ಕಾಡಿನಲ್ಲಿ ತೊರೆಯಲ್ಪಟ್ಟ ಸೀತೆಯ ಬಗ್ಗೆ ಹೇಳುತ್ತಿದ್ದಾರೆಯೋ?

ಮೇಲೆ ಹೇಳಿದ ಲೇಖನದಲ್ಲಿ, ಲೇಖಕರು ಎತ್ತಿ ಹಿಡಿದಿರುವ ಅಂಶಗಳು ಅಂದಿನ ದಿನದ ವಾಸ್ತವಾಂಶಗಳೆಂದು ನಂಬಬೇಕೆಂದು ನಮಗೆ ಹೇಳುತ್ತಿದ್ದರೆ, ದ್ರೌಪದಿಗೆ ತನ್ನ ಗಂಡಂದಿರನ್ನು ಜೂಜಿನಲ್ಲಿ ಪಣಕ್ಕಿಡುವ ಅವಕಾಶವನ್ನು ಏಕೆ ಕೊಡಲಿಲ್ಲ ಅಥವಾ, ತನ್ನ ಬಗ್ಗೆ ಹೀನಾಯವಾಗಿ ಯೋಚಿಸಿದ, ಮಾತನಾಡಿದ ಪುರುಷರನ್ನು ಅಗ್ನಿಪ್ರವೇಶ ಮಾಡಿಸುವ ಅವಕಾಶವನ್ನು ಸೀತೆಗೆ ಏಕೆ ಕೊಡಲಿಲ್ಲ?

ಈ ದೃಷ್ಟಿಯಿಂದ ಅಂದಿನ ಯುಗದಲ್ಲಿ ಸ್ತ್ರೀಯರನ್ನು ರಾಜತಂತ್ರವು ಬಳಸಿಕೊಳ್ಳುತ್ತಿತ್ತು ಎಂದು ಹೇಳಿದ್ದರೆ ಅದು ಹೆಚ್ಚು ಸಮರ್ಪಕವಾಗಿರುತ್ತಿತ್ತು.

ಯೂರೋಪಿನ ಸ್ತ್ರೀಯರು ಭಾರತದ ಅವರ ಸಹೋದರಿಯರಿಗಿಂತ ಈ ವಿಷಯದಲ್ಲಿ ಹಿಂದೆ ಬಿದ್ದಿದ್ದರೆಂದು ಹೇಳುವುದು ನನಗೆ ಸಾಧ್ಯವಿಲ್ಲ. ಆದರೆ ಅಂತಹ ಅವಕಾಶವನ್ನು ಕೆಲವರಾದರೂ ಪಡೆದಿದ್ದರೆ ತಕ್ಷಣ ಅವರು ಅದನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಳ್ಳುತ್ತಿದ್ದರು.

ಎಲಿಜಬೆತ್ ರಾಣಿಯು ದ್ರೌಪದಿಯ ಸ್ಥಾನದಲ್ಲಿದ್ದಿದ್ದರೆ, ಆಕೆ ತನ್ನ ಹತಭಾಗ್ಯನಾಗಿದ್ದ ಪ್ರಿಯಕರ ಲಾರ್ಡ್ ಎಸೆಕ್ಸ್‌ನನ್ನು ಗಲ್ಲಿಗೇರಿಸಿದ ಹಾಗೆ, ಈ ಐವರು ಪತಿಗಳನ್ನು ಗಲ್ಲಿಗೆ ಏರಿಸುತ್ತಿದ್ದಳು. ಆದರೆ, ರಾಜತಾಂತ್ರಿಕ ಜ್ಞಾನವಿಲ್ಲದ ದ್ರೌಪದಿಯು, ಎಲ್ಲಾ ರಾಜಕೀಯ ಅಧಿಕಾರಗಳೂ, ಕುಟಿಲತೆಯೂ ಇದ್ದ ರಾಣಿ ಬೆಸ್ಸಿಗಿಂತ ಹೆಚ್ಚು ಆಪ್ತಳಾಗುತ್ತಾಳೆ.

ಅನುಕೂಲಕರವಾಗಿ ಹೇಳಬಹುದಿದ್ದ ಇನ್ನೊಬ್ಬ ವ್ಯಕ್ತಿಯೆಂದರೆ ಹಲವು ಮಕ್ಕಳ ಪ್ರೀತಿಯ ತಾಯಿಯಾಗಿದ್ದ, ಸಮರ್ಥ ಆಡಳಿತಗಾರಳಾಗಿದ್ದ, ಆಸ್ಟ್ರಿಯಾ ಚಕ್ರವರ್ತಿನಿ ಮೇರಿಯಾ ಥೆರೇಸಾ. ಚರಿತ್ರೆಯಲ್ಲಿ ಇನ್ನೂ ಹಿಂದೆ ಹೋಗಿ ಹುಡುಕಿದರೆ ಎದ್ದು ಕಾಣುವ ಹೆಸರು, ಅತ್ಯಂತ ಕೆಳಸ್ತರದಿಂದ ಬಂದು

ಸಾರ್ವಭೌಮಪದವಿಯನ್ನಲಂಕರಿಸಿದ ಬೈಜಾಂಟಿಯಂನ ಚಕ್ರವರ್ತಿನಿ ಥಿಯೋಡೊರಾ ಅವಳದ್ದು. ವೇಶ್ಯೆಯಾಗಿ ಜೀವನವನ್ನು ಆರಂಭಿಸಿದ ಅವಳು ಚಕ್ರವರ್ತಿನಿಯಾದಳು.

ಇದು ಭಾರತೀಯ ನಾರಿತ್ವದ ಚರಮ ಧ್ಯೇಯವಾಗುವುದು ಸಾಧ್ಯವಿಲ್ಲ. ರಾಜತಾಂತ್ರಿಕ ನಿಪುಣತೆ ಸ್ತ್ರೀಯರ ವ್ಯಕ್ತಿತ್ವದ ಗೌರವನ್ನು ಒಂದು ಅಂಗುಲವೂ ಮೇಲೆ ಏರಿಸುವುದಿಲ್ಲ.

ಯೂರೋಪಿನ ಮಹಿಳೆಯರಿಗಿಂತ ಮೊದಲು ಭಾರತದ ಮಹಿಳೆಯರು ರಾಜತಂತ್ರದಲ್ಲಿ ಪಾಲ್ಗೊಳ್ಳಲಿಲ್ಲವೆಂಬುದನ್ನು ಸತ್ಯವೆಂದು ಇಟ್ಟುಕೊಂಡರೂ ನಮ್ಮ ಲೇಖಕರಿಗೆ ಇತ್ತೀಚಿನ ಯುಗದವರಾದ ಝಾನ್ಸಿ ರಾಣಿ ಮತ್ತು ಚಾಂದ್ ಬೀಬಿಯವರಿಗಿಂತ ಹಿಂದಿನ ಚಾರಿತ್ರಿಕ ದಾಖಲೆಗಳನ್ನು ನೋಡುವುದು ಸಾಧ್ಯವಾಗಿಲ್ಲ.

ಆದರೆ ಲೇಖನದಲ್ಲಿರುವ ಒಂದು ಅತ್ಯಾಶ್ಚರ್ಯಕರವಾದ ಹೇಳಿಕೆಯೆಂದರೆ "ಬೌದ್ಧರ ವಾದವು ಸ್ತ್ರೀಯರನ್ನು ಹಿನ್ನೆಲೆಗೆ ತಳ್ಳಿತು" ಎಂದು ತೆಗೆದಿರುವ ಉದ್ಗಾರ.

ಈ ವಾದವು ಯಾವುದು ಎಂಬುದನ್ನು ಪ್ರಾಜ್ಞ ಲೇಖಕರು ತಮ್ಮ ಲೇಖನದಲ್ಲಿ ತಿಳಿಸಿಲ್ಲ. ನಾನು ಬೌದ್ಧರ ಪವಿತ್ರಗ್ರಂಥಗಳನ್ನು, ಬೌದ್ಧರ ಉಪದೇಶಗಳನ್ನು ಪರಿಶೀಲಿಸಿದ ಮೇಲೂ ನನಗೆ ಸ್ತ್ರೀಯರ ಬಗ್ಗೆ ಇರುವ ಈ ವಿಶೇಷ ವಾದವನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಅದರ ಬದಲಿಗೆ ನನಗೆ ದೊರಕಿದ್ದು ಮಾನವ ಜನಾಂಗದ ಬಗ್ಗೆ ಮಾತ್ರ. ನಾಲ್ಕು ಉದ್ದಾಮ ಸತ್ಯಗಳು, ಅವಲಂಬಿತ ಉಗಮದ ಸೂತ್ರ ಮತ್ತು ವಿಮುಕ್ತಿಯ ಎಂಟು ಬಗೆಯ ಮಾರ್ಗಗಳು – ಪುರುಷ ಮತ್ತು ಸ್ತ್ರೀಯರ ನಡುವಿನ ಬೇಧವನ್ನು ಗಣಿಸುವುದಿಲ್ಲ.

ಬೌದ್ಧರ ಚರಿತ್ರೆಯ ಉದ್ದಕ್ಕೂ ಬೌದ್ಧೇತರ ದೇಶಗಳಿಗಿಂತ ಬೌದ್ಧ ಸಮಾಜದಲ್ಲಿ ಹೆಂಗಸರು ಉತ್ತಮವಾದ ಸ್ಥಾನವನ್ನು ಹೊಂದಿದ್ದರು. ತನ್ನ ಉಗಮದ ಕಾಲದಿಂದಲೂ ಬೌದ್ಧಮತಕ್ಕೆ ಸ್ತ್ರೀಪುರುಷರ ನಡುವಿನ ಸಮಾನತೆಯೇ ಆದರ್ಶ ಸೂತ್ರವಾಗಿತ್ತು.

ಸಿಲೋನ್, ಬರ್ಮಾ, ಇಂಡೋ–ಚೈನಾ, ಟಿಬೆಟ್ ಮುಂತಾದ ಯಾವುದೇ ಬೌದ್ಧ ದೇಶಗಳನ್ನು ನೋಡಿದರೂ ಸ್ತ್ರೀಯರು ಎಂತಹ ಅದ್ಭುತ ಸ್ಥಾನಮಾನಗಳನ್ನು ಹೊಂದಿದ್ದರು ಎಂಬುದು ತಿಳಿಯುತ್ತದೆ. ಬೌದ್ಧ ಮಹಿಳೆಯು ತನ್ನ ಗಂಡನನ್ನು ದೇವರು ಎಂಬ ಪೂಜ್ಯ ಭಾವನೆಯಿಂದ ನೋಡದಿರುವುದರಿಂದ ತನ್ನ ಗಂಡನ ಭೋಜನವಾದ ನಂತರ ಮಾತ್ರ ತಾನು ಊಟಮಾಡಬೇಕೆಂಬ ನಿಯಮವಾಗಲೀ, ತನ್ನ ಪತಿಯ ಮರಣಾನಂತರ ಹೀನಬಾಳನ್ನು ಬಾಳಬೇಕೆಂದು ಅವಳು ಸಹಗಮನ ಮಾಡಬೇಕೆಂಬ ಬಲವಂತವಾಗಲೀ ಅವಳಿಗೆ ಇಲ್ಲ. ಇದಕ್ಕೆ ವಿರುದ್ಧವಾಗಿ, ತನ್ನ ಇಷ್ಟಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಪತಿಯನ್ನು ತ್ಯಜಿಸುವ ಸ್ವಾತಂತ್ರ್ಯವು ಅವಳಿಗಿದೆ. ಅವಳು ತನ್ನ ಪತಿಯ ಮರಣಾನಂತರ ಸಾಮಾಜಿಕವಾಗಿ ಪರಿತ್ಯಕ್ತಳಾಗದೆ, ಬಯಸಿದರೆ ಮರು–ಮದುವೆಯನ್ನೂ ಮಾಡಿಕೊಳ್ಳಬಹುದಾಗಿದೆ. ಈ ಮಹಿಳೆಯರು, ಅದರಲ್ಲಿಯೂ ನನ್ನ ಅನುಭವದ ಮೇಲೆ ಹೇಳಬಹುದಾದರೆ, ಬರ್ಮಾ ಮತ್ತು ಟಿಬೆಟ್ ದೇಶಗಳಲ್ಲಿನ ಮಹಿಳೆಯರು, ಪುರುಷನಿಗೆ ಸಾಮಾಜಿಕವಾಗಿ ಹಾಗೂ ವ್ಯಾವಹಾರಿಕವಾಗಿ ಸರ್ವವಿಧದಲ್ಲಿಯೂ ಸಮಾನರಾಗಿದ್ದಾರೆ. ಸ್ತ್ರೀಯರು ಪುರುಷರಿಗಿಂತ ಹೆಚ್ಚಿನ ವ್ಯವಹಾರ ಸಾಮರ್ಥ್ಯವನ್ನು ಹೊಂದಿರುವುದರಿಂದ, ಅಲ್ಲಿನ ಪುರುಷರು ವ್ಯವಹಾರವನ್ನು ನಿಭಾಯಿಸುವುದನ್ನು ಸ್ವಸಂತೋಷದಿಂದ ತಮ್ಮ ಸ್ತ್ರೀಯರಿಗೆ ಒಪ್ಪಿಸುತ್ತಾರೆ.

ನಮ್ಮ ಲೇಖಕರು ಹೇಳುವ ಹಾಗೆ "ಬುದ್ಧನಿಗೆ ಹೆಂಗಸರ ಬಗ್ಗೆ ಪೂರ್ವಗ್ರಹವಿತ್ತು ಮತ್ತು ಅವರ ಬಗ್ಗೆ ಸದಾ ಎಚ್ಚರಿಕೆಯಿಂದಿರುವಂತೆ ಪುರುಷರಿಗೆ ಬುದ್ಧಿವಾದವನ್ನು ಹೇಳುತ್ತಿದ್ದ" ಎಂಬುದು ನಿಜವಾದರೆ

ಬೌದ್ಧ ಸಮಾಜದಲ್ಲಿ ಹೆಂಗಸರಿಗಿರುವ ಸ್ಥಾನವು ಅವರಿಗೆ ನಿಲುಕುತ್ತಲೇ ಇರಲಿಲ್ಲ.

ತನ್ನ ಹಿಂದಿನ ಎಲ್ಲಾ ಬೋಧಕರಿಗಿಂತಲೂ ಕಂಡಿತವಾಗಿಯೂ ಹೆಚ್ಚು ವಿಶಾಲಹೃದಯಿಯಾಗಿದ್ದ, ಉದಾರ ಮನಸ್ಸಿನವನಾಗಿದ್ದ, ಸಹಿಷ್ಣುವಾಗಿದ್ದ ಬುದ್ಧನಂತಹ ಬೋಧಕನನ್ನು ಪೂರ್ವಗ್ರಹಪೀಡಿತನೆಂದು ಹಳಿಯುವುದು ಒಂದು ಅಸಾಮಾನ್ಯವಾದ ತಪ್ಪು ನಿರ್ಣಯ. ಭಾರತದ ಮಹಾನ್ ಋಷಿಗಳಲ್ಲೆಲ್ಲಾ ಬುದ್ಧನನ್ನು ಮಾತ್ರ ಲೋಕದ ಉದ್ದಗಲದಲ್ಲಿ ಜನತೆ ಆರಾಧಿಸುವುದು ಅವನಲ್ಲಿ ಪೂರ್ವಗ್ರಹಗಳಿಲ್ಲದ ಕಾರಣಕ್ಕೆ, ಅವನ ವಿಶ್ವಾತ್ಮಕ ದೃಷ್ಟಿಗೆ, ಜಾತಿ, ಮತ, ಬಣ್ಣಗಳನ್ನು ಗಮನಿಸದೆ ಮಾನವಸ್ವಭಾವವನ್ನು ಆಳವಾಗಿ ಅರ್ಥಮಾಡಿಕೊಂಡಿರುವ ಅವನ ಸಾಮರ್ಥ್ಯಕ್ಕೆ. ಹಾಗಿಲ್ಲದಿದ್ದರೆ ಅವನನ್ನು ಜ್ಞಾನೋದಯವನ್ನು ಪಡೆದ ಬುದ್ಧ ಎಂದು ಹೇಗೆ ಕರೆಯಬಹುದಿತ್ತು.

ಮನುವಿನ ಧರ್ಮಸೂತ್ರದ ನಿಯಮಗಳಿಂದಾಗಿ ನಲುಗಿ ಹೋಗಿದ್ದ ಸ್ತ್ರೀಯರ ವಿಮುಕ್ತಿಗಾಗಿ ಅಡಿಪಾಯವನ್ನು ನಿಜವಾಗಿ ಹಾಕಿದವನು ಬುದ್ಧ. ಇದನ್ನು ಒಪ್ಪಿಕೊಳ್ಳುವ ಮೂಲಕ ಲೇಖಕರು ತಾವೇ ಮಾಡಿದ್ದ 'ಬೌದ್ಧರೇ ಸ್ತ್ರೀಯರನ್ನು ಹಿನ್ನೆಲೆಗೆ ತಳ್ಳಿದವರಲ್ಲಿ ಪ್ರಥಮರು' ಎಂಬ ಹೇಳಿಕೆಯನ್ನು ವಿರೋಧಿಸುತ್ತಾರೆ. ಸಂತರಾಗುವ ವಿಷಯದಲ್ಲಿ ಪುರುಷರಿಗಿಂತ ಸ್ತ್ರೀಯರೇ ಹೆಚ್ಚಿನ ಅವಕಾಶವನ್ನು ಹೊಂದಿದ್ದಾರೆ ಎಂದು ಬುದ್ಧ ಘೋಷಿಸಿದ.

ತಾನು ಈ ಮೊದಲೇ ವೇಶ್ಯೆಯೊಬ್ಬಳು ಭಿಕ್ಷಕ್ಕಾಗಿ ನೀಡಿದ ಆಹ್ವಾನವನ್ನು ಒಪ್ಪಿಕೊಂಡಿರುವುದರಿಂದ ರಾಜನಿಂದ ಬಂದ ಆಮಂತ್ರಣವನ್ನು ಬುದ್ಧನು ನಿರಾಕರಿಸಿದ ಘಟನೆಯಿಂದ ಬೌದ್ಧ ಧರ್ಮದಲ್ಲಿ ಸ್ತ್ರೀಯರ ಬಗ್ಗೆ ಇದ್ದ ನಿಲುವು ಸ್ಪಷ್ಟವಾಗುತ್ತದೆ. ಆ ಯಃಕಶ್ಚಿತ್ ಆಮ್ರಪಾಲಿಯಂತಹ ಹೆಂಗಸಿಗೆ ಬುದ್ಧನು ಗೌರವ ತೋರಿದನೆಂದು ರಾಜನಿಗೆ ಆಘಾತವಾಗುತ್ತದೆ ಮತ್ತು ಅವನ ಮನಸ್ಸನ್ನು ಬದಲಿಸಲು ಪ್ರಯತ್ನಿಸುತ್ತಾನೆ. ಆದರೆ ಬುದ್ಧ ತನ್ನ ಮಾತಿಗೇ ಅಂಟಿಕೊಂಡಿರುತ್ತಾನೆ. ನಂತರದ ದಿನಗಳಲ್ಲಿ ಆಮ್ರಪಾಲಿಯು ಶ್ಲಾಘನೀಯ ಸ್ತ್ರೀಯಾಗಿ, ಬುದ್ಧನ ಅತ್ಯಂತ ಆಪ್ತ ಶಿಷ್ಯರಲ್ಲಿ ಒಬ್ಬಳಾಗುತ್ತಾಳೆ. ಆತನಲ್ಲಿ ಸ್ತ್ರೀಯರ ಬಗ್ಗೆ ವಿಶಾಲ ಮನೋಭಾವವಿಲ್ಲದಿದ್ದರೆ ಅದನ್ನು ಹೊರಹಾಕಲು ಅವನಿಗೆ ಹೇರಳ ಅವಕಾಶಗಳಿದ್ದವು.

'ಬುದ್ಧನು ಹೆಂಗಸರ ಬಗ್ಗೆ ಎಚ್ಚರದಿಂದಿರಬೇಕೆಂದು ಯಾವಾಗಲೂ ಪುರುಷರಿಗೆ ಬುದ್ಧಿವಾದವನ್ನು ಹೇಳುತ್ತಿದ್ದ' ಎಂಬುದು ಅರ್ಧಸತ್ಯ. ಬುದ್ಧನ ಮಾತುಗಳು ಅವುಗಳ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಲು ಶ್ರಮವನ್ನು ಪಡದವರನ್ನು ಈ ಹೇಳಿಕೆ ದಾರಿತಪ್ಪಿಸುತ್ತದೆ.

ಬುದ್ಧನು ಈ ಎಚ್ಚರಿಕೆಯನ್ನು ನೀಡಿದ್ದು ಎಲ್ಲಾ ಪುರುಷರಿಗೆ ಅಲ್ಲ, ಬದಲಿಗೆ ಸಂನ್ಯಾಸಿಗಳಿಗೆ ಮಾತ್ರ. ಕಾರಣ ಸಂನ್ಯಾಸಿಗಳು ಪ್ರಾಚೀನ ಭಾರತದ ನಿಯಮಗಳಿಗೆ ಅನುಸಾರವಾಗಿ ಬ್ರಹ್ಮಚರ್ಯಾಶ್ರಮದ ಪ್ರತಿಜ್ಞೆಯನ್ನು ಕೈಗೊಂಡಿದ್ದವರು. ಸಂನ್ಯಾಸಿನಿಯರಿಗೂ ಪುರುಷರ ಬಗ್ಗೆ ಎಚ್ಚರವಾಗಿರುವಂತೆ ಅಷ್ಟೇ ಕಟ್ಟುನಿಟ್ಟಿನ ಬುದ್ಧಿವಾದವನ್ನು ಬುದ್ಧನು ಹೇಳಿದ್ದ. ಬುದ್ಧನ ಈ ಬುದ್ಧಿವಾದವು ಅವನು ಹೆಂಗಸರ ಬಗ್ಗೆ ಪೂರ್ವಗ್ರಹಪೀಡಿತನಾಗಿದ್ದುದರಿಂದ ಬಂದುದಲ್ಲ. ಆದರೆ ಸ್ತ್ರೀಪುರುಷರೆಲ್ಲರಲ್ಲೂ ಸಮಾನವಾಗಿರುವ ದೌರ್ಬಲ್ಯದ ಅರಿವು ಅವನಿಗಿದ್ದುದರಿಂದ. ಧಾರ್ಮಿಕ ಸಾಹಿತ್ಯಕ್ಕೆ ಸ್ವತಂತ್ರವಾಗಿ ಕೊಡುಗೆಗಳನ್ನು ಪ್ರಥಮವಾಗಿ ನೀಡಿದವರೆಂದರೆ ಬೌದ್ಧ ಸ್ತ್ರೀಯರೇ. ಅವರನ್ನು ಅವರ ಕಾಲದ ಅತ್ಯುತ್ತಮ ಗ್ರಂಥಕಾರರ ಸಾಲಿನಲ್ಲಿ ಅವರ ಸಮಾನರೆಂದು ಮಾನ್ಯಮಾಡಲಾಗಿತ್ತು. ಬೌದ್ಧ ಭಗಿನಿಯರ ಗೀತಗುಚ್ಛವಾದ ಥೇರಿಗಾತಾಕ್ಕೆ ಬೌದ್ಧ ಧಾರ್ಮಿಕ ಗ್ರಂಥಗಳಿಗೆ ಸಮಾನವಾದ ಸ್ಥಾನವನ್ನು ನೀಡಿದ್ದರು ಮತ್ತು ಅದನ್ನು ಬುದ್ಧನ ಉಪದೇಶಗಳ ಮತ್ತು ಅವನ ಪ್ರಮುಖ ಶಿಷ್ಯರ ಉಪದೇಶಗಳ ಸಾಲಿನಲ್ಲಿ ಇರಿಸಿದ್ದರು ಎಂಬುದು ಇದನ್ನು ಪ್ರಮಾಣೀಕರಿಸುತ್ತದೆ.

ಹಿಂದೂಧರ್ಮ ಮತ್ತು ಬೌದ್ಧಧರ್ಮಗಳೆರಡರಲ್ಲಿಯೂ ಮಹಾನ್ ಸ್ತ್ರೀಯರು ಹುಟ್ಟಿದ್ದಾರೆ. ತಮ್ಮತಮ್ಮ ಕಾಲಗಳಿಗೆ ಅನುಗುಣವಾಗಿ, ತಮ್ಮ ಕಾಲದ ಜನತೆಯ ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧನೆಗಳನ್ನು ಮಾಡಿದ ಪ್ರಾಚೀನ ಋಷಿಗಳ ಬೋಧನೆಯಲ್ಲಿ ಮತ್ತು ಆಚಾರಗಳಲ್ಲಿ ಇರಬಹುದಾದ ತಪ್ಪುಗಳನ್ನು ಹುಡುಕುತ್ತಾ ಕೂರುವ ಬದಲು ಅಂದಿನ ಮಹಾನ್ ಮಹಿಳಾ ಚೇತನಗಳನ್ನು ಅನುಸರಿಸಲು ಯತ್ನಿಸೋಣ. ಆ ಚೇತನಗಳು ರಾಜತಂತ್ರದ ಹಲವು ಪಟ್ಟು ಮೇಲಿನ ಹಂತಗಳಲ್ಲಿದ್ದವು. ಅವರ ಮನಸ್ಸು ಅನೇಕ ಚಕ್ರವರ್ತಿಗಳ ಮನಸ್ಸಿಗಿಂತ ವಿಶಾಲವಾಗಿದ್ದಿತು. ಮೃತ್ಯುದೇವತೆ ಯಮನನ್ನೇ ಹಿಮ್ಮೆಟ್ಟಿಸಿದ ಸಾವಿತ್ರಿಯ ಅಗಾಧವಾದ ಪ್ರೇಮ ಮತ್ತು ವಿವೇಕಗಳು ಸ್ತ್ರೀತ್ವದ ಅತ್ಯುತ್ತಮ ಪ್ರತೀಕಗಳಾಗಿ ಯಾವಾಗಲೂ ನಿಂತಿರುತ್ತವೆ. ಉಪನಿಷತ್ತಿನಲ್ಲಿನ ಮೈತ್ರೇಯೀ ಹಾಗೂ ಗಾರ್ಗಿಯರ ದನಿಗಳು ನಮ್ಮ ಕಿವಿಯಲ್ಲಿ ಯಾವಾಗಲೂ ಮೊಳಗುತ್ತಿರುತ್ತವೆ. ಸಂತ ಮೀರಾಬಾಯಿಯ ಭಕ್ತಿಗೀತೆಗಳಂತೆ, ಪದ್ಮಿನಿಯ ಶೌರ್ಯದಂತೆ, ಬೌದ್ಧಭಗಿನಿಯರ ಗೀತೆಗಳೂ ನಮ್ಮ ಹೃದಯದಲ್ಲಿ ಸದಾ ನೆಲಸಿರುತ್ತವೆ.*

* * * * *

---

*'ಹಿಂದೂಸ್ತ್ರೀಯ ಉನ್ನತಿ ಮತ್ತು ಅವನತಿ – ಅದಕ್ಕೆ ಹೊಣೆಗಾರರು ಯಾರು?' ಎಂಬ ಪುಸ್ತಿಕೆಯ ಅನುಬಂಧ

# ಪರಿಶಿಷ್ಟ ೩

## ಕ್ಯಾಬಿನೆಟ್ ಮಿಷನ್

ದಂಗೆಯು ಆರಂಭವಾದ ದಿನವಾದ ೧೯೪೬ರ ಫೆಬ್ರವರಿ ೧೯ರಂದು ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ಮೇಲ್ಮನೆಯಲ್ಲಿ ಹೀಗೆ ಘೋಷಿಸಿದರು. ಭಾರತ ಅಥವಾ ಬ್ರಿಟಿಷ್ ಕಾಮನ್‌ವೆಲ್ತ್‌ಗಳಿಗೆ ಮಾತ್ರವಲ್ಲದೆ, ವಿಶ್ವಶಾಂತಿಗೇ ಅತಿಮುಖ್ಯವಾಗಿರುವುದರಿಂದ, ಭಾರತೀಯ ಮುಖಂಡರೊಡನೆ ನಡೆದ ಯಶಸ್ವೀ ಸಂಧಾನಗಳ ಪರಿಣಾಮವಾಗಿ, ಬ್ರಿಟಿಷ್ ಸರಕಾರವು ಭಾರತಕ್ಕೆ ಕ್ಯಾಬಿನೆಟ್ ಸಚಿವರಾದ ಲಾರ್ಡ್ ಪೆಥಿಕ್ ಲಾರೆನ್ಸ್, ಭಾರತದ ವ್ಯವಹಾರಗಳ ಕಾರ್ಯದರ್ಶಿ, ಸರ್ ಸ್ಟಾಫೋರ್ಡ್ ಕ್ರಿಪ್ಸ್, ವ್ಯಾಪಾರ ಮಂಡಳಿಯ ಅಧ್ಯಕ್ಷರು, ಮತ್ತು ಪ್ರಥಮ ಲಾರ್ಡ್ ಆಫ್ ಅಡ್ಮಿರಾಲ್ಟಿ ಎ.ವಿ. ಅಲೆಗ್ಸಾಂಡರ್ ಅವರನ್ನೊಳಗೊಂಡ ವಿಶೇಷ ಮಿಷನ್ ಒಂದನ್ನು ಈ ವಿಷಯದಲ್ಲಿ ಭಾರತದ ಗವರ್ನರ್ ಜನರಲ್ಲರಿಗೆ ಸಹಕಾರಿಯಾಗುವಂತೆ ಕಳುಹಿಸುತ್ತಿದೆ. ಇಂತಹುದೇ ಒಂದು ಹೇಳಿಕೆಯನ್ನು ಶ್ರೀ ಕ್ಲೆಮೆಂಟ್ ಅಟ್ಲಿಯವರು ಕೆಳಮನೆಯಲ್ಲಿ ನೀಡಿದ್ದಾರೆ.

ಭಾರತದಲ್ಲಿನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವ ಸಲುವಾಗಿ ಲಾರ್ಡ್ ಪೆಥಿಕ್ ಲಾರೆನ್ಸ್ ಅವರ ನೇತೃತ್ವದ ಈ ಕ್ಯಾಬಿನೆಟ್ ಮಿಷನ್ ಭಾರತವನ್ನು ೧೯೪೬ರ ಮಾರ್ಚ್ ೨೩ರಂದು ತಲುಪಿತು. ಅಧಿಕಾರದ ಹಸ್ತಾಂತರಕ್ಕೆ ಸಾಧ್ಯವಾದಷ್ಟೂ ಉತ್ತಮ ವ್ಯವಸ್ಥೆಯನ್ನು ಮಾಡಿ ಆದಷ್ಟು ಬೇಗ ಭಾರತವನ್ನು ತೊರೆಯಬೇಕೆಂಬ ಲೇಬರ್ ಪಕ್ಷದ ಸರಕಾರದ ತೀರ್ಮಾನದ ಹಿನ್ನೆಲೆಯಲ್ಲಿ ಮಿಷನ್ನಿನ ಕಾರ್ಯಚಟುವಟಿಕೆಗಳನ್ನು ಮತ್ತು ಅದನ್ನು ಅನುಸರಿಸಿ ನಡೆದ ಘಟನೆಗಳನ್ನು ಅರ್ಥಮಾಡಿಕೊಳ್ಳಬಹುದು[೧] ಮುಖಂಡರೊಡನೆ ನಡೆಸಿದ ಸಂಧಾನಗಳು ನಿರೀಕ್ಷಿತ ಫಲಿತಾಂಶವನ್ನು ನೀಡಲಿಲ್ಲ. ೧೯೪೬ರ ಮೇ ೧೬ರಂದು ಮಿಷನ್ ತನ್ನದೇ ಆದ ಯೋಜನೆಯನ್ನು ಬಿಡುಗಡೆಮಾಡಿತು. ಪಾಕಿಸ್ತಾನದ ಪ್ರಶ್ನೆಯನ್ನು ಕೂಲಂಕಷವಾಗಿ ಚರ್ಚಿಸಿದ ನಂತರ, ಆಡಳಿತಾತ್ಮಕ, ಆರ್ಥಿಕ ಮತ್ತು ಮಿಲಿಟರಿ ಹಾಗೂ ಸಂಪರ್ಕಸಾಧನಗಳಿಗೆ ಮತ್ತು ಭಾರತೀಯ ಸಂಸ್ಥಾನಗಳಿಗೆ ಸಂಬಂಧಿಸಿದ ಸಮಸ್ಯೆಗಳ ಹಿನ್ನೆಲೆಯಲ್ಲಿ ಚಿಕ್ಕದಾಗಲೀ, ದೊಡ್ಡದಾಗಲೀ, ಪಾಕಿಸ್ತಾನವನ್ನು ಪ್ರತ್ಯೇಕ ರಾಷ್ಟ್ರವನ್ನಾಗಿಸುವುದು ಕಾರ್ಯಸಾಧುವಲ್ಲ ಎಂದು ತೀರ್ಮಾನಿಸಿತು. ಆದರೆ, ತಮ್ಮ ಸಾಂಸ್ಕೃತಿಕ, ರಾಜಕೀಯ ಮತ್ತು ಸಾಮಾಜಿಕ ಜೀವನಗಳ ಮೇಲೆ ಹಿಂದೂಗಳು ಪ್ರಭುತ್ವವನ್ನು ನಡೆಸಬಹುದು ಎಂಬ ಮುಸ್ಲಿಮರ ಭಯವನ್ನು ಅಲ್ಲಗಳೆಯುವಂತಿಲ್ಲ. ಭಾರತೀಯ ಸಂಸ್ಥಾನಗಳ ವಿಷಯದಲ್ಲಿ ಭಾರತಕ್ಕೆ ಸ್ವಾತಂತ್ರ್ಯವು ದಕ್ಕಿದ ನಂತರ ಸಂಸ್ಥಾನಗಳ ಮೇಲೆ ಪ್ರಭುತ್ವವನ್ನು ಹಿಡಿದಿಟ್ಟುಕೊಳ್ಳುವುದು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಾಧ್ಯವಿಲ್ಲ ಮತ್ತು ಅದನ್ನು ಹೊಸದಾಗಿ ರಚಿತವಾಗಿರುವ ಭಾರತ ಸರಕಾರಕ್ಕೆ ವರ್ಗಾಯಿಸುವುದೂ ಸಾಧ್ಯವಿಲ್ಲ. ಆದರೂ ಸಂಸ್ಥಾನಗಳು ಹೊಸ ಸರಕಾರದೊಡನೆ ಸಹಕರಿಸುವ ಇಚ್ಛೆಯನ್ನು ಹೊಂದಿವೆ. ಹೊಸ ಸಂವಿಧಾನವನ್ನು ರಚಿಸುವ ಹಲವು ವಿಧಾನಗಳ ಸಂಭಾವ್ಯತೆಯನ್ನು

---

೧. ಭಾಷಣಗಳು ಮತ್ತು ಭಾರತೀಯ ಸಂವಿಧಾನದ ದಾಖಲೆಗಳು – ಸಂಪುಟ ೧, ಆಯ್ದವರು: ಸರ್ ಮಾರಿಸ್ ಗ್ವೈರ್ ಮತ್ತು ಎ. ಅಪ್ಪಾದೊರೈ – ಮುನ್ನುಡಿ, ಪುಟ ೭ – ೧೯೫೭

ಕೂಲಂಕಷವಾಗಿ ಪರಿಶೀಲಿಸಿದ ನಂತರ ಕಂಡುಬಂದ ನ್ಯಾಯಯುತ ಹಾಗೂ ಕಾರ್ಯಸಾಧುವಾದ ಮಾರ್ಗವೆಂದರೆ (ಅ) ಪ್ರತಿ ಪ್ರಾಂತಕ್ಕೂ ಅಲ್ಲಿನ ಜಾತಿವಾರು ಸಂಖ್ಯೆಯ ಆಧಾರದ ಮೇಲೆ ನಿರ್ದಿಷ್ಟ ಸಂಖ್ಯೆಗಳನ್ನು ನಿಗದಿಪಡಿಸಬೇಕು. ಇದನ್ನು ಸರಿಸುಮಾರಾಗಿ ಒಂದು ದಶಲಕ್ಷಕ್ಕೆ ಒಂದು ಎಂಬುದಾಗಿ ನಿಗದಿಮಾಡಬಹುದು. ಹೆಚ್ಚುಕಡಿಮೆ ವಯಸ್ಕ ಮತದಾನಕ್ಕೆ ಸಮನಾಗಬಹುದು; (ಆ) ಹೀಗೆ ಪ್ರತಿ ರಾಜ್ಯಕ್ಕೂ ನಿಗದಿಯಾಗಬಹುದಾದ ಒಟ್ಟು ಸಂಖ್ಯೆಯನ್ನು ಅಲ್ಲಿನ ಮುಖ್ಯ ಸಮುದಾಯಗಳಿಗೆ ಅವುಗಳ ಸಂಖ್ಯಾಬಲದ ಆಧಾರದ ಮೇಲೆ ಹಂಚಬೇಕು. (ಇ) ಹೀಗೆ ಪ್ರತಿ ಸಮುದಾಯಗಳವರ ಅಭ್ಯರ್ಥಿಗಳನ್ನು ಆಯಾ ಸಮುದಾಯದ ಶಾಸನಸಭಾ ಸದಸ್ಯರೇ ಆಯ್ಕೆಮಾಡಬೇಕು. ಈ ಉದ್ದೇಶಕ್ಕಾಗಿ ಭಾರತದಲ್ಲಿ ಕೇವಲ ಮೂರು ಸಮುದಾಯಗಳನ್ನು ಮಾತ್ರ ಗಣಿಸಬೇಕು – ಮುಸ್ಲಿಮರು, ಸಿಕ್ಖರು ಮತ್ತು ಇತರರು. ಮುಸ್ಲಿಮರು ಮತ್ತು ಸಿಕ್ಖರನ್ನು ಬಿಟ್ಟು ಉಳಿದೆಲ್ಲರೂ 'ಇತರ'ರ ವಿಭಾಗದಲ್ಲಿಯೇ ಬರುತ್ತಾರೆ. ಇದರಿಂದ ಕೆಲವೊಂದು ಸಣ್ಣಪುಟ್ಟ ಸಮುದಾಯಗಳವರು ಪ್ರಾತಿನಿಧ್ಯದಿಂದ ವಂಚಿತರಾಗುತ್ತಾರೆ ಅಥವಾ ಅವರಿಗೆ ದೊರೆಯಬೇಕಾದಷ್ಟು ಪ್ರಾತಿನಿಧ್ಯವು ಅವರಿಗೆ ಸಿಗುವುದಿಲ್ಲ. ಅಲ್ಪಸಂಖ್ಯಾತರ ವಿಶೇಷ ಹಿತಾಸಕ್ತಿಗಳನ್ನು ಕಾಪಾಡಲು ಕೆಲವು ಮಾರ್ಗೋಪಾಯಗಳನ್ನು ಸೂಚಿಸಲಾಗಿತ್ತು.

ಆದ್ದರಿಂದ ಮಿಷನ್ ಪ್ರತಿ ಪ್ರಾಂತೀಯ ಶಾಸನಸಭೆಗಳಿಂದ ಕೆಳಕಂಡಂತೆ ಪ್ರತಿನಿಧಿಗಳನ್ನು ಆಯ್ಕೆಮಾಡಬೇಕೆಂದು ಸೂಚಿಸಿತು. ಆ ಪ್ರತಿನಿಧಿಗಳು ತಮ್ಮ ತಮ್ಮ ಸಮುದಾಯಗಳವರಿಂದ (ಮುಸ್ಲಿಂ, ಸಿಖ್ ಹಾಗೂ ಇತರರಿಂದ) ಮಾತ್ರ ಆಯ್ಕೆಯಾಗಬೇಕು ಮತ್ತು ಪ್ರತಿನಿಧಿಗಳ ಸಂಖ್ಯೆ ಅವರವರ ಸಮುದಾಯದ ಸಂಖ್ಯಾಬಲಕ್ಕೆ ಅನುಗುಣವಾಗಿರಬೇಕು ಮತ್ತು ಒಬ್ಬರಿಗೆ ಒಂದೇ ಮತ ಎನ್ನುವ ತತ್ತ್ವದ ಮೇಲೆ ಮತದಾನವಾಗಬೇಕು.

**ಪ್ರಾತಿನಿಧ್ಯದ ತಃಖ್ತೆ**

**(ಅ) ವಿಭಾಗ**

| **ಪ್ರಾಂತ** | **ಸಾಮಾನ್ಯ** | **ಮುಸ್ಲಿಂ** | **ಒಟ್ಟು** |
|---|---|---|---|
| ಮದರಾಸು | ೪೫ | ೪ | ೪೯ |
| ಬಾಂಬೆ | ೧೯ | ೨ | ೨೧ |
| ಸಂಯುಕ್ತ ಪ್ರಾಂತಗಳು | ೪೭ | ೮ | ೫೫ |
| ಬಿಹಾರ | ೩೧ | ೫ | ೩೬ |
| ಮಧ್ಯಪ್ರಾಂತಗಳು | ೧೬ | ೧ | ೧೭ |
| ಒರಿಸ್ಸಾ | ೯ | ೦ | ೯ |
| **ಒಟ್ಟು** | **೧೬೭** | **೨೦** | **೧೮೭** |

**(ಆ) ವಿಭಾಗ**

| **ಪ್ರಾಂತ** | **ಸಾಮಾನ್ಯ** | **ಮುಸ್ಲಿಂ** | **ಸಿಖ್** | **ಒಟ್ಟು** |
|---|---|---|---|---|
| ಪಂಜಾಬ್ | ೮ | ೧೬ | ೪ | ೨೮ |

| | | | | |
|---|---|---|---|---|
| ವಾಯವ್ಯ ಗಡಿ ಪ್ರದೇಶಗಳು | ೦ | ೩ | ೦ | ೩ |
| ಸಿಂಧ್ | ೧ | ೩ | ೦ | ೪ |
| **ಒಟ್ಟು** | **೯** | **೨೨** | **೪** | **೩೫** |

(ಇ) ವಿಭಾಗ

| **ಪ್ರಾಂತ** | **ಸಾಮಾನ್ಯ** | **ಮುಸ್ಲಿಂ** | **ಒಟ್ಟು** |
|---|---|---|---|
| ಬಂಗಾಳ | ೨೭ | ೩೩ | ೬೦ |
| ಅಸ್ಸಾಂ | ೭ | ೩ | ೧೦ |
| **ಒಟ್ಟು** | **೩೪** | **೩೬** | **೭೦** |

| | |
|---|---|
| ಬ್ರಿಟಿಷ್ ಭಾರತ ಒಟ್ಟು | ೨೯೨ |
| ಭಾರತೀಯ ರಾಜ್ಯಗಳು | ೯೩ |
| **ಒಟ್ಟು** | **೩೮೫** |

ಮುಖ್ಯ ಆಯುಕ್ತರ ಪ್ರಾಂತಗಳನ್ನು ಪ್ರತಿನಿಧಿಸುವ ಸಲುವಾಗಿ, ದೆಹಲಿಯನ್ನು ಕೇಂದ್ರೀಯ ಶಾಸನಸಭೆಯಲ್ಲಿ ಪ್ರತಿನಿಧಿಸುವವರು, ಅದೇ ಶಾಸನಸಭೆಯಲ್ಲಿ ಅಜಮೀರ್, ಮೇವಾಡಗಳನ್ನು ಪ್ರತಿನಿಧಿಸುವವವರು ಮತ್ತು ಕೊಡಗಿನ ಶಾಸನಸಭೆಯಿಂದ ಆಯ್ಕೆಯಾದ ಸದಸ್ಯರು – ಇವರುಗಳನ್ನು ಪರಿಚ್ಛೇದ (೧)ದಲ್ಲಿ ಸೇರಿಸಬೇಕು. ಬ್ರಿಟಿಷ್ ಬಲೂಚಿಸ್ತಾನದ ಪ್ರತಿನಿಧಿಯನ್ನು ಪರಿಚ್ಛೇದ (ಆ)ದಲ್ಲಿ ಸೇರಿಸಬೇಕು. ಆರ್ಥಿಕ ಸಂವಿಧಾನ ಸಭೆಯಲ್ಲಿ ರಾಜ್ಯಗಳಿಗೆ ಯೋಗ್ಯ ಪ್ರಾತಿನಿಧ್ಯವನ್ನು ಕಲ್ಪಿಸಬೇಕು. ಆದರೆ ಅಂತಹ ಪ್ರಾತಿನಿಧ್ಯವು ಬ್ರಿಟಿಷ್ ಭಾರತದಲ್ಲಿರುವಂತೆ ಜನಸಂಖ್ಯಾಬಲದ ಮೇಲೆ ಆಧರಿಸಲ್ಪಡದೆ, ಅದಕ್ಕಾಗಿ ರಾಜ್ಯಗಳೊಡನೆ ಸಂಧಾನ ನಡೆಸಿ ರೂಪಿಸಿದ ವಿಧಾನದಲ್ಲಿ ನಡೆಯಬೇಕು. ರಾಜ್ಯಗಳು ಒಪ್ಪಂದಗಳ ಸಮಿತಿಯೊಂದರ ಮೂಲಕ, ಪ್ರಾಥಮಿಕ ಹಂತಗಳಲ್ಲಿ ಪ್ರತಿನಿಧಿಸಲ್ಪಡಬೇಕು.

ಹೀಗೆ ಆಯ್ಕೆಯಾದ ಪ್ರತಿನಿಧಿಗಳು ದೆಹಲಿಯಲ್ಲಿ ಆದಷ್ಟು ಶೀಘ್ರವಾಗಿ ಸಮಾವೇಶಗೊಳ್ಳಬೇಕೆಂದು ಕ್ಯಾಬಿನೆಟ್ ಮಿಷನ್ ಉದ್ದೇಶಿಸಿತು. ಪ್ರಥಮ ಸಮಾವೇಶದಲ್ಲಿ ವ್ಯವಹಾರದ ಕ್ರಮವನ್ನು ನಿರ್ಧರಿಸಬೇಕು, ಅಧ್ಯಕ್ಷರು ಮತ್ತಿತರ ಅಧಿಕಾರಗಳು ಆಯ್ಕೆಯಾಗಬೇಕು, ನಾಗರಿಕರ, ಅಲ್ಪಸಂಖ್ಯಾತರ ಮತ್ತು ಪ್ರತ್ಯೇಕಿಸಲ್ಪಟ್ಟ ಪ್ರದೇಶಗಳ ಹಕ್ಕುಗಳ ಬಗ್ಗೆ ಸಲಹಾ ಸಮಿತಿಗಳನ್ನು ನೇಮಿಸಬೇಕು. ನಂತರ ಪ್ರಾಂತಗಳ ಪ್ರತಿನಿಧಿಗಳನ್ನು ತಃಖ್ತೆಯಲ್ಲಿ ತೋರಿಸಿರುವ ಹಾಗೆ (ಅ), (ಆ) ಮತ್ತು (ಇ) ಎಂದು ಮೂರು ವಿಭಾಗಗಳನ್ನಾಗಿ ಮಾಡಬೇಕು. ಈ ವಿಭಾಗಗಳು ತಮ್ಮತಮ್ಮ ಪ್ರದೇಶಗಳಿಗೆ ಸಂವಿಧಾನವನ್ನು ರಚಿಸಲು ತೊಡಗಬೇಕು. ಮತ್ತೆ ಆ ಪ್ರದೇಶಗಳಿಗೆ ಸಂಯುಕ್ತ ಸಂವಿಧಾನವನ್ನು ರಚಿಸುವ ಅಗತ್ಯವಿದೆಯೇ ಎಂಬುದನ್ನು ನಿರ್ಧರಿಸಬೇಕು. ಅಂತಹ ಸಂಯಕ್ತ ವಿಧಾನವನ್ನು ಆಯಾ ವಿಭಾಗದವರೇ ನಿರ್ವಹಿಸಬೇಕು. ಪ್ರಾಂತಗಳಿಗೆ ತಮ್ಮ ವಿಭಾಗವನ್ನು ತೊರೆಯುವ ಹಕ್ಕು ಇರುತ್ತದೆ. ಹೀಗೆ ವಿಭಾಗವನ್ನು ತೊರೆಯುವ ನಿರ್ಣಯವನ್ನು ಹೊಸ ಸಂವಿಧಾನದ ಅಡಿಯಲ್ಲಿ ನಡೆದ ಮೊದಲ ಮಹಾ ಚುನಾವಣೆಯ ನಂತರ ಆ ಪ್ರಾಂತದ ಶಾಸನಸಭೆಯಲ್ಲಿ ತೆಗೆದುಕೊಳ್ಳಬೇಕು. ಎಲ್ಲಾ ವಿಭಾಗಗಳ ಪ್ರತಿನಿಧಿಗಳೂ ಮತ್ತು ಭಾರತೀಯ ರಾಜ್ಯ ಪ್ರತಿನಿಧಿಗಳೂ,

ಭಾರತಕ್ಕೆ ಹೊಸ ಸಂವಿಧಾನವನ್ನು ಅಂತಿಮಗೊಳಿಸಲು ಒಟ್ಟಾಗಿ ಸಭೆಸೇರಬೇಕು. ಕೇಂದ್ರ ಸಂವಿಧಾನ ಸಭೆಯಲ್ಲಿ ಸಂವಿಧಾನಕ್ಕೆ ಮೇಲೆ ಹೇಳಿದಂತಹ ಅಥವಾ ಕೋಮು ವಿಷಯಗಳಿಗೆ ಸಂಬಂಧಿಸಿದಂತೆ ಮೂಲಭೂತ ಬದಲಾವಣೆಯನ್ನು ಮಾಡಬೇಕಾದರೆ, ಎರಡೂ ಪ್ರಮುಖ ಸಮುದಾಯದ ಬಹುಸಂಖ್ಯಾತ ಸದಸ್ಯರು ಸಭೆಯಲ್ಲಿ ಹಾಜರಿದ್ದು ಮತದಾನದಲ್ಲಿ ಭಾಗವಹಿಸಬೇಕು. ಯಾವುದಾದರೂ ಗೊತ್ತುವಳಿಯು ಗಂಭೀರವಾದ ಕೋಮು ವಿಷಯವಾಗಿದ್ದರೆ, ಪ್ರಮುಖ ಸಮುದಾಯಗಳೆರಡರಲ್ಲಿ ಒಂದರ ಬಹುಸಂಖ್ಯೆಯ ಸದಸ್ಯರ ಮನವಿಯ ಮೇರೆಗೆ, ಕೇಂದ್ರ ನ್ಯಾಯಾಲಯದ ಜೊತೆ ಅಧ್ಯಕ್ಷರು ಸಮಾಲೋಚಿಸಿ ನಿರ್ಧಾರವನ್ನು ತೆಗೆದುಕೊಳ್ಳಬಹುದು.

ನಾಗರಿಕರ, ಬುಡಕಟ್ಟು ಜನಾಂಗಗಳ ಮತ್ತು ಪ್ರತ್ಯೇಕಿಸಲ್ಪಟ್ಟ ಪ್ರದೇಶಗಳವರ ಹಕ್ಕುಗಳಿಗಾಗಿ ಇರುವ ಸಲಹಾ ಸಮಿತಿಯು, ಸಂಕಷ್ಟಪೀಡಿತ ಜನರ ಪ್ರತಿನಿಧಿಗಳನ್ನು ಒಳಗೊಂಡಿರಬೇಕು, ಮತ್ತು ಈ ಸಲಹಾ ಸಮಿತಿಯು ಮೂಲಭೂತ ಹಕ್ಕುಗಳ ಪಟ್ಟಿಯೊಂದಿಗೆ, ಅಲ್ಪಸಂಖ್ಯಾತರನ್ನು ರಕ್ಷಿಸಲು ಬೇಕಾದ ವಿಧಿಗಳನ್ನೂ, ಬುಡಕಟ್ಟು ಹಾಗೂ ಪ್ರತ್ಯೇಕಿತ ಪ್ರದೇಶಗಳ ಆಡಳಿತದ ಬಗ್ಗೆ ಕೇಂದ್ರ ಸಂವಿಧಾನ ಸಭೆಗೆ ವರದಿಯನ್ನು ನೀಡಬೇಕು; ಅಲ್ಲದೆ, ಈ ಸಲಹೆಗಳನ್ನು ಕೇಂದ್ರದ ಸಂವಿಧಾನದಲ್ಲಿ ಸೇರಿಸಬೇಕೋ ಅಥವಾ ಪ್ರಾಂತಗಳ ಸಂವಿಧಾನದಲ್ಲಿ ಸೇರಿಸಬೇಕೋ ಎಂಬುದನ್ನು ವಿಶದಪಡಿಸಬೇಕು – ಎಂದು ಕ್ಯಾಬಿನೆಟ್ ಮಿಷನ್ ಸೂಚಿಸಿತು.

ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡುವಂತೆ ಮತ್ತು ರಾಜ್ಯಗಳಿಗೆ ಒಪ್ಪಂದ–ಸಮಿತಿಗಳನ್ನು ರಚಿಸುವಂತೆ ಗವರ್ನರ್ ಜನರಲ್ ಅವರು ಪ್ರಾಂತೀಯ ಶಾಸನಸಭೆಗಳನ್ನು ಕೇಳಿಕೊಳ್ಳುವಂತೆ ಕ್ಯಾಬಿನೆಟ್ ಮಿಷನ್ ಅವರಿಗೆ ಸೂಚಿಸಿತು. ಅಧಿಕಾರ ಹಸ್ತಾಂತರದ ವಿಷಯದಲ್ಲಿ ಉದ್ಭವಿಸಬಹುದಾದ ವಿಷಯಗಳ ಬಗ್ಗೆ ಕೇಂದ್ರ ಸಂವಿಧಾನ ಸಭೆ ಹಾಗೂ ಬ್ರಿಟನ್‌ಗಳ ನಡುವೆ ಒಪ್ಪಂದವೊಂದನ್ನು ಮಾಡಿಕೊಳ್ಳುವುದು ಆವಶ್ಯಕ".

* * * * *

---

(ಮಿಟ್ಟಲ್ ಜೆ.ಕೆ., ಪುಟಗಳು ೧೧೯–೧೨೩)

# ಪರಿಶಿಷ್ಟ ೪

## ಕ್ಯಾಬಿನೆಟ್ ಮಿಷನ್‌ನೊಂದಿಗೆ ನಡೆದ ಜಗಜೀವನ ರಾಮ್, ರಾಧಾನಾಥ್ ದಾಸ್ ಮತ್ತು ಪೃಥ್ವೀಸಿಂಗ್ ಅವರ ಸಂದರ್ಶನ

ಜಗಜ್ಜೀವನ ರಾಮ್, ರಾಧಾನಾಥ್ ದಾಸ್ ಹಾಗೂ ಪೃಥ್ವೀಸಿಂಗ್ ಆಜ಼ಾದ್ – ಮೂವರೂ ಒಟ್ಟಿಗೆ ಅಖಿಲ ಭಾರತ ದಲಿತ ವರ್ಗಗಳ ಕೂಟದ ಪ್ರತಿನಿಧಿಗಳಾಗಿ ಹಾಜರಾಗಿದ್ದರು. ದೇಶದ ಸಮಗ್ರತೆಯನ್ನು ಹಾಳುಮಾಡುವ ಯಾವುದೇ ಸೂಚನೆಯನ್ನೂ ತಮ್ಮ ಕೂಟವು ವಿರೋಧಿಸುತ್ತದೆ ಎಂದು ಅವರು ಹೇಳಿದರು. ಭಾರತವನ್ನು ಹಿಂದೂಸ್ಥಾನ ಮತ್ತು ಪಾಕಿಸ್ತಾನವೆಂದು ಎರಡು ಭಾಗಗಳನ್ನಾಗಿ ವಿಭಜಿಸುವುದು ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ, ಬದಲಿಗೆ ಇನ್ನಷ್ಟು ಹೊಸ ಸಮಸ್ಯೆಗಳಿಗೆ ದಾರಿಮಾಡಿಕೊಡುತ್ತದೆ ಎಂಬುದು ತಮ್ಮ ಕೂಟದ ಅಭಿಪ್ರಾಯವೆಂದು ಅವರು ಹೇಳಿದರು. ಅಲ್ಲದೆ, ಅವರು ಒಂದಕ್ಕಿಂತ ಹೆಚ್ಚು ಸಂವಿಧಾನ ಸಭೆಗಳನ್ನೂ ಅದು ವಿರೋಧಿಸುತ್ತದೆ ಎಂದು ನುಡಿದರು. ಹೊಸ ಸಂವಿಧಾನವು ಅಲ್ಪಸಂಖ್ಯಾತರ ಭಾಷೆ, ಸಂಸ್ಕೃತಿಗಳನ್ನು ಹಾಗೂ ಪರಿಶಿಷ್ಟ ಜಾತಿಗಳವರ ಕಲ್ಯಾಣವನ್ನು ರಕ್ಷಿಸಬೇಕು. ತಾತ್ಕಾಲಿಕ ಸರಕಾರದ ವಿಷಯವನ್ನು ಚರ್ಚಿಸುತ್ತಾ ಇತರ ಸಮುದಾಯದವರಿಗೆ ಅನ್ಯಾಯವಾಗುವ ರೀತಿಯಲ್ಲಿ ಕೆಲವು ಸಮುದಾಯದವರಿಗೆ ಪ್ರಾಮುಖ್ಯವನ್ನು ನೀಡುವುದನ್ನು ತಮ್ಮ ಕೂಟವು ವಿರೋಧಿಸುತ್ತದೆ ಎಂದರು. ಇತರ ವರ್ಗಗಳವರಿಗೆ ನೀಡುವಂತಹ ಪ್ರಾಮುಖ್ಯವನ್ನು ಪರಿಶಿಷ್ಟ ಜಾತಿಗಳವರಿಗೂ ನೀಡಬೇಕು. ತಾತ್ಕಾಲಿಕ ಸರಕಾರವು ಶಾಸನಸಭೆಗೆ ಉತ್ತರದಾಯಿಯಾಗಿರಬೇಕು ಮತ್ತು ರಕ್ಷಣೆ, ಹಣಕಾಸು ಹಾಗೂ ವಿದೇಶಾಂಗ ವ್ಯವಹಾರಗಳನ್ನು ಸಚಿವ ಸಂಪುಟವೇ ನಿರ್ವಹಿಸತಕ್ಕದ್ದು ಮತ್ತು ಪ್ರಾಂತೀಯ ಶಾಸನಸಭೆಗಳಿಂದ ಈ ಸಂಪುಟಕ್ಕೆ ಪ್ರತಿನಿಧಿಗಳು ಆರಿಸಲ್ಪಟ್ಟಿರಬೇಕು. ಪ್ರಾಂತೀಯ ಶಾಸನಸಭೆಯಲ್ಲಿನ ಅಲ್ಪಸಂಖ್ಯಾತ ಸಮುದಾಯಗಳ, ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳಿಗೆ ಕೇಂದ್ರ ಸರಕಾರದಲ್ಲಿ ಸಾಕಷ್ಟು ಅವಕಾಶ ಕಲ್ಪಿಸಿಕೊಡಬೇಕು. ಇದಕ್ಕಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಬೇಕು. ಅಂಬೇಡ್ಕರ್ ನೇತೃತ್ವದ ಪರಿಶಿಷ್ಟ ಜಾತಿ ಒಕ್ಕೂಟ ಹಾಗೂ ದಲಿತ ವರ್ಗಗಳವರ ಕೂಟಗಳ ವಾದಗಳಲ್ಲಿ ಇರುವ ಮುಖ್ಯವಾದ ವ್ಯತ್ಯಾಸವೆಂದರೆ, ಒಕ್ಕೂಟವು ಪರಿಶಿಷ್ಟ ಜಾತಿಗಳವರನ್ನು ಹಿಂದೂಗಳಾಗಿರದೆ ಒಂದು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಪರಿಗಣಿಸುತ್ತದೆ. ಆದರೆ ತಮ್ಮ ಕೂಟವು ಪರಿಶಿಷ್ಟ ಜಾತಿಗಳವರೇ ತಮ್ಮನ್ನೂ ಹಿಂದೂಗಳೆಂದೂ ಮತ್ತು ಹಿಂದೂಧರ್ಮದ ಉಳಿವಿಗಾಗಿ ಶ್ರಮಿಸಿದವರೆಂದೂ ವಾದಿಸುತ್ತಾರೆ ಎಂದು ಜಗಜ್ಜೀವನ ರಾಮ್ ಹೇಳಿದರು. ಪರಿಶಿಷ್ಟ ಜಾತಿಗಳವರನ್ನು ದೇಶದ ಇತರ ಸಮುದಾಯಗಳವರೊಡನೆ ಸಮಾನಸ್ಕಂಧರಂತೆ ನಿಲ್ಲಲು ಸಹಾಯಮಾಡಲು, ಶಾಸನಸಭೆಗಳಲ್ಲಿ ಹಾಗೂ ಲೋಕಸೇವೆಯಲ್ಲಿ ಅವರಿಗೆ ವಿಶೇಷ ಸ್ಥಾನಮಾನಗಳನ್ನು ನೀಡಬೇಕು ಎಂದು ದಲಿತವರ್ಗಗಳ ಕೂಟವು ಒತ್ತಾಯಿಸುತ್ತದೆ”

(ಅಧಿಕಾರದ ಹಸ್ತಾಂತರ – ಪುಟಗಳು ೨೪೪–೪೫)

---

ಉದ್ಧೃತ: ಖೈರ್‌ಮೋಡೆ – ಸಂಪುಟ ೮, ಪುಟಗಳು ೬೪–೬೫

# ಪರಿಶಿಷ್ಟ ೫

## ಪೂನಾ ಸತ್ಯಾಗ್ರಹ : ಸತ್ಯಾಗ್ರಹಿಗಳ ಬಂಧನ

ಕಾಂಗ್ರೆಸ್ ಕುತಂತ್ರದ ಹಿನ್ನೆಲೆಯಲ್ಲಿ ಬ್ರಿಟಿಷ್ ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸಿನಲ್ಲಿ ತಮಗೆ ಆಗಿರುವ ಅನ್ಯಾಯದ ವಿರುದ್ಧ ಬಾಂಬೆ ರಾಜ್ಯದಲ್ಲಿನ ಪರಿಶಿಷ್ಟ ಜಾತಿಗಳ ಒಕ್ಕೂಟದ ಬೆಂಬಲಿಗರು ಅಹಿಂಸಾ ಸತ್ಯಾಗ್ರಹವನ್ನು ಆರಂಭಿಸಿದರು.

ಪೂನಾ ಜಿಲ್ಲೆಯಲ್ಲಿ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಿ ಪರಿಷತ್ತಿನ ಸಭೆಯ ಮುಂದೆ ಪ್ರತಿಭಟನೆಯನ್ನು ನಡೆಸುತ್ತಿದ್ದ ಪ್ರಥಮ ಗುಂಪಿನ ನಾಲ್ಕು ಮಂದಿ ಸ್ತ್ರೀಯರೂ ಸೇರಿದಂತೆ ಒಟ್ಟು ಆರು ಜನರನ್ನು ಇಂದು ಬೆಳಿಗ್ಗೆ ಬಂಧಿಸಲಾಯಿತು. ಬಂಧಿತರಲ್ಲಿ ನಾಸಿಕದ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಶಾಂತಾಬಾಯಿ ದಾನಿ, ಒಕ್ಕೂಟದ ಬಾಂಬೆ ಶಾಖೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ಗಾಯಕವಾಡ ಅವರ ಪತ್ನಿ ಶ್ರೀಮತಿ ಗೀತಾಬಾಯಿ ಗಾಯಕವಾಡ ಅವರೂ ಸೇರಿದ್ದಾರೆ.

ಅಧಿವೇಶನವು ಪ್ರಾರಂಭವಾಗುವುದಕ್ಕೆ ಸ್ವಲ್ಪ ಮುಂಚೆ, ಅಲ್ಲಿ ಕಾವಲು ಕಾಯುತ್ತಿದ್ದ ಪೊಲಿಸರ ಕಣ್ಣುತಪ್ಪಿಸಿ, ಪರಿಷತ್ತಿನ ಸಭಾಭವನವನ್ನು ಪ್ರವೇಶಿಸಿದ ಆರು ಜನ ಸತ್ಯಾಗ್ರಹಿಗಳು, ಒಳಗೆ ಪ್ರವೇಶಿಸುತ್ತಲೇ, ತಾವು ತಂದಿದ್ದ ಕಪ್ಪು ಬಾವುಟಗಳನ್ನು ಹೊರತೆಗೆದು, ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ, ಕಾಂಗ್ರೆಸ್ಸಿಗೆ ಧಿಕ್ಕಾರ, ಪುಣೆ ಒಪ್ಪಂದವನ್ನು ರದ್ದುಗೊಳಿಸಿ ಎಂಬ ಘೋಷಣೆಗಳನ್ನು ಕೂಗಿದರು.

ಆವರಣದ ಪ್ರವೇಶದಲ್ಲಿ ಮಧ್ಯಾಹ್ನ ಒಂದು ಗಂಟೆಯ ಸುಮಾರಿಗೆ ಮತ್ತೆ ಆರು ಜನ ಪುರುಷರು ಮತ್ತು ಎಂಟುಜನ ಸ್ತ್ರೀಯರು ಇದ್ದ ಎರಡು ತಂಡಗಳನ್ನು ಬಂಧಿಸಲಾಗಿದೆ.

ಈ ಮಧ್ಯೆ, ಮೊದಲು ಬಂಧಿತರಾಗಿದ್ದ ಸತ್ಯಾಗ್ರಹಿಗಳು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದರು. ಪರಿಷತ್ತಿನ ಭವನದತ್ತ ಹೋಗುವ ಮತ್ತು ದಂಡಾಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸುವ ಉದ್ದೇಶದಿಂದ ಹೊರಟಿದ್ದ ಪರಿಶಿಷ್ಟ ಜಾತಿಗಳವರ ಒಂದು ದೊಡ್ಡ ಮೆರವಣಿಗೆಯನ್ನು ಯುದ್ಧ ಸ್ಮಾರಕದ ಬಳಿ ತಡೆಯಲಾಯಿತು. ಆ ಜಾಗದಲ್ಲಿ ಪರಿಷತ್ತು ಇನ್ನು ಅರ್ಧ ಮೈಲಿಯಿದೆ ಎಂಬುದನ್ನು ಸೂಚಿಸಲು ಸೀಮೆಸುಣ್ಣದಿಂದ ಗುರುತನ್ನು ಹಾಕಲಾಗಿತ್ತು. ದಂಡಾಧಿಕಾರಿಗಳ ಆಜ್ಞೆಯ ಪ್ರಕಾರ, ಪರಿಷತ್ತಿನ ಭವನದ ಅರ್ಧ ಮೈಲಿಗಿಂತ ಒಳಕ್ಕೆ ಮೆರವಣಿಗೆಗಳು ಹೋಗುವಂತಿರಲಿಲ್ಲ.

ಮೆರವಣಿಗೆಯು ಬೆಳಿಗ್ಗೆ ೧೦ ಗಂಟೆಗೆ ಬಾಬಾ ಜನ್ ಚೌಕದಲ್ಲಿರುವ ಸತ್ಯಾಗ್ರಹಿಗಳ ಶಿಬಿರದಿಂದ ಹೊರಟು ನಾಲ್ಕೈದು ಮೈಲಿ ಸಾಗಿ ಬಂದಿತ್ತು. ಅದರ ಮುಂದಾಳತ್ವವನ್ನು ಬಾಂಬೆ ರಾಜ್ಯದ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಬಿ.ಕೆ. ಗಾಯಕ್‌ವಾಡ್, ಅದೇ ಒಕ್ಕೂಟದ ಕಾರ್ಯದರ್ಶಿ ಶ್ರೀ ಪಿ.ಎನ್. ರಾಜಭೋಜ್ ಮತ್ತು ಬಾಂಬೆ ಶಾಸನಸಭೆಯ ಮಾಜಿ ಸದಸ್ಯ ಶ್ರೀ ಆರ್.ಆರ್. ಬೋಲೆ ಅವರುಗಳು ವಹಿಸಿದ್ದರು. ಮೆರವಣಿಗೆಯ ಮಾರ್ಗದಲ್ಲಿ ಚಿಕ್ಕ ಹೆಣ್ಣುಮಕ್ಕಳು ಒಕ್ಕೂಟದ ಧ್ವಜವನ್ನು, ಕಪ್ಪುಬಾವುಟವನ್ನು ಹಿಡಿದು ನಡೆಯುತ್ತಿದ್ದರು. ಒಂದೂವರೆ ಮೈಲಿಯ ಸುತ್ತುಬಳಸಿನ ದಾರಿಯಲ್ಲಿ

ಕ್ರಮಿಸಿದ ಮೆರವಣಿಗೆಯು ಯುದ್ಧ ಸ್ಮಾರಕದ ಬಳಿಯಿದ್ದ 'ಗಡಿರೇಖೆ'ಯ ಬಳಿಗೆ ಬೆಳಿಗ್ಗೆ ೧೧ ಘಂಟೆಗೆ ಬಂದಿತು.

ಎ.ಎಸ್.ಪಿ. ಶ್ರೀ ಇ.ಎ.ದೊಡ್‌ವೆಲ್, ಉಪ ಎಸ್.ಪಿ. ಶ್ರೀ ಜೆ. ಕ್ರೋನ್ ಮತ್ತು ಎಫ್.ಡಿ. ರೋಚ್ ಅವರು ಮತ್ತು ಲಾಠಿಯನ್ನು ಹೊಂದಿದ್ದ ನೂರಕ್ಕೂ ಹೆಚ್ಚು ಪೋಲಿಸರು ಮತ್ತು ಇತರ ಪೋಲಿಸ್ ಅಧಿಕಾರಿಗಳು ಅಲ್ಲಿ ಕಾಯುತ್ತಾ ನಿಂತಿದ್ದರು. ಮೆರವಣಿಗೆ ಅಲ್ಲಿಗೆ ಬಂದ ಕೂಡಲೇ ಅದನ್ನು ತಡೆದರು.

ಮೆರವಣಿಗೆಯಲ್ಲಿದ್ದವರು ಅಲ್ಲಿಯೇ ನೆಲದ ಮೇಲೆ ಕುಳಿತು ಪರಿಶಿಷ್ಟ ಜಾತಿಗಳ ಒಕ್ಕೂಟದ ಪರವಾಗಿ ಘೋಷಣೆಗಳನ್ನು ಕೂಗಿದರು. ಎರಡು ಘಂಟೆಗಳ ಕಾಲ ಅಲ್ಲಿ ಹಾಗೆಯೇ ಕುಳಿತಿದ್ದು, ನಂತರ ವೆಸ್ಲಿ ರಸ್ತೆಯ ಮೂಲಕ ಸತ್ಯಾಗ್ರಹದ ಶಿಬಿರದತ್ತ ಹೊರಡಲು ತೀರ್ಮಾನಿಸಿದರು.

ಮೆರವಣಿಗೆಯಲ್ಲಿದ್ದವರು ಸತ್ಯಾಗ್ರಹದ ಶಿಬಿರವನ್ನು ತಲುಪಿದ ಮೇಲೆ ಸಭೆಯನ್ನು ನಡೆಸಿ ಪೋಲಿಸರಿಂದ ಬಂಧನಕ್ಕೊಳಗಾದವರನ್ನು ಅಭಿನಂದಿಸಿದರು.

ಶ್ರೀ ಪಿ.ಎನ್. ರಾಜ್‌ಭೋಜ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಸ್ವಾತಂತ್ರ್ಯಕ್ಕಾಗಿ ಹೋರಾಟವು ಇಂದು ಪ್ರಾರಂಭವಾಗಿದೆ ಎಂದು ಹೇಳಿದರು. ಪರಿಶಿಷ್ಟ ಜಾತಿಗಳ ಜನರು ಈಗ ಪೂರ್ಣವಾಗಿ ಜಾಗೃತರಾಗಿದ್ದು, ಅವರು ತಮ್ಮ ಗುರಿಯನ್ನು ತಲುಪುವವರೆಗೆ ಹಿಂದೆ ನೋಡುವುದಿಲ್ಲ ಎಂದು ಅವರು ಹೇಳಿದರು. ಇಂದಿನ ಸತ್ಯಾಗ್ರಹವು ದೇಶಾದ್ಯಂತ ನಡೆಯುವ ಚಳವಳಿಗೆ ನಾಂದಿಹಾಡಿದೆ ಎಂದರು.

ಶ್ರೀ ಬಿ.ಕೆ ಗಾಯಕ್‌ವಾಡ್ ಅವರು ಸತ್ಯಾಗ್ರಹಿಗಳು ನಾಳೆಯೂ ಮೆರವಣಿಗೆಯಲ್ಲಿ ಹೋಗುತ್ತಾರೆಂದೂ, ಪ್ರತಿದಿನವೂ ಇದು ಮುಂದುವರೆಯುತ್ತದೆ ಎಂದೂ ಘೋಷಿಸಿದರು.

ಪೂನಾ ನಗರ ಸಭೆ, ಪೂನಾ ನಗರದ ಹೊರವಲಯ ಹಾಗೂ ಪೂನಾದ ದಂಡು ಪ್ರದೇಶಗಳಲ್ಲಿ ದೊಣ್ಣೆ, ಚಾಕು, ಕಲ್ಲು ಅಥವಾ ಇನ್ನಿತರ ಆಯುಧಗಳನ್ನು ತೆಗೆದುಕೊಂಡು ಹೋಗುವುದನ್ನು ಪ್ರತಿಬಂಧಿಸಿ ಪೂನಾ ಜಿಲ್ಲಾ ದಂಡಾಧಿಕಾರಗಳು ಇಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಈ ಆಜ್ಞೆಯು ಜುಲೈ ೧೫ರಿಂದ ಏಳು ದಿನಗಳ ಕಾಲ ಜಾರಿಯಲ್ಲಿರುತ್ತದೆ.

ಪರಿಶಿಷ್ಟ ಜಾತಿಗಳ ಒಕ್ಕೂಟದ ಸತ್ಯಾಗ್ರಹದಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗವುಂಟಾಗುವ ಸಂಭವವಿರುವುದರಿಂದ ಅದನ್ನು ತಪ್ಪಿಸಲು ಮುನ್ನೆಚ್ಚರಿಕೆಯ ಕ್ರಮವಾಗಿ ಈ ಆಜ್ಞೆಯನ್ನು ಹೊರಡಿಸಲಾಗಿದೆ ಎಂದು ತಿಳಿದುಬಂದಿದೆ"[೧]

## ಪರಿಶಿಷ್ಟ ಜಾತಿಗಳ ಒಕ್ಕೂಟದ ಸತ್ಯಾಗ್ರಹಿಗಳ ಬಂಧನ

ಇನ್ನೂ ಒಂದು ನೂರ ಹದಿನಾಲ್ಕು ಜನ ಪರಿಶಿಷ್ಟ ಜಾತಿಗಳ ಸತ್ಯಾಗ್ರಹಿಗಳನ್ನು ಇಂದು ಬಂಧಿಸಿ ಸೆರೆಮನೆಗೆ ಕಳುಹಿಸಲಾಯಿತು. ಇದರಿಂದ ಬಂಧನಕ್ಕೊಳಗಾದ ಸತ್ಯಾಗ್ರಹಿಗಳ ಒಟ್ಟು ಸಂಖ್ಯೆ ೧೨೪ಕ್ಕೆ ಏರಿದೆ.

ಇಂದು ಬಂಧಿತರಾದ ೧೧೪ ಮಂದಿ ಸತ್ಯಾಗ್ರಹಿಗಳಲ್ಲಿ ೧೩ ಮಂದಿ ಮಹಿಳೆಯರೂ ಇದ್ದಾರೆ. ಅವರಿಗೆ ೨೫ ರೂಗಳ ದಂಡವನ್ನು ಕಟ್ಟಲು ಹೇಳಿ ಅದಕ್ಕೆ ತಪ್ಪಿದರೆ ಅವರು ೧೫ ದಿನಗಳ ಸರಳ

---

(೧. ಜೈಭೀಮ್, ೧೯೪೬ರ ಆಗಸ್ಟ್ ೧೩)

ಸೆರೆಮನೆವಾಸವನ್ನು ಅನುಭವಿಸಬೇಕಾಗುತ್ತದೆ. ಉಳಿದ ೬೪ ಮಂದಿಗೆ ೫೦ ರೂಗಳ ದಂಡವನ್ನು, ತಪ್ಪಿದರೆ ಎರಡು ತಿಂಗಳ ಸೆರೆವಾಸವನ್ನೂ ವಿಧಿಸಿದರು. ಅವರಲ್ಲಿ ಯಾರೂ ದಂಡವನ್ನು ಕಟ್ಟಲು ಒಪ್ಪಿಕೊಳ್ಳಲಿಲ್ಲ.

ಸತ್ಯಾಗ್ರಹಿಗಳನ್ನು ಇಟ್ಟಿರುವ ಯರವಾಡ ಬಂದೀಖಾನೆಯಲ್ಲಿ ಅವರ ವಿಚಾರಣೆಯನ್ನು ನಡೆಸಲಾಯಿತು.

ಬ್ರಿಟಿಷ್ ಸರಕಾರ ಹಾಗೂ ಕಾಂಗ್ರೆಸ್ ಪಕ್ಷಗಳು ಪರಿಶಿಷ್ಟ ಜಾತಿಗಳವರನ್ನು ವಂಚಿಸಿವೆ ಎಂದು ಆಪಾದಿಸಿರುವ ಹೇಳಿಕೆಯನ್ನು ಆಪಾದಿತರ ಪರವಾಗಿ ವಿಚಾರಣೆಯ ವೇಳೆಯಲ್ಲಿ ನ್ಯಾಯಾಲಯದಲ್ಲಿ ನೀಡಲಾಯಿತು. ಪ್ರಜಾಪ್ರಭುತ್ವದ ಪರವಾಗಿ ಇರುವುದೆಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷವು ಪೂನಾ ಒಪ್ಪಂದದ ಸಮಯದಲ್ಲಿ ಹಾಗೂ ಕ್ರಿಪ್ಸ್ ಶಿಫಾರಸ್ಸುಗಳ ಮತ್ತು ಬ್ರಿಟಿಷ್ ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳ ಅನುಮೋದನೆಯ ಸಮಯದಲ್ಲಿ ತಮ್ಮ ಸಮುದಾಯಕ್ಕೆ ವಂಚನೆಯನ್ನು ಮಾಡಿತು ಎಂದು ಆ ಹೇಳಿಕೆಯಲ್ಲಿ ಹೇಳಲಾಗಿದೆ. ಪರಿಶಿಷ್ಟ ಜಾತಿಗಳವರ ಬೆಂಬಲವನ್ನು ಹೆಚ್ಚಾಗಿ ಪಡೆದಿರುವ ಅಭ್ಯರ್ಥಿಗಳು ಕಾಂಗ್ರೆಸ್‌ನ ಕೈಗೊಂಬೆಗಳಾಗಿರುವ ಅಭ್ಯರ್ಥಿಗಳಿಂದ ಜಂಟಿ ಮತಕ್ಷೇತ್ರಗಳಲ್ಲಿ ಸವರ್ಣೀಯ ಹಿಂದೂಗಳ ಮತವನ್ನು ಪಡೆದು ಸೋಲಿಸಲ್ಪಟ್ಟಿದ್ದಾರೆ.

ಸತ್ಯಾಗ್ರಹದ ವ್ಯವಸ್ಥಾಪಕರು ಕೂಡ ಬಾಬಾಜನ್ ಚೌಕದಲ್ಲಿರುವ ಸತ್ಯಾಗ್ರಹ ಶಿಬಿರದಿಂದ ಮೆರವಣಿಗೆಯಲ್ಲಿ ಹೊರಟರು. ಈ ಮೆರವಣಿಗೆಯನ್ನು ಪರಿಷತ್ತಿನ ಅರ್ಧ ಮೈಲಿ ದೂರದಲ್ಲಿ ವೆಲ್ಲೆಸ್ಲಿ ರಸ್ತೆಯಲ್ಲಿರುವ ರೈಲ್ವೆ ಡಿಪೋದ ಬಳಿ ಪೋಲೀಸರು ತಡೆದರು.

ಮೆರವಣಿಗೆಯಲ್ಲಿದ್ದವರನ್ನು ಶಾಸಕ ಶ್ರೀ ಜಿ.ಎಚ್. ಕಾಳೆಯವರು ಉದ್ದೇಶಿಸಿ ಮಾತನಾಡಿ ತಮ್ಮ ಹೋರಾಟವನ್ನು ಜಯಸಾಧಿಸುವವರೆಗೂ ಮುಂದುವರೆಸುವಂತೆ ಕರೆನೀಡಿದರು. ಅವರ ಬೇಡಿಕೆಗಳ ಬಗ್ಗೆ ತಮಗೆ ಸಂಪೂರ್ಣ ಸಹಾನುಭೂತಿಯಿದೆ ಎಂದು ಶ್ರೀ ಕಾಳೆಯವರು ಹೇಳಿದರು.

**ಹೆಚ್ಚಿನ ಬಂಧನಗಳು**

ಪರಿಶಿಷ್ಟ ಜಾತಿಗಳ ಒಕ್ಕೂಟವು ಪ್ರಾರಂಭಿಸಿದ ಸತ್ಯಾಗ್ರಹವು ಮೂರನೆಯ ದಿನವಾದ ಇಂದೂ ಮುಂದುವರೆಯಿತು. ಐದು, ಹತ್ತು ಜನಗಳಿದ್ದ ಗುಂಪುಗಳು ಪರಿಷತ್ತಿನ ಭವನದ ಮುಂದೆ ಕಪ್ಪು ಬಾವುಟವನ್ನು ಪ್ರದರ್ಶಿಸಿ, ಜಿಲ್ಲಾ ದಂಡಾಧಿಕಾರಿಗಳ ಆಜ್ಞೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದುದು ಕಂಡುಬಂದಿತು.

ಮಧ್ಯಾಹ್ನ ಎರಡು ಗಂಟೆಯ ಸುಮಾರಿಗೆ ಸಭೆಯು ಪ್ರಾರಂಭವಾಗುವ ವೇಳೆಗೆ ಪೋಲಿಸರು ಇಬ್ಬರು ಹೆಂಗಸರೂ ಸೇರಿದಂತೆ ಒಟ್ಟು ೫೦ ಜನರನ್ನು ಬಂಧಿಸಿದರು.

**ಸತ್ಯಾಗ್ರಹದ ಐದನೆಯ ದಿನ**

**ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕರ್ತರ ಬಂಧನ**

**ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸಿದ್ದಕ್ಕೆ ವಿರೋಧ**

ಸತ್ಯಾಗ್ರಹದ ಐದನೆಯ ದಿನವಾದ ಇಂದೂ ಪರಿಶಿಷ್ಟ ಜಾತಿಯ ಕಾರ್ಯಕರ್ತರು ಪರಿಷತ್ತಿನ ಭವನದ ಮುಂದೆ ತಮ್ಮ ಸತ್ಯಾಗ್ರಹವನ್ನು ಮುಂದುವರೆಸಿದರು. ಸತ್ಯಾಗ್ರಹವು ಪ್ರಾರಂಭವಾದ ಒಂದು ಗಂಟೆಯ ಒಳಗೆ, ಪರಿಷತ್ತಿನ ಭವನದ ದ್ವಾರದಲ್ಲಿದ್ದ ಪೋಲಿಸರು ೭೦ ಜನ ಕಾರ್ಯಕರ್ತರನ್ನು ಬಂಧಿಸಿದರು.

ಜಿನುಗುತ್ತಿದ್ದ ಮಳೆಯಲ್ಲಿಯೇ ೪–೫ ಜನಗಳ ಗುಂಪುಗಳಲ್ಲಿ ಬಂದ ಕಾರ್ಯಕರ್ತರು ಪರಿಷತ್ತಿನ ಆವರಣದ ಹೊರಗೆ ಘೋಷಣೆಗಳನ್ನು ಕೂಗುತ್ತಿದ್ದರು.

ನಿನ್ನೆಯ ದಿನ ನಿಷೇದಾಜ್ಞೆಯನ್ನು ಉಲ್ಲಂಘಿಸಿದ ೧೨೨ ಜನ ಸತ್ಯಾಗ್ರಹಿಗಳ ವಿಚಾರಣೆಯು ಇಂದು ಬೆಳಿಗ್ಗೆ ಯರವಾಡ ಬಂದೀಖಾನೆಯಲ್ಲಿ ನಡೆಯಿತು. ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು ಅವರೆಲ್ಲರಿಗೂ ೨೫ರಿಂದ ೫೦ರೂಗಳ ದಂಡವನ್ನು, ಅದಕ್ಕೆ ತಪ್ಪಿದರೆ ೧೫ರಿಂದ ೬೦ ದಿನಗಳವರೆಗೆ ಸೆರೆವಾಸವನ್ನು ವಿಧಿಸಿದರು. ೧೩ ಜನ ಹೆಂಗಸರಿಗೆ ಲಘುತರವಾದ ಶಿಕ್ಷೆಯನ್ನು ವಿಧಿಸಲಾಯಿತು.

ನಿನ್ನೆಯ ದಿನ ದಂಡಾಧಿಕಾರಿಗಳು ಕರೆದಿದ್ದ ಸಭೆಯಲ್ಲಿ ಪೂನಾ ಒಕ್ಕೂಟದ ಮುಖಂಡರಾದ ಶ್ರೀ ಬಿ.ಕೆ. ಗಾಯಕವಾಡ್, ಶ್ರೀ ಪಿ.ಎನ್. ರಾಜ್‌ಭೋಜ್ ಮತ್ತು ಶ್ರೀ ಆರ್. ಆರ್. ಬೋಲೆ ಅವರು ಪೂನಾ ಜಿಲ್ಲಾ ದಂಡಾಧಿಕಾರಿಗಳಿಗೆ ಸತ್ಯಾಗ್ರಹವನ್ನು ಮುಂದುವರೆಸಲು ತಾವು ಯಾವುದೇ ಷರತ್ತುಬದ್ಧ ಅನುಮತಿಯನ್ನೂ ಒಪ್ಪುವುದಿಲ್ಲವೆಂದೂ, ಬ್ರಿಟಿಷ್ ಸರಕಾರವು ತಮಗೆ ಮಾಡಿರುವ ಅನ್ಯಾಯದ ವಿರುದ್ಧ ಹಾಗೂ ಕಾಂಗ್ರೆಸ್ ಸರಕಾರವು ವಿಧಿಸಿರುವ ನಿಷೇಧಾಜ್ಞೆಯ ವಿರುದ್ಧ ಪರಿಷತ್ತಿಗೆ ಅರ್ಧ ಮೈಲು ದೂರದ ಪ್ರದೇಶದಲ್ಲಿ ನಡೆಸುತ್ತಿರುವ ತಮ್ಮ ಪ್ರತಿಭಟನೆಯನ್ನು ಮುಂದುವರೆಸುವುದಾಗಿಯೂ ತಿಳಿಸಿದರು.

ಸತ್ಯಾಗ್ರಹದಲ್ಲಿ ಭಾಗವಹಿಸಲು ಕಾರ್ಯಕರ್ತರು ತಂಡತಂಡವಾಗಿ ಪ್ರಾಂತದ ವಿವಿಧ ಭಾಗಗಳಿಂದ ಬರುತ್ತಿದ್ದಾರೆಂದು ಸತ್ಯಾಗ್ರಹದ ವ್ಯವಸ್ಥಾಪಕರು ತಿಳಿಸಿದರು. ಸತ್ಯಾಗ್ರಹಕ್ಕೆ ಅಗತ್ಯವಾದ ಕಾರ್ಯಕರ್ತರಿಗೇನೂ ಕೊರತೆಯಿಲ್ಲ ಮತ್ತು ತಮ್ಮ ಗುರಿಯನ್ನು ಸಾಧಿಸುವತನಕ ತಮ್ಮ ಹೋರಾಟವನ್ನು ಮುಂದುವರಿಸುವುದಾಗಿ ಅವರು ಹೇಳಿದರು.

### ಮಧ್ಯ ಪ್ರಾಂತಗಳ ಶಾಸನಸಭೆಯ ಮುಂದೆ ಪ್ರತಿಭಟನೆ

ತನ್ನ ಪಾಲಿನ ೧೭ ಪ್ರತಿನಿಧಿಗಳನ್ನು ಸಂವಿಧಾನ ಸಭೆಗೆ ಆಯ್ಕೆಮಾಡಲು ಇಂದು ಮಧ್ಯಪ್ರಾಂತದ ಶಾಸನಸಭೆಯು ಸಮಾವೇಶಗೊಂಡಿದ್ದಾಗ, ಶಾಸನಸಭೆಯ ಮುಂದೆ ಪ್ರಮುಖವಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರುಗಳಿದ್ದ ೫೦೦ ಜನ ಮಹಿಳೆಯರೂ ಸೇರಿದಂತೆ ಒಟ್ಟು ೧೦,೦೦೦ ಜನರು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದರು. ಅಲ್ಲಿ ನೆರೆದಿದ್ದ ಪ್ರತಿಭಟನಾಕಾರರು 'ಸಂವಿಧಾನ ಸಭೆಯನ್ನು ತ್ಯಜಿಸಿ', 'ಕಾಂಗ್ರೆಸ್ ಸಚಿವ ಸಂಪುಟಕ್ಕೆ ಧಿಕ್ಕಾರ', 'ಹರಿಜನ ಎಂ.ಎಲ್.ಎ.ಗಳಿಗೆ ಧಿಕ್ಕಾರ','ಪೂನಾ ಒಪ್ಪಂದವನ್ನು ರದ್ದುಗೊಳಿಸಿ' ಎಂಬ ಘೋಷಣೆಗಳನ್ನು ಕೂಗುತ್ತಿದ್ದರು.

ಇದು ಕ್ಯಾಬಿನೆಟ್ ಮಿಷನ್ನಿನ ಶಿಫಾರಸ್ಸುಗಳ ವಿರುದ್ಧ ನಡೆಸಿದ ಪ್ರತಿಭಟನೆಯಾಗಿತ್ತು. ಕಪ್ಪು ಬಾವುಟಗಳನ್ನು ಪ್ರದರ್ಶಿಸುತ್ತಿದ್ದ ಪ್ರತಿಭಟನೆಯು ಶಾಂತಿಯುತವಾಗಿದ್ದಿತು.

### ಭಾರತದ ಮೇಲಿನ ಚರ್ಚೆಗೆ ಸಕಾಲ

ಸಂವಿಧಾನ ಸಭೆಯು ನಿಯೋಜಿಸುವ ಸಲಹಾ ಸಮಿತಿಯ ಮುಂದೆ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಸಮರ್ಥವಾಗಿ ಮಂಡಿಸುವಂತೆ ಮಾಡಲು ಬ್ರಿಟಿಷ್ ಸರಕಾರವು ತನ್ನ ಅಧಿಕಾರವನ್ನು ಉಪಯೋಗಿಸಬಹುದು ಮತ್ತು ಹಾಗೆ ಉಪಯೋಗಿಸಲೇ ಬೇಕು. ಆದರೆ ಚರ್ಚಿಲ್ಲರು ತಮ್ಮ ಅತ್ಯತ್ತಮ ವಾಗ್ಮಿತೆಯಿಂದ ಮಾಡಿಕೊಂಡ ಮನವಿಯ ಹೊರತಾಗಿಯೂ, ಪರಿಶಿಷ್ಟ ಜಾತಿಯವರಿಗೆ ಅವರು ಮಾಡಿರುವ ಬೇಡಿಕೆಗಳ ಬಗ್ಗೆ ನ್ಯಾಯ ಸಿಗುವಂತೆ ನಿರ್ಣಯವನ್ನು ತೆದುಕೊಳ್ಳಬಹುದಾದ ಅಧಿಕಾರವು ಈ ದೇಶದಲ್ಲಿರದೆ, ಇಂಗ್ಲೆಂಡಿನಲ್ಲಿರುತ್ತದೆ. ಸೆಕ್ರೆಟರಿ ಆಫ್ ಸ್ಟೇಟ್ ಹಾಗೂ ಇತರರು ಮಾಡಿದಂತೆ, ಬ್ರಿಟಿಷ್ ರಾಜಕೀಯ ಮುತ್ಸದ್ಧಿಗಳೂ ಅಲ್ಪಸಂಖ್ಯಾತರ

ಹಿತವನ್ನು ರಕ್ಷಿಸಲು ಉದಾರವಾದ ನೀತಿಯನ್ನು ಅನುಸರಿಸುವಂತೆ ಒತ್ತಾಯವನ್ನು ಹೇರಲು ಅಧಿಕಾರವನ್ನು ಹೊಂದಿದ್ದಾರೆ. ಆದರೆ ಭಾರತದ ಹೊಸ ಸ್ಥಾನಮಾನದಿಂದಾಗಿ ಭಾರತೀಯರೇ ಈ ವಿಷಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿರುವುದು ಸದ್ಯದ ಪರಿಸ್ಥಿತಿಯ ಮುಖ್ಯ ಅಂಶ.

**ಕ್ಯಾಬಿನೆಟ್ ಮಿಷನ್ ತನ್ನ ಕರ್ತವ್ಯದಲ್ಲಿ ತೋರಿದ ಅಶ್ರದ್ಧೆ**

ಪತ್ರಿಕಾ ಸಂದರ್ಶನವೊಂದರಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎನ್. ಶಿವರಾಜ್ ಅವರು ಸರ್ ಸ್ಟಾಫೋರ್ಡ್ ಕ್ರಿಪ್ಸ್ ಮತ್ತು ಅಲೆಗ್ಸಾಂಡರ್ ಅವರು ಪರಿಶಿಷ್ಟ ಜಾತಿಗಳವರಿಗೆ ಸಂಬಂಧಿಸಿದಂತೆ ನೀಡಿರುವ ಹೇಳಿಕೆಯಿಂದ ತಮಗೆ ಆಶ್ಚರ್ಯವಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದವರೊಡನೆ ಸೇರಿಕೊಂಡು ಪರಿಶಿಷ್ಟ ಜಾತಿಗಳವರ ಬೆನ್ನಿಗೆ ಚೂರಿಯನ್ನು ಹಾಕಿದ ಹಾಗೂ ಅವರನ್ನು ರಾಜಕೀಯವಾಗಿ ನಿಸ್ಸತ್ವರನ್ನಾಗಿಸಿದ ಪಾಪಕೃತ್ಯವನ್ನು ಎಸಗಿ ಅವರು ಪರಿಶಿಷ್ಟ ಜಾತಿಯವರು ಕಾಂಗ್ರೆಸ್ಸಿನೊಂದಿಗೇ ಇದ್ದಾರೆ ಎನ್ನುವ ಮೂಲಕ ಅವರು ಬ್ರಿಟಿಷ್ ಸಂಸತ್ತನ್ನು ಮತ್ತು ಬ್ರಿಟಿಷ್ ನಾಗರಿಕರನ್ನು ದಾರಿತಪ್ಪಿಸುತ್ತಿದ್ದಾರೆ ಎಂದೂ ಅವರು ಹೇಳಿದರು. ತಮ್ಮ ಹಾದಿಯಲ್ಲಿ ಸವರ್ಣೀಯ ಹಿಂದೂಗಳು ಎಷ್ಟೇ ಅಡ್ಡಿಗಳನ್ನು ಒಡ್ಡಿದರೂ ಪರಿಶಿಷ್ಟ ಜಾತಿಗಳ ಒಕ್ಕೂಟವು ಮಾತ್ರ ತಮ್ಮನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಕಳೆದ ಪ್ರಾಥಮಿಕ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳವರು ಸ್ಪಷ್ಟಪಡಿಸಿದ್ದಾರೆ. ತಮ್ಮ ಪೂರ್ವ ನಿರ್ಧಾರಿತ ಗುರಿಗಳನ್ನು ಸಾಧಿಸಿಕೊಳ್ಳುವ ಆತುರದಲ್ಲಿ ಕ್ಯಾಬಿನೆಟ್ ಮಿಷನ್ ಕಾಂಗ್ರೆಸ್ ಪಕ್ಷದವರನ್ನು ತೃಪ್ತಿಗೊಳಿಸಿ ಇಲ್ಲಿಯವರೆಗೆ ಪರಿಶಿಷ್ಟ ಜಾತಿಗಳವರನ್ನು ತಾವು ಸಂರಕ್ಷಿಸುತ್ತೇವೆಂಬ ಆಶ್ವಾಸನೆಯನ್ನು ನೀಡಿದ್ದರೂ, ಈಗ ಪರಿಶಿಷ್ಟ ಜಾತಿಗಳವರ ಕೈಬಿಟ್ಟಿದ್ದಾರೆ. ಪರಿಶಿಷ್ಟ ಜಾತಿಗಳವರು ತಮ್ಮ ನಾಯಕನನ್ನಾಗಿ ಡಾ. ಅಂಬೇಡ್ಕರ್ ಅವರನ್ನು ಅಥವಾ ಶ್ರೀ ಗಾಂಧಿಯವರನ್ನು ಆಯ್ದುಕೊಳ್ಳುತ್ತಾರೆಯೇ ಎಂಬುದರ ಬಗ್ಗೆ ನಾನು ನನ್ನ ವಾದಗಳನ್ನು ಯಾವುದೇ ನಿಷ್ಪಕ್ಷಪಾತವಾದ ಅಂತಾರಾಷ್ಟ್ರೀಯ ಪಂಚಾಯತಿಯ ಮುಂದೆ ಮಂಡಿಸಲು ಸಿದ್ಧನಿದ್ದೇನೆ. ಶ್ರೀ ಗಾಂಧಿಯವರು ಭಂಗಿಗಳ ವಾಸದ ಪ್ರದೇಶದಲ್ಲಿ ವಾಸಮಾಡುವ ತಂತ್ರಕ್ಕೆ ಕ್ಯಾಬಿನೆಟ್ ನಿಯೋಗವು ನಿಜವಾಗಿಯೂ ಬಲಿಯಾಗಿಲ್ಲ. ಆದರೆ ಇದೆಲ್ಲವೂ, ಶ್ರೀ ಗಾಂಧಿ ಮತ್ತು ಕ್ಯಾಬಿನೆಟ್ ನಿಯೋಗಗಳ ಮಧ್ಯೆ ಅದರಲ್ಲಿಯೂ ಶ್ರೀ ಗಾಂಧಿ ಮತ್ತು ಸರ್ ಸ್ಟಾಫೋರ್ಡ್ – ಇವರ ನಡುವೆ ನಡೆದಿರುವ ಒಪ್ಪಂದದ ಪರಿಣಾಮ ಎಂದು ಹೇಳಬೇಕೆನಿಸುತ್ತದೆ.[೧]

**೨**

**ನಾಗಪುರದ ಸತ್ಯಾಗ್ರಹ**

**ನನ್ನ ಹೆಸರು: 'ಜೈ ಭೀಮ್'**

**ನನ್ನ ಜಾತಿ: 'ಪರಿಶಿಷ್ಟ ಜಾತಿಗಳ ಒಕ್ಕೂಟ'**

**ನನ್ನ ನಿವಾಸ: ದಲಿತಸ್ಥಾನ**

**ಮಧ್ಯ ಪ್ರದೇಶಗಳ ಸತ್ಯಾಗ್ರಹಿಗಳ ಭಾವನಾತ್ಮಕ ಉತ್ತರಗಳು**

೧೯೪೬ರ ಸೆಪ್ಟೆಂಬರ್ ೧೨ರಂದು ೬ ಜನ ಮಹಿಳೆಯರು, ೯ ಜನ ಬಾಲಕರೂ ಸೇರಿದಂತೆ ಪರಿಶಿಷ್ಟ ಜಾತಿಗಳ ಒಕ್ಕೂಟದ ೨೪೩ ಜನ ಸದಸ್ಯರನ್ನು ಬಂಧಿಸಲಾಗಿದೆ. ಮಧ್ಯ ಪ್ರಾಂತಗಳ ಶಾಸನಸಭೆಯು

---

೧. ಜೈ ಭೀಮ್, ೧೯೪೬ರ ಆಗಸ್ಟ್ ೧೩, ಪುಟ ೮

ಪ್ರಾಂತದ ಆಯವ್ಯಯವನ್ನು ವಿವರವಾಗಿ ಚರ್ಚಿಸಲು ಕೈಗೆತ್ತಿಕೊಂಡಿದ್ದ ಸಮಯದಲ್ಲಿ ನಡೆಸಿದ ಪ್ರತಿಭಟನೆಗಳಿಂದಾಗಿ ಈ ಬಂಧನಗಳು ನಡೆದವು. ತಮ್ಮ ವಿರುದ್ಧ ಆಪಾದನಾ ಪಟ್ಟಿಗಳನ್ನು ಸಿದ್ಧಗೊಳಿಸುತ್ತಿರುವಾಗ ಪೋಲಿಸರು ಕೇಳಿದ ಪ್ರಶ್ನೆಗಳಿಗೆ ಪ್ರತಿಭಟನಾಕಾರರು ನವೀನ ಮಾದರಿಯ ಉತ್ತರಗಳನ್ನು ನೀಡಿದರು. ತಮ್ಮ ಹೆಸರು 'ಜೈ ಭೀಮ್', ತಮ್ಮ ಜಾತಿ 'ಪರಿಶಿಷ್ಟ ಜಾತಿಗಳ ಒಕ್ಕೂಟ' ಮತ್ತು ತಮ್ಮ ನಿವಾಸ 'ದಲಿತಸ್ಥಾನ' ಎಂದು ಅವರು ಹೇಳಿದರು.

### ಹೆಚ್ಚುತ್ತಿರುವ ಬಂಧನಗಳು

ಪರಿಶಿಷ್ಟ ಜಾತಿಗಳ ಒಕ್ಕೂಟದ ಪ್ರತಿಭಟನೆಯ ೧೩ನೆಯ ದಿನ ೨೬೨ ಜನರು ಬಂಧಿಸಲ್ಪಟ್ಟರು. ಅವರಲ್ಲಿ ೧೪ ಜನ ಹೆಂಗಸರು ಮತ್ತು ೯ ಬಾಲಕರೂ ಇದ್ದರು. ಪೋಲಿಸ್ ಕಾವಲನ್ನು ತಪ್ಪಿಸಿಕೊಂಡು ಶಾಸನಸಭಾಭವನದ ಹಜಾರದ ಮುಂದೆ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಒಬ್ಬನು ನಂತರ ಬಂಧಿಸಲ್ಪಟ್ಟನು.

### ಸೆಪ್ಟೆಂಬರ್ ೪ರಂದು ೨೦೩ ಜನರ ಬಂಧನ

ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರು ನಾಗಪುರ ಸತ್ಯಾಗ್ರಹದ ಎರಡನೆಯ ದಿನವಾದ ಸೆಪ್ಟೆಂಬರ್ ೪ರಂದು ಮಧ್ಯಪ್ರಾಂತದ ಸಭಾಭವನಕ್ಕೆ ಹೋಗುವ ಏಳು ರಸ್ತೆಗಳಲ್ಲಿ ತಮ್ಮ ಪ್ರತಿಭಟನೆಯನ್ನು ಮುಂದುವರಿಸಿದರು. ಅಂದು ೨೦೩ ಮಂದಿ ಪುರುಷರು, ೨೦ ಮಂದಿ ಮಹಿಳೆಯರು ಸಭಾಭವನದ ಮುಖ್ಯದ್ವಾರದತ್ತ ಸಾಗುತ್ತಿದ್ದಾಗ ಅವರನ್ನು ದಂಡಾಧಿಕಾರಿಗಳು ಮತ್ತು ಪೋಲಿಸರು ತಡೆದು ಬಂಧಿಸಿದರು. ನಾಗಪುರದಲ್ಲಿ ದಂಡ ಸಂಹಿತೆಯ ೧೪೪ನೆಯ ವಿಧಿಯ ಪ್ರಕಾರ ಸದ್ಯ ಜಾರಿಯಲ್ಲಿರುವ ಮೆರವಣಿಗೆಗಳ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಆರೋಪದ ಮೇಲೆ ಬಂಧಿಸಲಾದ ಈ ಸ್ತ್ರೀಪುರುಷರನ್ನೆಲ್ಲಾ ಒಟ್ಟಿಗೆ ವಿಚಾರಣೆಗೆ ಗುರಿಪಡಿಸಲಾಗುವುದು. ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ೧೮ ಜನ ಅಪ್ರಾಪ್ತವಯಸ್ಸಿನ ಬಾಲಕರನ್ನು ಬಿಟ್ಟುಕಳುಹಿಸಲಾಯಿತು. ಬಂಧಿತರಲ್ಲಿ ಕೆಲವರು ಸೆರೆಮನೆಯಲ್ಲಿ ಉಪಯೋಗಿಸಲು ಚಿಕ್ಕ ಹಾಸಿಗೆಗಳನ್ನು ತಮ್ಮೊಡನೆ ಒಯ್ದರು. ಸೆರೆಯಾದವರಲ್ಲಿ ಹಲವರು ಬ್ರಿಟಿಷ್ ಹಾಗೂ ಕಾಂಗ್ರೆಸ್ ಸರಕಾರಗಳ ವಿರುದ್ಧ ಪರಿಶಿಷ್ಟ ಜಾತಿಗಳವರನ್ನು ವಂಚಿಸಿದುದಕ್ಕಾಗಿ ಧಿಕ್ಕಾರದ ಘೋಷಣೆಗಳನ್ನು ಕೂಗುತ್ತಿದ್ದರು ಹಾಗೂ ಡಾ. ಅಂಬೇಡ್ಕರ್ ಪರವಾಗಿ ಜಯಕಾರಗಳನ್ನು ಹಾಕುತ್ತಿದ್ದರು.[೧]

## ೩

## ಲಖ್ನೌ ಸತ್ಯಾಗ್ರಹ

### ತಮ್ಮ ಹಕ್ಕುಗಳಿಗಾಗಿ ಉತ್ತರ ಪ್ರದೇಶದ ಪರಿಶಿಷ್ಟ ಜಾತಿಗಳವರ ಹೋರಾಟ

### ಶಾಂತಿಯುತ ಸತ್ಯಾಗ್ರಹವನ್ನು ನಡೆಸುತ್ತಿದ್ದವರ ಮೇಲೆ ಪೋಲಿಸರ ಲಾಠಿ ಪ್ರಹಾರ

### ರಾಜ್‌ಭೋಜ್ ಮತ್ತು ತಿಲಕ್‌ಚಂದ್ ಅವರ ಬಂಧನ

ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಅಸ್ಪೃಶ್ಯ ಮಹಿಳೆಯರ ವಿರುದ್ಧ ಸವರ್ಣೀಯ ಹಿಂದೂ ಪೋಲಿಸರು ಅಸಭ್ಯವಾಗಿ ವರ್ತಿಸಿದ್ದರಿಂದ ಉತ್ತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗಳ ಒಕ್ಕೂಟವು ಪ್ರಾರಂಭಿಸಿದ್ದ ಸತ್ಯಾಗ್ರಹವು ಹಿಂಸಾರೂಪವನ್ನು ಪಡೆಯಿತು. ಸತ್ಯಾಗ್ರಹಿಗಳ ಮೇಲೆ, ಅದರಲ್ಲಿಯೂ ಸ್ತ್ರೀಯರ ಮೇಲೆ ಅಧಿಕಾರದಲ್ಲಿರುವ

---

[೧] (ಜೈಭೀಮ್ – ೧೯೪೬ರ ಸೆಪ್ಟೆಂಬರ್ ೧೬, ಪು. ೭)

ಕಾಂಗ್ರೆಸ್ ಸಂಪುಟವು ನಡೆಸಿದ ದೌರ್ಜನ್ಯದ ಪರಿಣಾಮವಾಗಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಮಹಾಕಾರ್ಯದರ್ಶಿ ಶ್ರೀ ರಾಜ್‌ಭೋಜ್ ಅವರೇ ಸತ್ಯಾಗ್ರಹದ ಮುಂದಾಳತ್ವವನ್ನು ವಹಿಸಿಕೊಂಡರು. ಅವರನ್ನು ಏಪ್ರಿಲ್ ೧೮ರಂದು ಬಂಧಿಸಲಾಯಿತು. ಉತ್ತರ ಪ್ರದೇಶದ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ತಿಲಕ್‌ಚಂದ್ ಕುರೀಲ್ ಅವರನ್ನೂ ಸಹ ಬಂಧಿಸಲಾಗಿದೆ. ನಾವು ನಮ್ಮ 'ಉತ್ತರ ಪ್ರದೇಶ ಪರಿಶಿಷ್ಟ ಜಾತಿಗಳ ಒಕ್ಕೂಟದ ಸತ್ಯಾಗ್ರಹದ ದಿನಚರಿ'ಯ ಕಳೆದ ಸಂಚಿಕೆಯಲ್ಲಿ ಸತ್ಯಾಗ್ರಹದ ಬಗ್ಗೆ ಸುದ್ದಿಯನ್ನು ಪ್ರಕಟಿಸಿದ್ದೆವು. ದಿನದಿಂದ ದಿನಕ್ಕೆ ನಡೆದ ಘಟನೆಗಳ ಸಾರಾಂಶ ಹೀಗಿದೆ.

### ೧೯೪೭ರ ಏಪ್ರಿಲ್ ೧೪:

ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರೂ ಖಾನ್ಪುರದ ಮುನಿಸಿಪಲ್ ಆಯುಕ್ತರೂ ಆದ ದಾದಾ ಸಾಹೇಬ್ ಘುಲ್ಲೀದಾಸ್‌ಜೀ, ಶ್ರೀಮತಿ ಘುಲ್ಲಿದಾಸ್, ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷ ಶ್ರೀ ತೋತಾರಾಮ್ – ಈ ಮೂವರೂ ಸೇರಿದಂತೆ ಒಟ್ಟು ೧೪೮ ಜನ ಸತ್ಯಾಗ್ರಹಿಗಳನ್ನು ಇಂದು ಬಂಧಿಸಲಾಯಿತು. ಮಹಿಳಾ ಸತ್ಯಾಗ್ರಹಿಗಳು ಶಾಸನಸಭೆಯೊಳಗೆ ಹೋಗಿ ಸಭೆಯು ನಡೆಯದಂತೆ ೧೫ ನಿಮಿಷಗಳ ಕಾಲ ಗಲಭೆಯನ್ನು ಉಂಟುಮಾಡಿದರು. ಈ ಮಹಿಳೆಯರನ್ನು ಅವಮಾನಕರವಾಗಿ ನಡೆಸಿಕೊಳ್ಳಲಾಯಿತು ಮತ್ತು ಅವರನ್ನು ಹೊರಕ್ಕೆ ದಬ್ಬಲು ಮುಷ್ಟಿಪ್ರಯೋಗವನ್ನು ಮಾಡಲಾಯಿತು. ಅವರ ಬಳೆಗಳು ಒಡೆದವು. ಉದ್ರೇಕಗೊಂಡ ಮಹಿಳಾ ಸತ್ಯಾಗ್ರಹಿಗಳು ತಮ್ಮನ್ನು ಅವಮಾನಗೊಳಿಸಿದವರಲ್ಲಿ ಕೆಲವರಿಗೆ ತಮ್ಮ ಕೈಗಳಿಂದ ಬಾರಿಸಿದರು. ಅವರು ತಮ್ಮ ಕೂಸುಗಳನ್ನು ಎತ್ತಿಕೊಂಡು ಸತ್ಯಾಗ್ರಹವನ್ನು ನಡೆಸಲು ಅಲ್ಲಿಗೆ ಹೋಗಿದ್ದರು. ಈ ಸುದ್ದಿಯನ್ನು ಲಖ್ನೌದಲ್ಲಿರುವ ಸವರ್ಣೀಯ ಹಿಂದೂಗಳ ವರ್ತಮಾನ ಪತ್ರಿಕೆಗಳು ಪ್ರಕಟಿಸಲಿಲ್ಲ. ಅಲ್ಲಿ ನಡೆದ ಗಲಭೆಯಲ್ಲಿ ಇಬ್ಬರು ಮಹಿಳೆಯರು ಗಾಯಗೊಂಡರು.

ಶ್ರೀ ರಾಜ್‌ಭೋಜ್ ಅವರು ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದರು.

### ೧೯೪೭ರ ಏಪ್ರಿಲ್ ೧೭:

ಉತ್ತರ ಪ್ರದೇಶದ ಪರಿಶಿಷ್ಟ ಜಾತಿಗಳ ಒಕ್ಕೂಟದ ಸತ್ಯಾಗ್ರಹವು ಇಂದು ಹದಿನಾಲ್ಕನೆಯ ದಿವಸಕ್ಕೆ ಕಾಲಿಟ್ಟಿತು. ಪ್ರಾಂತದ ವಿವಿಧ ಜಿಲ್ಲೆಗಳಿಂದ – ಝೂನ್ಸಿ, ಆಗ್ರಾ, ಹಮೀರ್‌ಪುರ್, ಲಖ್ನೌಗಳಿಂದ – ನೂರು ಪುರುಷರು ಇದ್ದ ಒಂದು ದೊಡ್ಡ ಗುಂಪು ಹಾಗೂ ಹಸುಗೂಸುಗಳೊಡನೆ ಬಂದಿದ್ದ ೨೦ ಜನ ಮಹಿಳಾ ಸತ್ಯಾಗ್ರಹಿಗಳು ಅಂದು ಬಂಧನಕ್ಕೆ ಒಳಗಾದರು.

ಪ್ರಾರಂಭದಲ್ಲಿ, ಅಹಿಯಾಗಂಜ್ ಶಿಬಿರದಲ್ಲಿ ನಡೆದ ಸಭೆಯಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಮಹಾಕಾರ್ಯದರ್ಶಿ ಶ್ರೀ ಪಿ.ಎನ್. ರಾಜ್‌ಭೋಜ್ ಅವರು ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿದರು. ಉತ್ತರ ಪ್ರದೇಶದ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ತಿಲಕ್‌ಚಂದ್ ಕುರೀಲ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶತಶತಮಾನದಿಂದಲೂ ದೌರ್ಜನ್ಯಕ್ಕೆ ಒಳಗಾಗಿರುವ ಹಳ್ಳಿಗಳಲ್ಲಿನ ಪರಿಶಿಷ್ಟ ಜಾತಿಗಳವರ ಮೇಲೆ ಸವರ್ಣೀಯ ಹಿಂದೂಗಳೇ ಇರುವ ಕಾಂಗ್ರೆಸ್ ಆಡಳಿತದ ಅಡಿಯಲ್ಲಿಯೇ ಸವರ್ಣೀಯ ಹಿಂದೂಗಳು ಎಸಗುತ್ತಿರುವ ಹೃದಯವಿದ್ರಾವಕವಾದ, ಶೋಚನೀಯವಾದ ಅನ್ಯಾಯ, ದೌರ್ಜನ್ಯಗಳನ್ನು ಮಹಾಕಾರ್ಯದರ್ಶಿಯವರು ತಮ್ಮ ಭಾಷಣದಲ್ಲಿ ವಿವರಿಸಿದರು. ಅಮಾನುಷ ಕ್ರೌರ್ಯದ ನಿದರ್ಶನವನ್ನು ನೀಡುತ್ತಾ ಅವರು ಅಲೀಘರ್ ಜಿಲ್ಲೆಯಲ್ಲಿ ನಾಲ್ಕು ಜನರನ್ನು ಸಜೀವವಾಗಿ

ದಹಿಸಿದ, ಮೀರತ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ೧೨ ಬಡಜನರನ್ನು ಗುಂಡಿಕ್ಕಿ ಕೊಂದ, ಹರ್ದೋಯಿ ಜಿಲ್ಲೆಯಲ್ಲಿ ಹಲವಾರು ಮನೆಗಳನ್ನು ಬೆಂಕಿಗೆ ಆಹುತಿಕೊಟ್ಟ ಘಟನೆಗಳನ್ನು ಉದಾಹರಿಸಿದರು. ಹರಿಜನರ ಮೇಲೆ ಇಂತಹ ದುರದೃಷ್ಟಕರ ಘಟನೆಗಳು ನಡೆಯದ, ಅಥವಾ ಅವರು ಸವರ್ಣೀಯರಿಂದ ಕೊಲ್ಲಲ್ಪಡದಂತಹ ದಿನಗಳು ಒಂದೂ ಇಲ್ಲ. ಇಷ್ಟಾದರೂ ಅಸ್ಪೃಶ್ಯರನ್ನು ಪ್ರತಿನಿಧಿಸುವೆವೆಂದು ಹೇಳಿಕೊಳ್ಳುವ ಯಾವ ಒಬ್ಬ ಶಾಸಕನೂ ಶಾಸನಸಭೆಯಲ್ಲಿ ಈ ವಿಷಯವನ್ನು ಎತ್ತುವುದಿಲ್ಲ. ಅವರ ನಾಲಗೆಗಳು ಮೇಲೇಳದಂತೆ ಬೆಸೆದುಕೊಂಡಿವೆ. ಅಸ್ಪೃಶ್ಯರಂತಹ ಗುಲಾಮರು ಹೇಗೆ ತಾನೆ ತಮ್ಮ ಹಿಂದೂ ದಣಿಗಳ ವಿರುದ್ಧ ಸೊಲ್ಲನ್ನೆತ್ತಬಲ್ಲರು? ಅವರ ಒಂದು ಪ್ರತಿಭಟನೆಯ ನುಡಿ ಅವರನ್ನು ಬ್ರಾಹ್ಮಣರು ಸೃಷ್ಟಿಸಿರುವ ಸ್ವರ್ಗದಿಂದ ಹೊರದೂಡುತ್ತದೆ. ಒಟ್ಟು ಶಾಸಕರ ಸಂಖ್ಯೆ ೨೦ ಇದೆ. ಆದರೂ ಸವರ್ಣೀಯ ಹಿಂದೂಗಳ ಅಮಾನುಷ ವರ್ತನೆಯ ಬಗ್ಗೆ ಮಾತನಾಡಲು ಅವರಲ್ಲಿ ಯಾರಿಗೂ ಉಸಿರಿಲ್ಲ. ಇತ್ತೀಚೆಗೆ, ಹಿಂದೂ ಕಾಂಗ್ರೆಸ್ಸಿನ ಪೋಲಿಸರು ಮಹಿಳಾ ಪ್ರತಿಭಟನಾಕಾರರನ್ನು ಆಚೆಗೆ ಎಸೆದರು. ಮಹಿಳೆಯರಲ್ಲಿ ಹಲವರಿಗೆ ಗಾಯಗಳಾದವು. ಉನ್ನತ ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಯಾವ ಕ್ರಮವನ್ನೂ ತಗೆಗೆದುಕೊಳ್ಳಲಿಲ್ಲ. ಸವರ್ಣೀಯ ಹಿಂದೂಗಳ ಕೈಯಲ್ಲಿರುವ ಪತ್ರಿಕೆಗಳಲ್ಲಿ ಇದರ ಸುದ್ದಿ ಪ್ರಕಟವಾಗಲಿಲ್ಲ. ಶಾಸನಸಭೆಯಲ್ಲಿ ದಲಿತ ಸಮುದಾಯಕ್ಕೆ ಸೇರಿದ ಯಾವ ಶಾಸಕನಿಂದಲೂ ಇದರ ಬಗ್ಗೆ ಒಂದೇ ಒಂದು ಗೊತ್ತುವಳಿಯೂ ಮಂಡಿತವಾಗಲಿಲ್ಲ. ಶ್ರೀ ಎಂ.ಕೆ. ಗಾಂಧಿಯವರನ್ನು ೧೯೩೨ರಲ್ಲಿ ಅವರು ಕೈಗೊಂಡ ಆಮರಣಾಂತ ಉಪವಾಸವನ್ನು ನಿಲ್ಲಿಸಿ ಅವರ ಪ್ರಾಣವನ್ನು ಉಳಿಸಿದ ಪೂನಾ ಒಪ್ಪಂದದ ಪ್ರಕಾರ ಪ್ರತ್ಯೇಕ ಮತಕ್ಷೇತ್ರಗಳ ಬದಲಿಗೆ ಸಂಯುಕ್ತ ಮತಕ್ಷೇತ್ರಗಳನ್ನು ಜಾರಿಗೆ ತಂದ ವ್ಯವಸ್ಥೆಯ ಪರಿಣಾಮ ಇದು. ಜೀವನದಲ್ಲಿ ಕಾಲವೆನ್ನುವುದು ಒಂದು ದೊಡ್ಡ ಪ್ರಭಾವೀ ಅಂಶ. ಶಿಕ್ಷಿತ ಪ್ರಪಂಚದ ಮುಂದೆ ಅದು ಸತ್ಯವನ್ನು ಸ್ಥಾಪಿಸುತ್ತದೆ. ಯಾವುದೇ ಜಾತಿಯ ಮಹಿಳೆಯ ಮೇಲೆ ಈ ರೀತಿಯ ದೌರ್ಜನ್ಯವನ್ನು ಎಸಗಿದ್ದರೆ, ಸವರ್ಣೀಯ ಹಿಂದೂಗಳ ಪತ್ರಿಕೆಗಳು ಕೋಲಾಹಲವನ್ನು ಮಾಡುತ್ತಿದ್ದವು ಮತ್ತು ಭೂಮಿ ಆಕಾಶಗಳನ್ನು ಒಂದು ಮಾಡುತ್ತಿದ್ದವು.

ಸಂಯುಕ್ತ ಪ್ರಾಂತದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗಳವರ ಪಾಲು ಶೇ. ೩೩ ಇದೆ. ಆದರೆ ಅವರಿಗೆ ಸರಕಾರೀ ಸೇವೆಯಲ್ಲಿ ಪ್ರಾತಿನಿಧ್ಯವಿಲ್ಲ, ಕಾರ್ಯಾಂಗದಲ್ಲಿ ಪ್ರಾತಿನಿಧ್ಯವಿಲ್ಲ, ನ್ಯಾಯಾಂಗದಲ್ಲಾಗಲೀ ಶಿಕ್ಷಣ ಇಲಾಖೆಯಲ್ಲಾಗಲೀ ಇಲ್ಲ. ಭಾರತದಲ್ಲಿನ ಪರಿಶಿಷ್ಟ ಜಾತಿಗಳ ಪರಿಸ್ಥಿತಿಯು, ಅಮೇರಿಕದಲ್ಲಿದ್ದ ನಿಗ್ರೋಗಳ ಅಥವಾ ಜರ್ಮನಿ ಮತ್ತು ಪ್ಯಾಲಸ್ಟೈನ್‌ಗಳಲ್ಲಿದ್ದ ಯಹೂದಿಗಳ ಪರಿಸ್ಥಿತಿಗಿಂತ ಹೀನಾಯವಾದುದಾಗಿದೆ. ಕೊನೆಯಲ್ಲಿ ರಾಜ್‌ಭೋಜ್ ಅವರು ಡಾ. ಅಂಬೇಡ್ಕರ್ ಅವರ ಈ ಸಂದೇಶವನ್ನು ಓದಿದರು. "ಮುಂದಿನ ಸ್ವತಂತ್ರ ಭಾರತದಲ್ಲಿ ಪರಿಶಿಷ್ಟ ಜಾತಿಗಳು ಆಳುವ ಜನಾಂಗವಾಗಬೇಕು ಎಂಬ ಪಣವನ್ನು ತೊಡಬೇಕು. ದಾಸ್ಯ ಮನೋಭಾವದಿಂದ ಸೇವೆಮಾಡುವುದನ್ನು ಮುಂದುವರೆಸದಿರಲು ತೀರ್ಮಾನಿಸಬೇಕು, ದಣಿಗಳ ಕೈಕೆಳಗಿನ ಸೇವಕರಂತೆ ಯಾವ ಸ್ಥಾನಗಳನ್ನೂ ಒಪ್ಪಿಕೊಳ್ಳಬಾರದು".

## ತಿಲಕ್‌ಚಂದ್ ಮತ್ತು ರಾಜ್‌ಭೋಜ್ ಅವರ ಬಂಧನ
## ೧೯೪೭ರ ಏಪ್ರಿಲ್ ೧೮

ಇಂದು ಸತ್ಯಾಗ್ರಹದ ೧೫ನೆಯ ದಿವಸ. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಮಹಾಕಾರ್ಯದರ್ಶಿ ಶ್ರೀ ರಾಜ್‌ಭೋಜ್ ಅವರು, ಆಗ್ರಾ, ಅಲೀಘರ್, ಖಾನ್ಪುರ, ತುಂಡಾಲ ಮತ್ತು

ಲಖ್ನೌಗಳಿಂದ ಬಂದಿದ್ದ ಇತರ ಎಪ್ಪತ್ತೈದು ಸತ್ಯಾಗ್ರಹಿಗಳ ಜೊತೆಯಲ್ಲಿ ಬಂಧನಕ್ಕೆ ಒಳಗಾದರು. ಸರಕಾರವು ಕಳೆದ ರಾತ್ರಿ ಸತ್ಯಾಗ್ರಹ ಶಿಬಿರದಲ್ಲಿ ಮುಖ್ಯ ಆಯುಕ್ತರಾದ ಶ್ರೀ ತಿಲಕ್ ಚಂದ್ ಕುರೀಲ್ ಅವರನ್ನು ಬಂಧಿಸಿದ ಪ್ರಕರಣವು ಲಖ್ನೌ ಹಾಗೂ ಪ್ರಾಂತದ ಇತರೆಡೆಗಳಲ್ಲಿನ ಎಲ್ಲಾ ಪರಿಶಿಷ್ಟ ಜಾತಿಗಳ ಜನರಿಗೆ ಪ್ರತಿಭಟನೆಯ ಬಗ್ಗೆ ಹೆಚ್ಚಿನ ಉತ್ಸಾಹವನ್ನು ತುಂಬಿತು. ಲಖ್ನೌನಲ್ಲಿರುವ ಶಾಸನಸಭೆಯ ಮುಂದೆ ಬಂಧನಕ್ಕೆ ಒಳಗಾಗಲು ನೂರಾರು ಜನರು ಮುನ್ನುಗ್ಗಿ ಬರುತ್ತಿದ್ದಾರೆ. ಮಹಿಳಾ ಸತ್ಯಾಗ್ರಹಿಗಳೂ ಪುರುಷರಿಗಿಂತ ತಾವೇನೂ ಕಡಿಮೆಯಿಲ್ಲವೆಂಬಂತೆ ಇತ್ತ ಧಾವಿಸುತ್ತಿದ್ದಾರೆ. ಅಸ್ಪೃಶ್ಯ ಸಮಾಜದಲ್ಲಿನ ತಾಯಂದಿರು ತಮ್ಮ ಮಕ್ಕಳನ್ನು, ಸಹೋದರಿಯರು ತಮ್ಮ ಸಹೋದರರನ್ನು ಬಂಧನಕ್ಕೆ ಒಳಗಾಗಲು ಕಳುಹಿಸುತ್ತಿರುವ ಘಟನೆಗಳು ನಡೆಯುತ್ತಿವೆ.

ತಾವು ಬಂಧನಕ್ಕೆ ಒಳಗಾಗುವುದಕ್ಕೆ ಮೊದಲು ಶ್ರೀ ರಾಜ್‌ಭೋಜ್ ಅವರು ಖಾನ್ಪುರದ ಬದಲೂರಾಮ್ ಸೋಂಕರ್ ಅವರನ್ನು ಸಂಯುಕ್ತ ಪ್ರಾಂತದ ದ್ವಿತೀಯ ನಾಯಕರನ್ನಾಗಿ ನೇಮಿಸಿದರು

ತಾವು ಬಂಧನಕ್ಕೆ ಒಳಗಾಗಲು ಹೋಗುವುದರ ಮೊದಲು ಭಾರತದ ಪರಿಶಿಷ್ಟ ಜಾತಿಗಳವರಿಗೆ, ಅದರಲ್ಲೂ ಸಂಯುಕ್ತ ಪ್ರಾಂತಗಳ ಪರಿಶಿಷ್ಟ ಜಾತಿಗಳವರಿಗೆ ಈ ಸಂದೇಶವನ್ನು ನೀಡಿದರು

“ ಆಸ್ಟ್ರೇಲಿಯಾದ ಬುಷ್‌ಮ್ಯಾನ್‌ಗಳನ್ನು ವಸಾಹತುಶಾಹಿಗಳು, ನಿಗ್ರೋಗಳನ್ನು ಕ್ಲುಂಕ್ಲಕ್ಸ್ ಕ್ಲಾನ್ ಹಾಗೂ ಯಹೂದಿಗಳನ್ನು ನಾಝಿಗಳು ನಡೆಸಿಕೊಂಡ ರೀತಿಗಿಂತಲೂ ಹಿಂದೂಗಳು ಧರ್ಮದ ಹೆಸರಿನಲ್ಲಿ ಪರಿಶಿಷ್ಟ ಜಾತಿಗಳವರೊಂದಿಗೆ ವರ್ತಿಸುವ ರೀತಿ ಹೇಯವಾಗಿದೆ ಎಂದು ಹೇಳಬಯಸುತ್ತೇನೆ. ಇದು ನಮ್ಮನ್ನು ನಿಧಾನವಾಗಿ ಕೊಲ್ಲುವ ವಿಷ.

ಭವಿಷ್ಯದಲ್ಲಿ ನಾವು ಏನನ್ನಾದರೂ ಪಡೆಯಬೇಕಿದ್ದರೆ, ನಮ್ಮ ಶಕ್ತಿಯನ್ನೇ, ನಮ್ಮ ಸಾಧನ ಸಂಪತ್ತನ್ನೇ ಮತ್ತು ನಮ್ಮ ಧೈರ್ಯವನ್ನೇ ಅವಲಂಬಿಸಬೇಕಾಗುತ್ತದೆ ಎಂಬ ಪಾಠವು ನಮಗೆ ಸ್ಪಷ್ಟವಾಗಿದೆಯೇ? ನಾವು ನಮ್ಮ ಹೋರಾಟವನ್ನು ಏಕಾಂಗಿಯಾಗಿಯೇ ನಡೆಸಬೇಕು. ಹಲವು ಬಾರಿ ಹೋರಾಟವು ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟೇತರರ ವಿರುದ್ಧ ನಡೆಯುವ ಹೋರಾಟವಾಗಿರಬಹುದು. ಇಲ್ಲಿಯವರೆಗೆ ನಾವು ಬೇಡುತ್ತಲೇ ಇದ್ದೇವೆ, ನಮ್ಮ ಬೇಡಿಕೆಗಳು ಈಡೇರಲಿಲ್ಲ. ಕದವನ್ನು ತಟ್ಟುತ್ತಲೇ ಇದ್ದೇವೆ, ಕದವು ತೆರೆಯಲ್ಪಡಲಿಲ್ಲ. ಬಹುಶಃ ಕದವನ್ನು ಒಡೆದು ನಮಗೆ ಬೇಕಾದುದನ್ನು, ನಾವು ಪಡೆಯಲು ಅರ್ಹವಾಗಿರುವುದನ್ನು ತೆಗೆದುಕೊಂಡು ಹೋಗುವ ಸನ್ನಿವೇಶ ಈಗ ಬಂದಿದೆ. ನಮ್ಮ ಜನರ ಮುಂದೆ ಅತ್ಯಂತ ಕಷ್ಟದ ಸಮಯ ಇದೆ ಎಂದು ನನಗೆ ತೋರುತ್ತಿದೆ.

ಈ ಪರಿಸ್ಥಿತಿಯನ್ನು ನಿಭಾಯಿಸಲು ನಾವೆಲ್ಲರೂ ಒಂದಾಗಬೇಕಿದೆ, ನಮ್ಮ ದನಿಗಳೆಲ್ಲವೂ ಒಟ್ಟುಗೂಡಬೇಕಾಗಿದೆ, ನಮ್ಮ ಮನಸ್ಸುಗಳು ಒಂದೇ ದಿಕ್ಕಿನತ್ತ ಚಲಿಸಬೇಕಾಗಿದೆ, ನಾವೆಲ್ಲರೂ ಒಂದೇ ಛತ್ರದ ಅಡಿ ಸೇರಿ ಒಂದೇ ದನಿಯಿಂದ ನಮ್ಮ ಬೇಡಿಕೆಗಳನ್ನು ಮುಂದಿಟ್ಟು ಎಲ್ಲರೂ ಒಟ್ಟಾಗಿ ಹೋರಾಡೋಣವೆಂದು ನಾನು ನಮ್ಮೆಲ್ಲಾ ಸಹೋದರರಿಗೂ, ನಮ್ಮಿಂದ ದೂರವಾಗಿರುವವರಿಗೂ, ಮನವಿ ಮಾಡಿಕೊಳ್ಳುತ್ತೇನೆ.

ನಮ್ಮನ್ನು ನಾವು ವ್ಯವಸ್ಥಿತಗೊಳಿಸಿಕೊಳ್ಳಬೇಕು, ನಮ್ಮಲ್ಲೇ ಐಕ್ಯವನ್ನು ಸಾಧಿಸಬೇಕು. ನಾವು ಹೋರಾಡಲೇ ಬೇಕು. ಮುಂದಡಿಯಿಡುತ್ತಾ ನಾವು ನಮ್ಮ ಹೋರಾಟವನ್ನು ಮುಂದುವರೆಸಬೇಕು, ನಮ್ಮ ಹಾದಿಗೆ ಕಂಟಕವಾಗಿರುವ ಪ್ರತಿಯೊಬ್ಬರ ವಿರುದ್ಧವೂ ಹೋರಾಡಬೇಕು. ಸಂಯುಕ್ತ ಪ್ರಾಂತಗಳಲ್ಲಿ ಆರಂಭವಾಗಿರುವ ಹೋರಾಟವು, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಭಾರತದಲ್ಲಿನ ಸಮಾನ ಮಾನವ ಹಕ್ಕುಗಳಿಗಾಗಿ

ನಡೆಯುತ್ತಿದೆ. ನಾನು ಸಂಯುಕ್ತ ಪ್ರಾಂತದ ಪರಿಶಿಷ್ಟ ಜಾತಿಗಳ ಒಕ್ಕೂಟದ ಈ ಹೋರಾಟದಲ್ಲಿ ಭಾಗವಹಿಸುತ್ತೇನೆ ಎಂದು ಭಾವಿಸಿರಲಿಲ್ಲ. ಕಾಂಗ್ರೆಸ್ಸಿನ ಸರಕಾರದ ಅಡಿಯಲ್ಲಿಯೇ ನಮ್ಮ ಮಹಿಳಾ ಸತ್ಯಾಗ್ರಹಿಗಳಿಗೆ ಮಾಡಿದ ಅವಮಾನವು ನನ್ನನ್ನು ಈ ಪವಿತ್ರ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಮಾಡಿತು. ಈ ಹೇಯ ಕೃತ್ಯಕ್ಕೆ ಪ್ರತೀಕಾರವನ್ನು ಮಾಡುವವರೆಗೂ ಪರಿಶಿಷ್ಟ ಜಾತಿಗಳ ಯಾರೊಬ್ಬರೂ ಸುಮ್ಮನೆ ಕುಳಿತುಕೊಳ್ಳಬಾರದು. ನಮ್ಮ ಗುರಿಗಳನ್ನು ಸಾಧಿಸಲು ಪೂಜ್ಯ ಡಾ. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಹೋರಾಡಬೇಕಾದ, ಅದಕ್ಕಾಗಿ ಪ್ರಾಣಾರ್ಪಣೆಯನ್ನು ಬೇಕಾದರೂ ಮಾಡಬೇಕಾದ ಸಂದರ್ಭ ಬಂದಿದೆ. ಎಲ್ಲಾ ಸತ್ಯಾಗ್ರಹಿಗಳೂ ಶಾಂತಿಯುತವಾಗಿರುವಂತೆ, ಅಹಿಂಸಾಮಾರ್ಗದಿಂದ ವಿಚಲಿತರಾಗದಂತೆ ನಾನು ಅವರೆಲ್ಲರಿಗೂ ಮನವಿ ಮಾಡಿಕೊಳ್ಳುತ್ತೇನೆ.

ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು ನಾನು ಈ ಮೂಲಕ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಲಖ್ನೌಗೆ ಇನ್ನು ಯಾವ ತಂಡಗಳನ್ನೂ ಕಳುಹಿಸಬೇಡಿ, ಏಕೆಂದರೆ, ಸಂಯುಕ್ತ ಪ್ರಾಂತದ ಶಾಸನ ಸಭೆಯ ಅಧಿವೇಶನ ಮುಗಿಯುವವರೆಗೆ ಮಾತ್ರ ಈ ಸತ್ಯಾಗ್ರಹವು ಮುಂದುವರೆಯುತ್ತದೆ. ಕೇವಲ ಸಂಯುಕ್ತ ಪ್ರಾಂತದ ಪರಿಶಿಷ್ಟ ಜಾತಿಗಳ ಒಕ್ಕೂಟವೇ ಈ ಸತ್ಯಾಗ್ರಹವನ್ನು ಅದರ ಗುರಿಮುಟ್ಟಿಸಲು ಸಶಕ್ತವಾಗಿದೆ".

**೧೯೪೭ರ ಏಪ್ರಿಲ್ ೧೯**

ವಿವಿಧ ಭಾಗಗಳಲ್ಲಿ ನಾಲ್ಕು ಪಂಗಡಗಳು ಬಂಧನಕ್ಕೆ ಒಳಗಾದವು. ಮೊದಲೆರಡು ಪಂಗಡಗಳನ್ನು ಝುಂಡಾ ಪಾರ್ಕ್ ಹಾಗೂ ಅಮೀನಾಬಾದ್‌ನಲ್ಲಿ ಬಂಧಿಸಲಾಯಿತು. ನಾಲ್ವರು ಮಹಿಳೆಯರಿದ್ದ ಉಳಿದೆರಡು ಪಂಗಡಗಳು, ಕೈಸೋರ್‌ಬಾಗ್ ಬಳಿ ಬಂಧಿಸಲ್ಪಟ್ಟವು. ಈ ಪಂಗಡಗಳನ್ನು ಸರ್ವಶ್ರೀ ಜೋಹರಿಲಾಲ್, ಸೇವಾರಾಮ್, ಗೋಪಿಚಂದ್ ಮತ್ತು ಬಿಜಿಪತ್ ರಾಮ್‌ಜಿ ಬಸ್ತಿ ಅವರುಗಳು ಮುನ್ನಡೆಸುತ್ತಿದ್ದರು. ನಗರದ ದಂಡಾಧಿಕಾರಿಯೊಂದಿಗೆ ಬಂದ ಹರಿಜನ ಸಚಿವ ಶ್ರೀ ಗಿರಿಧರ್‌ಲಾಲ್ ಅವರು ಸತ್ಯಾಗ್ರಹಿಗಳನ್ನು ತಮ್ಮ ಸತ್ಯಾಗ್ರಹವನ್ನು ನಿಲ್ಲಿಸಲು ಮನವಿ ಮಾಡಿದರು. ಆದರೆ ಸ್ವಲ್ಪಹೊತ್ತಿನಲ್ಲಿಯೇ ತಮಗೆ ತಮ್ಮ ಸಮುದಾಯದಲ್ಲಿ ಎಂತಹ ಮರ್ಯಾದೆಯಿದೆ ಎಂಬುದು ಅವರಿಗೆ ಗೊತ್ತಾಯಿತು.

## ಸಂಯುಕ್ತ ಪ್ರಾಂತಗಳಲ್ಲಿ ಪರಿಶಿಷ್ಟ ಜಾತಿಗಳವರ ಸತ್ಯಾಗ್ರಹದ ಮುಂದುವರಿಕೆ

**೧೯೪೭ರ ಏಪ್ರಿಲ್ ೨೧:**

ಸತ್ಯಾಗ್ರಹವು ಇಂದು ೨೭ನೆಯ ದಿನವನ್ನು ಪ್ರವೇಶಿಸಿತು. ಇಲ್ಲಿಯವರೆಗೆ ೧೨೮೫ ಜನ ಸತ್ಯಾಗ್ರಹಿಗಳನ್ನು ಬಂಧಿಸಲಾಗಿದೆ. ಪ್ರಾಂತದ ವಿವಿಧ ಜಿಲ್ಲೆಗಳಿಂದ ಸತ್ಯಾಗ್ರಹಿಗಳು ಪ್ರವಾಹದೋಪಾದಿಯಲ್ಲಿ ಬರುತ್ತಿದ್ದಾರೆ. ಇವುಗಳಲ್ಲಿ ಆಗ್ರಾ, ಅಲೀಘರ್ ಮತ್ತು ಖಾನ್ಪುರ ಜಿಲ್ಲೆಗಳ ಜನರು ಬಹುಪಾಲು ಇದ್ದಾರೆ.

ಆಗ್ರಾದಿಂದ ಬಂದ ಶ್ರೀ ಕೇಸರ್ ಲಾಲ್ ಅವರ ನೇತೃತ್ವದಲ್ಲಿ ೩೫ ಜನರ ಮೊದಲ ಪಂಗಡವು ಚೌಕ್ ಬಜಾರ್ ಬಳಿ ಬಂಧನಕ್ಕೊಳಗಾಯಿತು. ಈ ಪಂಗಡದಲ್ಲಿ ೧೭ ಜನ ಮಹಿಳೆಯರೂ ಇದ್ದರು. ಸತ್ಯಾಗ್ರಹಿಗಳು ಚೌಕ್ ಬಜಾರಿನ ಬಳಿ ಬಂದಾಗ, ಶಾಂತಿಯಿಂದ ಅಹಿಂಸಾತ್ಮಕವಾಗಿ ಚಳವಳಿಯನ್ನು ನಡೆಸುತ್ತಿದ್ದ ಅವರ ಮೇಲೆ ಪೋಲಿಸರು ಲಾಠಿ ಪ್ರಹಾರವನ್ನು ಮಾಡಿದರು. ಇದರಿಂದ ನಾಯಕ ಶ್ರೀ ಕೇಸರ್ ಲಾಲ್ ಮತ್ತು ಅವರ ಮಗಳು ಗಂಭೀರವಾಗಿ ಗಾಯಗೊಂಡರು. ಬಾಬೂಲಾಲ್ ಎಂಬ ಮತ್ತೊಬ್ಬ ಸತ್ಯಾಗ್ರಹಿಯ ತಲೆಗೆ ತೀವ್ರವಾಗಿ ಪೆಟ್ಟಾಗಿದೆ. ಅವರು ನೆಲದ ಮೇಲೆ ಬಿದ್ದು ಪ್ರಜ್ಞೆಯನ್ನು ಕಳೆದುಕೊಂಡರು. ಅವರನ್ನು ಆ ಸ್ಥಿತಿಯಲ್ಲಿಯೇ ಪೋಲಿಸರು ಹತ್ತಿರದ ಪೋಲಿಸ್ ಸ್ಟೇಷನ್ನಿಗೆ

ತಗೆಗೆದುಕೊಂಡು ಹೋದರು. ೪೫ ಜನರಿದ್ದ ಸರ್ವದಾನಂದಜೀಯವರ ನೇತೃತ್ವದ ಎರಡನೆಯ ಪಂಗಡವನ್ನು ಕೈಸರ್ ಬಾಗ್ ಬಳಿ ಬಂಧಿಸಿದರು. ತಲಾ ೨೫ ಜನರಿದ್ದ ಮೂರು ಮತ್ತು ನಾಲ್ಕನೆಯ ಪಂಗಡಗಳನ್ನು ಅಮೀನಾಬಾದ್ ಬಳಿ ಬಂಧಿಸಲಾಯಿತು. ಈ ಎರಡೂ ಪಂಗಡಗಳನ್ನು ಶ್ರೀ ರಾಜಾರಾಮ್ ಮತ್ತು ರಾಮ್‌ಜಿ ಲಾಲ್ ಅವರು ಮುನ್ನಡೆಸುತ್ತಿದ್ದರು. ೨೩ ಜನರಿದ್ದ ಐದನೆಯ ತಂಡವನ್ನು ಲೋಟುಚೆ ರಸ್ತೆಯ ಬಳಿ ಬಂಧಿಸಿದರು. ಈ ತಂಡದ ನೇತೃತ್ವವನ್ನು ಆಗ್ರಾದ ವಾಲ್‌ಚಂದ್‌ಜೀ ಅವರು ವಹಿಸಿದ್ದರು.

ಪೋಲಿಸರು ನಡೆಸಿದ ಲಾಠಿ ಪ್ರಹಾರದ ವಿಷಯದಲ್ಲಿ ಪರಿಶಿಷ್ಟ ಜಾತಿಗಳ ಜನರಿಗೆ ವಿಪರೀತವಾದ ಅಸಮಾಧಾನವುಂಟಾಗಿದೆ.

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಶ್ರೀ ರಾಜ್‌ಭೋಜ್, ಸಂಯುಕ್ತ ಪ್ರಾಂತದ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷ ತಿಲಕ್‌ಚಂದ್ ಮತ್ತು ಇತರ ಮುಖಂಡರಾದ ಆಗ್ರಾದ ಶ್ರೀ ಗೋಪಿಚಂದ್ ಮತ್ತು ಖಾನ್ಪುರದ ಶ್ರೀ ಘುಲಿದಾಸ್ ಅವರ ಬಂಧನ ಮತ್ತು ಅವರನ್ನು ಮೂರನೆಯ ದರ್ಜೆಯ ಬಂದೀಖಾನೆಯಲ್ಲಿಟ್ಟಿರುವುದು ಪ್ರಾಂತದ ಪರಿಶಿಷ್ಟ ಜನಾಂಗದವರಲ್ಲಿ ಪ್ರಚೋದನೆ ಹಾಗೂ ಅಸಮಾಧಾನಗಳನ್ನು ಹುಟ್ಟುಹಾಕಿವೆ. ಇಂತಹ ಪರಿಸ್ಥಿತಿಯಲ್ಲಿ ಅಸ್ಪೃಶ್ಯರು ಮುಂದೆ ಬರಲಿರುವ ರಾಮರಾಜ್ಯದಲ್ಲಿ ಸವರ್ಣೀಯ ಹಿಂದೂಗಳ ಅಡಿಯಾಳುಗಳಾಗಿ ಬದುಕಬೇಕಾಗಿಬರುವ ಚಿತ್ರಣವನ್ನು ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದಾರೆ.

**೧೯೪೭ರ ಏಪ್ರಿಲ್ ೨೨:**

ಚೌಕದ ಬಳಿ ನಿನ್ನೆ ನಡೆದ ಪೋಲಿಸ್ ಲಾಠೀಪ್ರಹಾರದಿಂದಾಗಿ, ಇಂದು ಪರಿಶಿಷ್ಟ ಜಾತಿಗಳವರಲ್ಲಿ ದೊಡ್ಡ ಕೋಲಾಹಲವೇ ಆಯಿತು. ಮೂರು ದಿನಗಳ ಕಾಲ ಮುಂದೂಡಿದ್ದ ಶಾಸನಸಭೆಯು ಇಂದು ಮತ್ತೆ ಪ್ರಾರಂಭವಾಯಿತು. ನಗರದಲ್ಲಿ ಪ್ರತಿಭಟನೆಯನ್ನು ಮಾಡುವ ಬದಲು ಇಂದು ಪರಿಶಿಷ್ಟ ಜಾತಿಗಳ ಸತ್ಯಾಗ್ರಹಿಗಳು ಶಾಸನಸಭಾ ಭವನದ ಮುಂದೆ ಪ್ರತಿಭಟನೆಯನ್ನು ನಡೆಸಿದರು. ಖಾನ್ಪುರದ ಶ್ರೀ ಜೋಧಾರಾಮ್ ಅವರ ನೇತೃತ್ವದಲ್ಲಿ ಏಳು ಜನ ಮಹಿಳೆಯರು ಇದ್ದ ಮೂವತ್ತು ಜನರ ತಂಡವನ್ನು ಇಂದು ಬಂಧಿಸಲಾಯಿತು. ಸ್ವಾಮಿ ಹರಿನಂದ್‌ಜಿಯವರ ಮುಖಂಡತ್ವದಲ್ಲಿ ೩೨ ಜನರಿದ್ದ ಎರಡನೆಯ ತಂಡ ಶಾಸನಸಭೆಯ ಮುಂದೆ ಬಂಧನಕ್ಕೀಡಾಯಿತು. ೪ ಜನ ಸ್ತ್ರೀಯರಿದ್ದ ೪೦ ಸತ್ಯಾಗ್ರಹಿಗಳ ನಾಲ್ಕನೆಯ ತಂಡವನ್ನು ಹಜರತ್‌ಗಂಜ್ ಬಳಿ ಬಂಧಿಸಲಾಯಿತು. ಸತ್ಯಾಗ್ರಹಿಗಳು ಘೋಷಿಸುತ್ತಿದ್ದ ಮುಖ್ಯ ಘೋಷಣೆಗಳು ಹೀಗಿದ್ದವು –

೧) ಸವರ್ಣೀಯ ಹಿಂದೂಗಳಿಗೆ ಧಿಕ್ಕಾರ,

೨) ಬೇಗಾರ್ ವ್ಯವಸ್ಥೆಗೆ ಧಿಕ್ಕಾರ,

೩) ಅಳಿಯಲಿ, ಉಳಿಯಲಿ, ಪ್ರತ್ಯೇಕ ಮತಕ್ಷೇತ್ರಗಳು ಬೇಕೇಬೇಕು,

೪) ಪಂತ್ ಅವರ ಸರಕಾರಕ್ಕೆ ಧಿಕ್ಕಾರ,

೫) ಸಂಯುಕ್ತ ಪ್ರಾಂತದ ಹರಿಜನ ಶಾಸಕರಿಗೆ ಧಿಕ್ಕಾರ.

ನಮ್ಮ ಸತ್ಯಾಗ್ರಹದ ಸುದ್ದಿಯನ್ನು ಸವರ್ಣೀಯ ಹಿಂದೂಗಳ ಒಡೆತನದಲ್ಲಿರುವ ಪತ್ರಿಕೆಗಳು ಪ್ರಕಟಿಸದಿರುವುದು ವಿಚಿತ್ರವಾಗಿದೆ. ತಮ್ಮ ಬಂಧನಕ್ಕೆ ಮೊದಲು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಮಹಾಕಾರ್ಯದರ್ಶಿ ಶ್ರೀ ರಾಜ್‌ಭೋಜ್ ಅವರು ನೀಡಿದ ಹೇಳಿಕೆಯನ್ನು ಈ ಪತ್ರಿಕೆಗಳು ಪ್ರಕಟಿಸಲಿಲ್ಲ. ಎಲ್ಲಾ ಬಂಧಿತರನ್ನೂ ಮೂರನೇ ದರ್ಜೆಯ ಸೆರೆಮನೆಗಳಲ್ಲಿ ಇಡಲಾಗಿದೆ. ಅವರಿಗೆ

ಪತ್ರಿಕೆಗಳನ್ನು ಓದಲೂ ಅವಕಾಶವನ್ನು ನೀಡುತ್ತಿಲ್ಲ. ಸತ್ಯಾಗ್ರಹದ ವಿಷಯಗಳನ್ನು ಪ್ರಕಟಿಸುವುದನ್ನು ತಡೆಹಿಡಿಯುವುದರ ಮೂಲಕ ಪರಿಶಿಷ್ಟ ಜಾತಿಗಳವರ ಉತ್ಸಾಹವನ್ನು ಇಂಗಿಸಲಾಗುವುದಿಲ್ಲ ಎಂಬುದನ್ನು ಸವರ್ಣೀಯ ಹಿಂದೂ ಪತ್ರಿಕೆಗಳು ತಿಳಿದುಕೊಳ್ಳಬೇಕು. ಭಾರತದ ಪ್ರತಿ ಭಾಗದಲ್ಲಿಯೂ ಪರಿಶಿಷ್ಟ ಜಾತಿಗಳವರು ಎಚ್ಚೆತ್ತುಕೊಳ್ಳುತ್ತಿರುವುದನ್ನು ಸಾಮಾನ್ಯ ಹಿಂದೂಗಳು ಅವಾಕ್ಕಾಗಿ ನೋಡಿ ಗರಬಡಿದವರಂತೆ ನಿಂತುಕೊಳ್ಳುವ ದಿನ ಶೀಘ್ರವೇ ಬರಲಿದೆ.

ಇಲ್ಲಿಯವರೆಗೆ ೧೩೮೭ ಜನರನ್ನು ಬಂಧಿಸಲಾಗಿದೆ. ಇಂದು ಬಂಧಿತರಾದವರ ಸಂಖ್ಯೆ ೧೦೨.[೧]

**ಸಂಯುಕ್ತ ಪ್ರಾಂತಗಳ ಪರಿಶಿಷ್ಟ ಜಾತಿಗಳ ಒಕ್ಕೂಟದ ಸತ್ಯಾಗ್ರಹ**
**ಶ್ರೀ ಪಿ.ಎನ್ ರಾಜ್‌ಭೋಜ್ ಅವರಿಗೆ ಆರುತಿಂಗಳ ಕಠಿಣ ಸಜೆ**

ಲಖ್ನೌ, ಶನಿವಾರ

ಜಿಲ್ಲಾ ದಂಡಾಧಿಕಾರಿಗಳು ಮೆರವಣಿಗೆಯನ್ನು ನಿಷೇಧಿಸಿ ಹೊರಡಿಸಿದ್ದ ಆಜ್ಞೆಯನ್ನು ಉಲ್ಲಂಘಿಸಿದುದಕ್ಕಾಗಿ ಮತ್ತು ಶಾಂತಿಭಂಗವನ್ನು ಉಂಟುಮಾಡಿದ್ದಕ್ಕಾಗಿ ಜಿಲ್ಲಾ ದಂಡಾಧಿಕಾರಿ ಶ್ರೀ ಬಿ.ಡಿ. ಸನ್ವಾಲ್ ಅವರು ಭಾರತೀಯ ದಂಡ ಸಂಹಿತೆಯ ೩೮ನೆಯ ಪರಿಚ್ಛೇದದ ಪ್ರಕಾರ, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಮಹಾಕಾರ್ಯದರ್ಶಿ ಶ್ರೀ ಪಿ.ಎನ್. ರಾಜ್‌ಭೋಜ್ ಅವರಿಗೆ ಆರುತಿಂಗಳ ಸೆರೆವಾಸವನ್ನು ವಿಧಿಸಿದರು. ಇವೇ ಕಾರಣಗಳಿಗಾಗಿ ಪರಿಶಿಷ್ಟ ಜಾತಿಗಳವರ ಮತ್ತೊಬ್ಬ ಮುಖಂಡ ಶ್ರೀ ಗೋಪಿಚಂದ್ ಪಿಪಾಲ್ ಅವರಿಗೆ (...ಅಂಕಿಗಳು ಸ್ಪಷ್ಟವಿಲ್ಲ...) ತಿಂಗಳುಗಳ ಸೆರೆವಾಸವನ್ನು ವಿಧಿಸಲಾಗಿದೆ.

ಆರು ತಿಂಗಳುಗಳ ಕಾಲ ಶಾಂತಿಯನ್ನು ಕಾಪಾಡುವುದಾಗಿ ಭರವಸೆಯನ್ನು ನೀಡಬೇಕು ಮತ್ತು ಐದು ನೂರು ರೂಗಳ ಭದ್ರತೆಯನ್ನು ನೀಡಬೇಕು ಎಂದು ದಂಡಾಧಿಕಾರಿಗಳು ಸಂಯುಕ್ತ ಪ್ರಾಂತಗಳ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷ ಶ್ರೀ ತಿಲಕ್ ಚಂದ್ ಕುರಿಲ್ ಅವರಿಗೆ ನಿರ್ದೇಶಿಸಿದರು.

ಈ ಸಂದರ್ಭದಲ್ಲಿ ಬಂಧಿತರಾಗಿದ್ದವರಲ್ಲಿ ೬೦ ಜನ ಮಹಿಳೆಯರನ್ನು ಮತ್ತು ಬಾಲಕರನ್ನು ದಂಡಾಧಿಕಾರಿಗಳು ಎಚ್ಚರಿಕೆಯನ್ನು ನೀಡಿ ಬಿಡುಗಡೆಮಾಡಿದರು.[೨]

* * * * *

೧. ೧೯೪೭ ಮೇ ೪, ಪುಟ ೨

೨. ಜೈಭೀಮ್, ೧೯೪೭ರ ಮೇ ೨೫, ಪುಟ ೨

# ಪರಿಶಿಷ್ಟ ೬

## ಪೂನಾ ಒಪ್ಪಂದವನ್ನು ಬಲವಂತವಾಗಿ ಹೇರುವ ಮೂಲಕ ಶ್ರೀ ಗಾಂಧಿಯವರು ಅಸ್ಪೃಶ್ಯರಿಗೆ ಪ್ರಾತಿನಿಧ್ಯದ ಅವಕಾಶವನ್ನು ತಪ್ಪಿಸಿದ್ದಾರೆ

### ಶ್ರೀ ಗಾಂಧಿಯರ ತಂತ್ರಗಳ ಬಗ್ಗೆ ಬ್ರಿಟಿಷ್ ಮುಖಂಡರಿಂದ ಕಟುಟೀಕೆ

ಕೆಳಮನೆಯಲ್ಲಿ ಭಾರತದ ಸ್ವಾತಂತ್ರ್ಯ ಮಸೂದೆಯ ಬಗ್ಗೆ ನಡೆಯುತ್ತಿರುವ ಚರ್ಚೆಯ ಸಂದರ್ಭದಲ್ಲಿ ಪರಿಶಿಷ್ಟ ಜಾತಿಗಳವರ ಬಗ್ಗೆ ಮಾತನಾಡುತ್ತಿದ್ದ ಲಾರ್ಡ್ ವಿಂಟರ್‌ಟನ್ ಅವರು ಭಾರತಕ್ಕೆ ಗಾಂಧಿಯವರು ತಂದಿತ್ತ ಹಲವು ಅನಿಷ್ಟಗಳಲ್ಲಿ ಪೂನಾ ಒಪ್ಪಂದವೂ ಒಂದು ಎಂದು ಹೇಳಿದರು. ಅವರು ಇದಕ್ಕೆ ಕಾರಣರಾಗದೆ ಇದ್ದಿದ್ದರೆ ಈ ಜನಗಳು (ಅಸ್ಪೃಶ್ಯರು) ಇಂದು ಪ್ರಾತಿನಿಧ್ಯವನ್ನು ಪಡೆಯುವ ಉತ್ತಮ ಅವಕಾಶವನ್ನು ಹೊಂದಿರುತ್ತಿದ್ದರು. ಆದರೆ ಹಾಗಾಗಲು ಬಿಡದೆ ಗಾಂಧಿಯವರು ಆಮರಣ ಉಪವಾಸವನ್ನು ಪ್ರಾರಂಭಿಸುವ ಬೆದರಿಕೆಯನ್ನು ಒಡ್ಡಿದರು. ಅಧಿಕಾರದ ಹಸ್ತಾಂತರವಾದ ನಂತರ ಅವರು ಇಂತಹುದೇ ಆಮರಣ ಉಪವಾಸದ ಬೆದರಿಕೆಯನ್ನು ಒಡ್ಡಿದರೆ ಆ ವಿಷಯದಲ್ಲಿ ಬ್ರಿಟಿಷರು ಮಾಡಬೇಕಾದದ್ದೇನೂ ಇರುವುದಿಲ್ಲ.

ಭಾರತದ ಕರ್ಣಧಾರತ್ವವನ್ನು ಬ್ರಿಟಿಷರು ಭಾರತೀಯರಿಗೆ ಬಿಟ್ಟುಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಕರ್ಣಧಾರತ್ವದ ಸ್ಥಾನವನ್ನು ಸೃಷ್ಟಿಸಲು ಗಾಂಧಿಯವರಿಗಿಂತ ಹೆಚ್ಚಿನ ಶ್ರಮವನ್ನು ಇತರರು ಪಟ್ಟಿದ್ದಾರೆ. ಒಂದು ಕಡೆ ಬ್ರಿಟಿಷರು ಮತ್ತೊಂದು ಕಡೆ ಜಿನ್ನಾ ಮತ್ತು ನೆಹರೂ ಅವರ ಸಾಧನೆಯನ್ನು ಗಾಂಧಿಯವರು ಈಗಲೂ ಸರಿಯಾಗಿ ತಿಳಿದುಕೊಳ್ಳದಿರುವುದು ದುರದೃಷ್ಟಕರ.

ಈ ಚರ್ಚೆಯಲ್ಲಿ ಮಾತನಾಡಿದ ಕನ್ಸರ್ವೇಟಿವ್ ಪಕ್ಷದ ಮತ್ತೊಬ್ಬ ಪ್ರಮುಖ ನಾಯಕ ಬುಚರ್ ಅವರು ಭಾರತದ ಅಲ್ಪಸಂಖ್ಯಾತರ ಈ ಸಮಸ್ಯೆಯ ಬಗ್ಗೆ ಹೀಗೆ ಹೇಳಿದರು.

"ಅಲ್ಪಸಂಖ್ಯಾತರ ಬಗ್ಗೆ ಯಾವುದೇ ಗಮನವನ್ನೂ, ಅದರಲ್ಲಿಯೂ ಸಮಿತಿಗಳ ಮಟ್ಟದಲ್ಲಿ, ನೀಡಿಲ್ಲ. ಅವರ ಪ್ರಕರಣವನ್ನು ಎತ್ತಿಕೊಳ್ಳುವುದು ನಿಜವಾಗಿಯೂ ಅಸಾಧ್ಯವಾಗಿದೆ. ಸದನವು ಭಾರತೀಯರಿಗೆ ಅಧಿಕಾರದ ಹಸ್ತಾಂತರ ಮಾಡುವ ವಿಷಯವನ್ನು ಚರ್ಚಿಸುತ್ತಿರುವ ಈ ಸಮಯದಲ್ಲಿ, ಈ ವಿಷಯವನ್ನು ಚರ್ಚಿಸುವುದಂತೂ ಅತ್ಯಂತ ಕಷ್ಟಸಾಧ್ಯವಾದ ಕಾರ್ಯವಾಗಿದೆ.

ಭಾರತಕ್ಕೆ ಸ್ವಾತಂತ್ರ್ಯವು ಅದರ ಸಂವಿಧಾನದ ರಚನೆಗೂ ಮೊದಲೇ ಲಭ್ಯವಾಗುತ್ತದೆ ಎಂಬುದನ್ನು ನಾವು ನಿರ್ಧರಿಸಲಿದ್ದೇವೆ. ಅಂದರೆ ಅಲ್ಪಸಂಖ್ಯಾತರ ಸ್ಥಾನಮಾನಗಳನ್ನು ತೀರ್ಮಾನಿಸುವುದನ್ನು ಸಂವಿಧಾನದ ಸಭೆಯು ತೀರ್ಮಾನಿಸುತ್ತದೆ.

ಸರಕಾರದಲ್ಲಿ ಸೇವೆ ಸಲ್ಲಿಸಿರುವ, ಪರಿಶಿಷ್ಟ ಜಾತಿಗಳ ಮುಖಂಡರಾದ ಅಂಬೇಡ್ಕರ್ ಅವರು ನನ್ನೊಂದಿಗೆ ಮಾತನಾಡಿ ತಮ್ಮ ಸಮುದಾಯದ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಿದರೆ ಅನುಕೂಲವಾಗುತ್ತದೆ ಎಂದು ಕೋರಿದ್ದಾರೆ.

ಆದುದರಿಂದ, ಹೊಸ ಸಂವಿಧಾನವು ರಚಿಸಲ್ಪಟ್ಟಾಗ ಪರಿಶಿಷ್ಟ ಜಾತಿಗಳಿಗೆ ಸಂಪೂರ್ಣ ಗಮನವನ್ನು

ನೀಡಲಾಗುವುದು ಎಂಬ ವಿಶ್ವಾಸವು ನನಗಿದೆ.

ಬ್ರಿಟನ್ ಅವರಿಗೆ ಮಾಡಬೇಕಾದುದನ್ನು ಮಾಡಲಿಲ್ಲ ಎಂಬುದು ಆಗಾಗ್ಗೆ ಕೇಳಿಬರುತ್ತದೆ. ಆದರೆ, ರಾಣಿ ವಿಕ್ಟೋರಿಯಾ ಅವರ ಮೊದಲ ಘೋಷಣೆಯ ಪ್ರಕಾರ ನಾವು ದೇಶೀಯ ಜನರ ಧರ್ಮ, ಆಚರಣೆಗಳಲ್ಲಿ ಮಧ್ಯಪ್ರವೇಶಿಸುವುದು ಅನಪೇಕ್ಷಣೀಯವಾಗಿರುವುದರಿಂದ ಪರಿಶಿಷ್ಟ ಜಾತಿಗಳು ಬಯಸಿದುದನ್ನು ನಾವು ಅವರಿಗೆ ಮಾಡಲು ಸಾಧ್ಯವಾಗಲಿಲ್ಲ.

ಆದರೂ, ನಂತರದ ಕೆಲ ವರ್ಷಗಳಲ್ಲಿ ಪರಿಶಿಷ್ಟ ಜಾತಿಗಳವರ ಅಭಿವೃದ್ಧಿಗಾಗಿ ಮತ್ತು ಅಸ್ಪೃಶ್ಯತೆಯ ಕ್ರೌರ್ಯವನ್ನು ತಗ್ಗಿಸಲು ನಾವು ಪ್ರಯತ್ನಿಸಿದ್ದೇವೆ.

ಪರಿಶಿಷ್ಟ ಜಾತಿಗಳವರಿಗೆ ತಮ್ಮ ವ್ಯವಹಾರ ಮತ್ತು ಯೋಗಕ್ಷೇಮವನ್ನು ನೋಡಿಕೊಳ್ಳಲು ಅನುಕೂಲ ಮಾಡಿಕೊಡುವ ಪ್ರತ್ಯೇಕ ಮತಕ್ಷೇತ್ರಗಳನ್ನು ನಿರ್ಮಿಸುವ ಸಲಹೆಯನ್ನು ಪ್ರಾತಿನಿಧ್ಯ ಸಲಹಾ ಸಮಿತಿಯು ಶಿಫಾರಸ್ಸು ಮಾಡಿತು.

## ಪೂನಾ ಒಪ್ಪಂದ

ಶ್ರೀ ಗಾಂಧಿಯವರ ದೀರ್ಘಾವಧಿಯ ಉಪವಾಸಗಳಲ್ಲಿ ಒಂದಾದ ಇತ್ತೀಚಿನ ಉಪವಾಸದ ಕಾರಣವಾಗಿ ಮಾಡಿಕೊಂಡ ಪೂನಾ ಒಪ್ಪಂದವು ಪ್ರಾತಿನಿಧ್ಯ ಸಲಹಾ ಸಮಿತಿಯ ತೀರ್ಮಾನಗಳನ್ನು ದುರದೃಷ್ಟಕರವಾಗಿ ನಿಷ್ಕ್ರಿಯಗೊಳಿಸಿತು.

ನಾನು ಈಗ ಸಂವಿಧಾನ ರಚನಾ ಮಂಡಲಿಯ ತೀರ್ಮಾನಗಳ ಮೇಲೆ ಪ್ರಭಾವವನ್ನು ಬೀರಲಾರೆ. ಆದರೆ, ಪೂನಾ ಒಪ್ಪಂದದಿಂದಾಗಿ ತಮ್ಮ ಅಭಿಪ್ರಾಯಗಳನ್ನು ನೈಜವಾಗಿ ಬಿಂಬಿಸುವ ಪ್ರತಿನಿಧಿಗಳನ್ನು ಚುನಾಯಿಸುವ ಅವಕಾಶದಿಂದ ಪರಿಶಿಷ್ಟ ಜಾತಿಗಳವರು ಕಳೆದುಕೊಂಡಿದ್ದಾರೆ.

ಭಾರತದ ಕೆಲವು ಭಾಗಗಳಲ್ಲಿಯಾದರೂ ಅವರು ತಮ್ಮ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಆಯ್ಕೆಮಾಡುವಂತಹ ಚುನಾವಣಾ ವ್ಯವಸ್ಥೆಯನ್ನು ರೂಪಿಸುವುದು ಸಾಧ್ಯವಿದೆ ಎಂಬುದರಲ್ಲಿ ನನಗೆ ವಿಶ್ವಾಸವಿದೆ.

ಇತರ ಅಲ್ಪಸಂಖ್ಯಾತರ ಬಗೆಗೆ ಬಟ್ಲರ್ ಅವರು ಹೀಗೆ ಹೇಳಿದ್ದಾರೆ – "ನವಭಾರತದಲ್ಲಿ ಅಲ್ಪಸಂಖ್ಯಾತರು, ಅಲ್ಲಿಯೇ ಉಳಿಯ ಬಯಸುವ ಯೂರೋಪಿಯನ್ನರು ಸ್ವಾತಂತ್ರ್ಯವನ್ನು, ಸಮಾನ ಅವಕಾಶಗಳನ್ನು ಮತ್ತು ಶಾಂತಿಯುತ ಬಾಳ್ವೆಯನ್ನು ಪಡೆಯಲು ಸಾಧ್ಯವಿದೆ ಎಂಬುದರಲ್ಲಿ ನಾವು ವಿಶ್ವಾಸವಿಟ್ಟಿದ್ದೇವೆ"

"ಆದರೆ ನಾವಿಲ್ಲಿ ಗಮನಿಸಬೇಕಾದ ಒಂದು ಅಂಶವಿದೆ. ರಾಜಕೀಯದಲ್ಲಿ ಪ್ರವೇಶಿಸಲು ಇಚ್ಛಿಸದ ಕೃಷಿಕರು ಇತರ ಅಲ್ಪಸಂಖ್ಯಾತರೂ ಅಲ್ಲಿ ಇದ್ದಾರೆ. ಅವರ ದನಿಯು ನಮಗೆ ಕೇಳಿಸುವುದಿಲ್ಲ. ಆದರೆ ಅವರ ಅಭಿಪ್ರಾಯವು ಕೆಲವು ವೇಳೆ, ರಾಜಕೀಯ ರಂಗದಲ್ಲಿ ಕೂಗಾಡಿ, ಹಾರಾಡಿ ಮಿಂಚುವ ಅನೇಕರ ಅಭಿಪ್ರಾಯಗಳಿಗಿಂತ ಭಿನ್ನವಾಗಿರುತ್ತದೆ.

## ಜನತೆಯಬಗ್ಗೆ ಕಾಳಜಿ

"೧೯೩೩ರ ನವೆಂಬರ್ ೧೭ರಂದು ರಾಯಲ್ ಗ್ಯಾಲರಿಯಲ್ಲಿ ದುಂಡು ಮೇಜಿನ ಸಮ್ಮೇಳನವನ್ನು ಉದ್ಘಾಟಿಸುತ್ತಾ ಮಹಾಪ್ರಭುಗಳು ಮಾಡಿದ ಭಾಷಣದಲ್ಲಿ ಈ ಕೆಳಗಿನ ಮಾತುಗಳು ಇವೆ –

'ಇಡೀ ರಾಜಕೀಯ ವ್ಯವಸ್ಥೆಯಲ್ಲಿ ಬಹುಸಂಖ್ಯಾತರ ಮತ್ತು ಅಲ್ಪಸಂಖ್ಯಾತರ, ಸ್ತ್ರೀಯರ ಮತ್ತು ಪುರುಷರ, ನಗರವಾಸಿಗಳ ಮತ್ತು ಕೃಷಿಕರ, ಭೂಮಾಲೀಕರ ಮತ್ತು ಗೇಣಿದಾರರ, ಸಬಲರ ಮತ್ತು ದುರ್ಬಲರ, ಶ್ರೀಮಂತ ಮತ್ತು ಬಡವರ ಬೇರೆಬೇರೆ ಜನಾಂಗ, ಜಾತಿ, ಧರ್ಮಗಳ ಜನರ ನ್ಯಾಯಯುತ ಬೇಡಿಕೆಗಳು ನಮ್ಮ ದೃಷ್ಟಿಯಲ್ಲಿದೆ. ಇವರೆಲ್ಲರ ಯೋಗಕ್ಷೇಮದ ಬಗ್ಗೆ ನಾವು ಆಳವಾಗಿ ಚಿಂತಿಸುತ್ತೇವೆ'.

ತಮ್ಮ ಭಾಷಣದ ಕೊನೆಯಲ್ಲಿ ಬಟ್ಲರ್ ಅವರು ಹೀಗೆ ಹೇಳಿದರು. 'ಈ ಎಲ್ಲರ ಬಗೆಗೂ ನಾವು ಆಳವಾಗಿ ಯೋಚಿಸುತ್ತೇವೆ. ಈಗ ಅವರು ನಮ್ಮ ಕಕ್ಷೆಯ ಹೊರಗೆ ಇದ್ದಾರೆ. ನಾವು ಹೊರಗೆ ಹೋಗುತ್ತಿದ್ದೇವೆ. ಆಡಳಿತದ ಮತ್ತು ಭಾರತದ ಜನತೆಯ ಯೋಗಕ್ಷೇಮದ ಬಗ್ಗೆ ಹೊಣೆಯನ್ನು ತಮ್ಮ ಹೆಗಲಿನ ಮೇಲೆ ಹೊತ್ತುಕೊಳ್ಳುತ್ತಿರುವವರಿಗೆ ನಾವು ಶುಭವನ್ನು ಕೋರುತ್ತೇವೆ'.

* * * * *

---

(ಜೈಭೀಮ್, ೧೯೪೭ರ ಜುಲೈ ೨೩)

# ಪರಿಶಿಷ್ಟ ೭

## ದಮನಮಾಡುವವರ ಕರುಣೆಯಲ್ಲಿ ಸೌಲಭ್ಯವಂಚಿತರು
## ಸಂಸತ್ತಿನ ಕೆಳಮನೆಯಲ್ಲಿ ಸಂಪುಟದ ಸಂಚು ಬಹಿರಂಗ

ಇತ್ತೀಚಿನ ಲಂಡನ್ ಮಾತುಕತೆಗಳ ನಂತರ ಬ್ರಿಟಿಷ್ ಸರಕಾರವು ನೀಡಿರುವ ಹೇಳಿಕೆಯ ಬಗ್ಗೆ ಚರ್ಚೆಯ ಸಮಯದಲ್ಲಿ ಚರ್ಚಿಲ್ ಅವರು ಮಾತನಾಡುತ್ತಾ ಹೀಗೆ ಹೇಳಿದರು: –

"ದೀರ್ಘವಾದ ಈ ಚರಿತ್ರೆಯಲ್ಲಿ ಈ ಘೋಷಣೆ ಒಂದು ಮೈಲಿಗಲ್ಲಾಗಿದೆ.

ಭಾರತದಲ್ಲಿ ಹೋರಾಟದಲ್ಲಿ ನಿರತರಾಗಿರುವವರ ಪೈಕಿ ಅತಿದೊಡ್ಡ ಸಮುದಾಯವಾಗಿರುವ ಮುಸ್ಲಿಮರು ೯,೦೦,೦೦,೦೦೦ ಸಂಖ್ಯೆಯಲ್ಲಿ ಇದ್ದಾರೆ. ಅಸ್ಪೃಶ್ಯರ ಸಂಖ್ಯೆಯು ೪,೦೦,೦೦,೦೦೦ ಮತ್ತು ೬,೦೦,೦೦,೦೦೦ರ ನಡುವೆ ಇದೆ. ಈ ಸಮಸ್ಯೆಯ ಪರಿಹಾರದ ವಿಷಯದಲ್ಲಿ ತಂತ್ರಗಾರಿಕೆಯಲ್ಲಿ ಅವರನ್ನು ಮೀರಿಸಿ ಮೂಲೆಗುಂಪು ಮಾಡಲಾಗಿದೆ. ಅವರು ವಿಸ್ತಾರವಾದ ಹಿಂದೂಗಳ ಸಮಾಜದ ಒಂದು ಅವಿಭಾಜ್ಯ ಭಾಗವಾಗಿದ್ದಾರೆ ಮತ್ತು ಹಾಗಾಗಿ ಅವರನ್ನು ಅಲ್ಪಸಂಖ್ಯಾತರು ಎಂದು ಪ್ರತ್ಯೇಕವಾಗಿ ಪರಿಗಣಿಸುವ ಆವಶ್ಯಕತೆಯಿಲ್ಲ ಎಂಬ ತೋರಿಕೆಯ ವಾದವನ್ನು ಮಂಡಿಸಲಾಗಿದೆ.

ಈ ವಿಷಯದಲ್ಲಿ ಸರಕಾರದ ಅಭಿಪ್ರಾಯ ಮತ್ತು ಉದ್ದೇಶಗಳು ಏನು ಎಂಬುದನ್ನು ವಿವರಿಸಬೇಕೆಂದು ನಾನು ಪ್ರಧಾನಮಂತ್ರಿಯವರನ್ನು ಕೇಳುತ್ತಿದ್ದೇನೆ. ಅಸ್ಪೃಶ್ಯರನ್ನು ಇತರ ಅಲ್ಪಸಂಖ್ಯಾತ ವರ್ಗಗಳವರಗಿಂತ ಪ್ರತ್ಯೇಕವಾದ ಅಸ್ತಿತ್ವವುಳ್ಳ ಒಂದು ವರ್ಗವೆಂದು ಪರಿಗಣಿಸಲಾಗುವುದೇ ಅಥವಾ ತಮ್ಮ ದಮನಕಾರರು ಎಂದು ಅವರು ತಿಳಿದುಕೊಂಡಿರುವ ವರ್ಗದವರ ಸಂಖ್ಯೆಯನ್ನು ಉಬ್ಬಿಸಲು ಆ ವರ್ಗಕ್ಕೆ ಅಸ್ಪೃಶ್ಯರನ್ನು ಸೇರಿಸಲಾಗುವುದೇ?

### ಸಂವಿಧಾನ ಸಭೆ

ಭಾರತವನ್ನು ಗಣರಾಜ್ಯವನ್ನಾಗಿ ಮಾಡಲು ಉಪಕ್ರಮಿಸಿರುವ ಸಂವಿಧಾನ ಸಭೆಯ ಲಕ್ಷಣಗಳ ಬಗ್ಗೆ ಮಾತನಾಡುತ್ತಾ ಚರ್ಚಿಲ್ ಅವರು, ಜನತೆಯ ಬಹುಭಾಗ ಇನ್ನೂ ಪ್ರಾತಿನಿಧ್ಯವನ್ನೇ ಕಾಣದಿರುವಂತಹ ಸಮಯದಲ್ಲಿ, ಅದು ಭಾರತದ ಭಾಗ್ಯವನ್ನು ರೂಪಿಸುವ ಕೆಲಸದಲ್ಲಿ ನಿರತವಾಗಿದೆ ಎಂದರು.

ಮಧ್ಯೆ ಪ್ರವೇಶಿಸಿದ ಲೇಬರ್ ಪಕ್ಷದ ವಿಲಿಯಂ ಕೋವೆ ಅವರು ಚರ್ಚಿಲ್ ಅವರು ಆಳ್ವಿಕೆಯನ್ನು ಮುಂದುವರಿಸ ಬಯಸುತ್ತಾರೆಯೇ? ಎಂದು ಕೇಳಿದರು.

ಅದಕ್ಕೆ ಉತ್ತರವಾಗಿ ಚರ್ಚಿಲ್ಲರು ಹೌದು ಎಂದು ಹೇಳಿದರು. ಅದನ್ನು ಕೇಳಿ ಕೋವೆ ನಕ್ಕರು. ಮುಂದುವರಿದು ಚರ್ಚಿಲ್ಲರು "ನಮ್ಮ ಆಳ್ವಿಕೆಯನ್ನು ಮುಂದುವರೆಸಬೇಕೆಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ. ನನಗೆ ಜನಮತದಲ್ಲಿ ನಂಬಿಕೆಯಿದೆ. ಆದರೆ ಜನತೆಯ ನಡುವೆ ಇರುವ ದೀರ್ಘಕಾಲದ ತಮ್ಮ ಸಂಬಂಧದಿಂದಾಗಿ ಜನತೆಯ ಹೆಸರಿನಲ್ಲಿ ಬಲವಂತವಾಗಿಯೋ, ತಂತ್ರಗಳ ಮೂಲಕವೋ, ಅಥವಾ ಕುತಂತ್ರದ ಮೂಲಕವಾಗಿಯೋ ಅಧಿಕಾರವನ್ನು ಲಪಟಾಯಿಸಿದ ಬೆರಳೆಣಿಕೆಯಷ್ಟು ಜನರು ಜನಮತವನ್ನು

ತಿರುಚುವುದನ್ನು ನಾನು ಒಪ್ಪುವುದಿಲ್ಲ" ಎಂದರು.

ಆದರೆ ಮೇ ತಿಂಗಳಿನಲ್ಲಿ ಕ್ಯಾಬಿನೆಟ್ ಮಿಷನ್ ಸಂವಿಧಾನ ಸಭೆಯನ್ನು ರಚಿಸಲು ಮಾಡಿರುವ ಸಲಹೆಗಳ ಪ್ರಕಾರ ಭಾರತದ ಪ್ರಮುಖ ಪಕ್ಷಗಳು ಒಟ್ಟಿಗೆ ಸೇರಿ, ಅವರ ಪ್ರತಿನಿಧಿಗಳ ಮೂಲಕ ಉದ್ದೇಶಿತ ಸಂವಿಧಾನವನ್ನು ರಚಿಸಲು ಕೈಜೋಡಿಸಬೇಕು.

ಮಹಾಪ್ರಭುಗಳ ಸರಕಾರವು ಇಚ್ಛಿಸಿದರೆ ಅವರ ಉದ್ದೇಶಿತ ಸಂವಿಧಾನಸಭೆಯು ಕಾರ್ಯಾರಂಭ ಮಾಡಿರುವುದೇ ಎಂದು ತಿಳಿಯುವುದು ಸೂಕ್ತವೆಂದು ಎನಿಸುತ್ತದೆ ಎಂದು ಚರ್ಚಿಲ್ಲರು ಹೇಳಿದರು.

ನಾನು ಇದು ಹೀಗಾಗದಿರಲಿ ಎಂಬ ದೃಢವಿಶ್ವಾಸದ ಭಾವನೆಯಿಂದ ನನ್ನ ಮಾತನ್ನು ಮುಗಿಸಲು ಬಯಸುತ್ತೇನೆ. ಎಂದು ಚರ್ಚಿಲ್ಲರು ಹೇಳಿದಾಗ ಸರಕಾರದವರು ನಗೆಯಲ್ಲಿ ಮುಳುಗಿದರು.

ಭಾರತದ ಸಮಸ್ಯೆಗಳನ್ನು ಸುದೀರ್ಘವಾಗಿ ಅಧ್ಯಯನ ಮಾಡಿರುವವರಿಗೆ ಈ ಮೊದಲೇ ಗೊತ್ತಿರುವಂತೆ ಈ ಎಲ್ಲಾ ಮತಿಗೆಡಿಸುವ ವಿದ್ಯಮಾನಗಳ ಅನಿಶ್ಚಿತತೆಗಳ ನಡುವೆ ಬ್ರಿಟಿಷ್ ಸರಕಾರದ ಮುಂದೆ ಮೂರು ದಾರಿಗಳು ಇವೆ.

"ಮೊದಲನೆಯದು, ಅಲ್ಲಿ ಏನೇ ಸಂಭವಿಸಲಿ, ಅದರ ಬಗ್ಗೆ ಕಿಂಚಿತ್ತೂ ಕಾಳಜಿಯನ್ನು ತೋರಿಸದೆ, ಭಾರತವನ್ನು ತೊರೆಯುವುದು. ಎರಡನೆಯದು, ಸದ್ಯಕ್ಕೆ ಈಗ ಅದರ ಸಂಭವವನ್ನೂ ಕಾಣದಿರುವ, ಸಂಸತ್ತು ನೇಮಿಸುವ ನಿಷ್ಪಕ್ಷಪಾತ ಸರಕಾರವನ್ನು ರಚಿಸಿ, ಗಾಬರಿ, ಭಯ, ಅನಿಶ್ಚಿತತೆ ಮತ್ತು ಸಮಸ್ಯೆಗಳ ಸುಳಿಯಲ್ಲಿರುವ ಕೋಟಿಕೋಟಿ ಸಂಖ್ಯೆಯ ಸಾಮಾನ್ಯ ಜನತೆಯ ಕಲ್ಯಾಣ, ಕ್ಷೇಮ, ಜೀವಿಸುವ ಹಕ್ಕು, ಸ್ವಾತಂತ್ರ್ಯ ಮತ್ತು ಅವರವರ ಸುಖಸಂತೋಷಗಳನ್ನು ಪಡೆಯಲು ಅವಕಾಶ – ಇವುಗಳನ್ನು ಕಲ್ಪಿಸುವಂತೆ ಮಾಡುವುದು. ಮೂರನೆಯದು, ಪರಿಣಾಮವು ಏನೇ ಆಗಲಿ, ಭಾರತದ ಜನತೆಯು ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿರಬೇಕೆ ಅಥವಾ ಹೊರನಡೆಯಬೇಕೆ ಎಂಬುದನ್ನು ಅವರ ತೀರ್ಮಾನಕ್ಕೇ ಬಿಡುವುದು."

## ಸವರ್ಣೀಯ ಹಿಂದೂಗಳ ಪ್ರಾಬಲ್ಯ

"ಏನೇ ಆದರೂ ನಾವು ಮಾಡಲೇಬಾರದ ಒಂದು ಕೆಲಸವಿದೆ. ಬ್ರಿಟಿಷ್ ಸೇನೆಯಾಗಲೀ, ಭಾರತೀಯ ಸೇನೆಯಲ್ಲಿರುವ ಬ್ರಿಟಿಷ್ ಅಧಿಕಾರಿಗಳಾಗಲೀ ೯ ಕೋಟಿ ಮುಸ್ಲಿಮರ, ೬ ಕೋಟಿ ಅಸ್ಪೃಶ್ಯರ ಮೇಲೆ ಸವರ್ಣೀಯ ಹಿಂದೂಗಳು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಲು ಸಹಾಯಕವಾಗುವ ಸಾಧನಗಳಾಗಬಾರದು. ಭಾರತದಲ್ಲಿರುವ ಹೀನಾಯವಾದ ಪರಿಸ್ಥಿತಿಯಲ್ಲಿ ಯಾವ ಪಕ್ಷಗಳ ಪಾಲುದಾರವಾಗುವಂತಹ ಕೆಲಸವನ್ನು ಮುಳುಗುವ ಅಂಚಿನಲ್ಲಿದ್ದರೂ ಬ್ರಿಟಿಷ್ ಸರಕಾರವು ಮಾಡಬಾರದು.

"ನಾವು ಇಂತಹ ಕೆಲಸವನ್ನು ಮಾಡಿದ್ದೇ ಆದರೆ, ಅಲ್ಪಸಂಖ್ಯಾತರ ಮೇಲೆ ಧಾರ್ಮಿಕ ಭಾವನೆಯನ್ನು, ಪಕ್ಷಗಳ ವಿಜಯಪತಾಕೆಯನ್ನು ನೆಡುವಂತಾದರೆ, ಎಲ್ಲಾ ನೀತಿಗಳ ಪ್ರತಿಕೂಲತೆಯಿಂದ ಹಾಗೂ ನಮ್ಮ ಹೊರೆಯಿಂದ ನಮ್ಮ ವಾಸ್ತವಿಕ ಅಥವಾ ನೈತಿಕ ಹೊಣೆಯಿಂದ ಮುಕ್ತರಾದಂತೆ ಆಗುತ್ತದೆ".

" ಈ ಕಾರಣಗಳಿಂದ ಈ ಸಮಸ್ಯೆಗಳನ್ನು ನಿಷ್ಕರುಣೆಯಿಂದ, ನೇರವಾಗಿ ಬ್ರಿಟಿಷ್ ಮತ್ತು ಭಾರತದ ಜನತೆಯ ಮುಂದೆ ಇಡಬೇಕು. ಅವರು ಈಗಾಗಲೇ ಇಂತಹ ಸಮಸ್ಯೆಗಳಿಂದ ವಿಚಲಿತರಾಗಿದ್ದರೂ, ಈ ಮಾರ್ಗವನ್ನು ಅನುಸರಿಸುವುದು ನಮ್ಮ ಕರ್ತವ್ಯವೆಂಬುದು ನಾವು ಯೋಚಿಸಿರುವ ಕ್ರಮ". (ವಿರೋಧ ಪಕ್ಷದವರಿಂದ ಸಂತೋಷದ ಕೇಕೆ).

## ಟೋರಿಯ ನಿಲವಿನ ಬಗ್ಗೆ ಬಟ್ಲರ್ ಅವರ ವಿವರಣೆ

ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಆರ್. ಎ. ಬಟ್ಲರ್ ಅವರು ಪ್ರತಿಪಕ್ಷಗಳ ವಾದವನ್ನು ಮುಕ್ತಾಯ ಹಂತಕ್ಕೆ ತಂದು ತಾವು ಭಾರತೀಯ ಮುತ್ಸದ್ದಿಗಳೊಡನೆ ಕಾರ್ಯವೆಸಗಿದ್ದು, ಅವರು ಪ್ರಪಂಚದಲ್ಲಿರುವ ಅತ್ಯುತ್ತಮ ಮುತ್ಸದ್ದಿಗಳಾಗಿದ್ದಾರೆ ಎಂದು ಹೇಳಿದರು. "ಆದ್ದರಿಂದ ನಾವು ನಮ್ಮ ಮುಂದೆ ಇಟ್ಟುಕೊಂಡಿರುವ ಗುರಿಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳೇನೂ ಇಲ್ಲ. ಅವರದೇ ಆಡಳಿತವನ್ನು ಸ್ಥಾಪಿಸಲು, ಅಲ್ಲಿನ ಎಲ್ಲಾ ಪಕ್ಷಗಳೂ ಒಪ್ಪುವಂತಹ ಸಂವಿಧಾನವನ್ನು ಅಥವಾ ಸಂವಿಧಾನಗಳನ್ನು ರಚಿಸುವುದನ್ನು ಭಾರತೀಯರಿಗೇ ಬಿಡಬೇಕೆಂಬುದು ನಮ್ಮ (ವಿರೋಧಪಕ್ಷಗಳ) ಶಾಶ್ವತ ನಿಲುವಾಗಿದೆ. ಇದು ನಮ್ಮ ಮೊದಲ ಅಭಿಪ್ರಾಯ. ಎರಡನೆಯ ಅಭಿಪ್ರಾಯವೆಂದರೆ ಭಾರತದ ಮೇಲಿನ ಅಧಿಕಾರವನ್ನು ಸಂಪೂರ್ಣವಾಗಿ ಆಡಳಿತವನ್ನು ಸಮರ್ಥವಾಗಿ ನಡೆಸಿಕೊಂಡ ಹೋಗುವಂತಹ ಸರಕಾರಕ್ಕೆ ಅಥವಾ ಸರಕಾರಗಳಿಗೆ ಮಾತ್ರ ಹಸ್ತಾಂತರಗೊಳಿಸಬೇಕು ಎನ್ನುವುದು. ಭಾರತದಲ್ಲಿ ಅನಾಯಕತ್ವಕ್ಕೆ, ಆಂತರಿಕ ಕಲಹಗಳಿಗೆ ನಾವು ದಾರಿಮಾಡಿಕೊಡಬಾರದು.ಈ ಎರಡರ ಪೈಕಿ ಮೊದಲನೆಯದನ್ನು ಸರಕಾರವು ಒಪ್ಪಿದೆಯೆನ್ನುವುದು ಅದರ ಇತ್ತೀಚಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ.

"ಸರಕಾರದ ಇತ್ತೀಚಿನ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ, ಅದರಲ್ಲಿಯೂ ಸಮ್ಮತಿಯಿಲ್ಲದಿರುವ ದೇಶದ ಯಾವ ಜನಗಳ ಮೇಲೆಯೂ ಸಂವಿಧಾನವನ್ನು ಹೇರುವುದಿಲ್ಲ ಎಂದು ತಮ್ಮ ಹೇಳಿಕೆಯ ಅಂತಿಮ ಭಾಗದಲ್ಲಿ ಹೇಳಿರುವುದನ್ನು ವಿಶೇಷವಾಗಿ ಒಪ್ಪುತ್ತೇನೆ. ಆದಾಗ್ಯೂ, ನನಗೆ ಎರಡು ಅಂಶಗಳ ಮೇಲೆ ಸ್ಪಷ್ಟನೆ ಅಗತ್ಯವಿದೆ. ದೇಶದ ಕೆಲವು ಭಾಗಗಳಲ್ಲಿ ವಾಸಿಸುತ್ತಿರುವ ಅಧಿಕ ಸಂಖ್ಯೆಯ ಜನರನ್ನು ಈ ಹೇಳಿಕೆಯು ಕುರಿತದ್ದಾಗಿದೆ. ಭಾರತದ ವ್ಯಹಾರಗಳಲ್ಲಿ ಪಳಗಿಲ್ಲದ ನಮ್ಮಂತಹವರಿಗೆ ಇದು ಹೊಸದಾಗಿ ಕಾಣಿಸುತ್ತಿದೆ. ಸರ್ ಸ್ಟಾಫೋರ್ಡ್ ಕ್ರಿಪ್ಸ್ ಅವರು ಚರ್ಚೆಯಲ್ಲಿ ಮಾತನಾಡುವಾಗ ಹೊಸ ಭಾಷೆಯನ್ನು ಉಪಯೋಗಿಸಿದರು. ಇದು ಸ್ವಲ್ಪ ವಿಶದವಾಗಿರಬೇಕೆಂದು ನಾನು ಬಯಸುತ್ತೇನೆ. ಇಲ್ಲದಿದ್ದರೆ ಭಾರತದ ಜನತೆಯಲ್ಲಿ ಇದು ಅರ್ಥಪೂರ್ಣವಾಗಿ ಕಾಣಿಸದೆ ಹೋಗಬಹುದು" ಎಂದು ಬಟ್ಲರ್ ಅವರು ಹೆಳಿದರು.

"ಮುಸ್ಲಿಂ ಲೀಗಿನವರನ್ನು ಸಂವಿಧಾನ ಸಭೆಯಲ್ಲಿ ಭಾಗವಹಿಸುವಂತೆ ಮಾಡಲಾಗದಿದ್ದರೆ, ಅದರ ಪರಿಣಾಮವು ಅವರು ಬಹುಸಂಖ್ಯಾತರಾಗಿರುವ ಪ್ರದೇಶಗಳನ್ನು ಸಂವಿಧಾನಕ್ಕೆ ಬದ್ಧವಾಗಿರುವಂತೆ ಮಾಡಲು ಸಾಧ್ಯವಿಲ್ಲ ಎಂದು ಸರ್ ಕ್ರಾಫೋರ್ಡ್ ಕ್ರಿಪ್ಸ್ ಅವರು ಹೇಳಿದ್ದಾರೆ. ಆದರೆ ಸರಕಾರವು ಮುಸ್ಲಿಮರಿಗೆ ಮಾತ್ರ ಸೀಮಿತವಾಗಿರಬೇಕು ಎಂಬುದನ್ನು ನಾನು ಒಪ್ಪುವುದಿಲ್ಲ. ಮುಸ್ಲಿಮರನ್ನು ಒಟ್ಟಾರೆಯಾಗಿ ಪರಿಗಣಿಸಬೇಕಾದುದು ನ್ಯಾಯಸಮ್ಮತವಾಗಿರುತ್ತದೆ. ತಮ್ಮ ಮೂಲ ಅಭಿಪ್ರಾಯವು ಇಡೀ ಮುಸ್ಲಿಮ್ ಸಮುದಾಯಕ್ಕೆ ಸಂಬಂಧಿಸಿದುದೇ ಹೊರತು ಕೇವಲ ಆ ಸಮುದಾಯವನ್ನು ಪ್ರತಿನಿಧಿಸುವ ಒಂದು ಪಕ್ಷಕ್ಕೆ ಅಲ್ಲ ಎಂಬ ಹೇಳಿಕೆಯನ್ನು ಸಚಿವರು ಇಂದು ನೀಡುತ್ತಾರೆ ಎಂದು ನಾನು ಆಶಿಸುತ್ತೇನೆ"

"ಸಂಸತ್ತಿನಲ್ಲಿ ಮಂಡಿಸಿದ್ದ ಈ ವಿಷಯದಲ್ಲಿ ಮತ್ತು ಈ ವಿಷಯವು ಮತ್ತೆ ಚರ್ಚೆಗೆ ಬಂದಾಗ ವಿರೋಧ ಪಕ್ಷವು ಮುಸ್ಲಿಮ್ ಸಮುದಾಯವನ್ನಷ್ಟೇ ಅಲ್ಲದೆ ಇತರ ಅಲ್ಪಸಂಖ್ಯಾತರ ಹಿತವನ್ನು ಕುರಿತೂ ಯೋಚಿಸುತ್ತದೆ" ಎಂದು ಬಟ್ಲರ್ ಅವರು ಹೇಳಿದರು.

"ಬ್ರಿಟನ್ನಿನ ಧ್ಯೇಯವು ಸರಿಯಾಗಿ, ಗೌರವಯುತವಾಗಿ ಮತ್ತು ಯಶಸ್ವಿಯಾಗಿ ನೆರವೇರಬೇಕಾದರೆ, ಸಂಸತ್ತು ಮತ್ತು ಭಾರತದ ಜನತೆಯ ನಡುವೆ ಸಮಾನಾಭಿಪ್ರಾಯವು ಮೂಡುವಂತೆ ಮಾಡುವುದು ಅಗತ್ಯವೆಂದು ತೋರುತ್ತದೆ. ಇದಕ್ಕಾಗಿ ಯಾವುದನ್ನೂ ಬಿಡದೆ ಎಲ್ಲಾ ಅಂಶಗಳನ್ನೂ ಚರ್ಚೆಗೆ ಮುಕ್ತವಾಗಿ

ಒಡ್ಡಬೇಕಾಗಿದೆ"

ಅಲೆಗ್ಸಾಂಡರ್ ಅವರು ಮಧ್ಯೆ ಪ್ರವೇಶಿಸುತ್ತಾ " ಬಟ್ಲರ್ ಅವರು ಸೂಚಿಸಿದ ಎರಡು ಮಾರ್ಗಗಳನ್ನು ಬಿಟ್ಟು ಅಧಿಕ ಸಂಖ್ಯೆಯ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಸ್ವತಂತ್ರವಾಗಿ ಪ್ರಾಂತೀಯ ಚುನಾವಣೆಗಳಲ್ಲಿ ಜಯಗಳಿಸಿರುವರು ಎಂಬುದು ಬಟ್ಲರ್ ಅವರಿಗೆ ತಿಳಿದಿದೆಯೇ? ಎರಡನೆಯದು, ನಾವು ನಡೆದುಕೊಂಡ ರೀತಿಗೆ ನಮ್ಮ ಮುಂದಿದ್ದ ತುರ್ತು ಸ್ಥಿತಿಯೇ ಕಾರಣ ಎಂಬುದೂ ಅವರಿಗೆ ಗೊತ್ತಿದೆಯೇ?

ಪ್ರಾತಿನಿಧ್ಯದ ಪ್ರಶ್ನೆಯು ಇಲ್ಲಿ ಬಂದಿರುವುದು ಪೂನಾ ಒಪ್ಪಂದದ ಕಾರಣದಿಂದಲ್ಲ, ಬದಲಿಗೆ ೧೯೩೫ರಲ್ಲಿ ಅಂಗೀಕರಿಸಿದ ೧೯೩೫ರ ಭಾರತ ಸರಕಾರದ ಅಧಿನಿಯಮದ ದೆಸೆಯಿಂದ."

ಅಲೆಗ್ಸಾಂಡರ್ ಅವರು ಮುಂದುವರೆದು ನುಡಿದರು "ಮೂರನೆಯದಾಗಿ, ಇದಕ್ಕಾಗಿ ಹೊಸ ಮತದಾರರ ನೆಲೆಯನ್ನು ಕಂಡುಹಿಡಿಯುವ ಮತ್ತು ಭಾರತಾದ್ಯಂತ ಹೊಸ ಯಾದಿಯನ್ನು ತಯಾರಿಸುವ ಕ್ರಮಕ್ಕೆ ಕೈಹಾಕಲು ಹಾಗೂ ಹೊಸ ಒಪ್ಪಂದವನ್ನು ಅಲ್ಲಿಯವರೆಗೆ ಅನಿರ್ದಿಷ್ಟವಾಗಿ ಮುಂದೂಡುವಂತೆ ಮಾಡಲು ಬಟ್ಲರ್ ಅವರು ಸಲಹೆಯನ್ನು ಮಾಡುತ್ತಿದ್ದಾರೆಯೇ? ಈ ಸಂದರ್ಭದಲ್ಲಿಯೇ ನಾವು ಆ ಸನ್ನಿವೇಶವನ್ನು ಎದುರಿಸಬಾರದೇಕೆ?"

## ಪರಿಶಿಷ್ಟ ಜಾತಿಗಳವರ ಪ್ರಾತಿನಿಧ್ಯ

ಬಟ್ಲರ್ ; "ಸ್ವತಂತ್ರ ಸದಸ್ಯರ ಅಂಶವು ಖಂಡಿತವಾಗಿಯೂ ಸರಿಯಾಗಿಯೇ ಇದೆ. ಈ ವಿಷಯವನ್ನು ಪರಿಶೀಲಿಸುವಾಗ ನಾನು ಪಡೆದ ಎಲ್ಲಾ ಅಭಿಪ್ರಾಯಗಳಿಂದ ಕಾಂಗ್ರೆಸ್ ತನ್ನ ಶಿಸ್ತಿನಿಂದ ಹಾಗೂ ಅವರ ವಿರುದ್ಧ ನಡೆಸಿದ ಗೂಂಡಾಗಿರಿಯಿಂದಾಗಿ ಪರಿಶಿಷ್ಟ ಜಾತಿಗಳವರಲ್ಲಿ ಹಲವರು ತಮ್ಮನ್ನು ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಳ್ಳುವ ಬದಲು ತಾವು ಸ್ವತಂತ್ರರಾಗಿಯೇ ಇರುವುದಾಗಿ ತೀರ್ಮಾನಿಸಿಕೊಂಡಿದ್ದಾರೆ"

ಕಾಂಗ್ರೆಸ್ಸಿನ ಪ್ರತಿನಿಧಿಗಳು ಶಾಸನಸಭೆಯಲ್ಲಿ ಪರಿಶಿಷ್ಟಜಾತಿಗಳನ್ನು ಪ್ರತಿನಿಧಿಸುವುದು ಸರಿಯಾದ ಮಾರ್ಗ ಎಂದು ತಾವು ತಿಳಿದಿಲ್ಲ ಎಂದು ಬಟ್ಲರ್ ಅವರು ತಿಳಿಸಿದರು. ಅಲ್ಪಸಂಖ್ಯಾತರಿಗೆ ನ್ಯಾಯವನ್ನು ದೊರಕಿಸಿಕೊಡುವ ವಿಷಯದಲ್ಲಿ ಸರಕಾರವು ಸಲಹಾ ಸಮಿತಿಯ ಮೇಲೆ ತನ್ನ ಪೂರ್ಣ ವಿಶ್ವಾಸವನ್ನು ಇಟ್ಟಿದೆ ಎಂದ ಅವರು, ಸಲಹಾ ಸಮಿತಿಯು ಅಲ್ಪಸಂಖ್ಯಾತರ ಬಗ್ಗೆ ತೆಗೆದುಕೊಂಡಿರುವ ನಿರ್ಧಾರವನ್ನು ಸರಕಾರವು ಸಂವಿಧಾನದಲ್ಲಿ ಸೇರಿಸುತ್ತದೆಯೇ ಎಂದು ಕೇಳಿದರು.

ಭಾರತದಲ್ಲಿ ರಾಜೀಮಾಡಿಕೊಳ್ಳುವ ಮತ್ತು ಕೊಡು-ಕೊಳ್ಳುವ ಮನೋಭಾವವಿಲ್ಲದಿದ್ದರೆ, ಸರಕಾರವು ಗಂಭೀರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ, ಆದರೆ ಪರಿಸ್ಥಿತಿಯು ಹದಗೆಟ್ಟಿದೆ, ಸರಕಾರವು ಸಹಾಯಕ್ಕೆ ಬರುತ್ತದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು. ತಾನಾಗಿಯೇ ಕ್ರಮಗಳು ಅಗತ್ಯವಾದರೆ ಯೋಜನೆಯ ಸರಳೀಕರಣದತ್ತ ನಡೆಸುವಂತೆ ಇರಬೇಕು ಮತ್ತು ಮಾತುಕತೆಗಳು ಯಶಸ್ವಿಯಗುವ ಅವಧಿಯಲ್ಲಿ ಬ್ರಿಟಿಷರ ಹೊಣೆಗಾರಿಕೆಯನ್ನು ಸ್ಪಷ್ಟವಾಗಿ ಗುರುತಿಸುವ ಹಾಗೆ ಇರಬೇಕು. ವ್ಯವಸ್ಥಿತವಾದ ಪರಿಹಾರಕ್ಕೆ ಇನ್ನೂ ಕಾಲಾವಕಾಶವಿದ್ದು ಈ ವಿಷಯದಲ್ಲಿ ಸರಕಾರವು ಎಂತಹ ನಿರ್ಧಾರವನ್ನು ಹೊಂದಿದೆ ಮತ್ತು ಹೊಂದಿರುತ್ತದೆ ಮತ್ತು ಪರಿಸ್ಥಿತಿಯು ಹೊತ್ತುತರುತ್ತಿರುವ ಅಪಾಯವನ್ನು ಎಷ್ಟು ಸ್ಪಷ್ಟವಾಗಿ ಗುರುತಿಸುತ್ತದೆ ಎಂಬುದರ ಮೇಲೆ ಅದು ಅವಲಂಬಿಸಿದೆ. 'ನಾವೀಗ ನಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲಾಗುವುದಿಲ್ಲ. ಭಾರತದ ಜನತೆಯ ಸುಖ ಸಂತೋಷಗಳು ನಮ್ಮ ಹೊಣೆಗಾರಿಕೆಯನ್ನು ನಾವು ಸಮರ್ಥವಾಗಿ ಮತ್ತು ಸಮರ್ಪಕವಾಗಿ ನಿಭಾಯಿಸುವುದರ ಮೇಲೆ ಆಧಾರಿತವಾಗಿದೆ" ಎಂದು ಹೇಳಿ ತಮ್ಮ ಮಾತನ್ನು ಬಟ್ಲರ್ ಅವರು ಮುಗಿಸಿದರು.

## ಚರ್ಚಿಗೆ ಅಲೆಗ್ಸಾಂಡರ್ ಅವರ ಉತ್ತರ

ರಕ್ಷಣಾಸಚಿವರಾಗಿ ನೇಮಕಗೊಂಡಿರುವ ಅಲೆಗ್ಸಾಂಡರ್ ಅವರು ಚರ್ಚೆಗೆ ಉತ್ತರಿಸುತ್ತಾ ಹೀಗೆ ಹೇಳಿದರು – "ಭಾರತಕ್ಕೆ ಮತ್ತು ಅಲ್ಲಿನ ಜನಗಳಿಗೆ ಹಾಗೂ ಬ್ರಿಟಿಷ್ ಕಾಮನ್‌ವೆಲ್ತ್‌ಗೆ ನಿರ್ಣಾಯಕವಾಗಿರುವ ಈ ಸಮಯದಲ್ಲಿ ಇದು ಸಂಭವಿಸುತ್ತಿದೆ. ಭಾರತವು ತನ್ನ ಸ್ವಾತಂತ್ರ್ಯವನ್ನು ಸಂಬಂಧಿಸಿದ ಎಲ್ಲರ ಸದ್ಭಾವನೆ ಮತ್ತು ಸಹಕಾರದಿಂದ ಸಾಧಿಸಬೇಕು ಎಂದು ಸದನದಲ್ಲಿ ಮಾತನಾಡಿದ ಎಲ್ಲಾ ಭಾಷಣಕಾರರೂ ಬಯಸಿದ್ದಾರೆ ಎಂಬುದಷ್ಟನ್ನೇ ಭಾರತದ ಎಲ್ಲಾ ಪಕ್ಷಗಳ ಮುಖಂಡರೂ ಅರಿತುಕೊಳ್ಳಬೇಕು."

ಭಾರತದ ಪರಿಶಿಷ್ಟ ಜಾತಿಗಳವರನ್ನು ರಾಜಕೀಯವಾಗಿ ಪ್ರತ್ಯೇಕ ಅಸ್ತಿತ್ವವುಳ್ಳವರೆಂದು ಸರಕಾರವು ಪರಿಗಣಿಸುತ್ತದೆಯೇ ಎಂಬ ಚರ್ಚಿಲ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ಅವರು ೧೯೩೫ರ ಭಾರತ ಸರಕಾರದ ಅಧಿನಿಯಮದಲ್ಲಿ ಪರಿಶಿಷ್ಟ ಜಾತಿಗಳವರನ್ನು ರಾಜಕೀಯವಾಗಿ ಪ್ರತ್ಯೇಕ ವ್ಯವಸ್ಥೆಯೆಂದು ಪರಿಗಣಿಸಲಾಗಿದೆ, ಆದರೆ ಅವರಿಗೆ ಇಂತಹ ಪ್ರತ್ಯೇಕತೆಯನ್ನು ಶಾಸನಸಭೆಗಳಲ್ಲಿ ನೀಡಬೇಕೆ, ಬೇಡವೇ ಎಂಬುದು ಸಂವಿಧಾನಸಭೆಗೆ ಬಿಟ್ಟ ವಿಷಯ ಎಂದು ಅವರು ಹೇಳಿದರು. ಈ ವಿಷಯದಲ್ಲಿ ಸರಕಾರವು ಸಂವಿಧಾನ ಸಭೆಯ ಮೇಲೆ ಪ್ರಭಾವವನ್ನು ಬೀರುವುದು ಅಪೇಕ್ಷಣೀಯವಲ್ಲ, ಅಥವಾ ದಲಿತ ವರ್ಗಗಳವರ ಹಿತದೃಷ್ಟಿಯಿಂದ ಸಾಧುವೂ ಅಲ್ಲ ಎಂದು ಅವರು ಘೋಷಿಸಿದರು. ಅಲ್ಪಸಂಖ್ಯಾತರ ರಕ್ಷಣೆಯ ವಿಷಯದಲ್ಲಿ ಸೂಕ್ತ ನಿಬಂಧನೆಗಳನ್ನು ಸಂವಿಧಾನದಲ್ಲಿ ಅಳವಡಿಸುವುದು ಉತ್ತಮ ಮಾರ್ಗವೆಂಬುದು ಸರಕಾರದ ದೃಷ್ಟಿ ಎಂದು ಅವರು ಹೇಳಿದರು. ಸಂವಿಧಾನಸಭೆಯು ತನ್ನ ಸಂವಿಧಾನವನ್ನು ರೂಪಿಸುವ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಬ್ರಿಟಿಷ್ ಸರಕಾರವು ಸಂಸತ್ತಿಗೆ ಎರಡು ನಿಬಂಧನೆಗಳಿಗೆ ಒಳಪಟ್ಟು ಸಂವಿಧಾನವನ್ನು ಜಾರಿಗೆ ತರಲು ಸೂಕ್ತಕ್ರಮವನ್ನು ತೆಗೆದುಕೊಳ್ಳುವಂತೆ ಶಿಫಾರಸ್ಸನ್ನು ಮಾಡುತ್ತದೆ ಎಂದು ಕ್ಯಾಬಿನೆಟ್ ಮಿಷನ್ ಹೇಳಿರುವುದನ್ನು ಸದನದ ಗಮನಕ್ಕೆ ಅವರು ತಂದರು. ಅವುಗಳಲ್ಲಿ ಒಂದು ಅಲ್ಪಸಂಖ್ಯಾತರ ರಕ್ಷಣೆಗೆ ಸಮರ್ಪಕ ವ್ಯವಸ್ಥೆಯನ್ನು ಮಾಡುವುದು, ಎರಡೂ ಪ್ರಮುಖ ಪಕ್ಷಗಳು ಇಂತಹ ಸಂರಕ್ಷಣಾ ವ್ಯವಸ್ಥೆಯನ್ನು ಸಂವಿಧಾನದಲ್ಲಿ ಅಳವಡಿಸುವ ತಮ್ಮ ಉದ್ದೇಶವನ್ನು ಘೋಷಿಸಿರುವುದರಿಂದ, ಸಂವಿಧಾನ ಸಭೆಯ ವರ್ತನೆಯ ಬಗ್ಗೆ ಸಂಶಯವನ್ನು ತಾಳುವುದು ಅನಗತ್ಯ ಎಂದು ಸರಕಾರವು ಭಾವಿಸಿದೆ.

ಕನ್ಸರ್ವೇಟಿವ್ ಪಕ್ಷದ ಹ್ಯೂ ಮಾಲ್ಸನ್ ಅವರ ಅಭಿಪ್ರಾಯವನ್ನು ಅನುಮೋದಿಸುತ್ತಾ "ಅಲ್ಪಸಂಖ್ಯಾತರ ರಕ್ಷಣಾ ವಿಧಿಗಳನ್ನು ಸಂವಿಧಾನದಲ್ಲಿಯೇ ಅಳವಡಿಸಬೇಕು ಎನ್ನುವುದು ಸರಕಾರದ ಅಪೇಕ್ಷೆ" ಎಂದು ಅಲೆಗ್ಸಾಂಡರ್ ಅವರು ಹೇಳಿದರು. "ಡಾ. ಅಂಬೇಡ್ಕರ್ ಅವರು ಕ್ರಿಪ್ಸ್ ಮಿಷನ್ನಿನ ಮುಂದೆ ಇಂತಹ ಉದ್ದೇಶಕ್ಕಾಗಿಯೇ ಬಲವಾಗಿ ವಾದಿಸಿದರು ಎಂದು ಕೇಳಿದ್ದೇನೆ. ಅಸಮ್ಮತಿ ಸೂಚಿಸುವ ಸಮುದಾಯಗಳವರ ಮೇಲೆ ಏನನ್ನೂ ಹೇರುವ ಯೋಚನೆ ನಮಗಿಲ್ಲ ಎಂಬುದನ್ನು ನಾವು ನೀಡಿರುವ ಇತ್ತೀಚಿನ ಹೇಳಿಕೆಯ ಕೊನೆಯ ಪ್ಯಾರಾದಲ್ಲಿ ಸ್ಪಷ್ಟಪಡಿಸಿದ್ದೇವೆ. ಕಾಂಗ್ರೆಸ್ ಇದನ್ನು ಒಪ್ಪಿಕೊಂಡಿದೆ. ಮೇ ೨೫ರ ನಮ್ಮ ಹೇಳಿಕೆಯಲ್ಲಿ ಸಂವಿಧಾನವನ್ನು ರೂಪಿಸುವ ಕಾರ್ಯವನ್ನು ಭಾರತೀಯರಿಗೇ ಬಿಟ್ಟುಕೊಡಲು ನಾವು ಒಪ್ಪಿದ್ದೇವೆ ಎಂದು ಹೇಳಿದ್ದೇವೆ. ಅಲ್ಪಸಂಖ್ಯಾತರ ಸಂರಕ್ಷಣಾ ವಿಧಾನಗಳು ಸಂವಿಧಾನದಲ್ಲಿಯೇ ನಿರೂಪಿಸಲ್ಪಡಬೇಕು ಎಂದು ನಾವು ಬಯಸುತ್ತೇವೆ. ನಾವು ಭಾರತೀಯರಿಗೆ ನೀಡಿರುವ ವಚನಕ್ಕೆ ಬದ್ಧರಾಗಿರುತ್ತೇವೆ" ಎಂದು ಅಲೆಗ್ಸಾಂಡರ್ ತಿಳಿಸಿದರು.

* * * * *

## ಪರಿಶಿಷ್ಟ ೮

ಗೋಪ್ಯ
ಎಸ್.ಬಿ.

೧೯೩೪/೩೪.

ಮೆಮೊ ಸಂಖ್ಯೆ:
೩೯–ಬಿಹಾರ್–೩೭

## ಬಿಹಾರ ಪ್ರಾಂತೀಯ ದಲಿತವರ್ಗಗಳ ಕೂಟ

ಬಿಹಾರ ಪ್ರಾಂತೀಯ ದಲಿತವರ್ಗಗಳ ಕೂಟದ ಅಧ್ಯಕ್ಷರಾದ ಜಗಜ್ಜೀವನ ರಾಮ್, ಬಿ.ಎಸ್.ಸಿ ಅವರು, ಬಾಂಬೆಯ ದಾದರಿನ ರಾಜಗೃಹದಲ್ಲಿರುವ ಡಾ. ಅಂಬೇಡ್ಕರ್, ಬಾರ್–ಅಟ್–ಲಾ ಅವರಿಗೆ ೧೯೩೭ರ ಮಾರ್ಚ್ ೮ರಂದು ಪತ್ರವೊಂದನ್ನು ಬರೆದಿದ್ದಾರೆಂದು ತಿಳಿದುಬಂದಿದೆ. ಪತ್ರದ ಸಾರಾಂಶವನ್ನು ಕೆಳಗೆನೀಡಲಾಗಿದೆ.

**ಒಗ್ಗಟ್ಟಿನಿಂದಿರಿ ಮತ್ತು ವ್ಯವಸ್ಥೆಗೊಳ್ಳಿರಿ**

ಸಂಖ್ಯೆ ४೧ ಬಂಕಿಪುರ, ಪಾಟ್ನಾ, ೧೯४೭ರ ಮಾರ್ಚ್ ೮

ಪ್ರಿಯ ಡಾಕ್ಟರ್ ಸಾಹೇಬ್,

ತಾವು ಇದೇ ತಿಂಗಳ ಮೂರರಂದು ಬರೆದ ಪತ್ರವು ನನಗೆ ತಲುಪಿತು. ಜಾತಿಯ ಬಗ್ಗೆ ತಮ್ಮ ಪುಸ್ತಿಕೆಯ ಪ್ರತಿಯು ತಮ್ಮ ಬಳಿಯಿದ್ದರೆ, ಅದರ ಒಂದು ಪ್ರತಿಯನ್ನು ದಯೆಯಿಟ್ಟು ನನಗೆ ಕಳುಹಿಸಿದರೆ ನಾನು ಅದರ ಭಾಷಾಂತರವನ್ನು ಮಾಡುತ್ತೇನೆ.

ತಾವು ಬಯಸಿದಂತೆ, ಚುನಾವಣೆಯಲ್ಲಿ ಸ್ಪರ್ಧಿಸಿದವರ ಪಟ್ಟಿಯನ್ನು ಕಳುಹಿಸಿಕೊಡುತ್ತಿದ್ದೇನೆ. ನಾವು ಕಾಂಗ್ರೆಸ್‌ನೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದುದನ್ನು ನಾನು ಒಪ್ಪಿಕೊಳ್ಳಬೇಕು. ಇದರಿಂದ ೯ ಜನ ಸ್ಪರ್ಧಿಗಳು ಜಯಗಳಿಸಲು ಸಹಾಯವಾಯಿತು. ಕೂಟವು ಜನತೆಗೆ ನೀಡಿರುವ ವಾಗ್ದಾನಗಳಿಗೆ ಅವರು ಸಹಿಹಾಕಿದ್ದಾರೆ, ಅಲ್ಲದೆ, ಕಾಂಗ್ರೆಸ್ಸಿನವರು ನೀಡಿರುವ ವಾಗ್ದಾನಗಳಿಗೂ ಒಲ್ಲದ ಮನಸ್ಸಿನಿಂದ ಸಹಿಹಾಕಿದ್ದಾರೆ. ನಿಮಗೆ ತಿಳಿದಿರುವಂತೆ, ಬಿಹಾರದಲ್ಲಿ ಕಾಂಗ್ರೆಸ್ಸಿನ ಹೊರತಾಗಿ ಯಾವ ಸಂಘಟಿತ ಪಕ್ಷವೂ ಇಲ್ಲ. ಸ್ಥಳೀಯ ಸರಕಾರದಲ್ಲಿ ಸಚಿವರಾಗಿರುವ ಸರ್ ಗಣೇಶ ದತ್ ಸಿಂಗ್ ಅವರು ತಮ್ಮದೇ ಪಕ್ಷವನ್ನು ಕಟ್ಟಲು ಪ್ರಯತ್ನಿಸಿದರೂ ಅವರಿಗೆ ಅದನ್ನು ಸಾಧಿಸಲಾಗಲಿಲ್ಲ. ೧೯೩೬ರ ನವೆಂಬರ್ ೩ರಂದು ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನವಾಗಿದ್ದು, ನಾವು ಕೊನೆಯ ಗಳಿಗೆಯಲ್ಲಿ ಕಾಂಗ್ರೆಸ್‌ನವರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ದಲಿತವರ್ಗದ ನಾವು ಇಲ್ಲಿ ನಮ್ಮ ಸಂಘಟನೆಯನ್ನು ಬಹಳ ತಡವಾಗಿ ಪ್ರಾರಂಭಿಸಿದೆವು. ಇತ್ತೀಚಿನ ಚುನಾವಣೆಯಲ್ಲಿನ ನಮ್ಮ ಅನುಭವದಿಂದ

ಹೇಳಬಹುದಾದರೆ, ನಮ್ಮ ಕೆಲಸವನ್ನು ಇನ್ನು ಐದು ವರ್ಷಗಳ ಕಾಲ ಮುಂದುವರೆಸಿದರೆ, ಮುಂದಿನ ಚುನಾವಣೆಯಲ್ಲಿ ನಾವು ಸ್ವತಂತ್ರವಾಗಿ ಸ್ಪರ್ಧಿಸಿ ವಿಜಯವನ್ನು ಸಾಧಿಸುವ ಅವಕಾಶ ನಿಚ್ಚಳವಾಗಿರುತ್ತದೆ.

ಅಲಹಾಬಾದಿನ ಶ್ರೀ ಬಲದೇವ್ ಪ್ರಸಾದ್ ಜೈಸ್ವಾಲ್ ಅವರನ್ನು ನೀವು ಬಲ್ಲಿರಿ. ಅವರು ಪಾಟ್ನಾಗೆ ಬಂದಿದ್ದಾರೆ. ಅವರು ಅಖಿಲ ಭಾರತ ಸಮ್ಮೇಳನವನ್ನು ನಡೆಸಲು ಇಚ್ಛಿಸುತ್ತಿದ್ದಾರೆ. ಈ ಸಮ್ಮೇಳನದ ಅಧ್ಯಕ್ಷತೆಯನ್ನು ದಿವಾನ್ ಬಹಾದ್ದೂರ್ ಶ್ರೀನಿವಾಸನ್ ಅವರು ವಹಿಸುತ್ತಾರೆಂದು ಅವರು ಇಲ್ಲಿನ ಪತ್ರಿಕೆಗಳ ಮೂಲಕ ತಿಳಿಸಿದ್ದಾರೆ. ನನಗೆ ವಾಸ್ತವ ಸ್ಥಿತಿಯು ತಿಳಿದಿಲ್ಲ. ಹಾಗೂ ಆ ವ್ಯಕ್ತಿಯನ್ನು ನಂಬುವುದೂ ನನಗೆ ಸಾಧ್ಯವಿಲ್ಲ. ಕಳೆದ ವರ್ಷ ಲಖ್ನೌನಲ್ಲಿ ಒಂದು ಸಮಾವೇಶವನ್ನು ನಡೆಸಿದ್ದು ಆ ಸಮ್ಮೇಳನದ ಸಂಚಾಲನೆಯಲ್ಲಿ ಶ್ರೀ ಜೈಸ್ವಾಲ್ ಅವರು ಮುಖ್ಯ ಪಾತ್ರವನ್ನು ವಹಿಸಿದ್ದರು. ಕೇವಲ ನಿಮ್ಮನ್ನು ನೋಡುವ ಉದ್ದೇಶದಿಂದ ನಾನು ಲಖ್ನೋಗೆ ಹೋಗಿದ್ದೆ. ಆದರೆ, ತಾವು ಸಿಗದಿದ್ದುದಕ್ಕಾಗಿ ನನಗೆ ಅತೀವ ನಿರಾಸೆಯಾಯಿತು. ಶ್ರೀ ಜೈಸ್ವಾಲ್ ಅವರು ನನ್ನ ಸಹಾಯವನ್ನು ಬಯಸುತ್ತಿದ್ದಾರೆ. ಆದರೆ ನೀವು ಈ ಸಮ್ಮೇಳನದಲ್ಲಿ ಭಾಗವಹಿಸುತ್ತೀರೆಂದು ತಿಳಿದರೆ ಮಾತ್ರ ನಾನು ಅವರಿಗೆ ಸಹಾಯಮಾಡುತ್ತೇನೆ. ಈ ಸಮ್ಮೇಳನವು ೧೯೩೭ರ ಏಪ್ರಿಲ್ ೯, ೧೦ ಮತ್ತು ೧೧ರಂದು ನಡೆಯುತ್ತದೆ. ಅವರೊಡನೆ ಬಿಹಾರದವರು ಯಾರೂ ಸೇರಿಕೊಂಡಿಲ್ಲ. ಅವರು ತಮ್ಮ ಕಚೇರಿಯನ್ನು ಇಲ್ಲಿನ ಕ್ಯಾಥೊಲಿಕ್ ಚರ್ಚಿನಲ್ಲಿ ಮಾಡಿಕೊಂಡಿದ್ದಾರೆ ಮತ್ತು ಎಲ್ಲಾ ಕಾರ್ಯಗಳನ್ನೂ ಮಿಷನರಿಗಳೇ ನೋಡಿಕೊಳ್ಳುತ್ತಿದ್ದಾರೆ.

ದಲಿತ ವರ್ಗಗಳ ಕೂಟದ ಕಾರ್ಯಕಾರಿ ಸಮಿತಿಯು ೧೯೩೭ರ ಏಪ್ರಿಲ್ ೧೫ ಮತ್ತು ಮೇ ೧೫ರ ನಡುವೆ ಒಂದು ಪ್ರಾಂತೀಯ ಸಮ್ಮೇಳನವನ್ನು ನಡೆಸಲು ಹಾಗೂ ಅದಕ್ಕೆ ತಮ್ಮನ್ನು ಆಹ್ವಾನಿಸಲು ನಿರ್ಧರಿಸಿದೆ. ನೀವು ಶ್ರೀ ಜೈಸ್ವಾಲ್ ಅವರ ಸಮ್ಮೇಳನದಲ್ಲಿ ಭಾಗವಹಿಸಲು ಬರುವುದಾದರೆ (ನೀವು ಆ ಉದ್ದೇಶಕ್ಕೆ ಬರುವುದರಲ್ಲಿ ನನಗೆ ಸಂಶಯವಿದೆ) ನಮ್ಮ ಸಮ್ಮೇಳನವನ್ನು ಏಪ್ರಿಲ್ ೧೨ರ ಸುಮಾರಿಗೆ ನಡೆಸಲು ಏರ್ಪಾಟುಮಾಡುತ್ತೇವೆ. ತಾವು ಶ್ರೀ ಜೈಸ್ವಾಲ್ ಅವರ ಸಮ್ಮೇಳನಕ್ಕೆ ಬರುತ್ತಿರುವಿರೋ ಇಲ್ಲವೋ ಎಂಬುದನ್ನು ಈ ಪತ್ರ ತಲುಪಿದ ತಕ್ಷಣ ನನಗೆ ದಯೆಯಿಟ್ಟು ತಿಳಿಸುವಿರಾ? ಆದರೆ ಶ್ರೀ ಜೈಸ್ವಾಲ್ ಅವರಿಗೆ ಒಂದು ನೂರಕ್ಕಿಂತಲೂ ಹೆಚ್ಚು ದಲಿತವರ್ಗಗಳನ್ನು ಸೇರಿಸಲು ಸಾಧ್ಯವಾಗುವುದಿಲ್ಲ ಎಂಬುದು ನಿಶ್ಚಯ. ಲಖ್ನೌದಲ್ಲಿ ಮಾಡಿದ ಹಾಗೆಯೇ ಇಲ್ಲಿಯೂ ಅವರು ಸಾವಿರಾರು ಮುಸ್ಲಿಮರನ್ನು ಮತ್ತು ಕ್ರಿಶ್ಚಿಯನ್ನರನ್ನು ಆಹ್ವಾನಿಸುತ್ತಾರೆ. ಅವರ ಈ ರೀತಿಯನ್ನು ನಾನು ಪ್ರಬಲವಾಗಿ ವಿರೋಧಿಸುತ್ತೇನೆ. ನಾವು ನಿಜವಾದ ದಲಿತವರ್ಗಗಳವರ ಸಮಾವೇಶವನ್ನು ನಡಸಬೇಕು. ತಮ್ಮ ಅಭಿಪ್ರಾಯಗಳನ್ನು ಆದಷ್ಟು ಬೇಗ ನನಗೆ ತಿಳಿಸಿ.

ವಂದನೆಗಳೊಂದಿಗೆ,

ನಿಮ್ಮ ವಿಶ್ವಾಸಿ,
ಸಹಿ/- ಜಗಜ್ಜೀವರನಾಮ್

## ಬಿಹಾರ ಪ್ರಾಂತೀಯ ಶಾಸನಸಭೆಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳ ಪಟ್ಟಿ

| | ಹೆಸರು ಮತ್ತು ವಿಳಾಸ | ಪಕ್ಷ | ಪಡೆದ ಮತಗಳು |
|---|---|---|---|
| ೧. | ಜಗಜ್ಜೀವನ್ ರಾಮ್, ಚಾಂದ್ವಾ ಅರಾ, | ಡಿ.ಸಿ. ಲೀಗ್, ಕಾಂಗ್ರೆಸ್ | ಅವಿರೋಧ |
| ೨. | ರಾಮ್‌ಬಾಸ್ವಾನ್ ರಬಿದಾಸ್, ಗೋಪಾಲ್ ಗಂಜ್, ಸರನ್ | ಡಿ.ಸಿ. ಲೀಗ್, ಕಾಂಗ್ರೆಸ್ | ಅವಿರೋಧ |
| ೩. | ಬಲಗೋವಿಂದ ಭಗತ್, ಬೆಟ್ಟಯ್ಯ, ಚಂಪಾರಣ್ | ಕಾಂಗ್ರೆಸ್ | ಅವಿರೋಧ |
| ೪. | ಶಿವನಂದನ್ ರಾಮ್, ವಿ ಮನ್ಸೂರ್‌ಪುರ್, ಚಂಪಾರಣ್, ಅಂಚೆ ಮಾರ್ವಾನ್, ಮುಜ಼ಫರ್‌ಪುರ್ ಜಿಲ್ಲೆ | ಕಾಂಗ್ರೆಸ್ | ಅವಿರೋಧ |
| ೫. | ಡಾ. ರಘುನಂದನ್ ಪಿಡಿ., ಸರ್ದಾರ್ ಆಸ್ಪತ್ರೆ, ಮೋಂಘೀರ್ | ಕಾಂಗ್ರೆಸ್ | ಅವಿರೋಧ |
| ೬. | ಕರು ರಾಮ್, ಉಪಾಧ್ಯಾಯರು, ಸಂತ ಕೊಲಂಬಸ್ ಕಾಲೇಜ್, ಹಜ಼ಾರಿಬಾಗ್ | ಕಾಂಗ್ರೆಸ್ | ಅವಿರೋಧ |
| ೭. | ರಾಮ್ ಬರಸ್ ದಾಸ್ (ಬರ್ಸು ಚಮ್ಮಾರ್) ಬೆಲ್ತು ಗ್ರಾಮ, ಷಾಕುಂದ್ ಅಂಚೆ, ಭಾಗಲ್ಪುರ್ ಜಿಲ್ಲೆ | ಕಾಂಗ್ರೆಸ್ | ೭೫೪ |
| ೮. | ಮಹಾಬೀರ್ ದಾಸ್ ಲಾಲುಚಕ್, ಮಿರ್ಜನ್ ಹಟ್ ಅಂಚೆ | ಮಿನಿಸ್ಟೀರಿಯಲ್ | ೧,೭೦೦ |
| ೯. | ಬಿಷುಚರನ್ ದಾಸ್ ರಬಿದಾಸ್, ಸಹಕಾರಿಸಂಘ, ಮನ್‌ಭೂಮ್ ಅವರು | ಜಿಲ್ಲೆ ಪುರುಲಿಯಾ | ೧,೯೬೪ |
| | ಗುಲು ಧೋಬಾ, ಮಾಮುಜ಼ೋರ್ ಗ್ರಾಮ, ಇವರ ವಿರುದ್ದ | ಲೀಗ್, ಕಾಂಗ್ರೆಸ್ ಮಿನಿಸ್ಟೀರಿಯಲ್ | ೨,೩೦೦ |
| ೧೦. | ಜಿತೂರಾಮ್, ಬನ್‌ಸ್ದಿಹ್ ಗ್ರಾಮ, ಅವರು ಲೇಷಿಗಂಜ್ ಅಂಚೆ, ಪಲಮಾವ್ ಜಿಲ್ಲೆ | ಲೀಗ್, ಕಾಂಗ್ರೆಸ್ | ೨,೭೪೪ |
| | ಫಗುಣಿ ರಾಮ್, ಗುಮಾಸ್ತ, ಜಿಲ್ಲಾ ಮಂಡಳಿ, ದಲ್ತನ್‌ಗಂಜ್, ಪಲಮಾವ್ ಜಿಲ್ಲೆ – ಇವರ ವಿರುದ್ಧ | ಮಿನಿಸ್ಟೀರಿಯಲ್ | ೫೩೨ |
| ೧೧. | ರಾಮ್ ಪ್ರಸಾದ್, ಡಿಸಿ ಲೀಗ್, ಪಾಟ್ನಾ, ಅವರು | ಲೀಗ್, ಕಾಂಗ್ರೆಸ್ | ೧೪೭೩ |
| | ಕಲರ ದುಸದ್ ಅವರ ವಿರುದ್ಧ | ಮಿನಿಸ್ಟೀರಿಯಲ್ | ೫೧೧ |
| ೧೨. | ಸುಂದರ್ ಪಸಿ, ಕೆಸ್ತಾ ಗ್ರಾಮ, ದಲ್ಸಿಂಗಸಾರಾಯ್, ದಭಾಂಗ ಜಿಲ್ಲೆ | ಕಾಂಗ್ರೆಸ್ | ಅವಿರೋಧ |
| ೧೩. | ಕೇಶ್ವರ್ ಪಾಸ್ವಾನ್, ಬಿಹ್ತಾ ಗ್ರಾಮ, ಬೆನಿಪಟ್ಟಿ ಅಂಚೆ, ದರ್ಭಾಂಗ ಜಿಲ್ಲೆ | ಕಾಂಗ್ರೆಸ್ | ಅವಿರೋಧ |

| | | |
|---|---|---|
| ೧೪. ಸುಖಾರಿ ಪಸಿ, ಚಕಂದ್ ಅಂಚೆ, ಗಯಾ ಜಿಲ್ಲೆ | ಕಾಂಗ್ರೆಸ್ | ಅವಿರೋಧ |
| ೧೫. ಬುಂದಿ ಪಸಿ, ವರ್ಸಲಿಗಂಜ್, ಗಯಾ ಜಿಲ್ಲೆ | ಕಾಂಗ್ರೆಸ್ | ೩,೫೫೫ |
| ಇವರು ದಲಿಪ್ ದುಸದ್ ಅವರ ವಿರುದ್ಧ | ಮಿನಿಸ್ಟೀರಿಯಲ್ | ೪೮೭ |
| ೧೬. ಜಗ್‌ಲಾಲ್ ಚೌಧುರಿ, ಸ್ವರಾಜ್ ಆಶ್ರಮ, | | |
| ತಿಕ್ಕಪಟ್ಟಿ ಅಂಚೆ, ಪೂರ್ನಿಯಾ ಇವರು | ಕಾಂಗ್ರೆಸ್ | ೪,೭೮೯ |
| ಜಗ್‌ತುಪ್ ಮಸೂಹರ್ – ಅವರ ವಿರುದ್ಧ | ಮಿನಿಸ್ಟೀರಿಯಲ್ | ೧,೭೬೯ |

* * * * *

# ಪರಿಶಿಷ್ಟ ೯

## ರಾಜ್ಯಗಳ ಬಗ್ಗೆ

ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತೀಯ ರಾಜ್ಯಗಳಿಗೆ ಮತ್ತು ತಾತ್ಕಾಲಿಕ ಸರಕಾರಕ್ಕೆ ಸಕಾಲಿಕ ಎಚ್ಚರಿಕೆಯನ್ನು ನೀಡಿದ್ದಾರೆ. ಭಾರತವಿಲ್ಲದೆ ರಾಜ್ಯಗಳಿಗೆ ಅಸ್ತಿತ್ವವೇ ಇರುವುದಿಲ್ಲ ಎಂದು ಹೇಳಿದ್ದಾರೆ.

ಸಂವಿಧಾನ ತಜ್ಞರಾಗಿ ಡಾ. ಅಂಬೇಡ್ಕರ್ ಅವರು ಜನತೆಯು ಯಾವ ಭಾರತೀಯ ಸಂಸ್ಥಾನವನ್ನೂ ಸರ್ವತಂತ್ರ ಸ್ವತಂತ್ರ ಸರಕಾರವೆಂದು ಪರಿಗಣಿಸುವುದಿಲ್ಲ ಎಂದು ಬ್ರಿಟಿಷ್ ಸರಕಾರವು ಘೋಷಿಸುವಂತೆ ಮಾಡಬೇಕು ಎಂದು ತಾತ್ಕಾಲಿಕ ಸರಕಾರವನ್ನು ಕೇಳುತ್ತಾರೆ.

ಸಂಸ್ಥಾನಗಳನ್ನು ಆಳುವವರ ಹುಚ್ಚಾಟಗಳನ್ನು ನಿಲ್ಲಿಸಲು ಮತ್ತು ಅದರ ಪರಿಣಾಮದ ಅಪಾಯವು ಜನತೆಯ ಮೇಲೆ ಆಗದಂತೆ ತಡೆಯಲು ಕಾನೂನುಗಳು ಮಾತ್ರವೇ ಸಾಲದಾಗುತ್ತವೆ. ಅದಕ್ಕಿಂತ ಹೆಚ್ಚಿನದನ್ನು ನಾವು ಮಾಡಬೇಕು.

ಸಂಸ್ಥಾನಗಳ ವಿಷಯದಲ್ಲಿ ತಾತ್ಕಾಲಿಕ ಸರಕಾರವು ತೆಗೆದುಕೊಳ್ಳುವ ನಿರ್ಬಂಧದ ಕ್ರಮಗಳಾವುವು? ನಿರ್ಬಂಧದ ವಿಷಯಗಳು ನಾಲ್ಕು ತೆರನಾಗಿರಬಹುದು – (೧) ಭಾರತದ ಜನಾಭಿಪ್ರಾಯ, (೨) ಸಂಸ್ಥಾನದ ಜನಾಭಿಪ್ರಾಯ, (೩) ಪ್ರಜಾತಂತ್ರದ ಪ್ರಭಾವ, ಮತ್ತು (೪) ಸಂಸ್ಥಾನಾಧಿಪತಿಗಳ ಅಂಧ ಸ್ವೈರವೃತ್ತಿ.

ಎಲ್ಲಾ ಸಂಸ್ಥಾನಾಧಿಪತಿಗಳೂ ಪ್ರಜಾಪ್ರಭುತ್ವದ ವಿರೋಧಿಗಳಲ್ಲ, ಆದರೆ ಅವರು ರಾಜ್ಯಗಳ ಒಕ್ಕೂಟವನ್ನು ಬಯಸುತ್ತಾರೆ.

ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರ ನಿಲುವು ಚಂಚಲವಾದುದು. ಅವರು ತಿರುವಾಂಕೂರಿಗೆ ಹೋಗುವವರಿದ್ದಾರೆ. ಅಲ್ಲಿ ಅವರು ಒಂದು, ಎರಡು ಅಥವಾ ಐದು ವರ್ಷವಿರಬಹುದು. ಆದರೂ ಅವರು ಅಲ್ಲಿಂದ ಹೋಗಬೇಕು. ತಿರುವಾಂಕೂರು ಸಂಸ್ಥಾನದ ಪರವಾಗಿ ಅವರು ಆಡುವ ಮಾತುಗಳಲ್ಲಿ ಆಳವಿರಲಾರದು. ಇಂದಲ್ಲ ನಾಳೆ, ಕೊಚ್ಚಿನ್ ಮಹಾರಾಜರ ವಿವೇಕವು ಅವರ ಸಹೋದರಿಯ ರಾಜ್ಯವಾದ ತಿರುವಾಂಕೂರಿನವರ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ.

ನಿಜವಾದ ಸಮಸ್ಯೆಯಿರುವುದು ದೇಶದ ಮಧ್ಯಭಾಗದಲ್ಲಿರುವ ಹೈದರಾಬಾದಿನದು. ಅಲ್ಲಿ ಬೇರೆ ಯಾರ ಪ್ರಭಾವವೂ ನಡೆಯುವುದಿಲ್ಲ. ಅಲ್ಲಿನ ನವಾಬರೇ ತಮ್ಮ ಸಂಸ್ಥಾನವು ಸಂಯುಕ್ತ ಭಾರತಕ್ಕೆ ಸೇರುವುದನ್ನು ವಿರೋಧಿಸುತ್ತಾರೆ.

ನಿಜಾಮರು ಪ್ರಜಾಪ್ರಭುತ್ವದ ಪರವಾಗಿ ಇರುವ ಎಲ್ಲಾ ಸಮರ್ಥನೆಗಳನ್ನೂ ನಿರಾಕರಿಸುತ್ತಾರೆ. ಅವರು ತಮ್ಮ ಸಂಸ್ಥಾದಲ್ಲಿ ಹುಟ್ಟುಹಾಕಿರುವ ಸಂಸ್ಥೆಗಳೂ ಪ್ರಜಾಪ್ರಭುತ್ವದ ನೀತಿಗಳಿಗೆ ವಿರುದ್ಧವಾಗಿರುವಂತಹವುಗಳು. ಶಾಸನಸಭೆಯಲ್ಲಿನ ಮಂತ್ರಿಗಳ ನೇಮಕ ಮತ್ತು ವಜಾ ಅಲ್ಲಿನ ಮಹಾಪ್ರಭುಗಳ ಚಂಚಲ ಮನೋವೃತ್ತಿಗೆ ಅನುಗುಣವಾಗಿ ನಡೆಯುತ್ತದೆ.

ಈ ವಿಷಯಗಳನ್ನು ಈ ಹಿಂದೆ ಲಘುವಾಗಿ ಪರಿಗಣಿಸಿ ತೇಲಿಸಿಬಿಡಲಾಗಿತ್ತು. ಹೈದರಾಬಾದಿನ

ಜನತೆ ಸಂಯುಕ್ತ ಭಾರತದತ್ತ ಸಾಗುವ ಹಾದಿಯಲ್ಲಿ ಸದ್ಯದಲ್ಲಿ ನಾನಾ ವಿಧವಾದ ಅಡೆತಡೆಗಳು ಇವೆ.

ರಾಜ್ಯಗಳ ಸ್ಥಾನಗಳನ್ನು ಕುರಿತು ಕಾಂಗ್ರೆಸ್ ಮುಖಂಡರು ಸಾಕಷ್ಟು, ಬಹುಶಃ ಅಗತ್ಯವಿರುವುದಕ್ಕಿಂತ ಹೆಚ್ಚಾಗಿಯೇ, ಮಾತನಾಡಿದ್ದಾರೆ. ಆದರೆ, ಈ ರಾಜ್ಯದ ಅಥವಾ ಇನ್ನೊಂದು ರಾಜ್ಯದ ದಿವಾನರ ಸಂಗಡ ಆಡುವ ಮಾತುಕತೆಯಿಂದ ಯಾವ ಪ್ರಯೋಜನವೂ ಆಗದು.

ಅವರು ತಾವಾಡಿದ ಮಾತುಗಳನ್ನು ಕಾರ್ಯರೂಪಕ್ಕೆ ಇಳಿಸಬಲ್ಲಂತಹ ಬಲವಾದ ಕಾರ್ಯಕ್ರಮಗಳ ಬಗ್ಗೆ ಚಿಂತಿಸಬೇಕು. ಭಾರತೀಯ ಸಂಸ್ಥಾನಗಳು ಭಾರತದ ಅವಿಭಾಜ್ಯ ಅಂಗಗಳಾಗಿವೆ. ಭಾರತದ ಒಳಗೇ ಅವುಗಳು ಪ್ರತ್ಯೇಕ ದ್ವೀಪದಂತೆ ಇರುವಂತಹ ಪರಿಸ್ಥಿತಿಯನ್ನು ಉಂಟುಮಾಡಬಾರದು.

ಭಾರತೀಯ ಸಂಸ್ಥಾನಗಳ ಜನತೆ ಅಖಂಡ ಭಾರತದ ಪರವಾಗಿ ಇದ್ದಾರೆ. ಈ ನಿರ್ಧಾರವು ಕೂಡಲೇ ಕಾರ್ಯರೂಪಕ್ಕೆ ಬರಬೇಕು. ಈ ಅಖಂಡತ್ವವನ್ನು ಸಾಧಿಸುವುದಕ್ಕೆ ವೈಸ್‌ರಾಯ್ ಅವರನ್ನಾಗಲೀ, ದೇಶೀಯ ರಾಜರನ್ನಾಗಲೀ ಅವಲಂಬಿಸುವ ಅಗತ್ಯವಿಲ್ಲ. ಇಂತಹ ಬಲವಾಗಿರುವ ವಿಷಯದಲ್ಲಿ ಕಾಂಗ್ರೆಸ್ ಮುಖಂಡರು ತಮ್ಮ ಅಧಿಕಾರವನ್ನು ಸ್ಥಾಪಿಸಲು ಅವರ ಸಹಾಯವನ್ನು ಬೇಡುವಂತಾದರೆ, ಅದು ತಮ್ಮ ದೌರ್ಬಲ್ಯದಿಂದ ತಾವೇ ತಂದುಕೊಳ್ಳುವ ಸ್ಥಿತಿಯಾಗುತ್ತದೆ.

ಸಂವಿಧಾನ ಸಭೆಯು ಸಮಾವೇಶಗೊಂಡಾಗ, ಅದರಲ್ಲಿ ಹೆಚ್ಚಿನ ಸಂಖ್ಯೆಯ ದೇಶೀಯ ಸಂಸ್ಥಾನಗಳು ಸಮಾವೇಶಗೊಂಡಿರುತ್ತವೆ. ಹೀಗಾಗುವುದು ಒಂದು ಉತ್ತಮ ಬೆಳವಣಿಗೆಯಂತೆ ಕಾಣುತ್ತದೆ. ಏಕೆಂದರೆ, 'ಛೇಂಬರ್ ಆಫ್ ಪ್ರಿನ್ಸಸ್' ಅಸ್ತಿತ್ವಕ್ಕೆ ಬಂದನಂತರ, ಅಖಂಡ ಭಾರತದ ಜೊತೆಗೆ ಸಾಗಲು ಬಯಸುವುವು ಮತ್ತು ಹಾಗೆ ಸಾಗಲು ಒಪ್ಪದವು ಎಂದು ಎರಡು ಭಾಗವಾಗಿ ಈ ಸಂಸ್ಥಾನಗಳು ವಿಭಾಗವಾಗಿವೆ.

ಈ ಸೂತ್ರವನ್ನು ಹಿಡಿದುಕೊಂಡು ಕಾಂಗ್ರೆಸ್ ಮುಖಂಡರು ಮತ್ತು ಇತರ ರಾಷ್ಟ್ರೀಯವಾದಿಗಳು, ಅಖಂಡತ್ವಕ್ಕೆ ಒಪ್ಪದೆ ತಕರಾರುಮಾಡುತ್ತಿರುವ ರಾಜರುಗಳನ್ನು ದಾರಿಗೆ ತರಲು ಬೇಕಾಗುವಷ್ಟು ಬೆಂಬಲವನ್ನು, ಶಕ್ತಿಯನ್ನು ಗಳಿಸಿಕೊಳ್ಳಬಹುದು.

ಈಗ ಪಾಕಿಸ್ತಾನವು ಪ್ರತ್ಯೇಕ ರಾಷ್ಟ್ರವಾಗಿ ರೂಪುಗೊಳ್ಳಲು ಸಾಕಷ್ಟು ಕ್ಷಿಪ್ರವಾದ ಚಟುವಟಿಕೆಗಳು ನಡೆಯುತ್ತಿವೆ. ಈ ವಿಷಯದಲ್ಲಿ ಜಿನ್ನಾ ಅವರು ತಾವೂ ಸುಮ್ಮನೆ ಕೂರುವುದಿಲ್ಲ, ಬೇರೆಯವರನ್ನೂ ಹಾಗೆ ಕೂರಲು ಬಿಡುವುದಿಲ್ಲ.

ಭಾರತೀಯ ಸಂಸ್ಥಾನಗಳ ಬಗ್ಗೆ ಜಿನ್ನಾ ಅವರ ಹೇಳಿಕೆ ಅಸಮರ್ಥನೀಯವಾಗಿದೆ. ಅವರು ಪಾಕಿಸ್ತಾನಕ್ಕಾಗಿ ಬೇಡಿಕೆಯನ್ನು ಸಲ್ಲಿಸಿದ್ದರು ಹಾಗೂ ಅದನ್ನು ಪಡೆದುಕೊಂಡರು. ಅದಾದ ನಂತರ ಭಾರತದ ವ್ಯವಹಾರದಲ್ಲಿ ಮಾತನಾಡಲು ಅವರಿಗೂ, ಇತರ ವಿದೇಶೀ ಆಡಳಿತಗಾರರಂತೆಯೇ, ಯಾವುದೇ ಹಕ್ಕೂ ಇರುವುದಿಲ್ಲ.

ತಮ್ಮ ಅಖಿಲ ಭಾರತ ನಾಯಕನ ಸ್ಥಾನವು ಕಳೆದುಹೋದ ಮೇಲೆ ಅವರು ಭಾರತದ ರಾಜ್ಯಗಳಲ್ಲಿ ಸಂಕಷ್ಟಗಳನ್ನು ಸೃಷ್ಟಿಸುವ ಪ್ರಯತ್ನವು ಇದೇ ಮೊದಲಿನದಲ್ಲ. ಅವರ ಹಿಂಬಾಲಕರೊಬ್ಬರ ಹೇಳಿಕೆಯ ಪ್ರಕಾರ, ಜಿನ್ನಾ ಅವರು ಮೋಪ್ಲಾಸ್ತಾನದ ರಚನೆಗೆ ಬೆಂಬಲ ವ್ಯಕ್ತಪಡಿಸಿದ್ದರು. ಅದರ ಕಾರಣವು ಅವರಿಗೇ ತಿಳಿದಿರಬೇಕು.

ತಾವೊಬ್ಬರು ಸಂವಿಧಾನತಜ್ಞರು ಎಂಬಂತೆ ಜಿನ್ನಾ ಅವರು ಮಾತನಾಡುತ್ತಾರೆ. ಅವರು ತಮ್ಮ ಸಂವಿಧಾನತಜ್ಞತೆಯನ್ನು ಪಾಕಿಸ್ತಾನದ ವಿಧಾಯಕ ಸಭೆಯಲ್ಲಿ ಉಂಟಾಗಿರುವ ಕಗ್ಗಂಟುಗಳನ್ನು ಬಿಡಿಸಲು ಉಪಯೋಗಿಸಿಕೊಳ್ಳುವುದು ಒಳ್ಳೆಯದು ಎಂದು ಅವರಿಗೆ ಸಲಹೆಯನ್ನು ಕೊಡಬೇಕು.

ಜಿನ್ನಾ ಅವರು ನಿರ್ಧಾರವನ್ನು ತೆಗೆದುಕೊಳ್ಳಬೇಕಾದ ಎರಡು ಅಂಶಗಳಿವೆ. ಒಂದು, ಮುಂದಿನ ಪಾಕಿಸ್ತಾನದ ನೇತಾರರಾಗಿ ವರ್ತಿಸುವುದು, ಅಥವಾ ಎರಡು, ಕೇಂದ್ರದಲ್ಲಿ ತಾವೇ ಅಧಿಕಾರವನ್ನು ತೆಗೆದುಕೊಳ್ಳುವುದು.

ಅವರಿಗೆ ಸಂಬಂಧಿಸದ ವಿಷಯಗಳಲ್ಲಿ ಮೂಗು ತೂರಿಸಲು ಅವರಿಗೆ ಯಾರೂ ಸನ್ನದನ್ನು ನೀಡಿಲ್ಲ. ಅವರ ಪಕ್ಷ ದೇಶದ ವಿಭಜನೆಗಾಗಿ ಒತ್ತಾಯಿಸಿತು ಹಾಗೂ ಅದನ್ನು ಪಡೆಯಿತು. ಈಗ ಅದು ಭಾರತದ ಇತರ ಭಾಗಗಳಲ್ಲಿ ವಿಷದ ಬೀಜವನ್ನು ಬಿತ್ತುವ ಹಾಗಿಲ್ಲ.

ಕಾಂಗ್ರೆಸ್ ತಡಮಾಡದೆ ಕಾರ್ಯಪ್ರವೃತ್ತವಾಗಬೇಕು. ಭಾಷಣವನ್ನು ಮಾಡುವ ಕಾಲ ಮುಂದೆ ಬರುತ್ತದೆ. ಯಾವ ರೀತಿಯಿಂದ ನೋಡಿದರೂ ಇಂದಿನ ಪರಿಸ್ಥಿತಿ ಕ್ಲಿಕಷ್ಟಕರವಾಗಿದೆ ಎಂದು ಹೇಳಬಹುದು. ತನ್ನ ಚಿಂತೆಯ ಮೂಟೆಗೆ ಅದರದೇ ಆದ ಅತಿ–ಆಶಾವಾದವು ಇನ್ನಷ್ಟು ಸರಕನ್ನು ತುಂಬಿದ ಮೇಲೆ ಎಚ್ಚೆತ್ತುಕೊಳ್ಳುವ ಮನೋಭಾವವು ಕಾಂಗ್ರೆಸ್ಸಿನ ವಿನಾಶಕ್ಕೆ ಕಾರಣವಾಗಬಹುದು.

* * * * *

---

– ದ ಫ್ರೀಪ್ರೆಸ್ ಜರ್ನಲ್ –ದಿನಾಂಕ ೧೯೪೭ರ ಜೂನ್ ೫

# ಪರಿಶಿಷ್ಟ ೧೦

# ಸಂಯುಕ್ತ ಭಾರತದಲ್ಲಿ ವಿಲೀನವಾಗಲು ರಾಜ್ಯಗಳಿಗೆ ಅಂಬೇಡ್ಕರ್ ಅವರ ಒತ್ತಾಯ

## ಹೈದರಾಬಾದಿನ ನಿಲುವು ದೇಶವನ್ನು ಛಿದ್ರಗೊಳಿಸುತ್ತದೆ

ಬಾಂಬೆ, ೧೯೪೭ರ ಜೂನ್ ೧೭(ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ)

ಭಾರತೀಯ ಸಂಸ್ಥಾನಗಳು ಬ್ರಿಟಿಷ್ ಪರಮಾಧಿಕಾರದ ನೊಗದಿಂದ ಬಿಡಿಕೊಳ್ಳಬೇಕಾದರೆ, ದೇಶದ ಅಖಂಡ ಪ್ರಭುತ್ವದೊಂದಿಗೆ ಒಂದಾಗುವುದೊಂದೇ ಇರುವ ಮಾರ್ಗ. ಭಾರತೀಯ ರಾಜ್ಯಗಳು ಅಖಂಡ ಭಾರತದ ಸಾಂವಿಧಾನಿಕ ಅಂಗಗಳಾಗಿ ಸೇರಿದಾಗ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ಸಂವಿಧಾನತಜ್ಞರೂ, ವೈಸ್‌ರಾಯ್ ಕಾರ್ಯಾಂಗದ ಪರಿಷತ್ತಿನ ಮಾಜಿ ಸದಸ್ಯರೂ ಆಗಿರುವ ಭಾರತೀಯ ಸಂಸ್ಥಾನಗಳ ಸ್ವಾಯತ್ತತೆಯನ್ನು ವಿರೋಧಿಸಿ ನೀಡಿರುವ ೨೦೦೦ ಪದಗಳನ್ನೊಳಗೊಂಡ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

“ಸ್ವಾಯತ್ತ ರಾಜ್ಯಗಳಾಗಿ ಭಾರತೀಯ ಸಂಸ್ಥಾನಗಳು ದೀರ್ಘಕಾಲ ಬದುಕುವುದಿಲ್ಲವೆಂಬುದನ್ನು ಆ ರಾಜ್ಯಗಳು ಅರಿತುಕೊಳ್ಳಬೇಕು. ತಮ್ಮ ಹಿತದೃಷ್ಟಿಯಿಂದಲೇ ಆ ರಾಜರುಗಳು ಅಖಂಡ ಭಾರತದೊಡನೆ ವಿಲೀನವಾಗಿ ಸಾಂವಿಧಾನಿಕ ಪ್ರಭುಗಳಾಗಿ ಮುಂದುವರೆಯಬೇಕು.

ತಾವು ಸರ್ವತಂತ್ರ ಸ್ವತಂತ್ರರಾಗುತ್ತೇವೆ ಮತ್ತು ಸಂಯುಕ್ತ ರಾಷ್ಟ್ರಗಳ ಸಂಘದಿಂದ ಬೆಂಬಲವನ್ನು ಪಡೆಯುತ್ತೇವೆ ಎಂಬ ಆಸೆಯನ್ನು ಇಟ್ಟುಕೊಂಡಿದ್ದರೆ, ಅವರು ಮೂರ್ಖರ ಸ್ವರ್ಗದಲ್ಲಿ ವಿಹರಿಸುತ್ತಿದ್ದಾರೆ ಎಂದು ತಿಳಿಯಬೇಕಾಗುತ್ತದೆ” ಎಂದು ಡಾ. ಅಂಬೇಡ್ಕರ್ ಹೇಳಿದರು. ಭಾರತವು ಈ ರಾಜ್ಯಗಳ ಮೇಲೆ ಹೊಂದಿರುವ ಆಧಿಪತ್ಯವನ್ನು ಲಕ್ಷಿಸದೆ ಸಂಯುಕ್ತ ರಾಷ್ಟ್ರಗಳ ಸಂಘವು ಇವುಗಳಿಗೆ ಮಾನ್ಯತೆಯನ್ನು ನೀಡುವ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದರು.

ಒಂದು ವೇಳೆ ಸಂಯುಕ್ತ ರಾಷ್ಟ್ರ ಸಂಘವು ಈ ರಾಜ್ಯಗಳಿಗೆ ಮಾನ್ಯತೆಯನ್ನು ನೀಡಿದರೂ, ಆ ರಾಜ್ಯಗಳಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವವರೆಗೂ ಅದು ಅವುಗಳಿಗೆ ಬಾಹ್ಯ ಆಕ್ರಮಣಗಳ ವಿರುದ್ಧ ಆಂತರಿಕ ಗಲಭೆಗಳ ವಿರುದ್ಧ ರಕ್ಷಣೆಯ ಆಶ್ವಾಸನೆಯನ್ನು ಎಂದೂ ನಿಡುವುದಿಲ್ಲವೆಂದು ಡಾ. ಅಂಬೇಡ್ಕರ್ ಅವರು ಹೇಳಿದರು.

“ಭಾರತೀಯ ಸಂಸ್ಥಾನಗಳ ಆಯ್ಕೆಯು ಹೇಗೇ ಇದ್ದರೂ, ಭಾರತದ ಜನತೆಯ ಕರ್ತವ್ಯವು ಸ್ಪಷ್ಟವಾಗಿದೆ. ಅವರ ಪರವಾಗಿ ತಾತ್ಕಾಲಿಕ ಸರಕಾರವು ಪರಮಾಧಿಕಾರವನ್ನು ರದ್ದುಗೊಳಿಸುವ ಯಾವುದೇ ಕಾನೂನನ್ನು ಅಂಗೀಕರಿಸುವ ಹಕ್ಕು ಬ್ರಿಟಿಷ್ ಸರಕಾರಕ್ಕೆ ಇರುವುದಿಲ್ಲವೆಂಬುದನ್ನು ಮಹಾಪ್ರಭುಗಳ ಸರಕಾರಕ್ಕೆ ನಿವೇದಿಸಬೇಕು. ಭಾರತದ ಸಂಸ್ಥಾನಗಳಿಗೆ ಪರಮಾಧಿಕಾರವುಳ್ಳ ರಾಜ್ಯಗಳೆಂಬ ಪಟ್ಟವನ್ನು ಕಟ್ಟುವಂತಹ ಯಾವುದೇ ಕಾನೂನನ್ನು ಅಂಗೀಕರಿಸುವುದು ತಮ್ಮ ಸಾರ್ವಭೌಮತ್ವಕ್ಕೆ ವಿರುದ್ಧವಾದುದು ಎಂದು ಭಾರತದ ಜನತೆಯು ಭಾವಿಸುತ್ತದೆ ಎಂಬುದನ್ನೂ ತಿಳಿಸಬೇಕು. ಈ ಕಾರಣದಿಂದ ಅಂತಹ

ಕಾನೂನು ಅಸಿಂಧುವಾಗುತ್ತದೆ. ಅಲ್ಲದೆ ಭಾರತ ಸರಕಾರವು, ರಾಜ್ಯಗಳ ಸ್ವತಂತ್ರ ಸಾರ್ವಭೌಮತ್ವವನ್ನು ಮಾನ್ಯಮಾಡುವುದಿಲ್ಲ ಎಂಬುದನ್ನೂ ಅವರ ಗಮನಕ್ಕೆ ತರಬೇಕು."

ಡಾ. ಅಂಬೇಡ್ಕರ್ ಅವರು ತಮ್ಮ ಹೇಳಿಕೆಯಲ್ಲಿ ಮತ್ತೆ ಹೀಗೆ ಹೇಳಿದ್ದಾರೆ:

೧೯೪೭ರ ಆಗಸ್ಟ್ ೧೫ರಂದು ಭಾರತವು ಸ್ವತಂತ್ರವಾದಾಗ, ತಿರುವಾಂಕೂರು ಮತ್ತು ಹೈದರಾಬಾದ್ ಪ್ರಾಂತಗಳು ತಮ್ಮನ್ನು ತಾವು ಸ್ವತಂತ್ರ ಸಾರ್ವಭೌಮ ರಾಜ್ಯಗಳೆಂದು ಸಾರಿಕೊಳ್ಳುತ್ತವೆ ಎಂದು ನೀಡಿರುವ ಹೇಳಿಕೆಗಳು, ಹಾಗೂ ಇದೇ ಮಾರ್ಗವನ್ನು ತಾವೂ ಅನುಸರಿಸಬಹುದು ಎಂಬ ಸೂಚನೆಯನ್ನು ಇತರ ರಾಜ್ಯಗಳೂ ನೀಡಿರುವುದು ಒಂದು ಹೊಸ ಸಮಸ್ಯೆಯನ್ನು ಹುಟ್ಟುಹಾಕಿವೆ. ಈ ಸಮಸ್ಯೆಯು ಹಿಂದೂ–ಮುಸ್ಲಿಂ ಸಮಸ್ಯೆಗಿಂತ ತೀವ್ರವಾಗಿರುತ್ತದೆ ಮತ್ತು ಭಾರತವನ್ನು ಮತ್ತೂ ಹೋಳಾಗಿಸುತ್ತದೆ.

## ಹಕ್ಕುಗಳಿಗೆ ಆಧಾರ

ಈ ರಾಜ್ಯಗಳು ತಾವು ಸರ್ವತಂತ್ರ ಸ್ವತಂತ್ರ ರಾಜ್ಯಗಳಾಗಿರುತ್ತೇವೆ ಎಂದು ಹೇಳಿಕೊಳ್ಳುವ ಹಕ್ಕುಗಳಿಗೆ ಆಧಾರವು ಕ್ಯಾಬಿನೆಟ್ ಮಿಷನ್ ೧೯೪೬ರ ಮೇ ೧೨ರಂದು ನೀಡಿದ ಹೇಳಿಕೆಯಲ್ಲಿದೆ. ಮಿಷನ್ನಿನ ಹೇಳಿಕೆಯ ಪ್ರಕಾರ ಈ ರಾಜ್ಯಗಳ ಮೇಲಿನ ತನ್ನ ಪರಮಾಧಿಕಾರವನ್ನು ಭಾರತ ಸರಕಾರಕ್ಕೆ ಬಿಟುಕೊಡಲು ಸಾಧ್ಯವಿಲ್ಲ ಮತ್ತು ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದೂ ಇಲ್ಲ. ಇದರ ಅರ್ಥ ಈ ರಾಜ್ಯಗಳು ತಾವು ಬ್ರಿಟಿಷ್ ಸಾಮ್ರಾಜ್ಯದೊಡನೆ ಹೊಂದಿದ್ದ ಸಂಬಂಧವು ಕೊನೆಗೊಳ್ಳುತ್ತದೆ ಮತ್ತು ಸಾಮ್ರಾಜ್ಯಕ್ಕೆ ರಾಜ್ಯಗಳಿಂದ ದತ್ತವಾಗಿದ್ದ ಹಕ್ಕುಗಳು ಇನ್ನುಮುಂದೆ ಆಯಾ ರಾಜ್ಯಗಳಿಗೇ ಮರಳುತ್ತದೆ.

ಬ್ರಿಟಿಷ್ ಸಾಮ್ರಾಜ್ಯವು ಪರಮಾಧಿಕಾರವನ್ನು ಭಾರತ ಸರಕಾರಕ್ಕೆ ವರ್ಗಾಯಿಸುವುದಿಲ್ಲ ಎಂಬ ಕ್ಯಾಬಿನೆಟ್ ಮಿಷನ್ನಿನ ಹೇಳಿಕೆಯು ರಾಜನೀತಿಯ ಭಾಗವಾಗಿ ನೀಡಿದ ಹೇಳಿಕೆಯಲ್ಲ. ಇದು ಕಾನೂನು ಪುಸ್ತಕದ ಒಂದು ಹೇಳಿಕೆಯಷ್ಟೆ. 'ಈ ಕಾನೂನಿನ ಹೇಳಿಕೆಯು ರಾಜ್ಯಗಳಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಸರಿಯಾಗಿದೆಯೆ' ಎಂಬುದು ಪ್ರಶ್ನೆ.

ಕ್ಯಾಬಿನೆಟ್ ಮಿಷನ್ ನೀಡಿರುವ ಹೇಳಿಕೆಯಲ್ಲಿ ಹೊಸ ಸಲಹೆಗಳೇನೂ ಇಲ್ಲ. ಸಾಮ್ರಾಜ್ಯ ಹಾಗೂ ಭಾರತದ ರಾಜ್ಯಗಳ ನಡುವಿನ ಸಂಬಂಧಗಳ ಅಧ್ಯಯನಕ್ಕೆಂದು ೧೯೨೯ರಲ್ಲಿ ನೇಮಿಸಿದ್ದ ಬಟ್ಲರ್ ಸಮಿತಿಯಲ್ಲಿದ್ದ ಅಭಿಪ್ರಾಯವನ್ನೇ ಇಲ್ಲಿ ಪುನರುಚ್ಚರಿಸಲಾಗಿದೆ.

ರಾಜ್ಯಗಳ ಮೇಲಿನ ಪರಮಾಧಿಕಾರವನ್ನು ಭಾರತ ಸರಕರಕ್ಕೆ ವರ್ಗಾಯಿಸಲು ಸಾಧ್ಯವಿಲ್ಲವೆಂಬ ಹೇಳಿಕೆ ಅತ್ಯಂತ ಕುಟಿಲತನದಿಂದ ಕೂಡಿದೆ ಮತ್ತು ಈ ಸಮಸ್ಯೆಯು ಒಳಗೊಂಡಿರುವ ಅಂಶಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದರಿಂದ ಉದ್ಭವಿಸಿದೆ.

## ಪರಮಾಧಿಕಾರವೆಂದರೇನು?

ಪರಮಾಧಿಕಾರದ ಪ್ರಸಂಗದ ವಿರುದ್ಧವಾಗಿ ಕ್ಯಾಬಿನೆಟ್ ಮಿಷನ್ ತೆಗೆದುಕೊಂಡ ನಿಲುವನ್ನು ಹೀಗೆ ಹೇಳಬಹುದು:

(೧) ಪರಮಾಧಿಕಾರದ ಸುತ್ತ ಕವಿದಿರುವ ನಿಗೂಢತೆಯು ಪರಮಾಧಿಕಾರವೆಂದರೆ ಏನು ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದರಿಂದ ಆಗಿದೆ. ಪರಮಾಧಿಕಾರವೆನ್ನುವುದು ಪ್ರಭುತ್ವವನ್ನು ಹೊಂದಿರುವ ರಾಜರಿಗೆ ಇರುವ ವಿಶೇಷಾಧಿಕಾರದ ಇನ್ನೊಂದು ಹೆಸರಷ್ಟೆ. ರಾಜರ ಈ ಪರಮಾಧಿಕಾರವು

ಸಾಮಾನ್ಯವಾಗಿರುವ ಅಧಿಕಾರಗಳಿಗಿಂತ ಎರಡು ರೀತಿಯಲ್ಲಿ ಬೇರೆಯಾಗಿರುತ್ತವೆ –

ಅ) ರಾಜರಿಗೆ ಇರುವ ಸಾಮಾನ್ಯ ಅಧಿಕಾರಗಳ ಆಧಾರವು ಅಧಿನಿಯಮಗಳಿಗಿಂತ ಭಿನ್ನವಾಗಿರುವ ಸಾಮಾನ್ಯ ಕಾನೂನುಗಳಾಗಿದ್ದರೆ, ಪರಮಾಧಿಕಾರವು ಕರಾರು ಮತ್ತು ಸಂಪ್ರದಾಯಗಳ ಮೇಲೆ ನಿಂತಿರುತ್ತವೆ.

ಆ) ರಾಜರ ಸಾಮಾನ್ಯಾಧಿಕಾರಗಳು ಪ್ರಭುತ್ವದ ಅಡಿಯಲ್ಲಿನ ದೇಶಗಳಲ್ಲಿ ವಾಸಿಸುತ್ತಿರುವ ಎಲ್ಲಾ ಪ್ರಜೆಗಳಿಗೂ ಹಾಗೂ ತಾತ್ಕಾಲಿಕ ಉದ್ದೇಶಗಳಿಗಾಗಿ ಅಲ್ಲಿ ನೆಲೆಸಿರುವ ಇತರರಿಗೂ ಅನ್ವಯವಾಗುತ್ತದೆ. ಪರಮಾಧಿಕಾರವೂ ಪ್ರಭುತ್ವದ ಅಧಿಕಾರದ ಭಾಗವೆಂಬುದು ನಿಸ್ಸಂಶಯ. ಇವೆಲ್ಲ ವಿಷಯಗಳಲ್ಲಿನ ವ್ಯತ್ಯಾಸವು ಹೇಗೇ ಇದ್ದರೂ, ಪರಮಾಧಿಕಾರವು ಪ್ರಭುತ್ವದ ವಿಶೇಷ ಅಧಿಕಾರದ ಭಾಗವಾಗಿರುತ್ತದೆ.

(೨) ಸಾಮಾನ್ಯವಾಗಿ ತಿಳಿದಿರುವುದಕ್ಕೆ ವಿರುದ್ಧವಾಗಿ ರಾಜರ ಪರಮಾಧಿಕಾರವು ಅಂತಾರಾಷ್ಟ್ರೀಯ ಕಾನೂನುಗಳಿಗೆ ಒಳಪಟ್ಟಿರಬೇಕಿಲ್ಲ. ಬದಲಿಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಾಂವಿಧಾನಿಕ ಕಾನೂನು ಎಂದು ಕರೆಯಲ್ಪಡುವ ಸ್ಥಳೀಯ ಕಾನೂನಿಗೆ ಬದ್ಧವಾಗಿರಬೇಕಾಗುತ್ತದೆ.

(೩) ಬ್ರಿಟಿಷ್ ಸಾಮ್ರಾಜ್ಯದ ಸಾಂವಿಧಾನಿಕ ಕಾನೂನಿನ ಹಿಂದಿರುವ ತತ್ತ್ವದ ಪ್ರಕಾರ ಪರಮಾಧಿಕಾರವನ್ನು ರಾಜರು ಹೊಂದಿದ್ದರೂ, ಅವರು ಅದನ್ನು ಬಳಸುವ ವಿವೇಚನಾಧಿಕಾರವನ್ನು ಹೊಂದಿರುವುದಿಲ್ಲ. ತಮ್ಮ ಸಚಿವ ಸಂಪುಟದ ಸಲಹೆಯಲ್ಲದೆ ಅವರು ಈ ಪರಮಾಧಿಕಾರವನ್ನು ಬಳಸುವ ಹಾಗಿಲ್ಲ. ಅವರ ಸಚಿವ ಸಂಪುಟವು ನೀಡಿದ ಸಲಹೆಯ ಮೇರೆಗೆ ಮಾತ್ರ ಅವರು ಈ ಅಧಿಕಾರವನ್ನು ಬಳಸಬಹುದು.

## ಪರಮಾಧಿಕಾರದ ವರ್ಗಾವಣೆ

೧೮೩೩ರಿಂದ ೧೯೩೫ರ ವರೆಗಿನ ಅವಧಿಯಲ್ಲಿ ಭಾರತ ಸರಕಾರಕ್ಕೆ ಸಂಬಂಧಿಸಿದ ಹಾಗೆ ಸಂಸತ್ತು ಪರಮಾಧಿಕಾರದ ವರ್ಗಾವಣೆಯಲ್ಲಿ ವಿವಿಧ ಸಮಯಗಳಲ್ಲಿ ಅನುಸರಿಸಿರುವ ವಿವಿಧ ರೀತಿಗಳು ತಮ್ಮ ಪರಮಾಧಿಕಾರವನ್ನು ಬಳಸಲು ಸೂಚಿಸಲು ಭಾರತದ ಜನತೆಗೆ ಇರುವ ಅಧಿಕಾರವನ್ನು ಇಲ್ಲದಂತೆ ಮಾಡುವ ಹಾಗಿಲ್ಲ. ಸಾಮ್ರಾಜ್ಯದ ಸಾಂವಿಧಾನಿಕ ಕಾನೂನಿನ ಅಡಿಯಲ್ಲಿ ಯಾವುದೇ ದೇಶವು ಸ್ವತಂತ್ರವಾದಾಗ ಮಾತ್ರ ಮಹಾಪ್ರಭುಗಳಿಗೆ ಸಲಹೆಯನ್ನು ನೀಡುವ ಅಧಿಕಾರಗಳನ್ನು ಪಡೆಯುತ್ತವೆ. ಅವು ಸ್ವತಂತ್ರವಾಗುವ ಮೊದಲು ಮಹಾಪ್ರಭುಗಳಿಗೆ ಸೂಚನೆ ನೀಡುವ ಕ್ರಮವು ಬೇರೆಯಾಗಿತ್ತೆಂಬುದು ಈ ದೇಶಗಳು ಸ್ವತಂತ್ರವಾದ ಮೇಲೆ ಅವುಗಳ ಅಧಿಕಾರದ ಮೇಲೆ ಯಾವುದೇ ಪರಿಣಾಮವನ್ನೂ ಬೀರುವುದಿಲ್ಲ. ೧೯೩೫ರ ಅಧಿನಿಯಮದ ಪ್ರಕಾರ ಭಾರತಕ್ಕೆ ಜವಾಬ್ದಾರೀ ಸರಕಾರವನ್ನು ನೀಡಿರಲಿಲ್ಲ.

'ಪ್ರಭುತ್ವವು ಭಾರತ ಸರಕಾರಕ್ಕೆ ಸಂಸ್ಥಾನಗಳ ಮೇಲಿನ ಪರಮಾಧಿಕಾರವನ್ನು ವರ್ಗಾಯಿಸುವುದಿಲ್ಲ' ಎಂಬ ಅವರ ಹೇಳಿಕೆಯಲ್ಲಿನ ಉಳಿದ ಭಾಗವನ್ನು ಪರಿಶೀಲಿಸಬೇಕಾಗಿದೆ. ಕ್ಯಾಬಿನೆಟ್ ಮಿಷನ್ನಿನ ಪ್ರಕಾರ ಪರಮಾಧಿಕಾರವು ತಾನಾಗಿಯೇ ಕೊನೆಗೊಳ್ಳುತ್ತದೆ. ಇದೊಂದು ಅತ್ಯಾಶ್ಚರ್ಯಕರವಾದ ಹೇಳಿಕೆ ಮತ್ತು ಇಂದು ಸಾಂವಿಧಾನಿಕ ಕಾನೂನುಗಳ ಪ್ರಕಾರ ಸುಸ್ಥಿರವಾಗಿ ಸ್ಥಾಪಿಸಲ್ಪಟ್ಟಿರುವ ನೀತಿಗಳಿಗೆ ವಿರುದ್ಧವಾಗಿದೆ. ಈ ನೀತಿಯ ಪ್ರಕಾರ ರಾಜನೂ ತನ್ನ ಪರಮಾಧಿಕಾರವನ್ನು ಬೇರೆಯವರಿಗೆ ಒಪ್ಪಿಸುವುದಕ್ಕಾಗಲೀ ತಾನೇ ತ್ಯಜಿಸುವುದಕ್ಕಾಗಲೀ ಅವಕಾಶವಿಲ್ಲ. ಅಂದರೆ, ಪ್ರಭುತ್ವಕ್ಕೆ ತನ್ನ ಪರಮಾಧಿಕಾರವನ್ನು ವರ್ಗಾಯಿಸಲು ಸಾಧ್ಯವಿಲ್ಲದಿದ್ದರೆ ಅದನ್ನು ತ್ಯಜಿಸಲೂ ಸಾಧ್ಯವಿಲ್ಲ.

ಇಲ್ಲಿ ಒಂದು ಪ್ರಶ್ನೆಯನ್ನು ಕೇಳಬಹುದು. ಭಾರತವು ಸ್ವತಂತ್ರವಾದಾಗ ಏನಾಗುತ್ತದೆ? ರಾಜಪ್ರಭುತ್ವವು ಕೊನೆಗೊಳ್ಳುತ್ತದೆ ಮತ್ತು ರಾಜಪ್ರಭುತ್ವಕ್ಕೆ ಸಲಹೆ ನೀಡುವ ಪ್ರಮೇಯವೇ ಇರುವುದಿಲ್ಲ. ಸ್ವತಂತ್ರ ಭಾರತವು

ರಾಜಪ್ರಭುತ್ವದ ಎಲ್ಲಾ ವಿಶೇಷಾಧಿಕಾರಗಳಿಗೂ ಉತ್ತರಾಧಿಕಾರಿಯಾಗುತ್ತದೆಯೇ? ಇದರ ಉತ್ತರಕ್ಕಾಗಿ ರಾಜ್ಯಗಳ ಅಧಿಕಾರದ ವರ್ಗಾವಣೆಯನ್ನು ಪಡೆದ ಸರಕಾರವು, ವರ್ಗಾವಣೆಯನ್ನು ಮಾಡಿದ ಸರಕಾರದ ಕೆಲವು ವಿಶೇಷಾಧಿಕಾರಗಳನ್ನು ಪಡೆಯಬಹುದು ಎಂದು ಓಪನ್‌ಹೀಮ್ ಅಭಿಪ್ರಾಯಪಡುತ್ತಾರೆ. ಹಾಗೆಯೇ, ಹಾಲ್ಸ್ ಅವರ 'ಅಂತಾರಾಷ್ಟ್ರೀಯ ಕಾನೂನಿ'ನ ಪ್ರಕಾರ ಉಳಿದೆಲ್ಲಾ ವಿಷಯಗಳ ಜೊತೆಯಲ್ಲಿಯೇ, ಆಸ್ತಿ, ಮತ್ತು ಕರಾರಿನಿಂದ ಒದಗಬಹುದಾದ, ಸಿಗುವ ಲಾಭಾಲಾಭಗಳು ಇವೆಲ್ಲಕ್ಕೂ ವರ್ಗಾವಣೆಯನ್ನು ಪಡೆದ ಸರಕಾರವು ಹಕ್ಕುದಾರವಾಗಿರುತ್ತದೆ. ಇಲ್ಲಿ ಭಾರತವು ಅಂತಹ ವರ್ಗಾವಣೆಯನ್ನು ಸ್ವೀಕರಿಸಿದ ದೇಶ, ಸಂಸ್ಥಾನದ ರಾಜರುಗಳೊಂದಿಗೆ ಆಗಿರುವ ಕರಾರಿನ ಅಧಿಕಾರಗಳನ್ನು ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತವು ಪಡೆಯಲೇಬೇಕು. ಆದ್ದರಿಂದ ಸ್ವತಂತ್ರ ಭಾರತವು ಪರಮಾಧಿಕಾರವನ್ನು ಪಡೆಯಲು ತನ್ನ ಹಕ್ಕನ್ನು ಮಂಡಿಸಬಹುದಾಗಿದೆ.

* * * * *

---

ದ ಬಾಂಬೆ ಕ್ರಾನಿಕಲ್, ದಿನಾಂಕ ೧೯೪೭ರ ಜೂನ್೧೮

# ಪರಿಶಿಷ್ಟ ೧೧

## ಬಾಂಬೆಯ ಬಹಿಷ್ಕೃತ ಹಿತಕಾರಿಣಿ ಸಭೆಯ ಕಾರ್ಯಚಟುವಟಿಕೆಗಳು

### ೧

### ಬಹಿಷ್ಕೃತ ಹಿತಕಾರಿಣಿ ಸಭೆ
### ನಡೆದಿರುವ ಕಾರ್ಯಗಳ ಸಮೀಕ್ಷೆ

ದಲಿತರ ಅಭಿವೃದ್ಧಿಗಾಗಿ ದುಡಿಯುತ್ತಿರುವ ಬಹಿಷ್ಕೃತ ಹಿತಕಾರಿಣಿ ಸಭೆಯ ವಾರ್ಷಿಕ ಮಹಾಸಭೆಯು ಇದೇ ತಿಂಗಳ ೧೮ರಂದು ಬಾಂಬೆಯ ಪರೇಲ್‌ನಲ್ಲಿರುವ ದಾಮೋದರ್ ಥ್ಯಾಕರ್ಸೆ ಸಭಾಂಗಣದಲ್ಲಿ ನಡೆಯಿತು. ೧೯೨೫ನೇ ಸಾಲಿನ ವರದಿಯು ಸಭೆಯ ಕಾರ್ಯಚಟುವಟಿಕೆಗಳು ತ್ರಿಗುಣಗೊಂಡಿರುವುದೆಂದು ತಿಳಿಸುತ್ತದೆ. ದಲಿತವರ್ಗಗಳವರ ಶಿಕ್ಷಣದ ವಿಷಯದಲ್ಲಿ ಗಮನಿಸಿದರೆ, ಸಭೆಯು ೨೬೬೯–೦–೮ ರೂಗಳ ವೆಚ್ಚದಲ್ಲಿ ಸೋಲಾಪುರದ ಬಳಿಯಲ್ಲಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಒಂದು ವಿದ್ಯಾರ್ಥಿನಿಲಯವನ್ನು ನಡೆಸುತ್ತಿದೆ. ಈ ವಿದ್ಯಾರ್ಥಿನಿಲಯದಲ್ಲಿ ವಸತಿ ಸೌಲಭ್ಯವು ಸಂಪೂರ್ಣವಾಗಿ ಉಚಿತ. ತಾನು ಪ್ರಾರಂಭಗೊಂಡ ಮೊದಲ ವರ್ಷದಲ್ಲಿ ಸಭೆಯು ದಲಿತವರ್ಗಗಳವರ ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿಗೆ ಏನನ್ನೂ ಮಾಡಲಾಗಲಿಲ್ಲ. ಆದರೂ ನಾಸಿಕ್ ಜಿಲ್ಲೆಯ ಮಹರರಿಗೆ, ಅವರ ವತನದಾರಿಯ ವಿಷಯಲ್ಲಿದ್ದ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಸಭೆಯು ಸಹಾಯಮಾಡಿತು. ಸಭೆಯ ಹಣಕಾಸು ಪತ್ರವು ಈ ವರ್ಷದಲ್ಲಿ ೩೧೬೯–೧–೦ ರೂಗಳ ಆದಾಯವನ್ನು ಮತ್ತು ೨೯೩೮–೧೩–೬ ರೂಗಳ ವೆಚ್ಚವನ್ನು ತೋರಿಸುತ್ತದೆ.

### ನಡೆದ ಕಾರ್ಯಚಟುವಟಿಕೆಗಳು

ಬೈಕುಲಾದ ಇಂಪ್ರೂವ್‌ಮೆಂಟ್ ಟ್ರಸ್ಟ್ ಚಾಲಿನಲ್ಲಿ ದಲಿತವರ್ಗಗಳವರಿಗಾಗಿ ಸಭೆಯು ಒಂದು ವಾಚನಾಲಯವನ್ನು ತೆರೆದಿದೆ. ಪರೇಲ್ ಬಳಿಯಲ್ಲಿ ದಲಿತವರ್ಗದ ತರುಣರಿಗಾಗಿ ಒಂದು ಹಾಕಿ ಕ್ಲಬ್ಬನ್ನು ವ್ಯವಸ್ಥೆಯನ್ನು ಮಾಡಿದೆ. 'ಬಹಿಷ್ಕೃತ ವಿದ್ಯಾರ್ಥಿ ಸಮ್ಮೇಳನ' ಎಂಬ ಹೆಸರಿನ ದಲಿತವರ್ಗದ ವಿದ್ಯಾರ್ಥಿಗಳ ಬಹುಮುಖ್ಯವಾದ ಸಮ್ಮೇಳನವೊಂದನ್ನು ಸಭೆಯು ವ್ಯವಸ್ಥೆಮಾಡಿದೆ. ಇದೊಂದು ರೀತಿಯ ದಲಿತವರ್ಗಗಳ ವಿದ್ಯಾರ್ಥಿಗಳ ಸೋದರ–ಸಂಸ್ಥೆಯಾಗಿದ್ದು 'ವಿದ್ಯಾವಿಲಾಸ' ಎಂಬ ಮರಾಠೀ ಮಾಸಿಕವನ್ನು ಹೊರತರುತ್ತಿದೆ. ಇದಕ್ಕೆ ದಲಿತವರ್ಗದ ವಿದ್ಯಾರ್ಥಿಗಳೇ ಲೇಖನಗಳನ್ನು ಬರೆಯುತ್ತಾರೆ. ಆರ್ಥಿಕ ಕ್ಷೇತ್ರದಲ್ಲಿ ದಲಿತವರ್ಗಗಳಿಗಾಗಿ ಮೂರು ಸಹಕಾರೀ ಸಾಲದ ಸಂಸ್ಥೆಗಳನ್ನು ಸಭೆಯು ಹುಟ್ಟುಹಾಕಿದೆ. ೧೯೨೬ರಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಒಟ್ಟು ವೆಚ್ಚವು ೨೫,೦೦೦ ರೂಗಳಿಂದ ೩೦,೦೦೦ ರೂಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ – (ಅಸೋಸಿಯೇಟೆಡ್ ಪ್ರೆಸ್)

ದಲಿತವರ್ಗದವರಿಂದ ಬಂದಿರುವ ವಿಜ್ಞಾಪನಾ ಪತ್ರದ ಬಗ್ಗೆ ಪಿ.ಎಸ್.ಜಿ. ಅವರ ಕಚೇರಿಯಲ್ಲಿ ಮಾಡಿರುವ ಟಿಪ್ಪಣಿಗಳು ೧೯೪೬ರ ೩೪/೬ನೇ ಸಂಖ್ಯೆ ಪಿಪಿ ಪ್ರಕರಣವನ್ನು ಈ ಕೆಳಗೆ ನೀಡಲಾಗಿದೆ.

ಸಹಿ/– ಎಂ.ಸಿ.ಬಿ.

ಈ ಪತ್ರದಲ್ಲಿ ಎರಡು ಬೇಡಿಕೆಗಳನ್ನು ಮಾಡಲಾಗಿದೆ –

ಅ) ದಲಿತವರ್ಗಕ್ಕೆ ಸೇರಿದ ವಿಷಯಗಳಲ್ಲಿ ಸರಕಾರವು ಈ ಸಂಸ್ಥೆಯಿಂದ ಅದು ಕೇಂದ್ರೀಯ ಸಂಸ್ಥೆಯಾಗಿರುವುದರಿಂದ ಸಲಹೆಯನ್ನು ಪಡೆಯಬೇಕು,

ಆ) ಮಹಾಪ್ರಭುಗಳು ದಯವಿಟ್ಟು ಈ ಸಂಸ್ಥೆಯ ಮಹಾಪೋಷಕರಾಗಬೇಕು.

ಈ ಬೇಡಿಕೆಗಳನ್ನು ಮುಖ್ಯ ಕಾರ್ಯದರ್ಶಿಯವರಿಗೆ ಅವರ ಸಲಹೆಗಾಗಿ ಕಳುಹಿಸಬಹುದು.

ಸಹಿ/– ಜೆ.ಸಿ.ಕೆ.

ಜುಲೈ ೧[೧]

೨

"ಕೆಳಗಿನ ಯು.ಒ.ಆರ್. ಸಂಖ್ಯೆ.
ಡಿ. ೧೯೨೬ರ ಜುಲೈ ೨೬ ಮತ್ತು ಸದರಿ ತಿಂಗಳಿನ ೨೭,
ಜನರಲ್ ಇಲಾಖೆಯಿಂದ.
ಸಿ.ಐ.ಡಿ.
೧೯೨೬ ಜುಲೈ ೨೭

(೧) ಸಭೆಯ ಸಂವಿಧಾನವನ್ನು ರಚಿಸಲಾಗಿದೆಯೇ? ಹಾಗಿದ್ದರೆ ಅದರ ಒಂದು ಪ್ರತಿಯನ್ನು ಕಳುಹಿಸಿಕೊಡಿ.

(೨) ಸಭೆಯ ಪದಾಧಿಕಾರಿಗಳಲ್ಲಿ ಎಷ್ಟು ಮಂದಿ ದಲಿತವರ್ಗಕ್ಕೆ ಸೇರಿದ್ದಾರೆ?

(೩) ಸದಸ್ಯರು ನೀಡಬೇಕಾದ ಚಂದಾ ಹಾಗೂ ಸದಸ್ಯತ್ವದ ಇತರ ನಿಯಮಗಳೇನು?

(೪) ಕ್ಲಾರ್ಕ್ ರಸ್ತೆಯಲ್ಲಿರುವ ಗ್ರಂಥಾಲಯಕ್ಕೆ ದಯೆಯಿಟ್ಟು ಭೇಟಿಕೊಟ್ಟು ಅಲ್ಲಿರುವ ಗ್ರಂಥಗಳ ಸಂಖ್ಯೆ ಹಾಗೂ ಅವುಗಳ ವಿಷಯ ಮತ್ತು ದಲಿತವರ್ಗಗಳವರು ಅದನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ವರದಿ ಮಾಡಿ. ಈ ಗ್ರಂಥಾಲಯವು ಎಲ್ಲರಿಗೂ ಮುಕ್ತವಾಗಿದೆಯೇ ಅಥವಾ ಸಭೆಯ ಸದಸ್ಯರಿಗೆ ಮಾತ್ರ ಸೀಮಿತವಾಗಿದೆಯೇ ಎಂಬುದನ್ನೂ ತಿಳಿಸಿ.

(೫) ಪ್ರಕೃತ ವರ್ಷದಲ್ಲಿ ಸಭೆಯು ಯಾವುದಾದರೂ ಕಾರ್ಯಕ್ರಮವನ್ನು ನಡೆಸಿದೆಯೇ?

ಸಹಿ/–[೨]

೩

ಮಾನ್ಯರೆ,

ಈ ಪತ್ರದೊಂದಿಗೆ ಲಗತ್ತಿಸಿರುವ ಜನರಲ್ ಇಲಾಖೆಯ ೧೯೬೦ರ ಜುಲೈ ೨೬ರಯು.ಒ.ಆರ್. ಹಾಗೂ ಅದರ ಮೇಲೆ ಉಪ ಪೋಲಿಸ್ ಆಯುಕ್ತರ ಸೂಚನೆಯ ಪ್ರಕಾರ ನಾನು ಈ ಮುಂದಿನದನ್ನು

---

೧. ದ ಬಾಂಬೆ ಕ್ರಾನಿಕಲ್, ೧೯೨೬ರ ಏಪ್ರಿಲ್ ೨೯

೨. ಆಕರ: ಸಂಪುಟ ೧, ಪುಟ ೧೦

ನಿವೇದಿಸಿಕೊಳ್ಳಲು ಬಯಸುತ್ತೇನೆ:

(೧) ಬಹಿಷ್ಕೃತ ಹಿತಕಾರಿಣಿ ಸಭೆಯ ಸಂವಿಧಾನವನ್ನು ರಚಿಸಿ ಅದನ್ನು ಮುದ್ರಿಸಿ ಇಡಲಾಗಿದೆ. ಅದರ ಒಂದು ಪ್ರತಿಯನ್ನು ಈ ಪತ್ರಕ್ಕೆ ಅನುಬಂಧಿಸಲಾಗಿದೆ.

(೨) ಅಧ್ಯಕ್ಷರು ಮತ್ತು ಆರು ಉಪಾಧ್ಯಕ್ಷರು (ಇವರುಗಳ ಹೆಸರಿರುವ ವಾರ್ಷಿಕ ವರದಿಯ ಭಾಗಕ್ಕೆ 'ಬಿ' ಎಂದು ಒಂದು ಚೀಟಿಯನ್ನು ಅಂಟಿಸಲಾಗಿದೆ) ದಲಿತ ವರ್ಗಕ್ಕೆ ಸೇರಿದವರಲ್ಲ. ಡಾ. ಅಂಬೇಡ್ಕರ್ ಅವರನ್ನು ಒಳಗೊಂಡಿರುವ ಆಡಳಿತ ಮಂಡಳಿಯು ದಲಿತವರ್ಗಗಳವರನ್ನು ಒಳಗೊಂಡಿದೆ.

(೩) ವಂತಿಕೆಯ ವಿವರ ಹೀಗಿದೆ:

ಅ) ವಾರ್ಷಿಕ ೨೫ ರೂಗಳ ಅಥವಾ ಅದಕ್ಕಿಂತ ಹೆಚ್ಚಿನ ಹಣವನ್ನು ನೀಡುವ ವರ್ಗ
ಆ) ವಾರ್ಷಿಕ ೧೦ ರೂಗಳನ್ನು ನೀಡುವವರ ವರ್ಗ
ಇ) ವಾರ್ಷಿಕ ೫ ರೂಗಳನ್ನು ನೀಡುವವರ ವರ್ಗ
ಈ) ವಾರ್ಷಿಕ ೩ ರೂಗಳನ್ನು ನೀಡುವವರ ವರ್ಗ
ಉ) ವಾರ್ಷಿಕ ೧ ರೂವನ್ನು ನೀಡುವವರ ವರ್ಗ

(ಉ) ವರ್ಗದವರ ಸಂಖ್ಯೆ ಸುಮಾರು ೨೦೦. ಸುಮಾರು ಹತ್ತು ಜನ ಸಹಸದಸ್ಯರಿದ್ದಾರೆ. ಇವರು ದಲಿತ ವರ್ಗದವರ ಕಲ್ಯಾಣಕ್ಕಾಗಿ ೨೦೦ ರೂಗಳ ವಂತಿಕೆಯನ್ನು ನೀಡಿದ್ದಾರೆ. ಇವರು ಗುತ್ತಿಗೆದಾರರುಗಳಾಗಿದ್ದು, ದಲಿತವರ್ಗಗಳಿಗೆ ಸೇರಿದವರಲ್ಲ.

(೪) ಕ್ಲಾರ್ಕ್ ರೋಡಿನಲ್ಲಿರುವ ಬಾಂಬೆ ಅಭಿವೃದ್ಧಿ ಸಮಿತಿಯ ಮನೆಯೊಂದರ ಸಣ್ಣ ಕೊಠಡಿಯಲ್ಲಿ ತಿಂಗಳಿಗೆ ೭ರೂ ೩ ಆಣೆ ಬಾಡಿಗೆಯ ಮೇಲೆ, ನಾಲ್ಕು ತಿಂಗಳ ಹಿಂದೆ ಗ್ರಂಥಾಲಯವನ್ನು ಪ್ರಾರಂಭಿಸಿದ್ದಾರೆ. ಅದೊಂದು ಕೊಳಕು ಕೊಠಡಿಯಾಗಿದ್ದು ಪುಸ್ತಕಗಳಿಲ್ಲದ ಒಂದು ಮುರುಕು ಬೀರು, ಒಂದು ಮೇಜು ಹಾಗೂ ಒಂದು ಕುರ್ಚಿಯನ್ನು ಹೊಂದಿದೆ. ಆ ಮೇಜಿನ ಮೇಲೆ ಹಳೆಯ ವಾರ್ತಾಪತ್ರಿಕೆಗಳ ಹರಿದ ಚೂರುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುದು ಕಂಡುಬಂದಿತು. ಅವರಲ್ಲಿ ಸುಮಾರು ೬೪ ಪುಸ್ತಕಗಳಿದ್ದವು, ಹೆಚ್ಚುಕಡಿಮೆ ಎಲ್ಲವೂ ಮರಾಠಿಯಲ್ಲಿದ್ದವು. ಅವುಗಳಲ್ಲಿ ಕೆಲವನ್ನು ಓದುಗರಿಗೆ ಎರವಲು ನೀಡಲಾಗಿತ್ತು ಮತ್ತು ಉಳಿದವನ್ನು ಸಮಾಜಸೇವಾ ಲೀಗಿಗೆ ಸೇರಿದ್ದ ಎರಡು ಪೆಟ್ಟಿಗೆಗಳಲ್ಲಿ ತುಂಬಿಡಲಾಗಿತ್ತು.

ಸಮಾಜಸೇವಾ ಲೀಗಿನವರು ನೀಡಿದ್ದ ೨೦೦ ಪುಸ್ತಕಗಳನ್ನು ತಲಾ ನೂರರಂತೆ ಎರಡು ಕಬ್ಬಿಣದ ಪೆಟ್ಟಿಗೆಗಳಲ್ಲಿ ಇಡಲಾಗಿದೆ. ಇವುಗಳಲ್ಲಿ ಬಹುತೇಕ ಪುಸ್ತಕಗಳು ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳವಾಗಿದ್ದು ಕೆಲವು ಮರಾಠಿ ಭಾಷೆಯಲ್ಲಿ ಸ್ವರಾಜ್ಯದ ಮೇಲೂ ಇವೆ. ಪ್ರತಿದಿನ ಸರಾಸರಿ ೧೦–೧೨ ದಲಿತ ವರ್ಗದ ಸದಸ್ಯರು ಈ ಗ್ರಂಥಾಲಯಕ್ಕೆ ಬರುತ್ತಾರೆ. ಇದು ಎಲ್ಲರಿಗೂ ಮುಕ್ತವಾಗಿದ್ದರೂ, ದಲಿತರ ಪ್ರದೇಶದಲ್ಲಿರುವ ಈ ಗ್ರಂಥಾಲಯಕ್ಕೆ ದಲಿತವರ್ಗಕ್ಕೆ ಸೇರಿಲ್ಲದವರು ಸಾಮಾನ್ಯವಾಗಿ ಬರುವುದಿಲ್ಲ. ಯಾರಾದರೂ ಅಪರಿಚಿತರು ಕೊಠಡಿಗೆ ಬಂದರೆ, ಅವರಿಗೆ ಬೇರೆ ಯಾರಾದರೂ ಅದನ್ನು ಒಂದು ಗ್ರಂಥಾಲಯವೆಂದು ಹೇಳದಿದ್ದರೆ, ಆ ಕೊಠಡಿಯು ಗ್ರಂಥಾಲಯವೆಂದು ಬಂದವರಿಗೆ ತೋರುವುದೇ ಇಲ್ಲ.

(೫) ಗಮನಿಸಬಹುದಾದ ಯಾವ ಕಾರ್ಯಕ್ರಮವೂ ಇಲ್ಲಿ ನಡೆದಿಲ್ಲ. ಒಬ್ಬ ವಿದ್ಯಾರ್ಥಿಯು ಒಂದು ಸಣ್ಣ ಪತ್ರಿಕೆಯನ್ನು ಬರೆಯುತ್ತಾನೆ. ಕೈಬರಹದ ಈ ಪತ್ರಿಕೆಯನ್ನು ಇತರ ವಿದ್ಯಾರ್ಥಿಗಳಿಗೆ ಹಂಚಲಾಗುತ್ತದೆ.

ಬಹಿಷ್ಕೃತ ಹಿತಕಾರಿಣಿ ಸಭೆಯು ೧೯೨೬ರ ಏಪ್ರಿಲ್ ತಿಂಗಳಿನಲ್ಲಿ ನೊಂದಾಯಿತವಾಗಿದೆ. ಸಭೆಯ ಪಿ.ಪಿ.ಯನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ.

ಸಹಿ/–

ಉಪ ಪೋಲಿಸ್ ಆಯುಕ್ತ, ಎಸ್.ಬಿ.

೧೯೨೬ರ ಆಗಸ್ಟ್ ೯

ಗೌರವಗಳೊಡನೆ ಹಿಂದಿರುಗಿಸಲಾಗಿದೆ

೨) ಲಾರ್ಡ್ ಇರ್ವಿನ್ ಅವರು ಭೇಟಿಕೊಟ್ಟಾಗ ಅವರಿಗೆ ತಮ್ಮ ಅಹವಾಲನ್ನು ನೀಡುವುದಕ್ಕಾಗಿ ಅನುಮತಿಯನ್ನು ಬೇಡಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ನಾನು ೧೯೨೬ರ ಮಾರ್ಚ್ ೯ರಂದು ಮಾನ್ಯ ಗವರ್ನರ್ ಅವರಿಗೆ ಬರೆದ ಎಚ್–೩೪೪೭ನೇ ಸಂಖ್ಯೆಯ ಪತ್ರವು ಈ ಸಭೆಯ ವಿಷಯವನ್ನು ಒಳಗೊಂಡಿತ್ತು.

೩) 'ಸಂವಿಧಾನದ ನಿಯಮ'ಗಳ ಒಂದು ಪ್ರತಿಯನ್ನು ಲಗತ್ತಿಸಲಾಗಿದೆ. ಸಭೆಯು ಸುಮಾರು ೨೦೦ ಸದಸ್ಯರನ್ನು ಹೊಂದಿದೆ. ಅವರಲ್ಲಿ ಸುಮಾರು ೧೦ ಜನರನ್ನು ಹೊರತುಪಡಿಸಿ ಉಳಿದವರೆಲ್ಲರೂ (ಉ) ವರ್ಗಕ್ಕೆ ಸೇರಿದವರು. ಹೆಸರಿಗಾಗಿ ಇರುವ ಗ್ರಂಥಾಲಯವು ಕ್ಲಾರ್ಕ್ ರಸ್ತೆಯಲ್ಲಿರುವ ಅಭಿವೃದ್ಧಿ ಸಮಿತಿಗೆ ಸೇರಿರುವ ಕಟ್ಟಡದ ಎರಡನೆಯ ಮಹಡಿಯಲ್ಲಿನ ಒಂದು ಕೊಠಡಿಯಲ್ಲಿದೆ. ಅಲ್ಲಿರುವ ಬಹುತೇಕ ಪುಸ್ತಕಗಳನ್ನು ಸಮಾಜ ಸೇವಾ ಲೀಗಿನವರು ನೀಡಿದ್ದಾರೆ. ಅಲ್ಲಿಗೆ ಕೆಲವು ವಾರ್ತಾಪತ್ರಿಕೆಗಳೂ ಬರುತ್ತವೆ ಮತ್ತು ಅಲ್ಲಿಗೆ ಬರುವವರ ಸರಾಸರಿ ಸಂಖ್ಯೆ ೧೦ ಅಥವಾ ೧೨. ಅದು ಎಲ್ಲರಿಗೂ ಮುಕ್ತವಾಗಿದ್ದರೂ ಅದನ್ನು ದಲಿತವರ್ಗದ ಸದಸ್ಯರೇ ಉಪಯೋಗಿಸಿಕೊಳ್ಳುತ್ತಾರೆ. ಸಭೆಯು ಹೇಳಿಕೊಳ್ಳುವಂತಹ ಇನ್ನಾವುದೇ ಕಾರ್ಯಕ್ರಮವನ್ನು ನಡೆಸಿಲ್ಲ.

೪) ಸಭೆಯು ಯಾವುದೇ ಆಕ್ಷೇಪಣೆಗಳಿಗೆ ಒಳಗಾಗದೇ ಇದ್ದರೂ, ಅದನ್ನು ಒಂದು ಪ್ರಾತಿನಿಧಿಕ ಸಂಸ್ಥೆಯೆಂದು ಪರಿಗಣಿಸಲಾಗುವುದಿಲ್ಲ. ಅದೇ ಸಮಯದಲ್ಲಿ ಇದಕ್ಕಿಂತ ಉತ್ತಮವಾಗಿ ದಲಿತರನ್ನು ಪ್ರತಿನಿಧಿಸುವ ಯಾವ ಸಂಸ್ಥೆಯೂ ಇಲ್ಲ. ದಲಿತರಿಗೆ ಸಂಬಂಧಪಟ್ಟ ಯಾವುದಾದರೂ ವಿಷಯಗಳನ್ನು ಚರ್ಚಿಸಬೇಕಾದರೆ ಈ ಸಭೆಯನ್ನು ಸಂಪರ್ಕಿಸುವುದಕ್ಕೆ ಯಾವ ಆಕ್ಷೇಪಣೆಯೂ ಇರುವುದಿಲ್ಲ.

೫) ಸಭೆಯ ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಗಳೂ ದಲಿತವರ್ಗಕ್ಕೆ ಸೇರಿದವರಾಗಿದ್ದಾರೆ.

ಸಹಿ/–

ಪೋಲಿಸ್ ಆಯುಕ್ತರು

* * * * *

# ಪರಿಶಿಷ್ಟ ೧೨

## ಬಾಂಬೆ, ನವ ಬಾಂಬೆ, ಔರಂಗಾಬಾದ್, ಮಹದ್, ಪಂಡರಾಪುರ, ದಾಪೊಲಿ, ನಾಂದೇಡ್, ಪುಣೆ ಮತ್ತು ಬೆಂಗಳೂರುಗಳಲ್ಲಿರುವ ಪೀಪಲ್ಸ್ ಎಜುಕೇಶನ್ ಸೊಸೈಟಿಯ ಸಂಸ್ಥೆಗಳು

### ಕಾಲೇಜುಗಳು

೧. ಸಿದ್ಧಾರ್ಥ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬಾಂಬೆ (೧೯೪೬)
೨. ಮಿಲಿಂದ ಕಲಾ ಕಾಲೇಜು, ಔರಂಗಾಬಾದ್ (೧೯೫೦)
೩. ಮಿಲಿಂದ ವಿಜ್ಞಾನ ಕಾಲೇಜು (೧೯೫೦)
೪. ಸಿದ್ಧಾರ್ಥ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬಾಂಬೆ (೧೯೫೩)
೫. ಸಿದ್ಧಾರ್ಥ ಕಾನೂನು ಕಾಲೇಜು, ಬಾಂಬೆ (೧೯೫೬)
೬. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕಲೆ ಮತ್ತು ವಾಣಿಜ್ಯ ಕಾಲೇಜು, ಔರಂಗಾಬಾದ್ (೧೯೬೩)
೭. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕಲೆ ಮತ್ತು ವಾಣಿಜ್ಯ ಕಾಲೇಜು, ಮಹದ್, ರಾಯಗಡ ಜಿಲ್ಲೆ (೧೯೬೩)
೮. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕಾನೂನು ಕಾಲೇಜು, ಔರಂಗಾಬಾದ್ (೧೯೬೮)
೯. ಡಾ. ಬಾಬಾಸಾಹೇಬ್ ಅಂಬೇಡ್ಕರ್ ವಾಣಿಜ್ಯ ಮತ್ತು ಅರ್ಥಶಾಸ್ತ್ರದ ಕಾಲೇಜು, ವಡಾಲ, ಬಾಂಬ (೧೯೭೧)
೧೦. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕಾನೂನು ಕಾಲೇಜು, ವಡಾಲ, ಬಾಂಬೆ (೧೯೭೮)
೧೧. ಪಿ.ಇ.ಎಸ್. ದೈಹಿಕ ಶಿಕ್ಷಣ ಕಾಲೇಜು, ಔರಂಗಾಬಾದ್ (೧೯೮೪)
೧೨. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕಲೆ ಮತ್ತು ವಾಣಿಜ್ಯ ಕಾಲೇಜು, ಯೆರವಾಡ, ಪುಣೆ (೧೯೮೫)
೧೩. ಪಿ.ಇ.ಎಸ್. ಆಂಗ್ಲ ಮಾಧ್ಯಮ ಶಾಲೆ, ಯೆರವಾಡ, ಪುಣೆ (೧೯೮೫)
೧೪. ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು, ಔರಂಗಾಬಾದ್ (೧೯__)

### ಡಿಪ್ಲೊಮಾ ಶಿಕ್ಷಣ ಸಂಸ್ಥೆ

೧೫. ಸಿದ್ಧಾರ್ಥ ಕೈಗಾರಿಕಾ ಮತ್ತು ಆಡಳಿತ ಸಂಸ್ಥೆ, ಮುಂಬೈ (೧೯೬೭)

### ಪ್ರೌಢಶಾಲೆಗಳು

೧೬. ಸಿದ್ಧಾರ್ಥ ರಾತ್ರಿ ಪ್ರೌಢಶಾಲೆ, ಮುಂಬೈ (೧೯೪೭)
೧೭. ಮಿಲಿಂದ ವಿವಿಧೋದ್ದೇಶ ಪ್ರೌಢಶಾಲೆ, ಔರಂಗಾಬಾದ್ (೧೯೫೫)
೧೮. ಮಾತೋಶ್ರೀ ರಮಾಬಾಯಿ ಅಂಬೇಡ್ಕರ್ ಪ್ರೌಢಶಾಲೆ, ಔರಂಗಾಬಾದ್ (೧೯೬೫)

೧೯. ಪಿ.ಇ.ಎಸ್ ಮಾಧ್ಯಮಿಕ ಶಾಲೆ ಮತ್ತು ಕಿರಿಯ ಕಾಲೇಜು, ನವಿ ಮುಂಬೈ (೧೯೭೮)
೨೦. ನಾಗ್‌ಸೇನ್ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜು, ನಾಂದೇಡ್ (೧೯೮೧)
೨೧. ನಾಗ್‌ಸೇನ್ ವಿದ್ಯಾಶಾಲೆ ಪ್ರಾಥಮಿಕ ಶಾಲೆ, ನಾಂದೇಡ್ (೧೯೮೧)
೨೨. ಪಿ.ಇ.ಎಸ್. ಆಂಗ್ಲ ಮಾಧ್ಯಮ ಕೆ.ಜಿ. ಶಾಲೆ, ಬೆಂಗಳೂರು (೧೯೮೪)
೨೩. ಪಿ.ಇ.ಎಸ್. ಮರಾಠಿ ಪ್ರಾಥಮಿಕ ಶಾಲೆ, ನವಿ ಮುಂಬೈ (೧೯__)
೨೪. ಮಿಲಿಂದ ವಿವಿಧೋದ್ದೇಶ ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆ, ಔರಂಗಾಬಾದ್ (೧೯__)
೨೫. ಗೌತಮ ವಿದ್ಯಾಲಯ, ಪಂಡರಾಪುರ, ಶೋಲಾಪುರ ಜಿಲೆ (೧೯__)

## ವಿದ್ಯಾಥಿನಿಲಯಗಳು

೨೬. ಸಂತ ಗಾಡ್ಗೆ ಮಹಾರಾಜ್ ಚೊಖಮೇಲ ವಿದ್ಯಾರ್ಥಿ ವಸತಿಗೃಹ, ಪಂಡರಾಪುರ (೧೯೪೯)
೨೭. ಸಿದ್ಧಾರ್ಥ ವಿಹಾರ ವಿದ್ಯಾರ್ಥಿನಿಲಯ, ವಡಾಲ, ಮುಂಬೈ (೧೯೬೪)
೨೮. ಸುಬೇದಾರ್ ಸಾವಡ್ಕರ್ ವಿದ್ಯಾರ್ಥಿ ಆಶ್ರಮ, ಮಹದ್, ರಾಯ್‌ಗಡ ಜಿಲ್ಲೆ (೧೯೭೮)

* * * * *

# ಪರಿಶಿಷ್ಟ ೧೩

## ಮಹಾಪ್ರಭು ಸಯ್ಯಾಜಿರಾವ್ ಗಾಯಕ್‌ವಾಡ್ ಅವರಿಗೆ ಬರೆದ ಪತ್ರ

ನವದೆಹಲಿ
೧೯೪೬ರ ಮೇ ೨೧

ಮಹಾಪ್ರಭುಗಳಿಗೆ

ಪ್ರಕೃತ ವಿಷಯವು ಗಂಭೀರವಾಗಿಲ್ಲದಿದ್ದಿದ್ದರೆ ನಾನು ಮಹಾಪ್ರಭುಗಳಿಗೆ ತೊಂದರೆಯನ್ನು ನೀಡುವ ಸಾಹಸಕ್ಕೆ ಕೈಹಾಕುತ್ತಿರಲಿಲ್ಲ. ಬಾಂಬೆಯಲ್ಲಿ ದಲಿತವರ್ಗಗಳವರ ವಿಶೇಷ ಉಪಯೋಗಕ್ಕಾಗಿ ಬಾಂಬೆಯಲ್ಲಿ ಪ್ರಾರಂಭಿಸಬೇಕೆಂದಿರುವ ಕಾಲೇಜಿನ ಯೋಜನೆಗೆ ಆರ್ಥಿಕ ನೆರವನ್ನು ಬೇಡಿ ಸಲ್ಲಿಸುತ್ತಿರುವ ಮನವಿಯನ್ನು ಡಾ. ಅಂಬೇಡ್ಕರ್ ಅವರು ನನಗೆ ಕೊಟ್ಟಿದ್ದಾರೆ. ಅದನ್ನು ಈ ಪತ್ರದೊಂದಿಗೆ ಕಳುಹಿಸುತ್ತಿದ್ದೇನೆ. ಮಹಾಪ್ರಭುಗಳು ತಿಳಿದಿರುವಂತೆ, ದಲಿತವರ್ಗಗಳವರು ತಾವಿರುವ ಅಸಹಾಯಕ ಸ್ಥಿತಿಯಲ್ಲಿ ಸಹಾಯವನ್ನು ಕೋರಲು ಮೇಲ್ಜಾತಿಯ ಹಿಂದೂಗಳನ್ನಲ್ಲದೆ ಬೇರೆ ಯಾರೂ ಇಲ್ಲ. ಅವರು ಈಗಿರುವ ಸ್ಥಿತಿಗೆ ನಾವು ಕಾರಣರಲ್ಲ ಎಂದು ಹೇಳಿ ಅವರ ಮನವಿಯನ್ನು ತಿರಸ್ಕರಿಸಲು ಸಾಧ್ಯವಿಲ್ಲ. ದಲಿತವರ್ಗಗಳವರನ್ನು ಆರ್ಥಿಕವಾಗಿ ಮತ್ತು ನೈತಿಕವಾಗಿ ಮೇಲೆತ್ತಲು ನಮಗೆ ಇರುವ ಸಾಧನವೆಂದರೆ ಅವರಿಗೆ ನೀಡಬಹುದಾದ ವಿದ್ಯಾಭ್ಯಾಸ ಮಾತ್ರ. ಹೀಗಾಗಿ ಈ ಪ್ರಯತ್ನವು ಶ್ಲಾಘ್ಯವಾದುದಾಗಿದೆ. ಡಾ. ಅಂಬೇಡ್ಕರ್ ಅವರಿಗೆ ತಮ್ಮ ತಾತಂದಿರು ಮಾಡಿದ ಉಪಕಾರದ ಸ್ಮರಣೆಯಲ್ಲಿ ಅವರು ಇಂದೂ ಇದ್ದಾರೆ ಮತ್ತು ತಮ್ಮ ರಾಜಕುಟುಂಬಕ್ಕೆ ಅವರು ಸದಾ ಕೃತಜ್ಞರಾಗಿರುತ್ತಾರೆ. ಅವರು ಸಹಾಯವನ್ನು ಕೋರಿ ತಮ್ಮ ಸನ್ನಿಧಾನಕ್ಕೆ ಪತ್ರ ಬರೆಯುವ ಸಾಹಸವನ್ನು ಮಾಡುವುದಿಲ್ಲ. ಆದರೆ ನಾನು ಮಹಾಪ್ರಭುಗಳನ್ನು ವೈಯಕ್ತಿಕವಾಗಿ ಬಲ್ಲಂತಹ ಅದೃಷ್ಟವನ್ನು ಹೊಂದಿರುವುದರಿಂದ, ತಮ್ಮ ಗಮನಕ್ಕೆ ಇದನ್ನು ತರುವ ಕಾರ್ಯವನ್ನು ನನ್ನ ಹೆಗಲಮೇಲೇರಿಸಿಕೊಂಡಿದ್ದೇನೆ. ಭಾರತ ಸರಕಾರದವರು ಈ ಕಾಲೇಜನ್ನು ಪ್ರಾರಂಭಿಸಲು ಅನುದಾನವನ್ನು ಕೊಡಲಿದ್ದಾರೆ ಮತ್ತು ಹಲವಾರು ರಾಜರುಗಳು ಕೂಡ ಧನಸಹಾಯವನ್ನು ಮಾಡುವ ಆಶ್ವಾಸನೆಯನ್ನು ನೀಡಿದ್ದಾರೆ. ಆದರೆ, ಈ ಯೋಜನೆಯನ್ನು ಸರಿಯಾದ ರೀತಿಯಲ್ಲಿ ಸಾಧಿಸುವ ಮಹಾಕಾರ್ಯಕ್ಕೆ ಇನ್ನೂ ಹೆಚ್ಚಿನ ಹಣದ ಅಗತ್ಯವು ಇದೆ. ಸನ್ನಿಧಾನವು ಉದಾರವಾಗಿ ಈ ಯೋಜನೆಗೆ ಸಹಾಯವನ್ನು ಮಾಡಿದರೆ ಡಾ. ಅಂಬೇಡ್ಕರ್ ಅವರು ಮತ್ತು ಅವರ ಸಮುದಾಯವು ಸದಾಕಾಲವೂ ತಮಗೆ ಋಣಿಗಳಾಗಿರುತ್ತಾರೆ.

ತಮ್ಮ ವಿಶ್ವಾಸಿ
**ಕೆ.ಎ. ಕೇಲುಸ್ಕರ್**

* * * * *

---

(ರತ್ತು ನಾನಕ್ ಚಂದ್: 'ಡಾ. ಅಂಬೇಡ್ಕರ್ ಅವರ ಪರಿಚಿತವಲ್ಲದ ಮುಖಗಳು', ಪುಟ: ೨೩೩)

# ೧
# ಮಹಾ ಹೋರಾಟ

ಹೊಸ ವರ್ಷ–೧ನೇ ಜನವರಿ ೧೯೨೭ – ಈ ದಿನ ನಿಮ್ನವರ್ಗಗಳು ಕೋರೆಗಾಂವ್ ಯುದ್ಧಸ್ಮಾರಕ ಭವನದಲ್ಲಿ ಕರೆದಿದ್ದ ಒಂದು ಸಭೆಯೊಂದಿಗೆ ಪ್ರಾರಂಭವಾಯಿತು. ಸಮಾರಂಭದಲ್ಲಿ ನಿಮ್ನವರ್ಗಗಳ ಪ್ರಮುಖ ನಾಯಕರುಗಳು ಭಾಗವಹಿಸಿದ್ದರು. ಆ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರು ತಿಳಿಸಿದ್ದೇನೆಂದರೆ, ನಿಮ್ನವರ್ಗದ ಸಮುದಾಯಕ್ಕೆ ಸೇರಿದ ನೂರಾರು ಮಂದಿ ಯೋಧರು ಬ್ರಿಟೀಷರ ಜೊತೆಯಲ್ಲಿ ಕಾದಾಡಿದರು. ಆದರೂ ಸಹ ಕೃತಜ್ಞತೆಯಿಲ್ಲದ ಬ್ರಿಟೀಷರು, ಕಾದಾಟ ಮುಗಿದ ನಂತರ ಅವರನ್ನು "ಮಿಲಿಟರಿಯಲ್ಲದ ಸಮುದಾಯ" ಎಂದು ಹಣೆಪಟ್ಟಿ ಕಟ್ಟಿದರು. ಇತ್ತಲಾಗಿ ಸವರ್ಣ ಹಿಂದೂಗಳು ಅವರನ್ನು ಅಸ್ಪೃಶ್ಯರೆಂದು ತುಚ್ಛವಾದವರೆಂದೂ ಕಂಡಿದ್ದರಿಂದ, ಜೀವನೋಪಾಯಕ್ಕೆ ಬೇರೆ ದಾರಿ ಇಲ್ಲದೆ ಅಂತಿಮ ಉಪಾಯವೆಂದು ಬ್ರಿಟೀಷರ ಜೊತೆ ಕಾದಾಟಕ್ಕೆ ಸೇರಿದ್ದರು. ಬ್ರಿಟೀಷರ ಈ ರಾಜನೀತಿಯನ್ನು ಪ್ರತಿಭಟಿಸಿ ಮಿಲಿಟರಿಗೆ ಸೇರಲು ಇದ್ದ ನಿಷೇದವನ್ನು ಕಿತ್ತು ಹಾಕಬೇಕೆಂದು ಸರ್ಕಾರವನ್ನು ಒತ್ತಾಯಿಸಬೇಕೆಂದು (ಅಂಬೇಡ್ಕರ್) ಕರೆಕೊಟ್ಟರು.

### ಕೋರೆಗಾಂವ್ ಯುದ್ಧ ಸ್ಮಾರಕದ ಪ್ರಾಮುಖ್ಯತೆ

ಹೇಗಾದರೂ ಬ್ರಿಟೀಷ್ ಸೈನ್ಯದಲ್ಲಿ ಹಿಂದೆ ಪ್ರವೇಶ ಪಡೆದ ಅಸ್ಪೃಶ್ಯರಿಗೆ ತಮ್ಮ ಪರಾಕ್ರಮವನ್ನು ಮೆರೆಯಲು ಒಂದು ಅವಕಾಶ ಸಿಕ್ಕಿದಂತಾಗಿತ್ತು. ಬ್ರಿಟೀಷ್ ಅಧಿಕಾರಿಗಳು ಅವರ ಬಗ್ಗೆ ಪ್ರಶಂಸೆಯ ಮಳೆಗರೆದಿದ್ದರು. ಜನರಲ್ ಮ್ಯಾಲ್‌ಕೋಲ್ಮ್ ಬೊಂಬಾಯಿನ ಅಧಿಕಾರಿಗಳನ್ನು ಮತ್ತು ಸಿಪಾಯಿಗಳನ್ನು ಅವರ ನಿಷ್ಠೆಗೆ, ಸ್ವಾಮಿಭಕ್ತಿಗೆ ಹೊಗಳಿದ್ದನ್ನು ೧೮೧೬ರಲ್ಲಿ ನಿರ್ದೇಶಕರ ಮಂಡಲಿಯ ಕಾರ್ಯದರ್ಶಿಯವರಿಗೆ ಬರೆಯುತ್ತಾ, ಬೊಂಬಾಯಿ ಸೈನ್ಯದಲ್ಲಿ ಎಲ್ಲ ವರ್ಗಗಳ, ಎಲ್ಲಾ ಧರ್ಮಗಳ ಅಂದರೆ–ಹಿಂದೂಗಳು, ಮುಸಲ್ಮಾನರು, ಯಹೂದಿಗಳು ಮತ್ತು ಕ್ರಿಶ್ಚಿಯನ್‌ರು ಇದ್ದಾರೆಂದು ದೃಢೀಕರಿಸಿದ್ದರು. ಮಹಾರಾಷ್ಟ್ರದ ಹಿಂದೂಗಳಲ್ಲಿ ಪಾರ್‌ವರಿಗಳು (ಮಹರ್‌ಗಳು), ರಜಪೂತರು ಇತರ ಮೇಲ್ಜಾತಿಯವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಈ ಪಾರ್‌ವರಿಗಳು ಬೊಂಬಾಯಿಯ ದಕ್ಷಿಣ ತೀರಪ್ರದೇಶದಿಂದ ಬಂದವರಾಗಿದ್ದರು. ಬೊಂಬಾಯಿಯ ಸೈನ್ಯದ ಈ ಮಹರ್ ಸಿಪಾಯಿಗಳ ಬಗ್ಗೆ ಬಹಳಷ್ಟು ಮೆಚ್ಚಿಗೆಯ ಮಾತುಗಳು ಬಂದಿದ್ದವು. ಅವರು ಸಂಚಲನ ಮಾಡುವಾಗಿನ ಕಾಠಿಣವನ್ನು, ತೀವ್ರತೆಯನ್ನು, ಕೊರತೆಯಿದ್ದ ರೇಷನ್(ಆಹಾರಧಾನ್ಯ), ಮನುಷ್ಯರು ಮತ್ತು ಪ್ರಾಣಿಗಳನ್ನು ಹೆಚ್ಚಾಗಿ ಕಾಡುತ್ತಿದ್ದ ಖಾಯಿಲೆ ಇವುಗಳನ್ನು ಸಹಿಸಿಕೊಂಡು ಮುನ್ನಡೆಯುತ್ತಿದ್ದರು. ಮುನ್ನುಗ್ಗುತ್ತಿರಲಿ, ಇಲ್ಲವೇ ಶತೃಗಳು ಅವರನ್ನು ಸುತ್ತುವರೆದಿರಲಿ, ಇಲ್ಲವೇ ಯುದ್ಧ ಕೈದಿಗಳಾಗಿ ಬಂಧಿಸಿರಲಿ, ಇಲ್ಲವೇ ಕೋಟೆಕೊತ್ತಲಗಳಿಗೆ ಮುತ್ತಿಗೆ ಹಾಕುತ್ತಿರಲಿ, ಇಲ್ಲವೇ ಯುದ್ಧತಂತ್ರಕ್ಕಾಗಿ ಹಿಂದೆ ಸರಿಯುತ್ತಿರಲಿ, ಅವರು ಯಾವಾಗಲೂ ತಮ್ಮ ಅಧಿಕಾರಿಗಳ ಹಾಗೂ ಮಿತ್ರರ ಜೊತೆ ನಿಶ್ಚಲವಾಗಿ, ದೃಢವಾಗಿ ನಿಲ್ಲುತ್ತಿದ್ದರು. ತಮ್ಮ ರೆಜಿಮೆಂಟಿನ ಗೌರವ ಪ್ರತಿಷ್ಠೆಯನ್ನು ಕಾಪಾಡಿಕೊಂಡು ಬರುತ್ತಿದ್ದರು. ೧೮೧೮ನೆಯ ಇಸವಿಯ ಹೊಸ ವರ್ಷದ ಆರಂಭದ ದಿನ ಮಹರ್‌ಗಳು ಕಿರೀಟಪ್ರಾಯವಾದ ಅತಿಶಯ ಕೀರ್ತಿಯನ್ನು ಪಡೆದುಕೊಂಡರು. ಮೇಲೆ ಸುಡುಬಿಸಿಲು, ಕೆಳಗೆ ನೀರು ಇಂಗಿ ಬಿರುಕುಬಿಟ್ಟ ನೆಲದ

ಭೀಮಾ ನದಿಯ ದಡದ ಪಕ್ಕದ ಕೋರೆಗಾಂವ್‌ನ ಯುದ್ಧ ಭೂಮಿಯಲ್ಲಿ ಈ ಕೀರ್ತಿ ಅವರಿಗೆ ದಕ್ಕಿತ್ತು. ಇವರಿಗೆ ಇದ್ದದ್ದು ಐನೂರು ಜನ ಸೈನಿಕರಿದ್ದ ಸಣ್ಣದೊಂದು ಸೇನೆ. ಈ ಸೇನೆ ಬೊಂಬಾಯಿಯ ನೇಟಿವ್ ಪದಾತಿ ದಳದ ೧ನೇ ರೆಜಿಮೆಂಟಿನ ೨ನೇ ಬೆಟಾಲಿಯನ್‌ಗೆ ಸೇರಿದ್ದ ಒಂದು ತುಕಡಿ. ಜೊತೆಗೆ ಇದ್ದುದು ೨೫೦ ಜನರಿದ್ದ ಪೂನಾದ ಅಶ್ವಾರೋಹಿಗಳು. ಅವರ ಹತ್ತಿರ ಇದ್ದ ಆಯುಧಗಳೆಂದರೆ ಎರಡು ೬ ಪೌಂಡರ್ ಬಂದೂಕುಗಳು, ಮದರಾಸು ಫಿರಂಗಿ ದಳಕ್ಕೆ ಸೇರಿದ ೨೪ ಐರೋಪ್ಯ ಗನ್‌ರುಗಳು. ಇವರುಗಳೆಲ್ಲರ ದಳಪತಿ ಕ್ಯಾಪ್ಟನ್ ಎಫ್.ಎಫ್.ಸ್ಟಾಂಟನ್. ಇವರು ಎದುರಿಸುತ್ತಿದ್ದುದು ಪೇಶ್ವೆ ಎರಡನೆ ಬಾಜೀರಾಯನ ೨೦,೦೦೦ ಅಶ್ವಾರೋಹಿ ದಳ ಮತ್ತು ೮೦೦೦ ಪದಾತಿ ದಳ. ಈ ಬಾಜೀರಾಯನ ಸೇನೆ, ಕಿರ್ಕೀ(Kirkee) ಮತ್ತು ಪೂನಾದಲ್ಲಿದ್ದ ಬ್ರಿಟೀಷರ ಸೇನಾ ಪಾಳಯಕ್ಕೆ ಮುತ್ತಿಗೆ ಹಾಕಲು ಸಜ್ಜಾಗಿತ್ತು. ಇಂಥ ಬೃಹತ್ ಸೇನೆಯೊಂದಿಗೆ ಕ್ಯಾಪ್ಟನ್ ಸ್ಟಾಂಟನ್‌ನ ಚಿಕ್ಕಸೇನೆ ನೀರು, ಆಹಾರವಿಲ್ಲದೆ ಏಕ ಪ್ರಕಾರವಾಗಿ ಹನ್ನೆರಡು ಗಂಟೆಗಳ ಕಾಲ ಸೆಣಸಿತ್ತು.

ಪೂನಾದಲ್ಲಿದ್ದ ಸೇನಾ ಪಾಳಯವನ್ನು ರಕ್ಷಿಸಲು ಕ್ಯಾಪ್ಟನ್ ಸ್ಟಾಂಟನ್‌ನ ತುಕಡಿಯನ್ನು ಹಿಂದಿನ ದಿನ ಅಂದರೆ ೩೧ನೇ ಡಿಸೆಂಬರ್ ತಿಂಗಳ ಸಾಯಂಕಾಲ ಸಿರೂರಿನಿಂದ ತುರ್ತಾಗಿ ಕರೆಸಲಾಗಿತ್ತು. ಇಡೀ ರಾತ್ರಿ ಸಂಚಲನ ಮಾಡುತ್ತಾ ೨೭ ಮೈಲಿ ದೂರವನ್ನು ಕ್ರಮಿಸಿ ಈ ತುಕಡಿ ೧೮೧೮ನೆ ಜನವರಿ ೧ನೇ ತಾರೀಖಿನ ಬೆಳಗ್ಗೆ ಕೋರೆಗಾಂವ್‌ಗೆ ಬಂದು ಸೇರಿತ್ತು. ಅಲ್ಲಿ ಅದಕ್ಕೆ ಗಾಬರಿ ಹುಟ್ಟಿಸುವ ಹಾಗೆ ಒಂದೊಂದರಲ್ಲಿ ೬೦೦ ಜನರಿದ್ದ ಪೇಶ್ವಾ ಪದಾತಿದಳದ ಮೂರು ತುಕಡಿಗಳು ಇದ್ದವು. ಕ್ಯಾಪ್ಟನ್ ಸ್ಟಾಂಟನ್‌ನು ತನ್ನ ರಕ್ಷಣಾ ವ್ಯೂಹವನ್ನು ವ್ಯವಸ್ಥೆಗೊಳಿಸುವಷ್ಟರಲ್ಲಿಯೇ ಮೂರು ದಿಕ್ಕಿನಿಂದ ಮೂರು ತುಕಡಿಗಳು ಮುತ್ತಿಗೆ ಹಾಕಿದವು. ಅವರಿಗೆ ಬೆಂಬಲವಾಗಿ ಎರಡೂ ಬಂದೂಕುಗಳಿದ್ದವು. ಅಲ್ಲದೆ, ಅವರ ಮುನ್ನಡೆಗೆ ನೆರವಾಗಲು ರಾಕೆಟ್‌ಗಳು ಒಂದೇ ಸಮನೆ ಬೆಂಕಿ ಮಳೆಯನ್ನು ಸುರಿಸುತ್ತಿದ್ದವು. ಪೂನಾದ ಅಶ್ವದಳ ವೀರಾವೇಶದಿಂದ ಹೋರಾಡಿದರೂ, ಕೋರೆಗಾಂವ್‌ನಲ್ಲಿದ್ದ ಇಡೀ ಬ್ರಿಟೀಷ್ ದಳವನ್ನು ಮರಾಠರ ಅಶ್ವದಳ ಮತ್ತು ಪದಾತಿ ದಳ ಸುತ್ತುವರಿದಿತ್ತು. ಅವರಿಗೆ ಭೀಮಾನದಿಯನ್ನು ತಲುಪಲು ಇದ್ದ ಎಲ್ಲಾ ಮಾರ್ಗಗಳು ಮುಚ್ಚಿಹೋಗಿದ್ದವು. ಆಕ್ರಮಣ ಮಾಡುತ್ತಿದ್ದ ಮರಾಠರ ಸೇನೆ ಹೆಚ್ಚು ಸಂಖ್ಯೆಯಲ್ಲಿ ನುಗ್ಗಿ ಹಳ್ಳಿಯ ಮಧ್ಯಭಾಗಕ್ಕೆ ಬಂದು ಆಯಕಟ್ಟಿನ ಸ್ಥಳವನ್ನು ಹಿಡಿದುಕೊಂಡಿದ್ದವು. ಅಲ್ಲಿಂದ ಅವರನ್ನು ಕಾಲ್ತೆಗೆಯುವಂತೆ ಮಾಡಲು ಅಸಾಧ್ಯವಾಗಿತ್ತು. ಪ್ರತಿ ಗುಡಿಸಲಿಗೂ, ಮನೆಗಳಿಗೂ, ಬೀದಿಬೀದಿಗೂ ಕೈ ಕೈ ಮಿಲಾಯಿಸುವ ಕಾಳಗ ನಡೆಯುತ್ತಿತ್ತು. ಬ್ರಿಟೀಷರಿಗೆ ಭಾರಿ ನಷ್ಟ ಸಂಭವಿಸಿತು. ಆದರೂ ಅವರು

---

ಹುತಾತ್ಮರಾದ ಮಹರ್‌ಗಳು* (೧) ಸೋಮ್‌ನಾಕ್ ಕಮಲ್‌ನಾಕ್ ನಾಯಿಕ್ (೨) ರಾಮ್‌ನಾಕ್ ಯಮ್ನಾಕ್ ನಾಯಿಕ್ (೩) ಗೋಡ್‌ನಾಕ್ ಕೋತೆನಾಕ್ (೪) ರಾಮ್‌ನಾಕ್ ಯಶಾಕ್ (೫) ಭೋಗ್‌ನಾಕ್ ಹರ್‌ನಾಕ್ (೬) ಅಂಬನಾಕ್ ಕಾವನಾಕ್ (೭) ಗನ್ನಾಕ್ ಬಾಲ್‌ನಾಕ್ (೮) ಬಾಲ್‌ನಾಕ್ ಕೊಂಡ್‌ನಾಕ್ (೯) ರೂಪ್‌ನಾಕ್ ಲಖ್‌ನಾಕ್ (೧೦) ವಾಪ್‌ನಾಕ್ ರಾಮ್‌ನಾಕ್ (೧೧) ವಿಟ್‌ನಾಕ್ ಹಮ್‌ನಾಕ್ (೧೨) ರಾಗ್‌ನಾಕ್ ಗಾನ್‌ನಾಕ್ (೧೩) ವಾಪ್‌ನಾಕ್ ಹಾರ್‌ನಾಕ್ (೧೪) ರೈನಾಕ್ ಗಾನ್‌ನಾಕ್ (೧೫) ಗಜ್‌ನಾಕ್ ಧರ್ಮನಾಕ್ (೧೬) ದೇವ್‌ನಾಕ್ ಅಣ್‌ನಾಕ್ (೧೭) ಗೋಪಾಲ್‌ನಾಕ್ ಬಲ್‌ನಾಕ್ (೧೮) ಹರ್‌ನಾಕ್ ಹಿರ್‌ನಾಕ್ (೧೯) ಜೆಟ್‌ನಾಕ್ ಧೈನಾಕ್ (೨೦) ಗಣ್‌ನಾಕ್ ಲಖನಾಕ್ ಗಾಯಗೊಂಡ ಮಹರ್‌ಗಳ ಹೆಸರುಗಳು : (೨೧) ಜನನಾಕ್ (೨೨) ಭಾಕ್‌ನಾಕ್ ರತನ್‌ನಾಕ್ (೨೩) ರತನ್ ನಾಕ್‌ಧನ್‌ನಾಕ್

ಆಧಾರ : ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬಹಿಷ್ಕೃತ ಭಾರ್ತಾತಿಲ್ ಅಗ್ರಲೇಖ್(ಮರಾಠಿ) ಸಂಪಾದಕರು: ರತ್ನಾಕರ್ ಗಣ್‌ವೀರ್, ಪು.೨೪೭

ಹಿಂಜರಿಯಲಿಲ್ಲ. ಅವರೊಂದಿಗಿದ್ದ ಭಾರತದ ಸಿಪಾಯಿಗಳು ಅವರಲ್ಲಿ ಬಹಳಷ್ಟು ಮಂದಿ ಮಹರ್‌ಗಳು ಇದ್ದರು. ಪಟ್ಟು ಬಿಡದೆ ಸೆಣಸಿದರು. ಅವರ ಧೈರ್ಯ ಅತ್ಯದ್ಭುತವಾಗಿತ್ತು. ಕ್ಯಾಪ್ಟನ್ ಸ್ಟಾಂಟನ್ ತನ್ನ ಸೈನಿಕರನ್ನು ಕಡೆಯ ಸೈನಿಕನಿರುವವರೆಗೂ, ಕಡೆಯ ಗುಂಡು ಇರುವವರೆಗೂ, ಹೋರಾಡಿ ಎಂದು ಹೇಳಿದ್ದನು. ಮಹರ್ ಸೈನಿಕರು ನಿರ್ಭಯವಾಗಿ ಕಾದಾಡುತ್ತಾ ಅತ್ಯಂತ ಪರಾಕ್ರಮದಿಂದ ನಿರಾಶಾದಾಯಕ ಪರಿಸ್ಥಿತಿಯಲ್ಲೂ ಹೋರಾಟವನ್ನು ಮುಂದುವರೆಸಿದರು. ಸೂರ್ಯಾಸ್ತವಾಗುತ್ತಿದ್ದಂತೆ. ಬ್ರಿಟೀಷರು ಹತಾಶರಾಗಿದ್ದರು. ಸಮರ್ಥ ಸೇನಾಪತಿ ಗೋಖಲೆಯವರು ಮುನ್ನಡೆಸುತ್ತಿದ್ದ ಮರಾಠ ಸೈನ್ಯ ಎಲ್ಲ ದಿಕ್ಕಿನಲ್ಲೂ ಬ್ರಿಟೀಷರ ಮೇಲೆ ಮೇಲುಗೈ ಪಡೆದಿದ್ದರು. ಅದೃಷ್ಟವಶಾತ್ ರಾತ್ರಿಯಾಗುತ್ತಿದ್ದಂತೆ ಬ್ರಿಟೀಷರಿಗೆ ಕೊಂಚ ನೆಮ್ಮದಿ ಸಿಕ್ಕಿತು. ಮರಾಠಾ ದಳಗಳು ತಮ್ಮ ದಾಳಿಯನ್ನು ಸ್ವಲ್ಪಮಟ್ಟಿಗೆ ಸಡಿಲಗೊಳಿಸಿದರು. ಆಗ ಸಾಮಾನ್ಯವಾಗಿ ಯುದ್ಧಗಳಲ್ಲಿ ಸಂಭವಿಸುವ ಅನಿರೀಕ್ಷಿತ ಘಟನೆಗಳಲ್ಲೊಂದು, ವಿದ್ಯಮಾನಗಳಿಗೆ ಒಂದು ತಿರುವು ಕೊಟ್ಟಿತು. ಆ ರಾತ್ರಿ ೯ ಘಂಟೆಯ ಸುಮಾರಿಗೆ ಪೇಶ್ವೆಯ ಸೈನಿಕರು ಗುಂಡು ಹಾರಿಸುವುದನ್ನು ನಿಲ್ಲಿಸಿಬಿಟ್ಟರು. ಏಕೆ ನಿಲ್ಲಿಸಿದರು ಎಂದು ಹೇಳುವುದು ಕಷ್ಟ. ಗುಂಡು ಹಾರಿಸುವುದನ್ನು ನಿಲ್ಲಿಸಿ, ಕೈಗೆಟುಕುವಷ್ಟು ದೂರದಲ್ಲಿದ್ದ ವಿಜಯವನ್ನು ಬಿಟ್ಟು ಕೋರೆಗಾಂವ್‌ನಿಂದ ಹಿಂದೆ ಸರಿದರು. ಈ ಯುದ್ಧದಲ್ಲಿ ಮದರಾಸು ಫಿರಂಗಿ ದಳದ ೧೨ ಜನರು ಬೊಂಬಾಯಿ ನೇಟಿವ್ ಪದಾತಿದಳದ ೨/೧ನೇ ರೆಜ಼ಿಮೆಂಟಿನ ೫೦ ಮಂದಿ ಅಲ್ಲದೆ ೩ಜನ ಬ್ರಿಟೀಷ್ ಅಧಿಕಾರಿಗಳು ಅಸುನೀಗಿದ್ದರು. ೧೧೩ ಸಿಪಾಯಿಗಳು ಮತ್ತು ಇಬ್ಬರು ಬ್ರಿಟೀಷ್ ಅಧಿಕಾರಿಗಳಿಗೆ ಗಾಯವಾಗಿತ್ತು. ಬೊಂಬಾಯಿ ಪದಾತಿದಳದ ರೆಜ಼ಿಮೆಂಟಿನ ಸತ್ತ ಸಿಪಾಯಿಗಳಲ್ಲಿ ೨೨ ಮಂದಿ ಮಹರ್‌ಗಳು ಇದ್ದರು. ಅವರನ್ನು ಅವರ ಹೆಸರಿನ ಕಡೆಯಲ್ಲಿನ 'ನಾಕ್' ಎಂಬ ಪದದಿಂದ ಮಹರ್ ಎಂದು ಗುರುತಿಸಲಾಯಿತು. ಅಲ್ಲದೆ ೧೬ ಮಂದಿ ಮರಾಠರು, ೮ ಮಂದಿ ರಜಪೂತರು, ಇಬ್ಬರು ಮುಸ್ಲಿಮರು, ಒಂದಿಬ್ಬರು ಬಹುಶಃ ಭಾರತದ ಯೂಹೂದಿಗಳಿದ್ದರು.

ಇವರ ಶೌರ್ಯ, ಪರಾಕ್ರಮ, ಧೈರ್ಯ ಶಿಸ್ತುಬದ್ಧ ನಿರ್ಭೀತಿಯ ಹೋರಾಟ ಮತ್ತು ಮೆಚ್ಚತಕ್ಕ, ಎಂದಿಗೂ ಕುಗ್ಗದ [೧] ಎದೆಗಾರಿಕೆ ಇವುಗಳು ಮಹರ್ ಸೈನಿಕರಿಗೆ ಶಾಶ್ವತವಾದ ಪ್ರಖ್ಯಾತಿಯನ್ನು ತಂದುಕೊಟ್ಟವು. ಈ ಅತಿಶಯದ ಕೀರ್ತಿ ಹೆಚ್ಚು ಸಲ್ಲಬೇಕಾದುದು ಭಾರತದ ಸೈನಿಕರಿಗೋ, ಇಲ್ಲವೇ ಅವರಲ್ಲಿ ಇಂಥ ನಂಬಿಕೆ ವಿಶ್ವಾಸಾರ್ಹತೆ ಮತ್ತು ಅತ್ಯಾಶ್ಚರ್ಯಕರವಾದ [೨] ನಿಷ್ಠೆಯನ್ನು ತುಂಬಿದ ಬ್ರಿಟೀಷ್ ಅಧಿಕಾರಿಗಳಿಗೋ ಎಂದು ಹೇಳುವುದು ಕಷ್ಟ (ಭಾರತದ ಅನೇಕ ಸೈನಿಕರುಗಳು ಮಹರ್‌ಗಳಾಗಿದ್ದರು) ಅನತಿ ಸಮಯದಲ್ಲಿ ಕೋರೆಗಾಂವ್ ಯುದ್ಧದ ಅಗಾಧವಾದ ಪ್ರಾಮುಖ್ಯತೆಯನ್ನು ಮನಗಾಣಲಾಯಿತು. ಕೋರೆಗಾಂವ್‌ನಲ್ಲಿ ಮೊದಲು ಗುಂಡು ಹಾರಿಸಿದ ಜಾಗದಲ್ಲಿಯೇ ಶಿಲಾವೇದಿಕೆಯ ಮೇಲೆ ೬೫ ಅಡಿ ಎತ್ತರದ ಸ್ಮಾರಕವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. [೩] ಈ ಸ್ಮಾರಕದ ಶಿಲಾನ್ಯಾಸವನ್ನು ೨೬ ಮಾರ್ಚ ೧೮೨೧ರಂದು

---

(೧) ಬ್ರಿಗೇಡಿಯರ್ ಲಯೋನೆಲ್ ಸ್ಮಿತ್ ಅವರು ಪೂನಾದ ರೆಸಿಡೆಂಟ್ ಅವರಿಗೆ ದಖನ್‌ನ ಸೇನಾದಂಡನಾಯಕರಿಗೆ ಮತ್ತು ಭಾರತ ಸರ್ಕಾರದ ಗವರ್ನರ್ ಜನರಲ್ ಅವರಿಗೆ, ಹಾಗೂ ಈಸ್ಟ್ ಇಂಡಿಯಾ ಕಂಪೆನಿಯ ನಿರ್ದೇಶಕರ ಮಂಡಲಿಗೆ ಕೊಟ್ಟ ವರದಿ.

(೨) ಮೇಜ಼ರ್ ಜನರಲ್ ಜೆ.ಟಿ.ಗೋರ್‌ಮನ್, ನಾಲ್ಕನೇ ಬೊಂಬಾಯಿ ಗ್ರೇನೇಡಿಯರ್ಸ್‌ನ ೩ನೇ ಬೆಟಾಲಿಯನ್ನಿನ ಚಾರಿತ್ರಿಕ ದಾಖಲೆ.

(೩) ಲೆಫ್ಟಿನೆಂಟ್ ಕರ್ನಲ್ ಹೆಚ್.ಇ.ಕೆನ್ಯನ್ **"ಕೋರೆಗಾಂವ್ ಕದನ"** (Battle of Koregoan)
ಯುನೈಟೆಡ್ ಸರ್ವಿಸಸ್ ಜರ್ನಲ್ ೧೯೩೧.

ನೆರವೇರಿಸಲಾಯಿತು. ಈ ಕಂಬ ಸೈನಿಕದಳದ ಪರಾಕ್ರಮದ ದ್ಯೋತಕವಾಯಿತು. ಯಾರ ಪರಾಕ್ರಮಭರಿತ ಅಚಲ ಶ್ರದ್ಧೆ ಮತ್ತು ಸಮರ್ಪಣಾಭಾವ ಆ ದಿನದ ಕೀರ್ತಿಯನ್ನು ತಂದುಕೊಟ್ಟಿತೋ ಆ ಶೂರ ಸೈನಿಕರ ನೆನಪನ್ನು ಶಾಶ್ವತಗೊಳಿಸಲು, ಆ ಕದನದಲ್ಲಿ ಅಸುನೀಗಿದ ಮತ್ತು ಗಾಯಗೊಂಡವರ ಹೆಸರನ್ನು ಆ ಕಂಬದ ಮೇಲೆ ಕೆತ್ತಿಸಲು ನಿರ್ಧರಿಸಲಾಯಿತು. ೧೮೫೧ರಲ್ಲಿ ಒಂದು ವಿಶೇಷ ಪದಕವನ್ನು ಸಹ ಬಿಡುಗಡೆ ಮಾಡಲಾಯಿತು. ಆ ಪದಕದ ಮೇಲೆ 'ಭಾರತದ ಸೇನೆಗೆ' ಮತ್ತು ಎರಡು ಕೊಂಡಿಗಳ ಮೇಲೆ 'ಕಿರ್ಕೀ'(Kirkee) ಮತ್ತು 'ಕೋರೆಗಾಂವ್' ಎಂದೂ ಸಹ ಕೆತ್ತಿಸಲಾಯಿತು.[೧]

ಮಹರ್‌ಗಳು ಬೊಂಬಾಯಿ ಸೇನೆಯಲ್ಲೇ ಮುಂದುವರೆದು ಅದರ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಿದ್ದವು. ಇದು ಅವರ ದುರ್ಜಯವಾದ ಪರಾಕ್ರಮಕ್ಕೂ ಮತ್ತು ನಿಶ್ಚಲವಾದ ಸಮರ್ಪಣಾಭಾವಕ್ಕೂ ಸಾಕ್ಷಿಯಾಯಿತು. ಅವರು ಗಂಭೀರವಾದ ಕದನಗಳಲ್ಲಿ ಯುದ್ಧ ಮಾಡಿ ತಮ್ಮ ಪರಾಮಕ್ರಮಕ್ಕಾಗಿ ಖ್ಯಾತಿಯನ್ನು ಸಂಪಾದಿಸಿದರು. ಖಾತಿಯ ವಾರ್ (೧೮೨೬), ಮುಲ್ತಾನ್ ಮತ್ತು ಗುಜರಾತ್ (೧೮೮೦) ಈ ಯುದ್ಧಗಳಲ್ಲಿ ಅವರು ಭಾಗವಹಿಸಿದ್ದರು. ಬೊಂಬಾಯಿ ಸೇನೆ ಭಾಗವಹಿಸಿದ್ದ ಯುದ್ಧಗಳೆಂದರೆ, ಮೊದಲನೆ ಮತ್ತು ಎರಡನೆ ಆಫ್ಘನ್ ಯುದ್ಧಗಳು. ಮೀನೀ ಕದನ (೧೮೪೩) ಮತ್ತು ೧೮೫೬–೫೭ರ ಪರ್ಷಿಯನ್ ಯುದ್ಧ[೨]. ಬೊಂಬಾಯಿ ಸೇನೆಯ ಸೈನಿಕರು, ೧೮೬೦ರಲ್ಲಿ ಚೀನಾಕ್ಕೂ, ೧೮೬೫ರಲ್ಲಿ ಏಡನ್‌ಗೂ ಹೋದರು. ತಮ್ಮ ನಾಯಕತ್ವದಲ್ಲಿ ಯುದ್ಧ ಮಾಡಿದ ೨೫ನೆ ಬಾಂಬೆ ನೇಟಿವ್ ಪದಾತಿ ದಳ ಸಿಂಧ್ ಯುದ್ಧದಲ್ಲಿ ತೋರಿದ ಗಮನಾರ್ಹವಾದ ಸಾಧನೆಯನ್ನು ಮಾಗ್‌ಡಲಾದ ಸರ್ ಚಾರ್ಲ್ಸ್ ನೇಪಿಯರ್ ಅವರು ಎಂದಿಗೂ ಮರೆಯಲೇ ಇಲ್ಲ. ಬೊಂಬಾಯಿ ಸೈನಿಕನನ್ನು ಯಾವಾಗಲೂ ಹೊಗಳುತ್ತಿದ್ದರು. 'ನಾನು ಬೊಂಬಾಯಿ ಸೈನ್ಯವನ್ನು ಬಹುವಾಗಿ ಪ್ರೀತಿಸುತ್ತೇನೆ. ಅದರ ಸಿಪಾಯಿಗಳ ಬಗ್ಗೆ ನನಗೆ ಎಂದೆಂದಿಗೂ ಮೆಚ್ಚಿಗೆ ಇದೆ.' ಬೊಂಬಾಯಿ ಸೈನ್ಯದಲ್ಲಿದ್ದ ಮಹರ್‌ಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗುತ್ತಾ, ಸಮೀಪದ, ದೂರದ ರಣರಂಗಗಳಲ್ಲಿ ತಮ್ಮ ಪರಾಕ್ರಮದ ಛಾಪನ್ನು ಮೂಡಿಸುತ್ತಿದ್ದರು. ಎರಡನೇ ಆಫ್ಘನ್ ಯುದ್ಧದ ಸಂದರ್ಭದಲ್ಲಿ (೧೮೭೮–೧೮೯೫) ಮಹರ್ ಸೈನಿಕ ಅವನ ಅಸಾಧಾರಣ ಶೌರ್ಯಕ್ಕಾಗಿ ಬಹುವಾದ ಮೆಚ್ಚಿಗೆಯನ್ನು ಪಡೆದುಕೊಂಡ. ಇವನ ಶೌರ್ಯ, ಕೋರೆಗಾಂವ್‌ನಲ್ಲಿ ನಡೆದ ಯುದ್ಧದಲ್ಲಿ ಮಹರ್‌ಗಳು ತೋರಿದ ನಿರ್ಭೀತಿ, ಛಲ, ಎದೆಗುಂದದಿರುವಿಕೆಯನ್ನು ನೆನಪಿಗೆ ತರುತ್ತಿತ್ತು. ಸಿಪಾಯಿ ಸೊನ್ನಾಕ್ ಟನ್ನಾಕ್ ತನ್ನ ಅತ್ಯುತ್ತಮ ಮಟ್ಟದ ಶೌರ್ಯಕ್ಕೊಂದು ನಿದರ್ಶನವಾದ ಬೊಂಬಾಯಿಯ ವಾಡ್‌ಬಿ ರಸ್ತೆಯಲ್ಲಿ ಸ್ಥಾಪಿಸಿರುವ ಫಲಕವೊಂದರಲ್ಲಿ ಇದನ್ನು ದಾಖಲಿಸಲಾಗಿದೆ. ಆ ಫಲಕದ ಮೇಲೆ ಹೀಗೆ ಬರೆಯಲಾಗಿದೆ.

---

(೧) ಇದು ಈಸ್ಟ್ ಇಂಡಿಯಾ ಕಂಪನಿಯ ಭಾರತದ ಸೈನ್ಯಕ್ಕಾಗಿ, ಬ್ರಿಟೀಷರಿಂದ ಕೊಡಮಾಡಲ್ಪಟ್ಟ ಮೊಟ್ಟಮೊದಲ ಭಾರತೀಯ ಪದಕ

(೨) ಈ ಪರ್ಷಿಯನ್ ಯುದ್ಧದ ಸಂದರ್ಭದಲ್ಲೇ ಭಾರತದ ಸೈನ್ಯದ ಮೊದಲನೇ ವಿಕ್ಟೋರಿಯಾ ಕ್ರಾಸ್ ಅನ್ನು ೩೦ನೆಯ ಬಾಂಬೆ ನೇಟಿವ್ ಇನ್‌ಫೆಂಟ್ರಿಗೆ (೧೨೦ನೆ ರಾಜ್ ಪುಟಾಣ ರೈಫಲ್ಸ್ ಸೇರಿದ ಕ್ಯಾಪ್ಟನ್ ಜೆ.ಎ.ವುಡ್ ಅವರು ಗೆದ್ದುಕೊಂಡರು. ಅದೇ ಪದಾತಿ ದಳದ ಸುಬೇದಾರ್ ಮೇಜರ್ ಮೊಹಮ್ಮದ್ ಶರೀಫ್ ಮತ್ತು ಸಿಪಾಯಿ ಬೀರ್ ಭಟ್ ಅವರ ಹೆಸರುಗಳನ್ನು ಆ ಪುರಸ್ಕಾರಕ್ಕಾಗಿ ಶಿಫಾರಸ್ಸು ಮಾಡಲಾಗಿತ್ತು. ಆದರೆ ಅದನ್ನು ಅವರಿಗೆ ಕೊಡಲಿಲ್ಲ. ಕಾರಣವೇನೆಂದರೆ, ಅಕ್ಟೋಬರ್ ೧೧ರವರೆಗೆ ವಿಕ್ಟೋರಿಯ ಕ್ರಾಸ್‌ಅನ್ನು ಪಡೆಯಲು ಭಾರತದ ಸೈನಿಕರಿಗೆ ಅರ್ಹತೆಯಿರಲಿಲ್ಲ.

(೩) ಎಂದೆಂದಿಗೂ ಮುಂಚೂಣಿಯಲ್ಲಿ ಮಹರ್ ರೆಜಿಮೆಂಟಿನ ಚರಿತ್ರೆ – ವಿ ಲಾಂಗೆರ್ ಪುಟ–೧೨–೧೫.

"ಈ ರಸ್ತೆಗೆ ಮೇಜರ್ ಸಿಡ್ನಿ ಜೇಮ್ಸ್ ವಾಡ್‌ಬಿಯವರ ಹೆಸರನ್ನು ಇಡಲಾಗಿದೆ. ಇವರು ಸಿಪಾಯಿ ಇಲಾಹಿ ಬಕ್ಷ್ ಮತ್ತು ಸಿಪಾಯಿ ಸೊನ್ನಾಕ್ ಟನ್ನಾಕ್ ಇವರೆಲ್ಲರೂ ೧೯ನೇ ಬೊಂಬಾಯಿ ಪದಾತಿ ದಳಕ್ಕೆ ಸೇರಿದವರು. ಆಫ್ಘಾನಿಸ್ತಾನದ ಡಬ್ರಾಯಿ ಠಾಣೆಯನ್ನು ರಕ್ಷಿಸಲು ಹೋರಾಡಿ ೧೬.೦೪.೧೮೮೦ರಲ್ಲಿ ಅಸು ನೀಗಿದರು. ಈ ಠಾಣೆಯ ಮೇಲೆ ಇನ್ನೇನು ಆಕ್ರಮಣವಾಗಲಿದೆಯೆಂದು ಎಚ್ಚರಿಕೆ ನೀಡಿದಾಗ್ಯೂ ೩೦೦ಕ್ಕೂ ಹೆಚ್ಚು ಸೈನಿಕರಿದ್ದ ಶತೃ ಸೇನೆಯನ್ನು ಎದುರಿಸಿ ಅನೇಕರನ್ನು ಕೊಂದು ತಮ್ಮಲ್ಲಿದ್ದ ಮದ್ದುಗುಂಡುಗಳು ಮುಗಿದು ಹೋದಾಗ, ಶತೃಗಳ ಮಧ್ಯೆ ನುಗ್ಗಿ ಮೂರು ಘಂಟೆಗಳ ಕಾಲ ಹೋರಾಡುತ್ತ ಪ್ರಾಣಬಿಟ್ಟರು. ಇವರ ಈ ಶೌರ್ಯ ಪ್ರದರ್ಶನವನ್ನು ಗೌರವಿಸುವುದಕ್ಕಾಗಿ ಈ ಫಲಕವನ್ನು ಈ ರೆಜಿಮೆಂಟು ಸ್ಥಾಪಿಸಿದೆ.[೩]

೧೮೧೮ನೆಯ ಇಸವಿಗೆ ಮುಂಚೆ, ಪೇಷ್ವೆಗಳ ಆಡಳಿತದ ಕೆಳಗೆ ಮಹರ್ ಸಮುದಾಯದ ಸಾಮಾಜಿಕ ಸ್ಥಿತಿಗತಿಯನ್ನು ವಿವರಿಸುತ್ತಾ, ಡಾ.ಅಂಬೇಡ್ಕರ್ ಅವರು ಹೀಗೆ ಹೇಳುತ್ತಾರೆ : "ಮರಾಠ ರಾಜ್ಯದಲ್ಲಿ ಪೇಷ್ವೆಗಳ ಆಡಳಿತದ ಕೆಳಗೆ, ಹಿಂದುವೊಬ್ಬ ದಾರಿಯಲ್ಲಿ ನಡೆದು ಬರುತ್ತಿದ್ದರೆ, ಅಸ್ಪೃಶ್ಯನೊಬ್ಬ ಆ ರಸ್ತೆಯಲ್ಲಿ ಓಡಾಡುವ ಹಾಗಿರಲಿಲ್ಲ. ಕಾರಣ ಅವನ ನೆರಳು ಬಿದ್ದರೆ ಹಿಂದು ಕಲುಷಿತನಾಗುತ್ತಾನೆಂದು. ಅಸ್ಪೃಶ್ಯನೊಬ್ಬ ಅವನ ಮಣಿಕಟ್ಟಿನ ಮೇಲಾಗಲೀ, ಇಲ್ಲವೇ ಕುತ್ತಿಗೆಯ ಮೇಲಾಗಲೀ ಒಂದು ಕಪ್ಪುದಾರವನ್ನು ಧರಿಸಬೇಕಾಗಿತ್ತು. ಅಚಾತುರ್ಯದಿಂದ ಹಿಂದುವೊಬ್ಬ ಅವನನ್ನು ಮುಟ್ಟಿ ಕಲುಷಿತನಾಗುವುದನ್ನು ತಪ್ಪಿಸುವುದು ಇದರ ಉದ್ದೇಶವಾಗಿತ್ತು ಮತ್ತು ಅಸ್ಪೃಶ್ಯನೊಬ್ಬ ತಾನು ಎಲ್ಲಿ ಹೋದರೂ ಮಡಕೆಯೊಂದನ್ನು ತನ್ನ ಕುತ್ತಿಗೆಗೆ ನೇತು ಹಾಕಿಕೊಂಡು ಹೋಗಬೇಕಾಗಿತ್ತು. ಇದು ಅವನ ಉಗುಳು ನೆಲಕ್ಕೆ ಬಿದ್ದು ಅದನ್ನು ಹಿಂದುವೊಬ್ಬ ತುಳಿದು ಕಲುಷಿತನಾಗುವುದನ್ನು ತಡೆಯುವ ಉದ್ದೇಶವಾಗಿತ್ತು. ಪೇಷ್ವೆಗಳ ರಾಜಧಾನಿಯಾದ ಪುಣೆಯಲ್ಲಿ ಅಸ್ಪೃಶ್ಯನೊಬ್ಬ ತನ್ನ ಸೊಂಟದಿಂದ ಕೆಳಗೆ ಒಂದು ಪರಕೆಯನ್ನು ತೂಗುಹಾಕಿಕೊಳ್ಳಬೇಕಾಗಿತ್ತು. ಇದು ಸಹ ಅವನು ತುಳಿದ ಮಣ್ಣನ್ನು ತುಳಿದು ಹಿಂದುವೊಬ್ಬ ಕಲುಷಿತನಾಗುವುದನ್ನು ತಪ್ಪಿಸುವ ಉದ್ದೇಶವಾಗಿತ್ತು.[೧]

---

(೧) ಬರೆಹಗಳು ಮತ್ತು ಭಾಷಣಗಳು ೧ನೆ ಸಂಪುಟ ಪು. ೩೯

# ೨

# ಮಾನವನೊಬ್ಬನ ಮೌಲ್ಯ ಸ್ವತಃಸಿದ್ಧ ಪ್ರಮಾಣವಾದುದು ಮತ್ತು ಸ್ವಯಂವೇದ್ಯವಾದುದು

ನಾಸಿಕ್ ಪಟ್ಟಣ ಹಿಂದೂಗಳ ಯಾತ್ರಾಸ್ಥಳಗಳಲ್ಲಿ ಒಂದು. ೧೮ನೆಯ ಜನವರಿ ೧೮೮೨ರಂದು ನಾಸಿಕದ ಹತ್ತಿರ ಇರುವ ತ್ರ್ಯಂಬಕ್‌ನಲ್ಲಿ ನಿಮ್ನವರ್ಗಗಳವರು ಒಂದು ಸಭೆಯನ್ನು ಕರೆದರು. ಅವರ ಶ್ರೇಷ್ಠಸಂತನಾದ ಚೊಕ್ಕವೇಲನ ಹೆಸರಿನಲ್ಲಿ ಒಂದು ದೇವಸ್ಥಾನವನ್ನು ನಿರ್ಮಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಈ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಡಾ.ಅಂಬೇಡ್ಕರ್ ಅವರನ್ನು ವಿಶೇಷವಾಗಿ ಆಮಂತ್ರಿಸಲಾಗಿತ್ತು. ಮಿ.ಬಿ.ಕೆ.ಗಾಯಕ್‌ವಾಡ್, ಭಾಲೇರಾವ್, ಪುಂಜಾಜಿ, ನವ್‌ಸಾಜಿ ಜಾಧವ್ ಮುಂತಾದವರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಇವರಲ್ಲದೇ ನಾಸಿಕದ ಮಿ.ದಾತಾರ್ ಶಾಸ್ತ್ರಿ, ಮಿ.ಮರಾಠೆ ಸ್ವರಾಜ್ಯ ಪತ್ರಿಕೆಯ ಸಂಪಾದಕರು ಮಿ.ವಾಡೇಕರ್, ಮಿ.ಥೋರಟ್ ಜಲಗಾಂವ್‌ನ ಮಿ.ಚೌಧರಿಯವರು ಕೂಡ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಅಂತಿಮ ಚರ್ಚೆಯಾದ ಮೇಲೆ ದೇವಸ್ಥಾನವೊಂದನ್ನು ಕಟ್ಟುವುದಕ್ಕೆ ಬದಲಾಗಿ ಅಸ್ಪೃಶ್ಯತೆಯನ್ನು ಕೊನೆಗೊಳಿಸಲು ಎಲ್ಲರೂ ಕಂಕಣಬದ್ಧರಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಸಭೆ ತೀರ್ಮಾನಿಸಿತು. ಸಂಗತಿಯೇನೆಂದರೆ, ದಲಿತರಿಗಾಗಿ ಬೇರೆ ದೇವಸ್ಥಾನಗಳನ್ನು ಕಟ್ಟುವುದಕ್ಕೆ ಡಾ.ಅಂಬೇಡ್ಕರ್ ಅವರು ತಮ್ಮ ಹೃದಯಾಂತರಾಳದಿಂದ ವಿರುದ್ಧವಾಗಿದ್ದರು. ಎರಡನೆಯದಾಗಿ, ಕಟ್ಟಡ ನಿರ್ಮಾಣದ ಖರ್ಚು ಒಂದು ದೊಡ್ಡ ಹೊರೆಯಾಗಿ ಬಿಡುತ್ತಿತ್ತು. ಮೂರನೆಯದಾಗಿ, ಡಾ.ಅಂಬೇಡ್ಕರ್ ಅವರು ವಿಗ್ರಹಾರಾಧನೆಗಿಂತ ಪ್ರಯೋಜನಕಾರಿ ಕೆಲಸಗಳಿಗೆ ಒತ್ತುಕೊಟ್ಟಿದ್ದರು.

ಡಾ.ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಮಹಾರಾಷ್ಟ್ರದ (೧೩೦೦–೧೬೦೦) ಸಂತಕವಿಗಳು ಭಾಗವತ ಧರ್ಮಕ್ಕೆ ಸೇರಿದವರಾಗಿದ್ದು, ಜಾತಿ ಪದ್ಧತಿಯ ವಿರುದ್ಧ ನೇರವಾಗಿ ಬೋಧನೆ ಮಾಡಲಿಲ್ಲ. ಒಂದು ಜಾತಿಯು ಇತರ ಜಾತಿಗಳ ಮೇಲೆ ಅಧಿಕಾರವನ್ನು ಚಲಾಯಿಸುವುದಕ್ಕೆ ಸಾಮಾಜಿಕ ಅಸಮಾನತೆಯನ್ನು ಮತ್ತು ಸಾಮಾಜಿಕ ಅನ್ಯಾಯವನ್ನು ಹೇರಿರುವುದನ್ನು ಈ ಜಾತಿವ್ಯವಸ್ಥೆ ಪ್ರತಿಪಾದನೆ ಮಾಡುತ್ತಿತ್ತು. ಈ ಸಂತಕವಿಗಳ ಪರಿಶ್ರಮವೆಲ್ಲಾ ಸಮಾನತೆಯನ್ನು ಸ್ಥಾಪಿಸುವುದಕ್ಕೆ ಅಂದರೆ ವ್ಯಕ್ತಿಗತವಾಗಿ ಬ್ರಾಹ್ಮಣ ಮತ್ತು ಶೂದ್ರನ ನಡುವೆ ಅಲ್ಲ, ಆದರೆ ದೈವಭಕ್ತರಾಗಿದ್ದ ಬ್ರಾಹ್ಮಣ ಮತ್ತು ಶೂದ್ರನ ನಡುವೆ ಸೆಣಸಾಟದಲ್ಲಿ ಅವರಿಗೆ ಜಯ ದೊರಕಿತು. ಹೀಗಾಗಿ, ಬ್ರಾಹ್ಮಣನೊಬ್ಬ ಇನ್ನೊಬ್ಬನು ಯಾವುದೇ ಜಾತಿಗೆ ಸೇರಿರಲಿ, ಭಕ್ತನಾದವನ ಹಿರಿಮೆಯನ್ನು ಒಪ್ಪಿಕೊಳ್ಳಲೇಬೇಕಾಯಿತು. ಕಡೆಯದಾಗಿ, ಡಾ. ಅಂಬೇಡ್ಕರ್ ಅವರು ತಮ್ಮ ಅಧ್ಯಕ್ಷ ಸ್ಥಾನದಿಂದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅವರು ಹೇಳಿದ್ದು : ಜಾತಿಯ ಮೂಲೋಚ್ಚಾಟನೆ ಮಾಡುವ ದೃಷ್ಟಿಯಿಂದ ಸಂತರುಗಳ ಸೆಣಸಾಟ ಸಮಾಜದ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಮಾನವನ ಮೌಲ್ಯ ಸ್ವತಃಸಿದ್ಧವಾದುದು ಮತ್ತು ಸ್ವಯಂವೇದ್ಯವಾದುದು; ಅದು ಅವನಿಗೆ ಭಕ್ತಿಗೆ ಚಿನ್ನದ ಮೆರುಗನ್ನು ಕೊಟ್ಟ ಕಾರಣದಿಂದ ಬರಲಿಲ್ಲ. ಸಂತರು ವಾಸ್ತವವನ್ನು ಸಾಧಿಸಲು ಪ್ರಯತ್ನಿಸಲಿಲ್ಲ. ಬದಲಾಗಿ ಅವರ ಸೆಣಸಾಟ ನಿಮ್ನವರ್ಗದವರ ಮೇಲೆ ಆರೋಗ್ಯಕರವಲ್ಲದ ಪರಿಣಾಮವನ್ನು ಬೀರಿತು. ಇದರಿಂದಾಗಿ

ಅವರನ್ನು ಸುಮ್ಮನಾಗಿಸಲು ಬ್ರಾಹ್ಮಣರಿಗೊಂದು ನೆಪ ಸಿಕ್ಕಿತು. ಚೊಕ್ಕವೇಲನ ಅಂತಸ್ತನ್ನು ಅವರು ಅಂದರೆ ದಲಿತರು ಮುಟ್ಟಿದರೆ, ಅವರಿಗೂ ಅದೇ ಗೌರವ ಸಿಗುತ್ತದೆ ಎಂದು ಹೇಳಿದರು. ಬೇರೆ ಬೇರೆ ಪಂಥಗಳ ಅನುಯಾಯಿಗಳು ತಮ್ಮದೇ ಆದ ಪೂರ್ವಾಗ್ರಹಗಳಲ್ಲಿ ಮುಳುಗಿಹೋಗಿದ್ದ ಕಾರಣ ಸಮಾನತೆಯ ಸಂದೇಶ, ನ್ಯಾಯ ಮತ್ತು ಮಾನವೀಯತೆಗಳ ಕಡೆಗೆ ಅವರು ಕುರುಡಾಗಿ ಬಿಟ್ಟರು. ಜೊತೆಗೆ ತಮ್ಮ ನಂಬಲಸಾಧ್ಯವಾದ ಪವಾಡಗಳನ್ನು ಅತಿಯಾದ ಉತ್ಪ್ರೇಕ್ಷೆ ಮಾಡಿ ಬಣ್ಣಿಸಿದರು.

ರಾಮದಾಸರ ಪಂಥವನ್ನು ಕುರಿತಂತೆ ತಮ್ಮ ಹಿಂಬಾಲಕರು, ಅನುಷ್ಠಾನದ ಪ್ರಾರಂಭದಿಂದಲೇ ತಮ್ಮ ಜಾತಿಯ ಮೇಲಿನ ದುರಭಿಮಾನಕ್ಕಾಗಿ ಕುಖ್ಯಾತಿಯನ್ನು ಪಡೆದುಕೊಂಡಿದ್ದರು. ರಾಮದಾಸರ ಪ್ರಕಾರ ಅದರ (ಆ ಪಂಥದ) ಸ್ಥಾಪಕರೇ ಬ್ರಾಹ್ಮಣನೇ ಸರ್ವೋತ್ತಮನೆಂಬ ಭ್ರಾಂತಿಯಲ್ಲಿದ್ದರು. ಅವರ ಪ್ರಕಾರ ಅಧಃಪತನಗೊಂಡ ಬ್ರಾಹ್ಮಣ ಸ್ವರ್ಗದಲ್ಲಿಯಾಗಲೀ, ಭೂಮಿಯ ಮೇಲಾಗಲೀ ಇತರ ಜಾತಿಯವರಿಗಿಂತ ಉತ್ತಮನಾದವನು ಎಂದು, ಅದಿರಲಿ ಬ್ರಾಹ್ಮಣನೆಂದರೆ ದೇವತೆಗಳಿಂದ ಪ್ರಣಾಮ ಮಾಡಿಸಿಕೊಳ್ಳಬಲ್ಲವನಾಗಿದ್ದಾನೆ.

# ೩
# ನಾವು ಯೋಧರ ವಂಶಕ್ಕೆ ಸೇರಿದವರು

ರತ್ನಗಿರಿ ಜಿಲ್ಲಾ ಬಹಿಷ್ಕೃತ್ ಪರಿಷತ್ತಿನ ಎರಡನೇ ಅಧಿವೇಶನ ಬಹಿಷ್ಕೃತ್ ಸಮಾಜ ಸೇವಕ ಸಂಘದ ಆಶ್ರಯದಲ್ಲಿ ೧೩ನೇ ಏಪ್ರಿಲ್ ೧೯೨೯ರ ಶನಿವಾರ ಸಾಯಂಕಾಲ ೪.೩೦ ಗಂಟೆಗೆ ಚಿಪ್ಲೂನ್‌ನಲ್ಲಿ ನಡೆಯಿತು. ಅದರ ಅಧ್ಯಕ್ಷತೆಯನ್ನು ಡಾ.ಅಂಬೇಡ್ಕರ್ ವಹಿಸಿದ್ದರು. "ಸಮತಾ"ಪತ್ರಿಕೆಯ ಸಂಪಾದಕರಾದ ದೇವರಾವ್ ನಾಯಕ್, ಎಸ್.ಎನ್,ಶಿವತಾರ್‌ಕರ್. ಡಿ.ವಿ.ಪ್ರಧಾನ್, ಎಸ್.ಎಸ್.ಗುಪ್ತೆ, ಬಿ.ಆರ್.ಕಡ್ರೇಕರ್ ಇವರುಗಳು ಸಹ ಸಮ್ಮೇಳನದಲ್ಲಿ ಭಾಗಿಯಾಗಿದ್ದರು.[೧]

ಸಮ್ಮೇಳನ ನಡೆದ ಸಮಯದಲ್ಲಿ ಪರಿಸ್ಥಿತಿ ಬಿಗುವಾಗಿತ್ತು. ಸಮ್ಮೇಳನದ ಪೆಂಡಾಲ್‌ನ್ನು ನಿರ್ಮಿಸಲು ಬೇಕಾದ ಸ್ಥಳವನ್ನು ದೊರಕಿಸಿಕೊಳ್ಳುವುದಕ್ಕೆ ಸಾಕಷ್ಟು ಶ್ರಮಪಡಬೇಕಾಯಿತು. ಮಡಿವಂತ ಹಿಂದುಗಳ ಮನಸ್ಸಿನಲ್ಲಿ ಭಯ ಆವರಿಸಿಕೊಂಡಿತ್ತು. ಕಾರಣ, ಮಾಲಡ್‌ನಲ್ಲಿ ನಡೆದ ಪ್ರಸಂಗದ ಪುನರಾವೃತ್ತಿಯಾಗಬಹುದು ಮತ್ತು ಸಮ್ಮೇಳನ ತಮ್ಮ ಊರಿನಲ್ಲಿ ನಡೆದರೆ, ಅಸ್ಪೃಶ್ಯರಿಂದ ತಮ್ಮ ನೀರಿನ ಬಾವಿಗಳು ಕಲುಷಿತಗೊಳ್ಳಬಹುದೆಂಬ ಹೆದರಿಕೆ. ಹೀಗಾಗಿ ಅವರು ತಮ್ಮ ಬಾವಿಗಳನ್ನು ಬಹುಜಾಗ್ರತೆಯಿಂದ ಮತ್ತು ಎಚ್ಚರಿಕೆಯಿಂದ ಮುಚ್ಚಿದರು. ಶತೃ ಸೈನ್ಯ ಏನಾದರೂ ಧಾಳಿ ಮಾಡೀತೆಂಬ ಭಯವಿದ್ದಾಗ ವಹಿಸುವ ಎಚ್ಚರಿಕೆ! ಡಾ.ಅಂಬೇಡ್ಕರ್ ಅವರ ಸಹೋದ್ಯೋಗಿಗಳು ಚಿಪ್ಲುನ್‌ನಲ್ಲಿ ಎರಡು ದಿನ ಉಳಿದುಕೊಂಡರು. ವಕೀಲರುಗಳಾದ ವಿನಾಯಕ ರಾವ್ ಬಾರ್ವೆ ಮತ್ತು ಬಿ.ಜಿ.ಕಾರ್ವೆ ಅವರಂಥ ಪ್ರಗತಿಪರ ಜನರು ಸಮ್ಮೇಳನದಲ್ಲಿ ಹಾಜರಿದ್ದರು. ಓಮ್ ಸ್ವಾಮಿರಾಗ್‌ಜೀ ಅನ್ನುವವರು ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, ಸವರ್ಣ ಹಿಂದುಗಳು ವಿಶಾಲ ಮನೋಭಾವನೆಯನ್ನು ಬೆಳಸಿಕೊಳ್ಳಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಡಾ.ಅಂಬೇಡ್ಕರ್ ಅವರು ಹೇಳಿದ ಮಾತುಗಳು : "ನೀವೇ ನಿಮ್ಮ ಗುಲಾಮಗಿರಿಯನ್ನು ತೊಡೆದು ಹಾಕಬೇಕು. ಒಬ್ಬರ ಅತ್ಮಗೌರವಕ್ಕೆ ಚ್ಯುತಿ ಬರುವಂತೆ ಬದುಕುವುದು ನಾಚಿಕೆಗೇಡು. ಆತ್ಮಗೌರವ ಎಂಬುದು ಜೀವನದಲ್ಲಿ ಒಂದು ಅತಿಮುಖ್ಯವಾದ ಅಂಶ. ಅದಿಲ್ಲದ ಮನುಷ್ಯನೊಬ್ಬ ಬರಿಯ ಶೂನ್ಯ. ಮರ್ಯಾದೆಯಿಂದ ಮೌಲ್ಯಯುತವಾಗಿ ಬಾಳಬೇಕಾದರೆ, ಕಷ್ಟಗಳನ್ನು ಪರಿಹರಿಸಿಕೊಳ್ಳಬೇಕು. ಕಠಿಣವಾದ ಹಾಗೂ ಅವಿರತವಾದ ಸೆಣಸಾಟದಿಂದಲೇ ನಾವು ಶಕ್ತಿಯನ್ನು, ನಂಬಿಕೆಯನ್ನು ಮತ್ತು ಮರ್ಯಾದೆಯನ್ನು ಪಡೆದುಕೊಳ್ಳುತ್ತೇವೆ." ಅನಂತರ ಅವರು ಖೋಟ ಎಂದು ಕರೆಯಲ್ಪಡುತ್ತಿದ್ದ ಕೊಂಕಣದ ಭೂಮಿ ವ್ಯವಸ್ಥೆಯನ್ನು ಕುರಿತು ಮಾತನಾಡುತ್ತಾ, ಈ ವ್ಯವಸ್ಥೆ ನಿಮ್ಮ ರಕ್ತವನ್ನು ಹೀರಿಬಿಟ್ಟಿದೆ. ಈ ಪದ್ಧತಿಯನ್ನು ತೊಡೆದು ಹಾಕುವುದಕ್ಕೆ ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ" ಎಂದು ಭರವಸೆ ಕೊಟ್ಟರು. "ನಿಮ್ಮ ಒಳಿತಿಗಾಗಿ ಯಾವುದೇ ವಿಷಮಪರೀಕ್ಷೆಯನ್ನು ಎದುರಿಸಲು ಸಿದ್ಧ" ಎಂದು ಹೇಳಿದರು. ನಾನು ಇಲ್ಲಿಗೆ ನಿಮ್ಮ ತೊಳಲಾಟ, ಅವಮಾನದ ವಿರುದ್ಧ ನಿಮ್ಮನ್ನು ಎಚ್ಚರಿಸುವುದಕ್ಕೆ ಬಂದರೆ ನನಗೆ ಪ್ರಾಣ ಭಯವನ್ನು ಉಂಟುಮಾಡಲಾಯಿತು. ಮನುಷ್ಯ

---

೧. ಬಹಿಷ್ಕೃತ್ ಭಾರತ್ ತಾ॥ ೩ನೇ ಮೇ ೧೯೨೯

ಅಮರನಲ್ಲ, ಯಾವುದಾದರೊಂದು ದಿನ ಮನುಷ್ಯ ಸಾಯಲೇಬೇಕು. ಆತ್ಮಗೌರವದ ಉದಾತ್ತ ಆದರ್ಶಗಳನ್ನು ಮತ್ತು ಮಾನವ ಜೀವನವನ್ನು ಉತ್ತಮಗೊಳಿಸುವ ಆದರ್ಶಗಳನ್ನು ಶ್ರೀಮಂತಗೊಳಿಸುವುದಕ್ಕಾಗಿ ಪ್ರಾಣವನ್ನು ಬಿಡಲು ಸಿದ್ಧರಿರಬೇಕು. ನಾವೇನೂ ಗುಲಾಮರಲ್ಲ. ನಾವು ಯೋಧ ವಂಶಕ್ಕೆ ಸೇರಿದವರು. ಶೂರ ಮನುಷ್ಯನಿಗೆ ಆತ್ಮಗೌರವವಿಲ್ಲದ ಹಾಗೂ ದೇಶಪ್ರೇಮವಿಲ್ಲದ ಬಾಳನ್ನು ಬಾಳುವುದಕ್ಕಿಂತ ಹೆಚ್ಚಿಗೆ ಅವಹೇಳನಕಾರಿಯಾದುದು ಯಾವುದೂ ಇಲ್ಲ.

ಸವರ್ಣ ಹಿಂದೂಗಳ ಮತ್ತು ಹಿಂದೂ ಭೂಮಾಲೀಕರ ದಬ್ಬಾಳಿಕೆಯಿಂದ ಹೊರಬರಬೇಕಾದರೆ ಇದಕ್ಕಿಂದ ಉತ್ತಮವಾದ, ದೂರದಲ್ಲಿರುವ ಪ್ರದೇಶಗಳಿಗೆ ವಲಸೆ ಹೋಗಬೇಕೆಂದು ಸಲಹೆ ಮಾಡಿದರು. **ಸಿಂಧ್‌ನಲ್ಲಿ ಆಗಲೀ, ಇಂದೋರ್ ರಾಜ್ಯದಲ್ಲಿಯಾಗಲೀ ವಲಸೆ ಬರುವವರಿಗಾಗಿ ಕೃಷಿ ಮಾಡಲು ಭೂಮಿಯನ್ನು ಪಡೆಯಲು ಪ್ರಯತ್ನಿಸುತ್ತೇನೆಂದು ಹೇಳಿದರು.** ಅವರ ಮುಸ್ಲಿಮ್ ನೆರೆಹೊರೆಯವರ ಉದಾಹರಣೆಯನ್ನು ಉಲ್ಲೇಖಿಸಿ, ಅವರುಗಳು ಆಫ್ರಿಕಾಕ್ಕೆ ಹೋಗಿ ಶ್ರೀಮಂತರಾಗಿ ಕೊಂಕಣಕ್ಕೆ ಹಿಂದಿರುಗಿದ್ದನ್ನು ತಿಳಿಸಿದರು. ಸಿಂಧ್‌ಗೆ ವಲಸೆ ಹೋಗಬೇಕೆಂಬ ಆಲೋಚನೆ ಡಾ.ಅಂಬೇಡ್ಕರ್ ಅವರಿಗೆ ಸ್ಫುರಿಸಿದ್ದು, ಇತರ ಕೌನ್ಸಿಲರ್‌ಗಳ ಸಂಗಡ ಅವರು ಸರ್ವೆ ಮಾಡುವುದಕ್ಕೆ ಸಿಂಧ್‌ಗೆ ಭೇಟಿಕೊಟ್ಟಾಗ ಇರಬಹುದು. ಅವರು ಸರ್ವೆ ಮಾಡಲು ಹೋದದ್ದು, ಸಾವಿರಾರು ಎಕರೆ ಮರುಭೂಮಿಯನ್ನು ಫಲವತ್ತಾದ ವ್ಯವಸಾಯ ಕ್ಷೇತ್ರವನ್ನಾಗಿ ಪರಿವರ್ತಿಸಬಹುದೆಂದು ನಿರೀಕ್ಷಿಸಿದ್ದ ಸುಕ್ಕೂರ್ ಬ್ಯಾರೆಜ್ ಅನ್ನು ಇಂದೋರ್ ಮಹಾರಾಜರೊಂದಿಗೆ ಅವರು ಮಾಡಿಕೊಂಡ ಹೊಸ ಒಪ್ಪಂದ ಈ ಅಸ್ಪೃಶ್ಯರಿಗೊಂದಿಷ್ಟು ಜಮೀನು ಪಡೆಯಬಹುದೆಂಬ ಆಶಾಭಾವನೆಯನ್ನು ಉಂಟುಮಾಡಿರಬಹುದು.

ಆ ರಾತ್ರಿ ವಿನಾಯಕ ರಾವ್ ಬಾರ್ವೆಯವರು, ಡಾ.ಅಂಬೇಡ್ಕರ್ ಅವರನ್ನು ಆದರಪೂರ್ವಕ ಔತಣಕ್ಕೆ ಆಮಂತ್ರಿಸಿದರು. ಅವರು ಆ ಔತಣದಲ್ಲಿ ಭಾಗಿಯಾದರು. ಇಂಥ ಅಂತರ್ಜಾತಿ ಔತಣದಲ್ಲಿ ಭಾಗವಹಿಸುವ ಉದ್ದೇಶ ಬ್ರಾಹ್ಮಣರೊಂದಿಗೆ ಊಟ ಮಾಡಿದರೆ ಮೋಕ್ಷವಾಗುತ್ತದೆ ಎಂದು ಅಲ್ಲ ; ಆದರೆ ಇಂಥ ಔತಣಗಳು ಸಾಮಾಜಿಕವಾಗಿ ಬೆರೆಯುವಿಕೆಯನ್ನು ಹದಮಾಡಿ ಸಮಾನತೆಯ ತತ್ವವನ್ನು ಬೆಳೆಸುತ್ತದೆ ಎಂಬ ಕಾರಣಕ್ಕೆ ಎಂದು ಹೇಳಿದರು.

೪
# ಶಾಸನ ಸಭೆಗಳಿಗೆ ಸೂಕ್ತವಾದ ಜನಗಳನ್ನು ಕಳುಹಿಸಿ

೧೪ನೇ ಏಪ್ರಿಲ್ ೧೯೨೯ರಂದು ರತ್ನಗಿರಿ ಜಿಲ್ಲಾ ಕೃಷಿಕರ ಸಮ್ಮೇಳನವನ್ನು ಚಿಪ್ಲುನ್‌ನಲ್ಲಿ ನಡೆಸಲಾಯಿತು. ಬೊಂಬಾಯಿಂದ ಬಂದ ಅತಿಥಿಗಳಲ್ಲಿ ದೇವರಾವ್ ನಾಯಿಕ್, ಡಿ.ವಿ.ಪ್ರಧಾನ್, ಬಿ.ಆರ್.ಕದ್ರೇಕರ್, ಶಂಕರ್ ರಾವ್‌ಗುಪ್ತೆ, ಶಂಕರ್‌ವಾಡ್ ವಾಲ್ಕರ್, ಶಿವತಾರ್ಕರ್, ಬಾಬಾ ಅಡರೇಕರ್, ಡಿ.ಗಾಯಿಕ್‌ವಾಡ್ ಮೋರೆ ಮುಂತಾದವರು ಇದ್ದರು. ಚಿಪ್ಲನ್‌ನ ಪ್ರಮುಖದಲ್ಲಿ ಶ್ರೀ ವಿನಾಯಕರಾವ್ ಬಾರ್ವೆ, ಸಾಥೆ, ರಾಜ್ಯಾಧ್ಯಕ್ಷ ಖಾನಾಸಾಹೇಬ್ ದೇಸಾಯಿ, ಬೆಂಡಾಕೆ, ಶಿವರಾಮ್ ಜಾಧವ್ ಇದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಾ.ಅಂಬೇಡ್ಕರ್ ಹೇಳಿದ್ದೇನೆಂದರೆ : "ತುಳಿತಕ್ಕೆ ಒಳಗಾದವರ ಕಲ್ಯಾಣಕ್ಕಾಗಿ ಹೋರಾಡುವುದೇ ನನ್ನ ಜೀವನದ ಉದ್ದೇಶವೆಂದು ನಂಬಿದ್ದೇನೆ. ನಾನೊಂದು ಬಡಕುಟುಂಬದಿಂದ ಬಂದಿದ್ದು, ಮುಂಬಯಿಯ ಅಭಿವೃದ್ಧಿ ಟ್ರಸ್ಟ್‌ನ ಚಾಳ್ ಒಂದರಲ್ಲಿ ಬಡವರ ಮಧ್ಯೆ ಜೀವಿಸಿದ್ದೆ. ನಿಮ್ಮ ಕುಂದುಕೊರತೆಗಳು ಏನೆಂದು ನನಗೆ ಗೊತ್ತು." ಮುಂದುವರಿದು ಡಾ.ಅಂಬೇಡ್ಕರ್ "ಖೋಟಿ ವ್ಯವಸ್ಥೆ ನಿಮ್ಮ ರಕ್ತವನ್ನು ಹೀರುತ್ತಿದೆ. ಭೂಮಿ ಹಿಡುವಳಿ ವ್ಯವಸ್ಥೆಯನ್ನು ರದ್ದು ಮಾಡಲೇ ಬೇಕು. ಅದನ್ನು ರದ್ದು ಮಾಡುವುದರಿಂದ ಶಾಂತಿ ಮತ್ತು ಮುನ್ನಡೆಯನ್ನು ಸಾಧಿಸಬಹುದು. ನಿಮ್ಮ ಗುರಿಯನ್ನು ಮುಟ್ಟಬೇಕಾದರೆ, ನಿಮ್ಮ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗುತ್ತಿರಲೇಬೇಕು. ಭಾರತದೇಶ ತನ್ನ ಮೇಲಿನ ಸಂಪೂರ್ಣ ಭವಿಷ್ಯದ ಹತೋಟಿಯನ್ನು, ಬರುವ ನಾಲ್ಕು ಐದು ವರ್ಷಗಳಲ್ಲಿ ಸಾಧಿಸಲಿದೆ. ಆ ಸಮಯದಲ್ಲಿ ನೀವು ನಿರ್ದಿಷ್ಟವಾದ ಎಚ್ಚರಿಕೆಯಿಂದ ಶಾಸನ ಸಭೆಗಳಿಗೆ ಸರಿಯಾದ ವ್ಯಕ್ತಿಗಳನ್ನು ಕಳುಹಿಸಬೇಕು. ಈ ವ್ಯಕ್ತಿಗಳು ಖೋಟಿ ವ್ಯವಸ್ಥೆಯನ್ನು ರದ್ದುಗೊಳಿಸಲು ಶ್ರದ್ಧೆಯಿಂದ ಸೆಣಸುತ್ತಾರೆ."

೫

# ಒಂದು ದೇಶ, ಒಂದು ಸಂವಿಧಾನ, ಒಂದೇ ಭವಿಷ್ಯ ಈ ಭಾವನೆಗಳಿಂದ ಬೆಸೆದುಕೊಂಡ ಜನರು ಸ್ವಾತಂತ್ರ್ಯದಿಂದ ಇರುವುದಾದರೆ, ಗಂಡಾಂತರವನ್ನು ಎದುರಿಸುತ್ತಾರೆ.

ಸೈಮನ್ ಆಯೋಗದ ವರದಿಗೆ ಪ್ರತಿಕ್ರಿಯೆಯಾಗಿ ಅಸ್ಪೃಶ್ಯರ ರಾಜಕೀಯ ಹಕ್ಕುಗಳನ್ನು ಅರಿತುಕೊಂಡು ತೀರ್ಮಾನ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇತ್ತು; ಇದು ಭವಿಷ್ಯದಲ್ಲಿ ಅನುಸರಿಸಬೇಕಾದ ಮಾರ್ಗೋಪಾಯವಾಗಿತ್ತು. ಇದಕ್ಕೆ ಮಿಕ್ಕು ಲಂಡನ್‌ನಲ್ಲಿ ನಡೆಯಲಿದ್ದ ದುಂಡುಮೇಜಿನ ಸಮ್ಮೇಳನಕ್ಕೆ ದಲಿತರ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡುವ ಅವಶ್ಯಕತೆ ಇತ್ತು. ಈ ಸಮ್ಮೇಳನದಲ್ಲಿ ಭಾರತದ ಭವಿಷ್ಯ ಸಂವಿಧಾನ ರೂಪರೇಷೆಗಳನ್ನು ಚಿತ್ರಿಸಬೇಕಿತ್ತು. ಭಾರತದ ಭವಿಷ್ಯವನ್ನು ನಿರ್ಧರಿಸುವ ಸಮಯದಲ್ಲಿ ಏಳುಕೋಟಿ ಅಸ್ಪೃಶ್ಯರ ರಾಜಕೀಯ ಹಕ್ಕುಗಳನ್ನು ಕಾಪಾಡುವ ಸಲುವಾಗಿ ಅವರ ಪ್ರಾತಿನಿಧ್ಯ ಅವಶ್ಯಕವಾಗಿತ್ತು. ಈ ಕಾರಣಕೋಸ್ಕರ ರಾಷ್ಟ್ರೀಯ ಮಟ್ಟದಲ್ಲಿ ಒಂದು ಸಮ್ಮೇಳನವನ್ನು ಸೇರಿಸಬೇಕಾಗಿದ್ದು, ಇದನ್ನು ನಾಗ್‌ಪುರದಲ್ಲಿ ಕರೆಯಲಾಯಿತು. ಈ ಚಾರಿತ್ರಿಕ ಸಂಗತಿಗಾಗಿ ನಾಗ್‌ಪುರದ ಜನರಿಗೆ ಕೀರ್ತಿ ಸಲ್ಲಬೇಕು.

ಸ್ಥಳೀಯ ಅಸ್ಪೃಶ್ಯ ನಾಯಕರುಗಳು, ಅದರಲ್ಲೂ ದಶರತ್ ಲಕ್ಷ್ಮಣ್ ಪಾಟೀಲ್ ಮತ್ತು ಲಕ್ಷ್ಮಣ್ ರಾವ್ ಓಗಲೇ, ಎಮ್.ಎಲ್.ಸಿ., ಇವರುಗಳು ಡಾ.ಅಂಬೇಡ್ಕರ್ ಅವರೊಡನೆ ಚರ್ಚಿಸಲು ಮುಂಬಯಿಗೆ ಹೋದರು. ಅವರು ನಾಗ್‌ಪುರದಲ್ಲಿ ಅಖಿಲ ಭಾರತ ನಿಮ್ನವರ್ಗಗಳ ಸಮ್ಮೇಳನವನ್ನು ಡಾ.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನಡೆಸಲು ತಮ್ಮ ಅಭಿಲಾಶೆಯನ್ನು ವ್ಯಕ್ತಪಡಿಸಿದರು; ಇದಕ್ಕೆ ಅವರು ಒಪ್ಪಿಕೊಂಡರು. ಸಮ್ಮೇಳನವನ್ನು ೧೯೩೦ನೆ ಇಸವಿಯ ಆಗಸ್ಟ್ ೮ ಮತ್ತು ೯ನೆ ತಾರೀಕುಗಳಂದು ನಡೆಸಬೇಕೆಂದು ಹೇಳಿದರು. ಸ್ವಾಗತ ಸಮಿತಿಯಲ್ಲಿ ಅಧ್ಯಕ್ಷರಾಗಿ ಟಿ.ಸಿ.ಸಖಾರೆ ಅವರನ್ನು ಸೇರಿಸಲಾಯಿತು. ಮಿ:ದಶರಥ್ ಲಕ್ಷ್ಮಣ್ ಪಾಟೀಲ್ ಉಪಾಧ್ಯಕ್ಷರಾಗಿ, ಮಿ:ವಿಶ್ರಾಮ್‌ಜಿ ಸವಾಯಿ ಧೂಲ್ ಖಜಾಂಚಿಯಾಗಿ, ಮಿ:ಎಲ್.ಕೆ.ಓಗಲೆ, ಎಂ.ಎಲ್.ಸಿ. ಮಿ: ಹರ್‌ದಾಸ್, ಎಲ್.ಎನ್.ಕಾಂಪ್ಟಿ, ಮಿ:ಸಿ.ಕೆ.ಭಟಕರ್, ಅಮರಾವತಿ, ಮಿ:ಶಾಮರಾವ್ ಜಿ.ರಹಾತೆ, ವಡಗಾಂವ್, ಮಟಿಂಗ್ ಸಮುದಾಯದ ನಾಯಕರಾದ ಮಿ:ಹೆಚ್.ಡಿ.ಜೆಹಾಡೆ, ನಾಗ್‌ಪುರ ಇವರುಗಳನ್ನು ಕಾರ್ಯದರ್ಶಿಗಳನ್ನಾಗಿ ಸೇರಿಸಲಾಯಿತು.

ಮಿ: ಹರ್‌ದಾಸ್ ಎಲ್.ಎನ್ ಸಮ್ಮೇಳನದ ಕಾರ್ಯದರ್ಶಿ. ಇವರು ಪೂನಾದ ಶಿವರಾಮ್ ಜಾಂಬಾ ಕಾಂಬ್ಳೆಯವರಿಗೆ ಪತ್ರ ಬರೆದು, ನಾಗ್‌ಪುರದಲ್ಲಿ ಸೇರಿಸಬೇಕೆಂದು ಪ್ರಸ್ತಾವಿಸಲಾದ ಅಖಿಲ ಭಾರತ ಸಮ್ಮೇಳನದ ಆಮಂತ್ರಿತರ ಹಾಗೂ ಅಧ್ಯಕ್ಷರ ಹೆಸರುಗಳನ್ನು ಪ್ರಚುರಪಡಿಸಬೇಕೆಂದು ಕೇಳಿಕೊಂಡರು. ಆ ಕಾಗದದ ಒಕ್ಕಣೆ ಹೀಗಿದೆ :

**ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್ ಕಛೇರಿ**

ವಿಶ್ರಾಮ್ ಸಭಾ ಭವನ

ಲಕಡ್‌ಗಂಜ್ ಸರ್ಕಲ್, ನಾಗ್‌ಪುರ

ತಾ॥ ೧ನೇ ಫೆಬ್ರವರಿ ೧೯೩೦

ಸ್ವಾಗತ ಸಮಿತಿ ಅಧ್ಯಕ್ಷ : ಕೆ.ಜಿ.ನಂದಗಾವಳಿ
ಉಪಾಧ್ಯಕ್ಷ : ಡಿ.ಎಲ್.ಪಾಟೀಲ್
ಖಜಾಂಚಿ : ವಿ.ಎಸ್.ಸವಾಯಿ ಧೂಲ್
ಕಾರ್ಯದರ್ಶಿಗಳು : ಎಲ್.ಕೆ.ಓಗಲೆ, ಎಂ.ಎಲ್.ಸಿ
ಹರ್‌ದಾಸ್, ಎಲ್.ಎನ್
ಪಿ.ಕೆ.ಭಟ್ಕರ್, ಹೆಚ್.ಡಿ.ಬೆಹಾಡೆ

ಎಸ್.ಜೆ.ಕಾಂಬ್ಳೆ, ಪೂನ ಇವರಿಗೆ

ಸ್ವಾಮಿ,

ಮುಂದಿನ ಶರತ್ಕಾಲದಲ್ಲಿ ಲಂಡನ್ನಿನಲ್ಲಿ ನಡೆಸಬೇಕೆಂದು ಪ್ರಸ್ತಾಪಿಸಿರುವ ದುಂಡುಮೇಜಿನ ಸಮ್ಮೇಳನದ ಬಗ್ಗೆ ನಿಮಗೆ ಗೊತ್ತಿರಬೇಕು. ಇದರ ಉದ್ದೇಶ ಭಾರತದ ಭವಿಷ್ಯ ಸಂವಿಧಾನವನ್ನು ಚರ್ಚಿಸುವುದೇ ಆಗಿದೆ. ಈ ನಿರ್ಣಾಯಕ ಘಟ್ಟದಲ್ಲಿ, ನಿಮ್ನವರ್ಗಗಳವರು ಧ್ವನಿ ಎತ್ತಿ ಅಧಿಕಾರದಲ್ಲಿರುವವರಿಗೆ, ಅವರ ನಾಗರಿಕ ಹಕ್ಕುಗಳನ್ನು ಕಾಪಾಡುವುದಕ್ಕಾಗಿ, ಭವಿಷ್ಯದ ಭಾರತದ ಸಂವಿಧಾನದಲ್ಲಿ ಯಾವ ಯಾವ ರಕ್ಷಣೆಗಳನ್ನು ಮತ್ತು ಭರವಸೆಗಳನ್ನು ಸೇರಿಸಬೇಕೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ ಎಂದು ನನಗೆ ನಿಖರವಾಗಿ ಗೊತ್ತಿದೆ. ಅತಿಮುಖ್ಯವಾದ ಈ ವಾದಗ್ರಸ್ತ ವಿಷಯವನ್ನು ಚರ್ಚಿಸಲು ನಮ್ಮ ಜನಗಳು ತತ್‌ಕ್ಷಣ ಗಮನಹರಿಸಬೇಕಾಗಿದೆ. ಈ ಚರ್ಚೆಯ ಉದ್ದೇಶಕ್ಕಾಗಿ ಭಾರತದ ಬೇರೆ ಬೇರೆ ಭಾಗಗಳಿಂದ ಜನರನ್ನು ಕಲೆ ಹಾಕುವುದಕ್ಕಾಗಿ ನಾವು ಡಾ.ಅಂಬೇಡ್ಕರ್, ಎಮ್.ಎ., ಪಿ.ಹೆಚ್.ಡಿ. ಡಿ.ಎಸ್.ಸಿ, ಬಾರ್–ಅಟ್–ಲಾ, ಎಮ್.ಎಲ್.ಸಿ. ಇವರೊಡನೆ ಸಮಾಲೋಚಿಸಿ, ಸೈಮನ್ ಆಯೋಗದ ವರದಿಯನ್ನು ಪ್ರಸಿದ್ಧಿಸಿದ ಕೂಡಲೇ, ನಾಗ್‌ಪುರದಲ್ಲಿ ಒಂದು ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್ ಅನ್ನು ಆಯೋಜಿಸಬೇಕೆಂದು ಆಲೋಚಿಸಿದ್ದೇವೆ. ನಿಮ್ಮ ಒಪ್ಪಿಗೆ ದೊರಕುತ್ತದೆ ಎಂಬ ನಿರೀಕ್ಷೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಿದ್ದೇನೆ. ಮುಂದಿನ ಫೆಬ್ರವರಿ ೧೫ನೇ ತಾರೀಖಿನ ಒಳಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿದರೆ, ಆಭಾರಿಯಾಗಿರುತ್ತೇವೆ. ಇಂಥದೊಂದು ಕಾಂಗ್ರೆಸ್ ಅನ್ನು ಆಯೋಜಿಸುವುದರ ಯುಕ್ತಾಯುಕ್ತತೆಯನ್ನು ಮತ್ತು ಅದಕ್ಕೆ ಯಾರು ಅಧ್ಯಕ್ಷರಾಗಿರಬೇಕೆಂಬುದನ್ನು ತಿಳಿಸಿ.

ನಿಮ್ಮ ಉತ್ತರದ ನಿರೀಕ್ಷೆಯಲ್ಲಿ,

ನಿಮ್ಮ ವಿಶ್ವಾಸಿ
**ಹರ್‌ದಾಸ್,ಎಲ್.ಎನ್,**
**ಎಐಡಿಸಿ**
ನಾಗ್‌ಪುರ

---

(೧) ಹರ್‌ದಾಸ್, ಎಲ್.ಎನ್.ಕಾರ್ಯದರ್ಶಿ, ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್, ನಾಗ್‌ಪುರ, ಡಾ॥ ಅಂಬೇಡ್ಕರ್ ಅವರಲ್ಲಿ ಮೆಚ್ಚಿಗೆ ಇರುವ ಮತ್ತು ಅವರ ಅನುಯಾಯಿ, ಕಾಂಪ್ಟಿ (ವಿದರ್ಭದವರು) ಬಾಬಾ ಹರ್‌ದಾಸ್ ಎಂದು ಹೆಸರಾದವರು.

(೨) ಸರ್ಪಾಡೆ, ಭಾಗ ೭ ಪುಟಗಳು ೮೩–೮೪

ಶಿವರಾಮ್ ಜಂಬಾ ಕಾಂಬ್ಳೆಯವರ ಉತ್ತರ :

ಕಾಮಟಿಪುರ, ೫ನೇ ಬೀದಿ
ಮೊಕ್ಕಾಂ:ಪೂನಾ
ಫೆಬ್ರವರಿ, ೧೯೩೦

ಕಾರ್ಯದರ್ಶಿ
ಅಖಿಲ ಭಾರತ ನಿಮ್ನವರ್ಗಗಳವರ ಕಾಂಗ್ರೆಸ್
ನಾಗ್‌ಪುರ ಇವರಿಗೆ,

ಸ್ವಾಮಿ :

ನಿಮ್ಮ ದಿ.೦೧.೦೨.೧೯೩೦ರ ಮುದ್ರಿತ ಪತ್ರ ಕೈಸೇರಿ, ನೀವು ಶೀಘ್ರದಲ್ಲೇ ನಾಗ್‌ಪುರದಲ್ಲಿ ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್ ಅನ್ನು ಆಯೋಜಿಸಿದ್ದೀರೆಂದು ತಿಳಿದು ಸಂತೋಷವಾಯಿತು.

ಉದ್ದೇಶಿತ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ನಾನು ಡಾ॥ ಅಂಬೇಡ್ಕರ್ ಅವರ ಹೆಸರನ್ನು ಪ್ರಸ್ತಾವಿಸುವುದೂ ಅಲ್ಲದೆ, ಅವರನ್ನು ಲಂಡನ್ನಿನಲ್ಲಿ ನಡೆಯುವ ಸಮ್ಮೇಳನಕ್ಕೆ ನಿಮ್ನವರ್ಗಗಳ ಪ್ರತಿನಿಧಿಯಾಗಿ ಕಳುಹಿಸಬೇಕೆಂದು ಸಲಹೆ ಮಾಡುತ್ತೇನೆ.

ಸವರ್ಣ ಹಿಂದೂಗಳಿಂದ ವರ್ಷವರ್ಷಗಳಿಂದ ತುಳಿಯಲ್ಪಟ್ಟ ನಮ್ಮ ಆರು ಕೋಟಿ ಸಹೋದರರ ಗುರಿಯನ್ನು ಎತ್ತಿ ಹಿಡಿಯುವುದಕ್ಕಾಗಿ ನೀವು ಪಡುತ್ತಿರುವ ಪರಿಶ್ರಮಕ್ಕೆ ಜಯ ದೊರಕಲೆಂದು ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ
**ಶಿವರಾಮ್‌ಜಿ ಕಾಂಬ್ಳೆ**

ಮಿ: ಹರ್‌ದಾಸ್, ಎಲ್.ಎನ್. ಸಮ್ಮೇಳನದ ಕಾರ್ಯದರ್ಶಿಯವರು, ಸಮ್ಮೇಳನವನ್ನು ಕರೆಯುವುದರ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಿದರು. ಆ ಸುತ್ತೋಲೆ ಹೀಗಿದೆ :

ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್ ಕಛೇರಿ
ವಿಶ್ರಾಮ್ ಹಾಲ್, ನಾಗ್‌ಪುರ

ತಾ॥ ೨೦.೦೬.೧೯೩೦

ಸುತ್ತೋಲೆ ಸಂ.೫

ಸ್ವಾಮಿ,

ವರ್ತಮಾನ ಪತ್ರಿಕೆಗಳಲ್ಲಿ ಬಂದ ವರದಿಗಳಂತೆ, ಸೈಮನ್ ಆಯೋಗದ ವರದಿಯನ್ನು ೨೪ನೇ ಜೂನ್ ತಾರೀಖಿನಂದು ಪ್ರಕಟಿಸಲಾಗುತ್ತದೆ ಎಂದು ತಿಳಿದುಕೊಂಡಿದ್ದರಿಂದ, ಕಾಂಗ್ರೆಸ್‌ನ ತಾರೀಖನ್ನು ನಿಗದಿಪಡಿಸಲು ಸಾಧ್ಯವಾಯಿತು. ಅದರಂತೆ, ನಮ್ಮ ಸ್ವಾಗತ ಸಮಿತಿಯು ತನ್ನ ೨೪.೦೫.೧೯೩೦ ಈ ತಾರೀಖಿನ ಸಭೆಯಲ್ಲಿ ೧೨ ಮತ್ತು ೧೩ನೇ ಜುಲೈ ತಾರೀಖುಗಳನ್ನು ನಿಗದಿಪಡಿಸಿತ್ತು. ಇದರಿಂದಾಗಿ,

ನಮ್ಮ ನಾಯಕರುಗಳಿಗೆ ವರದಿಯನ್ನು ಓದಿಕೊಂಡು, ಒಂದು ಗೊತ್ತಾದ ಅಭಿಪ್ರಾಯವನ್ನು ತಳೆದು, ಕಾಂಗ್ರೆಸ್‌ನ ಸಮ್ಮೇಳನಕ್ಕೆ ಬರಲು ಸಾಕಷ್ಟು ಸಮಯವಿರುತ್ತಿತ್ತು.

ಆದರೆ, ಡಾ॥ ಅಂಬೇಡ್ಕರ್ ಅವರು ಈ ನಿಗದಿಪಡಿಸಿದ ತಾರೀಖುಗಳನ್ನು ಪುನರ್ ಪರಿಶೀಲನೆ ಮಾಡುವಂತೆ ಸೂಚಿಸಿದರು. ಅವರು ಹೇಳುವುದೇನೆಂದರೆ, ಸೈಮನ್ ಆಯೋಗದ ಮೊದಲನೆ ಸಂಪುಟದ ವರದಿಯನ್ನು ೧೦ನೇ ತಾರೀಖಿನಂದು ಪ್ರಕಟಿಸಲಾಗಿದ್ದು, ಅದರ ಪ್ರತಿ ಇನ್ನೂ ದೊರಕಿಲ್ಲ. ಅವರಿಗೆ ಗೊತ್ತಾದ ಹಾಗೆ ೨೨ನೆ ತಾರೀಖಿನವರೆಗೆ ಅದು ಸಿಗುವುದಿಲ್ಲ. ೨ನೇ ಸಂಪುಟ ೨೪ನೆ ತಾರೀಖು ಬಿಡುಗಡೆಯಾಗಲಿದ್ದು, ಇದೇ ತೆರನಾದ ವಿಳಂಬವಾದರೆ (ಪ್ರತಿಗಳನ್ನು ದೊರಕಿಸಿಕೊಳ್ಳಲು) ವರದಿಯನ್ನು ನೋಡದೆ, ಅಭ್ಯಸಿಸದೆ ನಾವು ಕಾಂಗ್ರೆಸ್ ಅನ್ನು ನಡೆಸಬೇಕಾಗುತ್ತದೆ. ಇಂಥ ಪರಿಸ್ಥಿತಿ ಉದ್ಭವಿಸಿದರೆ ಕಾಂಗ್ರೆಸ್ ನಿರರ್ಥಕವಾಗುತ್ತದೆ. ಆದುದರಿಂದ ಇಂಥ ಸಂಭವಬಾರದಂತೆ ನಾವು ಎಚ್ಚರಿಕೆ ವಹಿಸಿ, ಕಾಂಗ್ರೆಸ್‌ನ ತಾರೀಖುಗಳನ್ನು ಬದಲಾಯಿಸಬೇಕು.

ಈ ಉದ್ದೇಶಕ್ಕಾಗಿ ನಮ್ಮ ಸ್ವಾಗತ ಸಮಿತಿ ೨೦ನೇ ತಾರೀಖಿನಂದು ಸೇರಿ ೧೯೩೦ರ ಆಗಸ್ಟ್ ೮ ಮತ್ತು ೯ನೆ ತಾರೀಖುಗಳಂದು ನಮ್ಮ ಕಾಂಗ್ರೆಸ್ ಸೇರಬೇಕೆಂದು ನಿಗದಿಪಡಿಸಿದೆ. ವಿಷಯ ಸಮಿತಿಯು ಕೂಡ ಸೇರುವುದಕ್ಕೆ ನಮಗೆ ಸಮಯಾವಕಾಶವಿದ್ದು, ಡಾ॥ ಅಂಬೇಡ್ಕರ್ ಅವರ ಸಲಹೆಯಂತೆ, ಸ್ವಾಗತ ಸಮಿತಿ ಸಭೆಗೆ ಒಂದು ದಿನ ಮುಂಚಿತವಾಗಿ, ಅಂದರೆ ೭ನೇ ಆಗಸ್ಟ್ ನಾಗ್‌ಪುರಕ್ಕೆ ಬರಬೇಕೆಂದು ಎಲ್ಲ ನಾಯಕರುಗಳನ್ನು ಆಹ್ವಾನಿಸಬೇಕು. ಈ ದಿನಗಳು ರಜಾದಿನಗಳಾದ್ದರಿಂದ ನಮ್ಮ ನಾಯಕರುಗಳು ಅಧಿವೇಶನಕ್ಕೆ ಬರಲು ಸರಿಹೋಗುತ್ತದೆ.

ಪ್ರಾಂತೀಯ ಸ್ವಾಗತ ಸಮಿತಿ, ಅದಕ್ಕೆ ಬಂದ ಅಭಿಪ್ರಾಯಗಳನ್ನು ಅನುಸರಿಸಿ, ಸಾಮಾಜಿಕ, ಶೈಕ್ಷಣಿಕ, ಯುವಜನ ಮತ್ತು ಮಹಿಳೆಯರ ಸಮ್ಮೇಳನಗಳನ್ನು ಕಾಂಗ್ರೆಸ್‌ನ ಜೊತೆಯಲ್ಲೇ ನಡೆಸಬೇಕೆಂದು ತೀರ್ಮಾನಿಸಿದೆ. ರಾವ್ ಸಾಹೇಬ್ ರಾಮಚರಣ, ಬಿ.ಎ., ಎಲ್.ಎಲ್.ಬಿ., ಅಡ್ವೋಕೇಟ್, ಎಂ.ಎಲ್.ಸಿ. (ಉ.ಪ್ರ.) ಲಕ್ನೋ, ರಾವ್ ಸಾಹೇಬ್ ಮುನಿಸ್ವಾಮಿ ಪಿಳ್ಳೈ FMUMTC (ಮದರಾಸು), ಊಟಿ. ಮಿ.ಎಮ್.ಬಿ.ಮಲ್ಲಿಕ್, ಎಮ್.ಎ.ಬಿ.ಎಲ್ ಅಡ್ವೋಕೇಟ್, ಎಮ್.ಎಲ್.ಸಿ (ಬೆಂಗಾಲ್) ಮತ್ತು ಶ್ರೀಮತಿ ಗುಣಾಬಾಯಿ ಗಡೇಕರ್, ಪೂನಾ ಇದೇ ಕ್ರಮದಲ್ಲಿ ಅವರುಗಳನ್ನು ಸಮ್ಮೇಳನಗಳ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಆಮಂತ್ರಿಸಬೇಕು. ನನಗೆ ಸಂತಸ ಕೊಡುವುದೆಂದರೆ ಅವರುಗಳು ನಮ್ಮ ಕೋರಿಕೆಗಳಿಗೆ ಒಪ್ಪಿಗೆ ಸೂಚಿಸಿದ್ದಾರೆ. ಪ್ರತಿಯೊಂದು ಸಮ್ಮೇಳನಕ್ಕೂ ಬೇರೆ ಬೇರೆ ಸ್ವಾಗತ ಸಮಿತಿಗಳನ್ನು ರಚಿಸಲಾಗಿದ್ದು, ೧೦ ಮತ್ತು ೧೧ನೇ ತಾರೀಖುಗಳನ್ನು ಅವುಗಳಿಗಾಗಿ ಗೊತ್ತುಪಡಿಸಲಾಗಿದೆ.

ಭಾರತದ ಎಲ್ಲ ಕಡೆಯಿಂದ ನಿಮ್ನವರ್ಗಗಳವರನ್ನು ಈ ಮೂಲಕ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುವುದೇನೆಂದರೆ ತಮ್ಮ ಡೆಲಿಗೇಟ್‌ಗಳನ್ನು ಕಳುಹಿಸಿ, ಈ ಸಮ್ಮೇಳನ ಮತ್ತು ಕಾಂಗ್ರೆಸ್‌ಗಳು ಜಯಪ್ರದವಾಗುವ ಹಾಗೆ ಮಾಡಿ ಎಂದು. ಡೆಲಿಗೇಟ್‌ಗಳ ಹೆಸರುಗಳನ್ನು (ನೀವು ಮಂಡಿಸಬಯಸುವ) ನಿರ್ಣಯಗಳನ್ನು, ಕರಡುಗಳನ್ನು ಕಾರ್ಯದರ್ಶಿ, ಅಖಿಲ ಭಾರತ ನಿಮ್ನವರ್ಗಗಳ ಕಚೇರಿ, ವಿಶ್ರಾಮ್ ಹಾಲ್, ನಾಗ್‌ಪುರ ಇವರಿಗೆ ಕಳುಹಿಸಿಕೊಡಿ.

ನಾಗ್‌ಪುರ
೨೦, ಜೂನ್ ೧೯೩೦

ನಿಮ್ಮ ವಿಶ್ವಾಸಿ
**ಹರ್‌ದಾಸ್ ಎಲ್.ಎನ್**
ಕಾರ್ಯದರ್ಶಿ

ಸಮಿತಿ ವಿವಿಧ ಸಮ್ಮೇಳನಗಳನ್ನು ಮುಂದೆ ಕಾಣಿಸಿದಂತೆ ಘೋಷಣೆ ಮಾಡಿತ್ತು.

ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್ ಇದನ್ನು ನಾಗ್‌ಪುರ (ಮಧ್ಯಪ್ರಾಂತ್ಯ) ಈ ಪಟ್ಟಣದಲ್ಲಿ ಶುಕ್ರವಾರ ಮತ್ತು ಶನಿವಾರ ೮ನೇ ಮತ್ತು ೯ನೇ ಆಗಸ್ಟ್ ೧೯೩೦ ಈ ತಾರೀಖಿನಂದು ಬೆಳಗ್ಗೆ ೮ ಗಂಟೆಗೆ ಮತ್ತು ಅಪರಾಹ್ನ ೨ ಗಂಟೆಗೆ ಕಿತ್ತಲೆ ಮಾರುಕಟ್ಟೆ ಕಟ್ಟಡಗಳಲ್ಲಿ ನಡೆಸಲಾಗುತ್ತದೆ. ಅಧ್ಯಕ್ಷತೆ ವಹಿಸುವವರು : ಡಾ.ಬಿ.ಆರ್.ಅಂಬೇಡ್ಕರ್ ಎಮ್.ಎ, ಪಿ.ಎಚ್.ಡಿ., ಡಿಎಸ್‌ಸಿ,/ ಎಟ್–ಲಾ, ಎಮ್.ಎಲ್.ಸಿ ಬೊಂಬಾಯಿ

ಈ ಪ್ರಸ್ತಾವಿತ ಕಾಂಗ್ರೆಸ್ ಅನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ಕರೆಯಲಾಗಿದೆ :

೧. ಭಾರತದಲ್ಲಿ ಈಗ ಚಾಲನೆಯಲ್ಲಿರುವ ರಾಜಕೀಯ ಚಳುವಳಿಯತ್ತ ನಿಮ್ನವರ್ಗಗಳ ಧೋರಣೆ ಏನಿರಬೇಕೆಂದು ತೀರ್ಮಾನಿಸುವುದು.
೨. ಸೈಮನ್ ಆಯೋಗದ ಶಿಫಾರಸ್ಸುಗಳ ಬಗ್ಗೆ ನಿಮ್ನವರ್ಗಗಳ ಧೋರಣೆ ಏನಿರಬೇಕೆಂದು ತೀರ್ಮಾನಿಸುವುದು.
೩. ಕಾಲದಿಂದ ಕಾಲಕ್ಕೆ ದೇಶದಲ್ಲಿ ಏಳುತ್ತಿರುವ ಎಲ್ಲಾ ಸಮಸ್ಯೆಗಳ ಮೇಲೆ ನಿಮ್ನವರ್ಗಗಳ ಭಾವನೆಯನ್ನು ವ್ಯಕ್ತಪಡಿಸಲು ಅಖಿಲ ಭಾರತ ಸಂಸ್ಥೆಯನ್ನು ಸ್ಥಾಪಿಸುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು.

**ಸ್ವಾಗತ ಸಮಿತಿ :**

| | | |
|---|---|---|
| ಅಧ್ಯಕ್ಷರು | : | ಟಿ.ಸಿ.ಸಖಾರೆ, ನಾಗಪುರ |
| ಉಪಾಧ್ಯಕ್ಷರು | : | ಡಿ.ಎಲ್.ಪಾಟೀಲ್, ಬೇಲಾ |
| ಖಜಾಂಚಿ | : | ಬಿ.ಎಸ್.ಸವಾಯಿತುಲ್, ನಾಗಪುರ |
| ಕಾರ್ಯದರ್ಶಿಗಳು | : | ಎಲ್.ಕೆ.ಓಗಲೆ, ಎಲ್,ಎಲ್.ಸಿ, ಅಮರಾವತಿ |
| | | ಹರ್‌ದಾಸ್, ಎಲ್.ಎನ್. ಕಾಂಪ್ಟೀ |
| | | ಪಿ.ಕೆ.ವ್ಹಟ್‌ಕರ, ಅಮರಾವತಿ |
| | | ಎಸ್.ಜಿ.ರಹಾತೆ, ವಡಗಾಂವ್ |
| | | ಹೆಚ್.ಡಿ.ಬೆಹಾಡೆ, ನಾಗಪುರ |

* * * * * * * * * * *

**ಸಾಮಾಜಿಕ ಸಮ್ಮೇಳನ**

ಇದನ್ನು ೧೦ನೇ ಆಗಸ್ಟ್ ೧೯೩೦ ಭಾನುವಾರ ಬೆಳಿಗ್ಗೆ ೮ ಗಂಟೆಗೆ ಕರೆಯಲಾಗುವುದು

ಅಧ್ಯಕ್ಷರು : ರಾವ್ ಸಾಹೇಬ್ ರಾಮ್‌ಚರಣ, ಬಿ.ಎ.ಎಲ್.ಎಲ್.ಬಿ, ಅಡ್ವೋಕೇಟ್, ಎಮ್‌ಎಲ್.ಸಿ (ಉಪ್ರ), ಲಕ್ನೋ

**ಸ್ವಾಗತ ಸಮಿತಿ :**

ಅಧ್ಯಕ್ಷರು : ಕಿಸಾನ್ ಫಾಗು ಬಂಡ್‌ಸೋಡೆ, ಪಾಟೀಲ್, ನಾಗ್‌ಪುರ

ಕಾರ್ಯದರ್ಶಿಗಳು : ಡಿ.ಎಮ್‌ನಗರಾರೆ, ನಾಗ್‌ಪುರ ಎಸ್.ಜಿ.ಜಾಧವ್
ಎಮ್.ಟಿ.ಗೋಡ್‌ಘಾಟೆ, ನಾಗ್‌ಪುರ
ಎನ್.ಯು.ಆಥೆ, ರಾಯ್‌ಪುರ

* * * * * *

**ಶೈಕ್ಷಣಿಕ ಸಮ್ಮೇಳನ**

ಇದನ್ನು ೧೦ನೇ ಆಗಸ್ಟ್ ೧೯೩೦ ಭಾನುವಾರ ಅಪರಾಹ್ನ ೨ ಗಂಟೆಗೆ ಕರೆಯಲಾಗುವುದು.
ಅಧ್ಯಕ್ಷರು : ರಾವ್ ಸಾಹೇಬ್ ಮುನಿಸ್ವಾಮಿ ಪಿಳ್ಳೈ, ಎಫ್.ಎಂ.ಯು, ಎಮ್.ಎಲ್.ಸಿ., ಊಟಿ

**ಸ್ವಾಗತ ಸಮಿತಿ :**

ಅಧ್ಯಕ್ಷರು : ಜೆ.ಜಿ.ಕೋನೋನೆ, ಅಮರಾವತಿ

ಕಾರ್ಯದರ್ಶಿಗಳು : ಸಿ.ಎಮ್ ಸೋಮ್‌ಕುವರ್, ನಾಗ್‌ಪುರ
ವಿ.ಡಿ.ಮಕೇಸರ್, ಯಾವಟಮಲ್,
ಆರ್.ಎಸ್.ಖಂಡಾಕಿ, ಅಂಕೋಲ

* * * * * *

**ಯುವ ಸಮ್ಮೇಳನ**

**ಇದನ್ನು ೧೧ನೇ ಆಗಸ್ಟ್ ೧೯೩೦ ಸೋಮವಾರ ರಾತ್ರಿ ೮ ಗಂಟೆಗೆ ಕರೆಯಲಾಗುವುದು.**

ಅಧ್ಯಕ್ಷರು : ಮಿ.ಎಮ್.ಬಿ.ಮಲ್ಲಿಕ್, ಎಂ.ಎ.ಬಿ.ಎಲ್, ಅಡ್ವೋಕೇಟ್, ಎಮ್.ಎಲ್.ಸಿ. (ಬೆಂಗಾಲ್) ಕೊಲ್ಕತ್ತಾ

**ಸ್ವಾಗತ ಸಮಿತಿ :**

ಅಧ್ಯಕ್ಷರು : ಆರ್.ಎಮ್.ಬೋರ್‌ಕರ್, ನಾಗ್‌ಪುರ

ಕಾರ್ಯದರ್ಶಿಗಳು : ಡಿ.ಬಿ.ಬಾರ್ಸೆ, ನಾಗ್‌ಪುರ
ಆರ್.ಎಸ್.ಮಾಂಡವ್‌ಧಾರೆ, ಅಂಕೋಲ
ಜಿ.ಜಿ.ಜಿಯಾ ಇನಿ, ಅಂಜನ್‌ಗಾಂವ್

## ಮಹಿಳಾ ಸಮ್ಮೇಳನ

ಇದನ್ನು ೧೧ನೇ ಆಗಸ್ಟ್ ೧೯೩೦ ಸೋಮವಾರ ಅಪರಾಹ್ನ ೨ ಗಂಟೆಗೆ ಪೂನದಲ್ಲಿ ಕರೆಯಲಾಗುವುದು.

ಅಧ್ಯಕ್ಷರು : ಸೌ॥ ಗುಣಾಬಾಯಿ ಗಡೇಕರ್

**ಸ್ವಾಗತ ಸಮಿತಿ :**

ಅಧ್ಯಕ್ಷರು : ಸೌ॥ ಶೇವಂತ ಬಾಯಿ, ಓಗಲೆ, ಅಮರಾವತಿ

ಕಾರ್ಯದರ್ಶಿಗಳು : ತುಳಸಾಬಾಯಿ ಬಂಡ್‌ಖೋಡೆ ಪಾಟೀಲ್
ಜೈಬಾಯಿ ಚೌಧರಿ, ನಾಗ್‌ಪುರ
ಕಾಶೀಬಾಯಿ ಮಾಂಡವಧಾರೆ, ಅಂಕೋಲ

* * * * * *

**ವಿ.ಸೂ.:** ಕಾರ್ಯಕ್ರಮದಲ್ಲಿ ಏನಾದರೂ ಬದಲಾವಣೆಯಾದರೆ, ಆ ಸಮಯದಲ್ಲಿ ತಿಳಿಸಲಾಗುವುದು.

* * * * * *

ಡಾ.ಬಿ.ಆರ್.ಅಂಬೇಡ್ಕರ್ ಅವರು ತಂಗುವುದಕ್ಕೆ ಅಬ್ದುಲ್ ಭಾಯಿ ಖಾಕರ್ ಅವರ ಬಂಗಲೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಇದು ಗವರ್ನರ್ ಅವರ ಬಂಗಲೆಗೆ ಹತ್ತಿರವಾಗಿತ್ತು. ಆದರೆ ಡಾ.ಬಿ.ಆರ್.ಅಂಬೇಡ್ಕರ್ ಅಲ್ಲಿ ತಂಗುವುದಕ್ಕೆ ನಿರಾಕರಿಸಿದರು. ಇತರ ನಾಯಕರುಗಳ ಸಂಗಡವೇ ಉಳಿದುಕೊಳ್ಳಲು ಇಚ್ಛಿಸಿದರು. ಸಮ್ಮೇಳನ ನಡೆಯುವ ಸ್ಥಳ: ವೆಂಕಟೇಶ್ ಥಿಯೇಟರ್ (ನಂತರ ಇದು ಶ್ಯಾಮ್ ಟಾಕೀಸ್ ಆಯಿತು) ಅತಿಥಿಗಳ ವಸತಿಗಾಗಿ ಹತ್ತಿ(ಕಾಟನ್) ಮಾರುಕಟ್ಟೆ ಹತ್ತಿರ ವಿಶಾಲವಾದ ಪೆಂಡಾಲ್ ಒಂದನ್ನು ನಿರ್ಮಿಸಲಾಯಿತು. ಈ ಸಮ್ಮೇಳನದ ಜೊತೆಗೆ ಸಾಮಾಜಿಕ, ಶೈಕ್ಷಣಿಕ, ಯುವ ಮತ್ತು ಮಹಿಳಾ ಸಮ್ಮೇಳನಗಳನ್ನು ಸಹ ಆಯೋಜಿಸಲಾಗಿತ್ತು. ಸಾಮಾಜಿಕ ಸಮ್ಮೇಳನದ ಅಧ್ಯಕ್ಷರು ಮಿ.ಪಿ.ಎನ್.ರಾಜ್‌ಭೋಜ್, ದಶರಥ ಪಾಟೀಲರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಶ್ರೀಮತಿ ಶೇವಂತಬಾಯಿ ಓಗಲೆ, ಅಮರಾವತಿ ಅವರು ಮಹಿಳಾ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಹಾಗೆಯೇ ಶ್ರೀಮತಿ ತುಳಸಾಬಾಯಿ ಬನಸೋಡೆ, ನಾಗ್‌ಪುರ, ಶ್ರೀಮತಿ ಜೈಬಾಯಿ ಚೌಧರಿ, ನಾಗ್‌ಪುರ, ಶ್ರೀಮತಿ ಕಾಶೀಭಾಯಿ, ವುಂಡೋಧರೆ ಅಂಕೋಲ ಇವರುಗಳು ಕಾರ್ಯದರ್ಶಿಗಳಾಗಿದ್ದರು. ಅಡ್ವೋಕೇಟ್ ಶಿವದಯಾಳ್ ಸಿಂಗ್, ಲಕ್ನೋ, ಇವರು ಯುವಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ರಾಘವೇಂದ್ರ ಬೋರ್‌ಕರ್ ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು.

## ಈ ಕಾಂಗ್ರೆಸ್‌ನ ಪ್ರಾಮುಖ್ಯತೆ

ಅಸ್ಪೃಶ್ಯರ ರಾಜಕೀಯ ಉತ್ಥಾನಕ್ಕಾಗಿ ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್ ಒಂದು ಚಾರಿತ್ರಿಕ ಪಾತ್ರವನ್ನು ನಿರ್ವಹಿಸಿತ್ತು. ಮೊದಲನೆಯದಾಗಿ, ಅದು ಒಂದೇ ಧ್ವಜದ ಕೆಳಗೆ ಭಾರತದ ಎಲ್ಲ ಕಡೆಯ ಅಸ್ಪೃಶ್ಯರನ್ನು ಒಂದುಗೂಡಿಸಿದ ಮೊಟ್ಟಮೊದಲನೆಯ ಸಮ್ಮೇಳನ. ಎರಡನೆಯದಾಗಿ, ಅಸ್ಪೃಶ್ಯರ ನಾಯಕರುಗಳು ಮೊಟ್ಟಮೊದಲ ಬಾರಿಗೆ ಡಾ.ಅಂಬೇಡ್ಕರ್ ಅವರ ಮುಂದಾಳತ್ವವನ್ನು ಒಪ್ಪಿಕೊಂಡು ಅಖಿಲ ಭಾರತ ಮಟ್ಟದಲ್ಲಿ ತಮ್ಮ ರಾಜಕೀಯ ಬೇಡಿಕೆಗಳನ್ನು ಸಲ್ಲಿಸಿದರು. ಮೂರನೆಯದಾಗಿ, ಲಂಡನ್ನಿನಲ್ಲಿ ಆಯೋಜಿಸಿದ್ದ ದುಂಡುಮೇಜಿನ ಸಮ್ಮೇಳನಕ್ಕೆ ಡಾ.ಅಂಬೇಡ್ಕರ್ ಅವರನ್ನು ತಮ್ಮ ನಾಯಕನಾಗಿ ಪ್ರತಿನಿಧಿಸಲು ಒಮ್ಮತದಿಂದ ಚುನಾಯಿಸಿದರು. ನಾಲ್ಕನೆಯದಾಗಿ, ಅಸ್ಪೃಶ್ಯರ ಅಖಿಲ ಭಾರತ ಮಟ್ಟದ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಕಡೆಯದಾಗಿ ಅಸ್ಪೃಶ್ಯರ ಯೋಜಿತ ರಾಜಕೀಯ ಮೈಲಿಗಲ್ಲನ್ನು ಸ್ಥಾಪಿಸಲಾಯಿತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅನೇಕಾನೇಕ ವರ್ಷಗಳಿಂದ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದ ಅಸ್ಪೃಶ್ಯರ ಸಮ್ಮೇಳನ, ಪಂಚಮ ಜಾತಿಯ ಭಾರತ ಸ್ವಾತಂತ್ರ್ಯ ಸೆಣಸಾಟದ ಮೊದಲನೆಯ ಪುಟವನ್ನು ಬರೆಯಲಾಯಿತು.

ಎಲ್ಲಾ ಸೇರಿ, ಈ ಸಮ್ಮೇಳನದಲ್ಲಿ ೧೩ ನಿರ್ಣಯಗಳನ್ನು ಒಮ್ಮತದಿಂದ ಅನುಮೋದಿಸಲಾಯಿತು.

## ನಿಮ್ನವರ್ಗಗಳ ಕಾಂಗ್ರೆಸ್‌ನ ನಿರ್ಣಯಗಳು

ಡಾ.ಬಿ.ಆರ್.ಅಂಬೇಡ್ಕರ್ ಎಮ್.ಎ, ಪಿ.ಎಚ್.ಡಿ., ಡಿಎಸ್‌ಸಿ / ಭಾರತ್ ಅಟ್-ಲಾ, ಎಮ್.ಎಲ್.ಸಿ ಇವರ ಅಧ್ಯಕ್ಷತೆಯಲ್ಲಿ ಸೇರಿದ ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್, ನಾಗ್‌ಪುರದಲ್ಲಿ ದಿನಾಂಕ:೦೮.೦೮.೧೯೩೦ ರಂದು ಈ ಕೆಳಗಿನ ನಿರ್ಣಯಗಳನ್ನು ಅನುಮೋದನೆ ಮಾಡಿತು.

೧. ಭಾರತ ರಾಷ್ಟ್ರೀಯ ಕಾಂಗ್ರೆಸ್ ಘೋಷಣೆ ಮಾಡಿದ ಸ್ವಾತಂತ್ರ್ಯದ ಕಲ್ಪನೆ ವಿನಾಶಕಾರಿಯಾಗಿದ್ದು, ಭಾರತದ ಹಿತದೃಷ್ಟಿಯಿಂದ ಹಾನಿಕಾರಕವಾಗಿದೆಯೆಂದು ಈ ಕಾಂಗ್ರೆಸ್ ಹಿಂದು ಮುಂದು ನೋಡದೆ ಘೋಷಣೆ ಮಾಡುತ್ತದೆ. ಆದುದರಿಂದ, ಆ ಆಡಳಿತದಿಂದ ಅದು ದೂರವಿರುತ್ತದೆ. ಈ ಕಾಂಗ್ರೆಸ್‌ನ ಅಭಿಪ್ರಾಯದಲ್ಲಿ, ಭಾರತದ ಈ ಪರಿಸ್ಥಿತಿಯಲ್ಲಿ ಸಾಮಂತ ರಾಜ್ಯದ ಸ್ಥಾನಮಾನ(ಡೊಮಿನಿಯನ್ ಸ್ಟೇಟಸ್)ವನ್ನು ಕೊಡುವುದೇ ಅತ್ಯುತ್ತಮವಾಗಿದೆ.

೨. **ಅತಿ ಶೀಘ್ರದಲ್ಲಿ ಸಾಮಂತ ರಾಜ್ಯದ ಸ್ಥಾನಮಾನ :** ಸಾಮಂತ ರಾಜ್ಯದ ಗುರಿಯನ್ನು ವಾಸ್ತವಗೊಳಿಸುವ ವಿಷಯದಲ್ಲಿ ಎಲ್ಲ ವಿಷಯಗಳಲ್ಲೂ ಕಾರ್ಯ ನಿರ್ವಾಹಕ ಜವಾಬ್ದಾರಿಯನ್ನು ವರ್ಗಾಯಿಸುವುದಕ್ಕೆ ಈ ಕಾಂಗ್ರೆಸ್‌ನ ಆಕ್ಷೇಪಣೆ ಇಲ್ಲ. ಆದರೆ, ಸಮರ್ಪಕ ಆಡಳಿತದ ದೃಷ್ಟಿಯ ಕಾರಣ ಕೊಟ್ಟು ಹತೋಟಿಯನ್ನು ತತ್‌ಕ್ಷಣ ವರ್ಗಾಯಿಸಲಾಗದು. ಆದರೂ ಕೂಡ ನಿಮ್ನವರ್ಗಗಳ ಸುರಕ್ಷತೆ ಮತ್ತು ಭದ್ರತೆಯ ದೃಷ್ಟಿಯಿಂದ ಈ ಕೆಳಗಿನ ರಕ್ಷಣೆಯನ್ನು ಭಾರತ ಸಂವಿಧಾನದಲ್ಲಿ ಸೇರಿಸಬೇಕು.

   ೧) ಕೇಂದ್ರದ ಮತ್ತು ಪ್ರಾದೇಶಿಕ ಶಾಸನ ಸಭೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ.

   ೨) ದೇಶದ ಲೋಕ ಸೇವೆಗಳಲ್ಲಿ ಸಾಕಷ್ಟು ಅನುಪಾತದಲ್ಲಿ ಮೀಸಲು.

೩. ಶೈಕ್ಷಣಿಕ ವಿಷಯಗಳಲ್ಲಿ ಸ್ಥಳೀಯ ಸಂಸ್ಥೆಗಳ ಇತರ ಹಕ್ಕುಗಳ ಮತ್ತು ಹಿತಾಸಕ್ತಿಗಳ ವಿಷಯದಲ್ಲಿ

ರಾಜ್ಯ ಕಾರ್ಯದರ್ಶಿಯವರಿಗೆ ಮೇಲ್ಮನವಿ ಮಾಡುವ ಹಕ್ಕು, ರಾಜ್ಯ ಕಾರ್ಯದರ್ಶಿಯವರು ಈ ಮೇಲ್ಮನವಿಯನ್ನು ಪರಿಗಣನೆ ಮಾಡಿದ ಮೇಲೆ, ಬಜೆಟ್‌ನಲ್ಲಾಗಲೀ ಅಥವಾ ಯಾವುದೇ ಶಾಸನದಲ್ಲಾಗಲಿ ಸೂಕ್ತವಾದ ಉಪಬಂಧಗಳನ್ನು ಅವರಿಗೆ ಅವಶ್ಯಕವೆಂದು ಮತ್ತು ಸಾಕಷ್ಟು ಇದೆಯೆಂದು ಪ್ರಮಾಣೀಕರಿಸಿದರೆ, ಇಂಥ ಪ್ರಮಾಣಪತ್ರ ಭಾರತದ ಕೇಂದ್ರ ಅಥವಾ ಪ್ರಾಂತೀಯ ಕಾರ್ಯ ನಿರ್ವಾಹಕ ಶಾಖೆಯ ಮೇಲೆ ಕಡ್ಡಾಯವಾಗಿ ಅನುಸರಿಸಲೇಬೇಕಾಗುವಂತೆ ಆಗಬೇಕು.

೪. **ಅಮಾನವೀಯ ನಡತೆ :** ನಿಮ್ನವರ್ಗಗಳೆಡೆಗೆ ತಮ್ಮ ಅಮಾನವೀಯ ನಡತೆಯನ್ನು ನಿಜವಾಗಿ ಬದಲಾಯಿಸಿಕೊಂಡು ಅವರ ವಿಶ್ವಾಸವನ್ನು ಪಡೆದುಕೊಳ್ಳುವಲ್ಲಿ ಸಂಪ್ರದಾಯವಾದಿಗಳು ಸೋತಿರುವುದರಿಂದ, ಅಲ್ಲದೆ ಭಾರತದ ಭವಿಷ್ಯದ ಸಂವಿಧಾನದಲ್ಲಿ ನಿಮ್ನವರ್ಗಗಳಿಗೆ ಸೂಕ್ತ ರಕ್ಷಣೆಗಳನ್ನು ಒದಗಿಸುವುದಕ್ಕೆ ತಾವು ಸಿದ್ಧರಿದ್ದೇವೆಂದು ತೋರಿಸಿಲ್ಲದಿರುವುದರಿಂದ, ಅಲ್ಲದೆ ದೇಶದಲ್ಲಿರುವ ಸಾಮಾಜಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲರಿಗೂ ಗ್ರಾಸ್ಯವಾಗುವಂತೆ ಭಾರತದ ರಾಜಕೀಯ ಸಂವಿಧಾನವನ್ನು ರೂಪಿಸಲಸಾಧ್ಯವೆಂದು ನಿಮ್ನವರ್ಗಗಳಿಗೆ ಗೊತ್ತಾಗಿರುವುದರಿಂದ ಮತ್ತು ಸಂವಿಧಾನದಲ್ಲಿ ಅವಶ್ಯಕವಾದ ಹೊಂದಾಣಿಕೆಯನ್ನು ಪರಸ್ಪರ ಒಪ್ಪಿಗೆಯಿಲ್ಲದೆ ಮಾಡಲಾಗುವುದಿಲ್ಲವಾದ್ದರಿಂದ ಮತ್ತು ನಾಗರೀಕ ಅಸಹಕಾರ ಚಳುವಳಿ (ಸರ್ಕಾರವನ್ನು?) ಕಾಲ್ತುಳಿತಕ್ಕೆ ಸಿಕ್ಕಿಸುವ ರೀತಿಯದಾದ್ದರಿಂದ, ನಿಮ್ನವರ್ಗಗಳು ಅದರಲ್ಲಿ ಭಾಗವಹಿಸಕೂಡದೆಂದು ಮನವಿ ಮಾಡುತ್ತದೆ.

೫. ಆರ್.ಟಿ.ಸಿ. ಒಪ್ಪಿಗೆಯಾಗಿದೆ (ದುಂಡುಮೇಜಿನ ಸಮ್ಮೇಳನಕ್ಕೆ ಒಪ್ಪಿಗೆಯಿದೆ) : ಪ್ರಸ್ತುತ ಸಂವಿಧಾನಿಕ ಸಮಸ್ಯೆಯನ್ನು ಸರಿಪಡಿಸುವುದಕ್ಕೆ ದುಂಡುಮೇಜಿನ ಸಮ್ಮೇಳನವೇ ಅತ್ಯುತ್ತಮವಾದ ಮಾಧ್ಯಮವೆಂದು ಈ ಕಾಂಗ್ರೆಸ್ ಒಪ್ಪಿಕೊಳ್ಳುತ್ತದೆ ; ಅದರಲ್ಲಿ ಭಾಗವಹಿಸಬೇಕೆಂದು ನಿಮ್ನವರ್ಗಗಳವರಿಗೆ ಸಲಹೆ ಮಾಡುತ್ತದೆ. ಇದೇ ಕಾಲಕ್ಕೆ, ಈ ಅವಕಾಶವನ್ನು ಉಪಯೋಗಿಸಿಕೊಂಡು, ಈ ಕಾಂಗ್ರೆಸ್ ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವುದೇನೆಂದರೆ, ದುಂಡುಮೇಜಿನ ಸಮ್ಮೇಳನ ಸಂಪೂರ್ಣವಾಗಿ ಯಶಸ್ವಿಯಾಗುವಂತೆ ಮಾಡುವ ಅವಶ್ಯಕತೆ ಇದ್ದು, ಈ ಸಮ್ಮೇಳನಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ನಿಮ್ನವರ್ಗಗಳವರು ಸೇರಿದಂತೆ – ಅವರಿಗೆ ತಕ್ಕ ಅನುಪಾತದಲ್ಲಿ – ಎಲ್ಲ ಪಕ್ಷಗಳನ್ನು ಆಮಂತ್ರಿಸಬೇಕೆಂದು ಕೇಳುತ್ತದೆ.

೬. ಈ ದೇಶದ ಶಾಸನ ಸಭೆಗಳಲ್ಲಿ, ನಾಮನಿರ್ದೇಶನದ ಮೂಲಕ ನಿಮ್ನವರ್ಗಗಳವರಿಗೆ ಪ್ರಾತಿನಿಧ್ಯವನ್ನು ಕಲ್ಪಿಸುವ ವ್ಯವಸ್ಥೆಗೆ ಈ ಕಾಂಗ್ರೆಸ್‌ನ ವಿರೋಧವಿದೆ. ಅದು ತಮ್ಮದೇ ಜನಗಳಿಂದ ಚುನಾವಣೆಯ ಮೂಲಕ ಪ್ರಾತಿನಿಧ್ಯವನ್ನು ಕಲ್ಪಿಸಬೇಕೆಂದು ಒತ್ತಾಯಿಸುತ್ತದೆ. ಅಲ್ಲದೆ, ಇತರ ಸಮುದಾಯಗಳಿಗೆ ಸೇರಿದವರಿಂದ ನಿಮ್ನವರ್ಗಗಳವರಿಗೆ ನಾಮನಿರ್ದೇಶನದ ಮೂಲಕ ಪ್ರಾತಿನಿಧ್ಯವನ್ನು ಕಲ್ಪಿಸಿ, ಗವರ್ನರ್ ಅವರಿಂದ ಪ್ರಮಾಣೀಕರಿಸುವ ಉಪಬಂಧದಷ್ಟರ ಮಟ್ಟಿಗೆ ಸೈಮನ್ ಆಯೋಗದ ಶಿಫಾರಸ್ಸುಗಳನ್ನು ತಿರಸ್ಕರಿಸುತ್ತದೆ.

೭. **ನಮಗೆ ಸಂಯುಕ್ತ ಮತದಾರರ ಮಂಡಳಿ ಬೇಕು:** ಪ್ರತ್ಯೇಕ ಮತದಾರರ ಮಂಡಲಿ ಪರಿಣಾಮಕಾರಿಯಾದುದೆಂಬುದನ್ನು ಒಪ್ಪಿಕೊಳ್ಳುತ್ತಾದರೂ, ಈ ಕಾಂಗ್ರೆಸ್ ಸಂಯುಕ್ತ ಚುನಾವಣೆದಾರರ ಮಂಡಲಿಯನ್ನು ಮತ್ತು ನಿಮ್ನವರ್ಗಗಳವರಿಗೆ ವಯಸ್ಕ ಮತದಾನ

ವ್ಯವಸ್ಥೆಯ ಮೂಲಕ ಮೀಸಲು ಸ್ಥಾನಗಳನ್ನು ಕೊಡುವುದನ್ನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತದೆ.

೮. ತಮ್ಮ ಪ್ರಾತಿನಿಧ್ಯದ ಬೇಡಿಕೆಗಳನ್ನು ಅಪಮೌಲ್ಯ ಮಾಡಿ, ಇತರ ಅಲ್ಪಸಂಖ್ಯಾತ ಸಮುದಾಯಗಳವರಿಗೆ ಹೆಚ್ಚಿನ ಮಹತ್ವವನ್ನು ಸೈಮನ್ ಆಯೋಗ ನೀಡಿರುವುದಕ್ಕೆ ಈ ಕಾಂಗ್ರೆಸ್ ವಿಷಾದಿಸುತ್ತದೆ. ಈ ಅಲ್ಪಸಂಖ್ಯಾತರ ನಿರ್ಬಲತೆಗಳು, ನಿಮ್ನವರ್ಗಗಳು ತೊಳಲುತ್ತಿರುವ ನಿರ್ಬಲತೆಗಳಿಗೆ ಹೋಲಿಸಿದರೆ ಏನೂ ಇಲ್ಲ. ಈ ಕಾಂಗ್ರೆಸ್ ಎಲ್ಲ ಅಲ್ಪಸಂಖ್ಯಾತರ ಸಮುದಾಯಗಳನ್ನೂ ಸಮಾನವಾಗಿ ನಡೆಸಿಕೊಳ್ಳಬೇಕೆಂಬ ತತ್ವಗಳನ್ನು ಆವಾಹಿಸುತ್ತದಲ್ಲದೆ, ನಿಮ್ನವರ್ಗಗಳವರಿಗೆ ಅವರ ನಿರ್ಬಲತೆಗಳಿಗನುಸಾರವಾಗಿ ಅಲ್ಲದೆ ಅವರ ಜನಸಂಖ್ಯೆಗೆ ಆಧಾರಿತ ಪ್ರಾತಿನಿಧ್ಯವನ್ನು ಕೊಡಬೇಕೆಂದು ಒತ್ತಾಯಿಸುತ್ತದೆ.

೯. **ಅಪರೋಕ್ಷ ಪ್ರಾತಿನಿಧ್ಯ :** ವಿಧಾನ ಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಅಪರೋಕ್ಷವಾದ ಚುನಾವಣೆಯ ಮೂಲಕ ಪ್ರಾತಿನಿಧ್ಯವನ್ನು ಕಲ್ಪಿಸುವ ವ್ಯವಸ್ಥೆಯನ್ನು ಈ ಕಾಂಗ್ರೆಸ್ ಒಪ್ಪಿಕೊಳ್ಳುತ್ತಾದರೂ, ನಿಮ್ನವರ್ಗಗಳವರಿಗೆ ಸಾಕಷ್ಟು ಪ್ರಾತಿನಿಧ್ಯದ ಹಕ್ಕಿಗೆ ಮಾನ್ಯತೆ ಕೊಡಬೇಕೆಂದು ಒತ್ತಾಯಿಸುತ್ತದೆ.

೧೦. ರಾಜ್ಯ ಸಭೆಯಲ್ಲಿ ನಿಮ್ನವರ್ಗಗಳವರಿಗೆ ಯಾವ ಉಪಬಂಧವನ್ನೂ ಸೈಮನ್ ಆಯೋಗ ಕಲ್ಪಿಸದೇ ಇರುವುದಕ್ಕೆ ಈ ಕಾಂಗ್ರೆಸ್ ವಿಷಾದಿಸುತ್ತದೆ ; ರಾಜ್ಯ ಸಭೆಯಲ್ಲಿ ನಿಮ್ನವರ್ಗದವರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡಬೇಕೆಂಬುದನ್ನು ಮಾನ್ಯ ಮಾಡಬೇಕೆಂದು ಒತ್ತಾಯಿಸುತ್ತದೆ.

೧೧. ವಿಧಾನ ಸಭೆಯ ಪುನರ್ರಚನೆಗಾಗಿ ಸೈಮನ್ ಆಯೋಗ ತಯಾರು ಮಾಡಿರುವ ಚೌಕಟ್ಟನ್ನು, ಅದರ ಅನುಕೂಲವನ್ನು ಮನಗಾಣುತ್ತಾದರೂ, ಈ ಕಾಂಗ್ರೆಸ್‌ನ ಅಭಿಪ್ರಾಯದಲ್ಲಿ ಇದು ವಿಧಾನ ಸಭೆಗಿಂತ ರಾಜ್ಯ ಸಭೆಗೆ ಹೆಚ್ಚು ಸೂಕ್ತವಾದುದಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸಭೆಯನ್ನು ಇನ್ನೂ ಹೆಚ್ಚಿನ ಪ್ರಜಾಸತ್ತಾತ್ಮಕ ನಿಕಾಯವಾಗಿ ಮಾಡುವುದಕ್ಕಾಗಿ ಅದರ ಅಂಗರಚನೆಯನ್ನು ಉತ್ತಮಪಡಿಸುವ ಅತ್ಯಾವಶ್ಯಕತೆ ಇರುವುದರಿಂದ, ಈ ಕಾಂಗ್ರೆಸ್‌ನ ಅಭಿಪ್ರಾಯದಲ್ಲಿ ಸೈಮನ್ ಆಯೋಗ ಅಸೆಂಬ್ಲಿಗೆ ಸೂಚಿಸಿದ ಚೌಕಟ್ಟನ್ನು ರಾಜ್ಯ ಸಭೆಗೂ ಅನ್ವಯಿಸಬೇಕು ಮತ್ತು ಅಸೆಂಬ್ಲಿಯನ್ನು ನೇರ ಚುನಾವಣೆ ಮೂಲಕ ರಚಿಸಬೇಕು.

೧೨. **ಸೈಮನ್ ವರದಿಯನ್ನು ಖಂಡಿಸಲಾಯಿತು :** ಭಾರತದಲ್ಲಿನ ಮಿಲಿಟರಿಗೆ ಸಂಬಂಧಿಸಿದ ಹಾಗೆ ಸೈಮನ್ ಆಯೋಗದ ಪ್ರಸ್ತಾವನೆಗಳನ್ನು ಈ ಕಾಂಗ್ರೆಸ್ ಅನುಮೋದಿಸುವುದಿಲ್ಲ. ಈ ಕಾಂಗ್ರೆಸ್‌ನ ಅಭಿಪ್ರಾಯದಲ್ಲಿ, 'ಸೇನೆ' ಮೀಸಲಿಟ್ಟ ವಿಷಯವಾದರೂ, ಅದನ್ನು ಭಾರತ ಸರ್ಕಾರ ಕಾರ್ಯಾಂಗದ ಹತೋಟಿಯಿಂದ ಹಿಂದೆ ತೆಗೆದುಕೊಳ್ಳಬಾರದು.

೧೩. ಒಂದು ಕೇಂದ್ರೀಯ ಅಖಿಲ ಭಾರತ ಸಂಸ್ಥೆ ಭಾರತದ ನಿಮ್ನವರ್ಗದವರಿಗೆ ಇರಬೇಕಾದ ಅವಶ್ಯಕತೆ ಇದೆ ಎಂಬುದು ಈ ಕಾಂಗ್ರೆಸ್‌ಗೆ ಮನದಟ್ಟಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ಕಾಂಗ್ರೆಸ್ ಒಂದು ಸಮಿತಿಯನ್ನು ನೇಮಕ ಮಾಡಿದೆ.

೧) ಇಂಥದೊಂದು ಅಖಿಲ ಭಾರತ ಸಂಸ್ಥೆಯ ಅಂಗರಚನೆಯನ್ನು ರೂಪಿಸಿ, ಈ ಕಾಂಗ್ರೆಸ್‌ನ ಮುಂದಿನ ಅಧಿವೇಶನದಲ್ಲಿ ಇಡಬೇಕು.

೨) ಮುಂದಿನ ವರ್ಷಕ್ಕೆ ಈ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯಾಗಿ ಕೆಲಸ ನಿರ್ವಹಿಸಿ, ದೇಶದಲ್ಲಿನ ಪ್ರಸ್ತುತ ರಾಜಕೀಯ ಪರಿಸ್ಥಿತಿಯಿಂದ ಉದ್ಭವಿಸುವ ನಿಮ್ನವರ್ಗಗಳಿಗೆ ಸಂಬಂಧಪಟ್ಟ

ಎಲ್ಲ ವಿಷಯಗಳನ್ನು ಕುರಿತು ವ್ಯವಹರಿಸಬೇಕು.

೮ನೇ ಆಗಸ್ಟ್ ೧೯೩೦ರಂದು ನಾಗ್‌ಪುರದಲ್ಲಿ ನಡೆದ ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್ ಅನ್ನು ಉದ್ದೇಶಿಸಿ ಡಾ.ಅಂಬೇಡ್ಕರ್ ಅವರು ಮಾಡಿದ ಅಧ್ಯಕ್ಷ ಭಾಷಣ :–

ಮಹಿಳೆಯರೇ ಮತ್ತು ಮಹನೀಯರೆ, ಈ ದಿನ ನಿಮ್ಮ ನಡವಳಿಕೆಗಳ ಮೇಲೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿ, ಗೌರವಿಸಿದ್ದಕ್ಕೆ ನನಗೆ ಬಹಳಷ್ಟು ಮೆಚ್ಚಿಗೆಯಾಗಿದೆ. ಇದಕ್ಕಾಗಿ ನಾನು ನಿಮಗೆ ಅಭಾರಿಯಾಗಿದ್ದೇನೆ. ನೀವು ನನ್ನಲ್ಲಿ ಇಟ್ಟಿರುವ ನಂಬಿಕೆಯನ್ನು ನಾನು ಬಹುವಾಗಿ ಮೆಚ್ಚಿಕೊಂಡರೂ, ಈ ಸ್ಥಾನದ ಜವಾಬ್ದಾರಿ ಏನೆಂಬುದು ನನಗೆ ಗೊತ್ತಿದೆ. ನೀವು ನನ್ನಲ್ಲಿ ಅಭಿಮಾನವಿಟ್ಟು ಕೂರಿಸಿರುವ ಈ ಸ್ಥಾನದ ಹೊಣೆಯನ್ನು ನಿಭಾಯಿಸುವುದು ಬಹಳ ಕಷ್ಟದ ಕೆಲಸವಾಗಿದೆ. ಅದರಿಂದ ತಪ್ಪಿಸಿಕೊಂಡು ಹೋಗಿಬಿಡುವುದು ಬುದ್ಧಿ ಇಲ್ಲದೆ ಮಾಡುವಂಥ ಕೆಲಸವೇನು ಅಲ್ಲ. ಹೇಗಾದರೂ, ಈ ಸ್ಥಾನವನ್ನು ಒಪ್ಪಿಕೊಳ್ಳಲು ಕಾರಣವೇನೆಂದರೆ, ಇಂಥ ಸಂಧಿಕಾಲದಲ್ಲಿ ತನ್ನ ಸೇವೆಯನ್ನು ತನ್ನ ದೇಶವಾಸಿಗಳಿಗೋಸ್ಕರ ಯಾವ ಹಿಂಜರಿತವೂ ಇಲ್ಲದೆ, ಮುಡುಪಾಗಿಡುವುದು ಪ್ರತಿಯೊಬ್ಬ ಸಾರ್ವಜನಿಕ ವ್ಯಕ್ತಿಯ ಕರ್ತವ್ಯವಾಗಿದೆ. ಈ ದೇಶವಾಸಿಗಳೆಲ್ಲರೂ ಒಂದೇ ಧ್ಯೇಯ ಸಾಧನೆಗಾಗಿ ಶ್ರಮಿಸುತ್ತಿದ್ದಾರೆ. ಆದರೆ ಈ ಹೊಣೆಗಾರಿಕೆಯನ್ನು ನಾನು ತೆಗೆದುಕೊಳ್ಳುವಲ್ಲಿ ನೀವುಗಳು ನನಗೆ ಕೊಡುವ ಬೆಂಬಲ ಮತ್ತು ಸಹಾಯವನ್ನು ಹಿಂದೆ ತೆಗೆದುಕೊಳ್ಳುವುದಿಲ್ಲವೆಂಬ ನಂಬಿಕೆಯಿಂದ ಧೈರ್ಯವನ್ನು ಪಡೆದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಇಲ್ಲಿ ಸೇರಿರುವ ನಮ್ಮ ಜನರ ನಂಬಿಕಸ್ತ ಮುಂದಾಳುಗಳು ತಮ್ಮ ಪರ್ಯಾಲೋಚಿಸಿದ ತೀರ್ಮಾನ ಹಾಗೂ ಮಾಗಿದ ಅನುಭವದ ಪೂರ್ಣಫಲವನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಾರೆಂದೂ ಕೂಡ ನಂಬಿರುತ್ತೇನೆ.

### I ಭಾರತದಲ್ಲಿ ಸ್ವಯಮಾಡಳಿತದಲ್ಲಿ ಇರುವ ಸಮಸ್ಯೆ

೨.ಕ್ಷಿತಿಜದಲ್ಲಿ ದೊಡ್ಡದಾಗಿ ಚಾಚಿಕೊಂಡಿರುವ ಒಂದೇ ಒಂದು ಪ್ರಶ್ನೆಯೆಂದರೆ ಈ ದೇಶದ ಜನರಿಗೆ ಒಗ್ಗಟ್ಟಿನಿಂದ ಒಂದು ಸ್ವಯಮಾಡಳಿತ ಮಾಡಬಲ್ಲ ಸಮುದಾಯವಾಗಲು ಸಾಧ್ಯವೇ ಎಂಬುದು. ಈ ಪ್ರಶ್ನೆಗೆ ಸಂಬಂಧಿಸಿದ ಹಾಗೆ ನಿಮ್ನವರ್ಗಗಳ ಧೋರಣೆಯನ್ನು ವಿಶದೀಕರಿಸಲು ನಾವು ಇಲ್ಲಿ ಸೇರಿಲ್ಲ. ಈ ಪ್ರಶ್ನೆ ಈ ದೇಶದ ಮನಸ್ಸಷ್ಟನ್ನೇ ಅಲ್ಲ, ಬ್ರಿಟೀಷ್ ಚಕ್ರಾಧಿಪತ್ಯವನ್ನಷ್ಟೇ ಅಲ್ಲ, ಇಡೀ ಪ್ರಪಂಚವನ್ನೇ ಕಾಡುತ್ತಿದೆ. ಈ ಪ್ರಶ್ನೆಗೆ ನಾವು ಕೊಡುವ ಉತ್ತರ ಈ ದೇಶದ ಅಂತಿಮ ಭವಿಷ್ಯವನ್ನು ನಿರ್ಧರಿಸುವಲ್ಲಿ, ಮಹತ್ತರವಾದ ಮಾರ್ಗವನ್ನು ಕ್ರಮಿಸಲಿದೆ. ನಾವು ತೆಗೆದುಕೊಳ್ಳುವ ತೀರ್ಮಾನ ಅದನ್ನು ಸಾಕ್ಷಾತ್ಕರಿಸಿಕೊಳ್ಳುವಲ್ಲಿ ತಡೆಯನ್ನು ಉಂಟುಮಾಡುವ ಇಲ್ಲವೇ ವೇಗೋತ್ಕರ್ಷವನ್ನು ಉಂಟು ಮಾಡುವ ಸುಪ್ತಶಕ್ತಿಯನ್ನು ಖಂಡಿತವಾಗಿ ಒಳಗೊಂಡಿದೆ. ಬಹುಶಃ ಅದು ವೃದ್ಧಿ ಮಾಡಬಹುದು ಇಲ್ಲವೇ ಹಾಳುಗೆಡವಬಹುದು. ಆದ್ದರಿಂದ ನೀವು ಈ ಪ್ರಶ್ನೆಯನ್ನು ಹಗುರವಾಗಿ ತೆಗೆದುಕೊಳ್ಳಲಾಗುವುದಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಆದ್ದರಿಂದ ಅದರ ಸಾಧಕ–ಭಾದಕಗಳನ್ನು ಆಳವಾಗಿ ಸರಿಪಡಿಸಿ, ತುಲನೆ ಮಾಡಲೇಬೇಕು. ನಮ್ಮ ತೀರ್ಮಾನ ಇತರರು ತೆಗೆದುಕೊಳ್ಳುವ ತೀರ್ಮಾನಕ್ಕಿಂತ ಭಿನ್ನವಾಗಿರುತ್ತದೆಂದು ನಮಗೆ ಅಂಜಿಕೆಬೇಡ. ಆದರೆ ನಮ್ಮ ಅಂತಿಮ ತೀರ್ಮಾನಗಳು ಮುಕ್ತವಾಗಿ ಚಿಂತನೆ ಮತ್ತು ಪ್ರಾಮಾಣಿಕ ನಂಬಿಕೆಯ ಫಲಿತವಾಗಿರಬೇಕೆಂಬುದಕ್ಕೆ ನಾವು ಎಚ್ಚರದಿಂದ ಇರೋಣ.

೩.ಈ ಪ್ರಶ್ನೆಗೆ ಎರಡು ಮಗ್ಗಲುಗಳು ಇವೆ ಎಂಬುದು ನಿಮಗೆ ಗೊತ್ತು. ಭಾರತದ ಜನಾಂಗ ಅನೇಕಾನೇಕ ಪ್ರತ್ಯೇಕ ಪ್ರತ್ಯೇಕವಾದ ಬುಡಕಟ್ಟುಗಳಿಗೆ ಸೇರಿದ ಜನಾಂಗವೆಂದು ಗುರುತಿಸಲಾಗಿದೆ. ಅವರು ಬೇರೆ ಬೇರೆ ಮತಧರ್ಮಗಳ ಅನುಯಾಯಿಗಳಾಗಿದ್ದು, ನಂಬಿಕೆಗಳು ವೈರುದ್ಯದಿಂದ ಕೂಡಿದ್ದು, ಅಚರಣೆಗಳೂ

ಸಹ ಬೇರೆ ಬೇರೆಯಾಗಿವೆ. ಅವರು ಬೇರೆ ಬೇರೆ ಭಾಷೆಗಳನ್ನು ಮಾತನಾಡುತ್ತಾರೆ. ಭಿನ್ನವಾದ ಹೊಂದಾಣಿಕೆಯಾಗದ ಪೂರ್ವಾಗ್ರಹಗಳಿಂದ ಒಬ್ಬರಿಗೊಬ್ಬರು ಪ್ರತ್ಯೇಕಿಸಲ್ಪಟ್ಟಿದ್ದಾರೆ. ತಿಕ್ಕಾಟದಿಂದ ಕೂಡಿದ ಸಾಮಾಜಿಕ ಆಚರಣೆಗಳು ಒಂದಕ್ಕೊಂದು ವಿರೋಧವಾಗಿರುವ ಸಾಮಾಜಿಕ ಆಚರಣೆಗಳು ಒಂದಕ್ಕೊಂದು ವಿರೋಧವಾಗಿರುವ ಪ್ರಾಪಂಚಿಕ ಆಸಕ್ತಿಗಳು, ಈ ವಿಜಾತಿಯ ವೈವಿಧ್ಯತೆಯಿಂದ ಕೂಡಿದ ಜನಾಂಗ ಒಂದು ಸ್ವಯಮಾಡಳಿತ ಸಮುದಾಯವಾಗಿ ಹೇಗೆ ಕೆಲಸ ಮಾಡಬಲ್ಲದು ಎಂದು ಈಗ ಎದ್ದಿರುವ ಪ್ರಶ್ನೆ. ಈ ವಾಸ್ತವಗಳು ಕಲ್ಲಿನಂತೆ ಗಡುಸಾಗಿದ್ದು, ಭಾರತದಲ್ಲಿ ಸ್ವಯಮಾಡಳಿತ ಪ್ರಶ್ನೆಯ ಮೇಲೆ ಇದು ಯಾವ ರೀತಿ ತಳುಕು ಹಾಕಿಕೊಂಡಿದೆಯೆಂಬುದನ್ನು ಯಾವ ಬುದ್ಧಿವಂತನೇ ಆಗಲೀ ಕಡೆಗಣಿಸುವ ಹಾಗಿಲ್ಲ. ಆದರೆ ಈ ಕಟುಸತ್ಯಗಳನ್ನು ಒಪ್ಪಿಕೊಳ್ಳುತ್ತಾ ನಾವು ತಲುಪುವ ತೀರ್ಮಾನವೇನು? ಮಹನೀಯರೇ, ನಿಮ್ಮ ಅಭಿಪ್ರಾಯವನ್ನು ನೀವು ವ್ಯಕ್ತಪಡಿಸುವ ಮುಂಚೆ ನಿಮ್ಮ ಗಮನವನ್ನು ಇಷ್ಟೇ ಕಠಿಣವಾದ ಕೆಲವು ವಾಸ್ತವಗಳತ್ತ ಸೆಳೆಯಬಯಸುತ್ತೇನೆ. ಲಾಟ್‌ವಿಯಾ, ರುಮೇನಿಯಾ, ಲಿಥುವೇನಿಯಾ, ಯುಗೋಸ್ಲೋವಿಯಾ, ಎಸ್ತೋನಿಯಾ ಮತ್ತು ಜೆಕೋಸ್ಲೋವಾಕಿಯಾದಂಥ ದೇಶಗಳಲ್ಲಿನ ಪರಿಸ್ಥಿತಿಯನ್ನು ನೋಡಿ. ಈ ಹೊಸ ದೇಶಗಳು ೧೯೧೪ರ ಮಹಾಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ದೇಶಗಳು. ಈ ಯುದ್ಧವನ್ನು ಪ್ರಪಂಚದೆಲ್ಲೆಡೆ ಸ್ವಯಾಮಾಡಳಿತ ತತ್ವವನ್ನು ಸ್ಥಾಪಿಸಲೋಸುಗವೆಂದೇ ಕಂಠೋಕ್ತವಾಗಿ ಹೇಳಿದ ಉದ್ದೇಶಗಳಿಗಾಗಿಯೇ ಹೋರಾಡಲಾಗಿತ್ತು. ಹೊಸದಾಗಿ ರಚಿಸಲ್ಪಟ್ಟ ಈ ದೇಶಗಳೆಲ್ಲವೂ ಸ್ವಯಮಾಡಳಿತವುಳ್ಳ ಪರಮಾಧಿಕಾರವುಳ್ಳ ಸ್ವತಂತ್ರ ದೇಶಗಳಾಗಿದ್ದು, ಪ್ರತಿ ದೇಶವೂ ತನ್ನ ಆಂತರಿಕ ಮತ್ತು ವಿದೇಶ ವ್ಯವಹಾರಗಳಲ್ಲಿ ಪರಮೋಚ್ಛ ಅಧಿಕಾರವನ್ನು ಹೊಂದಿವೆ. ಈ ರಾಜ್ಯಗಳಲ್ಲಿನ ಸಾಮಾಜಿಕ ಸ್ಥಿತಿಗತಿಗಳೇನು? ಅದು ಭಾರತದಲ್ಲಿರುವಷ್ಟೇ ಏಕೆ, ಇನ್ನೂ ಕೆಟ್ಟದಾಗಿದೆ ಎಂಬುದನ್ನು ಕೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಲಾಟ್‌ವಿಯಾದಲ್ಲಿ ಲಾಟರು, ರಷಿಯನ್ನರು, ಯಹೂದಿಗಳು, ಜರ್ಮನರೂ ಅಲ್ಲದೆ, ಮತ್ತಿತರ ದೇಶಗಳವರೂ ಇದ್ದಾರೆ. ಲಿಥುವೇನಿಯಾದಲ್ಲಿ ಲಿಥುವೇನಿಯನ್‌ರು, ಯಹೂದಿಗಳು, ಪೋಲೆಂಡಿನವರು, ರಷ್ಯನ್‌ರು ಅಲ್ಲದೆ ಸಣ್ಣಪುಟ್ಟ ಅಲ್ಪಸಂಖ್ಯಾತರುಗಳೂ ಇದ್ದಾರೆ. ಯುಗೋಸ್ಲೋವಿಯಾದಲ್ಲಿ ಸರ್ಬರು, ಕ್ರೋಟಿರು, ಸ್ಲೊವೆನಿಗಳು, ರುಮೇನಿಯನ್‌ರು ಮತ್ತು ಹಂಗೇರಿಯನ್‌ರು, ಅಲ್ಬೇನಿಯನ್‌ರು ಮತ್ತು ಜರ್ಮನ್‌ರು ಇಷ್ಟೂ ಅಲ್ಲದೆ ಸ್ಲಾವ್ ಜನಗಳೂ ಇದ್ದಾರೆ. ಎಸ್ಥೋನಿಯಾದಲ್ಲಿ ಎಸ್ತೋನಿಯನ್‌ರು, ರಷ್ಯನ್‌ರು, ಜರ್ಮನ್‌ರು ಮತ್ತು ಇತರ ಚಿಕ್ಕ ಚಿಕ್ಕ ಗುಂಪುಗಳು ಇದ್ದಾರೆ. ಜೆಕೊಸ್ಲೋವಾಕಿಯಾದಲ್ಲಿ ಝೆಕ್ಕರು, ಜರ್ಮನ್‌ರು, ಮೆಗಿಯರು, ರುಥಿಯನ್ಸ್ ಮತ್ತು ಇತರರಿದ್ದಾರೆ. ಹಂಗೇರಿಯಲ್ಲಿ ಮೆಗಿಯರು, ಜರ್ಮನರು ಮತ್ತು ಸ್ಲೊವಾಕರು ಇದ್ದಾರೆ. ಜನಾಂಗದಿಂದ, ಭಾಷೆಯಿಂದ ಬೇರೆಯಾದ ಈ ಗುಂಪುಗಳು ತಮ್ಮ ತಮ್ಮ ರಾಜ್ಯಗಳಲ್ಲೇ ಕದನಕ್ಕಿಳಿದ ದೇಶಗಳಾಗಿದ್ದಾರೆ. ಅವರಲ್ಲಿ ಒಂದು ಧಾರ್ಮಿಕ ಒಗ್ಗಟ್ಟು ಸಹ ಇಲ್ಲ. ಇದ್ದಿದ್ದರೆ, ಈ ವೈವಿಧ್ಯಮಯ ಗುಂಪುಗಳು ಒಂದೇ ಆಗಿ ಬೆಸೆದುಕೊಳ್ಳಬಹುದಾಗಿತ್ತು. ಅದರ ನಡುವೆ ನಾಲ್ಕೈದು ಬಗೆಯ ಕ್ಯಾಥೋಲಿಕರುಗಳನ್ನು ನೀವು ಕಾಣಬಹುದು. ರೋಮನ್ ಕ್ಯಾಥೋಲಿಕರು, ಗ್ರೀಕ್ ಕ್ಯಾಥೋಲಿಕರು, ಜೆಕೊಸ್ಲಾವಾಕ್ ಕ್ಯಾಥೋಲಿಕರು ಇದ್ದಾರೆ. ಈ ಕ್ಯಾಥೋಲಿಕರುಗಳು ಅಲ್ಲದೆ, ಎವಾಂಜಿಲಿಕರುಗಳು, ಪ್ರೊಟೆಸ್ಟೆಂಟರುಗಳು, ಯಹೂದಿಗಳು, ಪ್ರೊಟೆಸ್ಟೆಂಟರು ಇವರೂ ಇದ್ದಾರೆ. ಅನೇಕಾನೇಕ ಪಂಥಗಳವರು ಅಲ್ಲಿ ಕಾಣಸಿಗುತ್ತಾರೆ. ಈ ಕುರಿತು ಸಾವಧಾನವಾಗಿ ಆಲೋಚಿಸಿ, ಈ ದೇಶಗಳಲ್ಲಿ ನಿಮಗೆ ಕಾಣಸಿಗುವಂಥ ವ್ಯವಸ್ಥಿತ ಮಾನವ ಗುಂಪಿಗಿಂತ ಭಾರತದ ಮಾನವ ಗುಂಪು ಹೆಚ್ಚು ದಿಗ್ಭ್ರಮೆಗೊಳಿಸುವಂಥದ್ದೇನು? ಹೆಚ್ಚು ವಿಜಾತಿಯವಾದದ್ದೇನು? ನಾನು ಅಳುಕಿಲ್ಲದೆ "ಇಲ್ಲ" ಎಂದು ಹೇಳುತ್ತೇನೆ. ಭಾರತದ ಬಗ್ಗೆ ನಿಮ್ಮ

ತೀರ್ಮಾನವನ್ನು ತೆಗೆದುಕೊಳ್ಳುವಾಗ ಅದು ಪ್ರಾಮಾಣಿಕವಾಗಿರಬೇಕಾದರೆ, ಮುಕ್ತವಾಗಿರಬೇಕಾದರೆ ಈ ವಾಸ್ತವಗಳನ್ನು ನೀವು ಸಂಜ್ಞಾನಕ್ಕೆ ತೆಗೆದುಕೊಳ್ಳಲೇಬೇಕು. ಮಹನೀಯರೆ, ಲಾಟವಿಯಾ, ಲಿಥುವೇನಿಯಾ, ಯುಗೋಸ್ಲಾವಿಯಾ, ಎಸ್ಟೋನಿಯಾ, ಜೆಕೋಸ್ಲೋವೇಕಿಯ, ಹಂಗೇರಿ ಮತ್ತು ರುಮೇನಿಯಾಗಳು ತಮ್ಮ ಎಲ್ಲಾ ಭಿನ್ನತೆಗಳ ನಡುವೆ ಅಂದರೆ ಜನಾಂಗ, ಸಂಘ, ಭಾಷೆ ಮತ್ತು ಸಂಸ್ಕೃತಿಗಳ ಭಿನ್ನತೆಗಳ ನಡುವೆ ಒಂದು ಒಗ್ಗಟ್ಟಾದ ಸ್ವಯಮಾಡಳಿತ ಸಮುದಾಯಗಳಾಗಿ ಇರುತ್ತಿರಬೇಕಾದರೆ ಇಂಡಿಯಾದ (ಭಾರತದ) ಜನಗಳು ಏಕೆ ಇರಲಾರರು ಎಂಬ ಪ್ರಶ್ನೆಗೆ ನಿಮ್ಮ ಹತ್ತಿರ ಉತ್ತರವಿದೆಯೇ? ನನ್ನ ಹತ್ತಿರ ಉತ್ತರವೇನೂ ಇಲ್ಲ. ಉತ್ತರ ತಮ್ಮ ಬಳಿ ಇದೆಯೆಂದು ತಿಳಿಸಿರುವ ಸ್ನೇಹಿತರು ಏನು ಹೇಳುತ್ತಾರೆ ಎಂಬುದನ್ನು ಕೇಳುವುದಕ್ಕೆ ನಾನು ಬಹಳ ಆಸಕ್ತಿಯಿಂದ ಇದ್ದೇನೆ.

೪. ಒಂದು ದೇಶದಲ್ಲಿನ ವಿವಿಧ ಘಟಕಗಳು ಮೊದಲು ಸಂಘಟಿತರಾಗದ ಹೊರತು ಸ್ವಯಮಾಡಳಿತಕ್ಕೆ ಅವರು ಅರ್ಹರಲ್ಲವೆಂದು ಹೇಳುವುದು. ಆದ್ಯತೆಯ ಕ್ರಮವನ್ನೇ ತಿರುಗು–ಮುರುಗು ಮಾಡಿದ ಹಾಗೆ ಆಗುತ್ತದೆ; ಹೀಗೆ ಮಾಡಿದರೆ ಸ್ವಯಮಾಡಳಿತದ ಮಹತ್ತರ ಕಾರ್ಯವಿಧಾನವಾದ ಒಕ್ಕೂಡಿಸುವಿಕೆಯ ಪರಿಣಾಮಗಳನ್ನೇ ಉಪೇಕ್ಷೆ ಮಾಡಿದಂತಾಗುತ್ತದೆ. ಕೆಲವು ದೇಶಗಳಲ್ಲಿ ಮಾತ್ರ ಒಂದೇ ಭಾಷೆ, ಒಂದೇ ಧರ್ಮ, ಒಂದೇ ಸಂಸ್ಕೃತಿ ಇರುವ ಜನರು ಬೆಸೆದುಕೊಂಡಿರುತ್ತಾರೆ. ಆದರೆ ಅನೇಕ ದೇಶಗಳಲ್ಲಿ ಚಾರಿತ್ರಿಕ, ಭೌಗೋಳಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಪಂಥದಲ್ಲಿ, ಭಾಷೆಯಲ್ಲಿ ಮತ್ತು ಅವರ ಸಂಸ್ಕೃತಿಗಳಲ್ಲಿ ಬೇರೆ ಬೇರೆ ಇರುವ ಜನರು ಬೆರೆತುಹೋಗಿದ್ದಾರೆ. ಇಂಥ ಜನಗಳು, ನಿರಂಕುಶತ್ವದ ಕಠಿಣ ನಿಯಮಗಳನ್ನು ಅವರಿಗೆ ಅನ್ವಯಿಸಿ ನೋಡುವುದಾದರೆ ಅವರು ಸ್ವಯಮಾಡಳಿತದ ವ್ಯವಸ್ಥೆಯೊಂದರ ವಾರಸುದಾರರಾಗುತ್ತಿರಲಿಲ್ಲ. ಇಷ್ಟೆಲ್ಲಾ ಹೇಳಿಯಾದ ಮೇಲೆ ಸ್ವಯಮಾಡಳಿತದ ವ್ಯವಸ್ಥೆಯೇ ಅನೇಕ ಜನರನ್ನು ಒಟ್ಟುಗೂಡಿಸುವುದಕ್ಕೆ ಕಾರಣವಾಗಿದೆ ಎಂದು ಅನಿಸುವುದಿಲ್ಲವೇ? ಅದಿಲ್ಲದಿದ್ದರೆ, ಅವರು ತಾವು ಮೊದಲಿನ ಪರಿಸ್ಥಿತಿಯಲ್ಲಿ ಇದ್ದ ಹಾಗೆ ಹೊಂದಾಣಿಕೆ ಇಲ್ಲದ ಭಿನ್ನವಾದ ಜನಗಳ ಹಾಗೆ ಇರುತ್ತಿದ್ದರು. ಜರ್ಮನ್ ಚಕ್ರಾಧಿಪತ್ಯ ಅಳವಡಿಸಿಕೊಂಡ ಸ್ವಯಮಾಡಳಿತದ ಸಂವಿಧಾನ ಜರ್ಮನ್ ಜನರನ್ನೆಲ್ಲಾ ಒಂದುಗೂಡಿಸುವುದಕ್ಕೆ ಕಾರಣವಾಗಲಿಲ್ಲವೇ? ಬವ್ನೇರಿಯನ್‌ರು, ಪರ್ಷಿಯನ್‌ರು, ಶ್ಲಾಕ್ಸ್‌ನ್‌ರು ಮತ್ತಿತರ ವಿವಿಧ ಗುಂಪುಗಳು, ೧೮೭೦ ಕ್ಕೆ ಮುಂಚೆ ಭಿನ್ನವಾದ ರಾಷ್ಟ್ರೀಯತೆಗಳು ಮತ್ತು ಬೇರೆ ಬೇರೆ ರಾಜ್ಯಗಳಾಗಿ ಇದ್ದವರು, ಅವರನ್ನು ಒಂದೇ ಸರ್ಕಾರದ ಕೆಳಗೆ ತರದೇ ಹೋಗಿದ್ದರೆ ಒಂದುಗೂಡಿಸಿದ ರಾಷ್ಟ್ರವಾಗಿ ವಿಲೀನವಾಗುತ್ತಿದ್ದರೆ? ಬೇರೆ ಬೇರೆ ಜನರುಗಳನ್ನು ಒಂದೇ ರಾಷ್ಟ್ರವಾಗಿ ಎರಕ ಹೊಯ್ಯುವುದಕ್ಕೆ ಸಮಷ್ಟಿ ಸರ್ಕಾರವೇ ಅನೇಕ ಬಾರಿ ಒಂದು ಅತ್ಯುತ್ತಮ ಸಾಧನವಾಗುತ್ತದೆ. ಇದನ್ನು ದೃಷ್ಟಾಂತ ಮಾಡಲು ನಾವು ಜರ್ಮನಿಯಷ್ಟು ದೂರ ಏಕೆ ಹೋಗಬೇಕು? ಭಾರತವೇ ಇದನ್ನು ದೃಷ್ಟಾಂತಗೊಳಿಸುವುದಿಲ್ಲವೇ? ಈ ದಿನಗಳಲ್ಲಿ ಎಷ್ಟೇ ಶೈಶವಾವಸ್ಥೆಯಲ್ಲಿದ್ದರೂ, ಅಪೂರ್ಣವಾಗಿದ್ದರೂ, ಭಾರತ ಒಂದು ಸಂಯುಕ್ತ ರಾಷ್ಟ್ರವೆಂಬ ಭಾವನೆಯಿದ್ದರೆ, ಅದಕ್ಕೆ ಕಾರಣ ಬ್ರಿಟೀಷರ ಆಡಳಿತದ ಕಾಲದಿಂದಲೂ ಒಂದು ಸಮಷ್ಟಿ ಸರ್ಕಾರ ಅಸ್ತಿತ್ವದಲ್ಲಿದೆ ಎಂದು ಎಲ್ಲರೂ ಒಪ್ಪುವ ಮಾತು. ಚಾರಿತ್ರಿಕವಾಗಿ ಮತ್ತು ತಾರ್ಕಿಕವಾಗಿ ವಿಭಿನ್ನ ಪರಿಸ್ಥಿತಿ ಮತ್ತು ವಿಭಿನ್ನ ಜನರು ಭಾರತದ ಸ್ವಯಮಾಡಳಿತಕ್ಕೆ ಅಡ್ಡಿಯಾಗಿದೆಯೆಂದು ಯಾರೂ ಹೇಳಲಿಕ್ಕಾಗುವುದಿಲ್ಲವೆಂದು ನನಗೆ ತೋರುತ್ತದೆ. ವಾಸ್ತವವಾಗಿ ಭಾರತ ಒಂದು ಸಂಯುಕ್ತ ರಾಷ್ಟ್ರವಾಗಬೇಕಾದರೆ, ಆ ಆದರ್ಶವನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಸ್ವಯಮಾಡಳಿತ ಅತ್ಯಂತ ಪರಿಣಾಮಕಾರಿಯಾದ ಸಾಧನವಾಗುತ್ತದೆ.

## II ಸಮಸ್ಯೆಯ ಪರಿಸ್ಥಿತಿಗಳು

೫. ಹಾಗಾದರೆ ಜನಗಳ ಮತ್ತು ಪರಿಸ್ಥಿತಿಗಳ ವಿಭಿನ್ನತೆ ಯಾವ ಪರಿಣಾಮವನ್ನು ಬೀರುವಂಥ ವಿಷಯವಲ್ಲವೆ ಎಂದು ನೀವು ನಿಸ್ಸಂದೇಹವಾಗಿ ಕೇಳಬಹುದು. ಭಾರತದಲ್ಲಿನ ಸ್ವಯಮಾಡಳಿತಕ್ಕೆ ಸಂವಿಧಾನವನ್ನು ರೂಪಿಸುವಾಗ ಇದನ್ನು ಗಣನೆಗೆ ತೆಗೆದುಕೊಳ್ಳಬೇಕೆ, ಅದರ ಅವಶ್ಯಕತೆ ಇಲ್ಲವೇ ಎಂಬ ಪ್ರಶ್ನೆಗೆ ಯಾವ ಹಿಂಜರಿಕೆಯೂ ಇಲ್ಲದೆ ನಾನು ಹೌದು ಎಂದು ಹೇಳಲೇಬೇಕಾಗಿದೆ. ಭಾರತದಲ್ಲಿನ ಕಾಂಗ್ರೆಸ್‌ನ ಸಾಮಾನ್ಯ ರಾಜಕೀಯ ವ್ಯಕ್ತಿಯೊಬ್ಬ –ಈ ಪರಿಸ್ಥಿತಿಗಳ ಮತ್ತು ಜನರ ನಡುವೆ ಇರುವ ವಿಭಿನ್ನತೆಯನ್ನು ಕಡೆಗಳಿಸುವ ಒಂದು ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಸ್ವಯಮಾಡಳಿತದ ಭಾರತಕ್ಕೆ ಯಾವುದೇ ಇತಿಮಿತಿಗಳಿಲ್ಲದ, ನಿರ್ಬಂಧಗಳಿಲ್ಲದ ಸಂವಿಧಾನಬೇಕೆಂದು ಒತ್ತಾಯಿಸುತ್ತಾರೆ. ಮಹನೀಯರೆ, ದೇಶದ ಸಾಮಾಜಿಕ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳದ, ಗುರುತಿಸದ ಸ್ವಯಮಾಡಳಿತವಿರುವ ಭಾರತದ ಸಂವಿಧಾನದಲ್ಲಿ ರಾಜಕೀಯದ ಶಕ್ತಿಕೇಂದ್ರ ಎಲ್ಲಿರುತ್ತದೆ? ಅಲ್ಪಸಂಖ್ಯಾತ ಸಮುದಾಯದವರಿಗೆ ಒಪ್ಪಿಗೆಯಾಗುತ್ತದೆಂದು ನೀವು ಭಾವಿಸುತ್ತೀರೇನು? ನಿಮ್ನವರ್ಗಗಳವರು ಅದಕ್ಕೆ ವಾರಸುದಾರರಾಗುತ್ತಾರೆಂಬ ಸಾಧ್ಯತೆ ಇದೆಯೆಂದು ನೀವು ಯೋಚಿಸುತ್ತೀರೇನು? ನನಗೆ ಯಾವುದರ ಬಗ್ಗೆ ಖಚಿತವಾಗಿದೆ ಎಂದರೆ, ಅದು ಭಾರತೀಯ ಸಮಾಜದಲ್ಲಿನ ಕಟುಸತ್ಯವನ್ನು ಗುರುತಿಸಲೊಲ್ಲದ, ಸ್ವಯಮಾಡಳಿತದ ಭಾರತದಲ್ಲಿ ರಾಜಕೀಯ ಅಧಿಕಾರದ ಚುಕ್ಕಾಣಿ, ಮೇಲ್ಮಟ್ಟದಲ್ಲಿರುವ ವಿದ್ಯಾವಂತರಾದ, ಧನಿಕ ಜಾತಿಗಳ ಕೈಯ್ಯಲ್ಲಿ ಇರುತ್ತದೆ ಎಂದು ; ಅಂದರೆ ಸಾಮಾಜಿಕ ಸ್ಥಾನಮಾನ ಇರುವವರ, ಶಿಕ್ಷಣ ಪಡೆದವರ, ಐಶ್ವರ್ಯವಂತ ಧನಿಕರ ಕೈಯ್ಯಲ್ಲಿ ಇರುತ್ತದೆ. ಜೀವನದ ಇತರ ನಡೆಗಳಲ್ಲಿರುವಂತೆ, ರಾಜಕೀಯದಲ್ಲೂ ಕೂಡ ಬಲಿಷ್ಠರಿಗೆ ಜಯ ಒಲಿಯುತ್ತದೆ. ಶ್ರೀಮಂತ ವರ್ಗದವರಿಗೆ, ಐಶ್ವರ್ಯ ಮತ್ತು ಶಿಕ್ಷಣ ಇವುಗಳಿಂದ ಒದಗಿಬರುವ ಸಂಪನ್ಮೂಲಗಳು ದೊರಕುತ್ತವೆ. ಆದರೆ ಶ್ರೀಮಂತರಿಗೆ ಇರುವುದು ಇದು ಒಂದೇ ಅನುಕೂಲತೆಯಲ್ಲ, ಇದಕ್ಕೆ ಎದುರಾಗಿ ಸಣ್ಣಪುಟ್ಟ ಮತ್ತು ನಿರ್ಬಲರಾದ ಸಮುದಾಯಗಳು ರಾಜಕೀಯ ಶಕ್ತಿಯಲ್ಲಿ ತಮ್ಮ ಪಾಲಿಗೋಸ್ಕರ ಹೋರಾಡಬೇಕಾಗುತ್ತದೆ.

ಕಾರ್ಯಾಚರಣೆಯಲ್ಲಿ ನವಿರಾದುದಾದರೂ ವಾಸ್ತವದ ಒಂದು ಸಂಗತಿಯಿದೆ. ಅದೆಂದರೆ ಇಚ್ಛಾ ಸ್ವಾತಂತ್ರ್ಯದ ನಿರಾಕರಣೆ. ಈ ನಿರಾಕರಣೆಯಲ್ಲಿ ಅರ್ಹತೆಗಾಗಲಿ, ಸಾಮರ್ಥ್ಯಕ್ಕಾಗಲಿ ಜಾಗವಿಲ್ಲ. ಅದರಲ್ಲಿ ಗಣನೆಗೆ ಬರುವುದು ಒಂದೇ ಒಂದು – ಬಾಂಧವ್ಯ. ಯಾರು ತನ್ನ ಕುಲಸ್ಥರಲ್ಲವೋ, ಬಂಧುವರ್ಗದವರಲ್ಲವೋ ಅವರಿಗೆ ತಾರತಮ್ಯ ಮಾಡುವುದು. ಇದು ಭಾರತೀಯನ ಜಾಯಮಾನಕ್ಕೆ ಬಂದದ್ದು. ಬಹುಸಂಖ್ಯಾತ ಸಮುದಾಯದ ಇವರ ಮನಸ್ಸಿನಲ್ಲಿ ಕೆಲಸ ಮಾಡುತ್ತಿರುವ ಈ ಇಚ್ಛಾ ಸ್ವಾತಂತ್ರ್ಯದ ನಿರಾಕರಣೆಯ ಪರಿಣಾಮವೆಂದರೆ, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರನ್ನು ಎದುರಿಸಲಾಗದ ಅನಾನುಕೂಲಕ್ಕೆ ಗುರಿ ಮಾಡುವುದು ; ಅಲ್ಲದೆ ನಿಜವಾಗಿ ಅವರನ್ನು ಎಂದೆಂದಿಗೂ ರಾಜಕೀಯ ಅಧಿಕಾರದಿಂದ ಹೊರಗಿಡುವುದು. ನಿಮಗೆ ಗೊತ್ತಿರುವ ಹಾಗೆ ಭಾರತದಲ್ಲಿನ ಮತ, ಧರ್ಮಶಾಸ್ತ್ರ ಆಧಾರಿತ ಜಾತಿಗಳ ವರ್ಗೀಕರಣ ಊರ್ಧ್ವಮುಖವಾದ ಭಕ್ತಿಭಾವವನ್ನೂ, ಅಧೋಮುಖವಾದ ತಿರಸ್ಕಾರವನ್ನು ರೂಪಿಸುತ್ತದೆ. ಈ ವರ್ಗೀಕರಣದ ಪರಿಣಾಮವೆಂದರೆ, ಕೆಳಗಿನ ಜಾತಿಗಳವರ ಮನಸ್ಸಿನಲ್ಲಿ ಮೇಲ್ವರ್ಗದ ಜನಗಳ ಬಗ್ಗೆ ಹೆಚ್ಚಿನ ಒಲವನ್ನು ಮತ್ತು ಅದೇ ಕಾಲಕ್ಕೆ ಮೇಲ್ವರ್ಗದ ಜನರ ಮನಸ್ಸಿನಲ್ಲಿ ಕೆಳವರ್ಗದ ಜಾತಿಗಳ ಬಗ್ಗೆ ತಿರಸ್ಕಾರವನ್ನೂ ಉಂಟು ಮಾಡುತ್ತದೆ. ಇಂಥದೊಂದು ಮಾನಸಿಕ ಸ್ಥಿತಿ, ರಾಜಕೀಯ ಶಕ್ತಿಗಾಗಿ ನಿಮ್ನವರ್ಗದವರ ಸೆಣಸಾಟಕ್ಕೆ ದುರಂತವಾಗಿ ಪರಿಣಮಿಸುತ್ತದೆ. ಅಸ್ಪೃಶ್ಯರ ಪರವಾಗಿ ಒಂದೇ ಒಂದು ಮತವನ್ನು ಚಲಾಯಿಸದ

ಮೇಲ್ಜಾತಿಯವರು ಅವರ ಅಗಾಧವಾದ ಮತಗಳನ್ನು ಪಡೆಯುತ್ತಾರೆ. ಅದೇ ಕಾಲಕ್ಕೆ ಅಸ್ಪೃಶ್ಯರು ಚುನಾವಣಾ ಕಾಳಗದಲ್ಲಿ ಸೋಲುವುದೂ ಅಲ್ಲದೆ ಅವರ ಎದುರಾಳಿಗಳು ಗೆಲ್ಲಲು ಇಚ್ಛೆಯಿಲ್ಲದಿದ್ದರೂ ಸಹಾಯ ಮಾಡುತ್ತಾರೆ. ಈ ಸಾಮಾಜಿಕ ಸತ್ಯಗಳನ್ನು ಕಡೆಗಳಿಸುವುದರ ಪರಿಣಾಮ ಐಶ್ವರ್ಯ, ವಿದ್ಯೆ ಮತ್ತು ಸಾಮಾಜಿಕ ಅಂತಸ್ತನ್ನು ಹೊಂದಿದ ಶ್ರೀಮಂತ ವರ್ಗದವರನ್ನು ಆಳುವ ಜಾತಿಯನ್ನಾಗಿ ಮಾಡುತ್ತದೆ. ಆದರೆ ನಮ್ಮ ಗುರಿಯನ್ನು ಮುಟ್ಟುವ ದಿಶೆಯಲ್ಲಿ ಎಲ್ಲ ರೀತಿಯಲ್ಲೂ ಅದನ್ನು ತಡೆಗಟ್ಟುವುದು ನಮ್ಮ ಕರ್ತವ್ಯವಾಗಿದೆ. ಒಡೆಯರುಗಳ ಬದಲಾವಣೆಯಿಂದಷ್ಟೇ ನಾವು ತೃಪ್ತಿಪಡಬಾರದು. ಯಾವುದೇ ಒಂದು ದೇಶ ಇನ್ನೊಂದು ದೇಶವನ್ನು ಆಳುವುದು ಸಾಧುವಲ್ಲ ಎಂದು ಕಾಂಗ್ರೆಸ್ಸಿನವರು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಅದೇ ರೀತಿ ಒಂದು ಜಾತಿ ಇನ್ನೊಂದು ಜಾತಿಯನ್ನು ಆಳುವುದೂ ಸಹ ಸಾಧುವಲ್ಲ ಎಂದು ನಾನು ಎದುರೆದುರೆ ಹೇಳುತ್ತೇನೆ. ಯಾರು ಸಾಮಾನ್ಯ ಜನಕೋಟಿಯ ಯೋಗಕ್ಷೇಮವನ್ನು ಉತ್ತಮವಾಗಿ ನೋಡಿಕೊಳ್ಳಬಲ್ಲರು ಎಂಬ ಯೂರೋಪಿನ ಅಧಿಕಾರಶಾಹಿ ಮತ್ತು ಸ್ಥಳೀಯ ಶ್ರೀಮಂತಶಾಹಿ ಇವರುಗಳ ನಡುವಿನ ಸ್ಪರ್ಧೆಯಲ್ಲಿ (ಶ್ರೀಮಂತಶಾಹಿ ಎಂಬ ಪದವನ್ನು ನಾನು ಐಶ್ವರ್ಯ, ವಿದ್ಯೆ ಮತ್ತು ಸಾಮಾಜಿಕ ಅಂತಸ್ತು ಇವುಗಳ ಸಮ್ಮಿಳಿತದ ಪ್ರಭಾವವನ್ನು ಸೂಚಿಸಲು ಉಪಯೋಗಿಸುತ್ತಿದ್ದೇನೆ) ಶ್ರೀಮಂತ ವರ್ಗದವರು ಒತ್ತುಕೊಟ್ಟು ಹೇಳುವುದೇನೆಂದರೆ –ಸಾಮಾನ್ಯ ಜನರ ಜೀವನದ ಪರಿಸ್ಥಿತಿಗಳ ಬಗ್ಗೆ ಅವರು ಜೀವಿಸುವ ಆಲೋಚಿಸುವ ರೀತಿಗಳ ಬಗ್ಗೆ ಅವರ ಅಭ್ಯಾಸಗಳ ಬಗ್ಗೆ ಅವರ ಬೇಕುಬೇಡಗಳ ಕುಂದುಕೊರತೆಗಳ ಬಗ್ಗೆ, ಅವರ ಮನಸ್ಸಿನ ಒಳಹೊಕ್ಕು ಅವರಿಗೆ ಅವಶ್ಯಕವಾದದ್ದು ಯಾವುದು ಎಂಬುದನ್ನು ತಿಳಿಯುವ ಸಾಮರ್ಥ್ಯ, ಇದೆಲ್ಲವನ್ನು ಯೂರೋಪಿನ ಅಧಿಕಾರಷಾಹಿಗಿಂತ ಹೆಚ್ಚಿನ ಮಟ್ಟದಲ್ಲಿ ಹೊಂದಿದ್ದೇವೆ ಎನ್ನುತ್ತಾರೆ. ಅದು ಒತ್ತಟ್ಟಿಗಿರಲಿ, ಆದರೆ, ಈ ಶ್ರೀಮಂತ ವರ್ಗ, ತನ್ನ ಸದಸ್ಯರುಗಳಿಗಿರುವ ವರ್ಗ ಪಕ್ಷಪಾತ, ಖಂಡಿತವಾದ, ಸ್ವಕುಲ ಪ್ರೇಮ, ಅವರ ಬಳಗದವರಿಗೇ ಮಣೆ ಹಾಕುವ ಪ್ರವೃತ್ತಿ– ಈ ಆಪಾದನೆಗಳನ್ನು ಅವರು ತಳ್ಳಿಹಾಕಲಾಗುವುದಿಲ್ಲ ಎಂದು ನನಗೆ ತೋರುತ್ತದೆ. ಇದರಿಂದಾಗಿ ಎಲ್ಲ ಜನಗಳ ಹಿತವನ್ನು ಕಾಪಾಡುವ ಅಧಿಕಾರವನ್ನು ಅವರಿಗೆ ಕೊಡಲು ಸಾಧ್ಯವಾಗುವುದಿಲ್ಲ. ವಾಸ್ತವದಲ್ಲಿ, ಶ್ರೀಮಂತ ವರ್ಗದವರಿಗೂ, ಜನಸಾಮಾನ್ಯರಿಗೂ ನಡುವೆ ಇರುವ ದೊಡ್ಡ ಸಾಮಾಜಿಕ ಕಂದಕದಿಂದಾಗಿ ಮತ್ತು ಅವರು ಜನ ಸಾಮಾನ್ಯರಿಂದ ಹೊರತಾಗಿ ಜೀವಿಸುವ ಕಾರಣದಿಂದಾಗಿ ಅವರುಗಳ ಅಂದರೆ ಜನಸಾಮಾನ್ಯರ ಆಸೆಗಳು, ಆಕಾಂಕ್ಷೆಗಳು ಮತ್ತು ಅಪೇಕ್ಷೆಗಳಿಗೆ ಅವರು ಸ್ಪಂದಿಸುತ್ತಾರೆಂದು ಹೇಳಲಾಗುವುದಿಲ್ಲ. ಇನ್ನೂ ಮುಂದಕ್ಕೆ ಹೋಗಿ ಅವರ ಬಯಕೆಗಳಿಗೆ ಶ್ರೀಮಂತ ವರ್ಗದವರು ಕಟ್ಟಾವಿರೋಧಿಗಳೆಂದೂ ಸಹ ಹೇಳಬಹುದು. ಶ್ರೀಮಂತ ವರ್ಗದವರಲ್ಲಿ ನಂಬಿಕೆಯಿಟ್ಟು, ಅವರಿಗೆ ರಾಜಕೀಯ ಅಧಿಕಾರವನ್ನು ಕೊಡಲೇಬಾರದೆಂದು ನಾನು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಕಾರಣವೇನೆಂದರೆ, ಸ್ವಯಮಾಡಳಿತದ ಭಾರತ ದೇಶದಲ್ಲಿ ಜನಸಾಮಾನ್ಯರು ಕ್ಷೇಮವಾಗಿರಬೇಕಾದರೆ ಪ್ರಜಾಪ್ರಭುತ್ವದ ಕಲ್ಪನೆಯ ಬೇರುಗಳು ಸಾವಿರಾರು ವರ್ಷಗಳಿಂದ ರೂಪುಗೊಂಡಿರುವ ಮತ್ತು ಈ ದಿನಗಳಲ್ಲೂ ಕೂಡ ಅವರ ನಂಬಿಕೆಗಳಿಗೆ ಆಧಾರವಾಗಿರುವ ಯೋಚನೆಗಳಿಗೆ ತದ್ವಿರುದ್ಧವಾಗಿವೆ. ಪ್ರತಿ ವ್ಯಕ್ತಿಯ ಮೌಲ್ಯವನ್ನು ಗುರುತಿಸಿ, ಅವನಿಗಿರುವ ಒಂದೇ ಜೀವಿತಕಾಲದ ಅವಧಿಯಲ್ಲಿ ಅವನು ಗರಿಷ್ಠ ಅಭಿವೃದ್ಧಿ ಹೊಂದುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದು ಆಧುನಿಕ ಪ್ರಜಾಪ್ರಭುತ್ವದ ಮೂಲಭೂತ ತತ್ವ. ಈ ಪ್ರಸ್ತಾಪವನ್ನು ಭಾರತದ ಶ್ರೀಮಂತವರ್ಗದವರು ರೂಢಿಸಿಕೊಂಡಿರುವ ಒಂದು ಭಾಗವೆಂದು ಹೇಳಲಾಗುವುದಿಲ್ಲ. ಬದಲಾಗಿ ಅವರ ಪ್ರಕಾರ ವರ್ತಮಾನದ ಜೀವಿತಕಾಲ ಒಂದು ಜನ್ಮದ ಸರಣಿಯಲ್ಲಿ ಒಂದು ಹುಟ್ಟು ಮಾತ್ರ ಆಗಿದ್ದು, ಈ

ಜೀವಿತ ಕಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸ್ಥಾನವನ್ನು ಹಿಂದಿನ ಜನ್ಮದ ಅವರ ಪಾಪಪುಣ್ಯ ನಿರ್ಧರಿಸುತ್ತದೆಂದೂ, ಆದಕಾರಣ ಯಾವುದೇ ವ್ಯಕ್ತಿ ಎಷ್ಟೇ ಔನ್ನತ್ಯವನ್ನು ಸಾಧಿಸಿದರೂ ಅವನಿಗೆ ಎಷ್ಟೇ ಮಹತ್ತರವಾದ ಸಾಮರ್ಥ್ಯವಿದ್ದರೂ, ಸಾಮಾಜಿಕ ಸ್ತರದಲ್ಲಿ ಅವನು ಹುಟ್ಟಿನಿಂದ ಬಂದ ಜಾಗವನ್ನು ಬದಲಾಯಿಸಲಾಗುವುದಿಲ್ಲ. ಶ್ರೀಮಂತ ವರ್ಗದ ಪ್ರಕಾರ ಬ್ರಾಹ್ಮಣನಾಗಿ ಹುಟ್ಟಿದವನು ಬ್ರಾಹ್ಮಣನಾಗಿಯೇ ಇರುತ್ತಾನೆ ಮತ್ತು ಪೆರಿಯನಾಗಿ ಹುಟ್ಟಿದವನು ಪೆರಿಯನಲ್ಲದೆ ಬೇರೇನೂ ಆಗುವುದಿಲ್ಲ. ಇದೇನೂ ವ್ಯರ್ಥಾಲಾಪವಲ್ಲ. ಇದು ಇಂದಿಗೂ ಬದುಕಿರುವ, ಚಾಲನೆಯಲ್ಲಿರುವ ಒಂದು ಸಿದ್ಧಾಂತ. ಈ ಬಗೆಯ ಜನಗಳ ಕೈಯ್ಯಲ್ಲಿ ಅನಿರ್ಬಂಧಿತ ಅಧಿಕಾರವನ್ನು ಕೊಡುವುದು, ನೇಣು ಹಾಕುವವನ ಕೈಯ್ಯಲ್ಲಿ ಚಾಕುವನ್ನು ಕೊಟ್ಟಂತೆ.

೬. ಈ ಧೋರಣೆಯನ್ನು ತಾಳಿದ ನಮ್ಮನ್ನು ಜಾತೀಯವಾದಿಗಳೆಂದೂ, ದೇಶದ ಶತ್ರುಗಳೆಂದು ಹಳಿಯುತ್ತಾರೆ. ಎಲ್ಲ ದೇಶಗಳಲ್ಲೂ ಅಧಿಕಾರ ಯಾವಾಗಲೂ ಬುದ್ಧಿಜೀವಿಗಳ ಕೈಯ್ಯಲ್ಲೇ ಇರುತ್ತದೆ ಹಾಗೆ ಇರಬೇಕಾದುದು ದಕ್ಷ ಆಡಳಿತದ ದೃಷ್ಟಿಯಿಂದ ಅವಶ್ಯಕವೆಂದು ಕಾಂಗ್ರೆಸ್ಸಿಗರೂ ಹೇಳುತ್ತಾರೆ. ಬರುತ್ತಿರುವ ರಾಜಕೀಯ ಅಧಿಕಾರವನ್ನು ನಾವು ಶ್ರೀಮಂತ ವರ್ಗದವರ ಕೈಗಳಿಗೆ ಒಪ್ಪಿಸಬೇಕೆನ್ನುವ ಜನ, ಸಾಮಾಜಿಕ ಮತ್ತು ರಾಜಕೀಯ ಇವೆರಡೂ ಪ್ರತ್ಯೇಕ ರಾಶಿಗಳಾಗಿದ್ದು, ಅವುಗಳ ನಡುವೆ ಯಾವುದೆ ಪರಸ್ಪರ ಸಂಬಂಧವಿಲ್ಲವೆಂದು ಅವರು ಹೇಳುತ್ತಾರೆ. ಮಹನೀಯರೇ, ಮಾನವನ ನಡವಳಿಕೆ ಇಂಥ ಯಾಂತ್ರಿಕತೆಯಿಂದ ಕೂಡಿದೆ ಎಂಬ ಪ್ರಮೇಯದಿಂದ ನೀವು ದೂರವಿರಬೇಕು. ಈ ಅಮೂರ್ತ ಕಲ್ಪನೆಯ ಬಗ್ಗೆ ಎಚ್ಚರವಿರಲಿ, ರಾಜಕೀಯ ಉದ್ದೇಶಗಳಿಗಾಗಿ ಮನುಷ್ಯರನ್ನು ಕೇವಲ ಸಂಖ್ಯೆಗಳಿಂದ ಗುರುತಿಸಿ, ಸಾಲಿನ ಮೇಲೆ ಸಾಲಿನಂತೆ ಪೇರಿಸಲಾಗುವುದಿಲ್ಲವೆಂದು ನಿಮಗೆ ಅರಿವಾಗುತ್ತದೆ. ಮನುಷ್ಯನೊಬ್ಬ ಮತ ಹಾಕುವುದೇ ರಾಜಕೀಯದ ಮೂರ್ತರೂಪವೆಂದುಕೊಂಡು, ಅದನ್ನು ಚಲಾಯಿಸಿದ ಮೇಲೆ ಹಳೆಯ ಉಡುಪುಗಳನ್ನು ಬಿಸಾಡಿದ ಹಾಗೆ ಅವನ ಮನೋಭಾವವನ್ನು, ಅವನ ಆಸಕ್ತಿಗಳನ್ನು, ಅವನ ಅಭಿಪ್ರಾಯಗಳನ್ನು ಕಳಚಿಹಾಕಿ ಒಂದು ನಗ್ನ ಘಟಕವಾಗುವುದಿಲ್ಲ. ತನ್ನ ಮತದಾರರೊಡನೆ, ತನ್ನ ವ್ಯಕ್ತಿತ್ವವನ್ನು ರೂಪಿಸುವ, ಜೀವನದೆಡೆಗೆ ತನ್ನ ನಿಲುವು ಏನೆಂಬುದನ್ನು ನಿರ್ಧರಿಸುವ ದಿಕ್ಕಿನಲ್ಲಿ ಕೊಂಡೊಯ್ಯುತ್ತಾನೆ. ಶ್ರೀಮಂತಿಕೆಯಿಂದ ಹುಟ್ಟಿಕೊಂಡ ವಿಶೇಷ ಸಾಮರ್ಥ್ಯಗಳು ದೇಶಕ್ಕೆ ಒಂದು ಮಹತ್ತರವಾದ ಆಸ್ತಿ. ಆದರೂ ಈ ವಿಶೇಷ ಶಕ್ತಿಗಳು ದೇಶವನ್ನು ಆಳಲು ಯಾವುದೇ ಆಧಿಕಾರವನ್ನು ಕೊಡುವುದಿಲ್ಲ. ಅಧಿಕಾರವೆನ್ನುವುದು ಅದರ ಸ್ವಭಾವದ ಮೇಲೆ ಅವಲಂಬಿತವಾಗಲೇಬೇಕಾದುದಲ್ಲದೆ, ಆ ಶಕ್ತಿಗಳು ಯಾವ ರೀತಿ ಉಪಯೋಗಕ್ಕೆ ಬರುತ್ತವೆ ಎಂಬುದರ ಮೇಲೂ ಅವಲಂಬಿತವಾಗಿವೆ. ನಾವು ದಕ್ಷತೆಗೆ ಮಾತ್ರ ಗಮನ ಕೊಡದೆ ಅದರಿಂದ ನಮಗಾಗುವ ಉಪಯೋಗವನ್ನು ಕಂಡುಕೊಂಡ ಮೇಲಷ್ಟೆ ನಮ್ಮನ್ನು ಆಳಲು ಅದಕ್ಕಿರುವ ಹಕ್ಕನ್ನು ಒಪ್ಪಿಕೊಳ್ಳಬೇಕು. ಮನುಷ್ಯನಲ್ಲಿರುವ ಒಳ್ಳೆಯ ವಿಶೇಷ ಶಕ್ತಿಗಳು ಅದನ್ನು ಹೊಂದಿರುವವರಿಗೆ ಗೌರವವನ್ನು ತಂದುಕೊಡುತ್ತವೆಯಾದರೂ ಅದನ್ನು ಹೇಗೆ ಉಪಯೋಗಿಸಲಾಗುತ್ತಿದೆ ಎಂಬುದರ ಕಡೆಗೆ ಗಮನಕೊಡದಿರುವುದರಿಂದ ಆಗುವ ಕೆಡಕಿಗಿಂತ, ಹೆಚ್ಚಿನ ಕೆಡುಕು ಮಾನವ ಸಮಾಜಕ್ಕೆ ಆಗಲಾರದು ಎಂದು ಅಡಿಸನ್ ಹೇಳುತ್ತಾನೆ. ಪ್ರಕೃತಿಯ ಕೊಡುಗೆಗಳು ಮತ್ತು ಕಲೆಯ ಸಾಧನೆಗಳು ಮೌಲ್ಯಯುತವಾದವುಗಳೇನೋ ಸರಿ, ಆದರೆ ಅವುಗಳನ್ನು ಸೌಶೀಲ್ಯದ ಹಿತದೃಷ್ಟಿಯಿಂದ ಮತ್ತು ಗೌರವದ ನಿಯಮಗಳಿಗೆ ಒಳಪಟ್ಟು ಬಳಸಿಕೊಳ್ಳಬೇಕು. ವ್ಯಕ್ತಿಗಳ ಮನಃಸ್ಥಿತಿಗಳ ಬಗ್ಗೆ ಒಳ್ಳೆಯ ಮಾಹಿತಿ ಸಿಗುವವರೆಗೂ, ಅದನ್ನು ನಾವು ಗಮನಿಸುವವರೆಗೂ ನಾವು ವ್ಯವಹರಿಸುವ ಉತ್ಕೃಷ್ಟತೆಯ ಕಡೆಗೆ ನಮ್ಮ ಮನಸ್ಸಿಗೆ ತೆರೆ ಹಾಕಿಕೊಳ್ಳಬೇಕು ; ಇಲ್ಲದೇ ಹೋದರೆ ಅವರ ವ್ಯಕ್ತಿತ್ವದ ಆಕರ್ಷಣೆಗೂ ಮತ್ತು ಅವರ ಚತುರೋಕ್ತಿಗಳಿಗೂ

ನಾವು ಮಾರುಹೋಗುತ್ತೇವೆ. ಆದರೆ ಅಂಥವರ ಬಗ್ಗೆ ನಮ್ಮ ವಿವೇಚನೆ ಅವರನ್ನು ಕಂಡರೆ ಹೌಹಾರುವಂತೆ ಮಾಡುತ್ತದೆ. ನಾನು ಶ್ರೀಮಂತಿಕೆಯ ವೈಲಕ್ಷಣದ ಬಗ್ಗೆ ವಿಮರ್ಶಿಸಿದ್ದೇನೆ ; ರಾಜಕೀಯ ಅಧಿಕಾರಕ್ಕಾಗಿ ಹುಯಿಲೆಬ್ಬಿಸುವವರ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಇನ್ನೇನನ್ನು ಹೇಳಬೇಕಾಗಿಲ್ಲ. ಕೆಲವು ನಾಚಿಗೇಡಿನ ವಿಷಯಗಳ ಬಗ್ಗೆ ನಾನು ಹೇಳದೇ ಇರುವುದಕ್ಕೆ ಅಗುವುದಿಲ್ಲ. ಈ ಪರಿಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಿರುವುದಕ್ಕೆ ಶ್ರೀಮಂತ ವರ್ಗದವರೇ ಹೊಣೆಗಾರರು. ಈ ದೇಶದಲ್ಲಿ ೫೦ ರಿಂದ ೬೦ ದಶಲಕ್ಷ ಜನ ಅಸ್ಪೃಶ್ಯತೆಯ ಶಾಪದಿಂದ ನರಳುತ್ತಿದ್ದಾರೆ. ಇಂಥ ಶಾಪವನ್ನು, ಇಂಥ ವಿಪತ್ತನ್ನು ಪ್ರಪಂಚದ ಇನ್ನಾವ ಭಾಗದಲ್ಲೂ ಯಾರೂ ಕೇಳಿಲ್ಲ. ಪ್ರತಿಯೊಬ್ಬ ಮಾನವಜೀವಿಗೂ ಸಲ್ಲಬೇಕಾದ ಪ್ರಾಥಮಿಕ ಹಕ್ಕುಗಳನ್ನು ಸಹ ಅವರಿಗೆ ನಿರಾಕರಿಸಲಾಗಿದೆ. ನಾಗರೀಕತೆಯ, ಸಂಸ್ಕೃತಿಯ ಉಪಯೋಗಗಳನ್ನು ಅವರಿಗೆ ಕೊಡಲು ಒಪ್ಪದಿರಲಾಗಿದೆ.

ಅವಕಾಶದಲ್ಲಿ ಸಮಾನತೆಯಿಲ್ಲದೆ ಅವರ ಪರಿಸ್ಥಿತಿ ಬಹಳ ದಯನೀಯವಾಗಿದೆ. ಅಸ್ಪೃಶ್ಯರಲ್ಲದೆ, ಈ ದೇಶದಲ್ಲಿ ಅಷ್ಟೇ ಅಗಾಧ ಸಂಖ್ಯೆಯಲ್ಲಿ ಆದಿವಾಸಿಗಳು, ಗುಡ್ಡಗಾಡು ಜನರು ಇದ್ದಾರೆ. ಇವರನ್ನು ನಾಗರೀಕತೆ ಮತ್ತು ಸಂಸ್ಕೃತಿಯ ನೆರಳಿಗೆ ತರುವ ಯಾವ ಪ್ರಯತ್ನವನ್ನೂ ಮಾಡದೆ, ಅಲೆಮಾರಿಗಳಾಗಿ, ಬರ್ಬರ ಸ್ಥಿತಿಯಲ್ಲೇ ಇರಲು ಬಿಟ್ಟುಬಿಡಲಾಗಿದೆ. ಗತಕಾಲದಲ್ಲಿ ಶ್ರೀಮಂತ ವರ್ಗದವರು ತೋರಿಸುತ್ತಿದ್ದ ಸೇವಾ ಮನೋಭಾವಕ್ಕೊಂದು(?!) ಘಂಟಾಘೋಷವಾದ ಪ್ರಮಾಣವಾಗಿದೆ. ಈ ಶ್ರೀಮಂತ ವರ್ಗದವರ ನಡತೆ ಭವಿಷ್ಯತ್ತಿನಲ್ಲಿ ಸಂಪೂರ್ಣವಾಗಿ ಬೇರೆಯಾಗಿರುತ್ತದೆಂದು ನಂಬಬೇಕೆಂದು ನಮಗೆ ಹೇಳಲಾಗುತ್ತಿದೆ. ಇದನ್ನು ಒಪ್ಪಿಕೊಳ್ಳುವಷ್ಟು ಅಮಾಯಕ ನಾನಲ್ಲ. ಈ ದಿನದ ಸೈತಾನರು ಬೆಳಕು ಹರಿಯುವುದರಲ್ಲಿ ದೇವರಾಗಿ ಪರಿವರ್ತನೆ ಹೊಂದುತ್ತಾರೆಂಬ ಯಾವೊಂದು ದೃಷ್ಟಾಂತವೂ ನನ್ನ ಅರಿವಿಗೆ ಬಂದಿಲ್ಲ.

೭. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬರುವವರೆಗೂ ಸಾಮಾಜಿಕ ಸಮಸ್ಯೆಯ ಪರಿಹಾರಕ್ಕಾಗಿ ಕಾಯಬೇಕೆಂದು ನಮಗೆ ಹೇಳಲಾಗಿದೆ. ಈ ಆಲೋಚನಾಲಹರಿಗೆ ಯಾವ ಬುದ್ಧಿವಂತನೂ ಮೋಸ ಹೋಗುವುದಿಲ್ಲ. ಸಜ್ಜಿನ ಕೋಣೆ (ಪಾರ್ಲರ್) ಎಂದು ಕರೆಯುವ ಜಾಗದೊಳಕ್ಕೆ ಪ್ರವೇಶಿಸುವ ಮೊದಲು ಅದೊಂದು ಬೋನು ಅಲ್ಲ ಎಂದು ಖಾತರಿಪಡಿಸಿಕೊಳ್ಳಬೇಕು. ಸ್ವಾಧೀನ ಇಟ್ಟುಕೊಂಡಿಲ್ಲದ ವ್ಯಕ್ತಿಗಿಂತ ಸ್ವಾಧೀನ ಇಟ್ಟುಕೊಂಡಿರುವ ವ್ಯಕ್ತಿಯೇ ಹೆಚ್ಚು ಬಲಶಾಲಿಯೆಂದು ನಮಗೆಲ್ಲರಿಗೂ ಗೊತ್ತಿದೆ. ಗೊತ್ತಿಲ್ಲದವರು ಗೊತ್ತುಮಾಡಿಕೊಳ್ಳಬೇಕು. ಅಧಿಕಾರದಲ್ಲಿರುವವರು, ಇಲ್ಲದವರ ಪರವಾಗಿ ಪದತ್ಯಾಗ ಮಾಡುವುದು ಬಹಳ ವಿರಳವೆಂದು ನಮಗೆಲ್ಲರಿಗೂ ಗೊತ್ತಿದೆ ಅಥವಾ ಗೊತ್ತುಮಾಡಿಕೊಳ್ಳಬೇಕು. ನಿಮ್ಮಿಂದ ಸಹಾಯ ಪಡೆದು ಅಧಿಕಾರವನ್ನು ಹಿಡಿದುಕೊಂಡವರನ್ನು ನೀವು ಕೆಳಗೆ ಇಳಿಸಬೇಕಾದರೆ ಇನ್ನೊಂದು ಕ್ರಾಂತಿಯನ್ನು ಮಾಡುವುದಕ್ಕೆ ನೀವು ಸಿದ್ಧವಾಗಿದ್ದರೆ, ಅಂಥವರ ಕೈಗೆ ಅಧಿಕಾರ ಜಾರಿಹೋಗುವುದಕ್ಕೆ ನೀವು ಬಿಟ್ಟರೆ, ಸಾಮಾಜಿಕ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಪರಿಹರಿಸಬಹುದೆಂಬ ಆಸೆಯನ್ನು ಬಿಟ್ಟುಬಿಡಿ. ಮಹನೀಯರೇ, ಮಹಾ ತತ್ವಜ್ಞಾನಿಯಾದ ಎಡ್ಮಂಡ್ ಬರ್ಕ್ ಹೇಳಿದ ಬುದ್ಧಿಮಾತನ್ನೇ ನಾನು ನಿಮಗೆ ಹೇಳುತ್ತೇನೆ. "ಭದ್ರತೆಯ ಬಗ್ಗೆ ಅತಿವಿಶ್ವಾಸವನ್ನಿಟ್ಟುಕೊಂಡು ಹಾಳಾಗಿ ಹೋಗುವುದಕ್ಕಿಂತ ಅತಿಯಾದ ಆತಂಕ, ಹೆದರಿಕೆಗಳನ್ನಿಟ್ಟುಕೊಂಡು ಹುಚ್ಚೀಕರಿಸಿಕೊಳ್ಳುವುದೇ ಉತ್ತಮ'. ಈ ಬುದ್ಧಿ ಮಾತನ್ನೇ ಅನುಸರಿಸಿ ಹೇಳಬಹುದಾದರೆ, ಸಾಮಾಜಿಕ ಸಮಸ್ಯೆಯ ಪರಿಹಾರಕ್ಕೆ ಅತ್ಯುತ್ತಮ ಖಾತರಿಯೆಂದರೆ ರಾಜಕೀಯ ಯಂತ್ರವನ್ನೇ ಸರಿಹೊಂದಿಸಿಕೊಳ್ಳಬೇಕೆ ಹೊರತು, ಆ ಯಂತ್ರದ ಅನಿರ್ಬಂಧಿತ ಹತೋಟಿಯನ್ನು ಪಡೆಯಲು ಉಪಾಯ ಮಾಡುತ್ತಿರುವವರ ಇಚ್ಛೆಗೆ ಸರಿಹೊಂದಿಕೊಳ್ಳುವುದರಲ್ಲಿ ಅಲ್ಲ.

## III ನಿಮ್ನವರ್ಗದವರಿಗೆ ರಕ್ಷಣೋಪಾಯಗಳು

೮.ಭಾರತದಲ್ಲಿ ಸ್ವಯಮಾಡಳಿತ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಸಾಮಾಜಿಕ ಅಂಶಗಳು ಅಡ್ಡಿಪಡಿಸುವುದಿಲ್ಲವೆಂದು ನಾವು ಯೋಚಿಸಿದರೂ, ಸ್ವಯಮಾಡಳಿತಕ್ಕೆ ಒಳಪಟ್ಟ ಭಾರತ ಚಿಕ್ಕಚಿಕ್ಕ ಮತ್ತು ನಿಶ್ಯಕ್ತ ಸಮುದಾಯಗಳನ್ನು ರಾಜಕೀಯ ಪುನರ್‌ರಚನೆಯಲ್ಲಿ ಗೋಡೆಗೆ ತಳ್ಳಲ್ಪಡುವುದಿಲ್ಲವೆಂದು ಖಾತರಿಪಡಿಸಿಕೊಳ್ಳಲು ಹದ್ದುಬಸ್ತು ಮತ್ತು ಸಮತೋಲನದ ಅವಶ್ಯಕತೆ ಇದೆ ಎಂಬುದನ್ನು ನಾನು ಕಡೆಗಣಿಸುವ ಹಾಗಿಲ್ಲ. ನಿಮ್ನವರ್ಗಗಳವರ ಮಟ್ಟಿಗೆ ಇದನ್ನು ಎಷ್ಟು ಉತ್ತಮವಾಗಿ ಮಾಡಬಹುದು ಎಂಬ ಪ್ರಶ್ನೆಯನ್ನು ಈಗ ಎತ್ತಿಕೊಳ್ಳುತ್ತೇನೆ. ಭಾರತದಲ್ಲಿನ ರಾಜಕೀಯ ಸಮಸ್ಯೆಯ ಅಧ್ಯಯನ ಮಾಡುತ್ತಿರುವ ಕೆಲವು ವಿದ್ಯಾರ್ಥಿಗಳು ಇದ್ದಾರೆ. ಈ ಪ್ರಶ್ನೆಗೆ ಯಾವುದಾದರೊಂದು ಪರಿಹಾರವನ್ನು ಕಂಡುಕೊಳ್ಳಬೇಕಾದ ಅವಶ್ಯಕತೆಯನ್ನು ಒಪ್ಪಿಕೊಳ್ಳುವುದೂ ಅಲ್ಲದೆ, ಇದನ್ನು ಸ್ವಯಮಾಡಳಿತದ ಭಾರತದ ಸಂವಿಧಾನದಲ್ಲಿ ಅಳವಡಿಸಬೇಕೆಂದೂ ಸಹ ಒಪ್ಪಿಕೊಳ್ಳುತ್ತಾರೆ. ಈ ವಿದ್ಯಾರ್ಥಿಗಳು ತಮ್ಮ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಯುದ್ಧಾ ನಂತರದ ದೇಶಗಳ ಸಂವಿಧಾನಗಳಿಂದ ಬಹಳಮಟ್ಟಿಗೆ ತೆಗೆದುಕೊಂಡಿದ್ದಾರೆ ; ಇದನ್ನು ಈ ಭಾಷಣದ ಮೊದಲ ಭಾಗದಲ್ಲಿ ಪರಾಮರ್ಶೆ ಮಾಡಿದ್ದೇನೆ. ಆ ಮೂಲದಿಂದ ಅವರು ಅದನ್ನು ತೆಗೆದುಕೊಂಡಿದ್ದು ಸ್ವಾಭಾವಿಕವೇ ಆಗಿದೆ. ಕಾರಣವೇನೆಂದರೆ ಭಾರತದಲ್ಲಿ ಈಗಿರುವ ಪರಿಸ್ಥಿತಿಗಳಿಗೆ ಹೆಚ್ಚಿನ ಸಾಮ್ಯತೆಯನ್ನು ಆ ದೇಶಗಳಲ್ಲಿ ಮಾತ್ರ ಕಾಣಬಹುದು. ಅಲ್ಪಸಂಖ್ಯಾತರ ರಕ್ಷಣೆಗಾಗಿ ಆ ದೇಶಗಳಲ್ಲಿ ಇರುವ ಯೋಜನೆಗಳು, ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳನ್ನು ಮಾನ್ಯ ಮಾಡಲು ಸಂವಿಧಾನದಲ್ಲಿ ಖಂಡಗಳನ್ನು ಸೇರಿಸಲಾಗಿದೆ. ನೆಹರೂ ಸಮಿತಿಯ ವರದಿ ಈ ಯೋಜನೆಯನ್ನು ನಿಮ್ನವರ್ಗಗಳವರ ಹಿತಾಸಕ್ತಿಗಳನ್ನು ರಕ್ಷಿಸಲು ಅತ್ಯುತ್ತಮವಾದುದೆಂದು ಅಳವಡಿಸಿಕೊಂಡಿದೆ. ಇಂಥ ಯೋಜನೆಗಳಿಂದ ಮೋಸ ಹೋಗದಿರುವಂತೆ ನಾನು ನಿಮ್ಮನ್ನು ಎಚ್ಚರಿಸಬೇಕಾಗಿದೆ. ಭಾರತದ ರಾಜಕಾರಣಿ, ಮೂಲಭೂತ ಹಕ್ಕುಗಳೆಂದು ಕರೆಯಲಾಗಿರುವುದನ್ನು ಅಳವಡಿಸಿಕೊಂಡಿರುವ ಸಂವಿಧಾನದ ಸಮರ್ಥತೆಯ ಮೇಲೆ ಅತಿಶಯವಾದ ವಿಶ್ವಾಸವನ್ನು ಇಟ್ಟುಕೊಂಡಿರುವ ಹಾಗೆ ಕಾಣುತ್ತದೆ. ಅಲ್ಲದೆ ಅದನ್ನು, ಅದರ ಉಪಯೋಗಗಳನ್ನು ಅಲ್ಪಸಂಖ್ಯಾತರಿಗೆ ತನ್ನದೇ ವರ್ಗದವರ ನಿರಂಕುಶತ್ವದ ವಿರುದ್ಧ ಒಂದು ಖಾತರಿಯೆಂದು ಕೊಡಮಾಡಲು ಉತ್ಸುಕನಾಗಿದ್ದಾನೆ. ಅಧಿಕಾರಷಾಹಿಯ ಅತಿಕ್ರಮಣದ ವಿರುದ್ಧ ತನ್ನ ವರ್ಗದವರ ಪರವಾಗಿ ಅಷ್ಟೇ ಉತ್ಸುಕನಾಗಿದ್ದಾನೆ. ನಮ್ಮ ರಕ್ಷಣೆಗಾಗಿ ಇಂಥ ಯೋಜನೆಯಿಂದ ತೃಪ್ತಿಪಟ್ಟುಕೊಳ್ಳುವುದಕ್ಕೆ ನಾವು ನಿರಾಕರಿಸಲೇಬೇಕು. ಇಂಥ ಹಕ್ಕುಗಳ ಘೋಷಣೆಗಳಿಗೆ ಸ್ವಾಗತವಿಲ್ಲದೆ ಇರುವುದಿಲ್ಲ. ಆದರೂ ಆ ಘೋಷಣೆಗಳಿಗೆ ಎಷ್ಟೇ ಅರ್ಥ ವೈಶಾಲ್ಯವಿದ್ದರೂ ಅವುಗಳ ಅರ್ಥವ್ಯಾಖ್ಯೆಯಲ್ಲಿ ಎಷ್ಟೇ ಸ್ಪಷ್ಟತೆ ಇದ್ದರೂ, ಅವು–ಆ ಹಕ್ಕುಗಳು ಕೈಗೆ ಎಟುಕುತ್ತದೆ ಎಂಬುದನ್ನು ಖಚಿತಪಡಿಸಲಾಗುವುದಿಲ್ಲ. ಹಕ್ಕನ್ನು ಖಾತರಿಪಡಿಸುವುದು ಅದರ ಘೋಷಣೆಯಿಂದ ಅಲ್ಲ. ಆದರೆ ಅದನ್ನು ಉಲ್ಲಂಘಿಸಿದಾಗ, ಅದನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಚಿಕಿತ್ಸೆ ಮಾಡಲು ಇರುವ ಒಂದು ಉಪಬಂಧ. ನಾನು ಆಗಲೇ ಉಲ್ಲೇಖಿಸಿದ ಯುದ್ಧಾ ನಂತರದ ರಾಷ್ಟ್ರಗಳಲ್ಲಿ, ಅಧಿಕಾರದಲ್ಲಿರುವ ಬಹುಸಂಖ್ಯಾತರಿಂದ ಉಲ್ಲಂಘನೆಯಾದರೆ ಅವರಿಗೆ "ಲೀಗ್ ಆಫ್ ನೇಷನ್ಸ್"ಗೆ (ರಾಷ್ಟಗಳ ಕೂಟ) ಉಪಬಂಧವಿದೆ. ಈ ರಾಷ್ಟ್ರಗಳ ಕೂಟ ಇಂಥ ದೂರುಗಳನ್ನು ಸ್ವೀಕರಿಸುವುದಕ್ಕೆಂದೇ ಒಂದು ಸಮಿತಿಯನ್ನು ನೇಮಕ ಮಾಡಿದೆ. ಆದರೆ, ನೆಹರೂ ಸಮಿತಿಯ ವರದಿಯಲ್ಲಿ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ಎಲ್ಲಾದರೂ ಪರಿಹಾರವನ್ನು ಸೂಚಿಸಿದೆಯೆ? ನನಗೇನೋ

ಕಾಣಿಸುತ್ತಿಲ್ಲ, ಮೇಲ್ಮನವಿಯ ಖಂಡವೂ ಸೇರಿದಂತೆ ನೆಹರು ಸೂಚಿಸಿದ ಸಂವಿಧಾನದಲ್ಲಿ ಇರುವ ಖಾತರಿ ಬರಿ ಮರೀಚಿಕೆಯಷ್ಟೆ.

೯. ನೆಹರೂ ಅವರ ಸಂವಿಧಾನದಲ್ಲಿ ಮೇಲ್ಮನವಿಗೆ ಅವಕಾಶವಿದ್ದರೂ ಸಹ. ಆ ಯೋಜನೆಯನ್ನು ಒಪ್ಪಿಕೊಳ್ಳಬೇಡಿ ಎಂದು ನಾನು ನಿಮಗೆ ಸಲಹೆ ಮಾಡುತ್ತೇನೆ. ರಾಷ್ಟ್ರಗಳ ಕೂಟಕ್ಕಾಗಲೀ ಅಥವಾ ವೈಸ್‌ರಾಯ್ ಅವರಿಗಾಗಲೀ ಅಥವಾ ಸರ್ಕಾರಕ್ಕಾಗಲೀ ಮೇಲ್ಮನವಿಯನ್ನು ಸಲ್ಲಿಸುವ ಹಕ್ಕು ನಿಮ್ನವರ್ಗಗಳಿಗೊಂದು ಅತ್ಯಪೇಕ್ಷಿತ ಸೇರ್ಪಡೆಯಾಗುತ್ತಿತ್ತು. ಆದರೆ, ಅದೂ ಕೂಡ ಪರಿಣಾಮಕಾರಿಯಾದ ಆಯುಧವಾಗಲು ಸಾಧ್ಯವಿಲ್ಲ. ನಿಮ್ಮದೇ ಆದ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೆ ಅತ್ಯುತ್ತಮವಾದ ಖಾತರಿ ಎಂದರೆ, ಹತೋಟಿಯ ಅಧಿಕಾರ ನಿಮ್ಮ ಕೈಗಳಲ್ಲೇ ಇರಬೇಕು ; ಆಗ ನಿಮ್ಮ ಹಿತಾಸಕ್ತಿಗಳಿಗೆ ಕೆಡಕನ್ನುಂಟು ಮಾಡಿದರೆ ಅದಕ್ಕೆ ತಕ್ಕ ಶಾಸ್ತಿ ನೀವೇ ಮಾಡಬಹುದಲ್ಲದೆ ದಿನದಿಂದ ದಿನಕ್ಕೆ ನಿಮ್ಮ ಹಿತಾಸಕ್ತಿಗಳ ಮೇಲೆ ಕಣ್ಗಾವಲಿಟ್ಟು ಸಂಭವನೀಯ ಕೆಡಕುಗಳು ತಲೆಎತ್ತದ ಹಾಗೇ ತಡೆಗಟ್ಟಬಹುದು. ಅಧಿಕಾರವನ್ನು ಮೂರನೇಯವರ ಕೈಗೆ ಕೊಟ್ಟರೆ, ಆ ಮೂರನೆಯವರು ಸರ್ಕಾರವೇ ಆಗಿರಲಿ, ವೈಸರಾಯ್ ಅವರೇ ಆಗಿರಲಿ, ರಾಷ್ಟ್ರಗಳ ಕೂಟವೇ ಆಗಿರಲಿ ಇದನ್ನು ಭದ್ರ ಮಾಡಿಕೊಳ್ಳಲು ಎಂದೆಂದಿಗೂ ಸಾಧ್ಯವೇ ಇಲ್ಲ. ಮೂರನೆಯವರ ಕೈಯ್ಯಲ್ಲಿ ಕೊಟ್ಟ ಅಧಿಕಾರ ನಾವು ಬೇಡಿಕೊಂಡಾಗ ಅದನ್ನು ಅವರು ಚಲಾಯಿಸದೆ ಇದ್ದರೆ, ಅದರಿಂದ ನಮಗೆ ಏನು ಉಪಕಾರ? ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಅತ್ಯಂತ ಸುರಕ್ಷಿತವಾದ ಚಿಕಿತ್ಸೆಯೆಂದರೆ, ನನಗೆ ತೋಚುವ ಹಾಗೆ ಸ್ವಯಮಾಡಳಿತದ ಭಾರತದಲ್ಲಿ ಭವಿಷ್ಯತ್ತಿನ ಕಾರ್ಯಾಂಗದ ಹತೋಟಿಯನ್ನು ನಿಮ್ಮ ಕೈಗಳಲ್ಲೇ ಇಟ್ಟುಕೊಳ್ಳುವುದು. ಅದು ಸಾಧ್ಯವಾಗುವುದು ದೇಶದ ಶಾಸನ ಸಭೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಪಡೆದುಕೊಳ್ಳುವುದರಿಂದ ಮಾತ್ರ. ಈ ಏಕೈಕ ವಿಧಾನದಿಂದ ಮಾತ್ರವೇ ಕಾರ್ಯಾಂಗದ ದಿನನಿತ್ಯದ ಚಟುವಟಿಕೆಗಳ ಮೇಲೆ ಕಣ್ಣಿಟ್ಟು, ನಮ್ಮ ಸುರಕ್ಷೆಯನ್ನು ಮತ್ತು ನಮ್ಮ ಮುನ್ನಡೆಯನ್ನು ಖಚಿತಪಡಿಸಿಕೊಳ್ಳಬಹುದು. ಇದಕ್ಕೂ ಮಿಕ್ಕಿ, ಇನ್ನೂ ಹೆಚ್ಚಿನ ರಕ್ಷಣೋಪಾಯಗಳನ್ನು ಮತ್ತು ಖಾತರಿಗಳನ್ನು ಪಡೆದುಕೊಳ್ಳಲು ಸಾಧ್ಯವಾದರೆ ಧಾರಾಳವಾಗಿ ಪಡೆದುಕೊಳ್ಳಿ. ಅವುಗಳು ನಿಮ್ಮ ಬಿಲ್ಲಿನ ದಾರವನ್ನು ಇನ್ನೂ ಹೆಚ್ಚು ಬಲಗೊಳಿಸುತ್ತವೆ. ಆದರೆ ಸಾಕಷ್ಟು ಪ್ರಾತಿನಿಧ್ಯಕ್ಕೆ ಪರ್ಯಾಯವಾಗಿ ಇನ್ನೇನನ್ನು ಕೊಡುತ್ತೇನೆಂದರೂ ಒಪ್ಪಿಕೊಳ್ಳಬೇಡಿ. ದೇಶದ ರಾಜಕೀಯ ಅಂಗರಚನೆಯಲ್ಲಿ ಯಾವುದೇ ಬದಲಾವಣೆಗೆ ನಿಮ್ಮ ಸಮ್ಮತಿಯನ್ನು ನಿರಾಕರಿಸುವುದಕ್ಕೆ ನಿಮಗೆ ಸಂಪೂರ್ಣ ಹಕ್ಕಿದೆ. (ನಿಮಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡುತ್ತೇವೆ ಎಂದು ಖಾತರಿಯನ್ನು ಕೊಡುವವರೆಗೂ).

೧೦. ಭಾರತದಲ್ಲಿನ ಎಲ್ಲ ಅಲ್ಪಸಂಖ್ಯಾತ ಸಮುದಾಯದ ತುಟಿಗಳ ಮೇಲೆ 'ಸಾಕಷ್ಟು ಪ್ರಾತಿನಿಧ್ಯ' ಎಂಬ ಪದಪುಂಜವಿದೆ. ಆದರೆ, ಅದನ್ನು ಇಷ್ಟು ಎಂದು ಪರಿಮಾಣಾತ್ಮಕವಾಗಿ ನಿಗದಿಪಡಿಸಲು ಕಷ್ಟವಾಗಿರುವುದರಿಂದ ಅದು ಅಸ್ಪಷ್ಟ ಮತ್ತು ಅನಿರ್ಧಿಷ್ಟ ರೂಪದಲ್ಲೇ ಇದೆ. ಹೀಗಾಗಿ ಇದೊಂದು ಉಗ್ರಸ್ವರೂಪದ ವಾದ-ವಿವಾದದ ಕ್ಷೇತ್ರವಾಗಿಬಿಟ್ಟಿದೆ. ಆದರೆ ನಮ್ಮ ಬೇಡಿಕೆಗೆ ಒಂದು ನಿರ್ದಿಷ್ಟತೆಯನ್ನು ಕೊಡಲು ಬಯಸಿದರೆ ಆ ಪದಪುಂಜಕ್ಕೊಂದು ಪರಿಮಾಣಾತ್ಮಕ ವಿವರಣೆಯನ್ನು ರೂಪಿಸಲೇಬೇಕು. ಕಾಂಗ್ರೆಸ್ ವರ್ತುಲಗಳಲ್ಲಿ ಒಂದು ಸೂತ್ರಪಾತ ಪ್ರಚಲಿತವಿದೆ ; ಅದರ ಪ್ರಕಾರ ಸಾಕಾದಷ್ಟು ಪ್ರಾತಿನಿಧ್ಯ ಅಂದರೆ ಜನಸಂಖ್ಯೆಗೆ ಸರಿದೂಗುವ ಪ್ರಾತಿನಿಧ್ಯ, ನನ್ನ ಅಭಿಪ್ರಾಯದಲ್ಲಿ ಅಲ್ಪಸಂಖ್ಯಾತರಿಗೆ ಈ ಗಣಿತ ತತ್ವದ ಪ್ರಾತಿನಿಧ್ಯ ಒಂದು ಒರಟೊರಟಾದ ಆಭಾಸದ ಸಿದ್ಧಾಂತ. ಇದು ಬಹುಸಂಖ್ಯಾತರಿಗೆ ಅಲ್ಪಸಂಖ್ಯಾತರ ಬಗ್ಗೆ ಪ್ರಚಲಿತವಿರುವ ಧಾರಾಳವಲ್ಲದ ನಿಲುವಿನ ಪ್ರತಿಫಲನ ಅಲ್ಪಸಂಖ್ಯಾತರ ಸಮುದಾಯ ತನ್ನ ಸಾಮಾಜಿಕ

ಸ್ಥಾನಮಾನದಿಂದ ಮತ್ತು ತನ್ನ ಸದಸ್ಯರುಗಳಿಂದ ಸಿಗಬಹುದಾದಷ್ಟು ಅಧಿಕಾರ ತನ್ನ ರಕ್ಷಣೆಗೆ ಸಾಕಾಗುವುದಿಲ್ಲವೆಂದು ಅದು ಭಾವಿಸುವುದರಿಂದ, ಕೊರತೆಯನ್ನು ಭರ್ತಿ ಮಾಡಬೇಕೆಂದು ಅದು ಕೇಳುತ್ತಿದೆ. ಪ್ರಾತಿನಿಧ್ಯದಲ್ಲಿ ಇಂಥ ಹೆಚ್ಚಳವಿಲ್ಲದಿದ್ದರೆ ರಾಜಕೀಯ ಅಧಿಕಾರದಿಂದ ಬಲಿಷ್ಠರಾಗಿರುವ ಬಹುಸಂಖ್ಯಾತರನ್ನು ಎದುರಿಸಲು ಸಾಕಷ್ಟು ಬಲವಿರುವುದಿಲ್ಲವೆಂದು ಅದು ಭಾವಿಸುತ್ತದೆ. ಈ ದೃಷ್ಟಿಯಿಂದ ನೋಡುವುದಾದರೆ ಅಲ್ಪಸಂಖ್ಯಾತರಿಗೆ ರಕ್ಷಣೆ ಸಿಗಬೇಕಾದರೆ ಅವರ ಜನಸಂಖ್ಯೆಗೆ ಸಿಗಬೇಕಾದ ಕೋಟಾಕ್ಕಿಂತ (ಹಿಸ್ಸೆಗಿಂತ) ಹೆಚ್ಚು ಪ್ರಾತಿನಿಧ್ಯ ಸಿಗಬೇಕು. ಪರಿಸ್ಥಿತಿ ಹೀಗಿರಬೇಕಾದರೆ, ಜನಸಂಖ್ಯೆಗೆ ಮಾತ್ರ ಸೀಮಿತವಾದ ಪ್ರಾತಿನಿಧ್ಯದಿಂದ ಅಲ್ಪಸಂಖ್ಯಾತರಿಗೆ ರಕ್ಷಣೆ ಹೇಗೆ ಸಿಗುತ್ತದೆಂದು ಯಾರೇ ಪ್ರಶ್ನಿಸಬಹುದು. ಅಲ್ಪಸಂಖ್ಯಾತರ ರಕ್ಷಣೆ ಬಗ್ಗೆ ಮಾತನಾಡುತ್ತಾ, ಅದೇ ಕಾಲಕ್ಕೆ ಅವರ ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯವನ್ನು ಸೀಮಿತಗೊಳಿಸುವುದು ವಿರೋಧಾಭಾಸವಾಗಿ ಕಾಣುತ್ತದೆ. ಅವರ ಜನಸಂಖ್ಯೆಗೆ ಅನುಗುಣವಾಗಿ ಅವರ ಪ್ರಾತಿನಿಧ್ಯವನ್ನು ಗೊತ್ತುಪಡಿಸುವುದರ ಅರ್ಥವೆಂದರೆ, ಶಾಸನ ಸಭೆಯ ಹೊರಗೆ ಬಹುಸಂಖ್ಯಾತರಿಗೂ ಅಲ್ಪಸಂಖ್ಯಾತರಿಗೂ ಯಾವ ಅನುಪಾತವಿದೆಯೋ, ಅದೇ ಅನುಪಾತ ಶಾಸನ ಸಭೆಯ ಒಳಗೂ ಇದ್ದಹಾಗೆ ಆಗುತ್ತದೆ ; ಇಂಥದೊಂದು ಯೋಜನೆ ಅಧಿಕಾರದ ತಕ್ಕಡಿಯನ್ನು ಅದೇ ಸ್ಥಿತಿಯಲ್ಲಿ ಮುಂದುವರೆಸುತ್ತದೆ. ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ನೋಡುವುದಾದರೆ, ಯಾವುದೇ ಸುಧಾರಣೆ ಅದು ನಿಜವಾದ ಸುಧಾರಣೆ ಎನಿಸಿಕೊಳ್ಳಬೇಕಾದರೆ ಅಧಿಕಾರದ ಸಮತೋಲನ ಮಾಡುವಾಗ ಬದಲಾವಣೆಯನ್ನು ಸಹ ಗಮನಕ್ಕೆ ತೆಗೆದುಕೊಳ್ಳಬೇಕು ; ಇದು ಸಾಧ್ಯವಾಗುವುದು ಅವರ ಜನಸಂಖ್ಯೆಯಾಧಾರಿತ ಅನುಪಾತದ ಜೊತೆಗೆ ಒಂದಷ್ಟು ಹೆಚ್ಚಿನ ತೂಕವನ್ನು ಪ್ರಾತಿನಿಧ್ಯದ ಹಂಚಿಕೆ ಮಾಡುವಾಗ ಕೊಡಬೇಕು.

೧೧. ಪ್ರಾತಿನಿಧ್ಯದ ವಿಷಯದಲ್ಲಿ ಒಂದಷ್ಟು ಹೆಚ್ಚಿಗೆ ತೂಕವನ್ನು ಕೊಡಬೇಕಾದ ಅವಶ್ಯಕತೆ ಇರುವುದನ್ನು ಎಲ್ಲ ಅಲ್ಪಸಂಖ್ಯಾತರುಗಳು ಒಪ್ಪಿಕೊಳ್ಳುತ್ತಿದ್ದರು. ಅದನ್ನು ಹೇಗೆ ಅನ್ವಯಿಸುವುದೆಂಬುದರ ಬಗ್ಗೆ ಒಂದು ಒಮ್ಮತ ಅಭಿಪ್ರಾಯಕ್ಕೆ ಬರುತ್ತಿಲ್ಲವೆಂದು ತೋರುತ್ತದೆ. ನನಗೆ ತೋಚಿದ ಹಾಗೆ ಇದಕ್ಕೆ ಕಾರಣವೆಂದರೆ, ಈ ಹೆಚ್ಚಿಗೆ ತೂಕದ ನಿರ್ಧಾರ ಯಾವ ರೀತಿ ಕೆಲಸ ಮಾಡುತ್ತದೆಂದು ಒಂದು ನಿಚ್ಚಳವಾದ ತಿಳುವಳಿಕೆ ಇಲ್ಲದಿರುವುದೇ ಆಗಿದೆ. ನಾನು ಮೇಲೆ ಹೇಳಿರುವುದರಿಂದ ಗೊತ್ತಾಗುವುದೇನೆಂದರೆ, ಈ ಹೆಚ್ಚಿಗೆ ತೂಕ ಎನ್ನುವುದು ಅಲ್ಪಸಂಖ್ಯಾತರ ನಿಲುಕನ್ನು ಹೆಚ್ಚಿಸುವುದಕ್ಕೆ ಇರುವ ಒಂದು ಯೋಜನೆ. ಇಲ್ಲದಿದ್ದರೆ ರಕ್ಷಣೆ ಮಾಡಿಕೊಳ್ಳುವುದಕ್ಕೆ ಅದರ ನಿಲುವು ತೀರಾ ಚಿಕ್ಕದಾಗುತ್ತದೆ. ಸೇರಿಸಬೇಕಾದ ಉದ್ದ ತೋಳು ಈಗ ಎಷ್ಟು ಚಿಕ್ಕದಾಗಿದೆ ಎಂಬುದರ ಮೇಲೆ ಅವಲಂಬಿತವಾಗಿದೆ. ತೋಳು ತುಂಬಾ ಚಿಕ್ಕದಾಗಿದ್ದರೆ, ಸೇರಿಸಬೇಕಾದ ಉದ್ದ ಹೆಚ್ಚಿಗೆ ಇರಬೇಕು. ತೋಳು ಉದ್ದವಾಗಿದ್ದರೆ, ಸೇರಿಸಬೇಕಾದ ಉದ್ದವನ್ನು ಕಡಿಮೆ ಮಾಡಬೇಕು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಎಲ್ಲ ಅಲ್ಪಸಂಖ್ಯಾತರ ಸಮುದಾಯಗಳಿಗೂ ಈ ಹೆಚ್ಚಳ ಒಂದೇ ಸಮನಾಗಿ ಇರಲು ಸಾಧ್ಯವಿಲ್ಲ. ಅದು ಅವರ ಸಾಮಾಜಿಕ ಸ್ಥಾನಮಾನಕ್ಕೆ ತಕ್ಕುದಾಗಿ ಹೆಚ್ಚುಕಡಿಮೆ ಆಗಬೇಕು. ಅಧಿಕವಾಗಿರಬೇಕಾದರೆ ಅವರ ಅಂತಸ್ತು ಕೆಳಗಿರಬೇಕು ; ಕೆಳಗಿರಬೇಕಾದರೆ ಅವರ ಅಂತಸ್ತು ಹೆಚ್ಚಿಗೆ ಇರಬೇಕು. ದುರಾದೃಷ್ಟವಶಾತ್ ಕೆಲವು ಅಲ್ಪಸಂಖ್ಯಾತರ ಮನಃಸ್ಥಿತಿ ಹೇಗಿದೆ ಎಂದರೆ ತಮ್ಮ ಸಾಮಾಜಿಕ ಸ್ಥಾನಮಾನವನ್ನು, ಒಬ್ಬ ಸಾಧಾರಣ ಪೌರನ ಮಟ್ಟಕ್ಕಿಂತ ಎತ್ತರದ ಕಂಬಪೀಠದಲ್ಲಿ ಇಟ್ಟುಕೊಳ್ಳುವುದು. ಅಲ್ಲದೆ ತಮ್ಮ 'ಉನ್ನತ ಸ್ಥಾನಕ್ಕೆ' ಅನುಗುಣವಾಗಿ ಪ್ರಾತಿನಿಧ್ಯದಲ್ಲಿ ಹೆಚ್ಚಿನ ಪಾಲನ್ನು ಕೇಳುವುದು. ಹೀಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೇಳುವುದು ಅವರ ಅಂತಸ್ತು ಕೆಳಗಿದೆ ಎನ್ನುವ ಕಾರಣಕ್ಕಲ್ಲ. ಬದಲಿಗೆ ಹೆಚ್ಚಿಗೆ ಇದೆ ಎನ್ನುವ ಕಾರಣಕ್ಕೆ. ನಾನು ಮೊದಲೇ ಹೇಳಿದ ಹಾಗೆ ಅಲ್ಪಸಂಖ್ಯಾತರಿಗೆ ಹೆಚ್ಚಿನ

'ವೆಯ್ಟೇಜ್' ಕೊಡಬೇಕೆನ್ನುವ ಯೋಚನೆ ಅಸಂಬದ್ಧವಾಗಿದ್ದು, ಇಂಥ ವಿರೋಧಾಭಾಸದ ವಿರುದ್ಧ ನಾವು ಎಚ್ಚರಿಕೆಯಿಂದ ಇರಬೇಕು. ಇಲ್ಲದಿದ್ದರೆ ಇದು ದೇಶಕ್ಕೂ ಮತ್ತು ಅಲ್ಪಸಂಖ್ಯಾತರಿಗೂ ಹಾನಿಕಾರಕವಾಗಿ ಪರಿಣಮಿಸುತ್ತದೆ.

೧೨. ಅಲ್ಪಸಂಖ್ಯಾತರ ಪ್ರಾತಿನಿಧ್ಯಕ್ಕೆ 'ವೆಯ್ಟೇಜ್' ತತ್ವದ ನೀತಿಯನ್ನು ಸರಿಯಾಗಿ ಅನ್ವಯಿಸುವುದಕ್ಕೋಸ್ಕರ ಸಮೀಪಿಸಬೇಕಾದ ಸರಿದಾರಿಯ ಬಗ್ಗೆ ಒಂದು ಸೂಚನೆಯನ್ನು ಮಾತ್ರ ಇಲ್ಲಿಯವರೆಗೆ ಕೊಟ್ಟಿದ್ದೇನೆ. ಕರಾರುವಾಕ್ಕಾಗಿ ಎಷ್ಟು ಮೌಲ್ಯವನ್ನು (ವೆಯ್ಟೇಜ್) ನಿರ್ಧರಿಸಬೇಕೆಂಬ ಪ್ರಶ್ನೆ ಇನ್ನೂ ಉಳಿದುಕೊಂಡಿದೆ. ಸಂದರ್ಭಾನುಸಾರ ಅದು ಬದಲಾಗಬೇಕು ; ಅದನ್ನು ಲೆಕ್ಕ ಹಾಕುವುದಕ್ಕೆ ಒಂದು ಸ್ಥೂಲ ನಿಯಮವನ್ನು ಮಾತ್ರ ಕೊಡಬಲ್ಲೆನೆ ಹೊರತು ಬೇರೆ ಏನನ್ನೂ ಮಾಡಲಾರೆ. ಆ ನಿಯಮ ಹೀಗಿದೆ :– ಮೊದಲನೆಯದಾಗಿ, ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ನಡುವೆ ಒಂದು ಒಪ್ಪಂದವನ್ನು ಮಾಡಿಕೊಂಡು ಅದರಂತೆ ಜನಸಂಖ್ಯಾ ಅನುಪಾತದಲ್ಲಿ ಗರಿಷ್ಟ ಹೆಚ್ಚಳ ಎಷ್ಟಿರಬೇಕು ಎಂದು ಒಂದು ಸಂಖ್ಯೆಯನ್ನು ನಿರ್ಧರಿಸುವುದು. ಇದನ್ನು ಮೌಲ್ಯ ನಿರ್ಧಾರಿತ ಅಂಶವೆಂದು ಹೆಸರಿಸಬಹುದು. ಒಂದು ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯಕ್ಕೆ ಅವರಿಗೆ ಸಲ್ಲಬೇಕಾದ ಯಥೋಚಿತ ಪ್ರಾತಿನಿಧ್ಯವನ್ನು ನಿರ್ಧರಿಸುವದಕ್ಕೆ ಈ ಮೌಲ್ಯ ನಿರ್ಧಾರಕ ಅಂಶವನ್ನು ಆ ಅಲ್ಪಸಂಖ್ಯಾತ ವರ್ಗದ ಸಾಮಾಜಿಕ ಸ್ಥಾನಕ್ಕೆ ಅನುಗುಣವಾಗಿ ವ್ಯತಿರಿಕ್ತ ಅನುಪಾತದಲ್ಲಿ ನಿರ್ಧರಿಸಬೇಕು ; ಈ ಸಾಮಾಜಿಕ ಸ್ಥಾನವನ್ನು ನಿರ್ಧರಿಸುವಲ್ಲಿ (೧) ಅದರ ಸಾಮಾಜಿಕ ಅಂತಸ್ತು (೨) ಅದರ ಶೈಕ್ಷಣಿಕ ಸ್ಥಾನ ಮತ್ತು (೩) ಅದರ ಆರ್ಥಿಕಬಲ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಇದನ್ನು ಮಾಡಿದರೆ ವಿವಿಧ ಅಲ್ಪಸಂಖ್ಯಾತ ಸಮುದಾಯಗಳ ನಡುವೆ ಮತ್ತು ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರುಗಳ ನಡುವೆ ಒಂದು ಒಪ್ಪಂದಕ್ಕೆ ಬರಬಹುದು ಎಂದು ನನಗೆ ತೋರುತ್ತದೆ. ಇದು ನ್ಯಾಯಯುತವಾಗಿಯೂ ಮತ್ತು ಸರ್ವಸಮ್ಮತವಾಗಿಯೂ ಇದ್ದು, ಸಂಬಂಧಪಟ್ಟ ಯಾವುದೇ ಪಕ್ಷಗಳ ಯಾವುದೇ ದೂರುಗಳಿಗೆ ಅವಕಾಶವಿರುವುದಿಲ್ಲ.

೧೩. ನಮ್ಮ ಅವಗಾಹನೆಗೆ ಬರುವ ಮುಂದಿನ ಪ್ರಶ್ನೆ – ಮತದಾರರ ಮಂಡಲ ಮತ್ತು ಮತದಾನವನ್ನು ಕುರಿತದ್ದಾಗಿದೆ. ಮಹನೀಯರೇ, ಅವುಗಳ ಬಗ್ಗೆ ನಮ್ಮ ಬೇಡಿಕೆ ಏನಾಗಿರಬೇಕು? ಮತದಾರರ ಮಂಡಲವನ್ನು ರೂಪಿಸುವುದರ ಬಗ್ಗೆ ನಮ್ಮ ಮುಂದೆ ಎರಡು ಆಯ್ಕೆಗಳಿವೆ. ಮೊದಲನೆಯದು, ಪ್ರತ್ಯೇಕ ಮತದಾರರ ಮಂಡಲದ ಯೋಜನೆ ಎರಡನೆಯದು, ಕಾದಿರಿಸಲ್ಪಟ್ಟ ಸೀಟುಗಳನ್ನು ಒಳಗೊಂಡ ಮತಕ್ಷೇತ್ರಗಳು. ಈ ಪ್ರಶ್ನೆಯನ್ನು ಕುರಿತು ನಿಮ್ಮವರ್ಗಗಳಲ್ಲಿ ಅಭಿಪ್ರಾಯ ಭೇದವಿದೆಯೆಂದು ನನಗೆ ಗೊತ್ತು. ಪ್ರತ್ಯೇಕ ಮತಕ್ಷೇತ್ರಗಳಿರ(ಮತದಾರರ ಮಂಡಲ)ಬೇಕೆಂದು ಅನ್ನುವವರ ಅತಿದೊಡ್ಡ ಗುಂಪೇ ಇದೆ. ಅವರ ಹೆದರಿಕೆ ಏನೆಂದರೆ, ಸಂಯುಕ್ತ ಮತದಾರರ ಮಂಡಲಗಳಲ್ಲಿ, ಬಹುಸಂಖ್ಯಾತರಿಗೂ ವೋಟಿನ ಹಕ್ಕಿದ್ದು, ಅವರು ನಮ್ಮಲ್ಲಿ ಅವರಿಗೆ ವಿಧೇಯರಾಗಿರುವವರಿಗೆ ಮಣೆ ಹಾಕುತ್ತಾರೆ. ಇಂಥ ಹೆದರಿಕೆಗಳಿಗೆ ಬುನಾದಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಇದು ಸತ್ಯವಾಗಿದ್ದರೆ, ಅನ್ಯತಗಳನ್ನು ಪ್ರತ್ಯೇಕಿಸಿ ಇಡುವುದರಿಂದ ಪರಿಹಾರ ಸಿಗುವುದಿಲ್ಲ. ಬದಲಿಗೆ ವಯಸ್ಕರ ಮತದಾನ ಬೇಕೆಂದು ಒತ್ತಾಯ ಮಾಡಿ, ನಮ್ಮ ಮತದಾರರ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳುವುದರಿಂದ ಪರಿಹಾರ ದೊರಕಬಹುದು. ಹೀಗಾದಲ್ಲಿ, ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ಪ್ರಭಾವ ಬೀರುವುದನ್ನು ಕನಿಷ್ಟಗೊಳಿಸುವ ಸಾಧ್ಯತೆ ಇರುತ್ತದೆ. ಏಕೆಂದರೆ ಬಹುಸಂಖ್ಯಾತರು ಕೂಡ ನಮ್ಮ ಪ್ರತಿನಿಧಿಗಳ ಚುನಾವಣೆಯಲ್ಲಿ ಮತ ಚಲಾಯಿಸಬಹುದು. ನನ್ನ ಅಭಿಪ್ರಾಯದಲ್ಲಿ ನಮಗೆ ವಯಸ್ಕ ಮತದಾನ ಸಿಕ್ಕಿಬಿಟ್ಟರೆ – ಇದು ನಮ್ಮ ಅತ್ಯಂತ ಅವಶ್ಯಕ ಬೇಡಿಕೆಗಳಲ್ಲಿ ಒಂದು ಎಂದು

ಒತ್ತಾಯಿಸಬೇಕು. ನಮಗೆ ನಿಮ್ನವರ್ಗಗಳಿಗಾಗಿ ಕಾದಿರಿಸಲ್ಪಟ್ಟ ಸೀಟುಗಳಿರುವ ಸಂಯುಕ್ತ ಮತದಾರರ ಮಂಡಲದ ಯೋಜನೆಗೆ ಆಕ್ಷೇಪಣೆ ಏನೂ ಇರಲಾರದು.

೧೪. ಈ ಸಂದರ್ಭದಲ್ಲಿ ನಾನು ಮಾಡಲೇಬೇಕಾದ ಒಂದು ಅವಲೋಕನೆ ಇದೆ. ಈ ದೇಶ ಬೇರೆ ಬೇರೆ ಜಾತಿಗಳು ಮತ್ತು ಪಂಥಗಳಿಂದ ಕೂಡಿದ ಭಿನ್ನವಾದ ದೇಶವಾಗಿದ್ದು, ಸಂವಿಧಾನದ ಅಂಗವಾಗಿ ಅಲ್ಪಸಂಖ್ಯಾತರುಗಳಿಗೆ ಯಥೋಚಿತ ರಕ್ಷಣೆಗಳನ್ನು ಒದಗಿಸದಿದ್ದಲ್ಲಿ, ನಾವು ಒಂದು ಒಗ್ಗಟ್ಟಾದ ಸ್ವಯಮಾಡಳಿತವಿರುವ ಸಮುದಾಯವಾಗಿರಲು ಸಾಧ್ಯವಿಲ್ಲವೆಂಬ ಹೇಳಿಕೆಗೆ ನನ್ನ ತಕರಾರಿಲ್ಲ. ಆದರೆ ಅಲ್ಪಸಂಖ್ಯಾತರು ನೆನಪಿನಲ್ಲಿ ಇಟ್ಟುಕೊಳ್ಳಲೇಬೇಕಾದುದು ಏನೆಂದರೆ, ಈ ದಿನಗಳಲ್ಲಿ ನಾವು ಬಿರುಕುಬಿಟ್ಟ ಪಂಥಗಳಾಗಿ ತೃಣೀಕರಿಸಲ್ಪಟ್ಟ ಜಾತಿಗಳಾಗಿದ್ದೇವೆ. ಹೀಗಿದ್ದಾಗ್ಯೂ ಒಗ್ಗಟ್ಟಾದ ಭಾರತವೇ ನಮ್ಮ ಆದರ್ಶ. ಇದು ಎಂಥ ಆದರ್ಶವೆಂದರೆ ತಮ್ಮ ಧ್ವನಿಗೆ ಕಿವಿಗೊಡಬೇಕೆಂದು ಒತ್ತಾಯಿಸಿ ಕೇಳುವ ಅಲ್ಪಸಂಖ್ಯಾತವರ್ಗ ಎಲ್ಲಕ್ಕಿಂತ ಮುಂಚೂಣಿಯಲ್ಲಿ ಇಟ್ಟುಕೊಳ್ಳಲು ಸೋಲಬಾರದಂಥ ಆದರ್ಶ. ಅದು ಹಾಗಿರುವಾಗ ಪ್ರತಿಯೊಂದು ಅಲ್ಪಸಂಖ್ಯಾತರ ಬಣ/ಗುಂಪು ತನ್ನ ಅವಶ್ಯಕತೆಗಳನ್ನು ಕಾಪಾಡಿಕೊಳ್ಳುವ ಸಾಧನವನ್ನು ರೂಪಿಸಿಕೊಳ್ಳುವಲ್ಲಿ, ಆ ಆದರ್ಶವನ್ನು ಸಾಕ್ಷಾತ್ಕರಿಸಿಕೊಳ್ಳುವುದರಲ್ಲಿ ಅದಕ್ಕೆ ಹೊಂದಾಣಿಕೆ ತಪ್ಪದ ಹಾಗೆ ನೋಡಿಕೊಳ್ಳಬೇಕು. ನೀವು ನರಳುತ್ತಿರುವ ವೈಕಲ್ಯ ನಿಜವಾದದ್ದು. ಆದಕಾರಣ ನಿಮಗೆ ಬೇಕಾದ ರಕ್ಷಣೆಗಳಿಗಾಗಿ ಒತ್ತಾಯಿಸಿ. ಆದರೆ ಈ ರಕ್ಷಣೆಗಳು ಭಿನ್ನಾಭಿಪ್ರಾಯಗಳನ್ನು ಅನವರತಗೊಳಿಸದಂತೆ ಇರಲಿ. ಈ ಕಂದಕಗಳಿಗೆ ಸೇತುಬಂಧ ಮಾಡುವುದು ನಮ್ಮೆಲ್ಲರ ಮಹದಾಸೆಯಾಗಲಿ. ನಿಸ್ಸಂದೇಹವಾಗಿ ಬಹುಸಂಖ್ಯಾತ ಸಮುದಾಯದ ಮೇಲೆ ಒಂದು ಉಪಕಾರ ಭಾರವಿದೆ. ಅದೆಂದರೆ ಅವರು ಅಲ್ಪಸಂಖ್ಯಾತರಿಗಾಗಿ ರಕ್ಷಣೋಪಾಯಗಳನ್ನು ಕಲ್ಪಿಸುವುದಕ್ಕೆ ಸಮ್ಮತಿಸಬೇಕು. ಅದರೆ ಅಲ್ಪಸಂಖ್ಯಾತರ ಮೇಲೂ ಅಷ್ಟೇ ಪವಿತ್ರವಾದ ಉಪಕಾರ ಭಾರ ಇದೆ. ಎಲ್ಲರೂ ಒಗ್ಗೂಡುವ ದಾರಿಗೆ ಅಡ್ಡಬಾರದೇ ಇರುವುದೇ ಆ ಉಪಕಾರ ಭಾರ. ಈ ದೃಷ್ಟಿಕೋನದಿಂದ ನೋಡುವುದಾದರೆ, ಸಂಯುಕ್ತ ಮತದಾರರ ಮಂಡಲಗಳು ಮತ್ತು ಕಾದಿರಿಸಲ್ಪಟ್ಟ ಸೀಟುಗಳು ಇವುಗಳನ್ನು ಒಳಗೊಂಡ ಯೋಜನೆ ಪ್ರತ್ಯೇಕ ಮತದಾರರ ಮಂಡಲಕ್ಕಿಂತ ಉತ್ತಮವಾದುದೆಂದು ಹೇಳಲೇಬೇಕಾಗುತ್ತದೆ. ಅದು ಪ್ರಸ್ತುತದ ವಾಸ್ತವಗಳನ್ನು ಮುಟ್ಟುವುದೂ ಅಲ್ಲದೆ ಭವಿಷ್ಯದ ಆದರ್ಶಕ್ಕೂ ನೆರವಾಗುತ್ತದೆ.

೧೫. ನಿಮ್ನವರ್ಗಗಳವರಿಗೆ ಅವರ ಯೋಗಕ್ಷೇಮದ ಬಗ್ಗೆ ವಿಶೇಷ ಆಸಕ್ತಿವಹಿಸಬೇಕಾದ ಇನ್ನೊಂದು ವಿಷಯವಿದೆ. ಸಾರ್ವಜನಿಕ ಸೇವೆಗಳಿಗೆ ಅವರು ಪ್ರವೇಶಿಸುವುದಕ್ಕೆ ಅದು ಸಂಬಂಧಿಸಿದ್ದಾಗಿದೆ. ಕಾನೂನುಗಳನ್ನು ರಚನೆ ಮಾಡುವುದಕ್ಕೆ ಹಕ್ಕಿರುವ ಅಧಿಕಾರ ಎಷ್ಟು ಮುಖ್ಯವೋ, ಅದನ್ನು ಪಾಲಿಸುವ ಅಧಿಕಾರವೂ ಅಷ್ಟೇ ಮುಖ್ಯ. ಆದರೆ ಆಡಳಿತಗಾರ ತನ್ನ ಕುಟಿಲೋಪಾಯಗಳಿಂದ ಶಾಸನದ ಉದ್ದಿಶ್ಯದ ಹಿಂದಿರುವ ಚೇತನವನ್ನು ಸುಲಭವಾಗಿ ಉಲ್ಲಂಘಿಸಬಹುದು, ಇಲ್ಲವೇ ನಿಷ್ಕ್ರೀಯಗೊಳಿಸಬಹುದು. ಆದಾಗ್ಯೂ ಆಡಳಿತದ ಮೇಲೆ ಹತೋಟಿಯನ್ನಿಟ್ಟುಕೊಳ್ಳುವ ಅಧಿಕಾರವನ್ನು ಪಡೆದುಕೊಳ್ಳಲು ನಿಮ್ನವರ್ಗಗಳು ಆಸಕ್ತಿವಹಿಸುವುದಕ್ಕೆ ಇದೊಂದೇ ಕಾರಣವಲ್ಲ. ಅನೇಕ ಸಂದರ್ಭಗಳಲ್ಲಿ ಕೆಲಸದ ಒತ್ತಡವಿರುವಾಗ, ಕಠಿಣವಾದ ಸಮಸ್ಯೆ ಎದುರಾದಾಗ ಆಡಳಿತ ಇಲಾಖೆಯ ಮುಖ್ಯಸ್ಥರ ಕೈಯ್ಯಲ್ಲಿ ಹೆಚ್ಚಾದ ವಿವೇಚನಾ ಅಧಿಕಾರವನ್ನು ಕಾನೂನು ಕೊಡಲೇಬೇಕಾಗುತ್ತದೆ. ಈ ವಿವೇಚನೆಯನ್ನು ಎಷ್ಟು ನಿಷ್ಪಕ್ಷಪಾತವಾಗಿ ಚಲಾಯಿಸಲಾಗುತ್ತದೆ ಎಂಬುದರ ಮೇಲೆ ಜನಗಳ ಕಲ್ಯಾಣ ಅವಲಂಬಿತವಾಗಿದೆ. ಭಾರತದಂಥ ದೇಶದಲ್ಲಿ ಸಾರ್ವಜನಿಕ ಸೇವೆಯ ಆಡಳಿತ ಒಂದೇ ಸಮುದಾಯಕ್ಕೆ ಸೇರಿದ ಜನಗಳ ಕೈಯ್ಯಲ್ಲಿ ಇರುವಾಗ, ಒಂದೇ ವರ್ಗದ ಜನಗಳಿಗೆ ಅತಿಶಯವಾದ ಅನುಕೂಲವನ್ನು ಒದಗಿಸಿಕೊಡುವುದಕ್ಕೆ ಈ ವಿವೇಚನೆಯು ಅಧಿಕಾರವನ್ನು

ದುರುಪಯೋಗಪಡಿಸಿಕೊಳ್ಳಬಹುದು. ಇದಕ್ಕೆ ಅತ್ಯುತ್ತಮವಾದ ಪ್ರತಿಹಾರಿಯೆಂದರೆ ದೇಶದ ಸಾರ್ವಜನಿಕ ಸೇವೆಗಳಲ್ಲಿ, ನಿಮ್ನವರ್ಗಗಳವರು ಸೇರಿದಂತೆ ಬೇರೆ ಬೇರೆ ಜಾತಿಗಳ ಮತ್ತು ಪಂಥಗಳವರು ಒಂದು ಮಿಶ್ರಣ ಇರಬೇಕೆಂದು ಒತ್ತಾಯಿಸಬೇಕು. ಇದಕ್ಕಾಗಿ ಸಂವಿಧಾನದಲ್ಲಿ ಸೂಕ್ತವಾದ ಉಪಬಂಧವನ್ನು (ಖಂಡವನ್ನು) ಸೇರಿಸಬೇಕು. ದೇಶದ ಮುಂದಿನ ಮಂತ್ರಿ ಮಂಡಲಗಳಲ್ಲಿ ನಿಮ್ನವರ್ಗಗಳಿಗೆ ಪ್ರಾತಿನಿಧ್ಯ ಕಲ್ಪಿಸುವ ಸಂಭವವಿದ್ದರೆ ಇಂಥ ರಕ್ಷಣೆ ಬೇಕೆಂಬ ಬೇಡಿಕೆಯನ್ನು ನಾವು ಕೈಬಿಡಬಹುದಾಗಿತ್ತು. ಆದರೆ ಈ ಸಂಭವ ಅತಿ ವಿರಳವಾದ ಸಂಭವವೂ ಅಲ್ಲ. ಏಕೆಂದರೆ ನಿಮ್ನವರ್ಗಗಳವರು ಯಾವಾಗಲೂ ಅಲ್ಪಸಂಖ್ಯಾತರಾಗಿಯೇ ಉಳಿಯುತ್ತಾರೆ. ಇದರಿಂದಾಗಿ ಈ ರೀತಿ ಖಾತರಿಬೇಕೆಂದು ಒತ್ತಾಯ ಮಾಡುವುದು ಅತ್ಯವಶ್ಯಕವಾಗುತ್ತದೆ.

## IV ನಿಮ್ನವರ್ಗಗಳು ಮತ್ತು ಸೈಮನ್ ಆಯೋಗ

೧೬. ಸ್ವಯಮಾಡಳಿತದ ಭಾರತದ ಸಂವಿದಾನದಲ್ಲಿ ನಮಗೆ ಇರಲೇಬೇಕಾದ ಕೆಲವು ರಕ್ಷಣೋಪಾಯಗಳತ್ತ ನಿಮ್ಮ ಗಮನವನ್ನು ಸೆಳೆದಿದ್ದೇನೆ. ನಮ್ಮ ಪರವಾಗಿ ಸೈಮನ್ ಆಯೋಗ ಮಾಡಿರುವ ಶಿಫಾರಸ್ಸುಗಳ ಬಗ್ಗೆ ನಾನೀಗ ದೃಷ್ಟಿಹರಿಸುತ್ತೇನೆ. ಸಂವೈಧಾನಿಕ ರಕ್ಷಣಾ ಕ್ರಮಗಳ ಕುರಿತು ನಿಮ್ನವರ್ಗಗಳವರ ಪ್ರಕರಣವನ್ನು ಸೈಮನ್ ಆಯೋಗ ಅನುಕಂಪದಿಂದ ಪರಿಗಣಿಸಿದೆ. ಆಯೋಗ ನಿಮ್ನವರ್ಗಗಳ ನೈಜಚಿತ್ರಣವನ್ನು ಕೊಡಲು ಪ್ರಯತ್ನಿಸಿದೆ. ಆದರೂ ಸಹ ಅವರು ಕೊಟ್ಟಿರುವ ಚಿತ್ರ ಯಾವುದೇ ರೀತಿಯಿಂದಾಗಲೀ ಸಂಪೂರ್ಣ ಚಿತ್ರವಲ್ಲ. ಅದು ಶಾಲೆಗೆ ಸಂಬಂಧಿಸಿದ ಮತ್ತು ಬಾವಿ ನೀರಿಗೆ ಸಂಬಂಧಿಸಿದ ಕಷ್ಟಗಳನ್ನು ಮಾತ್ರ ಪರಾಮರ್ಶಿಸಿದ್ದರೆ ಈ ನತದೃಷ್ಟ ವರ್ಗಗಳವರ ಕುಂದುಕೊರತೆಗಳ ಉದ್ದನೆಯ ಪಟ್ಟಿಯಲ್ಲಿ ಒಂದು ಚಿಕ್ಕದಾದ ಭಾಗವನ್ನೇ ಈ ಚಿತ್ರಗಳು ನಿದರ್ಶಿಸುತ್ತವೆ. ಹೇಗೆ ಆದರೂ ನಿಮ್ನವರ್ಗಗಳವರಿಗೆ ಸಂವೈಧಾನಿಕ ರಕ್ಷಣೆಗಳು ಬೇಕೆಂದು ಮಾಂಟ್‌ಫೋರ್ಡ್ ವರದಿ ತಿಳಿಸಿಕೊಡುವುದಕ್ಕಿಂತ ಹೆಚ್ಚಾಗಿ ಸೈಮನ್ ಆಯೋಗ ನಿಜವಾಗಿ ತಿಳಿದುಕೊಂಡಿದೆ. ಆದರೆ ನಮ್ಮ ಮನವಿಯ ರೀತಿ ಮತ್ತು ಶಕ್ತಿಯುತವಾದ ಮನವಿಗೆ ಹೋಲಿಸಿದಾಗ ಸೈಮನ್ ಆಯೋಗದ ಶಿಫಾರಸ್ಸುಗಳು ಬಹಳ ನಿರಾಶಾದಾಯಕವಾಗಿರುವುದು ನನಗೆ ವ್ಯಸನವನ್ನುಂಟು ಮಾಡಿದೆ.

೧೭. ನಿಮಗೆ ಗೊತ್ತಿರುವ ಹಾಗೆ ಪ್ರಸ್ತುತದಲ್ಲಿ ನಿಮ್ನವರ್ಗಗಳನ್ನು ನಾಮನಿರ್ದೇಶನ ಮಾಡುವ ಮೂಲಕ ಪ್ರತಿನಿಧಿಸಲಾಗುತ್ತಿದೆ. ಪರಿಷತ್ತುಗಳಲ್ಲಿ ನಿಮ್ಮನ್ನು ಪ್ರತಿನಿಧಿಸಿದ ಅದೃಷ್ಟಹೀನರಾದ ನಾವು, ಪ್ರತಿನಿಧಿಸುವ ವ್ಯವಸ್ಥೆಯ ದುಷ್ಪರಿಣಾಮಗಳ ಬಗ್ಗೆ ಹೇಳುತ್ತೇವೆ. ಭಾರತದ ಎಲ್ಲಡೆ ಸೈಮನ್ ಆಯೋಗದ ಎದುರು ನಮ್ಮ ಜನಗಳು ಕೊಟ್ಟ ಸಾಕ್ಷ್ಯದಲ್ಲಿ ಈ ವ್ಯವಸ್ಥೆಯನ್ನು ಸಾರ್ವತ್ರಿಕವಾಗಿ ಖಂಡಿಸಲಾಯಿತು ಎಂದು ತಿಳಿಸಲು ಸಂತೋಷಿಸುತ್ತೇನೆ. ಆ ವ್ಯವಸ್ಥೆ ತಮಗೆ ಬೇಕಾದ ಅತ್ಯುತ್ತಮ ಜನರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶದಿಂದ ನಮ್ಮ ಜನರನ್ನು ವಂಚಿತರನ್ನಾಗಿ ಮಾಡಿದೆ ! ಅಲ್ಲದೆ, ನಾಮ ನಿರ್ದೇಶಿತ ಪ್ರತಿನಿಧಿಗಳಿಗೆ ಏನನ್ನು ಮಾಡಲೂ ಸ್ವಾತಂತ್ರ್ಯವಿಲ್ಲ. ಸೈಮನ್ ಆಯೋಗ ಈ ಕ್ರೂರ ವ್ಯವಸ್ಥೆಯನ್ನು ತ್ಯಜಿಸದಿರುವುದು ವಿಶಾದನೀಯವಾಗಿದೆ. ಅದಕ್ಕೇ ಆಯೋಗ ಇನ್ನೂ ಅಂಟಿಕೊಂಡಿದ್ದು, ಸೂಕ್ತವಾದ ಅಭ್ಯರ್ಥಿಗಳು ಚುನಾವಣೆಗೆ ನಿಲ್ಲಲು ದೊರಕದಿದ್ದರೆ, ರಾಜ್ಯಪಾಲರು ಅವರನ್ನು ನಾಮನಿರ್ದೇಶನ ಮಾಡಬಹುದೆಂದು ಆಯೋಗ ಶಿಫಾರಸ್ಸು ಮಾಡುತ್ತದೆ. ಇಷ್ಟೇ ಅಲ್ಲ, ನಿಮ್ನವರ್ಗಗಳನ್ನು ಶಾಸನಸಭೆಗಳಲ್ಲಿ ಪ್ರತಿನಿಧಿಸುವುದಕ್ಕೆ, ನಿಮ್ನವರ್ಗಕ್ಕೆ ಸೇರಿಲ್ಲದವರನ್ನು ನಾಮನಿರ್ದೇಶನ ಮಾಡುವುದಕ್ಕೆ ಗವರ್ನರ್ ಅವರಿಗೆ ಅಧಿಕಾರ ಕೊಡಬೇಕೆನ್ನುವ

ಅನಪೇಕ್ಷಿತ ಪ್ರಸ್ತಾವನೆಯನ್ನು ಸೈಮನ್ ಆಯೋಗ ಮಾಡಿದೆ. ಆದರೆ ಇವುಗಳು ಬದಲಿ ವ್ಯವಸ್ಥೆಗಳಾಗಿದ್ದು, ಅವುಗಳಿಗೆ ನಾವು ಹೆಚ್ಚು ಗಮನ ಕೊಡಬೇಕಾಗಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಸೈಮನ್ ಆಯೋಗದ ಮುಖ್ಯ ಪ್ರಸ್ತಾವನೆಯೂ ಸಹ ಇಷ್ಟೇ. ಒಪ್ಪಿಕೊಳ್ಳಲು ಆಗದೆ ಇರುವಂಥವುಗಳಾಗಿವೆ. ಅದರ ಪ್ರಕಾರ, ನಿಮ್ನವರ್ಗಗಳನ್ನು ಕಾದಿರಿಸಿದ ಸೀಟುಗಳಿರುವ ಜಂಟಿ ಮತದಾರ ಕ್ಷೇತ್ರಗಳ ವ್ಯವಸ್ಥೆಯಲ್ಲಿ ನಡೆಸುವ ಚುನಾವಣೆಗಳ ಮೂಲಕ ಪ್ರತಿನಿಧಿಸಬೇಕು. ಆದರೆ ಆ ಶಿಫಾರಸ್ಸಿನಲ್ಲಿ ಇನ್ನೇನೂ ಹೆಚ್ಚಿಗೆ ಇಲ್ಲದಿದ್ದರೂ, ನಮ್ಮ ಈಗಿನ ಪರಿಸ್ಥಿತಿಗಿಂತ ಮುನ್ನಡೆ ಸಾಧಿಸಿದೆ. ಆದರೂ ಈ ಪ್ರಸ್ಥಾವನೆ ಒಂದು ಉಪಬಂಧಕ್ಕೆ ಒಳಪಟ್ಟಿದೆ. ಅದೇಂದರೆ ಆ ಪ್ರಾಂತ್ಯದ ಗವರ್ನರ್ ಅವರು ಅಭ್ಯರ್ಥಿಯ ಯೋಗ್ಯತಾ ಪ್ರಮಾಣವನ್ನು ಕೊಡದ ಹೊರತು ಅವರು ಚುನಾವಣೆಗೆ ನಿಲ್ಲಲು ಅವಕಾಶವಿಲ್ಲ, ಇಂಥ ವ್ಯವಸ್ಥೇ ಪರಿಗ್ರಹವಲ್ಲದೆ ಇರುವುದಕ್ಕೆ ಕಾರಣವೆಂದರೆ ಈ ಪ್ರಸ್ಥಾವಿತ ವ್ಯವಸ್ಥೆ ಈಗ ಪ್ರಚಲಿತದಲ್ಲಿರುವ ನಾಮನಿರ್ದೇಶನ ವ್ಯವಸ್ಥೆಗೆ ಬಹುಮಟ್ಟಿಗೆ ಹೋಲುತ್ತದೆ. ಆದ್ದರಿಂದ ಅವುಗಳ ನಡುವೆ ಆರಿಸಿಕೊಳ್ಳುವುದೇನೂ ಇಲ್ಲ ಇದಲ್ಲದೆ, ಒಂದು ಮತಕ್ಷೇತ್ರಕ್ಕೆ ಒಬ್ಬನೇ ಒಬ್ಬ ಅಭ್ಯರ್ಥಿಯನ್ನು ಮಾತ್ರ ಆರಿಸಿಕೊಂಡ ಸಂದರ್ಭದಲ್ಲಿ ಆಚರಣೆಯಲ್ಲಿ ಅದು ಸರಳ ಶುದ್ಧಾಂಗ ನಾಮನಿರ್ದೇಶನವೇ ಆಗುತ್ತದೆ, ಈ ಯೋಗ್ಯತಾ ಪ್ರಮಾಣಪತ್ರವನ್ನು ಕೊಡುವ ವ್ಯವಸ್ಥೆ ಕೂಡಾ ಹೇಗೆ ಕಾರ್ಯಸಾಧುವೆಂದು ಯಾರಿಗೂ ಗೊತ್ತಾಗುವುದಿಲ್ಲ; ಅಲ್ಲದೆ ಆ ಯೋಗ್ಯತಾ ಪತ್ರವನ್ನು ಕೊಡುವುದಕ್ಕೆ ಯಾವ ಅಂಶಗಳನ್ನು (ಮಾನದಂಡಗಳನ್ನು) ಗಣನೆಗೆ ತೆಗೆದುಕೊಳ್ಳಲಾಗುತ್ತದೆ ಎಂಬುದು ಸಹಾ ತಿಳಿಯುವುದಿಲ್ಲ. ರಾಜ್ಯಪಾಲರು ನಿಮ್ನವರ್ಗದವರ ಸಂಘದವರೊಂದಿಗೆ ಸಮಾಲೋಚಿಸಿ, ಇಲ್ಲವೇ ತಮಗೆ ಯಾವುದು ಉತ್ತಮವೆಂದು ತೋರುತ್ತದೋ ಅದರಂತೆ ಪ್ರಮಾಣಪತ್ರವನ್ನು ಕೊಡಬೇಕೆಂದು ಸೈಮನ್ ಆಯೋಗ ಸಲಹೆ ಮಾಡುತ್ತದೆ. ಎರಡರಲ್ಲಿ ಯಾವುದಕ್ಕೂ ನಮ್ಮ ಒಪ್ಪಿಗೆಯಿಲ್ಲ. ಸಂಘಗಳೊಂದಿಗೆ ಸಮಾಲೋಚನೆ ಮಾಡುವ ವ್ಯವಸ್ಥೆಯನ್ನು ಅಳವಡಿಸಿಕೊಂಡರೆ ಅದು ಇನ್ನೂ ಹಲವು ಖೊಟ್ಟಿ ಸಂಘಗಳು ಹುಟ್ಟಿಕೊಳ್ಳುವುದರಲ್ಲಿ ಪರ್ಯಾವಸಾನವಾಗುತ್ತದೆ. ಅವುಗಳ ಉದ್ದೇಶ ತಮಗೆ ಅಚ್ಚುಮೆಚ್ಚಾದವರನ್ನು ಬೆಂಬಲಿಸುವುದೇ ಆಗಿದೆ; ಇಂಥವರು ಜನಸಾಮಾನ್ಯರಿಗೆ ಒಪ್ಪಿಗೆ ಆಗಬೇಕೆಂದೇನೂ ಇಲ್ಲ ಬದಲಿಗೆ ಅಳವಡಿಸಿಕೊಂಡ ವ್ಯವಸ್ಥೆ "ಬೇರೆಯದ್ದಾಗಿದ್ದರೆ" ಅದು ಅತಿ ಕೆಟ್ಟ ಅಧಿಕಾರಶಾಹಿಯಾಗಿ ಕೊಳೆತು ಹೋಗುವುದರಲ್ಲಿ ಸಂಶಯವಿಲ್ಲ; ಯೋಗ್ಯತಾ ಪ್ರಮಾಣಪತ್ರವನ್ನು ಕೊಡುವ ಮಾಮ್ಲತ್‌ದಾರರು(ಮಾಮ್ಲೆದಾರರ) ಮತ್ತು ತಹಶೀಲ್ದಾರ್ ಇವರುಗಳ ಕೈ ಸೇರಿಬಿಡುತ್ತದೆ, ಕಾರಣವೆಂದರೆ ಅವರುಗಳ ವರದಿಯ ಆಧಾರದ ಮೇಲೆಯೇ ರಾಜ್ಯಪಾಲರು ಬುದ್ಧಿವಂತಿಕೆಯಿಂದ ಕ್ರಮ ಕೈಗೊಳ್ಳಬೇಕಾಗುತ್ತದೆ; ಈ ಮಾಮ್ಲತ್‌ದಾರರುಗಳು ಮತ್ತು ತಹಶೀಲ್ದಾರ್‌ಗಳು ಎಂತಹ ಅಧಿಕಾರಿಗಳೆಂದು ನಿಮಗೆ ಗೊತ್ತು, ನಿಮ್ನವರ್ಗ ಮತ್ತು ಆ ವರ್ಗದ ಬುದ್ಧಿಜೀವಿಗಳ ಬಗ್ಗೆ ಅವರ ಧೋರಣೆ ಏನು ಎಂಬುದು ಸಹ ನಿಮಗೆ ಗೊತ್ತು. ಇದರಿಂದಾಗಿ ಪ್ರಮಾಣಪತ್ರಕ್ಕೆ ಅರ್ಹರೆಂದು ಎಂಥ ವ್ಯಕ್ತಿಗಳನ್ನು ಅವರು ಶಿಫಾರಸ್ಸು ಮಾಡುತ್ತಾರೆಂದು ನಾವು ಚೆನ್ನಾಗಿ ಊಹಿಸಬಹುದು.

೧೮. ನಿಮ್ನವರ್ಗದವರ ಪ್ರಾತಿನಿಧ್ಯದ ವಿಷಯದಲ್ಲಿ ಯಾವುದೇ ವಿಶೇಷ ಅವಶ್ಯಕತೆಯಿದೆ ಎಂದು ಆಯೋಗ ಹೇಳುವುದನ್ನು ನಾನು ಒಪ್ಪಿಕೊಳ್ಳಲಾರೆ. ಅವರ ಉದ್ದೇಶ ಶಾಸನ ಸಭೆಗಳಿಂದ ಅಪ್ರಯೋಜಕರನ್ನು ಹೊರಗಿಡುವುದೇ ಆಗಿದ್ದರೆ, ಶಾಸನ ಸಭೆಗಳಲ್ಲಿನ ಪ್ರಾತಿನಿಧ್ಯಕ್ಕೆ ಇದರೊಂದಿಗೆ ಇನ್ನೂ ಅನೇಕ ಆಸಕ್ತಿಗಳಿದ್ದು ಅವರನ್ನೂ ಸಹಾ ಪ್ರಮಾಣಪತ್ರದ ಕಾರ್ಯವಿಧಿಗೆ ಒಳಪಡಿಸಲೇಬೇಕಾಗುತ್ತದೆ. ಇಂಗ್ಲಿಷ್ ಭಾಷೆ ಗೊತ್ತಿಲ್ಲದವರು ಮತ್ತು ಆ ಭಾಷೆಯಲ್ಲಿ ಭಾಷಣ ಮಾಡುವುದಕ್ಕೆ ಬರದಿದ್ದವರು ಅಪ್ರಯೋಜಕರು ಎಂದರೆ, ಬೊಂಬಾಯಿ

ವಿಧಾನಪರಿಷತ್ತಿನಲ್ಲಿರುವ ಅನೇಕ ಬ್ರಾಹ್ಮಣೇತರ ಸದಸ್ಯರುಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿರುವ ಮುಸಲ್ಮಾನ ಸದಸ್ಯರುಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಏನೇನೂ ತಿಳಿವಳಿಕೆಯಿಲ್ಲವೆಂದು ನನಗೆ ಗೊತ್ತು. ಅವರು ಭಾಷಣ ಮಾಡಿರುವುದಾಗಲೀ, ಪ್ರಶ್ನೆ ಕೇಳಿರುವುದಾಗಲೀ ತುಂಬಾ ವಿರಳ. ಅನೇಕ ವಿಧಾನ ಪರಿಷತ್ತುಗಳಲ್ಲಿ ನಿಮ್ನವರ್ಗದವರನ್ನು ಪ್ರತಿನಿಧಿಸುತ್ತಿರುವ ನನ್ನ ಸ್ನೇಹಿತರುಗಳು, ತಮ್ಮತಮ್ಮ ಪ್ರಾಂತ್ಯಗಳಲ್ಲಿ ಇಂಥದೇ ಪ್ರಸಂಗಗಳನ್ನು ನೆನಪಿಗೆ ತಂದುಕೊಳ್ಳಬಹುದಾಗಿದೆ. ಪ್ರಮಾಣಪತ್ರ ಅವರಿಗೆ ಬೇಕಾಗಿಲ್ಲದಿದ್ದಲ್ಲಿ ನಿಮ್ನವರ್ಗದವರಿಗೆ ಮಾತ್ರ ಏಕೆ ಬೇಕಾಗಿದೆ? ಆದ್ದರಿಂದ ಸೈಮನ್ ಆಯೋಗ ಸೂಚಿಸಿರುವ ಪ್ರಾತಿನಿಧ್ಯ ಪ್ರಸ್ತಾವವನ್ನು ತಿರಸ್ಕರಿಸಿ, ನಮಗೆ ಬೇಕಾದ ನಮ್ಮದೇ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಯಾವುದೇ ನಿಬಂಧನೆಗಳಿಲ್ಲದ, ಯಾವುದೇ ಇತಿಮಿತಿಗಳಿಲ್ಲದ ಹಕ್ಕನ್ನು ಒತ್ತಾಯಿಸಬೇಕು. ನಮ್ಮ ಹಿತಾಸಕ್ತಿಗಳು ಏನು ಎಂಬುದರ ನಿರ್ಣಾಯಕರು ಖಂಡಿತವಾಗಿ ನಾವೇ ಆಗಿದ್ದೇವೆ. ನಮಗೆ ಯಾವುದು ಒಳ್ಳೆಯದೆಂದು ನಿರ್ಧರಿಸುವ ಅಧಿಕಾರವನ್ನು ರಾಜ್ಯಪಾಲರಿಗೆ ಕೊಡಲೇಬಾರದು.

೧೯. ಕೇಂದ್ರದ ಶಾಸನಸಭೆಯನ್ನು ಸಂಯೋಜನೆ ಮಾಡುವುದಕ್ಕೆ ಸೈಮನ್ ಆಯೋಗ ರೂಪಿಸಿರುವ ಯೋಜನೆ ಬಗ್ಗೆ ನಿಮ್ಮ ಭಾವನೆ ಏನು ಎಂದು ನನಗೆ ಗೊತ್ತಿಲ್ಲ. ಪ್ರಸಕ್ತ ಸ್ಥಿತಿಯಲ್ಲಿ ಶಾಸನ ಸಭೆಗೆ ಮತ್ತು ರಾಜ್ಯ ಪರಿಷತ್ತಿಗೆ ನೇರವಾದ ಚುನಾವಣೆಯನ್ನು ಆರಿಸಿಕೊಳ್ಳಲಾಗಿದೆ. ಸೈಮನ್ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಪರಿಷತ್ ತನ್ನ ಈಗಿರುವ ರಚನಾ ವ್ಯವಸ್ಥೆಯನ್ನೇ ಉಳಿಸಿಕೊಳ್ಳಬೇಕು; ಆದರೆ ಶಾಸನ ಸಭೆಯನ್ನು ಮಾತ್ರ ಪ್ರಾಂತೀಯ ಶಾಸನ ಸಭೆಗಳಿಂದ ಪರೋಕ್ಷ ಚುನಾವಣೆಯ ಆಧಾರದ ಮೇಲೆ ರಚನೆ ಮಾಡಬೇಕು. ಇದನ್ನು ಪ್ರಮಾಣಾನುಸಾರ ಪ್ರಾತಿನಿಧ್ಯದ ವ್ಯವಸ್ಥೆಯ ಮೂಲಕ ನಿಯಂತ್ರಿಸಬೇಕು. ಅಪರೋಕ್ಷ ಚುನಾವಣೆಗಳ ವ್ಯವಸ್ಥೆಗೆ ನನ್ನ ಬೆಂಬಲವಿಲ್ಲ; ಬೊಂಬಾಯಿಯ ಪ್ರಾಂತೀಯ ಸೈಮನ್ ಸಮಿತಿಯ ಸದಸ್ಯನಾಗಿ ನನ್ನ ಅಸಮ್ಮತಿ ಸೂಚಿಸುವ ಟಿಪ್ಪಣಿಯಲ್ಲಿ ನಾನು ಅದನ್ನು ಖಂಡಿಸಿದ್ದೇನೆ. ಆದರೆ ಸೈಮನ್ ಆಯೋಗ ಅದಕ್ಕೆ ಕೊಟ್ಟಿರುವ ಹೊದಿಕೆಯ ರೂಪದಲ್ಲಿರುವ ವ್ಯವಸ್ಥೆಯಲ್ಲಿ ಕೆಲವು ಅನುಕೂಲಗಳು ಮತ್ತು ಕೆಲವು ಅನಾನುಕೂಲಗಳೂ ಇವೆ. ಮೊಟ್ಟಮೊದಲನೆಯದಾಗಿ ಅದು ಅಲ್ಪಸಂಖ್ಯಾತರ ಪ್ರಾತಿನಿಧ್ಯದಲ್ಲಿ ಜಂಟಿ ಅಥವಾ ಪ್ರತ್ಯೇಕ ಮತದಾರ ಮಂಡಲಿಯಲ್ಲಿರುವ ಸಮಸ್ಯೆಯನ್ನು ತಪ್ಪಿಸುತ್ತದೆ. ಎರಡನೆಯದಾಗಿ, ದ್ವಿಗುಣ ಮತದಾನದ ಕೆಡಕುಗಳನ್ನು ನಿವಾರಿಸುತ್ತದೆ – ಅದರಲ್ಲಿ ಒಂದು ಪ್ರಾಂತೀಯ ಪರಿಷತ್ತುಗಳಿಗೆ, ಇನ್ನೊಂದು ವಿಧಾನಸಭೆಗೆ. ಮೂರನೆಯದಾಗಿ, ಶಾಸನ ಸಭೆಯನ್ನು ಉತ್ತಮವಾಗಿ ನಿಭಾಯಿಸಬಹುದಾದ ನಿಕಾಯವನ್ನಾಗಿ ಮಾಡುತ್ತದೆ. ಅನಾನುಕೂಲಗಳ ಕಡೆ ನೋಡಿದರೆ ಈ ವ್ಯವಸ್ಥೆ ಪ್ರಜೆಗಳ ಮತ್ತು ಸರಕಾರದ ನಡುವಿನ ಬಂಧವನ್ನು ನಿರ್ಬಲಗೊಳಿಸುತ್ತದೆ. ಮತ್ತು ದೇಶದ ಸಮಗ್ರತೆಯ ದೃಶ್ಯವನ್ನು ಜನರಿಂದ ಮರೆಮಾಚಿ ರಾಷ್ಟ್ರಮಟ್ಟದ ಒಗ್ಗಟ್ಟಿನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಆದರೆ ತಕ್ಕಡಿ ಅನುಕೂಲಗಳ ಕಡೆ ಇರಲಿ ಇಲ್ಲವೆ ಅನಾನುಕೂಲಗಳ ಕಡೆ ಇರಲಿ, ಸೈಮನ್ ಆಯೋಗದ ಯೋಜನೆ ಕೇಂದ್ರ ಶಾಸನ ಸಭೆಯ ರಚನೆಯಲ್ಲಿ ಒಂದು ಸ್ಥಾನವನ್ನು ಪಡೆಯಲೇ ಬೇಕು. ಒಂದೇ ಪ್ರಶ್ನೆಯೆಂದರೆ ಅದಕ್ಕೆ ಸೂಕ್ತ ಸ್ಥಾನವನ್ನು ಎಲ್ಲಿ ಕೊಡಬೇಕು ಎಂದು – ಶಾಸನ ಸಭೆಯಲ್ಲಿ ಹೆಚ್ಚು ಸಮಂಜಸವೋ ಅಥವಾ ರಾಜ್ಯ ಪರಿಷತ್ತಿನಲ್ಲೋ ಎಂದು ; ಎರಡರಲ್ಲೂ ಸ್ಥಾನ ಕಲ್ಪಿಸುವುದು ಆಗದ ಮಾತು ಎಂಬುದು ಸ್ವಯಂ ವೇದ್ಯ. ಪರೋಕ್ಷ ಚುನಾವಣೆಗಳ ಅತಿ ಹೆಚ್ಚು ದುರ್ಬಲತೆ ಎಂದರೆ, ಒಂದೇ ಸಲದ ಉಪಯೋಗದಿಂದಲೇ ಅದು ಬರಿದಾಗಿ ಬಿಡುತ್ತದೆ, ಮತದಾರನಿಗೂ (ವೋಟರ್) ಮತ ಚಲಾಯಿಸುವವನಿಗೂ (ಎಲೆಕ್ಟರ್) ಇವರಿಬ್ಬರ ಮಧ್ಯೆ ಒಂದೇ ಒಂದು ಅಂತರವಿದ್ದಾಗ ಒಂದಷ್ಟು ನೈಜತೆಯನ್ನು ಪಡೆದುಕೊಳ್ಳುವುದಕ್ಕಾಗಿ ಅದನ್ನು (ಆ ವ್ಯವಸ್ಥೆಯನ್ನು)

ನೆಚ್ಚಿಕೊಳ್ಳಬಹುದು. ಆದರೆ ಮತ ಚಲಾಯಿಸುವವನಿಗೂ, ಮತದಾರನಿಗೂ ಎರಡರಷ್ಟು ಅಂತರವಿದ್ದರೆ, ಆಗ ಅದು ತನ್ನ ಎಲ್ಲಾ ನೈಜತೆಯನ್ನು ಕಳೆದುಕೊಳ್ಳಲೇಬೇಕು. ಇದರರ್ಥವೇನೆಂದರೆ ಶಾಸನ ಸಭೆಗೆ ಆಯೋಗದ ವ್ಯವಸ್ಥೆಯನ್ನು ಅನ್ವಯಿಸಿದರೆ ಕೇಂದ್ರ ಶಾಸನ ಸಭೆಯಲ್ಲಿ ಎರಡೂ ಚೇಂಬರ್‌ಗಳನ್ನು ಉಳಿಸಿಕೊಂಡರೆ, ಪರಿಷತ್‌ನ್ನು ಅಸ್ಥಿತ್ವಕ್ಕೆ ತರಲು ಸಂಪನ್ಮೂಲವೇ ಉಳಿದಿರುವುದಿಲ್ಲ. ಭಾರತ ಸರಕಾರದ ಇಡಿಯ ರಚನೆಯಲ್ಲಿ ರಾಜ್ಯ ಪರಿಷತ್ತು ಒಂದು ಅತ್ಯಂತ ಕುರೂಪಿ ಅಂಗರಚನೆಯಾಗಿ ಉಳಿಯುತ್ತದೆ. ಆದರೆ ಅದನ್ನು ಈಗಿರುವ ಸ್ಥಿತಿಯಲ್ಲೇ ಉಳಿಯಲು ಬಿಡಬಾರದು. ಏಕೆಂದರೆ ಅದು ಪರಿಶೀಲನೆ (ತಿದ್ದುವ) ಮಾಡುವ ತನ್ನ ಕಾರ್ಯವನ್ನು ಸಮರ್ಪಕವಾಗಿ ಮಾಡಲಾಗುವುದಿಲ್ಲ. ನನ್ನ ಅಭಿಪ್ರಾಯ ಸಮಂಜಸವಾಗಿದ್ದರೆ, ಶಾಸನ ಸಭೆಗಳಿಗೆ ನೇರ ಚುನಾವಣೆ ನಡೆಯಬೇಕು ಮತ್ತು ಪ್ರಾಂತೀಯ ಶಾಸನ ಸಭೆಗಳಿಗೆ ಪರೋಕ್ಷ ಚುನಾವಣೆಗಳು ನಡೆಯಬೇಕು. ರಾಜ್ಯ ಪರಿಷತ್ತಿನ ರಚನೆಗೆ ಪ್ರಮಾಣಾನುಸಾರ ಪ್ರಾತಿನಿಧ್ಯದ ವ್ಯವಸ್ಥೆ ಅತ್ಯಂತ ಸಮರ್ಪಕವಾಗಿರುತ್ತದೆ. ಆದರೆ ಕೇಂದ್ರ ಶಾಸನ ಸಭೆಯನ್ನು ರಚನೆ ಮಾಡುವುದಕ್ಕೆ ಕೊನೆಯದಾಗಿ ಯಾವುದೇ ಆಧಾರವನ್ನು ಇಟ್ಟುಕೊಂಡರೂ ಅಪರೋಕ್ಷ ಚುನಾವಣೆಗಳು ನಿಮ್ನವರ್ಗದವರ ಪ್ರಾತಿನಿಧ್ಯಕ್ಕೆ ಅತಿ ಸುಲಭ ವಿಧಾನವಾಗಿ ಉಳಿಯಲೇಬೇಕು. ಇದು ಎರಡಕ್ಕೂ ಅನ್ವಯವಾಗುತ್ತದೆ. ಇದೇನು ವ್ಯಥೆಪಡಬೇಕಾದ ಫಲಿತಾಂಶವಲ್ಲ. ಅದಕ್ಕೆ ವಿರುದ್ಧವಾಗಿ ನಾಮನಿರ್ದೇಶನದ ವ್ಯವಸ್ಥೆಗೆ ಹೋಲಿಸಿದರೆ, ನಮ್ಮ ಪರಿಸ್ಥಿತಿಯಲ್ಲಿ ಬಹಳ ಮುನ್ನಡೆಯನ್ನು ಸಾಧಿಸಿದ ಕುರುಹಾಗುತ್ತದೆ.

೨೦. ಪ್ರಾಂತೀಯ ಶಾಸನ ಸಭೆಗಳಲ್ಲಿ ಈಗ ರಚನೆ ಮಾಡಿರುವ ಹಾಗೆ ನಿಮ್ನವರ್ಗದವರ ಪ್ರಾತಿನಿಧ್ಯ ಬಹಳ ಕಡಿಮೆ ಇದೆ. ೧೯೧೯ರಲ್ಲಿ ಸೌತ್ ಬರೋ ಸಮಿತಿ ಈ ಕುರಿತಾಗಿ ಅವರಿಗೆ ಬಹಳ ದೊಡ್ಡ ಅನ್ಯಾಯ ಮಾಡಿದೆ. ಹೀಗಾಗಿ ಭಾರತ ಸರಕಾರ ಆ ಸಮಿತಿ ನಿಗದಿ ಮಾಡಿದ ಅವರ ಪ್ರಾತಿನಿಧ್ಯದ ಪಾಲನ್ನು ಹೆಚ್ಚಿಸುವುದಕ್ಕೆ ಶಿಫಾರಸ್ಸು ಮಾಡಿತು. ಆದರೆ ಆ ಕಾಲದಲ್ಲಿ ಈ ಅನ್ಯಾಯವನ್ನು ಸರಿಪಡಿಸದೆ ಹಾಗೆಯೇ ಉಳಿದುಕೊಂಡಿತು. ೧೯೨೩ರಲ್ಲಿ ನೇಮಕವಾದ ಮಡ್ಡಿಮನ್ ಸಮಿತಿ ಪರಿಷತ್ತುಗಳಲ್ಲಿ ನಿಮ್ನವರ್ಗಗಳಿಗಿರುವ ಪ್ರಾತಿನಿಧ್ಯ ಎಷ್ಟು ಅಲ್ಪವೆಂದು ತೋರಿಸಿತು. ಅದು ಪ್ರಾತಿನಿಧ್ಯವನ್ನು ಬಹಳಷ್ಟು ವರ್ಧಿಸಬೇಕೆಂದು ಸಲಹೆ ಮಾಡಿತು. ಆದರೆ ಅಲ್ಲೊಬ್ಬ ಇಲ್ಲೊಬ್ಬ ಸದಸ್ಯನನ್ನು ಸೇರಿಸಿದ್ದನ್ನು ಬಿಟ್ಟರೆ ಕುಂದುಕೊರತೆಯನ್ನು ನಿವಾರಿಸುವುದಕ್ಕೆ ಏನನ್ನೂ ಮಾಡಲಿಲ್ಲ. ಅವರ ಈ ನಿರ್ಬಲ ಪರಿಸ್ಥಿತಿಯಲ್ಲಿ ತಮ್ಮ ಬೆಂಬಲಕ್ಕಾಗಿ ಅಧಿಕಾರಿ ಗುಂಪಿನ ಮೇಲೆ ಅವಲಂಬಿಸಬೇಕೆಂದು ಹೇಳಲಾಯಿತು. ನಮ್ಮ ಅನುಭವದಲ್ಲಿ ಈ ಅಧಿಕಾರಿ ಗುಂಪು ತನಗೆ ತಾನು ಸ್ನೇಹಿತನೇ ಹೊರತು ಬೇರೆ ಯಾರಿಗೂ ಸ್ನೇಹಿತನಲ್ಲ. ಅವರ ಸಹಾಯ ಮತ್ತು ಸ್ನೇಹ ಅವರ ಆಸಕ್ತಿಗಳಿಗಷ್ಟೇ ಸೀಮಿತವಾಗಿದೆ. ಅದು ಒತ್ತಟ್ಟಿಗಿರಲಿ. ಭವಿಷ್ಯದ ಭಾರತ ಸಂವಿಧಾನದಲ್ಲಿ ಈ ಅನುಮಾನಾಸ್ಪದ ಅನುಕೂಲ ಸಹ ಈ ಅಧಿಕಾರಿ ವರ್ಗಗಳಿಂದ ದೊರೆಯುತ್ತಿಲ್ಲವಾದ್ದರಿಂದ ನಿಮ್ನವರ್ಗದವರಿಗೆ ಇತರ ಎಲ್ಲ ಅಲ್ಪಸಂಖ್ಯಾತರಿಗೆ ದೊರೆಯುತ್ತಿರುವ ಯಥೋಚಿತ ಪ್ರಾತಿನಿಧ್ಯ ಸಹ ಸಿಗಬೇಕಾದುದು ನ್ಯಾಯವಲ್ಲವೆ? ಸೈಮನ್ ಆಯೋಗ ನಿಮ್ನವರ್ಗದವರಿಗೆ ಪ್ರಾಂತೀಯ ಶಾಸನ ಸಭೆಗಳಲ್ಲಿ ಎಷ್ಟರ ಮಟ್ಟಿಗಿನ ಪ್ರಾತಿನಿಧ್ಯ ಕೊಡಬೇಕೆಂದು ಪ್ರಸ್ತಾವಿಸಿದೆ? ಅವರು ಹೇಳುವುದೇನೆಂದರೆ, ನಿಮ್ನವರ್ಗದವರಿಗೆ ಕಾದಿರಿಸಲಾದ ಸೀಟುಗಳ ಪ್ರಮಾಣ, ಭಾರತದ ಎಲ್ಲಾ ಸಾಧಾರಣ ಮತಕ್ಷೇತ್ರಗಳಲ್ಲಿರುವ ಒಟ್ಟು ಸೀಟುಗಳಿಗೆ ಹೋಲಿಸಿದಾಗ, ಅದು ನಿಮ್ನವರ್ಗಗಳ ಜನಸಂಖ್ಯೆಯ ಪ್ರಮಾಣ ಆ ಪ್ರಾಂತ್ಯದ ಮತಕ್ಷೇತ್ರದಲ್ಲಿರುವ ಒಟ್ಟು ಜನಸಂಖ್ಯೆಯ ೩/೪ರಷ್ಟು ಇರಬೇಕು. ಈಗ ಸೈಮನ್ ಆಯೋಗ ಭಾರತದಲ್ಲಿನ ಇತರ ಅಲ್ಪಸಂಖ್ಯಾತರುಗಳಿಗೆ ಕೊಟ್ಟಿರುವ ಪ್ರಾತಿನಿಧ್ಯವನ್ನು ನೋಡಿ.

ಕಾಂಗ್ರೆಸ್‌ನವರ ಉಗ್ರ ವಿರೋಧವನ್ನು ಲೆಕ್ಕಿಸದೆ ಮಹಮ್ಮದೀಯ ಅಲ್ಪಸಂಖ್ಯಾತರಿಗೆ ಲಕ್ನೋ ಒಪ್ಪಂದದ ಕೆಳಗೆ ಸಿಕ್ಕಿದ ಹೆಚ್ಚಾದ ಪ್ರಾತಿನಿಧ್ಯವನ್ನು ಉಳಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಇಂಡಿಯನ್ ಕ್ರಿಶ್ಚಿಯನ್‌ರಿಗೆ, ಆಂಗ್ಲೋ ಇಂಡಿಯನ್‌ರಿಗೆ ಮತ್ತು ಐರೋಪ್ಯರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯವನ್ನು ಕೊಟ್ಟಿರುವುದೂ ಅಲ್ಲದೆ, ಅವರವರ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಗಣನೀಯವಾದ ಮೌಲ್ಯವನ್ನು (ವೆಯ್ಟೇಜ್) ಕೊಟ್ಟಿದ್ದಾರೆ. ಇದು ನಾಚಿಕೆಗೇಡಲ್ಲವೆ? ಅತಿಯಾದ ಅನಾನುಕೂಲದಿಂದ ನರಳುತ್ತಿರುವ ಒಂದು ಸಮುದಾಯ ಔದಾರ್ಯದಿಂದ ಕೂಡಿದ ವರ್ತನೆಗೆ ಬಾಧ್ಯರಲ್ಲವೆ? ಭಾರತದ ಕೇಂದ್ರ ಸಮಿತಿಯು ಸಹ ನಿಮ್ನವರ್ಗದವರಿಗೆ ನ್ಯಾಯವನ್ನು ಒದಗಿಸಿ ಅವರ ಜನಸಂಖ್ಯೆಯ ಆಧಾರದ ಮೇಲೆ ಪ್ರಾತಿನಿಧ್ಯವನ್ನು ಕೊಟ್ಟಿದೆ. ಇದು ಎಲ್ಲ ಅಲ್ಪಸಂಖ್ಯಾತರಿಗೂ ಸಲ್ಲಬೇಕಾದ ಕನಿಷ್ಟ ಪ್ರಾತಿನಿಧ್ಯವೆಂದು ಒಪ್ಪಿಕೊಳ್ಳಲೇಬೇಕಾಗಿದೆ.

೨೧. ಅವು ಪ್ರಾರಂಭವಾದಾಗಿನಿಂದಲೂ ಕೇಂದ್ರೀಯ ಶಾಸನಸಭೆಯ ಬಾಗಿಲುಗಳು ನಿಮ್ನವರ್ಗದವರಿಗೆ ಎಂದೆಂದಿಗೂ ತೆರೆಯಲೇ ಇಲ್ಲ. ಅವುಗಳನ್ನು ೧೯೨೧ರ ಜನಮತದ ಆಧಾರದ ಮೇಲೆಯೇ ಪುನರ್‌ರಚಿಸಿದಾಗಲೂ, ಬಾಗಿಲುಗಳು ಮುಚ್ಚಿಕೊಂಡೇ ಇದ್ದವು. ೧೯೨೬ನೆ ಇಸವಿಯಲ್ಲಿ ನಿಮ್ನವರ್ಗದವರಿಗೆ ೧೪೦ ಸದಸ್ಯರಿದ್ದ ಶಾಸಕಾಂಗ ಸಭೆಯಲ್ಲಿ ಒಂದು ಸ್ಥಾನವನ್ನು ದಯಪಾಲಿಸಲಾಯಿತು. ಆದರೆ ರಾಜ್ಯ ಪರಿಷತ್ತು ಅವರಿಗೆ ಇನ್ನೂ ಮುಚ್ಚಿಯೇ ಇದೆ. ಕೇಂದ್ರ ಶಾಸನ ಸಭೆಯಲ್ಲಿ ನಿಮ್ನವರ್ಗಗಳವರ ಪ್ರಾತಿನಿಧ್ಯಕ್ಕೆ ಉಪಬಂಧವನ್ನು ಕಲ್ಪಿಸುವುದಕ್ಕೆ ಸೈಮನ್ ಆಯೋಗ ಪ್ರಯತ್ನಪಟ್ಟಿದೆ. ಆದರೆ ಈ ಉಪಬಂಧ ಶಾಸಕಾಂಗ ಸಭೆಯನ್ನು ಮಾತ್ರ ಒಳಗೊಂಡಿದೆಯೇ ಹೊರತು ಅದು ರಾಜ್ಯಗಳ ಪರಿಷತ್ತನ್ನು ಮುಟ್ಟುತ್ತಿಲ್ಲ. ಈ ಅಲ್ಪ ಕನಿಕರವನ್ನು ತೋರಿಸಿದ್ದಕ್ಕೆ ನಾನು ಅಭಾರಿಯಾಗಿದ್ದರೂ ಆಯೋಗ ನಮಗೆ ತೋರಿಸಿರುವ ಈ ಕಪಿಮುಷ್ಟಿಯ ವರ್ತನೆ ಬಗ್ಗೆ ನಾನು ದೂರಲೇಬೇಕಾಗಿದೆ. ಸೈಮನ್ ಆಯೋಗವನ್ನು ಇನ್ನೇನು ನೇಮಕ ಮಾಡುವ ಸಂದರ್ಭದಲ್ಲಿ ನಿಮ್ನವರ್ಗದವರ ಮಹಾಗಣತಿಯು ನಡೆದದ್ದು ನಿಮಗೆ ಜ್ಞಾಪಕ ಇರಬಹುದು; ಅದೇ ಸಮಯಕ್ಕೆ ಸರಕಾರವೂ ಸೇರಿದಂತೆ ಎಲ್ಲಾ ಕಡೆಯಿಂದಲೂ ನಿಮ್ನವರ್ಗಗಳವರ ಜನಗಣತಿ ಸಂಖ್ಯೆ ನಿಜವಾದದಕ್ಕಿಂತ ಹೆಚ್ಚಿಗೆ ಇದೆ ಎಂದು ತೋರಿಸುವುದಕ್ಕೆ ಪ್ರಯತ್ನ ನಡೆದಿದ್ದೂ ಸಹಾ ನಿಮಗೆ ನೆನಪಿರಬಹುದು. ಅತಿ ಕನಿಷ್ಟವಾಗಿ ಲೆಕ್ಕ ಹಾಕಿದರೂ ಸೈಮನ್ ಆಯೋಗದ ಪ್ರಕಾರ ನಿಮ್ನವರ್ಗದವರು ಬ್ರಿಟೀಷ್ ಇಂಡಿಯಾದ ಜನಸಂಖ್ಯೆಯ ಶೇಕಡಾ ೨೦ರಷ್ಟಿದ್ದಾರೆ. ಆದರೆ ಶಾಸಕಾಂಗ ಸಭೆಗಳಲ್ಲಿ ಸೈಮನ್ ಆಯೋಗ ಉಪಬಂಧದಲ್ಲಿ ಕಲ್ಪಿಸಿರುವ ಪ್ರಕಾರ, ನಿಮ್ನವರ್ಗಗಳ ಹಣೆಬರಹದಲ್ಲಿ ಇರುವುದು ಆ ನಿಕಾಯದ ಒಟ್ಟು ಸ್ಥಾನಗಳಲ್ಲಿ ೮% ಮಾತ್ರ.

೨೨. ಸೈಮನ್ ಆಯೋಗದ, ನಮ್ಮ ಬೇಡಿಕೆಗಳ ಮತ್ತು ಅವಶ್ಯಕತೆಗಳ ಇಂಥ ವ್ಯವಸ್ಥಿತ ಅಪಮೌಲ್ಯ ನನಗೆ ಅರ್ಥವಾಗುತ್ತಿಲ್ಲ. ಸೈಮನ್ ಆಯೋಗ ನಿಮ್ನವರ್ಗದವರಿಗೆ ನ್ಯಾಯವನ್ನು ಒದಗಿಸಿ ಕೊಡುವುದೂ ಅಲ್ಲದೆ, ಧಾರಾಳತನವನ್ನೂ ಸಹಾ ತೋರಿಸುತ್ತದೆಂದು ನಾವೆಲ್ಲ ನಿರೀಕ್ಷಿಸಿದ್ದೆವು. ಇಂಥ ಧಾರಾಳತನ ತೋರಿಸುವುದಕ್ಕೆ ಕಾರಣಗಳಿಗೇನು ಕೊರತೆ ಇರಲಿಲ್ಲ. ಸಂವಿಧಾನವನ್ನು ರೂಪಿಸುವಲ್ಲಿ, ಯಾವುದೇ ಸಮುದಾಯದ ನಿಷ್ಠೆ ಅದಕ್ಕೆ ವಿಶೇಷ ಸವಲತ್ತುಗಳನ್ನು ದೊರಕಿಸಿಕೊಡಬಲ್ಲದೆಂದು ನನಗೆ ಅರ್ಥವಾಗುತ್ತಿಲ್ಲ. ಆದರೆ ಭಾರತದಲ್ಲಿ ನಿಷ್ಠೆ ಎನ್ನುವುದು ರಾಜಕೀಯ ಸವಲತ್ತುಗಳನ್ನು ಕೊಳ್ಳಬಹುದಾದರೆ, ನಿಮ್ನವರ್ಗಗಳವರ ನಿಷ್ಠೆ ಸೀಮಾತೀತವಾಗಿದೆ. ಅವರು ಬ್ರಿಟೀಷರನ್ನು ಒಂದು ನೀತಿಗೊಳಪಟ್ಟು ಪ್ರೀತಿಸುತ್ತಿದ್ದರು ಮಾತ್ರವಲ್ಲ, ಭಾವನಾತ್ಮಕವಾಗಿ ಕೂಡ ಪ್ರೀತಿಸುತ್ತಿದ್ದರು. ಆದರೆ ನಿಮ್ನವರ್ಗಗಳವರ ದಯನೀಯ ಸ್ಥಿತಿ, ಧಾರಾಳತನ

ತೋರಿಸಿ ಎಂಬ ಬೇಡಿಕೆಗೆ ಹೆಚ್ಚು ಒತ್ತು ಕೊಡುತ್ತದೆ. ನಿಮ್ನವರ್ಗಗಳವರಷ್ಟು ಕೆಳಗೆ ತುಳಿಯಲ್ಪಟ್ಟು, ಅವರಷ್ಟು ಅಸಹಾಯಕರಾಗಿರುವಷ್ಟು ಬೇರೆ ಯಾವ ಅಲ್ಪಸಂಖ್ಯಾತರೂ ಇಲ್ಲ. ಅವರ ಗೋಳಾಟ ಎಷ್ಟಿದೆ ಎಂದರೆ, ಎಷ್ಟು ಅಸಾಧಾರಣವಾದುದು ಎಂದರೆ, ಇದು ಭಾರತ ಸ್ವರಾಜ್ಯಕ್ಕೆ ತಕ್ಕುದಲ್ಲವೆಂದು ಪರಿಗಣಿಸಲಾಯಿತು. ಇಷ್ಟೊಂದು ಪಾಪಕೃತ್ಯಕ್ಕೆ ಬಲಿಯಾದ ಸಮುದಾಯಕ್ಕೆ ಖಂಡಿತವಾಗಿಯೂ ಧಾರಾಳತನದ ವರ್ತನೆಯೂ ಪ್ರಾಮಾಣಿಕವಾಗಿ ಸಿಗಲೇಬೇಕು. ನಿಮ್ನವರ್ಗದವರಿಗೆ ಸೈಮನ್ ಆಯೋಗದವರ ಕೈಯ್ಯಲ್ಲಿ ಯಾವುದೇ ಧಾರಾಳತನ ಸಿಗುವುದಿರಲಿ, ಅವರಿಗೆ ಬರಡು ನ್ಯಾಯವೂ ಸಿಕ್ಕಿಲ್ಲ. ಸೈಮನ್ ಆಯೋಗವನ್ನು ನೇಮಕ ಮಾಡಬೇಕೆಂದು ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿ ಲಾರ್ಡ್ ಬರ್ಕನ್‌ಹೆಡ್ ಮಂಡಿಸಿದಾಗ ಅವರು ಅಭಿವ್ಯಕ್ತಿಗೊಳಿಸಿದ ಅಂತಃಕರಣ ಎಲ್ಲಿಗೆ ಹೋದವು ಎಂದು ಕೇಳಬೇಕಾಗಿದೆ. ಆಗ ಹೇಳಿದ ಪ್ರಕಾರ ನಿಮ್ನವರ್ಗಗಳವರು ಒಂದು ವಿಶೇಷವಾದ ಟ್ರಸ್ಟ್ ಆಗುತ್ತಾರೆಂದೂ, ಬ್ರಿಟೀಷ್ ಜನರು ಅವರ ಯೋಗಕ್ಷೇಮಕ್ಕಾಗಿ ಸಾಕಷ್ಟು ಉಪಬಂಧಗಳನ್ನು ಕಲ್ಪಿಸದೆ ಆ ಟ್ರಸ್ಟ್ ಅನ್ನು ಕೈಬಿಡುವುದಕ್ಕಾಗುವುದಿಲ್ಲವೆಂದು ಆಗ ಹೇಳಲಾಗಿತ್ತು. ಸೈಮನ್ ಆಯೋಗದ ಶಿಫಾರಸ್ಸುಗಳು ಆ ಬಡಾಯಿ ಮಾತುಗಳ ಸಾರ್ಥಕತೆ ಎಂದು ತಿಳಿಯಬೇಕೇನು? ಮಹನೀಯರೆ, ಇತರ ಜನರು ನಮ್ಮನ್ನು ಯಾವ ರೀತಿ ನಡೆಸಿಕೊಳ್ಳುತ್ತಿದ್ದಾರೆಂಬ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು. ನಮ್ಮ ದುರಾದೃಷ್ಟ ಪರಿಸ್ಥಿತಿಗಳನ್ನು ಜಾಹೀರು ಮಾಡುವುದರಲ್ಲಿ ಬ್ರಿಟೀಷರ ಉದ್ದೇಶ ಅದನ್ನು ತೊಡೆದು ಹಾಕುವುದಕ್ಕಾಗಿ ಅಲ್ಲ; ಬದಲಿಗೆ ಭಾರತದ ರಾಜಕೀಯ ಮುನ್ನಡೆಯನ್ನು ಕುಂಠಿತಗೊಳಿಸುವುದಕ್ಕೆ ಅವರಿಗೆ ನೆಪವೊಂದು ಸಿಗುತ್ತದೆ ಎಂಬ ಕಾರಣಕ್ಕಾಗಿ ಎಂದು ನನ್ನ ಹೆದರಿಕೆಯಾಗಿದೆ. ಇಂಥ ಸಂದರ್ಭಗಳಲ್ಲಿ ಬ್ರಿಟೀಷರು ನಮಗೆ ಏನು ಮಾಡಿದ್ದಾರೆಂದು ತಿಳಿದುಕೊಳ್ಳುವುದಕ್ಕೆ ತೊಂದರೆ ತೆಗೆದುಕೊಳ್ಳುವ ಬದಲು ನಮ್ಮ ನಾಯಕರು ಮುಂದೆ ನಮಗೆ ಏನಾಗಬಹುದೆಂದು ಮತ್ತು ಅದರ ಪ್ರಕಾರ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವತ್ತ ನಿಗಾ ಕೊಡಬೇಕಾಗಿರುವುದು ಅವರ ಕರ್ತವ್ಯವಾಗಿದೆ. ಅಲ್ಲದೆ ನಮ್ಮ ನಿರ್ದಿಷ್ಟ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಮ್ಮೊಂದಿಗೆ ಧಾರಾಳತನದಿಂದ ನಡೆದುಕೊಳ್ಳದೇ ಇದ್ದರೂ ನ್ಯಾಯಯುತವಾಗಿ ನಡೆದುಕೊಳ್ಳಬೇಕೆಂದು ಒತ್ತಾಯ ಮಾಡಬೇಕು.

## V. ನಿಮ್ನವರ್ಗಗಳು ಮತ್ತು ಸ್ವರಾಜ್ಯ

೨೩. ಸ್ವರಾಜ್ಯ ಭಾರತದ ಭವಿಷ್ಯತ್ತಿನ ಎಂದು ಭಾವಿಸುತ್ತೇನೆ. ಸಂವಿಧಾನದಲ್ಲಿ ನಮಗೆ ಇರಲೇಬೇಕಾದ ಖಾತರಿ ಬಗ್ಗೆ, ರಕ್ಷಣೋಪಾಯಗಳ ಬಗ್ಗೆ ನಾನು ಹೇಳಬೇಕಾದುದನ್ನೇ ಹೇಳಿದ್ದೇನೆ ಎಂದು ಭಾವಿಸುತ್ತೇನೆ. ಆದರೆ ಈ ಸಭೆ ಗಣನೆಗೆ ತೆಗೆದುಕೊಳ್ಳಬೇಕಾದ ಎಲ್ಲ ವಿಷಯಗಳೂ ಅದರಲ್ಲಿ ಸೇರಿಲ್ಲ. ದೇಶದಲ್ಲಿನ ಪ್ರಸ್ತುತ ರಾಜಕೀಯ ಚಳುವಳಿ ಬಗ್ಗೆ ಈ ಸಭೆ ತನ್ನ ಅಭಿಪ್ರಾಯವೇನೆಂದು ರೂಪಿಸದಿದ್ದರೆ ಅದು ತನ್ನ ಉದ್ದೇಶವನ್ನು ಸಾಧಿಸಿದೆಯೆಂದು ಹೇಳಲು ಎಂದಿಗೂ ಸಾಧ್ಯವಿಲ್ಲ. ನಿಮಗೆ ನೆನಪಿರುವ ಹಾಗೆ, ಡಿಸೆಂಬರ್ ೧೯೨೮ರಲ್ಲಿ ಕಲ್ಕತ್ತದಲ್ಲಿ ನಡೆಸಿದ ತನ್ನ ಸಭೆಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಒಂದು ಠರಾವನ್ನು ಅನುಮೋದಿಸಿತು. ಆ ಠರಾವಿನಲ್ಲಿ ೧೯೨೯ರ ಡಿಸೆಂಬರ್ ಕೊನೆಯ ಹೊತ್ತಿಗೆ ಭಾರತದಲ್ಲಿ ಡೊಮಿನಿಯನ್ ಸ್ವರೂಪದ ಸರಕಾರವನ್ನು ಸ್ಥಾಪಿಸಬೇಕೆಂದು ಒತ್ತಾಯ ಮಾಡಲಾಗಿದ್ದು, ಹಾಗೆ ಮಾಡದಿದ್ದರೆ ತಮ್ಮ ಗುರಿಯನ್ನು ಡೊಮಿನಿಯನ್ ಸ್ಥಾನಮಾನ ಬೇಡಿಕೆಯಿಂದ ಸಂಪೂರ್ಣ ಸ್ವರಾಜ್ಯ ಬೇಕೆಂದು ಬದಲಾಯಿಸುವುದಾಗಿ ಬ್ರಿಟೀಷ್ ಪಾರ್ಲಿಮೆಂಟಿಗೆ ಅಂತಿಮ ಎಚ್ಚರಿಕೆಯನ್ನು ಕೊಡಲಾಗಿತ್ತು. ಕಾಂಗ್ರೆಸ್‌ನ ಈ ಅಂತಿಮ ಎಚ್ಚರಿಕೆಯ ಫಲಿತಾಂಶವೇನೆಂದರೆ ಭಾರತಕ್ಕೆ ಡೊಮಿನಿಯನ್ ಸ್ಥಾನಮಾನವನ್ನು ಕೊಡುವುದು

ಬ್ರಿಟೀಷ್ ಸರಕಾರದ ಕಾರ್ಯನೀತಿ ಎಂದು ವೈಸ್‌ರಾಯ್ ಪ್ರಕಟಿಸಿದರು. ಇದು ಕಾಂಗ್ರೆಸ್‌ನವರಿಗೆ ಸಮಾಧಾನಕರವಾಗಲಿಲ್ಲ. ಆ ಬೇಡಿಕೆ ಕೇವಲ ನಮ್ಮ ಗುರಿ ಮಾತ್ರವಲ್ಲ, ಅದನ್ನು ತಕ್ಷಣವೇ ಜಾರಿಗೆ ತರಬೇಕೆಂದು ಹೇಳಿದುದಲ್ಲದೆ, ೧೯೨೮ರ ಡಿಸೆಂಬರ್ ಸಭೆ ಸೇರಿದಾಗ, ಸ್ವಾತಂತ್ರ್ಯವನ್ನು ಘೋಷಣೆ ಮಾಡುವುದೇ ಭಾರತದ ಗುರಿ ಎಂಬ ನಿರ್ಣಯವನ್ನು ಅಂಗೀಕರಿಸಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ರಾಜಕೀಯ ಆದರ್ಶಗಳ ಬಗ್ಗೆ ಯಾವ ಅಭಿಪ್ರಾಯ ತಾಳಬೇಕೆಂದು ಘೋಷಿಸುವುದು ನಿಮಗೆ ಬಿಟ್ಟದ್ದು. ಸ್ವಾತಂತ್ರ್ಯ ಬೇಕೆಂಬ ಬೇಡಿಕೆಯನ್ನು ನಾವು ನಮ್ಮ ಪರಿಗಣನೆಯಿಂದ ತೊಡೆದು ಹಾಕೋಣ. ಅದು ಕಾರ್ಯಸಾಧುವೂ ಅಲ್ಲ ಮತ್ತು ಈಗಿನ ಪರಿಸ್ಥಿತಿಯಲ್ಲಿ ದುರಂತವನ್ನು ತರುತ್ತದೆ. ಸ್ವತಂತ್ರವಾಗಿರುವ ಅಪಾಯವನ್ನು ಎದುರಿಸಲು, ಒಂದು ಸಂವಿಧಾನ, ಒಂದು ಭವಿಷ್ಯ ಮತ್ತು ಏಕಭಾವದಿಂದ ಬೆಸೆಯಲ್ಪಟ್ಟ ಪ್ರಜೆಗಳು ಇದ್ದರೆ ಮಾತ್ರ ಸಾಧ್ಯ. ಆ ಆದರ್ಶದಿಂದ ದೇಶ ಮೈಲಿಗಟ್ಟಲೆ ದೂರವಿದೆಯೆಂಬ ಸತ್ಯವನ್ನು ಯಾರೂ ನಿರಾಕರಿಸಲಾರರು. ಡೊಮಿನಿಯನ್ ಸ್ಥಾನಮಾನದ ಆದರ್ಶ ಉತ್ತಮವಾದುದೆಂದು ನನಗೆ ತೋರುತ್ತದೆ. ಏಕೆಂದರೆ ಸಂಪೂರ್ಣ ಸ್ವಾತಂತ್ರ್ಯದಲ್ಲಿರುವ ಅಪಾಯಗಳಿಲ್ಲದೆ, ಅದರಲ್ಲಿ ಸ್ವಾತಂತ್ರ್ಯದ ಹೂರಣವಿದೆ. ಆದ್ದರಿಂದ ನಾವು ನಮ್ಮ ಬೆಂಬಲವನ್ನು ಸ್ವಾತಂತ್ರ್ಯದ ಆದರ್ಶಕ್ಕೆ ಕೊಡುವುದಕ್ಕೆ ನಿರಾಕರಿಸಬೇಕು. ಅದರ ಉಪಯುಕ್ತತೆ ಬಗ್ಗೆ ಕಾಂಗ್ರೆಸಿನವರಿಗೇ ಪ್ರಬಲವಾದ ಅನುಮಾನಗಳಿವೆ.

೨೪. ಆದರೆ ಡೊಮಿನಿಯನ್ ಸ್ಥಾನದ ಬಗ್ಗೆ ನಾವು ಏನು ಹೇಳೋಣ? ಹಾಗೆಂದರೆ ಪ್ರಜೆಗಳ, ಪ್ರಜೆಗಳಿಗೋಸ್ಕರ ಮತ್ತು ಪ್ರಜೆಗಳಿಂದ ಸರಕಾರ. ಇದರ ಬಗ್ಗೆ ನೀವು ತೀರ್ಮಾನ ತೆಗೆದುಕೊಳ್ಳುವ ಮುಂಚೆ ಚೆನ್ನಾಗಿ ಯೋಚಿಸಬೇಕು. ಬ್ರಿಟೀಷರು ಭಾರತಕ್ಕೆ ಬಂದಿದ್ದು ಒಂದು ಮಹತ್ತರವಾಧ ವರಪ್ರಸಾದವೆಂಬುದರಲ್ಲಿ ಸಂಶಯವಿಲ್ಲ. ಈ ದೈವದತ್ತವಾದ ಸಂಬಂಧವಿಲ್ಲದೆ ಇದ್ದರೆ, ಭಾರತದ ಬೌದ್ಧಿಕ ಜಾಗೃತಿ ಇಷ್ಟೆ ಮಹತ್ವವುಳ್ಳದ್ದಾಗಿ, ಇಷ್ಟೇ ವೇಗವಾಗಿ ಆಗುತ್ತಿತ್ತೆಂದು ಅನುಮಾನಾಸ್ಪದ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ, ಈ ಮೂಲ ಪರಿಕಲ್ಪನೆಗಳನ್ನು ಒಳಗೊಂಡ ಐರೋಪ್ಯ ನಾಗರಿಕತೆಯ ಸಂಪರ್ಕವಿಲ್ಲದಿದ್ದರೆ, ಭಾರತ ಸಮಾಜ, ಅದರ ಸಾಮಾಜಿಕ ಮತ್ತು ನೈತಿಕ ಸಂಹಿತೆಯ ಭಾಗವೆಂದೇ ಗುರುತಿಸಲ್ಪಟ್ಟುಕೊಂಡು ಬಂದಿರುವ ಅನೇಕ ಸಾಮಾಜಿಕ ಆಚರಣೆಗಳ ಬಗ್ಗೆ ತಲೆತಗ್ಗಿಸುವಂತೆ ಎಂದೆಂದಿಗೂ ಮಾಡುತ್ತಿರಲಿಲ್ಲ. ಎರಡೂ ನಾಗರಿಕತೆಗಳ ಈ ಜೀವಂತ ಸಂಪರ್ಕದಿಂದಾಗಿ ಕಂಡ ವೈದೃಶ್ಯ ಭಾರತವನ್ನು ತನ್ನ ಸಾಮಾಜಿಕ ಮೌಲ್ಯಗಳನ್ನು ಮರುಮಾಪನ ಮಾಡಿಕೊಳ್ಳುವುದಕ್ಕೂ ಮತ್ತು ತನ್ನ ಅನೇಕ ಸಾಮಾಜಿಕ ಆಚರಣೆಗಳು ಸಾಮಾಜಿಕ ಕೆಡುಕುಗಳೆಂದು ಅರಿತುಕೊಳ್ಳುವ ಹಾಗೆ ಬಲಾತ್ಕಾರಿಸಿತು. ಇದು ಭಾರತವನ್ನು ಬೇರೆ ಇನ್ನಾವುದೂ ಮಾಡಲಸಾಧ್ಯವಾದ ರೀತಿಯಲ್ಲಿ ಜೀರ್ಣೋದ್ಧಾರದ ಮಾರ್ಗದಲ್ಲಿ ತಂದು ನಿಲ್ಲಿಸಿದೆ. ಬ್ರಿಟೀಷರ ಆಗಮನವಾಗದಿದ್ದರೆ, ಭಾರತಕ್ಕೆ ಒಂದು ಏಕರೂಪ ವ್ಯವಸ್ಥೆಯುಳ್ಳ ಸರಕಾರವಾಗಲೀ, ಒಂದು ಏಕರೂಪ ಕಾನೂನು ವ್ಯವಸ್ಥೆಯ ಆಧಾರವಾದ ಅನುಕೂಲವಾಗಲೀ ಎಂದೆಂದಿಗೂ ದೊರಕುತ್ತಿರಲಿಲ್ಲ. ಯಾವುದೇ ದೇಶದ ಪುರೋಭಿವೃದ್ಧಿಗೆ ಇವುಗಳೇನು ಕಳಪೆ ಸಾಧನಗಳಲ್ಲ. ಭಾರತಕ್ಕೆ ಇವುಗಳ ಮೌಲ್ಯ ಅಳತೆಗೆ ನಿಲುಕುವಂಥದ್ದಲ್ಲ. ಭಾರತೀಯ ರಾಷ್ಟ್ರೀಯತೆಯು ಆಳವಾಗಿ ಬೇರೂರಲು ಸಾಧ್ಯವಾಗುವಂತೆ ಇಲ್ಲಿಯ ಮಣ್ಣನ್ನು ಹದ ಮಾಡಿರುವುದೂ ಅಲ್ಲದೆ ಒಂದು ಸುಸ್ಥಿರವಾರ ಸರಕಾರಕ್ಕೆ ಬುನಾದಿಯನ್ನೂ ಹಾಕಿದೆ. ಈ ದೇಶಕ್ಕೆ ಆಧುನಿಕತೆಯ ನಾಗರೀಕತೆಯ ಸಾಧನಗಳಾದ ಕರೆನ್ಸಿ, ರಸ್ತೆಗಳು, ಕಾಲುವೆಗಳು, ರೈಲು, ರಸ್ತೆಗಳು ಮತ್ತು ಅಂಚೆ ವ್ಯವಸ್ಥೆಯನ್ನು ಒದಗಿಸುವುದನ್ನು ಕಡೆಗಣಿಸಿದ್ದಾರೆಂದು ಹೇಳಲು ಬರುವುದಿಲ್ಲ.

೨೫. ಇದೆಲ್ಲವೂ ಸತ್ಯ. ಆದರೆ ಇದಕ್ಕೆ ತೆರಬೇಕಾದ ಬೆಲೆಯೆಷ್ಟು? ಬ್ರಿಟೀಷರ ಆಡಳಿತದ ಕೆಳಗೆ

ಭಾರತದ ಜನಾಂಗವನ್ನು ಒಂದು ರೀತಿಯಲ್ಲಿ ಕುಬ್ಜರನ್ನಾಗಿಸುವುದು ಅಥವಾ ಕುಂಠಿತಗೊಳಿಸುವುದು ನಡೆಯುತ್ತಲೇ ಇದೆ. ಮಿ.ಗೋಖಲೆಯವರ ಮಾತುಗಳಲ್ಲಿ "ನಾವು ನಮ್ಮ ಜೀವನದುದ್ದಕ್ಕೂ ಕೀಳರಿಮೆಯ ವಾತಾವರಣದಲ್ಲಿ ಜೀವಿಸಲೇಬೇಕಾಗಿದೆ. ನಮ್ಮಲ್ಲಿ ಅತ್ಯಂತ ಘನತೆಯುಳ್ಳವರೂ ಸಹ ಬಾಗಲೇಬೇಕಾಗಿದೆ". ಸ್ವಾಯತ್ತ ಸಮುದಾಯದಲ್ಲಿ ಕಾಣಸಿಗುವ ಔನ್ನತ್ಯದ ಮೂಲದ್ರವ್ಯವಾಗಿರುವ ಊರ್ಧ್ವಮುಖಿಯಾದ ಆವೇಗವನ್ನು ಯಾವ ಭಾರತೀಯನೂ ಕೂಡಾ ಮುಟ್ಟಲಾರ. ಸ್ವರಾಜ್ಯದ ಬೇಡಿಕೆಯು ನಿಂತಿರುವ ನೈತಿಕ ತಳಹದಿಯನ್ನು ಮೆಚ್ಚಿಕೊಳ್ಳದೇ ಇರಬಹುದು, ಸೈತಾನನು ಧರ್ಮ ಗ್ರಂಥಗಳನ್ನು ತನ್ನನ್ನು ಸಮರ್ಥಿಸಿಕೊಳ್ಳಲು ಉಲ್ಲೇಖ ಮಾಡಿದಂತೆ, ಶ್ರೀಮಂತ ವರ್ಗಕ್ಕೆ ಸೇರಿದವರು ಅದನ್ನು ಒತ್ತಾಯಿಸುವುದನ್ನು ನೋಡಿ ಅವರಿಗೆ ಚೋದ್ಯವೆನಿಸಬಹುದು. ಭಾರತದಲ್ಲಿನ ಬ್ರಿಟೀಷ್ ಸರಕಾರದ ಖರ್ಚು ಈ ದೇಶದ ಜನರ ಉಪಲಬ್ಧತೆಗಿಂತ ವಿಪರೀತವಾಗಿ ಮಿತಿಮೀರಿದೆ ಎಂಬುದರಲ್ಲಿ ಸಂದೇಹವಿಲ್ಲ. ಪ್ರಪಂಚದಲ್ಲೆಲ್ಲ ಇದು ಅತ್ಯಂತ ದುಬಾರಿಯಾದ ಸರಕಾರ. ಇದು ಕೂಡಾ ನಿಮಗೆ ಮನ ಮುಟ್ಟಲಾರದು; ದೇಶದಲ್ಲಿನ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ಯಾವ ಖರ್ಚು ಹೆಚ್ಚಿನದಲ್ಲ ಎಂದು ನೀವು ಹೇಳಬಹುದು. ಆದರೆ ಈ ದೇಶದ ಜನರ ಬಡತನ ನಿಮ್ಮ ಮನಸಿಗೆ ತಟ್ಟಲೇಬೇಕು. ಪ್ರಪಂಚದ ಯಾವುದೇ ಭಾಗದಲ್ಲಿ ಭಾರತೀಯರ ಬಡತನಕ್ಕೆ ಸಮಾನವಾದುದು ಬೇರೆ ಯಾವುದಾದರೂ ಇದೆಯೆ? ೧೯ನೆಯ ಶತಮಾನದ ಮೊದಲ ಕಾಲುಭಾಗದಲ್ಲಿ ಬ್ರಿಟೀಷರ ಆಡಳಿತ ಭಾರತದಲ್ಲಿ ಸ್ಥಾಪಿತವಾದಾಗ ಐದು ಕ್ಷಾಮಗಳು ಸಂಭವಿಸಿದ್ದು, ಅಂದಾಜು ೧೦,೦೦,೦೦೦ ಜನ ಸತ್ತರು. ಎರಡನೆಯ ಕಾಲುಭಾಗದಲ್ಲಿ ಎರಡು ಕ್ಷಾಮಗಳು ಸಂಭವಿಸಿದ್ದು, ೪,೦೦,೦೦೦ ಜನ ಸತ್ತರು. ಮೂರನೆಯ ಕಾಲುಭಾಗದಲ್ಲಿ ಆರು ಕ್ಷಾಮಗಳು ಸಂಭವಿಸಿದ್ದು, ೫೦,೦೦,೦೦೦ ಜನ ಸತ್ತರೆಂದು ದಾಖಲಾಗಿದೆ. ಮತ್ತೂ ಸಹ ನಮಗೆ ಕೊನೆಯ ಕಾಲುಭಾಗದಲ್ಲಿ ಕಾಣಬರುವುದು ಏನು? ಹದಿನೆಂಟು ಕ್ಷಾಮಗಳು. ಅಂದಾಜು ಮರಣ ಒಟ್ಟು ಗಾಭರಿ ಹುಟ್ಟಿಸುವ ೧,೫೦,೦೦,೦೦೦ ದಿಂದ ೨,೬೦,೦೦,೦೦೦. ಇದರಲ್ಲಿ ಸರಕಾರಿ ಭಿಕ್ಷೆಯಿಂದ ಜೀವ ಉಳಿಸಿಕೊಂಡ ಲಕ್ಷಲಕ್ಷ ಜನ (೬೦,೦೦,೦೦೦ಕ್ಕೂ ಮೇಲೆ). ಮಹನೀಯರೆ, ಇದಕ್ಕೆ ಕಾರಣ ಏನಾಗಿರಬೇಕು? ಸರಳ ಮಾತುಗಳಲ್ಲಿ ಹೇಳುವುದಾದರೆ ಇದಕ್ಕೆ ಕಾರಣ ಈ ದೇಶದ ಸರಕಾರದಲ್ಲಿ ಬ್ರಿಟೀಷರು ಪ್ರಜ್ಞಾಪೂರ್ವಕವಾಗಿ ಅನುಸರಿಸಿದ ಕಾರ್ಯನೀತಿ. ಉದ್ದಕ್ಕೂ ಬ್ರಿಟೀಷರ ಗುರಿ ಈ ದೇಶದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಯನ್ನು ನಿರುತ್ಸಾಹಗೊಳಿಸುವುದೇ ಆಗಿದೆ. ಇದು ಕೇವಲ ಊಹಾತ್ಮಕವಾದ ಅಪಾದನೆಯಲ್ಲ. ಅವರೇ ಒಪ್ಪಿಕೊಳ್ಳುವಂತೆ ಬ್ರಿಟೀಷ್ ಆಡಳಿತ ಕಾರ್ಯನೀತಿಯ ಪ್ರಕಾರ ಭಾರತವನ್ನು ಬ್ರಿಟೀಷ್ ಸರಕುಗಳಿಗೆ ಯಾವಾಗಲೂ ಒಂದು ಮುಕ್ತ ಮಾರುಕಟ್ಟೆಯಾಗಿ ಉಳಿಯುವಂತೆ ಮಾಡುವುದೇ ಆಗಿದೆ. ಈ ಕಾರ್ಯನೀತಿಯಿಂದಾಗಿಯೇ ಭಾರತವನ್ನು ಬಡತನ ಬೇರೂರಿದ ದೇಶವನ್ನಾಗಿ ಮಾಡಿದೆ. ಹೆಚ್ಚುತ್ತಿರುವ ಜನಗಳ ದರಿದ್ರಾವಸ್ಥೆಯಲ್ಲಿ ಅತ್ಯಂತ ಹೆಚ್ಚಿಗೆ ನರಳಿದವರು ಯಾರು? ಒಂದು ಅರ್ಧ ವಾರ್ಷಿಕ ಕೊನೆಯಿಂದ ಇನ್ನೊಂದು ಕೊನೆ ಗೊತ್ತಾಗಲಾರದ ಕೃಷಿಕರ ಜನಸಂಖ್ಯೆಯ ಅರ್ಧಭಾಗದಲ್ಲಿ ಹೊಟ್ಟೆತುಂಬಾ ಊಟ ಮಾಡುವುದೆಂದರೆ ಏನು ಎಂದು ಗೊತ್ತಿಲ್ಲದವರಲ್ಲಿ ನಿಮ್ನವರ್ಗದವರದ್ದೇ ಅತ್ಯಂತ ದೊಡ್ಡ ಭಾಗ. ಅವರ ದಯನೀಯ ಬಡತನ, ಅವರನ್ನು ಕ್ಷಾಮಗಳಿಗೆ ಸಿದ್ದಪಡಿಸಿದ ಬಲಿಪಶುಗಳನ್ನಾಗಿ ಮಾಡಿರಲೇಬೇಕು. ಇದಕ್ಕೆ ಅವರೇ ಅತಿ ಹೆಚ್ಚಿನ ಸುಂಕವನ್ನು ಕಟ್ಟಿರಬೇಕು. ಇವರನ್ನು ನಿಮ್ಮ ಜನಗಳೆಂದೇ ನೀವು ಕಾಣುವುದಾದರೆ, ನೀವು ನಿಜವಾಗಿ ಅವರಲ್ಲಿ ಆಸಕ್ತಿ ಉಳ್ಳವರಾದರೆ ಈ ಹೃದಯವಿದ್ರಾವಕ ಸಂಗತಿಗೆ ಕುರುಡರಾಗಿರುವುದಕ್ಕೆ, ಅಸಡ್ಡೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಧಿಕಾರಶಾಹಿ ನಿಮಗೆ ಉತ್ತಮ ರಸ್ತೆಗಳನ್ನು ಕೊಟ್ಟಿದ್ದಾರೆ. ವೈಜ್ಞಾನಿಕವಾದ

ಕಾಲುವೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ರೈಲು ಸಾಗಾಣಿಕೆಯನ್ನು ತಂದಿದ್ದಾರೆ. ಕಾಲಾಣೆ ಅಂಚೆಯನ್ನು ರಚಿಸಿದ್ದಾರೆ. ಸುದ್ದಿಗಳನ್ನು ಮಿಂಚಿನ ವೇಗದಲ್ಲಿ ರವಾನಿಸಿದ್ದಾರೆ. ಕರೆನ್ಸಿಗಳನ್ನು ಸ್ಥಿರಗೊಳಿಸಿದ್ದಾರೆ. ತೂಕ ಮತ್ತು ಅಳತೆಗಳನ್ನು ನಿಯಂತ್ರಿಸಿದ್ದಾರೆ. ಚಾಲ್ತಿಯಲ್ಲಿರುವ ಮತ ಧರ್ಮಶಾಸ್ತ್ರದ, ಭೂಗೋಳದ, ಖಗೋಳ ಶಾಸ್ತ್ರದ, ಔಷಧಗಳ ಕುರಿತಾದ ನಂಬಿಕೆಗಳನ್ನು ತಿದ್ದಿದ್ದಾರೆ ಮತ್ತು ಅಂತರಿಕ ಕಲಹಗಳನ್ನು ನಿಲ್ಲಿಸಿದ್ದಾರೆ ಎಂಬ ಕಾರಣಗಳಿಗೆ ನೀವು ಅಧಿಕಾರಶಾಹಿಯ ಹೊಗಳಿಕೆಯನ್ನು ಹಾಡುತ್ತಾ ಹೋಗಲಾಗುವುದಿಲ್ಲ. ಇಷ್ಟೆಲ್ಲ ಹೊಗಳಿಕೆಗೆ ಕಾರಣ ಕಾನೂನು ಮತ್ತು ಸುವ್ಯವಸ್ಥೆಯ ಕ್ಷೇತ್ರದಲ್ಲಿ ಇವರು ಮಾಡಿರುವ ಸಾಧನೆಗಳು. ಆದರೆ ಮಹನೀಯರೆ, ನಿಮ್ನವರ್ಗದವರಿಗೂ ಸೇರಿದಂತೆ ಎಲ್ಲರೂ ಕಾನೂನು ಮತ್ತು ಸುವ್ಯವಸ್ಥೆಯಿಂದ ಬದುಕುವುದಿಲ್ಲ; ಅವರು ಬದುಕುತ್ತಿರುವುದು ಬ್ರೆಡ್ಡು ಮತ್ತು ಬೆಣ್ಣೆಯನ್ನು ತಿಂದು. ಈ ಕಠೋರವಾದ ಜೀವನ ನಿಯಮ ನಿಮ್ನವರ್ಗಗಳವರನ್ನೂ ಸಹ ದೇಶದ ಆರ್ಥಿಕ ಪುರೋಭಿವೃದ್ಧಿಗೆ ಸಹಾಯ ಮಾಡಬಲ್ಲ ಸರಕಾರ ಬೇಕೆಂದು ಬೇಡಿಕೆ ಸಲ್ಲಿಸಬಹುದು.

ನಿಮ್ಮಲ್ಲಿ ಕೆಲವರು ಉತ್ಪಾದನೆಯಲ್ಲಿ ಕೊರತೆಯುಂಟಾಗಿರುವುದರಿಂದ ಜನಗಳಿಗೆ ಬಡತನ ಬಂದಿದೆಯೆಂದೂ ಮತ್ತು ಇದು ಸಂಪತ್ತಿನ ಅಸಮವಾದ ಹಂಚಿಕೆಯಿಂದ ಆಗಿಲ್ಲವೇನು ಎಂದು ಪ್ರಶ್ನಿಸಬಹುದು. ಈ ದೇಶದ ಜನಗಳು ಇಂಗ್ಲೆಂಡಿಗೆ ಕೊಡುತ್ತಿರುವ ಬಹು ಚರ್ಚಿತ ವಾರ್ಷಿಕ ಕಪ್ಪಕಾಣಿಕೆಗಳು, ಈ ದೇಶದ ಭೂಮಾಲೀಕರೂ ಮತ್ತು ಬಂಡವಾಳಶಾಹಿಗಳೂ ತಮಗಾಗಿ ಬೆವರು ಸುರಿಸುವ ಬಹುಸಂಖ್ಯಾತ ಜನಗಳು ಕಷ್ಟಪಟ್ಟು ಸಂಪಾದಿಸಿದ ಅತ್ಯಲ್ಪ ಕೂಲಿ ಹಣದಿಂದ ಭಾರಿ ಪ್ರಮಾಣದಲ್ಲಿ ಕಿತ್ತುಕೊಳ್ಳುತ್ತಿರುವ ಹಣದ ಮುಂದೆ ಈ ಕಪ್ಪಗಳು ಏನೇನೂ ಅಲ್ಲ, ಬ್ರಿಟೀಷ್ ಸರಕಾರ ಭೂಮಾಲೀಕರ ಮತ್ತು ಬಂಡವಾಳಶಾಹಿಗಳ ಹಿಂಡಿಹಾಕುವ ಭಾಗದಿಂದ ನಿಮಗೆ ಪರಿಹಾರವನ್ನು ಒದಗಿಸಿಕೊಡುತ್ತದೆ ಎಂದು ಹೇಗೆ ನಿರೀಕ್ಷಿಸುತ್ತೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ನಾವು ಒಂದು ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅದೆಂದರೆ ಪ್ರೊ.ಡೈಕ್ ಅವರು ಸೂಚಿಸಿರುವ ಹಾಗೆ, ಎಷ್ಟೇ ಬಲಶಾಲಿಯಾದ ಸರಕಾರವಾಗಲೀ ಅದು ಎರಡು ಗಂಭೀರವಾದ ಇತಿಮಿತಿಗಳಿಂದ ಬಳಲುತ್ತದೆ.

ಮೊದಲನೆಯದಾಗಿ, ಒಂದು ಆಂತರಿಕ ಸಮಿತಿ. ಇದು ಉದ್ಭವವಾಗುವುದು ಅಧಿಕಾರದಲ್ಲಿರುವವರ ನಡತೆ, ಪ್ರೇರಣೆ ಮತ್ತು ಆಸಕ್ತಿಗಳಿಂದ ಮತ್ತು ಬ್ರಿಟೀಷ್ ಸರಕಾರ ಭಾರತೀಯ ಸಮಾಜದಲ್ಲಿನ ಸಜೀವ ಚೈತನ್ಯಗಳ ಬಗ್ಗೆ ಅನುಕಂಪ ತಾಳದಿದ್ದರೆ, ಅವರ ಅಕಾಂಕ್ಷೆಗಳಿಗೆ ಹಗೆತನ ತೋರಿದರೆ, ಶಿಕ್ಷಣವನ್ನು ನಿರ್ಲಕ್ಷ್ಯ ಮಾಡಿದರೆ, ಸ್ವದೇಶಿ ಕಲ್ಪನೆಗೆ ಸ್ಪಂದಿಸದಿದ್ದರೆ, ಅವರಿಗೆ ಈ ವಿಷಯಗಳ ಬಗ್ಗೆ ಒಲವು ಇಲ್ಲವೆಂದಲ್ಲ. ಬದಲಿಗೆ ಅದು ಅವರ ನಡತೆ, ಪ್ರೇರಣೆ ಮತ್ತು ಆಸಕ್ತಿಗಳಿಗೆ ವಿರುದ್ಧವಾಗಿರುವುದರಿಂದ. ಎರಡನೆಯದಾಗಿ ಸರಕಾರದ ಅಧಿಕಾರಗಳನ್ನು ಮಿತಿಗೊಳಿಸುವ ಪರಿಗಣನೆ ಎಂದರೆ, ಹೊರಗಿನ ಪ್ರತಿರೋಧ. ಭಾರತ ಸಮಾಜದ ಅತ್ಯಾವಶ್ಯಕ ಭಾಗಗಳನ್ನು (ಅಂಗಗಳನ್ನು) ತಿಂದು ಹಾಕುತ್ತಿರುವ ಸಾಮಾಜಿಕ ಕೆಡಕುಗಳನ್ನು ನಿವಾರಿಸಬೇಕಾದ ಪ್ರಾಮುಖ್ಯತೆಯನ್ನು ಭಾರತ ಸರಕಾರ ಮನಗಾಣುತ್ತಿಲ್ಲವೆ? ಭೂಮಾಲೀಕರುಗಳು ಜನಸ್ತೋಮವನ್ನು ಹಿಂಡಿಹಿಪ್ಪೆ ಮಾಡುತ್ತಿರುವುದನ್ನು ಭಾರತ ಸರಕಾರ ಪ್ರಾತ್ಯಕ್ಷಿಕೆ ಮಾಡಿಕೊಳ್ಳುತ್ತಿಲ್ಲವೆ? ಬಂಡವಾಳಶಾಹಿಗಳು ಕೂಲಿಕಾರ್ಮಿಕರಿಗೆ ಬದುಕಲು ಬೇಕಾದ ಕೂಲಿಯನ್ನು ಮತ್ತು ಕೆಲಸ ಮಾಡಲು ಯೋಗ್ಯವಾದ ಪರಿಸ್ಥಿತಿಯನ್ನು ಕೊಡುತ್ತಿಲ್ಲವೆಂದು ಭಾರತ ಸರಕಾರಕ್ಕೆ ಅರ್ಥವಾಗುತ್ತಿಲ್ಲವೆ? ಅದಕ್ಕೆ ಎಲ್ಲಾ ಗೊತ್ತು. ಆದರೂ ಸಹ ಈ ಕೆಡಕುಗಳಲ್ಲಿ ಯಾವುದನ್ನು ಮುಟ್ಟುವುದಕ್ಕೂ ಅದು ಧೈರ್ಯ ಮಾಡುತ್ತಿಲ್ಲ ಏತಕ್ಕಾಗಿ? ಅದನ್ನು ತೊಡೆದು ಹಾಕಲು ಅದಕ್ಕೆ ಕಾನೂನಿನ ಬೆಂಬಲವಿಲ್ಲವೆ? ಅದು ಮಧ್ಯಪ್ರವೇಶಕ್ಕೆ

ಹಿಂಜರಿಯುತ್ತಿರುವ ಕಾರಣ, ಈಗ ಅಸ್ತಿತ್ವದಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಅಘೋಷಿತ ಸಂಹಿತೆಯನ್ನು ತಿದ್ದುಪಡಿ ಮಾಡುವುದಕ್ಕೆ ಅದಕ್ಕೆ ಕಾರಣ ಭಯ; ಕಾರಣ ಅದು ಪ್ರತಿರೋಧಕ್ಕೆ ಎಡೆ ಮಾಡಿಕೊಡುತ್ತದೆ ಎಂದು. ಇಂಥ ಸರಕಾರದಿಂದ ಯಾರಿಗೇನು ಪ್ರಯೋಜನ? ಇಂಥ ಎರಡು ಇತಿಮಿತಿಗಳ ನಡುವೆ ನಿಶ್ಚೇತಗೊಂಡ ಜೀವನವನ್ನು ಹಸನುಗೊಳಿಸುವುದರಲ್ಲಿ ಹೆಚ್ಚಿನ ಅಂಶ ತಡೆಹಿಡಿಯಲ್ಪಟ್ಟಿರುತ್ತದೆ, ಯಾವ ಸರಕಾರದಲ್ಲಿ ಅಧಿಕಾರದಲ್ಲಿರುವವರು ತಮ್ಮ ಏಕಪ್ರಕಾರದ ನಿಷ್ಠೆಯನ್ನು ದೇಶದ ಒಳಿತಿಗೆ ತೋರುತ್ತಾರೋ ಅಂತಹ ಸರಕಾರ ನಮಗೆ ಬೇಕಾಗಿದೆ. ಯಾವ ಸರಕಾರದಲ್ಲಿ ಅಧಿಕಾರದಲ್ಲಿರುವವರಿಗೆ ಎಲ್ಲಿ ವಿಧೇಯತೆ ಕೊನೆಗೊಂಡು ಎಲ್ಲಿ ಪ್ರತಿರೋಧ ಪ್ರಾರಂಭವಾಗುತ್ತದೆಂದು ಗೊತ್ತಿದ್ದು, ಅಲ್ಲಿಂದ ನ್ಯಾಯ ಮತ್ತು ಔಚಿತ್ಯಗಳು ಶೀಘ್ರವಾಗಿಬೇಕಾಗುವ ಜೀವನದ ಸಾಮಾಜಿಕ ಮತ್ತು ಆರ್ಥಿಕ ಸಂಹಿತೆಯನ್ನು ತಿದ್ದುಪಡಿ ಮಾಡುವುದಕ್ಕೆ ಹೆದರುವುದಿಲ್ಲವೋ ಅಂಥ ಸರಕಾರ ನಮಗೆ ಬೇಕು. ಈ ಪಾತ್ರವನ್ನು ಬ್ರಿಟಿಷ್ ಸರಕಾರ ಎಂದೆಂದಿಗೂ ನಿರ್ವಹಿಸಲಾರದು. ಅದನ್ನು ಮಾಡಬಲ್ಲ ಸರಕಾರವೆಂದರೆ ಜನಗಳ, ಜನಗಳಿಗೋಸ್ಕರ ಮತ್ತು ಜನಗಳಿಂದಾಗಿ ಇರುವ ಸರಕಾರ ಮಾತ್ರ. ಅಂದರೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದು ಸ್ವರಾಜ್ಯ ಸರಕಾರದಿಂದ ಮಾತ್ರ.

೨೬. ಈ ಪ್ರಶ್ನೆಯನ್ನು ನಿಮ್ಮದೇ ಸಂಕುಚಿತ ದೃಷ್ಟಿಕೋನದಿಂದ ಗಮನಿಸಿ. ಬ್ರಿಟೀಷರಿಗೂ ಮುಂಚೆ, ನಿಮ್ಮ ಅಸ್ಪೃಶ್ಯತೆಯ ಕಾರಣದಿಂದಾಗಿ ನೀವು ಅಸಹ್ಯ ಹುಟ್ಟಿಸುವ ಪರಿಸ್ಥಿತಿಯಲ್ಲಿದ್ದೀರಿ. ನಿಮ್ಮ ಅಸ್ಪೃಶ್ಯತೆಯನ್ನು ತೊಡೆದುಹಾಕಲು ಬ್ರಿಟೀಷ್ ಸರಕಾರ ಏನನ್ನಾದರೂ ಮಾಡಿದೆಯೆ? ಬ್ರಿಟೀಷರಿಗೂ ಮುಂಚೆ ಹಳ್ಳಿಯ ಬಾವಿಯಿಂದ ನೀರನ್ನು ತೆಗೆದುಕೊಳ್ಳಲು ಬಿಡುತ್ತಿರಲಿಲ್ಲ, ನೀರು ತೆಗೆದುಕೊಳ್ಳುವ ಹಕ್ಕನ್ನು ಬ್ರಿಟೀಷ್ ಸರಕಾರ ನಿಮಗೆ ಕೊಟ್ಟಿದೆಯೆ? ಬ್ರಿಟೀಷರಿಗೆ ಮುಂಚೆ ನಿಮಗೆ ದೇವಸ್ಥಾನಕ್ಕೆ ಪ್ರವೇಶವಿರಲಿಲ್ಲ. ಈಗ ನೀವು ಪ್ರವೇಶ ಮಾಡಬಲ್ಲಿರಾ? ಬ್ರಿಟೀಷರಿಗೂ ಮುಂಚೆ ನಿಮಗೆ ಪೊಲೀಸ್ ದಳಕ್ಕೆ ಪ್ರವೇಶ ನಿರಾಕರಿಸಲಾಗಿತ್ತು. ಈಗ ಬ್ರಿಟೀಷ್ ಸರಕಾರ ನಿಮ್ಮನ್ನು ಪೊಲೀಸ್ ದಳಕ್ಕೆ ಸೇರಿಸಿಕೊಳ್ಳುತ್ತಿದ್ದೆಯೆ? ಬ್ರಿಟೀಷರಿಗೆ ಮುಂಚೆ ನಿಮಗೆ ಮಿಲಿಟರಿಯಲ್ಲಿ ಸೇವೆ ಸಲ್ಲಿಸಲು ಅವಕಾಶವಿರಲಿಲ್ಲ, ಆ ಜೀವನ ಪಥ ನಿಮಗೆ ಮುಕ್ತವಾಗಿದೆಯೆ? ಮಹನೀಯರೆ, ಈ ಯಾವ ಪ್ರಶ್ನೆಗಳಿಗೂ ನೀವು ಸಕಾರಾತ್ಮಕವಾದ ಉತ್ತರವನ್ನು ಕೊಡಲಾರಿರಿ. ಇಷ್ಟು ದೀರ್ಘಕಾಲ ದೇಶದ ಮೇಲೆ ಹೆಚ್ಚು ಅಧಿಕಾರವನ್ನು ಚಲಾಯಿಸುತ್ತಿದ್ದವರು, ಏನಾದರೂ ಒಳ್ಳೆಯದನ್ನು ಮಾಡಲೇಬೇಕಾಗಿತ್ತು. ಆದರೆ ನಿಮ್ಮ ಸ್ಥಿತಿಯ ಬಗ್ಗೆ ಯಾವುದೇ ಮೂಲಭೂತವಾದ ಗಮನವನ್ನೂ ಕೊಟ್ಟಿಲ್ಲ, ನಿಮಗೆ ಸಂಬಂಧಪಟ್ಟ ಹಾಗೆ ಬ್ರಿಟೀಷ್ ಸರಕಾರ ಆಗ ಇದ್ದ ವ್ಯವಸ್ಥೆಗಳನ್ನು ಹೇಗೆ ಕಂಡಿದ್ದರೋ ಹಾಗೇ ಒಪ್ಪಿಕೊಂಡಿದ್ದಾರೆ. ಅವರು ಆ ವ್ಯವಸ್ಥೆಗಳನ್ನು ಕಾಪಾಡಿಕೊಂಡು ಬಂದಿರುವ ರೀತಿ ಚೀನಿ ದರ್ಜಿಯೊಬ್ಬ ಮಾಡಿದ ರೀತಿಯಲ್ಲೇ ಇದೆ. ಮಾದರಿಗಾಗಿ ಅವನಿಗೆ ಒಂದು ಹಳೆಯ ಕೋಟನ್ನು ಕೊಟ್ಟು ಅದೇ ರೀತಿ ಹೊಸ ಕೋಟನ್ನು ಹೊಲೆದು ಕೊಡುವುದಕ್ಕೆ ಹೇಳಲಾಯಿತು, ಅವನು ತದ್ರೂಪದ ಅಂಥದೇ ಕೋಟನ್ನು ಹೊಲಿದುಕೊಟ್ಟ; ಹರಿದುಹೋಗಿದ್ದ ಕಡೆ ಹಾಗೆಯೇ ಹರಿದಿದ್ದ, ತೇಪೆ ಹಾಕಿದ್ದ ಕಡೆ ಹೊಸದರಲ್ಲೂ ಹಾಗೆಯೇ ತೇಪೆ ಹಾಕಿದ್ದ, ಇಷ್ಟು ಮಾಡಿ ತನ್ನ ಕೆಲಸದ ಬಗ್ಗೆ ತಾನೇ ಹೆಮ್ಮೆ ಪಟ್ಟುಕೊಂಡ ನಿಮಗೆ ಆದ ಕೆಡಕುಗಳು ತೆರೆದ ಹುಣ್ಣಿನಂತೆಯೇ ಹಾಗೆಯೇ ಉಳಿದುಕೊಂಡಿದೆಯೇ ಹೊರತು, ಅದು ವಾಸಿಯಾಗಿಲ್ಲ. ಅತ್ಯುತ್ತಮವಾದ ಪ್ರೇರಣೆಗಳಿಂದಲೂ ರೀತಿನಿಯಮಗಳಿಂದಲೂ ಉತ್ತೇಜಿತರಾಗಿದ್ದರೂ ನಿಮ್ಮ ಕುಂದುಕೊರತೆಗಳ ಮಟ್ಟಿಗೆ ಯಾವಾಗಲೂ ನಿಸ್ಸಹಾಯಕರಾಗಿಯೇ ಉಳಿಯುತ್ತಾರೆ. ನಿಮ್ಮ ಗೋಳನ್ನು ನೀವೇ ಪರಿಹರಿಸಿಕೊಳ್ಳಬೇಕೆ ಹೊರತು ಇನ್ನು ಯಾರೂ ಅದನ್ನು ಪರಿಹರಿಸಲಾರರು. ನಿಮ್ಮ ಕೈಗಳಲ್ಲಿ

ರಾಜಕೀಯ ಅಧಿಕಾರ ಸಿಗದ ಹೊರತು ಅವುಗಳನ್ನು ನಿವಾರಿಸಿಕೊಳ್ಳಲು ಆಗುವುದಿಲ್ಲ, ಬ್ರಿಟೀಷ್ ಸರಕಾರ ಈಗ ಹೇಗಿದೆಯೋ ಹಾಗೆಯೇ ಇದ್ದರೆ ನಿಮ್ಮ ಪಾಲಿನ ರಾಜಕೀಯ ಅಧಿಕಾರ ನಿಮಗೆ ಸಿಗುವುದಿಲ್ಲ. ಸ್ವರಾಜ್ಯದ ಸಂವಿಧಾನದಲ್ಲಿ ಮಾತ್ರ ನಿಮಗೆ ರಾಜಕೀಯ ಅಧಿಕಾರ ಸಿಗುವ ಸಂಭವ ಇದೆ. ಅದಿಲ್ಲದೆ, ನಿಮ್ಮ ಜನಗಳಿಗೆ ನೀವು ಮುಕ್ತಿಯನ್ನು ತಂದುಕೊಡಲಾರಿರಿ. ನಮ್ಮ ಜನಗಳಲ್ಲಿ ಬಹುಸಂಖ್ಯಾತರಿಗೆ ಸ್ವರಾಜ್ಯವೆಂದರೆ ಒಂದು ಭೂತವೋ, ದೆವ್ವವೊ ಇದ್ದಂತೆ. ಅದು ಹಾಗೆ ಇರುವುದು ಸ್ವಾಭಾವಿಕ. ಅದು ಅವರ ಸಹದೇಶವಾಸಿಗಳ ಭಯಾನಕ ಆಳ್ವಿಕೆಯನ್ನು ಅವರ ದಮನವನ್ನು ನೆನಪಿಗೆ ತರುತ್ತದೆ. ಸ್ವರಾಜ್ಯದ ಕೆಳಗೂ ಇದೇ ಪುನಾವೃತ್ತಿಯಾಗಬಹುದೆಂದು ಅವರ ಹೆದರಿಕೆ. ಆದರೆ ಕಳೆದುಹೋಗಿರುವುದನ್ನು ಒಂದು ಕ್ಷಣ ಮರೆತು ಆರೋಗ್ಯದಾಯಕ ಕ್ಷಣಗಳನ್ನೊಳಗೊಂಡ ಭವಿಷತ್ತಿನ ಸ್ವರಾಜ್ಯವನ್ನು ಚಿತ್ರೀಕರಿಸಿಕೊಳ್ಳಿ; ಜನಸ್ತೋಮವನ್ನು ಪ್ರತಿಷ್ಠಿತ ವರ್ಗಗಳಿಂದ ಕಾಪಾಡುವುದಕ್ಕೆ ಭೂತವೂ ಅಲ್ಲದ ದೆವ್ವವೂ ಅಲ್ಲದ ಒಂದು ಅವಕಾಶ ದೊರಕಬಹುದಾದ ಸರಕಾರದ ವ್ಯವಸ್ಥೆ ನಿಮ್ಮದಾಗುತ್ತದೆ, ರಾಜಕೀಯ ಪರಮಾಧಿಕಾರ ಪಡೆದುಕೊಳ್ಳುವುದರಲ್ಲಿ ನೀವೂ ಒಬ್ಬರಾಗಿರುತ್ತೀರಿ. ಕಳೆದುಹೋಗಿರುವುದರ ಭಯಾನಕ ಕಲ್ಪನೆಯಿಂದ ಹೊರಗಡೆ ಬನ್ನಿ. ನಿಮ್ಮ ತೀರ್ಮಾನವನ್ನು ನೀವೇ ತೆಗೆದುಕೊಳ್ಳಿ. ಯಾರ ಬೆದರಿಕೆಯಿಂದ, ಪುಸಲಾವಣೆಯಿಂದ ಪ್ರಭಾವಿತರಾಗಬೇಡಿ. ಅತ್ಯುತ್ತಮ ಹಿತಾಸಕ್ತಿಗಳು ಯಾವುವೆಂದು ಮನನ ಮಾಡಿಕೊಳ್ಳಿ. ಸ್ವರಾಜ್ಯವೇ ನಿಮ್ಮ ಗುರಿಯೆಂದು ಒಪ್ಪಿಕೊಳ್ಳುತ್ತೀರೆಂದು ನನಗೆ ನಂಬಿಕೆ ಇದೆ.

೨೭. ಈ ಅಭಿಪ್ರಾಯವನ್ನು ನೀವು ಒಪ್ಪಿಕೊಳ್ಳುವುದಾದರೆ ಭವಿಷ್ಯ ಭಾರತ ಸರಕಾರವನ್ನು ಕುರಿತ ಸೈಮನ್ ಆಯೋಗದ ಶಿಫಾರಸ್ಸುಗಳನ್ನು ನೀವು ಅನುಮೋದಿಸಲು ಸಾಧ್ಯವಿಲ್ಲ, ಸೈಮನ್ ಆಯೋಗದ ವರದಿಯನ್ನು ಕೂಲಂಕುಷವಾಗಿ ಪರೀಕ್ಷೆ ಮಾಡಲು ನನಗೆ ಸಾಧ್ಯವಾಗುತ್ತಿಲ್ಲ. ನನಗೆ ಅದಕ್ಕೆ ಸಮಯವಿಲ್ಲ, ದೇಶದ ಸರಕಾರದಲ್ಲಿ ಆಯೋಗವು ತರಬಯಸುವ ಹೊಣೆಗಾರಿಕೆಯ ಮಟ್ಟವನ್ನು ಕುರಿತು ನಿಮ್ಮ ಗಮನವನ್ನು ಸೆಳೆಯುವಷ್ಟಕ್ಕೆ ನಾನು ತೃಪ್ತಿಗೊಳ್ಳುತ್ತೇನೆ. ಕೇಂದ್ರ ಸರಕಾರದಲ್ಲಿ ಯಾವುದೇ ಮೂಲಭೂತ ಬದಲಾವಣೆಯನ್ನು ಆಯೋಗ ಮಾಡುತ್ತಿಲ್ಲ, ಅಲ್ಲಿಯ ಕಾರ್ಯಾಂಗ ಈಗ ಎಷ್ಟು ಹೊಣೆಗೇಡಿಯಾಗಿದೆಯೋ ಅಷ್ಟೇ ಹೊಣೆಗೇಡಿಯಾಗಿ ಉಳಿದುಕೊಳ್ಳುತ್ತದೆ. ಪ್ರಾಂತ್ಯಗಳಲ್ಲಿ ಕಾರ್ಯಾಂಗವನ್ನು ಶಾಸಕಾಂಗಕ್ಕೆ ಹೊಣೆ ಮಾಡುವ ಒಂದು ಪ್ರಯತ್ನ ಇದೆ. ಆದರೂ ಈ ಹೊಣೆಗಾರಿಕೆ ಗವರ್ನರ್ ಅವರ ತುರ್ತುಪರಿಸ್ಥಿತಿಯ ಅಧಿಕಾರಕ್ಕೆ ಒಳಪಟ್ಟು ಇದೆ; ಈ ತುರ್ತು ಅಧಿಕಾರವನ್ನು ಚಲಾಯಿಸಿ ಅವರು ಪ್ರಾಂತ್ಯಗಳ ಕಾರ್ಯಾಂಗಕ್ಕೆ ಪ್ರಾಂತೀಯ ಶಾಸನ ಸಭೆಗೆ ಹೊಣೆಗಾರರಾಗಿಲ್ಲದ ವ್ಯಕ್ತಿಗಳನ್ನು ನೇಮಕ ಮಾಡಬಹುದು. ಅಲ್ಲದೆ ಯಾವುದೇ ಇಲಾಖೆಯ ಆಡಳಿತವನ್ನು ವಹಿಸಿಕೊಳ್ಳಬಹುದು. ಮಹನೀಯರೆ, ಸೈಮನ್ ಆಯೋಗದ ಈ ಯೋಜನೆಯ ಮೇಲೆ ಒಂದು ಟೀಕೆಯನ್ನು ಮಾಡಲಿಚ್ಚಿಸುತ್ತೇನೆ. ಈ ಸಮಸ್ಯೆಯನ್ನು ಎರಡು ಮಾರ್ಗಗಳಿಂದ ಸಮೀಪಿಸಬಹುದು. ಮೊದಲನೆಯದು ಭಾರತದ ಶಾಸನ ಸಭೆಗಳಿಗೆ– ಕೇಂದ್ರೀಯ ಮತ್ತು ಪ್ರಾಂತೀಯ– ಅನುಕ್ರಮವಾಗಿ ಅನುಕ್ರಮವಾಗಿ ಅವುಗಳ ಕಾರ್ಯಾಂಗಗಳು ಎಷ್ಟು ಅಧಿಕಾರವನ್ನು ಕೊಡಬೇಕು ಎಂದು. ಇನ್ನೊಂದು– ಭಾರತದಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಕಾರ್ಯಾಂಗಕ್ಕೆ ಕ್ರಮವಾಗಿ ಅವುಗಳ ಶಾಸನ ಸಭೆಗಳ ಮೇಲೆ ಎಷ್ಟು ಅಧಿಕಾರವನ್ನು ಉಳಿಸಿಕೊಳ್ಳಲು ಅನುಮತಿಸಬೇಕು ಎಂದು. ಈ ಎರಡು ವಿಧಾನದಲ್ಲಿ ಸೈಮನ್ ಆಯೋಗ ಅಳವಡಿಸಿಕೊಂಡಿರುವುದು ಮೊದಲನೆಯದನ್ನು. ನನಗೆ ತೋಚುವುದೇನೆಂದರೆ, ಶಾಸನ ಸಭೆಗಳು ಸಂಬಂಧಪಟ್ಟ ಎಲ್ಲಾ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿರುವಾಗ ಸರಿಯಾದ ವಿಧಾನವನ್ನು ಆರಿಸಿಕೊಳ್ಳುವುದಾದರೆ, ಎರಡನೆಯದೇ ಹೊರತು ಮೊದಲನೆಯದಲ್ಲ. ನನ್ನ ಅನಿಸಿಕೆ ಸರಿಯಾಗಿದ್ದರೆ,

ಪ್ರತಿಯೊಂದು ಕ್ಷೇತ್ರದಲ್ಲೂ ತರಬೇಕೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದಕ್ಕೆ ವಿನಾಯಿತಿ ಎಂದರೆ, ಅದನ್ನು ಜಾರಿಗೆ ತರುವುದು ಸದ್ಯಕ್ಕೆ ಎಲ್ಲಿ ಕಾರ್ಯಸಾಧುವಲ್ಲವೋ ಅದನ್ನು ಬಿಟ್ಟು ಮಿಕ್ಕ ಕಡೆಯಲ್ಲಿ ಹೊಣೆಗಾರಿಕೆಯನ್ನು ಜಾರಿಗೆ ತರುವುದು. ಪ್ರಾಂತೀಯ ಕಾರ್ಯಾಂಗವನ್ನು ಸಂಪೂರ್ಣ ಹೊಣೆಗಾರರನ್ನಾಗಿ ಏತಕ್ಕೆ ಮಾಡಬಾರದೆಂಬುದಕ್ಕೆ ಯಾವ ಕಾರಣವೂ ಇಲ್ಲ, ಅಷ್ಟೇ ಅಲ್ಲ, ಕೇಂದ್ರ ಸರಕಾರದಲ್ಲೂ ಹೊಣೆಗಾರಿಕೆಯನ್ನು ಜಾರಿಗೆ ತರುವುದಕ್ಕೆ – ಮಿಲಿಟರಿ ಮತ್ತು ವಿದೇಶ ವ್ಯವಹಾರಗಳಿಗೆ ಸಂಬಂಧ ಪಟ್ಟ ವಿಷಯಗಳನ್ನು ಬಿಟ್ಟು– ಕಷ್ಟವೇನೆಂದು ನನಗೆ ತಿಳಿಯುತ್ತಿಲ್ಲ.

೨೮. ನಮ್ಮಲ್ಲಿ ಕೆಲವರು ಇನ್ನೂ ಬಹಳ ದೂರವಿದೆಯೆಂದೂ, ನಿಮ್ನವರ್ಗಗಳವರು ಹೊಣೆಗಾರಿಕೆಯ ಪ್ರಶ್ನೆ ಬಂದಾಗ ತಮ್ಮನ್ನು ತಾವು ಶಾಸನ ಸಭೆಗಳಿಗಷ್ಟೆ ನಿರ್ಬಂಧಗೊಳಿಸಿಕೊಳ್ಳಬೇಕೆಂದು ಹೇಳಬಹುದು. ಅವರುಗಳಿಗೆ ನಾನು ಸಲಹೆ ಮಾಡಲು ಬಯಸುವುದೇನೆಂದರೆ, ಕೇಂದ್ರದ ಅಥವಾ ಪ್ರಾಂತ್ಯದ ಕಾರ್ಯಾಂಗಗಳಲ್ಲಿ ಹೊಣೆಗಾರಿಕೆ ಪ್ರಶ್ನೆಯ ಮೇಲೆ ತಮ್ಮ ಅಭಿಪ್ರಾಯವನ್ನು ರೂಪಿಸಿಕೊಳ್ಳುವಾಗ ಅವರು ಎರಡು ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಒಂದು ನಿಮ್ನವರ್ಗಗಳೂ ಸೇರಿದಂತೆ ದೇಶದ ಯೋಗಕ್ಷೇಮ ಪ್ರಾಂತೀಯ ಸರಕಾರಕ್ಕಿಂತ ಹೆಚ್ಚಿಗೆ ಕೇಂದ್ರ ಸರಕಾರದೊಂದಿಗೆ ಬಹಳ ಸಮೀಪವಾಗಿ ಮತ್ತು ವಿಸ್ತಾರದೊಂದಿಗೆ ಬೆಸೆದುಕೊಂಡಿದೆ ಎಂದು. ಆದ್ದರಿಂದ ಬಹುಮಟ್ಟಿಗೆ ಈ ದೇಶದ ಜನರ ಪುರೋಭಿವೃದ್ಧಿ ಕೇಂದ್ರದ ಗಿರಣಿ ಎಷ್ಟು ಚೆನ್ನಾಗಿ ಮತ್ತು ಎಷ್ಟು ಸಲೀಸಾಗಿ ಅರೆಯುತ್ತದೆ ಎಂಬುದರ ಮೇಲೆ ಅವಲಂಬಿತವಾಗಿದೆ. ಈ ದೃಷ್ಟಿಕೋನದಿಂದ, ಜನಗಳ ನೈತಿಕ ಮತ್ತು ಲೌಕಿಕ ಪರಿಸ್ಥಿತಿಯಲ್ಲಿ ಶೀಘ್ರವಾದ ಮುನ್ನಡೆಯನ್ನು ಕಾಣುವುದಕ್ಕೆ ನೀವು ಕಾತರರಾಗಿದ್ದರೆ, ಕೇಂದ್ರ ಸರಕಾರದ ಹೊಣೆಗಾರಿಕೆಯ ಪ್ರಶ್ನೆಯ ಮೇಲೆ ನೀವು ಉದಾಸೀನರಾಗಿರುವುದಕ್ಕೆ ಸಾಧ್ಯವಿಲ್ಲ. ಆದರೆ ಅದೇ ದಿಕ್ಕಿನಲ್ಲಿ ಸೂಚಿಸುವ ಇನ್ನೊಂದು ಪರಿಗಣನೆ ಇದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸಿಕೊಂಡು ಬರುವುದರಲ್ಲಿ, ಪ್ರಾಂತ್ಯದ ಕಾರ್ಯಾಂಗ ಯಾವಾಗಲೂ ಕೇಂದ್ರ ಸರಕಾರದ ಒಂದು ಮುಖ್ಯ ಪ್ರತಿನಿಧಿಯಾಗಿ ಉಳಿಸಿಕೊಳ್ಳುತ್ತದೆ. ಅವೆರಡೂ ಸಾಮರಸ್ಯದಿಂದ ಕೆಲಸ ಮಾಡಬೇಕಾದರೆ, ಒಂದೇ ಮೂಲದಿಂದ ಅವುಗಳು ತಮ್ಮ ನಿರ್ದೇಶನವನ್ನು ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಅವೆರಡರ ಮಧ್ಯೆ ಗಂಭಿರವಾದ ಕಲಹ ಉಂಟಾಗುತ್ತದೆ. ಪ್ರಾಂತೀಯ ಶಾಸನ ಸಭೆಗೆ ಹೊಣೆಗಾರಿಕೆ ಇರುವ ಪ್ರಾಂತೀಯ ಕಾರ್ಯಾಂಗ, ಕೇಂದ್ರ ಶಾಸನ ಸಭೆಯಿಂದಲ್ಲದೆ, ರಾಜ್ಯ ಕಾರ್ಯದರ್ಶಿಯಿಂದ ಆದೇಶಗಳನ್ನು ಪಡೆದುಕೊಳ್ಳುವ, ಕೇಂದ್ರ ಸರಕಾರದಿಂದ ಆದೇಶಗಳನ್ನು ಪಡೆದುಕೊಳ್ಳುವ ಸಾಧ್ಯತೆ ಇರುವುದಿಲ್ಲ. ಈ ಕಲಹದಲ್ಲಿ ದೇಶದ ಆಡಳಿತ ಯಂತ್ರ ತುರ್ತು ಪರಿಸ್ಥಿತಿಯ ಕಾಲದಲ್ಲಿ ಸಂಪೂರ್ಣವಾಗಿ ನಿಶ್ಚೇತಗೊಳಿಸುತ್ತದೆ. ಆದುದರಿಂದ ನಿಮಗೆ ಬೇಕಿರಲಿ ಅಥವಾ ಬೇಡವಾಗಿರಲಿ, ಕೇಂದ್ರ ಕಾರ್ಯಾಂಗದಲ್ಲಿ ಒಂದಷ್ಟು ಹೊಣೆಗಾರಿಕೆಯನ್ನು ಜಾರಿಗೊಳಿಸದೇ ಪ್ರಾಂತೀಯ ಕಾರ್ಯಾಂಗದಲ್ಲಿ ಹೊಣೆಗಾರಿಕೆಯನ್ನು ಹೊರಿಸಲು ನಿಮಗೆ ಸಾಧ್ಯವಾಗುವುದಿಲ್ಲ.

## VI ನಿಮ್ನವರ್ಗಗಳು ಮತ್ತು ನಾಗರಿಕ ಅಸಹಕಾರ

೨೯. ಡೊಮಿನಿಯನ್ ಸ್ಥಾನಮಾನದ ಆದರ್ಶವನ್ನು ಅದು ರಕ್ಷಣೋಪಾಯಗಳಿಂದ ಕೂಡಿದ್ದರೂ ಸಹ, ನಾವು ಬೆಂಬಲಿಸಿದರೂ ಕಳೆದ ಮಾರ್ಚಿನಿಂದ ಮಹಾತ್ಮ ಗಾಂಧಿಯವರು ಪ್ರಾರಂಭಿಸಿದ ನಾಗರಿಕ ಅಸಹಕಾರ ಚಳುವಳಿಯಲ್ಲಿ ಸೇರಿಕೊಳ್ಳಲೇಬೇಕೆಂದು ಅರ್ಥವಾಗುತ್ತದೆಯೇ? ಈ ಪ್ರಶ್ನೆಯನ್ನು ಕುರಿತು ನಿಮ್ಮ ನಿಲುವೇನೆಂಬುದನ್ನು ನೀವು ಸ್ಪಷ್ಟವಾಗಿ ತಿಳಿಸಬೇಕು. ನಿಮಗೆ ಗೊತ್ತಿರುವ ಹಾಗೆ ಈ ಚಳುವಳಿಯನ್ನು

ಅಸಂವೈಧಾನಿಕವೆಂದು ಸೌಮ್ಯವಾದ ಅಭಿಪ್ರಾಯವಿರುವವರೆಲ್ಲರೂ ಖಂಡಿಸಿದ್ದಾರೆ. ಆ ವಾದ ನನ್ನ ಮನಸ್ಸಿಗೆ ಸರಿ ಕಾಣುತ್ತಿಲ್ಲ. ನಿಮ್ಮ ದೇವಸ್ಥಾನ ಪ್ರವೇಶ ಚಳುವಳಿ ಅಸಂವೈಧಾನಿಕವೆಂದು ಸಂಪ್ರದಾಯವಾದಿಗಳು ನಿಮಗೆ ಹೇಳಿದರೆ ನೀವು ಏನು ಉತ್ತರ ಕೊಡುತ್ತೀರಿ? ಈ ರೀತಿ ನೇರ ಕ್ರಮ ಕೈಗೊಳ್ಳುವ ಬದಲು, ಸರಿಯಾದ ವಿಧಾನವೆಂದರೆ ಸಂಪ್ರದಾಯವಾದಿ ವರ್ಗಗಳಿಗೆ ಅರ್ಜಿಯನ್ನು ಕೊಡುವುದು, ನ್ಯಾಯಾಲಯಗಳಲ್ಲಿ ದಾವೆಗಳನ್ನು ಹೂಡುವುದು ಮತ್ತು ಕಾನೂನನ್ನು ಬದಲಿಸಲು ಪ್ರಯತ್ನ ಪಡುವುದು. ಸಂಪ್ರದಾಯದ ವಿರುದ್ಧ ಸ್ವಾತಂತ್ರಕ್ಕಾಗಿ ನಿಮ್ಮ ಕದನದಲ್ಲಿ ನಿಮ್ಮ ಸಂಪನ್ಮೂಲಗಳ ಮೇಲೆ ಇಂಥ ಇತಿಮಿತಿಗಳಿಂದ ನಿಮಗೆ ತೃಪ್ತಿಯಾಗುತ್ತದೆಯೆ? ಎಲ್ಲರಿಗೂ ಒಪ್ಪಿಗೆಯಾದ ಸಂವಿಧಾನವೊಂದು ಅಸ್ತಿತ್ವದಲ್ಲಿ ಇದ್ದರೆ ಮಾತ್ರ ನೀವು ಸಂವೈಧಾನಿಕ ಉಪಾಯಗಳನ್ನು ಬಳಸಬೇಕೆಂದು ಒತ್ತಾಯಿಸಬಹುದೆಂದು ನನಗೆ ಅನಿಸುತ್ತದೆ. ಆದರೆ ಎಲ್ಲಿ ಇಂಥ ಸಂವಿಧಾನವಿಲ್ಲವೋ ಸಂವಿಧಾನದ ಮೂಲಕ ಎನ್ನುವ ಅಂತಿಮ ಸತ್ಯಕ್ಕೆ (ಸಿದ್ಧಾಂತಕ್ಕೆ) ಯಾರು ಕಿವಿಗೊಡುತ್ತಾರೆ! ಇಂಥದೊಂದು ದೃಷ್ಟಿಕೋನ ಬ್ರಿಟೀಷರಿಗೂ ವಿಚಿತ್ರವೆನಿಸುವುದಿಲ್ಲ; ಏಕೆಂದರೆ ಅಲ್ಸ್ಟರ್ (ಐರ್ಲೆಂಡ್) ಚಳುವಳಿ ಕೂಡ ನಾಗರಿಕ ಅಸಹಕಾರ ಚಳುವಳಿಯಲ್ಲವೆ? ಮತ್ತು ಅದರಲ್ಲಿ ಭಾಗವಹಿಸಿದವರು ಪ್ರತಿಷ್ಠಿತ ಬ್ರಿಟೀಷ್ ರಾಜಕಾರಣಿಗಳಲ್ಲವೆ? ನಾಗರಿಕ ಅಸಹಕಾರ ಚಳುವಳಿ ಸರಿಯೋ, ತಪ್ಪೋ ಎಂಬುದು ಪ್ರಶ್ನೆಯಲ್ಲ. ಪ್ರಶ್ನೆಯೆಂದರೆ, ಅದು ಸಂದರ್ಭೋಚಿತವೇ ಮತ್ತು ನಮ್ಮ ಹಿತಾಸಕ್ತಿಗಳನ್ನು ಕಾಪಾಡಲು ಅನುಗುಣವಾಗಿದೆಯೆ ಎಂದು. ನಾಗರಿಕ ಅಸಹಕಾರ ಚಳುವಳಿ ಏನೇನೂ ಸಮಯೋಚಿತವಾಗಿಲ್ಲವೆಂದೂ ನನಗೆ ಖಾತರಿಯಾಗಿರುವುದರಿಂದ ನಾನು ಅದನ್ನು ವಿರೋಧಿಸುತ್ತೇನೆ. ಬ್ರಿಟೀಷ್ ಚಕ್ರಾಧಿಪತ್ಯದಲ್ಲಿ ಮೈಗೂಡಿಸಿಕೊಂಡಿರುವ ಕೆಡಕುಗಳು ಭಾರತದಲ್ಲಿದ್ದರೂ ಸಹ ಭಾರತೀಯರ ಮುನ್ನಡೆಗೆ ಸ್ವಲ್ಪ ಅವಕಾಶವಿದೆ. ಈ ಅಭಿಪ್ರಾಯ ನನ್ನೊಬ್ಬನದೇ ಅಲ್ಲ, ಭಾರತದಲ್ಲಿ ಕಾನೂನಿನನ್ವಯ ಸ್ಥಾಪಿತವಾದ ಸರಕಾರದ ವಿರುದ್ಧ ಬಂಡಾಯ ಮಾಡುವುದು ಅವರ ಅತ್ಯವಶ್ಯಕ ಕರ್ತವ್ಯವೆಂದು ತಿಳಿದಿರುವ ಮಹಾತ್ಮಾಗಾಂಧಿಯವರು ಸಹ ಇದೇ ಅಭಿಪ್ರಾಯ ಹೊಂದಿದ್ದಾರೆ. ಅದು ಬ್ರಿಟೀಷ್ ಚಕ್ರಾಧಿಪತ್ಯದ ಚೇತನವೇ ಮಾತ್ರವಲ್ಲ, ಭಾರತದಲ್ಲಿ ಸ್ವರಾಜ್ಯ ಸ್ಥಾಪನೆಯ ಆದರ್ಶವನ್ನು ಹಂತಹಂತವಾಗಿ ಸಾಕ್ಷಾತ್ಕರಿಸಿಕೊಳ್ಳುವ ಉದ್ದೇಶದಿಂದ ಪ್ರಾಂತ್ಯಗಳಲ್ಲಿ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವ, ತನ್ಮೂಲಕ ಆ ಚೇತನವನ್ನು ಸಾದೃಶಗೊಳಿಸುವುದಕ್ಕೆ ೧೯೨೦ನೆಯ ಇಸವಿಯಲ್ಲಿ ನಿಜವಾದ ಪ್ರಯತ್ನವನ್ನು ಮಾಡಲಾಯಿತು. ಆದರೆ ವಸ್ತುಸ್ಥಿತಿ ಆ ಆದರ್ಶಕ್ಕಿಂತ ಬಹುಶಃ ತೀರಾ ಹಿಂದೆ ಬಿದ್ದಿತು. ಆ ಆದರ್ಶದ ಸಾಕ್ಷಾತ್ಕಾರ ತೀರಾ ನಿಧಾನಗತಿಯಲ್ಲಿ ಸಾಗುತ್ತಿತ್ತು. ಆದರೆ ಆ ಕಾರ್ಯನೀತಿಯಿಂದ ಹಿಂದೆ ಸರಿಯಲಾಗುತ್ತಿತ್ತೆಂದು ಹೇಳಲಾಗುತ್ತದೆಯೆ? ನಿಜವಾಗಿ ಹಾಗೆ ಹಿಂದೆ ಸರಿದಿದ್ದರೆ, ಆಗ ನಾಗರಿಕ ಅಸಹಕಾರ ಚಳುವಳಿ ಸಂದರ್ಭೋಚಿತವೆ? ಅಲ್ಲವೆ ಎಂದು ಅರ್ಥವಾಗುತ್ತಿತ್ತು. ಆದರೆ ಅದು ಖಂಡಿತವಾಗಿಯೂ ಹಾಗೆ ಆಗಲಿಲ್ಲ. ಅದರ ಬದಲು ಡೊಮಿನಿಯನ್ ಸ್ಥಾನಮಾನವನ್ನು ಕೊಡುತ್ತೇವೆಂದು ಸ್ಪಷ್ಟ ಮಾತುಗಳಲ್ಲಿ ವೈಸ್‌ರಾಯ್ ಅವರು ಘೋಷಣೆ ಮಾಡಿದ್ದು ಆ ಗುರಿಯನ್ನು ಹೊಸದಾಗಿ ವಿಶದೀಕರಿಸಲಾಯಿತು. ಅಲ್ಲದೆ ಆ ಆದರ್ಶದ ಕನಸನ್ನು ಬೇಗ ನನಸಾಗಿಸಿಕೊಳ್ಳುವುದಕ್ಕೆ ಮಾರ್ಗೋಪಾಯಗಳನ್ನು ಚರ್ಚಿಸುವುದಕ್ಕಾಗಿ ಒಂದು ದುಂಡು ಮೇಜಿನ ಸಮ್ಮೇಳನವನ್ನು ಸಹ ಕರೆಯುವುದಾಗಿ ಮಾತು ಕೊಡಲಾಯಿತು. ಆದರೆ ತತ್‌ಕ್ಷಣವೇ ಡೊಮಿನಿಯನ್ ಸ್ಥಾನಮಾನ ಬೇಕೆನ್ನುತ್ತಿದ್ದವರ ದೃಷ್ಟಿಯಲ್ಲಿ, ಈ ಹೇಳಿಕೆಯಲ್ಲಿ ಕೊರತೆಗಳು ಕಾಣಿಸಿದ್ದು ನಿಜ. ಆದರೆ ದುಂಡು ಮೇಜಿನ ಸಮ್ಮೇಳನವನ್ನು ತಿರಸ್ಕರಿಸುವುದಕ್ಕೆ ಕಾಂಗ್ರೆಸ್‌ಗೆ ಯಾವ ಕಾರಣವೂ ಇರಲಿಲ್ಲ. ವೈಸ್‌ರಾಯ್ ಅವರೊಂದಿಗೋ ಅಥವಾ ಬ್ರಿಟೀಷ್ ಮಂತ್ರಿಮಂಡಲದೊಂದಿಗೋ

ಒಂದಲ್ಲ ಒಂದು ರೀತಿಯ ಬದ್ಧತೆಗೋ ಅಥವಾ ಒಪ್ಪಂದಕ್ಕೋ ಬರುವುದಕ್ಕೆ ಗುದ್ದಾಡುವುದು ಉಪಯೋಗವಿಲ್ಲದ, ಅನವಶ್ಯಕವಾದ ಗುದ್ದಾಟವೆಂದು ನನಗೆ ತೋರುತ್ತದೆ. ಬದ್ಧತೆ ಇರಲಿ ಬಿಡಲಿ ಡೊಮಿನಿಯನ್ ಸ್ಥಾನಮಾನಬೇಕೆಂದು ಒಕ್ಕೊರಳಿನಿಂದ ಕೇಳುವಲ್ಲಿ ಬ್ರಿಟೀಷ್ ಪಾರ್ಲಿಮೆಂಟಿನ ಮೇಲೆ ಅದರ ಪ್ರಭಾವ ಬೀರದೇ ಇರದು. ಏನೇ ಆಗಲಿ ಕಾಂಗ್ರೆಸ್ ದುಂಡು ಮೇಜಿನ ಸಮ್ಮೇಳನಕ್ಕೆ ಒಪ್ಪಿಕೊಂಡಿದ್ದರೆ ಯಾವ ನಷ್ಟವೂ ಆಗುತ್ತಿರಲಿಲ್ಲ ಸಮ್ಮೇಳನದಲ್ಲಿ ಯಾವ ಫಲಿತಾಂಶವೂ ಸಿಗದಿದ್ದ ಪಕ್ಷದಲ್ಲಿ, ನಾಗರಿಕ ಅಸಹಕಾರ ಚಳುವಳಿ ಒಂದು ವರ್ಷ ಮುಂದೂಡಲ್ಪಡುತ್ತಿತ್ತೇ ವಿನಾ ಇನ್ನೇನೂ ಆಗುತ್ತಿರಲಿಲ್ಲ; ಅಲ್ಲದೆ ಕಾಂಗ್ರೆಸ್‌ಗೆ ಧನಾತ್ಮಕವಾದ ಮೌಲ್ಯ ಸಿಗುತ್ತಿತ್ತು. ತಪ್ಪೊಪ್ಪಸರಿಯೋ ನಂಬಿಕೆಯನ್ನಿಟ್ಟುಕೊಂಡವರಿಗೆ ಅದು ಭ್ರಮನಿರಸನವನ್ನುಂಟು ಮಾಡುತ್ತಿತ್ತು. ನಾಗರಿಕ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿ ಮತ್ತು ದುಂಡು ಮೇಜಿನ ಸಮ್ಮೇಳನ ತಂದುಕೊಡುತ್ತಿದ್ದ ಶಾಂತಿಯುತವಾದ ಸಂಧಾನಗಳನ್ನು ತಿರಸ್ಕರಿಸಿ, ಕಾಂಗ್ರೆಸ್ ಅತಿ ದೊಡ್ಡ ತಪ್ಪು ಮಾಡಿದೆ ಎಂದು ನಾನು ಹೇಳಲೇಬೇಕಾಗಿದೆ.

೩೦. ನಾನು ನಾಗರಿಕ ಅಸಹಕಾರ ಚಳುವಳಿಯನ್ನು ಬೆಂಬಲಿಸದಿರುವುದಕ್ಕೆ ಇನ್ನೂ ಒಂದು ಕಾರಣವಿದೆ. ಅದೆಂದರೆ ಆ ಚಳುವಳಿ ನಮ್ಮ ಹಿತಾಸಕ್ತಿಗಳ ಸುರಕ್ಷತೆ ಮತ್ತು ಭದ್ರತೆಗೆ ಸಾಮರಸ್ಯವಾಗುತ್ತದೆಂದು ನನಗೆ ಅನಿಸುವುದಿಲ್ಲ. ನಾಗರಿಕ ಅಸಹಕಾರ ಚಳುವಳಿ ಒಂದು ಸಮೂಹ ನಡೆಸುತ್ತಿರುವ ಚಳುವಳಿಯಾಗಿದೆ. ಆ ಚಳುವಳಿಯ ಸಾರಸರ್ವಸ್ವ ಬಲಪ್ರಯೋಗ ಮಾಡುವುದು. ಅದು ಸಮೂಹ ಕಾಲ್ತುಳಿತಕ್ಕೆ ಗುರಿಯಾಗುವ ವಿಧಾನವಾಗಿದ್ದು, ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇ ಆದರೆ, ಅದೊಂದು ಕ್ರಾಂತಿಗೆ ಎಡೆಮಾಡಿಯೇ ತೀರುತ್ತದೆ, ಕ್ರಾಂತಿ, ಅದು ರಕ್ತಸಿಕ್ತವಾಗಿರಲಿ, ರಕ್ತರಹಿತವಾಗಲೀ ವ್ಯತ್ಯಾಸವೇನೂ ಇರುವುದಿಲ್ಲ. ಅದೊಂದು ಬದಲಾವಣೆಯ ವಿಧಾನವಾಗಿದ್ದು, ತನ್ನ ಗುರಿಯ ಬಗ್ಗೆ ಅನಿಶ್ಚಿತವಾಗಿರುತ್ತದೆ. ಅದರಲ್ಲಿ ಗೊಂದಲದ ಅಪಾಯವಿದ್ದು, ಕಾರ್ಯಗತಿಯಲ್ಲಿ ಅನಾಹುತ ಬಹಳ ದೊಡ್ಡ ಪ್ರಮಾಣದ್ದಾಗಿದೆ. ನಮ್ಮ ಮುಂದೆ ಪ್ರಖ್ಯಾತಿಯಾದ ಫ್ರೆಂಚ್ ಕ್ರಾಂತಿಯ ಉದಾಹರಣೆ ಇದೆ. ಅದು ಪ್ರಾರಂಭವಾದದ್ದು ತೋರಿಕೆಗಾಗಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲೆಂದು. ಆದರೆ ಫಲಿತಾಂಶ ಸರ್ವಾಧಿಕಾರ ಸ್ಥಾಪನೆಯಾಗಿದ್ದು. ಅನೇಕ ಬಾರಿ ಕ್ರಾಂತಿಗಳು ಅನಿವಾರ್ಯ ಆಗಿಬಿಡುತ್ತವೆ. ಹೇಗಾದರೂ ನಾವು ನೈಜವಾದ ಸಾಮಾಜಿಕ ಬದಲಾವಣೆಯಿಂದ ಕ್ರಾಂತಿಯನ್ನು ಬೇರ್ಪಡಿಸುವ ವ್ಯತ್ಯಾಸವನ್ನು ಮರೆಯಲೇಬಾರದು. ಕ್ರಾಂತಿ, ರಾಜಕೀಯ ಅಧಿಕಾರವನ್ನು ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ವರ್ಗಾಯಿಸುತ್ತದೆ. ಆಕ್ರಮಣ ಅದನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವರ್ಗಾಯಿಸುವ ಹಾಗೆ. ಇಂಥದೊಂದು ಬರಿದಾದ ಬದಲಾವಣೆಯಿಂದ ನಮಗೆ ತೃಪ್ತಿ ಸಿಗುವುದಿಲ್ಲವೆಂದು ನನಗೆ ಮನವರಿಕೆಯಾಗಿದೆ. ನಮಗೆ ಬೇಕಾಗಿರುವುದು ಅಧಿಕಾರದ ವಗಾವಣೆ. ಅದರೊಟ್ಟಿಗೆ ಅಧಿಕಾರದ ಹಂಚಿಕೆಯೂ ಆಗಬೇಕು. ಆಗ ಸಮಾಜದಲ್ಲಿ ಚಾಲನೆಯಲ್ಲಿರುವ ಶಕ್ತಿಗಳ ಪರಸ್ಪರ ಸಾಮರ್ಥ್ಯದಲ್ಲಿನ ನಿಜವಾದ ಬದಲಾವಣೆಯಾಗುತ್ತದೆ, ಇದೊಂದು ಹೊಂದಿಕೆ ಮಾಡಿಕೊಳ್ಳಬೇಕಾದ ವಿಷಯವಾಗಿದೆ. ನಿಮ್ನವರ್ಗಗಳವರ ಭವಿಷ್ಯ ಇಂಥ ಹೊಂದಾಣಿಕೆಗಳನ್ನು ಗುರುತಿಸಿ, ಕಾರ್ಯರೂಪಕ್ಕೆ ತರುವುದರ ಮೇಲೆ ಸಂಪೂರ್ಣ ಅವಲಂಬಿತವಾಗಿದೆ. ಮುಕ್ತವಾದ ಸರಕಾರವನ್ನು ರೂಪಿಸುವುದೇ ಭಾರತದಲ್ಲಿನ ಸಮಸ್ಯೆಯಾಗಿದೆ. ಬರ್ಕ್ ಅವರನ್ನು ಮತ್ತೆ ಉದ್ಧರಿಸುವುದಾದರೆ ಸರಕಾರವನ್ನು ಮಾಡುವುದಕ್ಕೇನೂ ಅತಿಶಯವಾದ ತಿಳಿವಳಿಕೆ ಬೇಕಾಗಿಲ್ಲ; ಅಧಿಕಾರದ ಪೀಠವನ್ನು ಇತ್ಯರ್ಥಗೊಳಿಸು; ವಿಧೇಯತೆಯನ್ನು ಕಲಿಸು. ಅಲ್ಲಿಗೆ ಕೆಲಸ ಮುಗಿದ ಹಾಗೆ. ಸ್ವಾತಂತ್ರ್ಯವನ್ನು ಕೊಡುವುದು ಇನ್ನೂ ಸುಲಭ. ಮಾರ್ಗದರ್ಶನ ಮಾಡುವ ಅಗತ್ಯವಿಲ್ಲ. ಲಗಾಮನ್ನು ಮಾತ್ರ ಸಡಿಲಿಸಬೇಕಾಗಿದೆ. ಆದರೆ ಮುಕ್ತ ಸರಕಾರವೊಂದನ್ನು ರಚಿಸಬೇಕಾದರೆ ಈ ಎರಡು

ಒಂದಕ್ಕೊಂದು ವಿರುದ್ಧವಾದ ಸ್ವಾತಂತ್ರ್ಯ ಮತ್ತು ನಿಗ್ರಹ ಎಂಬ ಮೂಲಧಾತುಗಳನ್ನು ಬೆಸೆದು ಒಂದು ಸುಸಂಗತವಾದ ಇಡಿಯನ್ನಾಗಿ ಮಾಡುವುದಕ್ಕೆ ಬಹಳಷ್ಟು ಚಿಂತನೆ ಮತ್ತು ಆಳವಾದ ಪ್ರತಿಫಲನ ಬೇಕಾಗುತ್ತದೆ. ಏಕೆಂದರೆ ಅದೊಂದು ನಾಜೂಕಾದ ಹೊಂದಾಣಿಕೆಗಳ ವಿಷಯವಾಗಿದ್ದು, ಇದು ನಾಗರಿಕ ಅಸಹಕಾರ ಚಳುವಳಿಯಂಥ ಸಾಮಾಜಿಕ ಕಾಲ್ತುಳಿತದಲ್ಲಿ ಸಾಧ್ಯವಾಗುವುದಿಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ.

೩೧. ಮಹನೀಯರೆ, ನಿಮ್ನವರ್ಗಗಳವರು ನಾಗರಿಕ ಅಸಹಕಾರ ಚಳುವಳಿಯನ್ನು ಬೆಂಬಲಿಸಬಾರದೆಂಬುದಕ್ಕೆ ಇವೇ ಆ ಕಾರಣಗಳು. ದುಂಡು ಮೇಜಿನ ಸಮ್ಮೇಳನದ ಶಾಂತಿಯುತ ಸಂಧಾನಗಳ ವಿಧಾನವನ್ನು ಅನುಸರಿಸುವುದೇ ಅವರಿಗೆ ಒಳ್ಳೆಯದು. ಅವರು ಆ ಸಮ್ಮೇಳನದಲ್ಲಿ ಸಾಕಷ್ಟು ಪ್ರಾತಿನಿಧ್ಯಕ್ಕೆ ಒತ್ತಾಯ ಮಾಡಬೇಕು; ಪ್ರಾತಿನಿಧ್ಯ ಮಾಡುವವರಲ್ಲಿ ಸಾಮರ್ಥ್ಯ ಮತ್ತು ನೀತಿನಿಷ್ಠೆಯ ಬಗ್ಗೆ ಅವರಿಗೆ ಪೂರ್ಣ ವಿಶ್ವಾಸವಿರಬೇಕು.

## VII ನಿಮ್ನವರ್ಗಗಳವರ ಸಂಸ್ಥೆ

೩೨. ಈ ನಿರ್ಲಿಪ್ತ ಮನೋಭಾವನೆ ನಿಮ್ನವರ್ಗಗಳವರಿಗೆ ಬಹಳ ದುಬಾರಿಯಾಗಿ ಪರಿಣಮಿಸುತ್ತದೆಂದು ನನ್ನ ಅನೇಕ ಸ್ನೇಹಿತರು ನನ್ನನ್ನು ಎಚ್ಚರಿಸಿದ್ದಾರೆ. ನಿಮ್ನವರ್ಗಗಳವರು ಬ್ರಿಟಿಷ್ ಸರ್ಕಾರ ಇಲ್ಲವೇ ಭಾರತ ರಾಷ್ಟ್ರೀಯ ಕಾಂಗ್ರೆಸಿನೊಡನೆ ಸಖ್ಯವನ್ನು ಬೆಳೆಸಿಕೊಳ್ಳಬೇಕು. ನಾನು ಈ ಪ್ರಶ್ನೆಯನ್ನು ಪುನಃ ಪುನಃ ಪರಿಶಿಲಿಸಿದ್ದೇನೆ. ನನಗೆ ಅನಿಸುವುದೇನೆಂದರೆ, ಇಬ್ಬರಿಂದಲೂ ಸ್ವತಂತ್ರವಾಗಿರುವುದೇ ನಿಮ್ನವರ್ಗಗಳವರಿಗೆ ಕ್ಷೇಮ ಎಂದು. ನಾನು ಹೇಳಿದ ಹಾಗೆ ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ಕೊಡುವುದನ್ನು ನಾನು ವಿರೋಧಿಸಲಾಗುವುದಿಲ್ಲ. ಏಕೆಂದರೆ, ಬ್ರಿಟೀಷ್ ಸರಕಾರ ನಮ್ಮ ಸಮಸ್ಯೆಯನ್ನು ಎಂದೆಂದಿಗೂ ಪರಿಹರಿಸಲಾರದೆಂದು ನನಗೆ ಖಚಿತವಾಗಿದೆ. ಆದರೆ ಅದೇ ಕಾಲಕ್ಕೆ ಕಾಂಗ್ರೆಸ್ ಅನ್ನು ಸೇರಿಕೊಳ್ಳುವುದರಿಂದ, ನಾವು ಹೇಗೆ ಉತ್ತರವನ್ನು ಸಮೀಪಿಸುತ್ತೇವೆಂದು ನನಗೆ ಅರ್ಥವಾಗುತ್ತಿಲ್ಲ. ಕಾಂಗ್ರೆಸ್ ಪಕ್ಷ ಅಸ್ಪೃಶ್ಯತೆಯನ್ನು ಮಾನ್ಯ ಮಾಡುವುದಿಲ್ಲವೆಂದೂ ಜನಸಾಮಾನ್ಯರಿಗೆ ಒತ್ತಾಸೆಯಾಗಿರುವುದು ಅದು ಒಂದೇ ಪಕ್ಷವೆಂದೂ ಹೇಳಲಾಗಿದೆ. ಮಹಾತ್ಮಾಗಾಂಧಿಯವರ ಆಶ್ರಯದಲ್ಲಿ ಕಾಂಗ್ರೆಸ್ ಪಕ್ಷ ಅಸ್ಪೃಶ್ಯತೆಯನ್ನು ಖಂಡಿಸಿ ನಿರ್ಣಯವೊಂದನ್ನು ಅನುಮೋದಿಸಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಆದರೆ ಆ ನಿರ್ಣಯವನ್ನು ಜಾರಿಗೆ ತರಲು ಕಾಂಗ್ರೆಸ್ ಏನು ಮಾಡಿದೆ? ತನ್ನ ಕಾರ್ಯಕ್ರಮವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕಾಗಿ ತನ್ನ ಸದಸ್ಯತ್ವವನ್ನು ಪಡೆಯುವವರಿಗೆ ಖದ್ದರ್ ಮತಾಧಿಕಾರವನ್ನು ನಿಗದಿ ಪಡಿಸಿದೆ. ಆದರೆ ಕಾಂಗ್ರೆಸ್ ತನ್ನ ಸದಸ್ಯತ್ವವನ್ನು ಪಡೆಯಬೇಕಾದರೆ ಅಸ್ಪೃಶ್ಯತೆಯನ್ನು ತೊಡೆದುಹಾಕಿರಬೇಕು ಎಂದು ಏಕೆ ನಿಗದಿಪಡಿಸಿಲ್ಲ? ಇಂಥದೊಂದು ನಿಬಂಧನೆ ಸುಲಭವಾಗಿ ಕೆಲಸ ಮಾಡುತ್ತಿತ್ತು. ಇಂಥ ಮತಾಧಿಕಾರವನ್ನು ಕೊಡಲು ಸ್ಪೃಶ್ಯನೊಬ್ಬ ಅಸ್ಪೃಶ್ಯನೊಬ್ಬನನ್ನು ತನ್ನ ಮನೆಯಲ್ಲಿ ಸೇವಕನ ಹಾಗೋ ಅಥವಾ ವಿದ್ಯಾರ್ಥಿಯ ಹಾಗೋ ಇಟ್ಟುಕೊಳ್ಳಬೇಕೆಂಬ ನಿಬಂಧನೆ ಸುಲಭವಾಗಿ ಕೆಲಸ ಮಾಡುತ್ತಿತ್ತು. ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮಾಡಿರುವ ಪರಿಶ್ರಮವಾದರೂ ಏನು? ಅವರ ನೈತಿಕ ಬೆಂಬಲ ಎಷ್ಟೇ ಮಹತ್ವದ್ದಾಗಿರಲಿ, ಅವರ ವೈಯುಕ್ತಿಕ ಪ್ರಭಾವ ಮತ್ತು ಸಂಪನ್ಮೂಲಗಳನ್ನು ಗಮನವಿಟ್ಟುಕೊಂಡು ಹೇಳುವುದಾದರೆ ಅದನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲು ಅವರು ಏನನ್ನೂ ಮಾಡಿಲ್ಲ. ಪ್ರತಿ ವರುಷ ನೂಲು ತೆಗೆಯುವವರಿಗಾಗಿ ಹಣ ಸಂಗ್ರಹ ಮಾಡಲು ಅವರು ಪ್ರವಾಸ ಕೈಗೊಳ್ಳುತ್ತಿದ್ದಾರೆ. ಅವರೇನಾದರೂ, ಅಸ್ಪೃಶ್ಯತೆಯ ವಿರುದ್ಧ ಒಂದು ನೈತಿಕ ಚಳುವಳಿಯನ್ನು ಯಾವಾಗಲಾದರೂ

ಕೈಗೊಂಡಿದ್ದಾರೇನು? ಈ ನಿಮಿತ್ತವಾಗಿ ಅವರು ಚರಕದ ಮೇಲೆ ಖರ್ಚು ಮಾಡುವುದರಲ್ಲಿ ನೂರನೇ ಒಂದು ಭಾಗವನ್ನು ನಮ್ಮ ನಿಮಿತ್ತ ಖರ್ಚು ಮಾಡಿದ್ದಾರೇನು? ಹಿಂದೂ ಮತ್ತು ಮುಸಲ್ಮಾನರ ನಡುವೆ ಸಾಮರಸ್ಯವನ್ನುಂಟು ಮಾಡಲು ಅವರು ಮೂರು ವಾರಗಳ ಉಪವಾಸ ಮಾಡಿದ್ದರೆಂಬುದು ನಿಮಗೆಲ್ಲ ಗೊತ್ತು. ಆದರೆ ಮಹಾತ್ಮಾಗಾಂಧಿ ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವೆ ಹೆಚ್ಚಿನ ಔದಾರ್ಯದ ಭಾವನೆ ಉಂಟು ಮಾಡಲು ಒಂದು ದಿನವಾದರೂ ಉಪವಾಸ ಮಾಡಿದ್ದಾರೇನು? ಇವೆಲ್ಲವನ್ನೂ ಮಾಡಿದ್ದೇ ಆಗಿದ್ದರೆ, ಕಾಂಗ್ರೆಸ್ ವೇದಿಕೆಯನ್ನು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಕಾಂಗ್ರೆಸ್‌ನಿಂದ ಅಸ್ಪೃಶ್ಯತೆಯ ಕಳಂಕ ತೊಡೆಯಲು ಪ್ರಾಮಾಣಿಕ ಪ್ರಯತ್ನದ ಸಾಕ್ಷ್ಯವೇನೂ ನಮಗೆ ದೊರೆತಿಲ್ಲ. ಆದರೆ ಸ್ವಾಮಿ ಶ್ರದ್ಧಾನಂದ ಅವರು ಈ ದಿಸೆಯಲ್ಲಿ ಕಾಂಗ್ರೆಸ್‌ನವರಿಗೆ ನಾಟಕ ಮಾಡುವುದನ್ನು ಬಿಟ್ಟು ಬೇರೇನೂ ಮಾಡುವುದಕ್ಕೆ ಮನಸ್ಸಿಲ್ಲವೆಂದು ಗೊತ್ತಾಗಿ, ಬೇಸರದಿಂದ ಕಾಂಗ್ರೆಸ್ ಪಕ್ಷ ತೊರೆದರೆಂದು ನಮಗೆ ಗೊತ್ತು. ಅವರ ಠರಾವುಗಳಿಂದ ಅವರ ಬಣ್ಣವೇನೆಂದು ನಾವು ಕಂಡುಕೊಳ್ಳುವುದಾದರೆ ಕಾಂಗ್ರೆಸ್ ಜನಸಾಮಾನ್ಯರ ಪರವಾಗಿದ್ದರೆಂದು ಒಪ್ಪಿಕೊಳ್ಳಲು ಅನುಮಾನಿಸಬೇಕಾಗುತ್ತದೆ, ಅದರ ಆರ್ಥಿಕ ನಿರ್ಣಯಗಳು ಶ್ರೀಮಂತರ ಮತ್ತು ಮಧ್ಯಮ ವರ್ಗದವರ ಹಿತಾಸಕ್ತಿಗಳನ್ನು ಪ್ರತಿಫಲಿಸುತ್ತವೆ. ಅದರ ವಾಣಿಜ್ಯ ಸಂಬಂಧಿ ಠರಾವುಗಳು ಕೇವಲ ವ್ಯಾಪಾರೀ ಮತ್ತು ಕಾರಖಾನೆ ಮಾಲೀಕರುಗಳಿಗೆ ಮಾತ್ರ ಸಂಬಂಧಿಸಿದ್ದು ಕಾರ್ಮಿಕ ವರ್ಗದವರನ್ನು ಪೂರಾ ಕಡೆಗಣಿಸಲಾಗಿದೆ. ೧ ಷಿಲ್ಲಿಂಗ್, ನಾಲ್ಕು ಪೆನ್ನಿ ಪ್ರಮಾಣದ ಪರವಾಗಿರುವ ಮತ್ತು ೧ ಷಿಲ್ಲಿಂಗ್ ಮತ್ತು ೧ ಪೆನ್ನಿ ಪ್ರಮಾಣಕ್ಕೆ ವಿರುದ್ಧವಾಗಿರುವ (೧/೩ ಬದಲು ೧/೨) ಜನಸಾಮಾನ್ಯರ ರಕ್ಷಕರೆಂದು ಸಾಧಿಸುವುದನ್ನು ಕೈಬಿಡಬೇಕು. ನಾಗರಿಕ ಅಸಹಕಾರ ಚಳುವಳಿಯಲ್ಲಿ ಉಪ್ಪಿನ ಮೇಲಿನ ಚಳುವಳಿಯನ್ನು ಸೇರಿಸಿದ ಮಾತ್ರಕ್ಕೆ ಕಾಂಗ್ರೆಸ್ ಮುಖಚಹರೆಯೇನೂ ಬದಲಾಗುವುದಿಲ್ಲ. ರಾಜಕೀಯ ಆಂದೋಲನಕ್ಕೆ ಉಪ್ಪಿನ ತೆರಿಗೆ ವಿರುದ್ಧ ಅಸ್ಫೋಟನೆಗಳು ಸ್ವಾಗತಾರ್ಹವಾದ ಸಾಧನಗಳೇ ಹೌದು. ಆದರೆ ಕಡುಬು ತಯಾರಾಗಿರುವುದರ ಪುರಾವೆ ಅದನ್ನು ತಿನ್ನುವುದೇ ಆಗಿರುವ ಹಾಗೆ, ಉಪ್ಪು ತೆರಿಗೆ ಚಳುವಳಿಯ ನಿಜವಾದ ಪರೀಕ್ಷೆ ಎಂದರೆ ಜನಸಾಮಾನ್ಯರನ್ನು ಉಳಿಸಿ, ಉಳಿದ ಪ್ರತಿಷ್ಠಿತ ವರ್ಗಗಳವರನ್ನು ಇಳಿಸುವಂಥ ಒಂದು ಬದಲಿಯಿಂದ ಹೊರೆಯನ್ನು ಸ್ಥಳಾಂತರಿಸುವುದಕ್ಕೆ ಅವರು ಸಿದ್ಧರಾಗಿದ್ದಾರೆಯೇ ಎಂಬುದಾಗಿದೆ. ಕಾಲವೊಂದೇ ಅದರ ಹಿಂದಿರುವ ಪ್ರಾಮಾಣಿಕತೆಯನ್ನು ತೋರಿಸಬಲ್ಲದು. ಆದರೆ ಪರೀಕ್ಷೆಯ ಸಮಯ ಸನ್ನಿಹಿತವಾದಾಗ ಕಾಂಗ್ರೆಸಿನವರಲ್ಲಿ ಬಹುಮಂದಿ ಪ್ರತಿಷ್ಠಿತರ ಗುಂಪಿನಲ್ಲಿ ಇರುತ್ತಾರೆಯೇ ಹೊರತು ಜನಸಾಮಾನ್ಯರ ಗುಂಪಿನಲ್ಲಿ ಅಲ್ಲ ಎಂಬುದರಲ್ಲಿ ಸಂದೇಹವಿಲ್ಲ. ಜನಸಾಮಾನ್ಯರ ಬಗ್ಗೆ ಕಾಂಗ್ರೆಸ್ ಭಾವನೆಗಳು ಉಗುರು ಬೆಚ್ಚಗೆ ಮತ್ತು ಅಸಡ್ಡೆಯಿಂದ ಇರಲೇಬೇಕೆಂಬುದು ಅನಿವಾರ್ಯ. ಕಾರಣವಿಷ್ಟೇ. ಅದು ಒಂದು ರಾಷ್ಟ್ರೀಯ ಚಳುವಳಿಯನ್ನು ಪ್ರತಿನಿಧಿಸುತ್ತದೆಯೇ ಹೊರತು ಒಂದು ರಾಜಕೀಯ ಪಕ್ಷವನ್ನಲ್ಲ. ಹೀಗಾಗಿ ಅದರ ಕಾರ್ಯಕ್ರಮ ಮತ್ತು ಕಾರ್ಯನೀತಿ ಒಂದು ಕಿಚಡಿಯಾಗಿರಲೇ ಬೇಕು. ನಿಕಾಯವೊಂದು (ಸಂಸ್ಥೆ) ಸಣ್ಣಪುಟ್ಟದೆನ್ನದೆ, ಎಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದ್ದಾಗ, ಅದು ಕೆಲಸವನ್ನು ನಾಮಕಾವಾಸ್ಥೆ (ನಾಮ್‌ಕಾವಾಸ್ಥೇ) ಲೆಕ್ಕಕ್ಕೆ ತೆಗೆದುಕೊಂಡು, ವಿರೋಧ ವ್ಯಕ್ತವಾದಾಗ ಅತ್ಯಂತ ನಿರ್ಮಲವಾದುದನ್ನು ಅದರ ಹಣೆಬರಹಕ್ಕೆ ಬಿಡಬೇಕಾಗುತ್ತದೆ. ಆದುದರಿಂದ ಕಾಂಗ್ರೆಸ್‌ನವರು ನಮ್ಮ ನಿಮಿತ್ತವನ್ನು ಕೈಗೆತ್ತಿಕೊಳ್ಳುತ್ತಾರೆಂದು ನಿರೀಕ್ಷೆ ಮಾಡುವ ಹಾಗಿಲ್ಲ. ಅವರು ನಮ್ಮ ಪರವಾಗಿ ನಿಂತರೆ ನಮ್ಮ ವಿರೋಧಿಗಳನ್ನು ಎದುರು ಹಾಕಿಕೊಳ್ಳುತ್ತಾರೆ. ಹಾಗೇನಾದರೂ ಆದರೆ ಕಾಂಗ್ರೆಸ್‌ಗೆ ಅವರ ಬೆಂಬಲ ನಿಂತುಹೋಗುತ್ತದೆ.

೩೩. ನಮ್ಮಲ್ಲಿ ಕಾಂಗ್ರೆಸ್‌ನ ಸೇವೆ ಮಾಡಬಯಸುವವರು, ಸ್ವರಾಜ್ಯ ಬಂದ ಮೇಲೆ ಅವರ ಸೇವೆಗೆ ತಮ್ಮ ಅಸ್ಪೃಶ್ಯತೆಯನ್ನು ನಿವಾರಿಸುತ್ತಾರೆಂದು ನಂಬಿದ್ದಾರೆ. ಈಗ ನಾವು ಸೇವೆ ಸಲ್ಲಿಸದಿದ್ದರೆ, ನಮ್ಮ ತಪ್ಪಿಗಾಗಿ ನಮ್ಮನ್ನು ಅವಮಾನಗೊಳಿಸುತ್ತಾರೆ. ಪುಗಸಟ್ಟೆಯಾಗಿ ಮಾಡುವ ಸೇವೆಗಳಿಗೆ ಬಹುಮಾನ ಸಿಗುವುದು ಒಂದು ಅಪೂರ್ವ ಎಂದು ನಾನೇನು ಟೀಕೆ ಮಾಡಬೇಕಾಗಿಲ್ಲ. ಆದರೆ ನಾವು ಕಾಂಗ್ರೆಸ್‌ಗೆ ಎಷ್ಟೇ ಸೇವೆ ಮಾಡಿದರೂ ಸಹ ಸ್ವರಾಜ್ಯದ ನಂತರ ಕಾಂಗ್ರೆಸ್ ಎಲ್ಲಿದೆ ಎಂದು ಹುಡುಕುವುದು ವ್ಯರ್ಥ. ಆಗ ನಾವು ನಮ್ಮ ಸಂಪನ್ಮೂಲಗಳ ಮೇಲೇ ಅವಲಂಬಿತರಾಗಬೇಕು. ಕಾರಣ ಕಾಂಗ್ರೆಸ್‌ಗೆ ತನ್ನ ಉದ್ದೇಶ ಸಾಫಲ್ಯ ಮಾಡಿಕೊಂಡ ಮೇಲೆ ಗಾಳಿಯಲ್ಲಿ ಅದೃಶ್ಯವಾಗಿಬಿಟ್ಟಿರುತ್ತದೆ. ಆಗ ನಮಗೆ ಎದುರುಬೀಳುವವರು ಈ ದೇಶದ ಜನಗಳು. ಇವರನ್ನು ಹ್ಯಾಮಿಲ್ಟನ್ ಅವರ ಮಾತಿನಲ್ಲೇ ಹೇಳುವುದಾದರೆ "ಇದು ಒಂದು ಮಹಾಮೃಗ" ಆದೇಶಗಳನ್ನು ಮತ್ತು ಪೂರ್ವಾಗ್ರಹಗಳನ್ನೂ ನಾವು ಎದುರಿಸಬೇಕಾಗುತ್ತದೆ. ನಮ್ಮ ಗೋಳುಗಳನ್ನೆಲ್ಲ ನಿವಾರಿಸುವುದಕ್ಕಾಗಿ ಯಾರಿಗೆ ನಾವು ಅದನ್ನು ಹೇಳಿಕೊಳ್ಳಬೇಕೆಂದು ಸಲಹೆ ಮಾಡಲಾಗಿದೆಯೋ ಆ ಮಹಾತ್ಮಾಗಾಂಧಿ ಅವರ ಜೀವಿತಾವಧಿ ಈ ದೇಶದ ಸಾಧಾರಣ ಮನುಷ್ಯರಿಗೆ ಪ್ರಕೃತಿ ದಯಪಾಲಿಸಿರುವುದಕ್ಕಿಂತ ಬಹಳ ದೀರ್ಘವಾಗಿರುತ್ತದೆ ಎಂದು ಊಹಿಸಿಕೊಂಡರೂ ಸಹ– ಆ ಮೃಗದಿಂದ ನಮ್ಮನ್ನು ರಕ್ಷಿಸಲಾರರು.

೩೪. ನಾನು ತಳೆದಿರುವ ಅಭಿಪ್ರಾಯ ಸರಿಯಾಗಿದ್ದರೆ, ನಮ್ಮ ಮುಂದಿನ ಮಾರ್ಗವನ್ನು ನಮಗೋಸ್ಕರ ನಮಗೆ ನಾವೇ ಕಂಡುಕೊಳ್ಳಬೇಕು. ಇಂಥ ದಾರಿಯನ್ನು ತಿಳಿಯುವುದಕ್ಕೆ ಕೆಲವರಿಗೆ ಇರುವ ಹೆದರಿಕೆ ನನಗೆ ಅರ್ಥವಾಗುತ್ತದೆ. ಸರಕಾರದಿಂದಾಗಲೀ, ಕಾಂಗ್ರೆಸ್‌ನಿಂದಾಗಲೀ ಸ್ವತಂತ್ರವಾಗಿರುವುದರಲ್ಲಿ ಅಪಾಯವಿದೆ ಎಂದು ಅವರಿಗೆ ಅನಿಸುತ್ತಿದೆ. ಇದು ನಮ್ಮ ನಿರ್ಬಲತೆಯನ್ನು ನಾವೇ ಒಪ್ಪಿಕೊಂಡ ಹಾಗೆ ಆಗುತ್ತದೆ. ನಿಮ್ನವರ್ಗಗಳವರಿಗೆ ಸ್ವತಂತ್ರವಾಗಿರುವುದು, ಅದೇ ಸಮಯಕ್ಕೆ ನಮ್ಮನ್ನು ಲೆಕ್ಕಾಚಾರಕ್ಕೆ ತೆಗೆದುಕೊಳ್ಳುವ ಹಾಗೆ ಮಾಡುವ ಯಾವ ಅಧಿಕಾರವೂ ಇಲ್ಲದೇ ಇರುವುದು ಒಂದು ಸಮಾಧಾನ ತರುವ ಸಂಗತಿಯಲ್ಲ. ಆದರೆ ಸರಕಾರದ ಮೇಲಾಗಲೀ ಅಥವಾ ಕಾಂಗ್ರೆಸ್ ಮೇಲಾಗಲೀ ಅವಲಂಬಿತರಾಗಿರುವುದರಲ್ಲಿ ಯಾವುದೇ ಲಾಭವಾಗಲೀ ಉಪಯೋಗವಾಗಲೀ ಇದೆಯೇ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಬಲಶಾಲಿಯಾದ ಒಂದು ರಾಜಕೀಯ ನಿಮ್ಮನ್ನು ನೀವು ಕೇವಲ ಬೇಕಾದವರು ಎನ್ನಿಸಿಕೊಂಡುಬಿಟ್ಟರೆ ಸಾಕೆ? ನಿಮ್ಮನ್ನು ಲೆಕ್ಕಾಚಾರಕ್ಕೆ ತೆಗೆದುಕೊಳ್ಳುತ್ತಾರೆಯೆ, ಇಲ್ಲವೆ ಎಂಬುದನ್ನು ಸಹಾ ಯೋಚಿಸದೆ ಸುಮ್ಮನೆ ಬೇಕಾದವರು ಎಂದು ಮಾತ್ರ ಎನಿಸಿಕೊಂಡು ತೃಪ್ತಿಪಟ್ಟುಕೊಳ್ಳುವುದು. ಭಿಕ್ಷುಕರು/ಭಿಕಾರಿಗಳು ಆಯ್ದುಕೊಳ್ಳುವ ದಾರಿ; ಯಾವುದೇ ಮರ್ಯಾದಸ್ಥ ಜನ ಸಹಿಸಿಕೊಳ್ಳಲಾರದಂಥ ಅವಮಾನಕರವಾದ ಶರಣಾಗುವಿಕೆ ಇದಾಗುತ್ತದೆ. ತಮ್ಮನ್ನು ತಾವು, ಎಲ್ಲರೂ ಲೆಕ್ಕಾಚಾರಕ್ಕೆ ತೆಗೆದುಕೊಳ್ಳುವ ಒಂದು ಶಕ್ತಿಯಾಗಿ ಪರಿವರ್ತಿಸಿಕೊಳ್ಳಬೇಕು ಎಂಬುದು ನಿಮ್ನವರ್ಗಗಳವರ ಮುಂದಿರುವ ಪ್ರಶ್ನೆ. ಹೀಗಾದಲ್ಲಿ ಮಾತ್ರ ಎಲ್ಲಾ ಸಂದರ್ಭಗಳಲ್ಲೂ ನಿಮ್ಮ ಅಭಿಪ್ರಾಯಗಳಿಗೆ ಮತ್ತು ಹಿತಾಸಕ್ತಿಗಳಿಗೆ ಬೆಲೆ ಸಿಗುತ್ತದೆ. ನಿಮ್ಮವರ್ಗದವರ ಚಳಿವಳಿಗೆ ಎರಡು ಗಂಭಿರವಾದ ಕೊರತೆಗಳಿವೆ ಎಂದು ನನಗೆ ತೋರುತ್ತದೆ. ಎಲ್ಲಕ್ಕಿಂತ ಮೊದಲನೆಯದಾಗಿ ನಿಮ್ನವರ್ಗಗಳವರ ಸಾರ್ವಜನಿಕ ಅಭಿಪ್ರಾಯ ಎಂಬುದು ಒಂದಿಲ್ಲ. ಎರಡನೆಯದಾಗಿ ನಿಮ್ನವರ್ಗಗಳವರೆಲ್ಲರೂ ಸಾಮೂಹಿಕವಾಗಿ ವ್ಯವಸ್ಥಿತವಾದ ರೀತಿಯಲ್ಲಿ ಕ್ರಿಯಾಶೀಲರಾಗುವುದಕ್ಕೆ ಆಸ್ಪದವಿಲ್ಲ. ನನಗೆ ತಿಳಿದಮಟ್ಟಿಗೆ ನಮ್ಮ ಕುಂದುಕೊರತೆಗಳಿಗೆ ಯಾವ ಪರಿಹಾರವೂ ಸಿಕ್ಕಿಲ್ಲದೇ ಇರುವುದಕ್ಕೆ ಕಾರಣ ನೀವು ಯುಗಾಂತರಗಳಿಂದ ಮೂಕರಾಗಿಯೇ ಉಳಿದುಕೊಂಡು ಸಾರ್ವಜನಿಕವಾಗಿ ಹೇಳಿಕೊಳ್ಳುವುದಕ್ಕೆ ಗಮನ ಕೊಟ್ಟಿಲ್ಲದಿರುವುದು.

ನಮ್ಮ ಈ ಸ್ಥಿತಿಗೆ ನಾವು ಸರಕಾರವನ್ನಾಗಲೀ ಅಥವಾ ಸುಧಾರಣಕಾರರನ್ನಾಗಲೀ ದೂಷಿಸುವುದು ನ್ಯಾಯವಲ್ಲ. ಈ ಧ್ವನಿಯಿಲ್ಲದ ಸ್ಥಿತಿಯಲ್ಲಿ ಉಳಿದುಕೊಳ್ಳುವುದನ್ನು ನಾವೇ ಆರಿಸಿಕೊಂಡಿದ್ದೇವೆ. ಈ ಪರಿಸ್ಥಿತಿಯಲ್ಲಿ ಅವರ ಮೇಲೆ ಹೊಣೆಗಾರಿಕೆಯನ್ನು ಹೊರಿಸಿ ಏನು ಮಾಡಬೇಕೆಂದು ತಿಳಿಸಿಯೂ ಇಲ್ಲ, ಅಥವಾ ಬಲವಾದ ಒತ್ತಾಸೆಯನ್ನೂ ಕೊಟ್ಟಿಲ್ಲ. ನಾವು ನಮ್ಮ ಸಭೆಗಳಲ್ಲಿ ಅನುಮೋದನೆ ಮಾಡುವ ಠರಾವುಗಳನ್ನು ನಾವು ಒತ್ತಾಯಿಸುವ ನಮ್ಮ ಬೇಡಿಕೆಗಳನ್ನು ಇತರ ಸಮುದಾಯಗಳ ವಿಷಯದಲ್ಲಿ ಆಗುವ ಹಾಗೆ ಅಧಿಕಾರದಲ್ಲಿರುವವರು ಏತಕ್ಕೆ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲವೆಂಬುದನ್ನು ಕುರಿತು ನಾನು ಆತಂಕದಿಂದ ಯೋಚಿಸುತ್ತಿದ್ದೇನೆ. ನಾವು ಪರಿಣಾಮಕಾರಿಯಾಗಿಲ್ಲದೇ ಇರುವುದಕ್ಕೆ ಕಾರಣ ನಾವು ನಮ್ಮ ಕೆಲಸಗಳಲ್ಲಿ ಇನ್ನೂ ಪ್ರಾಂತೀಯ ಮಟ್ಟದಲ್ಲೇ ಇರುವುದರಿಂದ. ಒಂದು ಪ್ರಾಂತ್ಯದಲ್ಲಿ ಮಾಡಿದ ಬೇಡಿಕೆಗೆ ಇತರ ಪ್ರಾಂತ್ಯಗಳಲ್ಲಿ ಬೆಂಬಲವಾಗಲೀ, ಒತ್ತಾಸೆಯಾಗಲೀ ದೊರೆಯುತ್ತಿಲ್ಲ. ಆದರೆ ನಾವು ಒಂದು ಕೇಂದ್ರೀಯ ಸಂಸ್ಥೆಯಾಗಿ ಈ ಬೇಡಿಕೆಗಳನ್ನು ಇಟ್ಟಿದ್ದರೆ, ಅದಕ್ಕೆ ಖಂಡಿತವಾಗಿ ಜನಬೆಂಬಲ ಸಿಗುತ್ತಿತ್ತು. ನಿಮ್ನವರ್ಗಗಳವರು ಒಂದು ಅಖಿಲ ಭಾರತ ಸಂಸ್ಥೆಯಾಗಿ ರೂಪುಗೊಂಡರೆ ಅವರಿಗೆ ತಮ್ಮ ಅಭಿಪ್ರಾಯಗಳನ್ನು ಪರಿಣಾಮಕಾರಿಯಾಗಿ ಧ್ವನಿಸುವುದಕ್ಕೆ ಸಾಧ್ಯವಾಗುವುದಲ್ಲದೆ, ವ್ಯವಸ್ಥಿತ ರೀತಿಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಒಂದು ಸಾಧನ ದೊರಕುತ್ತದೆ ಎಂದು ನನಗೆ ಅನಿಸುತ್ತದೆ. "ಅಖಿಲ ಭಾರತ ನಿಮ್ನವರ್ಗಗಳವರ ಅಸೋಸಿಯೇಷನ್" ಎಂಬ ಹೆಸರಿನ ನಿಕಾಯವೊಂದು ಎರಡು ಮೂರು ವರುಷಗಳಿಂದ ಅಸ್ತಿತ್ವಕ್ಕೆ ಬಂದಿದೆ. ಕೇವಲ ಪದಾಧಿಕಾರಿಗಳು ಮಾತ್ರವಿದ್ದು. ಸದಸ್ಯರುಗಳೇ ಇಲ್ಲದಿರುವುದು ಬಹಿರಂಗ ಸತ್ಯ. ಯಾವುದೇ ಪ್ರಾಂತ್ಯದಲ್ಲಿ ಇದೇ ಪರಿಸ್ಥಿತಿ ಇದೆ. ಇಂಥ ಢೋಂಗಿ ನಾಮಕಾವಸ್ಥೆ ಸಂಸ್ಥೆಗಳಿಂದ ನಿಮ್ನವರ್ಗಗಳವರಿಗೆ ಏನೂ ಪ್ರಯೋಜನವಿಲ್ಲ. ಒಂದು ಸಂಘ ಜೀವಂತ ಸಂಸ್ಥೆಯಾಗಿದ್ದು ನಿಮ್ನವರ್ಗದವರ ನಿಜವಾದ ಭಾವನೆಗೆ ಅಭಿವ್ಯಕ್ತಿ ಕೊಡಬೇಕು. ತನ್ನ ಪದರಗಳಲ್ಲಿ ಸಮುದಾಯದ ನಿಜವಾದ ಕೆಲಸಗಾರರನ್ನು ಒಳಗೊಂಡಿರಬೇಕಾಗಿರುವುದಲ್ಲದೆ ಅದರ ಜಾಲ ಇಡಿಯ ದೇಶದಲ್ಲಿ ಹರಡಿಕೊಂಡಿರಬೇಕು. ಈ ಸಭೆ ನಾನು ಹೇಳಿದ ಇಂಥದೊಂದು ಚಿಕ್ಕದಾದ ಅಂಗರಚನೆಯ ಸಮಿತಿಯನ್ನು ನೇಮಿಸುವ ಪಕ್ಷದಲ್ಲಿ ದೊಡ್ಡ ಉಪಕಾರವಾಗುತ್ತದೆ. ಇದೊಂದು ಮಹಾನ್ ಪರಿಶೀಲನಾ ವಿಷಯವಾಗಿದ್ದು ವಿಳಂಬವಿಲ್ಲದೇ ಮಾಡಲೇಬೇಕು.

## VIII ನಿಮ್ನವರ್ಗಗಳವರ ಉತ್ಥಾನ :

೩೫. ಮಹನೀಯರೆ, ನಾನು ಮಾತನಾಡಬೇಕಾದ್ದಕ್ಕಿಂತ ಹೆಚ್ಚಾಗಿ, ನಾವು ರಾಜಕೀಯ ಅಧಿಕಾರವನ್ನು ಹಿಡಿಯಬೇಕಾದ ಅವಶ್ಯಕತೆಯ ಮೇರೆಗೆ ದೀರ್ಘವಾಗಿ ಮಾತನಾಡಿದ್ದೇನೆ. ಆದರೆ ರಾಜಕೀಯ ಅಧಿಕಾರ ಒಂದೇ ನಿಮ್ನವರ್ಗಗಳವರ ಕಾಯಿಲೆಗೆ ಸರ್ವರೋಗ ನಿವಾರಣಾ ಔಷಧವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳುತ್ತೇನೆ. ನಿಮ್ನವರ್ಗಗಳವರನ್ನು ಅವರ ಕೆಟ್ಟ ಅಭ್ಯಾಸಗಳಿಂದ ಬಿಡಿಸಿ ಶುಚಿ ಮಾಡಬೇಕು. ಅವರನ್ನು ಅವರು ಜೀವಿಸುತ್ತಿರುವ ಕೆಟ್ಟ ಹಾದಿಯಿಂದ ಸುಧಾರಿಸಬೇಕು. ಅವರ ಜೀವನ ಶೈಲಿಯಿಂದ ಬದಲಾವಣೆ ಮಾಡುವುದರಿಂದ ಅವರನ್ನು ಗೌರವ ಪಡೆದುಕೊಳ್ಳುವುದಕ್ಕೆ ಮತ್ತು ಸ್ನೇಹ ಮಾಡುವುದಕ್ಕೆ ಯೋಗ್ಯರನ್ನಾಗಿ ಮಾಡಬೇಕು. ಬರಿದೇ 'ಓದು', 'ಗಣಿತ', 'ಬರವಣಿಗೆ'ಗಳಿಂದ ತಲುಪಬೇಕಾದ ಉತ್ತುಂಗಕ್ಕೆ ತಲುಪುವುದಕ್ಕೆ ಏನೇನೂ ಸಾಕಾಗುವುದಿಲ್ಲ. ಹೀಗೆ ಉತ್ತುಂಗಕ್ಕೆ ತಲುಪಿದರೆ ಮಾತ್ರ ಅವರು ಮತ್ತು ಅವರ ಸಮುದಾಯ ಸಾರ್ವಜನಿಕ ಅಂದಾಜು ದೃಷ್ಟಿಯಲ್ಲಿ ಮೇಲೆ ಬರಲು ಸಾಧ್ಯ. ಅವರು ಕರುಣಾಜನಕ ಸಂತೃಪ್ತ ಮನೋಭಾವದಿಂದ ಅವರನ್ನು ಕದಲಿಸಬೇಕಾದ ಗುರುತರವಾದ ಅವಶ್ಯಕತೆ

ಇದ್ದು, ಆತ್ಮೋನ್ನತಿಯ ಚಿಲುಮೆಯಾದ ದೈವೀ ಅತೃಪ್ತಿಯ ಬೀಜವನ್ನು ಅವರೊಳಗೆ ಬಿತ್ತಬೇಕು. ಕಡೆಯದಾಗಿ ಹೇಳಿದರೂ ಪ್ರಾಮುಖ್ಯತೆಯಲ್ಲಿ ಕಡಿಮೆಯಾದದ್ದಲ್ಲವೇನೂ ಅಲ್ಲದ, ನಿಮ್ನವರ್ಗದವರನ್ನು ಹುರಿದುಂಬಿಸಿ ಅವರಲ್ಲಿ ಶಕ್ತಿ ತುಂಬುವ ಕೆಲಸವನ್ನು ಮಾಡುವ ಅವಶ್ಯಕತೆ ಇದ್ದು, ಅವರು ತಮ್ಮೆಲ್ಲ ಹೆದರಿಕೆಗಳನ್ನು ಬದಿಗಿಟ್ಟು ತಮ್ಮ ಮಾನವೀಯತೆಯ ಹಕ್ಕುಗಳನ್ನು ಇತರರೊಂದಿಗೆ ಚಲಾಯಿಸುವಂತಾಗಬೇಕು. ನಮ್ಮ ಕೈಗಳಿಗೆ ರಾಜಕೀಯ ಅಧಿಕಾರ ಸಿಕ್ಕಿದರೂ ಈ ಫಲಿತಾಂಶಗಳು ಅದರ ಹಿಂದೆ ಬರುವುದಿಲ್ಲ. ಅದು ಗುರಿಯಲ್ಲ ಆದರೆ ಗುರಿ ಮುಟ್ಟುವ ಸಾಧನವೆಂದು ನಾವು ಅರಿತುಕೊಳ್ಳಬೇಕು. ನಾನು ಈ ಎಚ್ಚರಿಕೆಯನ್ನು ಕೊಡುತ್ತಿರುವುದಕ್ಕೆ ಕಾರಣವಿದೆ. ನಿಮ್ನವರ್ಗಗಳಿಗೆ ಸೇರಿದ ನಮ್ಮಲ್ಲಿ ಕೆಲವರು ಶಾಸನ ಸಭೆಗಳಿಗೆ ಆಯ್ಕೆಯಾದ ಕಾರಣಕ್ಕೆ ಮಾತ್ರ ನಿಮ್ನವರ್ಗದವರಾಗಿ ಉಳಿಯುವುದಿಲ್ಲವೆಂದು ತಿಳಿಯುವುದು ಗಂಭೀರವಾದ ತಪ್ಪು ಆಗುತ್ತದೆ. ಇದೆಲ್ಲವೂ ಸಾಮಾಜಿಕ ಉತ್ಥಾನದಲ್ಲಿ ಆಗುವಂತಾದ್ದು. ಇದನ್ನು ಗೋಖಲೆಯವರ 'ಸರ್ವೆಂಟ್ಸ್ ಆಫ್ ಇಂಡಿಯಾ', ಸೊಸೈಟಿ ಅಥವಾ ಲಾಲಾ ಲಕಪತರಾಯ್ ಅವರ 'ಸೊಸೈಟಿ ಆಫ್ ದಿ ಪೀಪಲ್' ಅನ್ನು ಮಾದರಿಯಾಗಿಟ್ಟುಕೊಂಡು ನಿಮ್ನವರ್ಗಗಳ ಸಂಸ್ಥೆಗಳು ಕೈಗೆತ್ತಿಕೊಳ್ಳಬೇಕು.

೩೬. ಮಹನೀಯರೆ, ನನ್ನ ಅತಿ ದೀರ್ಘ ಭಾಷಣದಿಂದ ನಿಮ್ಮನ್ನೆಲ್ಲ ಚಿಂತೆಗೀಡು ಮಾಡಿದ್ದಕ್ಕೆ ವಿಷಾದಿಸುತ್ತೇನೆ. ಸಂಕ್ಷಿಪ್ತತೆ ಯಾವಾಗಲೂ ನಮ್ಮ ಗುರಿಯಾಗಬೇಕಿದ್ದಾಗ್ಯೂ ಸಹ ರಾಜಕೀಯದ ಅರಿವಿಲ್ಲದ ಜನರು ಮೊದಲಬಾರಿಗೆ ಸೇರಿ ಗಂಭೀರವಾದ ವಿಷಯಗಳನ್ನು ತೀರ್ಮಾನಿಸುವ ಇಂತಹ ಕೆಲ ಸಂದರ್ಭಗಳಲ್ಲಿ ಈ ಪ್ರಶ್ನೆಯ ಎಲ್ಲ ಮಗ್ಗಲನ್ನು ಅವರ ಮುಂದೆ ಬಿಚ್ಚಿಡುವುದು ಅಪೇಕ್ಷಣೀಯವೆಂದು ನನಗೆ ಅನಿಸಿತು. ಈ ನನ್ನ ಭಾಷಣ ದೀರ್ಘವಾದುದಕ್ಕೆ ಕೊಡುವ ಸಮಜಾಯಿಷಿ ಎಂದರೆ ನನಗೆ ಸಾಧ್ಯವಿದ್ದಷ್ಟು ಸಂಪೂರ್ಣ ಮಾರ್ಗದರ್ಶಿ ಸೂತ್ರಗಳನ್ನು ನಿಮಗೆ ಕೊಡಬೇಕೆಂಬ ನನ್ನ ಇಚ್ಛೆ. ಈ ನಮ್ಮ ಸಭೆ, ಇದೇ ಕೊನೆಯದಾಗುವುದಿಲ್ಲವೆಂದು ಆಶಿಸುತ್ತಾ ಇಂತಹದೊಂದು ಮಹಾ ಚಳುವಳಿಯ ದ್ಯೋತಕವಾಗಿ ನಮ್ಮ ಜನಗಳು ಸಂಕೋಲೆಗಳಿಂದ ಬಿಡುಗಡೆಗೊಂಡು ನಮ್ಮ ಈ ನಾಡಿನಲ್ಲಿ ಎಲ್ಲ ಜನಗಳಿಗೂ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜೀವನ ಎಲ್ಲಾ ಭಾಗಗಳಲ್ಲೂ ಎಲ್ಲರಿಗೂ ಒಂದೇ ಮೌಲ್ಯ ಸಿಗುತ್ತದೆಂದು ನಂಬಿರುತ್ತೇನೆ. ನನಗೆ ನೀವು ಸಲ್ಲಿಸಿರುವ ಗೌರವಕ್ಕಾಗಿ ಮತ್ತು ನನ್ನ ಭಾಷಣ ಕೇಳಿರುವುದಕ್ಕಾಗಿ ನಿಮ್ಮೆಲ್ಲರನ್ನೂ ಪುನಃ ವಂದಿಸುತ್ತೇನೆ.

## ೬

# ಸಂವಿಧಾನದತ್ತ ರಕ್ಷಣೆಗಳನ್ನು ಮತ್ತು ಖಾತರಿಗಳನ್ನು ನಿಮ್ಮದಾಗಿಸಿಕೊಳ್ಳುವ ಬಗ್ಗೆ

ಬಹಳ ಹೆಚ್ಚು ಸಂಖ್ಯೆಯಲ್ಲಿ ನೆರೆದಿದ್ದ ಗುಜರಾತಿಗಳು ಮತ್ತು ಮರಾಠರು ಇದ್ದ 'ಬಾಂಬೆ ಡಿಪ್ರೆಸ್ಡ್ ಕ್ಲಾಸಸ್'ನ (ಬೊಂಬಾಯಿ ನಿಮ್ನವರ್ಗಗಳ) ಸದಸ್ಯರುಗಳ ಸಭೆಯೊಂದು ವಾರಾಂತ್ಯದಲ್ಲಿ ಪುರಸಭೆಯಲ್ಲಿ ನಡೆಯಿತು. ಡಾ॥ವಿ,ಜಿ.ಸೋಲಂಕಿ ಅಧ್ಯಕ್ಷತೆ ವಹಿಸಿದ್ದರು. ನಾಗ್‌ಪುರದಲ್ಲಿ ಇತ್ತೀಚೆಗೆ ನಡೆದ ನಿಮ್ನವರ್ಗಗಳ ಕಾಂಗ್ರೆಸ್‌ನಲ್ಲಿ ರೂಪಿಸಲಾದ ಬೇಡಿಕೆಗಳನ್ನು ಕುರಿತು ವಿವರಣೆ ಕೊಡಲು ಸಭೆ ಕರೆಯಲಾಗಿತ್ತು. ನಿಮ್ನವರ್ಗಗಳ ಕಾಂಗ್ರೆಸ್ ಅಧ್ಯಕ್ಷರಾದ ಡಾ॥ ಬಿ.ಆರ್.ಅಂಬೇಡ್ಕರ್ ಮುಖ್ಯ ಭಾಷಣಕಾರರಾಗಿದ್ದರು. ನಿಮ್ನವರ್ಗಗಳವರಿಗೆ ಸಂವಿಧಾನಾತ್ಮಕ ರಕ್ಷಣೋಪಾಯಗಳು ಮತ್ತು ಖಾತರಿಗಳನ್ನು ದೊರಕಿಸಿಕೊಡಬೇಕಾದ ಅವಶ್ಯಕತೆ ಇರುವ ಬಗ್ಗೆ ಡಾ॥ ಅಂಬೇಡ್ಕರ್ ವಿಶದೀಕರಿಸಿದರು. ನಾಗರಿಕ ಅಸಹಕಾರ ಚಳುವಳಿಯಿಂದ ದೂರವಿರಬೇಕೆಂದು ಅವರು ಸಭೆಯನ್ನು ಒತ್ತಾಯಪೂರ್ವಕವಾಗಿ ಮನವಿ ಮಾಡಿದರು.

## ೭

# ಹೆಚ್ಚು ಹೆಚ್ಚಾಗಿ ಚಳುವಳಿ ಮಾಡಿ, ಈಗಿನದ್ದಕ್ಕಿಂತ ಉತ್ತಮವಾಗಿ ವ್ಯವಸ್ಥೆ ಮಾಡಿ

ನಿಮ್ನವರ್ಗಗಳವರ ಸಂತ ಸಮಾಜ ಸಂಘ ಎಂಬ ಒಂದು ಅಧ್ಯಾತ್ಮಿಕ ಸಂಸ್ಥೆಯ ೩೬ನೆಯ ವಾರ್ಷಿಕೋತ್ಸವವನ್ನು ಪೂನಾದಲ್ಲಿ ೨೭ನೆ ಸೆಪ್ಟೆಂಬರ್ ೧೯೩೦ನೆಯ ಗುರುವಾರ ನೆರವಾರಿಸಲಾಯಿತು. ಆ ದಿವಸ ಬೇರೊಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಡಾ॥ ಅಂಬೇಡ್ಕರವರ ಅನುಪಸ್ಥಿತಿಯಲ್ಲಿ ಶಿವಾಜಿ ಮರಾಠ ಶಾಲೆಯ ಪ್ರಾಂಶುಪಾಲರಾದ ಮಿ:ಬಿ.ಜಿ.ಜಗತಾಪ್ ಅವರು ಅಧ್ಯಕ್ಷತೆ ವಹಿಸಿದ್ದರು. ನಿಮ್ನವರ್ಗಗಳ ಮಿಷನ್ ಸೊಸೈಟಿ ಪೂನ, ಇದರ ಕಾರ್ಯದರ್ಶಿ ಮಿ: ಕೆ.ಜಿ.ಪಟಾಡೆ ಅವರು ಸಂಘದ ಸಂಕ್ಷಿಪ್ತ ಚರಿತ್ರೆ ತಿಳಿಸುತ್ತಾ ನಿಮ್ನವರ್ಗಗಳ ಸಾಮಾಜಿಕ ಸಮಾನತೆಯ ಸಿದ್ಧಾಂತವನ್ನು ಪಸರಿಸುವುದು ಅದರ ವಿಶೇಷ ಲಕ್ಷಣವಾಗಿದೆ ಎಂದು ಸಮತ ಸಮಾಜ ಸಂಘ ಜನಸಮೂಹವನ್ನು ಮತ್ತು ನಿಮ್ನವರ್ಗದವರನ್ನು ಒಟ್ಟುಗೂಡಿಸುವ ಶಕ್ತಿಯಾಗಿದೆಯೆಂದು ಹೇಳಿದರು. ಡಾ॥ಅಂಬೇಡ್ಕರ್ ಮತ್ತು ಸುಬೇದಾರ್ ಘಟಗೆ ಅವರು ಮಾಡಿರುವ ಕೆಲಸಗಳಿಗೆ ಅವರಿಗೆ ಉಜ್ವಲವಾದ ಶ್ಲಾಘನೆಗಳನ್ನು ಸಲ್ಲಿಸಿದರು. ಬೊಂಬಾಯಿ ಶಾಸಕಾಂಗ ಪರಿಷತ್ತಿಗೆ ಸುಬೇದಾರ ಘಟಗೆ ಅವರನ್ನು ನಿಮ್ನವರ್ಗಗಳ ಪರವಾಗಿ ನಾಮನಿರ್ದೇಶನ ಮಾಡಿರುವುದು ಆ ವರ್ಗಗಳ ಒಳ್ಳೆಯದಕ್ಕೆ ಎಂದು ಹೇಳಿದರು.

ಇಷ್ಟುಹೊತ್ತಿಗೆ ಅಲ್ಲಿಗೆ ಆಗಮಿಸಿದ ಡಾ॥ಅಂಬೇಡ್ಕರ್ ಅಧ್ಯಕ್ಷ ಪೀಠವನ್ನು ಅಲಂಕರಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಲು ಎದ್ದಾಗ, ಸಭಿಕರೆಲ್ಲ ಎದ್ದು ನಿಂತು ಕರತಾಡನ ಮಾಡಿದರು. ತಮ್ಮ ಭಾಷಣದಲ್ಲಿ ತಮ್ಮ ವೈಯಕ್ತಿಕ ಕಾರ್ಯಚಟುವಟಿಕೆಗಳು ನಿಮ್ನವರ್ಗಗಳ ಕುಂದುಕೊರತೆಗಳನ್ನು ಪರಿಹರಿಸಲು ಸಾಕಾಗುತ್ತಿಲ್ಲವೆಂದೂ ನಿಮ್ನವರ್ಗಗಳವರು ಈಗ ಇರುವುದಕ್ಕಿಂತ ಇನ್ನೂ ಹೆಚ್ಚಾಗಿ ಚಳುವಳಿ ಮಾಡಬೇಕೆಂದೂ ಅವರು ಹೇಳಿದರು. ಡಾ॥ಅಂಬೇಡ್ಕರ್ ತಾವು ದುಂಡು ಮೇಜಿನ ಸಮ್ಮೇಳನದಲ್ಲಿ ನಿಮ್ನವರ್ಗಗಳವರ ಕೊರತೆಗಳನ್ನು ಬ್ರಿಟೀಷರಿಗೆ ಮನವರಿಕೆ ಮಾಡಿಕೊಡುವುದಕ್ಕೆ ತಮ್ಮ ಕೈಲಾಗುವುದೆಲ್ಲವನ್ನೂ ಮಾಡುವುದಾಗಿ ಒತ್ತಿ ಹೇಳಿದರು. ಅವರಿಗೆ (ನಿಮ್ನವರ್ಗಗಳವರಿಗೆ) ಎಷ್ಟು ಸಾಧ್ಯವೋ ಅಷ್ಟು ಹಕ್ಕುಗಳು ದೊರೆಯುವ ಹಾಗೆ ಮಾಡಲು ಶ್ರಮಿಸುವುದಾಗಿ ಹೇಳಿದರು.

# ೮

# ಇಲ್ಲದೇ ಹೋದರೆ ಮುಂದುವರೆದ ಹಿಂದೂ ಜಾತಿಗಳವರು ಅಧಿಕಾರದಲ್ಲಿ ಉಳಿದುಕೊಂಡು ಅಲ್ಪಸಂಖ್ಯಾತರುಗಳನ್ನು ಆಳುತ್ತಾರೆ

೨ನೆ ಅಕ್ಟೋಬರ್ ೧೯೩೦ನೆ ಇಸವಿ ಗುರುವಾರ ಪರೇಲ್‌ನಲ್ಲಿರುವ ದಾಮೋದರ್ ಥ್ಯಾಕರ್ಸೆ ಸಭಾಂಗಣದ ಹೊರಗಡೆಯ ಮೈದಾನದಲ್ಲಿ ಬೊಂಬಾಯಿ ನಿಮ್ನವರ್ಗಗಳ ಸುಮಾರು ಹತ್ತು ಸಾವಿರ ಪುರುಷರು ಮತ್ತು ಮಹಿಳೆಯರು ಸೇರಿದ್ದರು. ದುಂಡು ಮೇಜಿನ ಸಮ್ಮೇಳನದಲ್ಲಿ ನಿಮ್ನವರ್ಗಗಳ ಪ್ರತಿನಿಧಿಯಾಗಿ ಭಾಗವಹಿಸಲು ಇಂಗ್ಲೆಂಡಿಗೆ ತೆರಳುತ್ತಿದ್ದ ಡಾ॥ಬಿ.ಆರ್.ಅಂಬೇಡ್ಕರ್ ಅವರನ್ನು ಬೀಳ್ಕೊಡುವ ಉದ್ದೇಶದಿಂದ ಅವರು ಅಲ್ಲಿ ಸೇರಿದ್ದರು. ಸಭೆಯ ಅಧ್ಯಕ್ಷತೆಯನ್ನು ಡಾ॥ಪಿ.ಜಿ.ಸೋಲಂಕಿ ಅವರು ವಹಿಸಿದ್ದು ಸಭೆ ಬಹಳ ಉತ್ಸಾಹಭರಿತವಾಗಿತ್ತು. ಮೊದಲಿಗೆ ಅಧ್ಯಕ್ಷರು ಡಾ॥ಅಂಬೇಡ್ಕರ್ ಅವರು ಅನೇಕ ರೀತಿಯಲ್ಲಿ ಸಲ್ಲಿಸಿದ ಸೇವೆ ಸ್ಮರಿಸಿಕೊಳ್ಳುತ್ತಾ ದುಂಡು ಮೇಜಿನ ಸಮ್ಮೇಳನದಲ್ಲಿ ನಿಮ್ನವರ್ಗಗಳನ್ನು ಪ್ರತಿನಿಧಿಸಲು ಯಾರಾದರೂ ಇದ್ದರೆ, ಅವರಲ್ಲಿ ಅತ್ಯುತ್ತಮ ವ್ಯಕ್ತಿ ಎಂದರೆ ಡಾ॥ಅಂಬೇಡ್ಕರ್ ಎಂದು ಹೇಳಿದರು. ಅವರಿಗೆ ಸುಖಪ್ರಯಾಣ ಮತ್ತು ಉದ್ದೇಶಿತ ಧ್ಯೇಯದಲ್ಲಿ ಜಯ ದೊರಕಲಿ ಎಂದು ಶುಭ ಹಾರೈಸಿದರು.

ಆನಂತರ ಡಾ॥ಅಂಬೇಡ್ಕರ್ ಅವರಿಗೆ ಶುಭಾಶಯ ಕೋರುವ ಜನಗಳ ಭಿನ್ನವತ್ತಳೆಯನ್ನು ಶ್ರೀ ಶಿವಶಂಕರ್ ಅವರು ಓದಿದರು.

ಡಾ॥ ಅಂಬೇಡ್ಕರ್ ಸಭೆಯನ್ನು ಉದ್ದೇಶಿಸಿ ದೀರ್ಘ ಭಾಷಣವನ್ನು ಮಾಡಿದರು. ನಿಮ್ನವರ್ಗಗಳವರು ಅವರ ರಾಜಕೀಯ ಮತ್ತು ಸಾಮಾಜಿಕ ಕ್ಷೇಮಾಭಿವೃದ್ಧಿಯಲ್ಲಿ ಆಸಕ್ತಿ ಕಳೆದುಕೊಳ್ಳದ ಹಾಗೆ ಪ್ರಚಾರವನ್ನು ಮುಂದುವರೆಸಿಕೊಂಡು ಹೋಗುವ ಅವಶ್ಯಕತೆ ಕುರಿತು ಮಾತನಾಡಿದರು. ನಿಮ್ನವರ್ಗಗಳ ತಮ್ಮ ಹಳೆಯ ಪತ್ರಿಕೆಯನ್ನು "ಜನತಾ" ಎಂದು ಹೊಸದಾಗಿ ನಾಮಕರಣ ಮಾಡಿ ಪುನರುಜ್ಜೀವನಗೊಳಿಸಲು ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ತಮ್ಮ ಇಂಗ್ಲೆಂಡ್ ಪ್ರವಾಸದ ಬಗ್ಗೆ ಪ್ರಸ್ತಾಪಿಸುತ್ತಾ ಕಾಂಗ್ರೆಸಿಗರು ದುಂಡು ಮೇಜಿನ ಸಮ್ಮೇಳನಕ್ಕೆ ಹೋಗುವುದರಿಂದ ಏನೂ ಪ್ರಯೋಜನ ಇಲ್ಲವೆಂದು ಹೇಳುತ್ತಿದ್ದಾರೆ. ಅವರೇನೇ ಹೇಳಲಿ, ಸಮ್ಮೇಳನದಿಂದ ಏನಾದರೊಂದು ಒಳ್ಳೆಯದಾಗುವುದು ಖಂಡಿತವೆಂದು, ಅದರಿಂದ ನಿಮ್ನವರ್ಗಗಳವರಿಗೆ ಪ್ರಯೋಜನವಾಗುತ್ತದೆಂದು ಹೇಳಿದರು. ಬೊಂಬಾಯಿನಲ್ಲಿ ಕಾಂಗ್ರೆಸಿನವರು ಅಳವಡಿಸಿಕೊಳ್ಳುತ್ತಿದ್ದ ವಿಧಾನಗಳೊಡನೆ ತಾವು ಸಹಭಾಗಿಯಾಗಲು ಆಗುತ್ತಿಲ್ಲವೆಂದೂ ಕಾರಣವೆಂದರೆ ಅದರಿಂದ ಸಾವಿರಾರು ಬಡಕಾರ್ಮಿಕರಿಗೆ ಉದ್ಯೋಗವಿಲ್ಲದಂತಾಗಿದೆಯೆಂದು ಹೇಳಿದರು.

ಆದರೆ ಕಾಂಗ್ರೆಸಿಗರಿಗೆ ಸ್ವರಾಜ್ಯ ಮತ್ತು ಸ್ವಯಮಾಡಳಿತ ಎಷ್ಟರ ಮಟ್ಟಿಗೆ ಬೇಕೋ ನಿಮ್ನವರ್ಗಗಳವರಿಗೆ ಸಹಾ ಅಷ್ಟೇಬೇಕಾಗಿದೆ ಎಂದು ತಿಳಿಸಿದರು. ಆದರೆ ಅವರು ಹೇಳುವುದೇನೆಂದರೆ ಅವರಿಗೂ ಮತ್ತು ದೇಶದಲ್ಲಿನ ಇತರ ಅಲ್ಪಸಂಖ್ಯಾತರಿಗೂ ಸಂವಿಧಾನದಲ್ಲಿ ನ್ಯಾಯಯುತವಾದ ಪಾಲು ಸಿಗಲೇಬೇಕು ಎಂಬುದು. ಕಾಂಗೆಸಿಗರು ಇಷ್ಟಪಟ್ಟಂತೆ ಬ್ರಿಟೀಷರೇನಾದರೂ ಹೊಸ ಸಂವಿಧಾನದನ್ವಯ ಸುಮ್ಮನೆ ಹೊರಟುಹೋದರೆ ಫಲಿತಾಂಶ ಏನಾಗುತ್ತದೆಂದರೆ ಮುಂದುವರೆದ ಹಿಂದೂ ವರ್ಗಗಳು ಅಧಿಕಾರದಲ್ಲಿ

ಉಳಿದುಕೊಂಡು ಅಲ್ಪಸಂಖ್ಯಾತರನ್ನು ಆಳುತ್ತಾರೆ. ನಿಮ್ನವರ್ಗಗಳವರೂ ಆಕ್ಷೇಪಿಸುತ್ತಿರುವುದು ಇದನ್ನೇ. ದುಂಡು ಮೇಜಿನ ನಿಲುವಿನಿಂದಾಗಿ ವಿಫಲವಾದರೆ ಕಾಂಗ್ರೆಸ್ ಮತ್ತು ಮುಂದುವರೆದ ವರ್ಗಗಳವರೇ ಹೊಣೆಗಾರರಾಗುತ್ತಾರೆ. ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸುವ ಹಿಂದೂ ನಿಯೋಗದ ಪ್ರತಿನಿಧಿಗಳು ಸಮ್ಮೇಳನ ಜಯಪ್ರದವಾಗಬೇಕೆಂದು ಬಯಸಿದರೆ ಅವರು ಅಲ್ಪಸಂಖ್ಯಾತರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಮುಂದುವರೆದು, ಡಾ॥ಅಂಬೇಡ್ಕರ್ ತಾವು ಇಂಗ್ಲೆಂಡಿನಲ್ಲಿ ತಮ್ಮ ವಾಸ್ತವ್ಯ ಮುಂದುವರೆಸಿ, ತಮ್ಮ ದೃಷ್ಟಿಯಲ್ಲಿರುವ ಇನ್ನೊಂದು ಉದ್ದೇಶ ಸಾಧಿಸುವುದಕ್ಕೆ ಪ್ರಯತ್ನ ಪಡುತ್ತೇನೆ ಎಂದು ಹೇಳಿದರು. ನಿಮ್ನವರ್ಗಗಳವರ ಎರಡು ಮುಖ್ಯ ಅಳಲೆಂದರೆ, ಅವರು ಪೊಲೀಸ್ ದಳದಲ್ಲಿ ಮತ್ತು ಮಿಲಿಟರಿಯಲ್ಲಿ ಭರ್ತಿಯಾಗಲು ಇರುವ ನಿಷೇಧ. ಇದನ್ನು ವಾರ್‌ಆಫೀಸ್ ಮತ್ತು ಬ್ರಿಟೀಷ್ ಮಂತ್ರಿಮಂಡಲದ ಗಮನಕ್ಕೆ ತಂದು ನಿಷೇಧವನ್ನು ಹಿಂತೆಗೆದುಕೊಳ್ಳುವಂತೆ ಮಾಡುವುದೇ ಅವರ ಉದ್ದೇಶವಾಗಿತ್ತು. ಇದಲ್ಲದೆ ನಿಮ್ನವರ್ಗಗಳ ಪರವಾಗಿ ಪ್ರಚಾರ ಮಾಡುವುದಕ್ಕೆ ರಷ್ಯಾ, ಜರ್ಮನಿ, ಅಮೆರಿಕಾ ಮತ್ತು ಜಪಾನ್‌ಗಳಿಗೆ ಭೇಟಿ ಕೊಡುವುದೂ ಸಹ ಅವರ ಉದ್ದೇಶವಾಗಿತ್ತು. ಈ ದೇಶಗಳಲ್ಲಿ ಕಾಂಗ್ರೆಸಿಗರು ಬ್ರಿಟೀಷರ ವಿರುದ್ಧ ಪ್ರಚಾರ ಮಾಡುತ್ತಿದ್ದುದು ಅವರ ಗಮನಕ್ಕೆ ಬಂದಿದ್ದು, ನಿಮ್ನವರ್ಗಗಳವರು ಜೀವಿಸುತ್ತಿದ್ದ ಸ್ಥಿತಿಗತಿಗಳನ್ನು ಅವರ ಗಮನಕ್ಕೆ ತಂದು ಅವರ ಅನುಕಂಪವನ್ನು ಪಡೆದುಕೊಳ್ಳುವುದು ಖಂಡಿತ ನ್ಯಾಯಯುತವಾದದ್ದೆಂದು ಅವರು ಯೋಚಿಸಿದ್ದರು. ಶ್ರೀ ಕೆಲೂಸ್ಕರ್ ಮತ್ತು ಶ್ರೀ ನಾಯಿಕ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು (ಟೈಂಸ್ ಆಫ್ ಇಂಡಿಯಾ, ೩ನೆ ಅಕ್ಟೋಬರ್ ೧೯೩೦)

ಕೀರ್ ಅವರು ದಾಖಲಿಸಿಕೊಂಡಂತೆ ಡಾ॥ಅಂಬೇಡ್ಕರ್ ಭಾಷಣಕ್ಕೆ ಇನ್ನೂ ಹೆಚ್ಚಿನ ಆಯಾಮಗಳಿದ್ದವು. ಅವು ಕೆಳಕಂಡಂತೆ ಇದ್ದವು. ಸಂಪಾದಕರು ಭಾಷಣಕ್ಕೆ ಉತ್ತರಿಸುತ್ತಾ, ಡಾ। ಬಿ.ಆರ್.ಅಂಬೇಡ್ಕರ್ ಅವರು ತಾವು ಸಾಧಿಸಿದ್ದು ಬಹಳ ಅಲ್ಪವೆಂದು ಅದನ್ನು ಬಹುಮಂದಿ ಕೆಲಸಗಾರರು ಮತ್ತು ಸಹೋದ್ಯೋಗಿಗಳ ಸಹಕಾರದಿಂದ ಮಾಡಲಾಯಿತು ಎಂದು ತಿಳಿಸಿದರು. ವಿಧಾನ ಪರಿಷತ್ತಿನಲ್ಲಿನ ಡಾ॥ ಸೋಲಂಕಿ ಅವರು ಮಾಡಿರುವ ಪ್ರಾಮಾಣಿಕ ಸಹಾಯ ಮತ್ತು ಕೆಲಸವನ್ನು ಪ್ರಶಂಸಿಸಿದರು. ದೇವರಾಜ ನಾಯಕ್ ಅವರು ತಮ್ಮ ಬಲಗೈನಂತಿದ್ದಾರೆಂದು ತಮ್ಮ ಗೈರುಹಾಜರಿಯಲ್ಲಿ ಚಳುವಳಿಯನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುವಂತೆ ಮಾರ್ಗದರ್ಶನ ಮಾಡುತ್ತಾರೆಂದು ಹೇಳಿದರು. ಚಳುವಳಿಯ ಮೇಲೆ ಬಹಳ ಹಣ ವೆಚ್ಚ ಮಾಡಿದ ಶಂಕರರಾವ್ ಎಸ್.ಪಾಶ್ ಅವರನ್ನು ವಂದಿಸಿದರು. ದುಂಡು ಮೇಜಿನ ಸಮ್ಮೇಳನದ ಮಟ್ಟಿಗೆ ಹೇಳುವುದಾದರೆ ಅದು ಖಂಡಿತವಾಗಿಯೂ ನಿಮ್ನವರ್ಗಗಳವರಿಗೆ ಅನುಕೂಲಕರವಾಗಿ ಪರಿಣಮಿಸುತ್ತದೆಂದೂ ಡಾ॥ ಅಂಬೇಡ್ಕರ್ ವಿಶ್ವಾಸ ವ್ಯಕ್ತಪಡಿಸಿದರು. ಮುಂದುವರೆಯುತ್ತ ಡಾ॥ಅಂಬೇಡ್ಕರ್ ನನ್ನ ಮಟ್ಟಿಗೆ ಹೇಳುವುದಾದರೆ ಜನಗಳಿಗೆ ಯಾವುದು ಸರಿಯೆಂದು ತೋರುತ್ತದೋ ಅದನ್ನು ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ಅಲ್ಲದೆ ಸ್ವರಾಜ್ಯ ಬೇಡಿಕೆಯನ್ನು ಖಂಡಿತವಾಗಿ ಎತ್ತಿ ಹಿಡಿಯುತ್ತೇನೆ ಎಂದು ಹೇಳಿದರು. ಕಡೆಯದಾಗಿ ಸಾಧ್ಯವಾದರೆ ನಿಮ್ನವರ್ಗಗಳವರ ಸಮಸ್ಯೆಯನ್ನು "ಲೀಗ್ ಆಫ್ ನೇಷನ್ಸ್" ಮುಂದೆಯೂ ಇಡುತ್ತೇನೆ ಎಂದು ಭರವಸೆ ನೀಡಿದರು. ತಮ್ಮ ಬಂಟರುಗಳಿಗೆ ಮತ್ತು ತಮ್ಮ ಜನಗಳಿಗೆ ಎಚ್ಚರಿಕೆಯನ್ನು ಕೊಡುತ್ತಾ ಅಂತಃಕಲಹಗಳಿಂದ ದೂರವಿರುವಂತೆ ಹೇಳಿದರು. ಇಲ್ಲದಿದ್ದರೆ ಮುಖಂಡತ್ವಕ್ಕಾಗಿ ದುರಾಸೆ ಪಟ್ಟರೆ ಅದು ಅವರ ಬಲವನ್ನು ಕುಂದಿಸುವುದಲ್ಲದೆ ಅವರ ಸ್ಥಾನವನ್ನೂ ಹಾಳು ಮಾಡಿ ಅವರ ಗುರಿಯನ್ನು ತಪ್ಪಿಸುತ್ತದೆ ಎಂದು ಹೇಳಿದರು.

## ೯

# ಹೋರಾಟದಿಂದ ನಿಮಗೆ ಅಧಿಕಾರ ಮತ್ತು ಗೌರವ ಸಿಗುತ್ತದೆ

ದುಂಡು ಮೇಜಿನ ಸಮ್ಮೇಳನದಲ್ಲಿ ಅಸ್ಪೃಶ್ಯ ವರ್ಗದವರ ಪ್ರತಿನಿಧಿಯಾಗಿ ಡಾ॥ ಅಂಬೇಡ್ಕರ್ ಅವರು ಹಾಜರಾಗಬೇಕಿತ್ತು. ಅವರು ೧೫.೦೮.೧೯೩೧ರಂದು ಲಂಡನ್ನಿಗೆ ಪ್ರಯಾಣ ಬೆಳೆಸಬೇಕಾಗಿತ್ತು. ಆ ಸಂದರ್ಭದ ಹಿಂದಿನ ದಿನ ಒಂದು ಬೀಳ್ಕೊಡುಗೆ ಸಮಾರಂಭವನ್ನು ೧೪.೦೮.೧೯೩೧ರಂದು ಸರ್ ಕವಾಸ್ಜಿ ಜಹಾಂಗೀರ್ ಸಭಾಭವನದಲ್ಲಿ ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಡಾ॥ ಅಂಬೇಡ್ಕರ್ ಎರಡು ಬೇರೆ ಬೇರೆ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು.

– ಒಂದು ರಾತ್ರಿ ೮ ಗಂಟೆಗೆ ಮಹಿಳೆಯರದ್ದು ಮತ್ತು ಇನ್ನೊಂದು ರಾತ್ರಿ ೧೦ ಗಂಟೆಗೆ ಪುರುಷರದ್ದು.

ಡಾ॥ ಅಂಬೇಡ್ಕರ್ ಅವರು ಮಹಿಳೆಯರನ್ನು ಉದ್ದೇಶಿಸಿ ಭಾವೋದ್ರೇಕಗೊಳಿಸುವ ಭಾಷಣ ಮಾಡಿದರು. ನೀವು ನಿಮ್ಮ ಗುಲಾಮಗಿರಿಯನ್ನು ಬೇರುಸಹಿತ ಕಿತ್ತುಹಾಕಲು ಮಾಡಿರುವ ಧೃಢ ನಿರ್ಧಾರದಿಂದ ಏನೇ ಕಷ್ಟಕಾರ್ಪಣ್ಯ ಸಹಿಸಬೇಕಾದರೂ ಸಹಾ ಹಿಂಜರಿಯದಿದ್ದರೆ, ನಾನು ನಿಭಾಯಿಸಬೇಕಾದ ಗುರುತರ ಕೆಲಸದಲ್ಲಿ ಸಾಧಿಸುವ ಜಯ ಮತ್ತು ಹೆಚ್ಚುಗಾರಿಕೆ ನಿಮ್ಮದಾಗುತ್ತದೆ.

ಆ ಕೂಡಲೇ ಅವರು ಅದೇ ಸಭಾಂಗಣದಲ್ಲಿ ನಿಮ್ನವರ್ಗದ ಪುರುಷರು ಹಾಜರಿದ್ದ ಇನ್ನೊಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಭಾವೋದ್ವೇಗದ ಭಾಷಣದಲ್ಲಿ ಅವರ ಜನಗಳ ಅಪಾರವಾದ ಪ್ರೀತಿ ಅವರಿಗೆ ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದರು. ದುಂಡು ಮೇಜಿನ ಸಮ್ಮೇಳನವನ್ನು ಕುರಿತು ಅವರು ಹೇಳಿದ್ದೇನೆಂದರೆ, ೧೨೫ ಸದಸ್ಯರಿದ್ದ ಸಮ್ಮೇಳನದಲ್ಲಿ ನಾವು ಇಬ್ಬರು ಮಾತ್ರ ಇದ್ದೆವು. ಆದರೆ ನಿಮ್ಮ ಕಲ್ಯಾಣಕ್ಕೋಸ್ಕರ ನಾವು ಭೂಮಿ ಆಕಾಶಗಳನ್ನು ತಳ್ಳಲು ಸಿದ್ಧರಿದ್ದೇವೆ. ಈ ದಿನ ಮಧ್ಯಾಹ್ನ ನಾನು ಗಾಂಧಿಯ ಸಂಗಡ ಮಾತನಾಡಿದೆ. ಪ್ರಸ್ತುತದಲ್ಲಿ ನಿಮ್ಮ ಹಿತಾಸಕ್ತಿಗಳ ಬಗ್ಗೆ ಏನನ್ನೂ ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ನಮ್ಮ ಹಕ್ಕುಗಳಿಗಾಗಿ ನಮ್ಮ ಕಾಲ ಮೇಲೆ ನಿಂತುಕೊಂಡು ನಾವು ಹೋರಾಡಬೇಕು. ಆದ್ದರಿಂದ ನಿಮ್ಮ ಚಳುವಳಿಯನ್ನು ಮುಂದುವರಿಸಿ, ನಿಮ್ಮ ಬಲಗಳನ್ನು ರೂಢಿಸಿಕೊಳ್ಳಿ. ಅಧಿಕಾರ ಮತ್ತು ಗೌರವ ನಿಮ್ಮ ಹೋರಾಟದಿಂದ ನಿಮಗೆ ಬರುತ್ತದೆ.

# ೧೦
# ಮುಂದಿನ ತಲೆಮಾರಿನ ಹಿಂದೂಗಳು ನನ್ನ ಸೇವೆಯನ್ನು ಮೆಚ್ಚಿಕೊಳ್ಳುತ್ತಾರೆ

ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿ ಹಿಂದಿರುಗಿದ ನಂತರ ಆ ಸಂಜೆ ಬಲ್ಲಾರ್ಡ್ ಬಂದರು ಕಟ್ಟೆಯಲ್ಲಿ ಕೆಳಕಂಡ ಏರ್ಪಾಡುಗಳನ್ನು ಸರ್ಕಾರದ ವತಿಯಿಂದ ಮಾಡಲಾಗಿತ್ತು.

"ಮೌಲಾನ ಶೌಕತ್ ಆಲಿ ಮತ್ತು ಡಾ.ಅಂಬೇಡ್ಕರ್ ಅವರುಗಳು ದಿ:೨೯.೦೧.೧೯೩೨ರಂದು ಎಸ್.ಎಸ್.ಮುಲ್ತಾನ್ ಹಡಗಿನಲ್ಲಿ ಆಗಮಿಸುತ್ತಾರೆ. ಸೂಪರಿಟೆಂಡೆಂಟ್ ಹೆಚ್ ಮತ್ತು ಐ ವಿಭಾಗ.

ಬೊಂಬಾಯಿ ಪೋರ್ಟ್ ಟ್ರಸ್ಟ್ ಕಾರ್ಯದರ್ಶಿಯವರು ನಿಮ್ನವರ್ಗಗಳವರ ಇನ್‌ಸ್ಟಿಟ್ಯೂಟ್‌ನ ಕಾರ್ಯದರ್ಶಿಯವರಿಗೆ ಬರೆದಿರುವ ಕಾಗದದ ನಕಲೊಂದನ್ನು ನಿಮ್ಮ ಮಾಹಿತಿಗಾಗಿ ಇದರೊಂದಿಗೆ ಕಳುಹಿಸಲಾಗಿದೆ. ಇದರಿಂದ ಯಾವ ರಿಯಾಯಿತಿಗಳನ್ನು ನಿಮ್ನವರ್ಗಗಳವರಿಗೆ ಮತ್ತು ಖಿಲಾಫತ್ ಕಮಿಟಿಗೆ ಶೌಕತ್ ಆಲಿ ಮತ್ತು ಡಾ.ಅಂಬೇಡ್ಕರ್ ಅವರುಗಳು ಬಲ್ಲಾರ್ಡ್ ಬಂದರು ಕಟ್ಟೆಗೆ ಆಗಮಿಸುತ್ತಿರುವ ಸಂಬಂಧದಲ್ಲಿ ಕೊಡಲಾಗಿದೆ ಎಂದು ನಿಮಗೆ ಗೊತ್ತಾಗುತ್ತದೆ.

೨.ಈ ಕುರಿತು ಡಾಕ್ ಮ್ಯಾನೇಜರ್ ಅವರ ಕಚೇರಿಯ ಇದೇ ತಿಂಗಳ ೨೭ನೆ ತಾರೀಖಿನ ಟಿಪ್ಪಣಿಗೆ ನಿಮ್ಮ ಗಮನವನ್ನು ಸೆಳೆಯಲಾಗಿದೆ. ಅದರ ನಕಲೊಂದನ್ನು ನಿಮಗೆ ನೇರವಾಗಿ ಕಳುಹಿಸಲಾಗಿದೆ. ನೀವು ಅದರಂತೆ ಏರ್ಪಾಡುಗಳನ್ನು ಮಾಡಬೇಕು. ಗ್ರೀನ್‌ಗೇಟ್(ಹಸಿರು ಬಾಗಿಲು)ಅನ್ನು ಬೆಳಗಿನ ೫ ಘಂಟೆಗೆ ತೆರೆಯಲಾಗುವುದೆಂದು ನಿಮ್ನವರ್ಗಗಳವರ ಕಾರ್ಯದರ್ಶಿ ಮತ್ತು ಖಿಲಾಫತ್ ಕಮಿಟಿಯ ಕಾರ್ಯದರ್ಶಿ ಇವರುಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಗಾಂಧಿಯವರು ಆಗಮಿಸಿದಾಗ ಮಾಡಿದ ಏರ್ಪಾಡುಗಳನ್ನು ಈಗಲೂ ಮಾಡಬೇಕು. ನಿಮ್ನವರ್ಗಗಳವರ ಸ್ವಯಂಸೇವಕರುಗಳಿಗೆ ಸಭಾ ಭವನದ ಪ್ರವೇಶ ದ್ವಾರದಿಂದ 'ಗ್ರೀನ್‌ಗೇಟ್'ವರೆಗಿನ ಮಾರ್ಗದುದ್ದಕ್ಕೂ ಸಾಲಾಗಿ ನಿಲ್ಲಲು ಅನುಮತಿ ಕೊಡಬೇಕು. ಅವಶ್ಯಕತೆ ಬಿದ್ದರೆ, ವಾಹನ ಸಂಚಾರಕ್ಕೆ ಅಡ್ಡಿಯಾಗದ ಹಾಗೆ ಸ್ವಯಂಸೇವಕರುಗಳನ್ನು ಸೂಕ್ತ ಸ್ಥಳದಲ್ಲಿ ನಿಲ್ಲುವ ಹಾಗೆ ಸೂಪರಿಟೆಂಡೆಂಟ್ ಅವರು ಏರ್ಪಾಡು ಮಾಡಬೇಕು. ದೋಣಿಯನ್ನು ಕಟ್ಟುವವರೆಗೂ, ಗ್ಯಾಂಗ್‌ವೇ ಅನ್ನು ಕೆಳಗೆ ಬಿಡುವವರೆಗೂ ಯಾರನ್ನೂ ಬಂದರು ಕಟ್ಟೆಯ ಮೇಲೆ ಬಿಡಬಾರದು. ಕಸ್ಟಮ್ಸ್ ಹಾಲಿಗೆ ಯಾರನ್ನೂ ಬಿಡಬಾರದು.

೩.ಈ ಹಡಗಿನಲ್ಲಿ ಬರುತ್ತಿರುವ ದುಂಡು ಮೇಜಿನ ಸಮ್ಮೇಳನದ ವಿವಿಧ ಸಮಿತಿಗಳ ಸದಸ್ಯರುಗಳ ವಿರುದ್ಧ ವಿರೋಧಿ ಕಾಂಗ್ರೆಸ್‌ನವರು ಪ್ರತಿಭಟನಾ ಪ್ರದರ್ಶನವನ್ನು ಮಾಡುವ ಸಾಧ್ಯತೆ ಇದೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ಸೂಕ್ತವಾದ ಏರ್ಪಾಡುಗಳನ್ನು 'A' ವಿಭಾಗದ ಸೂಪರಿಂಟೆಂಡೆಂಟ್ ಅವರು ಮಾಡಬೇಕು. ಯಾವುದೇ ಸಂದರ್ಭದಲ್ಲಿ ವಿರೋಧಿ ಪ್ರತಿಭಟನಾಕಾರರನ್ನು ಬಲ್ಲಾರ್ಡ್ ಬಂದರು ಕಟ್ಟೆಯ ಆವರಣದೊಳಗೆ ಬಿಡಬಾರದು. ವಾಹನ ಸಂಚಾರದ ನಿಯಂತ್ರಣವನ್ನು ಮಾಡುವುದಕ್ಕೆ 'T' ವಿಭಾಗದಿಂದ ಮೂವರು ಅಧಿಕಾರಿಗಳನ್ನು ಕಳುಹಿಸಿಕೊಡಲಾಗುತ್ತಿದೆ. ಮೋಟಾರು ಕಾರುಗಳನ್ನು ಎಂದಿನಂತೆ ನಿಲುಗಡೆ ಮಾಡಬೇಕು.

೪.ವಿರೋಧಿ ಪ್ರದರ್ಶನಕಾರರು 'ರೆಡ್ ಗೇಟ್' (ಕೆಂಪು ಬಾಗಿಲು) ಮೂಲಕ ಪ್ರವೇಶ

ಮಾಡಬಹುದಾದ ಸಂಭವವನ್ನು ತಳ್ಳಿ ಹಾಕಲಾಗುವುದಿಲ್ಲ.

೬. ಸಭಾಂಗಣದೊಳಗೆ ಪ್ರವೇಶ ಮಾಡುವುದಕ್ಕೋಸ್ಕರ ಇರುವ 'ಪಾಸ್'ನ ನಕಲೊಂದನ್ನು ಇದರೊಂದಿಗೆ ಕಳುಹಿಸಿಕೊಡಲಾಗಿದೆ.

೭. ಮೌಲಾನ ಶೌಕತ್ ಆಲಿ ಮತ್ತು ಡಾ.ಅಂಬೇಡ್ಕರ್ ಅವರುಗಳು ಬೆಳಗಿನ ೭–೧೫ ರಿಂದ ೭–೩೦ರ ಒಳಗೆ ಹಡಗಿನಿಂದ ಇಳಿಯಲು ಏರ್ಪಾಡು ಮಾಡಲಾಗಿದೆ. ಎರಡೂ ಅಸೋಸಿಯೇಷನ್‌ಗಳ ಕಾರ್ಯದರ್ಶಿಗಳವರಿಗೆ ಬಲ್ಲಾರ್ಡ್ ಬಂದರು ಕಟ್ಟೆಯನ್ನು ಬೆಳಗಿನ ೮.೩೦ರ ಹೊತ್ತಿಗೆ ಖಾಲಿ ಮಾಡಬೇಕೆಂದು ತಿಳಿಸಲಾಗಿದೆ. ಮತಾಧಿಕಾರ ಸಮಿತಿಯ ಸದಸ್ಯರು ಬಲ್ಲಾರ್ಡ್ ಬಂದರು ಕಟ್ಟೆಯಿಂದ ಕಾರುಗಳ ಮೂಲಕ ಬೆಳಗ್ಗೆ ೮.೩೦ ರಿಂದ ೯.೦೦ ಗಂಟೆಯೊಳಗೆ ಗೌರ್ನಮೆಂಟ್ ಹೌಸ್‌ಗೆ ಹೊರಡುತ್ತಾರೆ. ಗೌರ್ನಮೆಂಟ್ ಹೌಸ್ ಕಾರುಗಳು ಬಲ್ಲಾರ್ಡ್ ಬಂದರು ಕಟ್ಟೆಗೆ ಸುಮಾರು ೮.೩೦ಕ್ಕೆ ಬರುತ್ತದೆ. ಅವು ರೆಡ್‌ಗೇಟ್ ಮೂಲಕ ಬಂದರನ್ನು ಪ್ರವೇಶ ಮಾಡುತ್ತವೆ.

೮. ಎಸ್.ಎಸ್.ಮುಲ್ತಾನ್ ಹಡಗು ಬಲ್ಲಾರ್ಡ್ ಬಂದರು ಕಟ್ಟೆಗೆ ಬಹುಶಃ ಬೆಳಗಿನ ೪ ಗಂಟೆಗೆ ಬರಬಹುದು. ಅಂಚೆ ಹೊತ್ತ ಹಡಗು ಸಮಯಕ್ಕೆ ಮುಂಚೆ ಬರುವುದಾದರೆ, ಅಂಚೆ ವ್ಯಾನುಗಳನ್ನು, ಕೂಲಿಗಳನ್ನು, ಅಂಚೆ ಕಚೇರಿ ಕೆಲಸದವರನ್ನು ಒಳಗೆ ಬಿಡಲು ಹಸಿರು ಗೇಟ್‌ಅನ್ನು ತೆರೆಯಲಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಹೀಗೆ ಮಾಡಲಾಗುವುದಿಲ್ಲ. ಅಂಚೆ ಕಚೇರಿ ಕೆಲಸದವರು ಮತ್ತಿತರರು ಬಲ್ಲಾರ್ಡ್ ಬಂದರು ಕಟ್ಟೆಯನ್ನು ರೆಡ್‌ಗೇಟ್ ಮೂಲಕ ಪ್ರವೇಶಿಸುತ್ತಾರೆ. ಬಹುಶಃ ಇದರಿಂದಾಗಿ ಹಸಿರುಗೇಟ್ ತೆರೆಯುವವರಿಗೆ ಬಲ್ಲಾರ್ಡ್ ಬಂದರು ಕಟ್ಟೆ ಮತ್ತು ರೆಡ್‌ಗೇಟ್‌ನಲ್ಲಿ ಹೆಚ್ಚು ಕೆಲಸ ಬೀಳಬಹುದು.

ನಕಲು ಸಹಿ/–
ಶಾಖೆ: ಎಸ್.ಬಿ. ಡೆಪ್ಯೂಟಿ ಕಮೀಷನರ್ ಆಫ್ ಪೊಲೀಸ್, ಬಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ಲಂಡನ್ನಿಗೆ ೪ನೇ ಜನವರಿ ೧೯೩೨ ಭಾನುವಾರ ಹಿಂದಿರುಗಿದರು. ೧೫ನೆ ಜನವರಿ ೧೯೩೨ಕ್ಕೆ ಲಂಡನ್ ಅನ್ನು ಬಿಟ್ಟು ಮಾರ್ಸೆಲ್ಸ್‌ನಲ್ಲಿ ಹಡಗನ್ನು ಹತ್ತಿ ೨೯.೦೧.೧೯೩೨ಕ್ಕೆ ಬೊಂಬಾಯಿ ತಲುಪಿದರು. ಅವರ ಜೊತೆಯಲ್ಲಿ ಹಡಗಿನಲ್ಲಿ ಇದ್ದವರೆಂದರೆ ಬ್ರಿಟೀಷ್ ಮತಾಧಿಕಾರ ಸದಸ್ಯರುಗಳು. ಅವರನ್ನು ಬ್ರಿಟೀಷ್ ಪ್ರಧಾನ ಮಂತ್ರಿಗಳು ನೇಮಕ ಮಾಡಿದ್ದರು. ಹಾಗೆ ನೇಮಕ ಮಾಡಲ್ಪಟ್ಟವರಲ್ಲಿ ಅಂಬೇಡ್ಕರ್ ಅವರು ಸಹ ಒಬ್ಬ ಸದಸ್ಯರು. ಡಾ.ಅಂಬೇಡ್ಕರ್ ಅವರು ಕೊಂಡುಕೊಂಡಿದ್ದ ವಸ್ತುಗಳು ಎಂದಿನಂತೆ ಅವರೊಂದಿಗಿದ್ದವು. ಅವುಗಳು ೨೪ ಪೆಟ್ಟಿಗೆಗಳಲ್ಲಿ ತುಂಬಿದ್ದ ಪುಸ್ತಕಗಳಾಗಿದ್ದವು.

ಡಾ. ಬಿ.ಆರ್. ಅಂಬೇಡ್ಕರ್ ಅವರು ೬ಗಂಟೆಗೆ ಹಡಗಿನಿಂದ ಇಳಿಯಬೇಕಾಗಿತ್ತು. ಬೆಳ್ಳಂಬೆಳಗಿನಿಂದ ಅವರ ಅನುಯಾಯಿಗಳು ಮತ್ತು ಅವರ ಅಭಿಮಾನಿಗಳ ದೊಡ್ಡ ಗುಂಪೇ ಬರುವಿಕೆಗಾಗಿ ಕಾಯುತ್ತಿತ್ತು. ಬಂದಿದ್ದ ನಿಮ್ನವರ್ಗಗಳ ಕೆಲವು ಮುಂದಾಳುಗಳ ಪೈಕಿ ಪಿ.ಬಾಲು ಮತ್ತು ಕಚೋಲ್ಕರ್ ಅವರುಗಳು ಇದ್ದರು. ಇವರಿಬ್ಬರೂ ರಾಜಕೀಯವಾಗಿ ಗಾಂಧಿಯವರ ಕಡೆ ವಾಲಿದವರಾಗಿದ್ದರೂ, ಅಲ್ಲಿಗೆ ಬಂದಿದ್ದು, ಅವರನ್ನು ಹಡಗಿನ ಡೆಕ್ ಮೇಲೆ ಸ್ವಾಗತಿಸಿ ಹಾರ ಹಾಕಿದರು.

ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಅವರ ಸಹಪ್ರಯಾಣಿಕ ಮೌಲಾನ ಶೌಕತ್ ಆಲಿಯವರು ಮೋಲೆ ನಿಲ್ದಾಣದಲ್ಲಿ ಇಳಿದರು. ಆ ಮುಸಲ್ಮಾನರ ನಾಯಕನನ್ನು ಮತ್ತು ಡಾ.ಬಿ.ಆರ್.ಅಂಬೇಡ್ಕರ್

ಅವರನ್ನು ಹರ್ಷ ಧ್ವನಿಯಿಂದ ಸ್ವಾಗತಿಸಲಾಯಿತು. ಮುಸಲ್ಮಾನರ ಒಂದು ದೊಡ್ಡ ಗುಂಪನ್ನು ಉದ್ದೇಶಿಸಿ ಮಾತನಾಡುತ್ತ ಅವರು 'ಪ್ರತಿಯೊಬ್ಬನಿಗೆ ಅವರ ಧ್ಯೇಯದಲ್ಲಿ ಇಂಗಿಹೋಗದ ನಂಬಿಕೆ ಇರಬೇಕು' ಎಂದು ಹೇಳಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಅವರ ಧ್ಯೇಯ ಸಾಧನೆಗಾಗಿ ಹೊಡೆದಾಡುವಲ್ಲಿ ಅವರು ತೋರಿಸಿದ ಧೈರ್ಯಕ್ಕಾಗಿ ಬಹಳವಾಗಿ ಮೆಚ್ಚುಗೆ ವ್ಯಕ್ತಪಡಿಸಿದರು. ಶೌಕತ್ ಆಲಿ ಖಾನ್ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಒಂದು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು. ಮೆರವಣಿಗೆ ಬೈಕುಲ್ಲಾದಲ್ಲಿ ಕೊನೆಗೊಂಡಿತು.

ನಿಮ್ನವರ್ಗಗಳವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಬಲ, ಆಶಾಭಾವನೆ ಮತ್ತು ಮಹತ್ವಾಕಾಂಕ್ಷೆ – ಇವುಗಳ ದ್ಯೋತಕವಾದರು. ಅವರನ್ನು ಯಾರೂ ತುಳಿಯಲಾರರು ಎಂದು ಈಗ ಸಾದೃಶವಾಯಿತು. ಅವರು ಅಸ್ಪೃಶ್ಯರನ್ನು ಬಹಳ ಸಾಮರ್ಥ್ಯದಿಂದ ಒಂದು ಯುಗಾಂತ್ಯದವರೆಗೆ ಕೊಂಡೊಯ್ದಿದ್ದರು. ನಿಮ್ನವರ್ಗಗಳವರ ಸತ್ತುಹೋಗಿದ್ದ ಜೀವಕೋಶಗಳು ಈಗ ಹೊಸ ಚೇತನದಿಂದ ತುಂಬಿಕೊಂಡಿದ್ದವು. ಕಷ್ಟಗಳಿರಲಿ, ಅಪಾಯಗಳಿರಲಿ ಶಕ್ತಿ, ದೃಷ್ಟಿ ಮತ್ತು ಜಾಗೃತಿ ಅವರಲ್ಲಿ ನಂದಿಹೋಗದೇ ಇರುತ್ತಿದ್ದವು.

ಅದೇ ದಿನ ಸಾಯಂಕಾಲ ಬೊಂಬಾಯಿನ ಪರೇಲ್‌ನಲ್ಲಿ ನಡೆದ ಒಂದು ಸಮೂಹ ಸಭೆಯಲ್ಲಿ ೧೧೪ ಸಂಸ್ಥೆಗಳ ಪರವಾಗಿ ಅವರಿಗೆ ಭಿನ್ನವತ್ತಳೆಯೊಂದನ್ನು ಅರ್ಪಿಸಲಾಯಿತು.

ಡಾ. ಬಿ.ಆರ್.ಅಂಬೇಡ್ಕರ್, ಎಂ.ಎ., ಪಿ.ಹೆಚ್.ಡಿ., ಡಿ.ಎಸ್‌ಸಿ, ಬಾರ್–ಅಟ್–ಲಾ, ವಿಧಾನ ಪರಿಷತ್ ಸದಸ್ಯರು, ನಿಯೋಗಿ, ಭಾರತ ದುಂಡು ಮೇಜಿನ ಸಮ್ಮೇಳನ, ಇವರಿಗೆ ಅರ್ಪಿಸಿದ ಭಿನ್ನವತ್ತಳೆ :–

ಸ್ವಾಮಿ,

ಕೆಳಗೆ ಹೆಸರಿಸಲಾದ ಸಂಸ್ಥೆಗಳಾದ ನಾವುಗಳು,

ಎರಡನೆ ದುಂಡು ಮೇಜಿನ ಸಮ್ಮೇಳನದಲ್ಲಿ ನಮ್ಮ ನ್ಯಾಯಯುತವಾದ ಹಕ್ಕುಗಳಿಗೆ ಮತ್ತು ಸ್ಥಾನಮಾನಕ್ಕೆ ಮಾನ್ಯತೆ ದೊರಕಿಸಿಕೊಡಲು ನೀವು ಕಷ್ಟಸಾಧ್ಯವಾದ, ಗುರುತರವಾದ ಹೋರಾಟವನ್ನು ಮಾಡಿ ಸ್ವದೇಶಕ್ಕೆ ಹಿಂದಿರುಗಿದ, ನಮ್ಮಗಳಿಂದ ಅಂಗೀಕರಿಸಲ್ಪಟ್ಟ ನಾಯಕರಾದ ನಿಮಗೆ ಭಾರತದ ನಿಮ್ನವರ್ಗಗಳವರ ಪರವಾಗಿ ಹೃದಯಪೂರ್ವಕವಾದ ಸ್ವಾಗತವನ್ನು ಕೋರುವುದು ನಮಗೆ ಸಂದ ಗೌರವ ಮತ್ತು ವಿಶೇಷ ಸವಲತ್ತು ಎಂದು ಭಾವಿಸುತ್ತೇವೆ. ನಮ್ಮ ಬೇಡಿಕೆಯಾದ ಸಮಾನ ಸ್ಥಾನಮಾನ, ನಡವಳಿಕೆ / ವರ್ತನೆಯಲ್ಲಿ ಸಮಾನತೆ ಇವುಗಳಿಗೆ ಮಾನ್ಯತೆ ದೊರಕಬೇಕೆಂದು ಸಂಪೂರ್ಣವಾಗಿ ಸಾಧಿಸಿ ತೋರಿಸಿದ್ದೀರಿ. ನೀವು ನಮ್ಮ ಪರವಾಗಿ ಧೈರ್ಯದಿಂದ ಹೋರಾಡದೆ ಇದ್ದಿದ್ದರೆ ನಮ್ಮ ಬೇಡಿಕೆಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿತ್ತು ಎಂದು ನಮಗೆ ಅನಿಸುತ್ತದೆ. ನಮ್ಮ ಹಕ್ಕುಗಳನ್ನು ಕಾಪಾಡುವುದಕ್ಕೆ ಮನುಷ್ಯ ಪ್ರಯತ್ನದಿಂದ ಸಾಧ್ಯವಾಗುವುದನ್ನೆಲ್ಲಾ ಮಾಡಿದ್ದೀರ. ಲಂಡನ್ನಿನಲ್ಲಿ ನಿಮ್ಮ ಪರಿಶ್ರಮದಿಂದ ಅನತಿ ಭವಿಷ್ಯದಲ್ಲಿ ಭಾರತದ ಇತರ ಎಲ್ಲಾ ಮುಖ್ಯ ಸಮುದಾಯಗಳೊಂದಿಗೆ ಸರಿಸಮಾನರಾಗಿ ನಾವು ನಿಲ್ಲುತ್ತೇವೆ.

ದುಂಡು ಮೇಜಿನ ಸಮ್ಮೇಳನದಲ್ಲಿ ನಮ್ಮನ್ನು ಪ್ರತಿನಿಧಿಸುವುದಕ್ಕಾಗಿ ನಿಮ್ಮನ್ನು ಆಯ್ಕೆ ಮಾಡುವಲ್ಲಿ ಸರ್ಕಾರಕ್ಕೆ ನಿಮಗಿಂತ ಉತ್ತಮರಾದವರು ಇನ್ನು ಯಾರೂ ಕಾಣಬರಲಿಲ್ಲ ಎಂಬುದನ್ನು ಇಲ್ಲಿ ಈ ಸಂದರ್ಭದಲ್ಲಿ ದಾಖಲಿಸಲು ಬಯಸುತ್ತೇನೆ. ನೀವು ಮತ್ತು ನಿಮ್ಮ ಸಂಗಡ ರಾವ್ ಬಹದ್ದೂರ್ ಶ್ರೀನಿವಾಸನ್ ಮಾಡಿದ ಕೆಲಸ ನಮ್ಮ ಧ್ಯೇಯ ಸಾಧನೆಗೆ ಬಹಳ ಅಮೂಲ್ಯವಾಗಿದ್ದು, ನಿಮ್ಮ ಪ್ರಭಾವೀ ಭಾಷಣದಿಂದ ಪ್ರಪಂಚಕ್ಕೆ ನಿಮ್ನವರ್ಗಗಳು ಅಗಾಧವಾದ ಅಲ್ಪಸಂಖ್ಯಾತರು ಎಂದು ನೀವು ತೋರಿಸಿಕೊಟ್ಟಿದ್ದು, ಅವರಿಗೆ

(ನಿಮ್ನವರ್ಗದವರಿಗೆ) ಪ್ರತ್ಯೇಕವಾದ ಪ್ರಾತಿನಿಧ್ಯವಿಲ್ಲದೇ ಹೋದರೆ, ಅವರ ಹಿತಾಸಕ್ತಿಗಳು ಎಂದೆಂದಿಗೂ ಕ್ಷೇಮವಾಗಿರುವುದಿಲ್ಲವೆಂದು ತೋರಿಸಿಕೊಟ್ಟಿದ್ದೀರಿ. ನಮ್ಮ ಬಗ್ಗೆ ಅನುಕಂಪವಿದೆ ಎಂದು ಹೇಳಿಕೊಳ್ಳುವ, ನೇತಾರರು ಎಂದು ಕರೆಸಿಕೊಳ್ಳುತ್ತಿರುವ ಕಾಂಗ್ರೆಸ್‌ನ ಅನೇಕರು ಜಾರಿಕೊಳ್ಳುವ ಜಾಣರೆಂದು ನಿಸ್ಸಂಶಯವಾಗಿ ತೋರಿಸಿಕೊಟ್ಟಿದ್ದೀರಿ. ಈ ಸಾಧನೆಯ ಗೌರವ ನಿಮಗೇ ಸಲ್ಲುತ್ತದೆ. ಇಷ್ಟರಲ್ಲೇ ಕೆಲಸ ಪ್ರಾರಂಭಿಸಲಿರುವ ಮತಾಧಿಕಾರ ಸಮಿತಿಯಲ್ಲಿ ನಿಮ್ಮದೇ ಆದ ಶೈಲಿಯಲ್ಲಿ ನಮ್ಮ ಧ್ಯೇಯವನ್ನು ಬೆಂಬಲಿಸುತ್ತಾ, ದುಂಡು ಮೇಜಿನ ಸಮ್ಮೇಳನದಲ್ಲಿ ನೀವು ಮಾಡಿದ ಕೆಲಸವನ್ನು ಬಲಪಡಿಸುವ ಹೊಣೆ ನಿಮ್ಮದಾಗಿದೆ. ನಿಮ್ಮ ಭಾತೃಗಳಿಗೆ ಸಮಾನ ಸ್ಥಾನಮಾನ ಮತ್ತು ಸಮಾನ ವರ್ತನೆಗಿಂತ ಕಡಿಮೆಯಾದುದಕ್ಕೆ ನೀವು ಒಪ್ಪಿಕೊಳ್ಳಬಾರದೆಂದು ನಾವು ನಿಮಗೆ ಒತ್ತಾಯಿಸುವುದು ಇಲ್ಲಿ ಸಂದರ್ಭೋಚಿತವಾಗುತ್ತದೆ. ಈ ಉದ್ದೇಶಗಳನ್ನು ಸಾಫಲ್ಯಗೊಳಿಸುವುದರಲ್ಲಿ ಮತಾಧಿಕಾರ ಸಮಿತಿಯಲ್ಲಿ ಹಾಗೂ ದೇಶದ ಸಂವಿಧಾನ ರಚನೆಗೆ ಸಂಬಂದಪಟ್ಟ ಎಲ್ಲಾ ಕೆಲಸದಲ್ಲಿ ನೀವು ನಿಮ್ಮ ಕೈಲಾದದ್ದನ್ನೆಲ್ಲಾ ಮಾಡುತ್ತೀರೆಂದು ನಮಗೆ ಭರವಸೆ ಇದೆ. ಸಾವಿರಾರು ವರ್ಷಗಳಿಂದ ಎಲ್ಲರಿಂದಲೂ ತುಳಿಯಲ್ಪಟ್ಟ ನಿರಂಕುಶತ್ವದಿಂದ ನರಳಿಸಲ್ಪಟ್ಟ, ಶೋಷಣೆಗೆ ಒಳಪಟ್ಟ ನಾವು ಸಾರ್ವಜನಿಕ ಜೀವನದ ಬಾನಂಚಿನಲ್ಲಿ ನಿಮ್ಮ ಆಗಮನದ ಪ್ರಾರಂಭದ ಈ ದಿನವನ್ನು ನಾವು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು. ಮಹಾಡ್, ನಾಸಿಕ್ ಮತ್ತು ಇತರ ಕಡೆಗಳಲ್ಲಿ ನೀವು ನಮ್ಮಲ್ಲಿ ಹೊಸ ಜೀವನ ಮತ್ತು ಹೊಸ ಚೇತನವನ್ನು ತುಂಬುವಂತೆ ಉತ್ಸಾಹಿತಗೊಳಿಸಿ ನಮಗೆ ನಮ್ಮ ಸಾಧಾರಣವಾದ ಮಾನವ ಹಕ್ಕುಗಳನ್ನು ಪಡೆದುಕೊಳ್ಳಲು ಎಚ್ಚರಿಸಿರುವುದೂ ಅಲ್ಲದೆ, ನಮ್ಮ ಕೀಳರಿಮೆಯನ್ನು ಹೊಡೆದೋಡಿಸುವಂತೆ ಮಾಡಿದ್ದೀರಿ. ಸ್ನೇಹಿತರೇ ಇಲ್ಲದ ಈ ನಮ್ಮ ಸಮುದಾಯಕ್ಕೆ ನೀವು ಮಾಡುತ್ತಿರುವ ಅಗಾಧವಾದ ತ್ಯಾಗ ನಮಗೆ ಗೊತ್ತಿದೆ. ನಮ್ಮ ಸಮುದಾಯದ ಪ್ರಸ್ತುತ ಹೊಣೆಗಾರಿಕೆಯ ಅರಿವು ಮತ್ತು ಮುನ್ನೋಟ ಈಗ ದೇಶದಲ್ಲೆಲ್ಲಾ ತನ್ನ ಹಕ್ಕುಗಳನ್ನು ಸಾಧಿಸುವುದಕ್ಕೆ ಹೊರಟಿರುವುದು ನಿಮ್ಮ ಪರಿಶ್ರಮ ಮತ್ತು ಮಾರ್ಗದರ್ಶನದ ಫಲಶೃತಿ ಎಂದು ಹೇಳುವುದರಲ್ಲಿ ಅತಿಶಯೋಕ್ತಿಯಲ್ಲ.

ನಮ್ಮ ಹಿತಾಸಕ್ತಿಗಳು ರಾಜಕೀಯವಾಗಲೀ, ಬೇರೆ ಯಾವುದೇ ಆಗಿರಲಿ, ನಿಮ್ಮ ಕೈಗಳಲ್ಲಿ ಕ್ಷೇಮವಾಗಿದೆ. ನಾವು ನಿಮ್ಮ ಕಡೆಗೆ, ನಿಮ್ಮೊಬ್ಬರ ಕಡೆಗೆ ಮಾತ್ರ ನಮ್ಮ ನಂಬಿಕಸ್ತ ನಾಯಕನೆಂದು ನೋಡುತ್ತೇವೆ ಎಂದು ಪುನರುಚ್ಚರಿಸುವುದು ಅನಾವಶ್ಯಕ. ನೀವು ನಮ್ಮನ್ನು ಈ ದೇಶದಲ್ಲಿ ರಾಜಕೀಯ ಅಧಿಕಾರ ಪಡೆಯುವತ್ತ ಕೊಂಡ್ಯೊಯುತ್ತೀರಿ. ಇದು ಮಾತ್ರವೇ ನಮ್ಮ ತುಳಿಯಲ್ಪಟ್ಟ ಸಮುದಾಯಕ್ಕೆ ಮೋಕ್ಷವನ್ನು ತಂದು ಕೊಡುವುದು ಎಂದು ನಮಗೆ ಮನವರಿಕೆಯಾಗಿದೆ.

ಇಂತಿ ನಿಮ್ಮ ನಂಬುಗೆಯ :

ಈ ಕೆಳಗೆ ಕಾಣಿಸಿದ ಸಂಸ್ಥೆಗಳ ಸದಸ್ಯರುಗಳು :

(೧) ಸೋಷಿಯಲ್ ಈಕ್ವಾಲಿಟಿ ಆರ್ಮಿ (ಬಾಂಬೆ ಆಧಿಪತ್ಯ)

(೨) ಫ್ರೆಂಡ್ಸ್ ಯೂನಿಯನ್, ಪೆಲಿಸ್ಲೆ ರಸ್ತೆ

(೩) ಸೋಮವಂಶೀಯ ಅಬಾಲವೃದ್ಧ ಸೇವಾ ಮಂಡಲ್

(೪) ಬಹಿಷ್ಕೃತ್ ಸೇವಾ ಮಂಡಲ್

(೫) ಮಹಾರಾಷ್ಟ್ರ ಬಾಲ್‌ವೀರ್ ಶಿಕ್ಷಣ್ ಪ್ರಸಾರಕ್ ಮಂಡಲ್

(೬) ಬಹಿಷ್ಕೃತ್ ಹಿತಚಿಂತಕ್ ಸೇವಾ ಮಂಡಲ್

(೭) ದಕ್ಷಿಣ ಭಾರತ್ ಆದಿ ದ್ರಾವಿಡ ಮಹಾಜನ್ ಸಭಾ
(೮) ಮಹಿಳಾ ಮಂಡಲ್, ಬೊಂಬಾಯಿ
(೯) ಮಹರ್ ಸಮಾಜ್ ಸೇವಾ ಸಂಘ
(೧೦) ಸತಾರಾ ಜಿಲ್ಲಾ ಯುವಕ ಸಂಘ
(೧೧) ನಗರ್ ಜಿಲ್ಲಾ ಬಹಿಷ್ಕೃತ್ ಸೇವಾ ಸಂಘ
(೧೨) ಯುವಕ್ ಸಂಘ ಸಾಮಾಜಿಕ್ ಜಲ್ಸಾ
(೧೩) ಟ್ರಾಮ್‌ವೇ ಕಂಪನಿ ಕಾರ್ಯಾಗಾರ ನಿಮ್ನವರ್ಗಗಳವರ ಅಸೋಸಿಯೇಷನ್
(೧೪) ನವರಂಗ್ ಸಿಗರೇಟ್ ಕಂಪನಿ 'ಡಿ' ಕ್ಲಾಸಸ್
(೧೫) ಬಹಿಷ್ಕೃತ್ ಮಹಿಳಾ ಸೇವಾ ಮಂಡಲ್
(೧೬) ಬಾರಾ ಚಾಲ್ ಸೇವಾ ಸಂಘ್
(೧೭) ರತ್ನಗಿರಿ ಜಿಲ್ಲಾ ಸಾಮಾಜಿಕ ಸಮಾನತಾ ಲೀಗ್
(೧೮) ಗುಜರಾತ್ ಡಿ.ಸಿ. ಅಸೋಸಿಯೇಷನ್
(೧೯) ಪೂನಾ ಜಿಲ್ಲಾ ಬಹಿಷ್ಕೃತ್ ಅಸೋಸಿಯೇಷನ್
(೨೦) ಪೂನಾ ಜಿಲ್ಲಾ ದಲಿತ್ ಸಂಘ
(೨೧) ಸತಾರಾ ಜಿಲ್ಲಾ ಸಾಮಾಜಿಕ ಸಮಾನತಾ ಸೇನೆ
(೨೨) ಬಹಿಷ್ಕೃತ್ ನಿಮ್ನವರ್ಗಗಳವರ ಸಿ.ಸಿ.ಸೊಸೈಟಿ
(೨೩) ಬಹಿಷ್ಕೃತ್ ನಿಮ್ನವರ್ಗಗಳವರ ನವಯುವಕ ಸಂಘ
(೨೪) ಪೇವಲಾಟಿ ಸಹಕಾರ ಮಂಡಲ್
(೨೫) ಧೋಭಿತಲಾವ್ ಸೋಮವಂಶಿಯ ಮಂಡಲ್
(೨೬) ಧೋಬಿತಲಾವ್ ಸೋಮವಂಶಿಯ ಮಹಿಳಾ ಮಂಡಲ್
(೨೭) ಎಫ್ ವಾರ್ಡ್ ಬಹಿಷ್ಕೃತ್ ಸೇವಾ ಮಂಡಲ್ ಬೊಂಬಾಯಿ
(೨೮) ಟಾಟಾ ಮಿಲ್ಸ್, ಚಾಲ್ಸ್, ಮಹರ್ ಪಂಚ್
(೨೯) ಕೋಕನ್ ಪ್ರಾಂತಿಕ್ ಚೇಂಬರ್ ಪರಿಷದ್
(೩೦) ಫೋ಼ರಾಸ್ ರಸ್ತೆ ಸಿಮೆಂಟ್ ಚಾಲ್ಸ್ ಪಂಚ್
(೩೧) ಮಾಝ಼ಗಾಂವ್ ಖಡ್ಡ ಪಂಚ್
(೩೨) ಜೂನ ಧೋರ್ ಪಂಚ್
(೩೩) ಬಾಟಾಯಾಚಿ ಚಾಲ್ಸ್ ಪಂಚ್
(೩೪) ಫೋ಼ರಾಸ್ ರಸ್ತೆ ಡಿ.ಸಿ.ವಠಾರಗಳು ಬ್ಲಾಕ್ ನಂ–೧–೩
(೩೫) ನವಿಧಾರ್ ಚಾಲ್‌ಪಂಚ್
(೩೬) ಸೋಮವಂಶೀಯ ನಿರಾಶ್ರಿತ್ ಶಿಕ್ಷಣ ವರ್ಧಕ್ ಸಮಾಜ್
(೩೭) ಸೋಲಾಪುರ್ ಜಿಲ್ಲಾ ಮಹರ್ ಸೇವಾ ಸಂಘ್
(೩೮) ಸತಾರಾ ಜಿಲ್ಲಾ ವಿಟೆ ತಾಲೂಕ್ ಪಂಚ್
(೩೯) ಬಹಿಷ್ಕೃತ್ ಸಹಕಾರ ಸಂಘ್

(೪೦) ಡಿ.ಸಿ.ಟೆನೆಂಟ್ಸ್ – ಬಿ.ಡಿ.ಡಿ ಬ್ಲಾಕ್‌ನಂ.೭
(೪೧) ಮಹಾರಾಷ್ಟ್ರೀಯ ಪುರಾತನ್ ಮಹರ್ ಉನ್ನತಿ ಸಂಘ
(೪೨) ಸತಾರಾ ಜಿಲ್ಲಾ ಡಿ.ಸಿ.ಸೊಸೈಟಿ
(೪೩) ಗುಲಾಬ್‌ವಾಡಿ ಪಂಚ್ ಮಂಡಲಿ
(೪೪) ಭಂಡಾರಿ ಸಮಾಜ್ ಸಂಘ್
(೪೫) ಭಾರತೀಯ ತರುಣ್ ಯುವಕ್ ಸಂಘ್ ಬಹಿಷ್ಕೃತ್
(೪೬) ಶ್ರೀ ಸೋಮವಂಶೀಯ ಮಂಡಲಿ
(೪೭) ನೈಗಾಂವ್ ಚಾಲ್‌ನವ ಸಹ ಕುಮಘಾರ್ ಪಂಚ್
(೪೮) ಬಹಿಷ್ಕೃತ್ ಹಿತವರ್ಧಕ್ ಸಮಾಜ್
(೪೯) ಪುಂಪಾರೀ ಸಯ್ಯದ್ ನಾಸಿಕ್ ತಾಲೂಕ್ ಜಲ್ಸ್
(೫೦) ರೋಹಿದಾಸ್ ಧ್ಯಾನ್‌ದೇವ್ ಸಮಾಜ್
(೫೧) ಚರ್ಮಕಾರ್ ಮಹಿಳಾ ಮಂಡಲ್
(೫೨) ಚರ್ಮಕಾರ್ ಸುಧಾಕರ್ ಮಂಡಲ್
(೫೩) ಯುವಕರ ಮಹರ್ ಅಸೋಸಿಯೇಷನ್, ಪಿಂಚೂರ್
(೫೪) ನಾಯ್‌ಗಾಂವ್ ಸಾಮಾಜಿಕ್ ಸಮತಾ ಲೀಗ್
(೫೫) ಬಹಿಷ್ಕೃತ್ ಭಜನ್ ಸಮಾಜ್, ವಡಾಲ
(೫೬) ಚಂದನ್‌ವಾಡಿ ಮಹಿಳಾ ಮಂಡಲ್
(೫೭) ಚಂದನ್‌ವಾಡಿ ಡಿ.ಸಿ. ಅಸೋಸಿಯೇಷನ್
(೫೮) ಸೋಲಾಪುರ್ ಜಿಲ್ಲಾ ತಾಲ್ ಕರ್ಮಾಲೆ ಹಿತವರ್ಧಕ್ ಸಮಾಜ್
(೫೯) ಸತಾರಾ ಜಿಲ್ಲಾ ಬಲವೀರ್ ಸೈನಿಕ್‌ದಳ್
(೬೦) ಥಾಣಾ ಜಿಲ್ಲಾ ಡಿ.ಸಿ.ಅಸೋಸಿಯೇಷನ್
(೬೧) ಬಾಂದ್ರಾ ಕಾಟ್‌ವಾಡಿ ವರೂಡೆ ಮಂಡಲ್
(೬೨) ನಾಸಿಕ್ ಯುವಕ ಸಂಘ
(೬೩) ನಾಯ್‌ಗಾಂವ್ ಬಿ.ಡಿ.ಡಿ ಬ್ಲಾಕ್ ಬಾಡಿದಾರರ ಅಸೋಸಿಯೇಷನ್
(೬೪) ಬಿ. ಅಂಡ್ ಸಿ, ಐ ರೈಲ್ವೇ ಡಿ.ಸಿ.ಲೀಗ್
(೬೫) ನಾಸಿಕ್ ಜಿಲ್ಲಾವರ್ಧಕ್ ಮಧ್ಯವರ್ತಿ ಮಂಡಲ್
(೬೬) ಭಾರತೀಯ ಸಮಾಜ ಸೇವಾ ಮಂಡಲ್
(೬೭) ಮಧ್ಯವರ್ತಿ ಸಮತಾ ಸೈನಿಕ್‌ದಳ್
(೬೮) ರಾವನ್‌ಗಾಂವ್ ಡಿ.ಸಿ.ಲೀಗ್
(೬೯) ಆಟ್‌ಪಾಡೀ ಡಿ.ಸಿ.ಸೊಸೈಟಿ
(೭೦) ಕುಲಾಬಾ ಜಿಲ್ಲಾ ಡಿ.ಸಿ.ಅಸೋಸಿಯೇಷನ್
(೭೧) ಟ್ರಾಮ್‌ವೇ ಸಹಕಾರ ಸಂಘದ ಚಾಲ್ ಬಾಡಿಗೆದಾರರ ಅಸೋಸಿಯೇಷನ್
(೭೨) ಸಾಮಾಜಿಕ ಸಮತಾ ಲೀಗ್

(೭೩) ಜಂಗೀರ ಬಹಿಷ್ಕೃತ್ ಪ್ರಜಾ ಚಿರೋಲ್ ಮಂಡಲ್
(೭೪) ದಾದರ್ ಮಹಿಳಾ ಮಂಡಲ್
(೭೫) ನವಯುವಕ್ ಮಂಡಲ್, ಅಹ್ಮದಾಬಾದ್
(೭೬) ಧಾರವಾಡ ಜಿಲ್ಲಾ ಡಿ.ಸಿ.ಲೀಗ್
(೭೭) ಬೆಳಗಾವಿ ಜಿಲ್ಲಾ ಡಿ.ಸಿ.ಲೀಗ್
(೭೮) ಕಾರವಾರ ಜಿಲ್ಲಾ ಡಿ.ಸಿ.ಲೀಗ್
(೭೯) ಮೇಘವಾಲ್ ಸುಧಾರಕ್ ಸಮಾಜ
(೮೦) ಗುಜರಾತ್ ದಲಿತ್ ಸುಧಾರಕ್ ಮಂಡಲ್
(೮೧) ಸತಾರಾ ಜಿಲ್ಲಾ ತರುಣ್ ಸೇವಾ ಮಂಡಲ್
(೮೨) ರೋಹಿದಾಸ್ ತರುಣ್ ಮಂಡಲ್, ಥಾಣೆ
(೮೩) ಸೋಮವಂಶೀಯ ಸನ್ಮಾರ್ಗ್ ದರ್ಶಕ್ ಸಂಘ, ಕಲ್ಯಾಣ್
(೮೪) ಥಾಣಾ ಜಿಲ್ಲಾ ಚರ್ಮಕಾರ್ ಐಕಿಚ್ಚು ಮಂಡಲ್, ಮಾಣಿಕ್‌ಪುರ್
(೮೫) ಕಾಮಾಟಿಪುರ ೧೩ನೆ ಲೇನ್ ಭಜನ್ ಸಮಾಜ್
(೮೬) ದಿ ಬೀರಾರ್ ಅಸ್ಪೃಶ್ಯ ಸಮಾಜ್ ಸುಧಾರಕ್ ಸೇವಾ ಮಂಡಲ್
(೮೭) ದಿ ಸೂಪಾ ಪರ್‌ಗಣ ಕ್ಷತ್ರಿಯ ಯುವಕ ಸಂಘ
(೮೮) ಸತಾರಾ ಜಿಲ್ಲಾ ವಂದರ್ ಮನರ್ ಸಂಘ
(೮೯) ಬಿ.ಪಿ.ಟಿ ಬಹಿಷ್ಕೃತ್ ಕಾರ್ಮಿಕರ ನವಯುವಕ್
(೯೦) ಕರ್ನಾಟಕ ಮಾಚಿಗ್ನರ್ ಸೊಸೈಟಿ
(೯೧) ಕರ್ನಾಟಕ ಡಿ.ಸಿ.ಯೂತ್ ಲೀಗ್
(೯೨) ಡಿ.ಸಿ. ಅಸೋಸಿಯೇಷನ್, ಹುಬ್ಬಳ್ಳಿ
(೯೩) ಚಿತ್ರ ಬಜಾರ್ ಬೋರಿ, ಚಾಲ್, ಡಿ.ಸಿ ಲೀಗ್
(೯೪) ರೋಹೆ ತಾಲೂಕ್ ಮಹರ್ ಸಂಘ
(೯೫) ಕಾಮಾಟಿಪುರ ಲಾಯದ ಬೀದಿ ಮಹರ್ ಅಸೋಸಿಯೇಷನ್
(೯೬) ಅಗ್ರಿಪಾದ ಪುರಸಭಾ ಚಾಲ್ ಡಿ.ಸಿ ಬಾಡಿಗೆದಾರರ ಅಸೋಸಿಯೇಷನ್
(೯೭) ಬಾಂದ್ರ ಚಾನಿ ಡಿ.ಸಿ.ಲೀಗ್ ಭಾವೋಗ್ರ
(೯೮) ಬಾಂದ್ರ ಪಾಲೀ ಬಹಿಷ್ಕೃತ್ ಸಮಾಜ್
(೯೯) ಮಹರ್ ಮಿಲಿಟರಿ ಇಂಡಿಯನ್ ಆಫೀಸರ್ಸ್ ಅಸೋಸಿಯೇಷನ್
(೧೦೦) ಮಾಹಿಮ್ ಕಿಲ್ಲಾ ಡಿ.ಸಿ.ಅಸೋಸಿಯೇಷನ್
(೧೦೧) ರೆಟೀಚ ಧಕ್ಕ ಪಂಚ್ ಮಂಡಲ್
(೧೦೨) ಬಿ.ಐ.ಟಿ.ಪೋಯಿ ಬಾವಾಡಿ ಚಾಲ್ ಡಿ.ಸಿ.ಲೀಗ್
(೧೦೩) ಪಾನ್‌ವೆಲ್ ಪೆನ್ಷನ್ ಮಹರ್ ಪಂಚ್
(೧೦೪) ಕ್ರೌನ್ ಸಿಗರೇಟ್ ಕಂ.ಯ.ಡಿ.ಸಿ. ಲೇಬರ್ ಮಂಡಲ್
(೧೦೫) ನಾನಾ ಚೌಕ್ ಮಹರ್ ಸಂಘ್

(೧೦೬) ಅಖಿಲ ಭಾರತ ಅಸ್ಪೃಶ್ಯತಾ ಲೀಗ್, ಪೂನಾ
(೧೦೭) ಮಹಾರಾಷ್ಟ್ರ ಸೇವಾ ಸಂಘ, ಪೂನಾ
(೧೦೮) ದಕ್ಷಿಣ್ ಮಹಾರಾಷ್ಟ್ರ ಸತ್ಯ ಪ್ರಸಾರಕ್ ಮಂಡಲ್, ಕೊಲ್ಹಾಪುರ
(೧೦೯) ಮಾತಂಗ್ ಧ್ಯಾನೋದಯ ಸಮಾಜ, ಬಾಂಬೆ
(೧೧೦) ಅಸ್ಪೃಶ್ಯೋನ್ನತಿ ಮಂಡಲ್, ನಾಸಿಕ್ ರೋಡ್
(೧೧೧) ದೇವಸ್ಥಾನ ಪ್ರವೇಶ ಸತ್ಯಾಗ್ರಹ ಮಂಡಲಿ, ನಾಸಿಕ್
(೧೧೨) ಬಹಿಷ್ಕೃತ್ ಹಿತಚಿಂತಕ ಸೇವಾ ಸಂಘ, ನಾಸಿಕ್ ರೋಡ್
(೧೧೩) ಶ್ರೀ ಶಾಹು ಚಕ್ರಪತಿ ಬೋರ್ಡಿಂಗ್, ನಾಸಿಕ್
(೧೧೪) ಅಸ್ಪೃಶ್ಯ ತರುಣ್ ಸಮತಾ ಸಮಾಜ, ಚೀರಾಬಜಾರ್

ತನ್ನ ಜನಗಳ ಅನ್ಯಾದೃಶ ಪ್ರೀತಿ ಮತ್ತು ಕೃತಜ್ಞತೆಯಿಂದ ಪ್ರಭಾವಿತರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಕ್ಷಣಕಾಲ ಮುಜುಗರಕ್ಕೆ ಒಳಗಾಗಿ ಅಗಾಧವಾದ ಸಭೆಯ ಮುಂದೆ ನಿಶ್ಚಲವಾಗಿ ನಿಂತುಬಿಟ್ಟರು. ಸ್ವಲ್ಪ ಸಮಯದ ನಂತರ ಮಾತನಾಡುತ್ತಾ ತಾವು ಮಾಡಲು ಸಾಧ್ಯವಾದ ಎಲ್ಲಾ ಸೇವೆಗಳು ಎಲ್ಲಾ ಕೆಲಸಗಾರರರುಗಳ ಸಹಕಾರದ ಒಟ್ಟಾರೆ ಫಲಿತಾಂಶವಾಗಿದ್ದು, ತನ್ನ ಜನರ ಹಿಂಜರಿಕೆಯಿಲ್ಲದ ದೃಢವಾದ ಬೆಂಬಲದಿಂದ ಮಾತ್ರ ಸಾಧ್ಯವಾಯಿತು ಎಂದು ಹೇಳಿದರು. ಯಾವುದೇ ನೇತಾರ ಯಾವುದೇ ಧ್ಯೇಯ ಸಾಧನೆಗೆ ದೊರೆತ ಜಯಕ್ಕಾಗಲೀ ಅಥವಾ ಅಪಜಯಕ್ಕಾಗಲೀ ತಾನೊಬ್ಬನೇ ಬಾಧ್ಯನಲ್ಲ. ತಮ್ಮ ಬಗ್ಗೆ ಹೇಳುವುದಾದರೆ ತಾನೂ ಒಬ್ಬ ಮಾನವಜೀವಿ ತಪ್ಪು ಮಾಡುವುದು ಮಾನವ ಸಹಜ. ತಾವು ಕೆಲವೊಮ್ಮೆ ಪಕ್ಷಪಾತ ಮಾಡಿರಬಹುದು. ಅದನ್ನು ಕ್ಷಮಿಸಬೇಕು ಎಂದು ಕೇಳಿದರು.

ಕಾಂಗ್ರೆಸ್‌ನವರು ನನ್ನನ್ನು ದ್ರೋಹಿ ಎಂದು ಕರೆದಿದ್ದಾರೆ. ಕಾರಣ ನಾನು ಗಾಂಧಿಯವರನ್ನು ವಿರೋಧಿಸಿದೆ ಎಂದು. ಇಂಥ ಆಪಾದನೆಯಿಂದ ನಾನು ವಿಚಲಿತನಾವುಗುವುದಿಲ್ಲ. ಆ ಆಪಾದನೆಗೇನೂ ಆಧಾರವಿಲ್ಲ. ಅದು ಸುಳ್ಳು ಮತ್ತು ದ್ವೇಷದಿಂದ ಕೂಡಿದೆ. ಆದರೆ ಗಾಂಧಿಯವರು ನಿಮ್ಮ ಸಂಕೋಲೆಗಳನ್ನು ಮುರಿದು ಹಾಕುವುದಕ್ಕೆ ಬಹಳ ತೀವ್ರವಾಗಿ ವಿರೋಧ ಮಾಡಿದ್ದು, ಪ್ರಪಂಚಕ್ಕೆ ಆಘಾತವನ್ನುಂಟು ಮಾಡಿತು. ಹಿಂದೂಗಳ ಮುಂದಿನ ಪೀಳಿಗೆ ದುಂಡು ಮೇಜಿನ ಸಮ್ಮೇಳನದ ಚರಿತ್ರೆಯನ್ನು ಅಭ್ಯಸಿಸಿದ ಮೇಲೆ ನನ್ನ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ ಎಂದು ನನಗೆ ಭರವಸೆ ಇದೆ. ಗಾಂಧಿಯವರು ಲಂಡನ್ನಿನಲ್ಲಿದ್ದಾಗ ಕೈಯ್ಯಲ್ಲಿ ಕುರಾನಿನ ಪ್ರತಿಯೊಂದನ್ನು ಹಿಡಿದುಕೊಂಡು ರಹಸ್ಯವಾಗಿ ಆಗಾಖಾನ್‌ರವರ ಬಳಿಗೆ ಸಾಗಿ, ಆ ಮುಸ್ಲಿಮ್ ನಾಯಕನನ್ನು ಅವರ ಬೆಂಬಲವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದು, ಅದಕ್ಕೆ ಆಗಾಖಾನ್ ಅವರು ಒಪ್ಪದೇ ಇದ್ದುದ್ದನ್ನು ತಾವು ನೋಡಿದ್ದಾಗಿ ಬಹಿರಂಗಪಡಿಸಿದರು. ಕಡೆಗೆ ತನ್ನನ್ನು ದೈವತ್ವ ಪಟ್ಟಕ್ಕೆ ಏರಿಸಬಾರದೆಂದು ತಾನು ದೈವೀಕರಣವನ್ನು ದ್ವೇಷಿಸುವುದಾಗಿ ತನ್ನ ಜನಗಳಿಗೆ ಮನವಿ ಮಾಡಿಕೊಂಡರು. ಕಡೆಯದಾಗಿ ಆಗ ತಾನೆ ಜೈಲುಗಳಿಂದ ಬಿಡುಗಡೆ ಮಾಡಲ್ಪಟ್ಟ ನಾಸಿಕ್ ವೀರರನ್ನು ಗೌರವಿಸಿದರು.

ಡಾ.ಅಂಬೇಡ್ಕರ್ ಸಭೆಗೆ ತಮ್ಮ ಧನ್ಯವಾದವನ್ನು ತಿಳಿಸುತ್ತಾ, ತಮಗೆ ಏಳುಕೋಟಿ ಅಸ್ಪೃಶ್ಯರ ಒಗ್ಗಟ್ಟಿನ ಬೆಂಬಲ ಸಿಗದೆ ಇದ್ದಿದ್ದರೆ ತಮಗೆ ದುಂಡು ಮೇಜಿನ ಸಮ್ಮೇಳನದ ಮುಂದೆ ನಿಮ್ನವರ್ಗಗಳ ಸಮಸ್ಯೆಯನ್ನು ಇಡಲಾಗುತ್ತಿರಲಿಲ್ಲವೆಂದು ಹೇಳಿದರು. ತಮ್ಮ ಮತ್ತು ನಿಮ್ನವರ್ಗಗಳವರ ಕೆಲವು ಗುಂಪಿನವರ

ಮಧ್ಯೆ ಇದ್ದ ಭಿನ್ನಾಭಿಪ್ರಾಯದ ಬಗ್ಗೆ ಪರಾಮರ್ಶಿಸುತ್ತಾ, ತಾವು ನಿಮ್ನವರ್ಗದ ಯಾವುದೇ ನಿರ್ದಿಷ್ಟ ಗುಂಪಿನ ಪರವಾಗಿ ಇಲ್ಲವೆಂದೂ, ಆದರೆ ಇಡೀ ಸಮುದಾಯದ ಹಿತಾಸಕ್ತಿಯನ್ನು ಕಾಪಾಡಲು ಯಾವುದೇ ಯೋಜನೆಯನ್ನು ಒಪ್ಪಿಕೊಳ್ಳಲು ಸಿದ್ಧವಿರುವುದಾಗಿ ತಿಳಿಸಿದರು. ಅಲ್ಪಸಂಖ್ಯಾತರ ಸಮಸ್ಯೆಯನ್ನು ಕುರಿತು ಗಾಂಧಿಯವರ ಧೋರಣೆಯನ್ನು ಟೀಕೆ ಮಾಡಿದರು. ಅವರು ನಿಮ್ನವರ್ಗಗಳವರ ಜೊತೆ ಸಂಧಾನ ಮಾಡುತ್ತಿದ್ದಾಗಲೂ, ಮಹಮ್ಮದೀಯರ ಜೊತೆಗೆ ರಹಸ್ಯವಾಗಿ ಸಲ್ಲಾಪ ಮಾಡುತ್ತಿದ್ದರು. ನೇತಾರ ಯಾರೇ ಆಗಲಿ ಅವನ ಮೇಲೆ ಪೂರ್ಣ ವಿಶ್ವಾಸ ಇರಬಾರದೆಂದೂ, ತಮ್ಮ ಬಲದ ಮೇಲೆ ಮಾತ್ರ ಅವಲಂಬಿತರಾಗಬೇಕೆಂದು ಹೇಳಿದರು. ಕಟ್ಟಕಡೆಯದಾಗಿ ನಾಸಿಕ ದೇವಸ್ಥಾನ ಪ್ರವೇಶ ಸತ್ಯಾಗ್ರಹಿಗಳನ್ನು ಅಭಿನಂದಿಸಿದರು.

# ೧೧
# ಗೌತಮಬುದ್ಧ ಮತ್ತು ರಾಮಾನುಜರ ಹೋರಾಟವನ್ನು ನಿಮ್ಮ ಕಣ್ಣು ಮುಂದೆ ಇಟ್ಟುಕೊಳ್ಳಿ

ಮತಾಧಿಕಾರ ಸಮಿತಿಯ ಸದಸ್ಯನಾಗಿ ಪ್ರವಾಸದಲ್ಲಿದ್ದಾಗ ೧೯೩೨ರಲ್ಲಿ ಮದರಾಸಿಗೆ ಡಾ.ಬಿ.ಆರ್.ಅಂಬೇಡ್ಕರ್ ಭೇಟಿ ಕೊಟ್ಟಿದ್ದರು. ೨೮ನೆ ಫೆಬ್ರವರಿಯಂದು ನಿಮ್ನವರ್ಗಗಳವರಿಗೆ ಸೇರಿದ ೧೦,೦೦೦ ಜನರ ಅಗಾಧವಾದ ಸಭೆ ಅವರಿಗೆ ಒಂದು ವರ್ಣರಂಜಿತ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ ಮುಸ್ಲಿಮರು, ಕ್ರಿಶ್ಚಿಯನ್‌ರು ಮತ್ತು ಬ್ರಾಹ್ಮಣೇತರರು ಭಾಗವಹಿಸಿದ್ದರು. ಭೂಸೇನಾ ಸೇವೆಯ ನಿಮ್ನವರ್ಗಗಳವರ ಚೇರ್‌ಮನ್‌ರವರು ಅಧ್ಯಕ್ಷತೆ ವಹಿಸಿದ್ದರು. ದಕ್ಷಿಣ ಭಾರತದಲ್ಲಿರುವ ಹೆಚ್ಚುಕಡಿಮೆ ಎಲ್ಲ ನಿಮ್ನವರ್ಗಗಳ ಸಂಸ್ಥೆಗಳು, ಅಂದರೆ ನಿಮ್ನವರ್ಗಗಳ ಸೇನಾ ಸೇವಾ ಸಂಸ್ಥೆ, ಮದರಾಸು ಪ್ರಾಂತೀಯ ನಿಮ್ನವರ್ಗಗಳ ಒಕ್ಕೂಟ, ಆದಿದ್ರಾವಿಡ ಮಲಯಾಳಂ ಸಭಾ ಅಧ್ಯಕ್ಷರು, ಆದಿ ಆಂಧ್ರ ಮಹಾ ಸಭೆ, ಅರುಂಧತೇಯ ಮಹಾಸಭಾ ಕೇರಳ, ನಿಮ್ನವರ್ಗಗಳ ಅಸೋಸಿಯೇಷನ್ ಮತ್ತು ಕಾರ್ಮಿಕರ ಒಕ್ಕೂಟ ಒಮ್ಮತದಿಂದ ಡಾ.ಅಂಬೇಡ್ಕರ್ ಅವರಿಗೆ ಭಿನ್ನವತ್ತಳೆಯನ್ನು ಅರ್ಪಿಸಿದರು. ಸಭೆಯಲ್ಲಿ ಡಾ.ಅಂಬೇಡ್ಕರ್ ಅವರು ರಾಜಾ ಅವರು, ಪ್ರತ್ಯೇಕ ಮತದಾರರ ಮಂಡಲಿಗೆ ಒಲವಿದ್ದವರು ತಿಪ್ಪರಲಾಗ ಹಾಕಿ ರಿಸರ್ವ ಸ್ಥಾನಗಳಿರುವ 'ಜಂಟೀ ಮತದಾರರ ಮಂಡಳಕ್ಕೆ' ತಮ್ಮ ನಿಲುವನ್ನು ಬದಲಾಯಿಸಿದ್ದನ್ನು ಸಭೆಗೆ ತಿಳಿಸಿದರು. ಅಖಿಲ ಭಾರತ ನಿಮ್ನವರ್ಗಗಳವರ ಕಾಂಗ್ರೆಸ್‌ನ ಕಾಂಪ್‌ಟೀ ಅಧಿವೇಶನಕ್ಕೆ ಮುಂಚೆ ರಾಜಾ ಅವರು ಯಾವುದೇ ಮಾತಿಗೆ ಕಟ್ಟು ಬೀಳಬಾರದಾಗಿತ್ತು. ಆದ್ದರಿಂದ ಅವರು ಅಸ್ಪೃಶ್ಯರನ್ನು ರಾಜಕೀಯ ಅಧಿಕಾರವನ್ನು ಹಿಡಿದು ಕೊಳ್ಳುವಂತೆ ಉತ್ತೇಜಿಸಿದರು. ಯಾರದೇ ಮೌಖಿಕ ಮತ್ತು ಬಣ್ಣಬಣ್ಣದ ಆಶ್ವಾಸನೆಗಳಿಗೆ ಮರುಳಾಗದೆ ಎಚ್ಚರಿಕೆಯಿಂದ ಇರಬೇಕೆಂದು, ತಮ್ಮ ಅಳಲುಗಳ ಬಗ್ಗೆ ಗೊತ್ತಿರುವ ನೇತಾರರುಗಳಲ್ಲಿ ಮಾತ್ರ ನಂಬಿಕೆ ಇಡುವಂತೆ ಸಲಹೆ ಕೊಟ್ಟರು. ಕಟ್ಟಕಡೆಯದಾಗಿ ಅವರು ಸ್ಪೃಶ್ಯ ನೇತಾರರಾದ ಗೌತಮಬುದ್ಧ ಮತ್ತು ರಾಮಾನುಜ ಅವರು ನಿಮ್ನವರ್ಗದವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಮತ್ತು ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕುವುದಕ್ಕೆ ಶ್ರಮಿಸಿದ ಅವರ ಹಣೆಬರೆಹ ಏನಾಯಿತು ಎಂದು ಸಾದೃಶಪಡಿಸಿಕೊಳ್ಳಿ ಎಂದು ಹೇಳಿದರು.

# ೧೨
# ಅಸ್ಪೃಶ್ಯರಿಗೆ ರಾಜಕೀಯ ಅಧಿಕಾರ ಇರಲೇಬೇಕು

ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್‌ನ ೨ನೇ ಅಧಿವೇಶನವನ್ನು ಕಾಂಪ್ಟೀನಲ್ಲಿ ನಡೆಸುವುದೆಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ತೀರ್ಮಾನಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷರಾದ ಎಲ್.ಎನ್.ಹರದಾಸ್ ಅವರು ಅಧಿವೇಶನದ ಪ್ರಾಮುಖ್ಯತೆಯನ್ನು ಬಿಂಬಿಸುವ ಒಂದು ಸುತ್ತೋಲೆಯನ್ನು ಹೊರಡಿಸಿದರು. 'ನಿಮಗೆಲ್ಲಾ ಗೊತ್ತಿರುವ ಹಾಗೆ ಅಖಿಲ ಭಾರತ ನಿಮ್ನವರ್ಗಗಳ ಕಾಂಗ್ರೆಸ್‌ನ ಎರಡನೆ ಅಧಿವೇಶನವನ್ನು ಏಪ್ರಿಲ್ ತಿಂಗಳ ೨೪ ಮತ್ತು ೨೫ನೆ ತಾರೀಖುಗಳಲ್ಲಿ ಕಾಂಪ್ಟೀನಲ್ಲಿ ನಡೆಸಲಾಗುತ್ತಿದೆ.

ಈ ಅಧಿವೇಶನದ ಪ್ರಾಮುಖ್ಯತೆ ಬಹಳ ಅಗಾಧವಾದದ್ದು. ಈ ಅಧಿವೇಶನ ಈ ಕೆಳಗಿನ ಎರಡು ವಿವಾದಾಂಶಗಳಿಗೆ ಸಂಬಂಧಪಟ್ಟಿದ್ದಾಗಿದೆ.

೧. ದುಂಡು ಮೇಜಿನ ಸಮ್ಮೇಳನಕ್ಕೆ ಸಲ್ಲಿಸಲಾದ ಅಲ್ಪಸಂಖ್ಯಾತರ ಒಡಂಬಡಿಕೆ ಇದರಲ್ಲಿ ನಿಮ್ನವರ್ಗಗಳವರ ಪ್ರತಿನಿಧಿಗಳು ಭಾಗಿಯಾಗಿದ್ದರು.

೨. ಭಾರತದ ನಿಮ್ನವರ್ಗಗಳವರ ಹೆಸರಿನಲ್ಲಿ ಕಾರ್ಯನಿರ್ವಹಿಸುವ ಮತ್ತು ಮಾತನಾಡುವ ಒಂದು ಕೇಂದ್ರೀಯ ಸಂಸ್ಥೆಯ ಅಸ್ತಿಭಾರ.

ಹೊಸ ರಾಜ್ಯಾಂಗದ ಕೆಳಗೆ ನಿಮ್ನವರ್ಗಗಳವರ ರಾಜಕೀಯ ಹಕ್ಕುಗಳಿಗೆ ಅಲ್ಪಸಂಖ್ಯಾತರ ಒಡಂಬಡಿಕೆ ಮೂರ್ತರೂಪ ಕೊಟ್ಟಿದೆ. ದುಂಡು ಮೇಜಿನ ಸಮ್ಮೇಳನದಲ್ಲಿ ಇದನ್ನು ಬಹುಸಂಖ್ಯಾತ ಸಮುದಾಯದ ಪ್ರತಿನಿಧಿಗಳು ಒಪ್ಪಿಕೊಳ್ಳಲಿಲ್ಲ. ಹೇಗಾದರೂ ನಿಮ್ನವರ್ಗಗಳವರು ಅಲ್ಪಸಂಖ್ಯಾತರ ಒಡಂಬಡಿಕೆಗೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಟ್ಟಿದ್ದರು. ಇತ್ತೀಚೆಗೆ ಕೆಲವು ಅಸೋಸಿಯೇಷನ್‌ಗಳು ತಾವು ಭಾರತದ ನಿಮ್ನವರ್ಗಗಳ ಪರವಾಗಿ ಮಾತನಾಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದು ಹಿಂದು ಮಹಾಸಭಾದವರೂ ಇವರುಗಳನ್ನು ತಮ್ಮತ್ತ ಸೆಳೆದುಕೊಂಡಿದ್ದು, ಅಲ್ಪಸಂಖ್ಯಾತರ ಒಡಂಬಡಿಕೆಯನ್ನು ತಿರಸ್ಕರಿಸಿದ್ದಾರೆ. ಆದ್ದರಿಂದ ನಿಮ್ನವರ್ಗಗಳವರ ಪ್ರತಿನಿಧಿಗಳು ತಕ್ಷಣ ಸಭೆ ಸೇರಿ, ಆ ಅಲ್ಪಸಂಖ್ಯಾತರ ಒಡಂಬಡಿಕೆಯಲ್ಲಿರುವ ಉಪಬಂಧಕ್ಕೆ ತಮ್ಮ ಅತ್ಯುತ್ತಮವಾದ ಚಿಂತನೆಯನ್ನು ಹರಿಸಿ ಅದರ ಮೇಲೆ ತಮ್ಮ ಪರ್ಯಾಲೋಚಿಸಲ್ಪಟ್ಟ ಅಭಿಪ್ರಾಯವನ್ನು ಕೊಡುವುದು ಅತ್ಯವಶ್ಯಕವಾಗಿದೆ. ದುಂಡು ಮೇಜಿನ ಸಮ್ಮೇಳನದಲ್ಲಿ ನಿಮ್ನವರ್ಗಗಳನ್ನು ಪ್ರತಿನಿಧಿಸಿದ ನಿಯೋಗಿಗಳಾದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ರಾವ್ ಬಹದ್ದೂರ್ ಶ್ರೀನಿವಾಸನ್ ಅವರುಗಳು ಈ ಅಧಿವೇಶನದಲ್ಲಿ ಹಾಜರಿದ್ದು ಅಲ್ಪಸಂಖ್ಯಾತರ ಒಡಂಬಡಿಕೆಗೆ ಸಂಬಂಧಪಟ್ಟ ಹಾಗೆ ಸಂದರ್ಭಗಳನ್ನು ಮತ್ತು ಉಪಬಂಧಗಳನ್ನು ವಿವರಿಸುತ್ತಾರೆ.

ರಾವ್‌ಬಹದ್ದೂರ್ ಎಮ್.ಸಿ.ರಾಜಾ ಮತ್ತು ಮಿ.ಜಿ.ಎ.ಗವಾಯಿ ಅವರನ್ನು ಅಧಿವೇಶನಕ್ಕೆ ಬರುವ ಹಾಗೆ ಆಮಂತ್ರಿಸಬೇಕೆಂದು ಪ್ರಸ್ತಾವಿಸಲಾಗಿದ್ದು, ಆ ಒಡಂಬಡಿಕೆ ಬಗ್ಗೆ ಯಾವುದೇ ಠರಾವವನ್ನು ಅನುಮೋದಿಸುವ ಮೊದಲು ಅವರ ಅಭಿಪ್ರಾಯವನ್ನು ತಿಳಿಸಲು ಒಂದು ಅವಕಾಶವನ್ನು ಕೊಡಬಹುದಾಗಿದೆ. ಈ ಅಧಿವೇಶನವನ್ನು ಕರೆದಿರುವ ೨ನೆಯ ಉದ್ದೇಶ ಅಷ್ಟೇ ಮುಖ್ಯವಾಗಿದೆ. ಅದನ್ನು ಹಿಗ್ಗಲಿಸಿ ಹೇಳುವ ಅವಶ್ಯಕತೆಯೇನಿಲ್ಲ ನಿಮಗೆಲ್ಲಾ ಗೊತ್ತಿರುವ ಹಾಗೆ ರಾಜಕೀಯ ವಿಷಯಗಳಲ್ಲಿ ನಿಮ್ನವರ್ಗಗಳವರ

ಸಾರ್ವಜನಿಕ ಅಭಿಪ್ರಾಯವನ್ನು ಸುಳ್ಳಾಗಿ ಬಿಂಬಿಸಲು ಪ್ರಯತ್ನಗಳು ನಡೆಯುತ್ತಾ ಇವೆ. ಒಂದು ಕೇಂದ್ರೀಯ ಸಂಸ್ಥೆಯನ್ನು ಹುಟ್ಟು ಹಾಕಿ, ಅದನ್ನು ನಿಮ್ನವರ್ಗಗಳವರ ಮುಖವಾಣಿಯನ್ನಾಗಿ ಮಾಡದ ಹೊರತು ಈ ಕಿತಾಪತಿಗಳನ್ನು ನಿಲ್ಲಿಸಲು ಸಾಧ್ಯವಿಲ್ಲ.

ಅಖಿಲ ಭಾರತ ನಿಮ್ನವರ್ಗಗಳವರ ಅಸೋಸಿಯೇಷನ್ ಎಂದು ಕರೆದುಕೊಳ್ಳುತ್ತಿರುವ ಸಂಸ್ಥೆ ಅಳವಡಿಸಿಕೊಂಡಿರುವ ಕುತಂತ್ರ, ಈ ಅಧಿವೇಶನವನ್ನು ಕರೆಯಬೇಕಾಗಿರುವ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಹೊಸ ಸಂವಿಧಾನದ ಕೆಳಗೆ ನಿಮ್ನವರ್ಗಗಳವರಿಗೆಂದು ಪ್ರಸ್ತಾವಿಸಲಾದ ಜಂಟೀ ಮತದಾರರ ಮಂಡಲಿಯೋ, ಪ್ರತ್ಯೇಕ ಮತದಾರರ ಮಂಡಲಿಯೋ ಅವರಿಗೆ ಎಷ್ಟು ಸೀಟುಗಳನ್ನು ಕಾದಿರಿಸಬೇಕೆಂಬ ಪ್ರಶ್ನೆಯನ್ನು ಪರಿಗಣಿಸುವುದಕ್ಕೋಸ್ಕರ ನವದೆಹಲಿಯಲ್ಲಿ ಕಳೆದ ಫೆಬ್ರವರಿ ೨೧ ಮತ್ತು ೨೨ನೆ ತಾರೀಖು ಅಸೋಸಿಯೋಷನ್ನಿನ ಕಾರ್ಯಕಾರಿ ಸಮಿತಿ ಸಭೆ ನಡೆಯಿತೆಂದೂ, ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗದ್ದರಿಂದ, ನಿಮ್ನವರ್ಗಗಳ ಮುಂಚೂಣಿಯಲ್ಲಿರುವ ನಾಯಕರುಗಳ ಸಮ್ಮೇಳನವನ್ನು ನಾಗಪುರದಲ್ಲಿ ನಡೆಸಲು ಕಾರ್ಯಕಾರಿ ಸಮಿತಿ ತೀರ್ಮಾನಿಸಿದೆಯೆಂದೂ ವೃತ್ತಪತ್ರಿಕೆಗಳಲ್ಲಿ ಪ್ರಸಿದ್ಧಿಸಲಾಯಿತು. ಯಾವುದೇ ಗೊತ್ತಾದ ಕ್ರಮವನ್ನು ತೆಗೆದುಕೊಳ್ಳುವ ಮುಂಚೆ ಮುಖಂಡರುಗಳ ಸಮ್ಮೇಳನವನ್ನು ಕರೆಯಲಾಗುತ್ತದೆಂದು ಆಶಿಸಲಾಗಿತ್ತಾದರೂ, ಅಖಿಲ ಭಾರತ ನಿಮ್ನವರ್ಗಗಳ ಅಸೋಸಿಯೋಷನ್ ಇಂಥ ಸಮ್ಮೇಳನವನ್ನು ಕರೆಯುವ ಉದ್ದೇಶವನ್ನು ಅವರಿಗೆ ಗೊತ್ತಿರಬಹುದಾದ ಕಾರಣಗಳಿಗೆ ಕೈಬಿಟ್ಟಿದ್ದಾರೆ. ಈ ಸಂದರ್ಭಗಳ ಕೆಳಗೆ ನಿಮ್ನವರ್ಗಗಳ ಸಾಮಾಜಿಕ ಅಭಿಪ್ರಾಯವನ್ನು ಕ್ರೋಢೀಕರಿಸುವ ಅವಶ್ಯಕತೆ ಇದ್ದು, ಇಂಥ ಕುಯುಕ್ತಿಗಳು ಕುಚೇಷ್ಟೆಗಳನ್ನು ಮಾಡದ ಹಾಗೆ ಮತ್ತು ಎರಡನೆಯದಾಗಿ ಈ ಗಹನವಾದ ಅಂಶಗಳ ಮೇಲೆ ಸಾರ್ವಜನಿಕರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕಲ್ಪಿಸುವ ಅವಶ್ಯಕತೆಯೂ ಇದೆ. ಈ ಅಧಿವೇಶನದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ನೀವು ಅದರಲ್ಲಿ ಭಾಗವಹಿಸುತ್ತೀರೆಂದು ನಂಬಿದ್ದೇವೆ.

ನಿಮ್ಮ ನಂಬುಗೆಯ
ಹರ್‌ದಾಸ್, ಎಲ್.ಎನ್.
ಅಧ್ಯಕ್ಷರು, ಸ್ವಾಗತ ಸಮಿತಿ

ಡಾ.ಅಂಬೇಡ್ಕರ್ ಅವರು ಸಿಮ್ಲಾದಿಂದ ಬೊಂಬಾಯಿಗೆ ೦೪.೦೫.೧೯೩೨ರಂದು ಹಿಂದಿರುಗಿದರು. ತತ್‌ಕ್ಷಣವೇ ೦೬.೦೫.೧೯೩೨ರಂದು ಬೊಂಬಾಯಿಯನ್ನು ಬಿಟ್ಟು ಕೊಲ್ಕತ್ತಾ ಮೇಲ್‌ನಲ್ಲಿ ನಾಗ್‌ಪುರದ ಹತ್ತಿರವಿರುವ ಕಾಂಪ್‌ಟೀನಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ನಿಮ್ನವರ್ಗಗಳ ಕಾಂಗ್ರೆಸ್‌ನಲ್ಲಿ ಭಾಗವಹಿಸುವುದಕ್ಕೆ ಪ್ರಯಾಣ ಬೆಳೆಸಿದರು. ಡಾ.ಅಂಬೇಡ್ಕರ್ ಅವರಿಗೆ ಅನುಕೂಲವಾಗುವ ಹಾಗೆ ಕಾಂಗ್ರೆಸ್‌ನ ತಾರೀಖನ್ನು ಮುಂದೂಡಲಾಗಿತ್ತು. ಕಸಾರದಿಂದ ನಾಗಪುರದವರೆಗೆ ದಾರಿಯುದ್ದಕ್ಕೂ ಆ ರಾತ್ರಿ ಉತ್ಸಾಹಿ ಅಸ್ಪೃಶ್ಯರ ಗುಂಪುಗಳು ಅವರನ್ನು ಅಭಿವಂದಿಸಿ, ಜಯಕಾರ ಮಾಡಿತು. ೦೭.೦೫.೧೯೩೨ ಬೆಳಗಿನ ೯ ಗಂಟೆಗೆ ಟ್ರೈನ್ ನಾಗ್‌ಪುರ ನಿಲ್ದಾಣಕ್ಕೆ ಬಂದಾಗ ಡಾ.ಅಂಬೇಡ್ಕರ್ ಅವರು ದೀರ್ಘಾಯುಗಳಾಗಲೀ ಎಂಬ ಘೋಷಣೆಗಳು ಪ್ರತಿಧ್ವನಿಸಿದವು. ನಿಲ್ದಾಣದ ಫ್ಲಾಟ್‌ಫಾರ್ಮ್‌ನಲ್ಲಿ ೫೦೦೦ ಜನಗಳ ಒಂದು ದೊಡ್ಡ ಗುಂಪು ಅವರಿಗೆ ಸ್ವಾಗತವನ್ನು ಕೋರಿತು. ತುಲಾರಾಮ್ ಸಖಾರೆ, ಎಮ್.ಎಲ್.ಸಿ ಅವರು ಡಾ.ಅಂಬೇಡ್ಕರ್

ಮತ್ತು ಇತರ ನಾಯಕರುಗಳನ್ನು ಬರಮಾಡಿಕೊಂಡರು. ನಗರ ದಂಡಾಧಿಕಾರಿಯವರು ಮತ್ತು ಪೊಲೀಸ್ ಅಧೀಕ್ಷಕರು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ನಿಲ್ದಾಣದಲ್ಲಿ ಹಾಜರಿದ್ದರು.

ಅಧಿವೇಶನದ ಪೆಂಡಾಲನ್ನು ಅಲಂಕೃತಗೊಳಿಸಲಾಗಿತ್ತು. ಅದು ೧೫ ಸಾವಿರ ಜನರು ಕುಳಿತುಕೊಳ್ಳುವಷ್ಟು ವಿಶಾಲವಾಗಿದ್ದು, ಬಹಳ ದೊಡ್ಡದಾದ ಉಪನ್ಯಾಸ ವೇದಿಕೆ ಇತ್ತು. ಗಹನವಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಭಾರತದ ನಾಲ್ಕೂ ಮೂಲೆಗಳಿಂದ ನಿಮ್ನವರ್ಗಗಳ ನಾಯಕರುಗಳು ಬಂದು ಸೇರಿದ್ದರಿಂದ ವಾತಾವರಣ ಬಹಳ ಬಿಗುವಾಗಿತ್ತು. ಜನರು ಉತ್ಸಾಹಿಗಳಾಗಿದ್ದರು. ಬಡತನದಲ್ಲಿದ್ದರೂ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಿಮ್ನವರ್ಗದ ಪ್ರತಿನಿಧಿಗಳು ಹಾಜರಿದ್ದದ್ದು ಬಹಳ ಆಶ್ಚರ್ಯಕರವಾಗಿತ್ತು. ನಿಮ್ನವರ್ಗಗಳ ಕಾಂಗ್ರೆಸ್‌ನ ಇನ್ನೊಂದು ಆಶ್ಚರ್ಯಕರವಾದ ಸಂಗತಿಯೇನೆಂದರೆ, ಅದನ್ನು ವ್ಯವಸ್ಥೆಗೊಳಿಸಿದ ಸ್ಥಳ ಡಾ.ಮೂಂಜೆ ಅವರ ಬೆಂಬಲಿಗರು ಹಾಗೂ ಡಾ.ಮೂಂಜೆ ರಾಜ ಒಡಂಬಡಿಕೆಯ ಬೆಂಬಲಿಗರ ಭದ್ರಕೋಟೆಯಾಗಿತ್ತು. ಆ ಸಂದರ್ಭದ ಒಂದು ಸಂಪೂರ್ಣ ಚಿತ್ರ ಬೇಕಾದರೆ, ಅಖಿಲ ಭಾರತ ನಿಮ್ನವರ್ಗಗಳ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿಯವರಾದ ಗವಾಯಿ ಅವರಿಗೆ ರಾಜಾ–ಮೂಂಜೆ ಒಡಂಬಡಿಕೆಯನ್ನು ಘೋಷಣೆ ಮಾಡಿದ ತರುಣದಲ್ಲೇ ಬರೆದ ಪತ್ರಗಳಲ್ಲಿ ಒಂದರಲ್ಲಿ ಡಾ. ಅಂಬೇಡ್ಕರ್ ಅವರು ಗಂಬೀರವಾದ ಪ್ರಚೋದನೆಗೆ ಒಳಗಾಗಿ ಬೆದರಿಕೆಯ ದಾಟಿಯಲ್ಲಿ ಹೀಗೆ ಬರೆದಿದ್ದರು. "ನಿಮ್ಮ ಸಂಸ್ಥೆಯೇನಾದರೂ ಜಂಟೀ ಮತದಾರರ ಮಂಡಲ ಮತ್ತು ರಿಸರ್ವ್ ಸೀಟುಗಳನ್ನು ಪ್ರತಿಪಾದಿಸಿದ್ದೇ ಆದರೆ ನಮ್ಮ ನಿಮ್ಮ ನಡುವೆ ಬಿರುಕುಂಟಾಗಿ ನಮ್ಮ ನಿಮ್ಮಲ್ಲೇ ಯುದ್ಧವಾಗುತ್ತದೆ." ಎಂದು ತಿಳಿಸಿದ್ದರು. ಗವಾಯಿ ಅವರು ಈ ಬೆದರಿಕೆಯ ವಿರುದ್ಧ ಲಾರ್ಡ್ ಲೋಧಿಯಾನ್ ಅವರಿಗೆ ಪ್ರತಿಭಟನೆ ಸಲ್ಲಿಸಿದ್ದರೆಂದು ವರದಿಯಾಗಿತ್ತು!

ಮೇ ೭ರ ಸಾಯಂಕಾಲ, ಕಾಂಗ್ರೆಸ್‌ನ ನಡೆವಳಿಗಳು ಪ್ರಾರಂಭವಾದವು. ಅಲ್ಪಸಂಖ್ಯಾತರ ಒಡಂಬಡಿಕೆಯಲ್ಲಿ ರೂಪುರೇಷೆಯಲ್ಲಿ ತೋರಿಸಿದ್ದ ಹಾಗೂ ಪ್ರತ್ಯೇಕ ಮತದಾರರ ಮಂಡಲದ ಬೇಡಿಕೆಯನ್ನು ಬೆಂಬಲಿಸುವ ಸುಮಾರು ಇನ್ನೂರು ಸಂದೇಶಗಳನ್ನು ಹಾಗೆ ಕಾಂಗ್ರೆಸ್‌ಗೆ ಜಯವನ್ನು ಕೋರಿ ಬಂದ ಸಂದೇಶಗಳನ್ನು ಓದಲಾಯಿತು. ಬೌದ್ಧ ಮಹಾ ಸಭೆಯ ಪ್ರಧಾನ ಕಾರ್ಯದರ್ಶಿಗಳವರು ಶುಭಕಾಮನೆಗಳ ಸಂದೇಶವೊಂದನ್ನು ಕಳುಹಿಸಿ ನಿಮ್ನವರ್ಗಗಳು ಬೌದ್ಧ ಧರ್ಮವನ್ನು ಸೇರಲು ಸಲಹೆ ನೀಡಿದ್ದರು. ಆಗಿನ ಡಾ.ಅಂಬೇಡ್ಕರ್ ಅವರ ಪಕ್ಷ ಸುವ್ಯವಸ್ಥಿತವಾಗಿದ್ದು ಕಟ್ಟುನಿಟ್ಟಾದ ಶಿಸ್ತನ್ನು ಕಾಪಾಡಿಕೊಂಡಿತ್ತು. ಬಡಪಾಯಿ ರಾಜಭೋಜ ಮತ್ತು ಅವರ ಬೆಂಬಲಿಗರಿಗೆ ಇಂಥದೊಂದು ವ್ಯವಸ್ಥಿತ ಬೆಂಬಲವಿರಲಿಲ್ಲ.

ಅಧ್ಯಕ್ಷರಾದ ಎಲ್.ಎನ್.ಹರ್‌ದಾಸ್ ಅವರು ನಿಮ್ನವರ್ಗಗಳರ ಕಾಂಗ್ರೆಸ್‌ನ ಚರಿತ್ರೆಯನ್ನು ಅವಲೋಕಿಸುತ್ತಾ ನಿಮ್ನವರ್ಗಗಳವರ ಮಧ್ಯೆ ಒಗ್ಗಟ್ಟಿರಬೇಕೆಂದು ಒತ್ತಿ ಹೇಳುತ್ತಾ ಪ್ರತ್ಯೇಕ ಮತದಾರರ ಮಂಡಲದೊಂದಿಗೆ ನಾವು ಈಜುತ್ತೇವೆ ಇಲ್ಲ ಮುಳುಗುತ್ತೇವೆ ಎಂದು ಹೇಳಿದರು. ಮುನಿಸ್ವಾಮಿ ಪಿಳ್ಳೈ ಅವರು ತಮ್ಮ ಎರಡು ಘಂಟೆಯ ಭಾಷಣದಲ್ಲಿ ನಿಮ್ನವರ್ಗಗಳವರ ಮಹದಾಸೆಗಳನ್ನು ವಿವರಿಸುತ್ತಾ ನಿಯೋಗಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ತೆಗೆದುಕೊಳ್ಳದಿರುವುದಕ್ಕೆ ಸರ್ಕಾರದ ನಡತೆಯ ಬಗ್ಗೆ ಅಸಂತೃಪ್ತಿಯನ್ನು ವ್ಯಕ್ತಪಡಿಸಿದರು. ಕಡೆಯಪಕ್ಷ ನಿಮ್ನವರ್ಗಗಳವರಿಂದ ಇಬ್ಬರನ್ನಾದರೂ ಆಹ್ವಾನಿಸುವಂತೆ ಸರ್ಕಾರವನ್ನು ಕೇಳಿದರು. ಮಾರನೆಯ ದಿನ ಮುಕ್ತ ಅಧಿವೇಶನ ಪ್ರಾರಂಭವಾಯಿತು. ನಿಮ್ನವರ್ಗಗಳ ಕಾಂಗ್ರೆಸ್ ಎರಡು ಠರಾವುಗಳನ್ನು ಅಳವಡಿಸಿಕೊಂಡಿತು. ಅಲ್ಪಸಂಖ್ಯಾತರ ಒಡಂಬಡಿಕೆಯಲ್ಲಿ ಏನೇನೂ ಕಡಿಮೆ ಮಾಡಲಾಗದ ನಿಮ್ನವರ್ಗಗಳವರ ಕನಿಷ್ಠ ಬೇಡಿಕೆಗಳು ಇವೆಯೆಂಬುದು ತನ್ನ ಪರ್ಯಾಲೋಚಿಸಿದ ಅಭಿಪ್ರಾಯವೆಂದು

ಅದು ಘೋಷಿಸಿತು. ಅದು ರಾಜಾ–ಮೂಂಜೆ ಒಡಂಬಡಿಕೆಯನ್ನು ತಿರಸ್ಕರಿಸಿತು. ಕಾರಣ ಅದರ ಪ್ರತಿನಿಧಿಗಳ ಪ್ರಕಾರ ಆ ಒಡಂಬಡಿಕೆ ನಿಮ್ನವರ್ಗಗಳವರ ಹಿತಾಸಕ್ತಿಗೆ ವಿರುದ್ಧವಾಗಿದ್ದರಿಂದ ಅದನ್ನು ತಿರಸ್ಕರಿಸಲಾಯಿತು. ಹಾಗೆಯೇ ಡಾ.ಅಂಬೇಡ್ಕರ್ ಅವರು ಮತ್ತು ರಾವ್ ಬಹಾದ್ದೂರ್ ಶ್ರೀನಿವಾಸನ್ ಅವರು ದುಂಡು ಮೇಜಿನ ಸಮ್ಮೇಳನದಲ್ಲಿ ಸಲ್ಲಿಸಿದ ಅಸಾಧಾರಣವಾದ ಸೇವೆಯನ್ನು ಪ್ರಶಂಸಿಸಲಾಯಿತು. ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಡಾ.ಅಂಬೇಡ್ಕರ್ ಅವರು ಹೇಳಿದ್ದೇನೆಂದರೆ "ಅಸ್ಪೃಶ್ಯರ ಕೈಗೆ ರಾಜಕೀಯ ಲಗಾಮು ಬರಲೇಬೇಕಾದುದು ಅತಿ ಅವಶ್ಯಕವಾಗಿದೆ. ಅದಕೋಸ್ಕರ ನಾವೆಲ್ಲ ಒಗ್ಗಟ್ಟಾಗಿದ್ದುಕೊಂಡು ರಾಜಕೀಯ ಸ್ಥಾನಮಾನ ಪಡೆದುಕೊಳ್ಳಬೇಕು. ಭಾರತದಲ್ಲಿ ಎಲ್ಲಿಯವರೆಗೆ ಅಸ್ಪೃಶ್ಯರು ರಾಜಕೀಯ ದಾರಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಅಸ್ಪೃಶ್ಯತೆಯನ್ನು ತೊಡೆದುಹಾಕಲಾಗುವುದಿಲ್ಲ." ಡಾ.ಅಂಬೇಡ್ಕರ್ ಮತ್ತು ಅಲ್ಪಸಂಖ್ಯಾತರ ಒಡಂಬಡಿಕೆಗೆ ತಾವು ನಿಷ್ಠರಾಗಿರುವುದಾಗಿ ಘೋಷಣೆ ಮಾಡುತ್ತಾ ನಿಮ್ನವರ್ಗಗಳವರ ಕಾಂಗ್ರೆಸ್ ಮುಕ್ತಾಯವಾಯಿತು.

# ೧೩
# ನಾನು ನನ್ನ ನ್ಯಾಯಯುತವಾದ ಬೇಡಿಕೆಯಿಂದ ಒಂದಂಗುಲದಷ್ಟೂ ಹಿಂದೆ ಸರಿಯುವುದಿಲ್ಲ

ಪೂನಾದಲ್ಲಿ ಮುಖ್ಯ ಕಚೇರಿ ಹೊಂದಿರುವ ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಲೀಗ್‌ನವರ ಆಹ್ವಾನದ ಮೇಲೆ ದುಂಡು ಮೇಜಿನ ಸಮ್ಮೇಳನದಲ್ಲಿ ನಿಮ್ನವರ್ಗಗಳನ್ನು ಪ್ರತಿನಿಧಿಸಿದ ಹಾಗೂ ಪ್ರಸಕ್ತ ಮತಾಧಿಕಾರ ಸಮಿತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರು ಮೇ ತಿಂಗಳ ಮೊದಲಲ್ಲಿ ಪೂನಾಕ್ಕೆ ಬರುವವರಿದ್ದು, ಅಲ್ಲಿ ಲೀಗ್‌ನ ವತಿಯಿಂದ ಅವರ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸುವ ಒಂದು ಭಿನ್ನವತ್ತಳೆಯನ್ನು ಸ್ವೀಕರಿಸುವವರಿದ್ದಾರೆ.

ಅದೇ ಸಮಯದಲ್ಲಿ ಪೂನಾ ಜಿಲ್ಲೆಯ ನಿಮ್ನವರ್ಗಗಳು ಅವರಿಗೊಂದು ಭಿನ್ನವತ್ತಳೆಯನ್ನು ಸಮರ್ಪಿಸುತ್ತಾರೆ. ಆರ್.ಎಸ್. ಘಟಗೆ ಅವರ ಅಧ್ಯಕ್ಷತೆಯಲ್ಲಿ ಒಂದು ಸ್ಥಳೀಯ ಸ್ವಾಗತ ಸಮಿತಿ ಇದ್ದುದಕ್ಕಾಗಿ ಸಿದ್ಧತೆಗಳನ್ನು ಮಾಡಿದೆ. ಕಾಂಪ್ಟೀ ಕಾಂಗ್ರೆಸ್‌ನ ನಂತರ ಡಾ.ಅಂಬೇಡ್ಕರ್ ಅವರು ಪೂನಾ, ಸೊಲ್ಲಾಪುರ ಮತ್ತು ನಿಪ್ಪಾಣಿಗಳಿಗೆ ಭೇಟಿ ಕೊಟ್ಟು ಅಲ್ಲಿ ನಿಮ್ನವರ್ಗಗಳವರ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಭೇಟಿಗಳಲ್ಲಿ ಪೂನಾ ಭೇಟಿ ಬಹಳ ಮುಖ್ಯವಾಗಿತ್ತು. ಅವರು ಮೇ ೨೧, ೧೯೩೨ರ ಸಾಯಂಕಾಲ ಪೂನಾ ತಲುಪಿದರು. ಅಲ್ಲಿ ಅವರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು. ಆ ಬಹುದೊಡ್ಡದಾದ ಮೆರವಣಿಗೆ ಕಂದಾಚಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಅಹಲ್ಯಾಶ್ರಮದ ಮೈದಾನವನ್ನು ಸೇರಿತು. ಎ.ಬಿ.ಲತ್ತೆ ಅವರ ಅಧ್ಯಕ್ಷತೆಯಲ್ಲಿ ಅವರಿಗೆ ಅಲ್ಲಿ ಒಂದು ಭಿನ್ನವತ್ತಳೆಯನ್ನು ಕೊಡಲಾಯಿತು. ಲತ್ತೆಯವರು ಲಂಡನ್ನಿನಲ್ಲಿ ಇದ್ದಾಗ ಅವರನ್ನು ಬ್ರಿಟಿಷ್ ರಾಜಕಾರಣಿಗಳು ಮತ್ತು ಉನ್ನತ ಅಧಿಕಾರಿಗಳು ಅಂಬೇಡ್ಕರ್ ಅವರು ಭಾರತದ ಕ್ರಾಂತಿಕಾರಿ ಪಕ್ಷಕ್ಕೆ ಸೇರಿದವರೇ, ಅಲ್ಲವೆ ಎಂದು ಗುಟ್ಟಾಗಿ ಅವರನ್ನು ಪ್ರಶ್ನಿಸಿದ್ದನ್ನು ಅವರು ಸಭೆಯಲ್ಲಿ ಬಹಿರಂಗಪಡಿಸಿದರು. ಡಾ.ಅಂಬೇಡ್ಕರ್ ಅವರಂಥ ದೊಡ್ಡ ಮನುಷ್ಯರನ್ನು ದ್ರೋಹಿ ಎಂದು ಚಿತ್ರಿಸಿದ ರಾಷ್ಟ್ರೀಯತಾ ಪತ್ರಿಕೆಯವರು ಎಂದು ಹೇಳಿಕೊಂಡವರು ಮಾಡಿದ್ದನ್ನು ತೀರಾ ಅವಮಾನಕರ ಎಂದು ಲತ್ತೆಯವರು ಹೇಳಿದರು. ಒಮ್ಮೆ ಅಂಬೇಡ್ಕರ್ ಅವರನ್ನು ಕೊಲ್ಹಾಪುರದ ಕಲಾ ಕಾಲೇಜಿನ ಪ್ರಾಂಶುಪಾಲರ ಹುದ್ದೆಯನ್ನು ಒಪ್ಪಿಕೊಳ್ಳುವಂತೆ ಕೇಳಿದ್ದ ಲತ್ತೆಯವರು, ಅವರನ್ನು ಲಾಯರ್ ಆಗಿ ಅವರ ಸಾಫಲ್ಯದ ಬಗ್ಗೆ ಕೇಳಿದರು. ಡಾ.ಅಂಬೇಡ್ಕರ್ ಅದಕ್ಕೆ ಉತ್ತರ ಕೊಡುತ್ತಾ ನಿಮ್ನವರ್ಗಗಳವರನ್ನು ಮಾನವ ಜೀವಿಗಳ ಮಟ್ಟಕ್ಕೆ ತರುವುದರಲ್ಲಿನ ಜಯವೇ ತಮ್ಮ ಜೀವನದಲ್ಲಿ ತಾವು ಸಾಧಿಸುವ ಜಯ ಎಂದು ಹೇಳಿದರು. ಲತ್ತೆಯವರು ಭಾಷಣವನ್ನು ಮುಕ್ತಾಯ ಮಾಡುತ್ತಾ ಭಾರತದಲ್ಲಿ ಕೆಳಕ್ಕೆ ತುಳಿಯಲ್ಪಟ್ಟವರ ಸ್ಥಿತಿಗತಿಯನ್ನು ಉತ್ತಮಪಡಿಸುವುದಕ್ಕೆ ಡಾ.ಅಂಬೇಡ್ಕರ್ ಅವರ ಪರಿಶ್ರಮದ ಸೇವೆಯೇ, ಭಾರತಕ್ಕೆ ಮತ್ತು ಪ್ರಪಂಚಕ್ಕೆ ಅವರು ಕೊಡುತ್ತಿರುವ ಮಹತ್ತರವಾದ ಕೊಡುಗೆ ಎಂದು ಹೇಳಿದರು. ಬಿನ್ನವತ್ತಳೆಗೆ ಉತ್ತರ ಕೊಡುತ್ತಾ ಡಾ.ಅಂಬೇಡ್ಕರ್ ಅವರು ಹೀಗೆ ಹೇಳಿದರು "ಪ್ರಸ್ತುತದಲ್ಲಿ ಭಾರತದಲ್ಲೀಗ ಅತ್ಯಂತ ದ್ವೇಷಿಸಲ್ಪಟ್ಟ ಮನುಷ್ಯನಾಗಿದ್ದೇನೆ. ನನ್ನನ್ನು ಒಬ್ಬ ದ್ರೋಹಿಯೆಂದು ಬಿಂಬಿಸಲಾಗಿದೆ. ನಾನು ಹಿಂದೂಗಳ ಶತೃವೆಂದು ಹೀಗಳಿಯಲ್ಪಟ್ಟಿದ್ದೇನೆ. ಹಿಂದುತ್ವದ ವಿನಾಶಕನೆಂದು

ಶಪಿಸಲ್ಪಟ್ಟಿದ್ದೇನೆ. ದೇಶದ ಅತಿ ದೊಡ್ಡ ಶತೃವೆಂದು ಮುದ್ರೆಯನ್ನು ಒತ್ತಿಸಿಕೊಂಡಿದ್ದೇನೆ. ಆದರೆ ನನ್ನನ್ನು ನಂಬಿ ; ಕೆಲವು ದಿವಸಗಳ ನಂತರ ಈಗ ಮೇಲೆ ಎದ್ದಿರುವ ಧೂಳು ಕೆಳಗೆ ಇಳಿದ ಮೇಲೆ ದುಂಡು ಮೇಜಿನ ಸಮ್ಮೇಳನದ ನಡವಳಿಕೆಗಳ ಪುನರ್ವೀಕ್ಷಣೆ ಮಾಡಿದಾಗ ಹಿಂದೂಗಳ ಭವಿಷ್ಯತ್ತಿನ ಪೀಳಿಗೆಯವರು ದೇಶಕ್ಕೆ ನಾನು ಮಾಡಿದ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅವರೇನಾದರೂ ನನ್ನ ಸೇವೆಯನ್ನು ಗುರುತಿಸದೆ ಇದ್ದರೆ ಅವರ ತೆಗಳಿಕೆಯನ್ನು ನಾನೇನೂ ಲೆಕ್ಕಿಸುವುದಿಲ್ಲ." ಶಾಂತ ಮುಖಮುದ್ರೆಯಿಂದ ಅವರು ಮುಕ್ತಾಯ ಮಾಡಿದ್ದೇನೆಂದರೆ, "ನನಗೆ ಅತ್ಯಂತ ತೃಪ್ತಿ ಕೊಟ್ಟಿರುವ ವಿಷಯವೇನೆಂದರೆ ನಿಮ್ನವರ್ಗದ ಜನರಿಗೆ ನನ್ನ ಕೆಲಸದಲ್ಲಿ ಅವ್ಯಕ್ತವಾದ ನಂಬಿಕೆ ಇದೆ. ಯಾವ ಧ್ಯೇಯ ಸಾಧನೆಗೆ ನಾನು ಕೆಲಸ ಮಾಡುತ್ತಿದ್ದೇನೆಯೋ ಅದರಲ್ಲಿ ಅವರಿಗೆ ಒಂದೇ ಪ್ರಕಾರದ ಶ್ರದ್ಧೆ ಇದೆ. ಯಾರ ಮಧ್ಯೆ ನಾನು ಹುಟ್ಟಿ ಬೆಳೆದೆನೋ, ಯಾರ ಮಧ್ಯೆ ನಾನು ಜೀವಿಸುತ್ತಿದ್ದೇನೆಯೋ ಆ ತುಳಿತಕ್ಕೊಳಗಾದ ಜನಗಳ ಧ್ಯೇಯ ಸಾಧನೆಗೋಸ್ಕರ ಪ್ರಾಣ ಬಿಡುತ್ತೇನೆಂಬ ಗಂಭೀರ ಪ್ರತಿಜ್ಞೆಯನ್ನು ಮಾಡುತ್ತೇನೆ. ನನ್ನ ನ್ಯಾಯಯುತವಾದ ಧ್ಯೇಯದಿಂದ ನಾನು ಒಂದಿಂಚೂ ಹಿಂದೆ ಸರಿಯುವುದಿಲ್ಲ. ನನ್ನನ್ನು ಹೀಗಳೆಯುವವರ ಟೀಕೆಗಳನ್ನು ನಾನು ಲೆಕ್ಕಿಸುವುದಿಲ್ಲ." ಡಾ.ಅಂಬೇಡ್ಕರ್ ಅವರ ಭಾಷಣಕ್ಕೆ ಇನ್ನೂ ಹೆಚ್ಚಿನ ಆಯಾಮಗಳಿದ್ದು, ಅವುಗಳನ್ನು ಬಾಂಬೆ ಕ್ರಾನಿಕಲ್ ಪತ್ರಿಕೆಯಲ್ಲಿ ವರದಿ ಮಾಡಲಾಗಿದೆ. ಅವು ಕೆಳಕಂಡಂತೆ ಇವೆ...... ಸಂಪಾದಕರು.

ಉತ್ತರ ಕೊಡುತ್ತಾ ಡಾ.ಅಂಬೇಡ್ಕರ್ ಹೀಗೆ ಹೇಳಿದರು: "ನನಗೆ ದೇವಸ್ಥಾನಗಳಾಲೀ, ಬಾವಿಗಳಾಗಲೀ, ಅಂತರ್ಜಾತಿ ಔತಣಗಳಾಗಲೀ ಬೇಕಿಲ್ಲ ; ನನಗೆ ಬೇಕಾಗಿರುವುದು ಸರ್ಕಾರಿ ಕೆಲಸ, ಆಹಾರ, ಬಟ್ಟೆ, ವಿದ್ಯಾಭ್ಯಾಸ ಮತ್ತಿತರ ಅವಕಾಶಗಳು. ಜಾತಿ ವ್ಯವಸ್ಥೆಗಳಲ್ಲದೆ, ಇತರ ಭೇದಗಳು– ಅಂದರೆ ವಿದ್ಯಾಭ್ಯಾಸದಲ್ಲಿನ 'ಗುಣಭೇದ', ಇದಕ್ಕೆ ರಾಜಕೀಯ ಸುಧಾರಣೆಗಳು ಬೇಕಾಗಿವೆ. ಈ ಕಾರಣಗಳಿಂದ ತಾವು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಂಡಿರುವುದಾಗಿಯೂ, ಸಾಮಾಜಿಕ ಸುಧಾರಣೆಗೂ ಮುಂಚೆ ರಾಜಕೀಯ ಸುಧಾರಣೆ ಆಗಬೇಕೆಂದು ತಮಗೆ ಮನವರಿಕೆ ಆಗಿದೆಯೆಂದು ಹೇಳಿದರು. ರಾವ್ ಬಹಾದೂರ್ ರಾಜ ಮತ್ತು ಗವಾಯಿ ಅವರುಗಳಂಥ ನಾಯಕರುಗಳು ಜಂಟಿ ಮತದಾರ ಮಂಡಲವನ್ನು ಪ್ರತಿಪಾದಿಸುತ್ತಿದ್ದಾಗ್ಯೂ ಸದ್ಯಕ್ಕೆ ನಮ್ಮ ಸಮುದಾಯಕ್ಕೆ ಬೇಕಾಗಿರುವುದು ಪ್ರತ್ಯೇಕ ಮತದಾರರ ಮಂಡಲವೆಂದು ಹೇಳಿದರು.

# ೧೪
# ಸಾಮಾಜಿಕ ಸುಧಾರಣೆ ಆಗುವುದಕ್ಕಿಂತ ಮುಂಚೆ ರಾಜಕೀಯ ಸುಧಾರಣೆ ಬರಲೇಬೇಕು

ದಿನಾಂಕ:೨೫.೦೫.೧೯೩೨ರಂದು ಬೆಳಗಾವಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ದಕ್ಷಿಣ ವಿಭಾಗದ ಬೇರೆ ಬೇರೆ ಭಾಗಗಳಿಂದ ಬಂದ ನಿಮ್ನವರ್ಗಗಳವರು ಒಂದು ಜಂಟಿ ಭಿನ್ನವತ್ತಳೆಯನ್ನು ಅರ್ಪಿಸಿದರು. ಅಧ್ಯಕ್ಷತೆ ವಹಿಸಿದ್ದ ದಿವಾನ್ ಬಹದೂರ್ ಲತ್ತೆಯವರು ಅತಿಥಿಯನ್ನು ಹೃದಯಾಂತರಾಳದಲ್ಲಿ ಒಬ್ಬ ರಾಷ್ಟ್ರೀಯತಾವಾದಿ ಎಂದು ಪರಿಚಯ ಮಾಡಿಕೊಟ್ಟರು. ನಿಮ್ನವರ್ಗಗಳವರ ಧ್ಯೇಯಸಾಧನೆಗೆ ಡಾ.ಅಂಬೇಡ್ಕರ್ ಅವರು ಸಲ್ಲಿಸಿದ ಸೇವೆಯನ್ನು ಪ್ರಶಂಸಿದರು. ಭಿನ್ನವತ್ತಳೆ ಮತ್ತು ರೂ.೫೦೦/– ರೂಪಾಯಿಗಳ ನಗದನ್ನು ಡಾ.ಅಂಬೇಡ್ಕರ್ ಅವರಿಗೆ ಸಮರ್ಪಿಸಲಾಯಿತು.

ಉತ್ತರ ಕೊಡುತ್ತಾ ಡಾ.ಅಂಬೇಡ್ಕರ್ ಅವರು ಸಾಮಾಜಿಕ ಸುಧಾರಣೆಗಿಂತ ಮುಂಚೆ ರಾಜಕೀಯ ಸುಧಾರಣೆ ಆಗಬೇಕು. ರಾಜಕೀಯ ಅಧಿಕಾರವಿಲ್ಲದೆ ನಿಮ್ನವರ್ಗಗಳವರ ಸ್ಥಾನಮಾನ ಅಭಿವೃದ್ಧಿಯಾಗುವುದಿಲ್ಲ ಎಂದು ಹೇಳಿದರು. ನಿಮ್ನವರ್ಗಗಳವರ ಏಳಿಗೆಗೆ ಮಾತ್ರ ತಾವು ಪರಿಶ್ರಮ ಪಡುತ್ತಿರುವುದು ಸ್ವಾರ್ಥವೆಂದು ಪರಿಗಣಿಸಲ್ಪಡಬಹುದಾದರೂ, ಇದುವರೆಗೆ ಈ ದೇಶ ಅವರಿಗೆ ಮಾಡಿದ ದೊಡ್ಡ ಅನ್ಯಾಯವನ್ನು ಗಮನದಲ್ಲಿಟ್ಟುಕೊಂಡರೆ, ಅದನ್ನು ಸಮರ್ಥಿಸಿಕೊಳ್ಳಬಹುದೆಂದರು. ಕಳೆದ ರಾತ್ರಿ ಅವರು ಶೊಲ್ಲಾಪುರಕ್ಕೆ ಪ್ರಯಾಣ ಬೆಳೆಸಿದರು.

# ೧೫
# ಅಧ್ಯಾತ್ಮಿಕ ಆಹಾರಕ್ಕಿಂತ ಪ್ರಾಪಂಚಿಕ ಒಳಿತಿಗೆ ಹೆಚ್ಚು ಗಮನ ಮಾಡಬೇಕು

ಪೂನಾ ಒಡಂಬಡಿಕೆಯಾದ ನಂತರ ಅಸ್ಪೃಶ್ಯರೆಲ್ಲಾ ಡಾ. ಅಂಬೇಡ್ಕರ್ ಅವರ ಮಾತುಗಳನ್ನು ಕೇಳುವುದಕ್ಕಾಗಿ ಬಹಳ ಉತ್ಸುಕತೆಯಿಂದ ಕಾಯುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ಬೊಂಬಾಯಿ ವೋರ್ಲಿಯಲ್ಲಿನ ಯುವಕರುಗಳು ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದರು. ಆ ಸಭೆಯನ್ನು ದಿ:೦೨.೦೯.೧೯೩೨ ಬುಧವಾರ ವೊರ್ಲಿಯಲ್ಲಿನ ಬಿ.ಡಿ.ಡಿ ಚಾಲ್ಸ್‌ಗಳ ತೆರೆದ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ದೇವರಾವ್ ನಾಯಿಕ್ ಅವರು ವಹಿಸಿದ್ದರು. ದೇವಸ್ಥಾನ ಪ್ರವೇಶಕ್ಕಾಗಿ ನಾಸಿಕ್‌ನಲ್ಲಿ ತಮ್ಮದೇ ಆದ ರೀತಿಯಲ್ಲಿ ಒಂದು ಚಳುವಳಿಯನ್ನು ಪ್ರಾರಂಭಿಸಿದ್ದ ಡಾ.ಅಂಬೇಡ್ಕರ್ ಅವರು ಬಹುಬೇಗನೆ ತಮ್ಮ ಚಳುವಳಿಯ ಹಡಗಿನ ಚುಕ್ಕಾಣಿಯನ್ನು ಬದಲಾಯಿಸಿದರು. ರಾಜಕೀಯ ಅಧಿಕಾರವನ್ನು ಸಾಧಿಸುವುದಕ್ಕಾಗಿ ತಮ್ಮೆಲ್ಲರ ಶಕ್ತಿಯನ್ನು ವ್ಯಯಿಸಬೇಕೆಂದು ಜನರಿಗೆ ಒತ್ತಾಸೆ ಮಾಡಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಂಬೇಡ್ಕರ್ ಅವರು ಹೀಗೆ ಹೇಳಿದರು: "ದೇವಸ್ಥಾನ ಪ್ರವೇಶ ಚಳುವಳಿಯ ಉದ್ದೇಶ ಒಳ್ಳೆಯದೇ ಆದರೆ ನೀವು ಅಧ್ಯಾತ್ಮಿಕ ಆಹಾರಕ್ಕಿಂತ ಪ್ರಾಪಂಚಿಕ ಒಳಿತಿಗೆ ಹೆಚ್ಚು ಕಾಳಜಿ ವಹಿಸಬೇಕು. ನಿಮಗೆ ತಿನ್ನುವುದಕ್ಕೆ ಆಹಾರವಾಗಲೀ, ಉಡುವುದಕ್ಕೆ ಬಟ್ಟೆಯಾಗಲೀ, ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಅವಕಾಶಗಳಾಗಲೀ, ವೈದ್ಯಕೀಯ ಸಹಾಯವಾಗಲೀ ಹಣವಿಲ್ಲದೆ ನಿಮಗೆ ಲಭಿಸುವುದಿಲ್ಲ. ಆದ್ದರಿಂದ ನೀವು ಗಳಿಕೆಗಳ ಬಗ್ಗೆ ಬಹಳ ಎಚ್ಚರದಿಂದಿರಬೇಕು. ನಿಮ್ಮ ಬಲವನ್ನು ಹೆಚ್ಚಿಸಿಕೊಂಡು ಜೀವನದಲ್ಲಿ ಪ್ರಾಪಂಚಿಕವಾಗಿ ಮುಂದುವರಿಯುವುದಕ್ಕೆ ಹೋರಾಡಬೇಕು. ಚಳುವಳಿಯ ಕೇಂದ್ರ ಕಚೇರಿಯನ್ನು ಸ್ಥಾಪಿಸುವುದಕ್ಕಾಗಿ ಒಂದು ಕಟ್ಟಡವನ್ನು ನಿರ್ಮಿಸಬೇಕಾಗಿದ್ದು ಕಟ್ಟಡದ ನಿಧಿಗಾಗಿ ಸಭೆಗೆ ಭಾವನಾತ್ಮಕವಾದ ಮನವಿಯನ್ನು ಮಾಡಿದರು."

## ೧೬
# ಕ್ರಿಯಾಶೀಲರಾಗಿ, ನಿಮ್ಮ ಕೈಗಳಿಗೆ ಬರುವ ಅಧಿಕಾರವನ್ನು ಉಪಯೋಗಿಸಿಕೊಳ್ಳಿ

೯ನೇ ಅಕ್ಟೋಬರ್ ೧೯೩೨ ಭಾನುವಾರ ರಾತ್ರಿ ೧೦.೩೦ ಗಂಟೆಗೆ ಬೊಂಬಾಯಿಯ ಬೆಲಾಸಿನ್ ರಸ್ತೆಯ "ಅಭಿವೃದ್ಧಿ ವಿಶ್ವಸ್ತ ಚಾಲ್‌ಗಳ ಮೈದಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಾಮಾಜಿಕ ಸೇವಾ ಲೀಗ್‌ನ ಮುಖ್ಯ ಕೆಲಸಗಾರರಲ್ಲಿ ಒಬ್ಬರಾದ ಮಿ.ಬಾಪು ಸಾಹೇಬ್ ಸಹಸ್ರ ಬುಧೆ ಅವರು ವಹಿಸಿದ್ದರು. ಶ್ರೀ ಎಸ್.ಎನ್.ಶಿವ ತಾರ್‌ಕರ್ ಅವರೂ ಸಹ ಉಪಸ್ಥಿತರಿದ್ದರು.

ಇನ್ನೊಂದು ಲೋಕದಲ್ಲಿನ ಕಣ್ಣಿಗೆ ಕಾಣದ ಸಂತೋಷವನ್ನು ಹುಡುಕಿಕೊಳ್ಳಲು ತಮ್ಮ ಜನಗಳು ಉಪಾಯಗಳಿಗಾಗಿ ಹಪಹಪಿಸುತ್ತ ತಮ್ಮ ಅಸ್ತಿತ್ವಕ್ಕಾಗಿ ಹೋರಾಟವನ್ನು ಎಷ್ಟು ಕಷ್ಟಕರವಾಗಿ ಮಾಡಿಕೊಂಡಿದ್ದಾರೆಂದು ಕಣ್ಣಿಗೆ ಕಟ್ಟುವ ಹಾಗೆ ತಮ್ಮ ಭಾಷಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ವಿವರಿಸಿದರು. ಇದರ ಬದಲು ಅವರ ಮನಸ್ಸು ಐಹಿಕ ಶಕ್ತಿಗಳ ಮೇಲೆ ಕೇಂದ್ರಿಕೃತವಾಗಬೇಕಿತ್ತು ಎಂದು ಹೇಳಿದರು. ಜನಗಳು ಜೀವನದ ಐಹಿಕ ಅವಶ್ಯಕತೆಗಳನ್ನು ಕಡೆಗಣಿಸಿ, ಅದನ್ನು ಪಡೆಯಬಹುದಾದ ಜ್ಞಾನದ ಕಡೆಗೆ ಔದಾಸೀನ್ಯವನ್ನು ಬೆಳೆಸಿಕೊಂಡಿದ್ದರಿಂದ ದೇಶ ಹಿಂದುಳಿದು ಅದರ ಪುರೋಭಿವೃದ್ಧಿ ನಿಂತೇ ಹೋಯಿತು ಎಂದು ತಮ್ಮ ಹೃದಯಸ್ಪರ್ಶಿ ಮನವಿಯಲ್ಲಿ ಹೇಳಿದರು. ನಿಮ್ಮ ಕುತ್ತಿಗೆಗೆ ತುಳಸೀಹಾರ ಹಾಕಿಕೊಂಡ ಮಾತ್ರಕ್ಕೆ ಸಾಲಗಾರರ ಹಿಡಿತದಿಂದ ನೀವು ತಪ್ಪಿಸಿಕೊಳ್ಳಲಾಗುವುದಿಲ್ಲ. ರಾಮನ ಹಾಡನ್ನು ಹಾಡಿದ ಮಾತ್ರಕ್ಕೆ ಮನೆ ಮಾಲೀಕ ಬಾಡಿಗೆಯಲ್ಲೇನೂ ರಿಯಾಯಿತಿ ತೋರಿಸುವುದಿಲ್ಲ. ಪಂಡರಾಪುರಕ್ಕೆ ಪ್ರತಿ ವರ್ಷ ಯಾತ್ರೆ ಹೋದರೆ ತಿಂಗಳ ಕಡೆಯಲ್ಲಿ ನಿಮಗೆ ಸಂಬಳಗಳು ಸಿಗುವುದಿಲ್ಲ. ನಮ್ಮ ಸಮಾಜದ ಹೆಚ್ಚಿನ ಭಾಗದ ಜನ ಈ ಕೆಲಸಕ್ಕೆ ಬಾರದ ಜೀವನದ ರಹಸ್ಯಗಳಲ್ಲಿ ಮೂಢ ನಂಬಿಕೆಗಳಲ್ಲಿ, ಅಧ್ಯಾತ್ಮ ಯೋಗದಲ್ಲಿ ಮುಳುಗಿಬಿಟ್ಟರೆ, ಚಾಲಾಕಿ ಮತ್ತು ಸ್ಪರ್ಧೆಗೆ ಇಳಿಯುವ ಜನಗಳಿಗೆ ತಮ್ಮ ಸಮಾಜ ವಿರೋಧಿ ಚಟುವಟಿಕೆಗಳಿಗೆ ಸಾಕಷ್ಟು ಅವಕಾಶಗಳು ಸಿಕ್ಕಿ ಬಿಡುತ್ತವೆ. ತಮ್ಮ ಭಾಷಣವನ್ನು ಮುಗಿಸುತ್ತಾ ಅವರು ಹೇಳಿದ್ದೇನೆಂದರೆ, ಕಾರ್ಯಪ್ರವೃತ್ತರಾಗಿ ನಿಮ್ಮ ಕೈಗಳಿಗೆ ಬರುತ್ತಿರುವ ಅಲ್ಪ ಅಧಿಕಾರವನ್ನು ಬಳಸಿಕೊಳ್ಳಿ. ನೀವು ಉದಾಸೀನ ಮಾಡಿದರೆ ಅದನ್ನು ನೀವು ಸರಿಯಾಗಿ ಉಪಯೋಗಿಸಿಕೊಳ್ಳದೇ ಇದ್ದರೆ ನಿಮ್ಮ ಕಳವಳಕ್ಕೆ ಕೊನೆಯೇ ಇರುವುದಿಲ್ಲ. ಯಾವ ಗುಲಾಮಗಿರಿಯ ವಿರುದ್ಧ ನಾವು ಹೋರಾಟ ಮಾಡುತ್ತಿದ್ದೇವೆಯೋ ಅದು ನಮ್ಮನ್ನು ಪುನಃ ಹಿಂದಕ್ಕೆ ತಳ್ಳಿ ಬಿಡಬಹುದೆಂಬ ಭಯ ನನ್ನ ಮನಸ್ಸಿನಲ್ಲಿ ಅಡಗಿ ಕುಳಿತಿದೆ. ಈ ನಮ್ಮ ಜಾಗೃತಿ ಅಲ್ಪಾಯುವಾಗುತ್ತದೇನು?

# ೧೭
# ಗುಲಾಮಗಿರಿಯ ಯೋಚನೆಯನ್ನೇ ತೊಡೆದು ಹಾಕಿ

೨೮ನೇ ಅಕ್ಟೋಬರ್ ೧೯೩೨ರಂದು ಸರ್ ಕವಾಸ್ ಜೀ ಜಹಾಂಗೀರ್ ಭವನದಲ್ಲಿ ಡಾ.ಅಂಬೇಡ್ಕರ್ ಅವರಿಗೆ ಬಿನ್ನವತ್ತಳೆಯೊಂದನ್ನು ಋಷಿ ಸಮಾಜದವರು ಅರ್ಪಿಸಿದರು. ಅಸ್ಪೃಶ್ಯರ ಮುಖಂಡರಾದ ಡಾ.ಪಿ.ಜಿ.ಸೋಲಂಕಿ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಏರ್ಪಾಡುಗಳನ್ನು ನೋಡಿಕೊಳ್ಳುವುದಕ್ಕೆ ಸಮತಾ ಸೈನಿಕದಳದ ಸ್ವಯಂಸೇವಕರು ಸಭಾ ಸ್ಥಳದಲ್ಲಿ ಹಾಜರಿದ್ದರು. ದೇವಸ್ಥಾನ ಪ್ರವೇಶ ಚಳುವಳಿಯಲ್ಲಿ ಮತ್ತು ಅಂತರ್ಜಾತಿ ಭೋಜನಕೂಟಗಳಲ್ಲಿ ಮುಳುಗಿ ಹೋಗಬಾರದೆಂದು ಡಾ.ಅಂಬೇಡ್ಕರ್ ಎಚ್ಚರಿಸಿದರು. ಅದರಿಂದ ಹೊಟ್ಟೆಪಾಡಿನ ಸಮಸ್ಯೆ ಪರಿಹಾರವಾಗುವುದಿಲ್ಲವೆಂದು ಹೇಳಿದರು. ಕಷ್ಟಕೋಟಲೆಗಳು ನಿಮ್ಮ ಹಣೆಯಲ್ಲಿ ಬರೆದಿವೆ ಎಂಬ ಮೂರ್ಖ ನಂಬಿಕೆಗಳನ್ನು ಎಷ್ಟು ಬೇಗ ಕಿತ್ತು ಹಾಕುತ್ತಿರೋ ಅಷ್ಟು ಒಳ್ಳೆಯದು ಎಂದು ಹೇಳಿದರು. ನಿಮ್ಮ ಬಡತನ ಅನಿವಾರ್ಯವೆಂದೂ, ಅದು ತನ್ನಲ್ಲೇ ಹುಟ್ಟಿದ್ದೆಂದೂ, ಅದು ನಿಮ್ಮಿಂದ ಬೇರೆಯಾಗುವುದಿಲ್ಲವೆಂದೂ ನೀವು ಯೋಚಿಸುವುದು ಸಂಪೂರ್ಣವಾಗಿ ತಪ್ಪು. ನಿಮ್ಮನ್ನು ನೀವು ಗುಲಾಮರು ಎಂಬ ಯೋಚನಾಲಹರಿಯನ್ನು ಬಿಟ್ಟು ಹಾಕಿ ಎಂದು ತಮ್ಮ ಮಾತನ್ನು ಮುಗಿಸಿದರು.

# ೧೮
# ಅದೃಷ್ಟದ ಮೇಲೆ ನಂಬಿಕೆ ಬೇಡ, ನಿಮ್ಮ ಶಕ್ತಿಯ ಮೇಲೆ ನಂಬಿಕೆ ಇಡಿ

೧೮.೦೨.೧೯೩೨ರ ಶನಿವಾರದಂದು ಥಾಣಾ ಜಿಲ್ಲೆಯ ಸಮ್ಮೇಳನವನ್ನು ಕಸಾರಾದಲ್ಲಿ ನಡೆಸಲಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಡಾ.ಅಂಬೇಡ್ಕರ್ ವಹಿಸಿದ್ದರು. ಅವರು ಬೊಂಬಾಯಿಯಿಂದ ಕಾರಿನ ಮೂಲಕ ರಾತ್ರಿ ೮.೦೦ ಗಂಟೆಗೆ ಕಸಾರಾವನ್ನು ತಲುಪಿದರು. ಶ್ರೀ ಶಿವಶಂಕರ್, ದಿವಾಕರ್ ಪಗಾಜಿ, ಗಣಪತ್ ಬುವಾ ಜಾಧವ್ ಅಲಿಯಾಸ್ ಮಡ್ಕೆ ಬುವಾ, ಅಂಬೇಡ್ಕರ್ ಅವರ ಸಂಗಡ ಬಂದರು. ಶ್ರೀ ಬಿ.ಕೆ.ಗಾಯಕ್‌ವಾಡ್, ಕೆ.ಬಿ.ಜಾಧವ್ ಲಿಂಬಾಜಿ ಭಲೇರಾವ್ ಮತ್ತು ರೋರ್ಡ್ಡೆ ಅವರುಗಳು ನಾಸಿಕ್‌ನಿಂದ ಬಂದರು. ಶಂಕರ್ ನಾಥ್ ಬಾರ್ವೆ ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು,

ದೇವಸ್ಥಾನ ಪ್ರವೇಶ ಮಸೂದೆಯ ಮೇಲೆ ಹೇಳಿಕೆಯನ್ನು ಕೊಟ್ಟು ಅನಂತರ ಡಾ.ಅಂಬೇಡ್ಕರ್ ಅವರ ಅಧ್ಯಾತ್ಮಿಕ ಹುಚ್ಚುಗಳ ವಿರುದ್ಧ ಮತ್ತು ಮೂಢನಂಬಿಕೆಗಳ ವಿರುದ್ಧ ಬಂದು ಪ್ರಚಾರವನ್ನೇ ಪ್ರಾರಂಭಿಸಿಬಿಟ್ಟರು. ಈ ದೌರ್ಬಲ್ಯಗಳು ಶತಮಾನಗಳ ಕಾಲ ಜನರನ್ನು ಹಿಂಡಿ ಹಿಪ್ಪೆ ಮಾಡಿಬಿಟ್ಟಿತ್ತು. ದೇವರನ್ನು ಪೂಜಿಸುವುದಕ್ಕಿಂತ ತಿನ್ನಲು ಬೇಕಾದ ಆಹಾರವೇ ಉತ್ತಮವಾದುದೆಂದು ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದರು. ಸಮ್ಮೇಳನದಲ್ಲಿ ಮಾತನಾಡುತ್ತಾ ಅಸ್ಪೃಶ್ಯರಿಗೆ ಅವರು ಹೇಳಿದ್ದೇನೆಂದರೆ ಹಿಂದೂ ಧರ್ಮದಲ್ಲಿ ನಮಗೆ ಸಮಾನತೆ ಬೇಕು; ಚಾತುರ್ವರ್ಣ ಎಂಬುದನ್ನು ಬೇರುಸಹಿತ ಕಿತ್ತು ಹಾಕಬೇಕು. ಉತ್ತಮ ಜಾತಿಯವರಿಗೆ ಸವಲತ್ತುಗಳು ಮತ್ತು ಕೀಳು ಜಾತಿಯವರಿಗೆ ಬಡತನ ಎನ್ನುವ ನೀತಿ ಈಗಲೇ ಕೊನೆಗಾಣಬೇಕು. ಬ್ರಿಟೀಷ್ ಸರ್ಕಾರ–ವಿದೇಶೀ ಸರ್ಕಾರ. ಅವರಿಂದ ನಮ್ಮ ಸ್ಥಿತಿಗತಿಗಳಲ್ಲಿ ಹೆಚ್ಚಿಗೆ ಏನೂ ಮುಂದುವರಿಕೆ ಕಾಣಲು ಸಾಧ್ಯವಿಲ್ಲ. ಒಗ್ಗಟ್ಟಿಲ್ಲದೆ ಇರುವುದನ್ನು ಬಿಟ್ಟು ಬಿಡಿ. ಅದು ನಿಮ್ಮನ್ನು ಹಾಳು ಮಾಡುತ್ತದೆ. ನಿಮ್ಮ ಕಣ್ಣುಗಳಿಂದಲೇ ಪರಿಸ್ಥಿತಿಯನ್ನು ಮತ್ತು ಸುತ್ತಮುತ್ತ ಇರುವುದನ್ನು ಅಭ್ಯಸಿಸಿ ಮಹಾಡ್ ಮತ್ತು ನಾಸಿಕ್‌ನಲ್ಲಿ ನೀವು ಮಾಡಿದ ಹೋರಾಟ ನಿಮಗೆ ಈಗ ಸಿಗಲಿರುವ ರಾಜಕೀಯ ಸ್ಥಾನಮಾನವನ್ನು ಗೆದ್ದುಕೊಟ್ಟಿದೆ ಎಂಬುದನ್ನು ಮರೆಯಬೇಡಿ. ನಾಸಿಕ್ ಸತ್ಯಾಗ್ರಹದ ಬಗ್ಗೆ ಪ್ರತಿನಿತ್ಯ ಲಂಡನ್ನಿನ ಟೈಮ್ಸ್ ಪತ್ರಿಕೆಯಲ್ಲಿ ಬರುತ್ತಿದ್ದ ಸುದ್ದಿ ಬ್ರಿಟೀಷರಿಗೆ ಆಸಕ್ತಿಯನ್ನು ಕೆರಳಿಸಿದುದಲ್ಲದೆ, ಅವರಿಗೆ ತಿಳಿವಳಿಕೆಯನ್ನೂ ಸಹ ಕೊಟ್ಟಿತ್ತು. ಮುಂದುವರಿದು ಮಾತನಾಡುತ್ತಾ, ನೀವು ಏನನ್ನು ಕಳೆದುಕೊಂಡಿದ್ದೀರೋ ಅದನ್ನು ಬೇರೆಯವರು ಪಡೆದುಕೊಂಡರು. ನಿಮಗಾದ ಅವಮಾನ ಬೇರೆಯವರಿಗೆ ಹೆಮ್ಮೆಯಾಯಿತು. ನೀವು ಈಗ ನರಳುತ್ತಿರುವ ಬೇಕುಗಳು, ಕೊರತೆಗಳು, ಅವಮಾನಗಳು ನಿಮ್ಮ ಪೂರ್ವಜನ್ಮದಲ್ಲಿ ನೀವು ಮಾಡಿದ ಪಾಪಗಳಿಂದ ಅಲ್ಲ; ನಿಮ್ಮ ಮೇಲೆ ಕುಳಿತಿರುವ ಜನರ ದಬ್ಬಾಳಿಕೆಯಿಂದ ಮತ್ತು ದ್ರೋಹದಿಂದ. ನಿಮ್ಮ ಹತ್ತಿರ ಭೂಮಿ ಇಲ್ಲದಿರುವುದಕ್ಕೆ ಕಾರಣ, ಅದನ್ನು ನಿಮ್ಮಿಂದ ಕಸಿದುಕೊಳ್ಳಲಾಯಿತು; ನಿಮಗೆ ಯಾವುದೇ ಹುದ್ದೆಗಳು ಇಲ್ಲದಿರುವುದಕ್ಕೆ ಕಾರಣ, ಇತರರು ಅದನ್ನು ಸರ್ವಸ್ವಾಮ್ಯ ಮಾಡಿಕೊಂಡು ಬಿಟ್ಟಿದ್ದಾರೆ. ಹಣೆಬರಹದಲ್ಲಿ ನಂಬಿಕೆ ಇಡಬೇಡಿ; ನಿಮ್ಮ ಅಂತಃಶಕ್ತಿಯಲ್ಲಿ ನಂಬಿಕೆ ಇಡಿ.

# ೧೯

# ಯಾರು ಪರಿಶ್ರಮಪಡುತ್ತಾರೋ ಅವರು ಮಾತ್ರ ಮೇಲಕ್ಕೆ ಬರುತ್ತಾರೆ

ಬೊಂಬಾಯಿಯ ಮಝಗಾಂವ್‌ನಲ್ಲಿ ೧೯೩೩ನೆ ಇಸವಿ ಫೆಬ್ರವರಿ ತಿಂಗಳ ಕಡೆಯ ವಾರದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಡಾ॥ ಅಂಬೇಡ್ಕರ್ ಅವರು ಹೇಳಿದ ಮಾತುಗಳು:

ತಿಲಕ್ ಅವರು ಒಮ್ಮೆ ಇದ್ದ ಪರಿಸ್ಥಿತಿಯಲ್ಲೇ ನಾವೀಗ ಇದ್ದೇವೆ. ಎಲ್ಲಿಯವರೆಗೆ ನನ್ನ ವಿರೋಧಿಗಳು ನನ್ನನ್ನು ಶಪಿಸುತ್ತಿರುತ್ತಾರೋ, ಅಲ್ಲಿಯವರೆಗೆ ನಾನು ನಿಮಗಾಗಿ ಮಾಡುತ್ತಿರುವ ಕೆಲಸ ಸರಿಯಾದ ಮಾರ್ಗದಲ್ಲಿ ಸಾಗುತ್ತಿದೆ ಮತ್ತು ನ್ಯಾಯಯುತವಾಗಿದೆಯೆಂದು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಕಳೆದ ಇನ್ನೂರು ವರ್ಷಗಳ ಅವಧಿಯಲ್ಲಿ ಯಾವತ್ತೂ ಯಾರೂ ಅಸ್ಪೃಶ್ಯತೆಯನ್ನು ತೊಡೆದುಹಾಕಲು ಯಾವುದೇ ಪ್ರಯತ್ನವನ್ನು ಮಾಡಿರಲಿಲ್ಲ. ಸ್ವರಾಜ್ಯ ಬೇಕೆಂಬ ಬೇಡಿಕೆಗೆ ಮತ್ತು ಹಿಂದೂಗಳ ಧ್ಯೇಯ ಸಾಧನೆಗೆ ನಿಮ್ನವರ್ಗಗಳವರ ಬೆಂಬಲವಿಲ್ಲದೆ ಜಯ ದೊರಕುವುದಿಲ್ಲವೆಂದು ಅಸ್ಪೃಶ್ಯರಿಗೆ ಈಗ ಮನದಟ್ಟಾಗಿದೆ. ನಿಮಗೆ ಈಗ ಹಿಂದೂಗಳು ಏನು ಮಾಡುತ್ತಿದ್ದಾರೋ ಅದನ್ನು ಅವರು ಧರ್ಮ ಬುದ್ಧಿಯಿಂದಲೋ, ನಿಮ್ಮ ಮೇಲಿನ ಕರುಣೆಯಿಂದಲೋ ಮಾಡುತ್ತಿಲ್ಲ. ಅದನ್ನು ಅವರ ಯೋಗಕ್ಷೇಮಕ್ಕೂ ಸಹ ಮಾಡುತ್ತಿದ್ದಾರೆ. ನಮ್ಮ ಚಳುವಳಿಯ ಧ್ಯೇಯ, ನಿರಂಕುಶತ್ವ, ಅನ್ಯಾಯ ಮತ್ತು ಢೋಂಗಿ ಪರಂಪರೆಗಳ ವಿರುದ್ಧ ಹೋರಾಡುವುದೇ ಆಗಿದೆ. ಎಲ್ಲ ಸವಲತ್ತುಗಳನ್ನು ಕಿತ್ತು ಹಾಕುವುದು, ಸಂತ್ರಸ್ತ ಜನಗಳನ್ನು ಬಂಧನದಿಂದ ಬಿಡಿಸುವುದು ನಮ್ಮ ಗುರಿಯಾಗಿದೆ. ನಮ್ಮ ಅವಿರತ ಹೋರಾಟದಿಂದ ನಮ್ಮ ಧ್ಯೇಯಕ್ಕೆ ಮಾನ್ಯತೆ ದೊರಕಿದೆ.

ಸತ್ತಪ್ರಾಣಿಗಳ ಕೊಳೆತ ಮಾಂಸವನ್ನು ತಿನ್ನುವುದನ್ನು ಬಿಟ್ಟುಬಿಡಿ. ಹಾಗಾದರೆ, ನಾವು ಏನನ್ನು ತಿನ್ನಬೇಕೆಂದು ಜನ ನನ್ನನ್ನು ಕೇಳುತ್ತಾರೆ. ಉತ್ತರವಾಗಿ, ನಾನು ನಿಮ್ಮನ್ನು ಒಬ್ಬ ಸದ್ಗುಣಿಯಾದ ಸ್ತ್ರೀಯ ಉದಾಹರಣೆಯನ್ನು ನೆನಪಿಸಿಕೊಳ್ಳಿ ಎಂದು ಹೇಳುತ್ತೇನೆ. ಅವರು ಕಷ್ಟಕರವಾದ ದಿವಸಗಳನ್ನು ಎದುರಿಸಬೇಕಾದಾಗಲೂ, ವೇಶ್ಯೆಯಂತೆ ಜೀವಿಸುವುದಕ್ಕೆ ಎಂದೆಂದಿಗೂ ಒಪ್ಪುವುದಿಲ್ಲ. ಆತ್ಮಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಅವಳು ಕಷ್ಟವನ್ನು ಎದುರಿಸುತ್ತಾಳೆ. ಈ ಪ್ರಪಂಚದಲ್ಲಿ ಆತ್ಮಗೌರವದೊಂದಿಗೆ ಬದುಕುವುದನ್ನು ಕಲಿತುಕೊಳ್ಳಿ. ಏನಾದರೊಂದು ಒಳ್ಳೆಯದನ್ನು ಮಾಡುವ ಮಹದಾಸೆಯನ್ನು ನೀವು ಯಾವಾಗಲೂ ಮನಸ್ಸಿನಲ್ಲಿ ಇಟ್ಟುಕೊಳ್ಳಿ. ಪರಿಶ್ರಮ ಪಡುವವರು ಮಾತ್ರ ಮೇಲಕ್ಕೆ ಬರುತ್ತಾರೆ. ಅಸಹಾಯಕತೆಯ ಪರ್ವ ಮುಗಿದಿದೆ ಎಂಬುದು ನೆನಪಿರಲಿ. ಹೊಸ ಯುಗ ಹುಟ್ಟಿದೆ. ಈ ದೇಶದ ರಾಜಕೀಯದಲ್ಲಿ ಮತ್ತು ಶಾಸನ ಸಭೆಗಳಲ್ಲಿ ಭಾಗವಹಿಸುವುದಕ್ಕೆ ನಿಮಗೆ ಅವಕಾಶವಿರುವುದರಿಂದ ಎಲ್ಲವೂ ನಿಮಗೆ ಸಾಧ್ಯವಾಗಿದೆ.

# ೨೦
# ದೇವರ ಮೇಲಾಗಲೀ, ಅತಿ ಮಾನವನ ಮೇಲಾಗಲೀ ಭರವಸೆ ಇಟ್ಟುಕೊಳ್ಳಬೇಡಿ

೧೯೩೩ನೆ ಇಸವಿ ಮಾರ್ಚಿ ತಿಂಗಳ ೪ನೇ ತಾರೀಖು ಶನಿವಾರ ರಾತ್ರಿ ಜಿ.ಪಿ. ರೇಲ್ವೆ ವಸತಿಗೃಹಗಳ ಮೈದಾನದಲ್ಲಿ (ಬೊಂಬಾಯಿನ ಸ್ಯಾಂಡ್‌ಹರ್ಸ್ಟ್ ರಸ್ತೆ) ಅಸ್ಪೃಶ್ಯರ ಸಭೆಯೊಂದನ್ನು ನಡೆಸಲಾಯಿತು. ಅಧ್ಯಕ್ಷತೆ ವಹಿಸಲು ಶ್ರೀ ಆರ್.ಡಿ. ಕವಾಲಿ, ಬಿ.ಎ.,ಎಲ್.ಎಲ್.ಬಿ. ಅವರ ಹೆಸರನ್ನು ಪ್ರಸ್ತಾವಿಸಿ, ಅದನ್ನು ಶ್ರೀ ಕಾರ್ಡಕ್ ಅವರು ಅನುಮೋದಿಸಿದರು. ೮೫ ಜನ ಸಹಿ ಮಾಡಿದ ಭಿನ್ನವತ್ತಳೆಯೊಂದನ್ನು ಡಾ.ಅಂಬೇಡ್ಕರ್ ಅವರಿಗೆ ಸಮರ್ಪಿಸಲು ಆ ಸಭೆಯನ್ನು ವ್ಯವಸ್ಥೆಗೊಳಿಸಲಾಗಿತ್ತು. ಈ ಉದ್ದೇಶಕ್ಕಾಗಿ ಒಂದು ದೊಡ್ಡ ಪೆಂಡಾಲನ್ನು ನಿರ್ಮಿಸಲಾಗಿದ್ದು, ಅದು ಭರ್ತಿಯಾಗಿತ್ತು. ಗಣ್ಯಮುಖಂಡರುಗಳಾದ ಶಿವ ತಾರ್‌ಕರ್, ನಾಯಿಕ್, ಸಹಸ್ರ ಬುಧೆ, ದಿವಾಕರ್ ಪರಾರೆ, ಉಪಶ್ಯಾಮ್ ಕಮಲಾಕಾಂತ್ ಚಿತ್ರೆ, ಮೇಶ್‌ರಾಮ್ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

### ಭಿನ್ನವತ್ತಳೆಗೆ ಉತ್ತರಿಸುತ್ತಾ ಡಾ॥ಅಂಬೇಡ್ಕರ್ ಹೀಗೆ ಹೇಳಿದರು

ಮಹಿಳೆಯರೇ ಮತ್ತು ಮಹನೀಯರೇ, ಈ ಭಿನ್ನವತ್ತಳೆಯ ತುಂಬಾ ನನ್ನ ಕೆಲಸದ ಬಗ್ಗೆ ಮತ್ತು ನನ್ನ ಗುಣಗಳ ಬಗ್ಗೆ ಅತಿಶಯೋಕ್ತಿಗಳಿವೆ. ನಾನು ನಿಮ್ಮಂತೆ ಒಬ್ಬ ಸಾಧಾರಣ ಮನುಷ್ಯ. ಆದರೆ ನನ್ನನ್ನು ದೈವೀಕರಿಸುತ್ತಿದ್ದೀರಿ ಎಂದು ಅರ್ಥವಾಗುತ್ತದೆ. ಈ ರೀತಿ ವ್ಯಕ್ತಿಪೂಜೆಯನ್ನು ಮಡುವುದನ್ನು ನೀವು ಮೊಳಕೆಯಲ್ಲೇ ಚಿವುಟಿ ಹಾಕದಿದ್ದರೆ, ಸರ್ವನಾಶವಾಗುತ್ತೀರಿ. ವ್ಯಕ್ತಿಯೊಬ್ಬನನ್ನು ಈ ರೀತಿ ದೈವೀಕರಿಸುವುದರಿಂದ ಪರಾವಲಂಬಿಗಳಾಗುವ ರೂಢಿಯನ್ನು ನೀವು ಬೆಳೆಸಿಕೊಂಡು ನಿಮ್ಮ ಕರ್ತವ್ಯದ ಬಗ್ಗೆ ಉದಾಸೀನರಾಗುತ್ತೀರಿ. ಈ ರೀತಿಯ ಯೋಚನೆಗಳಿಗೆ ನೀವು ಬಲಿಯಾದರೆ, ರಾಷ್ಟ್ರೀಯ ಜೀವನ ವಾಹಿನಿಯಲ್ಲಿ ನಿಮ್ಮ ಅದೃಷ್ಟ ಮರದ ದಿಮ್ಮಿಗಳಿಗಿಂತ ಉತ್ತಮವೇನೂ ಆಗುವುದಿಲ್ಲ. ನಿಮ್ಮ ಹೋರಾಟವೆಲ್ಲಾ ವ್ಯರ್ಥವಾಗುತ್ತದೆ. ಮುಂದುವರೆದು ಹೇಳುತ್ತಾ, ಈ ಹೊಸ ಯುಗ ನಿಮಗೆ ತಂದುಕೊಟ್ಟಿರುವ ನಿಮ್ಮ ರಾಜಕೀಯ ಹಕ್ಕುಗಳನ್ನು ಕಡೆಗಣಿಸಬೇಡಿ. ನಿಮ್ಮ ಇಡೀ ವರ್ಗಗಳವರು ತುಳಿಯಲ್ಪಟ್ಟಿದ್ದಕ್ಕೆ ಕಾರಣವೇನೆಂದರೆ, ನೀವು ಅಸಹಾಯಕತೆಯ ಮನೋಧರ್ಮದಿಂದ ತುಂಬಿಹೋಗಿದ್ದೀರಿ, ಈ ವ್ಯಕ್ತಿಪೂಜೆ, ದೈವೀಕರಣ ಮತ್ತು ಕರ್ತವ್ಯ ಮಾಡುವಲ್ಲಿ ಉದಾಸೀನ ಇವುಗಳು ಹಿಂದೂ ಸಮಾಜವನ್ನು ಹಾಳುಗೆಡವಿದೆ. ಅಲ್ಲದೆ ನಮ್ಮ ದೇಶದ ಅವನತಿಗೆ ಕಾರಣವಾಗಿದೆ. ಬೇರೆ ದೇಶಗಳಲ್ಲಿ ಒಂದು ರಾಷ್ಟ್ರವ್ಯಾಪಿ ವಿಪತ್ತಿನ ಮತ್ತು ಸಂದಿಗ್ಧ ಕಾಲದಲ್ಲಿ, ಜನಗಳೆಲ್ಲಾ ಒಗ್ಗಟ್ಟಾಗಿ ವಿಪತ್ತನ್ನು ಎದುರಿಸುತ್ತಾರೆ. ಅಪಾಯವನ್ನು ಪರಿಹರಿಸಿಕೊಳ್ಳುತ್ತಾರೆ, ಶಾಂತಿಯನ್ನೂ, ಏಳಿಗೆಯನ್ನೂ ಪಡೆಯುತ್ತಾರೆ. ಆದರೆ ನಮ್ಮ ಧರ್ಮ ಮನುಷ್ಯ ಏನನ್ನು ಮಾಡಲಾರನೆಂದು ನಮ್ಮ ಕಿವಿಗಳಲ್ಲಿ ಊದಿಬಿಟ್ಟಿದೆ. ಮನುಷ್ಯನೊಬ್ಬ ಅಸಹಾಯಕ ಮರದ ದಿಮ್ಮಿ. ರಾಷ್ಟ್ರೀಯ ವಿಪತ್ತು ಎರಗಿ ಬರುತ್ತಿದ್ದಂತೆಯೇ, ದೇವರು ಕೆಳಗಿಳಿದು ಬಂದು ನಮ್ಮನ್ನು ಅಪಾಯದಿಂದ ಪಾರು ಮಾಡುತ್ತಾರೆಂಬುದಾಗಿ ನಂಬುತ್ತೇವೆ. ಫಲಿತಾಂಶವೆಂದರೆ ತಮ್ಮ ಶತ್ರುಗಳ ವಿರುದ್ಧ ಒಗ್ಗಟ್ಟಿನಿಂದ ಕ್ರಮ ತೆಗೆದುಕೊಳ್ಳುವುದರ ಬದಲು, ಈ ಕೆಲಸ ಮಾಡುವುದಕ್ಕೆ

ಅವತಾರಪುರುಷನೊಬ್ಬ ಹುಟ್ಟಿ ಬರುತ್ತಾನೆಂದು ನಾವು ಕಾಯುತ್ತೇವೆ.

ನಿಮ್ಮ ಗುಲಾಮಗಿರಿಯನ್ನು ನೀವೇ ತೊಡೆದುಹಾಕಬೇಕು. ರಾಜಕೀಯ ಅಧಿಕಾರಗಳನ್ನು ಪಡೆದುಕೊಳ್ಳುವುದರಲ್ಲಿ ನಿಮ್ಮ ಮೋಕ್ಷ ಇದೆಯೇ ಹೊರತು; ತೀರ್ಥಯಾತ್ರೆ ಮಾಡುವುದರಲ್ಲಿ, ಉಪವಾಸ ಕೂಡುವುದರಲ್ಲಿ ಅಲ್ಲ. ಧರ್ಮಗ್ರಂಥಗಳ ಮೇಲೆ ಭಕ್ತಿಭಾವವನ್ನಿಟ್ಟುಕೊಂಡರೆ ನೀವು ಜೀತದಿಂದ, ಕೊರತೆಯಿಂದ, ಬಡತನದಿಂದ ಬಿಡುಗಡೆ ಆಗುವುದಿಲ್ಲ. ಇದನ್ನೇ ನಿಮ್ಮ ಪೂರ್ವಿಕರು ತಲೆತಲಾಂತರದಿಂದ ಮಾಡುತ್ತಾ ಬಂದಿದ್ದಾರೆ. ಆದರೆ ಅದರಿಂದಾಗಿ ನಿಮಗೆ ನಿಮ್ಮ ದುರವಸ್ಥೆಯ ಜೀವನದಲ್ಲಿ ಯಾವ ಬಿಡುವು ಸಿಕ್ಕಿಲ್ಲ. ನಿಮ್ಮ ಪೂರ್ವಿಕರಂತೆಯೇ, ನೀವು ಚಿಂದಿಯನ್ನೇ ಉಡುತ್ತಿದ್ದೀರಿ. ಅವರ ಹಾಗೆಯೇ ನೀವು ಕೂಡ ತುಣುಕುಗಳ ಮೇಲೆ ಜೀವಿಸಿದ್ದೀರಿ. ಅವರಂತೆಯೇ ನೀವು ಕೊಳಗೇರಿಗಳಲ್ಲಿ ವಿನಾಶವಾಗುತ್ತಿದ್ದೀರಿ. ಅವರ ಹಾಗೆಯೇ ನೀವು ಕೂಡ ಖಾಯಿಲೆಗಳಿಗೆ ಸುಲಭವಾಗಿ ತುತ್ತಾಗುತ್ತಿದ್ದೀರಿ, ನಿಮ್ಮಲ್ಲಿನ ಸಾವಿನ ಪ್ರಮಾಣ ಕೋಳಿಫಾರಂಗಳಲ್ಲಿ ಕೋಳಿಗಳು ಸಾಯುವಷ್ಟೇ ವೇಗವಾಗಿ ಇದೆ. ನಿಮ್ಮ ಧಾರ್ಮಿಕ ಉಪವಾಸಗಳು, ತಪಸ್ಸುಗಳು, ವ್ರತಗಳು ನಿಮ್ಮನ್ನು ಹಸಿವಿನಿಂದ ಕಾಪಾಡಿಲ್ಲ. ಭಾಷಣವನ್ನು ಮುಕ್ತಾಯ ಮಾಡುತ್ತಾ ಅವರು ಹೇಳಿದ್ದು ; ನಿಮ್ಮ ಆಹಾರಕ್ಕೆ, ಬಟ್ಟೆಗಳಿಗೆ, ವಾಸಕ್ಕೆ, ಶಿಕ್ಷಣಕ್ಕೆ, ಔಷಧಿಗೆ ಮತ್ತು ಜೀವನೋಪಾಯ ಮಾರ್ಗಗಳಿಗೆ ಏರ್ಪಾಡು ಮಾಡುವುದು ಶಾಸನ ಸಭೆಗಳ ಕರ್ತವ್ಯವಾಗಿದೆ. ಕಾನೂನನ್ನು ಮಾಡಿ ಅದನ್ನು ಜಾರಿಗೊಳಿಸುವ ಕೆಲಸ ನಿಮ್ಮ ಒಪ್ಪಿಗೆ, ಸಹಾಯ, ಇಚ್ಛೆಯಿಂದ ಮಾಡುವಂಥಾದ್ದು. ಎಲ್ಲಾ ರೀತಿಯ ಪ್ರಾಪಂಚಿಕ ಸಂತೋಷಗಳ ಆಗರವೇ ಕಾನೂನು. ನೀವು ಕಾನೂನು ಮಾಡುವ ಅಧಿಕಾರವನ್ನು ಹಿಡಿದುಕೊಳ್ಳಿ. ಆದ್ದರಿಂದ ನಿಮ್ಮ ಗಮನವನ್ನು ಉಪವಾಸದಿಂದ, ಪೂಜೆಯಿಂದ, ತಪಸ್ಸಿನಿಂದ ವಿಮುಖಗೊಳಿಸಿ, ಅದನ್ನು ಕಾನೂನು ಮಾಡುವ ಅಧಿಕಾರವನ್ನು ಹಿಡಿದುಕೊಳ್ಳುವತ್ತ ತಿರುಗಿಸಿ. ಅದೇ ನಿಮ್ಮ ಮೋಕ್ಷದ ದಾರಿ. ಅದು ನಿಮ್ಮ ಉಪವಾಸವನ್ನು ಕೊನೆಗಾಣಿಸುತ್ತದೆ. ಜನಗಳಿಗೆ ಸಂಖ್ಯಾಬಲವಿದ್ದರೆ ಸಾಲದು. ಜಯವನ್ನು ಸಾಧಿಸಿ ರೂಢಿಸಿಕೊಳ್ಳುವುದಕ್ಕೆ ಯಾವಾಗಲೂ ಎಚ್ಚರವಾಗಿರಬೇಕು, ಬಲಿಷ್ಠರಾಗಿರಬೇಕು. ಉತ್ತಮ ಶಿಕ್ಷಣ ಪಡೆಯಬೇಕು ಮತ್ತು ಆತ್ಮಗೌರವವನ್ನು ಕಾಯ್ದುಕೊಳ್ಳಬೇಕು.

## ೨೧

# ನಾನು ದೇಶಕ್ಕಾಗಿ ಎಷ್ಟು ಸಾಧ್ಯವೋ ಅಷ್ಟೂ ಅಧಿಕಾರವನ್ನು ಬಲವಂತವಾಗಿ ಪಡೆದುಕೊಳ್ಳುತ್ತೇನೆ

ಡಾ॥ ಅಂಬೇಡ್ಕರ್ ಅವರು ಲಂಡನ್ನಿಗೆ ಹೋಗುವ ಹಿಂದಿನ ದಿನ, ಅಂದರೆ ೨೩.೪.೧೯೩೩ರಂದು ಪೂನಾದ ನಿಮ್ನವರ್ಗದವರು ಬೊಂಬಾಯಿನ ದಾಮೋದರ್ ಸಭಾಂಗಣದಲ್ಲಿ ಒಂದು ಭಿನ್ನವತ್ತಳೆಯನ್ನು ಕೊಟ್ಟರು. ಈ ಸಭೆಯಲ್ಲಿ ಸುಮಾರು ೮ ರಿಂದ ೧೦ ಸಾವಿರ ಜನ ಸೇರಿದ್ದರು. ಮಿ.ಪಿ.ಎಲ್.ಲೋಖಾಂಡೆಯವರು ಭಿನ್ನವತ್ತಳೆಯನ್ನು ಓದಿ, ಅದನ್ನು ನಾಸಿಕ್ ಜಿಲ್ಲೆಯ ಪರವಾಗಿ ಡಾ॥ ಅಂಬೇಡ್ಕರ್ ಅವರಿಗೆ ಸಮರ್ಪಿಸಿದರು. ಹಾಗೆಯೇ ಹರಿಬಾಬು ಹನುಮಂತ್ ರೋಕ್ಡೆ ಅವರು ಪೂನಾ ಜಿಲ್ಲೆಯ ಪರವಾಗಿ ಭಿನ್ನವತ್ತಳೆಯನ್ನು ಸಮರ್ಪಿಸಿದರು. ಈ ಸಂದರ್ಭದಲ್ಲಿ ವಿವಿಧ ಜಿಲ್ಲಾ ಸಮಿತಿಗಳು ತಾವು ಸಂಗ್ರಹಿಸಿದ ಬೇರೆಬೇರೆ ಮೊತ್ತದ ಹಣವನ್ನು ಡಾ॥ ಅಂಬೇಡ್ಕರ್ ದಂಪತಿಗಳಿಗೆ ಸಮರ್ಪಿಸಿದರು.

ಡಾ॥ ಅಂಬೇಡ್ಕರ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ದುಂಡು ಮೇಜಿನ ಸಮ್ಮೇಳನದ ಎರಡನೆಯ ಸುತ್ತಿನಲ್ಲಿ ತಾವು ಅಸಹಾಯಕರಾಗಿದ್ದುದಾಗಿ ತಿಳಿಸಿದರು. ಗಾಂಧಿಯವರ ಪಕ್ಷವಹಿಸಿ, ಬ್ರಿಟೀಷ್ ಸರ್ಕಾರದೊಂದಿಗೆ ವಿರಸ ಕಟ್ಟಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ; ಗಾಂಧಿಯವರಾದರೊ, ನಿಮ್ನವರ್ಗಗಳವರಿಗೆ ಏನನ್ನೂ ಬಿಟ್ಟುಕೊಡಲು ಸಿದ್ಧರಿರಲಿಲ್ಲ. ನಿಮ್ನವರ್ಗಗಳವರ ಪರವಾಗಿ ತಾವು (ಡಾ॥ಅಂಬೇಡ್ಕರ್) ಮಾಡುತ್ತಿದ್ದ ಹೋರಾಟ ಇನ್ನೇನು ಫಲಪ್ರದವಾಗುತ್ತಿದ್ದುದರಿಂದ, ಎಷ್ಟು ಸಾಧ್ಯವೋ ಅಷ್ಟೆ ಅಧಿಕಾರವನ್ನು ಕಿತ್ತುಕೊಳ್ಳಲೂ ತಮ್ಮ ಶಕ್ತಿಯನ್ನು ಬಳಸಿಕೊಳ್ಳುತ್ತಿದ್ದೇನೆ ಎಂದು ಹೇಳಿದರು. ಸಭೆ ಮುಕ್ತಾಯವಾಗುತ್ತಿದ್ದಂತೆ, ಬಲ್ಲಾರ್ಡ್ ಹಡಗು ಕಟ್ಟೆಗೆ ತಮ್ಮನ್ನು ಎಂದಿನಂತೆ ಬೀಳ್ಕೊಡುವ ಸಲುವಾಗಿ, ಒಂದು ದಿನದ ಮಜೂರಿಯನ್ನು ನಷ್ಟ ಮಾಡಿಕೊಂಡು ಬರುವುದು ಬೇಡವೆಂದು ಹೇಳಿದರು.

# ೨೨
# ನಿಮ್ಮ ಹಿತಾಸಕ್ತಿಗಳನ್ನು ಮುಂದು ಮಾಡಬಲ್ಲ ಜನಗಳನ್ನು ಹುಡುಕಿಕೊಳ್ಳಿ

ಕೊಲಬಾ ಜಿಲ್ಲಾ ಕೃಷಿಕರ ಸಮ್ಮೇಳನದ ೩ನೆ ಅಧಿವೇಶನವನ್ನು ೧೬ನೆ ಡಿಸೆಂಬರ್ ೧೯೩೮ರ ಭಾನುವಾರದಂದು ಆಲಿಬಾಗ್ ತಾಲ್ಲೂಕಿನ ಚೌರಿ ಎಂಬಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಮ್ಮೇಳನದ ಆರಂಭಿಕ ಏರ್ಪಾಡುಗಳನ್ನು ಕೃಷಿಕರು ತಾವೇ ಮಾಡಿಕೊಂಡಿದ್ದರು. ವಿಶಾಲವಾದ ಪೆಂಡಾಲನ್ನು, ಅದರ ಮಧ್ಯಭಾಗದಲ್ಲಿ ವೇದಿಕೆಯನ್ನು ನಿರ್ಮಿಸಿ, ವೇದಿಕೆಯ ಮೇಲೆ ಅಧ್ಯಕ್ಷರು ಮತ್ತು ಗೌರವಾನ್ವಿತ ಅತಿಥಿಗಳು ಕೂರುವುದಕ್ಕೆ ಅನುವು ಮಾಡಿಕೊಡಲಾಗಿತ್ತು. ನೀಟಾದ ಬಾವುಟಗಳು ಮತ್ತು ಬಟ್ಟೆಯ ತೋರಣಗಳಿಂದ ಸಭಾ ಸ್ಥಳವನ್ನು ಅಲಂಕರಿಸಲಾಗಿತ್ತು. 'ಕೃಷಿಕರಿಗೆ ಜಯವಾಗಲಿ', 'ಕೃಷಿಕರೆ ಒಗ್ಗಟ್ಟಿರಲಿ', ಇತ್ಯಾದಿ ಘೋಷಣೆಗಳನ್ನು ಬರೆದಿದ್ದ ಬಟ್ಟೆ ಫಲಕಗಳನ್ನು ಅಲ್ಲಲ್ಲಿ ಕಟ್ಟಲಾಗಿತ್ತು. ಕೃಷಿಕರು ಅಂಬೇಡ್ಕರ್ ಅವರಿಗೆ ಸರಲ್, ರೆಂವಾಸ್, ಹಾಶಿರ್ವೆ, ನಾರಿಂಗಿ ಇತ್ಯಾದಿ ಸ್ಥಳಗಳಲ್ಲಿ ಮಾಲಾರ್ಪಣೆ ಮಾಡಿದರು. ಮಧ್ಯಾಹ್ನ ೩ ಗಂಟೆಗೆ ಸಮ್ಮೇಳನ ತನ್ನ ಬೈಠಕ್ ಅನ್ನು ಪ್ರಾರಂಭಿಸಿತು. ಜಿಲ್ಲಾದ ಎಲ್ಲಾ ವಿಭಾಗಗಳಿಂದ ಸುಮಾರು ೬೦೦೦ ಕೃಷಿಕರು, ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನಕ್ಕೆ ಬಂದಿದ್ದದವರಲ್ಲಿ ಶ್ರೀಮಂತರುಗಳಾದ ಜಿ.ಎಲ್.ಸಹಸ್ರ ಬುದೇ, (ಬಾಂಬೆ ಎಸ್.ಎಸ್.ಲೀಗ್), ಎಮ್.ವಿ.ದೊಂಡೆ (ಪ್ರಾಂಶುಪಾಲರು, ಪರೇಲ್ ಪ್ರೌಢಶಾಲೆ), ಎಸ್.ವಿ.ಪರುಳೇಕರ್, (ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ), ಟಿ.ವಿ.ಪರ್ವತೆ (ಸಂಪಾದಕರು: 'ಮರಾಠ) ಎಸ್.ಜಿ.ಟಿಫ್‌ನಿಸ್, ಸಿ.ಜಿ.ದೇಶಪಾಂಡೆ, ಎನ್.ಎಂ.ದೇಶಪಾಂಟೆ, ಸುಬೇದಾರ್ ಸಾವರ್‌ಕರ್, ದಾಲು ಅಣ್ಣ ಘೊಟ್ನಿಸ್, (ಬೋರ್ ಪ್ರಜಾ ಪರಿಷತ್) ಮತ್ತಿತರರು; ಮಿ.ಆರ್ದೆಶಿರ್ ಬಾರಿಯ, ಪೆಜಾರಿಯದ ಭೂಮಾಲೀಕರು ಸಹ ಹಾಜರಿದ್ದರು. ಆಲಿಬಾಗ್‌ನ ಮಾಮ್ಲೆದಾದ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಇತರ ಸರ್ಕಾರಿ ಅಧಿಕಾರಿಗಳು ಸಹ ಹಾಜರಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಮಿ.ಎನ್.ಎನ್.ಪಾಟೀಲ್ ಅವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಡಾ॥ ಅಂಬೇಡ್ಕರ್ ಅವರು ಭಾಷಣ ಮಾಡುವುದಕ್ಕೆ ಎದ್ದು ನಿಲ್ಲುತ್ತಿದ್ದಂತೆ, ಅವರಿಗೆ ಉತ್ಸಾಹಭರಿತ ಚಪ್ಪಾಳೆ ಸಿಕ್ಕಿತು.

ಅವರು ಹೇಳಿದ್ದು :

ಈ ದಿನ ನೀವು ನಿಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ದಾರಿಯನ್ನು ಹುಡುಕಿಕೊಳ್ಳುವುದಕ್ಕೆ ನಿಮ್ಮ ಗಮನವನ್ನು ಕೇಂದ್ರೀಕರಿಸಬೇಕು. 'ಶೇತ್ಕಾರಿ' ಎಂಬ ಪದ ಈ ದಿನಗಳಲ್ಲಿ ಸಾಧಾರಣವಾಗಿ ಬಳಕೆಯಲ್ಲಿ ಇರುವಂಥ ಪದ, ಆದರೆ ಈ ಪದವನ್ನು ತಪ್ಪಾಗಿ ಉಪಯೋಗಿಸಲಾಗುತ್ತಿದೆ. ನೂರಾರು ಎಕರೆ ವಿಸ್ತಾರವಿರುವ ಭೂಮಿಗಳನ್ನು ಹೊಂದಿದ್ದು, ತಾವೇ ಕೃಷಿ ಕೆಲಸ ಮಾಡಬೇಕಾಗಿಲ್ಲದವರನ್ನೂ, ಒಂದು ತುತ್ತು ಅನ್ನಕ್ಕಾಗಿ ಫಾರ್ಮ್‌ಗಳಲ್ಲಿ ದುಡಿಯಬೇಕಾದ, ಒಂದಂಗುಲ ಭೂಮಿಯೂ ಇಲ್ಲದವರನ್ನೂ ಒಂದೇ ಎಂದು ವರ್ಗೀಕರಣ ಮಾಡಲಾಗಿದೆ. ಈ ಎರಡೂ ವರ್ಗಗಳ ಜನರ ಹಿತಾಸಕ್ತಿಗಳಲ್ಲಿ ಬಹು ದೊಡ್ಡದಾದ ಭೇದವಿದ್ದು ಪರಸ್ಪರ ವಿರೋಧಿಯಾಗಿದೆ. ಒಂದನ್ನು ಇನ್ನೊಂದರ ಜೊತೆ ಹೆಣೆಯುವುದು

ತಪ್ಪಾಗುತ್ತದೆ. ಆದುದರಿಂದ 'ಶೇತ್ಕಾರಿ' ಎಂಬ ಪದಕ್ಕೆ ಸ್ಪಷ್ಟವಾದ ವಿವರಣೆಯನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ನಾನೀಗ 'ಚಾರಿಯ' ಜನಗಳ ಮನಸ್ಸಿನಲ್ಲಿ ಬಹಳ ಮೇಲೆ ಇರುವಂಥ ಪ್ರಶ್ನೆಯನ್ನು ಕುರಿತು ಮಾತನಾಡಬಯಸುತ್ತೇನೆ. ಅದೇಂದರೆ ಕಳೆದ ಎರಡು ವರ್ಷಗಳಿಂದ ಚಾರಿಯ ಗೇಣಿಕಾರರು ತಮ್ಮ ಸಾಹುಕಾರರುಗಳ ಮತ್ತು ಭೂಮಾಲೀಕರುಗಳ ವಿರುದ್ಧ ನಡೆಸುತ್ತಿರುವ ಮುಷ್ಕರ. ಆ ಮುಷ್ಕರದ ನ್ಯಾಯಾನ್ಯಾಯವನ್ನು ವಿಮರ್ಶಿಸದೆ, ಗೇಣಿದಾರರ ಮತ್ತು ಭೂಮಾಲೀಕರ ನಡುವಿನ ಇಂಥ ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಬಹುದೆಂದು ನನ್ನ ನಂಬಿಕೆ/ಅನಿಸಿಕೆ. ಇದಕ್ಕಾಗಿ ಒಂದು ಮಧ್ಯಸ್ತಿಕೆ ಮಂಡಲಿಯನ್ನು ರಚಿಸಿ, ಅದರಲ್ಲಿ ಎರಡೂ ಪಕ್ಷಗಳ ಪ್ರತಿನಿಧಿಗಳು ಇದ್ದು, ಅವರ ಜೊತೆಗೆ ಸರ್ಕಾರದಿಂದ ನಾಮನಿರ್ದೇಶಿತರಾದ ವ್ಯಕ್ತಿಯೊಬ್ಬರಿದ್ದು, ಆ ಮಂಡಲಿಗೆ ಕಾನೂನಿನ ಸ್ಥಾನಮಾನವನ್ನು ಕೊಡಬೇಕು. ಈ ಮಧ್ಯಸ್ತಿಕೆ ಮಂಡಲಿಯ ತೀರ್ಮಾನಕ್ಕೆ ಎರಡೂ ಪಕ್ಷಗಳು ಬದ್ಧರಾಗಿರುತ್ತಾರೆ. ಇಂಥ ಪ್ರಸಂಗಗಳಲ್ಲಿ ಸರ್ಕಾರ ಮಧ್ಯಪ್ರವೇಶಿಸಿ, ಇಂಥದೊಂದು ಮಂಡಲಿಯನ್ನೂ ಏಕೆ ನೇಮಿಸಬಾರದೆಂಬುದಕ್ಕೆ ನನಗೆ ಕಾರಣಗಳು ಗೊತ್ತಾಗುತ್ತಿಲ್ಲ. ಪ್ರೆಸಿಡೆನ್ಸಿಯ ಈ ಭಾಗದಲ್ಲಿ ಅನೇಕ ಕುಂದುಕೊರತೆಗಳು ಇವೆಯೆಂದು ನನಗೆ ಗೊತ್ತು. ಇವುಗಳು ಹುಟ್ಟಿಕೊಂಡಿರುವುದು ಜನಗಳು ಸಾಮಾನ್ಯವಾಗಿ ಕರೆಯುವ 'ಖೋಟಿ ವ್ಯವಸ್ಥೆಯಿಂದ' ಈ 'ಖೋಟ್'ಗಳ ಮುಷ್ಠಿಯಲ್ಲಿ ಸಿಲುಕಿಕೊಂಡಿರುವ 'ಇಷ್ಟಪರ್ಯಂತ' ಗೇಣಿದಾರರ ದುರವಸ್ಥೆಯ ಬಗ್ಗೆ ನನಗೆ ಅರಿವಿದೆ. ಗೇಣಿದಾರನನ್ನು ಭೂಮಾಲೀಕ ತನಗಿಷ್ಟ ಬಂದ ಹಾಗೆ ಹೊರಗೆ ದಬ್ಬಬಹುದಾಗಿದ್ದು, ಇದರಿಂದ ಗೇಣಿದಾರನ ಆದಾಯ ಅಭದ್ರವಾಗಿದ್ದು, ಅವರ ಜೀವನ ಚಿಂತಾಜನಕವಾಗುತ್ತದೆ. ಇಂಥ ಕಣ್ಣಿಗೆ ರಾಚುವ ಅನ್ಯಾಯದಿಂದ ಗೇಣಿದಾರರು ಕೆಲಸ ಮಾಡುತ್ತಿದ್ದಾರೆ. ದಿಢೀರನೆ ಗೇಣಿದಾರನನ್ನು ಉಚ್ಚಾಟಿಸಲು ಖೋಟ್‌ಗೆ ಇರುವ ಈ ಸ್ವಾತಂತ್ರ್ಯದಿಂದ, ಗೇಣಿದಾರ ತಾನು ಜಮೀನಿನ ಮೇಲೆ ವರ್ಷಾನುಗಟ್ಟಲೆ ಮಾಡಿದ ಶ್ರಮದ ಪ್ರತಿಫಲ ಅವನಿಗೆ ದೊರಕದ ಹಾಗೆ ಮಾಡುತ್ತದೆ. ಇಂಥ ಇಷ್ಟಪರ್ಯಂತ ಗೇಣಿದಾರನ ಗೋಳನ್ನು ಪರಿಹರಿಸಲು ಕೂಡಲೇ ಶಾಸನ ಮಾಡಿ ಖೋಟ್‌ನಿಂದ ಅವನಿಗೆ ಸಾಕಷ್ಟು ಪರಿಹಾರ ಸಿಗುವಂತೆ ಮಾಡಬೇಕು.

ಖೋಟ್‌ನ ಭೂಮಿಯ ಮೇಲೆ ಗೇಣಿದಾರ ಕಟ್ಟಿಕೊಂಡಿರುವ ಮನೆಯನ್ನು ಕೆಡವಿ ಹಾಕುತ್ತೇನೆ ಎಂದು ಅವನನ್ನು ಬೆದರಿಸುವ ಭೂಮಾಲೀಕನ ದೌರ್ಜನ್ಯ ನನ್ನ ಅಭಿಪ್ರಾಯದಲ್ಲಿ ಪರಾಕಾಷ್ಠೆಯನ್ನು ಮುಟ್ಟಿದೆ. ಒಬ್ಬ ಖೋಟ್ ಮತ್ತು ಒಬ್ಬ ಗೇಣಿಕಾರನ ನಡುವೆ ವ್ಯಾಜ್ಯ ಪ್ರಾರಂಭವಾದಾಗಲೆಲ್ಲ ತಾನು ಹೇಳಿದ ಹಾಗೆ ಕೇಳುವಂತೆ ಗೇಣಿಕಾರನನ್ನು ಬಲಾತ್ಕರಿಸಲು ಖೋಟ್ ಅನುಕರಿಸುವ ಮಾರ್ಗ. ಇಂಥ ಕಣ್ಣಿಗೆ ರಾಚುವ ಅನ್ಯಾಯವನ್ನು ಹೇಗೆ ಮುಂದುವರಿಯಲು ಆಸ್ಪದ ಕೊಡಲಾಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇಂಥದೊಂದು ಅಮಾನುಷವಾದ ಅನ್ಯಾಯ ಆಗುತ್ತಿದ್ದರೂ, ಅದನ್ನು ಕಂಡರೂ ಕಾಣದೆ ಇರುವ ಸರ್ಕಾರ ಒಂದು ಗಂಭೀರವಾದ ಅಪರಾಧ ಮಾಡಿದ ತಪ್ಪಿತಸ್ಥವಾಗುತ್ತದೆ. ಉದಾಹರಣೆಗೆ ಬೊಂಬಾಯಿಯ ಕೆಲವು ಗಿರಣಿ ಮಾಲೀಕರುಗಳನ್ನು ತೆಗೆದುಕೊಳ್ಳೋಣ. ಅವರು ಕೆಲಸಗಾರರಿಗೆ ವಸತಿಗಳನ್ನು ಕೊಟ್ಟಿದ್ದಾರೆ. ಆದರೆ ಮುಷ್ಕರದ ಸಂದರ್ಭದಲ್ಲಿ ಕೆಲಸಗಾರರಿಗೆ ತಮ್ಮ ಕೆಲಸವನ್ನು ಕಳೆದುಕೊಳ್ಳುವುದರ ಜೊತೆಗೆ ಮನೆಯನ್ನು ಕಳೆದುಕೊಳ್ಳುವ ಹೆದರಿಕೆಯಿಂದ ಅವರ ಹೋರಾಟದಲ್ಲಿನ ಅರ್ಥ ಮೊನಚೇ ಹೋಗಿಬಿಡುತ್ತದೆ. ಇಂಥದೊಂದು ಪರಿಸ್ಥಿತಿಯನ್ನು ಮುಂದುವರೆಯಲು ಬಿಡಬಾರದು. ಈ ಸಮ್ಮೇಳನ, ಈ ಕುರಿತು ಅದರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಸಂದರ್ಭವನ್ನು ಹುಡುಕಬೇಕು.

ನಾನು ಈಗ ತಾನೇ ಪ್ರಸ್ತಾಪಿಸಿದ ಕುಂದುಕೊರತೆಗಳನ್ನು ನಿವಾರಿಸಲು ಸಾಧ್ಯವಾಗುವುದು ಪರಿಣಾಮಕಾರಿಯಾದ ಒಂದು ಶಾಸನದಿಂದ ಮಾತ್ರ ಎಂದು ನೀವು ಮರೆಯಲೇಬಾರದು. ಮುಷ್ಕರದಂಥ ಒಂದು ವಿಧಾನ ನಿಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳುವುದಕ್ಕೆ ಇರುವ ಒಂದು ಖಚಿತವಾದ ಉಪಾಯವಲ್ಲ. ನೊಂದವರಿಗೆ ಇರುವ ಮುಷ್ಕರ ಮಾಡುವ ಹಕ್ಕಿನ ಬಗ್ಗೆ ನಾನೇನು ಕರುಬುವುದಿಲ್ಲ. ಆದರೆ ಅದು ಪದೇ ಪದೇ ಉಪಯೋಗಿಸಬಹುದಾದಂಥ ಆಯುಧವಲ್ಲ. ಇಂಥದೊಂದು ಕಾನೂನನ್ನು ಶಾಸನದ ಪುಸ್ತಕದೊಳಗೆ ಸೇರಿಸುವುದು ಹೇಗೆ ಎಂಬ ಪ್ರಶ್ನೆಗೆ ನೀವೀಗ ಉತ್ತರಿಸಬೇಕಾಗಿದೆ. ವಿಧಾನ ಪರಿಷತ್ತುಗಳಲ್ಲಿ ನಿಮ್ಮವರೇ ಆದ ಪ್ರತಿನಿಧಿಗಳು ಇಲ್ಲದಿದ್ದರೆ ನಿಮಗೆ ಅದನ್ನು ಮಾಡಲು ಸಾಧ್ಯವಾಗುವುದಿಲ್ಲ. ನಿಮ್ಮ ಹಿತಾಸಕ್ತಿಗಳನ್ನು ಮುಂದು ಮಾಡುವವರನ್ನು ನೀವು ಹುಡುಕಬೇಕು. ಹೀಗೆ ನಿಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ, ಕಾಂಗ್ರೆಸ್‌ನಲ್ಲಿ ಇರುವಂಥ ನಾಯಕರುಗಳು ಮಾತ್ರವೇ ನಿಮ್ಮ ಧ್ಯೇಯ ಸಾಧನೆಗಾಗಿ ಹೋರಾಡುವವರು ಎಂದು ನಂಬಬೇಡಿ. ಈ ದಿನ ಕಾಂಗ್ರೆಸ್ ಏನನ್ನಾದರೂ ಪ್ರತಿನಿಧಿಸುತ್ತಾ ಇದ್ದರೆ, ಅದು ಬ್ರಿಟೀಷರ ವಿರುದ್ಧವಲ್ಲದೆ ಬೇರೇನೂ ಅಲ್ಲ.

ಕೃಷಿಕರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿ ಕೆಲವು ನಿರ್ಣಯಗಳನ್ನು ಅನುಮೋದಿಸಿದ ಮೇಲೆ, ಅಧ್ಯಕ್ಷರು ಕೆಲವು ಮುಕ್ತಾಯದ ಮಾತುಗಳಿಂದ ಸಮ್ಮೇಳನವನ್ನು ವಂದಿಸಿದರು.

## ೨೩
# ದುರಾದೃಷ್ಟವಶಾತ್ ನಾನು ಒಬ್ಬ ಹಿಂದೂವಾಗಿ ಹುಟ್ಟಿದೆ, ಆದರೆ ನಾನು ಹಿಂದುವಾಗಿ ಸಾಯುವುದಿಲ್ಲ

ಹತ್ತು ವರ್ಷಗಳ ಅವಿರತ ಸಾಮಾಜಿಕ ಹೋರಾಟದ ಹಿನ್ನೆಲೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಪುನರವಲೋಕನ ಮಾಡುವ ದೃಷ್ಟಿಯಿಂದ, ಡಾ॥ ಅಂಬೇಡ್ಕರ್ ಅವರು ನಿಮ್ನವರ್ಗಗಳವರ ಸಮ್ಮೇಳನವನ್ನು ನಾಸಿಕ್ ಜಿಲ್ಲೆಯ ಯೆವೋಲದಲ್ಲಿ ೧೩ನೇ ಅಕ್ಟೋಬರ್ ೧೯೩೫ ರಂದು ಕರೆಯಲು ನಿರ್ಧರಿಸಿದರು. ೧೨ನೆ ಅಕ್ಟೋಬರ್ ೧೯೩೫ ಶನಿವಾರ ಬೆಳಗಿನ ೧೧ ಗಂಟೆಗೆ ಡಾ॥ ಅಂಬೇಡ್ಕರ್ ಅವರು ನಾಸಿಕ್‌ಗೆ ಬಂದಾಗ, ಅವರನ್ನು ಅತ್ಯುತ್ಸಾಹದಿಂದ ಸ್ವಾಗತಿಸಿ ಒಂದು ದೊಡ್ಡ ಮೆರವಣಿಗೆಯ ಮೂಲಕ ಪಟ್ಟಣಕ್ಕೆ ಕರೆತರಲಾಯಿತು. ನಾಸಿಕ್ ಪಟ್ಟಣದಲ್ಲಿ ಪುಸ್ತಕ ಭಂಡಾರವೊಂದನ್ನು ಅವರು ಉದ್ಘಾಟನೆ ಮಾಡಿದರು.

ಆ ಸಂದರ್ಭದಲ್ಲಿ ಅವರು ಹೇಳಿದ್ದು : ನೀವು ಸ್ವಯಂ ಸಹಾಯದಲ್ಲಿ ನಂಬಿಕೆ ಇಟ್ಟಿದ್ದೀರಿ. ನಿಮ್ಮ ಕಾಲ ಮೇಲೆ ನೀವು ನಿಂತುಕೊಂಡು ನಿಮ್ಮ ಅಭಿವೃದ್ಧಿಗೆ ಸೆಣಸಬೇಕು. ನನಗೇನಾದರೂ ಗಂಭೀರವಾದ ಅಪಘಾತವಾದರೆ, ನನ್ನ ನಂತರ ಈ ಹೋರಾಟವನ್ನು ಮುಂದುವರಿಸಿಕೊಂಡು ಹೋಗಲು ನಿಮಗೆ ಸಾಧ್ಯವಾಗಬೇಕು.

ರವಿವಾರ ಪೇಟೆಯ ಹೀರಾಲಾಲ್ ಓಣಿಯಲ್ಲಿ ರಾತ್ರಿ ೯ ಗಂಟೆಗೆ ಒಂದು ಅಂತರ್ಜಾತಿ ಔತಣವನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ದೇಶಪಾಂಡೆ ಎಂಬ ಒಬ್ಬ ಕಾಂಗ್ರೆಸ್‌ನವರೂ ಭಾಗವಹಿಸಿದ್ದರು.

ಡಾ॥ ಅಂಬೇಡ್ಕರ್ ಅವರು ೧೩ನೆ ಅಕ್ಟೋಬರ್ ೧೯೩೫, ಭಾನುವಾರ ವಿಂಚೂರಿಗೆ ಹೋದರು. ಅಲ್ಲಿ ಅವರಿಗೆ ಸ್ವಾಗತವನ್ನು ನೀಡಲಾಯಿತು. ಹಾಗೆಯೇ ಯೆವೋಲಾಗೆ ಹೋಗುವ ಮಾರ್ಗ ಮಧ್ಯದ ಹಳ್ಳಿಗಳವರು ಅವರನ್ನು ಸ್ವಾಗತಿಸಿದರು.

ಯೆವೋಲಾದ ಪುರಸಭೆಯವರು ಬೆಳಗ್ಗೆ ಅಂಬೇಡ್ಕರ್ ಅವರಿಗೆ ಭಿನ್ನವತ್ತಳೆಗಳನ್ನು ಅರ್ಪಿಸಿದರು. ಭಿನ್ನವತ್ತಳೆಗೆ ಉತ್ತರ ಕೊಡುತ್ತಾ ಡಾ॥ ಅಂಬೇಡ್ಕರ್ ಅವರು ಹೇಳಿದ್ದು : ಸ್ಪೃಶ್ಯರ ಧೋರಣೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ, ನಮ್ಮ ನಿರಂತರ ಹೋರಾಟದ ಹೊರತು ಅವರು ನಮ್ಮೊಡನೆ ಪ್ರೀತಿಯಿಂದ ವರ್ತಿಸಲು ಸಿದ್ಧರಿಲ್ಲವೆಂದೂ ನಾವೀಗ ತೀರ್ಮಾನಕ್ಕೆ ಬಂದಿದ್ದೇವೆ. ಆದ್ದರಿಂದ ಹಿಂದೂಗಳಿಂದ ಬೇರೆಯಾಗಿರಲು, ಸ್ವಸಹಾಯದಿಂದ ಬದುಕಲು, ಸ್ವಯಂ ಔನ್ನತ್ಯವನ್ನು ಪಡೆಯಲು ಸೆಣಸಬೇಕೆಂದು ನಾವು ನಿರ್ಧರಿಸಿದ್ದೇವೆ.

ಯೆವೋಲಾದ ಸಮ್ಮೇಳನ ೧೩ನೆ ಅಕ್ಟೋಬರ್ ೧೯೩೫ರಂದು ರಾತ್ರಿ ಹತ್ತು ಗಂಟೆಗೆ ಸೇರಿತು. ಎಲ್ಲಾ ತೆರನಾದ ಅಭಿಪ್ರಾಯ ಹೊಂದಿದ್ದ ಸುಮಾರು ೧೦,೦೦೦ ಅಸ್ಪೃಶ್ಯರು ಭಾಗವಹಿಸಿದ್ದರು. ಇದರಲ್ಲಿ ಹೈದರಾಬಾದ್ ರಾಜ್ಯದಿಂದ ಮತ್ತು ಮಧ್ಯಭಾರತದಿಂದ ಬಂದ ಪ್ರತಿನಿಧಿಗಳೂ ಸೇರಿದ್ದರು. ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ನಿಮ್ನವರ್ಗದವರು ತೋರಿಸಿದ್ದ ಅತಿಶಯವಾದ ಸ್ಪಂದನ ಮತ್ತು ಆಸಕ್ತಿಯನ್ನು ನೋಡಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಅಮೃತ್ ರಾವ್ ರಣತುಂಬೆಯವರು ತಮ್ಮ ಸ್ವಾಗತ ಭಾಷಣದಲ್ಲಿ

ಸಂತೋಷವನ್ನು ವ್ಯಕ್ತಪಡಿಸುತ್ತಾ ಅವನತಿ ಹೊಂದಿದ ಹಿಂದುತ್ವವನ್ನು ಬ್ರಾಹ್ಮಣತ್ವ ಎಂದು ಸರಿಯಾಗಿಯೇ ಹೆಸರಿಸಲಾಗಿದೆ. ಏಕೆಂದರೆ ಇದರಿಂದ ಬ್ರಾಹ್ಮಣ ಜಾತಿ ಮಾತ್ರ ಉಪಯೋಗ ಪಡೆದುಕೊಂಡಿದೆ ಎಂದು ಹೇಳಿದರು. ಒಂದೂವರೆ ಗಂಟೆಯ ಕಾಲ ಹೆಚ್ಚಿನ ಭಾವೋದ್ವೇಗದಿಂದ ಮಾತನಾಡಿದ ಅಂಬೇಡ್ಕರ್ ಅವರು ಎಲ್ಲಾ ವರ್ತುಲದಲ್ಲಿ ಅಂದರೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ವರ್ತುಲಗಳಲ್ಲಿ, ಅವರ, ಅಂದರೆ ನಿಮ್ನವರ್ಗಗಳವರ ಪಡುಪಾಟಲನ್ನು ವಿವರಿಸುತ್ತಾ, ಹಿಂದೂತ್ವದ ಆಶ್ರಯದಲ್ಲಿ ಒಂದೇ ಸಮುದಾಯದ ಸದಸ್ಯರಾಗಿ, ತೀರಾ ಕನಿಷ್ಟವಾದ ಮಾನವೀಯ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೆ ಅವರು ಮಾಡಿದ ಅಗಾಧವಾದ ತ್ಯಾಗವನ್ನು ವಿವರಿಸಿದರು. ವಿಶೇಷವಾಗಿ ಕಲಾರಾಮ್ ದೇವಸ್ಥಾನ ಪ್ರವೇಶ ಚಳುವಳಿಯನ್ನು ಪ್ರಸ್ತಾಪಿಸುತ್ತಾ, ಕಳೆದ ಐದು ವರ್ಷಗಳಿಂದಲೂ ಅವರಿಗೆ ಸಿಕ್ಕಿದ ಅಮಾನವೀಯ ವರ್ತನೆಯನ್ನು ಪ್ರಸ್ತಾಪಿಸಿದರು. ಹಿಂದೂ ಸಮಾಜದಲ್ಲಿ ಪ್ರಾಥಮಿಕ ಹಕ್ಕುಗಳನ್ನು, ಸಮಾನ ಸ್ಥಾನಮಾನವನ್ನು ಪಡೆಯಲು ಅವರು ಮಾಡಿದ ಹೋರಾಟದಲ್ಲಿ ನಿರರ್ಥಕವಾಯಿತು ಎಂದು ಹೇಳಿದರು. ಆ ಉದ್ದೇಶದ ಸಾಫಲ್ಯತೆಗಾಗಿ ಅವರು ವ್ಯಯಿಸಿದ ಸಮಯ ಮತ್ತು ಪರಿಶ್ರಮಗಳೆಲ್ಲಾ ಸಂಪೂರ್ಣವಾಗಿ ವಿಫಲವಾಗಿದ್ದ ವಾಸ್ತವದ ಅರಿವು ಅವರಿಗೆ ನೋವನ್ನು ಉಂಟು ಮಾಡಿದೆ ಎಂದು ಹೇಳಿದರು. ಈ ವಿಷಯವನ್ನು ಅಂತಿಮವಾಗಿ ತೀರ್ಮಾನ ಮಾಡುವ ಕಾಲ ಸನ್ನಿಹಿತವಾಗಿದೆಯೆಂದು ಅಭಿಪ್ರಾಯ ಪಟ್ಟು, ಯಾವ ನಿರ್ಬಲತೆಗಳಿಂದ ಅವರು ಬಳಲುತ್ತಿದ್ದರೋ, ಯಾವ ಅಗೌರವವನ್ನು ಅವರು ಸಹಿಸಿಕೊಳ್ಳುತ್ತಿದ್ದರೋ, ಅದಕ್ಕೆ ಕಾರಣ ಅವರು ಹಿಂದೂ ಸಮಾಜದ ಸದಸ್ಯರಾಗಿದ್ದುದು ಆ ಧರ್ಮವನ್ನು ಬಿಟ್ಟು ಬೇರೊಂದು ಧರ್ಮಕ್ಕೆ ಸೇರಿಕೊಂಡು ಅಲ್ಲಿ ಸಮಾನ ಸ್ಥಾನಮಾನ, ಸುಭದ್ರತೆ ಮತ್ತು ಸರಿಯಾದ ರೀತಿಯ ನಡವಳಿಕೆಯನ್ನು ಪಡೆದುಕೊಳ್ಳುವುದು ಉತ್ತಮವಲ್ಲವೇ ಎಂದು ಕೇಳಿದರು.

ತಮ್ಮ ಧ್ವನಿಯನ್ನು ಎತ್ತರಿಸುತ್ತಾ ಹಿಂದೂ ಧರ್ಮದಿಂದ ತಮ್ಮ ಕೊಂಡಿಗಳನ್ನು ಕಳಚಿಕೊಳ್ಳುವಂತೆ ಅವರನ್ನು ಉತ್ತೇಜಿಸಿದರು ; ಕಳಚಿಕೊಂಡು ಇನ್ನೊಂದು ಧರ್ಮದಲ್ಲಿ ಸಾಂತ್ವಾನ, ನೆಮ್ಮದಿ ಮತ್ತು ಆತ್ಮಗೌರವವನ್ನು ಪಡೆಯಿರಿ ಎಂದು ಸಲಹೆ ಮಾಡಿದರು. ಯಾವ ಧರ್ಮಕ್ಕೆ ಮತಾಂತರಗೊಳ್ಳಬೇಕೆಂಬುದನ್ನು ಆರಿಸಿಕೊಳ್ಳುವುದರಲ್ಲಿ ಬಹಳ ಎಚ್ಚರಿಕೆ ವಹಿಸಬೇಕೆಂದೂ, ಆ ಧರ್ಮದಲ್ಲಿ ತಾರತಮ್ಯವಿಲ್ಲದ ವರ್ತನೆ, ಸಮಾನತೆ ಮತ್ತು ಮುಕ್ತವಾದ ಅವಕಾಶಗಳನ್ನು ಅವರಿಗೆ ಖಾತರಿಯಾಗಿ ಕೊಡುವ ಧರ್ಮವನ್ನು ಆಯ್ದುಕೊಳ್ಳಿ ಎಂದು ಹೇಳಿದರು. ಈ ವಿಷಯದಲ್ಲಿ ತಮ್ಮ ವೈಯಕ್ತಿಕ ತೀರ್ಮಾನವನ್ನು ಪ್ರಸ್ತಾಪಿಸುತ್ತಾ, ತಾವು ಒಬ್ಬ ಅಸ್ಪೃಶ್ಯ ಹಿಂದೂವಾಗಿ ಹುಟ್ಟಿದ್ದು ದುರದೃಷ್ಟಕರವೆಂದೂ, ಅದನ್ನು ತಪ್ಪಿಸಲು ಅವರಿಂದ ಸಾಧ್ಯವಾಗದಾಗಿತ್ತೆಂದೂ ಹೇಳುತ್ತಾ, ಆದರೆ ಇಂಥ ಅವಮಾನಕರ, ಅವಹೇಳನಕರ ಸ್ಥಿತಿಯಲ್ಲಿ ಬದುಕಲು ನಿರಾಕರಿಸುವುದು ತಮ್ಮ ಕೈಯ್ಯಲ್ಲಿ ಇದೆಯೆಂದೂ ಘೋಷಿಸಿದರು. ನಾನು ಹಿಂದೂವಾಗಿ ಸಾಯುವುದಿಲ್ಲವೆಂದು ನಿಮಗೆ ಪ್ರಮಾಣಪೂರ್ವಕ ಭರವಸೆ ಕೊಡುತ್ತೇನೆ ಎಂದು ಗುಡುಗಿದರು. ಕಡೆಯಲ್ಲಿ ಅವರು ತಮ್ಮ ಜನಗಳನ್ನು ಕಲಾರಾಮ್ ದೇವಸ್ಥಾನ ಸತ್ಯಾಗ್ರಹವನ್ನು ನಿಲ್ಲಿಸುವಂತೆ ಕೇಳಿದರು. ಕಾರಣ, ಹಿಂದೂಗಳು ನಿಮ್ಮೆಲ್ಲರ ಪ್ರಯತ್ನಗಳನ್ನು ನಿರರ್ಥಕಗೊಳಿಸಿ ತಮ್ಮದು ಎಂಥ ಪಶ್ಚಾತ್ತಾಪ ಪಡೆದ ಹೃದಯಗಳೆಂದು ತೋರಿಸಿಕೊಟ್ಟ ಸವರ್ಣೀಯ ಹಿಂದೂಗಳ ದಬ್ಬಾಳಿಕೆ ವಿರುದ್ಧ ಚಳುವಳಿ ಮಾಡುವುದು ನಿರರ್ಥಕವೆಂದು ಪ್ರಮಾಣಿಸಿದ್ದಾರೆ ಎಂದು ಹೇಳಿದರು. ಭವಿಷ್ಯದಲ್ಲಿ ಯಾವ ರೀತಿ ನಿಮ್ಮ ನಡೆ ಇರಬೇಕೆಂದರೆ ಹಿಂದೂ ಧರ್ಮದಿಂದಾಚೆ ನೀವು ಒಂದು ಪ್ರತ್ಯೇಕ ಸಮುದಾಯವಾಗಿ ಉಳಿಯಬೇಕೆಂಬ ತೀರ್ಮಾನ ಮತ್ತು ಮುಕ್ತಪೌರರಿಗೆ ಯೋಗ್ಯವಾದ ಒಂದು ಭವಿಷ್ಯವನ್ನು ರೂಪಿಸಿಕೊಳ್ಳುತ್ತೇವೆಂಬುದರಲ್ಲಿ ಹೊರಗಿನ ಪ್ರಪಂಚಕ್ಕೆ ಯಾವ

ಅನುಮಾನವು ಬಾರದಂತೆ ನಡೆದುಕೊಳ್ಳಿ ಎಂದು ಒತ್ತಾಯಪೂರ್ವಕವಾಗಿ ಹೇಳಿದರು.

ಅದರಂತೆ ಚರ್ಚೆಯು ಮುಗಿದ ಮೇಲೆ ಸಭೆ ಒಂದು ಠರಾವನ್ನು ಅನುಮೋದಿಸಿತು. ಆ ಠರಾವು ನಿಮ್ನವರ್ಗಗಳವರನ್ನು ಸವರ್ಣ ಹಿಂದೂಗಳ ಅಂತಸ್ತಿಗೆ ಸಮನಾಗಿ ಮೇಲೆತ್ತಬೇಕೆಂದು ಕಳೆದ ಹತ್ತು ವರ್ಷಗಳಿಂದ ಅವರು ನಡೆಸುತ್ತಿರುವ ಚಳುವಳಿಯನ್ನು ಕೈಬಿಡಬೇಕೆಂದು ಸೂಚಿಸಿತು. ಸಾಮಾಜಿಕ ಸಮಾನತೆ ಬೇಕೆಂಬ ಬೇಡಿಕೆಗೆ, ಸರ್ವ ಹಿಂದೂಗಳು ತೋರಿಸಿದ ಜಿಡ್ಡುಗಟ್ಟಿದ ಮತ್ತು ಅಪರಾಧಿಕ ಉದಾಸೀನವೇ ಇದಕ್ಕೆ ಕಾರಣವಾಗಿತ್ತು. ನಮ್ಮ ಉದ್ದೇಶ ಎರಡೂ ಪಂಗಡಗಳನ್ನು ಒಂದುಗೂಡಿಸಿ, ಬಲಪಡಿಸಿ, ಅವರನ್ನು ಒಂದು ಶಕ್ತಿಶಾಲಿ ಸಮುದಾಯ/ಸಂಘವನ್ನಾಗಿ ಮಾಡಬೇಕೆಂದೇ ಆಗಿತ್ತು. ನಿಶ್ಚಲವಾದ ಪ್ರಯತ್ನಗಳನ್ನು ಮಾಡಿ, ತಮ್ಮ ಶಕ್ತಿಸಾಮರ್ಥ್ಯಗಳನ್ನು ನಷ್ಟ ಮಾಡಿಕೊಳ್ಳುವುದನ್ನು ನಿಲ್ಲಿಸಿ, ಹಿಂದೂಸ್ಥಾನದ ಇತರ ಸಮುದಾಯಗಳೊಡನೆ, ಸಮಾನತೆಯ ಆಧಾರದ ಮೇಲೆ ಗೌರವಯುತವಾದ ಅಂತಸ್ತನ್ನು ಮತ್ತು ಸ್ವತಂತ್ರವಾದ ಸ್ಥಾನವನ್ನು ಪಡೆದುಕೊಳ್ಳುವುದಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಕರೆಕೊಟ್ಟರು.

ಡಾ॥ ಅಂಬೇಡ್ಕರ್ ಅವರು ಯೆವೊಲದಿಂದ ಹಿಂದುರುಗಿ, ನಾಸಿಕ್‌ನಲ್ಲಿ ಉಳಿದುಕೊಂಡರು. ಅವರ ವಾಸ್ತವ್ಯದ ಸಮಯದಲ್ಲಿ ಕಸಗುಡಿಸುವ (ಮೇಘವಾಲ್) ಕೆಲಸ ಮಾಡುವ ಸಮುದಾಯ ಚಹಾಕೂಟವನ್ನು ಮತ್ತು ಔತಣಕೂಟವನ್ನು ೧೫ ಮತ್ತು ೧೬ ಅಕ್ಟೋಬರ್ ೧೯೩೫ನೆ ತಾರೀಕು ಏರ್ಪಡಿಸಿದ್ದರು. ತಾವು ಹಿಂದೂ ಧರ್ಮವನ್ನು ತ್ಯಜಿಸಿ ಬೇರಾವುದಾದರೂ ಒಂದು ಧರ್ಮಕ್ಕೆ ಪರಿವರ್ತನೆಯಾಗುತ್ತೇನೆಂಬ ಅಂಬೇಡ್ಕರ್ ಅವರ ಹೇಳಿಕೆ ಪ್ರಾಪಂಚಿಕ ಮಟ್ಟದಲ್ಲಿ ವಿಸ್ತೃತವಾದ ಪ್ರಚಾರವನ್ನು ಪಡೆದುಕೊಂಡಿತು. ಅದು ಪಶ್ಚಾತ್ತಾಪ ಪಡೆದ ಹಿಂದೂ ಸಮುದಾಯದತ್ತ ಗುರಿಯಿಟ್ಟು ಎಸೆದ ಒಂದು ಸುಂಟರಗಾಳಿಯಾಗಿತ್ತು. ಹಿಂದೂಗಳ ಬೇರೆ ಬೇರೆ ಗುಂಪುಗಳಲ್ಲಿ ಗದ್ದಲದ ವಾರಾವರಣವನ್ನೇ ಇದು ಸೃಷ್ಟಿಸಿತು. ಈ ಗುಂಪುಗಳು ಧ್ವನಿಸಿದ ಅಸಾಧಾರಣವಾದ ಪ್ರತಿಕ್ರಿಯೆಗಳು ಹೀಗಿದ್ದವು.

[ಸಂಪಾದಕರುಗಳು]

ನಿಮ್ನವರ್ಗಗಳವರ ತೀರ್ಮಾನದಿಂದ ದಯಾಹೀನರಾದ ಮತ್ತು ಮಾನವದ್ವೇಷಿಯಾದ ಹಿಂದೂಗಳು ಮಿಸುಕಾಡಲಿಲ್ಲ. ಮುರಿದು ಬಿದ್ದು ಕೊಳೆಯುತ್ತಿರುವ ಅವರು ಅವರ ಯೋಚನಾಶಕ್ತಿಯನ್ನೂ, ದೃಷ್ಟಿಯನ್ನೂ ಕಳೆದುಕೊಂಡಿದ್ದರು. ಅನಕ್ಷರಸ್ಥ ಬ್ರಾಹ್ಮಣೇತರರು, ಧಾರ್ಮಿಕ ವಿಷಯಗಳ ಮೇಲೆ ತೀರ್ಮಾನ ತೆಗೆದುಕೊಳ್ಳುವುದು ಬ್ರಾಹ್ಮಣರಿಗೆ ಸೇರಿದ ವಿಷಯ ಎಂದು ಸುಮ್ಮನಾದರು. ಯೆವೋಲಾ ತೀರ್ಮಾನದಿಂದ ಆನಂದತುಂದಿಲರಾದ ಕರ್ಮಠ ಹಿಂದೂಗಳು ನಿಟ್ಟುಸಿರನ್ನು ಬಿಟ್ಟರು. ದೇವಸ್ಥಾನ ಪ್ರವೇಶ ಸತ್ಯಾಗ್ರಹದಿಂದ ಕಳೆದ ಐದು ವರ್ಷಗಳಿಂದ ಪೀಡಿಸಲ್ಪಟ್ಟು, ನಾಸಿಕ್‌ನ ಸಂಪ್ರದಾಯವಾದಿ ಹಿಂದೂಗಳು ನಿಟ್ಟುಸಿರನ್ನು ಬಿಟ್ಟರು. ಹಿಂದೂ ಸಮಾಜದಿಂದ ಹೊರಗೆ ಹೋಗುತ್ತೇವೆಂಬ ತೀರ್ಮಾನದಿಂದ ಅತಿಯಾದ ಸಂತೋಷವನ್ನುಪಟ್ಟರು. ಕಲೆಕ್ಟರ್ ಅವರಿಗೆ ಅರ್ಜಿ ಸಲ್ಲಿಸಿ, ಅಸ್ಪೃಶ್ಯರ ಇತ್ತೀಚಿನ ಘೋಷಣೆಯ ಹಿನ್ನೆಲೆಯಲ್ಲಿ ನಾಸಿಕ್‌ನ ತೇರಿನ ಮೆರವಣಿಗೆಯ ಮೇಲೆ ವಿಧಿಸಿದ್ದ ನಿಷೇಧವನ್ನು ಹಿಂದಕ್ಕೆ ಪಡೆಯಬೇಕೆಂದು ಕೇಳಿಕೊಂಡರು. ದೇಶದಲ್ಲಿನ ವಿದ್ಯಾವಂತ ಸಮುದಾಯ ಹಾಗೂ ರಾಜಕೀಯ ಮನೋಧರ್ಮದ ಜನಗಳು ಅಸ್ಪೃಶ್ಯರ ತೀರ್ಮಾನವನ್ನು ಕುರಿತು ತಮ್ಮ ವ್ಯಥೆಯನ್ನು ವ್ಯಕ್ತಪಡಿಸಿದರು. ಸಿಂಧೀ ಹಿಂದೂ ಒಬ್ಬ ಅಂಬೇಡ್ಕರ್ ಅವರಿಗೆ ರಕ್ತದಲ್ಲಿ ಒಂದು ಪತ್ರವನ್ನು ಬರೆದು, ಅವರು ಹಿಂದೂ ಧರ್ಮವನ್ನು ತ್ಯಜಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು.

## ಡಾ॥ ಅಂಬೇಡ್ಕರ್ ಅವರು ಯೆವೋಲಾ ಭಾಷಣಕ್ಕೆ ಗಾಂಧೀಜಿಯವರ ಪ್ರತಿಕ್ರಿಯೆ

ವಾರ್ಧಾ, ಅಕ್ಟೋಬರ್, ೧೫

ಡಾ॥ ಅಂಬೇಡ್ಕರ್ ಅವರ ಭಾಷಣವನ್ನು ಕುರಿತು ಅಸೋಸಿಯೇಟೆಡ್ ಪ್ರೆಸ್‌ನ ಪ್ರತಿನಿಧಿಯವರಿಗೆ ಕೊಟ್ಟ ಸಂದರ್ಭದಲ್ಲಿ ಗಾಂಧೀಜಿಯವರು ಹೀಗೆ ಹೇಳಿದರು. ಡಾ॥ ಅಂಬೇಡ್ಕರ್ ಅವರು ಮಾಡಿದರೆಂದು ಹೇಳಲಾದ ಭಾಷಣವನ್ನು ನಂಬಲಸಾಧ್ಯ. ಆದರೆ ಅಂಥ ಭಾಷಣವನ್ನು ಅವರು ಮಾಡಿದ್ದು ನಿಜವೇ ಆಗಿದ್ದು, ಸಮ್ಮೇಳನ ಹಿಂದೂ ಧರ್ಮದಿಂದ ಸಂಪೂರ್ಣ ಬೇರೆಯಾಗಿ ಸಮಾನತೆಯನ್ನು ಖಾತರಿಯಾಗಿ ಕೊಡುವ ಬೇರೊಂದು ಧರ್ಮವನ್ನು ಒಪ್ಪಿಕೊಳ್ಳುವುದು ಎಂದಾದರೆ, ಎರಡನ್ನೂ ನಾನು ದುರದೃಷ್ಟಕರ ಪ್ರಸಂಗಗಳೆಂದೇ ಭಾವಿಸುತ್ತೇನೆ. ಅದರಲ್ಲೂ ಅಲ್ಲೊಂದು ಇಲ್ಲೊಂದು ಪ್ರಕರಣಗಳನ್ನು ಬಿಟ್ಟು ಅಸ್ಪೃಶ್ಯತೆಯೆನ್ನುವುದು ಕಟ್ಟಕಡೆಯ ಹಂತವನ್ನು ತಲುಪಿರುವ ಈ ಸಂದರ್ಭದಲ್ಲಿ ಕವಿತಾ ಮತ್ತು ಇತರ ಹಳ್ಳಿಗಳಲ್ಲಿ ನಡೆಯಿತೆಂದು ಹೇಳಲಾದ ಹೇಯಕೃತ್ಯಗಳಿಂದಾಗಿ ಉನ್ನತ ವ್ಯಕ್ತಿಯಾದ, ಮಹಾನ್ ವಿದ್ಯಾವಂತರಾದ ಡಾ॥ ಅಂಬೇಡ್ಕರ್ ಅವರ ಕೋಪವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಧರ್ಮ ಎನ್ನುವುದು ಮನೆಯನ್ನಾಗಲೀ, ಉಡುಪನ್ನಾಗಲಿ ಬದಲಾಯಿಸುವಂಥದಲ್ಲ. ಅದು ಮನುಷ್ಯನ ದೇಹಕ್ಕಿಂತ ಹೆಚ್ಚಾಗಿ ಮನುಷ್ಯನ ಅಂತರಾತ್ಮನ ಒಂದು ಅವಿಭಾಜಿತ ಅಂಗ. ಧರ್ಮ ಎಂಬುದು ಮನುಷ್ಯನನ್ನು ಅವನ ಸೃಷ್ಟಿಕರ್ತನೊಂದಿಗೆ ಬೆಸೆಯುವ ಒಂದು ಬಂಧನ. ದೇಹ ನಾಶವಾಗುತ್ತದೆ, ಆದರೆ ಧರ್ಮ ಮರಣಾನಂತರವೂ ಉಳಿದುಕೊಳ್ಳುತ್ತದೆ.

ಅಂಬೇಡ್ಕರ್ ಅವರಿಗೆ ದೇವರಲ್ಲಿ ಏನಾದರೂ ನಂಬಿಕೆ ಇದ್ದದ್ದೇ ಆದರೆ, ಕೋಪವನ್ನು ಶಮನ ಮಾಡಿಕೊಂಡು, ಅವರ ಅನುವಂಶೀಯ ಧರ್ಮವನ್ನು ಅದರದೇ ನೆಲೆಗಟ್ಟಿನಲ್ಲಿ, ಆದರೆ ಅದರ ನಂಬಿಕೆಯಿಲ್ಲದ ಅನುಯಾಯಗಳ ಮೇಲೆ ಪರೀಕ್ಷೆ ಮಾಡುವಂತೆ ನಾನು ಅವರನ್ನು ಒತ್ತಾಯಿಸುತ್ತೇನೆ. ಕಡೆಯದಾಗಿ ನನಗೆ ಖಾತರಿಯಾಗಿರುವಂತೆ ಅವರಾಗಲೀ ಅಥವಾ ಆ ಠರಾವನ್ನು ಅನುಮೋದಿಸಿದವರಾಗಲೀ ಧರ್ಮವನ್ನು ಬದಲಾಯಿಸಿದರೆ ಅದು ಅವರ ಹೃದಯದಲ್ಲಿರುವ ಅವರ ಧ್ಯೇಯಕ್ಕೇನೂ ಸಹಾಯವಾಗುವುದಿಲ್ಲ. ಕಾರಣವೆಂದರೆ ಲಕ್ಷಾಂತರ ಮಂದಿ ಪ್ರಪಂಚ ಜ್ಞಾನವಿಲ್ಲದ, ಅನಕ್ಷರಸ್ಥ ಹರಿಜನರು ಪೂರ್ವಿಕರಿಂದ ಬಂದ ಧರ್ಮವನ್ನು ಅವರಾಗಲೀ ಅಥವಾ ಅವರ ಸಹವರ್ತಿಗಳಾಗಲೀ ತ್ಯಜಿಸಿದರೆ ಅವರ ಜೀವನ ಒಳಿತಿಗಾಗಲೀ, ಕೆಡುಕಿಗಾಗಲೀ, ಸವರ್ಣಿಯ ಹಿಂದೂಗಳ ಜೀವನದೊಂದಿಗೆ ಹೊಸೆದುಕೊಂಡಿರುವುದನ್ನು ಜ್ಞಾಪಿಸಿಕೊಂಡರೆ, ಅವರ ಅಂದರೆ ಧರ್ಮ ತ್ಯಜಿಸಿದವರ ಮಾತುಗಳಿಗೆ ಕಿವಿಗೊಡುವುದಿಲ್ಲ. —— ಎ.ಪಿ.

### ಗಾಂಧೀಜಿಯವರ ಪ್ರತಿಕ್ರಿಯೆ ಮೇಲೆ ಅಂಬೇಡ್ಕರ್ ಅವರ ಅಭಿಪ್ರಾಯಗಳು

ಯಾವ ಧರ್ಮಕ್ಕೆ ತಾವು ಸೇರಬೇಕೆನ್ನುವುದು ಇನ್ನೂ ತೀರ್ಮಾನವಾಗಿಲ್ಲ. ಯಾವ ಮಾರ್ಗಗಳನ್ನು, ಯಾವ ಮಾಧ್ಯಮವನ್ನು ನಾವು ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ನಾವಿನ್ನೂ ಯೋಚನೆ ಮಾಡಿಲ್ಲ. ಆದರೆ ನಾವು ಸರಿಯಾಗಿ ವಿಚಾರ ಮಾಡಿ, ಸರಿಯಾಗಿ ಮನದಟ್ಟು ಮಾಡಿಕೊಂಡು ನಮಗೆ ಹಿಂದೂ ಧರ್ಮ ಒಳ್ಳೆಯದಲ್ಲವೆಂಬ ತೀರ್ಮಾನಕ್ಕೆ ಬಂದಿದ್ದೇವೆ.

[ಈ ಮಾತುಗಳನ್ನು ಅಂಬೇಡ್ಕರ್ ಅವರಿಗೆ ಅಸೋಸಿಯೇಟ್ಸ್ ಪ್ರೆಸ್‌ನ ಪ್ರತಿನಿಧಿ ಗಾಂಧೀಜಿಯವರು ಅವರ ನಾಸಿಕ್ ಭಾಷಣದ ಮೇಲೆ ಮಾಡಿದ ಟೀಕೆಯನ್ನು ತೋರಿಸಿದಾಗ ಹೇಳಿದರು.]

ಮುಂದುವರೆದು,

ಅಸಮಾನತೆಯೇ ಹಿಂದೂ ಧರ್ಮದ ತಳಹದಿಯಾಗಿದ್ದು, ಮತ್ತು ಅದರ ನೈತಿಕತೆ ಹೇಗಿದೆಯೆಂದರೆ, ನಿಮ್ನವರ್ಗಗವರು ಎಂದೆಂದಿಗೂ ಸಂಪೂರ್ಣ ಪುರುಷತ್ವವನ್ನು ಪಡೆದುಕೊಳ್ಳಲಾಗುವುದಿಲ್ಲ. ನಾನು ಇದನ್ನು ಕವಿತಾ ಹಳ್ಳಿಯಲ್ಲಾಗಲೀ, ಬೇರೆ ಸ್ಥಳದಲ್ಲಿಯಾಗಲೀ ನಿಮ್ನವರ್ಗಗಳವರನ್ನು ನಡೆಸಿಕೊಂಡಿರುವ ರೀತಿಯ ಬಗ್ಗೆ ಆಕ್ರೋಶಗೊಂಡಾಗಲೀ ಅಥವಾ ಮುನಿಸಿನಿಂದಾಗಲೀ ಮಾಡಿದ್ದೇನೆಂದು ಯಾರು ತಿಳಿಯವುದು ಬೇಡ. ಅದೊಂದು ಆಳವಾಗಿ ಯೋಚಿಸಿ, ತೆಗೆದುಕೊಂಡ ತೀರ್ಮಾನ.

ಧರ್ಮದ ಅವಶ್ಯಕತೆ ಇದೆ ಎಂದು ಗಾಂಧೀಜಿ ಅವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಾನು ತನ್ನ ನಡತೆಯನ್ನು ಹೇಗೆ ನಿಯಂತ್ರಿಸಿಕೊಳ್ಳಬೇಕೆಂದು ಮತ್ತು ಜೀವನದಲ್ಲಿ ಹೇಗೆ ಮುಂದುವರೆಯಬೇಕೆಂಬುದಕ್ಕೆ ಹಾಗೂ ಚೆನ್ನಾಗಿ ಬಾಳುವುದಕ್ಕೆ ಬೇಕಾದ ತನ್ನ ಕಲ್ಪನೆಯ ಧರ್ಮಕ್ಕೆ, ತನ್ನ ಪೂರ್ವಿಕರ ಧರ್ಮ ಅಸಂಗತವಾಗಿದ್ದರೆ, ಅದಕ್ಕೇ ಅವನು ಅಂಟಿಕೊಂಡಿರಬೇಕೆಂಬುದಕ್ಕೆ ನನ್ನ ಸಹಮತವಿಲ್ಲ. ಅವರು ಯಾವಾಗ ಮತಾಂತರಗೊಳ್ಳಬೇಕೆಂದು ತೀರ್ಮಾನಿಸಿದ್ದೀರ ಮತ್ತು ಇದು ಅವರ ವೈಯಕ್ತಿಕ ನಿರ್ಧಾರವೋ ಅಥವಾ ಸಮೂಹದ ನಿರ್ಧಾರವೋ ಎಂಬ ಪ್ರಶ್ನೆಗೆ ನಾನು ನನ್ನ ಧರ್ಮವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೇನೆ. ಆದರೆ ನನ್ನ ಜೊತೆಗೆ ಸಮೂಹ ಬರದೆ ಇದ್ದರೆ ನನಗೆ ಚಿಂತೆಯಿಲ್ಲ. ಅದನ್ನು ಅವರೇ ತೀರ್ಮಾನಿಸಿಕೊಳ್ಳುತ್ತಾರೆ. ಅದು ಒಳ್ಳೆಯದೆಂದು ಅವರಿಗೆ ಅನಿಸದಿದ್ದರೆ ಅವರು ನನ್ನ ಉದಾಹರಣೆಯನ್ನು ಅನುಸರಿಸುವುದಿಲ್ಲ. ನನ್ನ ಸಲಹೆಯೇನೆಂದರೆ, ಗಾಂಧೀಜಿಯವರು, ನಿಮ್ನವರ್ಗಗಳವರು ಅವರ ದಾರಿಯನ್ನು ಅವರೇ ಹುಡುಕಿಕೊಳ್ಳಲು ಬಿಟ್ಟುಬಿಡಬೇಕು ಎಂದು ಕವಿತಾ ಹಳ್ಳಿಯಲ್ಲಿ ನಡೆದದ್ದು ಯಾವುದೋ ಒಂದು ಒಮ್ಮೆ ಮಾತ್ರ ಘಟಿಸಿದ ಸಂಗತಿಯಲ್ಲ. ಆದರೆ ಆ ಘಟನೆಯ ತಳಹದಿ ಹಿಂದೂಗಳ ಪೂರ್ವಿಕರ ಧರ್ಮದಲ್ಲಿ ಕಾಣಸಿಗುವ ವ್ಯವಸ್ಥೆಯ ಬುನಾದಿ.

# ೨೪
# ನನ್ನ ಸಾಮರ್ಥ್ಯ ಮತ್ತು ಹಿರಿಮೆ ನನ್ನ ತಾಳ್ಮೆಯ ಪರಿಶ್ರಮ ಮತ್ತು ಬುದ್ಧಿವಂತಿಕೆಯ ಫಲಶ್ರುತಿ

೮ನೇ ಡಿಸೆಂಬರ್ ೧೯೩೫ ರಂದು ಬೊಂಬಾಯಿಯಿನ ಫೋರಾಸ್ ರಸ್ತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಯೆವೊಲಾದಲ್ಲಿ ಡಾ॥ ಅಂಬೇಡ್ಕರ್ ಅವರು ಮತ ಪರಿವರ್ತನೆಯಾಗುತ್ತೇನೆಂದು ತಮ್ಮ ಇಂಗಿತವನ್ನು ಘೋಷಣೆ ಮಾಡಿದ ಮೇಲೆ ಈ ಸಭೆ ಬೊಂಬಾಯಿಯಲ್ಲಿ ನಡೆದ ಮೊದಲ ಸಭೆಯಾಗಿತ್ತು. ಈ ಸಭೆಯಲ್ಲಿ ಸುಮಾರು ೧೦,೦೦೦ ಅಸ್ಪೃಶ್ಯರು, ೫೦-೭೫ ಜನ ಮುಸ್ಲಿಮರು ಮತ್ತು ಕೆಲವರು ಕ್ರಿಶ್ಚಿಯನ್‌ರು ಇದ್ದರು. ಡಾ॥ಅಂಬೇಡ್ಕರ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮಿ: ದೇವರಾವ್ ನಾಯಿಕ್ ಅವರು ಪೀಠಿಕಾ ಮಾತುಗಳನ್ನು ಆಡಿದ ಮೇಲೆ ಸುರ್ಬಾಟಿಪ್‌ನಿಸ್ ಅವರು ಮಾತನಾಡಿದರು. ಮಿ:ಹೊಂಡೆ ಮತ್ತು ಮಿ:ಸಹಸ್ರ ಬುಧೆ ಅವರೂ ಉಪಸ್ಥಿತರಿದ್ದರು. 'ಡಾ॥ ಬಿ.ಆರ್.ಅಂಬೇಡ್ಕರ್ ಅವರು ತಾವು ಯೋಜಿಸುತ್ತಿರುವ ಮಹರ್ ಸಮ್ಮೇಳನದಲ್ಲಿ ಮನಪರಿವರ್ತನೆಯ ವಿಷಯದಲ್ಲಿ ತೀರ್ಮಾನವನ್ನು ಮೊದಲು ತೆಗೆದುಕೊಳ್ಳಲಾಗುತ್ತದೆ ಎಂದು ಘೋಷಿಸಿದರು. ವರ್ತಮಾನ ಪತ್ರಿಕೆಗಳಲ್ಲಿ ಒಂದೇ ಸಮನೆ ಪತ್ರಗಳು ಪ್ರಕಟವಾಗುತ್ತಿದ್ದು, ಅದರಲ್ಲಿ ಬಹು ಸಂಖ್ಯೆಯ ಪತ್ರಗಳು ಅವರನ್ನು (ಡಾ॥ಅಂಬೇಡ್ಕರ್ ಅವರನ್ನು) ಬಹು ಕಟುವಾಗಿ ಖಂಡನೆ ಮಾಡಿದ್ದ ಪತ್ರಗಳಾಗಿದ್ದು, ಅವರಿಗೆ ಬೆಂಬಲ ಸೂಚಿಸಿದ್ದ ಪತ್ರಗಳು ಎಲ್ಲೋ ಕೆಲವು ಮಾತ್ರ ಇದ್ದವು. ಇಂಥ ಪತ್ರಗಳ ಮತ್ತು ಲೇಖನಗಳ ಸಾಲಿನಲ್ಲಿ ಒಬ್ಬ ಅರೆ-ಸಾಮಾಜಿಕ ಸುಧಾರಕನಾಗಿದ್ದವನು ಬರೆದ ಪತ್ರವೊಂದು ಇತ್ತು. ಅದರಲ್ಲಿ ಅವರು ಡಾ॥ ಅಂಬೇಡ್ಕರ್ ಅವರು ಹಿಂದೂ ಧರ್ಮದಿಂದ ಹೊರಗೆ ಹೋದರೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಾರೆಂದು ಬಡಬಡಿಸಿದ್ದ ಕಾರಣ ಅವನ ಪ್ರಕಾರ, ಡಾ॥ ಅಂಬೇಡ್ಕರ್ ಅವರು, ಅವರ ಅಸ್ಪೃಶ್ಯತೆಯಿಂದಾಗಿಯೇ ಹಿರಿಮೆಯನ್ನು ಗಳಿಸಿಕೊಂಡಿದ್ದಾರೆ ಎಂದು. ಡಾ॥ ಅಂಬೇಡ್ಕರ್ ತಮ್ಮದೇ ವೈಲಕ್ಷಣದ ಬಿರುನುಡಿಗಳಲ್ಲಿ ಉತ್ತರ ಕೊಡುತ್ತಾ ತಮ್ಮ ಸಾಮರ್ಥ್ಯ ಮತ್ತು ಹಿರಿಮೆ ತಮ್ಮ ತಾಳ್ಮೆಯ ಪರಿಶ್ರಮ ಮತ್ತು ತಮ್ಮ ಬುದ್ಧಿಮತ್ತೆಯ ಫಲಶೃತಿಯೆಂದು, ತಾವು ಯಾವ ಧರ್ಮದಲ್ಲೇ ಇರಲಿ ಅಥವಾ ಯಾವುದೇ ಸಾಹಿತ್ಯಕ ಅಥವಾ ರಾಜಕೀಯ ಪ್ರಭೃತಿಗಳ ಜೊತೆಯಲ್ಲಿರಲಿ ಅವರು ಬ್ರಾಹ್ಮಣರೇ ಆಗಲಿ ಅಥವಾ ಬ್ರಾಹ್ಮಣೇತರರೇ ಆಗಲೀ ತಮ್ಮ ವ್ಯಕ್ತಿತ್ವವನ್ನು ಹಾಗೆಯೇ ಉಳಿಸಿಕೊಳ್ಳಬಲ್ಲೆ ಎಂದು ಹೇಳಿದರು. ತನ್ನ ತುಳಿತಕ್ಕೆ ಸಿಕ್ಕಿದ ಜನ ಯಾವುದೇ ಧರ್ಮದಲ್ಲಿ ಏಳಿಗೆ ಹೊಂದುವುದಾದರೆ, ತಾವು ಅದೇ ಧರ್ಮದಲ್ಲಿ ಯಾವ ಪ್ರಖ್ಯಾತಿಯನ್ನೂ ಬಯಸದೆ ಇರಲು ಬಯಸುತ್ತೇನೆ ಎಂದು ಹೇಳಿದರು.

## ೨೫
# ನಾವು ಎಲ್ಲೇ ಹೋಗಲಿ, ನಮ್ಮ ಕಲ್ಯಾಣಕ್ಕಾಗಿ ಹೋರಾಡಲೇಬೇಕು

ಮತ ಪರಿವರ್ತನೆಯ ಯೆವೋಲಾ ಘೋಷಣೆ ಹಿಂದೂ ಸಮಾಜದಲ್ಲಿ ಪ್ರತಿಕ್ರಿಯೆಯ ಅಲೆಗಳನ್ನೇ ಸೃಷ್ಟಿಸಿತು. ಈ ಘೋಷಣೆಯನ್ನು ಬೆಂಬಲಿಸುವ ಸಲುವಾಗಿ ಮಹಾರಾಷ್ಟ್ರ ಅಸ್ಪೃಶ್ಯ ಯುವಕರ ಸಮ್ಮೇಳನವನ್ನು ಪೂನಾದಲ್ಲಿ ೧೧ ಮತ್ತು ೧೨ನೆ ಜನವರಿ ೧೯೩೬ ರಂದು ಕರೆಯಲಾಯಿತು. ಮದರಾಸಿನ ಹೆಸರಾಂತ ಮುಖಂಡರಾದ ಪ್ರೊ:ಎನ್.ಶಿವರಾಜ್ ಎನ್ನುವವರು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಸುಮಾರು ಹತ್ತು ಸಾವಿರ ಮಂದಿ ಮಹಿಳೆಯರು ಮತ್ತು ಪುರುಷರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನದಲ್ಲಿ ಕೆಲವು ಹಿಂದೂ ಸ್ಪೃಶ್ಯರು, ಮುಸ್ಲಿಮರು ಮತ್ತು ಸಿಖ್ಖರೂ ಸಹ ಹಾಜರಿದ್ದರು. ತಮ್ಮ ಅಧ್ಯಕ್ಷ ಭಾಷಣವನ್ನು ಮಾಡುತ್ತಾ ಶಿವರಾಜ್ ಅವರು ಹೀಗೆ ಹೇಳಿದರು.

ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಒಂದೇ ಮಾರ್ಗವೆಂದರೆ, ಅಸ್ಪೃಶ್ಯರು ಹಿಂದೂ ಧರ್ಮವನ್ನು ತ್ಯಜಿಸಿ, ಅವಶ್ಯಕವಾಗಿ ಇನ್ನೊಂದು ಧರ್ಮವನ್ನು ಸೇರಬೇಕೆಂದೇನೂ ಅಲ್ಲ. ಆದರೆ, ಸಾಧ್ಯವಾದಲ್ಲಿ ಇನ್ನೊಂದು ಹೊಸ ಧರ್ಮವನ್ನು ಪ್ರಾರಂಭಿಸುವುದು ಅಥವಾ **ಆದಿದ್ರಾವಿಡರು** ಅನುಸರಿಸುತ್ತಿದ್ದ ಪುರಾತನವಾದ ಧರ್ಮವನ್ನು ಪುನಃ ಚೇತನಗೊಳಿಸುವುದು. ಆರ್ಯನ್‌ರು ಭಾರತಕ್ಕೆ ಹಿಂದೂ ಧರ್ಮವನ್ನು ಅದರ ಭಿನ್ನಭಿನ್ನವಾದ ಆಚರಣೆಗಳೊಂದಿಗೆ ತರುವುದಕ್ಕೆ ಬಹಳ ಮುಂಚೆ ಆದಿದ್ರಾವಿಡರು ಆ ತಮ್ಮ ಧರ್ಮವನ್ನು ಆಚರಿಸುತ್ತಿದ್ದರು ಎಂದರು.

ಡಾ॥ ಸೋಲಂಕಿ ಅವರು ಮಾತನಾಡಿದ ಮೇಲೆ ಡಾ॥ಅಂಬೇಡ್ಕರ್ ಅವರು ತಮ್ಮ ಜನಗಳಿಗೆ ಎಚ್ಚರಿಕೆ ಕೊಡುತ್ತಾ, ಮತಪರಿವರ್ತನೆ ಅವರನ್ನು ನರಕದಿಂದ ಬಿಡುಗಡೆ ಮಾಡಿ ಸಮಾನತೆಯ ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುತ್ತದೆ ಎಂಬ ತಪ್ಪು ಆಭಿಪ್ರಾಯದ ವಿರುದ್ಧ ಎಚ್ಚರಿಸುತ್ತಾ, ಹಾಗೆ ತಿಳಿಯುವುದು ಬೇಡ ಎಂದರು. ನಾವು ಯಾವ ಧರ್ಮಕ್ಕೇ ಹೋಗಲಿ, ಕ್ರಿಶ್ಚಿಯನ್ ಧರ್ಮವಾಗಲಿ, ಇಸ್ಲಾಂ ಧರ್ಮವಾಗಲಿ, ಸಿಖ್ ಧರ್ಮವಾಗಲಿ ನಾವು ನಮ್ಮ ಯೋಗಕ್ಷೇಮಕ್ಕಾಗಿ ಹೊಡೆದಾಡಲೇಬೇಕು ಎಂಬುದರ ಬಗ್ಗೆ ನಮಗೆ ಸಂಪೂರ್ಣ ಅರಿವಿದೆ. ಇಸ್ಲಾಮಿಗೆ ಮತಾಂತರ ಹೊಂದಿದರೆ ನಮ್ಮಲ್ಲಿ ಎಲ್ಲರೂ ನವಾಬ್ ಆಗುತ್ತೇವೆಂದು, ಕ್ರಿಶ್ಚಿಯನ್ ಆದರೆ ಪೋಪ್ ಆಗುತ್ತೇವೆಂದು ಅಂದುಕೊಳ್ಳುವುದು ದಡ್ಡತನವಾಗುತ್ತದೆ. ಎಲ್ಲಿಗೇ ಹೋದರೂ ಹೊಡೆದಾಡುವುದು ನಮಗೆ ತಪ್ಪಿದ್ದಲ್ಲ. ಸವರ್ಣ ಹಿಂದೂಗಳೊಂದಿಗೆ ರಾಜಿಯಾಗಿ, ಸಮಾನತೆಗಾಗಿ ಹಿಂದೂ ಧರ್ಮದೊಳಗೆ ಹೋರಾಟ ಮಾಡುವುದು ಎಂದೆಂದಿಗೂ ಫಲ ಕೊಡುವುದಿಲ್ಲ. ಕಾರಣ ಸಮಸ್ಯೆ ಊಟ–ತಿಂಡಿಯದಲ್ಲ. ನಮ್ಮ ಹೋರಾಟದ ಹಿಂದೆ, ಒಂದು ನಿರ್ದಿಷ್ಟವಾದ ದೈವೀಸಂಕಲ್ಪ ಇರುವುದರಲ್ಲಿ ಸಂದೇಹವಿಲ್ಲ. ಇಲ್ಲದಿದ್ದರೆ ಹಣವನ್ನು ಕೊಡುತ್ತೇವೆಂಬ ಅನೇಕ ಪ್ರಸ್ತಾವನೆಗಳು ಮುಂದೆ ಬರುತ್ತಿರಲಿಲ್ಲ. ಏಳುಕೋಟಿ ರೂಪಾಯಿಗಳನ್ನು ಕೊಡುತ್ತೇವೆಂಬ ಪ್ರಸ್ತಾವನೆ ನಿಜಾಮರಿಂದ ಬಂದಿತ್ತೆಂದು ನಂಬಲಾಗದ ಕಡೆಯಿಂದ ಬಂದಿದ್ದವು. ದೇವರ ಸಹಾಯವಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ. ಗಾಂಧೀಯವರಿಂದ ಪ್ರಾರಂಭಿಸಲಾದ 'ಹರಿಜನ ನಿಧಿ'ಯನ್ನು ಪ್ರಸ್ತಾಪ ಮಾಡುತ್ತಾ, ಅದರ ಉದ್ದೇಶ ಸವರ್ಣೀಯ ಹಿಂದೂಗಳ ಪಾಳೆಯದಲ್ಲಿ ಅಸ್ಪೃಶ್ಯರನ್ನು ಗುಲಾಮಗಿರಿಗೆ ತಳ್ಳುವುದೇ ಆಗಿದೆ. ಸವರ್ಣೀಯ ಹಿಂದೂಗಳು ಸಹಾಯ

ಮಾಡುವುದಕ್ಕೆ ಬರಲಿ, ಇಲ್ಲವೆ ಅಡ್ಡಿ ಮಾಡುವುದಕ್ಕೆ ಬರಲಿ, ತಾವೀಗ ಮತಾಂತರಕ್ಕೆ ಕಟ್ಟುಬಿದ್ದಿದ್ದೇವೆ ಎಂದು ಹೇಳಿದರು. ದೇವರನ್ನೇ ಕರೆತಂದು ತಮ್ಮ ಮುಂದೆ ನಿಲ್ಲಿಸಿದರೂ ತಾವು ಹಿಂದೂ ಧರ್ಮವನ್ನು ತ್ಯಜಿಸುವುದರಿಂದ ವಿಮುಖರಾಗುವಂತೆ ಮಾಡುವುದು ಸಾಧ್ಯವಿಲ್ಲವೆಂದು ಹೇಳಿದರು. ತಾವು ತಮ್ಮ ದೃಢನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿದರು.

## ೨೬
# ಹಿಂದೂ ಧರ್ಮವನ್ನು ತ್ಯಜಿಸಲು ತೀರ್ಮಾನಿಸಿದೆ

ಲಾಹೋರಿನ ಜಟ್-ಪಟ್-ತೋಹಕ್ ಮಂಡಲ್ ತಮ್ಮ ಸಮ್ಮೇಳನವನ್ನು ಮೇ ತಿಂಗಳ ಮಧ್ಯಭಾಗಕ್ಕೆ ಮುಂದೂಡಲಾಗಿದೆಯೆಂದು, ಮಾರ್ಚ ೧೯೩೬ರ ಕೊನೆಯ ಹೊತ್ತಿಗೆ ಡಾ॥ ಅಂಬೇಡ್ಕರ್ ಅವರಿಗೆ ತಿಳಿಸಿತು. ಪಂಜಾಬಿನ ಪತ್ರಿಕಾ ವಲಯದಲ್ಲಿ ಒಂದು ಸಣ್ಣ ಕೋಲಾಹಲ ಆಗಿತ್ತು. ಸಂಪ್ರದಾಯಸ್ಥ ಸಾರ್ವಜನಿಕರು ಮಂಡಲ್ ಅನ್ನು ಅತ್ಯಂತ ಕಟುಟೀಕೆಗೆ ಗುರಿ ಮಾಡಿದ್ದರು; ಕಾರಣ ಡಾ॥ ಅಂಬೇಡ್ಕರ್ ಅವರಂಥ ಸ್ವ-ಘೋಷಿತ ಹಿಂದೂ ಧರ್ಮದ ದ್ವೇಷಿಯನ್ನು ಮಂಡಲದ ಅಧ್ಯಕ್ಷನನ್ನಾಗಿ ಚುನಾಯಿಸಿದ್ದಕ್ಕಾಗಿ. ಫಲಿತಾಂಶವೆಂದರೆ, ನಿಷ್ಠ ಮುಖಂಡರುಗಳಾದ ಭಾಯಿ ಪರಮಾನಂದ್, ಡಾ॥ನಾರಂಗ್, ಮಹಾತ್ಮ ಹಂಸರಾಜ್ ಮತ್ತು ರಾಜಾ ನರೇಂದ್ರನಾಥ್ ಅಂಥವರು ಮಂಡಲ್‌ನಿಂದ ತಮ್ಮ ಸಂಬಂಧವನ್ನು ಕಡಿದುಕೊಂಡರು. ಪರಿಸ್ಥಿತಿಯ ನೈಜ ಚಿತ್ರಣವನ್ನು ಕೊಡಲಿಕ್ಕಾಗಿ, ಮಂಡಲ ಮುಂಚೂಣಿಯ ಬೆಳಕಿನಂತಿದ್ದ ಸಂತ್‌ರಾಮ್ ಅವರು ಹರ್ ಭಗವಾನ್ ಎಂಬುವರನ್ನು ಬೊಂಬಾಯಿಗೆ ಕಳುಹಿಸಿದರು. ಅವರು ಡಾ॥ ಅಂಬೇಡ್ಕರ್ ಅವರನ್ನು ಬೊಂಬಾಯಿಯಲ್ಲಿ ಏಪ್ರಿಲ್ ೯ರಂದು ಕಂಡು, ಆ ಸಮಯದಲ್ಲಿ ಸಿದ್ಧವಾಗಿದ್ದ ಅಧ್ಯಕ್ಷ ಭಾಷಣದ ಭಾಗವನ್ನು ತೆಗೆದುಕೊಂಡು ಹೋದರು.

ಡಾ॥ಅಂಬೇಡ್ಕರ್ ಅವರೂ ಸಹ ಏಪ್ರಿಲ್ ೧೦, ೧೯೩೬ರಂದು ಸಿಖ್ ಮಿಷನ್ ಸಮ್ಮೇಳನದಲ್ಲಿ ಭಾಗವಹಿಸಲು ಅಮೃತಸರಕ್ಕೆ ತೆರಳಿದರು. ಆಗ ಸಮ್ಮೇಳನ ಏಪ್ರಿಲ್ ತಿಂಗಳ ೧೩ ಮತ್ತು ೧೪ನೆ ತಾರೀಖಿಗೆ ನಿಗದಿಯಾಗಿತ್ತು. ಸಿಖ್‌ರ ಸಮ್ಮೇಳನಕ್ಕೆ ಸಿಖ್‌ರ ಬಹುದೊಡ್ಡದಾದ ಗುಂಪು ಪಂಜಾಬ್, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದಿಂದ ಮತ್ತು ನಿಮ್ನವರ್ಗಗಳವರು ಬಂದಿದ್ದರು. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಸರ್ದಾರ್ ಬಹಾದೂರ್ ಹುಕುಮ್ ಸಿಂಗ್ ಎನ್ನುವವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಪ್ರೆಸಿಡೆಂಟ್ ಮತ್ತು ಅಧ್ಯಕ್ಷರು ಇಬ್ಬರು ಬಹುಮಟ್ಟಿಗೆ ಮಿಷನರಿ ಕೆಲಸದಲ್ಲಿ ತೊಡಗಿಕೊಂಡು ನಿಮ್ನವರ್ಗಗಳವರ ಪಡುಪಾಟಲಿನ ಸ್ಥಿತಿಯನ್ನು ಉತ್ತಮಪಡಿಸಬೇಕಾದ ಅವಶ್ಯಕತೆಯನ್ನು ಕುರಿತು ಒತ್ತಿ ಹೇಳಿದರು.

ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಡಾ॥ಅಂಬೇಡ್ಕರ್ ಅವರು ಸಿಖ್‌ರ ನಡುವೆ ಇರುವ ಸಮಾನತೆಯ ತತ್ವಗಳನ್ನು ಮೆಚ್ಚಿಕೊಂಡು, ತಾವು ಹಿಂದೂ ಧರ್ಮವನ್ನು ತ್ಯಜಿಸಬೇಕೆಂದು ತೀರ್ಮಾನ ಮಾಡಿದ್ದರೂ ಸಹ, ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದು ಹೇಳಿದರು.

ಇನ್ನೊಬ್ಬ ಭಾಷಣಕಾರರಾದ ಸರ್ ಜೋಗಿಂದರ್ ಸಿಂಗ್ ಅವರು ಮಿಷನರಿ ಕೆಲಸದ ಅವಶ್ಯಕತೆಯ ಬಗ್ಗೆ ಒತ್ತಿ ಹೇಳುತ್ತಾ, ಆ ಉದ್ದೇಶಕ್ಕಾಗಿ ಒಂದು ವಿಶ್ವಸ್ತ ಮಂಡಲಿಯನ್ನು ರಚಿಸಬೇಕಾಗಿದೆಯೆಂದು ಹೇಳಿ, ಅದರ ನಿಧಿಗೆ ವಂತಿಗೆಯನ್ನು ಕೊಡಬೇಕೆಂದು ಮನವಿ ಮಾಡಿಕೊಂಡರು. ಆ ಸಮ್ಮೇಳನದ ಮುಖ್ಯ ಉದ್ದೇಶ ಕೇರಳದ ತಿಯ್ಯ(Thiyya) ಸಮುದಾಯಕ್ಕೆ ಸೇರಿದ, ಕುಟ್ಟಿರ್ ಅವರ ಮುಂದಾಳತ್ವದ ನಿಮ್ನವರ್ಗಗಳವರನ್ನು ಹಾಗೂ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದಿಂದ ಬಂದ ಇತರೆ ಐವತ್ತು ಜನರನ್ನು ಸಿಖ್ ಧರ್ಮಕ್ಕೆ ಮತಾಂತರಗೊಳಿಸುವ ಸಲುವಾಗಿ ಕರೆಯಲಾಗಿತ್ತು.

# ೨೭
# ಜಯವನ್ನು ಸಾಧಿಸುವುದಕ್ಕೋಸ್ಕರ ನನ್ನ ಆತ್ಮಸಾಕ್ಷಿಯನ್ನು ನಾನು ಬಲಿ ಕೊಡಲಾರೆ

೧೯೩೬ನೇ ಇಸವಿ, ಮೇ ೧ನೇ ತಾರೀಕಿನ ದಿವಸ ಬೆಳಿಗ್ಗೆ ಡಾ॥ಅಂಬೇಡ್ಕರ್ ಅವರು ವಾರ್ಧಾಕ್ಕೆ ಬಂದಾಗ, ನಿಮ್ನವರ್ಗಗಳಿಗೆ ಸೇರಿದ ಜನಗಳು ಅವರನ್ನು ಅತ್ಯುತ್ಸಾಹದಿಂದ ಸ್ವಾಗತಿಸಿದರು. ವಾರ್ಧಾದಲ್ಲಿ ಡಾ॥ಅಂಬೇಡ್ಕರ್ ಅವರು ತಂಗಿದ್ದ ಸಮಯದಲ್ಲಿ *'ನಿರ್ಭಯ ತರುಣ್ ಸಂಘ್'* ರವರು ಸಂಪೂರ್ಣ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡಿದ್ದರು. ಡಾ॥ ಅಂಬೇಡ್ಕರ್ ಅವರು ನಳವಾಡಿಗೂ ಸಹ ಭೇಟಿ ಕೊಟ್ಟರು. ಬೆಳಗಿನ ೧೧.೩೦ಕ್ಕೆ ನಿಮ್ನವರ್ಗಗಳ ಮುಖಂಡರಾದ ಪುರುಷೋತ್ತಮ್ ಖಪರ್ದೆ, ಶಂಕರರಾವ್ ಸೋನಾವಣೆ, ಗೋಮಾಜಿ ತೆಂಬಾರೆ ಅವರುಗಳು ಡಾ॥ ಅಂಬೇಡ್ಕರ್ ಅವರೊಡನೆ ಮತಾಂತರದ ವಿಷಯ ಕುರಿತು ಮಾತನಾಡಿದರು. ಡಾ॥ ಅಂಬೇಡ್ಕರ್ ಅವರು ನಿಖರವಾದ ಮಾತುಗಳಲ್ಲಿ ಹೀಗೆ ಹೇಳಿದರು. ನಾನು ಇಸ್ಲಾಂ ಅಥವಾ ಕ್ರಿಶ್ಚಿಯನ್ ಧರ್ಮವನ್ನು ಈಗಲೇ ಯಾರಿಗೂ (ಸೇರಲು) ಒತ್ತಾಸೆ ಮಾಡುತ್ತಿಲ್ಲ. ಯಾರೇ ಆಗಲೀ ಅವರ ಸ್ವಂತ ಜವಾಬ್ದಾರಿಯ ಮೇಲೆ ಇಸ್ಲಾಂ ಅಥವಾ ಬೇರೆ ಯಾವುದೇ ಧರ್ಮವನ್ನು (ಸೇರಲು) ಶಿಫಾರಸ್ಸು ಮಾಡಿದರೆ ಅವರು ಮೋಸ ಹೋಗುತ್ತಾರೆ, ಅದಕ್ಕೆ ನಾನು ಹೊಣೆಗಾರನಾಗುವುದಿಲ್ಲ. ನಾನು ಮತಾಂತರದ ಬಗ್ಗೆ ಘೋಷಣೆ ಮಾಡಿರುವುದು ವಾಸ್ತವ. ಆದರೆ ಯಾವುದೇ ನಿರ್ದಿಷ್ಟ ಧರ್ಮಕ್ಕೆ ಸೇರಿಕೊಳ್ಳಿ ಎಂದು ಇದುವರೆಗೂ ಹೇಳಿಲ್ಲ. ಅಲ್ಲಿಯವರೆಗೂ ಎಲ್ಲರೂ ಮತಾಂತರದ ಬಗ್ಗೆ ಪ್ರಚಾರವನ್ನು ಮಾಡಲೇಬೇಕು. ಆದರೆ ಇಂಥದೇ ಧರ್ಮಕ್ಕೆ ಮತಾಂತರ ಹೊಂದಿ ಎಂದು ಪ್ರಚಾರ ಮಾಡಬೇಡಿ. ನಾನು ಘೋಷಣೆ ಮಾಡಿದ ಮೇಲೆಯೇ ಏಳು ಕೋಟಿ ಅಸ್ಪೃಶ್ಯರೂ ಒಮ್ಮೆಗೇ ಮತಾಂತರಗೊಳ್ಳುತ್ತಾರೆ.

ಅನಂತರ ಡಾ॥ಅಂಬೇಡ್ಕರ್ ಅವರು ಇತರ ಅಸ್ಪೃಶ್ಯ ಮುಖಂಡರುಗಳೊಡನೆ ಪ್ರತ್ಯೇಕವಾಗಿ ಚರ್ಚೆ ಮಾಡಿದರು.

ಡಾ॥ ಅಂಬೇಡ್ಕರ್ ಅವರ ವಾರ್ಧಾ ಭೇಟಿಯನ್ನು ಕುರಿತು ಕೀರ್ ಅವರು ಹೀಗೆ ವಿವರಿಸಿದ್ದಾರೆ.

ಈ ಸುಮಾರಿಗೆ ಗಾಂಧಿ ಪಾಳೆಯದವರೂ ಕೂಡ ಅಂಬೇಡ್ಕರ್ ಅವರ ಚಟುವಟಿಕೆಗಳ ಬಗ್ಗೆ ಆತಂಕಗೊಂಡಿದ್ದರು. ಆದುದರಿಂದ, ಸೇಠ್ ವಾಲ್‌ಚಂದ್ ಹೀರಾಚಂದ್ ಅವರು ಅಂಬೇಡ್ಕರ್ ಅವರನ್ನು ಗಾಂಧೀಜಿಯವರನ್ನು ಕಾಣುವಂತೆ ಮನವೊಲಿಸಿದರು. ವಾಲ್‌ಚಂದ್ ಅವರ ಜೊತೆಗೂಡಿ ಡಾ॥ ಅಂಬೇಡ್ಕರ್ ಅವರು ಗಾಂಧೀಜಿಯವರನ್ನು ವಾರ್ಧಾದಲ್ಲಿ ಆಮೇಲೆ ಸೇಗಾಂವ್‌ನಲ್ಲಿ (ನಂತರ ಇದು ಸೇವಾಗ್ರಾಮ್ ಆಯಿತು) ಭೇಟಿ ಮಾಡಿದರು. ಆದರೆ ಈ ಸಮಸ್ಯೆಯ ಪರಿಹಾರಕ್ಕೆ ಅವರು ಒಂದು ಒಡಂಬಡಿಕೆಗೆ ಬರಲು ಸಾಧ್ಯವಾಗಲಿಲ್ಲ. ಡಾ॥ಅಂಬೇಡ್ಕರ್ ಅವರ ಹಿಂಸೆ ಭಾರತ ಮತ್ತು ಲಂಡನ್‌ನಲ್ಲಿ ಅನೇಕ ಪ್ರಭಾವಗಳು ಇದೆಯೆಂದು ಗಾಂಧೀಜಿಯವರು ತಪ್ಪಾಗಿ ತಿಳಿದುಕೊಂಡಿದ್ದರು. ಅಲ್ಲದೆ, ಈ ಬೆದರಿಕೆಗಳಿಂದಾಗಿ ಸಮಸ್ಯೆಯನ್ನು ಅತಿ ದೊಡ್ಡದಾಗಿ ಬೆಳೆಯಲು ಬಿಡಲಾಗಿದೆ ಎಂದು ತಿಳಿದರು. ಸೇಗಾಂವ್‌ನಿಂದ ಮರಳಿದ ಮೇಲೆ ವಾರ್ಧಾ ಸ್ಟೇಷನ್‌ನಲ್ಲಿ ಡಾ॥ ಅಂಬೇಡ್ಕರ್ ಅವರನ್ನು ಅಸ್ಪೃಶ್ಯರು ಉತ್ಸಾಹದಿಂದ ಬರಮಾಡಿಕೊಂಡರು.

ಗಾಂಧೀಜಿಯವರ ಬೆಂಬಲಿಗರಾದ ಲಕ್ಷಾಧಿಪತಿಗಳಾದ ವಾಲ್‌ಚಂದ್ ಹೀರಾಚಾಂದ್ ಮತ್ತು ಜಮನ್‌ಲಾಲ್ ಬಜಾಜ್ ಅವರು ಡಾ॥ಅಂಬೇಡ್ಕರ್ ಅವರನ್ನು ಗಾಂಧಿಯವರ ಪಾಳೆಯಕ್ಕೆ ಏಕೆ ಸೇರಿಕೊಳ್ಳಲಿಲ್ಲವೆಂದು ಕೇಳಿದರು. ಹಾಗೆ ಸೇರಿದ್ದೆ ಆಗಿದ್ದರೆ, ನಿಮ್ನವರ್ಗಗಳವರನ್ನೂ ಮೇಲಕ್ಕೆ ತರುವುದಕ್ಕೆ ಅವರಿಗೆ ಅಪರಿಮಿತವಾದ ಸಂಪನ್ಮೂಲಗಳು ದೊರೆಯುತ್ತಿತ್ತೆಂದು ಹೇಳಿದರು. ಹೀಗೆ ಹೇಳಿದ ಮೇಲೆ ಅವರು ನೆಹರೂ ಅವರನ್ನು ಪ್ರಸ್ತಾಪಿಸಿ, ತಮ್ಮ ಅಭಿಪ್ರಾಯಗಳನ್ನು ಬದಿಗಿಟ್ಟು ನೆಹರೂ ಅವರ ಉದಾಹರಣೆಯನ್ನು ಅನುಸರಿಸಬೇಕೆಂದು ಸಲಹೆ ಮಾಡಿದರು. ಆಗ ಅಂಬೇಡ್ಕರ್, ನೆಹರೂ ಅವರ ದೃಷ್ಟಾಂತ ತಮಗೆ ಅನ್ವಯ ಆಗುವಂಥ ಮನುಷ್ಯ ತಾವಲ್ಲವೆಂದು ಹೇಳಿ ಅವರನ್ನು ಸುಮ್ಮನಾಗಿಸಿದರು; ತಮ್ಮ ಆತ್ಮಸಾಕ್ಷಿಯನ್ನು ಜಯ ಸಾಧಿಸುವುದಕ್ಕಾಗಿ ತಾವು ಬಲಿಕೊಡುವುದಿಲ್ಲವೆಂದು ಹೇಳಿದರು. ಡಾ.ಅಂಬೇಡ್ಕರ್ ಅವರನ್ನು ಬರಮಾಡಿಕೊಳ್ಳಲು ನೆರೆದಿದ್ದ ನಿಮ್ನವರ್ಗಗಳವರ ಗುಂಪುಗಳನ್ನು ನೋಡಿ ಆ ಲಕ್ಷಾಧೀಶ್ವರರುಗಳು ಆಶ್ಚರ್ಯವನ್ನು ವ್ಯಕ್ತಪಡಿಸಿ, ಅವರಿಗೋಸ್ಕರ ತಾವು ಹಣವನ್ನು ಖರ್ಚು ಮಾಡಿದ್ದಾಗ್ಯೂ, ಹರಿಜನರು ಈ ರೀತಿ ಪ್ರತಿಕ್ರಿಯಿಸುತ್ತಿರಲಿಲ್ಲವೆಂದು ಹೇಳಿದರು. ತಕ್ಷಣವೇ ಡಾ.ಅಂಬೇಡ್ಕರ್ ಅವರು ಅದು ತಾಯಿಗೂ ಮತ್ತು ದಾದಿಗೂ ಇರುವ ವ್ಯತ್ಯಾಸ ಎಂದು ಉತ್ತರಿಸಿದರು.

# ೨೮
# ನಿಮ್ಮ ದಾಸ್ಯ ವಿಮೋಚನೆಗೆ ಮತ್ತು ಉದ್ಧಾರಕ್ಕೆ ಮತಾಂತರದ ಆವಶ್ಯಕತೆ ಇದೆ

೧೯೩೬ನೇ ಇಸವಿ ಮೇ ೧೭ನೆ ತಾರೀಖು ಭಾನುವಾರ ಥಾನಾ ಜಿಲ್ಲೆಯ ಪೂರ್ವ ಮತ್ತು ದಕ್ಷಿಣ ಬಾಗದ ಅಸ್ಪೃಶ್ಯರು ಕಲ್ಯಾಣ್‌ನಲ್ಲಿ ಒಂದು ದೊಡ್ಡದಾದ ಸಮ್ಮೇಳನವನ್ನು ಏರ್ಪಡಿಸಿದ್ದರು. ಡಾ.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಆ ಸಮ್ಮೇಳನದಲ್ಲಿ ಮತಾಂತರದ ಘೋಷಣೆಗೆ ಮುಕ್ತವಾದ ಬೆಂಬಲ ಸೂಚಿಸಲು ಏರ್ಪಾಡು ಮಾಡಲಾಗಿತ್ತು. ನೂರರಿಂದ ನೂರೈವತ್ತು ಹಳ್ಳಿಗಳಿಂದ ಬಂದ ಜನ ಅವರನ್ನು ಸ್ವಾಗತಿಸಲು ರೇಲ್ವೆ ಸ್ಟೇಷನ್‌ಗೆ ಬಂದಿದ್ದರು. ಅಪರಾಹ್ನ ೩ ಗಂಟೆಗೆ ಅವರು ರೇಲ್ವೆ ಸ್ಟೇಷನ್ ಅನ್ನು ತಲುಪಿದಾಗ ಅನೇಕ ಮುಖಂಡರುಗಳು ಅವರನ್ನು ಹರ್ಷಧ್ವನಿಯಿಂದ ಸ್ವಾಗತಿಸಿದರು. ರೇಲ್ವೆ ನಿಲ್ದಾಣದ ಹೊರಗಡೆ ಜನಗಳು "ಅಂಬೇಡ್ಕರ್ ಜಿಂದಾಬಾದ್, ಥೋಡೆ ದಿನ್ ಮೇ ಭೀಮ್‌ರಾಜ್" ಎಂದು ಘೋಷಣೆಗಳನ್ನು ಕೂಗುತ್ತಿದ್ದರು. ಮೆರವಣಿಗೆಯಲ್ಲಿ ಸುಮಾರು ನಾಲ್ಕು ಸಾವಿರ ಜನ ಅಸ್ಪೃಶ್ಯರು ಇದ್ದರು. ಮೆರವಣಿಗೆಯಲ್ಲಿ ಬಾಜಾಬಜಂತ್ರಿಗಳನ್ನೂ ದೈಹಿಕ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. 'ದಡ್ಡ'ರೆಂದು ಹೆಸರಿಸಲಾದ ಅಸ್ಪೃಶ್ಯರಿಂದ ತುಂಬಿದ್ದ ಆ ವಾತಾವರಣದಲ್ಲಿ ಪ್ರೀತಿ ಮತ್ತು ಆತ್ಮಗೌರವ ತುಂಬಿತ್ತು.

ಮತಾಂತರವನ್ನು ಬಿಟ್ಟರೆ ಬೇರೆ ಮಾರ್ಗ ಏತಕ್ಕೆ ಇಲ್ಲವೆಂದು ಡಾ.ಅಂಬೇಡ್ಕರ್ ವಿವರಿಸಿದರು.

– ಸಂಪಾದಕರು

ಮತಾಂತರವನ್ನು ಕುರಿತು ನನ್ನ ಅಭಿಪ್ರಾಯವನ್ನು ಕೇಳಲು ನೀವುಗಳು ಇಲ್ಲಿ ನೆರೆದಿದ್ದೀರಿ. ಆದುದರಿಂದ ಆ ವಿಷಯದ ಮೇಲೆ ನಿಮ್ಮೊಂದಿಗೆ ಮಾತನಾಡಲು ಅವಶ್ಯಕತೆಯಿದೆ ಎಂದು ನಾನು ಭಾವಿಸುತ್ತೇನೆ. ಕೆಲವರು ಅನೇಕ ಬಾರಿ ಈ ಪ್ರಶ್ನೆಯನ್ನು ಎತ್ತುತ್ತಾರೆ, ನಾವು ನಮ್ಮ ಧರ್ಮವನ್ನು ಏತಕ್ಕೆ ಬದಲಾಯಿಸಬೇಕು ಎಂದು. ಆಗ ನಾನು ನಾವೇಕೆ ನಮ್ಮ ಧರ್ಮವನ್ನು ಬದಲಾಯಿಸಬಾರದು ಎಂದು ಆವೇಗದಿಂದ ಮರುಪ್ರಶ್ನೆಯನ್ನು ಕೇಳಬಯಸುತ್ತೇನೆ. ಮತಾಂತರದ ಅವಶ್ಯಕತೆ ಏತಕ್ಕೆ ಇದೆ ಎಂಬುದನ್ನು ವಿವರಿಸಲು ನಾನು ನನ್ನ ಜೀವನದಲ್ಲಿ ಘಟಿಸಿದ ಕೆಲವು ಘಟನೆಗಳನ್ನು ಹೇಳಬಯಸುತ್ತೇನೆ. ಆಗ ನಿಮಗೆ ನಾನು ಏತಕ್ಕಾಗಿ ಮತಾಂತರವನ್ನು ಆರಿಸಿಕೊಂಡೆ ಎಂದು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ. ನಿಮಗೂ ಕೂಡ ನಿಮ್ಮ ಜೀವನದಲ್ಲಿ ಇಂಥ ಘಟನೆ ಆಗಿರಲೇಬೇಕು. ನನ್ನ ಮನಸ್ಸಿನ ಮೇಲೆ ಆಳವಾದ ಗುರುತುಗಳನ್ನು ಬಿಟ್ಟ ನಾಲ್ಕು–ಐದು ಘಟನೆಗಳು ನನ್ನ ಜೀವನದಲ್ಲಿ ಸಂಭವಿಸಿವೆ. ಇವು ನನ್ನನ್ನು ಹಿಂದೂ ಧರ್ಮವನ್ನು ತ್ಯಜಿಸಿ, ಬೇರೊಂದು ಧರ್ಮಕ್ಕೆ ಮತಾಂತರಗೊಳ್ಳುವುದರ ಪರ ತೀರ್ಮಾನಿಸಲು ಕಾರಣವಾಯಿತು. ಇವುಗಳಲ್ಲಿ ಎರಡು ಮೂರು ಘಟನೆಗಳನ್ನು ಮಾತ್ರ ಈ ದಿನ ಹೇಳಬಯಸುತ್ತೇನೆ.

ನಾನು ಹುಟ್ಟಿದ್ದು ಇಂದೋರಿನ ಮ್ಹೋನಲ್ಲಿ. ಅಲ್ಲಿ ನನ್ನ ತಂದೆಯವರು ಸೈನ್ಯದಲ್ಲಿ ಕೆಲಸದಲ್ಲಿದ್ದರು. ನಾವು ದಂಡುಪ್ರದೇಶದಲ್ಲಿ ವಾಸಿಸುತ್ತಿದ್ದುದರಿಂದ ಮಿಲಿಟರಿ ಪ್ರದೇಶದಿಂದ ಆಚೆಗಿನ ಹೊರಗಿನ ಪ್ರಪಂಚದೊಡನೆ ನಮಗೆ ಯಾವ ಸಂಪರ್ಕವೂ ಇರಲಿಲ್ಲ. ಅಸ್ಪೃಶ್ಯತೆಯ ಬಗ್ಗೆ ನನಗೆ ಯಾವ ಅನುಭವವೂ ಇರಲಿಲ್ಲ. ನಮ್ಮ ತಂದೆಯವರು ಸೇವೆಯಿಂದ ನಿವೃತ್ತಿ ಹೊಂದಿ, ನಿವೃತ್ತಿ ವೇತನ ಪಡೆದುಕೊಂಡ ಮೇಲೆ ನಾವು ಸತಾರಾದಲ್ಲಿ ನೆಲೆಸಿದೆವು. ನನಗಿನ್ನೂ ಐದು ವರ್ಷವಾಗಿದ್ದಾಗಲೇ ನಮ್ಮ ತಾಯಿಯವರು ತೀರಿಕೊಂಡಿದ್ದರು. ಸತಾರಾ

ಜಿಲ್ಲೆಯಲ್ಲಿನ ಗೋರೆಗಾಂವ್‌ನಲ್ಲಿ ಕ್ಷಾಮ ಉಂಟಾಗಿ ಇದನ್ನು ಎದುರಿಸಲು ಸರ್ಕಾರ ಕ್ಷಾಮ ಪರಿಹಾರ ಉದ್ಯೋಗ ಎಂಬುದಕ್ಕೆ ಚಾಲನೆ ನೀಡಿತು. ನೀರಿನ ಟ್ಯಾಂಕ್ ಒಂದಕ್ಕೆ ಅಗೆಯಲು ಪ್ರಾರಂಭಿಸಿದರು. ನಮ್ಮ ತಂದೆಯವರನ್ನು ಕಾರ್ಮಿಕರ ಕ್ಯಾಂಪ್‌ನಲ್ಲಿ ಕಾರ್ಮಿಕರಿಗೆ ಕೂಲಿ ಹಣವನ್ನು ಬಟವಾಡೆ ಮಾಡಲು 'ಪೇ ಮಾಸ್ಟರ್' ಆಗಿ ನೇಮಕ ಮಾಡಿಕೊಳ್ಳಲಾಯಿತು. ಅವರು ಗೋರೆಗಾಂವ್‌ನ ಲೇಬರ್ ಕ್ಯಾಂಪ್‌ಗೆ ಹೋಗಬೇಕಾಗಿದ್ದರಿಂದ, ನಾವು ನಾಲ್ಕು ಜನ ಮಕ್ಕಳನ್ನು ಸತಾರಾದಲ್ಲೇ ಬಿಡಲಾಯಿತು. ಸತಾರಾದಲ್ಲಿ ನಾಲ್ಕು-ಐದು ವರ್ಷಗಳ ಕಾಲ ನಾವು ಬರಿಯ ಅಕ್ಕಿಯನ್ನೇ ತಿಂದುಕೊಂಡು ಬದುಕಬೇಕಾಯಿತು. ಸತಾರಾಗೆ ಬಂದ ಮೇಲೆಯೇ ನಮಗೆ ಅಸ್ಪೃಶ್ಯತೆ ಅಂದರೆ ಏನು ಎಂಬುದು ಅರ್ಥವಾಗತೊಡಗಿತು. ಮೊಟ್ಟಮೊದಲನೆಯದಾಗಿ ನನಗೆ ಗೊತ್ತಾಗಿದ್ದು, ಯಾವ ಕ್ಷೌರಿಕನೂ ನಮ್ಮ ತಲೆಗೂದಲನ್ನು ಕತ್ತರಿಸಲು ತಯಾರಿರಲಿಲ್ಲ. ಇದು ನಮಗೆ ಗೊಂದಲವನ್ನುಂಟು ಮಾಡಿತು. ಈಗಲೂ ಬದುಕಿರುವ ನನ್ನ ಅಕ್ಕ ಮನೆಯ ಹೊರಗಿನ ಜಗುಲಿಯ ಮೇಲೆ ಕುಳಿತು ನನ್ನ ತಲೆಗೂದಲನ್ನು ಕತ್ತರಿಸುತ್ತಿದ್ದಳು. ಬಹಳಷ್ಟು ಜನ ಕ್ಷೌರಿಕರಿದ್ದರೂ ಯಾವ ಕ್ಷೌರಿಕನೂ ನಮ್ಮ ತಲೆಗೂದಲನ್ನು ಕತ್ತರಿಸಲು ಏಕೆ ಒಪ್ಪುತ್ತಿಲ್ಲವೆಂದು ನನಗೆ ಅರ್ಥವಾಗುತ್ತಿರಲಿಲ್ಲ.

ಎರಡನೆಯ ಘಟನೆಯು ಕೂಡಾ ಅದೇ ಕಾಲಕ್ಕೆ ಸಂಬಂಧಿಸಿದ್ದು, ನನ್ನ ತಂದೆಯವರು ಗೋರೆಗಾಂವ್‌ನಲ್ಲಿದ್ದಾಗ ನಮಗೆ ಕಾಗದಗಳನ್ನು ಕಳುಹಿಸುತ್ತಿದರು. ಒಂದು ಕಾಗದದಲ್ಲಿ ನಮ್ಮನ್ನು ಗೋರೆಗಾಂವ್‌ಗೆ ಬರುವಂತೆ ಆಮಂತ್ರಿಸಿದರು. ಗೋರೆಗಾಂವ್‌ಗೆ ಟ್ರೈನ್‌ನಲ್ಲಿ ಹೋಗುವ ಅವಕಾಶ, ಯಾವತ್ತೂ ಟ್ರೇನಿನಲ್ಲಿ ಪ್ರಯಾಣ ಮಾಡಿರದ ನನಗೆ ಬಹಳ ರೋಮಾಂಚನವಾಯಿತು. ನನ್ನ ತಂದೆ ನಮಗೆ ಕಳುಹಿಸಿದ ಹಣದಿಂದ ನಾವು ಹೊಸ ಬಟ್ಟೆಗಳನ್ನು ಹೊಲಿಸಿಕೊಂಡು ನನ್ನ ಸಹೋದರ, ನನ್ನ ತಂಗಿಯ ಮಗಳು ಮತ್ತು ನಾನು ಗೋರೆಗಾಂವ್‌ಗೆ ಹೊರಟೆವು. ನಾವು ಬರುತ್ತಿರುವ ಬಗ್ಗೆ ಮುಂಚೆಯೇ ಒಂದು ಪತ್ರವನ್ನು ಕಳುಹಿಸಿದ್ದೆವು. ಆದರೆ ನಮ್ಮ ಸೇವಕನ ಅಜಾಗರೂಕತೆಯಿಂದಲೋ, ತಪ್ಪಿನಿಂದಲೋ ನಮ್ಮ ಪತ್ರ ನಮ್ಮ ತಂದೆಯವರಿಗೆ ತಲುಪಿರಲಿಲ್ಲ. ನಮ್ಮನ್ನು ಬರಮಾಡಿಕೊಳ್ಳಲು ನಮ್ಮ ತಂದೆಯವರು ಸೇವಕನೊಬ್ಬನನ್ನು ಕಳುಹಿಸುತ್ತಾರೆಂದು ನಮಗೆ ಖಂಡಿತವಾಗಿತ್ತು. ಟ್ರೇನಿನಿಂದ ಕೆಳಗಿಳಿದ ಮೇಲೆ ಸೇವಕನನ್ನು ಎಲ್ಲೂ ಕಾಣದೆ ನಾವು ಬಹಳ ಸಂತ್ರಸ್ತರಾದೆವು.

ಪ್ರಯಾಣಿಕರೆಲ್ಲಾ ಬೇಗನೇ ಹೊರಟರೂ ನಾವುಗಳು ಮಾತ್ರ ಪ್ಲಾಟ್‌ಫಾರ್ಮ್‌ನಲ್ಲೇ ಉಳಿದುಕೊಂಡೆವು. ಮುಕ್ಕಾಲು ಗಂಟೆ ನಾವು ವ್ಯರ್ಥವಾಗಿ ಕಾದೆವು. ಸ್ಟೇಷನ್ ಮಾಸ್ಟರ್ ನಾವು ಯಾರನ್ನು ನೋಡಲು ಬಂದಿದ್ದೇವೆ, ನಮ್ಮ ಜಾತಿ ಯಾವುದು ಮತ್ತು ನಾವು ಎಲ್ಲಿಗೆ ಹೋಗಬೇಕಾಗಿದೆ ಎಂದು ಕೇಳಿದರು. ನಮ್ಮದು ಮಹರ್ ಜಾತಿ ಎಂದು ಹೇಳಿದೆವು. ಇದು ಅವರಿಗೆ ಆಘಾತವಾಯಿತು. ಒಂದು ಐದು ಹೆಜ್ಜೆ ಹಿಂದಕ್ಕೆ ಸರಿದರು. ಆದರೆ ಚೆನ್ನಾದ ಬಟ್ಟೆಗಳನ್ನು ಹಾಕಿಕೊಂಡಿದ್ದರಿಂದ, ನಾವು ಅನುಕೂಲಸ್ತ ಕುಟುಂಬಕ್ಕೆ ಸೇರಿದವರೆಂದು ಅವರು ಊಹಿಸಿದರು. ನಮಗೆ ಒಂದು ಬಂಡಿಯನ್ನು ಗೊತ್ತು ಮಾಡಿಕೊಡುವುದಾಗಿ ಭರವಸೆ ಕೊಟ್ಟರು. ಆದರೆ ನಾವು ಮಹರ್ ಜಾತಿಗೆ ಸೇರಿದವರಾದ್ದರಿಂದ, ಯಾವ ಗಾಡಿಯವರೂ ನಮ್ಮನ್ನು ಕರೆದುಕೊಂಡು ಹೋಗಲು ಒಪ್ಪಲಿಲ್ಲ. ಸಂಜೆಯಾಗುತ್ತಾ ಬಂದಿತು, ಸಂಜೆ ೬ ಅಥವಾ ೭ ಗಂಟೆಯಾದರೂ ನಮಗೆ ಗಾಡಿ ಸಿಕ್ಕಲಿಲ್ಲ. ಕಟ್ಟಕಡೆಗೆ ಒಬ್ಬ ಬಂಡಿಯವನು ನಮಗೆ ಗಾಡಿಯನ್ನು ಕೊಡಲು ಒಪ್ಪಿಕೊಂಡನಾದರೂ, ಗಾಡಿಯನ್ನು ಹೊಡೆಯಲು ಅವನು ತಯಾರಿರಲಿಲ್ಲ.

ನಾನು ಮಿಲಿಟರಿ ಪ್ರದೇಶದಲ್ಲಿ ವಾಸಿಸುತ್ತಿದ್ದುದರಿಂದ ಗಾಡಿ ಹೊಡೆಯುವುದು ನನಗೇನೂ

ಕಷ್ಟವಾಗಲಿಲ್ಲ. ನಾವು ಅವರ ನಿಬಂಧನೆಗಳಿಗೆ ಒಪ್ಪಿದ ಕೂಡಲೇ ಅವನು ಗಾಡಿಯ ಸಂಗಡ ಬಂದ, ನಾವು ಮಕ್ಕಳೆಲ್ಲಾ ಗೋರೆಗಾಂವ್‌ಗೆ ಹೊರಟೆವು. ಹಳ್ಳಿಯಿಂದ ಸ್ವಲ್ಪ ದೂರದಲ್ಲೇ ನಾವು ಒಂದು ತೊರೆಯ ಹತ್ತಿರ ಬಂದೆವು. ದಾರಿಯಲ್ಲಿ ಬೇರೆಲ್ಲೂ ನೀರು ಸಿಕ್ಕುವುದಿಲ್ಲವಾದ್ದರಿಂದ, ಗಾಡಿಯವನು ನಮ್ಮನ್ನು ಅಲ್ಲೇ ಊಟ ಮಾಡುವಂತೆ ಹೇಳಿದ. ಅವನು ಹೇಳಿದಂತೆ ನಾವು ಗಾಡಿಯಿಂದ ಇಳಿದು ಊಟ ಮಾಡಿದೆವು. ನೀರು ರಾಡಿಯಾಗಿದ್ದು ಅದರಲ್ಲಿ ಸಗಣಿಯು ಬೆರೆತುಕೊಂಡಿತ್ತು. ಈ ಮಧ್ಯೆ ಗಾಡಿಯವನೂ ತನ್ನ ಊಟ ಮುಗಿಸಿ ವಾಪಸ್ಸು ಬಂದಿದ್ದ, ಕತ್ತಲೆಯಾಗುತ್ತಾ ಹೋದಂತೆ, ಗಾಡಿಯವನು ಗಾಡಿಯನ್ನು ಹತ್ತಿಕೊಂಡು ನಮ್ಮ ಪಕ್ಕದಲ್ಲೇ ಕುಳಿತುಕೊಂಡ, ಬಹುಬೇಗನೇ ಗಾಢವಾದ ಕತ್ತಲೆ ಆವರಿಸಿಕೊಂಡಿತು. ಮೈಲಿಗಟ್ಟಲೆ ನಮಗೆ ಒಂದು ಮಿಣುಗುವ ದೀಪವಾಗಲೀ, ಒಬ್ಬ ನರಪಿಳ್ಳೆಯಾಗಲೀ ಕಾಣಬರಲಿಲ್ಲ. ಹೆದರಿಕೆ, ಕತ್ತಲೆ ಮತ್ತು ಒಂಟಿತನ ನಮ್ಮನ್ನು ಅಳುವ ಹಾಗೆ ಮಾಡಿತು. ಮಧ್ಯರಾತ್ರಿಯಾದ ಮೇಲೆ ಬಹಳ ಹೊತ್ತಾಗಿದ್ದು, ನಾವು ಗಾಭರಿಯಾಗಿದ್ದೆವು. ನಮಗೆ ಎಷ್ಟು ಭಯವಾಗಿತ್ತೆಂದರೆ, ನಾವು ಗೋರೆಗಾಂವ್ ಅನ್ನು ತಲುಪುವುದೇ ಇಲ್ಲ ಎಂದು ಅಂದುಕೊಂಡೆವು. ಸುಂಕದ ಕಟ್ಟೆಯ ಹತ್ತಿರ ಬಂದಾಗ, ನಾವು ಗಾಡಿಯಿಂದ ಧುಮುಕಿದೆವು. ಆಸುಪಾಸಿನಲ್ಲಿ ಎಲ್ಲಿಯಾದರೂ ತಿನ್ನುವುದಕ್ಕೆ ಏನಾದರೂ ಸಿಗುತ್ತದೆಯೇ ಎಂದು ನಾವು ಸುಂಕದ ಕಟ್ಟೆಯವರನ್ನು ಕೇಳಿದೆವು. ನಾನು ಅವನೊಂದಿಗೆ ಪರ್ಷಿಯನ್ ಭಾಷೆಯಲ್ಲಿ ಮಾತನಾಡಿದೆ. ನನಗೆ ಪರ್ಷಿಯನ್ ಭಾಷೆ ಗೊತ್ತಿದ್ದರಿಂದ ಅವನೊಂದಿಗೆ ಮಾತನಾಡಲು ನನಗೇನೂ ಕಷ್ಟವಾಗಲಿಲ್ಲ. ಒರಟಾಗಿ ಉತ್ತರಕೊಟ್ಟ ಅವನು ಬೆಟ್ಟಗಳ ಕಡೆಗೆ ಬೊಟ್ಟು ಮಾಡಿದ. ಹೇಗೋ ನಾವು ಹಳ್ಳವೊಂದರ ಹತ್ತಿರ ರಾತ್ರಿ ಕಳೆದು ಬೆಳಕು ಹರಿಯುತ್ತಿದ್ದಂತೆಯೇ ಗೋರೆಗಾಂವ್‌ಗೆ ಪ್ರಯಾಣ ಮುಂದುವರೆಸಿದೆವು. ಮಧ್ಯಾಹ್ನದ ಹೊತ್ತಿಗೆ ನಾವು ಅಂತೂ–ಇಂತೂ ಗೋರೆಗಾಂವ್ ಅನ್ನು ತಲುಪಿದೆವು. ನಾವು ತಲುಪಿದಾಗ ಬಸವಳಿದು ಅರ್ಧ ಸತ್ತೇ ಹೋಗಿದ್ದೆವು.

ನಾನು ಬರೋಡಾ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದಾಗ ಮೂರನೇ ಘಟನೆ ನಡೆಯಿತು. ಬರೋಡ ರಾಜ್ಯ ನನಗೆ ಕೊಟ್ಟ ವಿದ್ಯಾರ್ಥಿವೇತನದ ಹಣದಲ್ಲಿ ನಾನು ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಿದ್ದೆ. ಇಂಗ್ಲೆಂಡಿನಿಂದ ಬಂದ ಮೇಲೆ ನಾನು ಒಪ್ಪಂದದ ಪ್ರಕಾರ ಬರೋಡ ದರ್ಬಾರ್ ಕೆಳಗೆ ಸೇವೆ ಸಲ್ಲಿಸಬೇಕಾಗಿತ್ತು. ಬರೋಡಾದಲ್ಲಿ ವಾಸ ಮಾಡುವುದಕ್ಕೆ ನನಗೊಂದು ಮನೆ ಸಿಗಲಿಲ್ಲ. ಬರೋಡಾ ಪಟ್ಟಣದಲ್ಲಿ ಒಬ್ಬ ಹಿಂದೂವಾಗಲೀ ಅಥವಾ ಒಬ್ಬ ಮುಸ್ಲಿಮನಾಗಲೀ ನನಗೆ ಬಾಡಿಗೆಗೆ ಮನೆ ಕೊಡಲು ಸಿದ್ಧನಾಗಿರಲಿಲ್ಲ. ಯಾವುದೇ ಒಂದು ನೆಲೆಯಲ್ಲಿ ಮನೆ ಸಿಗದ ಕಾರಣ, ನಾನು ಪಾರ್ಸಿ ಧರ್ಮಶಾಲೆಯಲ್ಲಿ ಉಳಿದುಕೊಳ್ಳಲು ನಿರ್ಧರಿಸಿದೆ. ಅಮೆರಿಕಾ ಮತ್ತು ಇಂಗ್ಲೆಂಡ್‌ನಲ್ಲಿ ನಾನು ಇದ್ದುದರಿಂದ ನನ್ನ ಚರ್ಮ ಬೆಳ್ಳಗಾಗಿದ್ದಲ್ಲದೆ, ನಾನು ಪ್ರಭಾವೀ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದೆ. ನನಗೆ ನಾನೇ ಒಂದು ಪಾರ್ಸಿ ಹೆಸರನ್ನು ಕೊಟ್ಟುಕೊಂಡು (ಅಡಾಲ್ಜೀ ಸೊರಾಬ್ಜಿ) ಪಾರ್ಸಿ ಧರ್ಮಶಾಲೆಯಲ್ಲಿ ವಾಸ ಮಾಡಲು ಪ್ರಾರಂಭಿಸಿದೆ. ಆದರೆ ಬರೋಡ ಮಹಾರಾಜರಾದ ಗಾಯಕ್‌ವಾಡ್ ಅವರ ದರ್ಬಾರಿನಲ್ಲಿ ಒಬ್ಬ ಮಹರ್ ಹುಡುಗನನ್ನು ಅಧಿಕಾರಿಯಾಗಿ ನೇಮಿಸಿಕೊಂಡದ್ದು ಬಹಳ ಬೇಗನೆ ಜನಗಳಿಗೆ ಗೊತ್ತಾಗಿಹೋಯಿತು. ಅಲ್ಲದೆ ನಾನು ಪಾರ್ಸಿ ಧರ್ಮಶಾಲೆಯಲ್ಲಿ ಪಾರ್ಸಿ ಹೆಸರನ್ನಿಟ್ಟುಕೊಂಡು ವಾಸಿಸುತ್ತಿದ್ದೇನೆಂಬ ಗುಟ್ಟು ಸಹ ರಟ್ಟಾಗಿ ಹೋಯಿತು.

ನನ್ನ ವಾಸ್ತವ್ಯದ ಎರಡನೆ ದಿನ ಬೆಳಗಿನ ಉಪಹಾರದ ನಂತರ ನಾನು ಇನ್ನೇನು ಆಫೀಸಿಗೆ ಹೊರಡಬೇಕು. ಆಗ ೧೫ ರಿಂದ ೨೦ ಜನಗಳಿದ್ದ ಪಾರ್ಸಿ ಜನರ ಗುಂಪೊಂದು ಲಾಠಿಗಳನ್ನು ಹಿಡಿದುಕೊಂಡು ನನ್ನನ್ನು ಸುತ್ತುವರೆದು, ಕೊಲೆ ಬೆದರಿಕೆ ಹಾಕುತ್ತ ನಾನು ಯಾರು ಎಂದು ಕೇಳಿದರು.

ನಾನೊಬ್ಬ ಹಿಂದೂ ಎಂದು ನಾನು ಉತ್ತರ ಕೊಟ್ಟೆ. ಈ ಉತ್ತರದಿಂದ ಅವರಿಗೆ ತೃಪ್ತಿಯಾಗಲಿಲ್ಲ. ಕೋಪೋದ್ರಿಕ್ತರಾಗಿ ನನ್ನ ಮೇಲೆ ಬೈಗುಳಗಳ ಮಳೆಗರೆದು ನಾನು ಕೂಡಲೇ ಕೊಠಡಿಯನ್ನು ಖಾಲಿ ಮಾಡಬೇಕೆಂದು ದಬಾವಣೆ ಮಾಡಿದರು. ನನ್ನ ಮನಃಸ್ಥಿಮಿತ ಮತ್ತು ತಿಳುವಳಿಕೆಯಿಂದ ನಾನು ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಿದೆ. ಇನ್ನೂ ಎಂಟು ಗಂಟೆಗಳ ಕಾಲ ಇರುವುದಕ್ಕೆ ಅನುಮತಿಕೊಡಿರೆಂದು ವಿನೀತನಾಗಿ ಕೇಳಿದೆ. ಇಡೀ ದಿನ ನನ್ನ ತಲೆಯನ್ನೊಂದು ಕಡೆ ಮರೆಮಾಡುವುದಕ್ಕಾಗಿ ಮನೆಯೊಂದನ್ನು ಹುಡುಕಿ ವಿಫಲನಾದೆ. ನನ್ನ ಸ್ನೇಹಿತರನ್ನು ಸಹಾಯಕ್ಕಾಗಿ ಕೇಳಿಕೊಂಡಾಗ ಎಲ್ಲರೂ ಒಂದಲ್ಲ ಒಂದು ನೆಪ ಹೇಳಿ ಜಾರಿಕೊಂಡರು. ನನಗೆ ಭಾರಿ ನಿರಾಸೆಯಾಗಿದ್ದುದು ಅಲ್ಲದೆ, ಬಸವಳಿದುಹೋಗಿದ್ದೆ. ಮುಂದೇನು ಮಾಡಬೇಕೆಂದು ನನಗೆ ತೋಚಲೇ ಇಲ್ಲ. ನಿರುಪಾಯನಾಗಿ ಸುಸ್ತುಹೊಡೆದು, ನಾನು ಒಂದು ಕಡೆ ಕುಳಿತುಬಿಟ್ಟೆ. ನನ್ನ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಸುರಿಯಿತು. ಮನೆ ಸಿಕ್ಕುವ ಯಾವ ಆಸೆಯೂ ಇಲ್ಲದೆ, ಜಾಗ ಖಾಲಿ ಮಾಡದೇ ಬೇರೆ ದಾರಿಯಿಲ್ಲದೆ, ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ರಾತ್ರಿ ಟ್ರೇನಿನಲ್ಲಿ ಬೊಂಬಾಯಿಗೆ ಹೊರಟೆ. ನನ್ನ ಜೀವನದಲ್ಲಿನ ಈ ಭಯಾನಕ ಘಟನೆಗಳಂತೆಯೇ, ನೀವೂ ಸಹ ನಿಮ್ಮ ಜೀವನದಲ್ಲಿ ಇಂಥ ಘಟನೆಗಳನ್ನು ಎದುರಿಸಿರಲೇಬೇಕು. ನಾನು ನಿಮ್ಮನ್ನೆಲ್ಲಾ ಕೇಳುವುದೇನೆಂದರೆ, ಯಾವ ಸಮಾಜದಲ್ಲಿ ಮಾನವೀಯತೆ ಎನ್ನುವುದು ಇಲ್ಲವೋ, ಯಾವ ಸಮಾಜಕ್ಕೆ ನಿಮ್ಮ ಮೇಲೆ ಗೌರವವಿಲ್ಲವೋ, ಯಾವ ಸಮಜ ನಿಮಗೆ ರಕ್ಷಣೆ ಕೊಡುವುದಿಲ್ಲೋ ಅಥವಾ ನಿಮ್ಮನ್ನು ಒಬ್ಬ ಮಾನವಜೀವಿಯಂತೆ ನಡೆಸಿಕೊಳ್ಳುವುದಿಲ್ಲವೋ, ಅಂಥ ಸಮಾಜದಲ್ಲಿ ಬದುಕುವುದರಲ್ಲಿ ಏನು ಅರ್ಥ ಇದೆ? ಇದರ ಬದಲು, ಅದು ನಿಮ್ಮನ್ನು ಅವಮಾನಿಸುತ್ತದೆ, ಅವಹೇಳನ ಮಾಡುತ್ತದೆ, ನಿಮ್ಮನ್ನು ಘಾಸಿಗೊಳಿಸುವ ಒಂದು ಅವಕಾಶವನ್ನೂ ಸಹ ತಪ್ಪಿಸಿಕೊಳ್ಳುವುದಿಲ್ಲ. ತೃಣಮಾತ್ರ ಆತ್ಮಗೌರವ ಮತ್ತು ಸಭ್ಯತೆ ಉಳಿಸಿಕೊಂಡಿರುವ ಯಾವನೇ ಆಗಲಿ, ಇಂಥದೊಂದು ಸೈತಾನ ಧರ್ಮದಲ್ಲಿಯೇ ಉಳಿದುಕೊಳ್ಳುವುದಕ್ಕೆ ಇಚ್ಛಿಸುವುದಿಲ್ಲ. ಗುಲಾಮರಂತೆ ಇರುವುದಕ್ಕೆ ಅಡ್ಡಿ ಇಲ್ಲದವರು ಮಾತ್ರ ಈ ಧರ್ಮದಲ್ಲಿ ಉಳಿಯಲು ಬಯಸುತ್ತಾರೆ.

ನನ್ನ ತಂದೆ ಮತ್ತು ನಮ್ಮ ಪೂರ್ವಜರು ಶ್ರದ್ಧಾಭಕ್ತಿಯ ಹಿಂದುಗಳಾಗಿದ್ದರು. ಅದರೆ ಹಿಂದೂ ಧರ್ಮ ಅವರ ಮೇಲೆ ಹೇರಿದ್ದ ನಿರ್ಬಂಧದಿಂದ ಅವರಿಗೆ ವಿದ್ಯಾಭ್ಯಾಸ ದೊರಕಲಿಲ್ಲ. ಆ ಧರ್ಮ ಅವರನ್ನು ಆಯುಧದಾರಿಗಳನ್ನಾಗಿರುವುದಕ್ಕೆ ಅನುಮತಿ ಕೊಡಲಿಲ್ಲ. ಹಿಂದೂ ಧರ್ಮದ ಕೆಳಗೆ ಐಶ್ವರ್ಯವನ್ನು ಪಡೆದುಕೊಳ್ಳುವುದಕ್ಕೂ ಸಹ ಸಾಧ್ಯವಿರಲಿಲ್ಲ. ಈ ಧರ್ಮಕ್ಕೆ ಅಂಟಿಕೊಂಡ ನಾವು ಈ ಮೂರನ್ನು ಪಡೆದುಕೊಳ್ಳುವುದಕ್ಕೆ ಆಗಲಿಲ್ಲ.

ನಾನು ಸಂಸ್ಕೃತವನ್ನು ಕಲಿಯಲು ಇಷ್ಟಪಟ್ಟೆ. ಆದರೆ ಹಿಂದೂ ಧರ್ಮ ಹೇರಿದ ನಿರ್ಬಂಧಗಳಿಂದಾಗಿ ನನಗೆ ಸಂಸ್ಕೃತವನ್ನು ಕಲಿಯಲಾಗಲಿಲ್ಲ. ಆದರೆ ಈಗ ನನಗೆ ಶಿಕ್ಷಣ ಮತ್ತು ಹಣ ಪಡೆಯುವುದಕ್ಕೆ ಹಾಗೂ ಆಯುಧಗಳನ್ನು ಧರಿಸುವುದಕ್ಕೆ ಸಾಧ್ಯವಾಗಿದೆ.

ಯಾವ ಹಿಂದೂ ಧರ್ಮ ನಿಮ್ಮ ಪೂರ್ವಜರನ್ನು ದುರ್ದಶೆಯ ಬಾಳನ್ನು ಬಾಳುವಂತೆ ಬಲಾತ್ಕರಿಸಿತೋ, ಅವರನ್ನು ಎಲ್ಲಾ ಬಗೆಯ ಅವಮಾನಗಳಿಗೆ ಗುರಿ ಮಾಡಿತೋ, ಅವರನ್ನು ಬಡವರನ್ನಾಗಿ, ಅಜ್ಞಾನಿಗಳನ್ನಾಗಿ ಇಟ್ಟುಕೊಂಡಿತೋ ಅಂಥದೊಂದು ರಾಕ್ಷಸೀ ಪಂಥದಲ್ಲಿ ನೀವೇಕೆ ಉಳಿದುಕೊಳ್ಳಬೇಕು? ನಿಮ್ಮ ತಾತ ಮುತ್ತಾತರುಗಳಂತೆ ನೀವೂ ಸಹ ದುರ್ದಶೆಯ, ಕೀಳುಮಟ್ಟದ ಸ್ಥಾನವನ್ನು ಮತ್ತು ಅಪಮಾನಗಳನ್ನು ಸಹಿಸಿಕೊಳ್ಳುವುದನ್ನು ಮುಂದುವರೆಸಿದರೆ, ನಿಮ್ಮನ್ನು ದ್ವೇಷಿಸುವುದು ಮುಂದುವರೆಯುತ್ತಲೇ ಇರುತ್ತದೆ. ಯಾರೂ ನಿಮ್ಮನ್ನು ಗೌರವಿಸುವುದೂ ಇಲ್ಲ; ಯಾರೂ ಸಹಾಯ ಮಾಡುವುದೂ ಇಲ್ಲ.

ಈ ಕಾರಣಗಳಿಂದಾಗಿಯೇ ಮತಾಂತರದ ಪ್ರಶ್ನೆ ನಮಗೆ ಬಹಳ ಮುಖ್ಯವಾಗಿದೆ. ನೀವು ಹಿಂದೂ ಧರ್ಮದ ಮಡಿಕೆಗಳಲ್ಲೇ ಉಳಿದುಕೊಳ್ಳುವುದನ್ನು ಮುಂದುವರೆಸಿದರೆ, ಗುಲಾಮಗಿರಿಗಿಂತ ಹೆಚ್ಚಿದ ಸ್ಥಾನಮಾನವನ್ನೇನೂ ನೀವು ಪಡೆಯಲಾರಿರಿ. ವೈಯುಕ್ತಿಕವಾಗಿ ಹೇಳುವುದಾದರೆ, ನನಗೆ ಯಾವ ನಿಷೇಧವೂ ಇಲ್ಲ. ನಾನು ಅಸ್ಪೃಶ್ಯನಾಗಿಯೇ ಉಳಿದುಕೊಂಡರೂ ಸಹ, ನಾನು ಒಬ್ಬ ಸವರ್ಣೀಯ ಹಿಂದೂ ಪಡೆದುಕೊಳ್ಳಲಾಗುವುದನ್ನು ಪಡೆದುಕೊಳ್ಳಬಲ್ಲೆ. ನಾನು ಹಿಂದುವಾಗಿ ಉಳಿದುಕೊಳ್ಳಲಿ, ಬಿಡಲಿ, ಅದರಿಂದ ನನಗೇನು ವ್ಯತ್ಯಾಸವಾಗುವುದಿಲ್ಲ. ನಾನು ಉಚ್ಚನ್ಯಾಯಾಲಯದ ನ್ಯಾಯಾಧೀಶನಾಗಬಲ್ಲೆ, ಶಾಸನ ಸಭೆಯ ಸದಸ್ಯನಾಗಬಲ್ಲೆ ಅಥವಾ ಮಂತ್ರಿಯೂ ಅಗಬಲ್ಲೆ. ಆದರೆ ನಿಮ್ಮ ದಾಸ್ಯ ವಿಮೋಚನೆಗೆ ಮತ್ತು ಉದ್ಧಾರಕ್ಕೆ ಮತಾಂತರವಾಗುವುದು ಬಹಳ ಅವಶ್ಯಕವಾಗಿದೆಯೆಂದು ನನಗೆ ತೋರುತ್ತದೆ.

ಈ ದುರ್ದಶೆಯ ಮತ್ತು ಅಪಮಾನಕಾರಿ ಬಾಳ್ವೆಯನ್ನು, ಸುವರ್ಣ ಜೀವನವನ್ನಾಗಿ ಬದಲಾಯಿಸಲು ಮತಾಂತರ ಅತ್ಯಂತ ಅವಶ್ಯಕವಾಗಿದೆ. ನಿಮ್ಮ ಸ್ನೇಹಿತರುಗಳಿಂದ, ನಿಮ್ಮ ಒಳಿತನ್ನು ಬಯಸುವವರಿಂದ ನಿಮಗೆ ಖಂಡಿತವಾಗಿಯೂ ನಿಮ್ಮ ಸ್ಥಿತಿಗತಿಯನ್ನು ಉತ್ತಮಗೊಳಿಸಿಕೊಳ್ಳುವುದಕ್ಕಾಗಿ ಸಹಾಯ ಮತ್ತು ಸಹಕಾರ ದೊರಕುತ್ತದೆಂದು ನಾನು ಆಶಿಸುತ್ತೇನೆ. ನಿಮ್ಮ ಅದೃಷ್ಟವನ್ನು ಉತ್ತಮಪಡಿಸುವುದಕ್ಕೋಸ್ಕರ ನಿಮ್ಮ ಮತಾಂತರಕ್ಕೆ ಚಾಲನೆ ಕೊಡಬೇಕು. ನನ್ನ ವೈಯಕ್ತಿಕ ಹಿತಾಸಕ್ತಿಯ ವಿಷಯಕ್ಕಾಗಲೀ ಅಥವಾ ಪುರೋಭಿವೃದ್ಧಿಗಾಗಲೀ ನನಗೆ ಯಾವ ಚಿಂತೆಯೂ ಇಲ್ಲ. ನಾನು ಈ ದಿನ ಎದುರಿಸುತ್ತಿರುವುದೆಲ್ಲವೂ ನಿಮ್ಮ ಉತ್ತಮಿಕೆಗಾಗಿ ಮತ್ತು ನಿಮ್ಮ ಹಿತಕ್ಕಾಗಿ.

ನೀವು ನನ್ನನ್ನು ದೇವರು ಎಂದು ಭಾವಿಸುತ್ತಿದ್ದೀರಿ. ಆದರೆ ನಾನು ದೇವರಲ್ಲ. ನಿಮ್ಮಂತೆಯೇ ನಾನೂ ಒಬ್ಬ ಮಾನವಜೀವಿ. ನನ್ನಿಂದ ನೀವು ಯಾವುದೇ ಸಹಾಯವನ್ನು ಬಯಸಿದರೂ ನಾನು ಅದನ್ನು ನಿಮಗೆ ಕೊಡಲು ಸಿದ್ಧನಿದ್ದೇನೆ. ನಾನು ನಿಮ್ಮನ್ನು ನಿಮ್ಮ ಈಗಿನ ನಿರಾಶಾದಾಯಕ ಮತ್ತು ದುರ್ದಶೆಯ ಪರಿಸ್ಥಿತಿಯಿಂದ ಮುಕ್ತಗೊಳಿಸಲು ತೀರ್ಮಾನಿಸಿದ್ದೇನೆ. ನನ್ನ ವೈಯಕ್ತಿಕ ಲಾಭಕ್ಕಾಗಿ ನಾನು ಏನನ್ನೂ ಮಾಡುತ್ತಿಲ್ಲ. ನಾನು ನಿಮ್ಮ ಜೀವನವನ್ನು ಉಪಯೋಗಕರವಾಗಿ ಮತ್ತು ಅರ್ಥಪೂರ್ಣವಾಗಿ ಮಾಡಲು, ನಿಮ್ಮನ್ನು ಮೇಲೆತ್ತುವುದಕ್ಕಾಗಿ ಹೋರಾಟವನ್ನು ಮುಂದುವರಿಸುತ್ತೇನೆ. ನೀವು ನಿಮ್ಮ ಹೊಣೆಗಾರಿಕೆಯನ್ನು ಸಾಕ್ಷಾತ್ಕರಿಸಿಕೊಂಡು, ನಾನು ನಿಮಗೆ ತೋರಿಸಿರುವ ಮಾರ್ಗದಲ್ಲಿ ನಡೆದು ಹೋಗಬೇಕು. ನೀವು ಅದನ್ನು ಶ್ರದ್ಧೆಯಿಟ್ಟು, ಅನುಸರಿಸಿದಲ್ಲಿ, ನಿಮ್ಮ ಗುರಿಯನ್ನು ಮುಟ್ಟಲು ಕಷ್ಟವಾಗುವುದಿಲ್ಲ.

## ೨೯
## ವಿಮೋಚನೆಯ ದಾರಿ ಯಾವುದು?

೧೩ನೇ ಅಕ್ಟೋಬರ್ ೧೯೩೫ ರಂದು ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಯೆಓಲಾದಲ್ಲಿ "ನಾನು ಹಿಂದೂ ಆಗಿಯೇ ಸಾಯುವುದಿಲ್ಲವೆಂದು ಪ್ರಜ್ಞಾಪೂರ್ವಕವಾಗಿ ನಿಮಗೆ ಭರವಸೆ ಕೊಡುತ್ತೇನೆ" ಎಂದು ಮಾಡಿದ ಘೋಷಣೆಯ ಹಿನ್ನೆಲೆಯಲ್ಲಿ ಡಾ॥ ಅಂಬೇಡ್ಕರ್ ಅವರು ೩೦ ಮತ್ತು ೩೧ನೇ ಮೇ ೧೯೩೬ರಂದು ಬೊಂಬಾಯಿಯ ದಾದರ್‌ನಲ್ಲಿ ಸಮ್ಮೇಳನವೊಂದನ್ನು ಕರೆದರು. ಈ ಸಮ್ಮೇಳನದ ಏಕೈಕ ಗುರಿ ಮತಾಂತರ ಚಳುವಳಿಗೆ ನನ್ನದೇ ಜನಗಳ ಬೆಂಬಲ ಎಷ್ಟಿದೆಯೆಂದು ತಿಳಿಯುವುದೇ ಆಗಿತ್ತು. ಆ ಸಮ್ಮೇಳನದಲ್ಲಿ ಸುಮಾರು ಮೂವತ್ತೈದು ಸಾವಿರ ಮಹರ್ ಅಸ್ಪೃಶ್ಯರು ಭಾಗವಹಿಸಿದ್ದರು. ವಿಶೇಷವಾಗಿ ನಿರ್ಮಿಸಿದ ಪೆಂಡಾಲ್‌ನಲ್ಲಿ ಕೆಳಗೆ ಕಂಡ ಘೋಷಣೆಗಳಿದ್ದ ಫಲಕಗಳನ್ನು ಪ್ರದರ್ಶಿಸಲಾಗಿತ್ತು.

* ಮನುಷ್ಯ ಧರ್ಮಕ್ಕಾಗಿ ಅಲ್ಲ; ಮನುಷ್ಯನಿಗಾಗಿ ಧರ್ಮ.
* ದಯಾಪರನಾಗುವುದಕ್ಕೆ ಮತಾಂತರ ಹೊಂದು.
* ವ್ಯವಸ್ಥಿತನಾಗುವುದಕ್ಕೆ ಮತಾಂತರ ಹೊಂದು.
* ಬಲಶಾಲಿಯಾಗುವುದಕ್ಕೆ ಮತಾಂತರ ಹೊಂದು.
* ಸಮಾನತೆಯನ್ನು ಪಡೆದುಕೊಳ್ಳಲು ಮತಾಂತರ ಹೊಂದು.
* ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ಮತಾಂತರ ಹೊಂದು.
* ನಿನ್ನ ಕುಟುಂಬ ಜೀವನವನ್ನು ಸುಖಮಯ ಮಾಡುವುದಕ್ಕೆ ಮತಾಂತರ ಹೊಂದು.
* ನಿನ್ನನ್ನು ಮಾನವ ಜೀವಿಯಂತೆ ಕಾಣದ ಆ ಧರ್ಮದಲ್ಲಿ ಏಕೆ ಉಳಿದುಕೊಂಡಿದ್ದೀಯ?
* ನಿನ್ನನ್ನು ದೇವಸ್ಥಾನಗಳ ಪ್ರವೇಶಕ್ಕೆ ನಿಷೇಧಿಸುವ ಧರ್ಮದಲ್ಲಿ ಏಕೆ ಉಳಿದುಕೊಂಡಿದ್ದೀಯ?
* ನಿನಗೆ ಕುಡಿಯುವ ನೀರನ್ನು ಪ್ರತಿಬಂಧಿಸುವ ಆ ಧರ್ಮದಲ್ಲಿ ಏಕೆ ಉಳಿದುಕೊಂಡಿದ್ದೀಯ?
* ನಿನಗೆ ಶಿಕ್ಷಣ ಪಡೆಯುವುದಕ್ಕೆ ಅನುಮತಿಸದ ಆ ಧರ್ಮದಲ್ಲಿ ಏಕೆ ಉಳಿದುಕೊಂಡಿದ್ದೀಯ?
* ಹೆಜ್ಜೆಹೆಜ್ಜೆಗೂ ನಿನ್ನನ್ನು ಅವಮಾನಿಸುವ ಆ ಧರ್ಮದಲ್ಲಿ ಏಕೆ ಉಳಿದುಕೊಂಡಿದ್ದೀಯ?
* ನೀನು ನೌಕರಿಯನ್ನು ಪಡೆದುಕೊಳ್ಳುವುದಕ್ಕೆ ತಡೆಮಾಡುವ ಆ ಧರ್ಮದಲ್ಲಿ ಏಕೆ ಉಳಿದುಕೊಂಡಿದ್ದೀಯ?
* ಮನುಷ್ಯ-ಮನುಷ್ಯನ ನಡುವೆ ನ್ಯಾಯಯುತವಾದ ಸಂಬಂಧಗಳನ್ನು ನಿಷೇಧಿಸುವುದು ಧರ್ಮವಲ್ಲ, ಆದರೆ ಬಲಾತ್ಕಾರದ ಪ್ರದರ್ಶನ.
* ಮಾನವೀಯತೆಯನ್ನು ಗುರುತಿಸುವುದು ಅಧರ್ಮವೆಂದು ನಡೆಸಿಕೊಳ್ಳುವ ಧರ್ಮ ಧರ್ಮವಲ್ಲ. ಅದೊಂದು ರೋಗ.
* ಅಪವಿತ್ರ ಪ್ರಾಣಿಗಳನ್ನು ಮುಟ್ಟಲು ಅನುಮತಿಸುವ, ಆದರೆ ಮಾನವ ಜೀವಿಗಳನ್ನು ಸ್ಪರ್ಶಿಸುವುದನ್ನು ನಿಷೇಧಿಸುವ ಧರ್ಮ ಧರ್ಮವಲ್ಲ. ಆದರೆ ದಡ್ಡತನ.
* ಒಂದು ವರ್ಗದ ಜನರನ್ನು ಶಿಕ್ಷಣ ಪಡೆಯದಂತೆ ತಡೆಯುವ, ಸಂಪದವನ್ನು ಶೇಖರಿಸುವುದನ್ನು

ನಿಷೇಧಿಸುವ, ಆಯುಧಗಳನ್ನು ಧರಿಸಲು ನಿಷೇಧಿಸುವ ಧರ್ಮ ಧರ್ಮವಲ್ಲ. ಆದರೆ ಮಾನವ ಜನ್ಮದ ಅಣಕ.

* ಅನಕ್ಷರಸ್ಥರನ್ನು ಅನಕ್ಷರಸ್ಥರನ್ನಾಗಿಯೇ ಉಳಿಯುವಂತೆ, ಬಡವರನ್ನು ಬಡವರಾಗಿಯೇ ಉಳಿಯುವಂತೆ ಬಲಾತ್ಕರಿಸುವ ಧರ್ಮ ಧರ್ಮವಲ್ಲ. ಅದೊಂದು ಶಿಕ್ಷೆ.
* ದೇವರನ್ನು ಸರ್ವಾಂತರ್ಯಾಮಿಯೆಂದು ಬೋಧಿಸುವ, ಆದರೆ ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಳ್ಳುವವರು ಆಷಾಡಭೂತಿಗಳು, ಇಂಥ ಜನರ ಸಹವಾಸ ಮಾಡಬೇಡಿ.
* ಇರುವೆಗಳಿಗೆ ಸಕ್ಕರೆಯನ್ನು ತಿನ್ನಿಸುವ, ಆದರೆ ಮನುಷ್ಯರನ್ನು ನೀರು ಕುಡಿಯದಂತೆ ನಿಷೇಧಿಸಿ, ಕೊಲ್ಲುವವರು. ಆಷಾಡಭೂತಿಗಳು ಅವರ ಸಹವಾಸ ಮಾಡಬೇಡಿ.

ಮಿ: ಸ್ಟಾನ್ಲಿ ಜೋನ್ಸ್ ಎನ್ನುವ ಒಬ್ಬ ಐರೋಪ್ಯ ಮತಪ್ರಚಾರಕ ಮತ್ತು ಬಿ.ಜಿ.ಜಾಧವ್ ಅನ್ನುವವರು ವಿಶೇಷ ಆಮಂತ್ರಿತರಾಗಿದ್ದರು. ಅಲ್ಲಿ ಅನೇಕ ಸಿಖ್ ಮತ್ತು ಮುಸ್ಲಿಮ್ ಮುಖಂಡರುಗಳೂ ಇದ್ದರು. ಅವರು ಮತಾಂತರದ ವಿಷಯ ಕುರಿತಂತೆ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಸೂಚನೆಯನ್ನು ಕೇಳಲು ಬಹಳ ಉತ್ಸುಕರಾಗಿದ್ದರು. ಯೆಓಲಾದಲ್ಲಿ ದಿನಾಂಕ ೧೩.೧೦.೧೯೩೫ರಂದು ಅನುಮೋದಿಸಿದ ಠರಾವನ್ನು ಕಾರ್ಯಗತಗೊಳಿಸುವುದಕ್ಕೆ ಮಾರ್ಗೋಪಾಯಗಳನ್ನು ರಚಿಸುವ ಉದ್ದೇಶದಿಂದ ಸಮ್ಮೇಳನವನ್ನು ಕರೆಯಲಾಗಿತ್ತು. ಮಿ.ಡಿ.ಡೋಲಾಸ್ ಅವರು ಪ್ರತಿನಿಧಿಗಳನ್ನು ಸ್ವಾಗತಿಸಿದರೆ, ಹೈದರಾಬಾದ್‌ನಿಂದ ಬಂದಿದ್ದ ವೆಂಕಟ್‌ರಾವ್ ಅನ್ನುವ ನಿಮ್ನವರ್ಗಗಳ ಮುಖಂಡರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. (ಜನತಾ ಪತ್ರಿಕೆ–೨೦.೦೬.೧೯೩೬) ೩೧.೦೫.೧೯೩೬ ರಂದು ಡಾ॥ಬಿ.ಆರ್.ಅಂಬೇಡ್ಕರ್ ಅವರು ಮರಾಠಿಯಲ್ಲಿ ಬಹಳ ವಿವರವಾಗಿ ಮಾತನಾಡಿದರು.

[ಸಂಪಾದಕರು]

ಅವರು ಹೇಳಿದ್ದು :

ಮಹಿಳೆಯರೇ ಮತ್ತು ಮಹನೀಯರೇ, ನಾನು ಇತ್ತೀಚೆಗೆ ಮಾಡಿದ ಮತಾಂತರದ ಘೋಷಣೆಯನ್ನು ಕುರಿತು ಸಮಾಲೋಚಿಸುವುದಕ್ಕಾಗಿ ಈ ಸಮ್ಮೇಳನವನ್ನು ಉದ್ದೇಶಪೂರ್ವಕವಾಗಿ ಕರೆಯಲಾಗಿದೆಯೆಂದು ಈಗಾಗಲೇ ನಿಮ್ಮಗಳಿಗೆ ಗೊತ್ತಾಗಿರಲೇಬೇಕು. ಮತಾಂತರದ ವಿಷಯ ನನಗೆ ಬಹಳ ಪ್ರಿಯವಾದುದು. ಅಷ್ಟೇ ಅಲ್ಲ, ನಿಮ್ಮ ಇಡೀ ಭವಿಷ್ಯ ಈ ವಿಷಯದ ಮೇಲೆ ಅವಲಂಬಿತವಾಗಿದೆ. ಈ ಸಮಸ್ಯೆಯ ತೀವ್ರತೆಯನ್ನು ನೀವುಗಳು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದೀರೆಂದು ಹೇಳುವುದಕ್ಕೆ ನನಗೆ ಅನುಮಾನವಿಲ್ಲ. ಹಾಗಿಲ್ಲದೇ ಹೋಗಿದ್ದರೆ, ನೀವುಗಳೆಲ್ಲಾ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇಲ್ಲಿ ನೆರೆಯುತ್ತಿರಲಿಲ್ಲ. ಈ ಅಗಾಧವಾದ ಸಭೆಯನ್ನು ನೋಡಲು ನನಗೆ ಬಹಳ ಆನಂದವಾಗಿದೆ.

### ಮತಾಂತರದ ಆವಶ್ಯಕತೆ

ಮತಾಂತರದ ಘೋಷಣೆಯನ್ನು ನಾನು ಮಾಡಿದ ಸಮಯದಿಂದಲೇ ನಮ್ಮ ಜನಗಳು ಅನೇಕ ಕಡೆಗಳಲ್ಲಿ ಬಹಳಷ್ಟು ಸಭೆಗಳನ್ನು ಕರೆದು ತಮ್ಮ ದೃಷ್ಟಿಕೋನವನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದು ನಿಮ್ಮೆಲ್ಲರನ್ನು ತಲುಪಿರಬಹುದೆಂದು ನಂಬಿದ್ದೇನೆ. ಆದರೆ ಇಲ್ಲಿಯವರೆಗೆ ನಾವೆಲ್ಲಾ ಒಟ್ಟಾಗಿ ಸೇರಿ ಮತಾಂತರದ ಸಮಸ್ಯೆಯನ್ನು ಚರ್ಚಿಸಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ನಮಗೊಂದು ಅವಕಾಶ

ಸಿಕ್ಕಿರಲಿಲ್ಲ. ಇಂಥದೊಂದು ಅವಕಾಶಕ್ಕೋಸ್ಕರ ನನಗೆ ಬಹಳ ಉತ್ಸುಕತೆ ಇತ್ತು. ಮತಾಂತರದ ಚಳುವಳಿಯನ್ನು ಜಯಶಾಲಿಯಾಗಿ ಮಾಡುವುದಕ್ಕೆ ಕಾರ್ಯವಿಧಾನ ಅತ್ಯವಶ್ಯಕವೆಂದು ನೀವು ಒಪ್ಪುತ್ತೀರಿ. ಮತಾಂತರವೆನ್ನುವುದು ಹುಡುಗಾಟದ ಮಾತಲ್ಲ. ಅದು ಮನೋರಂಜನೆಯ ವಿಷಯವಲ್ಲ. ಮನುಷ್ಯ ಜೀವನವನ್ನು ಹೇಗೆ ಜಯಪ್ರದವನ್ನಾಗಿ ಮಾಡಬೇಕೆಂಬುದನ್ನು ಕುರಿತು ಅದು ವ್ಯವಹರಿಸುತ್ತದೆ.

ಒಂದು ದೀರ್ಘ ಸಮುದ್ರಯಾನಕ್ಕೆ ಒಬ್ಬ ನಾವಿಕ ಹೇಗೆ ಎಲ್ಲಾ ಅವಶ್ಯಕವಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೋ ಹಾಗೆ ನಾವು ಕೂಡ ಮಾಡಿಕೊಳ್ಳಬೇಕು. ಸಿದ್ಧತೆ ಇಲ್ಲದೆ ಆಚೆಯ ತೀರವನ್ನು ತಲುಪಲು ಸಾಧ್ಯವಾಗುವುದಿಲ್ಲ. ಆದರೆ ಅಂಬಿಗ ಎಷ್ಟು ಮಂದಿ ಪ್ರಯಾಣಿಕರು ದೋಣಿಯನ್ನು ಹತ್ತುತ್ತಾರೆ ಎಂಬ ಕಲ್ಪನೆಯಿಲ್ಲದೆ ಲಗೇಜನ್ನು ತುಂಬಿಕೊಳ್ಳಲಾರನೋ ಹಾಗೆಯೇ ನನ್ನ ಸ್ಥಿತಿಯೂ ಇದೆ. ನಾನು ನಿಖರವಾದ ಸಂಗತಿಗಳಿಲ್ಲದೆ ಮುಂದುವರೆಯಲಾರೆ. ಹಿಂದೂ ಪದರಗಳನ್ನು ಬಿಡುವುದಕ್ಕೆ ಎಷ್ಟು ಮಂದಿ ಇಚ್ಛೆಯುಳ್ಳವರಾಗಿದ್ದಾರೆ ಎಂಬುದು ನನ್ನ ಕಲ್ಪನೆಗೆ ಬಾರದಿದ್ದರೆ ಮತಾಂತರಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳಲು ನನಗೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಒಂದು ಸಮ್ಮೇಳನವನ್ನು ಕರೆದು ಜನಾಭಿಪ್ರಾಯವನ್ನು ತಿಳಿದುಕೊಳ್ಳಬೇಕಾದ್ದರಿಂದ ನಾನು ಬೊಂಬಾಯಿಯಲ್ಲಿ ನನ್ನ ಆಲೋಚನೆಯನ್ನು ಕೆಲ ಕರ್ಮಚಾರಿಗಳ ಮುಂದೆ ಹೇಳಿದಾಗ, ಅವರು ಸ್ವಯಂಪ್ರೇರಿತರಾಗಿ ಖರ್ಚುವೆಚ್ಚಗಳ ಕುರಿತಾಗಲೀ, ಕೆಲಸ ಮಾಡುವವರ ಬಗ್ಗೆಯಾಗಲೀ ಯಾವ ನೆಪವನ್ನು ಹೇಳದೆ, ಈ ಸಮ್ಮೇಳನವನ್ನು ವ್ಯವಸ್ಥೆ ಮಾಡುವ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದಾರೆ. ಅವರುಗಳು ಏನೆಲ್ಲಾ ಶ್ರಮ ವಹಿಸಬೇಕಾಯಿತೆಂಬುದನ್ನು ನಮ್ಮ ಪೂಜ್ಯ ಮುಖಂಡರಾದ ಮತ್ತು ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ರೇವ್ ಜೀ ಡಾಗ್‌ಡು ಜೀ ಡೋಲಾಸ್ ಅವರು ತಮ್ಮ ಭಾಷಣದಲ್ಲಿ ವಿವರಿಸಿದ್ದಾರೆ. ಇಷ್ಟು ಶ್ರಮದಾಯಕ ಪ್ರಯತ್ನಗಳನ್ನು ಮಾಡಿ ಈ ಸಭೆಯ ಏರ್ಪಾಡನ್ನು ಮಾಡಿದ್ದಕ್ಕಾಗಿ ನಾನು ಸಮ್ಮೇಳನದ ಸ್ವಾಗತ ಸಮಿತಿಯವರಿಗೆ ಋಣಿಯಾಗಿದ್ದೇನೆ.

## ಮಹರ್‌ಗಳ ಸಮ್ಮೇಳನ ಮಾತ್ರ ಏಕೆ?

ಮಹರ್‌ಗಳ ಸಮ್ಮೇಳನವನ್ನು ಮಾತ್ರ ಏಕೆ ಕರೆಯಲಾಗಿದೆ ಎಂದು ಕೆಲವು ಮಂದಿ ಆಕ್ಷೇಪಣೆಯನ್ನು ಎತ್ತಬಹುದು. ಎಲ್ಲಾ ಅಸ್ಪೃಶ್ಯರಿಗೋಸ್ಕರ ಮತಾಂತರದ ಘೋಷಣೆಯನ್ನು ಮಾಡಿದ್ದರೆ, ಎಲ್ಲಾ ಅಸ್ಪೃಶ್ಯರ ಸಭೆಯನ್ನೇಕೆ ಕರೆಯಲಿಲ್ಲ ಎಂದು ಕೇಳಬಹುದು. ಸಮ್ಮೇಳನದ ಮುಂದಿರುವ ವಿಷಯಗಳ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ, ಈ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎಂದು ನಾನು ಭಾವಿಸುತ್ತೇನೆ. ಮಹರ್‌ಗಳ ಸಮ್ಮೇಳನವನ್ನು ಏರ್ಪಡಿಸುವುದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಈ ಸಮ್ಮೇಳನವನ್ನು ಕರೆದಿರುವುದು ಸರ್ಕಾರದಿಂದ ಯಾವುದೇ ರಕ್ಷಣೋಪಾಯಗಳು ಬೇಕೆಂದಾಗಲೀ ಅಥವಾ ಹಿಂದೂಗಳಿಂದ ಯಾವುದೇ ಸಾಮಾಜಿಕ ಹಕ್ಕುಗಳನ್ನು ಒತ್ತಾಯಿಸುವುದಕ್ಕೆ ಅಲ್ಲ. ಈ ಸಮ್ಮೇಳನದ ಮುಂದೆ ಇರುವ ಒಂದೇ ಪ್ರಶ್ನೆಯೆಂದರೆ ಜೀವನವನ್ನು ಉತ್ತಮಪಡಿಸುವುದಕ್ಕಾಗಿ ಏನನ್ನು ಮಾಡಬೇಕು ಎಂದು. ನಮ್ಮ ಭವಿಷ್ಯತ್ತಿನ ಜೀವನಕ್ಕೆ ದಾರಿಯನ್ನು ಹೇಗೆ ಮಾಡಿಕೊಳ್ಳಬೇಕು ಎಂದು. ಈ ಪ್ರಶ್ನೆಯನ್ನು ಆಯಾ ಸಮುದಾಯಗಳೇ ಉತ್ತರಿಸಬಲ್ಲವು; ಅವರೇ ಅದನ್ನು ಉತ್ತರಿಸಬೇಕಾಗಿದೆ. ಇದು ನಾನು ಎಲ್ಲಾ ಅಸ್ಪೃಶ್ಯರ ಸಮ್ಮೇಳನವನ್ನು ಕರೆಯದೆ ಇರುವುದಕ್ಕೆ ಒಂದು ಕಾರಣ. ಮಹರ್‌ಗಳ ಸಮ್ಮೇಳನವನ್ನು ಮಾತ್ರ ಕರೆದಿರುವುದಕ್ಕೆ ಇನ್ನೂ ಒಂದು ಕಾರಣ ಇದೆ; ಘೋಷಣೆಯನ್ನು ಮಾಡಿದ ಮೇಲೆ ಹತ್ತು ತಿಂಗಳುಗಳೇ ಕಳೆದಿವೆ. ಈ ಮಧ್ಯದ ಅವಧಿಯಲ್ಲಿ ಸಾರ್ವಜನಿಕ ಜಾಗೃತಿಯನ್ನು ಎಚ್ಚರಿಸಲು ಸಾಕಷ್ಟು ಪ್ರಯತ್ನವನ್ನು

ಮಾಡಿದ್ದಾಗಿದೆ. ಸಾರ್ವಜನಿಕ ಅಭಿಪ್ರಾಯಗಳನ್ನು ಕುರಿತು ವಿಮರ್ಶೆ ಮಾಡುವುದಕ್ಕೆ ಸೂಕ್ತವಾದ ಸಮಯ ಬಂದಿದೆ ಎಂದು ನಾನು ಭಾವಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಪ್ರತಿಯೊಂದು ಜಾತಿಯ ಸಭೆಯನ್ನು ಪ್ರತ್ಯೇಕವಾಗಿ ಕರೆದು ಅದರ ಅಭಿಪ್ರಾಯವನ್ನು ವಿಮರ್ಶಿಸುವುದು ಎಲ್ಲಕ್ಕಿಂತ ಸರಳ ಮಾರ್ಗ. ಮತಾಂತರದ ಸಮಸ್ಯೆಯನ್ನು ಮೂರ್ತರೂಪಗೊಳಿಸುವುದಕ್ಕೆ ಸಾರ್ವಜನಿಕ ಅಭಿಪ್ರಾಯ ಏನೆಂದು ತಿಳಿದುಕೊಳ್ಳುವುದಕ್ಕೆ ಬಹಳ ಅವಶ್ಯಕತೆಯಿದೆ.

ಪ್ರತಿಯೊಂದು ಜಾತಿಯ ಸಭೆಯನ್ನು ಪ್ರತ್ಯೇಕವಾಗಿ ಕರೆದು ಸಾರ್ವಜನಿಕ ಅಭಿಪ್ರಾಯವನ್ನು ಪಡೆದುಕೊಳ್ಳುವುದು ಹೆಚ್ಚು ಪ್ರಾತಿನಿಧಿಕವಾಗಿಯೂ ಮತ್ತು ನಂಬಲರ್ಹವಾಗಿರುತ್ತದೆಂದು ನನಗೆ ಅನಿಸುತ್ತದೆ; ಇದು ಎಲ್ಲ ಅಸ್ಪೃಶ್ಯ ಜಾತಿಗಳ ಸಭೆಯನ್ನು ಒಟ್ಟಾಗಿ ಕರೆದು ಅಭಿಪ್ರಾಯವನ್ನು ಪಡೆಯುವುದಕ್ಕಿಂತ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಇಂಥದೊಂದು ಸಭೆಯನ್ನು ಕರೆದು ಅದನ್ನು ಎಲ್ಲಾ ಅಸ್ಪೃಶ್ಯರ ಸಭೆಯೆಂದು ಕರೆದರೂ, ಅದು ಎಲ್ಲಾ ಅಸ್ಪೃಶ್ಯ ಜಾತಿಗಳನ್ನು ಅವಶ್ಯಕವಾಗಿ ಪ್ರತಿನಿಧಿಸುತ್ತದೆಂದು ಹೇಳಲಾಗುವುದಿಲ್ಲ. ಇಂಥ ಪರಿಸ್ಥಿತಿಯನ್ನು ತಪ್ಪಿಸುವುದಕ್ಕೆ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ಖಾತರಿ ಮಾಡಿಕೊಳ್ಳುವುದಕ್ಕೆ ಮಹರ್‌ಗಳ ಸಭೆಯನ್ನು ಮಾತ್ರ ಕರೆಯಲಾಗಿದೆ. ಬೇರೆ ಸಮುದಾಯಗಳನ್ನು ಕರೆದಿಲ್ಲವಾದರೂ ಅವರಿಗೆ ನಷ್ಟವೇನು ಇಲ್ಲ. ಅವರಿಗೆ ಮತಾಂತರವಾಗುವ ಇಚ್ಛೆಯಿಲ್ಲದಿದ್ದರೆ, ಈ ಸಮ್ಮೇಳನಕ್ಕೆ ಕರೆಯಲಿಲ್ಲವೆಂದು ವ್ಯಥಿಸುವುದು ಬೇಡ. ಅವರ ಧರ್ಮವನ್ನು ಬಿಡಲೇಬೇಕೆಂದು ಅವರು ಬಯಸಿದರೆ, ಈ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲವೆಂದ ಮಾತ್ರಕ್ಕೆ ಅವರು ಮತಾಂತರವಾಗುವುದನ್ನು ಯಾರೂ, ಯಾವುದೂ ತಡೆಯಲಾಗುವುದಿಲ್ಲ. ಅಸ್ಪೃಶ್ಯರ ಇತರ ಸಮುದಾಯಗಳು ಮಹರ್‌ಗಳಂತೆಯೇ ತಮ್ಮದೇ ಸಭೆಗಳನ್ನು ನಡೆಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸ್ವತಂತ್ರರಿದ್ದಾರೆ. ಇಂಥ ಸಭೆಗಳನ್ನು ನಡೆಸಿ ಎಂದು ನಾನು ಅವರಿಗೆ ಸಲಹೆ ಮಾಡುತ್ತೇನೆ. ನನ್ನಿಂದ ಸಹಾಯ ಬೇಕಾಗಿದ್ದರೆ, ಸಾಧ್ಯವಾದಷ್ಟು ಸಹಾಯವನ್ನು ಮಾಡುತ್ತೇನೆ. ಪೀಠಿಕೆಯಾಗಿ ಇಷ್ಟು ಸಾಕು. ಈಗ ನಾನು ಮುಖ್ಯ ವಿಷಯಕ್ಕೆ ಬರುತ್ತೇನೆ. ಒಬ್ಬ ಸಾಮಾನ್ಯ ಮನುಷ್ಯನಿಗೆ ಈ ಮತಾಂತರದ ವಿಷಯ ಬಹಳ ಮುಖ್ಯ. ಆದರೆ ಇದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಮತಾಂತರದ ವಿಷಯಕ್ಕೆ ಬಂದಾಗ ಸಾಮಾನ್ಯ ಮನುಷ್ಯನನ್ನು ತೃಪ್ತಿಗೊಳಿಸುವುದು ಸುಲಭಸಾಧ್ಯವಾದ ಕೆಲಸವಲ್ಲ. ಆದ್ದರಿಂದ ನಿಮಗೆಲ್ಲರಿಗೂ ಸಮಾಧಾನವಾಗದ ಹೊರತು ಮತಾಂತರದ ಕಲ್ಪನೆಯನ್ನು ನೈಜತೆಗೆ ತರುವುದು ಬಹಳ ಕಷ್ಟ. ಆದ್ದರಿಂದ ಈ ವಿಷಯವನ್ನು ಎಷ್ಟು ಸಾಧ್ಯವೋ ಅಷ್ಟೂ ಸರಳವಾಗಿ ವಿವರಿಸುವುದಕ್ಕೆ ಪ್ರಯತ್ನಿಸುತ್ತೇನೆ.

## ಮತಾಂತರದ ಪ್ರಾಪಂಚಿಕ ಮುಖ

ಮತಾಂತರದ ವಿಷಯವನ್ನು ಎರಡು ಮುಖಗಳಿಂದ ನೋಡಲೇಬೇಕು – ಪ್ರಾಪಂಚಿಕ ಮತ್ತು ಅಧ್ಯಾತ್ಮಿಕ. ಯಾವುದೇ ಮುಖವಾಗಲೀ ಅಥವಾ ಆಲೋಚನ ರೀತಿಯಾಗಲೀ, ಅಸ್ಪೃಶ್ಯತೆಯ ಸ್ವಭಾವವನ್ನು ಮತ್ತು ಅದನ್ನು ಹೇಗೆ ಆಚರಿಸಲಾಗುತ್ತಿದೆ ಎಂಬುದನ್ನು ಮೊದಲಿಗೆ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಈ ತಿಳುವಳಿಕೆ ಇಲ್ಲದೆ ನನ್ನ ಮತಾಂತರದ ಘೋಷಣೆಯ ಹಿಂದಿರುವ ನಿಜವಾದ ಅರ್ಥವೇನೆಂದು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅಸ್ಪೃಶ್ಯತೆಯ ಸ್ಪಷ್ಟ ತಿಳುವಳಿಕೆಯನ್ನು ಪಡೆದುಕೊಳ್ಳುವುದಕ್ಕೆ ಮತ್ತು ನಿಜಜೀವನದಲ್ಲಿ ಅದನ್ನು ಹೇಗೆ ಆಚರಿಸಲಾಗುತ್ತಿದೆಯೆಂದು ತಿಳಿದುಕೊಳ್ಳುವ ಸಲುವಾಗಿ ನಿಮ್ಮ ವಿರುದ್ಧ ಎಸಗಿದ ಅತ್ಯಾಚಾರದ ಸರಣಿಯನ್ನು ನೆನಪಿಗೆ ತಂದುಕೊಳ್ಳಿ. ನಿಮ್ಮ ಮಕ್ಕಳುಗಳನ್ನು ಸರ್ಕಾರಿ

ಪಾಠಶಾಲೆಗಳಲ್ಲಿ ದಾಖಲು ಮಾಡಿಸುವುದಕ್ಕೆ ನಿಮಗೆ ಇರುವ ಹಕ್ಕನ್ನು ಪ್ರತಿಪಾದಿಸಿದಾಗ, ಸಾರ್ವಜನಿಕ ಬಾವಿಯಿಂದ ನೀರು ತೆಗೆದುಕೊಳ್ಳಲು ನಿಮಗಿರುವ ಹಕ್ಕನ್ನು ಕೇಳಿದಾಗ, ವರನನ್ನು ಕುದುರೆ ಮೇಲೆ ಕೂರಿಸಿ ಮದುವೆ ಮೆರವಣಿಗೆ ಹೋಗುವುದಕ್ಕೆ ನಿಮ್ಮ ಹಕ್ಕನ್ನು ಚಲಾಯಿಸುವಾಗ ಸವರ್ಣ ಹಿಂದೂಗಳು ನಿಮ್ಮನ್ನು ಬಡಿದಾಡಿದ ಸಂದರ್ಭಗಳು ಅನೇಕ. ನಿಮ್ಮ ಕಣ್ಣುಗಳ ಮುಂದೆಯೇ ಈ ಘಟನೆಗಳು ಸಂಭವಿಸಿರುವುದು ನಿಮಗೆಲ್ಲಾ ಗೊತ್ತು. ಇದಲ್ಲದೆ ಸವರ್ಣ ಹಿಂದೂಗಳು ನಾನಾ ಕಾರಣಗಳಿಗಾಗಿ ಅಸ್ಪೃಶ್ಯರ ಮೇಲೆ ಘೋರ ಕೃತ್ಯಗಳನ್ನು ಎಸಗಿದ್ದಾರೆ. ಇವುಗಳನ್ನು ಹಿಂದುತ್ವದಿಂದ ಹೊರಗೆ ಇರುವ ಸಾರ್ವಜನಿಕರಿಗೆ ತಿಳಿಸಿದರೆ, ಅವರು ಆಶ್ಚರ್ಯಚಕಿತರಾಗುತ್ತಾರೆ. ಉತ್ತಮ ಉಡುಪುಗಳನ್ನು ಧರಿಸಿದ್ದಕ್ಕೆ ಅಸ್ಪೃಶ್ಯರನ್ನು ಥಳಿಸಿದ್ದಾರೆ; ತಾಮ್ರದ ಅಥವಾ ಯಾವುದೇ ಲೋಹದ ಚಾವಟಿಯಿಂದ ಹೊಡೆದಿದ್ದಾರೆ, ಜಮೀನಿನಲ್ಲಿ ಕೃಷಿ ಮಾಡಿದ್ದಕ್ಕೆ ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ; ದೇಹದ ಮೇಲೆ ಪವಿತ್ರ ದಾರವನ್ನು ಧರಿಸಿದ್ದಕ್ಕೆ ಹೊಡೆದಿದ್ದಾರೆ; ಸತ್ತ ಪ್ರಾಣಿಗಳನ್ನು ಹೊತ್ತು ತೆಗೆದುಕೊಂಡು ಹೋಗದಿದ್ದಕ್ಕೆ; ಸತ್ತ ಪ್ರಾಣಿಗಳ ಕೊಳೆತ ಮಾಂಸವನ್ನು ತಿನ್ನಲು ನಿರಾಕರಿಸಿದ್ದಕ್ಕೆ ಅಥವಾ ಹಳ್ಳಿಗಳ ಬೀದಿಗಳಲ್ಲಿ ಬೂಟು ಕಾಲುಚೀಲಗಳನ್ನು ಧರಿಸಿ ನಡೆದಿದ್ದಕ್ಕೆ, ಸವರ್ಣಹಿಂದುಗಳ ಮುಂದೆ ತಲೆತಗ್ಗಿಸದಿದ್ದಕ್ಕೆ, ಬಹಿರ್ದೆಶೆಗೆ ಹೋದಾಗ ತಾಮ್ರದ ಚೊಂಬಿನಲ್ಲಿ ನೀರನ್ನು ತೆಗೆದುಕೊಂಡು ಹೋಗಿದ್ದಕ್ಕೆ ಹೊಡೆದಿದ್ದಾರೆ. ಇತ್ತೀಚೆಗೆ ಔತಣಕೂಟವೊಂದರಲ್ಲಿ ಚಪಾತಿಗಳನ್ನು ಬಡಿಸಿದ್ದಕ್ಕೆ ಅಸ್ಪೃಶ್ಯರನ್ನು ಹೊಡೆದಿರುವುದು ಗಮನಕ್ಕೆ ಬಂದಿದೆ. ನಿಮ್ಮಲ್ಲಿ ಕೆಲವರು ಇಂಥ ನೀಚಕೃತ್ಯಗಳ ಬಗ್ಗೆ ಕೇಳಿರಬಹುದು ಅಥವಾ ನಿಮಗೇ ಅದರ ಅನುಭವ ಆಗಿರಬಹುದು. ಹೊಡೆಯುವುದಕ್ಕೆ ಸಾಧ್ಯವಾಗದೇ ಇದ್ದಾಗ ಬಹಿಷ್ಕಾರದ ಅಸ್ತ್ರವನ್ನು ನಿಮ್ಮ ಮೇಲೆ ಹೇಗೆ ಪ್ರಯೋಗಿಸಲಾಯಿತು ಎಂಬುದು ನಿಮಗೇ ಗೊತ್ತಿರುವ ವಿಷಯ. ನಿಮಗೆಲ್ಲಾ ಗೊತ್ತಿರುವ ಹಾಗೆ, ಸವರ್ಣ ಹಿಂದೂಗಳು ನಿಮಗೆ ಕೂಲಿ ಕಾರ್ಮಿಕರು ಸಿಗದ ಹಾಗೆ ನಿಷೇಧಿಸಿ, ಕಾಡುಗಳಲ್ಲಿ ನಿಮ್ಮ ದನಕರುಗಳನ್ನು ಮೇಯಿಸುವುದಕ್ಕೆ ಬಿಡದೆ, ಹಳ್ಳಿಗಳಿಗೆ ನಿಮ್ಮ ಜನ ಪ್ರವೇಶಿಸದ ಹಾಗೆ ತಡೆದು, ನಿಮ್ಮ ದೈನಂದಿನ ಜೀವನವನ್ನು ಹೇಗೆ ದುರ್ಬರವನ್ನಾಗಿ ಮಾಡಿದ್ದಾರೆ. ಆದರೆ ಇದೆಲ್ಲಾ ಏತಕ್ಕೆ ಆಗುತ್ತಿದೆ ಎಂಬುದನ್ನು ನಿಮ್ಮಲ್ಲಿ ಅತ್ಯಲ್ಪ ಮಂದಿ ಮಾತ್ರ ತಿಳಿದುಕೊಂಡಿರಬಹುದು. ಈ ಕ್ರೌರ್ಯದ ಮೂಲದ ಹಿಂದೆ ಏನಿದೆ? ನಾವು ಇದನ್ನು ಅರ್ಥಮಾಡಿಕೊಳ್ಳಬೇಕಾದ ಅವಶ್ಯಕತೆಯಿದೆ ಎಂದು ನನಗೆ ತೋರುತ್ತಿದೆ.

### ಇದೊಂದು ವರ್ಗ ಸಂಘರ್ಷಕ್ಕೆ ಸಂಬಂಧಪಟ್ಟ ವಿಷಯ

ಮೇಲೆ ತಿಳಿಸಿದ ಘಟನೆಗಳಿಗೂ, ಒಬ್ಬ ವೈಯುಕ್ತಿಕ ಮನುಷ್ಯನ ಗುಣಾವಗುಣಗಳಿಗೂ ಏನೇನು ಸಂಬಂಧವಿಲ್ಲ. ಇದು ಎರಡು ಪ್ರತಿಸ್ಪರ್ಧಿಗಳ ನಡುವಿನ ಕಾದಾಟದಲ್ಲ, ಅಸ್ಪೃಶ್ಯತೆಯ ಸಮಸ್ಯೆ ವರ್ಗಸಂಘರ್ಷದ ಒಂದು ವಿಷಯವಾಗಿದೆ. ಅದು ಸವರ್ಣ ಹಿಂದೂಗಳ ಮತ್ತು ಅಸ್ಪೃಶ್ಯರ ನಡುವಿನ ಒಂದು ವರ್ಗ ಸಂಘರ್ಷವಾಗಿದೆ. ಇದು ಏಕೈಕ ಮನುಷ್ಯನ ವಿರುದ್ಧ ಆಗುತ್ತಿರುವ ಅನ್ಯಾಯದ ವಿಷಯವಲ್ಲ. ಈ ವರ್ಗಸಂಘರ್ಷಕ್ಕೂ ಸಾಮಾಜಿಕ ಅಂತಸ್ತಿಗೂ ಒಂದು ಸಂಬಂಧವಿದೆ. ಈ ಸಂಘರ್ಷ ಒಂದು ವರ್ಗ ಇನ್ನೊಂದು ವರ್ಗದೊಡನೆ ತನ್ನ ಸಂಬಂಧವನ್ನು ಹೇಗೆ ಇಟ್ಟುಕೊಳ್ಳಬೇಕೆಂದು ಸೂಚಿಸುತ್ತದೆ. ಇನ್ನಿತರರ ಜೊತೆಯಲ್ಲಿ ನಮಗೆ ಸಮಾನತೆಯಿಂದ ವರ್ತಿಸಬೇಕೆಂದು ಒತ್ತಾಯ ಮಾಡಿದ ಕೂಡಲೇ ಈ ಸಂಘರ್ಷ ಪ್ರಾರಂಭವಾಗಿ ಬಿಡುತ್ತದೆ. ಹಾಗಿಲ್ಲದೆ ಹೋಗಿದ್ದರೆ, ಈ ಸಂಘರ್ಷವೇ ಇರುತ್ತಿರಲಿಲ್ಲ. ಕಾರಣ ತುಂಬಾ ಸರಳ. ಚಪಾತಿ ಬಡಿಸುವುದು, ಉತ್ತಮವಾದ ಉಡುಪನ್ನು ಧರಿಸುವುದು, ಪವಿತ್ರ ದಾರವನ್ನು ಧರಿಸುವುದು,

ಲೋಹದ ಕೊಡದಲ್ಲಿ ನೀರು ತರುವುದು. ವರನ ಕುದುರೆ ಸವಾರಿ ಇತ್ಯಾದಿ. ಈ ಎಲ್ಲಾ ಸಂದರ್ಭಗಳಲ್ಲಿ ನೀವು ನಿಮ್ಮ ಹಣವನ್ನು ಖರ್ಚು ಮಾಡಿರುತ್ತೀರಿ. ಹಾಗಾದರೆ, ಸವರ್ಣ ಹಿಂದೂಗಳಿಗೆ ಕೋಪವೇಕೆ ಬರಬೇಕು? ಅವರ ಕೋಪಕ್ಕೆ ಕಾರಣ ತುಂಬಾ ಸರಳ, ನೀವು ಅವರು ಮಾಡುವುದನ್ನೇ ಮಾಡುವುದು ಅವರಿಗೆ ಅವಮಾನ ಮಾಡಿದಂತೆ ಎಂದು ಅವರು ತಿಳಿಯುತ್ತಾರೆ. ಅವರ ದೃಷ್ಟಿಯಲ್ಲಿ ನಿಮ್ಮ ಅಂತಸ್ತು ಬಹಳ ಕೆಳಮಟ್ಟದ್ದು ನೀವು ಪರಿಶುದ್ಧರಲ್ಲ (ಅಶುದ್ಧರು), ನೀವು ಕಟ್ಟಕಡೆಯ ಕೆಳಗಿನ ಮೆಟ್ಟಿಲಲ್ಲೇ ನಿಲ್ಲಬೇಕು ; ಹಾಗಾದರೆ ಮಾತ್ರ ಅವರು ಸಂತೋಷದಿಂದ ನಿಮ್ಮನ್ನು ಬದುಕಲು ಬಿಡುತ್ತಾರೆ. ನೀವು ನಿಮ್ಮ ಮಟ್ಟವನ್ನು ದಾಟಿದ ಕೂಡಲೇ ಸಂಘರ್ಷ ಪ್ರಾರಂಭವಾಗಿ ಬಿಡುತ್ತದೆ. ಮೇಲೆ ವಿವರಿಸಿದ ಘಟನೆಗಳು ಅಸ್ಪೃಶ್ಯತೆಯ ಸಣ್ಣದಾದ ಅಥವಾ ತಾತ್ಕಾಲಿಕವಾದ ವೈಲಕ್ಷಣವಲ್ಲ, ಆದರೆ ಶಾಶ್ವತವಾದದ್ದು ಎಂಬ ಇನ್ನೂ ಒಂದು ಸಂಗತಿಯನ್ನು ಪ್ರಮಾಣೀಕರಿಸುತ್ತದೆ. ನೇರವಾಗಿ ಹೇಳಬೇಕೆಂದರೆ ಸವರ್ಣೀಯರ ಮತ್ತು ಅಸ್ಪೃಶ್ಯರ ನಡುವೆ ಇರುವ ಸಂಘರ್ಷ ಒಂದು ಶಾಶ್ವತವಾದ ಅತಿಶಯ ಸಂಗತಿ. ಮೇಲ್ಜಾತಿಯ ಜನರ ನಂಬಿಕೆಯ ಪ್ರಕಾರ ನಿಮ್ಮನ್ನು ಸಮಾಜದ ಅತ್ಯಂತ ಕೆಳಮಟ್ಟದಲ್ಲಿ ಇಟ್ಟಿರುವ ಧರ್ಮವೇ ನಿರಂತರವಾದುದರಿಂದ ಅದೂ ಸಹ ನಿರಂತರವಾದುದು. ಕಾಲ ಅಥವಾ ಸಂದರ್ಭಗಳಿಂದ ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ನೀವು ಏಣಿಯ ಕಟ್ಟಕಡೆಯ ಮೆಟ್ಟಿಲಲ್ಲಿ ಇದ್ದೀರಿ. ನೀವು ಎಂದೆಂದಿಗೂ ಅತ್ಯಂತ ಕೆಳಮಟ್ಟದಲ್ಲೇ ಇರಬೇಕು. ಇದರ ಅರ್ಥ ನಿಮ್ಮ ಮತ್ತು ಸವರ್ಣೀಯ ಹಿಂದೂಗಳ ನಡುವಿನ ಹೋರಾಟವೂ ಸಹ ಎಂದೆಂದಿಗೂ ಮುಂದುವರೆಯುತ್ತದೆ. ಈ ಹೋರಾಟದಲ್ಲಿ ನೀವು ಹೇಗೆ ಉಳಿಯುತ್ತೀರಿ ಎಂಬುದೇ ಮುಖ್ಯವಾದ ಪ್ರಶ್ನೆ. ಇದನ್ನು ಕುರಿತು ನೀವು ಆಲೋಚಿಸದ ಹೊರತು ಬೇರೆ ಮಾರ್ಗವಿಲ್ಲ. ಯಾರು ಹಿಂದೂಗಳು ಹೇಳಿದ ಹಾಗೆ ಕೇಳಿಕೊಂಡು ವಿಧೇಯತೆಯಿಂದ ಇರಲು ಬಯಸುತ್ತಾರೋ, ಯಾರು ಅವರ ಗುಲಾಮರಾಗಿ ಉಳಿಯಲು ಬಯಸುತ್ತಾರೋ ಅವರು ಈ ಸಮಸ್ಯೆಯ ಬಗ್ಗೆ ಚಿಂತಿಸಬೇಕಾದ್ದಿಲ್ಲ. ಯಾರು ಆತ್ಮಗೌರವವನ್ನು ಉಳಿಸಿಕೊಂಡು, ಸಮಾನತೆಯ ಜೀವನವನ್ನು ಜೀವಿಸಲು ಬಯಸುತ್ತಾರೋ ಅವರು ಇದರ ಬಗ್ಗೆ ಚಿಂತಿಸಲೇ ಬೇಕು. ಈ ಹೋರಾಟದಲ್ಲಿ ನಾವು ಹೇಗೆ ಬದುಕುಳಿಯಬೇಕು? ಈ ಪ್ರಶ್ನೆಯನ್ನು ಉತ್ತರಿಸುವುದು ನನಗೇನೂ ಕಷ್ಟವೆನಿಸುವುದಿಲ್ಲ. ಯಾವುದೇ ಒಂದು ಹೋರಾಟದಲ್ಲಿ ಯಾರಿಗೆ ಬಲ ಇರುತ್ತದೆಯೋ ಅವರು ಜಯಶಾಲಿಯಾಗುತ್ತಾರೆಂದು ಇಲ್ಲಿ ಸೇರಿರುವ ನೀವೆಲ್ಲರೂ ಒಪ್ಪಲೇಬೇಕು. ಬಲವಿಲ್ಲದವರು ಜಯವನ್ನು ನಿರೀಕ್ಷಿಸಬೇಕಾಗಿಲ್ಲ. ಇದು ಅನುಭವಸಿದ್ಧವಾದ್ದರಿಂದ ನಾನು ಅದನ್ನು ಸಾಧಿಸುವುದಕ್ಕಾಗಿ ಯಾವುದೇ ನಿದರ್ಶನಗಳನ್ನು ಕೊಡಬೇಕಾಗಿಲ್ಲ.

### ಮೊದಲು ಅಧಿಕಾರವನ್ನು ಪಡೆದುಕೊಳ್ಳಿ

ಈಗ ನೀವು ವಿವೇಚಿಸಬೇಕಾದ ಪ್ರಶ್ನೆಯೆಂದರೆ ಈ ಹೋರಾಟದಲ್ಲಿ ನಿಮಗೆ ಬದುಕುಳಿಯುವಷ್ಟು ಶಕ್ತಿ ಇದೆಯೇ ಎಂದು. ಮನುಷ್ಯನಿಗೆ ಮೂರು ವಿಧವಾದ ಶಕ್ತಿಗಳು ಗೊತ್ತು. (೧) ಮನುಷ್ಯ ಬಲ (೨) ಆರ್ಥಿಕ ಬಲ (೩) ಮಾನಸಿಕ ಸ್ಥೈರ್ಯ: ಇವುಗಳಲ್ಲಿ ಯಾವುದು ನಿಮಗಿದೆ ಎಂದು ಅಂದುಕೊಂಡಿದ್ದೀರಿ? ಮನುಷ್ಯ ಬಲವನ್ನು ತೆಗೆದುಕೊಂಡರೆ, ನೀವು ಅಲ್ಪಸಂಖ್ಯಾತರಿದ್ದೀರಿ. ಬೊಂಬಾಯಿ ಅಧಿಪತ್ಯದಲ್ಲಿ ನೀವು ಒಟ್ಟು ಜನಸಂಖ್ಯೆಯ ೧/೨ ಭಾಗ ಇದ್ದೀರಿ. ಅದೂ ಸಹ ಅಸಂಘಟಿತವಾಗಿ ನಿಮ್ಮನಿಮ್ಮಲ್ಲೇ ಇರುವ ಜಾತಿಗಳು ನಿಮ್ಮನ್ನು ಸಂಘಟಿತರಾಗಲು ಬಿಡುವುದಿಲ್ಲ. ಅವರೆಲ್ಲಾ ಒಟ್ಟಾಗಿ ಒಂದೇ ಕಡೆಯೂ ಇಲ್ಲ. ಹಳ್ಳಿಹಳ್ಳಿಗಳಲ್ಲಿ ಚದುರಿ ಹೋಗಿದ್ದಾರೆ. ಈ ಕಾರಣಗಳಿಂದಾಗಿ, ಈ ಅತ್ಯಲ್ಪ ಜನಸಂಖ್ಯೆ, ಅಸ್ಪೃಶ್ಯರ ನಿರ್ಣಾಯಕ ವಾಸಸ್ಥಳಕ್ಕಾಗಿ ಹೋರಾಟ ಮಾಡಬಲ್ಲ ಒಂದು ದಳವಾಗಿ ಯಾವ ಉಪಯೋಗವೂ ಇಲ್ಲ.

ಆರ್ಥಿಕ ಬಲವೂ ಕೂಡ ಹೆಚ್ಚುಕಡಿಮೆ ಹಾಗೆಯೇ ಇದೆ. ಎಲ್ಲೋ ಒಂದು ಸ್ವಲ್ಪ ಮನುಷ್ಯ ಬಲವಿದೆ ಎಂಬುದು ನಿರ್ವಿವಾದವಾದರೂ ನಿಮಗೆ ಹಣ ಬಲ ಏನೇನೂ ಇಲ್ಲ. ನಿಮಗೆ ಯಾವುದೇ ವಾಣಿಜ್ಯವಿಲ್ಲ, ವ್ಯಾಪಾರವಿಲ್ಲ, ಯಾವುದೇ ಕೆಲಸವಾಗಲಿ, ಭೂಮಿಯಾಗಲಿ ಇಲ್ಲ. ಮೇಲಿನ ಜಾತಿಯವರು ಎಸೆದ ಆಹಾರದ ತುಣುಕುಗಳೇ ನಿಮ್ಮ ಜೀವನೋಪಾಯದ ಮಾರ್ಗ. ನಿಮ್ಮ ಹತ್ತಿರ ಆಹಾರವಿಲ್ಲ, ಬಟ್ಟೆಬರೆಗಳಿಲ್ಲ. ನಿಮಗೆ ಯಾವ ಆರ್ಥಿಕ ಬಲ ಇರಲು ಸಾಧ್ಯ? ಅನ್ಯಾಯವಾದರೆ ನ್ಯಾಯಾಲಗಳಿಂದ ಉಪಶಮನವನ್ನು ಪಡೆಯಲು ಸಾಮರ್ಥ್ಯವಿಲ್ಲ. ಸಾವಿರಾರು ಜನ ಅಸ್ಪೃಶ್ಯರು ಹಿಂದೂಗಳ ನಿಂದೆ, ಭಯಾನಕ ಸರ್ವಾಧಿಕಾರ, ದಬ್ಬಾಳಿಕೆಗಳನ್ನು, ದೂರಿನ ಒಂದು ನಿಟ್ಟುಸಿರೂ ಸಹ ಇಲ್ಲದೆ ಸಹಿಸಿಕೊಂಡಿದ್ದಾರೆ; ಕಾರಣ, ನ್ಯಾಯಾಲಯಗಳ ಖರ್ಚನ್ನು ಭರಿಸಲು ಅವರಿಗೆ ಸಾಮರ್ಥ್ಯವಿಲ್ಲ. ಮನಸ್ಥೈರ್ಯದ ಬಗ್ಗೆ ಹೇಳುವುದಾದರೆ ಪರಿಸ್ಥಿತಿ ಇನ್ನೂ ಹೆಚ್ಚಿಗೆ ಕೆಟ್ಟದಿದೆ. ಶತಮಾನಗಳ ಕಾಲ ನೀವು ಮೇಲಿನ ವರ್ಗದ ಜಾತಿಗಳ ಸೇವೆಯನ್ನು ಮಾಡಿದ್ದೂ ಅಲ್ಲದೆ, ಅವರ ಭಯಾನಕ ಸರ್ವಾಧಿಕಾರ, ನಿಂದೆಗಳನ್ನು ಯಾವ ರಾಗ, ದ್ವೇಷ, ದೂರು ಇಲ್ಲದೇ ಸಹಿಸಿಕೊಂಡು ಬಂದಿದ್ದೀರಿ; ಇದು ಪ್ರತ್ಯುತ್ತರ ಕೊಡಬೇಕೆನ್ನುವ, ಪ್ರತಿಭಟನೆ ಮಾಡಬೇಕೆನ್ನುವ ಮನೋಧರ್ಮವನ್ನೇ ಅಳಿಸಿಹಾಕಿಬಿಟ್ಟಿದೆ. ನಂಬಿಕೆ, ಚೈತನ್ಯ ಮತ್ತು ಮಹದಾಸೆ ನಿಮ್ಮಿಂದ ಸಂಪೂರ್ಣವಾಗಿ ಮಾಯವಾಗಿ ಬಿಟ್ಟಿದೆ. **ನೀವುಗಳೆ**ಲ್ಲಾ ನಿಸ್ಸಹಾಯಕರಾಗಿ ಬಿಟ್ಟಿದ್ದೀರಿ. ಚೈತನ್ಯವಿಲ್ಲದವರಾಗಿದ್ದೀರಿ, ಪೇಲವವಾಗಿ ಬಿಟ್ಟಿದ್ದೀರಿ. ಇಲ್ಲೆಲ್ಲಾ ಸೋಲಿನ, ನಿರಾಶೆಯ ವಾತಾವರಣವೇ ಇದೆ. ನೀವು ಏನನ್ನಾದರೂ ಮಾಡಬಲ್ಲಿರಿ ಎಂಬ ಅತಿ ಚಿಕ್ಕ ಕಲ್ಪನೆ ಯಾರ ಮನಸ್ಸಿನಲ್ಲೂ ಹುಟ್ಟುತ್ತಲೇ ಇಲ್ಲ.

### ನೀವು ಮಾತ್ರ ಏತಕ್ಕೆ ದಬ್ಬಾಳಿಕೆಗೆ ಒಳಗಾಗಿದ್ದೀರಿ?

ನಾನು ಮೇಲೆ ಹೇಳಿದ ಸಂಗತಿಗಳೆಲ್ಲಾ ನಿಜವಾಗಿದ್ದರೆ, ನೀವು ಅದರ ಮುಕ್ತಾಯವನ್ನು ಒಪ್ಪಿಕೊಳ್ಳಲೇ ಬೇಕು. ನೀವು ನಿಮ್ಮ ಬಲವೊಂದರ ಮೇಲೆ ಮಾತ್ರ ನಂಬಿಕೊಂಡಿದ್ದರೆ, ಎಂದೆಂದಿಗೂ ದಬ್ಬಾಳಿಕೆಯನ್ನು ನೀವು ಎದುರಿಸಲಾರಿರಿ ಎಂಬುದೇ ಆ ಮುಕ್ತಾಯ. ನೀವು ದಬ್ಬಾಳಿಕೆಗೆ ಒಳಪಟ್ಟಿದ್ದೀರಿ ಎಂಬುದು ಸಂಶಯಾತೀತ. ಕಾರಣ ನಿಮ್ಮಲ್ಲಿ ಬಲವೇ ಇಲ್ಲ. ನೀವು ಮಾತ್ರ ಒಬ್ಬರೇ ಅಲ್ಪಸಂಖ್ಯಾತರಾಗಿಲ್ಲ. ಮುಸ್ಲಿಮರು ಕೂಡಾ ಸಂಖ್ಯೆಯಲ್ಲಿ ಕಡಿಮೆ ಇದ್ದಾರೆ. ಮಹರ್-ಮಾಂಗುಗಳ ಹಾಗೇ ಹಳ್ಳಿಗಳಲ್ಲಿ ಮುಸ್ಲೀಮರಿಗೂ ಸಹ ಕೆಲವೇ ಮನೆಗಳಿವೆ. ಆದರೆ ಮುಸ್ಲಿಮರನ್ನು ಎದುರು ಹಾಕಿಕೊಳ್ಳಲು ಯಾರಿಗೂ ಧೈರ್ಯವಿಲ್ಲ. ಆದರೆ ನೀವು ಮಾತ್ರ ಭಯಾನಕ ಸರ್ವಾಧಿಕಾರಕ್ಕೆ ಬಲಿಯಾಗಿದ್ದೀರ, ಇದು ಹೀಗೇಕೆ ಆಯಿತು? ಹಳ್ಳಿಯಲ್ಲಿ ಮುಸ್ಲಿಮರದ್ದು ಎರಡೇ ಮನೆಗಳಿದ್ದರೂ ಅವರ ತಂಟೆಗೆ ಹೋಗಲು ಯಾರಿಗೂ ಧೈರ್ಯವಿಲ್ಲ; ಆದರೆ ನಿಮ್ಮದು ಹತ್ತು ಮನೆಗಳಿದ್ದರೂ ಸಹ, ಇಡೀ ಹಳ್ಳಿಜನ ನಿಮ್ಮ ಮೇಲೆ ಸರ್ವಾಧಿಕಾರ ಚಲಾಯಿಸುತ್ತಾರೆ. ಇದು ಏಕೆ ಹೀಗೆ ಆಗುತ್ತಿದೆ? ಇದೊಂದು ಶಾಶ್ವತವಾದ ಪ್ರಶ್ನೆಯಾಗಿದ್ದು, ನೀವು ಇದಕ್ಕೆ ಸೂಕ್ತವಾದ ಉತ್ತರವನ್ನು ಕಂಡುಕೊಳ್ಳಲೇಬೇಕು. ನನ್ನ ಅಭಿಪ್ರಾಯದಲ್ಲಿ ಈ ಪ್ರಶ್ನೆಗೆ ಒಂದೇ ಒಂದು ಉತ್ತರ ಇದೆ. ಭಾರತದಲ್ಲಿರುವ ಇಡೀ ಮುಸ್ಲಿಮ್ ಸಮುದಾಯ ಹಳ್ಳಿಯಲ್ಲಿರುವ ಎರಡು ಮುಸ್ಲಿಮ್ ಮನೆಗಳ ಹಿಂದೆ ಇದೆ ಎಂದು ಹಿಂದೂಗಳಿಗೆ ಗೊತ್ತು. ಹೀಗಾಗಿ, ಅವರನ್ನು ಮುಟ್ಟಲು ಹೆದರುತ್ತಾರೆ. ಆ ಎರಡೂ ಮುಸ್ಲಿಮ್ ಮನೆಗಳೂ ಸಹ, ಮುಕ್ತವಾದ ನಿರ್ಭಯವಾದ ಜೀವನವನ್ನು ಮಾಡುತ್ತಿದ್ದಾರೆ. ಕಾರಣ ಹಿಂದೂಗಳು ಅವರ ಮೇಲೆ ದುರಾಕ್ರಮಣ ಮಾಡಿದರೆ, ಪಂಜಾಬಿನಿಂದ ಮದರಾಸಿನವರೆಗೆ ಇರುವ ಇಡೀ ಮುಸ್ಲಿಮ್ ಸಮುದಾಯ ಯಾವುದೇ ಸಂದರ್ಭದಲ್ಲಿ ಅವರ ರಕ್ಷಣೆಗೆ ಧಾವಿಸುತ್ತದೆ ಎಂದು ಆ ಎರಡು ಮನೆಯ ಮುಸ್ಲಿಮರಿಗೆ ಗೊತ್ತಿದೆ. ಇದಕ್ಕೆ ಬದಲಾಗಿ ಯಾರೂ ನಿಮ್ಮ ಸಹಾಯಕ್ಕೆ ಬರುವುದಿಲ್ಲವೆಂದು

ಹಿಂದೂಗಳಿಗೆ ಖಂಡಿತವಾಗಿ ಗೊತ್ತು. ಹಾಗೆಯೇ ಯಾವ ಆರ್ಥಿಕ ಸಹಾಯವೂ ನಿಮ್ಮತ್ತ ಬರುವುದಿಲ್ಲವೆಂದು ಅವರಿಗೆ ಗೊತ್ತು. ಕಡೆಯದಾಗಿ ಯಾವುದೇ ಅಧಿಕಾರಿಗಳೂ ಸಹ ನಿಮ್ಮ ಸಹಾಯಕ್ಕೆ ಬರುವುದಿಲ್ಲವೆಂಬುದೂ ಅವರಿಗೆ ಗೊತ್ತು. ತಹಶೀಲ್ದಾರ್ ಮತ್ತು ಪೊಲೀಸಿನವರು ಸವರ್ಣ ಹಿಂದೂ ಜಾತಿಗಳಿಗೆ ಸೇರಿದವರಾಗಿದ್ದು, ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ವ್ಯಾಜ್ಯ ಉಂಟಾದರೆ ಅವರು ಅವರ ಕರ್ತವ್ಯಕ್ಕೆ ನಿಷ್ಠೆತೋರದೆ ತಮ್ಮ ಜಾತಿಗೆ ನಿಷ್ಠೆ ತೋರುತ್ತಾರೆ. ನೀವು ನಿಸ್ಸಹಾಯಕರಾಗಿರುವುದರಿಂದಲೇ ಹಿಂದುಗಳು ನಿಮಗೆ ಅನ್ಯಾಯ ಮಾಡುತ್ತಾರೆ. ಸರ್ವಾಧಿಕಾರ ಚಲಾಯಿಸುತ್ತಾರೆ. ಈ ಚರ್ಚೆಯಿಂದ ಎರಡು ಸಂಗತಿಗಳು ವೇದ್ಯವಾಗುತ್ತವೆ. ಮೊದಲನೆಯದಾಗಿ, ಬಲವಿಲ್ಲದೇ ನೀವು ಸರ್ವಾಧಿಕಾರವನ್ನು ಎದುರಿಸಲಾಗುವುದಿಲ್ಲ. ಎರಡನೇಯದಾಗಿ, ಸರ್ವಾಧಿಕಾರವನ್ನು ಎದುರಿಸುವುದಕ್ಕೆ ಬೇಕಾದಷ್ಟು ಬಲ ನಿಮ್ಮಲ್ಲಿ ಇಲ್ಲ. ಈ ಎರಡೂ ಸಂಗತಿಗಳನ್ನು ನಾನು ಸತ್ಯವೆಂದು ಶೃತಪಡಿಸಿದ ಮೇಲೆ ಮೂರನೆಯದು ತನಗೆ ತಾನೇ ಸತ್ಯವೆಂದಾಗಿ ಬಿಡುತ್ತದೆ. ಅದೇನೆಂದರೆ, ಸರ್ವಾಧಿಕಾರವನ್ನು ಎದುರಿಸುವ ಬಲವನ್ನು ನೀವು ಹೊರಗಡೆಯಿಂದ ಪಡೆದುಕೊಳ್ಳಬೇಕಾಗುತ್ತದೆ. ನೀವು ಈ ಬಲವನ್ನು ಹೇಗೆ ಪಡೆದುಕೊಳ್ಳಲಾಗುತ್ತದೆ ಎಂಬುದೇ ನಿಜವಾದ ಪ್ರಶ್ನೆ. ನೀವು ಈ ಪ್ರಶ್ನೆಯ ಬಗ್ಗೆ ಚಿಂತನೆಯನ್ನು ಯಾವ ಪೂರ್ವಾಗ್ರಹವಿಲ್ಲದ ಮನಸ್ಸಿನಿಂದ ಮಾಡಬೇಕು.

## ಹೊರಗಡೆಯಿಂದ ಬಲವನ್ನು ತರಬೇಕಾದ ಆವಶ್ಯಕತೆ ಇದೆ

ನಾನು ಕಾಣುವ ಹಾಗೆ ಈ ದೇಶದಲ್ಲಿನ ಜಾತಿವಾದ ಮತ್ತು ಉಗ್ರವಾದ ಜನಗಳ ಮನಸ್ಸು ಮತ್ತು ನೈತಿಕತೆಯ ಮೇಲೆ ಬಹು ವಿಲಕ್ಷಣವಾದ ಪರಿಣಾಮವನ್ನು ಬೀರಿದೆ. ಈ ದೇಶದಲ್ಲಿ ಯಾರಿಗೂ ಸಹ ಜನಗಳ ಬಡತನ ಮತ್ತು ತೊಳಲಾಟದಿಂದ ನೋವುಂಟಾಗಿರುವ ಹಾಗೆ ಕಾಣುವುದಿಲ್ಲ. ಒಂದು ವೇಳೆ ಯಾರಿಗಾದರೂ ನೋವುಂಟಾಗಿದ್ದರೂ ಸಹ ಅದನ್ನು ಅಳಿಸಿಹಾಕಲು ಅವರು ಪ್ರಯತ್ನಪಡುವುದಿಲ್ಲ. ಜನಗಳು ಬಡತನ, ದುಃಖ ಮತ್ತು ತೊಳಲಾಟದಲ್ಲಿರುವವರ ಸಹಾಯಕ್ಕೆ ಬರುತ್ತಾರೆ ನಿಜ, ಆದರೆ ಅದು ಅವರವರ ಜಾತಿಗಳು ಮತ್ತು ಧರ್ಮಗಳಿಗೆ ಸೀಮಿತವಾಗಿರುತ್ತದೆ. ಇದು ಒಂದು ವಿಕೃತ ಮನಸ್ಸಿನ ನೈತಿಕತೆಯಾದರೂ ಈ ದೇಶದಲ್ಲಿ ಇದೇ ಪ್ರಚಲಿತವಾಗಿದೆಯೆಂಬುದನ್ನು ಮರೆಯಲಾಗುವುದಿಲ್ಲ. ಹಳ್ಳಿಗಳಲ್ಲಿ ಅಸ್ಪೃಶ್ಯರ ಹಿಂದೂಗಳ ಕೈಗಳಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಾರೆ ಎಂದ ಮಾತ್ರಕ್ಕೆ, ಇಂಥ ಧರ್ಮಗಳಿಗೆ ಸೇರಿದ ಜನಗಳು ಇಲ್ಲವೆಂದೂ, ಅಸ್ಪೃಶ್ಯರನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿರುವುದು ಅವರಿಗೆ ಮನವರಿಕೆ ಆಗಿಲ್ಲವೆಂದೂ, ಅನ್ಯಾಯವೆಂದು ಅವರಿಗೆ ತಿಳಿದಿಲ್ಲವೆಂದೂ ಅಥವಾ ಹಿಂದೂಗಳಿಂದ ಅಸ್ಪೃಶ್ಯರ ದಬ್ಬಾಳಿಕೆ ನಡೆಯುತ್ತಿರುವುದು ಅನ್ಯಾಯವೆಂದು ಗೊತ್ತಿದ್ದೂ ಅವರು ಅಸ್ಪೃಶ್ಯರ ರಕ್ಷಣೆಗೆ ಬರುವುದಿಲ್ಲವೆಂದೂ ಅರ್ಥವಲ್ಲ. ಇದರ ಹಿಂದಿರುವ ಕಾರಣವೇನು? ನಿಮಗೆ ಏಕೆ ಸಹಾಯ ಮಾಡುತ್ತಿಲ್ಲವೆಂದು ಅವರನ್ನು ಕೇಳಿದರೆ, ನಿಮ್ಮ-ನಿಮ್ಮ ಜಗಳದಲ್ಲಿ ಮಧ್ಯಪ್ರವೇಶ ಮಾಡುವುದು ನಮಗೆ ಸಂಬಂಧಿಸಿದ್ದಲ್ಲವೆಂದೂ, ನೀವು ಅವರ ಧರ್ಮಕ್ಕೆ ಸೇರಿದವರಾಗಿದ್ದರೆ, ಅವರು ನಿಮಗೆ ಸಹಾಯ ಮಾಡುತ್ತಿದ್ದೇವೆಂದೂ ಹೇಳುತ್ತಾರೆ. ಇದರಿಂದ ನಿಮಗೆ ಮನವರಿಕೆಯಾಗಬೇಕಾಗಿರುವುದೇನೆಂದರೆ, ಬೇರೊಂದು ಸಮಾಜದೊಂದಿಗೆ ನೀವು ಹತ್ತಿರವಾದ ಸಂಬಂಧಗಳನ್ನು ಬೆಳೆಸಿಕೊಳ್ಳದಿದ್ದರೆ, ನೀವು ಇನ್ನೊಂದು ಧರ್ಮಕ್ಕೆ ಸೇರದಿದ್ದರೆ, ನಿಮಗೆ ಹೊರಗಡೆಯ ಬಲ ಸಿಕ್ಕುವುದಿಲ್ಲ. ಆದ್ದರಿಂದ ನಿಮ್ಮ ಈಗಿನ ಧರ್ಮವನ್ನು ತ್ಯಜಿಸಿ, ಇನ್ನೊಂದು ಸಮಾಜದೊಂದಿಗೆ ನಿಮ್ಮನ್ನು ನೀವು ಒಂದಾಗಿ ಬೆರೆತುಕೊಳ್ಳದಿದ್ದರೆ, ಆ ಸಮಾಜದ ಬಲ ನಿಮಗೆ ಸಿಗುವುದಿಲ್ಲವೆಂದು ಸ್ಪಷ್ಟವಾಗಿ ಅರ್ಥವಾಗುತ್ತಾ ಇದೆ. ಎಲ್ಲಿಯವರೆಗೆ ನಿಮಗೆ ಬಲವಿರುವುದಿಲ್ಲವೋ

ಅಲ್ಲಿಯವರೆಗೂ ನೀವು ಮತ್ತು ನಿಮ್ಮ ಮುಂದಿನ ಪೀಳಿಗೆ ಇದೇ ಕರುಣಾಜನಕ ಸ್ಥಿತಿಯಲ್ಲಿ ನಿಮ್ಮ ಜೀವನವನ್ನು ಸವೆಸಬೇಕಾಗುತ್ತದೆ.

## ಮತಾಂತರದ ಆಧ್ಯಾತ್ಮಿಕ ಮುಖಗಳು

ಇಲ್ಲಿಯವರೆಗೆ ಪ್ರಾಪಂಚಿಕ ಒಳಿತಿಗಾಗಿ ಮತಾಂತರ ಏಕೆ ಅವಶ್ಯಕವೆಂದು ಚರ್ಚಿಸಿದೆವು. ಈಗ ನಾನು ಆಧ್ಯಾತ್ಮಿಕ ಒಳಿತಿಗಾಗಿ ಮತಾಂತರ ಬಹಳ ಅವಶ್ಯಕವೆಂಬುದರ ಕುರಿತು ನನ್ನ ಆಲೋಚನೆಯನ್ನು ಹರಿಸುತ್ತೇನೆ. ಧರ್ಮ ಇರುವುದು ಏತಕ್ಕೆ? ಅದರ ಅವಶ್ಯಕತೆ ಏತಕ್ಕೆ ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಡೋಣ. ಅನೇಕರು ಧರ್ಮವನ್ನು ಕುರಿತು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಆದರೆ ಈ ಎಲ್ಲಾ ವಿವರಣೆಗಳ ಮಧ್ಯೆ ಒಂದು ಮಾತ್ರ ಎಲ್ಲಕ್ಕಿಂತ ಅರ್ಥಪೂರ್ಣವಾಗಿದ್ದು, ಎಲ್ಲರಿಗೂ ಒಪ್ಪಿಗೆಯಾಗಿದೆ. ಯಾವುದು ಜನರನ್ನು ಪಾಲಿಸುತ್ತದೆಯೋ ಅದೇ ಧರ್ಮ. ಅದೇ ಧರ್ಮದ ನಿಜವಾದ ವ್ಯಾಖ್ಯಾನ. ಇದು ನನ್ನ ವ್ಯಾಖ್ಯಾನವಲ್ಲ. ಸನಾತನ ಹಿಂದೂಗಳು ಮುಂಚೂಣಿಯಲ್ಲಿರುವ ಮುಖಂಡರುಗಳಾಗಿದ್ದು ಈ ವ್ಯಾಖ್ಯಾನದ ಕರ್ತೃವಾಗಿದ್ದಾರೆ. ಆದ್ದರಿಂದ ಯಾರೂ ನನ್ನನ್ನು ಧರ್ಮದ ವ್ಯಾಖ್ಯಾನವನ್ನು ಮಧ್ಯೆ ಸೇರಿಸಿದ್ದೇನೆಂದು ಆಪಾದನೆ ಮಾಡುವ ಹಾಗಿಲ್ಲ. ನಾನು ಅದನ್ನು ವ್ಯಾಖ್ಯಾನಿಸಿಲ್ಲದಿದ್ದರೂ, ಅದನ್ನು ಕೇವಲ ವಾದ ಮಂಡಿಸುವುದಕ್ಕೋಸ್ಕರ ಮಾತ್ರ ಒಪ್ಪಿಕೊಳ್ಳುತ್ತೇನೆ. ನನಗೂ ಸಹ ಧರ್ಮದ ಬಗ್ಗೆ ಅದೇ ಪರಿಕಲ್ಪನೆ ಇದೆ. ಈ ವ್ಯಾಖ್ಯಾನ ವಾಸ್ತವವಾಗಿ ಹಾಗೂ ತಾರ್ಕಿಕವಾಗಿ ಸರಿಯೆಂದು ತೋರಿದರೂ ಸಮಾಜವನ್ನು ಪಾಲಿಸುವ ನಿಯಮಗಳ ಸ್ವಭಾವವನ್ನು ಶ್ರುತಪಡಿಸುವುದಾಗಲೀ ಮಾಡುವುದಿಲ್ಲ. ಸಮಾಜವನ್ನು ಪಾಲಿಸುವ ನಿಮಯಮಗಳ ಸ್ವಭಾವ ಏನೆಂಬ ಪ್ರಶ್ನೆ ಇನ್ನೂ ಉಳಿದುಕೊಳ್ಳುತ್ತದೆ. ಈ ಪ್ರಶ್ನೆ ವ್ಯಾಖ್ಯಾನಕ್ಕಿಂತ ಹೆಚ್ಚು ಪ್ರಮುಖವಾಗಿದೆ. ಏಕೆಂದರೆ ಯಾವುದು ಧರ್ಮ ಯಾವುದು ಧರ್ಮವಲ್ಲ ಅನ್ನುವುದು ವ್ಯಾಖ್ಯಾನದ ಮೇಲೆ ಅವಲಂಬಿತವಾಗಿಲ್ಲ. ಆದರೆ ಸಮಾಜವನ್ನು ಒಂದು ಕಟ್ಟುಪಾಡುಗಳಿಗೆ ಒಳಪಡಿಸಿ ಪಾಲಿಸುವ ನಿಯಮಗಳ ಪ್ರೇರಣೆ ಮತ್ತು ಸ್ವಭಾವದ ಮೇಲೆ ಅವಲಂಬಿತವಾಗಿದೆ. ನೈಜ ಧರ್ಮದ ಸ್ವಭಾವ ಹೇಗಿರಬೇಕು? ಈ ಪ್ರಶ್ನೆಯನ್ನು ತೀರ್ಮಾನಿಸುವಲ್ಲಿ ಇನ್ನೊಂದು ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ಮನುಷ್ಯ ಮತ್ತು ಸಮಾಜದ ನಡುವಿನ ಸಂಬಂಧ ಹೇಗಿರಬೇಕು ಎಂದು ಆಧುನಿಕ ಸಾಮಾಜಿಕ ತತ್ವಶಾಸ್ತ್ರಜ್ಞರು ಈ ಪ್ರಶ್ನೆಗಳಿಗೆ ಮೂರು ಉತ್ತರಗಳನ್ನು ತರ್ಕಿಸಲು ಇಟ್ಟುಕೊಂಡಿದ್ದಾರೆ. ವ್ಯಕ್ತಿಯೊಬ್ಬನು ಸುಖಸಂತೋಷವನ್ನು ಪಡೆದುಕೊಳ್ಳುವುದೇ ಸಮಾಜದ ಕಟ್ಟಕಡೆಯ ಗುರಿ ಎಂದು ಕೆಲವರು ಹೇಳುತ್ತಾರೆ. ಮಾನವನ ಅಂತರ್ನಿಹಿತ ಗುಣಗಳನ್ನು ಮತ್ತು ಚೈತನ್ಯಗಳನ್ನು ಅಭಿವೃದ್ಧಿಪಡಿಸಿ, ತನ್ನನ್ನು ತಾನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಲೆಂದೇ ಸಮಾಜ ಅಸ್ತಿತ್ವದಲ್ಲಿದೆ ಎಂದು ಕೆಲವರು ಹೇಳುತ್ತಾರೆ. ಹೇಗಾದರೂ ಸಾಮಾಜಿಕ ಸಂಸ್ಥೆಯ ಮುಖ್ಯೋದ್ದೇಶ ವ್ಯಕ್ತಿಯೊಬ್ಬನ ಅಭಿವೃದ್ಧಿ ಅಥವಾ ಸುಖಶಾಂತಿಯಿಲ್ಲ. ಆದರೆ ಆದರ್ಶ ಸಮಾಜದ ಸೃಷ್ಟಿ ಎಂದು ಇನ್ನೂ ಕೆಲವರು ಪ್ರತಿಪಾದಿಸುತ್ತಾರೆ. ಹಿಂದೂ ಧರ್ಮದ ಪರಿಕಲ್ಪನೆ ಮಾತ್ರ ಈ ಎಲ್ಲಾ ಪರಿಕಲ್ಪನೆಗಳಿಗಿಂತ ಭಿನ್ನವಾಗಿದೆ. ಹಿಂದೂ ಧರ್ಮದಲ್ಲಿ ವ್ಯಕ್ತಿಯೊಬ್ಬನಿಗೆ ಸ್ಥಳವಿಲ್ಲ. ಹಿಂದೂ ಧರ್ಮವನ್ನು ವರ್ಗಕಲ್ಪನೆಯ ಮೇಲೆ ರಚನೆ ಮಾಡಲಾಗಿದೆ. ಹಿಂದೂ ಧರ್ಮ ವ್ಯಕ್ತಿಯೊಬ್ಬ ಇನ್ನೊಬ್ಬ ವ್ಯಕ್ತಿಯೊಡನೆ ಹೇಗೆ ನಡೆದುಕೊಳ್ಳಬೇಕೆಂದು ಕಲಿಸುವುದಿಲ್ಲ. ವ್ಯಕ್ತಿಯನ್ನು ಮಾನ್ಯತೆ ಮಾಡದ ಧರ್ಮ ನನಗೆ ಒಪ್ಪಿಗೆಯಿಲ್ಲ. ವ್ಯಕ್ತಿಯೊಬ್ಬನಿಗೆ ಸಮಾಜದ ಅವಶ್ಯಕತೆ ಇದ್ದಾಗ್ಯೂ, ಧರ್ಮದ ಗುರಿ ಕೇವಲ ಸಾಮಾಜಿಕ ಕಲ್ಯಾಣವಾಗಲು ಸಾಧ್ಯವಿಲ್ಲ. ನನ್ನ ಪ್ರಕಾರ ವ್ಯಕ್ತಿಯೊಬ್ಬನ ಕಲ್ಯಾಣ ಮತ್ತು ಪುರೋಭಿವೃದ್ಧಿ

ಧರ್ಮದ ನೈಜಗುರಿಯಾಗಿರಬೇಕು. ವ್ಯಕ್ತಿಯೊಬ್ಬ ಸಮಾಜದ ಒಂದು ಭಾಗವಾದರೂ ಸಹ, ಸಮಾಜದೊಂದಿಗಿನ ಸಂಬಂಧ ದೇಹ ಮತ್ತು ಅಂಗಗಳು ಅಥವಾ ಬಂಡಿ ಮತ್ತು ಅದರ ಚಕ್ರಗಳ ಸಂಬಂಧದಂತಲ್ಲ.

### ಸಮಾಜ ಮತ್ತು ವ್ಯಕ್ತಿ

ಸಮುದ್ರದಲ್ಲಿ ಬೀಳುವ ನೀರಿನ ಹನಿಯೊಂದು ಹೇಗೆ ತನ್ನ ಅಸ್ತಿತ್ವವನ್ನು ಕಳೆದುಕೊಂಡುಬಿಡುತ್ತದೆಯೋ ಹಾಗೆ ಮನುಷ್ಯ ತಾನು ವಾಸಿಸುವ ಸಮಾಜದಲ್ಲಿ ತನ್ನತನವನ್ನು ಕಳೆದುಕೊಳ್ಳುವುದಿಲ್ಲ. ಮನುಷ್ಯನ ಜೀವನ ಸ್ವತಂತ್ರವಾದುದು. ಅವನು ಸಮಾಜದ ಸೇವೆಗೆ ಎಂದು ಜನ್ಮ ತಾಳಿಲ್ಲ. ತನ್ನ ಬೆಳವಣಿಗೆಗಾಗಿ ಹುಟ್ಟಿದ್ದಾನೆ. ಈ ಒಂದೇ ಕಾರಣಕ್ಕಾಗಿ ಅಭಿವೃದ್ಧಿ ಹೊಂದಿ ದೇಶಗಳಲ್ಲಿ ಒಬ್ಬ ಮನುಷ್ಯ ಇನ್ನೊಬ್ಬನನ್ನು ಅಡಿಯಾಳಾಗಿ ಮಾಡಿಕೊಳ್ಳಲಾರ. ಯಾವ ಧರ್ಮದಲ್ಲಿ ವ್ಯಕ್ತಿಯೊಬ್ಬನಿಗೆ ಪ್ರಾಮುಖ್ಯತೆ ಇಲ್ಲವೋ ಅದು ನನಗೆ ಒಪ್ಪಿಗೆಯಿಲ್ಲ. ಹಿಂದುತ್ವವು ವ್ಯಕ್ತಿಯೊಬ್ಬನ ಪ್ರಾಮುಖ್ಯತೆಯನ್ನು ಮಾನ್ಯ ಮಾಡುವುದಿಲ್ಲ. ಆದ್ದರಿಂದ ಅದು ನನಗೆ ಒಪ್ಪಿಗೆಯಿಲ್ಲ. ಯಾವ ಧರ್ಮದಲ್ಲಿ ಒಂದು ವರ್ಗಕ್ಕೆ ಮಾತ್ರ ಜ್ಞಾನಾರ್ಜನೆಗೆ ಹಕ್ಕಿದೆಯೋ, ಇನ್ನೊಂದಕ್ಕೆ ಮಾತ್ರ ಆಯುಧ ಧರಿಸುವುದಕ್ಕೆ ಹಕ್ಕಿದೆಯೋ, ಮೂರನೆಯದಕ್ಕೆ ವ್ಯಾಪಾರದಲ್ಲಿ, ನಾಲ್ಕನೆಯದಕ್ಕೆ ಸೇವೆಗೆ ಮಾತ್ರ ಹಕ್ಕಿದೆಯೋ, ಆ ಧರ್ಮವನ್ನು ನಾನು ಒಪ್ಪುವುದಿಲ್ಲ. ಪ್ರತಿಯೊಬ್ಬರಿಗೂ ಜ್ಞಾನ ಬೇಕಾಗಿದೆ. ಎಲ್ಲರಿಗೂ ಆಯುಧಗಳು ಬೇಕು. ಎಲ್ಲರಿಗೂ ಧನದ ಅವಶ್ಯಕತೆ ಇದೆ. ಯಾವ ಧರ್ಮ ಇದನ್ನು ಮರೆತು ಬಿಡುತ್ತದೆಯೋ, ಕೆಲವರನ್ನು ಮಾತ್ರ ಜ್ಞಾನಿಗಳನ್ನು ಮಾಡುವ ಉದ್ದೇಶದಿಂದ ಇತರರನ್ನು ಕತ್ತಲಲ್ಲಿ ಇಡುವ ಧರ್ಮ– ಧರ್ಮವಲ್ಲ; ಅದು ಜನರನ್ನು ಮಾನಸಿಕವಾಗಿ ಗುಲಾಮಗಿರಿಯಲ್ಲಿಡುವ ಒಂದು ಸಂಚು. ಯಾವ ಧರ್ಮ ಒಬ್ಬನಿಗೆ ಮಾತ್ರ ಆಯುಧ ಧಾರಣೆಗೆ ಅನುಮತಿಸುತ್ತದೆಯೋ, ಇನ್ನೊಬ್ಬನನ್ನು ನಿಷೇಧಿಸುತ್ತದೆಯೋ, ಅದು ಧರ್ಮವಲ್ಲ. ಅದು ಇನ್ನೊಬ್ಬನನ್ನು ನಿರಂತರ ಗುಲಾಮಗಿರಿಯಲ್ಲಿಡುವ ತಂತ್ರವಷ್ಟೆ. ಯಾವ ಧರ್ಮ ಕೆಲವರಿಗೆ ಮಾತ್ರ ಆಸ್ತಿಯನ್ನು ಪಡೆದುಕೊಳ್ಳುವ ಮಾರ್ಗವನ್ನು ತೆರೆದು, ಇನ್ನೊಬ್ಬನನ್ನು ತನ್ನ ದೈನಂದಿನ ಅವಶ್ಯಕತೆಗೂ ಆ ಕೆಲವರ ಮೇಲೆ ಅವಲಂಬಿಸುವ ಹಾಗೆ ಒತ್ತಾಯಿಸುತ್ತದೆಯೋ, ಅದು ಧರ್ಮವಲ್ಲ. ಆದರೆ ಅದು ತಮ್ಮನ್ನು ತಾವು ಅತಿ ವಿಸ್ತರಗೊಳಿಸಿಕೊಳ್ಳುವ ವಿಧಾನವಷ್ಟೆ. ಇದನ್ನೇ ಹಿಂದೂ ಧರ್ಮದಲ್ಲಿ ಚಾತುರ್ ವರ್ಣ ಎಂದು ಕರೆಯಲಾಗುತ್ತಿದೆ. ಅದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನೀವೀಗ ಹಿಂದುತ್ವ ನಿಮಗೆ ಉಪಯೋಗಿಯೇ ಅಲ್ಲವೇ ಎಂಬುದನ್ನು ಕುರಿತು ಆಲೋಚಿಸಬೇಕಾಗಿದೆ. ಯಾವನೇ ಒಬ್ಬ ವ್ಯಕ್ತಿಯ ಅಧ್ಯಾತ್ಮಿಕ ಬೆಳವಣಿಗೆಗೆ ಪರಿಸರವನ್ನು ಸೃಷ್ಟಿ ಮಾಡಿಕೊಳ್ಳುವುದೇ ಒಂದು ಧರ್ಮದಲ್ಲಿನ ಮೂಲಭೂತ ಚಿಂತನೆ. ಇದನ್ನು ಒಪ್ಪಿಕೊಂಡರೆ ಹಿಂದುತ್ವದಲ್ಲಿ ನೀವು ಬೆಳವಣಿಗೆಯಾಗುವುದಕ್ಕೆ ಆಗುವುದೇ ಇಲ್ಲವೆಂದು ಸ್ಪಷ್ಟವಾಗುತ್ತದೆ. ವ್ಯಕ್ತಿಯೊಬ್ಬನನ್ನು ಮೇಲೆತ್ತಬೇಕಾದರೆ ಮೂರು ಅಂಶಗಳು ಬೇಕಾಗುತ್ತವೆ. ಅವೆಂದರೆ ಅನುಕಂಪ, ಸಮಾನತೆ ಮತ್ತು ಸ್ವಾತಂತ್ರ್ಯ. ಈ ಯಾವುದೇ ಅಂಶಗಳು ಹಿಂದುತ್ವದಲ್ಲಿ ಇದೆಯೆಂದು ನಿಮ್ಮ ಅನುಭವನಕ್ಕೆ ಬಂದಿದೆಯೇ?

### ಹಿಂದುತ್ವದಲ್ಲಿ ನಿಮ್ಮ ಬಗ್ಗೆ ಏನಾದರೂ ಅನುಕಂಪವಿದೆಯೇ?

ಅನುಕಂಪವನ್ನು ತೆಗೆದುಕೊಂಡರೆ, ಅದು ಅಸ್ತಿತ್ವದಲ್ಲೇ ಇಲ್ಲ. ನೀವೆಲ್ಲಿಗೆ ಹೋದರೂ ಯಾರು ನಿಮ್ಮನ್ನು ಅನುಕಂಪದಿಂದ ನೋಡುವುದಿಲ್ಲ. ನಿಮಗೆಲ್ಲ ಅದರ ಅನುಭವ ಚೆನ್ನಾಗಿ ಆಗಿದೆ. ಹಿಂದುಗಳಿಗೆ

ನಿಮ್ಮ ಬಗ್ಗೆ ಭ್ರಾತೃತ್ವದ ಪ್ರಜ್ಞೆಯೇ ಇಲ್ಲ. ನಿಮ್ಮನ್ನು ವಿದೇಶಿಯರಿಗಿಂತ ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ. ಗ್ರಾಮವೊಂದರಲ್ಲಿ ಹಿಂದೂಗಳ ಮತ್ತು ಅಸ್ಪೃಶ್ಯರ ಸಂಬಂಧಗಳತ್ತ ನೋಡಿದರೆ, ಯಾರೂ ಅವರನ್ನು ಸಹೋದರರೆಂದು ಕರೆಯಲು ಸಾಧ್ಯವಿಲ್ಲ. ಅದರ ಬದಲು ಸಮರ ಪಾಳೆಯದಲ್ಲಿನ ಎರಡೂ ವಿರೋಧಿ ಸೈನ್ಯ ಗಳೆಂದು ಹೇಳಬಹುದು. ಹಿಂದೂಗಳಿಗೆ ಮುಸ್ಲಿಮರ ಬಗ್ಗೆ ಇರುವ ಸಾಮೀಪ್ಯತನ ನಿಮ್ಮ ಬಗ್ಗೆ ಲವಲೇಶವೂ ಇಲ್ಲ. ಮುಸ್ಲಿಮರು ನಿಮಗಿಂತ ಹತ್ತಿರದವರೆಂದು ಪರಿಗಣಿಸಲ್ಪಡುತ್ತಾರೆ. ಹಿಂದೂಗಳು ಮತ್ತು ಮುಸ್ಲಿಮರು ಸ್ಥಳೀಯ ಮಂಡಲಿಗಳಲ್ಲಿ ವಿಧಾನ ಪರಿಷತ್ತುಗಳಲ್ಲಿ, ವ್ಯಾಪಾರದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಅದರೆ ಸವರ್ಣೀಯ ಹಿಂದೂಗಳು ನಿಮ್ಮ ಕಡೆಗೆ ತೋರಿದ ಒಂದೇ ಒಂದು ಅನುಕಂಪದ ವರ್ತನೆ ಕಾಣಸಿಗುತ್ತದೆಯೇ? ಅದರ ಬದಲು ಅವರು ನಿಮ್ಮ ಬಗ್ಗೆ ಯಾವಾಗಲೂ ದ್ವೇಷವನ್ನೇ ಬೆಳೆಸಿಕೊಳ್ಳುತ್ತಾರೆ. ಈ ದ್ವೇಷ ಎಂಥ ಭಯಾನಕ ಪರಿಣಾಮಗಳನ್ನು ಉಂಟು ಮಾಡಿದೆಯೆಂಬುದು ನ್ಯಾಯಾಲಯಕ್ಕೆ ನ್ಯಾಯಕ್ಕಾಗಿ ಹೋಗುವ ಸಂದರ್ಭ ಒದಗಿ ಬಂದವರಿಂದ ಅಥವಾ ಸಹಾಯಕ್ಕಾಗಿ ಪೊಲೀಸಿನವರ ಕಡೆಗೆ ಹೋದವರಿಂದ ನೀವು ತಿಳಿಯಬಹುದು. ನ್ಯಾಯಾಲಯ ನಿಮಗೆ ನ್ಯಾಯ ಕೊಡುತ್ತದೆಯೆಂದು ಅಥವಾ ಪೊಲೀಸಿನವರು ಸರಿಯಾಗಿ ವರ್ತಿಸುತ್ತಾರೆಂದು ನಿಮ್ಮಲ್ಲಿ ಯಾರಾದರೂ ನಂಬುತ್ತೀರೇನು? ಹಾಗಲ್ಲದಿದ್ದರೆ, ನಿಮ್ಮ ವಿರುದ್ಧ ಇಂಥ ದ್ವೇಷ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದಕ್ಕೆ ಕಾರಣವೇನು? ನನ್ನ ಅಭಿಪ್ರಾಯದಲ್ಲಿ ಇಂಥ ನಂಬಿಕೆ ಬಾರದಿದ್ದರೆ ಅದಕ್ಕೆ ಒಂದೇ ಒಂದು ಕಾರಣವಿದೆ. ಹಿಂದೂಗಳು ತಮ್ಮ ಅಧಿಕಾರವನ್ನು ಸರಿಯಾಗಿ ಬಳಸುವುದಿಲ್ಲವೆಂದು. ಅದಕ್ಕೆ ಕಾರಣ ಅವರಿಗೆ ನಿಮ್ಮ ಮೇಲೆ ಅನುಕಂಪವಿಲ್ಲವೆಂದು ನೀವು ನಂಬುತ್ತೀರಿ. ಅದು ಹಾಗಿದ್ದರೆ, ಇಂಥ ದ್ವೇಷದ ಮಧ್ಯೆ ಬದುಕಿಕೊಂಡು ಇರುವ ಉಪಯೋಗವಾದರೂ ಏನು?

### ಹಿಂದುತ್ವದಲ್ಲಿ ನಿಮಗೆ ಸಮಾನತೆ ಇದೆಯೆ?

ವಾಸ್ತವದಲ್ಲಿ ಈ ಪ್ರಶ್ನೆಯನ್ನು ಕೇಳಲೇಬಾರದು. ಅಸ್ಪೃಶ್ಯತೆಯೇ ಒಂದು ಅಸಮಾನತೆಯ ಬಂಡೆ. ಅಸಮಾನತೆಯ ಜೀವಂತ ಉದಾಹರಣೆ ಇಂಥದು ಇನ್ನೆಲ್ಲೂ ಕಾಣಸಿಗುವುದಿಲ್ಲ. ಪ್ರಪಂಚದ ಚರಿತ್ರೆಯಲ್ಲಿ ಯಾವುದೇ ಕಾಲದಲ್ಲಿ ಅಸ್ಪೃಶ್ಯತೆಗಿಂತ ತೀವ್ರತರವಾದ ಇಂಥ ಅಸಮಾನತೆಯನ್ನು ನಾವು ಕಾಣಲಾರೆವು. ಈ ಮೇಲರಿಮೆ–ಕೀಳರಿಮೆ ಎಂಬ ಮನೋಪ್ರವೃತ್ತಿಯಿಂದಾಗಿ ತಂದೆಯೊಬ್ಬ ತನ್ನ ಮಗಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಕೊಡಲಾಗುವುದಿಲ್ಲ. ಅಥವಾ ಇನ್ನೊಬ್ಬರ ಜೊತೆ ಊಟ ಮಾಡಲಾಗುವುದಿಲ್ಲ. ಅಸಮಾನತೆಯ ಇಂಥ ಉದಾಹರಣೆಗಳು ಮಾಮೂಲಿ. ಆದರೆ ಪ್ರಪಂಚದಲ್ಲಿ ಎಲ್ಲಿಯೇ ಆಗಲಿ ಹಿಂದೂ ಧರ್ಮದಲ್ಲಿ ಇರುವಂತೆ, ಹಿಂದೂ ಸಮಾಜದಲ್ಲಿ ಇರುವಂತೆ ಮನುಷ್ಯನೊಬ್ಬ ಇನ್ನೊಬ್ಬನನ್ನು ಮುಟ್ಟಬಾರದೆನ್ನುವ ಮಟ್ಟಿಗೆ ಕೀಳಾಗಿ ಕಾಣುವಂಥದ್ದು ಎಲ್ಲಿಯಾದರೂ ಇದೆಯೆ? ಮನುಷ್ಯನೆಂಬ ಪ್ರಾಣಿ ಮುಟ್ಟಿದಾಕ್ಷಣ ಇನ್ನೊಬ್ಬ ಮನುಷ್ಯ ಅಶುದ್ಧನಾಗುತ್ತಾನೆಂದು, ನೀರು ಕಲುಷಿತವಾಗುತ್ತದೆಂದು, ದೇವರು ಪೂಜೆಗೆ ಅನರ್ಹನಾಗುತ್ತಾನೆಂದು ಯಾರಾದರೂ ನಂಬುತ್ತಾರೆಯೇ? ಅಸ್ಪೃಶ್ಯನನ್ನು ಮತ್ತು ಕುಷ್ಟರೋಗಿಯೊಬ್ಬನನ್ನು ನಡೆಸಿಕೊಳ್ಳುವ ರೀತಿಯಲ್ಲಿ ಏನಾದರೂ ವ್ಯತ್ಯಾಸವಿದೆಯೆ? ಕುಷ್ಟರೋಗಿಯನ್ನು ಕಂಡು ಜನಗಳು ಅಸಹ್ಯಪಟ್ಟುಕೊಂಡರೂ, ಕಡೆಯ ಪಕ್ಷ ಅವನ ಮೇಲೆ ಅನುಕಂಪವಿದೆ. ಆದರೆ ಜನಗಳಿಗೆ ನಿಮ್ಮ ಮೇಲೆ ಅಸಹ್ಯವಲ್ಲದೆ, ದ್ವೇಷವೂ ಇದೆ. ನಿಮ್ಮ ಪರಿಸ್ಥಿತಿ ಕುಷ್ಟರೋಗಿಯ ಪರಿಸ್ಥಿತಿಗಿಂತ ಕೆಟ್ಟದ್ದಾಗಿದೆ. ಈ ದಿನದಲ್ಲೂ ಕೂಡ, ಉಪವಾಸ, ವ್ರತ ಮಾಡುತ್ತಿದ್ದವನು ಉಪವಾಸವನ್ನು ಮುಗಿಸುವಾಗ ಮಹರ್ ಒಬ್ಬನ ಬಾಯಿಯಿಂದ

ಬರುವ ಮಾತುಗಳು ಕಿವಿಗೆ ಬಿದ್ದರೆ, ಅವನು ಆಹಾರವನ್ನು ಮುಟ್ಟುವುದಿಲ್ಲ. ನಿಮ್ಮ ದೇಹಗಳಿಗೆ ಮತ್ತು ನಿಮ್ಮ ಮಾತುಗಳಿಗೆ ಇಂಥ ಕೊಳಕನ್ನು ಮೆತ್ತಲಾಗಿದೆ. ಕೆಲವು ಮಂದಿ ಅಸ್ಪೃಶ್ಯತೆಯೆನ್ನುವುದು ಹಿಂದೂ ಧರ್ಮಕ್ಕೆ ಒಂದು ಕಳಂಕ ಎಂದು ಹೇಳುತ್ತಾರೆ. ಇಂಥ ಹೇಳಿಕೆಗೆ ಯಾವ ಅರ್ಥವೂ ಇಲ್ಲ. ಹಿಂದೂ ಧರ್ಮವೊಂದು ಕಳಂಕವೆಂದು ಯಾವ ಹಿಂದುವೂ ನಂಬುವುದಿಲ್ಲ. ಆದರೆ ಬಹುಸಂಖ್ಯಾತ ಹಿಂದೂಗಳು ನೀವೊಂದು ಕಳಂಕವೆಂದೂ, ನೀವು ಅಶುದ್ಧವೆಂದೂ ನಂಬುತ್ತಾರೆ. ಇಂಥದೊಂದು ಪರಿಸ್ಥಿತಿಗೆ ನಿಮ್ಮನ್ನು ತರಲಾಗಿದೆಯೇ? ನೀವು ಹಿಂದೂ ಆಗಿ ಮುಂದುವರೆದಿರುವುದರಿಂದಲೇ ನಿಮ್ಮನ್ನು ಈ ಪರಿಸ್ಥಿತಿಗೆ ತಳ್ಳಲಾಗಿದೆಯೆಂದು ನಾನು ಅಂದುಕೊಳ್ಳುತ್ತೇನೆ. ನಿಮ್ಮಲ್ಲಿ ಮುಸ್ಲಿಮರಾದವರನ್ನು ಹಿಂದೂಗಳು ಅಸ್ಪೃಶ್ಯರೆಂದಾಗಲೀ ಅಥವಾ ಸಮಾನರೆಂದಾಗಲೀ ನಡೆಸಿಕೊಳ್ಳುವುದಿಲ್ಲ. ನಿಮ್ಮಲ್ಲಿ ಕ್ರಿಶ್ಚಿಯನ್ ಆದವರನ್ನು ಅಸ್ಪೃಶ್ಯರೆಂದಾಗಲೀ ಅಸಮಾನರಾಗಿಯಾಗಲೀ ನಡೆಸಿಕೊಳ್ಳುತ್ತಿಲ್ಲ. ಟ್ರಾವಂಕೂರಿನಲ್ಲಿ ಇತ್ತೀಚೆಗೆ ನಡೆದ ಘಟನೆಯೊಂದು ಉಲ್ಲೇಖಾರ್ಹವಾಗಿದೆ. ಅಲ್ಲಿ ಧಿಯ್ಯಾ ಎಂದು ಕರೆಯಲಾಗುವ ಅಸ್ಪೃಶ್ಯರನ್ನು ರಸ್ತೆಗಳಲ್ಲಿ ನಡೆದಾಡದಂತೆ ನಿಷೇಧಿಸಲಾಗಿದೆ. ಸ್ವಲ್ಪ ದಿವಸಗಳ ಹಿಂದೆ ಈ ಅಸ್ಪೃಶ್ಯರಲ್ಲಿ ಕೆಲವರು ಸಿಖ್ ಧರ್ಮಕ್ಕೆ ಮತಾಂತರ ಹೊಂದಿದರು. ತತ್‌ಕ್ಷಣವೇ ಅವರು ಮೇಲೆ ರಸ್ತೆಗಳಲ್ಲಿ ನಡೆದಾಡಬಾರದೆಂಬ ನಿಷೇಧವನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಇದೆಲ್ಲದರಿಂದ ಸಿದ್ಧವಾಗುವುದೇನೆಂದರೆ, ನಿಮ್ಮನ್ನು ಅಸ್ಪೃಶ್ಯರೆಂದು ಮತ್ತು ಅಸಮಾನರೆಂದು ನಡೆಸಿಕೊಳ್ಳುತ್ತಿರುವುದಕ್ಕೆ ಕಾರಣವೆಂದರೆ, ಹಿಂದೂ ಧರ್ಮದೊಂದಿಗೆ ನಿಮಗೆ ಇರುವ ಸಂಬಂಧ. ಇಂಥ ಅಸಮಾನತೆಯ ಮತ್ತು ಅನ್ಯಾಯದ ಪರಿಸ್ಥಿತಿಯಲ್ಲಿ, ಕೆಲವು ಹಿಂದೂಗಳು ಅಸ್ಪೃಶ್ಯರನ್ನು ಸಾಂತ್ವನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಅವರು ಹೇಳುವುದು ಶಿಕ್ಷಣ ಪಡೆಯಿರಿ, ಶುಚಿಯಾಗಿರಿ, ಆಗ ನಾವು ನಿಮ್ಮನ್ನು ಮುಟ್ಟುತ್ತೇವೆ, ನಿಮ್ಮನ್ನು ಸಮಾನರಾಗಿ ನಡೆಸಿಕೊಳ್ಳುತ್ತೇವೆ ಎಂದು. ಆದರೆ ನಮಗೆ ನಮ್ಮ ಅನುಭವದಿಂದ ಗೊತ್ತಾಗಿರುವುದೇನೆಂದರೆ, ವಿದ್ಯಾವಂತ ಹಣವಂತ ಮತ್ತು ಶುಚಿಯಾಗಿದ್ದ ಮಹರ್‌ನ ಪರಿಸ್ಥಿತಿ, ಅವಿದ್ಯಾವಂತ ಬಡವ ಮತ್ತು ಕೊಳಕ ಮಹರ್‌ನ ಪರಿಸ್ಥಿತಿಯಷ್ಟೆ ಕೆಟ್ಟದಾಗಿದೆ ಎಂದು. ಮಹರ್ ಒಬ್ಬನನ್ನು ಅವನು ವಿದ್ಯಾವಂತನಾಗಿಲ್ಲದ ಕಾರಣ, ಬಡವನಾಗಿರುವ ಕಾರಣ, ಒಳ್ಳೆಯ ಉಡುಪನ್ನು ತೊಟ್ಟಿಲ್ಲದ ಕಾರಣ ಗೌರವಿಸಿಲ್ಲದಿದ್ದರೆ, ಅವನು ಏನುಮಾಡೇಕೆಂದು ಆಲೋಚಿಸೋಣ. ಶಿಕ್ಷಣ ಪಡೆದುಕೊಳ್ಳಲಾಗದಿದ್ದರೆ, ಆಸ್ತಿಯಿಲ್ಲದಿದ್ದರೆ, ಉತ್ತಮವಾದ ಉಡುಪನ್ನು ತೊಡದಿದ್ದರೆ, ಯಾರೊಬ್ಬ ಸಮಾನತೆಯನ್ನು ಪಡೆದುಕೊಳ್ಳುವುದು ಹೇಗೆ ? ಕ್ರಿಶ್ಚಿಯನ್ ಧರ್ಮದಲ್ಲಿಯಾಗಲೀ, ಇಸ್ಲಾಮ್ ಧರ್ಮದಲ್ಲಿಯಾಗಲೀ ಕಲಿಸುವಂತೆ ಜ್ಞಾನವಾಗಲಿ, ಐಶ್ವರ್ಯವಾಗಲೀ ಅಥವಾ ಧಿರಿಸಾಗಲೀ ಒಬ್ಬನ ಬಾಹ್ಯ ಸ್ವರೂಪವೇ ಹೊರತು, ಅದಕ್ಕೂ ಸಮಾನತೆಗೂ ಯಾವ ಸಂಬಂಧವೂ ಇಲ್ಲವೆಂದೂ, ಇವರೆಡೂ ಧರ್ಮಗಳು ಮಾನವಿಯತೆಯೇ ತಮ್ಮ ಧರ್ಮದ ಮುಖ್ಯ ಲಕ್ಷಣಗಳೆಂದು ಹೇಳುತ್ತವೆ. ಮಾನವೀಯತೆಯನ್ನು ಎಲ್ಲರೂ ಗೌರವಿಸಬೇಕೆಂದು. ಯಾರೂ ಇನ್ನೊಬ್ಬರಿಗೆ ಅಗೌರವವನ್ನು ತೋರಿಸಬಾದೆಂದೂ, ಯಾರೂ ಇತರರನ್ನು ಅಸಮಾನರೆಂದು ವರ್ತಿಸಬಾರದೆಂದೂ ಬೋಧಿಸುತ್ತವೆ. ಹಿಂದೂ ಧರ್ಮದಲ್ಲಿ ಈ ಬೋಧನೆಗಳು ಸಂಪೂರ್ಣವಾಗಿ ಸಿಗುತ್ತಿಲ್ಲ. ಮಾನವೀಯತೆಯನ್ನು ಗೌರವಿಸದ ಇಂಥದೊಂದು ಧರ್ಮದಿಂದ ಏನು ಪ್ರಯೋಜನ ? ಅದಕ್ಕೆ ಅಂಟಿಕೊಂಡೇ ಇರುವುದರಿಂದ ಏನು ಒಳ್ಳೆಯದಾಗುತ್ತದೆ ? ಇದಕ್ಕೆ ಉತ್ತರವಾಗಿ ಕೆಲವು ಹಿಂದೂಗಳು ಉಪನಿಷತ್ತುಗಳನ್ನು ಉಲ್ಲೇಖಿಸುತ್ತಾ, ಅವುಗಳಲ್ಲಿ ಸ್ಪಷ್ಟವಾಗಿ ನಿರೂಪಿಸಿದ ತತ್ವಗಳ ಪ್ರಕಾರ ದೇವರು ಸರ್ವವ್ಯಾಪಿಯೆಂದು ಹೆಮ್ಮೆಪಟ್ಟುಕೊಂಡು ಹೇಳುತ್ತಾರೆ. ಧರ್ಮ ಮತ್ತು ವಿಜ್ಞಾನ ಎರಡೂ ಬೇರೆ ಬೇರೆ ದ್ರವ್ಯಗಳು ಎಂದು ನಾವು ಇಲ್ಲಿ ಸೂಚಿಸಬಹುದು. ಯಾವುದೇ ಒಂದು ಪ್ರಮೇಯ

ವಿಜ್ಞಾನದ ಒಂದು ನಿಯಮವೇ ಹೊರತು ಧರ್ಮದ ನಿಯಮಗಳಲ್ಲ. ಕಾರಣ ಧರ್ಮಕ್ಕೂ ಮಾನವನ ವರ್ತನೆಗೂ ನೇರ ಸಂಬಂಧವಿದೆ. ದೇವರು ಸರ್ವಾಂತರ್ಯಾಮಿ ಎಂಬುವ ತತ್ವ ವಿಜ್ಞಾನದ ತತ್ವವೇ ಹೊರತು ಧರ್ಮದ ಬೋದನೆಯಲ್ಲ. ಹಿಂದೂಗಳು ಈ ತತ್ವಕ್ಕೆ ಅನುಸಾರ ನಡೆದುಕೊಳ್ಳುತ್ತಿಲ್ಲವೆಂಬ ಸಂಗತಿಯೇ ಮೇಲಿನ ಹೇಳಿಕೆಗೆ ಆಧಾರಾಗಿದೆ. ಅದರ ಬದಲು ಹಿಮದೂಗಳು ದೇವರು ಸರ್ವಾಂತರ್ಯಾಮಿ ಎಂಬುದು ತತ್ವಜ್ಞಾನದ ನೀತಿಯಲ್ಲವೆಂದೂ, ಅದು ತಮ್ಮ ಧರ್ಮದ ಮೂಲ ತತ್ವ ಎಂದೂ ಒತ್ತಾಯಿಸಿದರೆ, ನಾನು ಸರಳವಾಗಿ ಹೇಳುವುದೇನೆಂದರೆ, ಹಿಂದೂಗಳಲ್ಲಿ ಮನೆಮಾಡಿರುವ ಅಲ್ಪತನ ಪ್ರಪಂಚದಲ್ಲಿ ಬೇರೆಲ್ಲೂ ಕಾಣಬರುವುದಿಲ್ಲವೆಂಬ ಸತ್ಯವನ್ನು. ಮಾತಿಗೂ ಕೃತಿಗೂ ಎರಡು ಧ್ರುವಗಳ ಅಂತರವಿರುವ ಹಿಂದೂಗಳನ್ನು ಅತ್ಯಂತ ಕ್ರೂರಿಗಳೆಂದು ವರ್ಗೀಕರಿಸಬಹುದು. ಅವರ ನಾಲಗೆ ತುದಿಯಲ್ಲಿ ರಾಮನಾಮ ಇದ್ದರೆ, ಕಂಕುಳಲ್ಲಿ ಚಾಕು ಇರುತ್ತದೆ. ಅವರು ಸಂತರುಗಳ ಹಾಗೆ ಮಾತನಾಡುತ್ತಾರೆ. ಆದರೆ ಕಟುಕರುಗಳ ರೀತಿ ನಡೆದುಕೊಳ್ಳುತ್ತಾರೆ. ದೇವರನ್ನು ಸರ್ವಾಂತರ್ಯಾಮಿ ಎಂದು ನಂಬುವ, ಆದರೆ ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುವವವರೊಂದಿಗೆ ಸಂಗಮಾಡಬೇಡಿ. ಅವರು ಆಶಾಢಭೂತಿಗಳು ಇರುವೆಗಳಿಗೆ ಸಕ್ಕರೆಯನ್ನು ತಿನ್ನಿಸುವ ಆದರೆ ಮನುಷ್ಯರನ್ನು ನೀರು ಕುಡಿಯದಂತೆ ನಿಷೇಧಿಸುವ ಕೊಲ್ಲುವವರ ಸಂಗ ಮಾಡಬೇಡಿ. ಅವರ ಸಂಗದಿಂದ ನಿಮ್ಮ ಮೇಲೆ ಎಂಥ ಪರಿಣಾಮ ಉಂಟಾಗಿದೆಯೆಂಬುದನ್ನು ನೀವು ಊಹಿಸಿಕೊಳ್ಳಲಾರಿರಿ. ನಿಮ್ಮನ್ನು ಗೌರವಿಸುವುದು ನಿಂತುಹೋಗಿದೆ. ನಿಮಗೆ ಯಾವ ಅಂತಸ್ತೂ ಸಹ ಇಲ್ಲ. ಹಿಂದೂಗಳು ಮಾತ್ರ ನಿಮಗೆ ಯಾವ ಗೌರವವನ್ನೂ ಕೊಡುತ್ತಿಲ್ಲವೆಂದು ಹೇಳುವುದು ಅಸಮರ್ಪಕ. ಹಿಂದೂಗಳು ಮಾತ್ರವಲ್ಲ, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರೂ ನಮ್ಮನ್ನು ಅತ್ಯಂತ ಕೀಳುಮಟ್ಟದವರಲ್ಲಿ ಕೀಳು ಎಂದು ನೋಡುತ್ತಾರೆ. ವಾಸ್ತವವಾಗಿ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಧರ್ಮಧ ಬೋದನೆಗಳು ಮೇಲು–ಕೀಳು ಎಂಬ ಪ್ರಜ್ಞೆಯನ್ನು ಹುಟ್ಟುಹಾಕುವುದಿಲ್ಲ. ಹಾಗಾದ ಮೇಲೆಯೂ ಎರಡೂ ಧರ್ಮಗಳ ಅನುಯಾಯಿಗಳು ನಿಮ್ಮನ್ನು ಕೀಳಾಗಿ ಕಾಣುತ್ತಾರೆ. ಅವರ ಭಯ ಏನೆಂದರೆ ಅವರು ನಿಮ್ಮನ್ನು ಸಮಾನರಾಗಿ ಕಂಡರೆ, ಹಿಂದೂಗಳು ಅವರನ್ನು ಕೀಳಾಗಿ ಕಾಣುತ್ತಾರೆ ಎಂದು. ಆದ ಕಾರಣವೇ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರೂ ಕೂಡ ಹಿಂದೂಗಳಂತೆ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ಹೀಗಾಗಿ ನಾವು ಹಿಂದೂಗಳ ದೃಷ್ಟಿಯಲ್ಲಿ ಮಾತ್ರ ಕೀಳುಮಟ್ಟದವರಲ್ಲ, ಇಡೀ ಭಾರತದಲ್ಲಿ ಅತ್ಯಂತ ಕೀಳು ಮಟ್ಟದಲ್ಲಿ ಇದ್ದೇವೆ. ಇದಕ್ಕೆ ಕಾರಣ ಹಿಂದೂಗಳು ನಮ್ಮೊಡನೆ ವರ್ತಿಸುತ್ತಿರುವ ರೀತಿ. ನೀವು ಈ ನಾಚಿಕೆಗೇಡಿನ ಸ್ಥಿತಿಯನ್ನು ತೊಡೆದುಹಾಕಬೇಕಾದರೆ, ಈ ಕಳಂಕವನ್ನು ಶುಚಿಮಾಡಿಕೊಳ್ಳಬೇಕಾದರೆ, ಈ ಅಮೂಲ್ಯ ಜೀವನವನ್ನು ರಮ್ಯವಾಗಿ ಮಾಡಿಕೊಳ್ಳಬೇಕಾದರೆ, ಇರುವುದು ಒಂದೇ ಮಾರ್ಗ ; ಅದೆಂದರೆ ಹಿಂದೂ ಧರ್ಮವನ್ನು ಮತ್ತು ಹಿಂದೂ ಸಮಾಜವನ್ನು ಕಳಚಿ ಬಿಸಾಡುವುದು.

**ಹಿಂದೂ ಧರ್ಮದಲ್ಲಿ ನಿಮಗೇನಾದರೂ ಸ್ವಾತಂತ್ರ್ಯವಿದೆಯೇ ?**

ಇತರ ಯಾವುದೇ ಪೌರನ ಹಾಗೆ ನಿಮಗೂ ವ್ಯಾಪಾರ ಮಾಡುವ ಸ್ವಾತಂತ್ರ್ಯವಿದೆಯೆಂದು; ಅದಕ್ಕೆ ಕಾನೂನಿನ ರಕ್ಷಣೆ ಇದೆಯೆಂದೂ ಇತರರ ಹಾಗೆ ನಿಮಗೂ ವೈಯಕ್ತಿಕ ಸ್ವಾತಂತ್ರ್ಯವಿದೆ ಎಂದು ಕೆಲವರು ಹೇಳಬಹುದು. ಇಂಥ ಹೇಳಿಕೆಗಳನ್ನು ಕುರಿತು ನೀವು ಆಳವಾಗಿ ಯೋಚನೆ ಮಾಡಬೇಕು. ಅವುಗಳಿಗೆ ಏನಾದರೂ ಅರ್ಥವಿದೆಯೇ ಎಂದು ಹುಡುಕಬೇಕು. ನಿಮ್ಮ ಪೂರ್ವಿಕರಿಂದ ಬಂದ ವ್ಯಾಪಾರವನ್ನು ಬಿಟ್ಟು ಇತರ ಯಾವುದೇ ವ್ಯಾಪಾರವನ್ನು ಮಾಡುವುದಕ್ಕೆ ಸಮಾಜ ಆಸ್ಪದ ಕೊಡದೇ ಇದ್ದರೆ, ನಿಮಗೆ ವ್ಯಾಪಾರ ಮಾಡುವುದಕ್ಕೆ ಸ್ವಾತಂತ್ರ್ಯವಿದೆ ಎಂದು ಹೇಳುವುದರಲ್ಲಿ ಒಳಿತೇನಿದೆ? ಆಸ್ತಿಯನ್ನು ಪಡೆದುಕೊಳ್ಳುವ

ಎಲ್ಲಾ ಮಾರ್ಗಗಳೂ ಅವನಿಗೆ ಮುಚ್ಚಿರುವಾಗ "ನಿನಗೆ ಆಸ್ತಿಯನ್ನು ಅನುಭವಿಸುವ ಸ್ವಾತಂತ್ರ್ಯವಿದೆ, ಯಾರೂ ನಿನ್ನ ಹಣವನ್ನು ಮುಟ್ಟುವುದಿಲ್ಲ." ಎಂದು ಹೇಳುವ ಮಾತುಗಳಿಂದ ಉಪಯೋಗವೇನು? ಹುಟ್ಟಿನಿಂದ ಅವನಿಗೆ ಯಾವ ಸೇವೆಗೂ ಪ್ರವೇಶ ಪಡೆಯುವ ಯೋಗ್ಯತೆಯಿಲ್ಲ ಎಂದು ಹೇಳುವುದು ಮತ್ತು ಅವನ ಕೆಳಗೆ ಕೆಲಸ ಮಾಡುವುದು ಇತರರಿಗೆ ಅತ್ಯಂತ ಅವಮಾನಕಾರಿ ಎಂದು ತಿಳಿಯುವುದು. ಹೀಗಿದ್ದಾಗ, ಅವನಿಗೆ ಸೇವೆ ಮಾಡುವ ಹಕ್ಕು ಇದೆ ಎಂದು ಹೇಳುವುದು ಅವನನ್ನು ಅಣಕ ಮಾಡಿದಂತಾಗುತ್ತದೆ. ನಿಮಗೆ ಕಾನೂನು ಯಾವುದೇ ಹಕ್ಕನ್ನು ಗ್ಯಾರಂಟಿಯಾಗಿ ಕೊಡಬಹುದು. ಆದರೆ ಅದನ್ನು ನಿಜವಾದ ಹಕ್ಕುಗಳೆಂದು ಕರೆಯಬೇಕಾದರೆ, ಆ ಹಕ್ಕುಗಳನ್ನು ಚಲಾಯಿಸುವುದಕ್ಕೆ ಸಮಾಜ ಆಸ್ಪದ ಕೊಡಬೇಕು. ಅಸ್ಪೃಶ್ಯರಿಗೆ ಒಳ್ಳೆಯ ಉಡುಪುಗಳನ್ನು ಧರಿಸಲು ಕಾನೂನು ಖಾತರಿ ಮಾಡಿದೆ ಆದರೆ ಹಿಂದೂಗಳು ಈ ಬಟ್ಟೆಗಳನ್ನು ಧರಿಸಲು ಅವರನ್ನು ಬಿಡುವುದಿಲ್ಲ. ಹಾಗಿದ್ದ ಮೇಲೆ ಈ ಹಕ್ಕಿನಿಂದ ಅವರಿಗೆ ಏನು ಪ್ರಯೋಜನ? ಕಾನೂನು ಅಸ್ಪೃಶ್ಯರಿಗೆ ಲೋಹದ ಕೊಡಗಳಲ್ಲಿ ನೀರನ್ನು ತರುವುದಕ್ಕೆ, ಲೋಹದ ಉಪಕರಣಗಳನ್ನು ಉಪಯೋಗಿಸುವುದಕ್ಕೆ, ತಮ್ಮ ಮನೆಗಳ ಮೇಲೆ ಹೆಂಚುಗಳನ್ನು ಹೊದಿಸುವುದಕ್ಕೆ ಹಕ್ಕುಗಳನ್ನು ಖಾತರಿ ಮಾಡಿದೆ. ಆದರೆ ಹಿಂದೂ ಸಮಾಜ ಈ ಹಕ್ಕುಗಳನ್ನು ಚಲಾಯಿಸುವುದಕ್ಕೆ ಅವರಿಗೆ ಅವಕಾಶಕೊಡುವುದಿಲ್ಲವೆಂದ ಮೇಲೆ ಈ ಹಕ್ಕಿನಿಂದ ಅವರಿಗೆ ಏನು ಪ್ರಯೋಜನ ? ಇಂಥ ಅನೇಕ ಉಲ್ಲಂಘನೆಗಳನ್ನು ಉಲ್ಲೇಖಿಸಬಹುದು. ಚುಟುಕಾಗಿ ಹೇಳುವುದಾದರೆ ಯಾವುದಕ್ಕೆ ಸಮಾಜ ಅನುಮತಿಸುತ್ತದೋ ಅದನ್ನು ಮಾತ್ರ ಹಕ್ಕು ಎಂದು ಕರೆಯಬಹುದು. ಕಾನೂನಿನಿಂದ ಖಾತರಿಗೊಳಿಸಲ್ಪಟ್ಟ ಹಕ್ಕಾದರೂ ಸಮಾಜ ಅದನ್ನು ವಿರೋಧಿಸಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಕಾನೂನಿನ ಖಾತರಿಗಿಂತ ಹೆಚ್ಚಾಗಿ ಅಸ್ಪೃಶ್ಯರಿಗೆ ಸಾಮಾಜಿಕ ಸ್ವಾತಂತ್ರ್ಯದ ಅವಶ್ಯಕತೆ ಹೆಚ್ಚಾಗಿದೆ. ಎಲ್ಲಿಯವರೆಗೆ ನೀವು ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸುವುದಿಲ್ಲವೋ ಅಲ್ಲಿಯವರೆಗೆ ಕಾನೂನು ಒದಗಿಸಿಕೊಟ್ಟ ಸ್ವಾತಂತ್ರ್ಯ ಯಾವ ಕೆಲಸಕ್ಕೂ ಬರುವುದಿಲ್ಲ. ಕೆಲವರು ನಿಮಗೆ ದೈಹಿಕ ಸ್ವಾತಂತ್ರ್ಯವಿದೆ ಎಂದು ಸಲಹೆ ಕೊಡಬಹುದು. ಹೌದು ಕಾನೂನಿನ ಪರಿಮಿತಿಯೊಳಗೆ ನೀವು ಎಲ್ಲಿಗೆ ಬೇಕಾದರೂ ಹೋಗಬಹುದು, ಏನು ಬೇಕಾದರೂ ಮಾತನಾಡಬಹುದು. ಆದರೆ ಇಂಥ ಸ್ವಾತಂತ್ರ್ಯದಿಂದ ಏನು ಪ್ರಯೋಜನ ? ಮಾನವನಿಗೆ ದೇಹ ಮತ್ತು ಮನಸ್ಸು ಎರಡೂ ಇದೆ. ಕೇವಲ ದೈಹಿಕ ಸ್ವಾತಂತ್ರ್ಯದಿಂದ ಏನೂ ಪ್ರಯೋಜನವಿಲ್ಲ. ಮಾನಸಿಕ ಸ್ವಾತಂತ್ರ್ಯ ಅತಿ ಮುಖ್ಯವಾದ ಸ್ವಾತಂತ್ರ್ಯ. ನೈಜತೆಯಿಂದ ಹೇಳುವುದಾದರೆ ಮನುಷ್ಯನಿಗೆ ದೈಹಿಕ ಸ್ವಾತಂತ್ರ್ಯ ಎನ್ನುವುದರ ಅರ್ಥವೇನು ? ಅದರ ಅರ್ಥ ಅವನು ತನಗಿಷ್ಟ ಬಂದ ಹಾಗೆ ಮಾಡಲು ಸ್ವತಂತ್ರನಿದ್ದಾನೆ ಎಂದು. ಕೈದಿಯೊಬ್ಬನ ಸರಳಪಳಿಯನ್ನು ಕಳಚಿ ಅವನನ್ನು ಮುಕ್ತಗೊಳಿಸಲಾಗಿದೆ. ಇದರಲ್ಲಿ ಹುದುಗಿರುವ ನೀತಿಯೇನು ನೀತಿಯೆಂದರೆ ಅವನು ತನಗಿಷ್ಟ ಬಂದ ಹಾಗೆ ಏನೇ ಮಾಡಲು ಸ್ವಾತಂತ್ರ್ಯನಿದ್ದಾನೆ ಮತ್ತು ಸಾಮರ್ಥ್ಯದ ಗರಿಷ್ಟ ಉಪಯೋಗವನ್ನು ಪಡೆದುಕೊಳ್ಳುವುದಕ್ಕೆ ಅವನಿಗೆ ಅವಕಾಶವಿರಬೇಕು. ಆದರೆ ಮಾನಸಿಕವಾಗಿ ಮುಕ್ತನಾಗಿಲ್ಲದ ದೈಹಿಕ ಸ್ವಾತಂತ್ರ್ಯದಿಂದ ಏನು ಉಪಯೋಗ ? ಮಾನಸಿಕ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯ. ಮನುಷ್ಯನೊಬ್ಬನಿಗೆ ಸಂಕೋಲೆಗಳಿಲ್ಲದಿದ್ದರೂ, ಮನಸ್ಸು ಮುಕ್ತವಾಗಿಲ್ಲದಿದ್ದರೆ ಗುಲಾಮನಾಗುತ್ತಾನೆ. ಮನಸ್ಸು ಮುಕ್ತವಾಗಿಲ್ಲದವರು ಕೈದಿಯಾಗಿಲ್ಲದಿದ್ದರೂ, ಕೈದಿಯಾಗಿರುತ್ತಾನೆ. ಮನಸ್ಸು ಮುಕ್ತವಾಗಿಲ್ಲದವನು ಬದುಕಿದ್ದರೂ ಸತ್ತಂತೆ. ಮಾನಸಿಕ ಸ್ವಾತಂತ್ರ್ಯ ಒಬ್ಬನ ಅಸ್ತಿತ್ವದ ಇರುವಿಕೆಯ ಸಾಕ್ಷ್ಯ. ಮನುಷ್ಯನೊಬ್ಬನ ಮಾನಸಿಕ ಸ್ವಾತಂತ್ರ್ಯದ ದೀಪ ನಂದಿ ಹೋಗಿಲ್ಲವೆಂಬುದಕ್ಕೆ ಆಧಾರವೇನು ? ಸಾಕ್ಷ್ಯವೇನು ? ಒಬ್ಬನ ಮನಸ್ಸು ಮುಕ್ತವಾಗಿದೆಯೆಂದು ಯಾರ ಬಗ್ಗೆ ನಾವು ಹೇಳಬಹುದು ? ಯಾರು

ಎಚ್ಚರಗೊಂಡ ಪ್ರಜ್ಞೆಯಿಂದ ತನ್ನ ಹಕ್ಕುಗಳನ್ನು ತನ್ನ ಹೊಣೆಗಾರಿಕೆಗಳನ್ನು, ಕರ್ತವ್ಯಗಳನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೋ, ಯಾರು ಸಂದರ್ಭಗಳ ಗುಲಾಮನಲ್ಲವೋ, ಯಾರು ತನ್ನ ಅನುಕೂಲಕ್ಕಾಗಿ ಅವುಗಳನ್ನು ಬದಲಾಯಿಸಿಕೊಳ್ಳಲು ತೀರ್ಮಾನವನ್ನು ತೆಗೆದುಕೊಂಡಿದ್ದಾನೋ ? ಅಂಥವನನ್ನು ನಾನು ಮುಕ್ತನೆಂದು ಕರೆಯುತ್ತೇನೆ. ಯಾರು ವಾಡಿಕೆಗಳ, ಪದ್ಧತಿಗಳ, ಪರಂಪರೆಗಳ ಅಥವಾ ತನ್ನ ಪೂರ್ವಜರಿಂದ ಬಂದಿದೆಯೆಂಬ ಕಾರಣಗಳಿಗಾಗಿ ಅವರ ಬೋಧನೆಗಳಿಗಾಗಿ ಯಾರ ವೈಚಾರಿಕ ಜ್ವಾಲೆ ನಂದಿಹೋಗಿಲ್ಲವೋ ಅವನನ್ನು ನಾನು ಮುಕ್ತ ಮಾನವನೆಂದು ಕರೆಯುತ್ತೇನೆ. ಯಾರು ತಾನೇ ಶರಣಾಗತಿಯಾಗಿಲ್ಲವೋ, ಇತರರ ಬೋಧನೆಗಳಂತೆ ಕೆಲಸ ಮಾಡುವುದಿಲ್ಲವೋ, ಯಾರು ಯಾವುದನ್ನು ತಾನು, ಘಟನೆ ಮತ್ತು ಅದರ ಪರಿಣಾಮದ ಬೆಳಕಿನಲ್ಲಿ ವಿಮರ್ಶಾತ್ಮಕವಾಗಿ ಪರೀಕ್ಷಿಸದ ಹೊರತು ನಂಬುವುದಿಲ್ಲವೋ ಅವನನ್ನು ನಾನು ಮುಕ್ತ ಮಾನವನೆಂದು ಕರೆಯುತ್ತೇನೆ. ಯಾರು ಯಾವಾಗಲೂ ತನ್ನ ಹಕ್ಕುಗಳನ್ನು ಕಾಪಾಡಿಕೊಳ್ಳಲು ಸಿದ್ಧನಿದ್ದಾನೋ, ಯಾರು ಸಾರ್ವನಿಕ ಟೀಕೆಗಳಿಗೆ ಹೆದರುವುದಿಲ್ಲವೋ, ಯಾರಿಗೆ ಸಾಕಷ್ಟು ವೈಚಾರಿಕ ಶಕ್ತಿ ಮತ್ತು ಆತ್ಮಗೌರವ ಇದ್ದು ಇತರರ ಕೈಗೊಂಬೆಯಾಗುವುದಿಲ್ಲವೋ, ಅಂಥ ಮನುಷ್ಯನನ್ನು ನಾನು ಮುಕ್ತ ಮನುಷ್ಯನೆಂದು ಕರೆಯುತ್ತೇನೆ. ಯಾರು ಇತರರ ನಿರ್ದೇಶನಗಳಂತೆ ತನ್ನ ಜೀವನವನ್ನು ಮಾಡುವುದಿಲ್ಲವೋ ತನ್ನದೇ ಆದ ವೈಚಾರಿಕತೆಯಿಂದ ತನ್ನ ಜೀವನದ ಗುರಿಯನ್ನು ರೂಪಿಸಿಕೊಳ್ಳುತ್ತಾನೋ, ತನ್ನ ಜೀವನವನ್ನು ಹೇಗೆ ಮತ್ತು ಯಾವ ರೀತಿಯಲ್ಲಿ ನಡೆಸಬೇಕೆಂದು ತೀರ್ಮಾನಿಸುತ್ತಾನೋ ಅವನನ್ನು ಮುಕ್ತ ಮನುಷ್ಯನೆಂದು ಕರೆಯುತ್ತೇನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಯಾರು ತನ್ನ ಯಜಮಾನ ತಾನೇ ಆಗಿದ್ದಾನೋ ಅವನನ್ನು ಮಾತ್ರ ನಾನು ಸ್ವತಂತ್ರ ಮಾನವನೆಂದು ಕರೆಯುತ್ತೇನೆ.

ಈ ಅವಲೋಕನೆಯ ಬೆಳಕಿನಲ್ಲಿ ನೋಡುವುದಾದರೆ ನೀವು ಸ್ವತಂತ್ರರೆ? ನಿಮ್ಮ ಗುರಿಗಳನ್ನು ಆಯ್ದುಕೊಳ್ಳುವುದಕ್ಕೆ ನಿಮಗೆ ಸ್ವಾತಂತ್ರವಿದೆಯೇ? ನನ್ನ ಅಭಿಪ್ರಾಯದಲ್ಲಿ ನಿಮಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಬದಲಿಗೆ ನೀವು ಗುಲಾಮಗಿರಿಗಿಂತ ಅತಿಕೆಟ್ಟ ಸ್ಥಿತಿಯಲ್ಲಿ ಇದ್ದೀರಿ. ನಿಮ್ಮ ಗುಲಾಮಗಿರಿಗೆ ಸಮನಾದುದು ಬೇರೆ ಯಾವುದೂ ಇಲ್ಲ. ಹಿಂದೂ ಧರ್ಮದಲ್ಲಿ ಯಾರಿಗೂ ವಾಕ್ ಸ್ವಾತಂತ್ರ್ಯವಿಲ್ಲ. ಹಿಂದೂ ಧರ್ಮಕ್ಕೆ ಸೇರಿದ ಎಲ್ಲರೂ ತಮ್ಮ ವಾಕ್ ಸ್ವಾತಂತ್ರ್ಯವನ್ನು ಒಪ್ಪಿಸಿಬಿಡಬೇಕು. ವೇದೋಕ್ತಿಯಂತೆ ಅವರು ನಡೆದುಕೊಳ್ಳಬೇಕು. ವೇದಗಳು ಅವನ ಕರ್ಮಗಳನ್ನು ಬೆಂಬಲಿಸದಿದ್ದರೆ, ಅವನು ಸ್ಮೃತಿಗಳಿಂದ ತಿಳುವಳಿಕೆಯನ್ನು ಪಡೆದುಕೊಳ್ಳಬೇಕು. ಸ್ಮೃತಿಗಳು ಅವನಿಗೆ ತಿಳಿವಳಿಕೆ ಕೊಡಲು ಆಗದಿದ್ದರೆ ಆಗ ನಾವು ಮಹಾಪುರುಷರು ತುಳಿದ ದಾರಿಯಲ್ಲೇ ಸಾಗಬೇಕು. ಹಿಂದುತ್ವದಲ್ಲಿ ಆತ್ಮಸಾಕ್ಷಿಗಾಗಲೀ, ವೈಚಾರಿಕತೆಗಾಗಲೀ, ಆಲೋಚನೆಗಳಿಗಾಗಲೀ ಯಾವುದೇ ಪ್ರಾಮುಖ್ಯತೆಯೂ ಇಲ್ಲ, ಯಾವ ಆಸ್ಪದವೂ ಇಲ್ಲ. ಹಿಂದೂಗಳು ಅವಶ್ಯಕವಾಗಿ ವೇದಗಳ ಇಲ್ಲವೇ ಸ್ಮೃತಿಗಳ ಗುಲಾಮರಾಗಬೇಕು. ಅವರು ತಮ್ಮ ವೈಚಾರಿಕತೆಯನ್ನು ಉಪಯೋಗಿಸುವ ಹಾಗಿಲ್ಲ. ಆದುದರಿಂದ ಎಲ್ಲಿಯವರೆಗೆ ನೀವು ಹಿಂದೂ ಧರ್ಮದ ಭಾಗವಾಗಿರುತ್ತೀರೋ ನಿಮಗೆ ಆಲೋಚನಾ ಸ್ವಾತಂತ್ರ್ಯವಿರುವುದಿಲ್ಲ. ಹಿಂದೂ ಧರ್ಮಕ್ಕೆ ಸೇರಿದ ನಿಮ್ಮನ್ನು ಮಾತ್ರ ಗುಮಾಮಗಿರಿಗೆ ಹಿಂದೂ ಧರ್ಮ ತಳ್ಳಿಲ್ಲ. ಇತರ ಎಲ್ಲಾ ಸಮುದಾಯಗಳೂ, ಮಾನಸಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡಿವೆ ಎಂದು ಕೆಲವರು ವಾದಿಸಬಹುದು. ಎಲ್ಲಾ ಹಿಂದೂಗಳು ಮಾನಸಿಕ ಗುಲಾಮಗಿರಿಯ ಸ್ಥಿತಿಯಲ್ಲಿ ಜೀವಿಸಿದ್ದಾರೆ ಎಂಬುದು ಸತ್ಯ. ಆದ್ದರಿಂದ ಎಲ್ಲರ ಬವಣೆಯೂ ಒಂದೇ ರೀತಿಯದು ಎಂದು ಯಾರೂ ಸಹ ತೀರ್ಮಾನಕ್ಕೆ ಬರಬಾರದು ಹಿಂದೂ ಧರ್ಮಕ್ಕೆ ಸೇರಿದ ಎಲ್ಲರೂ ಈ ಮಾನಸಿಕ ಗುಲಾಮಗಿರಿಯ ಪ್ರತಿಕೂಲ ಪರಿಣಾಮದಿಂದ ಸಮಾನರಾಗಿ ಪೀಡಿತರಾಗಿಲ್ಲ. ಈ ಮಾನಸಿಕ ಗುಲಾಮಗಿರಿ ಯಾವುದೇ ರೀತಿಯಲ್ಲಿ ಸವರ್ಣೀಯ ಹಿಂದೂಗಳ

ಪ್ರಾಪಂಚಿಕ ಸೌಖ್ಯಕ್ಕೆ ಕುಂದು ತಂದಿಲ್ಲ. ಸವರ್ಣೀಯ ಹಿಂದೂಗಳು ಮೇಲೆ ನೋಡಿದ ಹಾಗೆ ವೇದಗಳ, ಸ್ಮೃತಿಗಳ ಹಾಗೂ ಮಹಾಪುರುಷರ ಗುಲಾಮರಾಗಿದ್ದರೂ ಸಹ ಅವರಿಗೆ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಉತ್ತಮ ಸ್ಥಾನವನ್ನು ಕೊಡಲಾಗಿದೆ. ಇತರರ ಮೇಲೆ ಆಳ್ವಿಕೆ ನಡೆಸಲು ಅವರಿಗೆ ಅಧಿಕಾರ ಕೊಡಲಾಗಿದೆ. ಹಿಂದೂ ಧರ್ಮ ಸವರ್ಣೀಯ ಹಿಂದೂಗಳ ಸೃಷ್ಟಿಯಾಗಿದ್ದು ಉನ್ನತ ಜಾತಿಗಳ ಕಲ್ಯಾಣ ಮತ್ತು ಪುರೋಭಿವೃದ್ಧಿಗೆ ಮಾತ್ರ ಸಹಾಯವಾಗಿದೆ. ಇದನ್ನು ಧರ್ಮವೆಂದು ಕರೆದು ನಿಮಗೆ ಗುಲಾಮಗಿರಿಯಿಂದ ತಪ್ಪಿಸಿಕೊಳ್ಳಲು ಆಗದೇ ಇರುವಂತೆ ಎಲ್ಲಾ ಏರ್ಪಾಡುಗಳನ್ನು ಧರ್ಮದಲ್ಲಿಯೇ ಮಾಡಲಾಗಿದೆ. ಆದುದರಿಂದ ಹಿಂದೂ ಧರ್ಮದ ಮಾನಸಿಕ ಗುಲಾಮಗಿರಿಯಿಂದ ಬಂಧ ವಿಮುಕ್ತವಾಗುವುದಕ್ಕೆ ಹೆಚ್ಚಿನ ಅವಶ್ಯಕತೆ ಇದೆ. ಈ ಧರ್ಮ ಹಿಂದೂಗಳಿಗೂ ಬೇಕಾಗಿಲ್ಲ. ಈ ದೃಷ್ಟಿಯಿಂದ ಹಿಂದೂ ಧರ್ಮ ನಿಮ್ಮ ಪುರೋಭಿವೃದ್ಧಿಯನ್ನು ಎರಡು ಕಡೆಗಳಿಂದ ಹಾಳು ಗೆಡವಿದೆ. ನಿಮ್ಮ ಮಾನಸಿಕ ಸ್ವಾತಂತ್ರ್ಯವನ್ನು ಅಳಿಸಿ ಹಾಕಿ ನಿಮ್ಮನ್ನು ಗುಲಾಮರನ್ನಾಗಿ ಮಾಡಿದೆ. ಹೊರಗಿನ ಪ್ರಪಂಚದಲ್ಲೂ ಸಹ ನಿಮ್ಮನ್ನು ತಳ್ಳಿದೆ. ನಿಮಗೆ ಸ್ವಾತಂತ್ರ್ಯ ಬೇಕಾದರೆ ನಿಮ್ಮ ಧರ್ಮವನ್ನು ಬದಲಾಯಿಸಲೇ ಬೇಕು.

## ಅಸ್ಪೃಶ್ಯರ ಸಂಸ್ಥೆಗಳು ಮತ್ತು ಮತಾಂತರ

ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕಾಗಿ ನಡೆಯುತ್ತಿರುವ ಚಳುವಳಿಯನ್ನು ತಮ್ಮೊಳಗೇ ಇರುವ ಅನೇಕ ಉಪಜಾತಿಗಳು ಪರಸ್ಪರ ವ್ಯವಹಾರಗಳಲ್ಲಿ ಜಾತೀಯತೆಯನ್ನು ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತಿವೆ ಎಂಬ ಕಾರಣಗಳನ್ನು ಕೊಟ್ಟು ಟೀಕಿಸಲಾಗಿದೆ. ಮಹರ್‌ಗಳು ಮತ್ತು ಮಾಂಗ್‌ಗಳು ಸಹ ಪಂಕ್ತಿ ಭೋಜನ ಮಾಡುವುದಿಲ್ಲ. ಈ ಎರಡೂ ಜಾತಿಗಳು ಬೀದಿ ಗುಡಿಸುವವರನ್ನು ಮುಟ್ಟುವುದಿಲ್ಲ. ಅವರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ತಮ್ಮೊಳಗೇ ಜಾತಿಯತೆಯನ್ನು ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತಿರುವ ಈ ಜನಗಳು ಮೇಲ್ಜಾತಿಯವರು ತಮ್ಮ ವಿರುದ್ಧ ಅಸ್ಪೃಶ್ಯತೆಯನ್ನು ಆಚರಿಸಬಾರದು ಎಂದು ನಿರೀಕ್ಷೆಯನ್ನು ಇಟ್ಟುಕೊಳ್ಳುವುದಕ್ಕೆ ಯಾವ ಹಕ್ಕು ಇದೆ ಎಂದು ಕೇಳುತ್ತಾರೆ. ಈ ಪ್ರಶ್ನೆಯನ್ನು ಯಾವಾಗಲೂ ಎತ್ತಲಾಗುತ್ತಿದೆ. ತಮ್ಮೊಳಗಿನ ಜಾತಿಗಳನ್ನು ಮತ್ತು ಅಸ್ಪೃಶ್ಯತೆಯನ್ನು ತೊಡೆದು ಹಾಕಿ, ಆಮೇಲೆ ಪರಿಹಾರಕ್ಕಾಗಿ ಬನ್ನಿ ಎಂದು ಅಸ್ಪೃಶ್ಯರಿಗೆ ಸಲಹೆ ಕೊಡಲಾಗುತ್ತಿದೆ. ಈ ವಾದದಲ್ಲಿ ಸತ್ಯಾಂಶವಿದೆಯೆಂದು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ಆದರೆ ಆಪಾದನೆಗಳು ಮಾತ್ರ ಸುಳ್ಳು. ಅಸ್ಪೃಶ್ಯತೆಯಲ್ಲಿ ಸೇರಿಕೊಂಡಿರುವ ಆ ಜಾತಿಗಳು, ಜಾತೀಯತೆಯನ್ನು ಮತ್ತೆ ಕೆಲವರು ಅಸ್ಪೃಶ್ಯತೆಯನ್ನು ಆಚರಣೆಯಲ್ಲಿಟ್ಟುಕೊಂಡಿದ್ದಾರೆಂಬುದನ್ನು ನಿರಾಕರಿಸಲಾಗುವುದಿಲ್ಲ. ಆದರೆ ಈ ಕುಕೃತ್ಯಕ್ಕೆ ಅವರು ಯಾವುದೇ ರೀತಿಯಲ್ಲಿ ಹೊಣೆಗಾರರೆಂದು ಹೇಳುವುದು ಅಷ್ಟೇ ಸುಳ್ಳು. ಜಾತೀಯತೆ ಮತ್ತು ಅಸ್ಪೃಶ್ಯತೆ ಎನ್ನುವುದು ಅಸ್ಪೃಶ್ಯರಿಂದ ಹುಟ್ಟಿ ಬಂದಿಲ್ಲ ; ಅದು ಬಂದಿರುವುದು ಮೇಲ್ಜಾತಿಯ ಹಿಂದೂಗಳಿಂದ ಜಾತೀಯತೆ ಮತ್ತು ಅಸ್ಪೃಶ್ಯತೆಯ ಆಚರಣೆಯನ್ನು ಹುಟ್ಟುಹಾಕಿದವರೇ ಅವರು. ಜಾತೀಯತೆಯ ಮತ್ತು ಅಸ್ಪೃಶ್ಯತೆಯ ಆಚರಣೆಗಳನ್ನು ರೂಢಿಗೆ ತಂದವರೇ ಉನ್ನತ ಜಾತಿಯ ಹಿಂದೂಗಳು. ಈ ಪಾಠವನ್ನು ಕಲಿಸಿದವರೇ ಅವರು. ಪಾಠ ಸುಳ್ಳಾಗಿದ್ದರೆ ಅದನ್ನು ಕಲಿಸಿದವರೇ ಅದರ ಹೊಣೆಯನ್ನು ಹೊರಬೇಕೆ ಹೊರತು, ಅದನ್ನು ಕಲಿತವರಲ್ಲ. ಈ ಉತ್ತರ ಸರಿಯೆಂದು ತೋರಿದರೂ ಅದು ನನಗೆ ತೃಪ್ತಿಯನ್ನು ಕೊಟ್ಟಿಲ್ಲ. ನಮ್ಮಗಳ ಮಧ್ಯದಲ್ಲಿ ಜಾತೀಯತೆ ಮತ್ತು ಅಸ್ಪೃಶ್ಯತೆ ಬೇರು ಬಿಟ್ಟಿರುವುದರ ಕಾರಣಕ್ಕೆ ನಾವು ಹೊಣೆಗಾರರಾಗಿಲ್ಲದಿದ್ದರೂ, ಅದನ್ನು ಖಂಡನೆ ಮಾಡದೆ ಅದು ಹೇಗಿದೆಯೋ ಹಾಗೆಯೇ ಇರುವುದಕ್ಕೆ ಬಿಟ್ಟು ಬಿಡುವುದು ಒಳ್ಳೆಯದು. ನಮ್ಮಗಳ ನಡುವೆ ಜಾತಿಯತೇ ಮತ್ತು ಅಸ್ಪೃಶ್ಯತೆ ಬೇರೂರಿರುವುದಕ್ಕೆ ನಾವು ಹೊಣೆಗಾರರಲ್ಲದಿದ್ದರೂ, ಅದನ್ನು ನಿರ್ನಾಮ

ಮಾಡಬೇಕಾಗಿರುವುದು ನಮ್ಮ ಹೊಣೆಗಾರಿಕೆಯಾಗಿದೆ. ನಾವೆಲ್ಲರೂ ಈ ಹೊಣೆಗಾರಿಕೆಯನ್ನು ಅರಿತು ಕೊಂಡಿರುವುದಕ್ಕೆ ನನಗೆ ಸಂತಸವಾಗಿದೆ. ಮಹರ್‌ಗಳ ಯಾವನೇ ಮುಖಂಡನು ಜಾತೀಯತೆಯ ಆಚರಣೆಯನ್ನು ಪ್ರತಿಪಾದನೆ ಮಾಡುತ್ತಿಲ್ಲವೆಂದು ನನಗೆ ಖಂಡಿತವಾಗಿ ಗೊತ್ತಿದೆ. ಹೋಲಿಕೆಯನ್ನು ಮಾಡಬೇಕಾದರೆ ಅದನ್ನು ಮುಖಂಡರುಗಳ ಮಧ್ಯೆ ಮಾಡಬೇಕು. ಮಹರ್ ಸಮುದಾಯದ ವಿದ್ಯಾವಂತ ವರ್ಗದವರನ್ನು ಬ್ರಾಹ್ಮಣ ವಿದ್ಯಾವಂತರಿಗೆ ಹೋಲಿಕೆ ಮಾಡಿದಲ್ಲಿ, ವಿದ್ಯಾವಂತ ಅಸ್ಪೃಶ್ಯರು ಜಾತಿಗಳನ್ನು ಅಳಿಸಿ ಹಾಕುವುದಕ್ಕೆ ಹೆಚ್ಚು ಉತ್ಸುಕರಾಗಿದ್ದಾರೆಂದು ಯಾರಾದರೂ ಒಪ್ಪಲೇಬೇಕು. ಇದನ್ನು ಅವರ ಕೃತಿಗಳಿಂದಲೂ ತೋರಿಸಿಕೊಡಬಹುದು. ವಿದ್ಯಾವಂತ ಮಹರ್‌ಗಳಲ್ಲದೆ, ಅವಿದ್ಯಾವಂತ ಮತ್ತು ಅನಕ್ಷರಸ್ಥ ಮಹರ್‌ಗಳೂ ಕೂಡ ಜಾತಿಯನ್ನು ಅಳಿಸಿ ಹಾಕುವುದಕ್ಕೆ ಮುಂದಾಳುಗಳಾಗಿದ್ದಾರೆ. ಇದನ್ನು ಕೂಡ ದೃಢಪಡಿಸಬಹುದು. ಈ ದಿನದಲ್ಲಿ ಮಹರ್ ಮತ್ತು ಮಾಂಗ್‌ಗಳಲ್ಲಿ ಅಂತರ ಜಾತಿ ಭೋಜನವನ್ನು ವಿರೋಧಿಸುವ ಒಬ್ಬನೇ ಒಬ್ಬನು ಮಹರ್ ಸಮುದಾಯದಲ್ಲಿ ಇಲ್ಲ. ಜಾತಿಗಳನ್ನು ತೊಡೆದು ಹಾಕುವ ಅವಶ್ಯಕತೆ ಇಲ್ಲ. ಜಾತಿಗಳನ್ನು ತೊಡೆದು ಹಾಕುವ ಅವಶ್ಯಕತೆ ಇದೆ ಎಂದು ನೀವು ಅರ್ಥಮಾಡಿಕೊಂಡಿರುವುದಕ್ಕೆ ನನಗೆ ಬಹಳ ತೃಪ್ತಿಯಾಗಿದೆ. ಅದಕ್ಕಾಗಿ ನಾನು ನಿಮಗೆ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ನೀವು ಅಸ್ಪೃಶ್ಯರ ನಡುವೆ ಜಾತಿಗಳನ್ನು ತೊಡೆದುಹಾಕುವುದಕ್ಕೆ ಪ್ರಯತ್ನಗಳನ್ನು ಜಯಪ್ರದವನ್ನಾಗಿ ಹೇಗೆ ಮಾಡಬೇಕೆಂಬುದನ್ನು ಕುರಿತು ಯಾವಾಗಲಾದರೂ ಯೋಚಿಸಿದ್ದೀರ? ಅಂತರ್‌ಜಾತಿ ಔತಣಕೂಟಗಳಿಂದಾಗಲೀ ಅಥವಾ ಅಲ್ಲೊಂದು ಇಲ್ಲೊಂದು ಅಂತರ್‌ಜಾತಿ ವಿವಾಹಗಳಿಂದಾಗಲೀ, ಜಾತಿಗಳನ್ನು ಅಳಿಸಿ ಹಾಕುವುದಕ್ಕೆ ಆಗುವುದಿಲ್ಲ. ಜಾತಿಯೆಂಬುದು ಒಂದು ಮನಃಸ್ಥಿತಿ. ಅದೊಂದು ಮಾನಸಿಕ ರೋಗ. ಹಿಂದೂ ಧರ್ಮದ ಬೋಧನೆಗಳೇ ಈ ರೋಗಕ್ಕೆ ಮೂಲ ಕಾರಣ. ನಾವು ಬದುಕುತ್ತಿರುವ ಹಿಂದೂ ಧರ್ಮ ನಮಗೆ ಹಾಗೆ ಹೇಳುವುದರಿಂದ ನಾವು ಜಾತೀಯತೆಯನ್ನು ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತೇವೆ. ಕಹಿಯಾದುದನ್ನು ಸಿಹಿಯಾಗಿ ಮಾಡಬಹುದು. ಉಪ್ಪಾದ, ಗಡುಸಾದ ಪದಾರ್ಥಗಳ ರುಚಿಯನ್ನು ಬದಲಾಯಿಸಬಹುದು. ಆದರೆ ವಿಷವನ್ನು ಅಮೃತವನ್ನಾಗಿ ಮಾಡಲಾಗುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ಮನುಷ್ಯನೊಬ್ಬನನ್ನು ಇನ್ನೊಬ್ಬ ಕೊಳಕನೆಂದು ನಡೆಸಿಕೊಳ್ಳುವಂತೆ ಬೋಧಿಸುವ ಧರ್ಮದಲ್ಲಿ ನಾವು ಉಳಿದುಕೊಳ್ಳುತ್ತೇವೆಯೋ ಅಂಥ ನಮ್ಮ ಮನಸ್ಸುಗಳಲ್ಲಿ ಬಹಳ ಆಳವಾಗಿ ಬೇರು ಬಿಟ್ಟಿರುವ ತಾರತಮ್ಯ ಪ್ರಜ್ಞೆಯನ್ನು ತೊಡೆದು ಹಾಕಲಾಗುವುದಿಲ್ಲ. ಜಾತಿಗಳನ್ನು ಮತ್ತು ಅಸ್ಪೃಶ್ಯತೆಯನ್ನು ಅಸ್ಪೃಶ್ಯರ ಮಧ್ಯದಿಂದ ಅಳಿಸಿ ಹಾಕುವುದಕ್ಕೆ ವಿಷಹಾನಿ ಎಂದರೆ ಧರ್ಮವನ್ನು ಬದಲಾಯಿಸುವುದೇ ಆಗಿದೆ.

## ಹೆಸರಿನಲ್ಲಿ ಬದಲಾವಣೆ ಮತ್ತು ಧರ್ಮದಲ್ಲಿ ಬದಲಾವಣೆ

ಇಲ್ಲಿಯವರೆಗೆ ನಾನು ನಿಮ್ಮ ಮುಂದೆ ಮತಾಂತರದ ಪರವಾಗಿರುವ ಅಂಶಗಳನ್ನು ಮುಂದಿಟ್ಟಿದ್ದೇನೆ. ಈ ವಿಶ್ಲೇಷಣೆ ನಿಮ್ಮ ಚಿಂತನೆಯ ಉದ್ದೀಪನ ಮಾಡುತ್ತದೆಂದು ನಂಬಿದ್ದೇನೆ. ಈ ಚರ್ಚೆ ಪಾಂಡಿತ್ಯ ಪೂರ್ಣವೆಂದು ನಿಮ್ಮಲ್ಲಿ ಕೆಲವರಿಗೆ ಅನ್ನಿಸಿದರೆ ನಿಮ್ಮ ಮುಂದೆ ಸರಳವಾದ ಚಿಂತನೆಗಳನ್ನು ಸರಳವಾದ ಭಾಷೆಯಲ್ಲಿ ಇಡಲು ಬಯಸುತ್ತೇನೆ. ಅಸಾಧಾರಣವಾದದ್ದು ಎಂದು ಕರೆಯಬಹುದಾದ ಅಂಶ ಮತಾಂತರಲ್ಲಿ ಏನಿದೆ ? ನಿಜವಾಗಿ ಹೇಳಬೇಕೆಂದರೆ, ಸವರ್ಣೀಯ ಹಿಂದೂಗಳೊಂದಿಗೆ ನಿಮಗಿರುವ ಸಾಮಾಜಿಕ ಸಂಬಂಧದ ಬಗೆಯಾದರೂ ಎಂಥಾದ್ದು? ಮುಸ್ಲಿಮರಿಂದ ಮತ್ತು ಕ್ರಿಶ್ಚಿಯನ್ನರಿಂದ ನೀವು ಹೇಗೆ ದೂರವಿದ್ದಿರೋ ಹಾಗೆ ಹಿಂದೂಗಳಿಂದ ಸಹ ಪ್ರತ್ಯೇಕವಾಗಿದ್ದೀರಿ. ಹಿಂದೂಗಳು ಮುಸ್ಲಿಮರು ಮತ್ತು

ಕ್ರಿಶ್ಚಿಯನ್ನರೊಂಗೆ ಹೇಗೆ ಅಂತರ್ಜಾತಿ ಔತಣ ಮತ್ತು ಅಂತರ್ಜಾತಿ ಮದುವೆಗಳನ್ನು ಇಟ್ಟುಕೊಂಡಿಲ್ಲವೋ ನಿಮ್ಮ ಕೂಡ ಇರುವ ಸಂಬಂಧವೂ ಹಾಗೆಯೇ ಇದೆ. ನಿಮ್ಮ ಮತ್ತು ಹಿಂದೂಗಳ ಸಮಾಜ ಎರಡು ಭಿನ್ನವಾದ ಗುಂಪುಗಳು. ಮತಾಂತರದಿಂದಾಗಿ ಒಂದು ಸಮಾಜವನ್ನು ಒಡೆದಿದೆ ಎಂದು ಯಾರೂ ಕೂಡ ಹೇಳುವ ಹಾಗಿಲ್ಲ ; ಹಾಗೆ ಭಾವಿಸಲೂ ಸಾಧ್ಯವಿಲ್ಲ. ನೀವು ಈ ದಿನ ಹಿಂದೂಗಳಿಂದ ಎಷ್ಟು ಪ್ರತ್ಯೇಕವಾಗಿದ್ದೀರೋ ಅಷ್ಟೆ ಪ್ರತ್ಯೇಕವಾಗಿ ಉಳಿಯುತ್ತೀರಿ. ಮತಾಂತರದಿಂದ ಹೊಸದೇನೂ ಸಂಭವಿಸುವುದಿಲ್ಲ. ಇದು ನಿಜವಾದರೆ ಮತಾಂತರವೆಂದರೆ ಕೆಲವರಿಗೆ ಹೆದರಿಕೆ ಏಕೆ ಆಗುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಧರ್ಮ ಬದಲಾವಣೆಯ ಪ್ರಾಮುಖ್ಯತೆಯನ್ನು ನೀವು ಅರ್ಥಮಾಡಿಕೊಳ್ಳುವುದಕ್ಕೆ ಆಗದಿದ್ದರೂ ಹೆಸರು ಬದಲಾವಣೆಯ ಪ್ರಾಮುಖ್ಯತೆ ನಿಮಗೆ ಖಂಡಿತವಾಗಿಯೂ ಗೊತ್ತಾಗಿದೆ. ನಿಮ್ಮಲ್ಲಿ ಯಾರನ್ನಾದರೂ ನಿನ್ನ ಜಾತಿ ಯಾವುದೆಂದು ಕೇಳಿದರೆ ಅವನು ನಾನು ಚೊಖಮೇಲ, ಹರಿಜನ ಇತ್ಯಾದಿ ಎಂದು ಉತ್ತರ ಕೊಡುತ್ತಾನೆ. ಆದರೆ ಅವನು ನಾನು ಮಹರ್ ಎಂದು ಹೇಳುವುದಿಲ್ಲ. ಸಂದರ್ಭವಿಲ್ಲದೇ ಯಾರೂ ತನ್ನ ಹೆಸರನ್ನು ಬದಲಾಯಿಸಲಾರ. ಇಂಥ ಹೆಸರು ಬದಲಾವಣೆಗೆ ಒಂದು ಸರಳವಾದ ಕಾರಣವಿದೆ. ಗೊತ್ತಿಲ್ಲದ ವ್ಯಕ್ತಿಯೊಬ್ಬ ಸ್ಪೃಶ್ಯ ಮತ್ತು ಅಸ್ಪೃಶ್ಯ ಯಾರೆಂದು ಗೊತ್ತುಹಚ್ಚಲಾರ ; ಎಲ್ಲಿಯವರೆಗೆ ಹಿಂದೂ ಒಬ್ಬನಿಗೆ ಒಬ್ಬ ವ್ಯಕ್ತಿಯ ಜಾತಿಯಾವುದೆಂದು ಗೊತ್ತಾಗುವುದಿಲ್ಲವೋ ಅವನು ಅಸ್ಪೃಶ್ಯನಾಗಿದ್ದರೂ ಅವನ ಮೇಲೆ ದ್ವೇಷ ಉಂಟಾಗಲಾರದು. ಪ್ರಯಾಣ ಮಾಡುವಾಗ ಒಬ್ಬ ಸವರ್ಣೀಯ ಹಿಂದು ಮತ್ತು ಒಬ್ಬ ಅಸ್ಪೃಶ್ಯ ತಮ್ಮಿಬ್ಬರ ಜಾತಿಗಳು ಯಾವುದೆಂದು ಗೊತ್ತಾಗುವವರೆಗೂ ಸ್ನೇಹ ಭಾವದಿಂದ ಇರುತ್ತಾರೆ. ಅವರು ಅಡಕೆ, ಬೀಡಿ, ಸಿಗರೇಟುಗಳು, ಹಣ್ಣು ಇತ್ಯಾದಿಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಆದರೆ, ಆ ಹಿಂದೂವಿಗೆ ತಾನು ಮಾತನಾಡುತ್ತಿರುವವನು ಅಸ್ಪೃಶ್ಯನೆಂದು ಗೊತ್ತಾಗುವುದೇ ತಡ ದ್ವೇಷಪ್ರಜ್ಞೆ ಅವನ ಮನಸ್ಸಿನಲ್ಲಿ ಮೊಳಕೆಯಾಗುತ್ತದೆ. ತಾನು ಮೋಸ ಹೋಗಿದ್ದೇನೆಂದು ಅವನು ಭಾವಿಸುತ್ತಾನೆ. ಅವನಿಗೆ ಕೋಪ ಬಂದು ಈ ತಾತ್ಕಾಲಿಕ ಸ್ನೇಹ ಬೈಗುಳದಲ್ಲಿ, ಜಗಳದಲ್ಲಿ ಪರ್ಯಾವಸಾನವಾಗುತ್ತದೆ. ನಿಮಗೂ ಇಂಥ ಅನುಭವ ಆಗಿರಲೇಬೇಕು. ಇದು ಹೀಗೇಕೆ ಆಗುತ್ತಿದೆಯೆಂಬುದು ನಿಮಗೆ ಗೊತ್ತಿರಲೇಬೇಕು. ನಿಮ್ಮ ಜಾತಿ ಸೂಚಕ ಹೆಸರುಗಳು ಎಷ್ಟು ಕೊಳಕಾದದ್ದು ಎಂದು ಪರಿಗಣಿಸಲಾಗುತ್ತದೆಯೆಂದರೆ ಅದನ್ನು ಉಚ್ಚಾರ ಮಾಡುವುದೇ ಹಿಂದೂಗಳಲ್ಲಿ ವಾಂತಿ ಬರಿಸುತ್ತದೆ. ಹೀಗೆ ಮಹರ್ ಎಂದು ಕರೆದುಕೊಳ್ಳುವುದುರ ಬದಲು ನೀವು ಚೊಖಮೇಲ ಎಂದು ಕರೆದುಕೊಂಡರೆ, ನೀವು ಜನಗಳನ್ನು ವಂಚನೆ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೀರಿ ಎಂದಾಗುತ್ತದೆ. ಆದರೆ ಜನಗಳು ಮೋಸ ಹೋಗಿಲ್ಲ ಎಂದು ನಿಮಗೆ ಗೊತ್ತು. ನೀವು ನಿಮ್ಮನ್ನು ಚೊಖಮೇಲ ಎಂದಾದರೂ ಕರೆದುಕೊಳ್ಳಿ ಅಥವಾ ಹರಿಜನ ಎಂದಾದರೂ ಕರೆದುಕೊಳ್ಳಿ. ನೀವುಗಳು ಯಾರು ಎಂದು ಜನಗಳಿಗೆ ಗೊತ್ತಾಗುತ್ತದೆ. ನಿಮ್ಮ ಕೃತಿಗಳಿಂದ ನಿಮ್ಮ ಹೆಸರನ್ನು ನೀವು ಬದಲಾಯುಸಿಕೊಳ್ಳುವ ಅವಶ್ಯಕತೆ ಇದೆ ಎಂದು ತೋರಿಸಿಕೊಟ್ಟಿದ್ದೀರಿ. ನಿಮ್ಮ ಹೆಸರನ್ನು ಬದಲಾಯಿಸಿಕೊಳ್ಳಬೇಕೆಂಬ ಅವಶ್ಯಕತೆ ಇದೆ ಎಂದು ನೀವು ಭಾವಿಸಿದರೆ ನಿಮ್ಮ ಧರ್ಮವನ್ನು ಬದಲಾಯಿಸಿಕೊಳ್ಳುವುದಕ್ಕೆ ಯಾವ ಆಕ್ಷೇಪಣೆ ಇರಬೇಕು. ಧರ್ಮವನ್ನು ಬದಲಾಯಿಸುವುದು ಎಂದರೆ ಹೆಸರನ್ನು ಬದಲಾಯಿಸಿದ ಹಾಗೆ ಧರ್ಮವನ್ನು ಬದಲಾಯಿಸಿಕೊಂಡ ಮೇಲೆ ಹೆಸರನ್ನು ಬಲಾಯಿಸಿಕೊಳ್ಳುವುದು ನಿಮಗೆ ಹೆಚ್ಚು ಪ್ರಯೋಜನಕಾಯಿಯಾಗುತ್ತದೆ. ತನ್ನನ್ನು ತಾನು ಮುಸ್ಲಿಮ್, ಕ್ರಿಶ್ಚಿಯನ್, ಬೌದ್ಧ ಅಥವಾ ಸಿಖ್ ಎಂದು ಕರೆದುಕೊಳ್ಳುವುದು, ಕೇವಲ ಧರ್ಮದ ಬದಲಾವಣೆಯಲ್ಲ. ಅದು ಹೆಸರಿನ ಬದಲಾವಣೆ ಕೂಡ. ಅದೇ ಹೆಸರಿನ ನಿಜವಾದ ಬದಲಾವಣೆ. ಈ ಹೊಸ ಹೆಸರಿನ

ಯಾವ ಕೊಳಕೂ ಅಂಟಿಕೊಂಡಿರುವುದಿಲ್ಲ. ಅದೊಂದು ತೀಕ್ಷ್ಣವಾದ ಬದಲಾವಣೆ. ಯಾರೂ ಅದರ ಮೂಲವನ್ನು ಹುಡುಕುವುದಕ್ಕೆ ಹೋಗುವುದಿಲ್ಲ. ಚೊಖಮೇಳ ಅಥವಾ ಹರಿಜನ ಎಂದು ಹೆಸರು ಬದಲಾಯಿಸಿಕೊಳ್ಳುವುದು ಅರ್ಥ ಶೂನ್ಯ. ಈ ಸನ್ನಿವೇಶದಲ್ಲಿ ಮೂಲ ಹೆಸರಿಗೆ ಅಂಟಿಕೊಂಡ ಎಲ್ಲಾ ದ್ವೇಷ, ಅವಮಾನ ಇತ್ಯಾದಿ ಹೊಸ ಹೆಸರಿಗೆ ಹರಿದು ಬರುತ್ತದೆ. ಹಿಂದೂ ಧರ್ಮದಲ್ಲೇ ನೀವು ಉಳಿದುಕೊಳ್ಳುವವರೆಗೂ, ನೀವು ನಿಮ್ಮ ಹೆಸರನ್ನು ಬದಲಾಯಿಸಿಕೊಳ್ಳಲೇಬೇಕು. ನಿಮ್ಮನ್ನು ನೀವು ಹಿಂದೂ ಎಂದು ಕರೆದುಕೊಂಡರೆ ಸಾಕಾಗುವುದಿಲ್ಲ. ಹಿಂದು ಎಂದು ಕರೆಯಲ್ಪಡುವ ಯಾರೊಬ್ಬರನ್ನು ಯಾರೂ ಗುರುತಿಸುವುದಿಲ್ಲ. ಆದುದರಿಂದ ಮಹರ್ ಎಂದು ಕರೆದುಕೊಳ್ಳುವುದರಿಂದ ಯಾವುದೇ ಉದ್ದೇಶ ಸಾಧನೆಯಾಗುವುದಿಲ್ಲ. ನೀವು ಈ ಹೆಸರನ್ನು ಉಚ್ಚರಿಸುತ್ತಿದ್ದಂತೆಯೇ ಯಾರು ನಿಮ್ಮ ಹತ್ತಿರ ಬರುವುದಿಲ್ಲ. ಈ ದಿನ ಒಂದು ಹೆಸರು ನಾಳೆ ಇನ್ನೊಂದು ಹೆಸರನ್ನು ಬದಲಾಯಿಸಿಕೊಳ್ಳುವ ಬದಲು ಲೋಲಕದ ಸ್ಥಿತಿಯಲ್ಲೇ ಉಳಿಯುವ ಬದಲು ನೀವು ನಿಮ್ಮ ನಿಮ್ಮ ಧರ್ಮವನ್ನು ಬಸಲಾಯಿಸಿಕೊಂಡು ನಿಮ್ಮ ಹೆಸರನ್ನು ಶಾಶ್ವತವಾಗಿ ಏಕೆ ಬಸಲಾಯಿಸಿಕೊಳ್ಳಬಾರದೆಂದು ನಾನು ನಿಮ್ಮನ್ನು ಕೇಳುತ್ತೇನೆ.

**ಎದುರುದಾರರ ಪಾತ್ರ**

ಈ ಮತಾಂತರದ ಚಳುವಳಿಯ ಪ್ರಾರಂಭದಿಂದ ಅನೇಕ ಜನಗಳು ಅನೇಕ ರೀತಿಯ ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಇಂಥ ಆಕ್ಷೇಪಣೆಗಳಲ್ಲಿ ಏನಾದರೂ ಸತ್ಯವಿದೆಯೇ ಎಂದು ನಾವು ಈಗ ಪರೀಕ್ಷೆ ಮಾಡೋಣ. ಕೆಲವು ಹಿಂದೂಗಳು ತಾವು ಧಾರ್ಮಿಕರು ಎಂದು ನಟನೆ ಮಾಡುತ್ತಾ ನಿಮಗೆ ಈ ರೀತಿ ಸಲಹೆ ಮಾಡುತ್ತಾರೆ. "ಧರ್ಮವೆಂಬುದು ಸುಖಾನುಭವದ ವಿಷಯವಲ್ಲ. ಪ್ರತಿ ನಿತ್ಯ ನಮ್ಮ ಬಟ್ಟೆಗಳನ್ನು ಬದಲಾಯಿಸಿದ ಹಾಗೆ, ಧರ್ಮವನ್ನು ಬದಲಾಯಿಸಿಕೊಳ್ಳಲಾಗುವುದಿಲ್ಲ. ನೀವು ಈ ಹಿಂದೂ ಧರ್ಮವನ್ನು ಬಿಟ್ಟು ಇನ್ನೊಂದನ್ನು ಅಪ್ಪಿಕೊಳ್ಳಲು ಇಚ್ಚಿಸುತ್ತೀರಿ. ಈ ಧರ್ಮಕ್ಕೆ ದೀರ್ಘಕಾಲ ಅಂಟಿಕೊಂಡಿದ್ದ ನಿಮ್ಮ ಪೂರ್ವಜರು ದಡ್ಡರೆಂದು ತಿಳಿದುಕೊಂಡಿದ್ದೀರೇನು ? ತಮ್ಮನ್ನು ತಾವು ಬುದ್ಧಿವಂತರೆಂದು ಕರೆದುಕೊಂಡ ಜನ ಈ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಆಕ್ಷೇಪಣೆಯಲ್ಲಿ ಯಾವ ತಿರುಳೂ ಕಾಣಿಸುವುದಿಲ್ಲ. ಪೂರ್ವಜರ ಧರ್ಮವೆಂಬ ಕಾರಣಕ್ಕೆ ಅದಕ್ಕೇ ಅಂಟಿಕೊಂಡಿರಬೇಕೆಂದು ಒಬ್ಬ ದಡ್ಡ ಮಾತ್ರ ಹೇಳುತ್ತಾನೆಯಷ್ಟೇ. ಯಾವ ಬುದ್ಧಿವಂತನೇ ಆಗಲೀ ಈ ಪ್ರಸ್ತಾಪವನ್ನು ಒಪ್ಪಿಕೊಳ್ಳುವುದಿಲ್ಲ. ಪುರಾತನ ಧರ್ಮವನ್ನು ಬದಲಾಯಿಸಲೇಬಾರದೆಂದು ಹೇಳುವವರು ಚರಿತ್ರೆಯನ್ನು ಓದಿಕೊಂಡ ಹಾಗೆ ಕಾಣುವುದಿಲ್ಲ. ಪುರಾತನವಾದ ಆರ್ಯರ ಧರ್ಮವನ್ನು ವೇದ ಧರ್ಮವೆಂದು ಕರೆಯುತ್ತಿದ್ದರು. ಇದರಲ್ಲಿ ಮೂರು ಸ್ಪಷ್ಟವಾದ ಲಕ್ಷಣಗಳಿದ್ದವು. ಗೋಮಾಂಸ ಭಕ್ಷಣ, ಮಧುಪಾನ ಮತ್ತು ಸಂಭ್ರಮಾಚರಣೆ ಇವು ಆ ದಿನಗಳ ಧರ್ಮದ ಒಂದು ಭಾಗವಾಗಿದ್ದವು. ಭಾರತದಲ್ಲಿನ ಸಾವಿರಾರು ಜನಗಳು ಅದರ ಅನುಯಾಯಿಗಳಾಗಿದ್ದರು. ಈಗಲೂ ಕೂಡ ಕೆಲವು ಬ್ರಾಹ್ಮಣರು ಅದಕ್ಕೆ ಹಿಂದಿರುಗಿ ಹೋಗಬೇಕೆಂದು ಕನಸು ಕಾಣುತ್ತಾರೆ. ಪುರಾತನ ಧರ್ಮಕ್ಕೆ ಮಾತ್ರ ಅಂಟಿಕೊಳ್ಳಬೇಕಾಗಿದ್ದರೆ ಭಾರತದ ಜನಗಳು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧಧರ್ಮವನ್ನು ಏತಕ್ಕೆ ಒಪ್ಪಿಕೊಂಡರು ? ವೇದ ಧರ್ಮವನ್ನು ತ್ಯಜಿಸಿ ಜೈನಧರ್ಮವನ್ನು ಏಕೆ ಒಪ್ಪಿಕೊಂಡರು ? ನಮ್ಮ ಪೂರ್ವಜರು ಪುರಾತನ ಧರ್ಮದಲ್ಲಿ ಜೀವಿಸಿದ್ದರೆಂದು ನಿರಾಕರಿಸಲು ಸಾಧ್ಯವಾಗದಿದ್ದರೂ ಅವರು ಆ ಧರ್ಮದಲ್ಲಿ ಸ್ವಇಚ್ಛೆಯಿಂದ ಉಳಿದುಕೊಂಡಿದ್ದರೆಂದು ಹೇಳಲಾಗುವುದಿಲ್ಲ. ಚಾತುರ್ವರ್ಣ ಪದ್ಧತಿ ದೇಶದಲ್ಲಿ ಬಹಳ ದೀರ್ಘಕಾಲ ಪ್ರಚಲಿತವಿದ್ದಿತು. ಈ ಪದ್ಧತಿಯಲ್ಲಿ ಬ್ರಾಹ್ಮಣರು ಜ್ಞಾನಾರ್ಜನೆ ಮಾಡಲು, ಕ್ಷತ್ರಿಯರು ಯುದ್ಧಮಾಡಲು, ವೈಶ್ಯರು ಆಸ್ತಿಸಂಪಾದನೆಯನ್ನು ಮಾಡಲು,

ಶೂದ್ರರು ಸೇವೆಯನ್ನು ಮಾಡಲು ಅನುಮತಿಸಲಾಗಿತ್ತು. ಆ ದಿನಗಳಲ್ಲಿ ಈ ರೀತಿಯ ಜೀವನವೇ ನಿಯಮವಾಗಿತ್ತು. ಈ ಜೀವನ ಕ್ರಮದಲ್ಲಿ ಶೂದ್ರರಿಗೆ ವಿದ್ಯಾಭ್ಯಾಸವಾಗಲೀ, ಆಸ್ತಿಯಾಗಲೀ, ಆಯುಧಗಳಾಗಲೀ ಇರಲಿಲ್ಲ. ಈ ರೀತಿಯ ಬದುಕನ್ನು ಬಲಾತ್ಕಾರದಿಂದ, ಜುಲುಮೆಯಿಂದ ಜೀವಿಸಿದ ನಿಮ್ಮ ಪೂರ್ವಜರು ಈ ಧರ್ಮವನ್ನು ಸ್ವಇಚ್ಛೆಯಿಂದ ಒಪ್ಪಿಕೊಂಡಿದ್ದರೆಂದು ಪ್ರಜ್ಞೆ ಇರುವ ಯಾವನೂ ಹೇಳುವುದಿಲ್ಲ. ಆದುದರಿಂದ ನಿಮ್ಮ ಪೂರ್ವಜರಿಗೆ ತಮ್ಮ ಧರ್ಮದ ವಿರುದ್ಧ ತಿರುಗಿ ಬೀಳುವುದಕ್ಕೆ ಸಾಧ್ಯವಿತ್ತೇ ಎನ್ನುವುದನ್ನು ಪರಿಗಣನೆಗೆ ತೆಗೆದುಕೊಳ್ಳುವ ಅವಶ್ಯಕತೆ ಇದೆ. ತಿರುಗಿ ಬೀಳಲಿಲ್ಲವೆಂದ ಮೇಲೆ ಆಗ ಮಾತ್ರ ಅವರು ಈ ಧರ್ಮವನ್ನು ಸ್ವ-ಇಚ್ಛೆಯಿಂದ ಒಪ್ಪಿಕೊಂಡಿದ್ದರೆಂದು ಹೇಳಬಹುದಾಗಿದೆ. ಆದರೆ ನೈಜ ಪರಿಸ್ಥಿತಿಯನ್ನು ಗಮನಿಸಿದರೆ, ನಮ್ಮ ಪೂರ್ವಜರನ್ನು ಒತ್ತಾಯದಿಂದ ಆ ಧರ್ಮದಲ್ಲಿ ಬದುಕಿರುವಂತೆ ಮಾಡಲಾಗಿತ್ತೆಂದು ಗೊತ್ತಾಗುತ್ತದೆ. ನಮ್ಮ ಪೂರ್ವಜರಿಗೆ ಗುಲಾಮಗಿರಿಯ ವಿರುದ್ಧ ಹೋರಾಡಲು ಯಾವ ಹರವೂ ಇರದಿದ್ದ ಕಾರಣ, ಅವರು ಪ್ರತಿಭಟಿಸಲಾಗಲಿಲ್ಲ; ಅವರು ಈ ಧರ್ಮದಲ್ಲೇ ಬದುಕುವ ಹಾಗೆ ಒತ್ತಾಯಿಸಲ್ಪಟ್ಟರು. ಈ ಅಸಹಾಯಕತೆಗಾಗಿ ಯಾರೂ ಅವರನ್ನು ದೂಷಿಸಲಾಗುವುದಿಲ್ಲ. ಆದರೆ ಈಗಿನ ಪೀಳಿಗೆಯ ಮೇಲೆ ಯಾವುದೇ ರೀತಿಯ ಗುಲಾಮರಿಗಿಯನ್ನು ಯಾರ ಮೇಲೂ ಬಲವಂತವಾಗಿ ಹೇರಲಾಗುವುದಿಲ್ಲ. ಅವರಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯವಿದೆ. ಇಂಥ ಸ್ವಾತಂತ್ರ್ಯವನ್ನು ಬಳಸಿಕೊಂಡು ಅವರು ತಮ್ಮನ್ನು ತಾವು ಬಿಡುಗಡೆ ಮಾಡಿಕೊಳ್ಳದಿದ್ದರೆ, ಬಹಳ ಸಂತಾಪದಿಂದ ಭೂಮಿಯ ಮೇಲಿರುವ ಅತ್ಯಂತ ಕೀಳಾದ, ಗುಲಾಮೀ ಬುದ್ದಿಯ ಅವಲಂಬಿ ಜನಗಳೆಂದು ಅವರೆಲ್ಲರನ್ನು ಕರೆಯಬೇಕು.

### ಮಾನವ ಮತ್ತು ಮೃಗಗಳಿರುವ ವ್ಯತ್ಯಾಸ

ಅದು ಸನಾತನವೆಂದ ಮಾತ್ರಕ್ಕೆ ತನ್ನದೇ ಆದ ಧರ್ಮಕ್ಕೆ ಅಂಟಿಕೊಂಡಿರಲೇ ಬೇಕೆನ್ನುವುದು ಒಬ್ಬ ದಡ್ಡನಿಗೆ ಮಾತ್ರ ಸಮಂಜಸವಾಗಿರುತ್ತದೆ. ಯಾವ ಬುದ್ಧಿವಂತ ವ್ಯಕ್ತಿಯೂ ಇಂಥದೊಂದು ವಾದವನ್ನು ಒಪ್ಪಲು ಸಾಧ್ಯವಿಲ್ಲ. ಈಗ ಅವನು ಬದುಕುತ್ತಿರುವ ಪರಿಸ್ಥಿತಿಯಲ್ಲೇ ಜೀವಿಸು ಎಂದು ಹೇಳುವುದು ಪ್ರಾಣಿಗಳಿಗೆ ಕೊಡಬಹುದಾದ ಬುದ್ಧಿವಾದವೇ ಹೊರತು ಮನುಷ್ಯರಿಗಲ್ಲ. ಮಾನವ ಮತ್ತು ಮೃಗಗಳಿಗೆ ಇರುವ ವ್ಯತ್ಯಾಸವೆಂದರೆ ಮಾನವನು ಮುನ್ನಡೆಯಬಹುದು ಆದರೆ ಪ್ರಾಣಿಗಳು ಮುನ್ನಡೆಯಲಾರವು. ಬದಲಾವಣೆ ಇಲ್ಲದೇ ನಮ್ಮ ಬಸಲಾವಣೆ ಸಾಧ್ಯವಿಲ್ಲ. ಮತಾಂತರವಾಗುವುದೂ ಸಹ ಒಂದು ರೀತಿಯ ಬದಲಾವಣೆಯೇ. ಮತಾಂತರವಿಲ್ಲದೆ ಮುನ್ನಡೆ ಸಾಧ್ಯವಿಲ್ಲದಿದ್ದರೆ, ಆಗ ಮತಾಂತರ ಅತ್ಯವಶ್ಯಕವಾಗುತ್ತದೆ. ಪೂರ್ವಜರ ಧರ್ಮ ಮನುಷ್ಯನ ಪ್ರಗತಿಶೀಲ ಹಾದಿಯಲ್ಲಿ ಎಂದೆಂದಿಗೂ ಅಡಚಣೆಯಾಗಬಾರದು.

ಮತಾಂತರದ ವಿರುದ್ಧ ಇನ್ನೂ ಒಂದು ವಾದವಿದೆ. ಅದೆಂದರೆ ಮತಾಂತರ ಒಂದು ಪಲಾಯನವಾದವೆಂದು ಅನೇಕ ಜನಗಳು ಹಿಂದೂ ಧರ್ಮವನ್ನು ಉತ್ತಮಪಡಿಸಲೇಬೇಕೆಂದು ಹೊರಟಿದ್ದಾರೆ. ಈ ಜನಗಳ ಸಹಾಯವನ್ನು ಪಡೆದುಕೊಂಡು ಅಸ್ಪೃಶ್ಯತೆಯನ್ನು ಮತ್ತು ಜಾತೀಯತೆಯನ್ನು ಅಳಿಸಿಹಾಕಬಹುದೆಂದು ಹೇಳುತ್ತಾರೆ.ಈ ಸಂಧಿಕಾಲದಲ್ಲಿ ಧರ್ಮವನ್ನು ಬದಲಾಯಿಸುವುದು ಸರಿಯಾದುದಲ್ಲ ಎಂದು ಹೇಳುತ್ತಾರೆ. ಹಿಂದೂ ಸಾಮಾಜಿಕ ಸುಧಾರಕರು ಯಾವುದೇ ಅಭಿಪ್ರಾಯ ಹೊಂದಿರಲಿ, ವೈಯಕ್ತಿಕವಾಗಿ ನನಗೆ ಅವರೆಂದರೆ ಅಸಹ್ಯವಾಗುತ್ತದೆ. ಅವರೊಂದಿಗಿನ ಅನುಭವ ನನಗೆ ಬಹಳ ಇದೆ. ಇದರಿಂದ, ಈ ಅರೆಹುಚ್ಚರ ಬಗ್ಗೆ ನನಗೆ ಅಸಹ್ಯವಾಗುತ್ತದೆ. ತಮ್ಮದೇ ಜಾತಿಯಲ್ಲಿ ಬದುಕಲಿಚ್ಛಿಸುವ, ತಮ್ಮದೇ ಜಾತಿಯಲ್ಲಿ ಸಾಯುವ ತಮ್ಮದೇ ಜಾತಿಯಲ್ಲಿ ವಿವಾಹವಾಗುವ ಈ ಜನಗಳು ಸುಳ್ಳು ಘೋಷಣೆಗಳನ್ನು ಕೂಗುತ್ತಾ ಜಾತಿಯತೆಯನ್ನು ಮುರಿಯುತ್ತೇವೆ ಎಂದು ಹೇಳುತ್ತಾರೆ ಎನ್ನುವುದು ನಿಜವಾಗಿಯೂ ಆಶ್ಚರ್ಯಕರ. ಅಸ್ಪೃಶ್ಯರು

ತಮ್ಮನ್ನು ನಂಬದೇ ಇದ್ದರೆ ಅವರಿಗೆ ಕೋಪ ಬರುತ್ತದೆ. ಈ ಹಿಂದೂ ಸಾಮಾಜಿಕ ಸುಧಾರಕರ ಇಂಥ ಘೋಷಣೆಗಳನ್ನು ಕೇಳಿದಾಗ, ಅಮೆರಿಕಾದ ಬಿಳಿಯ ಜನ ನೀಗ್ರೋಗಳ ದಾಸ್ಯ ವಿಮೋಚನೆಗಾಗಿ ಮಾಡಿದ ಪರಿಶ್ರಮವನ್ನು ನೆನಪಿಸಿಕೊಳ್ಳುತ್ತೇನೆ. ಅನೇಕ ವರ್ಷಗಳ ಕೆಳಗೆ ಅಮೆರಿಕಾದಲ್ಲಿನ ನೀಗ್ರೋಗಳ ಪರಿಸ್ಥಿತಿ ಭಾರತದಲ್ಲಿನ ಅಸ್ಪೃಶ್ಯರ ಪರಿಸ್ಥಿತಿಯಂತೆ ಇತ್ತು. ಇವೆರಡರ ನಡುವಿನ ವ್ಯತ್ಯಾಸವೆಂದರೆ ಅಮೆರಿಕಾದ ನಿಗ್ರೋಗಳ ಗುಲಾಮಗಿರಿಗೆ ಕಾನೂನಿನ ಮಾನ್ಯತೆ ಇತ್ತು. ಆದರೆ ಇಲ್ಲಿ ಇಂಡಿಯಾದಲ್ಲಿ ಇದೊಂದು ಧರ್ಮದ ಸೃಷ್ಟಿ. ಕೆಲವು ಅಮೆರಿಕನ್ ಸುಧಾರಕರು ನೀಗ್ರೋಗಳ ಗುಲಾಮಗರಿಯನ್ನು ತೊಡೆದುಹಾಕಲು ಪ್ರಯತ್ನ ಮಾಡುತ್ತಿದ್ದರು. ಆದರೆ ಈ ಹಿಂದೂ ಸಮಾಜ ಸುಧಾರಕರನ್ನು ನೀಗ್ರೋಗಳ ದಾಸ್ಯ ವಿಮೋಚನೆ ಮಾಡಲು ಹೊರಟ ಅಮೆರಿಕಾದ ಆ ಬಿಳಿಯ ಸಾಮಾಜಿಕ ಸುಧಾರಕರೊಂದಿಗೆ ಹೋಲಿಕೆ ಮಾಡಲು ಸಾಧ್ಯವೆ ? ನೀಗ್ರೋಗಳ ದಾಸ್ಯ ವಿಮೋಚನೆಗಾಗಿ ಈ ಬಿಳಿಯ ಅಮೆರಿಕನ್ ಸುಧಾರಕರು ತಮ್ಮ ಬಂಧು ಬಳಗಗಳೊಂದಿಗೆ ಯುದ್ಧಮಾಡಿ ಕಾದಾಡಿದರು. ಗುಲಾಮಗಿರಿಯನ್ನು ಸಮರ್ಥಿಸಿಕೊಂಡ ಸಾವಿರಾರು ಬಿಳಿಯರನ್ನು ಕೊಂದು ಹಾಕಿದರು. ಈ ನಿಮಿತ್ತಕೋಸ್ಕರ ತಮ್ಮ ರಕ್ತವನ್ನೂ ಸಹ ಚೆಲ್ಲಿದರು. ಚರಿತ್ರೆಯ ಪುಟಗಳಲ್ಲಿ ಈ ಘಟನೆಗಳ ಬಗ್ಗೆ ಓದಿದಾಗ ಅಮೆರಿಕಾದ ಸಾಮಾಜಿಕ ಸುಧಾರಕರೊಂದಿಗೆ ಭಾರತದ ಸುಧಾರಕರನ್ನು ಹೋಲಿಕೆ ಮಾಡಲು ಅಸಾಧ್ಯವೆಂದು ನಾವು ಹೇಳಲೇ ಬೇಕಾಗುತ್ತದೆ. (ಎಲ್ಲಿಯ ರಾಜ, ಎಲ್ಲಿಯ ಪೋತರಾಜ!) ಭಾರತದ ಅಸ್ಪೃಶ್ಯರ ಉದ್ಧಾರಕರೆಂದು ಹೇಳಿಕೊಳ್ಳುವ ಈ ಸುಧಾರಕವನ್ನು ಒಂದು ಪ್ರಶ್ನೆ ಕೇಳಬೇಕಾಗಿದೆ. ನೀಗ್ರೋಗಳ ವಿಮೋಚನೆಗಾಗಿ ತಮ್ಮ ಬಿಳಿಯ ಸಹೋದರರೊಂದಿಗೆ ಹೋರಾಡಿದ ಅಮೆರಿಕಾದ ಬಿಳಿಯರ ಹಾಗೆ ನೀವೂ ಕೂಡ ನಿಮ್ಮ ಹಿಂದೂ ಸಹೋದರರೊಂದಿಗೆ 'ಯಾದವೀ ಕಲಹವನ್ನು' ಮಾಡಲು ಸಿದ್ಧರಿದ್ದೀರ ಎಂದು. ಹಾಗಿಲ್ಲದಿದ್ದರೆ ಸುದಾರಣೆಯ ಈ ಉದ್ದುದ್ದ ಭಾಷಣಗಳು ಏತಕ್ಕಾಗಿ ? ಅಸ್ಪೃಶ್ಯರ ನಿಮಿತ್ತಕ್ಕಾಗಿ ಹೊಡೆದಾಡುತ್ತಿದ್ದವೆಂದು ಹೇಳಿಕೊಳ್ಳುವ ಅತ್ಯಂತ ಮಹಾನ್ ಹಿಂದು ಮಹಾತ್ಮ ಗಾಂಧಿ. ಅವರು ಎಲ್ಲಿಯ ತನಕ ಹೋಗಬಲ್ಲರು ? ಬ್ರಿಟಿಷ್ ಸರ್ಕಾರದ ವಿರುದ್ಧ ಅಹಿಂಸಾತ್ಮಕ ಚಳುವಳಿಯ ಮುಂಚೂಣಿಯಲ್ಲಿರುವ ಮಹಾತ್ಮ ಗಾಂಧಿ ಹಿಂದೂಗಳ ಭಾವನೆಗೆ ನೋವುಂಟು ಮಾಡಲೂ ಕೂಡ ಸಿದ್ಧರಿಲ್ಲ; ಈ ಹಿಂದೂಗಳೇ ಅಸ್ಪೃಶ್ಯರ ದಮನಕಾರರು ! ಇವರ ವಿರುದ್ಧ ಸತ್ಯಾಗ್ರಹವನ್ನು ಮಾಡುವುದಕ್ಕೆ ಅವರಿಗೆ ಮನಸ್ಸಿಲ್ಲ. ಕಡೆಯ ಪಕ್ಷ ಆ ಹಿಂದೂಗಳ ವಿರುದ್ಧ ಕಾನೂನು ಕ್ರಮವನ್ನೂ ಸಹ ತೆಗೆದುಕೊಳ್ಳಲು ಅವರು ಸಿದ್ಧರಿಲ್ಲ. ಇಂಥ ಸುಧಾರಕರಿಂದ ಯಾವ ಒಳ್ಳೆಯದನ್ನೂ ನಾನು ಕಾಣುತ್ತಿಲ್ಲ.

## ತಪ್ಪಿರುವುದೆಲ್ಲಾ ಸ್ಪೃಶ್ಯರಲ್ಲಿ ಮಾತ್ರ

ಕೆಲವು ಹಿಂದೂಗಳು ಅಸ್ಪೃಶ್ಯರ ಸಭೆಗಳಿಗೆ ಬರುತ್ತಾರೆ. ಬಂದು ಸವರ್ಣೀಯ ಹಿಂದೂಗಳನ್ನು ನಿಂದಿಸುತ್ತಾರೆ. ಕೆಲವರು ಅಸ್ಪೃಶ್ಯರಿಗೆ "ಸಹೋದರರೇ, ಶುಚಿಯಾಗಿ ಬಾಳಿರಿ, ಶಿಕ್ಷಣವನ್ನು ಪಡೆದುಕೊಳ್ಳಿ, ನಿಮ್ಮ ಕಾಲ ಮೇಲೆ ನಿಂತುಕೊಳ್ಳಿ ಎಂದು ವೇದಿಕೆಯ ಮೇಲೆ ನಿಂತು ಬುದ್ಧಿ ಹೇಳುತ್ತಾರೆ. ನಿಜಹೇಳಬೇಕೆಂದರೆ, ಯಾರನ್ನಾದರೂ ದೂಷಿಸಬೇಕಾಗಿದ್ದರೆ, ಈ ಸವರ್ಣೀಯ ಹಿಂದೂಗಳನ್ನೇ ದೂಷಿಷಬೇಕು. ಈ ತಪ್ಪನ್ನು ಮಾಡುವವರೇ ಸವರ್ಣೀಯ ಹಿಂದೂಗಳು. ಆದರೂ ಯಾರೂ ಸಹ ಈ ಸವರ್ಣೀಯ ಹಿಂದೂಗಳನ್ನು ಒಂದು ಕಡೆ ಸೇರಿಸಿ ಅವರನ್ನು ಗದರಿಸುವುದಿಲ್ಲ. ಹಿಂದೂಗಳ ಜೊತೆಯಲ್ಲೇ ಉಳಿದುಕೊಂಡು ಹಿಂದೂಗಳ ಸಹಾಯದಿಂದಲೇ ನಿಮ್ಮ ಚಳುವಳಿಯನ್ನು ಮುಂದುವರಿಸಿ ಎಂದು ಬೋಧನೆ ಮಾಡುವವರಿಗೆ ಚರಿತ್ರೆಯ ಕೆಲವು ನಿದರ್ಶನಗಳನ್ನು ಕೊಡಲು ಬಯಸುತ್ತೇನೆ. ಕಡೆಯ ಪ್ರಪಂಚದ ಯುದ್ಧದಲ್ಲಿ ಒಬ್ಬ ಅಮೆರಿಕನ್

ಮತ್ತು ಒಬ್ಬ ಇಂಗ್ಲಿಷ್ ಸೈನಿಕರ ಮಧ್ಯೆ ನಡೆದ ಸಂಭಾಷಣೆಯ ಬಗ್ಗೆ ಓದಿದ್ದೇನೆ. ಈ ಸಂಭಾಷಣೆ ಈ ಸಂದರ್ಭದಲ್ಲಿ ಪ್ರಸ್ತುತವೆಂದು ತಿಳಿಯುತ್ತೇನೆ. ಯುದ್ಧ ಎಷ್ಟು ಕಾಲ ಮುಂದುವರಿಯಬೇಕೆಂಬುದೇ ಅವರ ಚರ್ಚೆಯ ವಿಷಯವಾಗಿತ್ತು. ಅಮೆರಿಕದವನ ಈ ಪ್ರಶ್ನೆಗೆ ಬಹಳ ಹೆಮ್ಮೆಯಿಂದ ಇಂಗ್ಲಿಷ್‌ನವನು ಹೇಳಿದ : "ಕಡೆಯ ಫ್ರೆಂಚ್ ಮನುಷ್ಯನನ್ನು ಕೊಲ್ಲುವವರೆಗೆ ನಾವು ಈ ಯುದ್ಧವನ್ನು ಮಾಡುತ್ತೇವೆ." ಹಿಂದೂ ಸಾಮಾಜಿಕ ಸುಧಾರಕರು "ಅಸ್ಪೃಶ್ಯರ ನಿಮಿತ್ತಕ್ಕಾಗಿ ನಾವು ಕಡೆಯವರೆಗೆ ಹೋರಾಡುತ್ತೇವೆ." ಎಂದು ಉದ್ಘೋಷಿಸುತ್ತಾರೋ ಅದರ ಅರ್ಥ ಕಡೆಯ ಅಸ್ಪೃಶ್ಯ ಸಾಯುವವರೆಗೂ ನಾವು ಹೋರಾಡುತ್ತೇವೆ ಎಂದು. ಅದರ ಅರ್ಥ ಇದೇ ಎಂದು ನಾನು ತಿಳಿಯುತ್ತೇನೆ. ಇನ್ನೊಬ್ಬರ ಪ್ರಾಣವನ್ನು ತೆಗೆದು ನಿಮ್ಮ ನಿಮಿತ್ತಕ್ಕಾಗಿ ಹೋರಾಟ ಮಾಡುವವನು ಕದನವನ್ನು ಗೆಲ್ಲುತ್ತಾನೆಂದು ನಿರೀಕ್ಷಿಸುವುದು ನಿಮಗೆ ಕಷ್ಟವಾಗಲಾರದು. ಸ್ವಾತಂತ್ರ್ಯಕ್ಕಾಗಿ ಹೆಣಗುವಲ್ಲಿ ನಾವು ಕಾಯಬೇಕಾದರೆ ತಪ್ಪಾದ ಜಾಗದಲ್ಲಿ ಕಾದಾಡಿ ಏನು ಪ್ರಯೋಜನ ? ಹಿಂದು ಸಮಾಜವನ್ನು ಸುಧಾರಣೆ ಮಾಡುವುದು ನಮ್ಮ ಗುರಿಯೂ ಅಲ್ಲ. ನಮ್ಮ ಕಾರ್ಯಕ್ಷೇತ್ರವೂ ಅಲ್ಲ? ನಮ್ಮ ಗುರಿ ನಮಗಾಗಿ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದೇ ಆಗಿದೆ. ಬೇರೆ ಯಾರೊಂದಿಗೂ ನಮಗೆ ಯಾವ ಕೆಲಸವೂ ಇಲ್ಲ. ಮತಾಂತರದಿಂದ ನಾವು ನಮ್ಮ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಾಧ್ಯವಾದರೆ ಹಿಂದೂ ಸಮಾಜವನ್ನು ಸುಧಾರಣೆ ಮಾಡುವ ಭಾರವನ್ನು ನಾವೇಕೆ ಹೊರಬೇಕು ? ಅದಕ್ಕೋಸ್ಕರ ನಾವೇಕೆ ನಮ್ಮ ಚೈತನ್ಯ, ಬಲ ಮತ್ತು ಐಶ್ವರ್ಯವನ್ನು ತ್ಯಾಗ ಮಾಡಬೇಕು ? ನಮ್ಮ ಮುಖ್ಯ ಉದ್ದೇಶ ಹಿಂದೂ ಸಾಮಾಜಿಕ ಸುಧಾರಣೆ ಎಂದು ಯಾರೂ ನಮ್ಮನ್ನು ತಪ್ಪಾಗಿ ತಿಳಿಯಬಾರದು. ಅಸ್ಪೃಶ್ಯರಿಗಾಗಿ ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸುವುದು ನಮ್ಮ ಚಳುವಳಿಯ ಉದ್ದೇಶವಾಗಿದೆ. ಮತಾಂತರಗೊಳ್ಳದೆ ಈ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲಾಗುವುದಿಲ್ಲವೆಂಬುದು ಅಷ್ಟೇ ಸತ್ಯ. ಅಸ್ಪೃಶ್ಯರಿಗೆ ಸಮಾನತೆ ಬೇಕಿದೆ ಎಂದು ನಾನು ಒಪ್ಪುತ್ತೇನೆ. ಮತ್ತು ಸಮಾನತೆಯನ್ನು ಪಡೆದುಕೊಳ್ಳುವುದೂ ಸಹ ನಮ್ಮ ಚಳುವಳಿಯ ಉದ್ದೇಶಗಳಲ್ಲಿ ಒಂದು. ಆದರೆ ಹಿಂದೂ ಧರ್ಮದಲ್ಲಿ ಉಳಿಯುವುದರಿಂದ ಮಾತ್ರ ಈ ಸಮಾನತೆಯನ್ನು ಸಾಧಿಸಬಹುದು, ಇಲ್ಲದಿದ್ದರೆ ಇಲ್ಲ ಎಂದು ಯಾರೂ ಹೇಳಲಾಗುವುದಿಲ್ಲ. ನನ್ನ ಮುಂದೆ ಸಮಾನತೆಯನ್ನು ಸಾಧಿಸಲು ಎರಡು ಮಾರ್ಗಗಳಿವೆ. ಹಿಂದೂಗಳ ಹೊದಿಕೆಯಲ್ಲೇ ಉಳಿದುಕೊಳ್ಳುವುದು ಒಂದು ಮಾರ್ಗ ; ಇನ್ನೊಂದು ಮತಾಂತರದಿಂದ. ಹಿಂದೂ ಧರ್ಮದಲ್ಲೇ ಉಳಿದುಕೊಳ್ಳುವುದರಿಂದ ಸಮಾನತೆಯನ್ನು ಸಾಧಿಸಬಹುದಾದರೆ ಮಾಲಿನ್ಯಗೊಳಿಸುವ ಸಂಪರ್ಕವನ್ನು ತೆಗೆದು ಹಾಕುವುದರಿಂದ ಮಾತ್ರ ಉದ್ದೇಶ ಸಫಲವಾಗುವುದಿಲ್ಲ. ಅಂತರಜಾತಿ ಔತಣಗಳು ಮತ್ತು ವಿವಾಹಗಳು ನಡೆದರೆ ಮಾತ್ರ ಸಮಾನತೆಯನ್ನು ಸಾಧಿಸಬಹುದು. ಇದರ ಅರ್ಥ ಚಾತುರ್ ವರ್ಣ ತೊಡೆದು ಹಾಕಿ ಬ್ರಾಹ್ಮಣೀ ಧರ್ಮವನ್ನು ಬುಡಮೇಲು ಮಾಡಬೇಕು. ಇದು ಸಾಧ್ಯವೇ ? ಅದು ಸಾಧ್ಯವಾಗದಿದ್ದರೆ, ಹಿಂದೂ ಧರ್ಮದಲ್ಲೇ ಉಳಿದುಕೊಂಡು ಸಮಾನತೆಯ ನಡತೆಯನ್ನು ನಿರೀಕ್ಷಿಸುವುದು ಬುದ್ಧಿವಂತಿಕೆಯಾಗುತ್ತದೆಯೇ? ನಿಮ್ಮ ಪ್ರಯತ್ನಗಳಲ್ಲಿ ನೀವು ಜಯಶಾಲಿಯಾಗಬಲ್ಲಿರಾ ? ಹೋಲಿಕೆ ಮಾಡಿ ಹೇಳುವುದಾದರೆ ಮತಾಂತರದ ದಾರಿಯೇ ಅತಿ ಸುಲಭವಾದುದು. ಹಿಂದು ಸಮಾಜ ಮುಸ್ಲಿಮರನ್ನು ಸಮಾನವಾಗಿ ನಡೆಸಿಕೊಳ್ಳುತ್ತದೆ. ಹಾಗೆಯೇ ಕ್ರಿಶ್ಚಿಯನ್ನರನ್ನೂ ಕೂಡ. ಸಾಮಾಜಿಕ ಸಮಾನತೆಯನ್ನು ಮತಾಂತರ ಆಗುವುದರಿಂದ ಸ್ಪಷ್ಟವಾಗಿ ಸಾಧಿಸಬಹುದು. ಇದು ನಿಜವೆಂದು ಒಪ್ಪುವುದಾದರೆ ನೀವು ಏತಕ್ಕೆ ಮತಾಂತರದ ಸರಳವಾದ ದಾರಿಯನ್ನು ಅಳವಡಿಸಿಕೊಳ್ಳಬಾರದು. ನನ್ನ ಪ್ರಕಾರ ಮತಾಂತರ ಇಬ್ಬರಿಗೂ ಅಂದರೆ ಅಸ್ಪೃಶ್ಯರಿಗೂ ಮತ್ತು ಹಿಂದೂಗಳಿಗೂ ಸಂತೋಷವನ್ನು ತಂದುಕೊಡುತ್ತದೆ. ಎಲ್ಲಿಯವರೆಗೆ

ನೀವು ಹಿಂದೂಗಳಾಗಿಯೇ ಉಳಿಯುತ್ತೀರೋ ಅಲ್ಲಿಯವರೆಗೆ ನೀವು ಮಾಲಿನ್ಯಗೊಳಿಸುವ ಸಂಪರ್ಕಗಳು, ಆಹಾರ, ನೀರು ಅಂತರ್ಜಾತಿ ವಿವಾಹಗಳಿಗೆ ಹೆಣಗಾಡಬೇಕು ; ಮತ್ತು ಎಲ್ಲಿಯವರೆಗೆ ಈ ಕಲಹ ಮುಂದುವರೆಯುತ್ತದೆಯೋ ಅಲ್ಲಿಯವರೆಗೆ ನೀವು ಮತ್ತು ಹಿಂದೂಗಳು ಅವಿರತ ಶತ್ರುಗಳಾಗಿಯೇ ಇರುತ್ತೀರ. ಮತಾಂತರದಿಂದ ಎಲ್ಲಾ ಕಲಹಗಳ ಬೇರುಗಳು ಮಾಯವಾಗುತ್ತವೆ. ಆಗ ನಿಮಗೆ ಅವರ ದೇವಸ್ಥಾನಗಳ ಮೇಲೆ ಯಾವ ಹಕ್ಕು ಇರುವುದಿಲ್ಲ. ಅದು ನಿಮಗೆ ಬೇಕಾಗುವುದೂ ಇಲ್ಲ. ಅಂತರ್ಜಾತಿ ವಿವಾಹಗಳು ಇತ್ಯಾದಿಗಳಂತ ಸಾಮಾಜಿಕ ಹಕ್ಕುಗಳಿಗಾಗಿ ಹೆಣಗಾಡುವುದಕ್ಕೆ ಯಾವ ಕಾರಣವೂ ಇರುವುದಿಲ್ಲ. ಈ ಕಲಹಗಳು ನಿಂತು ಹೋದರೆ, ನಿಮ್ಮ ನಿಮ್ಮಲ್ಲಿ ಪ್ರೀತಿ–ವಿಶ್ವಾಸ ಬೆಳೆಯುತ್ತದೆ. ಒಂದು ಕಡೆ ಹಿಂದೂಗಳು, ಮತ್ತೊಂದು ಕಡೆ ಕ್ರಿಶ್ಚಿಯನ್ನರೂ ಮತ್ತು ಮುಸಲ್ಮಾನರು ಇವರುಗಳ ನಡುವಿನ ಸಂಬಂಧದ ಕಡೆ ದೃಷ್ಟಿ ಹಾಯಿಸಿ ಹಿಂದೂಗಳು ಹೇಗೆ ನಿಮ್ಮನ್ನು ಅವರ ದೇವಸ್ಥಾನಗಳಿಗೆ ಪ್ರವೇಶ ಮಾಡುವುದಕ್ಕೆ ಬಿಡುವುದಿಲ್ಲವೋ ಹಾಗೆಯೇ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು ಸಹ ಬಿಡುವುದಿಲ್ಲ. ಅವರೊಂದಿಗೂ ಸಹ ಅಂತರ್ಜಾತಿ ಊಟವೂ ಇಲ್ಲ./ ವಿವಾಹವೂ ಇಲ್ಲ. ಹೀಗಿದ್ದರೂ ಕೂಡ ಈ ಜನಗಳಿಗೆ ನಿಮ್ಮ ಮತ್ತು ಹಿಂದೂಗಳ ಮೇಲೆ ಪ್ರೀತಿಯೂ ಇಲ್ಲ ವಿಶ್ವಾಸವೂ ಇಲ್ಲ. ಈ ವ್ಯತ್ಯಾಸಕ್ಕೆ ಮುಖ್ಯ ಕಾರಣವೇನೆಂದರೆ ನೀವು ಹಿಂದೂ ಸಮಾಜದಲ್ಲಿ ಜೀವಿಸುತ್ತಿದ್ದು, ನಿಮ್ಮ ಧಾರ್ಮಿಕ ಹಾಗೂ ಸಾಮಾಜಿಕ ಹಕ್ಕುಗಳಿಗಾಗಿ ಹಿಂದೂ ಸಮಾಜದೊಂದಿಗೆ ಹೆಣಗಾಡಬೇಕು. ಎರಡನೆಯದಾಗಿ, ಅವರಿಗೆ ಹಿಂದೂ ಸಮಾಜದಲ್ಲಿ ಯಾವ ಸಾಮಾಜಿಕ ಹಕ್ಕುಗಳು ಅಂದರೆ ಅಂತರ್ಜಾತಿ ಭೋಜನ ಮತ್ತು ಅಂತರ್ಜಾತಿ ವಿವಾಹ ಇಲ್ಲದಿದ್ದಾಗ್ಯೂ, ಅವರನ್ನು ಅಸಮಾನರೆಂದು ಹಿಂದೂಗಳು ನಡೆಸಿಕೊಳ್ಳುವುದಿಲ್ಲ. ಆದ್ದರಿಂದ ಈ ಮತಾಂತರದಿಂದ ಸಮಾನತೆಯನ್ನು ಸಾಧಿಸಿಕೊಳ್ಳಬಹುದಾದರೆ, ಅಸ್ಪೃಶ್ಯರೂ ಇಂಥ ಸರಳವಾದ ಮತ್ತು ಸಂತೋಷದ ದಾರಿಯನ್ನು ಅಳವಡಿಸಿಕೊಂಡು ಸಮಾನತೆಯನ್ನು ಭದ್ರಮಾಡಿಕೊಳ್ಳಬಹುದು. ಈ ಕೋನದಿಂದ ಸಮಸ್ಯೆಯ ಕಡೆಗೆ ನೋಡಿದರೆ, ಮತಾಂತರವೊಂದೇ ಸ್ವಾತಂತ್ರ್ಯ ಪಡೆದುಕೊಳ್ಳುವುದಕ್ಕಿರುವ ದಾರಿ. ಇದು ಅಂತಿಮವಾಗಿ ಸಮಾನತೆಯ ಕಡೆಗೆ ಕೊಂಡೊಯ್ಯುತ್ತದೆ. ಮತಾಂತರ ಪಲಾಯನವಾದವಲ್ಲ. ಅದು ಹೇಡಿತನದ ದಾರಿಯಲ್ಲ. ಅದು ಬುದ್ಧಿವಂತಿಕೆಯ ದಾರಿ.

ಮತಾಂತರದ ವಿರುದ್ಧ ಇನ್ನೂ ಒಂದು ವಾದವನ್ನು ಮಂಡಿಸಲಾಗಿದೆ. ಜಾತಿ ಪದ್ಧತಿಯಿಂದ ಹತಾಶೆಗೊಂಡು ಮತಾಂತರವಾದರೆ ಅದಕ್ಕೇನೂ ಬೆಲೆ ಇಲ್ಲ ಎಂದು ಕೆಲವು ಹಿಂದೂಗಳು ವಾದಿಸುತ್ತಾರೆ. ನೀವು ಎಲ್ಲಿ ಹೋದರೂ ಅಲ್ಲಿ ಜಾತೀಯತೆ ಇದ್ದೇ ಇರುತ್ತದೆ ಎಂದು ಹಿಂದೂಗಳು ಹೇಳುತ್ತಾರೆ. ನೀವು ಮುಸಲ್ಮಾನರಾದರೆ ಅಲ್ಲಿ ಜಾತೀಯತೆ ಇದೆ. ನೀವು ಕ್ರಿಶ್ಚಿಯನ್ ಆದರೆ ಅಲ್ಲೂ ಕೂಡ ಜಾತೀಯತೆ ಇದೆ. ದುರದೃಷ್ಟವಶಾತ್ ಈ ದೇಶದಲ್ಲಿನ ಇತರ ಧರ್ಮಗಳಲ್ಲಿಯೂ ಕೂಡ ಜಾತೀಯತೆ ನುಸುಳಿಕೊಂಡು ಬಿಟ್ಟಿದೆ. ಆದರೆ ಮಹತ್ತರವಾಗಿ ಉಳಿಸಿ ಬೆಳೆಸಿರುವ ಈ ಪಾಪದ ಹೊಣೆಯನ್ನು ಹಿಂದೂಗಳೇ ಹೊರಬೇಕು. ಈ ಕಾಯಿಲೆ ಮೊದಲು ಹಿಂದೂಗಳಲ್ಲಿ ಹುಟ್ಟಿ, ಆಮೇಲೆ ಈ ಸೋಂಕು ಇತರ ಧರ್ಮಗಳಿಗೆ ಹರಡಿತು. ಅವರ ದೃಷ್ಟಿಯಲ್ಲಿ ಅವರು ಇದರಲ್ಲಿ ಅಸಹಾಯಕರು. ಮುಸಲ್ಮಾನರಲ್ಲಿ ಮತ್ತು ಕ್ರಿಶ್ಚಿಯನ್‌ರಲ್ಲಿ ಏಕಪ್ರಕಾರವಾಗಿ ಜಾತಿಗಳು ಅಸ್ತಿತ್ವದಲ್ಲಿ ಇದ್ದರೂ ಸಹ ಅದನ್ನು ಹಿಂದೂಗಳ ಜಾತಿ ಪದ್ಧತಿಗೆ ಹೋಲಿಸುವುದು ಅಲ್ಪತನವಾಗುತ್ತದೆ. ಮುಸಲ್ಮಾನರ ಮತ್ತು ಕ್ರಿಶ್ಚಿಯನ್ನರ ಜಾತಿ ಪದ್ಧತಿಗೂ ಮತ್ತು ಹಿಂದೂಗಳ ಜಾತಿ ಪದ್ಧತಿಗೂ ಬಹು ದೊಡ್ಡ ಬೇಧವಿದೆ. ಮೊದಲನೆಯದಾಗಿ ಕ್ರಿಶ್ಚಿಯನ್ ಮತ್ತು ಮುಸಲ್ಮಾನರಲ್ಲಿ ಜಾತಿ ಪದ್ಧತಿ ಇದ್ದರೂ ಕೂಡ ಯಾರೂ ಅದನ್ನು ಅವರ ಸಾಮಾಜಿಕ ವ್ಯವಸ್ಥೆಯ ಪ್ರಧಾನ ಲಕ್ಷಣವೆಂದು ಹೇಳುವುದಿಲ್ಲ. "ನೀವು

ಯಾರು'' ಎಂದು ಯಾರಾದರೂ ಕೇಳಿದರೆ "ನಾನು ಮುಸ್ಲಿಮ್" ಅಥವಾ "ನಾನು ಕ್ರಿಶ್ಚಿಯನ್" ಎನ್ನುವ ಉತ್ತರ ಸಾಕಾಗುತ್ತದೆ. ಅವನ ಜಾತಿ ಯಾವುದು ಎಂದು ಕೇಳುವ ಅವಶ್ಯಕತೆ ಯಾರಿಗೂ ಬೀಳುವುದಿಲ್ಲ. ಆದರೆ ಇದೆ ಪ್ರಶ್ನೆಯನ್ನು ಹಿಂದೂ ಒಬ್ಬನಿಗೆ ಕೇಳಿದರೆ "ನಾನು ಹಿಂದೂ" ಎನ್ನುವ ಉತ್ತರ ಸಾಕಾಗುವುದಿಲ್ಲ. "ನಿನ್ನ ಜಾತಿ ಯಾವುದು" ಎಂದು ಮುಂದಕ್ಕೆ ಕೇಳಲಾಗುತ್ತದೆ. ಈ ಪ್ರಶ್ನೆಗೆ ಉತ್ತರ ಸಿಗದ ಹೊರತು ಯಾರಿಗೂ ಅವನ ಸಾಮಾಜಿಕ ಅಂತಸ್ತಿನ ಬಗ್ಗೆ ಕಲ್ಪನೆ ಬರುವುದಿಲ್ಲ. ಇದರಿಂದ ಸಾದೃಶವಾಗುವುದೆಂದರೆ, ಹಿಂದೂ ಧರ್ಮದಲ್ಲಿ ಜಾತಿಗೆ ಮೊದಲ ಪ್ರಾಮುಖ್ಯತೆ ಇದೆ ಎಂದು ಗೊತ್ತಾಗುತ್ತದೆ. ಅದೇ ಕಾಲಕ್ಕೆ ಅದು ಕ್ರಿಶ್ಚಿಯನ್ ಮತ್ತು ಮುಸ್ಲಿಮ್ ಧರ್ಮಗಳಲ್ಲಿ ಎಷ್ಟು ಗೌಣ ಎಂದೂ ಸಹ ವೇದ್ಯವಾಗುತ್ತದೆ. ಮುಸಲ್ಮಾನರ ಮತ್ತು ಕ್ರಿಶ್ಚಿಯನ್ನರ ಜಾತಿ ಪದ್ಧತಿಗೂ ಮತ್ತು ಹಿಂದೂಗಳ ಜಾತಿ ಪದ್ಧತಿಗೂ ಇನ್ನೂ ಒಂದು ವ್ಯಾತ್ಯಾಸ ಇದೆ. ಹಿಂದೂಗಳಲ್ಲಿನ ಜಾತಿ ಪದ್ಧತಿಗೆ ಹಿಂದೂ ಧರ್ಮದ ಅಸ್ತಿಭಾರವಿದೆ; ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಧರ್ಮಗಳಲ್ಲಿ ಜಾತಿ ಪದ್ಧತಿಗೆ ಯಾವ ಮಂಜುರಾತಿಯೂ ಇಲ್ಲ. ಹಿಂದೂಗಳು ಜಾತಿ ಪದ್ಧತಿಯನ್ನು ಕಿತ್ತು ಹಾಕುತ್ತೇವೆ ಎಂದರೂ ಅದಕ್ಕೆ ಅವರ ಧರ್ಮ ಅಡ್ಡಿ ಬರುತ್ತದೆ. ಅದರ ಬದಲಿಗೆ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು ಅವರ ಸಮಾಜದಲ್ಲಿ ಜಾತಿಪದ್ಧತಿಯನ್ನು ಅಳಿಸಿ ಹಾಕುವುದಕ್ಕೆ ಚಳುವಳಿಯನ್ನು ಪ್ರಾರಂಭಿಸಿದರೆ ಅವರ ಧರ್ಮಗಳು ಇದಕ್ಕೆ ಅಡ್ಡಿಪಡಿಸುವುದಿಲ್ಲ. ಜಾತಿಗಳನ್ನು ನಿರ್ಮೂಲ ಮಾಡುವುದಕ್ಕೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಅವರ ಧರ್ಮಗಳನ್ನೇನೂ ನಾಶಪಡಿಸಬೇಕಾಗಿಲ್ಲ. ಪ್ರತಿಯಾಗಿ, ಅವರ ಧರ್ಮಕ್ಕೆ ಬಹುಮಟ್ಟಿಗೆ ಬೆಂಬಲ ಕೊಡುತ್ತದೆ. ಜಾತಿಪದ್ಧತಿ ಎಲ್ಲೆಲ್ಲಿಯೂ ಇದೆ ಎಂದು ಪರಿಭಾವಿಸಿಕೊಂಡರೂ ಸಹ, ಅದೇ ಕಾರಣಕ್ಕಾಗಿ ಹಿಂದೂಗಳ ಹೊದಿಕೆಯೊಳಗೆ ಉಳಿದುಕೊಳ್ಳಬೇಕೆಂದು ನಿರ್ಣಯಿಸಬೇಕಾಗಿಲ್ಲ. ಜಾತಿಪದ್ಧತಿ ನಿರುಪಯೋಗಿಯಾದರೆ, ಆಗ ನಾವು ಒಂದು ತಾರ್ಕಿಕ ಮುಕ್ತಾಯಕ್ಕೆ ಬರಲೇಬೇಕು; ಅದೆಂದರೆ ಯಾವ ಸಮಾಜದಲ್ಲಿ ಜಾತಿಪದ್ಧತಿಯಲ್ಲಿ ತೀವ್ರತೆ ಇರುವುದಿಲ್ಲವೋ, ಇಲ್ಲವೇ ಎಲ್ಲಿ ಜಾತಿಗಳನ್ನು ಬೇಗನೇ ಮತ್ತು ಸುಲಭವಾಗಿ, ಸರಳ ರೀತಿಯಲ್ಲಿ ಅಳಿಸಿಹಾಕಬಹುದೋ ಆ ಸಮಾಜವನ್ನು ನಾವು ಒಪ್ಪಿಕೊಳ್ಳಬೇಕು. ಮತಾಂತರದಿಂದ ಮಾತ್ರ ಏನಾಗುತ್ತದೆ ಎಂದು ಕೆಲವು ಹಿಂದೂಗಳು ಕೇಳುತ್ತಾರೆ. ಮತಾಂತರದ ಬದಲು ನಿಮ್ಮ ಶೈಕ್ಷಣಿಕ ಮತ್ತು ಆರ್ಥಿಕ ಅಂತಸ್ತನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಪಡಿ ಎಂದು ಹೇಳುತ್ತಾರೆ. ಆದುದರಿಂದ ಅದನ್ನು ಚರ್ಚೆ ಮಾಡುವುದು ಅವಶ್ಯಕವೆಂದು ನಾನು ಭಾವಿಸುತ್ತೇನೆ. ಮೊದಲನೆಯ ಪ್ರಶ್ನೆಯೆಂದರೆ, ನಿಮ್ಮ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಉತ್ತಮಪಡಿಸುವವರು ಯಾರು ಎಂದು, ನೀವೋ ಅಥವಾ ಮೇಲೆ ಕಂಡಂತೆ ವಾದಮಾಡಿದವರೋ? ನಿಮಗೆ ಹೀಗೆ ಬುದ್ಧಿವಾದವನ್ನು ಹೇಳುವವರು, ತುಟಿಗೆ ತುಪ್ಪ ಸವರುವುದನ್ನು ಬಿಟ್ಟು ಇನ್ನೇನನ್ನೂ ಮಾಡಲು ಸಾಧ್ಯವಿಲ್ಲವೆಂದು ಅನಿಸುತ್ತದೆ. ಅವರ ಕಡೆಯಿಂದ ಈ ನಿಟ್ಟಿನಲ್ಲಿ ಯಾವುದೇ ಪ್ರಯತ್ನಗಳು ನನ್ನ ಕಣ್ಣಿಗೆ ಬೀಳುತ್ತಿಲ್ಲ. ಬದಲಿಗೆ ಪ್ರತಿಯೊಬ್ಬ ಹಿಂದೂ ತನ್ನ ಜಾತಿಯವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಾನೆ. ಬ್ರಾಹ್ಮಣರು ಬ್ರಾಹ್ಮಣ ಹೆಂಗಸರಿಗಾಗಿ ಪ್ರಸೂತಿ ಗೃಹಗಳನ್ನು ಸ್ಥಾಪಿಸಲು ನಿರತರಾಗಿದ್ದಾರೆ, ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಿಸುತ್ತಾರೆ, ನಿರುದ್ಯೋಗಿ ಬ್ರಾಹ್ಮಣರಿಗೆ ಉದ್ಯೋಗ ದೊರಕಿಸಿ ಕೊಡುತ್ತಾರೆ. ಸಾರಸ್ವತರು (ಬ್ರಾಹ್ಮಣರ ಜಾತಿಗಳಲ್ಲಿ ಒಂದು)ಅದನ್ನೇ ಮಾಡುತ್ತಿದ್ದಾರೆ. ಕಾಯಸ್ತರು ಮತ್ತು ಮರಾಠರು ಅದನ್ನೇ ಮಾಡುತ್ತಿದ್ದಾರೆ. ಪ್ರತಿಯೊಬ್ಬನೂ ತನ್ನ ಯೋಗಕ್ಷೇಮವನ್ನು ಮಾತ್ರ ನೋಡಿಕೊಳ್ಳುತ್ತಾನೆ. ಆಶ್ರಯದಾತರಿಲ್ಲದವರಿಗೆ ದೇವರೇ ಗತಿ.ನೀವೇ ಮೇಲಕ್ಕೆ ಏಳಬೇಕು, ನಿಮ್ಮ ಸಹಾಯಕ್ಕೆ ಬೇರೆ ಯಾರೂ ಬರುವುದಿಲ್ಲ. ಇದು ಪ್ರಸ್ತುತದಲ್ಲಿ ನಮ್ಮ ಸಮಾಜದ ಸ್ಥಿತಿ. ಪರಿಸ್ಥಿತಿ ಹೀಗೆ ಇರುವಾಗ, ಈ ಜನಗಳ

ಬುದ್ಧಿಮಾತಿಗೆ ಕಿವಿಗೊಡುವುದರಿಂದ ಏನು ಪ್ರಯೋಜನ? ಇಂಥ ಬುದ್ಧಿವಾದಕ್ಕೆ ನಿಮ್ಮ ದಾರಿಯನ್ನು ತಪ್ಪಿಸಿ ನಿಮ್ಮ ಸಮಯವನ್ನು ವ್ಯರ್ಥಗೊಳಿಸುವುದನ್ನು ಬಿಟ್ಟು ಬೇರೆ ಯಾವ ಉದ್ದೇಶವೂ ಇಲ್ಲ. ನಿಮ್ಮನ್ನು ನೀವು ಉತ್ತಮಪಡಿಸಿಕೊಳ್ಳಬೇಕಾದರೆ ಹಿಂದೂ ಜನಗಳ ಈ ಗೊಡ್ಡುಹರಟೆಗೆ ಕಿವಿಗೊಡಬೇಕಾಗಿಲ್ಲ. ಅಲ್ಲದೆ ನಿಮಗೆ ಬುದ್ಧಿವಾದ ಹೇಳಲು ಅವರಿಗೆ ಯಾವ ಹಕ್ಕೂ ಇಲ್ಲ. ಇಷ್ಟು ಹೇಳಿದ್ದು ಸಾಕೆನಿಸಿದರೂ, ಇದನ್ನು ಇಲ್ಲೇ ಬಿಡಲು ನಾನು ಇಚ್ಛಿಸುತ್ತಿಲ್ಲ. ಈ ವಾದವನ್ನು ಖಂಡಿಸಬೇಕಾದ ಅವಶ್ಯಕತೆ ಇದೆ ಎಂದು ನನಗೆ ಅನಿಸುತ್ತಿದೆ.

ಮತಾಂತರದಿಂದ ಏನಾಗುತ್ತದೆ ಎಂಬ ಕೆಲವು ಹಿಂದೂಗಳ ಅವಿವೇಕದ ಪ್ರಶ್ನೆಯಿಂದ ನನಗೆ ಬಹಳ ಆಶ್ಚರ್ಯವಾಗುತ್ತದೆ. ಬಹುಪಾಲು ಸಿಖ್ಖರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಮೊದಲಿಗೆ ಹಿಂದೂಗಳೇ ಆಗಿದ್ದು, ಅವರಲ್ಲಿ ಅನೇಕರು ಶೂದ್ರರುಗಳು, ಅಸ್ಪೃಶ್ಯರೂ, ಆಗಿದ್ದರು. ಹಿಂದೂ ಧರ್ಮವನ್ನು ಬಿಟ್ಟು ಸಿಖ್‌ಮತ, ಕ್ರಿಶ್ಚಿಯನ್ ಮತಕ್ಕೆ ಸೇರಿಕೊಂಡವರು ಯಾವ ಪ್ರಗತಿಯನ್ನು ಕಂಡೇ ಇಲ್ಲವೆಂದು ಹೇಳುತ್ತಾರೇನು? ಇದು ನಿಜವಲ್ಲದಿದ್ದರೆ ಮತ್ತು ಅವರ ಪರಿಸ್ಥಿತಿಯನ್ನು ಗಮನಿಸಿದಾಗ ಉತ್ತಮಿಕೆಯನ್ನು ಮತಾಂತರ ತಂದುಕೊಟ್ಟಿದೆಯೆಂದು ಒಪ್ಪಿಕೊಳ್ಳುವುದಾದರೆ, ಆಗ ಅಸ್ಪೃಶ್ಯರಿಗೆ ಮತಾಂತರದಿಂದ ಯಾವ ಉಪಯೋಗವೂ ಇಲ್ಲ ಎಂದು ಹೇಳುವುದಕ್ಕೆ ಯಾವ ಅರ್ಥವೂ ಇಲ್ಲ. ಅವರು ಇದನ್ನು ಕುರಿತು ಯೋಚಿಸಬೇಕು. ಮತಾಂತರದಿಂದ ಏನೂ ಆಗುವುದಿಲ್ಲ ಎಂಬ ಹೇಳಿಕೆಯ ಸೂಚ್ಯಾರ್ಥ ಧರ್ಮವೇ ಅರ್ಥಶೂನ್ಯ ಎಂದಾಗುತ್ತದೆ. ಧರ್ಮವೇ ಅರ್ಥಶೂನ್ಯ ಎಂದು ಅವರು ವಾದಿಸುವುದಾದರೆ, ಅಸ್ಪೃಶ್ಯರನ್ನು ಹಿಂದೂ ಧರ್ಮದಲ್ಲಿಯೇ ಉಳಿದುಕೊಳ್ಳಿ ಎಂದು ಏಕೆ ಬಲವಂತ ಮಾಡುತ್ತಾರೆ, ಏಕೆ ಅದರ ಪರವಾಗಿ ಮಾತನಾಡುತ್ತಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಲಾಭವೂ ಇಲ್ಲದಿದ್ದರೆ, ನಷ್ಟವೂ ಇಲ್ಲದಿದ್ದರೆ, ಧರ್ಮದಲ್ಲಿ ಅವರಿಗೆ ಯಾವ ಅರ್ಥವೂ ಕಾಣಬರದಿದ್ದರೆ ಯಾವ ಧರ್ಮವನ್ನು ಬಿಡಲಾಗಿದೆ, ಯಾವ ಧರ್ಮವನ್ನು ಒಪ್ಪಿಕೊಳ್ಳಲಾಗಿದೆ ಎಂದು ಅನವಶ್ಯಕವಾಗಿ ಅವರು ಏಕೆ ವಾದ ಮಾಡಬೇಕು? ಮತಾಂತರದಿಂದ ಮಾತ್ರವೇ ಏನಾಗುತ್ತದೆ ಎಂದು ನಮ್ಮನ್ನು ಕೇಳುವ ಹಿಂದೂಗಳನ್ನು ನಾವೂ ಕೂಡ ಅವರನ್ನು ಮರುಪ್ರಶ್ನೆ ಮಾಡಬಹುದು. ಸ್ವಯಂ ಆಡಳಿತದ ಸರ್ಕಾರದಿಂದ ಮಾತ್ರ ಏನನ್ನು ಸಾಧಿಸಬಹುದು ಎಂದು. ಭಾರತದಲ್ಲಿನ ಜನಗಳು ಅಸ್ಪೃಶ್ಯರಂತೆಯೇ, ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಬೇಕಾದ ಅವಶ್ಯಕತೆ ಇದೆ ಎಂದು ಭಾವಿಸಿದಂತೆ, ಸ್ವಯಂ ಆಡಳಿತದ ಸರ್ಕಾರದಿಂದ ಆಗಬೇಕಾದ ಒಳಿತೇನಿದೆ? ಸ್ವಯಂಆಡಳಿತ ಸರ್ಕಾರದಿಂದ ಮಾತ್ರ ದೇಶ ಪ್ರಯೋಜನ ಪಡೆಯಬೇಕಾದರೆ, ಅಸ್ಪೃಶ್ಯರೂ ಕೂಡ ಮತಾಂತರದಿಂದ ಪ್ರಯೋಜನ ಪಡೆಯುತ್ತಾರೆ. ಈ ಸಮಸ್ಯೆಯನ್ನು ಕುರಿತು ಆಳವಾಗಿ ಆಲೋಚನೆ ಮಾಡಿದ ಮೇಲೆ, ಭಾರತಕ್ಕೆ ಹೇಗೆ ಸ್ವಯಂ ಆಡಳಿತದ ಸರ್ಕಾರದ ಅವಶ್ಯಕತೆ ಇದೆಯೋ ಹಾಗೆಯೇ ಅಸ್ಪೃಶ್ಯರಿಗೆ ಮತಾಂತರದ ಅವಶ್ಯಕತೆ ಇದೆ ಎಂದು ಪ್ರತಿಯೊಬ್ಬರೂ ಒಪ್ಪಲೇ ಬೇಕು. ಮತಾಂತರದ ಮತ್ತು ಸ್ವಯಂಆಡಳಿತ ಸರ್ಕಾರದ ಉದ್ದೇಶ ಒಂದೇ. ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದೇ ಈ ಎರಡರ ಅಂತಿಮಗುರಿ. ಮಾನವ ಕುಲಕ್ಕೆ ಅವರ ಜೀವಕ್ಕೆ ಸ್ವಾತಂತ್ರ್ಯದ ಅವಶ್ಯಕತೆ ಇದ್ದರೆ, ಸಂಪೂರ್ಣ ಸ್ವಾತಂತ್ರ್ಯವನ್ನು ತಂದುಕೊಡುವ ಅಸ್ಪೃಶ್ಯರ ಮತಾಂತರವನ್ನು ಯಾವ ಬೆಲೆಯೂ ಇಲ್ಲದ್ದು ಎಂದು ಹೇಳುವುದು ಊಹಾತೀತವಾದದ್ದು.

**ಮೊದಲು ಯಾವುದು? ಪ್ರಗತಿಯೋ ಅಥವಾ ಮತಾಂತರವೊ**

ಮೊದಲು ಯಾವುದನ್ನು ಪ್ರಾರಂಭಿಸಬೇಕು – ಆರ್ಥಿಕ ಮುನ್ನಡೆಯೋ ಅಥವಾ ಮತಾಂತರವೋ ಎಂಬ ಪ್ರಶ್ನೆಯನ್ನು ಚರ್ಚೆಮಾಡಬೇಕಾದ ಅವಶ್ಯಕತೆ ಇದೆ ಎಂದು ನನಗನಿಸುತ್ತದೆ. ಆರ್ಥಿಕ ಮುನ್ನಡೆ

ಮೊದಲು ಆಗಬೇಕು ಎಂಬ ಅಭಿಪ್ರಾಯಕ್ಕೆ ನನ್ನ ಸಹಮತವಿಲ್ಲ. ಧಾರ್ಮಿಕ ಮತಾಂತರ ಮೊದಲೋ ಆರ್ಥಿಕ ಮುನ್ನಡೆ ಮೊದಲೋ ಎಂಬ ವಿವಾದಾಂಶ ರಾಜಕೀಯ ಸುಧಾರಣೆ ಮೊದಲೋ ಸಾಮಾಜಿಕ ಸುಧಾರಣೆ ಮೊದಲೋ ಎಂಬ ವಿವಾದದಷ್ಟೇ ಶುಷ್ಕವಾಗಿದೆ. ಸಮಾಜದ ಅಭಿವೃದ್ಧಿ ಮತ್ತು ಮುನ್ನಡೆಗಾಗಿ ಅನೇಕ ಮಾರ್ಗಗಳಿವೆ ಮತ್ತು ಪ್ರತಿಯೊಂದು ಮಾರ್ಗಕ್ಕೂ ತನ್ನದೇ ಆದ ಮಹತ್ವವಿದೆ. ಆದರೆ ಈ ಮಾರ್ಗಗಳನ್ನು ಅನುಸರಿಸುವುದಕ್ಕೆ ಯಾವುದೇ ನಿರ್ದಿಷ್ಟ ಕ್ರಮವನ್ನು ಅನುಸರಿಸಲಾಗುವುದಿಲ್ಲ. ಆದರೆ ಮತಾಂತರ ಮತ್ತು ಆರ್ಥಿಕ ಸುಧಾರಣೆ ಕುರಿತು ಯಾರಾದರೂ ಇಂಥದೇ ಕ್ರಮವನ್ನು ಅನುಸರಿಸಬೇಕೆಂದು ಒತ್ತಾಯಿಸಿದರೆ, ನಾನು ಒಲವು ತೋರುವುದು ಮೊದಲು ಮತಾಂತರಕ್ಕೆ, ನಂತರ ಆರ್ಥಿಕ ಸುಧಾರಣೆಗೆ ಎಲ್ಲಿಯವರೆಗೆ ಅಸ್ಪೃಶ್ಯನೆಂಬ ಕಳಂಕ ನಿಮ್ಮ ಮೇಲೆ ಇರುತ್ತದೆಯೋ, ಅಲ್ಲಿಯವರೆಗೆ ನೀವು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗುತ್ತದೆಯೇ ಎಂಬುದು ನನಗೆ ತಿಳಿಯದಾಗಿದೆ. ನೀವೇನಾದರೂ ಒಂದು ಅಂಗಡಿಯನ್ನು ತೆರೆದರೆ, ಅಂಗಡಿಯಾತ ಅಸ್ಪೃಶ್ಯನೆಂದು ಗೊತ್ತಾದರೆ, ಯಾರೂ ನಿಮ್ಮಿಂದ ಏನನ್ನೂ ಕೊಳ್ಳುವುದಿಲ್ಲ. ನಿಮ್ಮಲ್ಲಿ ಯಾರಾದರೂ ಕೆಲಸಬೇಕೆಂದು ಅರ್ಜಿ ಹಾಕಿದರೆ, ಅರ್ಜಿದಾರ ಅಸ್ಪೃಶ್ಯನೆಂದು ಗೊತ್ತಾದರೆ, ನಿಮಗೆ ಕೆಲಸ ಸಿಗುವುದಿಲ್ಲ. ಯಾರಾದರೂ ತಮ್ಮ ಜಮೀನನ್ನು ಮಾರಾಟ ಮಾಡಬೇಕೆಂದಿದ್ದು, ನಿಮ್ಮಲ್ಲಿ ಒಬ್ಬರು ಅದನ್ನು ಕೊಂಡುಕೊಳ್ಳುವ ಪ್ರಸ್ತಾಪ ಮಾಡಿದರೆ, ಖರೀದಿದಾರನು ಅಸ್ಪೃಶ್ಯನೆಂದು ಗೊತ್ತಾದರೆ, ಯಾರೂ ನಿಮಗೆ ಜಮೀನನ್ನು ಮಾರಾಟ ಮಾಡುವುದಿಲ್ಲ. ಆರ್ಥಿಕ ಪ್ರಗತಿಗೆ ನೀವು ಯಾವುದೇ ವಿಧಾನವನ್ನು ಬಳಸಿಕೊಂಡರೂ ನಿಮ್ಮ ಅಸ್ಪೃಶ್ಯತೆಯಿಂದಾಗಿ ನೀವು ಹತಾಶೆಗೊಳಗಾಗುತ್ತೀರಿ. ಅಸ್ಪೃಶ್ಯತೆಯೆಂಬುದು ನಿಮ್ಮ ಪ್ರಗತಿಯ ಹಾದಿಯಲ್ಲಿ ಒಂದು ಶಾಶ್ವತವಾದ ಬಂಡೆ. ಅದನ್ನು ನಿವಾರಿಸದ ಹೊರತು ನಿಮ್ಮ ದಾರಿ ಸುಗಮವಾಗುವುದಿಲ್ಲ ಮತ್ತು ಮತಾಂತರವಿಲ್ಲದೆ ಈ ತಡೆಗೋಡೆಯನ್ನು ತೆಗೆಯಲು ಸಾಧ್ಯವಾಗುವುದಿಲ್ಲ. ನಿಮ್ಮಲ್ಲಿನ ಯುವಕರಲ್ಲಿ ಕೆಲವರು ಶಿಕ್ಷಣ ಪಡೆಯುವುದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಆ ಉದ್ದೇಶಕ್ಕಾಗಿ ತಮಗೆ ಸರಿಯೆಂದು ತೋರುವ ಯಾವುದೇ ಮೂಲದಿಂದ ಹಣವನ್ನು ಸಂಗ್ರಹಿಸಲು ಪ್ರಯತ್ನ ಮಾಡುತ್ತಿದ್ದಾರೆ. ಹಣದ ಆಮಿಶದಿಂದಾಗಿ ಕೆಲವರು ಅಸ್ಪೃಶ್ಯರಾಗಿಯೇ ಉಳಿಯುವತ್ತ ವಾಲಿಕೊಂಡು ತಮ್ಮ ಪ್ರಗತಿಯನ್ನು ಸಾಧಿಸಬೇಕೆಂದುಕೊಂಡಿದ್ದಾರೆ.

ಈ ಯುವಕರಿಗೆ ನಾನೊಂದು ಪ್ರಶ್ನೆಯನ್ನು ಕೇಳಬೇಕೆಂದು ಬಯಸುತ್ತೇನೆ. ನಿಮ್ಮ ವಿಧ್ಯಾಭ್ಯಾಸ ಮುಗಿದ ಮೇಲೆ ನಿಮ್ಮ ಅರ್ಹತೆಗೆ, ಓದಿಗೆ ತಕ್ಕಂತೆ ನಿಮಗೆ ಕೆಲಸ ಸಿಗದೇ ಹೋದರೆ ನಿಮ್ಮ ವಿಧ್ಯಾಭ್ಯಾಸವನ್ನು ಕಟ್ಟಿಕೊಂಡು ಏನು ಮಾಡುತ್ತೀರಿ? ಈ ದಿನಗಳಲ್ಲಿ, ನಮ್ಮಲ್ಲಿ ವಿಧ್ಯಾಭ್ಯಾಸ ಪಡೆದುಕೊಂಡವರಲ್ಲಿ ಅನೇಕರು ನಿರುದ್ಯೋಗಿಗಳಾಗಿರುವುದಕ್ಕೆ ಕಾರಣವೇನು? ನನ್ನನ್ನು ಕೇಳಿದರೆ, ಈ ನಿರುದ್ಯೋಗಕ್ಕೆ ಪ್ರಮುಖವಾದ ಕಾರಣ ಅಸ್ಪೃಶ್ಯತೆ ಮಾತ್ರ. ನಿಮ್ಮ ಒಳ್ಳೆಯ ತನವನ್ನು ನಿಮ್ಮ ನೈತಿಕತೆಯನ್ನು ಮಾನ್ಯ ಮಾಡುವುದಿಲ್ಲ. ಇದಕ್ಕೆ ಕಾರಣ ನಿಮ್ಮ ಅಸ್ಪೃಶ್ಯತೆ ನಿಮ್ಮ ಮೌಲ್ಯ. ನಿಮ್ಮ ಸಾಮರ್ಥ್ಯಕ್ಕೆ ನಿಮ್ಮ ಅಸ್ಪೃಶ್ಯತೆಯ ಕಾರಣದಿಂದ ಯಾವ ಅವಕಾಶವೂ ಇಲ್ಲ. ನಿಮ್ಮ ಅಸ್ಪೃಶ್ಯತೆಯ ಕಾರಣದಿಂದಾಗಿಯೇ ನಿಮ್ಮನ್ನು ಮಿಲಿಟರಿ ಸೇವೆಯಿಂದ ಹೊರದಬ್ಬಲಾಗಿದೆ. ನಿಮ್ಮ ಅಸ್ಪೃಶ್ಯತೆಯ ಕಾರಣದಿಂದಾಗಿಯೇ ನಿಮ್ಮನ್ನು ಪೋಲೀಸ್ ಇಲಾಖೆಯಲ್ಲಿ ನೇಮಕ ಮಾಡಿಕೊಳ್ಳುತ್ತಿಲ್ಲ. ಅಸ್ಪೃಶ್ಯತೆಯ ಕಾರಣ ನಿಮಗೆ ಒಬ್ಬ ಜವಾನನ ಕೆಲಸವೂ ಸಿಗುತ್ತಿಲ್ಲ. ನಿಮ್ಮ ಅಸ್ಪೃಶ್ಯತೆಯ ಕಾರಣದಿಂದಾಗಿ ನಿಮಗೆ ಮೇಲ್ದರ್ಜೆಗೆ ಬಡ್ತಿ ಸಿಗುತ್ತಿಲ್ಲ. ಅಸ್ಪೃಶ್ಯತೆಯೆಂಬುದು ಒಂದು ರೀತಿಯ ಶಾಪ. ನೀವು ಸಂಪೂರ್ಣವಾಗಿ ಹಾಳಾಗಿ ಹೋಗಿದ್ದೀರ. ನಿಮ್ಮ ಸದ್ಗುಣ, ಸೌಶೀಲಗಳೆಲ್ಲಾ ಧೂಳಾಗಿ ಹೋಗಿವೆ. ಇಂಥ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚಿಗೆ ಯಾವ ಅರ್ಹತೆಗಳನ್ನು ಪಡೆದುಕೊಳ್ಳಬಲ್ಲಿರಿ?

ಪಡೆದುಕೊಂಡರೂ ಸಹ ಏನು ಉಪಯೋಗ? ನಿಮ್ಮ ಓದಿಗೆ, ವಿದ್ಯಾರ್ಹತೆಗಳಿಗೆ ಬೆಲೆ ಸಿಕ್ಕಬೇಕಾದರೆ; ನಿಮ್ಮ ವಿಧ್ಯಾಭ್ಯಾಸ ಸ್ವಲ್ಪವಾದರೂ ಉಪಯೋಗಕ್ಕೆ ಬರಬೇಕೆಂದರೆ; ನಿಮ್ಮ ಆರ್ಥಿಕ ಮುನ್ನಡೆಯ ಬಾಗಿಲುಗಳು ತೆರೆಯಬೇಕಾದರೆ ಅಸ್ಪೃಶ್ಯತೆಯ ಸಂಕೋಲೆಗಳನ್ನು ನೀವು ಕಿತ್ತೆಸೆಯಲೇಬೇಕು.

**ಮತಾಂತರದ ವಿರುದ್ಧದ ಅನುಮಾನಗಳು**

ಇಲ್ಲಿಯವರೆಗೆ ಮತಾಂತರದ ಟೀಕಾಕಾರರು ಮಾಡಿದ ವಾದಗಳನ್ನು ಚರ್ಚೆ ಮಾಡಿದ್ದಾಯಿತು. ಈಗ ನಾನು ಮತಾಂತರದ ಪರವಾಗಿ ಅನುಕಂಪವಿರುವವರು ವ್ಯಕ್ತಪಡಿಸಿದ ಕೆಲವು ಅನುಮಾನಗಳ ಬಗ್ಗೆ ವಿಷದೀಕರಣ ಮಾಡಲು ಬಯಸುತ್ತೇನೆ. ಮೊದಲನೆಯದಾಗಿ ಮಹರ್‌ಗಳಲ್ಲಿ ಕೆಲವರು ತಮ್ಮ ವತನ್‌ನ ಪಾಡು (ಗ್ರಾಮ ಸೇವಕರ ಅನುವಂಶೀಯ ಹಕ್ಕು) ಏನಾಗಬಹುದೆಂದು ಚಿಂತಿತರಾಗಿದ್ದರೆಂದು ಕೇಳಿದ್ದೇನೆ. ಮತಾಂತರವನ್ನು ವಿರೋಧಿಸುತ್ತಿರುವ ಕೆಲವು ಉತ್ತಮ ಜಾತಿಯ ಹಿಂದೂಗಳು, ಹಳ್ಳಿಗಳಲ್ಲಿನ ಮಹರ್‌ಗಳನ್ನು ಅವರೇನಾದರೂ ಹಿಂದೂ ಧರ್ಮವನ್ನು ಬಿಟ್ಟರೆ, ಅವರು ಗ್ರಾಮಸೇವಕರಾಗಿ ಸೇವೆ ಮಾಡುವ ಹಕ್ಕುಗಳನ್ನು ಕಳೆದುಕೊಳ್ಳುತ್ತಾರೆಂದು ಹೆದರಿಸುತ್ತಿರುವ ಬಗ್ಗೆ ಕೇಳಿದ್ದೇನೆ. ಮಹರ್‌ಗಳ ವತನ್ ಹಕ್ಕನ್ನು ಕಿತ್ತು ಹಾಕಿದರೆ, ನನಗೆ ಲೇಶ ಮಾತ್ರ ಚಿಂತೆಯಿಲ್ಲವೆಂದು ನಿಮಗೆಲ್ಲಾ ಗೊತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಮಹರ್‌ಗಳ ಅದೃಷ್ಟವನ್ನು ಮುಳುಗಿಸಿರುವುದು ಮಹರ್ ವತನ್ ಎಂದು ನಾನು ಪ್ರತಿಪಾದಿಸುತ್ತಲೇ ಬಂದಿದ್ದೇನೆ. ಯಾವ ದಿನ ಮಹರ್‌ಕಿಯ ಸಂಕೋಲೆ ಕಳಚಿಕೊಳ್ಳುತ್ತದೋ, ಆ ದಿನ ನಿಮ್ಮ ಬಿಡುಗಡೆಯ ದಾರಿ ತೆರೆದುಕೊಳ್ಳುತ್ತದೆಂದು ನಾನು ಭಾವಿಸುತ್ತೇನೆ. ಹೇಗಾದರೂ ಯಾರಿಗೆ ಮಹರ್ ವತನ್ ಬೇಕಿದೆಯೋ, ಈ ಮತಂತಾರದಿಂದಾಗಿ ಅವರ ವತನ್ ಹಕ್ಕಿಗೆ ಚ್ಯುತಿ ಬರುವುದಿಲ್ಲವೆಂದು ನಾನು ಭರವಸೆ ಕೊಡುತ್ತೇನೆ. ಈ ಕುರಿತು ೧೮೫೦ರ ಅಧಿನಿಯಮವನ್ನು ಪರಾಮರ್ಶಿಸಬಹುದಾಗಿದೆ. ಈ ಅಧಿನಿಯಮದ ಉಪಬಂಧದ ಕೆಳಗೆ ಒಬ್ಬ ವ್ಯಕ್ತಿಯ ವಾರಸುದಾರಿಕೆಯ ಹಕ್ಕು ಅವನ ಮತಾಂತರದಿಂದ ಭಾದಿತವಾಗುವುದಿಲ್ಲ. ಈ ಕಾನೂನಿನ ಪರಾಮರ್ಶೆಯನ್ನು ಅಪರಿಪೂರ್ಣವೆಂದು ಭಾವಿಸುವವರು ನಾಗಪುರ ಜಿಲ್ಲೆಯಲ್ಲಿನ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ ಜಿಲ್ಲೆಯಲ್ಲಿನ ಮಹರ್ ಸಮುದಾಯದ ಅನೇಕ ಮಂದಿ ಕ್ರಿಶ್ಚಿಯನ್ನರಾಗಿ ಬಿಟ್ಟಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಒಂದೇ ಕುಟುಂಬದಲ್ಲಿ ಕೆಲವರು ಕ್ರಿಶ್ಚಿಯನ್ನರಾಗಿದ್ದಾರೆ, ಮತ್ತೆ ಕೆಲವರು ಮಹರ್‌ಗಳಾಗಿಯೇ ಉಳಿದಿದ್ದಾರೆ. ಹೇಗೇ ಆದರೂ ಮತಾಂತರ ಹೊಂದಿದ ಮಹರ್‌ಗಳ ಹಕ್ಕು ಕ್ರಿಶ್ಚಿಯನ್ ಆದಮೇಲೆ ಅದೃಶ್ಯವಾಗಿಲ್ಲ. ಇದನ್ನು ನಗರ್‌ನ ಮಹರ್‌ಗಳಿಂದ ದೃಢೀಕರಿಸಿಕೊಳ್ಳಬಹುದು. ಆದ್ದರಿಂದ ಯಾರೂ ಕೂಡ ಮತಾಂತರ ಆಗುವುದರಿಂದ ಅವರ ವತನ್ ಹಕ್ಕುಗಳಿಗೆ ಕೇಡುಂಟಾಗುತ್ತದೆ ಎಂದು ಭಯಪಡಬೇಕಾಗಿಲ್ಲ.

ಎರಡನೆಯ ಸಂಶಯವಿರುವುದು ರಾಜಕೀಯ ಹಕ್ಕುಗಳ ಬಗ್ಗೆ. ಕೆಲವು ಜನಗಳು ತಾವು ಮತಾಂತರ ಹೊಂದಿದರೆ ತಮಗೆ ಈಗ ಇರುವ ರಕ್ಷಣೆಗಳಿಗೆ ಏನಾಗುತ್ತದೋ ಎಂಬ ಭಯವನ್ನು ವ್ಯಕ್ತಪಡಿಸಿದ್ದಾರೆ. ಅಸ್ಪೃಶ್ಯರು ದೊರಕಿಸಿಕೊಂಡಿರುವ ರಾಜಕೀಯ ರಕ್ಷಣೆಗಳ ಪ್ರಾಮುಖ್ಯತೆಯನ್ನು ನಾನು ಅರಿತುಕೊಂಡಿಲ್ಲವೆಂದು ಯಾರು ಹೇಳಲು ಸಾಧ್ಯವಿಲ್ಲ. ಅಸ್ಪೃಶ್ಯರಿಗಾಗಿ ರಾಜಕೀಯ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ನಾನು ಪಟ್ಟಿರುವ ಶ್ರಮವನ್ನು, ನಾನು ತೆಗೆದುಕೊಂಡಿರುವಷ್ಟು ತೊಂದರೆಗಳನ್ನು ಇನ್ನು ಯಾರೂ ತೆಗೆದುಕೊಂಡಿಲ್ಲವೆಂದು ಹೇಳುತ್ತೇನೆ. ಆದರೆ ಕೇವಲ ರಾಜಕೀಯ ಹಕ್ಕುಗಳನ್ನೇ ಅವಲಂಬಿಸುವುದು ಸರಿಯಲ್ಲವೆಂದು ನನ್ನ ಭಾವನೆ. ಈ ರಾಜಕೀಯ ರಕ್ಷಣೆಯನ್ನು ನಿರಂತರವೆಂಬ ನಿಬಂಧನೆಯ ಮೇಲೇನೂ ಕೊಟ್ಟಿರುವುದಿಲ್ಲ. ಯಾವತ್ತಾದರೂ ಸರಿ, ಅವು ಖಂಡಿತವಾಗಿಯೂ

ಕೊನೆಗೊಳ್ಳುತ್ತವೆ. ಬ್ರಿಟಿಷ್ ಸರ್ಕಾರದ "ಕಮ್ಯೂನಲ್ ಅವಾರ್ಡ್" ಗಳಂತೆ ಈ ರಕ್ಷಣೆಗಳಿಗೆ ೩೦ ವರ್ಷಗಳ ಕಾಲಮಿತಿಯಿದೆ. ಪೂನಾ ಕೌಲಿನ ಪ್ರಕಾರ (ವತನ್ ಹಕ್ಕಿಗೆ) ಕಾಲಮಿತಿಯನ್ನೇನೂ ನಿಗದಿಪಡಿಸಿಲ್ಲವಾದರೂ, ಯಾರೂ ಅವುಗಳನ್ನು ನಿರಂತರವೆಂದು ಹೇಳಲಾಗುವುದಿಲ್ಲ. ಈ ರಾಜಕೀಯ ರಕ್ಷಣೆಗಳನ್ನು ನಂಬಿಕೊಂಡಿರುವವರು ಅವುಗಳನ್ನು ಹಿಂದೆ ತೆಗೆದುಕೊಂಡ ಮೇಲೆ ಏನಾಗುತ್ತದೆ ಎಂಬುದರ ಬಗ್ಗೆ ಆಲೋಚಿಸಬೇಕು. ಯಾವ ದಿನ ರಾಜಕೀಯ ಹಕ್ಕುಗಳು ಕೊನೆ ಮುಟ್ಟುತ್ತವೋ, ಆ ದಿನದಿಂದ ನಾವು ನಮ್ಮ ಸಾಮಾಜಿಕ ಬಲವನ್ನು ಅವಲಂಬಿಸಬೇಕು. ಈ ಸಾಮಾಜಿಕ ಬಲ ನಮ್ಮಲ್ಲಿ ಇಲ್ಲ ಎಂದು ನಾನು ನಿಮಗೆ ಆಗಲೇ ಹೇಳಿದ್ದೇನೆ. ಈ ಒಲವನ್ನು ಮತಾಂತರವಿಲ್ಲದೆ ಸಾಧಿಸುವುದಕ್ಕಾಗುವುದಿಲ್ಲವೆಂದು ನಾನಾಗಲೇ ನಿಮಗೆ ತೋರಿಸಿಕೊಟ್ಟಿದ್ದೇನೆ. ವರ್ತಮಾನವನ್ನು ಮಾತ್ರ ಆಲೋಚಿಸಬೇಡಿ ನಿರಂತರ ಪ್ರಯೋಜನಕಾರಿಯಾಗಿರುವುದನ್ನು ಮರೆತು ತಾತ್ಕಾಲಿಕ ಲಾಭಗಳಿಂದ ಆಕರ್ಷಿತರಾಗುವುದು ತೊಳಲಾಟಕ್ಕೆ ದಾರಿಯಾಗುತ್ತದೆ. ಈ ಸಂದರ್ಭದಲ್ಲಿ ಯಾವುದು ಶಾಶ್ವತವಾಗಿ ಪ್ರಯೋಜನಕಾರಿ ಎಂಬುದನ್ನು ಯೋಚಿಸಬೇಕು. ನನ್ನ ಅಭಿಪ್ರಾಯದಲ್ಲಿ ಮತಾಂತರವೇ ನಿರಂತರ ಆನಂದಕ್ಕೆ ಮಾರ್ಗ. ಈ ಹಕ್ಕುಗಳಿಗಾಗಿ, ರಾಜಕೀಯ ಹಕ್ಕುಗಳನ್ನು ತ್ಯಾಗಮಾಡುವುದಕ್ಕೆ ಯಾರೂ ಹಿಂದೆಮುಂದೆ ನೋಡಬಾರದು. ರಾಜಕೀಯ ರಕ್ಷಣೆಗಳಿಗೆ, ಮತಾಂತರ ಯಾವ ಕೆಡಕನ್ನು ಉಂಟು ಮಾಡುವುದಿಲ್ಲ. ಮತಾಂತರವಾದರೆ ರಾಜಕೀಯ ರಕ್ಷಣೆಗಳಿಗೆ ಏಕೆ ಅಪಾಯ ಬರುತ್ತದೆ ಎಂದು ನನಗೆ ಅರ್ಥವಾಗುತ್ತಿಲ್ಲ. ನೀವು ಎಲ್ಲಿಗೆ ಹೋದರೂ, ನಿಮ್ಮ ರಾಜಕೀಯ ಹಕ್ಕುಗಳು ಮತ್ತು ರಕ್ಷಣೆಗಳು ನಿಮ್ಮ ಜೊತೆಯಲ್ಲೇ ಬರುತ್ತವೆ. ನನಗೆ ಅದರಲ್ಲಿ ಯಾವ ಅನುಮಾನವೂ ಇಲ್ಲ. ನೀವು ಮುಸ್ಲಿಮರಾದರೆ ನಿಮಗೆ ಮುಸ್ಲಿಮರ ರಾಜಕೀಯ ಹಕ್ಕುಗಳು ಸಿಗುತ್ತವೆ. ನೀವು ಕ್ರಿಶ್ಚಿಯನ್ನರಾದರೆ, ನಿಮಗೆ ಕ್ರಿಶ್ಚಿಯನ್ನರ ರಾಜಕೀಯ ಹಕ್ಕುಗಳು ಸಿಗುತ್ತವೆ. ನೀವು ಸಿಖ್ ಮತಕ್ಕೆ ಸೇರಿದರೆ ನಿಮಗೆ ಸಿಖ್ಖರಿಗೆ ಸಿಗುವ ರಾಜಕೀಯ ರಕ್ಷಣೆ ಸಿಗುತ್ತದೆ. ರಾಜಕೀಯ ಹಕ್ಕುಗಳು ಜನಸಂಖ್ಯೆಯ ಮೇಲೆ ಆಧಾರಿತವಾಗಿವೆ. ಯಾವುದೇ ಸಮಾಜದ ರಾಜಕೀಯ ಹಕ್ಕುಗಳು ಜನಸಂಖ್ಯೆ ಹೆಚ್ಚಾದಂತೆ ಹೆಚ್ಚಾಗುತ್ತವೆ. ನಾವು ಹಿಂದೂ ಸಮಾಜವನ್ನು ಬಿಟ್ಟರೆ ನಮಗೆ ಹಂಚಿಕೆಯಾಗಿರುವ ೧೫ ಸ್ಥಾನಗಳು ಮುಸಲ್ಮಾನರಿಗೆ ಮೀಸಲಾಗಿರುವ ಸ್ಥಾನಗಳಿಗೆ ಸೇರ್ಪಡೆಯಾಗುತ್ತದೆ. ಹಾಗೆಯೇ ನೀವು ಕ್ರಿಶ್ಚಿಯನ್ನರಾದರೆ ನಿಮ್ಮ ಸ್ಥಾನಗಳನ್ನು ಕ್ರಿಶ್ಚಿಯನ್ನರಿಗೆ ಮೀಸಲಾಗಿರುವ ಸ್ಥಾನಗಳಿಗೆ ಸೇರಿಸಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಮ್ಮ ರಾಜಕೀಯ ಹಕ್ಕುಗಳು ನಮ್ಮ ಜೊತೆಯಲ್ಲೇ ಬರುತ್ತವೆ. ಆದ್ದರಿಂದ ಯಾರೂ ಹೆದರಬೇಕಾಗಿಲ್ಲ ಅದರ ಬದಲು ನೀವು ಯೋಚನೆ ಮಾಡಬೇಕಾದದ್ದು, ಮತಾಂತರಗೊಳ್ಳದೇ ಹಿಂದೂಗಳಾಗಿಯೇ ಉಳಿದುಕೊಂಡರೆ, ನಮ್ಮ ಹಕ್ಕುಗಳು ಕ್ಷೇಮವಾಗಿ ಇರುತ್ತವೆಯೇ ಎಂದು. ಹಿಂದೂಗಳು ಒಂದು ಕಾನೂನನ್ನು ಜಾರಿಗೆ ತಂದು, ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದೆ, ಅದರ ಆಚರಣೆ ಶಿಕ್ಷಾರ್ಹ ಎಂದರೆ, ಅವರು ನಿಮಗೆ ಹೇಳಬಹುದು. ನಾವು ಅಸ್ಪೃಶ್ಯತೆಯನ್ನು ನಿಷೇಧಿಸಿದ್ದೇವೆ, ನೀವು ಇನ್ನು ಮೇಲೆ ಅಸ್ಪೃಶ್ಯರಲ್ಲ ಎಂದು. ನೀವು ತೀರಾ ಬಡವರು ಮತ್ತು ಹಿಂದುಳಿದವರು ಇರಬಹುದು. ನಿಮ್ಮ ಹಾಗೆಯೇ ಇತರ ಜಾತಿಗಳೂ ಹಿಂದುಳಿದವರಿದ್ದಾರೆ. ನಾವು ಇತರ ಹಿಂದುಳಿದ ಸಮುದಾಯಗಳಿಗೆ ಯಾವ ರಾಜಕೀಯ ರಕ್ಷಣೆಯನ್ನು ಒದಗಿಸಿಲ್ಲ. ಆದ್ದರಿಂದ ನಿಮಗೆ ಏಕೆ ಕೊಡಬೇಕು? ಎಂದು ಕೇಳುತ್ತಾರೆ. ಈ ಪ್ರಶ್ನೆಗಳಿಗೆ ಯಾವ ಉತ್ತರವನ್ನು ಕೊಡಬೇಕೆಂದು ನೀವು ಬಹಳ ಆಳವಾಗಿ ಆಲೋಚಿಸಬೇಕು. ಈ ಪ್ರಶ್ನೆಗೆ ಉತ್ತರ ಕೊಡುವುದು ಮುಸ್ಲಿಮರಿಗೂ ಮತ್ತು ಕ್ರಿಶ್ಚಿಯನ್ನರಿಗೂ ಬಹು ಸುಲಭ. ಅವರು ಹೇಳುತ್ತಾರೆ. "ನಾವು ಬಡವರೆಂದಾಗಲೀ, ಹಿಂದುಳಿದವರೆಂದಾಗಲೀ ನಮಗೆ ರಾಜಕೀಯ ಹಕ್ಕುಗಳನ್ನು ಕೊಟ್ಟಿಲ್ಲ. ನಮಗೆ ಕೊಟ್ಟಿರುವುದಕ್ಕೆ ಕಾರಣ ನಮ್ಮ ಧರ್ಮ ಬೇರೆ, ನಮ್ಮ

ಸಮಾಜ ಬೇರೆ, ಇತ್ಯಾದಿ ಎಲ್ಲಿಯವರೆಗೆ ನಮ್ಮ ಧರ್ಮ ಬೇರೆಯೋ , ರಾಜಕೀಯ ಹಕ್ಕುಗಳಲ್ಲಿ ನಮ್ಮ ಭಾಗ ನಮಗೆ ಸಿಗಲೇಬೇಕು" ಎಂದು. ಅವರ ಉತ್ತರ ಸೂಕ್ತವಾಗಿಯೂ ಇದೆ, ಸರಿಯಾಗಿಯೂ ಇದೆ. ಎಲ್ಲಿಯವರೆಗೆ ನೀವೂ ಹಿಂದೂ ಧರ್ಮದಲ್ಲಿ ಉಳಿದುಕೊಳ್ಳುತ್ತಿರೋ, ಹಿಂದೂ ಸಮಾಜದಲ್ಲಿ ಇರುತ್ತಿರೋ ಆವರೆಗೂ ನಿಮ್ಮ ಸಮಾಜ ಬೇರೆಯದೆಂಬ ಕಾರಣಕ್ಕೆ ನಿಮಗೆ ರಾಜಕೀಯ ರಕ್ಷಣೆ ಬೇಕೆಂಬ ನಿಲುವನ್ನು ತಾಳಲಾಗುವುದಿಲ್ಲ. ಯಾವದಿನ ನೀವು ಹಿಂದೂ ಸಮಾಜದ ಗುಲಾಮಗಿರಿಯಿಂದ ಮತಾಂತರ ಹೊಂದಿ ನಿಮ್ಮನ್ನು ನೀವು ಮುಕ್ತರಾಗಿಸಿಕೊಳ್ಳದೇ ಇದ್ದರೇ, ಇಂಥ ನಿಲುವನ್ನು ನೀವು ತೆಗೆದುಕೊಳ್ಳಲಾಗುವುದಿಲ್ಲ. ನೀವು ಇಂಥ ಸ್ವತಂತ್ರ್ಯವಾದ ನಿಲುವನ್ನು ತೆಗೆದುಕೊಂಡು ನಿಮ್ಮ ರಾಜಕೀಯ ಹಕ್ಕುಗಳನ್ನು ಒತ್ತಾಯಿಸದ ಹೊರತು, ನಿಮ್ಮ ರಾಜಕೀಯ ಹಕ್ಕುಗಳನ್ನು ಮತ್ತು ರಕ್ಷಣೆಗಳನ್ನು ಶಾಶ್ವತವಾದುದೆಂದೂ, ಅಪಾಯ ಮುಕ್ತವೆಂದು ಪರಿಗಣಿಸಲಾಗುವುದಿಲ್ಲ. ಅದು ಅಜ್ಞಾನವೆಂದು ನನಗೆ ಅನಿಸುತ್ತದೆ.

ಸಮಗ್ರ ದೃಷ್ಟಿಯಿಂದ ನೋಡಿದಾಗ, ಮತಾಂತರ ಅಡಚಣೆಯಲ್ಲ, ಆದರೆ ರಾಜಕೀಯ ಹಕ್ಕುಗಳನ್ನು ಬಲಪಡಿಸುವ ಮಾರ್ಗವೆಂದು ಹೇಳಬಹುದಾಗಿದೆ.

ನೀವು ಹಿಂದೂ ಧರ್ಮದಲ್ಲೇ ಉಳಿದರೆ, ನಿಮ್ಮ ರಾಜಕೀಯ ರಕ್ಷಣೆಗಳನ್ನು ಕಳೆದುಕೊಳ್ಳುತ್ತೀರಿ. ನಿಮ್ಮ ರಾಜಕೀಯ ರಕ್ಷಣೆಗಳನ್ನು ಕಳೆದುಕೊಳ್ಳಲು ಇಷ್ಟವಿಲ್ಲದಿದ್ದರೆ ಮತಾಂತರಗೊಳ್ಳಿ; ಮತಾಂತರದಿಂದ ಮಾತ್ರ ಅವು ಶಾಶ್ವತವಾಗುತ್ತವೆ.

## ಮುಕ್ತಾಯ

ನಾನು ನನ್ನ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ನನ್ನ ಮತಾಂತರ ಖಂಡಿತ. ನನ್ನ ಮತಾಂತರ ಯಾವುದೇ ಪ್ರಾಪಂಚಿಕ ಲಾಭಕ್ಕಲ್ಲ. ಅಸ್ಪೃಶ್ಯನಾಗಿಯೇ ಉಳಿದುಕೊಂಡರೆ ನಾನು ಸಾಧಿಸಲಾಗದೇ ಇರುವುದು ಯಾವುದೂ ಇಲ್ಲ. ನನ್ನ ಮತಾಂತರದ ಆಧಾರ ಆಧ್ಯಾತ್ಮವಲ್ಲದೇ ಬೇರೇನೂ ಅಲ್ಲ. ನನ್ನ ವಿವೇಚನೆಗೆ ಹಿಂದೂ ಧರ್ಮ ಹೊಂದಾಣಿಕೆಯಾಗುವುದಿಲ್ಲ. ನನ್ನ ಆತ್ಮಗೌರವಕ್ಕೆ ಹಿಂದೂ ಧರ್ಮ ಹಿತವಾಗುವುದಿಲ್ಲ. ಹೇಗಾದರೂ ಆಧ್ಯಾತ್ಮವಲ್ಲದ ಪ್ರಾಪಂಚಿಕ ಲಾಭಕ್ಕೂ ಮತಾಂತರ ಕಡ್ಡಾಯ ಪ್ರಾಪಂಚಿಕ ಲಾಭಕ್ಕಾಗಿ ಮತಾಂತರ ಆಗುವುದರ ಬಗ್ಗೆ, ಅದರ ಕಲ್ಪನೆಯ ಬಗ್ಗೆ ಕೆಲವರು ಪರಿಹಾಸ್ಯ ಮಾಡುತ್ತಾರೆ. ಇಂಥ ಜನಗಳನ್ನು ಹೆಡ್ಡರೆಂದು ಕರೆಯುವುದಕ್ಕೆ ನನಗೇನೂ ಹಿಂಜರಿಕೆಯಿಲ್ಲ. ಮರಣಾನಂತರ ಆತ್ಮಕ್ಕೆ ಏನಾಗುತ್ತದೆ, ಏನಾಗುವುದಿಲ್ಲ ಎಂದು ಬೋಧನೆ ಮಾಡುವ ಧರ್ಮ ಐಶ್ವರ್ಯವಂತರಿಗೆ ಉಪಯೋಗಕರವಾಗಿರಬಹುದು. ಅವರ ಬಿಡುವಿನ ಕಾಲದಲ್ಲಿ ಅದರ ಬಗ್ಗೆ ಆಲೋಚಿಸುತ್ತಾ ಮನರಂಜನೆ ಪಡೆಯಬಹುದು. ತಮ್ಮ ಜೀವಿತಕಾಲದಲ್ಲಿ ಎಲ್ಲಾ ಭೋಗಗಳನ್ನು ಅನುಭವಿಸಿದವರು ಇಂಥ ಧರ್ಮವನ್ನೇ ನಿಜವಾದ ಧರ್ಮವೆಂದು ತಿಳಿಯಬಹುದು. ಆ ಧರ್ಮ ಅವರಿಗೆ ಮರಣಾನಂತರ ಸಿಗಬಹುದಾದ ಭೋಗಗಳ ಬಗ್ಗೆ ಮುಖ್ಯವಾಗಿ ಹೇಳುತ್ತದೆ. ಆದರೆ ಯಾರಿಗೆ ಆಹಾರ, ಬಟ್ಟೆಯಂಥ ಪ್ರಾಥಮಿಕ ಅವಶ್ಯಕತೆಗಳು ನಿರಾಕರಿಸಲ್ಪಟ್ಟಿದೆಯೋ ಯಾರನ್ನು ಮಾನವ ಜೀವಿಗಳೆಂದೂ ಸಹ ನಡೆಸಿಕೊಂಡಿಲ್ಲವೋ, ಇಂಥ ಜನಗಳು ಧರ್ಮವನ್ನು ಪ್ರಾಪಂಚಿಕ ದೃಷ್ಟಿಕೋನದಿಂದ ನೋಡದೆ, ಯಾವುದೋ ಒಂದು ನಿರ್ದಿಷ್ಟ ಧರ್ಮದಲ್ಲೇ ಉಳಿದುಕೊಂಡು ಧೂಳಾಗುವ ಪರಿಸ್ಥಿತಿಗೆ ಬಂದಿರುವವರನ್ನು ಕಣ್ಣುಮುಚ್ಚಿಕೊಂಡು ಆಕಾಶದ ಕಡೆಗೆ ಮುಖ ಮಾಡಿಕೊಂಡು ನಿರೀಕ್ಷಿಸುತ್ತಾ ಇರಿ ಎಂದು ಹೇಳುವುದು ಎಷ್ಟು ಸರಿ? ಈ ಬಲ್ಲಿದರ ಮತ್ತು ಸೋಮಾರಿಗಳ ವೇದಾಂತದಿಂದ ಬಡವರಿಗೇನು ಉಪಯೋಗ?

## 'ಮಾನವನಿಗೆ ಧರ್ಮ'

ಮಾನವ ಧರ್ಮಕ್ಕೋಸ್ಕರ ಅಲ್ಲ. ಆದರೆ ಮಾನವನಿಗೋಸ್ಕರ ಧರ್ಮ. ಮಾನವೀಯತೆಯನ್ನು ಪಡೆದುಕೊಳ್ಳುವುದಕ್ಕಾಗಿ ಮತಾಂತರ ಹೊಂದಿ, ಎಂದು ನಾನು ನಿಮಗೆ ನಿರ್ದಿಷ್ಟವಾಗಿ ಹೇಳುತ್ತೇನೆ. ಬಲವನ್ನು ಪಡೆದುಕೊಳ್ಳುವುದಕ್ಕೆ ಮತಾಂತರ ಹೊಂದಿ, ಬಿಡುಗಡೆಯಾಗುವುದಕ್ಕೆ ಮತಾಂತರ ಹೊಂದಿ ನಿಮ್ಮ ಕುಟುಂಬ ಜೀವನ ಸಂತೋಷವಾಗಿರುವುದಕ್ಕೆ ಮತಾಂತರ ಹೊಂದಿ.

ನಿಮ್ಮನ್ನು ಮಾನವೀಯತೆಯಿಂದ ಕಾಣದ ಧರ್ಮದಲ್ಲೇಕೆ ಉಳಿದುಕೊಳ್ಳುತ್ತೀರಿ? ನಿಮಗೆ ಶಿಕ್ಷಣ ಪಡೆದುಕೊಳ್ಳಲು ಅನುಮತಿಸದ ಧರ್ಮದಲ್ಲೇಕೆ ಉಳಿಯುತ್ತೀರಿ? ದೇವಸ್ಥಾನಕ್ಕೆ ಪ್ರವೇಶ ನಿರಾಕರಿಸುವ ಧರ್ಮದಲ್ಲೇಕೆ ಉಳಿಯುತ್ತೀರಿ? ನೀರನ್ನು ನೀವು ಮುಟ್ಟದಂತೆ ನಿಷೇಧಿಸುವ ಧರ್ಮದಲ್ಲೇಕೆ ಉಳಿಯುತ್ತೀರಿ? ನೀವು ಉದ್ಯೋಗವನ್ನು ಪಡೆಯಲು ಅಡ್ಡಿಪಡಿಸುವ ಧರ್ಮದಲ್ಲೇಕೆ ಉಳಿಯುತ್ತೀರಿ? ಹೆಜ್ಜೆಹೆಜ್ಜೆಗೂ ನಿಮ್ಮನ್ನು ನಿಂದಿಸುವ ಧರ್ಮದಲ್ಲೇಕೆ ಉಳಿಯುತ್ತೀರಿ? ಮನುಷ್ಯ ಮನುಷ್ಯನ ನಡುವೆ ನ್ಯಾಯವಾದ ಸಂಬಂಧಗಳನ್ನು ನಿಷೇಧಿಸುವ ಧರ್ಮ, ಧರ್ಮವಲ್ಲ, ಆದರೆ ಅದೊಂದು ಶಕ್ತಿ ಪ್ರದರ್ಶನ. ಮಾನವನನ್ನು ಮಾನವನೆಂದು ಕಾಣದ ಧರ್ಮ, ಧರ್ಮವಲ್ಲ, ಅದೊಂದು ರೋಗ, ಪ್ರಾಣಿಗಳನ್ನು ಮುಟ್ಟುವುದಕ್ಕೆ ಅನುಮತಿಸುವ, ಆದರೆ ಮಾನವ ಜೀವಿಗಳನ್ನು ಸ್ಪರ್ಶಿಸುವುದನ್ನು ನಿಷೇಧಿಸುವ ಧರ್ಮ, ಧರ್ಮವಲ್ಲ ಅದೊಂದು ಅಣಕ, ಒಂದು ವರ್ಗದವರನ್ನು ಶಿಕ್ಷಣದಿಂದ ಹೊರಗಿಡುವ, ಐಶ್ವರ್ಯವನ್ನು ಸಂಚಯ ಮಾಡುವುದನ್ನು ನಿಷೇಧಿಸುವ, ಆಯುಧಗಳನ್ನು ಧರಿಸುವುದನ್ನು ನಿಷೇಧಿಸುವುದು ಧರ್ಮವಲ್ಲ. ಅದು ಮಾನವ ಜೀವನದ ಅಣಕ. ಅನಕ್ಷರಸ್ತರನ್ನು ಅನಕ್ಷರಸ್ತರನ್ನಾಗಿಯೇ ಉಳಿಯಲು ಬಡವರನ್ನು ಬಡವರನ್ನಾಗಿಯೇ ಇರಲು ಒತ್ತಾಯಿಸುವುದು ಧರ್ಮವಲ್ಲ. ಅದೊಂದು ಶಿಕ್ಷೆ.

ಮತಾಂತರದಿಂದ ಸಂಭವಿಸಬಹುದಾದ ಎಲ್ಲಾ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡಿ ವಿವರಿಸುವುದಕ್ಕೆ ನನ್ನ ತಿಳುವಳಿಕೆಗೆ ನಿಲುಕುವಷ್ಟರ ಮಟ್ಟಿಗೆ ನಾನು ಪ್ರಯತ್ನಸಿದ್ದೇನೆ. ಈ ಪ್ರವಚನ ಬಹಳ ಲಂಬವಾಗಿರಬಹುದು. ಆದರೆ ಪ್ರಾರಂಭದಿಂದಲೇ ಅದನ್ನು ಸುದೀರ್ಘವಾಗಿ ವಿವರಿಸುವುದಕ್ಕೆ ನಾನು ತೀರ್ಮಾನಿಸಿದ್ದೆ. ಮತಾಂತರದ ವಿರುದ್ಧ ನನ್ನ ಎದುರಾಳಿಗಳು ಎತ್ತಿದ ಅಂಶಗಳಿಗೆ ಉತ್ತರಿಸುವುದು ನನಗೆ ಅವಶ್ಯಕತೆಯಾಗಿತ್ತು. ಮತಾಂತರದ ಘೋಷಣೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳದೇ ಯಾರೂ ಮತಾಂತರಗೊಳ್ಳಬಾರದೆಂದು ನನ್ನ ಅಭಿಪ್ರಾಯ; ಆದ್ದರಿಂದ ಈ ಸಮಸ್ಯೆಯನ್ನು ಇಷ್ಟು ವಿವರಣಾತ್ಮಕವಾಗಿ ಚರ್ಚಿಸಿದ್ದೇನೆ. ಯಾಕೆಂದರೆ ಯಾರೂ ಅದರ ಬಗ್ಗೆ ಅನುಮಾನವನ್ನು ಇಟ್ಟುಕೊಳ್ಳಬಾರದೆಂದು. ನನ್ನ ಅಭಿಪ್ರಾಯವನ್ನು ಎಷ್ಟರ ಮಟ್ಟಿಗೆ ನೀವು ಒಪ್ಪಿಕೊಳ್ಳುತ್ತೀರೆಂದು ನಾನು ಹೇಳಲಾರೆ, ಆದರೆ ನೀವು ಅವುಗಳ ಮೇಲೆ ಆಳವಾಗಿ ಸಾವಧಾನಿಸುತ್ತೀರೆಂದು ನಂಬಿದ್ದೇನೆ. ಸಮೂಹಗಳನ್ನು ಸಂತೋಷಪಡಿಸಿ, ಜನಪ್ರಿಯತೆಯನ್ನು ಪಡೆದುಕೊಳ್ಳುವುದು ಸಾಧಾರಣ ಮನುಷ್ಯನಿಗೆ ಒಳಿತಾಗಿ ಕಾಣಿಸಬಹುದು. ಆದರೆ ಒಬ್ಬ ಮುಖಂಡನಿಗಲ್ಲ. ಯಾರು ಹೆದರಿಕೆಯಿಲ್ಲದೆ, ಯಾರ ಮರ್ಜಿಯಿಲ್ಲದೆ, ಜನರಿಗೆ ಪ್ರಿಯವಾಗುವ ಆಪಾದನೆಗಳನ್ನು ಮಾಡದೆ, ಜನಗಳಿಗೆ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂದು ತೋರಿಸಿಕೊಡುತ್ತಾನೋ ಅವನನ್ನೆ ನಾಯಕನೆಂದು ನಾನು ತಿಳಿಯುತ್ತೇನೆ. ನಿಮಗೆ ಅದು ಪಥ್ಯವಾಗದೇ ಇದ್ದರೂ ಯಾವುದು ಒಳ್ಳೆಯದು ಎಂದು ನಿಮಗೆ ಹೇಳುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ನಾನು ನನ್ನ ಕರ್ತವ್ಯವನ್ನು ಮಾಡಲೇಬೇಕು. ಅದನ್ನು ನಾನೀಗ ಮಾಡಿದ್ದೇನೆ. ತೀರ್ಮಾನವನ್ನು ತೆಗೆದುಕೊಳ್ಳುವುದು, ಹೊಣೆಗಾರಿಕೆಯನ್ನು ನಿಭಾಯಿಸುವುದು ನಿಮಗೆ ಬಿಟ್ಟಿದ್ದು ಈ ಮತಾಂತರದ ಸಮಸ್ಯೆಯನ್ನು ಎರಡು ಭಾಗಗಳಾಗಿ ವಿಭಜಿಸಿದ್ದೇನೆ. ಹಿಂದೂಧರ್ಮವನ್ನು

ಬಿಡಬೇಕೆ, ಅಥವಾ ಅಲ್ಲೇ ಉಳಿಯಬೇಕೆ ಎಂಬುದು ಸಮಸ್ಯೆಯ ಮೊದಲಭಾಗ. ಹಿಂದೂಧರ್ಮವನ್ನು ತ್ಯಜಿಸಿಬಿಟ್ಟರೆ. ಯಾವ ಇತರ ಧರ್ಮವನ್ನು ಒಪ್ಪಿಕೊಳ್ಳಬೇಕು ಅಥವಾ ಒಂದು ಹೊಸ ಧರ್ಮವನ್ನೇ ಸ್ಥಾಪಿಸಬೇಕೆ ಎಂಬುದು ಸಮಸ್ಯೆಯ ಎರಡನೆಯ ಭಾಗ. ಈ ದಿನ ನಾನು ಸಮಸ್ಯೆಯ ಮೊದಲ ಭಾಗವನ್ನು ತೀರ್ಮಾನಿಸಿದ್ದೇನೆ; ಮೊದಲನೆಯ ಭಾಗ ತೀರ್ಮಾನವಾಗದ ಹೊರತು, ಎರಡನೆಯದನ್ನು ಚರ್ಚೆಮಾಡುವುದಾಗಲೀ, ಅಥವಾ ಅಣಿಯಾಗುವುದಾಗಲೀ ನಿರರ್ಥಕವಾಗುತ್ತದೆ. ಆದ್ದರಿಂದ ನೀವು ಮೊದಲನೆ ಅಂಶವನ್ನು ನಿರ್ಧರಿಸಬೇಕು. ಇದನ್ನು ತೀರ್ಮಾನಿಸುವುದಕ್ಕೆ ನಿಮಗೆ ಇನ್ನೊಂದು ಅವಕಾಶವನ್ನು ಕೊಡುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ. ನೀವು ಈ ಸಮ್ಮೇಳನದಲ್ಲಿ ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೊ ಅದರಂತೆ ಮುಂದಿನ ಕಾರ್ಯಕ್ರಮವನ್ನು ಸಿದ್ದಪಡಿಸುತ್ತೇನೆ. ನೀವು ಮತಾಂತರದ ವಿರುದ್ಧ ನಿರ್ಧರಿಸಿದರೆ, ಪ್ರಶ್ನೆ ಎಂದೆಂದಿಗೂ ಮುಚ್ಚಿ ಹೋಗುತ್ತದೆ. ಆಗ ನನಗೋಸ್ಕರ ಏನು ಮಾಡಬೇಕಾಗಿದೆಯೋ ಅದನ್ನು ನಾನು ಮಾಡುತ್ತೇನೆ. ನೀವು ಮತಾಂತರದ ಪರವಾಗಿ ತೀರ್ಮಾನ ತೆಗೆದುಕೊಳ್ಳುವುದಾದರೆ, ಒಂದು ವ್ಯವಸ್ಥಿತವಾದ ಮತ್ತು ಸಾಮೂಹಿಕ ಮತಾಂತರವನ್ನು ಮಾಡುತ್ತೇವೆಂದು ನೀವು ನನಗೆ ಭರವಸೆ ಕೊಡಬೇಕು. ಮತಾಂತರದ ಪರವಾಗಿ ತೀರ್ಮಾನ ತೆಗೆದುಕೊಂಡರೆ, ಜನಗಳು ವೈಯುಕ್ತಿಕವಾಗಿ ತಮಗಿಷ್ಟ ಬಂದ ಧರ್ಮಕ್ಕೆ ಮತಾಂತರಗೊಳ್ಳಲು ಪ್ರಾರಂಭಿಸಿದರೆ, ನಿಮ್ಮಗಳ ಮತಾಂತರದಲ್ಲಿ ನಾನು ಮಧ್ಯೆ ಪ್ರವೇಶಿಸುವುದಿಲ್ಲ. ಆದರೆ ನೀವೆಲ್ಲರೂ ನನ್ನ ಜೊತೆಗೆ ಇರುತ್ತೀರೆಂದು ನಾನು ಆಶಿಸುತ್ತೇನೆ. ನಾವು ಯಾವುದೇ ಧರ್ಮವನ್ನು ಒಪ್ಪಿಕೊಂಡರೂ, ಆ ಧರ್ಮದಲ್ಲಿ ನಮ್ಮ ಜನಗಳ ಕಲ್ಯಾಣಕ್ಕಾಗಿ ನನ್ನ ಪ್ರಾಮಾಣಿಕ ಪ್ರಯತ್ನ ಮತ್ತು ಶ್ರಮವನ್ನು ತೊಡಗಿಸುವುದಕ್ಕಾಗಿ ನಾನು ಸಿದ್ದನಿದ್ದೇನೆ. ಆದರೆ ನೀವು ಭಾವೋದ್ವೇಗಕ್ಕೆ ಒಳಗಾಗಿ, ನಾನು ಹೇಳಿದೆನೆಂಬ ಒಂದೇ ಕಾರಣಕ್ಕಾಗಿ ನನ್ನನ್ನು ಅನುಸರಿಸಬೇಡಿ. ನಿಮ್ಮ ವಿವೇಚನೆಗೆ ಅದು ಒಪ್ಪಿತವಾದರೆ ಮಾತ್ರ ಅದಕ್ಕೆ ಸಮ್ಮತಿಸಿ. ನೀವು ನನ್ನನ್ನು ಸೇರಿಕೊಳ್ಳುವುದಿಲ್ಲವೆಂದು ತೀರ್ಮಾನಿಸಿದರೆ ನನಗೆ ಖಂಡಿತವಾಗಿಯೂ ವ್ಯಥೆಯಿಲ್ಲ. ಬದಲಿಗೆ ನನ್ನ ಹೊಣೆಗಾರಿಕೆಯಿಂದ ಬಿಡುಗಡೆಯಾಯಿತೆಂದು ನಾನು ಭಾವಿಸುತ್ತೇನೆ. ಆದುದರಿಂದ ಇದೊಂದು ನಿರ್ಣಾಯಕ ಸಂದರ್ಭವೆಂದು ನೀವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ನಿಮ್ಮ ಇಂದಿನ ತೀರ್ಮಾನ ನಿಮ್ಮ ಮುಂದಿನ ಪೀಳಿಗೆಗಳ ಪುರೋಭಿವೃದ್ಧಿಗೆ ಒಂದು ದಾರಿಯನ್ನು ರಚಿಸಿಕೊಡುತ್ತದೆ. ಈ ದಿನ ನೀವು ಬಿಡುಗಡೆಯಾಗುತ್ತೀರೆಂದು ತೀರ್ಮಾನಿಸಿದರೆ ನಿಮ್ಮ ಮುಂದಿನ ಪೀಳಿಗೆಗಳು ಖಂಡಿತವಾಗಿಯೂ ಬಿಡುಗಡೆಯಾಗುತ್ತಾರೆ. ನೀವು ಗುಲಾಮರಾಗಿಯೇ ಉಳಿಯುತ್ತೇವೆಂದು ತೀರ್ಮಾನಿಸಿದರೆ, ನಿಮ್ಮ ಮುಂದಿನ ಪೀಳಿಗೆಗಳೂ ಗುಲಾಮರಾಗುತ್ತಾರೆ. ಆದುದರಿಂದ ನಿಮ್ಮದು ಈಗ ಅತ್ಯಂತ ಕಠಿಣವಾದ ಕೆಲಸ.

## ನಿಮ್ಮ ಬೆಳಕು ನೀವೇ ಆಗಿ

ಈ ಸಂದರ್ಭದಲ್ಲಿ ನಿಮಗೆ ಯಾವ ಸಂದೇಶ ಕೊಡಬೇಕೆಂಬುದರ ಬಗ್ಗೆ ಯೋಚಿಸುತ್ತಿದ್ದಾಗ, ಭಗವಾನ್ ಬುದ್ಧ ತನ್ನ ಮಹಾ ಪರಿ ನಿರ್ವಾಣಕ್ಕೆ ಮುಂಚೆ, ತನ್ನ ಬಿಕ್ಕು ಸಂಘಕ್ಕೆ ಕೊಟ್ಟ ಸಂದೇಶವನ್ನು ನೆನಪಿಸಿಕೊಂಡೆ. ಈ ಸಂದೇಶವನ್ನು ಮಹಪರಿನಿಬ್ಬನ್ ಸುತ್ತದಲ್ಲಿ ಉಲ್ಲೇಖಿಸಲಾಗಿದೆ. ಒಂದು ಸಾರಿ. ಖಾಯಿಲೆಯಿಂದ ಚೇತರಿಸಿಕೊಂಡಮೇಲೆ, ಭಗವಾನ್ ಒಂದು ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ. ಅವನ ಶಿಷ್ಯ ಪೂಜ್ಯ ಆನಂದ ಬುದ್ಧನ ಬಳಿಗೆ ಹೋಗಿ, ಅವನಿಗೆ ವಂದಿಸಿ, ಅವನ ಪಕ್ಕದಲ್ಲಿ ಕುಳಿತುಕೊಂಡು ಹೇಳಿದ. "ನಾನು ನನ್ನ ಭಗವಾನನನ್ನು ಖಾಯಿಲೆಯಲ್ಲಿಯೂ ನೋಡಿದ್ದೇನೆ. ಸೌಖ್ಯದಲ್ಲಿಯೂ ನೋಡಿದ್ದೇನೆ. ಆದರೆ ಭಗವಾನನ ಪ್ರಸ್ತುತ ಅನಾರೋಗ್ಯದಿಂದ ನನ್ನ ಶರೀರ ಸೀಸದಂತೆ ಭಾಗವಾಗಿಬಿಟ್ಟಿದೆ. ನನ್ನ

ಮನಸ್ಸಿನಲ್ಲಿ ಶಾಂತಿಯಿಲ್ಲ. ನಾನು ಧರ್ಮದ ಮೇಲೆ ಏಕಾಗ್ರತೆಯನ್ನು ಸಾಧಿಸುವುದಕ್ಕೆ ಆಗುತ್ತಿಲ್ಲ. ಆದರೆ ಸಂಘಕ್ಕೆ ಸಂದೇಶವನ್ನು ಕೊಡದ ಹೊರತು ಭಗವಾನ್ ಪರಿನಿಬ್ಬನ್ ಅನ್ನು ಪಡೆಯುವುದಿಲ್ಲವೆನ್ನುವುದರಲ್ಲಿ ನನಗೆ ಸಮಾಧಾನ ಮತ್ತು ಸಂತೃಪ್ತಿಯ ಅನುಭವ ಆಗುತ್ತಿದೆ ಎಂದು ಹೇಳಿದ. ಆಗ ಭಗವಾನ್ ಹೀಗೆ ಉತ್ತರಿಸಿದ." "ಆನಂದ, ಸಂಘ ನನ್ನಿಂದ ನಿರೀಕ್ಷಿಸುತ್ತಿದೆ? ಏನನ್ನೂ ಮುಚ್ಚಿಡದೆ, ತೆರೆದ ಹೃದಯದಿಂದ ನಾನು ಧರ್ಮವನ್ನು ಬೋಧಿಸಿದ್ದೇನೆ. ಇತರ ಗುರುಗಳು ಮಾಡಿದಂತೆ ತಥಾಗತನು ಏನನ್ನು, ಯಾವುದನ್ನು ಮುಚ್ಚಿಟ್ಟಿಲ್ಲ. ಆದ್ದರಿಂದ ಆನಂದ, ಸೂರ್ಯನಂತೆ ಸ್ವಯಂ ಪ್ರಕಾಶವುಳ್ಳವನಾಗು. ಭೂಮಿಯಂತೆ ಬೆಳಕಿಗಾಗಿ ಆಶ್ರಿತನಾಗಬೇಡ. ನಿನ್ನಲ್ಲಿ ನೀನು ನಂಬಿಕೆಯನ್ನು ಇಟ್ಟುಕೋ, ಸತ್ಯವಂತನಾಗಿರು. ಯಾವಾಗಲೂ ಸತ್ಯಕ್ಕೇ ಮೊರೆಹೋಗು. ಮತ್ತೆ ಯಾರಿಗೂ ಶರಣಾಗಬೇಡ."

ನಾನೂ ಸಹ ಬುದ್ಧನ ಮಾತುಗಳಿಗೆ ಮೊರೆಹೋಗುತ್ತೇನೆ. "ನಿನ್ನ ಮಾರ್ಗದರ್ಶಿ ನೀನೇ ಆಗು. ನಿನ್ನ ವಿಚಾರಕ್ಕೇ ಮೊರೆಹೋಗು. ಇತರರ ಬುದ್ಧಿವಾದಕ್ಕೆ ಕಿವಿಗೊಡದಿರು. ಇತರರಿಗೆ ಯಾವತ್ತೂ ಮಣಿಯಬೇಡ." ಈ ಸಂಧಿಕಾಲದಲ್ಲಿ ಭಗವಾನ್ ಬುದ್ಧನ ಈ ಸಂದೇಶವನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ನಿಮ್ಮ ತೀರ್ಮಾನವು ತಪ್ಪಾಗುವುದಿಲ್ಲವೆಂದು ನನಗೆ ಖಂಡಿತವಾಗಿ ಗೊತ್ತು.

# ೩೦
# ಮಹರ್ ಮತ್ತು ಮ್ಹಾಂಗ್‌ಗಳ ಮಧ್ಯೆ ಯಾವ ಭೇದವೂ ಇಲ್ಲ

ಚುನಾವಣೆಯಲ್ಲಿ ಅವರು ಅವನ
ಪಕ್ಷಕ್ಕೆ ಸೇರಿದರೆ ತಮ್ಮ ಕೋಟಾವನ್ನು
ಕೊಡುತ್ತೇವೆ ಎಂದು ಮಾತುಕೊಡುತ್ತಾರೆ

ಬೊಂಬಾಯಿ ಅಧಿಪತ್ಯದ ಮ್ಹಾಂಗ್‌ಗಳ ಸಮ್ಮೇಳನವನ್ನು ೩ನೇ ಜೂನ್ ೧೯೩೬ರ ಮಂಗಳವಾರದಂದು ದಾದರ್‌ನ ನಯೀಗಾಂವ್‌ನಲ್ಲಿ ನಡೆಸಲಾಯಿತು. ಮ್ಹಾಂಗ್ ಸಮುದಾಯದ ಸುಮಾರು ೫೦೦ ಮಂದಿ ಮತ್ತು ಅಧಿಪತ್ಯದ ಬೇರೆ ಬೇರೆ ಕಡೆಗಳಿಂದ ಡೆಲಿಗೇಟುಗಳು ಅಧಿವೇಶನದಲ್ಲಿ ಭಾಗವಹಿಸಿದ್ದರು. ಮುಖ್ಯವಾದ ಠರಾವನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪಡೆದುಕೊಳ್ಳುವುದಕ್ಕಾಗಿ ಬೇರೆ ಯಾವ ಉಪಾಯವೂ ಇಲ್ಲದಿರುವುದರಿಂದ ಮ್ಹಾಂಗ್ ಸಮುದಾಯ ಮತಾಂತರವನ್ನು ಮಾಡಬೇಕೆಂದು ನಿರ್ಣಯಿಸಲಾಗಿತ್ತು. ವಿಶೇಷ ಆಹ್ವಾನದ ಮೇಲೆ ಹಾಜರಿದ್ದ ಡಾ॥ ಅಂಬೇಡ್ಕರ್ ಅವರು ಒಂದು ಗಂಟೆಯ ಕಾಲ ಸಮ್ಮೇಳನವನ್ನು ಉದ್ದೇಶಿಸಿ ಮಾತಾಡಿದರು. ಮ್ಹಾಂಗ್ ಸಮುದಾಯವು ಮತಾಂತರವನ್ನು ಮಾಡಬೇಕೆಂದು ತಮ್ಮ ತೀರ್ಮಾನವನ್ನು ಘೋಷಿಸಿದ ಪ್ರಾರಂಭದಲ್ಲಿ ಅವರು ಹೇಳಿದ್ದೇನೆಂದರೆ. ಮ್ಹಾಂಗ್ ಸಮುದಾಯ ಮತಾಂತರವನ್ನು ಮಾಡಬೇಕೆಂದು ತಮ್ಮ ತೀರ್ಮಾನವನ್ನು ಪ್ರಕಟಿಸಿದ ಮೇಲೆ ತಾವು ತಮ್ಮ ಭಾಷಣವನ್ನು ಮಾಡಲು ಸಮಯವನ್ನು ಆರಿಸಿಕೊಂಡಿದ್ದಾಗಿಯೂ; ಕಾರಣವೆಂದರೆ, ಅವರ ತೀರ್ಮಾನದ ಮೇಲೆ ತಮ್ಮ ಪ್ರಭಾವ ಕಿಂಚಿತ್ತು ಬೀಳಬಾರದೆಂಬುದೇ ಅದರ ಉದ್ದೇಶ ಎಂದರು.

### ದೂರುಗಳಿಗೆ ಕಾರಣ ಹಿಂದುತ್ವ

ಜಾತೀಯತೆಯ ಪಿಡುಗಿಗೆ ನಿಮ್ನ ವರ್ಗಗಳವರು ಹೊಣೆಗಾರರಲ್ಲವೆಂದು ಹೇಳಿದರು. ಹಿಂದುತ್ವ ಮಾತ್ರ ಅದಕ್ಕೆ ಹೊಣೆ ಮ್ಹಾಂಗ್ ಸಮುದಾಯವು ಜಾತಿಪದ್ಧತಿಯ ಪಿಡುಗಿನಿಂದ ಹೊರಗಡೆ ಬರಬೇಕೆಂದು ಇಷ್ಟಪಟ್ಟರೆ, ಅವರು ಹಿಂದೂ ಧರ್ಮದ ಹೊದಿಕೆಯಿಂದಲೇ ಹೊರಗಡೆ ಬರಬೇಕು ಎಂದು ಹೇಳಿದರು. ಬೊಂಬಾಯಿ ಆಧಿಪತ್ಯದಲ್ಲಿ ಮಹರ್ ಸಮುದಾಯ ನಿಮ್ನ ವರ್ಗಗಳಲ್ಲಿ ಬಹುಸಂಖ್ಯಾತ ಸಮುದಾಯವಾಗಿದ್ದು, ಮ್ಹಾಂಗ್ ಸಮುದಾಯ ತಮ್ಮೊಡನೆ ಬರಲು ಸಿದ್ದವಿದ್ದರೆ, ತಾವು ಮಹರ್ ಸಮುದಾಯಕ್ಕೆ ಸೇರಿದವನಾಗಿದ್ದು ಆ ಸಮುದಾಯದ ಪರವಾಗಿ, ಭರವಸೆಯನ್ನು ಕೊಡುತ್ತಾ ಹೇಳುವುದೇನೆಂದರೆ, ತಾವು ಎರಡೂ ಸಮುದಾಯಗಳ ನಡುವೆ ಯಾವ ಭೇದವನ್ನೂ ಮಾಡುವುದಿಲ್ಲವೆಂದರು. ಮ್ಹಾಂಗ್ ಸಮುದಾಯದವರು ಪಕ್ಷಕ್ಕೆ ಕೊಟ್ಟಿರುವ ವಾಗ್ದಾನಕ್ಕೆ ಬದ್ಧವಾಗಿದ್ದರೆ, ಬೊಂಬಾಯಿ ಆಧಿಪತ್ಯದಲ್ಲಿ ನಿಮ್ನ ವರ್ಗಗಳಿಗೆ ಹಂಚಿಕೆಯಾಗಿರುವ ೧೫ ಸ್ಥಾನಗಳಲ್ಲಿ ಮ್ಹಾಂಗ್ ಸಮುದಾಯದ ಕೋಟಾವನ್ನು ಬಿಟ್ಟುಕೊಡುವುದಕ್ಕೆ ಮಹರ್‌ಗಳು ಸಿದ್ದವಾಗಿದ್ದಾರೆ ಎಂದು ಹೇಳಿದರು. ನಿಮ್ನ ವರ್ಗಗಳವರ ಮುಂದೆ ತಾವು ಇಟ್ಟಿದ್ದ ಧರ್ಮ ಬದಲಾವಣೆಯ ಚಿಕಿತ್ಸೆ, ತೀರಾ ಕೆಳಮಟ್ಟದಲ್ಲಿರುವ ಮಂದಿ ತಮ್ಮ ಶತಮಾನಗಳ ಹೀನಾಯ ಸ್ಥಿತಿಯಿಂದ ಮೇಲೆ ಬರುವುದಕ್ಕೆ ಒಂದು ಅತಿದೊಡ್ಡ ಯೋಜನೆಯಾಗಿದೆ ಎಂದು ಮುಕ್ತಾಯ ಮಾಡುತ್ತಾ ಸಭೆಗೆ ಹೇಳಿದರು.

## ೩೧
## ನಿಮ್ಮ ನಾಚಿಕೆಗೇಡಿನ ವೃತ್ತಿಯನ್ನು ನೀವು ಬಿಟ್ಟು ಬಿಡಬೇಕು

೧೬ನೇ ಜೂನ್ ೧೯೩೬, ಮಂಗಳವಾರ ರಾತ್ರಿ ಬೊಂಬಾಯಿನ ಥ್ಲಾಕರ್‌ಸೆ ಸಭಾಂಗಣದಲ್ಲಿ ಸೇರಿದ ಸಭೆಯೊಂದರಲ್ಲಿ ಮಾತನಾಡುತ್ತಾ ಡಾ॥ ಅಂಬೇಡ್ಕರ್, ನಿಮ್ನ ವರ್ಗಗಳ ಕೆಲವು ಗುಂಪುಗಳಲ್ಲಿ ಪ್ರಚಲಿತವಿರುವ ಕೆಟ್ಟ ಆಚರಣೆಗಳನ್ನು ಮತ್ತು ಪದ್ಧತಿಗಳನ್ನು ಬಿಟ್ಟು ಬಿಡಬೇಕೆಂದು ಭಾವೋದ್ವೇಗದ ಮನವಿಯನ್ನು ಮಾಡಿದರು.

ಸಭೆಯಲ್ಲಿ ಭಾಗವಹಿಸಿದ್ದವರಲ್ಲಿ ದೇವದಾಸಿ, ಪತ್ರಾಜೆ, ಭೂತೆ, ಆರಾಧಿ ಮತ್ತು ಜೋಗಿನಿ ಪಂಗಡಗಳ ಸ್ತ್ರೀ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು; ಯೆಓಲಾದಲ್ಲಿ ಪ್ರಾರಂಭ ಮಾಡಿದ ಸಮೂಹ ಮತಾಂತರದ ನಿರ್ಣಯಕ್ಕೆ ಬೆಂಬಲ ಸೂಚಿಸಲು ಈ ಸಭೆಯನ್ನು ಕರೆಯಲಾಗಿತ್ತು. ಅನೇಕ ಮಂದಿ ಮಹಿಳಾ ಮತ್ತು ಪುರುಷ ಭಾಷಣಕಾರರು, ಸಭೆಯನ್ನು ಉದ್ದೇಶಿಸಿ, ಸಾಮಾಜಿಕ ಸ್ವಾತಂತ್ರ್ಯದ ಕಡೆಗೆ ಹೆಜ್ಜೆಯನ್ನಿಡಲು ಮತಾಂತರವಾಗಬೇಕಾದ ಅವಶ್ಯಕತೆಯನ್ನು ಕುರಿತು ಮಾತನಾಡಿದ ಮೇಲೆ, ಡಾ॥ ಅಂಬೇಡ್ಕರ್ ಅವರು, ಹೆಚ್ಚಾಗಿ ಕಾಮಾಟಿಪುರದಿಂದ ಬಂದಿದ್ದ ಮಹಿಳೆಯರಿಗೆ ಭಾವಪೂರ್ಣ ಮನವಿಯನ್ನು ಮಾಡಿದರು.

ಡಾ. ಅಂಬೇಡ್ಕರ್ ಹೇಳಿದ್ದು:

ನಮ್ಮೊಂದಿಗೆ ನೀವು ಧರ್ಮವನ್ನು ಬದಲಾಯಿಸಿ, ಬಿಡಿ. ನನಗೆ ಅದರಿಂದ ಏನೂ ಆಗಬೇಕಾಗಿಲ್ಲ. ಆದರೆ ನೀವು ಉಳಿದಿರುವ ನಮ್ಮ ಸಂಗಡ ಇರಬೇಕೆಂದು ಬಯಸಿದರೆ ನಿಮ್ಮ ನಾಚಿಕೆಗೇಡಿನ ಜೀವನವನ್ನು ಬಿಟ್ಟುಬಿಡಬೇಕು. ಕಾಮಾಟಿಪುರದ ಮಹರ್ ಹೆಂಗಸರು, ಸಮುದಾಯಕ್ಕೇ ಅವಮಾನ. ನಿಮ್ಮ ರೀತಿಯನ್ನು ಬದಲಾಯಿಸಿಕೊಳ್ಳದ ಹೊರತು, ನಿಮ್ಮ ಸಹವಾಸವೇ ನಮಗೆ ಬೇಡ ನಿಮ್ಮಿಂದ ನಮಗೆ ಯಾವ ಉಪಯೋಗವೂ ಇಲ್ಲ. ನಿಮಗೆ ಇರುವುದು ಎರಡೇ ದಾರಿ. ಒಂದು, ನೀವು ಎಲ್ಲಿದ್ದೀರೋ ಅಲ್ಲಿಯೇ ಇರಿ, ಇದ್ದು ಅಸಹ್ಯಕ್ಕೆ ತಿರಸ್ಕಾರಕ್ಕೆ ಗುರಿಯಾಗಿ. ಇಲ್ಲವೇ ನಿಮ್ಮ ಈ ನಾಚಿಕೆಗೇಡಿನ ವೃತ್ತಿಯನ್ನು ಬಿಟ್ಟು, ನಮ್ಮೊಂದಿಗೆ ಬನ್ನಿ.

(ವೃತ್ತಿಯನ್ನು ಬಿಟ್ಟರೆ) ಬದುಕನ್ನು ಹೇಗೆ ದೂಡಬೇಕೆಂದು ನೀವು ನನ್ನನ್ನು ಕೇಳುತ್ತೀರಿ. ಅದನ್ನು ನಾನು ನಿಮಗೆ ಹೇಳುವುದಿಲ್ಲ. ಬದುಕು ಮಾಡುವುದಕ್ಕೆ ನೂರಾರು ಮಾರ್ಗಗಳಿವೆ. ಆದರೆ ಈ ನಾಚಿಕೆಗೇಡಿನ ಜೀವನವನ್ನು ಬಿಟ್ಟುಬಿಡಬೇಕು. ನೀವು ಮದುವೆ ಮಾಡಿಕೊಂಡು, ಎಂದಿನ ಕೌಟುಂಬಿಕ ಜೀವನದಲ್ಲಿ ಇತರ ಮಹಿಳೆಯರಂತೆ ನೆಲೆಗೊಳ್ಳಬೇಕು ನಿಮ್ಮನ್ನು ವೇಶ್ಯಾವೃತ್ತಿಗೆ ಸೆಳೆದುಕೊಳ್ಳುವ ಪರಿಸ್ಥಿತಿಗಳಲ್ಲಿ ಬದುಕುವುದನ್ನು ಮುಂದುವರೆಸಬಾರದು

# ೩೨
# ಒಳಸಂಚಿಗೆ ಬಲಿಯಾಗಬೇಡಿ

ಯೂರೋಪಿಗೆ ಪಯಣ ಬೆಳೆಸುವುದಕ್ಕೆ ಮುಂಚೆ ಡಾ॥ ಅಂಬೇಡ್ಕರ್ ಅವರು ೮ನೇ ನವೆಂಬರ್, ೧೯೩೬ರ ಭಾನುವಾರ ಬೆಳಿಗ್ಗೆ ೯ಗಂಟೆಗೆ 'ಸಮತಾಸೈನಿಕ ದಳದ' ಸರ್ವಸದಸ್ಯರ ಸಭೆಯೊಂದನ್ನು ಕರೆದಿದ್ದರು. ಈ ಸಭೆಯನ್ನು ಬೊಂಬಾಯಿಯ ಪರೇಲ್‌ನಲ್ಲಿರುವ ದಾಮೋದರ್ ಸಭಾಂಗಣದಲ್ಲಿ ಕರೆಯಲಾಗಿತ್ತು. ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಅಂಬೇಡ್ಕರ್ ಹೀಗೆ ಹೇಳಿದರು.

ನಾನು ತುರ್ತಾದ ಒಂದು ಮುಖ್ಯವಾದ ಕೆಲಸದ ಮೇಲೆ ನಾಳೆ ಯೂರೋಪಿಗೆ ಹೊರಟಿದ್ದೇನೆ. ನನ್ನ ಗೈರು ಹಾಜರಿಯಲ್ಲಿ ನೀವು ಗಂಭೀರವಾದ ಹೊಣೆಗಾರಿಕೆಯನ್ನು ಹೊರಬೇಕಾಗಿದೆ. ನಿಮ್ಮ ವರ್ಗಗಳಿಗಾಗಿ ಶಾಸನ ಸಭೆಯಲ್ಲಿ ೧೫ ಸ್ಥಾನಗಳನ್ನು ಹೊಸ ರಾಜ್ಯಾಂಗದ ಪ್ರಕಾರ ಮೀಸಲಾಗಿಡಲಾಗಿದೆಯೆಂದು ನಿಮಗೆ ಗೊತ್ತಿರಲೇಬೇಕು. ಬರುವ ವರ್ಷ ಫೆಬ್ರವರಿಯಲ್ಲಿ ಶಾಸನಸಭೆಗೆ ಚುನಾವಣೆಗಳನ್ನು ನಡೆಸಲಾಗುತ್ತಿದೆ. ಪ್ರಾಂತ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಹದಿನೈದು ಸ್ಥಾನಗಳನ್ನು ನಮಗೆ ಹಂಚಿಕೆ ಮಾಡಲಾಗಿದೆ. ಈ ಸ್ಥಾನಗಳಿಗೆ ಸ್ವಾತಂತ್ರ್ಯ ಕಾರ್ಮಿಕ ಪಕ್ಷದಿಂದ ಸ್ಪರ್ಧಿಸಲು ನಾನು ಅಭ್ಯರ್ಥಿಗಳನ್ನು ನಾಮ ನಿರ್ದೇಶನ ಮಾಡಿದ್ದೇನೆ.

ಚುನಾವಣೆಗಳಲ್ಲಿ ಸ್ಪರ್ಧಿಸಲು ಈ ಸ್ವತಂತ್ರ್ಯ ಕಾರ್ಮಿಕ ಪಕ್ಷವನ್ನು ಕಟ್ಟಲು ನಾನು ಮತ್ತು ನನ್ನ ಸಹೋದ್ಯೋಗಿಗಳು ಏತಕ್ಕಾಗಿ ನಿರ್ಧರಿಸಿದ್ದೇವೆ? ಈ ಸಭೆಯಲ್ಲಿ ಈ ಪ್ರಶ್ನೆಯನ್ನು ಕುರಿತು ನಾನು ಚರ್ಚಿಸುವನಿದ್ದೇನೆ. ಭಾರತದಲ್ಲಿ ಅಸ್ತಿತ್ವದಲ್ಲಿರುವ, ಚೆನ್ನಾಗಿ ವ್ಯವಸ್ಥೆಗೊಳಿಸಲ್ಪಟ್ಟ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಇರುವಾಗ, ಹೊಸ ಪಕ್ಷವನ್ನು ಕಟ್ಟುವ ಅವಶ್ಯಕತೆ ಏನಿತ್ತು? ಈ ಒಂದು ಸಕ್ರಮವಾದ ಪ್ರಶ್ನೆಯನ್ನು ಎಲ್ಲರೂ ಕೇಳ ಬಯಸುತ್ತಾರೆ. ಅದಕ್ಕೆ ಉತ್ತರ ಬಹಳ ಸರಳವಾಗಿದೆ. ಕಾಂಗ್ರೆಸ್‌ನ ಮುಖ್ಯ ಉದ್ದೇಶ ಸ್ವಾತಂತ್ರ್ಯವನ್ನು ಗಳಿಸುವುದು. ನಾನು ಮತ್ತು ನನ್ನ ಸಹೋದ್ಯೋಗಿಗಳು ಸಹ ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ಇಚ್ಛಿಸುತ್ತೇವೆಯಾದರೂ, ಅದನ್ನು ಸಾಧಿಸುವುದು ಅಷ್ಟು ಸುಲಭ ಸಾಧ್ಯವಾದ ಕೆಲಸವಲ್ಲ ಗಾಂಧಿಯವರು ವಿಕಾಸಗೊಳಿಸಿದ "ಸತ್ಯಾಗ್ರಹ"ವೆಂಬ ಆಯುಧ ಕೂಡ ಪರಿಣಾಮಕಾರಿಯಾಗುವ ಸಂಭವವಿಲ್ಲ. ಅಸಹಕಾರ ಚಳುವಳಿ ಮತ್ತು ನಾಗರಿಕ ಅಸಹಕಾರದಿಂದ ಕೂಡ ಸ್ವಾತಂತ್ರ್ಯವನ್ನು ಗಳಿಸುವುದು ಅಸಾಧ್ಯ. ಇದು ಖಂಡಿತವಾಗಿಯೂ ನಮ್ಮ ಸಾಮರ್ಥ್ಯವನ್ನು ಮೀರಿದ್ದು. ಎಲ್ಲರೂ ಇದೇ ರೀತಿ ಆಲೋಚಿಸುತ್ತಿದ್ದಾರೆಂದು ತೋರುತ್ತಿದೆ. ಇದೇ ಇಷ್ಟು ಕಷ್ಟವಾದರೆ, ಇಂಥ ಅರ್ಥಶೂನ್ಯವಾದ ಸ್ವಾತಂತ್ರ್ಯದ ಬಗ್ಗೆ ಕನಸು ಕಾಣುವುದರಿಂದ ಏನು ಪ್ರಯೋಜನ? ಎಲ್ಲಿಯವರೆಗೆ ನಮಗೆ ಬಲವಿರುವುದಿಲ್ಲವೋ, ನಿಜವಾದ ಸ್ವಾತಂತ್ರ್ಯವನ್ನು ಗೆಲ್ಲಲು ಸಾಮರ್ಥ್ಯವಿರುವುದಿಲ್ಲವೋ, ನಮ್ಮ ಉದ್ದೇಶ ಸಫಲತೆಗಾಗಿ ಈಗಾಗಲೇ ಚೆನ್ನಾಗಿ ಪ್ರಯತ್ನಿಸಿಬಿಟ್ಟ ವಿಧಾನಗಳನ್ನೇ ಅನುಸರಿಸುವುದರಲ್ಲಿ ಬುದ್ಧಿವಂತಿಕೆ ಮತ್ತು ಲಾಭವಿದೆ. ಇದೇ ಸರಿಯಾದ ಅಭಿಪ್ರಾಯವೆಂದು ನನ್ನ ನಂಬಿಕೆ. ಭಾರತ ಇನ್ನೂ ಒಂದು ರಾಷ್ಟ್ರವಾಗಿಲ್ಲ. ಈ ದೇಶ ನಾಲ್ಕು ಸಾವಿರ ಜಾತಿಗಳಾಗಿ ಹೋಳಾಗಿದೆ. ಇದಲ್ಲದೆ ಜಾತೀಯತೆ, ಪ್ರಾಂತೀಯ ಭಾವನೆ, ಧಾರ್ಮಿಕ ಭಿನ್ನಾಭಿಪ್ರಾಯಗಳು, ಮತ್ತಿತ್ತರ ಅಸಂಖ್ಯ ಕಲಹಗಳು ಮತ್ತು ಜಗಳಗಳು ದೇಶವನ್ನು ಒಡೆದು ಹಾಕಿವೆ. ಈ ವಿಚ್ಛಿದ್ರಕಾರಿ ಶಕ್ತಿಗಳಿಂದಾಗಿ ಭಾರತ

ಎಂದೆಂದಿಗೂ ಒಗ್ಗಟ್ಟಾಗಿ ಇರುತ್ತದೆಂದು ಮುಂಗಾಣುವುದು ಕಷ್ಟ. ಮುಸ್ಲಿಮರಿಗೂ ಕ್ರಿಶ್ಚಿಯನ್ನರಿಗೂ ಒಂದೇ ಗುರಿಯಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಬಿಟಿಷ್ ರಾಜ್ಯ ಕೊನೆಗಾಣುತ್ತದೆಂದು ಇಟ್ಟುಕೊಂಡರೂ, ಅಖಂಡ ರಾಷ್ಟ್ರದಲ್ಲಿ ನಂಬಿಕೆ ಇಲ್ಲದ ಉಗ್ರಗಾಮಿಗಳು ರಾಜಕೀಯ ಅಧಿಕಾರವನ್ನು ಹಿಡಿಯುವುದಕ್ಕಾಗಿ ತಮ್ಮ ತಮ್ಮಲ್ಲೇ ಬಡಿದಾಡಿಕೊಳ್ಳುವುದಿಲ್ಲವೆ?

ನೈಜವಾದ ಮತ್ತು ಸತ್ಯವಾದ ಸ್ವಾತಂತ್ರ್ಯವನ್ನು ಸಾಧಿಸಲು ನೈಜಬಲವಿಲ್ಲದೇ ಇರುವಾಗ ಸ್ವಾತಂತ್ರ್ಯದ ಕನಸನ್ನು ಕಾಣುವುದು ಹಾನಿಕರವಾಗುತ್ತದೆ. ಬದಲಿಗೆ, ನಮ್ಮ ಮತ್ತು ಕಾಂಗ್ರೆಸ್ಸಿಗರ ನಿಲುವಿನಲ್ಲಿ ಒಂದು ಸ್ಪಷ್ಟವಾದ ವ್ಯಾತ್ಯಾಸವಿದೆ. ಕಾಂಗ್ರೆಸ್‌ನವರಿಗೆ ಸಾಂವಿಧಾನಿಕ ಸುಧಾರಣೆಗಳೆಂದರೆ ಇಷ್ಟವಿಲ್ಲ. ಅದು ಸುಧಾರಣೆಗಳ ವಿರೋಧಿಯಾಗಿದೆ. ಶಾಸನ ಸಭೆಯನ್ನು ಪ್ರವೇಶಿಸಿದ ಮೇಲೆ ಅವರು ಸುಧಾರಣೆಗಳನ್ನು ಕೊನೆಗಾಣಿಸಬಹುದು. ಈ ಸುಧಾರಣೆಗಳು ನಮ್ಮ ಆಸೆ ಆಕಾಂಕ್ಷೆಗಳಿಗೆ, ಬೇಡಿಕೆಗಳಿಗೆ, ತಾಳೆಯಾಗುವಂತೆ ಇಲ್ಲದಿದ್ದರೂ ಸಹ, ನಾವು ಅವುಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಒತ್ತು ಕೊಡುತ್ತೇವೆ ಮತ್ತು ನಮಗೆ ಈಗ ಕೊಡಲ್ಪಟ್ಟಿರುವುದಕ್ಕಿಂತ ಹೆಚ್ಚಿಗೆ ಹಕ್ಕುಗಳನ್ನು ಶಾಸನಸಭೆಗಳಲ್ಲಿ ಹಿಡಿದುಕೊಳ್ಳಲು ಬಯಸುತ್ತೇವೆ. ಶಾಸನಸಭೆಯನ್ನು ಆಟದ ಮೈದಾನವಾಗಿ ಉಪಯೋಗಿಸಿಕೊಂಡು ಕೈಚಳಕಗಳನ್ನು ತೋರಿಸುವುದಕ್ಕೂ, ತಮಾಶೆಗಳನ್ನು ಮಾಡುವುದಕ್ಕೂ ಇದು ಸಕಾಲವಲ್ಲ. ಈ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಒಂದು ವಿದೂಶಕರ ಗುಂಪಿನ ಚಿತ್ರಣವನ್ನು ಕೊಡುತ್ತದೆ. ಕಾಂಗ್ರೆಸ್‌ನಲ್ಲಿ ಎಲ್ಲ ತರಹದ ಪ್ರಭೃತಿಗಳೂ ಇದ್ದಾರೆ. ಪೋರ್ಟರಿನಿಂದ ಹಿಡಿದು ಬಡ ಕಾರ್ಮಿಕ, ರೈತ, ಚಿಲ್ಲರೆ ಅಂಗಡಿ ವ್ಯಾಪಾರಿ, ಅಂಗಡಿಗಳ ಮಾಲೀಕರು, ಭೂ ಮಾಲೀಕರು, ಬಡ್ಡಿಯ ಮೇಲೆ ಬಡ್ಡಿ ವಸೂಲು ಮಾಡುವ ಸಾಲಗಾರರು, ವರ್ತಕರು, ಮಧ್ಯಮವರ್ಗದ ಜನರು, ಬಂಡವಾಳಶಾಹಿಗಳು, ಶೋಷಣೆ ಮಾಡುವವರು ಇವರೆಲ್ಲರೂ ಕಾಂಗ್ರೆಸ್‌ನಲ್ಲಿ ಕಂಡು ಬರುತ್ತಾರೆ. ಚುಟುಕಾಗಿ ಹೇಳುವುದಾದರೆ ಕಾಂಗ್ರೆಸ್‌ನಲ್ಲಿ ಪರಸ್ಪರ ವಿರೋಧಿ ಹಿತಾಶಕ್ತಿಗಳು ಇವೆ. ಬಡವರ ರಕ್ತವನ್ನು ಹೀರುವ ಈ ಜನಗಳು ಯಾವತ್ತಾದರೂ ಶೋಷಣೆಗೊಳಗಾದವರ ಸ್ನೇಹಿತರಾಗಲು ಸಾಧ್ಯವೇ? ಕಾಂಗ್ರೆಸ್ ಧನಿಕರ ಮಡಿಲಲ್ಲಿ ಕುಳಿತುಕೊಂಡಿದೆ. ಅವರು ಬಡರೈತರಿಗೆ, ವ್ಯವಸಾಯಗಾರರಿಗೆ ಮತ್ತು ಕಾರ್ಮಿಕರಿಗೆ ಹೇಗೆ ಸಹಾಯ ಮಾಡಿಯಾರು? ಕಾಂಗ್ರೆಸ್ ಉಳುವವರ ಮತ್ತು ಕಾರ್ಮಿಕರ ಪಕ್ಷವಲ್ಲ. ಕಾಂಗ್ರೆಸ್ ಬಂಡವಾಳಶಾಹಿಗಳ ರಕ್ಷಕರು ಕಾರ್ಮಿಕ ವರ್ಗಗಳವರ ಮತ್ತು ಸಾಧಾರಣ ಜನರ ಹಿತಾಶಕ್ತಿಗಳನ್ನು ರಕ್ಷಿಸಿ ಕಾಪಾಡುವುದಕ್ಕೆ ಕಾಂಗ್ರೆಸ್‌ಗೆ ಕಷ್ಟವಾಗುತ್ತದೆ. ಇದಕ್ಕೆ ಎದುರಾಗಿ ನಮ್ಮ ಸಂಸ್ಥೆ – ಸ್ವತಂತ್ರ್ಯ ಕಾರ್ಮಿಕ ಪಕ್ಷ – ಸಮಾಜದ ನಿರ್ಬಲವರ್ಗದವರ ರಕ್ಷಣೆಗಾಗಿ ನಿಂತಿದೆ. ಉಳುಮೆ ಮಾಡುವವರ ಮತ್ತು ಕಾರ್ಮಿಕ ವರ್ಗಗಳವರ ಹಿತಾಶಕ್ತಿಯ ರಕ್ಷಣೆ ಮಾಡುವುದು ಕಾಂಗ್ರೆಸ್‌ನವರಿಗಿಂತ ನಮ್ಮ ಪಕ್ಷಕ್ಕೆ ಸುಲಭ ಸಾಧ್ಯವಾದ ಕೆಲಸ. ನಮ್ಮ ಪಕ್ಷದ ಮುಖ್ಯ ಉದ್ದೇಶ, ಅಸ್ಪೃಶ್ಯರ, ಕಾರ್ಮಿಕ ವರ್ಗಗಳ, ಬಡವರ ಮತ್ತು ಹರಣಕ್ಕೊಳಗಾದ ಜನಗಳ ಹಿತಾಶಕ್ತಿಗೆ ಹೋರಾಡುವುದೇ ಆಗಿದೆ. ನಮ್ಮ ಘೋಷಿತ ನೀತಿಗಳನ್ನು ಮತ್ತು ಧ್ಯೇಯಗಳನ್ನು ಕೈಬಿಡದೆ ಚುನಾವಣೆ ಗೆಲ್ಲುವುದಕ್ಕೆ ಇತರ ಪಕ್ಷಗಳೊಂದಿಗೆ ಸಖ್ಯವನ್ನು ಬೆಳೆಸಿಕೊಳ್ಳುತ್ತೇವೆ. ಅನೇಕಬಾರಿ, ಅಸ್ಪೃಶ್ಯರ ನಿಮಿತ್ತವನ್ನು ಪಕ್ಕಕ್ಕಿಟ್ಟು ನಾನು ಇತರ ಜನಗಳೊಂದಿಗೆ ಕೆಲಸ ಮಾಡುವುದನ್ನೇಕೆ ಆರಿಸಿಕೊಂಡಿದ್ದೇನೆ ಎಂದು ನನ್ನನ್ನು ಕೇಳಲಾಗಿದೆ. ಈ ಸಂಬಂಧವಾಗಿ ನಾನು ಹೇಳಲಿಚ್ಛಿಸುವುದೇನೆಂದರೆ, ಪ್ರಸ್ತಾವಿತ ಶಾಸನ ಸಭೆಯಲ್ಲಿ, ಹೊಸ ರಾಜ್ಯಾಂಗದ ಪ್ರಕಾರ ೧೭೫ ಚುನಾಯಿತ ಸದಸ್ಯರಿರುತ್ತಾರೆ. ಈ ೧೭೫ ಪ್ರತಿನಿಧಿಗಳಿಂದ ೧೫ ಮಂದಿ ಅಸ್ಪೃಶ್ಯರಿರುತ್ತಾರೆ. ಈ ೧೫ ಮಂದಿ ಸದಸ್ಯರಿಗೆ ಪರಿಣಾಮಕಾರಿಯಾಗಿ ಕೆಲಸಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ, ನಮಗೆ ಸಹಾಯ ಮಾಡಲು ಹೆಚ್ಚಿನ ಸಂಖ್ಯೆಯ ಜನಗಳ ಸಹಾಯ

ಅತ್ಯವಶ್ಯಕವಾಗಿದೆ. ಅವರ ಆಲೋಚನೆಗಳು ಮತ್ತು ನೀತಿಗಳು ನಮ್ಮ ಆಲೋಚನೆಗಳಿಗೆ ಮತ್ತು ನೀತಿಗಳಿಗೆ ಹೋಲುವಂತ ಸ್ನೇಹಿತರಾಗಿರಬೇಕು. ಈ ಅಸ್ಪೃಶ್ಯರಲ್ಲದವರ ಮಧ್ಯೆ ತಮ್ಮದೇ ಹಿತಾಸಕ್ತಿಗಳನ್ನು ತ್ಯಾಗ ಮಾಡಿ ನಮ್ಮ ನಿಮಿತ್ತಕ್ಕಾಗಿ ನಮ್ಮ ಜೊತೆಯಲ್ಲೇ ಹೋರಾಡಿದ್ದಾರೆ. ಆದುದರಿಂದ ನಮ್ಮ ಪಕ್ಷದ ಅಭ್ಯರ್ಥಿಗಳಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ನಾವು ಸೇರಿಸಿಕೊಳ್ಳಬೇಕು. ಆದುದರಿಂದ ಈ ಹಂತದಲ್ಲಿ ನಮ್ಮ ಸಮಯವನ್ನು ಈ ನಿರರ್ಥಕ ವಾದ – ವಿವಾದಗಳಲ್ಲಿ ವ್ಯರ್ಥ ಮಾಡಬಾರದು. ನಮ್ಮ ಪಕ್ಷದ ಉದ್ದೇಶ ಸಾಧನೆಗೆ ನಾವು ಕ್ಷುಲ್ಲಕ ಜಗಳಗಳಲ್ಲಿ, ವ್ಯರ್ಥಾಲಾಪಗಳಲ್ಲಿ, ಚರ್ಚೆಗಳಲ್ಲಿ ತೊಡಗದೆ ಅವುಗಳನ್ನು ಪಕ್ಕಕ್ಕೆ ತ್ಯಜಿಸಬೇಕು. ನಮ್ಮ ಪಕ್ಷದ ತತ್ವವನ್ನು ಮತ್ತು ನೀತಿನಿಯಮಗಳನ್ನು ಶ್ರದ್ಧೆಯಿಂದ ಅನುಸರಿಸಿದರೆ ಮತ್ತು ಪ್ರಾಮಾಣಿಕವಾಗಿ ಜಯ ಹೊಂದುವವರೆಗೆ ಕೆಲಸ ಮಾಡಿದರೆ, ಆಗ ನಾನು ನಮ್ಮ ಜನಕ್ಕಾಗಿ ಏನು ಮಾಡಲು ಸಾಧ್ಯವಾಗಿದೆಯೋ, ಅದು ಇನ್ನೂ ಬಲಗೊಳ್ಳುತ್ತದೆ. ಶಾಸನ ಸಭೆಯ ಚುನಾವಣೆಗಳಲ್ಲಿ ನನಗೆ ಸಿಗದೇ ಹೋದರೆ ಪರವಾಗಿಲ್ಲ. ಏನೇ ಆದರೂ ನೀವು "ಜಿ" ವಾರ್ಡ್‌ನಿಂದ ನಮ್ಮ ಅಭ್ಯರ್ಥಿಯಾದ ಮಿ: ಕರೋಖೆ ಅವರನ್ನು ಚುನಾಯಿಸಲೇಬೇಕು. ಇದು ನಮ್ಮ ಪ್ರತಿಷ್ಠೆಯ ವಿಷಯವಾಗಿದೆ.ಈ ಹಂತದಲ್ಲಿ ಮಹರ್ ಮತ್ತು ಮ್ಹಾಂಗ್‌ಗಳ ನಡುವೆ ಭೇದವನ್ನು ಬಿತ್ತಲು ಹೋಗಬೇಡಿ. ನಾವೆಲ್ಲ ಒಂದೇ ಆಗಿದ್ದು ಒಗ್ಗಟ್ಟಿನ ಭಾವನೆಯನ್ನು ಸದಾಕಾಲ ಮನಸ್ಸಿನಲ್ಲಿ ಶ್ರದ್ಧಾಪೂರ್ವಕವಾಗಿ ಇಟ್ಟುಕೊಳ್ಳಬೇಕು. ಈಗ ನಾನು ಇನ್ನೊಂದು ಮುಖ್ಯ ವಿಷಯಕ್ಕೆ ಬರುತ್ತೇನೆ. ನಮ್ಮ ಅಭ್ಯರ್ಥಿಗಳಾಗಿ ಬಹುತೇಕ ಮಹರ್ ಸಮುದಾಯದಿಂದ ಆರಿಸಿಕೊಂಡಿದ್ದೇನೆ; ಇತರ ಜಾತಿಗಳಿಂದ ಬಹುಮಂದಿಯನ್ನು ತೆಗೆದುಕೊಂಡಿಲ್ಲ. ಮುಚ್ಚುಮರೆಯಿಲ್ಲದೆ ಹೇಳುವುದಾದರೆ, ಈ ಹಂತದಲ್ಲಿ ಆದಕ್ಕೆ ಕಾರಣವನ್ನು ಹುಡುಕಿಕೊಂಡು ಹೋಗುವುದು ಬುದ್ಧಿವಂತಿಕೆಯಲ್ಲ. ಆದರೆ ರಾಷ್ಟ್ರೀಯ ಹರಿಜನ ಪಕ್ಷ ಎಂಬ ಹೆಸರಿನ ಪಕ್ಷವನ್ನು ಹುಟ್ಟುಹಾಕಿರುವ ಮಂದಿ ಈ ಆಪಾದನೆಯನ್ನು ನನ್ನ ಮೇಲೆ ಮಾಡಿ ಪ್ರಕರಣವನ್ನು ತೆರೆದಿದ್ದಾರೆ. ಈ ಆಪಾದನೆಯನ್ನು ನಿರಾಕರಿಸಿ ಅವರಿಗೆ ಸೂಕ್ತವಾದ ಉತ್ತರವನ್ನು ಕೊಡಬೇಕಾಗಿದೆ. ರಾಷ್ಟ್ರೀಯ ಹರಿಜನರೆಂದು ಹೇಳಿಕೊಳ್ಳುವ ಜನಗಳ ಸಂಸ್ಥೆಗೊಂದು ಹೆಸರನ್ನು ನಾನು ಕೊಟ್ಟಿದ್ದೇನೆ. ನಾನು ಅವರನ್ನು "ಸಿಕ್ಕಿದ್ದನ್ನು ಎತ್ತಿಕೊಂಡು ಓಡಿಹೋಗುವ ಕಳ್ಳ"ರೆಂದು ಕರೆಯುತ್ತೇನೆ.

ನಾನು ಛಂಭಾರ್ ಜಾತಿಗೆ ಸೇರಿದ ಯಾರನ್ನೂ ಪಕ್ಷದಿಂದ ಉಚ್ಚಾಟಿಸಿಯೂ ಇಲ್ಲ, ಹೊರಗೂ ಇಟ್ಟಿಲ್ಲ. ಅವರಿಗೆ ಇಷ್ಟ ಬಂದ ಹಾಗೆ ಅಂದುಕೊಳ್ಳಲು ಅವರು ಸ್ವಾತಂತ್ರ್ಯರಿದ್ದಾರೆ. ಇದು ನನ್ನನ್ನು ಹೆಚ್ಚಿಗೆ ಭಾದಿಸುವುದಿಲ್ಲ. ಈ "ಹರಿಜನರನ್ನು" ಬರುತ್ತಿರುವ ಶಾಸನಸಭೆ ಚುನಾವಣೆಗೆ ಅಭ್ಯರ್ಥಿಗಳನ್ನಾಗಿ ಆರಿಸಿಕೊಳ್ಳದಿರುವುದಕ್ಕೆ ಮುಖ್ಯವಾದ ಕಾರಣವಿದೆ. ಅವರನ್ನು ಸೇರಿಸಿಕೊಳ್ಳದೆ ಇರುವುದಕ್ಕೆ ಕಾರಣ ಅವರ ಕೆಟ್ಟ ಅಭ್ಯಾಸ, ಸಿಕ್ಕಿದ್ದನ್ನು ಎತ್ತಿಕೊಂಡು ಓಡಿಹೋಗುವುದು. ಅವರು ಭಿಕ್ಷೆ ಬೇಡಲು ಭಿಕ್ಷಕರಂತೆ ಎಲ್ಲಿಗಾದರೂ ಹೋಗುತ್ತಾರೆ. ಅವರಿಗೆ ನೀತಿ, ನಿಯಮ, ಪಕ್ಷದಲ್ಲಿನ ಶಿಸ್ತು ಮತ್ತು ಪಕ್ಷದ ಆದರ್ಶಗಳಿಗೆ ಯಾವ ಗೌರವವೂ ಇಲ್ಲ. ಅವರ ಒಂದೇ ನೀತಿಯೆಂದರೆ ಕೈಗೆ ಸಿಕ್ಕಿದ್ದನ್ನು ಎತ್ತಿಕೋ, ಜೇಬಿನಲ್ಲಿ ಇಟ್ಟುಕೋ ಮತ್ತು ಓಡಿಹೋಗುವುದೇ ಆಗಿದೆ.

ನಾವು ಮಹದ್ ಸತ್ಯಾಗ್ರಹವನ್ನು ಪ್ರಾರಂಭಿಸಿದೆವು. ನಾವು ಆತ್ಮಗೌರವ ಮತ್ತು ಆತ್ಮವಿಶ್ವಾಸದ ಚಳುವಳಿಯನ್ನು ಶುರು ಮಾಡಿದೆವು. ನಾಶಿಕ್‌ನಲ್ಲಿ ಇನ್ನೊಂದು ಹೋರಾಟಕ್ಕೆ ಚಾಲನೆ ಕೊಟ್ಟೆವು. ಪೂನಾ ಕಾಲಿಗೆ ಸಹಿ ಹಾಕುವುದಕ್ಕೆ ಮುಂಚೆ, ಇತ್ತೀಚಿಗೆ, ನಮ್ಮ ಪ್ರಾಣಗಳನ್ನು ಅಪಾಯಕ್ಕೆ ಒಡ್ಡಿ, ನಮ್ಮ ಹಕ್ಕುಗಳಿಗಾಗಿ, ರಾಜಕೀಯ ರಕ್ಷಣೆಗಾಗಿ ಗಾಂಧೀ ವಿರುದ್ಧ ಹೋರಾಡಿದೆವು. "ರಾಷ್ಟ್ರೀಯ ಹರಿಜನರೆಂದು" ಹೇಳಿಕೊಳ್ಳುವ

ಈ ಮಂದಿ ನಮ್ಮ ಶತೃಪಾಳಯದಲ್ಲಿ ಸುಖಾಸೀನರಾಗಿದ್ದರು. ಸಿಕ್ಕಿದ್ದನ್ನು ಎತ್ತಿಕೊಂಡು ಓಡಿಹೋಗುವ ಈ ಜನಗಳಿಗೆ ಈಗ ನಮ್ಮ ಗೆಲುವಿನಲ್ಲಿ ಪಾಲು ಬೇಕಾಗಿದೆ. ಅವರು ನಮ್ಮೊಂದಿಗೆ ಹೆಣಗಲೂ ಇಲ್ಲ, ನಮ್ಮೊಂದಿಗೆ ಸಹಕರಿಸಲೂ ಇಲ್ಲ. ಇಂಥ ಜನಗಳಿಗೆ ನಾವೇಕೆ ಈಗ ಔದಾರ್ಯವನ್ನು ತೋರಿಸಬೇಕು? ಬಾವಲಿಗಳಂತೆ ಬದುಕಿರುವ ಈ ಜನಗಳ ಟೀಕೆಯನ್ನು ನಾನು ಲೆಕ್ಕಿಸುವುದಿಲ್ಲ. ಇಷ್ಟೇ ಅಲ್ಲ ಪೂನಾ ಕೌಲಿಗಿಂತ ಮುಂಚೆಯೂ ಕೂಡ, ಗಾಂಧೀಜಿ ತಮ್ಮ ಜೀವನವನ್ನು ಪಣಕ್ಕಿಟ್ಟಾಗ ಇದೇ ಜನಗಳು ಅವರ ನಿಲುವನ್ನು ಬೆಂಬಲಿಸುವುದಕ್ಕಾಗಿ, ಗಾಂಧೀಯವರ ಜೀವನವನ್ನು ಉಳಿಸುವುದಕ್ಕಾಗಿ ನಿಮ್ಮ ವರ್ಗಗಳವರಿಗೆ ಸ್ಥಾನಗಳ ಯಾವ ಮೀಸಲಾತಿಯನ್ನು ಬೇಡ ಎಂದು ಹೇಳಿದರು. ಈಗ ನಮ್ಮ ಹೋರಾಟದಿಂದ ಗೆದ್ದುಕೊಂಡಿರುವ ಸ್ಥಾನಗಳಲ್ಲಿ ಪಾಲನ್ನು ಕೇಳುವುದಕ್ಕೆ ಈ ಜನಗಳಿಗೆ ಯಾವ ಹಕ್ಕಿದೆ? "ರಾಷ್ಟ್ರೀಯ ಹರಿಜನರು" ಎಂದು ಕರೆದುಕೊಳ್ಳುವ ಈ ಜನರ ಮುಖಂಡರು ಶ್ರೀ ನಾರಾಯಣ ಕಜ್ರೋಲ್‌ಕರ್ ಅವರು; ಇವರು ಒಂದು ದಿನ ಸಾವರ್ಕರ್ ಅವರ ದಳದಲ್ಲಿ ಗುರುತಿಸಿಕೊಳ್ಳುತ್ತಾರೆ. "ದೇಶಪ್ರೇಮಿ" ಎಂದು ಕರೆದುಕೊಳ್ಳುವ ವಲ್ಲಭ ಭಾಯಿ ಪಟೇಲ್ ಅವರಂಥವರ ಪಾಳ್ಯದಲ್ಲಿ ಶ್ರೀ ವಿ. ಬಾಲು ಅವರು ಒಂದು ಸ್ಥಾನಕ್ಕಾಗಿ ಅಂಟಿಕೊಂಡಿರುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಈ "ಹರಿಜನ" ಸಂಸ್ಥೆಯ ಸ್ಥಾನವೇನಾಗಿರುತ್ತದೆ? ಅದು ಏನಾಗಿರುತ್ತದೆ ಎಂಬುದನ್ನು ಈ ದಿನ ನಾನು ನಿಮಗೆ ಹೇಳುವುದು ಅವಶ್ಯಕವೂ ಅಲ್ಲ, ಸರಿಯೂ ಅಲ್ಲ. ಭವಿಷ್ಯದಲ್ಲಿ ಸಂಭವಿಸಬಹುದಾದ ಇಂಥ ಪರಿಸ್ಥಿತಿಯ ಮೇಲೆ ಯಾರಾದರೂ ಬೆಳಕನ್ನು ಚೆಲ್ಲಲು ಪ್ರಯತ್ನಿಸಿದ್ದಾರೆಯೆ? ಇಲ್ಲಿಯವರೆಗೆ ನಮಗೆ ಸಹಕಾರ ಕೊಟ್ಟು ನಮ್ಮ ಹೋರಾಟದಲ್ಲಿ ಸಹಾಯ ಮಾಡಿರುವ ಒಬ್ಬರೇ ಒಬ್ಬ ವ್ಯಕ್ತಿಯೆಂದರೆ ಮಿ:ಶಿವತಾರ್‌ಕರ್ ಮಾಸ್ಟರ್ ಅವರು. ಅವರು ಚಮ್ಮಾರ್ ಜಾತಿಗೆ ಸೇರಿದ ಒಬ್ಬ ಪ್ರಮುಖ ಮುಖಂಡರಾಗಿದ್ದಾರೆ. ದುರಾಧೃಷ್ಟವಶಾತ್, ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಅವರಿಗೆ ಸಮಿತಿಯಿಂದ ಇದುವರೆಗೂ ಅನುಮತಿ ದೊರಕಿಲ್ಲ. ಆದ್ದರಿಂದ ಅವರನ್ನು ನಮ್ಮ ಪಕ್ಷದ ಅಭ್ಯರ್ಥಿಯಾಗಿ ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ. ಒಳ್ಳೆಯದು! ಪ್ರಾಮಾಣಿಕವಾಗಿ ಹೇಳಬೇಕೆಂದರೆ ಶಾಸನ ಸಭೆಗೆ ಪ್ರವೇಶ ಮಾಡುವುದಕ್ಕಿಂತ ಹೊರಗಡೆಯಿಂದ ಕೆಲಸ ಮಾಡುವುದೇ ಉತ್ತಮ ಎಂದು ನನಗೆ ಅನಿಸುತ್ತದೆ. ಧಾರ್ಮಿಕ ಮತಾಂತರದ ಪ್ರಶ್ನೆಯೂ ನೆನೆಗುದಿಗೆ ಬಿದ್ದಿದೆ.

ಇಷ್ಟಾದರೂ ನಮ್ಮ ಜನಗಳ ಆಶೋತ್ತರಗಳನ್ನು ಗೌರವಿಸುತ್ತಾ ನಾನು ಸ್ವತಂತ್ರ್ಯ ಕಾರ್ಮಿಕ ಪಕ್ಷದ ಅಭ್ಯರ್ಥಿಯಾಗಿ ಶಾಸನಸಭೆಯನ್ನು ಪ್ರವೇಶಿಸಲು ತೀರ್ಮಾನಿಸಿದ್ದೇನೆ. ನಮ್ಮ ಈ ತೀರ್ಮಾನದಿಂದಾಗಿಯೇ, ಕಾಂಗ್ರೆಸ್ ಪಕ್ಷ ನಮ್ಮ ಹಾದಿಯಲ್ಲಿ ಎಲ್ಲಾ ರೀತಿಯ ಅಡಚಣೆಗಳನ್ನು ಒಡ್ಡಲು ಪ್ರಯತ್ನ ಪಡುತ್ತದೆಂದು ನನಗೆ ಖಾತರಿಯಾಗಿದೆ. ವಾಸ್ತವವಾಗಿ, ನನ್ನನ್ನು ಅಸೆಂಬ್ಲಿಯಿಂದ ಹೊರಗಿಡುವುದಕ್ಕಾಗಿ ಅವರು ಆಗಲೇ ತಮ್ಮ ಪ್ರಯತ್ನಗಳಿಗೆ ಚಾಲನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾವೆಲ್ಲಾ ಬಹಳ ಜಾಗೃತರಾಗಿದ್ದು ಒಗ್ಗಟ್ಟಾಗಿ ನಮ್ಮ ಕೆಲಸವನ್ನು ಶಿಸ್ತಿನಿಂದ ಮಾಡುವುದನ್ನು ಮುಂದುವರೆಸಬೇಕು. ಈ ಬಾರಿ ನನಗೆ ನಿಮ್ಮೆಲ್ಲರ ಮತ ಸಿಗಲೇಬೇಕು. ಅಸೆಂಬ್ಲಿ ಚುನಾವಣೆಯಲ್ಲಿ ಗೆಲ್ಲಲು ನಾನು ನನ್ನ ನೀತಿ ನಿಯಮಗಳನ್ನು ಕೈ ಬಿಡುತ್ತೇನೆಂದು ತಿಳಿಯಬೇಡಿ. ನಿಮಗೆ ಸಹಾಯ ಮಾಡುವವರು ಯಾರೂ ಇಲ್ಲವೆಂದು ನೀವು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಯಾವುದೇ ಸಂಚಿಗೆ ಬಲಿಯಾಗಬೇಡಿರೆಂದು ನಾನು ನಿಮಗೆ ಸಲಹೆ ಮಾಡುತ್ತೇನೆ. ಇಂಥ ಕಾಲದಲ್ಲಿ ನೀವು ನಿಮ್ಮ ಸ್ವಾರ್ಥ, ದುರಾಸೆ, ಮತ್ತು ಸಂಕುಚಿತ ಮನೋಭಾವವನ್ನು ಬಿಟ್ಟು ಬಿಡಬೇಕು. ಪಕ್ಷದ ಅಭ್ಯರ್ಥಿಗಳಾಗಿ ಸೇರಿಸುವುದು ಸಾಧ್ಯವಾಗಿಲ್ಲದ ಕಾರಣಕ್ಕಾಗಿ ಕೆಲವು ಜನಗಳು ಅಸಮಾಧಾನ ಮತ್ತು ಹತಾಶೆಯಿಂದ ಪಕ್ಷವನ್ನು ಛಿದ್ರಗೊಳಿಸುವ ಮತ್ತು ಚದುರಿಸುವ

ಹಾದಿಯನ್ನು ಸುಲಭವಾಗಿ ಹಿಡಿಯಬಹುದು. ಯಾವ ಮರ ನಮಗೆ ಆಸರೆ, ತಂಪಾದ ಮತ್ತು ಉಲ್ಲಾಸದಾಯಕವಾದ ನೆರಳನ್ನು, ಸೌಕರ್ಯ ಮತ್ತು ರಕ್ಷಣೆಯನ್ನು ಕೊಡುತ್ತದೋ ಅದನ್ನು ಪೋಷಿಸಿ ಕಾಪಾಡಬೇಕೆಂಬುದನ್ನು ನೀವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ನೀವು ಅದರ ರೆಂಬೆ ಕೊಂಬೆಗಳನ್ನು ಕಡಿದು ಕತ್ತರಿಸುವುದಕ್ಕೆ ಪ್ರಯತ್ನಿಸುವುದಿಲ್ಲವೆಂದು ನನಗೆ ಭರವಸೆ ಇದೆ. ಮುಖ್ಯವಾಗಿ ಸ್ವಾರ್ಥಪರತೆಯಿಂದ, ನಮ್ಮ ನಿಮಿತ್ತಗಳಿಗೆ ಹಾನಿಯನ್ನುಂಟುಮಾಡುವುದಕ್ಕೆ ಹೊರಟ ಈ ಜನಗಳಿಗೆ ಯಾವ ಲಾಭ ಸಿಗುತ್ತದೆಯೆಂಬ ಸಂಶಯ ನನಗಿದೆ. ಅವರಿಗೆ ಏನೆಂದರೆ ಏನೂ ಸಿಗುವುದಿಲ್ಲ. ತನ್ನ ಕಾಲನ್ನು ತಾನೇ ಕೊಡಲಿನಿಂದ ಹೊಡೆದುಕೊಳ್ಳುವ ರೀತಿಯಲ್ಲಿ ಈ ಜನರಿದ್ದಾರೆ. ಸಧ್ಯಕ್ಕೆ ಈ ಎಲ್ಲಾ ಚಟುವಟಿಕೆಗಳನ್ನು ಬದಿಗಿಟ್ಟು, ಈ ಕಾರ್ಯಕ್ರಮವನ್ನು ನಮ್ಮ ಸಹೋದ್ಯೋಗಿಗಳ ಸಹಾಯ ಮತ್ತು ಸಹಕಾರದಿಂದ ರೂಪಿಸಿ ನಿಮ್ಮ ಮುಂದೆ ಇಡುತ್ತಿದ್ದೇನೆ. ಸಮತಾ ಸೈನಿಕ ದಳದ ನೀವೆಲ್ಲಾ ಪಕ್ಷದ ಜಯಕ್ಕಾಗಿ ಶಿಸ್ತಿನಿಂದ ಮತ್ತು ಶ್ರದ್ಧಾಪೂರ್ವಕವಾಗಿ ಕೆಲಸ ಮಾಡುತ್ತೀರೆಂದು ಆಶಿಸುತ್ತೇನೆ.

ನಾವು ಬಹಳ ಬಲಶಾಲಿಯಾದ ಶತೃಗಳನ್ನು ಎದುರಿಸಬೇಕಾಗಿದೆ. ಆದ್ದರಿಂದ ಬೊಂಬಾಯಿ ಪಟ್ಟಣದಲ್ಲಿ ನಮಗೆ ಕನಿಷ್ಟ ಪಕ್ಷ ಎರಡು ಸಾವಿರ ಸಮತಾಸೈನಿಕದಳ ಇದ್ದೇ ಇರಬೇಕು. ಶ್ರದ್ಧಾಭಕ್ತಿ ಸಮರ್ಪಣಾ ಭಾವ ಮತ್ತು ಒಗ್ಗಟ್ಟಿನಿಂದ ಇರುವ ಸಾಕಷ್ಟು ಜನಬಲವಿದ್ದರೆ, ಯಾವುದೇ ಸಂದರ್ಭದಲ್ಲಿ ಅದು ಎಷ್ಟೇ ಗಂಭೀರವಾಗಿದ್ದರೂ ಸಹ ದಾರಿಯನ್ನು ಕಂಡುಕೊಳ್ಳುವುದಕ್ಕೆ ನನಗೆ ಎಂದೆಂದಿಗೂ ಕಷ್ಟವಾಗುವುದಿಲ್ಲ. ಕಾಂಗ್ರೆಸ್ ಮತ್ತು ಇತರ ವಿರೋಧಿ ಸಂಸ್ಥೆಗಳು ನಮ್ಮ ನಿಮಿತ್ತಕ್ಕೆ ಅನೇಕ ಅಡ್ಡಿಗಳನ್ನು ತಂದೊಡ್ಡುವುದಕ್ಕೆ ಪ್ರಯತ್ನ ಪಡುತ್ತಿವೆ. ನಮ್ಮ ಸಮುದಾಯದ ಸದಸ್ಯರೆಲ್ಲರೂ ತಮ್ಮ ಅಮೂಲ್ಯವಾದ ಮತಗಳನ್ನು ನನ್ನ ಪರವಾಗಿ ಹಾಕುತ್ತಾರೆಂದು ನಾನು ಸಂಪೂರ್ಣವಾಗಿ ನಂಬಿದ್ದೇನೆ; ನನ್ನ ವಾರ್ಡಿನಲ್ಲಿ ವಾಸಿಸುತ್ತಿರುವ ಯಾರೇ ಆಗಲಿ, ಮತ ಚಲಾಯಿಸದೆ ಇರುವುದಿಲ್ಲವೆಂದು ಅಂದುಕೊಂಡಿದ್ದೇನೆ. ಇದು ಸಾಧ್ಯವಾಗುವುದು ಸಮತಾಸೈನಿಕ ದಳ ಈ ಕೆಲಸವನ್ನು ಕೈಗೆತ್ತಿಕೊಂಡರೆ ಮಾತ್ರ. ನನ್ನ ಗೈರು ಹಾಜರಿಯಲ್ಲಿ ಸಮತಾಸೈನಿಕದಳದ ಪ್ರತಿಯೊಬ್ಬ ಸದಸ್ಯ ಈ ಅತಿ ಮುಖ್ಯವಾದ ಕರ್ತವ್ಯವನ್ನು ಉತ್ಸಾಹದಿಂದ ಮತ್ತು ಶ್ರದ್ಧಾಭಕ್ತಿಯಿಂದ ನೆರವೇರಿಸುತ್ತಾನೆಂದು ನಂಬಿದ್ದೇನೆ. ಈ ಉದ್ದೇಶಕ್ಕಾಗಿ ನಾನು ಸಮಿತಿಯೊಂದನ್ನು ನೇಮಕ ಮಾಡಿದ್ದೇನೆ. ಈ ಸಮಿತಿಯ ಸಹಾಯದಿಂದ ನೀವು ಈ ಘನಕಾರ್ಯವನ್ನು ಜಯಪ್ರದವಾಗಿ ಸಾಧಿಸುತ್ತೀರೆಂದು ನನಗೆ ಖಂಡಿತವಾಗಿ ಗೊತ್ತಿದೆ.

## ೩೩
## ನಮ್ಮ ಕುಂದುಕೊರತೆಗಳನ್ನು ಮುಂದುವರೆಯುವುದಕ್ಕೆ ನಾವು ಬಿಡಬಾರದು

೩೦ನೇ ಮೇ ೧೯೩೭ರಂದು ಬೊಂಬಾಯಿ ಪರೇಲ್‌ನ ಕಾಮ್‌ಗಾರ್ ಮೈದಾನದಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷದ ಆಶ್ರಯದಲ್ಲಿ ಒಂದು ದೊಡ್ಡ ಸಭೆಯನ್ನು ಏರ್ಪಾಡಿಸಲಾಗಿತ್ತು. ಕಾರ್ಯಕಾರಿ ಪರಿಷತ್ತಿನ ಚುನಾವಣೆಯಲ್ಲಿ ಚುನಾಯಿತರಾದ ಪ್ರತಿನಿಧಿಗಳನ್ನು ಅಭಿನಂದಿಸುವುದಕ್ಕಾಗಿ ಈ ಸಭೆಯನ್ನು ಏರ್ಪಡಿಸಲಾಗಿತ್ತು. ಡಾ॥ ವಿ.ಜೆ. ಸೋಲಂಕಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಸುಮಾರು ೧೫ ಸಾವಿರ ಜನಗಳು ಸೇರಿದ್ದು ಅದರಲ್ಲಿ ಸುಮಾರು ೧೨೦೦ ಮಹಿಳೆಯರಿದ್ದರು. ಈ ಸಭೆಯನ್ನು ವ್ಯವಸ್ಥೆ ಮಾಡಲಿಕ್ಕಾಗಿ ಸಮತಾಸೈನಿಕದಳದ ಬೇರೆ ಬೇರೆ ಘಟಕಗಳನ್ನು ವಿಶೇಷವಾಗಿ ಕರೆಸಲಾಗಿತ್ತು.

ಈ ಸಭೆಯಲ್ಲಿ ಡಾ॥ ಅಂಬೇಡ್ಕರ್ ಅವರು ತಮ್ಮ ಅಭಿಪ್ರಾಯಗಳನ್ನು ಪುನರುಚ್ಚರಿಸಿದರು. ನಿಮ್ನ ವರ್ಗಗಳವರ ಹಿತ ದೃಷ್ಟಿಯಿಂದ, ಹೊಸ ಅಂಗರಚನೆಯ ಪ್ರಕಾರ ಕೆಲಸ ಮಾಡಲು ತಮ್ಮ ದೃಢ ನಿರ್ಧಾರವನ್ನು ಪ್ರಕಟಿಸಿದರು. ತಮ್ಮ ಪ್ರಯತ್ನವನ್ನು ಮುಂದುವರೆಸಿ, ಬಿಕ್ಕಟ್ಟನ್ನು ಕೊನೆಗಾಣಿಸುವಂತೆ ಕಾಂಗ್ರೆಸ್ ಪಕ್ಷಕ್ಕೆ ಮನವಿ ಮಾಡುತ್ತಾ ಒಂದು ಎಚ್ಚರಿಕೆಯ ಟಿಪ್ಪಣಿಯನ್ನು ಸಹ ಕೊಟ್ಟರು : ಕಾಂಗ್ರೆಸ್‌ನ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟವೆಂದು ಕರೆಯಿಸಿಕೊಳ್ಳುತ್ತಿರುವ ಈ ಹೋರಾಟ ಮುಗಿಯದವರೆಗೂ, ನಮ್ಮ ಕುಂದುಕೊರತೆಗಳನ್ನು ಮುಂದುವರೆಯುವುದಕ್ಕೆ ಬಿಡಲು ಸಾಧ್ಯವಿಲ್ಲವೆಂದು ಹೇಳಿದರು. ತಮ್ಮ ಭಾಷಣವನ್ನು ಮುಂದುವರೆಸುತ್ತಾ ನೆಹರೂ ಅವರಂಥ ಕಾಂಗ್ರೆಸ್‌ನವರ ಧೋರಣೆಯನ್ನು ತೀವ್ರವಾಗಿ ಖಂಡಿಸಿದರು; ನಿಮ್ನ ವರ್ಗಗಳಿಂದ ಆಯ್ಕೆಯಾದ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಲು ಚಾಕರಿ ಮಾಡುವ ಸೇವಕರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಿರುವುದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದರು. ಈ ಸಂದರ್ಭದಲ್ಲಿ ಉದಾಹರಣೆಯಾಗಿ ನೆಹರೂ ಅವರ ಸೇವಕನಾದ ಹರಿ ಎಂಬುವನ ಉದಾಹರಣೆಯನ್ನು ಕೊಟ್ಟರು. ಮಧ್ಯವರ್ತಿ ಮಂತ್ರಿ ಮಂಡಲವನ್ನು ಏತಕ್ಕೆ ಸೇರಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಕೊಡುತ್ತಾ, ಬಹುಮತವೇ ಇಲ್ಲದ, ಬಹಳ ದಿನಗಳು ಅಸ್ತಿತ್ವದಲ್ಲಿರುವ ಸಂಭವ ಇಲ್ಲದ ಅಸೆಂಬ್ಲಿಯಲ್ಲಿ ಯಾವುದೇ ಅಧಿಕಾರವನ್ನು ಒಪ್ಪಿಕೊಳ್ಳುವುದರಲ್ಲಿ ಏನೂ ಪ್ರಯೋಜನವಿಲ್ಲವೆಂದು ಹೇಳಿದರು.

## ೩೪

# ನಿಮ್ಮ ವರ್ಗಗಳ ಯಾವ ಸಚಿವನೂ ಇರಲಿಲ್ಲ

ತಾ॥ ೩೧ನೇ ಜುಲೈ ೧೯೩೭ರಂದು ಡಾ॥ ಅಂಬೇಡ್ಕರ್ ಅವರು ವೃತ್ತಿ ಸಂಬಂಧವಾಗಿ ಧೂಲಿಯಾಕ್ಕೆ ಹೋಗುವ ದಾರಿಯಲ್ಲಿದ್ದರು. ಚಾಲೀಸ್ ಗಾಂವ್ ರೇಲ್ವೆ ನಿಲ್ದಾಣದಲ್ಲಿ ನಿಮ್ನ ವರ್ಗಗಳವರು ಅವರಿಗೆ ಉತ್ಸಾಹಭರಿತ ಸ್ವಾಗತವನ್ನು ನೀಡಿದರು. ಪ್ರಾತಃಕಾಲ ೮ ಗಂಟೆಗೆ ಅವರು ಧೂಲಿಯವನ್ನು ತಲುಪಿದಾಗ ಅವರಿಗೆ ಕಿವಿಗಡಚಿಕ್ಕುವ ಚಪ್ಪಾಳೆಗಳಿಂದ ಸ್ವಾಗತಿಸಲಾಯಿತು. "ಅಂಬೇಡ್ಕರ್ ಯಾರು" "ಅಂಬೇಡ್ಕರ್ ನಮ್ಮ ರಾಜ" ಎಂಬ ಘೋಷಣೆಗಳೊಂದಿಗೆ ಅವರನ್ನು ಬರಮಾಡಿಕೊಳ್ಳಲಾಯಿತು. ಅವರನ್ನು ಪ್ರವಾಸಿ ಮಂದಿರಕ್ಕೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ನ್ಯಾಯಾಲಯದಲ್ಲಿ ಅವರ ಕೆಲಸ ಮುಗಿದ ಮೇಲೆ ಹರಿಜನ ಸೇವಕ ಸಂಘದ ಬಾಕು ಅವರು ಚಹಾ ಕೂಟವನ್ನು ವ್ಯವಸ್ಥೆ ಮಾಡಿದ್ದರು. ಸಾಯಂಕಾಲದಲ್ಲಿ ಡಾ॥ ಅಂಬೇಡ್ಕರ್ ಅವರು ವಿಜಯಾನಂದ ಚಿತ್ರಮಂದಿರದಲ್ಲಿ ಸಭೆಯೊಂದನ್ನು ಉದ್ದೇಶಿಸಿ ಭಾಷಣ ಮಾಡಿದರು. ಭಾಷಣವನ್ನು ಮಾಡುತ್ತಾ ಅವರು ಹೇಳಿದ್ದು ಬ್ರಿಟಿಷ್ ಸರ್ಕಾರ ಅಸ್ಪೃಶ್ಯರ ಬಗ್ಗೆ ಅಸಡ್ಡೆಯಿಂದ ಇದ್ದರು; ಆದರೆ, ಈಗ ಅವರ ಬದಲಿಗೆ ನಿಮ್ನ ವರ್ಗಗಳನ್ನು ಸಾಮಾಜಿಕವಾಗಿ ತುಳಿಯುತ್ತಿರುವ ಪಕ್ಷಕ್ಕೆ ಸೇರಿದ ಮುಖಂಡರುಗಳ ಗುಂಪು ಬಂದಿದೆ. ಅಸ್ಪೃಶ್ಯರ ದೃಷ್ಟಿಕೋನದಿಂದ ಆ ದಿನಗಳಲ್ಲಿ ಕಾರ್ಮಿಕರ ಸಂಘಟನೆ ಮಾಡುವುದು ಮತ್ತು ಮುನ್ನೆಚ್ಚರಿಕೆ ತೆಗೆದುಕೊಳ್ಳುವುದೇ ಆಗಿತ್ತು. ಕಾಂಗ್ರೆಸ್‌ನವರು ಸ್ಥಾಪಿಸುತ್ತಿದ್ದ ಮಂತ್ರಿಮಂಡಲಗಳ ಮೂಲಕ ಬ್ರಾಹ್ಮಣತ್ವವು ಪ್ರವರ್ಧಮಾನಕ್ಕೆ ಬರುತ್ತಿತ್ತು. ಎಲ್ಲಾ ಕಾಂಗ್ರೆಸ್ ಮಂತ್ರಿಮಂಡಲಗಳಲ್ಲಿ ಬ್ರಾಹ್ಮಣರೇ ಮುಂದಾಳುಗಳಾಗಿದ್ದರು. ಆದರೆ ನಿಮ್ನ ವರ್ಗಗಳವರಿಗೆ ಸೇರಿದ ಯಾವ ಸಚಿವನೂ ಇರಲಿಲ್ಲ.

೩೫

# ಹಿಂದೂ ಧರ್ಮಕ್ಕೆ ಸೇರಿದ ದೇವರುಗಳನ್ನು ಪೂಜಿಸಬೇಡಿ

ನಂ.೧೧/೧೯೩೮

ಪೌರಾತ್ಯ ಭಾಷಾಂತರಕಾರರ
ಕಛೇರಿ, ಸಚಿವಾಲಯ
ಬೊಂಬಾಯಿ ೫ ಜನವರಿ ೧೯೩೮

ಕೆಳಗೆ ಸಹಿ ಮಾಡಿರುವ ನಾನು ನನ್ನ ಗೌರವವನ್ನು ಸರ್ಕಾರದ ಕಾರ್ಯದರ್ಶಿ, ಗೃಹ ಇಲಾಖೆ(ರಾಜಕೀಯ)

ಇವರಿಗೆ ತಿಳಿಸುತ್ತಾ, ಇದರೊಂದಿಗೆ ಇಟ್ಟಿರುವ ನಿರೋಪ್ಯ ಎಂಬ ಮರಾಠೀ ಪುಸ್ತಕವನ್ನು ಕಳುಹಿಸಿಕೊಡುತ್ತೀದ್ದೇನೆ (ಸಂಪುಟ XXII ೬ ನವೆಂಬರ್ ೧೯೩೭)

ಇದರ ೧೩೫–೧೩೮ನೇ ಪುಟಗಳಲ್ಲಿನ ಸಂಪಾದಕೀಯ ಟಿಪ್ಪಣಿಯಲ್ಲಿ ಗಮನಾರ್ಹವಾದ ವಿಷಯವಿದೆ.

೨. ಪೂನಾದ ಆರ್ಚ್ ಬಿಷಪ್ ಅವರು ನಿರೋಪ್ಯ ಎಂಬ ಪುಸ್ತಕವನ್ನು ಮುದ್ರಿಸಿ ಪ್ರಕಟಿಸಿದರು. ಇದು ಎಕ್ಸಾಮಿನರ್ ಮುದ್ರಣಾಲಯ. ದಲಾಲ್ ರಸ್ತೆ ಫೋರ್ಟ್, ಬೊಂಬಾಯಿ ಇಲ್ಲಿ ಮುದ್ರಣವಾಯಿತು. ಉಸ್ತುವಾರಿ ನೋಡುವವರ ಪ್ರಾಮಾಣಿಕ ಹೇಳಿಕೆ ಜೆ.ಎಂ.ಸೆರೆಸ್, ಎಸ್.ಜೆ. ಅವರ ಹೆಸರಿನಲ್ಲಿ ಇದ್ದು, ಅದರ ತಾರೀಕು:೨೨.೦೧.೧೯೩೭ ಮುದ್ರಣಾಲಯದಿಂದ ಬಿಡುಗಡೆಯಾದ ತಾರೀಕು:೦೧.೧೧.೧೯೩೭.

೩. ಪುಟ ೧೩೫ ರಿಂದ ಪುಟ ೧೩೮ರಲ್ಲಿ ಇರುವ ಸಂಪಾದಕೀಯ ಟಿಪ್ಪಣಿಯ ಪೂರ್ಣ ಭಾಷಾಂತರವನ್ನು ಇದರೊಂದಿಗೆ ಕಳುಹಿಸಲಾಗಿದೆ.

ಸಹಿ ಸೂಪರಿಂಟೆಂಡೆಂಟ್
ಎಸ್.ಬಿ, ಸಿ.ಐ.ಡಿ.

ಸಹಿ: ಸರ್ಕಾರದ ಪೌರ್ವಾತ್ಯ
ಭಾಷಾಂತರಕಾರರು
ಡಿ.ಸಿ.ಪಿ.

## ಮತಾಂತರದ ಅವಶ್ಯಕತೆ

ನಿರೋಪ್ಯ:ಸಂಪುಟ:XXII, ನಂ.೬, ನವೆಂಬರ್ ೧೯೩೭ರ ಸಂಚಿಕೆಯಲ್ಲಿ ಪ್ರಕಟವಾದ ಸಂಪಾದಕೀಯ

**ಡಾ.ಅಂಬೇಡ್ಕರ್ ಮತ್ತು ಮತಾಂತರದ ಆವಶ್ಯಕತೆ**

ಎನ್ನುವ ಶಿರೋನಾಮೆಯ ಕೆಳಗೆ ಇರುವ ಲೇಖನದ ಭಾಷಾಂತರ.

'ಜನತಾ' ಎಂಬ ಸಾಪ್ತಾಹಿಕ ಪತ್ರಿಕೆಯಿಂದ ಗೊತ್ತಾಗುವುದೇನೆಂದರೆ, ೨೮.೦೮.೧೯೩೭ ರಂದು ಬಾಂದ್ರಾದ ಪೌರಸಭಾ ಸಭಾಂಗಣದಲ್ಲಿ ನಿಮ್ನವರ್ಗಗಳವರ ಒಂದು ದೊಡ್ಡ ಸಾರ್ವಜನಿಕ ಸಭೆಯನ್ನು ಕರೆಯಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ವಹಿಸಿದ್ದರು. ಸಭೆಯಲ್ಲಿ ಕೆಳಗೆ ಕಂಡ ನಿರ್ಣಯಗಳನ್ನು ಅನುಮೋದಿಸಲಾಯಿತು.

"ಬೊಂಬಾಯಿ ಅಧಿಪತ್ಯದ ಮಹರ್ ಸಮ್ಮೇಳನದಲ್ಲಿ ತೀರ್ಮಾನಿಸಿದ ಹಾಗೆ ನಮ್ಮ ಸಹೋದರ ಸಹೋದರಿಯರು ಹಿಂದೂ ಧಾರ್ಮಿಕ ಹಬ್ಬಗಳನ್ನು, ಧಾರ್ಮಿಕ ವಿಧಿಗಳನ್ನು ಅಂದರೆ ವ್ರತಗಳು, ಕಾರ್ಮಿಕ ಆಚರಣೆಗಳು (ಉಪವಾಸಗಳು) ಇತ್ಯಾದಿಗಳನ್ನು ಆಚರಿಸಬಾರದು."

ಅನೇಕರ ಭಾಷಣಗಳಾದ ಮೇಲೆ ಡಾ.ಅಂಬೇಡ್ಕರ್ ಅವರು ಮಾತನಾಡಿದರು. ಅವರು ಹೇಳಿದ್ದು, 'ನಮ್ಮ ಈ ಸಭೆಯನ್ನು ವಿಶೇಷವಾಗಿ ಕರೆದಿರುವ ಉದ್ದೇಶವೆಂದರೆ ಬೊಂಬಾಯಿ ಅಧಿಪತ್ಯದ ಮಹರ್ ಸಮ್ಮೇಳನದಲ್ಲಿ ಮತಾಂತರವನ್ನು ಕುರಿತು ಅನುಮೋದಿಸಿ ಠರಾವುಗಳನ್ನು ನಿಮ್ಮ ನೆನಪಿಗೆ ತರುವುದೇ ಅಗಿದೆ. ಯಾರಿಗಾದರೂ ಮತಾಂತರದ ಬಗ್ಗೆ ಏನಾದರೂ ಪ್ರಶ್ನೆಗಳು, ಅನುಮಾನಗಳು ಇದ್ದಲ್ಲಿ ಅವರು ಖಂಡಿತವಾಗಿಯೂ ಆ ಪ್ರಶ್ನೆಗಳನ್ನು ಕೇಳಬಹುದು. ಯಾರೂ ಯಾವುದೇ ಪ್ರಶ್ನೆಯನ್ನು ಕೇಳಲು ಮುಂದೆ ಬರದೇ ಇದ್ದುದರಿಂದ, ಡಾ॥ ಅಂಬೇಡ್ಕರ್ ಅವರು ತಮ್ಮ ಭಾಷಣವನ್ನು ಪ್ರಾರಂಭಿಸಿದರು.

ನಲ್ಮೆಯ ಸಹೋದರ–ಸಹೋದರಿಯರೇ, ಈ ಸಭೆಗೆ ನಾನು ಬರುವುದು ಇರಲಿಲ್ಲ. ಆದರೆ ಇಲ್ಲಿ ಕೆಲವರು ಹಳೆಯ ಪರಂಪರೆಗಳಿಗೆ ಅಂಟಿಕೊಂಡು ಅನುಮೋದಿಸಿದ ಮತಾಂತರಕ್ಕೆ ಸಂಬಂಧಿಸಿದ ಠರಾವುಗಳನ್ನು ಪೂರ್ಣವಾಗಿ ಅನುಸರಿಸುತ್ತಿಲ್ಲವೆಂದು ನನಗೆ ಗೊತ್ತಾಗಿದೆ. ಇಂಥ ಜನಗಳ ಅನುಮಾನಗಳನ್ನು ಪರಿಹರಿಸಲು ನಾನು ಬಂದಿದ್ದೇನೆ. ಈ ವಿಷಯದ ಮೇಲೆ ಬಹಳ ಹಿಂದೆಯೇ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಹಾಗೆ ನೋಡುವುದಾದರೆ, ನೀವು ಯಾರೂ ಯಾವುದೇ ಅನುಮಾನಗಳಿಗೆ ನಿಮ್ಮ ಮನಸ್ಸಿನಲ್ಲಿ ಎಡೆಕೊಡಬಾರದು. ೧೯೩೬ರಲ್ಲಿ ನಡೆದ ಬೊಂಬಾಯಿ ಅಧಿಪತ್ಯದ ಮಹರ್ ಸಮ್ಮೇಳನವನ್ನು ಮಹರ್ ಸಮುದಾಯದ ಚರಿತ್ರೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕು. ಇಂಥ ಸಮ್ಮೇಳನದಲ್ಲಿ ಅನುಮೋದಿಸಿದ ಇಂಥ ನಿರ್ಣಯಕ್ಕೆ ಎಲ್ಲರು ಒಟ್ಟಾಗಿ ವಿಧೇಯರಾಗಿರಬೇಕು. ಮಹರ್ ಸಮುದಾಯದ ಬಹುಸಂಖ್ಯಾತರು ಅದರಂತೆ ನಡೆದುಕೊಳ್ಳಬೇಕು.

*****

**ಮತಾಂತರದ ಪರವಾಗಿ ಇರುವ ಚಳುವಳಿಯನ್ನು ಹಿಂದೆ ತೆಗೆದುಕೊಳ್ಳುವ ಹಾಗಿಲ್ಲ.**

*****

ತಮ್ಮ ಭಾಷಣದ ಕಡೆಯಲ್ಲಿ ಅಂಬೇಡ್ಕರ್ ಹೇಳಿದ್ದು:

ಮತಾಂತರದ ಅಲೆ ಈಗ ಇಳಿದು ಹೋಗಿದೆ ಎಂದು ಕೆಲವು ಜನಗಳ ಅಭಿಪ್ರಾಯವಾಗಿದೆ. ಆದರೆ ಅದು ಹಾಗಲ್ಲ. ಮತಾಂತರ ಖಂಡಿತವಾಗಿಯೂ ನಡೆದೇ ನಡೆಯುತ್ತದೆ. ನಾನು ಈ ಚಳುವಳಿಯನ್ನು ತೊರೆದುಹೋಗಿಲ್ಲ. ಕೆಲವು ಹಿಂದೂಗಳು "ನಿಮ್ಮ ಚಳುವಳಿಯಿಂದ ನಮ್ಮ ಮತಾಂತರದ ಕಣ್ಣುಗಳು ತೆರೆದಿವೆ. ಈಗ ನಾವು ಜಾಗೃತರಾಗಿರುವುದರಿಂದ ನಿಮ್ಮ ಕಡೆಗಿನ ನಮ್ಮ ಕರ್ತವ್ಯದಿಂದ ವಿಮುಖರಾಗುವುದಿಲ್ಲ.

ಆದ್ದರಿಂದ ನಿಮ್ಮ ಚಳುವಳಿಯನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಿ" ಎಂದು ಹೇಳುತ್ತಿದ್ದಾರೆ. ನಾನಾಗಲೇ ನಿಮಗೆ ತಿಳಿಸಿರುವ ಕಾರಣಗಳಿಗಾಗಿ ನನಗೆ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಅಭಿಲಾಷೆಯಿಲ್ಲ. ಈ ವಿಷಯವನ್ನು ಕೂಲಂಕುಶವಾಗಿ ಪರಿಗಣಿಸಿ; ಯಾವ ಮತಕ್ಕೆ ಸೇರಿಕೊಳ್ಳಬೇಕೆಂಬುದನ್ನು ಆಳವಾಗಿ ಪರೀಕ್ಷೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳಿ. ಇನ್ನು ಮುಂದೆ ಮಹರ್ ಸಮುದಾಯದ ಸದಸ್ಯರೆಲ್ಲರೂ ಮಹರ್ ಸಮ್ಮೇಳನದಲ್ಲಿ ತೀರ್ಮಾನ ಮಾಡಿದ ಹಾಗೆ ನಡೆದುಕೊಳ್ಳುತ್ತೀರೆಂದು ಆಶಿಸುತ್ತೇನೆ.

## ೩೬
## ಕಾರ್ಮಿಕರನ್ನು ಕಮ್ಯುನಿಸ್ಟರು ಶೋಷಣೆ ಮಾಡಿದರು

೧೯೩೭ರ ಸೆಪ್ಟೆಂಬರ್ ತಿಂಗಳ ಮೊದಲ ಭಾಗದಲ್ಲಿ ಡಾ.ಅಂಬೇಡ್ಕರ್ ಅವರು ಮಾಸೂಲಿನಲ್ಲಿನ ನಿಮ್ನವರ್ಗಗಳವರ ಒಂದು ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ತಮ್ಮ ಭಾಷಣವನ್ನು ಮಾಡುತ್ತಾ ಅವರು:

ಬಡವರ ಮತ್ತು ಶ್ರಮಿಕ ವರ್ಗಗಳವರ ಹಿತಾಸಕ್ತಿಯನ್ನು ನೋಡಿಕೊಳ್ಳುವ ವ್ಯಕ್ತಿ ಗಾಂಧಿಯಲ್ಲ ಎಂಬುದು ತಮ್ಮ ಸಮರ್ಥನೀಯ ಅಭಿಪ್ರಾಯವೆಂದು ಹೇಳಿದರು. ಒಂದು ವೇಳೆ ಕಾಂಗ್ರೆಸ್ ಏನಾದರೂ ಕ್ರಾಂತಿಕಾರಿ ಪಕ್ಷವಾಗಿದ್ದಿದ್ದರೆ, ತಾವು ಅದಕ್ಕೆ ಸೇರುತ್ತಿದ್ದೆ ಎಂದರು. ಅದು ಕ್ರಾಂತಿಕಾರಿ ಪಕ್ಷ ಅಲ್ಲ ಎನ್ನುವುದು ನನಗೆ ಮನದಟ್ಟಾಗಿದೆ. ನನ್ನ ಇಷ್ಟಾನುಸಾರ ತಾನು ಅಭಿವೃದ್ಧಿ ಹೊಂದುವುದಕ್ಕೆ ವಿರಾಮ ಮತ್ತು ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಾಮಾನ್ಯ ಮನುಷ್ಯರಿಗೆ ಸಾಧ್ಯವಾಗುವ ಹಾಗೆ, ಸಾಮಾಜಿಕ ಆದರ್ಶ ಮತ್ತು ಆರ್ಥಿಕ ಸಮಾನತೆಯನ್ನು ಉದ್ಘೋಷಿಸುವಷ್ಟು ಧೈರ್ಯಶಾಲಿಯಾಗಿ ಕಾಂಗ್ರೆಸ್ ಇರಲಿಲ್ಲ. ಅದು ಸಾಧ್ಯವಾಗದಿದ್ದುದಕ್ಕೆ ಕಾರಣ ಉತ್ಪಾದನೆಯ ಸಾಧನಗಳೆಲ್ಲ ಕೆಲವೇ ಜನಗಳಲ್ಲಿದ್ದು ಅವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೆ ಅವರ ಹತೋಟಿಗೆ ಒಳಪಟ್ಟಿತ್ತು. ಗಾಂಧಿತತ್ವದ ಅನುಸಾರವಾಗಿ ಎರಡು ಸ್ವಾಭಾವಿಕ ವಸ್ತುಗಳ ಜೊತೆಯಲ್ಲಿ ರೈತ ಮೂರನೆಯ ಎತ್ತಾಗಿ ನೇಗಿಲಿಗೆ ಹೂಡಲ್ಪಟ್ಟಿದ್ದಾನೆ. ಕಮ್ಯುನಿಸ್ಟರು ನಡೆಸುತ್ತಿರುವ ಕಾರ್ಮಿಕ ಚಳುವಳಿಯನ್ನು ಕುರಿತು ಹೇಳುವುದಾದರೆ, ಅವರನ್ನು (ನಾನು) ಸೇರಿಕೊಳ್ಳುವ ಯಾವ ಸಾಧ್ಯತೆಯೂ ಇಲ್ಲ. ತಾವು ಕಮ್ಯುನಿಸ್ಟರ ದೃಢೀಕರಿಸಿದ ಶತ್ರುವೆಂದು ಘೋಷಿಸಿದರು. ಕಮ್ಯುನಿಸ್ಟರು ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದಾರೆಂದು ಹೇಳಿದರು.

## ೩೭
## ಶೋಷಣೆ ಮಾಡುವವರ ವಿರುದ್ಧ ಎಚ್ಚರಿಕೆಯಿಂದ ಇರಿ

೩೦ ಡಿಸೆಂಬರ್, ೧೯೩೭ ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ನಿಮ್ನವರ್ಗಗಳವರ ಶೋಲಾಪುರ ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರನ್ನು ಕುಂದುವಾಡಿ ರೇಲ್ವೆ ನಿಲ್ದಾಣದಲ್ಲಿ ಉತ್ಸಾಹದಿಂದ ಬರಮಾಡಿಕೊಳ್ಳಲಾಯಿತು. ಮಾರ್ಗ ಮಧ್ಯದಲ್ಲಿ ಡಾ.ಅಂಬೇಡ್ಕರ್ ಸ್ವಲ್ಪ ಹೊತ್ತು ಕಾರ್ಕಮ್ ಗ್ರಾಮದ ಮಾತಂಗ್ ಸಮಾಜದ ಮುಂದೆ ಒಂದು ಚಿಕ್ಕ ಭಾಷಣವನ್ನು ಮಾಡಿದರು. ಕಾಂಗ್ರೆಸ್‌ನವರ ವಿರುದ್ಧ ಎಚ್ಚರಿಕೆಯಿಂದ ಇರಿ ಎಂದು ಹೇಳುತ್ತಾ ಅವರು ಬಿಳಿ ಟೋಪಿ, ಬಿಳಿ ಉಡುಪುದಾರಿಗಳಾಗಿದ್ದು; ಆ ಪಕ್ಷದಲ್ಲಿ ಇರುವವರು ಶೋಷಣೆ ಮಾಡುವವರು, ದಮನ ಮಾಡುವವರು ಮತ್ತು ರಕ್ತ ಹೀರುವವರು; ಆದರೂ ಕೂಡ ಬಡವರ ಕಲ್ಯಾಣಕ್ಕಾಗಿ ನಾವು ಇದ್ದೇವೆ ಎಂದು ಹೇಳುವವರು ಎಂದು ಹೇಳಿದರು.

# ೩೮
# ಆತ್ಮಗೌರವ ಮತ್ತು ಸ್ವಸಹಾಯ ಚಳುವಳಿಯಲ್ಲಿ ಕಳೆದುಕೊಳ್ಳುವುದು ಏನೂ ಇಲ್ಲ. ಆದರೆ ಎಲ್ಲವನ್ನು ಪಡೆದುಕೊಳ್ಳಬಹುದು

ಶೋಲಾಪುರ ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದಾಗ ಡಾ.ಅಂಬೇಡ್ಕರ್ ಅವರು ೩೧.೧೨.೧೯೩೭ರ ಮಧ್ಯಾಹ್ನ ಪಂಡರಾಪುರವನ್ನು ತಲುಪಿದರು. ಪ್ರವಾಸಿ ಮಂದಿರಕ್ಕೆ ಅವರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು. ಪಂಡರಾಪುರದ ಪುರಸಭೆಯ ಅಧ್ಯಕ್ಷರು ಅವರನ್ನು ಪ್ರವಾಸಿಮಂದಿರದಲ್ಲಿ ಭೇಟಿ ಮಾಡಿದರು. ನಂತರ ಅವರಿಬ್ಬರೂ ಮುನಿಸಿಪಲ್ ಧರ್ಮಶಾಲಾದಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ಸಮ್ಮೇಳನಕ್ಕೆ ಹೊರಟರು. ಈ ಮಹಾನ್ ಮುಖಂಡರ ಭಾಷಣವನ್ನು ಕೇಳಲು ಹತ್ತಿರದ ಮತ್ತು ದೂರದ ಊರುಗಳಿಂದ ಜನಗಳು ಬಂದು ಸೇರಿದ್ದರು. ಸಾವಿರಕ್ಕೂ ಮಿಕ್ಕಿ ಮಹಿಳೆಯರು ಉಪಸ್ಥಿತರಿದ್ದರು. ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ, ಅವರ ಮುಂದೆ ಮೂರು ಸಮಸ್ಯೆಗಳು ಇದೆಯೆಂದು ಹೇಳಿದರು. ಮೊದಲನೆಯದೆಂದರೆ, ಅವರಿಗೆ ಯಾವತ್ತೇ ಆದರೂ ಹಿಂದು ಸಮಾಜದಲ್ಲಿ ಸಮಾನ ಸ್ಥಾನಮಾನ ಕೊಡಲಾಗುತ್ತದೆಯೇ ಎಂದು, ಎರಡನೆಯ ಸಮಸ್ಯೆ ಅವರಿಗೆ ರಾಷ್ಟ್ರೀಯ ಸಂಸತ್ತಿನಲ್ಲಿ ನ್ಯಾಯವಾದ ಪಾಲು ಸಿಗುತ್ತದೆಯೇ ಎಂದು, ಮೂರನೆಯದಾಗಿ ಅವರ ಆತ್ಮಗೌರವ ಮತ್ತು ಸ್ವಸಹಾಯ ಚಳುವಳಿ ಏನಾಗುತ್ತದೆ ಎಂದು. ಮೊದಲನೆಯದನ್ನು ಕುರಿತು ಹೇಳುತ್ತಾ ಅವರು ಬಂಡವಾಳಶಾಹಿಗಳಿಂದ ಆಳಲ್ಪಟ್ಟ ಕಾಂಗ್ರೆಸ್‌ನವರಿಂದ ಅವರಿಗೆ ಸಿಕ್ಕ ನಡವಳಿಕೆ ಕುರಿತು ಅವರಿಗೆ ಆದ ತೀವ್ರವಾದ ಅಸಮಾಧಾನವನ್ನು ಹೇಳಿದರು. ಎಲ್ಲಿಯವರೆಗೆ ಕಾಂಗ್ರೆಸ್‌ನವರು ಬಂಡವಾಳಶಾಹಿಗಳ ಕೈನಲ್ಲಿ ಇರುತ್ತಾರೋ ಅಲ್ಲಿಯವರೆಗೆ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಈಗಿನ ಸರ್ಕಾರ ಏನನ್ನಾದರೂ ಮಾಡುತ್ತದೆಂದು ನಂಬುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಆದುದರಿಂದ ತಮ್ಮನ್ನು ಶೋಷಣೆ ಮಾಡುತ್ತಿರುವ ಬಂಡವಾಳಷಾಹಿಗಳ ವಿರುದ್ಧ ಒಂದು ಸಂಯುಕ್ತ ದಳವನ್ನು ರಚಿಸಬೇಕಾಗಿರುವುದರ ಅವಶ್ಯಕತೆಯನ್ನು ಕುರಿತು ಹೇಳಿದರು. ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕೆ ಕಾಲ ಸನ್ನಿಹಿತವಾಗಿದೆಯೆಂದು ಹೇಳಿದರು. ಮೂರನೆಯದರ ಬಗ್ಗೆ ಹೇಳುತ್ತಾ, ಅವರು ಇಡುತ್ತಿರುವ ಹೆಜ್ಜೆಯಿಂದ ಅವರು ಕಳೆದುಕೊಳ್ಳುತ್ತಿರುವುದು ಏನೂ ಇಲ್ಲವೆಂದೂ, ಅದಕ್ಕೆ ಬದಲು ಎಲ್ಲವನ್ನು ಸಂಪಾದಿಸಬಹುದೆಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿದರು. ಅವರ ಮುಖಂಡರು ಅಸೆಂಬ್ಲಿಯಲ್ಲಿ ಮಂಡಿಸಿರುವ ಮಹರ್ ವತನ್ ಮಸೂದೆಯನ್ನು ಸಮ್ಮೇಳನ ಹೃದಯಪೂರ್ವಕವಾಗಿ ಬೆಂಬಲಿಸಿದರು.

ಡಾ.ಅಂಬೇಡ್ಕರ್ ಅವರನ್ನು ಆನಂತರದಲ್ಲಿ ಪುರಸಭಾ ಸಭಾಂಗಣಕ್ಕೆ ಕರೆದುಕೊಂಡು ಹೋಗಲಾಯಿತು. ಅಧ್ಯಕ್ಷರು ಆ ಸಂದರ್ಭದಲ್ಲಿ ಮನಸ್ಸನ್ನು ತಟ್ಟುವ ಭಾಷಣವನ್ನು ಮಾಡಿದರು. ಅತಿಥಿಗೆ ಹಾರ ಸಮರ್ಪಿಸಿದರು. ಡಾ.ಅಂಬೇಡ್ಕರ್ ಅವರ ಭಾವನೆಗಳಿಗೆ ಪ್ರತಿಸ್ಪಂದಿಸಿ ಎಲ್ಲರಿಗೂ ವಂದಿಸಿದರು.

## ೩೯
## ರಾಜಕೀಯವಾಗಿ ಕ್ರಿಶ್ಚಿಯನ್ನರು ಹಿಂದೆ ಬಿದ್ದಿದ್ದಾರೆ

೧ನೇ ಜನವರಿ ೧೯೩೭ ನೇ ತಾರೀಖು ಶೋಲಾಪುರದಲ್ಲಿ ಡಾ.ಅಂಬೇಡ್ಕರ್ ಅವರು ಒಂದು ಮುಖ್ಯವಾದ ಭಾಷಣವನ್ನು ಮಾಡಿದರು. ಸ್ಥಳೀಯ ಕ್ರಿಶ್ಚಿಯನ್‌ರು ಧರ್ಮದ ಮೇಲೆ ಅವರ ಅಭಿಪ್ರಾಯವನ್ನು ತಿಳಿಯಲು ಬಹಳ ಉತ್ಸುಕರಾಗಿದ್ದರು. ಆದ್ದರಿಂದ ಅವರು ಕ್ರಿಶ್ಚಿಯನ್‌ರ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ರೆವರೆಂಡ್ ಗಂಗಾಧರ್ ಜಾಧವ್ ಅವರು ವಹಿಸಿದ್ದರು. ತಾವು ಹಿಂದೂ ಧರ್ಮವನ್ನು ತ್ಯಜಿಸುತ್ತೇನೆ ಎಂದು ಹೇಳಿದ ದಿನದಿಂದ, ತಾವು ಚೌಕಾಸಿ ಮಾಡುವುದಕ್ಕೆ ಒಂದು ವ್ಯಾಪಾರದ ವಸ್ತು ಇಲ್ಲವೆ, ಒಂದು ಪ್ರಹಸನದ ವಿಷಯವಾಗಿ ಬಿಟ್ಟಿದ್ದೇನೆಂದು ಹೇಳಿದರು. ಮಹಾರಾಷ್ಟ್ರದ ಖ್ಯಾತ ನಾಟಕಕರ್ತ ಪಿ.ಕೆ.ಅತ್ರೆ ಅವರು ಬರೆದ ವಂದೇ ಭಾರತಮ್ ಎನ್ನುವ ಸುಖಾಂತ್ಯ ನಾಟಕವನ್ನು ಪರಾಮರ್ಶೆ ಮಾಡಿದರು. ಆತ್ರೆ ಅವರು ತಮ್ಮ ನಾಟಕದಲ್ಲಿ ಮತಾಂತರದ ಕಲ್ಪನೆಯನ್ನು ಪರಿಹಾಸ್ಯ ಮಾಡಿದ್ದರು. ಆದರೂ ಸಹ ನಾನು ನನ್ನ ನಿರ್ಧಾರದಲ್ಲಿ ಅಚಲನಾಗಿದ್ದೇನೆ ಎಂದು ಹೇಳಿದರು. ಧರ್ಮದ ತುಲನಾತ್ಮಕ ಅಧ್ಯಯನದಿಂದಾಗಿ ಎರಡು ವ್ಯಕ್ತಿತ್ವಗಳು ನನ್ನ ಮನಸ್ಸನ್ನು ಸೆಳೆದಿದೆ ಎಂದು ಹೇಳಿದರು. ಅವರೆಂದರೆ ಬುದ್ಧ ಮತ್ತು ಕ್ರಿಸ್ತ. ಮುಂದುವರೆದು, ಮಾನವರು ತಮ್ಮತಮ್ಮೊಳಗೆ ಹೇಗೆ ವರ್ತಿಸಬೇಕೆಂದು ತಿಳಿಸಿಕೊಡುವಂಥ ಧರ್ಮ ತಮಗೆ ಬೇಕೆಂದು, ಮಾನವ ಇನ್ನೊಬ್ಬ ಮಾನವನಿಗೆ ತನ್ನ ಕರ್ತವ್ಯವೇನೆಂದು ತಿಳಿಸುವುದು ಮತ್ತು ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯದ ಬೆಳಕಿನಲ್ಲಿ ಪರಮಾತ್ಮನೊಂದಿಗಿನ ಸಂಬಂಧವನ್ನು ತಿಳಿಸುವ ಧರ್ಮ ನನಗೆ ಬೇಕೆಂದೂ ಹೇಳಿದರು.

ದಕ್ಷಿಣ ಇಂಡಿಯಾದಲ್ಲಿನ ಅವರ ಸಹಧರ್ಮಿಯರು ಚರ್ಚುಗಳಲ್ಲಿ ಜಾತಿ ವ್ಯವಸ್ಥೆಯನ್ನು ಆಚರಿಸುತ್ತಿದ್ದಾರೆಂದೂ, ಇದಲ್ಲದೆ ರಾಜಕೀಯವಾಗಿ ಬಹಳ ಹಿಂದೆ ಉಳಿದಿದ್ದಾರೆಂದೂ ಹೇಳಿದರು. ಮಹರ್ ಹುಡುಗರು ಕ್ರಿಶ್ಚಿಯನ್‌ರಾದರೆ ಅವರು ತಮ್ಮ ವಿದ್ಯಾರ್ಥಿವೇತನವನ್ನು ಕಳೆದುಕೊಳ್ಳುತ್ತಾರೆ. ಹೀಗಾಗಿ, ಕ್ರಿಶ್ಚಿಯನ್ ಆಗಿರುವುದರಿಂದ ಅವರಿಗೆ ಆರ್ಥಿಕವಾಗಿ ಯಾವ ಲಾಭವೂ ಆಗಿಲ್ಲವೆಂದೂ, ಇಂಡಿಯಾದ ಕ್ರಿಶ್ಚಿಯನ್‌ರು ಒಂದು ಸಮುದಾಯವಾಗಿ ಸಾಮಾಜಿಕ ಅನ್ಯಾಯವನ್ನು ತೊಡೆದು ಹಾಕಲು ಯಾವತ್ತೂ ಹೋರಾಟ ಮಾಡಿಲ್ಲ ಎಂದರು.

## ೪೦
## ಅಸ್ಪೃಶ್ಯರ ಉದ್ಧಾರಕ್ಕೆ ಕೆಲಸ ಮಾಡಿ

೦೧.೦೧.೧೯೩೮ರಂದು ಶೋಲಾಪುರದಲ್ಲಿ ಮಾಂಗ್ ಸಮುದಾಯದ ಸಮ್ಮೇಳನದ ನಾಲ್ಕನೇ ಅಧಿವೇಶನವನ್ನು ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಡಾ.ಅಂಬೇಡ್ಕರ್ ಅವರು ಅಸ್ಪೃಶ್ಯರ ಉದ್ದಾರಕ್ಕಾಗಿ ತಾವು ಮಾಡುತ್ತಿರುವ ಕೆಲಸ ಕೇವಲ ಮಹರ್‌ಗಳಿಗೆ ಮಾತ್ರ ಸೀಮಿತವಾಗಿರದೆ, ಎಲ್ಲ ನಿಮ್ನವರ್ಗಗಳನ್ನೂ ಒಳಗೊಂಡಿದೆ ಎಂದು ಹೇಳಿದರು. ಅವರುಗಳಿಗಾಗಿ ತಾವು ಹಾಸ್ಟೆಲ್‌ಗಳನ್ನು ತೆರೆದಿರುವುದಲ್ಲದೆ, ಮಾಂಗ್‌ಗಳಿಗೆ ಮತ್ತು ಚಮ್ಮಾರರಿಗೆ ಸರ್ಕಾರಿ ಕೆಲಸವನ್ನು ಕೊಡಿಸಿದ್ದೇನೆಂದು ಹೇಳಿದರು. ಸುಮಾರು ೨೫೦೦ ಜನ ಸಭೆಗೆ ಬಂದಿದ್ದರು.

## ೪೧

# ಕಿವಿಗೊಡುವುದಕ್ಕೆ ಅರ್ಹರಾದವರೆಲ್ಲರನ್ನೂ ಪ್ರಜಾಪ್ರಭುತ್ವ ಗೌರವದಿಂದ ಕೇಳಲೇಬೇಕು

ಡಾ. ಅಂಬೇಡ್ಕರ್ ಅವರು ಪಂಡರಾಪುರದಿಂದ ಶೋಲಾಪುರಕ್ಕೆ ಮಾತಂಗ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಹೋದರು. ಅವರು ಬಂದ ಮೇಲೆ ಶೋಲಾಪುರ ಪುರಸಭೆ ೪ನೇ ಜನವರಿ ೧೯೩೮ರಂದು ಅವರಿಗೆ ಸ್ವಾಗತಪೂರ್ವಕ ಭಿನ್ನವತ್ತಳೆಯನ್ನು ಭಗವತ್ ಚಿತ್ರಮಂದಿರದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ನೀಡಿದರು. ಈ ಭಿನ್ನವತ್ತಳೆಯನ್ನು ಓದಿ ಸಮರ್ಪಿಸಿದವರು ರಾವ್ ಬಹಾದೂರ್ ಡಾ.ವಿ.ವಿ.ಮೂಲೆ ಅವರು. ಮೂಲೆ ಅವರು ಶೋಲಾಪುರದ ಅಸ್ಪೃಶ್ಯರ ನಿಮಿತ್ತ ಸಹಾಯ ಮಾಡಿದ್ದರು. ಉತ್ತರ ಕೊಡುತ್ತಾ ಡಾ.ಅಂಬೇಡ್ಕರ್ ಅವರು ಒಂದು ಬಹುಮುಖ್ಯವಾದ ಭಾಷಣವನ್ನು ಮಾಡಿದರು. ಅದರಲ್ಲಿ ಅವರು ಸಂಸದೀಯ ಪ್ರಜಾಪ್ರಭುತ್ವ ಕೆಲಸ ಮಾಡುತ್ತಿರುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅವರು ಹೇಳಿದ್ದು:

ಈ ದೇಶದಲ್ಲಿ ಬೆಳವಣಿಗೆ ಆಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಜನಗಳಲ್ಲಿ ಒಂದು ಅಭ್ಯಾಸ ಬೆಳೆದುಬಿಟ್ಟಿದೆ. ಅದೆಂದರೆ, ಕಾಂಗ್ರೆಸ್ ಎಂಬ ಒಂದೇ ರಾಜಕೀಯ ಪಕ್ಷಕ್ಕೆ ಶ್ರದ್ಧಾಭಕ್ತಿಯನ್ನು ಸಮರ್ಪಿಸುವುದು ಎಲ್ಲಾ ಸಂದರ್ಭಗಳಲ್ಲೂ ಪ್ರಜಾಪ್ರಭುತ್ವವನ್ನು ಒಂದು ಆದರ್ಶವೆಂದು ತಿಳಿದುಕೊಂಡು ಅದರ ಹಿಂದೆ ಬೀಳುವುದರಲ್ಲಿ ನನಗೆ ನಂಬಿಕೆಯಿಲ್ಲ ಎಂದು ಹೇಳಿದರು. ಭಾರತದಲ್ಲಿನ ಈ ದಿನಗಳಲ್ಲಿನ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡರೆ, ಪ್ರಜಾಪ್ರಭುತ್ವವೆಂಬುದು ಒಂದು ಅತ್ಯಂತ ಅಸಮರ್ಪಕವಾದ ಸರ್ಕಾರ. ಹೇಗಾದರೂ ಸ್ವಲ್ಪಕಾಲ ಇಂಡಿಯಾಕ್ಕೆ ಬೇಕಾಗಿರುವುದು ತಿಳುವಳಿಕೆಯುಳ್ಳ ಒಬ್ಬ ಸರ್ವಾಧಿಕಾರಿಯ ಕಬ್ಬಿಣದ ಕೈ. ಮುಂದುವರೆದು ಅವರು ಹೇಳಿದ್ದು; ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇದೆ. ಆದರೆ, ಅದು ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸುವುದನ್ನು ನಿಲ್ಲಿಸಿಬಿಟ್ಟಿದೆ. ಅಂದು ಒಂದು ಸಂಸ್ಥೆಗೆ, ಒಂದೇ ಸಂಸ್ಥೆಗೆ ತನ್ನ ಕೈಕಾಲುಗಳನ್ನು ಕಟ್ಟಿಹಾಕಿಕೊಂಡು ಬಿಟ್ಟಿದೆ. ಈ ಸಂಸ್ಥೆ ಏನು ಯೋಚಿಸುತ್ತಿದೆ, ಏನು ಮಾಡುತ್ತಿದೆ ಎಂಬುದನ್ನು ವಿಮರ್ಶಿಸಲು ಅದು ತಯಾರಿಲ್ಲ. ಅದೊಂದು ದೊಡ್ಡ ಪಿಡುಗು, ಒಂದು ಕಾಯಿಲೆ ಎಂದು ನಾನು ಪರಿಗಣಿಸುತ್ತೇನೆ. ಅದು ನಮ್ಮೆಲ್ಲರ ಮೇಲೂ ಪರಿಣಾಮ ಬೀರಿದೆ. ಅವರಿಗೆಲ್ಲಾ ನಶೆ ಏರಿದೆ. ಪರಂಪರಾಗತವಾಗಿ ಭಾರತೀಯರಿಗೆ ನಂಬಿಕೆ ಜಾಸ್ತಿ, ಬುದ್ಧಿ ಕಡಿಮೆ. ಯಾರಾದರೂ, ಏನನ್ನಾದರೂ ಸಾಧಾರಣವಾದದ್ದನ್ನು ಮಾಡಿದರೆ, ಏನಾದರೂ ವಿಚಿತ್ರವಾದದ್ದನ್ನು, ಅಪರೂಪದ್ದನ್ನು ಮಾಡಿದರೆ, ಬೇರೆ ದೇಶಗಳಲ್ಲಿ ಅವನನ್ನು ಹುಚ್ಚನೆಂದು ಕರೆದರೆ, ನಮ್ಮ ದೇಶದಲ್ಲಿ ಅವನನ್ನು ಮಹಾತ್ಮ ಅಥವಾ ಯೋಗಿಯ ಪಟ್ಟಕ್ಕೆ ಏರಿಸಿಬಿಡುತ್ತೇವೆ. ಕುರಿಗಳು ಕುರುಬನನ್ನು ಹಿಂಬಾಲಿಸಿದಂತೆ, ಜನಗಳು ಅವನನ್ನು ಹಿಂಬಾಲಿಸುತ್ತಾರೆ. ಇದೇ ಸ್ಥಿತಿ ಮುಂದುವರೆದರೆ, ಅಧಿನಿಯಮದ ಕೆಳಗೆ ಈ ದೇಶಕ್ಕೆ ಸಿಕ್ಕಿರುವ ರಾಜಕೀಯ ಮುನ್ನಡೆಯಿಂದ ಯಾವ ಪ್ರಯೋಜನವೂ ದೊರಕುವುದಿಲ್ಲ. ಡಾ.ಅಂಬೇಡ್ಕರ್ ಅವರು ನಿರ್ಭರವಾಗಿ (ನಿರ್ಣಾಯಕವಾಗಿ) ಹೇಳಿದ್ದೇನೆಂದರೆ, ಪ್ರಜಾಪ್ರಭುತ್ವದ ಯೋಗಕ್ಷೇಮ ಒಂದು ನಿರ್ದಿಷ್ಟ ಸಮಸ್ಯೆಯ ಪರಿಹಾರಕ್ಕೆ ಒಂದಕ್ಕಿಂತ ಹೆಚ್ಚು ಪರ್ಯಾಯ ಮಾರ್ಗಗಳನ್ನಿಟ್ಟುಕೊಳ್ಳುವುದರಲ್ಲಿ ಇದೆ. ತಮ್ಮ ಸಲಹೆಗಳನ್ನು ಕೊಡುವುದಕ್ಕೆ ಜನರು ಸಿದ್ಧವಾಗಿರುವಾಗ,

ಕಿವಿಗೊಡುವುದಕ್ಕೆ ಅರ್ಹರಾಗಿರುವ ಎಲ್ಲರನ್ನೂ ಪ್ರಜಾಪ್ರಭುತ್ವ ಗೌರವದಿಂದಲೇ ಕಾಣಬೇಕು. ಮುಕ್ತಾಯ ಮಾಡುತ್ತಾ ಅವರು ಹೇಳಿದ್ದು: ತನ್ನದು ದೇಶದಲ್ಲಿರುವ ಒಂದೇ ಸಂಸ್ಥೆಯೆಂದು ಹೇಳಿಕೊಳ್ಳುವ ಸಂಸ್ಥೆಗೆ ನಾನು ಸೇರಿರದೇ ಇದ್ದರೂ ಸಹ, ಶೋಲಾಪುರ ಮುನಿಸಿಪಾಲಿಟಿ ನನಗೆ ಭಿನ್ನವತ್ತಳೆಯನ್ನು ಕೊಟ್ಟು ಒಂದು ಉದಾಹರಣೆಯನ್ನು ಹಾಕಿಕೊಟ್ಟಿದ್ದು, ಎಲ್ಲರೂ ಅದನ್ನು ಪ್ರಸ್ತುತದಲ್ಲಿ ಎತ್ತಿಹಿಡಿಯುವ ಮನಃಸ್ಥಿತಿಯಲ್ಲಿದ್ದಾರೆ.

# ೪೨
# ತಮ್ಮ ಬಡತನಕ್ಕೆ ಕಾರಣವೇನೆಂದು ರೈತರು ಮತ್ತು ಕಾರ್ಮಿಕರು ಯೋಚಿಸಲೇಬೇಕು

೧೦ನೇ ಜನವರಿ, ೧೯೩೮ ರಂದು ಡಾ.ಅಂಬೇಡ್ಕರ್ ಅವರು ರೈತರ ಒಂದು ಜಾಥಾವನ್ನು ಬೊಂಬಾಯಿಯ ಪರಿಷದ್ ಸಭಾಂಗಣಕ್ಕೆ ತೆಗೆದುಕೊಂಡು ಹೋದರು. ಹೊರವಲಯದ ಜಿಲ್ಲೆಗಳಾದ ಥಾನಾ, ಕೊಲಬಾ, ರತ್ನಗಿರಿ, ಸತಾರಾ ಮತ್ತು ನಾಸಿಕ್‌ನಿಂದ ರೈತರುಗಳು ಟ್ರೇನ್ ಮತ್ತು ಸ್ಟೀಮರುಗಳಲ್ಲಿ ಬೊಂಬಾಯಿಗೆ ಬಂದರು. ಹರಿದ ಬಟ್ಟೆಗಳನ್ನು ತೊಟ್ಟು, ಭುಜಗಳ ಮೇಲೆ ಹೊದಿಕೆಗಳನ್ನು–ಗಂಟುಗಳನ್ನು ಹೊತ್ತುಕೊಂಡು, ಕೈಗಳಲ್ಲಿ ಸಾಮಾನು ಸರಂಜಾಮುಗಳನ್ನು ಹಿಡಿದುಕೊಂಡು, ತಮ್ಮ ಅಳಲುಗಳನ್ನು ತೋಡಿಕೊಳ್ಳುವುದಕ್ಕೆ ಬಂದಿದ್ದರು. ಬಿಸಿಲಿಗೆ ಸುಟ್ಟ ಅವರ ಮುಖಗಳು ಒಂದು ತೆರನಾದ ಉತ್ಸಾಹದ ಲೇಪದಿಂದ ಪ್ರಕಾಶಿಸುತ್ತಿದ್ದವು. ಅವರು ಮೂರು ದಿಕ್ಕುಗಳಿಂದ ಪರಿಷದ್ ಭವನಕ್ಕೆ ಮೆರವಣಿಗೆಯಲ್ಲಿ ಬಂದರು. ಒಂದು ಪರೇಲ್‌ನಿಂದ, ಇನ್ನೊಂದು ಅಲೆಕ್ಸಾಂಡರ್ ಹಡಗು ಕಟ್ಟೆಯಿಂದ ಮೂರನೆಯದು ಚೌಪಾಟಿಯಿಂದ. ಪೊಲೀಸಿನವರ ಬೆಂಗಾವಲಿನಲ್ಲಿ ಅವರು ನಿಗದಿಪಡಿಸಿದ ಮಾರ್ಗಗಳಲ್ಲಿ ನಿಧಾನವಾಗಿ ಚಲಿಸಿದರು. ಮುಖ್ಯವಾದ ಜಂಕ್ಷನ್‌ಗಳಲ್ಲಿ ಪೊಲೀಸ್ ದಳವನ್ನು ನಿಯೋಜಿಸಲಾಗಿತ್ತು. ಮೆರವಣಿಗೆಯಲ್ಲಿ ಬರುತ್ತಿದ್ದವರ ಕೈಗಳಲ್ಲಿ ಘೋಷಣೆಗಳನ್ನು ಬರೆದಿದ್ದ ಪ್ರಕಟಣ ಪತ್ರದ ಬೋರ್ಡುಗಳಿದ್ದವು. ಆ ಪ್ಲಕಾರ್ಡುಗಳಲ್ಲಿ 'ಖೋಟ್ ವ್ಯವಸ್ಥೆ ಕಿತ್ತು ಹಾಕಿ'. "ಅಂಬೇಡ್ಕರ್ ಅವರ ಮಸೂದಿಯನ್ನು ಬೆಂಬಲಿಸಿ" ಮುಂತಾದ ಬರಹಗಳು ಇದ್ದವು. ಮೆರವಣಿಗೆಕಾರರು ವಿಕ್ಟೋರಿಯ ಟರ್ಮಿನಸ್ ಹತ್ತಿರ ಇರುವ ಎಸ್ಪ್ಲನೇಡ್ ಮೈದಾನವನ್ನು ಅಪರಾಹ್ನ ೧.೩೦ಕ್ಕೆ ತಲುಪಿದರು. ಅಲ್ಲಿ ಪೊಲೀಸ್ ಅಧಿಕಾರಿಗಳು ಮೆರವಣಿಗೆಯನ್ನು ತಡೆಹಿಡಿದು ಇಪ್ಪತ್ತು ಮಂದಿಯನ್ನು ಮಾತ್ರ ಮುಖ್ಯಮಂತ್ರಿಯವರನ್ನು(ಆಗ ಅವರನ್ನು ಪ್ರಧಾನಿಯೆಂದು ಕರೆಯಲಾಗುತ್ತಿತ್ತು) ಸಂದರ್ಶನ ಮಾಡುವುದಕ್ಕೆ ಬಿಟ್ಟರು. ಡಾ.ಅಂಬೇಡ್ಕರ್ ಅವರ ಮುಂದಾಳುತನದಲ್ಲಿ ಪರುಳೇಕರ್, ಎಸ್.ಸಿ.ಜೋಷಿ, ಡಿ.ಡಬ್ಲ್ಯೂ. ರಾವುತ್. ಇಂದುಲಾಲ್ ಯಾಗ್ನಿಕ್ ಮತ್ತು ಎ.ವಿ.ಚಿತ್ರೆಯವರು ಪ್ರಧಾನಿಯವರನ್ನು ಭೇಟಿ ಮಾಡಿದರು. ನಿಯೋಗಿಗಳ ಮೊದಲನೆಯ ಬೇಡಿಕೆ ಎಂದರೆ ಕೃಷಿ ಕಾರ್ಮಿಕರಿಗೆ ಕನಿಷ್ಠ ಮಜೂರಿಯನ್ನು ಜಾರಿಗೊಳಿಸುವುದು. ಎರಡನೆಯ ಬೇಡಿಕೆ ಎಂದರೆ ಕಂದಾಯದ ಬಾಕಿಯನ್ನು ಆಗಲೇ ಮಾಫಿ ಮಾಡಿರುವುದರಿಂದ ಬಾಡಿಗೆ ಬಾಕಿಯನ್ನು ಸಹ ವಜಾ ಮಾಡಬೇಕು. ಮೂರನೆಯದಾಗಿ ಅವರು ಒತ್ತಾಯ ಮಾಡಿದ್ದೇನೆಂದರೆ ಖೋಟಿ ವ್ಯವಸ್ಥೆಯನ್ನು ಮತ್ತು ಇನಾಂದಾರಿ ವ್ಯವಸ್ಥೆಯನ್ನು ಪರಿಹಾರ ಕೊಟ್ಟು ಅಥವಾ ಪರಿಹಾರ ಕೊಡದೆ ರದ್ದುಪಡಿಸಬೇಕು. ಅಲ್ಲದೆ ಆರ್ಥಿಕವಾಗಿ ವ್ಯರ್ಥವಾಗಿದ್ದು, ಸಾಮಾಜಿಕವಾಗಿ ದಬ್ಬಾಳಿಕೆ ಮಾಡುತ್ತಿರುವ ಜಮೀನ್ದಾರಿಕೆ ಹೋಗಲೇಬೇಕು. ಕಡೆಯ ಬೇಡಿಕೆ ಎಂದರೆ, ಸಣ್ಣ ಹಿಡುವಳಿದಾರರು ಕೊಡಬೇಕಾಗಿರುವ ನೀರಾವರಿ ರುಸುಮ್ ಅನ್ನು ಶೇಕಡಾ ೫೦% ಕಡಿಮೆ ಮಾಡುವುದು. ಪ್ರತಿಯೊಂದು ಸಮಸ್ಯೆಯನ್ನು ಸಂಬಂಧಪಟ್ಟ ಮಂತ್ರಾಲಯ ತನ್ನದೇ ಆದ ರೀತಿಯಲ್ಲಿ ನಿಭಾಯಿಸುತ್ತದೆ ಎಂದು ಪ್ರಧಾನಿಯವರು ನಿಯೋಗಿಗಳಿಗೆ ತಿಳಿಸಿದರು.

ಮುಖಂಡರುಗಳು ಎಕ್ಸ್ಪ್ಲನೇಡ್ ಮೈದಾನಕ್ಕೆ ಹಿಂದಿರುಗಿ ಭಾರಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಡಾ.ಅಂಬೇಡ್ಕರ್ ಅವರು ಬಹುಪ್ರಭಾವೀ ಭಾಷಣವನ್ನು ಮಾಡಿದರು.

ಅವರು ಹೇಳಿದ್ದು, ತಾವು ಕಮ್ಯುನಿಸಂ ಮೇಲೆ ಓದಿದ ಪುಸ್ತಕಗಳ ಸಂಖ್ಯೆ ಎಲ್ಲಾ ಕಮ್ಯುನಿಸ್ಟ್ ನಾಯಕರುಗಳು ಒಟ್ಟಿನಲ್ಲಿ ಓದಿದ ಪುಸ್ತಕಗಳ ಸಂಖ್ಯೆಗಿಂತ ಹೆಚ್ಚು ಎಂದರು. ಆದರೆ ಅವರ ಅಭಿಪ್ರಾಯದಲ್ಲಿ ಕಮ್ಯುನಿಸ್ಟರು ಒಂದು ಪ್ರಶ್ನೆಯ ಪ್ರಾಯೋಗಿಕ ಮಗ್ಗುಲನ್ನು ಯಾವತ್ತೂ ನೋಡುವುದಿಲ್ಲ ಎಂದರು. ಅವರ ವೀಕ್ಷಣೆಯ ಪ್ರಕಾರ ಪ್ರಪಂಚದಲ್ಲಿ ಎರಡು ವರ್ಗಗಳು ಇವೆ. ಉಳ್ಳವರು ಮತ್ತು ಉಳ್ಳವರಲ್ಲದವರು, ಬಲ್ಲಿದರು ಮತ್ತು ಬಡವರು, ಶೋಷಣೆ ಮಾಡುವವರು ಮತ್ತು ಶೋಷಣೆಗೆ ಒಳಗಾದವರು. ಮೂರನೆಯವರು ಅಂದರೆ ಮಧ್ಯಮ ವರ್ಗದವರು. ಅವರ ಸಂಖ್ಯೆ ಬಹಳ ಸಣ್ಣದು. ಆದುದರಿಂದ ಅವರು ಕೃಷಿಕರನ್ನು ಮತ್ತು ಕಾರ್ಮಿಕರನ್ನು ತಮ್ಮ ಬಡತನದ ಕಾರಣಗಳ ಬಗ್ಗೆ ಯೋಚನೆ ಮಾಡಬೇಕೆಂದು ಒತ್ತಾಯದ ಸಲಹೆ ಮಾಡಿದರು. ಅವರ ಬಡತನ ಅವರನ್ನು ಶೋಷಣೆ ಮಾಡಿದವರ ಶ್ರೀಮಂತಿಕೆಯಲ್ಲಿ ಇದೆ ಎಂದು ಹೇಳಿದರು. ಅವರಿಗೆ ಇರುವ ದಾರಿ ಅಂದರೆ, ಒಂದು ಕಾರ್ಮಿಕ ಮುಂಚೂಣಿ ದಳವನ್ನು ಜಾತಿ ಮತ್ತು ಪಂಥ ಇವುಗಳನ್ನು ನೋಡದೆ ವ್ಯವಸ್ಥೆಗೊಳಿಸಿ ಶಾಸನಸಭೆಗಳಿಗೆ ಅವರ ನಿಜವಾದ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕೆಂದು ಹೇಳಿದರು. ಅವರು ಹಾಗೆ ಮಾಡಿದರೆ ಅವರಿಗೆ ಆಸರೆ, ಬಟ್ಟೆ ದೊರಕುತ್ತದೆ, ದೇಶಕ್ಕಾಗಿ ಆಹಾರ ಉತ್ಪಾದಿಸುವವರು ಹಸಿವಿನಿಂದ ಸಾಯುವುದಿಲ್ಲ.

## ೪೩
## ನಿಮ್ನವರ್ಗಗಳ ಹಿತಾಸಕ್ತಿಯನ್ನು ರಕ್ಷಣೆ ಮಾಡಿ

ಅಹ್ಮದ್ ನಗರ ಜಿಲ್ಲಾ ನಿಮ್ನವರ್ಗಗಳವರ ಸೇವಾ ಸಂಘದ ಆಶ್ರಯದಲ್ಲಿ ೧೫ನೇ ಜನವರಿ ೧೯೩೮ ರಂದು ಕಾರ್ಮ್‌ಗಾರ್ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ವಹಿಸಿದ್ದು, ಬೊಂಬಾಯಿ ಶಾಸನಸಭೆಗೆ ಆಯ್ಕೆಯಾಗಿದ್ದ ಮಿ.ಪ್ರಭಾಕರ್ ರೋಹಮ್, ಎಂ.ಎಲ್.ಎ. ಅವರನ್ನು ಅಭಿನಂದಿಸುವುದಕ್ಕಾಗಿ ಸಭೆಯನ್ನು ಕರೆಯಲಾಗಿತ್ತು. ರೋಹಮ್ ಅವರಿಗೆ ಒಂದು ಭಿನ್ನವತ್ತಳೆಯನ್ನು ಮತ್ತು ಒಂದು ಪರ್ಸ್ ಅನ್ನು ಸಮರ್ಪಿಸಲಾಯಿತು.

ಡಾ.ಅಂಬೇಡ್ಕರ್, ಭಾವೂಸಾಹೆಬ್ ಗಾಯಕವಾಡ್ ಮತ್ತು ಶಿಂದೆ ಮಾಸ್ಟರ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ರೋಹಮ್ ಅವರು ಸ್ವತಂತ್ರ ಕಾರ್ಮಿಕ ಪಕ್ಷದ ಅಭ್ಯರ್ಥಿಯಾಗಿ ಶಾಸನ ಸಭೆಗೆ ಆಯ್ಕೆಯಾಗುವುದರಲ್ಲಿ ಜಯಶೀಲರಾಗಿದ್ದಾರೆ. ಅವರಿಗೆ ಅಹ್ಮದ್ ನಗರ ಜಿಲ್ಲೆಯ ನಿಮ್ನವರ್ಗಗಳ ಸಂಪೂರ್ಣ ಬೆಂಬಲವಿತ್ತು. ಈಗ ಅವರು ನಿಮ್ನವರ್ಗಗಳ ಹಿತರಕ್ಷಣೆಯನ್ನು ಮಾಡುತ್ತಾರೆಂದು ನಿರೀಕ್ಷಿಸಲಾಗಿದೆ. ರಾತ್ರಿ ೧೦.೩೦ಕ್ಕೆ ಆರಂಭವಾದ ಸಭೆ ೧೧.೩೦ಕ್ಕೆ ಶಾಂತಿಯುತವಾಗಿ ಮುಕ್ತಾಯವಾಯಿತು.

## ೪೪

# ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಕಾರ್ಮಿಕರ ಯೂನಿಯನ್‌ಗಳು (ಸಂಘಗಳು) ರಾಜಕೀಯ ಪ್ರವೇಶ ಮಾಡಬೇಕು

೧೨ ಮತ್ತು ೧೩ನೇ ಫೆಬ್ರವರಿ ೧೯೩೮ ರಂದು ಗ್ರೇಟ್ ಇಂಡಿಯನ್ ಪೆನಿನ್ಸುಲಾ (ಜಿ.ಐ.ಪಿ.) ರೇಲ್ವೆಯ ಎಲ್ಲ ಅಸ್ಪೃಶ್ಯರ ಕಾರ್ಮಿಕರ ಸಮ್ಮೇಳನವನ್ನು ಮನ್‌ಮಾಡ್‌ನಲ್ಲಿ ಆಯೋಜಿಸಲಾಗಿತ್ತು. ಈ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಡಾ.ಅಂಬೇಡ್ಕರ್ ಅವರು ಒಪ್ಪಿಗೆ ಕೊಟ್ಟರು; ಅದರಂತೆ ಜಿ.ಐ.ಪಿ. ರೇಲ್ವೆಯ ಎಲ್ಲಾ ಶಾಖೆಗಳಿಗೂ ಒಂದು ಮಾಹಿತಿ ಪ್ರಕಟನಾ ಪತ್ರಿಕೆಯನ್ನು ಪರಿಚಲನೆ ಮಾಡಿದರು. ಅಸ್ಪೃಶ್ಯತೆಯ ಆಚರಣೆಯಿಂದಾಗಿ ರೇಲ್ವೆಗೆ ಸೇರಿದ ಎಲ್ಲಾ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಯನ್ನು ಕುರಿತು ಚರ್ಚಿಸಲು ಸಮ್ಮೇಳನವನ್ನು ಯೋಜಿಸಲಾಗಿತ್ತು. ಇದರ ಜೊತೆಗೆ, ರೇಲ್ವೆಯು ಭಾರತದಲ್ಲಿನ ಅತ್ಯಂತ ಧನಿಕ ಮತ್ತು ಬಲಶಾಲಿಯಾದ ಸಂಸ್ಥೆಗಳಲ್ಲಿ ಒಂದಾಗಿದ್ದರೂ ಸಹ, ಈ ಅಸ್ಪೃಶ್ಯರ ಮತ್ತು ಅವರ ಕುಟುಂಬದವರ ಕರುಣಾಜನಕ ಸ್ಥಿತಿಯನ್ನು ಕೂಡ ಚರ್ಚಿಸಲು ಯೋಜಿಸಿತ್ತು.

ಈ ಸಮ್ಮೇಳನವನ್ನು ಜಯಶಾಲಿಯಾಗಿ ಮಾಡಲು ಮನ್‌ಮಾಡ್, ಭೂಸಾವಲ್, ಕಲ್ಯಾಣ್, ಇಗತ್‌ಪುರಿ, ನಂದಗಾಂವ್, ಜಾಂಡ್, ಸೋಲಾಪುರ, ಥಾನೆ ಮತ್ತು ಮುಂಬೈನಿಂದ ಬಂದ ಕಾರ್ಮಿಕರು ಡಾ.ಅಂಬೇಡ್ಕರ್ ಅವರೊಡನೆ ಮುಂಚೆಯೇ ಈ ವಿಷಯವನ್ನು ಕುರಿತು ಚರ್ಚಿಸಿದ್ದರು. ಇದಕ್ಕೆ ದೆಹಲಿ, ಅಲಹಾಬಾದ್, ಲಕ್ನೋ, ಕಾನ್ಪುರ, ಜಬಲ್ಪುರ ಇತ್ಯಾದಿ ಕಡೆಗಳಿಂದ ಧನಾತ್ಮಕವಾದ ಪ್ರತಿಕ್ರಿಯೆ ಸಿಕ್ಕಿತ್ತು. ಈ ಸಮ್ಮೇಳನವನ್ನು ಬಹಳ ಜಯಪ್ರದವನ್ನಾಗಿ ಮಾಡಬೇಕೆಂದು ಮನವಿ ಮಾಡಲಾಗಿತ್ತು. ಶ್ರೀ ಆರ್.ಆರ್.ಪವಾರ್ ಅವರು ಅಸ್ಪೃಶ್ಯ ರೇಲ್ವೆ ಕಾರ್ಮಿಕರಿಗೆ ಚೆನ್ನಾಗಿ ಪರಿಚಿತರಾಗಿದ್ದು, ಅವರು ಸಮ್ಮೇಳನದ ಪ್ರಧಾನ ಕಾರ್ಯದರ್ಶಿ ಆಗಿದ್ದರು.

ಡಾ.ಅಂಬೇಡ್ಕರ್ ಮತ್ತು ಶ್ರೀ ಆರ್.ಆರ್.ಪವಾರ್, ಕಾರ್ಯದರ್ಶಿ, ದಲಿತ ಕಾರ್ಮಿಕರ ಸಮ್ಮೇಳನ, ಮನ್‌ಮಾಡ್ ಇವರ ನಡುವೆ ಆದ ಪತ್ರ ವ್ಯವಹಾರದಿಂದ ಗೋಚರಿಸುವುದೇನೆಂದರೆ, ಅನಿವಾರ್ಯ ಕಾರಣಗಳಿಂದಾಗಿ ಡಾ.ಅಂಬೇಡ್ಕರ್ ಅವರು ೨೯ ಮತ್ತು ೩೦ನೇ ಜನವರಿ ೧೯೩೮ರಂದು ಸಮ್ಮೇಳನಕ್ಕೆ ಬರಲಾಗುತ್ತಿಲ್ಲವೆಂದು ಮತ್ತು ಆ ತಾರೀಖುಗಳ ಬದಲಾಗಿ ೧೨ ಮತ್ತು ೧೩ನೇ ಫೆಬ್ರವರಿ (ಶನಿವಾರ ಮತ್ತು ಭಾನುವಾರ) ಈ ತಾರೀಖುಗಳನ್ನು ಅವರೇ ಸೂಚಿಸಿದ್ದಾಗಿ ಗೊತ್ತಾಗಿದೆ. ಸಮ್ಮೇಳನದ ಕೈಪಿಡಿಯಲ್ಲಿ ಈ ಪತ್ರ ವ್ಯವಹಾರವನ್ನು ಸೇರಿಸಲಾಗಿತ್ತು. ಈ ಸಮ್ಮೇಳನಕ್ಕಾಗಿ ಮಿ.ಇಬ್ರಾಹಿಮ್ ತಾಜ್‌ಭಾಯಿ ಶೇಠ್ ಅವರಿಗೆ ಸೇರಿದ ಮನ್‌ಮಾಡ್ ರೇಲ್ವೆ ಸ್ಟೇಷನ್ನಿಗೆ ಹತ್ತಿರವಿರುವ ತೆರೆದ ಮೈದಾನದಲ್ಲಿ ಒಂದು ಬಹು ದೊಡ್ಡ ಪೆಂಡಾಲ್ ಅನ್ನು ನಿರ್ಮಿಸಲಾಗಿದ್ದು, ಆ ಸ್ಥಳಕ್ಕೆ ದಲಿತ ಕಾಮ್‌ಗಾರ್ ನಗರ (ಕಾರ್ಮಿಕರ) ಎಂದು ಹೆಸರಿಡಲಾಗಿತ್ತು. ಈ ಎರಡೂ ದಿನಗಳಲ್ಲಿ ಡಾ.ಅಂಬೇಡ್ಕರ್ ಅವರು ಮನ್‌ಮಾಡ್‌ನಲ್ಲಿ ತಂಗಿದ್ದರು. ಈ ಅವಧಿಯಲ್ಲಿ ಅವರು ಸತಾನ್ ಮತ್ತು ಕಾಜಿ ಸಂಘಾನಿಗೆ ಭೇಟಿ ಕೊಟ್ಟರು.

೧೨ನೇ ಫೆಬ್ರವರಿ ಶನಿವಾರದಂದು ಒಂದು ಯುವ ಸಮ್ಮೇಳನವನ್ನು ಏರ್ಪಾಡು ಮಾಡಲಾಗಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಅವರು ಅಧ್ಯಕ್ಷರಾಗಿದ್ದರು. 'ಸ್ವತಂತ್ರ ಕಾರ್ಮಿಕ ಪಕ್ಷದ' ಎಲ್ಲಾ ಕ್ಷೇತ್ರಗಳಲ್ಲಿ

ಭವಿಷ್ಯತ್ತಿನ ಕಾರ್ಯಕ್ರಮಗಳನ್ನು ಮತ್ತು ಅದರ ಬಿರುಸಿನ ಅನುಷ್ಠಾನದ ಬಗ್ಗೆ ಸಮ್ಮೇಳನದಲ್ಲಿ ಚರ್ಚಿಸಲಾಯಿತು.

ಯುವ ಸಮ್ಮೇಳನದ ಹಾಗೆಯೇ ಅಸ್ಪೃಶ್ಯ ಮಹಿಳೆಯರ ಸಮ್ಮೇಳನವನ್ನು ೧೩ನೇ ಫೆಬ್ರವರಿ ಭಾನುವಾರ ಅಪರಾಹ್ನ ೩ ಗಂಟೆಗೆ ಯೋಜನೆ ಮಾಡಲಾಗಿದ್ದು, ಇದಕ್ಕೆ ಪೂನಾದ ಒಬ್ಬ ಕಾರ್ಮಿಕ ಮಹಿಳೆಯಾದ ಶ್ರೀಮತಿ ಮೈನಾಬಾಯಿ ಶಾಮರಾವ್ ಭೋಲೆ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಶ್ರೀಮತಿ ವೇಣುಬಾಯಿ ರವಿಕಾಂತ್ ಜಾಧವ್ ಅವರನ್ನು ಈ ಸಮ್ಮೇಳನಕ್ಕೆ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಡಾ.ಅಂಬೇಡ್ಕರ್ ಅವರು ಆ ಮಹಿಳೆಯರನ್ನು ಉದ್ದೇಶಿಸಿ ಚಳುವಳಿಯ ಬಗ್ಗೆ ಮಾತನಾಡಿ, ಅವರಿಗೆ ಮಾರ್ಗದರ್ಶನ ನೀಡಿದರು.

ಎರಡು ದಿನಗಳಂದು ವಿವಿಧ ಮನೋರಂಜನ ಕಾರ್ಯಕ್ರಮಗಳನ್ನು ನಡೆಸಿಕೊಡಲಾಯಿತು. ಈ ಸಮ್ಮೇಳನಕ್ಕೋಸ್ಕರ ಚಾಲೀಸ್‌ಗಾಂವ್‌ನಿಂದ ವಿಶೇಷವಾಗಿ ಒಂದು ಬಾಜಾಬಜಂತ್ರಿಯನ್ನು ಕರೆಸಲಾಗಿತ್ತು. ಪೆಂಡಾಲಿನಲ್ಲಿ ಧ್ವನಿವರ್ಧಕಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಮಿ.ಆರ್.ಆರ್.ಪವಾರ್, ಮಿ.ಬಣಕಾರ್, ಮಿ:ಆಹಿರೆ, ಮಿ:ಖಾರೆ, ಮಿ:ಸನ್‌ಸಾರೆ, ಮಿ:ಪಾಟೀಲ್, ಮಿ:ಸರೋಡೆ, ಮಿ:ಮೋರೆ, ಮಿ:ಪಗಾರೆ, ಮಿ:ತೆಗೂರಿ ಮುಂತಾದವರು ಸಮ್ಮೇಳನವನ್ನು ಭಾರಿ ಜಯಪ್ರದವನ್ನಾಗಿ ಮಾಡಲು ಬಹಳಷ್ಟು ಶ್ರಮಿಸಿದರು.

ಈ ಸಂದರ್ಭದಲ್ಲಿ 'ಜನತಾ' ಸಾಪ್ತಾಹಿಕ ಪತ್ರಿಕೆಗೂ ಮತ್ತು ಸ್ವತಂತ್ರ ಕಾರ್ಮಿಕ ಪಕ್ಷಕ್ಕೂ ಪ್ರತ್ಯೇಕವಾದ ಕಚೇರಿಗಳನ್ನು ಸಮ್ಮೇಳನದ ಜಾಗದಲ್ಲೇ ತೆರೆಯಲಾಯಿತು. ಇದರ ಉದ್ದೇಶ 'ಜನತಾ'ಗೆ ವಾರ್ಷಿಕ ಸದಸ್ಯತ್ವ ಚಂದಾವನ್ನು ಮತ್ತು 'ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ' ಸದಸ್ಯತ್ವ ಶುಲ್ಕವನ್ನು ವಸೂಲು ಮಾಡುವುದೇ ಆಗಿತ್ತು. ಹಾಗೆಯೇ ಚಳುವಳಿಯ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳುವುದೂ ಆಗಿತ್ತು.

**ಸಮ್ಮೇಳನ**

ದಿನಾಂಕ:೧೨ ಮತ್ತು ೧೩ನೇ ಫೆಬ್ರವರಿ ೧೯೩೮ರಂದು ಸಮ್ಮೇಳನವನ್ನು ಜಯಪ್ರದವಾಗಿ ನಡೆಸಲಾಯಿತು. ದಲಿತ್ ಕಾಮ್‌ಗಾರ್ ನಗರವನ್ನು ಚೆನ್ನಾಗಿ ಅಲಂಕರಿಸಲಾಗಿತ್ತು. ೨೦ ಸಾವಿರ ಡೆಲಿಗೇಟ್‌ಗಳಿಗೆ (ಪ್ರತಿನಿಧಿಗಳು) ಆಸನಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ಅಧ್ಯಕ್ಷರಿಗೂ ಇತರ ಕೆಲಸಗಾರರಿಗೂ ಪ್ರತ್ಯೇಕವಾದ ವೇದಿಕೆಯನ್ನು ಏರ್ಪಡಿಸಲಾಗಿತ್ತು. ಅಧ್ಯಕ್ಷರೊಡನೆ ಅನೇಕ ಕೆಲಸಗಾರರು ತೆಗೆಸಿಕೊಂಡಿದ್ದ ಒಂದು ದೊಡ್ಡ ಭಾವಚಿತ್ರವನ್ನು ಹೂವಿನಿಂದ ಅಲಂಕರಿಸಿ ಇಡಲಾಗಿತ್ತು. ಮಹಿಳೆಯರಿಗೆ ಸ್ವಾಗತ ಸಮಿತಿಯ ಸದಸ್ಯರಿಗೆ ಮತ್ತು ವಿಶೇಷ ಆಹ್ವಾನಿತರಿಗೆ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು. ಶನಿವಾರ ಸಾಯಂಕಾಲ ಡಾ.ಅಂಬೇಡ್ಕರ್ ಅವರನ್ನು ದಲಿತ್ ಕಾಮ್‌ಗಾರ್ ನಗರಕ್ಕೆ ಸ್ವಾಗತಿಸಲಾಯಿತು. ಬಾಜಾ–ಭಜಂತ್ರಿ, ಹರ್ಷಧ್ವನಿಗಳು 'ಡಾ.ಅಂಬೇಡ್ಕರ್ ಬಹುಕಾಲ ಬಾಳಲಿ' ಎಂಬ ಘೋಷಣೆ ಅವರು ವೇದಿಕೆಯ ಮೇಲೆ ಕೂರುವತನಕ ನಡೆದಿತ್ತು.

ಪ್ರಾರಂಭದಲ್ಲಿ, ಚಿಕ್ಕ ಹುಡುಗ ಹುಡುಗಿಯರು ಕೆಲವು ಹಾಡುಗಳನ್ನು ಹಾಡಿದರು. ಈ ಕಾರ್ಯಕ್ರಮದ ಯಶಸ್ಸಿಗಾಗಿ ಮಿ.ಶಂಕರ್ ರಾವ್ ಸಾಳ್ವೆಯವರು ಬಹಳಷ್ಟು ಶ್ರಮವನ್ನು ತೆಗೆದುಕೊಂಡಿದ್ದರು. ಮಿ. ಪಿ.ಎನ್.ಬಣಕಾರ್ ಅವರು ತಮ್ಮ ಸ್ವಾಗತ ಭಾಷಣವನ್ನು ಓದಿದರು. ಮಿ:ರಾಮಚಂದ್ರ ಪವಾರ್ ಅವರು ಡೆಲಿಗೇಟುಗಳನ್ನು ಮತ್ತು ಆಮಂತ್ರಿತರನ್ನು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಅವರು ಅನೇಕ ಸಂದೇಶಗಳನ್ನು, ಅದರಲ್ಲೂ ವಿಶೇಷವಾಗಿ ಮಹಾಡ್‌ನಿಂದ ವಿಶ್ರಾಮ್ ಗಂಗಾರಾಮ್ ಸಾವಡೆಕರ್ ಮತ್ತು ಭಾಮಿ ಅನಂತರಾವ್ ಚಿತ್ರೆ ಅವರು ಕಳುಹಿಸಿದ ಸಂದೇಶಗಳನ್ನು ಓದಿದರು.

ಸಮ್ಮೇಳನದ ಅಧ್ಯಕ್ಷರನ್ನಾಗಿ ಡಾ.ಅಂಬೇಡ್ಕರ್ ಅವರನ್ನು ಚುನಾಯಿಸಲಾಯಿತು. ಅವರು ಅಧ್ಯಕ್ಷರಾಗಿ

ಚುನಾಯಿತರಾಗಿದ್ದನ್ನು ಜೋರಾದ ಚಪ್ಪಾಳೆಗಳಿಂದ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿದ ಮೇಲೆ ಅವರಿಗೆ ಹಾರ ಹಾಕಲಾಯಿತು. ನಂತರ ಅವರು ತಮ್ಮ ಪೀಠಿಕಾ ಭಾಷಣವನ್ನು ಮಾಡಿದರು.

೨ನೇ ದಿನ ಭಾನುವಾರ ೧೩ನೇ ಫೆಬ್ರವರಿ ೧೯೩೮ ರಂದು ಸಮ್ಮೇಳನದ ಎಂದಿನ ಕಲಾಪವನ್ನು ಪುನಃ ಪ್ರಾರಂಭಿಸಲಾಯಿತು.

ದಲಿತ್ ಕಾಮ್‌ಗಾರ್ ನಗರದಲ್ಲಿ ಸೂರ್ಯನ ಬಿಸಿಲು ಇದ್ದರೂ, ಡಾ.ಅಂಬೇಡ್ಕರ್ ಅವರ ಭಾಷಣವನ್ನು ಕೇಳಲಿಕ್ಕೆ ಅಗಾಧವಾದ ಜನಸಂದಣಿ ಸೇರಿತ್ತು. ಹೃದಯತುಂಬಿ ಬರುವ ಚಪ್ಪಾಳೆಗಳ ಮಧ್ಯೆ ಅವರು ಭಾಷಣ ಮಾಡಲು ನಿಂತರು. ಈ ಭಾಷಣದಲ್ಲಿ ಡಾ.ಅಂಬೇಡ್ಕರ್ ಹೇಳಿದ್ದು:

ಸ್ನೇಹಿತರೆ,

ಇದು ಜಿ.ಐ.ಪಿ.ರೇಲ್ವೆಯಲ್ಲಿ ರೇಲ್ವೆ ಕೆಲಸಗಾರರಾಗಿ ಕೆಲಸ ಮಾಡುತ್ತಿರುವ ನಿಮ್ನವರ್ಗಗಳವರ ಸಮ್ಮೇಳನ ಭಾರತದ ಇತರ ಪ್ರಾಂತ್ಯಗಳಲ್ಲಿ ಅಲ್ಲದೆ, ಈ ಪ್ರಾಂತ್ಯದಲ್ಲಿಯೂ ಸಹ ನಿಮ್ನವರ್ಗಗಳವರು ಅನೇಕ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಒಂದು ಅರ್ಥದಲ್ಲಿ ಇದು ಮೊದಲನೆ ಸಮ್ಮೇಳನವೇನಲ್ಲ. ಇನ್ನೊಂದು ಅರ್ಥದಲ್ಲಿ ಈ ರೀತಿಯ ಸಮ್ಮೇಳನಗಳಲ್ಲಿ ಇದೇ ಮೊದಲು. ನಿಮ್ನವರ್ಗಗಳವರು ಇದುವರೆಗೆ ಮುಖ್ಯವಾಗಿ ತಮ್ಮ ಸಾಮಾಜಿಕ ಕುಂದುಕೊರತೆಗಳ ನಿವಾರಣೆಗಾಗಿ ಚಳುವಳಿ ಮಾಡಿದ್ದಾರೆ. ಅವರು ತಮ್ಮ ಆರ್ಥಿಕ ಕುಂದುಕೊರತೆಗಳನ್ನು ನಿವಾರಣೆ ಮಾಡುವ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ತಮ್ಮ ಆರ್ಥಿಕ ಕುಂದುಕೊರತೆಗಳನ್ನು ಪರಿಗಣಿಸುವುದಕ್ಕೆ ಇದೇ ಮೊದಲಬಾರಿ ಸಭೆ ಸೇರುತ್ತಿದ್ದಾರೆ. ಇದುವರೆಗೂ ಅವರು ಸರಿಯಾಗಳಾಗಿ (ಅಸ್ಪೃಶ್ಯರಾಗಿ) ಸೇರುತ್ತಿದ್ದರು. ಈಗ ನೀವು ಕಾರ್ಮಿಕರಾಗಿ ಸಭೆ ಸೇರುತ್ತಿದ್ದೀರಿ. ನಮ್ಮ ಸಾಮಾಜಿಕ ಕುಂದುಕೊರತೆಗಳನ್ನು ಒತ್ತಿ ಹೇಳುವುದಕ್ಕೆ ನಮ್ಮ ಪರಿಶ್ರಮವನ್ನು ಕೇಂದ್ರೀಕರಿಸುತ್ತಿದ್ದೇವೆಂದು ಹೇಳುವುದರಲ್ಲಿ ನಾವು ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ಬೇರೆಯವರು ಏನೇ ಹೇಳಲಿ, ನಮ್ಮ ಪೌರುಷತ್ವವೇ ಅದರ ಭಾರದಲ್ಲಿ ನುಜ್ಜುಗುಜ್ಜಾಗುವಷ್ಟು ಕುಂದುಕೊರತೆಗಳಿವೆ. ನಮ್ಮ ಚಳುವಳಿ ಫಲಪ್ರದವಾಗಲಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಅಸ್ಪೃಶ್ಯತೆಯನ್ನು ತೊಡೆದುಹಾಕುವುದರಲ್ಲಿ ನಾವು ಜಯಶಾಲಿಗಳಾಗಿಲ್ಲವೆಂಬುದು ಸತ್ಯ. ಎಲ್ಲಾ ಮಾನವ ಜೀವಿಗಳಿಗೂ ಸಲ್ಲಬೇಕಾದ ಪ್ರಾಥಮಿಕ ಹಕ್ಕುಗಳು ನಮಗೆ ದೊರಕಿಲ್ಲವೆಂಬುದೂ ಸತ್ಯ. ಆದರೆ ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುವಷ್ಟರಮಟ್ಟಿಗೆ ನಮ್ಮ ಚಳುವಳಿ ಜಯ ಪಡೆದಿದೆ ಎಂಬುದೂ ಸತ್ಯ. ಅಧಿಕಾರದಲ್ಲಿರುವವನು ಸ್ವಾತಂತ್ರ್ಯವನ್ನು ಹೊಂದಿರುತ್ತಾನೆಂಬುದನ್ನು ಯಾರೂ ಹೇಳಬೇಕಾಗಿಲ್ಲ. ಒಬ್ಬನು ಸ್ವತಂತ್ರನಾಗಬೇಕಾದರೆ ಮತ್ತು ಎಲ್ಲಾ ಎಡರುತೊಡರುಗಳಿಂದ ಮುಕ್ತನಾಗುವುದಕ್ಕೆ ಅಧಿಕಾರ ಪಡೆದುಕೊಳ್ಳುವುದು ಒಂದೇ ಮಾರ್ಗ; ರಾಜಕೀಯ ಅಧಿಕಾರಕ್ಕೆ ಇರುವ ಸಾಮರ್ಥ್ಯ. ಧಾರ್ಮಿಕ ಅಥವಾ ಆರ್ಥಿಕ ಶಕ್ತಿಗಿಂತ ಹೆಚ್ಚಿಗೆ ಇಲ್ಲದಿದ್ದರೂ, ಅದಕ್ಕೆ ಇರುವಷ್ಟರಮಟ್ಟಿಗೆ ಶಕ್ತಿ ನಿಜವಾಗಿಯೂ ಪರಿಣಾಮಕಾರಿಯಾಗಿದೆ. ಹೊಸ ರಾಜ್ಯಾಂಗದ ಕೆಳಗೆ ನಿಮ್ನವರ್ಗಗಳವರಿಗೆ ಸಿಕ್ಕಿರುವ ರಾಜಕೀಯ ಅಧಿಕಾರ, ನಮ್ಮ ಶತ್ರುಗಳ ಷಡ್ಯಂತ್ರದಿಂದಲೂ, ನಮ್ಮವರೇ ಆದವರ ಅನೀತಿಯುತ ದುರ್ಮಾರ್ಗಿಗಳ ಸ್ವಾರ್ಥಪರತೆಯಿಂದ ಚೂರುಚೂರಾಗಿ ವ್ಯರ್ಥವಾಗಿ ಹೋಗಿದೆ ಎಂದು ಹೇಳಲು ನನಗೆ ಖೇದವಾಗಿದೆ. ವ್ಯವಸ್ಥೆಯಿಲ್ಲದ ಅಧಿಕಾರ, ಪ್ರಜ್ಞೆ ಇಲ್ಲದ ಅಧಿಕಾರ ಅಧಿಕಾರವೇ ಅಲ್ಲ. ಒಂದಲ್ಲ ಒಂದು ದಿನ ಅನತಿಕಾಲದಲ್ಲಿ, ನಿಮ್ನವರ್ಗಗಳವರು ವ್ಯವಸ್ಥಿತರಾಗುತ್ತಾರೆಂದೂ, ತಮಗೆ ಸಿಕ್ಕಿರುವ ಅಧಿಕಾರದ ಬಗ್ಗೆ ಪ್ರಜ್ಞಾವಂತರಾಗುತ್ತಾರೆಂದೂ, ಸಾಮಾಜಿಕವಾಗಿ ದಾಸ್ಯ ವಿಮೋಚನೆ

ಪಡೆದುಕೊಳ್ಳುವುದಕ್ಕೆ ಅದನ್ನು ಉಪಯೋಗಿಸಿಕೊಳ್ಳುತ್ತಾರೆಂದೂ ನಾನು ಆಶಿಸುತ್ತೇನೆ.

ನಮ್ಮ ಪರಿಶ್ರಮಗಳೆಲ್ಲಾ ತಪ್ಪುದಾರಿಯಲ್ಲಿ ಹೋಗುತ್ತಿವೆಯೆಂದೂ ಹೇಳಲು ನಾನು ಸಿದ್ಧನಾಗಿಲ್ಲದಿದ್ದರೂ, ದೀರ್ಘಕಾಲ ಸಾಮಾಜಿಕ ಸಮಸ್ಯೆಗೆ ಒತ್ತುಕೊಟ್ಟಿರುವಷ್ಟು ಆರ್ಥಿಕ ಸಮಸ್ಯೆಗೆ ಗಮನಕೊಟ್ಟಿಲ್ಲವೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ; ಆದುದರಿಂದ ಈ ದಿನ ನೀವು ಇಲ್ಲಿ ಅಸ್ಪೃಶ್ಯರಾಗಿ ಸೇರಿಲ್ಲದೆ, ಕಾರ್ಮಿಕರಾಗಿ ಸೇರಿದ್ದೀರೆಂಬುದು ನನಗೆ ಸಂತೋಷವಾಗಿದೆ. ಇದೊಂದು ಹೊಸ ಬೆಳವಣಿಗೆಯಾಗಿದ್ದು, ಈ ಸಮಸ್ಯೆಯನ್ನು ಕುರಿತು ಚರ್ಚಿಸಲು ನಮಗೆ ಅವಕಾಶ ಒದಗಿಸಿಕೊಟ್ಟವರನ್ನು ನಾನು ಅಭಿನಂದಿಸುತ್ತೇನೆ.

ಆದರೂ ಸಹ ಇದರಲ್ಲಿ ಕುಟಿಲೋಪಾಯವಿದೆಯೆಂದು ಅರ್ಥೈಸುತ್ತಾ, ಸಮ್ಮೇಳನದಲ್ಲಿ ಭಾಗಿಯಾಗಿರುವುದಕ್ಕೆ ನನ್ನನ್ನು ಟೀಕೆಗೆ ಗುರಿ ಮಾಡಿದ್ದಾರೆ. ನಾನು ಸಾಮಾನ್ಯವಾಗಿ ಈ ಟೀಕೆಗೆ ಸೊಪ್ಪು ಹಾಕುವವನಲ್ಲ. ಆದರೆ ಈ ಟೀಕೆ ಬಂದಿರುವುದು ಕಾರ್ಮಿಕ ಮುಖಂಡರುಗಳಿಂದ ಅವರ ಆಪಾದನೆಯ ತಿರುಳೆಂದರೆ, ನಿಮ್ನವರ್ಗಕ್ಕೆ ಸೇರಿದ ಕಾರ್ಮಿಕ ಸಮ್ಮೇಳನವನ್ನು ಆಯೋಜಿಸಿ ಕಾರ್ಮಿಕರುಗಳ ಮಧ್ಯೆ ಬಿರುಕನ್ನುಂಟು ಮಾಡುತ್ತಿದ್ದೇವೆ ಎಂಬುದೇ ಆಗಿದೆ.

ನನ್ನ ದೃಷ್ಟಿಯಲ್ಲಿ ಈ ದೇಶದ ಕಾರ್ಮಿಕರು ಎದುರಿಸಬೇಕಾದ ಇಬ್ಬರು ಶತ್ರುಗಳು ಇದ್ದಾರೆ. ಈ ಎರಡು ಶತ್ರುಗಳೆಂದರೆ ಬ್ರಾಹ್ಮಣತ್ವ ಮತ್ತು ಬಂಡವಾಳಷಾಹಿ. ಕಾರ್ಮಿಕರು ಎದುರಿಸಬೇಕಾದ ಬ್ರಾಹ್ಮಣತ್ವವನ್ನು ಶತ್ರು ಎಂದು ಗುರುತಿಸುವುದರಲ್ಲಿ ವಿಫಲರಾಗಿರುವುದೇ ನಮ್ಮನ್ನು ಟೀಕೆ ಮಾಡುವವರ ಆಪಾದನೆಗಳಿಗೆ ಭಾಗಶಃ ಕಾರಣವಾಗಿದೆ; ನಾವು ಎದುರಿಸಬೇಕಾದ ಬ್ರಾಹ್ಮಣತ್ವವನ್ನು ಶತ್ರು ಎಂದು ನಾನು ಕರೆಯುವುದನ್ನು ತಪ್ಪಾಗಿ ಅರ್ಥೈಸಿಕೊಳ್ಳಬಾರದು. ಬ್ರಾಹ್ಮಣತ್ವವೆಂದರೆ ನನ್ನ ಅರ್ಥದಲ್ಲಿ ಸ್ವಾತಂತ್ರ್ಯದ, ಸಮಾನತೆಯ ಮತ್ತು ಭ್ರಾತೃತ್ವದ ಇಂಗಿತದ ನಿರಾಕರಣೆ ಎಂದು. ಆ ಅರ್ಥದಲ್ಲಿ ಅದು ಎಲ್ಲಾ ವರ್ಗಗಳವರಲ್ಲೂ ಹುಚ್ಚಾಪಟ್ಟೆಯಾಗಿ ಹರಡಿಕೊಂಡಿದೆ. ಬ್ರಾಹ್ಮಣರೇ ಅದರ ಜನಕರಾಗಿದ್ದಾಗ್ಯೂ ಅವರಿಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲೆಲ್ಲೂ ಆವರಿಸಿಕೊಂಡಿರುವ ಈ ಬ್ರಾಹ್ಮಣತ್ವ, ಎಲ್ಲಾ ವರ್ಗಗಳವರ ಚಿಂತನೆಗಳನ್ನು ಮತ್ತು ಕ್ರಿಯೆಗಳನ್ನು ನಿಯಂತ್ರಿಸುತ್ತಿದೆ ಎಂಬುದು ನಿರ್ವಿವಾದವಾದ ಸಂಗತಿ. ಬ್ರಾಹ್ಮಣತ್ವ ಕೆಲವು ಗೊತ್ತಾದ ವರ್ಗಗಳಿಗೆ ಒಂದು ವಿಶೇಷ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ ಎಂಬುದೂ ನಿರ್ವಿವಾದವಾದ ಸಂಗತಿ. ಅದು ಇತರ ವರ್ಗಗಳವರಿಗೆ ಸಮಾನತೆಯ ಅವಕಾಶವನ್ನು ನಿರಾಕರಿಸುತ್ತದೆ. ಬ್ರಾಹ್ಮಣತ್ವದ ಪರಿಣಾಮಗಳು, ಅಂತರಜಾತಿ ಭೋಜನ, ಅಂತರಜಾತಿ ವಿವಾಹಗಳಂಥ ಸಾಮಾಜಿಕ ಹಕ್ಕುಗಳಿಗೆ ಸೀಮಿತವಾಗಿಲ್ಲ. ಅದು ಹಾಗೆ ಇದ್ದಿದ್ದರೆ ಯಾರೂ ಅದನ್ನು ಅಷ್ಟು ಗಹನವಾದದ್ದು ಎಂದು ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಅದು ಹಾಗೆ ಇಲ್ಲ. ಅದು ಸಾಮಾಜಿಕ ಹಕ್ಕುಗಳಿಂದ ಬೇರೆಯಾಗಿ ಗುರುತಿಸಲ್ಪಟ್ಟಿರುವ ನಾಗರೀಕ ಹಕ್ಕುಗಳಿಗೂ ವಿಸ್ತರಿಸುತ್ತದೆ. ಸಾರ್ವಜನಿಕ ಪಾಠಶಾಲೆಗಳ, ಸಾರ್ವಜನಿಕ ಬಾವಿಗಳ, ಸಾರ್ವಜನಿಕ ಉಪಾಹಾರ ಗೃಹಗಳ, ಸಾರ್ವಜನಿಕ ಸಾರಿಗೆಗಳ ಇವುಗಳೆಲ್ಲವನ್ನೂ ಉಪಯೋಗಿಸುವ ಹಕ್ಕು ನಾಗರೀಕ ಹಕ್ಕುಗಳಾಗಿವೆ. ಸಾರ್ವಜನಿಕವಾಗಿ ಇರುವ ಪ್ರತಿಯೊಂದು ಸೌಲಭ್ಯವೂ ಅಥವಾ ಸಾರ್ವಜನಿಕ ಹಣದಿಂದ ನಿರ್ವಹಣೆ ಮಾಡಲ್ಪಡುತ್ತಿರುವ ಪ್ರತಿಯೊಂದು ಸೌಲಭ್ಯವೂ ಎಲ್ಲ ಪೌರರಿಗೂ ಮುಕ್ತವಾಗಿರಬೇಕು. ಆದರೆ ಈ ಹಕ್ಕುಗಳನ್ನು ನಿರಾಕರಿಸಲ್ಪಟ್ಟಿರುವ ಲಕ್ಷಾಂತರ ಮಂದಿ ಇದ್ದಾರೆ. ಇದು ಬ್ರಾಹ್ಮಣತ್ವದ ಪರಿಣಾಮವೆಂದೇ ಎಂದು ಯಾರಿಗಾದರೂ ಅನುಮಾನವಿದೆಯೇ? ಈ ಬ್ರಾಹ್ಮಣತ್ವವನ್ನು ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ಸ್ವೇಚ್ಛೆಯಾಗಿ ಬಿಡಲಾಗಿದ್ದು, ಈಗಲೂ ಸಹ ಅದು ವಿದ್ಯುತ್ ಹರಿಯುತ್ತಿರುವ ವಾಹಕದಂತೆ ಕೆಲಸ ಮಾಡುತ್ತಿದೆ. ಬ್ರಾಹ್ಮಣತ್ವವು ಎಷ್ಟು ಸರ್ವವ್ಯಾಪಿಯಾಗಿದೆಯೆಂದರೆ ಅದು ಆರ್ಥಿಕ ಅವಕಾಶವನ್ನು ಸದಾ ಬಾಧಿಸುತ್ತದೆ. ಒಬ್ಬ ನಿಮ್ನವರ್ಗಗಳ

ಕಾರ್ಮಿಕನನ್ನು ತೆಗೆದುಕೊಳ್ಳಿ; ಅವನನ್ನು ನಿಮ್ನವರ್ಗಗಳಿಗೆ ಸೇರಿಲ್ಲದ ಒಬ್ಬ ಕಾರ್ಮಿಕನೊಂದಿಗೆ ಹೋಲಿಕೆ ಮಾಡಿ. ಅವನಿಗೆ ಕೆಲಸ ಮಾಡಲು ಯಾವ ಅವಕಾಶಗಳು ಇದೆ? ಸೇವಾ ಭದ್ರತೆಯ ವಿಷಯದಲ್ಲಾಗಲೀ, ಅದರಲ್ಲಿ ಮುಂದುವರೆಯುವುದಕ್ಕೆ ಅವನಿಗೆ ಇರುವ ಪ್ರತೀಕ್ಷೆ ಏನು?! ಅವನೊಬ್ಬ ಅಸ್ಪೃಶ್ಯನೆಂಬ ಕಾರಣಕ್ಕಾಗಿ ಅನೇಕ ಔದ್ಯೋಗಿಕ ಅವಕಾಶಗಳಿಂದ ಒಬ್ಬ ನಿಮ್ನವರ್ಗದ ಕಾರ್ಮಿಕನನ್ನು ಹೊರಗಿಡಲಾಗಿದೆ. ಜವಳಿ ಕೈಗಾರಿಕೆಯದು ಒಂದು ಕುಪ್ರಸಿದ್ಧ ಉದಾಹರಣೆ. ಭಾರತದ ಬೇರೆ ಭಾಗಗಳಲ್ಲಿ ಏನು ಆಗುತ್ತಿದ್ದೆಯೋ ನನಗೆ ಗೊತ್ತಿಲ್ಲ. ಆದರೆ ನನಗೆ ಗೊತ್ತಿರುವುದೇನೆಂದರೆ, ಬೊಂಬಾಯಿ ಮತ್ತು ಅಹ್ಮದಾಬಾದ್‌ನಲ್ಲಿನ ಹತ್ತಿ ಗಿರಣಿಗಳಲ್ಲಿನ ನೇಯ್ಗೆ ವಿಭಾಗದಿಂದ ನಿಮ್ನವರ್ಗಗಳವರನ್ನು ಹೊರಗಿಡಲಾಗಿದೆ. ಅವರು ನೂಲು ತೆಗೆಯುವ ಇಲಾಖೆಯಲ್ಲಿ ಮಾತ್ರ ಕೆಲಸ ಮಾಡಬಹುದು. ನೂಲು ತೆಗೆಯುವ ಇಲಾಖೆಯಲ್ಲಿ ಎಲ್ಲಕ್ಕಿಂತ ಕಡಿಮೆ ಸಂಬಳ. ಅವರನ್ನು ನೇಯ್ಗೆ ಇಲಾಖೆಯಿಂದ ಹೊರಗೆ ಇಟ್ಟಿರುವ ಕಾರಣ ಅವರು ಅಸ್ಪೃಶ್ಯರೆಂದು. ಆ ಕಾರಣದಿಂದಾಗಿ ಸವರ್ಣೀಯ ಹಿಂದೂ–ಕಾರ್ಮಿಕರು ಅವರ ಜೊತೆಯಲ್ಲಿ ಕೆಲಸ ಮಾಡಲು ಒಪ್ಪುವುದಿಲ್ಲವೆಂದೂ ಹೇಳಲಾಗಿದೆ. ಆದರೆ ಮುಸಲ್ಮಾನರ ಜೊತೆಯಲ್ಲಿ ಕೆಲಸ ಮಾಡಲು ಆ ಹಿಂದುವಿಗೆ ಯಾವ ಅಡ್ಡಿಯೂ ಇಲ್ಲ.

ಉದಾಹರಣೆಗೆ ರೇಲ್ವೆಯನ್ನು ತೆಗೆದುಕೊಳ್ಳಿ. ನಿಮ್ನವರ್ಗದ ಕೆಲಸಗಾರನೊಬ್ಬನ ಸ್ಥಿತಿ ರೇಲ್ವೆಯಲ್ಲಿ ಏನಾಗಿದೆ. ಅವರ ಹಣೆಬರಹ ಗ್ಯಾಂಗ್‌ಮನ್ ಆಗಿ ಕೆಲಸ ಮಾಡುವುದೇ ಆಗಿದೆಯೆಂಬುದನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ದಿನ, ಪ್ರತಿದಿನ, ಜೀವಮಾನವೆಲ್ಲಾ ಅವನು ಗ್ಯಾಂಗ್‌ಮನ್ ಆಗಿಯೇ ಕೆಲಸ ಮಾಡುತ್ತಾನೆ; ಅವನಿಗೆ ಮುಂಬಡ್ತಿ ಸಿಗುವ ಯಾವ ಪ್ರತೀಕ್ಷೆಯೂ ಇಲ್ಲ. ಅವನಿಗೆ ನೆರವಾಗಿರುವ ಹೆಚ್ಚಿನ ದರ್ಜೆಯ ಯಾವ ಹುದ್ದೆಯೂ ಇಲ್ಲ. ಪೋರ್ಟರ್ ಆಗಿಯೂ ಕೂಡ ಅವನನ್ನು ಬಹಳ ಅಪರೂಪವಾಗಿ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಪೋರ್ಟರ್‌ನೊಬ್ಬ ಸ್ಟೇಷನ್ ಮಾಸ್ಟರ್ ಮನೆಯಲ್ಲಿ ಮನೆಕೆಲಸದವನಾಗಿಯೂ ಸಹ ಕೆಲಸ ಮಾಡಬೇಕಾಗುತ್ತೆ. ನಿಮ್ನವರ್ಗದ ಕೆಲಸಗಾರನೊಬ್ಬ ಸ್ಟೇಷನ್ ಮಾಸ್ತರನಿಗೆ ನಿರುಪಯೋಗಿ ಆಗುತ್ತಾನೆ. ಹಿಂದೂವಾದ ಕಾರಣ ಅವನು ಸಾಧಾರಣವಾಗಿ ನಿಮ್ನವರ್ಗದವನೊಬ್ಬನನ್ನು ಪೋರ್ಟರ್ ಆಗಿ ಕೆಲಸಕ್ಕೆ ತೆಗೆದುಕೊಳ್ಳುವುದನ್ನು ತಪ್ಪಿಸಿಕೊಳ್ಳುತ್ತಾನೆ. ರೇಲ್ವೆಯಲ್ಲಿ ಗುಮಾಸ್ತರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಯಾವುದೇ ಅರ್ಹತಾ ಪರೀಕ್ಷೆ ಇಲ್ಲದಿರುವುದರಿಂದ, ಸಾಮಾನ್ಯವಾಗಿ ಮೆಟ್ರಿಕ್ ಅಲ್ಲದವರನ್ನು ಈ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಭಾರತೀಯ ಸವರ್ಣೀಯ ಹಿಂದೂಗಳಿಂದ ನೂರಾರು ಮಂದಿ ಮೆಟ್ರಿಕ್ ಆಗಿಲ್ಲದವರನ್ನು ರೇಲ್ವೆಗಳಲ್ಲಿ ಗುಮಾಸ್ತನನ್ನಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ. ಆದರೆ ನೂರಾರು ಮಂದಿ ನಿಮ್ನವರ್ಗಗಳಿಗೆ ಸೇರಿದ ಮೆಟ್ರಿಕ್ ಅಲ್ಲದ ಹುಡುಗರನ್ನು ವ್ಯವಸ್ಥಿತವಾಗಿ ತಿರಸ್ಕರಿಸಲಾಗುತ್ತದೆ; ಹೀಗಾಗಿ ಅವರಿಗೆ ಅಪರೂಪಕ್ಕೂ ಅವಕಾಶ ಸಿಗುವುದಿಲ್ಲ. ರೇಲ್ವೆ ವರ್ಕ್‌ಷಾಪ್‌ಗಳಲ್ಲಿ (ಕಾರ್ಯಾಗಾರಗಳಲ್ಲಿ) ಕೂಡಾ ಇದೇ ಪರಿಸ್ಥಿತಿಯಿದೆ. ನಿಮ್ನವರ್ಗದ ಮನುಷ್ಯನೊಬ್ಬನನ್ನು ಬಹು ವಿರಳವಾಗಿ ಮೆಕಾನಿಕ್ ದರ್ಜೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ನಿಮ್ನ ವರ್ಗಕ್ಕೆ ಸೇರಿದವನೊಬ್ಬ ಮೇಸ್ತ್ರಿ ಕೆಲಸದಲ್ಲಿರುವುದು ಕಾಣಸಿಗುವುದಿಲ್ಲ. ರೇಲ್ವೆ ವರ್ಕ್‌ಷಾಪ್‌ಗಳಲ್ಲಿ (ಕಾರ್ಯಾಗಾರದಲ್ಲಿ) ಅವರನನ್ನು ಯಾವತ್ತೂ ಫೋರ್ಮನ್ ಆಗಿ, ಕಡೆಯಪಕ್ಷ ಚಾರ್ಜ್‌ಮನ್ ಆಗಿ ಆಗಲಿ ನೇಮಕ ಮಾಡುವುದಿಲ್ಲ. ಅವನು ಕೇವಲ ಒಬ್ಬ ಕೂಲಿ, ಕೂಲಿಯಾಗಿಯೇ ಉಳಿಯುತ್ತಾನೆ. ರೇಲ್ವೆಗಳಲ್ಲಿರುವ ನಿಮ್ನವರ್ಗಗಳ ಕೆಲಸಗಾರರ ಪರಿಸ್ಥಿತಿ ಈ ರೀತಿ ಇದೆ.

ಅವನಿಗೆ ಕೆಲಸ ಸಿಗುವ ಸಂಭವವಿರುವ ದ್ವಿತೀಯ ವರ್ಗದ ಕೆಲಸಗಳಲ್ಲಿ ಅವನನ್ನು ತೀರಾ

ಕನಿಷ್ಠವಾದ ದರ್ಜೆಯಲ್ಲಿ ನೇಮಕ ಮಾಡಿಕೊಳ್ಳಲಾಗುತ್ತದೆ. ಅವನನ್ನು ಯಾವುದೇ ಅಧಿಕಾರ ಅಥವಾ ಅಧಿಕಾರ ನಿರ್ವಹಿಸುವ ಸ್ಥಾನದಿಂದ ಹೊರಗಡೆ ಇಡಲಾಗುತ್ತದೆ. ಅವನನ್ನು ತೀರಾ ಕನಿಷ್ಠವಾದ ದರ್ಜೆಯಲ್ಲಿ ನೇಮಕ ಮಾಡುವುದು ಅಲ್ಲದೆ ಅವನು ನಿವೃತ್ತಿ ಹೊಂದುವವರೆಗೂ ಅದೇ ದರ್ಜೆಯಲ್ಲಿಯೇ ಉಳಿದುಕೊಳ್ಳುತ್ತಾನೆ. ಅವನಿಗೆ ಬಡ್ತಿ ಎಂಬುದೇ ಇಲ್ಲ. ಅವನಿಗೆ ಯಾವ ಔದ್ಯೋಗಿಕ ಮುನ್ನಡೆಯೂ ಇಲ್ಲ. ಅನೇಕ ವೇಳೆ ಅವನಿಗೆ ಪ್ರಮೋಷನ್ (ಮುಂಬಡ್ತಿ) ಕೂಡಾ ಇಲ್ಲ. ಆರ್ಥಿಕ ಕುಸಿತವಿಲ್ಲದೇ ಇದ್ದಾಗಲೂ ಅವನಿಗೆ ಆಗುವುದು ಇದೇ, ಕುಸಿತವಿರುವ ದಿನಗಳಲ್ಲಿ ಮೊದಲು ಅವನನ್ನು ಕೆಲಸದಿಂದ ತೆಗೆದುಹಾಕಲಾಗುತ್ತದೆ. ಆದರೆ ಉಚ್ಛ್ರಾಯದ ಸಮಯದಲ್ಲಿ ಅವನನ್ನು ಕಡೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ.

ನನ್ನನ್ನು ಮತ್ತು ನಿಮ್ಮನ್ನು ಕುಟಿಲೋಪಾಯಗಳನ್ನು ಮಾಡುತ್ತಿದ್ದೇವೆಂದು ಆಪಾದಿಸುತ್ತಿರುವ ಟೀಕಾಕಾರರಿಗೆ ನಾನು ಎರಡು ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಅವು ಸರಳವಾದ ಪ್ರಶ್ನೆಗಳು. ಇವುಗಳು ನಿಜವಾದ ಕುಂದುಕೊರತೆಗಳೇ ಅಥವಾ ಅಲ್ಲವೇ ಎಂದು. ಎರಡನೆಯದಾಗಿ ಅವುಗಳು ನಿಜವಾದ ಕುಂದುಕೊರತೆಗಳೇ ಆಗಿದ್ದ ಪಕ್ಷದಲ್ಲಿ, ಅವುಗಳಿಂದ ಕಷ್ಟ ಅನುಭವಿಸುತ್ತಿರುವ ಜನ, ಅವುಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಸಂಘಟಿತರಾಗಬೇಡವೇ? ಈ ಎರಡು ಪ್ರಶ್ನೆಗಳಿಗೆ ನಿಮ್ಮ ಉತ್ತರ ಹೌದು ಎಂದಾಗಿದ್ದರೆ – ಯಾವನೇ ಒಬ್ಬ ಪ್ರಾಮಾಣಿಕ ವ್ಯಕ್ತಿ ಅಲ್ಲ ಎಂದು ಹೇಳುವುದಕ್ಕೆ ಹೇಗೆ ಸಾಧ್ಯ ಎಂದು ನನಗೆ ಗೊತ್ತಾಗುತ್ತಿಲ್ಲ. ಆಗ ನಮ್ಮ ಪ್ರಯತ್ನ ಸಾಕಷ್ಟು ನ್ಯಾಯಯುತವಾಗಿದೆ ಎಂದು ಆಗುತ್ತದೆ. ನಮ್ಮನ್ನು ದೂಷಿಸುತ್ತಿರುವ ಕಾರ್ಮಿಕ ನಾಯಕರುಗಳು ಒಂದು ರೀತಿಯ ಭ್ರಮೆಯಿಂದ ನರಳುತ್ತಿದ್ದಾರೆ. ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತದಲ್ಲಿ ಮಾಲೀಕರು ಮತ್ತು ಕೆಲಸಗಾರರು ಎಂಬ ಎರಡೇ ವರ್ಗಗಳು ಇರಲು ಸಾಧ್ಯ ಎಂದು ಅವರು ಓದಿರಬಹುದು. ಅದನ್ನು ಓದಿದ ಮೇಲೆ ಭಾರತದಲ್ಲೂ ಕೂಡ ಮಾಲೀಕರು ಮತ್ತು ನೌಕರರು ಎಂಬ ಎರಡು ವರ್ಗಗಳು ಇದ್ದವೆಂದು ಊಹಿಸಿಕೊಂಡು ಬಂಡವಾಳಶಾಹಿಯನ್ನು ಧ್ವಂಸ ಮಾಡುವ ಅವರ ಧ್ಯೇಯವನ್ನು ಮುಂದುವರೆಸುತ್ತಾರೆ. ಇದರಲ್ಲಿ ಎರಡು ತಪ್ಪುಗಳು ಇರುವುದು ಸ್ವಯಂವೇದ್ಯ. ಮೊದಲನೆಯ ತಪ್ಪೆಂದರೆ ಯಾವುದು ಸಾಧ್ಯ ಮಾತ್ರವೋ ಅಥವಾ ಆದರ್ಶ ಮಾತ್ರವೋ ಅದನ್ನೇ ನಿಜವೆಂದು ಭ್ರಮಿಸುವುದು. ಸಮಾಜದಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾದ ವರ್ಗಗಳು ಅಂದರೆ ಮಾಲೀಕರು ಮತ್ತು ಕೆಲಸಗಾರು ಇದ್ದಾರೆಂದು ಮಾರ್ಕ್ಸ್ ಸಿದ್ಧಾಂತವಾಗಿ ಎಂದಿಗೂ ಹೇಳಲಿಲ್ಲ. ವಾಸ್ತವದಲ್ಲಿ ಇಂಥ ಹೇಳಿಕೆ ಸತ್ಯವಾದದ್ದಲ್ಲ. ಆದ್ದರಿಂದ ಅದನ್ನು ಅಧಾರವಾಗಿಟ್ಟುಕೊಂಡು ಯಾವುದೇ ಪ್ರಚಾರವನ್ನು ಅದರ ಮೇಲೆ ಕಟ್ಟುವುದು ಅಪಾಯಕಾರಿ; ಅದು ಜಯಪ್ರದವಾಗುವ ಸಂಭವ ಇಲ್ಲ. ಒಬ್ಬ ಆರ್ಥಿಕ ತಜ್ಞ ಅಥವಾ ಒಬ್ಬ ವಿಚಾರವಾದಿ ಅಥವಾ ಒಬ್ಬ ನ್ಯಾಯಯುತ ಮನುಷ್ಯ ಎಲ್ಲಾ ವರ್ಗಗಳವರಲ್ಲೂ ಇರುತ್ತಾನೆ ಎಂದು ಹೇಳುವುದಾದರೆ ಅದು ಸುಳ್ಳು. ನನ್ನ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮೂಲಧಾತುವೆಂದು ಒಬ್ಬ ಆರ್ಥಿಕ ಮನುಷ್ಯನನ್ನು ಮುಂದಿಟ್ಟಾಗಲೆಲ್ಲಾ, ಎಲ್ಲಾ ವಿಷಯಗಳೂ ಸಮಾನವಾಗಿದ್ದರೆ ಮಾತ್ರ ಅವನ ಅಸ್ತಿತ್ವ ಇರುತ್ತದೆಂದು ಆರ್ಥಿಕ ತಜ್ಞ ಯಾವಾಗಲೂ ಒಂದು ಎಚ್ಚರಿಕೆ ಮಾತನ್ನು ಹೇಳುತ್ತಾನೆ. ಕಾರ್ಮಿಕ ನಾಯಕರುಗಳು ಈ ಸೆಟರಿಸ್ ಪಾರಿಬಸ್ (ಎಲ್ಲಾ ಸಂಗತಿಗಳು ಸಮವಾಗಿದ್ದರೆ) ಎಂಬ ಸಿದ್ಧಾಂತವನ್ನು ಮರೆತುಬಿಟ್ಟಿದ್ದಾರೆ. ಯೂರೋಪಗಳಲ್ಲೂ ಸಹ ಮಾರ್ಕ್ಸ್ ಹೇಳಿದ್ದು ನಿಜವೆಂದು ಅಂದುಕೊಳ್ಳುವುದು ತಪ್ಪಾಗುತ್ತದೆ. "ಜರ್ಮನಿಯಲ್ಲಿ ತುಳಿಯಲ್ಪಟ್ಟ ಬಡವನೊಬ್ಬನಿದ್ದಾನೆಯೇ? ಫ್ರಾನ್ಸಿನಲ್ಲಿ ದರೋಡೆ ಮಾಡಿ ಹಾಳುಗೆಡವಲ್ಪಟ್ಟ ಕುಶಲಕರ್ಮಚಾರಿ ಇದ್ದಾನೆಯೆ? ಆದರೆ ಅಲ್ಲಿಯ ಜನ ಒಂದು ಭೂತಕಾಲಕ್ಕೆ, ಒಂದು

ವರ್ತಮಾನ ಕಾಲಕ್ಕೆ, ಒಂದು ಭವಿಷ್ಯತ್ ಕಾಲಕ್ಕೆ, ಒಂದು ಜನಾಂಗ, ಒಂದು ದೇಶ, ಒಂದು ಪಂಥಕ್ಕೆ ಸಂಬಂಧಿಸಿದವರಾಗಿದ್ದಾರೆ. ಅವರೆಲ್ಲಾ ಒಗ್ಗಟ್ಟಾಗಲೀ" ಈ ಹುರಿದುಂಬಿಸುವ ಮಾತುಗಳನ್ನು ಮಾರ್ಕ್ಸ್‌ನ ದಿನಗಳಿಂದ ಹೇಳುತ್ತಲೇ ಬರಲಾಗಿದೆ. ಜರ್ಮನಿಯ ಬಡವ ಮತ್ತು ತುಳಿಯಲ್ಪಟ್ಟ ಮನುಷ್ಯ, ಫ್ರಾನ್ಸ್‌ನ ದರೋಡೆ ಮಾಡಲ್ಪಟ್ಟ ಹಾಳುಗೆಡವಲ್ಪಟ್ಟ ಮನುಷ್ಯರೊಂದಿಗೆ ಒಂದಾಗಿದ್ದಾನೆಯೇ? ನೂರು ವರ್ಷಗಳ ನಂತರವೂ ಕೂಡ ಅವರು ಒಗ್ಗಟ್ಟಾಗಿರುವುದನ್ನು ಕಲಿಯಲಿಲ್ಲ; ಮತ್ತು ಕಳೆದ ಯುದ್ಧದಲ್ಲಿ ಅವರು ಮುಚ್ಚುಮರೆಯಿಲ್ಲದೆ, ಕಂಠೋಕ್ತವಾಗಿ ಹೇಳಿದ, ಕಾರುಣ್ಯರಹಿತ ಶತ್ರುಗಳಂತೆ ಕಾದಾಡಿದರು. ಆದರೆ ಭಾರತಕ್ಕೆ ಸಂಬಂಧಿಸಿದ ಹಾಗೆ ಅದು ಖಂಡಿತವಾಗಿಯೂ ತಪ್ಪಾಗುತ್ತದೆ. ಭಾರತದಲ್ಲಿ ಒಂದು ಸ್ಪಷ್ಟವಾಗಿ ಬೇರ್ಪಡಿಸಿದ ವಿಭಾಗ ಇಲ್ಲ. ಎಲ್ಲಾ ಕಾರ್ಮಿಕರೂ ಒಂದೇ, ಒಂದೇ ವರ್ಗಕ್ಕೆ ಸೇರಿದವರು ಎನ್ನುವುದು ಬರಿಯ ಆದರ್ಶವಾಗಿದ್ದು, ಆ ಆದರ್ಶವನ್ನು ಸಾಕ್ಷಾತ್ಕಾರಗೊಳಿಸಬೇಕಾಗಿದೆ. ಆದರೆ, ಅದು ವಾಸ್ತವವೆಂದು ಅಂದುಕೊಳ್ಳುವುದು ಅತ್ಯಂತ ದೊಡ್ಡ ತಪ್ಪಾಗುತ್ತದೆ. ಕಾರ್ಮಿಕರ ತಂಡಗಳನ್ನು ಹೇಗೆ ಒಂದುಗೂಡಿಸಬೇಕು? ಕಾರ್ಮಿಕರ ಮಧ್ಯೆ ಒಗ್ಗಟ್ಟನ್ನು ಹೇಗೆ ತರಬೇಕು? ಒಂದು ವರ್ಗದ ಕಾರ್ಮಿಕರನ್ನು ಇನ್ನೊಂದು ವರ್ಗ ತುಳಿಯುವುದಕ್ಕೆ ಅನುಮತಿಸುವುದರಿಂದ ಅಲ್ಲ. ತುಳಿತಕ್ಕೊಳಗಾದವರು ಸಂಘಟಿತರಾಗದಂತೆ ತಡೆಯುವುದರಿಂದಲೂ ಅಲ್ಲ. ಒಗ್ಗಟ್ಟನ್ನು ತರುವುದಕ್ಕೆ ಅನುಸರಿಸಬೇಕಾದ ಸರಿಯಾದ ಮಾರ್ಗವೆಂದರೆ ಒಬ್ಬ ಕಾರ್ಮಿಕ ಇನ್ನೊಬ್ಬ ಕಾರ್ಮಿಕನನ್ನು ಅವನ ಜನಾಂಗ, ಧರ್ಮ ಈ ಕಾರಣಗಳಿಂದ ವಿರೋಧಿಸದಂತೆ ಮಾಡುವುದು. ತಾನು ಇತರ ಕಾರ್ಮಿಕರಿಗೆ ಕೊಡಲು ಸಿದ್ಧನಿಲ್ಲದ ಹಕ್ಕುಗಳನ್ನು ತಾನು ಮಾತ್ರ ಕ್ಲೇಮು ಮಾಡುವುದು ತಪ್ಪೆಂದು ಆ ಕಾರ್ಮಿಕನಿಗೆ ಮನದಟ್ಟು ಮಾಡಿಕೊಡುವುದೇ ನಿಜವಾದ ಒಗ್ಗಟ್ಟನ್ನು ತರುವ ಮಾರ್ಗ. ಸಾಮಾಜಿಕ ಭೇದಗಳನ್ನು ಮಾಡುವುದರಿಂದ ಅನ್ಯಾಯವಾದ ತಾರತಮ್ಯ ಉಂಟಾಗಿ, ಅದು ನೀತಿಯ ದೃಷ್ಟಿಯಿಂದ ತಪ್ಪೆಂದೂ, ಕಾರ್ಮಿಕರ ನಿಕಟತೆಗೆ ಹಾನಿಕಾರಕವೆಂದು ಅವರಿಗೆ ತಿಳಿಸಿ ಹೇಳುವುದೇ ನಿಜವಾದ ಒಗ್ಗಟ್ಟನ್ನು ತರುವ ಮಾರ್ಗ. ಪರ್ಯಾಯವಾಗಿ ಹೇಳುವುದಾದರೆ ತಾವು ಬ್ರಾಹ್ಮಣತ್ವವನ್ನು ಕಾರ್ಮಿಕರ ಮಧ್ಯದಿಂದ ಕಿತ್ತು ಹಾಕಬೇಕು. ಬ್ರಾಹ್ಮಣತ್ವವೆಂದರೆ ಅಸಮಾನತೆಯ ಚೇತನ. ಸಾಮಾನ್ಯ ಕಾರ್ಮಿಕರು ಒಗ್ಗಟ್ಟಾಗಿ ನಿಲ್ಲಬೇಕಾದರೆ ಇದನ್ನು ಮಾಡಲೇಬೇಕು. ಆದರೆ ಈ ಕೆಲಸವನ್ನು ಮಾಡಬೇಕಾದ ನಾಯಕ ಕಾರ್ಮಿಕರ ಮಧ್ಯದಲ್ಲಿ ಎಲ್ಲಿದ್ದಾನೆ? ಬಂಡವಾಳಷಾಹಿಗಳ ವಿರುದ್ಧ ಘಂಟಾಘೋಷವಾಗಿ ಮಾತನಾಡುವ ನಾಯಕರ ಬಗ್ಗೆ ನಾನು ಕೇಳಿದ್ದೇನೆ. ಆದರೆ, ಯಾವ ನಾಯಕನೂ ಕಾರ್ಮಿಕರ ನಡುವೆ ಇರುವ ಬ್ರಾಹ್ಮಣತ್ವದ ವಿರುದ್ಧ ಮಾತನಾಡಿದ ಬಗ್ಗೆ ಕೇಳಿಲ್ಲ. ಅದರ ಬದಲು ಈ ವಿಷಯದ ಮೇಲೆ ಅವರು ಮೌನತಾಳಿರುವುದು ಚೆನ್ನಾಗಿ ಗೋಚರಿಸುತ್ತಿದೆ. ಕಾರ್ಮಿಕರ ಸಂಘಟನೆಗೂ ಮತ್ತು ಒಗ್ಗಟ್ಟಿಗೂ ಬ್ರಾಹ್ಮಣತ್ವಕ್ಕೂ ಸಂಬಂಧವಿಲ್ಲವೆಂಬ ಅವರ ನಂಬಿಕೆಯೋ ಅಥವಾ ಕಾರ್ಮಿಕರ ಅಸಂಘಟನೆಗೂ, ಬ್ರಾಹ್ಮಣತ್ವಕ್ಕೂ ಬಹಳ ನಂಟಿದೆಯೆಂದು ಅವರು ನಂಬುತ್ತಿಲ್ಲವೋ, ಅಥವಾ ಕಾರ್ಮಿಕರ ನಾಯಕತ್ವವನ್ನು ಪಡೆದುಕೊಳ್ಳುವುದಕ್ಕಾಗಿ ಕಟ್ಟಾ ಅವಕಾಶವಾದಿ ಧೋರಣೆಯೋ, ಇದರಿಂದ ಕಾರ್ಮಿಕರ ಭಾವನೆಗಳಿಗೆ ಕ್ಷತಿಯುಂಟಾಗುತ್ತದೆಂದು ಏನನ್ನು ಹೇಳದಿರುವುಧೇ ಸರಿ ಎಂದು ಕೊಂಡಿರುವುದೋ, ನಾನೇನು ವಿಚಾರಿಸಲು ಹೋಗುವುದಿಲ್ಲ. ಆದರೆ ಬ್ರಾಹ್ಮಣತ್ವವೇ ಕಾರ್ಮಿಕ ವರ್ಗದ ಅಸಂಘಟನೆಗೆ ಮೂಲಕಾರಣವೆಂದು ಒಪ್ಪಿಕೊಂಡರೆ, ಅದನ್ನು ಕಾರ್ಮಿಕರಿಂದ ತೆಗೆದುಹಾಕುವುದಕ್ಕೆ ತೀವ್ರವಾದ ಪರಿಶ್ರಮವನ್ನು ಮಾಡಲೇಬೇಕು. ಕೇವಲ ಉದಾಸೀನದಿಂದ ಈ ಸೋಂಕು ಹೋಗುವುದಿಲ್ಲ; ಅದರ ಬಗ್ಗೆ ಮೌನ ತಾಳಿದರೂ ಅದು ಹೋಗುವುದಿಲ್ಲ, ಅದನ್ನು ಹಿಂಬಾಲಿಸಬೇಕು, ಅಗೆದು ತೆಗೆಯಬೇಕು ಮತ್ತು ನಾಶಪಡಿಸಬೇಕು. ಆಗಲೇ ಕಾರ್ಮಿಕರ

ಒಗ್ಗಟ್ಟಿನ ದಾರಿ ಸುಗಮವಾಗುತ್ತದೆ. ಎಲ್ಲಿಯವರೆಗೆ ಬ್ರಾಹ್ಮಣತ್ವ ಅನ್ನುವುದು ಒಂದು ಜೀವಂತ ಶಕ್ತಿಯಾಗಿ ಉಳಿದುಕೊಳ್ಳುತ್ತದೆಯೋ, ಎಲ್ಲಿಯವರೆಗೆ ಅದು ಒಂದು ವರ್ಗದ ಜನರಿಗೆ ಸವಲತ್ತುಗಳನ್ನು, ಇನ್ನೊಂದು ವರ್ಗದ ಜನರ ಮೇಲೆ ಅಡ್ಡಿಅಡಚಣೆಗಳನ್ನು ಹೇರುತ್ತದೆ ಅನ್ನುವ ಕಾರಣಕ್ಕಾಗಿ ಅದಕ್ಕೇ ಅಂಟಿಕೊಂಡು ಇರುತ್ತಾರೋ, ಅಲ್ಲಿಯವರೆಗೆ ಈ ಪ್ರತಿಬಂಧಗಳಿಂದ ಬಳಲುತ್ತಿರುವವರಿಗೆ ತಮ್ಮನ್ನು ತಾವು ಸಂಘಟಿಸಿಕೊಳ್ಳಬೇಕಾದ ಅವಶ್ಯಕತೆ ಇರುತ್ತದೆ. ಅವರು ಸಂಘಟಿತರಾಗುವುದರಲ್ಲಿ ಕೆಡುಕೇನಿಲ್ಲ. ಈ ಸಂಘಟನೆಯನ್ನು ಮಾಲೀಕರುಗಳೇ ಹುಟ್ಟುಹಾಕಿದ್ದರೆ, ಈ ದೂರಿನ ಬಿರುಕು ನನಗೆ ಅರ್ಥವಾಗುತ್ತಿತ್ತು. ನಾವು ನಮ್ಮ ಮಾಲೀಕರ ಕೈಯಲ್ಲಿನ ದಾಳಗಳೆಂದು ತೋರಿಸಿಕೊಟ್ಟಿದ್ದರೆ, ನಾವು ಅವರ ಕೈಗೊಂಬೆಯಾಗಿದ್ದರೆ, ನಾವು ಕಾರ್ಮಿಕರುಗಳ ಒಗ್ಗಟ್ಟನ್ನು ಒಡೆಯುವುದಕ್ಕಾಗಿ ಬೇಕೆಂದೇ ಪ್ರತ್ಯೇಕ ಸಂಘಟನೆಯನ್ನು ನಾವು ಕಟ್ಟುತ್ತಿದ್ದೇವೆಂದು ತೋರಿಸಿಕೊಟ್ಟಿದ್ದೇ ಆದರೆ, ಆಗ ಈ ಸಮ್ಮೇಳನವನ್ನು ಖಂಡಿಸುವುದಕ್ಕೆ ಸಾಕಷ್ಟು ಸಮರ್ಥನೆಗಳು ಸಿಗುತ್ತಿದ್ದವು. ವಾಸ್ತವವಾಗಿ ಇಂಥ ನಡತೆಯನ್ನು ದ್ರೋಹವೆಂದು ಅಲ್ಲಗಳೆಯಬಹುದು. ಆದರೆ, ಯಾರೇ ಆಗಲೀ ಈ ನಿಮ್ಮ ನಡೆಯನ್ನು ಪೊಲೀಸರುಗಳೇ ಹುಟ್ಟುಹಾಕಿದ್ದಾರೆಂದು ಹೇಳಲಾಗುತ್ತದೆಯೇ? ನಾವು ಮಾಲೀಕರಿಗೆ ಸಹಾಯ ಮಾಡಿ ಕಾರ್ಮಿಕರ ಅಕಾಂಕ್ಷೆಗಳನ್ನು ಹಾಳು ಮಾಡುವುದಕ್ಕೆ ಹೊರಟಿದ್ದೇವೆಂದು ಹೇಳಲಾಗುತ್ತದೆಯೆ? ಹೀಗೆಂದು ನಾವು ನಮ್ಮ ಟೀಕಾಕಾರರಿಗೆ ಸವಾಲು ಹಾಕುತ್ತೇವೆ.

ಆದ್ದರಿಂದ ಈ ಸಮ್ಮೇಳನವನ್ನು ಯೋಜಿಸುವುದಕ್ಕೆ ನಾವೇನೂ ನಾಚಿಕೆಪಟ್ಟುಕೊಳ್ಳಬೇಕಾಗಿಲ್ಲ ಅಥವಾ ಯಾರನ್ನೂ ಕ್ಷಮಾಪಣೆ ಕೇಳಬೇಕಾಗಿಲ್ಲ. ಅದರ ಕಾರಣಗಳು ಮತ್ತು ಉದ್ದೇಶಗಳೇ ಅದನ್ನು ಬೇಕಾದಷ್ಟು ಸಮರ್ಥನೆ ಮಾಡುತ್ತವೆ. ಈ ಸಮ್ಮೇಳನವನ್ನು ಅನುಮೋದಿಸಿಲ್ಲದವರಲ್ಲಿ ಒಬ್ಬಿಬ್ಬರು ನಿಮ್ನವರ್ಗಗಳವರೂ ಇರಬಹುದು. ಇದರಲ್ಲಿ ಅಂಥದ್ದೇನೂ ಆಶ್ಚರ್ಯವಿಲ್ಲ. ಅದರಲ್ಲಿ ಕೆಲವರು ಇತರರ ಬಾಲಬಡುಕರು ಮತ್ತು ಬಾಡಿಗೆ ಆಳುಗಳು ಇರಬಹುದು. ಕೆಲವರನ್ನು ತಪ್ಪುದಾರಿಗೆ ಎಳೆಯಲಾಗಿದೆ. ನಿಮ್ನವರ್ಗಗಳವರು ಬಹಳ ಶಕ್ತಿಹೀನರಾಗಿದ್ದು, 'ಯೂನಿಯನ್' ಎನ್ನುವ ಪದ, ಅದರಲ್ಲೂ ಪ್ರಭಾವಶಾಲಿ ಪ್ರಚಾರಕರ ಬಾಯಿಂದ ಬಂದಿದ್ದರೆ, ಅವರಿಗೆ ಎಷ್ಟು ಆಕರ್ಷಣೆಯೆಂದರೆ, ಅವರು ಮೋಸ ಹೋಗಿರುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಎಲ್ಲ ರೀತಿಯಲ್ಲೂ ಅವರ ಭಾವನೆಗಳು ಮತ್ತು ಧೋರಣೆಗಳು ಒಂದಕ್ಕೊಂದು ವಿರೋದವಾಗಿದ್ದು ಮತ್ತು ಅವರಲ್ಲೊಬ್ಬರು ಇನ್ನೊಬ್ಬರಿಗೆ ಪ್ರತಿಕೂಲವಾಗಿರುವ ಹಿತಾಸಕ್ತಿಗಳನ್ನು ಕ್ಲೇಮು ಮಾಡುತ್ತಿದ್ದರೆ ಆಗ ಅವರುಗಳ ನಡುವೆ ನೈಜವಾದ ಒಕ್ಕೂಟವಿರುಲು ಸಾಧ್ಯವಿಲ್ಲವೆಂದು ಇಂಥ ಜನಗಳು ಮರೆತುಬಿಡುತ್ತಾರೆ. ನಿರ್ಬಲವಾದ ಮತ್ತು ಕ್ಲೇಶಕ್ಕೊಳಗಾದವರಿಗೆ ಇಂಥ ಜನಗಳ ಮಧ್ಯದ ಒಕ್ಕೂಟ ಮೋಸಮಾಡಿದ ಹಾಗೆ ಅಲ್ಲದೆ ಮತ್ತೇನೂ ಅಲ್ಲ. ಇಂಥ ಮೋಸಗಾರರನ್ನ ಬಯಲಿಗೆಳೆಯುವ ನಿಷ್ಠಾವಂತರವನ್ನು ಈ ವೇಷಧಾರಿಗಳು, ಬಿರುಕಿನ ಬೀಜ ಬಿತ್ತುವವರೆಂದು ಕಪ್ಪುಮಸಿ ಬಳಿಯುತ್ತಾರೆ. ಬಿರುಕು ಎಂದು ಒಪ್ಪಿಕೊಳ್ಳೋಣ, ಅದು ಎಂಥ ಬಿರುಕು ಎಂದರೆ, ಎಲ್ಲಿ ನಿಜವಾದ ವ್ಯತ್ಯಾಸ ಮತ್ತು ನಿಜವಾದ ವೈರತ್ವ ಇರುತ್ತದೆಯೋ ಅಲ್ಲಿ ಈ ವೈರತ್ವ ಮುಖ್ಯವಾಗಿ ಎಲ್ಲಿ ಹುಟ್ಟಿಕೊಳ್ಳುತ್ತದೆಯೆಂದರೆ, ಕಾರ್ಮಿಕರ ಒಂದು ಪಂಗಡ, ಕಾರ್ಮಿಕರ ಇನ್ನೊಂದು ಪಂಗಡ, ಅಂದರೆ ನಿಮ್ನವರ್ಗಗಳವರ ವಿರುದ್ಧ ಪಟ್ಟಭದ್ರ ಹಕ್ಕುಗಳನ್ನು ಸಾಧಿಸುತ್ತದೆಯೋ ಅಲ್ಲಿ. ಭಿನ್ನಮತವನ್ನು ಹುಟ್ಟಿಹಾಕಲು ಯಾರೂ ಇಷ್ಟಪಡುವುದಿಲ್ಲ. ಈ ಭಿನ್ನಮತವನ್ನು ಗುರುತಿಸಿ ನಮಗೆ ಅದರಿಂದ ಅನ್ಯಾಯವಾಗದಂತೆ ನೋಡಿಕೊಳ್ಳುವುದನ್ನು ನಾವು ಈಗ ಮಾಡುತ್ತಿದ್ದೇವೆ. ನೀವು ನಿಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬೇಕೆಂದರೆ,

ಸಂಘಟಿತರಾಗಲೇಬೇಕೆಂಬುದು ಪ್ರಶ್ನಾತೀತ. ನಿಮ್ಮ ಸಂಘಟನೆ ಯಾವ ಉದ್ದೇಶವನ್ನು ಸಾಧಿಸಬೇಕಾಗಿದೆ ಎಂಬುದು ಮುಂದಿನ ಪ್ರಶ್ನೆ. ವ್ಯಾಪಾರೋದ್ಯಮಕ್ಕೆ ಇಳಿಯಬೇಕಾದರೆ ನೀವು ಸಂಘಟಿತರಾಗಲೇಬೇಕೆಂಬುದು ಪ್ರಶ್ನಾತೀತ, ಅದನ್ನು ಹೇಳಲೇ ಬೇಕಾಗಿಲ್ಲ. ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ, ನಮ್ಮದೇ ಪ್ರತ್ಯೇಕ ಸಂಘಟನೆ ಇರಬೇಕೇ ಅಥವಾ ಹಾಲಿ ಇರುವ ಸಂಘಟನೆಗಳೊಂದಿಗೆ ಕೈಜೋಡಿಸಬೇಕೇ ಎಂದು. ನಿಮ್ಮ ಕಾರ್ಯವಿಧಾನವನ್ನು ಯಾವ ರೀತಿ ರೂಪಿಸಿಕೊಳ್ಳಬೇಕೆಂಬುದನ್ನು ತೀರ್ಮಾನಿಸುವುದಕ್ಕೆ ಮುಂಚೆ, ನೀವು ಈ ಪ್ರಶ್ನೆಯನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು.

ಭಾರತದಲ್ಲಿನ ಕಾರ್ಮಿಕ ಸಂಘಟನೆ ಶೋಚನೀಯ ಪರಿಸ್ಥಿತಿಯಲ್ಲಿ ಇದೆ. ಕಾರ್ಮಿಕರ ಜೀವನ ಮಟ್ಟವನ್ನು ಕಡಿಮೆಯಾಗದಂತೆ ನೋಡಿಕೊಳ್ಳುವುದೇ ಕಾರ್ಮಿಕ ಸಂಘಟನೆಯ ಮುಖ್ಯ ಉದ್ದೇಶ. ಯೂರೋಪಿನಲ್ಲಿನ ಒಬ್ಬ ಮನುಷ್ಯ ತಾನು ಹುಟ್ಟಿನಿಂದ ಮತ್ತು ತರಬೇತಿಯಿಂದ ಯಾವುದೇ ಒಂದು ಜೀವನ ಶೈಲಿಗೆ ಒಗ್ಗಿಬಿಟ್ಟಿದ್ದಾನೋ, ಆ ಜೀವನ ಮಟ್ಟಕ್ಕೆ ಅಂಟಿಕೊಳ್ಳುವುದು ಒಂದು ಪ್ರವೃತ್ತಿ ಆಗಿಬಿಟ್ಟಿದೆ. ಅದನ್ನು ಕಮ್ಮಿ ಮಾಡುವ ಯವುದೇ ಪ್ರಯತ್ನವನ್ನು ಅವನು ದೃಢ ನಿರ್ಧಾರದಿಂದ ಪ್ರತಿರೋಧ ಮಾಡುತ್ತಾನೆ. ಭಾರತದ ಕಾರ್ಮಿಕನಲ್ಲಿ ಇಂಥ ದೃಢ ನಿರ್ಧಾರವಿಲ್ಲದಿರುವುದು ಕುಖ್ಯಾತಿಯಾಗಿದೆ. ಅವನು ಅಸ್ತಿತ್ವದಲ್ಲಿರುವುದಕ್ಕೆ ಮಾತ್ರ ಕಾತರನಾಗಿರುತ್ತಾನೆ. ಅವನಿಗೆ ಬದುಕಿರುವ ಇಚ್ಛೆಯೇ ಇಲ್ಲ. ಮಿಲ್ ಎಂಬ ಮಹಾಶಯ ಹೇಳಿರುವಂತೆ, 'ಯಾವ ಜನಗಳಲ್ಲಿ ಅವನತಿಯ ವಿರುದ್ಧ ನಿಶ್ಚಲವಾದ ಪ್ರತಿರೋಧವಿರುವುದಿಲ್ಲವೋ, ಲಾಗಾಯ್ತಿನಿಂದ ಇರುವ ಜೀವನ ಮಟ್ಟವನ್ನು ಕಾಯ್ದುಕೊಳ್ಳುವ ದೃಢ ನಿರ್ಧಾರವಿಲ್ಲವೋ, ಪುರೋಗಾಮಿ ದೇಶದಲ್ಲಿ ಕೂಡ ಬಡವರ್ಗದ ಪರಿಸ್ಥಿತಿ ಕೆಳಮಟ್ಟಕ್ಕೆ ಕುಸಿದರೂ, ಅದನ್ನು ಅವರು ಪ್ರಜ್ಞಾಪೂರ್ವಕವಾಗಿ ಸಹಿಸಿಕೊಳ್ಳುತ್ತಾರೆ. ಯಾವುದಾದರೂ ದೇಶದಲ್ಲಿ ಕಾರ್ಮಿಕ ಸಂಘಟನೆಯಾಗುವುದು ಅತ್ಯಂತ ಅವಶ್ಯಕತೆಯಾಗಿದ್ದರೆ, ಅದು ಭಾರತ ದೇಶ. ಆದರೆ ನಾನು ಆಗಲೇ ಹೇಳಿದ ಹಾಗೆ ಭಾರತದಲ್ಲಿನ ಕಾರ್ಮಿಕ ಸಂಘಟನೆ ನಿಂತ ನೀರಾಗಿ ನಾರುತ್ತಿರುವ ಒಂದು ನೀರು ತುಂಬಿದ ಹಳ್ಳವಾಗಿದೆ. ಇದಕ್ಕೆ ಸಂಪೂರ್ಣ ಕಾರಣವಾಗಿರುವವರು ಕಾರ್ಮಿಕ ಸಂಘಟನೆಯ ಮುಖಂಡರು; ಅವರು ಪುಕ್ಕಲಾಗಿದ್ದಾರೆ, ಸ್ವಾರ್ಥಿಗಳಾಗಿದ್ದಾರೆ; ಅಥವಾ ತಪ್ಪುದಾರಿಗೆ ಎಳೆಯಲ್ಪಟ್ಟಿದ್ದಾರೆ. ಕೆಲವು ಕಾರ್ಮಿಕ ಮುಖಂಡರುಗಳು ಕೇವಲ ಆರಾಮ ಕುರ್ಚಿಯ ತತ್ವಜ್ಞಾನಿಗಳಾಗಿದ್ದಾರೆ. ಅಥವಾ ವೃತ್ತಪತ್ರಿಕೆಗಳಲ್ಲಿ ಬರೆದೇ ಹೇಳಿಕೆಗಳನ್ನು ಕೊಡುವುದನ್ನೇ ಕಾರ್ಯ ಮಾಡಿಕೊಂಡಿರುವ ರಾಜಕಾರಣಿಗಳಾಗಿದ್ದಾರೆ. ಕಾರ್ಮಿಕರನ್ನು ಸಂಘಟಿಸುವುದು, ಅವರಿಗೆ ಶಿಕ್ಷಣ ಕೊಡುವುದು, ಚಳುವಳಿ ಮಾಡುವುದಕ್ಕೆ ಅವರಿಗೆ ಸಹಾಯ ಮಾಡುವುದು, ಅವರ ಕರ್ತವ್ಯದ ಭಾಗವಾಗಿಲ್ಲ. ಕಾರ್ಮಿಕರನ್ನು ಪ್ರತಿನಿಧಿಸುವುದಕ್ಕೆ, ಅವರ ಪರವಾಗಿ ಮಾತನಾಡುವುದಕ್ಕೆ ಮಾತ್ರ ಅವರಿಗೆ ಕಾತುರತೆ ಇದೆ. ಅದರೆ ಅವರ ಸಂಗಡ ಸಂಪರ್ಕವಿಟ್ಟುಕೊಳ್ಳುವುದಕ್ಕು ಅವರು ತಪ್ಪಿಸಿಕೊಳ್ಳುತ್ತಾರೆ. ಎರಡನೆ ಬಗೆಯ ಕಾರ್ಮಿಕ ನಾಯಕರು ಸಂಘಗಳನ್ನು ಕಟ್ಟುವುದರಲ್ಲಿ ನಿರತರಾಗಿದ್ದಾರೆ. ಅದರೆ ಅದರ ಒಂದೇ ಉದ್ದೇಶ ತಾವು ಆ ಸಂಘಕ್ಕೆ ಕಾರ್ಯದರ್ಶಿಗಳಾಗುವುದು. ಇಲ್ಲವೇ ಪ್ರೆಸಿಡೆಂಟ್ ಅಗುವುದು ಅಷ್ಟೇ. ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳುವುದಕ್ಕಾಗಿ, ತಮ್ಮ ಸಂಘಗಳನ್ನು ಪ್ರತ್ಯೇಕವಾದ ಇಲ್ಲವೇ ಪ್ರತಿಸ್ಪರ್ಧಿ ಘಟಕಗಳಾಗಿ ಇಟ್ಟುಕೊಳೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ. ಒಂದು ಅತ್ಯಾಶ್ಚರ್ಯಕರ ಮತ್ತು ಅದೇ ಕಾಲಕ್ಕೆ ನಾಚಿಕೆಗೇಡಿನ ಅಸಾಧಾರಣ ಸಂಗತಿಯೆಂದರೆ, ವಿವಿಧ ಕಾರ್ಮಿಕ ಸಂಘಗಳ ನಡುವಿನ ಬಡಿದಾಟ ಕಾರ್ಮಿಕರ ಮತ್ತು ಮಾಲೀಕರ ನಡುವಿನ ಬಡಿದಾಟಕ್ಕಿಂತ ಹೆಚ್ಚು ಮಾರಕವಾಗಿರುವುದನ್ನು ಕಾಣಬಹುದಾಗಿದೆ. ಇಷ್ಟೆಲ್ಲಾ ಏತಕ್ಕಾಗಿ? ಕೆಲವು ವ್ಯಕ್ತಿಗಳಿಗೆ ಯೂನಿಯನ್‌ಗಳ ಮೇಲೆ ವೈಯುಕ್ತಿಕವಾಗಿ ಒಡೆತನವನ್ನು ಸಾಧಿಸಿ, ತಮಗೆ

ಒಂದು ಮುಖಂಡತ್ವವನ್ನು ಪಡೆದುಕೊಳ್ಳಬೇಕೆಂಬ ಮಹದಾಶೆ. ಮೂರನೆ ವರ್ಗದ ಕಾರ್ಮಿಕ ನಾಯಕರುಗಳೆಂದರೆ, ಪ್ರಮುಖವಾಗಿ ಕಮ್ಯುನಿಸ್ಟರುಗಳೇ ತುಂಬಿಕೊಂಡಿರುವವರು. ಅವರ ಉದ್ದೇಶ ಒಳ್ಳೆಯದಿರಬಹುದು. ಅದರೆ ಅವರು ದಾರಿ ತಪ್ಪಿಸಲ್ಪಟ್ಟ ಜನಗಳ ಗುಂಪು ಎಂದು ಹೇಳುವುದಕ್ಕೆ ನಾನೇನೂ ಹಿಂದುಮುಂದು ನೋಡುವುದಿಲ್ಲ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಈ ಜನಗಳಿಗಿಂತ ಕಾರ್ಮಿಕರನ್ನು ಹೆಚ್ಚು ಹಾಳುಗೆಡವಿರುವವರು ಬೇರೆ ಯಾರೂ ಇಲ್ಲ. ಈ ದಿನದಲ್ಲಿ ಕಾರ್ಮಿಕರ ಬೆನ್ನುಮೂಳೆ ಸಂಪೂರ್ಣವಾಗಿ ಮುರಿದಿದ್ದರೆ, ಮಾಲೀಕರುಗಳದ್ದೇ ಮೇಲುಗೈ ಆಗಿದ್ದರೆ, ಈ ದಿನ ಸಂಘ ಚಟುವಟಿಕೆಯೆಂಬುದು ಶಾಪವಾಗಿದ್ದರೆ. ಅದಕ್ಕೆ ಕಾರಣ ಹಿಂದೆ ಒಂದು ಕಾಲದಲ್ಲಿ ಕಾರ್ಮಿಕ ಸಂಘಗಳ ಮೇಲೆ ಕಮ್ಯುನಿಷ್ಟರಿಗೆ ಇದ್ದ ಹಿಡಿತ ಮತ್ತು ಅದರ ದುರುಪಯೋಗವಷ್ಟೆ. ಅವರ ಗುರಿ ಕಾರ್ಮಿಕರ ಮಧ್ಯೆ ಈಗಾಗಲೇ ಸಾಕಷ್ಟು ಇರುವ ಅಸಂತುಷ್ಟತೆಯನ್ನು ಮತ್ತೂ ಬೆಳೆಸುವುದು ಎಂದು ತೋರುತ್ತದೆ. ಒಂದು ಅಸಂತುಷ್ಟ ಕಾರ್ಮಿಕರ ಗುಂಪನ್ನು ಮುಂದಿಟ್ಟುಕೊಂಡು, ಕ್ರಾಂತಿಯ ಮೂಲಕ ಜೀತದಾಳುಗಳ ಮೇಲೆ ತಮ್ಮ ಅಳ್ವಿಕೆಯನ್ನು ಸ್ಥಾಪಿಸುವುದೇ ಆಗಿದೆ. ಅದ್ದರಿಂದ ಅಸಂತುಷ್ಟತೆಯನ್ನು ಹುಟ್ಟುಹಾಕಲು ಅವ್ಯವಸ್ಥೆಯನ್ನು ವ್ಯವಸ್ಥೆಗೊಳಿಸುವ ಒಂದು ವ್ಯವಸ್ಥಿತ ಪ್ರಚಾರಾಂದೋಳನವನ್ನೇ ಪ್ರಾರಂಭಿಸಿದರು. ಕಾರ್ಮಿಕರುಗಳನ್ನು ಈ ಸರಣಿ ಮುಷ್ಕರಗಳಿಗೆ ತಳ್ಳುವುದಕ್ಕೆ ಬೇರೆ ಇನ್ನು ಯಾವ ಅರ್ಥವಾಗಲೀ, ಯಾವ ಪರಿಣಾಮವಾಗಲೀ ಇರಲಾರದು. ಕ್ರಾಂತಿಯೊಂದು ಜಯಪ್ರದವಾಗಬೇಕಾದರೆ ಬರಿಯ ಅಸಂತುಷ್ಟತೆ ಮಾತ್ರ ಇದ್ದರೆ ಸಾಲದು. ಬೇಕಾಗಿರುವುದೇನೆಂದರೆ, ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳ ಬಗ್ಗೆ ಆಳವಾದ ಮತ್ತು ಆಮೂಲಾಗ್ರವಾದ ಮನವರಿಕೆ. ಕಾರ್ಮಿಕ ಯಾಜಮಾನ್ಯದ ಕ್ರಾಂತಿಕಾರಿ ಪರಿಕಲ್ಪನೆ ಚಾಲನೆಯಲ್ಲಿದ್ದ ಆ ಹಳೆಯ ದಿನಗಳಲ್ಲಿದ್ದ ಹಾಗೆ, ಒಬ್ಬ ಕ್ರಾಂತಿಕಾರಿ ಮಾರ್ಕ್ಸ್‌ವಾದಿ ಮುಷ್ಕರಗಳ ಹುಚ್ಚನ್ನು ಹಿಡಿಸಿಕೊಳ್ಳುವುದಿಲ್ಲ. ಕ್ರಾಂತಿಕಾರಿ ಮಾರ್ಕ್ಸಿಸ್ಟರು ಮುಷ್ಕರವನ್ನು ಒಂದು ಕ್ರಾಂತಿಕಾರಿ ವ್ಯಾಯಾಮವೆಂದು ಯಾವತ್ತೂ ಪರಿಗಣಿಸಲಿಲ್ಲ. ಅದು ಇತರ ಎಲ್ಲಾ ಪ್ರಯತ್ನಗಳೂ ಫಲಕಾರಿಯಾಗದಿದ್ದ ಮೇಲೆ ಒಂದು ಕಟ್ಟಕಡೆಯ ಗಂಭೀರವಾದ ನಡೆಯೆಂದು ಪರಿಗಣಿಸಲಾಗಿತ್ತು. ಆದರೆ ಇದೆಲ್ಲವನ್ನೂ ಕಮ್ಯುನಿಸ್ಟರು ಗಾಳಿಗೆ ತೂರಿ ಕಾರ್ಮಿಕರುಗಳ ಮಧ್ಯೆ ಅಸಂತುಷ್ಟತೆಯನ್ನುಂಟು ಮಾಡುವುದಕ್ಕೆ ಮುಷ್ಕರಗಳು ಒಂದು ದೈವೀ ಸಾಧನವೆಂದು ಅಂದುಕೊಂಡಿದ್ದಾರೆ. ಅವರು ಹೆಚ್ಚಿನ ಅತೃಪ್ತಿಯನ್ನು ಸೃಷ್ಟಿ ಮಾಡಿದರೋ ಇಲ್ಲವೋ, ಆದರೆ ಯಾವುದು ತಮ್ಮ ಬಲದ ಉಗಮವಾಗಿತ್ತೋ, ಯಾವುದು ತಮ್ಮ ಅಧಿಕಾರದ ಮೂಲವಾಗಿತ್ತೋ ಆ ಕಾರ್ಮಿಕ ಸಂಘಗಳನ್ನು ನಿರ್ಣಾಯಕವಾಗಿ ನಾಶ ಮಾಡಿ, ಈಗ ಬೀದಿಗೆ ಬಿದ್ದು, ಎಲ್ಲಾ ತರಹದ ಬಂಡವಾಳಶಾಹಿ ಸಂಸ್ಥೆಗಳ ನೆರಳನ್ನು ಆಶ್ರಯಿಸುತ್ತಿದ್ದಾರೆ. ಇಂಥ ಬುದ್ಧಿಶೂನ್ಯ ಚಟುವಟಿಕೆಯಿಂದ ಇನ್ನೇನನ್ನು ತಾನೆ ನಿರೀಕ್ಷಿಸಬಹುದು? ಕಮ್ಯುನಿಷ್ಟರು ಒಂದು ರೀತಿಯ ಬೆಂಕಿ ಹಚ್ಚುವ ಕಿಡಿಗೇಡಿಯಂತೆ, ದಳ್ಳುರಿಯನ್ನು ಹಬ್ಬಿಸುತ್ತಾನೆ. ಆದರೆ ತನ್ನ ಮನೆಯೇ ಆ ದಳ್ಳುರಿಯಲ್ಲಿ ಭಸ್ಮವಾಗಬಹುದೆಂಬ ಎಚ್ಚರಿಕೆ ಅವನಿಗೆ ಇರುವುದಿಲ್ಲ. ಫಲಿತಾಂಶವಾಗಿ ಕಾರ್ಮಿಕರು ಆಶ್ರಯಿಸಬಹುದಾದ ಯಾವ ಸಂಘಟನೆಗಳೂ ಅಸ್ತಿತ್ವದಲ್ಲಿ ಇಲ್ಲ. ಬೊಂಬಾಯಿನಲ್ಲಿರುವ ಹತ್ತಿಗಿರಣಿ ಕಾರ್ಮಿಕರಿಗೆ ಅಂಟಿಕೊಂಡಿರುವ ಜಾಢ್ಯದ ಬಗ್ಗೆ ನಾನು ಮಾತನಾಡಲು ಹೊರಟಿಲ್ಲ. ಅವರ ಬಗ್ಗೆ ಎಷ್ಟು ಕಡಿಮೆ ಹೇಳಿದರೆ ಅಷ್ಟೂ ಒಳ್ಳೆಯದು. ಆದರೆ ಜಿ.ಐ.ಪಿ. ರೇಲ್ವೆ ಕಾರ್ಮಿಕರು ಇರುವ ಪರಿಸ್ಥಿತಿಯನ್ನು ತೆಗೆದುಕೊಳ್ಳಿ. ೧೯೨೦ ರಲ್ಲಿ ಜಿ.ಐ.ಪಿ. ರೇಲ್ವೆ ಸಿಬ್ಬಂದಿ ಸಂಘವನ್ನು ಸ್ಥಾಪಿಸಲಾಯಿತು. ೧೯೨೨ ರಿಂದ ೧೯೨೪ರ ವರೆಗಿನ ಅವಧಿಯಲ್ಲಿ ಅದು ಮುಚ್ಚಿಹೋಗಿತ್ತು. ೧೯೨೫ರಲ್ಲಿ ಅದನ್ನು ಪುನಃಚೇತನಗೊಳಿಸಲಾಯಿತು. ೧೯೨೭ರಲ್ಲಿ ಇನ್ನೊಂದು ಪ್ರತಿಸ್ಪರ್ಧಿ ಸಂಘಟನೆಯನ್ನು ಸ್ಥಾಪಿಸಲಾಯಿತು.

ಅದನ್ನು ಜಿ.ಐ.ಪಿ. ರೇಲ್ವೆ ಕಾರ್ಮಿಕರ ಸಂಘವೆಂದು ಹೆಸರಿಸಲಾಗಿತ್ತು. ೧೯೩೧ರಲ್ಲಿ ಎರಡೂ ಸಂಘಗಳನ್ನು ಒಂದುಗೂಡಿಸಿ ರೇಲ್ವೆ ಕರ್ಮಚಾರಿಗಳ ಸಂಘವೆಂದು ಕರೆಯಲಾಯಿತು. ೧೯೩೨ರಲ್ಲಿ ಈ ಸಂಘ ಒಡೆದುಹೋಗಿ ರೇಲ್ವೆ ಕಾರ್ಮಿಕ ಸಂಘ ಎಂಬ ಹೊಸ ಸಂಘ ಪ್ರಾರಂಭವಾಯಿತು. ೧೯೩೫ರಲ್ಲಿ ಹಳೆಯ ಜಿ.ಐ.ಪಿ. ಸಿಬ್ಬಂದಿ ಸಂಘಕ್ಕೆ ಮತ್ತೆ ಜೀವ ತುಂಬಲಾಯಿತು. ಅದನ್ನು ಹೊಸ ಸಂಘವೆಂದು ಪ್ರಾರಂಭಗೊಳಿಸಲಾಯಿತು. ಈಗ ಈ ಸಂಘಕ್ಕೆ ಮಾನ್ಯತೆ ದೊರಕಿದ್ದು, ಎರಡೂ ಸಂಘಗಳ ನಡುವೆ ತೀವ್ರವಾದ ಕಲಹ ಮತ್ತು ಪೈಪೋಟಿ ಶುರುವಾಗಿದೆ. ಈ ಕಲಹಗಳಿಗೆ ಕಾರಣವೆಂದರೆ ಕಮ್ಯುನಿಷ್ಟ್ ಗುಂಪುಗಳಿಗೂ ಮತ್ತು ಕಮ್ಯುನಿಷ್ಟರುಗಳು ಅಲ್ಲದ ಗುಂಪಿಗೂ ನಾಯಕತ್ವಕ್ಕಾಗಿ ಮುಖಂಡರುಗಳಲ್ಲಿ ನಡೆದಿರುವ ಸ್ಪರ್ಧೆ. ಇದೇ ಪೈಪೋಟಿ ಕೇಂದ್ರೀಯ ಸಂಸ್ಥೆಯಲ್ಲೂ ಬಿರುಕು ಮೂಡಿಸಿದೆ. ಅಖಿಲ ಭಾರತ ಕಾರ್ಮಿಕ ಸಂಘದ ಕಾಂಗ್ರೆಸ್ ಅನ್ನು ೧೯೧೯ರಲ್ಲಿ ಕಾರ್ಮಿಕರ ಕೇಂದ್ರೀಯ ಸಂಸ್ಥೆಯೆಂದು ಪ್ರಾರಂಭಿಸಲಾಯಿತು. ೧೯೨೯ರ ವರೆಗೆ ಎಲ್ಲಾ ಸಂಘಗಳು ಇದಕ್ಕೆ ಅಂಗಸಂಸ್ಥೆಗಳಾದ್ದವು. ೧೯೨೯ರಲ್ಲಿ ನಾಗಪುರದಲ್ಲಿ ಇದರಲ್ಲೂ ಬಿರುಕು ಉಂಟಾಗಿ ಕಮ್ಯುನಿಸ್ಟರ ನಾಯಕತ್ವವನ್ನು ಒಪ್ಪಿಕೊಳ್ಳದ ಗುಂಪು ಪ್ರತ್ಯೇಕವಾದ ಒಂದು ನಿಕಾಯವನ್ನು ರೂಪಿಸಿ, ಅದನ್ನು ನ್ಯಾಷನಲ್ ಟ್ರೇಡ್ ಯೂನಿಯನ್ ಫೇಡರೇಷನ್ ಎಂದು ಕರೆದರು. ಈ ಎರಡೂ ನಿಕಾಯಗಳಲ್ಲಿ ಈಗ ತೀಕ್ಷ್ಣವಾದ ಮನಸ್ತಾಪವಿದೆ. ೧೯೩೧, ೧೯೩೨ರಲ್ಲಿ ಈ ಎರಡು ಪ್ರತಿಸ್ಪರ್ಧಿ ನಿಕಾಯಗಳಲ್ಲಿ ಒಗ್ಗಟ್ಟನ್ನು ತರಲು ಪ್ರಯತ್ನಗಳನ್ನು ಮಾಡಲಾಯಿತು. ಆದರೆ ಆ ಪ್ರಯತ್ನ ನಿರರ್ಥಕವಾಯಿತು. ಬಡಿಗಲ್ಲಿನ ಮೇಲೆ ಏನನ್ನೋ ಬಡಿಯಲಾಗುತ್ತಿದೆ. ಅದರಿಂದ ಏನು ಒಳ್ಳೆಯದಾಗುತ್ತದೆ ಎಂದು ನಾನು ಹೇಳಲಾರೆ. ಈ ಪರಿಸ್ಥಿತಿಯಲ್ಲಿ ನಾನು ನಿಮಗೆ ಯಾವ ಸಲಹೆ ಬುದ್ಧಿವಾದವನ್ನು ಕೊಡಲು ಕಷ್ಟವಾಗುತ್ತದೆ. ನೀವೇ ಇನ್ನೊಂದು ಪ್ರತ್ಯೇಕ ಸಂಘವನ್ನು ಪ್ರಾರಂಭಿಸುವುದರಲ್ಲಿ ತಪ್ಪೇನೂ ಇಲ್ಲ; ಆದರೆ ಅದನ್ನು ನಡೆಸುವುದಕ್ಕೆ ನಿಮಗೆ ಜನಬಲವಿರಬೇಕು. ಇದು ಒಂದು ದೊಡ್ಡದಾದ ಪೂರ್ವಸಿದ್ಧತೆ. ಸಂಘವೊಂದು ಅಭಿವೃದ್ಧಿ ಆಗಬೇಕಾದರೆ ಅದು ಚಾಲನೆಯಲ್ಲಿ ಇರಬೇಕು. ಸಮರ್ಥರಾದ ಕಾರ್ಯಕರ್ತರಿಲ್ಲದಿದ್ದರೆ ಸಂಘ ಕೆಲಸ ಮಾಡಲಾಗುವುದಿಲ್ಲ. ನಿಮ್ಮ ಸಂಘವನ್ನು ನಡೆಸುವುದಕ್ಕೆ ನಿಮಗೆ ಜನಬಲ ಸಿಗುತ್ತದೆಯೇ ಸಿಗಬಹುದಾದರೆ ನಿಮ್ಮದೇ ಸಂಘವನ್ನು ಕಟ್ಟಿಕೊಳ್ಳಿ. ವಾಸ್ತವವಾಗಿ ಹೇಳುವುದಾದರೆ, ಹಾಗೇ ಮಾಡುವುದೇ ಉತ್ತಮ. ಪ್ರತ್ಯೇಕ ಸಂಘ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಕಾರಣವೇನೆಂದರೆ. ಸಂಘಗಳು ಪ್ರತ್ಯೇಕಗೊಳ್ಳಲುಬೇಕಿಲ್ಲ, ನಿರ್ಬಲವೂ ಆಗಬೇಕಿಲ್ಲ. ನಿಮ್ಮ ಪ್ರತ್ಯೇಕವಾದ ಸಂಘ ಯಾವುದಾದರೂ ಕೇಂದ್ರ ಕಾರ್ಮಿಕ ಸಂಸ್ಥೆಯ ಅಂಗಸಂಸ್ಥೆಯಾಗಬಹುದು ಇದು ನಿಮಗೆ ಉದ್ದೇಶದ ಐಕ್ಯತೆಯನ್ನೂ ಕಾರ್ಯನಿರ್ವಹಣೆಯ ಐಕ್ಯತೆಯ್ನೂ ಕೊಡಬಲ್ಲುದು. ನಿಮ್ಮದೇ ಅದ ಸಂಘವನ್ನು ಸ್ಥಾಪಿಸಲು ಆಗದಿದ್ದರೆ ನೀವು ಈಗಾಗಲೇ ಅಸ್ತಿತ್ವದಲ್ಲಿರುವ ಯಾವುದಾದರೂ ಒಂದು ಸಂಘವನ್ನು ಸೇರಿಕೊಳ್ಳಬಹುದು. ಆದರೆ ನೀವು ಸೇರಿಕೊಳ್ಳುವ ಸಂಘ ನಿಮ್ಮನ್ನು ತನ್ನದೇ ಉದ್ದೇಶಕ್ಕೆ ಬಳಸಿಕೊಳ್ಳದ ಹಾಗೆ ಎಚ್ಚರ ವಹಿಸಬೇಕು. ಅಂಥದೊಂದು ದೊಡ್ಡ ಅಪಾಯ ಸಂಭವಿಸಲೂಬಹುದು. ಅದು ಬೊಂಬಾಯಿನಲ್ಲಿ ಸಂಭವಿಸಿದೆ. ನೇಯ್ಗೆಯವರ ಹಿತಾಸಕ್ತಿಗಾಗಿ ಕರೆದಿರುವ ಮುಷ್ಕರದಲ್ಲಿ ನೂಲುವವರನ್ನು ನೇಯ್ಗೆಯವರ ಬೆಂಬಲಕ್ಕಾಗಿ ಬಳಸಿಕೊಳ್ಳಲಾಗಿದೆ. ಇದನ್ನು ತಪ್ಪಿಸಲು ನೀವು ಎರಡು ನಿಬಂಧನೆಗಳನ್ನು ಹಾಕಬೇಕು. ಮೊದಲನೆಯದಾಗಿ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ನಿಮಗೆ ವಿಶೇಷ ಪ್ರಾತಿನಿಧ್ಯಬೇಕೆಂದು ಕೇಳಿಕೊಳ್ಳಬೇಕು. ಆಗ ನಿಮ್ಮ ವಿಶೇಷ ಸಮಸ್ಯೆಗಳಿಗೆ ಗಮನ ಸಿಗುತ್ತದೆ; ಅಲ್ಲದೆ ಸಂಘದ ಬೆಂಬಲವೂ ಸಿಗುತ್ತದೆ. ಎರಡನೆಯದಾಗಿ, ಸಂಘಕ್ಕೆ ನೀವು ಕೊಡುವ ವಂತಿಗೆಯ ಒಂದು ಭಾಗವನ್ನು ನಿಮ್ಮ ಕುಂದುಕೊರತೆಗಳ ಬಗ್ಗೆ ಅವಶ್ಯಕತೆ

ಬಿದ್ದರೆ ಹೋರಾಟ ಮಾಡುವುದಕ್ಕಾಗಿ ಪ್ರತ್ಯೇಕವಾಗಿ ತೆಗೆದಿಡಬೇಕು. ನಿಮ್ಮದೇ ಅದ ಪ್ರತ್ಯೇಕ ಸಂಘ ಬೇಡವೆಂದು ನೀವು ತೀರ್ಮಾನಿಸಿದರೆ ಒಂದು ಸಾರ್ವತ್ರಿಕ ಸಂಘವನ್ನು ಸೇರಿಕೊಳ್ಳುವುದಕ್ಕೆ ಮುಂಚೆ ಈ ಎರಡು ಅತ್ಯವಶ್ಯಕ ನಿಬಂಧನೆಗಳು ಇರಲೇಬೇಕು. ವ್ಯಾಪಾರದ ಉದ್ದೇಶಕ್ಕಾಗಿ ನೀವು ಒಂದು ಸಂಘವನ್ನು ಸ್ಥಾಪಿಸಬೇಕೇ ಎನ್ನುವ ಪ್ರಶ್ನೆಯೇ ಇಲ್ಲ. ಆದರೆ ಇಷ್ಟೇ ಸಾಕಾಗುವುದಿಲ್ಲ. ನೀವು ರಾಜಕೀಯ ಉದ್ದೇಶಗಳಿಗೂ ಸಂಘಟನೆಯಾಗಬೇಕು. ಬರಿಯ ಕಾರ್ಮಿಕ ಸಂಘಗಳಿಂದ ಮಾತ್ರ ಮಾಲೀಕರುಗಳ ವಿರುದ್ಧ ಹೋರಾಟದಲ್ಲಿ ಕಾರ್ಮಿಕರಿಗೆ ಜಯ ಸಿಗುವುದಿಲ್ಲ ಎಂಬುದು ಅನುಭವದಿಂದ ಗೊತ್ತಾಗಿರುವ ವಿಷಯ. ಕಾರ್ಮಿಕ ಸಂಘಗಳು ರಾಜಕೀಯವನ್ನು ಪ್ರವೇಶಿಸಬೇಕೆ ಎಂಬ ಪ್ರಶ್ನೆಗೆ ಎರಡು ಅಭಿಪ್ರಾಯಗಳು ಇರಲು ಸಾಧ್ಯವೇ ಇಲ್ಲ.

ಕಾರ್ಮಿಕ ಸಂಘಗಳು ರಾಜಕೀಯಕ್ಕೆ ಇಳಿಯಲೇಬೇಕು. ಕಾರಣವೆಂದರೆ ರಾಜಕೀಯ ಅಧಿಕಾರವಿಲ್ಲದೆ, ಬರಿಯ ಕಾರ್ಮಿಕ ಸಂಘದ ಹಿತಾಸಕ್ತಿಗಳನ್ನು ಕಾಪಾಡಲು ಸಾಧ್ಯವೇ ಇಲ್ಲ. 'ಪ್ರಮಾಣ ದರ' (ಸ್ಟ್ಯಾಂಡರ್ಡ್ ರೇಟ್), 'ರೂಢಿಯ ದಿನ', 'ಸಾಮಾನ್ಯ ನಿಯಮ, ಕನಿಷ್ಟ ಕೂಲಿ', 'ಸಾಮೂಹಿಕ ಸಂಧಾನ' ಈ ಸುಧಾರಣೆಗಳನ್ನು ಸಂಘಗಳನ್ನು ಕಟ್ಟುವುದರಿಂದ ಮಾತ್ರ ಪಡೆದುಕೊಳ್ಳಲಾಗುವುದಿಲ್ಲ. ಸಂಘಗಳ ಶಕ್ತಿಯನ್ನು ಕಾನೂನಿಯ ನೆರವಿನಿಂದ ಇನ್ನು ಶಕ್ತಿಯುತವಾಗಿ ಮಾಡಬೇಕು. ಈ ದೇಶದ ರಾಜಕೀಯದಲ್ಲಿ ನೀವೂ ಸಹ ಪಾತ್ರವಹಿಸದ ಹೊರತು ಕೇವಲ ಕಾರ್ಮಿಕ ಸಂಘಗಳಿಂದ ಇವುಗಳನ್ನೆಲ್ಲಾ ಸಾಧಿಸಲು ಆಗುವುದಿಲ್ಲ.

ಕಾರ್ಮಿಕ ಸಂಘದ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶ ಮಾತ್ರವೇ ಕಾರ್ಮಿಕ ಸಂಘಗಳು ರಾಜಕೀಯ ಪ್ರವೇಶ ಮಾಡುವುದಕ್ಕೆ ಕಾರಣವಲ್ಲ. ನಿಮ್ಮ ಗಮನವನ್ನು ಕೇವಲ ಕಾರ್ಮಿಕ ಸಂಘದ ಚಟುವಟಿಕೆಗಳಿಗೆ ಮಾತ್ರ ಮಿತಗೊಳಿಸುವುದು, ತತ್ಕಾಲದ ಕೆಲಸವನ್ನೇ ಅಂತಿಮ ಗುರಿಯೆಂದು ತಪ್ಪಾಗಿ ತಿಳಿದುಕೊಂಡಂತೆ ಆಗುತ್ತದೆ. ಇತರರಿಗೆ ಗುಲಾಮ ಚಾಕರಿ ಮಾಡುವುದೇ ಕಾರ್ಮಿಕ ವರ್ಗಗಳವರ ತಪ್ಪಿಸಿಕೊಳ್ಳಲಾಗದ ಹಣೆಬರಹವೆಂದು ಭಾವಿಸಿಕೊಂಡ ಹಾಗೆ ಅಗುತ್ತದೆ. ಅದರ ಬದಲು ನೀವು ಈ ಕೂಲಿ ಗುಲಾಮಗಿರಿ ವ್ಯವಸ್ಥೆಯನ್ನು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ನೀತಿಗಳನ್ನು ಮಾನ್ಯ ಮಾಡುವ ವ್ಯವಸ್ಥೆಯಿಂದ ಬದಲಾಯಿಸಲೇಬೇಕು. ಇದರ ಅರ್ಥ ಸಮಾಜವನ್ನು ಪುನರ್‌ರಚಿಸಬೇಕಾಗಿದೆ. ಹೀಗೆ ಸಮಾಜದ ಪುನರ್‌ರಚನೆಯನ್ನು ಮಾಡಬೇಕಾದ ಆದ್ಯ ಕರ್ತವ್ಯ ಕಾರ್ಮಿಕ ವರ್ಗದ ಹೊಣೆಯಾಗಿದೆ. ಆದರೆ ಕಾರ್ಮಿಕ ವರ್ಗ ಈ ಆದರ್ಶವನ್ನು ಹೇಗೆ ಸಾಕ್ಷಾತ್ಕರಿಸಿಕೊಳ್ಳಬಲ್ಲುದು? ರಾಜಕೀಯ ಅಧಿಕಾರದ ಪರಿಣಾಮಕಾರಿ ಉಪಯೋಗ ಈ ದಿಶೆಯಲ್ಲಿ ಒಂದು ಶಕ್ತಿಯುತವಾದ ಸಾಧನವಾಗತ್ತದೆ. ಅವರಿಗೆ ಇರುವ ರಾಜಕೀಯ ಅಧಿಕಾರವನ್ನು ಅವರು ಏಕೆ ವಶ ಮಾಡಿಕೊಳ್ಳಬಾರದು. ಕಾರ್ಮಿಕಸಂಘಗಳು ರಾಜಕೀಯವನ್ನು ತಿರಸ್ಕಾರ ಮಾಡಬೇಕು ಎನ್ನುವುದರ ಅರ್ಥ, ಕಾರ್ಮಿಕರು ಅವರ ವೈಯಕ್ತಿಕ ನೆಲೆಯಲ್ಲಿ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದು ಎಂದು ಅರ್ಥವಲ್ಲ. ಅವರಲ್ಲಿ ಅನೇಕರು ರಾಜಕೀಯ ಸಭೆಗಳಿಗೆ ಹೋಗುತ್ತಾರೆ, ಯಾರಾದರೂ ಒಬ್ಬ ಚುನಾವಣಾ ಅಭ್ಯರ್ಥಿಗೆ ಮತ ಹಾಕುತ್ತಾರೆ, ಯಾವುದಾದರೊಂದು ರಾಜಕೀಯ ಪಕ್ಷಕ್ಕೆ ಆಗಿಂದಾಗ್ಗೆ ಸೇರುತ್ತಿರುತ್ತಾರೆ. ಕಾರ್ಮಿಕ ಸಂಘಕ್ಕೆ 'ರಾಜಕೀಯ ಬೇಡ' ಎನ್ನುವುದರ ಅರ್ಥ ಸಂಘದ ಸದಸ್ಯರಿಗೂ ರಾಜಕೀಯ ಬೇಡ ಎಂದೇನೂ ಅಲ್ಲ. 'ರಾಜಕೀಯ ಬೇಡ' ಎನ್ನುವ ಸೂತ್ರ ಪದವ್ಯವಸ್ಥಿತ ಸ್ವರೂಪದ ರಾಜಕೀಯಕ್ಕೆ ಮಾತ್ರ ಅನ್ವಯಿಸುತ್ತದೆ. ಇಂಥ ಸಂದರ್ಭದಲ್ಲಿ ಪ್ರತಿಯೊಬ್ಬ ವೈಯುಕ್ತಿಕ ಕಾರ್ಮಿಕ ತಾನು ಖಾಸಗಿಯಾಗಿ ರಾಜಕೀಯದಲ್ಲಿ ತನಗಿಷ್ಟ ಬಂದ ಪಕ್ಷಕ್ಕೆ ತನಗಿಷ್ಟ ಬಂದಷ್ಟು, ತೊಡಗಿಕೊಳ್ಳಬಹುದು. ಆದರೆ ತನ್ನ ಸಹೋದ್ಯೋಗಿಗಳೊಂದಿಗೆ ಸಂಘಟಿತನಾದ

ಮರುಕ್ಷಣವೇ ಅವನು ರಾಜಕೀಯದಿಂದ ಹೊರಗೆ ಬರಬೇಕು. ಸ್ವಾಭಾವಿಕವಾಗಿ ಒಬ್ಬ ಕಾರ್ಮಿಕ ತನ್ನನ್ನು ತಾನೇ ಅಣುವಾಗಿಸಿಕೊಂಡು, ತನ್ನ ವರ್ಗದವರ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕೆ ಈ ಪ್ರಮುಖ ಅಸ್ತ್ರವಾದ ಸಂಘಟನೆಯನ್ನು ಉಪಯೋಗಿಸುವುದಕ್ಕೆ ನಿರಾಕರಿಸಿದರೆ, ಅವನು ಬಂಡವಾಳಶಾಹಿ ಪಕ್ಷದ ಸಂಘಟಿತ ಬಿರುಸಿಗೆ ಬಲಿಯಾಗುತ್ತಾನೆ. ನಿಮಗೆ ಪ್ರಾಯಶಃ ಗೊತ್ತಿರುವ ಹಾಗೆ, ಕಾರ್ಮಿಕರ ಪರವಾಗಿ ಮಾತನಾಡುವುದಕ್ಕೆ ಹಕ್ಕು ಇದೆಯೆಂದು ಕ್ಲೇಮು ಮಾಡುವ ಆ ಎರಡು ಪ್ರತಿಸ್ಪರ್ಧಿ ನಿಕಾಯಗಳು, ಅಂದರೆ 'ಕಾರ್ಮಿಕ ಸಂಘದ ಕಾಂಗ್ರೆಸ್' ಮತ್ತು 'ಕಾರ್ಮಿಕ ಸಂಘದ ಫೆಡರೇಷನ್' ಒಂದೇ ನಿಕಾಯವಾಗಿ ವಿಲೀನ ಆಗುವುದಕ್ಕೆ ತೀರ್ಮಾನಿಸಿವೆ. ಕಾರ್ಮಿಕ ಸಂಘದ ಫೆಡರೇಷನ್ನಿನ ಅಂಗರಚನೆಯನ್ನು ಕಾರ್ಮಿಕ ಸಂಘದ ಕಾಂಗ್ರೆಸ್ ಅಳವಡಿಸಿಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದು, ಫೆಡರೇಷನ್ ತನ್ನ ಹೆಸರನ್ನು ಕೈಬಿಡಲು ಒಪ್ಪಿಕೊಂಡಿದೆ. ನನಗೆ ಗೊತ್ತಾಗಿರುವ ಹಾಗೆ, ಈ ಒಗ್ಗೂಡುವಿಕೆಯ ನಿಬಂಧನೆಗಳಲ್ಲಿ ಒಂದು, ಈ ಸಂಘಟನೆ ಶುದ್ಧಾಂಗವಾಗಿ ಕಾರ್ಮಿಕ ಸಂಘಟನೆಯಾಗಿರುತ್ತದೆ. ರಾಜಕೀಯವನ್ನು ಇಟ್ಟುಕೊಳ್ಳುವುದಿಲ್ಲ. ಇದನ್ನು ನಾನು ವಿಚಾರಿಸಿದಾಗ ಈ ಮಹನೀಯರಿಗೆ ತಾವು ಏನು ಹೇಳಿದ್ದೇವೆ ಎಂಬುದು ನಿಜವಾಗಿ ಅರ್ಥವಾಗಿದೆಯೇ ಎಂದು ಸೋಜಿಗಪಟ್ಟ ಕಾರ್ಮಿಕರು ಅತೀವ ಅನ್ಯಾಯಕ್ಕೆ ಬಲಿಯಾಗಿ ನರಳುತ್ತಿರುವುದು. ನನಗೆ ಬಹಳ ದುಃಖವಾಗಿದೆ; ಅವರಿಗೆ ಇರುವ ರಾಜಕೀಯ ಅಧಿಕಾರವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಸಡ್ಡೆ ಆಗಿರುವುದೇ ಇದಕ್ಕೆ ಕಾರಣವಾಗಿದೆ. ಒಗ್ಗಟ್ಟಾಗಿ ರಾಜಕೀಯ ಕ್ರಮವನ್ನು ತೆಗೆದುಕೊಳ್ಳುವುದಕ್ಕಲ್ಲದೆ, ಈ ಕಾರ್ಮಿಕ ಸಂಘದ ಒಗ್ಗಟ್ಟು ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಯಾವ ಅಂಶದ ಮೇಲೆ ಭಿನ್ನಾಭಿಪ್ರಾಯವಿದೆಯೋ, ಅದು ತೀರಾ ಸಣ್ಣದಾಗಿದ್ದು, ಇತರ ಮುಖ್ಯವಾದ ಮತ್ತು ಪ್ರಸ್ತುತವಾದ ಅಂಶಗಳನ್ನು ಅದು ಬಾಧಿಸುವುದಿಲ್ಲ ಎಂದರೆ, ಭಿನ್ನಾಭಿಪ್ರಾಯಕ್ಕೆ ಸಹಮತವಿದೆ ಎನ್ನುವ ಪದಗಳಲ್ಲಿ ಸ್ವಲ್ಪವಾದರೂ ಅರ್ಥವಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಜನಗಳ ಭಿನ್ನಾಭಿಪ್ರಾಯ ಬಹಳ ದೊಡ್ಡದಾಗಿದ್ದು, ಸಹಮತವಿರುವ ಅಂಶಗಳು ತೀರಾ ಚಿಕ್ಕದಾಗಿದ್ದು, ಅದರ ಪರಿಣಾಮ ಗಹನವಾದದ್ದೇನೂ ಅಲ್ಲವಾಗಿದ್ದರೆ, ಆಗ ಆ ಒಗ್ಗಟ್ಟಿಗೆ ಅರ್ಥವೇನೂ ಇಲ್ಲ. ಇತರ ಜನಗಳ ಅಭಿಪ್ರಾಯವೇನೇ ಇರಲಿ, ವ್ಯವಸ್ಥೆಗೊಂಡ ಕಾರ್ಮಿಕರು ರಾಜಕೀಯವನ್ನೇ ತ್ಯಜಿಸಬೇಕೆಂಬ ವ್ರತತೊಟ್ಟರೆ, ಅವರ ಶ್ರಮವೆಲ್ಲಾ ನಿರರ್ಥಕ. ಏನೇ ಆಗಲಿ ನಾವು ಅರ್ಥ ಮಾಡಿಕೊಳ್ಳಬೇಕಾದದು ಏನೆಂದರೆ, ಇಲ್ಲಿಯವರೆಗೆ ನಮ್ಮ ಶ್ರಮವೆಲ್ಲಾ ಸಾಮಾಜಿಕ ಸುಧಾರಣೆಯ ಒಂದೇ ಹರಿವಿನಲ್ಲಿ ಸಾಗುತ್ತಿದ್ದು ನಾವು ಆರ್ಥಿಕ ಸುಧಾರಣೆಯ ಹರಿವಿನತ್ತಲೂ ನಮ್ಮ ಪರಿಶ್ರಮ, ಗಮನವನ್ನು ಹರಿಸಬೇಕಾಗಿತ್ತೆಂಬುದನ್ನು ನಾವು ಮರೆತಿದ್ದೇವೆ. ಇಲ್ಲವೇ ಭಾಗಶಃ ನೆನಪಿಗೆ ತಂದು ಕೊಂಡಿದ್ದೇವೆ. ನಾವು ನರಳುತ್ತಿರುವ ಎಲ್ಲಾ ಕೆಡುಕುಗಳ ಕೆಳಗೆ ಒಂದು ಸಾಮಾನ್ಯ ಮೂಲ ಇದೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಅದೆಂದರೆ ಕಾರ್ಮಿಕ ವರ್ಗಕ್ಕೆ ನ್ಯಾಯವಾಗಿ ಸಲ್ಲಬೇಕಾದ ಶಕ್ತಿಯನ್ನು, ನಮ್ಮ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಮೇಲುಗೈ ಪಡೆದುಕೊಂಡಿರುವವರು ತಮ್ಮಲ್ಲೇ ಇಟ್ಟುಕೊಂಡು ಬಿಟ್ಟಿದ್ದಾರೆ ಎಂದು.

ರಾಜಕೀಯ ಪ್ರವೇಶ ಮಾಡುವುದು ಎಂದರೆ ಒಂದು ಪಕ್ಷವನ್ನು ಕಟ್ಟುವುದು. ಪಕ್ಷವಿಲ್ಲದೆ ರಾಜಕೀಯ ಮಾಡುವುದು ನಿರರ್ಥಕ. ಅನೇಕ ರಾಜಕೀಯ ವ್ಯಕ್ತಿಗಳು ಸ್ವತಂತ್ರವಾಗಿರುವುದನ್ನು ಇಷ್ಟಪಡುತ್ತಾರೆ. ಏಕಾಂಗಿಯಾಗಿ ಉಳುಮೆಯನ್ನು ಮಾಡಲಿಚ್ಛಿಸುತ್ತಾರೆ. ಸ್ವತಂತ್ರವಾಗಿ ಇರಬಯಸುವ ರಾಜಕೀಯ ವ್ಯಕ್ತಿಯ ಮೇಲೆ ನನಗೆ ಯಾವಾಗಲೂ ಅನುಮಾನ. ಯಾರೊಂದಿಗೂ ಬೆರೆಯದೆ ಸ್ವತಂತ್ರವಾಗಿ ಇರಬಯಸುವವನು ಪ್ರಾಯೋಗಿಕವಾಗಿ ಅವನಿಂದ ಯಾವ ಉದ್ದೇಶ ಸಾಧನೆಯೂ ಅಗುವುದಿಲ್ಲ. ಅವನು ಏನನ್ನೂ ಮಾಡಲಾರ. ನೇಗಿಲಿನ ಒಂದೇ ಗೆರೆಯಿಂದ ಒಂದೇ ಒಂದು ಹುಲ್ಲುಕಡ್ಡಿಯನ್ನು ಬೆಳೆಯಲಾರ. ಆದರೆ ಅನೇಕ

ರಾಜಕೀಯ ವ್ಯಕ್ತಿಗಳು ಅವರ ಬೌದ್ಧಿಕ ಪ್ರಾಮಾಣಿಕತೆಯಿಂದಾಗಿ ಸ್ವತಂತ್ರರಾಗಿರಲು ಬಯಸುವುದಿಲ್ಲ. ಹರಾಜಿನಲ್ಲಿ ಹೆಚ್ಚು ಕೂಗುವವನಿಗೆ ತಮ್ಮನ್ನು ತಾವು ಮರಿಕೊಳ್ಳುವುದಕ್ಕಾಗಿ ಸ್ವತಂತ್ರವಾಗಿರಲು ಬಯಸುತ್ತಾರೆ. ಪಕ್ಷವೊಂದರ ಶಿಸ್ತಿನ ಸಂಕೋಲೆಗಳಿಂದ ಮುಕ್ತವಾಗಿರಲು ಬಯಸುತ್ತಾರೆ. ಏನೇ ಆದರೂ, ರಾಜಕೀಯದಲ್ಲಿ ಸ್ವತಂತ್ರವಾಗಿರಬಯಸುವ ಅನೇಕ ಮಂದಿ ರಾಜಕೀಯ ವ್ಯಕ್ತಿಗಳೊಂದಿಗಿನ ಇಂಥ ಅನುಭವ ನನಗಿದೆ. ಪಕ್ಷವೊಂದಿಲ್ಲದೆ ನಿಜವಾಗಿ ಪರಿಣಾಮಕಾರಿಯಾಗಿರುವ ರಾಜಕೀಯ ಇರಲು ಸಾಧ್ಯವೇ ಇಲ್ಲ.

ಪ್ರಶ್ನೆಯೆಂದರೆ, ನೀವು ಯಾವ ರಾಜಕೀಯ ಪಕ್ಷವನ್ನು ಸೇರಬೇಕು ಎಂದು. ಕಾಂಗ್ರೆಸ್ ಪಕ್ಷ ಇದೆ.

ನೀವು ಕಾಂಗೆಸ್ ಸೇರಬೇಕೆ? ಕಾರ್ಮಿಕರಿಗೆ ಅದು ಸಹಾಯಕವಾಗುತ್ತದೆಯೇ? ಕಾಂಗ್ರೆಸ್‌ನಿಂದ ಹೊರತಾದ ಒಂದು ಪ್ರತ್ಯೇಕವಾದ ರಾಜಕೀಯ ಪಕ್ಷವನ್ನು ಕಾರ್ಮಿಕರು ಸೇರಬೇಕೆಂದು ನಾನು ಹಿಂದೆಮುಂದೆ ನೋಡದೆ ಹೇಳುತ್ತೇನೆ. ಕಾರ್ಮಿಕ ಮುಖಂಡರಲ್ಲಿ ಕೆಲವು ಮಂದಿ ನನ್ನ ಅಭಿಪ್ರಾಯವನ್ನು ವಿರೋಧಿಸುತ್ತಾರೆ ಎಂದು ನನಗೆ ಗೊತ್ತಿದೆ. ಕಾಂಗೆಸ್‌ನಲ್ಲಿನ ಸಮಾಜವಾದಿಗಳಿರುವ ಒಂದು ಗುಂಪಿಗೆ ಕಾರ್ಮಿಕರು ಸಮಾಜವಾದವನ್ನು ಬೆಳೆಸುವುದಕ್ಕೋಸ್ಕರ ಸಂಘಟಿತರಾಗಬೇಕೆಂದೂ, ಆದರೆ ಆ ಸಂಘಟನೆ ಕಾಂಗ್ರೆಸ್‌ನ ಕಕ್ಷೆಯಲ್ಲಿರಬೇಕೆಂದು ಬಯಸಿದರು. ಇನ್ನೂ ಒಂದು ಗುಂಪು ಇದೆ. ಅವರನ್ನು ಅವರು ಕಮ್ಯುನಿಸ್ಟ್ ಎಂದು ಕರೆದುಕೊಳ್ಳುತ್ತಾರೆ. ರಾಯ್ ಎನ್ನುವವರು ಅವುಗಳನ್ನು ಪ್ರತಿನಿಧಿಸುತ್ತಾರೆ. ಕಾರ್ಮಿಕರೇ ಆಗಲೀ ಭಾರತದಲ್ಲಿನ ಇತರ ಯವುದೇ ವರ್ಗವಾಗಲೀ, ಒಂದು ಪ್ರತ್ಯೇಕ ಸಂಘಟನೆಯಾಗುವುದಕ್ಕೆ ಅವರು ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುತ್ತಾರೆ; ಅದು ಕಾಂಗ್ರೆಸ್‌ನ ಒಳಗೇ ಆಗಲೀ ಅಥವಾ ಹೊರಗೇ ಅಗಲೀ, ಎರಡೂ ಗುಂಪಿನವರೊಂದಿಗೆ ನನ್ನ ಸಹಮತವಿಲ್ಲ. ನನಗೆ ಹೇಗೋ, ಇತರರಿಗೂ ರಾಯ್ ಅವರು ಒಂದು ಒಗಟು. ಒಬ್ಬ ಕಮ್ಯುನಿಸ್ಟ್ ಅದರಲ್ಲೂ ಕಾರ್ಮಿಕರು ರಾಜಕೀಯದಲ್ಲಿ ಪ್ರತ್ಯೇಕವಾಗಿ ಸಂಘಟಿತರಾಗುವುದಕ್ಕೆ ವಿರೋಧಿಸುವವರು! ದಿಗಿಲು ಹುಟ್ಟಿಸುವ, ಒಂದಕ್ಕೊಂದು ವಿರೋಧವಾದ ಹೇಳಿಕೆಗಳು. ಇದು ಎಂಥ ಅಭಿಪ್ರಾಯವೆಂದರೆ ಲೆನಿನ್ ತನ್ನ ಗೋರಿಯಲ್ಲೆ ಹೊರಳಾಡುವಂಥಾದ್ದು. ಇಂಥದೊಂದು ವಿಚಿತ್ರವಾದ ಹೇಳಿಕೆಯನ್ನು ಸಮನ್ವಯಗೊಳಿಸುವಂಥ ಒಂದೇ ಸಮರ್ಥನೆಯೆಂದರೆ ಮಿ:ರಾಯ್ ಅವರು ಸಾಮ್ರಾಜ್ಯಶಾಹಿಯನ್ನು ನಾಶಪಡಿಸುವುದು ಭಾರತದ ರಾಜಕೀಯದ ಮೊಟ್ಟಮೊದಲನೆಯ ಗುರಿ ಎಂದು ತಿಳಿದಿದ್ದಾರೆ. ರಾಯ್ ಅವರು ಪ್ರಸಾರ ಮಾಡುತ್ತಿರುವ ಅಭಿಪ್ರಾಯವನ್ನು ಬೇರೆ ಇನ್ನಾವುದೇ ರೀತಿಯಲ್ಲಿ ಅರ್ಥೈಸಿಕೊಳ್ಳಲಾಗುವುದಿಲ್ಲ. ಬಂಡವಾಳಶಾಹಿಯ ಎಲ್ಲಾ ಕುರುಹುಗಳು ಸಾಮ್ರಾಜ್ಯಶಾಹಿ ಅದೃಶ್ಯವಾಗುವುದರೊಂದಿಗೆ ಭಾರತದಲ್ಲಿ ಮಾಯವಾಗುತ್ತದೆ ಎಂಬ ಅಭಿಪ್ರಾಯ ಸರಿಯಾಗಿದೆ ಎಂದು ಹೇಳಬಹುದು. ಆದರೆ ಬ್ರಿಟೀಷರು ಭಾರತದಿಂದ ಹೊರಟುಹೋದರೂ, ಜಮೀನ್ದಾರರುಗಳು ಗಿರಣಿ ಮಾಲೀಕರುಗಳು ಹಣ ಸಾಲ ಕೊಡುವವರು ಭಾರತದಲ್ಲೇ ಉಳಿದುಕೊಳ್ಳುತ್ತಾರೆ ಮತ್ತು ಜನಗಳ ರಕ್ತ ಹೀರುವುದನ್ನು ಮುಂದುವರೆಸುತ್ತಾರೆ; ಸಾಮ್ರಾಜ್ಯಶಾಹಿ ಹೋದರೂ ಕೂಡ ಕಾರ್ಮಿಕರು ಈ ಹಿತಾಸಕ್ತಿಗಳ ವಿರುದ್ಧವೂ ಹೋರಾಡಲೇಬೇಕು. ಇದು ಹೀಗಿರಬೇಕಾದರೆ, ಕಾರ್ಮಿಕರು ಈಗಿನಿಂದಲೇ ಏಕೆ ಸಂಘಟಿತರಾಗಬಾರದು! ತಮ್ಮ ಸಂಘವನ್ನು ಅಭಿವೃದ್ಧಿಪಡಿಸುವುದಕ್ಕೆ ಏಕೆ ಕಾಯಬೇಕು? ನನಗೆ ಯಾವ ಉತ್ತರವೂ ಕಾಣಸಿಗುತ್ತಿಲ್ಲ. ಕಾರ್ಮಿಕರು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುವಷ್ಟೇ, ಬಂಡವಾಳಶಾಹಿಯ ವಿರುದ್ಧವೂ ಹೋರಾಡಬೇಕೆಂದು ಕಾಂಗ್ರೆಸ್ ಸಮಾಜವಾದಿಗಳು ಅರ್ಥ ಮಾಡಿಕೊಂಡಿರುವುದು ವೇದ್ಯವಾಗಿದೆ. ಆದರೆ ಯಾವುದೇ ಕಾರ್ಮಿಕ ಸಂಘಟನೆ ಕಾಂಗ್ರೆಸ್‌ನ ಒಳಗೇ ಇರಬೇಕೆಂದು ಅವರು ಉಪಬಂಧವನ್ನು ಸೇರಿಸಿದ್ದಾರೆ. ಕಾಂಗ್ರೆಸ್ ಮತ್ತು ಕಾಂಗ್ರೆಸ್ ನಡುವಿನ ಈ ಕಡ್ಡಾಯದ ಮಿಲನದ ನೈತಿಕತೆ ಅಥವಾ

ಅವಶ್ಯಕತೆ ನನಗೆ ಅರ್ಥವಾಗುತ್ತಿಲ್ಲ. ಕಾಂಗ್ರೆಸ್ ಸಮಾಜವಾದಿಗಳ ಗುರಿ ಸಮಾಜವಾದವನ್ನು ತರುವುದು ಎಂದು ಅವರು ಹೇಳಿಕೊಳ್ಳುತ್ತಾರೆ. ಕಾಂಗ್ರೆಸ್‌ನಲ್ಲಿರುವ ಬಲಪಂಥೀಯರನ್ನು ಮನವೊಲಿಸಿ ಇದನ್ನು ತರಬಹುದೆಂದು ಹೇಗೆ ಆಶಿಸುತ್ತಾರೋ? ಕಾಂಗ್ರೆಸ್‌ನಿಂದ ಹೊರಗಡೆ ಹೋಗದಿರುವುದಕ್ಕೆ ಅವರು ಕೊಡುವ ವಿವರಣೆ ಇದು. ಮಾನವ ಸ್ವಭಾವದ ಬಗ್ಗೆ ಸಂಪೂರ್ಣ ಅಜ್ಞಾನ ಇರುವ ಇದಕ್ಕಿಂತ ಹೆಚ್ಚಿನ ಕರುಣಾಜನಕ ಸ್ಥಿತಿಯನ್ನು ಊಹಿಸಿಕೊಳ್ಳಲೂ ಆಗುವುದಿಲ್ಲ. ಅವರ ಗುರಿ ಸಮಾಜವಾದವನ್ನು ತರುವುದೇ ಆಗಿದ್ದರೆ, ಅದನ್ನು ಜನಸಮೂಹದಲ್ಲಿ ಪ್ರಚಾರ ಮಾಡಿ ಆ ಉದ್ದೇಶಕ್ಕೋಸ್ಕರ ಅವರನ್ನು ಸಂಘಟಿಸಬೇಕು. ವರ್ಗಗಳನ್ನು ಪುಸಲಾಯಿಸುವುದರಿಂದ ಸಮಾಜವಾದ ಬರುವುದಿಲ್ಲ. ಬಲಪಂಥೀಯ ಕಾಂಗ್ರೆಸ್ಸಿಗರು ಸಮಾಜವಾದದ ಒಂದು ಸಣ್ಣ ಗುಟುಕು. ಅದಕ್ಕಿಂತ ಹೆಚ್ಚಿನದನ್ನು ಸಹಿಸುವುದಿಲ್ಲ ಎಂಬುದು ವಾಸ್ತವ. ಇದು ದಿನೇ ದಿನೇ ಸ್ಪಷ್ಟವಾಗುತ್ತಲಿದೆ. ಸಮಾಜವಾದದ ಪರವಾಗಿ ಹೋದ ವರ್ಷ ಪಂಡಿತ್ ನೆಹರು ಅವರು ಒಂದು ಸುಂಟರಗಾಳಿ ಪ್ರಚಾರವನ್ನು ಪ್ರಾರಂಭಿಸಿದರು. ಆ ಬಡಪಾಯಿಯನ್ನು ಕೂಡಲೇ ಶಿಸ್ತಿನ ಕ್ರಮಕ್ಕೊಳಪಡಿಸಿ, ತುಂಟ ಹುಡುಗನಿಗೆ ಮಾಡುವ ಹಾಗೆ ಅವನನ್ನು ಅವನ ಕೊಠಡಿಗೆ ಕಳುಹಿಸಿ, ಬ್ರೆಡ್ ಮತ್ತು ನೀರನ್ನು ಸೇವಿಸುವಂತೆ ಮಾಡಲಾಯಿತು; ಸರಿಯಾಗಿ ನಡೆದುಕೊಳ್ಳುತ್ತೇನೆಂದು ಒಪ್ಪಿಕೊಂಡ ಮೇಲೆ ಅವನನ್ನು ಮೆಟ್ಟಲಿನಿಂದ ಕೆಳಗೆ ಇಳಿಸಿ ಕರೆತರಲಾಯಿತು. ಪಂಡಿತರು ಈಗ ಸಂಪೂರ್ಣವಾಗಿ ಮೊದಲಿನ ಅಭಿಪ್ರಾಯವನ್ನು ತ್ಯಜಿಸಿಬಿಟ್ಟಿದ್ದಾರೆ. ಈಗ ಬಹಳಷ್ಟು ಮಟ್ಟಿಗೆ ಪಳಗಿಸಲ್ಪಟ್ಟು ಮೊದಲು ತಾವು ಅಲ್ಲಾಡಿಸುತ್ತಿದ್ದ ಕೆಂಪು ಬಾವುಟಕ್ಕೆ ಈ ಆಕ್ಷೇಪವೆತ್ತುತ್ತಿದ್ದಾರೆ. ಆ ಕೆಂಪು ಬಾವುಟ ಬಲಪಂಥೀಯ ಕಾಂಗ್ರೆಸ್‌ಗೆ ಒಂದು ಶಾಪವಾಗಿತ್ತು. ಬಿಹಾರದಲ್ಲಿ ಬಲಸಂಥೀಯ ಕಾಂಗ್ರೆಸ್ಸಿಗರು ತಮ್ಮ ದಂತ ಪ್ರದರ್ಶನ ಮಾಡಿದ್ದಾರೆ. ಕಿಸಾನ್ ಮುಖಂಡರಾದ ಸ್ವಾಮಿ ಸಹಜಾನಂದ ಅವರು ಕಾಂಗ್ರೆಸ್ ಅನ್ನು ಬಿಟ್ಟಿದ್ದಾರೆ. ಅವರ ಸಹೋದ್ಯೋಗಿ ಜಯಪ್ರಕಾಶ್ ನಾರಾಯಣ್ ಅವರು ಬಿಡುವುದರಲ್ಲಿ ಇದ್ದಾರೆ. ನನಗೆ ಗೊತ್ತಾದಂತೆ, ಬೊಂಬಾಯಿನಲ್ಲಿ ನಡೆಸಲ್ಪಟ್ಟ ಕಳೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಬಲಪಂಥೀಯ ಕಾಂಗ್ರೆಸ್ಸಿಗರು, ಕಾಂಗ್ರೆಸ್ ಸಮಾಜವಾದಿಗಳನ್ನು ಕಾಂಗ್ರೆಸ್ ವೇದಿಕೆಯಿಂದ ಸಮಾಜವಾದವನ್ನು ಪ್ರಚಾರ ಮಾಡಿದ್ದಕ್ಕಾಗಿ ಅಶಿಸ್ತಿನಿಂದ ವರ್ತಿಸಿದ್ದಾರೆಂದು ಆಪಾದನೆ ಮಾಡಿ ಅವರಿಗೆ ಎಚ್ಚರಿಕೆ ಕೊಟ್ಟು ಸುಮ್ಮನಾಗಿದ್ದಾರೆ. (ಮೊದಲನೆ ಅಪರಾಧಕ್ಕೆ ಅಪರಾಧ ಪ್ರಕ್ರಿಯಾ ಸಂಹಿತೆಯ ಕೆಳಗೆ ಅಪರಾಧ ಮಾಡಿದವರಿಗೆ ಎಚ್ಚರಿಕೆ ಕೊಟ್ಟು ಬಿಟ್ಟುಬಿಡುವ ಹಾಗೆ) ಕಾಂಗ್ರೆಸ್ ಸೋಷಿಯಲಿಸ್ಟರ ನಿರರ್ಥಕ ರಾಜಕೀಯ ಪರಿ ಇದು.

ಸಾಮ್ರಾಜ್ಯಶಾಹಿಗೆ ತನ್ನ ಪ್ರತಿಕ್ರಿಯೆಯಿಂದಾಗಿ ಭಾರತದ ರಾಜಕೀಯ ಸುರುವಿಕೊಂಡಿದೆ. ತಮ್ಮ ನಿಜವಾದ ಪಟ್ಟಭದ್ರ ಹಿತಾಸಕ್ತಿಗಳನ್ನು ಕಾರ್ಮಿಕರು ಮರೆಯುವ ಹಾಗೆ ಮಾಡಲಾಗಿದೆ. ರಾಜಭಕ್ತರು ಮತ್ತು ಕಾಂಗ್ರೆಸ್ ಇಬ್ಬರೂ, ಆಲೋಚನೆಯ ಗೊಂದಲದಿಂದಾಗಿ ಕೊಚ್ಚೆ ಕೆಸರನ್ನು ತುಳಿದಾಡುತ್ತಿದ್ದಾರೆ. ಇಬ್ಬರಿಗೂ ಒಬ್ಬನೇ ವೈರಿಯೆಂದು ಸಾಮ್ರಾಜ್ಯ ಶಾಹಿಯೊಂದಿಗೆ ವ್ಯವಹರಿಸಬೇಕಾಗಿದ್ದರೆ ಎಲ್ಲಾ ವರ್ಗಗಳೂ ತಮ್ಮ ಮ್ರಾಜ್ಯ ಸ್ವಂತ ಹಿತಾಸಕ್ತಿಯನ್ನು ಮರೆತು ಒಂದೇ ಸಂಘಟನೆಯಲ್ಲಿ ಸೇರಿಕೊಳ್ಳಬೇಕೆಂದೇನೂ ಇಲ್ಲ. ಬೇರೆ ಬೇರೆ ವರ್ಗಗಳ ಸಂಘಟನೆಗಳು ಒಂದೇ ಮುಂಚೂಣಿಯಲ್ಲಿ ಸೆಣಸಬಹುದು. ಈ ಉದ್ದೇಶಕ್ಕೋಸ್ಕರ ಎಲ್ಲಾ ಸಂಘಟನೆಗಳನ್ನು ಮುಚ್ಚಬೇಕಾಗಿಲ್ಲ. ವಿಲೀನ ಮಾಡುವ ಅವಶ್ಯಕತೆಯಿಲ್ಲ ಒಂದೇ ಮುಂಚೂಣಿಯಲ್ಲಿ ಬೇಕಾದಷ್ಟು ಕೆಲಸ ಮಾಡಬಹುದು. ಬಲಪಂಥೀಯ ಕಾಂಗ್ರೆಸ್‌ನವರು ಸಾಮ್ರಾಜ್ಯಶಾಹಿಯನ್ನು ಒಂದು ನೆಪವನ್ನಾಗಿಟ್ಟುಕೊಂಡು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಕಾರ್ಮಿಕ ಸಂಘಟನೆಗಳನ್ನು ತಡೆಯಲು ಉಪಯೋಗಿಸಿಕೊಳುತ್ತಿದ್ದಾರೆಂದು ಅನೇಕರಿಗೆ ಅರ್ಥವಾಗಿಲ್ಲ. ಈ ತಪ್ಪುಮಾಡದಂತೆ ನಾನು ನಿಮ್ಮನ್ನು

ಎಚ್ಚರಿಸುತ್ತಿದ್ದೇನೆ. ರಾಜಕೀಯ ವರ್ಗ ಪ್ರಜ್ಞೆಯ ಮೇಲೆ ಆಧಾರ ಪಟ್ಟಿರಬೇಕು. ವರ್ಗ ಪ್ರಜ್ಞೆ ಇಲ್ಲದ ರಾಜಕೀಯ ಆಶಾಢಭೂತಿತನವಾಗುತ್ತದೆ.

ಆದುದರಿಂದ ನೀವು ವರ್ಗ ಹಿತಾಸಕ್ತಿ ಮತ್ತು ವರ್ಗಪ್ರಜ್ಞೆಯ ಮೇಲೆ ಆಧಾರ ಹೊಂದಿರುವ ರಾಜಕೀಯ ಪಕ್ಷವನ್ನು ಸೇರಬೇಕು. ಈ ಪರೀಕ್ಷೆಯನ್ನು ಅನ್ವಯಮಾಡಿ ನೋಡಿದರೆ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಬಿಟ್ಟರೆ ನನಗೆ ಇನ್ನು ಯಾವುದೇ ಪಕ್ಷ ಕಂಡು ಬರುತ್ತಿಲ್ಲ; ನಿಮ್ಮ ಹಿತಾಸಕ್ತಿಗೆ ಧಕ್ಕೆ ಬಾರದ ಹಾಗೆ ಈ ಪಕ್ಷಕ್ಕೆ ನೀವು ಸೇರಬಹುದಾಗಿದೆ. ಸ್ಪಷ್ಟವಾದ ಕಾರ್ಯಕ್ರಮವಿರುವ ಪಕ್ಷವೆಂದರೆ ಇದೊಂದೇ. ಇದು ಕಾರ್ಮಿಕರಿಗೆ ಮೊಟ್ಟಮೊದಲ ಸ್ಥಾನವನ್ನು ಕೊಡುತ್ತದೆ. ಇದಕ್ಕೊಂದು ನಿರ್ದಿಷ್ಟವಾದ ಕಾರ್ಯನೀತಿ ಇದ್ದು ತನ್ನ ಕಾರ್ಯಕ್ರಮವನ್ನು ಮುಂದುವರೆಸುವುದಕ್ಕೆ ಸಂವಿಧಾನಾತ್ಮಕ ಉಪಕ್ರಮಗಳನ್ನು ಅನುಸರಿಸುತ್ತದೆ. ಅಲ್ಲದೆ, ನಿರ್ವಾಹವಿಲ್ಲದ ಹೊರತು ಯಾವುದೇ ಅಸಂವೈಧಾನಿಕ ಕ್ರಮಗಳನ್ನು ಉಪಯೋಗಿಸಿಕೊಳ್ಳುವುದಿಲ್ಲ. ಅದು ವರ್ಗ ಸಂಘರ್ಷವನ್ನು ನಿವಾರಿಸುತ್ತದೆ, ಆದರೆ ವರ್ಗಸಂಘಟನೆಯ ನೀತಿಯನ್ನು ಕೈ ಬಿಡುವುದಕ್ಕೆ ತಯಾರಿಲ್ಲ. ಸ್ವತಂತ್ರ ಕಾರ್ಮಿಕ ಪಕ್ಷ ತನ್ನ ಶೈಶವಾವಸ್ತೆಯಲ್ಲಿ ಇದೆಯೆಂಬುದು ನಿಜ. ಅದರ ಕಾರ್ಯಕ್ಷೇತ್ರ ಬೊಂಬಾಯಿ ಪ್ರಾಂತ್ಯಕ್ಕೆ ಸೀಮಿತವಾಗಿದೆ, ಪಕ್ಷ ಎಷ್ಟು ಹಳೆಯದು ಎನ್ನುವುದು ಪ್ರಶ್ನೆಯಲ್ಲ. ಪ್ರಶ್ನೆಯೆಂದರೆ ಅದರ ನೀತಿ ನಿಯಮಗಳೇನು, ಅದರ ಉದ್ದೇಶ ಯಾವುದು ಮತ್ತು ಅದರ ಅಂತಃಸತ್ವಗಳೇನು ಎನ್ನುವುದು ಪ್ರಸ್ತುತವಾಗುತ್ತದೆ. ಸ್ವತಂತ್ರ ಕಾರ್ಮಿಕ ಪಕ್ಷದ ಪ್ರನಾಳಿಕೆಯನ್ನು ಯಾರಾದರೂ ಓದಿದರೆ, ಅದರ ನೀತಿಗಳೇನು ಮತ್ತು ಅದರ ಧ್ಯೇಯವೇನು ಎಂದು ಗೊತ್ತಾಗುತ್ತದೆ. ಆ ಪಕ್ಷಕ್ಕೆ ಮಹತ್ತರವಾದ ಅಂತಃಸ್ಸತ್ವ ಇದೆ ಎನ್ನುವುದು ಸ್ವಯಂವೇದ್ಯ. ಆ ಪಕ್ಷವೇನೂ ಬಾಗಿಲು ಮುಚ್ಚಿದ ಕಾರ್ಪೊರೇಷನ್ ಅಲ್ಲ. ಅದು ಜಾತಿ, ಮತ, ಪಂಥಗಳ ಗೊಡೆವೆಯಿಲ್ಲದೆ ಎಲ್ಲರಿಗೂ ತೆರೆದಿದೆ. ಅದರ ಕಾರ್ಯಕ್ರಮ, ನಿಮ್ನವರ್ಗಗಳ ಕೆಲವು ಅವಶ್ಯಕತೆಗಳಿಗೆ ಒತ್ತುಕೊಟ್ಟಿದ್ದರೂ, ಅದು ಎಲ್ಲಾ ಕಾರ್ಮಿಕ ವರ್ಗಗಳ ಅವಶ್ಯಕತೆಯನ್ನು ಸೇರಿಸಿಕೊಳ್ಳುವಷ್ಟು ವಿಸ್ತಾರವಾಗಿದೆ. ಸ್ವತಂತ್ರ ಕಾರ್ಮಿಕ ಪಕ್ಷದ ಏಳಿಗೆಯ ದಾರಿಯಲ್ಲಿರುವ ಕಷ್ಟಗಳಲ್ಲಿ ಒಂದು– ರಾಜಕೀಯವಲ್ಲ. ಆದರೆ ಅದು ಸಾಮಾಜಿಕ ಕಷ್ಟ. ಅದರ ತಳಹದಿಯಲ್ಲಿ ನಿಮ್ನವರ್ಗಗಳಿರುವುದೊಂದೇ ಅದರ ಬೆಳವಣಿಗೆಗೆ ಮತ್ತು ವಿಕಾಸಕ್ಕೆ ಅಡ್ಡವಾಗಿದೆ. ಹಿಂದೂ ಕಾರ್ಮಿಕರು ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ಸೇರಿಕೊಳ್ಳದೆ ಇರುವುದಕ್ಕೆ ಕಾರಣ, ನಿಮ್ನವರ್ಗಗಳವರೊಂದಿಗೆ ಸವರ್ಣ ಜಾತಿಗಳವರು ಸಹಯೋಗ ಮಾಡಬಾರದೆಂಬ ಸಾಮಾನ್ಯ ಮನೋಭಾವನೆ. ಸ್ವತಂತ್ರ ಕಾರ್ಮಿಕ ಪಕ್ಷ ಬೆಳೆಯುವುದಕ್ಕೆ ವಿರೋಧವಿರುವವರ ಈ ಭಾವನೆಯನ್ನು ಬಳಸಿಕೊಂಡು, ತಿಳುವಳಿಕೆ ಸಾಲದ ಮತ್ತು ಮೂಢನಂಬಿಕೆ ಇರುವವರು ಪಕ್ಷಕ್ಕೆ ಸೇರದ ಹಾಗೆ ತಡೆಯುತ್ತಿದ್ದಾರೆ. ಆದರೆ ಸ್ವತಂತ್ರ ಕಾರ್ಮಿಕ ಪಕ್ಷದ ನೇರವಾದ ಮತ್ತು ಪ್ರಾಮಾಣಿಕವಾದ ರಾಜಕೀಯ ನಡೆಗಳು ಎಲ್ಲಾ ಕಾರ್ಮಿಕ ವರ್ಗಗಳವರನ್ನು ತನ್ನ ತಕ್ಕೆಗೆ ತೆಗೆದುಕೊಳ್ಳುತ್ತದೆ ಎಂಬ ಖಾತರಿ ನನಗೆ ಇದೆ. ಹೀಗಾಗಿ ಇದು ಹಿಂದೂ ಸಾಮಾಜಿಕ ವ್ಯವಸ್ಥೆಯಿಂದ ಹೊರಸೂಸುತ್ತಿರುವ ಯಾವುದೇ ವಿಚ್ಛೇದ್ರಕಾರಿ ಶಕ್ತಿಯನ್ನು ಎದುರಿಸಬಲ್ಲದು. ಈಗಾಗಲೇ ಪಕ್ಷ ಮೂರು ಜಿಲ್ಲೆಗಳಾದ ಥಾನೆ, ಕೊಲಾಬಾ ಮತ್ತು ರತ್ನಗಿರಿಯಲ್ಲಿ ನೆವೆಯೂರಿದ್ದು, ರೈತರುಗಳ ಮತ್ತು ಕಾರ್ಮಿಕರುಗಳ ನಡುವೆ ಒಂದು ಸ್ಥಾನವನ್ನು ಪಡೆದುಕೊಂಡಿದೆ. ಪ್ರಾಂತ್ಯದ ಇತರೆ ಭಾಗಗಳಲ್ಲಿ ಸಹ ಅದು ತಲೆಯೆತ್ತುತ್ತಿದೆ. ಪಕ್ಷ ಮಧ್ಯ ಪ್ರಾಂತ್ಯ ಮತ್ತು ಬೀರಾರ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅಲ್ಲದೆ ಭಾರತದ ಮಿಕ್ಕ ಇತರ ಪ್ರಾಂತ್ಯಗಳಲ್ಲಿ ಸಹ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತದೆ ಎಂದು ನಾನು ಆಶಿಸುತ್ತೇನೆ. ಆದ್ದರಿಂದ ಕಾರ್ಮಿಕ ವರ್ಗಗಳವರ ಬೆಂಬಲವನ್ನು ಸಮರ್ಥಿಸುವ ಒಂದೇ ಪಕ್ಷವೆಂದರೆ ಕಾರ್ಮಿಕ ಪಕ್ಷ.

ಕಾರ್ಮಿಕರ ಸಂಘಟನೆಯಲ್ಲಿ ನಿಮ್ನವರ್ಗಗಳವರು ಭಾರತದಲ್ಲಿನ ಎಲ್ಲಾ ಕಾರ್ಮಿಕ ಸಮುದಾಯಕ್ಕೆ ಒಂದು ಮಹತ್ತರವಾದ ಮುನ್ನಡೆಯನ್ನು ಕೊಡಬಲ್ಲರು. ಇಂಗ್ಲೆಂಡಿನ ಚಾರ್ಟಿಸ್ಟ್ ಚಳುವಳಿಯ ವಿದ್ಯಾರ್ಥಿಯಾದ ಮಿ. ಗ್ಲಾಮೇಜ್ ಅನ್ನುವವರು ಹೀಗೆ ಹೇಳುತ್ತಾರೆ: "ಸಾಮಾಜಿಕ ಉಗಮವಿಲ್ಲದೆ ಜನಗಳ ಒಂದು ಮಹತ್ತರವಾದ ರಾಜಕೀಯ ಚಳುವಳಿ ಯಾವತ್ತಿಗಾದರೂ ಇದ್ದೀತೆ ಎಂದು ಸಂಶಯಪಡಬಹುದು. ಮಾನವ ಜನಾಂಗದ ಮುಖ್ಯ ಪ್ರಾಪಂಚಿಕ ಉದ್ದೇಶವೆಂದರೆ ಸಾಮಾಜಿಕ ಸುಖಾನುಭವದ ಸಾಧನವನ್ನು ಪಡೆದುಕೊಳ್ಳುವುದು. ಇವುಗಳ ಸ್ವಾಧೀನ ಅವರಿಗೆ ಭದ್ರವಾಗಿ ಸಿಕ್ಕಿಬಿಟ್ಟರೆ ರಾಜಕೀಯದ ಅಮೂರ್ತ ಕಲ್ಪನೆಗಳತ್ತ ಅವರು ನಿಗಾ ಕೊಡುವುದು ಅತ್ಯಲ್ಪ. ಗಂಭೀರವಾದ ಸಾಮಾಜಿಕ ಕೆಡಕುಗಳ ಅಸ್ತಿತ್ವ ಮುಖ್ಯವಾಗಿ ರಾಜಕೀಯ ಹಕ್ಕುಗಳ ಮೌಲ್ಯವನ್ನು ಒಂದು ಸಮೂಹಕ್ಕೆ ತಿಳಿಸಿಕೊಡುತ್ತವೆ. ನಿಮ್ಮ ತಪ್ಪುಗಳು ಗಂಭಿರವಾದ್ದು; ನಿಮ್ಮ ದೇಶಗಳು ನಿಜವಾದದ್ದು; ನಿಮ್ಮ ರಾಜಕೀಯವೂ ಅಪ್ಪಟವಾದದ್ದು ಮತ್ತು ನಿಜವಾದದ್ದು. ನೀವು ಇದನ್ನು ಅರಿತುಕೊಂಡರೆ ಚೊಕ್ಕ ರಾಜಕೀಯ ಸಂಘಟನೆಯ ವಿಷಯದಲ್ಲಿ ಭಾರತದ ಎಲ್ಲಾ ಕಾರ್ಮಿಕ ವರ್ಗಕ್ಕೆ ನೀವು ದಾರಿದೀಪವಾಗಬಹುದು. ನೀವು ಇನ್ನೂ ಒಂದು ಸೇವೆಯನ್ನು ಸಲ್ಲಿಸಬಹುದಾಗಿದೆ. ಶಾಸನ ಸಭೆಯಲ್ಲಿ ನಿಮಗೆ ಕಾದಿರಿಸಿದ ಪ್ರಾತಿನಿಧ್ಯ ಇದೆ. ಈ ಕಾದಿರಿಸಿದ ಕೋಟಾದಿಂದ ಎಲ್ಲಾ ಕಾರ್ಮಿಕ ವರ್ಗಕ್ಕೆ ಯಾವರೀತಿಯಲ್ಲಿ ಅನುಕೂಲವಿದೆ ಎಂದು ಕೆಲವು ಕಾರ್ಮಿಕ ಮುಖಂಡರು ಅರಿತುಕೊಂಡಿಲ್ಲವೆಂದು ತೋರುತ್ತದೆ. ಚುನಾವಣೆಗಳೆಂದರೆ ಜೂಜು ಇದ್ದ ಹಾಗೆ. ಯಾವುದೇ ಚುನಾವಣಾ ವ್ಯವಸ್ಥೆ ಯಾವುದೇ ಪಕ್ಷಕ್ಕೆ ಶಾಸನ ಸಭೆಯ ಪ್ರಾತಿನಿಧ್ಯದ ಖಾತರಿಯಾದ ಪರಿಮಾಣವನ್ನು ಕೊಡಲಾರದು. ಹಾಗೆಯೇ ಯಾವುದೇ ಚುನಾವಣಾ ವ್ಯವಸ್ಥೆ ಯಾವುದೇ ಒಂದು ಮತದಾರರ ಸಮೂಹಕ್ಕೆ ಅವರ ಸಂಖ್ಯೆಗೆ ತಕ್ಕಂತೆ ಪ್ರಮಾಣಾನುಸಾರ ಪ್ರಾತಿನಿಧ್ಯವನ್ನು ಕೊಡಲಾರದು. ಇಂಗ್ಲೆಂಡಿನ ಚರಿತ್ರೆಯಲ್ಲಿ ನಮಗೆ ಕಂಡುಬರುವುದು ಏನೆಂದರೆ, ವಿವಿಧ ಪಕ್ಷಗಳಿಗೆ ಚುನಾವಣಾ ಫಲಿತಾಂಶಗಳು ಹೇಗೆ ಆಶ್ಚರ್ಯಕರ ಮತ್ತು ಹಾನಿಕಾರಕವಾಗಿದೆಯೆಂಬುದನ್ನು ತೋರಿಸುತ್ತದೆ. ಅನೇಕ ಬಾರಿ ಅಲ್ಪ ಸಂಖ್ಯಾತರಾದ ಮತದಾರರಿಗೆ ಬಹು ಸಂಖ್ಯೆಯ ಸ್ಥಾನಗಳು ದೊರಕುತ್ತವೆ. ಇಂಥ ಹಾನಿಯನ್ನು ನಮ್ಮಲ್ಲಿನ ಖಾತರಿಪಡಸಿದ ಕೋಟಾ ವ್ಯವಸ್ಥೆಯಲ್ಲಿ ನಿವಾರಿಸಲಾಗಿದೆ. ಇಲ್ಲಿಯವರೆಗೆ ಖಾತರಿಪಡಿಸಿದ ಪ್ರಾತಿನಿಧ್ಯದ ಕೋಟಾ ನಿಮ್ನವರ್ಗಗಳವರಿಗೆ ಮಾತ್ರವಲ್ಲದೆ, ಕಾರ್ಮಿಕ ವರ್ಗಕ್ಕೂ ಅನುಕೂಲಕರವಾಗಿದೆ. ಪ್ರಾತಿನಿಧ್ಯ ಪಡೆದುಕೊಳ್ಳುವ ಖಾತರಿ ಇರುವ ನಿಮ್ನವರ್ಗಗಳವರಿಗೆ ಮಾತ್ರವಲ್ಲದೆ, ಒಟ್ಟಾರೆ ಕಾರ್ಮಿಕ ವರ್ಗಕ್ಕೆ ಅನುಕೂಲಕರವಾಗಿದೆ. ಪ್ರಾತಿನಿಧ್ಯಪಡೆದುಕೊಳ್ಳುವ ಖಾತರಿ ಇರುವ ನಿಮ್ನವರ್ಗಗಳು, ರಾಜಕೀಯ ಸಂಘಟನೆ ಮಾಡುವ ಪ್ರಯತ್ನದಲ್ಲಿರುವ ಕಾರ್ಮಿಕ ವರ್ಗಗಳವರಿಗೆ, ಅವರು ಆಸಕ್ತಿ ತೋರಿಸಿದಲ್ಲಿ ಮಹತ್ತಾದ ಬೆಂಬಲವನ್ನು ಕೊಡಬಲ್ಲದ್ದಾಗಿದೆ, ರಾಜಕೀಯ ಪ್ರಾತಿನಿಧ್ಯ ಪಡೆಯುವಲ್ಲಿ ಕಳೆದ ಚುನಾವಣೆಯಲ್ಲಿ ಈ ಬೆಂಬಲ ಎಷ್ಟು ಮಹತ್ವದ್ದಾಗಿದೆ ಎಂದು ತೋರಿಸಿಕೊಟ್ಟಿದೆ. ಸ್ವತಂತ್ರ ಕಾರ್ಮಿಕ ಪಕ್ಷದ ಟಿಕೆಟ್‌ನಿಂದ ಚುನಾವಣೆಗೆ ಸ್ಪರ್ಧಿಸಿದ ಮೂವರು ಸವರ್ಣೀಯ ಹಿಂದೂಗಳು ಬೊಂಬಾಯಿ ಶಾಸನ ಸಭೆಗೆ ಚುನಾವಣೆ ಆಗುವುದರಲ್ಲಿ ನಿಮ್ನ ವರ್ಗಗಳ ಬೆಂಬಲ ಬಹಳ ಮಹತ್ವದ್ದಾಗಿತ್ತು. ಇವಲ್ಲದೆ, ಸ್ವತಂತ್ರ ಕಾರ್ಮಿಕ ಪಕ್ಷದ ಟಿಕೆಟ್ ಮೇಲೆ ಚುನಾವಣೆಗೆ ಸ್ಪರ್ಧಿಸದ, ಆದರೆ ಆ ಪಕ್ಷದಿಂದ ಅನುಮೋದನೆ ಆದ ಅನೇಕರಿಗೆ ನಿಮ್ನ ವರ್ಗಗಳವರು ಸಹಾಯ ಮಾಡಿದರು. ನಮ್ಮ ಪರಿಶ್ರಮಗಳ ಲಾಭ ಪಡೆಯಲು ಇಷ್ಟವಿರುವವರು ಪಡೆಯಬಹುದು. ಆದರೆ ನಿಮ್ನ ವರ್ಗಗಳವರು ಈ ದೇಶದ ರಾಜಕೀಯದಲ್ಲಿ ಒಂದು ದೊಡ್ಡ ಪಾತ್ರವನ್ನು ವಹಿಸಬಲ್ಲರು ಎಂಬುದು ವಾಸ್ತವದ ಸಂಗತಿ. ಈ ಪಾತ್ರ ತಮಗೂ ಅಲ್ಲದೆ ಎಲ್ಲಾ ಕಾರ್ಮಿಕ ವರ್ಗಕ್ಕೂ ಬಹಳಷ್ಟು

ನೆರವಾಗಬಲ್ಲದು.

ಆದರೆ ಇದೆಲ್ಲಾ ನೀವು ಎಷ್ಟು ಚೆನ್ನಾಗಿ, ಎಷ್ಟು ಬೇಗನೆ ಸಂಘಟಿತರಾಗುತ್ತಿರೆಂಬುದರ ಮೇಲೆ ಅವಲಂಬಿತವಾಗಿದೆ. ನೀವು ಏತಕ್ಕೆ ಸಂಘಟಿತರಾಗಬೇಕು, ಅದರಿಂದ ಏನು ಮಾಡಬಲ್ಲಿರಿ ಎಂದು ನಾನು ನಿಮಗೆ ಹೇಳಿದ್ದೇನೆ. ಈಗ ನಾನು ಮುಕ್ತಾಯ ಮಾಡುತ್ತಾ ಹೇಳುವುದೇನೆಂದರೆ, ನಿಮ್ಮ ಸಂಘಟನೆಯನ್ನು ಪ್ರಾರಂಭಿಸಿ, ಆದರೆ ಅದನ್ನು ಸಾಧಿಸುವವರೆಗೆ ವಿಶ್ರಮಿಸಬೇಡಿ. ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಿ ಎಂದು ಕೇಳಿ ನನಗೆ ನೀವು ತೋರಿದ ಗೌರವಕ್ಕೆ ನಿಮ್ಮನ್ನು ವಂದಿಸುತ್ತೇನೆ. ನಿಮಗೆ ಜಯ ದೊರಕಲಿ ಎಂದು ಆಶಿಸುತ್ತೇನೆ.

## ೪೫

# ನಡತೆ ಮತ್ತು ವಿನೀತ ಭಾವ ಇಲ್ಲದ ವಿದ್ಯಾವಂತ ಮನುಷ್ಯ ಕಾಡುಪ್ರಾಣಿಗಿಂತ ಹೆಚ್ಚು ಅಪಾಯಕಾರಿ

ಬೊಂಬಾಯಿ ಪ್ರಾಂತ್ಯದ ನಿಮ್ನವರ್ಗಗಳ ಯುವ ಸಮ್ಮೇಳನವನ್ನು ೧೨ನೇ ಫೆಬ್ರವರಿ ೧೯೩೮ರಂದು ರಾತ್ರಿ ೮ ಘಂಟೆಗೆ ನಡೆಸಲಾಯಿತು. ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನವನ್ನು ಜಿ.ಐ.ಪಿ. ರೈಲ್ವೆ ನಿಮ್ನ ವರ್ಗದ ಕರ್ಮಚಾರಿಗಳ ಸಮ್ಮೇಳನಕ್ಕೆ ನಿರ್ಮಿಸಲಾಗಿದ್ದ ವಿಶಾಲವಾದ ಪೆಂಡಾಲಿನಲ್ಲಿಯೇ ಏರ್ಪಡಿಸಲಾಗಿತ್ತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಮುರಳೀಧರ್ ಪಗಾರೆ ಅವರ ಸ್ವಾಗತ ಭಾಷಣದ ನಂತರ ಡಾ. ಬಿ.ಆರ್. ಅಂಬೇಡ್ಕರ್ ಅವರು ಭೋಧಪ್ರದವಾದ, ಸ್ಫೂರ್ತಿದಾಯಕವಾದ, ಪುಳಕಿತಗೊಳ್ಳುವ ಭಾಷಣವನ್ನು ಮಾಡಿದರು.

ಅವರು ಹೇಳಿದ್ದು.

ಜೀವನದ ನಿಯಮವೆಂದರೆ, ಒಂದು ಉದಾತ್ತವಾದ ಆದರ್ಶವನ್ನು ಪಾಲಿಸಬೇಕೇಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಲೇಬೇಕು. ಒಬ್ಬನ ಆದರ್ಶ ಏನೇ ಆಗಿರಬಹುದು. ರಾಷ್ಟ್ರೀಯ ಪುರೋಭೀವೃದ್ಧಿ ಅಥವ ತನ್ನದೇ ಅಭಿವೃದ್ಧಿ. ಅದನ್ನು ಸಾಧಿಸಲು ತಾಳ್ಮೆಯಿಂದ ಶ್ರಮವಹಿಸಬೇಕೆಂದರು. ಪ್ರಪಂಚದಲ್ಲಿನ ಎಲ್ಲಾ ಮಹತ್ತರವಾದ ಕೆಲಸಗಳನ್ನು ಸಂಯಮದ ಚಟುವಟಿಕೆ, ತೊಳಲಾಟ, ಸಂಕಷ್ಟ ಹಾಗೂ ವಿಷಮ ಪರೀಕ್ಷೆಯಿಂದ ಸಾಧಿಸಲಾಯಿತು. ಒಬ್ಬ ತನ್ನ ಮನಸ್ಸು ಮತ್ತು ಶಕ್ತಿಯನ್ನು ತನ್ನ ಗುರಿಯತ್ತ ಕೇಂದ್ರೀಕರಿಸಬೇಕು. ಮಾನವ ಬದುಕುವುದಕ್ಕಾಗಿ ತಿನ್ನಬೇಕು. ಸಮಾಜದ ಶ್ರೇಯೋಭಿವೃದ್ಧಿಗಾಗಿ ಕೆಲಸಮಾಡಬೇಕು ಎಂದರು.

ವಿದ್ಯಾಭ್ಯಾಸದ ಸಮಸ್ಯೆಯನ್ನು ಕುರಿತು ಡಾ. ಅಂಬೇಡ್ಕರ್ ಅವರು ಹೇಳಿದ್ದೇನೆಂದರೆ, ಶಿಕ್ಷಣ ಎನ್ನುವುದು ಎರಡು ಅಲಗಿರುವ ಕತ್ತಿಯಂತೆ ಇದ್ದು, ಅದನ್ನು ಬೀಸುವುದು ಅಪಾಯಕಾರಿ. ನಡತೆ ಮತ್ತು ವಿನೀತ ಭಾವ ಇಲ್ಲದೆ ಮನುಷ್ಯ ಕಾಡುಪ್ರಾಣಿಗಿಂತ ಹೆಚ್ಚು ಅಪಾಯಕಾರಿ. ಅವನ ಶಿಕ್ಷಣ ಬಡವರ ಕಲ್ಯಾಣಕ್ಕೆ ಕೆಡುಕನ್ನು ಉಂಟು ಮಾಡುವಂಥಾದ್ದಾದರೆ ಅಂಥ ವಿದ್ಯಾವಂತ ಮನುಷ್ಯ ಸಮಾಜಕ್ಕೊಂದು ಶಾಪವಿದ್ದ ಹಾಗೆ ಅಂಥ ವಿದ್ಯಾವಂತ ಮನುಷ್ಯನ ಮೇಲೆ ಗುಂಡು ಹಾರಿಸಿ! ನಡತೆಯೆನ್ನುವುದು ಧರ್ಮಕ್ಕಿಂತ ಹೆಚ್ಚು ಮುಖ್ಯ ಧರ್ಮವೆನ್ನುವುದು ಕೆಲವರು ತಿಳಿದಂತೆ ಮಾದಕ ಪದಾರ್ಥವಲ್ಲ. ನನ್ನಲ್ಲಿರುವ ಒಳ್ಳೆಯದೆಲ್ಲಾ, ಸಮಾಜಕ್ಕೆ ನನ್ನ ಶಿಕ್ಷಣದಿಂದ ಪ್ರಯೋಜನಗಳು ಏನೇ ಇರಲಿ, ಅದು ನನ್ನಲ್ಲಿರುವ ಧಾರ್ಮಿಕ ಭಾವನೆಗಳಿಂದ ಒಂದದ್ದು. ನನಗೆ ಧರ್ಮಬೇಕು, ಆದರೆ ಧರ್ಮದ ಹೆಸರಲ್ಲಿ ಆಶಾಢಭೂತಿತನವನ್ನಲ್ಲ. ಸಮ್ಮೇಳನ ಬಹಳ ಯಶಸ್ಸಿಯಾಯಿತು. ಅವಕಾಶ ಸಿಕ್ಕರೆ ನಿಮ್ನ ವರ್ಗದ ನಾಯಕರುಗಳು ಕೂಡ ಸಮೂಹಗಳನ್ನು ಒಟ್ಟಾಗಿ ಸೇರಿಸಬಲ್ಲರು ಎಂಬುದನ್ನು ಅದು ತೋರಿಸಿಕೊಟ್ಟಿತು.

# ೪೬
# ಅಸ್ಪೃಶ್ಯರು ತಾವೇ ಹೆಣಗಾಡಬೇಕು

ಸೋಮವಂಶೀಯ ಹಿತರಕ್ಷಕ ಸಮಜ ಮತ್ತು ಮಾಝ್‌ಗಾಂವ್‌ನ ತಾಡವಾಡಿ ಅಸ್ಪೃಶ್ಯ ನಿವಾಸಿಗಳ ಸಂಯುಕ್ತ ಆಶ್ರಯದಲ್ಲಿ ಮಾರ್ಚ್ ೧೯, ೧೯೩೮ ರಂದು ಮಾಝ್‌ಗಾಂವ್‌ನ ತಾಡವಾಡಿಯಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಉದ್ದೇಶ, ಡಾ. ಅಂಬೇಡ್ಕರ್ ಅವರಿಗೆ ಮತ್ತು ಸ್ವತಂತ್ರ ಕಾರ್ಮಿಕ ಪಕ್ಷದ ಅಧ್ಯಕ್ಷರಾದ ಡಾ. ಪಿ.ಜಿ. ಸೋಲಂಕಿ ಅವರಿಗೆ ಒಂದು ಬಿನ್ನವತ್ತಳೆಯನ್ನು ಹಾಗೂ ಒಂದು ನಿಧಿಯನ್ನು ಸಮರ್ಪಿಸುವುದೇ ಆಗಿತ್ತು. "ವಿವಿಧ್ ವೃತ್ತ" ಸಂಪಾದಕರಾದ ಆರ್. ಕೆ. ತಟನಿಸ್ ಅವರು ಅಧ್ಯಕ್ಷತೆ ವಹಿಸಿದ್ದರು. ಅವರು, ಎಮ್.ಎನ್. ತಲಪಾಡೆ, ಎಸ್.ಟಿ. ಗಾಯಕ್‌ವಾಡ್ ಮತ್ತು ಡಾ. ಅಂಬೇಡ್ಕರ್ ಅವರುಗಳು ಮರಾಠಿಯಲ್ಲಿ ಭಾಷಣ ಮಾಡಿದರು. ಸಭೆಯಲ್ಲಿ ಸುಮಾರು ೧೦೦ ಮಂದಿ ಮಹಿಳೆಯರು ಸೇರಿದಂತೆ ಸುಮಾರು ೫೦೦ ಜನ ಹಾಜಿರಿದ್ದರು. ತಮ್ಮ ಭಾಷಣದಲ್ಲಿ ಅಧ್ಯಕ್ಷರು, ಎಮ್, ಎನ್. ತಲ್ಪಾಡೆಯವರು ಮತ್ತು ಎಸ್.ಟಿ. ಗಾಯಕವಾಡ್ ಅವರು, ಡಾ. ಅಂಬೇಡ್ಕರ್ ಮತ್ತು ಡಾ. ಪಿ.ಜಿ. ಸೋಲಂಕಿ ಅವರುಗಳ ಅಸ್ಪೃಶ್ಯರ ನಿಮಿತ್ತಕ್ಕಾಗಿ ಸಲ್ಲಿಸಿದ ಸೇವೆಗಳನ್ನು ನೆನಪಿಸಿಕೊಂಡರು. ಒಂದು ಬಿನ್ನವತ್ತಳೆ ಮತ್ತು ಒಂದು ಪರ್ಸ್ (ಹಣದ ಚೀಲವನ್ನು) ಡಾ|| ಅಂಬೇಡ್ಕರ್ ಅವರಿಗೆ ಅಧ್ಯಕ್ಷರು ಸಮರ್ಪಿಸಿದರು. ಡಾ. ಪಿ.ಜಿ. ಸೋಲಂಕಿ ಅವರು ಅನಾರೋಗ್ಯದ ಕಾರಣಕ್ಕಾಗಿ ಹಾಜರಿರಲಿಲ್ಲ.

ಭಿನ್ನವತ್ತಳೆಗೆ ಉತ್ತರ ಕೊಡುತ್ತಾ, ಡಾ|| ಅಂಬೇಡ್ಕರ್ ಅವರು, ಉದ್ಧಾರವಾಗಬೇಕೆನ್ನುವವರು, ಯಾವ ವ್ಯಕ್ತಿಯ ಅಥವ ಸಂಸ್ಥೆಯ ಸಹಾಯವಿಲ್ಲದೆ, ತಾವೇ ಹೆಣಗಾಡಬೇಕು ಎಂದು ಹೇಳಿದರು. ಕಾಂಗ್ರೆಸ್ ಸಂಸ್ಥೆ ಅಸ್ಪೃಶ್ಯರಿಗೆ ಸಹಾಯ ಮಾಡುತ್ತೇನೆಂದು ಹೇಳಿಕೊಂಡರೂ, ಏನನ್ನೂ ಮಾಡಲಿಲ್ಲ. ಅಷ್ಟೇ ಅಲ್ಲ, ಇಂಥ ಸಂಸ್ಥೆಗಳು ಇದಕ್ಕೆ ತದ್ವಿರುದ್ಧವಾಗಿ ಕೆಲಸ ಮಾಡಿದವು. ಇದಕ್ಕೆ ಸಾಕ್ಷಿ ಎಂದರೆ, ಮಧ್ಯ ಪ್ರಾಂತ್ಯದಲ್ಲಿ ಒಬ್ಬಳು ಅಸ್ಪೃಶ್ಯ ಬಾಲೆಯ ಮೇಲೆ ಅತ್ಯಾಚಾರ ಮಾಡಿದ ಅಪರಾಧಕ್ಕಾಗಿ ಶಿಕ್ಷೆಗೆ ಗುರಿಯಾಗಿದ್ದ ಒಬ್ಬ ಮುಸಲ್ಮಾನನ ಶಿಕ್ಷೆಯನ್ನು ಕಡಿಮೆ ಮಾಡಿದ್ದು. ಆ ನಂತರ ಅವರು ಬೊಂಬಾಯಿನಲ್ಲಿ ಅಸ್ಪೃಶ್ಯರಿಗೆ ಒಂದು ಸಭಾಭವನದ ಅವಶ್ಯಕತೆಯನ್ನು ಒತ್ತಿಹೇಳಿ, ಅದಕ್ಕಾಗಿ ಚಂದಾ ಹಣವನ್ನು ಕೊಡಿರಿ ಎಂದು ಸಭಿಕರಿಗೆ ಮನವಿ ಮಾಡಿದರು. ಆ ಹಣವನ್ನು ಬಿರ್ಲಾ ಅಥವ ಬಜಾಜ್ ಅಂಥವರಿಂದ ಪಡೆದುಕೊಳ್ಳುವುದು ಸುಲಭ. ಆದರೆ ಹಾಗೆ ಮಾಡಿ ಅನವಶ್ಯಕವಾಗಿ ಅವರಿಗೆ ಮೇಲುಗೈ ಕೊಡುವುದಕ್ಕೆ ಇಷ್ಟವಿಲ್ಲ ಎಂದು ಹೇಳಿದರು. ತಮಗೆ ಕೊಟ್ಟ ಹಣವನ್ನು ಸ್ವತಂತ್ರ ಕಾರ್ಮಿಕ ಪಕ್ಷದ ನಿಧಿಗಾಗಿ ಕೊಡುತ್ತೇನೆಂದು ಪ್ರಕಟಿಸಿದರು.

ಸಮಾರಂಭ ಸುಮಾರು ರಾತ್ರಿ ೧೦.೩೦ಕ್ಕೆ ಪ್ರಾರಂಭವಾಗಿ ಸುಮಾರು ರಾತ್ರಿ ೧೨.೩೦ಕ್ಕೆ ಶಾಂತಿಯುತವಾಗಿ ಕೊನೆಗೊಂಡಿತು.

# ೪೭
# ಸಭ್ಯತೆಯಿಂದ ಕೂಡಿದ ಜೀವನ ಮಾಡಿ

ರತ್ನಗಿರಿ ಜಿಲ್ಲೆಯ ಕಂಕಾವಳಿಯಲ್ಲಿ ನಡೆದ ಕೊಂಕಣ್ ಪಂಚಮಹಲ್ ಮಹರ್ ಸಮ್ಮೇಳನವನ್ನು ೧೪ನೇ ಮೇ, ೧೯೩೮ರಂದು ಉದ್ದೇಶಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಅವರು ಮಾತನಾಡಿದರು. ಸುಮಾರು ೧೫೦೦ ಜನ ಸಭೆಗೆ ಬಂದಿದ್ದರು. ಮಹರ್‌ಗಳ ಹೀನಾಯವಾದ ಸ್ಥಿತಿಗೆ ದುಃಖಿಸುತ್ತಾ, ಸಭ್ಯ ಜೀವನವನ್ನು ನಡೆಸಬೇಕೆಂದೂ, ಸಾರ್ವಜನಿಕ ಬಾವಿಗಳು, ಧರ್ಮಶಾಲೆಗಳು, ವಿದ್ಯಾಭ್ಯಾಸ (ಶಿಕ್ಷಣ) ಇತ್ಯಾದಿ ಕಾನೂನು ದತ್ತ ಹಕ್ಕಗಳ ಪೂರ್ಣ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಸಲಹೆಮಾಡಿದರು. ಅವರ ಬಡತನಕ್ಕೆ ಕಾರಣರಾದ ಬ್ರಾಹ್ಮಣರು ಮತ್ತು ವರ್ತಕರನ್ನು ಒಳಗೊಂಡ ಕಾಂಗ್ರೆಸ್ ಪಕ್ಷ ಅವರಿಗೆ ಯಾವ ಒಳ್ಳೆಯದನ್ನೂ ಮಾಡಿಲ್ಲವೆಂದೂ, ಹಾಗಾಗಿ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸೇರಬೇಕೆಂದೂ ಹೇಳಿದರು. ಕಾಂಗ್ರೆಸ್‌ನಿಂದ ಶ್ರೀಮಂತ ಘಟಕಗಳನ್ನು ಓಡಿಸಬೇಕೆಂದು ಇಚ್ಛೆಯಿರುವಷ್ಟು ಭಾರತದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಓಡಿಸಲು ತಮಗೆ ಇಷ್ಟವಿಲ್ಲವೆಂದು ಹೇಳಿದರು. ಕಟ್ಟಕಡೆಯಿಂದಾಗಿ ಖೋಟ್ ವ್ಯವಸ್ಥೆಯನ್ನು ರದ್ದುಗೊಳಿಸುವ ಮಸೂದೆಗೆ ಬೆಂಬಲಕೊಡಬೇಕೆಂದು ಆಗ್ರಹಮಾಡಿದರು.

ಶಾಸನ ಸಭೆಯಲ್ಲಿ ಡಾ॥ ಅಂಬೇಡ್ಕರ್ ಅವರು ಮಂಡನೆ ಮಾಡಿದ್ದ ಮಹರ್ ವತನ್ ಮಸೂದೆ ಮತ್ತು ಖೋಟ್ ವ್ಯವಸ್ಥೆಯನ್ನು ರದ್ದುಗೊಳಿಸುವ ಮಸೂದೆಗೆ ಬೆಂಬಲ ಸೂಚಿಸುವ ನಿರ್ಣಯವನ್ನು ಇತರ ನಿರ್ಣಯಗಳೂ ಸೇರಿದಂತೆ ಅನುಮೋದನೆ ಮಾಡಲಾಯಿತು.

ಸಹಿ. ಸೂಪರಿಂಟೆಂಡೆಂಟ್
ಎಸ್.ಬಿ. ಸಿ.ಐ.ಡಿ.
೩೦.೫.೧೯೩೮

# ೪೮

# ನಿಮ್ನ ವರ್ಗಗಳವರನ್ನು ಸರ್ಕಾರ ಲಕ್ಷ್ಯವೇ ಮಾಡಲಿಲ್ಲ

೨೨, ೨೩ನೇ ಅಕ್ಟೋಬರ್ ೧೯೩೮ರಂದು ಅಹ್ಮದಾಬಾದ್‌ನಲ್ಲಿ ತಂಗಿದ್ದಾಗ ಡಾ॥ ಅಂಬೇಡ್ಕರ್ ಅವರು ಪ್ರೇಮ್‌ಭಾಯಿ ಸಭಾಂಗಣದಲ್ಲಿ ಸೇರಿದ್ದ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರಾಜಕೀಯದಲ್ಲಿ ಗಾಂಧಿಯವರನ್ನು ತಾನು ವಿರೋಧಿಸುತ್ತೇನೆಂದು ಒಪ್ಪಿಕೊಂಡರು. ಅದಕ್ಕೆ ಕಾರಣ ಅವರಿಗೆ ಗಾಂಧಿಯವರಲ್ಲಿ ನಂಬಿಕೆ ಇರಲಿಲ್ಲ. ನಿಮ್ನವರ್ಗಗಳವರಿಗೆ ಗಾಂಧಿಯವರು ಒಳ್ಳೆಯದನ್ನು ಮಾಡುತ್ತಾರೆ ಎಂದು ಅವರಿಗೆ ನಂಬಿಕೆ ಇರಲಿಲ್ಲ. ಗಾಂಧಿಯವರು ಪ್ರಾಮಾಣಿಕರಾಗಿದ್ದರೆ. ಬೊಂಬಾಯಿ ಮತ್ತು ಮಧ್ಯ ಪ್ರಾಂತ್ಯಗಳ ಪ್ರಧಾನ ಮಂತ್ರಿಗಳನ್ನು ಅವರ ಮಂಡಲಗಳಲ್ಲಿ ನಿಮ್ನ ವರ್ಗಗಳವರ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಿ ಎಂದು ಏಕೆ ಕೇಳಬಾರದಾಗಿತ್ತು ಎಂದು ಹೇಳಿದರು. ಬೊಂಬಾಯಿ ಸರ್ಕಾರ ಭೂಕಂದಾಯವನ್ನು ಕಡಿಮೆ ಮಾಡಲು ತಯಾರಿಲ್ಲ, ಅಲ್ಲದೆ ಶ್ರೀಮಂತರ ಮೇಲೆ ತೆರಿಗೆ ಹಾಕಲು ತಯಾರಿಲ್ಲ ಎಂದು ಹೇಳಿದರು. ಮುಂಚಿನ ಸರ್ಕಾರ, ನಿಮ್ನ ವರ್ಗಗಳವರಿಗೆ ಬಂಜರು ಭೂಮಿಯನ್ನು ವ್ಯವಸಾಯಕ್ಕಾಗಿ ಮಂಜೂರು ಮಾಡಲು, ಪೊಲೀಸ್ ಸೇವೆಗಳಿಗೆ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೂ ಮತ್ತು ಸರ್ಕಾರಿ ಇಲಾಖೆಗಳಲ್ಲಿ ಒಂದು ನಿರ್ದಿಷ್ಟ ಶೇಕಡಾವಾರನ್ನು ನಿಮ್ನ ವರ್ಗಗಳವರಿಗೆ ಮೀಸಲಿಡುವುದಕ್ಕೂ ಶಿಫಾರಸು ಮಾಡಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಅದಕ್ಕೆ ಸೊಪ್ಪೇ ಹಾಕಲಿಲ್ಲ.

# ೪೯
# ಸರ್ವರಿಗೂ ವಿರೋಧಿಯಾದ ವಿದೇಶೀ ಸಾಮ್ರಾಜ್ಯಶಾಹಿಯೊಂದಿಗೆ ಹೋರಾಡಲು ಸಂಯುಕ್ತ ರಾಜಕೀಯ ಸಂಘಟನೆಯ ಆವಶ್ಯಕತೆ ಇದೆ

೨೫ನೇ ಡಿಸೆಂಬರ್ ೧೯೩೮ ರಂದು ಭಾನುವಾರ ಅಪರಾಹ್ನ ಡಾ॥ ಅಂಬೇಡ್ಕರ್ ಅವರು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಸ್ವಾಮಿ ಸಹಜಾನಂದ್ ಅವರಿಗೆ ಒಂದು ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಮಾರಂಭಕ್ಕೆ ಅನೇಕ ಕಾರ್ಮಿಕ ಮುಖಂಡರುಗಳನ್ನು ತೀವ್ರಗಾಮಿಗಳನ್ನು ಮತ್ತು ಪತ್ರ ಕರ್ತರನ್ನು ಸಹ ಆಹ್ವಾನಿಸಲಾಗಿತ್ತು.

ತಮ್ಮ ಭಾಷಣದಲ್ಲಿ ಡಾ॥ ಅಂಬೇಡ್ಕರ್ ಅವರು ಮಾಡಿದ ಘೋಷಣೆ.

ಸ್ವತಂತ್ರ ಕಾರ್ಮಿಕ ಪಕ್ಷ ಮತ್ತು ಅದರ ವಕ್ತಾರನಾಗಿ, ಫೆಡರೇಷನ್ ವಿರುದ್ಧದ ಹೋರಾಟದಲ್ಲಿ, ನಾನು ಭಾರತ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರುತ್ತೇನೆಂದು ಬರವಣಿಗೆಯಲ್ಲಿ ಬರೆದುಕೊಡಲು ಒಪ್ಪಿದ್ದೇನೆ. ಕಾಂಗ್ರೆಸ್‌ನ ಸಚಿವರುಗಳು ಫೆಡರೇಷನ್ ವಿರುದ್ಧ ಪ್ರತಿಭಟನೆ ಮಾಡಲು ರಾಜೀನಾಮೆ ಕೊಟ್ಟರೆ, ಖಾಲಿ ಬಿದ್ದ ಜಾಗಗಳನ್ನು ಸ್ವತಂತ್ರ ಕಾರ್ಮಿಕ ಪಕ್ಷ ತುಂಬುವುದಿಲ್ಲ, ತಮ್ಮ ಎಲ್ಲಾ ಶಕ್ತಿಯನ್ನು ಮತ್ತು ಸಾಮರ್ಥ್ಯವನ್ನು ಉಪಯೋಗಿಸಿ, ಬೇರೆಯಾರೂ ಆಡಳಿತ ಯಂತ್ರವನ್ನು ನಡೆಸದ ಹಾಗೆ ಇತರರನ್ನು ತಡೆಯುತ್ತೇವೆಂದು ಬರವಣಿಗೆಯಲ್ಲಿ ಕೊಡಲು ಸಿದ್ಧನಿದ್ದೇನೆ.

ನಾವುಗಳು, ಭಾರತದಲ್ಲಿರುವ ಅತ್ಯಂತ ಹಸಿದ ನಾಯಿಗಳು ಎಂಬುದನ್ನು ನಾವು ಸಂಪೂರ್ಣವಾಗಿ ಅರಿತುಕೊಂಡಿದ್ದೇವೆ. ನಾವು ಅತಿ ಹೆಚ್ಚಾಗಿ ತುಳಿಯಲ್ಪಟ್ಟ, ಬಡತನದಲ್ಲಿ ಬಳಲುತ್ತಿರುವ ದಮನ ಮಾಡಲ್ಪಟ್ಟ ಜನಗಳಾಗಿದ್ದೇವೆ. ಇನ್ನು ಯಾವುದೇ ವರ್ಗದ ಜನಗಳು ಬಳಲುತ್ತಿಲ್ಲದ ಒಂದು ರೀತಿಯ ಅನ್ಯಾಯದಿಂದ ನಾವು ಬಳಲುತ್ತಿದ್ದೇವೆ. ಆದರೆ. ಈ ಸಮಯದಲ್ಲಿ ಉನ್ನತ ವರ್ಗಗಳವರ ಸಂಗಡ ನಮಗಿರುವ ಭಿನ್ನಾಭಿಪ್ರಾಯಗಳನ್ನು ಒತ್ತಟ್ಟಿಗಿಡುತ್ತೇವೆ. ನಾವು ನಮ್ಮ ವರ್ಗಗಳಿಗಾಗಿ ಇಟ್ಟಿರುವ ಬೇಟಿಕೆಗಳನ್ನು ಮುಂದಕ್ಕೆ ಹಾಕಿ, ಸಾಮ್ರಾಜ್ಯಶಾಹಿಯೊಂದಿಗೆ ಹೋರಾಡಲು ಕಾಂಗ್ರೆಸ್ ತೀರ್ಮಾನಿಸಿದ್ದೇ ಆದರೆ, ಅದನ್ನು ಸೇರಲು ಸಿದ್ಧರಿದ್ದೇವೆ.

ಸ್ವಾಮಿ ಸಹಜಾನಂದರು ಎಲ್ಲರೂ ಕಾಂಗ್ರೆಸ್ ಅನ್ನು ಸೇರಬೇಕೆಂದು ಕರೆಯನ್ನು ಕೊಟ್ಟ ಮೇಲೆ, ಮೇಲಿನ ಘೋಷಣೆಯನ್ನು ಮಾಡಲಾಯಿತು. ಕಾಂಗ್ರೆಸ್, ಒಂದು ಸಾಮ್ರಾಜ್ಯಶಾಹಿ ವಿರೋಧಿ ಸಂಸ್ಥೆಯೆಂದು, ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದ ಪರಂಪರೆ ಅದಕ್ಕೆ ಇದೆಯೆಂದೂ, ಇನ್ನು ಯಾವುದೇ ರಾಜಕೀಯ ಪಕ್ಷ ಈ ರೀತಿ ಹೋರಾಟ ಮಾಡಿದೆಯೆಂದು ಹೇಳಿಕೊಳ್ಳಲು ಆಗುವುದಿಲ್ಲವೆಂದೂ ದೇಶದ ಉದ್ದಗಲದಲ್ಲಿನ ಎಲ್ಲಾ ಲಕ್ಷಾಂತರ ಕಾರ್ಮಿಕ ಮತ್ತು ರೈತ ವರ್ಗಕ್ಕೆ ಅದರ ಹೆಸರು ಮತ್ತು ಧ್ಯೇಯ ಗೊತ್ತಿದೆಯೆಂದೂ, ಸಮೂಹಗಳ ವರ್ಗ ಪ್ರಜ್ಞೆಯನ್ನು ಸಚೇತನಗೊಳಿಸುವುದರಿಂದ, ಈಗ ಇರುವ ಮುಖಂಡರ ಹಿಡಿತದರಿಂದ ಆ ಪಕ್ಷವನ್ನು ಕಾಪಾಡಬಹುದೆಂದೂ ಹೇಳಿದರು. ಎಲ್ಲರಿಗೂ ವಿರೋಧಿಯಾದ ವಿದೇಶೀ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಪ್ರಯತ್ನಪಡುತ್ತಿರುವ ಈ ದೇಶದ ಎಲ್ಲಾ ಜನಗಳಿಂದ ಕೂಡಿದ ಸಂಯುಕ್ತ ರಾಜಕೀಯ ಸಂಘಟನೆ ಆಗಬೇಕಾಗಿರುವ ಅವಶ್ಯಕತೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನಮ್ಮೆಲ್ಲರ

ಶತೃವಿನ ವಿರುದ್ಧ ಹೋರಾಡದ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಸಂಸ್ಥೆಗಳನ್ನು ತಾತ್ಕಾಲಿಕವಾಗಿ ವಿಸರ್ಜಿಸುವುದನ್ನು ನಾನು ಬೆಂಬಲಿಸುತ್ತೇನೆ. ಇಂಥದೊಂದು ಹೋರಾಟವನ್ನು ಅವರು ಚಾಲನೆಗೊಳಿಸಿದರೆ, ನಾನು ಸ್ವತಂತ್ರ ಕಾರ್ಮಿಕ ಪಕ್ಷವನ್ನು ಮುಚ್ಚಿಬಿಟ್ಟು ನಮ್ಮ ದಳವನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನವರ ಕೆಲಸದಲ್ಲಿ ಸಂತೋಷವಾಗಿ ತೊಡಗಿಸುತ್ತೇನೆ.

ಉತ್ತರವಾಗಿ ಡಾ॥ ಅಂಬೇಡ್ಕರ್ ಹೇಳಿದ್ದು.

ಆದರೆ ಈ ದಿನದಲ್ಲಿರುವ ಸ್ಥಿತಿಯೇನು?

ಕಾಂಗ್ರೆಸ್ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ತೊಡಗಿಕೊಂಡಿಲ್ಲ. ಅದು ತನ್ನ ಅಂಗರಚನೆಯ ಯಂತ್ರವನ್ನು, ಕಾರ್ಮಿಕರ ಮತ್ತು ರೈತರುಗಳ ಹಿತಾಸಕ್ತಿಯನ್ನು ಬಲಿಕೊಟ್ಟು; ಬಂಡವಾಳಶಾಹಿಗಳ ಮತ್ತು ಇತರ ಪಟ್ಟ ಭದ್ರ ಹಿತಾಸಕ್ತಿಗಳನ್ನು ಕಾಪಾಡಲು ಉಪಯೋಗಿಸುತ್ತಿದೆ.

ಯಾವ ಸಾಮ್ರಾಜ್ಯಶಾಹಿಯ ವಿರುದ್ಧ ಕಾಂಗ್ರೆಸ್ ಹೋರಾಡುತ್ತಿದೆಯೆಂದು ಹೇಳಲಾಗುತ್ತಿದೆಯೋ, ಅದರಿಂದಲೇ ಅವರ ಆಡಳಿತಾತ್ಮಕ ಚಟುವಟಿಕೆಗಳ ಬಗ್ಗೆ ಹೊಗಳಿಕೆಯ ಮಾತು ಕೇಳಬಂದಿದೆ. ತನ್ನ ವರ್ಗದ ಹಿತಾಸಕ್ತಿಗಳನ್ನು ಮುಂದು ಮಾಡಲು ತನಗೆ ಸಿಕ್ಕಿರುವ ಚೂರುಪಾರು ಅಧಿಕಾರವನ್ನು ಕಾಂಗ್ರೆಸ್ ಬಳಸಿಕೊಳ್ಳುತ್ತಿದೆಯಾದ್ದರಿಂದ, ನಮ್ಮ ಹಿತಾಸಕ್ತಿಗಳನ್ನು ರಕ್ಷಣೆ ಮಾಡಲು, ನಮ್ಮ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಮೇಲೆ ಕಾಂಗ್ರೆಸ್ ಅಥವ ಇತರ ಯಾವುದೇ ಮಂತ್ರಿ ಮಂಡಲವೇ ಆಗಲೀ, ಅತಿಕ್ರಮಿಸುವುದನ್ನು ಪ್ರತಿರೋಧಿಸುವುದು ನಮ್ಮ ಸ್ವಯಂವೇದ್ಯ ಕರ್ತವ್ಯವಾಗುತ್ತದೆ. ಈ ಹಂತದಲ್ಲಿ ಕಾಂಗ್ರೆಸ್ ಅನ್ನು ಸೇರುವುದು ನಮಗೆ ಆತ್ಮಘಾತಕವಾಗುತ್ತದೆ.

ಸ್ವಾಮಿ ಸಹಜಾನಂದರ ಮುಖ್ಯ ವಾದವೆಂದರೆ ಕಾಂಗ್ರೆಸ್‌ನ ಪ್ರಸ್ತುತ ಕಾರ್ಯ ನೀತಿಗೆ ಸರಿಯಿಲ್ಲದ ಮುಖಂಡತ್ವವೇ ಕಾರಣವೆಂದು, ಈಗಿನ ಮುಖಂಡತ್ವವನ್ನು ಬುಡಮೇಲು ಮಾಡಿ, ಸಮೂಹ ಮುಖಂಡತ್ವವನ್ನು ಸ್ಥಾಪಿಸುವುದರ ಮೂಲಕ ಕಾರ್ಯನೀತಿಯನ್ನು ಬದಲಾಯಿಸಬಹುದೆಂದೂ, ಆದರೆ ಈ ಕೆಲಸ ಇಲ್ಲಿಯವರೆಗೆ ಆಗಿಲ್ಲದೆಂದೂ, ಇದಕ್ಕೆ ಕಾರಣ ಸಮೂಹ ವರ್ಗ ಪ್ರಜ್ಞೆ ಇಲ್ಲದಿರುವುದೇ ಎಂದು ಹೇಳಿದರು.

ಈ ದಿನ ನಮ್ಮ ಮುಖ್ಯ ಕಾರ್ಯಭಾರವೆಂದರೆ, ಸಮೂಹಗಳಲ್ಲಿ ವರ್ಗ ಪ್ರಜ್ಞೆಯನ್ನುಂಟುಮಾಡುವುದು. ಆಗ ಈಗ ಇರುವ ಮುಖಂಡತ್ವ ತನಗೆ ತಾನೇ ಕುಸಿದ್ದು ಬೀಳುತ್ತದೆ ಎಂದರು.

"ನಮಗೆ ಕಾಂಗ್ರೆಸ್ ಅನ್ನು ಹಿಡಿದು ಹಾಕಲು ಸಾಧ್ಯವಾದರೂ, ಈಗಿನ ಮುಖಂಡರುಗಳು, ಇನ್ನೊಂದು ಸಂಸ್ಥೆಯನ್ನು ಹುಟ್ಟುಹಾಕುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ ಕಾಂಗ್ರೆಸ್ ಅನ್ನು ಹಿಡಿದು ಹಾಕುವ ನಮ್ಮ ಮುಖ್ಯ ಉದ್ದೇಶ, ಅಂದರೆ ಇಡೀ ದೇಶದಲ್ಲಿ ಒಂದೇ ರಾಜಕೀಯ ಸಂಘಟನೆ ಇರಬೇಕೆಂಬ ಉದ್ದೇಶ, ನಿರರ್ಥಕವಾಗುತ್ತದೆ. ಈ ಎಲ್ಲಾ ಆಕ್ಷೇಪಣೆಗಳಿಗೆ ಸ್ವಾಮೀಜಿಯವರ ಉತ್ತರ, ಸಮೂಹಗಳನ್ನು ಎಬ್ಬಿಸಿ ಎಚ್ಚರಿಸಿರುವುದು ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ತಮ್ಮ ನಂಬಿಕೆ ಮತ್ತು ವಿಶ್ವಾಸವನ್ನು ಇಡಬೇಕು ಎಂದು ಹೇಳಿದರು.

ಈ ದೇಶವನ್ನು ಮೊದಲು ವಿದೇಶೀ ಆಳ್ವಿಕೆಯಿಂದ ಬಿಡುಗಡೆ ಮಾಡಬೇಕು, ನಮ್ಮಲ್ಲಿ ಇರುವ ಎಲ್ಲಾ ಬಲಗಳೂ ಈ ಉದ್ದೇಶಗಳಿಗಾಗಿ ಒಗ್ಗಟ್ಟಾಗಬೇಕು ಎಂದು ಹೇಳಿದರು; ಕಾಂಗ್ರೆಸ್ ಪಕ್ಷ, ಅದಕ್ಕಿರುವ ಹಿಂದಿನ ಅನುಭವಗಳು ಮತ್ತು ಪರಂಪರೆಗಳಿಂದ ಅದನ್ನು ಮಾಡುವುದಕ್ಕೆ ಅತ್ಯುತ್ತಮವಾಗಿದೆ ಎಂದರು.

ಈ ಹಂತದಲ್ಲಿಯೇ, ಸ್ವತಂತ್ರ ಕಾರ್ಮಿಕ ಪಕ್ಷದ ಮುಖಂಡರಾದ ಡಾ॥ ಅಂಬೇಡ್ಕರ್ ಅವರು ಮೇಲೆ ಉದ್ಧರಿಸಿದ ಹೇಳಿಕೆಗಳನ್ನು ಕೊಟ್ಟರು; ಅಂದರೆ, ಅವರು ಮತ್ತು ಅವರ ಪಕ್ಷ, ಸಾಮ್ರಾಜ್ಯಶಾಹಿಯನ್ನು

ಕೊನೆಗಾಣಿಸಲು ಅಥವ ಫೆಡರೇಷನ್ ವಿರುದ್ಧ ಹೊರಾಟವನ್ನು ಕಾಂಗ್ರೆಸ್ ಪ್ರಾರಂಭಿಸಬಹುದಾದ ಯಾವುದೇ ಚಳುವಳಿಯಲ್ಲಿ ಭಾಗಿಯಾಗುವುದಕ್ಕೆ ಸಿದ್ಧರಿದ್ದೇವೆ ಎಂದು ಹೇಳಿದರು. ಅಲ್ಲದೆ ಕಾಂಗ್ರೆಸ್ ಖಾಲಿ ಮಾಡಿದ ಯಾವುದೇ ಮಂತ್ರಿ ಮಂಡಲವನ್ನು ಅವರ ಪಕ್ಷ ಸೇರುವುದಕ್ಕೆ ಒಪ್ಪೊಕೊಳ್ಳುವುದಿಲ್ಲವೆಂದು ಮತ್ತು ಇತರರು ಮಂತ್ರಿ ಪದವಿಗಳನ್ನು ದುರುಪಯೋಗ ಮಾಡದಂತೆ ತಡೆಯುವುದಾಗಿಯೂ ಹೇಳಿದರು.

ಈ ಘೋಷಣೆಯಿಂದ ಸ್ವಾಮಿ ಸಹಜಾನಂದರು ಬಹಳವಾಗಿ ಪ್ರಭಾವಿತರಾದರು; ಈಗಿನ ಕಾಂಗ್ರೆಸ್ ಮುಖಂಡರು ಏನೇ ಹೇಳಲಿ, ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟ ಬಹಳ ದೂರದಿಲ್ಲಿಲ್ಲ ಎಂದು ಹೇಳಿದರು.

# ೫೦
# ಕುಂದುಕೊರತೆಗಳನ್ನು ನನಗೆ ತಿಳಿಸಿ

ಡಾ॥ ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ೩೦ನೇ ಡಿಸೆಂಬರ್ ೧೯೩೮ರಂದು ಪೂರ್ವಖಾನ್ ದೇಶ್ ಜಿಲ್ಲೆಯ ಮಕರಾನ್‌ಪುರದಲ್ಲಿ ನಡೆದ ಸಮ್ಮೇಳನಕ್ಕೆ ಔರಂಗಾಬಾದ್ ಜಿಲ್ಲೆಯ ಸುಮಾರು ೨೦೦ ಜನರು ಹಾಜರಿದ್ದರು. ಅಲ್ಲಿ ಸಮ್ಮೇಳನವನ್ನು ನಡೆಸಲು ಕಾರಣವೇನೆಂದರೆ, ನಿಜಾಮರ ರಾಜ್ಯದಲ್ಲಿ ಸಮ್ಮೇಳನವನ್ನು ನಡೆಸುವುದಕ್ಕೆ ಅನುಮತಿ ಹೊರಕಲಿಲ್ಲ; ಆ ತರಹದ ಸಮ್ಮೇಳನ ಅದೇ ಮೊದಲನೆಯದು. ರಾಜ್ಯದಲ್ಲಿ ಅಸ್ಪೃಶ್ಯರ ಬಗ್ಗೆ ಮುಸ್ಲಿಮರ ಧೋರಣೆಯನ್ನು ಖಂಡಿಸಲಾಯಿತು. ಮುಖ್ಯಭಾಷಣಕಾರರಾದ ಡಾ॥ ಅಂಬೇಡ್ಕರ್ ಅವರು ಸಭಿಕರಿಗೆ ಅರ ಕುಂದುಕೊರತೆಗಳ ಪಟ್ಟಿಯನ್ನು ತಮಗೆ ಕಳುಹಿಸಿಕೊಡುವಂತೆ ಹೇಳಿ, ರಾಜ್ಯದಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಕಟ್ಟುವಂತೆ ಸಲಹೆ ಮಾಡಿದರು.

ಇತರ ನಿರ್ಣಯಗಳ ಜೊತೆ ಕೆಳಗಿನ ನಿರ್ಣಯಗಳನ್ನೂ ಅನುಮೋದನೆ ಮಾಡಲಾಯಿತು.

೧. ಮಹರ್‌ಗಳಿಗೆ ವತನ್ ಭೂಮಿಯನ್ನು ಕೊಡುವುದು.

೨.ಅಸ್ಪೃಶ್ಯರಿಗೆ ಸ್ಥಾನಗಳನ್ನು ಮೀಸಲಿರಿಸುವುದು.

೩.ಪ್ರತಿ ವರ್ಷ ಏಪ್ರಿಲ್ ೧೪ ರಂದು ಅಂಬೇಡ್ಕರ್ ದಿನವನ್ನು ಆಚರಿಸುವುದು.

೪.ಅಸ್ಪೃಶ್ಯರಿಗೆ ಹಿಂದೂ ಮಹಾಸಭೆಯಲ್ಲಾಗಲೀ, ಆರ್ಯ ಸಮಾಜದಲ್ಲಿಯಾಗಲಿ ನಂಬಿಕೆ ಇಲ್ಲವಾದ್ದರಿಂದ, ಅವರು ಹಿಂದೂ ಧರ್ಮವನ್ನು ತ್ಯಜಿಸುವ ಡಾ॥ ಅಂಬೇಡ್ಕರ್ ಅವರ ಘೋಷಣೆಯನ್ನು ಬೆಂಬಲಿಸುವುದು.

# ೫೧
# ಅತ್ಯುತ್ತಮ ನಡತೆಯುಳ್ಳ ಮನುಷ್ಯರಾಗಿ

ಕಳೆದ ನವೆಂಬರ್ ೭ ರಂದು ಕಾರ್ಮಿಕರ ಮುಷ್ಕರದ ಮೇಲೆ ಸರ್ಕಾರದ ತನಿಖಾ ಸಮಿತಿ ತನ್ನ ಬೈಠಕ್‌ಗಳನ್ನು ಪ್ರಾರಂಭಿಸಿದ ಮೇಲೆ, ಮೊದಲನೆ ಬಾರಿಗೆ ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ॥ ಅಂಬೇಡ್ಕರ್ ಅವರು ಆ ಸಮಿತಿಯ ಮುಂದೆ ಕೊಡಲಾಗುತ್ತಿರುವ ಸಾಕ್ಷ್ಯದ ಸ್ವಭಾವಾದ ಮೇಲೆ ಕಟುವಾದ ಟೀಕೆಯನ್ನು ಮಾಡಿದರು. ಸಂದರ್ಭ, ಪಕ್ಷದ ಸ್ವಯಂ ಸೇವಕ ದಳದ ವಾರ್ಷಿಕ ಪೆರೇಡ್ ಆಗಿತ್ತು; ಅದನ್ನು ೮ನೇ ಜನವರಿ ೧೯೩೯, ಭಾನುವಾರ ಬೆಳಿಗ್ಗೆ ಕಾಮಗಾರ್ ಮೈದಾನದಲ್ಲಿ ನಡೆಸಲಾಯಿತು.

೨೫೦೦ ಮಂದಿ ಸ್ವಯಂ ಸೇವಕರು ಠಾಕು ಠೀಕಾದ ಸಮವಸ್ತ್ರಧರಿಸಿ ಪಾಲ್ಗೊಂಡಿದ್ದರು. ಪಕ್ಷದ ಅನುಯಾಯಿಗಳಾದ ಸುಮಾರು ೨೦,೦೦೦ ಜನ ಸಮಾರಂಭವನ್ನು ವೀಕ್ಷಿಸುವುದಕ್ಕೆ ಮೈದಾನದಲ್ಲಿ ತುಂಬಿದ್ದರು. ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಹೇಳಿದ್ದು; ಪ್ರಸ್ತುತದಲ್ಲಿ ಕಮಿಟಿಯ ಮುಂದೆ ನೀಡಲಾಗುತ್ತಿರುವ ಸಾಕ್ಷ್ಯದ ವಿವರಗಳ ಬಗ್ಗೆ ನಾನೇನೂ ಹೇಳಬಯಸುವುದಿಲ್ಲ. ಕಾರಣ ಕಮಿಟಿಯ ಮುಂದೆ ಇರುವ ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿದ್ದು "ಸಬ್ ಜುಡಿಸ್" ಆಗಬಹುದು. ಸ್ವತಂತ್ರ ಪಕ್ಷದ ಸ್ವಯಂ ಸೇವಕ ದಳದ ಸ್ವಭಾವ ಮತ್ತು ಪರಂಪರೆಗಳ ಬಗ್ಗೆ ನಾನು ಪ್ರಪಂಚಕ್ಕೆ ತಿಳುವಳಿಕೆ ಕೊಡಬೇಕಾಗಿದೆ; ಆ ಸಮಿತಿಯ ಮುಂದೆ ಎಲ್ಲಾ ತೆರನಾದ ಸಾಕ್ಷಿಗಳು ದಿನದಿಂದ ದಿನಕ್ಕೆ ಎಲ್ಲಾ ಬಗೆಯ ಕೆಟ್ಟ ಮತ್ತು ವಿಷಭರಿತ ಆಪಾದನೆಗಳನ್ನು ಮಾಡಲಾಗುತ್ತಿದೆ.

ನಮ್ಮ ಸ್ವಯಂ ಸೇವಕ ದಳದ ಮೇಲೆ ಪ್ರಶಂಸೆಯ ಮಳೆಗರೆದವರು ನಮ್ಮ ಸ್ನೇಹಿತರಾಗಲೀ, ನಮ್ಮ ಮೇಲೆ ಅನುಕಂಪವಿರುವವರಾಗಲೀ ಅಲ್ಲ; ಅವರು ಬೇರೆ ಯಾರೂ ಅಲ್ಲದೆ ಕಾಂಗ್ರೆಸ್‌ನ ಯಜಮಾನರುಗಳು. ಗೌರವಾನ್ವಿತ ಮಿ: ಖೇರ್ ಮತ್ತು ಸರ್ದಾರ್ ಪಟೇಲ್ ಅವರುಗಳು ಸ್ವಯಂ ಸೇವಕರ ಬಗ್ಗೆ ಆಡಿದ ಮೆಚ್ಚುಗೆಯ ಮಾತುಗಳನ್ನು ಉಲ್ಲೇಖಿಸಿದ ಮೇಲೆ, ಡಾ. ಅಂಬೇಡ್ಕರ್ ಹೇಳಿದ್ದು.

ನಮ್ಮ ಸ್ವಯಂಸೇವಕರು ಮತ್ತು ಸದಸ್ಯರಲ್ಲಿ ಅನೇಕರು ಮಿಲಿಟರಿಯಲ್ಲಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಅವರೇನೂ ಕಾನೂನು ಬಾಹಿರ ದೊಂಬಿದಾಸರಲ್ಲ; ಕಿತಾಪತಿ ಮತ್ತು ಗೂಂಡಾಗಿರಿ ಮಾಡುವವರಲ್ಲ. ಅವರಿಗೆ ತಮ್ಮ ಹೊಣೆಗಾರಿಕೆಯ ಅರಿವಿದೆ ಮತ್ತು ಶಿಸ್ತುಬದ್ಧ ನಡವಳಿಕೆಯಲ್ಲಿ ನಂಬಿಕೆ ಇದೆ. ಸಾಕ್ಷಿಗಳು ಅವರ ಬಗ್ಗೆ ನುಡಿದ ಕುಪ್ರಸಿದ್ಧ ಚಟುವಟಿಕೆಗಳನ್ನು ಮಾಡುವಂಥ ಜನರು ಅವರಲ್ಲ. ನೇರವಾಗಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡುತ್ತಾ ಡಾ. ಅಂಬೇಡ್ಕರ್ ಹೇಳಿದ್ದು: ನಿಮ್ಮ ವರ್ಗಗಳವರು ತಮ್ಮ ಮಾನವ ಹಕ್ಕುಗಳಿಗಾಗಿ ಪ್ರಾರಂಭಿಸಿದ ಹೋರಾಟದಲ್ಲಿ ಈ ಸ್ವಯಂ ಸೇವಕ ದಳ ಹುಟ್ಟಿತು. ಇದು ಮಹದ್ ಸತ್ಯಾಗ್ರಹದಲ್ಲಿ ಪರ್ಯವಸಾನವಾಯಿತು.

ಆ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕಾಗಿ ನೀವುಗಳು ಅತ್ಯುತ್ತಮ ನಡತೆಯುಳ್ಳ ಮನುಷ್ಯರಾಗಿರಬೇಕು; ಸಮಾಜ ನಿಮ್ಮನ್ನು ಮಾನವೀಯತೆಯ ಮಾದರಿಯಂತೆ ನೋಡುವಂತೆ ಇರಬೇಕು.

ನೀವು ಒಂದು ಜನ ಸಮೂಹವೂ ಅಲ್ಲ, ಒಂದು ಗುಂಪೂ ಅಲ್ಲ. ನೀವು ಒಂದು ಬೆಟಾಲಿಯನ್. ನಿಮ್ಮಂಥ ಚೆನ್ನಾಗಿ ತರಬೇತಿ ಪಡೆದ ಶಿಸ್ತುಬದ್ಧವಾದ ಕೆಲವೇ ಮಂದಿ ಸಾವಿರಾರು ಮಂದಿಯ ಗುಂಪನ್ನು

ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮಗಳ ಮತ್ತು ಒಂದು ಸಾಧಾರಣ ಗುಂಪಿನ ಮಧ್ಯೆ ಇರುವ ವ್ಯತ್ಯಾಸದ ಸಾರವೇ ಅದು.

ಡಾ. ಅಂಬೇಡ್ಕರ್, ಇತರ ಯುವಕರಿಗೆ ದಳಕ್ಕೆ ಸೇರಿ ಅದರ ಬಲವನ್ನು ವೃದ್ಧಿ ಮಾಡಬೇಕೆಂದು ಕಳಕಳಿಯ ಮನವಿ ಮಾಡಿದರು.

ಸೇವಾ ದಳದ ಜನರಲ್ ಆಫೀಸರ್ ಕಮ್ಯಾಂಡಿಂಗ್ ಆದ ಮಿ. ಡಿ.ವಿ.ಪ್ರಧಾನ್ ಅವರು, ಬೊಂಬಾಯಿ ಪ್ರಾಂತ್ಯದ ಬೇರೆ ಬೇರೆ ಭಾಗಗಳಲ್ಲಿ ಮಾಡಿದ ಹಾಗೆ ಭಾರತದಲ್ಲಿನ ಇತರ ಪ್ರಾಂತ್ಯಗಳಲ್ಲಿ ಕೂಡಾ ತಮ್ಮ ಶಾಖೆಗಳನ್ನು ತೆಗೆಯುವ ಆಕಾಂಕ್ಷೆ ಇದೆ ಎಂದು ತಮ್ಮ ಆಸೆಯನ್ನು ವ್ಯಕ್ತಪಡಿಸಿದರು.

## ೫೨
## ಭಾರತದ ರಾಜಕೀಯ ವಿಕಾಸದ ಗುರಿಯೇನು?

ಡಾ. ಅಂಬೇಡ್ಕರ್ ಫೆಡರೇಷನ್ ಅನ್ನು ಖಂಡಿಸಿದರು. ೨೯ನೇ ಜನವರಿ ೧೯೩೯ರಂದು ಭಾನುವಾರ ರಾತ್ರಿ ಗೋಖಲೆ ಅರ್ಥಶಾಸ್ತ್ರ ವಿದ್ಯಾಲಯದಲ್ಲಿ ಮೂರು ಗಂಟೆಗಳ ದೀರ್ಘ ಭಾಷಣವನ್ನು ಮಾಡುತ್ತಾ ಫೆಡರಲ್ ಯೋಜನೆಯ ವೈಚಾರಿಕ ವ್ಯಾಖ್ಯಾನವನ್ನು ಸ್ವತಂತ್ರ ಕಾರ್ಮಿಕ ಪಕ್ಷ, ಬೊಂಬಾಯಿ ಇದರ ಮುಖಂಡರಾದ ಡಾ. ಅಂಬೇಡ್ಕರ್ ಅವರು ಮಾಡಿದರು.

ಮೊದಲನೆಯದಾಗಿ ಫೆಡರಲ್ ಯೋಜನೆ, ದೇಶವನ್ನು ಸ್ವಾತಂತ್ರ್ಯದೆಡೆಗೆ ಕೊಂಡು ಹೋಗುವುದಿರಲಿ, ಡೊಮಿನಿಯನ್ ಸ್ಥಾನಮಾನದ ದಾರಿಗೂ ಸಹ ಶಾಶ್ವತವಾದ ಅಡ್ಡಗೋಡೆಯನ್ನು ಹಾಕುತ್ತದೆ ಎಂದರು.

ನಮಗೆ ಬೇಕಾಗಿರುವುದು ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳ ಒಕ್ಕೂಟ ಮಾತ್ರ ಎಂದು ಅವರು ಹೇಳಿದರು. ರಾಜ್ಯಗಳ ವಿಷಯಕ್ಕೆ ಬಂದಾಗ, ಸಣ್ಣ ರಾಜ್ಯಗಳ ರಾಜರುಗಳಿಗೆ ವಿರಾಮ ವೇತನವನ್ನು ಕೊಟ್ಟು ಹೊಸ ರಾಜ್ಯಗಳ ರಾಜರುಗಳಿಗೆ ಆಳ್ವಿಕೆಯನ್ನು ಮುಂದುವರೆಸಲು ಕೆಲವು ನಿಬಂಧನೆಗಳ ಮೇಲೆ ಅನುಮತಿಸಬೇಕೆಂದು ಹೇಳಿದರು. ಅವರ ಪ್ರಕಾರ, ಫೆಡರಲ್ ಯೋಜನೆ, ರಾಷ್ಟ್ರೀಯ ನೀತಿಯ ಅತಿಮುಖ್ಯ ಅಂಗವಾದ ಸ್ವತಂತ್ರ ಪ್ರಜೆಯನ್ನು ಮತ್ತು ಬಡವರನ್ನು ಸಂಪೂರ್ಣವಾಗಿ ಮರೆತು ಬಿಟ್ಟಿದೆ ಎಂದು ಹೇಳಿದರು.

ಡಾ.ಅಂಬೇಡ್ಕರ್ ಅವರ ಭಾಷಣದ ಸಾರಾಂಶ; ಫೆಡರೇಷನ್ನಿನ ನೈಜ ಸ್ವರೂಪದ ಬಗ್ಗೆ ಒಂದು ಸ್ಪಷ್ಟ ಕಲ್ಪನೆಯನ್ನು ಕೊಡುವುದಕ್ಕಾಗಿ ಡಾ. ಅಂಬೇಡ್ಕರ್ ಅವರು, ಇತರೆ ಒಕ್ಕೂಟಗಳೊಂದಿಗೆ ಈ ಪ್ರಸ್ತುತ ಒಕ್ಕೂಟವನ್ನು (ಫೆಡರೇಷನ್) ಹೋಲಿಕೆ ಮಾಡುತ್ತಾ ಮೂರು ಗಹನವಾದ ಪ್ರಶ್ನೆಗಳನ್ನು ಪರಾಮರ್ಶೆ ಮಾಡುತ್ತಾ ಹೋಲಿಕೆಯನ್ನು ಪ್ರಾರಂಭಿಸಿದರು. (೧) ಫೆಡರೇಷನ್ನಿನ ಘಟಕಗಳು ಯಾವುವು (೨) ಫೆಡರೇಷನ್ನಿಗೂ ಈ ಘಟಕಗಳಿಗೂ ಇರುವ ಸಂಬಂಧವೇನು? (೩) ಫೆಡರೇಷನ್ನಿನ ಪರಮಾಧಿಕಾರದ ಕೆಳಗೆ ಬರುವ ಪ್ರಜೆಗಳ ಸಂಬಂಧವೇನು?

ಈ ಸಂಬಂಧ ಅವರ ಪರಿವೀಕ್ಷಣೆ: "...ಫೆಡರೇಷನ್ ಅನ್ನುವುದು ಸಾಮಾನ್ಯ ಪೌರತ್ವ ಇರುವ ಒಂದು ಸಾಮಾನ್ಯ ಅಖಂಡತ್ವ ಅಲ್ಲ. ಫೆಡರೇಷನ್ ಅಂದರೆ ಕಾನೂನಿನನ್ವಯ ವಿದೇಶಿ ರಾಜ್ಯಗಳ ಒಂದು ಸೇರ್ಪಡಿಕೆ. ಫೆಡರೇಷನ್, ನಿಜವಾಗಿಯೂ ಒಂದು ಬಿಡಿ ಬಿಡಿ ರಾಜ್ಯಗಳ ಸ್ನೇಹ ಸಂಬಂಧವಷ್ಟೆ. ಅದರ ವೈಚಿತ್ರ್ಯಗಳು ಮತ್ತು ಅದರ ವೈಲಕ್ಷಣ್ಯಗಳು ಸ್ನೇಹ ಸಂಬಂಧಗಳು ಇರುವ ರಾಜ್ಯಗಳ ಒಂದು ಗುಂಪು ಮಾತ್ರ ಆಗಿದೆ. ಜನಗಳು ಅದನ್ನು ಫೆಡರೇಷನ್ ಎಂದೇ ಕರೆಯಲು ಒತ್ತಾಯ ಮಾಡಿದರೆ, ಆಗ ಅದು ಫೆಡರೇಷನ್‌ಗಳ ನಡುವಿನ ಒಂದು ದೈತ್ಯ ರಾಕ್ಷಸನೂ ಅಲ್ಲದೆ ಫೆಡರೇಷನ್‌ಗಳ ಮಧ್ಯದಲ್ಲಿನ ಒಂದು ಅತ್ಯಂತ ಘೋರವಾದ ವಿಕಾರತೆಯೂ ಹೌದು.

ಮುಂದಕ್ಕೆ ಡಾ. ಅಂಬೇಡ್ಕರ್ ಅವರು ಯೋಜನೆಯನ್ನು ಒಪ್ಪಿಕೊಳ್ಳಲು ಪ್ರತಿಪಾದಿಸಿದ ಆಧಾರಗಳನ್ನು ಕುರಿತು ವಿಶ್ಲೇಷಿಸಿದರು:

೧. ಭಾರತದ ಐಕ್ಯತೆಗೆ ಸಹಾಯವಾಗುತ್ತದೆ.

೨. ಬ್ರಿಟಿಷ್ ಇಂಡಿಯಾ ಭಾರತೀಯ ಇಂಡಿಯಾದ ಮೇಲೆ ಪ್ರಭಾವ ಬೀರುವುದಕ್ಕೆ, ಬ್ರಿಟಿಷ್ ಇಂಡಿಯಾಕ್ಕೆ ಸಾಧ್ಯವಾಗುವಂತೆ ಮಾಡಿ ಭಾರತೀಯ ಇಂಡಿಯಾದಲ್ಲಿ ಪ್ರಚಲಿತವಿರುವ ನಿರಂಕುಶತ್ವವನ್ನು, ಬ್ರಿಟಿಷ್ ಇಂಡಿಯಾದಲ್ಲಿ ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವಕ್ಕೆ ಕ್ರಮೇಣ ಮಾರ್ಪಾಡು ಮಾಡುತ್ತದೆ.

೩. ಈ ಯೋಜನೆ ಜವಾಬ್ದಾರಿಯುತ ಸರ್ಕಾರವೆಂದು ಕರೆಯಲ್ಪಡುತ್ತಿರುವುದನ್ನು ಆವಿರ್ಭವಿಸಿಕೊಂಡಿದೆ.

೧. ಮೊದಲನೆಯನ್ನು ಕುರಿತು ಅವರು ತೋರಿಸಿಕೊಟ್ಟಿದ್ದೇನೆಂದರೆ, ಭಾರತೀಯ ಇಂಡಿಯ ಎಂದು ಕರೆಯಲ್ಪಡುತ್ತಿರುವ ಪದದ ಕೆಳಗೆ ಬರುತ್ತಿರುವುದೆಲ್ಲಾ ಫೆಡರೇಷನ್ನಿನ ಕೆಳಗೆ ತಂದಿರುವುದಿಲ್ಲ. ಅಧಿನಿಯಮದ ಅನುಸೂಚಿ ೧ ರೊಂದಿಗೆ ೬(೧)ನೇ ಖಂಡವನ್ನು ಓದಿಕೊಂಡರೆ ಪ್ರತಿರಾಜ್ಯವೂ ಫೆಡರೆಷನ್ನನ್ನು ಸೇರುವುದಕ್ಕೆ ಅವಕಾಶವಿಲ್ಲ.

ಫಲಿತಾಂಶವಾಗಿ ೪೯೮ ರಾಜ್ಯಗಳು ಫೆಡರೇಷನ್ನಿನ ಹೊರಗಡೆಯೇ ಉಳಿದುಕೊಂಡು ಬಿಡುತ್ತವೆಯಲ್ಲದೆ ಅವು ಎಂದಿಗೂ ಫೆಡರೇಷನ್ನಿನ ಭಾಗವಾಗುವುದಿಲ್ಲ. ಈ ರಾಜ್ಯಗಳನ್ನು ಫೆಡರೇಷನ್ನಿನ ಹೊರಗಡೆ ಏಕೆ ಇಡಲಾಗಿದೆ, ಅವುಗಳ ಸ್ಥಾನವೇನು, ಅವುಗಳ ಭವಿಷ್ಯವೇನು ಎಂದು ಡಾ. ಅಂಬೇಡ್ಕರ್ ಪ್ರಶ್ನಿಸಿದರು.

೨. ಎರಡನೆಯದರ ಬಗ್ಗೆ ವ್ಯವಹರಿಸುತ್ತಾ ಬ್ರಿಟಿಷ್ ಇಂಡಿಯಾದ ರಾಜ್ಯಗಳ ವ್ಯವಹಾರಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವ ಹಾಗೆ, ರಾಜ್ಯಗಳಿಗೆ ಕಾನೂನಿನ ಮೂಲಕ ಸ್ಥಾನವನ್ನು ಮಾಡಿಕೊಟ್ಟದ್ದೂ ಅಲ್ಲದೆ, ಅದೇ ಕಾನೂನಿನಿಂದಾಗಿ ಬ್ರಿಟಿಷ್ ಇಂಡಿಯಾಕ್ಕೆ ರಾಜ್ಯಗಳ ಮೇಲೆ ಯಾವುದೇ ಪ್ರಭಾವ ಬೀರದ ಹಾಗೆ ಮಾಡಲಾಯಿತು. ಅವರ ಅಭಿಪ್ರಾಯದಲ್ಲಿ, ಫೆಡರಲ್ ಯೋಜನೆಯಿಂದಾಗಿ ಬ್ರಿಟಿಷ್ ಇಂಡಿಯಾ ಭಾರತೀಯ ರಾಜ್ಯಗಳನ್ನು ಪ್ರಜಾಪ್ರಭುತ್ವಕ್ಕೆ ಕೊಂಡೊಯ್ಯುವುದಕ್ಕೆ ಸಹಾಯ ಮಾಡುವುದಿರಲಿ, ಅದಕ್ಕೆ ಅಡ್ಡಿಪಡಿಸುತ್ತದೆ ಎಂದು ಹೇಳಿದರು.

ಮೂರನೆಯದನ್ನು ಕುರಿತು, ರಕ್ಷಣೆ ಮತ್ತು ವಿದೇಶ ವ್ಯವಹಾರಕ್ಕೆ ಹೊಣೆಗಾರಿಕೆಯನ್ನು ಯೋಜನೆ ವಿಸ್ತರಿಸುವುದಿಲ್ಲವೆಂದು, ಫೆಡರೇಷನ್ನಿನಲ್ಲಿ ಹೊಣೆಗಾರಿಕೆ ಯೋಜನೆ, ಪ್ರಾಂತ್ಯಗಳಲ್ಲಿನ ದ್ವಿಪ್ರಭುತ್ವಕ್ಕೆ ಹೋಲಿಸಿದಾಗ ಕಡಿಮೆ ಹೊಣೆಗಾರಿಕೆಯನ್ನು ತರುವತ್ತ ವಿನ್ಯಾಸಗೊಳಿಸಲಾಗಿದೆಯೆಂದು ಹೇಳಿದರು. ಫೆಡರಲ್ ಯೋಜನೆಯನ್ನು ಯಾವುದೇ ದೃಷ್ಟಿಕೋನದಿಂದ ನೋಡಿ ಹೊಣೆಗಾರಿಕೆಗೆ ಸಂಬಂಧಿಸಿದ ಹಾಗೆ ಇರುವ ಉಪಬಂಧಗಳನ್ನು ವಿಶ್ಲೇಷಣೆ ಮಾಡಿದರೂ, ಅಲ್ಲಿ ಯಾವುದೇ ಹೊಣೆಗಾರಿಕೆ ಇಲ್ಲದಿರುವುದನ್ನು ಕಾಣುತ್ತೇವೆ ಎಂದು ಡಾ. ಅಂಬೇಡ್ಕರ್ ಹೇಳಿದರು.

ಫೆಡರಲ್ ಯೋಜನೆಯ ಬೇನೆಯನ್ನು ಪರಾಮರ್ಶಿಸುತ್ತಾ ಅದರ ಸಂವಿಧಾನದಲ್ಲಿದ್ದ ಅತಿ ದೊಡ್ಡ ಕೊರತೆಯನ್ನು ಬಿಚ್ಚಿಟ್ಟರು. ಯೋಜನೆ ತುಂಬಾ ದೋಶಗಳಿಂದ ತುಂಬಿಕೊಂಡಿದೆ ಎಂದು ಗುರುತಿಸದವರು ಯಾರೂ ಇಲ್ಲ ಎಂದು ಹೇಳಿದರು. ಮುಂದುರೆಯುತ್ತಾ ಅವರು ಹೇಳಿದ್ದು; ಅದರ ಬಗ್ಗೆ ನಾವೇನು ಮಾಡಬಹುದಾಗಿದೆ ಎಂಬ ಪ್ರಶ್ನೆಯನ್ನು ಕೇಳಿದಾಗಲೇ ಭಿನ್ನಾಭಿಪ್ರಾಯಗಳು ತಲೆ ಎತ್ತುತ್ತವೆ. ಪ್ರಶ್ನೆಗೆ ಉತ್ತರ ಕೊಡುವುದನ್ನು ಮುಂದಕ್ಕೆ ಹಾಕಬಹುದೇ ವಿನಾ ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ ಎಂದರು. ಯಾವ ರೀತಿಯಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಬೇಕೆಂಬುದೇ ಪ್ರಶ್ನೆ. ಕಾಂಗ್ರೆಸ್‌ಗೆ ಒಪ್ಪಿಗೆಯಾಗುವಂತಹುದಾಗಬೇಕಾದರೆ, ಫೆಡರಲ್ ಸಂವಿಧಾನದಲ್ಲಿ ಮಾಡಬೇಕಾಗಿರುವ ಕನಿಷ್ಟ ಬದಲಾವಣೆಗಳನ್ನಾದರೂ ಮಾಡಬೇಕೆಂಬ ಸತ್ಯಮೂರ್ತಿಯವರ ಹೇಳಿಕೆಯನ್ನೇ ಡಾ. ಅಂಬೇಡ್ಕರ್ ಅವರು ಪ್ರಾರಂಭಿಕ ವಿಷಯವಾಗಿ ತೆಗೆದುಕೊಂಡರು. ಪ್ರಸ್ತುತವಾಗಿ ಫೆಡರಲ್ ಯೋಜನೆಯನ್ನು

ತಿರಸ್ಕರಿಸಬೇಕೆಂಬ ಧೋರಣೆಯನ್ನು, ಒಪ್ಪಿಕೊಳ್ಳಬೇಕೆಂದು ಬದಲಾಯಿಸುವುದಕ್ಕೆ ಈ ಬದಲಾವಣೆಗಳು ಸಾಕಾಗುತ್ತವೆಯೇ ಎಂದು ಡಾ. ಅಂಬೇಡ್ಕರ್ ಅವರು ಪ್ರಶ್ನಿಸಿದರು. ಸತ್ಯಮೂರ್ತಿಯವರು ಬೇಕೇ ಬೇಕೆಂದು ಕೇಳಿದ ಪ್ರತಿಯೊಂದನ್ನೂ ಬ್ರಿಟಿಷ್ ಪಾರ್ಲಿಮೆಂಟ್ ಕೊಡುವುದಕ್ಕೆ ಸಿದ್ಧವಾಗಿದ್ದರೂ, ಫೆಡರಲ್ ಯೋಜನೆಗೆ ಇರುವ ಆಕ್ಷೇಪಣೆಗಳನ್ನು ನಿವಾರಿಸುವುದಕ್ಕೆ ಆಗುವುದಿಲ್ಲವೆಂದು ಡಾ. ಅಂಬೇಡ್ಕರ್ ಅಭಿಪ್ರಾಯಪಟ್ಟರು. ಅವರಿಗೆ ಮೂಲಭೂತವಾದ ಪ್ರಶ್ನೆಯೆಂದರೆ, ಫೆಡರಲ್ ಯೋಜನೆ ಭಾರತ ತನ್ನ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವಂತೆ ವಿಕಾಸಗೊಳ್ಳಬಹುದೇ ಎಂದು. ಈ ದೃಷ್ಟಿಕೋನದಿಂದ ಈ ಪ್ರಶ್ನೆಯನ್ನು ಪರೀಕ್ಷಿಸಬೇಕಾಗಿದೆ ಎಂದರು. ಭಾರತದ ರಾಜಕೀಯ ವಿಕಾಸದ ಗುರಿಯೇನು ಎಂದು ಡಾ. ಅಂಬೇಡ್ಕರ್ ಪ್ರಶ್ನೆ ಮಾಡಿದರು. ಡಾ. ಅಂಬೇಡ್ಕರ್ ಅವರ ಪ್ರಕಾರ, ಫೆಡರಲ್ ಸಂವಿಧಾನದ ಕೆಳಗೆ ಡೊಮಿನಿಯನ್ ಸ್ಥಾನಮಾನ ಅಸಾಧ್ಯವಾದದ್ದು. ಏತಕ್ಕೆಂದರೆ ಅದರ ಸಂವಿಧಾನ ಸ್ಥಿರ ಮತ್ತು ಜಡ ಸಂವಿಧಾನವಾಗಿದ್ದು, ಅದನ್ನು ಬದಲಾಯಿಸುವುದಕ್ಕೆ ಪಾರ್ಲಿಮೆಂಟಿಗೂ ಅಧಿಕಾರವಿಲ್ಲ; ಹಾಗೆ ಮಾಡಬೇಕಾದರೆ ಫೆಡರಲ್ ಯೋಜನೆಯನ್ನೇ ನಾಶಪಡಿಸಬೇಕಾಗುತ್ತದೆ ಎಂದು ಹೇಳಿದರು.

ಸಂವಿಧಾನ ಸ್ವಾಯತ್ತ ಪ್ರಾಂತ್ಯಗಳನ್ನು ಅಸ್ತಿತ್ವಕ್ಕೆ ತರುತ್ತದೆಂಬ ವಾದವನ್ನು ಪರಾಮರ್ಶಿಸುತ್ತಾ, ಆದಕಾರಣ ಅವುಗಳನ್ನು ಒಂದಕ್ಕೊಂದು ಕಟ್ಟಿಹಾಕುವ ಬಲವನ್ನು ಒದಗಿಸಬೇಕಾಗಿದ್ದು, ಕೇಂದ್ರ ಸರ್ಕಾರವೊಂದನ್ನು ಸ್ಥಾಪಿಸಲೇಬೇಕಾದ ಅನಿವಾರ್ಯವಿದ್ದು, ಅದು ಇಲ್ಲದೆ ಸ್ವಾಯತ್ತತೆ ಅರಾಜಕತೆಯಲ್ಲಿ ಫಲಿತಗೊಳ್ಳುತ್ತದೆ ಎಂದು ಹೇಳಿದರು. ಭಾರತಕ್ಕೆಲ್ಲಾ ಒಂದು ಕೇಂದ್ರ ಸರ್ಕಾರವನ್ನು ಸ್ಥಾಪಿಸಬೇಕೆಂಬುದನ್ನು ಸಮರ್ಥನೆ ಮಾಡಲು ಪ್ರಯತ್ನಿಸಿದರೆ, ಆ ವಾದ ಅದರ ವ್ಯಾಪ್ತಿಯನ್ನು ಮೀರಿ ಹೋಗುತ್ತದೆ ಎಂದು ಅವರ ಅನಿಸಿಕೆ. ಅವರ ಅಭಿಪ್ರಾಯದಲ್ಲಿ ಸ್ವಾಯತ್ತ ಪ್ರಾಂತ್ಯಗಳನ್ನು ಅಸ್ತಿತ್ವಕ್ಕೆ ತರಲು ಇಡೀ ಭಾರತಕ್ಕೆ ಒಂದು ಕೇಂದ್ರ ಸರ್ಕಾರವನ್ನು ಸ್ಥಾಪಿಸಬೇಕೆಂಬ ಅವಶ್ಯಕತೆ ಇಲ್ಲವೆಂದೂ, ಬ್ರಿಟಿಷ್ ಇಂಡಿಯಾದ ಕೇಂದ್ರ ಸರ್ಕಾರ ಫೆಡರಲ್ ರೂಪದಲ್ಲಿ ಇದ್ದರೆ ಮಾತ್ರ ಸಾಕೆಂದು ಅವರ ಅಭಿಪ್ರಾಯ. ಇಷ್ಟು ವಿನಾ, ಇದರೊಳಗೆ ರಾಜ್ಯಗಳನ್ನು ತರಬೇಕಾದ ಅವಶ್ಯಕತೆ ಏನಿದೆ ಎಂದು ಅವರು ಕೇಳಿದರು. ಭಾರತ ಸರ್ಕಾರದ ಅಧಿನಿಯಮ–೧೯೩೫, ಎರಡು ಬೇರೆ ಬೇರೆ ಫೆಡರೇಷನ್ನುಗಳನ್ನು ಸ್ಥಾಪಿಸಿದೆ. ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳ ಫೆಡರೇಷನ್ ಒಂದು, ಇನ್ನೊಂದು ಅಖಿಲ ಭಾರತ ಫೆಡರೇಷನ್. ಅವುಗಳ ಶಾಸನಾಧಿಕಾರದಲ್ಲಿಯಾಗಲೀ ಅಥವಾ ಆರ್ಥಿಕ ಅಧಿಕಾರದಲ್ಲಿಯಾಗಲೀ, ಅಥವಾ ಅವುಗಳ ವೈಯುಕ್ತಿಕ ಸಂಘಟನೆಯಲ್ಲಾಗಲೀ ಯಾವ ವ್ಯತ್ಯಾಸವೂ ಇಲ್ಲವೆಂದು ಹೇಳಿದರು. ಆದರೆ ಅದರಲ್ಲಿ ಒಂದೇ ಒಂದು ಗಹನವಾದ ವ್ಯತ್ಯಾಸವಿದೆ ಎಂದರು. ಬ್ರಿಟಿಷ್ ಇಂಡಿಯಾ ಫೆಡರೇಷನ್ ಇದ್ದಾಗ, ಕೇಂದ್ರದಲ್ಲಿ ಯಾವ ಹೊಣೆಗಾರಿಕೆಯೂ ಇರಲಿಲ್ಲ. ಅಖಿಲ ಭಾರತ ಫೆಡರೇಷನ್ ಇಲ್ಲದ ಹೊರತು, ಕೇಂದ್ರದಲ್ಲಿ ಯಾವ ಹೊಣೆಗಾರಿಕೆಯೂ ಇರುತ್ತಿರಲಿಲ್ಲ. ಅದರ ಅರ್ಥ ಬ್ರಿಟಿಷ್ ಇಂಡಿಯಾಕ್ಕೆ ಹೊಣೆಗಾರಿಕೆ ಕೊಡಬೇಕಾದರೆ ರಾಜ್ಯಗಳ ಪ್ರವೇಶ ಆಗಬೇಕೆಂಬುದು ಪೂರ್ವ ಷರತ್ತು ಆಗಿತ್ತು. ರಾಜ್ಯಗಳ ಪ್ರವೇಶ ಏತಕ್ಕೆ ಅತ್ಯವಶ್ಯಕವಾಗಿತ್ತು ಎಂದು ಅವರು ಪ್ರಶ್ನೆ ಹಾಕಿಕೊಂಡು, ಅದಕ್ಕೆ ಉತ್ತರವನ್ನು ಒರಟಾಗಿ ಹೇಳುವುದಾದರೆ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ರಕ್ಷಣೆ ಮಾಡುವುದಕ್ಕಾಗಿ ರಾಜರುಗಳನ್ನು ಉಪಯೋಗಿಸಿಕೊಂಡು, ಬ್ರಿಟಿಷ್ ಇಂಡಿಯಾದಲ್ಲಿ ಪ್ರಜಾಪ್ರಭುತ್ವದ ಅಲೆಯನ್ನು ನಿಗ್ರಹ ಮಾಡುವುದೇ ಆಗಿತ್ತು ಎಂದರು. ಫೆಡರೇಷನ್ನಿನ ಉಗಮಕ್ಕೆ ಭಾರಿ ಬೆಲೆಯನ್ನೇ ತೆರಲಾಗಿದೆ ಎಂದರು. ರಾಜರುಗಳಿಗೆ ಫೆಡರೇಷನ್ ಅನ್ನು ಸುಲಭ ಮಾಡಿಕೊಡುವುದಕ್ಕೆ ಮಾಡಿದ ತ್ಯಾಗಕ್ಕೆ ಅನುಗುಣವಾಗಿ, ಬ್ರಿಟಿಷ್ ಇಂಡಿಯಾಕ್ಕೆ ಕೇಂದ್ರದಲ್ಲಿ ಹೊಣೆಗಾರಿಕೆಯನ್ನು ಪಡೆದುಕೊಳ್ಳುವುದಕ್ಕೆ ಆಗದಿರುವುದೂ ಅಲ್ಲದೆ,

ರಾಜರುಗಳಿಲ್ಲದೇ ತನ್ನದೇ ಹಕ್ಕಿನಿಂದ ಡೊಮಿನಿಯನ್ ಸ್ಥಾನಮಾನವನ್ನು ಪಡೆದುಕೊಳ್ಳುವ ತನ್ನ ಬೇಡಿಕೆಯನ್ನು ಕಳೆದುಕೊಂಡಿತು ಎಂದರು.

ಫೆಡರೇಷನ್ನಿನ ಎರಡು ಭಾಗಗಳಲ್ಲಿ, ಬ್ರಿಟಿಷ್ ಇಂಡಿಯಾ ಪ್ರಗತಿಶೀಲ ಭಾಗವಾಗಿದ್ದು, ರಾಜ್ಯಗಳು ಪ್ರಗತಿಶೀಲವಾಗಿರಲಿಲ್ಲ. ಪ್ರಗತಿಶೀಲ ಭಾಗವನ್ನು ಪ್ರಗತಿಶೀಲವಲ್ಲದ ರಥಕ್ಕೆ ಕಟ್ಟಿಹಾಕಿ, ಅದರ ದಾರಿ ಮತ್ತು ಅದೃಷ್ಟವನ್ನು ಪ್ರಗತಿಶೀಲವಲ್ಲದ ಭಾಗದ ಮೇಲೆ ಅವಲಂಬಿತವಾಗುವ ಹಾಗೆ ಮಾಡಿದ್ದು ಫೆಡರೇಷನ್ನಿನ ಅತ್ಯಂತ ದುರಂತ ಮಗ್ಗುಲಾಗಿದೆ.

ಡಾ. ಅಂಬೇಡ್ಕರ್ ಅವರು ಫೆಡರೇಷನ್ ಅನ್ನು ವಿವಿಧ ದೃಷ್ಟಿಕೋನಗಳಿಂದ ಪರಿಗಣಿಸಿದರು; ರಾಜರುಗಳ ದೃಷ್ಟಿಕೋನದಿಂದ ಹಾಗೂ ಹಿಂದೂ ಮತ್ತು ಮುಸ್ಲಿಮರ ದೃಷ್ಟಿಕೋನದಿಂದ. ಡಾ. ಅಂಬೇಡ್ಕರ್ ಅವರ ಪ್ರಕಾರ ರಾಜರುಗಳ ಹಿತಾಸಕ್ತಿ ಎರಡು ಪಟ್ಟಾಗಿತ್ತು. ಅವರು ಪರಮಾಧಿಕಾರದಿಂದ ತಪ್ಪಿಸಿಕೊಳ್ಳಲು ಇಷ್ಟಪಟ್ಟಿದ್ದೂ ಅಲ್ಲದೆ, ಫೆಡರೇಷನ್ನಿನ ಅಧಿಕಾರಕ್ಕೆ ಬಹಳವಾಗಿ ಒಳಪಡಲೂ ಇಷ್ಟಪಡಲಿಲ್ಲ.

ಫೆಡರೇಷನ್ನಿನತ್ತ ನೋಡುವಾಗ, ರಾಜರುಗಳು ತಮ್ಮ ಮುಂದೆ ಎರಡು ಪ್ರಶ್ನೆಗಳನ್ನು ಇಟ್ಟುಕೊಂಡರು. ಪರಮಾಧಿಕಾರದ ದಬ್ಬಾಳಿಕೆಯಿಂದ ಮುಕ್ತರಾಗಲು, ಫೆಡರೇಷನ್ ತಮ್ಮನ್ನು ಎಷ್ಟರ ಮಟ್ಟಿಗೆ ಸಶಕ್ತಗೊಳಿಸಬಹುದೆಂದು, ಎರಡನೆಯದಾಗಿ, ತಮ್ಮ ಒಳಾಡಳಿತ ಸರ್ಕಾರದ ಅಧಿಕಾರಗಳ ಸಾರ್ವಭೌಮತ್ವವನ್ನು ಈ ಯೋಜನೆ ಎಷ್ಟರ ಮಟ್ಟಿಗೆ ತೆಗೆದುಕೊಂಡು ಬಿಟ್ಟಿದೆ ಎಂದು. ಮೊದಲನೆಯದರ ಕೆಳಗೆ ಹೆಚ್ಚಾಗಿ ಸೆಳೆದುಕೊಳ್ಳಲು ಮತ್ತು ಎರಡನೆಯದರ ಕೆಳಗೆ ಕಮ್ಮಿಯಾಗಿ ಕೊಡುವುದು ಅವರ ಅಪೇಕ್ಷೆಯಾಗಿತ್ತು.

ಆಗಲೇ ಪ್ರಸ್ತಾಪಿಸಿದ ಅಭಿಪ್ರಾಯಗಳಲ್ಲದೆ, ಇತರ ದೃಷ್ಟಿಕೋನಗಳೂ ಇದ್ದು, ಅವುಗಳಿಗೂ ಮಾನ್ಯತೆ ಕೊಡಲೇಬೇಕಾಗಿದೆ ಎಂದರು. ಸ್ವತಂತ್ರ ಪ್ರಜೆಯ ಹಾಗೂ ಬಡವನ ಅಭಿಪ್ರಾಯಗಳೂ ಅಲ್ಲಿ ಇವೆ. ಫೆಡರೇಷನ್ ರವರು ಯಾರನ್ನೂ ಲೆಕ್ಕಕ್ಕೆ ಕರೆದುಕೊಂಡ ಹಾಗೆ ಕಾಣುವುದಿಲ್ಲ. ಆದರೆ ಹೆಚ್ಚಾಗಿ ಸಂಬಂಧಪಟ್ಟವರೆಂದರೆ ಈ ಜನಗಳೇ ಆಗಿದ್ದಾರೆ ಎಂದರು.

ಫೆಡರೇಷನ್ ಅಸ್ತಿತ್ವಕ್ಕೆ ಬಂದಿದ್ದೇ ಆದರೆ, ಅದು ಸ್ವತಂತ್ರ ಪ್ರಜೆಗೆ ನಿರಂತರ ಉಪದ್ರವಕಾರಿಯಾಗುವುದೂ ಅಲ್ಲದೆ, ಬಡವನ ದಾರಿಗೆ ಅಡಚಣೆಯೂ ಆಗುತ್ತದೆ ಎಂದು ಡಾ. ಅಂಬೇಡ್ಕರ್ ಒತ್ತಿ ಹೇಳಿದರು. ಮುಕ್ತಾಯ ಮಾಡುತ್ತಾ, ವಿಷಯದ ಆಗಾಧತೆಯೇ ತಮ್ಮ ಭಾಷಣ ಉದ್ದವಾಗುವುದಕ್ಕೆ ಕಾರಣವಾಯಿತು ಎಂದು ಹೇಳಿದರು. ಭಾರತದ ಜನಗಳಿಗೆ ಮಾರ್ಗದರ್ಶನ ಮಾಡಿದ ರಾನಡೆ, ತಿಲಕ್, ಅಗರ್‌ಕರ್, ಗೋಖಲೆ, ದಾಧಾಬಾಯಿ, ಫೆರೋಜ್ ಷಾಮೆಹ್ತಾ, ಸುರೇಂದ್ರ ನಾಥ ಬ್ಯಾನರ್ಜಿ ಇವರ ದಿನಗಳನ್ನು ನೆನಪಿಗೆ ತಂದುಕೊಡುತ್ತಾ, ತಮ್ಮ ಭಾಷಣವನ್ನು ಹ್ರಸ್ವಗೊಳಿಸುವುದು ಬೇಡ ಎಂದು ಅವರನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು. ಭಾರತದ ರಾಜಕೀಯ ನಭೋ ಮಂಡಲದ ಪ್ರಸಿದ್ಧ ವ್ಯಕ್ತಿಗಳಾಗಿದ್ದ ಆ ಜನ, ಒಳ್ಳೆಯ ಉಡುಪು ಧರಿಸಿದ, ಚೆನ್ನಾಗಿ ಓದಿಕೊಂಡ ವ್ಯಕ್ತಿಗಳಾಗಿ ತಮ್ಮ ಅಧ್ಯಯನ ಮತ್ತು ಅನುಭವದ ಮೇಲೆ ಅವಲಂಬಿಸಿದವರಾಗಿದ್ದರು.

# ೫೩

# ಯಾವುದೇ ರೂಪದಲ್ಲಾಗಲೀ ಫೆಡರೇಷನ್ ಅನ್ನು ಒಪ್ಪಿಕೊಳ್ಳಲು ಗಾಂಧಿ ಸಿದ್ಧವಾಗಿದ್ದರು

ಸ್ವತಂತ್ರ ಕಾರ್ಮಿಕ ಪಕ್ಷದ ಮುಖಂಡರಾದ ಡಾ. ಬಿ.ಆರ್.ಅಂಬೇಡ್ಕರ್ ಅವರು [೧೨.೨.೧೯೩೮ರಂದು] ಬಿಜಾಪುರದಲ್ಲಿ ನಡೆದ ಬಿಜಾಪುರ ಹರಿಜನ ಸಮ್ಮೇಳನದ ಅಧ್ಯಕ್ಷತೆ ವಹಿಸುತ್ತಾ ಹೀಗೆ ಹೇಳಿದರು.

ಫೆಡರೇಷನ್ ವಿಷಯವನ್ನು ಕುರಿತಾದ ಮಿ.ಬೋಸ್ ಅವರ ನಿಲುವಿಗೆ ಗಾಂಧಿಯವರ ವಿರೋಧವನ್ನು ನನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅವರ ವಿರೋಧವನ್ನು ಎರಡು ರೀತಿ ಅರ್ಥೈಸಿಕೊಳ್ಳಬಹುದು. ಗಾಂಧಿಯವರು ಬೇಷರತ್ತಾಗಿ ಫೆಡರೇಷನ್ ಅನ್ನು ಒಪ್ಪಿಕೊಳ್ಳಲು ಮನಸ್ಸು ಮಾಡಿರಬಹುದು. ಇಲ್ಲವೇ, ಅವರು ತಮ್ಮ ಆಯುಧವಾದ ಅಹಿಂಸೆ ಮತ್ತು ಸತ್ಯಾಗ್ರಹ ಉಪಯುಕ್ತತೆ ಬಗ್ಗೆ ವಿಶ್ವಾಸ ಕಳೆದುಕೊಂಡಿರಬಹುದು. ಯಾವುದೇ ರೂಪದಲ್ಲಿಯಾಗಲೀ ಫೆಡರೇಷನ್ ಅನ್ನು ಒಪ್ಪಿಕೊಳ್ಳಲು ಸಿದ್ಧರಾಗಿದ್ದಾರೆಂದು ತೋರುತ್ತದೆ.

ಫೆಡರೇಷನ್ ಅನ್ನು ಡಾ. ಅಂಬೇಡ್ಕರ್ ಕಟುವಾಗಿ ಟೀಕಿಸುತ್ತಾ ಅದು ಪರಿಸ್ಥಿತಿಯನ್ನು ಉತ್ತಮ ಪಡಿಸುವುದಿರಲಿ, ಅದು ಗೊಂದಲ ಗಲಾಟೆಗೆ ಎಡೆ ಮಾಡಿಕೊಡುವುದೂ ಅಲ್ಲದೆ, ಭಾರತದಲ್ಲಿನ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ ಎಂದು ಹೇಳಿದರು. ಕಾಂಗ್ರೆಸ್‌ನಲ್ಲಿ ಪ್ರಾಮಾಣಿಕತೆ ಎನ್ನುವುದು ಉಳಿದೇ ಇಲ್ಲವೆಂದು ತಾವು ಬುಡಮಟ್ಟ ಸಾಧಿಸಬಲ್ಲನೆಂದು ಹೇಳಿ, ಆ ಪಕ್ಷ ಸಂಪೂರ್ಣವಾಗಿ ಒಂದು ದುಷ್ಟ ಕೂಟದ ಕೈನಲ್ಲಿ ಸಿಕ್ಕಿ ಹಾಕಿಕೊಂಡಿದೆ ಎಂದು ಹೇಳಿದರು. ತಾವು ಗಾಂಧಿಯವರನ್ನು ಹೊಗಳಿದಿದ್ದರೆ, ಕಾಂಗ್ರೆಸ್‌ನಲ್ಲಿ ತಮಗೆ ಒಂದು ವಿಶಿಷ್ಟ ಸ್ಥಾನ ತಾವು ಬಯಸಿದ್ದರೆ ಸಿಗುತ್ತಿತ್ತೆಂದು ಹೇಳಿದರು. ಕಾಂಗ್ರೆಸ್‌ನ ಪ್ರಸ್ತುತ ನೀತಿಯಿಂದಾಗಿ ಪೂರ್ಣ ಸ್ವರಾಜ್ಯದತ್ತ ಅವರನ್ನು ಕೊಂಡು ಹೋಗುವುದಿಲ್ಲವೆಂದು ಅವರಿಗೆ ಚೆನ್ನಾಗಿ ಗೊತ್ತಿದೆಯೆಂದು, ಆದಕಾರಣ ಕಾಂಗ್ರೆಸ್ ಅನ್ನು ಸೇರಲು ಅವರಿಗೆ ಮನಸ್ಸು ಇಲ್ಲವೆಂದು ಹೇಳಿದರು. ಕಳೆದ ಅಸೆಂಬ್ಲಿ ಚುನಾವಣೆಗಳಿಗೆ ಸ್ವಲ್ಪ ದಿನಗಳ ಮುಂಚೆ, ತಾವು ಒಂದು ಪ್ರತ್ಯೇಕವಾದ ಪಕ್ಷವನ್ನು ಪ್ರಾರಂಭಿಸುವುದಾಗಿ ಹೇಳಿದರು. ಅಂದಿನಿಂದ ಅದರ ಬಲವರ್ಧನೆಯಾಗುತ್ತಿದೆ ಎಂದು ಹೇಳಿದರು. ಬಿಜಾಪುರಕ್ಕೆ ಅವರು ಬಂದಿದ್ದ ಮುಖ್ಯ ಉದ್ದೇಶವೆಂದರೆ ಅಲ್ಲಿ ಪಕ್ಷದ ಒಂದು ಶಾಖೆಯನ್ನು ತೆಗೆಯುವುದೇ ಆಗಿದೆ ಎಂದರು.

೫೪

# ನಿಮ್ಮ ಮಕ್ಕಳನ್ನು ಸಂಕಷ್ಟಭರಿತ ಜೀವನದಿಂದ ಕಾಪಾಡಿ

ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಬಿ.ಆರ್.ಅಂಬೇಡ್ಕರ್ ಅವರು ೨೬.೨.೧೯೩೯, ಭಾನುವಾರ ಸಾಯಂಕಾಲ ಬೊಂಬಾಯಿನ ಕುಚ್ರುಪಟ್ಟಿ ಕಾರ್ಮಿಕರ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದರು. ಆ ಸಂದರ್ಭದಲ್ಲಿ ಅವರಿಗೆ ಅವರ ಪಕ್ಷದ ಕೇಂದ್ರ ಕಚೇರಿ ಕಟ್ಟಡದ ನಿಧಿಗೆ ೧೦೦೦ ರೂಗಳ ಹಣದ ಚೀಲವನ್ನು ಕೊಡಲಾಯಿತು. ಆ ಸಂದರ್ಭದಲ್ಲಿ ಅವರು ಹೇಳಿದ್ದು; ಕಳೆದ ದಶಕದ ಸುಮಾರಿನಲ್ಲಿ, ನಿಮ್ಮ ವರ್ಗಗಳವರ ಸಾಮಾಜಿಕ ಮತ್ತು ಮಾನಸಿಕ ಬಾಹ್ಯ ನೋಟದಲ್ಲಿ ಗಮನಾರ್ಹವಾದ ಬದಲಾವಣೆ ಆಗಿದೆ.

ಸಭಿಕರನ್ನೇ ನೇರವಾಗಿ ಉದ್ದೇಸಿಸಿ ಅವರು ಹೇಳಿದ್ದು:

ಬೊಂಬಾಯಿನ ಹದಿಮೂರು ಲಕ್ಷ ಜನಗಳ ಕೊಳಕು ಮತ್ತು ಕೊಳಚೆಯನ್ನು ನೋಡಿಕೊಳ್ಳಲು ನಿಮ್ಮ ಹಣೆಯ ಬರಹ ನಿಮ್ಮನ್ನು ನಿಯಮಿಸಿದೆ. ನಿಮ್ಮ ಇಡೀ ಜೀವನವನ್ನು ಈ ಕೊಳಕಿನ ಮಧ್ಯದಲ್ಲಿ ಕಳೆಯುತ್ತಿದ್ದೀರಿ.

ಇಲ್ಲಿ ನೆರೆದಿರುವ ಪ್ರತಿಯೊಬ್ಬರೂ, ಕಡೆಯಪಕ್ಷ ನಿಮ್ಮ ಮಕ್ಕಳು ಯಾರೂ ಇಂಥ ಯಾತನಾಮಯ ಜೀವನಕ್ಕೆ ಬೀಳದ ಹಾಗೆ ನೋಡಿಕೊಳ್ಳಬೇಕು; ಅವರು ನಿಮಗಿಂತ ಉತ್ತಮ ಶಿಕ್ಷಣ ಪಡೆಯಬೇಕು; ಅವರು ನಿಮಗಿಂತ; ಸಂತೋಷಕರವಾದ, ಸೌಕರ್ಯದಿಂದ ಕೂಡಿದ ನಾಗರೀಕ ಜೀವನವನ್ನು (ಆ ಅದೃಷ್ಟ ನಿಮಗಿಲ್ಲ) ಜೀವಿಸುವ ಹಾಗೆ ನೋಡಿಕೊಳ್ಳಬೇಕು.

ಸ್ವತಂತ್ರ ಕಾರ್ಮಿಕ ಪಕ್ಷದ ಕಟ್ಟಡ ನಿಧಿಗೆ ವಂತಿಗೆ ಕೊಟ್ಟ ಎಲ್ಲರಿಗೂ ತಮ್ಮ ವಂದನೆಗಳನ್ನು ತಿಳಿಸುತ್ತಾ, ಇತರ ಕೇಂದ್ರಗಳಲ್ಲಿನ ಕಾರ್ಮಿಕರೂ ಸಹ ಚೆಂಬೂರಿನ ಮೇಲ್ಪಂಕ್ತಿಯಂತೆ ಹಣಕೊಡುತ್ತಾರೆಂದೂ ಹೀಗಾಗಿ ಪಕ್ಷದ ಕಟ್ಟಡದ ಕೆಲಸವನ್ನು ಸಾಧ್ಯವಾದಷ್ಟು ಬೇಗ ಪ್ರಾರಂಭಿಸಬಹುದೆಂದೂ ಹೇಳಿದರು. ಡಾ. ಅಂಬೇಡ್ಕರ್ ಅವರಿಗಿಂತ ಮುಂಚೆ ಮಾತನಾಡಿದವರಲ್ಲಿ ಮಿ: ಜಿ.ಎಮ್. ಜಾಧವ್, ಪ್ರಾಂಶುಪಾಲ ಹೊಂಡೆ, ಮಿ. ಗಾಯಕ್‌ವಾಡ್, ಬೊಂಬಾಯಿ ಶಾಸನ ಸಭೆಯಲ್ಲಿ ನಾಸಿಕದಿಂದ ನಿಮ್ನ ವರ್ಗಗಳವರ ಪ್ರತಿನಿಧಿಯಾಗಿದ್ದ ಡಾ. ದೇವರುಖ್ ಕಾರ್ ಅವರು ಇದ್ದರು. ಮಿ.ಡಿ.ವಿ.ಪ್ರಧಾನ್ ಅಧ್ಯಕ್ಷತೆ ವಹಿಸಿದ್ದರು.

# ೩೩

# ನಾನು ಇಡೀ ಸಮುದಾಯದ ಒಳಿತಿಗಾಗಿ ಕೆಲಸ ಮಾಡಿದೆ, ಕೇವಲ ಅದರ ಒಂದು ಭಾಗಕ್ಕಾಗಿ ಮಾತ್ರವಲ್ಲ

ಭಾನುವಾರ, ೩ನೇ ಜುಲೈ ೧೯೩೮ರಂದು ಬೊಂಬಾಯಿ ಪರೇಲ್‌ನ ಆರ್.ಎಂ.ಭಟ್ ಪ್ರೌಢಶಾಲೆಯಲ್ಲಿ ನಡೆದ ರೋಹಿದಾಸ್ ಶಿಕ್ಷಣ ಸಮಾಜದ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಡಾ. ಬಿ.ಆರ್.ಅಂಬೇಡ್ಕರ್ ಹೇಳಿದ್ದು:

"ನಿಮ್ಮ ವರ್ಗಗಳವರಲ್ಲಿರುವ ಉಪಜಾತಿಗಳನ್ನು ತೊಡೆದು ಹಾಕುವುದಕ್ಕೆ ಅವರಿಗೆ ಒಲವಿದ್ದು, ಆ ಗುರಿಯ ಸಾಧನೆಗೆ ತಾವು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿದರು. ಮುಂದುವರೆದು ಅವರು, ವಿವಾಹದ ಪ್ರಶ್ನೆ ಬಂದಾಗ, ಅದನ್ನು ಬಲವಂತವಾಗಿ ಇತ್ಯರ್ಥಪಡಿಸಲು ಆಗುವುದಿಲ್ಲವೆಂದು ಹೇಳಿದರು. ಯಾವುದೇ ಮಹರ್ ಹೆಣ್ಣುಮಗಳನ್ನು ಚಮ್ಮಾರ್ ಹುಡುಗನೊಂದಿಗೋ ಅಥವಾ ಮಂಗ್ ಹುಡುಗನೊಂದಿಗೋ ಮಂತ್ರದಂಡ ಬೀಸಿ, ಬಲವಂತದಿಂದ ಮದುವೆ ಮಾಡಲೇಬೇಕೆಂದೇನೂ ಅಲ್ಲ. ಇಂಥ ವಿವಾಹಗಳನ್ನು ನಡೆಸಲು ಸಿದ್ಧವಿರುವವರಿಗೆ ಉತ್ತೇಜನ ಕೊಡುವುದು ಅವರಿಗೇ ಬಿಟ್ಟದ್ದು. ರಾಜಕೀಯ ಸಮಸ್ಯೆಯನ್ನು ಪರಾಮರ್ಶಿಸುತ್ತಾ, ಕಾಂಗ್ರೆಸ್ ನಾಯಕರುಗಳು ಕೆಲವರು ಕೆಲವು ನಿಮ್ಮ ವರ್ಗಗಳ ಮುಖಂಡರುಗಳನ್ನು ತಮ್ಮ ಪಕ್ಷದ ವಿರುದ್ಧ ಎತ್ತಿಕಟ್ಟಿ, ನಿಮ್ಮ ವರ್ಗಗಳವರ ನಡುವೆ ಒಡಕನ್ನು ಉಂಟುಮಾಡುತ್ತಿದ್ದಾರೆ. ಕಾಂಗ್ರೆಸ್‌ನವರ ಈ ಸುಳ್ಳು ಪ್ರಚಾರಕ್ಕೆ ಬಲಿಯಾಗಬೇಡಿ ಎಂದು ಅವರಿಗೆ ಮನವಿ ಮಾಡಿದರು. ತಾವು ಕಾಂಗ್ರೆಸ್ ಪಾಳಯದಲ್ಲಿ ಇಲ್ಲದೇ ಇರುವುದರಿಂದ ಕಾಂಗ್ರೆಸ್ ನಾಯಕರುಗಳು ಹರಿಜನ ನಾಯಕರುಗಳನ್ನು ತಲೆ ಸವರುತ್ತಿದ್ದಾರೆಂದು (ಪೂಸಿ ಮಾಡುತ್ತಿದ್ದಾರೆಂದು) ಹೇಳಿದರು.

ತಮ್ಮ ಸ್ವತಂತ್ರ ಕಾರ್ಮಿಕ ಪಕ್ಷದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇರುವವರು ಮಹರ್‌ಗಳು ಎನ್ನುವುದು ವಾಸ್ತವ. ಆದರೆ ನಿಮ್ಮ ವರ್ಗಗಳವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವವರು ಮಹರ್‌ಗಳೇ ಆಗಿರುವುದರಲ್ಲಿ ತಮ್ಮದೇನೂ ತಪ್ಪಿಲ್ಲವೆಂದು ಹೇಳಿದರು. ಹೇಗಾದರೂ ಈ ಪಂಗಡಗಳ ಭಾವನೆಗಳನ್ನ ತೊಡೆದು ಹಾಕುವುದಕ್ಕೆ ಇರುವ ಒಂದೇ ಮಾರ್ಗವೆಂದರೆ, ಬೇರೊಂದು ಧರ್ಮವನ್ನು ಸ್ವೀಕರಿಸುವುದೇ ಆಗಿದೆ ಎಂದು ಹೇಳಿದರು. ಹೇಗಾದರೂ ಡಾ. ಅಂಬೇಡ್ಕರ್ ಅವರ ಭಾಷಣದಲ್ಲಿ ಹೆಚ್ಚಿನ ಆಯಾಮಗಳಿದ್ದು, ಇದನ್ನು "ಟೈಮ್ಸ್ ಆಫ್ ಇಂಡಿಯಾ" ವರದಿ ಮಾಡಿದೆ.

ಆ ಆಯಾಮಗಳು ಹೀಗಿವೆ:

ನಿಮ್ಮ ವರ್ಗಗಳವರ ಬೇರೆ ಬೇರೆ ಪಂಗಡಗಳಲ್ಲಿ ಅಭಿಪ್ರಾಯ ಭೇದವಿರುವುದು ವ್ಯಸನಕರವಾಗಿದ್ದು, ಆದರೆ ಅವರ ಪರಿಶ್ರಮ ಯಾವುದೇ ಒಂದು ಭಾಗದ ಒಳಿತಿಗಾಗಿ ಅಲ್ಲದೆ, ಇಡೀ ಸಮುದಾಯದ ಒಳಿತಿಗಾಗಿ ಎಂದು ಹೇಳಿದರು. ತಮ್ಮ ಉದ್ಧಾರದ ಕೆಲಸದಲ್ಲಿ ಯಾವುದೇ ಪಂಗಡದ ಅಥವ ಉಪಜಾತಿಯ ಚಿಂತನೆಯನ್ನಾಗಲೀ ಅಥವ ನೀತಿಯನ್ನಾಗಲೀ ತಾವು ಮಾನ್ಯ ಮಾಡುವುದಿಲ್ಲವೆಂದರು. ಮುಂದುವರೆದು ಮಾತನಾಡುತ್ತಾ, ಚಮ್ಮಾರ ಸಮುದಾಯ ಸ್ವತಂತ್ರ ಕಾರ್ಮಿಕ ಪಕ್ಷದಿಂದ ದೂರ ಉಳಿದು, ಕಾಂಗ್ರೆಸ್ ಪಕ್ಷ ತಮ್ಮ ಅದೃಷ್ಟವನ್ನು ಉತ್ತಮ ಪಡಿಸುತ್ತದೆ ಎಂದು ನಂಬಿಕೊಂಡಿದ್ದಾರೆ. ಆದರೆ ಅವರ ನಂಬಿಕೆ ತಪ್ಪು

ತಿಳುವಳಿಕೆಯಿಂದ ಕೂಡಿದೆ ಎಂದರು. ವಿವಿಧ ಪಂಗಡಗಳಲ್ಲಿ ಐಕ್ಯತಾ ಮನೋಭಾವ ಇರಬೇಕೆಂದು ಅವರು ಮನವಿ ಮಾಡಿದರು. ಅಧ್ಯಕ್ಷರಾಗಿದ್ದ ಮಿ: ದೊಂಡೆ ಅವರು, ಸರ್ಕಾರ ಈಗ ಕೊಡಲು ಒಪ್ಪಿರುವ ವಿದ್ಯಾರ್ಥಿ ವೇತನ ಸಾಕಷ್ಟು ಇಲ್ಲವೆಂದೂ, ಅವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು ಹೇಳಿದರು.

ಪ್ರತಿಯೊಂದು ಜಿಲ್ಲೆಗೂ ಉಚಿತ ಬೋರ್ಡಿಂಗ್ ಶಾಲೆಯನ್ನು ಸಮುದಾಯಕ್ಕೆ ಕೊಡಬೇಕೆಂದೂ, ಇತ್ತೀಚಿನ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹುಡುಗ ಹುಡುಗಿಯರಿಗೆ, ಮೂರು ತಿಂಗಳುಗಳಲ್ಲಿ ಇನ್ನೊಂದು ಪರೀಕ್ಷೆಗೆ ಅನುಮತಿ ಕೊಡಬೇಕು ಎಂಬ ನಿರ್ಣಯಗಳನ್ನು ಸಭೆಯಲ್ಲಿ ಅನುಮೋದಿಸಲಾಯಿತು.

ಪದಾಧಿಕಾರಿಗಳಾಗಿ ಕೆಳಗೆ ಕಂಡ ಸದಸ್ಯರುಗಳನ್ನು ಚುನಾಯಿಸಲಾಯಿತು. ಮಿ. ಕೆ.ಆರ್.ಪಾವೇಕರ್ (ಅಧ್ಯಕ್ಷರು) ಮಿ. ಬಿ.ಜೆ. ದೇವರೂಕರ್ ಮತ್ತು ಮಿ. ಬಿ.ಜಿ.ವಾಗ್‌ಮೋರೆ (ಕಾರ್ಯದರ್ಶಿಗಳು) ಮತ್ತು ೪೦ ಮಂದಿ ಸದಸ್ಯರುಗಳನ್ನು ಚುನಾಯಿಸಲಾಯಿತು.

೫೬

# ತೆರಿಗೆಗಳನ್ನು ರೈತರಿಗಾಗಿ ಮಾತ್ರ ಉಪಯೋಗಿಸಬೇಕು

ಜುಲೈ ೧೯೩೯ರಲ್ಲಿ ನಾಸಿಕದ ಹನ್ಸ್‌ರಾಜ್ ಪಿ. ಥ್ಯಾಕರೆ ಕಾಲೇಜಿನ ಅಧಿಕಾರಿಗಳು, ಡಾ. ಅಂಬೇಡ್ಕರ್ ಅವರಿಗಾಗಿ ಒಂದು ಚಹಾ ಕೂಟವನ್ನು ಏರ್ಪಡಿಸಿದ್ದರು. ಅವರಿಗೆ ಬರವಣಿಗೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಡಾ. ಅಂಬೇಡ್ಕರ್ ಹೇಳಿದ್ದು.

ತೆರಿಗೆಗಳ ರೂಪದಲ್ಲಿ ಸರ್ಕಾರ ಎತ್ತುತ್ತಿರುವ ಹಣವನ್ನು ರೈತರುಗಳ ಸಾಲವನ್ನು ತೀರಿಸುವುದಕ್ಕಾಗಿ, ಬಡತನದ ವಿರುದ್ಧ ಹೋರಾಡುವುದಕ್ಕಾಗಿ, ಮತ್ತು ಶಿಕ್ಷಣವನ್ನು ಕೊಡುವುದಕ್ಕಾಗಿ ಉಪಯೋಗಿಸಬೇಕು; ಆದರೆ ತುರ್ತು ಸಮಸ್ಯೆಗಳಿಗಿಂತ ಹೆಚ್ಚಾದ ಆದ್ಯತೆಯನ್ನು ಮದ್ಯಪಾನ ನಿಷೇಧಕ್ಕೆ ಕೊಟ್ಟರೆ, ಇದನ್ನು ಮಾಡಲು ಆಗುವುದಿಲ್ಲ ಎಂದು ಹೇಳಿದರು. ಸರ್ ಸಿಕಂದರ್ ಹಯಾತ್ ಖಾನ್ ಅವರು ಪ್ರಾಯೋಜಿಸಿದ ಭಾರತದ ವಿಭಜನೆಯ ಕುರಿತಾದ ವಲಯ ಯೋಜನೆಗೆ ತಮ್ಮ ಒಪ್ಪಿಗೆ ಇದೆಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಈ ಏಳು ವಲಯಗಳನ್ನು ತಾವು ಬೆಂಬಲಿಸುವುದಿಲ್ಲವೆಂದೂ, ಪಾಕಿಸ್ತಾನವನ್ನು ಸ್ಥಾಪನೆ ಮಾಡುವ ದಿಕ್ಕಿನಲ್ಲಿ ಇದು ಒಂದು ಹೆಜ್ಜೆ ಎಂದು ತಮ್ಮ ಸಂಶಯವೆಂದೂ ಹೇಳಿದರು. ಬ್ರಿಟಿಷ್ ಆಡಳಿತದ ಬಗ್ಗೆ ಹೇಳುತ್ತಾ, ಎಲ್ಲಾ ದೋಷಗಳು ಮತ್ತು ದುರ್ಬಲತೆಗಳನ್ನು ಬಿಟ್ಟರೆ ಅವರ ಅಭಿಪ್ರಾಯದಲ್ಲಿ ಬ್ರಿಟಿಷ್ ಆಡಳಿತ ಎರಡು ಉಪಯೋಗಗಳನ್ನು ಮಾಡಿಕೊಟ್ಟಿದೆ ಎಂದರು: ಒಂದು ಕೇಂದ್ರ ಸರ್ಕಾರ, ಬೇರೆ ಬೇರೆ ಧರ್ಮಗಳಿಗೆ ಸೇರಿದ ಜನರುಗಳಲ್ಲಿ ತಾವೆಲ್ಲಾ ಒಂದೇ ಸರ್ಕಾರದ ಭಾಗವೆಂದು ಮೂಡಿಸಿದ ಭಾವನೆ ಎಂದರು.

## ೫೭
# ಮದರ್ ವತನ್ ಎನ್ನುವುದು ಒಂದು ಹೃದಯಶೂನ್ಯ ಶೋಷಣೆ

ಮದರ್ ಮತ್ತು ಮಾಂಗ್ ವತನ್‌ದಾರರ ಅನೇಕ ಕುಂದು ಕೊರತೆಗಳನ್ನು ಪರಿಹಾರ ಮಾಡಲು ಬೊಂಬಾಯಿ ಪ್ರಾಂತ್ಯದ ಎಲ್ಲೆಡೆಯು ನಡೆಸುತ್ತಿದ್ದ ಸತ್ಯಾಗ್ರಹ ಚಳುವಳಿ ಮತ್ತು ಸರ್ವತ್ರ ಮುಷ್ಕರದ ನಿರೀಕ್ಷಿತ ಫಲಿತಾಂಶವನ್ನು ನೋಡಲು ಅಹ್ಮದ್ ನಗರದಲ್ಲಿ ವಾರಾಂತ್ಯದಲ್ಲಿ ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮ್ಮೇಳನವನ್ನು ಏರ್ಪಡಿಸಲಾಗಿತ್ತು.

ಶಾಸನ ಸಭೆಯ ಹೆಚ್ಚು ಕಡಿಮೆ ಸ್ವತಂತ್ರ ಕಾರ್ಮಿಕ ಪಕ್ಷದ ಎಲ್ಲಾ ಸದಸ್ಯರೂ ಹಾಜರಿದ್ದರು.

ಗ್ರಾಮಾಧಿಕಾರಿಗಳ ಉಗಮವನ್ನು ಅನ್ವೇಷಿಸುತ್ತಾ ಡಾ. ಅಂಬೇಡ್ಕರ್ ಹೇಳಿದ್ದು:

ಮರಾಠರ ಆಳ್ವಿಕೆಯ ಕಾಲದಲ್ಲಿ ೧೨ ವಿವಿಧ ಅಧಿಕಾರಿಗಳು ಇದ್ದರು; ಅವರೆಂದರೆ ಪಟೇಲ್, ಕುಲಕರ್ಣಿ, ದೇಸಾಯಿ, ನ್ಹಾವಿ (ಕ್ಷೌರಿಕ), ಸೂವರ್ (ಬಡಗಿ) ಮುಸಲ್ಮಾನ್ ಇತ್ಯಾದಿ. ಇವರುಗಳಿಗೆ ನಿರ್ದಿಷ್ಟವಾದ ಕರ್ತವ್ಯಗಳನ್ನು ವಹಿಸಲಾಗಿದ್ದು, ಈ ಕರ್ತವ್ಯವನ್ನು ಮಾಡುವುದಕ್ಕಾಗಿ ಅವರಿಗೆ ಭೂ ಕಂದಾಯವನ್ನು ಮಾಫಿ ಮಾಡಿ ಭೂಮಿಯನ್ನು ಕೊಡಲಾಗಿತ್ತು.

ಬ್ರಿಟಿಷರು ಬಂದ ಮೇಲೆ ವತನ್ ಭೂಮಿಯ ಮೂಲಕ ಮಾಡುತ್ತಿದ್ದ ಸಂದಾಯವನ್ನು ರದ್ದುಪಡಿಸಲಾಯಿತು. ಇದನ್ನು ಮಹರ್‌ಗಳ ವಿನಾ ಎಲ್ಲರಿಗೂ ಅನ್ವಯಿಸಲಾಯಿತು. ಅದರ ಬದಲು ನಿಯತವಾದ ಸಂಬಳಗಳನ್ನು ಗೊತ್ತು ಮಾಡಿ ಜನಗಳನ್ನು ನೇಮಕ ಮಾಡಲಾಯಿತು.

ಈ ಹಳೆಯ ವ್ಯವಸ್ಥೆಯ ರದ್ದು ವಿಧಾನದಲ್ಲಿ ಸ್ವಾರಸ್ಯಕರವಾದದ್ದು ಏನೆಂದರೆ, ನೂರಾರು ಪ್ರಕರಣಗಳಲ್ಲಿ ಮಾಜಿ ಪಟೇಲರುಗಳು, ಕುಲಕರ್ಣಿಗಳು, ತಲಾಟಿಗಳು, ಇತ್ಯಾದಿಯವರಿಗೆ, ಅವರ ಭೂಮಿಗಳನ್ನು ಅವರಲ್ಲೇ ಉಳಿಸಿಕೊಳ್ಳಲು ಅನುಮತಿ ಕೊಟ್ಟು, ವತನ್ ಭೂಮಿಗಳ ಮೇಲಿನ ಕಂದಾಯವನ್ನು ನಾಮ ಮಾತ್ರ ಹೆಚ್ಚಿಸಲಾಯಿತು. ಹೀಗಾಗಿ, ಸರ್ಕಾರ ಈ ದಿನದಲ್ಲಿ ಈ ಸರ್ಕಾರಿ ಗ್ರಾಮಾಧಿಕಾರಿಗಳ ವಂಶಸ್ಥರಿಗೆ ಅವರಿಗೆ ಮಾಡಲು ಯಾವ ಕೆಲಸವಿಲ್ಲದಿದ್ದರೂ ಸಹ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ, ಮಹರ್ ವತನ್‌ದಾರರುಗಳ ಹಣೆಬರಹ ಬೇರೆಯದಾಗಿತ್ತು; ಮಹರ್‌ಗಳಲ್ಲಿ ಪ್ರತಿಯೊಬ್ಬನೂ ಒಬ್ಬ ವತನ್‌ದಾರನಾಗಿದ್ದಾನೆ. ಆ ಆನುವಂಶಿಕ ಅಧಿಕಾರವನ್ನು ಬ್ರಿಟಿಷರು ರದ್ದುಪಡಿಸಲಿಲ್ಲ. ಮಹರ್‌ಗಳು ತಮ್ಮ ಕರ್ತವ್ಯಗಳನ್ನು ಎಂದಿನಂತೆ ಮುಂದುವರೆಸಿಕೊಂಡು ಬಂದರು. ಆದರೆ ರಿಯಾಯಿತಿ ಭೂಕಂದಾಯದ "ಜೂಡಿ"ಯನ್ನು ಹೆಚ್ಚಿಗೆ ಮಾಡಲಾಯಿತು.

### ಅನ್ಯಾಯದ ಕರಭಾರ

ಸರ್ಕಾರ ಇದನ್ನು ತನಿಖೆಗೊಳಪಡಿಸಿ ೧೮೭೪ರಲ್ಲಿ ಒಂದು ಅಧಿನಿಯಮವನ್ನು ಜಾರಿಗೆ ತಂದರು. ಅದರ ಪ್ರಕಾರ ವತನ್ ಭೂಮಿಗಳನ್ನು ಪರಭಾರೆ ಮಾಡುವ ಹಾಗಿರಲಿಲ್ಲ; ಮತ್ತು ಅದರ ಮೇಲಿನ ಕರಭಾರವನ್ನು ಹೆಚ್ಚಿಗೆ ಮಾಡುವ ಹಾಗಿರಲಿಲ್ಲ. ಮಹರ್ ವತನದಾರರುಗಳಿಗೆ ಪ್ರಯೋಜನಕಾರಿಯಾಗುವ ಹಾಗೆ ಇದ್ದರೆ ಮಾಡಬಹುದಾಗಿತ್ತು.

ಇಷ್ಟೆಲ್ಲಾ ಆದರೂ ನಿಮ್ನ ವರ್ಗಗಳವರ ಹಿತವನ್ನು ಕಾಯುತ್ತೇವೆಂದು ಹೇಳಿಕೊಂಡು, ಸರ್ಕಾರಕ್ಕೆ ತನ್ನ ಆದಾಯಗಳನ್ನು ಬೇರೆ ಬೇರೆ ರೀತಿಗಳಲ್ಲಿ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವಿದ್ದರೂ ಸಹ, ಬಡತನದಲ್ಲಿ ತೊಳಲಾಡುತ್ತಿದ್ದವರ ಮೇಲೆ ಹೆಚ್ಚಿಗೆ ಕಂದಾಯವನ್ನು ಹೇರಿ ಪ್ರಹಾರ ಮಾಡಿದರು.

ಇದು ಅನ್ಯಾಯ ಮತ್ತು ಅನೀತಿಯುತವಾಗಿದ್ದು, ಅದು ಈಗ ಅಸ್ತಿತ್ವದಲ್ಲಿದ್ದು, ಶಾಸನದ ಪುಸ್ತಕದಲ್ಲಿ ಈಗಲೂ ಉಳಿದುಕೊಂಡಿರುವ ಕಾನೂನನ್ನು ಉಲ್ಲಂಘನೆ ಮಾಡಿರುವುದರಿಂದ ಅದು ಕಾನೂನು ಬಾಹಿರವೂ ಅಲ್ಲದೆ ಅಸಂವೈಧಾನಿಕವೂ ಆಗಿದೆ. ಸರ್ಕಾರ ತಮ್ಮ ಈ ಕರ್ತವ್ಯಲೋಪವನ್ನು ಗ್ರಹಿಸಿಕೊಂಡು ಆದೇಶವನ್ನು ರದ್ದು ಮಾಡುವವರೆಗೂ, ಮಹರ್ ವತನ್‌ದಾರರುಗಳು ಅಧಿಕಾರಿಗಳ ವಿರುದ್ಧ ಬಂಡಾಯವನ್ನು ಘೋಷಣೆ ಮಾಡುವುದೂ ಅಲ್ಲದೆ ಗ್ರಾಮದಲ್ಲಿನ ತಮ್ಮ ಕೆಲಸವನ್ನು ಮಾಡುವುದಕ್ಕೆ ನಿರಾಕರಿಸುತ್ತಾರೆ.

ನಾವೇಕೆ ಇದರ ಬಗ್ಗೆ ಇಷ್ಟು ಗಂಭೀರವಾಗಿದ್ದೇವೆ? ಕಾರಣವೆಂದರೆ, ಕಾಂಗ್ರೆಸ್ ಸರ್ಕಾರ ಹೇರಿದ ಈ ಹೆಚ್ಚುವರಿ ಹೊರೆ ಇಲ್ಲದಿದ್ದರೂ ಕೂಡ, ಮಹರ್ ವತನ್ ಸಂಸ್ಥೆ ಒಂದು ಹೃದಯ ಶೂನ್ಯ ಶೋಷಣೆಯಾಗಿದೆ.

ಸಾವಿರಾರು ಮಹರ್‌ಗಳು ನರಳಿದ ಇನ್ನೊಂದು ದೊಡ್ಡ ಸಂಕಷ್ಟವಿತ್ತು. ಪ್ರಾಂತ್ಯದಲ್ಲಿ ಲೆಕ್ಕವಿಲ್ಲದಷ್ಟು ಗ್ರಾಮಗಳಿದ್ದು, ಅಲ್ಲಿನ ಮಹರ್‌ಗಳು ತಮಗೆ ಕೊಟ್ಟ ಎಲ್ಲಾ ಕೆಲಸಗಳನ್ನು ಮಾಡಬೇಕಾಗಿದ್ದು, ಅವರಿಗೆ ವತನ್ ಭೂಮಿಯೂ ಇಲ್ಲ ಬೇರೆ ಯಾವುದೇ ತರಹದ ಸಂಭಾವನೆಯೂ ಇಲ್ಲ. ವಾಸ್ತವವಾಗಿ ಇದು ಬಲವಂತದ ಪುಗಸಟ್ಟೆ ಕೆಲಸವಾಗಿತ್ತು. ಇದನ್ನು ಕೊನೆಗಾಣಿಸಲೇ ಬೇಕಾಗಿತ್ತು. ಇವುಗಳ ಸಂಬಂಧವಾಗಿ ಮತ್ತು ಇತರ ಕುಂದುಕೊರತೆಗಳ ಬಗ್ಗೆ, ಗವರ್ನರ್ ಅವರಿಗೆ ಒಂದು ನಿಯೋಗವನ್ನು ಕಳುಹಿಸಬೇಕೆಂದು ಪ್ರಸ್ತಾಪ ಮಾಡಿ ಅವರ ಗಮನಕ್ಕೆ ಎಲ್ಲಾ ಸಂಗತಿಗಳನ್ನು ತಂದು ಪರಿಹಾರವನ್ನು ಪಡೆದುಕೊಳ್ಳಬೇಕೆಂಬುದು ಅವರ ಪ್ರಸ್ತಾವನೆಯಾಗಿತ್ತು. ನಂತರ ಕಾಂಗ್ರೆಸ್ ಪಕ್ಷವನ್ನು ಕುರಿತು ಡಾ. ಅಂಬೇಡ್ಕರ್ ಹೇಳಿದ್ದು:

ಕಾಂಗ್ರೆಸ್ ಪಕ್ಷ ಪೂರ್ಣ ಸ್ವರಾಜ್ಯಕ್ಕೆ ಕಾಯದೆ ಇಷ್ಟು ಬೇಗ ತಮ್ಮ ಬಣ್ಣವನ್ನು ಬಯಲು ಮಾಡಿದ್ದು ಒಳ್ಳೆಯದೇ ಆಯಿತು. ಸ್ವರಾಜ್ಯ ಬಂದ ಮೇಲೆ, ವಿಷಯಗಳನ್ನು ಸರಿಪಡಿಸುವುದಕ್ಕೆ ವಿಪರೀತ ಕಷ್ಟವಾಗಿ ಬಿಡುತ್ತಿತ್ತು ಎಂದು ಹೇಳಿದರು. ಈಗ ನಾವು ಆ ಪಾಠವನ್ನು ಮರೆಯುವುದಿಲ್ಲ. ನಾವು ಕಾಂಗ್ರೆಸ್‌ನಷ್ಟು ಬಲಶಾಲಿಗಳಾಗಿರದೇ ಇರಬಹುದು. ನಮ್ಮ ಜನಸಂಖ್ಯೆ ಅವರಷ್ಟಿಲ್ಲದೇ ಇರಬಹುದು. ನಮಗೆ ತಿನ್ನುವುದಕ್ಕೆ ಒಂದು ಒಣ ಬ್ರೆಡ್ ಚೂರು ಸಿಕ್ಕಿದರೂ, ಅದನ್ನು ನಮ್ಮ ಸಂಗಾತಿಗಳೊಂದಿಗೆ ಹಂಚಿಕೆ ಮಾಡಿಕೊಳ್ಳಬೇಕೆಂಬ ಸಾಮಾಜಿಕ ಜೀವನದ ನೀತಿಯಲ್ಲಿ ನಂಬಿಕೆ ಇಟ್ಟುಕೊಂಡಿದ್ದೇವೆ. ಕಾಂಗ್ರೆಸ್‌ನವರಿಗೆ ಒಣ ಬ್ರೆಡ್ ಬೇಕಾಗಿಲ್ಲ. ಅವರಿಗೆ ಬೇಕಾಗಿರುವುದು ಭರ್ತಿ ಹಬ್ಬದೂಟ; ಅದನ್ನು ತಾವು ಮಾತ್ರ ಅನುಭವಿಸಬೇಕೆಂಬುದು ಅವರ ಅಪೇಕ್ಷೆ. ಬೇರೆಯವರನ್ನು ಉಪವಾಸ ಕೆಡವಲು ಅವರು ಬಯಸುತ್ತಾರೆ.

ಒಳ್ಳೆಯದು. ಅವರ ಕೈಗಳಿಂದ ಊಟದ ತಟ್ಟೆಗಳನ್ನು ಕಿತ್ತುಕೊಳ್ಳುವುದಕ್ಕೆ ನಮಗೆ ಸಾಧ್ಯವಾಗದೆ ಇರಬಹುದು. ಆದರೆ ಒಂದನ್ನಂತೂ ನಮಗೆ ಮಾಡಲು ಸಾಧ್ಯವಿದೆ. ಅವರ ಹಬ್ಬದೂಟಕ್ಕೆ ಒಂದು ಹಿಡಿ ಮಣ್ಣನ್ನು ಹಾಕಲು ನಮಗೆ ಸಾಧ್ಯ.

## ೫೮
## ನಿಮ್ನ ವರ್ಗಗಳವರಿಗೆ ಸರ್ಕಾರ ಏನನ್ನೂ ಮಾಡಿಲ್ಲ

ಈ ಸಮ್ಮೇಳನವನ್ನು ೨೪.೧೨.೧೯೩೯ರಂದು ಸತಾರ ಜಿಲ್ಲೆಯ ಅಂಕಲಕೊಪ್ಪ ಗ್ರಾಮದಲ್ಲಿ ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸುಮಾರು ೨೦೦೦ ಜನ ಸಮ್ಮೇಳನದಲ್ಲಿ ಹಾಜರಿದ್ದರು. ನಿಮ್ನ ವರ್ಗಗಳವರಿಗೆ ಡಾ. ಅಂಬೇಡ್ಕರ್ ಅವರು ಮಾಡಿರುವ ಕೆಲಸಕ್ಕೆ ಭಾಷಣಕಾರರು ತಮ್ಮ ಮೆಚ್ಚುಗೆಯನ್ನು ಸೂಚಿಸಿ, ಅವರಿಗೆ ನಿಮ್ಮ ಬೆಂಬಲವನ್ನು ಕೊಡಿ ಎಂದು ಒತ್ತಾಸೆ ಮಾಡಿದರು.

ಕಾಂಗ್ರೆಸ್ ಸರ್ಕಾರ ನಿಮ್ನ ವರ್ಗಗಳರಿಗೆ ಏನನ್ನೂ ಮಾಡಿಲ್ಲವೆಂದೂ, ಆದರೆ ಅದರ ಬದಲು ಇನಾಮು ಮತ್ತು ಮಹರ್ಕಿ ಭೂಮಿಗಳ ಮೇಲೆ ಭೂಕಂದಾಯವನ್ನು ಹೆಚ್ಚಿಸಿದ್ದಾರೆಂದೂ ಹೇಳಿದರು. ಮಹರ್‌ಗಳು ಹಳ್ಳಿಯಲ್ಲಿ ಮಾಡಬೇಕಾದ ದುಡಿಮೆಗೆ ಮಿತಿಯಿರಬೇಕೆಂದೂ, ಮಾಡಿದ ಕೆಲಸಕ್ಕೆ ಸರಿಯಾದ ಸಂಭಾವನೆಯನ್ನು ಕೊಡಬೇಕು ಎಂದು ಹೇಳಿದರು. ಆರು ತಿಂಗಳುಗಳ ಒಳಗೆ ಅವರ ಕುಂದುಕೊರತೆಗಳನ್ನು ನಿವಾರಿಸದೇ ಹೋದರೆ, ಮಹರ್‌ಗಳು ಕೆಲಸವನ್ನು ನಿಲ್ಲಿಸುವುದಕ್ಕೆ ತಯಾರಾಗಿರಬೇಕೆಂದು ಹೇಳಿದರು.

## ೫೯
## ಅಸ್ಪೃಶ್ಯತೆಯ ಪಾಪಕ್ಕೆ ಹಿಂದೂಗಳೇ ಹೊಣೆಗಾರರು

೨೬.೧೨.೧೯೩೯ರಂದು ಬೆಳಗಾವಿಯಲ್ಲಿ ಬೆಳಗಾವಿ ಪುರಸಭೆಯವರು ಒಂದು ಸ್ವಾಗತ ಬಿನ್ನವತ್ತಳೆಯನ್ನು ಡಾ. ಅಂಬೇಡ್ಕರ್ ಅವರಿಗೆ ಸಮರ್ಪಿಸಿದರು.

ಬಿನ್ನವತ್ತಳೆಗೆ ಉತ್ತರಿಸುತ್ತಾ ಸವರ್ಣೀಯ ಹಿಂದೂಗಳೇ ಅಸ್ಪೃಶ್ಯತೆಯ ಪಾಪಕ್ಕೆ ಜವಾಬ್ದಾರರೆಂದು ಡಾ. ಅಂಬೇಡ್ಕರ್ ಹೇಳಿದರು. ಹರಿಜನರ ಉದ್ಧಾರಕ್ಕಾಗಿ ತಾವು ಕೆಲಸ ಮಾಡಿ ಇದನ್ನು ತೊಡೆದು ಹಾಕಲು ಪ್ರಯತ್ನ ಪಡುತ್ತಿರುವುದಾಗಿ ಹೇಳಿದರು. ಸ್ವರಾಜ್ಯವನ್ನು ಗೆಲ್ಲುವುದಕ್ಕಿಂತ ಹರಿಜನರ ಸಮಸ್ಯೆಯನ್ನು ತುರ್ತಾಗಿ ಎದುರಿಸಬೇಕಾಗಿದೆ ಎಂದರು.

## ೬೦
## ಸೇನೆಯಲ್ಲಿ ಮೊದಲಿನ ಸ್ಥಾನವನ್ನು ಪುನಃ ಪಡೆದುಕೊಳ್ಳಿ

೨೮ನೇ ಜನವರಿ ೧೯೪೦ರಂದು ಡಾ. ಅಂಬೇಡ್ಕರ್ ಅವರು ರತ್ನಗಿರಿಗೆ ಭೇಟಿ ಕೊಟ್ಟರು. ಅಲ್ಲಿ ಅವರನ್ನು ಮಹರ್ ಸೇನೆಗೆ ಹೊಸದಾಗಿ ಭರ್ತಿಯಾದ ಸೈನಿಕರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಅವರು ಸ್ಪೃಶ್ಯ ಕುನ್‌ಬಿಗಳಿಗೂ ಮತ್ತು ಮಹರ್‌ಗಳಿಗೂ ಮುಂದೆ ಬಂದು ಸೈನ್ಯವನ್ನು ಸೇರಿಕೊಳ್ಳುವಂತೆ ಮನವಿ ಮಾಡಿದರು; ಇತ್ತೀಚೆಗೆ ಸೈನಿಕರಾಗಿ ಭರ್ತಿಯಾದ ಮಹರ್‌ಗಳು ಹಿಂದಿನ ದಿನ ಸಾಯಂಕಾಲ ಬಂದು, ತಮ್ಮ ಗೌರವಾರ್ಪಣೆ ಮಾಡಿದರು. ಸೈನ್ಯಕ್ಕೆ ಭರ್ತಿಯಾಗಲು ಅವರು ತೀರ್ಮಾನಿಸಿದ್ದಕ್ಕೆ ಡಾ. ಅಂಬೇಡ್ಕರ್ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಅವರುಗಳು ಹಿಂದೆ ಒಳ್ಳೆಯ ಸೇವೆಯನ್ನು ಸಲ್ಲಿಸಿದ್ದಾಗ್ಯೂ ಜಾತಿಗಳ ಪೂರ್ವಾಗ್ರಹದಿಂದಾಗಿ, ಸೇನೆಯಲ್ಲಿನ ಉದ್ಯೋಗವಕಾಶ ಅವರಿಗೆ ಮುಚ್ಚಿದ್ದು, ಒಂದು ಕಾಲದಲ್ಲಿ ಬೊಂಬಾಯಿ ಸೈನ್ಯದಲ್ಲಿ ೩/೪ರಷ್ಟು ಮಹರ್ ಸೈನಿಕರೇ ಇದ್ದು, ಬ್ರಿಟಿಷ್‌ರೊಡನೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಹೋರಾಡಿದ್ದರು; ಆ ಯುದ್ಧಗಳಲ್ಲಿ ಕೋರೆಗಾಂವ್ ಯುದ್ಧವೂ ಸೇರಿದ್ದು, ಅದರಲ್ಲಿ ಪೇಶ್ವೆಗಳನ್ನು ಸೋಲಿಸಿ ಬ್ರಿಟಿಷರು ತಮ್ಮ ಹಿರಿಮೆಯನ್ನು ಸ್ಥಾಪಿಸಿದ್ದರು.

೧೮೫೭ರ ದಂಗೆಯ ನಂತರ, ಇತರ ವರ್ಗಗಳವರೂ ಸೇನೆಗೆ ಭರ್ತಿಯಾದರು. ಅವರ ಪೂರ್ವಾಗ್ರಹ ಗಳಿಗೆ ಮಾನ್ಯತೆ ಕೊಡಬೇಕಾಗಿ ಬಂದಿದ್ದರಿಂದ, ಮಹರ್‌ಗಳನ್ನು ಭರ್ತಿ ಮಾಡಿಕೊಳ್ಳುವುದನ್ನು ನಿಲ್ಲಿಸಲಾಯಿತು. ಹೊಸದಾಗಿ ಭರ್ತಿಯಾದವರಿಗೆ ಸೇನೆಯಲ್ಲಿ ತಮ್ಮ ಹಿಂದಿನ ಸ್ಥಾನವನ್ನು ಪುನಃ ಪಡೆದುಕೊಳ್ಳುವ ಹೊಣೆಗಾರಿಕೆ ಇಂದೆ ಎಂದು ಹೇಳಿದರು.

# ೬೧

# ಭಾರತ ಸರ್ಕಾರದ ಅಧಿನಿಯಮ ಮತ್ತು ಪೂನಾ ಕೌಲಿನ ಕೆಳಗೆ ಕೊಟ್ಟಿರುವ ರಕ್ಷಣೋಪಾಯಗಳು ಸಾಕಷ್ಟು ಇಲ್ಲ

ಭಾನುವಾರ ರಾತ್ರಿ, ೪ನೇ ಫೆಬ್ರವರಿ ೧೯೪೦ರಂದು ಮಜ್ಗಾಂವ್‌ನಲ್ಲಿ ೪೦,೦೦೦ಕ್ಕೂ ಮಿಕ್ಕು ಪುರುಷರು ಮತ್ತು ಮಹಿಳೆಯರು ಒಂದು ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ರ‍್ಯಾಲಿಯನ್ನು ಎಸ್.ಸಿ.ಜೋಷಿ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಐದು ಮೈಲಿ ಉದ್ದದ ಮೆರವಣಿಗೆ, ಆ ಸಭೆಯಲ್ಲಿ ಮುಕ್ತಾಯವಾಗಿತ್ತು. ಮೆರವಣಿಗೆ ಡಾ. ಅಂಬೇಡ್ಕರ್ ಅವರ ಮನೆಯಿಂದ ಪ್ರಾರಂಭವಾಗಿದ್ದು, ಸ್ವತಂತ್ರ ಪಕ್ಷದ ಕೊಲಾಬಾ ಜಿಲ್ಲಾ ಶಾಖೆಯ ಅಧ್ಯಕ್ಷರಾದ ಸುರೇಂದ್ರನಾಥ ಟಿಪ್‌ನಿಸ್ ಅವರ ಗೌರವಾರ್ಥ ಏರ್ಪಡಿಸಲಾಗಿತ್ತು. ಖೋಟ್ ವ್ಯವಸ್ಥೆಯನ್ನು ರದ್ದುಪಡಿಸಬೇಕೆಂದು ಅವರು ಮಾಡಿದ ಭಾಷಣದ ಸಂಬಂಧ ಅವರನ್ನು ಮೂರು ತಿಂಗಳುಗಳ ಜೈಲು ಶಿಕ್ಷೆಗೆ ಗುರಿ ಮಾಡಲಾಗಿದ್ದು, ಧಾರಾ ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು. ಪಕ್ಷದ ಅನೇಕ ನಾಯಕರುಗಳು, ಶಾಸನ ಸಭೆಯಲ್ಲಿ ಪಕ್ಷದ ಸದಸ್ಯರು, ಅಲ್ಲದೇ ಸೇವಾದಳದವರು ಎಲ್ಲಾ ಸೇರಿ ಸುಮಾರು ೧೦೦೦ ಜನ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಘೋಷಣೆಗಳನ್ನು ಕೂಗುತ್ತಾ ಹರ್ಷಧ್ವನಿಗಳನ್ನು ಮಾಡುತ್ತಾ, ಜನ ನಿಬಿಡ ಕಾರ್ಮಿಕ ವರ್ಗದ ಬಸದಿಗಳ ಮೂಲಕ, ಮೆರವಣಿಗೆ ನಿಧಾನವಾಗಿ ಹರಿದು ಬಂದಿತು.

ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಅಂಬೇಡ್ಕರ್ ಅವರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಹೀಗೆ ಹೇಳಿದರು:

ಭಾರತ ಸರ್ಕಾರದ ಅಧಿನಿಯಮ ಮತ್ತು ಪೂನಾ ಕೌಲಿನ ಕೆಳಗೆ ಒದಗಿಸಲ್ಪಟ್ಟಿರುವ ರಕ್ಷಣೋಪಾಯಯಗಳು, ನಿಮ್ಮ ವರ್ಗಗಳವರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಏನೇನೂ ಸಾಲದಾಗಿದೆಯೆಂದೂ, ಈ ವರ್ಗಗಳವರು ತತ್‌ಕ್ಷಣವೇ ತಮ್ಮ ಗಮನವನ್ನು ಒಂದು ಸವಿವರವಾದ ಮತ್ತು ಸಮಗ್ರವಾದ ಗಟ್ಟಿ ಪ್ರಸ್ತಾವನೆಗಳನ್ನು ಮತ್ತು ಷರತ್ತುಗಳನ್ನು ರೂಪಿಸುವುದರತ್ತ ಹರಸಬೇಕೆಂದೂ ಹೇಳಿ ಆಡಳಿತ ವರ್ಗದವರೊಂದಿಗೆ ನಿಮ್ಮ ಸಹಕಾರ ಭವಿಷ್ಯದಲ್ಲಿ ಇದರ ಮೇಲೆಯೇ ಅವಲಂಬಿತವಾಗಿರುತ್ತದೆ ಎಂದು ಹೇಳಿದರು.

## ೬೨

# ಹಿಂದೂ ಸಮಾಜ ತನ್ನ ಪುರಾತನ ಚೌಕಟ್ಟನ್ನು ಕಿತ್ತುಹಾಕಿ ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳ್ಳಬೇಕು

ಡಾ. ಅಂಬೇಡ್ಕರ್ ಅವರು ಮಾರ್ಚ್ ತಿಂಗಳ ೧೯ನೇ ತಾರೀಖನ್ನು 'ಅಸ್ಪೃಶ್ಯರ ಸ್ವಾತಂತ್ರ್ಯದ' ದಿನ ಎಂದು ಘೋಷಣೆ ಮಾಡಿದರು. ಅದು ೧೯೨೭ನೆ ಇಸವಿಯಲ್ಲಿ ಒಂದು ದಿನವಾಗಿದ್ದು, ಆ ದಿನ ಮಹಾಡ್‌ನಲ್ಲಿ ಅಸ್ಪೃಶ್ಯರ ಒಂದು ಚಾರಿತ್ರಿಕ ಸಭೆಯನ್ನು ಕರೆಯಲಾಗಿತ್ತು. ಆ ಸಭೆಯಲ್ಲಿ ಡಾ. ಅಂಬೇಡ್ಕರ್ ಅವರು ಪ್ರಜಾಪ್ರಭುತ್ವದ ಮೂರು ನೀತಿಗಳು ಯಾವುವೆಂದು ಘೋಷಿಸಿದರು; ಅವುಗಳೆಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಎಂದರು. ಅದನ್ನು ವಿಶೇಷ ಸಮಾರಂಭವೆಂದು ಸ್ಮರಿಸಿಕೊಳ್ಳುವುದಕ್ಕಾಗಿ, ೧೯ನೇ ಮಾರ್ಚ್ ೧೯೪೦ರಂದು ಮಹಾಡ್‌ನಲ್ಲಿ ಸ್ವತಂತ್ರ್ಯ ಕಾರ್ಮಿಕ ಪಕ್ಷದ ಆಶ್ರಯದಲ್ಲಿ ಅಸ್ಪೃಶ್ಯರ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಒಂದು ಕೈಪಿಡಿಯನ್ನು ಪ್ರಸಿದ್ಧಿಸಲಾಯಿತು. ಅದರಂತೆ ನಿಮ್ನ ವರ್ಗಗಳವರು ೧೯ನೇ ಮಾರ್ಚ್ ೧೯೪೦ ಅನ್ನು ತಮ್ಮ ಸ್ವಾತಂತ್ರ್ಯ ದಿನವೆಂದು ಆಚರಿಸಿದರು.

ಮಹಾಡ್‌ನಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರು ೧೦,೦೦೦ ಜನಗಳ ಒಂದು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಭಾಷಣದಲ್ಲಿ ಹೀಗೆಂದು ಅವಲೋಕಿಸಿದರು:

"ದೇಶದ ರಾಜಕೀಯ ಸ್ವಾತಂತ್ರ್ಯದ ಬಗ್ಗೆ ಭಾರತೀಯರು ತಮ್ಮೆಲ್ಲರ ಗಮನವನ್ನು ಕೇಂದ್ರೀಕರಿಸಿದ್ದು ಸಂಪೂರ್ಣವಾಗಿ ತಪ್ಪು. ಹೀಗೆ ಮಾಡುವಲ್ಲಿ ಬಹಳ ಮೇಲುಗಡೆಯೇ ಇದ್ದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಅವರು ಮರೆತು ಬಿಟ್ಟರು. ಮುಂದುವರೆದು ಅವರು ಹೇಳಿದ್ದು: ಹಿಂದೂಗಳು ತಮ್ಮ ಪುರಾತನವಾದ ಚೌಕಟ್ಟನ್ನು ಮುರಿದು ಹಾಕಿ ಆಧುನಿಕ ರೀತಿಯಲ್ಲಿ ಸಂಘಟಿತರಾಗಬೇಕಿದೆ" ಆ ದಿನ ರಾತ್ರಿ ಮಹಾಡ್ ಪುರಸಭೆ ಸ್ವಾಗತದ ಬಿನ್ನವತ್ತಳೆಯನ್ನು ಡಾ. ಅಂಬೇಡ್ಕರ್ ಅವರಿಗೆ ಅರ್ಪಿಸಿದರು.

## ೬೩
# ಗಾಂಧಿಯವರ ಪರಿಶ್ರಮಗಳು ಅಸಮರ್ಪಕವಾಗಿವೆ

೨೩ನೇ ಫೆಬ್ರವರಿ ೧೯೪೧ರಂದು ಶೋಲಾಪುರ ಜಿಲ್ಲೆಯ ತಡ್‌ವಾಲ್‌ನಲ್ಲಿ (ಡೋಕಿ) ಮಹರ್ ಮತ್ತು ಮಾಂಗ್ ವತನ್‌ದಾರರುಗಳ ಸಮ್ಮೇಳನವನ್ನು ನಡೆಸಲಾಯಿತು. ಸುಮಾರು ३೦೦೦ ಜನರಿದ್ದ ಆ ಸಭೆಯ ಅಧ್ಯಕ್ಷತೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ವಹಿಸಿದ್ದರು. ಮುಖ್ಯ ಭಾಷಣಕಾರರಾದ ಡಾ. ಅಂಬೇಡ್ಕರ್ ಹೀಗೆ ಹೇಳಿದರು: "ಹರಿಜನರ ಸ್ಥಾನಮಾನವನ್ನು ಅಭಿವೃದ್ಧಿ ಮಾಡುವ ನಿಟ್ಟಿನತ್ತ ಗಾಂಧಿಯವರ ಪರಿಶ್ರಮ ಏನೇನೂ ಸಾಲದು. ಮೈಸೂರು ಮತ್ತು ಬರೋಡಾದಲ್ಲಿ ಹರಿಜನರನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು ಪ್ರಶಂಸಿದರು. ಆದರೆ ಹೈದರಾಬಾದ್ ರಾಜ್ಯದಲ್ಲಿ ಹರಿಜನರಿಗೆ ಕೊಡುತ್ತಿರುವ ಸೌಲಭ್ಯಗಳನ್ನು ಇನ್ನು ವಿಸ್ತರಿಸಬೇಕಾಗಿರುವುದು ಅತ್ಯವಶ್ಯಕ ಎಂದು ಹೇಳಿದರು. ತಮ್ಮ ಕಟ್ಟಡದ ನಿಧಿಗಾಗಿ ಚಂದಾ ಕೊಡಬೇಕೆಂದು ಮನವಿ ಮಾಡಿಕೊಂಡರು. ಅವರಿಗೆ ರೂ.೭೬೧ರ ಒಂದು ಹಣದ ಚೀಲವನ್ನು ಕೊಡಲಾಯಿತು.

## ೭೪
## ನಮ್ಮ ಸಾಮಾಜಿಕ ಪರಿಸ್ಥಿತಿ ಕಠಿಣ ಪರಿಶ್ರಮವಿಲ್ಲದೆ ಇನ್ನೂ ಹೆಚ್ಚಾಗಿ ಹದಗೆಡಬಹುದು

ನಿಮ್ನ ವರ್ಗಗಳವರ ಸಾರ್ವಜನಿಕ ಸಭೆಯೊಂದರಲ್ಲಿ ಉಪಸ್ಥಿತರಿದ್ದ ಪ್ರಮುಖ ಪಂಚಾಯಿತಿ ಸದಸ್ಯರುಗಳ ಸಮ್ಮುಖದಲ್ಲಿ ನಗರದಲ್ಲಿನ ಮಹರ್ ಸಮುದಾಯದ ಪಂಚಾಯಿತಿಗಳ ಕಾರ್ಯ ವೈಖರಿಯ ಬಗ್ಗೆ ನಿಷ್ಠುರವಾದ ಮಾತುಗಳಲ್ಲಿ ಡಾ. ಅಂಬೇಡ್ಕರ್ ತರಾಟೆಗೆ ತೆಗೆದುಕೊಂಡರು. ಈ ಸಭೆಯನ್ನು ಬೊಂಬಾಯಿನ ಭಟ್ ಪ್ರೌಢಶಾಲೆಯ ಸಭಾಂಗಣದಲ್ಲಿ ೨೮.೩.೧೯೪೧ರ ರಾತ್ರಿ ನಡೆಸಲಾಯಿತು. ಚರ್ಚೆಯ ವಿಷಯ ಥಾನಾದಲ್ಲಿನ ನಿಮ್ನ ವರ್ಗದ ವಿದ್ಯಾರ್ಥಿಗಳ ಆರ್ಥಿಕ ಪರಿಸ್ಥಿತಿಯನ್ನು ಕುರಿತದ್ದಾಗಿತ್ತು.

ಪಂಚಾಯಿತಿಗಳು ಎಲ್ಲಾ ರೀತಿಯ ಸಬೂಬುಗಳ ಮೇಲೆ ಅನೇಕ ತೆರಿಗೆಗಳನ್ನು ಸಮುದಾಯದ ಮೇಲೆ ಹೇರುತ್ತಾ ಬಂದಿದ್ದಾರೆಂದು ಅವರು ಹೇಳಿದರು. ಅದರಲ್ಲಿ ಹೆಚ್ಚಿನ ಭಾಗದ ಹಣವನ್ನು ಮದ್ಯಪಾನದ ಗೋಷ್ಠಿಗಳಿಗೆ ಖರ್ಚು ಮಾಡುತ್ತಿದ್ದು, ಈಗ ಪಾನನಿರೋಧ ಜಾರಿಗೆ ಬಂದ ಮೇಲೆ ಹಣವನ್ನು ಬತ್ತಾಸು ಮತ್ತು ಸಿಹಿ ತಿಂಡಿಗಳ ಮೇಲೆ ಖರ್ಚು ಮಾಡಲಾಗುತ್ತಿದೆ ಎಂದು ಹೇಳಿದರು. ಸಮುದಾಯದ ವಯೋವೃದ್ಧರಾದ, ಹಿರಿಯ ಸದಸ್ಯರಾದ ನಿಮಗೆಲ್ಲಾ ಏನಾಗಿದೆ? ನೀವು ಮಕ್ಕಳಂತೆ ವರ್ತಿಸಿ, ಸಾರ್ವಜನಿಕ ಹಣವನ್ನು ಪೋಲು ಮಾಡಿ ಸಿಹಿ ತಿನಿಸುಗಳನ್ನು ಕೊಳ್ಳುತ್ತಿದ್ದೀರಿ ಎಂದು ಹೇಳಿದರು. ಇದರಿಂದಾಗಿ ಬದುಕಿನ ಹೋರಾಟದಲ್ಲಿ, ಇತರ ಸಮುದಾಯಗಳೊಂದಿಗೆ ತೀವ್ರ ಸ್ಪರ್ಧೆಯನ್ನು ನಮ್ಮ ಸಮುದಾಯ ಎದುರಿಸಬೇಕಾಗಿದೆ ಎಂದು ಹೇಳಿದರು. ಈ ಬಾಲಿಶ ಚಟುವಟಿಕೆಗಳನ್ನು ನಾವು ಬಿಟ್ಟು ಗಂಭೀರ ಕೆಲಸವಾದ ಸಾಮಾಜಿಕ ಮತ್ತು ಶೈಕ್ಷಣಿಕ ಮುನ್ನಡೆಯನ್ನು ಕೈಗೆತ್ತಿಕೊಳ್ಳದ ಹೊರತು, ನಮ್ಮ ಪರಿಸ್ಥಿತಿ ಈಗಿನದಕ್ಕಿಂತ ಹೆಚ್ಚಿಗೆ ಹದಗೆಡಬಹುದು ಎಂದು ಹೇಳಿದರು.

ಮುಂದುವರೆದ ಭಾರತೀಯ ಸಮುದಾಯಗಳ ಉದಾಹರಣೆಯನ್ನು ನಿಮ್ನ ವರ್ಗಗಳವರ ಮುಂದೆ ಡಾ. ಅಂಬೇಡ್ಕರ್ ಅವರು ಇಟ್ಟರು. ಮುಂದುವರೆದ ಸಮುದಾಯಗಳ ಮಧ್ಯೆ ಯಾವುದೇ ಬಹುಮಾನದ ಅಥವಾ ಮೆಚ್ಚಿಗೆ ಸಿಗುತ್ತದೆಂಬ ಆಸೆ ಆಕಾಂಕ್ಷೆಗಳಿಲ್ಲದೆ ಜೀವನ ಪೂರ್ತಿ ತಮ್ಮ ಸಮುದಾಯದ ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳ ಕೆಲಸದಲ್ಲಿ ತಮ್ಮನ್ನು ಸಮರ್ಪಿಸಿಕೊಂಡವರು ಯಾವಾಗಲೂ ಇದ್ದಾರೆ ಎಂದು ಹೇಳಿದರು.

ಹೇಗಾದರೂ ನಿಮ್ನ ವರ್ಗಗಳವರುಗಳ ಮಧ್ಯೆ ಸ್ಥಳೀಯ ಮಂಡಳಿಗಳಲ್ಲಿ, ಪುರಸಭೆಗಳಲ್ಲಿ, ಮತ್ತು ಇಂಥದೇ ಇತರ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಗಿಟ್ಟಿಸಿಕೊಳ್ಳುವ ಒಂದು ಪ್ರವೃತ್ತಿ ಇದೆ ಎಂದು ಅವರು ಹೇಳಿದರು. ಆ ಸ್ಥಾನಗಳು ಅವರಿಗೆ ಸಿಗದೇ ಇದ್ದರೆ (ಆ ಸ್ಥಾನಗಳು ಎಲ್ಲರಿಗೂ ಸಿಗುವ ಸಂಭವವೂ ಇಲ್ಲ) ಅವರು ಸಾರ್ವಜನಿಕ ಕೆಲಸಗಳನ್ನು ಮಾಡುವುದರಲ್ಲಿ ಆಸಕ್ತಿಯನ್ನು ಕಳೆದುಕೊಂಡು, ಸಮುದಾಯದ ಹಣೆಬರಹಕ್ಕೆ ಸಂಪೂರ್ಣ ನಿರ್ಲಕ್ಷ್ಯದಲ್ಲಿ ಮುಳುಗಿ ಹೋಗುತ್ತಾರೆ ಎಂದರು:

ಇನ್ನೂ ಕೆಲವರು ಇದ್ದಾರೆ; ಅವರು ತಮ್ಮ ಸಾಮಾಜಿಕ ಕೆಲಸದಲ್ಲಿ ಎಷ್ಟು ಅಸ್ಥಿರವಾಗಿದ್ದಾರೆ ಎಂದರೆ ಒಂದು ರೀತಿಯ ಕೆಲಸದಲ್ಲಿ ಸ್ವಲ್ಪ ದಿವಸ ತೊಡಗಿಸಿಕೊಂಡು, ಆಮೇಲೆ ಅದನ್ನು ಬಿಟ್ಟು ಇನ್ನೊಂದಕ್ಕೆ

ಹೋಗುವುದು, ಅದನ್ನೂ ಬಿಟ್ಟು ಮೂರನೆಯದಕ್ಕೆ ಬದಲಾಯಿಸುವುದು, ಹೀಗೆ ತಾವು ಸೇರಿದ ಪ್ರತಿಯೊಂದು ಸಂಸ್ಥೆಯನ್ನು ಅವ್ಯವಸ್ಥೆಯಲ್ಲಿ ಬಿಟ್ಟುಬಿಡುತ್ತಾರೆ ಎಂದು ಹೇಳಿದರು.

## ೬೫
# ನಿಮಗೆ ಎಂಥ ಅಗಾಧವಾದ ಶಕ್ತಿ ಇದೆ ಎಂದು ನೀವೇ ಮನಗಂಡಿಲ್ಲ

ಬೊಂಬಾಯಿಯ ಕವಾಸ್‌ಜೀ ಜಹಾಂಗೀರ್ ಸಭಾಭವನದಲ್ಲಿ ೧೩.೭.೧೯೪೧ರಂದು ನಡೆದ ಬೊಂಬಾಯಿನ ಪೌರ ಕರ್ಮಚಾರಿಗಳ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ಡಾ. ಅಂಬೇಡ್ಕರ್ ಅವರು ತಮ್ಮ ಅಧ್ಯಕ್ಷೀಯ ಭಾಷಣ ಮಾಡುತ್ತಾ, ನಗರದಲ್ಲಿನ ಕೆಲವು ಕಾರ್ಮಿಕ ಸಂಘಗಳನ್ನು ನಡೆಸುತ್ತಿದ್ದ ರೀತಿಯ ಬಗ್ಗೆ ಕಟುವಾದ ಟೀಕೆಗಳನ್ನು ಮಾಡಿದರು. ಆ ಸಭೆಯಲ್ಲಿ ಪುರಸಭೆಯ ಆರೋಗ್ಯ, ಚರಂಡಿ ಮತ್ತು ನೈರ್ಮಲ್ಯ ಇಲಾಖೆಗಳಿಗೆ ಸೇರಿದ ಸಾವಿರಕ್ಕೂ ಮಿಕ್ಕಿದ ಪುರುಷರು ಮತ್ತು ಮಹಿಳೆಯರು ಹಾಜರಿದ್ದರು.

ವಿಪರೀತ ತ್ಯಾಗಮಾಡಬೇಕಾದ ಅವಶ್ಯಕತೆ ಇಲ್ಲದೆ ಸಂಘಟಿತ ಐಕ್ಯತೆಯ ಬಲದಿಂದ, ಅವರಿಗೆ ಬೇಕಾದುದೆಲ್ಲವನ್ನೂ ಹೇಗೆ ಪಡೆದುಕೊಳ್ಳಬಹುದೆಂದು ಅವರಿಗೆ ಹೇಳಲಾಯಿತು.

ಕೆಲವು ಯೂನಿಯನ್‌ಗಳ ಮುಖಂಡರುಗಳು, ಅದರಲ್ಲೂ ಬಟ್ಟೆ ಗಿರಣಿಯವರು, ಕಳೆದ ೧೪ ವರ್ಷಗಳಲ್ಲಿ ಅನೇಕ ಮುಷ್ಕರಗಳಿಗೆ ಕರೆ ಕೊಟ್ಟಿದರೂ ಒಂದೇ ಒಂದರಲ್ಲಿ ಸಹ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಅವರು ಜಯಶಾಲಿಗಳಾಗಿರಲಿಲ್ಲ. ವಾಸ್ತವವಾಗಿ ಮುಷ್ಕರದ ಅವಧಿಗಳಲ್ಲಿನ ನಿರುದ್ಯೋಗ ಮತ್ತು ಮುಷ್ಕರಗಳ ನಂತರದ ಸಾಮೂಹಿಕ ನೌಕರಿ ಖೋತಾ ಮತ್ತು ಸೇವೆಯಿಂದ ವಜಾ ಮಾಡಿದ ಪರಿಣಾಮವಾಗಿ, ಈ ಮುಷ್ಕರಗಳು ಕೆಲಸಗಾರರ ಅಳಲು ಮತ್ತು ದುರ್ದಶೆಯಲ್ಲಿ ಪರ್ಯವಸಾನಗೊಂಡಿದ್ದವು.

ಇಂಥ ಚಟುವಟಿಕೆಗಳಿಂದಾಗಿ, ಕಾರ್ಮಿಕರನ್ನು ಸಂಘಟಿಸುವ ಮಾತು ಹಾಗಿರಲಿ, ಅವರನ್ನು ಅಸಂಘಟಿತರನ್ನಾಗಿ ಮಾಡಿದುದೂ ಅಲ್ಲದೆ, ಅವರ ಯೂನಿಯನ್‌ಗಳನ್ನು ಒಡೆಯುವುದರಲ್ಲಿ ಕೊನೆಗೊಂಡಿತು. ಅದರ ಬದಲಿಗೆ ಪೌರಸಭಾ ಕಾರ್ಮಿಕರ ಸಂಘ, ಅಧಿಕಾರಿಗಳೊಂದಿಗೆ ಸಮಾಲೋಚಿಸಿ ತಮ್ಮ ಕುಂದು ಕೊರತೆಗಳಿಗೆ ಬಹುತೇಕ ಪರಿಹಾರವನ್ನು ಕಂಡು ಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದರು. ನೀವು ನಿಮ್ಮ ಕೈನಲ್ಲಿ ಇರುವ ಅಗಾಧವಾದ ಶಕ್ತಿಯನ್ನು ಅರಿತುಕೊಂಡಿರುವ ಹಾಗೆ ತೋರುತ್ತಿಲ್ಲ. ಕೆಲಸ ಮಾಡುವುದಕ್ಕೆ ನಿರಾಕರಿಸಿದರೆ, ನೀವು ಒಂದು ವಾರದಲ್ಲಿ ಉಂಟು ಮಾಡುವ ಅನಾಹುತ ಮತ್ತು ಹಾವಳಿ, ಹಿಂದೂ ಮುಸ್ಲಿಮರ ದಂಗೆಗಳಿಂದ ಮೂರು ತಿಂಗಳುಗಳಲ್ಲಿ ಸಂಭವಿಸುವುದಕ್ಕಿಂತ ಹೆಚ್ಚಾಗಿರುತ್ತದೆ ಎಂದು ಆ ಹರಿಜನ ನೇತಾರರು ಅವಲೋಕಿಸಿದರು. ಅಧಿಕಾರಿ ವರ್ಗಗಳವರಿಗೆ ಇದು ಗೊತ್ತು. ಆದಕಾರಣ ಅವರು ನೀವು ಒಗ್ಗಟ್ಟಾಗಿ ಮುಂದಿಡುವ ಬೇಡಿಕೆಗಳನ್ನು ಸುಲಭವಾಗಿ ಒಪ್ಪಿಕೊಳ್ಳುತ್ತಾರೆ. ಇಂಥದೊಂದು ಅನಾಹುತವನ್ನು ನಗರದಲ್ಲಿ ಹರಡಲು ನನಗೇನೂ ಇಚ್ಛೆಯಿಲ್ಲ; ಅಧಿಕಾರಿಗಳು ನಮ್ಮ ಬೇಡಿಕೆಗಳನ್ನು ಮಾನ್ಯ ಮಾಡಿದರೆ, ಇಂಥದನ್ನು ತಪ್ಪಿಸುವುದಕ್ಕೆ ನನ್ನ ಕೈಲಾದುದೆಲ್ಲವನ್ನೂ ಮಾಡುತ್ತೇನೆ ನಾನು ಹೇಳುವುದು ಇಷ್ಟೆ; ನೀವು ಯೂನಿಯನ್ನಿನಲ್ಲಿ ಒಗ್ಗಟ್ಟಾಗಿ ಇರಿ. ಅದು ಮತ್ತು ಕಾರ್ಯಕಾರಿ ಸಮಿತಿಯಲ್ಲಿರುವ ಸಕ್ಷಮತೆ ಹಾಗೂ ಚೈತನ್ಯದಿಂದ ಕೂಡಿದ ಮುಖಂಡತ್ವ ಮಿಕ್ಕ ಕೆಲಸವನ್ನು ತಾನೇ ಮಾಡುತ್ತದೆ.

ಒಗ್ಗಟ್ಟಿನಿಂದಾಗಿ ನಿಮ್ಮ ವರ್ಗಗಳವರಿಗೆ ದೇಶದ ರಾಜಕೀಯ ಜೀವನದಲ್ಲಿ ಪಡೆದುಕೊಂಡುದನ್ನು

ಪರಾಮರ್ಶಿಸುತ್ತಾ, ಹತ್ತು ವರ್ಷಗಳ ಹಿಂದೆ ಯಾವ ರಾಜಕೀಯ ಸ್ಥಾನಮಾನವೂ ಇಲ್ಲದ ಈ ವರ್ಗ ಕಾಂಗ್ರೆಸ್ ಮತ್ತು ಲೀಗ್‌ಗೆ (ಮುಸ್ಲಿಮ್ ಲೀಗ್) ಸಮನಾಗಿ ಸ್ಥಾನಮಾನವನ್ನು ತನ್ನ ಒಗ್ಗಟ್ಟಿನಿಂದಾಗಿ ಪಡೆದುಕೊಂಡಿದೆ ಎಂದು ಹೇಳಿದರು.

ಕಡೆಯದಾಗಿ, ಶಾಸನ ಸಭೆಯ ಮತದಾರರುಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ಸೇರಿಸಬೇಕೆಂದು ಹುರಿದುಂಬಿಸಿದರು. ಈ ಸಂದರ್ಭದಲ್ಲಿ ಕಳೆದ ಶಾಸನಭೆ ಚುನಾವಣೆಗಳಲ್ಲಿ ತಾವು ಸ್ಪರ್ಧಿಸಿದ ಉತ್ತರ ಬೊಂಬಾಯಿ ಕ್ಷೇತ್ರದಲ್ಲಿ ೮೦೦೦ ಹರಿಜನರು ಮತ್ತು ೪೮೦೦೦ ಹಿಂದೂ ಮತದಾರರೂ ಇದ್ದಾಗ್ಯೂ, ಇಂಥ ಮತಕ್ಷೇತ್ರದಿಂದ ತಾವು ಸ್ಪರ್ಧಿಸಿದ್ದಾಗಿಯೂ, ಆಗ ತಮ್ಮ ಕುತ್ತಿಗೆಗೆ ಕುತ್ತಿಗೆ ಪಟ್ಟಿಯನ್ನು ಹಾಕಿಕೊಂಡಿದ್ದ ಹಾಗೆ ಭಾಸವಾಗುತ್ತಿತ್ತು ಎಂದರು. ಆದರೂ ಸಹ, ನಿಮ್ನ ವರ್ಗಗಳ ಮತದಾರರು ಪೋಲಿಂಗ್ ಬೂತುಗಳಿಗೆ ಒಗ್ಗಟ್ಟಾಗಿ ಬಂದು ತಮ್ಮ ಜಯಕ್ಕೆ ಕಾರಣವಾದರು ಎಂದು ಹೇಳಿದರು. ಅವರ ಸಾಧನೆ ಮತದಾನದಲ್ಲಿ ನಡೆದ ಒಂದು ಪವಾಡವೇ ಆಗಿತ್ತು.

ಯೂನಿಯನ್ನಿನ ಮುಖ್ಯ ಕಾರ್ಯದರ್ಶಿಯಾದ ಮಿ. ಡಿ.ವಿ.ಪ್ರಧಾನ್ ವಾರ್ಷಿಕ ವರದಿಯನ್ನು ಓದಿದರು. ಒಂದು ವರ್ಷದ ಅವಧಿಯಲ್ಲಿ ಸಾಧಿಸಲಾದ ಸರ್ವತೋಮುಖವಾದ ಮುನ್ನಡೆಯನ್ನು ಆ ವರದಿಯಲ್ಲಿ ದಾಖಲಿಸಲಾಗಿತ್ತು.

**ಸಭೆಯಲ್ಲಿ ಅನುಮೋದಿಸಲ್ಪಟ್ಟ ನಿರ್ಣಯಗಳು:–**

ಒಂದು ರೂಪಾಯಿ ಹೆಚ್ಚಿಗೆ ತುಟ್ಟಿ ಭತ್ಯೆ ಕೊಡಬೇಕೆಂಬ ಬೇಡಿಕೆ; ಇದು ರೂ.೭೫/– ಮಾಸಿಕ ವೇತನ ಬರುವ ಎಲ್ಲ ಕೆಲಸಗಾರರಿಗೂ ಅನ್ವಯವಾಗುತ್ತಿತ್ತು. ಪೌರ ಕಾರ್ಮಿಕರ ವಸತಿ ಮತ್ತು ಜೀವಿಸುತ್ತಿರುವ ಪರಿಸ್ಥಿತಿಯ ಮೇಲೆ ವರದಿ ಸಲ್ಲಿಸುವುದಕ್ಕೆ ಕಾರ್ಪೋರೇಷನ್‌ನಿಂದ ನೇಮಿಸಲಾಗಿದ್ದ ಸಮಿತಿಯನ್ನು ತನ್ನ ವರದಿಯನ್ನು ಬೇಗ ಸಲ್ಲಿಸುವಂತೆ ಒತ್ತಾಯಿಸುವುದು ಮತ್ತು ಯೂನಿಯನ್ನಿನ ಅಂಗರಚನೆಯಲ್ಲಿ ಕೆಲವು ಸಣ್ಣ ಸಣ್ಣ ಬದಲಾವಣೆಗಳನ್ನು ಮಾಡುವುದು. ಈ ನಿರ್ಣಯಗಳು ಮಂಡಿಸಲ್ಪಟ್ಟು ಸರ್ವಸದಸ್ಯರ ಸಭೆಯಲ್ಲಿ ಅಂಗೀಕಾರವಾಯಿತು. ನಿರ್ಣಯಗಳ ಮೇಲೆ ಮಾತನಾಡಿದ ಭಾಷಣಕಾರರುಗಳಲ್ಲಿ ಶ್ರೀಯುತರಾದ ಎಮ್.ವಿ.ದೊಂಡೆ, ಎಯ್.ಕಾಲ್ಪಿ ಮತ್ತು ಜಿ.ಎಮ್. ಜಾಧವ್ ಅವರು ಇದ್ದರು.

ಡಾ. ಅಂಬೇಡ್ಕರ್ ಅವರು ಅಧ್ಯಕ್ಷರಾಗಿ, ಶ್ರೀಯುತರಾದ ಎಮ್.ವಿ.ದೊಂಡೆ ಮತ್ತು ಎಸ್.ಬಿ.ಕೇಣಿ ಉಪಾಧ್ಯಕ್ಷರುಗಳಾಗಿ ಇವರನ್ನು ಒಳಗೊಂಡ ಹೊಸ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಮಿ. ಡಿ.ವಿ.ಪ್ರಧಾನ್ ಅವರು ಪ್ರಸ್ತಾವನೆಯನ್ನು ಮಂಡಿಸಿದರು. ಸಹ ಕಾರ್ಯದರ್ಶಿಯವರಾದ ಮಿ. ಎಮ್.ವಿ. ಜಾಧವ್ ಅವರು ಕೆಲಸಗಾರರ ನಡುವೆ ಹೇಗೆ ಜಾತೀಯತೆಯನ್ನು ಬಿತ್ತಿ ಅವರನ್ನು ಶೋಷಣೆ ಮಾಡಲಾಗುತ್ತಿದೆಯೆಂದು ಹೇಳಿ, ಹೇಗೆ ಗುಜರಾತಿನ ನಿಮ್ನ ವರ್ಗಗಳಿಗೆ ಸೇರಿದ ಭಂಗಿಗಳು ಯೂನಿಯನ್ನಿನಿಂದ ಹೊರತಾಗಿ ಉಳಿದುಕೊಂಡಿದ್ದರೂ ಸಹ, ಯೂನಿಯನ್ನಿನ ಚಟುವಟಿಕೆಗಳಿಂದಾಗಿ ವೇತನದಲ್ಲಿ ಹೆಚ್ಚಳ ಮುಂತಾದವುಗಳನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದರು.

# ೬೬
# ವತನ್‌ದಾರಿ ಮಹರ್‌ಗಳಿಗೆ ಒಂದು ಶಾಪ

೧೬ನೇ ಆಗಸ್ಟ್ ೧೯೪೧ರಂದು ನಾಸಿಕ್ ಜಿಲ್ಲೆಯ ಸಿನ್ನಾರ್‌ನಲ್ಲಿ ನಡೆದ ಒಂದು ಸಭೆಗೆ ಸುಮಾರು ೪೦೦೦ ಜನರು ಬಂದಿದ್ದು, ಅದರ ಅಧ್ಯಕ್ಷತೆಯನ್ನು ಡಾ. ಬಿ.ಆರ್.ಅಂಬೇಡ್ಕರ್ ಅವರು ವಹಿಸಿದ್ದರು. ಡಿಸೆಂಬರ್ ೧೯೩೯ರಲ್ಲಿ ನಡೆದ ಹರೆಗಾಂವ್ ಸಮ್ಮೇಳನದಲ್ಲಿ ತೆಗೆದುಕೊಂಡ ತೀರ್ಮಾನದಂತೆ, ಬೊಂಬಾಯಿಯ ಗವರ್ನರ್ ಅವರಿಗೆ ಒಂದು ಜ್ಞಾಪನ ಪತ್ರವನ್ನು ಕೊಡಲಾಗಿತ್ತು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಿಲ್ಲವೆಂದು ಡಾ. ಅಂಬೇಡ್ಕರ್ ಹೇಳಿದರು. ಇತರ ವತನ್‌ದಾರರನ್ನು ನಡೆಸಿಕೊಂಡ ಹಾಗೆ ಮಹರ್ ಮತ್ತು ಮಾಂಗ್‌ಗಳನ್ನು ಸಮಾನತೆಯಿಂದ ನಡೆಸಿಕೊಂಡಿಲ್ಲ ಎಂದು ಆಪಾದಿಸಿದರು; ಆದರೆ ವತನ್ ಭೂಮಿಗಳ ಮೇಲೆ ಜೂಡಿ ಕಂದಾಯವನ್ನು ಹೆಚ್ಚಿಸಲಾಗಿದೆ ಎಂದರು. ಆದಕಾರಣ ಮಹರ್ ಮತ್ತು ಮಾಂಗ್‌ಗಳು ಹೆಚ್ಚುವರಿ ತೆರಿಗೆ ವಸೂಲಿಯನ್ನು ಪ್ರತಿಭಟಿಸುವುದೂ ಅಲ್ಲದೆ, ಯಾವುದೇ ಸಂದರ್ಭದಲ್ಲಿ ಭೂಮಿಗಳ ಮೇಲಿನ ತಮ್ಮ ಸ್ವಾಧೀನವನ್ನು ಬಿಟ್ಟುಕೊಡಬಾರದೆಂದು ಸಲಹೆ ಮಾಡಿದರು. ಹೇಗಾದರೂ, ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾಷಣಕ್ಕೆ ಹೆಚ್ಚಿನ ಆಯಾಮಗಳಿದ್ದು ಅದನ್ನು ಬಾಂಬೆ ಕ್ರಾನಿಕಲ್ ಪತ್ರಿಕೆ ವರದಿ ಮಾಡಿದೆ.

### ಆ ಆಯಾಮಗಳೆಂದರೆ

ಕಳೆದ ರಾತ್ರಿ, ಡಾ. ಬಿ.ಆರ್.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನಡೆದ ವತನ್‌ದಾರರ ಸಾಮೂಹಿಕ ಸಭೆಯಲ್ಲಿ ಬಿರುಸಾದ ಭಾಷಣಗಳನ್ನು ಮಾಡಲಾಯಿತು. ಭಾಷಣದ ವಿಷಯ ಮಹಾರಾಷ್ಟ್ರದ ಮಹರ್ ಮಾಂಗ್ ಮತ್ತು ವೇಧಿಯ ವತನ್ ದಾರರಗಳು ಅವರ ವತನ್ ಭೂಮಿಯ ಮೇಲೆ ಹೇರಿರುವ ಹೆಚ್ಚುವರಿ ಭೂಕಂದಾಯದ ವಸೂಲಿಯನ್ನು ತಮಗೆ ಸಾಧ್ಯವಿರುವ ಎಲ್ಲಾ ರೀತಿಯಿಂದಲೂ ತಡೆಯಬೇಕೆಂದು ಹೇಳಿದರು. ತೆರಿಗೆಯ ವಸೂಲಿಯನ್ನು ತಡೆಗಟ್ಟುವುದು ಅವರಿಗೆ ತಾರ್ಕಿಕವಾಗಿ ಮುಂದಿನ ಕ್ರಮವಾಗಿತ್ತು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರು "ನನ್ನ ಇಡೀ ಸಾರ್ವಜನಿಕ ಔದ್ಯೋಗಿಕ ನಡೆಯಲ್ಲಿ ನಾನು ಯಾವಾಗಲೂ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠೆಯಿಂದ ಇದ್ದೇನೆ ಎಂದರು. ನಾನು ನಿಷ್ಠೆಯಿಂದ ಇರುವುದಕ್ಕೆ ಕಾರಣ, ಎಲ್ಲಾ ದಿಕ್ಕುಗಳಿಂದ ಸುತ್ತವರೆಯಲ್ಪಟ್ಟ ನಿಮ್ಮ ವರ್ಗಗಳವರು, ಒಂದೇ ಕಾಲದಲ್ಲಿ ಎಲ್ಲಾ ಮುಂಚೂಣಿಗಳಲ್ಲೂ ಕಾದಾಡಲು ಶಕ್ಯವಿಲ್ಲ. ಆದುದರಿಂದ ನಾನು ಸವರ್ಣಿಯ ಹಿಂದೂಗಳ ಎರಡು ಸಾವಿರ ವರ್ಷಗಳ ದಬ್ಬಾಳಿಕೆ ಮತ್ತು ದಮನದ ವಿರುದ್ಧ ಹೋರಾಡಲು ತೀರ್ಮಾನಿಸಿದೆ; ಎಲ್ಲದಕ್ಕೂ ಮುಂಚೆ ನಿಮ್ಮ ವರ್ಗಗಳವರಿಗೆ ಸಾಮಾಜಿಕ ಸಮಾನತೆಯನ್ನು ಪಡೆಯುವುದಕ್ಕೆ ತೀರ್ಮಾನಿಸಿದೆ.

ಹಿಂದೂ ಸಮಾಜ ಮತ್ತು ಅದರ ಅನೇಕ ಕೆಡುಕುಗಳ ವಿರುದ್ಧ ತೀಕ್ಷ್ಣವಾದ ಆಕ್ರಮಣಗಳನ್ನು ಅನೇಕ ವರ್ಷಗಳಿಂದ ಮಾಡಿಕೊಂಡು ಬಂದಿದ್ದೇನೆ. ಆದರೆ ಇದಕ್ಕಿಂತ ನೂರು ಪಟ್ಟು ಹೆಚ್ಚಿಗೆ ಇನ್ನೂ ತೀಕ್ಷ್ಣವಾದ, ಇನ್ನೂ ಮಾರಕವಾದ ಆಕ್ರಮಣಗಳನ್ನು, ಹಿಂದೂಗಳಿಗೆ ಮಾಡಿರುವುದಕ್ಕಿಂತ ಹೆಚ್ಚಾಗಿ, ಬ್ರಿಟಿಷರ ವಿರುದ್ಧ, ಅವರೇನಾದರೂ ನನ್ನ ಸ್ವಾಮಿಭಕ್ತಿಯನ್ನು, ನನ್ನ ಜನಗಳನ್ನು ತುಳಿಯುವುದಕ್ಕೆ, ಅವರ ಜೀವನಾಧಾರವಾದ ಆಹಾರದ ಕಡೆಯ ತುಣುಕನ್ನೂ ಕಸಿದುಕೊಂಡು ಶೋಷಣೆ ಮಾಡಿದರೆ, ಮಾಡುತ್ತೇನೆ.

ನಮ್ಮಿಂದಾಗಿ ಈ ಪ್ರಾಂತ್ಯವನ್ನು ನೀವು ಆಳುತ್ತಿದ್ದೀರೆಂದು ಬ್ರಿಟಿಷ್ ಅಧಿಕಾರಿಗಳಿಗೆ ನಾನು ಹೇಳಬಯಸುತ್ತೇನೆ; ಪೇಶ್ವೆಗಳ ಆಳ್ವಿಕೆಯನ್ನು ನಾಶ ಮಾಡಿ, ಈ ಪ್ರಾಂತ್ಯದಲ್ಲಿ ಬ್ರಿಟಿಷ್ ರಾಜ್ಯವನ್ನು ಸ್ಥಾಪಿಸಿದವರು ಮಹರ್ ರೆಜಿಮೆಂಟುಗಳು ಎಂದು ಹೇಳುತ್ತೇನೆ.

ಬ್ರಿಟಿಷರಿಗಾಗಿ ಮಹಾರಾಷ್ಟ್ರವನ್ನು ಗೆದ್ದುಕೊಟ್ಟವರು ಮಹರ್‌ಗಳು. ಅವರು ಮಾಡಿದ ಸೇವೆಗಾಗಿ ಅವರಿಗೆ ಏನು ಸಿಕ್ಕಿತು? ಏನೂ ಇಲ್ಲ.

ಈ ವತನ್‌ದಾರಿಯೆ ಮಹರ್‌ಗಳಿಗೆ ಒಂದು ಶಾಪವಾಗಿ ಪರಿಣಮಿಸಿದೆ. ಅದು ಅವರನ್ನು ನಿರಂತರ ಬಡತನಕ್ಕೆ ಕಟ್ಟಿ ಹಾಕುತ್ತದೆ. ಅದು ಅವರ ಆತ್ಮಗೌರವವನ್ನು ಹೀರಿ ಬಿಡುತ್ತದೆ. ಅದು ಅವರನ್ನು ಕೀಳಾಗಿಯೇ ಇಟ್ಟಿರುತ್ತದೆ.

ನಾನು ಹೇಳುವುದೆಲ್ಲಾ ಇಷ್ಟೇ; ನಿಮ್ಮ ವತನದಾರಿ ನಮಗೆ ಬೇಕಾಗಿಲ್ಲ. ನಿಮ್ಮ ಸೇವೆಯಿಂದ ನಮ್ಮನ್ನು ಬಿಡುಗಡೆ ಮಾಡಿ. ನಮ್ಮ ಭೂಮಿಗಳ ಮೇಲೆ ಪೂರ್ತಾ ಕಂದಾಯವನ್ನು ಹಾಕಿ. ಇತರ ಗ್ರಾಮಸೇವೆಗಳಿಗೆ ಮಾಡಿದಂತೆ ಮಾಸಿಕ ವೇತನದ ಮೇಲೆ ನಮ್ಮನ್ನು ನೇಮಕ ಮಾಡಿಕೊಳ್ಳಿ. ಈ ೨೦ ವರ್ಷಗಳಿಂದ ಇದೇ ನನ್ನ ಬೇಡಿಕೆಯಾಗಿದೆ. ಆದರೆ ನಮಗೆ ಏನು ಸಿಕ್ಕಿದೆ? ನಮ್ಮನ್ನು ಸೇವೆಯಿಂದ ಬಿಡುಗಡೆ ಮಾಡುವ ಮಾತಿರಲಿ, ವತನದಾರರ ಮೇಲೆ ಹೆಚ್ಚುವರಿ ಕಂದಾಯಗಳನ್ನು ಹೇರಿ ಹೆಚ್ಚಿನ ಜೂಡಿಯನ್ನು ವಿಧಿಸಿದ್ದೀರಿ.

ಇಂಥ ರಾಕ್ಷಸೀ ಕೃತ್ಯವನ್ನು ನಾನು ಸಹಿಸುವುದಿಲ್ಲ. ಬ್ರಿಟಿಷ್ ಅಧಿಕಾರಿಗಳಿಗೆ ಎಷ್ಟೇ ಕೆಟ್ಟದ್ದನ್ನು ಬೇಕಾದರೆ ಮಾಡಿ ಎಂದು ನಾನು ಸವಾಲು ಮಾಡುತ್ತೇನೆ.

ನಾನು ಇಲ್ಲಿಯೇ ಅವರಿಗೆ ಕಟ್ಟಕಡೆಯದಾಗಿ ಹೇಳುವುದೇನೆಂದರೆ, ಒಂದು ಕಾಸು ಹೆಚ್ಚಿನ ಕಂದಾಯವನ್ನು ನಾವು ನಿಮಗೆ ಕೊಡುವುದಿಲ್ಲ; ನಿಮಗೆ ಬೇಕಾದ್ದನ್ನು ಮಾಡಿಕೊಳ್ಳಿ.

ವತನ್‌ದಾರರೇ, ನಿಮ್ಮ ಮಟ್ಟಿಗೆ ಹೇಳುವುದೇನೆಂದರೆ ನನ್ನ ಸೂಚನೆಗಳು ಸಾದಾ ಸೂಚನೆಗಳು ಏನೇ ಪರಿಣಾಮವಾಗಲೀ, ಹೆಚ್ಚಿನ ಕಂದಾಯ ಕಟ್ಟುವುದಕ್ಕೆ ನೀವು ಪ್ರತಿರೋಧಿಸಬೇಕು. ನಿಮ್ಮ ಗೃಹೋಪಯೋಗಿ ವಸ್ತುಗಳನ್ನು ಜಪ್ತಿ ಮಾಡಿದರೆ, ಅಥವಾ ನಿಮ್ಮ ದನಕರುಗಳನ್ನು ಜಪ್ತಿ ಮಾಡಿದರೆ ನಿಮ್ಮ ವಸ್ತುಗಳನ್ನು, ನಿಮ್ಮ ರಾಸುಗಳನ್ನು ತೆಗೆದುಕೊಂಡು ಹೋಗದ ಹಾಗೆ ಎಲ್ಲ ರೀತಿಯಲ್ಲು ತಡೆಯೊಡ್ಡಬೇಕು.

ಏನೇ ಆಗಲಿ, ಸರ್ಕಾರ ಕೆಳಗೆ ಇಳಿಯುವ ಹಾಗೆ ನಾವು ಮಾಡುತ್ತೇವೆ. ನಮ್ಮ ತೀರ್ಮಾನದಂತೆ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ; ಈ ತೀರ್ಮಾನವನ್ನು ಕಾರ್ಯಗತಗೊಳಿಸುವುದರಲ್ಲಿ ಹಿಂದು ಮುಂದು ನೋಡುವುದಿಲ್ಲ.

ಅಧ್ಯಕ್ಷೀಯ ಭಾಷಣದ ನಂತರ ಎರಡು ನಿರ್ಣಯಗಳನ್ನು ಅನುಮೋದಿಸಲಾಯಿತು; ಒಂದು ಡಾ. ಅಂಬೇಡ್ಕರ್ ಅವರು ಗವರ್ನರ್‌ಗೆ ಮಹರ್ ವತನ್‌ದಾರಿಯ ಮೇಲೆ ಕಳುಹಿಸಿಕೊಟ್ಟ ಜ್ಞಾಪನ ಪತ್ರ. ಇನ್ನೊಂದು ವತನ್‌ದಾರ ತಮಗೆ ಸಾಧ್ಯವಾದ ಎಲ್ಲ ರೀತಿಯಿಂದ ಹೆಚ್ಚುವರಿ ಜೂಡಿ ವಸೂಲಿಯನ್ನು ಪ್ರತಿರೋಧ ಮಾಡುವುದು.

ನಿರ್ಣಯಗಳ ಮೇಲೆ ಭಾಷಣಗಳನ್ನು ಮಾಡಿದವರಲ್ಲಿ ಶ್ರಿಯುತರುಗಳಾದ ಆರ್.ಆರ್.ಭೂಲೆ, ಬಿ.ಹೆಚ್.ವರಾಡೆ, ಜೆ.ಎಸ್.ಐಂಡಳೆ, ಪಿ.ಜೆ.ರೋಹಮ್, ಡಿ.ಜಿ.ಜಾಧವ್, ಬಿ.ಕೆ. ಗಾಯಕ್‌ವಾಡ್ ಮತ್ತು ಚಿತ್ರೆಯವರುಗಳು ಇದ್ದರು. ಇವರೆಲ್ಲಾ ಕ್ರಮವಾಗಿ ಪೂನಾ, ಬೆಳಗಾವಿ, ಶೋಲಾಪುರ, ಅಹ್ಮದ್‌ನಗರ, ಖಾಂದೇಶ್, ನಾಸಿಕ್ ಮತ್ತು ಕೊಲಾಬಾ ಜಿಲ್ಲೆಗಳನ್ನು ಬೊಂಬಾಯಿ ಶಾಸನ ಸಭೆಯಲ್ಲಿ

ಪ್ರತಿನಿಧಿಸುವವರಾಗಿದ್ದರು.

ಪ್ರತಿಯೊಬ್ಬರೂ ನಾಸಿಕ್ ಜಿಲ್ಲೆಯಲ್ಲಿ ಪ್ರಾರಂಭಿಸಬಹುದಾದ ಯಾವುದೇ ಚಳುವಳಿಗೆ ತಮ್ಮ ತಮ್ಮ ಜಿಲ್ಲೆ ಮಹರ್‌ಗಳಿಂದ ಸಾಧ್ಯವಾದಷ್ಟು ಸಂಪೂರ್ಣ ಬೆಂಬಲವನ್ನು ಕೊಡುವುದಾಗಿ ಆಶ್ವಾಸನೆಕೊಟ್ಟರು; ಅಲ್ಲದೆ, ಅಧಿಕಾರ ವರ್ಗದವರು ಸಕಾಲದಲ್ಲಿ ಬಾರದೇ ಇದ್ದರೆ ತಮ್ಮ ಜಿಲ್ಲೆಯಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿ ಹೇಳಿದರು.

ತಮ್ಮ ಮುಕ್ತಾಯ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರು ಚಳುವಳಿಯನ್ನು ಪ್ರಾರಂಭಿಸುವ ದಿನಾಂಕದ ಬಗ್ಗೆ ಹಿಂದಿನ ಕೆಲವು ಭಾಷಣಕಾರರು ಉಂಟುಮಾಡಿದ ಭಾವನೆಗಳನ್ನು ಸರಿಪಡಿಸಿದರು. ಜಪ್ತಿ ನಾಳೆ ಪ್ರಾರಂಭವಾದರೆ, ನಿಮ್ಮ ಪ್ರತಿರೋಧ ನಾಳೆಯೇ ಪ್ರಾರಂಭವಾಗುತ್ತದೆ; ಕಾಯುವ ಪ್ರಶ್ನೆಯೇ ಇಲ್ಲ, ತಿಳುವಳಿಕೆ ಕೊಡುವ ಪ್ರಶ್ನೆಯೇ ಇಲ್ಲ ಎಂದು ಡಾ. ಅಂಬೇಡ್ಕರ್ ಹೇಳಿದರು. ಕಂದಾಯ ವಸೂಲು ಮಾಡುವ ಪ್ರಯತ್ನದ ಕ್ಷಣದಿಂದ ಅದನ್ನು ಪ್ರತಿರೋಧಿಸಬೇಕು. ಆದ್ದರಿಂದ ವತನ್‌ದಾರರುಗಳು ತಮ್ಮ ಈ ಮನೋಗತವನ್ನು ಸ್ಥಿರಪಡಿಸಿಕೊಂಡು ಹೋಗಲಿ. ಅದೆಂದರೆ ಹೆಚ್ಚುವರಿ ಕಂದಾಯವನ್ನು ಮೊಟ್ಟ ಮೊದಲ ಮೆಟ್ಟಲಿನಿಂದ ಅಲ್ಲದೆ ನಂತರದ ಪ್ರತಿಯೊಂದು ಮೆಟ್ಟಲಿನಿಂದ ಪ್ರತಿರೋಧಿಸಬೇಕು.

## ೬೭

# ಗಮನಾರ್ಹವಾದ ಬದಲಾವಣೆ ಆಗಿದೆ

ದಾದರ್ ಹತ್ತಿರದ ಕೇಸರ್‌ವಾಡಿಯ ಪ್ರದೇಶದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಆಗಿರುವ ಗಮನಾರ್ಹ ಬದಲಾವಣೆಗಳು ಮತ್ತು ಪುರಸಭೆಯವರು ಆ ಜಾಗದಲ್ಲಿರುವ ಹರಿಜನ ಕ್ವಾಟರ್ಸ್‌ಗಳಲ್ಲಿ ಮಾಡಿರುವ ಸ್ಮರಣಾರ್ಹವಾದ ಅಭಿವೃದ್ಧಿಗಳ ಬಗ್ಗೆ ಡಾ. ಅಂಬೇಡ್ಕರ್ ಅವರು ಪರಾಮರ್ಶಿಸಿದರು. ಸಂದರ್ಭ ೨೦.೮.೧೯೪೧ರಂದು ಸ್ವತಂತ್ರ ಕಾರ್ಮಿಕ ಪಕ್ಷದ ಕಟ್ಟಡ ನಿಧಿಗಾಗಿ ಆ ಪ್ರದೇಶದ ಜನಗಳು ಅವರಿಗೆ ಒಂದು ಹಣದ ಚೀಲವನ್ನು ಸಮರ್ಪಿಸಿದಾಗ; ಕಟ್ಟಡಕ್ಕಾಗಿ ೪೦,೦೦೦/– ರೂಪಾಯಿ ಬೆಲೆ ಬಾಳುವ ನಿವೇಶನವೊಂದನ್ನು ಆಗಲೇ ಗುತ್ತಿಗೆಯ ಮೇಲೆ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಹಣದ ಚೀಲವನ್ನು ಕೊಡುತ್ತಾ, ಮಿ. ಉಪ್‌ಶಾಮ್ ಅವರು, ಕಟ್ಟಡದ ನಿಧಿಗಾಗಿ ಹಣವನ್ನು ಸಮರ್ಪಿಸುತ್ತಿರುವುದು ಇದು ನಾಲ್ಕನೆಯ ಬಾರಿ ಎಂದು ಹೇಳಿದರು.

ಮಿ. ಡಿ.ವಿ.ಪ್ರಧಾನ್, ಪ್ರಧಾನ ಕಾರ್ಯದರ್ಶಿ, ಮುನಿಸಿಪಲ್ ಕಾಮಗಾರ್ ಯೂನಿಯನ್ ಅಧ್ಯಕ್ಷತೆ ವಹಿಸಿದ್ದರು. ಮಾತನಾಡುತ್ತಾ ಅವರು, ನಿಮ್ನ ವರ್ಗಗಳ ಗುಜರಾತ್ ವಿಭಾಗದವರು, ಯೂನಿಯನ್ ಚಟುವಟಿಕೆಗಳಿಂದ ಸಿದ್ಧಿಸಿದ ಉಪಯೋಗಗಳನ್ನು ಪೂರ್ಣವಾಗಿ ಪಡೆದುಕೊಂಡಿದ್ದರೂ, ಯೂನಿಯನ್ ಚಟುವಟಿಕೆಗಳ ಭಾರವನ್ನು ಹೊರಲು ಸಿದ್ಧರಾಗಿಲ್ಲದಿರುವುದು ತಮಗೆ ಬಹಳ ವ್ಯಸನವಾಗಿದೆ ಎಂದು ಹೇಳಿದರು.

ತುಟ್ಟಿಭತ್ಯೆ ಕೊಡಬೇಕೆಂಬ ಅವರ ಬೇಡಿಕೆಗಳನ್ನು ಬೆಂಬಲಿಸಲು, ಪೌರಸಭಾ ಕಾರ್ಮಿಕರ ಒಂದು ಮೆರವಣಿಗೆಯನ್ನು ೭ನೇ ಸೆಪ್ಟೆಂಬರ್‌ನಂದು ವ್ಯವಸ್ಥೆಗೊಳಿಸಲಾಗಿದೆ ಎಂದು ಅವರು ಪ್ರಕಟಿಸಿದರು.

# ೭೮
# ವಿದ್ಯಾವಂತರು ಮಿಲಿಟರಿಯನ್ನು ಸೇರಲೇಬೇಕು

"ಮಹರ್ ಬೆಟಾಲಿಯನ್" ಅನ್ನುವ ವಿಷಯದ ಮೇಲೆ ಒಂದು ಸಾರ್ವಜನಿಕ ಭಾಷಣವನ್ನು ಮಹರ್ ಸಮುದಾಯದ ಆಶ್ರಯದಲ್ಲಿ ನಡೆಸಲಾಯಿತು. ಇದನ್ನು ೨೪ನೇ ಸೆಪ್ಟೆಂಬರ್ ೧೯೪೧ರಂದು ಸುಮಾರು ರಾತ್ರಿ ೯.೧೫ ಗಂಟೆಗೆ ಪರೇಲ್‌ನಲ್ಲಿರುವ ಆರ್.ಎಮ್.ಭಟ್ ಪ್ರೌಢಶಾಲೆಯಲ್ಲಿ ವ್ಯವಸ್ಥೆಗೊಳಿಸಲಾಗಿತ್ತು. ಸುಮಾರು ೫೦೦ ಮಂದಿ ಮಹರ್‌ಗಳು ಸಭೆಯಲ್ಲಿ ಹಾಜರಿದ್ದರು. ಡಾ. ಅಂಬೇಡ್ಕರ್ ಅವರು ಭಾಷಣವನ್ನು ಮಾಡಿದರು. ಭಾಷಣವನ್ನು ಏರ್ಪಡಿಸಿದ ಕಾರಣ, ತಮ್ಮ ಸಮುದಾಯದ ವಿದ್ಯಾವಂತ ಪುರುಷರು ಮಿಲಿಟರಿಗೆ ಸೇರುವುದಕ್ಕೆ ಉತ್ತೇಜನ ಕೊಡುವುದಕ್ಕಾಗಿತ್ತು. ಡಾ. ಅಂಬೇಡ್ಕರ್ ಹೇಳಿದರು. ಕಳೆದ ಮಹಾಯುದ್ಧದಲ್ಲಿ ೧೧೧ ಮಹರ್ ಬೆಟಾಲಿಯನ್ ತೋರಿಸಿದ ಮಹತ್ತರವಾದ ಪರಾಕ್ರಮದಿಂದಾಗಿ, ಭಾರತ ಸರ್ಕಾರ "ಮಹರ್ ಬೆಟಾಲಿಯನ್" ಒಂದನ್ನು ರಚಿಸುವುದಾಗಿ ಅವರಿಗೆ ಭರವಸೆ ಕೊಟ್ಟಿತ್ತು. ಆ ಬೆಟಾಲಿಯನ್ನಿನ ಅಧಿಕಾರಿಗಳು ಬಹುತೇಕ ಉನ್ನತ ವರ್ಗದ ಹಿಂದೂಗಳು ಮತ್ತು ಮುಸ್ಲಿಮರು ಆಗಿದ್ದು, ಈ ಸೈನಿಕರುಗಳು ಮಿಲಿಟರಿ ಕೆಲಸಕ್ಕೆ ಉಪಯೋಗವಿಲ್ಲವೆಂದು ದೂರು ಕೊಟ್ಟಿದ್ದರಿಂದ, ಆ ಬೆಟಾಲಿಯನ್ ಅನ್ನು ರದ್ದುಪಡಿಸಲಾಗಿತ್ತು ಎಂದು ಅವರು ಹೇಳಿದರು. ಆದ್ದರಿಂದ ಭಾಷಣಕಾರರು (ಡಾ. ಅಂಬೇಡ್ಕರ್) ಮಹರ್ ಬೆಟಾಲಿಯನ್‌ನಲ್ಲಿ ಈ ಬಾರಿ ಮಹರ್ ಅಧಿಕಾರಿಗಳನ್ನು ನೇಮಕ ಮಾಡಲೇಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದರು. ಆದುದರಿಂದ ಅವರು ಸಭಿಕರನ್ನೂ ಅದರಲ್ಲೂ ನಿರ್ದಿಷ್ಟವಾಗಿ ವಿದ್ಯಾವಂತರಾದವರನ್ನು ಮಿಲಿಟರಿಗೆ ಸೇರುವಂತೆ ಪ್ರಾರ್ಥಿಸಿದರು. ಭಾಷಣ ರಾತ್ರಿ ಸುಮಾರು ೧೦ ಗಂಟೆಗೆ ಮುಕ್ತಾಯವಾಯಿತು.

ಹೇಗಾದರೂ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾಷಣದಲ್ಲಿ ಆ ವಿಷಯದ ಮೇಲೆ ಹೆಚ್ಚಿನ ಆಯಾಮಗಳಿದ್ದು, ಅದನ್ನು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ವರದಿ ಮಾಡಿತ್ತು. ಆಯಾಮಗಳು ಹೀಗಿದ್ದವು.

ನಾಸಿಕ್, ಖಾಂದೇಶ ಮತ್ತು ಪ್ರಾಂತ್ಯದ ಇತರ ಜಿಲ್ಲೆಗಳಲ್ಲಿ ಪ್ರಚಲಿತವಿದ್ದ "ವತನ್‌ದಾರ್" ವ್ಯವಸ್ಥೆಯಿಂದಾಗಿ ಬಹು ಕಠಿಣವಾಗಿ ಸ್ಥಳೀಯ ಸರ್ಕಾರ ಅವರನ್ನು ನಡೆಸಿಕೊಂಡಿದ್ದಾಗ್ಯೂ, ಮಹರ್‌ಗಳು ತಮ್ಮ ಸಹಕಾರವನ್ನು ಕೊಡದೆ ಇರುವುದಕ್ಕೆ ಇದು ಸಕಾಲವಲ್ಲ ಎಂದು ಡಾ. ಅಂಬೇಡ್ಕರ್ ಹೇಳಿದರು. ಕಳೆದ ಯುದ್ಧದ ನಂತರ ಮಹರ್ ಬೆಟಾಲಿಯನ್ ಅನ್ನು ಬರಖಾಸ್ತು ಮಾಡಿ, ಸೇನೆಗೆ ಸೇರಿದ ಮಹರ್‌ಗಳಿಗೆ ಏನನ್ನೂ ಕೊಡಲಿಲ್ಲ. ಇತ್ತೀಚೆಗೆ ಅವರು ಸರ್ಕಾರಕ್ಕೆ "ಮಹರ್ ಬೆಟಾಲಿಯನ್" ಒಂದನ್ನು ಶಾಶ್ವತವಾಗಿ ನಿರ್ವಹಣೆ ಮಾಡಬೇಕೆಂದು ಮನವಿಗಳನ್ನು ಮಾಡಿದ್ದರು. ತಮ್ಮ ಧ್ಯೇಯ ಸಾಧನೆಯ ಜಯಕ್ಕಾಗಿ ಸಮುದಾಯದವರು. ಬೊಂಬಾಯಿ ಗವರ್ನರ್ ಮತ್ತು ವೈಸ್‌ರಾಯ್ ಅವರಿಗೆ ಆಭಾರಿಯಾಗಿರಬೇಕು. ಮುಂದುವರೆಯುತ್ತಾ ಅನೇಕ ಮಹರ್‌ಗಳು ಈಗ ಕಾಲೇಜುಗಳಲ್ಲಿ ಓದುತ್ತಿದ್ದಾರೆಂದು ಡಾ. ಅಂಬೇಡ್ಕರ್ ಹೇಳಿದರು. ಅವರುಗಳಿಗೆ ತಮ್ಮ ಅಧ್ಯಯನವನ್ನು ಸದ್ಯಕ್ಕೆ ನಿಲ್ಲಿಸಿ ಮಿಲಿಟರಿಗೆ ಸೇರಿಕೊಳ್ಳಲು ಮನವಿ ಮಾಡಿದರು; ಅವರು ರಾಜನ ಮತ್ತು ವೈಸ್‌ರಾಯ್ ಅವರ ಕಮಿಷನ್‌ಗೆ ಮುಂದಕ್ಕೆ ಅರ್ಹತೆ ಪಡೆದುಕೊಳ್ಳಬಹುದು ಎಂದರು. ಅನೇಕ ಮಂದಿ ಕೆಳ ದರ್ಜೆಯವರು ಆಗಲೇ ಸೈನ್ಯಕ್ಕೆ ಸೇರಿದ್ದು, ಆಫೀಸರ್ ದರ್ಜೆಯನ್ನು ಸೇರಲು, ವಿದ್ಯಾವಂತ ಮಹರ್‌ಗಳ ಕೊರತೆ ಇದ್ದು,

ಸಮುದಾಯದ ವಿದ್ಯಾವಂತ ಯುವಕರು ಮುಂದಕ್ಕೆ ಬಂದು ತತ್‌ಕ್ಷಣವೇ ಭರ್ತಿಯಾಗುತ್ತಾರೆಂದು ಅವರು ಆಶಯ ವ್ಯಕ್ತಪಡಿಸಿದರು.

## ೬೯
## ನಮ್ಮ ನಾಡಿನ ರಕ್ಷಣೆಗಾಗಿ ನನ್ನ ಪ್ರಾಣವನ್ನು ಕೊಡುತ್ತೇನೆ

೧೯೪೨ನೇ ಇಸವಿಯ ಫೆಬ್ರವರಿ ತಿಂಗಳ ಮಧ್ಯಭಾಗದಲ್ಲಿ ಬೊಂಬಾಯಿನ ವಾಗ್ಯೆ ಸಭಾಭವನದಲ್ಲಿ ಬೇಸಿಗೆ ಭಾಷಣ ಸರಣಿಯ ಅಂಗವಾಗಿ ಚರ್ಚೆಗಳನ್ನು ಏರ್ಪಡಿಸಲಾಗಿತ್ತು. "ಪಾಕಿಸ್ತಾನದ ಮೇಲೆ ಚಿಂತನೆಗಳು" ಎನ್ನುವ ವಿಷಯದ ಮೇಲೆ ಚರ್ಚೆ ಮಾಡಲು ಮೂರು ದಿನಗಳನ್ನು ಮೀಸಲಿಡಲಾಗಿತ್ತು. ಚರ್ಚೆಯ ಸಮಯದಲ್ಲಿ ಡಾ. ಅಂಬೇಡ್ಕರ್ ಅವರು ಹಾಜರಿದ್ದರು. ಆಚಾರ್ಯ ಎಮ್.ವಿ. ದೊಂಡೆ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ದೊಂಡೆ ಅವರ ಸ್ನೇಹಿತ, ಸಹೋದ್ಯೋಗಿ ಮತ್ತು ಪ್ರಾಂತ್ಯದಲ್ಲೇ ಮಹಾನ್ ಶಿಕ್ಷಣ ತಜ್ಞರಾದ ಡಾ. ಅಂಬೇಡ್ಕರ್ ಅವರು ಚರ್ಚೆಗೆ ಉತ್ತರ ಕೊಡಲು ನಿಂತರು. ಅವರು ಹೇಳಿದ್ದು: ಪಾಕಿಸ್ತಾನವು ಚರ್ಚೆ ಮಾಡಬಹುದಾದ ಒಂದು ವಿಷಯವೇ ಅಲ್ಲ ಎಂದು ಚಿಂತನೆ ಮಾಡುವವರ ಮೇಲೆ ತಮ್ಮ ಮಾತುಗಳನ್ನು ವ್ಯರ್ಥ ಮಾಡುವುದಿಲ್ಲ ಎಂದು ಹೇಳಿದರು. ಅವರ ಬೇಡಿಕೆ ಅನ್ಯಾಯವಾದುದೆಂದು ಅವರು ಅಂದುಕೊಂಡರೆ ಪಾಕಿಸ್ತಾನ ಅಸ್ತಿತ್ವಕ್ಕೆ ಬರುವುದು ಅವರಿಗೆ ಒಂದು ಭಯಂಕರ ವಿಷಯವಾಗುತ್ತದೆ. ಚರಿತ್ರೆಯನ್ನು ಮರೆತುಬಿಡಿ ಎಂದು ಜನಗಳಿಗೆ ಹೇಳುವುದು ತಪ್ಪಾಗುತ್ತದೆ ಎಂದರು. ಮುಂದುವರೆಯುತ್ತಾ ಅವರು ಹೇಳಿದ್ದು, ಯಾರು ಚರಿತ್ರೆಯನ್ನು ಮರೆಯುತ್ತಾರೋ ಅವರು ಚರಿತ್ರೆಯನ್ನು ಮಾಡಲಾರರು ಎಂದರು. ಇಂಡಿಯಾದ ಸೈನ್ಯದಲ್ಲಿ ಮುಸಲ್ಮಾನರ ಸಂಖ್ಯೆ/ಪ್ರಾಮುಖ್ಯತೆಯನ್ನು ಕೆಳಗೆ ತರಬೇಕಾದರೆ ಮತ್ತು ಸೈನ್ಯ ಕ್ಷೇಮವಾಗಿರಬೇಕಾದರೆ, ಪ್ರತಿಕೂಲವಾದ ಧಾತುವನ್ನು ಹೊರಗಡೆ ಬಿಟ್ಟುಬಿಡುವುದೇ ಬುದ್ಧಿವಂತಿಕೆ. ನಾವು ನಮ್ಮ ದೇಶವನ್ನು ರಕ್ಷಣೆ ಮಾಡುತ್ತೇವೆ. ಪಾಕಿಸ್ತಾನ ತನ್ನ ಮುಸ್ಲಿಮ್ ಚಕ್ರಾಧಿಪತ್ಯವನ್ನು ಭಾರತದ ಮೇಲೆ ವಿಸ್ತರಿಸುತ್ತದೆ ಎಂಬ ತಪ್ಪು ತಿಳುವಳಿಕೆಯನ್ನು ಇಟ್ಟುಕೊಳ್ಳಬೇಡಿ. ಹಿಂದೂಗಳು ಅದನ್ನು ಮಣ್ಣು ನೆಕ್ಕುವ ಹಾಗೆ ಮಾಡುತ್ತಾರೆ. ಕೆಲವು ವಿಷಯಗಳ ಕುರಿತು ಸವರ್ಣೀಯ ಹಿಂದೂಗಳೊಂದಿಗೆ ನನ್ನ ಭಿನ್ನಾಭಿಪ್ರಾಯ ಇದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ಭೂಮಿಯ ರಕ್ಷಣೆಗಾಗಿ ಪ್ರಾಣವನ್ನು ಕೊಡಲು ಸಿದ್ಧನಿದ್ದೇನೆ ಎಂದು ನಿಮ್ಮ ಮುಂದೆ ಪ್ರತಿಜ್ಞೆ ಮಾಡುತ್ತೇನೆ. ಅವರ ಭಾಷಣಕ್ಕೆ ಭಾರಿ ಉತ್ಸಾಹಿತ ಕರತಾಡನದಿಂದ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

# ೭೦
# ನಿಮ್ಮ ಮುಕ್ತಿ ನಿಮ್ಮ ಕೈಗಳಲ್ಲೇ ಇರಬೇಕು

೨೬ನೇ ಏಪ್ರಿಲ್ ೧೯೪೨ರ ಭಾನುವಾರ ಇಡೀ ದಿನ ಪುಸ್ತಕಗಳಿಂದ ತುಂಬಿ ಹೋಗಿದ್ದ ತಮ್ಮ ಅಟ್ಟದಲ್ಲಿ ಮುಳುಗಿ ಹೋಗಿದ್ದು, ತಮ್ಮ ಮುಂದಿನ ಸ್ಫೋಟಕಕ್ಕೆ ಇನ್ನು ಹೆಚ್ಚಿನ ವಿಷಯ ಸಂಗ್ರಹ ಮಾಡುತ್ತಿದ್ದ ಡಾ. ಬಿ.ಆರ್.ಅಂಬೇಡ್ಕರ್ ಬೊಂಬಾಯಿನ ಕಾಮ್‌ಗಾರ್ ಮೈದಾನಕ್ಕೆ ಬಿರುಸಿನಿಂದ ಹೊರಟರು. "ಹಿಂದೂಗಳು ನಮಗೇನು ಮಾಡಿದ್ದಾರೆ" ಅನ್ನುವ ವಿಷಯವೇ ಆ ಸ್ಫೋಟಕ. "ಬಾಂಬ್ ಅಥವ ಸಹಕಾರ" ಅನ್ನುವ ವಿಷಯದ ಮೇಲೆ ಅವರು ಮಾತನಾಡಬೇಕಾಗಿತ್ತು. ಜಾತ್ರೆಯಂತೆ ಅಲ್ಲಿ ಸೇರಿದ್ದ ಅತ್ಯಂತ ಮನತಟ್ಟುವ ಜನಜಂಗುಳಿ, ಡಾ. ಅಂಬೇಡ್ಕರ್ ಅವರ ಸುವರ್ಣ ಮಹೋತ್ಸವದ ಅಂಗವಾಗಿ ಅವರಿಗೊಂದು ನಿಧಿಯನ್ನು ಸಮರ್ಪಿಸಲು ಸೇರಿದ್ದರು. ಜಾತ್ರೆಗೆ ಬಂದವರೆನ್ನುವ ಹಾಗಿದ್ದ ಆ ೧೦ ಸಾವಿರ ಜನಗಳು ತಮ್ಮ ಗಂಟಲುಗಳಿಂದ ಹೊರಟ ಪ್ರತಿಧ್ವನಿಸುವ ಯುದ್ಧ ಘೋಷಣೆಯಿಂದ ಮೈದಾನವನ್ನು ಬಿಟ್ಟು ಹೊರಟರು. "ನನ್ನ ಹುಟ್ಟಿದ ದಿನದಂದು ಇನ್ನು ಮೇಲೆ ಯಾವ ಸಮಾರಂಭವೂ ನನಗೆ ಬೇಡ" ಎಂದು ಅವರು ಉದ್ಗರಿಸಿದರು.

ಡಾ. ಅಂಬೇಡ್ಕರ್ ಅವರ ಶಾಂತವಾದ, ಮೆದುವಾದ ಧ್ವನಿಯಲ್ಲಿ ಗುಡುಗಿನಂಥ ಏರು ಸ್ವರದಲ್ಲಿ ಅಬ್ಬರಿಸಿದರು. ಬ್ರಿಟಿಷ್ ಸರ್ಕಾರ ನಮಗೆ ನಂಬಿಕೆ ದ್ರೋಹ ಮಾಡಿ ನಮ್ಮ ಕೈ ಬಿಟ್ಟಿದ್ದಾರೆ. ಕ್ರಿಪ್ಸ್ ಪ್ರಸ್ತಾವನೆಗಳ ಉದ್ದೇಶ ಬ್ರಿಟಿಷರ ಕಷ್ಟ ಕಾಲದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಎರಡನ್ನೂ ಸಮಾಧಾನಪಡಿಸಿ, ನಿಮ್ಮ ವರ್ಗಗಳವರನ್ನು ಬಲಿ ಕೊಡುವುದೇ ಆಗಿತ್ತು. ಕಾಂಗ್ರೆಸ್‌ನ ಮತ್ತು ಲೀಗ್‌ನ ಬೇಡಿಕೆಗಳು ಒಂದಕ್ಕೊಂದು ತೀವ್ರವಾಗಿ ವಿರೋಧಿಯಾಗಿದ್ದು, ಇಬ್ಬರ ಬೇಡಿಕೆಗಳನ್ನು ಬ್ರಿಟಿಷರು ಒಪ್ಪಿಕೊಂಡರೂ, ಇಬ್ಬರೂ ಸಹ ಅದನ್ನು ತಿರಸ್ಕರಿಸಿದರು. ಅದಕ್ಕಾಗಿ ದೇವರಿಗೆ ನನ್ನ ವಂದನೆಗಳು.

ನಿಮ್ಮ ವರ್ಗಗಳವರು ಒಂದು ಅನಾಹುತದಿಂದ ಪಾರಾಗಿದ್ದಾರೆ. ಆದರೆ ಆ ಪಿಡುಗು ತನ್ನ ತಲೆಯನ್ನು ಪುನಃ ಎತ್ತಬಹುದು. ಮುಂದಿನ ಸಮಯ ಅದು ಸಂಭವಿಸಿದರೆ, ನೀವು ಕಾರ್ಯ ಪ್ರವೃತ್ತರಾಗುವುದಕ್ಕೆ ಸಿದ್ಧವಿರಬೇಕು; ಆ ಕೆಲಸ ಯಾವುದೇ ಆಗಿರಬಹುದು; ನಾನು ಲೆಕ್ಕಿಸುವುದಿಲ್ಲ; ಸಾಂವಿಧಾನಿಕ, ಅಸಂವಿಧಾನಿಕ, ಹಿಂಸಾತ್ಮಕ, ಅಹಿಂಸಾತ್ಮಕ, ಶಾಂತಿಯುತ ಅಥವ ಗೊಂದಲವೆಬ್ಬಿಸುವ ಯಾವುದೇ ಆಗಿರಬಹುದು.

### ಕಾಂಗ್ರೆಸ್‌ನವರಿಗೆ ಒಂದು ಪ್ರಸ್ತಾವ

ಸಂವಿಧಾನದ ಆಚರಣೆಯ ಪ್ರತಿಜ್ಞಾಧಾರಕರಾದ ಡಾ. ಅಂಬೇಡ್ಕರ್ ಅವರು ತಮ್ಮ ಮುಂದಿನ ಮಹೋತ್ಸವವನ್ನು ಕ್ರಾಂತಿಕಾರಿಯಾಗಿ ಆಚರಣೆ ಮಾಡುವ ಸಾಧ್ಯತೆ ಬಗ್ಗೆ ಒಂದು ಇಂಗಿತವನ್ನು ಕೊಟ್ಟರು.

### ಅವರು ಹೀಗೆ ಘೋಷಣೆ ಮಾಡಿದರು

ನೀವು ಸಂವಿಧಾನ ರಚನಾ ಸಭೆಯನ್ನು ಪುನಃ ಎದುರಿಸಬೇಕಾಗಬಹುದು; ಆಗ ನಿಮ್ಮ ಸ್ಥಳ ಸದನದ ಒಳಗೆ ಇರುವುದಿಲ್ಲ. ನಿಮಗೆ ಅಲ್ಲಿ ಯಾವ ಜಾಗವೂ ಇರುವುದಿಲ್ಲ. ನಿಮ್ಮ ಕ್ರಮಬದ್ಧವಾದ ಜಾಗ

ಆಗ ನಿಮ್ಮ ಮುಖ್ಯ ಕಚೇರಿಯಲ್ಲಿ ಇರುತ್ತದೆ, ಬಾಂಬ್‌ಗಳನ್ನು ತಯಾರಿಸುತ್ತಾ. ಹೌದು ಅದರಲ್ಲೇನೂ ಸಂಶಯವಿಲ್ಲ. ಬಾಂಬ್‌ಗಳನ್ನು ನೀವು ಮಾಡಿಯೇ ಮಾಡುತ್ತೀರಿ. ಹ್ಯಾಂಡ್ ಗ್ರೇನೇಡುಗಳನ್ನು ಎಷ್ಟೋ ಜನಗಳಿಗಿಂತ ನಾವು ಚೆನ್ನಾಗಿ ಉಪಯೋಗಿಸಬಲ್ಲೆವು.

೨೦ ವರ್ಷ ಕಾಂಗ್ರೆಸ್ ವಿರುದ್ಧ ಹೋರಾಡಿದ ಅವರು ಕಾಂಗ್ರೆಸ್‌ನವರಿಗೆ ಒಂದು ಆಕರ್ಷಕ ಪ್ರಸ್ತಾವನೆಯನ್ನು ಕೊಟ್ಟರು. ನೀವು ಸ್ವರಾಜ್‌ಗಾಗಿ ಹೋರಾಡುತ್ತಿದ್ದೀರಿ. ನಿಮ್ಮ ಜೊತೆ ಸೇರಲು ನಾನು ಸಿದ್ಧ. ನಿಮಗಿಂತ ಚೆನ್ನಾಗಿ ನಾನು ಹೋರಾಡಬಲ್ಲೆ ಎಂದು ನಿಮಗೆ ಭರವಸೆ ಕೊಡುತ್ತೇನೆ. ನನ್ನದು ಒಂದೇ ಒಂದು ಷರತ್ತು. ಸ್ವರಾಜ್ಯದಲ್ಲಿ ನನ್ನ ಪಾಲು ಎಷ್ಟು ಎಂದು ಹೇಳಿ. ನಿಮಗೆ ಅದನ್ನು ನನಗೆ ಹೇಳಲು ಇಷ್ಟವಿಲ್ಲದಿದ್ದರೆ, ನನ್ನ ಬೆನ್ನ ಹಿಂದೆ ಬ್ರಿಟಿಷರೊಡನೆ ರಾಜಿ ಮಾಡಿಕೊಳ್ಳಬೇಕೆಂದಿದ್ದರೆ, ನೀವಿಬ್ಬರೂ ನರಕಕ್ಕೆ ಹೋಗಿ.

ಅಲ್ಲಿ ಹಾಜರಿದ್ದ ಸಭಿಕರಿಗೆ, ಒಬ್ಬ ಪ್ರೀತಿಯ ತಂದೆ ತನ್ನ ಮಕ್ಕಳಿಗೆ ಹೇಳುವ ಹಾಗೆ, ಡಾ. ಅಂಬೇಡ್ಕರ್ ಹೇಳಿದರು; ಹಿಂದಿನ ಕಾಲದ ಕಥೆಗಳನ್ನು ಹೇಳುತ್ತಾ, ಕಳೆದ ೨೫ ವರ್ಷಗಳಲ್ಲಿ ನಡೆದ ಘಟನೆಗಳನ್ನು ಹೇಳುತ್ತಾ, ಗತಕಾಲದ ಘಟನೆಗಳನ್ನು ಸ್ಮರಿಸಿಕೊಳ್ಳುತ್ತಾ, ತನ್ನದೇ ಜನಗಳ ವಿರೋಧವನ್ನು ಎದುರಿಸಬೇಕಾಗಿ ಬಂದುದನ್ನು ಹೇಳಿದರು. ಆ ಜನಗಳೋ ಅನಿಷ್ಟ ಆಚರಣೆಗಳನ್ನೂ ತಮ್ಮ ಅಮೂಲ್ಯವಾದ ಪಿತ್ರಾರ್ಜಿತ ಆಸ್ತಿ ಎಂದು, ತುಳಿಸಿಕೊಳ್ಳುವುದೇ ತಮ್ಮ ಜನ್ಮ ಸಿದ್ಧ ಹಕ್ಕು ಎಂದು ತಿಳಿದಿದ್ದರು. ಈ ಆಚರಣೆಗಳ ವಿವರಗಳನ್ನು ಡಾ. ಅಂಬೇಡ್ಕರ್ ಅವರು ಕಥನ ಮಾಡುತ್ತಿದ್ದಂತೆ, ವೇದಿಕೆಗೆ ಹತ್ತಿರವಾಗಿದ್ದ, ಸುಂದರವಾದ ಉಡುಪುಗಳನ್ನು ಧರಿಸಿದ್ದ ಯುವತಿಯರು ತಿರುಗಿಕೊಂಡು ತಮ್ಮ ತಾಯಂದಿರ ಸುಕ್ಕುಗಟ್ಟಿದ ಮುಖಗಳನ್ನು ನೋಡುತ್ತಾ ನಗೆ ಬೀರಿದರು. ಆ ತಾಯಂದಿರೋ ತಾವು ಇತ್ತೀಚಿನವರೆಗೂ ಮಾಡುತ್ತಿದ್ದು, ಈಗ ಬಿಟ್ಟಿರುವ ಆಚರಣೆಗಳನ್ನು ನೆನಪಿಸಿಕೊಂಡು ಮುಜುಗರಪಟ್ಟುಕೊಂಡರು. ಅವರು (ಡಾ. ಅಂಬೇಡ್ಕರ್) ಹೇಳಿದ್ದು; ಆ ಎಲ್ಲಾ ಕೆಡಕುಗಳಿಂದ ಈ ದಿನ ನೀವು ಪರಿಶುದ್ಧರಾಗಿದ್ದೀರಿ. ಮುಂಬೆಳಗಿನ ಕಾಲದಲ್ಲಿ ಬೀಳುವ ಬಿಳಿಯ ಮಂಜಿನಂತೆ, ಈ ದಿನ ಉನ್ನತ ಜಾತಿಗಳಿಗೆ ಸೇರಿದ, ಮೂಢನಂಬಿಕೆಯಲ್ಲಿ ಮುಳುಗಿರುವ ಪುರುಷರು ಮತ್ತು ಸ್ತ್ರೀಯರ ಎದುರಿಗೆ ನಿಂತಿದ್ದೀರಿ. ಮರಾಠರು, ಭಂಡಾರಿಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಹೊರನೋಟದಿಂದ ನಿಮಗಿಂತ ಮೈಲಿಗಟ್ಟಲೆ ಹಿಂದಿದ್ದಾರೆ. ನಾನು ನನ್ನ ಸಾರ್ವಜನಿಕ ಔದ್ಯೋಗಿಕ ಪರ್ವವನ್ನು ಪ್ರಾರಂಭಿಸಿದಾಗ, ಆ ನಂತರ ಬಹುದಿನಗಳಾದ ಮೇಲೆ, ನಾವು ಹಿಂದೂ ಸಮಾಜದ ಭಾಗವಾಗಿದ್ದೆವು.

ಹಿಂದೂ ಸಮಾಜವನ್ನು ಈ ಕೆಡಕುಗಳಿಂದ ಮುಕ್ತಗೊಳಿಸಿ, ನಿಮ್ಮ ವರ್ಗಗಳವರನ್ನು ಸಮಾನತೆಯ ಆಧಾರದ ಮೇಲೆ, ಆ ಧರ್ಮದಲ್ಲಿ ಸ್ಥಾಪಿಸಬೇಕೆಂದು ನಾನು ಬಹಳ ದೀರ್ಘಕಾಲದವರೆಗೆ ಯೋಚನೆ ಮಾಡಿದೆ. ಆ ಪ್ರೇರಕ ಶಕ್ತಿ ಮಹದ್ ಚಾಡರ್ ಕೆರೆ ಸತ್ಯಾಗ್ರಹ ಮತ್ತು ನಾಸಿಕ್ ದೇವಸ್ಥಾನ ಪ್ರವೇಶ ಸತ್ಯಾಗ್ರಹಕ್ಕೆ ಪ್ರೇರಣೆಯಾಯಿತು. ಆ ಉದ್ದೇಶವನ್ನು ಇಟ್ಟುಕೊಂಡು ನಾವು ಮನುಸ್ಮೃತಿಯನ್ನು ಸುಟ್ಟು ಹಾಕಿದೆವು. ಮತ್ತು ಸಾಮೂಹಿಕ ಉಪನಯನ ಸಮಾರಂಭಗಳನ್ನು ಆಚರಿಸಿದೆವು. ಅನುಭವ ನನಗೆ ಒಳ್ಳೆಯ ಪಾಠ ಕಲಿಸಿದೆ. ಆದರೆ ಈ ದಿನ ನನಗೆ ಸಂಪೂರ್ಣವಾಗಿ ಮನವರಿಕೆಯಾಗಿರುವುದೇನೆಂದರೆ ಹಿಂದೂಗಳ ಮಧ್ಯೆ ನಿಮ್ಮ ವರ್ಗಗಳವರಿಗೆ ಸಮಾನತೆಯೆಂಬುದು ಸಾಧ್ಯವಿಲ್ಲ. ಕಾರಣ ಹಿಂದೂ ಧರ್ಮ ನಿಂತಿರುವುದು ಅಸಮಾನತೆಯ ಬುನಾದಿಯ ಮೇಲೆ.

ಆದ್ದರಿಂದ ಇನ್ನು ಮೇಲೆ ನಾವು ಹಿಂದೂ ಸಮಾಜದ ಭಾಗವಾಗಿರಲು ಇಚ್ಛಿಸುವುದಿಲ್ಲ. ಹಾಗಾದರೆ

ನಾವೇನು ಮಾಡಬೇಕಾಗಿದೆ? ಅದನ್ನು ಸರಿಯಾದ ಸಮಯ ಬಂದಾಗ ತೀರ್ಮಾನ ಮಾಡೋಣ. ಆದರೆ ಸದ್ಯಕ್ಕೆ ನಾನೀಗ ಸ್ಪಷ್ಟಪಡಿಸುವುದೇನೆಂದರೆ ಯಾವುದೇ ಸಂದರ್ಭದಲ್ಲಿ ನಾವು ಹಿಂದೂ ಸಮಾಜದ ಭಾಗವಾಗಿರಲು ಸಾಧ್ಯವಿಲ್ಲ. ಈ ದೇಶದ ಸರ್ಕಾರವನ್ನು ನಡೆಸುವುದಕ್ಕೆ ನಾವು ಪಾಲುದಾರರಾಗಲು ಬಯಸುತ್ತೇವೆ. ರಾಜಕೀಯ ಹಕ್ಕುಗಳನ್ನು ನಾವು ಭಾಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮ ರಾಜಕೀಯ ಹಕ್ಕುಗಳನ್ನು ಹಿಂದೂಗಳ ಹಕ್ಕುಗಳಿಂದ ಭಿನ್ನವಾಗಿ ಗುರುತಿಸಲೇಬೇಕಾಗಿದೆ.

ಹಿಂದೂಗಳು ಆ ಹಕ್ಕುಗಳನ್ನು ಮಾನ್ಯ ಮಾಡಲು ಸಿದ್ಧವಾಗಿದ್ದರೆ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅವರನ್ನು ಸೇರಿಸಿಕೊಳ್ಳಲು ನಾನು ಸದಾ ಸಿದ್ಧನಾಗಿದ್ದೇನೆ.

ಡಾ. ಅಂಬೇಡ್ಕರ್ ಅವರೇನೂ ನಾಯಕ ಪೂಜಕರೇನೂ ಅಲ್ಲ; ತಮ್ಮ ಅನುಯಾಯಿಗಳೂ ಅದನ್ನು ಮಾಡುವುದು ಅವರಿಗೆ ಬೇಕಿಲ್ಲ; ಅವರಿಗೆ ನಾಯಕ ಪೂಜೆಯ ಕೆಡಕುಗಳೇನೆಂಬುದರ ಬಗ್ಗೆ ಆಳವಾದ ಪ್ರಜ್ಞೆ ಇದೆ. ಶತಮಾನಗಳಿಂದ ಈ ದೇಶದಲ್ಲಿ ಉಂಟು ಮಾಡಿರುವ ಹಾವಳಿ ಏನೆಂದೂ ಸಹ ಅವರಿಗೆ ಗೊತ್ತಿದೆ.

ಸಮಾಧಾನ ಚಿತ್ತದಿಂದ, ಆದರೆ ಅಷ್ಟೇ ಪರಿಣಾಮಕಾರಿಯಾಗಿ ಡಾ. ಅಂಬೇಡ್ಕರ್ ಹೇಳಿದರು: ಕಳೆದ ೧೫ ವರ್ಷಗಳಿಂದ ನೀವು ನನ್ನ ಜನ್ಮದಿನವನ್ನು ಆಚರಿಸಿಕೊಂಡು ಬಂದಿದ್ದೀರಿ. ನಾನು ಯಾವತ್ತೂ ಅದರಲ್ಲಿ ಭಾಗಿಯಾಗಿಲ್ಲ. ಆ ಆರಣೆಗೆ ಯಾವತ್ತೂ ವಿರೋಧ ವ್ಯಕ್ತಪಡಿಸಿದ್ದೇನೆ. ಈಗ ನೀವು ನನ್ನ ಸುವರ್ಣ ಮಹೋತ್ಸವವನ್ನು ಆಚರಿಸಿದ್ದೀರಿ; ಅಷ್ಟು ಸಾಕು. ಇನ್ನು ಯಾವ ಸಂಭ್ರಮಾಚರಣೆಯೂ ಬೇಡ. ಕಾರಣ, ನಾಯಕರುಗಳನ್ನು ಅತಿಯಾಗಿ ಗೌರವಿಸಿದರೆ, ಸಾಮೂಹಿಕವಾಗಿ ಆತ್ಮವಿಶ್ವಾಸ ಬಸಿದು ಹೋಗಿ, ಅವರನ್ನು ಅಸಹಾಯಕರನ್ನಾಗಿ ಮಾಡಿ ಸಂಕಷ್ಟದಲ್ಲಿ ಅವರನ್ನು ನಾಯಕರಿಲ್ಲದ ಹಾಗೆ ಮಾಡುತ್ತದೆ ಅಥವ ಅನೀತಿಯುತ ನಾಯಕಗರುಗಳನ್ನು ಮುನ್ನಡೆಸಿದರೆ ಇದೇ ಪರಿಣಾಮ ಉಂಟಾಗುತ್ತದೆ.

ಹಿಂದೂ ಸಮಾಜದ ಅಧೋಗತಿಗೆ ಮಹತ್ತಾದ ಕಾರಣವೆಂದರೆ, ಅದರ ಹೀನಾಯ ಸ್ಥಿತಿಯ ಅನವರತ ಮುಂದುವರಿಕೆಗೆ ಶ್ರೀ ಕೃಷ್ಣನ ಉಪದೇಶವೇ ಆಗಿದೆ. ಆ ಉಪದೇಶವೆಂದರೆ, ಕಷ್ಟ ಕಾಲಗಳಲ್ಲಿ ತಮ್ಮ ಹತಾಶೆಯ ಆಳಕ್ಕೆ ಕುಸಿಯುವುದರಿಂದ ಪಾರು ಮಾಡಲು ಅವತಾರ ಪುರುಷನಿಗೆ ಮೊರೆ ಹೋಗಬೇಕು ಎಂದು. ಈ ಉಪದೇಶ ಹಿಂದೂ ಸಮುದಾಯವನ್ನು ವಿಪತ್ಕಾಲದಲ್ಲಿ ಅಸಹಾಯಕರನ್ನಾಗಿ ಮಾಡಿದೆ ಎಂದರು. ಇಂಥ ಒಂದು ಸರ್ವನಾಶ ಮಾಡುವ ಉಪದೇಶವನ್ನು ನೀವು ಅನುಸರಿಸಬೇಡಿ ಎಂಬುದು ನನ್ನ ಇಚ್ಛೆ. ಯಾವುದೇ ಒಬ್ಬನೇ ಒಬ್ಬನ ವ್ಯಕ್ತಿತ್ವದ ಮೇಲೆ ನೀವು ನಿಮ್ಮ ವಿಮೋಚನೆಗಾಗಿ ಅವಲಂಬಿತರಾಗಬೇಡಿ. ನಿಮ್ಮ ವಿಮೋಚನೆ ನಿಮ್ಮ ಪರಿಶ್ರಮದ ಮೂಲಕ ನಿಮ್ಮ ಕೈಗಳಲ್ಲೇ ಇರಬೇಕು.

ಮುಕ್ತಾಯ ಮಾಡುತ್ತಾ ಡಾ. ಅಂಬೇಡ್ಕರ್ ಅವರು ಬ್ರಿಟಿಷ್ ಸರ್ಕಾರಕ್ಕೂ ಮತ್ತು ಹಿಂದೂಗಳಿಗೂ ಒಂದು ಎಚ್ಚರಿಕೆಯ ಮಾತನ್ನು ಉಚ್ಚರಿಸಿದರು. ಅಧಿಕಾರ ಹಸ್ತಾಂತರ ಮಾಡುವಾಗ, ನಿಮ್ನ ವರ್ಗಗಳವರಿಗೆ ಸಾಕಾದಷ್ಟು ಭರವಸೆಗಳನ್ನು ಕೊಡಲೇಬೇಕೆಂದು ಬ್ರಿಟಿಷ್ ಸರ್ಕಾರ ನೆನಪಿನಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿದರು. ಅವರು ಹಾಗೆ ಮಾಡದಿದ್ದರೆ ನಿಮ್ನ ವರ್ಗಗಳವರು ತಮ್ಮೆಲ್ಲ ಶಕ್ತಿಯಿಂದ ಬ್ರಿಟಿಷರ ವಿರುದ್ಧ ಹೋರಾಡುತ್ತಾರೆ. ಅದೇ ರೀತಿ; ಹಿಂದೂಗಳು ನಿಮ್ನ ವರ್ಗಗಳವರಿಗೆ ಖಾತರಿಗಳನ್ನು ಕೊಟ್ಟರೆ ಅವರ ಕದನಗಳಲ್ಲಿ ಭುಜಕ್ಕೆ ಭುಜಕೊಟ್ಟು ಹೋರಾಡುತ್ತಾರೆ; ಇಲ್ಲವಾದರೆ ಅವರೊಂದಿಗೆ ಯಾವ ಒಪ್ಪಂದವೂ ಇಲ್ಲ ಎಂದರು.

ಡಾ. ಬಿ.ಆರ್.ಅಂಬೇಡ್ಕರ್ ಅವರ ೫೦ನೇ ಜನ್ಮ ದಿನಾಚರಣೆಯ ಅಂಗವಾಗಿ ವ್ಯವಸ್ಥೆಗೊಳಿಸಿದ್ದ

ಸುವರ್ಣ ಮಹೋತ್ಸವ ಸಮಿತಿ ಅವರಿಗೆ ೫೮೦ ರೂ.ಗಳ ನಿಧಿಯನ್ನು ಅರ್ಪಿಸಿತು. ಈ ಸಮರ್ಪಣೆ ಕಾಮ್‌ಗಾರ್ ಮೈದಾನದಲ್ಲಿ ಸೇರಿದ್ದ ಅವರ ಅನುಯಾಯಿಗಳ ಭಾರೀ ಸಭೆಯಲ್ಲಿ ನಡೆಯಿತು. ಮಿ.ಎಮ್.ವಿ.ದೊಂಡೆ, ಮುನಿಸಿಪಲ್ ಕಾರ್ಪೋರೇಟರ್ ಅಧ್ಯಕ್ಷತೆ ವಹಿಸಿದ್ದರು.

# ೬೧
# ನನ್ನ ಮನೆಯ ಬಾಗಿಲು ನನ್ನ ಸ್ನೇಹಿತರಿಗಾಗಿ ಯಾವಾಗಲೂ ತೆರೆದಿರುತ್ತದೆ

ಜುಲೈ ೨, ೧೯೪೨ರಂದು ಹೊರಡಿಸಿದ ಅಧಿಕೃತ ಪ್ರಕಟಣೆಯ ಪ್ರಕಾರ ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ಭಾರತದ ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನಲ್ಲಿ ಸೇರಿಸಿಕೊಳ್ಳಲಾಯಿತು.

ಡಾ. ಬಿ.ಆರ್.ಅಂಬೇಡ್ಕರ್ ಅವರು ರಾಷ್ಟ್ರೀಯ ರಕ್ಷಣಾ ಪರಿಷತ್ತಿನ ಸಭೆಯಲ್ಲಿ ಭಾಗವಹಿಸಲು ೫ನೇ ಜುಲೈ ೧೯೪೨ರಂದು ತತ್‌ಕ್ಷಣ ದೆಹಲಿಗೆ ಹೊರಟು ೧೧ನೇ ಜುಲೈನಂದು ಬೊಂಬಾಯಿಗೆ ಹಿಂದಿರುಗಿದರು.

ಹಿಂದಿರುಗಿ ಬಂದ ನಂತರ, ಡಾ. ಅಂಬೇಡ್ಕರ್ ಅವರು, ಅವರ ಸ್ನೇಹಿತರು ಮತ್ತು ಅವರ ಅಭಿಮಾನಿಗಳು ಬೊಂಬಾಯಿನ ರೇಡಿಯೋ ಕ್ಲಬ್ಬಿನಲ್ಲಿ ಇಟ್ಟುಕೊಂಡಿದ್ದ ಔತಣ ಕೂಟದಲ್ಲಿ ಭಾಗವಹಿಸಿದರು. ಆ ಸಂದರ್ಭದಲ್ಲಿ ಮಾತನಾಡುತ್ತಾ, ಆಚಾರ್ಯ ಎಮ್.ವಿ.ದೊಂಡೆಯವರು, ಅನೇಕ ವರ್ಷಗಳ ತಾಳ್ಮೆಯ ಶ್ರಮ ಮತ್ತು ತನ್ಮೂಲಕ ಅವರಿಗೆ ಒತ್ತಾಸೆಯನ್ನು ಕೊಟ್ಟುದನ್ನು ಪರಾಮರ್ಶಿಸುತ್ತಾ, ತನ್ನ ಜನಗಳ ಗುಲಾಮಗಿರಿಯನ್ನು ಡಾ. ಅಂಬೇಡ್ಕರ್ ಕೊನೆಗಾಣಿಸುತ್ತಾರೆಂದೂ ಮತ್ತು ಭಾರತದ ಶ್ರಮಿಕ ಸಮೂಹಗಳ ಸ್ಥಿತಿಗತಿಗಳನ್ನು ಸುಧಾರಿಸುವುದರಲ್ಲಿ ಜಯಶಾಲಿಯಾಗುತ್ತಾರೆಂಬ ಆಶೆಯನ್ನು ವ್ಯಕ್ತಪಡಿಸಿದರು.

ಉತ್ತರಿಸುತ್ತಾ, ಡಾ. ಬಿ.ಆರ್.ಅಂಬೇಡ್ಕರ್ ಹೇಳಿದ್ದು:

ತಾವು ಬಡವರ ಮನೆಯಲ್ಲಿ ಹುಟ್ಟಿದವನೆಂದೂ ಅವರ ಮಧ್ಯೆಯೇ ಬೆಳೆದವನೆಂದೂ, ಅವರ ಮಧ್ಯೆಯೇ ಜೀವನ ಮಾಡಿದವನೆಂದೂ, ಗೋಣಿಯನ್ನು ಹಾಸಿದ ಒದ್ದೆ ನೆಲದ ಮೇಲೆ ಮಲಗುತ್ತಿದ್ದವನೆಂದೂ, ತನ್ನ ಜನಗಳ ದುಃಖವನ್ನು ಹಂಚಿಕೊಂಡಿದ್ದೇನೆಂದೂ ಹೇಳಿದರು. ತಮ್ಮ ಸ್ನೇಹಿತರಿಗೆ ಮತ್ತು ಇತರ ಪ್ರಪಂಚಕ್ಕೆ ತಮ್ಮ ಧೋರಣೆಯಲ್ಲಿ ಸಂಪೂರ್ಣವಾಗಿ ಯಾವ ಬದಲಾವಣೆಯೂ ಇಲ್ಲದೆ ಇರುತ್ತೇನೆಂದು ಆಶ್ವಾಸನೆ ಕೊಟ್ಟರು. ತಮ್ಮ ನವದೆಹಲಿಯ ನಿವಾಸದ ಬಾಗಿಲುಗಳು ತನ್ನ ಸ್ನೇಹಿತರಿಗೆ ಯಾವಾಗಲೂ ತೆರೆದಿರುತ್ತದೆಂದೂ ಹೇಳಿದರು.

## ೭೨

# ಕನಿಷ್ಠ ಮಟ್ಟದ ಸಮಾಜದ ಹೋರಾಟ ಕಾರ್ಮಿಕ ವರ್ಗಗಳ ಎಲ್ಲಾ ಭಾಗಗಳಿಗೂ ಸಹಾಯಕವಾಗಿಯೇ ತೀರುತ್ತದೆ

೧೨ನೇ ಜುಲೈ ೧೯೪೨ರಂದು ಸ್ವತಂತ್ರ ಕಾರ್ಮಿಕ ಪಕ್ಷ ಮತ್ತು ಬೊಂಬಾಯಿಯ ಪೌರ ಕಾರ್ಮಿಕರ ಸಂಘ ತಮ್ಮ ನಾಯಕರಾದ ಡಾ. ಅಂಬೇಡ್ಕರ್ ಅವರನ್ನು ಅಭಿನಂದಿಸಲು ಒಂದು ಸಭೆಯನ್ನು ಕರೆದಿದ್ದರು.

(ವೈಸ್ ರಾಯ್ ಅವರ) ಕಾರ್ಯಕಾರಿ ಸಮಿತಿಯ ಮುಖ್ಯ ಕಾರ್ಯಭಾರ ದೇಶದ ರಕ್ಷಣೆಯಾಗಿದ್ದರೂ ತಾವು ಪರಿಷತ್ತಿನಲ್ಲಿ ಸಾಧಿಸಬಹುದಾದದ್ದು ಪರಿಷತ್ತಿನ ತಮ್ಮ ಸಹೋದ್ಯೋಗಿಗಳ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದರು.

ಬೊಂಬಾಯಿಯ ಆರ್.ಎಮ್.ಭಟ್ ಪ್ರೌಢಶಾಲೆಯಲ್ಲಿ ನಡೆಸಿದ ಕೊಂಕಣ ಜಿಲ್ಲೆಯ ಮತ್ತು ರಾಜ್ಯಗಳ ರೈತರುಗಳ ಇನ್ನೂ ಒಂದು ಸಭೆಯಲ್ಲಿ, ಡಾ. ಅಂಬೇಡ್ಕರ್ ತಾವು ಭಾರತದಲ್ಲಿ ಕಾರ್ಮಿಕ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಮತ್ತು ಮುಂದುವರೆಸುವುದಕ್ಕೆ ಬೇಕಾದ ಕದನದಲ್ಲಿ ಎಂದಿಗೂ ಶರಣಾಗುವುದಿಲ್ಲವೆಂದು ಘೋಷಣೆ ಮಾಡಿದರು. ಆದರೆ ಮುಂದುವರೆಯುತ್ತಾ ಅವರು ಹೇಳಿದುದು ಏನೆಂದರೆ: ತಾವು ಅದೇ ಕಾಲಕ್ಕೆ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಬಂದರೆ, ರಾಜೀನಾಮೆ ಕೊಡುತ್ತೇನೆಂದು ತಮ್ಮ ಸಹೋದ್ಯೋಗಿಗಳಿಗೆ ಬೆದರಿಕೆ ಹಾಕುವುದಿಲ್ಲವೆಂದು ಹೇಳಿದರು.

ನಿಮ್ನ ವರ್ಗಗಳವರಿಗೆಂದು ಒಂದು ಪ್ರತ್ಯೇಕವಾದ ಸಂಸ್ಥೆ, ಕಾರ್ಮಿಕ ವರ್ಗದ ಹಿತಾಸಕ್ತಿಗಳಿಗೆ ಮತ್ತು ಒಗ್ಗಟ್ಟಿಗೆ ಕೆಡಕನ್ನು ಉಂಟು ಮಾಡುತ್ತದೆಂಬ ಆಪಾದನೆಗೆ ಉತ್ತರ ಕೊಡುತ್ತಾ ಅವರು ಹೇಳಿದ್ದು; ಸಮಾಜದ ಅತ್ಯಂತ ಕೆಳಸ್ಥರದವರನ್ನು ಒಳಗೊಂಡ ಹೋರಾಟ, ಕಾರ್ಮಿಕ ವರ್ಗದವರ ಇತರ ಎಲ್ಲಾ ಭಾಗಗಳ ಉತ್ತಮ ಪಡಿಸುವಿಕೆಗೆ ಸಹಾಯವಾಗಲೇಬೇಕು. ಏಕೆಂದರೆ ಒಂದು ನಿರ್ಮಿತಿಯ ಎಲ್ಲಕ್ಕಿಂತ ಕೆಳಗಿನ ಕಲ್ಲನ್ನು ಅದರ ಜಾಗದಿಂದ ಜರುಗಿಸಿದರೆ ಅದರ ಮೇಲಿರುವ ಕಲ್ಲುಗಳು ತಮ್ಮ ಸ್ಥಾನಗಳಿಂದ ಜರುಗಲೇಬೇಕು. ಸವರ್ಣೀಯ ಹಿಂದೂ ಕಾರ್ಮಿಕರುಗಳು, ನಿಮ್ನ ವರ್ಗಗಳ ಕಾರ್ಮಿಕರ ವಿರುದ್ಧ ಅವರಿಗೆ ಇರುವ ಪೂರ್ವಾಗ್ರಹದಿಂದ ಹೊರಗಡೆ ಬಂದೇ ಇಲ್ಲ ಎಂದು ಹೇಳಿದರು. ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅನಂತರಾವ್ ಚಿತ್ರ ಅವರು, ತಮ್ಮ ಪ್ರಭಾವಕ್ಕೆ ಒಳಪಟ್ಟ ಕ್ಷೇತ್ರವನ್ನು ವಿಸ್ತರಿಸಿ, ನಿಮ್ನ ವರ್ಗಕ್ಕೆ ಸೇರಿಲ್ಲದ ಕಾರ್ಮಿಕ ವರ್ಗಗಳವರನ್ನು ಸೇರಿಸಿಕೊಂಡು, ಭಾರತದ ಸಮಸ್ತ ಶ್ರಮ ಜೀವಿಗಳ ಸಮೂಹಗಳ ನಾಯಕತ್ವವನ್ನು ವಹಿಸಿಕೊಳ್ಳಬೇಕೆಂದು ಡಾ. ಅಂಬೇಡ್ಕರ್ ಅವರನ್ನು ಒತ್ತಾಯಿಸಿದರು.

## ೭೩
# ಅತ್ಯಂತ ತಳಮಟ್ಟದಲ್ಲಿರುವ ಕಲ್ಲನ್ನು ಜರುಗಿಸಿದರೆ ಅದರ ಮೇಲಿರುವುದೆಲ್ಲಾ ಅಲ್ಲಾಡುತ್ತವೆ

ಕಳೆದ ರಾತ್ರಿ ಬೊಂಬಾಯಿನ ಭಟ್ ಪ್ರೌಢಶಾಲೆಯಲ್ಲಿ ನಡೆಸಿದ ರತ್ನಗಿರಿ ಮತ್ತು ಕೊಲಾಬಾ ಜಿಲ್ಲೆಗಳ ರೈತರ ಮತ್ತು ನಿಮ್ನ ವರ್ಗಗಳವರ ಸಭೆಯಲ್ಲಿ, ಅವರನ್ನು ಅಭಿನಂದಿಸಿ ಮಾಡಿದ ಭಾಷಣಗಳಿಗೆ ಉತ್ತರಕೊಡುತ್ತಾ ಡಾ. ಬಿ.ಆರ್.ಅಂಬೇಡ್ಕರ್ ಅವರು ಹೇಳಿದ್ದು:

(ವೈಸ್‌ರಾಯ್ ರವರ) ಕಾರ್ಯಕಾರಿ ಪರಿಷತ್ತಿನಲ್ಲಿ ಭಾರತದಲ್ಲಿನ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕೆ ಮತ್ತು ಉತ್ತಮಪಡಿಸುವುದಕ್ಕೆ ನಾನು ಮಾಡಲೇಬೇಕಾದ ಕದನದಲ್ಲಿ ಶರಣಾಗುವುದಿಲ್ಲವೆಂದು ನಿಮಗೆ ಭರವಸೆ ಕೊಡುತ್ತೇನೆ. ಅದರ ಬಗ್ಗೆ ನೀವು ನನ್ನ ಮೇಲೆ ಭರವಸೆ ಇಡಿ; ನಾನು ಇಲ್ಲಿ ಸ್ಪಷ್ಟ ಪಡಿಸುವುದೇನೆಂದರೆ, ನನ್ನ ಜೇಬಿನಲ್ಲಿ ರಾಜೀನಾಮೆ ಕಾಗದವನ್ನು ಇಟ್ಟುಕೊಂಡು, ಸಣ್ಣ ಸಣ್ಣ ಭಿನ್ನಾಭಿಪ್ರಾಯ ಬಂದಾಗಲೆಲ್ಲಾ, ಅದನ್ನು ನನ್ನ ಸಹೋದ್ಯೋಗಿಗಳ ಮುಖಕ್ಕೆ ಹಿಡಿಯುವಷ್ಟು ಬಾಲಿಶವಾಗಿ ವರ್ತಿಸುವುದಿಲ್ಲ ಎಂದು ಹೇಳಿದರು.

ಈ ಉದ್ದೇಶವನ್ನೇ ಗಮನದಲ್ಲಿಟ್ಟುಕೊಂಡು ನಾನು ಹತ್ತು ವರ್ಷಗಳ ಕಾಲ ಬ್ರಾಹ್ಮಣಹೇತರ ಪಕ್ಷಕ್ಕೆ ಅಂಟಿಕೊಂಡಿದ್ದೆ; ನನ್ನ ಆಸೆ ಇದ್ದದ್ದು ಈಗಲೋ ಅಥವ ನಂತರವೋ, ಬ್ರಾಹ್ಮಣೇತರ ಸಮುದಾಯದ ಶ್ರಮಜೀವಿ ಸಮೂಹಗಳ ವಿಮೋಚನೆಗಾಗಿ ಹೋರಾಡಬೇಕೆಂದ ಅದರ ಮಹಾನ್ ಧ್ಯೇಯದ ಪೂರ್ಣ ಎತ್ತರಕ್ಕೆ ಆ ಪಕ್ಷ ಬೆಳೆಯುತ್ತದೆಂದು ಆಶಿಸಿದ್ದೆ.

ಪ್ರಜಾಪ್ರಭುತ್ವದ ಉನ್ನತವಾದ ನೀತಿಯ ಮೊಳಕೆಗಳು ಆ ಪಕ್ಷದಲ್ಲಿ ಇದ್ದಿತು. ಆದರೆ ದುರದೃಷ್ಟವಶಾತ್ ಅದರ ನಾಯಕರುಗಳು ತಮ್ಮ ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ಅರಿತುಕೊಳ್ಳದೆ, ಸರ್ಕಾರ ಹಾಗೂ ಕಾಂಗ್ರೆಸ್‌ನವರುಗಳ ಜಂಟೀ ಆಶ್ರಯದ ಪ್ರಭಾವದ ಕೆಳಗೆ ಪಕ್ಷವನ್ನೂ ಚೂರು ಚೂರಾಗುವುದಕ್ಕೆ ಬಿಟ್ಟರು. ಈ ವಿಷಯದಲ್ಲಿ ಅವರು ಈಗಲೂ ಏನನ್ನಾದರೂ ಮಾಡಿದರೆ ಅದನ್ನು ನಾನು ಸ್ವಾಗತಿಸುತ್ತೇನೆ. ಬ್ರಾಹ್ಮಣೇತರ ಕಾರ್ಮಿಕ ವರ್ಗಗಳು ನಮ್ಮ ಪಕ್ಷವನ್ನು ಸೇರಲೇಬೇಕೆಂದು ನಾನು ಒತ್ತಾಯಪಡಿಸುವುದೇ ಇಲ್ಲ. ಅವರು ಹಾಗೆ ಇಷ್ಟಪಟ್ಟರೆ ತಮ್ಮದೇ ಪಕ್ಷವನ್ನು ಇಟ್ಟುಕೊಳ್ಳಲಿ. ಆದರೆ ಬ್ರಾಹ್ಮಣರು, ಬಂಡವಾಳ ಶಾಹಿಗಳು, ಜಮೀನ್ದಾರರು ಮತ್ತು ಇತರ ಶೋಷಣೆ ಮಾಡುವ ವರ್ಗಗಳ ವಿರುದ್ಧ ಒಂದೇ ಮುಂಚೂಣಿಯನ್ನು ಖಂಡಿತವಾಗಿ ವ್ಯವಸ್ಥೆಗೊಳಿಸಬಲ್ಲೆವು. ಪಕ್ಷವನ್ನು ಒಡೆದು ಹಾಕಿ ಬ್ರಾಹ್ಮಣೇತರರು ರಾಜಕೀಯ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ ಎನ್ನಬಹುದು.

ನನ್ನ ಮಟ್ಟಿಗೆ ಹೇಳುವುದಾದರೆ, ಇಂಥ ಆತ್ಮಘಾತಕ ನೀತಿಯನ್ನು ಅನುಸರಿಸಲು ನನಗೇನೂ ತುಡಿತವಿಲ್ಲ. ನಿಮ್ನ ವರ್ಗಗಳವರು ತಮ್ಮದೇ ಆದ ರಾಜಕೀಯ ಸಂಘಟನೆಯನ್ನು ಮುಂದುವರೆಸಿಕೊಂಡು ಬರುತ್ತಾರೆ.

ನಿಮ್ನ ವರ್ಗಗಳವರು ಒಂದು ಪ್ರತ್ಯೇಕ ಪಕ್ಷವನ್ನು ಸಂಘಟಿಸುವುದು ಎಲ್ಲ ಕಾರ್ಮಿಕ ವರ್ಗಗಳ ಹಿತಾಸಕ್ತಿಗಳಿಗೆ ಕೆಡುಕನ್ನು ಉಂಟು ಮಾಡುತ್ತದೆಂದು ಕೆಲವು ಮಂದಿ ದೂರುತ್ತಾರೆ. ಹಾಗೇನೂ ಆಗುವುದಿಲ್ಲ.

ಅದರ ಬದಲು ಕಾರ್ಮಿಕ ವರ್ಗದ ಅತ್ಯಂತ ಕೆಳಸ್ತರದವರಿಂದ ಕೂಡಿರುವ ನಮ್ಮ ಹೋರಾಟ, ಎಲ್ಲ ಕಾರ್ಮಿಕ ವರ್ಗಗಳ ಎಲ್ಲ ಇತರೆ ಭಾಗಗಳನ್ನು ಉತ್ತಮಪಡಿಸುವುದಕ್ಕೆ ಸಹಾಯ ಮಾಡುತ್ತದೆ.

ಒಂದು ನಿರ್ಮಿತಿಯಲ್ಲಿ ಅತಿ ಕೆಳಮಟ್ಟದ ಕಲ್ಲನ್ನು ಅದರ ಜಾಗದಿಂದ ಜರುಗಿಸಿದರೆ, ಅದರ ಮೇಲೆ ಇರುವ ಎಲ್ಲಾ ಕಲ್ಲುಗಳೂ ಸ್ಥಾನಪಲ್ಲಟವಾಗುತ್ತವೆ. ಆದರೆ ಸವರ್ಣ ಹಿಂದೂಗಳೇ ಇರುವ ಒಂದು ಕಾರ್ಮಿಕ ಸಂಘಟನೆ ಹಿಂದೂಗಳಿಗೆ ಸಹಾಯಕವಾಗುವುದಿಲ್ಲ.

ವಿರುದ್ಧವಾಗಿ ಸರಿಯಾದ ಮಾರ್ಗದರ್ಶನವಿಲ್ಲದೇ ಇದ್ದರೆ, ಅದು ನಿಮ್ಮ ವರ್ಗಗಳವರಿಗೂ ಕೆಡುಕು ಉಂಟು ಮಾಡಬಹುದು. ಸವರ್ಣೀಯ ಹಿಂದೂ, ನಿಮ್ಮ ವರ್ಗಗಳ ಕಾರ್ಮಿಕ ಹಕ್ಕನ್ನು ಮಾನ್ಯ ಮಾಡದೆ ಹೋಗಬಹುದು. ಅದು ಹೋಗಲಿ, ಹಿಂದೆ ಅನೇಕ ಪ್ರಕರಣಗಳಲ್ಲಿ ಆದ ಹಾಗೆ ಅವರ ಹಕ್ಕುಗಳನ್ನು ತುಳಿಯಲೂಬಹುದು ನನ್ನ ವಾದವನ್ನು ಸರಿ ಎಂದು ತೋರಿಸಲು ಒಂದು ನಿದರ್ಶನ ಸಾಕು. ೧೯೨೯ರಲ್ಲಿ ಬೊಂಬಾಯಿನ ಜವಳಿ ಗಿರಣಿಗಳಲ್ಲಿ ಒಂದು ಸುದೀರ್ಘ ಮುಷ್ಕರ ನಡೆಯಿತು. ಮುಷ್ಕರ ನಡೆಯುತ್ತಿದ್ದಾಗ, ಗಿರಣಿಯ ಕೆಲವು ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ನಿಮ್ಮ ವರ್ಗಗಳ ಕಾರ್ಮಿಕರ ಮೇಲೆ ಸವರ್ಣೀಯ ಹಿಂದೂಗಳ ಬಹಿಷ್ಕಾರವನ್ನು ತೆಗೆದು ಹಾಕಲು ನಾನು ಕೆಲವು ಮುಷ್ಕರದ ನಾಯಕರುಗಳನ್ನು ಸಮೀಪಿಸಿ ಏನಾದರೂ ಮಾಡಿ ಎಂದು ಕೇಳಿಕೊಂಡೆ. ನನ್ನ ಸಲಹೆಯ ಮೇಲೆ ಅವರು ತಿಂಗಳುಗಟ್ಟಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಅವರು ಮಾಡಿದ್ದೆಂದರೆ, ಅದನ್ನು ಫಾಸೆಟ್ ಸಮಿತಿಗೆ ಕಳುಹಿಸಿಕೊಟ್ಟರು. ಆ ಸಮಿತಿಯೂ ಆ ವಿಷಯದಲ್ಲಿ ಏನನ್ನು ಮಾಡಲಿಲ್ಲ.

ಅದರ ಬದಲಿಗೆ ಖೋಟಿಯನ್ನು ರದ್ದುಪಡಿಸಬೇಕೆಂಬ ಚಳುವಳಿಯನ್ನು ನಾವು ಪ್ರಾರಂಭಿಸಿದೆವು. ಅದು ಪ್ರಾಥಮಿಕವಾಗಿ ನಿಮ್ಮ ವರ್ಗಗಳ ಹಿತಾಸಕ್ತಿಗಾಗಿ ಪ್ರಾರಂಭಿಸಿದ ಚಳುವಳಿಯಾಗಿದ್ದರೂ, ಅದರಿಂದ ತಂತಾನೇ ಖೋಟಿ ಭೂಮಿಯನ್ನು ಕೃಷಿ ಮಾಡುತ್ತಿದ್ದ ಸವರ್ಣೀಯ ಹಿಂದೂ ಕಾರ್ಮಿಕರಿಗೂ ಸಹಾಯವಾಗುತ್ತಿತ್ತು. ಇಂಥ ನಿದರ್ಶನಗಳನ್ನು ಲೆಕ್ಕವಿಲ್ಲದಷ್ಟು ಹೇಳಬಹುದು.

ಇಲ್ಲಿ ನಾನು ಒತ್ತಿ ಹೇಳುವುದೇನೆಂದರೆ, ನಮ್ಮ ವಿಭಾಗೀಯ ಚಳುವಳಿ ಇತರರಿಗೆ ಯಾವ ವಿಧದಲ್ಲೂ ಕೆಡಕು ಮಾಡುವುದಿಲ್ಲ. ಅದೂ ಅಲ್ಲದೆ, ಕಾರ್ಮಿಕರ ಇತರ ವರ್ಗಗಳವರೊಡನೆ ನಾವು ಒಂದೇ ಗುರಿಯನ್ನು ಇಟ್ಟುಕೊಳ್ಳುವುದಕ್ಕೆ ಯಾವಾಗಲೂ ಸಿದ್ಧ. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಿ. ವಿ.ವಿ. ಚಿತ್ರೆಯವರು, ಡಾ. ಅಂಬೇಡ್ಕರ್ ಅವರ ಹತೋಟಿಯಲ್ಲಿದ್ದ ಕಾರ್ಮಿಕ ಚಳುವಳಿಯ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಇದರಿಂದಾಗಿ ನಿಮ್ಮ ವರ್ಗಗಳವರಲ್ಲದವರೂ ಚಳುವಳಿಯಲ್ಲಿ ಸೇರಿಕೊಳ್ಳುತ್ತಾರೆ ಎಂದು ಹೇಳಿದರು. ಡಾ. ಅಂಬೇಡ್ಕರ್ ಅವರನ್ನು ಕೇವಲ ದಲಿತ ವರ್ಗಗಳ ಮುಖಂಡ ಮಾತ್ರವಲ್ಲದೆ ಭಾರತದ ಎಲ್ಲ ಶ್ರಮಜೀವಿಗಳ ಮುಖಂಡರನ್ನಾಗಿಯೂ ನೋಡ ಬಯಸುತ್ತೇನೆಂದು ಹೇಳಿದರು.

ಇತರ ಭಾಷಣಕಾರರಲ್ಲಿ ಶ್ರೀಯುತರುಗಳಾದ ಸುರೇಂದ್ರನಾಥ ಟಿಪ್ನಿಸ್, ನಾರಾಯಣ್ ನಾಗು ಪಾಟೀಲ್, ದೇವರಾವ್ ನಾಯಕ್, ವಾಡ್ಪಾಲ್ಕರ್ ಮತ್ತು ಗಾಯಕವಾಡ್ ಅವರುಗಳು ಇದ್ದರು.

# ೭೪
# ಪ್ರಜಾಪ್ರಭುತ್ವದ ಅವಸಾನವಾದರೆ ಅದೇ ನಮ್ಮ ಸರ್ವನಾಶ

೧೮ನೇ ಜುಲೈ ೧೯೪೨ರಂದು ಅಖಿಲ ಭಾರತ ನಿಮ್ನ ವರ್ಗಗಳ ೩ನೇ ಅಧಿವೇಶನದ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ರಾವ್ ಬಹಾದೂರ್ ಎನ್ ಶಿವರಾಜ್, ಎಮ್.ಎಲ್.ಎ. ಅವರು ಮತ್ತು ಡಾ. ಬಿ.ಆರ್.ಅಂಬೇಡ್ಕರ್ ಅವರು ನಾಗಪುರಕ್ಕೆ ಬೆಳಗಿನ ೯ ಘಂಟೆಗೆ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಅವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಬರಮಾಡಿಕೊಂಡರು. ಸ್ವಾಗತ ಸಮಿತಿಯ ಹೆಚ್ಚು ಕಡಿಮೆ ಎಲ್ಲಾ ಸದಸ್ಯರುಗಳು ಮತ್ತು ಡೆಲಿಗೇಟುಗಳು ರೈಲ್ವೆ ಪ್ಲಾಟ್ ಫಾರ್ಮ್‌ನಲ್ಲಿ ಹಾಜರಿದ್ದು, ಚುನಾಯಿತ ಅಧ್ಯಕ್ಷರಿಗೆ ಮತ್ತು ಡಾ. ಅಂಬೇಡ್ಕರ್ ಅವರಿಗೆ ಹೃದಯಪೂರ್ವಕ ಸ್ವಾಗತವನ್ನು ಕೋರಿದರು. ಅಂಬೇಡ್ಕರ್ ಜಿಂದಾಬಾದ್ (ಅಂಬೇಡ್ಕರ್ ಅವರು ದೀರ್ಘಾಯುವಾಗಲಿ) ಎಂಬ ಕಿವಿಗಡಚಿಕ್ಕುವ ಘೋಷಣೆಗಳನ್ನು ಕೂಗುತ್ತಾ ಸ್ವಾಗತ ಬಯಸಿದರು. ಚುನಾಯಿತ ಅಧ್ಯಕ್ಷರಿಗೆ ಮತ್ತು ಡಾ. ಅಂಬೇಡ್ಕರ್ ಅವರಿಗೆ ವಿಫುಲವಾಗಿ ಮಾಲಾರ್ಪಣೆ ಮಾಡಿದರು. ನಂತರ, ಒಂದು ಮೆರವಣಿಗೆಯನ್ನು ಹೊರಡಿಸಿ, ಸನ್ಮಾನ್ಯ ಅತಿಥಿಗಳನ್ನು ರೈಲ್ವೆ ನಿಲ್ದಾಣದ ಎದುರಿನ ಮೈದಾನಕ್ಕೆ ಕರೆದುಕೊಂಡು ಹೋಗಲಾಯಿತು. ಡಾ. ಅಂಬೇಡ್ಕರ್ ಮತ್ತು ಚುನಾಯಿತ ಅಧ್ಯಕ್ಷರುಗಳ ದರ್ಶನಕ್ಕಾಗಿ ೫೦ ಸಾವಿರಕ್ಕೂ ಮಿಕ್ಕು ಜನಗಳು ಸೇರಿದ್ದರು. ಮೈದಾನದಲ್ಲಿ ಅವರು ಕಾಣಿಸಿಕೊಳ್ಳುತ್ತಿದ್ದಂತೆ, ಕರತಾಡನ ಮಾಡಿ ಅವರನ್ನು ಸ್ವಾಗತಿಸಿ, ಅಂಬೇಡ್ಕರ್ ಕಿ ಜೈ ಎಂದು ಹರ್ಷೋದ್ಗಾರಗಳನ್ನು ಮಾಡಿದರು. ಮೈದಾನದ ಉದ್ದಕ್ಕೂ ನಿಂತಿದ್ದ ಪ್ರಾಂತೀಯ ಸಮತಾ ಸೈನಿಕದಳಕ್ಕೆ ಸೇರಿದ ಐದು ಸಾವಿರ ಸಮವಸ್ತ್ರ ಧರಿಸಿದ ಸೈನಿಕರು ಗೌರವ ರಕ್ಷೆಯನ್ನು ಕೊಟ್ಟರು. ಸೈನಿಕದಳದ ಬ್ಯಾಂಡಿನವರು ಸಂದರ್ಭಕ್ಕೆ ತಕ್ಕ ರಾಗಗಳನ್ನು ಬಾರಿಸಿದರು. ಗೌರವ ರಕ್ಷೆಯನ್ನು ವೀಕ್ಷಿಸಿದ ಮೇಲೆ ಚುನಾಯಿತ ಅಧ್ಯಕ್ಷರನ್ನು ಮತ್ತು ಡಾ. ಅಂಬೇಡ್ಕರ್ ಅವರನ್ನು ಮೆರವಣಿಗೆಯಲ್ಲಿ ಸಮ್ಮೇಳನದ ಪೆಂಡಾಲಿಗೆ ಕರೆದೊಯ್ಯಲಾಯಿತು. ಮೆರವಣಿಗೆಯ ಹಿಂದೆ ಮೈಲಿ ಉದ್ದದ ಸಮತಾ ಸೈನಿಕದಳದ ತುಕಡಿ, ಅವರ ಬ್ಯಾಂಡಿನೊಡನೆ, ಅವರೊಂದಿಗೆ ಸಾವಿರಾರು ಮಂದಿ ಪ್ರೇಕ್ಷಕರು ಮತ್ತು ಸಮ್ಮೇಳನದ ಡೆಲಿಗೇಟುಗಳು ಬಂದರು. ಅಂಥ ಮೆರವಣಿಗೆಯನ್ನು ಅದಕ್ಕೆ ಮುಂಚೆ ಎಂದೂ ನೋಡಿರಲಿಲ್ಲದ ನಾಗಪುರದ ಸಾರ್ವಜನಿಕರು ಬಹುಕಾಲ ನೆನಪಿಸಿಕೊಳ್ಳುವಂಥ ಮೆರವಣಿಗೆಯಾಗಿತ್ತು.

ಮಾರ್ಗದಲ್ಲಿ ವಿಜಯದ ಸಂಕೇತವಾಗಿ ಕಮಾನುಗಳನ್ನು ನಿರ್ಮಿಸಲಾಗಿದ್ದು, ಅವುಗಳಿಗೆ ಅಂಬೇಡ್ಕರ್ ದ್ವಾರಾ, ಹರಿದಾಸ್ ದ್ವಾರ, ಕಲ್ಲೂ ಆಹಿರೆ ದ್ವಾರ, ರಮಾಬಾಯಿ ಅಂಬೇಡ್ಕರ್ ದ್ವಾರ ಇತ್ಯಾದಿಯಾಗಿ ನಾಮಕರಣ ಮಾಡಲಾಗಿತ್ತು. ಮೋಹನ್ ಪಾಕ್ ಹೋಟಲಿನಲ್ಲಿ ಚುನಾಯಿತ ಅಧ್ಯಕ್ಷರನ್ನು, ಡಾ. ಅಂಬೇಡ್ಕರ್ ಅವರನ್ನು ಮತ್ತು ಡೆಲಿಗೇಟುಗಳನ್ನು ಇಳಿಸಲಾಗಿತ್ತು. ಆ ಹೋಟಲಿಗೆ ಮುಂದುಗಡೆ ರಸ್ತೆಯ ಇಕ್ಕೆಲಗಳಲ್ಲೂ ನಿಂತು, ತಮ್ಮ ಲಾಠಿಗಳನ್ನು ಕಮಾನಿನ ಆಕಾರದಲ್ಲಿ ಹಿಡಿದುಕೊಂಡಿದ್ದು ಅದರ ಮೂಲಕ ಗೌರವಾನ್ವಿತ ನಾಯಕರುಗಳು ಸಾಗಿದರು.

೧೮ನೇ ಜುಲೈನಿಂದ ೨೦ನೇ ಜುಲೈವರೆಗೆ ನಾಗಪುರದಲ್ಲಿ ಮೂರು ಸಮ್ಮೇಳನಗಳನ್ನು ನಡೆಸಲಾಯಿತು. ಅವೆಂದರೆ:

೧. ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನ,
ರಾವ್ ಬಹಾದ್ದೂರ್,
ಎನ್.ಶಿವರಾಜ್, ಬಿ.ಎ.ಬಿ.ಎಲ್,
ಶಾಸಕರು (ಕೇಂದ್ರೀಯ) ಅವರ ಅಧ್ಯಕ್ಷತೆಯಲ್ಲಿ

೨. ನಿಮ್ನ ವರ್ಗಗಳವರ ಮಹಿಳಾ
ಸಮ್ಮೇಳನ, ಅಮರಾವತಿಯ
ಶ್ರೀಮತಿ ಡೋಂಗ್ರಿ ಅವರ ಅಧ್ಯಕ್ಷತೆಯಲ್ಲಿ

೩. ಸಮತಾ ಸೈನಿಕ್ ದಳದ ಸಮ್ಮೇಳನ.
ಶ್ರೀ ಗೋಪಾಲ್ ಸಿಂಗ್, ಎಮ್.ಬಿ.ಇ.
ಶಾಸಕರು (ಪಂಜಾಬ್) ಅವರ ಅಧ್ಯಕ್ಷತೆಯಲ್ಲಿ

ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನ ಮೂರು ವಿಷಯಗಳಿಗೆ ಗಮನಾರ್ಹವಾಗಿತ್ತು. ದಾಖಲೆ ಸಂಖ್ಯೆಯಲ್ಲಿ ಪುರುಷರು ಮತ್ತು ಮಹಿಳೆಯರು ಸಮ್ಮೇಳನದಲ್ಲಿ ಹಾಜರಿದ್ದುದು ಗಮನ ಸೆಳೆಯಿತು ಅಧಿವೇಶನದಲ್ಲಿ ೭೫,೦೦೦ಕ್ಕೆ ಕಡಿಮೆ ಇಲ್ಲದಂತೆ ಜನಗಳು ಹಾಜರಿದ್ದು, ಅದರಲ್ಲಿ ೨೦,೦೦೦ಕ್ಕೆ ಕಡಿಮೆ ಇಲ್ಲದಂತೆ ಮಹಿಳೆಯರು ಇದ್ದರು. ಇದರ ಜೊತೆಗೆ, ಈ ಸಮ್ಮೇಳನದಲ್ಲಿ ಭಾರತದಲ್ಲಿನ ಎಲ್ಲಾ ಪ್ರಾಂತ್ಯಗಳು ಸಂಪೂರ್ಣವಾಗಿ ಪ್ರತಿನಿಧಿಸಲ್ಪಟ್ಟಿದ್ದವು. ಸಮ್ಮೇಳನ ಸ್ಮರಣೀಯವಾಗಿ ಉಳಿಯುವುದಕ್ಕೆ ಎರಡನೆಯ ವಿಶೇಷವೆಂದರೆ, ಆ ಸಮ್ಮೇಳನ ಅನುಮೋದಿಸಿದ ಠರಾವುಗಳು. ಈ ನಿರ್ಣಯಗಳು ಮೊಟ್ಟ ಮೊದಲ ಬಾರಿಗೆ, ನಿಮ್ನ ವರ್ಗಗಳವರ ರಾಜಕೀಯ ಬೇಡಿಕೆಗಳ ಸ್ಪಷ್ಟವಾದ ಮತ್ತು ಧನಾತ್ಮಕವಾದ ನಿರೂಪಣೆಗಳಾಗಿದ್ದವು. ಅವುಗಳನ್ನು ಓದಿದ ಯಾರೇ ಆಗಲಿ ಅಸ್ಪೃಶ್ಯರ (ನಿಮ್ನ ವರ್ಗಗಳವರ) ರಾಜಕೀಯ ಬೇಡಿಕೆಗಳು ಯಾವುವು ಎಂಬುದರ ಬಗ್ಗೆ ಅನುಮಾನಿಸಲಾಗುತ್ತಿರಲಿಲ್ಲ. ಕೆಲವು ಪತ್ರಿಕಾ ವರದಿಗಾರರು ಹೇಳಿದಂತೆ, ಈ ಸಮ್ಮೇಳನ ಅನುಮೋದಿಸಿದ ಠರಾವುಗಳು, ಬೇಡಿಕೆಗಳ ಸ್ವಭಾವ ಮತ್ತು ಅವುಗಳನ್ನು ವಿವರಿಸಿದ್ದ ಪದಗಳಲ್ಲೂ ಸಹ ನಿಮ್ನ ವರ್ಗಗಳುವರ ಪಾಕಿಸ್ತಾನದ ಸಂಯೋಜನೆ ಆಗಿತ್ತು.

ಸಮ್ಮೇಳನ ಸ್ಮರಣೀಯವಾಗಿ ಉಳಿಯುವುದಕ್ಕೆ ಮೂರನೆಯ ವಿಶೇಷವೆಂದರೆ, ಒಂದು ಅಖಿಲ ಭಾರತ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಮಾಡಿದ ನಿರ್ಣಯ. ಈ ಸಂಸ್ಥೆಯನ್ನು ಅಖಿಲ ಭಾರತ ಅನುಸೂಚಿತ ಜಾತಿಗಳ ಒಕ್ಕೂಟ ಎಂದು ಹೆಸರಿಸಲಾಗಿತ್ತು. ಈ ಸಂಸ್ಥೆ ಭಾರತದ ನಿಮ್ನ ವರ್ಗಗಳವರೆಲ್ಲರ ಏಕೈಕ ಮುಖವಾಣಿಯಂತೆ ಕೆಲಸ ಮಾಡಬೇಕಾಗಿದ್ದು, ಅದಕ್ಕಾಗಿ ಎಲ್ಲಾ ಸಣ್ಣ ಪುಟ್ಟ ಪ್ರಾಂತೀಯ ಸಂಸ್ಥೆಗಳು ಈ ಏಕೈಕ ಸಂಸ್ಥೆಯಲ್ಲಿ ವಿಲೀನವಾಗಬೇಕು. ಇದನ್ನು ಕುರಿತು ಸಮ್ಮೇಳನ ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳಬೇಕು; ಈ ಸಂಸ್ಥೆ ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ತನ್ನ ಶಾಖೆಗಳನ್ನು ಹೊಂದಿರಬೇಕು.

ಈ ಸಮ್ಮೇಳನ ಸಾಧಿಸಿದ ಕೆಲಸವನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಿಮ್ನ ವರ್ಗಗಳವರಿಗೆ ಒಂದು ಹೊಸದಾದ ಮುನ್ನೋಟವನ್ನು ತೆರೆದು ಕೊಟ್ಟು, ಅವರ ಚಳುವಳಿಗೆ ಒಂದು ಹೊಸ ದಿಗ್ದರ್ಶನವನ್ನು ಕೊಡುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ನಡೆವಳಿಗಳ ದಾಖಲೆಯಲ್ಲಿ, ಇತರ ಎರಡು ಸಮ್ಮೇಳನಗಳ ನಡೆವಳಿಗಳನ್ನೂ ಸೇರಿಸಬೇಕೆಂದು ಸ್ವಾಗತ ಸಮಿತಿ ನಿರ್ಧರಿಸಿತ್ತು; ಈ ಎರಡು ಸಮ್ಮೇಳನಗಳನ್ನು ಅದೇ ಪೆಂಡಾಲಿನಲ್ಲಿ ಮುಖ್ಯ ರಾಜಕೀಯ ಸಮ್ಮೇಳನದ ಒಂದು ಭಾಗವಾಗಿ ನಡೆಸಲಾಗಿತ್ತು. ಅವುಗಳೂ ಸಹ ಭಾರತದ ಎಲ್ಲೆಡೆಯ ಅಸ್ಪೃಶ್ಯರಲ್ಲಿ ಆಸಕ್ತಿಯನ್ನು ಮತ್ತು ಉತ್ಸಾಹವನ್ನು ಉದ್ದೀಪನಗೊಳಿಸುತ್ತವೆ. ಅದಕ್ಕೆ ಕಾರಣ ಸ್ವಯಂಸೇವಕ ಸಂಸ್ಥೆ ಮತ್ತು ಮಹಿಳೆಯರ ಸಂಘಟನೆಗಳು ಸಾಮಾಜಿಕ ಹಾಗೂ ರಾಜಕೀಯ ವಿಷಯಗಳಲ್ಲಿ ತಮ್ಮ ಪ್ರಭಾವವನ್ನು ಪ್ರಗತಿಶೀಲವಾಗಿ ಬೀರುತ್ತಿರುವುದನ್ನು ಅಸ್ಪೃಶ್ಯರು ಸಾಕ್ಷಾತ್ಕರಿಸಿಕೊಂಡಿರುವುದೇ ಆಗಿದೆ.

**೧೮ನೇ ಮತ್ತು ೧೯ನೇ ಜುಲೈ ೧೯೪೨ರಂದು ನಾಗಪುರದಲ್ಲಿ ನಡೆದ ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನ**

**ಮೊದಲ ದಿನದ ನಡವಳಿಗಳು**

ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನದ ಮೂರನೆಯ ಅಧಿವೇಶನ ೧೮.೭.೧೯೪೨ರಂದು ಅಪರಾಹ್ನ ೩.೩೦ಕ್ಕೆ ಪ್ರಾರಂಭವಾಯಿತು; ಅದನ್ನು ನಾಗಪುರದ ಮೋಹನ್ ಪಾರ್ಕಿನಲ್ಲಿ ವಿಶೇಷವಾಗಿ ನಿರ್ಮಿಸಿದ ಪೆಂಡಾಲಿನಲ್ಲಿ ವ್ಯವಸ್ಥೆ ಗೊಳಿಸಲಾಗಿತ್ತು. ಅಧಿವೇಶನದ ಅಧ್ಯಕ್ಷತೆಯನ್ನು ರಾವ್ ಬಹಾದೂರ್ ಎನ್.ಶಿವರಾಜ್, ಎಮ್.ಎಲ್.ಎ. (ಕೇಂದ್ರ) ವಹಿಸಿದ್ದರು. ಭಾರತದ ಎಲ್ಲೆಡೆಗಳಿಂದ ಡೆಲಿಗೇಟುಗಳು ಮತ್ತು ೬೦ ಸಾವಿರಕ್ಕೂ ಮಿಕ್ಕು ಸಭಿಕರು ಹಾಜರಿದ್ದರು. ಸಭಿಕರಲ್ಲಿ, ಪ್ರತಿಷ್ಠಿತ ವ್ಯಕ್ತಿಗಳೂ ಇದ್ದು, ಅದರಲ್ಲಿ ಸುಮಾರು ೩೦ ಸಾವಿರ ಮಹಿಳೆಯರೂ ಇದ್ದರು. ಅಧಿಕ ಸಂಖ್ಯೆಯಲ್ಲಿದ್ದ ಮಹಿಳಾ ಸಭಿಕರು ಸಮ್ಮೇಳನದ ಒಂದು ನಯನ ಮನೋಹರ ವೈಶಿಷ್ಟ್ಯವಾಗಿತ್ತು.

ಚುನಾಯಿತ ಅಧ್ಯಕ್ಷರು ಮತ್ತು ಡಾ. ಅಂಬೇಡ್ಕರ್ ಅವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರು ಅವರ ಪೀಠಗಳಿಗೆ ಕರೆತಂದರು. ಚುನಾಯಿತ ಅಧ್ಯಕ್ಷರು ಮತ್ತು ಇತರ ಡೆಲಿಗೇಟುಗಳು ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿದ ಮೇಲೆ ಸ್ವಾಗತ ಗೀತೆಗಳೊಂದಿಗೆ ನಡೆವಳಿಗಳು ಪ್ರಾರಂಭವಾದವು.

ಸ್ವಾಗತ ಗೀತೆಗಳನ್ನು ಹಾಡಿದ ಮೇಲೆ, ಮಿ. ಜಿ.ಟಿ. ಮೇಶರಾಮ್, ಸ್ವಾಗತ ಸಮಿತಿಯ ಅಧ್ಯಕ್ಷರು ತಮ್ಮ ಭಾಷಣವನ್ನು ಮಾಡಿದರು.

ಪ್ರಧಾನ ಕಾರ್ಯದರ್ಶಿಯವರ ಪರವಾಗಿ ಹೆಚ್.ಎಲ್.ಕೊಸಾರೆಯವರು ವರದಿಯನ್ನು ಓದಿದ ಮೇಲೆ, ನಮಗೆ ಭಾರತದ ಎಲ್ಲೆಡೆಯಿಂದ ಅನುಕಂಪದ ಸಂದೇಶಗಳು ಬಂದಿವೆ. ಎಲ್ಲವನ್ನೂ ಓದುವುದಕ್ಕೆ ದೀರ್ಘ ಕಾಲ ತೆಗೆದುಕೊಳ್ಳುತ್ತದೆ. ಆದುದರಿಂದ ಸಂದೇಶಗಳನ್ನು ಕಳುಹಿಸಿದವರ ಹೆಸರುಗಳನ್ನು ಮಾತ್ರ ಓದುತ್ತೇನೆ ಎಂದು ಹೇಳಿದರು.

ಆ ಹೆಸರುಗಳು ಹೀಗಿವೆ:–

ಬಂಗಾಳ : ೧. ಮಿ. ವಿ.ಎನ್. ಎಡ್‌ಬೋರ್, ಎಮ್.ಎ. ಬಿ.ಎಲ್. ಎಮ್.ಎಲ್.ಎ.

೨. ಮಿ. ಎ.ಮಾ.ಜಿ., ಎಮ್.ಎಲ್.ಎ.

೩. ಮಿ. ಬಿ.ಬಿ. ಮಂಡಲ್, ಬಿ.ಎಲ್., ಎಮ್.ಎಲ್.ಎ.

೪. ಗೌ. ಮಿ. ಎನ್. ಬಾರ್ಮನ್, ಸಚಿವರು

ಮದರಾಸು: ೧. ರಾವ್ ಸಾಹೇಬ್ ಎ.ಜೆ. ಮುನಿಸ್ವಾಮಿ ಪಿಳ್ಳೈ, ಎಮ್.ಎಲ್.ಎ.

೨. ಮಿ. ಇ.ಕಣ್ಣನ್, ಎಮ್.ಎಲ್.ಎ.

೩. ಮಿ. ಆರ್. ವೀರಯ್ಯನ್, ಕೊಯಮತ್ತೂರು

೪. ಸ್ವಾಮಿ ಸಜಾನಂದ, ಎಮ್.ಎಲ್.ಎ. ಚಿದಂಬರಮ್.

ಬೊಂಬಾಯಿ: ೧. ಮಿ. ಎಸ್.ಎನ್.ಮಾನೆ, ಬಾರ್–ಅಟ್–ಲಾ ಬೆಳಗಾವಿ

೨. ಪೂನಾದ ನಿಮ್ನ ವರ್ಗಗಳ ಕಾಲೇಜಿನ ವಿದ್ಯಾರ್ಥಿಗಳು

೩. ಮಿ. ಸಾಮತ್, ಎಮ್.ಎಲ್.ಎ. ಸತಾರ್ ಜಿಲ್ಲೆ

೪. ಬಲ್ ಭೀಮ ಸಿಂಗ್, ಧೂಲಿಯಾ

೫. ಸಮತಾವಾದಿ ದಲಿತ ಮಂಡಲ, ಧೂಲಿಯ

೬. ಮಿ. ಎಸ್.ಎಮ್. ಡಿಖಾಲೆ, ಪೂನ

೭. ಮಿ. ಆರ್.ಎಸ್. ಸಾಲುಂಕೆ, ಭೋರ್ ರಾಜ್ಯದ ದಲಿತ್ ಪ್ರಜಾ

೮. ಮಿ. ಆರ್.ಜಿ. ಖಂಡಾಲೆ, ದೌಂಡ್

೯. ಮಿ. ಟಿ.ಎಸ್. ಧುತ್ರೆ, ಥಾನಾ

೧೦. ರಾಜಾ, ಬೊಂಬಾಯಿ

೧೧. ದಕ್ಷಿಣ ಭಾರತ ಆದಿ ದ್ರಾವಿಡ ಯುವಕ ಸಂಘ

೧೨. ತಿರ್‌ನೆಲ್‌ವೇಲಿ ಜಿಲ್ಲಾ ಆದಿ ದ್ರಾವಿಡ ಸಮ್ಮೇಳನ

೧೩. ಮಿ. ಎಮ್.ಜಿ., ಪರ್ಮರ್, ಬಿ.ಎ.; ಡಿ.ಸಿ.ಎ. ಎಫ್.ಆರ್.ಸಿ.ಎಸ್. ಬಿಜಾಪುರ (ಉ.ಕ)

೧೪. ಮಿ. ರಾಮ್‌ಜೀ ಭಾಯಿ ಭಾನಾಬಾಯಿ, ಅಹ್ಮದಾಬಾದ್

೧೫. ಮಿ. ಸೋಮಾ ಭಾಯಿ ಸುಂದರ್‌ಜೀ, ಅಹ್ಮದಾಬಾದ್

೧೬. ಮಿ. ಸಾಧು ಪ್ರೇಮ್‌ದಾಸ್, ಅಹ್ಮದಾಬಾದ್

೧೭. ಮಿ. ಆತ್ಮಾರಾಮ್ ಇಚ್ಛಾ ರಾಮ್ ಸೋಲಂಕಿ, ಅಹ್ಮದಾಬಾದ್

೧೮. ಮಿ. ಎಸ್.ಪಿ.ಚವ್ಹಾನ್, ಮೇಘವಾಲ್ ಇಂಡಿಪೆಂಡೆಂಟ್ ಲೀಗ್, ಬೊಂಬಾಯಿ

**ಪಂಜಾಬ್:**

೧. ಮಿ. ಭಗತ್ ಹನ್ಸರಾಜ್, ಎಮ್.ಎಲ್.ಎ.

೨. ಮಿ. ಸುಖ್‌ಲಾಲ್, ಲಾಹೋರ್

೩. ಮಿ. ಆರ್.ಎಲ್. ಭೋನೋಡಿಯಾ ಲಾಹೋರ್

**ಉತ್ತರ ಪ್ರದೇಶ:**

೧. ಮಿ. ರಾಮಚಂದ್ರ, ಅಲಹಾಬಾದ್

೨. ರಾಜ್ ಬಹಾದೂರ್ ಹೋಮಿ ಪ್ರಸಾದ್ ಟಮ್ಟಾ, ಅಲ್ಮೋರಾ

೩. ಮಿ. ರಾಧೇಲಾಲ್ ವ್ಯಾಸ್, ಬರೈಲಿ

೪. ಮಿ. ಗಂಗಾರಾಮ್ ಜಿ. ಧನುಕ್, ಇಟಾವಾ

**ಹೈದರಾಬಾದ್**

೧. ಮಿ. ಬಿ.ಎಸ್. ಮೋರೆ, ಔರಂಗಾಬಾದ್

ಮಿ. ಡಿ.ಜಿ. ಜಾಧವ್, ಬಿ.ಎ.ಎಲ್.ಎಲ್.ಬಿ., ಎಮ್.ಎಲ್.ಎ. ಜಲಗಾಂವ್, ಪೂರ್ವ ಖಾಂದೇಶ (ಬೊಂಬಾಯಿ) ಅವರು ಈಗ ಚುನಾಯಿತ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿಲಿ ಎಂದು ಮಿ.

ಜಿ.ಟಿ. ಮೇಶ್ ರಾಮ್ ಅವರು ಹೇಳಿದರು.

ಅದರಂತೆ, ಡಿ.ಜಿ. ಜಾಧವ್, ಆರ್.ಎಲ್. ಬಿಸ್ವಾಸ್, ಬಿ.ಎ; ಬಿ.ಎಲ್.ಎಮ್.ಎಲ್.ಎ. (ಬಂಗಾಳ) ರಾಯ್ ಸಾಹಿಬ್ ಶಾಮಲಾಲ್, ಮಾಜಿ ಎಮ್.ಎಲ್.ಸಿ. (ಅಲಹಾಬಾದ್) (ಉತ್ತರ ಪ್ರದೇಶ), ಕೆ.ಹೆಚ್.ಶೆಂಡ್ರೆ, ಬಿ.ಎ.ಎಲ್.ಎಲ್.ಬಿ. ನಾಗಪುರ (ಮಧ್ಯ ಪ್ರಾಂತ್ಯಗಳು) ಗೋಪಾಲ್ ಸಿಂಗ್, ಎಮ್.ಬಿ.ಇ, ಎಮ್.ಎಲ್.ಎ. (ಸಂಸದೀಯ ಕಾರ್ಯದರ್ಶಿ, ಪಂಜಾಬ್ ಸಕಾರ), ಕೂರ್ಮಯ್ಯ ಬಿ.ಎ., ಬಿ.ಎಲ್., ಎಮ್.ಎಲ್.ಎ, (ಮದರಾಸು, ಆಂಧ್ರ) ಎ.ಡಿ.ರಾಯ್, ಎಮ್.ಎಲ್.ಸಿ. (ಬಂಗಾಳ) ಮತ್ತು ಪಿ.ಎನ್.ರಾಜ್ ಭೋಜ್, ಪೂನಾ (ಬೊಂಬಾಯಿ) ಇವರುಗಳು ನಿರ್ಣಯವನ್ನು ಪ್ರಸ್ತಾವಿಸಿ, ಅನುಮೋದಿಸಿ, ಬೆಂಬಲಿಸಿದರು. ಆನಂತರ ಅಖಿಲ ಭಾರತ ನಿಮ್ನ ವರ್ಗಗಳ ಸಮ್ಮೇಳನದ ಮೂರನೇ ಅಧಿವೇಶನದ ಅಧ್ಯಕ್ಷರಾಗಿ ಚುನಾಯಿತರಾಗಿರುವ ರಾವ್ ಬಹಾದೂರ್ ಎನ್.ಶಿವರಜ್, ಅವರು ಅಧ್ಯಕ್ಷ ಪೀಠದಲ್ಲಿ ಕೂರಬೇಕೆಂಬ ನಿರ್ಣಯವನ್ನು ವಿಧ್ಯುಕ್ತವಾಗಿ ಪ್ರಸ್ತಾವಿಸಿ, ಅನುಮೋದಿಸಿ, ಸಮ್ಮೇಳನದ ಎಲ್ಲೆಡೆಯಿಂದ ಬೆಂಬಲಿಸಲಾಗಿದೆ ಎಂದು ಶ್ರೀ ಜಿ.ಟಿ. ಮೇಶ್‌ರಾಯ್ ಅವರು ಹೇಳಿದರು. ಈಗ ಅದನ್ನು ನಾನು ವೋಟಿಗೆ ಹಾಕುತ್ತೇನೆ. ಪರವಾಗಿ ಇರುವವರು ತಮ್ಮ ಒಪ್ಪಿಗೆಯನ್ನು ಕೈಗಳನ್ನು ಎತ್ತುವುದರ ಮೂಲಕ ತೋರಿಸುತ್ತಾರೆ (ಎಲ್ಲರೂ ಎಲ್ಲರೂ) ವಿರೋಧವಾಗಿರುವವರು ತಮ್ಮ ವಿರೋಧವನ್ನು ಕೈಗಳನ್ನು ಎತ್ತುವುದರ ಮೂಲಕ ತೋರಿಸುತ್ತಾರೆ. ಯಾವುದೇ ವಿರೋಧವಿಲ್ಲ. ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ಈಗ ನಾನು ಶಿವರಾಜ್ ಅವರನ್ನು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಳ್ಳವಂತೆ ಕೇಳಿಕೊಳ್ಳುತ್ತೇನೆ ಎಂದರು. ಹರ್ಷೋದ್ಗಾರಗಳ ನಡುವೆ, ಶಿವರಾಜ್ ಅವರು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡರು. ಸ್ವಾಗತ ಸಮಿತಿಯ ಅಧ್ಯಕ್ಷರು ಅವರಿಗೆ ಮಾಲಾರ್ಪಣೆ ಮಾಡಿದರು. ಆ ನಂತರ ಶ್ರೀ ರಾವ್ ಬಹಾದೂರ್ ಎನ್. ಶಿವರಾಜ್ ಅವರು ಹರ್ಷ ಧ್ವನಿಗಳ ಮಧ್ಯೆ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.

ಅಧ್ಯಕ್ಷ ಭಾಷಣದ ನಂತರ ರಾವ್ ಬಹಾದೂರ್ ಎನ್.ಶಿವರಾಜ್ ಅವರು ಪ್ರಕಟಿಸಿದ್ದು: ವಿಷಯಗಳ ಸಮಿತಿ ಮೋಹನ್ ಪಾರ್ಕ್ ಸಭಾಂಗಣದಲ್ಲಿ ರಾತ್ರಿ ೯ ಘಂಟೆಗೆ ಸೇರುತ್ತದೆ. ಇಲ್ಲಿ ಬಂದಿರುವ ಎಲ್ಲಾ ಡೆಲಿಗೇಟುಗಳು ವಿಷಯ ಸಮಿತಿಯ ಸದಸ್ಯರಾಗುತ್ತಾರೆ. ಡಾ. ಅಂಬೇಡ್ಕರ್ ಅವರ ಭಾಷಣವನ್ನು ಈ ದಿನ ಕೇಳಬೇಕೆಂಬ ಮಹದಾಸೆಯನ್ನು ಗಮನದಲ್ಲಿಟ್ಟುಕೊಂಡು, ವಿಷಯ ಸಮಿತಿಯು ಸೇರುವ ಮುಂಚೆ ಡಾ. ಅಂಬೇಡ್ಕರ್ ಅವರನ್ನು ಮಾತನಾಡುವಂತೆ ಕೇಳಿಕೊಳ್ಳುತ್ತೇನೆ. ಅವರ ಭಾಷಣವನ್ನು ಸ್ವಾಗತ ಸಮಿತಿಯ ಅಧ್ಯಕ್ಷರು ನಿಮಗೆ ಮರಾಠಿಯಲ್ಲಿ ವಿವರಿಸುತ್ತಾರೆ. ಮಿ. ಜಿ.ಟಿ. ಮೇಶ್‌ರಾಮ್; ಅಧ್ಯಕ್ಷರ ಇರಾದೆಯಂತೆ ನಮ್ಮ ಮಹಾನ್ ನಾಯಕರಾದ ಡಾ. ಬಿ.ಆರ್.ಅಂಬೇಡ್ಕರ್ ಅವರು ಮೊದಲು ಇಂಗ್ಲಿಷ್‌ನಲ್ಲಿ, ನಂತರ ಮರಾಠಿಯಲ್ಲಿ ಈ ದಿನ, ಇಡೀ ರಾತ್ರಿ ಪ್ರಯಾಣ ಮಾಡಿಯು ಮತ್ತು ಗಂಟಲು ಕಟ್ಟಿದ್ದರೂ ಸಹ, ಭಾಷಣ ಮಾಡಲು ಒಪ್ಪಿರುತ್ತಾರೆ. ಕಳೆದ ರಾತ್ರಿ ಅವರಿದ್ದ ಟ್ರೇನು ನಿಂತ ಕಡೆಯಲ್ಲೆಲ್ಲಾ ನಮ್ಮ ಜನ, ಅವರನ್ನು ಬರಮಾಡಿಕೊಳ್ಳುವುದಕ್ಕಾಗಿ ಅಧಿಕ ಸಂಖ್ಯೆಯಲ್ಲಿ ಸೇರಿದ್ದರಿಂದ, ಮಾರ್ಗ ಮಧ್ಯದಲ್ಲಿ ಅವರಿಗೆ ನಿದ್ರೆ ಮಾಡಲು ಆಗಲೇ ಇಲ್ಲ. ಅವರ ಗಂಟಲಿಗೆ ಹೆಚ್ಚು ಶ್ರಮವಾಗದ ಹಾಗೆ, ನೀವೆಲ್ಲಾ ಬಹಳ ನಿಶ್ಯಬ್ಧವಾಗಿ ಇರಬೇಕು.

ಡಾ. ಅಂಬೇಡ್ಕರ್ ಅವರಿಗೆ, ಅವರು ಮಾತನಾಡುವುದಕ್ಕೆ ಏಳುತ್ತಿದ್ದಂತೆಯೇ ಉತ್ಸಾಹದಿಂದ ಕೂಡಿದ ಚಪ್ಪಾಳೆ ಸಿಕ್ಕಿತು:

## ಡಾ. ಅಂಬೇಡ್ಕರ್ ಅವರ ಭಾಷಣ

### ಡಾ. ಅಂಬೇಡ್ಕರ್ ಹೇಳಿದ್ದು :

ಅಧ್ಯಕ್ಷರೇ, ಮಹಿಳೆಯರೇ ಮತ್ತು ಮಹನೀಯರೇ, ಈ ಸಮ್ಮೇಳನದಲ್ಲಿ ಭಾಷೆಯ ಪ್ರಶ್ನೆಯನ್ನು ಎದುರಿಸಬೇಕಾಗಿರುವುದು ಮೊದಲನೆಯ ಮತ್ತು ಪ್ರಾರಂಭದ ಕಷ್ಟ. ಅಗಾಧವಾದ ಸಂಖ್ಯೆಯಲ್ಲಿ ಸೇರಿರುವ ಈ ಜನಗಳು ಮರಾಠಿ ಮಾತನಾಡುವ ಪ್ರದೇಶದಿಂದ ಬಂದಿದ್ದು ಈ ಸಮ್ಮೇಳನದಲ್ಲಿ ಏನು ಜರುಗುತ್ತದೆ ಎಂದು ಅವರಿಗೆ ಅರ್ಥವಾಗಬೇಕಾದರೆ ಮರಾಠಿಯಲ್ಲೇ ಮಾತಾಡಬೇಕಾಗಿದೆ. ಆದರೆ ಇಲ್ಲಿ ಮರಾಠಿ ಮಾತನಾಡುವ ಸಭಿಕರಲ್ಲದೆ, ಇತ್ತ ಪ್ರಾಂತ್ಯಗಳಿಂದ ಬಂದಿರುವ ಅನುಸೂಚಿತ ಜಾತಿಗಳ ಪ್ರತಿನಿಧಿಗಳೂ ಇದ್ದಾರೆ. ಬಂಗಾಳದಿಂದ, ಬಿಹಾರದಿಂದ, ಮದರಾಸಿನಿಂದ, ಪಂಜಾಬಿನಿಂದ ಮತ್ತು ಇತರ ಅನೇಕ ಕಡೆಗಳಿಂದ ಬಂದವರು ನನಗೆ ಕಾಣಿಸುತ್ತಿದ್ದಾರೆ. ಅವರು ಏನು ನಡೆಯುತ್ತಿದೆ ಎಂದು ಅರ್ಥ ಮಾಡಿಕೊಳ್ಳಬೇಕಾದರೆ, ಇಂಗ್ಲಿಷಿನಲ್ಲೇ ಮಾತನಾಡಬೇಕಾಗಿದೆ. ಈ ಕಷ್ಟವನ್ನು ಪರಿಹರಿಸುವುದಕ್ಕೆ ನಾನು ಎರಡು ಬಾರಿ ಮಾತನಾಡುತ್ತೇನೆ. ಒಮ್ಮೆ ಇಂಗ್ಲಿಷ್‌ನಲ್ಲಿ ಮತ್ತು ಇನ್ನೊಮ್ಮೆ ಮರಾಠಿಯಲ್ಲಿ. ಈ ದಿನ ನಾನು ಇಂಗ್ಲಿಷ್‌ನಲ್ಲಿ ಮಾತನಾಡುತ್ತೇನೆ. ನಾಳೆ ಮರಾಠಿಯಲ್ಲಿ ಮಾತನಾಡುತ್ತೇನೆ. ಈ ಸಮ್ಮೇಳನವನ್ನು ನಡೆಸಬೇಕೆಂಬ ಆಲೋಚನೆ ಹೇಗೆ ಹುಟ್ಟಿಕೊಂಡಿತೆಂಬುದನ್ನು ನಾನು ನಿಮಗೆ ಹೇಳಬಹುದು. ನಿಮಗೆ ಚೆನ್ನಾಗಿ ಜ್ಞಾಪಕವಿರುವಂತೆ ಕಳೆದ ವರ್ಷ ಏಪ್ರಿಲ್‌ನಲ್ಲಿ ಭಾರತದಕ್ಕೆ ಬಂದಿದ್ದ ಸರ್ ಸ್ಟಾಫೋರ್ಡ್ ಕ್ರಿಪ್ಸ್ ಅವರನ್ನು ಭೇಟಿ ಮಾಡುವುದಕ್ಕೆ ನಾನು ದೆಹಲಿಗೆ ಹೋಗಿದ್ದೆ. ಅವರು ಚಕ್ರವರ್ತಿಯವರ ಸರ್ಕಾರದ ಪ್ರತಿನಿಧಿಯಾಗಿ ಬಂದಿದ್ದು ಸಾಂವಿಧಾನಿಕ ಬದಲಾವಣೆಗಳಿಗೆ ಕೆಲವು ಪ್ರಸ್ತಾವನೆಗಳನ್ನು ತಂದಿದ್ದರು. ಆ ಪ್ರಸ್ತಾವನೆಗಳನ್ನು ಒಪ್ಪಿಕೊಳ್ಳುವಂತೆ ಮನವೊಲಿಸಲು ಬೇರೆ ಬೇರೆ ರಾಜಕೀಯ ಪಕ್ಷಗಳೊಂದಿಗೆ ಸಂಧಾನ ಮಾಡಲು ಅವರು ಬಂದಿದ್ದರು. ನಾನು ದೆಹಲಿಗೆ ಹೋಗುವ ಮುಂಚೆ, ವಿವಿಧ ಪ್ರಾಂತ್ಯಗಳಲ್ಲಿನ ಅನುಸೂಚಿತ ಜಾತಿಗಳ ಪ್ರತಿನಿಧಿಗಳನ್ನು ಅವರ ಸಲಹೆಗಳನ್ನು ಪಡೆಯುವುದಕ್ಕೋಸ್ಕರ ನನ್ನನ್ನು ದೆಹಲಿಯಲ್ಲಿ ಭೇಟಿ ಮಾಡುವಂತೆ ನಾನು ಆಹ್ವಾನಿಸಿದ್ದೆ. ಸರ್ ಸ್ಟಾಫೋರ್ಡ್ ಕ್ರಿಪ್ಸ್ ಅವರೊಡನೆ ನನ್ನ ಮಾತುಕತೆಯ ಫಲಿತಾಂಶಗಳನ್ನು ನಾನು ಅವರಿಗೆ ತಿಳಿಸಿದಾಗ, ಆ ಪ್ರಸ್ತಾವನೆಗಳು ಅನುಸೂಚಿತ ಜಾತಿಗಳವರಿಗೆ ಮಾರಕವಾಗಿದೆಯೆಂಬುದು ಎಲ್ಲರ ಅಭಿಪ್ರಾಯವಾಗಿತ್ತು. ಕ್ರಿಪ್ಸ್ ಪ್ರಸ್ತಾವನೆಗಳ ಮೇಲೆ ನನ್ನ ಅಭಿಪ್ರಾಯವನ್ನು ಸುದ್ದಿ ಮಾಧ್ಯಮದವರಿಗೆ ಹೇಳಿದೆ. ಅದು ಏನೆಂಬುದನ್ನು ನೀವೆಲ್ಲರೂ ಆಗಲೇ ಓದಿ ತಿಳಿದುಕೊಂಡಿದ್ದೀರೆಂದು ಅಂದುಕೊಂಡಿದ್ದೇನೆ. ಭಾರತದ ಎಲ್ಲ ಕಡೆಯಿಂದ ಅನುಸೂಚಿತ ಜಾತಿಗಳವರು ಒಟ್ಟಾಗಿ ಕ್ರಮ ತೆಗೆದುಕೊಳ್ಳಬೇಕಾಗಿರುವುದು ಬಹಳ ಅವಶ್ಯಕವಾಗಿದ್ದು, ಹಾಗೆ ಮಾಡುವುದು ಮಾತ್ರ ನಮ್ಮ ಮೇಲೆ ಬಂದೆರಗಲಿರುವ ಸರ್ವನಾಶದಿಂದ ನಮ್ಮನ್ನು ಉಳಿಸಲು ಸಾಧ್ಯ ಎಂದು ನಮ್ಮೆಲ್ಲರ ಅಭಿಪ್ರಾಯವಾಗಿತ್ತು. ದೆಹಲಿಗೆ ಬಂದಿದ್ದ ಅವರ ಪ್ರತಿನಿಧಿಗಳ ಮೂಲಕ ಭಾರತ ಎಲ್ಲೆಡೆಯ ಅನುಸೂಚಿತ ಜಾತಿಗಳವರು ವ್ಯಕ್ತಪಡಿಸಿದ ಇಚ್ಛೆಯ ಫಲಶ್ರುತಿಯೇ ಈ ಸಮ್ಮೇಳನ. ಆದುದರಿಂದಲೇ ಭಾರತದ ಎಲ್ಲೆಡೆಯಿಂದ ಬಂದಿರುವ ಅನುಸೂಚಿತ ಜಾತಿಗಳ ಪ್ರತಿನಿಧಿಗಳು ಈ ದಿನ ನಮ್ಮೊಂದಿಗೆ ಇದ್ದಾರೆ. ಈ ಸಮ್ಮೇಳನವನ್ನು ಎಲ್ಲಿ ನಡೆಸಬೇಕೆಂಬುದರ ಬಗ್ಗೆ ಪ್ರಾಂತ್ಯಗಳ ಮಧ್ಯೆ ಸ್ಪರ್ಧೆ ಪ್ರತಿಸ್ಪರ್ಧೆ ಇತ್ತು; ಬಂಗಾಳ, ಪಂಜಾಬ್, ಉತ್ತರ ಪ್ರದೇಶ, ಮಧ್ಯಪ್ರದೇಶ ಹೀಗೆ ಪ್ರತಿಯೊಬ್ಬರಿಗೂ ಸಮ್ಮೇಳನ ತಮ್ಮ ರಾಜ್ಯದಲ್ಲೇ ನಡೆಯಬೇಕೆಂಬ ಅಭಿಲಾಷೆಯಿತ್ತು. ಕಟ್ಟಕಡೆಗೆ ಎಲ್ಲರೂ ಕೇಂದ್ರ ಪ್ರಾಂತ್ಯದಲ್ಲಿ ಸಮ್ಮೇಳನ ನಡೆಸುವ ಬಗ್ಗೆ ಒಪ್ಪಿಕೊಂಡರು. ಆದರೆ ಅವರದ್ದು ಒಂದು ನಿಬಂಧನೆ ಇತ್ತು. ಅದೇನೆಂದರೆ ಸಮ್ಮೇಳನ ಎಲ್ಲೇ ನಡೆಯಲಿ ನಾನು ಅದರ

ಅಧ್ಯಕ್ಷತೆಯನ್ನು ವಹಿಸಬೇಕೆಂಬುದು ಅವರ ಆಗ್ರಹ. ಅವರ ಇಚ್ಛೆಯಂಥೆ ನಾನು ಅಧ್ಯಕ್ಷನಾಗುವುದಕ್ಕೆ ಒಪ್ಪಿಕೊಂಡಿದ್ದೆ. ಸಮ್ಮೇಳನ ಈ ಪ್ಲಾನಿನಂತೆ ನಡೆಯುತ್ತಿದೆ. ಇಂಥ ಒಂದು ದೊಡ್ಡದಾದ, ಗೆಲುವು ಸಾಧಿಸಿದ ಸಮ್ಮೇಳನ ಎಂದಿಗೂ ನಡೆದಿರಲಿಲ್ಲ. ಇದಕ್ಕಾಗಿ ನಾವೆಲ್ಲರೂ ನಮ್ಮ ಕೇಂದ್ರ ಪ್ರಾಂತ್ಯದ ಸ್ನೇಹಿತರಿಗೆ ಕೃತಜ್ಞರಾಗಿರಬೇಕಾಗಿದೆ. ಅವರ ಉತ್ಸಾಹ, ಅವರ ಪರಿಶ್ರಮವೇ ಈ ಸಮ್ಮೇಳನ ಹೀಗೆ ಜಯಪ್ರದವಾಗಿ ನಡೆಯುತ್ತಿರುವುದಕ್ಕೆ ಕಾರಣವಾಗಿದೆ. ಮೊದಲಿನ ಪ್ಲಾನ್‌ಗಿಂತ ಸ್ವಲ್ಪ ಬದಲಾವಣೆ ಆಗಿರುವುದೇನೆಂದರೆ, ಅಧ್ಯಕ್ಷತೆಯಲ್ಲಿನ ಬದಲಾವಣೆ. ನನ್ನ ಜಾಗದಲ್ಲಿ ನನ್ನ ಸ್ನೇಹಿತರಾದ ರಾವ್ ಬಹಾದೂರ್ ಎನ್.ಶಿವರಾಜ್ ಅವರು ಅಧ್ಯಕ್ಷತೆ ವಹಿಸುತ್ತಿದ್ದಾರೆ. ನಾನು ಅಧ್ಯಕ್ಷತೆ ವಹಿಸಿಕೊಳ್ಳುತ್ತೇನೆ ಎಂದು ಒಪ್ಪಿಕೊಂಡ ಸಮಯದಲ್ಲಿ, ನಾನೊಬ್ಬ ಸ್ವತಂತ್ರ ಮನುಷ್ಯನಾಗಿದ್ದೆ; ನನಗೆ ರಾಜಕೀಯ ವ್ಯಕ್ತಿಗೆ ಇರುವ ಸ್ವಾತಂತ್ರ್ಯವಿತ್ತು. ನಾನು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಬಹುದಾಗಿತ್ತು. ನಾನು ಹೇಳಬೇಕೆಂದುಕೊಂಡಿದ್ದನ್ನು ಹೇಳಬಹುದಾಗಿತ್ತು. ಸರ್ಕಾರದ ಪದವಿ ಸೃಷ್ಟಿ ಮಾಡುವ ಇತಿಮಿತಿಗಳು ಆಗ ಇರಲಿಲ್ಲ. ಆದರೆ ಸಮ್ಮೇಳನ ಪ್ರಾರಂಭವಾಗುವ ಮುಂಚೆ, ನನ್ನನ್ನು ವೈಸ್‌ರಾಯ್ ಅವರ ಎಕ್ಸಿಕ್ಯೂಟಿವ್ ಕೌನ್‌ಸಿಲ್‌ಗೆ (ಕಾರ್ಯ ನಿರ್ವಾಹಕ ಪರಿಷತ್ತಿಗೆ) ನೇಮಕ ಮಾಡಲಾಗಿದೆಯೆಂದು ಪ್ರಸಿದ್ಧಿಸಲಾಯಿತು. ಇದು ಅಧಿಕಾರದಿಂದ ಉದ್ಭವಿಸುವ ಕಟ್ಟುಪಾಡುಗಳನ್ನು ತಂದಿತು. ಆದುದರಿಂದ ಅನುಸೂಚಿತ ಜಾತಿಗಳ ಪರವಾಗಿ, ಸ್ವತಂತ್ರವಾಗಿ, ಅಧಿಕಾರಯುತವಾಗಿ ಮಾತನಾಡುವ ಇನ್ನೊಬ್ಬರನ್ನು ಇಟ್ಟುಕೊಳ್ಳುವುದು ಉಚಿತವೆಂದು ತೋರಿತು. ರಾವ್ ಬಹಾದೂರ್ ಎನ್.ಶಿವರಾವ್ ಅವರು ಮುಕ್ತವಾಗಿ ಮಾತನಾಡಬಲ್ಲರು. ಜನಗಳ ನಿಮಿತ್ತ ಅವರು ದೀರ್ಘಕಾಲ ಶ್ರಮಿಸಿದ್ದಾರೆ. ನಮ್ಮ ಜನಗಳನ್ನು ಪ್ರತಿನಿಧಿಸುತ್ತಿದ್ದಾರೆ. ವಿದ್ಯಾರ್ಹತೆಯಲ್ಲಿ ಅವರಿಗೆ ಇರುವಷ್ಟು ಅರ್ಹತೆ ಬಹಳ ಮಂದಿಗೆ ಇರುವುದಿಲ್ಲ. ಅವರು ಮದರಾಸ್ ವಿಶ್ವವಿದ್ಯಾಲಯದ ಬಿ.ಎ. ಮತ್ತು ಬಿ.ಎಲ್.ಪದವೀಧರರು, ಅವರು ವಕೀಲರಾಗಿ ಪ್ರಾಕ್ಟೀಸ್ ಮಾಡುತ್ತಿದ್ದು, ಹತ್ತು ವರ್ಷಗಳಿಗೂ ಮಿಕ್ಕು ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾರೆ. ವಾಸ್ತವವಾಗಿ ಅವರಿಗಿಂತ ಉತ್ತಮ ವ್ಯಕ್ತಿಯನ್ನು ಹುಡುಕುವುದಕ್ಕೆ ಆಗುತ್ತಿರಲಿಲ್ಲ. ಅವರು ನನ್ನ ಬದಲಿಗೆ ಅಧ್ಯಕ್ಷತೆ ವಹಿಸುತ್ತಿರುವುದಕ್ಕೆ ನನಗೆ ಸಂತೋಷವಾಗಿದೆ.

ನಾನು ಭಾರತ ಸರ್ಕಾರದಲ್ಲಿ ಮುಂದುವರೆಯುತ್ತಿರುವವರೆಗೆ, ನಮ್ಮ ಚಳುವಳಿಯನ್ನು ಮುಂದುವರೆಸಿಕೊಂಡು ಹೋಗುವ ಮತ್ತು ಅದನ್ನು ಪರಿಣಾಮಕಾರಿಯನ್ನಾಗಿ ಮಾಡುವ ಹೊಣೆ ನಿಮ್ಮ ಮೇಲೆ ಇರುತ್ತದೆ. ಇದರಿಂದಾಗಿ, ನಾವೆಲ್ಲರೂ ಯಾವ ಫಲಿತಾಂಶಕ್ಕಾಗಿ ಆಶಿಸುತ್ತಿದ್ದೇವೆಯೋ, ಅದನ್ನು ನಾವು ಸಾಧಿಸಬಹುದಾಗಿದೆ. ನಾನು ನಿಮಗೆ ಸಹಾಯ ಮಾಡುತ್ತೇನೆ, ಸಲಹೆಯನ್ನೂ ಕೊಡುತ್ತೇನೆ. ಆದರೆ ಅದರಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂಗತಿಯನ್ನು ನೀವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅವಶ್ಯಕತೆ ಇದೆ. ಆದುದರಿಂದ ಈ ಹೊಣೆಗಾರಿಕೆಯನ್ನು ಬೇರೆಯವರಿಗೆ ವರ್ಗಾಯಿಸುವುದಕ್ಕೆ ಮುಂಚೆ, ನನ್ನ ಮುಂದಾಳತ್ವದಲ್ಲಿ ನಡೆದ ಅಸ್ಪೃಶ್ಯರ ಈ ಚಳುವಳಿಯನ್ನು ಕುರಿತು ಹೇಳಬೇಕಾಗಿದೆ. ಕಳೆದ ೨೦ ವರ್ಷಗಳಿಂದ ನನ್ನ ಆಶ್ರಯದಲ್ಲಿ ಅಲ್ಲದಿದ್ದರೂ ನನ್ನ ಮಾರ್ಗದರ್ಶಿತ್ವದಲ್ಲಿ ಈ ಚಳುವಳಿ ನಡೆದುಬಂದಿದೆ. ಯಾರ ಮೇಲೆ ಈ ಹೊಣೆಗಾರಿಕೆ ಬೀಳುತ್ತದೆಯೋ ಅವರು ಅನುಸೂಚಿತ ಜಾತಿಗಳವರು. ಈ ದೇಶದಲ್ಲಿರುವ ಇತರ ಸಮುದಾಯಗಳೊಂದಿಗೆ ಹೋಲಿಸಿದಾಗ, ಎಲ್ಲಿ ನಿಂತಿದ್ದಾರೆ, ಏನು ಮಾಡಲಾಗಿದೆ ಮತ್ತು ಅವರ ವಿಮೋಚನೆಗೆ ಮಾಡಬೇಕಾದುದು ಏನು ಉಳಿದುಕೊಂಡಿದೆ ಎನ್ನುವುದು ಅವರಿಗೆ ಗೊತ್ತಾಗಬೇಕಾಗಿದೆ ಎನ್ನುವ ಕಾರಣಕ್ಕಾಗಿ ಈ ಚಳುವಳಿಯನ್ನು ಕುರಿತು ಹೇಳುತ್ತಿದ್ದೇನೆ.

ಎಲ್ಲಾ ದಿಸೆಯಲ್ಲೂ ಅಸ್ಪೃಶ್ಯರು ಮಹತ್ವವಾದ ಮುನ್ನಡೆಯನ್ನು ಸಾಧಿಸಿದ್ದಾರೆ ಎಂಬುದು ನನಗೆ

ಸಂತೃಪ್ತಿಯನ್ನು ತಂದುಕೊಟ್ಟಿದೆ. ನಾನು ಅದರಲ್ಲಿ ಮೂರನ್ನು ಮಾತ್ರ ನಿರ್ದಿಷ್ಟಗೊಳಿಸಿ ಹೇಳುತ್ತೇನೆ. ಯಾರೂ ಸಾಧಿಸಿಲ್ಲದಂಥ ರಾಜಕೀಯ ಪ್ರಜ್ಞೆಯನ್ನು ಅವರು ಪಡೆದುಕೊಂಡಿದ್ದಾರೆ. ಎರಡನೆಯದಾಗಿ ಶಿಕ್ಷಣದಲ್ಲಿ ಕೂಡ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿದ್ದಾರೆ. ಮೂರನೆಯದಾಗಿ, ಸಂಘ-ಸಂಸ್ಥೆಗಳಲ್ಲಿ, ಸಾರ್ವಜನಿಕ ಸೇವೆಯಲ್ಲಿ ಅವರಿಗೆ ಹೆಜ್ಜೆ ಊರಲು ಸಾಧ್ಯವಾಗಿದೆ.

ಅಸ್ಪೃಶ್ಯರ ಇಂದಿನ ಪೀಳಿಗೆಯವರಿಗೆ, ಅಸ್ಪೃಶ್ಯರು ಸಾಧಿಸಿರುವ ಅಗಾಧವಾದ ಪ್ರಗತಿಯನ್ನು ಮನನ ಮಾಡಿಕೊಳ್ಳುವುದಿಕ್ಕೆ ಆಗುತ್ತಿಲ್ಲ. ಅದಕ್ಕೆ ಸರಳವಾದ ಕಾರಣವೆಂದರೆ, ೨೦ ವರ್ಷಗಳ ಹಿಂದೆ ಇದ್ದ ಪರಿಸ್ಥಿತಿಯ ಅರಿವು ಅವರಿಗೆ ಇಲ್ಲ. ನಾನು ಬ್ಯಾರಿಸ್ಟರ್ ಆದ ನಂತರ ಇಂಗ್ಲೆಂಡ್‌ನಿಂದ ಮರಳಿದ ಮೇಲೆ, ಮೊದಲ ಸಭೆಯನ್ನು ಉದ್ದೇಶಿಸಿ ನಾನು ಮಾತನಾಡಿದ್ದು ನನ್ನ ಜ್ಞಾಪಕದಲ್ಲಿ ಇದೆ. ಆ ಸಭೆಯ ವ್ಯವಸ್ಥಾಪಕರುಗಳನ್ನು ಬಿಟ್ಟು ಒಬ್ಬನೇ ಒಬ್ಬ ವ್ಯಕ್ತಿ ಸಭೆಯಲ್ಲಿ ಇರಲಿಲ್ಲ. ಕೆಲವರು ಮನೆಗಳ ಮೆಟ್ಟಿಲುಗಳ ಮೇಲೆ ಕುಳಿತುಕೊಂಡಿದ್ದರು; ಇನ್ನು ಕೆಲವರು ಮೂಲೆಯಲ್ಲಿ ನಿಂತು ಚುಟ್ಟಾ ಸೇದುತ್ತಾ ಹರಟೆ ಕೊಚ್ಚುತ್ತಿದ್ದರು. ಸಭೆಗೆ ಬರಬೇಕೆಂದು ಯಾರಿಗೂ ಹೊಳೆಯಲೇ ಇಲ್ಲ. ಈಗ ವ್ಯತ್ಯಾಸವನ್ನು ನೋಡಿ. ಇಲ್ಲೀಗ ೭೫,೦೦೦ ಜನರಿದ್ದೀರ. ೨೦ ವರ್ಷಗಳ ಹಿಂದೆ ಇದ್ದ ಪರಿಸ್ಥಿತಿಗೆ ಹೋಲಿಸಿದರೆ, ಶಿಕ್ಷಣ ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ. ಪೂನಾ ಒಂದರಲ್ಲೇ ಕಾಲೇಜುಗಳಲ್ಲಿ ೫೦ ಹುಡುಗರು ಓದುತ್ತಿದ್ದಾರೆ. ವಿವಿಧ ವಿಶ್ವವಿದ್ಯಾಲಯಗಳಿಂದ ಪದವಿಗಳನ್ನು ಪಡೆದುಕೊಂಡ ಸುಮಾರು ೫೦೦ ಅಸ್ಪೃಶ್ಯರು ಇದ್ದಾರೆ. ಕೆಲವರು ವೈದ್ಯರುಗಳಾಗಿದ್ದಾರೆ. ಕೆಲವರು ಬ್ಯಾರಿಸ್ಟರುಗಳಾಗಿದ್ದಾರೆ. ನಮ್ಮ ಅನೇಕ ಸಹೋದರರು ಪುರಸಭೆಗಳ, ಜಿಲ್ಲಾ ಮತ್ತು ಸ್ಥಳೀಯ ಮಂಡಳಿಗಳ ಸದಸ್ಯರುಗಳಾಗಿದ್ದಾರೆ. ಅನೇಕ ವರ್ಷಗಳ ಹಿಂದೆ ನಮ್ಮ ಮಕ್ಕಳುಗಳಿಗೆ ಶಿಕ್ಷಣವನ್ನು ನಿರಾಕರಿಸಲಾಗಿತ್ತು. ಅನೇಕ ವರ್ಷಗಳ ಹಿಂದೆ ಮಾಲಿನ್ಯವಾಗುತ್ತದೆಂಬ ಹೆದರಿಕೆಯಿಂದ ಅಸ್ಪೃಶ್ಯರನ್ನು ಸ್ಥಳಿಯ ಮಂಡಳಿಗಳ, ಪುರಸಭೆಗಳ ಸದಸ್ಯರುಗಳಾಗುವುದಕ್ಕೆ ಅನುಮತಿ ಕೊಡುತ್ತಿರಲಿಲ್ಲ. ಸಾರ್ವಜನಿಕ ಸೇವೆಯಲ್ಲಿನ ನಮ್ಮ ಪ್ರಗತಿ ಬಯಸಿದಷ್ಟು ವೇಗದಲ್ಲಿ ಆಗಿಲ್ಲ. ಕೆಲವು ವಿಷಯಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶಾವಕಾಶ ಸಿಕ್ಕಿದೆ. ನಾನು ಪೋಲೀಸ್ ಮತ್ತು ಸೈನ್ಯವನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಪೋಲಿಸ್ ಇಲಾಖೆಯನ್ನು ಅಸ್ಪೃಶ್ಯರಿಗೆ ಮುಚ್ಚಲಾಗಿತ್ತು. ಒಂದು ಕಾನ್‌ಸ್ಟೇಬಲ್ ಹುದ್ದೆಯೂ ಅಸ್ಪೃಶ್ಯನಿಗೆ ತೆರೆದಿರಲಿಲ್ಲ. ಈ ಪರಿಸ್ಥಿತಿ ಕಡೆಯ ಪಕ್ಷ ಕೆಲವು ಪ್ರಾಂತ್ಯಗಳಲ್ಲಾದರೂ ಬದಲಾಗಿದೆ. ನಮ್ಮ ಜನಗಳನ್ನು ಪೋಲಿಸ್ ಸೇವೆಯಲ್ಲಿ ಈಗ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಸೈನ್ಯವನ್ನೂ ಸಹ ಪ್ರಸ್ತಾಪಿಸಲೇಬೇಕು. ೧೮೯೨ನೆಯ ಇಸವಿಯವರೆಗೂ ಮಹರ್‌ಗಳು ಸೈನ್ಯದಲ್ಲಿ ಎಲ್ಲೆಲ್ಲಿಯೂ ಇದ್ದರು; ಮಹರ್‌ಗಳ ಸೈನ್ಯವೇ ಇತ್ತು. ೧೮೯೨ರ ನಂತರ ಸೈನ್ಯದಲ್ಲಿ ಮಹರ್‌ಗಳ ಪ್ರವೇಶ ನಿಂತುಹೋಯಿತು. ೧೯೧೪ರ ಮಹಾಯುದ್ಧರ ಅವಧಿಯಲ್ಲಿ ಸೈನ್ಯದಲ್ಲಿ ಮಹರ್‌ಗಳ ಭರ್ತಿ ಪುನಃ ಪ್ರಾರಂಭಿಸಲಾಯಿತು; ಮಹರ್‌ಗಳ ಒಂದು ಬೆಟಾಲಿಯನ್ನನ್ನೇ ರಚಿಸಲಾಯಿತು. ಕಡೆಯ ಯುದ್ಧದ ನಂತರ ಬೆಟಾಲಿಯನ್ನನ್ನು ಪುನಃ ವಿಸರ್ಜಿಸಲಾಯಿತು. ಈಗ, ಹೇಗಾದರೂ ರೆಜಿಮೆಂಟುಗಳನ್ನು ಪುನಾರಚಿಸಲಾಗುತ್ತಿದೆ. ನಮ್ಮ ಯುವಕರುಗಳಿಗೆ ಮಿಲಿಟರಿ ಅಧಿಕಾರಗಳನ್ನು ಪ್ರದಾನ ಮಾಡಲಾಗುತ್ತಿದೆ. ನಮ್ಮಲ್ಲಿ ೫-೬ ಜನ ಯುವಕರು ಆಗಲೇ ರಾಜರ ನಿರೂಪವನ್ನು ಪಡೆದುಕೊಂಡಿದ್ದಾರೆ; ಸೈನ್ಯದಲ್ಲಿ ಜವಾಬ್ದಾರಿಯುತ ಸ್ಥಾನ ಮತ್ತು ಗೌರವ ಸಿಕ್ಕಿದೆ. ನಮ್ಮ ಸ್ತ್ರೀ ಸಮುದಾಯ ಅತ್ಯಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಇಲ್ಲಿ ಈ ಸಮ್ಮೇಳನದಲ್ಲಿ ೨೦,೦೦೦ದಿಂದ ೨೫,೦೦೦ದವರೆಗೆ ಸ್ತ್ರೀಯರು ಹಾಜರಿದ್ದಾರೆ. ಅವರ ಉಡಿಗೆಗಳನ್ನು ನೋಡಿ, ಅವರ ನಡೆನುಡಿಗಳನ್ನು ನೋಡಿ, ಅವರು ಮಾತನಾಡುವುದನ್ನು ಗುರುತಿಸಿ. ಯಾರಾದರೂ ಅವರನ್ನು ಅಸ್ಪೃಶ್ಯ ಮಹಿಳೆಯರು ಎಂದು ಹೇಳಲು ಸಾಧ್ಯವೆ? ನಿಮ್ಮ

ಮಹಿಳೆಯರು ಸಾಧಿಸಿರುವ ಪ್ರಗತಿ ಅತ್ಯಂತ ಆಶ್ಚರ್ಯಕರವಾಗಿದೆ, ಹುರಿದುಂಬಿಸುವಂತೆ ಇದೆ. ನಮ್ಮ ಚಳುವಳಿಯ ವೈಲಕ್ಷಣ್ಯದಲ್ಲಿ ಅದು ಅತ್ಯಂತ ತೃಪ್ತಿದಾಯಕವಾಗಿದೆ.

ನಾವೆಲ್ಲರೂ ಸಕಾರಣವಾಗಿಯೇ ಹೆಮ್ಮೆ ಪಡಬಹುದಾದಂಥ ಪ್ರಗತಿಯ ದಾಖಲೆ ಇದಾಗಿದೆ. ಈ ಪ್ರಗತಿಗಾಗಿ ನಾವು ಯಾರಿಗೂ ಧನ್ಯವಾದ ಹೇಳಬೇಕಾಗಿಲ್ಲ. ಅದೇನೂ ಹಿಂದೂಗಳು ನಮಗೆ ಕೊಟ್ಟ ದಾನಧರ್ಮವಲ್ಲ. ಈ ಸಾಧನೆ ಸಂಪೂರ್ಣವಾಗಿ ನಮ್ಮ ಪರಿಶ್ರಮದಿಂದ ಮಾತ್ರ ಬಂದದ್ದು. ಈಗ ಪ್ರಶ್ನೆಯೇನೆಂದರೆ, ಈ ಪ್ರಗತಿಯನ್ನು ಉಳಿಸಿಕೊಂಡು ಹೋಗುವುದು ಹೇಗೆ ಎಂದು. ಇದು ನಮ್ಮನ್ನು ನಾವೇ ಕೇಳಿಕೊಳ್ಳಲು ಮರೆಯಕೂಡದಾದ ಪ್ರಶ್ನೆ. ಸಮುದಾಯಗಳ ನಡುವಿನ ಸ್ಪರ್ಧಾತ್ಮಕ ಪ್ರಗತಿ. ಅಧಿಕಾರದಿಂದ ಸಿದ್ಧಿಸಿದ ಪ್ರಗತಿ. ಈ ಶಕ್ತಿ ಆರ್ಥಿಕ ಶಕ್ತಿಯಾಗಿರಬಹುದು, ಸಾಮಾಜಿಕ ಶಕ್ತಿಯಾಗಿರಬಹುದು ಅಥವ ರಾಜಕೀಯ ಶಕ್ತಿಯಾಗಿರಬಹುದು. ಈ ನಮ್ಮ ಪ್ರಗತಿಯನ್ನು ಧರಿಸಿಕೊಂಡು ಹೋಗುವ ಶಕ್ತಿ ನಮಗೆ ಇದೆಯೆ? ನಮಗೆ ಆರ್ಥಿಕ ಶಕ್ತಿ ಇದೆಯೆ? ಇಂಥದೇನೂ ನಮಗೆ ಇಲ್ಲ ಎಂದು ನನಗೆ ಖಂಡಿತ ಗೊತ್ತು. ನಾವು ಒಂದು ಗುಲಾಮೀ ವರ್ಗಕ್ಕೆ ಸೇರಿದವರು. ನಮಗೆ ಸಾಮಾಜಿಕ ಶಕ್ತಿ ಇದೆಯೆ? ಅದು ಖಂಡಿತ ನಮಗೆ ಇಲ್ಲ. ನಾವು ಮಾನವ ಜನಾಂಗದ ಒಂದು ಕೀಳು ದರ್ಜೆಯ ಭಾಗವಷ್ಟೆ. ಆದುದರಿಂದ ನಮ್ಮ ಮುಂದುವರೆದ ಪ್ರಗತಿಗಾಗಿ ನಾವು ನಂಬಿಕೊಳ್ಳಬೇಕಾದದ್ದು ರಾಜಕೀಯ ಶಕ್ತಿಯನ್ನು ಹಿಡಿದುಕೊಳ್ಳುವುದು. ಇದೊಂದೇ ನಮ್ಮ ಮುಕ್ತಿಗೆ ಮಾರ್ಗವೆಂಬುದರಲ್ಲಿ ನನಗೆ ಅನುಮಾನವೇ ಇಲ್ಲ; ಅದಿಲ್ಲದಿದ್ದರೆ, ನಾವು ನಾಶವಾಗಿ ಬಿಡುತ್ತೀವಿ. ಈ ಪ್ರಶ್ನೆಯ ಮೇಲೆ ನಾವು ನಮ್ಮ ಗಮನವನ್ನೆಲ್ಲಾ ಕೇಂದ್ರೀಕರಿಸಬೇಕಾಗಿದೆ. ಇದು ನಮಗೆ ಜೀವನ್ಮರಣದ ಪ್ರಶ್ನೆ. ರಾಜಕೀಯ ಶಕ್ತಿಯನ್ನು ಹಿಡಿದುಕೊಳ್ಳುವುದರಲ್ಲಿ ನಮ್ಮ ಪ್ರತೀಕ್ಷೆಗಳೇನು? ನಮಗೆ ಸಹಾಯ ಮಾಡುತ್ತಿರುವ ಶಕ್ತಿಗಳನ್ನು, ಹಾಗೆಯೇ ನಮಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಶಕ್ತಿಗಳನ್ನು ಸಮತೋಲನ ಮಾಡಬೇಕು. ಇಂಥ ಶಕ್ತಿಗಳ ಬಗ್ಗೆ ನಮಗೆ ತಿಳುವಳಿಕೆ ಇದ್ದರೆ, ನಿಮ್ಮ ಕಾರ್ಯನೀತಿಗಳನ್ನು ರೂಪಿಸಿಕೊಳ್ಳಬಹುದು.

ನನ್ನ ರಾಜಕೀಯದ ಪ್ರಮುಖ ನೀತಿ ಯಾವುದು ಎಂಬುದನ್ನು ಹೇಳುತ್ತಾ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ನಿಮಗೆ ಅದು ಈಗಾಗಲೇ ಗೊತ್ತಿರಬಹುದು. ಆದರೆ ಅದನ್ನು ಪುನರುಚ್ಚರಿಸುವುದೇ ಸೂಕ್ತವಾಗಿ ಕಾಣುತ್ತದೆ. ಅಸ್ಪೃಶ್ಯರು ಹಿಂದೂಗಳ ಉಪಭಾಗವಾಗಲೀ, ಅಥವಾ ಉಪವಿಭಾಗವಾಗಲಿ ಅಲ್ಲ; ಅವರು ಭಾರತ ದೇಶದ ಜನಜೀವನದ ಒಂದು ಭಿನ್ನವಾದ ಮತ್ತು ಒಂದು ಪ್ರತ್ಯೇಕವಾದ ಭಾಗವಾಗಿದ್ದಾರೆ. ಅವರು ಮುಸ್ಲಿಮರಂತೆ ಭಿನ್ನವೂ, ವಿಭಿನ್ನವೂ ಆಗಿದ್ದು, ಮುಸಲ್ಮಾನರುಗಳಿಗೆ ಹೇಗೋ ಹಾಗೆಯೇ ಅವರಿಗೆ ಭಾರತದ ಹಿಂದೂಗಳ ವಿರುದ್ಧ ಪ್ರತ್ಯೇಕವಾದ ರಾಜಕೀಯ ಹಕ್ಕುಗಳಿಗೆ ಅವರು ಬಾಧ್ಯರಾಗಿದ್ದಾರೆ. ಇದೇ ನನ್ನ ರಾಜಕೀಯದ ಪ್ರಮುಖ ನೀತಿ. ಇದನ್ನು ಜ್ಞಾಪಕದಲ್ಲಿ ಇಟ್ಟುಕೊಂಡರೆ ಯಾರೂ ನನ್ನನ್ನಾಗಲೀ ಅಥವಾ ನನ್ನ ರಾಜಕೀಯವನ್ನಾಗಲೀ ತಪ್ಪಾಗಿ ಅರ್ಥೈಸಿಕೊಳ್ಳುವುದಿಲ್ಲ. ನನ್ನ ರಾಜಕೀಯ ಮೂಲಾಧಾರವೇನು ಎಂದು ಹೇಳಿದ ಮೇಲೆ, ನಮ್ಮ ಬೇಡಿಕೆಯಾದ ಪ್ರತ್ಯೇಕ ರಾಜಕೀಯ ಹಕ್ಕುಗಳ ಪರವಾಗಿ ಮತ್ತು ವಿರೋಧವಾಗಿ ಸಕ್ರಿಯವಾಗಿರುವ ಶಕ್ತಿಗಳ ಕುರಿತು ಸಂಕ್ಷಿಪ್ತವಾಗಿ ಹೇಳುತ್ತೇನೆ. ನಾನು ದುಂಡು ಮೇಜಿನ ಸಮ್ಮೇಳನದಿಂದ ಪ್ರಾರಂಭಿಸುತ್ತೇನೆ ದುಂಡು ಮೇಜಿನ ಸಮ್ಮೇಳನ ಒಂದು ವಿಸ್ತಾರವಾದ ವ್ಯವಹಾರವಾಗಿದ್ದು, ನಡೆದ ಸಂಗತಿಗಳ ವಿವರಗಳನ್ನು ಹೇಳಿ ನಿಮಗೆ ತೊಂದರೆ ಕೊಡಲು ಇಚ್ಛೆಸುವುದಿಲ್ಲ. ಅಸ್ಪೃಶ್ಯರಿಗೆ ಏನಾಯಿತು ಎಂಬುದಷ್ಟರ ಮಟ್ಟಿಗೆ ಸೀಮಿತವಾಗುತ್ತೇನೆ. ನನ್ನ ಮತ್ತು ಮಿ. ಗಾಂಧಿಯವರ ಮಧ್ಯೆ ಒಂದು ಸ್ಪರ್ಧೆ ಇತ್ತು. ಮಿ. ಗಾಂಧಿಯವರ ಪ್ರಕಾರ ಅಸ್ಪೃಶ್ಯರು ಹಿಂದೂಗಳ ಒಂದು ಉಪ ವಿಭಾಗ. ಆದುದರಿಂದ

ಯಾವುದೇ ರಾಜಕೀಯ ಫಲಿತಾಂಶ ಬ್ರಿಟಿಷರಿಂದ ಬರುವುದಾದರೆ, ಅದು ಅವಿಭಾಜಿತವಾಗಿ ಬ್ರಿಟಿಷರ ಕೈಗಳಿಂದ ಹಿಂದೂಗಳ ಕೈಗಳಿಗೆ ಬರಬೇಕು; ಹಿಂದೂಗಳು ಅಸ್ಪೃಶ್ಯರ ಹಿತಾಸಕ್ತಿಗಳನ್ನು ಕಾಪಾಡುತ್ತಾರೆಂದು ನಂಬಬೇಕು. ಆದರೆ ನನ್ನ ನಿಲುವು ಸಂಪೂರ್ಣವಾಗಿ ಬೇರೆಯದೇ ಆಗಿತ್ತು. ದೇಶದ ಜನಜೀವನದಲ್ಲಿ ಅಸ್ಪೃಶ್ಯರು ಒಂದು ಪ್ರತ್ಯೇಕವಾದ ಹಾಗೂ ವಿಭಿನ್ನವಾದವರು ಎಂದು ನಾನು ಪ್ರತಿಪಾದಿಸಿದೆ. ಹಿಂದೂಗಳು ನಮ್ಮ ವಂಶಪಾರಂಪರ್ಯ ಶತೃಗಳಾಗಿದ್ದು, ಅವರನ್ನು ನಂಬಲಿಕ್ಕೆ ಆಗುವುದಿಲ್ಲ. ಅವರು ತಮ್ಮ ರಾಜಕೀಯ ಶಕ್ತಿಯನ್ನು ಅಸ್ಪೃಶ್ಯರ ಉದ್ಧಾರಕ್ಕಾಗಿ ಉಪಯೋಗಿಸುವುದಿರಲಿ, ಅವರನ್ನು ನಿರಂತರವಾಗಿ ತುಳಿಯುತ್ತಿರುವುದನ್ನು ಮುಂದುವರೆಸಲು ಉಪಯೋಗಿಸುತ್ತಾರೆ; ಆದುದರಿಂದ ಅಸ್ಪೃಶ್ಯರ ಮತ್ತು ಹಿಂದೂಗಳ ಮಧ್ಯೆ ಒಂದು ರಾಜಕೀಯ ವಿಭಜನೆಯಾಗುವುದು ಅತ್ಯವಶ್ಯಕವಾಗಿದೆ. ಆಗ ಅಸ್ಪೃಶ್ಯರಿಗೆ ತಮ್ಮ ಕೈಗಳಲ್ಲೇ ರಾಜಕೀಯ ಅಧಿಕಾರ ಸಿಕ್ಕಿ, ಅದನ್ನು ತಮ್ಮ ಕಲ್ಯಾಣಕ್ಕಾಗಿ ಅಥವಾ ಅದನ್ನು ಹಿಂದೂಗಳ ದಬ್ಬಾಳಿಕೆ ಮತ್ತು ತುಳಿತದಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ನಮ್ಮ ಬೇಡಿಕೆಯನ್ನು ಸೋಲಿಸುವುದಕ್ಕೆ ಅವರು ಮಾಡಿದ ಚಾತುರ್ಯ ಪ್ರದರ್ಶನದ ಬಗ್ಗೆ ನಾನು ಹೆಚ್ಚು ಹೇಳಲು ಬಯಸುವುದಿಲ್ಲ. ಆದರೆ ದುಂಡುಮೇಜಿನ ಸಮ್ಮೇಳನದಲ್ಲಿ ಅಸ್ಪೃಶ್ಯರು ಗೆದ್ದರು ಮತ್ತು ಮಹಾತ್ಮ ಸೋತರು ಎಂದು ಹೇಳುವುದಷ್ಟೇ ಸಾಕು. ಅದರ ಫಲಿತಾಂಶವೇ ಮತೀಯ ಐತೀರ್ಪು. ಅದರ ಮಹತ್ತರವಾದ ಸದ್ಗುಣವೆಂದರೆ ಅಸ್ಪೃಶ್ಯರನ್ನು ಭಾರತದ ಜನಜೀವನದಲ್ಲಿ ಗುರುತಿಸಿದ್ದು; ಅಲ್ಲದೆ ಅವರು ಪ್ರತ್ಯೇಕವಾದ ರಾಜಕೀಯ ಹಕ್ಕುಗಳನ್ನೂ ಕೇಳಬಹುದು ಎಂಬುದನ್ನು ಮಾನ್ಯ ಮಾಡಲಾಯಿತು ಎಂಬುದು. ಇದೇ ಮತೀಯ ಐತೀರ್ಪಿನ ಪ್ರಾಮುಖ್ಯತೆ.

ಮೊದಲಿಗೆ ಮಿ. ಗಾಂಧಿಯವರು ಮತೀಯ ಐತೀರ್ಪನ್ನು ಒಪ್ಪಿಕೊಳ್ಳಲಿಲ್ಲ. ಇತ್ಯರ್ಥಗೊಳಿಸಲಾಗಿದ್ದುದನ್ನು ಕಿತ್ತುಹಾಕುವಂತೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಲು ಅವರು ಅಮರಣಾಂತ ಉಪವಾಸ ಪ್ರಾರಂಭಿಸಿದರು. ದುಂಡುಮೇಜಿನ ಸಮ್ಮೇಳನದಲ್ಲಿ ಸೋತ ಹಾಗೆ ತಮ್ಮ ಉಪವಾಸದಲ್ಲೂ ಅವರು ಸೋತರು; ನಾವು ಹಿಂದೂಗಳಿಂದ ಪ್ರತ್ಯೇಕವಾದ, ವಿಭಿನ್ನವಾದ ಭಾಗವೆಂದೂ, ಹಾಗಾಗಿ ತಮಗೆ ಪ್ರತ್ಯೇಕವಾದ ರಾಜಕೀಯ ಮಾನ್ಯತೆ ಕೊಡಬೇಕೆಂಬುದು ಅಸ್ಪೃಶ್ಯರ ಹಕ್ಕೊತ್ತಾಯವಾಗಿತ್ತು. ಅದನ್ನು ವಿರೋಧಿಸಿದ ಗಾಂಧಿಯವರು ಸೋತರು. ನಾನು ದುಂಡು ಮೇಜಿನ ಸಮ್ಮೇಳನದಲ್ಲಿ ಮುಂದು ಮಾಡಿದ ಮುಖ್ಯವಾದ ವಾದವನ್ನು ಅವರು ಪೂನಾ ಕೌಲಿನಲ್ಲಿ ಒಪ್ಪಿಕೊಳ್ಳಲೇಬೇಕಾಯಿತು. ಮೊದಲನೆ ಸುತ್ತಿನಲ್ಲಿ ಜಯ ಅಸ್ಪೃಶ್ಯರದ್ದಾಗಿತ್ತು. ಯುದ್ಧ ಪ್ರಾರಂಭವಾದ ನಂತರ, ಭಾರತದ ರಾಜಕೀಯದಲ್ಲಿ ಮೇಲುಗೈನ ಸ್ಥಾನವನ್ನು ಕಾಂಗ್ರೆಸ್ ಪಡೆದುಕೊಂಡರೂ, ನಮ್ಮ ಸ್ಥಾನ ಭದ್ರವಾಗಿ ಉಳಿದುಕೊಂಡಿತು. ವಾಸ್ತವವಾಗಿ ನಮ್ಮ ಹಕ್ಕೊತ್ತಾಯಕ್ಕೆ ಪುನರಪಿ ಭರವಸೆ ದೊರಕಿ ೮.೮.೪೦ರಲ್ಲಿ ವೈಸ್‌ರಾಯ್ ಅವರು ಮಾಡಿದ ಘೋಷಣೆಯಲ್ಲಿ ಅದನ್ನು ಎತ್ತಿಹಿಡಿದು ಉಳಿಸಿಕೊಳ್ಳಲಾಯಿತು. ಆ ಘೋಷಣೆಯಲ್ಲಿ, ಮುಸ್ಲಿಮರು ಮತ್ತು ಅಸ್ಪೃಶ್ಯರು ಭಾರತದ ಜನಜೀವನದಲ್ಲಿ ಪ್ರತ್ಯೇಕವಾದ ಮತ್ತು ವಿಭಿನ್ನವಾದ ಅಂಶಗಳೆಂದೂ, ಸಂವಿಧಾನವನ್ನು ಮುಸ್ಲಿಮರ ಮತ್ತು ನಿಮ್ನ ವರ್ಗದವರ ಬೆಂಬಲವಿಲ್ಲದೆ ಬ್ರಿಟಿಷ್ ಸರ್ಕಾರ ಜಾರಿ ಮಾಡುವುದಿಲ್ಲವೆಂದು ಹೇಳಲಾಯಿತು.

ನಾನು ಇದುವರೆಗೂ ನಮ್ಮ ಸ್ಥಾನ ಬಲದ ಮೇಲೆ ಮಾತನಾಡಿದ್ದೇನೆ. ನಾನು ಈಗ ನಮ್ಮನ್ನು ನಿರ್ಬಲಗೊಳಿಸುವುದಕ್ಕೆ ಹೊರಟಿರುವ ಶಕ್ತಿಗಳ ಮೇಲೆ ಮಾತನಾಡುತ್ತೇನೆ. ಕೇಡುಂಟು ಮಾಡುವ ಒಂದು ಅಂಶವೆಂದರೆ, ಗಾಂಧಿ ಮತ್ತು ಗಾಂಧಿವಾದ. ಪೂನಾ ಕೌಲಿಗೆ ಸಹಿ ಹಾಕಿ, ನಾನು ಮಿ. ಗಾಂಧಿಯವರ ಜೀವವನ್ನು ಉಳಿಸಿದೆ. ಆದರೆ ಮಿ. ಗಾಂಧಿಯವರು, ಒಬ್ಬ ಸದ್ಗೃಹಸ್ತ ತನ್ನ ಮಾತನ್ನು ಉಳಿಸಿಕೊಳ್ಳುವುದಕ್ಕೆ ಒಪ್ಪಂದವೊಂದಕ್ಕೆ ಸಹಿ ಮಾಡುವ ಹಾಗೆ ಪೂನಾಕೌಲನ್ನು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಬದಲು ಒಂದು

ಕಷ್ಟಕರ ಪರಿಸ್ಥಿತಿಯಿಂದ ಹೊರಗೆ ಬರಲು ಒಬ್ಬ ಚಾಲಾಕಿ ಮನುಷ್ಯ ಮಾಡುವ ಹಾಗೆ ಸಹಿ ಮಾಡಿದರು. ಏಕೆಂದರೆ ಮಿ. ಗಾಂಧಿಯವರು ಅವರನ್ನು ಸಾವಿನಿಂದ ಬಚಾವು ಮಾಡಿದ ಪೂನಾ ಕೌಲಿನ ಹೊರತಾಗಿಯೂ, ಆ ಕೌಲಿನ ತಳಹದಿ ನೀತಿಗೆ ತಮ್ಮ ನಿಜವಾದ ಪ್ರಾಮಾಣಿಕವಾದ ಒಪ್ಪಿಗೆಯನ್ನು ಕೊಡಲಿಲ್ಲ ಎಂಬುದನ್ನು ನೀವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಪ್ರತ್ಯೇಕ ರಾಜಕೀಯ ಮಾನ್ಯತೆ ಬೇಕೆಂಬ ಅಸ್ಪೃಶ್ಯರ ಹಕ್ಕೊತ್ತಾಯಕ್ಕೆ, ಗಾಂಧೀಜಿ ಅವರು ದೃಢವಿರೋಧಿಯಾಗಿಯೇ ಉಳಿದುಕೊಂಡರು. ಅಲ್ಲಿಂದೀಚೆಗೆ ನಮ್ಮ ಹಕ್ಕೊತ್ತಾಯವನ್ನು ವಿರೋಧಿಸುವುದಕ್ಕೆ ಮತ್ತು ನಮ್ಮ ಸ್ಥಾನವನ್ನು ಪಲ್ಲಟ ಮಾಡುವುದಕ್ಕೆ ಸಾಧ್ಯವಾದ ಪ್ರಯತ್ನವನ್ನು ಮಾಡಿದ್ದಾರೆ. ಮಿ. ಗಾಂಧಿಯವರು ನಮ್ಮ ಅತಿ ದೊಡ್ಡ ವಿರೋಧಿಯೆಂಬುದನ್ನು ನೀವು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಎಂದು ನಾನು ಬಯಸುತ್ತೇನೆ. ಶತೃ ಎಂಬ ಪದವನ್ನು ಬಳಸಲು ನನಗೆ ಇಷ್ಟವಿಲ್ಲ. ಆದರೆ ಆ ಪದವನ್ನು ಉಪಯೋಗಿಸುವುದಕ್ಕೆ ಸಾಕಷ್ಟು ಸಮರ್ಥನೆ ಇದೆ. ನಮ್ಮಲ್ಲಿ ಕೆಲವರು ಅವರ ಕೃತಕ ಮಾತಿನ ಮೋಡಿಗೆ ಮರುಳಾಗಿದ್ದಾರೆ. ಆದರೆ ನಿಮಗೆ ನನ್ನ ಎಚ್ಚರಿಕೆ ಏನೆಂದರೆ, ನಿಮ್ಮ ಪಕ್ಷವನ್ನು ದುರ್ಬಲಗೊಳಿಸುತ್ತಿರುವವರಲ್ಲಿ ಮತ್ತು ಯಾರ ವಿರುದ್ಧ ನಿಮ್ಮ ಜಯವನ್ನು ಸಾಧಿಸುವುದಕ್ಕೆ ರಾಜಕಿಯ ಸ್ವಾತಂತ್ರ್ಯವನ್ನು ಗೆಲ್ಲಲಿಕ್ಕೆ ಹೋರಾಡಲು ನಿಮ್ಮ ಬಲಗಳನ್ನು ಒಟ್ಟುಗೂಡಿಸಬೇಕಾಗಿದೆಯೋ, ಆ ಅತ್ಯಂತ ದುರ್ಗಮವಾದ ಶಕ್ತಿಯೆಂದರೆ ಮಿ. ಗಾಂಧಿ ಅವರು.

ನಿಮ್ಮ ಸ್ಥಿತಿಯನ್ನು ನಿರ್ಬಲಗೊಳಿಸಿರುವ ಇನ್ನೊಂದು ಅಂಶವೆಂದರೆ, ಚಕ್ರವರ್ತಿಯವರ ಸರ್ಕಾರದ ಬದಲಾದ ನಿಲುವು/ ಧೋರಣೆ ೮ನೇ ಆಗಸ್ಟ್ ೧೯೪೦ರ ಘೋಷಣೆ ಮಾಡುವವರೆಗೂ, ಅಸ್ಪೃಶ್ಯರು ವಿಭಿನ್ನವಾದ ಮತ್ತು ಪ್ರತ್ಯೇಕವಾದ ಅಂಶವೆಂದೂ, ಯಾವುದೇ ಸಾಂವಿಧಾನಿಕ ಬದಲಾವಣೆಗೆ ಅವರ ಒಪ್ಪಿಗೆ ಅವಶ್ಯಕವೆಂದೂ, ಚಕ್ರವರ್ತಿಯವರ ಸರ್ಕಾರದ ಧೋರಣೆ / ನಿಲುವು ಆಗಿತ್ತು. ಆದರೆ ಸ್ಟಾಫೋರ್ಡ್ ಕ್ರಿಪ್ಸ್ ಅವರ ಸಂಗಡ ಕಳುಹಿಸಿದ ಪ್ರಸ್ತಾವನೆಗಳಲ್ಲಿ ಚಕ್ರವರ್ತಿಯವರ ಸರ್ಕಾರ ತಿರುಗು ಮುರುಗು ಧೋರಣೆಯನ್ನು ತಾಳಿದೆ. ಏಕೆಂದರೆ ಸರ್. ಸ್ಟಾಫೋರ್ಡ್ ಕ್ರಿಪ್ಸ್ ಅವರು ಸಂಕೋಚವಿಲ್ಲದೆ, ಪಶ್ಚಾತ್ತಾಪವಿಲ್ಲದೆ, ಕ್ರಿಪ್ಸ್ ಪ್ರಸ್ತಾವನೆಗಳಲ್ಲಿ ಸೂಚಿಸಿರುವ ಸಾಂವಿಧಾನಿಕ ಬದಲಾವಣೆಗಳನ್ನು ಜಾರಿಗೆ ತರುವುದಕ್ಕೆ ಹಿಂದೂಗಳ ಮತ್ತು ಮುಸ್ಲಿಮರ ಒಪ್ಪಿಗೆ ಮಾತ್ರ ಸಾಕೆಂದೂ, ಅಸ್ಪೃಶ್ಯರ ಒಪ್ಪಿಗೆ ಅನಾವಶ್ಯಕವೆಂದೂ, ಘೋಷಣೆ ಮಾಡಿದರು. ಸರಳವಾದ ಮಾತುಗಳಲ್ಲಿ ಹೇಳುವುದಾದರೆ, ಅಸ್ಪೃಶ್ಯರು ಭಾರತದ ರಾಷ್ಟ್ರೀಯ ಜೀವನದ ಒಂದು ಮುಖ್ಯವಾದ ಅಂಶವಲ್ಲವೆಂದಾಯಿತು. ೬೦ ರಿಂದ ೭೦ ದಶಲಕ್ಷ ಅಸ್ಪೃಶ್ಯರು ಕೆಲವೇ ತಿಂಗಳುಗಳಲ್ಲಿ ಒಂದು ಮುಖ್ಯವಾದ ಅಂಶವಾಗಿಲ್ಲದೇ ಇರುವುದು ಹೇಗೆ ಎಂದು ಯಾರಿಗೂ ಅರ್ಥವಾಗಲಾರದ ವಿಷಯ. ಇದು ಚಕ್ರವರ್ತಿಯವರ ಸರ್ಕಾರದ ಸಂಪೂರ್ಣ ಉಲ್ಟಾಪಲ್ಟಾ. ಅದು ಅಸ್ಪೃಶ್ಯರಿಗೆ ಆದ ಒಂದು ಅತಿ ದೊಡ್ಡ ದ್ರೋಹ. ಈ ದ್ರೋಹ ಬಗೆಯುವುದಕ್ಕೆ ಯಾವುದೇ ಕಾರಣವಿಲ್ಲ; ಚಕ್ರರ್ತಿ ಸರ್ಕಾರದ ಈ ಇಷ್ಟು ತೀವ್ರಕರ ಅನ್ಯಾಯದ, ಇಷ್ಟು ಅಸಭ್ಯ ನಡೆವಳಿಕೆ ಬಗ್ಗೆ, ನಿಮ್ಮ ಭಾವನೆಗಳು ಎಷ್ಟೇ ತೀವ್ರವಾಗಿರಲಿ, ಇದು ನಮ್ಮ ಯುದ್ಧದಲ್ಲಿ ಒಂದು ಅತಿದೊಡ್ಡ ಬಿರುಕನ್ನು ನಾವು ಗುರುತಿಸಲೇಬೇಕು. ಪ್ರತಿಕೂಲ ಗುಣದ ಇನ್ನೊಂದು ಮೂರನೆಯ ಸಂದರ್ಭ ಇದೆ. ಇದು ನಿಮ್ಮ ಗಮನವನ್ನು ಸೆಳೆಯಲಾರದೇ ಇರದು. ಭಾರತದ ವಿವಿಧ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಅದರಲ್ಲೂ ಮುಸ್ಲಿಮ್ ಸಮುದಾಯ ಒಂದು ದೊಡ್ಡ ಸಮುದಾಯವಾಗಿದ್ದು, ಒಟ್ಟು ಸಮುದಾಯಗಳೆಲ್ಲದರ ಹಿತಾಸಕ್ತಿಯ ಮೇಲೆ ಆಧಾರಪಟ್ಟು ಒಂದು ನಿಕಟತೆಯ ಭಾವನೆ ಇತ್ತು. ಆ ನಿಕಟತೆ ಈಗ ಮಾಯವಾಗಿದೆ. ಇದಕ್ಕೆ ಪ್ರಮುಖವಾದ ಕಾರಣವೆಂದರೆ, ಮುಸ್ಲಿಮ್‌ಲೀಗ್‌ನವರಿಂದಾಗಿ ಮುಸ್ಲಿಮ್ ಸಮುದಾಯದಲ್ಲಿ ಬದಲಾಗಿರುವ ಮುನ್ನೋಟದಲ್ಲಿನ ಬದಲಾವಣೆ.

೧೯೩೭ರ ಚುನಾವಣೆ ಆದ ಮೇಲೆ, ಜಿನ್ನಾರವರಿಂದಾಗಿ ಪುನಃ ಚೇತನಗೊಂಡ ಮುಸ್ಲಿಮ್ ಲೀಗ್ ಅಲ್ಪಸಂಖ್ಯಾತರೆಂಬ ಪರಿಕಲ್ಪನೆಯಿಂದ ಪ್ರಾರಂಭಗೊಂಡು, ಒಂದು ಅಲ್ಪ ಸಂಖ್ಯಾತ ಸಮುದಾಯವಾಗಿ ಅವರಿಗೆ ಇತರ ಅಲ್ಪ ಸಂಖ್ಯಾತರುಗಳ ಬೆಂಬಲದ ಅವಶ್ಯಕತೆ ಇದೆ ಎಂದು ತೀರ್ಮಾನಿಸಿದರು. ಪರಸ್ಪರ ಬಲದಲ್ಲಿ ಮುಸ್ಲಿಮ್ ಲೀಗಿಗೆ ಎಷ್ಟು ಬಲವಾದ ನಂಬಿಕೆ ಇತ್ತೆಂದರೆ, ಅದು ಇತರ ಅಲ್ಪ ಸಂಖ್ಯಾತರುಗಳ ನಿಮಿತ್ತವನ್ನು ಕೈಗೆ ತೆಗೆದುಕೊಂಡು ಅವರ ಹಕ್ಕೊತ್ತಾಯಗಳಿಗೆ ಬೆಂಬಲ ಸೂಚಿಸುವ ಠರಾವುಗಳನ್ನು ಅನುಮೋದಿಸಿದರು. ಅಷ್ಟೇ ಅಲ್ಲ, ಅವರು ಕೇವಲ ಮುಸ್ಲಿಮರ ನಿಮಿತ್ತವನ್ನು ಮಾತ್ರ ಪ್ರತಿನಿಧಿಸದೆ, ಭಾರತದಲ್ಲಿನ ಇತರ ಎಲ್ಲಾ ಅಲ್ಪ ಸಂಖ್ಯಾತರ ಬೆಂಬಲಿಗರಾದರು. ಮುಸ್ಲಿಮ್ ಲೀಗಿನ ಈ ನಿಲುವು ಅಸ್ಪೃಶ್ಯರಿಗೆ ನಿಸ್ಸಂದೇಹವಾಗಿ ಸಹಾಯ ಮಾಡಿತು. ಭಾರತದ ಮುಸ್ಲಿಮರ ಬಗ್ಗೆ ಅಸ್ಪೃಶ್ಯರ ಧೋರಣೆಯೂ ಇದೇ ಆಗಿತ್ತು. ಆದರೆ ಮುಸ್ಲಿಮ್ ಲೀಗಿನ ಈ ಧೋರಣೆ ಸಂಪೂರ್ಣವಾಗಿ ಬದಲಾಯಿತು. ಪಾಕಿಸ್ತಾನಬೇಕೆಂಬ ಠರಾವನ್ನು ಅನುಮೋದನೆ ಮಾಡಿದಂದಿನಿಂದ ಮುಸ್ಲಿಮರನ್ನು ಒಂದು ಸಮುದಾಯವೆಂದು ಕಾಣುವುದನ್ನು ಮುಸ್ಲಿಮ್ ಲೀಗ್ ನಿಲ್ಲಿಸಿಬಿಟ್ಟಿತು. ಅದು ಈಗ ಮುಸ್ಲಿಮರನ್ನು ಒಂದು ದೇಶವೆಂದು ಕಾಣಲು ಉಪಕ್ರಮಿಸಿತು. ಅಷ್ಟೇ ಅಲ್ಲ, ಇನ್ನೂ ಮುಂದಕ್ಕೆ ಹೋಗಿ ತನಗೂ ಮತ್ತು ಇತರ ಸಮುದಾಯಗಳಿಗೂ ನಡುವೆ ಆಗಬೇಕಾದ್ದು ಏನೂ ಇಲ್ಲ, ಹಿಂದೂ ಸಮುದಾಯಕ್ಕೂ ತನಗೂ ಆಗಬೇಕಾದ್ದೂ ಏನೂ ಇಲ್ಲ. ಅಲ್ಲದೆ ಇತರ ಅಲ್ಪಸಂಖ್ಯಾತ ಸಮುದಾಯಗಳಿಗೂ ಆಗಬೇಕಾದದ್ದು ಏನೂ ಇಲ್ಲವೆಂದು ನಂಬಿತ್ತು. ಮುಸ್ಲಿಮ್ ಲೀಗಿನ ಜೋಡಣೆ ಸರಳವಾದದ್ದು. ಅದು ಎಲ್ಲಾ ಮುಸ್ಲಿಮರ ಜೋಡಣೆಯಾಗಿದ್ದು, ಯಾವುದೇ ಭೇದ ಭಾವ ಇಲ್ಲದೆ ಇತರ ಎಲ್ಲಾ ಮುಸ್ಲಿಮೇತರರ ವಿರುದ್ಧವಾಗಿ ಇತ್ತು. ಮುಸ್ಲೀಮ್ ಲೀಗಿನ ಧೋರಣೆಯಲ್ಲಿನ ಈ ಬದಲಾವಣೆ ಅಸ್ಪೃಶ್ಯರಿಗೆ ಗಂಭೀರವಾದ ಪರಿಣಾಮವನ್ನುಂಟು ಮಾಡಿತು. ಅದರ ಅರ್ಥ ಅಸ್ಪೃಶ್ಯರು ಒಬ್ಬ ಸ್ನೇಹಿತನನ್ನು ಕಳೆದುಕೊಂಡ ಹಾಗೆ ಆಯಿತು. ಮುಸ್ಲಿಮೇತರರ ವಿರುದ್ಧ ಹೊಸದಾದ ಮತ್ತು ಬೇರೆಯದೇ ಆದ ಜೋಡಣೆಯನ್ನು ಮುಸ್ಲಿಮ್ ಲೀಗ್ ಸ್ಥಾಪಿಸಿರುವುದೂ ಅಲ್ಲದೆ, ಅದು ಮೌಲ್ಯಗಳ ಒಂದು ಹೊಸ ಸಮೀಕರಣವನ್ನೇ ಸೃಷ್ಟಿಸಿದೆ. ಅದು ಒಂದು ಬಹಳ ಸರಳವಾದ ಸಮೀಕರಣ. ಅದರ ಪ್ರಕಾರ ಮುಸ್ಲಿಮರು, ಅವರ ಸಂಖ್ಯೆ ಎಷ್ಟೇ ಇರಲಿ, ಅವರು ಮುಸ್ಲಿಮೇತರರಿಗೆ ಸಮ ಎಂದು. ಆದುದರಿಂದ, ಯಾವುದೇ ರಾಜಕೀಯ ಜೋಡಣೆಯಲ್ಲಿ, ಮುಸ್ಲಿಮರಿಗೆ ಶೇಕಡ ೫೦ನ್ನು ಕೊಡಬೇಕು. ಈ ಸಮೀಕರಣಕ್ಕೆ ಯಾರೂ ಒಪ್ಪಿಗೆ ಕೊಡಲಾರರು. ಅದು ಅಂಕಗಣಿತಕ್ಕೆ ವಿರುದ್ಧವಾಗಿರುವುದೂ ಅಲ್ಲದೆ, ಅದು ಅಸ್ಪೃಶ್ಯರೂ ಸೇರಿದಂತೆ ಎಲ್ಲಾ ಮುಸ್ಲಿಮೇತರರ ಹಿತಾಸಕ್ತಿಗೆ ವಿರುದ್ಧವಾಗಿದೆ. ಮುಸ್ಲಿಮ್ ಲೀಗಿನ ನಿಲುವಿನಲ್ಲಿ ಆದ ಈ ಬದಲಾವಣೆಗಳಿಂದಾಗಿ, ಅಸ್ಪೃಶ್ಯರು ಒಬ್ಬ ಕೂಟ ಸದಸ್ಯನನ್ನು ಕಳೆದುಕೊಂಡಿದ್ದೂ ಅಲ್ಲದೆ ಒಬ್ಬ ಸ್ನೇಹಿತನನ್ನೂ ಕಳೆದುಕೊಂಡ ಹಾಗೆ ಆಯಿತು. ಏಕೆಂದರೆ ಲೀಗ್ ಎಲ್ಲದರಲ್ಲೂ ಶೇಕಡ ೫೦ರ ಪ್ರಾತಿನಿಧ್ಯ ಒತ್ತಾಯ ಮಾಡಿದರೆ ಮುಸ್ಲಿಮರಿಗೂ, ಅಸ್ಪೃಶ್ಯರಿಗೂ ಕಲಹ ಉಂಟಾಗುವುದರಲ್ಲಿ ಸಂದೇಹವಿಲ್ಲ.

ನಾನು ಇಲ್ಲಿಯವರೆಗೆ ಭಾರತೀಯ ರಾಜಕೀಯದಲ್ಲಿ ನಮ್ಮ ಸ್ಥಾನವೇನು ಎಂಬ ಕಲ್ಪನೆಯನ್ನು ಕೊಟ್ಟಿದ್ದು, ಈ ಸ್ಥಾನವನ್ನು ಬುಡಮೇಲು ಮಾಡುವುದಕ್ಕೆ ಯಾವ ಶಕ್ತಿಗಳು ಕೆಲಸ ಮಾಡುತ್ತಿವೆಯೆಂದು ಹೇಳಿದ್ದೇನೆ. ನಿಮ್ಮ ರಾಜಕೀಯ ಹಕ್ಕೊತ್ತಾಯಗಳು ಏನಿರಬೇಕೆಂದು ನಾನು ಯೋಚಿಸುತ್ತಿರುವುದರ ಬಗ್ಗೆ ಒಂದು ಕಲ್ಪನೆಯನ್ನು ಕೊಡಲಿಚ್ಛಿಸುತ್ತೇನೆ. ಇದನ್ನು ಸ್ಪಷ್ಟವಾದ ಪದಗಳಲ್ಲಿ ರೂಪಿಸಬೇಕಾದುದು ಅತ್ಯವಶ್ಯಕವಾಗಿದೆ. ಅದು ನಮ್ಮ ಸ್ಥಿತಿಯನ್ನು ವಿಷದೀಕರಿಸುತ್ತದೆ. ನಮ್ಮ ನಿಲುವು ಯಾವುದಕ್ಕೋಸ್ಕರ ಎಂಬುದು ಜನಗಳಿಗೆ ಗೊತ್ತಾಗುತ್ತದೆ. ನಮ್ಮ ಹಕ್ಕೊತ್ತಾಯಗಳು ಯಾವುವು ಎಂಬುದು ನಮ್ಮ ವಿರೋಧಿಗಳಿಗೆ

ಗೊತ್ತಾಗುತ್ತದೆ. ಮೊದಲನೆಯದಾಗಿ, ಭಾರತದ ಜನ ಜೀವನದಲ್ಲಿ ನೀವೊಂದು ಸ್ವತಂತ್ರವಾದ ಮತ್ತು ಪ್ರತ್ಯೇಕವಾದ ಮೂಲಧಾತುವೆಂದು ಗುರುತಿಸಬೇಕೆಂದು ನೀವು ಒತ್ತಾಯ ಮಾಡಲೇಬೇಕು. ನೀವು ಹಿಂದೂಗಳ ಉಪವಿಭಾಗವೆಂಬ ಸಿದ್ಧಾಂತವನ್ನು ಖಡಾ ಖಂಡಿತವಾಗಿ ವಿರೋಧಿಸಬೇಕು. ಹಿಂದೂಗಳಿಂದ ಪ್ರತ್ಯೇಕವಾದ ಅಂಶವೆಂದು ಗುರುತಿಸಿಕೊಳ್ಳುವುದರಲ್ಲಿ ಸೋತರೆ ನಿಮ್ಮನ್ನು ಮುಳುಗಿಸಿ, ತುಳಿದು, ಹೀನಾಯ ಸ್ಥಿತಿಗೆ ತಂದುಬಿಡುತ್ತಾರೆ.

ಆಮೇಲೆ ನೀವು ಅಸ್ಪೃಶ್ಯರ ವಿದ್ಯಾಭ್ಯಾಸಕ್ಕೋಸ್ಕರ ಒಂದು ನಿಗದಿಪಡಿಸಿದ ಮೊತ್ತವನ್ನು ಎಲ್ಲಾ ಪ್ರಾಂತ್ಯಗಳ ಮುಂಗಡ ಪತ್ರದಲ್ಲಿ ತೆಗೆದಿಡುವುದಕ್ಕೆ ಸಂವಿಧಾನದಲ್ಲಿ ಉಪಬಂಧವನ್ನು ಕಲ್ಪಿಸುವುದಕ್ಕೆ ಕೇಳಬೇಕು. ಇಂಥ ಮೊತ್ತವನ್ನು ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರವಲ್ಲ ಉನ್ನತ ಶಿಕ್ಷಣಕ್ಕೂ ತೆಗೆದಿರಿಸಬೇಕೆಂದು ಕೇಳಬೇಕು. ಈ ಹಂತದಲ್ಲಿ ಪ್ರಾಥಮಿಕ ಶಿಕ್ಷಣಕ್ಕಿಂತ ಉನ್ನತ ಶಿಕ್ಷಣ ನಮಗೆ ಇನ್ನೂ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ನಾಯಕತ್ವದ ದೃಷ್ಟಿಯಿಂದ, ಉನ್ನತ ಹುದ್ದೆಗಳಿಗೆ ಭರ್ತಿಯಾಗುವ ದೃಷ್ಟಿಯಿಂದ ಅಸ್ಪೃಶ್ಯರಿಗೆ ಉನ್ನತ ಶಿಕ್ಷಣ ಅತ್ಯವಶ್ಯಕವಾಗಿದೆ. ಮೂರನೆಯದಾಗಿ, ನೀವು ಸಾರ್ವಜನಿಕ ಹುದ್ದೆಗಳಿಗೆ ಇಷ್ಟು ಸಂಖ್ಯೆಯ ಹುದ್ದೆಗಳನ್ನು ಕಾದಿರಿಸಬೇಕೆಂದು, ಕನಿಷ್ಠ ವಿದ್ಯಾರ್ಹತೆಗಳಿಗೆ ಒಳಪಟ್ಟು ಹಕ್ಕೊತ್ತಾಯ ಮಾಡಬೇಕು. ಇದು ಅತ್ಯಂತ ಅವಶ್ಯಕವಾಗಿದೆ. ನಾವು ಬವಣೆ ಪಡುತ್ತಿರುವುದು ಕೆಟ್ಟ ಕಾನೂನುಗಳಿಂದ ಅಲ್ಲ, ಆದರೆ ಕೆಟ್ಟ ಆಡಳಿತದಿಂದ ಬವಣೆ ಪಡುತ್ತಿದ್ದೇವೆ. ಆಡಳಿತ ಕೆಟ್ಟದಾಗಿರುವುದಕ್ಕೆ ಕಾರಣವೆಂದರೆ, ಅದು ಸವರ್ಣ ಹಿಂದೂಗಳ ಕೈಗಳಲ್ಲಿ ಇದೆ; ಅವರು ತಮ್ಮ ಸಾಮಾಜಿಕ ಪೂರ್ವಾಗ್ರಹಗಳನ್ನು ಆಡಳಿತದ ಒಳಗೂ ತಂದು, ಅಸ್ಪೃಶ್ಯರಿಗೆ ಒಂದಲ್ಲ ಒಂದು ಕಾರಣಕ್ಕೆ, ಅವರಿಗೆ ನ್ಯಾಯವಾಗಿ, ಸಮಾನತೆಯ ನೀತಿಯ ಮೇಲೆ, ಸಲ್ಲಬೇಕಾದ ಪ್ರಯೋಜನಗಳನ್ನು ನಿರಾಕರಿಸುತ್ತದೆ. ಒಳ್ಳೆಯ ಒಡಳಿತವಿಲ್ಲದಿದ್ದರೆ, ಒಳ್ಳೆಯ ಕಾನೂನಿನಿಂದ ಯಾವ ಪ್ರಯೋಜನವೂ ಇಲ್ಲ. ಅಸ್ಪೃಶ್ಯ ಜನಾಂಗಕ್ಕೆ ಸೇರಿದವರು ಉನ್ನತ ಆಡಳಿತಾತ್ಮಕ ಹುದ್ದೆಗಳಲ್ಲಿ ಇದ್ದರೆ, ಇತರ ಹಿಂದೂ ನಾಗರಿಕ ಸೇವಾ ಅಧಿಕಾರಿಗಳು, ಅಸ್ಪೃಶ್ಯರೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದಾರೆಂದು ಕಣ್ಗಾವಲು ಇಡಬಹುದು. ಅವರನ್ನು ತನಿಖೆ ಮಾಡಬಹುದು, ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು, ಕುಚೇಷ್ಟೆ ಮಾಡದಂತೆ ತಡೆಯಬಹುದು. ಆದರೆ ಬರಿಯ ಕಾದಿರಿಸುವಿಕೆಯನ್ನು ಮಾತ್ರ ಕೇಳಿದರೆ ಸಾಕಾಗುವುದಿಲ್ಲ. ಇಂಥ ಕಾದಿರುಸುವಿಕೆಯನ್ನು ಒಂದು ಗೊತ್ತಾದ ಅವಧಿಯೊಳಗೆ ಜಾರಿಗೆ ತರಬೇಕೆಂದು ಕೇಳಬೇಕು. ಬರಿಯ ಕಾದಿರುಸುವಿಕೆಗಿಂತ ಇದು ಅತ್ಯಂತ ಹೆಚ್ಚು ಅವಶ್ಯಕ. ಏಕೆಂದರೆ ಒಂದು ಅವಧಿಯನ್ನು ಗೊತ್ತುಪಡಿಸದಿದ್ದರೆ, ಕಾದಿರುಸುವಿಕೆ ಜಾರಿಗೆ ಬರುವುದೇ ಇಲ್ಲ. ಒಂದಲ್ಲ ಒಂದು ಕಾರಣವನ್ನು ಕೊಟ್ಟು ಅದನ್ನು ತಪ್ಪಿಸುತ್ತಾರೆ; ಅಂದ ಹಾಗೆ ಸಾಮಾನ್ಯವಾಗಿ ಕೊಡುವ ಕಾರಣವೆಂದರೆ ಸೂಕ್ತವಾದ ಅಭ್ಯರ್ಥಿ ಸಿಗಲಿಲ್ಲ ಎಂಬ ತಳಬುಡವಿಲ್ಲದ ಕಾರಣವನ್ನು ಮುಂದು ಮಾಡುತ್ತಾರೆ. ನಮಗೆಲ್ಲಾ ಗೊತ್ತಿರುವ ಹಾಗೆ ನೇಮಕ ಮಾಡುವ ಅಧಿಕಾರಿ ಒಬ್ಬ ಹಿಂದೂ ಆದರೆ ಅವನಿಗೆ ಯಾವ ಅಸ್ಪೃಶ್ಯ ಅಭ್ಯರ್ಥಿಯೂ ಸೂಕ್ತವಾಗಿ ಕಾಣುವುದಿಲ್ಲ. ನಾಲ್ಕನೆಯದಾಗಿ ಕೇಂದ್ರೀಯ ಮತ್ತು ಪ್ರಾಂತೀಯ ಕಾರ್ಯಕಾರಣಿಯಲ್ಲಿ ಅಸ್ಪೃಶ್ಯರಿಗೆ ಪ್ರಾತಿನಿಧ್ಯವನ್ನು ಕೂಡಲೇಬೇಕೆಂದು ನೀವು ಒತ್ತಾಯಿಸಲೇಬೇಕು. ಇವು ಅತಿ ಮುಖ್ಯವಾದ ಸ್ಥಾನಗಳು. ಈ ಸ್ಥಾನಗಳನ್ನು ಆಕ್ರಮಿಸಿಕೊಂಡಿರುವವರು ಮಾತ್ರ. ವಿದ್ಯಮಾನಗಳು ಯಾವ ದಿಕ್ಕಿನಲ್ಲಿ ಸಾಗಬೇಕೆಂದು ನಿರ್ದೇಶಿಸಬಲ್ಲರು. ಅವರು ಮಾತ್ರ ಯಾವುದೇ ಕುಚೇಷ್ಟೆ ನಡೆಯದಂತೆ ಹತೋಟಿಯಲ್ಲಿಡಬಲ್ಲರು, ಅವರು ಮಾತ್ರವೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ಮತ್ತು ಪ್ರಯೋಜನಕಾರಿ ಬದಲಾವಣೆಗಳನ್ನು ಒತ್ತಾಯಿಸಬಲ್ಲರು. ತಮ್ಮ ಪ್ರತಿನಿಧಿಗಳನ್ನು ಆಯಕಟ್ಟಿನ ಸ್ಥಾನಗಳಲ್ಲಿ ನೇಮಿಸಬೇಕೆಂದು

ಅಸ್ಪೃಶ್ಯರು ಒತ್ತಾಯಿಸಬೇಕು. ಇದು, ಈ ಬಾರಿ ಒಂದು ಒಡಂಬಡಿಕೆಯೂ ಅಲ್ಲ, ಸಂಪ್ರದಾಯವೂ ಅಲ್ಲ. ಹಿಂದೂಗಳು ಅವರ ಮಾತನ್ನು ಉಳಿಸಿಕೊಳ್ಳುತ್ತಾರೆಂದು ನಂಬುವ ಹಾಗೂ ಇಲ್ಲ. ಇದರ ಬಗ್ಗೆ ಒಂದು ಉಪಬಂಧವನ್ನು ಸಂವಿಧಾನದ ಭಾಗವಾಗಿ ಕಲ್ಪಿಸುವಂತೆ ನೋಡಿಕೊಳ್ಳಲೇಬೇಕು.

ಇನ್ನೂ ಒಂದು ಕಡೆಯ ಹಕ್ಕೊತ್ತಾಯ ಇದೆ. ಅದನ್ನು ಅಸ್ಪೃಶ್ಯರು ಒತ್ತಾಯಿಸಲೇಬೇಕು. ಇದು ಕಡೆಯದಾದರೂ, ಪ್ರಾಮುಖ್ಯತೆಯಲ್ಲಿ ಕಡೆಯದಲ್ಲ. ವಾಸ್ತವವಾಗಿ ಹೇಳುವುದಾದರೆ, ಅದು ಅತ್ಯಂತ ಗಹನವಾದ ಹಕ್ಕೊತ್ತಾಯವಾಗಿದೆ. ನಾನು ಹೇಳುತ್ತಿರುವುದು ಅಸ್ಪೃಶ್ಯರಿಗಾಗಿ ಒಂದು ಹೊಸ ವಸತಿ ಪ್ರದೇಶ. ಹಿಂದೂಗಳ ಹಳ್ಳಿಗಳಿಗಿಂತ ಬೇರೆಯಾದ ಮತ್ತು ಪ್ರತ್ಯೇಕವಾದವುಗಳು. ಸಾವಿರಾರು ವರ್ಷಗಳಿಂದ ಅಸ್ಪೃಶ್ಯರು ಏತಕ್ಕಾಗಿ ಹಿಂದೂಗಳ ಗುಲಾಮರಾಗಿ ಉಳಿದುಕೊಂಡಿದ್ದಾರೆ? ನನ್ನ ಮನಸ್ಸಿಗೆ ತೋಚುವ ಉತ್ತರವೆಂದರೆ, ಹಿಂದೂ ಗ್ರಾಮಗಳ ಒಂದು ರೀತಿಯ ವಿಚಿತ್ರವಾದ ವ್ಯವಸ್ಥೆ. ಭಾರತದ ಎಲ್ಲೆಡೆಯಲ್ಲಿಯೂ ನೀವು ಸುಮಾರು ೭,೦೦,೦೦೦ ಹಿಂದೂ ಹಳ್ಳಿಗಳನ್ನು ಹರಡಿಬಿಟ್ಟಿದ್ದೀರಿ ಪ್ರತಿ ಹಳ್ಳಿಗೆ ಸೇರಿದಂತೆ ಒಂದು ಸಣ್ಣ ಅಸ್ಪೃಶ್ಯರ ಕೇರಿ ಇರುತ್ತದೆ. ಈ ಕೇರಿ ತಾನು ಲಗತ್ತಾಗಿರುವ ಹಿಂದೂ ಹಳ್ಳಿಗಿಂತ ಬಹಳಷ್ಟು ಸಣ್ಣದಾಗಿರುತ್ತದೆ. ಎರಡನೆಯದಾಗಿ, ಈ ಅಸ್ಪೃಶ್ಯರ ಕೇರಿ, ಆರ್ಥಿಕವಾಗಿ ಯಾವ ಸಂಪನ್ಮೂಲ ಇಲ್ಲದೆ ಇರುತ್ತದೆ, ಹೀಗಾಗಿ ಮುಂದುವರಿಯುವುದಕ್ಕೆ ಅದಕ್ಕೆ ಯಾವ ಅವಕಾಶವೂ ಇರುವುದಿಲ್ಲ. ಅದು ನಿಸ್ಸಂದೇಹವಾಗಿ ಒಂದು ಭೂರಹಿತ ಜನಗಳ ಕೇರಿಯಾಗಿರುತ್ತದೆ. ಅಸ್ಪೃಶ್ಯರಾಗಿರುವ ಕಾರಣಕ್ಕೆ ಯಾರೂ ಅವರಿಂದ ಏನನ್ನು ಕೊಂಡುಕೊಳ್ಳುವುದಿಲ್ಲವಾದ್ದರಿಂದ, ಅವರು ಏನನ್ನೂ ಮಾರಲು ಸಾಧ್ಯವಾಗುವುದಿಲ್ಲ. ಅದೊಂದು ನಿರ್ಗತಿಕ ಜನಸಮೂಹವಾಗಿದ್ದು, ತಮ್ಮ ಜೀವನೋಪಾಯಕ್ಕೆ ಹಿಂದೂ ಹಳ್ಳಿಯ ಮೇಲೆ ಅವಲಂಬಿತವಾಗಿರುತ್ತದೆ. ಅದು ಭಿಕ್ಷೆಯಿಂದ ಅಥವ ಕವಡೆಕಾಸಿಗಾಗಿ ಕೂಲಿ ಕೆಲಸ ಮಾಡುವುದರಿಂದ ಬದುಕುತ್ತಿದೆ. ಈ ಒಂದು ಹಿನ್ನೆಲೆಯಲ್ಲಿ ಅಸ್ಪೃಶ್ಯರು ಏತಕ್ಕಾಗಿ ಒಂದು ಕೀಳು ದರ್ಜೆಯ ಪರಿಸ್ಥಿತಿಯಲ್ಲಿ ಶತಮಾನಗಳಿಂದ ಉಳಿದು ಕೊಂಡಿದ್ದಾರೆಂದು ನೀವು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲಿರಿ. ಹಿಂದೂ ಗ್ರಾಮಕ್ಕೆ ವಿರೋಧವಾಗಿ ಅಸ್ಪೃಶ್ಯರು ಯಾವ ಪ್ರತಿರೋಧವನ್ನೂ ಒಡ್ಡಲಾರರು. ಅವರಿಗೆ ಸಂಖ್ಯಾಬಲವಿಲ್ಲ, ಅರ್ಥಿಕವಾಗಿ ಬಡವರು ಪ್ರಸ್ತುತ ರೂಪದಲ್ಲಿಯೇ ಈ ಗ್ರಾಮ ವ್ಯವಸ್ಥೆ ಮುಂದುವರಿಯುತ್ತಿದ್ದರೆ, ಅಸ್ಪೃಶ್ಯರಿಗೆ ಸಾಮಾಜಿಕವಾಗಿಯಾಗಲಿ, ಆರ್ಥಿಕವಾಗಿಯಾಗಲೀ ಎಂದೆಂದಿಗೂ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲಾಗುವುದೇ ಇಲ್ಲ; ಇದರಿಂದಾಗಿ, ಅವರ ಸಾಮಾಜಿಕ ಮತ್ತು ಆರ್ಥಿಕ ಪರಾವಲಂಬನೆಯಿಂದ ಅವರು ಮೈಗೂಡಿಸಿಕೊಂಡ ಕೀಳರಿಮೆಯಿಂದ ಅವರಿಗೆ ಹೊರ ಬರಲು ಎಂದಿಗೂ ಸಾಧ್ಯವೇ ಇಲ್ಲ. ಆದುದರಿಂದಾಗಿ, ಈ ಗ್ರಾಮ ವ್ಯವಸ್ಥೆಯನ್ನು ಮುರಿಯಲೇಬೇಕಾಗಿದೆ.

ಈ ಗ್ರಾಮ ವ್ಯವಸ್ಥೆಯ ಮೂಲಕ ಹಿಂದೂಗಳಿಗೆ ಅಸ್ಪೃಶ್ಯರ ಮೇಲೆ ಇರುವ ಬಿಗಿ ಹಿಡಿತದಿಂದ ವಿಮೋಚನೆ ಪಡೆಯಬೇಕಾದರೆ ಅಸ್ಪೃಶ್ಯರಿಗೆ ಉಳಿದಿರುವುದು ಒಂದೇ ದಾರಿ. ನಿಮಗೆ ನನ್ನ ಸಲಹೆಯೇನೆಂದರೆ, ಕೇಂದ್ರ ಸರ್ಕಾರದ ಖರ್ಚಿನಿಂದ ಅಸ್ಪೃಶ್ಯರಿಗಾಗಿಯೇ ಹೊಸದಾದ ಮತ್ತು ಸ್ವತಂತ್ರವಾದ ಹಳ್ಳಿಗಳನ್ನು ಕಟ್ಟಲು ಸಂವಿಧಾನದಲ್ಲಿ ಉಪಬಂಧವನ್ನು ಕಲ್ಪಿಸಬೇಕು. ಅದಕ್ಕಾಗಿ ಒತ್ತಾಯಿಸಬೇಕು. ವ್ಯವಸಾಯ ಯೋಗ್ಯವಾದ ಯಾರ ಸ್ವಾದೀನದಲ್ಲಿಲ್ಲದ ಬಹಳಷ್ಟು ಭೂಮಿ ಇದೆ. ಅಸ್ಪೃಶ್ಯರಿಗಾಗಿ ಹೊಸ ಗ್ರಾಮಗಳನ್ನು ಕಟ್ಟುವ ಯೋಜನೆಯನ್ನು ಜಾರಿಗೆ ತರುವುದಕ್ಕೆ ಈ ಭೂಮಿಯನ್ನು ತೆಗೆದಿರಿಸಬಹುದು. ಸರ್ಕಾರ, ಹಳ್ಳಿಯ ಹೊರಗಿರುವ ಖಾಸಗಿ ಜಮೀನುಗಳನ್ನು ಕೊಂಡುಕೊಂಡು, ಇದೇ ಉದ್ದೇಶಕ್ಕಾಗಿ ಉಪಯೋಗಿಸಬಹುದಾಗಿದೆ.

ಅವರು ಈಗ ಇರುವ ತಾಂಡಗಳನ್ನು ಬಿಟ್ಟು ತಮ್ಮ ಹೊಸ ಹಳ್ಳಿಗಳಲ್ಲಿ ಸ್ವತಂತ್ರವಾದ ರೈತರುಗಳಂತೆ

ಬದುಕುವಂತೆ ಅಸ್ಪೃಶ್ಯರ ಮನವೊಲಿಸುವುದು ಕಷ್ಟವೇನೂ ಆಗುವುದಿಲ್ಲ. ಈ ವಿಧಾನ ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಆದರೆ ಪರವಾ ಇಲ್ಲ. ಇದು ಎಷ್ಟು ಗಹನವಾದದ್ದೆಂದರೆ, ಈ ಯೋಜನೆಯನ್ನು ಸಾಂವಿಧಾನಿಕವಾಗಿ ಮಾಡಿ, ಇದನ್ನು ಕೇಂದ್ರ ಸರ್ಕಾರದ ಜವಾಬ್ದಾರಿಯನ್ನಾಗಿ ಮಾಡಬೇಕೆಂದು ನಾವು ಒತ್ತಾಯಿಸಬೇಕು.

ಇನ್ನೂ ಒಂದು ವಿಷಯದ ಮೇಲೆ ನಾನು ನಿಮ್ಮೊಂದಿಗೆ ಒಂದೆರಡು ಮಾತುಗಳನ್ನು ಆಡಲೇಬೇಕು. ಭಾರತದಲ್ಲಿ ಅಸ್ಪೃಶ್ಯರ ಮುಖವಾಣಿಯಂತೆ ಮಾತನಾಡಬಲ್ಲ ಒಂದು ಕೇಂದ್ರೀಯ ರಾಜಕೀಯ ಸಂಸ್ಥೆಯನ್ನು ರಚನೆ ಮಾಡುವ ಬಗ್ಗೆ. ಈಗ ನಾವು ನಮ್ಮ ರಾಜಕೀಯ ಚಟುವಟಿಕೆಗಳನ್ನು ನಮ್ಮ ಪ್ರಾಂತೀಯ ಮಟ್ಟದ ಸಂಸ್ಥೆಗಳ ಮೂಲಕ ಮಾಡುತ್ತಿದ್ದೇವೆ. ಪ್ರಾಂತೀಯ ಮಟ್ಟದಲ್ಲಿ ಸಹ ಅನೇಕವಾಗಿ ರಾಜಕೀಯ ಸಂಸ್ಥೆಗಳು ಇರುವುದು ನನಗೆ ಕಂಡು ಬರುತ್ತಿದೆ. ಯಾವನೇ ಒಬ್ಬ ಮಹತ್ವಾಕಾಂಕ್ಷೆ ಇರುವ ವ್ಯಕ್ತಿ ತಾನು ಒಬ್ಬ ಅಧ್ಯಕ್ಷನೋ ಅಥವಾ ಕಾರ್ಯದರ್ಶಿಯೋ ಆಗಿ ಮೆರೆಯಬೇಕು ಎಂದು ಅಂದುಕೊಂಡರೆ, ತಾನೇ ಒಂದು ಅಸೋಸಿಯೇಷನ್ ಅನ್ನು ಹುಟ್ಟುಹಾಕಿ, ಅದಕ್ಕೆ ತಾನೇ ಅಧ್ಯಕ್ಷನೋ, ಕಾರ್ಯದರ್ಶಿಯೋ ಆಗುತ್ತಾನೆ. ಅವನು ಒಂದು ಲೆಟರ್ ಹೆಡ್ ಅನ್ನು ಮುದ್ರಣ ಮಾಡಿಸಿ, ಅದರಲ್ಲಿ ಅಸೋಸಿಯೆಷನ್ ಹೆಸರು, ತನ್ನ ಹೆಸರು (ಅಧ್ಯಕ್ಷನೆಂತಲೋ, ಕಾರ್ಯದರ್ಶಿ ಎಂತಲೋ) ಅಚ್ಚು ಹಾಕಿಸುತ್ತಾನೆ. ಇದಕ್ಕಿಂತ ಹೆಚ್ಚಾಗಿ ಅವನೇನೂ ಮಾಡಬೇಕಾಗಿಲ್ಲ. ಈ ಅರಾಜಕತೆಗೆ ನೀವು ಈ ಕ್ಷಣವೇ ಇತಿಶ್ರೀ ಹಾಡಬೇಕು. ಇದನ್ನು ಮಾಡಬಹುದಾದ ಒಂದೇ ಒಂದು ಮಾರ್ಗವಿದೆ. ಒಂದು ಅಖಿಲ ಭಾರತ ಸಂಸ್ಥೆಯನ್ನು ಸ್ಥಾಪಿಸಿ, ಎಲ್ಲಾ ಪ್ರಾಂತ್ಯಗಳಲ್ಲೂ ಅದರ ಶಾಖೆಗಳನ್ನು ತೆರೆದು ಈಗ ಅಸ್ತಿತ್ವದಲ್ಲಿರುವ ಎಲ್ಲಾ ಸಂಸ್ಥೆಗಳನ್ನೂ ರದ್ದುಗೊಳಿಸಬೇಕು. ಇದು ನಿಮಗೆ ಬೇಕಾಗಿರುವ ಬಲವನ್ನು ಕೊಡುವುದಲ್ಲದೆ, ಒಂದು ಸಂಯುಕ್ತರಂಗವನ್ನು ರಚಿಸಲು ನಿಮಗೆ ಸಹಾಯ ಆಗುತ್ತದೆ. ಈ ವಿಷಯವನ್ನು ನೀವು ಬಹಳ ಆಸ್ಥೆಯಿಂದ ಕೈಗೆತ್ತಿಕೊಳ್ಳುತ್ತೀರೆಂದು ಆಶಿಸುತ್ತೇನೆ.

ಅಸ್ಪೃಶ್ಯರ ಸಮಸ್ಯೆಯನ್ನು ಕುರಿತು ನಾನು ಅಂದುಕೊಂಡಿದ್ದನ್ನು, ನಾನು ಭಾವಿಸಿಕೊಂಡದ್ದನ್ನು ನಿಮಗೆ ಹೇಳಿಬಿಟ್ಟಿದ್ದೇನೆ. ಇದಕ್ಕೆ ನೀವು ನಿಮ್ಮ ಉತ್ತಮ ಪರಿಗಣನೆಯನ್ನು ಕೊಡುತ್ತೀರೆಂದು ಕೊಂಡಿದ್ದೇನೆ.

ಬಹುಶಃ, ಮುಕ್ತಾಯ ಮಾಡುತ್ತಾ, ಯುದ್ಧದ ಬಗ್ಗೆ ನಮ್ಮ ಧೋರಣೆಯ ಕುರಿತು ಪ್ರಸ್ತಾಪ ಮಾಡಬಹುದಾಗಿದೆ. ಪ್ರಾರಂಭದಿಂದಲೇ ನಾವು ಯುದ್ಧ ಪ್ರಯತ್ನಗಳನ್ನು ಬೆಂಬಲಿಸಿದ್ದೇವೆ. ನಮ್ಮ ಬೆಂಬಲವನ್ನು ಮುಂದುವರಿಸಿಕೊಂಡು ಹೋಗುತ್ತೇವೆಂಬ ವಿಶ್ವಾಸ ನನಗಿದೆ. ನಮಗೆ ನಮ್ಮ ರಾಜಕೀಯ ಹಕ್ಕೊತ್ತಾಯಗಳು ಇವೆ, ಅವುಗಳನ್ನು ಪೂರೈಸಬೇಕೆಂಬುದು ನಮ್ಮ ಒತ್ತಾಯ. ಆದರೆ ಯುದ್ಧ ಪ್ರಯತ್ನಗಳಿಗೆ ನಮ್ಮ ಬೆಂಬಲವನ್ನು ನಮ್ಮ ಹಕ್ಕೊತ್ತಾಯಗಳನ್ನು ಪೂರೈಸಲೇಬೇಕೆಂಬ ಪೂರ್ವ ನಿಬಂಧನೆಯಿಲ್ಲದೆ ಕೊಟ್ಟಿದ್ದೇವೆ. ಯುದ್ಧ ಸಮರ್ಪಕವಾಗಿ ಮುಕ್ತಾಯವಾಗಬೇಕೆಂಬುದಕ್ಕೆ ಕೊಟ್ಟಿರುವುದಕ್ಕಿಂತ ಕಡಿಮೆ ಪ್ರಾಮುಖ್ಯತೆಯನ್ನು ನಮ್ಮ ಹಕ್ಕೊತ್ತಾಯಕ್ಕೆ ಕೊಟ್ಟಿದ್ದೇವೆಯೆಂದೇನೂ ಅಲ್ಲ. ಯುದ್ಧಕ್ಕೆ ಬೆಂಬಲ ಕೊಡುವುದಕ್ಕಾಗಿ ಯಾವ ನಿಬಂಧನೆಗಳನ್ನೂ ಹಾಕುವುದಿಲ್ಲ; ಕಾರಣವೆಂದರೆ, ಯುದ್ಧವು ಜಯಪ್ರದವಾಗಿ ಮುಕ್ತಾಯವಾಗುವುದು ನಮ್ಮ ರಾಜಕಿಯ ಹಕ್ಕೊತ್ತಾಯಗಳನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆಯೇ ಹೊರತು, ಯುದ್ಧದಲ್ಲಿ ಸೋಲುಂಟಾದರೆ ಅಲ್ಲ. ಈ ಯುದ್ಧ ಒಂದು ಪ್ರಜಾಪ್ರಭುತ್ವ ಮತ್ತು ಒಂದು ನಿರಂಕುಶತ್ವದ ಮಧ್ಯೆ ನಡೆದಿರುವ ಸಮರ. ನಿರಂಕುಶತ್ವವೆಂದರೆ, ತಿಳುವಳಿಕೆ ಇರುವ ವಿದ್ಯಾವಂತರ ನಿರಂಕುಶತ್ವ ಅಲ್ಲ; ಅತ್ಯಂತ ಬರ್ಬರ ಗುಣವಿರುವ, ಯಾವುದೇ ನೈತಿಕ ಆದರ್ಶದ ತಳಹದಿ ಇಲ್ಲದ, ಜನಾಂಗೀಯ ಗರ್ವದ

ಮೇಲೆ ಆಧಾರಿತವಾದ ನಿರಂಕುಶತ್ವ. ಯಾವುದಾದರೂ ನಿರಂಕುಶತ್ವವನ್ನು ನಾಶಪಡಿಸಬೇಕಾಗಿದ್ದರೆ, ಅದೇ ಈ ಕೆಟ್ಟ ನಾಜಿ ನಿರಂಕುಶತ್ವ. ಈ ದೇಶದಲ್ಲಿ ಕಂಡುಬರುವ ಎಲ್ಲಾ ಭಿನ್ನಮತಗಳಲ್ಲಿ, ಭವಿಷ್ಯದ ಅನಿಶ್ಚಯತೆಗಳ ಮಧ್ಯದಲ್ಲಿ, ಈ ನಾಜಿತ್ವ ಎನ್ನುವುದು ಏನು ಎಂದು, ನಮ್ಮ ಭವಿಷ್ಯಕ್ಕೆ ಎಂಥ ಪಿಡುಗು ಎಂದು ನಾವು ಮರೆತು ಬಿಡುವ ಸಂಭವ ಇದೆ. ನಾಜಿಸಂನ ಜನಾಂಗೀಯ ಗರಿಮೆಯ ಆಧಾರ ಭಾರತಿಯರಿಗೆ ಖಂಡಿತವಾಗಿ ಅಪಾಯಕಾರಿ ಎಂಬುದು ಹೆಚ್ಚಿಗೆ ಮುಖ್ಯವಾಗಿದೆ. ಈ ಸಂದರ್ಭದ ಬಗ್ಗೆ ಇದು ಸರಿಯಾದ ದೃಷ್ಟಿ ಎಂದು ಆದರೆ, ಮಾನವೀಯ ಸಂಬಂಧಗಳ ಮಾರ್ಗದರ್ಶಿ ಸೂತ್ರವಾದ ಪ್ರಜಾಪ್ರಭುತ್ವ ಎಂಬುದು ಈ ಭೂಮಿಯಿಂದ ಮಾಯವಾಗಿ ಹೋಗಬಾರದು ಎನ್ನುವುದಾದರೆ, ಇದೇ ಸರಿಯಾದ ಅಭಿಪ್ರಾಯವೆಂದಾಗುತ್ತದೆ. ಅದರಲ್ಲಿ ನಮಗೆ ನಂಬಿಕೆ ಇರುವುದು ನಿಜವಾದರೆ ಆಗ ನಾವು ಅದಕ್ಕೆ ಸತ್ಯ ನಿಷ್ಠವಾಗಿ ನಡೆದುಕೊಳ್ಳಬೇಕು. ಪ್ರಜಾಪ್ರಭುತ್ವದ ಬಗ್ಗೆ ನಮಗೆ ಏಕಪ್ರಕಾರವಾದ ನಂಬಿಕೆ ಮಾತ್ರವಲ್ಲ, ನಾವು ಏನನ್ನೇ ಮಾಡಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ನೀತಿಗಳನ್ನು ಬುಡಮೇಲು ಮಾಡಲು ಪ್ರಜಾಪ್ರಭುತ್ವದ ಶತೃಗಳಿಗೆ ನಾವು ಸಹಾಯ ಮಾಡಬಾರದು. ಆ ಕುರಿತು ನಾವೆಲ್ಲಾ ಒಮ್ಮತವಾಗಿದ್ದೇವೆಂದು ನಾನು ನಂಬಿದ್ದೇನೆ. ಹಾಗೆಂದ ಮೇಲೆ, ಇತರ ನಾಗರಿಕ ದೇಶಗಳಂತೆ, ನಾವು ಸಹ ಪ್ರಜಾತಾಂತ್ರಿಕ ನಾಗರಿಕತೆಯ ಆಧಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಶ್ರಮಿಸಬೇಕಾಗಿದೆ. ಪ್ರಜಾಪ್ರಭುತ್ವ ಉಳಿದರೆ, ನಾವೆಲ್ಲಾ ಖಂಡಿತವಾಗಿ ಅದರ ಪ್ರಯೋಜನವನ್ನು ಪಡೆದುಕೊಳ್ಳುತ್ತೇವೆ. ಅದು ಸತ್ತರೆ ನಮ್ಮೆಲ್ಲರ ಸರ್ವನಾಶ ಖಂಡಿತ. ಅದರಲ್ಲಿ ಯಾವ ಸಂಶಯವೂ ಇಲ್ಲ.

ಈ ಸಂದರ್ಭದಲ್ಲಿ ನಾನು ಇನ್ನೂ ಹೆಚ್ಚಿಗೆ ಹೇಳಬೇಕಾದುದು ಏನೂ ಇಲ್ಲ. ನಿಮ್ಮೆಲ್ಲರುಗಳ ಮಧ್ಯೆ ಇರುವುದು ನನಗೆ ಸಂತೋಷವಾಗಿದೆ. ಹಿಂದೆ ಮಾಡಿದಂತೆಯೇ, ಭವಿಷ್ಯದಲ್ಲಿ ಕೂಡಾ ನಿಮ್ಮ ಸೇವೆ ಮಾಡುವುದು ನನಗೆ ಸಂತೋಷ ಕೊಡುತ್ತದೆ. ನಾವೆಲ್ಲಾ ಒಟ್ಟಿಗೆ ಕೆಲಸ ಮಾಡಿದರೆ, ಒಟ್ಟಿಗೆ ಶ್ರಮವಹಿಸಿದರೆ, ನಮಗೆ ಸೋಲಾಗುವುದಿಲ್ಲ. ಏಕೆಂದರೆ ನಮ್ಮ ಧ್ಯೇಯ ನ್ಯಾಯವಾದದ್ದು; ನಮ್ಮ ಧ್ಯೇಯ ಮಾನವ ಜನಾಂಗದ ಧ್ಯೇಯ.

ರಾವ್ ಬಹಾದೂರ್ ಎನ್.ಶಿವರಾಜ್ ಅವರು ಅಧಿವೇಶನವನ್ನು ಮರುದಿನ ಬೆಳಗ್ಗೆ ೧೦ ಗಂಟೆಗೆ ಮುಂದೂಡಿದೆ ಎಂದು ಘೋಷಿಸಿದರು. ಮತ್ತು ಮೊದಲೇ ಪ್ರಕಟ ಮಾಡಿದ ಹಾಗೆ ವಿಷಯ ಸಮಿತಿ ಈ ದಿನ ರಾತ್ರಿ ೯ ಗಂಟೆಗೆ ಮೋಹನ್ ಪಾರ್ಕ್ ಹೋಟಲಿನ ಸಭಾಂಗಣದಲ್ಲಿ ಸೇರುತ್ತದೆ ಎಂದು ತಿಳಿಸಿದರು.

**ವಿಷಯ ಸಮಿತಿಗಳ ಸಭೆಗಳು**

ಮೂರನೇ ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನದ ವಿಷಯ ಸಮಿತಿಯ ಸಭೆ ಎಲ್ಲಾ ಡೆಲಿಗೇಟುಗಳ ಉಪಸ್ಥಿತಿಯಲ್ಲಿ ರಾತ್ರಿ ೯ ಗಂಟೆಗೆ ಮೋಹನ್ ಪಾರ್ಕ್ ಹೋಟಲಿನ ಸಭಾಂಗಣದಲ್ಲಿ ರಾವ್ ಬಹಾದೂರ್ ಎನ್.ಶಿವರಾಜ್ ಅವರ ಅಧ್ಯಕ್ಷತೆಯಲ್ಲಿ ಸೇರಿ ಕರಡು ನಿರ್ಣಯಗಳನ್ನು ಚರ್ಚಿಸಿತು. ಸಮ್ಮೇಳನದ ಮುಕ್ತ ಅಧಿವೇಶನದ ಮುಂದೆ ಇಡುವ ನಿರ್ಣಯಗಳನ್ನು ವಿಷಯ ಸಮಿತಿಸರ್ವಾನುಮತದಿಂದ ಅಂಗೀಕರಿಸಿತು.

ಮುಕ್ತ ಅಧಿವೇಶನ
ಎರಡನೆಯ ದಿನ

ಜುಲೈ ೧೯, ೧೯೪೨

ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನದ ಮೂರನೇ ಅಧಿವೇಶನ ರಾವ್ ಬಹಾದೂರ್ ಎನ್.ಶಿವರಾಜ್ ಅವರ ಅಧ್ಯಕ್ಷತೆಯಲ್ಲಿ ಬೆಳಗಿನ ೧೦ ಗಂಟೆಗೆ ಪುನಃ ಸೇರಿತು.

ಸಮ್ಮೇಳನದ ಹಲವು ಸದಸ್ಯರುಗಳು ವಿಶೇಷವಾಗಿ ಸಂಯೋಜನೆ ಮಾಡಿದ ಗೀತೆಗಳನ್ನು ಹಾಡುವುದರೊಂದಿಗೆ ನಡವಳಿಗಳು ಪ್ರಾರಂಭವಾದವು.

ರಾವ್ ಬಹಾದೂರ್ ಎನ್.ಶಿವರಾಜ್ ಹೇಳಿದ್ದು; ಮಹಿಳೆಯರೆ ಮತ್ತು ಮಹನೀಯರೆ;

ಈ ಸಮ್ಮೇಳನದಲ್ಲಿ ಐದು ನಿರ್ಣಯಗಳನ್ನು ಮಂಡಿಸಲು ವಿಷಯ ಸಮಿತಿ ಒಪ್ಪಿದ್ದಾರೆಂದು ಪ್ರಕಟಿಸುತ್ತಿದ್ದೇನೆ. ೧ ರಿಂದ ೪ನೇ ನಿರ್ಣಯಗಳನ್ನು ಒಂದೇ ಪ್ರಸ್ತಾವವನ್ನಾಗಿ ಮಂಡಿಸಲಾಗುತ್ತದೆ ಮತ್ತು ೫ನೇ ನಿರ್ಣಯವನ್ನು ಆ ನಂತರ ಮಂಡಿಸಲಾಗುತ್ತದೆ. ಈಗ ನಾನು ಮೊದಲ ನಾಲ್ಕು ನಿರ್ಣಯಗಳನ್ನು ಮಂಡಿಸಲು ಮಿ. ಬಿ.ಕೆ.ಗಾಯಕ್‌ವಾಡ್, ಎಮ್.ಎಲ್.ಎ. (ನಾಸಿಕ್) ಅವರನ್ನು ಕರೆಯುತ್ತಿದ್ದೇನೆ.

ನಿರ್ಣಯಗಳನ್ನು ಮಂಡಿಸುತ್ತಾ ಗಾಯಕ್‌ವಾಡ್‌ರವರು ಹೇಳಿದ್ದು:

ಮಾನ್ಯ ಅಧ್ಯಕ್ಷರೆ, ಮಹಿಳೆಯರೆ ಮತ್ತು ಮಹನೀಯರೆ,

ನಾನು ಮಂಡಿಸಬೇಕೆಂದು ಹೇಳಲಾದ ನಿರ್ಣಯಗಳು ಈ ರೀತಿ ಇವೆ:

**ನಿರ್ಣಯ–೧ – ಕ್ರಿಪ್ಸ್ ಪ್ರಸ್ತಾವನೆಗಳು ಒಪ್ಪಿಕೊಳ್ಳಲಾಗುವುದಿಲ್ಲ.**

ಸರ್ ಸ್ಟಾಫೋರ್ಡ್ ಕ್ರಿಪ್ಸ್ ಅವರ ಮೂಲಕ ಚಕ್ರವರ್ತಿಯವರು ಕಳುಹಿಸಿದ ಸಾಂವಿಧಾನಿಕ ಬದಲಾವಣೆಗೆ ಸಂಬಂಧಪಟ್ಟ ಪ್ರಸ್ತಾವನೆಗಳು, ಅನುಸೂಚಿತ ಜಾತಿಗಳವರಿಗೆ ಸುತರಾಂ ಒಪ್ಪಿಗೆಯಿಲ್ಲ. ಈ ಸಮ್ಮೇಳನದ ಅಭಿಪ್ರಾಯದಲ್ಲಿ, ಈ ಪ್ರಸ್ತಾವನೆಗಳು ಅನುಸೂಚಿತ ಜಾತಿಗಳವರ ಹಿತಾಸಕ್ತಿಗಳಿಗೆ ಎಸಗಿದ ದ್ರೋಹವಾಗಿದ್ದು, ಮತ್ತು ನಮ್ಮಗಳಿಗೆ ಕೊಟ್ಟ ಭರವಸೆಗಳನ್ನು ಮುರಿಯಲಾಗಿದೆ. ಈ ಭರವಸೆಗಳನ್ನು ೮.೮.೧೯೪೦ರಂದು ಗೌರವಾನ್ವಿತ ವೈಸ್‌ರಾಯ್ ಅವರು ತಮ್ಮ ಘೋಷಣೆಯ ಮೂಲಕ ಕೊಟ್ಟಿರುತ್ತಾರೆ. ಅನುಸೂಚಿತ ಜಾತಿಗಳವರಿಗೆ ಒಪ್ಪಿಗೆಯಾಗದ ಸಂವಿಧಾನವನ್ನು ಅವರ ಮೇಲೆ ಹೇರಲಾಗುವುದಿಲ್ಲ ಎನ್ನುವುದೇ ಆ ಭರವಸೆ.

**ಕ್ರಿಪ್ಸ್ ಪ್ರಸ್ತಾವನೆಗಳ ವಿರುದ್ಧ ಪ್ರತಿಭಟನೆ:** ಈ ಸಮ್ಮೇಳನ ತನ್ನ ಅತ್ಯಂತ ನಿರ್ಭರವಾದ ಪ್ರತಿಭಟನೆಯನ್ನು, ಕಾಂಗ್ರೆಸ್ ಪಕ್ಷದ ಒತ್ತಾಯಕ್ಕೆ ಮಣಿದು ಚಕ್ರವರ್ತಿಯವರ ಸರ್ಕಾರ ಹೊಸ ಸಂವಿಧಾನವನ್ನು ಒಂದು ಸಂವಿಧಾನ ಸಭೆ ರೂಪಿಸಬೇಕೆಂದೂ ಮತ್ತು ಅನುಸೂಚಿತ ಜಾತಿಗಳವರ ಹಿತಾಸಕ್ತಿಗಳನ್ನು, ಭಾರತದ ರಾಷ್ಟ್ರೀಯ ಸರ್ಕಾರ ಮತ್ತು ಗ್ರೇಟ್ ಬ್ರಿಟನ್ನಿನ ಚಕ್ರವರ್ತಿಯವರ ಸರ್ಕಾರದ ಮಧ್ಯೆ ಆದ ಕೌಲಿನ ಅನುಸಾರ ರಕ್ಷಿಸಬೇಕೆಂಬ ಪ್ರಸ್ತಾವನೆಗೆ ವಿರೋಧವನ್ನು ಈ ಮೂಲಕ ದಾಖಲಿಸುತ್ತದೆ.

**ನಿರ್ಣಯ–೨–ಸಂವಿಧಾನಕ್ಕೆ ಒತ್ತಾಯ**

ಈ ಸಮ್ಮೇಳನ ಘೋಷಣೆ ಮಾಡುವುದೇನೆಂದರೆ, ಯಾವುದೇ ಸಂವಿಧಾನ ಅದು.

(ಅ) ಅನುಸೂಚಿತ ಜಾತಿಯವರಿಗೆ ಒಪ್ಪಿಗೆಯಾಗದಿದ್ದರೆ,

(ಆ) ಅದು ಭಾರತದ ರಾಷ್ಟ್ರೀಯ ಜೀವನದಲ್ಲಿ ಅನುಸೂಚಿತ ಜಾತಿಗಳವರು ಒಂದು ಭಿನ್ನವಾದ, ಪ್ರತ್ಯೇಕವಾದ ಮತ್ತು ಮುಖ್ಯವಾದ ಧಾತು ಅನ್ನುವುದನ್ನು ಮಾನ್ಯ ಮಾಡುತ್ತದೆ.

(ಇ) ಅನುಸೂಚಿತ ಜಾತಿಗಳವರಿಗೆ ಒಂದ ಭದ್ರತೆಯ ನೈಜವಾದ ಪ್ರಜ್ಞೆಯನ್ನು ಹೊಸ ಸಂವಿಧಾನದ ಉಪ ಬಂಧಗಳಲ್ಲಿ ಒಳಗೊಂಡಿರಬೇಕು.

ಆ ಉಪಬಂಧಗಳನ್ನು ಕೆಳಗಿನ ನಿರ್ಣಯಗಳಲ್ಲಿ ಕೊಡಲಾಗಿದೆ.

**ನಿರ್ಣಯ ಸಂಖ್ಯೆ–೩, ಹೊಸ ಸಂವಿಧಾನದಲ್ಲಿನ ಉಪಬಂಧಗಳು**

ಅನುಸೂಚಿತ ಜಾತಿಗಳವರಲ್ಲಿ ಸುರಕ್ಷತೆಯ ಪ್ರಜ್ಞೆಯನ್ನು ಬೆಳೆಸುವುದಕ್ಕಾಗಿ, ಸಂವಿಧಾನದಲ್ಲಿ ಈ ಕೆಳಗಿನ ಉಪಬಂಧಗಳನ್ನು ಸೇರಿಸಬೇಕು.

೧. ಪ್ರತಿಯೊಂದು ಪ್ರಾಂತೀಯ ಮುಂಗಡ ಪತ್ರದಲ್ಲಿ ಒಪ್ಪಂದದ ಮೂಲಕ ನಿರ್ಧರಿಸಿದಂತೆ, ಒಂದು ವಾರ್ಷಿಕ ಮೊತ್ತವನ್ನು ತೆಗೆದಿರಿಸಬೇಕು. ಇದನ್ನು ಅನುಸೂಚಿತ ಜಾತಿಗಳವರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಒತ್ತಾಸೆ ಕೊಡುವುದಕ್ಕೆ ಉಪಯೋಗಿಸಬೇಕು. ಅಲ್ಲದೆ ಇನ್ನೊಂದು ವಾರ್ಷಿಕ ಮೊತ್ತವನ್ನು ಅವರ ಮುಂದುವರೆದ ಶಿಕ್ಷಣಕ್ಕಾಗಿ ತೆಗೆದಿರಿಸಬೇಕು ಇಂಥ ಮೊತ್ತಗಳನ್ನು ಆ ಪ್ರಾಂತ್ಯದ ರೆವೆನ್ಯೂ ಆದಾಯದ ಮೇಲಿನ ಮೊದಲ ಋಣಭಾರವೆಂದು ಘೋಷಿಸಬೇಕು.

**ಕಾರ್ಯಾಂಗ ಸರ್ಕಾರದಲ್ಲಿ ಪ್ರಾತಿನಿಧ್ಯ : ೨** ಎಲ್ಲಾ ಕಾರ್ಯಾಂಗದ ಸರ್ಕಾರಗಳಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಅನುಸೂಚಿತ ಜಾತಿಗಳವರಿಗೆ ಪ್ರಾತಿನಿಧ್ಯವನ್ನು ಕೊಡಲು ಕಾನೂನಿನನ್ವಯ ಉಪಬಂಧಗಳನ್ನು ಕಲ್ಪಿಸಬೇಕು. ಇದರ ಪ್ರಮಾಣವನ್ನು ಅವರ ಜನ ಸಂಖ್ಯೆಗೆ, ಅವರ ಅವಶ್ಯಕತೆಗಳಿಗೆ ಮತ್ತು ಅವರ ಪ್ರಾಮುಖ್ಯತೆಗೆ ಅನುಸಾರವಾಗಿ ನಿರ್ಧರಿಸಬೇಕು.

**ಸಾರ್ವಜನಿಕ ಸೇವೆಗಳಲ್ಲಿ ಪ್ರಾತಿನಿಧ್ಯ : ೩** ಅನುಸೂಚಿತ ಜಾತಿಗಳವರಿಗೆ ಸಾರ್ವಜನಿಕ ಸೇವೆಯಲ್ಲಿ ಪ್ರಾತಿನಿಧ್ಯವನ್ನು ಕೊಡಲು ಕಾನೂನಿನನ್ವಯ ಉಪಬಂಧಗಳನ್ನು ಕಲ್ಪಿಸಬೇಕು. ಇದರ ಪ್ರಮಾಣವನ್ನು ಅವರ ಜನಸಂಖ್ಯೆಗೆ, ಅವರ ಅವಶ್ಯಕತೆಗಳಿಗೆ ಮತ್ತು ಅವರ ಪ್ರಾಮುಖ್ಯತೆಗೆ ಅನುಸಾರವಾಗಿ ನಿರ್ಧರಿಸಬೇಕು. ಈ ಸಮ್ಮೇಳನ ಒತ್ತಾಯಿಸುವುದೇನೆಂದರೆ– ನ್ಯಾಯಾಂಗ, ಪೋಲಿಸ್, ಮತ್ತು ರೆವೆನ್ಯೂಗಳಂಥ ಭದ್ರತಾ ಸೇವೆಗಳಲ್ಲಿ ಅನುಸೂಚಿತ ಜಾತಿಗಳವರಿಗೆ, ಕನಿಷ್ಟ ವಿದ್ಯಾರ್ಹತೆ ನಿಯಮಕ್ಕೆ ಒಳಪಟ್ಟು ನಿಗದಿಪಡಿಸಿದ ಪ್ರಮಾಣವನ್ನು ಹತ್ತು ವರ್ಷಗಳ ಅವಧಿಯಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕು.

**ಎಲ್ಲಾ ಶಾಸನ ಸಭೆಗಳಲ್ಲಿ ಮತ್ತು ಸ್ಥಳಿಯ ಸಂಸ್ಥೆಗಳಲ್ಲಿ ಶಾಸನ ಬದ್ಧ ಪ್ರಾತಿನಿಧ್ಯ : ೪** ಅನುಸೂಚಿತ ಜಾತಿಗಳವರಿಗೆ, ಕಾನೂನಿನನ್ವಯ ಎಲ್ಲಾ ಶಾಸನ ಸಭೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯವನ್ನು ಅವರ ಜನಸಂಖ್ಯೆ, ಅವಶ್ಯಕತೆಗಳು ಮತ್ತು ಪ್ರಾಮುಖ್ಯತೆಗೆ ಅನುಗುಣವಾಗಿ ಖಾತರಿಪಡಿಸಲು ಉಪಬಂಧಗಳನ್ನು ಕಲ್ಪಿಸಬೇಕು.

**ಪ್ರತ್ಯೇಕ ಮತದಾರರ ಮಂಡಲಿ : ೫** ಅನುಸೂಚಿತ ಜಾತಿಗಳವರಿಗೆ ಕಾನೂನಿನ ಮೂಲಕ ಎಲ್ಲಾ ಶಾಸನ ಸಭೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯವನ್ನು ಪ್ರತ್ಯೇಕ ಮತದಾರರ ಮಂಡಲಿ ಪದ್ಧತಿಯ ಮೂಲಕ ಕೊಡುವುದಕ್ಕೆ ಉಪಬಂಧವನ್ನು ಕಲ್ಪಿಸಬೇಕು.

**ಸಾರ್ವಜನಿಕ ಸೇವಾ ಆಯೋಗದಲ್ಲಿ ಪ್ರಾತಿನಿಧ್ಯ : ೬** ಅನುಸೂಚಿತ ಜಾತಿಗಳವರಿಗೆ ಎಲ್ಲಾ ಸಾರ್ವಜನಿಕ ಸೇವಾ ಆಯೋಗಗಳಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಉಪಬಂಧವನ್ನು ಕಲ್ಪಿಸಬೇಕು.

**೪ನೇ ನಿರ್ಣಯ – ಗ್ರಾಮ ವ್ಯವಸ್ಥೆಯಲ್ಲಿ ಬದಲಾವಣೆ:**

ಎಲ್ಲಿಯವರೆಗೆ ಅನುಸೂಚಿತ ಜಾತಿಗಳವರು ಹಳ್ಳಿಯ ಹೊರವಲಯದಲ್ಲಿ ವಾಸಿಸುತ್ತಿರುವುದನ್ನು ಮುಂದುವರೆಸುತ್ತಿರುವರೋ, ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಅಲ್ಲದೆ ಹಿಂದೂಗಳಿಗೆ ಹೋಲಿಸಿದರೆ ಸಣ್ಣ ಸಂಖ್ಯೆಯಲ್ಲಿ ಇರುತ್ತಾರೋ ಅಲ್ಲಿಯವರೆಗೆ ಅವರು ಅಸ್ಪೃಶ್ಯರಿಗಾಗಿಯೇ ಉಳಿಯುತ್ತಾರೆ. ಅಲ್ಲದೆ ಹಿಂದೂಗಳ ದಬ್ಬಾಳಿಕೆ ಮತ್ತು ತುಳಿತಕ್ಕೆ ಒಳಪಟ್ಟು ಪೂರ್ಣ ಹಾಗೂ ಮುಕ್ತ ಜೀವನವನ್ನು ನಡೆಸಲಾಗುವುದಿಲ್ಲ.

ಸವರ್ಣ ಹಿಂದೂಗಳ ದಬ್ಬಾಳಿಕೆ ಮತ್ತು ತುಳಿತದಿಂದ ಅನುಸೂಚಿತ ಜಾತಿಗಳ ರಕ್ಷಣೆ ಮಾಡುವುದಕ್ಕೋಸ್ಕರ, ಅವರು ತಮ್ಮ ಪುಂಸತ್ವವನ್ನು ಸಂಪೂರ್ಣವಾಗಿ ಉತ್ತಮ ಪಡಿಸಿಕೊಳ್ಳಲು, ಅವರಿಗೆ ಆರ್ಥಿಕ ಮತ್ತು ಸಾಮಾಜಿಕ ಬದ್ಧತೆಯನ್ನು ಕೊಡುವ ಸಲುವಾಗಿ, ಹಾಗೂ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಈ ಸಮ್ಮೇಳನ ದೀರ್ಘವಾದ ಮತ್ತು ಪ್ರಬುದ್ಧ ಚರ್ಚೆಗಳನ್ನು ಮಾಡಿದ ನಂತರ, ಒಂದು ಮೂಲಭೂತವಾದ ಬದಲಾವಣೆಯನ್ನು ಈಗ ಭಾರತದಲ್ಲಿ ಪ್ರಚಲಿತವಿರುವ ಗ್ರಾಮ ವ್ಯವಸ್ಥೆಯಲ್ಲಿ ಆಗಲೇಬೇಕೆಂದು ಮತ್ತು ಅನುಸೂಚಿತ ಜಾತಿಗಳವರು ಶತಮಾನಗಳಿಂದ ಹಿಂದೂಗಳ ಕೈನಲ್ಲಿ ಸಿಕ್ಕಿಕೊಂಡು ಬವಣೆ ಪಡುತ್ತಿರುವುದರಿಂದ ಬಿಡುಗಡೆಯಾಗುವುದಕ್ಕೆ ಈ ವ್ಯವಸ್ಥೆಯಲ್ಲಿ ಬದಲಾವಣೆ ಆಗಲೇಬೇಕಾಗಿದೆ. ಈ ಬದಲಾವಣೆಗಳ ಅವಶ್ಯಕತೆಗಳನ್ನು ಮನಗಾಣುತ್ತಾ ಈ ಸಮ್ಮೇಳನ ಸರ್ಕಾರದ ವ್ಯವಸ್ಥೆಯಲ್ಲಿನ ಸಾಂವಿಧಾನಿಕ ಬದಲಾವಣೆಯ ಜೊತೆಗೆ, ಈಗ ಪ್ರಚಲಿತವಿರುವ ಗ್ರಾಮ ವ್ಯವಸ್ಥೆಯಲ್ಲೂ ಕೂಡ ಬದಲಾವಣೆ ಈ ಕೆಳಗಿನ ರೀತಿಯಲ್ಲಿ ಆಗಲೇಬೇಕಾಗಿದೆ.

**ಪ್ರತ್ಯೇಕವಾದ ಗ್ರಾಮಗಳು**

೧. ಅನುಸೂಚಿತ ಜಾತಿಗಳವರನ್ನು ಅವರ ಈಗಿನ ವಾಸ್ತವ್ಯದಿಂದ ವರ್ಗಾವಣೆ ಮಾಡುವುದಕ್ಕೆ ಸಂವಿಧಾನದಲ್ಲಿ ಉಪಲಬ್ಧವನ್ನು ಕಲ್ಪಿಸಬೇಕು ಮತ್ತು ಅವರಿಗಾಗಿ ಹಿಂದೂಗಳ ಗ್ರಾಮಗಳಿಂದ ದೂರವಾಗಿ ಮತ್ತು ಸ್ವತಂತ್ರವಾಗಿರುವ ಅನುಸೂಚಿತ ಜಾತಿಗಳ ಗ್ರಾಮಗಳನ್ನು ರಚಿಸಬೇಕು.

**ವ್ಯವಸ್ಥಾ ಆಯೋಗಗಳು**

೨. ಅನುಸೂಚಿತ ಜಾತಿಗಳವರನ್ನು ಹೊಸ ಗ್ರಾಮಗಳಲ್ಲಿ ವ್ಯವಸ್ಥೆಗೊಳಿಸುವುದಕ್ಕೆ ವ್ಯವಸ್ಥಾ ಆಯೋಗವನ್ನು ಸ್ಥಾಪಿಸುವುದಕ್ಕೆ ಸಂವಿಧಾನದಲ್ಲಿ ಉಪಬಂಧವನ್ನು ಕಲ್ಪಿಸಬೇಕು.

**ಅನುಸೂಚಿತ ಜಾತಿಗಳವರಿಗೆ ಹೊಸ ಭೂಮಿ : ೩** ಖಾಲಿ ಇರುವ ಹಾಗೂ ಕೃಷಿ ಯೋಗ್ಯವಿರುವ, ಯಾರ ಸ್ವಾಧೀನದಲ್ಲೂ ಇಲ್ಲದೇ ಇರುವ ಸರ್ಕಾರಿ ಭೂಮಿಯನ್ನು ಆಯೋಗದ ವಶಕ್ಕೆ ವಾಸ್ತವ್ಯ ಪ್ರದೇಶಗಳನ್ನು ಸ್ಥಾಪಿಸುವುದಕ್ಕೆ ಕೊಡಬೇಕು.

**ಹೊಸ ಭೂಮಿಯ ಸ್ವಾಧೀನ : ೪** ಭೂ ಸ್ವಾದೀನ ಅಧಿನಿಯಮದ ಕೆಳಗೆ, ಹೊಸಭೂಮಿಯನ್ನು ಅದರ ಖಾಸಗಿ ಮಾಲಿಕರಿಂದ ಕೊಂಡುಕೊಂಡು, ಅನುಸೂಚಿತ ಜಾತಿಗಳ ವಸತಿ ವ್ಯವಸ್ಥಾ ಯೋಜನೆಯನ್ನು ಪೂರ್ಣಗೊಳಿಸಲು ಆಯೋಗಕ್ಕೆ ಅಧಿಕಾರ ಕೊಡುವುದು.

**ಕನಿಷ್ಟ ೫ ಕೋಟಿ ರೂಪಾಯಿಗಳನ್ನು ವಾರ್ಷಿಕವಾಗಿ ಕೇಂದ್ರ ಸರ್ಕಾರ ಕೊಡಬೇಕು : ೫** ಸೆಟಲ್ ಮೆಂಟ್ ಆಯೋಗಕ್ಕೆ ವಾರ್ಷಿಕವಾಗಿ ಕನಿಷ್ಟ ಐದು ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದು ಸಂವಿಧಾನದಲ್ಲಿ ಉಪಬಂಧವಿರಬೇಕು, ಈ ಬಗ್ಗೆ ಆಯೋಗ ತನ್ನ ಕರ್ತವ್ಯವನ್ನು ನಿಭಾಯಿಸಲು ಸಾಧ್ಯವಾಗುತ್ತದೆ.

ಮಿ. ಅಧ್ಯಕ್ಷರೆ, ಈ ನಿರ್ಣಯಗಳು ನಿಮ್ಮ ಚಳುವಳಿಯ ಮುಖ್ಯ ಬೆಂಬಲವಾಗಿವೆ. ಅವುಗಳನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳಲಾಗಿದ್ದು, ಅದನ್ನು ನಿಮಗೆ ಶಿಫಾರಸು ಮಾಡಲು ಉದ್ದನೆಯ ಭಾಷಣವೇ ಬೇಕಾಗಿಲ್ಲ. ಮೊದಲನೆಯ ನಿರ್ಣಯ ಕ್ರಿಪ್ಸ್ ಪ್ರಸ್ತಾವನೆಗಳನ್ನು ಪ್ರಕಟಿಸಿದ ಸರ್ಕಾರದ ಕ್ರಮವನ್ನು ಖಂಡಿಸುತ್ತದೆ; ಈ ಪ್ರಸ್ತಾವಗಳು ಅನುಸೂಚಿತ ಜಾತಿಗಳವರಿಗೆ ಹಾನಿಕಾರಕವಾಗಿವೆ. ೨ನೇ, ೩ನೇ ಮತ್ತು ೪ನೇ ನಿರ್ಣಯಗಳು, ಭವಿಷ್ಯದ ಸಂವಿಧಾನದಲ್ಲಿ, ಅನುಸೂಚಿತ ಜಾತಿಗಳವರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಅತ್ಯವಶ್ಯಕವಾದ ಉಪಬಂಧಗಳು ಯಾವುವು ಎಂಬುದನ್ನು ಹೇಳುತ್ತದೆ. ಸವರ್ಣ ಹಿಂದೂಗಳ ಏರು ಧ್ವನಿಯ ಆಶ್ವಾಸನೆಗಳಲ್ಲಿ ನಮಗೆ ನಂಬಿಕೆ ಇಲ್ಲ. ಪೂನ ಕೌಲ್‌ಗೆ ಸಹಿ ಹಾಕಿದ ಮಸಿ ಇನ್ನೂ

ಆರದಿರುವಾಗಲೇ ಅದರ ವಿರುದ್ಧ ತಿರುಗಿದ ಜನಗಳನ್ನು ನಂಬುವುದು ಹೇಗೆ? ಇಲ್ಲಿಯರೆಗೆ ಅನುಸೂಚಿತ ಜಾತಿಗಳವರು ಸಾಧಿಸಿದ ಪ್ರಗತಿಯನ್ನು ನಿಲ್ಲಿಸಿಬಿಡಲು ತವಕಿಸುತ್ತಿರುವ ಇಂಥ ಸಮುದಾಯಗಳಿಗೆ, ಭಾರತದ ಲಕ್ಷಾಂತರ ನಿಮ್ನ ವರ್ಗಗಳವರ ಭವಿಷ್ಯವನ್ನು ಒಪ್ಪಿಸಿ ಬಿಟ್ಟ ದಿನ ಪ್ರಪಂಚದ ಚರಿತ್ರೆಯಲ್ಲಿ ಅತಿ ಕರಾಳವಾದ ದಿನವಾಗುತ್ತದೆ. ಈ ನಿರ್ಣಯಗಳನ್ನು ನಮ್ಮ ಮ್ಯಾಗ್ನಾ ಕಾರ್ಟಾ ಎಂದು ಕರೆಯಬಹುದು.

[ಇಂಗ್ಲೆಂಡ್‌ನ ದೊರೆ, ಕ್ರಿ.ಶ.೧೨೧೫, ರಾಜಕೀಯ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕುಗಳ ಬಗ್ಗೆ ತನ್ನ ಪ್ರಜೆಗಳಿಗೆ ಕೊಟ್ಟ ಸನ್ನದು] [ಭಾಷಾಂತರಕಾರ]

ನಿಮ್ನ ವರ್ಗಗಳ ಪ್ರತಿಯೊಬ್ಬ ಸದಸ್ಯನೂ ಅದರಲ್ಲಿ ಬರೆದಿರುವ ಉದ್ದೇಶಗಳನ್ನು ಸಾಧಿಸುವುದಕ್ಕೆ ಕಟ್ಟ ಕಡೆಯ ತ್ಯಾಗವನ್ನು ಮಾಡಲಿಕ್ಕೆ ಸಿದ್ಧನಾಗಿರಬೇಕು. ಈಗಲೂ ಸಹ ನಮ್ಮ ಹಳ್ಳಿಯಲ್ಲಿರುವ ಜನಗಳನ್ನು ಗುಲಾಮರುಗಳಿಗಿಂತ ಕೀಳಾಗಿ ಕಾಣಲಾಗುತ್ತಿದೆ. ಆದರೆ ನಮ್ಮ ಭವಿಷ್ಯವನ್ನು ಸವರ್ಣ ಹಿಂದೂಗಳ ಕೈಗಳಲ್ಲಿಟ್ಟು ಬಿಟ್ಟರೆ, ನಮ್ಮ ಗ್ರಹಚಾರ ಏನಾಗುತ್ತದೆಂಬುದನ್ನು ಚಿತ್ರೀಕರಿಸಿ ಊಹಿಸಿಕೊಳ್ಳಬಹುದು. ಆದುದರಿಂದ ನಮ್ಮ ಸಮುದಾಯದ ಪ್ರತಿಯೊಬ್ಬನ ಕರ್ತವ್ಯವೆಂದರೆ ಈ ನಿರ್ಣಯಗಳನ್ನು ಬೆಂಬಲಿಸುವುದೇ ಆಗಿದೆ. ಈ ಕೆಲವು ಮಾತುಗಳಿಂದ ನಿರ್ಣಯಗಳನ್ನು ನಿಮ್ಮ ಒಪ್ಪಿಗೆಗಾಗಿ ಬಲವಾಗಿ ಶಿಫಾರಸು ಮಾಡುತ್ತೇನೆ. ರಾವ್ ಬಹಾದೂರ್ ಎನ್. ಶಿವರಾಜ್ ಅವರು ಮಿ. ರಾಯ್ ಸಾಹೇಬ್ ಶಾಮಲಾಲ್ (ಅಲಹಾಬಾದ್‌ನ) ಅವರನ್ನು ನಿರ್ಣಯವನ್ನು ಅನುಮೋದಿಸುವಂತೆ ಹೇಳಿದರು.

ರಾಯ್ ಸಾಹೇಬ್ ಶಾಮಲಾಲ್ ಹೇಳಿದ್ದು,

ಮಾನ್ಯ ಅಧ್ಯಕ್ಷರೇ, ಮಹಿಳೆಯರೇ ಮತ್ತು ಮಹನೀಯರೇ,

ನನ್ನ ಸ್ನೇಹಿತರಾದ ನಾಸಿಕ್‌ನ ಮಿ. ಬಿ.ಕೆ.ಗಾಯಕ್‌ವಾಡ್ ಅವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಲು ನನಗೆ ಅತೀವ ಸಂತೋಷವಾಗುತ್ತದೆ. ಸುಮಾರು ಮೂರು ದಶಕಗಳ ಪರ್ಯಂತ ನಿಮ್ನ ವರ್ಗಗಳವರಿಗೆ ನಾನೊಬ್ಬ ಸಾಮಾಜಿಕ ಕಾರ್ಯಕರ್ತನಾಗಿದ್ದೇನೆ. ನಮ್ಮ ಅಂತಿಮಗುರಿ ಮತ್ತು ಉದ್ದೇಶಗಳ ಬಗ್ಗೆ ನಮ್ಮಲ್ಲಿ ಒಂದು ಅಧಿಕೃತ ಕಾರ್ಯಕ್ರಮ ಇಲ್ಲದಿರುವುದು ನಮ್ಮೆಲ್ಲರ ಅತ್ಯಂತ ಹೆಚ್ಚಾದ ಹಿನ್ನಡೆಯಾಗಿದೆ. ಈಗ ತಾನೆ ಮಂಡಿಸಿದ ಈ ನಿರ್ಣಯಗಳಿಂದ ಈ ಹಿನ್ನಡೆಯನ್ನು ತೆಗೆದು ಹಾಕಲಾಗುವುದು. ಕ್ರಿಪ್ಸ್ ಪ್ರಸ್ತಾವನೆಗಳನ್ನು ದೆಹಲಿಯಲ್ಲಿ ಬಹಿರಂಗಪಡಿಸಿದಾಗ, ಡಾ. ಅಂಬೇಡ್ಕರ್ ಅವರು ಕೂಡಲೇ ಭಾರತದ ಎಲ್ಲೆಡೆಯಿಂದ ದಲಿತ ಮುಖಂಡರುಗಳನ್ನು ದೆಹಲಿಗೆ ಬರುವಂತೆ ಆಹ್ವಾನಿಸಿದರು. ನಾವೆಲ್ಲಾ ಅಲ್ಲಿ ಸೇರಿದ ಮೇಲೆ ಏಕಪಕ್ಷೀಯವಾಗಿದ್ದ ಆ ಪ್ರಸ್ತಾವನೆಗಳನ್ನು ತಿರಸ್ಕರಿಸಬೇಕೆಂದು ನಾವೆಲ್ಲಾ ಸರ್ವಾನುಮತದಿಂದ ತೀರ್ಮಾನಿಸಿದೆವು. ಆ ಪ್ರಸ್ತಾವನೆಗಳ ಉದ್ದೇಶ ಎಲ್ಲಾ ನಿಮ್ನ ವರ್ಗಗಳವರಿಗೆ ಹಾನಿಯುಂಟು ಮಾಡಬೇಕೆಂಬುದೇ ಆಗಿತ್ತು. ನಮ್ಮ ಹಿನ್ನಡೆಗಳೇನು, ನಾವು ಯಾವ ದುರ್ಬಲತೆಗಳಿಂದ ಬಳಲುತ್ತಿದ್ದೇವೆಂದು ಹೇಳುತ್ತಾ ಒಂದು ಉದ್ದನೆಯ ಭಾಷಣವನ್ನು ನಿಮ್ಮ ಮೇಲೆ ಹೇರುವುದು ಅನಾವಶ್ಯಕ. ನಮ್ಮಲ್ಲಿ ಪ್ರತಿಯೊಬ್ಬರೂ ಇದರಿಂದ ನರಳುತ್ತಿದ್ದೇವೆ; ಅದನ್ನು ಇಲ್ಲಿ ಪ್ರಸ್ತಾಪಿಸುವುದು ಹೇಳಿದ್ದನ್ನೇ ಹೇಳಿದಂತಾಗುತ್ತದೆ. ಈ ನಿರ್ಣಯ ಈಗಿನ ಪೀಳಿಗೆಗೆ ಮತ್ತು ಮುಂಬರುವ ಪೀಳಿಗೆಗಳಿಗೆಲ್ಲಾ ಒಳಿತಾಗಿ ಪರಿಣಮಿಸುತ್ತದೆ. ಆದ್ದರಿಂದ ಇದು ಸರ್ವಾನುಮತದಿಂದ ಒಪ್ಪಿಕೊಳ್ಳಬಹುದಾಗಿದೆ. ನಾನು ಬಂದಿರುವ ಪ್ರಾಂತ್ಯದ ಪರವಾಗಿ ಈ ಸಮ್ಮೇಳನಕ್ಕೆ ನಾನು ಭರವಸೆ ಕೊಡುವುದೇನೆಂದರೆ ಈ ಆದೇಶವನ್ನು ನಿರ್ವಹಿಸುವಲ್ಲಿ ನಿಮಗೆ ನಮ್ಮ ಹೃದಯ ಪೂರ್ವಕ ಬೆಂಬಲವನ್ನು ಕೊಡುತ್ತೇವೆ. ಈ ಕೆಲವು ಮಾತುಗಳನ್ನು ಹೇಳಿ, ಈ ನಿರ್ಣಯವನ್ನು ಅನುಮೋದಿಸುತ್ತಾ, ಇದನ್ನು ನೀವು ಒಪ್ಪಿಕೊಳ್ಳಬಹುದೆಂದು ಶಿಫಾರಸು ಮಾಡುತ್ತೇನೆ. ಈ ಕೆಳಕಂಡ

ಡೆಲಿಗೇಟುಗಳು ನಿರ್ಣಯವನ್ನು ಬೆಂಬಲಿಸಿದರು.

(೧) ಮಿ. ಗೋಪಾಲ್ ಸಿಂಗ್, ಎಮ್.ಬಿ.ಇ., ಎನ್.ಎಲ್.ಎ., (ಪಂಜಾಬ್)

(೨) ಮಿ. ಎನ್.ಎನ್.ದಾಸ್, ಎಮ್.ಎ.ಬಿ.ಎಲ್. (ಕಲ್ಕತ್ತಾ)

(೩) ಮಿ. ಆರ್.ಆರ್.ಭೋಲೆ, ಬಿ.ಎ.ಎಲ್.ಎಲ್.ಬಿ., ಎ.ಎಲ್.ಎ. ಪೂನಾ (ಬೊಂಬಾಯಿ)

(೪) ಮಿ. ಎ.ಡಿ.ರಾಯ್, ಬಿ.ಎ.ಬಿ.ಎಲ್.ಎಮ್.ಎಲ್.ಸಿ. (ಜೆಸ್ಸೂರ್, ಬಂಗಾಳ)

(೫) ಮಿ. ಪಿ.ಎಮ್.ಪಟಾಣಿ (ಅಹ್ಮದಾಬಾದ್, ಗುಜರಾತ್)

(೬) ಮಿ. ಮಂಗಿಲಾಲ್ (ರಾಜ್ ಪುಟಾಣ)

(೭) ಮಿ. ಹಚ್.ಎಲ್.ಕೊಸಾರೆ, ಬಿ.ಎ. (ನಾಗಪುರ)

(೮) ಮಿ. ಬಿ.ಹೆಚ್.ವರಾಳೆ, ಎಮ್.ಎಲ್.ಎ. (ಕರ್ನಾಟಕ, ಬೊಂಬಾಯಿ)

ನಿರ್ಣಯಗಳನ್ನು ಪ್ರಸ್ತಾವಿಸಿ, ವಿಧ್ಯುಕ್ತವಾಗಿ ಅನುಮೋದಿಸಿ ಮತ್ತು ಬೆಂಬಲಿಸಿದ ಮೇಲೆ ಅಧ್ಯಕ್ಷರು ಅದನ್ನು ವೋಟಿಗೆ ಹಾಕಿದರು. ನಿರ್ಣಯಗಳನ್ನು ವಿರೋಧಿಸಿದವರು ಯಾರೂ ಇಲ್ಲದ್ದರಿಂದ ಅವುಗಳನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಲಾಗಿದೆ ಎಂದು ಅವರು ಘೋಷಿಸಿದರು.

ಆನಂತರ, ಪ್ರೆಸಿಡೆಂಟರಾದ ರಾವ್ ಬಹಾದೂರ್ ಎನ್. ಶಿವರಾಜ್ ಅವರು ಮಿ. ಡಿ.ಜಿ. ಜಾಧವ್ ಬಿ.ಎ.ಎಲ್.ಎಲ್.ಬಿ., ಎಂ.ಎಲ್.ಎ. (ಜಲಗಾಂವ್) (ಬೊಂಬಾಯಿ) ಅವರನ್ನು ನಿರ್ಣಯದ ೨ನೇ ಭಾಗವನ್ನು ಮಂಡನೆ ಮಾಡಲು ಹೇಳಿದರು.

**ನಿರ್ಣಯ–ಮಿ. ಡಿ.ಜಿ.ಜಾಧವ್:** ಅವರು ನಿರ್ಣಯವನ್ನು ಮಂಡನೆ ಮಾಡುತ್ತಾ ಹೇಳಿದರು:

ಅಧ್ಯಕ್ಷರೇ ನನ್ನ ಸಹೋದರ ಡೆಲಿಗೇಟುಗಳೇ, ಮಹಿಳೆಯರೆ ಮತ್ತು ಮಹನೀಯರೆ, ನಿಮ್ಮ ಒಪ್ಪಿಗೆಗಾಗಿ ಮಂಡಿಸಲಿರುವ ನಿರ್ಣಯ ಕೆಳಗಿನಂತೆ ಇದೆ:

**ನಿರ್ಣಯ–೫** – ಅಖಿಲ ಭಾರತ ಅನುಸೂಚಿತ ಜಾತಿಗಳವರ ಫೆಡರೇಷನ್‌ನ ಸ್ಥಾಪನೆ:

ಅನುಸೂಚಿತ ಜಾತಿಗಳ ರಾಜಕೀಯ ಚಳುವಳಿಯನ್ನು ಮುನ್ನಡೆಸಿಕೊಂಡು ಹೋಗುವುದಕ್ಕಾಗಿ ಒಂದು ಕೇಂದ್ರೀಯ ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಲು ಈಗ ಸಮಯ ಒದಗಿಬಂದಿದೆ. ಆದುದರಿಂದ ಈ ಮೂಲಕ ಈ ಸಮ್ಮೇಳನ ಭಾರತದ ಅನುಸೂಚಿತ ಜಾತಿಗಳ ಫೆಡರೇಷನ್ ಅನ್ನು ಭಾರತದ ಅನುಸೂಚಿತ ಜಾತಿಗಳವರ ಕೇಂದ್ರೀಯ ರಾಜಕೀಯ ಸಂಸ್ಥೆಯಂತೆ ಸ್ಥಾಪಿಸಲು, ನಿರ್ಣಯ ಮಾಡುತ್ತದೆ; ಮತ್ತು ಈ ಮೂಲಕ ಎಲ್ಲ ಸ್ಥಳೀಯ ಅನುಸೂಚಿತ ಜಾತಿಗಳ ಸಂಸ್ಥೆಗಳನ್ನು ಈ ಕೇಂದ್ರೀಯ ಸಂಸ್ಥೆಯಲ್ಲಿ ವಿಲೀನಗೊಳಿಸಿ ಅದರ ಮೂಲಕವೇ ಕೆಲಸ ಮಾಡಬೇಕೆಂದು ಮನವಿ ಮಾಡುತ್ತದೆ. ಈ ಉದ್ದೇಶವನ್ನು ಕಾರ್ಯಗತಗೊಳಿಸುವುದಕ್ಕೋಸ್ಕರ, ಈ ಸಮ್ಮೇಳನದ ಅಧ್ಯಕ್ಷರಿಗೆ ಒಂದು ಸಮಿತಿಯನ್ನು ನೇಮಕ ಮಾಡುವಂತೆಯೂ, ಅದಕ್ಕೆ ಅವರೇ ಚೇರ್‌ಮನ್ ಆಗಿದ್ದು, ಅಖಿಲ ಭಾರತ ಅನುಸೂಚಿತ ಜಾತಿಗಳವರ ಫೆಡರೇಷನ್‌ಗೆ ಒಂದು ಅಂಗರಚನೆಯನ್ನು ಮಾಡಬೇಕೆಂದು, ಈ ಮೂಲಕ ಅವರಿಗೆ ಅಧಿಕಾರ ಕೊಡುತ್ತದೆ. ಸಮಿತಿ ತನ್ನ ವರದಿಯನ್ನು ಒಂದು ತಾತ್ಕಾಲಿಕ ಪರಿಷತ್ತಿಗೆ ಸಲ್ಲಿಸಬೇಕು.

ಪರಿಷತ್ತಿನಲ್ಲಿ ಕೆಳಕಂಡವರು ಇದ್ದು ಅವರು ಒಪ್ಪಿಗೆ ಕೊಟ್ಟ ಮೇಲೆ ಅಂಗರಚನೆ ಜಾರಿಗೆ ಬರುತ್ತದೆ.

ಬಂಗಾಳ : ಮಿ. ಆರ್.ಎಲ್.ಬಿಸ್ವಾಸ್

ಮಿ. ಎ.ಡಿ.ರಾಯ್

ಮಿ. ಆರ್.ಎಸ್.ಧೂಸಿಯ

| | |
|---|---|
| | ಮಿ. ಬಿ.ಸಿ.ಮಂಡಲ್ |
| ಬೊಂಬಾಯಿ: | ಮಿ. ಡಿ.ಜಿ.ಜಾಧವ್ |
| | ಮಿ. ಪಿ.ಎನ್.ರಾಜಭೋಜ್ |
| | ಮಿ. ಬಿ.ಕೆ.ಗಾಯಕ್‌ವಾಡ್ |
| ಪಂಜಾಬ್ : | ಮಿ. ಗೋಪಾಲ್ ಸಿಂಗ್ |
| | ಮಿ. ಸೇಥ್ ಕಿಸನ್ ದಾಸ್ |
| ಸಿ.ಪಿ. ಮತ್ತು ಬಿರಾರ್: | ಮಿ. ಆರ್.ವಿ.ಕವಾಡೆ |
| | ಮಿ. ಕೆ.ಹೆಚ್.ಶೆಂಡ್ರೆ |
| | ಮಿ. ಹೆಚ್.ಎಲ್.ಕೊಸಾರೆ |
| ಸಂಯುಕ್ತ ಪ್ರಾಂತಗಳು: | ರಾಯ್ ಸಾ ಹೆಚ್.ಶಾಮ್‌ಲಾಲ್ |
| | ರಾಯ್ ಸಾಹೇಬ್ ರಾಮ್ ಸಹಾಯ್ |
| | ಡಾ. ನಂದಲಾಲ್ ಜೈಸ್‌ವಾಲ್ |
| | ಮಿ. ಬದರಿ ಪ್ರಸಾದ್ ವಾಲ್ಮೀಕಿ |
| | ಮಿ. ಬಾಬು ತಿಲಕ್ ಚಂದ್ |

ಮಹಿಳೆಯರೇ ಮತ್ತು ಮಹನಿಯರೇ,

ನಿಮ್ಮ ಒಪ್ಪಿಗೆಗಾಗಿ ಶಿಫಾರಸು ಮಾಡುತ್ತಿರುವ ಈ ನಿರ್ಣಯ ನಿಮೆಲ್ಲರಿಗೂ ಮೆಚ್ಚುಗೆ ಆಗುತ್ತದೆಂದೂ, ನಿಮ್ಮ ಸರ್ವಾನುಮತದ ಬೆಂಬಲ ಅದಕ್ಕೆ ದೊರಕುತ್ತದೆಂದು ನಿಶ್ಚಯವಾಗಿ ನಿರೀಕ್ಷಿಸಬಹುದು. ಒಗ್ಗಟ್ಟೇ ಬಲ ಎಂಬುದಾಗಿ ಯಾರಿಗೂ ಹೇಳಬೇಕಾಗಿಲ್ಲ. ಈ ದಿನಗಳು ನಾವೆಲ್ಲಾ ಒಟ್ಟಾರೆ ಒತ್ತಡ ಹಾಕುವ ದಿನಗಳಾಗಿದ್ದು, ಒಂದೇ ಸಂಸ್ಥೆಯ ಮೂಲಕ ನಮ್ಮೆಲ್ಲಾ ಬಲವನ್ನು ಪ್ರಯೋಗ ಮಾಡದಿದ್ದರೆ, ಇತರ ಇನ್ನೂ ದೊಡ್ಡದಾದ ಸಮುದಾಯಗಳ ಆಕ್ರಮಣಗಳಿಂದ ನಾವು ಉಳಿಯುವುದಕ್ಕಾಗುವುದಿಲ್ಲ. ನಮಗೆಲ್ಲಾ ಗೊತ್ತಿರುವ ಹಾಗೆ, ಸವರ್ಣೀಯ ಹಿಂದೂಗಳು, ಕಾಂಗ್ರೆಸ್‌ನ ಆಶ್ರಯದಲ್ಲಿ ಬಹಳ ಬಲಯುತವಾಗಿ ಸಂಘಟಿತರಾಗಿದ್ದಾರೆ. ಹಾಗೆಯೇ ಮುಸ್ಲಿಮರು ಮುಸ್ಲಿಮ್ ಲೀಗಿನ ಕೆಳಗೆ ಸಂಘಟಿತರಾಗಿದ್ದಾರೆ. ಈ ಸಂಗತಿಗಳು ಗೊತ್ತಿದ್ದರೂ ಸಹ, ನಾವು ಒಂದು ಫೆಡರೇಷನ್ನಿನ ಕೆಳಗೆ (ಒಕ್ಕೂಟದ ಕೆಳಗೆ) ಒಂದಾಗದಿದ್ದರೆ, ನಮ್ಮ ಎದುರಾಳಿಗಳು ನಮ್ಮ ಮಧ್ಯೆ ಇರುವ ಅನೈಕ್ಯತೆಯ ಉಪಯೋಗವನ್ನು ಪಡೆದುಕೊಂಡು ನಮ್ಮಲ್ಲಿನ ಒಂದು ಪಂಗಡವನ್ನು ಇನ್ನೊಂದು ಪಂಗಡದ ಮೇಲೆ ಎತ್ತಿಕಟ್ಟುತ್ತಾರೆ. ಹೀಗೆ ನಮ್ಮ ನಮ್ಮಲ್ಲೇ ಒಳಜಗಳದಲ್ಲಿ ನಾವು ತೊಡಗಿಕೊಂಡಿರುವಾಗ ನಿಮ್ನ ವರ್ಗಗಳವರ ಒಂದು ಪ್ರತ್ಯೇಕ ಅಸ್ತಿತ್ವ ಇಲ್ಲವೆಂದು ಪ್ರಪಂಚಕ್ಕೆ ಹೇಳಿಬಿಡುತ್ತಾರೆ. ನಮ್ಮ ವಿರೋಧಿಗಳೊಡನೆ ಸೆಣಸಲು ನಮಗೆ ಯಾವ ಅವಕಾಶವೂ ಸಿಗುವುದಿಲ್ಲ. ಹೀಗೆ ನಮ್ಮಲ್ಲಿನ ಅನೈಕ್ಯಮತ್ಯ ನಮ್ಮ ಅಧಃಪತನಕ್ಕೆ ಕಾರಣವಾಗುತ್ತದೆ. ನಮ್ಮನ್ನು ಸವರ್ಣ ಹಿಂದೂಗಳಿಗೆ ಒಪ್ಪಿಸಿ ಕೊಟ್ಟುಬಿಟ್ಟರೆ, ಯಾವ ದುರ್ಗತಿ ನಮಗಾಗಿ ಕಾಯುತ್ತಿವೆ ಎಂಬುದನ್ನು ಊಹಿಸಿಕೊಳ್ಳಬಲ್ಲೆವು.

ಈ ನಿರ್ಣಯದಂತೆ ಎಲ್ಲಾ ಪ್ರಾಂತೀಯ ಸಂಸ್ಥೆಗಳೂ ಒಂದು ಕ್ರೇಂದ್ರೀಯ ಸಂಸ್ಥೆಯಲ್ಲಿ ವಿಲೀನ ಹೊಂದಿ ಕೆಲಸ ಮಾಡಬೇಕು. ಯುದ್ಧ ಕಾಲದಲ್ಲಿ ರಾಜಕೀಯ ಪಕ್ಷಗಳು ತಮ್ಮ ಅಸ್ತಿತ್ವವನ್ನು ಮರೆತು, ಶತೃವಿನೊಂದಿಗೆ ಹೋರಾಡಲು ಎಲ್ಲರೂ ಒಟ್ಟಾಗುತ್ತವೆ; ಗುಲಾಮರಂತೆ ಬದುಕಿರುವುದಕ್ಕಿಂತ ಸಾವನ್ನೇ ನಮ್ಮಲ್ಲಿ ಪ್ರತಿಯೊಬ್ಬರೂ ಬಯಸುತ್ತಾರೆಂದು ನನಗೆ ಖಂಡಿತವಾಗಿ ಗೊತ್ತು. ಆದ್ದರಿಂದ ಒಂದು ಹಳೆಯ

ನಾಣ್ಣುಡಿಯಂತೆ, ಒಂದು ಪೌಂಡು ಚಿಕಿತ್ಸೆಗಿಂತ ಒಂದು ಔನ್ಸ್ ನಿರೋಧವೇ ಒಳ್ಳೆಯದು ಎಂಬುದನ್ನು ಅನುಸರಿಸೋಣ. ತೀರಾ ತಡವಾಗುವುದಕ್ಕೆ ಮುಂಚೆ, ಈಗಲೇ ಒಗ್ಗಟ್ಟಾಗಿ ನಿಮ್ಮನ್ನೇ ದುರುಗುಟ್ಟಿಕೊಂಡು ನೋಡುತ್ತಿರುವ ಕಾಯಿಲೆಗಳನ್ನು (ಕೆಡಕುಗಳನ್ನು) ತಡೆಗಟ್ಟಿ. ಕಾಯಿಲೆಗಳು ನಿಮ್ಮನ್ನು ಆವರಿಸಿಕೊಂಡ ಮೇಲೆ ಚಿಕಿತ್ಸೆಯ ಕಾಟ ಮೀರಿಹೋಗಿರುತ್ತದೆ. ನಮ್ಮಗಳಲ್ಲಿ ಕೆಲವರು, ಒಂದೇ ನಾಯಕತ್ವದ ಕೆಳಗೆ ಬಂದರೆ ತಮ್ಮ ಸ್ವಪ್ರತಿಷ್ಠೆಗೆ ಕುಂದು ಬರಬಹುದೆಂದು ಹೆದರಿರಬಹುದು. ಆದರೆ ಯೋಚನೆ ಮಾಡಿ; ಕೆಲವೇ ಕೆಲವರ ಸ್ವಪ್ರತಿಷ್ಠೆಯ ನಷ್ಟ ಹೆಚ್ಚೋ, ಲಕ್ಷಾಂತರ ಮಂದಿಗೆ ಆಗುವ ನಷ್ಟ ಹೆಚ್ಚೋ ಎಂದು. ನಿರ್ಣಯವನ್ನು ಸರ್ವಾನುಮತದಿಂದ ಒಪ್ಪಿಕೊಳ್ಳುವುದು ಮಾತ್ರವಲ್ಲ, ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಒಂದೇ ಬಾವುಟದ ಕೆಳಗೆ ಕ್ಷಿಪ್ರವಾಗಿ ತನ್ನಿ ಎಂದು ನಿಮ್ಮಲ್ಲಿ ಮನವಿ ಮಾಡುತ್ತೇನೆ. ನಮ್ಮಲ್ಲಿ ಇಲ್ಲದೇ ಇರುವ ಯಾವುದೇ ಮುಖ್ಯವಾದ ಸಂಸ್ಥೆಗಳು ಇವೆಯೆಂದು ನಾನು ಹೇಳುತ್ತಿಲ್ಲ. ನಾನು ಹೇಳಬೇಕೆಂದಿರುವುದು ಏನೆಂದರೆ, ಮುಖ್ಯವಾಗಿಲ್ಲದೇ ಇದ್ದರೂ ಸಹ ಕೆಲವೇ ಸಂಸ್ಥೆಗಳು ಕೂಡ ನಮ್ಮ ಕೇಂದ್ರ ಸಂಸ್ಥೆಯಿಂದ ದೂರ ಇರಬಾರದು. ಈ ಕೆಲವು ಮಾತುಗಳಿಂದ, ಈ ನಿರ್ಣಯವನ್ನು ನಿಮ್ಮ ಒಪ್ಪಿಗೆಗಾಗಿ ಶಿಫಾರಸು ಮಾಡುತ್ತೇನೆ.

ರಾವ್ ಬಹಾದೂರ್ ಎನ್.ಶಿವರಾಜ್ ರವರು ರಾಯ್ ಸಾಹೇಬ್ ಎನ್.ಸಿ. ಧೂಸ್ಯ ಅವರಿಗೆ ನಿರ್ಣಯವನ್ನು ಅನುಮೋದನೆ ಮಾಡುವಂತೆ ಹೇಳಿದರು. ಅದರಂತೆ ರಾಯ್ ಸಾಹೇಬ್ ಎನ್.ಸಿ.ಧೂಸ್ಯ ನಿರ್ಣಯವನ್ನು ಅನುಮೋದಿಸಿದರು. ನಿರ್ಣಯವನ್ನು ಬೆಂಬಲಿಸಿದವರು.

ಮಿ. ಪಿ.ಎನ್.ರಾಜಭೋಜ್
ಮಿ. ಮಂಗಿಲಾಲ್ (ರಾಜ ಪುಟಾಣ)
ಮಿ. ಬಿ.ಸಿ.ಮಂಡಲ್, ಬಿ.ಎ. (ಕಲ್ಕತ್ತಾ)
ಮಿ. ಬದರೀ ಪ್ರಸಾದ್ ವಾಲ್ಮೀಕಿ ಅಲಹಾಬಾದ್ (ಯು.ಪಿ)
ಮಿ. ಪಿ.ಎಲ್.ಕೆ.ತಾಲಿಬ್, ಎಮ್.ಎ.ಎಲ್.ಎಲ್.ಬಿ. (ಲಕ್ನೋ, ಯು.ಪಿ)
ಮಿ. ಪಿ.ಜೆ. ರೋಹಮ್, ಎಮ್.ಎಲ್.ಎ. ಅಹ್ಮದ್‌ನಗರ (ಬೊಂಬಾಯಿ)

## ರಾವ್ ಬಹಾದೂರ್ ಎನ್.ಶಿವರಾಜ್ ಹೇಳಿದ್ದು

ನಿರ್ಣಯ ನಂ.–೫ನ್ನು ಪ್ರಸ್ತಾವಿಸಿ, ವಿದ್ಯುಕ್ತವಾಗಿ ಅನುಮೋದಿಸಿ ಮತ್ತು ಬೆಂಬಲಿಸಿರುವುದರಿಂದ ಅದನ್ನು ನಾನೀಗ ವೋಟಿಗೆ ಹಾಕುತ್ತಿದ್ದೇನೆ. ನಿರ್ಣಯದ ಪರವಾಗಿರುವುವರೆಲ್ಲರೂ ತಮ್ಮ ಕೈಗಳನ್ನು ಎತ್ತುವುದರ ಮೂಲಕ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾರೆ. (ಎಲ್ಲರೂ ತಮ್ಮ ಕೈಗಳನ್ನು ಎತ್ತಿದ ಹಾಗೆ ಕಂಡು ಬಂದಿತು) ನಿರ್ಣಯವನ್ನು ವಿರೋಧಿಸುವವರೆಲ್ಲರೂ ತಮ್ಮ ವಿರೋಧವನ್ನು ಕೈಗಳನ್ನು ಎತ್ತುವುದರ ಮೂಲಕ ಸೂಚಿಸುತ್ತಾರೆ ಯಾರೂ ನಿರ್ಣಯದ ವಿರುದ್ಧವಾಗಿ ಇಲ್ಲ. ಆದುದರಿಂದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆಯೆಂದು ಘೋಷಿಸುತ್ತೇನೆ.

## ಡಾ. ಅಂಬೇಡ್ಕರ್ ಅವರ ಮುಕ್ತಾಯ ಭಾಷಣ

ರಾವ್ ಬಹಾದೂರ್ ಎನ್.ಶಿವರಾಜ್ ಅವರು, ಡಾ. ಅಂಬೇಡ್ಕರ್ ಅವರನ್ನು ಅವರು ಕೊಟ್ಟ ಆಶ್ವಾಸನೆಯ ಮೇರೆಗೆ ಮಾತನಾಡುವಂತೆ ಕೇಳಿಕೊಂಡರು:

ಈ ಸಾರಿ ಡಾ. ಅಂಬೇಡ್ಕರ್ ಅವರು ಮರಾಠಿಯಲ್ಲಿ ಮಾತನಾಡಿದರು

ಸ್ನೇಹಿತರೆ, ಕಳೆದ ಹತ್ತು ವರ್ಷಗಳ ಅವಧಿಯಲ್ಲಿ, ರಾಜಕಿಯ ಚಳುವಳಿ ಬಹಳಷ್ಟು ಮಾರ್ಗವನ್ನು ಕ್ರಮಿಸಿದೆ. ಆದರೂ ಸಹ ನೀವು ಈ ದಿನ ಮಂಡನೆ ಮಾಡಿ ಅನುಮೋದಿಸಿದ ನಿರ್ಣಯ, ಅಸ್ಪೃಶ್ಯರ ಮಟ್ಟಿಗೆ ಹೇಳುವುದಾದರೆ ಒಂದು ಹೊಸ ಪರ್ವದ ಪ್ರಾರಂಭದ ಕುರುಹು ಆಗಿದೆ ಎಂದು ನಿಖರವಾಗಿ ಹೇಳಬಹುದಾಗಿದೆ. ನಿಮಗೆ ಗೊತ್ತಿರುವ ಹಾಗೆ ನಾನು ನಾಳೆಯಿಂದ ನನ್ನ ಅಧಿಕಾರವನ್ನು ವಹಿಸಿಕೊಳ್ಳುತ್ತಿದ್ದೇನೆ. ಆದುದರಿಂದ ಕಳೆದ ೨೦ ವರ್ಷಗಳಲ್ಲಿ ನನ್ನ ಮುಂದಾಳತ್ವದಲ್ಲಿ ನಡೆದ ವಿದ್ಯಮಾನಗಳ ಬಗ್ಗೆ ನಿಮಗೆ ಹೇಳಬೇಕಾಗಿರುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. (ಕಳೆದ ೨೦ ವರ್ಷಗಳಲ್ಲಿ ನಿಮ್ಮ ವರ್ಗಗಳವರು ಸಾಧಿಸಿದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಬಗ್ಗೆ ಅವರು ಮರಾಠಿಯಲ್ಲಿ ಪುನರುಚ್ಚರಿಸಿದರು)

ಮುಸ್ಲಿಮರ ಮತ್ತು ಅಸ್ಪೃಶ್ಯರ ಮಧ್ಯೆ, ಎರಡೂ ಸಮುದಾಯಗಳನ್ನು ಅಲ್ಪಸಂಖ್ಯಾತರೆಂದು ಗುರುತಿಸಲಾಗಿದ್ದರೂ ಸಹ, ಅವರ ಪರಿಸ್ಥಿತಿಗಳಲ್ಲಿ ಸಾರಭೂತವಾದ ವ್ಯತ್ಯಾಸ ಇದೆ. ನಮ್ಮ ಸಮುದಾಯಕ್ಕೆ ಹೋಲಿಸಿದರೆ, ಮುಸ್ಲಿಮ್ ಸಮುದಾಯ ಬಹಳ ಶ್ರೀಮಂತವಾಗಿದೆ. ಬ್ರಿಟಿಷರು ಬರುವವರೆಗೂ ಅವರು ಈ ದೇಶವನ್ನು ಆಳುತ್ತಿದ್ದರು. ಹೀಗಾಗಿ ಅವರಿಗೆ ಉತ್ತಮವಾದ ಸ್ಥಾನಮಾನವಿರುವುದಲ್ಲದೆ, ಅವರ ಮುನ್ನಡೆ ನಮ್ಮದಕ್ಕಿಂತ ಬಹಳ ಮುಂದೆ ಇದೆ. ಶತಮಾನಗಳವರೆಗೆ ನಾವು ತುಳಿಯಲ್ಪಟ್ಟಿದ್ದೆವು. ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಬಡತನದ್ದಾಗಿತ್ತು. ಜನಸಂಖ್ಯೆ ಆಧಾರದ ಮೇಲೆ ಮಾತ್ರ ನಾವು ಮುಸ್ಲಿಮರೊಂದಿಗೆ ಹೋಲಿಸಿಕೊಳ್ಳಲಾಗುವುದಿಲ್ಲ. ನಮ್ಮ ಪ್ರಯತ್ನಗಳ ಮೇಲೆಯೇ ಪೂರಾ ಭರವಸೆಯನ್ನಿಟ್ಟುಕೊಂಡು ನಾವು ಪ್ರಾರಂಭದಿಂದ ಮೇಲಕ್ಕೆ ಬರಬೇಕಾಯಿತು. ನಮ್ಮ ಸಮುದಾಯವನ್ನು ನಾವು ಮೇಲಕ್ಕೆ ಎತ್ತಬೇಕು. ನಾನು ಈಗ ನೇಮಕವಾಗಿರುವುದರಿಂದ ಈ ಹೊಣೆಗಾರಿಕೆಯನ್ನು ಇತರರು ಹೊರಬೇಕಾಗಿದೆ. ನನಗೇನೂ ಅಧಿಕಾರದ ವ್ಯಾಮೋಹವಿಲ್ಲ. ನಾನು ಇದ್ದ ಹಾಗೆಯೇ ಸರಿಯಾಗಿ ಇದ್ದೇನೆ. ಗೌರವಾನ್ವಿತ ಡಾ. ಅಂಬೇಡ್ಕರ್ ಮತ್ತು ಸರಳವಾದ ಡಾ. ಅಂಬೇಡ್ಕರ್ ಮಧ್ಯೆ ಏನಾದರೂ ವ್ಯತ್ಯಾಸವಾಗಿದೆಯೆಂದು ನಾನು ಪರಿಗಣಿಸುವುದಿಲ್ಲ. ನನ್ನ ನೇಮಕದ ಬಗ್ಗೆ ಅತಿ ಮುಖ್ಯವಾದುದು ಎಂದು ನಾನು ಪರಿಗಣಿಸುವುದೇನೆಂದರೆ, ನಿಮ್ಮ ವರ್ಗಗಳವರ ಪ್ರತಿನಿಧಿಯಾಗಿ ಒಂದು ಸ್ಥಾನ ಇರಬೇಕೆಂಬುದು ಸ್ಥಾಪಿತವಾಯಿತು. ಇದು ಬ್ರಾಹ್ಮಣತ್ವಕ್ಕೆ ಒಂದು ಮಾರಕವಾದ ಹೊಡೆತ. ನನ್ನ ನೇಮಕದಲ್ಲಿನ ಪ್ರಾಮುಖ್ಯತೆ ಇದೇನೇ. ಇಂಥ ಒಂದು ಸಮಾವೇಶ ನಡೆದದ್ದು ಬ್ರಾಹ್ಮಣತ್ವದ ಹಿತಾಸಕ್ತಿಗೇನೂ ಅಲ್ಲವೇ ಅಲ್ಲ. ಇದನ್ನು ನಾನು ಅಸ್ಪೃಶ್ಯರ ಒಂದು ಮಹತ್ತಾದ ವಿಜಯವೆಂದು ಪರಿಗಣಿಸುತ್ತೇನೆ.

ನನ್ನನ್ನು ಕಂಡರೆ ಆಗದೇ ಇದ್ದವರು ಬಹಳ ಮಂದಿ ಇದ್ದಾರೆ. ಸ್ವಭಾವತಃ ನಾನು ಒಂಟಿಯಾಗಿರುವುದಕ್ಕೆ ಬಯಸುತ್ತೇನೆ; ಓದುವುದರಲ್ಲಿ ಕಾಲವನ್ನು ಕಳೆಯುತ್ತೇನೆ. ಈ ನನ್ನ ಸ್ವಭಾವವನ್ನು ಅನೇಕರು ನಾನು ಜನಗಳೊಂದಿಗೆ ಸರಿಯಾಗಿ ನಡೆದುಕೊಳ್ಳುವುದಿಲ್ಲವೆಂಬುದರ ಗುರುತೆಂದು ತಿಳಿದಿದ್ದಾರೆ, ಅಲ್ಲದೆ ನಾನು ಅವರಿಂದ ದೂರ ಇರಲು ಪ್ರಯತ್ನಿಸುತ್ತೇನೆಂದು ತಿಳಿದಿದ್ದಾರೆ.

ನಾನು ಯಾರನ್ನೂ ಅವಮಾನಿಸಬಯಸುವುದಿಲ್ಲವೆಂದು ಖಂಡಿತ ಹೇಳುತ್ತೇನೆ. ನನಗಿರುವ ಸಮಯ ಅತ್ಯಲ್ಪ. ನಾನು ಅನೇಕ ಕೆಲಸಗಳನ್ನು ಮಾಡಬೇಕಾಗಿದೆ. ಆದರೆ ನನಗೆ ಯಾರ ಸಹಾಯವೂ ಇಲ್ಲ.

ಅನೇಕ ಹಿಂದೂಗಳು ನನ್ನನ್ನು ತಮ್ಮ ಶತೃವೆಂದು ಅಂದುಕೊಂಡಿದ್ದಾರೆ. ನಾನೊಬ್ಬ ದಯಾಳು. ಬ್ರಾಹ್ಮಣರಲ್ಲಿಯೂ ನನಗೆ ಅನೇಕ ಸ್ನೇಹಿತರುಗಳಿದ್ದಾರೆ. ಆದರೆ ದಯಾಳುವಾದ ಮನುಷ್ಯ ಕೂಡ ಸತ್ಯವನ್ನೇ ನುಡಿಯಬೇಕಾಗಿದೆ. ನನ್ನ ಬಂಧುಗಳನ್ನು ಕೀಳಾಗಿ ನಡೆಸಿಕೊಳ್ಳುತ್ತಿರುವಾಗ, ಎಲ್ಲ ರೀತಿಯಲ್ಲು

ಅವರ ಪ್ರಗತಿಗೆ ಅಡ್ಡಿಪಡಿಸುತ್ತಿರುವಾಗ, ಅವರು ಏನೂ ಮಾಡಿಲ್ಲವೆಂದು ಅಂದುಕೊಂಡು, ಅವರೊಂದಿಗೆ ನಾನು ದಯೆಯಿಂದ ಹೇಗೆ ವರ್ತಿಸಲಿ. ನನ್ನ ಭಾವನೆಗಳನ್ನು ಅದುಮಿಟ್ಟುಕೊಂಡು ನನ್ನ ವಿರೋಧಿಗಳನ್ನು ಗೌರವದಿಂದ ನಡೆಸಿಕೊಳ್ಳಲು ಪ್ರಯತ್ನಿಸುತ್ತೇನೆ. ಆದರೆ ಅಪರಾಧ ಪ್ರಜ್ಞೆ ನನ್ನನ್ನು ಕಾಡುತ್ತದೆ; ಆದಾಗ್ಯೂ, ಯಾವತ್ತಿಗೂ ನಾನು ನನ್ನ ಎದುರಾಳಿಗಳೊಂದಿಗೆ ನಿರ್ದಯವಾಗಿ ವರ್ತಿಸಿಲ್ಲ. ಈ ದೇಶದಲ್ಲಿ ರಾಜಕೀಯವನ್ನು ಹಿಂದೂಗಳು, ಮುಸ್ಲಿಮರು ಮತ್ತು ನಿಮ್ಮ ವರ್ಗಗಳವರು ಹಂಚಿಕೊಳ್ಳಬೇಕೆಂಬುದು ನನ್ನ ಖಂಡಿತವಾದ ಅಭಿಪ್ರಾಯವಾಗಿದೆ. ಸರ್ಕಾರದಲ್ಲಿ ಸಹ ನಿಮ್ಮ ವರ್ಗಗಳವರಿಗೆ, ಕಾನೂನಿನನ್ವಯ ನಿಮ್ಮ ವರ್ಗಗಳವರಿಗೆ, ಹಿಂದೂಗಳು ಮತ್ತು ಮುಸ್ಲಿಮರೊಂದಿಗೆ ಒಂದು ಸರಿಯಾದ ಭಾಗ ಇರಲೇಬೇಕು. ಈ ಆಧಾರ ಸ್ತಂಭಗಳ ಆಸರೆ ಇದ್ದರೆ ಮಾತ್ರ ಭವಿಷ್ಯದ ಸಂವಿಧಾನ ಕೆಲಸ ಮಾಡಬಲ್ಲದು. ಇದನ್ನು ಸಾಧಿಸಬೇಕಾದರೆ ನೀವೆಲ್ಲರೂ ಒಂದೇ ಬಾವುಟದ ಕೆಳಗೆ ಸಂಘಟಿತರಾಗಬೇಕು. ನಮಗೆ ಸಂವಿಧಾನರಲ್ಲಿ ನ್ಯಾಯವಾಗಿ ಸಲ್ಲಬೇಕಾದ ಸ್ಥಾನ ಸಿಕ್ಕಿಲ್ಲದಿದ್ದರೆ, ಅದಕ್ಕೆ ಕಾರಣ ನಮ್ಮಲ್ಲಿ ಒಗ್ಗಟ್ಟಿಲ್ಲದೆ ಇರುವುದು. ನೀವೆಲ್ಲರೂ ಒಂದೇ ಸಂಸ್ಥೆಯ ಕೆಳಗೆ ಒಗ್ಗಟ್ಟಿನಿಂದ ಕೆಲಸ ಮಾಡಿದರೆ, ನಿಮಗೆ ಸಲ್ಲಬೇಕಾದ ಸ್ಥಾನವನ್ನು ನೀವು ಎಟುಕಿಸಿಕೊಳ್ಳುತ್ತೀರೆಂಬುದರಲ್ಲಿ ನನಗೆ ಸಂಶಯವಿಲ್ಲ.

ಕಾಂಗ್ರೆಸ್ ಒಂದು ದೊಡ್ಡ ಸಂಘಟನೆಯಾಗಿದ್ದು, ಅದರ ಪ್ರಭಾವ ದೇಶದ ಉದ್ದ ಅಗಲಕ್ಕೂ ಹರಡಿದೆ. ಇದು ಹೀಗೇಕೆ ಎಂದು ಕೆಲವರು ಸ್ವಾಭಾವಿಕವಾಗಿ ಕೇಳುತ್ತಾರೆ. ನಮ್ಮ ಸಂಸ್ಥೆ ಏತಕ್ಕೆ ಹರಡಿಲ್ಲ ಎನ್ನುತ್ತಾರೆ. ಕಾಂಗ್ರೆಸ್‌ನವರ ಹತ್ತಿರ ಎರಡು ಸಾಧನಗಳು ಇವೆ. ಭಾರತದ ಪತ್ರಿಕಾ ಮಾಧ್ಯಮವೆಲ್ಲಾ ಅವರ ಬಳಿ ಇದೆ. ಅದಕ್ಕೆ ಸಂಪೂರ್ಣ ಪ್ರಚಾರ ಸಿಗುತ್ತದೆ. ರಾಷ್ಟ್ರೀಯ ಹಿಂದೂ ಪತ್ರಿಕಾ ಮಾಧ್ಯಮದವರಿಂದ ನಮಗೆ ಯಾವ ಪ್ರಚಾರವೂ ಸಿಗುವುದಿಲ್ಲ. ಎರಡನೆಯದಾಗಿ ಕಾಂಗ್ರೆಸ್‌ಗೆ ವಿಪುಲವಾದ ಹಣ ಇದೆ. ಕಾಂಗ್ರೆಸ್ ಒಂದು ಕೋಟಿ ರೂಪಾಯಿಗಳಷ್ಟು ನಿಧಿ ಸಂಗ್ರಹ ಮಾಡಿದೆಯೆಂದು ನಿಮಗೆ ನೆನಪಿರಬಹುದು. ಈ ದೊಡ್ಡದಾದ ನಿಧಿಯೇ ಅದರ ಜಯದ ಗುಟ್ಟುನಮ್ಮ ಸಮುದಾಯದ ಕೆಲಸಕ್ಕೆ ಹಣ ಕೇಳಿದ್ದನ್ನು ಮಾತ್ರ ಬಿಟ್ಟು ನಾನು ಎಂದಿಗೂ ಯಾರನ್ನೂ ನಿಧಿಗಾಗಿ ಕೇಳಿಲ್ಲ. ನಾವು ಸಾಧಿಸಿರುವ ಪ್ರಗತಿ ಮತ್ತು ಸಂಘಟನೆಯನ್ನು ನಾವು ಯಾವ ನಿಧಿಯೂ ಇಲ್ಲದೆ ಮಾಡಿದ್ದೇವೆ. ಹೇಗಾದರೂ ನಮ್ಮ ಸಂಘಟನೆಯನ್ನು ಕಟ್ಟುವುದಕ್ಕೋಸ್ಕರ, ನಾವು ನಿಧಿ ಸಂಗ್ರಹ ಮಾಡಬೇಕಾದದ್ದು ಅತ್ಯವಶ್ಯಕವಾಗಿದೆ. ನಿಧಿ ಇಲ್ಲದೆ ತಮ್ಮ ಸಮುದಾಯ ಮುನ್ನಡೆಯನ್ನು ಸಾಧಿಸಲಾಗುವುದಿಲ್ಲ. ಅಲ್ಲದೆ ಈಗಾಗಲೇ ಚೆನ್ನಾಗಿ ಸಂಘಟಿತರಾಗಿರುವ ಸಮುದಾಯಗಳೊಂದಿಗೆ ಹೆಜ್ಜೆ ಹಾಕಲಾಗುವುದಿಲ್ಲ.

ಸಾರ್ವಜನಿಕ ಜೀವನದಲ್ಲಿ ತಪ್ಪುಗಳು ಆಗುತ್ತವೆ. ಆದರೆ ಇವು ನಮ್ಮನ್ನು ನಿರುತ್ಸಾಹಗೊಳಿಸಬಾರದು. ತಪ್ಪುಗಳ ಮೂಲಕವೇ ನಮಗೆ ನಮ್ಮ ನಿರ್ಬಲತೆಯ ಅರಿವಾಗುತ್ತದೆ ಮತ್ತು ಅದನ್ನು ಸರಿಪಡಿಸಿಕೊಳ್ಳಲಾಗುತ್ತದೆ. ನನ್ನ ಉತ್ಕಟೇಚ್ಛೇಯೆಂದರೆ ನಮ್ಮ ಸಂಸ್ಥೆಗೆ ಪ್ರತಿಯೊಂದು ಪ್ರಾಂತದಲ್ಲೂ, ಪ್ರತಿಯೊಂದು ಊರಿನಲ್ಲೂ ನಮ್ಮದೇ ಆದ ಕಟ್ಟಡಗಳಿರಬೇಕು ಅದು ನಮ್ಮ ಚಟುವಟಿಕೆಯ ಕೇಂದ್ರವಾಗಿರುತ್ತದೆ. ಕಳೆದ ರಾತ್ರಿ ನಾನು ಬೇಲಾದ (ನಾಗಪುರ) ದಶರಥ ಪಾಟೀಲ್ ಅವರ ಸಂಗಡ ಮಾತನಾಡುತ್ತಿದ್ದೆ. ಒಂದಿಷ್ಟು ಜಾಗವನ್ನು ಕೊಂಡುಕೊಂಡು ನಮ್ಮ ಸಂಸ್ಥೆಗೆ ಒಂದು ಕಟ್ಟಡವನ್ನು ನಾಗಪುರದಲ್ಲಿ ಕಟ್ಟಿಸಿ ಕೊಡಿ ಎಂದು ನಾನು ಅವರನ್ನು ಕೇಳಿದೆ. ಅದನ್ನು ೨೦ ರಿಂದ ೨೫ ಸಾವಿರ ರೂಪಾಯಿಗಳಲ್ಲಿ ಮಾಡಬಹುದಾಗಿದೆ. ಕಟ್ಟಡದ ಅಡಿಗಲ್ಲನ್ನು ಹಾಕುವುದಕ್ಕೆ ನಾಗಪುರಕ್ಕೆ ನನ್ನನ್ನು ಆಹ್ವಾನಿಸಿದರೆ, ನಿಮ್ಮ ಆಹ್ವಾನವನ್ನು ಒಪ್ಪಿಕೊಳ್ಳಲು ನನಗೆ ಅತೀವ ಸಂತೋಷವಾಗುತ್ತದೆ ಎಂದು ಹೇಳಿದೆ. (ಈ ಹಂತದಲ್ಲಿ ಮಿ. ಸೀತಾರಾಮ್ ಹಡ್ಕೆಯವರು

ಭಾಂಕೇಡ ಬಸ್ತಿಯ ಪರವಾಗಿ ೨೫೦ ರೂ.ನ ಹಣದ ಚೀಲವನ್ನು ಸಮರ್ಪಿಸಿದರು) ಡಾ. ಅಂಬೇಡ್ಕರ ಅದನ್ನು ತೆಗೆದುಕೊಂಡು, ಅದನ್ನು ಕಟ್ಟಡದ ನಿಧಿಗಾಗಿ ದಶರಥ ಪಾಟೀಲರಿಗೆ ಕೊಟ್ಟರು. ಮುಖ್ಯ ಕಾರ್ಯದರ್ಶಿಯವರಾದ ಮಿ. ಆರ್.ವಿ.ಕಾವಡೆ ವಂದನೆಗಳನ್ನು ಅರ್ಪಿಸಿದರು. ಆ ನಂತರ ಅಧ್ಯಕ್ಷರು ಅಧಿವೇಶನದ ಸಮಾರೋಪವನ್ನು ಘೋಷಿಸಿದರು.

# ೭೫
# ವಿದ್ಯಾವಂತರಾಗಿ, ಚಳುವಳಿ ಮಾಡಿ, ಸಂಘಟಿತರಾಗಿ, ನಂಬಿಕೆ ಇಟ್ಟುಕೊಳ್ಳಿ ಮತ್ತು ನಿರಾಸೆ ಹೊಂದದಿರಿ

ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನವನ್ನು ನಾಗಪುರದಲ್ಲಿ ೧೯೪೨ನೇ ಇಸವಿಯ ಜುಲೈ ತಿಂಗಳ ೧೮ ರಿಂದ ೨೦ನೇ ತಾ॥ ನ ವರೆಗೆ ನಡೆಸಲಾಯಿತು. ಈ ಸಂದರ್ಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ೨೬/೭/೧೯೪೨ರಂದು ಡಾ. ಅಂಬೇಡ್ಕರ್ ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು. ಆ ಬಿನ್ನವತ್ತಳೆಯ ಕರಡು ಮತ್ತು ಅದಕ್ಕೆ ಡಾ. ಅಂಬೇಡ್ಕರ್ ಅವರ ಉತ್ತರ ಈ ಕೆಳಗಿನಂತೆ ಇದೆ:

ಗೌರವಾನ್ವಿತ ಡಾ. ಅಂಬೇಡ್ಕರ್ ಅವರಿಗೆ ಎಮ್.ಎ. ಪಿ.ಹೆಚ್.ಡಿ. ಡಿ.ಎಸ್‌ಸಿ, ಬ್ಯಾರಿಸ್ಟರ್ ಅಟ್ ಲಾ ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಸದಸ್ಯರು ಇವರಿಗೆ ಸಮರ್ಪಿಸಿದ ಬಿನ್ನವತ್ತಳೆ.

ನಮ್ಮ ಅತ್ಯಂತ ಪ್ರೀತಿ ಪಾತ್ರರಾದ ಬಾಬಾ ಸಾಹೇಬ್ ಅವರೆ,

ನಾಗಪುರದಲ್ಲಿ ನಡೆಯುತ್ತಿರುವ ಮೂರನೇ ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ಸದಸ್ಯರುಗಳಾದ ನಾವು ನಿಮಗೆ ೫೦ ವರ್ಷಗಳು ತುಂಬಿದ ಸಂದರ್ಭದಲ್ಲಿ ಭಾರತದ ತುಳಿತಕ್ಕೊಳಗಾದ, ಲಕ್ಷಾಂತರ ಮೂಕ ಮಂದಿಗಳ ನಿಮಿತ್ತ ನಿಮ್ಮ ದೀರ್ಘಕಾಲದ, ಅವಿರತ ಉತ್ಸಾಹ ಮತ್ತು ಕೆಲಸಕ್ಕಾಗಿ ನಮ್ಮ ಕೃತಜ್ಞತಾಪೂರ್ವಕವಾದ ಮೆಚ್ಚುಗೆಯ ಪ್ರತೀಕವಾಗಿ, ಈ ಬಿನ್ನವತ್ತಳೆಯನ್ನು ಗೌರವ ಪೂರ್ವಕವಾಗಿ ಸಮರ್ಪಿಸುತ್ತಿದ್ದೇವೆ. ಈ ವರ್ಷ ಕಾಕತಾಳೀಯವಾಗಿ ನಿಮಗೆ ೫೦ ವರ್ಷಗಳು ತುಂಬಿ, ನಿಮ್ಮ ಕಾರ್ಯಕ್ಷೇತ್ರವನ್ನು ಕ್ರಿಯಾತ್ಮಕ ರಾಜಕೀಯದಿಂದ ಕಾರ್ಯಾಂಗಕ್ಕೆ ಬದಲಾಯಿಸಿಕೊಂಡಿರುವ ಸಂದರ್ಭ ಭಾರತದ ನಿಮ್ನ ವರ್ಗಗಳವರ ಚರಿತ್ರೆಯಲ್ಲಿ ಒಂದು ಅತ್ಯಂತ ಮುಖ್ಯವಾದ ಸಂಗತಿಯಾಗಿದೆ. ನಿಮ್ಮ ಜೀವನ ಚರಿತ್ರೆ ಏನೇ ಆಗಿರಲಿ, ಅದು ತುಳಿತಕ್ಕೊಳಪಟ್ಟು ಲಕ್ಷಾಂತರ ಮಂದಿಯ ಪ್ರಗತಿ ಮತ್ತು ಅದಕ್ಕಾಗಿ ಶ್ರಮಿಸಿದ ಒಬ್ಬ ವ್ಯಕ್ತಿಯ ತ್ಯಾಗದ ಚರಿತ್ರೆಯೇ ಆಗಿದೆ. ನೀವು ನಮಗೆ ಕೇವಲ ಒಬ್ಬ ವ್ಯಕ್ತಿ ಮಾತ್ರವಲ್ಲ; ಒಂದು ಸಂಸ್ಥೆಯೇ ಆಗಿದ್ದೀರಿ. ನೀವು ನಮ್ಮ ಏಕೈಕ ಮಾರ್ಗದರ್ಶಿ, ಸ್ನೇಹಿತ ಮತ್ತು ತತ್ತ್ವಜ್ಞಾನಿಯಾಗಿದ್ದೀರಿ. ನಿಮ್ನ ವರ್ಗಗಳವರಿಗೆ ಒಬ್ಬರೇ ಆಧಾರವಾಗಿದ್ದೀರಿ. ನಮ್ಮ ಜನಗಳನ್ನು ಮೇಲೆತ್ತುವ, ನ್ಯಾಯಯುತವಾದ ನಿಮಿತ್ತಕ್ಕಾಗಿ, ನಿಮ್ಮ ಸತತ ಎಡೆಬಿಡದ ಪರಿಶ್ರಮಗಳಿಂದಾಗಿ ನಾವು ಇದುವರೆಗೆ ಪಡೆದುಕೊಂಡಿರುವ ಇಂಥ ಪ್ರಯೋಜನಗಳ ನಿಜವಾದ ಸಾಧನವಾಗಿದ್ದೀರಿ. ಚಿಗುರುತ್ತಿದ್ದ ಒಬ್ಬ ವಕೀಲನಾಗಿದ್ದು ಉಜ್ವಲ ಭವಿಷ್ಯವಿದ್ದರೂ ನೀವು ಎಲ್ಲವನ್ನು ಪಣಕ್ಕಿಟ್ಟು ದಮನ ಮಾಡುತ್ತಿದ್ದವರಿಂದ ಸಂಕಷ್ಟಕ್ಕೆ ಒಳಗಾಗಿದ್ದವರಿಗೆ ಪರಿಹಾರವನ್ನು ತಂದುಕೊಡಲು ನಿಮ್ಮನ್ನು ನೀವು ಹೃದಯ ಪೂರ್ವಕವಾಗಿ ಹೋರಾಟದಲ್ಲಿ ತೊಡಗಿಸಿಕೊಂಡಿರಿ. ಹಾಗೆ ಮಾಡುವಲ್ಲಿ, ನಿಮ್ಮ ಭವಿಷ್ಯದ ಕಕ್ಷಿಗಾರರುಗಳು ದೂರವಾಗುತ್ತಾರೆಂಬುದನ್ನು ನೀವು ಅರ್ಥೈಸಿಕೊಳ್ಳಲಿಲ್ಲ; ಕಾರಣ ನಿಮ್ನ ವರ್ಗಗಳವರ ಹಿತಾಸಕ್ತಿಗಾಗಿ ಕಾದಾಟ ಮಾಡುವುದು, ಸವರ್ಣ ಹಿಂದೂಗಳೆಂದು ಕರೆಯಿಸಿಕೊಳ್ಳುವವರ ವಿರುದ್ಧ ನಡೆಸುವ ಹೋರಾಟವಾಗಿದೆ. ಎರಡು ದಶಕಗಳ ಅಲ್ಪಾವಧಿಯಲ್ಲಿ, ನಿಮ್ನ ವರ್ಗಗಳವರು ಒಂದು ಜೀವಂತವಾದ

ಅಸ್ತಿತ್ವವೆಂದು, ಅವರ ಹಕ್ಕುಗಳನ್ನು ಮಾನ್ಯ ಮಾಡಿ, ಅವರಿಗೆ ದೇಶದ ಸರ್ವೋನ್ನತ ಕಾರ್ಯಾಂಗದಲ್ಲಿ ಒಂದು ಸ್ಥಾನವನ್ನು ಕೊಡಬೇಕಾದ ಅವಶ್ಯಕತೆ ಇದೆಯೆಂದು ಯಾರೂ ಕೂಡ ಅಂದುಕೊಂಡಿರಲಿಲ್ಲ. ಸಮ್ಮೇಳನದ ಪೆಂಡಾಲಿಗೆ ರೈಲ್ವೆ ಸ್ಟೇಷನ್ನಿನಿಂದ ಹೊರಟ ಮೆರವಣಿಗೆ ಮತ್ತು ಸಮ್ಮೇಳನದ ಅಧಿವೇಶನದಲ್ಲಿ ಹಾಜರಿದ್ದ ಅಗಾಧವಾದ ಜನಸಂದಣಿ, ನಮ್ಮ ಸಮುದಾಯಗಳ ಜನರಿಗೆ ನಿಮ್ಮ ಮೇಲೆ ಇರುವ ಗೌರವಕ್ಕೆ ಒಂದು ಸಾಕ್ಷೀ ಭೂತವಾಗಿದೆ. ನೀವು ಅವರಿಗೆ ಮಾಡಿರುವ ಸಹಾಯಕ್ಕಾಗಿ ಈ ಅನೈಚ್ಛಿಕವಾದ ಭಾವಾವೇಶ ನಿಮ್ನ ವರ್ಗಗಳು ಅದಕ್ಕಾಗಿ ತಮ್ಮ ನಿಷ್ಠೆಯನ್ನು ತೋರಿಸುವ ಒಂದು ಸಣ್ಣದಾದ ಅಭಿವ್ಯಕ್ತಿಯಷ್ಟೆ. ನಮಗೆ ನೀವು ಎಂದರೆ ಸೃಷ್ಟಿಕರ್ತನಿಗಿಂತ ಹೆಚ್ಚು. ನಮ್ಮ ಸೃಷ್ಟಿಕರ್ತ ನಮ್ಮನ್ನು ಒಂದು ತಳವಿಲ್ಲದ ಪ್ರಪಾತಕ್ಕೆ ಎಸೆದು ಬಿಟ್ಟಿದ್ದ; ಆದರೆ ನೀವು ಅವನ ಹಾಗೆ ಮಾಡದೆ ಆ ಪ್ರಪಾತದಿಂದ ನಮ್ಮನ್ನು ಹೊರಗೆ ಎತ್ತುವುದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡಿದ್ದೀರಿ.

ಬುದ್ಧಿ ಶಕ್ತಿಯಲ್ಲಿ, ಹೃದಯವಂತಿಕೆಯಲ್ಲಿ ನಿಮ್ಮ ಸಮಾನರಾದವರು ಚರಿತ್ರೆಯಲ್ಲಿ ಯಾರೂ ಇಲ್ಲ; ನಮ್ಮ ಸೇವೆಯನ್ನು ಮಾಡುವ ಒಂದೇ ಕಾರಣಕ್ಕಾಗಿ ಔದಾರ್ಯದಿಂದ ವರ್ತಿಸಿದ್ದೀರಿ ಹಣವನ್ನು ಮುಕ್ತವಾಗಿ ಕೊಟ್ಟಿದ್ದೀರಿ, ನಮ್ಮ ನಿಮಿತ್ತಕ್ಕೋಸ್ಕರ ನಿಮ್ಮ ಜೀವನವನ್ನು ಮತ್ತು ಶಕ್ತಿಯನ್ನು ಸಮರ್ಪಣೆ ಮಾಡಿದ್ದೀರಿ. ಈ ಭೂಮಿಯ ಮೇಲೊಬ್ಬ ಜೀವಂತ ದೇವರಿದ್ದರೆ, ನೀವೇ ಅವನ ಮಾನವ ರೂಪ. ನಮ್ಮ ಪ್ರಾಮಾಣಿಕವಾದ, ಹೃದಯ ಪೂರ್ವಕವಾದ ಕೃತಜ್ಞತೆಯನ್ನು ಮತ್ತೆ ನಿಮಗೆ ಸಲ್ಲಿಸುತ್ತಾ, ಈ ಭೂಮಿಯ ಮೇಲಿನ ನಿಮ್ಮ ಧ್ಯೇಯವನ್ನು ಸಫಲಗೊಳಿಸುವುದಕ್ಕೆ ನಿಮಗೆ ದೀರ್ಘಾಯುಷ್ಯವನ್ನು ಹಾರೈಸುತ್ತೇವೆ.

ನಾಗಪುರ — ನಿಮಗೆ ವಿಧೇಯರಾಗಿರುವ<br>
೨೦.೭.೧೯೪೨ — ನಿಮ್ಮಲ್ಲಿ ಅತ್ಯಂತ ಕೃತಜ್ಞತೆ ಮತ್ತು ಶ್ರದ್ಧಾ ಭಕ್ತಿ ಇರುವ ನಿಮ್ಮ ಅನುಯಾಯಿಗಳು

ಅಧ್ಯಕ್ಷರು ಮತ್ತು ಸದಸ್ಯರು ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನದ ಸ್ವಾಗತ ಸಮಿತಿ.

ಬಿನ್ನವತ್ತಳೆಗೆ ಉತ್ತರ ಕೊಡುತ್ತಾ ಡಾ. ಅಂಬೇಡ್ಕರ್ ಹೇಳಿದ್ದು:<br>
ಮಹಿಳೆಯರೇ ಮತ್ತು ಮಹನೀಯರೇ,<br>
ನಿಮ್ಮ ಬಿನ್ನವತ್ತಳೆಗಾಗಿ ನಾನು ನಿಮ್ಮನ್ನು ಅಭಿವಂದಿಸುತ್ತೇನೆ.

ಇಂಥದೊಂದು ಬಿನ್ನವತ್ತಳೆಯ ಅವಶ್ಯಕತೆ ಇದ್ದೀತೆ ಎಂಬುದು ನನಗೆ ಸೋಜಿಗವಾಗಿದೆ. ಸ್ವಸ್ತಿಪಾನಗಳ ಮತ್ತು ಬಿನ್ನವತ್ತಳೆಗಳ ಹಿಂದೆ ಒಂದು ವಿಚಿತ್ರವಾದ ಚರಿತ್ರೆ ಇದೆ; ಕಡೆಯ ಪಕ್ಷ, ಸ್ವಸ್ತಿಪಾನಕ್ಕೆ, ದೊರೆಯ ಆರೋಗ್ಯ ಭಾಗ್ಯಕ್ಕೆ ಎಂದು ಹರಸುವ ಪಾನಗೋಷ್ಠಿಯಂತಹುದು. ನಾವು ಇಂಗ್ಲಿಷ್ ಸಮಾಜದಲ್ಲಿ ನೋಡಿದ ಹಾಗೆ, ಆಂತರಿಕ ಯುದ್ಧದ ನಂತರ ಮತ್ತು ಪುನರುಜ್ಜೀವನದ ಅವಧಿಯಲ್ಲಿ ವಾಡಿಕೆಗೆ ಬಂದಿತು. ಮೊದಲಿಗೆ ಅದು ಬಲವಂತದ ವಿಷಯವಾಗಿದ್ದು, ದೊರೆಯ ವಿರುದ್ಧ ದಂಗೆ ಎದ್ದ, ಇಂಗ್ಲಿಷ್ ರೆಜಿಮೆಂಟುಗಳ ಮೇಲೆ ಬಲಾತ್ಕಾರವಾಗಿ ಹೇರಲಾಯಿತು. ಹೊಸ ದೊರೆಗೆ ನಿಷ್ಠೆಯನ್ನು ಪಾಲಿಸುವುದಕ್ಕೆ ದೊರೆಯ ಆರೋಗ್ಯಕ್ಕಾಗಿ ಕುಡಿಯಲೇಬೇಕೆಂದು ನಿರ್ಬಂಧಿಸಲಾಯಿತು. ದೊರೆಯ ಆರೋಗ್ಯಕ್ಕೆಂದು

ಕುಡಿಯುವುದು ಈಗ ಸರ್ವೇ ಸಾಮಾನ್ಯವಾಗಿದ್ದು ಯಾರೂ ಅದರ ಮೂಲವನ್ನು ಹುಡುಕಿಕೊಂಡು ಹೋಗುವ ತೊಂದರೆ ತೆಗೆದುಕೊಳ್ಳುವುದಿಲ್ಲ. ನಾನು ನಿಮಗೆ ಹೇಳಿದ ಹಾಗೆ, ಅನುಮಾನಾಸ್ಪದ ನಿಷ್ಠೆ ತನ್ನನ್ನು ತಾನೇ ಘೋಷಿಸಿಕೊಳ್ಳಲು ಒತ್ತಾಯ ಮಾಡುವ ಇಚ್ಛೆಯಲ್ಲಿ, ಅದರ ಮೂಲ ಇದೆ. ನಿಮ್ಮ ನಿಷ್ಠೆಯೇನೂ ಅನುಮಾನಿಸುವುದಂಥದ್ದೇನೂ ಅಲ್ಲ. ಈ ಬಿನ್ನವತ್ತಳೆಯ ಮೂಲಕ ಅದನ್ನು ಖಾತರಿ ಪಡಿಸುವುದು ಅನವಶ್ಯಕವೆಂದು ನನಗೆ ಅನಿಸುತ್ತದೆ. ನನ್ನ ಬಗ್ಗೆ ನಿಮ್ಮ ನಿಷ್ಠೆ ಅನುಮಾನಿಸುವಂಥದ್ದೇನೂ ಅಲ್ಲ. ಆದರೂ ಬಿನ್ನವತ್ತಳೆಯನ್ನು ನಾನು ಒಪ್ಪಿಕೊಳ್ಳಬೇಕೆಂದು ನೀವು ಒತ್ತಾಯಿಸುತ್ತಿರುವುದರಿಂದ, ನಿಮಗೆ ನನ್ನ ಮೇಲೆ ಇರುವ ಪ್ರೀತಿ ಮತ್ತು ವಿಶ್ವಾಸದ ಸಂಕೇತವಾಗಿ ಅದನ್ನು ಒಪ್ಪಿಕೊಳ್ಳುತ್ತಿದ್ದೇನೆ. ನಾನು ಅಸ್ಪೃಶ್ಯರಿಗೆ ಮಾಡಿರುವ ಸೇವೆಗೆ ನಿಮ್ಮ ಮೆಚ್ಚುಗೆಯ ಕುರುಹಾಗಿ ಈ ಬಿನ್ನವತ್ತಳೆ ಇದೆ. ಭಾರತದ ಅಸ್ಪೃಶ್ಯರ ಹೆಸರಿನಲ್ಲಿ, ಈ ದೇಶದ ರಾಜಕೀಯದಲ್ಲಿ ನಾನು ತಾಳಿರುವ ನಿಲುವನ್ನು ನೀವು ಎತ್ತಿ ಹಿಡಿದಿರುವುದನ್ನು ಈ ಬಿನ್ನವತ್ತಳೆ ಸಾದೃಶಗೊಳಿಸುತ್ತದೆ. ಈ ದೇಶದ ಸರ್ಕಾರವನ್ನು ನಡೆಸುವುದರಲ್ಲಿ, ಹಿಂದೂಗಳು ಮತ್ತು ಮುಸಲ್ಮಾನರ ಜೊತೆಗೆ ನಮ್ಮನ್ನೂ ಕೂಡ ಗೌರವಾನ್ವಿತ ಪಾಲುದಾರರೆಂದು ಗುರುತಿಸಬೇಕೆಂಬುದು ನಮ್ಮ ಆದರ್ಶವಾಗಿದೆ. ಪಾಲುದಾರರೆಂದರೆ ಗೌರವಾನ್ವಿತ, ಸಮಾನವಾದ ನಿಯಮಗಳಿಗೆ ಒಳಪಟ್ಟು, ನಾವು ಗೊತ್ತುಪಡಿಸಿಕೊಂಡಿರುವ ಈ ಆದರ್ಶವನ್ನು ಸಾಧಿಸುವುದಕ್ಕೆ ನಾವು ಶ್ರಮಿಸುತ್ತೇವೆಂದು ಭರವಸೆ ಕೊಡುತ್ತೇನೆ.

ನಾನು ಈ ಆದರ್ಶಕ್ಕಾಗಿ ಹೋರಾಡುತ್ತಿದ್ದೇನೆಂಬುದರ ಬಗ್ಗೆ ನನ್ನ ಭರವಸೆಯೇನೂ ನಿಮಗೆ ಅಷ್ಟಾಗಿ ಅವಶ್ಯಕತೆ ಇಲ್ಲ. ನಿಮ್ಮಿಂದ ನನಗೆ ಇನ್ನೂ ಹೆಚ್ಚಿನ ಭರವಸೆ ಬೇಕಾಗಿದೆ. ನಿಮ್ಮ ಪ್ರೀತಿ ವಿಶ್ವಾಸದ ಬಗ್ಗೆ ನೀವು ನನಗೆ ಭರವಸೆ ಕೊಟ್ಟಿದ್ದೀರಿ. ಅದರ ಅವಶ್ಯಕತೆ ಏನೂ ಇರಲಿಲ್ಲ. ನನಗೆ ಬೇಕಾಗಿರುವುದು ಇನ್ನೊಂದು ಬಗೆಯ ಭರವಸೆ; ಅದು ನಮ್ಮ ಹಕ್ಕುಗಳಿಗಾಗಿ ನಿಲ್ಲುತ್ತೇವೆಂಬ, ನಮ್ಮ ಹಕ್ಕುಗಳಿಗಾಗಿ ಹೋರಾಡುತ್ತೇವೆಂಬ ಮತ್ತು ನಮ್ಮ ಹಕ್ಕುಗಳನ್ನು ಗೆಲ್ಲುವವರೆಗೂ ಹಿಂದಿರುಗುವುದಿಲ್ಲವೆಂದು ನಿಮ್ಮ ಬಲದ ಬಗ್ಗೆ, ನಿಮ್ಮ ಐಕ್ಯಮತದ ಬಗ್ಗೆ, ನಿಮ್ಮ ದೃಢ ಸಂಕಲ್ಪದ ಬಗ್ಗೆ ನನಗೆ ಕೊಡುವ ಭರವಸೆ. ನಿಮ್ಮ ಪಾತ್ರವನ್ನು ನೀವು ಮಾಡುತ್ತೀರೆಂದು ನನಗೆ ಮಾತು ಕೊಡಿ. ನಾನು ಮಾಡಬೇಕಾದ್ದನ್ನೂ ಮಾಡುತ್ತೇನೆಂದು ನಾನು ಮಾತು ಕೊಡುತ್ತೇನೆ. ನ್ಯಾಯ ನಮ್ಮ ಕಡೆ ಇರುವುದರಿಂದ, ಯುದ್ಧದಲ್ಲಿ ನಾವು ಸೋಲುವ ಹಾಗೇ ಇಲ್ಲ. ಈ ಹೋರಾಟ ನನಗೆ ಬಹಳ ಸಂತೋಷ ಕೊಡುವಂಥಾದ್ದು. ಈ ಹೋರಾಟ ಅದರ ಪರಿಪೂರ್ಣ ಅರ್ಥದಲ್ಲಿ ಅಧ್ಯಾತ್ಮಿಕವಾದದ್ದು. ಅದರಲ್ಲಿ ಪ್ರಾಪಂಚಿಕವಾದದ್ದಾಗಲೀ ಅಥವಾ ವಿಕೃತವಾದದ್ದಾಗಲೀ ಇಲ್ಲ. ಈ ಕದನ ಐಶ್ವರ್ಯಕ್ಕಾಗಲೀ, ಅಧಿಕಾರಕ್ಕಾಗಲೀ ಅಲ್ಲ. ಸ್ವಾತಂತ್ರ್ಯಕ್ಕಾಗಿ ಕದನ. ಮುಳುಗಿರುವ ಮಾನವೀಯ ವ್ಯಕ್ತಿತ್ವವನ್ನು ಮೇಲಕ್ಕೆ ಎತ್ತಿಕೊಳ್ಳುವುದಕ್ಕಾಗಿ ಕದನ. ಅದನ್ನು ಇದುವರೆಗೆ ಹಿಂದೂ ಸಾಮಾಜಿಕ ವ್ಯವಸ್ಥೆ ದಮನ ಮಾಡಿ, ಕೊಚ್ಚಿ ಕತ್ತರಿಸಿ ಹಾಕಿದ್ದು, ರಾಜಕೀಯ ಸೆಣಸಾಟದಲ್ಲಿ ಹಿಂದೂಗಳು ಗೆದ್ದು ನಾವು ಸೋತರೆ, ಈ ದಮನ ಹೀಗೆಯೇ ಮುಂದುವರಿಯುತ್ತದೆ. ನಿಮಗೆ ನನ್ನ ಅಂತಿಮ ಬುದ್ಧಿವಾದ ಏನೆಂದರೆ ನೀವು ವಿದ್ಯಾವಂತರಾಗಬೇಕು, ಚಳುವಳಿ ಮಾಡಬೇಕು ಮತ್ತು ಸಂಘಟಿತರಾಗಬೇಕು; ನಿಮ್ಮಲ್ಲಿ ನಿಮಗೆ ನಂಬಿಕೆ ಇರಲಿ. ನಿರಾಶರಾಗಬೇಡಿ. ನೀವು ನನ್ನೊಟ್ಟಿಗೆ ಇರುವ ಹಾಗೆಯೇ, ನಾನೂ ಯಾವಾಗಲೂ ನಿಮ್ಮೊಟ್ಟಿಗೆ ಇರುತ್ತೇನೆ.

## ೭೬
# ಸಮುದಾಯದ ಪ್ರಗತಿಯನ್ನು ಮಹಿಳೆಯರ ಪ್ರಗತಿಯಿಂದ ಅಳೆಯಲಾಗುತ್ತದೆ

### ೨೦.೭.೧೯೪೨ರಂದು ನಾಗಪುರದಲ್ಲಿ ನಡೆದ ಅಖಿಲ ಭಾರತ ನಿಮ್ನ ವರ್ಗಗಳ ಮಹಿಳೆಯರ ಸಮ್ಮೇಳನದ ಎರಡನೇ ಅಧಿವೇಶನ

### ನಡವಳಿಗಳು

ಅಖಿಲ ಭಾರತ ನಿಮ್ನ ವರ್ಗಗಳ ಮಹಿಳೆಯರ ಸಮ್ಮೇಳನ ನಾಗಪುರದ ಮೋಹನ್ ಪಾರ್ಕಿನಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ ಪೆಂಡಾಲಿನಲ್ಲಿ ೭೫,೦೦೦ಕ್ಕೂ ಹೆಚ್ಚಿಗೆ ಇದ್ದ ಸಭಿಕರ ಸಮ್ಮುಖದಲ್ಲಿ ೨೦.೭.೧೯೪೨ರ ಬೆಳಗಿನ ೧೦ ಗಂಟೆಗೆ ಪ್ರಾರಂಭವಾಯಿತು. ಮಹಿಳಾ ಡೆಲಿಗೇಟುಗಳು ಮತ್ತು ಸಂದರ್ಶಕರುಗಳು ಸುಮಾರು ೨೫,೦೦೦ ಜನರಿದ್ದರು. ವೇದಿಕೆಯ ಮೇಲೆ, ಡಾ. ಅಂಬೇಡ್ಕರ್ ಅವರೂ ಸೇರಿದಂತೆ ಗೌರವಾನ್ವಿತ ನಾಯಕರುಗಳು ಸೇರಿದ್ದರು. ಸ್ವಾಗತ ಗೀತೆಗಳನ್ನು ಹಾಡಿದ ಮೇಲೆ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಕೀರ್ತಿ ಬಾಯಿ ಪಾಟೀಲ ಅವರು ಭಾಷಣ ಮಾಡಿದರು.

ಆ ನಂತರ ಮುಖ್ಯ ಕಾರ್ಯದರ್ಶಿಯವರಾದ ಶ್ರೀಮತಿ ಇಂದಿರಾಬಾಯಿ ಪಾಟೀಲ ಅವರು ತಮ್ಮ ವರದಿಯನ್ನು ಓದಿದರು. ಅಖಿಲ ಭಾರತ ನಿಮ್ನ ವರ್ಗಗಳವರ ಮಹಿಳಾ ಸಮ್ಮೇಳನದ ಈ ಎರಡನೇ ಅಧಿವೇಶನದ ಅಧ್ಯಕ್ಷರನ್ನಾಗಿ ಶ್ರೀಮತಿ ಸುಲೋಚನಾ ಬಾಯಿ ಡೋಂಗ್ರೆ ಅವರ ಹೆಸರನ್ನು ಶ್ರೀಮತಿ ಜೈ ಬಾಯಿ ಚೌಧರಿ ಅವರು ಪ್ರಸ್ತಾಪಿಸಿದರು.

ಶ್ರೀಮತಿ ರಾಧಾಬಾಯಿ ಕಾಂಬ್ಳೆ ಅವರು ಪ್ರಸ್ತಾವನೆಯನ್ನು ಅನುಮೋದನೆ ಮಾಡಿದರು. ಅದರಂತೆ ಶ್ರೀಮತಿ ಸುಲೋಚನಾ ಬಾಯಿ ಡೋಂಗ್ರೆ ಅವರು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡು ತಮ್ಮ ಭಾಷಣವನ್ನು ಮಾಡಿದರು.

ಅವರು ಹೇಳಿದ್ದು:

ಸಹೋದರಿಯರುಗಳಾದ ಡೆಲಿಗೇಟುಗಳೇ, ನಿಮ್ಮ ಇಚ್ಛಾ ಪ್ರಕಾರ ಈ ದಿನ ಡಾ. ಅಂಬೇಡ್ಕರ್ ಅವರು ನಿಮ್ಮನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಸಮತಾದಳದ ಇನ್ನೊಂದು ಸಮ್ಮೇಳನ ಕೂಡ ಇದೇ ಪೆಂಡಾಲಿನಲ್ಲಿ ನಡೆಯಲಿದೆ. ಆದುದರಿಂದ ವಿಷಯ ಸಮಿತಿ ರಚಿಸಿರುವ ಕರಡು ನಿರ್ಣಯಗಳನ್ನೂ, ಈ ಸಮ್ಮೇಳನದ ಮುಕ್ತ ಅಧಿವೇಶನದಲ್ಲಿಯೇ ಸ್ವಲ್ಪ ಕಾಲಾವಧಿಯಲ್ಲಿ ನಡವಳಿಗಳನ್ನು ಮುಗಿಸುವ ಸಲುವಾಗಿ, ಉದ್ದನೆಯ ಭಾಷಣಗಳಿಲ್ಲದೆ ಮಂಡನೆ ಮಾಡಬಹುದೆಂದು ನಾನು ಪ್ರಸ್ತಾವಿಸುತ್ತೇನೆ.

ಈಗ ನಾನು ಅಧ್ಯಕ್ಷ ಸ್ಥಾನದಿಂದ ಮೊದಲನೆಯ ನಿರ್ಣಯವನ್ನು ಮಂಡನೆ ಮಾಡುತ್ತೇನೆ.

**ನಿರ್ಣಯ ಸಂ: ೧**

**ಅಖಿಲ ಭಾರತ ನಿಮ್ನ ವರ್ಗಗಳ ಸಮ್ಮೇಳನಕ್ಕೆ ಬೆಂಬಲ.**

ಈ ಸಮ್ಮೇಳನ, ಇನೇ ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನ ೧೯.೭.೧೯೪೨ರಂದು ನಾಗಪುರದಲ್ಲಿ ಅನುಮೋದಿಸಿದ ಎಲ್ಲಾ ನಿರ್ಣಯಗಳನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತದೆ. ಈಗ

ನಾನು ಈ ನಿರ್ಣಯವನ್ನೂ ವೋಟಿಗೆ ಇಡುತ್ತೇನೆ. ಯಾವುದೇ ವಿರೋಧ ಇಲ್ಲದಿರುವುದರಿಂದ, ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆಯೆಂದು ಘೋಷಿಸುತ್ತೇನೆ.

ಆನಂತರ ಅಧ್ಯಕ್ಷರು ಕು. ಪ್ರಭಾವತಿ ಬಾಯಿ ರಾಮ್‌ಟೀಕೆ ಅವರನ್ನು ೨ ಮತ್ತು ೩ನೇ ನಿರ್ಣಯಗಳನ್ನು ಮಂಡನೆ ಮಾಡಬೇಕೆಂದು ಸೂಚಿಸಿದರು.

ಕು. ಪ್ರಭಾವತಿಬಾಯಿ ರಾಮ್‌ಟೀಕೆ ಅವರು ಹೇಳಿದ್ದು; "ಅಧ್ಯಕ್ಷರೇ, ಡೆಲಿಗೇಟುಗಳೇ ಮತ್ತು ಸ್ನೇಹಿತರೇ," ನಾನೀಗ ನನ್ನ ಹೆಸರಿನಲ್ಲಿರುವ ನಿರ್ಣಯಗಳನ್ನು ಓದುತ್ತೇನೆ.

**ನಿರ್ಣಯ ಸಂ.೨**

**ವಿಚ್ಛೇದನ ಕಾನೂನು**

ಈ ಸಮ್ಮೇಳನ ಈ ಮೂಲಕ ನಿರ್ಣಯಿಸುವುದೇನೆಂದರೆ, ತನ್ನ ಗಂಡನನ್ನು ವಿಚ್ಛೇದನ ಮಾಡುವುದಕ್ಕೆ ಹೆಂಡತಿಗೆ ಇರುವ ಹಕ್ಕನ್ನು ಕಾನೂನಿನ್ವಯ ಮಾನ್ಯ ಮಾಡಬೇಕು ಮತ್ತು ಆ ನಿಟ್ಟಿನಲ್ಲಿ ಈ ಸಮ್ಮೇಳನ ಸರ್ಕಾರ ಮತ್ತು ಸಮಾಜದ ಗಣ್ಯರನ್ನು ಪ್ರಾರ್ಥಿಸುವುದೇನೆಂದರೆ, ಕಾನೂನಿನಲ್ಲಿ ಅವಶ್ಯಕವಾದ ಬದಲಾವಣೆಗಳನ್ನು ತರಲು ಕ್ರಮ ಕೈಗೊಳ್ಳಬೇಕು.

**ನಿರ್ಣಯ ಸಂ.೩**

**ಬಹು ಪತ್ನಿತ್ವ**

ನಮ್ಮ ಸಮಾಜದಲ್ಲಿ ಈಗ ಇರುವ ಬಹುಪತ್ನಿತ್ವದ ಪರಿಕಲ್ಪನೆಯನ್ನು ಮಹಿಳೆಯರಿಗೆ ಅನ್ಯಾಯವಾದುದೆಂದೂ, ಆದುದರಿಂದ ಸರ್ಕಾರವನ್ನು ಕಾನೂನಿಗೆ ಸೂಕ್ತವಾದ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ತಂದು ಇದನ್ನು ತಡೆಯಬೇಕೆಂದು ಅಥವಾ ಮಾರ್ಪಡಿಸಬೇಕೆಂದು ಪ್ರಾರ್ಥಿಸುತ್ತದೆ.

ಈ ನಿರ್ಣಯಗಳು ನಮ್ಮ ಬಹುದೀರ್ಘಕಾಲದ ಬೇಡಿಕೆಗಳ ಬಗ್ಗೆ ಇವೆ. ಇದನ್ನು ನಾವು ಎಲ್ಲಾ ವೇದಿಕೆಯಿಂದಲೂ ಪುನರುಚ್ಚರಿಸುತ್ತಲೇ ಇದ್ದೇವೆ. ಅವುಗಳ ಬಗ್ಗೆ ನಾನು ಮಾತನಾಡುವ ಅವಶ್ಯಕತೆಯೇ ಇಲ್ಲ. ನಿಮ್ಮ ಸರ್ವಾನುಮತದ ಒಪ್ಪಿಗೆಗಾಗಿ ನಾನು ಶಿಫಾರಸು ಮಾಡುತ್ತೇನೆ.

ಅಧ್ಯಕ್ಷ ಶ್ರೀಮತಿ ಡೋಂಗ್ರೆ ಅವರು ಕು. ಭೀಮಾಬಾಯಿ ಡೋಂಗ್ರೆ ಅವರನ್ನು ಈ ನಿರ್ಣಯಗಳನ್ನು ಅನುಮೋದಿಸುವಂತೆ ಸೂಚಿಸಿದರು. ಅದರಂತೆ ಅವರು ಈ ನಿರ್ಣಯಗಳನ್ನು ಅನುಮೋದಿಸಿದರು. ಯಾವ ವಿರೋಧವೂ ಬಾರದಿದ್ದುದರಿಂದ ಅಧ್ಯಕ್ಷರು ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತೆಂದು ಘೋಷಣೆ ಮಾಡಿದರು.

ಅಧ್ಯಕ್ಷರು ನಿರ್ಣಯ ನಂ.೪ ಅನ್ನು ಮಂಡನೆ ಮಾಡುವಂತೆ ಸೂಚಿಸಿದರು. ಅದರಂತೆ ಶ್ರೀಮತಿ ರಾಧಾಬಾಯಿ ಕಾಂಬ್ಳೆ ಅವರು ನಿರ್ಣಯದ ಮಂಡನೆ ಮಾಡಿದರು. ಶ್ರೀಮತಿ ರಾಧಾಬಾಯಿ ಕಾಂಬ್ಳೆ ಹೇಳಿದ್ದು:

ಅಧ್ಯಕ್ಷರೇ ಮತ್ತು ಸಹೋದರಿ ಡೆಲಿಗೇಟುಗಳೇ, ನಿಮ್ಮ ಸರ್ವಾನುಮತದ ಒಪ್ಪಿಗೆಗಾಗಿ ಕೆಳಕಂಡ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

**ನಿರ್ಣಯ ಸಂ.೪**

**ಆರ್ಥಿಕ ಪರಿಸ್ಥಿತಿ**

ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೋಸ್ಕರ ಗಿರಣಿಗಳಲ್ಲಿ, ಬೀಡಿ ಕಾರ್ಖಾನೆಗಳಲ್ಲಿ ಮುನಿಸಿಪಾಲಿಟಿಗಳಲ್ಲಿ ಮತ್ತು ರೈಲ್ವೆಗಳಲ್ಲಿ ಮಹಿಳಾ ಕೆಲಸಗಾರರ ಹಕ್ಕುಗಳನ್ನು ಈ ಕೆಳಕಂಡಂತೆ ಮಾನ್ಯ ಮಾಡಬೇಕು.

೧. ಅವರಿಗೆ ವಾರ್ಷಿಕ ೨೧ ದಿನಗಳ ಸಾಂದರ್ಭಿಕ ರಜಾ ಮತ್ತು ಕನಿಷ್ಠ ೧ ತಿಂಗಳ ರಜೆಯನ್ನು ಇತರ ನೌಕರರುಗಳಿಗೆ ಕೊಡುತ್ತಿರುವ ಹಾಗೆ ಕೊಡಬೇಕು.

೨.ಈ ಕಾರ್ಮಿಕರಿಗೆ ಕೆಲಸದ ಮೇಲಿದ್ದಾಗ ಸಾವು, ಅಪಘಾತ ಸಂಭವಿಸಿದರೆ ಅಥವ ಗಾಯ ಆದರೆ, ಅವರಿಗಾಗಲೀ ಅಥವ ಮಕ್ಕಳಿಗಾಗಲೀ ಸಾಕಷ್ಟು ಪರಿಹಾರವನ್ನು ಕೊಡಬೇಕು.

೩.೨೦ ವರ್ಷಗಳ ಕಾಲ ಕೆಲಸ ಮಾಡಿದ ಮೇಲೆ ಅವರಿಗೆ ಕಡೆಯ ಪಕ್ಷ ೧೫ ರೂ.ಗಳ ವಿರಾಮ ವೇತನವನ್ನು ಕೊಡಬೇಕು; ಈ ಸಮ್ಮೇಳನ ಸರ್ಕಾರವನ್ನು ಹಾಗೂ ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಕಾರ್ಮಿಕ ಸದಸ್ಯರನ್ನು ಪ್ರಾರ್ಥಿಸುವುದೇನೆಂದರೆ, ಈ ಕುಂದುಕೊರತೆಗಳನ್ನು ಪರಿಹರಿಸುವುದಕ್ಕೆ ಅವಶ್ಯಕವಾದ ಉಪಬಂಧಗಳನ್ನು ಕಲ್ಪಿಸಬೇಕು.

ಶ್ರೀಮತಿ ಜೈ ಬಾಯಿ ಚೌಧರಿ ಅವರು ನಿರ್ಣಯವನ್ನು ಅನುಮೋದಿಸಿದರು.

ಶ್ರೀಮತಿ ಜೈ ಬಾಯಿ ಚೌಧರಿ ಅವರು ಹೇಳಿದ್ದು:

ಅಧ್ಯಕ್ಷರೇ ಮತ್ತು ಭಗಿನಿ ಡೆಲಿಗೇಟುಗಳೇ, ನಾನು ಹೃದಯಪೂರ್ವಕವಾಗಿ ನಿರ್ಣಯವನ್ನು ಅನುಮೋದಿಸುತ್ತೇನೆ. ಹೆಚ್ಚು ಕಡಿಮೆ ನಾವೆಲ್ಲಾ ಕಾರ್ಮಿಕರುಗಳಾಗಿದ್ದು ನಿರ್ಣಯದಲ್ಲಿ ಪ್ರಸ್ತಾಪ ಮಾಡಿರುವ ಉಪಬಂಧಗಳನ್ನು ಸೇರಿಸುವುದಕ್ಕೆ ಕಾನೂನನ್ನು ತಿದ್ದುಪಡಿ ಮಾಡುವ ಹೆಚ್ಚಿನ ಅವಶ್ಯಕತೆ ಇದೆ. ಈ ಉಪಬಂಧಗಳು ಇಲ್ಲದೇ ಇರುವುದರಿಂದ ಅನೇಕ ಕಾರ್ಮಿಕ ಕುಟುಂಬಗಳು ಕಷ್ಟ ಕೋಟಲೆಗಳಿಂದ ನರಳುತ್ತಿದ್ದಾರೆ. ನಿಮ್ಮ ಸರ್ವಾನುಮತದ ಒಪ್ಪಿಗೆಗಾಗಿ ನಿರ್ಣಯವನ್ನು ಬೆಂಬಲಿಸಲು ಶಿಫಾರಸು ಮಾಡುತ್ತೇನೆ.

ಅಧ್ಯಕ್ಷರು ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕಾರ ಮಾಡಲಾಗಿದೆಯೆಂದು ಘೋಷಿಸಿದರು.

ಅಧ್ಯಕ್ಷರು ಆನಂತರ ಕು. ಮಂಜುಳಾ ಕಾನ್‌ಫಾಡೆ ಅವರನ್ನು ನಿರ್ಣಯ ನಂ.೫ನ್ನು ಮಂಡಿಸುವಂತೆ ಸೂಚಿಸಿದರು.

ಕು. ಮಂಜುಳಾ ಕಾನ್‌ಫಾಡೆ ಅವರು ನಿರ್ಣಯ ನಂ.೫ನ್ನು ಸರ್ವಾನುಮತದಿಂದ ಒಪ್ಪಿಕೊಳ್ಳುವಂತೆ ಕೇಳಿ ಮಂಡನೆ ಮಾಡಿದರು.

**ನಿರ್ಣಯ ಸಂ.೫**

**ಶಿಕ್ಷಣ**

(೧) ನಿಮ್ನ ವರ್ಗಗಳಿಗೆ ಸೇರಿದ ಮಹಿಳೆಯರಲ್ಲಿ ಶಿಕ್ಷಣ ಪಡೆದವರ ಶೇಕಡಾವಾರು ಬಹಳ ಕಡಿಮೆ ಇದೆಯೆಂದು ಈ ಸಮ್ಮೇಳನ ಅಭಿಪ್ರಾಯಪಡುತ್ತಾ ಅವರಲ್ಲಿ ಶಿಕ್ಷಣವನ್ನು ಹರಡುವ ನಿಮಿತ್ತವಾಗಿ, ಈ ಸಮ್ಮೇಳನ ಸರ್ಕಾರವನ್ನು ಪ್ರತಿಯೊಂದು ಪ್ರಾಂತ್ಯದಲ್ಲೂ, ಅದರ ಖರ್ಚಿನಲ್ಲೇ ಕನಿಷ್ಠ ೫೦ ನಿಮ್ನ ವರ್ಗಗಳಿಗೆ ಸೇರಿದ ಬಾಲಕಿಯರ ವಿದ್ಯಾರ್ಥಿಗಳಿಗೆ

ಹಾಸ್ಟೆಲ್‌ಗಳನ್ನು ನಡೆಸಬೇಕೆಂದು ಬೇಡಿಕೊಳ್ಳುತ್ತದೆ.

(೨) ಇನ್ನೂ ಮುಂದೆ ಈ ಸರ್ಕಾರವನ್ನು ಮತ್ತೂ ಪ್ರಾರ್ಥಿಸುವುದೇನೆಂದರೆ, ನಿಮ್ನ ವರ್ಗಗಳವರ ದಟ್ಟ ದಾರಿದ್ರ್ಯ ಸ್ಥಿತಿಯ ಕಾರಣ ಅವರಿಗೆ ಪ್ರೌಢಶಿಕ್ಷಣ ಮತ್ತು ಕಾಲೇಜು ಶಿಕ್ಷಣ ಪಡೆಯುವುದಕ್ಕೆ ಅಸಾಧ್ಯವಾಗಿರುವುದರಿಂದ, ಇಂಥ ನಿಮ್ನ ವರ್ಗಗಳವರಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರೌಢಶಿಕ್ಷಣ ಮತ್ತು ಕಾಲೇಜು ಶಿಕ್ಷಣ ಪಡೆಯುವ ಇರಾದೆಯಿದ್ದರೆ, ಅಂಥ ವಿದ್ಯಾರ್ಥಿಗಳಿಗೆ ಪ್ರತಿ ಪ್ರಾಂತ್ಯದಲ್ಲಿ ಸರ್ಕಾರ ಸಂಪೂರ್ಣ ಶುಲ್ಕ ವಿನಾಯಿತಿಯನ್ನೂ ಮತ್ತು ವಿದ್ಯಾರ್ಥಿ ವೇತನವನ್ನೂ ಕೊಡಲೇ ಬೇಕೆಂದು ಮನವಿ ಮಾಡುತ್ತದೆ.

(೩) ನಿಮ್ನ ವರ್ಗಗಳ ಮಹಿಳೆಯರಲ್ಲಿ ಸಾಮಾನ್ಯವಾಗಿರುವ ಅನಕ್ಷರತೆಯನ್ನು ಗಮನದಲ್ಲಿಟ್ಟುಕೊಂಡು, ಎಲ್ಲಾ ಪ್ರಾಂತ್ಯಗಳ ಸರ್ಕಾರಗಳನ್ನು ಈ ಸಮ್ಮೇಳನ ಪ್ರಾರ್ಥಿಸುವುದೇನೆಂದರೆ, ಅವರುಗಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಕಾನೂನಿನ್ವಯ ಜಾರಿಗೊಳಿಸಬೇಕು. ಈ ನಿರ್ಣಯವನ್ನು ಸಮರ್ಥಿಸುವುದಕ್ಕೆ ಯಾವ ಭಾಷಣವೂ ಬೇಡ. ನಿಮ್ಮ ಸರ್ವಾನುಮತದಿಂದ ಒಪ್ಪಿಗೆಗಾಗಿ ನಾನು ಅದನ್ನು ಶಿಫಾರಸು ಮಾಡುತ್ತೇನೆ.

ಕು. ಲಾತಿಕಾ ಗಾಜ್‌ಭಿಯ ನಿರ್ಣಯವನ್ನು ಅನುಮೋದಿಸಿದರು.

ನಿರ್ಣಯವನ್ನು ಈ ಕೆಳಗಿನವರೂ ಸಹ ಬೆಂಬಲಿಸಿದರು.

(೧) ಕು. ಸುಲೋಚನಾ ನಾಯಿಕ್ (ಅಮರಾವತಿ)

(೨) ಕು. ವಿರೇಂದ್ರ ಬಾಯಿ ತೀರ್ಥಂಕರ್ (ನಾಗಪುರ)

(೩) ಕು. ಚಂದ್ರಪ್ರಭಾ ಪಾಟೀಲ್ (ಗೋಂಡಿಯ)

(೪) ಕು. ಕವಶಲ್ಯಾ ನಂದೇಶ್ವರ್ (ನಾಗಪುರ)

ಅಧ್ಯಕ್ಷರು ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಗಿದೆಯೆಂದು ಘೋಷಿಸಿದರು.

ಶ್ರೀಮತಿ ರಾಧಾಭಾಯಿ ಕಾಂಬ್ಳೆ ನಿರ್ಣಯ ಸಂ.೬ನ್ನು ಮಂಡನೆ ಮಾಡಿದರು.

**ನಿರ್ಣಯ ಸಂ.೬**

**ಗಿರಣಿಗಳಲ್ಲಿ ಮಹಿಳಾ ಮೇಲ್ವಿಚಾರಕರನ್ನು ನೇಮಕ ಮಾಡುವ ಬಗ್ಗೆ ಕಾನೂನು.**

ಅನೇಕ ಗಿರಣಿಗಳಲ್ಲಿ ಈಗ ಕಂಡುಬಂದಿರುವ ಹಾಗೆ ಪುರುಷ ಮೇಲ್ವಿಚಾರಕರನ್ನು ಮಹಿಳಾ ಕಾರ್ಮಿಕರ ಕೆಲಸವನ್ನು ಮೇಲ್ವಿಚಾರಣೆ ಮಾಡುವುದಕ್ಕೆ ನೇಮಕ ಮಾಡಲಾಗಿದೆ. ಅನೇಕ ಕಡೆಗಳಲ್ಲಿ ಇದು ಅನಪೇಕ್ಷಿತವಾದ ಪರಿಣಾಮಗಳಿಗೆ ಎಡೆಕೊಟ್ಟಿದೆ. ಆದುದರಿಂದ ಈ ಸಮ್ಮೇಳನ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಪುರುಷರ ಬದಲಿಗೆ ಮಹಿಳಾ ಮೇಲ್ವಿಚಾರಕರನ್ನು ನೇಮಕ ಮಾಡಿಕೊಳ್ಳಲು ಕಾನೂನಿನನ್ವಯ ಅವಶ್ಯಕವಾದ ಉಪಬಂಧವನ್ನು ಕಲ್ಪಿಸಿಕೊಡಬೇಕು. ಶ್ರೀಮತಿ ಇಂದಿರಾಬಾಯಿ ಪಾಟೀಲ್ ನಿರ್ಣಯವನ್ನು ಅನುಮೋದಿಸಿದರು. ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಅಧ್ಯಕ್ಷರಾದ ಶ್ರೀಮತಿ ಡೋಂಗ್ರೆ ಅವರು ನಿರ್ಣಯ ಸಂ.೭ ಮತ್ತು ೮ನ್ನು ಅಧ್ಯಕ್ಷ ಪೀಠದಿಂದಲೇ ಮಂಡನೆ ಮಾಡಿದರು.

**ನಿರ್ಣಯ ಸಂ.೭**

**ಶಾಸನ ಸಭೆಗಳಲ್ಲಿ ನಿಮ್ನ ವರ್ಗಗಳ ಮಹಿಳೆಯರ ಪ್ರಾತಿನಿಧ್ಯ.**

ಕೇಂದ್ರೀಯ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿ ಮಹಿಳಾ ಪ್ರತಿನಿಧಿಗಳನ್ನು ತೆಗೆದುಕೊಂಡಿರುವಂತೆ, ನಿಮ್ನ ವರ್ಗಗಳ ಮಹಿಳೆಯರ ಸರ್ವಾಂಗೀಣ ಪ್ರಗತಿ ಮತ್ತು ಅಭಿವೃದ್ಧಿಗೆ, ಕೇಂದ್ರೀಯ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿ ಮತ್ತು ಇತರ ನಿಕಾಯಗಳಲ್ಲಿ ಸ್ಥಾನಗಳನ್ನು ಕಾದಿರಿಸಬೇಕೆಂದು ಈ ಸಮ್ಮೇಳನ ಭಾವಿಸುತ್ತದೆ. ಈಗ ನಿರ್ಣಯವನ್ನು ನಾನು ವೋಟಿಗೆ ಹಾಕುತ್ತೇನೆ. ಪರವಾಗಿರುವವರು ತಮ್ಮ ಕೈಗಳನ್ನು ಮೇಲೆತ್ತುವುದರ ಮೂಲಕ ತಮ್ಮ ಸಮ್ಮತಿಯನ್ನು ಸೂಚಿಸುತ್ತಾರೆ. ವಿರೋಧವಾಗಿರುವವರು ತಮ್ಮ ವಿರೋಧವನ್ನು ತಮ್ಮ ಕೈಗಳನ್ನು ಮೇಲೆತ್ತುವುದರ ಮೂಲಕ ಸೂಚಿಸುತ್ತಾರೆ. ಯಾವ ವಿರೋಧವೂ ಇಲ್ಲ ಎಂದು ಕಂಡು ಬರುತ್ತಿದೆ. ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಗಿದೆ ಎಂದು ನಾನು ಘೋಷಿಸುತ್ತೇನೆ.

**ನಿರ್ಣಯ ಸಂ.೮**

**ಅಖಿಲ ಭಾರತ ನಿಮ್ನ ವರ್ಗಗಳ ಮಹಿಳೆಯರ ಒಕ್ಕೂಟ (ಫೆಡರೇಷನ್)**

ಈ ಸಮ್ಮೇಳನ, ಒಂದು ಅಖಿಲ ಭಾರತ ಅನುಸೂಚಿತ ಜಾತಿಗೆ ಸೇರಿದ ಮಹಿಳೆಯರ ಒಕ್ಕೂಟವನ್ನು ಸ್ಥಾಪನೆ ಮಾಡಿ, ಅದರ ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ಮತ್ತು ಅದಕ್ಕಾಗಿ ನಿಧಿ ಸಂಗ್ರಹ ಮಾಡಲು ನಿರ್ಣಯಿಸುತ್ತದೆ.

ನಾನು ನಿರ್ಣಯವನ್ನು ವೋಟಿಗೆ ಹಾಕುತ್ತೇನೆ. ಪರವಾಗಿ ಇರುವವರೆಲ್ಲರೂ ತಮ್ಮ ಸಮ್ಮತಿಯನ್ನು ಕೈಗಳನ್ನು ಎತ್ತುವುದರ ಮೂಲಕ ಸೂಚಿಸುತ್ತಾರೆ. (ಎಲ್ಲರೂ ತಮ್ಮ ಕೈಗಳನ್ನು ಎತ್ತಿದ ಹಾಗೆ ಕಂಡುಬಂದಿತು) ವಿರೋಧವಾಗಿರುವವರೆಲ್ಲರೂ ತಮ್ಮ ವಿರೋಧವನ್ನು ಕೈಗಳನ್ನು ಎತ್ತುವುದರ ಮೂಲಕ ಸೂಚಿಸುತ್ತಾರೆ. ಯಾರ ವಿರೋಧ ಕಂಡುಬರುತ್ತಿಲ್ಲ. ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಗಿದೆ ಎಂದು ನಾನು ಘೋಷಣೆ ಮಾಡುತ್ತೇನೆ. ಅನಂತರ ಅಧ್ಯಕ್ಷರಾದ ಶ್ರೀಮತಿ ಡೋಂಗ್ರೆ ಅವರು, ಡಾ. ಅಂಬೇಡ್ಕರ್ ಅವರನ್ನು ಸಭೆಯನ್ನು ಉದ್ದೇಶಿಸಿ ಮಾತನಾಡಬೇಕೆಂದು ಕೇಳಿಕೊಂಡರು.

**ಡಾ. ಅಂಬೇಡ್ಕರ್ ಅವರ ಭಾಷಣ:**

ಮಹಿಳೆಯರ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಡಾ. ಅಂಬೇಡ್ಕರ್ ಹೇಳಿದರು:

ನಿಮ್ಮನ್ನು ಉದ್ದೇಶಿಸಿ ಮಾತನಾಡುವ ಸಂದರ್ಭ ಒದಗಿ ಬಂದುದಕ್ಕೆ ನನಗೆ ಸಂತೋಷವಾಗಿದೆ. ನಿಮ್ನ ವರ್ಗಗಳವರ ಪುರೋಭಿವೃದ್ಧಿಯಲ್ಲಿ ಆಸಕ್ತಿ ಇರುವ ಯಾರಿಗೇ ಆಗಲಿ ಮಹಿಳೆಯರ ಈ ಸಭೆಯನ್ನು ನೋಡುವುದಕ್ಕಿಂತ ಇನ್ನೊಂದು ಹೆಚ್ಚಿಗೆ ಸಂತೋಷದ ಸಂದರ್ಭ ಸಿಗಲಿಕ್ಕಿಲ್ಲ. ನೀವಿಲ್ಲಿ ೨೦,೦೦೦ ದಿಂದ ೨೫,೦೦೦ ವರೆಗೆ ಇದ್ದೀರಿ. ಹತ್ತು ವರ್ಷಗಳ ಕೆಳಗೆ ಇದು ಊಹೆಗೂ ನಿಲುಕುವಂಥದಾಗಿರಲಿಲ್ಲ. ನನಗೆ ಮಹಿಳೆಯರ ಸಂಘಟನೆಯಲ್ಲಿ ಅತಿ ಹೆಚ್ಚಿನ ನಂಬಿಕೆ ಇದೆ. ಅವರು ಮನದಟ್ಟು ಮಾಡಿಕೊಂಡರೆ, ಸಮಾಜದ ಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ, ಏನೆಲ್ಲಾ ಮಾಡಬಲ್ಲರು ಎಂಬುದು ನನಗೆ ಗೊತ್ತು; ಸಾಮಾಜಿಕ ಪಿಡುಗು/ಕೆಡಕುಗಳನ್ನು ಅಳಿಸಿ ಹಾಕುವುದರಲ್ಲಿ ಅವರು ಅತಿಶಯವಾದ ಸೇವೆಯನ್ನು ಮಾಡಿದ್ದಾರೆ. ಅದರ ಬಗ್ಗೆ ನನ್ನ ಸ್ವಾನುಭವದಿಂದ ಹೇಳಬಲ್ಲೆ. ನಿಮ್ನ ವರ್ಗಗಳವರ ಕೆಲಸ ಮಾಡಲು ನಾನು ಉಪಕ್ರಮಿಸಿದ ದಿನದಿಂದ ನಾನು ಪುರುಷರೊಂದಿಗೆ ಸ್ತ್ರೀಯರನ್ನೂ ಸೇರಿಸಿಕೊಳ್ಳುತ್ತಿದ್ದೆ. ಆದುದರಿಂದಲೇ ನಮ್ಮ ಸಮ್ಮೇಳನಗಳೆಲ್ಲವೂ ಸಮ್ಮಿಶ್ರ ಸಮ್ಮೇಳನಗಳಾಗಿರುತ್ತವೆಯೆಂದು ನೀವು ನೋಡಿದ್ದೀರಿ.

ಸಮುದಾಯದ ಪ್ರಗತಿಯನ್ನು, ಮಹಿಳೆಯರು ಸಾಧಿಸಿದ ಪ್ರಗತಿಯಿಂದ ನಾನು ಅಳೆಯುತ್ತೇನೆ. ಈ ಕೂಟವನ್ನು ನಾನು ನೋಡುವಾಗ ನಾವು ಪ್ರಗತಿ ಸಾಧಿಸಿದ್ದೇವೆಂದು ನನಗೆ ಮನವರಿಕೆಯಾಗಿದೆ, ಸಂತೋಷವೂ ಆಗಿದೆ. ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಕೆಲವು ಸಂಗತಿಗಳನ್ನು ಹೇಳುತ್ತೇನೆ.

ಶುಚಿಯಾಗಿರುವುದನ್ನು ಕಲಿತುಕೊಳ್ಳಿ; ಎಲ್ಲ ದುಶ್ಚಟಗಳಿಂದ ಮುಕ್ತವಾಗಿರಿ. ನಿಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿ. ಅವರಿಗೆ ಉಜ್ವಲ ಭವಿಷ್ಯ ಇದೆಯೆಂದು ಅವರ ಮನಸ್ಸಿನಲ್ಲಿ ಅಚ್ಚೊತ್ತಿ. ಅವರಲ್ಲಿರುವ ಕೀಳರಿಮೆಯನ್ನು ತೆಗೆದು ಹಾಕಿ. ಮದುವೆಯಾಗಲು ಆತುರ ಬೇಡ. ವಿವಾಹ ಅಂದರೆ ಒಂದು ಜವಾಬ್ದಾರಿ. ನಿಮ್ಮ ಮಕ್ಕಳು ಮದುವೆಯಿಂದ ಉದ್ಭವಿಸುವ ಜವಾಬ್ದಾರಿಗಳನ್ನು ಆರ್ಥಿಕವಾಗಿ ನಿರ್ವಹಿಸಲು ಶಕ್ತರಾಗುವವರೆಗೂ, ಮದುವೆಯನ್ನು ಅವರ ಮೇಲೆ ಹೇರಬೇಡಿ. ಮದುವೆಯಾಗುವವರು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದುದು ಏನೆಂದರೆ, ಬಹು ಸಂತಾನ ಪಡೆಯುವುದು ಒಂದು ಅಪರಾಧ ಎಂದು. ಮಾತಾಪಿತೃಗಳ ಕರ್ತವ್ಯ ತಮ್ಮ ತಂದೆ ತಾಯಿಗಳು ತಮಗೆ ಕೊಟ್ಟ ಪ್ರಾಪಂಚಿಕ ಜೀವನಕ್ಕಿಂತ ಉತ್ತಮವಾದುದನ್ನು ತಮ್ಮ ಮಕ್ಕಳಿಗೆ ಕೊಡುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಎಲ್ಲಕ್ಕಿಂತ ಮಿಗಿಲಾಗಿ ಮದುವೆಯಾಗುವ ಪ್ರತಿಯೊಬ್ಬ ಹುಡುಗಿ, ತನ್ನ ಗಂಡನ ಎದುರಾಗಿ ನಿಂತು, ತಾನು ಅವನ ಸ್ನೇಹಿತೆಯೆಂದೂ ಸರಿಸಮಾನಳೆಂದೂ, ಆದರೆ ಗುಲಾಮಳಲ್ಲವೆಂದು ಒತ್ತಿ ಹೇಳಲಿ. ನೀವು ಈ ಬುದ್ಧಿವಾದವನ್ನು ಅನುಸರಿಸಿದರೆ, ನಿಮ್ಮಗಳಿಗೂ ನಿಮ್ಮ ವರ್ಗಗಳವರಿಗೂ, ಗೌರವ ಮತ್ತು ಅತಿಶಯ ಕೀರ್ತಿಯನ್ನು ತಂದು ಕೊಡುತ್ತೀರೆಂದು ನನಗೆ ಭರವಸೆ ಇದೆ.

ಶ್ರೀಮತಿ ಕೀರ್ತಿ ಬಾಯಿ ಪಾಟೀಲ್, ಸ್ವಾಗತ ಸಮಿತಿಯ ಅಧ್ಯಕ್ಷರು ವಂದನೆಗಳನ್ನು ಸಲ್ಲಿಸಿದರು. ಅಧ್ಯಕ್ಷರು ಅಧಿವೇಶನ ಸಮಾರೋಪವಾಯಿತೆಂದು ಘೋಷಿಸಿದರು.

# ೭೭
# ನಾನು ಅಹಿಂಸೆ ಮತ್ತು ದೈನ್ಯತೆಯ ನಡುವೆ ವ್ಯತ್ಯಾಸವನ್ನು ಗುರುತಿಸುತ್ತೇನೆ

ಸಮತಾ ಸೈನಿಕ ದಳದ ಸಮ್ಮೇಳನ
(ನಿಮ್ನ ವರ್ಗಗಳ ಸ್ವಯಂ ಸೇವಕರುಗಳ ಸಮ್ಮೇಳನ)
ಮೊದಲನೆ ಅಧಿವೇಶನ – ೧೯೪೨
ತಾ. ೨೦.೭.೧೯೪೨ರಂದು ನಾಗಪುರದಲ್ಲಿ

೨೦.೭.೧೯೪೨ರಂದು ಅಪರಾಹ್ನ ೧೨.೩೦ಕ್ಕೆ ನಾಗಪುರದ ಮೋಹನ್ ಪಾರ್ಕಿನಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ ಪೆಂಡಾಲಿನಲ್ಲಿ ಸಮತಾ ಸೈನಿಕ ದಳದ ಸಮ್ಮೇಳನದ ಅಧಿವೇಶನವನ್ನು ೭೦,೦೦೦ಕ್ಕೂ ಅಧಿಕ ಸಭಿಕರ ಸಮ್ಮುಖದಲ್ಲಿ ನಡೆಸಲಾಯಿತು. ವೇದಿಕೆಯ ಮೇಲೆ ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಸೇರಿದಂತೆ ಪ್ರತಿಷ್ಠಿತ ನಾಯಕರುಗಳು ಆಸೀನರಾಗಿದ್ದರು.

ಚುನಾಯಿತ ಅಧ್ಯಕ್ಷರನ್ನು ಅವರ ಸ್ಥಾನಕ್ಕೆ ಸ್ವಾಗತ ಸಮಿತಿಯ ಅಧ್ಯಕ್ಷರು ಕರೆದುಕೊಂಡು ಬಂದರು. ಚುನಾಯಿತ ಅಧ್ಯಕ್ಷರು ಮತ್ತು ಇತರ ಡೆಲಿಗೇಟುಗಳು ತಮ್ಮ ಆಸನಗಳಲ್ಲಿ ಕುಳಿತುಕೊಂಡ ಮೇಲೆ, ಸ್ವಾಗತ ಗೀತೆಗಳನ್ನು ಹಾಡುವುದರೊಂದಿಗೆ ನಡವಳಿಗಳು ಪ್ರಾರಂಭವಾದವು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಮಿ. ಎ.ಎಲ್. ಕೊಸಾರೆ, ಬಿ.ಎ. ಅವರು ತಮ್ಮ ಭಾಷಣವನ್ನು ಮಾಡಿದರು, ಆ ನಂತರ ಪ್ರಧಾನ ಕಾರ್ಯದರ್ಶಿಯವರಾದ ಮಿ. ಎಮ್.ಎಮ್. ಸಾಸಲೇಕರ್ ಅವರನ್ನು ಚುನಾಯಿತ ಅಧ್ಯಕ್ಷರಾದ ಮಿ. ಗೋಪಾಲ್ ಸಿಂಗ್, ಎಮ್.ಎಲ್.ಎ. (ಪಂಜಾಬ್) ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳಲು ಪ್ರಸ್ತಾವಿಸಬೇಕೆಂದು ಕೇಳಿಕೊಂಡರು. ಅದರಂತೆ, ಮಿ. ಎಮ್.ಎಮ್.ಸಾಸಲೇಕರ್ ಅವರು ನಿರ್ಣಯವನ್ನು ಮಂಡನೆ ಮಾಡಿದರು.

ಸಮತಾ ಸೈನಿಕದಳದ ಸಮ್ಮೇಳನದ ಪ್ರಧಾನ ಕಾರ್ಯದರ್ಶಿ ಅವರಾದ ಮಿ. ಆರ್.ಆರ್. ಪಾಟೀಲ್ ಅವರು ನಿರ್ಣಯವನ್ನು ಅನುಮೋದನೆ ಮಾಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಮಿ. ಎ.ಎಲ್.ಕೊಸಾರೆ ಅವರು ನಿರ್ಣಯಕ್ಕೆ ಯಾರ ವಿರೋಧವೂ ಇಲ್ಲವೆಂದು ನಿರ್ಣಯ ಸರ್ವಾನುಮತದಿಂದ ಅಂಗೀಕಾರ ಆಯಿತೆಂದು ಘೋಷಣೆ ಮಾಡಿದರು. ನಾನು ಈಗ ಮಿ. ಗೋಪಾಲ್‌ಸಿಂಗ್ ಅವರನ್ನು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಳ್ಳಬೇಕೆಂದು ಕೇಳುತ್ತೇನೆ ಎಂದು ಹೇಳಿದಂತೆ ಸರ್ದಾರ್ ಗೋಪಾಲ್ ಸಿಂಗ್ ಅವರು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡು ತಮ್ಮ ಅಧ್ಯಕ್ಷ ಭಾಷಣವನ್ನು ಮಾಡಿದರು.

ಅಧ್ಯಕ್ಷರಾದ ಮಿ. ಗೋಪಾಲ್‌ಸಿಂಗ್ (ಪಂಜಾಬ್) ಮಿ. ಯ.ಎಲ್.ಕರಂಡೀಕರ್ ಅವರನ್ನು ಮೊದಲನೆ ನಿರ್ಣಯವನ್ನು ಮಂಡನೆ ಮಾಡುವಂತೆ ಸೂಚಿಸಿದರು.

ಮಿ. ಯ.ಎಲ್.ಕರಂ ಡೀಕರ್ ಹೇಳಿದ್ದು:

ಮಿ. ಅಧ್ಯಕ್ಷರೆ ನನ್ನ ಹೆಸರಿನಲ್ಲಿರುವ ನಿರ್ಣಯ ಈ ಕೆಳಗಿನಂತೆ ಇದೆ:

**ನಿರ್ಣಯ ಸಂ.೧**

**ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನಕ್ಕೆ ಬೆಂಬಲ.**

(ಎ) ಅಖಿಲ ಭಾತ ಸಮತಾ ಸೈನಿಕ ದಳದ ಸಮ್ಮೇಳನ, ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನದಲ್ಲಿ ಅಂಗೀಕರಿಸಲಾದ ನಿರ್ಣಯಗಳನ್ನು ಹೃದಯ ಪೂರ್ವಕವಾಗಿ ಬೆಂಬಲಿಸುತ್ತದೆ, ಅಲ್ಲದೆ ಆ ನಿರ್ಣಯಗಳ ಉಪಬಂಧಗಳನ್ನು ಸಾಧ್ಯವಾದ ಎಲ್ಲಾ ರೀತಿಗಳಲ್ಲಿ ಅಂದರೆ ಭೌತಿಕವಾಗಿ ಆರ್ಥಿಕವಾಗಿ ಮತ್ತು ನೈತಿಕವಾಗಿ ತನ್ನ ಶ್ರದ್ಧಾಪೂರ್ವಕವಾದ ದೃಢನಿರ್ಧಾರವನ್ನು ಈ ಮೂಲಕ ಘೋಷಣೆ ಮಾಡುತ್ತದೆ.

**ದಳದ ಶಾಖೆಗಳು:**

(ಬಿ) ಈ ಸಮ್ಮೇಳನ ತನ್ನ ಎಲ್ಲಾ ಬೆಂಬಲಿಗರನ್ನೂ ಹಾಗೂ ಅಭಿಮಾನಿಗಳನ್ನು ಪ್ರಾರ್ಥಿಸಿ ಮನವಿ ಮಾಡಿಕೊಳ್ಳುದೇನೆಂದರೆ, ಪ್ರತಿಯೊಂದು ಪ್ರಾಂತ್ಯದಲ್ಲೂ ಮತ್ತು ಮುಖ್ಯವಾದ ಊರುಗಳಲ್ಲೂ ಸಮತಾ ಸೈನಿಕ ದಳದ ಶಾಖೆಗಳನ್ನು ಸ್ಥಾಪಿಸಿ ಎಂದು.

**ಅಂಗರಚನೆ:**

(ಸಿ) ಈ ಸಮ್ಮೇಳನ ನಿರ್ಣಯಿಸುವುದೇನೆಂದರೆ ಅಖಿಲ ಭಾರತ ಸಮತಾ ಸೈನಿಕ ದಳಕ್ಕೆ ಒಂದು ಅಂಗರಚನೆಯನ್ನು ರೂಪಿಸಬೇಕು; ಆ ಉದ್ದೇಶಕ್ಕಾಗಿ ಕೆಳಗೆ ಕಂಡ ಮಹನೀಯರುಗಳ ಒಂದು ಸಮಿತಿಯನ್ನು ರಚಿಸಬೇಕು. ಈ ಸಮಿತಿ ರಚಿಸಿದ ಅಂಗರಚನೆಯನ್ನು ಕೇಂದ್ರೀಯ ಪ್ರಾಂತ್ಯ ಮತ್ತು ಬೀರಾರ್ ಹಾಗೂ ಬೊಂಬಾಯಿ ಪ್ರಾಂತ್ಯಗಳ ಸಮತಾ ದಳದ ಜಂಟಿ ಉಪಸಮಿತಿಗೆ ಸಲ್ಲಿಸಬೇಕು. ಉಪಸಮಿತಿಯ ಅನುಮೋದನೆ ಆದ ಮೇಲೆ, ಅದು ಜಾರಿಗೆ ಬರುತ್ತದೆ.

**ಸಮಿತಿಯ ಸದಸ್ಯರು:**

೧) ಮಿ. ಎಮ್.ಎಮ್.ಸಾಸಲೇಕರ್, ಬೊಂಬಾಯಿ

೨) ಮಿ. ಎಸ್.ಬಿ. ಜಾಧವ್

೩) ಮಿ. ಆರ್.ಆರ್. ಪಾಟೀಲ್

೪) ಮಿ. ವಿ.ಎಲ್.ಕೊಸಾರ್, ಬಿ.ಎ.; ನಾಗಪುರ

೫) ಮಿ. ಪಿ.ಎಲ್.ಕೆ. ತಾಲಿಬ್, ಪಿಎಚ್.ಡಿ., ಲಕ್ನೋ

ನಿರ್ಣಯ ಬಹಳ ಸ್ಪಷ್ಟವಾಗಿದ್ದು, ಭಾಷಣಗಳ ಅವಶ್ಯಕತೆ ಇಲ್ಲ. ನಿಮ್ಮ ಸರ್ವಾನುಮತದ ಒಪ್ಪಿಗೆಗಾಗಿ ಶಿಫಾರಸು ಮಾಡುತ್ತೇನೆ. ಕೆಳಗೆ ಕಾಣಿಸಿದ ಮಹನೀಯರುಗಳೂ ಕೂಡ ನಿರ್ಣಯಕ್ಕೆ ಬೆಂಬಲ ಸೂಚಿಸಿದರು.

೧. ಮಿ. ಪಿ.ಎಲ್.ರೋಹಾಮ್, ಎಮ್.ಎಲ್.ಎ., ಬೊಂಬಾಯಿ

೨. ಮಿ. ಪಾರ್‌ಮಾರ್, ಸಿಂಧ್

೩. ಮಿ. ಪಿ.ಎಲ್.ಕೆ. ತಾಲಿಬ್, ಎಮ್.ಎ. ಎಲ್.ಎಲ್.ಬಿ., ಪಿ.ಹೆಚ್.ಡಿ. (ಲಕ್ನೋ)

೪. ಮಿ. ಖಿ.ಜಿ. ಜಾಧವ್, ಬಿ.ಎ.ಎಲ್.ಎಲ್.ಬಿ, ಎಮ್.ಎಲ್.ಎ., ಜಲಗಾಂವ್

೫. ಮಿ. ಬಿ.ಕೆ. ಗಾಯಕವಾಡ್, ಎಮ್.ಎಲ್.ಎ. ನಾಸಿಕ್

ಯಾವ ವಿರೋಧವೂ ಇಲ್ಲದಿರುವುದರಿಂದ ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತೆಂದು

ಘೋಷಿಸುತ್ತೇನೆಂದು ಮಿ. ಗೋಪಾಲ್ ಸಿಂಗ್, ಅಧ್ಯಕ್ಷರು ಹೇಳಿದರು.

ಮಿ. ಎಸ್.ಬಿ.ಜಾಧವ್ ಅವರನ್ನು ಎರಡನೆಯ ನಿರ್ಣಯವನ್ನು ಮಂಡನೆ ಮಾಡುವಂತೆ ಅಧ್ಯಕ್ಷರು ಸೂಚಿಸಿದರು. ಅದರಂತೆ ಮಿ. ಎಸ್.ಬಿ.ಜಾಧವ್ ಅವರು ಸರ್ವಾನುಮತದ ಅಂಗೀಕಾರಕ್ಕಾಗಿ ನಿರ್ಣಯವನ್ನು ಮಂಡನೆ ಮಾಡಿದರು.

**ನಿರ್ಣಯ ಸಂ.೨.**

**ಫ್ಯಾಸಿಸ್ಟ್ ಆಕ್ರಮಣದ ವಿರುದ್ಧ ಸಂಯುಕ್ತರಂಗ**

೨. ಭಾರತ ದೇಶಕ್ಕೆ ಫ್ಯಾಸಿಸ್ಟ್ ಆಕ್ರಮಣಕಾರಿಗಳಿಂದ ತತ್‌ಕ್ಷಣದ ಬೆದರಿಕೆ ಇದ್ದು, ನಮ್ಮ ಮಾತೃಭೂಮಿಯನ್ನು ಜರ್ಮನಿ ಮತ್ತು ಜಪಾನಿನ ಮಿಲಿಟರಿಯವರು ಆಕ್ರಮಣ ಮಾಡುವ ಸಂಭವ ಬಹಳ ಹತ್ತಿರದಲ್ಲೇ ಇದೆ. ಈ ಸೂಕ್ಷ್ಮ ಪರಿಸ್ಥಿತಿಯಲ್ಲಿ, ದೇಶ ಮಾಡಬೇಕಾಗಿರುವ ಮುಖ್ಯವಾದ ಕೆಲಸವೆಂದರೆ, ತತ್‌ಕ್ಷಣ ಒಂದು ಫ್ಯಾಸಿಸ್ಟ್ ವಿರುದ್ಧದ ಸಂಘಟನೆಯನ್ನು ಆಕ್ರಮಣದ ವಿರುದ್ಧ ಕಟ್ಟಬೇಕು. ಆದ್ದರಿಂದ ಕೂಡಲೇ ಪ್ರಜೆಗಳ ಒಂದು ಸಂಯುಕ್ತರಂಗವನ್ನು ಕಟ್ಟಬೇಕೆಂದು ಭಾರತೀಯರಿಗೆ ಈ ಸಮ್ಮೇಳನ ಕರೆಕೊಡುತ್ತದೆ.

ಮಿ. ಎಸ್.ವಿ. ಗಾಯಕವಾಡ್ ಅವರು ನಿರ್ಣಯವನ್ನು ಅನುಮೋದಿಸಿದರು.

ಮಿ. ಗೋಪಾಲ್‌ಸಿಂಗ್ ಅವರು ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಗಿದೆಯೆಂದು ಘೋಷಿಸಿದರು.

**ನಿರ್ಣಯ ಸಂ. ೩**

ಮುಂದಿನ ಅಧಿವೇಶನ

ಅಧ್ಯಕ್ಷರು ತಮ್ಮ ಪೀಠದಿಂದ ಕೆಳಗೆ ಕಂಡ ನಿರ್ಣಯವನ್ನು ಮಂಡನೆ ಮಾಡಿದರು.

೩. ಎರಡನೆಯಅಖಿಲ ಭಾರತ ಸಮತಾ ಸೈನಿಕ ದಳದ ಸಮ್ಮೇಳನವನ್ನು ಪಂಜಾಬಿನಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಯಿತು. ಅಖಿಲ ಭಾರತ ನಿಮ್ನ ವರ್ಗಗಳವರ ಸಮ್ಮೇಳನವು ಸಹ ಆಗಲೇ ಅಲ್ಲಿ ನಡೆಯುತ್ತದೆ. ಯಾರ ವಿರೋಧವೂ ಇಲ್ಲ. ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಗಿದೆಯೆಂದು ನಾನು ಘೋಷಿಸುತ್ತೇನೆ.

ಈಗ ನಾನು ಗೌರವಾನ್ವಿತ ಡಾ. ಅಂಬೇಡ್ಕರ್ ಅವರನ್ನು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಮಾತನಾಡುವುದಕ್ಕಾಗಿ ಎದ್ದಾಗ ಅವರಿಗೆ ಉತ್ಸಾಹಭರಿತ ಕರತಾಡನವನ್ನು ಮಾಡಲಾಯಿತು.

**ಡಾ. ಅಂಬೇಡ್ಕರ್ ಅವರ ಭಾಷಣ:**

ಡಾ. ಅಂಬೇಡ್ಕರ್ ಅವರ ಭಾಷಣದ ಮುಖ್ಯಾಂಶಗಳನ್ನು ಕೆಳಗೆ ಕೊಟ್ಟಿದೆ:

ಸ್ವಯಂ ಸೇವಕ ದಳದ ಈ ದೊಡ್ಡದಾದ ನಿಕಾಯವನ್ನು ಕೇಂದ್ರೀಯ ಪ್ರಾಂತ್ಯದಲ್ಲಿ ಹುಟ್ಟು ಹಾಕಿರುವುದನ್ನು ನೋಡಲು ನನಗೆ ಬಹಳ ಸಂತೋಷವಾಗುತ್ತದೆ. ಈ ಸ್ವಯಂ ಸೇವಕ ದಳವನ್ನು ಮೊದಲಿಗೆ ಬೊಂಬಾಯಿನಲ್ಲಿ ೧೯೨೬ರಲ್ಲಿ ಪ್ರಾರಂಭಿಸಲಾಯಿತು. ಸಮತಾ ಸೈನಿಕ ದಳ ನಮ್ಮ ಸರ್ವತ್ರ

ಚಳುವಳಿಯ ಒಂದು ಅವಿಭಾಜ್ಯ ಅಂಗವಾಗಿದೆ. ನಮ್ಮ ಚಳುವಳಿಯ ಗುರಿಗಳಲ್ಲಿ ಮತ್ತು ಉದ್ದೇಶಗಳಲ್ಲಿ ಒಂದು ಸಂಪೂರ್ಣವಾದ ಮತ್ತು ಮೂಲಭೂತ ಬದಲಾವಣೆ ಆಗಿದೆ. ಒಂದು ಕಾಲದಲ್ಲಿ ನಮ್ಮ ಉದ್ದೇಶ ಹಿಂದೂ ಸಮಾಜದ ಒಳಗೆ, ಅದರ ಒಂದು ಭಾಗವೇ ಆಗಿದ್ದು, ಒಂದು ಸಮಾನ ಸ್ಥಾನವನ್ನು ಪಡೆಯುವ ಉದ್ದೇಶ ಇತ್ತು. ಈ ದಿನದಲ್ಲಿ ನಾವು ಭಾರತದ ರಾಷ್ಟ್ರೀಯ ಜೀವನದಲ್ಲಿ ಹಿಂದೂಗಳಿಂದ ಒಂದು ವಿಭಿನ್ನವಾದ ಮತ್ತು ಪ್ರತ್ಯೇಕವಾದ ಅಂಶವಾಗಿ ಅವರೊಂದಿಗೆ ಸಮಾನತೆಯನ್ನು ಕೇಳುತ್ತಿದ್ದೇವೆ. ಸಮತಾ ದಳದ ಗುರಿಗಳು ಮತ್ತು ಉದ್ದೇಶಗಳೂ ಸಹ, ಈ ನಮ್ಮ ಚಳುವಳಿಯ ಗುರಿಗಳು ಮತ್ತು ಉದ್ದೇಶಗಳೊಂದಿಗೆ ಬದಲಾವಣೆ ಹೊಂದಿವೆ. ಈ ಸ್ವಯಂ ಸೇವಕ ದಳದ ರಚನೆಯ ಮೊದಲಿನ ಉದ್ದೇಶ, ನಿಮ್ಮ ವರ್ಗಗಳವರಿಗೆ ಹಿಂದೂಗಳ ನಡುವೆ ಸಮಾನತೆಯ ಹಕ್ಕೊತ್ತಾಯವನ್ನು ಬೆಳೆಸುವುದೇ ಆಗಿತ್ತು. ಹೆಸರೇ ಹೇಳುವ ಹಾಗೆ ಹಿಂದೂ ಸಮಾಜದಲ್ಲಿ ಪುನರ್ ಸಂಘಟನೆಯನ್ನು ತರುವುದಕ್ಕಾಗಿ ಈ ಸಂಸ್ಥೆಯನ್ನು ಕಟ್ಟಲಾಗಿದ್ದು, ನಿಮ್ಮ ವರ್ಗಗಳವರಿಗೆ ಹಿಂದೂ ಸಮಾಜದಲ್ಲಿ ಒಂದು ಸಮಾನ ಸ್ಥಾನವನ್ನು ಕಂಡುಕೊಳ್ಳುವುದಕ್ಕಾಗಿ ಎಂಬ ಉದ್ದೇಶವಿದ್ದು, ಈ ದಿನಗಳಲ್ಲಿ ಅದರ ಉದ್ದೇಶ ಹಿಂದೂಗಳಿಂದ ಸಂಪೂರ್ಣವಾಗಿ ಪ್ರತ್ಯೇಕಗೊಂಡು, ಅವರೊಂದಿಗೆ ಸಾಮಾಜಿಕ ಸಮಾನತೆಯನ್ನು ಪಡೆದುಕೊಳ್ಳುವುದೇ ಆಗಿದೆ. ಇದನ್ನು ಹಿಂದೂ ಧರ್ಮದಿಂದ ಪ್ರತ್ಯೇಕಗೊಂಡು ಸಾಧಿಸುವುದಕ್ಕೆ ಆಶಿಸುತ್ತೇವೆ. ನಾವು ಹಂತ ಹಂತವಾಗಿ ಹೋಗಬೇಕು. ರಾಜಕೀಯವಾಗಿ ಪ್ರತ್ಯೇಕವಾಗಿ ಇರಬೇಕೆಂದು ಒತ್ತಾಯ ಮಾಡಿ, ರಾಜಕೀಯದಲ್ಲಿ ಸಮಾನತೆ ಬೇಕೆಂಬ ಹಕ್ಕೊತ್ತಾಯ ಮಾಡುವುದರಿಂದ ನಾವು ಪ್ರಾರಂಭ ಮಾಡಿದೆವು. ಇದು ಅತ್ಯಂತ ಕಠಿಣವಾದ ಕೆಲಸವಾಗಿತ್ತು. ಏಕೆಂದರೆ ನಿಮ್ಮ ವರ್ಗಗಳವರಿಗೆ ಒಂದು ಕ್ಷೇಮವಾದ, ಭದ್ರವಾದ ವೇದಿಕೆ ಬೇಕಾಗಿದ್ದು, ಅದರ ಮೂಲಕ ನಮ್ಮ ರಾಜಕೀಯ ಬೇಡಿಕೆಗಳನ್ನು ಮುಂದಿಡಬಹುದಾಗಿತ್ತು. ಆದರೆ ಅಂಥದೊಂದು ವೇದಿಕೆ ನಮಗೆ ಕಂಡು ಬರಲಿಲ್ಲ. ಇದು ಅತ್ಯಂತ ಅಸಾಧ್ಯವಾಗಿದ್ದ ಸಮಯವೊಂದಿತ್ತು. ಕಾಂಗ್ರೆಸ್ ಸಂಸ್ಥೆ ಎಷ್ಟು ಪ್ರಭಾವೀ ಶಕ್ತಿ ಆಗಿತ್ತೆಂದರೆ, ಬೊಂಬಾಯಿ ಪಟ್ಟಣದಲ್ಲಿ ಅದು ಯಾರಿಗೂ ರಾಜಕೀಯ ಸಭೆಗಳನ್ನು ನಡೆಸಲು ಬಿಡುತ್ತಿರಲಿಲ್ಲ. ಕಾಂಗ್ರೆಸ್ ಸ್ವಯಂ ಸೇವಕರುಗಳು ಬಂದು ಇಂಥ ಸಭೆಗಳನ್ನು ಚದುರಿಸುತ್ತಿದ್ದರು. ಯಾರಿಗೂ ಸಭೆಯನ್ನು ನಡೆಸಲು ಧೈರ್ಯವಿರುತ್ತಿರಲಿಲ್ಲ. ಈ ಹಾವಳಿಯನ್ನು ಎದುರಿಸಲು ನಮ್ಮ ಸ್ವಯಂ ಸೇವಕ ದಳಕ್ಕೆ ಮೊದಲಿನ ಕರ್ತವ್ಯಕ್ಕೆ ಇದೊಂದು ಹೊಸ ಕರ್ತವ್ಯ ಸೇರ್ಪಡೆಯಾಯಿತು. ಅದೆಂದರೆ ರಾಜಕೀಯದಲ್ಲಿ ಭಾಗವಹಿಸಿ, ಕಾಂಗ್ರೆಸ್ ಸ್ವಯಂ ಸೇವಕರ ದಬ್ಬಾಳಿಕೆ ಚಟುವಟಿಕೆಗಳನ್ನು ಮೆಟ್ಟಿ, ನಮ್ಮ ವೇದಿಕೆಗಳನ್ನು ಕಾಪಾಡುವುದೇ ಆಗಿತ್ತು. ಕಾಂಗ್ರೆಸ್ ಸ್ವಯಂ ಸೇವಕರ ದಾಂಧಲೆಯನ್ನು ತಡೆಗಟ್ಟಲು ಇದು ಒಂದು ಅತ್ಯಂತ ಪರಿಣಾಮಕಾಗಿ ಸಾಧನವಾಯಿತು. ನಾನು ಮೊದಲ ದುಂಡು ಮೇಜಿನ ಸಮ್ಮೇಳನಕ್ಕೆ ಹೊರಟ ಸುಮಾರಿನಲ್ಲಿ ಬೊಂಬಾಯಿನಲ್ಲಿ ನಡೆದ ಒಂದು ಘಟನೆ ನನಗೆ ಚೆನ್ನಾಗಿ ನೆನಪಿದೆ. ಕಾಂಗ್ರೆಸ್‌ನವರು ನಾನು ವಾಸವಾಗಿರುವ ಸ್ಥಳದ ಸಮೀಪದಲ್ಲಿ ನಿಮ್ಮ ವರ್ಗಗಳವರ ಹೆಸರಿನಲ್ಲಿ ಒಂದು ಸಭೆಯನ್ನು ಕರೆದಿದ್ದರು. ಸಭೆಯ ಉದ್ದೇಶ ನಾನು ದುಂಡು ಮೇಜಿನ ಸಮ್ಮೇಳನಕ್ಕೆ ಹೋಗುವುದನ್ನು ಖಂಡನೆ ಮಾಡುವುದಕ್ಕೆ ಮತ್ತು ನಾನು ನಿಮ್ಮ ವರ್ಗಗಳವರ ನಿಜವಾದ ಪ್ರತಿನಿಧಿಯಲ್ಲವೆಂದು ಘೋಷಣೆ ಮಾಡುವುದಕ್ಕೆ. ಆ ಸಂಘಟನೆಯ ವ್ಯವಸ್ಥಾಪಕರಿಗೆ ನಾನು ಹೇಳಿದ್ದೇನೆಂದರೆ ನೀವು ಯಾವುದೇ ನಿರ್ಣಯಗಳನ್ನು ಅನುಮೋದಿಸಿ, ಆದರೆ ಅದು ನಿಮ್ಮ ವರ್ಗಗಳವರ ಸಭೆಯಾಗಬೇಕು; ಆದರೆ ನಿಮ್ಮ ಸಭೆ ನಿಮ್ಮ ವರ್ಗಗಳವರ ಸಭೆ ಅಲ್ಲವೆಂದು ಹೇಳಿದೆ. ಅವರು ತಾವು ಮಾಡಲೇಬೇಕೆಂದು ಕೆಲಸದಿಂದ ವಿಮುಖರಾಗಲು ನಿರಾಕರಿಸಿದರು. ಸಾಯಂಕಾಲದಲ್ಲಿ ನಮ್ಮ ಸ್ವಯಂ ಸೇವಕರು ಒಂದು ಗುಂಪಾಗಿ ಹೋಗಿ, ಕಾಂಗ್ರೆಸ್ ಸ್ವಯಂ ಸೇವಕರನ್ನು

ಅತ್ಯಂತ ಮುಜುಗರಕ್ಕೊಳಗಾಗುವಂತೆ ಸಭೆಯನ್ನೇ ಹಿಡಿದುಕೊಂಡುಬಿಟ್ಟರು. ಕಾಂಗ್ರೆಸ್‌ನವರು ಜೀವಭಯದಿಂದ ದಿಕ್ಕಾಪಾಲಾಗಿ ಓಡಿಹೋಗಬೇಕಾಯಿತು. ಹಾಗೆ ಓಡಿಹೋಗುವಾಗ ಅವರು ಬಿಟ್ಟು ಹೋಗಿದ್ದ ಕುರ್ಚಿ, ಟೇಬಲ್ ಮತ್ತು ಗಂಟೆಯನ್ನು ನಮ್ಮ ಸ್ವಯಂ ಸೇವಕರು ಒಂದು ಟ್ರೋಫಿಯ ಥರ ತೆಗೆದುಕೊಂಡು ಬಂದರು. ನಮ್ಮ ಸ್ವಯಂ ಸೇವಕ ದಳ ಬೊಂಬಾಯಿನಲ್ಲೇ ಅತ್ಯಂತ ಬಲಶಾಲಿಯಾದ ದಳವಾಗಿದೆ. ಅವರ ಬಲದಿಂದಾಗಿಯೇ ನಾವು ನಮ್ಮ ರಾಜಕೀಯ ಚಟುವಟಿಕೆಗಳನ್ನು ಯಾರೂ ಕೆಡಿಸದ ಹಾಗೆ ನೋಡಿಕೊಂಡು ಬಂದಿದ್ದೇವೆ. ಅವರಿಗೆ ನಮ್ಮ ಅತ್ಯಂತ ಆಳವಾದ ಕೃತಜ್ಞತೆಗಳು ಸಲ್ಲುತ್ತವೆ. ನೀವು ಈ ಉಪಾಯವನ್ನು ಬೊಂಬಾಯಿನವರಿಂದ ತೆಗೆದುಕೊಂಡಿದ್ದೀರಿ, ಆದರೆ ಅದೇ ಬೊಂಬಾಯಿಯನ್ನು ಒಂದು ದೊಡ್ಡದಾದ ಸಂಸ್ಥೆಯನ್ನು ಕಟ್ಟಿ ಹಿಂದೆ ಹಾಕಿದ್ದೀರಿ. ಇದರಲ್ಲಿ ನೀವು ನನ್ನ ಮೆಚ್ಚುಗೆಯನ್ನು ಆಗಲೇ ಉದ್ದೀಪನಗೊಳಿಸಿದ್ದೀರಿ. ಈಗ ನಿಮ್ಮ ಮಟ್ಟಕ್ಕೆ ಬರಬೇಕಾದರೆ ಬೊಂಬಾಯಿನವರು ಬಹಳ ಮಟ್ಟಿಗೆ ಪರಿಶ್ರಮ ಪಡಬೇಕು. ಈ ಅಗಾಧವಾದ ಸ್ವಯಂ ಸೇವಕ ಸಂಸ್ಥೆಯ ಅವಶ್ಯಕತೆ ಇರುವುದನ್ನು ನಾನು ಪ್ರಶ್ನಾತೀತವಾಗಿ ನಂಬುತ್ತೇನೆ. ಇದನ್ನು ಹೀಗೆಯೇ ಈ ಸ್ಥಿತಿಯಲ್ಲಿಯೇ ಉಳಿಸಿಕೊಂಡು ಹೋಗುವುದೂ ಅಲ್ಲದೆ, ಇದನ್ನು ಪ್ರತಿಯೊಂದು ಪ್ರಾಂತ್ಯದಲ್ಲೂ ಪ್ರಾರಂಭಿಸಬೇಕು; ಅದನ್ನು ಎಷ್ಟರ ಮಟ್ಟಿಗೆ ವಿಸ್ತರಿಸಬೇಕೆಂದರೆ, ಅದು ನಿಮ್ಮ ವರ್ಗಗಳಿಗೆ ಸೇರಿದ ಎಲ್ಲಾ ಯುವಕರನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳಬೇಕು.

ಇಂಥ ಸ್ವಯಂ ಸೇವಕ ಸಂಸ್ಥೆಗಳಿಗೆ ಆಕ್ಷೇಪಣೆಯನ್ನು ಮಾಡುವ ಜನಗಳೂ ಇದ್ದಾರೆ. ಅವರು ಅಹಿಂಸೆಯಲ್ಲಿ ನಂಬಿಕೆ ಇರುವವರು; ಇದರಿಂದಾಗಿ ಈ ಸಂಸ್ಥೆಗಳಿಗೂ ಮತ್ತು ಅವುಗಳ ಮೂಲಕ ಶಕ್ತಿ ಪ್ರದರ್ಶನಕ್ಕೂ ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಾರೆ. ನನಗೂ ಸಹ ಅಹಿಂಸೆಯಲ್ಲಿ ನಂಬಿಕೆ ಇದೆ. ಆದರೆ ನಾನು ಅಹಿಂಸೆಗೂ ಮತ್ತು ದೈನ್ಯತೆಗೂ ವ್ಯತ್ಯಾಸವನ್ನು ಗುರುತಿಸುತ್ತೇನೆ. ವಿಧೇಯತೆ ಎನ್ನುವುದು ಒಂದು ರೀತಿಯ ನಿಶ್ಯಕ್ತತೆ; ಸ್ವಯಂ ಪ್ರೇರಿತವಾಗಿ ನಮ್ಮ ಮೇಲೆ ನಾವೇ ಅದನ್ನು ಎಳೆದುಕೊಳ್ಳುವುದೇ ಒಂದು ಉನ್ನತವಾದ ನೈತಿಕ ಮೌಲ್ಯವೇನೂ ಅಲ್ಲ. ಉಪನಿಷುತ್ತುಗಳಲ್ಲಿ ಒಂದು ಕಥೆ ಇದೆ. ಒಂದು ಕುರಿಮರಿ ದೇವರ ಹತ್ತಿರ ಹೋಗಿ ಒಂದು ದೂರನ್ನು ಕೊಟ್ಟಿತು. ಅದೆಂದರೆ ದೇವರು ಎಲ್ಲಾ ಪ್ರಾಣಿಗಳ ತಂದೆಯಾಗಿದ್ದು, ಹಾಗಾಗಿ ಎಲ್ಲ ಪ್ರಾಣಿಗಳೂ ಸಹೋದರರು; ಆದರೂ ಕೂಡ ಭ್ರಾತೃತ್ವವನ್ನು ಮರೆತು ಬಿಟ್ಟು, ಪ್ರತಿಯೊಂದು ಪ್ರಾಣಿಯೂ ತನಗೆ ಜೀವಭಯವನ್ನುಂಟು ಮಾಡುತ್ತಿದೆ; ಇದಕ್ಕೆ ನಿನ್ನ ಸಮಜಾಯಿಷಿ ಏನು ಎಂದು ದೇವರನ್ನು ಕೇಳಿತು. ದೇವರು ಕೊಟ್ಟನೆಂದು ಹೇಳಲಾದ ಉತ್ತರ ಬಹಳ ಬೋಧಪ್ರದವಾಗಿದೆ. ನೀನು ಎಷ್ಟು ವಿಧೇಯನಾಗಿ ಕಾಣುತ್ತಿದ್ದೀಯೆಂದರೆ, ನನಗೂ ಸಹ ನಿನ್ನನ್ನು ನುಂಗಿ ಹಾಕಿಬಿಡಬೇಕೆಂದು ಆಸೆಯಾಗುತ್ತಿದೆ ಎಂದು ದೇವರು ಹೇಳಿದರು. ನಾವು ಕೂಡ ಆ ಕಥೆಯಲ್ಲಿನ ಕುರಿಮರಿಯಂತೆ ಆಗಿಬಿಟ್ಟಿದ್ದೀವಿ. ತನ್ನ ಮೇಲೆ ತಾನೇ ಎಳೆದುಕೊಂಡ ದೈನ್ಯತೆಯ ಪ್ರಜ್ಞೆ ಸದ್ಗುಣವೇನೂ ಅಲ್ಲ ಎಂದು ನನಗೆ ಮನದಟ್ಟಾಗಿದೆ. ನಾನೂ ಕೂಡ ಅಹಿಂಸೆಯಲ್ಲಿ ನಂಬಿಕೆ ಇಟ್ಟವನು; ಆದರೆ ಸಂತ ತುಕಾರಾಮ್ ಅವರು ವಿವರಿಸಿದ ರೀತಿಯಲ್ಲಿ ಅಲ್ಲ. ಅಹಿಂಸೆ ಎರಡು ಗುಣಗಳನ್ನು ಒಳಗೊಂಡಿದೆಯೆಂದು ಸಂತ ತುಕಾರಾಮರು ಬಹಳ ಸರಿಯಾಗಿ ಹೇಳಿದ್ದಾರೆ. (೧) ಎಲ್ಲಾ ಜೀವಿಗಳ ಬಗ್ಗೆ ಪ್ರೀತಿ ಮತ್ತು ದಯೆ (೨) ಕೆಡಕನ್ನು ಮಾಡುವವರನ್ನೆಲ್ಲಾ ನಾಶಪಡಿಸುವುದು. ಅಹಿಂಸೆಯ ವಿವರಣೆಯ ಈ ಎರಡನೆಯ ಭಾಗ ಅನೇಕ ವೇಳೆ ಕಣ್ಣಿಗೆ ಬೀಳುವುದಿಲ್ಲ. ಹೀಗಾಗಿ ಅಹಿಂಸಾ ಸಿದ್ಧಾಂತ ಇಷ್ಟು ಹಾಸ್ಯಾಸ್ಪದವಾಗಿ ಬಿಡುತ್ತದೆ. ಅಹಿಂಸಾ ಸಿದ್ಧಾಂತದಲ್ಲಿ ದುಷ್ಟರನ್ನು ನಾಶ ಮಾಡುವುದೇ ಪ್ರಮುಖವಾದ ಅಂಶ. ಅದಿಲ್ಲದೆ, ಅಹಿಂಸೆ ಎನ್ನುವುದು ತಿರುಳಿಲ್ಲದ ಬರಿಯ ಕರಟವಾಗಿ ಬಿಡುತ್ತದೆ. ಒಂದು ಕಾಲ್ಪನಿಕ ಅನುಭವ ಮಾತ್ರ ಅದೊಂದು ಸಕಾರಾತ್ಮಕವಾದ ಕರ್ತವ್ಯವಾಗಿ

ಉಳಿಯುವುದಿಲ್ಲ. ಎಲ್ಲಿಯವರೆಗೆ ಯಾರಿಗೂ ಕೆಡಕನ್ನುಂಟು ಮಾಡಬೇಕೆಂಬ ಉದ್ದೇಶ ನಮಗೆ ಇರುವುದಿಲ್ಲವೋ, ಎಲ್ಲಿಯವರೆಗೆ ದುಷ್ಟರನ್ನೂ ನಾಸಪಡಿಸುವಷ್ಟರ ಮಟ್ಟಿಗೆ ಮಾತ್ರ ನಮ್ಮನ್ನು ನಾವು ನಿರ್ಬಂಧಗೊಳಿಸಿಕೊಂಡಿರುತ್ತೇವೆಯೋ, ಯಾರೂ ಕೂಡ ನಮ್ಮ ಬಲವನ್ನು ನಾವು ವೃದ್ಧಿಪಡಿಸಿಕೊಳ್ಳುವುದಕ್ಕೆ ಕ್ಯಾತೆ ತೆಗೆಯುವ ಹಾಗಿಲ್ಲ. ನಮ್ಮ ಆದರ್ಶವೆಂದರೆ ಶೀಲದ ಹತೋಟಿಗೆ ಒಳಪಟ್ಟ ಶಕ್ತಿ. ನೀವು ಯಾವ ಟೀಕೆಗೂ ಹೆದರಬೇಕಾಗಿಲ್ಲ. ಯಾರಿಗೂ ಬೇಕೆಂತಲೇ ಕೆಡಕು ಮಾಡುವುದಕ್ಕೆ ಹೋಗಬೇಡಿ, ನಿಮ್ಮ ಸಹಾಯ ಬೇಡಿಕೊಂಡು ಬಂದವರಿಗೆ ಸಹಾಯ ಮಾಡಿ; ಆಗ ನೀವು ಜನಗಳಿಗೆ ದೊಡ್ಡ ಸಹಾಯ ಮಾಡಿದಂತಾಗುತ್ತದೆ. ಇದುವರೆಗೂ ನಿಮ್ಮ ಚಟುವಟಿಕೆಗಳೆಲ್ಲಾ ಮುಖ್ಯವಾಗಿ ರಾಜಕೀಯ ಜೀವನವನ್ನು ನಡೆಸಿಕೊಂಡು ಬರುವುದಷ್ಟೇ ಆಗಿತ್ತು. ನಿಮ್ಮ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳೇಬೇಕಾದ ಇತರ ಕ್ಷೇತ್ರಗಳೂ ಇವೆ. ಊರುಗಳಲ್ಲಿ ಕೆಲವು ಧೂರ್ತರು ಮಹಿಳೆಯರನ್ನು ಅಪಹರಿಸಿಕೊಂಡು ಹೋಗುತ್ತಿರುವುದರ ಬಗ್ಗೆ ಆಗಾಗ್ಗೆ ಸುದ್ದಿ ಬರುತ್ತಿರುತ್ತದೆ. ಹಳ್ಳಿಗಳಲ್ಲಿ ಸವರ್ಣೀಯ ಹಿಂದೂಗಳು ಜನಗಳನ್ನು ದಬ್ಬಾಳಿಕೆಗೆ ಒಳಪಡಿಸುತ್ತಿರುವುದರ ಬಗ್ಗೆ ಅನೇಕ ಸಾರಿ ಕೇಳಿದ್ದೇವೆ. ಈ ಪ್ರಕರಣಗಳಲ್ಲಿ ನಿಮ್ಮನ್ನೂ ನೀವು ತೊಡಗಿಸಿಕೊಳ್ಳಬೇಕು. ನಿಮ್ಮಂಥ ಸಂಸ್ಥೆಗಳಂಥವರು ಸಹಾಯ ಮಾಡಬಹುದಾದ ಬಹು ಗಂಭೀರವಾದ ಪ್ರಕರಣಗಳು ಇವು.

ಅಖಿಲ ಭಾರತ ನಿಮ್ನ ವರ್ಗಗಳ ಸ್ವಯಂ ಸೇವಕ ದಳದ ಸಮ್ಮೇಳನವನ್ನು ನಡೆಸಬೇಕೆಂದು ನೀವು ಅನುಮೋದಿಸಿರುವ ಠರಾವಿನ ಬಗ್ಗೆ ನನಗೆ ಸಂತೋಷವಾಗಿದೆ. ಇದೊಂದು ಒಳ್ಳೆಯ ಕಲ್ಪನೆ ಆಗಿದ್ದು ಅದು ಫಲಪ್ರದವಾದರೆ ಉತ್ತಮ ಪರಿಣಾಮ ಸಿಗುತ್ತದೆ. ನೀವು ಇದರಲ್ಲಿ ಜಯಶಾಲಿಯಾಗಲಿ ಎಂದು ಹಾರೈಸುತ್ತೇನೆ.

ಈ ಕೆಲವು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟುದ್ದಕ್ಕಾಗಿ ನಿಮ್ಮನ್ನೂ ಮತ್ತು ನಿಮ್ಮ ಅಧ್ಯಕ್ಷರನ್ನು ವಂದಿಸುತ್ತೇನೆ.

ಮಿ. ಎಸ್.ವಿ.ರಾಮ್ ಟೀಕೆ ಅವರು ವಂದನಾರ್ಪಣೆ ಮಾಡಿದರು ಆ ನಂತರ ಅಧ್ಯಕ್ಷರು ಅಧಿವೇಶನ ವಿಸರ್ಜನೆಯಾಯಿತೆಂದು ಘೋಷಣೆ ಮಾಡಿದರು.

# ೭೮
# ನಾನು ನಿಮ್ಮೊಂದಿಗೆ ಇರುತ್ತೇನೆ

೨೧.೭.೧೯೪೨ರ ಮಂಗಳವಾರ ಸಾಯಂಕಾಲ ತಾಜ್‌ಮಹಲ್ ಹೋಟಲಿಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಗೌರವಾರ್ಥವಾಗಿ ನ್ಯಾಷನಲ್ ಸೀಮೆನ್ಸ್ ಯೂನಿಯನ್ ಆಫ್ ಇಂಡಿಯಾದ ಅಧ್ಯಕ್ಷರು ಏರ್ಪಡಿಸಿದ್ದ ಚಹಾ ಕೂಟದಲ್ಲಿ ಮಾತನಾಡುತ್ತಾ ಭಾರತ ಸರ್ಕಾರದ ಕಾರ್ಮಿಕ ಇಲಾಖೆಯ ಸದಸ್ಯರಾದ ಡಾ. ಅಂಬೇಡ್ಕರ್ ಅವರು ಈ ದೇಶದ ಕಾರ್ಮಿಕ ವರ್ಗದ ಜೀವನ ಮಟ್ಟವನ್ನು ಉತ್ತಮ ಪಡಿಸುವುದಕ್ಕೆ ತಮ್ಮ ಕೈಲಾದದ್ದೆನ್ನೆಲ್ಲಾ ಮಾಡುತ್ತೇನೆಂದು ಭರವಸೆ ಕೊಟ್ಟರು.

ತಾವು ಸೇರಿದ ಸರ್ಕಾರವನ್ನು ಮುಖ್ಯವಾಗಿ ಯುದ್ಧಕ್ಕೆ ಸಹಾಯ ಮಾಡುವ ಉದ್ದೇಶಕ್ಕಾಗಿ ರಚಿಸಲಾಗಿದ್ದು, ದೇಶದ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಪುನಾರಚಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೆಂಬ ಅರ್ಥದಲ್ಲಿ ಪುನಾರಚಿಸಿದ ಸರ್ಕಾರವೇನೂ ಅಲ್ಲ ಎಂದು ಹೇಳಿದರು. ಭಾರತೀಯ ನಾವಿಕರ ಸ್ಥಿತಿಯ ಬಗ್ಗೆ ಉಲ್ಲೇಖ ಮಾಡುತ್ತಾ, ಡಾ. ಅಂಬೇಡ್ಕರ್ ಅವರು ಹೇಳಿದ್ದೇನೆಂದರೆ, ಭಾರತದ ಕಾರ್ಮಿಕ ಜನಗಣದಲ್ಲಿ ಭಾರತದ ನಾವಿಕರು ಅತಿ ಪ್ರಾಮುಖ್ಯವಾದ ಭಾಗವಾಗುತ್ತಾರೆ. ಅಗಾಧವಾದ ಸಮುದ್ರ ತೀರವಿರುವಾಗ, ಭಾರತದ ಅತಿ ಹೆಚ್ಚಿನ ಅವಶ್ಯಕತೆ ನೌಕಾಸೇನೆಯದ್ದು. ಹೀಗಾಗಿ ಭಾರತದ ನಾವಿಕರ ಸ್ಥಿತಿ ಭಾರತದ ನೌಕಾಸೇನೆಯಲ್ಲಿ ಮತ್ತು ಭಾರತದ ಸಮುದ್ರ ವಾಣಿಜ್ಯದಲ್ಲಿ ನಿಜಕ್ಕೂ ಮಹತ್ತರದ್ದಾಗಿದೆ.

ಭಾರತದ ನಾವಿಕರ ರಾಷ್ಟ್ರೀಯ ಸಂಘದ ಮಿ. ಎ.ಎಚ್.ಮಿರ್ಜಾ ಮತ್ತು ಖಾನ್ ಸಾಹಿಬ್ ಸರಾಂಗ್ ಅವರು ಭಾರತೀಯ ನಾವಿಕರ ಕೆಲವು ಕುಂದು ಕೊರತೆಗಳನ್ನು ಉಲ್ಲೇಖಿಸುತ್ತಾ ಮ್ಯಾನಿಂಗ್ ಸ್ಕೇಲ್ ಇಲ್ಲದೆ ಇರುವುದು, ಕೆಲಸದ ವೇಳೆಯನ್ನು ನಿಗದಿಪಡಿಸದೇ ಇರುವುದು, ಮತ್ತು ಸ್ವಾಭಾವಿಕ ಕಾರಣಗಳಿಗಾಗಿ ಹಡಗಿನ ಮೇಲಿದ್ದಾಗ ಸಂಭವಿಸಿದ ಸಾವಿಗೆ ಪರಿಹಾರವನ್ನು ಕೊಡುವುದಕ್ಕೆ ಉಪಬಂಧವಿಲ್ಲದೇ ಇರುವುದನ್ನು ಉಲ್ಲೇಖಿಸಿದರು. ದೂರ ಸಮುದ್ರದ ಮೇಲೆ ಈ ಯುದ್ಧದಲ್ಲಿ ಸೇವೆ ಸಲ್ಲಿಸುತ್ತಿರುವ ಭಾರತೀಯ ನಾವಿಕರ ಸಂಖ್ಯೆ ೨೦,೦೦೦ಕ್ಕೆ ಕಡಿಮೆ ಇಲ್ಲದೆ ಇದ್ದು, ಅಂತಾರಾಷ್ಟ್ರೀಯ ಸಾಗರ ವಾಣಿಜ್ಯ ಸಮ್ಮೇಳನದ (೧೯೩೬ರ) ತೀರ್ಮಾನಗಳಿಗೆ ಒಪ್ಪಿಗೆ ಸೂಚಿಸಬೇಕೆಂದು ಒತ್ತಾಯಿಸಿದರು.

ಚಹಾ ಕೂಟದಲ್ಲಿ ಭಾಗವಹಿಸಿದ್ದವರ ಪೈಕಿ, ಸರ್ ಸುಲ್ತಾನ್ ಚಿನಾಯ್, ಮಿ. ಆಸ್ಕರ್ ಎಚ್.ಬ್ರೌನ್, ಪ್ರಧಾನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್, ಮಿ. ಆರ್.ಮ್ಯಾಥಲೋನ್, ಡಾ. ಮತ್ತು ಶ್ರೀಮತಿ ಜೆ.ಎ.ಕೊಲೇಕೊ, ಡಾ. ಎಮ್.ಆರ್.ಎ. ಬೇಗ್, ಬೊಂಬಾಯಿನ ಷರೀಫ್ ಮತ್ತು ಹಡಗು ಕಂಪೆನಿಗಳ ಅಧಿಕಾರಿಗಳು ಇದ್ದರು.

## ೭೯
# ಈ ದೇಶದ ಸ್ವಾತಂತ್ರ್ಯ ನನ್ನ ಮಹದಾಸೆಯಾಗಿದ್ದು ನಾನು ಯಾರಿಗೂ ತಲೆ ಬಾಗುವುದಿಲ್ಲ

೨೨ನೇ ಜುಲೈ ೧೯೪೨ರ ರಾತ್ರಿ ಭಟ್ ಪ್ರೌಢಶಾಲಾ ಭವನ, ಬೊಂಬಾಯಿ, ಇಲ್ಲಿ ಆಯೋಜಿಸಿದ್ದ ಸಮತಾ ಸೈನಿಕ ದಳದ ಸ್ವಾಗತ ಸಮಾರಂಭದಲ್ಲಿ ಮಾತನಾಡುತ್ತಾ ಡಾ. ಬಿ.ಆರ್.ಅಂಬೇಡ್ಕರ್ ಹೀಗೆ ಹೇಳಿದರು.

ಯಾವುದೇ ರಾಜಕೀಯ ಪಕ್ಷಗಳಿಗೆ ಸೇರಿದವರೇ ಆಗಿರಲಿ, ಎಲ್ಲಾ ದೇಶಪ್ರೇಮಿ ಭಾರತೀಯನ ಕರ್ತವ್ಯವೆಂದರೆ, ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನವರು ನಾಗರಿಕ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಲು ಪ್ರಯತ್ನ ಪಡುತ್ತಿದ್ದು, ಅದರಿಂದಾಗಿ ದೇಶದಲ್ಲಿ ಅರಾಜಕತೆ ಮತ್ತು ಗೊಂದಲವನ್ನು ಸೃಷ್ಟಿ ಮಾಡಿ ತನ್ಮೂಲಕ ದೇಶವನ್ನು ಶರಣಾಗತಿಯತ್ತ ಕೊಂಡು ಹೋಗುವುದನ್ನು ನಿಮ್ಮ ಎಲ್ಲಾ ಶಕ್ತಿಯಿಂದ ಸಂಪನ್ಮೂಲದಿಂದ ತಡೆಯಬೇಕು. ಹಿಂದಿನ ನಾಗರಿಕ ಅಸಹಕಾರ ಚಳುವಳಿಯಲ್ಲಿ ನಾವು ಮಧ್ಯ ಪ್ರವೇಶಿಸಲಿಲ್ಲ; ಕಾರಣವೆಂದರೆ ಆ ಸಮಯದಲ್ಲಿ ಸಂದರ್ಭ ಸಂಪೂರ್ಣವಾಗಿ ಬೇರೆಯದೇ ಆಗಿತ್ತು. ಈ ದಿನ ಆಕ್ರಮಣಕಾರಿ ಜಪಾನ್ ಭಾರತದ ಬಾಗಿಲಲ್ಲೇ ನಿಂತಿದೆ. ಈಜಿಪ್ಟ್ ಮತ್ತು ರಷ್ಯಾ ರಂಗಗಳಲ್ಲಿ ಪರಿಸ್ಥಿತಿಯೇನೂ ಸಂತೋಷದಾಯಕವಾಗಿ ಇಲ್ಲ.

ಈ ಸಂದಿಗ್ಧದಲ್ಲಿ ಇಂಥ ನಾಗರೀಕ ಅಸಹಕಾರ ಚಳುವಳಿಯನ್ನು ಪ್ರಾರಂಭಿಸುವುದು, ನೇರವಾಗಿ ವೈರಿಯ ಪರವಾಗಿ ಸಹಕರಿಸಿದಂತೆಯೇ ಆಗುತ್ತದೆ ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಈ ಆಟವನ್ನು ಆಡುವುದಕ್ಕೆ ಕಾಂಗ್ರೆಸ್‌ನವರಿಗೆ ಆಗಲೀ ಬೇರೆ ಯಾರಿಗೇ ಆಗಲೀ ನಾವು ಬಿಡುವುದಿಲ್ಲ. ಅದು ಭಾರತಕ್ಕೆ ದ್ರೋಹವೆಸಗುವ ಆಟ. ಈ ದೇಶದ ಸ್ವಾತಂತ್ರ್ಯಕ್ಕೆ ನನಗಿರುವ ಮಹತ್ವಾಕಾಂಕ್ಷೆಯ ಬಗ್ಗೆ ಯಾರಿಗೂ ನಾನು ಬಗ್ಗುವುದಿಲ್ಲ. ಆದರೆ ಬ್ರಿಟಿಷರನ್ನು ಓಡಿಸಿ, ಈ ದೇಶದ ಮೇಲೆ ಜಪಾನಿನ ಆಡಳಿತವನ್ನು ಸ್ಥಾಪಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ ಕೇವಲ ನಾಟಕವಾಗಿರಬಹುದು. ಅದೇ ಆಗಿದ್ದರೆ ಈ ವಿಷಯದಲ್ಲಿ ಏನನ್ನೂ ಮಾಡಬೇಕಾದ್ದಿಲ್ಲ. ಆದರೆ ಈ ಬೆದರಿಕೆಯನ್ನು ನಿಜವಾಗಿ ಕಾರ್ಯರೂಪಕ್ಕೆ ತಂದರೆ, ಆಗ ಸಮತಾ ಸೈನಿಕ ದಳ ತನ್ನ ಸಾಂಘಿಕ ಬಲವನ್ನು ಉಪಯೋಗಿಸಿ; ಕಾಂಗ್ರೆಸ್‌ನವರಿಗೆ ಪ್ರಜ್ಞೆ ಉಂಟು ಮಾಡಿ; ದೇಶದಲ್ಲಿ ಅರಾಜಕತೆ, ಕೋಲಾಹಲ ಉಂಟಾಗದಂತೆ ತಡೆಯಬೇಕು.

ದೆಹಲಿಗೆ ಹೊರಡುವ ಮುಂಚೆ, ಈ ವಿಷಯದ ಬಗ್ಗೆ ಯಾವ ನೀತಿಯನ್ನು ಸ್ವತಂತ್ರ ಕಾರ್ಮಿಕ ಪಕ್ಷ ಮತ್ತು ಇತರ ಸಹಯೋಗಿ ಪಕ್ಷಗಳು ಅನುಸರಿಸಬೇಕೆಂಬುದರ ಬಗ್ಗೆ ನಾನು ಒಂದು ಹೇಳಿಕೆಯನ್ನು ಬಿಡುಗಡೆ ಮಾಡುತ್ತೇನೆ. ಆ ಹೇಳಿಕೆಯನ್ನು ಅಭ್ಯಸಿಸಿ ಅದರಲ್ಲಿರುವ ಸೂಚನೆಗಳನ್ನು ಚಾಚೂ ತಪ್ಪದಂತೆ ಪಾಲಿಸಬೇಕು. ಹೀಗೆಂದು ಡಾ. ಅಂಬೇಡ್ಕರ್ ಮುಕ್ತಾಯ ಮಾಡಿದರು.

## ೮೦
# ಸರ್ಕಾರದ ಕಡಿವಾಣಗಳು ನಿಮ್ಮ ಕೈಲಿರಬೇಕೆಂದು ನಾನು ಬಯಸುತ್ತೇನೆ

ದೆಹಲಿಯ ನಿಮ್ನ ವರ್ಗಗಳವರ ಕಲ್ಯಾಣ ಅಸೋಸಿಯೇಷನ್‌ನವರು ತಮ್ಮ ಗೌರವಾರ್ಥ ಏರ್ಪಡಿಸಿದ್ದ ಒಂದು ಸ್ವಾಗತ ಸಮಾರಂಭದಲ್ಲಿ ಮಾತನಾಡುತ್ತಾ ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ. ಬಿ.ಆರ್.ಅಂಬೇಡ್ಕರ್ ಅವರು ಭಾರತ ಸಂವಿಧಾನದ ಗುರಿ ಮತ್ತು ತಮ್ಮ ಸಮುದಾಯದ ಭವಿಷ್ಯವನ್ನು ಕುರಿತು ಒಂದು ಮುಖ್ಯವಾದ ಹೇಳಿಕೆಯನ್ನು ಕೊಟ್ಟರು.

ಅವರು ಹೇಳಿದ್ದು:

ಭಾರತದ ಇತರ ಸಮುದಾಯಗಳ ಜೊತೆ ನಿಮ್ನ ವರ್ಗಗಳವರನ್ನೂ ಸಹ ಸಮಾನ ನಿಯಮಗಳ ಅನ್ವಯ ಇಡಬೇಕೆಂದು ನಾನು ಬಯಸುತ್ತೇನೆ. ನೀವು ಇತರ ಸಮುದಾಯಗಳ ಆಜ್ಞಾಧಾರಕರಾಗಿಯೇ ಉಳಿಯಬೇಕೆಂದು ನಾನು ಬಯಸುವುದಿಲ್ಲ; ಆದರೆ ಸರ್ಕಾರದ ಲಗಾಮುಗಳು ನಿಮ್ಮ ಕೈಲಿರಬೇಕೆಂದು ಬಯಸುತ್ತೇನೆ. ಮುಸಲ್ಮಾನರಿಗೆ ಸರಿಸಮಾನವಾಗಿ ನೀವು ರಾಜಕೀಯ ಅಧಿಕಾರದಲ್ಲಿ ಪಾಲ್ಗೊಳ್ಳಬೇಕೆಂದು ನಾನು ಬಯಸುತ್ತೇನೆ.

ಸರ್ಕಾರದ ಅಧಿಕಾರ ಮತ್ತು ಅಧಿಪತ್ಯದಲ್ಲಿ ಪಾಲ್ಗೊಂಡು ಹಂಚಿಕೊಳ್ಳಬೇಕೆಂಬ ನಿಮ್ನ ವರ್ಗಗಳ ಹಕ್ಕನ್ನು ಬ್ರಿಟಿಷ್ ಸರ್ಕಾರ ಮಾನ್ಯ ಮಾಡಿತ್ತು.

೧೯೪೦ನೇ ಇಸವಿಯಿಂದ ಈಚೆಗೆ ನಿಮ್ನ ವರ್ಗಗಳವರ ಪರಿಸ್ಥಿತಿಯಲ್ಲಿ ಒಂದು ಹಿನ್ನಡೆಯಾಗಿತ್ತು. ಮೊದಲನೆಯದಾಗಿ ಕ್ರಿಪ್ಸ್ ಪ್ರಸ್ತಾವಗಳು ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳೊಡನೆ ಒಂದು ಒಡಂಬಡಿಕೆ ಮಾಡಿಕೊಳ್ಳುವುದನ್ನು ಆಲೋಚಿಸಿತ್ತು; ಮತ್ತು ಇಂಥದೊಂದು ಒಡಂಬಡಿಕೆಯನ್ನು ಮಾಡಿಕೊಂಡು ಬಿಟ್ಟರೆ, ನಿಮ್ನ ವರ್ಗಗಳವರು ಲೆಕ್ಕಕ್ಕೇ ಬರುವುದಿಲ್ಲ. ಇದೊಂದು ನಿಮ್ನ ವರ್ಗಗಳವರಿಗೆ ಮಾಡಿದ ಅತ್ಯಂತ ದೊಡ್ಡ ನಂಬಿಕೆ ದ್ರೋಹ ಎಂದು ಡಾ. ಅಂಬೇಡ್ಕರ್ ಘೋಷಿಸಿದರು.

ಮುಂದುವರಿಯುತ್ತಾ ಅವರು ಕ್ರಿಪ್ಸ್ ಸಂಧಾನ ನಿಷ್ಫಲವಾದ ಮೇಲೆ, ಭಾರತದಲ್ಲಿನ ಹಾಗೂ ವಿದೇಶದಲ್ಲಿನ ಸಾರ್ವಜನಿಕ ವ್ಯಕ್ತಿಗಳು ಕಾಂಗ್ರೆಸ್‌ನವರೊಂದಿಗೆ ಹಾಗೂ ಮುಸ್ಲಿಮರೊಂದಿಗೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಮಾತ್ರ ಮಾತನಾಡಿದರು. ಕಾಂಗ್ರೆಸ್‌ನವರು ಮುಸ್ಲಿಮರೊಂದಿಗೆ ಒಡಂಬಡಿಕೆಗೆ ಬರಲು ಪ್ರಯತ್ನಿಸುತ್ತಿದ್ದಾರೆ; ಆದರೆ ಎಂದಿಗೂ ನಿಮ್ನ ವರ್ಗಗಳವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಉಸಾಬರಿಗೇ ಹೋಗಲಿಲ್ಲ; ಗಾಂಧೀಜಿಯವರು ದಸ್ತಗಿರಿ ಆಗುವ ಸ್ವಲ್ಪ ಮುಂಚೆ; ತಾವು ನಿಮ್ನ ವರ್ಗಗಳವರನ್ನು ಒಂದು ಪ್ರತ್ಯೇಕವಾದ ಘಟಕ ಎಂದು ಮಾನ್ಯ ಮಾಡುವುದಿಲ್ಲ ಎಂದು ಘೋಷಿಸಿದರು. ಅವರು ಮತ್ತೂ ಹೇಳಿದ್ದು; ಆದ್ದರಿಂದ ರಾಜಕೀಯ ಜೀವನದಲ್ಲಿ ನಮ್ಮ ಸ್ಥಾನವನ್ನು ಭದ್ರ ಮಾಡಿಕೊಳ್ಳುವುದು ಬಹಳ ಅವಶ್ಯಕವಾಗಿದೆ. ಸ್ಥಾನವೆಂದರೆ ಪರಿಪೂರ್ಣ ಸಮಾನತೆ ಮತ್ತು ಸ್ವಾತಂತ್ರ್ಯ. ಇಂಥದೊಂದು ಸಿಕ್ಕದ ಹೊರತು, ನಾವು ನಮ್ಮ ಮೊದಲಿನ ಸ್ಥಾನವಾದ ದೈನ್ಯತೆ ಮತ್ತು ಗುಲಾಮಗಿರಿಗೆ ಹಿಂದಕ್ಕೆ ತಳಲ್ಪಡುತ್ತೇವೆ.

ಇದಕ್ಕೆ ಮುಂಚೆ ತಮಗೆ ಅದಿಕಾರದ ವ್ಯಾಮೋಹ ಇಲ್ಲವೆಂದೂ, ತಮ್ಮ ಸಮುದಾಯದ ಸ್ಥಿತಿಗತಿಯನ್ನು ಉತ್ತಮ ಪಡಿಸಲು ತಾವು ಮಾಡುವ ಪರಿಶ್ರಮಕ್ಕೆ ಜಯ ದೊರಕದಿದ್ದರೆ ತಮ್ಮ ಕೆಲಸಕ್ಕೆ ಸಂತೋಷದಿಂದ

ಹಿಂದಿರುಗುತ್ತೇನೆ ಎಂದು ಘೋಷಿಸಿದರು.

ಹೇಗಾದರೂ ಡಾ. ಅಂಬೇಡ್ಕರ್ ಅವರ ಭಾಷಣದಲ್ಲಿ ಆ ವಿಷಯದ ಮೇಲೆ ಹೆಚ್ಚಿನ ಆಯಾಮಗಳಿದ್ದು, ಅದನ್ನು "ಇಂಡಿಯನ್ ಸ್ಟೇಟ್ಸ್" ಅನ್ನುವ ಪತ್ರಿಕೆ ವರದಿ ಮಾಡಿತ್ತು.

ಡಾ. ಅಂಬೇಡ್ಕರ್ ಅವರು, ತಮ್ಮ ಸಮುದಾಯದ ಪರವಾಗಿ ನಡೆಸುತ್ತಿದ್ದ ಚಳುವಳಿಯ ಕುರಿತು ಉಲ್ಲೇಖ ಮಾಡಿದರು. ದುಂಡು ಮೇಜಿನ ಸಮ್ಮೇಳನದಲ್ಲಿ ನಿಮ್ನ ವರ್ಗಗಳವರು ಹಿಂದೂಗಳ ಒಂದು ಉಪವಿಭಾಗವಲ್ಲವೆಂದೂ, ಅವರಿಗೆ ತಮ್ಮದೇ ಆದ ಪ್ರತ್ಯೇಕವಾದ ಅನನ್ಯತೆ ಇದೆಯೆಂದೂ ಪ್ರತಿಪಾದಿಸಿದ್ದಾಗಿ ಹೇಳಿದರು. ಅದನ್ನು ಮಹಾತ್ಮಗಾಂಧಿಯವರು ಪ್ರಶ್ನಿಸಿದ್ದು, ಕಡೆಗೆ ಅವರೇ ಕದನದಲ್ಲಿ ಸೋತರು.

ಜಾತೀಯ ಐತೀರ್ಪು ನಿಮ್ನ ವರ್ಗಗಳವರಿಗೆ ಕೊಟ್ಟ ಒಂದು ಪ್ರತ್ಯೇಕವಾದ ಮನ್ನಣೆ. ಇದನ್ನು ಗಾಂಧೀಜಿಯವರು ಎರಡನೆಯ ಬಾರಿಗೆ ಪ್ರಶ್ನಿಸಿ ಉಪವಾಸ ಕೂತರು. ಇದರ ಫಲಶೃತಿಯೇ ಪೂನಾ ಕೌಲಾಗಿದ್ದು, ಇದರಲ್ಲಿ ಅಂಬೇಡ್ಕರ್ ಅವರು ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ಜಯಶಾಲಿಗಳಾದರು.

ಮೂರನೆಯ ಹೆಗ್ಗುರುತೆಂದರೆ ಬ್ರಿಟಿಷರು ಆಗಸ್ಟ್ ತಿಂಗಳಿನಲ್ಲಿ ಕೊಟ್ಟ ಪ್ರಸ್ತಾವ. ಇದರಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದೇನೆಂದರೆ, ನಿಮ್ನ ವರ್ಗಗಳವರ ಒಪ್ಪಿಗೆ ಮತ್ತು ಸಹಮತವಿಲ್ಲದೆ ಭಾರತಕ್ಕೆ ಯಾವ ಸಂವಿಧಾನವನ್ನು ಬ್ರಿಟಿಷ್ ಸರ್ಕಾರ ಒಪ್ಪಿಕೊಳ್ಳುವುದಿಲ್ಲವೆಂದು.

## ೬೧
# ಪ್ರಸ್ತುತ ಅವ್ಯವಸ್ಥೆಗಳು ಭಾರತೀಯರಿಗೆ ಮಾತ್ರ ಕೆಡಕನ್ನುಂಟುಮಾಡುತ್ತಿವೆ

ಫ್ರಾಂಟಿಯರ್ ಮೇಲ್ ಗಾಡಿಯಲ್ಲಿ ಬಂದ ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ. ಅಂಬೇಡ್ಕರ್ ಅವರನ್ನು ಬರಮಾಡಿಕೊಳ್ಳಲು ೩ನೇ ನವೆಂಬರ್ ೧೯೪೨ರ ಪ್ರಾತಃಕಾಲ ಬೊಂಬಾಯಿ ಸೆಂಟ್ರಲ್ ಸ್ಟೇಷನ್ನಿಗೆ ನಿಮ್ನ ವರ್ಗಗಳವರು ಬಹುಸಂಖ್ಯೆಯಲ್ಲಿ ಬಂದು ಮುತ್ತಿಗೆ ಹಾಕಿದರು.

ಹಾರವನ್ನು ಹಾಕುವ ಸಮಾರಂಭ ಮುಗಿದ ಮೇಲೆ ಡಾ. ಅಂಬೇಡ್ಕರ್ ಅವರು ತಮ್ಮ ದಾದರ್ ನಿವಾಸಕ್ಕೆ ಕಾರಿನಲ್ಲಿ ತೆರಳಿದರು. ಅಲ್ಲಿ ಅವರ ಬರವಿಗಾಗಿ ಇನ್ನೊಂದು ದೊಡ್ಡ ಜನಗಳ ಗುಂಪು ಕಾದಿತ್ತು. ಡಾ. ಅಂಬೇಡ್ಕರ್ ಅವರು ಮಹಾಡ್‌ಗೆ ನವೆಂಬರ್ ೧೦ನೇ ತಾ॥ ತೆರಳಿ ಮೂರು ದಿವಸಗಳ ನಂತರ ಹಿಂದಿರುಗುವುದೆಂದು ಗೊತ್ತಾಯಿತು.

೮ನೇ ನವೆಂಬರ್ ೧೯೪೨ರ ಭಾನುವಾರ ಸಾಯಂಕಾಲ ಅಖಿಲ ಭಾರತ ಅನುಸೂಚಿತ ಜಾತಿಗಳವರ ಫೆಡರೇಷನ್ನಿನ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ. ಅಂಬೇಡ್ಕರ್ ಅವರು, ಮಿ. ಗಾಂಧಿ ಮತ್ತು ಕಾಂಗ್ರೆಸ್ ಪಕ್ಷವನ್ನು ನಾಗರೀಕ ಅಸಹಕಾರ ಆಂದೋಲನವನ್ನು ಪ್ರಾರಂಭಿಸಿದ್ದಕ್ಕೆ ದೂಷಿಸಿದರು. ಸರ್. ಸ್ಟಾಫೋರ್ಡ್ ಕ್ರಿಪ್ಸ್ ಅವರು ಕೊಟ್ಟ ಪ್ರಸ್ತಾವವನ್ನು ದೃಷ್ಟಿಯಲ್ಲಿ ಇಟ್ಟುಕೊಂಡರೆ, ಆ ಆಂದೋಲನಕ್ಕೆ ಕಿಂಚಿತ್ತೂ ಸಮರ್ಥನೆ ಇಲ್ಲ ಎಂದು ಹೇಳಿದರು. ಪ್ರಸ್ತುತ ಗೊಂದಲಗಳು, ಬಾಡಿಗೆ ಜನಗಳು ಮಾಡುವ ಈ ಗೊಂದಲಗಳು ಬ್ರಿಟಿಷ್ ಸರ್ಕಾರಕ್ಕಾಗಲಿ, ಬ್ರಿಟಿಷ್ ಜನರಿಗಾಗಿಲೀ ಯಾವುದೇ ಕೆಡಕನ್ನಾಗಲೀ, ನಷ್ಟವನ್ನಾಗಲೀ ಉಂಟು ಮಾಡಲಿಲ್ಲ. ಆದರೆ ಭಾರತೀಯರಿಗೆ ಮಾತ್ರ ಕೆಡಕನ್ನುಂಟು ಮಾಡಿತು ಎಂದು ಹೇಳಿದರು. ದೇಶದಲ್ಲಿನ ಹಿರಿಯರು ಹಾಗೂ ಮುಖ್ಯವಾದ ಭಾಗಗಳು ಆಂದೋಲನದ ಪರವಾಗಿ ಇಲ್ಲದಿದ್ದು, ಅದು ಸೋಲುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಹೇಳಿದರು.

ನಿಮ್ನ ವರ್ಗಗಳ ಮಟ್ಟಿಗೆ ಹೇಳುವುದಾದರೆ, ಆ ಆಂದೋಲನದಲ್ಲಿ ಅವರು ಭಾಗವಹಿಸಲೂ ಇಲ್ಲ, ಭಾಗವಹಿಸಲಾಗಲೂ ಇಲ್ಲ. ಕಾಂಗ್ರೆಸ್ ನಾಯಕರುಗಳು ಮುಸ್ಲಿಮರನ್ನು ಸಮಧಾನ ಪಡಿಸಲು ಕಾತುರರಾಗಿ, ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನೇಕ ಬಾರಿ ಅವರನ್ನೂ ಸಮೀಪಿಸಿದರು. ಆದರೆ ಅವರು (ಕಾಂಗ್ರೆಸಿನವರು) ನಿಮ್ನ ವರ್ಗಗಳವರ ಬೇಡಿಕೆಗಳನ್ನು (ದೇಶದ ಭವಿಷ್ಯತ್ ಸಂವಿಧಾನಕ್ಕೆ ಸಂಬಂಧಿಸಿದ ಹಾಗೆ) ಅಲಕ್ಷ್ಯ ಮಾಡಿದರು. ಮುಸ್ಲಿಮರನ್ನು ಸಮಾಧಾನ ಪಡಿಸುವುದಕ್ಕೆ ಅವರು ಕಾತುರರಾಗಿದ್ದುದಕ್ಕೆ ಕಾರಣವೆಂದರೆ, ಮುಸ್ಲಿಮರು ಬಲಶಾಲಿಗಳಾಗಿದ್ದು ಬಹಳ ಚೆನ್ನಾಗಿ ಸಂಘಟಿತರಾಗಿದ್ದರು. ಡಾ. ಅಂಬೇಡ್ಕರ್ ಅವರು ನಿಮ್ನ ವರ್ಗಗಳವರು ಅಖಿಲ ಭಾರತ ಅನುಸೂಚಿತ ಜಾತಿಗಳ ಫೆಡರೇಷನ್ನಿನ ಮೂಲಕ ರಾಜಕೀಯವಾಗಿ ಬಲಶಾಲಿಯಾಗಬೇಕೆಂದು ಪ್ರೇರೇಪಿಸಿದ್ದಲ್ಲದೆ, ತಮ್ಮ ಸ್ವಯಂ ಸೇವಕ ಸೇನೆಯನ್ನೂ ಬಲಪಡಿಸಬೇಕೆಂದು ಹೇಳಿದರು. ಪ್ರಸ್ತುತ ರಾಜಕೀಯ ಚಳುವಳಿಯಿಂದ ದೂರವಿರಬೇಕು ಎಂದು ಅವರಿಗೆ ಸಲಹೆ ಮಾಡಿದರು.

ಫೆಡರೇಷನ್ನಿನ ಅಧ್ಯಕ್ಷರಾದ ರಾವ್ ಬಹಾದೂರ್ ಎನ್. ಶಿವರಾಜ್ ಅವರು, ಡಾ. ಅಂಬೇಡ್ಕರ್

ಅವರು ವೈಸ್‌ರಾಯ್ ಅವರ ಪರಿಷತ್ತಿನ ಸದಸ್ಯರಾಗಿ ಮಾಡಿದ ಒಂದಷ್ಟು ಕೆಲಸವನ್ನು ಕುರಿತು ಉಲ್ಲೇಖಿಸಿದರು. ಅಮೆರಿಕಾದಲ್ಲಿ ಫೆಸಿಫಿಕ್ ರಿಲೇಷನ್ಸ್ ಕೌನಸಿಲ್‌ಗೆ ಭಾರತದ ನಿಯೋಗದ ಸದಸ್ಯರಲ್ಲೊಬ್ಬರಾಗಿ ಅವರು ಆಯ್ಕೆಯಾಗಿರುವುದನ್ನು ಬಹಿರಂಗ ಪಡಿಸುತ್ತಾ, ಸದ್ಯದಲ್ಲೇ ಅವರು ಆ ದೇಶಕ್ಕೆ ಹೊರಡಲಿದ್ದಾರೆ ಎಂದು ತಿಳಿಸಿದರು. ಸಭೆ ಮುಕ್ತಾಯವಾದ ನಂತರ ಅವರಿಗೆ ಮಾಲಾರ್ಪಣೆ ಮಾಡಲಾಯಿತು.

## ೮೨
## ಬ್ರಾಹ್ಮಣೇತರರ ಪಕ್ಷ ತಾನೇ ಪುನರ್ ನಿರ್ಮಾಣವಾಗಬೇಕು

ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ. ಬಿ.ಆರ್.ಅಂಬೇಡ್ಕರ್ ಅವರು ೧೨ನೇ ಜನವರಿ ೧೯೪೩ರಂದು ಪ್ರಾತಃಕಾಲ ಬೊಂಬಾಯಿಗೆ ಬಂದರು.

–ಎ.ಪಿ:

೧೭ನೇ ಜನವರಿ ೧೯೪೩ ಭಾನುವಾರ ಬೊಂಬಾಯಿ ಪರೇಲ್‌ನಲ್ಲಿರುವ ಆರ್.ಎಮ್.ಭಟ್ ಪ್ರೌಢಶಾಲೆಯಲ್ಲಿ, ಮರಾಠಾ ಮತ್ತು ಸಹವರ್ತಿ ಸಮುದಾಯಗಳು ಅವರಿಗೆ ಕೊಟ್ಟ ಒಂದು ಸತ್ಕಾರ ಕೂಟದಲ್ಲಿ ಮಾತನಾಡುತ್ತಾ, ಭಾರತ ಸರ್ಕಾರದ ಕಾರ್ಮಿಕ ಸದಸ್ಯ ಡಾ. ಬಿ.ಆರ್.ಅಂಬೇಡ್ಕರ್ ಅವರು ಭಾರತದಲ್ಲಿನ ಪ್ರಜಾಪ್ರಭುತ್ವ ಬ್ರಾಹ್ಮಣೇತರ ಪಕ್ಷದವರ ಕೈಗಳಲ್ಲಿ ಮಾತ್ರ ಸುರಕ್ಷಿತವಾಗಿರಬಲ್ಲದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮದರಾಸು ಮತ್ತು ಬೊಂಬಾಯಿಗಳಲ್ಲಿ ಅಧಿಕಾರದಲ್ಲಿದ್ದ ಬ್ರಾಹ್ಮಣೇತರರ ಪಕ್ಷ ಅನೇಕ ಕಾರಣಗಳಿಂದ ಒಡೆದು ಹೋಗಿರುವುದಕ್ಕೆ ತಮ್ಮ ವ್ಯಥೆಯನ್ನು ವ್ಯಕ್ತಪಡಿಸಿದರು; ಹಿಂದೆ ಮಾಡಿದ ತಪ್ಪುಗಳಿಂದ ಪಾಠ ಕಲಿತುಕೊಂಡು ಅವರ ಬೇರೆ ಬೇರೆ ಬಣಗಳ ಮಧ್ಯೆ ಇರುವ ಸಣ್ಣಪುಟ್ಟ ಅಭಿಪ್ರಾಯ ಬೇಧಗಳನ್ನು ಮರೆತು, ಪುನಃ ಒಂದು ಸಂಘಟಿತ ಶಕ್ತಿಯಾಗಿ ಪುನಾರಚಿಸಿಕೊಳ್ಳುತ್ತವೆಂಬ ಆಶಯವನ್ನು ವ್ಯಕ್ತಪಡಿಸಿದರು. ಒಂದು ಪಕ್ಷ ಜಯವನ್ನು ಸಾಧಿಸಬೇಕಾದರೆ ಮೂರು ಅಂಶಗಳು ಅವಶ್ಯಕವಾಗುತ್ತವೆ ಒಬ್ಬ ನಾಯಕ, ಒಳ್ಳೆಯ ಸಂಘಟನೆ ಮತ್ತು ಸ್ಪಷ್ಟವಾದ ಹಾಗೂ ನಿರ್ದಿಷ್ಟವಾದ ಉದ್ದೇಶ ಮತ್ತು ಕಾರ್ಯಕ್ರಮ. ಬ್ರಾಹ್ಮಣೇತರ ಪಕ್ಷದ ಅನೇಕ ಸದಸ್ಯರು ಪಕ್ಷವನ್ನು ತ್ಯಜಿಸಿ ಕಾಂಗ್ರೆಸ್ ಅನ್ನು ಸೇರಿಕೊಂಡಿರುವುದು ಮರುಕ ಉಂಟಾಗಿದೆ. ಆದರೆ ಅವರೀಗ ತಮ್ಮ ತಪ್ಪಿಗಾಗಿ ವ್ಯಥೆ ಪಟ್ಟುಕೊಳ್ಳುತ್ತಿದ್ದಾರೆ. ಆಯಾ ಸಮುದಾಯದ ಹಿತ ದೃಷ್ಟಿಯಿಂದ, ಅಲ್ಲದೆ ಭಾರತದಲ್ಲಿನ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ, ಬ್ರಾಹ್ಮಣೇತರರ ಪಕ್ಷ ಪುನರ್ ಸಂಘಟಿಸಿ ಒಂದು ಶಕ್ತಿಯಾಗಿ ಹೊರಹೊಮ್ಮಬೇಕು. ಅಧ್ಯಕ್ಷತೆ ವಹಿಸಿದ್ದ ರಾವ್ ಬಹಾದೂರ್ ಆರ್.ಎಸ್.ಅಥಾವಳ ಅವರು ಹಾಗೂ ರಾವ್ ಬಹಾದ್ದೂರ್ ಎಸ್.ಕೆ.ಬೋಳೆ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಮರಾಠಾ ಮತ್ತು ಇತರ ಸಹವರ್ತಿ ಸಮುದಾಯಗಳು ಒಗ್ಗಟ್ಟಿನಿಂದ ಇರಬೇಕಾದ ಪ್ರಾಮುಖ್ಯವನ್ನು ಒತ್ತಿ ಹೇಳುತ್ತಾ, ಅವರುಗಳ ಮತ್ತು ಡಾ. ಅಂಬೇಡ್ಕರ್ ಅವರ ನಾಯಕತ್ವದ ಪಕ್ಷದ ಮಧ್ಯೆ ಸಹಕಾರ ಇರಬೇಕೆಂದು ಒತ್ತಿ ಹೇಳಿದರು.

## ೮೩
## ಸೇನೆ, ನೌಕಾಪಡೆ ಮತ್ತು ವಾಯುಪಡೆಗಳಿಗೆ ಸೇರಿಕೊಳ್ಳಿ

೧೭ನೇ ಜನವರಿ ೧೯೪೩ರ ಸಾಯಂಕಾಲದಂದು ಡಾ. ಬಿ.ಆರ್.ಅಂಬೇಡ್ಕರ್ ಅವರು ನಯೀಗಾಂವ್‌ನಲ್ಲಿ ನಡೆದ ನಿಮ್ನ ವರ್ಗದಗಳವರ ಒಂದು ಸಭೆಯನ್ನು ಮಿ: ಎಸ್.ವಿ.ಅಪ್‌ಶ್ಯಾಮ್ ಮತ್ತು ಮಿ. ಶಿಂಥೆ ಅವರನ್ನು ಅವರು ಬೊಂಬಾಯಿನ ಮುನಿಸಿಪಲ್ ಶಾಲೆಗಳ ಸೂಪರ್ ವೈಸರುಗಳಾಗಿ ನೇಮಕಗೊಂಡಿರುವುದಕ್ಕೆ ಅಭಿನಂದಿಸುವ ಸಲುವಾಗಿ ಏರ್ಪಡಿಸಲಾಗಿತ್ತು.

ತಮ್ಮ ಸಮುದಾಯದ ಸದಸ್ಯರುಗಳನ್ನು, ಸೇನೆ, ನೌಕಾದಳ ಮತ್ತು ವಾಯುದಳಗಳನ್ನು ಸೇರಿಕೊಳ್ಳಲು ಸಿಕ್ಕಿರುವ ಸದಾವಕಾಶವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಿ ಎಂದು ಒತ್ತಾಯಪೂರ್ವಕ ಸಲಹೆ ಮಾಡಿದರು.

# ೮೪
# ಗಾಂಧಿ ಮತ್ತು ಜಿನ್ನಾ ನಿವೃತ್ತಿ ಆಗಬೇಕು

ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ. ಬಿ.ಆರ್.ಅಂಬೇಡ್ಕರ್ ಅವರು ಈ ದಿನ, ಅಂದರೆ ೨.೫.೧೯೪೩ರಂದು ಫ್ರಾಂಟಿಯರ್ ಮೇಲ್‌ನಲ್ಲಿ ಬೊಂಬಾಯಿಗೆ ಆಗಮಿಸಿದರು. ಡಾ. ಅಂಬೇಡ್ಕರ್ ಅವರು ಮೇ ೭ ಮತ್ತು ೮ನೇ ತಾರೀಖುಗಳೆಂದು ಕಾರ್ಮಿಕ ಪ್ರತಿನಿಧಿಗಳ, ಮಿಲ್ ಮಾಲೀಕರುಗಳ ಮತ್ತು ಸರ್ಕಾರದ ಒಂದು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ. ಬಿ.ಆರ್.ಅಂಬೇಡ್ಕರ್ ಅವರು ಮಾತನಾಡುತ್ತಾ, ಮಿ: ಗಾಂಧಿ ಮತ್ತು ಕಾಂಗ್ರೆಸ್ ಹೈಕಮಾಂಡಿನವರು ಸಂಪೂರ್ಣ ರಾಜಕೀಯ ದಿವಾಳಿತನ ಪ್ರದರ್ಶನ ಮಾಡಿದ್ದಾರೆ ಎಂದು ಒತ್ತಿ ಹೇಳುತ್ತಾ ಭಾನುವಾರ ೯ನೇ ಮೇ ೧೯೪೩ರಂದು ಬೊಂಬಾಯಿಯ ನಯಿಗಾಂವ್‌ನಲ್ಲಿ ನಡೆದ ಒಂದು ಸಮೂಹ ಸಭೆಯಲ್ಲಿ ಮಾತನಾಡುತ್ತಾ ಮಿ. ಗಾಂಧಿಯವರು ಸಕ್ರಿಯ ರಾಜಕಾರಣದಿಂದ ನಿವೃತ್ತಿ ಹೊಂದಬೇಕೆಂದು ಪ್ರತಿಪಾದಿಸಿದರು; ಅದೇ ರೀತಿ ಅಖಿಲ ಭಾರತ ಮುಸಲಿಮ್ ಲೀಗಿನ ಅಧ್ಯಕ್ಷರಾದ ಮಿ. ಜಿನ್ನಾರವರು ಒಂದು ಅಸಾಧ್ಯವಾದ ನಿಲುವಿಗೆ ಅಂಟಿಕೊಂಡಿದ್ದು, ಅವರೂ ಸಹ ನಿವೃತ್ತಿಯಾಗಬೇಕೆಂದು ಹೇಳಿದರು. ಇಬ್ಬರೂ ನಾಯಕರು ವೇದಿಕೆಯಿಂದ ನಿರ್ಗಮಿಸದ ಹೊರತು ಭಾರತ ರಾಜಕಾರಣವನ್ನು ಅದು ಈಗ ಬಿದ್ದಿರುವ ಉಸುಬಿನ ಗುಂಡಿಯಿಂದ ಮೇಲಕ್ಕೆತ್ತಲು ಯಾವುದೇ ಪ್ರಯತ್ನ ಸಂಪೂರ್ಣವಾಗಿ ನಿರರ್ಥಕವಾಗುತ್ತದೆ ಎಂದರು. ಆಗ ಮಾತ್ರ ದೇಶ ಅಭಿವೃದ್ಧಿ ಪಥದಲ್ಲಿ ಮುನ್ನಡೆಯನ್ನು ಸಾಧಿಸಲು ಭಾರತ ರಾಜಕೀಯ ಒಂದು ನೇರವಾದ ದಾರಿಯಲ್ಲಿ ಹೋಗಬಹುದೆಂದು ನಿರೀಕ್ಷಿಸಬಹುದೆಂದು ಹೇಳಿದರು.

ಮಿ. ಗಾಂಧಿಯವರು ಯಾವತ್ತೂ ಜನ್ಮ ತಾಳಿದ ರಾಜಕಾರಣಿಯವರುಗಳಲ್ಲಿ ಅತ್ಯಂತ ಹೆಚ್ಚು ಅದೃಷ್ಟಶಾಲಿ ಎಂದು ಹೇಳಬಹುದು ಎಂದರು. ಕೇವಲ ಕೇಳಿದ ಮಾತ್ರಕ್ಕೆ ಪರಿಣಾಮಕಾರಿ ರಾಜಕೀಯದ ಅವಶ್ಯಕತೆಗಳಿಗೆ ಬೇಕಾದ್ದೆಲ್ಲವೂ ಸಿಗುವುದರಿಂದ ಅವರು ಬಹಳ ಅದೃಷ್ಟಶಾಲಿಗಳಾಗಿದ್ದಾರೆ ಎಂದು ಹೇಳಬಹುದು. ಅವರಿಗೆ ಹೋಲಿಸಿದರೆ ಇತರ ರಾಜಕಾರಣಿಗಳಿಗೆ ಅವುಗಳನ್ನು ಪಡದುಕೊಳ್ಳುವುದಕ್ಕೆ ತಮ್ಮ ಇಡೀ ಜೀವಮಾನವನ್ನು ಕಳೆಯಬೇಕು ಎಂದು ಹೇಳಿದರು. ಮಿ. ಗಾಂಧಿಯವರಿಗೆ ಜನಬಲ ಮತ್ತು ಧನಬಲ ಯಥೇಚ್ಚವಾಗಿ ಇತ್ತು. ಆದರೆ ದಿವಂಗತ ತಿಲಕ್ ಮತ್ತು ರಾನಡೆಯವರಿಗೆ ಎಂದಿಗೂ ಧನಬಲವಿರಲಿಲ್ಲ ಮತ್ತು ಜನ ಬಲವನ್ನು ಸಂಘಟಿಸಲು ಅವರು ತಮ್ಮ ಇಡೀ ಜೀವಮಾನವನ್ನೇ ಕಳೆಯಬೇಕಾಯಿತು ಎಂದರು.

ಇಷ್ಟೆಲ್ಲಾ ಇದ್ದರೂ ಕೂಡ, ಕಳೆದ ೨೫ ವರ್ಷಗಳಲ್ಲಿ ಗಾಂಧಿಯವರ ರಾಜಕೀಯ ನಡೆ ಒಂದು ಸರಣಿ ಸೋಲುಗಳೇ ಆಗಿದ್ದಿತು. ಆದರೆ ಅವರ ರಾಜಕಾರಣ ಮಾತ್ರ ಗೋಖಲೆಯವರ ಅಥವಾ ರಾನಡೆಯವರ ಪ್ರಶಾಂತ ರಾಜಕಾರಣಕ್ಕೆ ಹೋಲಿಸಿದರೆ ಬಹಳ ಸಂಭ್ರಮ, ಸಡಗರ, ಕೋಲಾಹಲಕಾರಿಯಾದ ರಾಜಕಾರಣವಾಗಿತ್ತು. ಆದರೆ ಒಂದು ಮಾತ್ರ ಖಂಡಿತ, ಗೋಖಲೆಯವರ ಮತ್ತು ರಾನಡೆಯವರ ರಾಜಕಾರಣವಾಗಲೀ ಅಥವಾ ಅವರು ಅನುಸರಿಸಿದ ವಿಧಾನಗಳಾಗಲೀ ದೇಶವನ್ನು ಅದರ ಪ್ರಸ್ತುತ

ದುರಾದೃಷ್ಟ ಪರಿಸ್ಥಿತಿಯ ವಿಭಜನೆಯತ್ತ ಕೊಂಡು ಹೋಗುತ್ತಿರಲಿಲ್ಲ. ಮಿ. ಗಾಂಧಿಯವರ ರಾಜಕೀಯ ಆ ದುರಂತದಲ್ಲಿ ಪರ್ಯಾವಸಾನಗೊಂಡಿದೆ. ಸ್ವರಾಜ್ಯವನ್ನು ಪಡೆದುಕೊಳ್ಳುವುದರ ಬದಲು ಮತ್ತು ಆ ಒಂದೇ ಒಂದು ಪ್ರಶ್ನೆಯನ್ನು ಚರ್ಚೆ ಮಾಡುವುದರ ಬದಲು, ನಮ್ಮ ಪಯಣದ ಕೊನೆಯಲ್ಲಿ ನಾವೀಗ ಸಂಪೂರ್ಣವಾಗಿ ಬೇರೆಯಾದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಗೋಖಲೆಯವರಾಗಲೀ, ರಾನಡೆಯವರಾಗಲೀ ಇದು ಸಂಭವಿಸಲು ಬಿಡುತ್ತಿರಲಿಲ್ಲ.

ಮುಂದುವರೆಸುತ್ತಾ ಡಾ. ಅಂಬೇಡ್ಕರ್ ಅವರು, ಭಾರತೀಯರು ಗಾಂಧಿಯವರಲ್ಲಿ ಮತ್ತು ಕಾಂಗ್ರೆಸ್ ಹೈಕಮಾಂಡ್‌ನವರಲ್ಲಿ ಕುರುಡು ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ಭಾರತೀಯರು ವಿಮರ್ಶಾ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದು ಗಾಂಧಿಯವರು ಎಲ್ಲಿ ಎಡವಿದ್ದಾರೆ ಎಂದು ಹೇಳಲು ಅವರಿಗೆ ಧೈರ್ಯವಿಲ್ಲ ಎಂದರು. ಕ್ರಿಪ್ಸ್ ಪ್ರಸ್ತಾವಗಳನ್ನು ಕಾಂಗ್ರೆಸ್ ತಿರಸ್ಕರಿಸಿರುವುದನ್ನು ಪರಾಮರ್ಶಿಸುತ್ತಾ, ಪ್ರಸ್ತಾವನೆಗಳ ಬಗ್ಗೆ ಏನೇ ಹೇಳಬಹುದಾಗಿದ್ದರೂ, ಭವಿಷ್ಯದ ಮಟ್ಟಿಗೆ ಕ್ರಿಪ್ಸ್ ಪ್ರಸ್ತಾವನೆಗಳು ಕಾಂಗ್ರೆಸ್‌ನವರು ಬಯಸಿದ್ದರಲ್ಲಿ ನೂರಕ್ಕೆ ನೂರರಷ್ಟನ್ನು ಕೊಟ್ಟಿದೆ. ಪ್ರಸ್ತಾವನೆಗಳು ಅವರಿಗೆ ಸಂವಿಧಾನದ ಸ್ವರೂಪವನ್ನು ನಿರ್ಧರಿಸಲು ಬೇಕಾದ ಸಂವಿಧಾನ ಸಭೆಯನ್ನು ಕೊಟ್ಟಿದ್ದು ಅಲ್ಲದೆ ಸಂಪೂರ್ಣ ಸ್ವಾತಂತ್ರ್ಯ ಅಥವಾ ಸಾಮಂತ ರಾಜ್ಯ ಬೇಕೆ ಎಂಬ ಆಯ್ಕೆಯನ್ನು ಕೊಟ್ಟಿವೆ. ತತ್‌ಕ್ಷಣದ ಸರ್ಕಾರದ ಬಗ್ಗೆ ಹೇಳುವುದಾದರೆ, ಯುದ್ಧ ನಡೆಯುತ್ತಿರುವ ಸಂದರ್ಭಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಆ ಪ್ರಸ್ತಾವನೆಗಳು ಉದಾರವಾಗಿಯೇ ಇದ್ದವು. ಈ ದೇಶದ ರಕ್ಷಣೆಯ ವಿಷಯವೊಂದನ್ನು ಬಿಟ್ಟು ಮಿಕ್ಕೆಲ್ಲವನ್ನು ಪ್ರಸ್ತಾವನೆಗಳು ವರ್ಗ ಮಾಡಿದ್ದವು.

ರಾಜಕೀಯದಲ್ಲಿ ಮೊದಲ ಹೆಜ್ಜೆಗಳನ್ನು ಇಡುತ್ತಿರುವವನೂ ಸಹ, ೧೫ ಮಂದಿ ಒಂದು ಕಡೆ, ರಕ್ಷಣಾ ಮಂತ್ರಿಯೊಬ್ಬರು ಇನ್ನೊಂದು ಕಡೆ ಇದ್ದು ಯುದ್ಧಲ್ಲಿ ಮಂತ್ರಿಯವರಿಗೆ ಅಸಮಬಲದ ಯುದ್ಧವಾಗುತ್ತಿತ್ತು. ಅದೂ ಅಲ್ಲದೆ, ಯಾವನೇ ಪ್ರಜ್ಞಾವಂತ ಮನುಷ್ಯನೂ ಪ್ರಸ್ತುತಕ್ಕೆ ಸಂಬಂಧಿಸಿದ ಹಾಗೆ ಏನೋ ಒಂದು ಕೊರತೆ ಇದೆ ಎಂಬ ಕಾರಣಕ್ಕೆ ಅವುಗಳನ್ನು ತಿರಸ್ಕರಿಸುತ್ತಿರಲಿಲ್ಲ. ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ರಕ್ಷಣೆ ಮಾತ್ರ ಒಂದೇ ಸಾಧನ ಎಂಬುದನ್ನು ಅವರು ಒತ್ತಿ ಹೇಳಿದರು. ಅಖಿಲ ಭಾರತ ಅನುಸೂಚಿತ ಜಾತಿಗಳ ಫೆಡರೇಷನ್ ಅನ್ನು ಸೇರಿಕೊಳ್ಳುವಂತೆ ಅನುಸೂಚಿತ ಜಾತಿಗಳವರಿಗೆ ಮನವಿ ಮಾಡುತ್ತಾ, ಅವರುಗಳು ಇರುವ ಪರಿಸ್ಥಿತಿಯಲ್ಲಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೆ ಸಂಘಟಿತರಾಗಬೇಕೆಂದು ಡಾ. ಅಂಬೇಡ್ಕರ್ ಹೇಳಿದರು, ಸಂವಿಧಾನ ತ್ರಿಪಕ್ಷೀಯವಾಗಿರಬೇಕೆಂದು ನಮ್ಮ ನಿಲುವು. ದೇಶದ ರಾಜಕೀಯ ಜೀವನದಲ್ಲಿನ ಮುಕ್ತವಾದ, ಸ್ವತಂತ್ರವಾದ ಮತ್ತು ಮುಖ್ಯವಾದ ಘಟಕಾಂಶಗಳ ಹತೋಟಿಗೊಳಪಟ್ಟು ನಡೆಸಲ್ಪಡುವ ಸಂವಿಧಾನ ಅದಾಗಿರಬೇಕು. ತಮ್ಮ ರಾಜಕೀಯ ಮುನ್ನಡೆಗಾಗಿ ಮಾತ್ರ, ಅನುಸೂಚಿತ ಜಾತಿಗಳವರನ್ನು ಬಿಟ್ಟುಬಿಟ್ಟು ಹಿಂದೂಗಳು ಮತ್ತು ಮುಸ್ಲಿಮರು ತಮ್ಮ ತಮ್ಮಲ್ಲೇ ಒಪ್ಪಂದ ಮಾಡಿಕೊಳ್ಳುವುದಕ್ಕೆ ನಾವು ಅನುಮತಿಸುವುದಿಲ್ಲ. ಒಂದೇ ಒಂದು ಸಂಘಟನೆಯನ್ನು, ಅಂದರೆ, ಅಖಿಲ ಭಾರತ ಅನುಸೂಚಿತ ಜಾತಿಗಳ ಫೆಡರೇಷನ್ ಅನ್ನು ಅಸ್ತಿತ್ವಕ್ಕೆ ತರಲು ನಾವು ಪ್ರಸ್ತಾವಿಸುತ್ತಿದ್ದೇವೆ. ಈ ಸಂಘಟನೆ ಭಾರತದ ಎಲ್ಲೆಡೆ ಒಂದು ಜೀವಂತ ಘಟಕವಾಗಿ ಕೆಲಸ ಮಾಡುತ್ತಾ ನಿಮ್ಮ ವರ್ಗಗಳ ಆಶೋತ್ತರಗಳಿಗೆ ಸ್ಪಂದಿಸುತ್ತದೆ.

ತಾಂತ್ರಿಕ ಶಿಕ್ಷಣ ಪ್ರಾಮುಖ್ಯವನ್ನು ಒತ್ತಿ ಹೇಳುತ್ತಾ ಯಾವ ದೇಶವಾಗಲೀ ತಂತ್ರಜ್ಞರಿಲ್ಲದೆ ಮುಂದುವರಿಯಲು ಸಾಧ್ಯವಿಲ್ಲ. ಇಷ್ಟಲ್ಲದೆ, ತಾಂತ್ರಿಕ ತರಬೇತಿಗೆ ದೇಶದ ಕೈಗಾರಿಕಾ ಅಭಿವೃದ್ಧಿಯಲ್ಲಿ ಬಹು ದೊಡ್ಡದಾದ ಭವಿಷ್ಯವಿದೆ ಎಂದು ಹೇಳಿದರು.

## ೮೫
## ಯುದ್ಧಾ ನಂತರದ ಕಾಲದಲ್ಲಿ ಬಡತನವನ್ನು ಸಹಿಸಲಾಗುವುದಿಲ್ಲ

೧೦ನೇ ಮೇ ೧೯೪೩, ಸೋಮವಾರ ಮಧ್ಯಾಹ್ನ ಮಹಾರಾಷ್ಟ್ರ ಛೇಂಬರ್ಸ್ ಆಫ್ ಕಾಮರ್ಸ್‌ನ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ, ಡಾ. ಬಿ.ಆರ್.ಅಂಬೇಡ್ಕರ್ ಅವರು ಯುದ್ಧಾನಂತರದ ದಿನಗಳಲ್ಲಿ ಬಡತನವನ್ನು ಸಹಿಸಲಾಗುವುದಿಲ್ಲ ಎಂದು ಅವಲೋಕಿಸಿದರು. ಮುಂದಾಗಬಹುದಾದ ಸಾಧ್ಯತೆಗಳ ಬಗ್ಗೆ ಭವಿಷ್ಯವನ್ನು ನುಡಿಯಲಾಗದಿದ್ದರೂ, ಯುದ್ಧನಾಂತರದ ಕಾಲದಲ್ಲಿ, ಪರಿಸ್ಥಿತಿಗಳು ಎಷ್ಟು ಮೂಲಭೂತವಾಗಿ ಬದಲಾಗುತ್ತವೆಂದರೆ, ಬಡವನೊಬ್ಬ ಸುಸಂಸ್ಕೃತ, ಸುಧಾರಿತ ಜೀವನವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ತಾವು ಭಾವಿಸುವುದಾಗಿ ಹೇಳಿದರು. ಅವರ ಪ್ರಕಾರ ಶಾಶ್ವತ ಶಾಂತಿ ಎನ್ನುವುದು ಸಾರ್ವಭೌಮತ್ವ, ವರ್ಣ ಭೇದ ಮತ್ತು ಬಡತನ ಇವುಗಳನ್ನು ಜಯಪ್ರದವಾಗಿ ನಿವಾರಿಸುವುದರ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದರು. "ಸಾರ್ವಭೌಮತ್ವ" ಎನ್ನುವ ಪದ ಈಗ ಚರ್ವಿತ ಚರ್ವಣವಾಗಿ ಬಿಟ್ಟಿದೆ ಎಂದು ಹೇಳಿದರು. ಅದನ್ನು ಹೇಗೆ ಎದುರಿಸಿ ಪರಿಹರಿಸಬೇಕೆಂದರೆ ಭವಿಷ್ಯದಲ್ಲಿ ಮಾನವತ್ವದ ಶಾಂತಿ ಕದಡಲಾರದಂತೆ ನೋಡಿ ಕೊಳ್ಳಬೇಕು ಎಂದರು.

ಡಾ. ಅಂಬೇಡ್ಕರ್ ಅವರಿಗೆ, ಸೋಮವಾರ ಸಾಯಂಕಾಲ ಮಹರಾಷ್ಟ್ರ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷರಾದ ಮಿ. ಎಮ್.ಎಲ್. ದಹನೂಕರ್ ಅವರು ಚಹ ಕೂಟವನ್ನು ಏರ್ಪಡಿಸಿದ್ದರು.

## ೮೬
## ಸ್ವರಾಜ್ಯ ಕಾರ್ಮಿಕರ ಕೈಗಳಲ್ಲಿ ಇರಬಹುದಾಗಿದೆ

೧೦ನೇ ಮೇ ೧೯೪೩ರ ಸೋಮವಾರ ಸಾಯಂಕಾಲ ಭಾರತೀಯ ಕಾರ್ಮಿಕ ಫೆಡರೇಷನ್ನಿನ ಬೊಂಬಾಯಿ ಪ್ರೆಸಿಡೆನ್ಸಿ ಸಮಿತಿಯವರು, ಭಾರತ ಸರ್ಕಾರದ ಮಾನ್ಯ ಕಾರ್ಮಿಕ ಸದಸ್ಯರಾದ ಡಾ. ಬಿ.ಆರ್.ಅಂಬೇಡ್ಕರ್ ಅವರ ಗೌರವಾರ್ಥ ಏರ್ಪಡಿಸಿದ್ದ ಚಹ ಕೂಟದಲ್ಲಿ ಮಾತನಾಡುತ್ತಾ, ಭಾರತದಲ್ಲಿನ ಕಾರ್ಮಿಕ ಚಳುವಳಿಯ ಸಂಪೂರ್ಣ ಟೊಳ್ಳುತನ ಮತ್ತು ತೋರಿಕೆಯನ್ನು ಬಹಳ ಗಂಭೀರವಾಗಿ ಖಂಡಿಸಿದರು.

ಮಣಿಬೆನ್‌ಕಾರಾ ಅವರು ಡಾ. ಅಂಬೇಡ್ಕರ್ ಅವರನ್ನು ಸ್ವಾಗತಿಸುತ್ತಾ, ಕಾರ್ಮಿಕ ಚಳುವಳಿಯಲ್ಲಿ ಒಳಪಂಡಗಳಿರುವುದಕ್ಕೆ, ತೀವ್ರತರವಾದ ಭಿನ್ನಾಭಿಪ್ರಾಯವಿರುವುದಕ್ಕೆ ತಮ್ಮ ವ್ಯಥೆಯನ್ನು ವ್ಯಕ್ತಪಡಿಸಿದರು.

ಕಾರ್ಮಿಕ ಸದಸ್ಯರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಅತ್ಯಲ್ಪ ಕಾಲದಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿದ ಉತ್ತಮೀಕರಣದ ಕೆಲಸಕ್ಕೆ ಶ್ಲಾಘನೆ ಮಾಡಿದರು.

ಉತ್ತರ ಕೊಡುತ್ತಾ ಡಾ. ಅಂಬೇಡ್ಕರ್ ಅವರು ಕಾರ್ಮಿಕ ಮುಖಂಡರುಗಳನ್ನು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು, ಬಂಡವಾಳಶಾಹಿಯ ವಿರುದ್ಧ ಒಗ್ಗಟ್ಟಾಗಿ ಹೋರಾಡಬೇಕೆಂದು ಸಲಹೆ ಮಾಡಿದರು. ಬ್ರಿಟನ್ನಿನ ಕಾರ್ಮಿಕ ಚಳುವಳಿಯ ಬೆಳವಣಿಗೆಯನ್ನು ಪರಾಮರ್ಶಿಸುತ್ತಾ ಅದು ಹೇಗೆ ಸರ್ಕಾರದ ಲಗಾಮನ್ನು ಯಾವಾಗಲೂ ಮೇಲುಗೈ ಪಡೆದುಕೊಂಡಿದ್ದ ಟೋರಿ ಪಕ್ಷದವರಿಂದ ಎರಡು ಬಾರಿ ಕಿತ್ತುಕೊಂಡಿತೆಂಬುದನ್ನು ವಿವರಿಸಿದರು.

ಇದು ಭಾರತ ಕಾರ್ಮಿಕ ಚಳುವಳಿ ಅನುಸರಿಸಬೇಕಾದ ಒಂದು ಉದಾಹರಣೆಯೆಂದು ಹೇಳಿದರು.

ಬ್ರಿಟಿಷ್ ಕಾರ್ಮಿಕ ಪಕ್ಷದ ಮಾದರಿಯಂತೆ ಈ ದೇಶದಲ್ಲೂ ಸಹ ಒಂದು ಸಂಯುಕ್ತ ಕಾರ್ಮಿಕ ಪಕ್ಷವನ್ನು ಕಟ್ಟಬೇಕಾದ ಅವಶ್ಯಕತೆಯ ಕುರಿತು ಒತ್ತಿ ಹೇಳಿದರು.

ಮುಕ್ತಾಯ ಮಾಡುತ್ತಾ ಡಾ. ಅಂಬೇಡ್ಕರ್ ಅವರು ಇಂಗ್ಲೆಂಡಿನಲ್ಲಿ ಪ್ರಜಾಪ್ರಭುತ್ವಕ್ಕೆ ಸೋಲುಂಟಾಗಿದ್ದರೆ, ಅದಕ್ಕೆ ಕಾರಣ ಅದು ಟೋರಿಗಳ ಕೈಗಳಲ್ಲಿ ಇದ್ದುದು ಎಂದು ಹೇಳಿದರು. ಆದ್ದರಿಂದ ಯಾರ ಕೈಗಳಲ್ಲಿ ಸ್ವರಾಜ್ಯ ಇರಬೇಕೆಂಬುದು ಮುಖ್ಯವಾಗುತ್ತದೆ ಎಂದು ಹೇಳಿದರು.

ಭಾರತಕ್ಕೆ ಸ್ವರಾಜ್ಯ ಬಂದಾಗ ಅದು ಭಾರತದ ಕಾರ್ಮಿಕರ ಕೈಗೆ ಬರುವಂತೆ ನೋಡಿಕೊಳ್ಳಬೇಕೆಂದು ಅವರು ಕಾರ್ಮಿಕ ನಾಯಕರುಗಳನ್ನು ಹುರಿದುಂಬಿಸಿದರು.

# ೮೭
# ಹಕ್ಕುಗಳನ್ನು ಅನುಭವಿಸುವುದಕ್ಕೆ ಅರ್ಹತೆಯನ್ನು ಪಡೆಯಿರಿ

೧೯೪೩ನೇ ಇಸವಿ ಡಿಸೆಂಬರ್ ತಿಂಗಳ ೫ನೇ ತಾರೀಖಿನ ಸಾಯಂಕಾಲ ದಾದರ್‌ನ ಗೋಕುಲ್‌ದಾಸ್ ಪಾಸ್ತಾ ರಸ್ತೆಯ ಹತ್ತಿರ ಇರುವ ಮೈದಾನದಲ್ಲಿ, ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾದ ಡಾ. ಬಿ.ಆರ್.ಅಂಬೇಡ್ಕರ್ ಅವರಿಗೆ, ಪರಿಶಿಷ್ಟ ಜಾತಿಗಳ ಒಕ್ಕೂಟ ಬಂದು ಸ್ವಾಗತ ಸಮಾರಂಭವನ್ನು ಏರ್ಪಡಿಸಿತ್ತು. ಮಿ. ಬಿ.ವಿ.ಜಾಧವ್ ಅವರು ಅಧ್ಯಕ್ಷತೆ ವಹಿಸಿದ್ದರು.

ಅನೇಕ ಹಿಂದುಳಿದ ಸಂಘಟನೆಗಳ ಪರವಾಗಿ ಡಾ. ಬಿ.ಆರ್.ಅಂಬೇಡ್ಕರ್ ಅವರಿಗೆ ಮಾಲಾರ್ಪಣೆ ಮಾಡಲಾಯಿತು. ಅಭಿನಂದನೆಗಳಿಗೆ ಉತ್ತರ ಕೊಡುತ್ತಾ ಡಾ. ಅಂಬೇಡ್ಕರ್ ಅವರು ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನಲ್ಲಿ ಸದಸ್ಯರಾಗಿ ತಮ್ಮ ಚಟುವಟಿಕೆಗಳ ಬಗ್ಗೆ ಸಿಂಹಾವಲೋಕವನ್ನು ಮಾಡಿದರು; ಅಲ್ಲದೆ ಹಿಂದೂಗಳು ಮತ್ತು ಮುಸ್ಲಿಮರೊಂದಿಗೆ ಸಮಾನ ಸ್ಥಾನವನ್ನು ಪಡೆಯುವುದಕ್ಕಾಗಿ ಮತ್ತು ಶಾಸನಭೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಹೆಚ್ಚಿನ ಸ್ಥಾನಗಳಿಗಾಗಿ ಮಾಡಿದ ಪರಿಶ್ರಮಗಳ ಬಗ್ಗೆ ವಿವರಿಸಿದರು. ಪರಿಶಿಷ್ಟ ಜಾತಿಗಳನ್ನು ಮೇಲೆತ್ತುವುದಕ್ಕಾಗಿ ಸರ್ಕಾರದಿಂದ ಮೂರು ಲಕ್ಷ ರೂಪಾಯಿಗಳ ಅನುದಾನವನ್ನೂ ಸಹ ಪಡೆದುಕೊಂಡಿರುವುದಾಗಿ ಪ್ರಕಟಿಸಿದರು. ಫೆಡರೇಷನ್ ಅನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕೆಂದು ಸಭಿಕರನ್ನು ಪ್ರೋತ್ಸಾಹಿಸುತ್ತಾ, ಫೆಡರೇಷನ್ ಮಾತ್ರವೇ ನಿಮ್ಮ ರಾಜಕೀಯ ಹಕ್ಕುಗಳಿಗಾಗಿ ಹೋರಾಡಬಲ್ಲುದು ಎಂದು ಹೇಳಿದರು; ವಿದ್ಯಾವಂತರಾಗಿ, ಎಲ್ಲರ ಒಳಿತಿಗಾಗಿ ಒಂದಾಗಿರಿ, ನೀವು ಬೇಡುತ್ತಿರುವ ಹಕ್ಕುಗಳನ್ನು ಅನುಭವಿಸುವುದಕ್ಕೆ ಅರ್ಹತೆಯನ್ನು ಪಡೆಯಿರಿ ಎಂದು ಹೇಳಿದರು.

# ೮೮
# ಪರಿಶಿಷ್ಟ ಜಾತಿಗಳವರು ಹಿಂದುತ್ವವನ್ನು ತ್ಯಜಿಸಲೇಬೇಕು

೩೧.೧.೧೯೪೪ರಂದು ಕಾನ್‌ಪುರದಲ್ಲಿ ನಡೆದ ಪರಿಶಿಷ್ಟ ಜಾತಿಗಳವರ ಸಮ್ಮೇಳನದಲ್ಲಿ ಠರಾವುಗಳನ್ನು ಮುಗಿಸಿದ ಮೇಲೆ, ಮೂರು ಪರಿಶಿಷ್ಟ ಜಾತಿಗಳ ಸಂಸ್ಥೆಗಳು ಕೊಟ್ಟ ಸ್ವಾಗತ ಭಾಷಣಗಳಿಗೆ ಉತ್ತರ ಕೊಡುತ್ತಾ ಭವಿಷ್ಯದ ಭಾರತದಲ್ಲಿ ತಮ್ಮ ಸಮುದಾಯದ ಪಾತ್ರವೇನಿರಬೇಕೆಂದು ನಿಗದಿಪಡಿಸುತ್ತಾ, ಫೆಡರೇಷನ್ನಿನ ಬೆಂಬಲಕ್ಕಾಗಿ ಸಾಂಘಿಕ ಬಲವನ್ನು ವೃದ್ಧಿಗೊಳಿಸಬೇಕೆಂದು ಯುವಜನತೆಗೆ ಕರೆ ಕೊಟ್ಟರು. ಹೀಗೆ ಮಾಡುವುದರಿಂದ ಯಾವ ಪಕ್ಷವೇ ಆಗಲೀ, ಬ್ರಿಟಿಷ್ ಸರ್ಕಾರವೂ ಸೇರಿದಂತೆ, ಭಾರತದ ಸಾಂವಿಧಾನಿಕ ಬೆಳವಣಿಗೆಯ ಭವಿಷ್ಯದ ಯೋಜನೆಯಲ್ಲಿ ಅವರ ಪ್ರಾಮುಖ್ಯವನ್ನು ಗುರುತಿಸಲು ನಿರಾಕರಿಸುವ ಧೈರ್ಯ ಮಾಡುವುದಿಲ್ಲವೆಂದರು. ಭವಿಷ್ಯದ ಸ್ವತಂತ್ರ ಭಾರತದಲ್ಲಿ ನಾವೊಂದು ಆಳುವ ಜನಾಂಗವಾಗುತ್ತೇವೆಂದು ನಿಶ್ಚಯಿಸಲೇಬೇಕು. ನಾವು ಅತೀ ದೈನ್ಯತೆಯ ಪಾತ್ರವನ್ನು ಮುಂದುವರಿಸುವುದನ್ನಾಗಲೀ, ಅಥವಾ ಸೇವಕರಂತೆ ನಡೆಸಿಕೊಳ್ಳುವ ಸ್ಥಾನವನ್ನು ಒಪ್ಪಿಕೊಳ್ಳುವುದನ್ನಾಗಲೀ ತಿರಸ್ಕರಿಸಬೇಕು ಆದರೆ ಯಜಮಾನರ ಸ್ಥಾನವನ್ನಲ್ಲ ಎಂದು ಡಾ. ಅಂಬೇಡ್ಕರ್ ಘೋಷಿಸಿದರು.

ಭಾರತದಲ್ಲಿ ಯಾವತ್ತಾದರೂ ಸ್ವರಾಜ್ಯ ಸರ್ಕಾರ ಸ್ಥಾಪನೆಯಾದರೆ, ಹಿಂದೂಗಳು, ಮುಸ್ಲಿಮರು ಮತ್ತು ಪರಿಶಿಷ್ಟ ಜಾತಿಗಳವರು ರಾಜಕೀಯ ಅಧಿಕಾರವನ್ನು ಖಂಡಿತವಾಗಿಯೂ ಹಂಚಿಕೊಳ್ಳುತ್ತಾರೆ ಎಂದು ಹೇಳಿದರು.

ತಿಂಗಳಿಗೆ ೩೦ ರೂಪಾಯಿಗಳ ಕನಿಷ್ಟ ವೇತನ, ಕಾರ್ಮಿಕರಿಗೆ ವಸತಿ, ಬಡವರಿಗೆ ಅವರ ವೃದ್ಧಾಪ್ಯದಲ್ಲಿ ನೆರವಿಗೆ ಬರುವಂತೆ, ವಿರಾಮ ವೇತನ ಇವುಗಳನ್ನು ಖಾತರಿಯಾಗಿ ಕೊಡುವ ದಿನ ಬಂದೇ ಬರುತ್ತದೆಂದೂ ಚಿತ್ರಿಸಿಕೊಂಡರು.

ಕಾಂಗ್ರೆಸ್‌ಗೆ ಸೇರಿಕೊಳ್ಳುವಂತೆ ಸಲಹೆ ಮಾಡಿದ ಅವರ ಟೀಕಾಕಾರರಿಗೆ ಅವರು ಕೊಟ್ಟ ಉತ್ತರ ಸರಳವಾಗಿತ್ತು. ೨೦೦೦ ವರ್ಷಗಳಿಂದ ತುಳಿಯಲ್ಪಟ್ಟ ಸಮುದಾಯವಾದ ಅನುಸೂಚಿತ ಜಾತಿಗಳವರ ಮುಕ್ತಿ ನನಗೆ ಹೆಚ್ಚು ಪ್ರಾಮುಖ್ಯವಾದುದೆಂದು ನಾನು ಕಾಣುತ್ತೇನೆಂದರು. ದೇಶದ ಸ್ವರಾಜ್ಯಕ್ಕೆ ಕೆಲಸ ಮಾಡುವುದಕ್ಕಿಂತ ತಮ್ಮ ಸಮುದಾಯವನ್ನು ಮೇಲೆತ್ತುವುದಕ್ಕೆ ಕೆಲಸ ಮಾಡಲು ಆದ್ಯತೆ ಕೊಡುತ್ತೇನೆ ಎಂದರು.

೨೦೦೦ ವರ್ಷಗಳ ಅವರ ದೀರ್ಘಕಾಲದ ಬವಣೆಗಳಿಗೆ ಕಾರಣವೇನೆಂಬುದರ ಬಗ್ಗೆ ಚಿಂತಿಸಬೇಕೆಂದು ಜನಗಳಿಗೆ ಹೇಳಿದರು. ಆ ಬವಣೆಗೆ ಮುಖ್ಯ ಕಾರಣ ಒಂದು ಧರ್ಮ ಎಂದು ಅವರು ಒತ್ತಿ ಹೇಳಿದರು. ಪ್ರಪಂಚದಲ್ಲಿರುವ ಎಲ್ಲ ಧರ್ಮಗಳಿಗಿಂತ ಹೆಚ್ಚಾಗಿ, ವರ್ಣಭೇದ ಮತ್ತು ಅಸ್ಪೃಶ್ಯತೆಯನ್ನು ಮಾನ್ಯ ಮಾಡಿದ ಧರ್ಮವೆಂದರೆ ಹಿಂದೂ ಧರ್ಮ ಎಂದು ಹೇಳಿದರು. ಈ ದಿನಗಳಲ್ಲಿ ಕೂಡ ಗ್ರಾಮಗಳಲ್ಲಿ ಅವರು ಗೌರವಯುತವಾಗಿ ಬಾಳಲಾಗುತ್ತಿಲ್ಲವೆಂದು ವಿಷಾದದಿಂದ ಹೇಳಿದರು. ಆದುದರಿಂದ ಹಿಂದೂ ಧರ್ಮವನ್ನು ತ್ಯಜಿಸಬೇಕೆಂಬ ತಮ್ಮ ಸಂಕಲ್ಪವನ್ನು ಪುನರುಚ್ಚರಿಸುತ್ತಾ ಇನ್ನೆಂದಿಗೂ ಅವಮಾನಗಳಿಗೆ ತಲೆಬಾಗಬಾರದೆಂದು ಹೇಳಿದರು.

ನಮ್ಮಗಳ ಮೇಲೆ ಸವಾರಿ ಮಾಡುವುದನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಕಾರಣಕ್ಕಾಗಿ, ತನ್ನ ಸಮುದಾಯ ಅವಮಾನವನ್ನು ಸಹಿಸಿಕೊಂಡು ಹೋಗುತ್ತಿರುವುದು ತಮ್ಮನ್ನು ಎಲ್ಲಕ್ಕಿಂತ ಹೆಚ್ಚಾಗಿ ತಟ್ಟಿದೆ ಎಂದರು. ನಿಮ್ಮ ಸ್ವಂತ ಬಲದ ಮೇಲೆ ನಂಬಿಕೆ ಇಡಿ, ನೀವು ಇನ್ನಿತರ ಸಮುದಾಯಗಳಿಗಿಂತ ಯಾವುದೇ ರೀತಿಯಲ್ಲಿ ಕೀಳಲ್ಲ ಎಂದು ತನ್ನ ಜನಗಳನ್ನು ಹುರಿದುಂಬಿಸಿದರು.

ಮುಂದುವರಿಯುತ್ತಾ ಅವರ ರಾಜಕೀಯ ನಿಕಾಯವಾದ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಬೆಂಬಲವಾಗಿ ಸಾಂಘಿಕ ಬಲವನ್ನು ಕಟ್ಟಿಕೊಳ್ಳಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಮುಸ್ಲಿಮರಿಗೆ ಯಾವತ್ತೂ ಉದಾರತೆಯನ್ನು ತೋರಿಸಲು ಬ್ರಿಟಿಷ್ ಸರ್ಕಾರ ಸರ್ವದಾಸಿದ್ಧ ಎಂದು ಅವರು ಹೇಳಿದರು. ಒಂದು ವೇಳೆ ಕಾಂಗ್ರೆಸ್ ನಾಯಕರುಗಳು ಜೈಲಿನಿಂದ ಬಿಡುಗಡೆಯಾಗಿ ಬಂದಮೇಲೆ ಪಾಕಿಸ್ತಾನದ ವಿಷಯದ ಬಗ್ಗೆ ಮುಸ್ಲಿಮರೊಂದಿಗೆ ಸಮಾನತೆಯ ಆಧಾರದ ಮೇಲೆ, ಒಂದು ಒಪ್ಪಂದಕ್ಕೆ ಬಂದರೆ, ಆಗ ಅನುಸೂಚಿತ ಜಾತಿಗಳವರ ಪರಿಸ್ಥಿತಿ ಏನಾಗುತ್ತದೆ ಎಂದು ಕೇಳಿದರು. ಈ ಜಾತಿಗಳವರು ರಾಜಕೀಯ ಅಧಿಕಾರಗಳಲ್ಲಿ ಪಾಲು ಪಡೆಯಬೇಕೆಂದರೆ, ಅವರು ಒಂದು ಗಟ್ಟಿ ಘಟಕವಾಗಿ ಸಂಘಟಿತರಾಗಬೇಕು; ಆಗ ಮಾತ್ರ ದೇಶದ ಭವಿಷ್ಯತ್ ಆಡಳಿತದಲ್ಲಿ ತಮಗೆ ಸಲ್ಲಬೇಕಾದ ನ್ಯಾಯತೆ, ಹಕ್ಕುಗಳಿಗೆ ಗೆಲುವು ದೊರಕುವಂತೆ ಹೋರಾಡಲು ಸಾಧ್ಯ ಎಂದು ಹೇಳಿದರು.

ಮಹಿಳೆಯರ ಕೊಡುಗೆಯ ಮೌಲ್ಯವನ್ನು ಒತ್ತಿ ಹೇಳುತ್ತಾ, ಅವರುಗಳು ಸಕ್ರಿಯವಾಗಿ ಚಳುವಳಿಯನ್ನು ತೀಕ್ಷ್ಣಗೊಳಿಸುವ ಕೆಲಸದಲ್ಲಿ ತೊಡಗಿಕೊಳ್ಳದ ಹೊರತು, ಅದಕ್ಕೆ ಜಯ ದೊರಕುವುದಿಲ್ಲವೆಂದು ಹೇಳಿದರು. ಪ್ರತಿಯೊಂದು ಪಟ್ಟಣ ಮತ್ತು ಹಳ್ಳಿಯಲ್ಲಿ ಸ್ವಯಂ ಸೇವಕದಳವನ್ನು ಕಟ್ಟಿ ಸಮ್ಮೇಳನದ ಸಂದೇಶವನ್ನು ಪಟ್ಟಣಗಳಿಂದ ೨೦೦ ಮೈಲಿಯಷ್ಟು ದೂರವಿರುವ ಹಳ್ಳಿಗಳಲ್ಲಿ ಹರಡಬೇಕೆಂದು ಹೇಳಿದರು.

ನಡವಳಿಗಳನ್ನು ಮುಕ್ತಾಯಗೊಳಿಸುತ್ತಾ, ಮಿ. ಶಿವರಾಜ್ ಅವರು, ಎರಡು ದಿನಗಳ ಅಧಿವೇಶನ ಮುಕ್ತಾಯವಾಯಿತೆಂದು ಹೇಳಿ, ಡಾ. ಅಂಬೇಡ್ಕರ್ ಅವರು ತಮ್ಮ ಸಮುದಾಯಕ್ಕೆ ಮಾಡಿದ ಸೇವೆಗಳಿಗೆ ಮೆಚ್ಚುಗೆಯ ಧ್ವನಿಗಳ ಮಧ್ಯೆ, ಘೋಷಣೆ ಮಾಡಿದರು.

# ೮೯
# ಈಗ ಅಥವಾ ಇನ್ನಾವಾಗಲೂ ಇಲ್ಲ ಎಂಬ ಪ್ರಶ್ನೆ ಪರಿಶಿಷ್ಟ ಜಾತಿಗಳ ಮುಂದೆ ಇದೆ

ಪರಿಶಿಷ್ಟ ಜಾತಿಗಳವರ ಮುಂದೆ ಇರುವ ಪ್ರಶ್ನೆ "ಈಗಲೇ ಅಥವಾ ಎಂದಿಗೂ ಇಲ್ಲ" ಎಂದು ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಕಾರ್ಮಿಕ ಸದಸ್ಯರಾದ ಡಾ. ಅಂಬೇಡ್ಕರ್ ಅವರು ೨೬.೮.೧೯೪೪ರ ರಾತ್ರಿ ಕೊಲ್ಕತ್ತಾದಲ್ಲಿ ಅನೇಕ ಪರಿಶಿಷ್ಟ ಜಾತಿಗಳವರ ಸಂಘಟನೆಗಳು ಅವರಿಗೆ ಸಮರ್ಪಿಸಿದ ಸ್ವಾಗತ ಭಾಷಣಕ್ಕೆ ಉತ್ತರ ಕೊಡುತ್ತಾ ಹೇಳಿದರು.

ಭಾರತ ಸಂವಿಧಾನ ಭಾರತವನ್ನು ಒಂದು ಸಾಮಂತ ರಾಜ್ಯವನ್ನಾಗಿ ಮಾಡುತ್ತದೆಂದು ಡಾ. ಅಂಬೇಡ್ಕರ್ ಅವರು ವಿವರಿಸಿದರು. ಸಾಮಂತ ರಾಜ್ಯದ ಮೂಲಭೂತ ಇಂಗಿತಗಳಲ್ಲಿ ಒಂದೆಂದರೆ, ಚಕ್ರವರ್ತಿಯವರ ಸರ್ಕಾರಕ್ಕೆ ಭಾರತ ಸಂವಿಧಾನದ ರಚನೆಯಲ್ಲಿ ಮಧ್ಯ ಪ್ರವೇಶಿಸಲು ಯಾವ ಹಕ್ಕು ಇರುವುದಿಲ್ಲ. ಆದುದರಿಂದ ಪರಿಶಿಷ್ಟ ಜಾತಿಗಳವರಿಗೆ ಈಗ ಏನೇ ಕೊರತೆ ಇರಬಹುದಾಗಿದ್ದರೂ ಆ ಕೊರತೆಯನ್ನು ಈಗ ತುಂಬಿಸದಿದ್ದರೆ, ಅವರಿಗೆ ಮುಂದೆಂದೂ ತಮ್ಮ ರಾಜಕೀಯ ಹಕ್ಕೊತ್ತಾಯವನ್ನು ಭಾರತದಲ್ಲಿ ಮುಂದು ಮಾಡಲು ಅವಕಾಶವೇ ಇರುವುದಿಲ್ಲ ಎಂದು ಹೇಳಿದರು. ಆದ್ದರಿಂದ ಈಗ ಅಥವ ಎಂದೆಂದಿಗೂ ಇಲ್ಲ ಎಂಬುದೇ ಪ್ರಶ್ನೆ. ಗೆಲುವು ಹತ್ತಿರವಾಗಿದೆ ಆದರೆ ಈಗ ತಮಗೆ ಒಗ್ಗಟ್ಟು ಮಾತ್ರ ಬೇಕಾಗಿದೆ ಎಂದು ಅವರು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರು.

ಗಾಂಧಿಯವರ ಇಡೀ ಜೀವನ, ಅವರ ರಾಜಕೀಯ ಚಟುವಟಿಕೆಗಳು ಮತ್ತು ರಾಜಕೀಯ ತಂತ್ರಗಾರಿಕೆ ಎಲ್ಲವೂ ಅಲ್ಪ ಸಂಖ್ಯಾತರ ಬೇಡಿಕೆಗಳನ್ನು ನಿರ್ಲಕ್ಷಿಸುವುದರತ್ತ ಆಗಿದೆ ಎಂದು ಡಾ. ಅಂಬೇಡ್ಕರ್ ಹೇಳಿದರು, ನಾಗರಿಕ ಅಸಹಕಾರ ಚಳುವಳಿ, ಉಪ್ಪು ಕಾನೂನನ್ನು ಉಲ್ಲಂಘಿಸುವುದು ಮತ್ತೆಲ್ಲಾ ತಮಾಷೆಗಳನ್ನು ಮಾಡುತ್ತಿರುವ ಗಾಂಧಿಯವರಿಗೆ ಬೇರೇನೂ ಉದ್ದೇಶವಿಲ್ಲ ಎಂದರು. ಅಲ್ಪ ಸಂಖ್ಯಾತರ ರಾಜಕೀಯ ಬೇಡಿಕೆಗಳನ್ನು ನಿರ್ಲಕ್ಷಿಸುವುದಕ್ಕೆ ಆಗುವುದಿಲ್ಲವೆಂದು, ಮುಸಲ್ಮಾನರು ಮತ್ತು ಸಿಖ್ಖರೊಂದಿಗೆ ಒಂದು ಒಪ್ಪಂದಕ್ಕೆ ಬರಲೇಬೇಕೆಂದು ಗಾಂಧೀಜಿಯವರಿಗೆ ಈಗ ಅರ್ಥವಾಗಿದೆ ಎಂದು ಹೇಳಿದರು. ಆದರೆ ಪರಿಶಿಷ್ಟ ಜಾತಿಗಳ ಸಮುದಾಯದ ಬೇಡಿಕೆಗಳನ್ನು ಮಾನ್ಯ ಮಾಡುವುದಕ್ಕೆ ಅವರಿಗೆ ಯಾವ ಇಚ್ಛೆಯೂ ಇಲ್ಲವೆಂದು ಹೇಳಿದರು. ಪರಿಶಿಷ್ಟ ಜಾತಿಗಳವರು ಒಂದು ನಿರ್ಬಲ ಜನರಾಗಿದ್ದಾಗ್ಯೂ ದೈವ ಅವರಿಗೆ ಯಾವಾಗಲೂ ಸಹಾಯವನ್ನು ಮಾಡುತ್ತಾ ಬಂದಿದೆ; ಏಕೆಂದರೆ ಕ್ರಿಪ್ಸ್ ಆಯೋಗಕ್ಕೇನಾದರೂ ಜಯ ಸಿಕ್ಕಿದ್ದರೆ ನಮಗೆ ಯಾವ ವಿಪತ್ತು ಒದಗಿ ಬರುತ್ತಿತ್ತೆಂಬುದನ್ನು ನೀವು ಕಲ್ಪಿಸಿಕೊಳ್ಳಬಲ್ಲಿರಿ ಎಂದರು. ಅದು ನಿಷ್ಫಲವಾಗಿದ್ದಕ್ಕೆ ನಾನು ದೇವರನ್ನು ವಂದಿಸುತ್ತೇನೆಂದರು.

ವೈಸ್‌ರಾಯ್ ಅವರು ಬ್ರಿಟಿಷರಿಂದ ಭಾರತೀಯರ ಕೈಗಳಿಗೆ ಅಧಿಕಾರವನ್ನು ವರ್ಗಾಯಿಸುವುದಕ್ಕೆ ಯಾವ ಮೂಲಭೂ*ತ ನಿಯಮಗಳನ್ನು ಒಡ್ಡಿದ್ದರೆಂದು, ಗಾಂಧೀಜಿಯವರೊಂದಿಗಿನ ಇತ್ತೀಚಿನ ಪತ್ರ ವ್ಯವಹಾರದಲ್ಲಿ ತಿಳಿಸಿದ್ದರೆಂದೂ, ಕೇವಲ ಹಿಂದೂಗಳು ಮತ್ತು ಮುಸಲ್ಮಾನರೊಡನೆ ಮಾಡಿಕೊಳ್ಳುವ ಒಪ್ಪಂದ ಸಾಕಾಗುವುದಿಲ್ಲವೆಂದೂ ಹೇಳಿದ್ದರು; ಒಂದು ತ್ರೈಪಾಕ್ಷಿಕ ಒಪ್ಪಂದವಿರಬೇಕೆಂದೂ ಮತ್ತು ಪರಿಶಿಷ್ಟ

ಜಾತಿಗಳವರೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ರಾಜಕೀಯ ಅಧಿಕಾರವನ್ನು ಹಸ್ತಾಂತರಿಸುವುದಕ್ಕೆ ಒಂದು ಪೂರ್ವ ನಿಬಂಧನೆಯೆಂದು ಹೇಳಿದರು. ಅಂಥದೊಂದು ಘೋಷಣೆಗಾಗಿ ನಾವು ಬಹಳ ಕೃತಜ್ಞರಾಗಿರಬೇಕೆಂದು ಹೇಳಿದರು. ಹಿಂದೂ ಮಹಾಸಭೆಯವರು ಪರಿಶಿಷ್ಟ ಜಾತಿಗಳ ನ್ಯಾಯಯುತವಾದ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಸಿದ್ಧವಾಗಿದ್ದರೆ ತಾವು ಖಂಡಿತವಾಗಿಯೂ ಹಿಂದೂ ಮಹಾಸಭೆಯನ್ನು ಸೇರಲು ಸಿದ್ಧವೆಂದು ಹೇಳಿದರು. ಅದೇ ರೀತಿ ಕಾಂಗ್ರೆಸ್‌ನವರೇನಾದರೂ ನಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಸಿದ್ಧವಿದ್ದರೆ ತಾವು ಕಾಂಗ್ರೆಸ್ ಅನ್ನು ಸೇರಿಕೊಳ್ಳಲು ಯಾವ ಹಿಂಜರಿಕೆಯೂ ಇಲ್ಲವೆಂದು ಹೇಳಿದರು.

ಆದರೆ ಪ್ರಶ್ನೆಯೆಂದರೆ, ಈ ಸಂಸ್ಥೆಗಳು ಪರಿಶಿಷ್ಟ ಜಾತಿಗಳ ಸ್ನೇಹಿತರೋ ಅಥವಾ ಶತೃಗಳೋ ಎಂಬುದೇ ಆಗಿದೆ ಎಂದರು.

# ೯೦
# ನಿಮ್ನ ವರ್ಗಗಳವರು ಹಿದೂ ಸಮುದಾಯದ ಭಾಗವಲ್ಲ

ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾದ ಡಾ. ಬಿ.ಆರ್.ಅಂಬೇಡ್ಕರ್ ಅವರು ಈ ಅಪರಾಹ್ನ ಅಂದರೆ ೨೦ನೇ ಸೆಪ್ಟೆಂಬರ್ ೧೯೪೪ರಂದು ಮದರಾಸ್ ಎಕ್ಸ್‌ಪ್ರೆಸ್‌ನಲ್ಲಿ ಬೊಂಬಾಯಿನಿಂದ ಹೈದರಾಬಾದಿಗೆ ಹೊರಟಿದ್ದಾರೆ. ಅವರ ಸಂಗಡ ಹಲವು ನಿಮ್ನ ವರ್ಗಗಳ ನಾಯಕರುಗಳೂ ಇದ್ದಾರೆ.

ಒಂದು ದಿನದ ಮಟ್ಟಿಗೆ ಮದರಾಸಿಗೆ ತೆರಳುವರೆಂದು ತಿಳಿದು ಬಂದಿದೆ; ಅಲ್ಲಿ ಅವರು ಭಾರತದ ಭವಿಷ್ಯತ್ತಿನ ಸಂವಿಧಾನದ ಕೆಳಗೆ, ನಿಮ್ನ ವರ್ಗಗಳವರ ಸ್ಥಿತಿಗತಿಯನ್ನು ಕುರಿತು ಒಂದು ಬಹುಮುಖ್ಯವಾದ ಹೇಳಿಕೆಯನ್ನು ಕೊಡುವವರಿದ್ದಾರೆ. ಆ ಹೇಳಿಕೆ ಗಾಂಧಿ–ಜಿನ್ನಾ ಮಾತುಕತೆಗಳ ಫಲಿತಾಂಶದ ಮೇಲೆ ಆಧಾರಪಟ್ಟಿದೆಯೆಂದು ನಂಬಲಾಗಿದೆ.

ಡಾ. ಬಿ.ಆರ್.ಅಂಬೇಡ್ಕರ್ ಅವರು ದಕ್ಷಿಣ ಭಾರತದ ಪ್ರವಾಸದಲ್ಲಿದ್ದಾಗ, ಮೊದಲ ಬಾರಿಗೆ ನಿಜಾಮರ ಹೈದರಾಬಾದ್ ಪ್ರಾಂತ್ಯಗಳಿಗೆ ೨೦.೯.೪೪ರಂದು ಭೇಟಿಕೊಟ್ಟರು. ಅವರನ್ನು ನಾಂಪಲ್ಲಿ ಮತ್ತು ಸಿಕಂದರಾಬಾದ್‌ಗಳಲ್ಲಿ ಆತ್ಮೀಯತೆ ಮತ್ತು ತುಂಬು ಹೃದಯದಿಂದ ಸ್ವಾಗತಿಸಲಾಯಿತು. ಬೇಗುಪೇಟೆ ರೈಲ್ವೆ ನಿಲ್ದಾಣದಲ್ಲಿ ಅವರನ್ನು ಹೈದರಾಬಾದ್ ಪ್ರಾಂತ್ಯಗಳ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಅಧ್ಯಕ್ಷರಾದ ಮಿ. ಜೆ.ಸುಬ್ಬಯ್ಯ ಅವರು, ಶ್ರೀಮತಿ ಸುಬ್ಬಯ್ಯ, ಶ್ರೀಮತಿ ರಾಜಮಣಿ ದೇವಿ ಮತ್ತು ಮಿ. ಮಾದ್ರೆ ಅವರು ಸ್ವಾಗತಿಸಿದರು.

ಹೈದರಾಬಾದಿನ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಪುರುಷರು ಮತ್ತು ಮಹಿಳೆಯರಿಂದ ಅವರಿಗೆ ದೊರೆತ ಉತ್ಸಾಹ ಭರಿತ ಸ್ವಾಗತದಿಂದ ಅವರ ಭೇಟಿ ಸ್ಮರಣೀಯವಾಯಿತು. ಮಹಿಳಾ ಸ್ವಯಂಸೇವಕಿಯರು ಅವರಿಗೆ ಕೊಟ್ಟ ಗೌರವ ರಕ್ಷೆ ಎಷ್ಟು ಚಿತ್ತಾಕರ್ಷಕವಾಗಿತ್ತೆಂದರೆ, ಅಂಥ ಗೌರವ ರಕ್ಷೆ ವೈಸ್‌ರಾಯ್ ಅವರಿಗೂ ಕೂಡ ಎಂದೆಂದಿಗೂ ಸಿಕ್ಕಿರಲಾರದ ಹಾಗೆ ಇತ್ತು. ಇಡೀ ವಾತಾವರಣ ಅಂಬೇಡ್ಕರ್ ಜಿಂದಾಬಾದ್ ಎಂದು ಘೋಷ ವಾಕ್ಯದಿಂದ ತುಂಬಿ ಹೋಗಿತ್ತು. ಅವರನ್ನು ಸಿಕಂದರಾಬಾದ್ ರೈಲ್ವೆ ನಿಲ್ದಾಣದಿಂದ ಪಾಚ್–ಬಂಧು–ಸೇವ್ ಸಭಾಂಗಣಕ್ಕೆ ಕರೆದುಕೊಂಡು ಹೋಗಲಾಯಿತು. ಮತ್ತು ಅಲ್ಲಿಂದ ಸಮಾರಂಭ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಲಾಯಿತು. ಆ ಸಂದರ್ಭದಲ್ಲಿ ಸ್ವಾಗತ ಸಮಿತಿ ಮುಖ್ಯಸ್ಥರಾದ ಪ್ರೇಮ್ ಕುಮಾರ್ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು ಮತ್ತು ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಪರವಾಗಿ ಮಿ. ಜೆ.ಎಚ್. ಸುಬ್ಬಯ್ಯನವರು ಅವರಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿದರು.

ಡಾ. ಅಂಬೇಡ್ಕರ್ ಅವರು ಕಿವಿಗಡಚಿಕ್ಕುವ ಚಪ್ಪಾಳೆಗಳ ಮಧ್ಯೆ ಮಾತನಾಡಲು ಎದ್ದು ನಿಂತರು. ಅವರು ಹಿಂದಿಯಲ್ಲಿ ೪೫ ನಿಮಿಷಗಳವರೆಗೆ ಮಾತನಾಡಿದರು. ತಮ್ಮ ಮನತಟ್ಟುವ ಭಾಷಣದಿಂದ ಸಭಿಕರನ್ನು ಮಂತ್ರ ಮುಗ್ಧರನ್ನಾಗಿ ಮಾಡಿದರು; ಅವರ ಭಾಷೆ ಜನಗಳ ಹೃದಯವನ್ನು ಮುಟ್ಟಿತು. ತಮ್ಮ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರು, ಅಲ್ಲಿ ನೆರೆದಿದ್ದವರನ್ನೆಲ್ಲಾ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಧ್ವಜದಡಿಯಲ್ಲಿ ಒಗ್ಗಟ್ಟಿನಿಂದ ಇರುವಂತೆ ಮನವಿ ಮಾಡಿದರು.

ಪರಿಶಿಷ್ಟ ಜಾತಿಗಳವರ ಸದಸ್ಯರುಗಳಿಗೆ ಸಮಾನ ನ್ಯಾಯ ಮತ್ತು ಅವರಿಗೆ ಸಿಗಬೇಕಾದ ಹಕ್ಕುಗಳಿಗೆ

ಮತ್ತು ಸವಲತ್ತುಗಳಿಗೆ ಮನ್ನಣೆ ಸಿಗದೇ ಹೋದರೆ ಅವರು ತಮ್ಮ ಪ್ರಾಣಗಳನ್ನೇ ಪಣಕ್ಕಿಟ್ಟು ಹೊಡೆದಾಡುತ್ತಾರೆ ಎಂದು ಡಾ. ಅಂಬೇಡ್ಕರ್ ಎಚ್ಚರಿಸಿದರು. ರಾಜಕೀಯ ಅಧಿಕಾರ ಯಾರಿಗಾದರೂ ಸೇರಬೇಕಾಗಿದ್ದರೆ ಅದು ಮೂರೂ ಪಕ್ಷಗಾರರಿಗೆ ಅಂದರೆ ಹಿಂದೂಗಳು, ಮುಸ್ಲಿಮರು ಮತ್ತು ಪರಿಶಿಷ್ಟ ಜಾತಿಗಳವರಿಗೆ ಸೇರಬೇಕೆಂದು ಡಾ. ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದರು. ಅವರಿಗೆ ಸಿಗಬೇಕಾದ ನ್ಯಾಯಯುತವಾದ ಸ್ಥಾನವನ್ನು ಯಾರೂ ಸಹ ನಿರಾಕರಿಸಲಾಗುವುದಿಲ್ಲ ಎಂದು ಒತ್ತಿ ಹೇಳಿದರು. ಎರಡನೇ ದುಂಡು ಮೇಜಿನ ಸಮ್ಮೇಳನದ ನೆನಪುಗಳನ್ನು ಜ್ಞಾಪಿಸಿಕೊಳ್ಳುತ್ತ ಡಾ. ಅಂಬೇಡ್ಕರ್ ಅವರು ಗಾಂಧಿ ಅವರಿಗೆ ಮೊದಲನೆ ದುಂಡುಮೇಜಿನ ಸಮ್ಮೇಳನದಲ್ಲಿ ವಿವಿಧ ಪಕ್ಷಗಳ ತಂತ್ರಗಾರಿಕೆ ಮತ್ತು ಕುತಂತ್ರಗಳ ಬಗ್ಗೆ ಯಾವ ತಿಳುವಳಿಕೆಯೂ ಇರಲಿಲ್ಲವೆಂದು ಹೇಳಿದರು. ಆದಕಾರಣ ಮುಂದೆ ಯಾವ ಕಡಿದಾದ ಭೂಮಿಯಿದೆ ಎಂಬುದರ ಬಗ್ಗೆ ಅವರನ್ನು ಎಚ್ಚರಿಸಬೇಕೆಂದು ನಾನು ಕಳವಳಗೊಂಡಿದ್ದೆ ಎಂದು ಹೇಳಿದರು. ಈ ವಿಷಯದೊಂದಿಗೆ, ಫೆಡರಲ್ ರಚನಾ ಉಪಸಮಿತಿಯ ಮುಂದೆ ಮಾತನಾಡಲು ಮೊದಲನೇ ಅವಕಾಶವನ್ನು ಬಳಸಿಕೊಂಡರು. ಇದರಿಂದಾಗಿ ಈ ಅವ್ಯವಹಾರಗಳನ್ನೆಲ್ಲಾ ಬಯಲು ಮಾಡುವುದಕ್ಕೆ ನನಗೆ ಸಾಧ್ಯವಾಯಿತು ಎಂದು ಹೇಳಿದರು. ಕೆಲವು ಸಮಯದ ನಂತರ, ಅಂಬೇಡ್ಕರ್ ಅವರು ಮಾತನಾಡಿದ ಮೇಲೆ ಮಾತನಾಡಿದ ಗಾಂಧಿಯವರು, ನನ್ನ ಹೃದಯ ಡಾ. ಅಂಬೇಡ್ಕರ್ ಅವರೊಂದಿಗೆ ಇದೆ. ಆದರೆ ನನ್ನ ತಲೆ ಅವರೊಂದಿಗೆ ಇಲ್ಲ ಎಂದು ಹೇಳಿದರು. ಮರುದಿನ ಪ್ರಾತಃಕಾಲ ನಡವಳಿಗಳು ಪ್ರಾರಂಭವಾಗುವುದಕ್ಕೆ ಮುಂಚೆ, ಅವರು ತಮ್ಮಿಬ್ಬರ ನಡುವೆ ಜಗಳ ಉಂಟು ಮಾಡಿರುವ ಕಾರಣಗಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಗಾಂಧಿಯವರಿಗೆ ಕೇಳಿದರು. ಭಾರತದ ರಾಜರುಗಳಿಗೆ, ನಾಮ ನಿರ್ದೇಶನದ ಮೂಲಕ ಪ್ರಾತಿನಿಧ್ಯವನ್ನು ಕೊಡುವುದನ್ನು ತಾವು ಸ್ವಾಗತಿಸುವುದಾಗಿ ಹೇಳಿಕೆ ಕೊಡಲು ಅವರಿಗೆ ಕಾಂಗ್ರೆಸ್‌ನಿಂದ ಏನಾದರೂ ಅಧಿಕಾರ ಕೊಡಲಾಗಿತ್ತೇ ಮತ್ತು ಅಪರೋಕ್ಷ ಚುನಾವಣೆಗೆ ಕಾಂಗ್ರೆಸ್‌ನವರಿಗೆ ವಿರೋಧವಿರಲಿಲ್ಲವೇ ಎಂದು ಕೇಳಿದ ಪ್ರಶ್ನೆಗೆ ಗಾಂಧೀಜಿಯವರು ತಮಗೆ ಯಾವ ಆಕ್ಷೇಪಣೆಯೂ ಇರಲಿಲ್ಲವೆಂದು ಹೇಳಿದರು ಮತ್ತು ಹೋಂ ರೂಲ್ ಮಸೂದೆಗೆ, ಅದೇ ಕಾರಣಕ್ಕಾಗಿ ಕಾಂಗ್ರೆಸ್‌ನವರು ತಿರಸ್ಕರಿಸಲಿಲ್ಲವೇ ಎಂಬ ಪ್ರಶ್ನೆಗೆ ಗಾಂಧಿಯವರು ಉತ್ತರಿಸಲು ನಿರಾಕರಿಸಿದ್ದರು. ಇಲ್ಲಿ ನಾನು ನಿದರ್ಶನಗೊಳಿಸಲು ಇಷ್ಟಪಡುವುದೇನೆಂದರೆ, ಯಾರಾದರೂ ಭಾರತ ದೇಶವನ್ನು ಕೈಬಿಟ್ಟಿದ್ದರೆ, ಅದು ನಾನಲ್ಲ, ಪರಿಶಿಷ್ಟ ಜಾತಿಗಳವರಿಂದ ಅಲ್ಲ, ಅದು ಗಾಂಧಿ, ಮಿ. ಶ್ರೀನಿವಾಸಶಾಸ್ತ್ರಿ ಮತ್ತು ಇತರರುಗಳಿಂದ ಕೈ ಬಿಡಲ್ಪಟಿತು ಎಂದು ಡಾ. ಅಂಬೇಡ್ಕರ್ ಅವರು ಹೇಳಿದರು. ಮುಂದುವರಿಯುತ್ತಾ ಡಾ. ಅಂಬೇಡ್ಕರ್ ಅವರು ಹೀಗೆ ಅವಲೋಕಿಸಿದರು.

ಸವರ್ಣೀಯ ಹಿಂದೂಗಳು ಭಾರತದ ರಾಷ್ಟ್ರೀಯ ಜೀವನದಲ್ಲಿ ಪರಿಶಿಷ್ಟ ಜಾತಿಗಳವರು ಒಂದು ಪ್ರತ್ಯೇಕವಾದ ಘಟಕವೆಂಬ ವಸ್ತುಸ್ಥಿತಿಯ ಬಗ್ಗೆ ಸಮಾಧಾನಪಟ್ಟುಕೊಳ್ಳುವುದು ಬಹುಮಟ್ಟಿಗೆ ಒಳ್ಳೆಯದು. ಈ ದೇಶಕ್ಕೆ ಸ್ವಾತಂತ್ರ್ಯ ಸಿಗಲೇ ಬೇಕೆಂಬುದರ ಬಗ್ಗೆ ಅವರೊಂದಿಗೆ ನಮ್ಮ ಪರಿಪೂರ್ಣ ಸಹಮತವಿದೆ. ಆದರೆ ಯಾವುದೇ ಹೊಸ ಸರ್ಕಾರದಲ್ಲಿ ಅಂದರೆ ಸ್ವರಾಜ್ಯ ಸರ್ಕಾರದಲ್ಲಿ ಹಿಂದೂಗಳು, ಮುಸ್ಲಿಮರು ಮತ್ತು ಪರಿಶಿಷ್ಟ ಜಾತಿಗಳವರು ಎಲ್ಲರೂ ಸಾರ್ವಭೌಮತ್ವಕ್ಕೆ ವಾರಸುದಾರರಾಗಿರುವ ಸರ್ಕಾರವಾಗಿರಬೇಕು ಎಂದರು.

ದೇಶದಲ್ಲಿ ಅತ್ಯಂತ ದೊಡ್ಡದಾದ ರಾಜಕೀಯ ಪಕ್ಷವಾದ ಕಾಂಗ್ರೆಸ್‌ನವರಿಂದ ಬಲವನ್ನು ಪಡೆದುಕೊಂಡಿರುವ ಗಾಂಧಿಯವರ ನೀತಿಯೆಂದರೆ, ಬ್ರಿಟಿಷ್ ಸರ್ಕಾರಕ್ಕೆ ಬೆದರಿಕೆಯೊಡ್ಡಿ, ಪರಿಶಿಷ್ಟ ಜಾತಿಗಳವರ ಹಕ್ಕೊತ್ತಾಯಕ್ಕೆ ಮನ್ನಣೆ ಕೊಡದೆ, ಅದನ್ನು ತಮ್ಮೊಂದಿಗೆ ಒಪ್ಪಂದಕ್ಕೆ ಬರಲು ಬಲವಂತ

ಮಾಡುವುದೇ ಆಗಿದೆ. ರಾಜಕೀಯ ಜೀವನದಲ್ಲಿ ಗಾಂಧಿಯವರ ಏಕೈಕ ಗುರಿಯೆಂದರೆ ಅಲ್ಪ ಸಂಖ್ಯಾತರ ಸಮಸ್ಯೆ ದೊಡ್ಡದಾಗಿ ಕಾಣಿಸಿಕೊಂಡಾಗ, ಪರಿಶಿಷ್ಟ ಜಾತಿಗಳವರನ್ನು ಕಡೆಗಣಿಸುವುದು; ಅವರನ್ನು ದಾಟಿಕೊಂಡು ಹೋಗುವ ಈ ವಿಷಯದಲ್ಲಿ ನನಗೆ ಬಹಳ ಕಹಿ ಅನುಭವ ಆಗಿದೆ ಎಂದರು.

ದುಂಡು ಮೇಜಿನ ಸಮ್ಮೇಳನದಲ್ಲಿ ಗಾಂಧಿಯವರು ತಮ್ಮನ್ನು ಒಂಟಿಯಾಗಿ ಮಾಡಲು ತಮ್ಮ ಪರಿಶ್ರಮಗಳಿಗೆ ಎಲ್ಲ ಬಗೆಯ ಅಡ್ಡಿ ತರಲು ಪ್ರಯತ್ನಿಸಿದರು; ಪ್ರತಿ ಸಾರಿಯೂ ಗಾಂಧಿಯವರ ಪ್ರಯತ್ನ ನಿರರ್ಥಕವಾಯಿತು; ಆದರೆ ಕಟ್ಟಕಡೆಯಲ್ಲಿ ಅವರು ಒಂದು ಆಯುಧದ ಬಳಕೆ ಮಾಡಿಕೊಂಡರು; ಅಂಥ ಕೆಲಸವನ್ನು ಯಾವ ಪ್ರಾಮಾಣಿಕ ವ್ಯಕ್ತಿಯೂ ಕೂಡ ಮಾಡಿದ್ದಿರಲಾರ ಎಂದು ಹೇಳಲು ನನಗೆ ವ್ಯಥೆಯಾಗುತ್ತದೆ. ಅವರು ಮುಸಲ್ಮಾನರ ಬಳಿಗೆ ಹೋಗಿ, ಜಿನ್ನಾರವರ ೧೪ ಸೂತ್ರಗಳನ್ನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆಂದು, ಆದರೆ ಮುಸ್ಲಿಮರು ಈ ಕೊಳಕು ನಾಯಿಗಳಾದ ಅಸ್ಪೃಶ್ಯರನ್ನು ಬೆಂಬಲಿಸಬಾರದು ಎಂದು ಹೇಳಿದರು.

ಅದೃಷ್ಟವಶಾತ್, ಮುಸ್ಲಿಮರಿಗೆ ಒಂದಷ್ಟು ನಾಚಿಕೆಯ ಪ್ರಜ್ಞೆಯಿದ್ದು, ಅವರು ಗಾಂಧಿಯವರನ್ನು ಬೆಂಬಲಿಸಲಿಲ್ಲ. ಹೇಗಾದರೂ ಡಾ. ಅಂಬೇಡ್ಕರ್ ಅವರ ಭಾಷಣದಲ್ಲಿ ಇನ್ನೂ ಹೆಚ್ಚಿನ ಆಯಾಮಗಳಿದ್ದು, ಅದನ್ನು ಟೈಮ್ ಆಫ್ ಇಂಡಿಯಾ ಪತ್ರಿಕೆ ವರದಿ ಮಾಡಿತ್ತು. ಆ ಆಯಾಮಗಳು ಈ ಕೆಳಗಿನಂತೆ ಇವೆ.

ಅವರು ಬ್ರಿಟಿಷ್ ಸರ್ಕಾರಕ್ಕೆ ಸ್ಪಷ್ಟ ಪಡಿಸಲು ಇಚ್ಛಿಸಿದ್ದೇನೆಂದರೆ, ನೈಜವಾದ ರಾಷ್ಟ್ರೀಯ ಸರ್ಕಾರವೆಂದರೆ ಅದರಲ್ಲಿ ಹಿಂದೂಗಳು, ಮುಸ್ಲಿಮರು ಮತ್ತು ನಿಮ್ನ ವರ್ಗದವರೆಲ್ಲರೂ ಸಂಯೋಜಿತವಾಗಿರುವ ಸರ್ಕಾರ. ನಿಮ್ನ ವರ್ಗಗಳವರು ಹಿಂದೂ ಸಮುದಾಯದ ಭಾಗವೇನಲ್ಲ. ಆದರೆ ಅವರೇ ಪ್ರತ್ಯೇಕವಾದ ಒಂದು ರಾಷ್ಟ್ರ. ನಿಮ್ನ ವರ್ಗಗಳವರು ತಮ್ಮ ಉದ್ದೇಶ ಸಾಫಲ್ಯಕ್ಕೋಸ್ಕರ, ಚಳುವಳಿ ನಡೆಸಿ ಹೊಡೆದಾಡಲು ಸಿದ್ಧ ಎಂದು ಹೇಳಿದರು.

ತಮ್ಮ ಸಮುದಾಯಕ್ಕೆ ಎಚ್ಚರಿಕೆ ನೀಡುತ್ತಾ, ಡಾ. ಅಂಬೇಡ್ಕರ್ ಅವರು ತಮ್ಮ ಪಥದಲ್ಲಿ ದೊಡ್ಡ ಅಡಚಣೆಗಳು ಇವೆ. ಸರ್ಕಾರದಲ್ಲಿ ತಮ್ಮ ಪಾಲು ತಮಗೆ ಸೇರಬೇಕೆಂಬ ಮುಸ್ಲಿಮರ ಬೇಡಿಕೆಗಳನ್ನು ಗಾಂಧಿ ಮತ್ತು ಹಿಂದೂಗಳು ಒಪ್ಪಿಕೊಂಡಿದ್ದು, ಆದರೆ ಇದೇ ತೆರನಾದ ನಿಮ್ನ ವರ್ಗಗಳವರ ಬೇಡಿಕೆಯನ್ನು ಒಪ್ಪಿಕೊಂಡಿಲ್ಲ. ಭಾರತಕ್ಕೆ ಸ್ವತಂತ್ರ ಬೇಕೆಂಬ ಪ್ರೀತಿಯಲ್ಲಿ ನಿಮ್ನ ವರ್ಗಗಳವರು ಬೇರೆ ಯಾವ ಸಮುದಾಯಕ್ಕೂ ಹಿಂದೆ ಬಿದ್ದಿಲ್ಲ. ಭಾರತದ ಸ್ವಾತಂತ್ರ್ಯದ ಜೊತೆಗೆ ತಮ್ಮ ಸಮುದಾಯಕ್ಕೂ ಸ್ವಾತಂತ್ರ್ಯ ಬೇಕೆಂದು ಬಯಸುತ್ತಾರೆ ಎಂದು ಡಾ. ಅಂಬೇಡ್ಕರ್ ಘೋಷಣೆ ಮಾಡಿದರು.

ಹೈದರಾಬಾದ್ ರಾಜ್ಯದ ಪರಿಶಿಷ್ಟ ಜಾತಿಗಳ ಫೆಡರೇಷನ್, ಡಾ. ಅಂಬೇಡ್ಕರ್ ಅವರಿಗೆ ಅರ್ಪಿಸಿದ ಬಿನ್ನವತ್ತಳೆ ಗಾಂಧಿ–ಜಿನ್ನಾ ಮಾತುಕತೆಗಳನ್ನು ಪರಾಮರ್ಶಿಸಿ, ಯಾವುದೇ ಪರಸ್ಪರ ಗೊತ್ತುಪಾಡಾಗಲೀ ಅಥವಾ ಒಪ್ಪಂದವಾಗಲೀ ಅದು ಮುಕ್ತವಾಗಿರಲಿ ಅಥವಾ ಸದ್ದಿಲ್ಲದೆ ಗೌಪ್ಯವಾಗಿ ಮಾಡಿಕೊಂಡಿದ್ದಾಗಿರಲೀ, ಅವರ ಅಧಿಕೃತ ನಾಯಕರಾದ ಡಾ. ಅಂಬೇಡ್ಕರ್ ಅವರ ಒಪ್ಪಿಗೆ ಇಲ್ಲದಿದ್ದರೆ, ನಿಮ್ನ ವರ್ಗಗಳವರನ್ನು ಅದು ಕಟ್ಟು ಮಾಡುವುದಿಲ್ಲ ಎಂದು ವಿಷದೀಕರಿಸಿತು.

# ೯೧
# ನಾನೇನೂ ರಾಷ್ಟ್ರೀಯತೆಯ ವಿರೋಧಿಯಲ್ಲ, ಆದರೆ.....

ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ. ಬಿ.ಆರ್.ಅಂಬೇಡ್ಕರ್ ಅವರಿಗೆ ನಾಗರೀಕ ಬಿನ್ನವತ್ತಳೆಯನ್ನು ೨೨ನೇ ಸೆಪ್ಟೆಂಬರ್ ೧೯೪೪, ಶುಕ್ರವಾರದಂದು ಅರ್ಪಿಸಲು ಮದರಾಸಿನ ಮುನಿಸಿಪಲ್ ಕಾರ್ಪೋರೇಷನ್ ತೀರ್ಮಾನವನ್ನು ತೆಗೆದುಕೊಂಡಿತು. ಅದನ್ನು ರಿಪ್ಪನ್ ಕಟ್ಟಡದಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಮುಖ್ಯ ಅತಿಥಿಯವರ ಆಗಮನದ ನಂತರ ಅವರನ್ನು ಮೇಯರ್, ಕೌನ್ಸಿಲರುಗಳು ಮತ್ತು ಕಮಿಷನರ್ ಅವರು ಬರಮಾಡಿಕೊಂಡರು. ಅಲ್ಲಿ ಒಂದು ದೊಡ್ಡ ಗುಂಪೇ ಸೇರಿತ್ತು. ಕಾಂಗ್ರೆಸ್ ಮುಖ್ಯ ಪಕ್ಷದ ಸದಸ್ಯರ ಗೈರು ಹಾಜರಿ ಎದ್ದು ಕಾಣುತ್ತಿತ್ತು.

ಮೇಯರ್ ಸೈಯದ್ ನಿಜ಼ಾಮತುಲ್ಲಾ ಅವರು ಓದಿದ ಬಿನ್ನವತ್ತಳೆಯನ್ನು ಒಂದು ಸುಂದರವಾದ ಬೆಳ್ಳಿಯ ಕರಂಡಿಕೆಯಲ್ಲಿ ಸಮರ್ಪಿಸಲಾಯಿತು. ಡಾ. ಅಂಬೇಡ್ಕರ್ ಅವರಿಗೆ ಮಾಲಾರ್ಪಣೆ ಮಾಡಿ ಹಾಜರಿದ್ದ ಕೌನ್ಸಿಲರುಗಳನ್ನು ಪರಿಚಯ ಮಾಡಿಸಲಾಯಿತು.

ಬಿನ್ನವತ್ತಳೆಗೆ ಉತ್ತರ ಕೊಡುತ್ತಾ, ಡಾ. ಅಂಬೇಡ್ಕರ್ ಅವರು ಹೀಗೆ ಹೇಳಿದರು:

ಈ ದೇಶವನ್ನು ಆಳುತ್ತಿರುವ ಸಮುದಾಯವೆಂದರೆ ಬ್ರಾಹ್ಮಣ ಸಮುದಾಯ. ೧೯೩೭ರ ಚುನಾವಣೆಗಳಲ್ಲಿ ಏಳು ಪ್ರಾಂತ್ಯಗಳಲ್ಲಿ ಬ್ರಾಹ್ಮಣ ಪ್ರಧಾನ ಮಂತ್ರಿಗಳು, ಸಚಿವರುಗಳಲ್ಲಿ ಅರ್ಧದಷ್ಟು ಜನ ಬ್ರಾಹ್ಮಣರು, ಇದರಲ್ಲಿ ಪರ್ಯಾವಸಾನಗೊಂಡಿತು. ಒಂದು ವೇಳೆ ರಾಷ್ಟ್ರೀಯ ಸರ್ಕಾರವೇನಾದರೂ ರಚನೆಯಾದರೆ, ಅದು ಆಳುತ್ತಿರುವ ವರ್ಗಗಳವರ ಕೈ ಸೇರಿದರೆ, ಇಷ್ಟೊಂದು ಟೀಕೆಗೆ ಗುರಿಯಾಗಿರುವ ಪ್ರಸ್ತುತ ಭಾರತ ಸರ್ಕಾರಕ್ಕಿಂತ ಆ ಸರ್ಕಾರ ಉತ್ತಮವಾಗಿ ಕೆಲಸ ಮಾಡುತ್ತದೆಯೆಂದು ನೀವು ತಿಳಿದಿದ್ದೀರೇನು? ನಿಮ್ಮ ನಗರಕ್ಕೆ ನನ್ನನ್ನು ಸ್ವಾಗತಿಸಿ ಬಿನ್ನವತ್ತಳೆಯನ್ನು ಕೊಡಬೇಕೆಂದು ನಿರ್ಧರಿಸಿರುವುದು ನಿಮ್ಮ ಔದಾರ್ಯವನ್ನು ತೋರಿಸುತ್ತದೆ. ನಾನೇನೂ ಮದರಾಸು ನಗರದ ನಿವಾಸಿಯಲ್ಲ; ಇಲ್ಲಿನ ನಾಗರೀಕ ಜೀವನದಲ್ಲಿ ನನ್ನದೇನೂ ಪಾತ್ರವಿಲ್ಲ. ನಿಮ್ಮ ದಾಕ್ಷಿಣ್ಯಪರತೆಯನ್ನು ನಿರೀಕ್ಷಿಸಲು ನನಗೆ ಯಾವ ಹಕ್ಕೂ ಇಲ್ಲ. ಆದಾಗ್ಯೂ ಕೂಡ ಈ ಬಿನ್ನವತ್ತಳೆಯನ್ನು ನನಗೆ ಕೊಡಲು ನಿರ್ಧರಿಸಿದ್ದೀರಿ. ಯಾವುದರ ಬಗ್ಗೆ ನಾನು ಯಾವ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗುವುದಿಲ್ಲವೋ ಅದನ್ನು ನೀವು ನನಗೆ ಕೊಟ್ಟಿರುವುದಕ್ಕೆ ನಾನು ಬಹಳ ಆಭಾರಿಯಾಗಿದ್ದೇನೆ. ನಾನು ಈ ಸಂಗತಿಯನ್ನು ಪರಾಮರ್ಶಿಸಬಹುದಾದರೆ, ನನಗೆ ಈ ಬಿನ್ನವತ್ತಳೆಯನ್ನು ಕೊಡುವುದಕ್ಕೆ ಸರ್ವಾನುಮತವಿರಲಿಲ್ಲವೆಂದು ಅದಕ್ಕೆ ಸ್ವಲ್ಪ ವಿರೋಧವೂ ಇತ್ತೆಂದು ಪತ್ರಿಕಾ ವರದಿಗಳಿಂದ ನನಗೆ ಗೊತ್ತಾಗಿದೆ. ಇದನ್ನು ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣವೆಂದರೆ, ನಾನು ಈ ಬಿನ್ನವತ್ತಳೆಯನ್ನು ಇನ್ನೂ ಹೆಚ್ಚಿಗೆ ಸ್ವಾಗತಿಸುತ್ತೇನೆ; ಅದು ಸರ್ವಾನುಮತದಿಂದ ಒಪ್ಪಿಗೆ ಪಡೆದುಕೊಂಡಿರುವುದಕ್ಕಿಂತ ಇನ್ನೂ ಹೆಚ್ಚಾಗಿ ಸ್ವಾಗತಿಸುತ್ತೇನೆ. ನಾವು ಸರ್ವಾನುಮತದಿಂದ ಮಾಡುವ ಕೆಲಸಗಳಲ್ಲಿ ಹೆಚ್ಚಿನವು ಔಪಚಾರಿಕವಾಗಿರುತ್ತದೆ; ಅಥವಾ ನಾಗರೀಕತೆಯ ಸಾಂಪ್ರದಾಯಿಕ ಸುಳ್ಳುಗಳಿಗಿಂತ ಹೆಚ್ಚಿನದೇನೂ ಆಗಿರುವುದಿಲ್ಲ. (ಹರ್ಷ ಧ್ವನಿ). ಇದನ್ನು ನಾವು ಪ್ರತಿನಿತ್ಯ ಮಾಡುತ್ತಲೇ ಇರುತ್ತೇವೆ, ಆದರೆ ಅದಕ್ಕೆ ಅರ್ಥವೇನೂ ಇರುವುದಿಲ್ಲ. ಏನೇ

ಆಗಲಿ, ಕಾರ್ಪೋರೇಷನ್ನಿನ ಒಂದು ಭಾಗ ಪ್ರಾಮಾಣಿಕವಾಗಿದ್ದು ಈ ಬಿನ್ನವತ್ತಳೆಯನ್ನು ಕೊಡಲು ಒತ್ತಾಯ ಮಾಡಿದರೆಂಬುದು ಇದರಿಂದ ಸೂಚಿತವಾಗುತ್ತದೆ.

ನನ್ನ ವಿಶ್ವವಿದ್ಯಾಲಯದ ಪರ್ವಕ್ಕೆ, ಒಬ್ಬ ಉಪಾಧ್ಯಾಯನಾಗಿ ನಾನು ಮಾಡಿರುವ ಕೆಲಸಕ್ಕೆ, ವಕೀಲನಾಗಿ, ಬೊಂಬಾಯಿ ವಿಧಾನ ಪರಿಷತ್ತಿನ ಸದಸ್ಯನಾಗಿ ನನ್ನ ಕೆಲಸಕ್ಕೆ ನೀವು ಅತಿ ಧಾರಾಳವಾಗಿ ಹೊಗಳಿಕೆ ಮಾಡಿದ್ದೀರೆಂದು ನನಗೆ ಕಂಡು ಬರುತ್ತಿದೆ.

ಆದರೆ ನೀವು ಹೇಳಿದ್ದಕ್ಕೆಲ್ಲಾ ನಾನು ಅರ್ಹನೆಂದು ನಂಬುವಷ್ಟು ನನಗೆ ಜಂಭವಿಲ್ಲ. ನೀವು ಬಳಸಿದ ಭಾಷೆ, ನಾನು ಯಾವ ಧ್ಯೇಯಕ್ಕಾಗಿ ಇಷ್ಟು ದೀರ್ಘಕಾಲ ಶ್ರಮಿಸಿದ್ದೇನೆಯೋ ಅದಕ್ಕಾಗಿ ನಿಮ್ಮ ಮಹತ್ತಾದ ಸಹಾನುಭೂತಿಯನ್ನು ತೋರಿಸುತ್ತದೆಯೆಂದು ಅಂದುಕೊಂಡಿದ್ದೇನೆ ಮತ್ತು ನೀವು ಹೇಳಿರುವುದೆಲ್ಲವೂ ನನ್ನ ಧ್ಯೇಯವನ್ನು ಕುರಿತದ್ದು ಆಗಿದೆಯೇ ಹೊರತು ನನ್ನ ವೈಯಕ್ತಿಕ ಬೆಂಬಲಕ್ಕಾಗಿ ಅಲ್ಲವೆಂದು ಅಂದುಕೊಂಡಿದ್ದೇನೆ.

ಕೊಳಚೆ ಪ್ರದೇಶದ ನಿರ್ಮೂಲ, ಶ್ರಮಿಕರ ಮಕ್ಕಳಿಗೆ ಆಹಾರ ಇವುಗಳನ್ನು ಕುರಿತು ಮದರಾಸು ಕಾರ್ಪೋರೇಷನ್ನಿನ ಕೆಲಸವನ್ನು ಕುರಿತು ಪರಾಮರ್ಶೆ ಮಾಡಲಾಗಿದೆ. ಈ ಸಂಬಂಧ ಭಾರತ ಸರ್ಕಾರ ಏನು ಮಾಡಿದೆಯೆಂಬುದನ್ನು ಪ್ರಸ್ತಾಪಿಸುವುದು ಸೂಕ್ತವಾಗುವುದಿಲ್ಲ. ಹೇಗಾದರೂ, ಭಾರತ ಸರ್ಕಾರ ಬಹು ನಿಧಾನ ಗತಿಯ ಯಂತ್ರವೆಂದೂ, ಅದು ಬಹಳ ನಿಧಾನವಾಗಿ ಅರೆಯುತ್ತದೆ ಎಂಬ ಟೀಕೆಯನ್ನು ನಿವಾರಿಸುವುದಕ್ಕಾಗಿ, ನಾನು ಹೇಳಬಹುದಾದುದು ಏನೆಂದರೆ ಕಳೆದ ಕೆಲವು ವರ್ಷಗಳಲ್ಲಿ ಭಾರತ ಸರ್ಕಾರ ಬಹಳ ಆದರ್ಶ ಪ್ರಾಯವಾದ ನಿಕಾಯದಂತೇನೂ ವರ್ತಿಸಿಲ್ಲ; ಅದು ಪ್ರತಿಯೊಂದು ಸರ್ಕಾರವೂ ಮಾಡಲೇಬೇಕಾದ ಅತ್ಯವಶ್ಯಕವಾದ ಸುಧಾರಣೆಗಳನ್ನು ಮಾಡಲು ಸಮಯವನ್ನು ಕಾಯುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತ ಸರ್ಕಾರ ಕಾರ್ಮಿಕ ವರ್ಗಗಳವರಿಗೋಸ್ಕರ ಮಾಡಿರುವ ಒಂದು ಮಹತ್ವದ ಕೆಲಸದ ಬಗ್ಗೆ ಉಲ್ಲೇಖಿಸ ಬಯಸುತ್ತೇನೆ. ಅದರ ತಾಂತ್ರಿಕ ತರಬೇತಿ ಯೋಜನೆ ಬಗ್ಗೆ ನಾನು ಪ್ರಸ್ತಾಪಿಸ ಬಯಸುತ್ತೇನೆ. ಈ ಯೋಜನೆ ೬೮೦೦ ಮಂದಿ ಕೌಶಲರಹಿತ ಜನರಿಗೆ ಕೌಶಲವನ್ನು ಕಲ್ಪಿಸಿಕೊಟ್ಟಿದೆ. ಭಾರತದುದ್ದಕ್ಕೂ ಮುನ್ನೂರರಿಂದ ನಾನೂರರವರೆಗೂ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ; ನಾವು ಕಟ್ಟಿ ಬೆಳೆಸಿರುವ ತಾಂತ್ರಿಕ ತರಬೇತಿ ಯೋಜನೆಯನ್ನು ಯುದ್ಧಾನಂತರ ಅಳಿಸಿ ಹಾಕುವುದಿಲ್ಲವೆಂದು ನಮ್ಮ ಆಸೆ ಮತ್ತು ಆಕಾಂಕ್ಷೆಯಾಗಿದೆ; ಮತ್ತು ಅದು ಈ ದೇಶದ ಶಿಕ್ಷಣ ವ್ಯವಸ್ಥೆಯ ಶಾಶ್ವತವಾದ ಭಾರವಾಗಿ ಇರುತ್ತದೆಂದೂ, ಅದರಿಂದಾಗಿ ಕಾರ್ಮಿಕ ವರ್ಗಗಳ ಮಕ್ಕಳು, ವಿಶ್ವವಿದ್ಯಾನಿಲಯದ ಶಿಕ್ಷಣದಿಂದ ವಂಚಿರಾದಾಗ್ಯೂ, ಉತ್ತಮವಾದ ಕೌಶಲವನ್ನು ಪಡೆದುಕೊಂಡು ತಮ್ಮ ಗಳಿಕೆಯ ಸಾಮರ್ಥ್ಯವನ್ನು ಉತ್ತಮ ಪಡಿಸಿಕೊಳ್ಳಬಹುದಾಗಿದೆ (ಹರ್ಷ ಧ್ವನಿ). ಯುದ್ಧದ ಅವಧಿಯಲ್ಲಿ ಸರ್ಕಾರ ಜಾರಿಗೆ ತಂದಿರುವ ಅನೇಕ ಶಾಸನಗಳಿವೆ. ಉದಾಹರಣೆಗೆ: ಕೈಗಾರಿಕಾ ವಿವಾದಗಳ ಕಡ್ಡಾಯವಾದ ಮಧ್ಯಸ್ತಿಕೆಯ ಉಪಬಂಧವಿದೆ. ಇಲ್ಲಿಯವರೆಗೆ ಭಾರತ ಸರ್ಕಾರಕ್ಕೆ ಕಾರ್ಮಿಕರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುವ ನಿಯಮ ನಿಬಂಧನೆಗಳನ್ನು ಗೊತ್ತುಪಡಿಸುವುದಕ್ಕೆ ಯಾವ ಅಧಿಕಾರವೂ ಇರಲಿಲ್ಲ. ಅದು ಒಬ್ಬ ಕಾರ್ಮಿಕ ಮತ್ತು ಉದ್ಯೋಗದಾತ ಇವರ ಮಧ್ಯೆ ಆಗುವ ಒಂದು ಖಾಸಗಿ ಒಪ್ಪಂದಕ್ಕಿಂತ ಹೆಚ್ಚಿನದೇನೂ ಆಗಿಲ್ಲದೆ, ಒಬ್ಬ ಖಾಸಗಿ ವ್ಯಕ್ತಿಯ ವಿಷಯ ಮಾತ್ರ ಆಗಿತ್ತು. ಈ ದಿನಗಳಲ್ಲಿ ನಮ್ಮಲ್ಲಿರುವ ಕಾನೂನಿನ ಪ್ರಕಾರ, ನೌಕರಿಯ ನಿಯಮ ನಿಬಂಧನೆಗಳು ಸಮರ್ಪಕವಾಗಿಲ್ಲವೆಂದು ಭಾರತ ಸರ್ಕಾರ ಅಭಿಪ್ರಾಯ ಪಟ್ಟಿದೆ. ತಮಗೆ ಸರಿಯಾದ ಮತ್ತು ಸಮರ್ಪಕವಾದದ್ದು ಎಂದು ಕಂಡುಬಂದ ನಿಬಂಧನೆಗಳನ್ನು ಹೇರುವ ಅಧಿಕಾರವಿದೆ. ಈ ಶಾಸನ,

ಯುದ್ಧದ ಫಲಿತಾಂಶವಾಗಿ ಹೊಮ್ಮಿದ್ದರೂ ಅದೇನೂ ಯುದ್ಧದೊಂದಿಗೆ ಕೊನೆಯಾಗುವುದಿಲ್ಲ ಮತ್ತು ಕಾನೂನುಗಳ ವ್ಯವಸ್ಥೆಯಲ್ಲಿ ಒಂದು ಶಾಶ್ವತವಾದ ಕಾನೂನಾಗಿ ಉಳಿದುಕೊಳ್ಳುತ್ತದೆಂದು ನಾನು ಆಶಿಸುತ್ತೇನೆ. ನಾವು ಮಾಡಿರುವುದು ಬಹಳ ಸಣ್ಣದೆಂದು ನಮಗೆ ಅರಿವಿದೆ. ಆದರೆ ಸಾರ್ವಜನಿಕರು ಗ್ರಹಿಸಬೇಕಾದದ್ದು ಏನೆಂದರೆ, ಶಾಸನ ಮಾಡುವ ವಿಷಯದಲ್ಲಿ ಭಾರತ ಸರ್ಕಾರ ಸಮಾಧಾನಕರವಾದ ಪರಿಸ್ಥಿತಿಯಲ್ಲಿ ಇಲ್ಲ ಎಂದು. ಮೊಟ್ಟ ಮೊದಲಿಗೆ ಕಾರ್ಮಿಕ ಶಾಸನದ ಒಂದು ದೊಡ್ಡ ಭಾಗ ಪ್ರಾಂತ್ಯಗಳ ಅಧಿಕಾರ ಮತ್ತು ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದೆ. ಅವುಗಳಿಗೆ ಮಾತ್ರ ಕಾರ್ಮಿಕ ಕಾನೂನುಗಳನ್ನು ಮಾಡಬಹುದಾದ ಅವಕಾಶವಿದೆ. ಸರ್ಕಾರದ ಅಧಿಕಾರ, ಸಮವರ್ತಿ ಪಟ್ಟಿ ಎಂದು ಕರೆಯಲಾದ ಶಾಸನದ ತುಣುಕಿನಲ್ಲಿ ಕಾಣಬಹುದಾಗಿದೆ. ನಿಮಗೆಲ್ಲ ಗೊತ್ತಿರುವ ಹಾಗೆ ಭಾರತ ಸರ್ಕಾರಕ್ಕೆ ಕಾರ್ಮಿಕ ಶಾಸನವನ್ನು ಮಾಡುವುದಕ್ಕೆ ಸಮವರ್ತಿ ಹಕ್ಕಿದ್ದರೂ, ಭಾರತ ಸರ್ಕಾರದ ಅಧಿನಿಯಮ ೧೯೩೫ರಲ್ಲಿ ಒಂದು ಉಪಬಂಧವಿದೆ; ಅದೇನೆಂದರೆ ಕಾನೂನು ಪ್ರಾಂತೀಯ ಅಧಿಕಾರದಿಂದ ಬಂದಿರಲಿ, ಅಥವಾ ಕೇಂದ್ರ ಶಾಸನ ಸಭೆಯ ಸಮವರ್ತಿ ಅಧಿಕಾರ ವ್ಯಾಪ್ತಿಯಿಂದ ಬಂದಿರಲಿ, ಕಾರ್ಮಿಕ ಆಡಳಿತ ಮಾತ್ರ ಪ್ರಾಂತೀಯ ಸಕಾರದ ಸಂಪೂರ್ಣವಾದ ಹತೋಟಿಯಲ್ಲಿರುತ್ತದೆ. ಪರಿಣಾಮವಾಗಿ ಭಾರತ ಸರ್ಕಾರಕ್ಕೆ ತನ್ನ ಸಮವರ್ತಿ ಅಧಿಕಾರದ ಮೂಲಕ ಶಾಸನ ಮಾಡಬೇಕೆನಿಸಿದರೆ, ಅದನ್ನು ಮಾಡುವುದಕ್ಕೆ ಮುಂಚೆ ಅದು ಪ್ರಾಂತೀಯ ಸರ್ಕಾರಗಳ ಸಲಹೆ ಪಡೆಯಲೇಬೇಕು; ಏಕೆಂದರೆ ಶಾಸನ ಅನುಮೋದನೆಯಾದ ಮೇಲೆ, ಅದನ್ನು ಪ್ರಾಂತೀಯ ಸರ್ಕಾರ ಮಾತ್ರ ಜಾರಿ ಮಾಡಬಲ್ಲುದು; ಭಾರತ ಸರ್ಕಾರಕ್ಕೆ ಪ್ರಾಂತೀಯ ಸರ್ಕಾರದ ಪೂರ್ವಭಾವಿ ಒಪ್ಪಿಗೆಯಿಲ್ಲದಿದ್ದರೆ, ಆ ಶಾಸನವನ್ನು ಮಾಡಿಯೂ ಏನೂ ಪ್ರಯೋಜನವಿಲ್ಲವೆಂದು ಅನಿಸುತ್ತದೆ. ಏಕೆಂದರೆ ಆಡಳಿತಾತ್ಮಕ ನಿಕಾಯಗಳು ಅದರತ್ತ ಕಣ್ಣೆತ್ತಿ ನೋಡಲೂ ತಯಾರಿರುವುದಿಲ್ಲ. ಇವು ನಮ್ಮ ಕಷ್ಟ. ಇತರರು ನಿರೀಕ್ಷಿಸುವಷ್ಟು ನಮ್ಮ ಶಾಸನ ವೇಗವಾಗಿಲ್ಲ. ಆದರೆ ನಾನು ಭರವಸೆಯಿಂದ ಹೇಳುತ್ತೇನೆ, ಸರ್ಕಾರಕ್ಕೇನೂ ಜಡವಾದ ಹೃದಯವಿಲ್ಲ. ಅದು ಚುರುಕಾಗಿದ್ದು, ಕಾರ್ಮಿಕ ವಿಷಯವನ್ನು ಕುರಿತು ಪುನರಚನೆ ಮಾಡುವ ಬಗ್ಗೆ ಚಿಂತನೆ ಮಾಡುತ್ತಿರುತ್ತದೆ.

ಅನೇಕ ಜನ ಭಾರತ ಸರ್ಕಾರವನ್ನು ಟೀಕೆ ಮಾಡುತ್ತಿರುತ್ತಾರೆ. ಆದರೆ ಅದರಿಂದ ಯಾವ ಪ್ರಯೋಜನವೂ ಇಲ್ಲವೆಂದು ನನಗೆ ಅನಿಸುತ್ತದೆ. ಭಾರತ ಸರ್ಕಾರ ಹೆಚ್ಚಿಗೆ ಏನನ್ನು ಮಾಡದೆ ಇರಬಹುದು. ಆದರೆ ಅದರಿಂದ ಏನಾಯಿತು? ಎಷ್ಟೇ ಆದರೂ ಹೊಸ ಭಾರತ ಸರ್ಕಾರ ಏನಾದರೂ ಮಾಡಿದೆಯೇ ಅಥವಾ ಮಾಡುವುದಿಲ್ಲವೆ ಎಂದು. ನನ್ನ ಮನಸ್ಸಿನಲ್ಲಿ ಏಳುವ ಪ್ರಶ್ನೆ ಎಂದರೆ ನಾವೆಲ್ಲಾ ರಾಷ್ಟ್ರೀಯ ಸರ್ಕಾರವೆಂದು ಯಾವುದನ್ನು ಕರೆಯುತ್ತೇವೆಯೋ, ಅದು ಇದಕ್ಕಿಂತ ಉತ್ತಮವಾಗಿ ಕೆಲಸ ಮಾಡುತ್ತದೆಯೋ ಎಂದು. ನಾವು ವಿನಮ್ರವಾಗಿ ಹೇಳಬಯಸುವುದೇನೆಂದರೆ, ನಾವೆಲ್ಲಾ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಪ್ರಶ್ನೆಗಿಂತ ಮೇಲಿನ ಪ್ರಶ್ನೆ ಬಹಳ ನಿರ್ಣಾಯಕವಾದುದು. ಪ್ರಸ್ತುತ ಭಾರತ ಸರ್ಕಾರ ಒಂದು ಉಸ್ತುವಾರಿ ಸರ್ಕಾರವೆಂದು ಇಟ್ಟುಕೊಳ್ಳುವುದಕ್ಕೆ ನಾನು ಸರ್ವಥಾ ಸಿದ್ಧನಿದ್ದೇನೆ. ನಾವೆಲ್ಲಾ ಒಂದು ಹೊಸ ಸರ್ಕಾರದ ಉದಯವನ್ನು ಎದುರು ನೋಡುತ್ತಿದ್ದೇವೆ. ಆದರೆ ನನ್ನನ್ನು ಚಿಂತೆಗೀಡು ಮಾಡುತ್ತಿರುವ ಪ್ರಶ್ನೆಗಳ ಕುರಿತಾದ ಅನ್ವೇಷಣೆ ಎಂದರೆ, ಈ ರಾಷ್ಟ್ರೀಯ ಸರ್ಕಾರ ಉತ್ತಮವಾಗಿ ಕೆಲಸ ಮಾಡಬಲ್ಲುದೇ ಎಂದು. ನಾನು ಇದರ ಬಗ್ಗೆ ಒಂದಿಷ್ಟು ಅನುಮಾನವನ್ನು ವ್ಯಕ್ತಪಡಿಸುತ್ತಿದ್ದೇನೆ. ಒಮ್ಮೆ ನಮಗೆ ಅಧಿಕಾರವನ್ನು ಕೊಟ್ಟರೆ, ವಯಸ್ಕ ಮತದಾನ ಪದ್ಧತಿಯನ್ನು ಜಾರಿಗೆ ತಂದರೆ, ಎಲ್ಲ ಕೆಡಕುಗಳನ್ನು ನಿವಾರಿಸಿಬಿಡುತ್ತೇವೆ, ಗಿಡಗಂಟೆಗಳನ್ನು ಸವರಿ, ಪ್ರತಿಯೊಬ್ಬರನ್ನೂ ಹಸಿದು ಸಾಲು ಮರಗಳಿರುವ ವಿಶಾಲವಾದ ಬೀದಿಯಲ್ಲಿ ನೆಟ್ಟಗೆ ಮಾನವ

ಜೀವಿಗಳಂತೆ ನಡೆಯುವಂತೆ ಮಾಡಿಬಿಡುತ್ತೇವೆಂದು ನಾವೆಲ್ಲಾ ಹೇಳುತ್ತಿದ್ದೇವೆ. ನನ್ನನ್ನು ಗಂಭೀರವಾದ ಭ್ರಮನಿರಸನ ಕಾಡುತ್ತಿವೆ. ಯೂರೋಪಿನ ಸರ್ಕಾರದ ಚರಿತ್ರೆಯನ್ನು ನಾನು ಸಾಕಷ್ಟು ಓದಿಕೊಂಡಿದ್ದೇನೆ. ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ಸಂಸದೀಯ ಸರ್ಕಾರ ಸ್ಥಾಪಿತವಾದರೆ, ಮಾನವತೆಯ ಎಲ್ಲ ಕೆಡಕುಗಳು ಮಾಯವಾಗಿ ಬಿಡುತ್ತದೆ ಎಂಬ ಪ್ರತಿಪಾದನೆ ನನ್ನನ್ನು ಸಂಪೂರ್ಣವಾಗಿ ಭ್ರಮನಿರಸನಗೊಳಿಸಿದೆ. ಇಂಥ ಬಗೆಯ ಒಂದು ಪ್ರಸ್ತಾವನೆಗೆ ಚರಿತ್ರೆಯಲ್ಲಿ ಯಾವ ಆಧಾರವೂ ಇಲ್ಲ. ನಾವೆಲ್ಲಾ ಒಂದು ರೀತಿಯ ಭ್ರಾಂತಿಯಿಂದ ಬಳಲುತ್ತಿದ್ದೇವೆ ಅಥವಾ ನಮ್ಮನ್ನು ನಾವೇ ಸುಳ್ಳು ಸುಳ್ಳು ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಿದ್ದೇವೆಯೆ ಎಂದು ಅನಿಸುತ್ತಿದೆ. ವಯಸ್ಕ ಮತದಾನ ಪದ್ಧತಿ ಇರಲಿ, ಇಲ್ಲದಿರಲಿ ಅಥವಾ ಒಂದು ಜನಾನುರಾಗಿ ಸರ್ಕಾರದ ಚೌಕಟ್ಟಿರಲಿ ಅಥವಾ ಇತರ ಯಾವುದೇ ಸರ್ಕಾರದ ಚೌಕಟ್ಟಿರಲಿ ಪ್ರತಿಯೊಂದು ಸಮಾಜದಲ್ಲಿ, ಪ್ರತಿಯೊಂದು ದೇಶದಲ್ಲಿ ಎರಡು ವರ್ಗಗಳು ಸರ್ಕಾರದ ವರ್ಗ ಮತ್ತು ಪ್ರಜೆಗಳ ವರ್ಗ ಅಂತರ್ನಿಹಿತವಾಗಿರುತ್ತದೆ. ಅವರು ಮೇಲ್ಮೈಗೆ ಬರಲಿ ಅಥವಾ ಮೋಡಗಳ ಹಿಂದೆ ಅಡಗಿರಲಿ ಪರವಾಗಿಲ್ಲ. ನಿಮಗೆ ವಯಸ್ಕಮತದಾನದ ಪದ್ಧತಿ ಕೊಡಲಿ ಅಥವಾ ಯಾವುದೇ ರೀತಿಯ ಅಧಿಕಾರ ಕೊಡಲಿ ಅಥವಾ ಚುನಾವಣೆಯನ್ನು ಕೊಡಲಿ ಆಗುವುದು ಇದೇನೆ. ಆಳುವ ವರ್ಗವನ್ನು ಆಳುವುದಕ್ಕಾಗಿ ಚುನಾಯಿಸಲಾಗುತ್ತದೆ; ಪ್ರಜಾ ವರ್ಗಗಳಿಗೆ ಒಂದು ಅವಕಾಶವೂ ಸಿಗುವುದಿಲ್ಲ. ನಾನೇನಾದರೂ ಹತೋಟಿಯಿಲ್ಲದ ಹೇಳಿಕೆಯನ್ನು ಕೊಡುತ್ತಿದ್ದೇನೆಯೇ? ನನಗೆ ಹಾಗೆನಿಸುವುದಿಲ್ಲ. ನಾನು ಹೇಳುವುದಕ್ಕೆ ಒಂದು ಆಧಾರವಿದೆ. ೧೯೩೭ರಲ್ಲಿ ನಡೆದ ಚುನಾವಣಾ ಫಲಿತಾಂಶಗಳನ್ನು ನಾವು ಪರಿಕ್ಷೀಸೋಣ. ಮತದಾನವಾಗಲೀ, ಚುನಾವಣೆಗಳ ಫಲಿತಾಂಶಗಳಾಗಲೀ, ಅಸಲಿ ವೋಟುಗಳಾಗಲೀ, ಎಲ್ಲವು ವಿಶಾಲವಾಗಿದ್ದವು. ಕಾಂಗ್ರೆಸ್‌ನ ಏಳು ಪ್ರಾಂತ್ಯಗಳಲ್ಲಿ ಆದದ್ದೇನು? ಅದರ ಬಗ್ಗೆ ಮಾತನಾಡಲು ನನಗೆ ಇಷ್ಟವಿಲ್ಲ. ಆಗ ನಾನು ಹೇಳಿದ್ದು ಸತ್ಯವಾಯಿತು. ಆ ಸತ್ಯವೆಂದರೆ ಈ ದೇಶದಲ್ಲಿ ನೀವು ಏನೇ ಮಾಡಲಿ, ನಿಮಗೆ ಸಿಗುವ ಆಳುವ ಸಮುದಾಯ ಬ್ರಾಹ್ಮಣ ಸಮುದಾಯ. ಮೇಲಕ್ಕೆ ಬಂದಿದ್ದು ಅದು ಮಾತ್ರ. ಬೇರೇನೂ ಬರಲಿಲ್ಲ. ಏಳೂ ಪ್ರಾಂತ್ಯಗಳಲ್ಲಿ ಬ್ರಾಹ್ಮಣ ಪ್ರಧಾನ ಮಂತ್ರಿಗಳು ಬಂದರು. ಮಂತ್ರಿಮಂಡಲಗಳಲ್ಲಿ ಅರ್ಧದಷ್ಟು ಮಂದಿ ಬ್ರಾಹ್ಮಣರೇ ಇದ್ದರು. ನಾನು ಇದನ್ನು ಟೀಕೆ ಮಾಡಬೇಕೆಂದೇ ಹೇಳುತ್ತಿಲ್ಲ. ಆದರೂ ನಾನು ವಾಸ್ತವವನ್ನು ಹೇಳುತ್ತಿದ್ದೇನೆ. ಚುನಾವಣೆಗಳು ಏನನ್ನಾದರು ಸಾಬೀತುಪಡಿಸಿದ್ದರೆ, ಅದು ಈ ದೇಶದ ಹೃದಯ ಭಾಗದಲ್ಲಿ ಆಳುವ ವರ್ಗವಾಗಿ ಒಂದು ಸಮುದಾಯಕ್ಕೆ ಮಾತ್ರ ಅದೃಷ್ಟವಿತ್ತು. ಆ ಸಮುದಾಯವೇ ಆಳುವ ವರ್ಗವಾಗಿ ಬಂದಿದೆ. ಪ್ರತಿಯೊಂದು ದೇಶಕ್ಕೂ ಸ್ವಯಮಾಡಳಿತದ ಹಕ್ಕು ಇಲ್ಲವೇ ಎಂಬ ಪ್ರಶ್ನೆಗಿಂತ ನಾವು ಕೇಳಬೇಕಾದ ಪ್ರಶ್ನೆ, ಯಾವುದೇ ದೇಶದಲ್ಲಿನ ಆಳುವ ವರ್ಗ ತನ್ನ ಹೊಣೆಗಾರಿಕೆ ಏನು ಎಂಬ ಪ್ರಶ್ನೆ ಇದೆಯೆ? ಸರ್ಕಾರದ ಜವಾಬ್ದಾರಿಯನ್ನು ಆ ಸಮುದಾಯಕ್ಕೆ ಕೊಡಬಹುದೇ ಎಂದು? ನಾವು ಮರೆತು ಬಿಟ್ಟಿರುವ ವಾಸ್ತವತೆ ಏನೆಂದರೆ, ಆಳುವ ಹಕ್ಕನ್ನು ನಿಜವಾಗಿಯೂ ತೀರ್ಮಾನ ಮಾಡಬೇಕಾದುದು ಆಳುವ ವರ್ಗದ ಹೊಣೆಗಾರಿಕೆಯ ಬೆಳಕಿನಲ್ಲಿ. ಹೇಳಿಕೇಳಿ ಆಳುವ ವರ್ಗ ಆಳಬೇಕಾದರೆ, ಆ ಆಳುವ ವರ್ಗದ ಹೊರನೋಟವೇನು ಎಂಬ ಪ್ರಶ್ನೆ ಏಳುತ್ತದೆ; ಅದರ ತತ್ವ ಏನು, ಅದಕ್ಕೆ ಯಾವುದರ ಬಗ್ಗೆ ನಂಬಿಕೆ ಇದೆ ಎಂದು. ನೀವು ದರ್ಜೆಗನುಗುಣವಾಗಿ ವಿಂಗಡಿಸಿದ ಅಸಮಾನತೆಯಲ್ಲಿ ನಂಬಿಕೆ ಇರುವ ಒಂದು ಆಳುವ ವರ್ಗವಾಗಿದ್ದರೆ, ಒಂದರ ಮೇಲೆ ಇನ್ನೊಂದು ಎನ್ನುವ, ಸಮಾನತೆಯಲ್ಲಿ ನಂಬಿಕೆ ಇಲ್ಲದ, ಮನುಷ್ಯನನ್ನು ಮನುಷ್ಯ ಮುಟ್ಟಬಾರದೆಂದು ನಂಬುವ, ಒಂದು ವರ್ಗಕ್ಕೆ ಮಾತ್ರ ಶಿಕ್ಷಣ ಪಡೆಯುವುದಕ್ಕೆ ಆಸ್ತಿಯನ್ನು ಇಟ್ಟುಕೊಳ್ಳುವುದಕ್ಕೆ ಅರ್ಹತೆ ಇದೆ. ಆದರೆ ಇನ್ನೊಂದು ವರ್ಗಕ್ಕೆ ಆ ಅರ್ಹತೆ

ಇಲ್ಲ ಎಂದು ನಂಬುವ ವರ್ಗ, ಎರಡನೆಯವನು ಸೇವೆ ಮಾಡುವುದಕ್ಕೆ ಮಾತ್ರ ಹುಟ್ಟಿದ್ದಾನೆ ಮತ್ತು ಅವನು ದಾಸ್ಯದಲ್ಲೇ ಸಾಯಬೇಕೆಂದು ನಂಬುವ ವರ್ಗ ಇರಬೇಕಾದರೆ, ಆಗ ನಾನು ಕೇಳುವ ಪ್ರಶ್ನೆ ಇದು: ಒಂದು ರಾಷ್ಟ್ರೀಯ ಸರ್ಕಾರ ರಚನೆಯಾದರೆ, ನಾವು ಆ ಆಳುವ ವರ್ಗದ ಕೈಗಳಲ್ಲಿ ಸಿಲುಕಿಕೊಂಡರೆ, ಆಗ ಆ ರಾಷ್ಟ್ರೀಯ ಸರ್ಕಾರ ಈಗ ಪ್ರಸ್ತುತವಿರುವ ಭಾರತ ಸರ್ಕಾರಕ್ಕಿಂತ ಉತ್ತಮವಾಗಿರುತ್ತದೆಯೆಂದು ನೀವು ನಿಜವಾಗಿ ನಂಬುತ್ತೀರೇನು? ನಾನೇನೂ ರಾಷ್ಟ್ರೀಯ ಸರ್ಕಾರದ ಬೇಡಿಕೆಗೆ ವಿರೋಧಿಯಲ್ಲ; ನಾನೇನೂ ಸ್ವರಾಜ್ಯದ ವಿರೋಧಿಯಲ್ಲ; ನಾನು ಸ್ವಾತಂತ್ರ್ಯದ ವಿರೋಧಿಯಲ್ಲ. ಸ್ವಾತಂತ್ರ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇದರಿಂದ ದೊರಕುತ್ತದೆ ಎಂಬ ಭರವಸೆ ನನಗೆ ಕೊಟ್ಟರೆ ನಾನು ಖಂಡಿತವಾಗಿಯೂ ಸ್ವಾತಂತ್ರ್ಯಕ್ಕಾಗಿ, ರಾಷ್ಟ್ರೀಯತೆಗಾಗಿ ಮತ್ತು ಮುಕ್ತಿಗಾಗಿ ಹೋರಾಡುತ್ತೇನೆ (ಹರ್ಷಧ್ವನಿ ಮತ್ತು ಚಪ್ಪಾಳೆ). ಆದರೆ ಇಷ್ಟೆಲ್ಲಾ ಉದ್ದನೆಯ ಭಾಷಣ, ಉದ್ದನೆಯ ವೇದಾಂತ ಶೂನ್ಯದಲ್ಲಿ ಮಾತ್ರ ಪರ್ಯಾವಸನವಾದರೆ, ಒಂದೇ ಹೆಜ್ಜೆಯ ನಾಟ್ಯದಲ್ಲಿ ಕೊನೆಗೊಂಡರೆ, ಅದು ಈಗ ಆಳುತ್ತಿರುವ ವರ್ಗಕ್ಕೆ ಮಾತ್ರ ಸೀಮಿತವಾದರೆ, ರಾಜಕೀಯ ಅಧಿಕಾರವನ್ನು ಆ ಸಮುದಾಯವನ್ನು ಮಾತ್ರ ಬಲಪಡಿಸಿ, ಇತರರ ಹಕ್ಕುಗಳನ್ನು ಕಿತ್ತುಕೊಂಡರೆ, ಆಗ ಪ್ರಸ್ತುತ ಭಾರತ ಸರ್ಕಾರವನ್ನು ಈಗ ಟೀಕಿಸುತ್ತಿರುವಷ್ಟು ಟೀಕಿಸಬೇಕಾಗಿಲ್ಲ.

(ಚಪ್ಪಾಳೆ)

# ೬೨
# ಒಗ್ಗಟ್ಟಿನಿಂದ ಇರುವುದು ಅತಿ ಮಹತ್ವದ್ದಾಗಿದೆ

೨೩ನೇ ಸೆಪ್ಟೆಂಬರ್ ೧೯೪೪ರಂದು ಮದರಾಸಿನ ಕೊನ್ನೆಮರಾ ಹೋಟಲಿನಲ್ಲಿ "ಸಂಡೇ ಅಬ್ಸರ್ವರ್ ಪತ್ರಿಕೆಯ ಸಂಪಾದಕರಾದ ಮಿ. ಪಿ.ಬಾಲಸುಬ್ರಮಣ್ಯ ಅವರು ಕೊಟ್ಟ ಔತಣಕೂಟದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಒಂದು ಭಾಷಣವನ್ನು ಮಾಡಿದರು."

ನಾನು ಅಧ್ಯಯನ ಮಾಡಿರುವಷ್ಟರ ಮಟ್ಟಿಗೆ ಬ್ರಾಹ್ಮಣೇತರ ಪಕ್ಷದ ಉಗಮ ಒಂದು ಭಾರತದ ಚರಿತ್ರೆಯಲ್ಲಿನ ಒಂದು ವಿದ್ಯಮಾನವಾಗಿದೆ. "ಬ್ರಾಹ್ಮಣೇತರ" ಎಂಬ ಪದ ಸೂಚಿಸಿದ ಜಾತೀಯತೆಯ ಮುಖ ಬ್ರಾಹ್ಮಣೇತರ ಪಕ್ಷದ ಮೂಲಾಧಾರವಲ್ಲವೆಂದು ಅನೇಕರಿಗೆ ಗ್ರಹಿಸಿಕೊಳ್ಳಲಾಗಲಿಲ್ಲ. ಬ್ರಾಹ್ಮಣೇತರ ಪಕ್ಷವನ್ನು ಯಾರೇ ನಡೆಸಲಿ, ಅವರು ಒಂದು ತುದಿಯಲ್ಲಿ ಬ್ರಾಹ್ಮಣರು ಇನ್ನೊಂದು ತುದಿಯಲ್ಲಿ ಅಸ್ಪೃಶ್ಯರು ಇವರುಗಳು ಅವರುಗಳ ನಡುವೆ ಇರುವ "ಮಧ್ಯವರ್ತಿ ವರ್ಗ"ದವರು. ಪ್ರಜಾಪ್ರಭುತ್ವ ಪಕ್ಷವಲ್ಲದಿದ್ದರೆ, ಅದು ಏನೇನೂ ಅಲ್ಲ. ಆದುದರಿಂದ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದವರೆಲ್ಲರಿಗೂ, ಆ ಪಕ್ಷದ ಭವಿಷ್ಯ ಮತ್ತು ಅದರ ಹಿತಾಸಕ್ತಿಗಳ ಬಗ್ಗೆ ಆಳವಾದ ಆಕಾಂಕ್ಷೆ ಇತ್ತು. ದೇಶದ ಚರಿತ್ರೆಯಲ್ಲಿ ಬ್ರಾಹ್ಮಣೇತರ ವಿದ್ಯಮಾನವೇ ಆಗಿತ್ತು. ಅದರ ಪತನವೂ ಸಹ ಅತ್ಯಂತ ದುಃಖದಿಂದ ನೆನಪಿಸಿಕೊಳ್ಳಬೇಕಾದ ಘಟನೆಯಾಗಿತ್ತು. ಆ ಪಕ್ಷ ೧೯೩೭ರ ಚುನಾವಣೆಯಲ್ಲಿ ನೆಲ ಕಚ್ಚಿದ್ದು ಏಕೆ ಎಂಬುದನ್ನು ಆ ಪಕ್ಷದ ನಾಯಕರುಗಳು ತಮ್ಮನ್ನು ತಾವೇ ಕೇಳಿಕೊಳ್ಳಬೇಕಾಗಿದೆ. ಏನೇ ಆದರೂ, ಮದರಾಸಿನಲ್ಲಿ ಪೂರಾ ೨೪ ವರ್ಷಗಳ ಕಾಲ ಬ್ರಾಹ್ಮಣೇತರ ಪಕ್ಷದ ಆಳ್ವಿಕೆ ಇತ್ತು. ಇಷ್ಟು ದೀರ್ಘಕಾಲ ಅಧಿಕಾರದಲ್ಲಿದ್ದ ಪಕ್ಷ ಹಂಚಿಕಡ್ಡಿಯ ಮನೆಯಂತೆ ಕುಸಿದು ಬಿದ್ದುದಕ್ಕೆ, ಪಕ್ಷದಲ್ಲಿ ಸಂಭವಿಸಿದ ತಪ್ಪಾದರೂ ಏನು? ಬ್ರಾಹ್ಮಣೇತರರದ್ದೇ ಅತಿ ದೊಡ್ಡ ಬಹುಮತವಿದ್ದ ಪಕ್ಷ ಅಷ್ಟು ಜನ ವಿರೋಧಿಯಾಗಲು ಅದು ಮಾಡಿದ್ದಾದರೂ ಏನು? ಈ ರೀತಿ ಪಕ್ಷ ನೆಲಕಚ್ಚಿದ್ದಕ್ಕೆ ಎರಡು ಘಟನೆಗಳು ಕಾರಣ ಎಂದು ನನ್ನ ಅಭಿಪ್ರಾಯ. ಮೊದಲನೆಯದಾಗಿ ಬ್ರಾಹ್ಮಣ ಪಂಗಡದವರೊಂದಿಗಿದ್ದ ಭಿನ್ನಾಬಿಪ್ರಾಯಗಳು ಏನೆಂದು ಅರ್ಥ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ಅತಿ ಕಟುವಾಗಿ ಟೀಕಿಸುವುದರಲ್ಲಿ ತೊಡಗಿದ್ದರೂ, ಅವರಲ್ಲಿ ಯಾರೊಬ್ಬರಿಗಾದರೂ, ಬ್ರಾಹ್ಮಣರೊಂದಿಗೆ ಅವರ ಭಿನ್ನಾಭಿಪ್ರಾಯವೇನೆಂದು ಗೊತ್ತಿತ್ತೆ? ಅವರಲ್ಲೇ ಇದ್ದ ಬ್ರಾಹ್ಮಣತ್ವ ಎಷ್ಟು? ಅವರು "ನವಾಬರೇ" ಆಗಿದ್ದು ತಮ್ಮನ್ನು ತಾವೇ ಎರಡನೇ ದರ್ಜೆ ಬ್ರಾಹ್ಮಣರು ಎಂದು ಕರೆದುಕೊಳ್ಳುತ್ತಿದ್ದರು. ಬ್ರಾಹ್ಮಣತ್ವವನ್ನು ದೂರ ಮಾಡುವ ಬದಲು ಬಿಟ್ಟುಬಿಡುವ ಬದಲು, ಅವರು ಅದರ ಚೇತನಕ್ಕೇ ಅಂಟಿಕೊಂಡಿದ್ದರು. ಅವರಿಗೆ ಅದು ತಲುಪಲೇಬೇಕಾದ ಒಂದು ಆದರ್ಶವಾಗಿತ್ತು. ಬ್ರಾಹ್ಮಣರ ಮೇಲಿನ ಅವರ ಕೋಪಕ್ಕೆ ಕಾರಣ ಬ್ರಾಹ್ಮಣರು ಅವರಿಗೆ ಎರಡನೇ ದರ್ಜೆಯನ್ನು ಮಾತ್ರ ಕೊಟ್ಟಿದ್ದರು.

ಯಾವುದೇ ಒಂದು ಪಕ್ಷದ ಅನುಯಾಯಿಗಳಿಗೆ ತಾವು ಇರುವ ಪಕ್ಷಕ್ಕೂ, ತಾವು ವಿರೋಧಿಸುವ ಪಕ್ಷಕ್ಕೂ ನಡುವೆ ಇರುವ ಸೈದ್ಧಾಂತಿಕ ವ್ಯತ್ಯಾಸಗಳೇನು ಎಂದು ಗೊತ್ತಿಲ್ಲದಿದ್ದರೆ, ಅವರ ಪಕ್ಷ ಬೇರೂರುವುದಾದರೂ ಹೇಗೆ? ಆದಕಾರಣ ಬ್ರಾಹ್ಮಣ ಪಂಗಡಗಳಿಗೂ, ಬ್ರಾಹ್ಮಣೇತರ ಪಂಗಡಗಳಿಗೂ ನಡುವೆ ಇರುವ ಸೈದ್ಧಾಂತಿಕ ವ್ಯತ್ಯಾಸಗಳೇನೆಂದು ಸ್ಪಷ್ಟವಾಗಿ ವಿಷದೀಕರಿಸಲು ವಿಫಲರಾದುದೇ ಆ ಪಕ್ಷದ

ಅವನತಿಗೆ ಕಾರಣವಾಯಿತು. ಆ ಪಕ್ಷದ ಅವನತಿಗೆ ಎರಡನೆಯ ಕಾರಣವೆಂದರೆ, ಅದಕ್ಕೆ ತೀರಾ ಕಿರಿದಾದ ರಾಜಕೀಯ ಕಾರ್ಯಕ್ರಮವಿತ್ತು. ಆ ಪಕ್ಷದ ವಿರೋಧಿಗಳು ಅವರನ್ನು ಕೆಲಸಕ್ಕಾಗಿ ಬೇಟೆಯಾಡುವ ಪಕ್ಷದವರೆಂದು ಹೆಸರಿಸಿದ್ದರು. "ಹಿಂದೂ" ಪತ್ರಿಕೆ ಈ ಪದವನ್ನು ಅನೇಕ ಬಾರಿ ಪ್ರಯೋಗಿಸಿತ್ತು. ಈ ಟೀಕೆಗೆ" ನಾನು ಹೆಚ್ಚಿನ ಪ್ರಾಮುಖ್ಯವನ್ನು ಕೊಡುವುದಿಲ್ಲ. ಏಕೆಂದರೆ "ನಾವು ಕೆಲಸವನ್ನು ಹುಡುಕಿಕೊಂಡು ಹೋಗುವವರಾದರೆ, ಅತ್ತ ಕಡೆಯವರೂ ಸಹ ನಮಗಿಂತ ಕಮ್ಮಿ ಏನೂ ಇಲ್ಲ. ಬ್ರಾಹ್ಮಣೇತರ ಪಕ್ಷದ ರಾಜಕೀಯ ಕಾರ್ಯಕ್ರಮದಲ್ಲಿನ ಒಂದು ಹುಳುಕು ಏನೆಂದರೆ, ಆ ಪಕ್ಷ ತಮ್ಮವರಿಗಾಗಿ ಒಂದಿಷ್ಟು ಗೊತ್ತಾದ ಸಂಖ್ಯೆಯಲ್ಲಿ ಕೆಲಸಗಳನ್ನು ಗಿಟ್ಟಿಸಿಕೊಳ್ಳುವುದನ್ನು ತನ್ನ ಮುಖ್ಯವಾದ ಆಸಕ್ತಿಯನ್ನಾಗಿ ಮಾಡಿಕೊಂಡಿತು. ಅದು ಪರಿಪೂರ್ಣವಾಗಿ ಕ್ರಮಬದ್ಧವಾಗಿಯೇ ಇತ್ತು. ಆದರೆ ಈ ಬ್ರಾಹ್ಮಣೇತರ ಯುವಕರು ಅವರಿಗಾಗಿ ಯಾರು ಲೋಕಸೇವೆಗಳಲ್ಲಿ ಕೆಲಸಗಳನ್ನು ಪಡೆದುಕೊಳ್ಳಲು ಹೊಡೆದಾಡಿದರೋ, ಆ ಯುವಕರು ತಮ್ಮ ಕೆಲಸಗಳಿಂದ ಸಂಬಳಗಳು ಸಿಕ್ಕಿದ ಮೇಲೆ, ಆ ಪಕ್ಷವನ್ನೇನಾದರೂ ನೆನಪಿಸಿಕೊಂಡರೆ? ಪಕ್ಷ ಅಧಿಕಾರದಲ್ಲಿದ್ದ ೩೦ ವರ್ಷಗಳ ಅವಧಿಯಲ್ಲಿ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಶೇಕಡಾ ೯೦ರಷ್ಟು ಬ್ರಾಹ್ಮಣೇತರರನ್ನು ಮರೆತೇಬಿಟ್ಟರು. ಆ ಗ್ರಾಮವಾಸಿಗಳೋ, ಪಾಪ ಬಡತನದ ಜಿವನವನ್ನು ಮಾಡುತ್ತಾ ಸಾಲಗಾರರ ಮುಷ್ಟಿಯೊಳಗೆ ಸಿಕ್ಕಿ ಹಾಕಿಕೊಳ್ಳುತ್ತಿದ್ದರು.

ಈ ಅವಧಿಯೊಳಗೆ ಅಧಿನಿಯಮಗೊಳಿಸಲ್ಪಟ್ಟ ಶಾಸನಗಳನ್ನು ನಾನು ಪರೀಕ್ಷಿಸಿದ್ದೇನೆ; ಭೂ ಸುಧಾರಣೆಯ ಒಂದೇ ಒಂದು ಕ್ರಮವನ್ನು ಬಿಟ್ಟರೆ, ಬ್ರಾಹ್ಮಣೇತರ ಪಕ್ಷ ಗೇಣಿದಾರರ ಬಗ್ಗೆಯಾಗಲೀ, ರೈತಾಪಿಜನಗಳ ಬಗ್ಗೆಯಾಗಲೀ ತಲೆಯನ್ನು ಕೆಡಿಸಿಕೊಳ್ಳೇ ಇಲ್ಲ. ಆಗಲೇ ಕಾಂಗ್ರೆಸ್‌ನವರು ಅವರ ಬಟ್ಟೆಗಳನ್ನು ಸದ್ದಿಲ್ಲದೇ ಎಗರಿಸಿಬಿಟ್ಟರು.

ಘಟನಾವಳಿಗಳು ಬದಲಾಗಿದ್ದುದಕ್ಕಾಗಿ ನನಗೆ ಬಹಳ ನೋವಾಯಿತು. ಅವರಿಗೆ ನಾನು ಮನದಟ್ಟು ಮಾಡಿಕೊಡಲು ಬಯಸುವುದೇನೆಂದರೆ, ಅವರನ್ನು ಕಾಪಾಡಬಲ್ಲುದು ಒಂದು ಪಕ್ಷ ಮಾತ್ರ.

ಒಂದು ಪಕ್ಷಕ್ಕೆ ಒಬ್ಬ ಒಳ್ಳೆಯ ನಾಯಕಬೇಕು; ಒಂದು ಪಕ್ಷಕ್ಕೆ ಒಳ್ಳೆಯ ಸಂಘಟನೆ ಬೇಕು; ಒಂದು ಪಕ್ಷಕ್ಕೆ ಒಂದು ರಾಜಕೀಯ ವೇದಿಕೆ ಬೇಕು.

ಆದರೆ ನಾಯಕರುಗಳ ಬಗ್ಗೆ ಕಟು ಟೀಕೆ ಮಾಡುವುದು ಬೇಡ. ನಾವು ಕಾಂಗ್ರೆಸ್‌ನತ್ತ ನೋಡೋಣ. ಬೇರೆ ಯಾವುದೇ ದೇಶದಲ್ಲಿ, ಮಹಾತ್ಮ ಗಾಂಧೀಯವರನ್ನು ಯಾರಾದರೂ ನಾಯಕನೆಂದು ಒಪ್ಪಿಕೊಳ್ಳುತ್ತಿದ್ದರೆ? ಅವರೊಬ್ಬರು ದೂರದೃಷ್ಟಿಯಿಲ್ಲದ, ತಿಳುವಳಿಕೆಯಿಲ್ಲದ, ಒಂದು ತೀರ್ಮಾನಕ್ಕೆ ಬರಲಾಗದ ಮನುಷ್ಯ. ಸಾರ್ವಜನಿಕ ಜೀವನದುದ್ದಕ್ಕೂ, ಅವರು ಸೋಲನ್ನೇ ಕಂಡಿದ್ದರು. ಭಾರತ ಇನ್ನೇನು ಜಯಗಳಿಸುವುದರಲ್ಲಿ ಇದ್ದಾಗ ಗಾಂಧೀಜಿಯವರು ಏನನ್ನಾದರೂ ಒಳ್ಳೆಯದನ್ನು ತಂದಿದ್ದ ಯಾವುದೇ ಮುಖ್ಯವಾದ ಸಂದರ್ಭ ಇರಲಿಲ್ಲ. ಮಿ. ಜಿನ್ನಾರವರು ಎರಡು ಮೂರು ವರ್ಷಗಳ ಕೆಳಗೆ ಪಾಕಿಸ್ತಾನದ ವಿಷಯ ಎತ್ತಿದಾಗ, ಗಾಂಧಿ ಅದನ್ನು ಪಾಪವೆಂದು ಹೆಸರಿಸಿದರು; ಅದಕ್ಕೆ ಕಿವಿಗೊಡಲೇ ಇಲ್ಲ. ಕಟ್ಟ ಕಡೆಗೆ ತಾನೇ ಸೃಷ್ಟಿಸಿದ ಭೂತ ಗಾಂಧಿಯವರನ್ನೇ ಬೆದರಿಸಿತು. ಅವರೀಗ ಲಾಗ ಹಾಕಿ ಅದರೊಂದಿಗೆ ಸೆಣತ್ತಿದ್ದರು. ಕಾಂಗ್ರೆಸ್ ಪಕ್ಷ ತನ್ನ ನಾಯಕನನ್ನು ವಿಚಾರಣೆಗೆ ಗುರಿಪಡಿಸದೆ ಇದ್ದ ಕಾರಣಕ್ಕೆ, ಗಾಂಧಿಯವರು ಈ ದೇಶದ ನಾಯಕರಾಗಿಯೇ ಮುಂದುವರಿದರು.

ನಾವೀಗ ಜಿನ್ನಾರವರ ಪ್ರಕರಣವನ್ನು ತೆಗೆದುಕೊಳ್ಳೋಣ. ಅವರೊಬ್ಬರು ಸರ್ವಾಧಿಕಾರಿ ನಾಯಕರಾಗಿದ್ದರು. ಅವರ ಮುಸ್ಲಿಮ್ ಲೀಗ್ ಪಕ್ಷ ಸಂಪೂರ್ಣವಾಗಿ ಅವರದ್ದೆ "ಷೋ" ಆಗಿತ್ತೆಂದರೆ

ನಿಮಗೆ ಆಶ್ಚರ್ಯವಾಗಬಹುದು. ಆದರೆ ಮುಸಲ್ಮಾನರು ಅವರಲ್ಲಿ ತಮ್ಮ ನಂಬಿಕೆಯನ್ನು ಇಟ್ಟಿದ್ದುದು ಸರಿಯಾಗೇ ಇತ್ತು. ಗಾಂಧಿಯವರ ಮೇಲೆ ಹೊರಿಸಿದ ಯಾವುದೇ ಆಪಾದನೆ, ತಮ್ಮ ಸಂಸ್ಥೆಯನ್ನೇ ಒಡೆದು ಹಾಕುತ್ತದೆಂಬುದು ಕಾಂಗ್ರೆಸ್‌ನವರಿಗೆ ಗೊತ್ತಿದ್ದು, ಹಾಗಾಗಿ ಅವರು ಪ್ರಜಾಪ್ರಭುತ್ವಕ್ಕೆ ಸರಿಹೊಂದದ ಬಹಳಷ್ಟನ್ನು ಸಹಿಸಿಕೊಂಡಿದ್ದರು. ಆದ್ದರಿಂದ ನಾನು ಬ್ರಾಹ್ಮಣೇತರರಿಗೆ ಹೇಳುವುದೇನೆಂದರೆ, ಒಗ್ಗಟ್ಟು ಪರಮ ಮುಖ್ಯವಾದದ್ದು. ತೀರಾ ವಿಳಂಬವಾಗುವುದಕ್ಕೆ ಮುಂಚೆ ಪಾಠವನ್ನು ಕಲಿಯಿರಿ.

# ೯೩
# ನಾನು ಭಾರತ ದೇಶದ ಭಕ್ತರುಗಳಿಗಿಂತ ಬಹಳ ಬಹಳ ಮುಂದೆ ಇದ್ದೆ

೨೪ನೇ ಸೆಪ್ಟೆಂಬರ್ ೧೯೪೪ರ ಭಾನುವಾರದಂದು ಮದರಾಸಿನ ಪಾರ್ಕ್ ಟೌನ್ ಸ್ಮಾರಕ ಭವನದಲ್ಲಿ ಅಸ್ಪೃಶ್ಯರ ಸಭೆಯೊಂದು ನಡೆಯಿತು. ಅದರ ಅಧ್ಯಕ್ಷತೆಯನ್ನು ರಾವ್ ಬಹಾದೂರ್ ಎನ್ ಶಿವರಾಜ್ ವಹಿಸಿದ್ದರು. ಡಾ. ಅಂಬೇಡ್ಕರ್ ಅವರ ಆಗಮನವನ್ನು ಕಿವಿಗಡಚಿಕ್ಕುವ ಚಪ್ಪಾಳೆಗಳಿಂದ ಸ್ವಾಗತಿಸಲಾಯಿತು. ಸಭೆಯಲ್ಲಿ (೧) ಮದರಾಸ್ ಆದಿ ದ್ರಾವಿಡ ಕಾರ್ಮಿಕರ ಸಂಘ (೨) ದಕ್ಷಿಣ ಭಾರತ ಬೌದ್ಧರ ಸಂಘ (೩) ಬೆಂಗಳೂರು ದಂಡು ಪ್ರದೇಶದ ಪರಿಶಿಷ್ಟ ಜಾತಿಗಳವರ ಒಕ್ಕೂಟ (೪) ಮದರಾಸಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಸಂಘ (೫) ಆಂಧ್ರಪ್ರಾಂತ್ಯ ಪರಿಶಿಷ್ಟ ಜಾತಿಗಳವರ ಕಲ್ಯಾಣ ಸಂಘ, ಅಲ್ಲದೆ ಇತರ ಸಂಸ್ಥೆಗಳು ಡಾ. ಬಿ.ಆರ್.ಅಂಬೇಡ್ಕರ್ ಅವರಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿದರು. ಈ ಸಂದರ್ಭದಲ್ಲಿ, ವಿದ್ಯಾರ್ಥಿಯೊಬ್ಬ ತಾನೇ ಬರೆದ ಬುದ್ಧ ಭಗವಾನನ ಸುಂದರವಾದ ಚಿತ್ರವನ್ನು ಸಮರ್ಪಿಸಿದ.

ತಮಗೆ ಸಮರ್ಪಿಸಲಾದ ಬಿನ್ನವತ್ತಳೆಗೆ ಉತ್ತರ ಕೊಡುತ್ತಾ ಡಾ. ಅಂಬೇಡ್ಕರ್ ಹೇಳಿದ್ದು: ಈ ಮದರಾಸ್ ಪಟ್ಟಣದಲ್ಲಿ, ಇಲ್ಲಿನ ಅತಿಗಣ್ಯರಾದ ಪೌರರೊಬ್ಬರು ಮಾಡಿದ ಎರಡು ಟೀಕೆಗಳನ್ನು ನಾನು ಕೇಳಿದ್ದೇನೆ ಎಂದು ಹೇಳುವ ಮೂಲಕ ನನ್ನ ಮಾತನ್ನು ಪ್ರಾರಂಭಿಸಲು ಇಚ್ಚಿಸುತ್ತೇನೆ. ಈ ಟೀಕೆಗಳನ್ನು ಇತ್ತೀಚೆಗೆ ತಮ್ಮ ಭಾಷಣದಲ್ಲಿ ಮಾಡಿದವರು ಗೌರವಾನ್ವಿತ ಯು.ಎಸ್. ಶ್ರೀನಿವಾಸ ಶಾಸ್ತ್ರಿಯವರು. ಅವರು ಹೇಳಿರುವುದು ನನಗೆ ಬಹಳ ಅವಹೇಳನಕಾರಿಯಾಗಿದೆ. ಮಿ. ಶಾಸ್ತ್ರಿಯವರು ಒಂದು ಸಂದರ್ಭದಲ್ಲಿ, ಅವರ ಮನಸ್ಸಿನ್ನೂ ಪಾಕಿಸ್ತಾನದ ವಿಷಯವಾಗಿ ವಿಚಲಿತರಾಗದೆ ಇದ್ದಾಗ, ಗಾಂಧಿಯವರನ್ನು ಭಾರತದ ಆತ್ಮದ ಮೂರ್ತ ರೂಪವೆಂದು ಇನ್ನೂ ಪರಿಗಣಿಸುತ್ತಿದ್ದಾಗ, ಅವರು ಮಾತ್ರವೇ ಯಾವುದೇ ಅಂತಾರಾಷ್ಟ್ರೀಯ ಸಭೆಗಳಲ್ಲಿ ಭಾರತವನ್ನು ಪ್ರತಿನಿಧಿಸಬಲ್ಲವರೆಂದು ಅಂದುಕೊಂಡಿದ್ದಾಗ, ಏನೇ ಆದರೂ ಭಾರತದ ಜನತೆ, ಯಾವುದೇ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ನನಗೆ ಅವಕಾಶ ಸಿಗದ ಹಾಗೆ ಅತಿಶಯವಾದ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಒಬ್ಬ ಪೂಜನೀಯ ರಾಜಕೀಯ ವ್ಯಕ್ತಿಯಿಂದ ಇಂಥ ಭಾಷೆಯನ್ನು ಕೇಳಿ ನನಗೆ ಆಶ್ಚರ್ಯವಾಯಿತು. ನನ್ನ ಸಾರ್ವಜನಿಕ ಜೀವನದಲ್ಲಿ ಎಲ್ಲಿಯಾದರೂ ನಾನು ಅಂಥ ಅವಮಾನಕರವಾದದ್ದನ್ನು ಏನಾದರೂ ನಿಜವಾಗಿ ಮಾಡಿದ್ದೇನೆಯೇ ಎಂದು ನನ್ನ ಹೃದಯವನ್ನು ಹುಡುಕುತ್ತಿದ್ದೆ. ನನ್ನ ಸಾರ್ವಜನಿಕ ಜೀವನ ಬಹುಶಃ ಅವರಷ್ಟು ಕೀರ್ತಿಯುತವಾದದ್ದು ಅಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಸಾರ್ವಜನಿಕ ಜೀವನದ ಚಿಕ್ಕ ಸೇತುವಿನಲ್ಲಿ ನಾನೇನಾದರೂ ಅಂಥ ಅವಮಾನ ಆಗುವಂಥ ಏನನ್ನಾದರೂ ಮಾಡಿ, ಯಾವುದೇ ಅಂತಾರಾಷ್ಟ್ರೀಯ ಕೂಟದಲ್ಲಿ ನಾನು ಭಾಗಿಯಾದರೆ, ಭಾರತ ದೇಶಕ್ಕೆ ಮುಖಭಂಗವಾಗುವಂಥದ್ದು ಏನಾದರೂ ಮಾಡಿದ್ದೇನೆಯೆ? ಬಯ್ಗುಳ ಭಾಷೆಯನ್ನು ಉಪಯೋಗಿಸುವುದಕ್ಕೆ ನನಗೆ ಇಷ್ಟವಿಲ್ಲ. ನಾನು ಬಹಳ ಸುಲಭವಾಗಿ ಗೌರವಾನ್ವಿತ ಶಾಸ್ತ್ರಿಯವರು ಬ್ರಿಟಿಷ್ ಸರ್ಕಾರದ ಮಡಿಲಲ್ಲಿ ಕುಳಿತಿರುವ ನಾಯಿಯೆಂದು ಹೇಳಬಹುದಾಗಿತ್ತು. ಇಷ್ಟರವರೆಗೂ ಅವರು ಬ್ರಿಟಿಷ್ ಸರ್ಕಾರದ ಮಡಿಲಲ್ಲಿ ಕುಳಿತುಕೊಂಡಿದ್ದಾರೆ. ಅವರೇನಾದರೂ ಭಾರತದಲ್ಲಿಯಾಗಲೀ, ಹೊರಗಡೆಯಲ್ಲಾಗಲೀ ಖ್ಯಾತಿಯನ್ನು ಅಥವಾ ಹಿರಿಮೆಯನ್ನು ಪಡೆದುಕೊಂಡಿದ್ದರೆ ಅದಕ್ಕೆ ಕಾರಣ

ಬ್ರಿಟಿಷ್ ಸರ್ಕಾರ ಅವರನ್ನು ಪ್ರದರ್ಶನಕ್ಕಿಟ್ಟು ಬೊಂಬೆಯಂತೆ ಮಾಡಿ ಕೂರಿಸಿದ್ದಕ್ಕಾಗಿ ಮಾತ್ರ. ಶಾಸ್ತ್ರಿಯವರು ಹೇಳಿದ್ದು ನಿಜವಾಗಿಯೂ ರೋಗಬಡಿದ ಕರುಳಿನ ಮೇಲೆ ಕುಳಿತಿರುವ ಒಂದು ಮುದಿ ಕಾಗೆಯ ಗೊರಗುಟ್ಟುವ ಧ್ವನಿ ಎಂದು ನಾನು ಹೇಳ ಬಯಸುವುದಿಲ್ಲ.

ಸಾಧಾರಣವಾಗಿ ಬಹುಮಂದಿ ಕಾಂಗ್ರೆಸ್ಸಿಗರು ಹೇಳುತ್ತಿರುವುದಾದರೂ ಏನು? ಅವರು ಹೇಳುತ್ತಿರುವುದು ಪರಿಶಿಷ್ಟ ಜಾತಿಗಳು ದೇಶದ ಹಿತಾಸಕ್ತಿಗಳಿಗೆ ಶತ್ರುಗಳಾಗಿದ್ದಾರೆ ಎಂದು. ನಾನು ಈ ದೇಶದ ಅತಿಗಣ್ಯವ್ಯಕ್ತಿಗಳಾದ ಮಿ. ಗಾಂಧಿ, ಹಾನರೆಬಲ್ ಶಾಸ್ತ್ರಿ, ಸರ್ ತೇಜ್ ಬಹಾದೂರ್ ಸಪ್ರು, ಅವರುಗಳ ಅಕ್ಕಪಕ್ಕದಲ್ಲಿ ಕುಳಿತಿದ್ದೇನೆ. ಭಾರತದ ರಾಜಕೀಯದಲ್ಲಿ ನಿಸ್ಸಂಶಯವಾಗಿ ಮೊದಲನೇ ರ್‍ಯಾಂಕಿನಲ್ಲಿರುವವ ಗುಂಪು ಗುಂಪನ್ನೇ ಗಣತಿ ಮಾಡಬಲ್ಲೆ. ಒಬ್ಬ ರಾಷ್ಟ್ರೀಯವಾಗಿ ಏನನ್ನು ಮಾಡಬಹುದು ಎಂದು ನಿರೀಕ್ಷಿಸಲಾಗಿದೆ ಎಂಬುದನ್ನು ಗಮನಿಸುತ್ತಾ ಬಂದಿದ್ದೇನೆ; ಯಾವುದೇ ಸಾರ್ವಜನಿಕ ಪ್ರಶ್ನೆ ದುಂಡು ಮೇಜಿನ ಸಮ್ಮೇಳನದ ಮುಂದೆ ಬಂದಾಗ, ಭಾರತದ ದೇಶಪ್ರೇಮಿಗಳೆಂದು ಕರೆಯಿಸಿಕೊಳ್ಳಲ್ಪಟ್ಟ ಮಹನೀಯರುಗಳಿಗಿಂತ ನಾನು ಬಹು ಮುಂದೆ ಇದ್ದೇನೆ ಎಂಬುದರ ಬಗ್ಗೆ ನನಗೆ ಭರವಸೆಯೂ ಇದೆ, ಹೆಮ್ಮೆಯೂ ಇದೆ.

### ಆರ್.ಟಿ.ಸಿ.ಯಲ್ಲಿ ಗಾಂಧಿಯವರು ಮಾಡಿದ ಕಾಯಕಗಳು

ಗಾಂಧಿಯವರು ಆರ್.ಟಿ.ಸಿ.ಯಲ್ಲಿ (ದುಂಡು ಮೇಜಿನ ಸಮ್ಮೇಳನದಲ್ಲಿ) ಏನು ಮಾಡುತ್ತಿದ್ದರೆಂಬುದು ಇಲ್ಲಿ ಸೇರಿರುವ ಜನಗಳಲ್ಲಿ ಬಹುಮಂದಿಗೆ ಗೊತ್ತಿಲ್ಲ. ನಾವು ಅಲ್ಲಿ ನಿರ್ವಹಿಸಿದ ಪಾತ್ರಗಳು ಕೀರ್ತಿ ಪ್ರಾಯವಾಗಿದ್ದವು ಎಂದು ನೀವು ತಿಳಿದಿರಬಹುದು. ಆದರೆ ಅದು ನಿಜವಾದ ಕಥೆಯೇನು? ಗಾಂಧಿಯವರು ಏನು ಮಾಡಿದರು? ನಿಮಗೆಲ್ಲಾ ಗೊತ್ತಿರುವ ಹಾಗೆ, ೧೯೩೧ರಲ್ಲಿ ಗಾಂಧಿಯವರು ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದ್ದಾಗ, ಅವರ ಮೇಲೆ ಒಂದು ಆದೇಶವನ್ನು ಹೊರಿಸಲಾಗಿತ್ತು; ಆ ಆದೇಶವೆಂದರೆ ಅವರು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಬೇಕೆಂದೂ, ಅದಕ್ಕಿಂತ ಕಮ್ಮಿ ಏನನ್ನೂ ಒಪ್ಪಿಕೊಳ್ಳಬಾರದೆಂದೂ ಇತ್ತು; ಇದು ನಿಸ್ಸಂದೇಹವಾಗಿ ಭಾರತದಲ್ಲಿ ಅನೇಕ ಮಹಾನ್ ರಾಜಕಾರಣಿಗಳು ಕೇಳುವುದಕ್ಕೆ ಆಗದೆ ಇದ್ದ ಬೇಡಿಕೆ ಆಗಿತ್ತು. ಆದರೆ ಗಾಂಧಿಯವರು ಏನು ಮಾಡಿದರು? ಅದನ್ನು ಹೇಳುವುದು ಖೇದಕರ. ಆರ್.ಟಿ.ಸಿ.ಯಲ್ಲಿ ತಪ್ಪದೇ ಕರಿಕಾಲಿನವನ ಪಾತ್ರವನ್ನು ಮಾಡುವವನು ಎಂಬ ಆಪಾದನೆಯನ್ನು ಗಮನದಲ್ಲಿರಿಸಿಕೊಂಡು ನಾನು ಆ ಕಥೆಯನ್ನು ಹೇಳಲೇಬೇಕು. ಆ ವಯೋವೃದ್ಧ, ಸ್ನೇಹಜೀವಿ ಸ್ವಾತಂತ್ರ್ಯಕ್ಕಿಂತ ಕಮ್ಮಿಯಾದದನ್ನು ಕೇಳಬಾರದೆಂದು ಆದೇಶವನ್ನು ಪಡೆದುಕೊಂಡಿದ್ದರೂ, ಅಲ್ಲಿ ಅವರೇನು ಮಾಡಿದರು? ಅಲ್ಲಿ ರಾಜ್ಯ ಕಾರ್ಯದರ್ಶಿಯವರಾದ ಸರ್ ಸ್ಯಾಮುಯಲ್ ಹೋರ್ ಅವರಿಗೆ ಅವರು ಹೇಳಿದ್ದೇನು? ಈ ಹಂತದಲ್ಲಿ ಪ್ರಾಂತೀಯ ಸ್ವಾಯತ್ತತೆಗಷ್ಟೆ ತೃಪ್ತಿಪಟ್ಟುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆಂದು ಹೇಳಿದರು; ಇದು ಅಸಾಧಾರಣ ವಿಷಯವಾಗಿತ್ತು. ಕಾಂಗ್ರೆಸಿಗೆ ಸೇರಿಲ್ಲದ ನಾವುಗಳು ಅತ್ತಲಾಗಿ ಒಂದು ನಿಲುವನ್ನು ತಾಳಿದ್ದೆವು. ಅದೆಂದರೆ ೧೯೩೧ರಲ್ಲಿ ಆಗಲೀ, ಭಾರತ ಸಾಮಂತ ರಾಜ್ಯದ ಸ್ಥಾನಮಾನವನ್ನು ಪಡೆದುಕೊಳ್ಳುವುದಕ್ಕೆ ಸಿದ್ಧವಿರಲಿ, ಬಿಡಲಿ, ಭಾರತೀಯರು ಎಲ್ಲಾ ಸಂದರ್ಭಗಳಲ್ಲಿ, ಕೇಂದ್ರದಲ್ಲಿ ಒಂದಿಷ್ಟು ಮಟ್ಟಿಗೆ ಹೊಣೆಗಾರಿಕೆಯನ್ನು ಪಡೆದುಕೊಳ್ಳುವುದಕ್ಕೆ ಒತ್ತಾಯಿಸುತ್ತಾರೆ ಹೊರತು ಪ್ರಾಂತೀಯ ಸ್ವಾಯತತ್ತೆಗೆ ತೃಪ್ತಿ ಪಟ್ಟುಕೊಳ್ಳುತ್ತಿರಲಿಲ್ಲ. ಆ ವಯೋವೃದ್ಧ ಮಹನೀಯರು ಇದಕ್ಕಿಂತಲೂ ಬಹಳ ಮುಂದೆ ಹೋಗುತ್ತಾರೆಂದು ನಿರೀಕ್ಷಿಸಲಾಗಿತ್ತು; ಏಕೆಂದರೆ ಅವರಿಗೆ ಕೊಟ್ಟ ಸ್ವಾತಂತ್ರ್ಯವನ್ನು ಅವರು ಒತ್ತಾಯಿಸಬೇಕು ಎಂದು. ಕುತೂಹಲಕರವಾಗಿ ದುರಾದೃಷ್ಟವಶಾತ್, ಮತ್ತು ಈ ದೇಶಕ್ಕೆ ಮಾರಣಾಂತಿಕವಾಗಿ, ಆ ವಯೋವೃದ್ಧ

ಮಹನೀಯರನ್ನು ಹೇಗೆ ಕೌಶಲದಿಂದ, ಬುದ್ಧಿವಂತಿಕೆಯಿಂದ ಕೈಗೊಂಬೆಯಾಗಿ ಮಾಡಿಕೊಳ್ಳಲಾಯಿತ್ತೆಂದರೆ, ೧೯೩೧ನೆಯ ಇಸವಿಯ ಸಮಯ ಸಂದರ್ಭಗಳಲ್ಲಿ ಸೈಯನ್ ಆಯೋಗದ ಶಿಫಾರಸುಗಳನ್ನು ಅವರು ಒಪ್ಪಿಕೊಳ್ಳುವಂತೆ ಮಾಡಲಾಯಿತು. ಮಹನೀಯರೆ, ಆ ಪರಿಸ್ಥಿತಿಯನ್ನು ಉಳಿಸಿದ್ದು ಯಾರು? ಆಗ ರಾಜ್ಯಕಾರ್ಯದರ್ಶಿಯವರಾಗಿದ್ದ ಸರ್ ಸ್ಯಾಮುಯಲ್ ಹೋರ್ ಅವರು ಮತ್ತು ಆಗ ಅಧಿಕಾರದಲ್ಲಿದ್ದ ಕನ್‌ಸರ್‌ವೇಟಿವ್ ಪಕ್ಷ ಆರ್.ಟಿ.ಸಿ. ಅನ್ನು ಮುಕ್ತಾಯ ಮಾಡಲು ಬಹಳ ಕಾತರವಾಗಿದ್ದರು. ಮಹತ್ತಾದ ಒಂದು ವಿಷಯವೆಂದರೆ, ನಾವು ಒಂದು ತ್ರಿಪಕ್ಷೀಯ ಆಯೋಗವನ್ನು ನೇಮಕ ಮಾಡಿದ್ದೆವು. ಅದನ್ನು ಪಾರ್ಲಿಮೆಂಟಿನಲ್ಲಿ ಪ್ರತಿನಿಧಿಸುತ್ತಿದ್ದವರು ಲಿಬರಲ್ ಪಕ್ಷ, ಲೇಬರ್ ಮತ್ತು ಕನ್‌ಸರ್‌ವೇಟಿವ್ ಪಕ್ಷಗಳು. ಸೈಮನ್ ಆಯೋಗದ ಶಿಫಾರಸುಗಳಿಗೆ ಬದ್ಧವಾಗಿರುವುದು ಪಾರ್ಲಿಮೆಂಟಿಗೆ ಒಂದು ಗೌರವ ಸೂಚಕವಾದದ್ದೆಂದು ಸರ್ ಸ್ಯಾಮ್ಯುಯಲ್ ಹೋಡ್ ಅವರು ತಿಳಿದಿದ್ದು ಮತ್ತು ಆಯೋಗ ಶಿಫಾರಸು ಮಾಡಿದ್ದಕ್ಕಿಂತ ಮುಂದೆ ಹೋಗಲೇಕೂಡದೆಂಬುದು ಅವರ ಅಭಿಪ್ರಾಯವಾಗಿತ್ತು. ಮಿ: ಗಾಂಧಿಯವರ ಧೋರಣೆ ಅವರ ಮಟ್ಟಿಗೆ ದೈವದತ್ತವಾದ ಒಂದು ಮಧ್ಯಪ್ರವೇಶದಂತೆ ಪರಿಣಮಿಸಿತು. ಸರ್ ಸ್ಯಾಮ್ಯುಯಲ್ ಅವರ ವಾದವೇನೆಂದರೆ ಮಿ: ಗಾಂಧಿಯವರು ಭಾರತದಲ್ಲಿನ ಅತ್ಯಂತ ಹಿರಿಯ ವ್ಯಕ್ತಿ ಅಲ್ಲದಿದ್ದರೆ, ಅವರಿಗಿಂತ ಹೆಚ್ಚಿನವರು ಯಾರು ಎಂದು. ಸಪ್ರೊ ಯಾರು? ಅಂಬೇಡ್ಕರ್ ಯಾರು? ಜಿನ್ನಾ ಯಾರು? ಗಾಂಧಿಯವರಿಗೆ ಪ್ರಾಂತೀಯ ಸ್ವಾಯತ್ತತೆ ತೃಪ್ತಿಕೊಟ್ಟರೆ, ಇಡೀ ಆಟವನ್ನು ಕೊನೆಗಾಣಿಸಿ, ಸಮ್ಮೇಳನವನ್ನು ಮುಕ್ತಾಯ ಮಾಡಿ ಸೈಮನ್ ಆಯೋಗದ ನಿಬಂಧನೆಗಳಂತೆ ಒಂದು ಮಸೂದೆಯನ್ನು ರಚಿಸಿ ಮಂಡಿಸಲು ಪಾರ್ಲಿಮೆಂಟಿಗೆ ಹೆಮ್ಮೆಯೆನಿಸಬೇಕು. ಅಂಥದೊಂದು ಸನ್ನಿವೇಶದಲ್ಲಿ ಧ್ವನಿಯೆತ್ತಿದವರಲ್ಲಿ ನಾನೂ ಒಬ್ಬ. ನಾವು ಹೇಳಿದ್ದು ಇಂಥ ವ್ಯವಸ್ಥೆ ನಮಗೆ ಎಂದೆಂದಿಗೂ ಬೇಡ; ನಾವು ಎಂದೆಂದಿಗೂ ಇದಕ್ಕೆ ಭಾಗೀದಾರರಾಗುವುದಿಲ್ಲ ಎಂದು. ನಾವು ಎಷ್ಟರಮಟ್ಟಿಗೆ ಗಲಾಟೆ ಎಬ್ಬಿಸಿದೆವೆಂದರೆ, ಒಂದು ಸಣ್ಣ ಕ್ಯಾಬಿನೆಟ್ ಕಮಿಟಿಯನ್ನು ಬ್ರಿಟಿಷ್ ಮಂತ್ರಿ ಮಂಡಲ ನೇಮಕ ಮಾಡಲೇಬೇಕಾಯಿತು. ಈ ಕಮಿಟಿ ಆರ್.ಟಿ.ಸಿ.ಯ ಪ್ರತಿನಿಧಿಗಳ ನಿಜವಾದ ಇರಾದೆ ಏನು ಎಂದು ತಿಳಿದುಕೊಳ್ಳಲು ಸಾಕ್ಷ್ಯ ಸಂಗ್ರಹ ಮಾಡಬೇಕಾಗಿತ್ತು. ಪ್ರಕರಣವನ್ನು ಪರೀಕ್ಷಿಸಲು ಮನವಿಗಳನ್ನು ಆಹ್ವಾನಿಸಲಾಯಿತು. ಕ್ಯಾಬಿನೆಟ್ ಸಮಿತಿಯ ಮುಂದೆ ಸಾಕ್ಷ್ಯಕೊಡಲು ಆಹ್ವಾನಿಸಲ್ಪಟ್ಟವರಲ್ಲಿ ನಾನೂ ಒಬ್ಬನಾಗಿದ್ದೆ. ಕಮಿಟಿಯ ಅಧ್ಯಕ್ಷರಾಗಿದ್ದವರು ಲಾರ್ಡ್ ಚಾನ್ಸಲರ್. ಪ್ರಧಾನ ಮಂತ್ರಿಯವರು ಮತ್ತು ಕಾರ್ಯದರ್ಶಿಗಳು, ಇತರ ಇಬ್ಬರು ಸದಸ್ಯರುಗಳು ನಿಮ್ಮ ವರ್ಗಗಳವರೂ ಸಹ, ಪಾರ್ಲಿಮೆಂಟು ತಾನು ಕೊಟ್ಟ ಮಾತಿನಿಂದ ಹಿಂದೆ ಸರಿಯವುದನ್ನು ಸಹಿಸುವುದಿಲ್ಲವೆಂದು ಹೇಳಿದವರಲ್ಲಿ ನಾನೂ ಒಬ್ಬನಾಗಿದ್ದೆನೆಂದು ಹೇಳಲು ನನಗೆ ಹೆಮ್ಮೆಯೆನಿಸುತ್ತದೆ. ನಾನು ನಿರ್ವಹಿಸಿದ ಪಾತ್ರವೇನೂ ಕಾಸಿಗೂ ಬೆಲೆಯಿಲ್ಲದ ಅಪಮಾನಕಾರವಾದ ಪಾತ್ರ ಆಗಿತ್ತೇನು? ಕೆಂದ್ರದಲ್ಲಿ ತಮ್ಮ ಹೊಣೆಗಾರಿಕೆಯನ್ನು ಮೀರಿ ಪರಿಶಿಷ್ಟ ಜಾತಿಗಳವರು ನಿಲುವು ತಾಳಿದ್ದರೆಂದು ಹೇಳಬಹುದೇನು? ನಿಮಗೆ ಇನ್ನೊಂದು ಸಂಗತಿಯನ್ನು ಹೇಳಬಯಸುತ್ತೇನೆ. ಈ ದೇಶದಲ್ಲಿ ಅಸಂಖ್ಯ ದೇಸೀ ರಾಜ್ಯಗಳು ಇವೆ; ಜನಸಂಖ್ಯೆಯ ೧/೩ ಭಾಗ ರಾಜರುಗಳ ಆಳ್ವಿಕೆಗೆ ಒಳಪಟ್ಟಿದ್ದಾರೆ. ಅಲ್ಲಿ ಯಾವ ಕಾನೂನು ಇಲ್ಲ, ಅಲ್ಲಿ ಪ್ರತಿಯೊಂದನ್ನೂ ರಾಜನ ವೈಯಕ್ತಿಕ ಅಧಿಕಾರದಿಂದ ಮಾಡಲಾಗುತ್ತಿದ್ದು, ಅವನಿಗೆ ತೋಚಿದ ಹಾಗೆ ಮಾಡಲಾಗುತ್ತಿದೆ. ಆರ್.ಟಿ.ಸಿ.ಯಲ್ಲಿ ತೆಗೆದುಕೊಂಡ ತೀರ್ಮಾನಗಳಲ್ಲಿ ಒಂದು ಎಂದರೆ. ಭಾರತದಲ್ಲಿರುವ ಪ್ರತಿಯೊಂದು ರಾಜ್ಯವನ್ನೂ ಅಖಿಲ ಭಾರತದ ಒಕ್ಕೂಟದ ಒಳಗಿನ ಒಂದು ಘಟಕದಂತೆ ತರಬೇಕು ಎನ್ನುವುದೇ ಆಗಿತ್ತು. ವಿವಾದದ ಮಹತ್ವವಾದ ವಿಷಯವೆಂದರೆ, ಭಾರತದ ರಾಜ್ಯಗಳ ಪ್ರತಿನಿಧಿಗಳನ್ನು ಜನಗಳು ತಾವೇ ಚುನಾಯಿಸಬೇಕೇ, ಇಲ್ಲವೇ

ರಾಜರುಗಳೇ ನಾಮ ನಿರ್ದೇಶನ ಮಾಡಬೇಕೇ ಎಂದು. ಅತ್ಯಂತ ಮಹತ್ವದ ವಿವಾದಾಂಶಗಳಲ್ಲಿ ಅದು ಒಂದಾಗಿದ್ದು, ಅನೇಕ ದಿನಗಳವರೆಗೆ ದೀರ್ಘವಾದ, ಗೊಂದಲಮಯ ಚರ್ಚೆ ನಡೆಯುತ್ತಿದ್ದು, ಬಹುಶಃ ನಿಮ್ಮಲ್ಲಿ ಕೆಲವರು, ಇಷ್ಟು ಮುಖ್ಯವಾದ, ಇಷ್ಟು ಗಹನವಾದ, ಗಾಂಧಿಯವರಿಗೆ ಅವರದೇ ಮಾತುಗಳಲ್ಲಿ ಅಷ್ಟು ಪ್ರಿಯವಾದ ಇಂಥ ವಿವಾದಾಂಶದ ಬಗ್ಗೆ ಗಾಂಧಿಯವರ ಧೋರಣೆ ಏನು ಎಂದುಕೊಂಡಿರಬಹುದು? ಸಮ್ಮೇಳನಕ್ಕೆ ರಾಜ್ಯಗಳ ಪ್ರತಿನಿಧಿಗಳನ್ನು ರಾಜರುಗಳೇ ನಾಮ ನಿರ್ದೇಶನ ಮಾಡುವುದಕ್ಕೆ ಗಾಂಧಿಯವರೇ ಅನಾಮತ್ತಾಗಿ ಮುಂದಾದರೆಂದು ಕೇಳಿ ನೀವು ಆಶ್ಚರ್ಯಚಕಿತರಾಗಬಹುದು. ಈ ವಿಷಯದ ಮೇಲೆ ಮೊದಲಿನಿಂದ ಕಡೆಯವರೆಗೆ ಹೊಡೆದಾಡಿದವನೆಂದರೆ ನಾನೊಬ್ಬನೇ. ಆರ್.ಟಿ.ಸಿ.ಯ ಒಬ್ಬನೇ ಒಬ್ಬ ಸದಸ್ಯ (ಹರ್ಷ ಧ್ವನಿ). ಹಾನರಬಲ್ ಶಾಸ್ತ್ರಿಯವರೂ ಕೂಡ – ಈ ವೃದ್ಧ ಮಹನೀಯರ ಬಗ್ಗೆ ಬಹಳ ತಮಾಷೆಯಾದ ಕಥೆಗಳನ್ನು ಹೇಳಬಹುದು (ಧ್ವನಿಗಳು–ಅವುಗಳನ್ನು ಕೇಳಲು ನಮಗೆ ಇಷ್ಟ). ನಾವೆಲ್ಲರೂ ಫೆಡರೇಷನ್ನಿಗೆ ವಿರೋಧವಾಗಿದ್ದೆವು. ಮೊದಲಿನಿಂದ ಕಡೆಯವರೆಗೂ, ಬ್ರಿಟಿಷ್ ಇಂಡಿಯಾದ ರಾಜಕೀಯವನ್ನು ಭಾರತದ ರಾಜ್ಯಗಳ ರಾಜಕೀಯದೊಂದಿಗೆ ಬೆರೆಸಬಾರದು ಎಂದು ನಾನು ಪ್ರತಿಪಾದಿಸಿದೆ ಎಂಬುದು ಮುಖ್ಯವಾದ ವಿಷಯಗಳಲ್ಲಿ ಒಂದಾಗಿತ್ತು. ಬ್ರಿಟಿಷ್ ಭಾರತ, ಭಾರತದ ಭಾರತದಿಂದ ಪ್ರತ್ಯೇಕವಾಗಿ ನಿರ್ದಿಷ್ಟವಾಗಿ ೧೫೦ ವರ್ಷಗಳ ಮೇಲೆ ಆಯಿತು. ನಮ್ಮ ಎಲ್ಲರ ಭವಿಷ್ಯ ಒಂದೇ ಎಂಬುದು ನಿಸ್ಸಂದೇಹ. ಆದರೂ ಸಹ ನಾವು ಬ್ರಿಟಿಷ್ ಇಂಡಿಯಾದಲ್ಲಿ ಇರುವವರು ಬೇರೊಂದು ದಾರಿಯನ್ನು ಕ್ರಮಿಸಿದ್ದೇವೆ. ಭಾರತದ ದೇಸಿ ರಾಜ್ಯಗಳು ಇನ್ನೊಂದು ದಾರಿಯಲ್ಲಿ ಸಾಗಿವೆ. ನಮಗೆ ದೊರಕಿರುವ ವಿಶಿಷ್ಟ ರಾಜಕೀಯ ಶಿಕ್ಷಣ ಅವರಿಗೆ ದೊರಕಲಿಲ್ಲ.

## ಭಾರತದ ರಾಜ್ಯಗಳ ಸಮಸ್ಯೆಗಳು

ನಾವು ಬೇರೆ ಬೇರೆ ರಾಜಕೀಯ ಪರಂಪರೆಗಳ ವಾರಸುದಾರರಾಗಿದ್ದೇವೆ; ಆದಕಾರಣ ನಾನು ಉದ್ದಕ್ಕೂ ಒತ್ತಾಯ ಮಾಡುತ್ತಿದ್ದುದು ಏನೆಂದರೆ, ರಾಜಕೀಯ ವಿಮೋಚನೆಗಾಗಿ ಬ್ರಿಟಿಷ್ ಇಂಡಿಯಾ ಅನ್ನು ತನ್ನದೇ ದಾರಿಯಲ್ಲಿ ಹೋಗಲು ಬಿಡಬೇಕು; ಅದಲ್ಲದೆ ಅದರ ಭವಿಷ್ಯವನ್ನು ಭಾರತದ ರಾಜ್ಯಗಳನ್ನು ಒಳಗೆ ತಂದು ಬೆರೆಸಿ, ಜಟಿಲತೆಗಳನ್ನು ಉಂಟು ಮಾಡುವುದಕ್ಕೆ ಬಿಡಬಾರದು. ಹಾನರಬಲ್ ಶಾಸ್ತ್ರಿಯವರು ನಮ್ಮ ಸಹೋದ್ಯೋಗಿಗಳಲ್ಲಿ ಒಬ್ಬರಾಗಿದ್ದರು, ಅಥವ ಸಂಚುಗಾರರಲ್ಲಿ ಒಬ್ಬರಾಗಿದ್ದರು. ನಾವು ಮೂರೇ ಜನರಿದ್ದೆವು. ಸರ್ ಚಿಂತಾಮಣಿ, ಶ್ರೀನಿವಾಸ ಶಾಸ್ತ್ರಿ ಮತ್ತು ನಾನು; ನಾವು ಬ್ರಿಟಿಷ್ ಇಂಡಿಯಾದೊಂದಿಗೆ ಹೃದಯಗಳನ್ನು ಅಪ್ಪಿಕೊಂಡವರು. ನಾವು ಶಾಸ್ತ್ರಿಯವರನ್ನು ನಮ್ಮ ಚಾಂಪಿಯನ್ ಎಂದು ಮುಂದು ಮಾಡಿದ್ದೆವು; ಕಾರಣ, ಅವರು ಅತಿಶಯ ಕೀರ್ತಿವಂತರಾಗಿದ್ದು ನನ್ನಂಥ ಯುವಕನಿಗಿಂತ ಹೆಚ್ಚಾಗಿ ಗೌರವಿಸಲ್ಪಡುತ್ತಿದ್ದವರು. ಪೂರ್ಣಾವಧಿ ಅಧಿವೇಶನದಲ್ಲಿ ಅವರು ಮಾತನಾಡಬೇಕಿದ್ದ ಒಂದು ದಿನದ ಮುಂಚೆ, ನಾನು ಮತ್ತು ಚಿಂತಾಮಣಿ ಅವರನ್ನು ಊಟಕ್ಕೆ ಕರೆದುಕೊಂಡು ಹೋಗಿದ್ದೆವು ನಮ್ಮ ಉದ್ದೇಶ ಅವರು ಇನ್ನೂ "ಹುಳಿ"ಯಾಗಿದ್ದಾರೆಯೇ ಎಂದು ತಿಳಿದುಕೊಳ್ಳುವುದೇ ಆಗಿತ್ತು. ಅವರಿನ್ನೂ ಹುಳಿಯಾಗಿದ್ದುದು ನಮಗೆ ಗೊತ್ತಾಯಿತು ನಾವು ಜೆರೆಮಿ ರಸ್ತೆಯಿಂದ ಕಿಂಗ್ ಜೇಮ್ಸ್ ಅರಮನೆವರೆಗೆ ನಡೆದುಕೊಂಡು ಬಂದೆವು. ಹಾನರಬಲ್ ಅವರು ಮಾತನಾಡುವುದು ಮೂರು ಗಂಟೆಗೆ ಎಂದು ನಿಗದಿಯಾಗಿತ್ತು. ಅವರು ಎದ್ದು ನಿಂತು ಹೇಳಿದ್ದು, "ನನ್ನ ಪ್ರಿಯ ಪ್ರಧಾನ ಮಂತ್ರಿಯವರೆ, ನಾನೊಬ್ಬ ಚಾಂಪಿಯನ್" ನನ್ನ ಮತ್ತು ಸರ್ ಚಿಂತಾಮಣಿಯವರ ಹೃದಯ ಸಾಕಷ್ಟು ಬಲವಾಗಿತ್ತು, ಇಲ್ಲದಿದ್ದರೆ, ನಾವು ಹೃದಯಾಘಾತದಿಂದ

ಸಾಯುತ್ತಿದ್ದೆವು. ಶಾಸ್ತ್ರಿಯವರು ತಾವು ಫೆಡರೇಷನ್ ಪರವಾಗಿ ಇದ್ದೇನೆ ಎಂದು ಹೇಳಿ, ನನ್ನ ಹಿಂದೆ ಓಡಿಬಂದು ನಾನೊಬ್ಬ ಗಟ್ಟಿ ದೇಶಪ್ರೇಮಿ, ನಾನು ಅವರ ಪ್ರಯತ್ನಗಳಿಗೆ ಕಲ್ಲು ಹಾಕುತ್ತಿದ್ದೇನೆ, ನಾನೇಕೆ ಬಾಯಿ ಮುಚ್ಚಿಕೊಂಡು ಇರಬಾರದು ಎಂದು ಕೇಳಿದರು. ಮಿ. ಗಾಂಧಿಯವರು ಪ್ರಾಮಾಣಿಕರಾಗಿದ್ದರೆ, ಭಾರತದ ದೇಸೀ ರಾಜ್ಯಗಳ ಪ್ರಜೆಗಳ ಆಗುಹೋಗುಗಳು ಅವರಿಗೆ ಹೆಚ್ಚು ಪ್ರಿಯವಾಗಿದ್ದರೆ ಆಗ ಆ ಜನಗಳನ್ನು ರಾಜರುಗಳ ವೈಯಕ್ತಿಕ ಆಡಳಿತದ ದಬ್ಬಾಳಿಕೆ ಮತ್ತು ಕ್ರೌರ್ಯದಿಂದ ಅವರ ವಿಮೋಚನೆಯಾಗುವುದು ಅತ್ಯವಶ್ಯಕವಾಗಿತ್ತು. ಚುನಾವಣೆಗಳ ಮೂಲಕವೇ ಪ್ರತಿನಿಧಿಗಳನ್ನು ಆರಿಸಬೇಕಾಗಿತ್ತು ಎಂದು ಹೇಳುವವರಲ್ಲಿ ಅವರು ಮೊದಲಿಗರಾಗಬೇಕಿತ್ತು. ಅದನ್ನು ಬಿಟ್ಟು ಗಾಂಧಿಯವರು ಹೇಳಿದ್ದೇನೆಂದರೆ ಆ ರಾಜರುಗಳು ತಮ್ಮ ಪ್ರತಿನಿಧಿಗಳನ್ನು ನಾಮ ನಿರ್ದೇಶನ ಮಾಡುವುದರ ಪರವಾಗಿ ನಾನಿದ್ದೇನೆ ಎಂದು ಹೇಳಿದರು. ಒಂದನ್ನು ನಾನು ನಿಮಗೆ ಹೇಳಬಹುದು, ಅದೇನೆಂದರೆ ಗಾಂಧಿಯವರಿಗೆ ರಾಜಕೀಯದ ಬಗ್ಗೆ ಏನೇನೂ ಗೊತ್ತಿಲ್ಲ ಎಂದು. ನಾನು ಇದನ್ನು ಹುಳುಕು ಹುಡುಕುವುದಕ್ಕಾಗಿ ಹೇಳುತ್ತಿಲ್ಲ, ನಾನೇನೂ ಅವರ ಮೇಲೆ ಒಂದು ತೀರ್ಮಾನವನ್ನು ಕೊಡುತ್ತಿಲ್ಲ, ಅಥವಾ ಅಗ್ಗದ ಚಪ್ಪಾಳೆ ಗಿಟ್ಟಿಸುವುದಕ್ಕೂ ಅಲ್ಲ. ಆದರೆ ಅದು ವಾಸ್ತವ ಎಂದು ನನಗೆ ಗೊತ್ತು. ಆಗಿದ್ದಿಷ್ಟು, ನಾನು ಮೊದಲನೆ ದುಂಡು ಮೇಜಿನ ಸಮ್ಮೇಳನಕ್ಕೆ ಹಾಜರಾಗಿದ್ದೆ. ನನಗೆ ಅನೇಕ ವಿಷಯಗಳು ಮತ್ತು ಗೋಚರವಾಗದ ಅಡೆತಡೆಗಳು ಗೊತ್ತಿತ್ತೆಂದು ಮಿ: ಗಾಂಧಿಯವರಿಗೆ ಗೊತ್ತಿರಲಿಲ್ಲ. ವಿವಿಧ ಪಕ್ಷಗಳು ಅಳವಡಿಸಿಕೊಂಡಿದ್ದ ತಂತ್ರಗಳು ಮತ್ತು ಕುಟಿಲೋಪಾಯಗಳು ಏನೆಂದು ನನಗೆ ಗೊತ್ತಿತ್ತು. ಮಿ: ಗಾಂಧಿಯವರು ಬಾಯಿ ತೆರೆಯುವುದಕ್ಕೆ ಮುಂಚೆ ಈ ಸುಳ್ಳುಗಳ ಕಂತೆಯ ಬಗ್ಗೆ ಅವರನ್ನು ಎಚ್ಚರಿಸಬೇಕೆಂದು ನಾನು ಕಾತರನಾಗಿದ್ದೆ. ಆಗ ಅವರಿಗೆ ಏನು ಹೇಳಬೇಕು, ಏನು ಹೇಳಬಾರದು ಎಂದು ಗೊತ್ತಾಗುತ್ತಿತ್ತು.

ಎರಡನೇ ದುಂಡುಮೇಜಿನ ಸಮ್ಮೇಳನದಲ್ಲಿ ಮಿ: ಗಾಂಧಿಯವರು ಬಂದಾಗ ನಾನು ಕೂಡ ಫೆಡರಲ್ ರಚನಾ ಸಮಿತಿಯ ಸದಸ್ಯನಾಗಿದ್ದೆ. ಹೌದು, ಹೇಳಿ ಕೇಳಿ ನಾನು ಪರಿಶಿಷ್ಟ ಜಾತಿಗಳ ಪ್ರತಿನಿಧಿಯಾಗಿದ್ದು, ಅಧ್ಯಕ್ಷತೆ ವಹಿಸಿದ್ದ ಲಾರ್ಡ್ ಚಾನ್ಸಲರ್ ಅವರ ಪಕ್ಕ ಮೊದಲನೇ ಸ್ಥಾನವನ್ನು ನಿರೀಕ್ಷಿಸುವುದಕ್ಕೆ ಆಗುತ್ತಿರಲಿಲ್ಲ (ನಗು) ಅಲ್ಲಿದ್ದವರ ಹೆಸರುಗಳ ಕ್ರಮದ ಪ್ರಕಾರ ನಾನು ಅಲ್ಲೆಲ್ಲಿಯೋ ಕಡೆಯಲ್ಲಿ ಕುಳಿತುಕೊಂಡೆ. ಸ್ಪಷ್ಟವಾಗಿ, ಮೊದಲನೆಯ ದಿನ ಗಾಂಧಿಯವರು ಬಂದಾಗ ಚರ್ಚೆಗಿಟ್ಟಿದ್ದ ಅಜೆಂಡಾವನ್ನು ನಮಗೆ ಕೊಡಲಾಯಿತು. ಗಾಂಧಿಯವರು ರಾಜಕೀಯ ಜ್ಞಾನದ ಅಪಕ್ವತೆಯನ್ನು ಗಮನದಲ್ಲಿಟ್ಟುಕೊಂಡು, ಹಾಗೂ ಅವರು ಮೊದಲನೆ ಆರ್.ಟಿ.ಸಿ.ಗೆ ಬಂದಿರಲಿಲ್ಲವೆಂಬುದನ್ನೂ ಸಹ ಪರಿಗಣಿಸಿದ ನನಗೆ ಬಹಳ ಚಿಂತೆಯಾಗಿತ್ತು. ಮಾತನಾಡುವುದಕ್ಕೆ ನನಗೆ ಮೊದಲನೆ ಅವಕಾಶಕ್ಕೆ ನಾನು ಹಪಹಪಿಸುತ್ತಿದ್ದೆ. ಇಡೀ "ವ್ಯಾಪಾರದ ಮರ್ಮ"ವೇನೆಂದು ಬಯಲು ಮಾಡಿ, ಗಾಂಧಿಯವರಿಗೆ ಪರಿಸ್ಥಿತಿ ಏನಿದೆ ಎಂದು ಗೊತ್ತಾಗುವ ಹಾಗೆ ಮಾಡಬೇಕೆಂದುಕೊಂಡಿದ್ದೆ. ತಾವು ಹೇಗೆ ಲಾರ್ಡ್ ಚಾನ್ಸಲರ್ ಅವರ ಹತ್ತಿರ ಮಾತನಾಡಿ, ತನಗೆ ಸಣ್ಣ ಜ್ವರ ಬರುತ್ತಿರುವುದರಿಂದ, ಮೊದಲು ಮಾತನಾಡಲು ಅವಕಾಶ ಗಿಟ್ಟಿಸಿಕೊಂಡೆ ಎಂದು ಅವರು ವಿವರಿಸಿ ಹೇಳಿದರು. ಲಾರ್ಡ್ ಚಾನ್ಸಲರ್ ಅವರು ನಿಮಗೇನಾದರೂ ಆಕ್ಷೇಪಣೆ ಇದೆಯೆ ಎಂದು ಗಾಂಧಿಯವರನ್ನು ಕೇಳಿದರು. ಗಾಂಧಿಯವರು ಔದಾರ್ಯಕ್ಕೋಸ್ಕರ "ಇಲ್ಲ" ಎಂದು ಹೇಳಿದರು. ನಾನು ಸುಮಾರು ೧ ೧/೨ ಗಂಟೆಯಕಾಲ ಮಾತನಾಡಿದೆ. ಬಹುಶಃ ನಾನು ಆ ದೇಶದಲ್ಲಿ ಮಾಡಿದ ಅತ್ಯಂತ ಉದ್ದನೆಯ ಭಾಷಣವಿದ್ದಿರಬೇಕು. ಭಾಷಣವನ್ನು ಮಾಡಿದ ಮೇಲೆ, ಸುಳ್ಳು ನೆಪವನ್ನು ಕೊಟ್ಟಿದ್ದ ನನಗೆ, ಮುಖ ಉಳಿಸಿಕೊಳ್ಳುವುದಕ್ಕೋಸ್ಕರ ಹೊರಗಡೆ ನಡೆಯಬೇಕಾಯಿತು. ಇಡೀ

ಲಂಡನ್ ಪಟ್ಟಣದಲ್ಲಿ ನಾನೊಬ್ಬನೇ ಕುಳಿತು ಗಾಂಧಿಯವರು ಏನು ಮಾತನಾಡಿದರು ಎಂದು ತಿಳಿದುಕೊಳ್ಳುವುದಕ್ಕೆ ಕಾಯುತ್ತಿದ್ದೆ. ಮಧ್ಯರಾತ್ರಿಗೆ ಸರಿಯಾಗಿ ನಡವಳಿಗಳ ಒಂದು ವರದಿ ನನ್ನ ಬಾಗಿಲಿಗೆ ಬಂದಿತು. ಅಂಚೆ ಪೇದೆ ಕೊಟ್ಟ ಪ್ಯಾಕೆಟ್ ಅವನ್ನು ತೆರೆದ ಮೇಲೆ, ಮಿ: ಗಾಂಧಿಯವರ ಮೊಟ್ಟ ಮೊದಲಿಗೆ ವಾಕ್ಯವನ್ನು ಕಂಡೆ. ಅದೆಂದರೆ, "ನನ್ನ ಹೃದಯ ಡಾ. ಅಂಬೇಡ್ಕರ್ ಅವರೊಂದಿಗೆ ಇದೆ, ಆದರೆ ತಲೆ ಅವರೊಂದಿಗೆ ಇಲ್ಲ" ಎಂದಿತ್ತು. ನಾನು ನನ್ನ ಭಾಷನದಲ್ಲಿ ಸಲಹೆ ಮಾಡಿದ್ದ ಪ್ರತಿಯೊಂದಕ್ಕೂ ಅವರು ವ್ಯತಿರಿಕ್ತವಾಗಿ ಹೇಳಿದ್ದರು. ನನಗೆ ಬಂದ ವಿಪರೀತ ಕೋಪದ ಜೊತೆಗೆ ಬೆಳಗ್ಗೆ ಇಲ್ಲದಿದ್ದ ಜ್ವರ ಈಗ ನಿಜವಾಗಿಯೂ ಬಂದಿತ್ತು. (ನಾಚಿಕೆಗೇಡು ಎಂಬ ಕೂಗಾಟ) ಮರುದಿನ ಬೆಳಗ್ಗೆ ನಾನು ಸಮ್ಮೇಳನಕ್ಕೆ ಹೋದೆ. ಮಿ: ಗಾಂಧಿ ಮತ್ತು ಇತರರು ಅಲ್ಲಿದ್ದರು. ನಡವಳಿಗಳು ಮುಕ್ತವಾಗಿದ್ದುದರಿಂದ ಮಧ್ಯ ಪ್ರವೇಶಿಸಿ, ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ಗಾಂಧಿಯವರನ್ನು ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಲಾರ್ಡ್ ಚಾನ್ಸಲರ್ ಅವರ ಅನುಮತಿ ಬೇಡಿದೆ. ನನ್ನ ಮತ್ತು ಗಾಂಧಿಯವರ ಮಧ್ಯೆ ಜಗಳಕ್ಕೆ ಅದೇ ಕಾರಣ ಆಯಿತು. ನಾನು ಗಾಂಧಿಯವರನ್ನು ಮೂರು ಪ್ರಶ್ನೆಗಳನ್ನು ಕೇಳಿದೆ. ಮೊದಲನೆ ಪ್ರಶ್ನೆಯೆಂದರೆ, ಭಾರತದ ರಾಜರ ಪ್ರಾತಿನಿಧ್ಯ ನಾಮ ನಿರ್ದೇಶನದಿಂದ ಆಗಬೇಕು ಎನ್ನುವುದನ್ನು ಸ್ವಾಗತಿಸುತ್ತೇನೆಂಬ ಹೇಳಿಕೆಗೆ ಕಾಂಗ್ರೆಸ್‌ನವರಿಂದ ಏನಾದರೂ ಆದೇಶ ಇದೆಯೇ, ಕಾಂಗ್ರೆಸ್‌ನವರು ಇದರ ಬಗ್ಗೆ ಏನಾದರೂ ಠರಾವುಗಳನ್ನು ಅನುಮೋದಿಸಿ ಏನನ್ನಾದರೂ ಮಾಡಲು ಅಧಿಕಾರ ಕೊಟ್ಟಿದ್ದಾರೆಯೇ? ಎಂದು. ಅವರನ್ನು ಕೇಳಿದ ಇನ್ನೊಂದು ಪ್ರಶ್ನೆ, ಅಪರೋಕ್ಷ ಚುನಾವಣೆಗೆ ಸಂಬಂಧಿಸಿದ್ದಾಗಿತ್ತು. ಕನ್‌ಸರ್‌ವೇಟಿವ್ ಪಕ್ಷಕ್ಕೆ ಅಪರೋಕ್ಷ ಚುನಾವಣೆಗಳ ಬಗ್ಗೆ ಬಹಳ ಒಲವಿತ್ತು, ಆದರೆ ನಾವೆಲ್ಲಾ ಅದಕ್ಕೆ ವಿರೋಧವಾಗಿದ್ದೆವು. ಗಾಂಧಿಯವರು ತಮ್ಮ ಭಾಷಣದಲ್ಲಿ ತಮ್ಮದೇನೂ ಆಕ್ಷೇಪಣೆ ಇಲ್ಲವೆಂದು ಹೇಳಿದ್ದರು ನಾನು ಮಿ: ಗಾಂಧಿಯವರನ್ನು ಕೇಳಿದ್ದೇನೆಂದರೆ, ಈ ಅಪರೋಕ್ಷ ಚುನಾವಣೆಯ ನೀತಿಯನ್ನು ಶ್ರೀಮತಿ ಆ್ಯನಿಬೆಸೆಂಟ್ ಅವರು ತಮ್ಮ "ಹೋಂ ರೂಲ್ ಬಿಲ್"ನಲ್ಲಿ ತಂದಿದ್ದು ವಾಸ್ತವವಲ್ಲವೆ ಮತ್ತು ಅದೇ ಕಾರಣಕ್ಕಾಗಿ ಕಾಂಗ್ರೆಸ್‌ನವರು ಅದನ್ನು ತಿರಸ್ಕರಿಸಲಿಲ್ಲವೇ ಎಂದು ಕೇಳಿದೆ. ಇಷ್ಟು ಸಮಯದ ನಂತರ ಇನ್ನೊಂದು ಪ್ರಶ್ನೆ ಏನು ಎಂಬುದನ್ನು ನಾನು ಮರೆತು ಬಿಟ್ಟಿದ್ದೇನೆ. ಲಾರ್ಡ್ ಚಾನ್ಸಲರ್ ಅವರು ಮಿ: ಗಾಂಧಿ ಅವರ ಕಡೆಗೆ ತಿರುಗಿ ಇದಕ್ಕೆ ನಿಮ್ಮ ಉತ್ತರವೇನು ಎಂದು ಕೇಳಿದರು. ಮಿ: ಗಾಂಧಿಯವರು ಉತ್ತರ ಕೊಡಲು ನಿರಾಕರಿಸಿದರು. ಭೂತಕಾಲವನ್ನು ವಿಕ್ರಯಿಸಿ ಬಿಡಲಾಗಿದ್ದರೆ, ಭಾರತ ದೇಶವನ್ನು ಕೈಬಿಡಲಾಗಿದ್ದರೆ, ಅದಕ್ಕೆ ಕಾರಣ ನಾನಲ್ಲ, ಪರಿಶಿಷ್ಟ ಜಾತಿಗಳವರಲ್ಲ, ಕೈಬಿಟ್ಟವರು ಮಿ: ಗಾಂಧಿ, ಮಿ: ಶಾಸ್ತ್ರಿ ಮತ್ತು ಇತರರು.

## ಐರೆಲೆಂಡ್‌ನ ವಿದ್ಯಮಾನಕ್ಕೆ ಸಮಾನಾಂತರ ಪರಿಸ್ಥಿತಿ

ಐರ್‌ಲೆಂಡ್‌ನ ಪರಿಸ್ಥಿತಿಯಿಂದ ಹೊರಹೊಮ್ಮಿ ೧೯೧೬ನೇ ಇಸವಿಯಲ್ಲಿ ದೇಶವನ್ನು ಒಂದುಗೂಡಿಸುವ ಕಡೆಯ ಪ್ರಯತ್ನವಾಗಿ, ದಕ್ಷಿಣ ಐರಿಷ್ ಕ್ಲಾಥೋಲಿಕರನ್ನು ಪ್ರತಿನಿಧಿಸುತ್ತಿದ್ದ ಮಿ: ರೆಡ್‌ಮಾಂಡ್ ಮತ್ತು ಐರಿಷ್ ನಾಯಕರಾದ ಸರ್ ಎಡ್ವರ್ಡ್ ಕಾರ್ಸನ್ ಅವರುಗಳ ಮಧ್ಯೆ ನಡೆದ ಸಂಭಾಷಣೆಯನ್ನು ಉಲ್ಲೇಖಿಸುತ್ತಾ ಮತ್ತು ರೆಡ್‌ಮಾಂಡ್ ಅವರು ಕಾರ್ಸನ್ ಅವರನ್ನು ಅವರು ಬಯಸುವ ಯಾವುದೇ ರಕ್ಷಣೋಪಾಯಗಳನ್ನು ಕೇಳಿ ಎಂದಾಗ ಕಾರ್ಸನ್ ಅವರು ಕೊಟ್ಟ ಉತ್ತರ: "ನಿಮ್ಮ ರಕ್ಷಣೋಪಾಯಗಳು ಹಾಳು ಬಿದ್ದು ಹೋಗಲಿ, ನಿಮ್ಮಿಂದ ಆಳಲ್ಪಡುವುದು ನಮಗೆ ಬೇಕಿಲ್ಲ" ಎಂದರು. ನಾನು ನನ್ನ ಹಿಂದೂ ಭ್ರಾತೃಗಳಿಗೆ ಹೇಳುವುದೇನೆಂದರೆ, ಕಾರ್ಸನ್ ಅವರ ಧೋರಣೆಯನ್ನೇ ಅಳವಡಿಸಿಕೊಳ್ಳುವುದಕ್ಕೆ ನಮಗೆ ಸಾವಿರ

ಕಾರಣಗಳಿವೆ. ಹಿಂದೂಗಳಿಗೆ ನಾವು ನ್ಯಾಯವಾಗಿ ಹೇಳಲೇ ಬಹುದಾಗಿರುವುದೇನೆಂದರೆ ನಿಮ್ಮ ರಕ್ಷಣೋಪಾಯಗಳು ಹಾಳುಬಿದ್ದು ಹೋಗಲಿ, ನಿಮ್ಮ ಆಡಳಿತ ನಮಗೆ ಬೇಕಾಗಿಲ್ಲ; ಆದರೆ ನಾವು ಹಾಗೆ ಹೇಳಿದ್ದೇವೆಯೆ? ಇಲ್ಲ ನಾವು ಹಾಗೆ ಹೇಳಿಲ್ಲ; ಹಾಗೆ ನಮಗೆ ಹೇಳುವುದಕ್ಕೆ ಎಲ್ಲ ಸಮರ್ಥನೆಗಳೂ ಇದ್ದರೂ, ಎಲ್ಲ ಹಕ್ಕೂ ಇದ್ದರೂ, ನಾವು ಹಾಗೆ ಹೇಳಿಲ್ಲ. ನಾವು ದೈನ್ಯತೆಯಿಂದ ನಮ್ಮ ಪಾತ್ರವನ್ನು ನಿರ್ವಹಿಸಿದ್ದೇವೆ. ನಿಮಗೆ "ಹೋಂ ರೂಲ್" ಬೇಕಾದರೆ, ಹಿಂದೂ ಮಹಾ ಸಭೆ ಅಧ್ಯಕ್ಷರು ಹೇಳಿದ ಹಾಗೆ ನಿಮಗೆ "ಹೋಂ ರೂಲ್" ಗಿಂತ ಹೆಚ್ಚಿಗೆ ಏನೂ ಸಿಗುವುದಿಲ್ಲ. ಆದರೂ ಸಹ ನಮಗೆ ಹೃದಯ ವೈಶಾಲ್ಯವಿದೆ; ಕಾರಣ, ನಮಗೆ ದೇಶದ ಒಟ್ಟಾರೆ ಹಿತಾಸಕ್ತಿಯ ಬಗ್ಗೆ ಗಮನವಿದೆ. ನಿಮಗೆ ಹೋಂ ರೂಲ್ ಬೇಕಾದರೆ ತೆಗೆದುಕೊಳ್ಳಿ, ನಾವು ನಿಮ್ಮನ್ನು ಬೆಂಬಲಿಸುತ್ತೇವೆ ಎಂದು ಹೇಳಿದ್ದೇವೆ. ಆದರೆ ನಮ್ಮ ಒಂದು ಸಣ್ಣ ಷರತ್ತು ಇದೆ. ಆ ಷರತ್ತು ಏನೆಂದರೆ, ನಮಗೆ ನಂಬಿಕೆ ಇಡಬಹುದಾದ ರಕ್ಷಣೋಪಾಯಗಳನ್ನು ಕೊಡಿ. ಈ ನಮ್ಮ ಧೋರಣೆ ಕಾರ್ಸನ್ ಅವರ ಧೋರಣೆಗಿಂತ ಉದಾತ್ತವಾಗಿದೆ.

ಮಿ: ಶಾಸ್ತ್ರಿ, ಮಿ: ಗಾಂಧಿ ಅಥವಾ ಇತರ ಯಾವುದೇ ಕಾಂಗ್ರೆಸ್ ರಾಜಕೀಯ ವ್ಯಕ್ತಿಯನ್ನು ನಾನು ಕೇಳಬಯಸುವುದೇನೆಂದರೆ, ಈ ನಮ್ಮ ಧೋರಣೆ ದೇಶಪ್ರೇಮದಿಂದ ಕೂಡಿದ್ದಲ್ಲವೆ ಎಂದು. ಕಳೆದ ೨೦೦೦ ವರ್ಷಗಳಿಂದ ಬ್ರಾಹ್ಮಣ ಆಳ್ವಿಕೆಯಿಂದ ನರಳುತ್ತಿದ್ದುದನ್ನು ಎಷ್ಟೋಂದು ನಾವು ಮರೆಯುತ್ತಿದ್ದೇವೆ; ನಮ್ಮ ಆಸೆ ಎಂದರೆ, ದೇಶದಲ್ಲಿನ ಇತರ ಉದಾತ್ತ ವ್ಯಕ್ತಿಗಳ ಸಹಾಯದಿಂದ ದೇಶದಲ್ಲಿ ಒಂದು ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ನಮಗೆ ಸಹಾಯವಾಗುತ್ತದೆ ಎಂದು. ಆ ವ್ಯವಸ್ಥೆಯಲ್ಲಿ ಈ ದೇಶ ಸಂಪೂರ್ಣ ಮಾನವೀಯತೆಯನ್ನೂ, ರಾಷ್ಟ್ರೀಯತೆಯನ್ನು ರೂಢಿಸಿಕೊಳ್ಳುತ್ತದೆ ಎಂದು ಅಂದುಕೊಂಡಿದ್ದೇವೆ. ಈ ಎಲ್ಲಾ ರಾಜಕೀಯ ವಾದ ವಿವಾದಗಳ ಮಧ್ಯೆ ಇದಕ್ಕಿಂತ ಹೆಚ್ಚಿಗೆ ಔದಾರ್ಯವನ್ನು ನೀವು ನಿರೀಕ್ಷಿಸಬಲ್ಲಿರೇನು? ಇದಕ್ಕಿಂತ ಮಹತ್ತಾದ ಮತ್ತು ಉದಾತ್ತವಾದುದನ್ನು ನಿಮಗೆ ನಿರೀಕ್ಷಿಸಲಾಗುತ್ತದೆಯೆ? ಆದ್ದರಿಂದ ನಾನು ನನ್ನ ಹಿಂದೂ ಭ್ರಾತೃಗಳಿಗೆ ಹೇಳಬಯಸುವುದೇನೆಂದರೆ ಅವರು ತಮ್ಮ ಮಾನಸಿಕ ಧೋರಣೆಯನ್ನು ತಿದ್ದಿಕೊಂಡು, ನಾವು ತೆಗೆದುಕೊಳ್ಳಲು ಸಿದ್ಧವಿರುವ ಅಪಾಯದ ನಡೆಯನ್ನು ಮತ್ತು ನೀವು ಮಾಡಲು ಸಿದ್ಧವಿರುವ ತ್ಯಾಗವನ್ನು ಲೆಕ್ಕಕ್ಕೆ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ನಾವು ನೀವು ಒಂದು ಒಪ್ಪಂದಕ್ಕೆ ಬಂದು ಈ ಪ್ರಶ್ನೆಯನ್ನು ಬಗೆಹರಿಸೋಣ. ನನಗೆ ಖಂಡಿತ ಇಚ್ಛೆ ಇದೆ ಮತ್ತು ನಾನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಆದರೆ ದುರದೃಷ್ಟವಶಾತ್, ಹಿಂದೂ ಸಮಾಜದಿಂದ ತೃಪ್ತಿಕರವಾದ ಉತ್ತರ ದೊರಕಿಲ್ಲ. ನಮ್ಮ ತಲೆಗಳನ್ನು ನಾವು ಮೇಲೆತ್ತಿದಾಗಲೆಲ್ಲ ಅವರು ನಮ್ಮನ್ನು ತುಚ್ಛೀಕರಿಸುತ್ತಿದ್ದಾರೆ. ೧೯೩೨ನೆ ಇಸವಿಯಲ್ಲಿ ಮೊದಲನೆಯ ಬಾರಿಗೆ ಪರಿಶಿಷ್ಟ ಜಾತಿಗಳವರ ಪ್ರಶ್ನೆ ತಳದಿಂದ ಮೇಲಕ್ಕೆ ಬಂದಿದ್ದು ಅದನ್ನು ಮುಸ್ಲಿಮರ ಮಟ್ಟದಲ್ಲೇ ಇಟ್ಟಿದ್ದನ್ನು ಜ್ಞಾಪಿಸಿಕೊಳ್ಳುತ್ತೇನೆ; ಮತ್ತು ಮತಾಧಿಕಾರ ಸಮಿತಿ ತನಿಖೆ ಮಾಡಿ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಪರಿಶಿಷ್ಟ ಜಾತಿಗಳವರ ಸಂಖ್ಯೆಯನ್ನು ಗೊತ್ತುಪಡಿಸಿಕೊಳ್ಳಲು ಹೋದಾಗಲೆಲ್ಲಾ ಎಲ್ಲಾ ಹಿಂದೂಗಳು ಉದಾರ ಮನಸ್ಸಿನವರೂ ಸಂಕುಚಿತ ಮನಸ್ಸಿನವರು, ವಿಶಾಲ ಮನಸ್ಸಿನವರು ಎಲ್ಲಾರೂ ಒಟ್ಟಾಗಿ ಸಂಚು ಮಾಡಿ ಈ ದೇಶದಲ್ಲಿ ನಿಮ್ನ ವರ್ಗದವರು, ಪರಿಶಿಷ್ಟ ವರ್ಗದವರು ಎಂದು ಕರೆಯಲ್ಪಡುವವರೂ ಯಾರೂ ಇಲ್ಲ ಎಂದು ಸಮಿತಿಯ ಮುಂದೆ ಹೇಳಿದರು. (ನಾಚಿಕೆಗೇಡು, ನಾಚಿಕೆಗೇಡು) ಸಂಯುಕ್ತ ಪ್ರಾಂತ್ಯಗಳಲ್ಲಿ, ಬಿಹಾರದಲ್ಲಿ, ಪಂಜಾಬಿನಲ್ಲಿ ಮತ್ತು ಇತರ ಕಡೆಗಳಲ್ಲಿ ಇದೇ ಕಥೆ ಆಯಿತು. ಯಾತಕ್ಕಾಗಿ? ಉತ್ತರ ಬಹು ಸರಳ. ನಮ್ಮ ಹಿಂದೂ ಭ್ರಾತೃಗಳಿಗೆ ಚಕ್ರವರ್ತಿಗಳ ಸರ್ಕಾರ ಶಾಸನ ಸಭೆಯಲ್ಲಿ ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡಬೇಕೆಂದು ನಿರ್ಧರಿಸಿದ್ದಾರೆ ಎಂದು ಗೊತ್ತಾಯಿತು;

ಇಂತಹ ಪ್ರಾತಿನಿಧ್ಯ ಪರಿಶಿಷ್ಟ ವರ್ಗಗಳವರ ಸಂಖ್ಯೆಯ ಮೇಲೆ ಆಧಾರಪಟ್ಟಿದೆಯೆಂದು ಮತ್ತು ಚಕ್ರವರ್ತಿಯವರ ಸರ್ಕಾರದ ಈ ಯೋಜನೆಯನ್ನು ಸೋಲಿಸಲು ಸಾಧ್ಯವಾಗದಿದ್ದರಿಂದ, ಪರಿಶಿಷ್ಟ ಜಾತಿ ಎನ್ನುವ ಒಂದು ಜಾತಿ ಇಲ್ಲವೇ ಇಲ್ಲ ಎಂದು ಹೇಳಿ, ಸುರಂಗ ಮಾರ್ಗದ ಮೂಲಕ ನುಸುಳಿಕೊಂಡಿದ್ದರು. ಇಂಥ ಒಂದು ತಂತ್ರಗಾರಿಕೆ, ಕುತಂತ್ರಗಾರಿಕೆಯನ್ನು ೧೯೩೨ರಲ್ಲಿ ಹಿಂದೂಗಳು ಉಪಯೋಗಿಸಿಕೊಂಡಿದ್ದರು. ಈ ದಿನದಲ್ಲಿ ಹಿಂದೂಗಳು ಇನ್ನೊಂದು ಬಗೆಯ ತಂತ್ರಗಾರಿಕೆಯನ್ನು ಉಪಯೋಗಿಸುತ್ತಿದ್ದಾರೆ.

## ಗಾಂಧಿ ವೇವೆಲ್ ಪತ್ರವ್ಯವಹಾರ

ಗಾಂಧಿ–ವೇವೆಲ್ ಅವರ ಪತ್ರ ವ್ಯವಹಾರಕ್ಕಾಗಿ ಅದರಲ್ಲಿ ನಿರ್ದಿಷ್ಟವಾಗಿ ೧೩–೭–೧೯೪೪ನೆ ತಾ॥ ನ ಒಂದು ಕಾಗದಕ್ಕೆ–ಸಭಿಕರ ಗಮನವನ್ನು ಸೆಳೆದು ಆ ಪತ್ರದಲ್ಲಿ ವೈಸ್‌ರಾಯ್ ಅವರು ಹೇಳಿದ್ದೇನೆಂದರೆ ಯುದ್ಧಾನಂತರ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಚಕ್ರವರ್ತಿಯವರ ಸರ್ಕಾರ ಸಿದ್ಧವಾಗಿದ್ದರೂ ಸಹ ಅಸ್ತಿತ್ವಕ್ಕೆ ಬರಲಿರುವ ಸಂವಿಧಾನಕ್ಕೆ ಭಾರತದ ರಾಷ್ಟ್ರೀಯ ಜೀವನದಲ್ಲಿ ಮುಖ್ಯವಾದ ಘಟಕಗಳೆಲ್ಲವೂ ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಒತ್ತಾಯ ಮಾಡಿದ್ದರು. ವೈಸ್‌ರಾಯ್ ಅವರು ಇನ್ನೂ ಮುಂದಕ್ಕೆ ಹೋಗಿ, ಆ ಮುಖ್ಯವಾದ ಘಟಕಗಳು ಯಾವುವೆಂದು ನಿರ್ದಿಷ್ಟವಾಗಿ ಗುರಿತಿಸಿದ್ದರು. ನಮ್ಮ ಅದೃಷ್ಟಕ್ಕೆ ಅದೇ ಕಾಲಕ್ಕೆ ನಮ್ಮ ಹಿಂದೂ ಭ್ರಾತೃಗಳ ದುರಾದೃಷ್ಟಕ್ಕೆ ನಾನು ಪರಿಶಿಷ್ಟ ಜಾತಿಗಳು ರಾಷ್ಟ್ರೀಯ ಜೀವನದಲ್ಲಿ ಒಂದು ಮುಖ್ಯವಾದ ಘಟಕವೆಂದು ಪ್ರಸ್ತಾಪಿಸಿದೆ.

## ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕವಾದ ಪ್ರಾತಿನಿಧ್ಯ

ವೈಸ್‌ರಾಯ್ ಅವರ ಈ ಹೇಳಿಕೆ ಹೊಸದೆಂದೂ, ಅದು ಚಕ್ರವರ್ತಿಯವರ ಸರ್ಕಾರದ ಪರವಾಗಿ ಸರ್ ಸ್ಟಾಫೋರ್ಡ್ ಕ್ರಿಪ್ಸ್ ಮಂಡಿಸಿದ ಪ್ರಸ್ತಾವನೆಗಿಂತ ಭಿನ್ನವಾದುದೆಂದೂ ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಎದ್ದಿದ್ದ ವಿವಾದವನ್ನೂ ಸಹ ನಾನು ಪರಾಮರ್ಶಿಸಿದೆ. ನನಗೆ ಕೋಪ ಬರುವಂತೆ ಮಾಡಿದ್ದೇ ಅದು; ಈ ಸುಳ್ಳು ಮತ್ತು ದುರುದ್ದೇಶದಿಂದ ಕೂಡಿದ ಪ್ರಚಾರ ನನಗೆ ಅರ್ಥವಾಗಲಿಲ್ಲ. ಹಿಂದೂ ಪತ್ರಕರ್ತರನ್ನು ಮತ್ತು ಸಂಪಾದಕರುಗಳನ್ನು ತಾವು ಏನು ಮಾತನಾಡುತ್ತಿದ್ದೇವೆಂಬುದನ್ನು ಸವಿವರವಾಗಿ ತಿಳಿದುಕೊಂಡಿರಬೇಕೆಂದೂ, ನಂತರ ಅವರಿಗೆ ಇಷ್ಟಬಂದ ಹಾಗೆ ಟೀಕೆ ಮಾಡಬಹುದೆಂದು, ನಾನು ನಿರೀಕ್ಷಿಸುತ್ತೇನೆ. ಪರಿಶಿಷ್ಟ ಜಾತಿಗಳವರಿಗೆ ಒಂದು ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ಕೊಡಬೇಕೆಂದು ಸೈಮನ್ ಆಯೋಗ ಒತ್ತಿ ಹೇಳಿದ್ದನ್ನೂ ನಾನಿಲ್ಲಿ ಹೇಳಬೇಕಾಗಿಲ್ಲ. ಪರಿಶಿಷ್ಟ ಜಾತಿಗಳವರು ಒಂದು ಪ್ರತ್ಯೇಕವಾದ ಮತ್ತು ಮುಖ್ಯವಾದ ಘಟಕವಾಗಿರಲಿಲ್ಲವೆಂದು ಯಾರಿಗಾದರೂ ಹೇಳಲು ಸಾಧ್ಯವೆ? ದುಂಡು ಮೇಜಿನ ಸಮ್ಮೇಳನದಲ್ಲಿ ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ಚಕ್ರವರ್ತಿಯವರ ಸರ್ಕಾರ ಅವರಿಗೆ ಕೊಟ್ಟಿದ್ದಾದರೂ ಏಕೆ? ಅವರೇನೂ ಹಿಂದೂಗಳ ಒಂದು ಉಪ ಶಾಖೆಯಾಗಲೀ ಅಥವಾ ಉಪ ಸಮುದಾಯವಾಗಿ ಆಗಲೀ, ಇರಲಿಲ್ಲ. ಚಕ್ರವರ್ತಿಯವರ ಸರ್ಕಾರ ಅವರಿಗೆ ಏಕೆ ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ಕೊಡಬೇಕಾಗಿತ್ತು? ಅವರಿಗೆ ಪತ್ಯೇಕವಾದ ಪ್ರಾತಿನಿಧ್ಯವನ್ನು ಕೊಟ್ಟಿದ್ದಕ್ಕೆ ಕಾರಣ ಅವರೊಂದು ಪ್ರತ್ಯೇಕವಾದ ಘಟಕ ಎಂದು ಗುರುತಿಸಿದ್ದಕ್ಕಾಗಿ ಮತ್ತೆ ಜಂಟಿ ಸಂಸದೀಯ ಸಮಿತಿಯ ವರದಿ ಇತ್ತು. ಅವೆಲ್ಲಾ ಈಗ ಹಳೆಯ ಚರಿತ್ರೆ.

ನಾನು ನನ್ನ ಹಿಂದೂ ಸಹೋದರರಿಗೆ ಹೇಳಬಯಸುವುದು ಇಷ್ಟು; ಇಂಥ ಒಂದು ಆಲೋಚನೆಯನ್ನು ಕೈಬಿಡಿ; ಒಳ್ಳೆಯದಕ್ಕೇ ಆಗಲಿ, ಕೆಟ್ಟದಕ್ಕೇ ಆಗಲಿ ಪರಿಶಿಷ್ಟ ಜಾತಿಗಳು ಭಾರತದ ರಾಷ್ಟ್ರೀಯ ಜೀವನದಲ್ಲಿ

ಒಂದು ಪ್ರತ್ಯೇಕವಾದ ಅಂಶ. ನಾನು ಅವರಿಗೆ ಘಂಟಾ ಘೋಷವಾಗಿ ಮತ್ತು ಕರಾರುವಕ್ಕಾಗಿ ಹೇಳಬಯಸುವುದೇನೆಂದರೆ, ಇಂಥ ತಪ್ಪನ್ನು ಮಾಡಬೇಡಿ ಎಂದು.

**ಜಿನ್ನಾ-ಗಾಂಧಿ ಮಾತುಕತೆಗಳು**

ಮುಖ್ಯವಾದ ಸಮಸ್ಯೆಯ ಮೇಲೆ ನನಗೆ ಹೇಳುವುದಕ್ಕೆ ಇನ್ನೇನೂ ಇಲ್ಲ. ಜನಗಳು ನನ್ನನ್ನು ಮಿ. ಜಿನ್ನಾ ಮತ್ತು ಮಿ. ಗಾಂಧಿಯವರ ನಡುವೆ ನಡೆಯುತ್ತಿರುವ ಬಗ್ಗೆ ಏನನ್ನಾದರು ಹೇಳಿ ಎಂದು ಕೇಳುತ್ತಿರುತ್ತಾರೆ. ಈ ಮಾತುಕತೆಗಳ ಬಗ್ಗೆ ಯಾರಾದರೂ ಏನನ್ನಾದರೂ ಹೇಳಬಲ್ಲರೆ ಎಂಬುದು ನನಗೆ ನಿಜವಾಗಿ ಗೊತ್ತಿಲ್ಲ. ಈ ಮಾತುಕತೆಗಳು ಎಷ್ಟು ದೀರ್ಘವಾಗಿವೆಯೆಂದರೆ, ಈ ಸ್ನೇಹಪರ ವೃದ್ಧರ ನಡುವೆ ಏನಾಗುತ್ತಿದೆಯೆಂದು ಅಥವಾ ಆ ಮಾತುಕತೆಗಳಲ್ಲಿ ಏನಾದರೂ ಜೀವಾಳವಿದೆಯೆಂದು ಊಹೆ ಮಾಡಲು ಯಾರಿಗಾದರೂ ಬಹಳ ಕಷ್ಟವೇ ಸರಿ. ಆದರೆ ನಾನು ಹೇಳಬಯಸುವುದೇನೆಂದರೆ, ಈ ಸಂಭಾಷಣೆಗಳನ್ನು ನಾನು ಲೆಕ್ಕಕ್ಕೆ ಇಡುವುದಿಲ್ಲ. ಜಾತಿಯ ಸಮಸ್ಯೆ ಹೆಚ್ಚಾಗಿ ಹಿಂದೂಗಳ ಮತ್ತು ಮುಸ್ಲಿಮರ ನಡುವೆ ಮಾತ್ರ ಇದ್ದ ಸಮಸ್ಯೆ ಅಲ್ಲ. ಆ ಸಮಸ್ಯೆಯಲ್ಲಿ ಮುಸ್ಲಿಮರಲ್ಲದೆ, ಕ್ರಿಶ್ಚಿಯನ್ನರು, ಪರಿಶಿಷ್ಟ ವರ್ಗಗಳವರ ಮತ್ತು ಬಹುಶಃ ಇತರ ಅಲ್ಪ ಸಂಖ್ಯಾತರೂ ಸಹ ಒಳಗೊಂಡಿದ್ದರು. ಪರಿಣಾಮವಾಗಿ ಇಂಥ ಸ್ವಭಾವದ ಒಂದು ವಿಷಯದಲ್ಲಿ ಅತ್ಯಂತ ಬುದ್ಧಿವಂತಿಕೆಯ ಅತ್ಯಂತ ಅಪಾಯವಿಲ್ಲದ ಮತ್ತು ಅತ್ಯಂತ ಪ್ರಾಮಾಣಿಕವಾದ ಮಾರ್ಗವೆಂದರೆ ಬೇರೆ ಬೇರೆ ಅಲ್ಪಸಂಖ್ಯಾತರುಗಳ ಪ್ರತಿನಿಧಿಗಳು ಒಟ್ಟಾಗಿ ಕುಳಿತು ತಮ್ಮ ತಮ್ಮ "ಎಲೆ"ಗಳನ್ನು ಮೇಜಿನ ಮೇಲೆ ಇಟ್ಟು ಪ್ರತಿಯೊಬ್ಬನಿಗೂ ಇನ್ನೊಬ್ಬರು ಏನು ಕೇಳುತ್ತಿದ್ದಾನೆಂದು ತಿಳಿಸಿ ಮತ್ತು ಎಲ್ಲಾರೂ ಒಟ್ಟಾಗಿ ತಮ್ಮ ಹಕ್ಕುಗಳ ಬಗ್ಗೆ ಮತ್ತು ಇತರರ ಹಕ್ಕುಗಳ ಬಗ್ಗೆ ಸಮಾಲೋಚನೆ ಮಾಡಿ ಎಲ್ಲರೂ ಒಪ್ಪಿಕೊಳ್ಳುವಂಥ ಒಂದು ತೀರ್ಮಾನಕ್ಕೆ ಬರುವುದು. ತುಂಡು ತುಂಡಾಗಿ ಮಾಡಿಕೊಳ್ಳುವ ಒಪ್ಪಂದ ಗ್ರಾಹ್ಯವಲ್ಲ. ಅದು ಇಬ್ಬರು ತಮ್ಮ ನಡುವೆ ತಮಗೆ ಬೇಕಾದ ಒಪ್ಪಂದವನ್ನು ಮಾಡಿಕೊಂಡು, ಮೂರನೆಯವನನ್ನು ದೋಚಿ, ತಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಹಾಗೆ ನನಗೆ ತೋರುತ್ತದೆ. ಜಿನ್ನಾರವರು ಗಾಂಧಿಯವರಿಂದ ಏನನ್ನು ಕೇಳುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಗಾಂಧಿಯವರು ಜಿನ್ನಾರವರಿಗೆ ಏನನ್ನು ಕೊಡಲು ಮನಸ್ಸುಳ್ಳವರಾಗಿದ್ದಾರೆಂದು ನನಗೆ ಗೊತ್ತಿಲ್ಲ. ಆದರೆ ನನ್ನ ಚಿಂತೆಯೇನೆಂದರೆ, ಗಾಂಧಿಯವರು ಜಿನ್ನಾರವರಿಗೆ, ಅವರಿಗೆ ಕೊಡಬೇಕಾದಕ್ಕಿಂತ ಹೆಚ್ಚಾಗಿ ಕೊಟ್ಟರೆ ಆ ಹೆಚ್ಚಾಗಿ ಕೊಟ್ಟಿದ್ದು ನಮ್ಮ ಪಾಲಿನಿಂದ ಹೋಗುತ್ತದೆ. ಆದ್ದರಿಂದ, ಅವರ ಮಾತುಕತೆಗಳ ಬಗ್ಗೆ ಏತಕ್ಕೆ ಇಷ್ಟೊಂದು ಚಿಂತಿತನಾಗಿದ್ದೇನೆಂದು ನೀವು ಅರ್ಥ ಮಾಡಿಕೊಳ್ಳಬಹುದು. ಗಾಂಧಿಯವರ ಅತ್ಯಂತ ಮುಖ್ಯವಾದ ನೀತಿಯೆಂದರೆ, ಅತ್ಯಂತ ದೊಡ್ಡದಾದ ಪಕ್ಷದಿಂದ (ಮುಸ್ಲಿಮರಿಂದ)ಸಹಾಯವನ್ನು ಪಡೆದುಕೊಂಡು ಕಾಂಗ್ರೆಸ್ಸಿನ ಬಲವರ್ಧನೆ ಮಾಡಿಕೊಂಡು, ಬ್ರಿಟಿಷ್ ಸರ್ಕಾರವನ್ನು ಬೆದರಿಸಿ, ಪರಿಶಿಷ್ಟ ಜಾತಿಗಳವರ ಬೇಡಿಕೆಯನ್ನು ಮಾನ್ಯ ಮಾಡದೆ, ತಮ್ಮೊಂದಿಗೆ ಒಪ್ಪಂದಕ್ಕೆ ಬರುವಂತೆ ಮಾಡುವುದೇ ಅಗಿದೆ.

ಮತೀಯ ಸಮಸ್ಯೆ ಉಲ್ಬಣವಾದಾಗಿನಿಂದ ಮಿ. ಗಾಂಧಿಯವರು ತಮ್ಮ ಸಾರ್ವಜನಿಕ ಜೀವನ ಪಥದಲ್ಲಿ ಮಾಡಿದ್ದು ಒಂದೇ ಒಂದು. ಅದೇನೆಂದರೆ ಪರಿಶಿಷ್ಟ ಜಾತಿಗಳವರನ್ನು ಕಡೆಗಣಿಸುವುದು (ನಾಚಿಕೆಗೇಡು, ನಾಚಿಕೆಗೇಡು) ಅವರನ್ನು ಹಿಂದಕ್ಕೆ ಹಾಕಿ, ಅವರನ್ನು ಅವರು ಈಗ ಎಲ್ಲಿದ್ದಾರೋ ಅಲ್ಲೇ ಬಿಟ್ಟು ಬಿಡುವುದು. ಈ ಸಂಬಂಧ, ನಾನು ಗಾಂಧಿಯವರ ತಂತ್ರಗಾರಿಕೆಯ ಅನುಭವವನ್ನು ಕುರಿತು ಹೇಳಿದ್ದೇನೆ. ದುಂಡು ಮೇಜಿನ ಸಮ್ಮೇಳನದಲ್ಲಿ ಗಾಂಧಿಯವರು ನನ್ನನ್ನು ಒಂಟಿಯಾಗಿ ಮಾಡಲು ಪ್ರಯತ್ನಪಟ್ಟರು.

"ಸುತ್ತುವರಿಯುವಿಕೆ" ಎನ್ನುವ ಹಿಟ್ಲರನ ಭಾಷೆಯನ್ನು ನಾನು ಉಪಯೋಗಿಸುವುದಿಲ್ಲ, ಅದು ಒಂದು ಉತ್ತಮ ಪದವಾಗಿದ್ದರೂ ಸಹ. ನಾನು ಪರಿಶಿಷ್ಟ ಜಾತಿಗಳ ಪರವಾಗಿ ಮಂಡಿಸಿದ ವಾದಕ್ಕೆ ಎಲ್ಲ ಬೆಂಬಲವನ್ನು ಕತ್ತರಿಸಿ ಹಾಕಿದರು. ಬಹುಕಾಲದವರೆಗೆ ಅವರು ಅದರಲ್ಲಿ ಜಯಶಾಲಿಯಾಗಲಿಲ್ಲ. ಕಟ್ಟಕಡೆಗೆ ಅವರು ಒಂದು ಅಯುಧವನ್ನು ಪ್ರಯೋಗಿಸಿದರು. ಅದನ್ನು ಯಾವ ಪ್ರಾಮಾಣಿಕ ವ್ಯಕ್ತಿಯೂ ಪ್ರಯೋಗಿಸುತ್ತಿರಲಿಲ್ಲ. ಅವರು ಮುಸ್ಲಿಮರ ಕಡೆಗೆ ಹೋಗಿ ಜಿನ್ನಾರವರಿಗೆ ಹೇಳಿದ್ದೇನೆಂರೆ, ಅವರ ಹದಿನಾಲ್ಕು ಬೇಡಿಕೆಗಳಿಗೂ ಒಪ್ಪಿಗೆ ಕೊಡಲು ಸಿದ್ಧವಾಗಿರುವುದಾಗಿ ಹೇಳಿ, ಇದಕ್ಕೆ ಬದಲು ಒಂದೇ ಒಂದು ರಿಯಾಯಿತಿಯನ್ನು ಬೇಡಿದರು. ಅದೇನೆಂದರೆ ಈ ಕೊಳಕು ನಾಯಿಗಳಾದ ಅಸ್ಪೃಶ್ಯರ ಬೇಡಿಕೆಗೆ ಒಪ್ಪಿಗೆ ಕೊಡಬಾರದು ಎಂದು. ದುಂಡು ಮೇಜಿನ ಸಮ್ಮೇಳನದಲ್ಲಿ ಮುಸ್ಲಿಮ್ ಲೀಗ್ ಮತ್ತು ಗಾಂಧಿಯವರ ನಡುವೆ ತಯಾರಾದ ದಸ್ತಾವೇಜು ನನ್ನ ಹತ್ತಿರ ಇದೆ. ನಾನು ಯಾವುದೇ ಸಾಕ್ಷ್ಯಾಧಾರವಿಲ್ಲದೆ ಮಾತನಾಡುತ್ತಿಲ್ಲ. ಅದೃಷ್ಟವಶಾತ್ ಮುಸ್ಲಿಮರಿಗೆ ಒಂದಷ್ಟು ನಾಚಿಕೆಯ ಪ್ರಜ್ಞೆ ಇತ್ತು. ಮತ್ತು ಪಶ್ಚಾತ್ತಾಪವೂ ಇತ್ತು. ಈ ಸಂದರ್ಭದಲ್ಲಿ ಕೂಡ ಗಾಂಧಿಯವರು ಜಿನ್ನಾ ಅವರನ್ನು ಭೇಟಿಯಾಗುವ ಸಂದರ್ಭದಲ್ಲಿ ಅದನ್ನೇ ಉಪಯೋಗಿಸುವುದಿಲ್ಲವೆಂದು ಆಶಿಸುತ್ತೇನೆ, ನಂಬುತ್ತೇನೆ.

ನಮ್ಮ ಉದ್ದೇಶವೇನೆಂದು ನೀವು ಅರಿತುಕೊಳ್ಳಬೇಕು. ನಮ್ಮ ಗುರಿ ಮತ್ತು ನಮ್ಮ ಮಹದಾಸೆ ನಾವೊಂದು ಆಡಳಿತ ನಡೆಸುವ ಸಮುದಾಯವಾಗಬೇಕೆಂದು. ನೀವೆಲ್ಲರೂ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು; ನಿಮ್ಮ ಮನೆಗಳ ಗೋಡೆಗಳ ಮೇಲೆ ಬರೆದಿಟ್ಟುಕೊಳ್ಳಬೇಕು. ಹೀಗಾಗಿ ನಾವು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿರುವ ಮಹದಾಸೆ ಮತ್ತು ನಮ್ಮ ಧ್ಯೇಯ ಚಿಲ್ಲರೆ ಪಲ್ಲರೆಯೇನೂ ಅಲ್ಲ. ನಾವು ನಮ್ಮ ಹೃದಯದಲ್ಲಿ ಆದರಿಸುವ ಅತಿದೊಡ್ಡದಾದ ಧ್ಯೇಯ ಅದು. ನಾವು ಆಡಳಿತ ಮಾಡಬಲ್ಲ ಸಮುದಾಯವೆಂದು ಮಾನ್ಯ ಮಾಡಲ್ಪಡುವ ಧ್ಯೇಯ ಅದು. ಅದನ್ನು ನೀವು ಸಾಕ್ಷಾತ್ಕರಿಸಿಕೊಂಡರೆ, ಅದನ್ನು ಪರಿಣಾಮಕಾರಿಯಾಗಿ ಮಾಡಬೇಕಾದರೆ ಆಗಾಧವಾದ ಪರಿಶ್ರಮ ಬೇಕೆಂದು ನಿಮಗೆ ಗೊತ್ತಾಗುತ್ತದೆ. ಬರಿಯ ಶಬ್ದಗಳು ಮಾತ್ರ ಲೆಕ್ಕಕ್ಕೆ ಬರುವುದಿಲ್ಲ. ಗಾಂಧಿಯವರು ಅದನ್ನು ಬಡಾಯಿ ಎಂದು ಒತ್ತಟ್ಟಿಗೆ ಇಡಬಹುದು. ನಾವು ಗಾಂಧಿಯವರಿಗೆ ಮತ್ತು ಚಕ್ರವರ್ತಿಯವರ ಸರ್ಕಾರಕ್ಕೆ ಇನ್ನೊಮ್ಮೆ ಹೇಳುತ್ತೇವೆ. ಚಕ್ರವರ್ತಿಯವರ ಸರ್ಕಾರಕ್ಕೆ ಸಾಧಿಸಿ ತೋರಿಸಬೇಕಾಗಿರುವುದೇನೆಂದರೆ, ನಾವು ಬಂದಿರುವುದು ವ್ಯವಹಾರಕ್ಕಾಗಿ, ನೂರಕ್ಕೆ ನೂರು ವ್ಯವಹಾರಕ್ಕಾಗಿ (ಕೇಳಿ, ಕೇಳಿ) ಮತ್ತು ಚಕ್ರವರ್ತಿಯವರ ಸರ್ಕಾರವನ್ನು ವ್ಯವಹಾರಕ್ಕಾಗಿ ಒತ್ತಾಯಿಸುತ್ತೇವೆ. ಯಾರಿಗೂ ಮೀನ ಮೇಷ ಎಣಿಸುವುದಕ್ಕೆ ಬಿಡುವುದಿಲ್ಲ. ಚಕ್ರವರ್ತಿಯವರ ಸರ್ಕಾರ ನಮಗೆ ಮಾತುಕೊಟ್ಟಿದೆ, ಅದು ಆ ಮಾತನ್ನು ಉಳಿಸಿಕೊಳ್ಳುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ. ಚಕ್ರವರ್ತಿಯರ ಸರ್ಕಾರದ ಸುಖ್ಯಾತಿಯ ಮೇಲೆ ಅವಲಂಬಿಸುವುದರಿಂದ ಏನೂ ಪ್ರಯೋಜನವಿಲ್ಲ. ನಮ್ಮ ಸುಖ್ಯಾತಿಯ ಮೇಲೆ ಅವಲಂಬಿಸುವುದರಿಂದಲೂ ಏನು ಪ್ರಯೋಜನವಿಲ್ಲ. ನಮ್ಮ ಬಲವನ್ನು ನಾವೇ ಬೆಳೆಸಿಕೊಳ್ಳಬೇಕು. ಇತರ ಕಾರಣಗಳನ್ನು ತೊಡೆದು ಹಾಕಬೇಕು.

## ಒಂದೇ ಧ್ವಜದ ಕೆಳಗೆ ಬನ್ನಿ

ಪರಿಶಿಷ್ಟ ಜಾತಿಗಳವರಲ್ಲಿ ಅತ್ಯಂತ ಉತ್ಸಾಹವನ್ನು ನಾನು ಗಮನಿಸುತ್ತಿದ್ದೇನೆ. ಬಹುಶಃ ನಾನು ಈ ಪಟ್ಟಣಕ್ಕೆ ಬಂದಿರುವುದರಿಂದ ಇರಬೇಕು. ನಿಮ್ಮ ಸ್ಥಳೀಯ ಚಟುವಟಿಕೆಗಳನ್ನು ಸ್ಥಳೀಯ ರೀತಿಯಲ್ಲಿ, ಸ್ಥಳೀಯ ಹುಮ್ಮಸ್ಸಿನಿಂದ ನಡೆಸುವುದರಿಂದ ಎಂದೆಂದಿಗೂ ಬಲವನ್ನು ನೀವು ರೂಢಿಸಿಕೊಳ್ಳುವುದಿಲ್ಲ.

ನೀವೆಲ್ಲರೂ ಒಂದೇ ಧ್ವಜದ ಕೆಳಗೆ ಬರಲು ಕಲಿಯಬೇಕು. ಹಾಗೆ ಮಾಡುವುದರಿಂದ, ನೀವೆಲ್ಲಾ ಅಖಿಲ ಭಾರತ ಪರಿಶಿಷ್ಟ ಜಾತಿಗಳವರ ಫೆಡರೇಷನ್ನಿನ ಒಂದೇ ಒಂದು ಸಂಘಟನೆಯ ಕೆಳಗೆ ಒಗ್ಗಟ್ಟಿನಿಂದ ಇದ್ದೇವೆಂದು ಪ್ರಪಂಚಕ್ಕೆ ತೋರಿಸಿಕೊಡಿ. ನನಗೆ ಸಂದ ಗೌರವಕ್ಕಾಗಿ ವ್ಯವಸ್ಥಾಪಕರನ್ನು ವಂದಿಸುತ್ತೇನೆ.

ನೆರದಿದ್ದವರಲ್ಲಿ ಕೆಲವರು ನನ್ನ ಭಾಷಣವನ್ನು ತಮಿಳಿಗೆ ಭಾಷಾಂತರಿಸಬೇಕೆಂದು ಒತ್ತಾಯಿಸಿದರು. ಭಾಷಣದ ತಮಿಳು ಭಾಷಾಂತರವನ್ನು ಮುದ್ರಿಸಿ ಉಚಿತವಾಗಿ ಹಂಚಲಾಗುತ್ತದೆ ಎಂದು ಅವರಿಗೆ ಭರವಸೆ ಕೊಡಲಾಯಿತು.

ಡಾ. ಅಂಬೇಡ್ಕರ್ ಚಿರಾಯುವಾಗಲಿ ಎಂಬ ಘೋಷಣೆಯೊಂದಿಗೆ ಸಭೆ ಮುಕ್ತಾಯವಾಯಿತು.

# ೯೪
# ಭಾರತದ ಚರಿತ್ರೆ ಬೌದ್ಧಮತ ಮತ್ತು ಬ್ರಾಹ್ಮಣತ್ವದ ನಡುವಿನ ಸೆಣಸಾಟವಲ್ಲದೆ ಬೇರೇನೂ ಇಲ್ಲ

ಮದರಾಸಿನಲ್ಲಿ ಉಳಿದುಕೊಂಡಿರುವಾಗ ಡಾ. ಬಿ.ಆರ್.ಅಂಬೇಡ್ಕರ್ ಅವರಿಗೆ ಭಾಷಣ ಮಾಡುವುದಕ್ಕಾಗಿ ಅನೇಕ ಆಹ್ವಾನಗಳು ಬಂದವು. ಈ ಆಹ್ವಾನಗಳು ವಿವಿಧ ಸಂಸ್ಥೆಗಳಿಂದ ಬಂದಿದ್ದವು. ಆಹ್ವಾನ ಕೊಟ್ಟವರುಗಳಲ್ಲಿ ಮದರಾಸು "ರ್‍ಯಾಷನಲ್ ಸೊಸೈಟಿಯಾ" (ವಿಚಾರವಾದಿ ಸಂಘ) ಒಂದು. ಅದು "ಭಾರತದಲ್ಲಿ ವಿಚಾರವಾದ" ಎಂಬ ವಿಷಯದ ಮೇಲೆ ೨೫ನೇ ಸೆಪ್ಟೆಂಬರ್ ೧೯೪೪ ಭಾನುವಾರದಂದು ಮದರಾಸಿನ ಬ್ರಾಡ್‌ವೇ ಅಲ್ಲಿನ ಪ್ರಭಾತ್ ಟಾಕೀಸ್‌ನಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅಧ್ಯಕ್ಷತೆ ವಹಿಸಿದ್ದವರು ಮಾಜಿ ಮಂತ್ರಿಗಳಾದ ರಾಮನಾಥನ್ ಅವರು. ಈ ಸಂದರ್ಭದಲ್ಲಿ ಸೌ॥ ಎಮ್.ಎಮ್. ಮುತ್ತು ಅವರು ಡಾ. ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು.

ಡಾ. ಅಂಬೇಡ್ಕರ್ ಹೇಳಿದ್ದು:

ಭಾರತದಲ್ಲಿನ ವಿಚಾರವಾದದ ವಿಷಯ ನಿಸ್ಸಂದೇಹವಾಗಿ ಭಾರತೀಯರಿಗ ಬಹಳ ಆಸಕ್ತಿ ಇರುವ ವಿಷಯವಾಗಿದ್ದು ಅವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಹಿಂದೂ ಸಮಾಜ ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಆ ವಿಷಯವನ್ನು ಸಂಪೂರ್ಣವಾಗಿ ಕಡೆಗಾಣಿಸಲಾಗಿದೆ. ಭಾರತದ ಚರಿತ್ರೆಯ ಬಗ್ಗೆ ಅನೇಕ ಸುಳ್ಳು ಕಲ್ಪನೆಗಳಿವೆ. ಇದನ್ನು ಚಲಾವಣೆಗೆ ಕೊಟ್ಟಿರುವ ಉದ್ದೇಶ ಸಾಹಿತ್ಯ ಕ್ಷೇತ್ರದಲ್ಲಿ ಬಹಳ ಮಹತ್ತರವಾದ ಪ್ರಭಾವವಿರುವವರನ್ನು ಕೊಳ್ಳಲಿಕ್ಕಾಗಿ. ಭಾರತದ ಚರಿತ್ರೆಯನ್ನು ಬರೆದ ಬಹಳ ಪಾಂಡಿತ್ಯ ಪೂರ್ಣ ಲೇಖಕರು ಹೇಳಿರುವುದೇನೆಂದರೆ, ಭಾರತದಲ್ಲಿ ರಾಜಕೀಯವೆಂಬುದೇ ಏನೇನೂ ಇಲ್ಲ ಮತ್ತು ಪುರಾತನ ಭಾರತದ ಲೇಖಕರು ತಮ್ಮನ್ನು ತೊಡಗಿಸಿಕೊಂಡದ್ದು, ವೇದಾಂತ, ಧರ್ಮ, ಆಧ್ಯಾತ್ಮ ಶಾಸ್ತ್ರ ಇವುಗಳ ಹೊರತು ಅವರು ರಾಜಕೀಯದ ಬಗ್ಗೆ ತಲೆ ಕೆಡಿಸಿಕೊಳ್ಳಲೇ ಇಲ್ಲ ಎಂದು. ಪ್ರಾಚೀನ ಕಾಲದ ಭಾರತದ ಜನರು ಚಾರಿತ್ರಿಕವಾಗಿಯಾಗಲೀ, ಅಥವಾ ರಾಜಕೀಯವಾಗಿ ಆಗಲೀ ಆಗಿದ್ದ ಜನಾಂಗವೇ ಅಲ್ಲ ಎಂದು ಆಪಾದಿಸಲಾಗಿದೆ. ಅದೇ ಅಭಿಪ್ರಾಯ ಈ ದಿನದಲ್ಲೂ ಇದೆ. ಭಾರತಕ್ಕೊಂದು ಚರಿತ್ರೆಯೇ ಇಲ್ಲವೆಂದು ಸಹ ಹೇಳಲಾಗಿದ್ದು ಸಮಾಜ ಎರಕಕ್ಕೆ ಹಾಕಿದ ಉಕ್ಕಿನ ಚೌಕಟ್ಟಿನಲ್ಲೇ ಚಲಿಸುತ್ತಿದ್ದು ಒಂದು ಸಾರಿ ಭದ್ರ ಮಾಡಿದ್ದು ಹಾಗೆಯೇ ಉಳಿದುಕೊಂಡಿದೆ; ಪರಿಣಾಮವಾಗಿ ಭಾರತದ ಚರಿತ್ರಕಾರನಿಗೆ, ಆ ಉಕ್ಕಿನ ಚೌಕಟ್ಟನ್ನು ಕುರಿತು ವಿವರಿಸುವುದನ್ನು ಬಿಟ್ಟು ಬೇರೇನೂ ಮಾಡುವುದಕ್ಕೆ ಇಲ್ಲ. ಮೊದಲು ಇದ್ದ ರಾಜಕೀಯ ಕ್ರಾಂತಿಯ ಚೌಕಟ್ಟನ್ನು ಬದಲಾಯಿಸುವ ಉದ್ದೇಶದಿಂದ, ಕೆಲವು ದೇಶಗಳು ಕೆಲವು ವಿಶೇಷವಾದ ಮತ್ತು ರಾಜಕೀಯ ಕ್ರಾಂತಿಗಳನ್ನು ಮಾಡಿದವು ಎಂದು ಹೇಳಲಾಗಿದೆ.

ನಾನು ಕೇವಲ ಒಬ್ಬ ರಾಜಕಾರಿಣಿಯಾಗಿ ಮಾತ್ರ ಉಳಿದುಕೊಂಡಿದ್ದು, ಸಾಹಿತ್ಯದ ವಿದ್ಯಾರ್ಥಿಯಾಗಿ, ಅಥವಾ ಚರಿತ್ರೆಯ ವಿದ್ಯಾರ್ಥಿಯಾಗಿ ಅಥವಾ ತತ್ವಶಾಸ್ತ್ರದ ವಿದ್ಯಾರ್ಥಿಯಾಗಿ ನನಗೆ ಆಳವಾದ ಜ್ಞಾನವೇನೂ ಇಲ್ಲ. ಆದರೆ ನನ್ನ ಸಮಯದಲ್ಲಿ ಸ್ವಲ್ಪ ಭಾಗವನ್ನು ಪ್ರಾಚೀನ ಚರಿತ್ರೆಯ ಅಧ್ಯಯನಕ್ಕಾಗಿ ಮೀಸಲಿಟ್ಟಿದ್ದೆ.

ನಾನು ಈ ಪ್ರಕಾಂಡ ಪಂಡಿತರು ಬಂದಿರುವ ತೀರ್ಮಾನಕ್ಕೆ ವಿರೋಧವಾದ ತೀರ್ಮಾನಕ್ಕೆ ಬಂದಿದ್ದೇನೆ. ನನ್ನ ಅಧ್ಯಯನದಿಂದ ನಾನು ತಿಳಿದುಕೊಂಡಿರುವುದೇನೆಂದರೆ– ಪ್ರಾಚೀನ ಭಾರತೀಯರು, ಚರಿತ್ರೆಗೆ ಗೊತ್ತಿರುವ ಹಾಗೆ ಒಂದು ರಾಜಕೀಯ ಜನಾಂಗಕ್ಕೆ ಸೇರಿದವರಾಗಿದ್ದರು. ಪ್ರಾಚೀನ ಕಾಲದಲ್ಲಿ ಯಾವ ದೇಶವೂ ಸಮಾಜದ ನೈತಿಕತೆಯನ್ನು ತಟ್ಟುವಂತೆ ಕ್ರಾಂತಿಗಳನ್ನು ಎದುರಿಸಿರಲಿಲ್ಲ. ಸರ್ಕಾರ ಮತ್ತು ತತ್ವಶಾಸ್ತ್ರ ಪ್ರಾಚೀನ ಭಾರತೀಯ ಒಂದು ವಿಶಿಷ್ಟತೆಯಾಗಿತ್ತೆಂದು ತೋರಿಸಿಕೊಡಬಹುದು. ಭಾರತದೇಶ, ಬಹುಶಃ, ವಿಚಾರವಾದವನ್ನು ಬೋಧಿಸಿದ ದೇಶದಲ್ಲಿ ಒಂದಾಗಿದ್ದು ಇಂಥ ವಿಚಾರವಾದದ ಬಗೆಯನ್ನು ಪ್ರಪಂಚ ಎಂದಿಗೂ ಕಂಡಿರಲಿಲ್ಲ. ಭಾರತ ಒಂದು ಕ್ರಾಂತಿ ಭೂಮಿಯಾಗಿದ್ದು, ಅದಕ್ಕೆ ಹೋಲಿಸಿದರೆ ಫ್ರೆಂಚ್ ಕ್ರಾಂತಿ ಕೇವಲ ಒಂದು ಗೋಲಿ ಆಟವಷ್ಟೇ ಹೊರತು ಬೇರೇನೂ ಅಲ್ಲ.

### ಬ್ರಾಹ್ಮಣತ್ವಕ್ಕೂ ಬೌದ್ಧ ತತ್ವಕ್ಕೂ ಇರುವ ವ್ಯತ್ಯಾಸಗಳು

ನನ್ನ ಅಭಿಪ್ರಾಯದಲ್ಲಿ ಭಾರತದ ಚರಿತ್ರೆಯ ವಿದ್ಯಾರ್ಥಿಗಳು ಒಂದು ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು; ಅದೆಂದರೆ ಭಾರತದ ಚರಿತ್ರೆಯ ಬಗ್ಗೆ ಬರೆದಿರುವ ಚರಿತ್ರಕಾರರು, ಅದನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಅದೊಂದು ಮೂಲಭೂತ ಸಂಗತಿಯಾಗಿದ್ದು, ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳದ ಹೊರತು, ಯಾರಿಗೂ ಸಹ ಭಾರತದ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಆ ಮೂಲಭೂತ ಸಂಗತಿಯೆಂದರೆ, ಬೌದ್ಧತತ್ವಕ್ಕೂ ಮತ್ತು ಬ್ರಾಹ್ಮಣ ತತ್ವಕ್ಕೂ ನಡುವೆ ಜರುಗಿದ ಬಹು ದೊಡ್ಡ ಸೆಣಸಾಟ. ಈ ಸೆಣಸಾಟವಿಲ್ಲದಿದ್ದರೆ ಭಾರತದ ಚರಿತ್ರೆ ಏನೇನೂ ಅಲ್ಲ. ತತ್ವಶಾಸ್ತ್ರದ ಪ್ರಾಚಾರ್ಯರುಗಳು ಪದೇ ಪದೇ ಉಚ್ಚರಿಸುತ್ತಿರುವಂತೆ ಅದೇನು ಒಂದು ಸೆಣಸಾಟ ಕೂಡ ಅಲ್ಲ, ಅದು ಯಾವುದೋ ಒಂದು ಪಂಥದ ಮೇಲಿನ ಜಗಳ. ಅದು ಒಂದು ಸಿದ್ಧಾಂತದ ಮೇಲಿನ ಕ್ರಾಂತಿ ಮಾತ್ರವಲ್ಲ, ಅದು ರಾಜಕೀಯ ಮತ್ತು ತತ್ವಶಾಸ್ತ್ರದಲ್ಲಿ ಒಂದು ಕ್ರಾಂತಿ. ಬೌದ್ಧ ತತ್ವ ಮತ್ತು ಬ್ರಾಹ್ಮಣ ತತ್ವದ ನಡುವೆ ಇದ್ದ ಕಲಹ ಈ ಒಂದು ವಿವಾದಾಂಶದ ಮೇಲೆ ಇದ್ದು, ಆ ವಿವಾದಾಂಶ ಅಂದರೆ "ಸತ್ಯ ಯಾವುದು" ಎಂದು. ಯಾವುದನ್ನು ಸತ್ಯವೆಂದು ಒಪ್ಪಿಕೊಳ್ಳಲಾಗುತ್ತದೆ? ಅದೇ ಈ ಪ್ರಶ್ನೆ ನಿಂತಿರುವ ಗಟ್ಟಿ ಬಂಡೆಯ ತಳಹದಿ; ಈ ಪ್ರಶ್ನೆಯೊಂದಿಗೆ ವಿಚಾರವಾದ ತಳುಕು ಹಾಕಿಕೊಂಡಿದೆ. 'ಸತ್ಯ' ಏನೆಂಬ ಪ್ರಶ್ನೆಗೆ ಬುದ್ಧ ಕೊಟ್ಟ ಉತ್ತರ ಬ್ರಾಹ್ಮಣರು ಕೊಟ್ಟ ಉತ್ತರಕ್ಕಿಂತ ಮೂಲಭೂತವಾಗಿ ಭಿನ್ನವಾಗಿತ್ತು. ದಶ ಇಂದ್ರಿಯಗಳು ಸಾಕ್ಷೀಕರಿಸುವ ಯಾವುದಾದರೂ ಒಂದು ಸತ್ಯವೆಂದು ಬುದ್ಧ ಹೇಳಿದ. ಯಾವುದನ್ನು ವೇದಗಳು ಸತ್ಯವೆಂದು ಘೋಷಣೆ ಮಾಡುತ್ತದೆ ಅದೇ ಸತ್ಯವೆಂದು ಬ್ರಾಹ್ಮಣತ್ವದ ಸಿದ್ಧಾಂತ ಹೇಳುತ್ತದೆ (ನಗು). ತಪ್ಪು ಮಾಡದಿರಿ, ಅದೇ ಬ್ರಾಹ್ಮಣತ್ವದ ಅತೀ ಮುಖ್ಯವಾದ ಸಿದ್ಧಾಂತ. ಬೌದ್ಧರು ಕ್ರಾಂತಿಕಾರಿಗಳು, ಬ್ರಾಹ್ಮಣರು ಪ್ರತೀಕ್ರಾಂತಿಕಾರಿಗಳು. ಬ್ರಾಹ್ಮಣತ್ವ ಮತ್ತು ಬೌದ್ಧ ತತ್ವದ ನಡುವಿನ ವ್ಯತ್ಯಾಸವೇ ಅದು. ಪ್ರಾಚೀನ ಕಾಲದಿಂದಲೂ, ಬ್ರಾಹ್ಮಣರು ಏತಕ್ಕಾಗಿ ಎಲ್ಲ ಸಾಮಾಜಿಕ ಮತ್ತು ಧಾರ್ಮಿಕ ಸಿದ್ಧಾಂತಕ್ಕೆ ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡಿದರು ಎನ್ನುವುದನ್ನು ಹೇಳುವುದು ಕಷ್ಟಕರವಾದದ್ದು. ಆದರೆ ನನಗೆ ಆಶ್ಚರ್ಯವಾಗುವುದು ಏನೆಂದರೆ, ಪ್ರಾಚೀನ ಭಾರತದಲ್ಲಿದ್ದ ಬ್ರಾಹ್ಮಣರಂಥ ಬುದ್ಧಿವಂತ ಜನರು, ಇಷ್ಟು ಅಗಾಧವಾದ ಪಾವಿತ್ರ್ಯತೆಯನ್ನು ಮತ್ತು ಆಧಾರವನ್ನು ಬರಿಯ ವಿದೂಶಕತೆಯಲ್ಲದೆ ಬೇರೇನೂ ಅಲ್ಲದ ಇಂಥ ಪುಸ್ತಕಗಳ ಮೇಲೆ ಏಕೆ ತಳುಕು ಹಾಕಿದರು ಎಂಬುದು ನನಗೆ ಆಶ್ಚರ್ಯ ಉಂಟು ಮಾಡುತ್ತದೆ.

## ವೇದಗಳಲ್ಲಿ ಸ್ಪಷ್ಟನೆ

ವೇದಗಳ ಹೊರ ನೋಟದ ಕೆಲವು ಉದಾಹರಣೆಗಳನ್ನು ಉಲ್ಲೇಖಿಸಿ ವಿಶ್ಲೇಷಿಸುತ್ತಾ, ಡಾ. ಅಂಬೇಡ್ಕರ್ ಅವರು ಕೆಲವು ಭಾಗಗಳು ಸ್ಪಷ್ಟನೆಯಾಗಿದ್ದು, ಅವುಗಳನ್ನು ನಂತರ ಸೇರಿಸಲಾಗಿದೆ ಎಂದು ಹೇಳಿದರು. ಅದನ್ನು ಅವರು ಮಾಡಿದ್ದಕ್ಕೆ ಕಾರಣ ಅವರಿಗೆ ಅವರ ತತ್ವಕ್ಕೊಂದು ಬಗೆಯ ಪಾವಿತ್ರತ್ಯೆಯ ಮೆರಗನ್ನು ಕೊಡಬೇಕಾಗಿತ್ತು. ಸಾಮಾಜಿಕ ತತ್ವಗಳಿಗೆ ವಿಚಾರವಾದಕ್ಕೆ ಹೊರತಾದ ಸಮೀಪಿಸುವಿಕೆಗೆ ಒತ್ತಾಯ ಮಾಡುತ್ತಿದ್ದುದಕ್ಕೆ ಇದು ಒಂದೇ ಕಾರಣವೆಂದು ತಮ್ಮ ಮನಸ್ಸಿಗೆ ತೋರುತ್ತದೆಯೆಂದು ಡಾ. ಅಂಬೇಡ್ಕರ್ ಹೇಳಿದರು. ಬುದ್ಧ ತತ್ವ ಮತ್ತು ಬ್ರಾಹ್ಮಣತ್ವದ ನಡುವಿನ ಸೆಣಸಾಟ ತಮ್ಮ ತಮ್ಮ ಹಿರಿಮೆಯನ್ನು ಎತ್ತಿ ಹಿಡಿಯುವುದಕ್ಕೆ ಮಾತ್ರ. ಬುದ್ಧ ತತ್ವ ಆವಿಯಾಗಿ ಹೋದ ಮೇಲೆ ಅವರಿಗೆ ಅಗಾಧವಾದ ನಷ್ಟ ಉಂಟಾಯಿತು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಸಂದೇಶವನ್ನು ಬೋಧಿಸಿದವರಲ್ಲಿ ಬುದ್ಧನೇ ಮೊದಲಿಗನು. ಅವರಿಗೆ ಸೋಲುಂಟಾಗುವುದಕ್ಕೆ ಕಾರಣ ಕ್ರಾಂತಿ, ಪ್ರತಿಕ್ರಾಂತಿಯಿಂದ ತುಳಿದು ಹಾಕಲ್ಪಟ್ಟಿತು. ಅವರು ವಿಚಾರವಾದದ ಚೇತನವನ್ನೂ (ಇಂಗಿತವನ್ನು) ಸಹ ಕಳೆದುಕೊಂಡಿದ್ದಾರೆ. ಅದೇ ಕಾರಣಕ್ಕಾಗಿಯೇ ಇಡೀ ಹಿಂದೂ ಸಮಾಜ ಅತಿಯಾದ ಕುರುಡು ನಂಬಿಕೆಯಲ್ಲಿ ಮುಳುಗಿಹೋಗಿದೆ; ಮೂರ್ತಿ ಪೂಜೆ ಮತ್ತು ಇತರ ಕೆಟ್ಟ ಆಚರಣೆಗಳಲ್ಲಿ ಮಗ್ನರಾಗಿದ್ದಾರೆ. ಇದೆಲ್ಲವನ್ನೂ ಧರ್ಮದ ಹೆಸರಿನಲ್ಲಿ ಆಚರಿಸಲಾಗುತ್ತಿದೆ. ಸತ್ಯದೆಡೆಗೆ ಬುದ್ಧನ ವಿಚಾರವಾದದ ಸಮೀಪಿಸುವಿಕೆ ಕಳೆದುಹೋಗಿದೆ. ಈದಿನ ಅವರು ಪ್ರತಿ ಕ್ರಾಂತಿಕಾರಿಗಳ ಬಿಗಿ ಮುಷ್ಟಿಯಲ್ಲಿ ಸಿಲುಕಿ ಕೊಂಡಿದ್ದಾರೆ. ಈ ಪ್ರತಿ ಕ್ರಾಂತಿಕಾರಿಗಳ ಅಂತಿಮ ಸತ್ಯವೆಂದರೆ ಭಗವದ್ ಗೀತೆ ಮತ್ತು ಮನುಸ್ಮೃತಿ. ಈ ದಿನದ ದುರಂತವೆಂದರೆ, ಅವಿಚಾರವಾದದ ಆದರ್ಶ ರಾಜಕೀಯದೊಳಕ್ಕೂ ಪ್ರವೇಶ ಪಡೆದಿದೆ. ಎಲ್ಲಾ ದೇಶಗಳಲ್ಲೂ ರಾಜಕೀಯ ನಾಯಕರುಗಳು ವಿಚಾರಣೆಯನ್ನು ಎದುರಿಸುತ್ತಿದ್ದಾರೆ. ಆದರೆ ಭಾರತದಲ್ಲಿನ ಪರಿಸ್ಥಿತಿ ಏನು? ಮಿ. ಗಾಂಧಿಯವರು ಯಾವತ್ತೂ ವಿಚಾರಣೆಗೆ ಒಳಪಟ್ಟಿಲ್ಲ. (ನಗು) ಅವರು ವಿಚಾರಣೆಗೆ ಒಳಗಾಗಿದ್ದಾರೆಯೇ? ಇಲ್ಲ. ಅವರೇನನ್ನಾದರೂ ಹೇಳಿದರೆ ಪ್ರತಿಯೊಬ್ಬರೂ ಅದನ್ನು ವೇದವಾಕ್ಯವೆಂದು ಒಪ್ಪಿಕೊಳ್ಳಬೇಕು. ಅವರು ಅದರ ವಿರುದ್ಧ ನುಡಿದರೆ ನಾವು ಅದನ್ನು ಒಪ್ಪಿಕೊಳ್ಳಲೇಬೇಕು. ಎರಡು ವರ್ಷಗಳ ಕೆಳಗೆ ಮಿ. ಗಾಂಧಿಯವರು ಪಾಕಿಸ್ತಾನವನ್ನು ಪಾಪ ಎಂದು ಕರೆದಿದ್ದರು. ಕಾಂಗ್ರೆಸ್‌ನವರೂ ಅದನ್ನು ಪಾಪವೆಂದಿದ್ದರು. ನಾನೂ ಸಹ ಪಾಕಿಸ್ತಾನದ ಮೇಲೆ ಒಂದು ಪುಸ್ತಕವನ್ನು ಬರೆದಿದ್ದೇನೆ. ನನ್ನನ್ನು ತನ್ನ ಬುದ್ಧಿಮತ್ತೆಯನ್ನು ಮುಸ್ಲಿಮ್ ಲೀಗಿಗೆ ಒತ್ತೆ ಇಟ್ಟವರಲ್ಲಿ ಒಬ್ಬನೆಂದೂ, ಹಾದರ ಮಾಡಿದ್ದೇನೆಂದು ಇತ್ಯಾದಿಯಾಗಿ ಮತ್ತು ಇನ್ನೇನನ್ನೊ ಮಾಡಿದವನೆಂದು ಕರೆಯಲಾಯಿತು. ಈ ದಿನ ಮಿ. ಗಾಂಧಿಯವರು ಪಾಕಿಸ್ತಾನ ಪಾಪವಲ್ಲವೆಂದು ಹೇಳುತ್ತಾರೆ. ಇದು ಅವಿಚಾರತತ್ವದ ಒಂದು ಉದಾಹರಣೆಯಷ್ಟೇ; ಇದು ನಮ್ಮ ಸಾಮಾಜಿಕ ಹಾಗೂ ಬೌದ್ಧಿಕ ಚಿಂತನೆಯಲ್ಲದೆ ರಾಜಕೀಯ ಚಿಂತನೆಯೊಳಗೂ ಪ್ರವೇಶ ಮಾಡಿದೆ.

ಏನನ್ನಾದರೂ ನಾವು ಬೇಗ ಮಾಡದಿದ್ದರೆ ಈ ದೇಶಕ್ಕೆ ದುರ್ಗತಿ ಖಂಡಿತವಾಗಿ ಬರುತ್ತದೆ.

# ೯೫

# ಪ್ರಾಂತೀಯ ಸ್ವಾಯತ್ತತೆಗೆ ಗಾಂಧೀಜಿ ತೃಪ್ತಿಪಟ್ಟುಕೊಂಡಿದ್ದರು

೨೪ನೇ ಸೆಪ್ಟೆಂಬರ್ ೧೯೪೪ನೇ ತಾ॥ ಮದರಾಸಿನ ಶಿವರಾಜ್ ಸ್ಮಾರಕ ಭವನದಲ್ಲಿ ಡಾ. ಅಂಬೇಡ್ಕರ್ ಅವರು ಶ್ರೀನಿವಾಸಶಾಸ್ತ್ರಿ ಮತ್ತು ಗಾಂಧೀಜಿ ಅವರನ್ನು ಬಹಳ ತೀಕ್ಷ್ಣವಾಗಿ ಟೀಕಿಸಿದರು.

ಅವರು ಹೇಳಿದ್ದು:

"............ತಮ್ಮ ಇತ್ತೀಚಿನ ಭಾಷಣದಲ್ಲಿ ಹಾನರೆಬಲ್ ವಿ.ಎಸ್. ಶ್ರೀನಿವಾಸ ಶಾಸ್ತ್ರಿಯವರು ತಾವು ಗಾಂಧಿಯವರನ್ನು ಭಾರತದ ಆತ್ಮ ಮೂರ್ತರೂಪವೆಂದು ಪರಿಗಣಿಸುವುದಾಗಿಯೂ ಮತ್ತು ಗಾಂಧಿಯವರು ಯಾವುದೇ ಅಂತಾರಾಷ್ಟ್ರೀಯ ಭಾರತವನ್ನು ಪ್ರತಿನಿಧಿಸಲೇಬೇಕೆಂದು ಮತ್ತು ಯಾವುದೇ ಸಂದರ್ಭದಲ್ಲಿ, ಭವಿಷ್ಯದ ಯಾವುದೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಡಾ. ಅಂಬೇಡ್ಕರ್ ಅಂಥವರಿಗೆ ಜಾಗ ಕೊಡದ ಹಾಗೆ ಎಚ್ಚರಿಕೆ ವಹಿಸಬೇಕೆಂದು ಹೇಳಿದರು.

"......ನನ್ನ ಇಡೀ ಸಾರ್ವಜನಿಕ ಜೀವನ – ಅದೇನೂ ಶಾಸ್ತ್ರಿಯರ್‌ಅವರದಷ್ಟು ವಿಸ್ತಾರವಾದುದಾಗಲೀ, ಅವರದಷ್ಟು ಕೀರ್ತಿಯುತವಾದದ್ದಾಗಲೀ ಅಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ನಾನು ಎಲ್ಲಿಯಾದರೂ ಅಂಥ ಅವಮಾನಕರವಾದದ್ದನ್ನು ಏನಾದರೂ ಮಾಡಿದ್ದೇನೆಯೇ ಎಂದು ನನ್ನ ಹೃದಯವನ್ನು ಹುಡುಕುತ್ತಿದ್ದೆ. ನನ್ನ ಸಾರ್ವಜನಿಕ ಜೀವನದ ಅಲ್ಪಕಾಲದಲ್ಲಿ ನಾನೇನಾದರು ಅಂಥ ಅಪಮಾನಕರವಾದ ಯಾವುದಾದರನ್ನಾದರೂ ಮಾಡಿದ್ದೇನೆಯೇ? ಬಯ್ಗಳದ ಭಾಷೆಯನ್ನು ಉಪಯೋಗಿಸುವುದಕ್ಕೆ ನನಗೆ ಇಷ್ಟವಿಲ್ಲ. ಹಾನರೆಬಲ್ ಶಾಸ್ತ್ರಿಯವರು ಬ್ರಿಟಿಷ್ ಸರ್ಕಾರದ ಮಡಿಲಲ್ಲಿ ಕುಳಿತಿರುವ ನಾಯಿ ಎಂದು ನಾನು ಸುಲಭವಾಗಿ ಹೇಳಬಹುದಾಗಿತ್ತು. ಇಷ್ಟರವರೆಗೂ ಅವರು ಬ್ರಿಟಿಷ್ ಸರ್ಕಾರದ ಮಡಿಲಲ್ಲಿ ಕುಳಿತುಕೊಂಡಿದ್ದಾರೆ. ಭಾರತದಲ್ಲಿಯಾಗಲೀ ಹೊರಗಡೆಯಲ್ಲಾಗಲೀ ಅವರೇನಾದರೂ ಪ್ರಖ್ಯಾತಿಯನ್ನಾಗಲೀ ಅಥವಾ ಹಿರಿಮೆಯನ್ನಾಗಲೀ ಪಡೆದುಕೊಂಡಿದ್ದರೆ ಅದಕ್ಕೆ ಕಾರಣ ಬ್ರಿಟಿಷ್ ಸರ್ಕಾರ ಅವರನ್ನು ಪ್ರದರ್ಶನಕ್ಕಿಟ್ಟ ಹುಡುಗನಂತೆ ಮಾಡಿ ಕೂರಿಸಿದ್ದಕ್ಕಾಗಿ ಮಾತ್ರ. ಶಾಸ್ತ್ರಿಯವರು ಹೇಳಿದ್ದು ನಿಜವಾಗಿಯೂ ರೋಗಬಡಿದ ಕರುಳಿನ ಒಂದು ಮುದಿ ಕಾಗೆಯ ಗೊರಗುಟ್ಟುವ ಧ್ವನಿ ಎಂದು ಹೇಳಬಯಸುವುದಿಲ್ಲ. ಶಾಸ್ತ್ರಿಯವರು ಹೇಳಿದ್ದಾದರೂ ಏನು? ಅದು ಅನೇಕ ಕಾಂಗ್ರೆಸ್ಸಿಗರು ಹೇಳುತ್ತಿರುವುದರ ಒಂದು ಮಾದರಿಯಷ್ಟೆ. ಅವರು ಹೇಳುವುದೇನೆಂದರೆ, ಪರಿಶಿಷ್ಟ ಜಾತಿಗಳವರು ಅವರ ನಾಯಕತ್ವದಲ್ಲಿ ಇದ್ದಷ್ಟು ದಿನ ದೇಶದ ಒಟ್ಟಿನ ಹಿತಾಸಕ್ತಿಯ ವಿರುದ್ಧವಾಗಿದ್ದರು. ಅನೇಕರಿಗೆ ಗಾಂಧಿಯವರು ದುಂಡು ಮೇಜಿನ ಸಮ್ಮೇಳನದಲ್ಲಿ ಏನು ಮಾಡಿದರೆಂಬುದು ಗೊತ್ತಿಲ್ಲ. ಅವರು ತಿಳಿದುಕೊಂಡಿದ್ದು ಗಾಂಧಿಯವರು ಕೀರ್ತಿ ತರುವ ಕೆಲಸವನ್ನು ಮಾಡಿದ್ದಾರೆ ಎಂದು. ಸಮ್ಮೇಳನಕ್ಕೆ ಹೋಗಿದ್ದು ಸ್ವಾತಂತ್ರ್ಯ ಬೇಕೆಂದು ಒತ್ತಾಯ ಮಾಡುವ ಆದೇಶವನ್ನು ಹೊತ್ತು; ಈ ಬೇಡಿಕೆ ಅನೇಕ ಸಾಧು ರಾಜಕಾರಣಿಗಳು ಕೇಳಲು ಸಿದ್ಧರಾಗಿರುವುದಕ್ಕಿಂತ ಬಹಳ ದೂರವಾಗಿತ್ತು. ಆದರೆ ಗಾಂಧೀಜಿ ಮಾಡಿದ್ದಾದರೂ ಏನು? ಸ್ವಾತಂತ್ರ್ಯಕ್ಕಿಂತ ಕಡಿಮೆಯಾದುದನ್ನು ಕೇಳಲೇ ಬಾರದೆಂಬ ಆದೇಶ ಹೊತ್ತು ಸಮ್ಮೇಳನಕ್ಕೆ ಹೋದ ಈ ಪುರಾತನ ಕಾಲದ ಮಹನೀಯರು ಕೇಳಿದ್ದಾದರೂ ಏನು; ಸರ್ ಸ್ಯಾಮ್ಯುಯಲ್ ಹೋರ್ ಅವರಿಗೆ ಗಾಂಧೀಜಿ ಹೇಳಿದ್ದೇನೆಂದರೆ ಪ್ರಾಂತೀಯ ಸ್ವಾಯತತ್ತೆಯನ್ನು ಕೊಟ್ಟರೆ ತೃಪ್ತಿ ಪಟ್ಟುಕೊಳ್ಳಲು ಸಿದ್ಧನಿದ್ದೇನೆ ಎಂದು. (ನಾಚಿಕೆಗೇಡು ಎಂಬ ಕೂಗಾಟ)

## ೯೬
# ನಾವೇ ಈ ದೇಶದ ಭವಿಷ್ಯವನ್ನು ರೂಪಿಸುವವರು

ಪರಿಶಿಷ್ಟ ಜಾತಿಗಳವರ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿಯವರಾದ ಪಿ.ಎನ್.ರಾಜಭೋಜ್ ಮತ್ತು ಕಾರ್ಮಿಕ ಇಲಾಖೆಯ ಎ.ಸಿ.ಎಮ್.ರವರಾದ ವಿ.ರಾಮಕೃಷ್ಣನ್ ಅವರ ಜೊತೆಯಲ್ಲಿ ಡಾ. ಅಂಬೇಡ್ಕರ್ ಅವರು ಗುರುವಾರ ೨೮ನೇ ಸೆಪ್ಟೆಂಬರ್ ೧೯೪೪ರಂದು ಅಪರಾಹ್ನ ರಾಜಮಹೇಂದ್ರಿಯನ್ನು ತಲುಪಿದರು. ಅಲ್ಲಿಯ ಪುರಸಭೆಯ ಪರವಾಗಿ ಅವರಿಗೆ ನಾಗರಿಕ ಬಿನ್ನವತ್ತಳೆಯನ್ನು ಮ್ಯೂಸಿಯಮ್ ಸಭಾಂಗಣದಲ್ಲಿ ಅರ್ಪಿಸಲಾಯಿತು. ಪುರಸಭೆಯ ಅಧ್ಯಕ್ಷರಾದ ಸೋಮಿನ ಕಾಮೇಶ್ವರ ರಾವ್ ಮತ್ತು ಮುನಿಸಿಪಲ್ ಆಯುಕ್ತರಾದ ಕೆ.ವೆಂಕಟಾದ್ರಿ ಚೌಧರಿಯವರು ಡಾ. ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು. ನಾಗರಿಕ ಬಿನ್ನವತ್ತಳೆಗೆ ಉತ್ತರಿಸುತ್ತಾ ಡಾ. ಅಂಬೇಡ್ಕರ್ ಅವರು ಹೇಳಿದ್ದು:

ನಾವು ಈದಿನ ಸೇರಿರುವುದು, ನಮಗೆ ಬಂದಿರುವ ಬಹಳ ವ್ಯಸನಕರವಾದ ಸುದ್ದಿಯ ನೆರಳಿನ ಕೆಳಗೆ. ಮಿ. ಗಾಂಧಿ ಮತ್ತು ಮಿ. ಜಿನ್ನಾ ರವರ ನಡುವಿನ ಮಾತುಕತೆಗಳು ಮುರಿದುಬಿದ್ದವೆಂದು ವರದಿಯಾಗಿದೆ. ನಾವು ಒಟ್ಟಾಗಿ ಸೇರುವುದಕ್ಕೆ ಆಗಲೇ ಇಲ್ಲ. ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಮುಂದೆ ಸಾಗುವುದಕ್ಕೆ ನಮಗೆ ಎಂದಿಗೂ ಸಾಧ್ಯವಾಗಲೇ ಇಲ್ಲ. ಅತ್ಯಂತ ನಿರ್ಣಾಯಕ ಸಂದರ್ಭದಲ್ಲಿ ಏನಾದರೊಂದು ಯಾವಾಗಲೂ ಸಂಭವಿಸುತ್ತಿರುತ್ತದೆ. “ಹಳೆಯ ಒಡಂಬಡಿಕೆ” ಎಲ್ಲಿಯೋ ಒಂದು ಕಡೆ ಹೀಗೆ ಹೇಳುತ್ತದೆ: “ಯಾವ ದೇಶ ತನ್ನ ದೂರದೃಷ್ಟಿಯನ್ನು ಕಳೆದುಕೊಳ್ಳುತ್ತದೋ, ಅದು ನಾಶವಾಗಿ ಬಿಡುತ್ತದೆ” ಎಂದು. ಗಾಂದಿಯವರಲ್ಲಿನ ದೋಷಗಳಲ್ಲಿ ನಾನು ಗಮನಿಸಿರುವ ಒಂದು ದೋಷವೆಂದರೆ, ಅವರಿಗೆ ದೂರದೃಷ್ಟಿ ಸಂಪೂರ್ಣವಾಗಿ ಇಲ್ಲದೇ ಇರುವುದು. ಈ ಪಾಕಿಸ್ತಾನದ ಬಗ್ಗೆ ಕಾಂಗ್ರೆಸ್ಸಿನ ಸ್ಥಾಪಕರು ಏನು ಚಿಂತಿಸುತ್ತಾರೆಂದು ನನಗೆ ಕೌತುಕವಾಗಿದೆ. ಮೊಟ್ಟಮೊದಲ ಬಾರಿಗೆ ೧೮೫೫ರಲ್ಲಿ ಸಭೆ ಸೇರಿದ ಇವರು ಭಾರತಕ್ಕೆ “ಹೋಂ ರೂಲ್” ಅನ್ನು ಪಡೆದು ಕೊಳ್ಳುವುದಕ್ಕಾಗಿ ಸಭೆ ಸೇರಿದರು. ಹಂತ ಹಂತವಾಗಿ, ಅವರ ಚಳುವಳಿ, ಈ ರೀತಿಯಲ್ಲಿ ಇಂಥ ಚೈತನ್ಯದಲ್ಲಿ ನಡೆಸಿಕೊಂಡು ಹೋಗಲಾಗುತ್ತದೆಯೆಂದು ಭಾವಿಸಿರಲಿಲ್ಲ; ಅದು ಯಾವಾಗಲೆಂದರೆ ಇನ್ನೇನು ಭಾರತ ಅಂತಿಮ ಗುರಿಯನ್ನು ಮುಟ್ಟಿಬಿಡುತ್ತದೆ ಎನ್ನುವಾಗ ಭಾರತವನ್ನು ಎರಡು ತುಂಡಾಗಿ ಕತ್ತರಿಸಲಾಗುತ್ತದೆ ಎನ್ನುವಾಗ. ಕಾಂಗ್ರೆಸ್ ಅನ್ನು ಪ್ರಾರಂಭಿಸಿದ ವೃದ್ಧರು ಬಹಳ ನಿಧಾನಗತಿಯವರು ಎಂದು ಕೇಳಲ್ಪಟ್ಟಿದ್ದೇನೆ. ಅವರುಗಳು ಕೇವಲ ಆರಾಮ ಕುರ್ಚಿಯ ವೇದಾಂತಿಗಳಾಗಿದ್ದು, ವೈಸ್‌ರಾಯ್ ಅವರಿಗೆ ಕಾಗದಗಳನ್ನು ಬರೆಯುವುದನ್ನು ಬಿಟ್ಟು ಇನ್ನೇನನ್ನೂ ಮಾಡುತ್ತಿರಲಿಲ್ಲ. ಅವರ ಈ ಕಾರ್ಯವಿಧಾನಗಳು ಈ ದೇಶಕ್ಕೆ ಸರಿಹೊಂದುತ್ತಿರಲಿಲ್ಲವೆಂದು ಹೇಳಲಾಗುತ್ತಿತ್ತು. ಫಲಿತಾಂಶವೆಂದರೆ, ಅತ್ಯಂತ ಚಲನಶೀಲ ಚಳುವಳಿಯನ್ನು ಗಾಂಧಿಯಂಥವರ ಆಶ್ರಯದಲ್ಲಿ ಪ್ರಾರಂಭಿಸಲಾಯಿತು. ಸಾಮೂಹಿಕ ಚಳುವಳಿ ಮತ್ತು ಆಂದೋಲನವನ್ನು ನಡೆಸಲಾಯಿತು. ನಮಗೆ ಎಲ್ಲವೂ ಇದ್ದವು–ಬೆಳಕು ಮತ್ತು ದೂರದೃಷ್ಟಿಯನ್ನು ಬಿಟ್ಟು. ಮಿ. ಗಾಂಧಿಯವರನ್ನು ಬಹಳ ಮಟ್ಟಿಗೆ ಅಬ್ರಹಾಂ ಲಿಂಕನ್ನನ ಹಾಗೆ ಎಂದು ಹೋಲಿಸುತ್ತಾರೆ. ಗುಲಾಮಗಿರಿಯ ಬಗ್ಗೆ ಅಬ್ರಹಾಂ ಲಿಂಕನ್ನನ ಧೋರಣೆಯನ್ನೇ ಭಾರತದಲ್ಲಿ ಗಾಂಧಿಯವರು ತಾಳಿದರು. ಅಬ್ರಹಾಂ ಲಿಂಕನ್ ಅವರು ಒಕ್ಕೂಟಕ್ಕೆ ಭಾವನಾತ್ಮಕವಾಗಿ ತಮ್ಮನ್ನು ಸಮರ್ಪಣೆ

ಮಾಡಿಕೊಂಡಿದ್ದರು. ಅವರು ಗುಲಾಮಿ ಪದ್ಧತಿಯನ್ನು ಎತ್ತಿ ಹಿಡಿದಿದ್ದವರು. ಆದರೆ, ಅದೇ ಅಬ್ರಹಾಂ ಲಿಂಕನ್ ೧೮೬೩ರಲ್ಲಿ ಗುಲಾಮರ ಮುಕ್ತಿಯ ಘೋಷಣೆಯನ್ನು ಹೊರಡಿಸಿದರು. ಉತ್ತರದ ಸೈನ್ಯಗಳಿಗೆ ನೀಗ್ರೋಗಳ ಬೆಂಬಲವನ್ನು ಪಡೆಯಲು ಅವರು ಹಾಗೆ ಮಾಡಬೇಕಾಗಿತ್ತು. ಮಿ. ಗಾಂಧಿಯವರ ಧೋರಣೆ ಸಹ ಹೆಚ್ಚು ಕಡಿಮೆ ಅದೇ ಆಗಿತ್ತು. ಅವರು ಯಾವಾಗಲೂ ಹೇಳುತ್ತಿದ್ದದ್ದು "ನನಗೆ ಸ್ವಾತಂತ್ರ್ಯ ಬೇಕು, ನನಗೆ ಚಾತುರ್ವರ್ಣ ಧರ್ಮವೂ ಬೇಕು" ಎಂದು. ಉದ್ದಕ್ಕೂ ಗಾಂಧಿಯವರು ಸೋತಿದ್ದಕ್ಕೆ ಕಾರಣವೆಂದರೆ ಅವರ ಈ ಧೋರಣೆಯೇ ಮಿ. ಗಾಂಧಿಯವರು ತಮ್ಮ ತಪ್ಪನ್ನು ಅರಿತುಕೊಳ್ಳುತ್ತಾರೆ ಎಂದು ನನ್ನ ಆಸೆ, ನನ್ನ ನಂಬಿಕೆ.

ಪ್ರತಿಯೊಬ್ಬರೂ ದೇಶದ ಸ್ವಾತಂತ್ರ್ಯವನ್ನು ಬಯಸುತ್ತಿದ್ದರು. ಆದರೆ ಅವರು ಅರಿತುಕೊಳ್ಳದೇ ಇದ್ದುದ್ದು ಏನೆಂದರೆ ರಾಜಕೀಯದಲ್ಲಿ ದರ್ಜೆಗೆ ತಕ್ಕಂತ ಸಮಾನತೆ ಇದೆ ಎಂದು. ಅವರಿಗೆ ಅಲ್ಪ ಸಂಖ್ಯಾತರ ಸಮಾನತೆ, ಮುಕ್ತಿ ಮತ್ತು ಸ್ವಾತಂತ್ರ್ಯ ಬೇಕಾಗಿತ್ತು. ಯಾವನಾದರು ಭಾರತೀಯನು ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ರಕ್ಷಣೋಪಾಯಗಳನ್ನು ಕಲ್ಪಿಸುವುದನ್ನು ವಿರೋಧಿಸುತ್ತಾನೋ ಅವನು ಪ್ರಜಾಪ್ರಭುತ್ವವಾದಿಯಲ್ಲ. ಅವನು ದೇಶದ ಶತೃ. ಈ ದೇಶಕ್ಕೆ ಸಿಕ್ಕಿರುವ ಅತ್ಯಂತ ಸೊಗಸಾದ ಅವಕಾಶವೆಂದರೆ ಇದೇನೇ. ಅನೇಕ ಸ್ನೇಹಿತರುಗಳು ನಂಬಿರುವುದೇನೆಂದರೆ ಯುದ್ಧಾ ನಂತರ ಭಾರತದ ವಿಭಜನೆ ಬಗ್ಗೆ ಬ್ರಿಟಿಷ್ ಸರ್ಕಾರ ಯಾವುದೇ ಸ್ಪಷ್ಟವಾದ ಘೋಷಣೆಯನ್ನು ಮಾಡದೇ ಇರುವುದರಿಂದ, ಏನಾಗುತ್ತದೆಯೋ ಎಂದು ಅವರಿಗೆ ಭಯವಿದೆ. ಯುದ್ಧಾನಂತರ ಭಾರತದ ಭವಿಷ್ಯದ ಬಗ್ಗೆ ಅವರಿಗೆ ಅಂಜಿಕೆ ಇರಲಿಲ್ಲ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವನಾಗಿದ್ದರೂ, ಆ ಒಬ್ಬನೇ ವ್ಯಕ್ತಿಯ ಮೇಲೆ ಭಾರತದ ಹಣೆಬರಹ ಅವಲಂಬಿತವಾಗುತ್ತದೆ ಎಂದು ಅವರು ನಂಬಿರಲಿಲ್ಲ. ಈ ದೇಶದ ಭವಿಷ್ಯವನ್ನು ರೂಪಿಸುವವರು ನಾವೇ. ನಮ್ಮ ನಮ್ಮಲ್ಲಿ ನಾವು ಎಷ್ಟರ ಮಟ್ಟಿಗೆ ಗಟ್ಟಿತನವನ್ನು ಬೆಳೆಸಿಕೊಳ್ಳುತ್ತೇವೆ ಎಂಬುದರ ಮೇಲೆ ಎಲ್ಲವೂ ಅವಲಂಬಿತವಾಗಿದೆ. ಯಾವ ರೀತಿಯಲ್ಲಿ ನಾವು ನಮ್ಮ ಆಂತರಿಕ ವ್ಯವಹಾರಗಳನ್ನು, ಒಳ ಜಗಳಗಳನ್ನು ನಿಭಾಯಿಸಿಕೊಳ್ಳುತ್ತೇವೆಂಬುದರ ಮೇಲೆ, ಈ ದೇಶದಲ್ಲಿರುವ ವಿವಿಧ ಭಾಗಗಳು ಮತ್ತು ಸಮುದಾಯಗಳ ಪ್ರತಿನಿಧಿಗಳೆಲ್ಲರೂ ಸಹಿ ಮಾಡಬಹುದಾದ ಸಂವಿಧಾನವೊಂದನ್ನು ನಾವು ತಯಾರಿಸಬಲ್ಲೆವು. ನಾವು ಮಿ. ಗಾಂಧಿಯವರನ್ನು ಪ್ರಜೆಗಳ ಒಬ್ಬನೇ ಒಬ್ಬ ಪ್ರತಿನಿಧಿಯನ್ನಾಗಿ ಪ್ರಧಾನ ಮಂತ್ರಿಯವರ ಬಳಿಗೆ ಅಥವಾ ಯಾರ ಬಳಿಗೇ ಆಗಲೀ ಕಳುಹಿಸಬಹುದು. ಅದೆಲ್ಲಾ ಅವಲಂಬಿತವಾಗಿರುವುದು ಮಿ. ಗಾಂಧಿಯವರಿಗೆ ಯಾವ ಆಲೋಚನೆಗಳು ಹೊಳೆಯುತ್ತವೆಯೋ ಎಂಬುದರ ಮೇಲೆ.

## ೯೭
# ಪದವಿಗಳಲ್ಲಿ ಧನಾತ್ಮಕವಾದ ಜ್ಞಾನವಿರುತ್ತದೆಯೇ ಎಂದು ವಿದ್ಯಾರ್ಥಿಗಳು ನೋಡಲೇಬೇಕು

ಪ್ರಸ್ತುತ ಪೀಳಿಗೆಯ ವಿದ್ಯಾರ್ಥಿಗಳ ಪ್ರಪಂಚದ ಶೈಕ್ಷಣಿಕ ಸಾಧನೆಗಳಲ್ಲಿ ಗುರುತಿಸಬಹುದಾದ ಅವನತಿಯಾಗಿದೆ ಎಂಬ ಅಭಿಪ್ರಾಯವನ್ನು ಡಾ. ಬಿ.ಆರ್.ಅಂಬೇಡ್ಕರ್ ಅವರು ೨ನೇ ಜನವರಿ ೧೯೪೫ ಮಂಗಳವಾರ ಅಪರಾಹ್ನ ಕಲ್ಕತ್ತಾದ ಸ್ಟೂಡೆಂಟ್ಸ್ ಹಾಲ್‌ನಲ್ಲಿ ನಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು. ಸೇಂಟ್ ಪಾಲ್ಸ್ ಕಾಲೇಜಿನ ಪ್ರೊ. ಜೆ.ಸಿ.ಮಂಡಲ್ ಅವರು ಅಧ್ಯಕ್ಷತೆ ವಹಿಸಿದ್ದರು.

ತಮ್ಮ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರು ಅಖಿಲ ಭಾರತ ವಿದ್ಯಾರ್ಥಿಗಳ ಫೆಡರೇಷನ್ ಅನ್ನು ಕಟುವಾಗಿ ಟೀಕಿಸಿದರು; ಅದರೊಂದಿಗೆ ಸಂಪರ್ಕವನ್ನು ಇಟ್ಟು ಕೊಳ್ಳಬೇಡಿ ಎಂದು ವಿದ್ಯಾರ್ಥಿಗಳಿಗೆ ಹೇಳಿ, ನೀವೇ ಒಂದು ಪರಿಶಿಷ್ಟ ಜಾತಿಗಳ ಅಖಿಲ ಭಾರತ ಸಂಘವನ್ನು ಕಟ್ಟಿಕೊಳ್ಳಿ ಎಂದು ಹೇಳಿದರು.

ಅಖಿಲ ಭಾರತ ವಿದ್ಯಾರ್ಥಿಗಳ ಫೆಡರೇಷನ್ ಒಂದು ಹೆಸರುವಾಸಿಯದ ಸಂಸ್ಥೆಯಾಗಿದ್ದು, ಅದರ ಚಟುವಟಿಕೆಗಳ ಬಗ್ಗೆ ನಾನು ಅನೇಕ ಬಾರಿ ಓದಿದ್ದೇನೆ ಎಂದು ಹೇಳಿದರು. ಅಲ್ಲಿಯೂ ಸಹ ಮುಸ್ಲಿಮ್ ವಿದ್ಯಾರ್ಥಿಗಳು ಯಾವುದೋ ಕಾರಣಕ್ಕಾಗಿ ಒಂದು ಪ್ರತ್ಯೇಕವಾದ ಸಂಘವನ್ನು ಕಟ್ಟಿಕೊಂಡರು. ಕಾರಣ ಅಂಬೇಡ್ಕರ್ ಅವರಿಗೆ ಗೊತ್ತಾಗಲಿಲ್ಲ, ಆದರೆ ಮುಸ್ಲಿಮ್ ವಿದ್ಯಾರ್ಥಿಗಳು ತಮ್ಮದೇ ಸಂಘವನ್ನು ಸ್ಥಾಪಿಸಬೇಕಾದ ಅವಶ್ಯಕತೆಯನ್ನು ಕಂಡುಕೊಂಡರು.

ಭಾಷಣಕಾರರು ತಮ್ಮ ಮಾತನ್ನು ಮುಂದುವರಿಸುತ್ತಾ ಹೇಳಿದ್ದೇನೆಂದರೆ, ರಾಜಕೀಯ ಎನ್ನುವುದು ತಮ್ಮ ಎಂದೂ ಎಂದಿನ ಹವ್ಯಾಸ ಅಲ್ಲವೆಂದು ಅನೇಕರಿಗೆ ಪ್ರಾಯಶಃ ಗೊತ್ತಿರಲಿಲ್ಲವೆಂದು ಹೇಳಿದರು; ರಾಜಕೀಯಕ್ಕೆ ಅವರನ್ನು ದಬ್ಬಲಾಗಿತ್ತು. ತಮಗೆ ಸಂತಸ ತಂದುಕೊಡುವ ಕ್ಷೇತ್ರವೆಂದರೆ ಶೈಕ್ಷಣಿಕ ಕ್ಷೇತ್ರ, ತಮ್ಮ ಇಲ್ಲಿನ ಅವಧಿ ಮುಗಿದ ಮೇಲೆ ಅದೇ ಕ್ಷೇತ್ರಕ್ಕೆ ಹಿಂದಿರುಗುವ ಅಭಿಲಾಷೆ ಇದೆ ಎಂದು ಹೇಳಿದರು. ಅವರು ಅರ್ಥಶಾಸ್ತ್ರ ಮತ್ತು ಕಾನೂನಿನ ವಿಷಯಗಳ ಪ್ರಾಚಾರ್ಯರಾಗಿದ್ದು, ಹಾಗಾಗಿ ವಿದ್ಯಾರ್ಥಿ ಪ್ರಪಂಚದ ನಿಕಟ ಅನುಭವದಿಂದ, ಅಖಿಲ ಭಾರತ, ವಿದ್ಯಾರ್ಥಿಗಳ ಫೆಡರೇಷನ್ನಿನ ಮೇಲೆ ಕೆಲವು ತೀಕ್ಷ್ಣವಾದ ಟೀಕೆಗಳನ್ನು ಮಾಡಿದ್ದರೆ, ಅದಕ್ಕಾಗಿ ಕ್ಷಮಿಸಬೇಕೆಂದು ಕೇಳಿದರು. ಈ ದಿನಗಳಲ್ಲಿ ಭಾರತದಲ್ಲಿನ ಶಿಕ್ಷಣ ಬಹಳ ಮಟ್ಟಿಗೆ ಅವನತಿಯತ್ತ ಸಾಗಿದೆಯೆಂದು ಹೇಳುವುದುಕ್ಕೆ ಡಾ. ಅಂಬೇಡ್ಕರ್ ಅವರಿಗೆ ಹಿಂಜರಿಕೆಯೇನೂ ಇಲ್ಲ; ತಮ್ಮ ವೃತ್ತಿಪರ ಜೀವನ ಪಥದಲ್ಲಿ ತಾವು ಭೇಟಿ ಮಾಡಿದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಗಳ ಜೊಚ್ಚಲ ಉತ್ಪಾದನೆಗಳಿಗೆ ಹೋಲಿಸುತ್ತಾ, ವಿದ್ಯಾರ್ಥಿ ಪ್ರಪಂಚದ ಶೈಕ್ಷಣಿಕ ಸಾಧನೆಗಳಲ್ಲಿ ಗಂಭೀರವಾದ ಕುಸಿತವಾಗಿದೆ ಎಂದು ಹೇಳುವುದಕ್ಕೆ ತಮಗೆ ಹಿಂಜರಿಕೆಯೇನೂ ಇಲ್ಲ ಎಂದು ಹೇಳಿದರು. ಈ ಸಂಬಂಧದಲ್ಲಿ, ನ್ಯಾ. ಮೂ. ರಾನಡೆ, ಬಾಲಗಂಗಾಧರ ತಿಲಕ್, ಗೋಖಲೆ, ಸರ್.ಸುರೇಂದ್ರನಾಥ್ ಮತ್ತು ಸರ್ ಶಿವಸ್ವಾಮಿ ಅಯ್ಯರ್ ಅವರುಗಳ ಹೆಸರುಗಳನ್ನು ಪ್ರಸ್ತಾಪ ಮಾಡುತ್ತಾ, ಡಾ. ಅಂಬೇಡ್ಕರ್ ಹೀಗೆ ಹೇಳಿದರು: ಈ ಪೀಳಿಗೆಯ ನಿಮ್ಮಲ್ಲಿ ಯಾರೊಬ್ಬರೂ ಈ ಜನಗಳ ಮೊಣಕಾಲಿನಷ್ಟು ಎತ್ತರಕ್ಕೂ ಮುಟ್ಟುವುದಿಲ್ಲವೆಂದು

ಹೇಳಿದರೆ ನನ್ನನ್ನು ಔದಾರ್ಯವಿಲ್ಲದವನು ಮತ್ತು ಬಹಳಷ್ಟು ಸೇಡಿನ ಬುದ್ಧಿಯವನು ಎಂದು ಯಾರೂ ಪರಿಗಣಿಸುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಹಿಂದಿಗಿಂತಲೂ ಈಗ ಸರ್ಕಾರ ಶಿಕ್ಷಣದ ಬಾಬತ್ತು ಹೆಚ್ಚಿನ ಮೊತ್ತವನ್ನು ಖರ್ಚು ಮಾಡುತ್ತಿದೆಯೆಂದು ತೋರಿಸುತ್ತಾ ಈ ಅವನತಿಗೆ ಕಾರಣಗಳಲ್ಲಿ ಒಂದು, ವಿದ್ಯಾರ್ಥಿಗಳಿಗೆ ಕಲಿಯುವುದಕ್ಕಿಂತ ಹೆಚ್ಚಾಗಿ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ಇದೆ ಎಂದು ಡಾ. ಅಂಬೇಡ್ಕರ್ ಹೇಳಿದರು. ಅವರ ಪ್ರಕಾರ ಶಿಕ್ಷಣಕ್ಕೆ ಬಡಿದಿರುವ ಬೇನೆಯೇ ಅದಾಗಿದೆ ಎಂದರು. ರಾಜಕೀಯದ ಒಂದಷ್ಟು ಗುಂಪುಗಳು ರಾಜಕೀಯವನ್ನು ವಿದ್ಯಾರ್ಥಿಗಳ ಚಟುವಟಿಕೆಯ ಕ್ರಮಬದ್ಧವಾದ ಪರಿಪಾಠಗಳು ಎಂಬ ಹೇಳಿಕೆಗೆ ಖಂಡಿತವಾಗಿಯೂ ತಮಗೆ ಭಿನ್ನಾಭಿಪ್ರಾಯವಿದೆ ಎಂದು ಹೇಳಿದರು. ಅಖಿಲ ಭಾರತ ವಿದ್ಯಾರ್ಥಿಗಳ ಫೆಡರೇಷನ್ನಿನ ಚಟುವಟಿಕೆಗಳನ್ನು ಟೀಕಿಸುತ್ತಾ, ಪತ್ರಿಕೆಗಳಲ್ಲಿ ಅಷ್ಟೊಂದು ಸದ್ದು ಗದ್ದಲ ಮಾಡುತ್ತಿರುವ ಚರ್ಚೆಗಳೆಲ್ಲವೂ, ಕಾಂಗ್ರೆಸ್‌ನವರ ನಿರ್ಣಯಗಳನ್ನು ಬಹಳ ಹಳಸಲು ರೀತಿಯಲ್ಲಿ ಅನುಮೋದನೆ ಮಾಡುತ್ತಿರುವುದಲ್ಲದೆ ಬೇರೇನೂ ಅಲ್ಲ ಎಂದರು. ಅವರ ಚರ್ಚೆಯಲ್ಲಿ ಯಾವ ಸ್ವಂತಿಕೆಯನ್ನು ಕಾಣುತ್ತಿಲ್ಲವೆಂದು ಹೇಳಿದರು. ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳು ಏನು ಮಾಡಬೇಕೆಂಬುದರ ಬಗ್ಗೆ ತಮ್ಮ ಸಲಹೆಯನ್ನು ಕೊಡುತ್ತಾ, ಅವರು ಪ್ರತ್ಯೇಕವಾದ ಸಂಘಟನೆಯನ್ನು ಮಾಡಿಕೊಳ್ಳಬೇಕೆಂದು ಬುದ್ಧಿವಾದ ಹೇಳಿದರು; ಕಾರಣ ಅವರುಗಳು ರಾಜಕೀಯದಿಂದ ಹೊರತಾಗಿರಬೇಕೆಂಬುದೆ ತಮ್ಮ ಆಶಯವೆಂದರೆ. ವಿದ್ಯಾರ್ಥಿಗಳು ಅಖಿಲ ಭಾರತ ಫೆಡರೇಷನ್ನಿನ ಸಹವಾಸದಿಂದ ದೂರವಿರಬೇಕೆಂದೂ ಮತ್ತು ವಿದ್ಯಾರ್ಥಿಯೊಬ್ಬ ತನ್ನ ಜೀವನಕ್ಕೆ ಪ್ರಸಕ್ತವಾಗಿರುವ ಸಮಸ್ಯೆಗಳ ಬಗ್ಗೆ ಗಮನಕೊಡಬೇಕೆಂದು ಹೇಳಿದರು. ನಿಮ್ಮ ಶೈಕ್ಷಣಿಕ ಜೀವನದಲ್ಲಿ ನಿಮಗೆ ಎದುರಾಗುವ ಸಂಕಷ್ಟಗಳ ಬಗ್ಗೆ ಚಿಂತಿಸಬೇಕೆಂದೂ ಸಹ ಹೇಳಿದರು. ಈ ಸಂಬಂಧ ಅವರು ಹೇಳಿದ್ದೇನೆಂದರೆ, ಖಾಸಗಿ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿಗಳ ಆರ್ಥಿಕ ಅಥವ ಸಾಮಾಜಿಕ ಕಷ್ಟಗಳಿಗೆ ಯಾವ ರಿಯಾಯಿತಿಯನ್ನು ತೋರಿಸುತ್ತಿಲ್ಲವೆಂದು ಹೇಳಿದರು. ಅವರ ಕಾಲೇಜಿನ ಪ್ರವೇಶಕ್ಕೆ ಯಾವ ವಿಶೇಷ ಉಪಬಂಧವನ್ನೂ, ಅವರ ವಿದ್ಯಾರ್ಥಿ ವೇತನಕ್ಕೆ ಯಾವ ವಿಶೇಷ ಉಪಬಂಧವನ್ನೂ ಮಾಡಿಲ್ಲವೆಂದೂ ಹೇಳಿದರು. ಎಲ್ಲ ವಿದ್ಯಾರ್ಥಿಗಳನ್ನೂ ಅವರು ಬಡವರಿರಲಿ, ಬಲ್ಲಿದರಿರಲಿ; ಲಕ್ಷಾಧಿಪತಿಗಳಿರಲಿ, ಭಿಕ್ಷುಕರಿರಲಿ ಎಲ್ಲರನ್ನೂ ಒಂದೇ ಅಳತೆಗೋಲಿನಲ್ಲಿ ಅಳೆಯಲಾಗುತ್ತಿದೆ ಎಂದು ಹೇಳಿದರು.

ಪರಿಶಿಷ್ಟ ಜಾತಿಗಳ ಸಮುದಾಯಗಳ ಅಖಿಲ ಭಾರತ ವಿದ್ಯಾರ್ಥಿಗಳ ಒಂದು ಸಂಘವಿದ್ದಿದ್ದರೆ, ಅವರ ಕಷ್ಟಗಳ ಬಗ್ಗೆ ಅವಶ್ಯಕವಾದ ಮಾಹಿತಿಗಳನ್ನು ಸಂಗ್ರಹಿಸಿದ್ದರೆ, ಆಗ ಅವರು ಸರ್ಕಾರವನ್ನಾಗಲೀ ಅಥವ ಆಡಳಿತ ಮಾಡುವವರನ್ನಾಗಲೀ, ಈ ವಿಷಯಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಕಲ್ಪಿಸಿಕೊಡುವಂತೆ ಒತ್ತಾಯ ಮಾಡಬಹುದಾಗಿತ್ತು. ಡಾ. ಅಂಬೇಡ್ಕರ್ ಅವರು ವಿದ್ಯಾರ್ಥಿಗಳಿಗೆ ಕೊಟ್ಟ ಸಲಹೆ ಏನೆಂದರೆ, ಪದವಿಯನ್ನು ಪಡೆದುಕೊಳ್ಳುವುದು ಮಾತ್ರವಲ್ಲ, ಆ ಪದವಿ ಕೆಲವು ಧನಾತ್ಮಕವಾದ ಜ್ಞಾನವನ್ನು ಅಥವಾ ಅದರೊಂದಿಗೆ ಏನಾದರೊಂದನ್ನು ಸಾಧಿಸುವಂಥದ್ದಾಗಿರಬೇಕು ಮತ್ತು ಅವರ ವಿದ್ಯಾರ್ಹತೆಗಳು "ಚಿನ್ನ"ವೆಂದು ಕರೆಯಲ್ಪಡುವಂಥದ್ದಾಗಿರಬೇಕು ಎಂದರು. ಶಿಕ್ಷಣವನ್ನು ಗಂಭೀರವಾದ ವಿಷಯವೆಂದು ಪರಿಗಣಿಸಬೇಕಲ್ಲದೆ ಚಹಾ ಸಮಯದ ಸುಖಾನುಭವ ಅಲ್ಲ ಎಂದರು.

ಅಖಿಲ ಭಾರತ ಸಂಘವನ್ನು ಕಟ್ಟಬೇಕೆಂದು ಹೇಳುತ್ತಾ ಡಾ. ಅಂಬೇಡ್ಕರ್ ಅವರು ವಿದ್ಯಾರ್ಥಿಗಳಲ್ಲಿ ಇನ್ನೂ ಅಖಿಲ ಭಾರತ ಪ್ರಜ್ಞೆಯಿಲ್ಲ. ಅವರಿನ್ನೂ ಪ್ರಾಂತೀಯ ಮಟ್ಟದಲ್ಲೇ ಜೀವಿಸುತ್ತಿದ್ದಾರೆ ಎಂದರು.

# ೯೮

# ಈ ದೇಶದ ದಾರಿದ್ರ್ಯ ಪೀಡಿತ ಲಕ್ಷಾಂತರ ಮಂದಿಯ ಅಭ್ಯುಯದಕ್ಕಾಗಿ ಒಂದು ಆಡಳಿತ ವ್ಯವಸ್ಥೆಗೆ ಅಸ್ತಿಭಾರವನ್ನು ಹಾಕೋಣ

ಕಲ್ಕತ್ತಾದ ಬೆಂಗಾಲ್ ಸೆಕ್ರೆಟೇರಿಯಟ್‌ನಲ್ಲಿ ನಡೆದ ಸಮ್ಮೇಳನದಲ್ಲಿ ೩ನೇ ಜನವರಿ ೧೯೪೫ರಂದು ನಡೆದ ಸಮ್ಮೇಳನದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಒಂದು ಭಾಷಣವನ್ನು ಮಾಡಿದರು:

ಅವರು ಹೇಳಿದ್ದು:

ಭಾರತ ಸರ್ಕಾರ ದೇಶದಲ್ಲಿನ ಜಲಸಂಪನ್ಮೂಲಗಳನ್ನು ಅತ್ಯುತ್ತಮವಾದ ಉಪಯೋಗಕ್ಕೆ ಬರುವ ಹಾಗೆ ಒಂದು ನೀತಿಯನ್ನು ವಿಕಸನ ಮಾಡಲು ಉದ್ದೇಶಿಸಿದೆ. ಇದರಿಂದಾಗಿ ಇತರ ದೇಶಗಳಲ್ಲಿ ಮಾಡುತ್ತಿರುವ ಹಾಗೆ ಅದೇ ಉದ್ದೇಶಗಳಿಗಾಗಿ ಅವುಗಳನ್ನು ತೊಡಗಿಸಿಕೊಳ್ಳಲು ಅನುವಾಗುತ್ತದೆ. ಭಾರತ ಸರ್ಕಾರ ಮನಸ್ಸಿನಲ್ಲಿ ಇಟ್ಟುಕೊಂಡಿರುವುದು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿನ ಟೆನೆಸ್ಸೀ ಕಣಿವೆ ಯೋಜನೆ. ಅವರು ಆ ಯೋಜನೆಯನ್ನು ಅಧ್ಯಯನ ಮಾಡುತ್ತಲಿದ್ದು ಅದೇ ರೀತಿ ಏನಾದರೊಂದನ್ನು ಭಾರತದಲ್ಲಿಯೂ ಮಾಡಬಹುದಾಗಿದೆ ಎಂದು ಭಾವಿಸುತ್ತಿದ್ದಾರೆ. ಆದರೆ ಇದಕ್ಕೆ ಪ್ರಾಂತ್ಯಗಳೆಲ್ಲಾ ತಮ್ಮ ಸಹಕಾರವನ್ನು ಕೊಡಬೇಕು ಮತ್ತು ಅವರ ಮುನ್ನಡೆ ಮತ್ತು ಪುರೋಭಿವೃದ್ಧಿಯ ದಾರಿಯಲ್ಲಿ ಇರುವ ಪ್ರಾಂತೀಯ ತಡೆಗೋಡೆಗಳನ್ನು ದಾಟಿಕೊಂಡು ಬರಬೇಕಾಗಿದೆ ಎಂದರು. ದೇಶದಲ್ಲಿರುವ ಜಲಮಾರ್ಗಗಳನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಳ್ಳಲು ಪ್ರಾಥಮಿಕ ಹೆಜ್ಜೆಯನ್ನು ಇಡಲು, ಭಾರತ ಸರ್ಕಾರ ಒಂದು ಕೇಂದ್ರೀಯ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದನ್ನು ಕೇಂದ್ರಿಯ ತಾಂತ್ರಿಕ ಶಕ್ತಿ ಮಂಡಲಿ ಎಂದು ಹೆಸರಿಸಿದ್ದಾರೆ; ಇದಲ್ಲದೆ, ಜಲಮಾರ್ಗಗಳ ನೀರಾವರಿ ಮತ್ತು ಜಲಯಾನ ಆಯೋಗವನ್ನೂ ಸಹ ಸ್ಥಾಪಿಸಲು ಆಲೋಚಿಸುತ್ತಿದ್ದಾರೆ. ಈ ಎರಡೂ ಸಂಸ್ಥೆಗಳನ್ನು ಸ್ಥಾಪಿಸಿರುವ ಉದ್ದೇಶ ಪ್ರಾಂತ್ಯಗಳು ತಮ್ಮ ಜಲ ಸಂಪನ್ಮೂಲಗಳನ್ನು ಉತ್ತಮವಾಗಿ ಹೇಗೆ ಉಪಯೋಗಿಸಿಕೊಳ್ಳಬಹುದೆಂಬುದರ ಬಗ್ಗೆ ಸಲಹೆ ಕೊಡಲು ಮತ್ತು ನೀರಾವರಿಯಲ್ಲದೆ ಇತರ ಉದ್ದೇಶಗಳಿಗಾಗಿಯೂ ಒಂದು ಯೋಜನೆಯನ್ನು ರೂಪಿಸಬಹುದು ಎಂದೂ ಸಹ ಆಗಿದೆ. ಆ ನಿಟ್ಟಿನಲ್ಲಿ ದಾಮೋದರ್ ಕಣಿವೆ ಯೋಜನೆ ಮೊದಲ ಯೋಜನೆಯಾಗಿದೆ. ಅದೊಂದು ವಿವಿಧೋದ್ದೇಶ ಯೋಜನೆಯಾಗಲಿದೆ. ಅದರ ಉದ್ದೇಶ ಪ್ರವಾಹ ನಿಯಂತ್ರಣ ಮಾತ್ರವಲ್ಲ, ಇತರ ಉದ್ದೇಶಗಳೂ ಅಂದರೆ, ನೀರಾವರಿ, ಜಲಯಾನ ಮತ್ತು ವಿದ್ಯುತ್ ಉತ್ಪಾದನೆಯೂ ಸಹ ಆಗಿದೆ. ದಾಮೋದರ ಕಣಿವೆ ಯೋಜನೆ ಪೂರ್ಣಗೊಂಡ ಮೇಲೆ, ಅದರ ಉಸ್ತುವಾರಿಯನ್ನು ನೋಡಿಕೊಳ್ಳುವ ಪ್ರಾಧಿಕಾರ, ಹೆಚ್ಚು ಕಡಿಮೆ ಟೆನೆಸ್ಸಿ ಕಣಿವೆಯ ಪ್ರಾಧಿಕಾರದ ಮಾದರಿಯಲ್ಲಿಯೇ ಇರುತ್ತದೆ. ಅದೊಂದು ಸರ್ಕಾರಿ ಉದ್ಯಮವಾಗಿದ್ದು, ಅದರಲ್ಲಿ ಕೇಂದ್ರ ಮತ್ತು ಬಂಗಾಳ ಹಾಗೂ ಬಿಹಾರ ಪ್ರಾಂತ್ಯಗಳು ಪಾಲುಗಾರರಾಗಿರುತ್ತವೆ. ನನ್ನ ಆಸೆಯೆಂದರೆ ಈ ಸಮ್ಮೇಳನ ಬೇರೆಲ್ಲಾ ಅಭಿಪ್ರಾಯಗಳನ್ನು ಒತ್ತಟ್ಟಿಗಿಟ್ಟು ತನ್ನ ಕರ್ತವ್ಯದ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲಿ; ಅತ್ಯುತ್ತಮ ಪರಿಹಾರ ಯಾವುದೆಂದು ಒಮ್ಮತಕ್ಕೆ ಬಂದು, ಜಲಮಾರ್ಗಗಳ ಕುರಿತು ಒಂದು ಹೊಸ ನೀತಿಯನ್ನು ಪ್ರಾರಂಭಿಸಿ, ದೇಶದಲ್ಲಿ ಬಡತನದಲ್ಲಿ ತೊಳಲಾಡುತ್ತಿರುವ ಲಕ್ಷಾಂತರ ಮಂದಿಯ ಪುರೋಭಿವೃದ್ಧಿಯನ್ನು ಸಾಧಿಸಲನುವಾಗುವ ಆಡಳಿತಕ್ಕೆ

ಬುನಾದಿಯನ್ನು ಹಾಕಲು ತೆಗೆದುಕೊಳ್ಳಬೇಕಾದದ್ದೇ ಆ ನಿರ್ಧಾರ. ಭಾರತ ಸರ್ಕಾರ ಈ ಯೋಜನೆಗೊಂದು ಆಕಾರ, ಸ್ವರೂಪ ಮತ್ತು ಜೀವವನ್ನು ಕೊಡಲು ಕಾತುರರಾಗಿದ್ದು ಹಾಗೆ ಮಾಡುವುದಕ್ಕೆ ಎಷ್ಟು ಸಮಯವೂ ವ್ಯರ್ಥವಾಗಬಾರದೆಂದು ಕಾತರರಾಗಿದ್ದಾರೆ.

# ೯೯
# ಆಧುನಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವರ್ತಮಾನ ಪತ್ರಿಕೆಗಳು ಒಳ್ಳೆಯ ಸರ್ಕಾರದ ಮೂಲಭೂತ ತಳಹದಿಯಾಗಿರುತ್ತವೆ

ವೈಸ್ರಾಯ್ ಅವರ ಕಾರ್ಯಕಾರಿ ಪರಿಷತ್ ಸದಸ್ಯರಾದ, ಗೌರವಾನ್ವಿತ ಡಾ: ಅಂಬೇಡ್ಕರ್ ಅವರು ಬುಧವಾರ, ೩೧ನೇ ಜನವರಿ ೧೯೪೫ರಂದು ಪೀಪಲ್ಸ್ ಹೆರಾಲ್ಡ ಪತ್ರಿಕೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಪತ್ರಿಕೆ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಂದು ಸಾಪ್ತಾಹಿಕ ಅಂಗವಾಗಿದ್ದು, ಅದರ ಕಚೇರಿ, ೧–೨ ಸೀತಾರಾಮ್ ಘೋಷ್ ಬೀದಿ, ಕಲ್ಕತ್ತದಲ್ಲಿ ಇದ್ದು, ಇದು ಫೆಡರೇಷನ್ನಿನ ಕಚೇರಿಯೂ ಸಹ ಆಗಿದೆ. ಗೌರವಾನ್ವಿತ ಮಿ: ಜೆ.ಎನ್.ಮಂಡಲ್ ಮತ್ತು ಮಿ: ಆರ್.ಎಲ್.ಬಿಸ್ವಾಸ್ ಅವರು ಪ್ರಾಂತೀಯ ಫೆಡರೇಷನ್ನಿನ ಪರವಾಗಿ ಡಾ: ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು.

ಬಂಗಾಳದ ಪ್ರಾಂತೀಯ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಅಧ್ಯಕ್ಷರಾದ ಗೌರವಾನ್ವಿತ ಮಿ: ಜೆ.ಎನ್. ಮಂಡಲ್ ಅವರು ಡಾ: ಅಂಬೇಡ್ಕರ್ ಅವರನ್ನು ಸ್ವಾಗತಿಸುತ್ತಾ, ಅಂಬೇಡ್ಕರ್ ಅವರು ಇಡೀ ಜೀವನವನ್ನು ಪರಿಶಿಷ್ಟ ಜಾತಿಗಳವರಿಗೆ ಮಾತ್ರವಲ್ಲ ಭಾರತದ ಎಲ್ಲಾ ಕೆಳಗೆ ತುಳಿಯಲ್ಪಟ್ಟ ಜನ ಸಮುದಾಯಕ್ಕೋಸ್ಕರವೂ ಸಮರ್ಪಿಸಿದ್ದಾರೆ ಎಂದು ಹೇಳಿದರು. ಡಾ: ಅಂಬೇಡ್ಕರ್ ಅವರ ಚಟುವಟಿಕೆಗಳ, ನಾಯಕತ್ವದ ಮತ್ತು ಮಾರ್ಗದರ್ಶನದ ಮೂಲಕ ಪರಿಶಿಷ್ಟ ಜಾತಿಗಳ ಮತ್ತು ಕೆಳಗೆ ತುಳಿಯಲ್ಪಟ್ಟ ಜನ ಸಮುದಾಯದ ವಿಮೋಚನೆ ಯಾಗುತ್ತದೆ ಎಂಬುದರ ಬಗ್ಗೆ ನನಗೆ ಭರವಸೆ ಇದೆ ಎಂದರು.

ಇದಕ್ಕೆ ಮುಂಚೆ, ಮಿ: ರಸಿಕ್ ಲಾಲ್ ಬಿಸ್ವಾಸ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ, ಈ ಸಂದರ್ಭದಲ್ಲಿ 'ಪೀಪಲ್ಸ್ ಹೆರಾಲ್ಡ್' ಪತ್ರಿಕೆ ಹೊರಬಂದಿರುವ ಕಾರಣ ಸ್ವಯಂ ವೇದ್ಯವಾಗಿದೆ ಎಂದರು. ಯುದ್ಧಾನಂತರದ ಸ್ವಲ್ಪ ಸಮಯದಲ್ಲೇ ಹೊರಹೊಮ್ಮಬೇಕಾಗಿದ್ದ ನವ ಭಾರತದಲ್ಲಿ, ಹಿಂದೂ ಸಮುದಾಯ ಪ್ರಮುಖ ಘಟಕವಾಗಿದ್ದು, ಈ ಹಿಂದೂ ಘಟಕದದಲ್ಲಿ ಪರಿಶಿಷ್ಟ ಜಾತಿಗಳವರು ನಗಣ್ಯವಾದ ಭಾಗವೇನಲ್ಲ.. ಈ ಜಾತಿಗಳಿಗೆ ಕೆಲವು ವೈಚಿತ್ರಗಳಿದ್ದವು ಅಂದರೆ ಪರಂಪರೆಗಳು, ಹಕ್ಕುಗಳು ಮತ್ತು ರೂಢಿಗಳು ಇದ್ದವು. ಇದರಿಂದಾಗಿ ಅವರನ್ನು ಇತರ ಹಿಂದೂಗಳಿಂದ ಭಿನ್ನವಾಗಿ ಗುರುತಿಸಲಾಯಿತು. ಪರಿಶಿಷ್ಟ ಜಾತಿಗಳವರಿಗೆ, ತಮ್ಮ ಈ ವೈಚಿತ್ರ್ಯಗಳನ್ನು ಗೌರವಿಸಬೇಕೆಂದು ಮತ್ತು ಶಿಕ್ಷಣದ ವಿಷಯದಲ್ಲಿ, ನೌಕರಿಯ ವಿಷಯದಲ್ಲಿ, ಮತ್ತು ಯಾವುದೇ ರಾಜ್ಯ ತನ್ನ ಪೌರರಿಗೆ ಕೊಡುವ ಎಲ್ಲಾ ಪ್ರಯೋಜನಗಳಲ್ಲಿ ತಮಗೆ ಸಲ್ಲಬೇಕಾದದ್ದನ್ನು ಕೊಡಬೇಕೆಂದು ಆಗ್ರಹ ಮಾಡುವ ಹಕ್ಕು ಇದೆಯೆಂದು ಹೇಳಿದರು. ಆದುದರಿಂದ ಈ ಪತ್ರಿಕೆ ಪರಿಶಿಷ್ಟ ಜಾತಿಗಳವರ ಅಖಿಲ ಭಾರತ ಅಂಗವಾಗಿ ಅಸ್ತಿತ್ವಕ್ಕೆ ಬರುತ್ತಿದೆ; ಇದು ಅವರ ಭಾವನೆಗಳನ್ನು ಮತ್ತು ಅವರ ನ್ಯಾಯಬದ್ಧವಾದ ಆಕಾಂಕ್ಷೆಗಳನ್ನು, ಅವರ ಅಳಲುಗಳನ್ನು, ಅವರ ಆಗ್ರಹ ಪೂರಿತ ಬೇಡಿಕೆಗಳನ್ನು ಅಲ್ಲದೆ ಭಾರತ ಎದುರಿಸುತ್ತಿರುವ ಈದಿನದ ಸಮಸ್ಯೆಗಳ ಮೇಲೆ ಅದರ ಅಭಿಪ್ರಾಯವನ್ನು, ಮತ್ತು ಭವಿಷ್ಯ ಭಾರತದ ರಾಜ್ಯದ ರಚನೆಯನ್ನು ಇವುಗಳೆಲ್ಲವನ್ನೂ ಧ್ವನಿಸುವುದಕ್ಕಾಗಿ ಅಸ್ತಿತ್ವಕ್ಕೆ ಬಂದಿದೆ.

ತಮ್ಮ ಭಾಷಣದಲ್ಲಿ, ಡಾ: ಅಂಬೇಡ್ಕರ್ ಅವರು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಭವಿಷ್ಯವನ್ನು

ಪರಾಮರ್ಶಿಸುತ್ತಾ, ಮಹಾತ್ಮ ಗಾಂಧಿಯವರ ನಿಧನದ ನಂತರ ಅದು ಚೂರು ಚೂರಾಗಿ ಹೋಗುತ್ತದೆ ಎಂದು ಹೇಳಿದರು. ಕಾರಣವೆಂದರೆ ಒಂದೆರಡು ನೂರು ಭೂಮಾಲೀಕರುಗಳು, ಬಂಡವಾಳಿಶಾಹಿಗಳು, ಒಂದಿಷ್ಟು ತಪ್ಪುದಾರಿಗೆ ಎಳೆಯಲ್ಪಟ್ಟ ಕಾರ್ಮಿಕ ನಾಯಕರುಗಳು ಇವರುಗಳು ಒಂದು ಪಕ್ಷವಾಗುತ್ತಾರೆಂದು ಗ್ರಹಿಸುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ ಎಂದರು. ಬ್ರಿಟಿಷರೊಂದಿಗೆ ಹೋರಾಟ ಮಾಡುವುಷ್ಟರ ಮಟ್ಟಿಗೆ ಅವರುಗಳು ಒಗ್ಗಟ್ಟಾಗಬಲ್ಲರು? ಆದರೆ ಬ್ರಿಟಿಷರು ಹೋಗುವಾಗ, ಒಂದು ನಿರ್ವಾತ ಸೃಷ್ಟಿಯಾದಾಗ, ಅವರು ಅಧಿಕಾರದ ಪೀಠದಲ್ಲಿ ಕುಳಿತುಕೊಂಡಾಗ, ತಮ್ಮ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಪುನರ್ ಪರೀಕ್ಷಿಸಿದಾಗ ಆ ಭೂ ಮಾಲೀಕರು, ಮತ್ತು ರೈತರುಗಳು, ಬಂಡವಾಳಶಾಹಿಗಳು ಮತ್ತು ಕಾರ್ಮಿಕರು ಕಾಂಗ್ರೆಸ್ಸಿನಲ್ಲಿ ಸಹಬಾಳ್ವೆ ಮಾಡುವುದಕ್ಕೆ ಒಪ್ಪುತ್ತಾರೆಯೇ? ಸ್ವರಾಜ್ಯ ಬಂದ ಕ್ಷಣವೇ ಕಾಗ್ರೆಸ್ ಚೂಚೂರಾಗಿ ಹೋಗಿ ಬಿಡುತ್ತದೆ. ಎಂದರು.

ಆದರೆ ಪರಿಶಿಷ್ತ ಜಾತಿಗಳ ಪಕ್ಷ ಚಿರಂಜೀವಿಯಾಗಿರುತ್ತದೆ, ಅದು ಒಂದು ನಿರಂತರ ಪಕ್ಷವಾಗಿದ್ದು, ಕೆಲವು ಮೂಲಭೂತ ನೀತಿ ನಿಯಮಗಳನ್ನು ಅನುಸರಿಸುತ್ತದೆ. ಹೀಗೆಂದು ಅವರು ದೃಢೀಕರಿಸುತ್ತಾ ಹೇಳಿದರು ಅವರು ಚೂರು ಪಾರು ತಿನಸುಗಳಿಗೆ ಹೊಡೆದಾಡುತ್ತಿದ್ದಾರೆಂದು ಹೇಳುವುದು ಶುದ್ಧಾಂಗವಾಗಿ ಅಪದ್ಧವೆಂದೂ, ಅವರು ಹೊಡೆದಾಡುತ್ತಿರುವುದು, ಈ ದೇಶದಲ್ಲಿ ಪಾಲಿಸಬೇಕಾಗಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಕ್ಕಾಗಿ ಎಂದು ಹೇಳಿದರು. ಅವರ ನೀತಿ ನಿಯಮಗಳು ಅವರು ತಮ್ಮ ದೃಷ್ಟಿಯಲ್ಲಿ ಇಟ್ಟುಕೊಂಡಿರುವ ಪರಿಮಿತವಾದ ಧ್ಯೇಯಕ್ಕೆ ಮಾತ್ರ ಸೀಮಿತವಾಗಿದ್ದು, ಅದು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿರುವ ಧ್ಯೇಯ ವಾಗಿದೆ ಎಂದರು. ಅವರುಗಳ ಈ ನೀತಿ, ಭಾರತದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿಯೂ ಸಹ ಪುನರುಜ್ಜೀವನವಾಗುತ್ತದೆ ಎಂದರು.

ವೈಯುಕ್ತಿಕವಾಗಿ ಹೇಳುವುದಾದರೆ, ಭಾರತದಲ್ಲಿ ಪರಿಶಿಷ್ಟ ಜಾತಿಗಳ ಉಥ್ಥಾನ ಮಾಡುವುದಕ್ಕಿಂತ ಮಿಗಿಲಾದ. ಉದಾತ್ತವಾದ ಬೇರೊಂದು ಕಾರ್ಯವಿಲ್ಲ ಎಂದು ನನಗೆ ಅನಿಸುತ್ತದೆ ಎಂದರು. ನನಗೆ ಕಾಗ್ರೆಸ್ನಲ್ಲಿ ಅನೇಕ ಮಂದಿ ಸ್ನೇಹಿತರುಗಳು ಇದ್ದಾರೆ; ಅವರು ನನ್ನ ರಾಜಕೀಯವನ್ನು ಇಷ್ಟಪಡದೇ ಇದ್ದರೂ, ನನ್ನನ್ನು ಇಷ್ಟ ಪಡುತ್ತಾರೆ. ಕಾಂಗ್ರೆಸ್ನ ಒಳಗಡೆ ಇದ್ದುಕೊಂಡು ದೇಶದ ಧ್ಯೇಯಕ್ಕಾಗಿ ಸೇವೆ ಸಲ್ಲಿಸಿದರೆ, ಒಂದಿಲ್ಲೊಂದು ದಿನ ನಾನು ಕಾಂಗ್ರೆಸ್ನ ಅಧ್ಯಕ್ಷನಾಗಬಹುದು ಎಂದು ಅವರು ಹೇಳುತ್ತಾರೆ. ಆ ಮನವಿಗಳು ಯಾವತ್ತೂ ನನ್ನನ್ನು ಆಕರ್ಶಿಸಿಲ್ಲ.ಈ ವರ್ಗಗಳ ಮದ್ಯೆಯೇ ಇದ್ದೇನೆಂದು ನಾನು ಯಾವಾಗಲೂ ಭಾವಿಸಿದ್ದೇನೆ; ಮೊದಲು ಅವರುಗಳಿಗೆ ಏನಾದರೂ ಮಾಡಬೇಕಾಗಿರುವುದು ನನ್ನ ಕರ್ತವ್ಯ. ಅಲ್ಲದೆ ನನಗೆ ಬಹಳ ಚೆನ್ನಾಗಿ ಮನದಟ್ಟಾಗಿರುವಂತೆ, ಪರಿಸಿಷ್ಟ ಜಾತಿಗಳವರ ನಿಮಿತ್ತಕ್ಕಾಗಿ ಕೆಲಸ ಮಾಡುವ ಸಾಮರ್ಥ್ಯವಿರುವ ನಾನೇ ಆಗಲೀ ಇತರ ಯಾರೇ ಆಗಲೀ, ಇತರ ಕೆಲಸಕ್ಕಾಗಿ ಅಥವಾ ಬೇರೆ ಯಾವುದಾದರೂ ಉದ್ದೇಶಕ್ಕಾಗಿ ಪರಿಶಿಷ್ಟ ಜಾತಿಗಳವರ ಸಮಸ್ಯೆಯನ್ನು ಕೈ ಬಿಟ್ಟರೆ, ಇನ್ನು ಯಾರೂ ಅದನ್ನು ಮುಟ್ಟುವುದಿಲ್ಲ, ಹಾಗಾಗಿ ಅದು ಕಳೆದ ಎರಡು ಸಾವಿರ ವರ್ಷಗಳಿಂದ ಉಳಿದುಕೊಂಡಿರುವ ಹಾಗೇ ಅದೇ ಕೊಳೆತ ಸ್ಥಿತಿಯಲ್ಲೇ ಮುಂದುವರಿಯುತ್ತದೆ. ಆದರೆ ಅದು ಒಂದು ಸೀಮಿತವಾದ ದೃಷ್ಟಿ ಮಾತ್ರ. ನಾನು ಈ ಧ್ಯೇಯ ಸಾಧನೆಗೆ ಅಂತಿಕೊಂಡಿರುವುದಕ್ಕೆ ಕಾರಣ, ನಾನು ಅದನ್ನೊಂದು ಉದಾತ್ತ ಧ್ಯೇಯವೆಂದು ಪರಿಗಣಿಸುತ್ತೇನೆ. ಹಿಂದೂಗಳ ಧ್ಯೇಯವಾದರೂ ಏನು? ಕಾಂಗ್ರೆಸ್ಸಿನವರ ಧ್ಯೇಯವೇನು? ರಾಷ್ಟ್ರೀಯ ಸ್ವಾತಂತ್ರ್ಯದ ಈ ಮಾತೇನು? ಹಿಂದೂಗಳ ಧ್ಯೆಯದ ಮಟ್ಟಿಗೆ ಹೇಳುವುದಾದರೆ, ಅದು ಒಂದು ಪರಾವಲಂಬಿ ವರ್ಗದ ಧ್ಯೇಯ. ಈ ದೇಶದ ಲಕ್ಷಾಂತರ ಮಂದಿಯ ರಕ್ತ, ಹಣ ಮತ್ತು

ದುಡಿಮೆಯ ಮೇಲೆ ಬದುಕುತ್ತಿರುವವರ ಧ್ಯೇಯ. ರಾಜಕೀಯ ಮತ್ತು ನೈತಿಕ ತತ್ವ ಶಾಸ್ತ್ರವನ್ನು ಅರ್ಥ ಮಾಡಿಕೊಂಡಿರುವ ಯಾರೇ ಆಗಲೀ, ಈ ಪ್ರಪಂಚದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಮಾಜವೂ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಇವುಗಳ ಮೇಲೆ ಆಧಾರಿತವಾಗಿಲ್ಲದ ಹೊರತು ಪ್ರಪಂಚಕ್ಕೆ ಮುಕ್ತಿ ಸಿಗುವುದಿಲ್ಲ ಎಂದು ನಂಬುವವರು, ಪರಿಶಿಷ್ಟಜಾತಿಗಳವರ ನಿಮಿತ್ತವನ್ನು ಕೈ ಬಿಟ್ಟು ಹಿಂದೂಗಳ ನಿಮಿತ್ತಕ್ಕಾಗಿ ದುಡಿಯುವದಕ್ಕೆ ಒಪ್ಪಿಗೆ ಕೊಡುತ್ತಾರೆಯೇ ಎಂದು ಡಾ: ಅಂಬೇಡ್ಕರ್ ಕೇಳಿದರು.

ಮುಂದುವರೆಯುತ್ತಾ ಡಾ: ಅಂಬೇಡ್ಕರ್ ಅವರು ಈಗ ದೇಶದ ಸ್ವಾತಂತ್ರ್ಯದ ಧ್ಯೇಯವನ್ನು ತೆಗೆದುಕೊಳ್ಳೋಣ; ನಿರ್ಬಲವರ್ಗವನ್ನು ತುಳಿಯುವುದಕ್ಕಾಗಿ ಸ್ವಾತಂತ್ರ್ಯವನ್ನು ಬಯಸುವ ಬಲಾಢ್ಯರ ವರ್ಗ, ಬೆಳೆದು ಸಂಪೂರ್ಣ ಮಾನವತ್ವನ್ನು ಪಡೆದುಕೊಳ್ಳಲು ಅವಕಾಶವನ್ನು ಕಾಯುತ್ತಿರುವ ನಿರ್ಬಲವರ್ಗದ ಸ್ವಾತಂತ್ರ್ಯ ಇವೆರಡರ ಮಧ್ಯೆ ಬೆಟ್ಟದಷ್ಟು ವ್ಯತ್ಯಾಸವೇ ಇದೆ ಎಂದು ಹೇಳಿದರು. ಸ್ವಾತಂತ್ರ್ಯ, ಅದು, ಇದು ಎಂದು ಅಪದ್ಧವನ್ನು ಮಾತನಾಡುವ ಹಿಂದೂ ದೇಶಪ್ರೇಮಿಗಳನ್ನು ನಾನು ಪ್ರಶ್ನಿಸಬಯಸುತ್ತೇನೆ: ಈ ಸ್ವಾತಂತ್ರ್ಯದಿಂದ ಯಾವ ಉಪಯೋಗವನ್ನು ಪಡೆಯಲು ಅವರು ಬಯಸುತ್ತಾರೆ ಎಂದು. ಸಾಮಾಜಿಕ ಸ್ವಾತಂತ್ರ್ಯ, ನಿಮ್ಮ ಮನಃಸ್ಥಿತಿ ಈಗ ಇರುವ ಹಾಗೆಯೇ ಇದ್ದರೆ, ಬ್ರಿಟಿಷರಿಂದ ನಿಮಗೆ ಸಿಗುವ ಸ್ವಾತಂತ್ರ್ಯವನ್ನು ದಮನಕ್ಕೊಳಗಾಗಿರುವವರನ್ನು, ತುಳಿತಕ್ಕೊಳಗಾಗಿರುವವರನ್ನು, ಇನ್ನೂ ಅದುಮಿಟ್ಟುಕೊಳ್ಳುವುದಕ್ಕಾಗಿ ಉಪಯೋಗಿಸಿಕೊಳ್ಳಿತ್ತೀರೇನು? ಹಾಗಾದ ಪಕ್ಷದಲ್ಲಿ ಈ ಸ್ವಾತಂತ್ರ್ಯಕ್ಕಾಗಿ ಏಕೆ ಹೊಡೆದಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲವೆಂದು ಕೇಳಿದರು. ಅದರ ಬದಲು, ನೀವು ನಮ್ಮ ಧ್ಯೇಯವನ್ನು ಪರೀಕ್ಷಿಸಿ, ನಾವು ಹೋರಾಡುತ್ತಿರುವ ನ್ಯಾಯ ನೀತಿಯನ್ನು ಪರೀಕ್ಷಿಸಿ, ಆಗ ನಮ್ಮ ದೃಷ್ಟಿಯಲ್ಲಿರುವ ಸೀಮಿತ ಉದ್ದೇಶಕ್ಕಿಂತ ಅದು ಇನ್ನೂ ಬಹು ದೂರ ಸಾಗಿ ಮುಂದೆ ಹೋಗುತ್ತದೆ ಎಂದು ನಿಮಗೇ ಗೊತ್ತಾಗುತ್ತದೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವರ್ತಮಾನಪತ್ರಿಕೆ ಉತ್ತಮ ಸರ್ಕಾರದ (ಆಡಳಿತದ) ಮೂಲಾಧಾರ, ಜನಗಳಿಗೆ ಶಿಕ್ಷಣ ಕೊಡುವ ಒಂದು ಮಾಧ್ಯಮ. ಆದ್ದರಿಂದ, ಭಾರತದಲ್ಲಿರುವ ನಮ್ಮ ದುರಾದೃಷ್ಟಕ್ಕೆ ಬೇರೆ ಯಾವ ಹೋಲಿಕೆಯೂ ಇಲ್ಲದ ಮತ್ತು ಅದರಿಂದ ಕಳಚಿಕೊಳ್ಳಲು ಬಹಳ ಕಾತರರಾಗಿರುವ, ಅತೀ ಕೆಟ್ಟ ದುರಾದೃಷ್ಟದವರಾದ ನಾವು ಪರಿಶಿಷ್ಟ ಜಾತಿಗಳವರು. ಎಂಟು ಕೋಟಿ ಅಸ್ಪೃಷ್ಯರಾದ ನಾವುಗಳು ರಾಜಕೀಯವಾಗಿ ವಿದ್ಯಾವಂತರಾಗುವವರೆಗೂ, ಜಯವನ್ನು ಸಾಧಿಸಲಾರೆವು.

ಮೂಂದುವರಿಯುತ್ತಾ ಅವರು ಹೇಳಿದ್ದೇನೆಂದರೆ, ಈ ಪತ್ರಿಕೆ ವಿವಿಧ ಶಾಸನ ಸಭೆಗಳಲ್ಲಿರುವ ನಮ್ಮ ಶಾಸನ ಸಭೆ ಸದಸ್ಯರುಗಳ ನಡವಳಿಕೆಯನ್ನು ವರದಿ ಮಾಡುವುದಕ್ಕೆ ಸ್ವಲ್ಪ ಜಾಗವನ್ನಾದರು ಮೀಸಲಿಟ್ಟು ಜನಗಳಿಗೆ ಅವರು ಇದನ್ನು ಏತಕ್ಕೆ ಮಾಡಲಿಲ್ಲ, ಏತಕ್ಕೆ ಇದನ್ನು ಮಾಡಿದ್ದಾರೆ ಎಂದು ಹೇಳಿದರೆ, ನಮ್ಮ ಎಮ್.ಎಲ್.ಎ ಗಳ ನಡವಳಿಕೆಯಲ್ಲಿ ಬಹಳಷ್ಟು ಸುಧಾರಣೆಯಾಗುತ್ತದೆ ಮತ್ತು ನಮ್ಮ ಸಮುದಾಯಕ್ಕೆ ಅಪಮಾನ ತರುವ ಪ್ರಸ್ತುತದಲ್ಲಿನ ಗೊಂದಲ ನಿಲ್ಲುತ್ತವೆ ಎಂಬುದರಲ್ಲಿ ನನ್ನ ಮನಸ್ಸಿನಲ್ಲಿ ಯಾವ ಹಿಂಜರಿಕೆಯೂ ಇಲ್ಲ.ಈ ಪತ್ರಿಕೆ ತಮ್ಮ ರಾಜಕೀಯ ಜೀವನದಲ್ಲಿ ಎಡವಿರುವವರನ್ನು ಶುದ್ಧೀಕರಿಸುವ ಒಂದು ಸಾಧನವಾಗುತ್ತದೆ ಎಂಬುದರಲ್ಲಿ ನನಗೆ ಯಾವ ಹಿಂಜರಿಕೆಯೂ ಇಲ್ಲ.

ಆ ನಂತರ ಡಾ: ಅಂಬೇಡ್ಕರ್ ಅವರು, ೧೯೩೭ರಲ್ಲಿ ತಮ್ಮ ಚುನಾವಣಾ ಪ್ರಚಾರವನ್ನು ಮಾಡಿದ ಒಂದು ಮರಾಠಿ ಪತ್ರಿಕೆಯನ್ನು ಉಲ್ಲೇಖಿಸುತ್ತಾ, ಪ್ರಸ್ತುತ ಪತ್ರಿಕೆಗೆ ಕೊಟ್ಟ ಸಲಹೆಯೆಂದರೆ, ಮತದಾರರನ್ನು ವಿದ್ಯಾವಂತರನ್ನಾಗಿ ಮಾಡುವುದಲ್ಲದೆ, ಈ ಮತದಾರರಿಂದ ಚುನಾಯಿಸಲ್ಪಟ್ಟವರು ಮತಕೊಟ್ಟವರ ಹಿತ

ಕಾಯುವುದಲ್ಲದೆ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿ ದುರ್ನಡತೆ ಮಾಡದ ಹಾಗೆ ನಿಗಾ ವಹಿಸಬೇಕು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸುತ್ತಾ, ಪರಿಶಿಷ್ಟಜಾತಿಗಳವರ ನಾಯಕರುಗಳು ಮತ್ತು ಕೆಲಸಗಾರರ ಒಂದು ದೊಡ್ಡ ಸಭೆಯ ಮಧ್ಯದಲ್ಲಿ ಅವರು ಹೇಳಿದ್ದೇನೆಂದರೆ, ಈ ಸಮಾರಂಭ ತಾವು ಭಾಗವಹಿಸಿದ ಸಮಾರಂಭಗಳಲ್ಲಿ ಅತ್ಯುತ್ತಮವಾಗಿದ್ದು, ಇದು ತಮ್ಮ ಮನಸ್ಸಿನ ಭಾರವನ್ನು ಸಂಪೂರ್ಣವಾಗಿ ಇಳಿಸಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕೊಟ್ಟಿದೆಯೆಂದು ಹೇಳಿದರು. ಭಾರತದ ಪರಿಶಿಷ್ಟ ಜಾತಿಗಳ ಧ್ಯೇಯ ಸಾಧನೆಗಾಗಿ 'ಪೀಪಲ್ಸ್ ಹೆರಾಲ್ಡ್' ಪತ್ರಿಕೆ ಜಯಪ್ರದವಾಗಿ ಮುನ್ನಡೆಯಲಿ ಎಂದು ಆಶಿಸುತ್ತಾ, ಜನಸೇವೆಯಲ್ಲಿ ಈ ಪತ್ರಿಕೆ ವಹಿಸುವ ಮಹತ್ತರವಾದ ಪಾತ್ರದ ಬಗ್ಗೆ ಮಾತನಾಡುತ್ತಾ, ಇಂಥ ರೀತಿಯ ರಾಜಕೀಯ ಅಂಗವಾದ ಪತ್ರಿಕೆಯ ಪ್ರಾಮುಖ್ಯವನ್ನು ಎಂದೆಂದಿಗೂ ಅಲ್ಲಗಳೆಯಲಾಗುವುದಿಲ್ಲ ಎಂದು ಹೇಳಿದರು.

ತಾವೂ ಸಹ ಬೊಂಬಾಯಿಯಲ್ಲಿ ಒಂದು ಸಾಪ್ತಾಹಿಕ ಪತ್ರಿಕೆಯ ಸಂಪಾದಕರಾಗಿ ಹದಿನಾರು ವರ್ಷಗಳಿಗೂ ಮಿಗಿಲಾಗಿ ಕೆಲಸ ಮಾಡಿದ್ದು ಬಹುಶಃ ಯಾರಿಗೂ ಅಷ್ಟಾಗಿ ಗೊತ್ತಿಲ್ಲದೆ ಇರಬಹುದು ಎಂದು ಈ ಸಂದರ್ಭದಲ್ಲಿ ಹೇಳಿದರು. ಆ ಪತ್ರಿಕೆ ಜನಗಳ ಮೇಲೆ ಅದ್ಭುತವಾದ ಪ್ರಭಾವವನ್ನು ಬೀರಿದ್ದು, ಇದರಿಂದಾಗಿ ಶಾಸನ ಸಭೆಯ ಚುನಾವಣೆಗಳಲ್ಲಿ ಬೊಂಬಾಯಿನ ಸಾಮಾನ್ಯ ಮತಕ್ಷೇತ್ರದಿಂದ ಅವರಿಗೆ ಎಲ್ಲಾ ಸಮುದಾಯಗಳೂ ವೋಟು ಮಾದಿದ್ದು, ಕಾಂಗ್ರೆಸ್ ಅಭ್ಯರ್ಥಿಯನ್ನು ಬಹುದೊಡ್ಡ ಅಂತರದಿಂದ ಸೋಲಿಸಿದ್ದನ್ನು ಉದಹರಿಸಿದರು. ಅವರ ಜಯಕ್ಕೆ ಆ ಪತ್ರಿಕೆ ಉಂಟು ಮಾಡಿದ ರಾಜಕೀಯ ಪ್ರಭಾವ ಬಹಳಷ್ಟು ಕಾರಣವಾಗಿತ್ತು. ಆದುದರಿಂದ ಅವರು 'ಪೀಪಲ್ಸ್ ಹೆರಾಲ್ಡ್' ಪತ್ರಿಕೆಗೆ ಶೀಘ್ರವಾಗಿ ಜಯ ದೊರಕಲಿ ಎಂದು ಹಾರೈಸಿ, ಪರಿಶಿಷ್ಟ ಜಾತಿಗಳ ಎಲ್ಲಾ ಸದಸ್ಯನೂ ಈ ಪತ್ರಿಕೆಯನ್ನು ತನ್ನ ಸ್ವಂತದ್ದೇ ಆಗಿ ಮಾಡಿಕೊಳ್ಳಲಿ ಎಂದು ಆಶಿಸಿದರು.

ಪರಿಶಿಷ್ಟ ಜಾತಿಗಳ ಧ್ಯೇಯ ಸಾಧನೆಗಾಗಿ ಈ ಗುರುತರವಾದ ಕೆಲಸವನ್ನು ವಹಿಸಿಕೊಂಡಿರುವುದಕ್ಕಾಗಿ ಪತ್ರಿಕೆಯ ಸಂಪಾದಕರಾದ ಮಿ: ಪಿ.ಸಿ. ಡೇ ಅವರನ್ನು ಅಭಿನಂದಿಸುತ್ತಾ, ಡಾ: ಅಂಬೇಡ್ಕರ್ ಅವರು ಹೇಳಿದ್ದೇನೆಂದರೆ, ದೇಶದಲ್ಲಿನ ಅನೇಕ ಜನಗಳು ಪರಿಶಿಷ್ಟ ಜಾತಿಗಳವರ ಕಷ್ಟಗಳ ಉಪಶಮನ ಮಾಡುವ ಕೆಲಸ ? ಬೀದಿ ಕಸ ಗುಡಿಸುವ? ಮತ್ತು ಒಂದು? ಕೊಳಕಲು? ಕೆಲಸವೆಂದು ಕಾಣುತ್ತಾರೆಂದು ಹೇಳಿದರು.

ಹಿಂದೂ ಮಹಾಸಭೆಯನ್ನು ಟೀಕಿಸುತ್ತಾ, ಡಾ: ಅಂಬೇಡ್ಕರ್ ಅವರು ಹೇಳಿದ್ದೇನೆಂದರೆ ಅವರ ಧ್ಯೇಯ ಒಂದು ಪರಾವಲಂಬಿಯ ಧ್ಯೇಯವಾಗಿದ್ದು ಅವರು ಜೀವಿಸಿತ್ತಿರುವುದು ಶ್ರಮ ಜೀವಿಗಳ ಹಣದಿಂದ, ಅಲ್ಲದೆ ದೇಶದ ಲಕ್ಷಾಂತರ ಮಂದಿಯ ದುಡಿಮೆಯಿಂದ ಎಂದರು. ಪ್ರಪಂಚದ ವಿಮೋಚನೆ, ಪ್ರಪಂಚದ ಮತ್ತು ಇತರ ಸಂಘಗಳ ಆರ್ಥಿಕ ಮತ್ತು ಸಾಮಾಜಿಕ ಸಂಘಟನೆಗಳು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಈ ನೀತಿಗಳ ಮೇಲೆ ಆಧಾರಪಟ್ಟಿರದಿಲ್ಲದಿದ್ದರೆ, ಆ ಪ್ರಪಂಚದ ವಿಮೋಚನೆಯಾಗುವುದು ಸಾಧ್ಯವಿಲ್ಲ ಎಂದರು.

# ೧೦೦
# ಪರಿಶಿಷ್ಟ ಜಾತಿಗಳು ಸಂಘಟಿತರಾಗಬೇಕು

ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ: ಅಂಬೇಡ್ಕರ್ ಅವರು ಇತ್ತೀಚೆಗೆ ಬೊಂಬಾಯಿಯಲ್ಲಿ ನಡೆದ ಒಂದು ಸಮೂಹ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ದೇಶದಲ್ಲಿನ ಇತರ ಸಮುದಾಯಗಳೊಂದಿಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಾನತೆಯನ್ನು ಸಾಧಿಸಲು ಪರಿಶಿಷ್ಟ ಜಾತಿಗಳವರು ತಾವೆಲ್ಲಾ ಸಂಘಟಿತರಾಗಿ, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಧ್ವಜದ ಕೆಳಗೆ ಒಗ್ಗಟ್ಟಾಗಿ ನಿಲ್ಲಬೇಕೆಂದರು

ವೈಸ್ರಾಯ್ ಅವರ ಕಾರ್ಯಕಾರಿ ಪರಿಷತ್ತನ್ನು ಸೇರಿದಂದಿನಿಂದ ಸಮುದಾಯದ ಉತ್ತಮ ಪಡಿಸುವಿಕೆಗಾಗಿ ತಾವು ಮಾಡಿದ ಕೆಲಸವನ್ನು ವಿಮರ್ಶಿಸಿದರು. ಪರಿಶಿಷ್ಟ ಜಾತಿಗಳವರಿಗೆ ಒಂದು ಗೊತ್ತಾದ ಶೇಕಡವಾರನ್ನು ಮೀಸಲಿಡುವುದಕ್ಕೆ ಸರ್ಕಾರ ಒಪ್ಪಿಕೊಂಡಿರುವದಕ್ಕೆ ತಮ್ಮ ಸಂತಸವನ್ನು ವ್ಯಕ್ತಪಡಿಸಿದರು. ಸಮುದಾಯದ ಹಿತಾಸಕ್ತಿಗಳನ್ನು ಪ್ರತಿನಿಧಿಸುವದಕ್ಕಾಗಿ ಕೇಂದ್ರ ಶಾಸನ ಸಭೆಯಲ್ಲಿ ಇನ್ನೂ ಎರಡು ಸ್ಥಾನಗಳನ್ನು ಪಡೆದುಕೊಳ್ಳಲು ತಮಗೆ ಸಾಧ್ಯವಾಯಿತು ಎಂದು ಹೇಳಿದರು. ಸಮುದಾಯದ ವಿದ್ಯಾರ್ಥಿಗಳು ಹೊರದೇಶದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗುವಂತೆ, ಸರ್ಕಾರ ಮೂರು ಲಕ್ಷ ರೂಪಾಯಿಗಳ ವಾರ್ಷಿಕ ಅನುದಾನವನ್ನು ಕೊಡಲು ಸಹ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು. ತಾವಿರುವ ಪ್ರಸ್ತುತ ಸ್ಥಾನದಿಂದ ಸಮುದಾಯವನ್ನು ಮೇಲೆತ್ತಲು ಇನ್ನೂ ಬಹಳಷ್ಟನ್ನು ಮಾಡುವುದು ಬಾಕಿ ಇದೆ ಎಂದು ಹೇಳಿ, ಅದು ಸಮುದಾಯ ತನ್ನ ಬೇಡಿಕೆಗಳ ಬಗ್ಗೆ ಎಷ್ಟರ ಮಟ್ಟಿಗೆ ಒಗ್ಗಟ್ಟಾಗಿ ನಿಲ್ಲುತ್ತದೆ ಎಂಬುದರ ಮೇಲೆ ಅವಲಂಬಿತವಾಗಿದೆ ಎಂದರು.

ಕಾರ್ಯಕಾರಿ ಪರಿಷತ್ತಿನ ಸದಸ್ಯತ್ವವನ್ನು ಒಪ್ಪಿಕೊಳ್ಳುವುದರಲ್ಲಿ ತಮ್ಮ ಮುಖ್ಯವಾದ ಉದ್ದೇಶ ಸಾಧ್ಯವಾದಷ್ಟು ಮಟ್ಟಿಗೆ ಸಮುದಾಯಕ್ಕೆ ಒಳ್ಳೆಯದನ್ನು ಮಾಡುವುದೇ ಆಗಿತ್ತು. ವಾಸ್ತವವಾಗಿ ವೈಸ್ರಾಯ್ ಅವರೊಂದಿಗೆ ತಮ್ಮ ಮೊದಲನೇ ಸಂದರ್ಶನದಲ್ಲಿಯೇ ಸಮುದಾಯದ ಕುಂದುಕೊರತೆಗಳ ಮತ್ತು ಬೇಡಿಕೆಗಳ ಒಂದು ವಿವರಣ ಪತ್ರವನ್ನು ಸಮರ್ಪಿಸಿದ್ದಾಗಿ ಹೇಳಿದರು. ಅದರಲ್ಲಿ ಅನೇಕ ಬೇಡಿಕೆಗಳಿಗೆ ಒಪ್ಪಿಗೆ ಸಿಕ್ಕಿರುವುದಕ್ಕೆ ಅವರಿಗೆ ಸಂತೋಷವಾಗಿದೆ ಎಂದು ಹೇಳಿ, ಅದಲ್ಲದೆ ವಾಸ್ತವದಲ್ಲಿ ಪರಿಶಿಷ್ಟ ಜಾತಿಗಳು ಕೆಲವು ಗೊತ್ತಾದ ವಿಶಯಗಳಲ್ಲಿ ಮುಸ್ಲಿಮರೊಂದಿಗೆ ಸಮಾನತೆಯನ್ನು ಪಡೆದುಕೊಂಡಿರುವುದಾಗಿ ಹೇಳಿದರು.

# ೧೦೧
# ಮೂಲ ನಿವಾಸಿ ಪಂಗಡಗಳಿಗೆ ಶಾಸನ ಬದ್ಧ ಆಯೋಗವಿರಲೇಬೇಕು

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಶ್ವನ್ನಿನ ಮೂರನೇ ಸಮ್ಮೇಳನ ಮುಂಬಯಿಯಲ್ಲಿ ೫ ಮತ್ತು ೬ನೇ ಮೇ ೧೯೪೫ ರಂದು ನಡೆಯಿತು. ರಾಷ್ಟ್ರೀಯವಾಗಿ, ಅಂತಾರಾಷ್ಟ್ರೀಯವಾಗಿ ಅಗಾಧವಾದ ಚಟುವಟಿಕೆಗಳು ನಡೆಯುತ್ತಿರುವಾಗ ಎಂಟು ಕೋಟಿ ಅಸ್ಪೃಷ್ಯರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಈ ಸಮ್ಮೇಳನ ಮುಖ್ಯವಾಗಿತ್ತು. ಈ ಸಮ್ಮೇಳನಕ್ಕೆ ಸುಮಾರು ಒಂದು ಸಾವಿರ ಡೆಲಿಗೇಟುಗಳು ಭಾರತದ ಎಲ್ಲೆಡೆಯಿಂದ ಬಂದಿದ್ದರು. ಸುಮಾರು ಐನೂರು ಡೆಲಿಗೇಟುಗಳು, ಸುಮಾರು ಐವತ್ತು ಮಹಿಳೆಯರೊಂದಿಗೆ ನಾಗಪುರ ಒಂದರಿಂದಲೇ ಬಂದಿದ್ದರು; ಸುಮಾರು ಇನ್ನೂರು ಡೆಲಿಗೇಟುಗಳು ಗುಜರಾತಿನಿಂದ ಬಂದಿದ್ದರು. ಈ ಡೆಲಿಗೇಟುಗಳಿಗೆ ವಸತಿ ಸೌಕರ್ಯವನ್ನು ಪರೇಲ್ನಲ್ಲಿರುವ ಪೌರ ಸಭೆಯ ಪಾಠಶಾಲೆಯಲ್ಲಿ ಏರ್ಪಡಿಸಿದ್ದರು.

ಈ ಸಮ್ಮೇಳನವನ್ನು, ಪರೇಲ್ನಲ್ಲಿ ಇರುವ 'ನಾರೆ ಪಾರ್ಕ್' ನಲ್ಲಿರುವ ವಿಶಾಲವಾದ ಮೈದಾನದಲ್ಲಿ ನಡೆಸಲಾಯಿತು; ಇದಕ್ಕೆ 'ಸಾಧ್ವಿ ರಮಾಬಾಯಿ ಅಂಬೇಡ್ಕರ್ ನಗರ' ವೆಂದು ಹೆಸರಿಡಲಾಗಿತ್ತು. ಮೈದಾನವು ಜನಗಳಿಂದ ಭರ್ತಿಯಾಗಿ ಹೋಗಿತ್ತ್ತು. ತಲೆಗೆ ಒಂದು ರೂಪಾಯಿಯ ಟಿಕೆಟ್ ಅನ್ನು ನಿಗದಿ ಪಡಿಸಿದ್ದರೂ ಸಹ ಮುಕ್ತ ಅಧಿವೇಶನದಲ್ಲಿ ಪಾಲ್ಗೊಂಡವರಲ್ಲಿ ಐವತ್ತು ಸಾವಿರಕ್ಕಿಂತ ಹೆಚ್ಚಾಗಿದ್ದ ಜನಗಳಲ್ಲಿ ಸುಮಾರು ಐದು ಸಾವಿರ ಮಹಿಳೆಯರು, ಇದ್ದರು. ಆ ಸಮಯದಲ್ಲಿ ಸುಮಾರು ೨ರಿಂದ ೨.೫ ಲಕ್ಷ ಅಸ್ಪೃಷ್ಯ ಕುಟುಂಬಗಳು ಮುಂಬಯಿಯಲ್ಲಿ ವಾಸವಾಗಿದ್ದರು; ಅವರಲ್ಲಿ ಕನಿಷ್ಟ ಕುಟುಂಬಕ್ಕೆ ಒಬ್ಬರಂತೆ ಕಡೆಯ ಪಕ್ಷ ಈ ಕುಟುಂಬಗಳಲ್ಲಿ ಶೇಕಡಾ ೫೦ರಷ್ಟು ಮಂದಿ ಸಮ್ಮೇಳನದಲ್ಲಿ ಹಾಜರಿದ್ದರು ಅವರಲ್ಲಿ ಅನೇಕರು ವೃದ್ಧರಾಗಿದ್ದು, ಇನ್ನೂ ಅನೇಕರು ಹಸುಗೂಸುಗಳೊಂದಿಗೆ ಬಂದಿದ್ದರು.

ಪ್ರಾರಂಭದಲ್ಲಿ, ಈ ಸಮ್ಮೇಳನವನ್ನು ಮುಂಬಯಿಯ ಪರಿಶಿಷ್ಟ ಜಾತಿಗಳ ಫೆಡರೇಷನ್ ರವರಿಗಾಗಿ ಮಾತ್ರ ಏಪ್ರಿಲ್ ೧೯೪೫ರ ಕಡೆಯ ವಾರದಲ್ಲಿ ಆಯೋಜಿಸಲಾಗಿತ್ತು. ಆದರೆ, ಮುಂಬಯಿ ಪರಿಶಿಷ್ಟ ಜಾತಿಗಳ ಫೆಡರೇಷನ್ ಕಾರ್ಯದರ್ಶಿ ಮಿ: ಎಸ್.ಬಿ. ಜಾಧವ್ ಅವರು ಡಾ: ಅಂಬೇಡ್ಕರ್ ಅವರನ್ನು ಭೇಟಿ ಮಾಡಲು ದೆಹಲಿಗೆ ಹೋದಾಗ, ಅಂಬೇಡ್ಕರ್ ಅವರು ಸಭೆಯ ಸ್ವರೂಪವನ್ನು ಬದಲಾಯಿಸಲು ಸೂಚಿಸಿದರು.; ಅದೇನೆಂದರೆ ಸಮ್ಮೇಳನವನ್ನು ಮುಂಬಯಿಗೆ ಸೀಮಿತಗೊಳಿಸುವ ಬದಲು, ಅದನ್ನು ಅಖಿಲ ಭಾರತ ಸಮ್ಮೇಳನವಾಗಿಸಲೇ ಬೇಕು ಎಂದು ಹೇಳಿದ್ದರು. ಸಮಿತಿಯ ಎಲ್ಲಾ ೨೦ ಮಂದಿ ಸದಸ್ಯರ ಶ್ರಮದ ಫಲವಾಗಿ ಅತ್ಯಲ್ಪ ಕಾಲದಲ್ಲಿ ಸದಸ್ಯತ್ವವನ್ನು ಆರು ಸಾವಿರದಿಂದ ಇಪ್ಪತ್ತು ಸಾವಿರಕ್ಕೆ ಏರಿಸಲಾಯಿತು.

ಸಮ್ಮೇಳನ ೫ನೇ ಮೇ ೧೯೪೫, ಶನಿವಾರ ಸಂಜೆ ಪ್ರಾರಂಭವಾಯಿತು. ಮೈದಾನದ ಒಂದು ಮೂಲೆಯಲ್ಲಿ ಒಂದು ದೊಡ್ಡದಾದ ವೇದಿಕೆಯನ್ನು ನಿರ್ಮಿಸಲಾಯಿತು. ವೇದಿಕೆಯ ಮಧ್ಯ ಭಾಗದಲ್ಲಿ 'ಗೌತಮ ಬುದ್ಧನ' ಚಿತ್ರವನ್ನು ಇರಿಸಲಾಗಿದ್ದು, ಕಮಾನುಗಳಿಂದ ಅಲಂಕೃತಗೊಳಿಸಲಾಗಿತ್ತು; ಕಾರಣ, ದೇಶದಲ್ಲಿ ಪ್ರಚಲಿತವಾಗಿದ್ದ ಸಾಮಾಜಿಕ ತಾರತಮ್ಯವನ್ನು ವಿರೋಧಿಸಿದವರಲ್ಲಿ ಗೌತಮ ಬುದ್ಧನೇ

ಮೊದಲಿಗನಾಗಿದ್ದ.

ಅನೇಕ ಸ್ವಾಗತ ಗೀತೆಗಳನ್ನು ಬೇರೆ ಬೇರೆ ಭಾಷೆಯಲ್ಲಿ ಹಾಡಲಾಯಿತು. ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿಯವರಾದ ಮಿ: ಪಿ.ಎನ್. ರಾಜ್ಬೋಜ್ ಅವರು ಹಿಂದಿನ ವರ್ಷದಲ್ಲಿ ನಡೆದ ಕೆಲಸಗಳ ವರದಿಯನ್ನು ಸಭೆಯ ಮುಂದಿಟ್ಟರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಮಿ: ಎಸ್.ಬಿ. ಜಾಧವ್ ಅವರು ಸಮ್ಮೇಳನಕ್ಕೆ ಬಂದಿದ್ದ ಸಂದೇಶಗಳನ್ನು ಓದಿದರು. ಈ ಸಂದೇಶಗಳನ್ನು ಕಳುಹಿಸಿದವರಲ್ಲಿ ಮಿ: ಸಿ.ಡಿ.ದೇಶ್ಮುಖ್, ಐ.ಸಿ.ಎಸ್, ಗವರ್ನರ್, ಭಾರತೀಯ ರಿಸರ್ವ್ ಬ್ಯಾಂಕ್; ಡಾ: ಆಲ್ಬೆನ್ ಡಿಸೌಝ, ಮುಂಬಯಿಯ ಮೇಯರ್; ಮಿ: ಮೋದಕ್, ಸಿಟಿ ಎಂಜಿನೀರ್; ಸರ್ ರುಸ್ತುಮ್ ಮಸಾನಿ, ರಾಷ್ಟ್ರೀಯ  ವಾರ್ ಫ್ರಂಟ್; ಮಿ: ಮದನ್, ಐ.ಸಿ.ಎಸ್.; ಮಿ:ಟಾನ್ವಾನ್, ಐ.ಸಿ..ಎಸ್.; ಮುಂಬಯಿಯ ಗವರ್ನರ್ ಅವರ ಸಲಹೆಗಾರರು; ಸರ್ ಕವಾಸ್ಜಿ ಜಹಾಂಗೀರ್, ಮಿ: ಬಾಲಾ ಸಾಹೆಬ್ ಖೇರ್, ಮಾಜಿ ಮುಖ್ಯ ಕಾರ್ಯದರ್ಶಿ, ಮುಂಬಯಿ ಪ್ರಾಂತ್ಯ,; ಮಿ: ಸೇಖಿಯ, ಅಸ್ಸಾಮಿನ ಮಾಜಿ ಮಂತ್ರಿ; ಮಿ: ಕೆ.ಎ.ಪಿ. ವಿಶ್ವನಾಥನ್, ?ಮದರಾಸ್ನ ಜಸ್ತಿಸ್ ಪಕ್ಷ ಮಿ: ಪ್ರಾಣ್ ದತ್, ಕಾನ್ಪುರ; ಮುಂಬಯಿಯ ವಕೀಲರಾದ ಆದ ಮಿ: ವೇಲಂಕರ್; ಬರೋಡಾದ ಮಾನೆ ಮತ್ತು ಮಣಿಲಾಲ್ ಪಾರ್‌ಮಾರ್ ಇತ್ಯಾದಿಗಳವರು ಇದ್ದರು.

ಇದೇ ಸಂದರ್ಭದಲ್ಲಿ ಬೇರೆ ಬೇರೆ ಸಮ್ಮೇಳನಗಳನ್ನು, ಅಂದರೆ 'ಮಹಿಳೆಯರ ಸಮ್ಮೇಳನ' ಶ್ರೀಮತಿ ಮೀನಂಬಾಳ್ ಶಿವರಾಜ್ ಅವರ ಅಧ್ಯಕ್ಷತೆಯಲ್ಲಿ; 'ಮುಂಬಯಿ ಮುನಿಸಿಪಲ್ ಕರ್ಮಚಾರಿಗಳ ಫೆಡರೇಷನ್,; ವಿದ್ಯಾರ್ಥಿ ಫೆಡರೇಷನ್, ಮಿ: ಪ್ಯಾರೆಲಾಲ್ ತಾಲಿಬ್ ಅವರ ಅಧ್ಯಕ್ಷತೆಯಲ್ಲಿ;' ಸಮತ ಸೈನಿಕ್ ದಳ್, ಸಮ್ಮೇಳನ, ಮಿ: ಜೆ.ಎಚ್. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ, ವ್ಯವಸ್ಥೆಗೊಳಿಸಲಾಗಿತ್ತು.ಈ ಸಮ್ಮೇಳನಗಳಲ್ಲಿ ಅನೇಕ ಡೆಲಿಗೇಟುಗಳು ಅಸ್ಪೃಷ್ಯರು ತಮ್ಮ ಮೇಲೆ ಎಸಗಿದ ಅತ್ಯಾಚಾರಗಳನ್ನು ವಿವರಿಸಿದರು.

ಚಾರಿತ್ರಿಕ ಭಾಷಣವನ್ನು ಡಾ: ಬಿ.ಆರ್. ಅಂಬೇಡ್ಕರ್ ಅವರು ಭಾನುವಾರ, ೬ನೇ ಮೇ, ೧೯೪೫ರಂದು ಮಾಡಿದರು: ಈ ಭಾಷಣವನ್ನು ಕೇಳಲು ಸುಮಾರು ಒಂದೂವರೆ ಲಕ್ಷ ಜನ ಬಂದಿದ್ದರು.

ಈ ಸಮ್ಮೇಳನದ ಭಾಷಣವನ್ನು ಡಾ: ಅಂಬೇಡ್ಕರ್ ಅವರು ಸಿದ್ಧಪಡಿಸಿದರು; ಆಮೇಲೆ ಇದನ್ನು 'ಜಾತೀಯ ಬಿಕ್ಕಟ್ಟು ಮತ್ತು ಅದನ್ನು ಪರಿಹರಿಸಲು ಒಂದು ಮಾರ್ಗ' ಎಂಬ ಶೀರ್ಷಿಕೆಯ ಕೆಳಗೆ ಪ್ರಸಿದ್ಧಿಸಲಾಯಿತು. – ( ಆ ಭಾಷಣದಿಂದ ಒಂದು ಕಂಡಿಕೆಯನ್ನು ನಾವು ಕೊಡುತ್ತಿದ್ದೇವೆ ? ಸಂಪಾದಕರುಗಳು)

ಈ ಭಾಷಣದಲ್ಲಿ ಡಾ: ಅಂಬೇಡ್ಕರ್ ಅವರು ಮೂಲನಿವಾಸಿಗಳ ಉಥ್ಥಾನಕ್ಕಾಗಿ ಒಂದು ಸ್ಕೀಮ್ ಅನ್ನು ಪ್ರಸ್ತಾವಿಸಿದರು ಅದು ಈ ಕೆಳಗೆ ಕಂಡಂತೆ ಇದೆ:

ಮೂಲ ನಿವಾಸಿ ಪಂಗಡಗಳು ಜನಸಂಖ್ಯೆಯಲ್ಲಿ ಸಿಖ್ಖರು, ಆಂಗ್ಲೋ ಇಂಡಿಯನ್ನರು, ಇಂಡಿಯನ್ ಕ್ರಿಶ್ಚಿಯನ್ನರು ಮತ್ತು ಪಾರ್ಸಿಗಳಿಗಿಂತ ಹೆಚ್ಚಿಗೆ ಇದ್ದರೂ, ನನ್ನ ಪ್ರಸ್ತಾವನೆಗಳು ಅವರನ್ನು ಒಳಗೊಂಡಿರುವುದಿಲ್ಲ ಎನ್ನುವುದು ಸ್ವಯಂ ವೇದ್ಯವಾಗಿದೆ.  ನಾನು ಅವರನ್ನು ನನ್ನ ಯೋಜನೆಯಿಂದ ಏತಕ್ಕಾಗಿ ಹೊರಗಿಟ್ಟಿದ್ದೇನೆಂದು ಹೇಳುತ್ತೇನೆ.  ಈ ಮೂಲ ನಿವಾಸಿಗಳು ಇನ್ನೂ ಕೂಡ ತಮ್ಮ ರಾಜಕೀಯ ಅವಕಾಶಗಳನ್ನು ಅತಿಶಯವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಯಾವುದೇ ರಾಜಕೀಯ ಅರಿವನ್ನು ಬೆಳಸಿಕೊಂಡಿಲ್ಲ. ಹೀಗಾಗಿ ಅವರು ಬಹುಸಂಖ್ಯಾತರು ಅಥವಾ ಅಲ್ಪಸಂಖ್ಯಾತರು ಇವುರುಗಳ ಕೈನಲ್ಲಿ ಕೇವಲ ಒಂದು ಸಾಧನವಾಗಿ ಬಿಡಬಹುದು ಮತ್ತು  ತಮಗೂ ಯಾವ ಉಪಯೋಗವೂ ಇಲ್ಲದೆ ಸಮತೋಲನವನ್ನು ಕೆಡಿಸಿಬಿಡಬಹುದು.ಅವರ ಬೆಳವಣಿಗೆಯ  ಪ್ರಸ್ತುತ ಹಂತದಲ್ಲಿ, ಈ ಹಿಂದುಳಿದ ಸಮುದಾಯಗಳಿಗೆ ಮಾಡಬಹುದಾದ ಉತ್ತಮವಾದ

ಕೆಲಸವೆಂದರೆ, ಒಂದು ಶಾಸನಬದ್ಧ ಆಯೋಗವನ್ನು ಸ್ಥಾಪಿಸುವುದೇ ಸರಿಯಾದ ಮಾರ್ಗವೆಂದು ನನಗೆ ತೋರುತ್ತದೆ; ಈ ಆಯೋಗ ಈಗ 'ಹೊರಗಿಟ್ಟ ಕ್ಷೇತ್ರಗಳೆಂದು' ಕರೆಯಲಾಗುತ್ತಿರುವ ಪ್ರದೇಶದ ಆಡಳಿತವನ್ನು, ದಕ್ಷಿಣ ಆಫ್ರಿಕಾ ಸಂವಿಧಾನದಲ್ಲಿ ಮಾಡಿರುವ ಹಾಗೆ ನೋಡಿಕೊಳ್ಳಬಹುದಾಗಿದೆ. ಈ 'ಹೊರಗಿಟ್ಟ ಪ್ರದೇಶಗಳು' ಇರುವ ಪ್ರತಿಯೊಂದು ಪ್ರಾಂತ್ಯವನ್ನು ಈ ಪ್ರದೇಶಗಳ ಆಡಳಿತ ವ್ಯವಸ್ಥೆಗಾಗಿ ಒಂದು ನಿಗದಿಪಡಿಸಿದ ಹಣವನ್ನು ಕೊಡಬೇಕೆಂದು ಒತ್ತಾಯಿಸಬೇಕು.

ಮುಂಬಯಿಯ ಒಬ್ಬ ಪ್ರಮುಖ ಕಾಗ್ರೆಸ್ ನಾಯಕರೂ, ಹರಿಜನ ಸೇವಕ ಸಂಘದ ಪ್ರಧಾನ ಕಾರ್ಯದರ್ಶಿಯವರೂ, ಗಾಧೀಜಿಯವರ ನಿಕಟವರ್ತಿಯೂ ಆಗಿದ್ದ ಎ.ವಿ.ಥಕ್ಕರ್ ಅವರು, ಡಾ: ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ರೂಪಿಸಿದ ಈ ಜಾತಿವಾರಿನ/ಸಾಮುದಾಯಿಕ ಇತ್ಯರ್ಥಕ್ಕೆ ಮಾಡಿದ ಪ್ರಸ್ತಾವನೆಯನ್ನು ಟೀಕಿಸಿದರು. ಈ ಟೀಕೆಯಿದ್ದ ಪತ್ರವನ್ನು ೧೭ನೇ ಮೇ ೧೯೪೫ ನೇ ತಾರೀಖಿನ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಎ.ವಿ.ಥಕ್ಕರ್ ಅವರಿಗೆ ಡಾ: ಅಂಬೇಡ್ಕರ್ ಅವರ ಪ್ರತ್ಯುತ್ತರ

ಸಂಪಾದಕರು, ಟೈಮ್ಸ್ ಆಫ್ ಇಂಡಿಯ, ಇವರಿಗೆ,

ಸ್ವಾಮಿ,

ಒಂದು ಸಾಮುದಾಯಿಕ ಇತ್ಯರ್ಥಕ್ಕಾಗಿ ನಾನು ಮಾಡಿದ ಪ್ರಸ್ತಾವನೆಯನ್ನು ಟೀಕಿಸಿ ಮೀ: ಥಕ್ಕರ್ ಅವರು ಬರೆದ,, ಈ ದಿವಸ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ಪ್ರಕಟವಾಗಿರುವ ಪತ್ರಕ್ಕೆ ಉತ್ತರವನ್ನು ಕೊಡಲು ಸ್ಥಳಾವಕಾಶವನ್ನು ದಯಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಿ: ಥಕ್ಕರ್ ಅವರು ನಾನು ಈ ಪ್ರಸ್ತಾವನೆಗಳನ್ನು ಮುಂದುಮಾಡಿ ಆ ಪಂಗಡಳ ಬೇಡಿಕೆಗಳನ್ನು ಸಾರಾ ಸಗಾಟಾಗಿ ಕಡೆಗಾಣಿಸಿದ್ದೇನೆಂದು ಮೂಲನಿವಾಸಿ ಪಂಗಡಗಳ ಪರವಾಗಿ ಬಡಿಗೋಲನ್ನು ಎತ್ತಿಕೊಂಡಿದ್ದಾರೆ. ತಮ್ಮ ಟೀಕೆಗೆ ಮೊನಚು ಕೊಡುವುದಕ್ಕಾಗಿ ನನ್ನನ್ನು 'ಅದುಮಲ್ಪಟ್ಟವರ, ನಿಮ್ನವರ್ಗಗಳವರ' ನಿರ್ಭೀತ ಚಾಂಪಿಯನ್ ಎಂದು ಕರೆದಿದ್ದಾರೆ. ತೊಳಲುತ್ತಿರುವ ಮಾನವ ಸಮುದಾಯದ ಸಾರ್ವಕಾಲಿಕ ನಾಯಕನು ನಾನೆಂದು ನಾನು ಯಾವತ್ತೂ ಹೇಳಿಕೊಂಡಿಲ್ಲ ಎಂದು ಥಕ್ಕರ್ ಅವರಿಗೆ ತಿಳಿಸಬಯಸುತ್ತೇನೆ. ಅಸ್ಪೃಷ್ಯರ ಸಮಸ್ಯೆಯೇ ನನ್ನ ನಾಜೂಕಾದ ಭುಜಗಳಿಗೆ ಸಾಕಾಗಿದೆ; ಅವರ ಹಾಗೂ ಗಾಂಧಿಯವರ ಬಿಗಿ ಮುಷ್ಟಿಯಿಂದ ಅಸ್ಪೃಷ್ಯರನ್ನು ನಾನು ಬಿಡಿಸಿಕೊಳ್ಳುವುದರಲ್ಲಿ ಜಯಶಾಲಿಯಾದರೆ, ನನಗೆ ಬಹಳ ಸಂತೋಶವಾಗುತ್ತದೆ.

ಇತರ ಯಾವುದೇ ಧ್ಯೇಯಗಳು ಉದಾತ್ತವಾದವುಗಳು ಅಲ್ಲ ಎಂದು ನಾನೇನೂ ಹೇಳುತ್ತಿಲ್ಲ.. ಮಾನವ ಜನ್ಮ ಕ್ಷಣಿಕವಾದುದು ಎಂದು ಗೊತ್ತಿದ್ದು, ಒಬ್ಬರು ಒಂದು ಧ್ಯೇಯಕ್ಕಾಗಿ ಮಾತ್ರ ಸೇವೆಯನ್ನು ಸಲ್ಲಿಸಬಲ್ಲರು, . ನಾನು ಅಸ್ಪೃಷ್ಯರಿಗಾಗಿ ಸೇವೆ ಮಾಡುವುದಕ್ಕಿಂತ ಹೆಚ್ಚಾಗಿ ಯಾವ ಆಕಾಂಕ್ಷೆಯನ್ನು.ಇಟ್ಟುಕೊಂಡಿಲ್ಲ. ಮಿ: ಥಕ್ಕರ್ ಅವರೇ ಹೇಳುವ ಹಾಗೆ ಅಸ್ಪೃಷ್ಯರನ್ನು ಮೂಲನಿವಾಸಿಗಳೇ ತುಚ್ಛವಾಗಿ ಕಾಣುತ್ತಾರೆ. ವಿಷಾದಕರವಾದುದು ಏನೆಂದರೆ, ಮಿ: ಥಕ್ಕರ್ ಅವರು ತಮ್ಮ ಟೀಕೆಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾದ ನನ್ನ ಭಾಷಣಗಳ ಉದ್ಧೃತಿಯನ್ನು ಆಧಾರವಾಗಿಟ್ಟುಕೊಂಡು ಮಾಡಿದ್ದಾರೆ. ಅವರೇನಾದರೂ ನನ್ನ ಭಾಷಣದ ಪೂರ್ಣಪಾಠವನ್ನು ಓದುವ ತೊಂದರೆ ತೆಗೆದುಕೊಂಡಿದ್ದರೆ, ಮೂಲನಿವಾಸಿಗಳ ಧ್ಯೇಯವನ್ನು ಹೊರಗಿಡುವುದಿರಲಿ, ಅವರ ರಕ್ಷಣೆಗಾಗಿ ಇನ್ನೂ ಅತ್ಯುತ್ತಮವಾದ, ಇನ್ನೂ ಪರಿಣಾಮಕಾರಿಯಾದ ನಾನು ನಂಬಿದ ಪ್ರಸ್ತಾವನೆಗಳನ್ನು ಮುಂದಿಟ್ಟಿದ್ದೇನೆಂದು ಅವರಿಗೆ ಅರಿವಾಗುತ್ತಿತ್ತು. ನನ್ನ ಪ್ರಸ್ತಾವನೆಯ ಈ ಭಾಗವನ್ನು ಸವಿವರವಾಗಿ ಬಿಚ್ಚಿಡಲು ಸ್ಥಳಾವಕಾಶವಿಲ್ಲ; ನನ್ನನ್ನು

ಪಕ್ಷಪಾತಿಯೆಂದು, ಸಣ್ಣ ಮನಸ್ಸಿನವನೆಂದು ಆಪಾದಿಸುವ ಮುನ್ನ ಮಿ:: ಥಕ್ಕರ್ ಅವರು ವೃತ್ತಪತ್ರಿಕೆಗಳಿಗೆ ಓಡಿಹೋಗುವ ಮುಂಚೆ, ಮೂಲನಿವಾಸಿಗಳಿಗಾಗಿ ನನ್ನ ಪ್ರಸ್ತಾವನೆಯನ್ನು ಪರಿಗಣಿಸಿದರೆ ಒಳಿತಾಗುತ್ತದೆ.

ಮೂಲನಿವಾಸಿಗಳನ್ನು ನಾನು ಶಾಸನಸಭೆಯಲ್ಲಿ ಸೀಟುಗಳ ಹಂಚಿಕೆಗಾಗಿ ಸೇರಿಸದೆ ಇದ್ದ ಕಾರಣ ನನಗೆ ಅವರ ಮೇಲಿನ ಮನಸ್ತಾಪದ ಪರಿಣಾಮವೇನೂ ಅಲ್ಲ; ಆದರೆ ಅದಕ್ಕೆ ಕಾರಣ ಈ ಮೂಲನಿವಾಸಿಗಳಿಗೆ ಇನ್ನೂ ಸಹ ರಾಜಕೀಯ ಸಾಮರ್ಥ್ಯವಿಲ್ಲ ಎಂಬ ನನ್ನ ನಂಬಿಕೆ; ಈ ಸಾಮರ್ಥ್ಯ ರಾಜಕೀಯ ಅಧಿಕಾರವನ್ನು ಅವರ ಒಳಿತಿಗಾಗಿ ಚಲಾಯಿಸಲು ಬೇಕೇಬೇಕು. ನಾನು ಮಿ: ಥಕ್ಕರ್ ಅವರನ್ನು ಕೇಳಬಯಸುವುದೇನೆಂದರೆ, ಈ ಮೂಲನಿವಾಸಿಗಳು ಮತ್ತು ಇತರರಿಗಾಗಿ ಒಬ್ಬ ಸಮಾಜ ಸೇವಕನಾಗಿರುವ ಅವರು ಅವರ ವೃತ್ತಿ ಜೀವನ ಪಥದಲ್ಲಿ ಶೈಕ್ಷಣಿಕ ಮಟ್ಟವನ್ನು ಉತ್ತಮಪಡಿಸಲೂ ಏನನ್ನಾದರೂ ಮಾಡಿದ್ದಾರೆಯೆ, ಹಾಗೆ ಮಾಡಿದ್ದಿದ್ದರೆ ಅವರಿಗೆ ತಮ್ಮ ಪರಿಸ್ಥಿತಿಗಳು ಏನೆಂದು ಗೊತ್ತಾಗುತ್ತಿತ್ತು, ಉನ್ನತ ಹಿಂದೂವಿನ ಮಟ್ಟಕ್ಕೆ ಏರುವ ಆಕಾಂಕ್ಷೆ ಇರುತ್ತಿತ್ತು, ಹಾಗೂ ರಾಜಕೀಯ ಅಧಿಕಾರವನ್ನು ಗುರಿ ಸಾಧನೆಯ ಮಾಧ್ಯಮವಾಗಿ ಉಪಯೋಗಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಇರುತ್ತಿದ್ದರು ಅಲ್ಲವೇ? ಮಿ: ಥಕ್ಕರ್ ಅವರು ಈ ೨೦ ವರ್ಷಗಳ ಅವಧಿಯಲ್ಲಿ, ಒಬ್ಬನೇ ಒಬ್ಬ ಮೂಲನಿವಾಸಿ ಪದವೀಧರನನ್ನು ತಯಾರು ಮಾಡಲು ಸಾಧ್ಯವಾಗಲಿಲ್ಲ ಎಂಬುದು ಅವರು ಮಾಡಿರುವ ಕೆಲಸದ ಮೇಲೆ ಅತ್ಯಂತ ವ್ಯಸನಕರವಾದ ಭಾಷ್ಯವಾಗಿದೆ.

ಎರಡನೆಯದಾಗಿ, ನಾನು ಮಿ: ಥಕ್ಕರ್ ಅವರಿಂದ ಕೇಳ ಬಯಸುವುದೇನೆಂದರೆ ಶಾಸನಸಭೆಯಲ್ಲಿ ಮೂಲನಿವಾಸಿಗಳ ಪ್ರಾತಿನಿಧ್ಯವನ್ನು ಹೆಚ್ಚಿಸಲು ಇದ್ದಕ್ಕಿದ್ದಂತೆ ಅವರಿಗೆ ಯೋಚನೆ ಹೇಗೆ ಬಂದಿತು ಎಂದು. ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿ, ಮೂಲನಿವಾಸಿಗಳಿಗೆ ಕೊಟ್ಟಿರುವ ಪ್ರಾತಿನಿಧ್ಯ, ಅವರ ಜನಸಂಖ್ಯೆಗೆ ಹೋಲಿಸಿದರೆ ತೀರಾ ನಗಣ್ಯವಾಗಿದೆ. ಭಾರತ ಸರ್ಕಾರದ ಅಧಿನಿಯಮ ಈ ಅಸಮಾನತೆಯ ನ್ಯಾಯದ ಪ್ರಮಾದವನ್ನು ಮಾಡಿದ್ದರ ವಿರುದ್ಧ ಮಿ: ಥಕ್ಕರ್ ಅವರು ತಮ್ಮ ಧ್ವನಿಯನ್ನು ಎತ್ತರಿಸಿದರೇನು? ಸಪ್ರು ಸಮಿತಿಯ ಪ್ರಸ್ತಾವನೆಗಳ ವಿರುದ್ಧ ಮಿ: ಥಕ್ಕರ್ ಅವರು ಹೇಳುವುದೇನಿದೆ? ಬಹುಶಃ ಮಿ: ಥಕ್ಕರ್ ಅವರಿಗೆ ನನ್ನ ವಿರುದ್ಧ ಈರ್ಷ್ಯೆ ಇರುವ ಹಾಗೆ ಅವರುಗಳ ಮೇಲೆ ಇಲ್ಲವೆಂದು ಅನಿಸುತ್ತದೆ.

ಮೂರನೆಯದಾಗಿ, ಮೂಲನಿವಾಸಿ ಪಂಗಡಗಳಿಗೆ ಅವರ ಜನಸಂಖ್ಯೆಗೆ ತಕ್ಕಂತೆ ಪ್ರಾತಿನಿಧ್ಯ ಸಿಗಲೇಬೇಕೆಂಬುದು ಮಿ: ಥಕ್ಕರ್ ಅವರ ಅಭಿಲಾಶೆಯಾಗಿದ್ದರೆ, ಇಲ್ಲ, ಅವರಿಗೆ ವೈಟೇಜ್ ಕೂಡ ಸಿಗಬೇಕೆಂದಿದ್ದರೆ, ಇದು ಮುಸ್ಲಿಮರ ಪ್ರಾತಿನಿಧ್ಯವನ್ನು ಇಳಿಸದ ಹೊರತು ಸಾಧ್ಯವಾಗುವುದಿಲ್ಲ ಎಂದು ಗೊತ್ತುಪಡಿಸಿಕೊಳ್ಳಲೇಬೇಕು. ಮೂಲ ನಿವಾಸಿಗಳಿಗಾಗಿ ಮುಸ್ಲಿಮರ ವಿರುದ್ಧ ಹೋರಾಡಲು ಮೀ; ಥಕ್ಕರ್ ಅವರು ಸಿದ್ಧವಾಗಿದ್ದಾರೆಯೇ? ಅಸ್ಪೃಷ್ಯರ ಪ್ರಾತಿನಿಧ್ಯಕ್ಕೆ ಕತ್ತರಿ ಹಾಕಿ ಅವರ ಮೇಲೆ ಪ್ರೀತಿ ಇದೆಯೆಂದು ಮಿ: ಥಕ್ಕರ್ ಅವರು ಸಾಧಿಸುತ್ತಿಲ್ಲ. ಹಿಂದೆಯೂ ಕೂಡ ತಮಗೆ ಬರಬೇಕಾದ ಪ್ರಾತಿನಿಧ್ಯವೂ ಸಿಗದೆ ಇರುವ ಒಂದು ನಿರ್ಬಲ ಸಮುದಾಯವಾದ ಅಸ್ಪೃಷ್ಯರ ಮೇಲೆ ಕತ್ತಿ ಎತ್ತುವ ಮೂಲಕ ತಾವೊಬ್ಬರು 'ಪರಾಕ್ರಮಿ' ಎಂದು ಮಿ: ಥಕ್ಕರ್ ಅವರು ಸಾಧಿಸಲು ಹೊರಟಿದ್ದಾರೆಯೇ? ಮುಸಲ್ಮಾನರು ಅನುಭವಿಸುತ್ತಿರುವ ವೈಟೇಜ್ನಿಂದ ಏನನ್ನಾದರೂ ಪಡೆದುಕೊಳ್ಳುವುದಕ್ಕೆ ಹೋರಾಟ ಮಾಡಿದರೆ ಅವರು ಮೂಲನಿವಾಸಿಗಳ ಹಿತಚಿಂತಕರು ಎಂದು ಸಾಬೀತಾಗುತ್ತದೆ.

ಬಾಂಬೆ, ತಾ: ೧೭ನೇ ಮೇ, ೧೯೪೫ ಡಾ: ಬಿ.ಆರ್.ಅಂಬೇಡ್ಕರ್

# ೧೦೨
# ಭಾರತದ ಗುರಿಯಾದ ಸ್ವಾತಂತ್ರ್ಯದ ಬಗ್ಗೆ ಯಾವ ವಿವಾದವೂ ಇಲ್ಲ

ಜಾತೀಯ ಪ್ರಷ್ನೆಯೊಂದನ್ನು ಬಿಟ್ಟು ಭಾರತದಲ್ಲಿನ ಪಕ್ಷಗಳ ನಡುವೆ ಯಾವ ವಿವಾದವೂ ಇಲ್ಲವೆಂದು, ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ: ಅಂಬೇಡ್ಕರ್ ಅವರು ತಮ್ಮ ಗೌರವಾರ್ಥ ಸ್ನೇಹಿತರ ಗುಂಪೊಂದು ಭಾನುವಾರ, ೨೦ನೇ ಮೇ, ೧೯೪೫ರಂದು ಬೊಂಬಾಯಿನ 'ಕೆಫೆ ಮಾಡೆಲ್' ನಲ್ಲಿ ಕೊಟ್ಟ ಚಹಾ ಕೂಟದಲ್ಲಿ ಹೇಳಿದರು. ಅಂತಿಮ ಗುರಿಯಾದ ಭಾರತೀಯ ರಾಜಕೀಯ ವಿಕಾಸ, ಸ್ವಾತಂತ್ರ್ಯ ಇದರ ಬಗ್ಗೆ ಪಕ್ಷಗಳ ನಡುವೆ ಯಾವ ಅಭಿಪ್ರಾಯ ಭೇದವೂ ಇಲ್ಲವೆಂದು ಮುಂದುವರೆದು ಹೇಳಿದರು.

ಪ್ರಸ್ತುತ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತ, ಅದನ್ನು ಒಂದು ಪ್ರಶ್ನೆಯಲ್ಲಿ ಸಂಗ್ರಹವಾಗಿ ಕೇಳಬಹುದು ಎಂದರು: ಆ ಪ್ರಶ್ನೆಯೆಂದರೆ: 'ಬಹು ಸಂಖ್ಯಾತರ ಆಳ್ವಿಕೆ ಸರಿಯೇ' ಅವರ ಅಭಿಪ್ರಾಯದಲ್ಲಿ ಅದು ತಪ್ಪು. ರಾಜ್ಯದ ಅವಶ್ಯಕತೆಗಳು ಪರಮೋಚ್ಚವಾದುದು, ಆದರೆ ವ್ಯಕ್ತಿಯೊಬ್ಬನದು ಅಲ್ಲ ಎಂದು ಪರಿಗಣಿಸುವುದು ತಪ್ಪಾಗುತ್ತದೆ. ಹಾಗೆಂದಾಗ ಅದು ಫ್ಯಾಸಿಸ್ಟ್ ಅಥವಾ ನಾಜ಼ಿ ಸಿದ್ಧಾಂತವಾಗುತ್ತದೆ. ಅವರು ಮುಂದುವರಿದು ಹೇಳಿದ್ದೇನೆಂದರೆ ವ್ಯಕ್ತಿಯೊಬ್ಬನ ರಕ್ಷಣೆ ರಾಜ್ಯದ ಕರ್ತವ್ಯವಾಗಿದ್ದು ಅವನನ್ನು ತುಳಿಯುವುದನ್ನು ಸಹಿಸಲಾಗುವುದಿಲ್ಲವೆಂದರು.

ಮತ್ತೂ ಅವರು ಹೇಳಿದ್ದೇನೆಂದರೆ ಬಹುಸಂಖ್ಯಾತರನ್ನು ರಾಜಕೀಯ ಬಹುಸಂಖ್ಯಾತರು ಮತ್ತು ಜಾತೀಯ ಬಹುಸಂಖ್ಯಾತರು ಎಂದು ವಿಂಗಡಿಸಬಹುದು. ಮೊದಲನೆಯವರು ಯಾವಾಗಲೂ ಬದಲಾಯಿಸುತ್ತಲೇ ಇರುತ್ತಾರೆ. ಅಂಥವರನ್ನು ಸಹಿಸಿಕೊಳ್ಳಬಹುದು. ಆದರೆ ಹುಟ್ಟಿನಿಂದ ಬಂದ ಬಹು ಸಂಖ್ಯಾತರನ್ನು ಸಹಿಸಲಾಗುವುದಿಲ್ಲ ಎಂದರು. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಅವರು 'ಕೇವಲ ಬಹು ಸಂಖ್ಯಾತರು' ಎಂಬ ನೀತಿಯಿಂದ ನಿರ್ಗಮಿಸಬೇಕು. ಅದು ಆಗಿಬಿಟ್ಟರೆ ಅವರು ಎದುರಿಸುತ್ತಿರುವ ಸಮಸ್ಯೆಗೆ ಒಂದು ಪರಿಹಾರ ಸಿಕ್ಕಿದಂತಾಗುತ್ತದೆ.

ಸಾಮಂತ ಸ್ಥಾನಮಾನವೋ ಅಥವಾ ಸ್ವಾತಂತ್ರ್ಯವೋ ಯಾವುದನ್ನು ಒಪ್ಪಿಕೊಳ್ಳಬೇಕೆಂಬ ಪ್ರಶ್ನೆಯತ್ತ ನೋಡುತ್ತಾ, ಅದು ಒಂದು ಪ್ರಷ್ನೆಯೇ ಅಲ್ಲವೆಂದು ಹೇಳಿದರು. ಎರಡನೆಯದನ್ನು ತಲುಪುವುದಕ್ಕೆ ಮುಂಚಿನದು ಮೊದಲನೆಯ ಮೆಟ್ಟಲು ಮಾತ್ರ ವೆಂದು ಅವರು ಪರಿಗಣಿಸಿದ್ದರು. ಅವರ ವೈಯುಕ್ತಿಕ ಭಾವನೆಯೆಂದರೆ, ಸಾಮಂತ ಸ್ಥಾನವನ್ನು ಒಪ್ಪಿಕೊಳ್ಳುವುದು ಭಾರತಕ್ಕೆ ಉತ್ತಮವಾದದ್ದು ಎಂದು. ಉಳಿಸಿಕೊಳ್ಳಲಾಗದೇ ಇರುವ ಸ್ವಾತಂತ್ರ್ಯವನ್ನು ಗೆಲ್ಲುವುದರಿಂದ ಏನೂ ಉಪಯೋಗವಿಲ್ಲ ಎಂದರು. ಭಾರತೀಯರು ನಿರ್ಧಾರ ಮಾಡಬೇಕಿರುವುದು ಏನೆಂದರೆ ತಮ್ಮನ್ನು ತಾವು ಬ್ರಿಟಿಷ್ ನೊಗದಿಂದ ಬಿಡಿಸಿಕೊಳ್ಳಬೇಕೆಂಬುದಲ್ಲ, ಆದರೆ ಸ್ವಾತಂತ್ರ್ಯವನ್ನು ಪಡೆದುಕೊಂಡಮೇಲೆ ಅದನ್ನು ಉಳಿಸಿಕೊಳ್ಳುವುದಕ್ಕೆ ಅವರು ಶಕ್ತರಾಗಿರಬೇಕು ಎಂದರು.

ಡಾ:ಅಂಬೇಡ್ಕರ್ ಅವರ ಪ್ರಕಾರ ಸ್ವತಂತ್ರ ಭಾರತ ಎದುರಿಸಬೇಕಾದ ಎರಡು ಮುಖ್ಯವಾದ ಪ್ರಶ್ನೆಗಳೆಂದರೆ ಕೈಗಾರಿಕೀಕರಣ ಮತ್ತು ರಕ್ಷಣೆ. ಒಂದೇ ಕಾಲಕ್ಕೆ ಎರಡೂ ಹಾದಿಯನ್ನು ತುಳಿಯುವುದಕ್ಕೆ

ಭಾರತಕ್ಕೆ ಅವಶ್ಯಕವಾದ ಸಂಪನ್ಮೂಲಗಳು ಇದೆಯ ಎಂಬುದರ ಬಗ್ಗೆ ತಮಗೆ ಗಂಭೀರವದ ಅನುಮಾನಗಳು ಇವೆ ಎಂದು ಡಾ: ಅಂಬೇಡ್ಕರ್ ಹೇಳಿದರು. ಸಾಮಂತ ಸ್ಥಾನಮಾನದಲ್ಲಿ ಬ್ರಿಟನ್ನಿನೆಡೆಗೆ ಭಾರತಕ್ಕೆ ಯಾವ ಕಟ್ಟುಪಾಡಾಗಲೀ ಮುಲಾಜಾಗಲೀ ಇರುವುದಿಲ್ಲ ಎಂದು ಹೇಳಿದರು.; ಅಂತಾರಾಷ್ಟ್ರೀಯ ಕಾನೂನಿನ ಪ್ರಕಾರ ಅದರ ಅರ್ಥ ಪರಿಪೂರ್ಣ ಸಾರ್ವಭೌಮತ್ರ್ವವೆಂದೇ ಆಗುತ್ತದೆ.

ಸರ್ಕಾರ ಯುದ್ಧಾನಂತರದ ಅವಧಿಯಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಮಾಡಿದ ಕೆಲಸವನ್ನು ಪರಾಮರ್ಶೆ ಮಾಡುತ್ತಾ, ಅವರು ಹೇಳಿದ್ದು ಒಂದು ಸಾಮಾಜಿಕ ಭದ್ರತಾ ಸತ್ಯಾಂಶ ಶೋಧನಾ ಸಮಿತಿಯನ್ನು ನೇಮಿಸಲಾಗಿದ್ದು ಅದು ಮುಂದಿನ ಆಗಸ್ಟ್ ತಿಂಗಳ ಹೊತ್ತಿಗೆ ತನ್ನ ವರದಿಯನ್ನು ಸಲ್ಲಿಸಲಿದ್ದು, ಅದರ ನಂತರ ಸಮಿತಿಯ ಶೋಧನೆಗಳನ್ನು ಕುರಿತು ವ್ಯವಹರಿಸುವುದಕ್ಕೆ ಪರಿಣಿತರನ್ನು ನೇಮಕ ಮಾಡಲಾಗುವುದು.

ಮಿ: ಜಿ.ಎನ್.ಸಹಸ್ರಬುಧೆ ಅವರು ವಂದನಾರ್ಪಣೆಯನ್ನು ಮಾಡಿದರು.

# ೧೦೩
# ಮನುಷ್ಯನಿಗೆ ರಾಜಕೀಯವಾಗಿ ಅರಿವನ್ನುಂಟುಮಾಡಲು ಬುದ್ಧಿಪೂರ್ವಕ ಪ್ರಯತ್ನವನ್ನು ಮಾಡಿ

ದೇಶದ ಬಾಕಿ ಬಿದ್ದಿರುವ ಸಮಸ್ಯೆಗಳನ್ನು ಪರಿಹಾರ ಮಾಡಲು ಕಾಂಗ್ರೆಸ್ಗೆ ಸಾಧ್ಯವಾಗಿಲ್ಲ, ಏತಕ್ಕಾಗಿ ಅಂದರೆ ಅದರ ನಾಯಕರುಗಳು ಬೇಕೆಂದೇ ಆ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗಿಲ್ಲವೆಂದೂ, ರಾಜಕೀಯವನ್ನು ಅಧ್ಯಯನವನ್ನು ಮಾಡಲೂ ಸಹ ನಿರಾಕರಿಸಿದ್ದಾರೆ ಎಂಬ ದೋಶಾರೋಪವನ್ನು ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ: ಬಿ.ಆರ್. ಅಂಬೇಡ್ಕರ್ ಅವರು ಅಕ್ಟೋಬರ್ ೩, ೧೯೪೫, ಬುಧವಾರ ರಾತ್ರಿ, ಪೂನಾದಲ್ಲಿ ತಾವು ಮಾಡಿದ ಭಾಷಣವೊಂದರಲ್ಲಿ ಹೇಳಿದರು.

ರಾಜಕೀಯದಲ್ಲಿ ಆಸಕ್ತಿ ಇರುವ ಪರಿಶಿಷ್ಟ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳು ಇರುವ ಡಾ: ಅಂಬೇಡ್ಕರ್ ರಾಜಕೀಯ ಪಾಠಶಾಲೆಯ ಪ್ರಾರಂಭೋತ್ಸವ ಸಮಾರಂಭ, ಆ ಸಂದರ್ಭವಾಗಿತ್ತು ಡಾ: ಅಂಬೇಡ್ಕರ್ ಅವರು ಹೇಳಿದ್ದೇನೆಂದರೆ, ಈ ದೇಶದ ರಾಜಕೀಯ ವರ್ತುಲದಲ್ಲಿ ಗಾಂಧಿಯವರು ಪ್ರವೇಶ ಮಾಡುವುದಕ್ಕೆ ಮುಂಚೆ ಎರಡು ಮುಖ್ಯವಾದ ರಾಜಕೀಯ ಚಿಂತನಾ ಪರಂಪರೆಗಳು ಚಾಲ್ತಿಯಲ್ಲಿದ್ದವು. ಮೊದಲನೆಯ ಪರಂಪರೆಯ ಮುಂಚೂಣಿಯಲ್ಲಿದ್ದವರು ಮಿ: ರಾನಡೆ ಮತ್ತು ಮಿ: ಮಿ: ಗೋಖಲೆ ಅವರು; ಈ ಪರಂಪರೆಯು ಉದಾರ ಚಿಂತನೆಯ ಪರಂಪರೆ ಎಂದು ಪರಿಚಯವಾಗಿತ್ತು. ಇನ್ನೊಂದು ಪರಂಪರೆಯನ್ನು ಬಂಗಾಳದ ಕ್ರಾಂತಿಕಾರಿಗಳು ಮುನ್ನಡೆಸಿದ್ದರು. ಅವುಗಳ ಬಗ್ಗೆ ಮುಖ್ಯವಾದ ವಿಷಯವೆಂದರೆ, ಎರಡೂ ಪರಂಪರೆಗಳು, 'ಮೂರ್ಖ ರಹಿತ' ಮತ್ತು 'ಚೋರ ರಹಿತ' ವಾಗಿದ್ದವು.

ಉದಾರ ಪರಂಪರೆಯ ಶಾಲೆಯ ಸದಸ್ಯನಾಗುವುದಕ್ಕೆ ಇದ್ದ ಅರ್ಹತೆ ಎಷ್ಟು ಕಠಿನವಾಗಿತ್ತೆಂದರೆ ಮೂರ್ಖರಾಗಲೀ ಅಥವಾ ಚೋರರಾಗಲೀ ಆ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಹಾಗೆ ಇರಲಿಲ್ಲ. ಅವರ ದರ್ಜೆ ಅಂದರೆ, ಅಧ್ಯಯನ ಮತ್ತು ಜ್ಞಾನ. ಅವರ ವೇದಿಕೆಯನ್ನು ಬಯಸುವವರು ರಾಜಕೀಯವನ್ನು ಚೆನ್ನಾಗಿ ತಿಳಿದವರಾಗಿರಬೇಕಾಗಿತ್ತು.

ಕ್ರಾಂತಿಕಾರಿ ಪರಂಪರೆಯ ಶಾಲೆಯೂ ಸಹ ಬಹಳ ಉನ್ನತವಾದ ದರ್ಜೆಯನ್ನು ಇಟ್ಟುಕೊಂಡಿತ್ತು. ಯಾವನೇ ಆಗಲೀ ತನ್ನ ಜೀವವನ್ನು ಪಣಕ್ಕಿಡಲಾರದವನಾಗಿದ್ದರೆ, ಆ ಪಕ್ಷದ ಸದಸ್ಯನಾಗುವ ಹಾಗಿರಲಿಲ್ಲ.. ಮಿ: ಗಾಂಧಿಯವರ ಸಂಸ್ಥೆಯಲ್ಲಿ ಮೂರ್ಖರಿಗೂ, ಚೋರರಿಗೂ ಮುಕ್ತ ಪ್ರವೇಶವಿತ್ತು. ಅಧ್ಯಯನ ಮತ್ತು ಜ್ಞಾನವನ್ನು ಪಾಲಿಸುವ ಪರಂಪರೆ ಕಾಂಗ್ರೆಸ್ ಸಂಸ್ಥೆಗೆ ಹಿಡಿಸಲಿಲ್ಲ. ಇದು ದೇಶದಲ್ಲಿನ ಸಾರ್ವಜನಿಕ ಜೀವನದಲ್ಲಿ ಅನೇಕ ದುರಂತಗಳಲ್ಲಿ ಪರ್ಯಸವಾನಗೊಂಡಿತು; ಹೀಗಾಗಿ ಕಾಂಗ್ರೆಸ್ಗೆ ಯಾವ ಗಹನವಾದ ಸಮಸ್ಯೆಯನ್ನೂ ಬಿಡಿಸಲು ಸಾಧ್ಯವಾಗಲಿಲ್ಲ; ಆ ಸಮಸ್ಯೆಗಳಲಿ ಜಾತಿಯ ಸಮಸ್ಯೆಯೂ ಒಂದು.

ಯಾವುದೇ ಸಂಸ್ಥೆಯಾಗಲೀ ಅಥವಾ ಸಂಘವೇ ಆಗಲೀ, ಕಾಲ ಮತ್ತು ಸಂದರ್ಭಗಳಿಗನುಸಾರವಾಗಿ ತನ್ನ ಆಲೋಚನೆಗಳಲ್ಲಿ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಸ್ವಾತಂತ್ರ್ಯವಿಲ್ಲದಿದ್ದರೆ ಅದು ತನ್ನ ಅಸ್ತಿತ್ವದ ಹೆಣಗಾಟದಲ್ಲಿ ಉಳಿಯಲು ಸಾಧ್ಯವಾಗುವುದಿಲ್ಲ.

ಒಂದು ಸಂಘ, ಮನೋಗತಗಳ ಒಂದು ಕಟ್ಟನ್ನೇ ಉತ್ತರಾಧಿಕಾರದಿಂದ ಪಡೆದಿದ್ದು ಅದಾನ್ನು

ಪವಿತ್ರವಾದುದು ಎಂದು ತಿಳಿದುಕೊಂಡಿದ್ದರೆ ಅದು ಹೊಂದಾಣಿಕೆಯನ್ನು ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಇರಲಾಗುವುದಿಲ್ಲ. ಇಂಥ ಸಂಘಗಳು ಕೊನೆಯಲ್ಲಿ ನಶಿಸಿ ಹೋದವು. ಅಂಬೇಡ್ಕರ್ ಅವರು ತಮ್ಮದೇ ಆದ ಒಂದು ಪಾಠಶಾಲೆಯನ್ನೋ ಅಥವಾ ಪಂಥವನ್ನೋ ಪ್ರಾರಂಭಿಸುವ ಪ್ರಸ್ತಾವನೆಯೇ ಇಲ್ಲ ಎಂದು ಘೋಷಿಸಿದರು. ತಮ್ಮ ಮರಣಾನಂತರ ಅಂಥ ಶಾಲೆ ಅಸ್ತಿತ್ವಕ್ಕೆ ಬರುತ್ತದೆ ಅಂದರೆ ತಮಗೆ ವ್ಯಸನವಾಗುತ್ತದೆ ಅಂದರು.

ರಾಜಕೀಯ ಪಂಥಗಳನ್ನು ಸೃಷ್ಟಿಸಿದ್ದರಿಂದ ಸಂಭವಿಸಿದ ದುರಂತಗಳು ಅವರಿಗೆ ಗೊತ್ತಿತ್ತು. ಮಹಾರಾಷ್ಟ್ರದಲ್ಲಿ ಅವರೊಬ್ಬರು ಉತ್ಸಾಹೀ ರಾಜಕೀಯ ವಿದ್ಯಾರ್ಥಿ ಆಗಿದ್ದರು. ಹೊಸ ಸಮಸ್ಯೆಗಳು ಎದುರಾದಾಗ, ಜನಗಳು ಸಮಿತಿಗಳಲ್ಲಿ ಸಭೆ ಸೇರಿ, ತಮ್ಮ ಊಹಾಶಕ್ತಿಯನ್ನು ಉಪಯೋಗಿಸಿ, ಇಂಥದೇ ಸಂದರ್ಭಗಳಲ್ಲಿ ಮಿ: ತಿಲಕ್ ಅವರು ಏನು ಮಾಡುತ್ತಿದ್ದರೆಂದು ಊಹೆ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದರು. ಎಂದೋ ಸತ್ತು ಮರೆಯಾದ ಜನಗಳ ಅಂತಃಸ್ಫೂರ್ತಿಯ ಮೇಲೆ ಯಾವಾಗಲೂ ಅವಲಂಬಿತರಾಗಿರುವುದು ಒಂದು ರೀತಿಯ ಚಿಂತಾಜನಕ ಬದುಕಾಗಿತ್ತು.

ವಿದ್ಯಾರ್ಥಿಗಳಿಗೆ ಅವರು ಮನವಿ ಮಾಡಿದ್ದೇನೆಂದರೆ, ತಾನು ಸರಿ ಎಂದು ಅವರ ಮನಸ್ಸಿನಲ್ಲಿ ತೃಪ್ತಿಯಾದರೆ ಮಾತ್ರ ನನ್ನ ದಾರಿಯಲ್ಲಿ ಸಾಗಿ ಎಂದು ಹೇಳಿದರು. ಡಾ: ಅಂಬೇಡ್ಕರ್ ಅವರು ಹೇಗಾದರೂ ಆ ಸಂಸ್ಥೆಯ ಉದ್ದೇಶವನ್ನು, ಅಂದರೆ ರಾಜಕೀಯವನ್ನು ಅಧ್ಯಯನ ಮಾಡುವುದಕ್ಕೆ ಅನುಮತಿ ಕೊಡುವುದನ್ನು ಹೊಗಳಿದರು. ಮನುಷ್ಯನೊಬ್ಬ ರಾಜಕೀಯ ಪ್ರಾಣಿಯೆಂದು ನಂಬಿದವರನ್ನು ಅವರು ಒಪ್ಪಿಕೊಳ್ಳಲಿಲ್ಲ; ಮನುಷ್ಯನಲ್ಲಿ ರಾಜಕೀಯ ಅರಿವನ್ನು ಉಂಟು ಮಾಡುವುದಕ್ಕೆ ಅತ್ಯಂತ ಬುದ್ಧಿಪೂರ್ವಕ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದರು.

## ೧೦೪
## ಸರ್ಕಾರ ೧೯೪೨ರಲ್ಲಿ ತೆಗೆದುಕೊಂಡ ಕ್ರಮ ನ್ಯಾಯಯುತವಾಗಿಯೇ ಇತ್ತು

೧೦ನೇ ನವೆಂಬರ್ ೧೯೪೫ರಂದು, ಅಹ್ಮದಾಬಾದ್ ಮುನಿಸಿಪಾಲಿಟಿ ಸಮರ್ಪಿಸಿದ ಬಿನ್ನವತ್ತಳೆಗೆ ಉತ್ತರಿಸುತ್ತಾ ಡಾ: ಬಿ.ಆರ್.ಅಂಬೇಡ್ಕರ್ ಅವರು ಸರ್ಕಾರ ೧೯೪೨ರಲ್ಲಿ ತೆಗೆದುಕೊಂಡ ತೀಕ್ಷ್ಣವಾದ ಕ್ರಮ ನ್ಯಾಯಯುತವಾಗಿಯೇ ಇತ್ತು ಎಂದು ಅಭಿಪ್ರಾಯಪಟ್ಟರು; ಇಲ್ಲದೇ ಹೋಗಿದ್ದರೆ, ಭಾರತವನ್ನು ಜಪಾನಿನವರು ಮತ್ತು ಜರ್ಮನ್ನರು ಅಕ್ರಮಿಸಿಕೊಂಡುಬಿಡುತ್ತಿದ್ದರು. 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ಸರ್ಕಾರ ದಮನ ಮಾಡಿದ್ದರ ಸಮರ್ಥನೆ ಜನಗಳ ಭಾವನೆಯನ್ನು ಕೆರಳಿಸಿದ್ದಲ್ಲದೆ ಮೊದಲೇ ಇದ್ದ ಅವರ ಪೂರ್ವಾಗ್ರಹಕ್ಕೆ ಇದೂ ಸೇರ್ಪಡೆಯಾಯಿತು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ವರ್ಷಗಳಲ್ಲಿ ನಿಮ್ನವರ್ಗಗಳವರನ್ನು ಉಳಿದ ಜನಗಳಿಂದ ಬೇರೆ ಮಾಡಿದ ದಾಟಲಾರದ ಕಂದಕಕ್ಕೆ ಇದೇ ಮುಖ್ಯ ಕಾರಣವಾಗಿತ್ತು.

## ೧೦೫
## ಗಾಂಧೀಜಿಯವರು ನಿರಾಕರಿಸಿದರು

ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ: ಬಿ.ಆರ್. ಅಂಬೇಡ್ಕರ್ ಅವರು, ನಿಮ್ನವರ್ಗಗಳ ಫೆಡರೇಷನ್ ಮತ್ತು ಶೋಲಾಪುರದ ಪೌರ ಕಾರ್ಮಿಕರ ಫೆಡರೇಷನ್ ಇವರುಗಳು ೧೬ನೇ ಜನವರಿ, ೧೯೪೬ರಂದು ಅರ್ಪಿಸಿದ ಬಿನ್ನವತ್ತಳೆಗೆ ಉತ್ತರಿಸುತ್ತಾ, ಬೊಂಬಾಯಿನಲ್ಲಿ ಜರುಗಿದ ಗಾಂಧಿ–ಜಿನ್ನಾ ಮಾತುಕತೆಗಳ ಸರಣಿಯನ್ನು ಪರಾಮರ್ಶಿಸುತ್ತಾ, ಅದಕ್ಕೆ ಉತ್ತರವಾಗಿ ಹೇಳಿದ್ದೇನೆಂದರೆ, ಆರು ತಿಂಗಳುಗಳ ಕೆಳಗೆ ತಾವೊಂದು ಪತ್ರವನ್ನು ಗಾಂಧಿಯವರಿಗೆ ಬರೆದಿದ್ದಾಗಿಯೂ, ಆದರೆ ಗಾಂಧೀಜಿಯವರು ನಮ್ಮಿಬ್ಬರ ದೃಷ್ಟಿಕೋನಗಳಲ್ಲಿ ಸಮಾನವಾದುದು ಯಾವುದೂ ಇಲ್ಲವೆಂಬ ಕಾರಣಕ್ಕಾಗಿ ತಮ್ಮನ್ನು ಭೇಟಿ ಮಾಡಲು ನಿರಾಕರಿಸಿದರು ಎಂದರು.

# ೧೦೬
# ಪರಿಶಿಷ್ಟ ಜಾತಿಗಳವರ  ಆಗ್ರಹದ ಬೇಡಿಕೆಗಳನ್ನು ಒಂದು ನಿಷ್ಪಕ್ಷಪಾತವಾದ ಅಂತಾರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಒಪ್ಪಿಸಬೇಕು

೧೭ನೇ ಫೆಬ್ರವರಿ ೧೯೪೬ರಂದು, ಬೊಂಬಾಯಿಯ ನಾರೆ ಪಾರ್ಕ್‌ನಲ್ಲಿ ೭೦,೦೦೦ ಪುರುಷರು ಮತ್ತು ಸ್ತ್ರೀಯರು ನೆರೆದಿದ್ದರು. ಚುನಾವಣಾ ಪ್ರಚಾರವನ್ನು ಪ್ರಾರಂಭಿಸುವುದಕ್ಕೆ ಡಾ: ಅಂಬೇಡೇಕರ್ ಎದ್ದು ನಿಂತಾಗ ಜನ ಹರ್ಷಧ್ವನಿ ಮಾಡಿದರು.

ಸಭೆಯಲ್ಲಿ ಪ್ರವೇಶ ಶುಲ್ಕವಾಗಿ ಬಂದಿದ್ದ  ೧೭,೦೦೦/– ರೂಪಾಯಿಗಳನ್ನು ಪ್ರಚಾರಕ್ಕೋಸ್ಕರ ಡಾ: ಅಂಬೇಡ್ಕರ್ ಅವರಿಗೆ ಸಮರ್ಪಿಸಲಾಯಿತು. ಬೊಂಬಾಯಿ ಶಾಖೆಯ ಅಧ್ಯಕ್ಷರಾದ ಮಿ: ಜಿ.ಎಮ್.ಜಾಧವ್, ಪ್ರಚಾರಕ್ಕೋಸ್ಕರ ಗೊತ್ತುಪಡಿಸಿದ ಹಣ ೫೦,೦೦೦ ರೂಪಾಯಿಗಳನ್ನು ಮೇ ತಿಂಗಳ ಹೊತ್ತಿಗೆ ಮುಟ್ಟಿಸುವುದಾಗಿ ಹೇಳಿದರು.

ಪ್ರಾರಂಭೋತ್ಸವ ಸಮಾರಂಭಕ್ಕೆ ಮುಂಚೆ ಡಾ: ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಗಳವರ ಬಾವುಟವನ್ನು ಹಾರಿಸಿದರು.  ಅವರಿಗೆ ಗೌರವ ರಕ್ಷೆಯನ್ನು ಪರಿಶಿಷ್ಟ ಜಾತಿಗಳ ಸ್ವಯಂಸೇವಕ ದಳದವರು ಕೊಟ್ಟರು. ಬಹಳ ದೊಡ್ಡ ಪ್ರಮಾಣದಲ್ಲಿ ಜನಗಳು ಸೇರಿದ್ದರೂ ಸಹ, ಸಮಾರಂಭದ ಉದ್ದಕ್ಕೂ ಸುವ್ಯವಸ್ಥೆ ಇತ್ತು; ಡಾ: ಅಂಬೇಡ್ಕರ್ ಅವರ ಭಾಷಣಕ್ಕೆ ಕಿವಿ ಗಡಚಿಕ್ಕುವ ಹರ್ಷ ಧ್ವನಿಯೂ ಇತ್ತು.

ಪರಿಶಿಷ್ಟ ಜಾತಿಗಳವರ ಆಗ್ರಹದ ಬೇಡಿಕೆಗಳು ನ್ಯಾಯಸಮ್ಮತವಲ್ಲವೆಂದು ಕಾಂಗ್ರೆಸ್‌ನವರು ಭಾವಿಸಿದ್ದರೆ, ಆ ವಿಷಯವನ್ನು ಒಂದು ನಿಷ್ಪಕ್ಷಪಾತವಾದ ಆಂತಾರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಒಪ್ಪಿಸಿದರೆ, ಅದು ಕೊಡುವ ತೀರ್ಮಾನಕ್ಕೆ ತಾವು ಬದ್ಧವಾಗಿರುವುದಾಗಿ ಅಂಬೇಡ್ಕರ್ ಅವರು ಚುನಾವಾಣಾ ಪ್ರಚಾರ ಪ್ರಾರಂಭಿಸುವಾಗ ಹೇಳಿದರು. ಕಾಂಗ್ರೆಸ್‌ನವರು ಕೂಗಾಡುತ್ತಿರುವ 'ಸ್ವರಾಜ್'ನಲ್ಲಿ ದೇಶವನ್ನು ಆಳುವುದಕ್ಕೆ ಬ್ರಿಟಿಷರ ಬದಲಾಗಿ ಹಿಂದೂಗಳು ಬರುತ್ತಾರೆ, ಅಷ್ಟೆ ಎಂದು ಹೇಳಿದರು.

ಕಳೆದ ಕೆಲವು ದಿನಗಳಲ್ಲಿ, ಕಾಂಗ್ರೆಸ್ನವರ ಭಾಷಣದಲ್ಲಿ ಕೇಂದ್ರದಲ್ಲಿ ರಾಷ್ಟ್ರೀಯ ಸರ್ಕಾರ ಸ್ಥಾಪಿತವಾದರೆ ಆಹಾರ ಪರಿಸ್ಥಿತಿ ಸುಧಾರಿಸುತ್ತದೆ ಎಂಬ ಮಾತುಗಳು ಕೇಳಿಬರುತ್ತಿದ್ದವು. ಖಂಡಿತವಾಗಿಯೂ, ಕಾಂಗ್ರೆಸ್ ನವರು ಪವಾಡವೊಂದನ್ನು ಮಾಡಲಾರರು. ಆಹಾರ ಸಮಸ್ಯೆಯನ್ನು ಬಗೆಹರಿಸುವ ಈ ಎಲ್ಲಾ ಉದ್ದುದ್ದ ಮಾತುಗಳು ಬರಿಯ ಮಾತುಗಳು ಮಾತ್ರವಷ್ಟೆ ಎಂದರು.

ಪರಿಶಿಷ್ಟ ಜಾತಿಗಳ ಚಳುವಳಿಯನ್ನು ಬಲಪಡಿಸಬೇಕಾದ ಅವಶ್ಯಕತೆಯನ್ನು ಒತ್ತಿಹೇಳುತ್ತಾ, ಡಾ: ಅಂಬೇಡ್ಕರ್ ಅವರು ಕಾಂಗ್ರೆಸ್‌ನವರು ಸ್ವರಾಜ್‌ಗಾಗಿ ಕೂಗಾಡುತ್ತಲೇ ಇದ್ದಾರೆ; ಆದರೆ ಕಾಂಗ್ರೆಸ್ಸ್‌ನವರು ಕೇಳುತ್ತಿರುವ ಸ್ವರಾಜ್ ಬ್ರಿಟಿಷರ ಬದಲಾಗಿ ಹಿಂದೂಗಳ ನಿರಂಕುಶತ್ವಕ್ಕೆ ಮಾತ್ರ ಎಂದು ಪರಿಶಿಷ್ಟ ಜಾತಿಗಳು ಖಚಿತ ಮಾಡಿಕೊಳ್ಳಬಹುದು ಎಂದರು. ಪರಿಶಿಷ್ಟ ಜಾತಿಗಳು ಇದನ್ನು ಸಂಭವಿಸುವುದಕ್ಕೆ ಬಿಡಬಾರದು. ತಮ್ಮ ಹಕ್ಕುಗಳೆಲ್ಲಾ ತಮಗೆ ಸಿಗುವ ಹಾಗೆ ನೋಡಿಕೊಳ್ಳಬೇಕು, ಆಗ ಸ್ವತಂತ್ರ ಭಾರತದಲ್ಲಿ ಅವರೂ ಸಹ ಸ್ವತಂತ್ರವಾಗಿರಬಹುದು.

ಪರಿಶಿಷ್ಟ ಜಾತಿಗಳವರೇನೂ ಮುಸ್ಲಿಮರು ಕೇಳುತ್ತಿರುವ ಹಾಗೆ ವಿಭಾಗವನ್ನೇನೂ ಕೇಳುತ್ತಿಲ್ಲ;,

ಅವರು ಕೇಳುತ್ತಿರುವುದು ತಮ್ಮ ಬಗ್ಗೆ ನ್ಯಾಯವಾಗಿ ನಡೆದುಕೊಳ್ಳುವುದನ್ನು ಮಾತ್ರ. ಶತಮಾನಗಳಿಂದ ಅವರನ್ನು ಅದುಮಿಡಲಾಗಿತ್ತು. ಆದರೆ ಈಗ ಶೋಷಣೆಯನ್ನು ಅವರು  ಒಪ್ಪುತ್ತಿಲ್ಲ.

ಅವರಿಗೆ ಬೇಕಾಗಿರುವುದೆಲ್ಲ ಸಮಾನ ರಾಜಕೀಯ ಹಕ್ಕುಗಳಷ್ಟೆ, ಆಶ್ರಯವಲ್ಲ. ನಮ್ಮ ಆಗ್ರಹಪೂರ್ವಕಬೇಡಿಕೆಗಳು ನ್ಯಾಯಸಮ್ಮತವಲ್ಲವೆಂದು ಕಾಂಗ್ರೆಸ್ನವರಿಗೆ ಅನಿಸಿದರೆ, ಆಗ ಈ ವಿಷಯವನ್ನು ಒಂದು ನಿಷ್ಪಕ್ಷಪಾತ ಅಂತರಾಷ್ಟ್ರೀಯ ನ್ಯಾಯಾಧಿಕರಣಕ್ಕೆ ಒಪ್ಪಿಸಬಹುದು. ಇಂಥ ನ್ಯಾಯಾಧಿಕರಣ ಕೊಡುವ ತೀರ್ಪಿಗೆ   ಬದ್ಧವಾಗಿರುವುದಕ್ಕೆ ನಾನು ಸಿದ್ಧ ಎಂದು ಹೇಳಿದರು.

ತಮ್ಮ ಉದ್ದೇಶ ಸಾಫಲ್ಯಕ್ಕಾಗಿ ತಾವು ಎಲ್ಲಾ ತ್ಯಾಗಗಳನ್ನೂ ಮಾಡಲು  ಸಿದ್ಧವಾಗಿದ್ದೇನೆ ಎಂದು ಡಾ: ಅಂಬೇಡ್ಕರ್ ಹೇಳಿದರು. ಕಾಂಗ್ರೆಸ್  ಆಗಲೀ ಬೇರೆ ಯಾವುದೇ ರಾಜಕೀಯ ಸಂಸ್ಥೆಯಾಗಲೀ ಅವರನ್ನು ಹೆದರಿಸುವ ಪ್ರಯತ್ನವನ್ನು ಮಾಡುವುದು ಬೇಡ.ಬೊಂಬಾಯಿನಲ್ಲಿ ಶಾಸನ ಸಭೆಗೆ ನಡೆದ ಪ್ರಾಥಮಿಕ  ಚುನಾವಣೆಗಳ ಸಂದರ್ಭದಲ್ಲಿ ಒಬ್ಬ ಪರಿಶಿಷ್ಟ ಅಭ್ಯರ್ಥಿಯನ್ನು ಕೊಲೆ ಮಾಡಲಾಯಿತು. ಅದರ ಹೋಣೆಗಾರಿಕೆಯನ್ನು ಡಾ: ಅಂಬೇಡ್ಕರ್ ಅವರು ಕಾಂಗ್ರೆಸ್ಸ್ ಮೇಲೆ ಹೊರಿಸಿ, ಅಂತ್ಯ ಕ್ರಿಯೆ ಮೆರವಣಿಗೆಯ ಮೇಲೆ ಪೋಲೀಸರು ಮಾಡಿದ  ಲಾಠಿ ಪ್ರಹಾರವನ್ನು ಖಂಡಿಸಿದರು.

ಕಾಂಗ್ರೆಸ್ ಪಕ್ಷ ದೇಶದಲ್ಲಿನ ಇಡೀ ರಾಜಕೀಯ ಕ್ಷೇತ್ರವನ್ನು  ತಮ್ಮ  ಕಬ್ಜೆಗೆ [ಹತೋಟಿಗೆ] ತೆಗೆದುಕೊಳ್ಳಲು ಹೊರಟಿದ್ದಾರೆ ಮತ್ತು ಆ ಪ್ರಯತ್ನದಲ್ಲಿ ಲಂಚ ಕೊಡುವ ಮಟ್ಟಿಗೂ ಇಳಿದಿದ್ದಾರೆ. ಎಂದು ಡಾ: ಅಂಬೇಡ್ಕರ್ ಅವಲೋಕಿಸಿದರು. ಬಿಡಿ ವ್ಯಕ್ತಿಗಳಿಗೆ ಕಾಂಗ್ರೆಸ್ ಆಶ್ರಯವನ್ನು ಕೊಟ್ಟು ಪರಿಶಿಷ್ಟ ಜಾತಿಗಳಂಥ ಸಂಸ್ಥೆಗಳನ್ನು ಬುಡಮೇಲು ಮಾಡಲು ಪ್ರಯತ್ನಿಸಿದ್ದಾರೆ ಎಂದರು.

ಆದರೆ ಇಂಥ ಪ್ರಯತ್ನಗಳನ್ನು ತಡೆಗಟ್ಟುವಷ್ಟರ ಮಟ್ಟಿಗೆ ಫೆಡರೇಷನ್ ಬಲಶಾಲಿಯಾಗಿದೆ ಮತ್ತು ದಿನೇ ದಿನೇ ಹೆಚ್ಚು ಹೆಚ್ಚು ಬಲವನ್ನು ಪಡೆದುಕೊಳ್ಳುತ್ತಿದೆ ಎಂದರು. ಅವರ ರಾಜಕೀಯ ಹಕ್ಕುಗಳನ್ನು ಅವರಿಗೆ ಕೊಡುವವರೆಗೂ ಹಿಂದೂಗಳೊಂದಿಗೆ ಅವರಿಗೆ ಏನೂ ಆಗಬೇಕಾಗಿಲ್ಲ ಎಂದರು.

ಕಳೆದ ಕೆಲವು ದಿನಗಳಲ್ಲಿ ಕಾಗ್ರೆಸ್ ಜನಗಳ ಭಾಷಣಗಳು ರಾಷ್ಟ್ರೀಯ ಸರ್ಕಾರ ಕೇಂದ್ರದಲ್ಲಿ ಸ್ಥಾಪಿತವಾದರೆ ಆಹಾರ ಪರಿಸ್ಥಿತಿ ಬಗೆಹರಿದು ಬಿಡುತ್ತದೆ ಎಂದು ಜನಗಳ ಮನಸ್ಸಿನಲ್ಲಿ  ಅಭಿಪ್ರಾಯವನ್ನು ಮೂಡಿಸುತ್ತಿದ್ದಾರೆ,. ಖಂಡಿತವಾಗಿಯೂ ಕಾಂಗ್ರೆಸ್ನವರು ಪವಾಡಗಳನ್ನು ಮಾಡಲಾರರು. ಆಹಾರ ಸಮಸ್ಯೆಯನ್ನು ಬಗೆಹರಿಸುತ್ತೇವೆಯೆಂಬ ಈ ಮಾತುಗಳೆಲ್ಲ ಕೇವಲ ಪೊಳ್ಳು ಮಾತುಗಳಷ್ಟೆ; ಕಾರ್ಯಕಾರಿ ಪರಿಷತ್ತಿನ ಕೆಲವು  ಸದಸ್ಯರನ್ನು ಬದಲಾಯಿಸಿ ಹಿಂದೂಗಳನ್ನು ತಂದರೆ ಇದೆಲ್ಲಾ ಆಗಿಬಿಡುತ್ತದೆಯಂತೆ.

ಕಾಂಗ್ರೆಸ್ನವರು ಬ್ರಿಟಿಷ್ ಸರ್ಕಾರ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದೆ ಎಂದು ಆಪಾದಿಸುತ್ತಿದ್ದಾರೆ. ಅದೇ ಆಟವನ್ನೇ ಕಾಂಗ್ರೆಸ್ನವರೂ ಅಡಿದ್ದಾರೆ ಮತ್ತು ಅದರಲ್ಲಿ ಕೊಚ ಜಯವನ್ನು ಸಹ ಪಡೆದುಕೊಂಡಿದ್ದಾರೆ; ಈ ಜಯ ಸಾಧಿಸಿರುವುದು ಕಳೆದ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳ ಫೆಡರೇಷನ್ ಮಟ್ಟಿಗೆ. ಇದೇ ಆಟವನ್ನು ಮುಂದಿನ ಚುನಾವಣೆಗಳಲ್ಲಿಯೂ ಅವರು ಮುಂದುವರಿಸುತ್ತಾರೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ; ಆದರೆ ಈ ಸಲ ಪರಿಶಿಷ್ಟ ಜಾತಿಗಳವರು ಅವರ ಬಲೆಗೆ ಬೀಳುವುದಿಲ್ಲ.

ಪರಿಶಿಷ್ಟ ಜಾತಿಗಳವರು ಕಾಂಗ್ರೆಸ್ ವಿರುದ್ಧ ಸ್ಪರ್ಧಿಸುವ ಆಸೆಯನ್ನು ಇಟ್ಟುಕೊಳ್ಳಲಾರರು; ಚುನಾವಣೆಗಳ ಸಮಯದಲ್ಲಿ ವ್ಯವಸ್ಥೆಗಳನ್ನು ಮಾಡುವುದಕ್ಕಾಗಿ ಕಾಗ್ರೆಸ್ನವರಿಗೆ ಬಂಡವಾಳಶಾಹಿಗಳ ಬೆಂಬಲವಿದೆ. ಮತಗಟ್ಟೆಗಳಿಗೆ ಮತದಾರರುಗಳನ್ನು ಕರೆದುಕೊಂಡು ಹೋಗುವುದಕ್ಕೆ ಯಾವುದೇ ಕಾರುಗಳನ್ನು ಒದಗಿಸಲಾಗುವುದಿಲ್ಲ. ಖಂಡಿತವಾಗಿ ಪ್ರತಿಯೊಬ್ಬ ಪರಿಶಿಷ್ಟ ಜಾತಿಗಳ ಮತದಾರ ಮತಗಟ್ಟೆಗೆ ನಡೆದುಕೊಂಡು

ಹೋಗಿ ತನ್ನ ಮತವನ್ನು ಚಲಾಯಿಸುತ್ತಾನೆ; ಇದರಿಂದ ಅವನು ಫೆಡರೇಷನ್ನಿನ ಬೆನ್ನಿನ ಹಿಂದೆ ಗಟ್ಟಿಯಾಗಿ ನಿಂತಿದ್ದಾನೆ ಎಂದು ಪ್ರಪಂಚಕ್ಕೆ ಗೊತ್ತಾಗುತ್ತದೆ. ಫೆಡರೇಷನ್ನಿನ ಬಲ ಎಷ್ಟು ಎಂಬುದು ಪ್ರಾಥಮಿಕ ಚುನಾವಣೆಗಳಲ್ಲಿ ಬೇಕಾದಷ್ಟು ಸಾಬೀತಾಗಿದೆ; ಆ ಚುನಾವಣೆಗಳಲ್ಲಿ ಫೆಡರೇಷನ್ನಿನ ಬೆಂಬಲಿಗರು ಕಾಂಗ್ರೆಸ್ ಬೆಂಬಲಿಗರನ್ನು ಅತ್ಯಧಿಕ ಸಂಖ್ಯೆಯಲ್ಲಿ ಹಿಂದೆ ಹಾಕಿದ್ದರು. ಫಲಿತಾಂಶಗಳನ್ನು ನೋಡಿದ ಕಾಂಗ್ರೆಸ್‌ವರು ಪ್ರಜಾಸತ್ತೆಯ ವಿಧಾನಗಳಿಗೆ ನಿಷ್ಠರಾಗಿದ್ದರೆ ಸ್ಪರ್ಧೆಯಿಂದ ಹಿಂದೆ ಸರಿಯಲೇ ಬೇಕಾಗಿತ್ತು.

ತಮಗೆ ಚುನಾವಣಾ ಪ್ರಚಾರಕ್ಕಾಗಿ ಕೊಡಮಾಡಿದ ಹಣದ ಚೀಲದ ಬಗ್ಗೆ ಉಲ್ಲೇಖಿಸುತ್ತಾ, ಹಣದ ಮೊತ್ತ ಕಡಿಮೆಯಾಗಿದ್ದರೂ ಅವರಿಗೆ ಅದರ ಬಗ್ಗೆ ಏನೇನೂ ಚಿಂತೆ ಇಲ್ಲ. ಕಾರಣವೆಂದರೆ ಅವರ ಪ್ರಚಾರ ಮಲಿನವಾಗಿಲ್ಲದ, ಪ್ರಾಮಾಣಿಕವಾದ ಮತ್ತು ನೇರವಾದ ಪ್ರಚಾರವಾಗಿರುತ್ತದೆ. ಕಾಂಗ್ರೆಸ್ ನಾಯಕರು ಭಾರಿ ಹಣವನ್ನು ಸಂಗ್ರಹಿಸುತ್ತಿದ್ದಾರೆ, ಕಾರಣ ಅವರಿಗೆ ಆ ಹಣ ವೋಟುಗಳನ್ನು ಕೊಂಡು ಕೊಳ್ಳಲು ಬೇಕಾಗಿದೆ ಎಂದರು.

ಇದಕ್ಕೆ ಮುಂಚೆ, ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಮಿ: ಬಿ.ಕೆ. ಗಾಯಕ್ವಾಡ್ ಅವರು ಪರಿಶಿಷ್ಟ ಜಾತಿಗಳವರಿಗೆ ಮಿ: ಗಾಂಧಿಯವರು ಏನನ್ನೂ ಮಾಡಲಿಲ್ಲವೆಂದು ಹೇಳಿದರು. ಮದ್ರಾಸಿನಲ್ಲಿ ಮಿ: ಗಾಂಧಿಯವರು ಇತ್ತೀಚೆಗೆ ಮಾಡಿದ ಭಾಷಣವನ್ನು ಟೀಕಿಸಿದರು; ಆ ಭಾಷಣದಲ್ಲಿ ಅವರು ಪರಿಶಿಷ್ಟ ಜಾತಿಗಳವರು ಸರ್ಕಾರದ ಕಡೆಗೆ ನೋಡುವುದು ರಾವ್ ಬಹಾದೂರ್‌ಗಳಾಗುವುದಕ್ಕೆ, ಇಲ್ಲವೇ ಒಳ್ಳೆಯ ಕೆಲಸಗಳನ್ನು ಗಿಟ್ಟಿಸಿಕೊಳ್ಳುವುದಕ್ಕೆ ಅಂದಿದ್ದರು.

ಡಾ: ಅಂಬೇಡ್ಕರ್ ಅವರು ಸತಾರಾ ಮತ್ತು ಬೆಳಗಾಂವ್ ಜಿಲ್ಲೆಯಿಂದ ತಮ್ಮ ಚುನಾವಣಾ ಪ್ರವಾಸವನ್ನು ಮುಗಿಸಿಕೊಂಡು ಭಾನುವಾರ ಬೆಳಗ್ಗೆ ವಾಪಸ್ ಬಂದು, ಸೋಮವಾರ ಸಾಯಂಕಾಲ ಬೊಂಬಾಯಿಂದ ನವ ದೆಹಲಿಗೆ ತೆರಳುವರು.

ಹೇಗಾದರೂ, ಅದೇ ವಿಷಯದ ಮೇಲೆ ಡಾ: ಬಿ.ಆರ್.ಅಂಬೇಡ್ಕರ್ ಅವರ ಭಾಷಣದಲ್ಲಿ ಹೆಚ್ಚಿನ ಆಯಾಮಗಳಿದ್ದು ಅದನ್ನು ಫ್ರೀ ಪ್ರೆಸ್ ಜರ್ನಲ್ ವರದಿ ಮಾಡಿತ್ತು. ಆ ಆಯಾಮಗಳು ಹೀಗಿದ್ದವು:

ನಮಗೆ ಹಿಂದೂಗಳ ಮೇಲೆ ಯಾವ ನಂಬಿಕೆಯೂ ಇಲ್ಲ; ಅವರು ನಮ್ಮನ್ನು ಕಳೆದ ೨೦೦೦ ವರ್ಷಗಳಿಂದ ತೀರಾ ಕೆಟ್ಟದಾಗಿ ಮತ್ತು ಅವಮಾನಕರವಾದ ರೀತಿಯಲ್ಲಿ ನಡೆಸಿಕೊಂಡಿದ್ದಾರೆ; ಈಗ ನಾವು ಸಂಘಟಿತರಾಗುವ ಪರಿಸ್ಥಿತಿಯಲ್ಲಿರುವಾಗ, ನಮಗೆ ಬಹಳ ದಿನಗಳಿಂದ ಬರಬೇಕಾಗಿರುವುದೆಲ್ಲಕ್ಕೂ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇವೆ ಎಂದು ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ: ಅಂಬೇಡ್ಕರ್ ಅವರು ಹೇಳಿದರು. ಅವರು ಈ ಸಾಯಂಕಾಲ ನಾರೆ ಪಾರ್ಕ್‌ನಲ್ಲಿ ಪರಿಶಿಷ್ಟ ಜಾತಿಗಳವರ ದೊಡ್ಡ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಸ್ವರಾಜ್ ಮತ್ತು ರಾಷ್ಟ್ರೀಯ ಸರ್ಕಾರ ಇವುಗಳ ಒಂದೇ ಅರ್ಥವೆಂದರೆ ಹಿಂದು ರಾಜ್ ಅದನ್ನು ನಾವು ಇನ್ನು ಸಹಿಸಲಾಗುವುದಿಲ್ಲ ಎಂದು ಹೇಳಿದರು. ಆದುದರಿಂದ ಬ್ರಿಟಿಷರು ಭಾರತದಿಂದ ಹೋಗುವುದಕ್ಕೆ ಮುಂಚೆ ಹಕ್ಕುಗಳ ಹಂಚಿಕೆ ಆಗಲೇಬೇಕೆಂದು ಆಗ್ರಹಪಡಿಸಿದರು.

# ೧೦೭
# ನಿಮ್ನವರ್ಗಗಳವರನ್ನು ಕಡೆಗಣಿಸಲಾಗಿದೆ

೧೨ನೇ ಮಾರ್ಚ್, ೧೯೪೬ ರಂದು, ಡಾ: ಬಿ.ಆರ್.ಅಂಬೇಡ್ಕರ್ ಅವರು ಮದರಾಸಿನಲ್ಲಿ ಒಂದು ಭಾಷಣವನ್ನು ಮಾಡಿದರು. ಮೊದಲನೆ ದುಂಡು ಮೇಜಿನ ಸಮ್ಮೇಳನದಿಂದ ಪ್ರಸ್ತುತ ತಾರೀಖಿನವರೆಗೂ ನಿಮ್ನ ವರ್ಗಗಳ ಉತ್ತಮಿಕೆಗಾಗಿ ತಾವು ಮಾಡಿದ ಪ್ರಯತ್ನಗಳ ರೂಪರೇಷೆಯನ್ನು ಕೊಟ್ಟರು; ಕಾಂಗ್ರೆಸ್ ಆ ಪ್ರಯತ್ನಗಳಿಗೆ ಅಡ್ಡಗಾಲು ಹಾಕಿದೆ ಎಂದು ಆಪಾದನೆ ಮಾಡಿದರು.

ನಿಮ್ನವರ್ಗಗಳನ್ನು ಕಡೆಗಣಿಸಲು ಕಾಂಗ್ರೆಸ್ ತನ್ನ ಎಲ್ಲಾ ಶಕ್ತಿಗಳನ್ನು ಕೇಂದ್ರೀಕರಿಸಿತು. ಅಸ್ಪೃಷ್ಯರನ್ನು ಹಿಂದೆ ಹಾಕಲು ಒಂದು ಸ್ಕೀಮ್ ಅನ್ನು ತಯಾರಿಸಿತು. ಮುಸ್ಲಿಮರನ್ನು ಸಮೀಪಿಸಿ, ಅವರು ಅಸ್ಪೃಷ್ಯರನ್ನು ಬೆಂಬಲಿಸುವುದಿಲ್ಲ ಎಂಬ ನಿಬಂಧನೆಯ ಮೇಲೆ ನಾವು ನಿಮ್ಮ ೧೪ ಅಂಶಗಳಿಗೆ ಒಪ್ಪಿಗೆ ಕೊಡುತ್ತೇವೆ ಎಂದರು. ಆದರೆ ಮುಸ್ಲಿಮರು ಅವರಲ್ಲಿರುವ ಮಾನವೀಯತೆಯ ಮೇಲಿರುವ ಉದಾತ್ತ ಪ್ರಜ್ಞೆಯ ಕಾರಣದಿಂದ ಈ ಪ್ರಸ್ತಾವವನ್ನು ತಿರಸ್ಕಿಸಿದರು. ಅಸ್ಪೃಷ್ಯರನ್ನು ಏಕಾಂಗಿಗಳಾಗಿ ಮಾಡಲು ಅವರು ಒಪ್ಪಲಿಲ್ಲ.

# ೧೦೮
# ಪರಿಶಿಷ್ಟ ಜಾತಿಗಳವರನ್ನು ಎಲ್ಲಿದ್ದರೋ ಅಲ್ಲಿಯೇ ಬಿಡಲಾಗಿದೆ

ಭಾರತದಲ್ಲಿನ ಪರಿಶಿಷ್ಟ ಜಾತಿಗಳವರ ನಿಮಿತ್ತದ ಮೇಲೆ ಬ್ರಿಟಿಷ್ ಮಂತ್ರಿಮಂಡಲದ ನಿಯೋಗ ಅವರನ್ನು ನಡಸಿಕೊಂಡ ರೀತಿಯಿಂದ ಆಟಮ್ ಬಾಂಬ್ ಅನ್ನು ಸಿಡಿಸಿದ ಹಾಗೆ ಆಗಿ ಆಳವಾದ ವ್ಯಸನವಾಗಿದೆ ಎಂದು ಡಾ: ಅಂಬೇಡ್ಕರ್ ಅವರು, ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಒಂದು ಸಭೆಯಲ್ಲಿ ಮಾತನಾಡುತ್ತ ಹೇಳಿದರು. ಬಂಗಾಳ ಸರ್ಕಾರದ ಸಚಿವರಾದ ಮಿ: ಜೆ.ಎನ್. ಮಂಡಲ್ ಅವರು ಆ ಸಭೆಗೆ ಅಧ್ಯಕ್ಷತೆ ವಹಿಸಿದ್ದರು.

೬೦ ದಶಲಕ್ಷ ಜನಸಂಖ್ಯೆ ಇರುವ ಪರಿಶಿಷ್ಟ ಜಾತಿಗಳವರಿಗೆ ಮಧ್ಯಂತರ ಸರ್ಕಾರದಲ್ಲಿ ಒಂದೇ ಒಂದು ಸ್ಥಾನವನ್ನು ಕೊಡಲಾಗಿದೆ ಎಂಬುದಕ್ಕೆ ಡಾ: ಅಂಬೇಡ್ಕರ್ ಅವರು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಮೂರು ಅಥವಾ ನಾಲ್ಕು ದಶಲಕ್ಷ ಜನಸಂಖ್ಯೆಗಿಂತ ಹೆಚ್ಚಿಗೆ ಇರದ ಇತರ ಸಮುದಾಯಗಳಿಗೂ ಸಹ ಒಂದು ಸ್ಥಾನವನ್ನು ಕೊಡಲಾಗಿದೆ ಎಂದರು.

ಈ ದೇಶದಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸುವುದಕ್ಕೆ ಬ್ರಿಟಿಷರಿಗೆ ಸಹಾಯ ಮಾಡಿದವರು ಬಿಹಾರ ಮತ್ತು ಬೊಂಬಾಯಿನ ಪರಿಶಿಷ್ಟ ಜಾತಿಗಳವರು ಆಗಿದ್ದರೂ, ಭಾರತದಲ್ಲಿ ಕಳೆದ ೧೫೦ ವರ್ಷಗಳಿಂದ ಬ್ರಿಟಿಷ್ ಆಡಳಿತದ ಫಲಗಳನ್ನು ಅನುಭವಿಸಿದವರು ಹಿಂದೂಗಳು ಮತ್ತು ಮುಸ್ಲಿಮರು ಮಾತ್ರ ಎಂದು ಡಾ: ಅಂಬೇಡ್ಕರ್ ಹೇಳಿದರು. ಪರಿಶಿಷ್ಟ ಜಾತಿಗಳನ್ನು ಪ್ರಾರಂಭದಲ್ಲಿ ಅವರು ಎಲ್ಲಿದ್ದರೋ ಅಲ್ಲಿಯೇ ಬಿಡಲಾಗಿದೆ ಎಂದು ಹೇಳಿದರು. ದೇವಸ್ಥಾನಗಳು, ಭಾವಿಗಳು, ಧರ್ಮಶಾಲೆಗಳು, ಆಫೀಸುಗಳು, ಕಚೇರಿಗಳು ಅವರಿಗೆ ಮುಚ್ಚಿಯೇ ಇವೆ. ಬ್ರಿಟಿಷ್ ಮಂತ್ರಿಮಂಡಲ ಮಾಡಿದ ಕೆಲಸದಿಂದಾಗಿ ಅವರ, ನಮ್ಮ ದಾರಿಗಳು ಬೇರೆ ಬೇರೆ ಯಾಗಿವೆ ಎಂದರು.

ಡಾ: ಅಂಬೇಡ್ಕರ್ ಅವರು ತಮ್ಮ ಸಭಿಕರನ್ನು ಎಚ್ಚರಿಸುತ್ತಾ ಹೇಳಿದ್ದೇನೆಂದರೆ, ಮುಂದೆ ಬರುವ ಹೋರಾಟದಲ್ಲಿ ಅವರಿಗೆ ರಾಜಕೀಯ ಅಧಿಕಾರವಿಲ್ಲದಿದ್ದರೆ ಭಾರತದ ಪರಿಶಿಷ್ಟ ಜಾತಿಗಳವರು ನಾಶವಾಗಿ ಹೋಗಿ ಬಿಡುತ್ತಾರೆ ಎಂದರು. ಅಗಾಧ ಅಧಿಕಾರವಿರುವ ಮತ್ತು ಅವರನ್ನು ಪರಿಯಾ ನಾಯಿಗಳು ಎಂದು ಕರೆದೇ ಅಭ್ಯಾಸವಾಗಿರುವ ಇತರ ಸಮುದಾಯಗಳು ಅವರನ್ನು ಹೊಸಕಿ ಹಾಕಿ ಬಿಡುತ್ತವೆ ಎಂದು ಹೇಳಿದರು.

ಪ್ರಾಂತೀಯ ಶಾಸನಸಭೆಗಳಲ್ಲಿ ಇರುವ ಪರಿಶಿಷ್ಟ ಜಾತಿಗಳ ಸದಸ್ಯರುಗಳಿಗೆ, ಅವರ ಭವಿಷ್ಯ ಕಟ್ಟುವ ಅಥವಾ ಕೆಡವುವ ಈ ವಿಷಮ ಘಟ್ಟದಲ್ಲಿ ಅವರ ಕರ್ತವ್ಯಗಳ ಬಗ್ಗೆ ಗಮನ ಕೊಡಬೇಕು, ಎಂದು ಡಾ: ಅಂಬೇಡ್ಕರ್ ಮನವಿ ಮಾಡಿದರು.

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಕಾರ್ಯದರ್ಶಿ ಆದ ಮಿ: ಪಿ.ಎನ್. ರಾಜ್ ಭೋಜ್ ಅವರೂ ಸಹ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

## ೧೧೯
## ನನಗೆ ನಮ್ಮ ಜನಗಳಿಗೂ ಮತ್ತು ಈ ದೇಶಕ್ಕೂ ಸಹ ನಿಷ್ಠೆ ಇದೆ

ಪರಿಶಿಷ್ಟ ಜಾತಿಗಳ ಉದ್ಧಾರಕರಾದ ಅಂಬೇಡ್ಕರ್ ಆವರ ೫೫ನೇ ವಾರ್ಷಿಕ ಜನ್ಮ ದಿನೋತ್ಸವವನ್ನು ನವದೆಹಲಿಯುದ್ದಕ್ಕೂ ಉತ್ಸಾಹ ಮತ್ತು ಅನಂದಮಯ ದೃಷ್ಯಗಳ ನಡುವೆ ಆಚರಿಸಲಾಯಿತು. ದೆಹಲಿಯಲ್ಲಿ ಸಾರ್ವಜನಿಕ ಸಭೆಗಳ ಮೇಲೆ ಆಗ ಜಾರಿಯಲ್ಲಿದ್ದ ನಿಷೇಧಾಜ್ಞೆಯ ಕಾರಣದಿಂದ ಈ ವರ್ಷ ಈ ಸಮಾರಂಭದ ಅಂಗವಾಗಿ ನಡೆಸುತ್ತಿದ್ದ ಸಾರ್ವಜನಿಕ ಸಭೆಯನ್ನು ಕೈ ಬಿಡಲಾಯಿತು; ಆದರೆ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿಯವರು ಹೊರಡಿಸಿದ ನಿರ್ದೇಶನದ ಪ್ರಕಾರ ಫೆಡರೇಷನ್ನಿನ ಬಾವುಟಗಳನ್ನು ಎಲ್ಲಾ ಮುಖ್ಯವಾದ ಬಡಾವಣೆಗಳಲ್ಲಿ, ಮಧ್ಯಂತರ ಸರ್ಕಾರದ ಕಾನೂನು ಸದಸ್ಯರಾದ ಮಿ: ಜೆ.ಎನ್. ಮಂಡಲ್ ಅವರ ನಿವಾಸವೂ ಸೇರಿದಂತೆ, ಹಾರಿಸಲಾಯಿತು. ಡಾ: ಬಾಬಾ ಸಾಹೆಬ್ ಅಂಬೇಡ್ಕರ್ ಅವರ ಧೀರ್ಘಾಯುಷ್ಯಕ್ಕಾಗಿ ಪ್ರಾರ್ಥನೆಗಳನ್ನು ಮಾಡಲಾಯಿತು, ಅಲ್ಲದೆ ಎಲ್ಲಾ ಪರಿಶಿಷ್ಟ ಜಾತಿಗಳವರ ನಿವಾಸಗಳನ್ನು ರಾತ್ರಿಯಲ್ಲಿ ದೀಪಗಳಿಂದ ಬೆಳಗಿಸಲಾಯಿತು.

೧೪ನೇ ಏಪ್ರಿಲ್ ೧೯೪೭ರ ಬೆಳಗ್ಗೆ ೧೦೦೧ರೂಪಾಯಿಗಳ ಪರ್ಸ್ ಅನ್ನು ಬಾಬಾ ಸಾಹೆಬ್ ಅವರಿಗೆ ದೆಹಲಿ ಪರಿಶಿಷ್ಟ ಜಾತಿಗಳ ಕಲ್ಯಾಣ ಸಂಘದ (ಕರೋಲ್ ಬಾಗ್ ಶಾಖೆ) ಪರವಾಗಿ ಸಮರ್ಪಿಸಲಾಯಿತು. ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಕೆಲವು ವೈಯುಕ್ತಿಕ ಸದಸ್ಯರು ಸಹ ಇನ್ನೊಂದು ಪರ್ಸ್ ಅನ್ನು ಸಮರ್ಪಿಸಿದರು. ತಮಗೆ ಮಾಡಿದ ಅಭಿನಂದನೆಗಳಿಗೆ ಉತ್ತರ ಕೊಡುತ್ತಾ, ಬಾಬಾ ಸಾಹೆಬ್ ಅವರು ಹೀಗೆ ಅವಲೋಕನೆಗಳನ್ನು ಮಾಡಿದರು:? ನಾನು ಬೊಂಬಾಯಿನಲ್ಲಿ ಈ ದಿನ ಇದ್ದಿದ್ದರೆ ನಮ್ಮ ಜನಗಳು ನನಗೆ ಮುತ್ತಿಗೆ ಹಾಕಿ ಬಿಡುತ್ತಿದ್ದರು. ನಾನು ಬೇಕೆಂದೇ ೧೩ನೇ ತಾರೀಖು ದೊಡ್ಡ ಗುಂಪುಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಇಲ್ಲಿಗೆ ಬಂದೆ, ಕಾರಣ ನನಗೆ ಶಾಂತಿ ಮತ್ತು ಸಮಾಧಾನ ಬೇಕಾಗಿದೆ ಎಂದರು.

ಒಂದು ದೃಷ್ಟಿಕೋನದಿಂದ ಜನ್ಮ ದಿನಗಳ ಆಚರಣೆಗಳು ಅಷ್ಟೇನೂ ಸಂತೋಷಕರವಾದುದಲ್ಲ. ನಿಮಗೆ ಗೊತ್ತಿರುವ ಹಾಗೆ ಮಾನವ ಅಮರನೇನಲ್ಲ ಒಂದಿಲ್ಲೊಂದು ದಿನ ಅವನು ಹೋಗಲೇಬೇಕು. ಜನ್ಮ ದಿನಗಳು ಒಬ್ಬರ ಜೀವಮಾನದಲ್ಲಿ ಅನೇಕ ವರ್ಷಗಳು ಕಳೆದು ಹೋಗಿವೆ ಎಂಬುದನ್ನು ನೆನಪು ಮಾಡಿಕೊಡುತ್ತವೆ. ಹೌದು, ಈ ಕಳೆದು ಹೋಗಿರುವ ವರ್ಷಗಳ ಬಗ್ಗೆ ಯಾರೂ ವ್ಯಸನಪಡಬೇಕಾಗಿಲ್ಲ. ಏಕೆಂದರೆ ಮಾನವ ತನ್ನ ಜೀವಮಾನವನ್ನು ಸವೆಸಬೇಕೆಂಬುದು ಸ್ವಾಭಾವಿಕ. ಹೇಗಾದರೂ ಮಾನವನೊಬ್ಬ ತನ್ನ ಜೀವನವನ್ನು ಯಾವುದಾದರು ಸಾರ್ವಜನಿಕ ನಿಮಿತ್ತಕ್ಕಾಗಿ ಸಮರ್ಪಿಸಿದ್ದರೆ, ಆಗ ಅದೊಂದು ಪರಿಗಣಿಸಲೇಬೇಕಾದ ವಿಷಯವಾಗಿ ಬಿಡುತ್ತದೆ.

ಪರಿಸ್ಥಿತಿಯತ್ತ ಕಣ್ಣು ಹಾಯಿಸಿದರೆ, ನನಗೆ ಬಹಳ ಸಂತೋಷವಾಗುವುದೇನೆಂದರೆ, ಭಾರತದಲ್ಲಿ ಎಲ್ಲೆಡೆ ಪರಿಷ್ಟ ಜಾತಿಗಳವರು ತಮ್ಮ ನಿರ್ಬಲತೆಗಳ ಬಗ್ಗೆ ಅರಿವನ್ನುಂಟು ಮಾಡಿಕೊಂಡಿದ್ದಾರೆ ಮತ್ತು ಈಗ ಚೆನ್ನಾಗಿ ಸಂಘಟಿತರಾಗಿದ್ದು, ತಮ್ಮ ಜೀವನದಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಎಷ್ಟು ಧೃಡ ಸಂಕಲ್ಪ ಮಾಡಿದ್ದಾರೆಂದರೆ, ತನ್ನ ಭವಿಷ್ಯವನ್ನು ಕುರಿತು ಯಾರೂ ಹತಾಶರಾಗಬೇಕಾಗಿಲ್ಲ.. ಆ ದಿನ ನಾನು

ವೈಸ್ರಾಯ್ ಅವರಿಗೆ ಹೇಳಿದ್ದನ್ನು ನಿಮಗೂ ಹೇಳಲು ನನಗೇನೂ ತೊಂದರೆ ಇಲ್ಲ. ನೀವು ನನ್ನನ್ನು ಕರೆಯದೇ ಇದ್ದಿದ್ದರೆ, ನಾನು ನಿಮ್ಮನ್ನು ನೋಡಲು ಬರುತ್ತಿರಲಿಲ್ಲ. ಬ್ರಿಟಿಷರ ಹಿಂದೆ ಓಡಲು ನನಗೆ ಯಾವ ಆಸೆಯೂ ಇಲ್ಲ. ಒಂದು ಕಾಲದಲ್ಲಿ ಪರಿಶಿಷ್ಟ ಜಾತಿಗಳವರನ್ನು ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಬ್ರಿಟಿಷರು ಹೊತ್ತುಕೊಂಡಿದ್ದರು. ಆ ಹೊಣೆಗಾರಿಕೆಯನ್ನು ನಿಭಾಯಿಸಲು ಅವರು ವಿಶೇಷವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ನಾನು ತಿಳಿದಿದ್ದೆ. ಬ್ರಿಟಿಷರು ಹೋಗುತ್ತಿದ್ದರೆ, ಪರವಾ ಇಲ್ಲ. ಆದರೆ ನಮಗೆ ಬೇಕಾದ ರಕ್ಷಣೋಪಾಯಗಳನ್ನು ಸಂವಿಧಾನದಲ್ಲಿ ಅಳವಡಿಸಲು ಯಾವುದೇ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳದೆ ಅವರು ಹೋಗುತ್ತಿದ್ದಾರೆ. ಅವರು ಮಾಡಿದ್ದು ಸರಿಯೇ, ತಪ್ಪೇ ಎಂಬುದನ್ನು ಅವರೇ ತೀರ್ಮಾನ ಮಾಡಬೇಕು, ನಾನಲ್ಲ. ಅಸ್ಪೃಶ್ಯರ ಕಲ್ಯಾಣಕ್ಕಾಗಿ ಏನನ್ನಾದರೂ ಮಾಡಿ ಎಂದು ನೂರಾರು ಬಾರಿ ನಾನು ಅವರನ್ನು ಮನವೊಲಿಸಬೇಕಾಯಿತು. ಬ್ರಿಟಿಷರು ತಮ್ಮ ಕರ್ತವ್ಯವನ್ನು ಮಾಡಲು ನಿರಾಕರಿಸಿದರೆ, ೬೦ ದಶಲಕ್ಷ ಅಸ್ಪೃಶ್ಯರ ವಿಧಿಗೇನೂ ಬೀಗಮುದ್ರೆ ಬೀಳುವುದಿಲ್ಲ ಎಂದು ನನಗೆ ಭರವಸೆ ಇದೆ. ಲೇಬರ್ ಸರ್ಕಾರ ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಹಕ್ಕುಗಳನ್ನು ಕೊಡಲು ಇಚ್ಚಿಸದಿದ್ದರೂ ಸಹ, ೬೦ ದಶಲಕ್ಷ ಅಸ್ಪೃಶ್ಯರು ಯಾವ ಬೆಂಬಲವೂ ಇಲ್ಲದೆ, ಯಾವ ಅಧಿಕಾರವೂ ಇಲ್ಲದೆ ತಮಗೆ ಬೇಕಾದ್ದನ್ನು ಪಡೆದು ಕೊಳ್ಳುತ್ತಾರೆ ಎಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ.

ಖಂಡಿತವಾಗಿಯೂ ಈ ದಿನ, ನಾವುಗಳು ಯಾವ ಅರಿವೂ ಇಲ್ಲದ, ಯಾವ ಸಂಘಟನೆಯೂ ಇಲ್ಲದ, ಇತರರನ್ನು ಅನುಸರಿಸಬೇಕಾಗಿರುವ ಅದೇ ಹಳೆಯ ಜನಗಳಲ್ಲ. ಈ ದೇಶದಲ್ಲಿ ಇರುವ ಪ್ರತಿಯೊಬ್ಬರಿಗೂ ನಾವೀಗ ಬಹಳ ಬದಲಾಯಿಸಿದ ಜನಗಳೆಂದು ಗೊತ್ತು. . ಆದುದರಿಂದ, ನಾವು ಇನ್ನೂ ಹೆಚ್ಚಿನ ಬಲವನ್ನು, ಇನ್ನೂ ಹೆಚ್ಚಿನ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಕಾಂಗ್ರೆಸ್ನವರು, ಮುಸ್ಲಿಮ್ ಲೀಗ್ನವರು ಇಬ್ಬರೂ ನಮ್ಮ ಬೆಂಬಲವನ್ನು ಬಯಸುತ್ತಿದ್ದಾರೆ. ಅದಕ್ಕೆ ನಮ್ಮ ನಿಬಂಧನೆಗಳನ್ನು ಹಾಕುತ್ತಿದ್ದೇವೆ. ನಾವು ಇಷ್ಟು ಚೆನ್ನಾಗಿ ಸಂಘಟಿತರಾಗದೇ ಇದ್ದಿದ್ದರೆ, ಇದು ಸಂಭವಿಸುತ್ತಿರಲಿಲ್ಲ. ಆದರೆ ನಿಮಗೆ ನಾನು ಹೇಳಬೇಕೆಂದಿದ್ದುದೇನೆಂದರೆ, ದುರದೃಷ್ಟವಷಾತ್, ಬ್ರಿಟಿಷರು ಜೂನ್ ೧೯೪೮ರ ಹೊತ್ತಿಗೆ ಭಾರತವನ್ನು ಬಿಟ್ಟು ಹೋಗುತ್ತಾರೆ ಎಂಬ ಪ್ರಕಟನೆಯಿಂದ ನಮ್ಮ ವಿಷಯಕ್ಕೀಗ ಸಂಪೂರ್ಣವಾಗಿ ಮೋಡ ಕವಿದುಕೊಂಡಿದೆ. ಏನಾಗುತ್ತದೆ ಎಂಬುದರ ಬಗ್ಗೆ ನನಗೆ ಯಾವ ಕಲ್ಪನೆಯೂ ಇಲ್ಲ. ನಾನೀಗ ಕೆಲವು ಲೆಕ್ಕಾಚಾರಗಳನ್ನು ಮಾಡಿದ್ದೇನೆ. ಆದರೆ ಈಗ ಅದನ್ನು ಪ್ರಕಟಿಸಲು ನಾನು ಬಯಸುವುದಿಲ್ಲ. ತೀರಾ ಭಿನ್ನವಾದ ಸಂದರ್ಭಗಳಲ್ಲಿ ಬ್ರಿಟಿಷರು ಇಲ್ಲಿ ನಿಲ್ಲಬೇಕಾಗಿರಬಹುದು. ಆದರೆ ಹೊರಡಬೇಕೆದು ಬ್ರಿಟಿಷರು ತೆಗೆದುಕೊಂಡ ತೀರ್ಮಾನ, ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳನ್ನು ಸೃಷ್ಟಿ ಮಾಡಿದೆ. ಇವು ಸ್ವಲ್ಪ ಮಟ್ಟಿಗೆ ಸಾಂವಿಧಾನಿಕ ರಕ್ಷಣೋಪಾಯಗಳು ಬೇಕೆಂಬ ನಮ್ಮ ಬೇಡಿಕೆಯನ್ನು ಮಸಕುಗೊಳಿಸಿದೆ. ಆದರೂ, ಈ ವಿಷಯಕ್ಕೆ ಈ ರೀತಿ ಮೋಡ ಮುಸುಕಿದ್ದರೂ ಸಹ, ನಾವು ಸಂಪೂರ್ಣವಾಗಿ ಅಲ್ಲದಿದ್ದರೂ ಬಹಳಷ್ಟು ಮಟ್ಟಿಗೆ ನಮಗೆ ಅವಶ್ಯವಿರುವ ರಾಜಕೀಯ ರಕ್ಷಣೋಪಾಯಗಳನ್ನು ಪಡೆದುಕೊಳ್ಳುವುದರಲ್ಲಿ ಜಯಶಾಲಿಗಳಾಗುತ್ತೇವೆಂದು ನಾನು ಆಶಿಸುತ್ತೇನೆ.

ಮೂಲಭೂತ ಹಕ್ಕುಗಳನ್ನು ರಚಿಸುವ ಸಮಿತಿಯಲ್ಲಿ, ನಾವು ಬಹಳಷ್ಟು ಮಟ್ಟಿಗೆ ಜಯವನ್ನು ಸಾಧಿಸಿದ್ದೇವೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಮೂಲಭೂತ ಹಕ್ಕುಗಳ ಉಪ ಸಮಿತಿಗೆ ನಾನು ಸಲ್ಲಿಸಿದ ಒಂದು ಜ್ಞಾಪನಾ ಪತ್ರವನ್ನು ಸಮಿತಿ ಒಪ್ಪಿಕೊಂಡಿದೆ. ಒಂದು ವಿವಾದಾಂಶದ ಮೇಲೆ ಕೆಲವು ಭಿನ್ನಾಭಿಪ್ರಾಯಗಳಿದ್ದವು; ಅದು ಆಡಳಿತದಲ್ಲಿ ಮತ್ತು ಲೋಕಸೇವೆಯಲ್ಲಿ ಭೇಧಭಾವ ಮಾಡುವುದು. ಅಂಥ ಬಗೆಯ ಭೇದಭಾವವನ್ನು ತಪ್ಪಿಸಲಿಕ್ಕೆ ನಾನು ಕೆಲವು ಕ್ರಮಗಳನ್ನು ಸೂಚಿಸಿದ್ದೇನೆ ಮತ್ತು ಅದರಲ್ಲಿ

ನಮಗೆ ಜಯ ಸಿಗುತ್ತದೆ ಎಂದು ನಂಬಿದ್ದೇನೆ. ಅದು ಆಗಿಬಿಟ್ಟರೆ ಶಾಸನ ಸಭೆ ಅಥವಾ ಕಾರ್ಯಕಾರಿ ಸಮಿತಿಗಳಿಗೆ ಸಂಬಂಧಪಟ್ಟ ಹಾಗೆ ನಮಗೆ ಸಂವಿಧಾನದಲ್ಲೇ ಸಾಕಷ್ಟು ರಕ್ಷಣೆ ಸಿಗುತ್ತದೆ. ಅಲ್ಪಸಂಖ್ಯಾತರ ಉಪಸಮಿತಿ ೧೭ನೇ ಏಪ್ರಿಲ್ ಸೇರಿ, ಸ್ವಲ್ಪ ಸಮಯದವರೆಗೆ ತನ್ನ ಕೆಲಸವನ್ನು ಮುಂದುವರಿಸುತ್ತದೆ. ಅಲ್ಪಸಂಖ್ಯಾತರ

ಉಪಸಮಿತಿಯಲ್ಲಿರುವ ಪರಿಶಿಷ್ಟ ಜಾತಿಗೆ ಸೇರಿದ ಇಬ್ಬರು ಸದಸ್ಯರುಗಳು ಕಳುಹಿಸಿರುವ ಒಂದು ಜ್ಞಾಪನಾ ಪತ್ರ ಪರಿಶಿಷ್ಟ ಜಾತಿಗಳವರ ಒಟ್ಟು ಅಭಿಪ್ರಾಯಕ್ಕೆ ವಿರೋಧವಾಗಿದೆ ಎಂದು ತಿಳಿಸಲು ನನಗೆ ವಿಷಾದವಾಗುತ್ತದೆ. ಒಬ್ಬರು ಪ್ರತ್ಯೇಕ ಮತದಾರ ಮಂಡಲಕ್ಕೆ ಬದಲಾಗಿ ಜಂಟಿ ಮತದಾರರ ಮಂಡಲವನ್ನು ಪ್ರಸ್ತಾವಿಸಿದ್ದಾರೆ. ಅವರು ಡಿಸ್ಟ್ರಿಬ್ಯೂಟೀವ್ ವ್ಯವಸ್ಥೆಯ ಮತದಾನ ಇರುವ ಜಂಟಿ ಮತದಾರರ ಮಂಡಲವನ್ನು ಪ್ರಸ್ತಾವನೆ ಮಾಡಿದ್ದಾರೆ. ಇದು ರಾಜಕೀಯ ಗುಲಾಮಗಿರಿಯಲ್ಲದೆ ಬೇರೇನೂ ಅಲ್ಲ. (ನಾಚಿಕೆಗೇಡು, ನಾಚಿಕೆಗೇಡು ಎಂಬ ಕೂಗಾಟ). ನಾನು ಕಡೆಯತನಕ ಹೋರಾಟ ಮಾಡಲು ಸಿದ್ಧನಿದ್ದೇನೆ. ನನಗೆ ಉಪ ಸಮಿತಿಯಲ್ಲಿ ಇತರ ಅಲ್ಪಸಂಖ್ಯಾತ ಸಮುದಾಯಗಳ ಬೆಂಬಲ ಸಿಗುತ್ತದೆ ಎಂಬ ಭರವಸೆ ಇದೆ. ಈ ಹಂತದಲ್ಲಿ ಏನಾಗಬಹುದು ಎಂದು ಹೇಳಲು ನಾನು ಬಯಸುವುದಿಲ್ಲ; ಸಮಿತಿ ಈ ವಿಷಯವನ್ನು ತನ್ನ ಬಹುಸಂಖ್ಯಾತ ಮತದಿಂದ ಇತ್ಯರ್ಥ ಪಡಿಸಬೇಕಾಗಿದೆಯೋ, ಅಥವಾ ಅದು ಸಂಧಾನದ ಮೂಲಕ ಮಾಡಲು ಪ್ರಸ್ತಾವಿಸುತ್ತದೆಯೋ, ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಆದರೆ ಅವರು ವಿವಾದಾಂಶವನ್ನು ಬಹುಮತದ ಆಧಾರದ ಮೇಲೆ ತೀರ್ಮಾನಿಸಿದರೆ, ನಾನು ಆಗ ಖಂಡಿತವಾಗಿಯೂ ಸಂವಿಧಾನ ರಚನಾ ಸಭೆಯಿಂದ ಸಂಪೂರ್ಣವಾಗಿ ಹೊರಬರುತ್ತೇನೆ. (ಹರ್ಷಧ್ವನಿ). ಆಗ ನಾವು ಏನು ಮಾಡಬಹುದೆಂದು ಕರಾರುವಾಕ್ಕಾಗಿ ತೀರ್ಮಾನಿಸುತ್ತೇವೆ. ಈ ರಾಜಕೀಯ ವಿಷಯದಲ್ಲಿ ನಿಮಗೆ ಗೊತ್ತಿರುವ ಹಾಗೆ ನಾವು, ಕಡೆಯ ಪಕ್ಷ ನಾನು, ದ್ವಿನಿಷ್ಠೆಯೊಂದಿಗೆ ವ್ಯವಹರಿಸಬೇಕಾಗಿದೆ.

ಈ ದೇಶವಾಸಿಗಳಿಗೆ ನನ್ನ ನಿಷ್ಠೆ ಇದೆ, ಇಲ್ಲಿಯವರೆಗೂ ಅವರು ಎದುರಿಸಬೇಕಾದ ಎಲ್ಲಾ ಕಷ್ಟಗಳನ್ನು ಸೂಕ್ತವಾದ ರಾಜಕೀಯ ರಕ್ಷಣೋಪಾಯಗಳಿಂದ ಎದುರಿಸಲಾಗುತ್ತದೆ ಎಂದು ನಿರ್ಧರಿಸಿದ್ದೇನೆ. ಈ ದೇಶಕ್ಕೂ ಸಹ ನನ್ನ ನಿಷ್ಠೆ ಇದೆ. ನಿಮಗೂ ಸಹ ಆ ನಿಷ್ಠೆ ಇದೆ ಎಂಬುದರಲ್ಲಿ ಸಂಶಯವಿಲ್ಲ. ನಾವೆಲ್ಲರೂ ಈ ದೇಶ ಮುಕ್ತವಾಗಬೇಕೆಂದು ಬಯಸುತ್ತೇವೆ. ನನ್ನ ಮಟ್ಟಿಗೆ ಹೇಳುವುದಾದರೆ, ಬ್ರಿಟಿಷ್ ಮಂತ್ರಿಮಂಡಲದ ನಿಯೋಗ ತನ್ನ ಪ್ರಸ್ತಾವನೆಗಳಲ್ಲಿ ನಮ್ಮನ್ನು ಕಡೆಗಣಿಸಿದ್ದರೂ ಸಹ ಈ ದೇಶ ಸ್ವಾತಂತ್ರ್ಯವನ್ನು ಪಡೆಯುವ ಹಾದಿಯಲ್ಲಿ ನಾವು ಯಾವ ಕಷ್ಟಗಳನ್ನು ತಂದೊಡ್ಡುವುದಿಲ್ಲ. ನಿಮಗೆಲ್ಲಾ ಗೊತ್ತಿರುವ ಹಾಗೆ, ನಾನು ಅನೇಕ ಭಾಷಣಗಳನ್ನು ಮಾಡಿದ್ದೇನೆ; ಈ ದೇಶ ಸುಲಭವಾಗಿ ಸ್ವಾತಂತ್ರ್ಯ ಪಡೆಯುವಂತಾಗಬೇಕೆಂಬ ಪರಿಗಣನೆಯೇ ಆ ಭಾಷಣಗಳಲ್ಲಿ ನನ್ನ ಮಾರ್ಗದರ್ಶಿಯಾಗಿದೆ. ಅದೇ ಕಾಲಕ್ಕೆ, ೬೦ ದಶಲಕ್ಷ ಅಸ್ಪೃಶ್ಯರನ್ನು ರಾಜಕೀಯ ಹಕ್ಕುಗಳನ್ನು ದೊರಕಿಸಿಕೊಳ್ಳುವುದರ ಮೂಲಕ ರಕ್ಷಣೆ ಮಾಡಲಾಗದಿದ್ದರೆ, ಮತ್ತು ಕಾಂಗ್ರೆಸ್ ಜನಗಳಿಂದ ಪರಿಶಿಷ್ಟ ಜಾತಿಗಳ ರಕ್ಷಣೋಪಾಯವನ್ನು ಇತ್ಯರ್ಥ ಮಾಡುವ ವಿಷಯದಲ್ಲಿ ಸರಿಯಾದ ಇಂಗಿತವನ್ನು ನಾನು ಕಾಣದೆ ಹೋದರೆ, ಆಗ ಸಂವಿಧಾನ ರಚನಾಸಭೆಯಿಂದ ನಾನು ಹೊರಗುಳಿಯುವ ಹೆಜ್ಜೆಯನ್ನು ನಾನು ಇಟ್ಟರೆ, ಯಾರೂ ನನ್ನನ್ನು ದೂಷಿಸುವ ಹಾಗಿಲ್ಲ. ಆದರೂ ಸಹ ನೀವು ನೆನಪಿನಲ್ಲಿ ಇಡಬೇಕಾದುದು ಏನೆಂದರೆ, ೨೯೨ ಮಂದಿ ಸದಸ್ಯರಿರುವ ಸಂವಿಧಾನ ರಚನಾ ಸಭೆಯಲ್ಲಿ ನಾನು ಒಬ್ಬನೇ ಒಬ್ಬ ಒಂಟಿ ಮನುಷ್ಯ. ನೀವು ಮತ್ತೂ ನೆನಪಿನಲ್ಲಿಡಬೇಕಾದುದು ಏನೆಂದರೆ, ಒಬ್ಬ ವ್ಯಕ್ತಿ ಬೌದ್ಧಿಕವಾಗಿ ಎಷ್ಟೇ ದೊಡ್ಡವನಾಗಿದ್ದರೂ, ಅಥವ ವಾದ ಮಾಡಿ ಸಮರ್ಥಿಸಿಕೊಳ್ಳುವುದಕ್ಕೆ ಸಾಮರ್ಥ್ಯ

ಇದ್ದರೂ ಸಹ, ಮೊತ್ತದಲ್ಲಿ ಅವನು ಒಬ್ಬನೇ ಒಬ್ಬ ಮನುಷ್ಯ, ಒಬ್ಬಂಟಿಗ ವ್ಯಕ್ತಿ. ಮಿಕ್ಕ ೨೯೧ ಜನ ಸಕಾರಣವಾದುದಕ್ಕೆ ಕಿವಿಗೊಡಲು ಸಿದ್ಧವಾಗಿಲ್ಲದಿದ್ದರೆ, ವಾದವನ್ನು ಕೇಳದಿದ್ದರೆ, ತಮ್ಮ ಎದುರಾಳಿಯನ್ನು ವಿರೋಧಿಸಿದರೆ, ೨೯೨ ಮಂದಿ ಇರುವ ಸಂವಿಧಾನ ಸಭೆಯಲ್ಲಿ ನಾನೊಬ್ಬನೇ ಆಗಿ, ನನ್ನ ಅಸಹಾಯಕತೆಯನ್ನು ನೀವು ಗ್ರಹಿಸಿಕೊಳ್ಳಬಲ್ಲಿರಿ.

ಒಳ್ಳೆಯ ಅರಿವು ಮೂಡುತ್ತದೆ, ಕಟ್ಟಕಡೆಗೆ ನಮಗೆ ಬೇಕಾದುದನ್ನು ನಾವು ಪಡೆಯುತ್ತೇವ? ಎಂದು ನಾನು ಆಶಿಸುತ್ತೇನೆ. ನಮಗೆ ಬೇಕಾಗಿರುವುದು ಒಂದು ಸಂಘ/ಸಂಸ್ಥೆ. ನಮ್ಮ ನಿರಂತರ ಪ್ರಯತ್ನಗಳಿಂದ ನಮಗೆ ಸಿಗಬಹುದಾದ ರಾಜಕೀಯ ಹಕ್ಕುಗಳು, ಒಂದಷ್ಟು ಅವಧಿಯವರೆಗೆ ಮಾತ್ರ ಎಂದು ನೀವೆಲ್ಲ ನೆನಪಿನಲ್ಲಿ ಇಡಬೇಕು. ಈ ಹಕ್ಕುಗಳೆಲ್ಲ ಮಾಯವಾಗುವ ಒಂದು ಕಾಲ ಬರುತ್ತದೆ, ನಮಗೊಬ್ಬರಿಗೇ ಅಲ್ಲ ಈ ದೇಶದಲ್ಲಿ ಇರುವ ಎಲ್ಲರಿಗೂ ಸಹ. ಈ ಹಕ್ಕುಗಳು ಮಾಯವಾದಾಗ, ನಾವು ನಂಬಿಕೆ ಇಡಬೇಕಾದದ್ದು ನಮ್ಮ ಸಂಸ್ಥೆ, ನಮ್ಮ ಬಲ ಮತ್ತು ನಮ್ಮ ಒಗ್ಗಟ್ಟಿನ ಮೇಲೆ. ಆದ್ದರಿಂದ, ನಾವು ಒಗ್ಗಟ್ಟಾಗುವುದಕ್ಕೆ ನಿರ್ಧರಿಸಬೇಕು. (ಇಲ್ಲಿ ಬಾಬಾರವರು ಜೈ ಭೀಮನಿಗೆ ಕಳುಹಿಸಿದ ಸಂದೇಶವನ್ನು ಪರಾಮರ್ಶೆ ಮಾಡಿ ಅದರಲ್ಲಿದ್ದ ಕಥೆಯನ್ನು ಹೇಳಿದರು) ನಿಮಗೆ ನಾನು ಕೊಡಬಲ್ಲ ಸಂದೇಶವೆಂದರೆ ಬವಣೆ,ತೊಳಲಾಟ ಇನ್ನೂ ಹೆಚ್ಚಿನ ಬವಣೆ,ತೊಳಲಾಟ. ತೊಳಲಾಟದ ಮೂಲಕವಲ್ಲದೆ ಬೇರೆ ಯಾವ ವಿಧಾನವೂ ಇಲ್ಲ; ಕೆಲವು ಹಳ್ಳಿಗಳಲ್ಲಿನ ನಮ್ಮ ಜನಗಳು ಬವಣೆ ಪಟ್ಟಿದ್ದಾರೆಂದು ಮತ್ತೂ ಬವಣೆ ಪಡುತ್ತಲೇ ಇದ್ದಾರೆಂದೂ ಅಧೈರ್ಯ ಪಡಬೇಡಿ. ನಾವು ನಮ್ಮ ಮುಂದಿರುವ ಕೆಲಸವನ್ನು ಧೃಡ ನಿರ್ಧಾರದಿಂದ ಮಾಡುತ್ತಾ ಹೋಗಬೇಕು ಮತ್ತು ಸಂಘಟಿತರಾಗಲು ತೀರ್ಮಾನಿಸಬೇಕು. ಈ ದೇಶದಲ್ಲಿ ಬವಣೆ ಪಡಬೇಕಾದೀತೆಂಬ ಹೆದರಿಕೆ ಬೇಡ.

ನಿಮ್ಮಿಂದ ಈ ಪರ್ಸ್ ಅನ್ನು ಪಡೆದುಕೊಳ್ಳುವುದಕ್ಕೆ ನನಗೆ ಅತೀವ ಸಂತೋಷವಾಗಿದೆ. ಈ ಹಣದಿಂದ ಏನು ಮಾಡಬೇಕೆಂದು ನಾನೀಗ ಆಲೋಚಿಸುತ್ತಿದ್ದೇನೆ. ಒಂದೆರಡು ಕೆಲಸವನ್ನು ಮಾಡಬೇಕೆಂದುಕೊಂಡಿದ್ದೇನೆ. ಒಂದು, ಈ ಹಣವನ್ನು ಯಾರಲ್ಲಿಯಾದರು ಇಟ್ಟು ಅದನ್ನು ದೆಹಲಿಯಲ್ಲಿ ಕೊಳ್ಳಲು ವ್ಯವಸ್ಥೆ ಮಾಡಿರುವ ಭೂಮಿಯ ಮೇಲೆ ಕ್ಲಬ್ ಕಟ್ಟಡವನ್ನು ಕಟ್ಟಬೇಕೆಂದುಕೊಂಡಿದ್ದೇನೆ. ಈ ಹಣ ಸ್ವಲ್ಪವಾಗಿದ್ದರೂ, ಆ ಉದ್ದೇಶಕ್ಕಾಗಿ ಹೆಚ್ಚಿನ ಹಣವನ್ನು ಕೂಡಿಸಲಿದ್ದೇವೆ. ಇನ್ನೊಂದು ಈ ಹಣವನ್ನು ಅಸೋಸಿಯೇಷನ್ನಿಗೆ ಹಿಂದಿರುಗಿಸಿದರೆ ಅವರು ಅದನ್ನು ಕೆಲವು ಉದ್ದೇಶಗಳಿಗೆ ಉಪಯೋಗಿಸಕೊಳ್ಳಬಹುದಾಗಿದೆ. (ಅಸೋಸಿಯೇಷನ್ನಿನವರು ಅದನ್ನು ಹಿಂದಕ್ಕೆ ಪಡೆಯಲು ಒಪ್ಪಲಿಲ್ಲ). ಸರಿ, ಹಾಗಾದರೆ, ಕ್ಲಬ್ ಕಟ್ಟಡದ ನಿಧಿಗೆ ಇದನ್ನು ಕೊಡಬೇಕು.

# ೧೧೦
# ಅಲ್ಪಸಂಖ್ಯಾತರನ್ನು ಯಾವಾಗಲೂ ಮನ ಒಲಿಸಿಕೊಳ್ಳಬೇಕೇ ವಿನಃ ಯಾವತ್ತೂ ಅವರ ಮೇಲೆ ಒತ್ತಾಯ ಹೇರಬಾರದು

೨೫ನೇ ಸೆಪ್ಟೆಂಬರ್ ೧೯೪೭ ರಂದು ಬೊಂಬಾಯಿನಲ್ಲಿ ಡಾ: ಅಂಬೇಡ್ಕರ್ ಅವರು ಸಿದ್ಧಾರ್ಥ್ ಕಾಲೇಜ್ ಪಾರ್ಲಿಮೆಂಟನ್ನು ಉಧ್ಘಾಟಿಸಿದರು.

ಈ ಸಂದರ್ಭದಲ್ಲಿ ಅವರು ಹೇಳಿದ್ದು:

ಪ್ರಸ್ತುತದಲ್ಲಿ ನನ್ನ ಮುಂದೆ ಯಾವ ಸ್ಪಷ್ಟವಾದ ಕಾರ್ಯಕ್ರಮವೂ ಇಲ್ಲ. ಆದ್ದರಿಂದ ನಾನೀಗ ಮಿಲಿಟರಿ ರೀತಿಯಲ್ಲಿ ಮಾತನಾಡಲಿದ್ದೇನೆ. ಈ ಸ್ವಾತಂತ್ರ್ಯ ಎಷ್ಟು ಹಠಾತ್ತಾಗಿ ಬಂದಿದೆಯೆಂದರೆ, ನಮಗೆ ನಮ್ಮ ದಳಗಳನ್ನು ವಾಪಸ್ ಕರೆಸಿಕೊಳ್ಳುವುದಕ್ಕೆ ಸಮಯವೇ ಸಿಗಲಿಲ್ಲ ಮತ್ತು ನಮ್ಮ ದಳವನ್ನು ವ್ಯವಸ್ಥೆಗೊಳಿಸುವುದಕ್ಕೂ ಸಹ ನಮಗೆ ಸಮಯವಿರಲಿಲ್ಲ

ಕಳೆದ ೫೦ ವರ್ಷಗಳಿಂದ ನಮಗೆ ಬ್ರಿಟಿಷರು ಆಶ್ವಾಸನೆಗಳನ್ನು ಕೊಡುತ್ತಲೇ ಬಂದಿದ್ದರೂ, ಕಡೆಯಲ್ಲಿ ಪರಿಶಿಷ್ಟ ಜಾತಿಗಳನ್ನು ಒಂದು ಪ್ರತ್ಯೇಕವಾದ ರಾಜಕೀಯ ಘಟಕವೆಂದು ಗುರುತಿಸದೇ ನಮಗೆ ಮೋಸ ಮಾಡಿದರು. ಈ ಕೆಲಸದಲ್ಲಿ ಅವರು ನಮಗೆ ಸಹಾಯವನ್ನು ಮಾಡಲಿಲ್ಲ. ಅವರು ಮುಸಲ್ಮಾನರಿಗೆ ಮತ್ತು ಸಿಖ್ಖರಿಗೆ ಸಹಾಯವನ್ನು ಮಾಡಿದರು. ಬ್ರಿಟಿಷರು ಕೇವಲ ಮುಸಲ್ಮಾನರಿಗೆ ಮತ್ತು ಸಿಖ್ಖರಿಗೆ ಮಾತ್ರ ಸಹಾಯ ಮಾಡಿದರು, ಆದರೆ ಪರಿಶಿಷ್ಟ ಜಾತಿಗಳವರಿಗೆ ಏಕೆ ಮಾಡಲಿಲ್ಲ ಎಂಬುದು ಬಹಳ ಕುತೂಹಲಕರವಾಗಿದೆ. ನಮಗೆ ಯಾವ ಬೆಂಬಲವೂ ಇಲ್ಲ. ನಮ್ಮ ಬಲದ ಮೇಲಲ್ಲದೆ ಇನ್ನು ಯಾವುದರ ಮೇಲೂ ಅವಲಂಬಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತೆ ನಿಮಗೆಲ್ಲಾ ಚೆನ್ನಾಗಿ ಗೊತ್ತಿರುವ ಹಾಗೆ ಬ್ರಿಟಿಷ್ ರಾಜಕೀಯ ಸರ್ವೇಕ್ಷಣೆಗಾರರಾದ ಕ್ರಿಪ್ಸ್ ಮತ್ತು ನಿಯೋಗದಲ್ಲಿದ್ದ ಅವನ ಸಹಯೋಗಿ ಸ್ನೇಹಿತರ ಕಣ್ಣಿನಲ್ಲಿ ನಮ್ಮ ಈ ಬಲ ಕೂಡಾ ಒಡೆದು ಹೋಗಿದೆ ಎಂದು. ಈ ಒಡಕನ್ನು ಅವರು ಗುರುತಿಸಿದ್ದಕ್ಕೆ ಕಾರಣ ಹರಿಜನ ಪಕ್ಷವೆಂದು ಕರೆದುಕೊಳ್ಳುತ್ತಿರುವ ಒಂದು ಪ್ರತ್ಯೇಕವಾದ ಸಂಘಟನೆ. ಇದು ಸತ್ಯ,. ಆದರೆ ನಿಜವಾಗಿ ಹೇಳುವುದಾದರೆ ಪರಿಶಿಷ್ಟ ಜಾತಿಗಳ ಫೆಡರೇಷನ್ ಮಾತ್ರ ಪರಿಶಿಷ್ಟ ಜಾತಿಗಳ ಏಕ ಮಾತ್ರ ಪ್ರಾತಿನಿಧಿಕ ನಿಕಾಯ.

ನಾನು ಇಂಗ್ಲೆಂಡಿಗೆ ಹೋಗಿದ್ದಾಗ ಅಲ್ಲಿನ ಬೇರೆ ಬೇರೆ ರಾಜಕೀಯ ಗುಂಪುಗಳ ನಾಯಕರುಗಳೊಂದಿಗೆ, ಸ್ಥಿರ ಸಂಸದೀಯ ಕಾರ್ಯದರ್ಶಿಗಳೊಂದಿಗೆ ಚರ್ಚೆ ಮಾಡಿದ್ದೆ; ಅವರಿಗೆ ಭಾರತದ ಆಗು ಹೋಗುಗಳ ಬಗ್ಗೆ ದಿನದಿಂದ ದಿನಕ್ಕೆ ಸಂಪರ್ಕವಿತ್ತು. ಅವರೆಲ್ಲರೂ ಪರಿಶಿಷ್ಟ ಜಾತಿಗಳ ಫೆಡರೇಷನ್ ಮಾತ್ರ ಪರಿಶಿಷ್ಟ ಜಾತಿಗಳ ಏಕ ಮಾತ್ರ ಪ್ರಾತಿನಿಧಿಕ ನಿಕಾಯವೆಂದು ನನ್ನ ಹೇಳಿಕೆಯನ್ನು ಬೆಂಬಲಿಸಿದ್ದರು. ಅಷ್ಟು ಮಾತ್ರವಲ್ಲ, ಕ್ರಿಪ್ಸ್ ಮತ್ತು ಅವರಂಥ ಅನೇಕರಿಗೆ ನನ್ನ ಧ್ಯೇಯ/ಉದ್ದೇಶದ ಬಗ್ಗೆ ಮನದಟ್ಟಾಗಿತ್ತು, ಆದರೂ ಸಹ ಬ್ರಿಟೀಷ್ ನಿಯೋಗ ಎಲ್ಲವನ್ನೂ ತಳ್ಳಿ ಹಾಕಿತ್ತು; ಕಾರಣವೆಂದರೆ ಅವರದೇ ಕ್ಷೇಮದ ದೃಷ್ಟಿಯಿಂದ. ಅದು ಸತ್ಯಕ್ಕೆ ಎಷ್ಟು ದೂರವಾಗಿದ್ದರೂ, ರಾಜಕೀಯ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಬಯಸಿ. ಹೀಗಾಗಿ ನಮಗೆ ಪ್ರತಿಕೂಲವಾಗಿ ಒಂದು ರಾಜಕೀಯ ತೀರ್ಮಾನವನ್ನು

ತೆಗೆದುಕೊಂಡು ಬಿಟ್ಟರು. ಪರಿಶಿಷ್ಟ ಜಾತಿಗಳಿಗೆ ಆದ ಈ ನಷ್ಟಕ್ಕೆ ಕಾರಣ ರಾಷ್ಟ್ರೀಯ ಹರಿಜನರ ನಾಚಿಕೆಗೆಟ್ಟ ಧೋರಣೆಯೇ ಆಗಿತ್ತು. ಅಲ್ಪಸಂಖ್ಯಾತರ ಉಪ ಸಮಿತಿಯಲ್ಲಿ ನಾನು ಪ್ರತ್ಯೇಕ ಮತದಾರರ ಮಂಡಲಕ್ಕಾಗಿ ನಮ್ಮ ಆಗ್ರಹದ ಬೇಡಿಕೆಯನ್ನು ಒತ್ತಿಹೇಳಿದೆ; ಇದಕ್ಕಾಗಿ ನಾನು ಒಂದು ಪರಿಹಾರವನ್ನೂ ಸೂಚಿಸಿದೆ. ಅದೇನೆಂದರೆ ಜಯಶಾಲಿಯಾದ ಅಭ್ಯರ್ಥಿ ಕಡೆಯ ಪಕ್ಷ ತಾನು ಪ್ರತಿನಿಧಿಸುವ ಸಮುದಾಯದ ೩೫% ವೋಟುಗಳನ್ನು ಪಡೆದುಕೊಳ್ಳಬೇಕು; ಆದರೆ ನನ್ನ ಸೂಚನೆಯ ಮೇಲೆ ವೋಟು ಮಾಡುವ ಸಮಯದಲ್ಲಿ ಮುಸ್ಲಿಮ್ ಗುಂಪಿನವರು ಆತುರದ ಕ್ರಮದಲ್ಲಿ ಸಭಾ ಭವನವನ್ನು ಬಿಟ್ಟು ಹೋಗಿದ್ದರಿಂದ, ನನ್ನ ಪ್ರಸ್ತಾವನೆಗೆ ಪರ–ವಿರೋಧವಾಗಿ ಸಮ–ಸಮ ವೋಟುಗಳು, ಅಂದರೆ ೭–೭ ಬಂದವು. ಸಲಹಾ ಸಮಿತಿಯಲ್ಲೂ ಕೂಡ ನನ್ನ ಪ್ರಯತ್ನವನ್ನು ಮಾಡಿದೆ. ವಿಚಿತ್ರವೆನ್ನುವ ಹಾಗೆ, ಮದರಾಸಿನ ಶಾಸನ ಸಭೆಯ ಸ್ಪೀಕರ್ ಅವರಾದ ಮಿ: ಮನುಸ್ವಾಮಿ ಪಿಳ್ಳೆ ಅವರು ನನ್ನ ತಿದ್ದುಪಡಿಯನ್ನು ಬೆಂಬಲಿಸಿದರು. ಮಿ: ವಲ್ಲಭ ಭಾಯಿ ಪಟೇಲ್ ಅವರೂ ಸಹ ನನ್ನ ತಿದ್ದುಪಡಿಗೆ ವಿರುದ್ಧವಾಗಿ ವೋಟು ಮಾಡಲಿಲ್ಲ. ಆದರೆ ಸರ್ವ ಸದಸ್ಯರ ಸಂವಿಧಾನ ಸಭೆಯಲ್ಲಿ, ನನ್ನ ಬೆಂಬಲಿಗರಲ್ಲೆ ಒಬ್ಬರಾದ ಮೀ: ಪಿಳ್ಳೆ ಅವರು ಪ್ರಸ್ತಾವನೆಯನ್ನು ವಿರೋಧಿಸಿ ಸಹಿ ಹಾಕಿದವರಲ್ಲಿ ಒಬ್ಬರಾಗಿದ್ದರು. ಇದೆಲ್ಲದರಿಂದ ನಾನು ಸ್ಥಂಭೀಭೂತನಾದೆ. ಒಟ್ಟಾರೆ ಪರಿಶಿಷ್ಟ ಜಾತಿಗಳವರ ಹಿತಾಸಕ್ತಿಗೆ, ಮತ್ತು ಶಾಶ್ವತವಾಗಿ ಕಿರುಕುಳಕೊಡುವುದಕ್ಕೆ ರಾಷ್ಟ್ರೀಯ ಹರಿಜನರು ಆಡಿದ ಕೃತ್ರಿಮ ಪಾತ್ರದಲ್ಲಿ ಇದು ಎರಡನೆಯದಾಗಿತ್ತು ಈ ಕಾರಣಗಳಿಂದಾಗೆಯೇ, ಪ್ರಸ್ತುತದಲ್ಲಿ ನನಗೆ ಈಗ ಯಾವ ಸ್ಪಷ್ಟವಾದ ಕಾರ್ಯ ನೀತಿಯೂ ಇಲ್ಲ ನಾನು ನಿಮಗೆ ಈವಾಗ ಹೇಳಬೇಕಾದದ್ದು ಏನೆಂದರೆ, ಪ್ರತ್ಯೇಕ ಮತದಾರರ ಮಂಡಲವೊಂದೇ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಸಕಲ ಸಾಧನವಲ್ಲ. ನಮ್ಮ ಅರ್ಥದಲ್ಲಿ ಪ್ರತ್ಯೇಕ ಮತದಾರರ ಮಂಡಲ ಒಳ್ಳೆಯದೆ ಸರಿ, ಆದರೆ ವಸ್ತು ನಿಷ್ಠವಾಗಿ ಅವುಗಳು ಕೆಟ್ಟದ್ದೇ. ನಿಮಗೆ ಪ್ರತ್ಯೇಕ ಮತದಾರರ ಮಂಡಲಗಳು ಇವೆ, ಆದರೆ ಯಾವ ರಾಜಕೀಯ ರಕ್ಷಣೋಪಾಯಗಳೂ ಇಲ್ಲ. ಅವರ ಅದೃಷ್ಟವೇನಾಗುತ್ತದೋ ನನಗೆ ಗೊತ್ತಿಲ್ಲ. ಶಾಸನ ಸಭೆಗಳಲ್ಲಿ ಮತ್ತು ಲೋಕ ಸೇವೆಗಳಲ್ಲಿ ನಿಮಗೆ ಕೆಲವು ಸ್ಥಾನಗಳನ್ನು ಕೊಡಿಸುವುದಕ್ಕೆ ನನಗೆ ಸಾಧ್ಯವಾಗಬಹುದು. ನನ್ನ ಪ್ರಯತ್ನಗಳಿಂದಾಗಿಯೇ, ಉಳಿಕೆ ಅಲ್ಪಸಂಖ್ಯಾತರುಗಳಾದ ಸಿಖ್ಖರು, ಭಾರತೀಯ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ಕೆಲವು ರಕ್ಷಣೋಪಾಯಗಳನ್ನು ಪಡೆದುಕೊಂಡಿದ್ದಾರೆ. ಈ ಆಗ್ರಹಕ್ಕಾಗಿ ಬಹಳಷ್ಟು ಒತ್ತಾಯ ಮಾಡುತ್ತಿದ್ದವರಲ್ಲಿ ನಾನೊಬ್ಬನೇ ಆಗಿದ್ದ ಕಾರಣದಿಂದ, ಸಂವಿಧಾನ ಸಭೆಗೆ ಈ ಹಂತದಲ್ಲಿ ನನ್ನನ್ನು ಅಸಂತುಷ್ಟಗೊಳಿಸುವುದಕ್ಕೆ ಧೈರ್ಯವಿಲ್ಲದ್ದರಿಂದ ಇದು ಸಾಧ್ಯವಾಯಿತು. ಅಲ್ಪಸಂಖ್ಯಾತರಿಗೆ ನಿಜವಾದ ಅರ್ಥದಲ್ಲಿ ಸೇವೆ ಸಲ್ಲಿಸುವುದು ಸಾಧ್ಯವಾಗಿದ್ದಕ್ಕಾಗಿ, ನನಗೆ ಸಂತೋಷವಾಗಿದೆ. ಆಗ್ರಹದ ಬೇಡಿಕೆ ನಿಮಗೆ ನಿರಾಸೆಯಾಗಿರಬಹುದು; ನನಗೂ ಸಹ ಇದರಿಂದ ಹೆಚ್ಚಿಗೆ ಸಂತೋಷವೇನೂ ಆಗಿಲ್ಲ. ಆದಾಗ್ಯೂ, ಭವಿಷ್ಯದಲ್ಲಿ ನಾವು ನಮ್ಮ ಪಾತ್ರವನ್ನು ಆಡಲೇಬೇಕು. ಬ್ರಿಟಿಷ್ ಲೇಬರ್ ಪಕ್ಷದ ಚರಿತ್ರೆಯ ಬಗ್ಗೆ ನಾನು ನಿಮಗೆ ಹೇಳಲು ಬಯಸುತ್ತೇನೆ. ಕಳೆದ ೨೫ ವರ್ಷಗಳಲ್ಲಿ ಆ ಪಕ್ಷ ಎಷ್ಟು ಬೆಳೆದಿದೆ ಎಂದರೆ, ಈ ದಿನ ಅದು ರಾಜ್ಯ ಆಳುತ್ತಿದೆ. ಇದೇ ಪಕ್ಷ, ಅದನ್ನು ಮೊದಲು ಸಂಘಟಿಸಿದಾಗ, ಅದಕ್ಕೆ ಪಾರ್ಲಿಮೆಂಟಿನಲ್ಲಿ ಏನೇನೂ ಪ್ರಾತಿನಿಧ್ಯ ಇರಲಿಲ್ಲ. ಇದು ಏನನ್ನು ತೋರಿಸುತ್ತದೆ? ಚುನಾವಣೆಗಳಲ್ಲಿ ಗೆಲ್ಲುವುದೇ ಪಕ್ಷದ ಗೆಲುವಲ್ಲ, ನೀತಿಯ ಮತ್ತು ಅದು ಹಾಕಿಕೊಳ್ಳುವ ಕಾರ್ಯಕ್ರಮದ ಜಯವೇ ಪಕ್ಷದ ಜಯ. ತಾನು ಯಾವ ನೀತಿಗಳಿಗಾಗಿ ನಿಂತಿದೆಯೋ, ಪರಿಶಿಷ್ಟ ಜಾತಿಗಳ ಫೆಡರೇಷನ್ನಿಗೆ ತನ್ನದೇ ಪಾತ್ರವಿರುತ್ತದೆ ಎಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಈ ಕಾರಣದಿಂದಲೇ ನನಗೆ ನಿರಾಶೆಯೇ ಆಗಿಲ್ಲ. ಈ ಕಾರಣಕ್ಕಾಗಿಯೇ ಈ ಕೆಳಕಂಡ ಮೂರು

ವಿಷಯಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು:

(i) ಏನೇ ಸಂದರ್ಭದಲ್ಲಿಯಾದರೂ ಪರಿಶಿಷ್ಟ ಜಾತಿಗಳ ಫೆಡರೇಷನ್ ತನ್ನ ರಾಜಕೀಯ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕು.ನಮ್ಮ ಮುಂದೆ ಬ್ರಾಹ್ಮಣೇತರರ ಪಕ್ಷದ ಚರಿತ್ರೆ ಇದೆ. ಕಾಗ್ರೆಸ್ ಪ್ರಾಮುಖ್ಯಕ್ಕೆ ಬರುವ ಮುಂಚೆ, ಅಖಿಲ ಭಾರತ ಬ್ರಾಹ್ಮಣೇತರ ಪಕ್ಷ ತನ್ನ ಉತ್ತುಂಗದಲ್ಲಿ ಇತ್ತು. ಆದರೆ ಆ ಪಕ್ಷದ ಮುಖಂಡರುಗಳು ತಮ್ಮ ವೈಯುಕ್ತಿಕ ಉದ್ದೇಶಕ್ಕಾಗಿ ಕಾಂಗ್ರೆಸ್ ಪಕ್ಷದತ್ತ ಹೋದರೋ, ಅವರನ್ನು ಕೊಂಡುಕೊಂಡ ಹಾಗೆಯೇ ಆಯಿತು; ಹೀಗಾಗಿ ಅವರಿಗೆ ಆಗ ಕಾಂಗ್ರೆಸ್ನಲ್ಲೆ ಯಾವ ಧ್ವನಿಯೂ ಇರಲಿಲ್ಲ, ಈಗಲೂ ಇಲ್ಲ. ಅವರು ಒಂದು ಅಗಾಧವಾದ ಬಹುಸಖ್ಯಾತರಾದರೂ, ಅವರೀಗ ಆಳಲ್ಪಡುತ್ತಿದ್ದಾರೆ. ವ್ಯಕ್ತಿಗಳಿಗಿಂತ ಹೆಚ್ಚಾಗಿ ಅವರಿಗೆ ಪಕ್ಷದ ಮೇಲೆ ಹೆಚ್ಚಿನ ಹೊಣೆಗಾರಿಕೆ ಇರಬೇಕು.

(ii) ನಿಮಗೆ ಯಾವಾಗಲೂ ಸಮರ್ಥರಾದ ನಾಯಕರುಗ್ಗಳು ಇರಬೇಕು. ನಿಮ್ಮ ನಾಯಕರುಗಳಿಗೆ ಇನ್ನಾವುದೇ ರಾಜಕೀಯ ಪಕ್ಷದ ನಾಯಕರುಗಳನ್ನು ಸರಿಗಟ್ಟುವ ಧೈರ್ಯ ಮತ್ತು ಮೌಲ್ಯ/ಸಾಮರ್ಥ್ಯ ಇರಬೇಕು. ದಕ್ಷ ನಾಯಕರುಗಳಿಲ್ಲದ ಪಕ್ಷ ಏನೇನೂ ಅಲ್ಲ ಈ ಕಾರಣಕ್ಕಾಗಿಯೇ ೧೯೩೧ರಲ್ಲಿ ಬ್ರಿಟಿಷ್ ಲೇಬರ್ ಪಕ್ಷ ಸೋಲು ಅನುಭವಿಸಿತು. ಇದು ಭಾರತದಲ್ಲಿನ ಬ್ರಾಹ್ಮಣೇತರ ಪಕ್ಷಕ್ಕೂ ಸಮಾನವಾಗಿ ಅನ್ವಯವಾಗುತ್ತದೆ.

(iii) ಯಾವುದೇ ಪಕ್ಷದಲ್ಲಿ, ಹೇಗೆ ಯಾವತ್ತಿಗೂ ಯಾರೂ ಕೊಂಡು ಕೊಳ್ಳಲು ಸಾಧ್ಯವಾಗದಿರುವ ಒಂದು ಪ್ರಾಮಾಣಿಕ ಮುಖಂಡತ್ವಕ್ಕೆ ಬಹಳ ಗಹನವಾದ ಪ್ರಾಮುಖ್ಯತೆ ಇರುತ್ತದೆಯೋ, ಅದೇ ರೀತಿ ಪಕ್ಷದಲ್ಲಿನ ಸಮರ್ಪಣಾ ಮನೋಭಾವದ ಕೆಲಸಗಾರರು ಪಕ್ಷದ ಬೆಳವಣಿಗೆಗೆ ಎರಡನೆ ಮುಖ್ಯವಾದ ಅಂಶವಾಗುತ್ತಾರೆ. ಪರಿಶಿಷ್ಟ ಜಾತಿಗಳ ಫೆಡರೇಷನ್ ಅನೇಕರನ್ನು ಸೃಷ್ಟಿಸಬಹುದು, ಆದರೆ ಅದು ನನಗೆ ತೃಪ್ತಿಕರವಾಗಿರುವುದಿಲ್ಲ. ಒಂದು ರೀತಿಯಲ್ಲಿ, ಪರಿಶಿಷ್ಟ ಜಾತಿಗಳ ಫೆಡರೇಷನ್ ಇದರ ಬಗ್ಗೆ ಚಿಂತಿಸಬೇಕಾಗಿಲ್ಲ, ಏಕೆಂದರೆ, ಅವರ ಮುಖಂಡನನ್ನು., ಎಷ್ಟೇ ಬೆಲೆಯಾಗಲೀ ಯಾರೂ ಕೊಳ್ಳಲಾಗುವುದಿಲ್ಲ; ಆದರೆ ಇತರ ಅಂಗಗಳ ಪಾಡೇನು? ಅವರು ಯಾವಾಗ ನಿರೀಕ್ಷಿತ ಮಟ್ಟಕ್ಕೆ ಬರುತ್ತಾರೆ? ನನ್ನ ಅವಶ್ಯಕತೆಯನ್ನು ಪೂರೈಕೆ ಮಾಡುವುದು ನಿಮಗೆ ಸೇರಿದ್ದು. ನಾನು ನಿಮಗೆ ಪದೇ ಪದೇ ಹೇಳುವುದೇನೆಂದರೆ, ಪರಿಶಿಷ್ಟ ಜಾತಿಗಳ ಫೆಡರೇಷನ್ ತನ್ನ ರಾಜಕೀಯವನ್ನು ಉಳಿಸಿ ಬೆಳಸಿಕೊಳ್ಳಬೇಕು; ನನ್ನ ವೈಯುಕ್ತಿಕ ಹಿತಾಸಕ್ತಿಗಾಗಿ ಅಲ್ಲ, ಆದರೆ ನಿಮಗೆ ಮತ್ತು ನನಗೆ. ಕಡೆಯಲ್ಲಿ ನಾನು ನಿಮಗೆ ಹೇಳುವುದೇನೆಂದರೆ, ಸಿದ್ಧಾರ್ಥ್ ಕಾಲೇಜು ಒದಗಿಸಿಕೊಟ್ಟಿರುವ ಅನುಕೂಲಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಿ. ಆಗ ಮಾತ್ರವೇ, ಪರಿಶಿಷ್ಟ ಜಾತಿಗಳನ್ನು ಮುನ್ನಡೆಸುವಲ್ಲಿ ತನ್ನ ಬೆಲೆಯೇನು ಎಂದು ತೋರಿಸಿಕೊಡುವ ಉದಯೋನ್ಮುಖ ನಕ್ಷತ್ರವನ್ನು ನಾವು ವೀಕ್ಷಿಸಲು ಸಾಧ್ಯ, ಪ್ರಪಂಚದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಎರಡು ಪ್ರಲೋಭನೆಗಳು ಇರುತ್ತವೆ, ಒಂದು ಹಣ, ಇನ್ನೊಂದು ಪತ್ನಿ, ಆಮೇಲೆ ಮಕ್ಕಳಿರುತ್ತಾರೆ. ಅದು ಸ್ವಾಭಾವಿಕವೇ ಸರಿ; ಆದರೆ ನಮ್ಮ ಜನಗಳಿಗೆ ಒಂದೆರಡು ಮಕ್ಕಳೆಂದರೆ ಅರ್ಥವೇ ಆಗುವುದಿಲ್ಲ. ಆಗ, ಪರಿಶಿಷ್ಟ ಜಾತಿಗಳವರು ಎಲ್ಲಿ ನಿಂತಿದ್ದಾರೆ ಎಂದು ನೋಡಲು ಅವರಿಗೆ ಸಮಯವೇ ಇರುವುದಿಲ್ಲ. ಒಟ್ಟಾರೆ ಪರಿಶಿಷ್ಟ ಜಾತಿಗಳ ಅವಶ್ಯಕತೆಯನ್ನು ಪೂರೈಸುವುದು ನಿಮಗೆ ಸೇರಿದ್ದು. ನಮ್ಮ ದಳಗಳು ಯಾವಾಗ ಬೇಕಾಗಬಹುದು ಎಂದು ನನಗೆ ಗೊತ್ತಿಲ್ಲ; ಆದರೆ ಕಾದು ನೋಡುವುದಕ್ಕೆ ನಾವು ನಮ್ಮ ಎಚ್ಚರಿಕೆಯಲ್ಲಿ ಇರಬೇಕು. ಇಲ್ಲಿಯವರೆಗೆ ನೀವು ಗಮನಿಸಿರಬಹುದಾದಂತೆ, ನಮ್ಮಲ್ಲಿ ಬಹುತೇಕ ವಿದ್ಯಾರ್ಥಿಗಳು ರಾಜಕೀಯ ಚಳುವಳಿಯಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಿದ್ದರೂ ಸಹ ಅವರಿಗೆ ರಾಜಕೀಯವೆಂದರೆ ಏನು, ಅದು

ಯಾವ ಹೊಣೆಗಾರಿಕೆಗಳನ್ನು ಒಳಗೊಂಡಿದೆ ಎಂದು, ರಾಜಕೀಯ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಯಾವ ವಿಧಾನಗಳನ್ನು ಅನುಸರಿಸಬೇಕು ಎಂಬುದರ ಸ್ಪಷ್ಟ ಕಲ್ಪನೆ ಇರಲಿಲ್ಲ. ನಾನು ಕಂಡ ಹಾಗೆ, ಯಾವುದನ್ನು ನಾವು ವಿದ್ಯಾ ವಿಷಯಕ ಜೀವನವೆಂದು ಕರೆಯುತ್ತೇವೆಯೋ ಅದು ರಾಜಕೀಯದ ಪ್ರಾಯೋಗಿಕ ಸಮಸ್ಯೆಗಳಿಗಿಂತ ಸಂಪೂರ್ಣವಾಗಿ ಬೇರೆಯಾಗಿತ್ತು. ನೀವು ಎರಡು ಕೆಲಸವನ್ನು ಮಾಡಬೇಕಾಗಿದೆ:

(i) ನಿಮ್ಮ ಮನಸ್ಸನ್ನು, ನಿಮ್ಮ ದೃಷ್ಟಿಯನ್ನು, ಆಲೋಚನೆ ಮಾಡುವ ನಿಮ್ಮ ಸಾಮರ್ಥ್ಯವನ್ನು. ಸಮಸ್ಯೆಗಳನ್ನು ಬಗೆಹರಿಸುವ ನಿಮ್ಮ ಶಕ್ತಿಯನ್ನು ವಿಕಾಸಗೊಳಿಸಿಕೊಳ್ಳಬೇಕು..

(ii) ಈ ದಿನಗಳಲ್ಲಿ, ಈ ದೇಶದ ಜನಗಳ ಅತಿ ದೊಡ್ಡ ಸಮೂಹ ಎದುರಿಸುತ್ತಿರುವ ನಿಜವಾದ ಸಮಸ್ಯೆಗಳ ಮೇಲೆ ತೀರ್ಮಾನವನ್ನು ರೂಪಿಸಿಕೊಳ್ಳಲನುವಾಗುವ ಆ ಶಕ್ತಿ, ಆ ದೃಷ್ಟಿ, ಆ ಸಾಮರ್ಥ್ಯವನ್ನು ರೂಢಿಸಿಕೊಳ್ಳಬೇಕಾಗಿದೆ.

ಅದೇನೂ ನಮ್ಮ ಏಕಾಂತದ ಕೊಠಡಿಯಲ್ಲಿ ಕೇವಲ ಮೊಟ್ಟೆಗೆ ಕಾವು ಕೊಡುವುದಕ್ಕಾಗಿ ಅಲ್ಲ. ರಸಾಯನ ಶಾಸ್ತ್ರದ ಅಥವಾ ಭೌತ ಶಾಸ್ತ್ರದ ಪ್ರಯೋಗಶಾಲೆ ಅಲ್ಲ. ಅದು ಅದಕ್ಕಿಂತ ಏನೋ ಹೆಚ್ಚಿಗೆ ವಿಶಾಲವಾದುದು. ನೀವು ಕೇವಲ ರಾಜಕೀಯ ಅರ್ಥಶಾಸ್ತ್ರವನ್ನು. ರಾಜಕೀಯ ವಿಜ್ಞಾನವನ್ನು, ಚರಿತ್ರೆಯನ್ನು, ವಾಣಿಜ್ಯ ಶಾಸ್ತ್ರವನ್ನು ವ್ಯಾಪಾರವನ್ನು ಕರೆನ್ಸಿಯನ್ನು, ಮಾತ್ರ ಕಲಿಯುವುದಲ್ಲ. ಈ ಎಲ್ಲಾ ವಿಷಯಗಳು ಜನಗಳ ಪ್ರಾಯೋಗಿಕ ಜೀವನವನ್ನು ತಟ್ಟುತ್ತವೆ, ಆದರೆ, ಆ ಶಿಕ್ಷಣವನ್ನು, ಆ ಕಲಿಯುವಿಕೆಯನ್ನು ನಿಮಗೆ ಮಾತ್ರವಲ್ಲ ಜೊತೆಗೆ ಈ ದೇಶದ ಆಗುಹೋಗುಗಳನ್ನು ಕೈನಲ್ಲಿ ಇಟ್ಟುಕೊಂಡಿರುವ ರಾಜಕಾರಣಿಗಳಿಗೂ ಕೂಡ ಅವರ ಎದುರಿಗಿರುವ ಸಮಸ್ಯೆಗಳೇನು, ಅವಕ್ಕೆ ಸರಿಯಾದ ಪರಿಹಾರವೇನು, ಅವರು ಎಲ್ಲಿ ತಪ್ಪುತ್ತಿದ್ದಾರೆ ಎಂದು ತೋರಿಸುಕೊಡುವುದಕ್ಕೆ ಸಲಹೆ ಕೊಡುವುದಕ್ಕೆ ಸಹ ಉಪಯೋಗಿಸಿಕೊಳ್ಳಬೇಕು.

ಇನ್ನೊಂದು ವಿಷಯವನ್ನು ಸಹ ನೀವು ನೆನಪಿನಲ್ಲಿ ಇಟ್ಟುಕೊಳ್ಳಲೇಬೇಕಾಗಿದೆ. ಅದೇನೆಂದರೆ ನಿರಂಕುಶ ಆಡಳಿತದಲ್ಲಿ ಕಾನೂನುಗಳನ್ನು ಮಾಡುವುದು ಒಬ್ಬ ಸರ್ವಾಧಿಕಾರಿಯ ಅಥವ ಒಬ್ಬ ನಿರಂಕುಶ ಚಕ್ರವರ್ತಿಯ ಇಚ್ಛಾನುಸಾರವಾಗಿ; ಅಲ್ಲಿ ಮಾತಿನ ಚತುರತೆ ಉಪಯೋಗಕ್ಕೆ ಬರುವುದಿಲ್ಲ. ಯಾವ ಸರ್ವಾಧಿಕಾರಿಯಾಗಲೀ, ನಿರಂಕುಶ ಚಕ್ರವರ್ತಿಯೇ ಆಗಲೀ ನಿರರ್ಗಳ ಮಾತುಗಾರಿಕೆಗೆ ಗಮನಕೊಡಬೇಕಾಗಿಲ್ಲ. ಏಕೆಂದರೆ ಅಲ್ಲಿ ಅವನು ಹೇಳಿದ್ದೇ ಕಾನೂನು. ಆದರೆ ಜನಗಳ ಇಚ್ಛಾನುಸಾರವಾಗಿ ಕಾನೂನನ್ನು ಮಾಡುವ ಒಂದು ಸಂಸತ್ತಿನಲ್ಲಿ, ಎದುರಾಳಿಗಳ ಮೇಲೆ ಜಯ ಸಾಧಿಸುವ ಒಬ್ಬ ವ್ಯಕ್ತಿಗೆ ತನ್ನ ಎದುರಾಳಿಯನ್ನು ಮನ ಒಲಿಸುವ ಕಲೆ ಗೊತ್ತಿರುತ್ತದೆ. ಸದನದಲ್ಲಿನ ಅಲ್ಪಸಂಖ್ಯಾತ ಬಣವನ್ನು ನಿಮ್ಮ ಎದುರಾಳಿಗೆ ಮುಷ್ಟಿ ಪ್ರಹಾರ ಮಾಡಿ ಗೆಲ್ಲಲು ಸಾಧ್ಯವಿಲ್ಲ .ಅಲ್ಪಸಂಖ್ಯಾತ ಬಣ ಗೂಂಡಾಗಳನ್ನು ಕರೆದುಕೊಂಡು ಬಂದು ಬಹುಸಂಖ್ಯಾತರನ್ನು ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಹಾಗೆಯೇ ಬಹುಸಂಖ್ಯಾತ ಬಣ ಅಲ್ಪಸಂಖ್ಯಾತರನ್ನು ಕೆಳಕ್ಕೆ ತಳ್ಳಿ ಜಯವನ್ನು ದಾಖಲಿಸಲು ಸಾಧ್ಯವಿಲ್ಲ. ನಿಮ್ಮ ಒಂದು ಪ್ರಸ್ತಾವವನ್ನು ಮಾತುಗಾರಿಕೆಯ ಕಲೆಯಿಂದ ಮಾತ್ರ ಗೆಲ್ಲಬಹುದು, ನಿಮ್ಮ ಎದುರಾಳಿಯನ್ನು ಮನ ಒಲಿಸುವುದರ ಮೂಲಕ ಗೆಲ್ಲಬಹುದು, ವಾದ ಮಾಡಿ ಗೆಲ್ಲಬಹುದು. ಆದರೆ ಆ ವಾದ ಜೋರಾಗಿ ಇರಬಹುದು ಅಥವಾ ಮೆದುವಾಗಿರಬಹುದು. ಆದರೆ ಯಾವಾಗಲೂ ತಾರ್ಕಿಕವಾಗಿ ಇರಬೇಕು, ಬೋಧಪ್ರದವಾಗಿರಬೇಕು. ಆದ್ದರಿಂದ ಒಂದು ಸಂಸದೀಯ ಸಂಸ್ಥೆಯಲ್ಲಿ ಪಾರಮ್ಯವಾದ ಅರ್ಹತೆಯೆಂದರೆ ಸದನವನ್ನು ವಶಕ್ಕೆ ತೆಗೆದುಕೊಳ್ಳಲು ಇರಬೇಕಾದ ಸಾಮರ್ಥ್ಯ. ಆದ್ದರಿಂದ ಪಾರ್ಲಿಮೆಂಟಿಗೆ ನೀವು ಹೋಗುವಾಗ ಪೂರ್ಣವಾಗಿ

ತಯಾರಿ ಮಾಡಿಕೊಂಡು, ಗಂಭೀರವಾದ ವಿಷಯಕ್ಕೆ ಒಂದು ಗಂಭೀರವಾದ ಕೊಡುಗೆಯನ್ನು ಕೊಡಲು ಹೋಗಬೇಕು.

ಮತ್ತು ಕೂಡಾ ಭಾಷಣ ಮಾಡುವ ಕಲೆಯನ್ನು ಗಂಭೀರವಾಗಿ ಪರಿಗಣಿಸಿ ನೀವು ಕಲಿಯಬೇಕೆಂದು ನಾನು ಬಯಸುತ್ತೇನೆ. ನನ್ನ ಅನುಭವದಿಂದ ಹೇಳಬಹುದಾದರೆ, ಅದೇನೂ ಅಂಥ ಕಷ್ಟಕರವಾದ ಕಲೆಯೇನೂ ಅಲ್ಲ. ನಾನೇನೂ ಅಂಥ ಮಹಾನ್ ಭಾಷಣಕಾರನಲ್ಲ. ಭಾರತದ ರಾಜಕಾರಣದಲ್ಲಿ ತಮ್ಮ ಪಾತ್ರವನ್ನು ಮಾಡಿದ ಜನಗಳ ಬಗ್ಗೆ ಚರಿತ್ರೆಯನ್ನು ಬರೆಯುವುದಕ್ಕೆ ಯಾರಾದರೂ ಮನಸ್ಸು ಮಾಡಿದರೆ, ಭಾರತದ ಅತ್ಯುತ್ತಮ ಭಾಷಣಕಾರರಲ್ಲಿ ನಾನೂ ಒಬ್ಬನು ಎಂದು ಹೇಳುವುದಕ್ಕೆ ಅವರಿಗೆ ಯಾವ ಸಮರ್ಥನೆಯೂ ಸಿಗುವುದಿಲ್ಲ. ಆ ಗೌರವಕ್ಕೆ ನಾನು ಆಕಾಂಕ್ಷೆಯನ್ನು ಪಡುವುದಿಲ್ಲ. ಒಂದು ಕಾಲದಲ್ಲಿ ನಾನು ನಾಚಿಕೆಯಿಂದ ಎಷ್ಟರ ಮಟ್ಟಿಗೆ ಕುಗ್ಗಿಹೋಗಿದ್ದೆನೆಂದರೆ, ಅದು ನನ್ನನ್ನು ಎಷ್ಟರಮಟ್ಟಿಗೆ ಭೀತನನ್ನಾಗಿ ಮಾಡಿತ್ತೆಂದರೆ, ನಾನು ಸೈಡೆನ್ ಹ್ಯಾಮ್ ಕಾಲೇಜಿನ ನನ್ನ ಪ್ರೊಫೆಸರ್ ಹುದ್ದೆಯನ್ನು ಬಿಟ್ಟುಬಿಡಬೇಕೆಂದುಕೊಂಡಿದ್ದೆ; ಅದಕ್ಕೆ ಕಾರಣ ಹುಡುಗರು ನನ್ನನ್ನು ಎಲ್ಲಿ ಗೇಲಿ ಮಾಡುತ್ತಾರೋ ಎಂಬ ಹೆದರಿಕೆಯಿಂದ. ಆದರೆ ನಾನು ನಿಮಗೆ ಭರವಸೆಯನ್ನು ಕೊಡುತ್ತೇನೆ: ನಿಮ್ಮಲ್ಲಿ ಕೆಲವರಿಗೆ ನನಗೆ ಇದ್ದ ಹಾಗೆ ಭಯವಿದ್ದರೆ, ಅದನ್ನು ಅತ್ತ ಬಿಸಾಡಿ, ಭಾಷೆಯ ಮೇಲಿನ ಪ್ರಭುತ್ವವನ್ನು ಸಾಧಿಸುವುದಕ್ಕೆ ಪ್ರಯತ್ನ ಪಡಿ, ಅದೇನೂ ಅಂಥ ಕಷ್ಟಸಾಧ್ಯವಾದ ಕೆಲಸವೇನೂ ಅಲ್ಲ.

ಆಮೇಲೆ ಸ್ಪೀಕರ್ (ಸಭಾಪತಿ) ಅವರ ರೂಲಿಂಗಿಗೆ ಬೇಶರತ್ ವಿಧೇಯತೆಯನ್ನು ತೋರಿಸಬೇಕು. ಸಭಾಪತಿಯವರ ರೂಲಿಂಗ್ ಅನ್ನು ಯಾವತ್ತೂ ಪ್ರಶ್ನಿಸಬಾರದು. ಒಂದು ಕಷ್ಟವಾದ ಕ್ರಿಯಾಲೋಪವಿದ್ದರೆ, ಅದಕ್ಕೆ ಯಾವುದೇ ಪೂರ್ವನಿದರ್ಶನ ಇಲ್ಲದಿದ್ದರೆ, ಅವರಿಗೆ ಅಲ್ಲಿಯೇ ರೂಲಿಂಗ್ ಕೊಡಲು ಆಗದಿದ್ದರೆ, ಆಗ ಅವರು ಸದನದ ಬೇರೆ ಬೇರೆ ಪಕ್ಷಗಳನ್ನು ಯಾವುದಾದರೂ ಒಂದು ಗೊತ್ತಾದ ರೂಲಿಂಗ್ ಬಗ್ಗೆ ಸರಿಯಾದ ವ್ಯಾಖ್ಯಾನವೇನು ಎಂಬುದರ ಬಗ್ಗೆ ಅವರ ಅಭಿಪ್ರಾಯವನ್ನು ಕೇಳುತ್ತಾರೆ. ಆದರೆ ಎಲ್ಲಾ ಪಕ್ಷಗಳನ್ನೂ ಕೇಳಿದ ಮೇಲೆ, ಅವರು ತಮ್ಮ ರೂಲಿಂಗ್ ಅನ್ನು ಕೊಡುವುದಕ್ಕೆ ಮುಂದಾದಾಗ ಅದು ಎಷ್ಟೇ ತಪ್ಪಾಗಿದ್ದರೂ ಸಹ, ಅದನ್ನು ನೀವು ಪವಿತ್ರ ಕರ್ಮವೆಂದು ಒಪ್ಪಿಕೊಳ್ಳಬೇಕು. ನಾನು ಸಂಸದೀಯ ಸಂಸ್ಥೆಗಳಲ್ಲಿ ೧೯೨೬ರಿಂದ ೧೯೪೬ ರ ವರೆಗೆ , (ಮಧ್ಯೆ ಸ್ವಲ್ಪ ಅವಧಿಯನ್ನು ಬಿಟ್ಟು) ಇದ್ದೇನೆ. ಬೇರೆ ಬೇರೆ ವ್ಯಕ್ತಿತ್ವದ ಸಭಾಪತಿಗಳು ನನಗೆ ಗೊತ್ತಿದ್ದಾರೆ, ಒಳ್ಳೆಯವರು ಮತ್ತು ಇತರರು. ಆದರೆ ಎಲ್ಲರ ರೂಲಿಂಗ್ ಗಳನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೂ, ಯಾವುದೇ ಒಂದು ಗೊತ್ತಾದ ಅದೇಶವನ್ನು ತಿದ್ದುಪಡಿಮಾಡಬೇಕೆಂದು ನೀವು ಒಂದು ಪ್ರಸ್ತಾವವನ್ನು ಮಂಡಿಸಬಹುದು.

ಪಾರ್ಲಿಮೆಂಟು ಹೀಗೆ ಕೆಲಸ ಮಾಡುತ್ತದೆ ಎಂದು ತೋರಿಸುವ ಪ್ರಾತ್ಯಕ್ಷಿಕೆಯನ್ನು ನೋಡುವುದಕ್ಕೆ ನಿಮಗೆ ಅವಕಾಶವಿಲ್ಲದಿರುವುದು ದುರ್‌ದೃಷ್ಟಕರ. ಪ್ಯಾರಿಸ್ಸಿಗೆ ಹೋಗಿ ಅಲ್ಲಿಯ ವಾಸ್ತವ ಅಧಿವೇಶನವನ್ನು ನೋಡಿದರೆ ಅಥವಾ ಲಂಡನ್ನಿಗೆ ಹೋಗಿ ಕಾಮನ್ಸ್ ಸಭೆಯನ್ನು ನೋಡಿದರೆ ಅಥವಾ ಯು.ಎಸ್.ಎ ಗೆ ಹೋಗಿ ಅಲ್ಲಿನ ಪ್ರತಿನಿಧಿಗಳ ಸಭೆಯನ್ನು ನೋಡಿದರೆ ಮೂರೂ ನಿಕಾಯಗಳ ನಡುವೆ ಇರುವ ಆಶ್ಚರ್ಯಕರ ವ್ಯತ್ಯಾಸವನ್ನು ನೀವು ಗಮನಿಸುತ್ತೀರಿ. ಪ್ಯಾರಿಸ್ಸಿನಲ್ಲಿ ನೀವು ಒಂದು ಆಶ್ಚರ್ಯವನ್ನುಂಟು ಮಾಡುವ ಅಸೆಂಬ್ಲಿಯನ್ನು ನೋಡುತ್ತೀರಿ. ಒಮ್ಮೆ ನಾನು ಪ್ಯಾರಿಸ್ಸಿನಲ್ಲಿ ಕೆಳಗಿನ ಸಭೆಗೆ ಎರಡು ಮೂರು ಬಾರಿ ಹೋಗಿದ್ದೆ. ಆ ಉನ್ನತ ಸದನಕ್ಕೂ ಕ್ರಾಫೋರ್ಡ್ ಮಾರ್ಕೆಟ್ಟಿಗೂ ನನಗೆ ಯಾವ ವ್ಯತ್ಯಾಸವೂ ಕಂಡು ಬರಲಿಲ್ಲ. ಜನಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡುತ್ತಿದ್ದರು, ಒಂದು ಮೂಲೆಯಿಂದ

ಇನ್ನೊಂದು ಮೂಲೆಗೆ ಓಡಾಡುತ್ತಿದ್ದರು? ಎಲ್ಲ ಅವ್ಯವಸ್ಥೆ, ಯಾರೂ ಸಭಾಪತಿಯವರ ಮಾತನ್ನು ಕೇಳುತ್ತಿರಲಿಲ್ಲ, ಆ ಬಡಪಾಯಿ ಸಭಾಪತಿ ಅವರ ಮೇಜಿನ ಮೇಲೆ ಒಂದು ದಪ್ಪನೆಯ ಮರದ ಕೊರಡನ್ನು ಇಟ್ಟುಕೊಂಡಿದ್ದರು, ಒಂದು ದಪ್ಪನಾದ ಮರದ ಸುತ್ತಿಗೆಯನ್ನೂ ಸಹ ಇಟ್ಟುಕೊಂಡಿದ್ದರು.ಅವರು ಒಂದೇ ಸಮನೆ ಸುತ್ತಿಗೆಯಿಂದ ಕುಟ್ಟುತ್ತಲೇ ಇದ್ದರು, ಆದರೆ ಯಾರು ಅವರಿಗೆ ಗಮನವನ್ನು ಕೊಡುತ್ತಲೇ ಇರಲಿಲ್ಲ. ಆದರೆ ಇದಕ್ಕೆ ತದ್ವಿರುದ್ಧವಾದದ್ದು ಲಂಡನ್ನಿನ ಕಾಮನ್ಸ್ ಸಭೆಯಲ್ಲಿ. ಸ್ಪೀಕರ್ ಅವರು ನಿಂತುಕೊಂಡಿರುವಾಗ ಯಾರೂ ನಿಂತಿರಬಾರದೆಂಬ ಒಂದು ನಿಯಮ ಅಲ್ಲಿ ಇತ್ತು. ಪ್ರತಿಯೊಬ್ಬ ಸದಸ್ಯನು ಕುಳಿತುಕೊಳ್ಳಲೇಬೇಕು. ಒಬ್ಬ ಸದಸ್ಯ ನಿಂತಿರುವಾಗ ಇತರ ಸದಸ್ಯರು ಕುರ್ಚಿಯಲ್ಲಿ ಕುಳಿತಿರಲೇಬೇಕು. ಅವರು ಕುಳಿತು ಕಿವಿಗೊಡಬೇಕು. ಸ್ಪೀಕರ್ ಕರೆಯುವವರೆಗೂ ಯಾವ ಸದಸ್ಯನೂ ಮಾತನಾಡುವುದಕ್ಕೆ ಪ್ರಾರಂಭಿಸುವ ಹಾಗಿಲ್ಲ. ಯಾರೇ ಒಬ್ಬ ಸದಸ್ಯನನ್ನು ಮಾತನಾಡುವುದಕ್ಕೆ ಕರೆಯಲೇ ಬೇಕೆಂಬ ಕರ್ತವ್ಯವಾಗಲೀ ಅಥವಾ ಹೊಣೆಗಾರಿಕೆಯಾಗಲೀ ಸಭಾಪತಿಯವರಿಗೆ ಇರುವುದಿಲ್ಲ. ಒಂದು ವಾಕ್ಯ ಸಮುಚ್ಚಯ ಇದೆ: ಸ್ಪೀಕರ್ ಕಣ್ಣಿಗೆ ಯಾರು ಬೀಳುತ್ತಾರೋ ಅವರನ್ನು ಮಾತನಾಡುವುದಕ್ಕೆ ಕರೆಯುತ್ತಾರೆ ಎಂದು. ಇದು ಒಂದು ಭ್ರಮೆಯನ್ನು ತರಿಸುವ ವಾಕ್ಯ ಸಮುಚ್ಚಯ. ಸಭಾಪತಿಯವರ ಕಣ್ಣಿಗೆ ಒಬ್ಬರು ಬೀಳಬಹುದು, ಆದರೆ ಅವರು ಅವನನ್ನು ನೋಡಿದರೂ ನೋಡದ ಹಾಗೆ ಇದ್ದು ಬಿಡಬಹುದು. ಕಾರಣ ಸ್ವಯಂ ವೇದ್ಯ. ಕುರ್ಚಿಯಲ್ಲಿ ಬಹಳ ವರ್ಷಗಳಿಂದ ಕುಳಿತಿದ್ದು ಪ್ರತಿಯೊಬ್ಬನೂ ಅವರಿಗೆ ವೈಯುಕ್ತಿಕವಾಗಿ ಗೊತ್ತಿರುತ್ತಿದೆ, ಅವರ ಒಳ್ಳೆಯ ಅಂಶಗಳೂ ಗೊತ್ತಿರುತ್ತದೆ, ಕೆಟ್ಟ ಅಂಶಗಳೂ ಗೊತ್ತಿರುತ್ತದೆ. ಅವನ ಕುಟುಂಬದ ಚರಿತ್ರೆಯೂ ಗೊತ್ತಿರುತ್ತದೆ. ಬರಿಯ ಮಾತನಾಡುವ, ಆದರೆ ಏನನ್ನೂ ಹೇಳದ, ಬೇಸರಗೊಳಿಸುವ ಸದಸ್ಯನನ್ನು ಸ್ಪೀಕರ್ ಮಾತನಾಡಲು ಬಹಳ ಅಪರೂಪವಾಗಿ ಕರೆಯುತ್ತಾರೆ.

ನಮಗೆ ಈಗ ಇರುವುದನ್ನು ಸಂಸದೀಯ ಪ್ರಜಾಸತ್ತೆ ಎಂದು ಕರೆಯಲಾಗುತ್ತಿದೆ. ಅ ಪದದ ಅರ್ಥವನ್ನು ತಿಳಿದುಕೊಳ್ಳೋಣ. ಅದು ಒಂದು ಬಹು ಅಪರೂಪದ ಸಂಸ್ಥೆ. ಅದು ನಿರಂಕುಶತ್ವದಿಂದ ಅಥವಾ ಮಿತಿಯಿಲ್ಲದ ಚಕ್ರಾಧಿಪತ್ಯದಿಂದ ಬೇರೆ ಇದೆ; ಕಾರಣ ನಿರಂಕುಶತ್ವದಲ್ಲಿ ಅಥವಾ ಮಿತಿಯಿಲ್ಲದ ಚಕ್ರಾಧಿಪತ್ಯದಲ್ಲಿ ಪಾರ್ಲಿಮೆಂಟ್ ಅಂತ ಕರೆಸಿಕೊಳ್ಳುವುದು ಏನೂ ಇರುವುದಿಲ್ಲ. ಪ್ರಜೆಗಳ ಆಶಯಗಳು ಏನೇನೂ ಲೆಕ್ಕಕ್ಕಿಲ್ಲ. ದೊರೆ ಅಥವಾ ಸರ್ವಾಧಿಕಾರಿ ಸಂದರ್ಭದ ಏಕೈಕ ಮಾಸ್ಟರ್. ಅವನು ತಾನು ಜನಗಳ ಇಷ್ಟವನ್ನು ಪ್ರತಿನಿಧಿಸುತ್ತೇನೆಂದು ಹೇಳುತ್ತಾನೆ, ಆದರೆ ಮಾಡುವುದೆಲ್ಲಾ ತನ್ನ ಇಷ್ಟದಂತೆಯೇ.

ನಮ್ಮಲ್ಲಿ ಈಗ ಇನ್ನೊಂದು ವ್ಯವಸ್ಥೆ ಜಾರಿಯಲ್ಲಿದೆ; ಈ ದಿನದಲ್ಲಿ ಅದನ್ನು ಜನಸಮೂಹದ (Proletariat? ಪ್ರೊಲಿಟೇರಿಯೆಟ್) ಸರ್ವಾಧಿಕಾರ ಎಂದು ಕರೆಯುತ್ತಾರೆ. ನಮ್ಮ ದೃಷ್ಟಿಯಲ್ಲಿ ಎರಡರ ನಡುವಿನ ವ್ಯತ್ಯಾಸ ತೀರ ಅತ್ಯಲ್ಪ. ನಿರಂಕುಶತ್ವ ಸಮೂಹಗಳಿಗೆ ಸೇವೆ ಮಾಡುವ ಹೊಣೆಗಾರಿಕೆಯನ್ನು ತನ್ನ ಮೇಲೆ ತಾನೇ ಎಳೆದುಕೊಂಡಿದೆ. ಆದರೆ ಮೂಲಭೂತವಾಗಿ ಇಂಥ ಸರ್ವಾಧಿಕಾರ, ಸಂಪೂರ್ಣ ಚಕ್ರಾಧಿಪತ್ಯದಿಂದ ಅಷ್ಟೇನೂ ಸಾರಭೂತವಾಗಿ ಹೊರತಾಗಿಲ್ಲ. ಏಕೆಂದರೆ ಎರಡರಲ್ಲೂ ಸಾಮಾನ್ಯ ಜನಗಳಿಗೆ ಯಾವ ಪಾತ್ರವೂ ಇಲ್ಲ. ಸಂಸದೀಯ ಪ್ರಜಾಸತ್ತೆ ಎರಡಕ್ಕೂ ಮಧ್ಯದಲ್ಲಿ ಇದೆ. ಅದು ಒಂದು ನವಿರಾದ ಸಂಸ್ಥೆ.. ಅದರ ಗುಣಲಕ್ಷಣಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಇದನ್ನು ವಿವಿಧ ಬಗೆಯ ರಾಜಕೀಯ ವೇದಾಂತಿಗಳು ವಿವಿಧ ಬಗೆಯಲ್ಲಿ ವಿವರಿಸಿದ್ದಾರೆ ಸಂಸದೀಯ ಪ್ರಜಾಸತ್ತೆಯನ್ನು ಕಾನೂನಿಂದಾದ ಸರ್ಕಾರವೆಂದು ವಿವರಿಸಲಾಗಿದೆ. ಒಂದು ಕಾಲದಲ್ಲಿ ಕಾನೂನಿನಿಂದಾದ ಸರ್ಕಾರವೆಂಬ ಸಂಸದೀಯ ಪ್ರಜಾಸತ್ತೆಯ ಈ ಗುಣಲಕ್ಷಣ, ನಿಸ್ಸಂದೇಹವಾಗಿ ಬಹಳ ಪ್ರಾಮುಖ್ಯವಾಗಿತ್ತು, ಬಹಳ ನಿಜವಾಗಿತ್ತು.

ಯೂರೋಪಿನಲ್ಲಿ ಚಕ್ರಾಧಿಪತ್ಯವನ್ನು ತೊಡೆದು ಹಾಕಿದಾಗ ಮತ್ತು ಸಂಸದೀಯ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದಾಗ, ಬಂದು ಕಾರ್ಯಾರಂಭ ಮಾಡಿದಾಗ ಅಪ್ಪಟ ಚಕ್ರಾಧಿಪತ್ಯದಿಂದ ಸಂಸದೀಯ ಪ್ರಜಾಪ್ರಭುತ್ವಕ್ಕೆ ಬದಲಾವಣೆಗೊಂಡುದುದನ್ನು ನೋಡಿದ ಪೀಳಿಗೆ, ಸಂಸದೀಯ ಪ್ರಜಾಪ್ರಭುತ್ವವನ್ನು ಕಾನೂನಿಂದಾದ ಸರ್ಕಾರವೆಂಬ ವಿವರಣೆ ಕೊಟ್ಟುದು ನಿಸ್ಸಂಶಯವಾಗಿ ಸತ್ಯವಾಗಿತ್ತು, ಪ್ರಾಮುಖ್ಯವಾಗಿತ್ತು. ಏಕೆಂದರೆ ಅದಕ್ಕೆ ಮುಂಚೆ ಅದು ಖಾಸಗಿ ಆಡಳಿತವಾಗಿತ್ತು. ಮೊದಲನೆಯದಾಗಿ ಅ ಆಡಳಿತ ಅವನ ಬೇಕು ಬೇಡಗಳ ಮೇಲೆ ಅವಲಂಬಿಸಿತ್ತು. ಎರಡನೆಯದಾಗಿ ಅವನು ಯಾವಾಗಲೂ ತಾನು ಕಾನೂನಿಗಿಂತ ಮಿಗಿಲಾದವನಾಗಿದ್ದ. ಕಾನೂನು ಜನಗಳಿಗೆ ಮಾತ್ರವಾಗಿದ್ದು, ಅವನಿಗೆ ಆ ಕಾನೂನು ಇರಲಿಲ್ಲ. ಈಗ ನಾವು ಅನುಭವಿಸುತ್ತಿರುವ ಕಾನೂನಿನ ಆಡಳಿತ– ಒಂದು ಚೆನ್ನಾಗಿ ಸ್ಥಾಪಿಸಲ್ಪಟ್ಟ ನೀತಿ. ನಾವು ಅದಕ್ಕೆ ಎಷ್ಟರ ಮಟ್ಟಿಗೆ ಒಗ್ಗಿ ಹೋಗಿ ಬಿಟ್ಟಿದ್ದೇವೆ ಎಂದರೆ, ಅದನ್ನು ಒಂದು ವಿಶೇಷವಾದ ಸದ್ಗುಣವೆಂದು ಕಾಣುತ್ತಿಲ್ಲ. ಆದರೆ ಈಗಲೂ ಕೂಡ ಉಳಿದು ಕೊಳ್ಳುವ ಪ್ರಾಮುಖ್ಯವಾದ ಸಂಗತಿ ಯಾವುದೆಂದರೆ ನಾವು ಕಾನೂನನ್ನು ಮಾಡಿದಾಗ, ಕಾನೂನನ್ನು ಮಾಡಿದವರನ್ನೂ ಸಹ ಕಾನೂನಿನಿಂದ ಕೆಳಗಡೆ ಇಡುತ್ತೇವೆ. ಸಂಸದೀಯ ಪ್ರಜಾಪ್ರಭುತ್ವವನ್ನು ಬಹುಸಂಖ್ಯಾತರ ಪ್ರಜಾ ಪ್ರಭುತ್ವ ಎಂದು ಯಾರೋ ಹೇಳಿಯೂ ಇದ್ದಾರೆ. ನಮ್ಮ ಶಾಸನಗಳಲ್ಲಿ, ಎಲ್ಲ ಪ್ರಶ್ನೆಗಳನ್ನೂ ಬಹುಸಂಖ್ಯಾ ಬಲದಿಂದ ತೀರ್ಮಾನ ಮಾಡಬೇಕು ಎಂಬ ಒಂದು ನಿಯಮ ಇರುವುದು ಸತ್ಯ. ಆ ನೀತಿಯ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕೆಂದು ನಾನು ಹೇಳುತ್ತೇನೆ. ನಮ್ಮಲ್ಲಿ ಇರುವ ನೀತಿ/ನಿಯಮಗಳಲ್ಲಿ ಇರುವ ಅತ್ಯಂತ ಅಪಾಯಕಾರಿ ನಿಯಮವೆಂದರೆ ಇದೇ. ಅನುಕೂಲಕ್ಕೋಸ್ಕರ ಮಾತ್ರ ಬಹುಸಂಖ್ಯಾತ ಆಡಳಿತವನ್ನು ಒಪ್ಪಿಕೊಳ್ಳಲಾಗಿದೆ. ಆದರೆ ದೇವರಾಣೆಗೂ, ಅದೇ ತತ್ವಕ್ಕೆ ವಿಪರೀತ ಅಂಟಿಕೊಳ್ಳಬೇಡಿ. ಹಾಗೆ ಮಾಡಿದ್ದಾದರೆ ಬಹಳಷ್ಟು ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೀರಿ. ಒಂದರ್ಥದಲ್ಲಿ ಬಹುಸಂಖ್ಯಾತರು ಅನ್ನುವ ನಿಯಮವೇ ಸರಿಯಿಲ್ಲ. ಈ ವಿಷಯ ಕುರಿತು ನಾನು ವಾದ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ನಾವೀಗ ಒಂದು ಸಂವಿಧಾನವನ್ನು ರಚಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದೇವೆ. ನನ್ನನ್ನು ಅದರ ಮುಖ್ಯಸ್ಥನೆಂದು, ಅಧ್ಯಕ್ಷನೆಂದು ನೇಮಿಸಿಕೊಂಡಿದ್ದಾರೆ. ನಾವು ಅಲ್ಪಸಂಖ್ಯಾತರ ಮೂಲಭೂತ ಹಕ್ಕನ್ನು ರಕ್ಷಿಸಬೇಕು. ಮೂಲಭೂತ ಹಕ್ಕೆಂದರೆ ಬಹುಸಂಖ್ಯಾತರು ಕೆಲವೊಂದನ್ನು ಮಾಡುವುದಕ್ಕೆ ಅವರಿಗೆ ಹಕ್ಕು ಇರುವುದಿಲ್ಲ ಎಂಬುದನ್ನು ಮರೆಯಬೇಡಿ. ವಾಸ್ತವವಾಗಿ ಬಹುಸಂಖ್ಯಾತರ ಆಡಳಿತ ಬಂದಿದೆ, ಆದರೆ ಅಕಾಸ್ಮಾತ್ತಾಗಿ ಬಂದಿದೆ.

ನೀವು ಕಾಮನ್ಸ್ ಸಭೆಯ ಪ್ರಕ್ರಿಯೆಯನ್ನು ಮತ್ತು ಅದರ ಹಿಂದೆ ಇರುವ ಚರಿತ್ರೆಯನ್ನು ಪರೀಕ್ಷಿಸಿದರೆ ಸಾವಿರದ ನಾನೂರ ಹದಿನೈದನೇ ವರ್ಷದ ಸುಮಾರಿನಲ್ಲಿ ಆಗಿದ್ದಿಷ್ಟು: ಕಾಮನ್ಸ್ ಸಭೆಯಲ್ಲಿ ಒಂದು ಪ್ರಸ್ತಾವವನ್ನು ಮಂಡಿಸಲಾಯಿತು: ಪರವಾಗಿದ್ದವರೆಲ್ಲರೂ ಹೌದಪ್ಪಗಳ ಲಾಬಿಯಲ್ಲಿ ಕುಳಿತುಕೊಂಡರು: ವಿರೋಧವಾಗಿದ್ದವರು ಇನ್ನೊಂದು ಲಾಬಿಯಲ್ಲಿ ಕುಳಿತುಕೊಂಡರು. ಸಭಾಪತಿಯವರು ಗುಮಾಸ್ತನನ್ನು ಹೌದಪ್ಪಗಳ ಲಾಬಿಯಲ್ಲಿ ಎಷ್ಟು ಜನ ಇದ್ದಾರೆ, ಬೇಡ ಅನ್ನುವವರ ಲಾಬಿಯಲ್ಲಿ ಎಷ್ಟು ಜನರಿದ್ದಾರೆ ಎಂದು ಕೇಳುತ್ತಾರೆ. ಬೇಡ ಅನ್ನುವವರ ಲಾಬಿಯಲ್ಲಿ ೨೦ ಜನರಿದ್ದಾರೆಂದು, ಹೌದು ಅನ್ನುವವರ ಲಾಬಿಯಲ್ಲಿ ೫೦ ಜನರಿದ್ದಾರೆಂದು ತಿಳಿಸಲಾಯಿತು. ಆದರೆ ಸ್ಪೀಕರ್ ಅವರು ಪ್ರಸ್ತಾವದ ಫಲಿತಾಂಶವನ್ನು ಘೋಷಣೆ ಮಾಡಲಿಲ್ಲ. ಅವರು ಮಾಡಿದ್ದೇನೆಂದರೆ, ಹೌದು ಅನ್ನುವವರ ಲಾಬಿಯಲ್ಲಿದ್ದವರನ್ನು ಕರೆದು ಬೇಡ ಅನ್ನುವವರ ಲಾಬಿಗೆ ಹೋಗಿ ಅವರ ಮನವೊಲಿಸಿ ಹೌದು ಅನ್ನುವವರ ಲಾಬಿಗೆ ಬಂದು ಕುಳಿತುಕೊಳ್ಳುವಂತೆ ಹೇಳಿ, ಆಮೇಲೆಯೇ ಫಲಿತಾಂಶವನ್ನು ಘೋಷಣೆ ಮಾಡುತ್ತಿದ್ದರು. ಅದರ ಅರ್ಥ ಏನು? ಬಹಳ

ಮಹತ್ವದ್ದು, ಸ್ಪೀಕರ್ ಅವರಿಗೆ, ಅಲ್ಪಸಂಖ್ಯಾತರು ಹೌದು ಎಂದು ಬಾಯಿ ಬಿಟ್ಟು ಹೇಳದೇ ಇದ್ದರೂ ಮೌನವಾಗಿ ಸಮ್ಮತಿ ಸೂಚಿಸಿದ್ದಾರೆ ಎಂದು ಖಾತರಿಯಾಗುವವರೆಗೂ ಬಹುಸಂಖ್ಯಾತರು ತಮ್ಮ ಪರವಾಗಿ ತೀರ್ಮಾನವನ್ನು ಪಡೆಯಲಾಗುತ್ತಿರಲಿಲ್ಲ. ಇದು ಮೊದಲಿದ್ದ ಪ್ರಕ್ರಿಯೆ. ಕಾಲಾನಂತರದಲ್ಲಿ, ಏನೋ ಒಂದು ಕಾರಣಕ್ಕಾಗಿ ಈ ಪದ್ಧತಿ ಅಥವಾ ಬಹುಸಂಖ್ಯಾತರ ಮೇಲಿದ್ದ ಈ ಹೊಣೆಗಾರಿಕೆ ಅಂದರೆ, ವಿರುದ್ಧ ಪಕ್ಷದಲ್ಲಿದ್ದ ತಮ್ಮ ಸಹೋದರರನ್ನು ಮನವೊಲಿಸಿ ಹಿಂದಿರುಗಿ ಬಂದು ಕೇಳುವಂತೆ ಮಾಡುವುದನ್ನು ಕೈ ಬಿಡಲಾಯಿತು. ಹೇಗಾದರೂ ಸಂಸದೀಯ ಪ್ರಜಾಪ್ರಭುತ್ವ ಬಹುಸಂಖ್ಯಾತರ ಆಡಳಿತ ಅನ್ನುವ ನಿಯಮವನ್ನು ಒಪ್ಪಿಕೊಂಡರಾದರೂ, ನಿಮಗಿಷ್ಟ ಬಂದ ಹಾಗೆ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುವುದಾಗಲೀ, ಅವರಿಗೆ ಅನಾನುಕೂಲವನ್ನು ಮಾಡುವುದಾಗಲೀ ಮಾಡುವ ಹಾಗಿರಲಿಲ್ಲ. ಈ ಸಭೆಯಲ್ಲಿಯೇ ಬಹಳಷ್ಟು ತೊಂದರೆಯನ್ನು ಮೇಲೆ ನೀವೇ ಮೇಲೆ ಎಳೆದು ಕೊಳ್ಳುತ್ತೀರಿ. ಅಲ್ಪಸಂಖ್ಯಾತರನ್ನು ಯಾವತ್ತೂ ಮನವೊಲಿಸಿಕೊಳ್ಳಬೇಕು. ಅವರನ್ನು ಯಾವತ್ತೂ ಬಲವಂತ ಮಾಡಬಾರದು.

ಇನ್ನೊಂದು ರಾಜಕೀಯ ತತ್ವ ಇತ್ತು? ಅದೇ ವಾಲ್ಟರ್ ಬಾಗೆಹಾಟ್‌ನ ತತ್ವ. ಅವನು ಸಂಸದೀಯ ಸರ್ಕಾರವನ್ನು ಚರ್ಚೆ ಮಾಡುವ ಸರ್ಕಾರವೆಂದು ವಿವರಣೆ ಕೊಟ್ಟ. ನನಗೂ ಸಹ ಅವನು ಕೊಟ್ಟ ಸಂಸದೀಯ ಸರ್ಕಾರದ ವಿವರಣೆ ಬಹಳ ನಿಜವೆಂದು ಅನಿಸುತ್ತದೆ. ಸಂಸದೀಯ ಸರ್ಕಾರದಲ್ಲಿ ಪರದೆಯ ಹಿಂದೆ ಏನನ್ನೂ ಮಾಡುವುದಿಲ್ಲ, ಕೆಲವು ವ್ಯಕ್ತಿಗಳ ಇಷ್ಟಾನುಸಾರ ಏನನ್ನೂ ಮಾಡುವುದಿಲ್ಲ. ಪ್ರತಿಯೊಂದು ವಿಷಯವನ್ನೂ ಸದನದ ಮುಂದೆ ಒಂದು ಮಸೂದೆಯ ರೂಪದಲ್ಲಿ ಅಥವಾ ಒಂದು ನಿರ್ಣಯದ ರೂಪದಲ್ಲಿ ಅಥವಾ ಇನ್ನಾವುದೋ ಪ್ರಸ್ತಾವದ ರೂಪದಲ್ಲಿ ತರಲಾಗುತ್ತದೆ.

ಅದನ್ನು ಸದನದ ಮುಂದೆ ಇಟ್ಟಾಗ ಅದರ ಮೇಲೆ ಚರ್ಚೆ ಮಾಡಬಹುದು. ಆದರೆ 'ಎನ್ಕ್ಲೋಶರ್' ಅನ್ನುವ ಮಹತ್ವದ ಸಂಸದೀಯ ಆಚರಣೆಯನ್ನು ನಾವು ಅನುಸರಿಸದೇ ಇರುವುದು ಬಹಳ ಕನಿಕರವಾಗುತ್ತದೆ. (ಇಲ್ಲಿ ಸ್ಪೀಕರ್ ಅವರು ಪಾರ್ನೆಲ್ ಅನ್ನುವ ಸಂಸದ ಗ್ಲಾಡ್‌ಸ್ಟೋನ್ ಮತ್ತು ಲಾರ್ಡ್ ನಾರ್ತ್‌ಬ್ರೂಕ್ ಅವರನ್ನು ಹೇಗೆ ೪೮ ಗಂಟೆ ೩೬ ಗಂಟೆ ಮತ್ತು ೨೪ ಗಂಟೆ ಗೋಳಾಡಿಸಿದ ಎಂದು, ಫಲಿತಾಂಶವಾಗಿ 'ಎನ್ಕ್ಲೋಶರ್' ಅನ್ನುವ ಆಚರಣೆ ಜಾರಿಗೆ ಬಂದಿತು ಎಂದು ಹೇಳಿದರು).

ಹೇಗಾದರೂ ಈಗ ಎಲ್ಲಾ ಶಾಸನ ಸಭೆಗಳು ಚರ್ಚೆಯನ್ನು ಮುಕ್ತಾಯಗೊಳಿಸುವ ಒಂದು ನಿಯಮವಿದ್ದಾಗ್ಯೂ, ಅವರು ಕೇಳಿದ ಪ್ರಶ್ನೆಯಿಂದಾಗಿ ಚರ್ಚೆ ಮಾಡುವುದಕ್ಕೆ ಸಾಕಷ್ಟು ಸಮಯ ಸಿಗುತ್ತಿತ್ತು . ಪಾರ್ಲಿಮೆಂಟಿನಲ್ಲಿ ನಡೆಯುತ್ತಿದ್ದ ಚರ್ಚೆ ಸಂಬಂಧಪಟ್ಟ ವಿಷಯದ ಮೇಲೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಸ್ತುತವಾಗಿರುತ್ತಿದ್ದರೂ, ಅದಕ್ಕೆ ಇನ್ನೂ ಹೆಚ್ಚಿನ ಪ್ರಸ್ತುತತೆ ಮತ್ತು ಇನ್ನು ಹೆಚ್ಚಿನ ಮಹತ್ವ ಇರುತ್ತದೆ. ಉನ್ನತ ಮಟ್ಟದಲ್ಲು ಚರ್ಚೆ ನಡೆದು, ವರ್ತಮಾನ ಪತ್ರಿಕೆಗಳಲ್ಲಿ ಅದನ್ನು ಸರಿಯಾಗಿ ವರದಿ ಮಾಡಿದರೆ, ಅದರಿಂದ ಸಾಮಾನ್ಯ ಜನಗಳಿಗೆ ಸಿಗುತ್ತಿದ್ದ ರಾಜಕೀಯ ಶಿಕ್ಷಣ, ಕಾಮನ್ಸ್ ಸಭೆಯೊಳಗೆ ನಡೆಯುತ್ತಿದ್ದ ಚರ್ಚೆಗಿಂತ ಹೊರತಾಗಿ, ಉತ್ತಮ ಮಟ್ಟದ ಮಾಧ್ಯಮದಿಂದ ದೊರೆಯುತ್ತಿತ್ತು. ಆದುದರಿಂದ ಇದು ಒಂದು ಬಹಳ ಮುಖ್ಯವಾದ ನೋಟವನ್ನು ಕೊಡುತ್ತದೆ.

ಸಂಸದೀಯ ಸರ್ಕಾರವನ್ನು ಸ್ವಯಮಾಡಳಿತದ ಸರ್ಕಾರವೆಂದು ಹೇಳಲಾಗಿದೆ. ತಾರ್ಕಿಕವಾಗಿ ನೋಡುವುದಾದರೆ ನಿಸ್ಸಂದೇಹವಾಗಿ ಈ ಹೇಳಿಕೆ ಸರಿಯಾಗಿದೆ. ಆದರೆ ನೀವು ಬಹಳ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಬಹು ಮುಖ್ಯವಾದ ವಿಷಯವೆಂದರೆ ದೇಶಕ್ಕೆ ಬೇಕಾಗಿರುವುದು ಒಂದು ಒಳ್ಳೆಯ ಸರ್ಕಾರ; ಆದರೆ ಪ್ರಶ್ನೆಯೆಂದರೆ ನಿಮಗೆ ಒಳ್ಳೆಯ ಸರ್ಕಾರ ಹೇಗೆ ದೊರಕುತ್ತದೆ ಎಂದು? ಒಂದು ಬಹಳ

ಮುಖ್ಯವಾದ ಪ್ರಶ್ನೆ. ನಾನು ಕಡು ಸಿದ್ಧಾಂತವನ್ನು ಹೇಳುತ್ತಿಲ್ಲ. ನಿಮ್ಮ ಅವಗಾಹನೆಗೆ ಒಂದೆರಡು ಗಂಭೀರವಾಗಿ ಪರಿಗಣಿಸಬೇಕಾದ ಅವಲೋಕನೆಗಳನ್ನು ಮುಂದಿಡ ಬಯಸುತ್ತೇನೆ. ಏಕೆಂದರೆ ನನ್ನ ಅಭಿಪ್ರಾಯದಲ್ಲಿ, ಒಳ್ಳೆಯ ಸರ್ಕಾರವನ್ನು ರಚಿಸುವುದು ಎಂಥಾದ್ದು ಎಂಬುದರಲ್ಲಿ ಯಾವ ಕಡು ಸಿದ್ಧಾಂತವಿರಲೂ ಸ್ವಾಧ್ಯವಿಲ್ಲ. ಬೇರೆ ಬೇರೆ ಜನ ಒಳ್ಳೆಯ ಸರ್ಕಾರ ಯಾವುದು ಎಂಬುದರ ಬಗ್ಗೆ ಬೆರೆಬೇರೆ ಕಲ್ಪನೆಯನ್ನು ಹೊಂದಿರಬಹುದು. ಬಂಡವಾಳ ಶಾಹಿಗಳು ಬಂಡವಾಳ ಶಾಹಿ ಸರ್ಕಾರ ಒಳ್ಳೆಯದು ಎಂದು ಯೋಚಿಸುತ್ತಾರೆ; ಕಾರಣ, ಇಂಥ ಸರ್ಕಾರದಲ್ಲಿ ವಿಷಯಗಳು ಹೋದ ದಾರಿಗೆ ಹೋಗಲಿ ಎನ್ನುವ ಮನೋಭಾವ ಇರುತ್ತದೆ. ಅತ್ತಲಾಗಿ ಸಮಾಜವಾದಿಗಳು ಸಮತಾ ಸರ್ಕಾರ ಒಳ್ಳೆಯ ಸರ್ಕಾರವೆನ್ನುತ್ತಾರೆ. ತಮ್ಮದೇ ಬ್ರಾಂಡಿನ ಸರ್ಕಾರವನ್ನು ಅಪೇಕ್ಷಿಸುವ ಅನೇಕ ಬಗೆಯ ಜನಗಳು ಇರಬಹುದು. ವಾಸ್ತವವೆಂದರೆ ಯಾವುದು ಒಳ್ಳೆಯ ಸರ್ಕಾರವೆಂಬುದರ ಬಗ್ಗೆ ಬಗೆ ಬಗೆಯ ಅಭಿಪ್ರಾಯಗಳು ಇರಬಹುದು. ನಮ್ಮ ಸಮಾಜದ ಹಾಗೆ ಎಲ್ಲಾ ಬಗೆಯ ಕವಲುಗಳಿರುವ ಒಂದು ಸಂಕೀರ್ಣವಾದ ಸಮಾಜದಲ್ಲಿ ಪಾರಮ್ಯದ ಚಿಕಿತ್ಸೆ ಸಾಧ್ಯವಿಲ್ಲದಿರಬಹುದು.

## ೧೧೧
## ಭಾಷಣ ಮಾಡುವ ಕಲೆಯನ್ನು ಬೆಳೆಸಿಕೊಳ್ಳಬಹುದು

೧೯೪೪ನೇ ಇಸವಿ ಜನವರಿ ೧೪ರಂದು ಡಾ: ಬಿ.ಆರ್.ಅಂಬೇಡ್ಕರ್ ಅವರು ಧೋಬಿ ತಲಾವ್‌ನ ರಾತ್ರಿ ಶಾಲೆಯ ಭಾಷಣ ಕಲೆಯ ಸ್ಪರ್ಧೆಯಲ್ಲಿ (ಗೆದ್ದವರಿಗೆ) ಬಹುಮಾನ ವಿತರಣ ಸಮಾರಂಭ ಸಭೆಯನ್ನು ಉದ್ದೇಶಿಸಿ ಮಾತನಾಡಿದರು; ಸಮಾರಂಭವನ್ನು ಸಿದ್ಧಾರ್ಥ ಕಾಲೇಜಿನ ಕಟ್ಟಡದಲ್ಲಿ ನಡೆಸಲಾಗಿತ್ತು.

ಡಾ: ಅಂಬೇಡ್ಕರ್ ಅವರು ಬಾಲಕರಿಗೆ ಭಾಷಣ ಕಲೆಯನ್ನು ಬಹಳಷ್ಟು ಶ್ರಮದಿಂದ ಅಭಿವೃದ್ಧಿಪಡಿಸಿಕೊಳ್ಳಬಹುದು ಎಂದು ಮನದಟ್ಟು ಮಾಡಿದರು. ತಮ್ಮ ಮೊಟ್ಟ ಮೊದಲನೆಯ ಭಾಷಣವನ್ನು ಮಾಡುವಾಗ ಆ ಮಹಾನ್ ಭಾಷಣಕಾರರಾದ ಜಿ.ಕೆ.ಗೋಖಲೆಯವರು ಹೇಗೆ ಗಾಭರಿಗೊಂಡಿದ್ದರು, ಹೇಗೆ ಫಿರೋಝ್ ಷಾ ಮೆಹ್ತಾ ಅವರು ತಮ್ಮ ಭಾಷಣ ಕಲೆಯನ್ನು ಕನ್ನಡಿಗಳನ್ನು ಅಳವಡಿಸಿದ್ದ ಒಂದು ಕೊಠಡಿಯಲ್ಲಿ ಭಾಷಣಗಳನ್ನು ವಾಚಿಸುತ್ತಾ ಅಭಿವೃದ್ಧಿಪಡಿಸಿಕೊಂಡರು ಎಂದು ಹೇಳಿದರು; ಕನ್ನಡಿಯಲ್ಲಿ ನೋಡುತ್ತಾ ಹೇಗೆ ತಮ್ಮ ಮುಖಭಾವ ಬದಲಾಯಿಸುತ್ತಿತ್ತು, ಹೇಗೆ ತಮ್ಮ ಕೈಗಳು ಚಲಿಸುತ್ತಿದ್ದವು ಎಂಬುದನ್ನು ಗಮನಿಸುತ್ತಿದ್ದರು. ತಮ್ಮ ದಿರಿಸು ನೀಟಾಗಿ ಮತ್ತು ಮೆಚ್ಚುವಂತಿರುವ ಹಾಗೆ ಇರಲು ಬಹಳಷ್ಟು ಎಚ್ಚರಿಕೆಯನ್ನು ವಹಿಸುತ್ತಿದ್ದರು. ಅ ಮಹಾನ್ ಭಾಷಣಕಾರರಾದ ಚರ್ಚಿಲ್‌ರವರು ಯಾವುದೇ ಭಾಷಣವನ್ನು ಸಿದ್ಧತೆ ಮಾಡಿಕೊಳ್ಳದೇ ಮಾಡುತ್ತಿರಲಿಲ್ಲ ಎಂದು ಹೇಳಿದರು.

# ೧೧೨
# ಮನುವಿನ ಅಥವಾ ಯಾಜ್ಞವಲ್ಕ್ಯನ ದೈವೀ ಕಾನೂನಿಂದ ಹಿಂದೂ ಸಮಾಜ ತನ್ನನ್ನು ತಾನು ದುರಸ್ತುಮಾಡಿಕೊಳ್ಳಲು ಆಗಲೇ ಇಲ್ಲ

೧೦ನೇ ಏಪ್ರಿಲ್ ೧೯೪೮ರಂದು ಲಾ ಕಾಲೇಜ್, ದೆಹಲಿ ಯೂನಿವರ್ಸಿಟಿ, ದೆಹಲಿ ಇಲ್ಲಿ ಡಾ: ಬಿ.ಆರ್ ಅಂಬೇಡ್ಕರ್ ಅವರು ಒಂದು ಭಾಷಣವನ್ನು ಮಾಡಿದರು.

ಅವರು ಹೇಳಿದ್ದು:

ಈ ವಿಳಂಬವಾಗಿರುವುದಕ್ಕೆ ಹೊಣೆಗಾರಿಕೆ ಪುರಾತನ ಸಮಾಜಗಳು ತಮ್ಮ ಕಟ್ಟಡದಲ್ಲಿನ ದೋಷಗಳನ್ನು ತೆಗೆಯುವುದರಲ್ಲಿ ವಿಫಲವಾಗಿರುವುದೇ ಕಾರಣವಾಗಿದೆ. ದೋಷಗಳನ್ನು ತೆಗೆಯುವುದರ ಬದಲು ಅವರು ಮನುವಿನಂಥ ಕಾನೂನು ಪ್ರವರ್ತಕರು ಬರೆದ ಕಾನೂನಿಗೆ ತಲೆ ಬಾಗಿದರು. ಕಾನೂನಿನ ನಿಜವಾದ ಕೆಲಸವೆಂದರೆ ಸಮಾಜದಲ್ಲಿನ ದೋಷಗಳನ್ನು ತೆಗೆದು ದುರಸ್ತಿ ಮಾಡುವುದೇ ಆಗಿದೆ.

ನಾಗರೀಕತೆ ಯಾವತ್ತೂ ಅವಿಚ್ಛಿನ್ನ ಸಂಸ್ಕರಣ ವಿಧಾನವಲ್ಲ. ಒಂದು ಕಾಲದಲ್ಲಿ ರಾಜ್ಯಗಳು ಮತ್ತು ಸಮಾಜಗಳು ನಾಗರೀಕವಾಗಿದ್ದವು. ಕಾಲಾನುಕಾಲದಲ್ಲಿ ಏನೋ ಒಂದು ಸಂಭವಿಸಿತು, ಅದು ಈ ಸಮಾಜಗಳನ್ನು ನಿಂತಲ್ಲೇ ಕೊಳೆಯುವ ಹಾಗೆ ಮಾಡಿತು. ಇದನ್ನು ಭಾರತದ ಚರಿತ್ರೆಯಲ್ಲೇ ದೃಷ್ಟಾಂತಗೊಳಿಸಬಹುದು.

ಮಹಾನ್ ಪುರಾತನ ನಾಗರೀಕತೆ ಇದ್ದ ದೇಶಗಳಲ್ಲಿ ಭಾರತವೂ ಒಂದು ಎಂಬುದರಲ್ಲಿ ಅನುಮಾನವೇ ಇಲ್ಲ. ಯೂರೋಪ್ ದೇಶವಾಸಿಗಳು ಬರ್ಬರವಾದ ಮತ್ತು ಅಲೆಮಾರಿ ಪರಿಸ್ಥಿತಿಗಳಲ್ಲಿ ವಾಸಿಸುತ್ತಿದ್ದಾಗ ಈ ದೇಶ ನಾಗರಿಕ ಉತ್ತುಂಗವನ್ನು ತಲುಪಿತ್ತು. ಇಲ್ಲಿ ಸಂಸದೀಯ ಸಂಸ್ಥೆಗಳು ಇದ್ದವು, ಅದೇ ಕಾಲಕ್ಕೆ ಯೂರೋಪಿನ ಜನಗಳು ಕೇವಲ ಅಲೆಮಾರಿಗಳಾಗಿದ್ದರು.

ನಮ್ಮ ಸಾಮಾನ್ಯ ಜನಗಳು ಈ ದಿನದ ನಮ್ಮ ಸಂಸದೀಯ ಸಂಸ್ಥೆಗಳು ಸಂಸದೀಯ ಪ್ರಕ್ರಿಯೆಯನ್ನು ಯೂರೋಪಿನ ದೇಶಗಳಿಂದ, ಅದರಲ್ಲೂ ಬ್ರಿಟನ್ನಿನಿಂದ ಎರವಲು ಪಡೆದಿವೆ ಎಂದುಕೊಂಡಿದ್ದಾರೆ. ಆದರೆ ಯಾರಾದರೂ ವಿನಯ್–ಪೀಟಕದ ಪುಟಗಳನ್ನು ತಿರುವಿ ಹಾಕಿದರೆ, ಇಂಥ ಅಭಿಪ್ರಾಯಕ್ಕೆ ಯಾವ ಆಧಾರವೂ ಇಲ್ಲ ಎಂದು ಗೊತ್ತಾಗುತ್ತದೆ.

ಮೇ ಅವರ ಸಂಸದೀಯ ಆಚರಣೆಯಲ್ಲಿ ಕೆಲವು ಆಚರಣೆಗಳು ಭಾರತದ ಜನಗಳಿಗೆ ವಿನಯ–ಪೀಟಕದ ವಿದ್ಯಾರ್ಥಿಗಳಾಗಿ ಗೊತ್ತಿದ್ದವು. ಒಂದು ಪ್ರಸ್ತಾವವಿಲ್ಲದೆ ಸಂಸತ್ತಿನಲ್ಲಿ ಯಾವ ಚರ್ಚೆಯೂ ನಡೆಯುವ ಹಾಗಿಲ್ಲ, ಪ್ರಸ್ತಾವವನ್ನು ಮಂಡನೆ ಮಾಡದೆ ವೋಟಿಗೆ ಹಾಕುವ ಹಾಗಿಲ್ಲ ಎಂಬ ಪ್ರಕ್ರಿಯೆ ಹೊಸತು ಎಂದು ಜನಗಳು ತಿಳಿದುಕೊಂಡಿದ್ದ ಹಾಗೆ ಕಾಣುತ್ತದೆ. ವಿನಯ–ಪೀಟಕ ಭಿಕ್ಕುಗಳ ಸಂಘದ ಸಭೆಗಳನ್ನು ನಿಯಂತ್ರಣ ಮಾಡುತ್ತಿದ್ದು, 'ನೇತಿ' ಪ್ರಸ್ತಾವವಿಲ್ಲದೆ ಯಾವ ಚರ್ಚೆಯೂ ನಡೆಯುವ ಹಾಗೆ ಇರಲಿಲ್ಲ ಎಂಬುದು ಸರ್ವ ವಿದಿತವಾಗಿತ್ತು.

ಈ ದಿನಗಳಲ್ಲಿ ನಾವು ತಿಳಿದುಕೊಂಡಿರುವ ಹಾಗೆ ರಹಸ್ಯ ಮತದಾನ ಎನ್ನುವುದು ಬ್ರಿಟಿಷರು ಕಂಡು ಹಿಡಿದದ್ದು ಎಂದು. ಅದೂ ಸಹ ತಪ್ಪೇ. ವಿನಯ–ಪೀಟಕದಲ್ಲಿ ಮತಗಳನ್ನು ಎಣಿಸುವುದಕ್ಕೆ 'ಎಣಿಸುವವರು'

(tellers) ಇರಬೇಕು ಎಂಬ ಒಂದು ಗೊತ್ತಾದ ಉಪಬಂಧವಿದೆ. ಅವರನ್ನು ಸಾಲ್ ಪತ್ರಕ್ ಗ್ರಾಹಕ್ಸ್ ಎಂದು ಕರೆಯಲಾಗುತ್ತಿತ್ತು. ಸಾಲ್ಪತ್ರಕವನ್ನು (ಒಂದು ಮರದ ತೊಗಟೆ) ಮತ ಪತ್ರದಂತೆ (ballot paper) ಉಪಯೋಗಿಸಲಾಗುತ್ತಿತ್ತು. ರಹಸ್ಯ ಮತದಾನದ ಒಂದು ವ್ಯವಸ್ಥೆಯೂ ಅಲ್ಲಿತ್ತು; ಭಿಕ್ಕುವೊಬ್ಬ ತಾನೇ ತನ್ನ 'ಸಾಲ್ಪತ್ರಕ'ವನ್ನು ಮತ ಪೆಟ್ಟಿಗೆಯಲ್ಲಿ ಹಾಕುತ್ತಿದ್ದ.

ನಾನು ರಾಜಕೀಯ ವಿಷಯಗಳನ್ನು ಪರಾಮರ್ಶೆ ಮಾಡುತ್ತಿದ್ದೇನೆ; ಏಕೆಂದರೆ ಅನೇಕ ಚರಿತ್ರಕಾರರು ಹೇಳುತ್ತಿರುವುದು ಏನೆಂದರೆ, ಭಾರತೀಯರು ಜೀವನದ ಬೇರೆ ಶಾಖೆಗಳಲ್ಲಿ ಏನೇ ಸಾಧನೆ ಮಾಡಿದ್ದಿರಬಹುದಾದರೂ ಅವರು ರಾಜಕೀಯದಲ್ಲಿ ಬಹಳವಾಗಿ ಹಿಂದುಳಿದಿದ್ದರು ಎಂಬ ಈ ಪ್ರಸ್ತಾವನೆಯನ್ನು ನಾನು ಅಲ್ಲಗಳೆಯುತ್ತೇನೆ.

ನಾವು ಹೇಗೋ ರಾಜಕೀಯ ಕುಶಾಗ್ರತೆಯನ್ನು ಕಳೆದುಕೊಂಡೆವೆಂದು ನಾನು ಒಪ್ಪುತ್ತೇನೆ. ನಾವು ಎಲ್ಲಾ ಸಂಸದೀಯ ಸಂಸ್ಥೆಗಳನ್ನೂ ಕಳೆದುಕೊಂಡು ಹೇಗೋ ಸರ್ವಾಧಿಕಾರಿ ದೊರೆಯ ತೆಕ್ಕೆಗೆ ಬಿದ್ದುಬಿಟ್ಟೆವು. ನಾಗರಿಕತೆಯ ಅವನತಿಯನ್ನು ಅದು ಗುರುತಿಸುತ್ತದೆ ಮತ್ತು ಭಾರತೀಯ ಸಮಾಜ ಕಾಲದಿಂದ ಕಾಲಕ್ಕೆ ಎಲ್ಲ ಸಮಾಜಗಳೂ ಆಗಿರುವ ಹಾಗೆ ಅವನತಿಯತ್ತ ಸಾಗುತ್ತಲೇ ಇದೆ.

ಆಧುನಿಕ ಯುಗದಲ್ಲಿ ಯುದ್ಧಗಳು ತಂದಿಡುವ ಯಾವ ಕಷ್ಟಗಳೂ ಇಲ್ಲದೆ ಸಮಾಜಗಳು ಅವಿಚ್ಛಿನ್ನವಾಗಿ ಮುಂದುವರೆಯುತ್ತಿರುವ ಹಾಗೆ ಹೇಗೆ ತೋರುತದೆ? ಪುರಾತನ ಸಮಾಜದಲ್ಲಿ ಏಕೆ ಹಾಗೆ ಇರಲಿಲ್ಲ?. ಆಧುನಿಕ ಸಮಾಜಕ್ಕೂ, ಪುರಾತನ ಸಮಾಜಕ್ಕೂ ನಡುವೆ ಇರುವ ವ್ಯತ್ಯಾಸವೇನೆಂದರೆ, ಪುರಾತನ ಸಮಾಜಗಳಲ್ಲಿ ಕಾನೂನನ್ನು ಮಾಡುವುದು ಜನಗಳ ಕೆಲಸವಾಗಿರಲಿಲ್ಲ. ಕಾನೂನನ್ನು ದೇವರು ಮಾಡುತ್ತಿದ್ದರು. ಇಲ್ಲವೇ ಕಾನೂನಿನ ಪ್ರವರ್ತಕರು ಮಾಡುತ್ತಿದ್ದರು. ಸಮಾಜದ ಕೆಲಸವೆಂದರೆ ದೈವ ಅಥವ ಪ್ರವರ್ತಕರು ಮಾಡಿದ ಕಾನೂನಿಗೆ ಸುಮ್ಮನೇ ವಿಧೇಯವಾಗಿರುವುದು ಮಾತ್ರವಷ್ಟೆ. ಪುರಾತನ ಸಮಾಜಗಳಿಗೆ ಅವಿಚ್ಛಿನ್ನ ನಾಗರಿಕತೆಯು ಇಲ್ಲದಿದ್ದುದಕ್ಕೆ ಇದೇ ಮೂಲಭೂತ ಕಾರಣ.

ಸಮಾಜದ ದೋಷಗಳನ್ನು ನಿವಾರಿಸುವುದೇ ಕಾನೂನಿನ ನಿಜವಾದ ಕೆಲಸ. ದುರದೃಷ್ಟವಷಾತ್ ಪುರಾತನ ಸಮಾಜಗಳು ತಮ್ಮದೇ ಆದ ದೋಷಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಎಂದಿಗೂ ಧೈರ್ಯ ಮಾಡಲೇ ಇಲ್ಲ; ಪರಿಣಾಮವಾಗಿ ಅವರು ಕ್ಷೀಣಿಸಿದರು. ಹಿಂದೂ ಸಮಾಜದ ಅವನತಿಗೆ ಕಾರಣಗಳಲ್ಲಿ ಒಂದು ಎಂದರೆ ಅವರು ಮನು ಅಥವ ಯಾಗ್ನವಲ್ಕ್ಯ ಮಾಡಿದ ಕಾನೂನಿಗೆ ವಿಧೇಯರಾಗಿದ್ದರು. ಈ ಪ್ರವರ್ತಕರಿಂದ ಕೊಡಲ್ಪಟ್ಟ ಕಾನೂನು ದೈವದತ್ತವಾದ ಕಾನೂನೆಂದು ತಿಳಿಯಲ್ಪಟ್ಟಿತ್ತು. ಫಲಿತಾಂಶವೆಂದರೆ ಹಿಂದೂ ಸಮಾಜ ತನ್ನನ್ನು ತಾನು ಸುಧಾರಿಸಿಕೊಳ್ಳಲು ಎಂದಿಗೂ ಸಾಧ್ಯವಾಗಲೇ ಇಲ್ಲ.

ಯೂರೋಪಿನಲ್ಲಿ ಕಾಲಾನಂತರದಲ್ಲಿ ಧಾರ್ಮಿಕ ಕಾನೂನಿನ ಅಧಿಕಾರ ವ್ಯಾಪ್ತಿಯನ್ನು ಧರ್ಮ ನಿರ್ಲಿಪ್ತ ಕಾನೂನಿನಿಂದ ಎದುರಿಸಲಾಯಿತು (challenge) ಇದರಿಂದಾಗಿ ಪಶ್ಚಿಮದಲ್ಲಿ ಈಗ ಕಾನೂನು ಶುದ್ಧಾಂಗವಾಗಿ ಧರ್ಮ ನಿರ್ಲಿಪ್ತವಾಗಿದ್ದು ಚರ್ಚಿನ ಅಧಿಕಾರ ವ್ಯಾಪ್ತಿ ಪಾದ್ರಿಗೆ ಮಾತ್ರ ಸೀಮಿತಗೊಂಡಿದೆ.

ದುರದೃಷ್ಟವಷಾತ್ ಭಾರತದ ಪುರಾತನ ಕಾಲದ ಸಂಶೋಧನೆಯನ್ನು ಕೈಗೊಂಡಿದ್ದ ಅನೇಕ ಬರಹಗಾರರುಗಳು ಭಾರತದ ಕಾನೂನು ಬದಲಾವಣೆ ಆಗಿಯೇ ಇಲ್ಲ ಎಂಬ ಅಭಿಪ್ರಾಯವನ್ನು ಹರಿಬಿಟ್ಟಿದ್ದಾರೆ.ಇದು ಸಂಪ್ರದಾಯವಾದಿ ಪಂಡಿತರು ಹೇಳುತ್ತಿರುವುದಕ್ಕೆ ಸರಿಹೊಂದುತ್ತದೆ. ಆದರೆ ನಾನು ಮಾಡಿರುವಷ್ಟು ಅಧ್ಯಯನದಿಂದ ಇದು ಅಪ್ಪಟ ಸುಳ್ಳು ಎಂದು ನಾನು ಹೇಳಬಲ್ಲೆ.

ಈ ದೇಶದಲ್ಲಾಗಿರುವಷ್ಟು ಕ್ರಾಂತಿಗಳು ಪ್ರಪಂಚದ ಬೇರೆ ಯಾವ ದೇಶದಲ್ಲೂ ಆಗಿಲ್ಲ.

ಯೂರೋಪಿಯನ್ನರು ಪೋಪ್‌ನ (ಚರ್ಚಿನ) ಅಧಿಕಾರವನ್ನು (ಕಾನೂನನ್ನು) ಎದುರಿಸಿದ ಧೀರ್ಘಕಾಲಕ್ಕೆ ಮುಂಚೆಯೇ ಈ ದೇಶದಲ್ಲಿ ಧಾರ್ಮಿಕ ಕಾನೂನಿಗೂ ಮತ್ತು ಧರ್ಮ ನಿರ್ಲಿಪ್ತ ಕಾನೂನಿಗೂ ಮಧ್ಯೆ ಕಲಹಗಳು ನಡೆಯುತ್ತಲೇ ಇದ್ದವು. ಕೌಟಿಲ್ಯನ ಅರ್ಥಶಾಸ್ತ್ರ ಧರ್ಮನಿರ್ಲಿಪ್ತ ಕಾನೂನಿನ ಬುನಾದಿಯನ್ನು ಹಾಕಿಟ್ಟಿದೆ. ಭಾರತದಲ್ಲಿ ದುರಾದೃಷ್ಟಕ್ಕೆ, ಧಾರ್ಮಿಕ ಕಾನೂನು ಧರ್ಮ ನಿರ್ಲಿಪ್ತ ಕಾನೂನಿನ ಮೇಲೆ ಜಯಗಳಿಸಿತು. ಅದು ಹಾಗೇಕೆ ಆಯಿತು? ನನ್ನ ಅಭಿಪ್ರಾಯದಲ್ಲಿ ಈ ದೇಶ ಕಂಡ ಅತ್ಯಂತ ದೊಡ್ಡ ದುರಂತಗಳಲ್ಲಿ ಇದು ಒಂದು.

ಹಿಂದು ಸಮಾಜದ ಪ್ರತಿಗಾಮಿ ಸ್ವಭಾವಕ್ಕೆ ಕಾರಣ ಕಾನೂನನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ ಎಂಬ ಕಲ್ಪನೆಯೆಂಬುದಾಗಿ ಹೇಳಬಹುದು.

# ೧೧೩
# ಒಬ್ಬ ನಾಯಕನ ಕೆಳಗೆ; ಒಂದು ಪಕ್ಷದ ಕೆಳಗೆ, ಒಂದು ಕಾರ್ಯಕ್ರಮದ ಕೆಳಗೆ ಸಂಘಟಿತರಾಗಿ

ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಸಂಯುಕ್ತ ಪ್ರಾಂತ್ಯಗಳ ಐದನೇ ಸಮ್ಮೇಳನವನ್ನು ೨೪ ಮತ್ತು ೨೫ನೇ ಏಪ್ರಿಲ್ ೧೯೪೮ರಂದು ಲಕ್ನೋದಲ್ಲಿ ಸಂಘಟಿಸಲಾಗಿತ್ತು.

ಕಳೆದ ವರ್ಷ, ಪರಿಶಿಷ್ಟ ಜಾತಿಗಳ ಫೆಡರೇಷನ್ ಮಾನವ ಜೀವಿಗಳ ರಾಜಕೀಯ ಹಕ್ಕುಗಳಿಗೆ ಮತ್ತು ಸಮಾನತೆಗಾಗಿ ಅದೇ ಸ್ಥಳದಲ್ಲಿ ಒಂದು ಚಳುವಳಿಯನ್ನು ಪ್ರಾರಂಭಿಸಿತು.

ಈ ಚಳುವಳಿಯಲ್ಲಿ ೨೦೦೦ಕ್ಕೂ ಹೆಚ್ಚಿನ ದಲಿತ ಪುರುಷರು ಮತ್ತು ಮಹಿಳೆಯರು ಭಾಗವಹಿಸಿದ್ದರು. ಇವರೆಲ್ಲರನ್ನೂ ಬಂಧಿಸಿ ಲಕ್ನೋ ಜೈಲಿನಲ್ಲಿ ಇಡಲಾಗಿತ್ತು. ಅದು ಸಂಯುಕ್ತ ಪ್ರಾಂತ್ಯಗಳ ಅಸ್ಪೃಶ್ಯರು ಮಾಡಿದ ಒಂದು ದೊಡ್ಡ ತ್ಯಾಗವಾಗಿತ್ತು. ದಲಿತರ ವಿಮೋಚನೆಗೊಳಿಸಿದ ಡಾ: ಅಂಬೇಡ್ಕರ್ ಅವರನ್ನು ನೋಡುವುದಕ್ಕೆ, ಅವರ ಮಾತನ್ನು ಕೇಳುವುದಕ್ಕೆ ಈ ಎಲ್ಲಾ ಪುರುಷರು ಮತ್ತು ಮಹಿಳೆಯರಿಗೆ ಉತ್ಕಟೇಚ್ಛೆ ಇತ್ತು. ಪ್ರಸ್ತುತ ಭಾಷಣ ಈ ಪರಿಶ್ರಮಗಳ ಫಲ.

ಸಮ್ಮೇಳನವನ್ನು ಯಶಸ್ವಿಯಾಗಿ ಮಾಡುವುದಕ್ಕೆ ಕಾರಣಕರ್ತರೆಂದರೆ ಶ್ರೀ ಗಯಾಪ್ರಸಾದ್, ಪ್ರಧಾನ ಕಾರ್ಯದರ್ಶಿ, ಬಾಲ್ ಗೋವಿಂದ್, ಕನ್ಹಯ್ಯಲಾಲ್ ಸೋಂಕರ್, ಬುದ್ಧದಾಸ್ ಚೌಧರಿ ಮತ್ತು ಮೇವ ಲಾಲ್ ಸೋಂಕರ್. ಈ ಸಮ್ಮೇಳನಕ್ಕೆ ೧ ಲಕ್ಷಕ್ಕಿಂತ ಮಿಗಿಲಾಗಿ ದಲಿತರು ಸೇರಿದ್ದರು.ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಪಿ.ಎನ್. ರಾಜ್ ಭೋಜ್ ಅವರೂ ಸಹ ಈ ಸಮ್ಮೇಳನದಲ್ಲಿ ಹಾಜರಿದ್ದರು. ಶ್ರೀ ಗೋಪಿಚಂದ್ ಉಪ್ಪಲ್, ಅಧ್ಯಕ್ಷರು, ಸಂಯುಕ್ತ ಪ್ರಾಂತ್ಯಗಳು, ಸಮತಾ ಸೈನಿಕ್ ದಳ್, ಶ್ರೀ ತಿಲಕ್ ಚಂದ್ ಕುರಿಲ್, ಅಧ್ಯಕ್ಷರು ಸಂಯುಕ್ತ ಪ್ರಾಂತ್ಯಗಳ ಪರಿಶಿಷ್ಟ ಜಾತಿಗಳ ಫೆಡರೇಷನ್ ಇವರುಗಳು ಸಂಘಟನೆ ಮಾಡಿದ ಮುಖ್ಯ ಆಧಾರ ಸ್ತಂಭಗಳು. ಎರಡು ವಿಶೇಷತೆಗಳಿಗಾಗಿ ಈ ಸಮ್ಮೇಳನ ಮುಖ್ಯವಾದುದಾಗಿದೆ: (೧) ಸಮ್ಮೇಳನದಿಂದ ಸ್ಪಷ್ಟವಾಗಿದ್ದೇನೆಂದರೆ ಕಾಂಗ್ರೆಸ್ ಆಡಳಿತವಿದ್ದ ರಾಜ್ಯಗಳಲ್ಲಿ ಅಸ್ಪೃಶ್ಯರ ಬವಣೆಗೆ ಕೊನೆಯೇ ಇಲ್ಲ (೨) ಪರಿಶಿಷ್ಟ ಜಾತಿಗಳ ಫೆಡರೇಷನ್ ಅಸ್ಪೃಶ್ಯರ ಏಳಿಗೆಗಾಗಿ ಏನನ್ನೇ ಮಾಡಲು ಹಿಂಜರಿಯುವುದಿಲ್ಲ. ಡಾ: ಬಾಬಾ ಸಾಹೆಬ್ ಅಂಬೇಡ್ಕರ್ ಅವರು ಭಾನುವಾರ, ೨೫ನೇ ಏಪ್ರಿಲ್ ೧೯೪೮ರಂದು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು

ಅವರು ಹೇಳಿದ್ದು:

ಎಲ್ಲಾ ಸಾಮಾಜಿಕ ಮುನ್ನಡೆಗೆ ರಾಜಕೀಯ ಅಧಿಕಾರ ಬಹಳ ಮುಖ್ಯವಾದುದು; ಪರಿಶಿಷ್ಟ ಜಾತಿಗಳು ಈ ಅಧಿಕಾರವನ್ನು ಹಿಡಿದುಕೊಂಡರೆ ತಮ್ಮ ವಿಮೋಚನೆಯನ್ನು ಸಾಧಿಸಬಹುದು; ಹೀಗೆ ಅಧಿಕಾರವನ್ನು ಹಿಡಿದುಕೊಳ್ಳುವುದಕ್ಕಾಗಿ ಅವರು ಒಂದು ಮೂರನೆ ಪಕ್ಷವಾಗಿ ಸಂಘಟಿತರಾಗಬೇಕು. ಸಂಘಟಿತರಾಗಿ ಎರಡು ಪ್ರತಿಸ್ಪರ್ಧಿ ರಾಜಕೀಯ ಪಕ್ಷಗಳ ನಡುವೆ ಅಂದರೆ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷ

(ಸೋಷಿಯಲಿಸ್ಟ್ ಪಕ್ಷ) ಗಳ ನಡುವೆ, ಅಧಿಕಾರದ ತಕ್ಕಡಿಯನ್ನು ಹಿಡಿದುಕೊಳ್ಳಬೇಕು.

ಪರಿಶಿಷ್ಟ ಜಾತಿಗಳು. ಕಾಂಗ್ರೆಸ್ ಅನ್ನು ಸೇರುವುದರಿಂದ ರಾಜಕೀಯ ಅಧಿಕಾರವನ್ನು ಹಿಡಿದುಕೊಳ್ಳಲಾಗುವುದಿಲ್ಲ. ಅದು ಒಂದು ದೊಡ್ಡ ಸಂಸ್ಥೆಯಾಗಿದ್ದು, ನಾವು ಕಾಂಗ್ರೆಸ್ ಅನ್ನು ಪ್ರವೇಶಿಸಿದರೆ ಆ ಸಮುದ್ರದಲ್ಲಿ ಕೇವಲ ಒಂದು ಹನಿಯಾಗಿ ಬಿಡುತ್ತೇವೆ. ಕಾಂಗ್ರೆಸ್ ಜನಕ್ಕೆ ವಿಪರೀತ ಜಂಭವಿದ್ದು ಆ ಸಂಸ್ಥೆಯನ್ನು ಸೇರಿದರೆ ನಾವು ಮೇಲೆ ಏಳುವುದಕ್ಕೆ ಆಗುವುದಿಲ್ಲ. ಕಾಂಗ್ರೆಸ್ ಅನ್ನು ಸೇರುವುದರಿಂದ ನಾವು ನಮ್ಮ ಶತೃಗಳ ಬಲವನ್ನು ಹೆಚ್ಚು ಮಾಡುತ್ತೀವಷ್ಟೆ.

ಕಾಂಗ್ರೆಸ್ ಒಂದು ಉರಿಯುತ್ತಿರುವ ಮನೆಯಾಗಿದ್ದು, ಅದನ್ನು ಪ್ರವೇಶಿಸುವುದರಿಂದ ನಾವು ಏಳಿಗೆಯಾಗುವುದಿಲ್ಲ. ಒಂದೆರಡು ವರ್ಷಗಳಲ್ಲಿ ಅದು ಹಾಳಾಗಿ ಹೋಗಿ ಬಿಟ್ಟರೆ ನನಗೆ ಏನೂ ಆಶ್ಚರ್ಯವಾಗುವುದಿಲ್ಲ. ಸೋಷಿಯಲಿಸ್ಟರು ಕಾಂಗ್ರೆಸ್ಸಿನಿಂದ ಹೊರಗೆ ಬಂದಿದ್ದಾರೆ. ಅದು ಖಂಡಿತವಾಗಿಯೂ ಕಾಂಗ್ರೆಸ್ ಅನ್ನು ನಿರ್ಬಲಗೊಳಿಸುತ್ತದೆ.

ನಾವು ಮೂರನೆಯ ಪಕ್ಷವಾಗಿ ಸಂಘಟಿತರಾಗಬೇಕು. ಆಗ ಒಂದು ವೇಳೆ ಸೋಷಯಲಿಸ್ಟರು ಮತ್ತು ಕಾಂಗ್ರೆಸ್ಸಿನವರು ಸಂಪೂರ್ಣ ಬಹುಮತವನ್ನು ಸಾಧಿಸಲಾಗದಿದ್ದರೆ, ಅವರು ಬಂದು ನಮ್ಮ ವೋಟಿಗಾಗಿ ನಮ್ಮ ಕಾಲಿಗೆ ಬೀಳುತ್ತಾರೆ. ಆಗ ನಾವು ಅಧಿಕಾರದ ತಕ್ಕಡಿಯನ್ನು ಹಿಡಿದುಕೊಂಡು

ನಮ್ಮ ರಾಜಕೀಯ ಬೆಂಬಲವನ್ನು ಕೊಡುವುದಕ್ಕೆ ನಮ್ಮದೇ ನಿಬಂಧನೆಗಳನ್ನು ಹಾಕಬಹುದು.

ನಾನು ಲಕ್ನೋಗೆ ಲೋತಿಯನ್ ಸಮಿತಿಯ ಒಬ್ಬ ಸದಸ್ಯನಾಗಿ ೧೨ ವರ್ಷಗಳ ಕೆಳಗೆ ಬಂದೆ. ಪರಿಶಿಷ್ಟ ಜಾತಿಗಳಲ್ಲಿ ಈಗ ಹೆಚ್ಚಿನ ರಾಜಕೀಯ ಅರಿವು ಇದೆಯೆಂದು ನನಗೆ ಬಹಳ ಸಂತೋಷವಾಗಿದೆ. ಉತ್ತರ ಪ್ರದೇಶದಲ್ಲಿ ನಾವು ಸತ್ಯಾಗ್ರಹವನ್ನು ಮಾಡಿದ್ದೆವು.

ಸಮುದಾಯಕ್ಕಾಗಿ ನೀವು ಮಾಡಿರುವ ತ್ಯಾಗಕ್ಕಾಗಿ ನಾನು ನಿಮ್ಮನ್ನೆಲ್ಲ ಅಭಿನಂದಿಸಲೇಬೇಕು. ನಾವು ನಮ್ಮ ಧ್ಯೇಯೋದ್ದೇಶಗಳನ್ನು ಸಾಧಿಸಲು ಸಂಕಲ್ಪ ಮಾಡಿದರೆ, ಎಷ್ಟೇ ಅಡಚಣೆಗಳು ಬಂದರೂ ಸಾಧಿಸಿಯೇ ತೀರುತ್ತೇವೆ.

ನಾನು ಕಾಂಗ್ರೆಸ್ ಸರ್ಕಾರವನ್ನು ಸೇರಿರುವುದು ಪರಿಶಿಷ್ಟ ಜಾತಿಗಳವರಲ್ಲಿ ಬಹಳಷ್ಟು ಗೊಂದಲವನ್ನುಂಟು ಮಾಡಿದೆ. ನಾನು ಆ ಅಪನಂಬಿಕೆಯನ್ನು, ಅನುಮಾನವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ಬ್ರಿಟೀಷರು ತಮ್ಮ ವಾಗ್ದಾನವನ್ನು ಉಳಿಸಿಕೊಳ್ಳಲಿಲ್ಲ. ರಾಜಕೀಯ ಅಧಿಕಾರವನ್ನು ವರ್ಗಾಯಿಸಬಹುದಾದ ಸಮುದಾಯವೆಂದು ಅವರು ಹಿಂದುಗಳನ್ನು, ಮುಸ್ಲಿಮರನ್ನು ಮತ್ತು ಸಿಖ್ಖರನ್ನು ಮಾತ್ರ ಮಾನ್ಯ ಮಾಡಿದರು.

೨೫ ವರ್ಷಗಳ ಕಾಂಗ್ರೆಸ್ ವಿರುದ್ಧದ ಹೋರಾಟದ ನಂತರ ಆ ನಿರ್ಣಾಯಕ ಘಟ್ಟದಲ್ಲಿ ನಾನೇಕೆ ಮೌನವಾಗಿದ್ದೆ ಎಂದು ನನ್ನನ್ನು ಕೇಳಲಾಗಿದೆ. ಯಾವಾಗಲೂ ಬಡಿದಾಡಿಕೊಂಡೇ ಇರುವುದೇ ಉತ್ತಮವಾದ ರಣ ನೀತಿಯಲ್ಲ. ನಾವು ಬೇರೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಬ್ರಿಟಿಷರು ನಮ್ಮನ್ನು ತೂಗುಯ್ಯಾಲೆಯಲ್ಲಿ ಬಿಟ್ಟು ಹೋಗಿಬಿಟ್ಟರು ಮತ್ತು ನಮ್ಮ ಸಮುದಾಯ ಒಡೆದುಹೋಗಿತ್ತು. ನಮ್ಮಲ್ಲೇ ಅನೇಕ ಪಂಚಮ ದಳದವರಿದ್ದರು. ಅ ಸಮಯದಲ್ಲಿ ಅಷ್ಟು ಬಲಶಾಲಿಯಾದ ಪಕ್ಷದೊಂದಿಗೆ ಹೋರಾಡುವುದು ನಮ್ಮ ಹಿತಾಸಕ್ತಿಗೆ ಒಳ್ಳೆಯದಾಗಿರಲಿಲ್ಲ ನಾವು ಸಂಧಾನ ಮಾರ್ಗವನ್ನು ಅನುಸರಿಸಿದೆವು. ಅದರಿಂದಾಗಿ ಬಹಳಷ್ಟು ಮಟ್ಟಿಗೆ ಜಯವನ್ನು ಪಡೆದುಕೊಂಡಿದ್ದೇವೆ. ನಾವು ಬಯಸಿದ್ದೆಲ್ಲಾ ನಮಗೆ ಸಿಗದೇ ಇದ್ದರೂ ಸಹ ನಾವು ಪಡೆದು ಕೊಂಡಿರುವುದೇ ಬೇಕಾದಷ್ಟು ಇದೆ. ಶಾಸನ ಸಭೆಗಳಲ್ಲಿ ಮತ್ತು ಲೋಕ ಸೇವೆಗಳಲ್ಲಿ ನಮಗೆ ಮೀಸಲಾತಿ ಸಿಕ್ಕಿದೆ. ನಮ್ಮ ಬೇಡಿಗಳಲ್ಲಿ ಬಹಳಷ್ಟಕ್ಕೆ ಒಪ್ಪಿಗೆ ಸಿಕ್ಕಿದೆ.

ಪ್ರತ್ಯೇಕ ಮತದಾರರ ಮಂಡಲ ಬೇಕೆಂಬ ನಮ್ಮ ಬೇಡಿಕೆಯನ್ನು ಮಾನ್ಯ ಮಾಡಿಲ್ಲ; ಅದಕ್ಕಾಗಿ ನಾವು ನಾಚಿಕೆಪಡಬೇಕಾಗಿಲ್ಲ, ಏಕೆಂದರೆ ಇತರ ಅಲ್ಪಸಂಖ್ಯಾತರಿಗೂ ಅದು ಸಿಕ್ಕಿಲ್ಲ. ಕಾಂಗ್ರೆಸ್‌ನವರೊಂದಿಗೆ ಜಗಳ ಮಾಡುವುದಕ್ಕೆ ಇದು ಸಮಯವಲ್ಲ. ಅವರೊಂದಿಗೆ ಸಂಧಾನ ಮಾದುವುದರಿಂದ, ಸಹಕರಿಸುವುದರಿಂದ ನಮಗೆ ಸಿಗಬಹುದಾದಷ್ಟು ಸಿಗಲೇ ಬೇಕು.

ನಾನು ಕೇಂದ್ರ ಸರ್ಕಾರವನ್ನು ಸೇರಿದ್ದೇನೆ; ಆದರೆ ಕಾಂಗ್ರೆಸ್ ಸದಸ್ಯನಾಗಿಲ್ಲ, ಆಗುವ ಇರಾದೆಯೂ ಇಲ್ಲ. ಕೇಂದ್ರ ಸರ್ಕಾರವನ್ನು ಸೇರಿಕೊಳ್ಳಿ ಎಂದು ನನ್ನನ್ನು ಅಹ್ವಾನಿಸಲಾಯಿತು ಮತ್ತು ಯಾವುದೇ ನಿಬಂಧನೆಗಳನ್ನು ಹಾಕದೆ ಸೇರಿಕೊಂಡಿದ್ದೇನೆ. ಯಾವುದೇ ಸಮಯದಲ್ಲಿ ನಾನು ಹೊರಗೆ ಬರಬಹುದು. ಅಲ್ಲಿ ಉಳಿಯುವುದು ಉಪಯೋಗವಿಲ್ಲ. ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ, ನಮ್ಮ ಜನಗಳು ಆಡಳಿತ ಯಂತ್ರದಲ್ಲಿ ಇರುವುದು ಅವಶ್ಯಕವಾಗಿದೆ. ನ್ಯಾಯವಾದ ಕಾನೂನಿಂದ ಹೆದರಿಕೆ ಇಲ್ಲದಿದ್ದರೂ ಒಳ್ಳೆಯ ಕಾನೂನನ್ನು ಕೆಟ್ಟದಾಗಿ ಜಾರಿಗೆ ತರಬಹುದು; ಪರಂಪರಾಗತವಾಗಿ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗೆ ವಿರೋಧವಾಗಿರುವ ಜನರು ಸರ್ಕಾರದಲ್ಲಿ ಇದ್ದರೆ, ಆಗ ನಮಗೆ ಯಾವ ಆಸೆಯೂ ಇರುವುದಿಲ್ಲ. ಬೇಗಾರ್ ಬಲವಂತದ ಕಾರ್ಮಿಕರನ್ನು ದುಡಿಸಿಕೊಳ್ಳುವುದಕ್ಕೆ ಕಾನೂನಿನ ಅನುಮತಿ ಇಲ್ಲ ಆದರೆ ಜಮೀನ್ದಾರರುಗಳು ಕಾನೂನನ್ನು ಮಾಡುತ್ತಲೇ ಇದ್ದಾರೆ; ಈ ಸಂಬಂಧ ಪರಿಶಿಷ್ಟ ಜಾತಿಗಳು ಕೊಟ್ಟ ಅರ್ಜಿಗಳನ್ನು ಕಡೆಗಣಿಸಲಾಗುತ್ತಿದೆ. ಕಾರಣವೆಂದರೆ ಈ ಅರ್ಜಿಗಳನ್ನು ಸ್ವೀಕರಿಸುವ ಅಧಿಕಾರಿಗಳು, ಅನೇಕ ಸಂದರ್ಭದಲ್ಲಿ ಅವರನ್ನು ತುಳಿಯುತ್ತಿರುವವರ ಸಂಬಂಧಿಗಳೇ ಆಗಿರುತ್ತಾರೆ. ಒಂದು ವೇಳೆ ಕೆಲವು ಪರಿಶಿಷ್ಟ ಜಾತಿಗಳವರು ಅಧಿಕಾರದಲ್ಲಿ ಇದ್ದಿದ್ದರೆ, ಅವರು ತಮ್ಮ ಸಹೋದರರಿಗೆ ಸರಿಯಾದ ರಕ್ಷಣೆಯನ್ನು ಕೊಟ್ಟಿರುತ್ತಿದ್ದರು.

ನಾನು ಕಾಂಗ್ರೆಸ್ ಅನ್ನು ಸೇರಬೇಕಾದರೆ, ನನ್ನ ಇಂಗಿತವನ್ನು ಜಾಹೀರು ಪಡಿಸಿಯೇ ಸೇರುತ್ತೇನೆ. ಹಾಗೆ ನೀವು ಸೇರುವುದು ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳಿಗೆ ಒಳಿತು ಮಾಡುವುದಾದರೆ ಹಾಗೆ ಮಾಡುವಂತೆ ನಾನೇ ನಿಮಗೆ ಸಲಹೆಯನ್ನು ಕೊಡುತ್ತೇನೆ. ಆದರೆ ನಾನು ಮುಕ್ತವಾಗಿ ಹೇಳುವ ತನಕ ಸೇರಬೇಡಿ.

ಹಿಂದುಳಿದ ವರ್ಗಗಳವರು ಬವಣೆ ಪಟ್ಟಿರುವುದಕ್ಕೆ ಅವರು ಹೊರಚ್ಚಾಗಿ ಇರುವುದೇ ಕಾರಣ. ಮೇಲ್ವರ್ಗಗಳಿಂದ ಅಧಿಕಾರವನ್ನು ಕಿತ್ತುಕೊಳ್ಳಬೇಕಾದರೆ ಅವರು ಒಂದು ಸಂಯುಕ್ತ ರಂಗವನ್ನು ಬೆಸೆಯಬೇಕು., ಸಮೂಹಗಳಿಗೆ ರಾಜಕೀಯ ಅಧಿಕಾರವನ್ನು ವಯಸ್ಕರ ಮತದಾನ ಪದ್ಧತಿ ತಂದುಕೊಟ್ಟಿದೆ. ನನ್ನ ಅಭಿಪ್ರಾಯದಲ್ಲಿ ಉತ್ತರ ಪ್ರದೇಶದಲ್ಲಿ ಒಂದೂವರೆ ಕೋಟಿ ಪರಿಶಿಷ್ಟ ಜಾತಿಗಳು, ಒಂದು ಕೋಟಿ ಹಿಂದುಳಿದ ವರ್ಗಗಳವರೊಂದಿಗೆ ಇಬ್ಬರಿಗೂ ನಿಶಾನೆಯಾಗಿರುವವರ ವಿರುದ್ಧ ಕೈ ಜೋಡಿಸಿದರೆ, ಅವರು ತಮ್ಮ ೫೦% ಸದಸ್ಯರುಗಳನ್ನು ಶಾಸನಸಭೆಗೆ ಕಳುಹಿಸಿ ಅಧಿಕಾರವನ್ನು ಹಿಡಿದುಕೊಳ್ಳಬಹುದು. ಮೇಲ್ಜಾತಿಯವರ ವಿರುದ್ಧ ಹಿಂದುಳಿದ ವರ್ಗಗಳವರು ಒಂದು ಪ್ರತ್ಯೇಕವಾದ ರಂಗವನ್ನು ರಚಿಸುವುದಕ್ಕೆ ನನ್ನ ಆಕ್ಷೇಪಣೆಯೇನೂ ಇಲ್ಲ. ಪರಿಶಿಷ್ಟ ಜಾತಿಗಳಿಗೆ ಮತ್ತು ಹಿಂದುಳಿದ ವರ್ಗಗಳವರಿಗೆ ತಮ್ಮ ಶಕ್ತಿಯ ಅರಿವಿಲ್ಲದೆ ಇರುವುದು ಶೋಚನೀಯ; ಇದರಿಂದಾಗಿ ಮೇಲ್ಜಾತಿಗಳು ಆಡಳಿತದಲ್ಲಿ ಮೇಲುಗೈ ಪಡೆದಿದ್ದಾರೆ. ನೀವುಗಳು ಒಬ್ಬ ನಾಯಕನ ಕೆಳಗೆ, ಒಂದು ಪಕ್ಷದ ಕೆಳಗೆ, ಒಂದೇ ಕಾರ್ಯಕ್ರಮದ ಕೆಳಗೆ ಸಂಘಟಿತರಾಗಬೇಕು. ಎಲ್ಲಾ ಜಾತಿ ಭೇದ ಭಾವಗಳನ್ನು ತೊಡೆದು ಹಾಕಿ ಫೆಡರೇಷನ್ನಿನ ಆಶ್ರಯದಲ್ಲಿ ಸಂಘಟಿತರಾಗಿ.

ಡಾ: ಅಂಬೇಡ್ಕರ್ ಅವರ ಹೇಳಿಕೆ

ಲಕ್ನೋದಲ್ಲಿ ಅವರು ಮಾಡಿದ ಭಾಷಣದಲ್ಲಿನ. ವಿಷಯವನ್ನು ವಿಷದೀಕರಿಸುವುದಕ್ಕೆ ಮತ್ತು ವಿವರಿಸುವುದಕ್ಕೆ ಡಾ: ಬಿ.ಆರ್. ಅಂಬೇಡ್ಕರ್ ಅವರು ಒಂದು ಹೇಳಿಕೆಯನ್ನು ಹೊರಡಿಸಿದರು. ಅದು ಈ ಕೆಳಕಂಡಂತೆ ಇದೆ:

ಲಕ್ನೋದಲ್ಲಿ ಏಪ್ರಿಲ್ ೨೫ನೇ ತಾರೀಕು ಪರಿಶಿಷ್ಟ ಜಾತಿಗಳ ಸಮ್ಮೇಳನದಲ್ಲಿ ನಾನು ಮಾಡಿದ ಭಾಷಣದ ಅತಿಯಾಗಿ ವಿರೂಪಗೊಳಿಸಿದ ವರದಿಯನ್ನು ನಾನು ಗಮನಿಸಿದ್ದೇನೆ ಮತ್ತು ಒಂದು ದೈನಿಕ ಪತ್ರಿಕೆಯಲ್ಲಿ ಸಹೋದ್ಯೋಗಿಗಳ ಬಗ್ಗೆ ಕಟುವಾದ ಟೀಕೆಗಳನ್ನು ನಾನು ಮಾಡಿದ್ದೇನೆಂದು ವರದಿಯನ್ನು ಓದಿ ನನ್ನ ಮನಸ್ಸಿಗೆ ನೋವಾಗಿದೆ. ಕವಿದಿರುವ ಮೋಡವನ್ನು ಚದುರಿಸುವ ಹಾಗೂ ನಾನು ಲಕ್ನೋದಲ್ಲಿ ಏನು ಹೇಳಿದೆನೆಂದು ಸ್ಥೂಲವಾಗಿ ತಿಳಿಸುವುದರ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ.

ನನ್ನ ಭಾಷಣ ಆಶು ಭಾಷಣವಾಗಿತ್ತು; ನನ್ನ ಭಾಷಣದಲ್ಲಿ ನಾನು ಪ್ರಸ್ತಾಪಿಸಿದ ಕೆಲವು ವಿಷಯಗಳನ್ನು ಕೊಡುತ್ತೇನೆ. ನನ್ನ ಕೆಲವು ಸಹೋದ್ಯೋಗಿಗಳೇ ನನ್ನ ವಿರುದ್ಧ ಮಾಡಿದ ಟೀಕೆಗಳಿಗೆ ಉತ್ತರ ಕೊಡುವುದು ಅದರ ಉದ್ದೇಶ.

(೧) ಮಂತ್ರಿ ಮಂಡಲ ತಂಡದ ನಿರ್ಗಮನವಾದಾರಭ್ಯ. ನಾನೇಕೆ ಮೌನವಾಗಿದ್ದೇನೆ?

(೨) ನಾನೇಕೆ ಕಾಂಗ್ರೆಸ್ ಸರ್ಕಾರವನ್ನು ಸೇರಿಕೊಂಡೆ

(೩) ಭವಿಷ್ಯದಲ್ಲಿ ನಾನೇನು ಮಾಡಬೇಕೆಂದುಕೊಂಡಿದ್ದೇನೆ?

ಮೊದಲನೆಯದಕ್ಕೆ ಉತ್ತರವಾಗಿ ನಾನು ಹೇಳಿದ್ದು: ಪರಿಶಿಷ್ಟ ಜಾತಿಗಳ ಫೆಡರೇಷನ್ ರಾಜಕೀಯ ರಕ್ಷಣೋಪಾಯಗಳು ಬೇಕೆಂದು ಆಗ್ರಹ ಮಾಡಿತ್ತು ? ಅದರಲ್ಲಿ ಅತ್ಯಂತ ಮುಖ್ಯವಾದದ್ದು ಪ್ರತ್ಯೇಕ ಮತದಾರರ ಮಂಡಲಗಳು. ಪ್ರಾಥಮಿಕ ಚುನಾವಣೆಗಳ ಫಲಿತಾಂಶಗಳನ್ನು ಪರೀಕ್ಷೆಗಾಗಿ ತೆಗೆದುಕೊಂಡರೆ, ಪರಿಶಿಷ್ಟ ಜಾತಿಗಳೆಲ್ಲ ಸಂಪೂರ್ಣವಾಗಿ ಈ ಬೇಡಿಕೆಯ ಹಿಂದೆ ಇದ್ದರೆಂಬುದರಲ್ಲಿ ಸಂಶಯವಿಲ್ಲ. (i) ಮುಸ್ಲಿಮರಿಗೆ ಮತ್ತು ಸಿಖ್ಖರಿಗೆ ಹೋಲಿಸಿದಾಗ ನಾವು ನಿರ್ಬಲ ಪಕ್ಷವಾಗಿದ್ದೆವು. (ii) ಅನೇಕ ಪಂಚಮ ದಳದವರಿದ್ದ ನಮ್ಮ ದಳಗಳಲ್ಲಿಯೇ ಒಡಕುಗಳು

ಇದ್ದವು. ಕ್ಯಾಬಿನೆಟ್ ಮಿಷನ್ನಿನ ತೀರ್ಮಾನಗಳು ಪರಿಶಿಷ್ಟ ಜಾತಿಗಳ ಪ್ರತ್ಯೇಕ ರಾಜಕೀಯ ಅಸ್ತಿತ್ವವನ್ನೆ ಅಳಿಸಿಹಾಕಿಬಿಡುವಂತೆ ಇತ್ತು ಮತ್ತು ರಾಜಕೀಯ ರಕ್ಷಣೋಪಾಯಗಳಿಲ್ಲದೆ ಪರಿಶಿಷ್ಟ ಜಾತಿಗಳು ಸರ್ವನಾಶವಾದ ಹಾಗೆ ನನಗೆ ಕಂಡಿತು. ನನ್ನ ಮುಂದೆ ಗಾಢಾಂಧಕಾರವಿತ್ತು. ಆದುದರಿಂದಲೇ ನಾನು ಯಾವ ಹೇಳಿಕೆಯನ್ನೂ ಕೊಡಲಿಲ್ಲ.

(೨) ನೆಯದಕ್ಕೆ ಉತ್ತರವಾಗಿ ನಾನು ಹೇಳಿದ್ದು:

ನಾನೊಬ್ಬ ಕಾಂಗ್ರೆಸ್‌ನ ಎದುರಾಳಿಯೂ ಹೌದು, ಟೀಕಾಕಾರನೂ ಹೌದು. ಅದೇ ಕಾಲಕ್ಕೆ ವಿರೋಧಕ್ಕಾಗಿ ವಿರೋಧ ಮಾಡುವುದರಲ್ಲಿ ನನಗೆ ನಂಬಿಕೆ ಇಲ್ಲ. ಸಹಕಾರದಿಂದ ಏನನ್ನಾದರೂ ಪಡೆಯಲು ಸಾಧ್ಯವಾಗುವುದಾದರೆ, ಸಹಕಾರದ ಇಂಗಿತ/ಚೇತನ ಇದ್ದೇ ಇರಬೇಕು.

ಕಾಂಗ್ರೆಸ್‌ನವರೊಂದಿಗೆ ಹೋರಾಡುವುದರಿಂದ ಏನೂ ಉಪಯೋಗವಿಲ್ಲವೆಂದು ನನಗೆ ಅನ್ನಿಸಿತು. ಆದುದರಿಂದ ಸಹಕರಿಸುವುದಕ್ಕೆ ನಾನು ತೀರ್ಮಾನಿಸಿದೆ ಮತ್ತು ಸಹಕಾರದಿಂದ ನಾವು ಕೆಲವೊಂದು ರಕ್ಷಣೋಪಾಯಗಳನ್ನು ಪಡೆದುಕೊಂಡೆವು ; ಇಲ್ಲದೆ ಇದ್ದರೆ ಅದು ನಮಗೆ ಸಿಗುತ್ತಿರಲಿಲ್ಲ. ನನ್ನ ವಾದವನ್ನು ಪುಷ್ಟೀಕರಿಸುವುದಕ್ಕೆ ಕೆಲವು ಘಟನೆಗಳನ್ನು ಕೊಟ್ಟೆ.

ನಾನು ಮಂತ್ರಿಮಂಡಲಕ್ಕೆ ಸೇರಿದ ಬಗ್ಗೆ: ಆ ಪ್ರಸ್ತಾವವನ್ನು ಒಪ್ಪಿಕೊಳ್ಳುವುದಕ್ಕೆ ಎರಡು

ಕಾರಣಗಳಿದ್ದವೆಂದು ನಾನು ಹೇಳಿದೆ ? (i) ಆ ಪ್ರಸ್ತಾವಕ್ಕೆ ಯಾವ ಕಂಡೀಷನ್ (ನಿಬಂಧನೆ) ಇರಲಿಲ್ಲ (ii) ಸರ್ಕಾರದ ಹೊರಗಡೆ ಇದ್ದುಕೊಂಡಿರುವದಕ್ಕಿಂತ, ಸರ್ಕಾರದ ಒಳಗೆ ಇದ್ದರೆ ಪರಿಶಿಷ್ಟ ಜಾತಿಗಳ ಹಿತಾಸಕ್ತಿಯನ್ನು ಉತ್ತಮವಾಗಿ ನೋಡಿಕೊಳ್ಳಬಹುದೆಂದು.

ಪರಿಶಿಷ್ಟ ಜಾತಿಗಳಿಗೆ ಅವರ ವಿರುದ್ಧ ಏಕಪಕ್ಷೀಯವಾಗಿ ಮಾಡಬಹುದಾದ ಕೆಟ್ಟ ಕಾನೂನುಗಳ ಭಯವಿರಲಿಲ್ಲ. ಕೆಟ್ಟ ಆಡಳಿತಕ್ಕೆ ಅವರು ಭಯಪಡಬೇಕಾಗಿತ್ತು. ಆಡಳಿತ ವರ್ಗಕ್ಕೆ ಪರಿಶಿಷ್ಟ ಜಾತಿಗಳವರ ಬಗ್ಗೆ ಅನುಕಂಪವೇ ಇರಲಿಲ್ಲ; ಕಾರಣವೆಂದರೆ ಆಡಳಿತದಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದ ಯಾರೂ ಇರಲಿಲ್ಲ.

ಆಡಳಿತ ವರ್ಗಕ್ಕೆ ಪರಿಶಿಷ್ಟ ಜಾತಿಗಳ ಬಗ್ಗೆ ಅನುಕಂಪವೇ ಇರಲಿಲ್ಲ; ಅದಕ್ಕೆ ಕಾರಣ ಆಡಳಿತದಲ್ಲಿ ಇದ್ದವರೆಲ್ಲಾ ಸಂಪೂರ್ಣವಾಗಿ ಸವರ್ಣೀಯ ಹಿಂದುಗಳೇ ಇದ್ದರು; ಇವರು ಹಳ್ಳಿಗಳಲ್ಲಿನ ಸವರ್ಣೀಯ ಹಿಂದೂಗಳ ಪರ ಪಕ್ಷಪಾತ ಮಾಡುತ್ತಿದ್ದರು. ಅವರು ಪರಿಶಿಷ್ಟ ಜಾತಿಗಳವರಿಂದ ಬಲವಂತದ ಕೂಲಿ ಕೆಲಸವನ್ನು (ಬೇಗಾರ್) ಮಾಡಿಸುತ್ತಿದ್ದುದಲ್ಲದೆ, ಹಗಲು ರಾತ್ರಿ ಎನ್ನದೆ ಅವರ ಮೇಲೆ ದೌರ್ಜನ್ಯ ಮತ್ತು ದಬ್ಬಾಳಿಕೆ ಮಾಡುತ್ತಿದ್ದರು. ಈ ದೌರ್ಜನ್ಯ ಮತ್ತು ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಬೇಕಾದರೆ, ಪರಿಶಿಷ್ಟ ಜಾತಿಗಳು ನಾಗರಿಕ ಸೇವೆಯಲ್ಲಿ ಜಾಗವನ್ನು ಪಡೆದುಕೊಳ್ಳಲೇಬೇಕು. ಸರ್ಕಾರದಿಂದ ಹೊರಗಡೆ ಇರುವುದರ ಬದಲು, ಸರ್ಕಾರದ ಒಳಗಡೆ ಇದ್ದು ಇದನ್ನು ಮಾಡುವುದು ಒಳಿತು.

ಮೂರನೆಯ ವಿಷಯಕ್ಕೆ ಬಂದರೆ, ಕಾಂಗ್ರೆಸ್ ಅನ್ನು ಸೇರುವುದರಿಂದ ಏನೂ ಪ್ರಯೋಜನವಿಲ್ಲವೆಂದು ನಾನು ಹೇಳಿದೆ. ಎರಡು ಪಕ್ಷಗಳು ಇರುವುದರಲ್ಲಿಯೇ ಕ್ಷೇಮವಿದೆ. ಸರ್ಕಾರವನ್ನು ಟೀಕಿಸುವುದಕ್ಕೆ ಒಂದು ವಿರೋಧ ಪಕ್ಷ ಇರಲೇ ಬೇಕು. ಇಲ್ಲದೇ ಹೋದರೆ ಸರ್ಕಾರ ಸುಲಭವಾಗಿ ಸರ್ವಾಧಿಕಾರ ಮನೋಭಾವ ತಾಳಿಬಿಡಬಹುದು. ಅದು ಒಂದು ಹತ್ತಿ ಉರಿಯುತ್ತಿರುವ ಮನೆ. ವಿರೋಧ ಪಕ್ಷವನ್ನು ಕಟ್ಟಬೇಕೆಂಬ ಅನೇಕರು ಕಾಂಗ್ರೆಸ್‌ನಲ್ಲೇ ಇದ್ದಾರೆ. ಅದರ ಅವಶ್ಯಕತೆಯನ್ನು ಅವರು ಬಹಳ ಗಂಭೀರವಾಗಿ ಮನಗಂಡಿದ್ದಾರೆ.

ಎರಡನೆಯದಾಗಿ, ಕಾಂಗ್ರೆಸ್ ತಾನೇ ಇಬ್ಭಾಗವಾಗುತ್ತಿದೆ. ಸಮಾಜವಾದಿಗಳು ಅದರಿಂದ ಹೊರಗಡೆ ಹೋಗಿದ್ದಾರೆ. ಅವರು ಎಷ್ಟು ದೊಡ್ಡದಾಗಿ ಬೆಳೆಯುತ್ತಾರೆ ಎಂಬುದನ್ನು ಈಗ ಹೇಳಲು ಬರುವುದಿಲ್ಲ. ಅವರು ಬಹಳ ದೊಡ್ಡದಾಗಿ ಬೆಳೆಯುವ ಎಲ್ಲಾ ಸಾಧ್ಯತೆಗಳು ಇವೆ. ಇನ್ನು ಮೇಲೆ ಎರಡು ಪಕ್ಷಗಳು ಇರುತ್ತವೆ: (೧) ಕಾಂಗ್ರೆಸ್ ಮತ್ತು (೨) ಸೋಶಲಿಸ್ಟರು. ಪ್ರಶ್ನೆ ಎಂದರೆ ನಾವು ಕಾಂಗ್ರೆಸ್ ಅನ್ನು ಸೇರಬೇಕೆ ಅಥವಾ ಸೋಶಲಿಸ್ಟರನ್ನು ಸೇರಬೇಕೆ ಎಂದು.

ನಿಮಗೆ ನನ್ನ ಸಲಹೆ ಏನೆಂದರೆ ನೀವು ಮೂರನೆಯ ಪಕ್ಷವೊಂದನ್ನು ಕಟ್ಟಬೇಕು; ಆಗ ಪರಿಶಿಷ್ಟ ಜಾತಿಗಳವರು ಎರಡು ಪಕ್ಷಗಳ ಮಧ್ಯೆ ಸಮತೋಲನ ಮಾಡುವ ಪಕ್ಷವಾಗಿ, ನಿಮಗೆ ಬೇಕಾದುದನ್ನು ಕೇಳುವುದಕ್ಕೆ ಶಕ್ತಿ ಬರುತ್ತದೆ. ಯಾವುದೇ ರಾಜಕೀಯ ಪಕ್ಷವನ್ನು ಕೇವಲ ಅದರ ಅನುಯಾಯಿಗಳಾಗಿ ಸೇರುವುದರಿಂದ ಏನೂ ಪ್ರಯೋಜನವಿಲ್ಲ. ಅದು ಏನನ್ನಾದರೂ ಕೊಡುವುದೇ ಆದರೆ, ಅದು ನೌಕರಿಯನ್ನು ಕೊಡಬಹುದು. ಆದರೆ ಅದು ಅಧಿಕಾರವನ್ನು ಕೊಡುವುದಿಲ್ಲ.

ನಿಮ್ಮ ಸಮ್ಮೇಳನ ಈಗ ತಾನೇ ಒಂದು ನಿರ್ಣಯವನ್ನು ಅನುಮೋದಿಸಿ ಪಂತ್ ಸರ್ಕಾರವನ್ನು,, ನಿಮಗೆ ಕೊಡಬೇಕಾದ ಶೇಕಡ ೨೨ರ ಬದಲು ಕೇವಲ ಶೇಕಡ ಹತ್ತು ಮೀಸಲಾತಿಯನ್ನು, ಕೊಟ್ಟಿರುವುದಕ್ಕಾಗಿ ಖಂಡಿಸಿದ್ದೀರಿ. ಪಂತ್ ಅವರು ನಿಮಗೆ ನಿಮ್ಮ ಭರ್ತಿ ಕೋಟವನ್ನು ಕೊಡದೇ ಇರುವುದಕ್ಕೆ ಕಾರಣ, ಸಂಯುಕ್ತ ಪ್ರಾಂತ್ಯಗಳ ಶಾಸನ ಸಭೆಯಲ್ಲಿ ಬಹುಮತಕ್ಕಾಗಿ ಅವರು ನಿಮ್ಮ ಮೇಲೆ ಅವಲಂಬಿತರಾಗಿಲ್ಲ.

ಅದು ಯಾವಾಗ ಸಾಧ್ಯ ಎಂದರೆ, ಸಂಧಾನ ಮಾಡಲು ಯೋಗ್ಯವಾದ ಒಂದು ಪ್ರತ್ಯೇಕವಾದ ಸಂಸ್ಥೆಯಾಗಿ ಒಂದುಗೂಡಿದರೆ ಮಾತ್ರ ಸಾಧ್ಯವಾಗುತ್ತದೆ. ಆಗ ನೀವು ೨೨% ಅನ್ನು ಆಗ್ರಹಪೂರ್ವಕವಾಗಿ ಕೇಳಬಹುದು.

ಪರಿಶಿಷ್ಟ ಜಾತಿಗಳ ಮತ್ತು ಹಿಂದುಳಿದ ವರ್ಗಗಳವರೆಂದು ಕರೆಯಿಸಿಕೊಳ್ಳುವವರ ಮಧ್ಯೆ ಒಗ್ಗಟ್ಟಿರಬೇಕೆಂಬ ಪ್ರಶ್ನೆಯತ್ತ ಗಮನ ಹರಿಸಿದೆ. ಇದನ್ನು ನಾನು ಮಾಡಿದ್ದು ಸಮ್ಮೇಳನದಲ್ಲಿ ಹಾಜರಿದ್ದ ಹಿಂದುಳಿದ ವರ್ಗಗಳವರ ಪ್ರಾರ್ಥನೆಯ ಮೇರೆಗೆ. ಎರಡು ವರ್ಗಗಳ ಅವಶ್ಯಕತೆಗಳೂ ಒಂದೇ ಆಗಿದ್ದರೂ ಸಹ ಒಟ್ಟಾಗಲಿಲ್ಲವೆಂಬುದು ಪಾಪ ಎನ್ನಿಸುತ್ತದೆ. ಹಿಂದುಳಿದ ವರ್ಗಗಳವರು ಪರಿಶಿಷ್ಟ ಜಾತಿಗಳವರೊಂದಿಗೆ ಸೇರದೇ ಇರಲು ಕಾರಣವೆಂದರೆ, ಅವರೊಡನೆ ಒಡನಾಟ ಮಾಡಿದರೆ ತಾವೂ ಸಹ ಪರಿಶಿಷ್ಟ ಜಾತಿಗಳವರ ಮಟ್ಟಕ್ಕೆ ಇಳಿಯಬೇಕಾಗುತ್ತದೆ ಎಂದು.

ಪರಿಶಿಷ್ಟ ಜಾತಿಗಳ ಮತ್ತು ಹಿಂದುಳಿದ ವರ್ಗಗಳ ಮಧ್ಯೆ ಸಹಭೋಜನ ಮತ್ತು ಅಂತರ್ಜಾತಿ ವಿವಾಹಕ್ಕೆ ನಾನೇನೂ ಅಷ್ಟು ಉತ್ಸುಕನಾಗಿರಲಿಲ್ಲ ಎಂದು ನಾನು ಹೇಳಿದ್ದೆ. ಅವರು ಪ್ರತ್ಯೇಕ ಸಾಮಾಜಿಕ ಘಟಕಗಳಾಗಿ ಉಳಿಯುವುದೇ ಒಳ್ಳೆಯದು.ಆದರೆ ನಮ್ಮೊಂದಿಗೆ ಕೈ ಜೋಡಿಸಿ ಒಂದು ರಾಜಕೀಯ ಪಕ್ಷವನ್ನು ಹುಟ್ಟುಹಾಕದೆ ಇರುವುದಕ್ಕೆ ಅದೇನೂ ಕಾರಣವಲ್ಲ. ಹೀಗೆ ಕೈ ಜೋಡಿಸಿದರೆ ಅವರು ತಮ್ಮ ಹಿಂದುಳಿದ ಪರಿಸ್ಥಿತಿಯಿಂದ ಹೊರಗೆ ಬರಬಹುದು. ಪರಿಶಿಷ್ಟ ಜಾತಿಗಳು ದೇಶದ ರಾಜಕೀಯದಲ್ಲಿ ತಮ್ಮ ಪಾತ್ರವನ್ನು ಮಾಡಿ ಹೇಗೆ ತಮ್ಮ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಂಡಿದ್ದಾರೆಂದು ತೋರಿಸಿದೆ. ಹಿಂದುಳಿದ ವರ್ಗಗಳವರೂ ಸಹ ಅದನ್ನೇ ಏತಕ್ಕೆ ಮಾಡಬಾರದು ಎಂಬುದಕ್ಕೆ ಯಾವ ಕಾರಣವೂ ಇಲ್ಲ..

ಪರಿಶಿಷ್ಟ ಜಾತಿಗಳು ಮತ್ತು ಹಿಂದುಳಿದ ವರ್ಗಗಳು ಒಟ್ಟಿಗೆ ಈ ದೇಶದ ಬಹುಸಂಖ್ಯಾತ ಜನಾಂಗವಾಗುತ್ತಾರೆ. ಅವರು ಈ ದೇಶವನ್ನು ಆಳಬಾರದೆಂಬುದಕ್ಕೆ ಯಾವ ಕಾರಣವೂ ಇಲ್ಲ. ಅವಶ್ಯಕತೆ ಇರುವುದು ರಾಜಕೀಯ ಅಧಿಕಾರವನ್ನು ಹಿಡಿದುಕೊಳ್ಳುವ ಉದ್ದೇಶದಿಂದ ಇಬ್ಬರೂ ಸಂಘಟಿತರಾಗಬೇಕಷ್ಟೆ.. ವಯಸ್ಕರ ಮತದಾನ ಪದ್ಧತಿಯಿಂದಾಗಿ ಅದು ನಿಮ್ಮ ಸ್ವಂತದ್ದೇ ಆಗುತ್ತದೆ. ಜನಗಳು ಧೈರ್ಯವನ್ನು ತಂದು ಕೊಳ್ಳುತ್ತಿಲ್ಲ; ಕಾರಣವೆಂದರೆ ಕಾಂಗ್ರೆಸ್ ಸರ್ಕಾರ ಚಿರಕಾಲ ಇರುತ್ತದೆ ಎಂಬ ಅವರ ನಂಬಿಕೆ. ಇದು ಒಂದು ತಪ್ಪು ತಿಳುವಳಿಕೆ ಎಂದು ನಾನು ಹೇಳಿದೆ. ಜನರಿಂದಾದ ಪ್ರಜಪ್ರಭುತ್ವದಲ್ಲಿ ಯಾವ ಸರ್ಕಾರವೂ ಶಾಶ್ವತವಲ್ಲ; ಆ ಸರ್ಕಾರ ಕಾಂಗ್ರೆಸ್‌ನ ಇಬ್ಬರು ಮೇರು ವ್ಯಕ್ತಿಗಳಾದ ಪಂಡಿತ್ ನೆಹರೂ ಮತ್ತು ಸರ್ದಾರ್ ಪಟೇಲ್ ಅವರು ಸ್ಥಾಪನೆ ಮಾಡಿದ್ದರೂ ಸಹ. ನೀವು ಸಂಘಟಿದರಾದರೆ, ಆ ಸರ್ಕಾರವನ್ನೂ ಸಹ ನೀವು ವಶಕ್ಕೆ ತೆಗೆದುಕೊಳ್ಳಬಹುದು.

ನಾನು ಕಾಂಗ್ರೆಸ್ ಸಂಸ್ಥೆಯನ್ನಾಗಲೀ ಅಥವಾ ನನ್ನ ಸಹೋದ್ಯೋಗಿಗಳನ್ನಾಗಲೀ ಖಂಡನೆ ಮಾಡಿದೆ ಎಂಬ ಸೂಚನೆ, ವಾಸ್ತವಗಳ ಒಂದು ಅಣಕವಷ್ಟೆ ಎಂಬುದನ್ನು ಪತ್ರಿಕೆಯ ಓದುಗ ಗಮನಿಸುತ್ತಾನೆ ಎಂದು ನನಗೆ ನಂಬಿಕೆ ಇದೆ.

## ೧೧೪
## ಸಮುದಾಯದ ಪುರೋಭಿವೃದ್ಧಿ ಯಾವಾಗಲೂ ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ

ಜನವರಿ೧೫, ೧೯೪೯ ರಂದು, ಮನ್ಮಾಡ್ ನಲ್ಲಿ ಡಾ: ಅಂಬೇಡ್ಕರ್ ಅವರಿಗೆ ಒಂದು ಪರ್ಸ್ ಅನ್ನು ಸಮರ್ಪಿಸಲಾಯಿತು. ಆ ಸಂದರ್ಭದಲ್ಲಿ ಮಾತನಾಡುತ್ತ, ಅವರು ಘೋಷಣೆ ಮಾಡಿದರು:

ನನ್ನ ಜನಗಳು ಈ ದೇಶದಲ್ಲಿ ರೈತರುಗಳ ಮತ್ತು ಕಾರ್ಮಿಕರ ಆಳ್ವಿಕೆಯಲ್ಲಿ ನೈಜವಾದ ಸಮಾಜವಾದವನ್ನು ಸ್ಥಾಪಿಸುತ್ತಾರೆ ಎಂದು ಹೇಳಿದರು. ಒಂದು ಸಮುದಾಯದ ಪುರೋಭಿವೃದ್ಧಿ ಅವರು ಶಿಕ್ಷಣದಲ್ಲಿ ಹೇಗೆ ಮುಂದುವರೆಯುತ್ತಾರೆಂಬುದರ ಮೇಲೆ ಅವಲಂಬಿತವಾಗಿದೆ ಎಂದು ಮನದಟ್ಟು ಮಾಡಿದರು.

# ೧೧೫
# ನಾಗರಿಕ ಸಂಹಿತೆಯ ಕಡೆಗೆ, ಹಿಂದು ಸಂಹಿತೆ ಒಂದು ಸರಿಯಾದ ಹೆಜ್ಜೆ

ಸಿದ್ಧಾರ್ಥ ಕಾಲೇಜಿನ ವಿದ್ಯಾರ್ಥಿಗಳ ಪಾರ್ಲಿಮೆಂಟು ೧೧ನೇ ಜನವರಿ ೧೯೫೦ರ ಬುಧವಾರದ ದಿನ ಒಂದು ವಿದ್ಯಾರ್ಥಿ ಪಾರ್ಲಿಮೆಂಟನ್ನು ವ್ಯವಸ್ಥೆ ಮಾಡಿದ್ದರು. ಆ ಸಮಾರಂಭ ಡಾ: ಬಿ.ಆರ್ ಅಂಬೇಡ್ಕರ್ ಅವರು ಬೊಂಬಾಯಿನಲ್ಲಿ ಇದ್ದ ದಿವಸವೇ ನಡೆದಿತ್ತು. ವಿಶೇಷವಾಗಿ 'ಹಿಂದೂ ಸಂಹಿತೆ' ಮಸೂದೆಯ ಮೇಲೆ ಮಾತನಾಡಲು ಅವರನ್ನು ಅಹ್ವಾನಿಸಲಾಗಿತ್ತು. ಕಾರ್ಯಕ್ರಮವನ್ನು ಸುಂದರಬಾಯಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮ ಪ್ರಾರಂಭವಾಗುವುದು ಬೆಳಗಿನ ೯ ಗಂಟೆಯೆಂದು ನಿಗದಿಯಾಗಿದ್ದರೂ, ಸಭಾಂಗಣ ಬೆಳಗಿನ ೮ಗಂಟೆಗೇ ಕಿಕ್ಕಿರಿದು ತುಂಬಿತ್ತು. ಡಾ:ಅಂಬೇಡ್ಕರ್ ಅವರ ಭಾಷಣವನ್ನು ಕೇಳುವುದಕ್ಕೆ ಹೊರಗಿನ ಅನೇಕ ಗಣ್ಯ ವ್ಯಕ್ತಿಗಳು ಬಂದಿದ್ದರು. ಲೌಡ್ ಸ್ಪೀಕರುಗಳ ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

ಡಾ: ಬಿ. ಆರ್. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದು:

ಹಿಂದೂ ಸಂಹಿತೆ ಮಸೂದೆಯನ್ನು ತೀವ್ರಗಾಮಿಯೆಂದಾಗಲೀ ಅಥವಾ ಕ್ರಾಂತಿಕಾರಿಯೆಂದಾಗಲೀ ವಿವರಿಸುವುದು ತಪ್ಪಾಗುತ್ತದೆ. ಆ ಮಸೂದೆ, ಮುನ್ನಡೆಯ ಹೊಸ ಹಾದಿಯಲ್ಲಿ ಹೋಗುವುದಕ್ಕೆ ಒಪ್ಪಿಗೆ ಕೊಟ್ಟಿದ್ದರೂ ಅದು ಸಾಂಪ್ರದಾಯಿಕ ಆಚರಣೆಗಳನ್ನು ವಿರೋಧಿಸುವುದಿಲ್ಲ. ಭಾರತದ ಒಕ್ಕೂಟದ ಸಂವಿಧಾನ, ಸರ್ಕಾರಕ್ಕೆ ಒಂದು ಸಕಾರಾತ್ಮಕ ನಿರ್ದೇಶನವನ್ನು ಕೊಟ್ಟಿದ್ದು, ಒಟ್ಟಾರೆ ದೇಶದ ಪ್ರಯೋಜನಕ್ಕಾಗಿ ಒಂದು ನಾಗರಿಕ ಸಂಹಿತೆಯನ್ನು ಸಿದ್ಧಪಡಿಸುವದಕ್ಕಾಗಿ ಕೆಲಸ ಮಾಡಬೇಕೆಂದು ಹೇಳಿದೆ. ಹಿಂದೂ ಸಂಹಿತೆಯ ಮಸೂದೆಯ ಉದ್ದೇಶ, ಹಿಂದೂ ಕಾನೂನಿನ ಕೆಲವು ಗೊತ್ತಾದ ಶಾಖೆಗಳನ್ನು ಸಂಹಿತೀಕರಣ ಮತ್ತು ಮಾರ್ಪಾಡುಗಳನ್ನು ಮಾಡುವುದೇ ಆಗಿದೆ. ಅದರ ಮಹತ್ವದ ಬಗ್ಗೆ ಹೇಳುತ್ತಾ ಆ ಸಂಹಿತೆ ದೇಶದ ಏಕತೆಯ ದೃಷ್ಟಿಯಿಂದ ಪ್ರಯೋಜನಕಾರಿಯಾಗಿದ್ದು, ಅಂದರೆ ಹಿಂದೂಗಳು ತಮ್ಮ ಸಾಮಾಜಿಕ ಮತ್ತು ಧಾರ್ಮಿಕ ಜೀವನವನ್ನು ಒಂದೇ ಗುಂಪಿನ ಕಾನೂನುಗಳಿಂದ ನಿಯಂತ್ರಿಸಲ್ಪಡಬೇಕು ಎಂದು ಹೇಳುತ್ತದೆ ಎಂದರು. ಮುಂದುವರೆದು ಅವರು ಮಾತನಾಡುತ್ತಾ ಹಿಂದೂ ಕಾನೂನುಗಳನ್ನು ಪರಿಷ್ಕರಿಸುತ್ತಿರುವುದು ಹಿಂದೂಗಳು ಪುನರುಜ್ಜೀವನವನ್ನು ತಡೆಯುವಷ್ಟು ಒಂದು ನಿರ್ಬಲ ಜನಾಂಗವೆನ್ನುವ ಕಾರಣಕ್ಕಾಗಿ ಅಲ್ಲ, ಆದರೆ. ಅದರ ಏಕರೂಪತೆಯ ಕಾರಣಕ್ಕಾಗಿ ಮಾತ್ರ. ನಾಗರಿಕ ಸಂಹಿತೆಯ ಕಡೆಗೆ ಹಿಂದೂ ಸಂಹಿತೆ ಒಂದು ಸರಿಯಾದ ಹೆಜ್ಜೆ ಎಂದರು. ಕಾನೂನುಗಳು ಸುಲಭವಾಗಿ ಅರ್ಥವಾಗುವಂತೆ ಇರಬೇಕಲ್ಲದೆ, ಬೇರೆ ಬೇರೆ ಪ್ರದೇಶಗಳಲ್ಲಿ ಇರುವ ಸಮಾಜದ ಎಲ್ಲರಿಗೂ ಅನ್ವಯಿಸುವಂತೆ ಇರಬೇಕು ಎಂದರು. ಅಷ್ಟೂ ಅಲ್ಲದೆ, ಹಿಂದೂ ಒಬ್ಬ, ಯಾರನ್ನೇ ಬೇಕಾದರೂ ಹಿಂದೂ ಸಮಾಜದಿಂದ ದತ್ತು ತೆಗೆದುಕೊಳ್ಳಬಹುದಾಗಿದ್ದು ಉಯಿಲೊಂದನ್ನು ಬರೆದು ತನ್ನ ಮಗಳಿಗೆ ಆಸ್ತಿ ಸೇರದಂತೆ ಮಾಡಬಹುದು.

ಸಂಹಿತೆಯ ಕರಡನ್ನು ಸಿದ್ಧಪಡಿಸಿದ ಆಧಾರ ಗ್ರಂಥಗಳನ್ನು ಕುರಿತು, ಪ್ರಸ್ತಾವನೆ ಮಾಡಿದ ಅವರು ಮಾರ್ಪಾಡುಗಳು ಹಿಂದೂ ಶಾಸ್ತ್ರಗಳು ಮತ್ತು ಸ್ಮೃತಿಗಳ ಮೇಲೆ ಆಧಾರ ಪಟ್ಟಿದೆ ಎಂದು ಹೇಳಿದರು.

ಆಸ್ತಿಯನ್ನು ದಯಾಭಾಗ ಪದ್ಧತಿ ನಿಯಂತ್ರಿಸುತ್ತದೆ: ವಿಚ್ಛೇದನವನ್ನು ಕೌಟಿಲ್ಯ ಮತ್ತು ಪರಾಶರ ಸ್ಮೃತಿಗಳು ಬೆಂಬಲಿಸುತ್ತವೆ.. ಆಸ್ತಿಗೆ ಸಂಬಂಧ ಪಟ್ಟ ಹಾಗೆ ಸ್ತ್ರೀಯರ ಹಕ್ಕುಗಳನ್ನು ಬೃಹಸ್ಪತಿ ಸ್ಮೃತಿ ಬೆಂಬಲಿಸುತ್ತದೆ ಎಂದು ಮುಕ್ತಾಯ ಮಾಡಿದರು.

# ೧೧೬
# ಭಾರತ ಪುನಃ ಗುಲಾಮಗಿರಿಗೆ ಹೋಗದಂತೆ ನಾವು ಖಾತರಿಪಡಿಸಿಕೊಳ್ಳಬೇಕು

೧೧ನೇ ಜನವರಿ ೧೯೫೦, ಬುಧವಾರ ಸಾಯಂಕಾಲ ಪರೇಲ ನನಾರೆ ಪಾರ್ಕ್ ಉದ್ಯಾನದಲ್ಲಿ ನಡೆದ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಸಭೆಯಲ್ಲಿ ಅಸಾಧಾರಣವಾದ ಸಮೂಹ ಉತ್ಸಾಹವಿತ್ತು. ಆದಿನ, ಭಾರತ ಸಂವಿಧಾನವನ್ನು ರೂಪಿಸಿವುದರ ಹಿಂದಿದ್ದ ಅದಮ್ಯ ಚೇತನವಾದ ಡಾ: ಬಿ.ಆರ್.ಅಂಬೇಡ್ಕರ್ ಅವರಿಗೆ ಚಿರಸ್ಥಾಯಿಯಾದ ಸಂವಿಧಾನದ ಪುಸ್ತಕವೊದನ್ನು ಇಟ್ಟಿದ್ದ ಪುಸ್ತಕರೂಪದಲ್ಲಿ ತಯಾರಿಸಿದ್ದ ಕ್ಯಾಸ್ಕೆಟ್ ಒಂದನ್ನು ಸಮರ್ಪಿಸಲಾಯಿತು.

ಎರಡು ಲಕ್ಷಕ್ಕಿಂತ ಹೆಚ್ಚಿಗೆ ಪುರುಷರು, ಮಹಿಳೆಯರು ಮತ್ತು ಮಕ್ಕಳೂ ಸೇರಿ, ಹಾಜರಿದ್ದ ಆ ಸಭೆ, ಪರಿಶಿಷ್ಟ ಜಾತಿಗಳ ಫೆಡರೇಶನ್ನಿನ ಚರಿತ್ರೆಯಲ್ಲಿ ಒಂದು ಹೆಗ್ಗುರುತಾಗಿತ್ತು. ಪಾರ್ಕಿನಿಂದ ಮುಖ್ಯರಸ್ತೆಗೆ ತುಂಬಿ ಹರಿದ ಜನಸ್ತೋಮ, ಎಂದಿಗೂ ನೋಡಿರದಷ್ಟು ಅತ್ಯಂತ ದೊಡ್ಡದಾಗಿತ್ತು.

ಹರಿಜನರ ಉದ್ದನೆಯ ಮೆರವಣಿಗೆಗಳು, ನೀಲಿ ಬಣ್ಣದ ಪಕ್ಷದ ಬಾವುಟಗಳನ್ನು ಕೈನಲ್ಲಿ ಹಿಡಿದು ಕಿವಿಗಡಚಿಕ್ಕುವ ಜಯಘೋಷಗಳನ್ನು ಕೂಗುತ್ತಾ, ದೂರದ/ಹತ್ತಿರದ ವಾಸಸ್ಥಳಗಳಿಂದ ಪಾರ್ಕಿಗೆ ಬಂದು ಸೇರುತ್ತಿದ್ದವು. ಗುಂಪುಗಳು ಸ್ವಯಂಸೇವಕರುಗಳ ನಿರ್ದೇಶನದಲ್ಲಿ ಬರುತ್ತಿದ್ದು, ಗಮನಾರ್ಹವಾದ ಶಿಸ್ತನ್ನು ಕಾಪಾಡಿಕೊಳ್ಳಲಾಗಿತ್ತು. ಐದು ವರ್ಷಗಳಲ್ಲಿ ಸಿಟಿಯಲ್ಲಿ ನಡೆದ ತಮ್ಮ ಮೊದಲನೆ ಸಾರ್ವಜನಿಕ ಸ್ವಾಗತ ಸಮಾರಂಭದ ಸಭೆಯಲ್ಲಿ ಭಾಗವಹಿಸಲು ಡಾ: ಅಂಬೇಡ್ಕರ್ ಅವರು ವೇದಿಕೆಯ ಮೇಲಕ್ಕೆ ಹತ್ತಿದಾಗ ಜನಗಳ ಉತ್ಸಾಹದ ಜ್ವರ ಮೇರೆಮೀರಿತ್ತು. ಅಂಬೇಡ್ಕರ್ ಕಿ ಜೈ ಎಂಬ ಘೋಷಣೆಗಳು ಮುಗಿಲು ಮುಟ್ಟಿತು. ಸುಮಾರು ೫೦ ಹಾರಗಳನ್ನು ಕಾನೂನು ಸದಸ್ಯರಿಗೆ ಹಾಕಲಾಯಿತು; ನಂತರದಲ್ಲಿ ಅವರ ಪತ್ನಿಯಾದ ಡಾ: ಸವಿತಾ ಅಂಬೇಡ್ಕರ್ ಅಲ್ಲಿಗೆ ಬಂದು ಸೇರಿದರು. ಅವರಿಗೂ ಸಹ ಸಭಿಕರು ಉತ್ಸಾಹಪೂರ್ವಕವಾದ ಸ್ವಾಗತವನ್ನು ಕೋರಿದರು.

ಫೆಡರೇಷನ್ನಿನವರು ಕೂಡಿಸಿದ ಚಂದಾ ಹಣದಿಂದ ಆ ದೊಡ್ಡ ಗಾತ್ರದ ಕ್ಯಾಸ್ಕೆಟ್ಟಿಗೆ ದುಡ್ಡು ಕೊಡಲಾಗಿತ್ತು. ಕ್ಯಾಸ್ಕೆಟ್ಟಿಗೆ ಹಣ ಕೊಟ್ಟಾದ ಮೇಲೆ ಮಿಕ್ಕಿದ ಎರಡು ಸಾವಿರ ರುಪಾಯಿಗಳನ್ನೂ ಸಹ ಡಾ: ಅಂಬೇಡ್ಕರ್ ಅವರಿಗೆ ಫೆಡರೇಷನ್ನಿನ ಕಾರ್ಯದರ್ಶಿಯವರಾದ ಮಿ:: ಜೆ.ಜಿ. ಭಟಂಕರ್ ಅವರು ಸಮರ್ಪಿಸಿದರು.

ಕೊಡುಗೆಯನ್ನುಸ್ವೀಕರಿಸಿದ ಮೇಲೆ, ಡಾ: ಅಂಬೇಡ್ಕರ್ ಅವರು ಮಾತನಾಡುತ್ತಾ ಹಿಂದಿನದನ್ನೆಲ್ಲಾ ಬಹಳವಾಗಿ ನೆನಪಿಸಿಕೊಂಡರು:

ಎಲ್ಲಾ ಚುನಾವಣೆಗಳಲ್ಲೂ ನಾವು ಕಾಂಗ್ರೆಸ್ಸಿಗರೊಂದಿಗೆ ಸೆಣಸುತ್ತಿದ್ದರಿಂದ ಅವರು ನನ್ನ ಮೇಲೆ ಎಷ್ಟು ವಿರೋಧವಾಗಿದ್ದರೆಂದರೆ, ಸಂವಿಧಾನ ಸಭೆಯಲ್ಲಿ ಯಾರನ್ನು ನೋಡಿದರೂ, ನನ್ನನ್ನು ನೋಡುವುದಿಲ್ಲವೆಂದು ಹೇಳುತ್ತಿದ್ದರು. ವಾಸ್ತವವಾಗಿ ಇಲ್ಲಿ ನಮ್ಮ ಪಕ್ಷದ ಬಲ ಸಾಕಷ್ಟು ಇಲ್ಲದಿದ್ದರಿಂದ ನಾನು ಸಂವಿದಾನ ಸಭೆಗೆ ಬಂಗಾಳದಿಂದ ಚುನಾವಣೆಗೆ ನಿಲ್ಲ ಬೇಕಾಯಿತು. ನಡೆದದ್ದು ಏನೆಂದರೆ, ನಾನು

ಸಭೆಯನ್ನು ಪ್ರವೇಶಿಸಿದ್ದು ಮಾತ್ರವಲ್ಲ, ಸಂವಿಧಾನವನ್ನು ಕರಡು ಮಾಡುವ ವಿಶಿಷ್ಟವಾದ ಗೌರವನ್ನು ನಂತರ ನನಗೆ ಕೊಡಲಾಯಿಇತು. ಅದು ನನಗೆ ಸಂದ ಶ್ಲಾಘನೆಗಿಂತ ಪಕ್ಷಕ್ಕೆ ಸಂದ ಗೌರವವಾಗಿತ್ತು. ನಮ್ಮನ್ನೆಲ್ಲ ಬ್ರಿಟಿಷರ ಮತ್ತು ಮುಸ್ಲಿಮರ ಬಾಲಬಡುಕರು ಎಂದು ಕರೆಯಲಾಗಿತ್ತು; ನಾವು ಮುಕ್ತರಾಗಿಲ್ಲದಿದ್ದ ಕಾರಣದಿದ ಬ್ರಿಟಿಷರೊಂದಿಗೆ ವ್ಯವಹರಿಸಬೇಕಾಗಿತ್ತು, ಮತ್ತು ನಮ್ಮ ಹಿತಾಸಕ್ತಿಗಳನ್ನು ರಕ್ಷಿಸಕೊಳ್ಳಬೇಕಾದ ಒತ್ತಾಯವಿತ್ತು.

ಮುಂದುವರೆದು ಅವರು ಹೇಳಿದ್ದೇನೆಂದರೆ,

ಸಂವಿಧಾನ ಸಭೆಯನ್ನು ಜಾತಿಗಳವರ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿಯೇ ಹೊರತು ಸಂವಿಧಾನವನ್ನು ರಚಿಸುವ ಮಹದಾಸೆಯನ್ನು ಹೊತ್ತು ಅಲ್ಲ. ಹೇಗಾದರೂ ಕೆಲವು ಸಂದರ್ಭಗಳಿಂದಾಗಿ ಸಂವಿಧಾನದ ಕರಡನ್ನು ತಯಾರಿಸುವ ಹೊಣೆ ನನ್ನ ಹೆಗಲ ಮೇಲೆ ಬಿದ್ದಿತು. .ನನ್ನ ಹೆಸರು ಸಂವಿಧಾನ ರಚಿಸಿದವರ ಹೆಸರುಗಳೊಂದಿಗೆ ಸೇರಿಕೊಂಡಿದ್ದು ನನಗೆ ಹೆಮ್ಮೆಯಾಗಿದೆ ಏಕೆಂದರೆ ಇಂಥ ಅವಕಾಶ ಜೀವನದಲ್ಲಿ ಒಮ್ಮೆ ಮಾತ್ರ ದೊರಕುತ್ತದೆ.

ಇನ್ನೂ ಹೆಚ್ಚಾಗಿ ವೈಯುಕ್ತಿಕವಾಗಿ ಮಾತನಾಡುವುದಾದರೆ, ಕೆಲವು ಜನರ ಯೋಚನೆ ಏನೆಂದರೆ, ನಾನು ರಾಜಧಾನಿಯಲ್ಲಿಯೇ ಇರುವುದರಿಂದ, ನಾನು ಫೆಡರೇ

ಷನ್ನಿನ ಸಂಪರ್ಕವನ್ನು ಕಳೆದುಕೊಳ್ಳುತ್ತಿದ್ದೇನೆ, ಹಾಗೂ ನೆಲ ನನ್ನ ಕಾಲಡಿಯಿಂದ ಜರುಗುತ್ತಿದೆಯೆಂದು. ಆದರೆ ಈ ದಿನದ ಸಭೆ ಎಂದಿಗಿಂತ ಹೆಚ್ಚು ಗಟ್ಟಿಯಾದ ನೆಲದಮೇಲೆ ನಾನು ನಿಂತಿದ್ದೇನೆ ಎಂದು ತೋರಿಸುತ್ತಿದೆ.

ಆ ಕಾನೂನಿನ ಸದಸ್ಯರು (ಡಾ. ಅಂಬೇಡ್ಕರ್) ತಮ್ಮ ಗಂಭೀರವಾದ ಮುಖಮುದ್ರೆಯನ್ನು ಸಮಾರಂಭದ ಉದ್ದಕ್ಕೂ ಉಳಿಸಿಕೊಂಡಿದ್ದು ತಮ್ಮ ಮತ್ತು ಕಾಗ್ರೆಸ್ ನಡುವಿನ ಗತ ಕಾಲದ ಕಹಿನ್ನು ನೆನಪಿಸಿಕೊಂಡರು; ಆದರೂ ಸಹ ಹರಿಜನರಿಗೆ ಅವರು ಮನವಿ ಮಾಡಿದ್ದೇನೆಂದರೆ ಇತರ ರಾಜಕೀಯ ಗುಂಪುಗಳಿಂದ ಹೊರಗೆ ಇರಬೇಡಿ, ಅದರ ಬದಲು ಸಮುದಾಯದ ಒಳಿತಿಗಾಗಿ ಅವರ ಸಹಕಾರವನ್ನು ಕೇಳಿ ಎಂದರು.

ಈ ತಕ್ಷಣದಲ್ಲಿ ಪರಿಸ್ಥಿತಿ ತಿಳಿಯಾಗಿಲ್ಲ, ಮತ್ತು ನಾವು ಯಾವ ಪಕ್ಷದೊಂದಿಗೆ ಸಖ್ಯ ಬೆಳೆಸಬೇಕೆಂದು ಎಂದು ಹೇಳುವುದಕ್ಕೆ ಇನ್ನು ಸಮಯ ಬಂದಿಲ್ಲ ಎಂದು ಹೇಳಿದರು. ಸ್ವಾತಂತ್ರ್ಯಕ್ಕೆ ಮುಂಚಿನ ದಿನಗಳಲ್ಲಿ ಮಾತನಾಡುತ್ತಿದ್ದ ಅವರ ಧ್ವನಿಗೆ ಹೋಲಿಸಿದರೆ, ಬೇರೆಯಾದ ಧ್ವನಿಯಲ್ಲಿ ಮಾತನಾಡುತ್ತಾ, ತಮ್ಮ ಬಗ್ಗೆ ಮಾತ್ರ ಚಿಂತಿಸದೆ, ಸಮಗ್ರ ದೇಶದ ಬಗ್ಗೆಯೂ ಚಿಂತಿಸಬೇಕು ಎಂದು ಹೇಳಿದರು. ಮುಸ್ಲಿಮರು ಮತ್ತು ಬ್ರಿಟಿಷರು ಭಾರತವನ್ನು ಗುಲಾಮಗಿರಿಗೆ ತಳ್ಳಿದ್ದರು, ಆದರೆ, ಈ ದಿನ ನಾವು ಸ್ವತಂತ್ರವಾಗಿ ಇದ್ದೇವೆ; ನಾವು ಮತ್ತೆ ಅದೇ ಸ್ಥಿತಿ ಮರುಕಳಿಸದಂತೆ ಶ್ರಮ ವಹಿಸಬೇಕು ಎಂದರು.

.ನಾವು ಕಾಂಗ್ರೆಸ್‌ನವರೊಡನೆ ಬಹಳ ಕಾಲದ ವರೆಗೂ ಗುದ್ದಾಟ ಮಾಡುತ್ತಿದ್ದರೂ, ಈಗಿನ ಸರ್ಕಾರ ಪರಿಶಿಷ್ಟ ಜಾತಿಗಳವರಿಗೆ ಕಡೆಯ ಪಕ್ಷ ಸ್ವಲ್ಪವನ್ನಾದರೂ ಮಾಡಿದೆ ಎಂದರು. ಪ್ರಜಾ ಪ್ರಭುತ್ವದಲ್ಲಿ ಯಾವುದೇ ಅಲ್ಪ ಸಂಖ್ಯಾತರೂ ತಾವೇ ಏನನ್ನು ಹೆಚ್ಚಿಗೆ ಸಾಧಿಸುವುದಕ್ಕೆ ಆಗುವುದಿಲ್ಲ. ನಾವು ಅಲ್ಪ ಸಂಖ್ಯಾತರು. ನಾವು ಅಲ್ಪಸಂಕ್ಯಾತರಾಗಿಯೇ ಮುಂದುವರೆಯುತ್ತೇವೆ. ಆದುದರಿಂದ ಇತರ ಪಕ್ಷಗಳಿಂದ ಸಹಕಾರವನ್ನು ಬೇಡುವುದು?? ಅವಶ್ಯಕವಾಗುತ್ತದೆ ಎಂದರು.

ಡಾ: ಅಂಬೇಡ್ಕರ್ ಅವರು ನಂತರ ಚುನಾವಣೆಗಳ ವಿಷಯಕ್ಕೆ ಬಂದರು. ನಾವು ಒಂಡು ಬಡ

ಸಮುದಾಯ. ನಮ್ಮ ಹತ್ತಿರ ಚುನಾವಣೆಗಳ ಮೇಲೆ ಖರ್ಚು ಮಾಡುವುದಕ್ಕೆ ಬಹಳಷ್ಟು ಹಣ ಇಲ್ಲ. ಆದ್ದರಿಂದ ಪಕ್ಷದ ನಿಧಿಯನ್ನು ಬೆಳೆಸಬೇಕಾದರೆ, ಎಲ್ಲರೂ ತಿಂಗಳಿಗೆ ನಾಲ್ಕು ಆಣೆಗಳನ್ನು ಕೊಡಬೇಕೆಂದು ನನ್ನ ಸಲಹೆ. ಈ ತಕ್ಷಣದಿಂದಲೇ ಈ ಕೆಲಸವನ್ನು ನಾವು ಪ್ರಾರಂಭಿಸಬೇಕಾಗಿದೆ; ಆಗ, ಚುನಾವಣೆಗಳ ಸಮಯದ ಹೊತ್ತಿಗೆ ಸಾಕಷ್ಟು ಹಣವನ್ನು ಸೇರಿಸಿರಬಹುದಾಗಿದೆ??

ಸಭೆ ಮುಗಿದ ಗಂಟೆಗಳ ನಂತರವೂ ಕೇಂದ್ರ ಮತ್ತು ಉತ್ತರ ಬೊಂಬಾಯಿನ ಹರಿಜನರು ತಮ್ಮ ಮನೆಗಳಿಗೆ ಹಿಂದಿರುಗುತ್ತಾ, ಶಾಂತಿಯುತವಾದ ಆದರೆ ಗದ್ದಲದಿಂದ ಕೂಡಿದ ಅಂಬೇಡ್ಕರ್ ಪರ ಘೋಷಣೆಗಲ್ನ್ನು ಕೂಗುತ್ತಿದ್ದರು.

ಹೇಗಾದರೂ ಅಂಬೇಡ್ಕರ್ ಅವರ ಭಾಷಣಕ್ಕೆ ಇನ್ನೂ ಹೆಚ್ಚಿನ ಆಯಾಮಗಳಿದ್ದು ಅದನ್ನು ಬಾಂಬೆ ಕ್ರಾನಿಕಲ್ ವರದಿ ಮಾಡಿದೆ: ಆಯಾಮಗಳು ಹೀಗಿದ್ದವು:

ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷನನ್ನಾಗಿ ತಮ್ಮ ಚುನಾವಣೆ ಒಂದು ವಿಶಿಷ್ಟ ಗೌರವವಾಗಿದ್ದು, ತಮಗೆ ಮಾತ್ರವಲ್ಲದೆ ಫೆಡರೇಷನ್ ಅನ್ನೂ ಸಹ ಲೆಕ್ಕಕ್ಕೆ ತೆಗೆದುಕೊಳ್ಳಲೇಬೇಕಾದ ಒಂದು ರಾಜಕೀಯ ಶಕ್ತಿ ಎಂದು ಗುರುತಿಸಲಾಯಿತು ಎಂದರು.

ಗತಕಾಲದಲ್ಲಿ, ಅವರು ಗುರುತರವಾದ ಆಡಚಣೆಗಳು ವಿರುದ್ದ ಹೋರಾಡಬೇಕಾಗಿದ್ದು, ಅನೇಕರು ತಮ್ಮನ್ನು ಬಿಟಿಷರ ಮತ್ತು ಮುಸ್ಲಿಮ್ ಲೀಗಿನ ಬಾಲಬಡುಕರು ಆಪಾದಿಸಿದ್ದರು. ಕಳೆದ ಇಪ್ಪತ್ತು ವರ್ಷಗಳ ಉದ್ದಕೂ ಕಾಂಗ್ರೆಸ್‌ನಚರು ಫೆಡರೇಷನ್ ಒಂದಿಗೆ

ಗುದ್ದಾಟ ಮಾಡಿಕೊಡೇ ಇತ್ತು. ಅವರು (ಕಾಂಗ್ರೆಸ್‌ನವರು) ಫೆಡರೇಷನ್ನಿನ ಯಾವ ಪ್ರತಿನಿದಿಗೂ, ಸಂವಿಧಾನ ರಚನಾ ಸಭೆಯಲ್ಲಿ ಒಂದು ಸ್ಥಾನವೂ ಸಿಗಬಾರದೆಂದು ನಿರ್ಧರಿಸಿದ್ದರು.

ಸಂವಿಧಾನವನ್ನು ರೂಪಿಸುವ ಹೊಣೆಗಾರಿಕೆಯನ್ನು ತಮ್ಮ ಮೇಲೆ ಹೊರಿಸಲಾಗುತ್ತದೆಯೆಂದು ಅವರು ಕನಸು ಕಂಡಿರಲಿಲ್ಲ.ಈಗ ವಿರೋಧಿಗಳಿಗೆ ಫೆಡರೇಷನ್ ಒಂದು ರಾಜಕೀಯ ಶಕ್ತಿಯೆಂದು ಮತ್ತು ಅದನ್ನು ಅವಮಾನಿಸಲಾಗಲೀ ಅಥವಾ ಕಡೆಗಣಿಸುವುದಾಗಲೀ ಆಗುವುದಿಲ್ಲ ಎಂದು ಗೊತ್ತಾಗಿದೆ.

ಡಾ:: ಅಂಬೇಡ್ಕರ್ ಅವರು ಇಲ್ಲಿಯವರೆಗೆ ಫೆಡರೇಷನ್ ಒಂದು ಇಕ್ಕಟ್ಟಾದ ದಾರಿಯಲ್ಲಿ ಸಾಗುತ್ತಿದ್ದು, ಅಂದರೆ ದೇಶದ ಹಿತಾಸಕ್ತಿಗಿಂತ ತಮ್ಮ ಹಿತಾಸಕ್ತಿಯೇ ಹೆಚ್ಚು ಎಂದು ತಿಳಿದಿದ್ದರು.ಮತ್ತು ಅದಕ್ಕೆ ತಾವೂ ಸಹ ಸ್ವಲ್ಪ ಮಟ್ಟಿಗೆ ಜವಾಬ್ದಾರರೆಂಡು ಒಪ್ಪಿಕೊಂಡರು. ಈಗ ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದು, ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳುವಂ ಸಮಯ ಬಂದಿದ್ದು, ರಾಷ್ಟ್ರದ ಒಳಿತಿಗಾಗಿ, ಮತ್ತು ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ದುಡಿಯಬೇಕೆಂದು ಹೇಳಿದರು.

ಬ್ರಿಟ್ರಿಷರ ಆಳ್ವಿಕೆಯ ಅವಧಿಯಲ್ಲಿ ಫೆಡರೇಷನ್ ತನ್ನದೇ ಆದ ನೀತಿಯನ್ನು ಅನುಸರಿಸುತ್ತಿತ್ತು. ಅದು ಇತರ ರಾಜಕೀಯ ಪಕ್ಷಗಳಿಂಡ ಹೊರಚ್ಚಾಗಿ ಇತ್ತು. ಅಷ್ಟಕ್ಕೂ ನಾವು ಅಲ್ಪಸಂಖ್ಯಾತರು ಇನ್ನೂ ಹೆಚ್ಚಿನ ಶಕ್ತಿ ಇರುವ ರಾಜಕೀಯ ಪಕ್ಷದ ಬೆಂಬಲವಿಲ್ಲದೆ ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಾಗುವುದಿಲ್ಲ ಎಂದರು. ಆದುದರಿಂದ ಅವರ ಸಂಸ್ಥೆ ಯಾವುದೇ ಇತರ ಪಕ್ಷದ ಬೆಂಬಲವನ್ನು ಮುಂದೆ ಬರುವ ಚುನಾವಣೆಗಳಿಗೆ ಕೇಳಲೇ ಬೇಕಾಗುತ್ತದೆ ಎಂದು ಹೇಳಿದರು. ಚುನಾವಣೆ ನಿಧಿಗಾಗಿ ಧಾರಾಳವಾಗಿ ಕೊಡುಗೆಯನ್ನು ನೀಡಬೇಕೆಂದು ಸಭಿಕರಿಗೆ ಕಳಕಳಿಯ ಮನವಿಯನ್ನು ಮಾಡಿದರು.

# ೧೧೭

# ಮಹಾರಾಷ್ಟ್ರ ಜನರು ದೇಶಕ್ಕೆ ಹೆಚ್ಚು ಪ್ರಾಮಾಣಿಕರೂ ಮತ್ತು ಹೆಚ್ಚುಕರ್ತವ್ಯನಿಷ್ಠರೂ ಆಗಿದ್ದಾರೆ

ಹೊಸ ಮಹಾರಾಷ್ಟ್ರ ಭವನದಲ್ಲಿ ನವ ದೆಹಲಿಯ ಮಹಾರಾಷ್ಟ್ರ ಸಂಸ್ಥೆಗಳು ಗಣ ರಾಜ್ಯೋತ್ಸವವನ್ನು ೨೭ನೇ ಜನವರಿ ೧೯೫೦ರಂದು ಬಹಳ ವಿಜೃಂಭಣೆಯಿಂದ ಆಚರಿಸಿದರು. ಈ ಸಂದರ್ಭದಲ್ಲಿ ವಿವಿದ ಕಾರ್ಯ ಕ್ರಮಗಳನ್ನು ಆಯೋಜಿಸಲಾಗಿತ್ತು. ಈ ಸಮಾರಂಭಕ್ಕೆ ಡಾ: ಅಂಬೇಢ್ಕರ್ ಅವರನ್ನು ವಿಶೇಷವಾಗಿ ಆಮಂತ್ರಿಸಿ ಗೌರವಿಸಲಾಯಿತು. ಮಿ: ಕಾಕಾ ಸಾಹೆಬ್ ಗಾಡಗೀಳರು ಡಾ: ಬಾಬಾಸಾಹೇಬ್ ಮತ್ತು ಶ್ರೀವತಿ ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು. ಬಿನ್ನವತ್ತಳೆಗೆ ಉತ್ತರಿಸುತ್ತಾ,

ಅವರು?? ಹೇಳಿದ್ದು:

ಮಹಾರಾಷ್ಟ್ರದ ಜನರು ದೇಶಕ್ಕೆ ಹೆಚ್ಚು ಪ್ರಾಮಾಣಿಕರು, ಹೆಚ್ಚು ಕರ್ತವ್ಯನಿಷ್ಠರೂ ಆಗಿದ್ದಾರೆ, ದೇಶದ ಹಿತಕ್ಕಾಗಿ ತ್ಯಾಗವನ್ನು ಮಾಡಲು ಯಾವಾಗಲೂ ಸಿದ್ದರಾಗಿದ್ದಾರೆ. ಇಬ್ಬರು ಮಹಾರಾಷ್ಟ್ರದವರು ಕೆಂದ್ರ ಮಂತ್ರಿಮಂಡಲದಲ್ಲಿಇರುವುದು, ಮತ್ತು ರಿಸರ್ವ್ ಬ್ಯಾಂಕಿನ ಗವರ್ನರ್ ಕೂಢ ಮಹಾರಾಷ್ಟ್ರದವರಾಗಿರುವುದು ಅವರಿಗೆ ಹೆಮ್ಮೆಯ ವಿಷಯವಾಗಿದೆ. ರಾಜಕೀಯದಲ್ಲಿ, ಕಲಿಯುವುದರಲ್ಲಿ ಮತ್ತು ತ್ಯಾಗ ಮಾಡುವುದರಲ್ಲಿ ಮಹಾರಾಷ್ಟ್ರದವರು ಬಹಳ ಮುಂದೆ ಇದ್ದಾರೆ ಎಂದು ಮುಕ್ತಾಯ ಮಾಡಿದರು.

## ೧೧೮

# ಧರ್ಮವನ್ನು ವಾರಸುದಾರಿಕೆಯ ಮೂಲಕ ಅನುಸರಿಸುವುದನ್ನು ಬಿಟ್ಟು ಪ್ರತಿಯೊಬ್ಬರೂ ವೈಚಾರಿಕವಾಗಿ ಪರೀಕ್ಷಿಸಿ ಅನುಸರಿಸಬೇಕು

ಒಂದು ಮಹತ್ವದ ರಾಷ್ಟ್ರೀಯ ಬೆಳವಣಿಗೆಯಲ್ಲಿ ಹಾಗೂ ಅಗ್ನೇಯ ಏಷ್ಯಾದ ಎಲ್ಲೆಡೆಯಲ್ಲಿ ಆಸಕ್ತಿಯನ್ನು ಕೆರಳಿಸಿದ ಒಂದು ನಾಟಕೀಯ ಬೆಳವಣಿಗೆ ದೇಶದ ರಾಜಧಾನಿಯಾದ ನವ ದೆಹಲಿಯಲ್ಲಿ ಈ ರಾತ್ರಿ ಅಂದರೆ ೨ನೇ ಮೇ, ೧೯೫೦ ಜರುಗಿತು. ಆ ದಿನ ಭಾರತದ ಕಾನೂನು ಮಂತ್ರಿ ಡಾ: ಬಿ.ಆರ್. ಅಂಬೇಡ್ಕರ್ ಅವರು ೭೦ ದಶಲಕ್ಷ ಹರಿಜನರನ್ನು ಬೌದ್ಧ ಧರ್ಮವನ್ನು ಸೇರುವಂತೆ ಕರೆಕೊಟ್ಟರು. ಅವರು ಬುದ್ಧನ ತ್ರಿಗುಣ ವಾರ್ಷಿಕ ಸಮಾರಂಭದಲ್ಲಿ ಒಂದು ಜನ ಭರಿತ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಆ ನಂತರ ಡಾ: ಅಂಬೇಡ್ಕರ್ ಅವರು 'ಭಾರತ್' ಪತ್ರಿಕೆಯ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ ತಾವು ಬೌದ್ಧ ಧರ್ಮವನ್ನು ಸ್ವೀಕರಿಸುವ ದಾರಿಯಲ್ಲಿ ಇದ್ದೇನೆಂದು ಹೇಳಿದರು. ಆ ಸಭೆಯಲ್ಲಿ ಶ್ರೀಮತಿ ಅಂಬೇಡ್ಕರ್ ಅವರು ಉಪಸ್ಥಿತರಿದ್ದರು.

ಸುಮಾರು ೧೫ ಮಂದಿ ಹರಿಜನರು ಸಹ ಮಾರನೆಯ ದಿನ ದೆಹಲಿಯಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸುವವರಿದ್ದಾರೆಂದು ಗೊತ್ತಾಗಿದೆ. ಇದೇ ರೀತಿಯ ನಿರ್ದೇಶನಗಳನ್ನು ಭಾರತದಲ್ಲಿ ಎಲ್ಲೆಡೆ ಡಾ: ಅಂಬೇಡ್ಕರ್ ಅವರ ಅನುಯಾಯಿಗಳಿಗೆ ಕೊಡಲಾಗಿದೆಯೆಂದು ತಿಳಿದು ಬಂದಿದೆ.

ನಿನ್ನೆಯ ದಿವಸ, ಅಂದರೆ ತ್ರಿಗುಣ–ಜನ್ಮದಿನದಂದು, 'ಪರಿನಿರ್ವಾಣದ' ದಿನ ಭಗವಾನ್ ಬುದ್ಧನು ಮರಣ ಹೊಂದಿದ ದಿನ, ಡಾ: ಅಂಬೇಡ್ಕರ್ ಅವರು ಸ್ಥಳಿಯ 'ವಿಹಾರ'ಕ್ಕೆ ತಮ್ಮ ಗೌರವವನ್ನು ಮತ್ತು ಶ್ರದ್ಧಾಂಜಲಿಯನ್ನು ಸಲ್ಲಿಸಲು ಹೋಗಿದ್ದರು.

ಒಬ್ಬ ಉನ್ನತ ಬೌದ್ಧ ಭಿಕ್ಕುವಿನ ಪ್ರಕಾರ ಡಾ: ಅಂಬೇಡ್ಕರ್ ಅವರು ಪ್ರಾರ್ಥನೆ ಮಾಡಿದರು:

ಬುದ್ಧಮ್ ಶರಣಮ್ ಗಚ್ಚಾಮಿ
ಧರ್ಮಮ್ ಶರಣಮ್ ಗಚ್ಚಾಮಿ
ಸಂಘಮ್ ಶರಣಮ್ ಗಚ್ಚಾಮಿ

ಅವರು ಬೌದ್ಧ ಧರ್ಮದ ಐದು ಸೂತ್ರಗಳನ್ನು ಒಪ್ಪಿಕೊಂಡರು ; ಈ ಸೂತ್ರಗಳೆಲ್ಲವನ್ನು ಅನುಷ್ಠಾನದ ಹಾಗೆಯೇ ಎಂದು ವ್ಯಾಖ್ಯಾನಿಸಲಾಗಿದೆ.

### ಬೌದ್ಧ ಧರ್ಮದ ಪುನರುಥ್ಥಾನ

ತಮ್ಮ ಭಾಷಣವನ್ನು ಡಾ: ಅಂಬೇಡ್ಕರ್ ಅವರು ಮಾಡುತ್ತಿದ್ದಾಗ ಅಲ್ಲಿ ಹಾಜರಿದ್ದ ಉನ್ನತ ಬೌದ್ಧ ಭಿಕ್ಕುವೊಬ್ಬರು ಭಾರತಕ್ಕೆ ಈಗ ಸ್ವಾತಂತ್ರ್ಯ ಬಂದಿದೆ ಎಂದು ಹೇಳಿದರು. ಬೌದ್ಧ ಧರ್ಮ ಮೊದಲು ಇದ್ದ ಹಾಗೆ ಆಗಬೇಕು. ಭಾರತದಲ್ಲಿ ಬೌದ್ಧ ಧರ್ಮದ ಪುನರುಥ್ಥಾನದ ರಾಜಕೀಯ ಮಹತ್ವವನ್ನು ಒತ್ತಿ

ಹೇಳುತ್ತಾ, ಭಾರತಕ್ಕೆ ತನ್ನ ಸ್ವಾತಂತ್ರ್ಯವನ್ನು ಮತ್ತು ಅಧ್ಯಾತ್ಮಿಕ ಬಲವನ್ನು ರಕ್ಷಿಸಿಕೊಳ್ಳಲು ಬೌದ್ಧ ಧರ್ಮದ ಅವಶ್ಯಕತೆ ಇದೆ ಎಂದು ಹೇಳಿದರು.

ಸ್ವಚ್ಛ ಹಿಂದಿಯಲ್ಲಿ ಮಾತನಾಡಿದ ತಮ್ಮ ೩೦ ನಿಮಿಷದ ಭಾಷಣದಲ್ಲಿ ಬೌದ್ಧ ಧರ್ಮದ ಪುನರುತ್ಥಾನ ಭಾರತದಲ್ಲಿ ಪುನಃ ಪ್ರಾರಂಭವಾಗಿದೆ ಎಂದು ಒತ್ತಿ ಹೇಳಿದರು. ತಮ್ಮ ಹೇಳಿಕೆಗೆ ಬೆಂಬಲವಾಗಿ ಅವರು ಉದಹರಿಸಿದ್ದು, ಗಣರಾಜ್ಯದ ಅಧ್ಯಕ್ಷರು ಸ್ವತಂತ್ರ ಭಾರತದ ರಾಷ್ಟ್ರೀಯ ಧ್ವಜದ ಕುರುಹಿಗಾಗಿ ಬ್ರಾಹ್ಮಣ ಧರ್ಮದಲ್ಲಿ ಮಾಡಿದ ಹುಡುಕಾಟದಲ್ಲಿ ಏನೂ ಸಿಗದೆ ಇದ್ದುದರಿಂದ ಬೌದ್ಧ ಧರ್ಮವನ್ನೇ ಅವಲಂಬಿಸಬೇಕಾಯಿತು ಎಂದು ಹೇಳಿದರು. ಬೌದ್ಧ ಮತ ತನ್ನ ಕುರುಹಾದ ಮೂರು ಸಿಂಹಗಳನ್ನು ಗಣರಾಜ್ಯಕ್ಕೆ ಕೊಡಲು ಮುಂದೆ ಬಂದಿತು. ಮೊದಲನೆ ರಾಷ್ಟ್ರಪತಿಯವರು ಪ್ರಮಾಣವಚನ ಸ್ವೀಕರಿಸುತಿದ್ದಾಗ, ಆ ಚಾರಿತ್ರಿಕ ಸಮಾರಂಭದಲ್ಲಿ, ಹಿಂದು ದೇವರುಗಳ ಅಥವಾ ದೇವಿಯರ ಲೆಕ್ಕವಿಲ್ಲದಷ್ಟು ವಿಗ್ರಹಗಳ ಬದಲಾಗಿ ಭಗವಾನ್ ಬುದ್ಧನ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು ಆ ಸಮಾರಂಭವನ್ನು ದಾಖಲಿಸುವುದಕ್ಕಾಗಿ ಎಂದು ಹೇಳಿದರು.

ರಾಮನಾಗಲೀ, ಕೃಷ್ಣನಾಗಲೀ ಭಗವಾನ್ ಬುದ್ಧನಿಗೆ ಸರಿಸಾಟಿಯಲ್ಲ ಎಂದು ಅವರು ಹೇಳಿದರು. ಬುದ್ಧನಿಗಿಂತ ಹೆಚ್ಚಿನ ಧರ್ಮ ಗುರುವಾಗಲೀ ಅಥವಾ ನಾಯಕನಾಗಲೀ ಹುಟ್ಟುವುದಿಲ್ಲ ಎಂದು ಡಾ: ಅಂಬೇಡ್ಕರ್ ಅವರು ಘೋಷಿಸಿದರು.

ರಾಮಾಯಣ ಮತ್ತು ಮಹಾಭಾರತದಿಂದ ಅನೇಕ ಸಂಗತಿಗಳನ್ನು ಉದಹರಿಸುತ್ತಾ, ರಾಮಚಂದ್ರನ ಮತ್ತು ಭಗವಾನ್ ಕೃಷ್ಣನ ಹಿರಿಮೆಯನ್ನು, ಅವರು ಆ ರೀತಿ ನಡೆದುಕೊಂಡರು ಅನ್ನುವುದನ್ನು ಪ್ರಶ್ನೆ ಮಾಡಿದರು. ಹಿಂದುತ್ವದ ಜೋಡಿ ಪ್ರಮೇಯವಾದ, ಒಂದು ಸತ್ಯ, ಇನ್ನೊಂದು ತನ್ನದೇ ಆದದ್ದಕ್ಕೆ ಪ್ರೀತಿ ಎಂದು ಪ್ರತಿಪಾದಿಸಿರುವುದನ್ನು ಧರ್ಮಾಂಧತೆ ಎಂದು ಹೇಳಿದರು. ಅದು ವ್ಯಾಜ್ಯಗಳನ್ನು ಪರಿಹರಿಸದೆ ತಪ್ಪಿಸಿಕೊಳ್ಳುವುದಕ್ಕಾಗಿ ತನ್ನ ಅನುಯಾಯಿಗಳನ್ನು ಅಖಂಡವಾಗಿ ಇಟ್ಟುಕೊಳ್ಳುವುದಕ್ಕಾಗಿ ಹಾಗೆ ಮಾಡಿದರು.

ಕಿರೀಟವೊಂದನ್ನು ಬಿಟ್ಟು ಮತ್ತಿತರ ಎಲ್ಲಾ ಹಕ್ಕುಗಳನ್ನು ಭದ್ರವಾಗಿ ಹಿಡಿದಿಟ್ಟುಕೊಂಡರೆಂದು ಬ್ರಾಹ್ಮಣರನ್ನು ಆಪಾದಿಸಿದರು. ಪ್ರಾಸಂಗಿಕವಾಗಿ ಹಿಂದು ಶಾಸ್ತ್ರದ ಪ್ರಕಾರ ಕಿರೀಟವನ್ನು ಧರಿಸಿದವನನ್ನು ಅದು ನರಕಕ್ಕೆ ಕರೆದುಕೊಂಡು ಹೋಗುತ್ತದೆ ಎಂದು ಹೇಳಿದರು. ನಿರಂತರವಾಗಿ ಹೀಯಾಳಿಸಲ್ಪಟ್ಟ, ದಂಡನೆಗೆ ಗುರಿ ಮಾಡಲ್ಪಟ್ಟ ಲಕ್ಷಾಂತರ ಜನರು ಇಂಥ ಒಂದು ಧರ್ಮವನ್ನು ಪ್ರೀತಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದರು. ತಂದೆಯಿದ ಮಗನಿಗೆ ಸರಕುಗಳಂತೆ, ಜಾನುವಾರುಗಳಂತೆ, ವಾರಸಾ ಮೂಲಕ ಪಡೆದುಕೊಳ್ಳುವುದನ್ನು ನಿಲ್ಲಿಸುವ ಮತ್ತು ಅದನ್ನು ವೈಚಾರಿಕವಾಗಿ ಪರೀಕ್ಷಿಸಿ ಪ್ರತಿಯೊಬ್ಬರೂ ನಂತರ ಒಪ್ಪಿಕೊಳ್ಳಬೇಕೆನ್ನುವ ಕಾಲ ಬಂದಿದೆ ಎಂದು ಹೇಳಿದರು.

ಸೋಷಿಯಲಿಸ್ಟರು, ಕಮ್ಯೂನಿಸ್ಟರು ಧರ್ಮದ ಅವಶ್ಯಕತೆ ಇಲ್ಲ ಎಂದು ಹೇಳುವುದನ್ನು ನಾನು ನಂಬುವುದಿಲ್ಲ ಎಂದು ಸ್ಪಷ್ಟ ಪಡಿಸಿದರು. ಮಾನವಕುಲಕ್ಕೆ ಧರ್ಮದ ಅವಶ್ಯಕತೆ ಇದೆ ಎನ್ನುವುದನ್ನು ನಾನು ನಂಬುತ್ತೇನೆ ಎಂದು ಖಡಾ ಖಂಡಿತವಾಗಿ ಹೇಳಿದರು. ಧರ್ಮಧ ಅವಸಾನವೇ ಸಮಾಜದ ಅವಸಾನವಾಗುತ್ತದೆ ಎಂದು ಹೇಳಿದರು. ಆಷ್ಟಕ್ಕೂ ನೀತಿ ಮತ್ತು ಧರ್ಮ ಕಾಪಾಡುವ ಹಾಗೆ ಯಾವ ಸರ್ಕಾರವೂ ಮಾನವ ಕುಲವನ್ನು ರಕ್ಷಣೆ ಮಾಡುವುದಾಗಲೀ ಅಥವಾ ಶಿಸ್ತಿಗೆ ಒಳಪಡಿಸುವುದಾಗಲೀ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು.

ಬರ್ಮಾದ ರಾಯಭಾರಿಯವರಾದ ಸರ್ ಮಾಂಗ್ ಗ್ಯೀ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ನೋವು ಮತ್ತು ಕಷ್ಟಗಳಲ್ಲಿ ಸಿಲುಲಿಕಿಕೊಂಡಿರುವ ಪ್ರಪಂಚಕ್ಕೆ ಬೌದ್ಧ ಧರ್ಮದಲ್ಲಿ ಶಾಂತಿ ಮತ್ತು ಸಾಂತ್ವನ ಸಿಗುತ್ತದೆ ಎಂದು ಹೇಳಿದರು. ಮಹಾ ಭೋಧಿಸಂಘದ ಅಧಿಕಾರಿಯೊಬ್ಬರು ಡಾ: ಅಂಬೇಡ್ಕರ್ ಅವರು ನಮ್ಮ ಜೊತೆಗೆ ಸೇರಿರುವದಕ್ಕೆ ಸಂಘದ ಸಂತೋಷವನ್ನು ವ್ಯಕ್ತಪಡಿಸಿದರು.

ಡಾ: ಅಂಬೇಡ್ಕರ್ ಅವರು ನಾಳೆ ಬೊಂಬಾಯಿಗೆ ಬರಲಿದ್ದಾರೆ.

## ೧೧೯
## ನಾಸ್ತಿಕರನ್ನು ಅಷ್ಟ ಪಥಕ್ಕೆ ಪರಿವರ್ತಿಸಬೇಕು

ಬೌದ್ಧರ ವಿಶ್ವ ಫೆಲೋಶಿಪ್ ಸಮ್ಮೇಳನವನ್ನು ಸಿಲೋನಿನ ಕ್ಯಾಂಡಿಯಲ್ಲಿ ೨೫ನೇ ಮೇ ಯಿಂದ ೬ನೇ ಜನವರಿ ವರೆಗೆ ನಡೆಸಲಾಯಿತು ಡಾ: ಬಿ.ಆರ್.ಅಂಬೇಡ್ಕರ್ ಅವರು ಸಮ್ಮೇಳನದಲ್ಲಿ ಹಾಜರಿದ್ದರು. ೨೬ನೇ ಮೇ ೧೯೫೦ರಂದು ೨೭ ದೇಶಗಳ ಪ್ರತಿನಿಧಿಗಳು ಸತ್ಯ ದೇವಾಲಯದಲ್ಲಿ (ಟೆಂಪಲ್ ಆಫ್ ಟ್ರೂತ್) ಸಭೆ ಸೇರಿ ಬೌದ್ಧ ಧರ್ಮದ ಪುನರುಜ್ಜೀವನವನ್ನು ಕುರಿತು ಚರ್ಚೆ ಮಾಡಿದರು. ಆ ಸಮ್ಮೇಳನದಲ್ಲಿ ವಿಶ್ವ ಭ್ರಾತೃತ್ವದ ಬಗ್ಗೆ ನಿರ್ಣಯವೊಂದನ್ನು ಅನುಮೋದಿಸಲಾಯಿತು.

ಆ ನಂತರ ಸಮ್ಮೇಳನವನ್ನು ಉದ್ದೇಶಿಸಿ ಡಾ: ಅಂಬೇಡ್ಕರ್ ಅವರು ಮಾತನಾಡಿದರು.

ತಮ್ಮ ಭಾಷಣದಲ್ಲಿ ಡಾ: ಅಂಬೇಡ್ಕರ್ ಹೀಗೆ ಹೇಳಿದರು:

ನಾನು ಒಂದು ನಿಯೋಗದ ಸದಸ್ಯನಲ್ಲ, ನಾನು ಒಬ್ಬ ಆಸಕ್ತಿ ಇರುವ ವೀಕ್ಷಕ. ನಾನು ಕೆಲವು ಬಹಳ ಗಂಭೀರವಾದ ಉದ್ದೇಶಗಳಿಂದ ಬಂದೆ. ನಿಮಗೆ ಬಹುಶಃ ಗೊತ್ತಿರುವ ಹಾಗೆ ಭಾರತದಲ್ಲಿನ ಕೆಲವು ಜನಗಳು, ಅಲ್ಲಿ ಬೌದ್ಧ ಧರ್ಮವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನ ಮಾಡುವ ಸಮಯ ಬಂದಿದೆ ಎಂದು ಆಲೋಚಿಸುತ್ತಿದ್ದಾರೆ; ಅವರುಗಳಲ್ಲಿ ನಾನೂ ಒಬ್ಬ. ನನ್ನ ಭೇಟಿಯ ನಿರ್ದಿಷ್ಟ ಉದ್ದೇಶಗಳು ಎಂದರೆ, ಮೊದಲಿಗೆ ಬೌದ್ಧರ ಧಾರ್ಮಿಕ ಆಚರಣೆಗಳು. ಧರ್ಮವೊಂದರ ಮುಖ್ಯವಾದ ಭಾಗವೆಂದರೆ ಅಚರಣೆ. ವಿಚಾರವಾದಿಗಳು ಏನೇ ಹೇಳಲಿ, ಧರ್ಮದಲ್ಲಿ ಆಚರಣೆ ಎನ್ನುವುದು ಅತ್ಯವಶ್ಯಕವಾದದ್ದು. ಇಲ್ಲಿಗೆ ಬಂದು, ನಾನು ಬುದ್ಧ ಧರ್ಮದ ಅವಿಭಾಜ್ಯ ಅಂಗವಾದ ಮತಾಚರಣೆ (ಮತ ಸಂಸ್ಕಾರ) ಯನ್ನು ನೋಡಬಹುದು ಎಂದುಕೊಂಡಿದ್ದೆ.

ಎರಡನೆಯದಾಗಿ, ಇಲ್ಲಿ ಎಷ್ಟರಮಟ್ಟಿಗೆ ಬುದ್ಧ ಧರ್ಮವನ್ನು ತನ್ನ ಮೂಲ ಸ್ವರೂಪದಲ್ಲಿ ಆಚರಿಸಲಾಗುತ್ತಿದೆ ಯೆಂದೂ, ಎಷ್ಟರಮಟ್ಟಿಗೆ ಅವನ ದೈವ ವಾಣಿಗೆ ಮೂಢ ನಂಬಿಕೆಯ ಪದರಗಳು, ಅವನ ಬೌದ್ಧ ಧರ್ಮಕ್ಕೆ, ಸಿದ್ಧಾಂತಕ್ಕೆ ಹೊಂದಿಕೊಳ್ಳದ ನಂಬಿಕೆಗಳು ಅಂಟಿಕೊಂಡಿವೆಯೆಂದೂ, ಮೂರನೆಯ ಉದ್ದೇಶ ಬುದ್ಧ ಸ್ಥಾಪಿಸಿದ ಭಿಕ್ಕುಗಳ ಭ್ರಾತೃತ್ವ ಎಷ್ಟರಮಟ್ಟಿಗೆ ಸಮುದಾಯಕ್ಕೆ ಉಪಕಾರಿಯಾಗಿದೆ ಮತ್ತು ಆ ಭ್ರಾತೃತ್ವ, ಜೀವನದ ಪರಿಶುದ್ಧತೆಯನ್ನು ಕೇವಲ ತನಗೋಸ್ಕರ ಕಾಪಾಡಿಕೊಂಡು ಬರುವುದರಲ್ಲೇ ಮಗ್ನವಾಗಿದೆಯೇ ಅಥವಾ ಅದು ಭಕ್ತಜನಗಳಿಗೆ ಸೇವೆ ಮಾಡುವುದರಲ್ಲಿ, ಸಲಹೆ ಕೊಡುವುದರಲ್ಲಿ ಮತ್ತು ಬುದ್ಧ ಇಚ್ಛಿಸಿದ ಹಾಗೆ ಅದನ್ನು ಪರಿಪೂರ್ಣ ಗೊಳಿಸುವುದರಲ್ಲಿ ತೊಡಗಿಕೊಂಡಿದ್ದಾರೆಯೇ ಎಂದು. ಬುದ್ಧನ ಧರ್ಮ ಎಷ್ಟರ ಮಟ್ಟಿಗೆ ಒಂದು ಜೀವಂತ ಶಕ್ತಿಯಾಗಿದೆ ಅಥವಾ ಅದು ಅಸ್ತಿತ್ವದಲ್ಲಿ ಇರುವುದಕ್ಕೆ ಕಾರಣ ಈ ದೇಶದ ಜನಗಳು ಬುದ್ಧ ಎಂಬ ಪದದ ಪರಂಪರಾಗತ ಅರ್ಥದಲ್ಲಿ ಬೌದ್ಧರಾಗಿದ್ದಾರೆಯೇ. ಮತ್ತು ಅದನ್ನು ವಾರಸದಿಂದ ಪಡೆದುಕೊಂದು, ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಕೇವಲ ವರ್ಗಾಯಿಸಿದ್ದಾರೆಯೇ, ಅಥವಾ ಈ ದೇಶದ ಮಟ್ಟಿಗೆ ಧರ್ಮದ ಕ್ರಿಯಾಶೀಲತೆ ಇತ್ತೇ ಎಂಬುದನ್ನು ತಿಳಿಯಲು ನಾನು ಆಸಕ್ತನಾಗಿದ್ದೇನೆ. ಧರ್ಮ ನಿಂತಲ್ಲೇ ನಿಂತಿದೆಯೇ ಅಥವಾ ಅದಕ್ಕೆ ವೇಗೋತ್ಕರ್ಷವಿದೆಯೇ ಮತ್ತು ಕ್ರಿಯಾಶೀಲವಾಗಿದೆಯೆ ಎಂದು ತಿಳಿದುಕೊಳ್ಳುವುದಕ್ಕೆ ಉತ್ತಮವಾದ ಮಾರ್ಗವೆಂದರೆ ಈ ದೇಶದ

ಯುವ ಪೀಳಿಗೆ ಪ್ರದರ್ಶಿಸುತ್ತಿರುವ ಆಸಕ್ತಿಯನ್ನು ಅಧ್ಯಯನ ಮಾಡಿ ಅವಲೋಕಿಸುವುದೇ ಆಗಿದೆ; ಅಲ್ಲದೆ ಎಷ್ಟರ ಮಟ್ಟಿಗೆ ಅವರು ತಮ್ಮ ಸಮಯವನ್ನು ಧರ್ಮಕ್ಕೆ ಮುಡುಪಿಟ್ಟಿದ್ದಾರೆ, ಎಷ್ಟರ ಮಟ್ಟಿಗೆ ಧರ್ಮದ ಮೇಲಿನ ಈ ನಂಬಿಕೆ ಅವರಿಗೆ ಮುಕ್ತಿಯನ್ನು ತಂದುಕೊಟ್ಟಿದೆ (ಮುಕ್ತಿಯೆಂದರೆ ಮರಣಾನಂತರ ಮತಧರ್ಮಶಾಸ್ತ್ರದ ಅರ್ಥದಲ್ಲಿ ಅಲ್ಲ, ಆದರೆ ಪ್ರಾಪಂಚಿಕ ಜೀವನದ ಅರ್ಥದಲ್ಲಿ). ಬುದ್ಧ ಧರ್ಮದ ದೇಶಗಳು ಸಾಹಚರ್ಯ ಮಾತ್ರವಲ್ಲ (ಫೆಲೋಶಿಪ್) ಧರ್ಮವನ್ನು ಬೆಳಸಬೇಕು ಮತ್ತು ತ್ಯಾಗವನ್ನು ಮಾಡಬೇಕು. ಭಿಕ್ಕುಗಳನ್ನು ಬುದ್ಧನ ಸಂದೇಶವನ್ನು ಸಾರುವುದಕ್ಕಾಗಿ ಕೇವಲ ಭಾಷಣಗಳನ್ನು ಮಾಡುವುದಕ್ಕೆ ಕಳುಹಿಸಿದರೆ ಜನಗಳು ಬುದ್ಧನ ಜೀವನ ಮಾರ್ಗವನ್ನು ಒಪ್ಪಿಕೊಳ್ಳುವಂತೆ ಮಾಡುವುದಕ್ಕೆ ಆಗುವುದಿಲ್ಲ.

ಪ್ರಪಂಚದ ಶಾಂತಿಯನ್ನು ಗಟ್ಟಿ ಮಾಡಿಕೊಳ್ಳಬೇಕಾಗಿದ್ದರೆ ಬರೀ ಭಾಷಣ ಮಾಡುವುದರಿಂದ ಆಗುವುದಿಲ್ಲ. ಬುದ್ಧನ ಪಥದಲ್ಲಿ ನಂಬಿಕೆಯಿಲ್ಲದಿದ್ದವರಿಗೆ ಅದನ್ನು ಒಪ್ಪಿಕೊಳ್ಳುವಂತೆ ಮನವೊಲಿಸಬೇಕು, ಬೌದ್ಧ ಧರ್ಮ ಇರುವ ದೇಶಗಳಲ್ಲಿ ತ್ಯಾಗಗಳನ್ನು ಮಾಡಬೇಕಾಗಿರುವುದು ಸ್ವಯಂ ವೇದ್ಯವಾಗಿದ್ದು, ಧರ್ಮ ಪ್ರಚಾರಕ್ಕೆ ಮಿಷನರಿಗಳನ್ನು ಕಳುಹಿಸಬೇಕು, ನಿಧಿ ಸಂಗ್ರಹ ಮಾಡಬೇಕು ಆಗ ಅವರಿಗೆ ದೈವ ವಾಣಿಯನ್ನು ಹರಡುವ ಕೆಲಸ ಮಾತ್ರವಲ್ಲದೆ, ಪುರುಶರು ಮತ್ತು ಸ್ತ್ರೀಯರನ್ನು ಅಷ್ಟ ಪಥಕ್ಕೆ ಪರಿವರ್ತಿಸಬಹುದು.

# ೧೨೦
# ಬೌದ್ಧ ಮತ ಪ್ರಜಾಸತ್ತೆಗೆ ಮತ್ತು ಸಮಾಜವಾದಕ್ಕೆ ದಾರಿ ಮಾಡಿಕೊಟ್ಟಿತು

ಬೌದ್ಧರ ವಿಶ್ವ  ಫೆಲೋಶಿಪ್ ಸಮ್ಮೇಳನವನ್ನು ಸಿಲೋನಿನ ಕ್ಯಾಂಡಿಯಲ್ಲಿ ೨೫ನೇ ಮೇ ಯಿಂದ ೬ನೇ  ಜನವರಿ ವರೆಗೆ ನಡೆಸಲಾಯಿತು. ಡಾ: ಬಿ.ಆರ್.ಅಂಬೇಡ್ಕರ್ ಅವರು ಸಮ್ಮೇಳನದಲ್ಲಿ ಹಾಜರಿದ್ದರು.

ಕೊಲೊಂಬೋದಲ್ಲಿ ಒಂದು ಅಂತಾರಾಷ್ಟ್ರೀಯ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಡಾ: ಅಂಬೇಡ್ಕರ್ ಹೇಳಿದ್ದು:

ಬೌದ್ಧ ಧರ್ಮದ ಉದಯ ಮತ್ತು ಪತನವನ್ನು ಭಾರತದಲ್ಲಿ ಅಧ್ಯಯನ ಮಾಡಿದ ಅನೇಕ ಮಂದಿ, ತಾವು ಈ ವಿಷಯಕ್ಕೆ ಕೊಡಬೇಕಾದಷ್ಟು ವಿವರವಾಗಿ ಗಮನವನ್ನು ಹರಿಸಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಬೌದ್ಧ ಧರ್ಮ ತನ್ನ ಉತ್ತುಂಗವನ್ನು ಹೇಗೆ ಮುಟ್ಟಿತು ಮತ್ತು ಏತಕ್ಕೆ ಮಾಯವಾಗಿ ಬಿಟ್ಟಿತು ಎಂಬ ಕಾರಣವನ್ನು ಹುಡುಕುವುದಕ್ಕೆ ನಂಬಬಹುದಾದ ಸಾಕಷ್ಟು  ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ ನನಗೆ ಸಾಧ್ಯವಾಗಿಲ್ಲ.

ಸವಿಸ್ತಾರವಾಗಿ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳುವುದಕ್ಕೆ, ಅದರ ಪ್ರಸ್ತುತವಾದ ಪರಂಪರೆಗಳನ್ನು ಕರಾರುವಾಕ್ಕಾಗಿ  ತಿಳಿದುಕೊಳ್ಳಲೇಬೇಕು. ಹಾಗೆಯೇ ಬೌದ್ಧ ಧರ್ಮವನ್ನು, ಅದು ಹೇಗೆ ಉದಯವಾಯಿತು ಎಂದು ಅರ್ಥ ಮಾಡಿಕೊಳ್ಳದೆ, ಅದರ ಮಹತ್ವವನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಭಾರತದಲ್ಲಿನ ಧರ್ಮ, ಲಾಗಾಯತಿನಿಂದಲೂ ಹಿಂದೂ ಧರ್ಮವೇ ಆಗಿದ್ದಿತು ಎಂಬ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಹಿಂದುತ್ವವು ಭಾರತದಲ್ಲಿ ಸಾಮಾಜಿಕ ಚಿಂತನೆಯ ಇತ್ತೀಚಿನ ಬೆಳವಣಿಗೆಯಾಗಿದೆ.

ಭಾರತದ ಧರ್ಮ ಮೂರು ಬದಲಾವಣೆಗಳನ್ನು ಕಂಡಿದೆ. ಮೊದಲು ಆಚರಣೆಯಲ್ಲಿದ್ದ ವೇದ ಧರ್ಮ, ಕಾಲ ಕ್ರಮದಲ್ಲಿ ಬ್ರಾಹ್ಮಣತ್ವವಾಗಿ, ಆಮೇಲೆ ಇದು ಹಿಂದುತ್ವವಾಯಿತು. ಬ್ರಾಹ್ಮಣತ್ವದ ಯುಗದಲ್ಲಿ ಬೌದ್ಧ ಧರ್ಮ ಜನ್ಮ ತಾಳಿತು. ಇದಕ್ಕೆ ಕಾರಣವೇನೆಂದರೆ, ಬೌದ್ಧ ಧರ್ಮ, ಭಾರತದಲ್ಲಿ ಬ್ರಾಹ್ಮಣತ್ವ ಪರಿಚಯಿಸಿದ  ಅಸಮಾನತೆಯನ್ನು, ಅಧಿಕಾರ ದರ್ಪವನ್ನು, ಮತ್ತು ಸಮಾಜವನ್ನು ಬೇರೆ ಬೇರೆ ವರ್ಗಗಳಾಗಿ ಒಡೆದಿದ್ದನ್ನು ವಿರೋಧಿಸಿತು.

ವೇದ ಧರ್ಮವನ್ನು ಆಚರಣೆ ಮಾಡುವುದು ಸುಲಭ. ಅದರಲ್ಲಿ ಯಜ್ಞಗಳನ್ನು ಮಾಡುವುದೇ ಮುಖ್ಯವಾದ ಪೂಜೆ. ವೇದಗಳ ಕಾಲದ ಆರ್ಯನ್ನರು ಅಸಂಖ್ಯಾತ ದೇವರುಗಳನ್ನು ಪೂಜಿಸುತ್ತಿದ್ದರು. ದೇವತೆಗಳನ್ನು ತೃಪ್ತಿಪಡಿಸುವುದಕ್ಕಾಗಿ ಅವರು ಯಜ್ಞಗಳನ್ನು ಮಾಡುತ್ತಿದ್ದರು. ಈ ದೇವತೆಗಳಿಗೆ ಮಾಡಬೇಕಾದ ಪೂಜೆ ಅವಶ್ಯಕವಾಗಿ ಪವಿತ್ರವಾಗಿ ಮತ್ತು ಅತ್ಯುತ್ತಮವಾಗಿ ಇರಬೇಕಾಗಿದ್ದಿತು. ಆ ಕೃಶಿ ಯುಗದಲ್ಲಿ, ಗೋವುಗಳು ಅರ್ಯನ್ನರ ಮುಖ್ಯ ಸಂಪತ್ತು ಆಗಿದ್ದಿತು. ಆದುದರಿಂದ ಅವರು ದೇವತೆಗಳನ್ನು ಸಂತೃಪ್ತಿಗೊಳಿಸಲು ಗೋವುಗಳನ್ನು ಬಲಿ ಕೊಡುತ್ತಿದ್ದರು. ಈ ರೀತಿಯಲ್ಲಿ ವೇದ ಧರ್ಮ ಹಿಂಸೆಗೆ ಉತ್ತೇಜನ ಕೊಟ್ಟಿತು.

ಯಜ್ಞಗಳನ್ನು ಅಳವಡಿಸಿಕೊಳ್ಳುವುದರಿಂದಷ್ಟೇ ಬ್ರಾಹ್ಮಣರು ಸಮಾಜವನ್ನು ಸಂಘಟಿಸುವುದರಲ್ಲಿ

ಜಯಶಾಲಿಗಳಾದರು. ಬ್ರಾಹ್ಮಣರು ಸಮಾಜವನ್ನು ನಾಲ್ಕು ಭಾಗಗಳಾಗಿ ಒಡೆದು ಬಿಟ್ಟರು (ವರ್ಣಗಳು)? ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ನಾಲ್ಕು ವರ್ಣಗಳನ್ನಾಗಿ ವಿಭಜನೆ ಮಾಡಿದ್ದು ಅನೇಕ ಅಸಮಾನತೆಗಳನ್ನು ಸೃಷ್ಟಿಸಿತು. ಬ್ರಾಹ್ಮಣರು ಬ್ರಹ್ಮನ ಬಾಯಿಯಿಂದ ಹುಟ್ಟಿದರು, ಶೂದ್ರರು ಅವನ ಕಾಲಿನಿಂದ ಹುಟ್ಟಿದರು ಎಂದು ಅವರು ಹೇಳಿದರು. ಸಮಾಜವನ್ನು ಒಡೆಯುವುದನ್ನು ಯಾವುದೇ ಧರ್ಮದ ತಳಹದಿಯೆಂದು ಯಾರಾದರೂ ನಂಬಲು ಸಾಧ್ಯವೇ? ಆದರೂ ಇದನ್ನೇ ಬ್ರಾಹ್ಮಣತ್ವ ನಿರಂತರಗೊಳಿಸಿತು. ಅತ್ತಲಾಗಿ ಸಮಾನತೆಯೇ ಬೌದ್ಧ ಧರ್ಮದ ಮುಖ್ಯ ಲಕ್ಷಣ. ಬುದ್ಧನ ಧರ್ಮ ಎಲ್ಲರಿಗೂ ಆಲೋಚನ ಸ್ವಾತಂತ್ರ್ಯವನ್ನು ಮತ್ತು ಸ್ವಯಂ ಬೆಳವಣಿಗೆಯ ಸ್ವಾತಂತ್ರ್ಯವನ್ನು ಕೊಟ್ಟಿತು. ಹಿಂಸೆಯನ್ನು ವರ್ಜಿಸುವುದೇ ಬೌದ್ಧ ಧರ್ಮದ ಇನ್ನೊಂದು ಅತ್ಯವಶ್ಯಕವಾದ ಭೋಧನೆ. ಪ್ರಾಣಿಗಳನ್ನು ಬಲಿ ಕೊಡುವುದರಿಂದ ಮುಕ್ತಿಯನ್ನು ಪಡೆಯಬಹುದೆಂದು ಅಥವಾ ಯಾವುದೇ ಜೀವಿಯನ್ನು ಬಲಿಕೊಡುವುದರಿಂದ ದೇವರುಗಳನ್ನು ತೃಪ್ತಿಪಡಿಸಬಹುದೆಂದು ಬೌದ್ಧ ಧರ್ಮ ಯಾವತ್ತೂ ಹೇಳಿಲ್ಲ. ಭಾರತದಲ್ಲಿ ಬೌದ್ಧ ಮತದ ಉತ್ಥಾನ ಫ್ರೆಂಚ್ ಕ್ರಾಂತಿಯಷ್ಟೆ ಮಹತ್ವದ್ದಾಗಿತ್ತು ಎಂದು ನಾನು ಹೇಳುತ್ತೇನೆ. ಬೌದ್ಧಮತದ ಪ್ರಾರಂಭಕ್ಕೆ ಮುಂಚೆ ಶೂದ್ರನೊಬ್ಬನಿಗೆ ಸಿಂಹಾಸನ ಸಿಗಬಹುದು ಎಂದು ಆಲೋಚಿಸುವುದೂ ಸಹ ಸಾಧ್ಯವಿರಲಿಲ್ಲ. ಭಾರತದ ಚರಿತ್ರೆ ನಮಗೆ ತೋರಿಸುವುದೇನೆಂದರೆ, ಬೌದ್ಧಮತ ಹೊರಹೊಮ್ಮಿದ ಮೇಲೆ ಶೂದ್ರರು ಸಿಂಹಾಸನಗಳನ್ನು ಪಡೆದುಕೊಳ್ಳುತ್ತಿದ್ದರು. ಸತ್ಯವಾಗಿಯೂ, ಭಾರತದಲ್ಲಿ ಬೌದ್ಧ ಧರ್ಮ ಪ್ರಜಾಸತ್ತೆಯನ್ನು ಸ್ಥಾಪಿಸುವುದಕ್ಕೂ ಮತ್ತು ಸಮಾಜವಾದಕ್ಕೆ ದಾರಿ ಮಾಡಿಕೊಡುವುದಕ್ಕೂ ಮಾರ್ಗವನ್ನು ಸುಗಮಗೊಳಿಸಿತು.

ಯಾವ ಬೌದ್ಧ ಧರ್ಮ ಅತ್ಯಂತ ಉನ್ನತ ಸ್ಥಾನವನ್ನು ಪಡೆದುದುಕೊಂಡಿತೋ, ಅದು ಹೇಗೆ ಭಾರತದಿಂದ ಅದೃಷ್ಯವಾಯಿತೋ ಎಂಬುದು ಗೊಂದಲವನ್ನುಂಟು ಮಾಡುತ್ತದೆ. ಕ್ರಿಸ್ತ ಪೂರ್ವ ೨೭೪ರವರೆಗೆ ಬೌದ್ಧ ಧರ್ಮದ ಪರಿಸ್ಥಿತಿ ಏನಾಗಿತ್ತು ಎಂದು ತಿಳಿದುಕೊಳ್ಳಲು ಏನೇನೂ ಮಾಹಿತಿಯಿಲ್ಲ. ಹೇಗಾದರೂ ಅಶೋಕನ ಕಾಲದಲ್ಲಿ ಬೌದ್ಧ ಧರ್ಮ ಜನಪ್ರಿಯತೆಯ ತುಟ್ಟತುದಿಯಲ್ಲಿ ಇದ್ದಿತು ಎಂಬುದು ಗೊತ್ತಾಗುತ್ತದೆ. ಇಂಥ ಒಂದು ಮಹಾನ್ ಮತ್ತು ಜನಾನುರಾಗಿ ಧರ್ಮ ತನ್ನ ನೆಲೆಯನ್ನು ಕಳೆದುಕೊಂಡಿತು ಎಂಬುದು ನೋವನ್ನುಂಟು ಮಾಡುವ ಒಂಧು ಅಸಾಧಾರಣ, ಅತಿಶಯದ ಸಂಗತಿ.

ಕ್ರಿಸ್ತ ಪೂರ್ವ ೧೮೫ರಲ್ಲಿ, ಮೌರ್ಯರ ದೊರೆ ಅವನ ಮುಖ್ಯ ಸೇನಾಧಿಪತಿಯಿಂದ ಕೊಲ್ಲಲ್ಪಟ್ಟಾಗ, ಬೌದ್ಧ ಧರ್ಮಕ್ಕೆ ಬಲವಾದ ವಿರೋಧ ವ್ಯಕ್ತವಾಯಿತು. ಬ್ರಾಹ್ಮಣರು ತಮ್ಮ ಧರ್ಮವನ್ನು ಉಳಿಸಿಕೊಳ್ಳುವುದಕ್ಕೆ ಮಾಡಿದ ಕಾನೂನುಬದ್ಧ ಕೆಲಸಗಳಲ್ಲಿ ಇದು ಒಂದಾಗಿತ್ತು. ಈ ಘಟನೆಗೆ ಚರಿತ್ರಕಾರರು ಸಾಕಷ್ಟು ಪ್ರಾಮುಖ್ಯತೆಯನ್ನು ಕೊಡದೆ ಇರುವುದು ಕನಿಕರಿಸುವಂಥಾದ್ದು. ಬೌದ್ಧ ಸಾಹಿತ್ಯವನ್ನು ನೋಡುತ್ತಿರುವಾಗ ನಮಗೆ ಕಾಣಿಸುವುದು ಬುದ್ಧನ ಅನುಯಾಯಿಗಳಲ್ಲಿ ಶೇಕಡ ೯೦ರಷ್ಟು ಜನ ಬ್ರಾಹ್ಮಣರೇ ಇದ್ದರು. ಬ್ರಾಹ್ಮಣರು ಬುದ್ಧನ ಬಳಿಗೆ ಚರ್ಚೆ ಮಾಡುವುದಕ್ಕೆ ಮತ್ತು ವಾದ ವಿವಾದಕ್ಕೆ ಬರುತ್ತಿದ್ದರು.

ಸೋಲಿಸಲ್ಪಟ್ಟಾಗ ಬುದ್ಧನಿಗೆ ನಂಬಿಕಸ್ತರಾಗಿ ಮತ್ತು ಕಡೆಯಲ್ಲಿ ಬ್ಔದ್ಧ ಧರ್ಮವನ್ನು ಒಪ್ಪಿಕೊಂಡರು. ಬೌದ್ಧ ಸಾಹಿತ್ಯದಲ್ಲಿ ಇಂತ ಅನೇಕ ಸಂಗತಿಗಳು ಇವೆ. ಆದುದರಿಂದ ಅನೇಕ ಬ್ರಾಹ್ಮಣರ ಮಧ್ಯೆ ನಳನಳಿಸುತ್ತಿದ್ದ ಬೌದ್ಧ ಧರ್ಮ ಆ ನಂತರ ಹೇಗೆ ಬ್ರಾಹ್ಮಣರಿಂದಲೇ ನಾಶಗೊಳೊಸಲ್ಪಟ್ಟಿತು?

ನನ್ನ ಅಭಿಪ್ರಾಯದಲ್ಲಿ, ಇದಕ್ಕೆ ಮುಖ್ಯವಾದ ಕಾರಣವೆಂದರೆ ಮನೆ ದೇವರ (ಕುಲ ದೇವರ) ಪೂಜೆ. ಭಾರತದಲ್ಲಿ ಗ್ರಾಮ ದೇವತೆಗಳಿರುವ ಹಾಗೆ, ರಾಷ್ಟ್ರ ದೇವತೆಗಳಿರುವ ಹಾಗೆ, ಮನೆ ದೇವತೆಗಳು ಇದ್ದಾರೆ; ಈ ದೇವತೆಗಳನ್ನು ಬ್ರಾಹ್ಮಣರ ಮುಖಾಂತರ ಪೂಜೆ ಮಾಡಿಸಲಾಗುತ್ತದೆ. ಈ ದೇವತೆಗಳನ್ನು

ಪೂಜೆ ಮಾಡಿಸುತ್ತಿದ್ದ ಪುರೋಹಿತರು ರಾಜ್ಯದ ವ್ಯವಹಾರಗಳ ಮೇಲೆ ರಾಣಿಯರ ಮೂಲಕ ಪ್ರಭಾವ ಬೀರುತ್ತಿದ್ದರು. ಅಶೋಕ ಬೌದ್ಧ ಧರ್ಮವನ್ನು ಸ್ವೀಕರಿಸಿದ ಮೇಲೆ, ಈ ಆಚರಣೆಯನ್ನು ನಿಲ್ಲಿಸಿ ಅಂಥ ದೇವತೆಗಳ ವಿಗ್ರಹಗಳನ್ನು ತೆಗೆಯಿಸಿಬಿಟ್ಟ. ನಾನು ದಿವ್ಯ ಜ್ಞಾನವನ್ನು ಪಡೆದುಕೊಂಡ ಬುದ್ಧನನ್ನು ಆರಾಧಿಸುವುದರಿಂದ ಇತರ ಯಾವುದೇ ದೇವತೆಯನ್ನು ಪೂಜಿಸುವ ಅವಶ್ಯಕತೆ ಇಲ್ಲ ಎಂದು ಅಶೋಕ ಹೇಳಿಬಿಟ್ಟ. ಅಶೋಕನ ಈ ಕ್ರಮದಿಂದ ಬ್ರಾಹ್ಮಣರು ಬಹಳವಾಗಿ ಕೆರಳಿದರು, ಕಾರಣವೆಂದರೆ ಅದು ಅವರ ಜೀವನೋಪಾಯದ, ಆದರೆ ಅನ್ಯಾಯದ ಮಾರ್ಗವನ್ನು ಮತ್ತು ಶೋಷಣೆಯನ್ನು ಕೊನೆಗಾಣಿಸಿಬಿಟ್ಟಿತ್ತು. ಈ ನಷ್ಟಕ್ಕಾಗಿ ಪ್ರತೀಕಾರ ಮಾಡುವುದಾಗಿ ಅವರು ಪಣತೊಟ್ಟರು.

ಬ್ರಾಹ್ಮಣರ ದೃಷ್ಟಿಯಲ್ಲಿ, ರಾಜರುಗಳು ಅವರ ಮರಣಾನಂತರ, ತಮ್ಮ ತಪ್ಪುಗಳಿಂದಾಗಿ, ತಾವು ಮಾಡಬೇಕಾದ ಕೆಲಸವನ್ನು ಮಾಡದೇ ಬಿಟ್ಟುದಕ್ಕಾಗಿ ನರಕಕ್ಕೆ ಹೋಗುತ್ತಾರೆ. ಆದ್ದರಿಂದ ಅವರು ಅರಸೊತ್ತಿಗೆ ಮಾಡಲು ಒಪ್ಪದೆ, ರಾಜರುಗಳಿಗೆ ಮುಖ್ಯ ಸಲಹೆಗಾರರಾಗುವುದನ್ನು ಆಯ್ದುಕೊಂಡರು. ಕುಲದೇವತ ಪೂಜೆಗಳನ್ನು ನಿಲ್ಲಿಸಿಬಿಟ್ಟಿದ್ದರಿಂದ ನಷ್ಟ ಆದದ್ದಕ್ಕೆ ಪ್ರತೀಕಾರವನ್ನು ಮಾಡುವುದಕ್ಕೋಸ್ಕರ, ಬ್ರಾಹ್ಮಣರು ಕೇವಲ ಸಲಹೆಗಾರರಾಗಿರಬೇಕೆಂಬ ತಮ್ಮ ಧ್ಯೇಯವನ್ನು ಬಿಟ್ಟುಬಿಟ್ಟು, ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ತಮ್ಮ ಕ್ಷೇಮಾಭಿಲಾಷಿಗಳಾದ ಕ್ಷತ್ರಿಯರ ಸಹಾಯದಿಂದ ಅವರು ಬೌದ್ಧ ಧರ್ಮಕ್ಕೆ ವಿರುದ್ಧವಾಗಿ ಸಂಯುಕ್ತ ಬ್ರಾಹ್ಮಣ–ಕ್ಷತ್ರಿಯ ಕೂಟವನ್ನು ಸಂಘಟಿಸಿದರು. ಬ್ರಾಹ್ಮಣತ್ವದ ಮರು ಉಚ್ಛ್ರಾಯ ಬೌದ್ಧ ಧರ್ಮದ. ಅಧಃಪತನದ ಕಾರಣಗಳಲ್ಲಿ ಒಂದು. ಪರದೇಶದವರ ಆಕ್ರಮಣಗಳು ಕೂಡ ಭಾರತದಲ್ಲಿ ಬೌದ್ಧ ಧರ್ಮದ ಅವನತಿಗೆ ಕಾರಣವಾಗಿದೆ. ಗ್ರೀಕರು ಬೌದ್ಧ ಧರ್ಮಕ್ಕೆ ಯಾವ ಕೆಡಕನ್ನೂ ಮಾಡಲಿಲ್ಲ. ಬೌದ್ಧ ಚಟುವಟಿಕೆಗಳಿಗೆ ಉದಾರವಾದ ಆರ್ಥಿಕ ಸಹಾಯವನ್ನು ಗ್ರೀಕರು ಕೊಟ್ಟರೆಂಬುದಕ್ಕೆ ಸಕಾರಾತ್ಮಕವಾದ ಸಾಕ್ಷ್ಯವಿದೆ. ಹೂಣರು ಭಾರತದ ಮೇಲೆ ಆಕ್ರಮಣವನ್ನು ಮಾಡಿದರು ಮತ್ತು ಗುಪ್ತರಿಂದ ಸೋಲನ್ನನುಭವಿಸಿದ ಮೇಲೆ ಅವರು ಭಾರತದಲ್ಲಿ ನೆಲೆ ನಿಂತರು. ಇದಕ್ಕೆ ಮೊದಲು ಹೂಣರು ಬೌದ್ಧ ಧರ್ಮವನ್ನು ನಾಶಪಡಿಸಲು ಪ್ರಯತ್ನ ಪಟ್ಟರು. ಬೌದ್ಧ ಧರ್ಮಕ್ಕೆ ಅತಿ ಭಾರಿಯಾದ ಪೆಟ್ಟು ಬಿದ್ದದ್ದು, ಮುಸ್ಲಿಮರ ಆಕ್ರಮಣದಿಂದ. ಅವರು ಬೌದ್ಧ ವಿಗ್ರಹಗಳನ್ನು ನಾಶಪಡಿಸಿ, ಭಿಕ್ಕುಗಳನ್ನು ಕೊಂದುಬಿಟ್ಟರು. ನಳಂದ ವಿಶ್ವವಿದ್ಯಾಲಯವನ್ನು ಬೌದ್ಧರ ಕೋಟೆಯೆಂದು ತಪ್ಪಾಗಿ ತಿಳಿದುಕೊಂಡು, ಹೆಚ್ಚು ಸಂಖ್ಯೆಯಲ್ಲಿ ಸನ್ಯಾಸಿಗಳನ್ನು ಸೈನಿಕರೆಂದು ಗ್ರಹಿಸಿ, ಕೊಂದುಬಿಟ್ಟರು. ಅಳಿದುಳಿದ ಭಿಕ್ಕುಗಳು ಆಕ್ರಮಣಕಾರರಿಂದ ತಪ್ಪಿಸಿಕೊಂದು, ನೆರೆಯ ದೇಶಗಳಾದ ನೇಪಾಳ, ಟಿಬೆಟ್ ಮತ್ತು ಚೀನಾಗೆ ಓಡಿ ಹೋದರು.

ಹಿಂದೂ ಧರ್ಮದಲ್ಲಿಯೂ ಸಹ ಮೂರ್ತಿ ಪೂಜೆಯಿದ್ದು, ಆ ಧರ್ಮ ಭಾರತದಲ್ಲಿ ಉಳಿದುಕೊಂಡಿತು, ಆದರೆ ಬೌದ್ಧ ಮತವೇಕೆ ಸತ್ತು ಹೋಯಿತು ಎಂದು ನನ್ನ ಕೆಲವು ಹಿಂದು ಸ್ನೇಹಿತರುಗಳು ನನ್ನನ್ನು ಕೇಳುತ್ತಾರೆ. ಅದಕ್ಕೆ ನನ್ನ ಉತ್ತರವೆಂದರೆ, ಧರ್ಮ ಯಾವುದೇ ಆಗಲೀ, ಅದು ಉಳಿಯಬೇಕಾದರೆ, ಅದಕ್ಕೆ ಪುರೋಹಿತ ಸಮುದಾಯ ಬೇಕಾಗುತ್ತದೆ. ಬೌದ್ಧ ಸನ್ಯಾಸಿಗಳ ಕೊರತೆಯಿಂದಾಗಿ ಬೌದ್ಧ ಧರ್ಮ ಅವನತಿಯತ್ತ ಸಾಗಿತು. ತದನಂತರದಲ್ಲಿ ಕೆಲವರು ಬೌದ್ಧರು ಮತ್ತೊಂದು ಪುರೋಹಿತ ವರ್ಗವನ್ನು ಕಟ್ಟಲು ಪ್ರಯತ್ನಗಳನ್ನು ಮಾಡಿದರು, ಆದರೆ ಅವರ ಪ್ರಯತ್ನಗಳು ಸೋತು ಹೋದವು. ಆದರೆ ಹಿಂದುತ್ವದಲ್ಲಿ ಹೀಗಿಲ್ಲ. ಬ್ರಾಹ್ಮಣನ ಮಗ ಹುಟ್ಟಿನಿಂದ ಪುರೋಹಿತನಾಗುತ್ತಾನೆ. ಆದ್ದರಿಂದ ಅವರ ಧರ್ಮವನ್ನು ರಕ್ಷಿಸುವುದಕ್ಕೆ ಪ್ರತ್ಯೇಕವಾದ ಪುರೋಹಿತ ಸಮುದಾಯದ ಅವಶ್ಯಕತೆ ಇಲ್ಲ. ಇದೇ ಕಾರಣಕ್ಕೆ ಹಿಂದೂ ಧರ್ಮ ಮುಸ್ಲಿಮರ

ಆಕ್ರಮಣದಿಂದ ಉಳಿದುಕೊಂಡಿತು. ಅದಕ್ಕೂ ಮಿಗಿಲಾಗಿ, ಬೌದ್ಧ ಧರ್ಮವನ್ನು ಆಚರಣೆಯಲ್ಲಿ ತರುವುದು ಕಷ್ಟ, ಆದರೆ ಹಿಂದೂ ಧರ್ಮ ಹಾಗಲ್ಲ. ಇದಲ್ಲದೆ, ರಾಜಕೀಯ ಹವಾಗುಣ ಸಹ ಭಾರತದಲ್ಲಿ ಅದರ ಮುನ್ನಡೆಗೆ ಅನನುಕೂಲವಾಗಿತ್ತು.

ಭಾರತದಲ್ಲಿ ಅನೇಕ ಜನಗಳು ಮಾಡಿದ ಹೇಳಿಕೆಗೆ ನನ್ನ ಸಹಮತವಿಲ್ಲ. ಏನೆಂದರೆ ಶಂಕರಾಚಾರ್ಯರ ಪ್ರಚಾರ ಕಾರ್ಯದಿಂದಾಗಿ ಬೌದ್ಧ ಧರ್ಮ ನಾಶವಾಯಿತು ಎಂದು ಅವರು ಹೇಳುತ್ತಾರೆ. ಇದು ವಾಸ್ತವಕ್ಕೆ ದೂರ; ಅವರ ಮರಣಾನತರವೂ ಅನೇಕ ಶತಮಾನಗಳ ವರೆಗೆ ಬೌದ್ಧ ಧರ್ಮ ಅಸ್ತಿತ್ವದಲ್ಲಿ ಇತ್ತು. ನನ್ನ ಅಭಿಪ್ರಾಯದಲ್ಲಿ ಶಂಕರಾಚಾರ್ಯರು ಸ್ವತಃ ಬೌದ್ಧರಾಗಿದ್ದರು. ಅವರ ಗುರು ಬೌದ್ಧರಾಗಿದ್ದರು. ಹೌದು, ಭಾರತದಲ್ಲಿ ಬೌದ್ಧ ಮತ ಕ್ಷೀಣಿಸಿದ್ದಕ್ಕೆ ಕಾರಣ, ವೈಷ್ಣವ ಮತ್ತು ಶೈವ ಧರ್ಮದ ಬೆಳವಣಿಗೆ. ಈ ಎರಡೂ ಪಂಥಗಳು, ಬೌದ್ಧ ಧರ್ಮದ ಅನೇಕ ಒಳ್ಳೆಯ ವಿಷಯಗಳನ್ನು ಅಳವಡಿಸಿಕೊಂಡವು. ಈ ದಿನದಲ್ಲಿ ಹಿಂದೂ ಧರ್ಮ ಬಹಳ ಮಟ್ಟಿಗೆ ಬದಲಾವಣೆಯಾದ ಸ್ವರೂಪದಲ್ಲಿದೆ. ಮೊದಲಿಗೆ ಹಿಂಸೆಯನ್ನು ಬೋಧಿಸಿ ಆಚರಿಸಿದ ಹಿಂದೂ ಧರ್ಮ ಈಗ ಅಹಿಂಸೆಯನ್ನು ಬೋಧಿಸುತ್ತಿದೆ. ಇದನ್ನು ಬೌದ್ಧ ಧರ್ಮದಿಂದ ಎತ್ತಿಕೊಳ್ಳಲಾಗಿದೆ. ಬೌದ್ಧ ಧರ್ಮ ಮೂರ್ತರೂಪದಲ್ಲಿ ಮಾಯವಾಗಿರಬಹುದು ಆದರೆ ಒಂದು ಅಧ್ಯಾತ್ಮಿಕ ಶಕ್ತಿಯಾಗಿ ಅದು ಭಾರತದಲ್ಲಿ ಇನ್ನೂ ಅಸ್ತಿತ್ವದಲ್ಲಿ ಇದೆ.

# ೧೨೧
# ನನ್ನ ಉಳಿದಿರುವ ಜೀವನವನ್ನು ಬೌದ್ಧ ಧರ್ಮವನ್ನು ಪುನರುಜ್ಜೀವನಗೊಳಿಸುವುದಕ್ಕೆ ಮತ್ತು ಹರಡುವುದಕ್ಕೆ ಮೀಸಲಿಡುತ್ತೇನೆ

ಭಾರತ ಸರ್ಕಾರದ ಕಾನೂನು ಸಚಿವರಾದ ಡಾ:ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮವನ್ನು ಸ್ವೀಕರಿಸುವಂತೆ ಜನಗಳಿಗೆ ಮನವಿ ಮಾಡಿದ್ದಾರೆ.

ಈಗಿನ ಹಿಂದೂ ಧರ್ಮ ಸಾವಿರ ವರ್ಷಗಳ ಕೆಳಗೆ ಇದ್ದ ಹಾಗೆಯೇ ಇದೆ. ಆಗ ಇದ್ದದ್ದು ಅದು ಬೌದ್ಧ ಧರ್ಮವಲ್ಲದೇ ಬೇರೇನೂ ಅಲ್ಲ, ಆದರೆ ಮೊಹಮ್ಮದೀಯರ ಆಕ್ರಮಣದ ನಂತರ ಮತ್ತಿತರ ಕಾರಣಗಳಿಂದಾಗಿ ಅದು ತನ್ನ ಪರಿಶುದ್ಧತೆಯನ್ನು ಕಳೆದುಕೊಂಡು ತ್ಯಾಜ್ಯದೊಂದಿಗೆ ಬೆರೆತು ಬಿಟ್ಟಿದೆ ಎಂದರು.

ಅವರು ಬೊಂಬಾಯಿಯ ವೋರ್ಲಿ ಬುದ್ಧ ದೇವಸ್ಥಾನದಲ್ಲಿ ಶುಕ್ರವಾರ ೨೯ನೇ ಸೆಪ್ಟೆಂಬರ್ ೧೯೫೦ರಂದು ಮಾತನಾಡುತ್ತಿದರು. ದೇಶದ ಎಲ್ಲಾ ಕೆಡಕುಗಳನ್ನು ರಾಜಕೀಯ ಸ್ವಾತಂತ್ರ್ಯ ಕೊನೆಗಾಣಿಸುತ್ತದೆ ಎಂಬ ಕಲ್ಪನೆಯನ್ನು ಅವರು ಅಲ್ಲಗಳೆದರು. ಎಲ್ಲಿಯವರೆಗು ಮನಸ್ಸಿನ ಪರಿಶುದ್ಧತೆ ಇರುವುದಿಲ್ಲವೋ, ದೈನಂದಿನ ಜೀವನದಲ್ಲಿ ಕೆಟ್ಟ ಕೆಲಸಗಳನ್ನು ಮಾಡುವುದು ಮತ್ತು ನೈತಿಕತೆಯನ್ನು ಸಂಪೂರ್ಣವಾಗಿ ಅಲಕ್ಷ್ಯ ಮಾಡುವುದು ಮುಂದುವರೆಯುತ್ತದೆಯೋ ಮತ್ತು ಮನುಷ್ಯನಿಗೆ ಎಲ್ಲಿಯವರೆಗೆ ಇನ್ನೊಬ್ಬ ಮನುಷ್ಯನ ಜೊತೆ ಹೇಗೆ ನಡೆದುಕೊಳ್ಳಬೇಕೆಂದು ಗೊತ್ತಿರುವುದಿಲ್ಲವೋ ಮತ್ತು ಮನುಷ್ಯ ಮನುಷ್ಯನ ನಡುವೆ ತಡೆಗಳನ್ನು ಸೃಷ್ಟಿಸುತ್ತಾನೋ, ಅಲ್ಲಿಯವರೆಗೆ ಭಾರತ ಎಂದೆಂದಿಗೂ ಉದ್ಧಾರವಾಗುವುದಿಲ್ಲ.

ಈ ಎಲ್ಲ ತೊಂದರೆಗಳನ್ನು ನಿವಾರಿಸಿಕೊಳ್ಳುವುದಕ್ಕೆ, ಭಾರತ ಬೌದ್ಧ ಧರ್ಮವನ್ನು ಅಪ್ಪಿಕೊಳ್ಳಬೇಕು. ನೈತಿಕತೆಗಳ ತತ್ವಗಳ ಮೇಲೆ ಆಧಾರಿತವಾಗಿರುವ ಒಂದೇ ಧರ್ಮವೆಂದರೆ ಬೌದ್ಧ ಧರ್ಮ; ಅದು ಸಾಮಾನ್ಯ ಮನುಷ್ಯ ಜೀವಿಯ ಒಳಿತಿಗೆ ಮತ್ತು ಕ್ಷೇಮಕ್ಕಾಗಿ ಹೇಗೆ ಕೆಲಸ ಮಾಡಬೇಕೆಂದು ತೋರಿಸಿಕೊಡುತ್ತದೆ ಎಂದು ಹೇಳಿದರು.

ತಾವು ತಮ್ಮ ಮಿಕ್ಕ ಜೀವನವನ್ನು ಬೌದ್ಧ ಮತದ ಪುನರುಜ್ಜೀವನಕ್ಕೆ ಮತ್ತು ಪ್ರಚಾರ ಮಾಡುವುದಕ್ಕೆ ಮೀಸಲಿಡುತ್ತೇನೆಂದು ಡಾ: ಅಂಬೇಡ್ಕರ್ ಅವರು ಘೋಷಣೆ ಮಾಡಿದರು.

# ೧೨೨
# ಮಸೂದೆಯ ಉದ್ದೇಶ ಮಹಿಳೆಯರ ಸಾಮಾಜಿಕ ಪ್ರಗತಿಗೋಸ್ಕರವಾಗಿದೆ

೨೬ನೇ ಡಿಸೆಂಬರ್, ೧೯೫೦ರಂದು ಡಾ: ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಗಳ ಫೆಡರೇಶನ್ನಿನ ಬೆಳಗಾವ್ ಜಿಲ್ಲಾ ಶಾಖೆಯ ಆಶ್ರಯದಲ್ಲಿ ನಡೆದ ೫೦,೦೦೦ ಜನಗಳ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಹೀಗೆ ಹೇಳಿದರು:

ಭಾರತದಲ್ಲಿನ ಮಹಿಳೆಯರಿಗೆ  ನೈತಿಕ ಧೈರ್ಯವಿಲ್ಲದೇ ಇರುವುದು ಮತ್ತು ಅವರ ದುರ್ಬಲ ನಡತೆ,  ತಾವು ಕರಡು ತಯಾರಿಸಿದ ಹಿಂದೂ ಕೋಡ್ ಮಸೂದೆಗೆ ಅಡ್ಡವಾಗಿ ಬಂದಿತು. ಪ್ರಮುಖ ಮಹಿಳಾ ಮುಖಂಡರುಗಳು ಯಾರಿಗೂ ಸಹ ನಮ್ಮ ಮಹಿಳೆಯರ ಸಾಮಾಜಿಕ ಪುರೋಭಿವೃದ್ಧಿಯಲ್ಲಿ ಅಸಕ್ತಿಯೇ ಇರಲಿಲ್ಲ ಎಂದು ಹೇಳಿದರು.

ಮುಂದುವರೆದು ಡಾ: ಅಂಬೇಡ್ಕರ್ ಹೇಳಿದ್ದು:

ಮಹಿಳೆಯರಿಗಾಗಿ ಅನೇಕ ಹಕ್ಕುಗಳನ್ನು ಅನುಮತಿಸಿರುವ, ಸ್ಮೃತಿಗಳು ವಿಧಿಸಿರುವ ಹಾಗೆ ನಾನು ಆ ಮಸೂದೆಯ ಕರಡನ್ನು ತಯಾರಿಸಿದೆ. ಮಹಿಳೆಯರ ಸಾಮಾಜಿಕ ಪ್ರಗತಿಗೆ ಕಾನೂನಿನ ಅಡಚಣೆಗಳನ್ನು ನಿವಾರಿಸುವುದು ಆ ಮಸೂದೆಯ ಗುರಿಯಾಗಿತ್ತು. ಮಹಿಳೆಯರ ಸ್ವಾತಂತ್ರ್ಯ ಸಂಪತ್ತಿನ ಮೇಲೆ ಅವಲಂಬಿಸಿದೆ. ಮಹಿಳೆಯೊಬ್ಬಳು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ನಿರ್ದಿಷ್ಟವಾಗಿ ಆ ತನ್ನ ಸಂಪತ್ತನ್ನು ಮತ್ತು ಹಕ್ಕುಗಳನ್ನು ಉಳಿಸಿಕೊಳ್ಳಬೇಕು.

ಕಹಿಯಾದ ದ್ರಾವಣದೊಂದಿಗೆ ಮಿಶ್ರಣ ಮಾಡಿ ಕೆಡಿಸಿದ ಹಾಲಿನೊಂದಿಗೆ ಹಿಂದು ಕೋಡ್ ಮಸೂದೆಯನ್ನು ಹೋಲಿಸಿದರು.  ಕೆಲವು ಸಂಪ್ರದಾಯವಾದಿ ಪುರುಷರು ಮತ್ತು ಯಾರ ಪ್ರಯೋಜನಕ್ಕಾಗಿ ಆ ಮಸೂದೆಯನ್ನು ಮಂಡಿಸಲಾಗಿತ್ತೋ ಆ ಹೆಂಗಸರೂ ಸಹ ನಡೆಸುತ್ತಿದ್ದ ಚಳುವಳಿಗಳನ್ನು ಪರಾಮರ್ಶಿಸುತ್ತ, ಯಾರೇ ಆಗಲೀ ಈ ಮಸೂದೆಯಲ್ಲಿರುವ ಯಾವ ಭಾಗಗಳಾಗಲೀ ಸ್ಮೃತಿಗಳು ವಿಧಿಸಿರುವ ಹಾಗೆ ಇಲ್ಲ ಎಂದು ತೋರಿಸಲಿ ಎಂದು  ನಾನು ಸವಾಲು ಮಾಡುತ್ತೇನೆ ಎಂದು ಹೇಳಿದರು.

# ೧೨೩
# ಪರಿಶಿಷ್ಟ ಜಾತಿಗಳು ರಾಜಕೀಯ ತಾಟಸ್ಥ್ಯವನ್ನು ಬಿಟ್ಟು ಬಿಡಬೇಕು

೧೨ನೇ ಜೂನ್ ೧೯೫೧ರಂದು ಡಾ: ಬಿ.ಆರ್.ಅಂಬೇಡ್ಕರ್ ಅವರು ಬೊಂಬಾಯಿನಲ್ಲಿ ಭಾಷಣವೊಂದನ್ನು ಮಾಡಿದರು.

ಪರಿಶಿಷ್ಟ ಜಾತಿಗಳು ತಮ್ಮ ರಾಜಕೀಯ ತಾಟಸ್ಥ್ಯವನ್ನು ಬಿಟ್ಟುಬಿಟ್ಟು, ಹೊಸದಾಗಿ ನಾವು ಗೆದ್ದುಕೊಂಡಿರುವ ಸ್ವಾತಂತ್ರ್ಯವನ್ನು ಬಲಪಡಿಸುವುದರಲ್ಲಿ ಸಹಕರಿಸಬೇಕು. ಆದರೆ ಇಂಥ ಸಹಕಾರದಲ್ಲಿ ಫೆಡರೇಷನ್ನಿನ ಪ್ರತ್ಯೇಕವಾದ ಅನನ್ಯತೆಯನ್ನು ಉಳಿಸಿಕೊಳ್ಳಬೇಕು. ಕಾಂಗ್ರೆಸ್ಸಿನತ್ತ ನಿಮ್ಮ ನೀತಿಗಳನ್ನು ಮೂಲಭೂತವಾಗಿ ಬದಲಾಯಿಸಿಕೊಳ್ಳಬೇಕು. ಇಲ್ಲಿಯವರೆಗೆ ಕಾಂಗ್ರೆಸ್ಸೊಡನೆ ನಮ್ಮ ಸಂಬಂಧ ವಿರೋಧೀ ಸಂಬಂಧವಾಗಿತ್ತು. ರಾಜಕೀಯ ಕ್ಷೇತ್ರದಲ್ಲಿ ನಾವುಗಳು ಪರಸ್ಪರ ಶತೃಗಳಾಗಿದ್ದೆವು. ಇಲ್ಲಿಯವರೆಗೆ ನಾವು ನಮ್ಮ ಹೊರನೋಟದಲ್ಲಿ ತೀರಾ ಸಂಕುಚಿತ ಮನೋಭಾವದವರಾಗಿದ್ದೆವು. ನಮ್ಮ ಸಮುದಾಯದ ಆಸಕ್ತಿಯೊಂದೇ ನಮ್ಮ ಆಸಕ್ತಿಯಾಗಿತ್ತು. ನಾವೀಗ ನಮ್ಮ ಸ್ವಾತಂತ್ರ್ಯವನ್ನು ಪಡೆದುಕೊಂಡಿರುವುದರಿಂದ, ಸಮುದಾಯದ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಮತ್ತು ಹೊಸದಾಗಿ ನಾವು ಗೆದ್ದುಕೊಂಡಿರುವ ಸ್ವಾತಂತ್ರ್ಯವನ್ನು ಬಲಪಡಿಸಿ ಕೊಳ್ಳಲು ನಾವು ನಮ್ಮ ಹೊರ ನೋಟವನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳಬೇಕು.

ಫೆಡರೇಷನ್ನಿನ ತಳಹದಿ ವೇಗವಾಗಿ ಕುಸಿದುಬೀಳುತ್ತಿದೆಯೆಂದು ಹೇಳುವುದು ತಪ್ಪಾಗುತ್ತದೆ. ವಾಸ್ತವವಾಗಿ ನಮಗೆ ಈಗ ಬಲ ಬಂದಿದೆ ಮತ್ತು ನಾವುಗಳು ಕಲ್ಲಿನಂತೆ ಒಗ್ಗಟ್ಟಾಗಿದ್ದೇವೆ. ೧೯೪೬ನೇ ಇಸವಿಯಲ್ಲಿ ಫೆಡರೇಷನ್ ಚುನಾವಣೆಯಲ್ಲಿ ಕೆಟ್ಟ ಸೋಲನ್ನು ಅನುಭವಿಸಿತು. ಸಮುದಾಯದ ಹಿತಾಸಕ್ತಿಗೋಸ್ಕರ ನಮ್ಮಲ್ಲಿ ಕೆಲವರು ಸಂವಿಧಾನ ರಚನಾ ಸಭೆಗೆ ಪ್ರವೇಶ ಮಾಡುವುದು ಅತ್ಯವಶ್ಯಕವಾಗಿತ್ತೆಂದು ನನಗೆ ಕಂಡಿತ್ತು.ಎಲ್ಲಾ ಬಾಗಿಲುಗಳೂ ಮತ್ತು ಕಿಟಕಿಗಳೂ ಆಗ ನಮಗೆ ಮುಚ್ಚಿದ್ದವು. ನನ್ನ ಬಗ್ಗೆ ನನಗೆ ಖಾತರಿ ಇರಲಿಲ್ಲ, ಆದರೂ ಚುನಾವಣೆಗೆ ನಿಂತೆ ಮತ್ತು ಬಂಗಾಳದಿಂದ ಗೆದ್ದೆ.

ಆ ಸಮಯದಲ್ಲಿ ನಾನು ಸಮಗ್ರ ರಾಷ್ಟ್ರಕ್ಕೇ ಏನಾದರೊಂದನ್ನು ಮಾಡುತ್ತೀನೆಂದು ನನಗೆ ಏನೇನೂ ಕಲ್ಪನೆ ಇರಲಿಲ್ಲ. ದೇಶಕ್ಕೆ ಸಂವಿಧಾನವನ್ನು ರಚಿಸುವ ಹೊಣೆಗಾರಿಕೆಯನ್ನು ನನ್ನ ಭುಜಗಳ ಮೇಲೆ ಹೊರಿಸಲಾಯಿತು. ನನಗೆ ಮತ್ತು ನಮ್ಮ ಸಮುದಾಯಕ್ಕೆ ಅದು ಒಂದು ಸುವರ್ಣಾವಕಾಶವಾಗಿತ್ತು ಎಂದು ಈಗ ನನಗೆ ಅನಿಸುತ್ತಿದೆ. ಈ ಸಂವಿಧಾನವನ್ನು ರಚನೆ ಮಾಡಿ, ನನ್ನನ್ನೂ ಮತ್ತು ನನ್ನ ಪಕ್ಷವನ್ನೂ ಕಳೆದ ಇಪ್ಪತ್ತು ವರ್ಷಗಳಿಂದ ರಾಷ್ಟ್ರ ವಿರೋಧಿ ಎಂದು ತೆಗಳುತ್ತಿದ್ದ ಹಿಂದೂಗಳಿಗೆ, ಅದು ಸಂಪೂರ್ಣವಾಗಿ ತಪ್ಪು ಎಂದು ಮನವರಿಕೆ ಮಾಡಿಕೊಟ್ಟೆ. ನಾವು ಇತರ ಸಂಸ್ಥೆಯಷ್ಟೇ ಕಟ್ಟಾ ರಾಷ್ಟ್ರೀಯವಾದಿಗಳಾಗಿದ್ದೇವೆ.

ಈಗ ಕಾಲ ಬದಲಾಗಿದೆ. ಹಿಂದೂಗಳು ನಮ್ಮ ಮೇಲೆ ಅಧಿಕಾರ ಮಾಡುತ್ತಿದ್ದುದರಿಂದ ನಮ್ಮ ರೀತಿ ಬೇರೆಯಾಗಿತ್ತು; ಆಗ ನಮಗೆ ನಮ್ಮ ಭವಿಷ್ಯದ ಬಗ್ಗೆ ಖಾತರಿ ಇರಲಿಲ್ಲ. ನಾವು ಹೊಸದಾಗಿ ಗೆದ್ದುಕೊಂಡಿರುವ ಸ್ವಾತಂತ್ರ್ಯವನ್ನು ರೂಢಿಸಿಕೊಳ್ಳುವುದೇ ಈಗ ನಮ್ಮ ಕಟ್ಟ ಕಡೆಯ ಗುರಿ.

ಫೆಡರೇಷನ್ ತನ್ನ ತಾಟಸ್ಥ್ಯವನ್ನು ಬಿಟ್ಟು ಬಿಡಲೇಬೇಕು. ನಮ್ಮದು ಒಂದು ಚಿಕ್ಕ ಸಮುದಾಯ; ನಾವು ಈಗ ಇರುವ ನಮ್ಮ ಪರಿಸ್ಥಿತಿಯನ್ನೇ ಉಳಿಸಿಕೊಳ್ಳಬೇಕಾದರೆ ಮುಂದಿನ ಚುನಾವಣೆಯಲ್ಲಿ ನಾವು ಯಾವುದಾದರೊಂದು ರಾಜಕೀಯ ಪಕ್ಷದೊಂದಿಗೆ ಸಹಕರಿಸಲೇಬೇಕು.

ಈ ಪ್ರಶ್ನೆಯನ್ನು ಚುನಾವಣೆಗಳ ಸಮಯದಲ್ಲಿ ದೇಶದಲ್ಲಿ ಆಗ ಇರುವ ರಾಜಕೀಯ ಪರಿಸ್ಥಿತಿಯನ್ನು ನೋಡಿಕೊಂಡು ತೀರ್ಮಾನಿಸಬೇಕು.

# ೧೨೪
# ನಾನು ಕರಗದೆ ಇರುವ ಒಂದು ಬಂಡೆಯ ಹಾಗೆ, ಆದರೆ ಅದು ನದಿಗಳು ಹರಿಯುವ ದಿಕ್ಕನ್ನೇ ತಿರುಗಿಸುತ್ತದೆ

೨೭ನೇ ಅಕ್ಟೋಬರ್ ೧೯೫೧ರಂದು ಪಂಜಾಬಿನ ಜಲಂದರ್‌ನ ರಾಮದಾಸಪುರದಲ್ಲಿ ನಡೆದ ಚುನಾವಣಾ ಪ್ರಚಾರದ ಸಮಯದಲ್ಲಿ ಡಾ: ಅಂಬೇಡ್ಕರ್ ಅವರ ಭಾಷಣ:

ಅವರು ಹೇಳಿದ್ದು:

ಪ್ರಿಯ ಸಹೋದರರೆ ಮತ್ತು ಸಹೋದರಿಯರೆ,

ಇದಕ್ಕೆ ಮುಂಚೆಯೇ ಪಂಜಾಬಿನಲ್ಲಿ ಪ್ರವಾಸ ಮಾಡಬೇಕೆಂಬ ಆಲೋಚನೆ ನನಗೆ ಇತ್ತು. ಆದರೆ ನನಗೆ ಇಲ್ಲಿ ಬರಲಾಗಲಿಲ್ಲ. ಆಮೇಲೆ ನನಗೆ ತಿಳಿದು ಬಂದದ್ದು ಏನೆಂದರೆ, ಅನೇಕ ಮಂದಿ ಇಲ್ಲಿ ಬಂದು ಸೇರಿದ್ದು, ನಾನು ಬರದೇ ಇದ್ದುದಕ್ಕೆ ಅವರಿಗೆ ನಿರಾಸೆಯಾಗಿದ್ದು ನನಗೆ ತಿಳಿದು ಬಂದಿತು. ನಿಮ್ಮೆಲ್ಲರಿಗೆ ಆದ ಅನಾನುಕೂಲಕ್ಕಾಗಿ ಕ್ಷಮೆ ಇರಲಿ. ನಾನು ಬರಲು ಆಗದೇ ಇದ್ದುದಕ್ಕೆ ಕಾರಣ ನನ್ನ ಅಸಹಾಯಕತೆ. ಈ ಕೆಳಗಿನ ಕಾರಣಗಳಿಂದಾಗೆಯೇ ನಾನು ಬರಲಾಗಲಿಲ್ಲ. ಮೊದಲನೆಯದಾಗಿ, ಕಾಂಗ್ರೆಸ್ ಸರ್ಕಾರದಲ್ಲಿ ನಾನು ಇದ್ದ ನಾಲ್ಕು ವರ್ಷಗಳ ಅವಧಿಯಲ್ಲಿ ನನ್ನ ಮೇಲೆ ವಿಪರೀತವಾಗಿ ಸರ್ಕಾರಿ ಕೆಲಸದ ಹೊರೆ ಬಿದ್ದಿತ್ತು. ಹೀಗಾಗಿ ಇಲ್ಲಿಗೆ ಬರಲು ನನಗೆ ಸಮಯ ಸಿಗಲಿಲ್ಲ. ಎರಡನೆಯದಾಗಿ, ಈ ಎಲ್ಲಾ ವರ್ಷಗಳಲ್ಲಿ ನನ್ನ ಆರೋಗ್ಯ ಸರಿಯಿರಲಿಲ್ಲ, ಈಗಲೂ ಸಹ ನನ್ನ ಆರೋಗ್ಯ ಪೂರ್ತಿಯಾಗಿ ಸುಧಾರಿಸಿಲ್ಲ. ಮೂರನೆಯದಾಗಿ, ಭಾರತದಲೆಲ್ಲೆಡೆ ಇರುವ ಅಚ್ಛುತಗಳು ನಾನು ಭಾರತದಲ್ಲಿ ಎಲ್ಲೆಡೆ ಪ್ರವಾಸ ಮಾಡಬೇಕೆಂದು ಮತ್ತು ಅವರೊಡನೆ ಮಾತನಾಡಬೇಕೆಂದು ಆಶಿಸುತ್ತಾರೆ. ಈ ನಮ್ಮ ದೇಶ ಎಷ್ಟು ದೊಡ್ಡದಾದ ಖಂಡವೆಂದರೆ, ಒಬ್ಬನೇ ಒಬ್ಬ ಮನುಷ್ಯನಿಗೆ ಇಡೀ ದೇಶವನ್ನು ಎರಡು ವರ್ಷಗಳಲ್ಲಿ ಸಹ ಪ್ರವಾಸ ಮಾಡುವುದು ಕಷ್ಟ ಸಾದ್ಯವೆಂದು ನಿಮಗೆಲ್ಲಾ ಗೊತ್ತು. ಆದುದರಿಂದ ನನಗೆ ಜನಗಳ ಆಸೆಯನ್ನು ಪೂರೈಸಲಾಗಲಿಲ್ಲ ಮತ್ತು ಅವರಿಗೆ ಬೇಕಾದಾಗ ನಾನು ಬರಲಾಗಲಿಲ್ಲ. ಆದ್ದರಿಂದ ನಾನು ಬಯಸುವುದೇನೆಂದರೆ, ನಮ್ಮ ಜನಗಳು ತಮ್ಮ ಕಾಲ ಮೇಲೆ ತಾವೇ ನಿಲ್ಲುವುದನ್ನು ಕಲಿಯಬೇಕು. ಅಲ್ಲದೆ ನೀವು ಒಗ್ಗಟ್ಟಾಗಿ ಇದ್ದು, ನನ್ನ ಸಹಾಯವಿಲ್ಲದೆ ಯಾವುದೇ ಚಂಡ ಮಾರುತವನ್ನು ಎದುರಿಸಬೇಕು; ನನ್ನ ಮೇಲೆ ಬಹಳ ಒತ್ತಾಯ ತರಬೇಡಿ.

ಮನುಷ್ಯನೊಬ್ಬ ೫೫ ವರ್ಷಗಳಾದ ಮೇಲೆ ರಾಜಕೀಯವನ್ನು ಬಿಟ್ಟು ಬಿಡಬೇಕು; ಏಕೆಂದರೆ ಸರ್ಕಾರ ಕೂಡ ತನ್ನ ನೌಕರರಿಗೆ ೫೫ ವರ್ಷಗಳಾದ ಮೇಲೆ ನೀನೀಗ ಕೆಲಸ ಮಾಡಲು ಅಸಮರ್ಥ, ನೀನು ನಿವೃತ್ತಿಯಾಗಲೇ ಬೇಕೆಂದು ನೋಟಿಸ್ ಕೊಡುತ್ತದೆ. ಈ ಯುಗದ ರಾಜಕಾರಣಿಗಳು ತಮ್ಮ ರಾಜಕೀಯವನ್ನು ೫೫ ವರ್ಷಗಳ ನಂತರ ತಮ್ಮ ಜೀವನೋಪಾಯಕ್ಕೆಂದು ಪ್ರಾರಂಭಿಸುತ್ತಾರೆ . ಆದರೆ ಅವರಿಗೆ ದೇಶಕ್ಕೆ ಸೇವೆ ಸಲ್ಲಿಸಲು ಆಗುತ್ತದೆಯೇ ಬಿಡುತ್ತದೆಯೇ ಎಂಬುದೇನೂ ಪರವಾಗಿಲ್ಲ. ಅವರ ಮನಸ್ಸಿನಲ್ಲಿ ಇರುವುದು ಒಂದೇ ಒಂದು; ಅದರಿಂದ ತಮ್ಮ ಸ್ವಂತಕ್ಕೆ ಏನಾದರೂ ಸಿಗುತ್ತದೆಯೇ ಎಂದು. ನನಗೆ ಯಾವ ಸ್ವಾರ್ಥ ಉದ್ದೇಶಗಳು ಇಲ್ಲ. ನಾನು ನನ್ನ ಪ್ರಯೋಜನಕ್ಕಾಗಿ ರಾಜಕೀಯದಲ್ಲಿ

ಮುಂದುವರೆಯುತ್ತಿಲ್ಲ. ನಾನು ನನ್ನ ಸಮುದಾಯಕ್ಕೋಸ್ಕರ ಮುಂದುವರೆಯುತ್ತಿದ್ದೇನೆ. ನಾನು ರಾಜಕೀಯಕ್ಕೆ ಧುಮುಕಿದ್ದು ೧೯೨೦ರಲ್ಲಿ. ಆಗಲಿಂದ ನಾನು ರಾಜಕೀಯದಲ್ಲಿ ಭಾಗವಹಿಸಿದ್ದೇನೆ; ನನ್ನ ಜೀವನದ ೩೦ ದೀರ್ಘ ವರ್ಷಗಳನ್ನು ನನ್ನ ಸಮುದಾಯದ ಸೇವೆಯಲ್ಲಿ ಕಳೆದಿದ್ದೇನೆ. ನಾನು ರಾಜಕೀಯವನ್ನು ಬಿಟ್ಟು ಬಿಡಬೇಕೆಂದಿದ್ದರೂ, ಸಮುದಾಯವನ್ನು ವ್ಯವಸ್ಥೆಗೊಳಿಸುವ ಬಗ್ಗೆ ಆಲೋಚನೆ ಮಾಡುತ್ತಾ, ನಾನು ರಾಜಕೀಯದಲ್ಲೇ ಉಳಿಯಬೇಕಾದ ಒತ್ತಾಯವಿದೆ. ಈ ಮೂವತ್ತು ವರ್ಷಗಳಲ್ಲಿ, ಎಂಟು ವರ್ಷಗಳು ನಾನು ಸರ್ಕಾರದ ಒಬ್ಬ ಸದಸ್ಯನಾಗಿದ್ದೆ. ಯಾವನೇ ಒಬ್ಬ ರಾಜಕಾರಣಿ ಇಷ್ಟು ದೀರ್ಘಕಾಲದವರೆಗೂ ಒಂದೇ ಸಮನೆ ರಾಜಕಾರಣದಲ್ಲಿ ಇದ್ದಾನೆಯೆ ಎಂಬುದು ನನಗೆ ಗೊತ್ತಿಲ್ಲ. ನಾನು ಸರ್ಕಾರದಲ್ಲಿ ಎಂಟು ವರ್ಷಗಳವರೆಗೂ ಇದ್ದೆ; ಎಂದೆಂದಿಗೂ ಅಲ್ಲೇ ಇರಲು ಬಯಸಿದ್ದೆ. ನಾನೇನೂ ಜಂಭಕ್ಕೆ ಹೇಳುತ್ತಿಲ್ಲ, ನನಗಿರುವ ಇಷ್ಟೊಂದು ವಿದ್ಯಾರ್ಹತೆಗಳಿಂದಾಗಿ, ನಾನು ಅಲ್ಲೇ ಇರಲು ಬಯಸಿದ್ದರೆ, ಯಾರಿಗೂ ನನ್ನನ್ನು ಹೊರಕ್ಕೆ ತಳ್ಳುವ ತಾಕತ್ತು ಇರಲಿಲ್ಲ. ಆದರೆ ನನ್ನ ಸಮುದಾಯದ ನಿಮಿತ್ತದಿಂದ, ಕಾಂಗ್ರೆಸ್ ಸರ್ಕಾರದ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವ ಅವಶ್ಯಕತೆ ಬಿತ್ತು. ನಾನು ಎಲ್ಲೇ ಹೋಗಲೀ, ನಾನು ನನ್ನ ಸಮುದಾಯದ ಯೋಗಕ್ಷೇಮವನ್ನೇ ನನ್ನ ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತೇನೆ ಎಂದು ನಿಮಗೆ ಭರವಸೆ ಕೊಡುತ್ತೇನೆ.

ತತ್ವಜ್ಞಾನದಲ್ಲಿ ಡಾಕ್ಟರೇಟ್ ಪಡೆದುಕೊಂಡು ನಾನು ಇಂಗ್ಲೆಂಡಿನಿಂದ ಹಿಂದಿರುಗಿದಾಗ ಇಂಥ ವಿದ್ಯಾರ್ಹತೆಗಳಿದ್ದ ಯಾರೂ ಭಾರತದಲ್ಲಿ ಇರಲಿಲ್ಲ. ಆದ್ದರಿಂದ, ಬೊಂಬಾಯಿ ತಲುಪಿ ಯಾವ ಮೊಹಲ್ಲಾದಿಂದ ನಾನು ಹೋಗಿದ್ದೆನೋ ಅಲ್ಲೇ ನೆಲೆಗೊಂಡಾಗ, ಬೊಂಬಾಯಿ ಸರ್ಕಾರ, ಬಹಳ ಕಷ್ಟ ಪಟ್ಟು ನಾನಿದ್ದ ಜಾಗವನ್ನು ಹುಡುಕಿತು. ಯಾಕೆಂದರೆ ನಾನಿದ್ದ ಜಾಗ ಜನಪ್ರಿಯ ಜಾಗವಲ್ಲ, ಯಾರಿಗೂ ನಾನು ಎಲ್ಲಿ ವಾಸವಾಗಿದ್ದೇನೆಂದು ಗೊತ್ತಿರಲಿಲ್ಲ. ಬೊಂಬಾಯಿ ಸರ್ಕಾರ ನನ್ನನ್ನು ರಾಜಕೀಯ ಅರ್ಥಶಾಸ್ತ್ರದ ಪ್ರಾಚಾರ್ಯ ಹುದ್ದೆಯನ್ನು ಒಪ್ಪಿಕೊಳ್ಳುವಂತೆ ಕೇಳಿತು. ನಾನು ಆ ಪ್ರಸ್ತಾವವನ್ನು ಒಪ್ಪಿಕೊಳ್ಳಲಿಲ್ಲ. ನಾನು ಆ ಹುದ್ದೆಯನ್ನು ಒಪ್ಪಿಕೊಂಡಿದ್ದರೆ, ಈಗ ನಾನು ಕಡೆಯ ಪಕ್ಷ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನಿರ್ದೇಶಕನಾಗಿರುತ್ತಿದ್ದೆ. ನನಗೆ ತಿಂಗಳಿಗೆ ಮೂರು ಅಥವ ನಾಲ್ಕು ಸಾವಿರ ರೂಪಾಯಿಗಳ ವೇತನ ಸಿಗುತ್ತಿತ್ತು. ನಾನು ಆ ಹುದ್ದೆಯನ್ನು ನಿರಾಕರಿಸಿದ್ದಕ್ಕೆ ಕಾರಣವೇನೆಂದರೆ, ನನ್ನ ಸಮುದಾಯದ ಸೇವೆ ಮಾಡುವುದಕ್ಕೆ ನನಗೆ ಇದ್ದ ಮಹತ್ತಾದ ಭಾವನೆ. ಸರ್ಕಾರಿ ಸೇವೆಯಲ್ಲಿ ಇದ್ದರೆ ಆ ಸೇವೆಯನ್ನು ಮಾಡುವುದಕ್ಕೆ ನನಗೆ ಆಗುತ್ತಿರಲಿಲ್ಲ. ನಿಮಗೆ ಗೊತ್ತಿರುವ ಹಾಗೆ, ಸರ್ಕಾರಿ ನೌಕರನೊಬ್ಬ ಸರ್ಕಾರದ ಇರಾದೆಯಂತೆ ಹೋಗಬೇಕಾಗಿದ್ದು, ಸರ್ಕಾರದ ನೀತಿಯನ್ನು ಅನುಸರಿಸಬೇಕಾಗಿದ್ದು, ತನ್ನ ಸಮುದಾಯಕ್ಕೆ ಸೇವೆ ಮಾಡುವುದಕ್ಕೆ ಆಗುತ್ತಿರಲಿಲ್ಲ.

ಎರಡು ಮೂರು ವರ್ಷಗಳು ಸ್ವಲ್ಪ ಹಣವನ್ನು ಸಂಪಾದನೆ ಮಾಡಿದಮೇಲೆ, ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ ನಾನು ಪುನಃ ಇಂಗ್ಲೆಂಡಿಗೆ ಹೋದೆ, ಮತ್ತು ಬ್ಯಾರಿಸ್ಟರ್ ಆಗಿ ಹಿಂದಕ್ಕೆ ಬಂದೆ. ಬೊಂಬಾಯಿ ಸರ್ಕಾರ ಪುನಃ ನನ್ನನ್ನು ಜಿಲ್ಲಾ ನ್ಯಾಯಾಧೀಶರ ಕೆಲಸವನ್ನು ಒಪ್ಪಿ ಕೊಳ್ಳುವಂತೆ ಕೇಳಿತು. ನನಗೆ ೨೦೦೦ ರೂಪಾಯಿಗಳ ವೇತನದ ಪ್ರಸ್ತಾವ ಕೊಟ್ಟು, ಕೆಲವು ಸಮಯದ ನಂತರ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕ ಮಾಡುವುದಾಗಿ ಭರವಸೆ ಕೊಡಲಾಯಿತು. ಇದನ್ನೂ ಕೂಡ ನಾನು ಒಪ್ಪಿಕೊಳ್ಳಲಿಲ್ಲ. ಇತರ ಮೂಲಗಳಿಂದ ನನ್ನ ಆದಾಯ ಆಗ ಕೇವಲ ೨೦೦ ರೂಪಾಯಿಗಳಷ್ಟಿತ್ತು.

೧೯೪೨ರಲ್ಲಿ ನಾನು ಎರಡು ಪ್ರಶ್ನೆಗಳನ್ನು ಎದುರಿಸಬೇಕಾಯಿತು. : ಒಂದು ಉಚ್ಚ ನ್ಯಾಯಾಲಯದ

ನ್ಯಾಯಾಧೀಶನಾಗಿ ಸೇವೆ ಮಾಡುವುದು, ಇನ್ನೊಂದು ವೈಸ್ರಾಯ್ ಅವರ ಕಾರ್ಯಕಾರಿ ಪರಿಷತ್ತಿನಲ್ಲಿ ಸದಸ್ಯನಾಗಿ ಭಾರತ ಸರ್ಕಾರವನ್ನು ಸೇರುವುದು. ನಾನು ಉಚ್ಚ ನ್ಯಾಯಾಲಯವನ್ನು ಸೇರಿದ್ದರೆ, ನನ್ನ ವೇತನ ತಿಂಗಳಿಗೆ ೫೦೦೦ ರೂಪಾಯಿಗಳು, ನಿವೃತ್ತಿ ಹೊಂದಿದ ಮೇಲೆ ೧,೦೦೦ ರೂಪಾಯಿನ ನಿವೃತ್ತಿ ವೇತನ. ಆದರೆ ನಾನು ಹಾಗೆ ಮಾಡಲಿಲ್ಲ. ನಾನು ರಾಜಕೀಯವನ್ನು ಸೇರಿದೆ. ಅಚ್ಚುತ್ ಸಮುದಾಯದಲ್ಲಿ ನಾನು ಹುಟ್ಟಿದೆ, ನನ್ನ ಸಮುದಾಯಕ್ಕಾಗಿ ನಾನು ಸಾಯುತ್ತೇನೆ; ನನ್ನ ಸಮುದಾಯದ ನಿಮಿತ್ತ ನನಗೆ ಪರಮೋಚ್ಚವಾದುದು. ನಾನು ಯಾವುದೇ ಪಕ್ಷವನ್ನಾಗಲೀ ಅಥವಾ ನಿಕಾಯವನ್ನಾಗಲೀ ಸೇರಲಿಲ್ಲ. ನಾನು ಸ್ವತಂತ್ರನಾಗಿಯೇ ಉಳಿದುಕೊಂಡೆ. ನಾನು ಕಾಂಗ್ರೆಸ್ ಸರ್ಕಾರದಲ್ಲಿ ಕ್ಯಾಬಿನೆಟ್ ಮಂತ್ರಿ ಪದವಿಯನ್ನು ಒಪ್ಪಿಕೊಂಡಿದ್ದರಿಂದ, ಅನೇಕರು ನನ್ನನ್ನು ಕಾಂಗ್ರೆಸ್ ಪಕ್ಷವನ್ನು ಸೇರಿದೆನೆಂದು ತಿಳಿದುಕೊಂಡಿದ್ದರು. ಡಾ: ಅಂಬೇಡ್ಕರ್ ಕಾಂಗ್ರೆಸ್ ಅನ್ನು ಸೇರಿದ್ದಾರೆ, ಆದ್ದರಿಂದ ಪರಿಶಿಷ್ಟ ಜಾತಿಗಳ ಜನರು ಪರಿಶಿಷ್ಟ ಜಾತಿಗಳ ಫೆಡರೇಷನ್ನಿನಲ್ಲಿ ಏತಕ್ಕೆ ಮುಂದುವರಿಯಬೇಕೆಂದು ಕೆಲವು ಟೀಕಾಕಾರರು ಬೊಟ್ಟು ಮಾಡಿದರು.ನಾನು ಅದರ ಬಗ್ಗೆ ಲಕ್ನೋದಲ್ಲಿ ವಿವರಣೆ ಕೊಟ್ಟೆ: ಮಣ್ಣು ಮತ್ತು ಕಲ್ಲು ಎರಡು ಬೇರೆ ಬೇರೆ ವಸ್ತುಗಳು. ಅವೆರಡೂ ಎಂದಿಗೂ ಬೆರೆಯುವುದಿಲ್ಲ. ಕಲ್ಲು ಕಲ್ಲಾಗಿಯೇ ಉಳಿಯುತ್ತದೆ, ಮಣ್ಣು ಮಣ್ಣಾಗಿಯೇ ಇರುತ್ತದೆ. ನಾನು ಬಂಡೆಯಂತೆ. ಅದು ಕರಗುವುದಿಲ್ಲ, ಆದರೆ ಅದು ನದಿಗಳು ಹರಿಯುವ ದಿಕ್ಕನ್ನು ತಿರುಗಿಸುತ್ತದೆ. ನಾನು ಎಲ್ಲೇ ಇರಲಿ, ಯಾರ ಜೊತೆಯಲ್ಲಿಯಾದರೂ ನಾನು ಇರಲಿ, ನಾನು ನನ್ನ ವ್ಯಕ್ತಿತ್ವವನ್ನು, ಅನನ್ಯತೆಯನ್ನು ಕಳೆದುಕೊಳ್ಳುವುದಿಲ್ಲ. ಯಾರಾದರೂ ನನ್ನ ಸಹಕಾರವನ್ನು ಕೇಳಿದರೆ, ಯೋಗ್ಯ ಧ್ಯೇಯಕ್ಕಾಗಿ ಸಂತೋಷವಾಗಿ ಕೊಡುತ್ತೇನೆ. ನಾನು ಕಾಂಗ್ರೆಸ್ಸ್ ಸರ್ಕಾರದೊಡನೆ ನಾಲ್ಕು ವರ್ಷಗಳ ಕಾಲ ನನ್ನ ಎಲ್ಲಾ ಬಲದಿಂದ, ಪ್ರಾಮಾಣಿಕತೆಯಿಂದ, ತಾಯ್ನಾಡಿನ ಸೇವೆಯಲ್ಲಿ ಸಹಕರಿಸಿದೆ. ಆದರೆ ಇಷ್ಟೆಲ್ಲಾ ವರ್ಷಗಳಲ್ಲೂ ನಾನು ಎಂದಿಗೂ ಕಾಂಗ್ರೆಸ್ ಸಂಸ್ಥೆಯಲ್ಲಿ ಮಿಳಿತವಾಗಲಿಲ್ಲ.

ಯಾವ ಪಕ್ಷಕ್ಕೆ ಪರಿಶಿಷ್ಟ ಜಾತಿ ಜನಗಳಿಗೆ ಅನುಕಂಪವಿದೆ ಎಂದು ನಮಗೆ ಅನಿಸುತ್ತದೆಯೋ, ನಮ್ಮ ಜನಗಳ ಕುಂದು ಕೊರತೆಗಳನ್ನು ಪರಿಹರಿಸುವುದಕ್ಕೆ ಶ್ರಮ ವಹಿಸುತ್ತದೆಯೋ ಆ ಪಕ್ಷವನ್ನು ನಾವು ಸೇರ ಬಯಸುತ್ತೇವೆ. ಆದರೆ ನಮ್ಮ ಜನಗಳ ಮೇಲೆ ಅನುಕಂಪ ಇರುವ ಒಂದೇ ಒಂದು ಪಕ್ಷವೂ ಇಲ್ಲ ಎಲ್ಲರೂ ಸ್ವಾರ್ಥಿಗಳು.

ನಾನು ಚುನಾವಣೆಗಳ ಸಂಬಂಧ ಇಲ್ಲಿಗೆ ಬಂದಿದ್ದೇನೆ. ನೀವು ಒಗ್ಗಟ್ಟಿನಿಂದ ಇಲ್ಲದಿದ್ದರೆ, ನಿಮಗೆ ಜಯ ಸಿಗುವುದಿಲ್ಲ ಎಂದು ನಾನು ಹೇಳುತ್ತೇನೆ. ಜಯಶಾಲಿಗಳಾಗಬೇಕಾದರೆ ಶಕ್ತಿಶಾಲಿಯಾಗಿರಬೇಕು ಇಲ್ಲವೇ ಹಣವಂತರಾಗಿರಬೇಕು. ಇವೆರಡರಲ್ಲಿ ಒಂದು ನಾವು ಜಯಗಳಿಸಬೇಕಾದರೆ, ಅತ್ಯವಶ್ಯಕ. ನಮ್ಮ ಹತ್ತಿರ ಹಣವೂ ಇಲ್ಲ, ನಮಗೆ ಬಹುಮತವೂ ಇಲ್ಲ. ಮಾರ್ವಾಡಿಗಳಿಗೆ ಮತ್ತು ಬನಿಯಾಗಳಿಗೆ ಅಧಿಕಾರವಿಲ್ಲ, ಆದರೆ ಹಣವಿದೆ. ಆದ್ದರಿಂದ ಆ ಹಣದಿಂದ ಏನು ಬೇಕಾದರೂ ಕೊಳ್ಳಬಹುದು. ಅವರು ಪೋಲೀಸರನ್ನು ಕೊಳ್ಳಬಲ್ಲರು, ಹಾಗೆಯೇ ನ್ಯಾಯಲಯಗಳನ್ನು ಸಹ. ನಮ್ಮ ಜನಗಳಿಗೆ ಅಧಿಕಾರವೂ ಇಲ್ಲ, ಹಣವೂ ಇಲ್ಲ. ಹಳ್ಳಿಗಳಲ್ಲಿ ನಮ್ಮ ಜನ ಅಲ್ಪಸಂಖ್ಯಾತರಾಗಿದ್ದಾರೆ, ಮತ್ತು ಅವರು ಯಾವಾಗಲೂ ಸವರ್ಣೀಯ ಹಿಂದೂಗಳ ಇಲ್ಲವೇ ಇತರ ಮೇಲ್ಜಾತಿಯ ಹಿಂದೂಗಳ ಮರ್ಜಿಯಲ್ಲಿ ಬದುಕಬೇಕು. ನಮ್ಮ ಜನಗಳು ಎಲ್ಲಾ ರೀತಿಯ ಕಷ್ಟ ಕೋಟಲೆಗಳಿಗೆ ಒಳಗಾಗುತ್ತಾರೆ, ಮತ್ತೆ ಅವರು ಪೊಲೀಸ್ ಅಧಿಕಾರಿಗಳಿಗೆ ದೂರು ಕೊಟ್ಟರೆ, ಅವರನ್ನು ಯಾರೂ ಕೇಳುವುದಿಲ್ಲ. ಅವರು ದೂರು ಕೊಟ್ಟರೆ ಬಯ್ಗುಳಗಳನ್ನೂ ಕೇಳಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲೂ ನಾವೇನಾದರೂ ಸಾಧಿಸಿದ್ದರೆ, ಅದು ಕೇವಲ ರಾಜಕೀಯ ಹಕ್ಕುಗಳು. ನಾವು

ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಬಾವುಟದ ಕೆಳಗೆ ಒಂದುಗೂಡಿದರೆ, ಆ ಹಕ್ಕುಗಳನ್ನು ಪಡೆದುಕೊಳ್ಳಬಹುದಲ್ಲದೆ, ನಮ್ಮ ಸಮುದಾಯವನ್ನು ಗೊಂದಲ ಗಲಾಟೆಯಿಂದ ಹೊರಗೆ ಎಳೆದುಕೊಳ್ಳಬಹುದು.

ನಮಗೆ ಸಿಗುವುದು ಒಂದು ಅಧಿಕಾರ ಮಾತ್ರ, ಮತ್ತೆ ಅದು ರಾಜಕೀಯ ಅಧಿಕಾರ. ಈ ಅಧಿಕಾರವನ್ನು ನಾವು ಗೆಲ್ಲಲೇಬೇಕು. ಈ ಅಧಿಕಾರದ ಅಸ್ತ್ರವನ್ನು ಇಟ್ಟುಕೊಂಡು, ನಾವು ನಮ್ಮ ಜನಗಳನ್ನು ಕಾಪಾಡಬಹುದು.

ಈ ದೇಶಕ್ಕೆ ಸಿಕ್ಕಿರುವ ಸ್ವಾತಂತ್ರ್ಯದಲ್ಲಿ ಈ ಅಧಿಕಾರ ನಿಮಗೆ ಸಿಗುವ ಖಾತರಿ ಇದೆಯೆ?

ಈ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ನಾವು ಎಂದಿಗೂ ವಿರೋಧವಾಗಿರಲಿಲ್ಲ. ಆದರೆ ನಮಗೆ ಒಂದೇ ಒಂದು ಪ್ರಶ್ನೆಗೆ ನೇರವಾದ ಉತ್ತರ ಬೇಕಾಗಿತ್ತು. ಸ್ವತಂತ್ರ ಭಾರತದಲ್ಲಿ ನಮ್ಮ ಗತಿಯೇನು? ಈ ಪ್ರಶ್ನೆಯನ್ನು ನಾನು ಗಾಂಧೀಜಿ ಮತ್ತು ಇತರ ಕಾಂಗ್ರೆಸ್ ನಾಯಕುರಗಳನ್ನು ಕೇಳಿದೆ. ನಾನು ಕೇಳಿದ ಒಂದೇ ಒಂದು ಪ್ರಶ್ನೆಯೆಂದರೆ, ಸ್ವರಾಜ್ಯದಲ್ಲಿ ನಮ್ಮ ಜನಗಳ ಪರಿಸ್ಥಿತಿ ಏನಾಗುತ್ತದೆ ಎಂದು. ನಾವು ಈ ದಿನಗಳಲ್ಲಿ ಇರುವ ಹಾಗೆಯೇ ಆಗಲೂ ಅದೇ ಭಂಗಿಗಳಾಗಿ, ಚಮ್ಮಾರರುಗಳಾಗಿ ಉಳಿದುಕೊಳ್ಳುತ್ತೇವೆಯೇ? ಈಗ ಆಗುತ್ತಿರುವ ಹಾಗೆಯೇ, ನಮ್ಮ ಮಕ್ಕಳುಗಳನ್ನು ಪಾಠಶಾಲೆಗಳಿಗೆ ಸೇರಿಸುವುದಿಲ್ಲವೆ? ಈಗ ಹಳ್ಳಿಗಳಲ್ಲಿ ನಮ್ಮ ಜನ ನರಳುತ್ತಿರುವ ಹಾಗೆ ಆಗಲೂ ನಾವು ನರಳಬೇಕೆ? ನಮ್ಮ ಜನಗಳಿಗೆ ಏನಾಗುತ್ತದೆ? ದುಂಡು ಮೇಜಿನ ಸಮ್ಮೇಳನದಲ್ಲಿ, ನಮಗೆ ಸ್ವರಾಜ್ಯ ಬೇಕೇ ಬೇಡವೇ ಎಂಬ ಈ ಪ್ರಶ್ನೆಯನ್ನು ಮತ್ತೆ ಎತ್ತಲಾಗಿತ್ತು. ಈ ನಡೆಯ ಪ್ರಾಯೋಜಕರು ಯಾರು ಎಂದು ನಾನು ಗಾಂಧೀಜಿಯವರನ್ನು ಕೇಳಿದೆ: ಅದೇ ಪ್ರಶ್ನೆ: ಭಾರತಕ್ಕೆ ಸ್ವರಾಜ್ಯ ಬಂದರೆ, ಬಡ ಜನಗಳಿಗೆ ಏನು ಮಾಡುತ್ತೀರಿ ಎಂದು. ಮುಸ್ಲಿಮರಿಗೆ, ಸಿಖ್ಖರಿಗೆ, ಮತ್ತು ಆಂಗ್ಲೋ ಇಂಡಿಯನ್ನರಿಗೆ ಕೊಡಬೇಕೆಂದು ಪ್ರಸ್ತಾವಿಸಿರುವ ರಕ್ಷಣೋಪಾಯಗಳನ್ನು ಪರಿಶಿಷ್ಟ ಜಾತಿಗಳಿಗೆ ಕೊಡಲಾಗುತ್ತದೆಯೆ ಎಂದು? ಆದರೆ, ೧೯೩೨ರಲ್ಲಿ ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕವಾದ ಹಕ್ಕುಗಳನ್ನು ಕೊಟ್ಟಾಗ ಗಾಂಧೀಜಿ ಅವರಿಗೆ ಕೊಟ್ಟ ಪ್ರತ್ಯೇಕ ಮತದಾರರ ಮಂಡಲದ ಉಪಬಂಧವನ್ನು ಕಿತ್ತು ಹಾಕುವವರೆಗೂ ಆಮರಣಾಂತ ಉಪವಾಸವನ್ನು ಪ್ರಾರಂಭಿಸಿದರು. ಆ ಸಮಯದಲ್ಲಿ ನಮ್ಮ ಮಧ್ಯೆ ಒಂದು ಒಪ್ಪಂದಕ್ಕೆ ಬರಲಾಯಿತು, ಆದರೆ ಈ ದಿನ ಆಗುತ್ತಿರುವುದು. ಆ ದಿನ ಆದ ಒಪ್ಪಂದಕ್ಕೆ ಪೂರಾ ಬೇರೆಯಾಗಿದೆ. ಆ ಸಮಯದಲ್ಲಿ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಅಭ್ಯರ್ಥಿಗಳ ವಿರುದ್ಧ ಕಾಂಗ್ರೆಸ್ ಟಿಕೆಟ್ ಮೇಲೆ ಯಾವ ಅಭ್ಯರ್ಥಿಗಳನ್ನೂ ನಿಲ್ಲಿಸುವುದಿಲ್ಲ ಎಂದು ಭರವಸೆ ಕೊಡಲಾಗಿತ್ತು. ಈಗ ನಾವು ರಿಸರ್ವ್ ಸೀಟುಗಳಿಗೆ ನಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಲು ಬಯಸುತ್ತಿದ್ದೇವೆ, ಆದರೆ ಕಾಂಗ್ರೆಸ್ ಪಕ್ಷ ಮಧ್ಯೆ ಪ್ರವೇಶಿಸುತ್ತಿದೆ. ನಮ್ಮ ರಿಸರ್ವ್ ಸೀಟುಗಳಿಗೆ ಅಭ್ಯರ್ಥಿಗಳಾಗಿ ಅವರು ದಡ್ಡರನ್ನೂ ಸ್ವಾರ್ಥಪರರನ್ನೂ ನಿಲ್ಲಿಸಲು ಪ್ರಯತ್ನಿಸುತ್ತಿದ್ದಾರೆ; ಇಂಥವರು ಕಾಂಗ್ರೆಸ್ಸಿನ ಹೌದಪ್ಪಗಳಾಗುತ್ತಾರೆ. ಯಾರೇ ಬ್ರಾಹ್ಮಣನಾಗಲೀ ಅಥವಾ ಬನಿಯನಾಗಲೀ ಕಾಂಗ್ರೆಸ್ನ ಟಿಕೆಟ್ ಬೇಕೆಂದು ಕೇಳಿದರೆ, ಅವನಿಗೆ ಒಂದು ಪ್ರಶ್ನೆಯನ್ನು ಕೇಳಲಾಗುತ್ತದೆ. ಅವನು ಎಷ್ಟು ಬಾರಿ ಜೈಲಿಗೆ ಹೋಗಿದ್ದನೆಂದು. ಇದೇ ಪ್ರಶ್ನೆಯನ್ನು ಕಾಂಗ್ರೆಸ್ ಟಿಕೆಟ್ ಕೇಳುವ ಪರಿಶಿಷ್ಟ ಜಾತಿಗಳ ಜನರಿಗೆ ಏಕೆ ಕೇಳುವುದಿಲ್ಲ ಎಂದು ಕಾಂಗ್ರೆಸ್‌ನವರನ್ನು ಕೇಳಬಯಸುತ್ತೇನೆ. ಅಲ್ಲದೆ, ಅನಕ್ಷರಸ್ತ ಮತ್ತು ಜನಪ್ರಿಯರಾಗಿಲ್ಲದ ಜನಗಳನ್ನೇ ಏಕೆ ನೀವು ಆರಿಸುತಿದ್ದೀರಿ ಎಂದೂ ಕೇಳಬಯಸುತ್ತೇನೆ.

ಪಾರ್ಲಿಮೆಂಟಿನಲ್ಲಿ ೩೦ ಮಂದಿ ಪರಿಶಿಷ್ಟ ಜಾತಿಗೆ ಸೇರಿದವರು ಇದ್ದರು. ಅಲ್ಲಿ ಅವರೇನು ಮಾಡಿದ್ದಾರೆಂದು ನಾನು ಕೇಳುತ್ತೇನೆ. ಅವರು ಯಾವತ್ತೂ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ. ಪಾರ್ಲಿಮೆಂಟಿನ ಅವಗಾಹನೆಗೆ ಒಂದು ಮಸೂದೆಯನ್ನು ಮಂಡಿಸಲಿಲ್ಲ. ಹೊರಗಡೆಯಿಂದ ಯಾರಾದರೂ ಬಂದು, ಈ

೩೦ ಮಂದಿ ಪಾರ್ಲಿಮೆಂಟಿನ ಸದಸ್ಯರು, ಯಾವುದೇ ಕುಂದು ಕೊರತೆಯನ್ನು ಮುಂದಿಟ್ಟಿಲ್ಲದಿದ್ದರೆ, ಅವರು ನಮ್ಮ ಜನಗಳೆಲ್ಲ ಕ್ಷೇಮವಾಗಿದ್ದಾರೆ, ಮತ್ತೆ ಅವರಿಗೆ ಯಾವ ವಿಶೇಷ ಪರ್ಯಾಲೋಚನೆಯೂ ಬೇಡ ಎಂದು ತಿಳಿಯುತ್ತಾರೆ. ಆದ ಕಾರಣ ನಾವು ನಮ್ಮ ನೈಜವಾದ ಪ್ರತಿನಿಧಿಗಳನ್ನು ಕಳುಹಿಸಬಯಸುತ್ತೇವೆ; ಆಗ ಅವರು ನಮ್ಮ ಕುಂದು ಕೊರತೆಗಳನ್ನು ಶಾಸನ ಸಭೆಗಳ ಮುಂದೆ ಪರಿಹಾರಕ್ಕಾಗಿ ಇಡುತ್ತಾರೆ.

ಮೊಟ್ಟ ಮೊದಲನೆಯ ಚುನಾವಣೆಯಿಂದ, ನಾವು ಕಾಂಗ್ರೆಸ್ಗೆ ವಿರೋಧವಾಗಿ ಹೋರಾಡುತ್ತಿದ್ದೇವೆ, ಏಕೆಂದರೆ ಅವರು ಅನವಶ್ಯಕವಾಗಿ ನಮ್ಮ ಹಕ್ಕುಗಳಳಲ್ಲಿ ಮೂಗು ತೂರಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ನಾಯಕರಾದ ಪಂಡಿತ್ ನೆಹರೂ ಅವರನ್ನು ನೋಡಿ: ಕಳೆದ ಇಪ್ಪತ್ತು ವರ್ಷಗಳಲ್ಲಿ ಎರಡು ಸಾವಿರ ಭಾಷಣಗಳನ್ನು ಮಾಡಿದ್ದಾರೆ., ಆದರೆ ಅವರು ಒಂದು ಸಲವೂ ಕೂಡ ಪರಿಶಿಷ್ಟ ಜಾತಿಗಳ ಯೋಗಕ್ಷೇಮದ ಬಗ್ಗೆ ಮಾತನಾಡಿಲ್ಲ. ಕಾಂಗ್ರೆಸ್ ಪಕ್ಷದ ನಾಯಕರೇ ಇಷ್ಟು ಹಠಮಾರಿಯಾಗಿದ್ದರೆ, ನಮ್ಮ ಬಗ್ಗೆ ಯಾವ ಅನುಕಂಪವನ್ನು ಇಟ್ಟುಕೊಂಡಿರಬಹುದು ಎಂದು ಇದರಿಂದ ನಿಮಗೆ ಗೊತ್ತಾಗುತ್ತದೆ. ಪಂಡಿತ್ ನೆಹರೂ ಅವರು ಯಾವಾಗಲೂ ಮುಸ್ಲಿಮರ ಪರವಾಗಿ ಇದ್ದಾರೆ. ಮುಸ್ಲಿಮರನ್ನು ಕಡೆಗಣಿಸಬೇಕೆಂಬುದು ನನ್ನ ಅಪೇಕ್ಷೆಯೇನಲ್ಲ ಆದರೆ ಇನ್ನೂ ಹೆಚ್ಚಿಗೆ ರಕ್ಷಣೆ ಬೇಕಾದ ಇತರ ಸಮುದಾಯಗಳಿಗೆ ಕೊಡದೆ ಮುಸ್ಲಿಮರು ಸೌಲಭ್ಯಗಳನ್ನು ಅನುಭವಿಸಲು ಕೊಡಲು ಬಾರದು ಎಂದು ನಾನು ಹೇಳುತ್ತೇನೆ. ಕೆಲವು ಜನ ಪಂಡಿತ್ ನೆಹರೂ ಅವರ ಬಳಿಗೆ ಹೋಗಿ ಪರಿಶಿಷ್ಟ ಜಾತಿಗಳಿಗೆ ಏನಾದರೂ ಮಾಡಿ ಎಂದು ಪ್ರಾರ್ಥಿಸಿದರೆಂದು ನನಗೆ ಗೊತ್ತಾಯಿತು. ಆದರೆ, ಪ್ರತಿಯೊಂದನ್ನೂ ಅವರಿಗೆ ಮಾಡಲಾಗಿದೆ. ಅವರಿಗೀಗ ಏನೂ ವಿಶೇಷವಾಗಿ ಮಾಡಬೇಕಾದದ್ದು ಇಲ್ಲ ಎಂದು ಅವರಿಗೆ ನೆಹರು ಹೇಳಿದರು. ದೇಶದ ವಿಭಜನೆಯ ಸಮಯದಲ್ಲಿ, ಪಾಕಿಸ್ತಾನದ ಅಧಿಕಾರಿಗಳು ನಮ್ಮ ಜನರನ್ನು ನೀವು ಸೇವಕರು ಮಾಡುವ ಕೆಲಸಗಳನ್ನು ಮಾಡಬೇಕಾಗಿಲ್ಲವೆಂದು ಹೇಳಿ ಪಾಕಿಸ್ತಾನದಲ್ಲೇ ಉಳಿದುಕೊಳ್ಳುವಂತೆ ಕೇಳಿದಾಗ, ನಾನು ಪಂಡಿತ್ ನೆಹರೂ ಅವರನ್ನು ಬಡ ಪರಿಶಿಷ್ಟ ಜಾತಿಗಳನ್ನು ಖಾಲಿಮಾಡಿಸುವುದಕ್ಕೆ ಏನಾದರೂ ಮಾಡಿ ಎಂದು ಕೇಳಿಕೊಂಡೆ. ಪಂಡಿತ್ ನೆಹರೂ ಏನನ್ನೂ ಮಾಡಲಿಲ್ಲ. ನಮ್ಮ ಜನಗಳನ್ನು ಪಾಕಿಸ್ತಾನದಿಂದ ಸ್ಥಳಾತರಿಸುವುದಕ್ಕೆ ನಾನು ಇಬ್ಬರನ್ನು ಅಲ್ಲಿಗೆ ಕಳುಹಿಸಿದೆ; ಬಡ ಪರಿಶಿಷ್ಟ ಜಾತಿಗಳ ರಕ್ಷಣೆಗಾಗಿ ನಮ್ಮ ಮಹರ್ ಬೆಟಾಲಿಯನ್ ಅನ್ನೂ ಸಹ ಅಲ್ಲಿಗೆ ಕಳುಹಿಸಿದೆ. ನಮ್ಮ ಜನಗಳ ಬಗ್ಗೆ ಕಾಂಗ್ರೆಸ್ ನಾಯಕರಿಗೆ ಅಷ್ಟೊಂದು ಅನುಕಂಪವಿದ್ದರೆ ಕಾಂಗ್ರೆಸ್ ನಮಗೇನು ಮಾಡಿತು?

ಪಂಜಾಬ್ ಶಾಸನ ಸಭೆಯಲ್ಲಿ ೧೨೦ ಸ್ಥಾನಗಳಿದ್ದು ಅದರಲ್ಲಿ ೨೧ ಸ್ಥಾನಗಳನ್ನು ಪರಿಶಿಷ್ಟ ಜಾತಿಗಳವರಿಗೆ ಮೀಸಲಿಡಲಾಗಿದೆ; ಮತ್ತೆ ಕೇಂದ್ರದ ಪಾರ್ಲಿಮೆಂಟಿನಲ್ಲಿ ಮೂರು ಸ್ಥಾನಗಳನ್ನು ಮೀಸಲಿಡಲಾಗಿದೆ. ಈ ಎಲ್ಲಾ ಮೀಸಲು ಸ್ಥಾನಗಳಿಗೆ ನಿಮ್ಮ ಆಯ್ಕೆಯ ಅಭ್ಯರ್ಥಿಗಳನ್ನು ನಿಲ್ಲಿಸಲು ಬಯಸುತ್ತಿದ್ದೀರ ಎಂಬ ಒಂದು ಪ್ರಶ್ನೆಯನ್ನು ಈ ಎಲ್ಲಾ ಪಕ್ಷಗಳಿಗೆ ನಾನು ಕೇಳುತ್ತೇನೆ; ಪರಿಶಿಷ್ಟ ಜಾತಿಗಳಿಗೆ ಅನುಕಂಪವನ್ನು ತೋರಿಸಲು ಮೀಸಲಿರಿಸಿರುವ ಸ್ಥಾನಗಳಿಗೆ ಮಾತ್ರ ಏಕೆ ನಿಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುತ್ತೀದ್ದೀರಿ? ಏಕೆ ಮುಕ್ತವಾಗಿರುವ ಸ್ಥಾನಗಳಿಗೆ ನಿಲ್ಲಿಸುತ್ತಿಲ್ಲ? ಅವರು ಪ್ರಾಮಾಣಿಕರಾಗಿದ್ದರೆ, ನಮ್ಮ ಜನಗಳಿಗೆ ಮುಕ್ತ ಸ್ಥಾನಗಳನ್ನು ಕೊಡಲಿ. ನಾವು ಬಹಳ ಕಷ್ಟಪಟ್ಟು ಪಡೆದುಕೊಂಡಿರುವದನ್ನು ಕಿತ್ತುಕೊಳ್ಳಲು ಈ ಎಲ್ಲಾ ಪಕ್ಷಗಳು ಪ್ರಯತ್ನಿಸುತ್ತಿವೆ.

ರಾಜಕೀಯ ಅಧಿಕಾರವಿಲ್ಲದೆ, ಈ ಪ್ರಪಂಚದಲ್ಲಿ ಅಸ್ತಿತ್ವದಲ್ಲಿ ಇರಲು ಸಾಧ್ಯವಿಲ್ಲ. ಪ್ರಾಂತೀಯ ಶಾಸನ ಸಭೆಗಳಲ್ಲಿ ಮತ್ತು ಒಕ್ಕೂಟದ ಪಾರ್ಲಿಮೆಂಟಿನಲ್ಲಿ ನಾವು ಮೀಸಲು ಸ್ಥಾನಗಳನ್ನ ೧೦ ವರ್ಷಗಳಿಗೆ

ಪಡೆದುಕೊಂಡಿದ್ದೇವೆ, ಆದರೆ ೧೦ವರ್ಷಗಳ ನಂತರ ಏನಾಗುತ್ತದೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಶಾಸನ ಸಭೆಗಳಿಗೆ ಮತ್ತು ಪಾರ್ಲಿಮೆಂಟಿಗೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸದೆ ಇದ್ದರೆ, ನಮ್ಮ ಎಲ್ಲಾ ಪರಿಶ್ರಮಗಳು ನಿರರ್ಥಕವಾಗುತ್ತವೆ. ಆದರೆ ಅವರನ್ನು ಕಳುಹಿಸಿದರೆ, ಅದರಿಂದ ಏನಾದರೊಂದು ಉಪಯೋಗವಾಗುತ್ತದೆ. ಇಲ್ಲದಿದ್ದರೆ, ಸರ್ಕಾರದಲ್ಲಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿಯಾಗಲೀ ನಮ್ಮನ್ನು ಕೇಳುವವರೇ ಇರುವುದಿಲ್ಲ.

ಈಗ ಭಾರತದಲ್ಲಿ ರಾಜಕೀಯ ಭೂಪಟ ಬದಲಾಯಿಸಿದೆ. ಮೊದಲು, ಕಾಂಗ್ರೆಸ್ ಸ್ವರಾಜ್ಯಕ್ಕಾಗಿ ಹೋರಾಡುತ್ತಿತ್ತು; ಅದರಿಂದಾಗಿಯೇ ಎಲ್ಲಾ ಜನಗಳೂ ಅದರಲ್ಲಿ ಭರ್ತಿಯಾದರು. ಕಾಂಗ್ರೆಸ್ ಅನ್ನು ವಿರೋಧಿಸಿದವರನ್ನು ರಾಷ್ಟ್ರ ವಿರೋಧಿ ಎಂದು ಭಾವಿಸಲಾಯಿತು. ಆದರೆ ಈಗ ಪರಿಸ್ಥಿತಿ ಬದಲಾಯಿಸಿದೆ. ಪಂಜಾಬ್ ಕಾಂಗ್ರೆಸ್ಸಿನ ಪೈಲವಾನರುಗಳನ್ನು ನೋಡಿ. ಒಂದು ಕಾಲದಲ್ಲಿ ಭಾರ್ಗವ ಮತ್ತು ಸಾಚಾರ್ ಅವರುಗಳು ಸಹೋದರರಂತೆ ಇದ್ದರು. ಒಬ್ಬರಿಗೊಬ್ಬರು ಶಾಂತಿಯಿಂದ ಇರುವುದಾಗಿ ಮಾತು ಕೊಟ್ಟರು. ಆದರೆ, ಈಗ ಕಡುವೈರಿಗಳಾಗಿದ್ದಾರೆ. ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ಕಡೆಯ ತಾರೀಖು ೫ನೇ ನವೆಂಬರ್, ಈವತ್ತು ೨೭ನೇ ಅಕ್ಟೋಬರ್. ಆದರೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ಇದುವರೆಗೂ ಪಂಜಾಬಿನಿಂದ ಕಳುಹಿಸಿಲ್ಲ. ಈ ಇಬ್ಬರು ಕೂಡ ಪ್ರಧಾನ ಮಂತ್ರಿಯಾಗಲು ಬಯಸಿದ್ದಾರೆ. ಬಿಹಾರದಲ್ಲೂ ಸಹಾ ಇದೇ ಆಗುತ್ತಿದೆ. ವಿಭಜನೆಯ ಸಮಯದಲ್ಲಿ ಅಷ್ಟೊಂದು ಶಕ್ತಿಶಾಲಿಯಾಗಿದ್ದ ಕಾಂಗ್ರೆಸ್ ಇಷ್ಟು ಅಲ್ಪ ಸಮಯದಲ್ಲಿ ಬಹಳ ನಿರ್ಬಲವಾಗಿರುವುದು ನನಗೆ ಆಶ್ಚರ್ಯವಾಗಿದೆ. ಈ ದಿನಗಳಲ್ಲಿ ಗಾಂಧಿ ಟೋಪಿ ಹಾಕಿಕೊಂಡವರನ್ನು ಸಭ್ಯ ವ್ಯಕ್ತಿ ಎಂದು ಯಾರೂ ಅಂದುಕೊಳ್ಳುತ್ತಿಲ್ಲ. ಕಾಂಗ್ರೆಸ್ ಈಗ ಹಳೆಯದಾಗಿ ಹೋಗಿದೆ; ಇತರರೊಂದಿಗೆ ಅದಕ್ಕೆ ಹೋರಾಡಲು ಸಾಧ್ಯವಾಗುತ್ತಿಲ್ಲ,, ತಾನೇ ಸ್ವಾಭಾವಿಕ ಸಾವನ್ನು ಅಪ್ಪುತ್ತದೆ.

ನೀವು ಪರಿಶಿಷ್ಟ ಜಾತಿಗಳ ಫೆಡರೇಷನ್ನಿಗೆ ಮತ ಹಾಕಿದರೆ, ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ನಮ್ಮ ಅಭ್ಯರ್ಥಿಗಳು ಖಂಡಿತವಾಗಿಯೂ ಗೆಲ್ಲುತ್ತಾರೆ ಎಂದು ನಾನು ನಿಮಗೆ ಭರವಸೆ ಕೊಡುತ್ತೇನೆ. ಅದರಲ್ಲಿ ಯಾವ ಸಂಶಯವೂ ಇಲ್ಲ, ಆದರೆ ನೀವು ನಮ್ಮ ಸಾಚಾ ಪ್ರತಿನಿಧಿಗಳಿಗೆ ವೋಟು ಮಾಡಬೇಕಷ್ಟೆ. ಮತ ಹಾಕುವ ದಿನ ಎಲ್ಲಾ ಪುರುಷರು ಮತ್ತು ಮಹಿಳೆಯರೂ ಎಲ್ಲಾ ಕೆಲಸವನ್ನು ಬಿಟ್ಟು, ಮತಗಟ್ಟೆಗೆ ಹೋಗಬೇಕು.

ಪರಿಶಿಷ್ಟ ಜಾತಿಗಳಿಗೆ ಇರುವ ಮೀಸಲಾತಿ ೧೦ ವರ್ಷಗಳಿಗೆ ಮಾತ್ರ. ಅಸ್ಪೃಷ್ಯತೆ ಇರುವವರೆಗೂ ಈ ಮೀಸಲಾತಿ ಇರಬೇಕೆಂದು ನಾನು ಬಯಸಿದ್ದೆ, ಆದರೆ ಕಾಂಗ್ರೆಸ್ ನಾಯಕರಾದ ದಿವಂಗತ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರು ನನ್ನನ್ನು ವಿರೋಧಿಸಿದರು. ಆದರೆ ಸಮಿತಿಯಲ್ಲಿ ಇದ್ದ ಇತರರು ಸರ್ದಾರ್ ಅವರನ್ನು ಬೆಂಬಲಿಸಬೇಕಾಯಿತು. ಏಕೆಂದರೆ ಪಟೇಲ್ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದರು. ಆದುದರಿಂದ ನಾವು ನಮ್ಮ ಸಾಚಾ ಪ್ರತಿನಿಧಿಗಳನ್ನು ಶಾಸನ ಸಭೆಗಳಿಗೆ ಕಳುಹಿಸಲು ಪ್ರಯತ್ನ ಪಡಬೇಕು; ಆಗ ಅವರು ನಮ್ಮ ಹಿತರಕ್ಷಣೆ ಮಾಡುವುದೂ ಅಲ್ಲದೆ ೧೦ ವರ್ಷಗಳ ನಂತರವೂ ಮೀಸಲಾತಿಯನ್ನು ಮುಂದುವರಿಸುವುದಕ್ಕೆ ಪ್ರಯತ್ನಿಸುತ್ತಾರೆ. ಇತರ ಪಕ್ಷಗಳಿಂದ ಟಿಕೆಟ್ಗಳನ್ನು ಪಡೆಯುತ್ತಿರುವ ನಮ್ಮ ಜನಗಳು, ೧೦ ವರ್ಷಗಳ ನಂತರ ತಮಗೆ ಎಲ್ಲೂ ಜಾಗವಿರುವುದಿಲ್ಲವೆಂಬುದನ್ನು ಮರೆತಿದ್ದಾರೆ. ಬೇರೆ ಯಾವ ಪಕ್ಷದವರೂ ಅವರಲ್ಲಿಗೆ ಬರುವುದಿಲ್ಲ, ಹಾಗಾಗಿ ಅವರು ತಮ್ಮ ಕಾಲ ಮೇಲೆಯೇ ನಿಲ್ಲಬೇಕಾಗುತ್ತದೆ. ಈ ದಿನ ಇತರ ಪಕ್ಷಗಳು ನಮ್ಮ ವೋಟುಗಳನ್ನು ಪಡೆಯಲು, ನಮ್ಮ ಸ್ಥಾನಗಳನ್ನು ಹಿಡಿದುಕೊಳ್ಳಲು ಕಾತರರಾಗಿದ್ದಾರೆ; ಅವರಿಗೆ ನಮ್ಮ ಬಗ್ಗೆ ಯಾವ ಅನುಕಂಪವೂ ಇಲ್ಲ.

ಮತ ಚಿಹ್ನೆಗಳನ್ನು ಬೇರೆ ಬೇರೆ ಪಕ್ಷಗಳಿಗೆ ಹಂಚಿಕೆ ಮಾಡುವ ಸಮಯ ಬಂದಾಗ, ನಮ್ಮ ಪಕ್ಷವಾದ ಪರಿಶಿಷ್ಟ ಜಾತಿಗಳ ಫೆಡರೇಷನ್ ಅನ್ನು ಅಖಿಲ ಭಾರತ ಪಕ್ಷವೆಂದು ಗುರುತಿಸಲಾಯಿತು. ಇತರ ಪಕ್ಷಗಳು, ಎತ್ತುಗಳು, ಕುದುರೆಗಳು, ಕತ್ತೆಗಳು ಇತ್ಯಾದಿ ಇತ್ಯಾದಿ ಗಳನ್ನು ತಮ್ಮ ಚಿಹ್ನೆ ಎಂದು ಆಯ್ದುಕೊಂಡರು.. ಆದರೆ ನಿಮ್ಮ ಅನುಕೂಲಕ್ಕಾಗಿ ನಾನು ನಮ್ಮ ಚಿಹ್ನೆಯಾಗಿ 'ಆನೆ' ಯನ್ನು ಆಯ್ದುಕೊಂಡೆ, ಹೀಗಾಗಿ ನಮ್ಮ ಜನಗಳಿಗೆ ನಮ್ಮ ಪಕ್ಷದ ಅಭ್ಯರ್ಥಿಗಳು ಯಾರು ಎಂದು ಗುರುತಿಸುವದಕ್ಕೆ ಕಷ್ಟವಾಗಬಾರದು ಎಂದು. ಆನೆಯನ್ನು ಇತರ ಪ್ರಾಣಿಗಳಿಂದ ಸುಲಭವಾಗಿ ಗುರುತಿಸಬಹುದು.

ಈ ಸಲ ಸಂಚಿತ ಮತದಾನ ಪದ್ಧತಿಗೆ ಬದಲಾಗಿ ಹಂಚಿಕೆ ಮತದಾನ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಮೀಸಲಾತಿ ಇರುವ ಕಡೆಯಲ್ಲಿ, ಆ ಮತ ಕ್ಷೇತ್ರದ ಮತದಾರರು ಎರಡು ಮತಗಳನ್ನು ಚಲಾಯಿಸಬಹುದು. ಒಂದು ಮೀಸಲು ಸ್ಥಾನದ ಅಭ್ಯರ್ಥಿಗೆ, ಇನ್ನೊಂದು ಮುಕ್ತ ಸ್ಥಾನದ ಅಭ್ಯರ್ಥಿಗೆ. ಒಬ್ಬನಿಗೇ ಎರಡು ಮತಗಳನ್ನು ಹಾಕಲಾಗುವುದಿಲ್ಲ. ಆದುದರಿಂದ ಯಾವುದಾದರೊಂದು ಪಕ್ಷದೊಂದಿಗೆ ಜೊತೆಯಾಗಬೇಕು; ಆ ಪಕ್ಷದ ಮತದಾರರು ನಮ್ಮ ಅಭ್ಯರ್ಥಿಗೆ ತಮ್ಮ ಎರಡನೆ ಮತವನ್ನು ಹಾಕುತ್ತಾರೆ. ನಾವು ಒಪ್ಪಂದಕ್ಕೆ ಬರಬೇಕೆಂದಿರುವ ಪಕ್ಷವನ್ನು ಇನ್ನು ಕೆಲವೇ ದಿನಗಳಲ್ಲಿ ಪ್ರಕಟಿಸಲಾಗುತ್ತದೆ. ನೀವು ಆ ಪಕ್ಷಕ್ಕೇ ಮತ ಹಾಕಬೆಕು ಮತ್ತು ಪ್ರತಿಯಾಗಿ ಆ ಪಕ್ಷ ನಮ್ಮ ಅಭ್ಯರ್ಥಿಗಳನ್ನು ಬೆಂಬಲಿಸುತ್ತದೆ. ಈ ರೀತಿಯಾಗಿ, ನಮ್ಮ ಅಭ್ಯರ್ಥಿಗಳಿಗೆ ಜಯ ದೊರಕುತ್ತದೆ. ನಮ್ಮ ವೋಟಿನ ಬಲ ಅಷ್ಟು ಭದ್ರವಾಗಿಲ್ಲ ಮೇಲಾಗಿ ಜಂಟೀ ಮತದಾರ ಮಂಡಲಿಗಳಿದ್ದು, ಅದು ನಮ್ಮ ಸ್ಥಿತಿಯನ್ನು ಮುಜುಗರಕ್ಕೆ ಈಡು ಮಾಡುತ್ತದೆ. ಆದುದರಿಂದ ಯಾವುದಾದರೊಂದು ಪಕ್ಷದೊಂದಿಗೆ ಸಖ್ಯವನ್ನು ಬೆಳಸಿಕೊಳ್ಳಲೇ ಬೇಕಾಗುತ್ತದೆ.

ಕಡೆಯಲ್ಲಿ ನಾನು ನಿಮಗೆ ತಿಳಿಸಬೇಕಾಗಿರುವುದು ಏನೆಂದರೆ, ಪರಿಶಿಷ್ಟ ಜಾತಿಗಳಿಗೆ ಏನಾದರೂ ಮಾಡಬಲ್ಲ ಒಂದೇ ಒಂದು ಪಕ್ಷವೆಂದರೆ ಪರಿಶಿಷ್ಟ ಜಾತಿಗಳ ಫೆಡರೇಷನ್. ನಾನು ನಿಮಗೆ ಮನೆಯನ್ನು ಕಟ್ಟಿಕೊಟ್ಟಿದ್ದೇನೆ, ಸರಿಯಾದ ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ನಿಮಗೆ ಸೇರಿದ್ದು. ನಾನು ಮರವನ್ನು ನೆಟ್ಟಿದ್ದೇನೆ, ಅದಕ್ಕೆ ನೀವು ನೀರೆರದರೆ ಅದರ ಹಣ್ಣನ್ನು ಸವಿಯಬಲ್ಲಿರಿ, ಅದರ ನೆರಳಿನ ಕೆಳಗೆ ನಿಲ್ಲಬಲ್ಲಿರಿ. ಇಲ್ಲದಿದ್ದರೆ, ನೀವು ಬಿಸಿಲಿನಲ್ಲಿ ನಿಲ್ಲಬೇಕಾಗುತ್ತದೆ. ನಮ್ಮ ಸಮುದಾಯ ಹಾಳಾಗಿ ಹೋಗುತ್ತದೆ. ಆದ್ದರಿಂದ ಪರಿಶಿಷ್ಟ ಜಾತಿಗೆ ಸೇರಿದ ಪ್ರತಿಯೊಬ್ಬರೂ ಪರಿಷ್ಟ ಜಾತಿಗಳ ಫೆಡರೇಷನ್ನಿನ ಬಾವುಟದ ಕೇಳಗೆ ಬರಲೇಬೇಕು ಮತ್ತು ಅದನ್ನು ಇನ್ನು ಹೆಚ್ಚಿಗೆ ಶಕ್ತಿಯುತವಾಗಿ ಮಾಡಬೇಕು. ನಾವೆಲ್ಲ ಒಗ್ಗಟ್ಟಾದರೆ ಮಾತ್ರ, ನಾವು ಏನನ್ನಾದರೂ ಸಾಧಿಸಬಲ್ಲೆವು. ಒಗ್ಗಟ್ಟಾಗಿದ್ದರೆ, ನಾವೆಲ್ಲ ನಿಲ್ಲಬಲ್ಲೆವು, ಒಡೆದು ಹೋದರೆ, ನಾವು ಅಧಃಪತನವಾಗುತ್ತೇವೆ.

# ೧೨೫

# ಸಂಸದೀಯ ಪ್ರಜಾಸತ್ತೆಗೆ ಸೋಲುಂಟಾದರೆ, ಅದು ದಂಗೆ, ಅರಾಜಕತೆ ಮತ್ತು ಕಮ್ಯೂನಿಸಂನಲ್ಲೆ ಪರ್ಯವಸಾನವಾಗುತ್ತದೆ

೨೮ನೇ ಅಕ್ಟೋಬರ್ ೧೯೫೧ರಂದು, ಪಂಜಾಬಿನ ಜಲಂದರ್ ಪಟ್ಟಣದಲ್ಲಿ ಡಿ.ಎ.ವಿ ಕಾಲೇಜಿನ ವಿದ್ಯಾರ್ಥಿಗಳ ಪಾರ್ಲಿಮೆಂಟಿನ ಮುಂದೆ ಕೊಟ್ಟ ತಮ್ಮ ಭಾಷಣದಲ್ಲಿ ಡಾ: ಬಿ..ಆರ್. ಅಂಬೇಡ್ಕರ್ ಅವರು ಸಂಸದೀಯ ಪ್ರಜಾಸತ್ತೆ ಏನೆಂದು ಬಹಳ ಸ್ಪಷ್ಟವಾಗಿ ವಿವರಿಸುತ್ತಾರೆ.

ಅವರು ಹೇಳಿದ್ದು:

ಪ್ರಾಂಶುಪಾಲರೆ, ಮಾನ್ಯ ಅಧ್ಯಕ್ಷರೆ ಮತ್ತು ಮಾನ್ಯ ಸಭಾಪತಿ ಅವರೆ,

ನಿಮ್ಮ ಪಾರ್ಲಿಮೆಂಟಿನ ವಿಶೇಷ ಅಧಿವೇಶನವನ್ನು ಉದ್ದೇಷಿಸಿ ಮಾತನಾಡುವುದಕ್ಕೆ ನನ್ನನ್ನು ಕೇಳಿ, ನನಗೆ ಕೊಟ್ಟ ಈ ಅತಿಶಯ ಗೌರವಕ್ಕಾಗಿ ನಾನು ನಿಮಗೆ ಆಭಾರಿಯಾಗಿದ್ದೇನೆ. ನನ್ನ ಇಡೀ ಜೀವನದಲ್ಲಿ ನಾನು ಹಾಗೆ ಹೇಳಬಹುದಾದರೆ ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ, ಒಂದು ವೃತ್ತಿಯಿಂದ ಇನ್ನೊಂದು ವೃತ್ತಿಗೆ ಒಬ್ಬ ಅಲೆಮಾರಿಯಾಗಿದ್ದೇನೆ. ನಾನು ನನ್ನ ವೃತ್ತಿ ಜೀವನವನ್ನು ೧೯೧೯ರಲ್ಲಿ ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆ ಬೊಂಬಾಯಿನ ಸರ್ಕಾರಿ ಕಾಮರ್ಸ್ ಕಾಲೇಜಿನಲ್ಲಿ ರಾಜಕಿಯ ಅರ್ಥಶಾಸ್ತ್ರದ ಪ್ರಾಂಶುಪಾಲನಾಗಿ ಪ್ರಾರಂಭಿಸಿದೆ. ಸಾರ್ವಜನಿಕ ಸೇವೆಯನ್ನು ಮಾಡಬೇಕೆಂದು ಬಯಸುವ ಒಬ್ಬ ವ್ಯಕ್ತಿಗೆ ಸರ್ಕಾರಿ ಸೇವೆ ಸರಿಯಾದುದಲ್ಲ ಎಂದು ಬಹಳ ಬೇಗ ಅನಿಸಿತು. ಸರ್ಕಾರಿ ಸೇವಕನೊಬ್ಬ ಶಿಸ್ತಿನ ನಿಯಮಗಳಿಂದ ಕಟ್ಟಿಹಾಕಲ್ಪಟ್ಟಿರುತ್ತಾನೆ. ಸಾರ್ವಜನಿಕ ಸೇವೆಯ ಅವನ ಕೆಲಸದ ಪ್ರತಿ ಹಂತದಲ್ಲೂ ಅವನಿಗೆ ಅಡ್ಡಿ ಅಡಚಣೆಗಳು ಇರುತ್ತವೆ. ಆಗ ನಾನು ಇಂಗ್ಲೆಂಡಿಗೆ ಹಿಂದಿರುಗಿ ವಕೀಲನಾಗಿ ಪ್ರಾಕ್ಟೀಸು ಮಾಡುವುದಕ್ಕೆ ಬೇಕಾದ ವಿದ್ಯಾರ್ಹತೆಯನ್ನು ಪಡೆದುಕೊಂಡೆ. ನಾನು ಹಿಂದಿರುಗಿ ಬಂದ ಮೇಲೆ ಸ್ವಲ್ಪ ಸಮಯ ವಕೀಲನಾಗಿ ಕೆಲಸ ಮಾಡಿದೆ. ಆಮೇಲೆ ಬೊಂಬಾಯಿನ ಸರ್ಕಾರಿ ಲಾ ಕಾಲೇಜಿನ ಪ್ರಾಂಶುಪಾಲನ ಹುದ್ದೆಯನ್ನು ಒಪ್ಪಿಕೊಂಡೆ. ನಂತರ ಉಪಾಧ್ಯಾಯ ವೃತ್ತಿಗೆ ಹಿಂದಿರುಗಿದೆ. ಆ ಲಾ ಕಾಲೇಜಿನ ಪ್ರಾಂಶುಪಾಲನಾಗಿ ಐದು ವರ್ಷಗಳ ಕಾಲ ಕೆಲಸ ಮಾಡಿದೆ. ಆಗ ೧೯೩೫ರ ಭಾರತ ಸರ್ಕಾರದ ಅಧಿನಿಯಮ ಜಾರಿಗೆ ಬಂದಿತು; ಅದು ಮೊದಲನೆಯ ಬಾರಿಗೆ ಶಾಸನ ಸಭೆಗಳನ್ನು ಅಸ್ತಿತ್ವಕ್ಕೆ ತಂದಿತು. ಆಗ ನನಗೆ ರಾಜಕೀಯಕ್ಕೆ ಧುಮಕಬೇಕೆಂಬ ಅಲೋಚನೆ ಬಂದು, ನಾನು ನನ್ನ ಕೆಲಸವನ್ನು ಬಿಟ್ಟು ರಾಜಕೀಯಕ್ಕೆ ಬಂದೆ. ಆಗಿನಿಂದ ನಾನು ಬಿಟ್ಟು ಬಿಟ್ಟು ವಕೀಲನಾಗಿ ಕೆಲಸವನ್ನು ಮತ್ತು ಸಾರ್ವಜನಿಕ ಸೇವೆಯನ್ನು ಮಾಡುತ್ತಿದ್ದೇನೆ. ಹೀಗಾಗಿ ವಕೀಲ ವೃತ್ತಿ ಮತ್ತು ಸಾರ್ವಜನಿಕ ಸೇವೆ ನನ್ನ ಜೀವನದಲ್ಲಿ ಅದಲು ಬದಲಾಗುತ್ತಿರುವ ವಾಹಿನಿಯಾಗಿವೆ; ನನ್ನ ಜೀವನ ಯಾವ ಕರೆಂಟ್ (ವಾಹಿನಿ) ನಲ್ಲಿ ಕೊನೆಯಾಗುತ್ತದೆಯೋ, ಎ.ಸಿ ಅಥವಾ ಡಿ.ಸಿ ಯೋ ಎಂದು ನನಗೆ ಗೊತ್ತಿಲ್ಲ.

ನನಗೆ ಉಪಾಧ್ಯಾಯ ವೃತ್ತಿ ಎಂದರೆ ಬಹಳ ಅಚ್ಚು ಮೆಚ್ಚು. ನನಗೆ ವಿದ್ಯಾರ್ಥಿಗಳೂ ಬಹಳ ಇಷ್ಟ. ಅವರೊಂದಿಗೆ ಒಡನಾಡಿದ್ದೇನೆ, ಅವರಿಗೆ ಭಾಷಣ ಮಾಡಿದ್ದೇನೆ. ಮಂತ್ರಿಮಂಡಲದಿಂದ ಹೊರಬಂದ ಮೇಲೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವುದು ನನಗೆ ಸಿಕ್ಕಿರುವ ಮೊದಲನೆ ಅವಕಾಶ. ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟ ಮೇಲೆ, ನಾನು ವಿದ್ಯಾರ್ಥಿಗಳಿಗೆ ಭಾಷಣ ಮಾಡಲೇಬೇಕಾಗಿತ್ತು. ಈ ದೇಶದ ವಿದ್ಯಾರ್ಥಿಗಳ ಮೇಲೆ ಈ ದೇಶದ ಬಹಳಷ್ಟು ಭವಿಷ್ಯ ಅತ್ಯವಶ್ಯಕವಾಗಿ ಬೀಳುತ್ತದೆ. ಸಮುದಾಯದ ಒಂದು ಬುದ್ಧಿಮತ್ತೆಯ ಭಾಗವೆಂದರೆ ವಿದ್ಯಾರ್ಥಿಗಳು; ಅವರು ಸಾರ್ವಜನಿಕ ಅಭಿಪ್ರಾಯಕ್ಕೊಂದು ಆಕಾರ ಕೊಡಬಲ್ಲರು. ಆದುದರಿಂದ ನಿಮಗೆ ಎಂದರೆ ಈ ಪಾರ್ಲಿಮೆಂಟಿನ ಸದಸ್ಯರಿಗೆ, ಭಾಷಣ ಮಾಡುವುದು ಎಂದರೆ ನನಗೆ ವಿಶೇಷ ಸಂತಸ ಕೊಡುತ್ತದೆ. ಈ ಅವಕಾಶ ಕೊಟ್ಟುದಕ್ಕಾಗಿ ನಾನು ನಿಜವಾಗಿಯೂ ನಿಮಗೆ ಆಭಾರಿಯಾಗಿದ್ದೇನೆ.

ನಿಮ್ಮನ್ನು ಉದ್ದೇಶಿಸಿ ಭಾಷಣ ಮಾಡಬೇಕೆಂದು ನಿಮ್ಮ ಪ್ರಾಂಶುಪಾಲರು ನನಗೆ ಪತ್ರ ಬರೆದಾಗ, ಅವರು ಯಾವುದೇ ನಿರ್ದಿಷ್ಟ ವಿಷಯವನ್ನು ಸೂಚಿಸಿರಲಿಲ್ಲ. ಈ ದಿನ ಬೆಳಗ್ಗೆ ಯಾವ ವಿಷಯದ ಮೇಲೆ ಮಾತನಾಡಬೇಕೆಂಬುದರ ಬಗ್ಗೆ ನನ್ನ ಮನಸ್ಸಿನಲ್ಲಿ ಏನೂ ಇರಲಿಲ್ಲ. ಆದರೆ ಅಚಾನಕ್ಕಾಗಿ, ನನಗೆ ಯಾವಾಗಲೂ ಆಗುವ ಹಾಗೆ, ಮಾತನಾಡಬೇಕಾದ ವಿಷಯ ಮಿಂಚಿನ ಹಾಗೆ ನನಗೆ ಹೊಳೆಯಿತು. ಸಂಸದೀಯ ಸರ್ಕಾರ ಎಂಬ ವಿಷಯದ ಮೇಲೆ ನಿಮ್ಮೊಂದಿಗೆ ಕೆಲವು ಮಾತುಗಳನ್ನಾಡಬೇಕೆಂದು ತೀರ್ಮಾನಿಸಿದ್ದೇನೆ. ನನಗೆ ಇರುವ ಸಮಯ ಅತ್ಯಲ್ಪ, ಆದ್ದರಿಂದ ಅ ವಿಷಯದ ಮೇಲೆ ಒಂದು ಸಂಕ್ಷಿಪ್ತ ವಿಶ್ಲೇಷಣೆಯನ್ನು ಮಾತ್ರ ಕೊಡಲು ಸಾಧ್ಯವಾಗುತ್ತದೆ.

ಸಂವಿಧಾನ ಸಭೆಯಲ್ಲಿ ಚರ್ಚೆಗಳು ನಡೆಯುತ್ತಿದ್ದಾಗ ನಮಗೆ ಬೇಕಾಗಿರುವ ಸಂವಿಧಾನದ ಸ್ವಭಾವದ ಬಗ್ಗೆ ವಿವಿಧ ಅಭಿಪ್ರಾಯಗಳು ಬರುತ್ತಿದ್ದವು. ಕೆಲವರಿಗೆ ಬ್ರಿಟೀಷ್ ಪದ್ಧತಿಯ ಬಗ್ಗೆ ಒಲವು ಇದ್ದಿತು. ಕೆಲವರಿಗೆ ಅಮೆರಿಕಾದ ಪದ್ಧತಿ ಇಷ್ಟವಾಗಿತ್ತು. ಈ ಎರಡು ಸರ್ಕಾರದ ಪದ್ಧತಿಯ ಬಗ್ಗೆ ಒಲವಿಲ್ಲದ ಇನ್ನೂ ಕೆಲವು ಮಂದಿ ಇದ್ದರು. ಆದರೆ ಸುದೀರ್ಘ ಚರ್ಚೆಯ ನಂತರ, ನಮ್ಮ ದೇಶಕ್ಕೆ ಅತ್ಯಂತ ಸಮರ್ಪಕವಾಗಿರುವ ಪದ್ಧತಿಯೆಂದರೆ ಬ್ರಿಟನ್ನಿನಲ್ಲಿ ಇರುವ ಸಂಸದೀಯ ವ್ಯವಸ್ಥೆ.

ಸಂಸದೀಯ ಸರ್ಕಾರವನ್ನು ಇಷ್ಟ ಪಡದ ಒಂದು ಬಾಗದ ಜನಗಳೂ ಇದ್ದಾರೆ. ಕಮ್ಯೂನಿಸ್ಟರಿಗೆ ರಷ್ಯಾ ಮಾದರಿ ಸರ್ಕಾರ ಬೇಕು. ಪ್ರಸ್ತುತ ಭಾರತ ಸಂವಿಧಾನಕ್ಕೆ ಸೋಷಿಯಲಿಸ್ಟರಿಗೂ ವಿರೋಧವಿದೆ. ಅದರ ವಿರುದ್ಧ ಚಳುವಳಿ ಮಾಡುತ್ತಿದ್ದಾರೆ. ತಾವು ಅಧಿಕಾರಕ್ಕೆ ಬಂದರೆ ಅದನ್ನು ಮಾರ್ಪಾಡು ಮಾಡುವುದಾಗಿ ಅವರು ಘೋಷಿಸಿದ್ದಾರೆ. ವೈಯುಕ್ತಿಕವಾಗಿ ಹೇಳುವುದಾದರೆ, ಸಂಸದೀಯ ಪದ್ಧತಿಯ ಸರ್ಕಾರಕ್ಕೆ ನಾನು ಬಹಳವಾಗಿ ಅಂಟಿಕೊಂಡಿದ್ದೇನೆ. ಅದು ಏನು ಎಂದು ನಾವು ಅರ್ಥ ಮಾಡಿಕೊಳ್ಳಬೇಕು, ಅದನ್ನು ಸಂವಿಧಾನದಲ್ಲಿ ಕಾಪಾಡಿಕೊಳ್ಳಬೇಕು.

ಸಂಸದೀಯ ಸರ್ಕಾರದ ಅರ್ಥವೇನು? ವಾಲ್ಟರ್ ಬಾಗೆಹಾಟ್ ಇಂಗ್ಲಿಷ್ ಸಂವಿಧಾನದ ಮೇಲೆ ಬರೆದ ಒಂದು ಪುಸ್ತಕವಿದೆ. ಅದು ನಿಜವಾಗಲೂ ಒಂದು ಶಾಸ್ತ್ರೀಯ ಪ್ರಕರಣ ಗ್ರಂಥ. ಸಾಂವಿಧಾನಿಕ ಸರ್ಕಾರದ ಮೇಲೆ ಪಂಡಿತರಾದ ಲಾಸ್ಕಿ ಮತ್ತಿತರರು ಆ ನಂತರದಲ್ಲಿ ಅದನ್ನು ವಿಸ್ತರಿಸಿದರು. ಅವನು ಸಂಸದೀಯ ಸರ್ಕಾರದ ಪರಿಕಲ್ಪನೆಯನ್ನು ಒಂದೇ ವಾಕ್ಯದಲ್ಲಿ ಹಿಡಿದಿಟ್ಟಿದ್ದಾನೆ. ಸಂಸದೀಯ ಸರ್ಕಾರವೆಂದರೆ ಚರ್ಚೆಯಿಂದಾಗುವ ಸರ್ಕಾರವಲ್ಲದೆ ಮುಷ್ಟಿ ಕಾಳಗದ ಸರ್ಕಾರವಲ್ಲ ಎಂದು ಅವನು ಹೇಳುತ್ತಾನೆ. ಬ್ರಿಟಿಷ್ ಮಾದರಿಯ ಸರ್ಕಾರದಲ್ಲಿ ತೀರ್ಮಾನವನ್ನು ಚರ್ಚೆ ಮಾಡಿ ತೆಗೆದುಕೊಳ್ಳುತ್ತಾರೆಯೇ ಹೊರತು

ಮುಷ್ಟಿ ಕಾಳಗದಿಂದ ಅಲ್ಲ ಎಂಬುದನ್ನು ಯಾವಾಗಲೂ ನೀವು ಕಾಣುತ್ತೀರಿ. ಫ್ರೆಂಚ್ ರಾಜಕೀಯದತ್ತ ನೋಡಿ. ಅನೇಕ ಬಾರಿ ತೀರ್ಮಾನವನ್ನು ಬಡಿದಾಟದಿಂದ ತೆಗೆದುಕೊಳ್ಳಲಾಗುತ್ತದೆ. ಆ ವ್ಯವಸ್ಥೆಯಲ್ಲಿ ಹುಟ್ಟಿಲ್ಲದವರಿಗೆ, ಅದು ಏನೇನೂ ಸಮರ್ಪಕವಲ್ಲ ಎಂದು ನೀವು ಕಾಣುತ್ತೀರಿ. ನಾವು ಕಲಿಯಬೇಕು, ಅರ್ಥ ಮಾಡಿಕೊಳ್ಳಬೇಕು ಮತ್ತು ಅದನ್ನು ಜಯಪ್ರದಗೊಳಿಸಬೇಕು.

ಪ್ರಸ್ತುತದಲ್ಲಿ ಸಂಸದೀಯ ಪ್ರಜಾಸತ್ತೆ ನಮಗೆ ಗೊತ್ತೇ ಇಲ್ಲ. ಆದರೆ ಒಂದು ಕಾಲದಲ್ಲಿ ಭಾರತ ಸಂಸದೀಯ ಸಂಸ್ಥೆಗಳನ್ನು ಹೊಂದಿತ್ತು. ಪುರಾತನ ಕಾಲದಲ್ಲಿ ಭಾರತ ಬಹಳವಾಗಿ ಮುಂದುವರೆದಿತ್ತು. ಮಹಾಪರಿ ನಿಬ್ಬಣದ ಸೂಕ್ತಗಳನ್ನು ನೀವು ಓದಿದರೆ, ಭಗವಾನ್ ಬುದ್ಧ ಕುಸಿನಾರಧ್ದಲ್ಲಿ (ಕುಸಿನಗರ) ಮರಣ ಶಯ್ಯೆಯಲ್ಲಿ ಇದ್ದಾಗ, ಅದೇ ಸಮಯದಲ್ಲಿ ಅಧಿವೇಶನದಲ್ಲಿ ಕುಳಿತಿದ್ದ, ಮಲ್ಲಾಗಳಿಗೆ ಆ ಬಗ್ಗೆ ಒಂದು ಸಂದೇಶವನ್ನು ಕಳುಹಿಸಲಾಯಿತು. ಅವರು ಸಂಸದೀಯ ಸಂಸ್ಥೆಗಳಿಗೆ ಒಲವು ಬೆಳಸಿಕೊಂಡಿದ್ದರು. ಬುದ್ಧನ ಬಗ್ಗೆ ಆ ಸಂದೇಶವನ್ನು ಅವರು ಪಡೆದುಕೊಂಡಾಗ, ಅವರು ಅಧಿವೇಶನವನ್ನು ಮುಕ್ತಾಯಗೊಳಿಸದೆ, ತಮ್ಮ ಕೆಲಸವನ್ನು ಮುಂದುವರಿಸಿ, ಸಂಸತ್ತಿನ ಕೆಲಸವನ್ನು ಮುಗಿಸಿ, ಆಮೇಲೆ ಕುಸಿನಾರಕ್ಕೆ ಹೋಗುವುದು ಎಂದು ತೀರ್ಮಾನಿಸಿದರು. ನಮ್ಮ ಸಾಹಿತ್ಯದಲಿ ಈ ಕುರಿತು ಅಸಂಖ್ಯಾತ ಉಲ್ಲೇಖಗಳಿದ್ದು., ಅವು ಸಂಸದೀಯ ಪದ್ಧತಿಯ ಸರ್ಕಾರ ನಮಗೆ ಗೊತ್ತಿಲ್ಲದೆ ಇದ್ದುದೇನಲ್ಲ ಎಂದು ಪ್ರಮಾಣಿಸುತ್ತದೆ.

ಸಂಸದೀಯ ಪ್ರಕ್ರಿಯೆಯ ಬಗ್ಗೆ ಅನೇಕ ನಿಯಮಗಳು ಇವೆ. ಮೇ ಅವರ ಸಂಸದೀಯ ಆಚರಣೆಯನ್ನು ಸಾಮಾನ್ಯವಾಗಿ ಅನುಸರಿಸಲಾಗುತ್ತಿದೆ. ಎಲ್ಲೆಲ್ಲಿಯೂ ಸದಾಕಾಲ ಆಚರಣೆಯಲ್ಲಿರುವ ನಿಯಮವೆಂದರೆ, ಪ್ರಸ್ತಾವ ಇಲ್ಲದೆ ಯಾವ ಚರ್ಚೆಯೂ ಇಲ್ಲ ಎಂದು. ಅದುದರಿಂದಲೇ ಪ್ರಶ್ನೆಯೊದರ ಮೇಲೆ ಯಾವ ಚರ್ಚೆಯೂ ಇರುವುದಿಲ್ಲ. ಇದೇ ನಿಯಮವನ್ನು ನಮ್ಮ ದೇಶದಲ್ಲೂ ಪುರಾತನ ಕಾಲದಲ್ಲಿ ಅನುಸರಿಸಲಾಗುತ್ತಿತ್ತು. ರಹಸ್ಯ ಮತದಾನ ಪದ್ಧತಿಯೂ ಸಹ ನಮಗೆ ಹೊಸದೇನೂ ಅಲ್ಲ. ಅದನ್ನು ಬೌದ್ಧ ಸಂಘಗಳಲ್ಲಿ ಅನುಸರಿಸಲಾಗುತ್ತಿತ್ತು. ಅವರಲ್ಲಿ ಮತಪತ್ರಗಳಿದ್ದು ಅವರು ಅದನ್ನು 'ಸಾಲಪತ್ರಕ ಗ್ರಾಹಕಗಳು' ಎಂದು ಕರೆಯುತ್ತಿದ್ದರು. ದುರದೃಷ್ಟವಷಾತ್ ಹಿಂದಿನ ಕಾಲದ ಈ ಎಲ್ಲ ಒಳ್ಳೆಯ ಪುರಾತತ್ವ ಬಳುವಳಿಯನ್ನು ನಾವು ಕಳೆದುಕೊಂಡು ಬಿಟ್ಟಿದ್ದೇವೆ. ಭಾರತದ ಚರಿತ್ರಕಾರರು, ನಮ್ಮ ನೆಲದಿಂದ ಈ ಸಂಸದೀಯ ಸಂಸ್ಥೆಗಳು ಏತಕ್ಕೆ ಮಾಯವಾದವು ಎಂಬ ಪ್ರಶ್ನೆಯನ್ನು ಉತ್ತರಿಸಬೇಕು. ಆದರೆ ಅವರು ಅದನ್ನು ಮಾಡಲಾರರು ಅಥವ ಅವರಿಗೆ ಅದನ್ನು ಮಾಡುವುದಕ್ಕೆ ಇಷ್ಟವಿಲ್ಲ ಎಂದು ನನಗೆ ತೋರುತ್ತದೆ. ಪ್ರಾಚೀನ ಭಾರತ, ಪ್ರಪಂಚಕ್ಕೇ ಗುರುವಾಗಿತ್ತು. ಇನ್ನೆಲ್ಲಿಯೂ ಕಾಣಬರದಾದ ಬೌದ್ಧಿಕ ಸ್ವಾತಂತ್ರ್ಯ ಪುರಾತನ ಭಾರತದಲ್ಲಿ ಇತ್ತು. ಆದರೆ ಈ ಪುರಾತನ ನಾಗರೀಕತೆ ಏಕೆ ನಾಯಿ ಪಾಡಾಯಿತು? ಭಾರತವನ್ನು ಈ ನಿರಂಕುಶ ಚಕ್ರಾಧಿಪತ್ಯಗಳಿಗೆ ಹೇಗೆ ಗುರಿಪಡಿಸಲಾಯಿತು? ನಮಗೆ ಸಂಸದೀಯ ಸಂಸ್ಥೆಗಳು ಪರಿಚಿತವಾಗಿದ್ದವು. ನಮಗೆ ಮತಗಳ (ವೋಟುಗಳ) ಬಗ್ಗೆ, ಮತ ಚಲಾಯಿಸುವ ಬಗ್ಗೆ, ಸಮಿತಿಗಳ ಬಗ್ಗೆ ಮತ್ತು ಸಂಸದೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಇತರ ವಿಷಯಗಳ ಬಗ್ಗೆ ಎಲ್ಲವೂ ಗೊತ್ತಿತ್ತು, ಪರಿಚಯವಿತ್ತು. ಈ ದಿನ ಸಂಸದೀಯ ಪದ್ಧತಿಯ ಸರ್ಕಾರ ನಮಗೆ ಪರಕೀಯವಾಗಿದೆ. ಗ್ರಾಮಗಳಿಗೆ ನಾವು ಹೋದರೆ, ಗ್ರಾಮಸ್ತರಿಗೆ ವೋಟು ಎಂದರೇನು, ಪಕ್ಷ ಎಂದರೇನು ಅರ್ಥವಾಗುವುದಿಲ್ಲ ಎಂಬುದನ್ನು ಕಾಣುತ್ತೇವೆ. ಅದು ಅವರಿಗೆ ವಿಚಿತ್ರವಾಗಿ, ಪರಕೀಯವಾಗಿ ಕಾಣಿಸುತ್ತದೆ. ಆದ್ದರಿಂದ ಈ ಸಂಸ್ಥೆಯನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ. ನಾವು ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸಬೇಕು, ಸಂಸದೀಯ ಪ್ರಜಾಸತ್ತೆಯ ಪ್ರಯೋಜನಗಳ ಬಗ್ಗೆ, ಸಂಸದೀಯ

ವ್ಯವಸ್ಥೆಯ ಸರ್ಕಾರದ ಬಗ್ಗೆ ಅವರಿಗೆ ತಿಳಿ ಹೇಳಬೇಕು.

ಸಂಸದೀಯ ಸರ್ಕಾರವೆಂದರೆ ಬಾಗೆಹಾಟ್ ಏನು ಹೇಳುತ್ತಾನೆ ಎಂದು ನಮಗೆ ಗೊತ್ತು. ಆದರೆ ಈ ದಿನದಲ್ಲಿ ಅವನ ವಿವರಣೆ ಉಪಯೋಗಕ್ಕೆ ಬರುವುದಿಲ್ಲ, ಅದು ಏನೇನೂ ಸಮರ್ಪಕವಾಗಿಲ್ಲ.

ಸಂಸದೀಯ ಪದ್ಧತಿಯ ಸರ್ಕಾರದಲ್ಲಿ ಅಂತರ್ನಿಹಿತವಾಗಿರುವ ಮೂರು ಮುಖ್ಯವಾದ ವಿಷಯಗಳು ಇವೆ.

ಸಂಸದೀಯ ಸರ್ಕಾರವೆಂದರೆ, ವಂಶ ಪಾರಂಪರ್ಯದ ಆಳ್ವಿಕೆಯನ್ನು ನಾಸ್ತಿಗೊಳಿಸುವುದು. ಯಾವನೇ ಒಬ್ಬ ವ್ಯಕ್ತಿ ನಾನು ಆನುವಂಶಿಕ ದೊರೆ ಎಂದು ಹೇಳುವ ಹಾಗಿಲ್ಲ. ಯಾರಿಗೆ ಆಳಬೇಕೆಂಬ ಇಚ್ಛೆ ಇದೆಯೋ ಅವನು ಕಾಲದಿಂದ ಕಾಲಕ್ಕೆ ಚುನಾಯಿತನಾಗಬೇಕು. ಅವನು ಜನಗಳ ಮನ್ನಣೆಯನ್ನು ಪಡೆದುಕೊಳ್ಳಬೇಕು. ಸಂಸದೀಯ ಪದ್ಧತಿಯ ಸರ್ಕಾರದಲ್ಲಿ ಆನುವಂಶಿಕ ಆಳ್ವಿಕೆಗೆ ಮಂಜುರಾತಿ ಇಲ್ಲ.

ಎರಡನೆಯದಾಗಿ ಯಾವುದೇ ಕಾನೂನಾಗಲೀ, ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಾಗಲೀ; ಅದನ್ನು ಜನಗಳಿಂದ ಚುನಾಯಿಸಲ್ಪಟ್ಟ ಜನಗಳು ಕೊಟ್ಟ ಸಲಹೆಯ ಮೇಲೆ ಆಧಾರಿತವಾಗಿರಬೇಕು. ಯಾವೊಬ್ಬನೇ ವ್ಯಕ್ತಿ, ತನಗೆ ಎಲ್ಲಾ ಗೊತ್ತು, ತಾನೇ ಕಾನೂನನ್ನು ಮಾಡಬಲ್ಲೆ, ಸರ್ಕಾರವನ್ನು ತಾನೇ ನಡೆಸಬಲ್ಲೆ ಎಂಬ ಅಧಿಕಾರವನ್ನು ತನಗೆ ತಾನೇ ಕೊಟ್ಟುಕೊಳ್ಳುವ ಹಾಗಿಲ್ಲ. ಕಾನೂನುಗಳನ್ನು ಜನಪ್ರತಿನಿಧಿಗಳು ಸಂಸತ್ತಿನಲ್ಲಿ ಮಾಡಬೇಕು. ಯಾರ ಹೆಸರಿನಲ್ಲಿ ಕಾನೂನನ್ನು ಘೋಷಣೆ ಮಾಡಲಾಗಿದೆಯೋ ಅವರಿಗೆ ಸಲಹೆಯನ್ನು ಕೊಡಬಲ್ಲವರು ಆ ಜನಗಳು ಮಾತ್ರ. ಅದೇ ಚಕ್ರವರ್ತಿಯ ಸರ್ಕಾರಕ್ಕೂ ಸಂಸದೀಯ ಸರ್ಕಾರಕ್ಕೂ ಇರುವ ವ್ಯತ್ಯಾಸ.. ಚಕ್ರವರ್ತಿಯ ಸರ್ಕಾರದಲ್ಲಿ ಸಾರ್ವಜನಿಕರ ವ್ಯವಹಾರಗಳನ್ನು ರಾಜ್ಯದ ಮುಖ್ಯಸ್ಥನ ಹೆಸರಿನಲ್ಲಿ, ಆದರೆ ಚಕ್ರವರ್ತಿಯ ಅಧಿಕಾರಕ್ಕೊಳಪಟ್ಟು ನಡೆಸಲಾಗುತ್ತದೆ. ಆದರೆ ಕಾನೂನುಗಳು ಮತ್ತು ಕಾರ್ಯನಿರ್ವಾಹಕ ಕ್ರಮಗಳು ಇವು ಸರ್ಕಾರದ ಆಡಳಿತವನ್ನು ನಡೆಸಿಕೊಂಡು ಹೋಗುತ್ತವೆ. ರಾಜ್ಯದ ಪ್ರಮುಖನೊಬ್ಬ ಬರಿಯ ನಾಮಕಾವಾಸ್ತೆ ಪ್ರಮುಖ. ಅವನು ಕೇವಲ ಒಂದು ಚಿಹ್ನೆ, ಗುರುತು ಅಷ್ಟೆ. ಅವನೊಬ್ಬ ಪ್ರತಿಷ್ಠಾಪನೆಗೊಂಡ ಮೂರ್ತಿಯಷ್ಟೆ. ಅವನನ್ನು ಪೂಜಿಸಬಹುದು, ಆದರೆ ದೇಶದ ಸರ್ಕಾರವನ್ನು ನಡೆಸುವುದಕ್ಕೆ ಅವನಿಗೆ ಅನುಮತಿ ಇಲ್ಲ. ಆದಾಗ್ಯೂ, ದೇಶದ ಸರ್ಕಾರವನ್ನು ಅವನ ಹೆಸರಿನಲ್ಲಿ ಚುನಾಯಿತ ಪ್ರತಿನಿಧಿಗಳು ನಡೆಸಿಕೊಂಡು ಹೋಗುತ್ತಾರೆ.

ಮೂರನೆಯದಾಗಿ ಮತ್ತು ಕಡೆಯದಾಗಿ ಸಂಸದೀಯ ಪದ್ಧತಿಯ ಸರ್ಕಾರ ಅಂದರೆ– ಒಂದು ನಿಗದಿತ ಅವಧಿಯಲ್ಲಿ ರಾಜ್ಯದ ಪ್ರಮುಖನಿಗೆ ಸಲಹೆಯನ್ನು ಕೊಡಬೇಕೆಂದು ಬಯಸುವವರು, ಜನಗಳು ತಮ್ಮಲ್ಲಿ ಇಟ್ಟಿರುವ ನಂಬಿಕೆಯನ್ನು ನವೀಕರಿಸಿಕೊಳ್ಳಬೇಕು. ಬ್ರಿಟನ್ನಿನಲ್ಲಿ ಮೊದಲಿಗೆ, ಪಾರ್ಲಿಮೆಂಟಿಗೆ ಚುನಾವಣೆ ಏಳು ವರ್ಷಕ್ಕೊಮ್ಮೆ ನಡೆಯುತ್ತಿತ್ತು. ಕಾರ್ಮಿಕರಿಗೆ ರಾಜಕೀಯ ಅಧಿಕಾರವನ್ನು ಕೊಡಬೇಕೆಂದು ಚಳುವಳಿ ಮಾಡುತ್ತಿದ್ದವರು (ಚಾರ್ಟಿಸ್ಟರು) ಇದರ ವಿರುದ್ಧ ಪ್ರತಿಭಟಿಸಿದರು. ಅವರು ವಾರ್ಷಿಕ ಚುನಾವಣೆಗಳು ಬೇಕೆನ್ನುತ್ತಿ್ದದರು. ಈ ಚಳುವಳಿಯ ಹಿಂದೆ ಇದ್ದ ಉದ್ದೇಶ ನಿಜಕ್ಕೂ ಬಹಳ ಪ್ರಶಂಸಾರ್ಹವಾಗಿತ್ತು. ವಾರ್ಷಿಕ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಿದ್ದರೆ ಅದು ಜನಗಳ ಹಿತಾಸಕ್ತಿಯ ದೃಷ್ಟಿಯಲ್ಲಿ ಬಹಳ ಉತ್ತಮವಾಗಿರುತ್ತಿತ್ತು ಆದರೆ ಸಂಸದೀಯ ಚುನಾವಣೆಗಳು ಬಹಳ ಖರ್ಚಿನ ಬಾಬತ್ತಿನವು. ಹೀಗಾಗಿ ಒಂದು ರೀತಿಯ ಕಾಜಿನ್ಯಾಯ ಮಾಡಿ, ಐದು ವರ್ಷಗಳ ಅವಧಿಯನ್ನು ಗೊತ್ತುಪಡಿಸಲಾಯಿತು. ಈ ಅವಧಿ ಮುಗಿದ ಮೇಲೆ ಶಾಸಕರು ಮತ್ತು ಸಚಿವರುಗಳು ಜನಗಳತ್ತ ಹೋಗಿ ಅವರ ನಂಬಿಕೆಯನ್ನು ನವೀಕರಿಸಿಕೊಂಡು ಬರಬಹುದಾಗಿತ್ತು.

ಇದೂ ಸಹ ಸಾಲದು. ಸಂಸದೀಯ ಪದ್ಧತಿಯ ಸರ್ಕಾರ, ಚರ್ಚೆಯಿಂದಾದ ಸರ್ಕಾರಕ್ಕಿಂತ ಇನ್ನೂ ಬಹಳ ಹೆಚ್ಚಿನದು. ಸಂಸದೀಯ ಸರ್ಕಾರ ನಿಂತಿರುವುದು ಎರಡು ಆಧಾರಸ್ತಂಭಗಳ ಮೇಲೆ. ಆ ಯಂತ್ರ ಸಾಧನ ಕೆಲಸ ಮಾಡುವುದೇ ಈ ತಿರುಗಣಿಗಳ ಮೇಲೆ. ಆ ಎರಡು ಆಧಾರ ಸ್ತಂಭಗಳೆಂದರೆ, (i) ಒಂದು ವಿರೋಧ ಪಕ್ಷ (ii) ಮುಕ್ತವಾದ ಮತ್ತು ಪಕ್ಷಪಾತವಿಲ್ಲದ ಚುನಾವಣೆಗಳು.

ಕಳೆದ ೨೦ ಅಥವಾ ೩೦ ವರ್ಷಗಳಿಂದ ನಾವು ಒಂದೇ ಒಂದು ರಾಜಕೀಯ ಪಕ್ಷಕ್ಕೆ ಒಗ್ಗಿಕೊಂದು ಬಿಟ್ಟಿದ್ದೇವೆ. ಸಂಸದೀಯ ಪ್ರಜಾಪ್ರಭುತ್ವ ನ್ಯಾಯಯುತವಾಗಿ ಕೆಲಸ ಮಾಡಬೇಕಾದರೆ ವಿರೋಧ ಪಕ್ಷದ ಅವಶ್ಯಕತೆ ಮತ್ತು ಪ್ರಾಮುಖ್ಯತೆಯನ್ನು ನಾವು ಹೆಚ್ಚು ಕಡಿಮೆ ಮರೆತೇ ಬಿಟ್ಟಿದ್ದೇವೆ. ವಿರೋಧ ಎನ್ನುವುದು ಕೆಟ್ಟದ್ದು ಎಂದು ನಮಗೆ ನಿರಂತರವಾಗಿ ಹೇಳಲಾಗುತ್ತಿದೆ. ಇಲ್ಲಿ ಸಹಾ ಗತಕಾಲದ ಚರಿತ್ರೆ ನಮಗೆ ಯಾವ ಪಾಠವನ್ನು ಕಲಿಸಬೇಕಾಗಿದೆಯೆಂದು ಮರೆತು ಬಿಟ್ಟಿದ್ದೇವೆ. ವೇದಗಳನ್ನೂ ಮತ್ತು ಸ್ಮೃತಿಗಳನ್ನೂ ನಿರ್ವಚನ ಮಾಡುವುದಕ್ಕೆ ನಿಭಂದಕರುಗಳು ಇದ್ದರು ಎಂದು ನಿಮಗೆ ಗೊತ್ತಿದೆ. ಶ್ಲೋಕಗಳ ಮತ್ತು ಸೂತ್ರಗಳ ಮೇಲೆ ತಮ್ಮ ಟೀಕೆಗಳನ್ನು ಮಾಡುವುದಕ್ಕೆ ಮುಂಚೆ, ಅವರು ಮೊದಲು 'ಪೂರ್ವ ಪಕ್ಷ', ಅಂದರೆ ಪ್ರಶ್ನೆಯ ಒಂದು ಮಗ್ಗುಲನ್ನು ಹೇಳುತ್ತಾ ಪ್ರಾರಂಭಿಸುತ್ತಿದ್ದರು. ಆಮೇಲೆ 'ಉತ್ತರ ಪಕ್ಷ' ಅಂದರೆ ಇನ್ನೊಂದು ಮಗ್ಗುಲನ್ನು ಕೊಡುತ್ತಾ ಮುಂದುವರೆಯುತ್ತಿದ್ದರು. ಇದರಿಂದ ಅವರು ತೋರಿಸಬಯಸುತ್ತಿದ್ದಿದು ಏನೆಂದರೆ ಕೇಳಲ್ಪಟ್ಟ ಪ್ರಶ್ನೆ ಸುಲಭವಾದ ಪ್ರಶ್ನೆಯೇನೂ ಅಲ್ಲ ಎಂದು; ಆ ಪ್ರಶ್ನೆಯಲ್ಲಿ ವಿವಾದ, ಚರ್ಚೆ ಮತ್ತು ಸಂಶಯ ಇದೆ ಎಂದು. ಆಮೇಲೆ ಅವರು ತಾವು 'ಅಧಿಕರಣ' ಎಂದು ಕರೆಯುತ್ತಿದ್ದುದನ್ನು ಕೊಡುತ್ತಿದ್ದರು; ಅಲ್ಲಿ ಅವರು ಎರಡೂ ಪಕ್ಷವನ್ನು ಟೀಕೆ ಮಾಡುತ್ತಿದ್ದರು. ಕಡೆಯದಾಗಿ, 'ತಮ್ಮ ಸಿದ್ಧಾಂತ'ವನ್ನು ಅಂದರೆ ತಮ್ಮ ತೀರ್ಮಾನವನ್ನು ಕೊಡುತ್ತಿದ್ದರು. ನಮ್ಮ ಪುರಾತನ ಶಿಕ್ಷಕರು ಎರಡು ಪಕ್ಷ ಇರುವ ಸರ್ಕಾರದಲ್ಲಿ ನಂಬಿಕೆ ಇಟ್ಟಿದ್ದರು ಎಂದು ಇಲ್ಲಿ ನಾವು ಕಂಡುಕೊಳ್ಳಬಹುದಾಗಿದೆ.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ಏನೆಂದರೆ, ಒಂದು ಪ್ರಶ್ನೆಗೆ ಎರಡು ಮಗ್ಗುಲುಗಳು ಇದ್ದರೆ, ಜನಗಳು ಅತ್ತ ಕಡೆಯ ಮಗ್ಗುಲನ್ನೂ ತಿಳಿದುಕೊಳ್ಳಬೇಕು. ಆದುದರಿಂದ ಕ್ರಿಯಾಶೀಲವಾದ ವಿರೋಧ ಪಕ್ಷ ಬೇಕಾಗಿದೆ. ಮುಕ್ತ ರಾಜಕೀಯ ಜೀವನಕ್ಕೆ ವಿರೋಧ ಪಕ್ಷ ಎನ್ನುವುದು ಕೀಲಿ ಕೈ ಇದ್ದ ಹಾಗೆ. ಅದಿಲ್ಲದೆ ಯಾವ ಪ್ರಜಾಪ್ರಭುತ್ವವೂ ಇರಲು ಆಗುವುದಿಲ್ಲ. ಸಂಸದೀಯ ಪದ್ಧತಿಗಳ ಸರ್ಕಾರಗಳ ಪ್ರವರ್ತಕರಾದ ಬ್ರಿಟನ್ ಮತ್ತು ಫ್ರಾನ್ಸ್ ಈ ಮುಖ್ಯವಾದ ಸಂಗತಿಯನ್ನು ಗುರುತಿಸಿದ್ದಾರೆ. ಎರಡೂ ದೇಶಗಳಲ್ಲಿ ವಿರೋಧ ಪಕ್ಷದ ನಾಯಕರಿಗೆ ಸರ್ಕಾರದಿಂದ ವೇತನವನ್ನು ಕೊಡಲಾಗುತ್ತಿದೆ. ವಿರೋದಪಕ್ಷವನ್ನು ಅತ್ಯವಶ್ಯಕವಾದದ್ದು ಎಂದು ನೋಡುತ್ತಾರೆ. ಈ ಎರಡೂ ದೇಶಗಳಲ್ಲಿನ ಜನರು ವಿರೋಧ ಪಕ್ಷ ಸರ್ಕಾರದಷ್ಟೆ ಚುರುಕಾಗಿರಬೇಕೆಂದು ನಂಬುತ್ತಾರೆ. ಸರ್ಕಾರ ಸಂಗತಿಗಳನ್ನು ಮುಚ್ಚಿಡಬಹುದು, ಏಕ ಪಕ್ಷೀಯ ಪ್ರಚಾರವನ್ನು ಮಾಡಬಹುದು. ಈ ಎರಡು ದೇಶಗಳಲ್ಲಿ ಈ ಸಂಭವನೀಯತೆಯ ವಿರುದ್ಧ ಪ್ರಶ್ನೆ ಮಾಡಲು ಜನಗಳಿಗೆ ಅವಕಾಶಗಳಿವೆ.

ಈಗ ಏಳುವ ಪ್ರಶ್ನೆ ಏನೆಂದರೆ, ಅಧಿಕಾರದಲ್ಲಿರುವ ಪಕ್ಷಕ್ಕೆ ಯಾವುದಾದರೊಂದು ವಿರೋಧ ಪಕ್ಷ ಅಸ್ತಿತ್ವಕ್ಕೆ ಬರಲಿ ಎಂಬ ಇಚ್ಚೆಯೇನಾದರೂ ಇದೆಯೆ ಎಂದು? ಕಾಂಗ್ರೆಸ್ ಯಾವ ವಿರೋಧ ಪಕ್ಷವೂ ಬೇಕಾಗಿಲ್ಲ. ಚಿಲ್ಲರೆ ಅಭಿಪ್ರಾಯಗಳನ್ನು ಹೊಂದಿರುವ ಕೆಲವು ಜನಗಳನ್ನು ಚಪ್ಪರದ ಕೆಳಗೆ ಒಟ್ಟುಗೂಡಿಸಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಈ ದೇಶದ ರಾಜಕೀಯ ಜೀವನದಲ್ಲಿ ಇದು ಒಂದು ಅಪೇಕ್ಷಣೀಯವಾದ ಪ್ರವೃತ್ತಿಯೇ ಎಂದು ನಾನು ನಿಮ್ಮನ್ನು ಕೇಳುತ್ತೇನೆ.

ಮುಕ್ತವಾದ ಮತ್ತು ನಿಷ್ಪಕ್ಷಪಾತವಾದ ಚುನಾವಣೆಗಳು ಸಂಸದೀಯ ಪ್ರಜಾಪ್ರಭುತ್ವ ಒರಗಿಕೊಂಡಿರುವ ಇನ್ನೊಂದು ಆಧಾರ ಸ್ಥಂಭ. ಮುಕ್ತವಾದ ಮತ್ತು ನಿಷ್ಪಕ್ಷಪಾತವಾದ ಚುನಾವಣೆಗಳು ಸಮುದಾಯದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಶಾಂತಿಯುತವಾಗಿ, ರಕ್ತಪಾತವಿಲ್ಲದೆ, ಅಧಿಕಾರ ವರ್ಗಾವಣೆ ಮಾಡಲು ಅವಶ್ಯಕವಾಗಿವೆ. ಹಿಂದಿನ ಕಾಲದಲ್ಲಿ ರಾಜನೊಬ್ಬ ಮರಣಿಸಿದರೆ, ಅರಮನೆಯಲ್ಲಿ ಕಡೆಯಪಕ್ಷ ಒಂದಾದರೂ ಕೊಲೆ ನಡೆಯುತ್ತಿತ್ತು. ಹೊಸ ದೊರೆ ದೇಶದ ಲಗಾಮುಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಳ್ಳುವುದಕ್ಕೆ ಮುಂಚೆ, ಅರಮನೆಯಲ್ಲಿ ಕೊಲೆಗಳಲ್ಲಿ ಪರ್ಯವಸಾನವಾಗುತ್ತಿದ್ದ ಕ್ರಾಂತಿಗಳು ನಡೆದು ಹೋಗುತ್ತಿದ್ದವು. ಭಾರತದ ಚರಿತ್ರೆಯೇ ಇದಾಗಿದೆ. ಚುನಾವಣೆಗಳು ಸಂಪೂರ್ಣವಾಗಿ ಮುಕ್ತವಾದ ಮತ್ತು ನಿಷ್ಪಕ್ಷಪಾತವಾದ ಚುನಾವಣೆಗಳಾಗಿರಬೇಕು. ಶಾಸನ ಸಭೆಗಳಿಗೆ ಯಾರನ್ನು ಕಳುಹಿಸಬೇಕೆಂಬುದನ್ನು ಜನಗಳ ಆಯ್ಕೆಗೆ ಬಿಟ್ಟು ಬಿಡಬೇಕು.

ಮುಕ್ತವಾದ ಮತ್ತು ನಿಷ್ಪಕ್ಷಪಾತವಾದ ಚುನಾವಣೆಗಳು ಅಂದರೆ ಏನು? ಈ ದೇಶದ ರಾಜಕೀಯ ಜೀವನದಲ್ಲಿ ಭಾರಿಯಾದ ವಣಿಕವರ್ಗ ದೊಡ್ಡದಾಗಿ ಭಾಗವಹಿಸಲು ಪ್ರಯತ್ನಿಸುತ್ತಿದೆ. ಈ ದೊಡ್ಡ ವ್ಯಾಪಾರಸ್ಥ ಕುಳಗಳು ಕಾಂಗ್ರೆಸ್ಸಿಗೆ ಚಂದಾ ಕೊಡುತ್ತಿರುವ ಭಾರಿ ಹಣದ ಗಂಟು ಅಪಾಯಕಾರಿಯಾಗಿದೆ. ಯಾವುದೇ ರಾಜಕೀಯ ಪಕ್ಷದ ಚುನಾವಣೆ ನಿಧಿಗೆ ಹಣವನ್ನು ಕೊಡುವುದರ ಮೂಲಕ ಹಣ ಇರುವ ಮಂದಿ ಚುನಾವಣೆಗಳ ಮೇಲೆ ಪ್ರಭಾವ ಬೀರುವ ಪ್ರಯತ್ನ ಮಾಡಿದರೆ, ಫಲಿತಾಂಶ ಏನಾಗುತ್ತದೆ? ತಾವು ಬೆಂಬಲಿಸಿದ ಪಕ್ಷ ಅಧಿಕಾರಕ್ಕೆ ಬಂದರೆ ಅವರು ಸ್ವಾಭಾವಿಕವಾಗಿ ತಮಗೋಸ್ಕರ ರಿಯಾಯಿತಿಗಳನ್ನು ಕೇಳಲು ಪ್ರಯತ್ನಿಸುತ್ತಾರೆ., ಆ ರಿಯಾಯಿತಿ, ಹಾಲಿ ಇರುವ ಶಾಸನಗಳನ್ನು ಮಾರ್ಪಾಡುಗಳನ್ನು ಮಾಡುವುದಕ್ಕೆ ಇರಬಹುದು ಅಥವಾ ತಮ್ಮ ಹಿತಾಸಕ್ತಿಗಳಿಗೆ ಅನುಕೂಲಕರವಾದಂಥ ಶಾಸನಗಳನ್ನು ಜಾರಿಗೆ ತರುವುದಕ್ಕೆ ಇರಬಹುದು. ಮಹನೀಯರೆ, ಈ ಪರಿಸ್ಥಿತಿಗಳ ಕೆಳಗೆ ಸಂಸದೀಯ ಪದ್ಧತಿಯ ಸರ್ಕಾರವೇನಾದರೂ ದೇಶಕ್ಕೆ ಒಳ್ಳೆಯದನ್ನು ಮಾಡಬಹುದೆಂಬ ಆಸೆ ಉಳಿದುಕೊಂಡಿದೆಯೆ? ಪಾಂಡವರ ಮತ್ತು ಕೌರವರ ನಡುವಿನ ಯುದ್ಧದಲ್ಲಿ ಭೀಷ್ಮ ಮತ್ತು ದ್ರೋಣರು ಕೌರವರ ಪಕ್ಷದಲ್ಲಿ ಇದ್ದರು. ನ್ಯಾಯ ಪಾಂಡವರ ಕಡೆಗೆ ಇತ್ತು. ಮತ್ತೆ ಕೌರವರು ಮಾಡಿದ್ದು ಅನ್ಯಾಯ. ಭೀಷ್ಮ ಇದನ್ನು ಒಪ್ಪಿಕೊಂಡ. ಪಾಂಡವರು ನ್ಯಾಯ ಮಾರ್ಗದಲ್ಲಿ ಇದ್ದರೆ, ಕೌರವರನ್ನು ನೀವು ಏತಕ್ಕಾಗಿ ಬೆಂಬಲಿಸುತ್ತಿದ್ದೀರೆಂದು ಯಾರೋ ಭೀಷ್ಮನನ್ನು ಕೇಳಿದಾಗ, ಭೀಷ್ಮ ಕೊಟ್ಟ ಉತ್ತರ ಸ್ಮರಣೀಯವಾಗಿತ್ತು:

ಉಪ್ಪು ತಿಂದ ಮನೆಗೆ ನನ್ನ ನಿಷ್ಠೆ ಇರಬೇಕು. ಕೌರವರಿಂದ ನನಗೆ ಅಶನ ಸಿಕ್ಕಿದರೆ, ಅವರದು ತಪ್ಪೇ ಇದ್ದರೂ, ನಾನು ಅವರ ಪಕ್ಷವನ್ನೇ ವಹಿಸಬೇಕು?..

ಈ ದಿನಗಳಲ್ಲಿ ಕೂಡ ಅದೇ ಆಗುತ್ತಿದೆ. ಬನಿಯಾಗಳ, ಮಾರ್ವಾಡಿಗಳ ಮತ್ತು ಇತರ ಲಕ್ಷಾಧಿಪತಿಗಳ ಆರ್ಥಿಕ ನೆರವನ್ನು ಕಾಂಗ್ರೆಸ್ ಪಡೆದುಕೊಳ್ಳುತ್ತಿದೆ. ಕಾಂಗ್ರೆಸ್ ಅವರುಗಳ ಅನ್ನವನ್ನು ತಿನ್ನುತ್ತಿದೆ, ಆದುದರಿಂದ ಸ್ವಾಭಾವಿಕವಾಗಿ ಕಾಂಗ್ರೆಸ್ ಈ ಭಾರೀ ವ್ಯಾಪಾರೀ ಕುಳಗಳ ಪಕ್ಷವನ್ನೇ ಎಲ್ಲಾ ನಿರ್ಣಾಯಕ ಸಮಯಗಳಲ್ಲಿ ವಹಿಸಬೇಕು.

ಸರ್ಕಾರಿ ನೌಕರರುಗಳೂ ಸಹ, ಯಾವ ಪಕ್ಷ ತಮಗೆ ಮತ್ತು ತಮ್ಮ ಅವಲಂಬಿಗಳಿಗೆ ತಿನ್ನಿಸುತ್ತಿದೆಯೋ ಆ ಪಕ್ಷದ ಪರವಾಗಿ ಚುನಾವಣೆಗಳಲ್ಲಿ ಪ್ರಭಾವ ಬೀರುತ್ತಿದ್ದಾರೆ ಎಂಬುದನ್ನೂ ಸಹ ನಾವು ನೋಡುತ್ತಿದ್ದೇವೆ. ಇತ್ತೀಚೆಗೆ, ದೆಹಲಿಯಲ್ಲಿ ನಡೆದ ಭಾರತೀಯ ಜನಸಂಘದ ಪ್ರಾರಂಭಿಕ ಅಧಿವೇಶನದಲ್ಲಿ ಡಾ: ಶ್ಯಾಮ್ ಪ್ರಸಾದ್ ಮುಖರ್ಜಿ ಅವರಂಥ ಮಹಾನ್ ವ್ಯಕ್ತಿ ಸರ್ಕಾರಿ ನೌಕರರು ಕಾಂಗ್ರೆಸ್ಗೆ ಸಹಾಯ ಮಾಡುತ್ತಿದ್ದಾರೆಂದು

ಹಾಗೆ ಮಾಡಿ ಚುನಾವಣೆಗಳು ಮುಕ್ತವಾಗಿ ಮತ್ತು ನಿಷ್ಪಕ್ಷಪಾತವಾಗಿರದಂತೆ ಮಾಡಿಬಿಟ್ಟಿದ್ದಾರೆಂದು ಆಪಾದಿಸಿದರು. ಮಹನೀಯರೆ, ಈ ಪರಿಸ್ಥಿತಿಗಳ ಕೆಳಗೆ, ಸಂಸದೀಯ ಪ್ರಜಾಸತ್ತೆ ಜಯಶಾಲಿಯಾಗುವ ಯಾವುದಾದರೂ ಆಸೆ ಇದೆಯೆ ಎಂದು ನೀವು ಯೋಚಿಸಲು ಸಾಧ್ಯವೆ?

ಈ ದೇಶದಲ್ಲಿ ಸಂಸದೀಯ ಪ್ರಜಾ ಪ್ರಭುತ್ವಕ್ಕೆ ಸೋಲುಂಟಾದರೆ, ಮತ್ತು ನಾನು ಕೊಟ್ಟ ಕಾರಣಗಳಿಂದಾಗಿ ಅದು ಸೋತೇ ಸೋಲುತ್ತದೆ. ಅದರ ಒಂದೇ ಫಲಿತಾಂಶ ದಂಗೆ, ಅರಾಜಕತೆ ಮತ್ತು ಕಮ್ಯೂನಿಸಮ್. ಅಧಿಕಾರದಲ್ಲಿರುವ ಜನಗಳು ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ, ಆಗ ಈ ದೇಶ ಸರ್ವನಾಶವಾಗಿಬಿಡುತ್ತದೆ, ಇಲ್ಲಾ ಕಮ್ಯೂನಿಸಮ್ ಬರುತ್ತದೆ ಅಥವಾ ರಷ್ಯಾ ನಮ್ಮ ದೇಶದ ಮೇಲೆ ಪ್ರಭುತ್ವ ಸಾಧಿಸಿ, ವೈಯುಕ್ತಿಕ ಸ್ವಾತಂತ್ರ್ಯ, ಮತ್ತು ನಮ್ಮ ದೇಶದ ಸ್ವಾತಂತ್ರ್ಯ ಎರಡೂ ಹರಣವಾಗುತ್ತದೆ; ಇಲ್ಲವೇ ಅಧಿಕಾರದಲ್ಲಿರುವ ಪಕ್ಷದ ಸೋಲಿನಿಂದ ನೊಂದ ಅತೃಪ್ತಿಗೊಂಡ ಜನ ದಂಗೆಯನ್ನು ಪ್ರಾರಂಭಿಸುತ್ತಾರೆ. ಆಗ ದೇಶದಲ್ಲಿ ಅರಾಜಕತೆ ನೆಲೆಗೊಳ್ಳುತ್ತದೆ. ಮಹನೀಯರೇ ಖಂಡಿತವಾಗಿಯೂ ಸಂಭವಿಸುವ ಈ ಪರಿಣಾಮಗಳ ಬಗ್ಗೆ ಗಮನ ಕೊಡಿ ಮತ್ತು ಸಂಸದೀಯ ಪದ್ಧತಿಯ ಸರ್ಕಾರ ಮತ್ತು ಸಂಸದೀಯ ಪ್ರಜಾ ಸತ್ತೆ ಈ ದೇಶದಲ್ಲಿ ಉಳಿಯಬೇಕೆಂದಿದ್ದರೆ– ನಮ್ಮ ಆಲೋಚನ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಕಾರ್ಯ ಸ್ವಾತಂತ್ರ್ಯ, ಉಳಿಯುತ್ತದೆಯೆಂದು ನಿಮಗೆ ಭರವಸೆ ಇದ್ದರೆ, ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕೆಂದರೆ, ವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ನಾವು ಆದರಿಸಿದರೆ, ಆಗ ವಿದ್ಯಾರ್ಥಿಗಳಾಗಿ ನಿಮ್ಮ ಕರ್ತವ್ಯವೆಂದರೆ–ನಮ್ಮ ದೇಶದ ಬುದ್ಧಿವಂತ ಸಮುದಾಯದವರಾಗಿ, ಈ ಸಂಸದೀಯ ಪದ್ಧತಿಯ ಸರ್ಕಾರವನ್ನು, ಅದರ ನಿಜವಾದ ಚೇತನದಲ್ಲಿ ಆದರಿಸಿ ಬೆಳಸುವುದಕ್ಕೆ ಕಾರ್ಯ ತತ್ಪರರಾಗಿ.

ಮಹನೀಯರೇ, ನಾನು ಮುಗಿಸಿದ್ದೇನೆ; ಈ ಘನ ಗಂಭೀರ ಸಭೆಯನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ನಿಮ್ಮನ್ನು ವಂದಿಸುತ್ತೇನೆ.

# ೧೨೬
# ನಮ್ಮ ನೈಜ ಪ್ರತಿನಿಧಿಗಳನ್ನು ಚುನಾಯಿಸದಿದ್ದರೆ, ಆಗ ಪ್ರಜಾಪ್ರಭುತ್ವ ಎನ್ನುವುದು ಒಂದು ಪರಿಹಾಸ್ಯವಾಗುತ್ತದೆ

೨೮ನೇ ಅಕ್ಟೋಬರ್ ೧೯೫೧ರಂದು ಲೂಧಿಯಾನದಲ್ಲಿ ನಡೆದ ಚುನಾವಣ ಪ್ರಚಾರದಲ್ಲಿ ಡಾ: ಅಂಬೇಡ್ಕರ್ ಅವರು ಮಾಡಿದ ಭಾಷಣ:

ಅವರು ಹೇಳಿದ್ದು:

ಪ್ರಿಯ ಸಹೋದರರೇ ಮತ್ತು ಸಹೋದರಿಯರೇ,

ನಮ್ಮ ಜನಗಳನ್ನು ಉದ್ದೇಶಿಸಿ ಮಾತನಾಡುವುದಕ್ಕೆಂದು ನಾನು ಲೂಧಿಯಾನಕ್ಕೆ ಬಂದಿರುವುದು ಇದೇ ಮೊದಲು. ಇದಕ್ಕೆ ಮುಂಚೆ ಈ ಸ್ಥಳಕ್ಕೆ ಬರಬೇಕೆಂದು ನಾನು ಅಂದುಕೊಂಡಿದ್ದೆ ಆದರೆ ಕೆಲವು ಅನಿವಾರ್ಯ ಕಾರಣಗಳಿಂದಾಗಿ ನನಗೆ ಬರಲಾಗಲಿಲ್ಲ. ನೀವೆಲ್ಲ ಇಲ್ಲಿ ಸೇರಿರುವುದು ಒಂದು ಶುಭ ಸನ್ನಿವೇಶವಾಗಿದೆ.

ಇನ್ನು ಎರಡು-ಮೂರು ತಿಂಗಳುಗಳಲ್ಲಿ ಚುನಾವಣೆಗಳು ನಡೆಯಲಿದ್ದು, ಅದರಲ್ಲಿ ಅನೇಕ ಪಕ್ಷಗಳು ಭಾಗವಹಿಸುತ್ತಿವೆ. ರಾಜ್ಯ ಶಾಸನ ಸಭೆಗಳಲ್ಲಿ ಮತ್ತು ಒಕ್ಕೂಟದ ಪಾರ್ಲಿಮೆಂಟಿನಲ್ಲಿ ನಮಗಾಗಿ ಮೀಸಲಿಟ್ಟಿರುವ ಎಲ್ಲಾ ಸ್ಥಾನಗಳಿಗೂ ನಾವು ಸ್ಪರ್ಧಿಸಲಿದ್ದೇವೆ; ಇದಲ್ಲದೆ ಎಲ್ಲಿ ನಮಗೆ ಸಾಕಷ್ಟು ವೋಟುಗಳು ಇವೆಯೋ, ಅಲ್ಲಿ ನಾವು ಮುಕ್ತ ಸೀಟುಗಳಿಗೂ ಸ್ಪರ್ಧಿಸಲಿದ್ದೇವೆ. ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆಂದು ನಾನು ಆಶಿಸುತ್ತೇನೆ. ನಮ್ಮ ಅಭ್ಯರ್ಥಿಗಳು ಜಯಗಳಿಸುವುದು ನಮ್ಮ ಜನಗಳ ಮೇಲೆ ಅವಲಂಬಿತವಾಗಿದೆ. ನಮ್ಮ ಜನಗಳೆಲ್ಲಾ ನಮ್ಮ ಅಭ್ಯರ್ಥಿಗಳಿಗೆ ವೋಟು ಮಾಡಿದರೆ, ನಮ್ಮ ಜಯ ನಿಶ್ಚಿತ. ಆದುದರಿಂದ ಎಲ್ಲಾ ಪರಿಶಿಷ್ಟ ಜಾತಿಗಳ ಜನಗಳು, ಪರಿಶಿಷ್ಟ ಜಾತಿಗಳ ಫೆಡರೇಷನ್ ನಿಲ್ಲಿಸಿರುವ ಅಭ್ಯರ್ಥಿಗಳಿಗೆ ವೋಟು ಮಾಡಲೇಬೇಕು ಎಂದು ಒತ್ತಾಯಿಸುತ್ತೇನೆ. ನಮ್ಮ ಫೆಡರೇಷನ್ ಪರಿಶಿಷ್ಟ ಜಾತಿಗಳ ಮತ್ತು ಹಿಂದುಳಿದ ವರ್ಗಗಳವರ ಏಕಮಾತ್ರ ಸಂಘಟನೆ.

ಭಾರತದಲ್ಲಿ ತಮ್ಮ ಆಳ್ವಿಕೆಯ ಅವಧಿಯಲ್ಲಿ ಬ್ರಿಟಿಷರು ನಮ್ಮನ್ನು ಹೇಗೆ ಮೋಸಗೊಳಿಸಿದ್ದಾರೆಂದು ನಾನು ನಿಮಗೆ ಹೇಳಬಯಸುತ್ತೇನೆ. ಅವರು ನೂರಾರು ಮೈಲಿಗಳಷ್ಟು ದೂರದವರಾದರೂ ಇಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸುವುದರಲ್ಲಿ ಜಯಶಾಲಿಗಳಾದರು. ಮೊದಲನೆಯದಾಗಿ ಈಸ್ಟ್ ಇಂಡಿಯಾ ಕಂಪನಿ ಬಾರತಕ್ಕೆ ಬಂದಾಗ ಅದರ ಉದ್ದೇಶ ಕೇವಲ ವ್ಯಾಪಾರ ಮಾಡುವುದಾಗಿತ್ತು; ಆದರೆ ಸ್ವಲ್ಪ ಸಮಯದಲ್ಲೇ ಬ್ರಿಟಿಷರಿಗೆ ತಮ್ಮ ರಾಜ್ಯವನ್ನು ಸ್ಥಾಪಿಸುವುದಕ್ಕೆ ಕಾತರತೆ ಇತ್ತು. ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳುವುದರಲ್ಲಿ ಅವರು ಹೇಗೆ ಸಫಲರಾದರು? ಭಾರತದಲ್ಲಿ ಅವರದೇ ಆದ ಸೈನ್ಯವಿರಲಿಲ್ಲ. ತಮ್ಮದೇ ಆದ ಸೈನ್ಯವಿಲ್ಲದೆ, ಭಾರತದಲ್ಲಿನ ಎಲ್ಲಾ ರಾಜ ಮಹಾರಾಜರುಗಳನ್ನು ಹೇಗೆ ಮಣಿಸಲು ಸಾಧ್ಯವಾಯಿತು ಎಂಬುದನ್ನು ಇಲ್ಲಿಯವರೆಗೆ ಯಾರಿಗೂ ಹೇಳಲು ಸಾಧ್ಯವಾಗಿಲ್ಲ. ಆ ಪ್ರಶ್ನೆಗೆ ಈಗ ನಾನು ಉತ್ತರ ಕೊಡಲಿದ್ದೇನೆ. ಬ್ರಿಟಿಷರು ಪರಿಶಿಷ್ಟ ಜಾತಿಯ ಜನಗಳ ಸಹಾಯದಿಂದ ಭಾರತದಲ್ಲಿ ರಾಜರುಗಳಾದರು. ಈ ಜಾತಿಗಳವರನ್ನು ಅಸ್ಪೃಷ್ಯರು ಎಂದು ಕರೆಯಲಾಗುತ್ತಿತ್ತು. ಅವರು ಅನಕ್ಷರಸ್ಥರಾಗಿದ್ದರು; ಅವರೊಡನೆ ಉನ್ನತ ಜಾತಿಯ

ಹಿಂದೂಗಳು ನಡೆದುಕೊಳ್ಳುತ್ತಿದ್ದ ರೀತಿ ಬಹಳ ಅಪಮಾನಕರವಾಗಿತ್ತು. ಅವರಿಗೆ ಯಾವ ಜೀವನೋಪಾಯವೂ ಇರಲಿಲ್ಲ,; ಅವರು ಯಾವಾಗಲೂ ಉತ್ತಮ ಜಾತಿಯ ಹಿಂದೂಗಳ ಕೃಪಾಕಟಾಕ್ಷದಲ್ಲಿ ಇರುತಿದ್ದರು. ಹೀಗೆ ಅವರಿಗೆ ತಮ್ಮ ಜೀವನಕ್ಕಾಗಿ ಬ್ರಿಟಿಷರ ಸೈನ್ಯವನ್ನು ಸೇರುವುದಲ್ಲದೆ ಬೇರೆ ದಾರಿಯಿರಲಿಲ್ಲ. ಏನು ಸಂಭವಿಸಿತೋ ಅದು ಒಳ್ಳೆಯದಾಗಿತ್ತು ಎಂದು ನಾನು ನಿಮಗೆ ಮನದಟ್ಟು ಮಾಡುವುದಕ್ಕೆ ಇಚ್ಚಿಸುತ್ತಿಲ್ಲ, ಆದರೆ ನಾನು ಬೇರೆ ಏನನ್ನೋ ಒತ್ತಿ ಹೇಳಬೇಕೆಂದಿದ್ದೇನೆ. ಭಾರತದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸುವುದಕ್ಕೆ ನಾವು ಸಹಾಯ ಮಾಡಿದ ಜನಗಳೇ ನಮ್ಮ ಜನಗಳನ್ನು ಈ ರೀತಿ ನಡೆಸಿಕೊಂಡಿದ್ದಾರೆ. ಈ ಬ್ರಿಟಿಷರಿಗೋಸ್ಕರ ನಮ್ಮ ಜನಗಳು ಸೈನ್ಯದಲ್ಲಿ ಸತ್ತರು. ಅದಕ್ಕೆ ಬದಲಾಗಿ ಅವರಿಗೆ ಸಿಕ್ಕಿದ್ದು ಏನು? ಯಾರಿಗೆ ಪ್ರಯೋಜನವಾಯಿತು? ಪರಿಶಿಷ್ಟ ಜಾತಿಯ ಜನ ಬ್ರಿಟಿಷರಿಗೆ ಸಹಾಯ ಮಾಡಿದ್ದಾಗ್ಯೂ, ಅದರಿಂದ ಪೂರಾ ಪ್ರಯೋಜನ ಪಡೆದುಕೊಂಡವರೆಂದರೆ, ಬ್ರಾಹ್ಮಣರು ಮತ್ತಿತರ ಉನ್ನತ ಜಾತಿಯ ಹಿಂದೂಗಳು. ಬ್ರಿಟಿಷರು ಅವರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಟ್ಟರು, ಅಲ್ಲದೆ ಅವರಿಗೆ ಎಲ್ಲ ಆರ್ಥಿಕ ಸಹಾಯವನ್ನು ಕೊಟ್ಟರು, ಆದರೆ ನಮ್ಮ ಜನಗಳಿಗೆ ಯಾವ ಗಮನವನ್ನೂ ಕೊಡಲಿಲ್ಲ. ಇದು ಉನ್ನತ ಜಾತಿಯ ಹಿಂದೂಗಳು ಪರಿಶಿಷ್ಟ ಜಾತಿಗಳ ಶ್ರಮದ ಫಲದಿಂದಾಗಿ ಚೆನ್ನಾಗಿ ಬದುಕುವುದಕ್ಕೆ ಸಹಾಯವಾಯಿತು. ಆದರೆ ಪರಿಶಿಷ್ಟ ಜಾತಿಗಳು ಮುಂಚೆ ಹೇಗಿದ್ದರೋ ಹಾಗೆಯೇ ಉಳಿದುಕೊಂಡರು. ಇದೇ ಕಾರಣಕ್ಕೆ ಇಲ್ಲಿಯವರೆಗೆ, ನೆಮ್ಮದಿಯಿಂದ ಇರುವ ಪರಿಶಿಷ್ಟ ಜಾತಿಗಳ ಕುಟುಂಬ ಇಲ್ಲ. ಇದೇ ಕಾರಣಕ್ಕಾಗಿ ಅವರ ಮಕ್ಕಳುಗಳಿಗೆ ಒಳ್ಳೆಯ ವಿಧ್ಯಾಭ್ಯಾಸ ಸಿಕ್ಕಿಲ್ಲ; ಇದೇ ಕಾರಣಕ್ಕಾಗಿ ಅವರು ಸಾಮಾನ್ಯವಾಗಿ ಹಿಂದುಳಿದಿದ್ದಾರೆ. ಪರಿಣಾಮವಾಗಿ ಸೇನೆಯಲ್ಲಾಗಲೀ, ಪೊಲೀಸ್ ದಳದಲ್ಲಾಗಲೀ ಮತ್ತಿತರ ಆಡಳಿತ ಇಲಾಖೆಗಳಲ್ಲಿ ಮುಖ್ಯವಾದ ಹುದ್ದೆಗಳು ಪ್ರಸ್ತುತದಲ್ಲಿ ಈ ಉನ್ನತ ಜಾತಿಯ ಹಿಂದೂಗಳ ಕೈನಲ್ಲಿ ಇದೆ. ಬ್ರಿಟಿಷ್ ಜನರು ನಮ್ಮ ಜನಗಳ ಉದ್ಧಾರಕ್ಕಾಗಿ ಏನನ್ನಾದರೂ ಮಾಡಬೇಕಾಗಿತ್ತು. ಆದರೆ ಅವರು ನಮಗಾಗಿ ಏನನ್ನೂ ಮಾಡಲಿಲ್ಲ. ೧೮೫೭ರಲ್ಲಿ ಸಿಪಾಯಿ ದಂಗೆಯಾದಾಗ, ಅದಕ್ಕೆ ಕಾರಣ ಏನು? ನಮ್ಮ ಜನಗಳಿಗೆ ಬ್ರಿಟಿಷರು ಏನನ್ನಾದರೂ ಮಾಡುವುದರಲ್ಲಿ ವಿಫಲರಾಗಿದ್ದರಿಂದ ಸೈನ್ಯದಲ್ಲಿದ್ದ ನಮ್ಮ ಜನ ಅವರ ಮೇಲೆ ತಿರುಗಿ ಬಿದ್ದರು. ದಂಗೆ ಶಮನವಾದಾಗ, ಬ್ರಿಟಿಷ್‌ರ ವಿರುದ್ಧ ಸಿಡಿದೆದ್ದವರು ನಮ್ಮ ಜನಗಳು ಎಂದು ಗೊತ್ತಾದಾಗ, ಮುಂದಕ್ಕೆ ನಮ್ಮ ಜನಗಳನ್ನು ಸೈನ್ಯದಲ್ಲಿ ಭರ್ತಿ ಮಾಡುವುದನ್ನು ನಿಲ್ಲಿಸಿಬಿಟ್ಟರು. ಅವರ ಬದಲಿಗೆ, ಹಿಂದುಗಳನ್ನು ಮತ್ತು ರಜಪೂತರನ್ನು ಸೈನ್ಯದಲ್ಲಿ ಭರ್ತಿ ಮಾಡಿಕೊಂಡರು. ಹೀಗಾಗಿ ನಮ್ಮ ಜನಗಳ ಆದಾಯದ ಪ್ರಮುಖ ಮೂಲ ಕಳೆದು ಹೋಯಿತು. ೧೯೪೭ರಲ್ಲಿ ಬ್ರಿಟಿಷ್ ಜನ ಇಂಡಿಯಾವನ್ನು ಬಿಟ್ಟಾಗ, ನಮ್ಮ ಜನಗಳ ಪರಿಸ್ಥಿತಿ ಬ್ರಿಟಿಷರು ಭಾರತಕ್ಕೆ ಬರುವುದಕ್ಕೆ ಮುಂಚೆ ಹೇಗೆ ಇತ್ತೋ ಹಾಗೆಯೇ ಉಳಿದುಕೊಂಡಿತು. ಅಧಿಕಾರ ವರ್ಗಾವಣೆಯ ಸಮಯದಲ್ಲಿ ಬ್ರಿಟಿಷರು ಎಲ್ಲಾ ಅಧಿಕಾರಗಳನ್ನು ಉನ್ನತ ಜಾತಿಯ ಹಿಂದೂಗಳಿಗೆ ಕೊಟ್ಟು ಬಿಟ್ಟರು. ನಮಗೆ ಏನೂ ಸಿಗಲಿಲ್ಲ. ಈ ಕ್ರೂರ ಪ್ರಾಣಿಗಳ ಮರ್ಜಿಗೆ ನಮ್ಮನ್ನು ಬಿಟ್ಟುಬಿಟ್ಟರು. ಇದರಿಂದ ನಿಮಗೆ ಚೆನ್ನಾಗಿ ಅರ್ಥವಾಗುವುದೇನೆಂದರೆ ಇತರ ಜನಗಳು ಪರಿಶಿಷ್ಟ ಜಾತಿಗಳವರನ್ನು ಹೇಗೆ ನಡೆಸಿಕೊಂಡರು ಎಂದು. ಇದೇ ಕಾರಣಕ್ಕಾಗಿಯೇ ನಾವು ಇಲ್ಲಿಯವರೆಗೆ ಬಹಳ ಹಿಂದುಳಿದವರಾಗಿ ಉಳಿದುಕೊಂದು ಬಿಟ್ಟಿದ್ದೇವೆ. ನಾನು ನಿಮಗೆ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಅದೇಂದರೆ, ನೀವು ಇನ್ನೂ ಹಿಂದುಳಿದವರಾಗಿಯೇ ಉಳಿದುಕೊಂಡು ಈ ಉನ್ನತ ಜಾತಿಯ ಜನಗಳಿಗೆ ಗುಲಾಮರಾಗಿಯೇ ಕೆಲಸ ಮಾಡಲು ಬಯಸುತ್ತೀರಾ ಎಂದು? ಆರ್ಯನ್ನರು ಭಾರತಕ್ಕೆ ಬಂದಾಗ, ವರ್ಣಾಶ್ರಮ ಧರ್ಮ ಜಾರಿಗೆ ಬಂದಿತು. ಜನಗಳಿಗೆ ಅವರ ಹುಟ್ಟಿಗನುಸಾರವಾಗಿ ಸಮಾಜದಲ್ಲಿ ದರ್ಜೆಗಳನ್ನು ಕೊಡಲಾಯಿತು.

ಕೆಲವರನ್ನು ಬ್ರಾಹ್ಮಣರೆಂದು ಕರೆದರು, ಕೆಲವರನ್ನು ಕ್ಷತ್ರಿಯರೆಂದು, ಕೆಲವರನ್ನು ವೈಶ್ಯರೆಂದು, ಕೆಲವರನ್ನು ಶೂದ್ರರೆಂದು ಮತ್ತುಳಿದವರನ್ನು ಅಸ್ಪೃಶ್ಯರೆಂದು ಕರೆದರು. ಈ ವರ್ಗೀಕರಣದ ಪ್ರಕಾರ, ಅಸ್ಪೃಶ್ಯರು ಎಲ್ಲರಿಗಿಂತ ಕೀಳುಮಟ್ಟದವರಾದರು ಮತ್ತು ಅವರನ್ನು ಸಂಪೂರ್ಣವಾಗಿ ಸಮಾಜದಿಂದ ದೂರವಿಡಲಾಯಿತು. ಸವರ್ಣ ಹಿಂದೂವಿಗೂ ಮತ್ತು ಒಬ್ಬ ಅಸ್ಪೃಶ್ಯನಿಗೂ ಇದ್ದ ಸಂಬಂಧವೆಂದರೆ, ಕಾಲಿಗೂ ಮತ್ತು ಪಾದರಕ್ಷೆಗೂ ಇರುವ ಸಂಬಂಧ. ನಮ್ಮ ಮನೆಯನ್ನು ನಾವು ಪ್ರವೇಶಿಸುವಾಗ, ನಮ್ಮ ಪಾದರಕ್ಷೆಗಳನ್ನು ಹೊರಗೆ ಬಿಡುತ್ತೇವೆ. ಇದೇ ರೀತಿ ಅಚ್ಚುತುಗಳನ್ನು ಸಮಾಜದಿಂದ ಹೊರಗೆ ಇಡಲಾಯಿತು, ಮತ್ತು ಅವರಿಗೆ ಯಾವುದೇ ಹಕ್ಕುಗಳನ್ನು ಕೊಡಲಿಲ್ಲ. ಸವರ್ಣ ಹಿಂದೂಗಳ ಕೈನಲ್ಲಿ ಈ ರೀತಿಯಲ್ಲಿ ಕೀಳಾಗಿ ನಡೆಸಿಕೊಂಡಿರುವುದನ್ನು ನಾವು ಶತಮಾನಗಳ ಕಾಲ ಸಹಿಸಿಕೊಂಡಿದ್ದೇವೆ. ಮತ್ತು ಈಗಲೂ ಕೂಡ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನರಳುತ್ತಿದ್ದೇವೆ.

ಅನೇಕ ವರ್ಷಗಳ ಪರಿಶ್ರಮದ ನಂತರ, ನಾವು ಕೆಲವು ಗೊತ್ತಾದ ರಾಜಕೀಯ ಹಕ್ಕುಗಳನ್ನು ಪಡೆದುಕೊಂಡಿದ್ದೇವೆ; ಇವುಗಳನ್ನು ಭಾರತದ ಸಂವಿಧಾನದಲ್ಲಿಯೇ ಸೇರಿಸಿಬಿಡಲಾಗಿದೆ. ಇಪ್ಪತ್ತು ವರ್ಷಗಳ ದೀರ್ಘ ಕಾಲ ನಾನು ಮಹಾತ್ಮ ಗಾಂಧಿಯವರ ವಿರುದ್ಧ ಹೋರಾಡಿದೆ. ನಮಗೆ ಪ್ರತ್ಯೇಕವಾದ ಹಕ್ಕುಗಳನ್ನು ಕೊಡುವುದಕ್ಕೆ ಅವರು ವಿರೋಧವಾಗಿದ್ದರು., ಅಸ್ಪೃಶ್ಯರಿಗೆ ಪ್ರತ್ಯೇಕವಾದ ಹಕ್ಕುಗಳನ್ನು ಕೊಟ್ಟರೆ, ಅವರು ಎಂದೆಂದಿಗೂ ಹಿಂದೂ ಸಮುದಾಯಕ್ಕೆ ಬರಲು ಸಾಧ್ಯವಾಗುವುದಿಲ್ಲ ಎಂದು ಅವರ ವಾದ; ಅವರು ಹಿಂದುಗಳಿಂದ ಯಾವತ್ತಿಗೂ ಹೊರಗೇ ಉಳಿದುಕೊಂಡು ಬಿಡುತ್ತಾರೆ ಎಂದು. ದುಂಡು ಮೇಜಿನ ಸಮ್ಮೇಳನದಲ್ಲಿಯೂ ಸಹ ಮಹಾತ್ಮ ಗಾಂಧಿಯವರು ನಮ್ಮ ಬೇಡಿಕೆಯಾದ ಪ್ರತ್ಯೇಕ ಮತದಾರರ ಮಂಡಲವನ್ನೂ ಸಹ ವಿರೋಧಿಸಿದರು. ಅನೇಕ ವರ್ಷಗಳ ಹೆಣಗಾಟದ ನಂತರ, ನಾವು ಕೆಲವು ರಾಜಕೀಯ ಹಕ್ಕುಗಳನ್ನು ಪಡೆದುಕೊಂಡಿದ್ದೇವೆ. ನಾವೀಗ ರಾಜ್ಯ ಶಾಸನ ಸಭೆಗಳಿಗೆ ಮತ್ತು ಒಕ್ಕೂಟದ ಪಾರ್ಲಿಮೆಂಟಿಗೆ ಪರಿಶಿಷ್ಟ ಜಾತಿಗಳಿಗೆ ಮೀಸಲಿರಿಸಿದ ಸ್ಥಾನಗಳಿಗೆ ನಮ್ಮವರೇ ಆದ ಪ್ರತಿನಿಧಿಗಳನ್ನು ಕಳುಹಿಸಬಹುದು.

ಈ ಹಕ್ಕುಗಳನ್ನು ಕಿತ್ತುಕೊಳ್ಳಲು ಅನೇಕ ಪಕ್ಷಗಳು ಕಾತರರಾಗಿದ್ದಾರೆ. ನಮ್ಮ ವೋಟುಗಳನ್ನು ಪಡೆದುಕೊಳ್ಳುವುದಕ್ಕೆ, ಮತ್ತು ತಮ್ಮದೇ ಆದ ಬಾಲಬಡುಕರನ್ನು ನಮ್ಮ ಜನಗಳಿಗೆ ಮೀಸಲಿರಿಸಿದ ಜಾಗಗಳಿಗೆ ಕಳುಹಿಸಲು ಅವರು ಕಾತುರರಾಗಿದ್ದಾರೆ. ಅವರ ಉದ್ದೇಶಗಳನ್ನು ನೀವು ಬಹಳ ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲಿರಿ. ಪರಿಶಿಷ್ಟ ಜಾತಿಗಳವರು ಈಗ ಎಲ್ಲಿದ್ದಾರೆಯೋ ಅಲ್ಲೇ ಇರಬೇಕೆಂಬುದು ಅವರ ಇಚ್ಛೆ; ಅವರು ಅಧಿಕಾರಕ್ಕೆ ಬರಕೂಡದು, ಅವರು ಈಗ ಮಾಡಿಕೊಡಿರುತ್ತಿರುವ ದಾಸ್ಯ ವೃತ್ತಿಯನ್ನು ಮಾಡಿಕೊಂಡೇ ಇರಬೇಕು ಎಂದು. ಬರುತ್ತಿರುವ ಚುನಾವಣೆಯಲ್ಲಿ ನೀವು ಬಹಳ ಎಚ್ಚರಿಕೆಯಿಂದ ಇರಬೇಕು. ನಮ್ಮ ನೈಜ ಪ್ರತಿನಿಧಿಗಳೇ ನಮ್ಮ ವೋಟುಗಳನ್ನು ಪಡೆದುಕೊಂಡು ಚುನಾಯಿತರಾಗುವ ಹಾಗೆ, ಬೇರೆ ಯಾರೂ ಬರದ ಹಾಗೆ ನೀವು ನೋಡಿಕೊಳ್ಳಬೇಕು. ಆಗ ಮಾತ್ರ, ಸಂವಿಧಾನದಲ್ಲಿ ಅಳವಡಿಸಿರುವ ನಮ್ಮ ಹಕ್ಕುಗಳು ರಕ್ಷಿಸಲ್ಪಡುತ್ತವೆ.

ನಿಮ್ಮ ನಿಜವಾದ ಪ್ರತಿನಿಧಿಗಳು ರಾಜ್ಯ ಶಾಸನ ಸಭೆಗಳಿಗೆ ಮತ್ತು ಪಾರ್ಲಿಮೆಂಟಿಗೆ ಚುನಾಯಿತರಾಗದಿದ್ದರೆ ನಾವು ಸ್ವಾತಂತ್ರ್ಯವನ್ನು ಅನುಭವಿಸಲಾಗುವುದಿಲ್ಲ. ನಮ್ಮ ಜನಗಳಿಗೆ ಸ್ವಾತಂತ್ರ್ಯ ಎನ್ನುವುದು ಒಂದು ಪರಿಹಾಸ್ಯವಾಗಿಬಿಡುತ್ತದೆ. ಇದು ಉನ್ನತ ಜಾತಿಗಳ ಸ್ವಾತಂತ್ರ್ಯವಾಗಿ ಬಿಡುತ್ತದೆಯೇ ಹೊರತು ನಮ್ಮ ಸ್ವಾತಂತ್ರ್ಯವಲ್ಲ. ಆದರೆ ನಮ್ಮ ನಿಜವಾದ ಪ್ರತಿನಿಧಿಗಳು ಪಾರ್ಲಿಮೆಂಟಿನಲ್ಲಿ ಮತ್ತು ರಾಜ್ಯ ಶಾಸನ

ಸಭೆಗ್ಗಳಲ್ಲಿ ಇದ್ದರೆ, ನಮ್ಮ ನಿಮಿತ್ತಕ್ಕಾಗಿ ಅವರು ಹೋರಾಡಬಹುದು ಮತ್ತು ಕುಂದು ಕೊರತೆಗಳನ್ನು ಪರಿಹರಿಸಿಕೊಡಬಹುದು. ಆಗ ಮಾತ್ರ ನಮ್ಮ ಮಕ್ಕಳು ಒಳ್ಳೆಯ ಶಿಕ್ಷಣವನ್ನು ಪಡೆಯಬಹುದು; ಆಗ ಮಾತ್ರ ನಮ್ಮ ಬಡತನವನ್ನು ನಿವಾರಿಸಬಹುದು, ಆಗ ಮಾತ್ರ ಜೀವನದ ಎಲ್ಲಾ ವರ್ತುಲಗಳಲ್ಲಿ ಸಮಾನ ಪಾಲನ್ನು ನಮಗೆ ಕೊಡಲಾಗುವುದು. ಭಾರತದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳಿಗೆ ವಿಶೇಷ ಹಕ್ಕುಗಳನ್ನು ಕೊಡಲಾಗಿದ್ದರೂ, ಇತರ ಪಕ್ಷಗಳು, ಆದರಲ್ಲೂ ಕಾಂಗ್ರೆಸ್ ಪಕ್ಷ ಅನವಶ್ಯಕವಾಗಿ ಅದರಲ್ಲಿ ಮೂಗು ತೂರಿಸುತ್ತಿದೆ. ಪರಿಶಿಷ್ಟ ಜಾತಿಗಳಿಗೆ ಮೀಸಲಾದ ಸ್ಥಾನಗಳಿಗೆ ತಮ್ಮದೇ ಬಾಲ ಬಡುಕರನ್ನು ನಿಲ್ಲಿಸುತ್ತಿದ್ದಾರೆ. ಕಾಂಗ್ರೆಸ್ ಟಿಕೆಟ್ ಮೇಲೆ ಚುನಾಯಿತರಾದ ಜನ ತಮ್ಮ ಯಜಮಾನರುಗಳು ಹೇಳಿದ ಹಾಗೆ ಕೇಳಬೇಕಾಗಿರುವಾಗ ನಮ್ಮ ಹಿತಾಸಕ್ತಿಗಳನ್ನು ಹೇಗೆ ಕಾಪಾಡಬಲ್ಲರು? ಅವರು ನಮಗೇನು ಮಾಡಬಲ್ಲರು?

ಪರಿಶಿಷ್ಟ ಜಾತಿಗಳಿಗೆ ಮೀಸಲಿರಿಸಿದ ಸ್ಥಾನಗಳಿಗೆ ಕಾಂಗ್ರೆಸ್ ಟಿಕೆಟ್ ಮೇಲೆ ಸ್ಪರ್ಧಿಸಿ ಪಾರ್ಲಿಮೆಂಟಿಗೆ ಚುನಾಯಿತರಾದ ಜನಗಳ ಬಗ್ಗೆ ನಿಮಗೆ ಹೇಳಬಯಸುತ್ತೇನೆ. ಅವರು ಸುಮಾರು ೩೦ ಮಂದಿ ಇದ್ದರು ಮತ್ತು ಪಾರ್ಲಿಮೆಂಟಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಇದ್ದರು.

ಅವರಲ್ಲಿ, ಆ ಮೂವತ್ತು ಮಂದಿ ಸದಸ್ಯರಲ್ಲಿ, ಒಬ್ಬನೇ ಒಬ್ಬ ಸದಸ್ಯ ಪರಿಶಿಷ್ಟ ಜಾತಿಗಳ ಕುಂದು ಕೊರತೆಗಳ ಬಗ್ಗೆ ಯಾವುದೇ ಪ್ರಶ್ನೆಯನ್ನು ಪಾರ್ಲಿಮೆಂಟಿನಲ್ಲಿ ಎತ್ತಲಿಲ್ಲ. ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಯನ್ನು ಎತ್ತಿದರೂ ಸಭಾಪತಿಯವರು ಅದಕ್ಕೆ ಅನುಮತಿಸಲಿಲ್ಲ ಮತ್ತು ಆ ವಿಷಯ ಅಲ್ಲಿಗೆ ಪರಿಸಮಾಪ್ತಿಯಾಯಿತು. ಒಂದು ವೇಳೆ ಸಭಾಪತಿಯವರು ಔದಾರ್ಯದಿಂದ ಪ್ರಶ್ನೆಗೆ ಅನುಮತಿ ಕೊಟ್ಟು ಅದನ್ನು ಆ ದಿನದ ಕಾರ್ಯ ಕ್ರಮದ ಪಟ್ಟಿಯಲ್ಲಿ ಸೇರಿಸಿದರೂ, ಕಾಂಗ್ರೆಸ್ ಪಕ್ಷದ ಸಚೇತಕ ಸಂಬಂಧಪಟ್ಟ ಸದಸ್ಯನ ಬಳಿಗೆ ಹೋಗಿ, ಪ್ರಶ್ನೆಯನ್ನು ಅದು ಮುದ್ರಣ ಆಗುವುದಕ್ಕೆ ಮುಂಚೆ ಹಿಂದಕ್ಕೆ ಪಡೆಯುವಂತೆ ಹೇಳುತ್ತಿದ್ದರು. ಅಕಸ್ಮಾತ್ ಪ್ರಶ್ನೆ ಏನಾದರೂ ಮುದ್ರಿಸಲ್ಪಟ್ಟಿದ್ದರೆ, ಆಗ ಸಚೇತಕ ಆ ಸದಸ್ಯನನ್ನು ಪ್ರಶ್ನೆಗೆ ಉತ್ತರ ಕೊಡಬೇಕಾದ ದಿನದ ಮಟ್ಟಿಗೆ ಊರಿನಿಂದ ಹೊರಗಡೆ ಹೋಗುವಂತೆ ಹೇಳುತ್ತಿದ್ದರು. ಹೀಗಾಗಿ ಪಾರ್ಲಿಮೆಂಟಿನಲ್ಲಿ ಎತ್ತಲ್ಪಟ್ಟ ವಿಷಯದ ಮೇಲೆ, ಪ್ರಶ್ನೆ ಕೇಳಿದ ಸದಸ್ಯನೇ ಇಲ್ಲದಿದ್ದ ಮೇಲೆ ಯಾವ ಚರ್ಚೆಯೂ ನಡೆಯುತ್ತಿರಲಿಲ್ಲ. ಬಜೆಟ್ ಮೇಲೆ ಪಾರ್ಲಿಮೆಂಟಿನಲ್ಲಿ ಒಂದು ತಿಂಗಳ ಕಾಲ ಚರ್ಚೆ ನಡೆಯುತ್ತದೆ. ಆ ಸಮಯದಲ್ಲಿ ಯಾವುದೇ ಸದಸ್ಯ ಬಜೆಟ್ ಮೇಲೆ ಮಾತನಾಡಿ, ಇಂತಿಂಥ ಸವಲತ್ತುಗಳನ್ನು ತನ್ನ ಸಮುದಾಯಕ್ಕೆ ಅಥವಾ ತನ್ನ ಪಕ್ಷಕ್ಕೆ ಒದಗಿಸಿ ಕೊಡಬೇಕಾಗಿದೆ ಎಂದು ತೋರಿಸಬಹುದು. ಅನವಶ್ಯಕವಾದ ಯೋಜನೆಗಳ ಮೇಲೆ ವೃಥಾ ಇಷ್ಟೊಂದು ಹಣವನ್ನು ಖರ್ಚು ಮಾಡಲಾಗುತ್ತಿದೆಯೆಂದು, ಅದೇ ಸಮಯಕ್ಕೆ ಮುಖ್ಯವಾದ ಪ್ರಸ್ತಾವನೆಗಳನ್ನು ಕಡೆಗಣಿಸಲ್ಪಟ್ಟಿದೆಯೆಂದು ತೋರಿಸಬಹುದಾಗಿತ್ತು. ಈ ನಾಲ್ಕು ವರ್ಷಗಳ ಅವಧಿಯಲ್ಲಿ ಯಾವನೆ ಒಬ್ಬ ಖೋತ ನಿರ್ಣಯವನ್ನು ಮಂಡಿಸಿದ್ದನ್ನು ನಾನು ನೋಡಲೇ ಇಲ್ಲ. ಇದಕ್ಕೆಲ್ಲಾ ಕಾರಣ ಕಾಂಗ್ರೆಸ್ ಪಕ್ಷದ ಶಿಸ್ತು. ಸದಸ್ಯರೇನಾದರೂ ನಿರ್ಣಯವೊಂದನ್ನು ಮಂಡನೆ ಮಾಡಲು ಉದ್ದೇಶಿಸಿದರೆ, ಅದನ್ನು ಮಂಡನೆ ಮಾಡುವುದಕ್ಕೆ ಮುಂಚೆ, ಮುಖ್ಯ ಸಚೇತಕರ ಅನುಮತಿಯನ್ನು ಪಡೆಯಬೇಕಾಗಿತ್ತು. ಈ ನಾಲ್ಕು ವರ್ಷಗಲ್ಲಿ, ಈ ಸದಸ್ಯರು ಯಾವುದೇ ಮಸೂದೆಯನ್ನು ಮಂಡಿಸಲೇ ಇಲ್ಲ. ಅಸ್ಪೃಷ್ಯರಾಗಲೀ, ಭಾರತೀಯ ಕ್ರಿಶ್ಚಿಯನ್ನರಾಗಲೀ, ಆಂಗ್ಲೋ ಇಂಡಿಯನ್ನರಾಗಲೀ, ಅವರಿಗೆ ಮೀಸಲಿಟ್ಟ ಸ್ಥಾನಗಳನ್ನು ಕಾಂಗ್ರೆಸ್ ಟಿಕೆಟ್ ಮೇಲೆ ಅವರ ಶತೃಗಳು ಆಕ್ರಮಿಸಿಕೊಂಡಿದ್ದರೆ, ಸಂವಿಧಾನದಲ್ಲಿ ಅವರಿಗೆಂದೇ ಕೊಡಲ್ಪಟ್ಟ ಸವಲತ್ತುಗಳನ್ನು ಅವರು ಪಡೆಯುವುದಾದರೂ ಹೇಗೆ?

ನೀವು ಕಾಂಗ್ರೆಸ್ಗೆ ವೋಟು ಮಾಡುವುದಾದರೆ, ನೀವು ಎಂದೆಂದಿಗೂ ನರಳಬೇಕಾಗುತ್ತದೆಂದು ಸ್ಪಷ್ಟ ಪಡಿಸಲು ನಾನು ಬಯಸುತ್ತೇನೆ. ರಾಜ್ಯ ಶಾಸನ ಸಭೆಗಳಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ ಟಿಕೆಟ್ ಮೇಲೆ ಚುನಾಯಿತರಾದ ನಮ್ಮ ಪ್ರತಿನಿಧಿಗಳು ಮೌನವಾಗಿರುತ್ತಾರೆ. ಪರಿಶಿಷ್ಟ ಜಾತಿಗಳ ಏಕೈಕ ಸಂಘಟನೆಯಾದ ಫೆಡರೇಷನ್ನಿನ ಟಿಕೆಟ್ ಮೇಲೆ ಚುನಾಯಿತರಾದ ನಮ್ಮ ನಿಜವಾದ ಪ್ರತಿನಿಧಿಗಳು ಮಾತ್ರ ನಮ್ಮ ಹಿತಾಸಕ್ತಿಗಳನ್ನು ಕಾಪಾಡಬಲ್ಲರು. ಕಾಂಗ್ರೆಸ್ನಲ್ಲಿ ನಮ್ಮ ಕುಂದುಕೊರತೆಗಳಿಗೆ ಪರಿಹಾರವನ್ನು ಪಡೆದುಕೊಳ್ಳುವ ಅವಕಾಶವಿದ್ದಿದ್ದರೆ, ನಾನು ಆ ಸಂಸ್ಥೆಯನ್ನು ಬಿಡುತ್ತಿರಲಿಲ್ಲ. ಕಾಂಗ್ರೆಸ್ನವರ ಹತ್ತಿರ ಬೇಕಾದಷ್ಟು ಹಣವಿದೆ ಎಂದು ನನಗೆ ಗೊತ್ತು. ಅವರು ಅದರಿಂದ ವೋಟುಗಳನ್ನು ಕೊಂಡು ಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಆದರೆ ನೀವು ಅದರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ನನಗೆ ಬೇಕಾಗಿದ್ದರೆ, ನಾನು ಕಾಂಗ್ರೆಸ್ನಲ್ಲೆ ಎಂದೆಂದಿಗೂ ಇರಬಹುದಾಗಿತ್ತು, ಮತ್ತು ನನಗೆ ನಿಶ್ಚಯವಾಗಿ ಒಂದು ಒಳ್ಳೆಯ ಸ್ಥಾನ ಸಿಗುತ್ತಿತ್ತು. ನನಗೆ ನನ್ನ ಸಮುದಾಯದ ಮೇಲೆ ಯಾವ ಅಭಿಮಾನವೂ ಇಲ್ಲದಿದ್ದರೆ, ನನಗೆ ಸ್ವಾರ್ಥ ಉದ್ದೇಶಗಳಿದ್ದಿದ್ದರೆ ಅದನ್ನು ನಾನು ಮಾಡುತ್ತಿದ್ದೆ. ನನಗಾಗಿ ಯಾವುದಾದರೂ ಪರ್ಮಿಟ್ ಆಗಲೀ ಅಥವಾ ಲೈಸೆನ್ಸ್ ಆಗಲೀ ಬೇಕಾಗಿದ್ದರೆ,. ನಾನು ಅಲ್ಲೇ ಉಳಿದುಕೊಂಡಿರುತ್ತಿದ್ದೆ. ಲೈಸೆನ್ಸ್‌ಗಳನ್ನು ಮತ್ತು ಪರ್ಮಿಟ್ಟುಗಳನ್ನು ಪಡೆದುಕೊಳ್ಳ ಬಯಸುವ ಮನುಷ್ಯ, ತನ್ನ ಸಮುದಾಯಕ್ಕೆ ಅನ್ಯಾಯ ಮಾಡಿ ಪಡೆದುಕೊಳ್ಳಬಹುದು. ಇದು ಕಾಂಗ್ರೆಸ್ ಸರ್ಕಾರದಲ್ಲಿ ನಾನು ಇದ್ದ ಅವಧಿಯಲ್ಲಿ ಪಡೆದುಕೊಂಡ ಅನುಭವ.

ಇಂಗ್ಲಿಷ್ ಜನ, ಅವರು ಭಾರತದಲ್ಲಿ ಇದ್ದ ಅವಧಿಯಲ್ಲಿ, ಮನಸ್ಸು ಮಾಡಿದ್ದರೆ ನಮ್ಮ ಸಮುದಾಯದ ಕಲ್ಯಾಣಕ್ಕಾಗಿ ಏನನ್ನಾದರೂ ಮಾಡಬಹುದಾಗಿತ್ತು. ಆ ಕಾಲ ಈಗ ಮಿಂಚಿ ಹೋಗಿದೆ, ಬೇರೊಂದು ಪರ್ವ ಅಸ್ತಿತ್ವಕ್ಕೆ ಬಂದಿದೆ. ಈಗಲಾದರೂ ಸಹ ನಾವು ಎಚ್ಚರಿಕೆಯಿಂದ ಇರದಿದ್ದರೆ, ನಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿದ್ದರೆ, ನಾವು ಹಾಳಾಗಿ ಬಿಡುತ್ತೇವೆ. ನೀವು ಈಗ ನರಳುತ್ತಿರುವ ಹಾಗೆ, ನಿಮ್ಮ ಪೀಳಿಗೆಯೂ ನರಳ ಬಾರದು ಎಂಬ ಇಚ್ಛೆ ನಿಮಗಿದ್ದರೆ, ಅದಕ್ಕಾಗಿ ಈಗ ಏನನ್ನಾದರೂ ನೀವು ಮಾಡಲೇಬೇಕು. ನೀವು ಗಿಡವೊಂದನ್ನು ನೆಟ್ಟಾಗ, ಕೆಲವು ಕಾಲದ ನಂತರ ನಿಮಗೆ ಅದರಲ್ಲಿ ಹಣ್ಣು ಸಿಗುತ್ತದೆ. ಶಾಸನ ಸಭೆಗಳಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ನಿಮಗೆ ಇರುವ ಮೀಸಲಾತಿ ಕೇವಲ ಹತ್ತು ವರ್ಷಗಳವರೆಗೆ ಮಾತ್ರ ಎಂದು ನಾನು ನಿಮಗೆ ಮನದಟ್ಟು ಮಾಡಲು ಬಯಸುತ್ತೇನೆ. ಭಾರತದಲ್ಲಿ ಅಸ್ಪೃಷ್ಯತೆ ಇರುವವರೆಗೂ ಮೀಸಲಾತಿ ಇರಬೇಕೆಂದು ನಾನು ಬಯಸಿದರೂ, ಉನ್ನತ ಜಾತಿಗಳಿಗೆ ಸೇರಿದವರನ್ನ ಬಿಡಿ, ಕಾಂಗ್ರೆಸ್ ಟಿಕೆಟ್ ಮೇಲೆ ಪಾರ್ಲಿಮೆಂಟಿಗೆ ಚುನಾಯಿತರಾದ ನಮ್ಮ ಜನಗಳೇ ಅದನ್ನು ವಿರೋಧಿಸಿದರು.

ಆದ್ದರಿಂದ ಏನೂ ಇಲ್ಲದ್ದಕ್ಕಿಂತ ಏನಾದರೂ ಇದ್ದರೆ ಸ್ವಲ್ಪ ವಾಸಿ ಎಂದುಕೊಂಡು ನಾನು ೧೦ ವರ್ಷಗಳ ಮೀಸಲಾತಿಗೆ ಒಪ್ಪಿಕೊಂಡೆ; ಹೀಗೆ ನಮ್ಮ ಜನಗಳಿಗೆ ಅಲ್ಪ ಸ್ವಲ್ಪ ದೊರಕಿಸಿಕೊಟ್ಟೆ.

ಮೀಸಲಾತಿ ಕೇವಲ ಎರಡು ಚುನಾವಣೆಗಳಿಗೆ ಮಾತ್ರ ಮತ್ತು ಅಲ್ಲಿಯವರೆಗೆ ಮಾತ್ರ. ಕಾಂಗ್ರೆಸ್–ನಂಥ ಆಸಕ್ತ ಪಕ್ಷಗಳು ನಿಮ್ಮಲ್ಲಿಗೆ ಬಂದು ವೋಟು ಕೊಡಿ ಎಂದು ಕೇಳುತ್ತಾರೆ. ಈ ರೀತಿಯಾಗಿ ಹತ್ತು ವರ್ಷದ ಅವಧಿ ಕಳೆದೇ ಹೋಗುತ್ತದೆ. ಈ ಅವಧಿಯನ್ನು ವಿಸ್ತರಿಸಿ ಎಂದು ಕೇಳಲು ಯಾರೂ ಇರುವುದಿಲ್ಲ. ನೀವು ಆಗ ಏನು ಮಾಡುತ್ತೀರಿ ಎಂದು ನಾನು ನಿಮ್ಮನ್ನು ಕೇಳಬಯಸುತ್ತೇನೆ. ಆಗ ಕಾಂಗ್ರೆಸ್ಸಿನವರು ನಿಮ್ಮ ಬಳಿಗೆ ಬಂದು ತಮ್ಮ ಟಿಕೆಟ್ ಮೇಲೆ ಚುನಾವಣೆಗೆ ಎಂದು ನಿಮ್ಮನ್ನು ಕೇಳುತ್ತಾರೆಯೇ? ಖಂಡಿತವಾಗಿಯೂ ಇಲ್ಲ. ಅವರೇನೂ ದಡ್ಡರಲ್ಲ. ಅವರು ನಿಮ್ಮನ್ನು ಯಾಮಾರಿಸಲು ಬಯಸುತ್ತಾರೆ. ಈ ದಿನ ಕಾಂಗ್ರೆಸ್ ಟಿಕೆಟ್ ಕೇಳುತ್ತಿರುವವರ ಮುಖದ ಮೇಲೆ ಅವರು ಉಗಿಯುವುದೂ ಇಲ್ಲ.

ಆದ್ದರಿಂದ ನೀವು ಈ ಸಮಸ್ಯೆಯನ್ನು ಕುರಿತು ಸಾವಧಾನವಾಗಿ ಚಿಂತಿಸಬೇಕು, ಆಮೇಲೆ ಯಾವ ಅಭ್ಯರ್ಥಿಗೆ ನಿಮ್ಮ ಮತವನ್ನು ಹಾಕಬೇಕು ಎಂದು ತೀರ್ಮಾನಿಸಬೇಕು.

ಪ್ರತಿಯೊಂದು ಪಕ್ಷಕ್ಕೂ ಇಲ್ಲಾ ಹಣ ಇರಬೇಕು, ಇಲ್ಲಾ ಅಧಿಕಾರ ಇರಬೇಕು. ನಾವು ಅಲ್ಪ ಸಂಖ್ಯಾತರಾಗಿ ಹಳ್ಳಿಗಳಲ್ಲಿ ಉನ್ನತ ಜಾತಿಗಳ ಕೃಪಾಕಟಾಕ್ಷದಲ್ಲಿ ವಾಸಿಸುತ್ತಿದ್ದೇವೆ. ಬನಿಯಾಗಳು, ಮಾರ್ವಾಡಿಗಳು, ಇತ್ಯಾದಿ, ಇವರುಗಳಿಗೇನೂ ಅಧಿಕಾರವಿಲ್ಲ, ಆದರೆ ಅವರ ಹತ್ತಿರ ಹಣವಿದೆ. ಹಣದಿಂದ ಅವರು ಏನನ್ನು ಬೇಕಾದರೂ ಕೊಳ್ಳಬಲ್ಲರು. ಆದ್ದರಿಂದ ನಿಮ್ಮಗಳಿಗೆ ನೀವು ಏನನ್ನಾದರೂ ಮಾಡಿಕೊಳ್ಳಬೇಕೆಂದಿದ್ದರೆ, ಇದೇ ನಿಮ್ಮ ಅವಕಾಶ. ನೀವು ಒಗ್ಗಟ್ಟಾಗಿದ್ದರೆ, ನಿಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೆ ನಿಮ್ಮ ಪ್ರತಿನಿಧಿಗಳನ್ನು ಶಾಸನ ಸಭೆಗಳಿಗೂ ಮತ್ತು ಪಾರ್ಲಿಮೆಂಟಿಗೂ ಕಳುಹಿಸಬಹುದು. ಇಲ್ಲದಿದ್ದರೆ, ನೀವು ಹಾಳಾಗಿ ಹೋಗಿ ಬಿಡುತ್ತೀರಿ. ಗಲಾಟೆ ಗೊಂದಲದಿಂದ ನಿಮ್ಮ ಸಮುದಾಯವನ್ನು ಹೊರಕ್ಕೆ ಎಳೆದುಕೊಳ್ಳಬೇಕಾದರೆ, ನೀವು ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಬಾವುಟದ ಕೆಳಗೆ ಒಗ್ಗಟ್ಟಾಗಿ ನಿಲ್ಲಬೇಕು. ಪ್ರತಿಯೊಬ್ಬ ಅಚ್ಚುತ್ ಫೆಡರೇಷನ್ನಿಗೆ ತಮ್ಮ ನಿಜವಾದ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕೆ ಸಹಾಯ ಮಾಡಬೇಕು. ಅನೇಕ ಪಕ್ಷಗಳು ನಿಮ್ಮಲ್ಲಿಗೆ ಬಂದು ನಿಮ್ಮ ವೋಟನ್ನು ಕೇಳುತ್ತಾರೆ, ಆದರೆ ಅವರು ನಿಮ್ಮನ್ನು ತಪ್ಪುದಾರಿಗೆ ಎಳೆಯಲು ಬಿಡಬೇಡಿ.

ಕೆಲವು ದಿನಗಳ ಹಿಂದೆ, ಪಂಡಿತ್ ನೆಹರು ಇಲ್ಲಿಗೆ ಬಂದಿದ್ದರು. ಅವರ ಭಾಷಣವನ್ನು ಕೇಳಲು ಎರಡರಿಂದ ಮೂರು ಲಕ್ಷ ಜನರು ಸೇರಿದ್ದರೆಂದು ವರದಿಯಾಗಿತ್ತು. ಅಲ್ಲಿ ಎಷ್ಟು ಜನರಿದ್ದರೆಂದು ನನಗೆ ಗೊತ್ತಿಲ್ಲ. ನೆನ್ನೆ ನಾನು ಜಲಂಧರ್ಗೆ ಭೇಟಿ ಕೊಟ್ಟಾಗ ಅಲ್ಲಿ ಎರಡು ಲಕ್ಷಕ್ಕೂ ಮಿಕ್ಕು ಜನಗಳು ಸೇರಿದ್ದರು, ಆದರೆ ಪ್ರೆಸ್ಸಿನವರು ಅಲ್ಲಿ ಮೂವತ್ತು ಸಾವಿರ ಜನರು ಸೇರಿದ್ದರೆಂದು ವರದಿ ಮಾಡಿದ್ದರು. ನಿಮಗೆ ನಾನು ಹೇಳಬಯಸುವುದೇನೆಂದರೆ, ಕಾಂಗ್ರೆಸ್ಸ್ನ ಯಾವುದಾದರೂ ಸಮ್ಮೇಳನವಿದ್ದರೆ, ಸಭೆಯಲ್ಲಿ ಜನಗಳು ವಿರಳವಾಗಿದ್ದರೂ ಅವರು ಸಮ್ಮೇಳನಕ್ಕೆ ಬಹಳ ದೊಡ್ಡ ಸಂಖ್ಯೆಯಲ್ಲಿ ಜನಗಳು ಸೇರಿದ್ದರೆಂದು ವರದಿ ಮಾಡುತ್ತಾರೆ.

ಐದಕ್ಕೆ ಐವತ್ತು ಎಂದು, ಐವತ್ತಕ್ಕೆ ಐನೂರು ಎಂದು, ಐನೂರಕ್ಕೆ ಐದು ಸಾವಿರವೆಂದು, ಐದು ಸಾವಿರಕ್ಕೆ ಅವರು ಐದು ಲಕ್ಷವೆಂದು ವರದಿ ಮಾಡುತ್ತಾರೆ. ವರದಿಗಾರರ ಈ ಟೀಕೆ ನನಗೆ ಪರವಾ ಇಲ್ಲ. ಅನೇಕ ವರ್ಷಗಳಿಂದ ಅವರು ನನ್ನನ್ನು ಟೀಕೆ ಮಾಡಿಕೊಂಡೇ ಬಂದಿದ್ದಾರೆ, ಹಾಗಿದ್ದೂ ಕೂಡ ನಾನು ಭೌತಿಕವಾಗಿ ಮತ್ತು ಮಾನಸಿಕವಾಗಿ ಮುಂದುವರೆದಿದ್ದೇನೆ. ನನಗೆ ದೊಡ್ಡ ಸಂಖ್ಯೆಯಲ್ಲಿ ಜನರು ಸೇರುವುದು ಬೇಕಿಲ್ಲ. ಆದರೆ ನನಗೆ ಬೇಕಾಗಿರುವುದೇನೆಂದರೆ, ಈ ಸವರ್ಣ ಹಿಂದೂಗಳ ಅತ್ಯಾಚಾರದ ವಿರುದ್ಧ ಹೋರಾಡುವುದಕ್ಕಾಗಿ ನಮ್ಮ ಜನಗಳು ಸಂಘಟಿತರಾಗ ಬೇಕು. ನನ್ನ ಜನಗಳು ನನಗೆ ಕಿವಿಗೊಡಬೇಕೆಂದು ನಾನು ಬಯಸುತ್ತೇನೆ. ಅವರು ಸಣ್ಣ ಸಂಖ್ಯೆಯಲ್ಲಿ ಸೇರಲಿ ಅಥವಾ ದೊಡ್ಡ ಸಂಖ್ಯೆಯಲ್ಲಿ ಸೇರಲಿ ಅದು ಅಪ್ರಸ್ತುತ. ಪ್ರತಿಯೊಂದು ಪಕ್ಷವೂ ಚುನಾವಣಾ ಪ್ರಣಾಳಿಕೆಯನ್ನು ಹೊರ ತಂದಿದೆ. ಪ್ರತಿಯೊಂದು ಪಕ್ಷವೂ ತಾನು ಅಧಿಕಾರಕ್ಕೆ ಬಂದರೆ ಅದು ಮಾಡುತ್ತೇವೆ ಇದು ಮಾಡುತ್ತೇವೆ ಎಂದು ಭರವಸೆ ಕೊಡುತ್ತದೆ. ಪರಿಶಿಷ್ಟ ಜಾತಿಗಳ ಫೆಡರೇಷನ್ ಸಹಾ ಒಂದು ಬೃಹತ್ ಗಾತ್ರದ ಪ್ರಣಾಳಿಕೆಯನ್ನು ಹೊರ್ರತಂದಿದೆ. ಆದರೆ ಸಾಧಾರಣ ಜನರಿಗೆ ಅದು ಅರ್ಥವಾಗುವುದಿಲ್ಲವೆಂದು ಅವರಿಗೆ ಗೊತ್ತಾದಮೇಲೆ, ಅದನ್ನು ತಿದ್ದುಪಡಿ ಮಾಡಿ ಸಣ್ಣದು ಮಾಡಿದರು. ಕಾಂಗ್ರೆಸ್ಸಿನವರ ಪ್ರಣಾಳಿಕೆಯೂ ಸಹ ಚಿಕ್ಕದಾಗುತ್ತಾ ಹೋಗಿ, ಅದೊಂದು ದಿನ ಕಾಂಗ್ರೆಸ್ಸಿನವರ ಪ್ರಣಾಳಿಕೆಯೇ ಇರುವುದಿಲ್ಲ. ಪ್ರಣಾಳಿಕೆಯಲ್ಲಿ ಏನು ಇರಬೇಕೆಂದು, ಏನಿರಬಾರದೆಂದು

ನಾನು ನಿಮಗೆ ಹೇಳಲಿಚ್ಛಿಸುತ್ತೇನೆ. ಯಾವ ಪ್ರಣಾಳಿಕೆ ಅತ್ಯುತ್ತಮವಾದುದೆಂದು ಹೇಳಲು ಒಂದು ಸಮಿತಿಯನ್ನು ನೇಮಿಸಿ ಎಂದು ಎಲ್ಲಾ ರಾಜಕೀಯ ಪಕ್ಷಗಳನ್ನು ನಾನು ಸವಾಲು ಮಾಡುತ್ತೇನೆ. ನಮ್ಮ ಪ್ರಣಾಳಿಕೆಯೇ ಎಲ್ಲದಕ್ಕಿಂತ ಅತ್ಯುತ್ತಮವಾದುದು ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಎಲ್ಲಾ ಪಕ್ಷಗಳೂ ತಮ್ಮ ತಮ್ಮ ಪ್ರಣಾಳಿಕೆಯಲ್ಲಿ ಜನಗಳಿಗೆ ಏನೇನನ್ನೋ ಮಾಡುತ್ತೇವೆ ಎಂದು ಮಾತು ಕೊಟ್ಟಿದ್ದಾರೆ. ಮಾತು ಕೊಡುವುದು ಸುಲಭ, ಆದರೆ ಅದನ್ನು ಉಳಿಸಿಕೊಳ್ಳುವುದು ಕಷ್ಟ. ನೀವು ಒಂದನ್ನು ಮಾಡುತ್ತೀವೆಂದು ಭರವಸೆ ಕೊಡಬಹುದು, ಹಾಗೆಯೇ ನೂರನ್ನೂ ಮಾಡುತ್ತೇವೆ ಎಂದು ಭರವಸೆ ಕೊಡಬಹುದು. ಪ್ರಣಾಳಿಕೆ ಎಂದರೆ ಭರವಸೆಗಳ ಒಂದು ಪಟ್ಟಿ ಮಾತ್ರವಲ್ಲ. ಅದು ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ವ್ಯವಹರಿಸಬೇಕು, ಅಲ್ಲದೆ ಈ ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು ಎಂದು ಹೇಳಬೇಕು. ಕಾಂಗ್ರೆಸ್ಸಿನವರ ಪ್ರಣಾಳಿಕೆಯಲ್ಲಿ ಆ ತರಹದ್ದು ಏನಾದರೂ ಇದೆಯೆ? ಮುಸ್ಲಿಮ್ ಸಮಸ್ಯೆ ಒಂದಕ್ಕೇ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಒತ್ತುಕೊಟ್ಟಿರುವುದು. ಅದರ ಪ್ರಕಾರ, ಈ ದೇಶ ಎದುರಿಸುತ್ತಿರುವ ಇನ್ನಾವ ಸಮಸ್ಯೆಯೂ ಇಲ್ಲ. ಯಾರಾದರೂ ಇದನ್ನು ಒಪ್ಪಬಹುದೆ? ಹೌದು, ಭಾರತದಲ್ಲಿ ಮುಸ್ಲಿಮರ ಸಮಸ್ಯೆ ಇತ್ತು, ಭಾರತ ಒಂದೇ ಆಗಿದ್ದಾಗ, ಪಾಕಿಸ್ತಾನ ಇಲ್ಲದೇ ಇದ್ದಾಗ. ಆದರೆ ಆಗಲೂ ಕೂಡ, ಇದು ಒಂದೇ ಸಮಸ್ಯೆ ಆಗಿರಲಿಲ್ಲ. ಮುಸ್ಲಿಮರು ಪಾಕಿಸ್ತಾನಕ್ಕೆ ವಲಸೆ ಹೋಗಿಬಿಟ್ಟಿದ್ದಾರೆ. ಹಿಂದೂಗಳು, ಸಿಖ್ಖರು ಮತ್ತು ಇತರ ಅಲ್ಪಸಂಖ್ಯಾತರು ಭಾರತದಲ್ಲಿ ಇದ್ದಾರೆ. ಈಗ ಭಾರತ ಮುಸ್ಲಿಮ್ ಸಮಸ್ಯೆಯನ್ನು ಎದುರಿಸುತ್ತಿದೆಯೆಂದು ನಿಮಗೆ ಅನಿಸುತ್ತಿದೆಯೇ? ಮುಸ್ಲಿಮರಿಗಿಂತ ಹತ್ತು ಪಟ್ಟು ಬಡವರಾಗಿರುವ, ಹಿಂದುಳಿದವರಾಗಿರುವ ನಿಮ್ಮ ವರ್ಗಗಳಿಗೆ ಏನನ್ನೂ ಮಾಡಬೇಕಾಗಿಲ್ಲವೆಂದರೆ ನೀವು ಒಪ್ಪುತ್ತೀರ? ಪರಿಶಿಷ್ಟ ಜಾತಿಗಳವರು ಇದ್ದಾರೆ, ಪರಿಶಿಷ್ಟ ಪಂಗಡಗಳವರು ಇದ್ದಾರೆ, ಇತರ ಪಂಗಡಗಳವರು ಇದ್ದಾರೆ; ಇವುಗಳಿಗೆ ಸರ್ಕಾರ ಅತಿ ಹೆಚ್ಚಿನ ಗಮನ ಕೊಡಬೇಕಾಗಿದೆ. ಆದರೆ ಕಾಂಗ್ರೆಸ್ಸಿನವರು ಹೇಳುವುದೇನೆಂದರೆ, ಜನಗಳು ಜಾತೀಯ ಮನೋಭಾವನೆಯನ್ನು ಹೊಂದಿರಬಾರದು ಮತ್ತು ಈ ಹಿಂದುಳಿದ ವರ್ಗಗಳವರಿಗೆ ವಿಶೇಷ ಸವಲತ್ತುಗಳು ಬೇಕೆಂದು ಆಗ್ರಹ ಪಡಿಸಬಾರದು. ಭಾರತದಲ್ಲಿರುವ ಇನ್ನೊಂದು ಸಮಸ್ಯೆ ಎಂದರೆ, ಬಡತನ. ಭಾರತದಲ್ಲಿನ ಜನಗಳು ಎಷ್ಟು ಬಡವರಾಗಿದ್ದಾರೆಂದರೆ, ಶೇಕಡ ೯೦ ಮಂದಿಗೆ ಸರಿಯಾದ ಊಟವೂ ಸಿಗುತ್ತಿಲ್ಲ. ಅವರಿಗೆ ಯಾವುದೇ ಬಟ್ಟೆಗಳು ಸಿಗುತ್ತಿಲ್ಲ.ಅವರಿಗೆ ತಲೆಯ ಮೇಲೊಂದು ಸೂರಿಲ್ಲ.. ಪ್ರತಿವರ್ಷವೂ ಕೋಟ್ಯಾಂತರ ರೂಪಾಯಿಗಳ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ನಾವು ಆಹಾರ ಪದಾರ್ಥಗಳನ್ನೇ ಹೊರಗಡೆಯಿಂದ ಆಮದು ಮಾಡಿಕೊಂಡು, ಇಷ್ಟೊಂದು ಖರ್ಚು ಮಾಡಿದರೆ, ಪಥ ಜರುಗುವುದಾದರೂ ಹೇಗೆ? ಆದರೆ ಇದು ಯಾವುದಕ್ಕೂ ಕಾಂಗ್ರೆಸ್ಸಿಗರ ಮನಸ್ಸಿನಲ್ಲಿ ಜಾಗವೇ ಇಲ್ಲ. ಅವರಿಗೆ ಇರುವುದು ಒಂದೇ ಸಮಸ್ಯೆ, ಅದೇಂದರೆ ಮುಸ್ಲಿಮ್ ಸಮಸ್ಯೆ.

ಪರಿಶಿಷ್ಟ ಜಾತಿಗಳ ಫೆಡರೇಶನ್ನಿನ ವತಿಯಿಂದ ಬರುವ ಚುನಾವಣೆಗಳಲ್ಲಿ ನಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುತ್ತಿದ್ದೇವೆ.. ಪರಿಶಿಷ್ಟ ಜಾತಿಗಳ ಫೆಡರೇಷನ್ ಎಲ್ಲಾ ಹಿಂದುಳಿದ ವರ್ಗಗಳವರಿಗೂ ಇದೆ. ಪ್ರತಿಯೊಂದು ಹಿಂದುಳಿದ ವರ್ಗಕ್ಕೂ ಪ್ರಾತಿನಿಧ್ಯವನ್ನು ಕೊಡಲಾಗುತ್ತದೆ. ಅದರ ಬಗ್ಗೆ ಯಾರಿಗೂ ಹೆದರಿಕೆ ಬೇಡ. ಕಮ್ಮಾರರು, ಭಂಗಿಗಳು ಎಲ್ಲರೂ ಸಮಾನರು. ನಾವೆಲ್ಲಾ ಒಗ್ಗಟ್ಟಾಗಿ ಇರಬೇಕು ಯಾರೂ ತಾವು ಇತರರಿಂದ ಬೇರೆ ಎಂದು ತಿಳಿಯಬಾರದು. ಚುನಾವಣೆ ದಿವಸ ಎಲ್ಲರೂ, ಹೆಂಗಸರೂ ಗಂಡಸರೂ, ತಮ್ಮ ತಮ್ಮ ಕೆಲಸಗಳನ್ನು ಒತ್ತಟ್ಟಿಗಿಟ್ಟು ಮತಗಟ್ಟೆಗಳಿಗೆ ಹೋಗಿ ತಮ್ಮ ಮತಗಳನ್ನು ಚಲಾಯಿಸಬೇಕು.ಈಗಾಗಲೇ ನಮ್ಮ ವೋಟುಗಳು ಸಾಕಷ್ಟು ಇಲ್ಲ, ಮತದಾರರು ಆ ದಿನ ಮತವನ್ನು ಚಲಾಯಿಸದೇ ಹೋದರೆ,

ನಮಗೆ ಒಳ್ಳೆಯದಾಗುವುದಿಲ್ಲ. ನಮಗೆ ಪ್ರಾತಿನಿಧ್ಯವಿಲ್ಲದೇ ಹೋಗುತ್ತದೆ. ಮತದಾನದ ದಿನ, ಪರಿಶಿಷ್ಟ ಜಾತಿಗಳಿಗೆ ಜೀವನ್ಮರಣದ ದಿನ. ಬರುವ ಚುನಾವಣೆಗಳಲ್ಲಿ ಭಾಗವಹಿಸುತ್ತಿರುವ ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಒಂದೊಂದು ಚುನಾವಣಾ ಚಿಹ್ನೆಯನ್ನು ಕೊಡಲಾಗಿದೆ. ನಮ್ಮ ಫೆಡರೇಷನ್ನಿನ ಚುನಾವಣ ಚಿಹ್ನೆ 'ಆನೆ' ಜನಗಳ ಮನಸ್ಸಿನಲ್ಲಿ ಯಾವ ಗೊಂದಲವೂ ಉಂಟಾಗಬಾರದೆಂದು ನಾನು ಈ ಚಿಹ್ನೆಯನ್ನು ಆಯ್ದುಕೊಂಡಿದ್ದೇನೆ. ಕೆಲವು ಪಕ್ಷಗಳು, ಎತ್ತುಗಳು, ಕುದುರೆಗಳು, ಕತ್ತೆಗಳನ್ನು ತಮ್ಮ ಚುನಾವಣಾ ಚಿಹ್ನೆಯಾಗಿ ಆಯ್ದುಕೊಂಡಿದ್ದಾರೆ. ಆದರೆ ಸುಲಭವಾಗಿ ಗುರುತಿಸುವುದಕ್ಕಾಗಿ 'ಆನೆಯನ್ನು' ನಾನು ಆಯ್ದುಕೊಂಡಿದ್ದೇನೆ. ಈ ಬಾರಿ ಸಂಚಿತ ಮತದಾನ ಪದ್ಧತಿ ಇರುವುದಿಲ್ಲ. ಹಾಗಾಗಿ ನಾವು ನಮ್ಮ ಎಲ್ಲಾ ವೋಟುಗಳನ್ನು ನಮಗೆ ಬೇಕಾದ ಒಬ್ಬ ಅಭ್ಯರ್ಥಿಗೆ ಹಾಕಲಾಗುವುದಿಲ್ಲ. ಆದರೆ ನಮಗೆ ಹಂಚಿಕೆ ಪದ್ಧತಿ ಇದ್ದು ನಮ್ಮ ವೋಟುಗಳನ್ನು ಬೇರೆ ಬೇರೆ ಅಭ್ಯರ್ಥಿಗಳಿಗೆ ಹಂಚಬೇಕು. ಪರಿಶಿಷ್ಟ ಜಾತಿಗಳಿಗೆ ಸ್ಥಾನ ಮೀಸಲಾಗಿಟ್ಟಿರುವ ಒಂದು ಮತಕ್ಷೇತ್ರದಲ್ಲಿ ಜನಗಳಿಗೆ ಎರಡು ವೋಟುಗಳು ಇರುತ್ತವೆ. ಒಂದು ಮುಕ್ತ ಸ್ಥಾನಕ್ಕೆ ಇನ್ನೊಂದು ಮೀಸಲಿಟ್ಟ ಸ್ಥಾನಕ್ಕೆ. ಮೀಸಲು ಸ್ಥಾನಕ್ಕೆ ನಿಂತಿರುವ ನಮ್ಮ ಪಕ್ಷದ ಅಭ್ಯರ್ಥಿಗೆ ನಾವು ಎರಡು ಮತಗಳನ್ನು ಕೊಡುವ ಹಾಗಿಲ್ಲ. ಆ ಅಭ್ಯರ್ಥಿಯ ಪರವಾಗಿ ಒಂದು ಮತವನ್ನು, ಇನ್ನೊಂದನ್ನು ಮುಕ್ತ ಸ್ಥಾನಕ್ಕೆ ನಿಂತಿರುವ ಅಭ್ಯರ್ಥಿಗೆ ಹಾಕಬೇಕು. ಆದುದರಿಂದ ನಾವು ಯಾವುದಾದರೊಂದು ಪಕ್ಷವನ್ನು ಸೇರಿಕೊಳ್ಳಬೇಕು. ಅವರು ನಮ್ಮ ಅಭ್ಯರ್ಥಿಗೆ ತಮ್ಮ ಎರಡನೆ ವೋಟನ್ನು ಕೊಡುತ್ತಾರೆ ಮತ್ತು ಬದಲಿಗೆ ನಮ್ಮ ಎರಡನೆಯ ವೋಟನ್ನು ಅವರು ಪಡೆದುಕೊಳ್ಳುತ್ತಾರೆ ನಾವಿನ್ನೂ ಯಾವ ಪಕ್ಷದೊಂದಿಗೆ ಕೈ ಜೋಡಿಸಬೇಕೆಂದು ತೀರ್ಮಾನ ಮಾಡಿಲ್ಲ. ಅನೇಕ ಪಕ್ಷಗಳು ಸಖ್ಯಕ್ಕಾಗಿ ನಮ್ಮನ್ನು ಸಮೀಪಿಸಿವೆ, ಆದರೆ ಯಾವುದನ್ನು ಇನ್ನು ನಿಶ್ಚಯ ಮಾಡಿಲ್ಲ. ಮಾತುಕತೆಗಳು ನಡೆಯುತ್ತಿವೆ. ಯಾವುದಾದರೊಂದು ಪಕ್ಷದೊಂದಿಗೆ ಕೈ ಜೋಡಿಸುವ ಮುಂಚೆ ನಾವು ಅನೇಕ ಬಾರಿ ಯೋಚಿಸಬೇಕು. ಆದರೆ ನಾವು ಯಾವುದಾದರೊಂದು ಪಕ್ಷದೊಂದಿಗೆ ಸೇರಲೇಬೇಕು.

ಕಡೆಯದಾಗಿ ನಾನು ನಿಮಗೆ ಹೇಳ ಬಯಸುವುದೇನೆಂದರೆ ಪಂಜಾಬಿನಿಂದ ಮತ್ತು ಉತ್ತರ ಪ್ರದೇಶದಿಂದ ಮತ್ತಿತರ ದೂರ ಪ್ರದೇಶಗಳಿಂದ ಸಾವಿರಾರು ಜನಗಳು ತಮ್ಮ ಅಳಲುಗಳನ್ನು ನನ್ನ ಮುಂದೆ ಹೇಳಿಕೊಳ್ಳುವುದಕ್ಕೆಂದು ದೆಹಲಿಗೆ ಬರುತ್ತಾರೆ. ಕೆಲವರು ತಮ್ಮನ್ನು ಜ಼ಮೀನ್ದಾರರುಗಳು ಹೊಡೆದಿದ್ದಾರೆಂದು ದೂರುತ್ತಾರೆ. ಅವರು ಸಂಬಂಧಪಟ್ಟ ಅಧಿಕಾರಿಗಳನ್ನು ಸಮೀಪಿಸಿದಾಗ, ಆ ಅಧಿಕಾರಿಗಳೂ ಸಹ ಉನ್ನತ ಜಾತಿಗೆ ಸೇರಿದವರಾಗಿರುವುದರಿಂದ ತೀರ್ಮಾನಗಳನ್ನು ಅವರ ವಿರುದ್ಧವಾಗಿ ಕೊಡುತ್ತಾರೆ.. ದೂರುಗಳು ವಿಪರೀತವಾಗಿರುವುದರಿಂದ ನನಗೊಬ್ಬನಿಗೇ ಆ ದೂರುಗಳನ್ನು ವಿಚಾರಿಸಲು ಆಗುತ್ತಿಲ್ಲ. ಅನೇಕರು ತಮ್ಮ ಮನೆಗಳಿಗೆ ನಿರಾಶರಾಗಿ ಹಿಂದಿರುಗುತ್ತಾರೆ. ಆದುದರಿಂದ ನಾನು ದೆಹಲಿಯಲ್ಲಿ ಒಂದು ಕಟ್ಟಡವನ್ನು ನಿರ್ಮಿಸಲು ತೀರ್ಮಾನಿಸಿದ್ದೇನೆ. ಅಲ್ಲಿ ಒಬ್ಬ ವಕೀಲರನ್ನು ಇಟ್ಟರೆ, ಅವರು ಜನಗಳ ದೂರನ್ನು ಪರಿಶೀಲಿಸಿ, ಆ ವಿಷಯದಲ್ಲಿ ಅವರೇನು ಮಾಡಬೇಕೆಂದು ಸಲಹೆ ಕೊಡುತ್ತಾರೆ. ಈ ಉದ್ದೇಶಕ್ಕಾಗಿ ನಾವು ಆಗಲೇ ಒಂದು ತುಂಡು ಭೂಮಿಯನ್ನು ಕೊಂಡಿದ್ದೇವೆ. ಆ ನಿವೇಶನದ ಮೇಲೆ ನಾವು ಒಂದು ಕಟ್ಟಡವನ್ನು ಕಟ್ಟಬೇಕೆಂದಿದ್ದೇವೆ. ಅದು ನಮ್ಮ ಫೆಡರೇಷನ್ನಿನ ಮುಖ್ಯ ಕಚೇರಿ ಆಗುತ್ತದೆ. ಹೊರಗಡೆಯಿಂದ ಬಂದ ಜನಗಳನ್ನು ಅಲ್ಲಿ ವಿಚಾರಿಸಿ ಅವರ ಕುಂದು ಕೊರತೆಗಳನ್ನು ಕೇಳಲಾಗುತ್ತದೆ. ಈ ಕಟ್ಟಡದ ನಿರ್ಮಾಣಕ್ಕಾಗಿ ನಮ್ಮ ಹತ್ತಿರ ಸಾಕಷ್ಟು ಹಣವಿಲ್ಲ. ಈ ಕಟ್ಟಡ ಕಟ್ಟುವುದು ಅತ್ಯವಶ್ಯಕವಾಗಿದೆ. ಆದುದರಿಂದ, ನಿಮ್ಮ ಮಿತಿಯಲ್ಲಿ ಕಟ್ಟಡ ನಿಧಿಗಾಗಿ ಏನನ್ನಾದರೂ ಚಂದ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ

ರೀತಿಯಲ್ಲಿ ನಮ್ಮ ಉದ್ದೇಶ ಸಫಲವಾಗುತ್ತದೆ. ಬಾವಾ ತುಲಾ ದಾಸ್ ಪಂಜಾಬಿನ ಎಲ್ಲೆಡೆಯಲ್ಲಿ ಕಟ್ಟಡ ನಿಧಿ ಶೇಖರಿಸುವುದಕ್ಕೆ ಸಂಚರಿಸುತ್ತಾರೆ. ಈ ಉದಾತ್ತ ಉದ್ದೇಶಕ್ಕಾಗಿ ಉದಾರವಾಗಿ ಚಂದಾ ಕೊಡಬೇಕೆಂದು ನಾನು ನಿಮ್ಮನ್ನು ಪ್ರಾರ್ಥಿಸುತ್ತೇನೆ.

# ೧೨೭
# ಬಡವರು ತಮ್ಮ ಉದ್ದೇಶವನ್ನು ಸಾಧಿಸುವುದಕ್ಕಾಗಿ ಪ್ರತ್ಯೇಕವಾಗಿ ಒಗ್ಗಟ್ಟಾಗಬೇಕು

೨೯ನೇ ಅಕ್ಟೋಬರ್ ೧೯೫೧ರಂದು ಪಂಜಾಬಿನ ಪಾಟಿಯಾಲದಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ಡಾ: ಅಂಬೇಡ್ಕರ್ ಅವರು ಮಾಡಿದ ಭಾಷಣ:

ಅವರು ಹೇಳಿದ್ದು:

ನನ್ನ ಸ್ನೇಹಿತರಾದ ಮಿ: ರಾಜ್ ಭೋಜ್ ಅವರು ನಿಮಗೆ ಹೇಳಿದಂತೆ, ಈ ದಿನ ನನಗೆ ಸೌಖ್ಯವಿಲ್ಲ. ಇದಕ್ಕೆ ಕಾರಣ ನಾನು ದೀರ್ಘ ರಸ್ತೆಪ್ರಯಾಣ ಮಾಡಿ ಬಂದಿದ್ದು. ಆದುದರಿಂದ ಬಹಳ ಹೊತ್ತಿನವರೆಗೆ ನನಗೆ ಮಾತನಾಡಲು ಆಗುವುದಿಲ್ಲ; ಆದರೆ ನಾನು ಕೆಲವು ಮುಖ್ಯವಾದ ವಿಷಯಗಳ ಮೇಲೆ ಮಾತನಾಡುತ್ತೇನೆ.

ಭಾರತದಲ್ಲೀಗ ಎಲ್ಲರೂ ಚುನಾವಣೆಗಳಲ್ಲಿ ಬಹಳ ಮಗ್ನರಾಗಿದ್ದಾರೆ. ಚುನಾವಣೆಗಳಲ್ಲದೇ ಬೇರೇನೂ ಇಲ್ಲದಿರುವ ಅನೇಕ ರಾಜಕಾರಣಿಗಳು ಇದ್ದಾರೆ. ಹಾಗೆಯೇ ಪಕ್ಷಗಳು ಇವೆ. ಬರುತ್ತಿರುವ ಚುನಾವಣೆಗಳ ಬಗ್ಗೆ ಬಹಳ ಕಾತುರತೆಯನ್ನು ತೋರಿಸುತ್ತಿರುವ ಜನಗಳನ್ನು ನಾನು ಬಹಳ ಮೆಚ್ಚಿಕೊಳ್ಳುತ್ತೇನೆ; ನಾವು ಯಾವುದೇ ಪಕ್ಷಕ್ಕೆ ಅಥವಾ ವ್ಯಕ್ತಿಗೆ ವೋಟು ಮಾಡುವುದಕ್ಕೆ ಮುಂಚೆ ಬಹಳ ಯೋಚನೆ ಮಾಡಬೇಕಾಗಿದೆ. ಈಗ ಚುನಾಯಿಸಲ್ಪಟ್ಟ ಜನ ಐದು ವರ್ಷಗಳಷ್ಟು ದೀರ್ಘ ಕಾಲ ಮುಂದುವರಿಯುತ್ತಾರೆ. ಆದುದರಿಂದ ಅದರ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ಇದು ರಾಜಕೀಯ ಪಕ್ಷಗಳ ಹಾಗೂ ವ್ಯಕ್ತಿಗಳ ಜೀವನ್ಮರಣದ ಕಾಲ. ಪ್ರತಿಯೊಬ್ಬ ಪ್ರಜೆ ಮತ್ತು ರಾಜಕೀಯ ಪಕ್ಷ ಚುನಾವಣೆಗಳಲ್ಲಿ ಸೂಕ್ತವಾದ ಪಾತ್ರವನ್ನು ವಹಿಸಬೇಕು. ಇಲ್ಲದಿದ್ದರೆ ಅವರ ಅಸ್ತಿತ್ವವೇ ಅಪಾಯಕ್ಕೊಳಗಾಗುತ್ತದೆ.

ನಿಮಗೆ ಗೊತ್ತಿರುವ ಹಾಗೆ ಭಾರತದಲ್ಲೀಗ ಅಧಿಕಾರದಲ್ಲಿರುವ ಪಕ್ಷವೆಂದರೆ ಕಾಂಗ್ರೆಸ್ ಪಕ್ಷ. ಅದಕ್ಕೀಗ ನಲವತ್ತು ವರ್ಷ ಮತ್ತು ಅದರ ಹತ್ತಿರ ಭಾರಿ ಹಣವಿದೆ. ಕಳೆದ ನಾಲ್ಕು ಐದು ವರ್ಷಗಳಿಂದ ಭಾರತದಲ್ಲಿ ಆಡಳಿತವನ್ನು ನಡೆಸುತ್ತಿರುವುದು ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ಸಿಗರು ತಮ್ಮ ಪಕ್ಷಕ್ಕೇ ವೋಟು ಮಾಡಬೇಕೆಂದು ಪ್ರಚಾರ ಮಾಡುತ್ತಿದ್ದಾರೆ. ಬೇರೆ ಯಾವ ಪಕ್ಷವೂ ದೇಶವನ್ನು ಆಳುವಷ್ಟು ಶಕ್ತಿಶಾಲಿಯಾಗಿಲ್ಲ, ಕಾಂಗ್ರೆಸ್ ಈಗಾಗಲೇ ಸಾಧನೆ ಮಾಡಿರುವಷ್ಟನ್ನು ಮತ್ತು ಮುಂದೆ ಮಾಡಬಹುದಾದಷ್ಟನ್ನು, ಮಾಡುವುದು ಅವರಿಗೆ ಸಾಧ್ಯವಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಭಾರತ ಪುರೋಭಿವೃದ್ಧಿ ಹೊಂದಬೇಕಾದರೆ, ಅದು ಕಾಂಗ್ರೆಸ್ ಆಡಳಿತದಲ್ಲಿ ಮಾತ್ರ ಸಾಧ್ಯ, ಹೀಗಾಗಿ ಜನಗಳು ಅವರ ಧರ್ಮ ಯಾವುದೇ ಆಗಿರಲಿ, ಜಾತಿ ಪಂಥ ಯಾವುದೇ ಆಗಿರಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೇ ವೋಟು ಮಾಡಬೇಕು ಮತ್ತು ಬರುವ ಚುನಾವಣೆಗಳಲ್ಲಿ ಅವರನ್ನು ಗೆಲ್ಲಿಸಬೇಕು ಎಂದು ಪ್ರಚಾರ ಮಾಡುತ್ತಿದ್ದಾರೆ.

ಪ್ರಚಾರ ಮಾಡುವುದಕ್ಕೆ ಕಾಂಗ್ರೆಸ್ ನವರಿಗೆ ಹಣವಿದೆ ಎಂಬುದು ಸರಿ, ಹೀಗಾಗಿ ಕಾಂಗ್ರೆಸ್ ಟಿಕೆಟ್ ಮೇಲೆ ನಿಲ್ಲುವ ಅಭ್ಯರ್ಥಿಗೆ ೧೦೦ ಕ್ಕಿಂತ ಹೆಚ್ಚು ಏಜಂಟರುಗಳು ಅವನ ಪ್ರಚಾರ ಕಾರ್ಯಕ್ಕಾಗಿ ಇರುತ್ತಾರೆ. ಕಾಂಗ್ರೆಸ್‌ನ ಮುಖ್ಯ ಕಚೇರಿಯಲ್ಲಿ ಅನೇಕ ಜನ ಸರ್ಕಾರಿ ನೌಕರರುಗಳ ಹಾಗೆ ಕೆಲಸ

ಮಾಡುತ್ತಿದ್ದಾರೆ. ಅವರ ಪ್ರತಿಯೊಂದು ಶಾಖೆಗೂ ಆಫೀಸುಗಳು ಇವೆ. ಇದು ಆಗಿರುವುದೆಲ್ಲಾ ಹಣದಿಂದ. ಭಾರತದಲ್ಲಿ ಕಾಂಗ್ರೆಸ್ ಅತ್ಯಂತ ಶ್ರೀಮಂತ ಪಕ್ಷ. ಹಣದ ಬಲದಿಂದ ಅದು ತನಗೆ ಬೇಕಾದ್ದನ್ನೆಲ್ಲಾ ಮಾಡುತ್ತದೆ. ಹಣವಿಲ್ಲದಿದ್ದರೆ ಯಾವಪಕ್ಷಕ್ಕೂ ಪ್ರಚಾರ ಮಾಡುವುದಕ್ಕೆ ಆಗುವುದಿಲ್ಲ; ಸರಿಯಾದ ಪ್ರಚಾರ ಇಲ್ಲದಿದ್ದರೆ ಯಾವ ಪಕ್ಷವೂ ಅಭಿವೃದ್ಧಿಯಾಗುವುದಿಲ್ಲ. ಪ್ರಚಾರದಿಂದ ಕಾಂಗ್ರೆಸ್ ಸಾರ್ವಜನಿಕ ಅಭಿಪ್ರಾಯವನ್ನು ತನ್ನಪರವಾಗಿ ಎರಕ ಹೊಯ್ದಿದೆ. ಅದರ ಮರೆಯಲ್ಲಿ ಏನೇನನ್ನೋ ಮಾಡಲು ಅದು ಪ್ರಯತ್ನಿಸುತ್ತಿದೆ. ಈಗ್ಗೆ ನಾಲ್ಕು ವರ್ಷಗಳಿಂದ ಕಾಂಗ್ರೆಸ್ ಅಧಿಕಾರದಲ್ಲಿ ಇದೆ. ಅದು ಜನಗಳಿಗಾಗಿ ಏನು ಮಾಡಿದೆಯೆಂದು ನೀವೇ ಅರ್ಥ ಮಾಡಿಕೊಳ್ಳಬಹುದು. ಅಶನವಿಲ್ಲ, ವಸನವಿಲ್ಲ, ನೆರಳೂ ಇಲ್ಲ. ಈ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ ತಾನು ಮಾಡಬೇಕಾದ್ದನ್ನು ಮಾಡುವಲ್ಲಿ ಸೋತಿದೆ. ಮತ್ತೆ ಅಧಿಕಾರಕ್ಕೆ ಬಂದರೆ ಅದು ಜನಗಳಿಗೆ ಸಹಾಯ ಮಾಡುತ್ತದೆ ಎಂದು ನಿರೀಕ್ಷಿಸುಸುವುದಾದರೂ ಹೇಗೆ? ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಮತ್ತು ಕಾಳ ಸಂತೆ ಈ ಕೈಗಾರಿಕೆಗಳು ಮಾತ್ರವೇ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಅಭಿವೃದ್ಧಿ ಆಗಿರುವುದು. ಭ್ರಷ್ಟಾಚಾರ ಮತ್ತಿತರ ಕೆಡುಕುಗಳು ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಕಾಲಕ್ಕಿಂತ ಇನ್ನೂ ಹೆಚ್ಚಾಗಿವೆ. ನಾವು ಉಪವಾಸದಿಂದ ಸಾಯುತ್ತಿದ್ದೇವೆ, ಬಡವ ಬಲ್ಲಿದರ ಮಧ್ಯೆ ಅಗಾಧವಾದ ಅಸಮಾನತೆ ಇದೆ. ಈ ಐದು ವರ್ಷಗಳಲ್ಲಿ ಕಾಂಗ್ರೆಸ್ ಈ ಅಸಮಾನತೆಯನ್ನು ಅಳಿಸಿಹಾಕಲಾಗದಿದ್ದರೆ, ಭವಿಷ್ಯದಲ್ಲಿ ಅದನ್ನು ಮಾಡಲು ಅದಕ್ಕೆ ಸಾಧ್ಯವಾಗುತ್ತದೆಯೆ? ದಿನೇ ದಿನೇ ಹಣವಂತರು ಹೆಚ್ಚು ಹಣವಂತರಾಗುತ್ತಿದ್ದಾರೆ, ಬಡವರು ಹೆಚ್ಚು ಬಡವರಾಗುತ್ತಿದ್ದಾರೆ. ಈ ದಿಸೆಯಲ್ಲಿ ಕಾಂಗ್ರೆಸ್ ಏನು ಮಾಡಿದೆ?

ಕಾಂಗ್ರೆಸ್ ಸರ್ಕಾರ ಒಂದು ಭ್ರಷ್ಟ ಸರ್ಕಾರ. ಕಾಂಗ್ರೆಸ್ ಮಂತ್ರಿ ಲಂಚ ತೆಗೆದುಕೊಳ್ಳುತ್ತಾನೆ.

ಅವರು ಕಾಳ ಸಂತೆ ಮೂಲಕ ಹಣವನ್ನು ಪಡೆದುಕೊಳ್ಳುತ್ತಾರೆ. ಅವರು ಭ್ರಷ್ಟರು. ನಮ್ಮ ಮಂತ್ರಿಗಳು ಇಷ್ಟು ಕೆಟ್ಟ ನಡತೆಯವರಾಗಿದ್ದರೆ , ಅವರ ಅಧೀನದಲ್ಲಿ ಇರುವವರು ಇನ್ನು ಹೇಗೆ ನಡೆದುಕೊಳ್ಳುತ್ತಾರೆ ಎಂದು ನೀವೇ ಚೆನ್ನಾಗಿ ಊಹಿಸಿಕೊಳ್ಳಬಹುದು. ಬಂಡಶಾಹಿಗಳ ಕೆಳಗೆ ಕಾರ್ಮಿಕರ ಪರಿಸ್ಥಿತಿ ಏನಾಗಿರುತ್ತದೆ.? ನಮ್ಮ ಪ್ರಧಾನ ಮಂತ್ರಿಗಳು ಈ ಸಂಬಂಧ ಏನನ್ನಾದರೂ ಮಾಡುತ್ತಾರೆಂದು ನಾನು ನಿರೀಕ್ಷಿಸುತ್ತಿದ್ದೆ. ಲಂಚ, ಭ್ರಷ್ಟಾಚಾರ, ಕಾಳ ಸಂತೆ ಎಂದೆಂದಿಗೂ ಕೊನೆಯಾಗುತ್ತವೆ ಎಂದು ಅಂದುಕೊಂಡಿದ್ದೆ. ಆದರೆ ನವದೆಹಲಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಮಹಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ, ಭ್ರಷ್ಟಾಚಾರ ಇತರ ದೇಶಗಳಲ್ಲೂ ಕಡಿವಾಣವಿಲ್ಲದೆ ಹರಡಿದೆ. ಆದುದರಿಂದ ಅದು ಭಾರತದಲ್ಲಿ ಇದ್ದರೂ ಸಹ ನಾವೇನೂ ಅದರ ಬಗ್ಗೆ ಬಹಳ ಚಿಂತಿಸಬೇಕಾಗಿಲ್ಲ ಎಂದು ಹೇಳಿದ್ದನ್ನು ಕೇಳಿ ನನಗೆ ದುಃಖವಾಯಿತು. ಇತರ ದೇಶಗಳಿಗೆ ಹೋಲಿಸಿದರೆ, ಭ್ರಷ್ಟಾಚಾರ ನಮ್ಮ ದೇಶದಲ್ಲಿ ಬಹಳ ಸಣ್ಣ ಮಟ್ಟದಲ್ಲಿ ಇದೆ ಎಂದು ಹೇಳಿದರು. ಅದು ಸಣ್ಣ ಪ್ರಮಾಣದಲ್ಲಿ ಇದ್ದರೂ ಸಹ ಅದನ್ನು ತೆಗೆದು ಹಾಕಬೇಕು. ಈ ದಿಕ್ಕಿನಲ್ಲಿ ಪ್ರಧಾನ ಮಂತ್ರಿಯವರು ಏನು ಮಾಡಿದ್ದಾರೆ? ಮಂತ್ರಿಗಳು ಮತ್ತು ಇತರ ಉನ್ನತ ಸರ್ಕಾರಿ ಅಧಿಕಾರಿಗಳು ಭ್ರಷ್ಟರಾಗಿದ್ದರೆ, ಅವರು ಸುಮ್ಮನೆ ಕೂಡಬೇಕೆ? ನಾನು ಹೇಳಿದ್ದೆಲ್ಲಾ ನನ್ನ ಟೀಕೆಯಲ್ಲ, ಆದರೆ ಅದು ಕಾಂಗ್ರೆಸ್ ಮನುಷ್ಯರೇ ಕಾಂಗ್ರೆಸ್ ಮಂತ್ರಿಗಳ ಬಗ್ಗೆ ಮಾಡಿದ ಟೀಕೆಯೇ ಹೊರತು ಬೇರೆ ಯಾರೂ ಅಲ್ಲ. ಉದಾಹರ್ಣೆಗೆ, ಮದರಾಸಿನಲ್ಲಿ ಕೆಲವು ಕಾಲದವರೆಗೆ ಮಿ: ಪ್ರಕಾಶಂ ಅವರು ಮುಖ್ಯ ಮಂತ್ರಿಯಾಗಿದ್ದರು. ಅವರನ್ನು ಅಧಿಕಾರದಿಂದ ಕೆಳಗಿಳಿಸಿದಾಗ, ಆಮೇಲೆ ಮಿ: ರಾಜೆ ಅವರು ಆ ಸ್ಥಾನಕ್ಕೆ ಬಂದಾಗ, ಪ್ರಕಾಶಂ ಅವರ ವಿರುದ್ಧ ಕೆಲವು ಆಪಾದನೆಗಳು ಇದ್ದವು. ತನಿಖೆ ಮಾಡಿದಾಗ, ಅವರು ಅಗಾಧವಾದ ಹಣವನ್ನು ಲಂಚ ಇತ್ಯಾದಿಗಳ ಮೂಲಕ ಪಡೆದುಕೊಂಡಿದ್ದಾರೆಂದು ಗೊತ್ತಾಯಿತು. ಅವರು ಸಾವಿರಾರು

ಲೈಸೆನ್ಸುಗಳನ್ನೂ ಮತ್ತು ಪರವಾನಿಗೆಗಳನ್ನೂ ಹಂಚಿದ್ದಾರೆಂದು ಗೊತ್ತಾಯಿತು. ಮಧ್ಯ ಪ್ರದೇಶದಲ್ಲೂ ಸಹಾ ಅದೇ ಆಗುತ್ತಿದೆ. ಲಂಚ ತೆಗೆದುಕೊಂಡಿರುವ ಬಹಳಷ್ಟು ಮಂತ್ರಿಗಳಿದ್ದಾರೆ, ಆದರೆ ಅವರೆಲ್ಲ ಘನ ಸರ್ಕಾರದ ಮಂತ್ರಿಗಳಾಗಿ ಮುಂದುವರೆಯುತ್ತಿದ್ದಾರೆ. ಯಾರೂ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ, ಆದರೆ ಅದರ ಬದಲು ಅವರನ್ನು ಪ್ರೋತ್ಸಾಹಿಸಲಾಗುತ್ತಿದೆ. ಈ ಮಂತ್ರಿಗಳ ಮೆಲೆ ಆಪಾದನೆ ಮಾಡಿದ ಜನರನ್ನು ಜೈಲುಗಳಿಗೆ ಕಳುಹಿಸಲಾಗುತ್ತಿದೆ. ಪಂಜಾಬಿನಲ್ಲಿ ಏನಾಗುತ್ತಿದೆ? ಮಿ: ಸಾಚಾರ್ ಮತ್ತು ಮಿ:ಭಾರ್ಗವ ಪರಸ್ಪರ ಹೊಡೆದಾಡುತ್ತಿದ್ದಾರೆ. ಇಬ್ಬರೂ ಪಂಜಾಬಿನ ಪ್ರಧಾನಿಗಳಾಗಿದ್ದವರು. ಇಬ್ಬರೂ ನಾವು ತಪ್ಪಿತಸ್ಥರಲ್ಲ ಎಂದು ಹೇಳುತ್ತಿದ್ದಾರೆ. ಒಬ್ಬರು ಇನ್ನೊಬ್ಬರ ವಿರುದ್ಧ ತನಿಖೆ ಆಗಬೇಕೆಂದು ಆಗ್ರಹ ಪಡಿಸುತ್ತಿದ್ದಾರೆ. ಅವರಿಬ್ಬರೂ ತಾವು ಪಂಜಾಬಿನಲ್ಲಿ ಅಧಿಕಾರದಲ್ಲಿ ಇದ್ದಾಗ ಲಂಚಗಳನ್ನು ತೆಗೆದುಕೊಂಡಿದ್ದನ್ನು, ಕಾಳಸಂತೆಯನ್ನು ಪ್ರೋತ್ಸಾಹಿಸಿದ್ದನ್ನೂ ಯಾರು ಅಲ್ಲಗಳೆಯಲಾರರು, ಆದರೂ ಸಹಾ ಅವರ ಮೇಲೆ ಯಾವ ತನಿಖೆಯೂ ಆಗುತ್ತಿಲ್ಲ. ಈಗ ಇಬ್ಬರೂ ಪ್ರಧಾನಿ ಪಟ್ಟಕ್ಕೆ ಪ್ರಯತ್ನಿಸುತ್ತಿದ್ದಾರೆ. ಬರುತ್ತಿರುವ ಚುನಾವಣೆಗಳ ಸಮಯದಲ್ಲಿ ಅವರು ತಮ್ಮದೇ ಪಾಳಯದ ಎಷ್ಟು ಸಾಧ್ಯವೋ ಅಷ್ಟು ಪ್ರಧಾನಿ ಪಟ್ಟಕ್ಕೆ ತಮ್ಮನ್ನು ಬೆಂಬಲಿಸಲು ಸಾಕಾಗುವಷ್ಟು ಅಭ್ಯರ್ಥಿಗಳನ್ನು ಕಾಂಗ್ರೆಸ್ ಟಿಕೆಟ್ ಮೇಲೆ ನಿಲ್ಲಿಸಲು ಪ್ರಯತ್ನಿಸುತ್ತಿದ್ದಾರೆ. ಪಂಜಾಬಿನಲ್ಲಿ ನಾಮಪತ್ರಗಳನ್ನು ಸಲ್ಲಿಸಲು ಕಡೆಯ ತಾರೀಖು ೫ನೇ ನವೆಂಬರ್. ಆದರೆ ಈ ದಿನದವರೆಗೆ ಅವರ ಭಿನ್ನಾಭಿಪ್ರಾಯದ ಕಾರಣದಿಂದ ಯಾವ ಪಟ್ಟಿಯನ್ನೂ ಅಂತಿಮಗೊಳಿಸಿಲ್ಲ. ನನ್ನ ಪ್ರಕಾರ ಅವರಿಬ್ಬರೂ ಒಮ್ಮತಕ್ಕೆ ಎಂದಿಗೂ ಬರುವುದಿಲ್ಲ.

ಯಾವುದೇ ಒಬ್ಬ ವ್ಯಕ್ತಿ, ಯಾವುದೇ ಮಂತ್ರಿಯನ್ನೋ ಅಥವಾ ಇನ್ನೊಬ್ಬ ಸರ್ಕಾರಿ ಅಧಿಕಾರಿಯನ್ನೋ ಲಂಚ ತೆಗೆದುಕೊಂಡಿದ್ದಾರೆಂದು ಆಪಾದಿಸಿದರೆ, ಸರ್ಕಾರದ ಕರ್ತವ್ಯವೆಂದರೆ ತನಿಖೆ ಕ್ರಮವನ್ನು ಕೈಗೆತ್ತಿಕೊಂಡು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡಬೇಕು. ಯಾವುದೇ ಸರ್ಕಾರ, ಈ ರೀತಿಯಲ್ಲಿ ತನ್ನ ಮಂತ್ರಿಗಳನ್ನು, ಇತರ ಪ್ರತಿಷ್ಠಿತ ವ್ಯಕ್ತಿಗಳನ್ನು ಲಂಚ ತೆಗೆದುಕೊಳ್ಳುವುದಕ್ಕೆ ಅನುಮತಿಸಿದರೆ ,ಅದು ಉಳಿಯಲು ಸಾಧ್ಯವಿಲ್ಲ. ಪ್ರತಿಯೊಬ್ಬ ಸರ್ಕಾರಿ ಮಂತ್ರಿ ಹಣ ಮಾಡಿಕೊಂಡರೆ, ಆಗ ಸರ್ಕಾರವೇನಾಗಬೇಕು? ಇಂಗ್ಲೆಂಡಿನಲ್ಲಿ ಒಬ್ಬ ಮಂತ್ರಿ ಲಂಚ ತೆಗೆದುಕೊಂಡಿದ್ದಾರೆಂದು ಕಾಮನ್ಸ್ ಸಭೆಯಲ್ಲಿ ಆಪಾದಿಸಲಾಯಿತು. ಆ ವಿಷಯದ ಬಗ್ಗೆ ತನಿಖೆಯನ್ನು ಮಾಡಲು ಒಂದು ತನಿಖಾ ಆಯೋಗವನ್ನು ನೇಮಕ ಮಾಡಲಾಯಿತು. ಆಯೋಗ ತನ್ನ ವರದಿಯಲ್ಲಿ ಆ ಮಂತ್ರಿ ತನ್ನ ವ್ಯಾಪಾರಿ ಸ್ನೇಹಿತನೊಬ್ಬನಿಂದ ಸ್ವಲ್ಪ ಬಟ್ಟೆಯನ್ನು ತೆಗೆದುಕೊಂಡಿದ್ದನೆಂದು, ಆದರೆ ಇದನ್ನು ಲಂಚ ಎಂದು ಕರೆಯಲು ಆಗುವುದಿಲ್ಲವೆಂದೂ ಹೇಳಿತು. ಆದರೂ ಸಹ ಅವನು ವ್ಯಾಪಾರಿಯೊಬ್ಬನಿಂದ ಅವನು ಸ್ನೇಹಿತನಾಗಲೀ, ಶತೃವಾಗಲೀ. ಹಣವನ್ನು ಕೊಡದೆ ಬಟ್ಟೆಯನ್ನು ತೆಗೆದು ಕೊಂಡಿದ್ದು, ಆ ಕಾರಣದ ಮೇಲೆ ಮಿ: ಆಟ್ಲೀ ಆ ಮಂತ್ರಿಯನ್ನು ಅಧಿಕಾರದಿಂದ ಹೊರಗೆ ಹಾಕಿದರು. ಆದರೆ ನಮ್ಮ ಕಾಂಗ್ರೆಸ್ ಸರ್ಕಾರ, ಮಂತ್ರಿಗಳ ವಿರುದ್ಧ ಆಪಾದನೆಗಳನ್ನು ಕುರಿತು ತನಿಖೆ ಮಾಡುವುದು, ಅವರನ್ನು ಕೆಲಸದಿಂದ ತೆಗೆದು ಹಾಕುವುದು ಹಾಗಿರಲಿ, ತನ್ನ ಕರ್ತವ್ಯ ಎಂದು ಭಾವಿಸುವುದಿಲ್ಲ.

ಕಾಂಗ್ರೆಸ್, ಜನಗಳನ್ನು ವೋಟು ಕೊಡಿ ಎಂದು ಕೇಳುತ್ತಾರೆ, ಅವರೆಲ್ಲರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತೇವೆ ಎಂದು ಅಶ್ವಾಸನೆ ಕೊಡುತ್ತಾರೆ. ಬಡತನವನ್ನು ತೊಡೆದು ಹಾಕಿ ಬಿಡುತ್ತೇವೆ ಎನ್ನುತ್ತಾರೆ, ಹಿಂದುಳಿದ ವರ್ಗಗಳಿಗೆ ಸಹಾಯ ಮಾಡುತ್ತೇವೆ ಎನ್ನುತ್ತಾರೆ, ಹಾಗೆ ಮಾಡಿ ಅವರ ಜೀವನ ಮಟ್ಟವನ್ನು ಉತ್ತಮ ಪಡಿಸುತ್ತೇವೆ ಅನ್ನುತ್ತಾರೆ. ಹಾವು ಮತ್ತು ಮುಂಗುಸಿ ಒಟ್ಟಿಗೆ ಜೀವಿಸಲು ಸಾಧ್ಯವೇ ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಬೆಕ್ಕು ಇಲಿಯೊಂದಿಗೆ ಸಹಕರಿಸಬಲ್ಲುದೆ? ಆನೆ Birree (ಬಿರ್ರೀ) ಸಂಗಡ

ಜೀವಿಸಬಲ್ಲುದೆ?. ಹಾವು ಮುಂಗುಸಿ ಜೊತೆ ಬೆರೆತು, ಅದರಿಂದ ಏನಾದರೂ ಲಾಭವನ್ನು ಪಡೆಕೊಳ್ಳಲು ಬಯಸಿದರೆ, ಅದರದ್ದು ಖಂಡಿತವಾಗಿ ತಪ್ಪು ತಿಳುವಳಿಕೆ; ಮುಂಗುಸಿ ಹಾವನ್ನು ತಿಂದು ಹಾಕಿ ಬಿಡುತ್ತದೆ, ಇಲಿಯನ್ನು ಬೆಕ್ಕು ನುಂಗಿ ಹಾಕಿ ಬಿಡುತ್ತದೆ. ಹೀಗೆಯೇ, ಬಿರ್ರೀ ಜೊತೆ ಜೀವನವನ್ನು ಮಾಡಲು ಆನೆಗೆ ಸಾಧ್ಯವಿಲ್ಲ. ಮುಂಗುಸಿ ಹಾವಿನ ಶತೃ, ಬೆಕ್ಕು ಇಲಿಯ ಶತೃ ಮತ್ತು ಬಿರ್ರೀ ಆನೆಯ ಶತೃ. ಅವರು ಒಟ್ಟಿಗೆ ಸಹವಾಸ ಮಾಡಲಾರರು.

ಹೀಗೆಯೇ, ಮಾನವ ಪ್ರಪಂಚದಲ್ಲಿ ನಿರ್ಬಲ ವ್ಯಕ್ತಿಗಳೂ, ಸಬಲ ವ್ಯಕ್ತಿಗಳೂ ಇರುತ್ತಾರೆ. ಒಬ್ಬನು ಇನ್ನೊಬ್ಬನ ಶತೃ; ನಿರ್ಬಲ ವ್ಯಕ್ತಿ ಸಬಲ ವ್ಯಕ್ತಿಯೊಂದಿಗೆ ಶಾಂತಿಯಿಂದ ಸಹಬಾಳ್ವೆ ಮಾಡಲು ಖಂಡಿತವಾಗಿಯೂ ಸಾಧ್ಯವಿಲ್ಲ. ಸಾಲಗಾರ ಮತ್ತು ಸಾಲ ತೆಗೆದು ಕೊಳ್ಳುವವನು ಶಾಂತಿಯುತವಾಗಿ ಬಾಳಲು ಸಾಧ್ಯವಿಲ್ಲ.ಸಾಲಗಾರ ಸಾಲ ತೆಗೆದುಕೊಳ್ಳುವವನನ್ನು ತನ್ನ ಅನುಕೂಲಕ್ಕಾಗಿ ಶೋಷಣೆ ಮಾಡಲು ಪ್ರಯತ್ನಿಸುತ್ತಾನೆ. ಬನಿಯನೊಬ್ಬ (ಸಾಲ ಕೊಡುವವನು) ಬಡ ಜನರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಕೀಳಲು ಯಾವಾಗಲೂ ಪ್ರಯತ್ನಿಸುತ್ತಾನೆ.

ಬ್ರಾಹ್ಮಣರು ಯಾವತ್ತೂ ಬಡ ಪರಿಶಿಷ್ಟ ಜಾತಿಗಳವರಿಗೆ ಅನುಕಂಪವನ್ನು ತೋರಿಸುವುದಿಲ್ಲ; ಹಾಗೇನಾದರೂ ಅವರು ಮಾಡಿದರೆ, ಅವರಿಗೆ ಸೇವೆಯನ್ನು ಮಾಡುವವರು ಯಾರೂ ಇರುವುದಿಲ್ಲ. ಈ ಪ್ರಪಂಚದಲ್ಲಿ ಪರಸ್ಪರ ಶತೃಗಳಾದ ಎಷ್ಟೋ ವರ್ಗಗಳು ಇವೆ. ಬಡವರಿದ್ದಾರೆ, ಬಲ್ಲಿದರಿದ್ದಾರೆ, ಮತ್ತೆ ಬಲ್ಲಿದರು ಯಾವಾಗಲೂ ಬಡವರನ್ನ ಶೋಷಣೆ ಮಾಡುತ್ತಿರುತ್ತಾರೆ. ಈಗ ನಾನು ನಿಮ್ಮನ್ನು ಒಂದು ಪ್ರಶ್ನೆಯನ್ನು ಕೇಳ ಬಯಸುತ್ತೇನೆ. ನಾವು ಹಾವು, ಮುಂಗುಸಿ, ಬೆಕ್ಕು, ಇಲಿ, ಆನೆ ಮತ್ತು ಬಿರ್ರೀ ಇವುಗಳನ್ನು ಸೇರಿಸಿ ಒಂದು ಪಕ್ಷವನ್ನು ಕಟ್ಟಿದರೆ ಆಗ, ಹಾವು, ಇಲಿ ಮತು ಆನೆ ಅಲ್ಲಿ ಕ್ಷೇಮವಾಗಿ ಇರುವುದಕ್ಕೆ ಸಾಧ್ಯವೆ? ಖಂಡಿತವಾಗಿಯೂ ಇಲ್ಲ. ಅವರು ಯಾವಾಗಲೂ ತಮ್ಮ ಯಜಮಾನರುಗಳ ಮರ್ಜಿಯಲ್ಲಿ ಇರುತ್ತಾರೆ. ಹಾಗೆಯೇ ನಿಮ್ನ ವರ್ಗಗಳವರು ಬ್ರಾಹ್ಮಣರ ಜೊತೆ ಕೈ ಜೋಡಿಸಿ ಒಂದು ರಾಜಕೀಯ ಪಕ್ಷವನ್ನು ಕಟ್ಟಿದರೆ, ನಿಮ್ನವರ್ಗಗಳವರು ಅಲ್ಲಿ ಕ್ಷೇಮವಾಗಿ ಇರುತ್ತಾರೆ ಎಂದು ನಿಮಗೆ ಅನಿಸುತ್ತದೆಯೇ? ಎಚ್ಚರಿಕೆಯಿಂದ ಇರಿ, ಈ ವಿಷಯಕ್ಕೆ ಸಂಪೂರ್ಣ ನಿಗಾ ಕೊಡಿ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಕಾಂಗ್ರೆಸ್ ಬೀಸಿದ ಬಲೆಯಲ್ಲಿ ನೀವು ಸಿಕ್ಕಿ ಹಾಕಿಕೊಳ್ಳಬಾರದು. ಉತ್ತಮ ಜಾತಿಯವರೊಂದಿಗೆ ನೀವು ಕೈ ಜೋಡಿಸಿದರೆ ನಮಗೆ ಒಳ್ಳೆಯದಾಗುತ್ತದೆ ಎಂದು ನೀವು ಯೋಚಿಸಿದ್ದೇ ಆದರೆ, ನಿಮ್ಮದು ತಪ್ಪಾಗುತ್ತದೆ. ಉತ್ತಮ ಜಾತಿಯವರು ಯಾವಾಗಲೂ ಹಿಂದುಳಿದ ವರ್ಗಗಳವರನ್ನು ಅದುಮುತ್ತಾರೆ. ಉತ್ತಮ ಜಾತಿಯ ಜನ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ, ನಮ್ಮ ಜನಗಳು ಹೇಗೆ ಇದ್ದಾರೋ ಹಾಗೆಯೇ ಇರುತ್ತಾರೆ. ಬಲ್ಲಿದರ ಕೆಳಗೆ ಬಡವರು ಎಂದಿಗೂ ಅಭಿವೃದ್ಧಿ ಆಗುವುದಿಲ್ಲ ಅವರು ತಮ್ಮ ಉದ್ದೇಶ ಸಾಧನೆಗೆ ಪ್ರತ್ಯೇಕವಾಗಿ ಒಗ್ಗಟ್ಟಾಗಬೇಕು.

ನಿಮ್ನವರ್ಗಗಳವರ ಹಿತಾಸಕ್ತಿಗಳನ್ನು ಕಾಪಾಡಲು, ನಾವು ಒಂದು ರಾಜಕೀಯ ಪಕ್ಷವನ್ನು ಸಂಘಟಿಸಿದ್ದೇವೆ; ಅದನ್ನು ಪರಿಶಿಷ್ಟ ಜಾತಿಗಳ ಫೆಡರೇಷನ್ ಎಂದು ಕರೆಯಲಾಗಿದೆ. ನಮ್ಮ ಪರಿಶ್ರಮಗಳಿಂದಾಗಿ ನಾವು ಕೆಲವು ವಿಶೇಷ ಸವಲತ್ತುಗಳನ್ನು ಪಡೆದುಕೊಂಡಿದ್ದೇವೆ; ಇವುಗಳನ್ನು ಸಂವಿಧಾನದಲ್ಲಿಯೇ ಅಳವಡಿಸಲಾಗಿದೆ. ರಾಜ್ಯ ಶಾಸನ ಸಭೆಗಳಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಕೆಲವು ಸ್ಥಾನಗಳನ್ನು ಪರಿಶಿಷ್ಟ ಜಾತಿಗಳಿಗೆ ಕಾದಿರಿಸಲಾಗಿದೆ. ಈ ಸ್ಥಾನಗಳಿಗೆ ಪರಿಶಿಷ್ಟ ಜಾತಿಗಳವರನ್ನು ಮಾತ್ರ ಚುನಾಯಿಸಬಹುದು. ಆದರೆ ನಮ್ಮ ನಿಜವಾದ ಪ್ರತಿನಿಧಿಗಳನ್ನು ಶಾಸನ ಸಭೆಗಳಿಗೆ ಚುನಾಯಿಸದೇ ಇದ್ದರೆ, ಆಗ ಕಾಂಗ್ರೆಸ್‌ನ

ಅಭ್ಯರ್ಥಿಗಳು ಆ ಜಾಗಕ್ಕೆ ಚುನಾಯಿತರಾದರೆ, ಆಗ ನಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಲು ಆಗುವುದಿಲ್ಲ. ಕಾಂಗ್ರೆಸ್ ಟಿಕೆಟ್ ಮೇಲೆ ಚುನಾಯಿತರಾದ ನಮ್ಮ ಜನಗಳು ಕಾಂಗ್ರೆಸ್ಸಿನವರ ದಾಳಗಳಾಗಿ ಬಿಡುತ್ತಾರೆ. ಅವರು ತಮ್ಮ ಹಿತಾಸಕ್ತಿಗಳನ್ನು ಮಾತ್ರ ಕಾಪಾಡಿಕೊಳ್ಳುತ್ತಾರೆ. ಪರಿಶಿಷ್ಟ ಜಾತಿಗಳಿಗೆ ಸೇರಿದ PEPSU (ಪಾಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳ ಒಕ್ಕೂಟ) ಮಂತ್ರಿ ಮಂಡಲದಲ್ಲಿ ಇರುವ ಇಬ್ಬರು ಉಪಮಂತ್ರಿಗಳ ವಿಷಯವನ್ನೇ ತೆಗೆದುಕೊಳ್ಳಿ. ಅವರನ್ನು ಕಾಂಗ್ರೆಸ್ ಟಿಕೆಟ್ ಮೇಲೆ ಚುನಾಯಿಸಲಾಯಿತು. ಅವರು ನಿಮಗೇನು ಮಾಡಿದ್ದಾರೆ? ನಮ್ಮ ಮಕ್ಕಳಿಗೆ ಶಿಕ್ಷಣವಿಲ್ಲ,. ಮುಂಚಿನ ಹಾಗೆಯೇ ನಾವು ಬಡವರಾಗಿಯೇ ಉಳಿದಿದ್ದೇವೆ. ನಮಗೆ ಯಾವ ಭೂಮಿಯೂ ಇಲ್ಲ. ಹಳ್ಳಿಗಳಲ್ಲಿ ನಮ್ಮನ್ನು ಮನುಷ್ಯ ಜೀವಿಗಳ ಹಾಗೆ ನಡೆಸಿಕೊಳ್ಳುತ್ತಿಲ್ಲ. ಈ ವಿಷಯದಲ್ಲಿ ಅವರೇನಾದರೂ ಮಾಡಿದ್ದಾರೆಯೇ? ನಾನು ಪಾಟಿಯಾಲಾಕ್ಕೆ ಬರುತ್ತಿದ್ದೇನೆಂದು ಗೊತ್ತಾಗುತ್ತಿದ್ದಂತೆಯೇ ಅವರು ನನ್ನ ವಿರುದ್ಧ ಪ್ರಚಾರವನ್ನು ಪ್ರಾರಂಭಿಸಿದ್ದಾರೆ ಎಂದು ನನಗೆ ಗೊತ್ತಾಗಿದೆ. ಪರಿಶಿಷ್ಟ ಜಾತಿಗಳ ಜನರನ್ನು ನಮ್ಮ ಸಮ್ಮೇಳನಕ್ಕೆ ಬಹಿಷ್ಕಾರ ಹಾಕಿ ಎಂದು ಹೇಳಿದ್ದಾರೆ. ಕಾಂಗ್ರೆಸ್ ಟಿಕೆಟ್ ಮೇಲೆ ಚುನಾಯಿತರಾದ ಜನ ನಮಗೆ ಏನು ಮಾಡಬಲ್ಲರೆಂದು ಈಗ ನಿಮಗೆ ಗೊತ್ತಾಗುತ್ತದೆ. ಕಾಂಗ್ರೆಸ್ ಟಿಕೆಟ್ ಅನ್ನು ಕೇಳುವವರು ಸ್ವಾರ್ಥಿಗಳು; ಸ್ವಾರ್ಥಿಗಳು ಎಂದಿಗೂ ಇತರರ ಬಗ್ಗೆ ಯೋಚನೆ ಮಾಡುವುದಿಲ್ಲ. ನೀವು ಅವರಿಂದ ಏನನ್ನೂ ನಿರೀಕ್ಷಿಸಲಾಗುವುದಿಲ್ಲ.

ಕಾಂಗ್ರೆಸ್ ಅನ್ನು ಸೇರುವುದು ಸುಲಭ. ನನ್ನ ಅರ್ಹತೆಗಳಿಂದಾಗಿ ಹಾಗೆ ಸೇರಿಕೊಳ್ಳುವುದು ನನಗೆ ಇನ್ನೂ ಹೆಚ್ಚಿಗೆ ಸುಲಭವಾಗಿತ್ತು. ಎಲ್ಲರಿಗೂ ಪ್ರಯೋಜನಕಾರಿಯಾದರೆ, ಎಲ್ಲರೂ ಕಾಂಗ್ರೆಸ್ ಅನ್ನು ಸೇರುತ್ತಾರೆ. ಆದರೆ ಕಾಂಗ್ರೆಸ್ ಅನ್ನು ಸೇರುವುದರಿಂದ ನಮಗೆ ಪ್ರಯೋಜನವಿಲ್ಲದಿದ್ದರೆ, ಅದನ್ನು ಸೇರುವುದರಿಂದ ಉಪಯೋಗವೇನು. ಸರಿ! ನಾನು ಕಾಂಗ್ರೆಸ್ ಸರ್ಕಾರದಲ್ಲಿ ಇದ್ದೆ. ನಾನು ಯಾವತ್ತೂ ಯಾವ ಲಂಚವನ್ನೂ ತೆಗೆದುಕೊಳ್ಳಲಿಲ್ಲ. ಹಣವನ್ನು ಸಂಪಾದಿಸುವುದಕ್ಕೆ ನಾನು ಯಾವತ್ತೂ ಅನ್ಯಾಯದ ಮಾರ್ಗವನ್ನ ಹಿಡಿಯಲಿಲ್ಲ. ನನ್ನ ಮೇಲೆ ಒಂದೇ ಒಂದು ಆಪಾದನೆ ಇಲ್ಲವೆಂದು ನಾನು ಸವಾಲು ಹಾಕುತ್ತೇನೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ, ನಮ್ಮ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ನಮ್ಮ ಅಳಲುಗಳನ್ನು ಉಪಶಮನ ಮಾಡುವುದಕ್ಕೆ ಯಾವ ಪ್ರಾಯೋಗಿಕ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಏನೆಲ್ಲಾ ಹೇಳಲಾಗಿದೆ, ಆದರೆ ನಮ್ಮ ಜನಗಳಿಗಾಗಿ ಏನನ್ನೂ ಇಲ್ಲಿಯವರೆಗೆ ಮಾಡಿಲ್ಲ. ನಾವು ಬಹಳ ಖಿನ್ನರಾಗಿದ್ದೇವೆಂದು ನಾನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ, ಇದು ಹೀಗೇ ಮುಂದುವರೆದರೆ, ಕ್ರಾಂತಿಯೊದು ಅನಿವಾರ್ಯವಾಗುತ್ತದೆ. ನಮ್ಮ ಹಿಂದೂ ಸಹೋದರರು ನಮ್ಮ ಜನರ ಒಳ್ಳೆಯದಕ್ಕೆ ಏನನ್ನಾದರೂ ಮಾಡುತ್ತಾರೆಂದು ನಾವು ಅಂದುಕೊಂಡಿದ್ದೆವು. ಆದರೆ ನಮ್ಮ ಎಲ್ಲಾ ಆಸೆಗಳು ನಮ್ಮನ್ನು ಮೋಸಗೊಳಿಸಿವೆ. ಶಾಸನ ಸಭೆಗಳಲ್ಲಿ ಕೆಲವು ಸ್ಥಾನಗಳನ್ನು ಪರಿಶಿಷ್ಟ ಜಾತಿಗಳಿಗೆ ಮೀಸಲಿರಿಸಲಾಗಿದೆ, ಆದರೆ ನಮ್ಮ ನಿಜವಾದ ಪ್ರತಿನಿಧಿಗಳನ್ನು ಈ ಸ್ಥಾನಗಳಿಗೆ ಚುನಾಯಿತರಾಗುವುದಕ್ಕೆ ಬಿಡುತ್ತಿಲ್ಲ. ಈ ಮೀಸಲಾತಿ ಕೇವಲ ಹತ್ತು ವರ್ಷಗಳಿಗೆ ಮಾತ್ರ. ಆ ನಂತರ ಏನಾಗುತ್ತದೆ ಎಂಬುದನ್ನು ಹೇಳಲಾಗುವುದಿಲ್ಲ. ಹತ್ತು ವರ್ಷಗಳ ನಂತರ, ಸಮಾಜದಲ್ಲಿನ ಉನ್ನತ ಜಾತಿಗಳವರೊಂದಿಗೆ ಸ್ಪರ್ಧಿಸುವಷ್ಟು ನಾವು ಬೆಳೆದಿರುತ್ತೇವೆಯೆ? ಹಿಂದುಗಳ ಅಕ್ಕ ಪಕ್ಕ ಹೋರಾಡಲು ಸಾಧ್ಯವಾಗುವಷ್ಟು ನಮ್ಮ ಜನಗಳು ಶ್ರೀಮಂತರಾಗಿರುತ್ತಾರೆಯೆ? ಈ ಉನ್ನತ ಜಾತಿಯ ಜನಗಳಿಗೆ ನಾನು ಒಂದು ಎಚ್ಚರಿಕೆಯನ್ನು ಕೊಡಲು ಬಯಸುತ್ತೇನೆ, ಏನೆಂದರೆ ನಮ್ಮ ಪರಿಸ್ಥಿತಿ ಈಗ ಇರುವ ಹಾಗೆಯೇ ಉಳಿದುಕೊಂಡರೆ, ಆಗ ನಾವು ಬೇರೆ ದಾರಿಯನ್ನು ಹಿಡಿಯಬೇಕಾಗುತ್ತದೆ. ಇಲ್ಲ

ಅವರು ಇಲ್ಲಿರುತ್ತಾರೆ, ಅಥವಾ ನಾವು ಇಲ್ಲಿರುತ್ತೇವೆ. ಇಂಥ ಬಾಳನ್ನು ಬಾಳುವುದು ನಮಗೆ ರೋಸಿ ಹೋಗಿದೆ, ಇನ್ನು ಮುಂದಕ್ಕೆ ನಾವು ಅದನ್ನು ಸಹಿಸುವುದಿಲ್ಲ

ಬ್ರಾಹ್ಮಣರಾಗಲೀ, ಬನಿಯಾಗಳಾಗಲೀ ಸ್ವಾತಂತ್ರ್ಯಕ್ಕಾಗಿ ಹೋರಾಡಲಿಲ್ಲ; ಆದರೆ ಅದರ ಪ್ರಯೋಜನಗಳನ್ನು ಪಡೆಯುತ್ತಿರುವವರಲ್ಲಿ ಅವರು ಮಾತ್ರ ಅದೃಷ್ಟಶಾಲಿಗಳು. ಕಳೆದ ಯುದ್ಧದಲ್ಲಿ ಅವರಲ್ಲಿ ಎಷ್ಟು ಮಂದಿ ಸತ್ತಿದ್ದಾರೆಂದು ನಾನು ತಿಳಿಯಬಯಸುತ್ತೇನೆ. ಅವರಲ್ಲಿ ಎಷ್ಟು ಜನ ಸೈನ್ಯದಲ್ಲಿ ಇದ್ದಾರೆ? ಕಡ್ಡಾಯವಾಗಿ ಸೇನೆಯಲ್ಲಿ ಭರ್ತಿ ಮಾಡುವುದನ್ನು ಪ್ರಾರಂಭಿಸಿದರೆ, ಸೈನ್ಯಕ್ಕೆ ಹೋಗುವುವರಲ್ಲಿ ನಮ್ಮ ಜನಗಳೇ ಎಲ್ಲರಿಗಿಂತ ಮುಂದು. ಇದಕ್ಕೆ ಮುಂಚೆ ಹೇಗೆ ಮಾಡಿದ್ದರೋ ಹಾಗೆಯೇ ಈಗಲೂ ಸಹ ಅವರು ತಮ್ಮ ಕರ್ತವ್ಯವನ್ನು ಮಾಡುತ್ತಾರೆ. ಬಡವರು ಯಾವಾಗಲೂ ಶ್ರೀಮಂತರನ್ನು ರಕ್ಷಿಸಿದ್ದಾರೆ; ಆದರೆ, ಶ್ರೀಮಂತರು ಯಾವತ್ತೂ ಅವರಿಗೆ ಯಾವ ಅನುಕಂಪವನ್ನೂ ತೋರಿಸಿಲ್ಲ. ಹಿಂದುಳಿದ ವರ್ಗಗಳವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಏನನ್ನಾದರೂ ಮಾಡದಿದ್ದರೆ, ಕ್ರಾಂತಿಯೊಂದು ಅನಿವಾರ್ಯವಾಗುತ್ತದೆ ಎಂದು ನಾನು ಉನ್ನತ ಜಾತಿಯ ಜನರನ್ನು ಎಚ್ಚರಿಸುತ್ತೇನೆ.

ಮೂವತ್ತು ವರ್ಷಗಳ ದೀರ್ಘಕಾಲ, ನಾನು ನನ್ನ ಸಮುದಾಯದ ನಿಮಿತ್ತಕ್ಕಾಗಿ ಹೋರಾಡಿದೆ. ನನಗೆ ಯಾವ ಸ್ವಾರ್ಥ ಉದ್ದೇಶಗಳೂ ಇಲ್ಲ. ಮಂತ್ರಿಯಾಗಲಿಲ್ಲವೆಂದು ನಾನು ಯಾವತ್ತೂ ದೂರಿಲ್ಲ, ನನಗೊಂದು ಉನ್ನತ ಹುದ್ದೆಯನ್ನು ಕೊಡಬೇಕೆಂದು ಕೇಳಿಲ್ಲ. ನನ್ನ ಸ್ವಂತ ಪ್ರಯೋಜನಕ್ಕಾಗಿ ನಾನು ಯಾವತ್ತೂ ಏನನ್ನೂ ಬೇಡಿಲ್ಲ. ಗಾಂಧಿಯವರು ಯಾವಾಗಲೂ ನನ್ನನ್ನು ವಿರೋಧಿಸಿದರು. ಗಾಂಧಿ ಸ್ವರಾಜ್ಯ ಬೇಕೆಂದು ಆಗ್ರಹಪಡಿಸಿದಾಗ, ನಾನು ಆ ಬೇಡಿಕೆಗೆ ಸಂಪೂರ್ಣವಾಗಿ ಸಹಮತಿಸುತ್ತೇನೆ ಮತ್ತು ಖಂಡಿತವಾಗಿಯು ಅವರನ್ನು ಬೆಂಬಲಿಸುತ್ತೇನೆಂದು ಹೇಳಿದೆ. ಆದರೆ ಅವರಿಗೆ ಒಂದು ಪ್ರಶ್ನೆಯನ್ನು ಕೇಳಿದೆ. ನೀವು ಸ್ವರಾಜ್ಯವೆಂದು ಕರೆಯುತ್ತಿರುವ ಸ್ವರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಸ್ಥಾನವೇನು ಎಂದು. ನಮ್ಮ ಜನಗಳಿಗೆ ಜೀವನದಲ್ಲಿ ಉತ್ತಮ ಮಟ್ಟವನ್ನು ಕೊಡುತ್ತೀರ? ಅವರಿಗೆ ಶಿಕ್ಷಣ ಕೊಡಲಾಗುತ್ತದೆಯೇ? ನಮ್ಮ ಜನಗಳಿಗೆ ನಿಮ್ಮ ಸ್ವರಾಜ್ಯದಲ್ಲಿ ಯಾವ ಕಿರುಕುಳ ಇರುವುದಿಲ್ಲವೇ? ಈಗ ಭಾರತದ ಜನಗಳು ಸ್ವತಂತ್ರರಾಗಿದ್ದು, ಅದರಿಂದ ನಾವು ಯಾವ ಪ್ರಯೋಜನಗಳನ್ನು ಪಡೆದುಕೊಂಡಿದ್ದೇವೆ? ಈ ಉನ್ನತ ಜಾತಿಗಳ ಜನರಿಂದಾಗಿಯೇ ನಾವು ಈ ದಿನ ಹಿಂದುಳಿದವರಾಗಿದ್ದೇವೆ.; ನಮ್ಮನ್ನು ಅವರು ಸಮಾಜದಿಂದ ದೂರ ಇಟ್ಟಿದ್ದಾರೆ. ಅವರ ಸೇವೆಯನ್ನು ಮಾಡಲು ಬೇರೆ ಯಾವ ವರ್ಗಗಳು ಇಲ್ಲದ್ದರಿಂದ, ನಮ್ಮನ್ನು ಮುನ್ನಡೆಯಲು ಬಿಡಲಿಲ್ಲ. ನಾವು ಮಾಡುತ್ತಿರುವ ದಾಸ್ಯ ವೃತ್ತಿಯನ್ನು ಮಾಡಲು ಬೇರೆ ಯಾವ ಸಮುದಾಯವೂ ಇರಲಿಲ್ಲ. ನಮಗೂ ಮತ್ತು ಅವರಿಗೂ ಯಾವ ವ್ಯತ್ಯಾಸವೂ ಇಲ್ಲ. ನಾವು ಅವರ ಹಾಗೆಯೇ ಇದ್ದೇವೆ. ಒಂದೇ ವ್ಯತ್ಯಾಸವೆಂದರೆ, ಅವರ ಧರ್ಮದ ಪ್ರಕಾರ ನಾವು ಈ ಪ್ರಪಂಚಕ್ಕೆ ಬಂದಿರುವುದು ಅವರ ಸೇವೆ ಮಾಡುವುದಕ್ಕಾಗಿ ಮಾತ್ರ ಮತ್ತು ನಮಗೆ ಯಾವ ಸಮಾನ ಹಕ್ಕೂ ಇಲ್ಲ. ಈ ಉತ್ತಮ ಜಾತಿಯ ಜನಗಳು ನಮ್ಮ ಮುಂದೆ ಪರ್ವತಗಳನ್ನೇ ಇಡುತ್ತಿದ್ದಾರೆ. ನಮ್ಮನ್ನು ಎಲ್ಲ ತರಹದ ಕಷ್ಟಗಳಿಗೆ ಗುರಿಪಡಿಸಿ, ಮುನ್ನಡೆ ಸಾಧಿಸದಂತೆ ಮಾಡಿದ್ದಾರೆ.

ನಾವು ಕೆಲವು ಹಕ್ಕುಗಳನ್ನು ಪಡೆದುಕೊಂಡಿದ್ದೇವೆ, ಆದರೆ ಈ ಕಾಂಗ್ರೆಸ್ನವರು ಈ ಹಕ್ಕುಗಳ ಉಪ ಯೋಗಗಳಿಂದ ನಮ್ಮನ್ನು ವಂಚಿತರನ್ನಾಗಿ ಮಾಡಲು ಹಠ ತೊಟ್ಟಿದ್ದಾರೆ. ಪರಿಶಿಷ್ಟ ಜಾತಿಗಳಿಗೆಂದು ಮೀಸಲಿರಿಸಿದ ಸ್ಥಾನಗಳಿಗೆ ಅವರು ತಮ್ಮದೇ ಅಭ್ಯರ್ಥಿಗಳನ್ನು ನಿಲ್ಲಿಸುತ್ತಿದ್ದಾರೆ. ಮುಕ್ತ ಸ್ಥಾನಗಳಿಗೆ ಉನ್ನತ ಜಾತಿಗಳವರಿಗೆ ಟಿಕೆಟಗಳನ್ನು ಕೊಡುವಾಗ ಅವರನ್ನು ಅವರು ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ.

ಮೊದಲಿಗೆ ಕೇಳುವ ಪ್ರಶ್ನೆಯೆಂದರೆ, ಸಂಬಂಧ ಪಟ್ಟ ಮನುಷ್ಯ ಎಷ್ಟು ಬಾರಿ ಜೈಲಿಗೆ ಹೋಗಿದ್ದ ಎಂದು, ಸ್ವಾತಂತ್ರ್ಯದ ಹೋರಾಟದಲ್ಲಿ ಯಾವ ಆಸಕ್ತಿಯನ್ನು ತೋರಿದ್ದನೆಂದು. ನಾನು ಕಾಂಗ್ರೆಸ್ಸಿನವರನ್ನು ಕೇಳ ಬಯಸುವುದೇನೆಂದರೆ, ಈ ಪ್ರಶ್ನೆಯನ್ನು ಮೀಸಲಿರಿಸಿದ ಸ್ಥಾನಕ್ಕೆ ಟಿಕೆಟ್ ಕೇಳುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗೆ ಏಕೆ ಕೇಳುವುದಿಲ್ಲ ಎಂದು. ದೇಶಕ್ಕಾಗಿ ಅವನ ಸೇವೆಗಳನ್ನು ಏತಕ್ಕಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ? ಈ ಮೀಸಲಿರಿಸಿದ ಸ್ಥಾನಗಳಿಗೆ ಅನಕ್ಷರಸ್ಥ ಮತ್ತು ಜನಾನುರಾಗಿಗಳಲ್ಲದ ಜನಗಳನ್ನು ಆರಿಸುತ್ತೀರ? ಈ ಆಯ್ಕೆಗೆ ಏನು ಆಧಾರ? ನಾಗರೀಕ ಅವಿಧೇಯ ಚಳುವಳಿಯಲ್ಲಿ ಕಾಂಗ್ರೆಸ್ ನವರಿಗೆ ಸಹಾಯ ಮಾಡಿದ್ದಾರೆಯೇ ಇಲ್ಲವೇ ಎಂದು ಕೇಳಬೇಕು. ದಡ್ಡರನ್ನೇ ಏಕೆ ಅರಿಸುತ್ತಿದ್ದೀರಿ?

ನಮ್ಮ ಪ್ರತಿನಿಧಿಗಳನ್ನು ಶಾಸನ ಸಭೆಗಳಿಗೆ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಮೂಲಕ ಚುನಾಯಿಸಿದರೆ ನಮ್ಮ ಕುಂದು ಕೊರತೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ನಮಗೆ ಅವರೇನೂ ಮಾಡದಿದ್ದರೆ, ಅವರನ್ನು ನಾವು ತರಾಟೆಗೆ ತೆಗೆದುಕೊಳ್ಳಬಹುದು. ನಾನೀಗ ೩೦ ವರ್ಷಗಳಿಂದ ರಾಜಕೀಯದಲ್ಲಿ ಇದ್ದೇನೆ. ನಾನು ಮತ್ತು ಗಾಂಧಿಯವರು ಒಟ್ಟಿಗೇ ರಾಜಕೀಯಕ್ಕೆ ಇಳಿದೆವು. ಎಂಟು ವರ್ಷಗಳ ಕಾಲ ನಾನು ಮಂತ್ರಿಯಾಗಿದ್ದೆ. ನಾನು ಹಾಗೆ ಇಷ್ಟಪಟ್ಟಿದ್ದರೆ, ನನ್ನ ಜೀವನ ಪೂರ್ತಿ ನಾನು ಮಂತ್ರಿಯಾಗಿಯೇ ಮೂಂದುವರೆಯುತಿದ್ದೆ, ಆದರೆ ನನಗೆ ಯಾವ ಸ್ವಾರ್ಥ ಉದ್ದೇಶವೂ ಇಲ್ಲ. ಅಲ್ಲಿಯೇ ಉಳಿಯುವುದರಿಂದ ನನ್ನ ಸಮುದಾಯಕ್ಕೆ ಸೇವೆ ಸಲ್ಲಿಸಲು ಆಗುವುದಿಲ್ಲವಾದ್ದರಿಂದ ನಾನು ಕಾಂಗ್ರೆಸ್ ಸರ್ಕಾರದಿಂದ ಹೊರಬಂದೆ. ನೀವು ನನ್ನ ಪ್ರಾರ್ಥನೆಗೆ ಸ್ಪಂದಿಸದಿದ್ದರೆ ಮತ್ತು ನಮ್ಮ ನಿಜವಾದ ಪ್ರತಿನಿಧಿಗಳು ಚುನಾಯಿತರಾಗದಿದ್ದರೆ, ನಾವು ಎಂದೆಂದಿಗೂ ಕಷ್ಟ ಅನುಭವಿಸಬೇಕು. ಈ ಮೀಸಲಾತಿ ಹತ್ತು ವರ್ಷಗಳವರೆಗೆ ಮಾತ್ರ ಎಂದು ನಾನು ನಿಮಗೆ ಹೇಳುತ್ತೇನೆ, ಅಂದರೆ ಎರಡು ಚುನಾವಣೆಗಳಿಗೆ ಮಾತ್ರ. ಹತ್ತು ವರ್ಷಗಳಾದ ಮೇಲೆ ಮೀಸಲಾತಿ ಹೋಗಿಬಿಡುತ್ತದೆ. ಅಸ್ಪೃಷ್ಯತೆ ಇರುವವರೆಗೂ ಮೀಸಲಾತಿ ಇದ್ದೇ ಇರಬೇಕೆಂದು ನಾನು ಹೇಳಿದೆ, ಆದರೆ ಕಾಂಗ್ರೆಸ್ ಟಿಕೆಟ್ ಮೇಲೆ ಪಾರ್ಲಿಮೆಂಟಿಗೆ ಚುನಾಯಿತರಾದ ನಮ್ಮವರೇ ಆದ ಸದಸ್ಯರು, ಇತರ ಸವರ್ಣ ಹಿಂದೂ ಸದಸ್ಯರು ಹಾಗಿರಲಿ, ನನ್ನನ್ನು ವಿರೋಧಿಸಿದರು. ಕಾಂಗ್ರೆಸ್ ಟಿಕೆಟ್ ಅನ್ನು ಕೇಳುವವರನ್ನು, ಮೀಸಲಾತಿ ಇಲ್ಲವಾದಮೆಲೆ ನೀವೇನು ಮಾಡುತ್ತೀರಿ ಎಂದು ನಾನು ಕೇಳ ಬಯಸುತ್ತೇನೆ. ಕಾಂಗ್ರೆಸ್ ಅವರನ್ನು ತನ್ನ ಟಿಕೆಟ್ ಮೇಲೆ ಮುಕ್ತ ಸ್ಥಾನಗಳಿಗೆ ಸ್ಪರ್ಧಿಸಿ ಎಂದು ಕೇಳುತ್ತದೆಯೆ? ಯಾರೂ ಕೂಡ ಅವರ ಮೇಲೆ ಉಗಿಯುವುದೂ ಇಲ್ಲ. ಗತಿಸಿಹೋದ ಕಾಲದಲ್ಲಿ ಈ ಉತ್ತಮ ಜಾತಿಯ ಹಿಂದೂಗಳು ನಮ್ಮನ್ನು ಬಹಳ ಕೀಳಾಗಿ ನಡೆಸಿಕೊಂಡಿದ್ದಾರೆ, ಮತ್ತು ಮೀಸಲಾತಿ ಹೋದ ಮೇಲೆ ಹಾಗೆಯೇ ಮಾಡುತ್ತಾರೆ. ಅವರೀಗ ಈ ಕ್ಷಣದಲ್ಲಿ ನಮ್ಮ ಮೆಲೆ ಅನುಕಂಪ ತೋರಿಸುತ್ತಿದ್ದರೆ, ಅದಕ್ಕೆ ಕಾರಣ ಅವರು ನಮ್ಮನ್ನು ದಡ್ಡರನ್ನಾಗಿ ಮಾಡುವುದಕ್ಕೆ ಬಯಸುತ್ತಿದ್ದಾರೆ; ಆಮೇಲೆ ತಮ್ಮ 'ಹೌದಪ್ಪ' ಗಳನ್ನುಮೀಸಲಾತಿ ಸ್ಥಾನಗಳಿಗೆ ನಿಲ್ಲಿಸುತ್ತಾರೆ. ಮೀಸಲಾತಿ ರದ್ದುಪಡಿಸಿದ ಮೇಲೆ ಅವರು ನಮ್ಮನ್ನು ಮತ್ತೆ ಚಮ್ಮಾರರು, ಭಂಗಿಗಳು, ಎಂದು ಕರೆಯುತ್ತಾರೆ. ಆದ್ದರಿಂದ ನಾನು ನಿಮಗೆ ಹೇಳುವುದು ಏನೆಂದರೆ ಈಗ ನೀವು ಬಹಳ ಎಚ್ಚರಿಕೆಯಿಂದ ಇದ್ದು, ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಬಾವುಟದ ಕೆಳಗೆ ಒಗ್ಗಟ್ಟಾಗಬೇಕು. ಫೆಡರೇಷನ್ನಿನ ಅಭ್ಯರ್ಥಿಗಳಿಗೆ ಮತ ಹಾಕುವುದು ನಿಮ್ಮ ಕರ್ತವ್ಯ? ಅವರು ನಿಮಗಾಗಿ ಪ್ರಾಣ ಬಿಡಲೂ ಸಿದ್ಧವಾಗಿರುತ್ತಾರೆ.

ನಾನೀಗ ನಿಮಗೆ ಕೆಲವು ಮುಖ್ಯವಾದ ವಿಷಯಗಳನ್ನು ಹೇಳಲು ಬಯಸುತ್ತೇನೆ. ಮೊದಲನೆಯದಾಗಿ, ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಅಭ್ಯರ್ಥಿಗಳ ಚುನಾವಣ ಚಿನ್ಹೆ. ನನಗೆ ತಿಳಿದು ಬಂದಿರುವುದು

ಏನೆಂದರೆ, ಬೇರೆ ಯಾವುದೋ ಒಂದು ಪಕ್ಷ ಇದೇ ಚಿನ್ಹೆಯನ್ನು ಆಯ್ದುಕೊಂಡಿದ್ದಾರೆ ಎಂದು ಆದರೆ ಅದರಲ್ಲಿನ ವ್ಯತ್ಯಾಸ ಇಷ್ಟೆ: ನಮ್ಮ ಚಿನ್ಹೆ 'ಆನೆ' ಯಾದರೆ ಅವರದ್ದು ಆನೆಯ ಮೇಲೆ ಇರುವ ಚರಕ. ಆದ್ದರಿಂದ ಅದರ ಬಗ್ಗೆ ಬಹಳ ಹುಶಾರಾಗಿ ಇರಿ. ದಾರಿ ತಪ್ಪ ಬೇಡಿ. ನಮ್ಮ ಪಕ್ಷದ ಚಿನ್ಹೆ ಬರೀ 'ಆನೆ' ಮಾತ್ರ, ಯಾವುದೇ ಚರಕ ಇಲ್ಲದೆ.

ಎರಡನೆಯದಾಗಿ, ನಮ್ಮ ಸಂಖ್ಯೆ ಬಹಳ ಕಡಿಮೆ ಇದೆ. ನಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಿದರೆ, ಬಹು ಸಂಖ್ಯಾತ ವೋಟುಗಳಿರುವ ಇತರ ಪಕ್ಷಗಳವರು, ಅವರನ್ನು ಕೆಳಗೆ ಎಳೆದು ಬಿಡುತ್ತಾರೆ. ಹಳ್ಳಿಗಳಲ್ಲಿ ನಮ್ಮ ಸಂಖ್ಯೆ ಕೇವಲ ಶೇಕಡ ೧೦ ಇದ್ದು, ಇಷ್ಟು ಕಮ್ಮಿ ವೋಟುಗಳನ್ನು ಇಟ್ಟುಕೊಂಡು ಬರುವ ಚುನಾವಣೆಗಳಲ್ಲಿ ಗೆಲ್ಲಲಾಗುವುದಿಲ್ಲ.ಆದ್ದರಿಂದ ನಿಮ್ಮನ್ನೆಲ್ಲ ನಾನು ಪ್ರಾರ್ಥಿಸುವುದೇನೆಂದರೆ, ಪ್ರತಿಯೊಬ್ಬ ಪುರುಷ, ಪ್ರತಿಯೊಬ್ಬ ಮಹಿಳೆ, ಮತದಾನದ ದಿನ ತಮ್ಮ ಎಲ್ಲಾ ಕೆಲಸಗಳನ್ನು ಬದಿಗಿಟ್ಟು ತಮ್ಮ ಮತಗಳನ್ನು ಚಲಾಯಿಸಲೇ ಬೇಕು. ಫಲಿತಾಂಶವೆಂದರೆ, ನಮಗೆ ಕಡೆಯ ಪಕ್ಷ ನಮ್ಮ ವೋಟುಗಳಾದರೂ ಸಿಗುತ್ತವೆ. ಕೆಲವೇ ಮತದಾರರು ತಮ್ಮ ಮತಗಳನ್ನು ಚಲಾಯಿಸದೆ ಇದ್ದರೆ, ನಮ್ಮ ಅಭ್ಯರ್ಥಿಗಳು ಗೆಲ್ಲುವುದು ಕಷ್ಟವಾಗುತ್ತದೆ.

ಮೂರನೆಯದಾಗಿ, ನಾವು ಅಲ್ಪಸಂಖ್ಯಾತರಾಗಿರುವುದರಿಂದ, ಚುನಾವಣೆಗ್ಗಳಲ್ಲಿ ನಾವು ಯಾವುದಾದರೊಂದು ಪಕ್ಷದೊಂದಿಗೆ ಕೈ ಜೋಡಿಸಲೇಬೇಕು. ಈ ಸಾರಿ ಹಂಚಿಕೆ ಪದ್ಧತಿಯ ಮತದಾನ ಇರುತ್ತದೆ. ನಮಗೆ ಮೀಸಲು ಸ್ಥಾನಗಳು ಇರುವ ಕಡೆಯಲ್ಲಿ ಎಲ್ಲರಿಗೂ ಎರಡು ವೋಟುಗಳು ಇರುತ್ತವೆ. ಒಂದು ವೋಟು ಮುಕ್ತ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗೆ ಹೋಗುತ್ತದೆ, ಇನ್ನೊಂದು ಮೀಸಲು ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ನಮ್ಮ ಅಭ್ಯರ್ಥಿಗೆ. ಒಂದು ವೋಟನ್ನು ಮೀಸಲು ಸ್ಥಾನಕ್ಕೆ ನಿಂತಿರುವ ನಮ್ಮ ಅಭ್ಯರ್ಥಿಗೆ ಕೊಡುತ್ತೇವೆ, ಎರಡನೆಯ ವೋಟನ್ನು ಆ ಇನ್ನೊಂದು ಪಕ್ಷದ ಅಭ್ಯರ್ಥಿಗೆ ಕೊಡುತ್ತೇವೆ; ಆ ಪಕ್ಷದ ಅಭ್ಯರ್ಥಿ ತನ್ನ ಎರಡನೆಯ ವೋಟನ್ನು ನಮ್ಮ ಅಭ್ಯರ್ಥಿಗೆ ಕೊಡುತ್ತಾನೆ. ಯಾವ ಪಕ್ಷದೊಡನೆ ಸಖ್ಯ ಮಾಡಬೇಕೆಂದು ನಾವಿನ್ನೂ ತೀರ್ಮಾನಿಸಿಲ್ಲ. ಸಂಧಾನಗಳು ನಡೆಯುತ್ತಾ ಇವೆ, ಇನ್ನು ಕೆಲವೇ ದಿನಗಳಲ್ಲಿ ಅದನ್ನು ತೀರ್ಮಾನಿಸಲಾಗುತ್ತದೆ. ಆದರೆ, ನಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿರಬೇಕಾದುದು ಏನೆಂದರೆ, ಎಷ್ಟೇ ಬೆಲೆಯಲ್ಲಿ ನಾವು ಕಾಂಗ್ರೆಸ್‌ನವರೊಂದಿಗೆ ಕೈ ಜೋಡಿಸುತ್ತಿಲ್ಲ. ನೀವು ಈಗ ಕಾಂಗ್ರೆಸ್‌ನವರಿಗೆ ಹೆದರಬೇಕಾಗಿಲ್ಲ. ಅದು ಕ್ಷೀಣವಾಗಿದೆ, ಅದರ ಸದಸ್ಯರುಗಳು ತಮ್ಮ ತಮ್ಮಲ್ಲೇ ಹೊಡೆದಾಡುತ್ತಿದ್ದಾರೆ. ಕಾಂಗ್ರೆಸ್ಸಿಗೆ ಸ್ವಾಭಾವಿಕ ಸಾವು ಸಂಭವಿಸುತ್ತದೆ.

ಕಡೆಯಲ್ಲಿ ನಿಮಗೆ ನನ್ನ ಪ್ರಾರ್ಥನೆಯೇನೆಂದರೆ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಟಿಕೆಟ್ ಮೇಲೆ ಸ್ಪರ್ಧಿಸಿರುವ ಅಭ್ಯರ್ಥಿಗೇ ನಿಮ್ಮ ಮತ ಕೊಡಿ. ಫೆಡರೇಷನ್ ಅಬ್ಯರ್ಥಿಗಳೇ ನಿಮ್ಮ ನಿಜವಾದ ಪ್ರತಿನಿಧಿಗಳು. ಅವರು ನಮ್ಮ ಸಮುದಾಯದ ಕಲ್ಯಾಣಕ್ಕಾಗಿ ಎಲ್ಲವನ್ನೂ ಮಾಡುತ್ತಾರೆ, ಸ್ವಾರ್ಥಿಗಳಾಗುವುದಿಲ್ಲ. ಕಡೆಯವರೆಗೂ ತಮ್ಮ ಸಮುದಾಯಕ್ಕೆ ಸೇವೆ ಸಲ್ಲಿಸುತ್ತಾರೆ.

# ೧೨೮
# ನಮ್ಮ ಬಂಧುಬಳಗವನ್ನು ಕಾಪಾಡೋಣ

೭ನೇ ನವೆಂಬರ್ ೧೯೫೧ರಂದು ಲಕ್ನೋ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಡಾ: ಬಿ.ಆರ್.ಅಂಬೇಡ್ಕರ್ ಅವರು ಮಾತನಾಡಿದರು: ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ನಾಯಕರಾದ ಡಾ: ಬಿ.ಆರ್. ಅಂಬೇಡ್ಕರ್ ಅವರು ಹಿಂದುಳಿದವರ ಬಗ್ಗೆ ಅಸಡ್ಡೆ ಮಾಡುವುದರ ವಿರುದ್ಧ ಎಚ್ಚರಿಸಿದರು.; ಸಮಾನತೆಯ ಸ್ಥಾನಮಾನವನ್ನು ಪಡೆದುಕೊಳ್ಳುವುದರಲ್ಲಿ ಅವರು ಹತಾಶರಾದರೆ, ಪರಿಶಿಷ್ಟ ಜಾತಿಗಳು ಕಮ್ಯೂನಿಸಮ್ ಅನ್ನು ಆರಿಸಿಕೊಳ್ಳಬಹುದು ಮತ್ತು ಹಾಗೇನಾದರೂ ಆದರೆ ದೇಶದ ಸರ್ವನಾಶವಾಗುತ್ತದೆ ಎಂದರು.

ಡಾ: ಅಂಬೇಡ್ಕರ್ ಹೇಳಿದ್ದು: ಇಂಥದೊಂದು ಕ್ರಾಂತಿಯನ್ನು ನಾವು ತಪ್ಪಿಸಬೇಕಾದರೆ ರಾಜಕಾರಣಿಗಳಿಗೆ ನನ್ನ ಮೊದಲನೆ ಮನವಿ ಏನೆಂದರೆ, ಅವರು ಈ ಸಮಸ್ಯೆಯನ್ನು ತುರ್ತಾಗಿ ಗುರುತಿಸಬೇಕು. ವಯಸ್ಕರ ಮತದಾನ ವ್ಯವಸ್ಥೆಯನ್ನು ಸಂವಿಧಾನ ರೂಢಿಯಲ್ಲಿ ತಂದಿದ್ದರೂ, ಒಬ್ಬ ಮನುಷ್ಯ ಒಂದು ವೋಟು ಎಂಬುದನ್ನು ಮಾನ್ಯ ಮಾಡಿದ್ದರೂ, ಆ ನೀತಿಯನ್ನು ದೇಶದ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಇನ್ನೂ ಅಳವಡಿಸಿಕೊಂಡಿಲ್ಲ. ಕಾಶ್ಮೀರದ ಸಮಸ್ಯೆಯನ್ನು ಉಲ್ಲೇಖಿಸುತ್ತಾ, ಕಾಶ್ಮೀರವೇನೂ ಏಕಾತ್ಮಕ ರಾಜ್ಯವಲ್ಲ. ಅದು ಒಂದು ಸಮಗ್ರ ರಾಜ್ಯವಾಗಿದ್ದು, ಅದರಲ್ಲಿ ಹಿಂದೂಗಳು, ಬೌದ್ಧರು, ಮತ್ತು ಮುಸ್ಲಿಮರು ಇದ್ದಾರೆ. ಜಮ್ಮು ಮತ್ತು ಲಡಕ್ ಗಳು ಮುಸ್ಲಿಮೇತರ ಪ್ರದೇಶಗಳಾಗಿದ್ದು, ಕಾಶ್ಮೀರ ಕಣಿವೆ ಮುಸ್ಲಿಮ್ ಪ್ರದೇಶವಾಗಿದೆ. ಕಾಶ್ಮೀರಿಗಳು ಹೇಗೆ ವೋಟು ಮಾಡುತ್ತಾರೆಂದು ನನಗೆ ಗೊತ್ತಿಲ್ಲ ಆದರೆ ಜನಮತಗಣನೆಗೆ ಭಾರತ ವಿಶ್ವ ಸಂಸ್ಥೆಗೆ ಕಟ್ಟು ಬಿದ್ದಿದೆ. ಜನಮತ ಗಣನೆ ಪಾಕಿಸ್ತಾನದ ಪರವಾಗಿ ಆದರೆ ಆಗ ಶೇಕಡ ೨೦ ಇರುವ ಮುಸ್ಲಿಮೇತರ ಜನಗಳು ಏನಾಗಬೇಕು? ಅದು ಒಂದು ದೊಡ್ಡ ಪ್ರಶ್ನೆ. ಇಡೀ ಕಾಶ್ಮೀರವನ್ನು ನಾವು ಉಳಿಸಿಕೊಳ್ಳಲಾಗದಿದ್ದರೆ, ಕಡೆಯ ಪಕ್ಷ ನಾವು ನಮ್ಮ ಬಂಧುಬಳಗವನ್ನಾದರು ಕಾಪಾಡಬೇಕು. ವಸ್ತುಸ್ಥಿತಿಯ ಈ ಸಾದಾ ವಿಶ್ಲೇಷಣೆಯನ್ನು ಯಾರೂ ಅಲ್ಲಗಳೆಯಲಾರರು.

### ಮಸುಕಾದ ಭವಿಷ್ಯ

ವಿದ್ಯಾರ್ಥಿಯೊಬ್ಬನಿಗೆ ಉತ್ತರ ಕೊಡುತ್ತಾ, ತಾವು ಭಾರತದ ಭವಿಷ್ಯದ ಬಗ್ಗೆ ಬಹಳ ನಿರಾಶೆಯಿಂದ ಇರುವುದಾಗಿ ಹೇಳಿದರು: ಕಾರಣ, ವಿದೇಶಗಳು ಭಾರತವನ್ನು ಒಂದು ಮುಖ್ಯವಾದ ದೇಶವೆಂದು ಪರಿಗಣಿಸಿಲ್ಲ ಮತ್ತು ಆಂತರಿಕವಾಗಿ ಬ್ರಿಟಿಷರ ಆಳ್ವಿಕೆಗೆ ಹೋಲಿಸಿದರೆ ಆಡಳಿತ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ. ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಎಲ್ಲೆಲ್ಲೂ ತಾನೇ ತಾನಾಗಿ ಹರಡಿದೆ; ಕಾಂಗ್ರೆಸ್ಸಿನವರೇ ಕೆಲವರು ಮಂತ್ರಿಗಳ ವಿರುದ್ಧ ಸಲ್ಲಿಸಿದ ದೂರಿನ ಮೇಲೆ ಯಾವ ತನಿಖೆಯನ್ನೂ ಕಾಂಗ್ರೆಸ್ ವರಿಷ್ಠರು ಪ್ರಾರಂಭಿಸಲಿಲ್ಲ. ಅದರ ಬದಲಿಗೆ ಅವರಿಗೆ ರಕ್ಷಣೆಯನ್ನು ಕೊಡಲಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ೧೫ರಿಂದ ೨೦ ವರ್ಷಗಳ ಅವಧಿಯಲ್ಲಿ ಕ್ಷಾಮ ತಲೆದೋರುತ್ತಿತ್ತು. ಆದರೆ ಈಗ ಕ್ಷಾಮವನ್ನು ಪ್ರತಿ ವರ್ಷವೂ ಹೊತ್ತು ತರುತ್ತಿದೆ ಎಂದು ಅವರು ಹೇಳಿದರು. ಈ ದೇಶದ ಆರ್ಥಿಕತೆಗೆ ಏನಾಗಿದೆ? ನಾವು ನೊಣಗಳ ಹಾಗೆ ಸಾಯಲಿದ್ದೇವೆಯೇ ಎಂದು ಅವರು ಕೇಳಿದರು.

# ೧೨೯
# ನಾನು ಇದಕ್ಕೆ ಮುಂಚೆಯೇ ಏಕೆ ರಾಜಿನಾಮೆ ಕೊಡಲಿಲ್ಲ

೨೦ನೆ ನವೆಂಬರ್ ೧೯೫೧ರಂದು ಬೊಂಬಾಯಿಗೆ ಬರಲಿರುವ ಡಾ: ಅಂಬೇಡ್ಕರ್ ಅವರಿಗೆ ರಾಜ್ಯದ ಸೋಷಿಯಲಿಸ್ಟ್ ಪಕ್ಷ ಮತ್ತು ಪರಿಶಿಷ್ಟ ಜಾತಿಗಳ ಫೆಡರೇಷನ್ ಜೊತೆಯಾಗಿ ಸ್ವಾಗತವನ್ನು ಕೋರಲಿವೆ.

ಡಾ: ಅಂಬೇಡ್ಕರ್ ಅವರು ರಾಜ್ಯದಲ್ಲಿ ಆರು ದಿನಗಳ ಚುನಾವಣಾ ಪ್ರವಾಸಕ್ಕಾಗಿ ಬೊಂಬಾಯಿಗೆ ಭೇಟಿ ಕೊಡುತ್ತಲಿದ್ದು ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಚುನಾವಣಾ ಪ್ರಚಾರವನ್ನು ಚಾಲನೆಗೊಳಿಸಲಿದ್ದಾರೆ. ೨೨ನೇ ನವೆಂಬರ್ ಸಾರ್ವಜನಿಕ ಸಭೆಯಲ್ಲಿ ಪ್ರಚಾರವನ್ನು ಪ್ರಾರಂಭಿಸುತ್ತಾರೆ.

ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಅಧ್ಯಕ್ಷರಾದ ಡಾ: ಬಿ.ಆರ್. ಅಂಬೇಡ್ಕರ್ ಅವರು ಭಾನುವಾರ ೧೮ನೇ ನವೆಂಬರ್ ೧೯೫೧ರಂದು ಬೊಂಬಾಯಿಗೆ ಬಂದಾಗ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನ ಅವರಿಗೆ ಉತ್ಸಾಹಭರಿತ ಸ್ವಾಗತವನ್ನು ಕೋರಿದರು.

೬೦೦೦ಕ್ಕಿಂತ ಹೆಚ್ಚು ಜನಗಳು, ಅವರಲ್ಲಿ ಅನೇಕ ಮಂದಿ ಮಹಿಳೆಯರು, ವಿಕ್ಟೋರಿಯಾ ಟರ್ಮಿನಸ್ ನಿಲ್ದಾಣಕ್ಕೆ ಅವರನ್ನು ಸ್ವಾಗತಿಸಲು ಬಂದಿದ್ದರು. ಇದು ಮಾಜಿ ಕಾನೂನು ಮಂತ್ರಿಯವರು ಮಂತ್ರಿಮಂಡಲಕ್ಕೆ ರಾಜಿನಾಮೆ ಕೊಟ್ಟಮೇಲೆ ಪಟ್ಟಣಕ್ಕೆ ಕೊಟ್ಟ ಮೊದಲ ಭೇಟಿಯಾಗಿತ್ತು. ಅವರು ಬೊಂಬಾಯಿಯಲ್ಲಿ ಒಂದು ವಾರ ತಂಗಿದ್ದು ಫೆಡರೇಷನ್ ಪರವಾಗಿ ಚುನಾವಣಾ ಪ್ರಚಾರವನ್ನು ಪ್ರಾರಂಭಿಸುತ್ತಾರೆ.

ಡಾ: ಅಂಬೇಡ್ಕರ್ ಅವರು ಲೋಕ ಸಭೆಗೆ ಬೊಂಬಾಯಿಯ ಉತ್ತರ ಮತಕ್ಷೇತ್ರದಿಂದ (ಮೀಸಲು ಸ್ಥಾನ) ಸ್ಪರ್ಧಿಸಲಿದ್ದು ಚುನಾವಣಾ ಸಭೆಯಲ್ಲಿ ಗುರುವಾರ ಮಾತನಾಡಲಿದ್ದಾರೆ. ಅವರು ಪ್ರಯಾಣಿಸುತ್ತಿದ್ದ ಪಂಜಾಬ್ ಮೇಲ್ ರೇಲ್ವೆ ನಿಲ್ದಾಣಕ್ಕೆ ಬರುತ್ತಿದ್ದಂತೆ 'ಅಂಬೇಡ್ಕರ್ ಜಿಂದಾಬಾದ್' ಎಂಬ ಘೋಷಣೆ ಮುಗಿಲು ಮುಟ್ಟಿತು. ಬೊಂಬಾಯಿಯ ಸೋಷಿಯಲಿಸ್ಟ್ ಪಕ್ಷ ಮತ್ತು ಫೆಡರೇಷನ್ ಪ್ಲಾಟ್ ಫಾರ್ಮ್ ಮೇಲೆ ಅವರಿಗೆ ಜೊತೆಯಾಗಿ ಸ್ವಾಗತವನ್ನು ಕೋರಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿಯವಾರಾದ ಮಿ: ಅಶೋಕ್ ಮೆಹ್ತಾ ಅವರು ಡಾ: ಅಂಬೇಡ್ಕರ್ ಅವರಿಗೆ ಸ್ವಾಗತ ಕೋರಿ ರೇಲ್ವೆ ಗಾಡಿಯಲ್ಲಿ ಅವರೊಂದಿಗೆ ೧೫ ನಿಮಿಷಗಳು ಮತನಾಡಿದರು.

ಅಧಿಕೃತ ಸ್ವಾಗತದ ನಂತರ, ಪ್ಲಾಟ್ ಫಾರ್ಮ್ ೮ ಮತ್ತು ೯ರ ನಡುವೆ ಇದ್ದ ರಸ್ತೆಯ ಕೊನೆಗೆ ವಾಹನದಲ್ಲಿ ಬಂದರು. ಆಲ್ಲಿ ಅವರಿಗೆ ಅವರ ಗೌರವಾರ್ಥವಾಗಿ ಬೊಂಬಾಯಿನ ಫೆಡರೇಷನ್ನಿನ ಬೇರೆ ಬೇರೆ ತಾಲೂಕ ಸಮಿತಿಯವರು ಪ್ರತ್ಯೇಕವಾದ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಇಲ್ಲಿ ತಾಲೂಕು ಸಮಿತಿಗಳ ಮತ್ತು ಇತರ ಸಂಸ್ಥೆಗಳ ಪರವಾಗಿ ಮಾಲಾರ್ಪಣೆ ಮಾಡಲಾಯಿತು.

ಸ್ವಾಗತ ಸಮಾರಂಭದಲ್ಲಿ ಉಪಸ್ಥಿತರಿದ್ದವರಲ್ಲಿ ಡಾ: ಅಂಬೇಡ್ಕರ್ ಅವರ ಹಳೆಯ ಸಹವರ್ತಿಗಳಲ್ಲಿ ಒಬ್ಬರಾಗಿದ್ದ ಮಿ: ಎಸ್.ಕೆ ಬೋಲೆ ಅವರಿದ್ದರು. ಮಿ: ಬೋಲೆ ಅವರಿಗೆ ಪ್ರತ್ಯೇಕವಾದ ಆಸನಕ್ಕೆ ವ್ಯವಸ್ಥೆ ಮಾಡಿರಲಿಲ್ಲವಾದ್ದರಿಂದ ಅವರನ್ನು ಡಾ: ಅಂಬೇಡ್ಕರ್ ತಮ್ಮ ತೊಡೆಯ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ನಗುವಿನ ಮಧ್ಯೆ ಬೋಲೆ ಅವರು ಅಂಬೇಡ್ಕರ್ ಅವರ ತೊಡೆಯ ಮೇಲೆ ಕುಳಿತುಕೊಂಡರು.

ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಬೊಂಬಾಯಿ ಶಾಖೆಯ ಆಶ್ರಯದಲ್ಲಿ ೨೧ನೇ ನವೆಂಬರ್ ೧೯೫೧ರ ಸಾಯಂಕಾಲ ೬–೩೦ ರ ಸಮಯದಲ್ಲಿ ಭೋಯಿವಾಡ ಆಟದ ಮೈದಾನದಲ್ಲಿ ಡಾ:ಅಂಬೇಡ್ಕರ್ ಅವರಿಗೆ ಸ್ವಾಗತವನ್ನು ಕೋರಲಾಯಿತು. ಶ್ರೀ ಆರ್.ಜಿ.ಖತ್ರಿ ಅಧ್ಯಕ್ಷತೆ ವಹಿಸಿದ್ದರು. ಸುಮಾರು ೫೦೦೦ ಜನ ಸಭೆಯಲ್ಲಿ ಹಾಜರಿದ್ದರು.

ಫೆಡರೇಷನ್ನಿನ ಬೊಂಬಾಯಿ ಶಾಖೆ ಡಾ: ಅಂಬೇಡ್ಕರ್ ಅವರಿಗೆ ಸ್ವಾಗತವನ್ನು ಕೋರಲು ಸಭೆಯನ್ನು ಕರೆಯಲಾಗಿದೆಯೆಂದು ಅಧ್ಯಕ್ಷರು ಹೇಳಿದರು. ಅವರ ನಾಯಕತ್ವದಲ್ಲಿ ನೀಲಿ ಬಾವುಟದ ಕೆಳಗೆ ಬಲವಾದ ಐಕಮತ್ಯವನ್ನು ಕಟ್ಟಲಾಗಿದ್ದು, ಈಗ ಇತರ ಜನಗಳೂ ಸಹ ನೀಲಿ ಬಾವುಟದ ಸುತ್ತ ಸೇರುತ್ತಿದ್ದಾರೆ ಎಂದರು. ಡಾ: ಅಂಬೇಡ್ಕರ್? ಅವರು ಪಾರ್ಲಿಮೆಂಟ್ ಚುನಾವಣೆಗೆ ನಿಂತಿದ್ದಾರೆಂದೂ, ಬರುವ ಚುನಾವಣೆಗಳ ಸಂಬಂಧ ಅವರು ಸೂಚನೆಗಳನ್ನು ಕೊಡಲಿದ್ದಾರೆಂದು, ಜನಗಳು ಅದನ್ನು ಸರಿಯಾಗಿ ಪಾಲಿಸಬೇಕೆಂದೂ ಹೇಳಿದರು.

ಶ್ರೀ ಜೆ.ಜಿ. ಭಟಂಕರ್ ಅವರು ಡಾ: ಅಂಬೇಡ್ಕರ್ ಮತ್ತು ಶ್ರೀಮತಿ ಅಂಬೇಡ್ಕರ್ ಅವರಿಗೆ ಮಾಲಾರ್ಪಣೆ ಮಾಡಿದರು. ಡಾ: ಅಂಬೇಡ್ಕರ್ ಅವರಿಗೆ ೨೫,೦೦೦ ರೂಪಾಯಿನ ನಿಧಿಯನ್ನು ಕೊಡಬೇಕೆಂದು ತೀರ್ಮಾನಿಸಲಾಗಿದ್ದು ಇಲ್ಲಿಯವರೆಗೆ ಅಷ್ಟು ಹಣವನ್ನು ಕಲೆ ಹಾಕುವುದಕ್ಕೆ ಆಗಿಲ್ಲವೆಂದು ಹೇಳಿದರು. ಇಲ್ಲಿಯವರೆಗೆ ಕಲೆ ಹಾಕಿದ್ದಷ್ಟು ಎರಡು ಚೀಲಗಳ್ಳಿ ಇದ್ದು, ಉಳಿಕೆ ಹಣವನ್ನು ಬೇಗನೆ ಸೇರಿಸಿ ಚುನಾವಣೆಗೆ ಮುಂಚೆ ಸರಿಯಾದ ಸಮಯದಲ್ಲಿ ಸಮರ್ಪಿಸಲಾಗುವುದು ಎಂದು ಹೇಳಿದರು.

ತಮಗೆ ಕೊಟ್ಟ ಸ್ವಾಗತಕ್ಕೆ ಉತ್ತರ ಕೊಡುತ್ತಾ, ಡಾ: ಅಂಬೇಡ್ಕರ್ ಅನೇಕ ಮಂದಿ ಎರಡು ಪ್ರಶ್ನೆಗಳನ್ನು ಕೇಳುತ್ತಿದ್ದಾರೆಂದು, ಒಂದು ತಾವು ಇದಕ್ಕೆ ಮುಂಚೆಯೇ ಏಕೆ ರಾಜೀನಾಮೆ ಕೊಡಲಿಲ್ಲ? ಇದಕ್ಕೆ ಮುಂಚೆಯೇ ರಾಜೀನಾಮೆ ಕೊಟ್ಟಿದ್ದರೆ, ಕಾಂಗ್ರೆಸ್ಗೆ ವಿರುದ್ಧವಾಗಿ ಒಂದು ಸಶಕ್ತ ರಂಗವನ್ನು ಕಟ್ಟಬಹುದಾಗಿತ್ತು ಎಂದು. ಎರಡನೆಯ ಪ್ರಶ್ನೆ, ನಾನು ಕಾಂಗ್ರೆಸ್ನವರೊಂದಿಗೆ ಏಕೆ ಕೈ ಜೋಡಿಸಲಿಲ್ಲ ಎಂದು. ನಾನು ಕಳೆದ ನಾಲ್ಕು ವರ್ಷಗಳಿಂದ ಕಾಂಗ್ರೆಸ್ ಸರ್ಕಾರದಲ್ಲಿ ಒಬ್ಬ ಮಂತ್ರಿಯಾಗಿದ್ದೆ. ನಾನು ಮಂತ್ರಿಮಂಡಲವನ್ನು ಸೇರಿದ ಉದ್ದೇಶ ಮೇಲಿನ ನಾಯಕರುಗಳೊಂದಿಗೆ ಸಂಪರ್ಕ ಬೆಳಸಿ ಅವರು ನಿಜವಾಗಿಯೂ ಹರಿಜನರಿಗೆ ಒಳ್ಳೆಯದನ್ನು ಮಾಡಲು ಬಯಸಿದ್ದಾರೆಯೇ ಎಂದು ತಿಳಿದುಕೊಳ್ಳಲು. ತಮ್ಮ ಅನುಭವದಿಂದ ಅವರಿಗೆ ಗೊತ್ತಾಗಿದ್ದು ಏನೆಂದರೆ ಆ ನಾಯಕರಿಗೆ ನಿಜವಾಗಿಯೂ ಹರಿಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಇಚ್ಛೆ ಇರಲಿಲ್ಲ ಎಂದು. ಅವರಿಗೆ, ಅಂದರೆ ಹರಿಜನರಿಗೆ ಪಾರ್ಲಿಮೆಂಟಿನಲ್ಲಿ ಮತ್ತು ಶಾಸನ ಸಭೆಗಳಲ್ಲಿ ಹತ್ತು ವರ್ಷಗಳ ವರೆಗೆ ಮೀಸಲು ಸ್ಥಾನಗಳು ಸಿಕ್ಕಿವೆ. ಸರ್ಕಾರ ಅಸ್ಪೃಷ್ಯತೆಯನ್ನು ತೊಡೆದು ಹಾಕಬೇಕೆಂದು ನಿಯಮಗಳನ್ನು ಮಾಡಿದ್ದರೂ, ಹತ್ತು ವರ್ಷಗಳ ನಂತರವೂ ಸಹ ಅಸ್ಪೃಷ್ಯತೆ ಹಾಗೆಯೇ ಇರುತ್ತದೆ ಮತ್ತು ಅವರ ಪರಿಸ್ಥಿತಿ ಎಂದಿನಂತೆಯೇ ಇರುತ್ತದೆ ಎಂಬುದು ನನಗೆ ಖಂಡಿತವಾಗಿ ಗೊತ್ತು ಎಂದು ಹೇಳಿದರು. ಸಂವಿಧಾನದಲ್ಲಿ ಹರಿಜನರಿಗಾಗಿ ೧೨ ೧/೨% ನಷ್ಟು ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗ ಕೊಡಬೇಕೆಂದು ಉಪಬಂಧವಿದ್ದು, ಆದರೆ ಮುನ್ಷಿ ಮತ್ತು ಇತರ ಕಾಂಗ್ರೆಸ್ ಜನರು ಅದಕ್ಕೊಂದು ಕಾಲ ಮಿತಿಯನ್ನು ಹಾಕಬೇಕೆಂದಿದ್ದರು. ಆದರೆ ತಮ್ಮ ವಿರೋಧದಿಂದಾಗಿ ಅವರಿಗೆ ಜಯ ಸಿಗಲಿಲ್ಲ. ಅವರು ಒಮ್ಮೆ ಶ್ರೀ ರಾಜಗೋಪಾಲಚಾರಿಯವರನ್ನು ಸರ್ಕಾರಿ ಸೇವೆಗಳಲ್ಲಿ ಶೇಕಡಾವಾರು ಎಷ್ಟು ಹರಿಜನರು ಕೆಲಸದಲ್ಲಿ ಇದ್ದಾರೆಂದು ಕೇಳಲಾಗಿ ಅವರು ಕಳುಹಿಸಿದ ಸುತ್ತೋಲೆಗಳಿಂದ ತಿಳಿದು ಬಂದಿದ್ದು ಏನೆಂದರೆ ಯಾವುದೇ ಇಲಾಖೆಗಳಲ್ಲಿ ಹರಿಜನರು ಕೆಲಸದಲ್ಲಿ ಇರಲಿಲ್ಲ ಎಂದು. ಬ್ರಿಟಿಷರ ಕಾಲದಲ್ಲಿ ಅವರು

ಕಾರ್ಯಕಾರಿ ಪರಿಷತ್ತಿನಲ್ಲಿ ಇದ್ದು, ಕೆಲವು ಇಲಾಖೆಗಳು ಅವರ ಸುಪರ್ದಿನಲ್ಲಿ ಇದ್ದವು: ಅಂದರೆ ಕಾರ್ಮಿಕ ಇಲಾಖೆ ಮತ್ತು BPO. ಹರಿಜನರಿಗೆ ವಿದೇಶಗಳಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಬ್ರಿಟಿಷರು ಮೂರು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರು. ಈಗಿನ ಸರ್ಕಾರ ಆ ಹಣವನ್ನು ಖರ್ಚು ಮಾಡುತ್ತಿದೆ, ಆದರೆ ಹರಿಜನರನ್ನು ಶಿಕ್ಷಣಕ್ಕಾಗಿ ವಿದೇಶಗಳಿಗೆ ಕಳುಹಿಸುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಬ್ರಿಟಿಷರ ಕಾಲದಲ್ಲಿ ಹರಿಜನರನ್ನು ವಿದೇಶಕ್ಕೆ ಕಳುಹಿಸುತ್ತಿದ್ದುದು –ಫಿಟ್ಟರುಗಳು ಇತ್ಯಾದಿ ವಿಷಯದಲ್ಲಿ ತಿಳುವಳಿಕೆಯನ್ನು ಪಡೆಯುವುದಕ್ಕಾಗಿ. ದೇಶ ವಿಭಜನೆಯ ಸಂದರ್ಭದಲ್ಲಿ, ಪಾಕಿಸ್ತಾನ ಸರ್ಕಾರ ಸವರ್ಣ ಹಿಂದುಗಳನ್ನು ಪಾಕಿಸ್ತಾನಕ್ಕೆ ಬರುವುದಕ್ಕೆ ಅನುಮತಿಸಿದರು, ಆದರೆ ಆ ಸರ್ಕಾರ ಹರಿಜನರನ್ನು ಪಾಕಿಸ್ತಾನವನ್ನು ಬಿಟ್ಟು ಹೋಗದ ಹಾಗೆ ತಡೆದರು ಮತ್ತು ಅವರಲ್ಲಿ ಅನೇಕರನ್ನು ಇಸ್ಲಾಮಿಗೆ ಮತಾಂತರಿಸಲಾಯಿತು. ಮಹರ್ ಬೆಟಾಲಿಯನ್ ಕೆಲವು ಹರಿಜನರನ್ನು ಇಂಡಿಯ ದೇಶಕ್ಕೆ ಬರಲು ಸಹಾಯ ಮಾಡಿದರು. ಆದರೆ ಭಾರತ ಸರ್ಕಾರ ಅವರಿಗೆ ಯಾವ ಸಹಾಯವನ್ನೂ ಮಾಡಲಿಲ್ಲ. ಕೆಲವರು ರಾಜ್ ಘಾಟ್ ನಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು ಆದರೆ ಯಾರೂ ಅದಕ್ಕೆ ಗಮನ ಕೊಡಲೇ ಇಲ್ಲ. ನಿಮ್ಮ ಅಳಲುಗಳನ್ನು ಸರ್ಕಾರ ಪರಿಹಾರ ಮಾಡುವುದಿಲ್ಲ ಎಂದು ನಾನು ಅವರಿಗೆ ಹೇಳಿದೆ. ತಾವು ಹರಿಜನರಿಗಾಗಿ ಏನೂ ಮಾಡಲು ಸಾಧ್ಯವಾಗದ್ದರಿಂದ, ನಾನು ರಾಜೀನಾಮೆ ಕೊಡಲು ತೀರ್ಮಾನಿಸಿದೆ?. ಆದರೆ ಪಂಡಿತ್ ನೆಹರೂ ಅವರು ಕಾಂಗ್ರೆಸ್ ಸರ್ಕಾರದ ವಿರುದ್ಧ ತಾವು ಮಾಡಿದ ಅಪಾದನೆಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಮುಂದುವರೆದು ಅವರು ಹೇಳಿದ್ದೇನೆಂದರೆ, ನಮ್ಮ ಜನಸಂಖ್ಯೆ ಶೇಕಡಾ ೮ ಇದ್ದು ಬೇರೆ ಯಾವುದಾದರೂ ರಾಜಕೀಯ ಪಕ್ಷದ ನೆರವಿಲ್ಲದೆ ತಾವು ಚುನಾವಣೆಗಳಲ್ಲಿ ಸ್ಪರ್ಧಿಸುವುದು ಅಸಾಧ್ಯ.

ಆದುದರಿಂದ ತಾವು ಸೋಷಿಯಲಿಸ್ಟರೊಂದಿಗೆ ಕೈ ಜೋಡಿಸಲು ನಿರ್ಧರಿಸಿದ್ದೇವೆ ಎಂದರು. ಅವರ ವಿಶೇಷ ಕುಂದುಕೊರತೆಗಳಿಗೆ ಪರಿಹಾರವನ್ನು ಕೊಡಲು ಫೆಡರೇಶನ್ ಅನ್ನು ಮುಂದುವರಿಸುತ್ತಿದ್ದೇವೆ ಎಂದರು. ಚುನಾವಣೆಗಳಲ್ಲಿ ಪಕ್ಷದ ಜೊತೆ ಪ್ರಾಮಾಣಿಕರಾಗಿರುವಂತೆ ಸಭಿಕರನ್ನು ಕೇಳಿಕೊಂಡರು. ಸಮತಾ ಸೈನಿಕ ದಳದ ಕೆಲಸದ ಬಗ್ಗೆ ಅವರು ತಮ್ಮ ತೃಪ್ತಿಯನ್ನು ವ್ಯಕ್ತ ಪಡಿಸಿದರು. ಅವರು ಮುಂದೆ ಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಬಹಳ ಸಹಾಯಕ್ಕೆ ಬರುತ್ತಾರೆಂದು ಆಶಿಸಿದರು. ತಾವು ಬೊಂಬಾಯಿಯನ್ನು ೪ ದಿನಗಳ ನಂತರ ಬಿಡುತ್ತಿದ್ದೇನೆಂದು ಹೇಳಿದರು. ಪುನಃ ಬರುವುದಕ್ಕೆ ತಮಗೆ ಸಾಧ್ಯವಾಗಲಾರದು ಎಂದು ಹೇಳಿದರು. ನಿಮ್ಮ ವೋಟುಗಳನ್ನು ಪರಿಶಿಷ್ಟ ಜಾತಿಗಳ ಫೆಡರೇಶನ್ನಿನ ಅಭ್ಯರ್ಥಿಗಳಿಗೆ ಮತ್ತು ಸೋಷಿಯಲಿಸ್ಟ್ ಪಕ್ಷದ ಅಭ್ಯರ್ಥಿಗಳಿಗೆ ಕೊಡಿ ಎಂದು ಕೇಳಿದರು; ಯಾರೂ ಆ ದಿನ (ಚುನಾವಣೆ ದಿನ) ಮನೆಯಲ್ಲಿ ಉಳಿದುಕೊಳ್ಳಬಾರದು ಎಂದು ಹೇಳಿದರು.

# ೧೩೦

# ತನ್ನ ಪ್ರತ್ಯೇಕ ರಾಜಕೀಯ ಅಸ್ತಿತ್ವವನ್ನು ಫೆಡರೇಷನ್ ಬಿಟ್ಟುಬಿಡುವುದಿಲ್ಲ

೨೨ನೇ ನವೆಂಬರ್ ೧೯೫೧ ರಂದು, ಪರೇಲ್ನ ಸಂತ ಕ್ಸೇವಿಯರ್ ಕಾಲೇಜಿನ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ತಾವು ಅಧ್ಯಕ್ಷರಾಗಿದ್ದ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಚುನಾವಣಾ ಪ್ರಚಾರವನ್ನು ಉಧ್ಘಾಟಿಸುತ್ತಾ ಡಾ:ಅಂಬೇಡ್ಕರ್ ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ತಾವು ನಾಲ್ಕು ವರ್ಷಗಳಿಂದ ಮಾಡುತ್ತಿದ್ದ ಕೆಲಸವನ್ನು ಬಿಟ್ಟಿದ್ದಾಗಿಯೂ, ಅದಕ್ಕೆ ಕಾರಣ ಸರ್ಕಾರ ಪರಿಶಿಷ್ಟ ಜಾತಿಗಳ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಪುರೋಭಿವೃದ್ಧಿಗೆ ತೋರಿದ ದಿವ್ಯ ನಿರ್ಲಕ್ಷ್ಯವೆಂದು ಹೇಳಿದರು.

ಭಾರತ ಸರ್ಕಾರದ ಮಾಜಿ ಕಾನೂನು ಸಚಿವರಾದ ಡಾ: ಬಿ.ಆರ್. ಅಂಬೇಡ್ಕರ್ ಅವರು ಪಂಡಿತ್ ನೆಹರೂ ಅವರು ಬುದ್ಧಿಪೂರ್ವಕವಾಗಿಯೇ ತಾವು ಸರ್ಕಾರದ ವಿರುದ್ಧ ಮಾಡಿದ ಅಪಾದನೆಗಳಿಗೆ ಉತ್ತ್ತರ ಕೊಡದೆ ಜಾರಿಕೊಂಡಿದ್ದಾರೆ, ಕಾರಣ ಆಪಾದನೆಗಳು ನಿಜವಾಗಿದ್ದು ಅವುಗಳಿಗೆ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ.

ತಾವು ಕಳೆದ ತಿಂಗಳು ಸರ್ಕಾರದಿಂದ ರಾಜಿನಾಮೆ ಕೊಟ್ಟಾಗ ನೆಹರೂ ಅವರಿಗೆ ತಾವು ಬಿಡುಗಡೆ ಮಾಡಿದ ಹೇಳಿಕೆಯನ್ನು ವಿರೋಧಿಸಿ ತಮ್ಮ ಹೇಳಿಕೆ ಕೊಡುವುದಕ್ಕೆ ಅನೇಕ ಅವಕಾಶಗಳು ಇದ್ದವು. ಆದರೆ ಆಪಾದನೆಗಳು ನಿರ್ವಿವಾದವಾಗಿದ್ದವು ಎಂದು ಪ್ರಧಾನ ಮಂತ್ರಿಯವರಿಗೆ ಚೆನ್ನಾಗಿ ಗೊತ್ತಿದ್ದರಿಂದ ಮೌನವಾಗೇ ಉಳಿದರು. ಕಾಂಗ್ರೆಸ್ಸಿನವರಿಗೆ ದಮನಕ್ಕೊಳಪಟ್ಟ ಹಿಂದುಳಿದ ವರ್ಗಗಳವರ ಬಗ್ಗೆ ಯಾವ ಅನುಕಂಪವಾಗಲೀ ಅಥವಾ ಪ್ರೀತಿಯಾಗಲೀ ಇಲ್ಲ ಈಗ ಆತ್ಮ ವಿಶ್ವಾಸದಿಂದ ಹೇಳಬಹುದಾಗಿದೆ.

ಕಾಗ್ರೆಸ್ ಸರ್ಕಾರದಲ್ಲಿ ತಾವು ಮಂತ್ರಿಯಾಗಿರುವಾಗ, ತಮಗೆ ಕೊಟ್ಟ ಆಶ್ವಾಸನೆಯಂತೆ ಖಾತೆಗಳನ್ನೂ ಕೊಡಲಿಲ್ಲ, ಸಾಲದ್ದಕ್ಕೆ ಮಂತ್ರಿ ಮಂಡಲದ ಸಮಿತಿಗಳೂ ಸಹ ಅವರಿಗೆ ಮುಚ್ಚಲ್ಪಟ್ಟಿದವು.

ಒಬ್ಬ ಮಂತ್ರಿಯಾಗಿ ಸರ್ಕಾರದ ನೀತಿಯನ್ನು ಟೀಕೆ ಮಾಡುವುದಕ್ಕೆ ಆಗುತ್ತಿರಲಿಲ್ಲ, ಹಾಗೆಯೇ ಪರಿಶಿಷ್ಟ ಜಾತಿಗಳ ವಿಷಯದಲ್ಲಿ ಸರ್ಕಾರಕ್ಕೆ ಯಾವ ಪ್ರಶ್ನೆಯನ್ನೂ ಕೇಳುವುದಕ್ಕೆ ಆಗುತ್ತಿರಲಿಲ್ಲ.

ಕೆಲವು ಕಾಂಗ್ರೆಸ್ಸಿಗರು, ಸಂವಿಧಾನದ ಕರಡನ್ನು ತಯಾರಿಸುವಲ್ಲಿ ತಮ್ಮ ಪಾತ್ರ ಬಹಳ ನಗಣ್ಯವಾದದ್ದೆಂದು ಮಾಡಿದ ಆಪಾದನೆಗಳನ್ನು ನಿರಾಕರಿಸಿದರು. ಇದಕ್ಕಿಂತ ದೊಡ್ಡದಾದ ಸುಳ್ಳು ಬೇರೊಂದು ಇರಲಿಕ್ಕಿಲ್ಲ ಎಂದು ಹೇಳಿದರು. ಮುಂದುವರೆದು, ಕರಡು ಸಮಿತಿಯಲ್ಲಿನ ತಮ್ಮ ಸಹೋದ್ಯೋಗಿಗಳು ಯಾವ ಅಸಕ್ತಿಯನ್ನೂ ತೋರಿಸುತ್ತಿರಲಿಲ್ಲವೆಂದು ತಾವು ದಾಖಲೆಗಳ ಸಮೇತ ತೋರಿಸಿಕೊಡಲು ಸಿದ್ಧವೆಂದು ಹೇಳಿದರು. ಅವರು ಮೀಟಿಂಗುಗಳಿಗೆ ಬಹಳ ಅಪೂರ್ವವಾಗಿ ಬರುತ್ತಿದ್ದರೆಂದೂ, ಎಲ್ಲಾ ಹೊರೆ ತಮ್ಮ ಮೇಲೆ ಮತ್ತು ಸಮಿತಿಯ ಕಾರ್ಯದರ್ಶಿಯವರ ಮೇಲೆ ಬಿದ್ದಿತ್ತೆಂದೂ ಹೇಳಿದರು.

ಪರಿಶಿಷ್ಟ ಜಾತಿಗಳವರ ಕುಂದು ಕೊರತೆಗಳಿಗೆ ಕಾಂಗ್ರೆಸ್ನವರ ತಾತ್ಸಾರದ ಧೋರಣೆಯನ್ನು ತೋರಿಸುವ ಸಂಗತಿಗಳ ಉದ್ದನೆಯ ಪಟ್ಟಿಯನ್ನು ವಿವರಿಸಿ ಹೇಳಿದರು; ವಿದೇಶೀ ಬ್ರಿಟಿಷ್ ಸರ್ಕಾರ ಇದಕ್ಕೂ ಮಿಗಿಲಾಗಿ ಅನುಕಂಪವನ್ನೂ ಮತ್ತು ಔದಾರ್ಯವನ್ನು ತೋರಿಸಿದ್ದಲ್ಲದೆ ಅವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಪ್ರಾಮಾಣಿಕವಾಗಿ ಕೆಲಸ ಮಾಡಿದರು ಎಂದು ಹೇಳಿದರು.

ಡಾ: ಅಂಬೇಡ್ಕರ್ ಅವರು ಸೋಷಿಯಲಿಸ್ಟ್ ಪಕ್ಷ ಮತ್ತು ಫೆಡರೇಷನ್ನಿನ ನಡುವೆ ಆಗಿರುವ ಬಾಂಧವ್ಯವನ್ನು ಉಲ್ಲೇಖಿಸಿ, ಪರಿಶಿಷ್ಟ ಜಾತಿಯ ಮತದಾರರಿಗೆ ತಮ್ಮ ಮತಗಳನ್ನು ಸೋಷಿಯಲಿಸ್ಟ್ ಮತ್ತು ಫೆಡರೇಶನ್ನಿನ ಅಭ್ಯರ್ಥಿಗಳಿಗೆ ಕೊಡಬೇಕೆಂದು ಕರೆಕೊಟ್ಟರು. ಈ ಸಹಯೋಗಿತ್ವದ ಹಿಂದೆ ತಮ್ಮ ಸಮುದಾಯ ಗಟ್ಟಿಯಾಗಿ ನಿಲ್ಲುವುದೆಂದು, ಎರಡೂ ಪಕ್ಷಗಳು ನಿಲ್ಲಿಸಿರುವ ಅಭ್ಯರ್ಥಿಗಳನ್ನು ಶಾಸನ ಸಭೆಗಳಿಗೆ ಕಳುಹಿಸುತ್ತಾರೆಂದು ತಮಗೆ ಭರವಸೆಯಿದೆಯೆಂದು ಹೇಳಿದರು.

ಈ ಸ್ನೇಹ ಬಂಧ ಕೊಡು,ಕೊಳು ಇಂಗಿತದಲ್ಲಿ ಮಾಡಿಕೊಳ್ಳಲಾಗಿದೆಯೆಂದೂ ಮತ್ತು ಅದಕ್ಕೆ ಬದ್ಧರಾಗಿರಬೇಕೆಂದೂ ಹೇಳಿದರು. ಹೇಗಾದರೂ ಫೆಡರೇಷನ್ ತನ್ನ ಪ್ರತ್ಯೇಕವಾದ ರಾಜಕೀಯ ಅಸ್ತಿತ್ವವನ್ನು ಬಿಟ್ಟು ಬಿಡುವುದಿಲ್ಲ ಎಂದು ಹೇಳಿದರು.

ಸಭೆಯಲ್ಲಿ ಟಿಕೆಟ್ ಮಾರಾಟದಿಂದ ಬಂದ ಹಣವನ್ನು ಡಾ: ಅಂಬೇಡ್ಕರ್ ಅವರಿಗೆ ಸಮರ್ಪಿಸಲಾಯಿತು. ಹಣ ಎಷ್ಟು ಎಂದು ಪ್ರಕಟ ಮಾಡಲಿಲ್ಲ.

## ೧೩೧

## ಹಿಂದೂ ಸಂಹಿತೆ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುತ್ತದೆ

೨೪ನೇ ನವೆಂಬರ್ ೧೯೫೧ ರಂದು ಬೊಂಬಾಯಿನಲ್ಲಿ ಮಹಿಳೆಯರ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತ ಡಾ: ಅಂಬೇಡ್ಕರ್ ಅವರು ಹಿಂದು ಸಂಹಿತೆ ಮಸೂದೆ ಮಹಿಳೆಯರ ಸ್ಥಿಗತಿಗಳನ್ನು ಉತ್ತಮಪಡಿಸುವುದಲ್ಲದೆ ಅವರಿಗೆ ಇನ್ನೂ ಹೆಚ್ಚಿನ ಹಕ್ಕುಗಳನ್ನು ಕೊಡುತ್ತದೆ ಎಂದು ಘೋಷಣೆ ಮಾಡಿದರು. ಮಸೂದೆಯನ್ನು ಬೆಂಬಲಿಸುವಂತೆ ಮತ್ತು ನೈಜವಾದ ಪ್ರಜಾಪ್ರಭುತ್ವವನ್ನು ದೇಶದಲ್ಲಿ ತರುವಂಥ ಅಭ್ಯರ್ಥಿಗಳಿಗೆ ಮತ ಹಾಕುವಂತೆ ಪ್ರಾರ್ಥಿಸಿದರು. ಕೆಲವು ಕಾಂಗ್ರೆಸ್ಸಿನವರು ಮಸೂದೆಯ ವಿರುದ್ಧವಾಗಿ ಇದ್ದು, ಏನಾದರೊಂದು ರೀತಿಯಲ್ಲಿ ಅದನ್ನು ಸಾವಕಾಶ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ತಮ್ಮ ವ್ಯಸನವನ್ನು ವ್ಯಕ್ತ ಪಡಿಸಿದರು.

# ೧೩೨

# ಜನಗಳು  ಸೋಮಾರಿಯಾಗಿರುವುದು, ಉದಾಸೀನದಿಂದ ಇರುವುದು ಒಳ್ಳೆಯದಲ್ಲ

ಭಾನುವಾರ, ೨೫ನೇ ನವೆಂಬರ್ ೧೯೫೧ರಂದು ಬೊಂಬಾಯಿನಲ್ಲಿ ನಡೆದ ಒಂದು ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡುತ್ತಾ, ಕಾಂಗ್ರೆಸ್ ಅನ್ನು ಬಿಟ್ಟು ಸೋಷಿಯಲಿಸ್ಟರು ಮತ್ತು ನನ್ನಂಥ ಜನಗಳೊಂದಿಗೆ ಕೈ ಜೋಡಿಸಿ ಎಂದು ನೆಹರೂ ಅವರಿಗೆ ಕರೆ ಕೊಟ್ಟರು.

ಶಿವಾಜಿ ಪಾರ್ಕಿನಲ್ಲಿ ನಡೆದ ಆ ಸಭೆಯಲ್ಲಿ  ಎರಡು ಲಕ್ಷಕ್ಕಿಂತ ಹೆಚ್ಚು ಜನಗಳು ಸೇರಿದ್ದರು. ಈ ಸಭೆಯನ್ನು ಸೋಷಿಯಲಿಸ್ಟ್ ಪಕ್ಷ ಮತ್ತು ಪರಿಶಿಷ್ಟ ಜಾತಿಗಳ ಫೆಡರೇಷನ್ ಕರೆದಿತ್ತು.

ನೀಲಿ ನಕ್ಷತ್ರದ ಫೆಡರೇಷನ್ನಿನ ಬಾವುಟಗಳು ಮತ್ತು ಸೋಷಿಯಲಿಸ್ಟ್ ಪಕ್ಷದ ಕೆಂಬಾವುಟಗಳು ಎಲ್ಲೆಲ್ಲೂ ಕಾಣಿಸುತ್ತಿದ್ದವು. ನೀಲಿ ಮತ್ತು ಕೆಂಪು ಟೋಪಿಗಳನ್ನು ಧರಿಸಿದ ಎರಡೂ ಪಕ್ಷಗಳ ನೂರಾರು ಜನ ಸ್ವಯಂ ಸೇವಕರು ಶಿವಾಜಿ ಪಾರ್ಕಿನ ಹತ್ತಿರ ಜನ ಜಂಗುಳಿಯನ್ನು ಸಂಚಾರ ವ್ಯವಸ್ಥೆಗೆ ತೊಂದರೆ ಆಗದಂತೆ ನಿಯಂತ್ರಿಸುತ್ತಿದ್ದರು.

ಮಾಜಿ ಕಾನೂನು ಮಂತ್ರಿಯವರು, ತಮಗೆ ಮತ ಹಾಕುವಂತೆ ಜನಗಳಿಗೆ  ಮನವಿ ಮಾಡುತ್ತಿದ್ದರು. ತಾವು ಚುನಾಯಿತರಾದರೆ ಅಖಂಡ ಮಹಾರಾಷ್ಟ್ರಕ್ಕಾಗಿ ಹೋರಾಡುವುದಾಗಿ ಹೇಳಿದರು. ತಮ್ಮ ಜೀವನದ ಧ್ಯೇಯವೆಂದರೆ–ಪರಿಶಿಷ್ಟ ಜಾತಿಗಳ  ಉದ್ಧಾರ ಮತ್ತು ದೇಶಕ್ಕೊಂದು ಒಳ್ಳೆಯ ಸಂವಿಧಾನವನ್ನು ಕೊಡುವುದು ಎಂದು ಹೇಳಿದರು.

ತಾವು ಮಾಡಿದ ಆಪಾದನೆಗಳನ್ನು ಅಲ್ಲಗಳೆದ ನೆಹರೂ ಅವರ ಚೌಪಾತಿ ಭಾಷಣವನ್ನು ಉಲ್ಲೇಖಿಸುತ್ತಾ, ಕಾಂಗ್ರೆಸ್ ಪರಿಶಿಷ್ಟ ಜಾತಿಗಳ ಪರಿಸ್ಥಿತಿಯನ್ನು ಉತ್ತಮಪಡಿಸಿಲ್ಲ ಅಲ್ಲದೆ, ಚೈನಾ ಮತ್ತು ರಷ್ಯಾ ಕುರಿತಂತೆ ಸರ್ಕಾರದ ವಿದೇಶಾಂಗ ನೀತಿ ಆಘಾತಕಾರಿ ಎಂದು ಒತ್ತಿ ಹೇಳಿದರು.

ಈ ಆಪಾದನೆಗಳನ್ನು ಎರಡು ತಿಂಗಳ ಹಿಂದೆ ತಾವು ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟಾಗ ಮಾಡಿದ್ದೆಂದು, ಆದರೆ ನೆಹರೂ ಅವರು ಆಗ ಅದನ್ನು ಗಮನಕ್ಕೆ ತಂದುಕೊಂಡಿರಲಿಲ್ಲವೆಂದು, ತಮ್ಮ ಆಪಾದನೆಗಳನ್ನು ಪುನರುಚ್ಚರಿಸಿದ್ದನ್ನು ವರ್ತಮಾನ ಪತ್ರಿಕೆಗಳಲ್ಲಿ ವರದಿ ಮಾಡಿದ್ದನ್ನು ನೋಡಿ ಈಗಷ್ಟೆ ನಿರಾಕರಣೆಯನ್ನು ಮಾಡುತ್ತಿದ್ದಾರೆ ಎಂದು ಹೇಳಿದರು.

ವಿದೇಶಾಂಗ ನೀತಿಯ ಬಗ್ಗೆ ತಮಗಿದ್ದ ಭಿನ್ನಾಭಿಪ್ರಾಯವನ್ನು ಉಲ್ಲೇಖಿಸುತ್ತಾ, ಇದನ್ನೊಂದು ಮಂತ್ರಿಮಂಡಲ ಚರ್ಚೆ ಮಾಡಬಹುದಾದ ಮುಖ್ಯವಾದ ವಿವಾದಾಂಶವೆಂದು ತಾವು ಪರಿಗಣಿಸಿರಲಿಲ್ಲವೆಂದು ಹೇಳಿದರು. ಅದೂ ಅಲ್ಲದೆ, ತಾವು ಸಂವಿಧಾನದ ಕರಡನ್ನು ತಯಾರಿಸುವ ಇನ್ನೂ ಹೆಚ್ಚು ಗುರುತರವಾದ ಕೆಲಸದಲ್ಲಿ ಮುಳುಗಿಹೋಗಿದ್ದೆ ಎಂದು ಹೇಳಿದರು.

ಆ ಅಪಾದನೆಗಳನ್ನು ಈಗ ನಿರಾಕರಿಸಿ ಪ್ರಧಾನ ಮಂತ್ರಿಯವರು ತೀವ್ರ ಮುಖಭಂಗವನ್ನು

ಅನುಭವಿಸಿದ್ದಾರೆ ಎಂದು ಹೇಳಿದರು. ನೆಹರೂ ಅವರು ಅದನ್ನು ನಿರಾಕರಿಸಿದ್ದರೂ, ಪರಿಶಿಷ್ಟ ಜಾತಿಗಳ ಬಗ್ಗೆ ಸರ್ಕಾರದ ಔದಾಸೀನ್ಯವನ್ನು ಪರಾಮರ್ಶಿಸುತ್ತಾ, ನಾನು ಹೇಳಿದ್ದು ವಾಸ್ತವಾದ ಸಂಗತಿ ಎಂದು ಹೇಳಿದರು. ಪ್ರಧಾನ ಮಂತ್ರಿಯವರಿಗೆ ಸರಿಯಾದ ಮಾರ್ಗವೆಂದರೆ, ಒಂದು ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿ ಪರಿಶಿಷ್ಟ ಜಾತಿಗಳ ಉದ್ಧಾರಕ್ಕಾಗಿ ಸರ್ಕಾರ ಏನು ಮಾಡಿದೆಯೆಂದು ವಿವರಣೆ ಕೊಡುದಾಗಿದೆ. ಆಗ ಜನಗಳು ತಾವು ಹೇಳಿದ್ದು ತಪ್ಪೋ ಅಥವಾ ಸರ್ಕಾರ ಹೇಳಿದ್ದು ತಪ್ಪೋ ಎಂದು ತೀರ್ಮಾನಿಸುತ್ತಾರೆ ಎಂದು ಡಾ: ಅಂಬೇಡ್ಕರ್ ಅವರು ಹೇಳಿದರು.

ದೇಶದಲ್ಲಿ ಒಂದು ಸ್ಥಿರವಾದ ಸರ್ಕಾರವನ್ನು ರಚಿಸುವುದಕ್ಕೆ ಕಾಂಗ್ರೆಸ್ಗೆ ಮಾತ್ರ ಸಾಧ್ಯ ಎಂಬ ನೆಹರೂ ಅವರ ಹೇಳಿಕೆಯನ್ನು ಪ್ರಶ್ನಿಸಿದರು. ಕಾಂಗ್ರೆಸ್ನಲ್ಲಿ ಹಲವು ಆಂತರಿಕ ಭಿನ್ನಾಭಿಪ್ರಾಯಗಳು ಇದೆಯೆಂದು ಹೇಳಿ, ಅದಕ್ಕೆ ಅನೇಕ ಉದಾಹರಣೆಗಳನ್ನು ಕೊಟ್ಟರು. ನೆಹರೂ ಅಂದರೆ ಕಾಂಗ್ರೆಸ್ ಎನ್ನುವ ಸಮೀಕರಣ ಸರಿಯಲ್ಲ ಎಂದರು.

ನೆಹರೂ ಅವರು ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದಾರೆ. ಅವರು ಅದನ್ನು ಎಷ್ಟು ಬೇಗ ಅರಿತುಕೊಳ್ಳುತ್ತಾರೋ ಅಷ್ಟು ಒಳ್ಳೆಯದು ಎಂದು ಡಾ: ಅಂಬೇಡ್ಕರ್ ಅವರು ಒತ್ತಿ ಹೇಳಿದರು. ಕಾಂಗ್ರೆಸ್ ಜನ ತಾಂಡನ್ ಅವರನ್ನು ಅಧ್ಯಕ್ಷ ಪದದಿಂದ ಕೆಳಗಿಳಿಸಿ ನೆಹರೂ ಅವರನ್ನು ಚುನಾವಣೆಗಳಿಗೋಸ್ಕರ ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಎಂದರು.

ನೆಹರೂ ಅವರು ಒಬ್ಬ ಅಮಾಯಕ ವ್ಯಕ್ತಿ, ಇದು ಅವರಿಗೆ ಅರ್ಥವಾಗುವುದಿಲ್ಲ. ಚುನಾವಣೆಗಳು ಮುಗಿದ ಮೇಲೆ ಅವರ ಸ್ಥಾನ ಏನಾಗಿರುತ್ತದೆಯೋ ಎಂದು ನಾನು ಯೋಚಿಸುತ್ತಿದ್ದೇನೆ ಎಂದರು. ನಾನು ಒಬ್ಬ ವಾಸ್ತವತಾವಾದಿಯಾಗಿರುವುದರಿಂದ, ಇತರ ನಾಯಕರು ಅವರ ಬಗ್ಗೆ ಯಾವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ ಎಂದು ನೆಹರು ಅವರಿಗಿಂತ ನನಗೇ ಚೆನ್ನಾಗಿ ಗೊತ್ತು ಎಂದು ಡಾ: ಅಂಬೇಡ್ಕರ್ ಉದ್ಗರಿಸಿದರು.

ಭಾರತ ಗಣರಾಜ್ಯದ ಅಧ್ಯಕ್ಷ ಸ್ಥಾನದ ಚುನಾವಣೆ ಹತ್ತಿರ ಬಂದಾಗ, ಪ್ರಧಾನ ಮಂತ್ರಿಯವರು ತಮ್ಮ ಸೋಲನ್ನು ಒಪ್ಪಿಕೊಳ್ಳಬೇಕು ಅಥವಾ ಕಾಂಗ್ರೆಸ್ನ ಹೊರಗಡೆ ತಮ್ಮವರೇ ಆದ ಯಾರಾದರೊಬ್ಬರನ್ನು ಆರಿಸಿಕೊಳ್ಳಬೇಕು ಎಂದರು.

ಮಿ: ರಫಿ ಅಹಮದ್ ಕಿದ್ವಾಯಿ ಅವರು ಕಾಂಗ್ರೆಸ್ ಅನ್ನು ಬಿಟ್ಟಾಗ ತಾವು ಕಿದ್ವಾಯಿ ಅವರಿಗೆ ಹೇಳಿದ್ದನ್ನು ಸಭೆಗೆ ಹೇಳಿದರು? ನೆಹರೂ ಅವರಂಥ ಜನಗಳನ್ನು ನಿಮ್ಮೊಂದಿಗೆ ಕರೆದುಕೊಳ್ಳಿ, ಆಗ ನಾನು ನಿಮ್ಮೊಂದಿಗೆ ಇರುತ್ತೇನೆ?. ಎಂದು ಹೇಳಿದ್ದೆ ಎಂದರು.

ಒಂದು ಬಲಿಷ್ಟವಾದ ವಿರೋಧ ಪಕ್ಷ ಇರುವುದರ ಪ್ರಾಮುಖ್ಯವನ್ನು ಒತ್ತಿ ಹೇಳುತ್ತಾ, ಯಾವ ಪಕ್ಷಕ್ಕೂ ಅಪರಿಮಿತ ಅಧಿಕಾರ ಇರಕೂಡದು ಎಂದು ಡಾ: ಅಂಬೇಡ್ಕರ್ ಹೇಳಿದರು: ಅಂಥ ಪರಿಸ್ಥಿತಿ ಬಂದಾಗ, ಜನಗಳು ಸೋಮಾರಿಯಾಗಿರುವುದು ಮತ್ತು ಉದಾಸೀನವಾಗಿರುವುದು ಕೆಟ್ಟದ್ದು ಎಂದು ಹೇಳಿದರು.

ಸೋಷಿಯಲಿಸ್ಟ್ ಪಕ್ಷ ಮತ್ತು ಪರಿಶಿಷ್ಟ ಜಾತಿಗಳ ಫೆಡರೇಷನ್–ಪ್ರಜಾ ಪ್ರಾತಿನಿಧಿಕ ಸಮಾಜವಾದಕ್ಕೆ, ಸ್ವಾತಂತ್ರ್ಯಕ್ಕೆ ಮತ್ತು ಸಮಾನತೆಗಾಗಿ ಚುನಾವಣೆಗಳಲ್ಲಿ ಹೋರಾಡುತ್ತಿದೆ ಎಂದು ಹೇಳಿದರು.

ತಮಗೆ ಸರ್ಕಾರವನ್ನು ರಚಿಸಲು ಸಾಧ್ಯವಾಗದೆ ಹೋದರೂ, ಒಂದು ಬಲಿಷ್ಟವಾದ ವಿರೋಧ ಪಕ್ಷವನ್ನು ಕಟ್ಟಲು ತಮಗೆ ಸಾಧ್ಯವಿದೆ ಎಂಬುದು ತಮ್ಮ ನಂಬಿಕೆ ಎಂದರು.

ಅಂಕಿ ಸಂಖ್ಯೆಗಳು ಪ್ರಸ್ತುತವಲ್ಲ, ಆದರೆ ವಿರೋಧ ಪಕ್ಷದ ಸಕ್ಷಮತೆ ಪ್ರಸ್ತುತವಾಗುತ್ತದೆ ಎಂದರು. ಸೋಷಿಯಲಿಸ್ಟ್ ಪಕ್ಷ ಮತ್ತು ಫೆಡರೇಷನ್ ನಿಲ್ಲಿಸಿರುವ ಅಭ್ಯರ್ಥಿಗಳಲ್ಲಿ ಎಲ್ಲರನ್ನೂ ಅಲ್ಲದಿದ್ದರೂ ಇದ್ದವರಲ್ಲಿ ಉತ್ತಮವಾದವರನ್ನು ಆರಿಸಿ ಎಂದು ಜನಗಳಲ್ಲಿ ಮನವಿ ಮಾಡಿದರು. ಹಾಗೆ ಆದಾಗ ವಿರೋಧ ಪಕ್ಷ ಒಳ್ಳೆಯ ಗುಣ ಇರುವ ಪಕ್ಷವಾಗುತ್ತದೆ ಎಂದರು.

ಅನಾರೋಗ್ಯದ ಕಾರಣದಿಂದಾಗಿ ಅಶೋಕ್ ಮೆಹ್ತಾ ಅವರಿಗೆ ಸಭೆಯನ್ನು ಉದ್ದೇಶಿಸಿ ಮಾತನಾಡಲಾಗಲಿಲ್ಲ, ಆದರೆ ಅವರ ಬದಲು ಮಿ: ಹ್ಯಾರಿಸ್ ಅವರು ಮಾತನಾಡಿದರು. ಆಸಕ್ತ ಪಕ್ಷಗಳು ಸೋಷಿಯಲಿಸ್ಟರ ಮತ್ತು ಫೆಡರೇಷನ್ ನಡುವಿನ ಸ್ನೇಹಬಂಧಕ್ಕೆ ತಪ್ಪು ಅರ್ಥವನ್ನು ಕಲ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಅವರು ಹೇಳಿದರು.

ಇದಕ್ಕೆ ಮುಂಚೆ, ಕುರ್ಲಾದಿಂದ ಕೊಲಾಬಾವರೆಗೂ ಅನೇಕ ಮತಕ್ಷೇತ್ರಗಳಿಂದ ಮೆರವಣಿಗೆಯನ್ನು ತೆಗೆದುಕೊಂಡು ಬರಲಾಗಿತ್ತು.; ಅವರೆಲ್ಲರು ಶಿವಾಜಿ ಪಾರ್ಕಿನತ್ತ ಬಂದು ಸೇರಿದರು. ಎರಡು ಮುಖ್ಯ ವಾಹಿನಿಗಳು ಬೈಕುಲ್ಲ ಸೇತುವೆ ಮತ್ತು ಬಂದರು ಕಟ್ಟೆ ಕ್ಷೇತ್ರದಿಂದ ಹೊರಟಿದ್ದವು.

## ೧೩೩
## ಆಡಳಿತದಲ್ಲಿನ ಪರಿಶುದ್ಧತೆ ಜನಗಳ ಕಲ್ಯಾಣಕ್ಕಾಗಿ ಆವಶ್ಯಕವಾಗಿದೆ

೨೬ನೇ ನವೆಂಬರ್ ೧೯೫೧ರಂದು ಬೊಂಬಾಯಿನ ಸರ್ ಕವಾಸ್ಜಿ ಜಹಾಂಗೀರ್ ಸಭಾಂಗಣದಲ್ಲಿ ನಡೆದ ಪ್ರಜಾ ಸೋಷಿಯಲಿಸ್ಟ್ ಪಕ್ಷ ಮತ್ತು ಪರಿಶಿಷ್ಟ ಜಾತಿಗಳ ಫೆಡರೇಶನ್ನಿನ ಜನಭರಿತ ಜಂಟಿ ಸಭೆಯಲ್ಲಿ ಡಾ: ಅಂಬೇಡ್ಕರ್ ಅವರು ಭಾಷಣವೊಂದನ್ನು ಮಾಡಿದರು. ಮಿ: ಪುರುಷೋತ್ತಮ್ ತ್ರಿಕಂ ದಾಸ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ನೆಹರು ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ ಒಂದು ಪರಿಶುದ್ಧವಾದ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತವನ್ನು ಕೊಡುವುದಕ್ಕೆ ವಿಫಲವಾಗಿದೆ ಎಂಬ ಆಪಾದನೆಯನ್ನು, ಆ ಸೋಮವಾರದ ದಿನ ಭಾರತ ಸರ್ಕಾರದ ಮಾಜಿ ಕಾನೂನು ಸಚಿವರಾದ ಡಾ: ಅಂಬೇಡ್ಕರ್ ಮಾಡಿದರು.

ಜನಗಳಿಗೆ ಆಹಾರ ಮತ್ತು ಬಟ್ಟೆಯನ್ನು ಒದಗಿಸಿಲ್ಲ ಎಂದು ಕಾಂಗ್ರೆಸ್ ಮೇಲೆ ಮಾಡಿದ ಆರೋಪ ಸರಿಯಾಗಿಯೇ ಇದೆ. ಆದರೆ ಆಹಾರ ಮತ್ತು ಬಟ್ಟೆಗಿಂತ ಇನ್ನೂ ಹೆಚ್ಚಿಗೆ ಮುಖ್ಯವಾದದ್ದೆಂದರೆ, ಪರಿಶುದ್ಧ ಆಡಳಿತ, ಭ್ರಷ್ಟಾಚಾರ, ಲಂಚ, ಸ್ವಜನ ಪಕ್ಷಪಾತ ಮತ್ತು ಆಪ್ತರಿಗೆ ಪಕ್ಷಪಾತ ಇವುಗಳಿಂದ ಮುಕ್ತವಾದ ಆಡಳಿತವನ್ನು ಕೊಡದೇ ಇರುವುದು ಎಂದು ಹೇಳಿದರು.

ತಮ್ಮ ಆಪಾದನೆಯನ್ನು ಸಮರ್ಥಿಸಿಕೊಳ್ಳುತ್ತಾ ಡಾ: ಅಂಬೇಡ್ಕರ್ ಅವರು, ಉತ್ತರ ಪ್ರದೇಶ,

ಬಿಹಾರ್ ಮತ್ತು ಮದರಾಸಿನಲ್ಲಿನ ಹಲವು ಭ್ರಷ್ಟಾಚಾರ ಮತ್ತು ಲಂಚದ ಪ್ರಕರಣಗಳನ್ನು ಉದಹರಿಸಿದರು. ಇದರ ಬಗ್ಗೆ ಕಾಂಗ್ರೆಸ್ ಶಾಸಕರು ಆ ರಾಜ್ಯಗಳ ಮಂತ್ರಿ ಮಂಡಲಗಳ ವಿರುದ್ಧ ಮಾಡಿದ ಆಪಾಪದನೆಗಳನ್ನು ತನಿಖೆ ಮಾಡುವುದಕ್ಕೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಕೇಳಿದರು.

ದೇಶವನ್ನು ಆಳುತ್ತಿರುವ ಕಾಂಗ್ರೆಸ್ ಪಕ್ಷ ತನ್ನದೇ ಮರ್ಯಾದೆ, ಗೌರವ ಮತ್ತು ಪ್ರಾಮಾಣಿಕತೆಯ ಬಗ್ಗೆ ಇಷ್ಟೊಂದು ಉದಾಸೀನವಾಗಿರುವುದು ಅಸಾಧಾರಣ ಎಂದು ತೋರುತ್ತದೆ ಎಂದು ಹೇಳಿದರು; ಸರ್ಕಾರದ ವಿರುದ್ಧ ಅವರದೇ ಸದಸ್ಯರುಗಳು ಮಾಡಿದ ಆಪಾದನೆಗಳನ್ನು ವಿಚಾರಿಸುವುದಕ್ಕೆ ಏತಕ್ಕೆ ಒಂದು ತನಿಖಾ ಸಮಿತಿಯನ್ನು ನೇಮಕ ಮಾಡಿಲ್ಲ ಎಂದು ಅವರು ಕೇಳಿದರು.

ಜನಗಳಿಗೆ ಆಹಾರ ಮತ್ತು ಬಟ್ಟೆಯನ್ನು ಕೊಡುವುದಕ್ಕೆ ಕಷ್ಟವಾಗಿರಬಹುದು ಆದರೆ ಒಂದು ಪರಿಶುದ್ಧ ಸರ್ಕಾರವನ್ನು ಕೊಡುವುದಕ್ಕೆ ಏನು ಕಷ್ಟ ಎಂದು ಕೇಳಿದರು. ಅದು ಸಂಪೂರ್ಣವಾಗಿ ಸರ್ಕಾರದ ಕೈನಲ್ಲೇ ಇರುವ ವಿಷಯ ಅಂದರು. ತಮ್ಮ ಆಡಳಿತದಲ್ಲಿ ದಡ್ಡರು ಮತ್ತು ದಗಾಕೋರರು ಇಲ್ಲದ ಹಾಗೆ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದರೆ ಅದರ ದಾರಿಯಲ್ಲಿ ಯಾರೂ ಬರುವುದಿಲ್ಲ ಎಂದು ಹೇಳಿದರು. ಆದರೆ ನಿಜವಾಗಿ ಅದರ ಹಾದಿಯಲ್ಲಿ ಇರುವುದು ಕಾಂಗ್ರೆಸ್ಸೇ ಎಂದರು, ಏಕೆಂದರೆ ಆಡಳಿತದಲ್ಲಿ ಪರಿಶುದ್ಧತೆ ಇರುವುದರಲ್ಲಿ ಅದಕ್ಕೇ ನಂಬಿಕೆ ಇಲ್ಲ ಎಂದರು.

ನೆಹರೂ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಇತ್ತೀಚಿನ ಅಧಿವೇಶನದಲ್ಲಿ ಮಾಡಿದ ಹೇಳಿಕೆಯಿಂದ ತಮಗೆ ಬಹಳ ನೋವುಂಟಾಗಿದೆ ಎಂದರು; ಆದರಲ್ಲಿ ದೇಶದಲ್ಲಿ ಈಗ ಜಾರಿಯಲ್ಲಿರುವ ಭ್ರಷ್ಟಾಚಾರವನ್ನು ಅವರು ಪೂರಾ ಪೂರಾ ಸಮರ್ಥಿಸಿಕೊಂಡರು. ಭಾರತದಲ್ಲಿನ ಭ್ರಷ್ಟಾಚಾರ ಹೆಚ್ಚಿನ ಗಮನ ಕೊಡಬೇಕಾದಂಥ

ಕೆಡುಕೇನೂ ಅಲ್ಲ ಎಂದು ನೆಹರು ಹೇಳಿದ್ದರು.

ಪ್ರಜಾ ಪ್ರಾತಿನಿಧ್ಯ ಅಧಿನಿಯಮಕ್ಕೆ ತಾವು ತರಬೇಕೆಂದಿರುವ ಕೆಲವು ಚುನಾವಣಾ ಅನರ್ಹತೆ ಕಲಮುಗಳ ವಿರುದ್ಧ ಪಾರ್ಲಿಮೆಂಟಿನ ಕೆಲವು ಕಾಂಗ್ರೆಸ್ ಸದಸ್ಯರು ಎಬ್ಬಿಸಿದ ಬಿರುಗಾಳಿಯನ್ನೂ ಕೂಡ ಅವರು ಉಲ್ಲೇಖಿಸಿದರು. ಕಾಳಸಂತೆಕೋರರನ್ನು ಹಾಗೂ ಪರ್ಮಿಟ್ಟು ಮತ್ತು ಲೈಸೆನ್ಸುಧಾರಕರನ್ನು ಗುತ್ತಿಗೆದಾರರುಗಳ ಜೊತೆ ಚುನಾವಣೆಗಳಲ್ಲಿ ಸ್ಪರ್ಧಿಸದ ಹಾಗೆ ಅನರ್ಹತೆಗೊಳಿಸಬೇಕೆಂಬುದು ತಮ್ಮ ಇರಾದೆಯಾಗಿತ್ತು. ಆದರೆ ಕಾಂಗ್ರೆಸ್ ಸದಸ್ಯರ ತೀವ್ರ ವಿರೋಧದಿಂದಾಗಿ ಆ ಕಲಮನ್ನು ಬಲವಂತವಾಗಿ ಹಿಂದೆ ಪಡೆಯುವಂತೆ ಮಾಡಲಾಯಿತು. ತಾವು ತೀಕ್ಷ್ಣವಾಗಿ ಕಾದಾಡಿ ಸೋತ ಇನ್ನೊಂದು ಕದನವೆಂದರೆ ಪಕ್ಷಗಳು ಚುನಾವಣೆಗಳಿಗಾಗಿ ಮಾಡುವ ಖರ್ಚುಗಳ ಬಗ್ಗೆ ಆಗಿತ್ತು.

ಕಾಂಗ್ರೆಸ್ಸಿನವರ ಈ ಧೋರಣೆ ಮತ್ತು ನಡವಳಿಕೆಗೂ ಹಾಗೂ ಆಡಳಿತದಲ್ಲಿ ಶುದ್ಧತೆಯನ್ನು ಕಾಪಾಡುವುದಕ್ಕೂ ಸಾಮರಸ್ಯವಿರುತ್ತದೆಯೆ ಎಂದು ಅವರು ಪ್ರಶ್ನೆ ಮಾಡಿದರು. ಆಡಳಿತದಲ್ಲಿ ಪರಿಶುದ್ಧತೆಯ ಪ್ರಶ್ನೆ ಬಂದಾಗ ಕಣ್ಣಾ ಮುಚ್ಚಾಲೆ ಆಡುವ ಪಕ್ಷದಲ್ಲಿ ಭರವಸೆಯಾಗಲೀ ಅಥವಾ ನಂಬಿಕೆಯಾಗಲೀ ಯಾರಲ್ಲೂ ಹುಟ್ಟುವುದಿಲ್ಲ.

ಆಡಳಿತದಲ್ಲಿನ ಪರಿಶುದ್ಧತೆ ಜನಗಳ ಯೋಗಕ್ಷೇಮಕ್ಕೆ ಅತ್ಯವಶ್ಯಕವಾಗಿದ್ದು, ಜನಗಳಿಗೆ ಕಾನೂನನ್ನು ಹೇಗೆ ಮಾಡಲಾಯಿತು ಎನ್ನುವುದಕ್ಕಿಂತ ಕಾನೂನನ್ನು ಹೇಗೆ ಅನ್ವಯಿಸಲಾಯಿತು ಎಂಬುದರ ಬಗ್ಗೆ ಹೆಚ್ಚಿನ ಕಾಳಜಿ ಇರುತ್ತದೆ.

ಕಾಂಗ್ರೆಸ್ ಕೆಲಸಗಾರರು ಜಿಲ್ಲೆಗಳಲ್ಲಿನ ನ್ಯಾಯಾಧೀಶರ ಮೇಲೆ ಪ್ರಭಾವ ಬೀರುತ್ತಿದ್ದಾರೆಂದು ತಮಗೆ ಅನೇಕ ದೂರುಗಳು ಬಂದಿವೆಯೆಂದು ಡಾ: ಅಂಬೇಡ್ಕರ್ ಅವರು ಹೇಳಿದರು.

ಭಾರತದಲ್ಲಿ ಒಂದು ಬಲಶಾಲಿಯಾದ ವಿರೋಧ ಪಕ್ಷದ ಅವಶ್ಯಕತೆ ಇರುವುದನ್ನು ಒತ್ತಿ ಹೇಳುತ್ತಾ, ಡಾ: ಅಂಬೇಡ್ಕರ್ ಅವರು ಕಾಂಗ್ರೆಸ್ನವರಿಗೆ ಇತರ ರಾಜಕೀಯ ಪಕ್ಷಗಳು ಕೆಲಸ ಮಾಡುವುದಕ್ಕೆ ಬಿಡಬೇಕೆಂದೂ, ಮತ್ತು ಜನಗಳ ರಾಜಕೀಯ ಧ್ವನಿಯನ್ನು ಅಡಗಿಸಬಾರದೆಂದೂ ಕರೆ ಕೊಟ್ಟರು. ಕಾಂಗ್ರೆಸ್ ಪಕ್ಷದ ನಿಧಿಗೆ ಚಂದಾ ಕೊಡಬಾರದೆಂದು ಹಣವಂತ ವರ್ಗದವರನ್ನು ಎಚ್ಚರಿಸಿದರು.

ತಾವು ಕ್ಯಾಬಿನೆಟ್ಟಿಗೆ ರಾಜಿನಾಮೆ ಕೊಟ್ಟಿದ್ದಕ್ಕಾಗಿ ಕೃತಘ್ನನೆಂದು ಎಸ್.ಕೆ ಪಾಟೀಲ್ ಅವರು ಮಾಡಿದರೆಂದು ಹೇಳಲಾದ ಆಪಾದನೆಗಳನ್ನು ಮಾಜಿ ಕಾನೂನು ಮಂತ್ರಿಯವರು ಉಲ್ಲೇಖ ಮಾಡಿ ಮಿ: ಪಾಟೀಲ್ ಅವರಿಗೆ ಕೃತಜ್ಞತೆಯ ಬಗ್ಗೆ ವಿಚಿತ್ರವಾದ ಕಲ್ಪನೆಗಳು ಇವೆ ಎಂದು ಹೇಳಿದರು. ಐರಿಷ್ ವೇದಾಂತಿಯೊಬ್ಬರ ಒಂದು ಉದ್ಧೃತಿಯನ್ನು ಉಲ್ಲೇಖ ಮಾಡಿದರು:

ತನ್ನ ಗೌರವವನ್ನು ಕಳೆದುಕೊಂಡು ಯಾವ ಮನುಶ್ಯನೂ ಕೃತಜ್ಞನಾಗಿರಲಾರ, ತನ್ನ ಕನ್ಯತ್ವವನ್ನು ಕಳೆದುಕೊಂಡು, ಯಾವ ಸ್ತ್ರೀಯೂ ಕೃತಜ್ಞಳಾಗಿರಲಾರಳು,

ಮತ್ತೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಯಾವ ರಾಷ್ಟ್ರವೂ ಕೃತಜ್ಞವಾಗಿರಲಾರದು

ಕೃತಜ್ಞತೆಗೆ ತನ್ನದೇ ಆದ ಪರಿಮಿತಿಗಳು ಇರುತ್ತವೆ. ಭಾರತ ಸರ್ಕಾರದಲ್ಲಿ ಒಬ್ಬ ಗುಲಾಮನಾಗಿರುವುದಕ್ಕೆ ತಮಗೆ ಮನಸ್ಸಿಲ್ಲ ಎಂದು ಹೇಳಿದರು.

ಮಿ: ಪಾಟೀಲರು ಮಾಡಿದ ಹೇಳಿಕೆಗೆ ಉತ್ತರ ಕೊಡುತ್ತಾ, ತಮ್ಮ ಪರಿಶ್ರಮದಿಂದಲೇ ತಮಗೆ ಕೇಂದ್ರ ಸರ್ಕಾರದಲ್ಲಿ ಒಂದು ಜಾಗ ಸಿಕ್ಕಿದ್ದು, ತಾವು ಕ್ಯಾಬಿನೆಟ್ಟಿಗೆ ಪ್ರವೇಶ ಮಾಡಿದ್ದು. ಅದರಲ್ಲೂ ಕಾಂಗ್ರೆಸ್ ತಮ್ಮನ್ನು ಸಂವಿಧಾನ ಸಭೆಯ ದ್ವಾರದೊಳಗೂ ಪ್ರವೇಶಿಸುವುದಕ್ಕೆ ಅನುಮತಿ ಕೊಡುವುದಿಲ್ಲವೆಂದು

ನಿರ್ಧರಿಸಿ, ಪ್ರತಿಜ್ಞೆಯನ್ನು ಮಾಡಿದ್ದಾಗ, ತಮ್ಮ ಜೀವನದ ಅತಿ ಮಹತ್ತಾದ ಆಶ್ಚರ್ಯಗಳಲ್ಲಿ ಅದೂ ಒಂದು ಎಂದು ಹೇಳಿದರು.

## ೧೩೪
## ಪ್ರಶ್ನಿಸುವುದಕ್ಕೆ ಸ್ನೇಹಬಂಧ

ಭಾನುವಾರ, ೨೩ನೇ ಡಿಸೆಂಬರ್ ೧೯೫೧ರಂದು ಸೋಷಿಯಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ಮಿ: ಅಶೋಕ್ ಮೆಹತಾ ಅವರು ಚೌಪಾತಿಯಲ್ಲಿ ನಡೆದ ಒಂದು ಚುನಾವಣಾ ಪ್ರಚಾರ ಸಭೆಯಲ್ಲಿ, ಪರಿಶಿಷ್ಟ ಜಾತಿಗಳ ಫೆಡರೇಷನ್ನಿನೊಡನೆ ತಮ್ಮ ಪಕ್ಷದ ಸಖ್ಯ ಒಂದು ಹೊಸ ಶಕ್ತಿಯನ್ನು ಸೃಷ್ಟಿ ಮಾಡಿದೆ ಎಂದು ಹೇಳಿದರು.

ಅವರ ನಂತರ ಫೆಡರೇಷನ್ನಿನ ನಾಯಕರಾದ ಡಾ: ಅಂಬೇಡ್ಕರ್ ಅವರು ಆ ಸಖ್ಯ ಕೇವಲ ಕಾಂಗ್ರೆಸ್ ಅನ್ನು ವಿರೋಧಿಸುವುದಕ್ಕೆ ಮಾತ್ರ ಎಂದು ಹೇಳಿದರು.

ಸ್ನೇಹಬಂಧದ ಬಗ್ಗೆ ನೆಹರೂ ಅವರ ಟೀಕೆಯನ್ನು ಮಿ: ಮೆಹತಾ ಅವರು ಖಂಡಿಸಿದರು.

ಕಳೆದ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ ಏನನ್ನೂ ಮಾಡಿಲ್ಲವೆಂದು ಎಂದು ಡಾ: ಅಂಬೇಡ್ಕರ್ ಹೇಳಿದರು.

ಪಟ್ಟಣದ ಬೇರೆ ಬೇರೆ ಭಾಗಗಳಿಂದ ಹೊರಟ ಅನೇಕ ಮೆರವಣಿಗೆಗಳು ಚೌಪಾತಿಯಲ್ಲಿನ ಸಭೆಗೆ ಬಂದು ಸೇರಿದವು.

## ೧೩೫
## ಸದಾಕಾಲ ನನ್ನ ಹೃದಯದಲ್ಲಿ ದೇಶದ ಹಿತಾಸಾಕ್ತಿಯೇ ಇರುತ್ತದೆ

ಅಮೆರಿಕಾದ ಪ್ರಖ್ಯಾತಿ ಹೊಂದಿದ ಕೊಲಂಬಿಯಾ ವಿಶ್ವವಿದ್ಯಾಲಯ ೧೯೫೦ರಲ್ಲಿ ತೆಗೆದುಕೊಂಡ ಒಂದು ಅಸಾಧಾರಣ ತೀರ್ಮಾನದಂತೆ, ಭಾರತ ಸಂವಿಧಾನವನ್ನು ರಚಿಸುವಲ್ಲಿ ಅವರ ಪ್ರಮುಖ ಪಾತ್ರಕ್ಕೋಸ್ಕರ ಡಾ: ಅಂಬೇಡ್ಕರ್ ಅವರಿಗೆ ಪ್ರತಿಷ್ಟಿತ LL.D ಪದವಿಯನ್ನು ಪ್ರದಾನ ಮಾಡಿ ಅವರನ್ನು ಗೌರವಿಸಬೇಕೆಂದು ನಿರ್ಣಯ ಮಾಡಿತು. ತಾವು ಓದಿದ ವಿಶ್ವ ವಿದ್ಯಾಲಯದಿಂದ ಬಂದ ಈ ಸುದ್ದಿಯನ್ನು ಕೇಳಿ ಡಾ: ಅಂಬೇಡ್ಕರ್ ಅವರ ಸಂತೋಷ ಮೇರೆ ಮೀರಿತು; ಅದೇ ವಿಶ್ವ ವಿದ್ಯಾಲಯದಲ್ಲಿ ಅವರು M.A. ಮತ್ತು Ph.D ಪದವಿಗಳನ್ನು ಕ್ರಮವಾಗಿ ೧೯೧೫ ಮತ್ತು ೧೯೧೭ರಲ್ಲಿ ಪಡೆದುಕೊಂಡಿದ್ದರು. ಆದರೆ ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದ ಭಾರತ ಸರ್ಕಾರದ ಮುಂದೆ ಅನೇಕ ಸಮಸ್ಯೆಗಳು ಇದ್ದವು. ಇವುಗಳು ಸಾಂವಿಧಾನಿಕ ಸಮಸ್ಯೆಗಳಾಗಿದ್ದು ಅವುಗಳನ್ನು ಡಾ: ಅಂಬೇಡ್ಕರ್ ಅವರ ನಿಪುಣತೆಯಿಂದಲೇ ಪರಿಹರಿಸಬೇಕಾಗಿತ್ತು. ತಮ್ಮ ಹೊಣೆಗಾರಿಕೆಯನ್ನು ಅರಿತ ಡಾ: ಅಂಬೇಡ್ಕರ್ ಅವರಿಗೆ ಈ ಆಮಂತ್ರಣವನ್ನು ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ಸಮಾರಂಭಕ್ಕೆ ಬರುವುದಕ್ಕೆ ತಮ್ಮ ಅಸಹಾಯಕತೆಯನ್ನು ಅವರು ಅತ್ಯಂತ ವಿನೀತರಾಗಿ ವಿಶ್ವವಿದ್ಯಾಲಯಕ್ಕೆ ತಿಳಿಸಿದರು. ಆ ಸಮಯದಲ್ಲಿ ಜನರಲ್ ಐಸೆನ್‌ಹೋವೆರ್(Eisenhower) ಅವರು ಕೊಲಂಬಿಯಾ ವಿಶ್ವವಿದ್ಯಾಲಯದ ಅಧ್ಯಕ್ಷರಾಗಿದ್ದು, ಅಮೇಲೆ ಅವರು ಅಮೆರಿಕಾದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಅವರು ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸುವವರಿದ್ದರು.

ವಿಶ್ವವಿದ್ಯಾಲಯ ಅವರಿಗೆ ಅವರ ಅನುಪಸ್ಥಿತಿಯಲ್ಲಿ ಪದವಿಯನ್ನು ಪ್ರದಾನ ಮಾಡಲು ಸಿದ್ಧವಿತ್ತು. ಆದರೆ ಡಾ: ಅಂಬೇಡ್ಕರ್ ಅವರು ಒಂದೆರಡು ವರ್ಷದಲ್ಲಿ ಖುದ್ದಾಗಿ ಬಂದು ಪದವಿಯನ್ನು ಪಡೆದುಕೊಳ್ಳುತ್ತೇನೆಂದು ವಿಶ್ವವಿದ್ಯಾಲಯಕ್ಕೆ ತಿಳಿಸಿದರು. ಭಾರತದ ಹೆಮ್ಮೆಯ ಪುತ್ರನನ್ನು ಗೌರವಿಸುವುದಕ್ಕೆ ವಿಶ್ವವಿದ್ಯಾಲಯಕ್ಕೆ ಸಂತೋಷವಾಯಿತು; ಅದು ಅವರ ಪ್ರಾರ್ಥನೆಯನ್ನು ಮನ್ನಿಸಿ ಆ ಸಮಾರಂಭವನ್ನು ೫ನೇ ಜೂನ್ ೧೯೫೨ರಂದು ನೆರವೇರಿಸಲು ತೀರ್ಮಾನಿಸಿತು. ಮೇ ತಿಂಗಳ ನಾಲ್ಕನೆಯ ವಾರದಲ್ಲಿ, ಹೆಮ್ಮೆಯಿಂದ ಪದವಿಗಳನ್ನು ಪಡೆದುಕೊಂಡವರ ಪಟ್ಟಿಯಲ್ಲಿ ಡಾ: ಅಂಬೇಡ್ಕರ್ ಅವರ ಹೆಸರೂ ಸೇರಿತ್ತು. ಅವರ ಸ್ನೇಹಿತರುಗಳಿಂದ, ಅವರ ಅಭಿಮಾನಿಗಳಿಂದ ಅವರ ಹಿತ ಚಿಂತಕರಿಂದ ಅವರ ಮಹಾನ್ ಸಾಧನೆಗಾಗಿ ಅಭಿನಂದಿಸುವ ಪತ್ರಗಳ ಪ್ರವಾಹವೇ ಬಂದಿತು. ಆಗ್ಗೆ ಭಾರತದ ಉಪ ರಾಷ್ಟ್ರಪತಿಯವರಾಗಿದ್ದ ಡಾ: ಸರ್ವಪಲ್ಲಿ ರಾಧಾಕೃಷ್ಣ ಅವರು ಅವರ ಸಾಧನೆಗಾಗಿ ಹೆಮ್ಮೆ ಪಟ್ಟುಕೊಂಡು ಅವರನ್ನು ಕೆಳಗಿನ ಶಬ್ದಗಳಲ್ಲಿ ಅಭಿನಂದಿಸಿದರು.

ನಂ ೨, ಕಿಂಗ್ ಎಡ್ವರ್ಡ್ ರಸ್ತೆ
ನವ ದೆಹಲಿ, ೨೬ನೆ ಮೇ ೧೯೫೨

ನನ್ನ ಪ್ರೀತಿಯ ಅಂಬೇಡ್ಕರ್ ಅವರೆ,

ವರ್ತಮಾನ ಪತ್ರಿಕೆಗಳಲ್ಲಿ ಕೊಲಂಬಿಯಾ ವಿಶ್ವ ವಿದ್ಯಾಲಯ ನಿಮಗೆ ಡಾಕ್ಟರ್ ಆಫ್ ಲಾಸ್ ಗೌರವ ಪದವಿಯನ್ನು ಪ್ರದಾನ ಮಾಡುತ್ತಿದೆಯೆಂದು ನೋಡಿ ನನಗೆ ಬಹಳ ಸಂತೋಷವಾಯಿತು. ನಮ್ಮ ಸಂವಿಧಾನದ ಬಗ್ಗೆ ನೀವು ಮಾಡಿರುವ ಮಹಾನ್ ಕೆಲಸವನ್ನು ಸೂಕ್ತವಾಗಿ ಗುರುತಿಸಲಾಗಿದೆ. ನನ್ನ ಅತ್ಯಂತ ಉತ್ಕಟವಾದ ಅಭಿನಂದನೆಗಳು. ಈ ದಿನ ಮತ್ತು ನಾಳೆ ಮೊದಲನೆಯ ಗಂಟೆಯಲ್ಲಿ, ಕಾಲ ಪರಿಮಿತಿ ಇರುವುದಿಲ್ಲ. ಆದ್ದರಿಂದ ಬಜೆಟ್ ಮೇಲೆ ಮಾತನಾಡುವ ಅಭಿಲಾಷೆ ಇದ್ದರೆ, ಈ ದಿನ ಅಥವಾ ನಾಳೆಯ ಅಪರಾಹ್ನ ನೀವು ಮಾತನಾಡಿದರೆ ಅನುಕೂಲವಾಗುತ್ತದೆ.

With kind regards,

ನಿಮ್ಮ ವಿಶ್ವಾಸಿ
ಸಹಿ: ಎಸ್.ರಾಧಾಕೃಷ್ಣನ್

ಡಾ: ಬಿ.ಆರ್.ಅಂಬೇಡ್ಕರ್
ಸದಸ್ಯರು, ರಾಜ್ಯಗಳ ಪರಿಷತ್ತು
ಪಾರ್ಲಿಮೆಂಟ್ ಹೌಸ್
ನವ ದೆಹಲಿ
೪೦೦೧-೪೦೦೩

ಡಾ: ಅಂಬೇಡ್ಕರ್ ಅವರ ಉತ್ತರ:
೨೬, ಆಲಿಪುರ್ ರಸ್ತೆ
ದೆಹಲಿ,

೨೭ನೇ ಮೇ, ೧೯೫೨

ಪ್ರೀತಿಯ ಡಾ: ರಾಧಾಕೃಷ್ಣನ್ ಅವರೆ,

ಕೊಲಂಬಿಯ ವಿಶ್ವ ವಿದ್ಯಾಲಯದವರು ನನಗೆ ಡಾಕ್ಟರ್ ಆಫ್ ಲಾಸ್ ಗೌರವ ಪದವಿಯನ್ನು ಪ್ರದಾನ ಮಾಡಿರುವುದಕ್ಕಾಗಿ ಅಭಿನಂದನೆಗಳು ಇರುವ ನಿಮ್ಮ ೨೬ನೇ ಮೇ ೧೯೫೨ರ ಪತ್ರಕ್ಕಾಗಿ ನಿಮಗೆ ಬಹಳ ವಂದನೆಗಳು.

ನನಗೆ ಮಾಡುತ್ತಿರುವ ಈ ಗೌರವಕ್ಕಾಗಿ ಮೆಚ್ಚಿಗೆಯನ್ನು ವ್ಯಕ್ತ ಪಡಿಸುವುದಕ್ಕೆ ಸಿದ್ಧವಾಗಿರುವ ಕೆಲವರಾದರೂ ಭಾರತದಲ್ಲಿ ಇರುವುದಕ್ಕೆ ನನಗೆ ಬಹಳ ಸಂತೋಷವಾಗಿದೆಯೆಂದು ಹೇಳ ಬಯಸುತ್ತೇನೆ.

With kind regards

ನಿಮ್ಮ ವಿಶ್ವಾಸಿ
ಸಹಿ: ಬಿ.ಆರ್.ಅಂಬೇಡ್ಕರ್

ಡಾ: ಎಸ್. ರಾಧಾಕೃಷ್ಣನ್
ಭಾರತದ ಉಪರಾಷ್ಟ್ರಪತಿಯವರು
ನವ ದೆಹಲಿ

೧೫ನೇ ಜೂನ್ ೧೯೫೨ರ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಪೋಲುಕ್ಸ್ ಅವರು ಈ ಕೆಳಗಿನ ಪದಗಳಲ್ಲಿ ಡಾ: ಅಂಬೇಡ್ಕರ್ ಅವರನ್ನು ಅವರ ಸಾಧನೆಗಾಗಿ ಮೆಚ್ಚುಗೆ ಸೂಸಿ ಬರೆದಿದ್ದಾರೆ

**ಈ ಸುದ್ದಿಗಳು ಸುದ್ದಿಗಳನ್ನು ಮಾಡುತ್ತವೆ**

ಅಧಿಕಾರದಲ್ಲಿ ಇರಲಿ ಅಥವಾ ಅದರಿಂದ ಹೊರಗಿರಲಿ, ಡಾ: ಭೀಮ್ ರಾವ್ ಅಂಬೇಡ್ಕರ್ ಅವರು ಯಾವಾಗಲೂ ಸುದ್ದಿ ಮಾಡುತ್ತಾರೆ. ಈ ವಾರದ ಮೊದಲಲ್ಲಿ ಮೇಲ್ಮನೆಯಲ್ಲಿ ಮಾಡಿದ ತಮ್ಮ ಕಟುವಾದ ಭಾಷಣದಲ್ಲಿ ಅವರು ಪುನಃ (ಪತ್ರಿಕೆಗಳ) ತಲೆ ಬರಹದಲ್ಲಿ ಮಿಂಚಿದರು. ತಮ್ಮ ಭಾಷಣದಲ್ಲಿ ಅವರು ಸರ್ಕಾರದ ಕಾಶ್ಮೀರದ ನೀತಿಯ ಬಗ್ಗೆ ಖಂಡನೆ ಮಾಡಿದರು; ಆ ನೀತಿಯನ್ನು ರೂಪಿಸಿದವರಲ್ಲಿ ಹೋದ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿದ್ದ ಅವರ ಪಾಲೂ ಇದ್ದಿರಬಹುದು ಎನ್ನಲಾಗಿತ್ತು. ಎದೆಗುಂದಿಸುವ ಹಾಗೆ ಮಾತನಾಡುವ ಡಾಕ್ಟರ್ ಅವರು ಜೂನ್ ೧ ರಂದು ದೇಶದಿಂದ ಹೊರಗೆ ಹೋಗುತ್ತಿದ್ದಾರೆಂಬ ಸುದ್ದಿಯಿಂದ, ನಿಸ್ಸಂದೇಹವಾಗಿ ಟ್ರೆಷರಿ ಬೆಂಚಿನವರು ನಿಟ್ಟುಸಿರು ಬಿಟ್ಟಿರಬೇಕು. ತಮ್ಮ ಹಳೆಯ ವಿಶ್ವವಿದ್ಯಾಲಯವಾದ ಕೊಲಂಬಿಯ ವಿಶ್ವವಿದ್ಯಾಲಯದಿಂದ LL.D ಗೌರವ ಪದವಿಯನ್ನು ಪಡೆದುಕೊಳ್ಳಲು ಅವರು ನ್ಯೂಯಾರ್ಕಿಗೆ ವಿಮಾನದಲ್ಲಿ ಹೊರಟಿದ್ದಾರೆ.

ಅವರು ಈ ಪದವಿಯನ್ನು ಮೂರು ವರ್ಷಗಳ ಕೆಳಗೇ ಆಗಿನ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಜನರಲ್ ಐಸೆನ್ ಹೋವೆರ್ ಅವರಿಂದ ಪಡೆದುಕೊಳ್ಳಬೇಕಾಗಿತ್ತು; ಆದರೆ, ಮಂತ್ರಿಮಂಡಲದ ಹೊಣೆಗಾರಿಕೆಗಳು ಆ ನಂತರ ಚುನಾವಣಾ ಪ್ರಚಾರ ಅವರ ದಾರಿಗೆ ಅಡ್ಡ ಬಂದಿತು. ವಿಶ್ವವಿದ್ಯಾಲಯವಾದರೋ ಪದವಿಯನ್ನು ಅವರ ಅನುಪಸ್ಥಿತಿಯಲ್ಲಿ ಪ್ರದಾನ ಮಾಡಲು ಮನಸ್ಸು ಮಾಡಲಿಲ್ಲ. ಡಾ: ಅಂಬೇಡ್ಕರ್ ಅವರು ಅಮೆರಿಕಾಗೆ ೨೦ ವರ್ಷಗಳ ನಂತರ ಭೇಟಿ ಕೊಡುತ್ತಿದ್ದಾರೆ. ಶ್ರೀಮತಿ ಅಂಬೇಡ್ಕರ್ ಅವರು ಸಾಕಷ್ಟು ಡಾಲರುಗಳು ದೊರಕದೇ ಇದ್ದ ಕಾರಣದಿಂದ ತಮ್ಮೊಂದಿಗೆ ಬರುತ್ತಿಲ್ಲವೆಂದು ಹೇಳಿದರು. ನ್ಯೂಯಾರ್ಕಿನಲ್ಲಿ ಇರುವಾಗ ಅವರು ವೈದ್ಯಕೀಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲೆಯಾಗುವ ಸಂಭವ ಇದೆ. (ಭಾನುವಾರ ೧-೬-೧೯೫೨ರ ಇಲಸ್ಟ್ರೇಟೆಡ್ ವೀಕ್ಲಿ ಆಪ್ ಇಂಡಿಯ. ೪ನೇ ಅಂಕಣ, 'ಪೋಲುಕ್ಸ್' ಅವರ ಲೇಖನ) ಡಾ: ಅಂಬೇಡ್ಕರ್ ಅವರು ನ್ಯೂಯಾರ್ಕ್‌ಗೆ ಭಾನುವಾರ, ೧ನೇ ಜೂನ್ ೧೯೫೨ರ ರಾತ್ರಿ ಹೊರಡುವವರಿದ್ದರು. ಅವರ ಸ್ನೇಹಿತರು, ಕ್ಷೇಮಾಭಿಲಾಷಿಗಳು, ಅಭಿಮಾನಿಗಳು ಮತ್ತು ಪೀಪಲ್ಸ್ ಎಜುಕೇಷನ್ ಸೊಸೈಟಿಯ ನೌಕರರು ಎಲ್ಲರೂ ಅವರಿಗೆ ಶನಿವಾರ, ೩೧ನೇ ಮೇ, ೧೯೫೨ರ ರಾತ್ರಿ ಭಾರೀ ಔತಣಕೂಟವನ್ನು ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದ ವಿಶಾಲವಾದ ಹುಲ್ಲುಗಾವಲಿನಲ್ಲಿ ಏರ್ಪಡಿಸಿದ್ದರು. ಅನೇಕ ಪ್ರತಿಷ್ಠಿತ ಮಹನೀಯರು, ಪ್ರಾಂಶುಪಾಲರಾದ ಡಾ: ವಿ.ಎಸ್. ಪಟಂಕರ್, ಪೀಪಲ್ಸ್ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಯವರು, ಮಿ:: ಕೆ.ವಿ.ಚಿತ್ರೆ, ಮಿ: ಪ್ರಭಾಕರ್ ಪಾಧ್ಯೆ, ಮಿ: ಬಿ.ಎಚ್. ರಾವ್, ಮಿ: ಡಬ್ಲ್ಯೂ ಆಲ್ಫ್ರೆಡ್, ಪತ್ರಿಕಾಕರ್ತರ ಒಕ್ಕೂಟದ ಅಧ್ಯಕ್ಷರು ಔತಣ ಕೂಟಕ್ಕೆ ದಯಮಾಡಿಸಿದ್ದರು. ಈ ಸಂದರ್ಭದಲ್ಲಿ ಪಟಂಕರ್ ಅವರು ಹೇಳಿದ್ದು ಏನೆಂದರೆ, ಅನೇಕ ಭಾರತೀಯರು ಭಾರತದಲ್ಲಿನ ಅಸ್ಪೃಷ್ಯತೆಯ ಬಗ್ಗೆ ಅಮೆರಿಕಾದಲ್ಲಿ ತಂಗಿದ್ದ ಅವಧಿಯಲ್ಲಿ ಅಂಬೇಡ್ಕರ್ ಅವರು ಖಂಡ ತುಂಡವಾದ ಟೀಕೆಯನ್ನು ಮಾಡಿ, ಪ್ರಪಂಚದ ಗಮನವನ್ನು ಈ ಅನ್ಯಾಯದ ಆಚರಣೆಯ ಬಗ್ಗೆ ಸೆಳೆದು, ಈ ನಿಟ್ಟಿನಲ್ಲಿ ಈ ಸಮಸ್ಯೆಯನ್ನು ನಿವಾರಿಸುವಲ್ಲಿ ಭಾರತ ಸರ್ಕಾರದ ವೈಫಲ್ಯವನ್ನು ಬಿಚ್ಚಿಡುತ್ತಿದ್ದರು ಎಂದು

ಹೆದರಿದ್ದರು. ಆದರೆ ಈ ಭಯಕ್ಕೆ ಆಧಾರವಿರಲಿಲ್ಲ. ಏಕೆಂದರೆ, ಯಾವಾಗಲೂ ಡಾ: ಅಂಬೇಡ್ಕರ್ ಮೊದಲು ಭಾರತೀಯರು, ಹೀಗಾಗಿ ತಮ್ಮ ತಾಯಿನಾಡಿನ ಗೌರವಕ್ಕೆ ಚ್ಯುತಿ ಬರುವಂತ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ.

ಡಾ: ಅಂಬೇಡ್ಕರ್ ಅವರು ಎಲ್ಲರಿಗೂ ತಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತಾ, ತಮಗೆ ಅಮೆರಿಕಾದಲ್ಲಿ ಭಾಷಣ ಕೊಡುವ ಯಾವ ಕಾರ್ಯಕ್ರಮವೂ ಇಲ್ಲವೆಂದು, ಆದುದರಿಂದ ಅಲ್ಲಿ ತಾವು ಈ ದೇಶದ ಬಗ್ಗೆ ಕಟುವಾಗಿ ಮಾತನಾಡುತ್ತೇನೆಂಬ ಹೆದರಿಕೆ ಬೇಡ ಎಂದರು.

ತಾವು ಅತಿಯಾದ ಕೋಪಿಷ್ಟರೆಂದು ಜನಗಳು ಅಂದುಕೊಂಡರೂ, ಮತ್ತು ಅನೇಕ ಬಾರಿ ಸದನದಲ್ಲಿ ಅಧಿಕಾರದಲ್ಲಿರುವವರ ಜೊತೆ ಜಗಳಕ್ಕೆ ನಿಲ್ಲುತ್ತಿದ್ದರೂ, ತಾವು ಒಂದೇ ಒಂದು ಸಲವಾದರೂ ದೇಶ ದ್ರೋಹದ ಕೆಲಸವನ್ನು ಮಾಡಿಲ್ಲವೆಂದು ಹೇಳಿದರು. ಯಾವಾಗಲೂ ದೇಶದ ಹಿತಾಸಕ್ತಿ ತಮ್ಮ ಹೃದಯದಲ್ಲಿ ಇರುತ್ತದೆಯೆಂದು ಹೇಳಿದರು. ದುಂಡು ಮೇಜಿನ ಸಮ್ಮೇಳನದಲ್ಲಿ ಕೂಡ ಭಾರತದ ಹಿತಾಸಕ್ತಿಯ ವಿಷಯ ಬಂದಾಗ ತಾವು ಮಹಾತ್ಮ ಗಾಂಧಿಯವರಿಗಿಂತ ೨೦೦ ಮೈಲಿಗಳಷ್ಟು ಮುಂದೆ ಇರುತ್ತಿದ್ದೆನೆಂದು ಅವರು ಹೇಳಿದರು. (ಟೈಮ್ಸ್ ಆಫ್ ಇಂಡಿಯಾ, ಸೋಮವಾರ ೨-೬-೧೯೫೨ ಪುಟ ೭, ೩ನೇ ಅಂಕಣ)

ಈ ಔತಣ ಕೂಟದ ಮೇಲೆ ಬೆಳಕು ಚೆಲ್ಲುತ್ತಾ, 'ದಿ ಈವಿನಿಂಗ್ ನ್ಯೂಸ್ ಆಫ್ ಇಂಡಿಯಾದ' ಅಂಕಣಕಾರರೊಬ್ಬರು ಹೀಗೆ ಬರೆದಿದ್ದರು:

**ಮಹಾನ್ ಪುರುಷ**

ಸಿದ್ಧಾರ್ಥ ಕಾಲೇಜಿನ ಪ್ರಾಂಶುಪಾಲರಾದ ಯು.ಎಸ್. ಪಟಂಕರ್ ಅವರು ಹೇಳುವ ಹಾಗೆ ಭಾರತದ ಯಾವುದೇ ವಿಶ್ವವಿದ್ಯಾಲಯವಾಗಲೀ ನಮ್ಮ ಸಂವಿಧಾನ ಶಿಲ್ಪಿಗಳಲ್ಲಿ ಒಬ್ಬರಾದ ಡಾ: ಅಂಬೇಡ್ಕರ್ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿ ಗೌರವಿಸಲು ಮುಂದೆ ಬಾರದೇ ಇರುವುದು ಒಂದು ವಿಧಿಯ ವಿಪರ್ಯಾಸ. ಡಾ: ಅಂಬೇಡ್ಕರ್ ಅವರು ವಿದ್ಯಾರ್ಥಿ ಆಗಿದ್ದ ಬೊಂಬಾಯಿ ವಿಶ್ವ ವಿದ್ಯಾಲಯ ಸಹ ನಿಧಾನ ಮಾಡಿದೆ. ಆದರೆ ಅವರು ವಿದ್ಯಾರ್ಥಿಯಾಗಿದ್ದ ಕೊಲಂಬಿಯಾ ವಿಶ್ವವಿದ್ಯಾಲಯ, ಡಾ: ಅಂಬೇಡ್ಕರ್ ಅವರಿಗೆ ಡಾಕ್ಟರ್ ಆಫ್ ಲಾಸ್ ಗೌರವ ಪದವಿಯನ್ನು ಪ್ರದಾನ ಮಾಡುವುದರಲ್ಲಿ ಮೊದಲನೆಯದಾಗಿದೆ.

ಹೋದ ಸೋಮವಾರ ಡಾ: ಅಂಬೇಡ್ಕರ್ ಅವರು T.W.A ವಿಮಾನದಲ್ಲಿ ಅಮೆರಿಕಾಗೆ ಪ್ರಯಾಣ ಬೆಳಸಿದರು. ಅವರು ಅಮೆರಿಕಾದಲ್ಲಿ ಕೆಲವು ವಾರಗಳು ತಂಗಿದ್ದು, ತಮ್ಮ ಕಾಲುಗಳಿಗೆ ಏನಾದರೊಂದು ಚಿಕಿತ್ಸೆ ಪಡೆಯಬಹುದೆಂಬ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಸಿದ್ಧಾರ್ಥ ಕಾಲೇಜಿನ ಡಾ: ಪಟಂಕರ್ ಮತ್ತು ಮಿ: ಚಿತ್ರೆ ಅವರು ಅಮೆರಿಕಾಗೆ ಹೊರಡುವ ಮುನ್ನಾ ದಿನ, ಕ್ರಿಕೆಟ್ ಕ್ಲಬ್ ಆಫ್ ಇಂಡಿಯದಲ್ಲಿ ಅವರಿಗೊಂದು ಔತಣ ಕೂಟವನ್ನು ಏರ್ಪಡಿಸಿದ್ದರು. ಯಾರೂ ಯಾವತ್ತೂ ಡಾ: ಅಂಬೇಡ್ಕರ್ ಅವರ ದೇಶಪ್ರೇಮವನ್ನು ಪ್ರಶ್ನಿಸಿಲ್ಲ; ಔತಣ ಕೂಟದ ನಂತರ ಮಾತನಾಡುತ್ತಾ, ತಾವು ಅಮೆರಿಕಾದಲ್ಲಿ ತಂಗಿರುವ ಸಂದರ್ಭದಲ್ಲಿ ಭಾರತವನ್ನು ಕೆಳಕ್ಕೆ ಎಳೆಯುವುದು ಎಂದಿಗೂ ತಮ್ಮ ಉದ್ದೇಶವಾಗಿರಲಿಲ್ಲ ಎಂದು ಹೇಳಿದರು.

ಒಂದು ಸ್ವಾರಸ್ಯಕರ ಸಂಭಾಷಣೆಯಲ್ಲಿ, ಡಾ: ಅಂಬೇಡ್ಕರ್ ಅವರು ಮಾತನಾಡುತ್ತಾ, ತಮಗೆ ಮೌಲಾನಾ ಆಝಾದ್ ಅವರ ಹಿಂದಿ ಎಂದರೆ ಬಹಳ ಅಚ್ಚು ಮೆಚ್ಚು ಎಂದರು. ನಮ್ಮನ್ನು ಆ ರೀತಿಯ ಹಿಂದಿಯನ್ನು ಬಳಸಬೇಕೆಂದು ಹೇಳಿದರೆ, ಬಹಳ ಒಳ್ಳೆಯದು; ಆದರೆ ವಿಪರೀತ ಸಂಸ್ಕೃತ ಮಯವಾಗಿರುವ

ಹಿಂದಿ, ಹಿಂದಿ ಅಲ್ಲ ಎಂದರು. ಮೌಲಾನಾ ಅಝಾದ್ ಅವರ ಹಿಂದಿಯಲ್ಲಿ ಯಾವುದೇ ಅರಾಬಿಕ್ ಅಥವ ಪರ್ಷಿಯನ್ ಪದಗಳಾಗಲೀ ಅಥವಾ ಯಾವುದೇ ಸಂಸ್ಕೃತ ಪದ ಪುಂಜಗಳಾಗಲೀ ಇಲ್ಲ ಎಂದು ಹೇಳಿದರು. ಹೀಗಿದ್ದರೂ ಸಹ ಅವರ ಹಿಂದಿ ಶುದ್ಧವಾಗಿದ್ದು, ಮೆರುಗಿನಿಂದ ಮತ್ತು ಗಾಂಭೀರ್ಯದಿಂದ ಕೂಡಿದೆ ಎಂದರು.

ಡಾ: ಅಂಬೇಡ್ಕರ್ ಅವರು ಪ್ರಯಾಣಿಸುತ್ತಿದ್ದ ವಿಮಾನ ಸುಮಾರು ಮಧ್ಯರಾತ್ರಿಯ ಹೊತ್ತಿಗೆ ಸಾಂಟಾ ಕ್ರುಝ್ ವಿಮಾನ ನಿಲ್ದಾಣದಿಂದ ಹೊರಟಿತು. ಅವರು ತಮ್ಮ ತೋಳಿನ ಮೇಲೆ ಒಂದು ನಿಲುವಂಗಿಯನ್ನು, ತಲೆಯ ಮೇಲೆ ಒಂದು ಹ್ಯಾಟನ್ನೂ, ಒಂದು ಕಪ್ಪು ಬಣ್ಣದ ಟೈ ಅನ್ನೂ ಧರಿಸಿದ್ದರು. ತಮ್ಮ ಚಿರಪರಿಚಿತವಾದ ಮುಗುಳ್ನಗೆಯೊಂದಿಗೆ ಅವರು ಜನಗಳಿಗೆ ವಿದಾಯ ಹೇಳಿದರು. ಇದೆಲ್ಲವನ್ನು ಒಂದು ಛಾಯಾಚಿತ್ರದಲ್ಲಿ ಸೆರೆ ಹಿಡಿದು ೧೯೫೨ಜೂನ್ ೨೮ ಫ್ರೀ ಪ್ರೆಸ್ ಬುಲೆಟಿನ್ ಪತ್ರಿಕೆಯ ಮುಖಪುಟದಲ್ಲಿ ಪ್ರಕಟಿಸಿದೆ.

**ಕೊಲಂಬಿಯಾ ವಿಶ್ವವಿದ್ಯಾಲಯ ಡಾ: ಬಿ.ಆರ್. ಅಂಬೇಡ್ಕರ್ ಅವರನ್ನು ಗೌರವಿಸಿತು.**

ನ್ಯೂ ಯಾರ್ಕ್, ಜೂನ್ ೬, ೧೯೫೨. ಕೊಲಂಬಿಯಾ ವಿಶ್ವ ವಿದ್ಯಾಲಯ ಡಾ: ಅಂಬೇಡ್ಕರ್ ಅವರನ್ನು ಅವರಿಗೆ ತನ್ನ ೧೯೮ನೇ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡುವಾಗ ಭಾರತ ದೇಶದ ಪ್ರಮುಖ ಪ್ರಜೆಗಳಲ್ಲಿ ಒಬ್ಬರೆಂದೂ, ಒಬ್ಬ ಮಹಾನ್ ಸಮಾಜ ಸುಧಾರಕರೆಂದೂ ಅಲ್ಲದೆ ಮಾನವ ಹಕ್ಕುಗಳನ್ನು ಎತ್ತಿ ಹಿಡಿದಿರುವ ಒಬ್ಬ ಧೈರ್ಯಶಾಲಿಯೆಂದು ಅವರನ್ನು ಬಣ್ಣಿಸಿತು.

ಆ ಕಾನ್ವೊಕೇಶನ್ ಸಮಾರಂಭದಲ್ಲಿ ಕೊಲಂಬಿಯಾದ ೧೭ ಪಾಠಶಾಲೆಗಳ ಮತ್ತು ಕಾಲೇಜುಗಳ ಪದವೀಧರರು ತಮ್ಮ ಶೈಕ್ಷಣಿಕ ಅವಧಿಗಳನ್ನು ಮುಗಿಸಿ, ಪದವಿಗಳನ್ನು ಪಡೆದುಕೊಂಡರು. ಅಲ್ಲಿ ಆ ದಿನ ಡಾ: ಅಂಬೇಡ್ಕರ್ ಅವರ ಜೊತೆ ಗೌರವಿಸಲ್ಪಟ್ಟವರಲ್ಲಿ. ಕೆನಡಾದ ವಿದೇಶಾಂಗ ಕಾರ್ಯದರ್ಶಿಯವರಾದ ಮಿ: ಲೆಸ್ಟರ್ ಬಿ ಪಿಯರ್ಸನ್, ಮಿ: ಡೇನಿಯಲ್ ಮಾರ್ನೆಟ್, ಸಾಹಿತ್ಯಕ ಚರಿತ್ರಕಾರರು, ಮತ್ತಿತರ ಎಂಟು ಅಮೆರಿಕಾದ ಪೌರರು ಇದ್ದರು. (ಟೈಮ್ಸ್ ಆಫ್ ಇಂಡಿಯಾ, ಬೊಂಬಾಯಿ, ಶನಿವಾರ ೭–೬–೧೯೫೨, ಪುಟ ೬)

ಈ ಸುದ್ದಿ ಡಾ: ಬಿ.ಆರ್. ಅಂಬೇಡ್ಕರ್ ಮತ್ತು ಕನೆಕ್ಟಿಕಟ್ ರಾಜ್ಯದ ಹಾರ್ಟ್‌ಫೋರ್ಡಿನ ಕವಿ ಮತ್ತು ಎಕ್ಸಿಕ್ಯೂಟೀವ್ ಆದ ಮೀ: ವ್ಯಾಲೇಸ್ ಸ್ಟೀವನ್ಸ್ ಅವರ ಛಾಯಾಚಿತ್ರದೊಂದಿಗೆ ಪತ್ರಿಕೆಯಲ್ಲಿ ಅಚ್ಚಾಗಿತ್ತು. ಇವರಿಬ್ಬರಿಗೂ ಡಾಕ್ಟರ್ ಆಪ್ ಲಾಸ್ ಗೌರವ ಪದವಿಯನ್ನು ಪ್ರದಾನ ಮಾಡಲಾಗಿತ್ತು.

**ಡಾಕ್ಟರ್ ಅಫ್ ಲಾಸ್**

**ದೃಷ್ಟಾಂತ ವಾಕ್ಯ**

ಕೊಲಂಬಿಯ ವಿಶ್ವವಿದ್ಯಾಲಯ, ನ್ಯೂ ಯಾರ್ಕ್

ಭೀಮ್ ರಾವ್ ರಾಮ್ಜಿ ಅಂಬೇಡ್ಕರ್, LL.D

ಭಾರತದಲ್ಲಿ ಹುಟ್ಟಿ, ಬಹಳ ಕಷ್ಟದಲ್ಲಿ ಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿದರು

ಇಪ್ಪತ್ತು ವರ್ಷಕ್ಕೆ ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ B.A. ಪದವಿ. ಈ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳ ಕಾಲ ಗ್ರಾಜುಯೇಟ್ ವಿದ್ಯಾರ್ಥಿ, ರಾಜಕೀಯ ವಿಜ್ಞಾನದಲ್ಲಿ ಡಾಕ್ಟರೇಟ್; ಆ

ನಂತರದಲ್ಲಿ ಇನ್ಸ್ ಆಫ್ ಕೋರ್ಟ್ ಮತ್ತು ಯೂನಿವರ್ಸಿಟಿ ಆಫ್ ಲಂಡನ್, ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್; ಮೂರು ದಶಕಗಳಿಂದ ಬ್ಯಾರಿಸ್ಟರ್. ವಿಶ್ವವಿದ್ಯಾಲಯದ ಪ್ರಾಚಾರ್ಯ ಮತ್ತು ಶಾಸಕಾಂಗ ಪರಿಷತ್ತಿನಲ್ಲಿ ಸದಸ್ಯ, ಸಂವಿಧಾನದ ರಚನೆ, ಮಂತ್ರಿಮಂಡಲದ ಹಾಗೂ ರಾಜ್ಯಗಳ ಪರಿಷತ್ತಿನ ಸದಸ್ಯ, ಭಾರತದ ಪ್ರಮುಖ ಪ್ರಜೆಗಳಲ್ಲಿ ಒಬ್ಬರು, ಮಹಾನ್ ಸಾಮಾಜಿಕ ಸುಧಾರಕರು ಮತ್ತು ಮಾನವ ಹಕ್ಕುಗಳನ್ನು ಎತ್ತಿಹಿಡಿಯುವ ಧೈರ್ಯಶಾಲಿ ಟ್ರಸ್ಟೀಗಳು ನನ್ನಲ್ಲಿ ನಿಹಿತಗೊಳಿಸಿರುವ ಅಧಿಕಾರ ಬಲದಿಂದ ನಾನು ಸಂತೋಷದಿಂದ ನಿಮಗೆ ಡಾಕ್ಟರ್ ಅಫ್ ಲಾಸ್ ಪದವಿಗೆ ಈ ವಿಶ್ವ ವಿದ್ಯಾಲಯದಲ್ಲಿ ಪ್ರವೇಶಕೊಡುತ್ತೇನೆ, ಹಾನೊರಿಸ್ ಕಾಸ (honoris causa) ಮತ್ತು ಆ ಪದವಿಗೆ ಸೇರಿಕೊಂಡಿರುವ ಎಲ್ಲಾ ಹಕ್ಕುಗಳನ್ನೂ ಮತ್ತು ಸವಲತ್ತುಗಳನ್ನು ನಿಮಗೆ ಕೊಟ್ಟಿರುತ್ತೇನೆ ಮತ್ತು ಅದರ ಗುರುತಾಗಿ ಈ ಡಿಪ್ಲೊಮಾ ಅನ್ನು ನಿಮಗೆ ಹಸ್ತಾಂತರಿಸುತ್ತಿದ್ದೇನೆ.

ಜೂನ್ ೫, ೧೯೫೨

ಸಹಿ: ಗ್ರೇಸನ್ ಕರ್ಕ್
ಉಪಾಧ್ಯಕ್ಷ ಮತ್ತು ಪ್ರೊವೋಸ್ಟ್

**SURATORS UNIVERSITATIS COLUMBIAE NEO EBORACENSIS**

**OMNIBUS ET SINGULIS QUORUM INTEREST SALUTEM HIS LETTER'S TESTAMUR NOS UNANIMI CONSENSU**

Bhimrao Ramji Ambedkar

AD GRADUM

DOCTORIS IN LEGIBUS

HONORIS CAUSA PROVEXISSE EIQUE OMNIA IURA ET PRIVILEGIA QUAE AD ISTUM ATTIENENT DEDISSE ET CONCESSISSE IN CVIVS REI PLENIVS TESTI MONIUM SIGILLO HVIVS UNIVERSITTIS ET PRAESIDIS CHIROGRAPHO DIPLOMA HOCCE MUNIENDUM CURAVIMVS DATUM NOVI EBORACI DIE

MENSIS IVNII QUINTO,
ANNOQUE DOMINI
MILLESIMO NONGENTESM
QUINQUAGESIMO SECUNDO

Sd/-Grayson Kirk,
PROPR AE SES

Seal of the University
of columbia. [1]

1. Khairmode, Vol. 10, Pp 280-288

## ೧೩೬
# ನನ್ನ ಗಮನವೆಲ್ಲ ಫೆಡರೇಷನ್ನಿಗೆ ಸಭಾಭವನವನ್ನು ಕಟ್ಟುವುದರಲ್ಲಿ ಕೇಂದ್ರೀಕೃತವಾಗಿದೆ

ಬೊಂಬಾಯಿಯ ನಾರೆ ಪಾರ್ಕ್ ಮೈದಾನದಲ್ಲಿ ಭಾನುವಾರ, ೨೮ನೇ ಸೆಪ್ಟೆಂಬರ್ ೧೯೫೨ರಂದು ಸಾಯಂಕಾಲ ೪ ಗಂಟೆಗೆ ಅಸ್ಪೃಷ್ಯರ ಮೇಳವನ್ನು ನಡೆಸಲು ನಿರ್ಧರಿಸಲಾಗಿತ್ತು. ಅದನ್ನು ಉದ್ದೇಶಿಸಿ ಡಾ॥ ಅಂಬೇಡ್ಕರ್ ಅವರು ಮಾತನಾಡಬೇಕೆಂದೂ ಸಹ ನಿರ್ಧರಿಸಲಾಗಿತ್ತು. ಅದರಂತೆ ಒಂದು ಕರಪತ್ರವನ್ನು ಜೆ.ಜಿ ಭಟಂಕರ್, ಕಾರ್ಯದರ್ಶಿ, ಪರಿಶಿಷ್ಟ ಜಾತಿಗಳ ಫೆಡರೇಷನ್ ಮತ್ತು ಮುಂಬಯಿಯ ಪೌರ ಕಾರ್ಮಿಕರ ಸಂಘ, ಎಲ್.ಎಫ್. ಹಿಂಡ್ಲೇಕರ್, ಪ್ರಧಾನ ಕಾರ್ಯದರ್ಶಿ, ಮಹರ್ ದ್ಯಾಂತಿ ಪಂಚಾಯತ್ ಸಂಘ್, ಮುಂಬಯಿ, ಎಸ್.ಎ. ಉಪಶ್ಯಾಮ್, ಕಾರ್ಯದರ್ಶಿ, ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಟ್ರಸ್ಟ್ ಮತ್ತು ಎಮ್.ಎಮ್.ಸಾಸಲೇಕರ್, ಜೆ.ಓ.ಸಿ. ಸಮತ ಸೈನಿಕ್ ದಳ, ಇವರುಗಳು ಜಂಟಿಯಾಗಿ ಸಹಿ ಮಾಡಿ ಬಿಡುಗಡೆ ಮಾಡಿದರು.

ಅಸ್ಪೃಷ್ಯರಿಂದ ಮೈದಾನ ತುಂಬಿ ತುಳುಕಿತ್ತು ೫–೩೦ಕ್ಕೆ ಸರಿಯಾಗಿ ಡಾ: ಬಿ.ಆರ್.ಅಂಬೇಡ್ಕರ್ ಅವರು ಸಭೆಗೆ ಹಾಜರಾಗಲು ಬಂದರು. ಅಸ್ಪೃಷ್ಯರು ಅವರನ್ನು ಕಿವಿಗಡಚಿಕ್ಕುವ ಚಪ್ಪಾಳೆಯಿಂದ ಬರಮಾಡಿಕೊಂಡರು.

ಪರಿಚಯ ಮಾಡಿಕೊಡುವ ಮಾತುಗಳಾದ ಮೇಲೆ, ಉಪಶ್ಯಾಮ್ ಅವರು ಡಾ: ಅಂಬೇಡ್ಕರ್ ಅವರನ್ನು ಸಭೆಯನ್ನು ಉದ್ದೇಶಿಸಿ ಮಾತನಾಡುವಂತೆ ಕೇಳಿಕೊಂಡರು.

ಡಾ: ಅಂಬೇಡ್ಕರ್ ಹೇಳಿದ್ದು: ಸದ್ಯಕ್ಕೆ ನನ್ನ ಗಮನವೆಲ್ಲಾ ಫೆಡರೇಷನ್ನಿಗೊಂದು ಸಭಾಭವನವನ್ನು ಕಟ್ಟುವುದರಲ್ಲಿ ಕೇಂದ್ರೀಕೃತವಾಗಿದೆ. ಮುಂದಿನ ವಾರ ನಾನು ದೆಹಲಿಗೆ ಹೋಗುತ್ತಿದ್ದೇನೆ. ನಾನು ವಾಪಸ್ ಬರುವುದಕ್ಕೆ ಕೆಲವು ದಿನಗಳು ಆಗಬಹುದು. ಬೊಂಬಾಯಿನಿಂದ ತಮ್ಮ ಅನುಪಸ್ಥಿತಿಯಲ್ಲಿ ನಿಧಿಯನ್ನು ಸಂಗ್ರಹಿಸುವ ಕೆಲಸ ಮುಂದುವರೆಯಲಾರದೆಂಬ ಹೆದರಿಕೆ ತಮಗೆ ಇದೆ ಎಂದರು.

ತಮ್ಮ ಸಮುದಾಯದ ಸದಸ್ಯರುಗಳು ಉದಾರವಾಗಿ ವಂತಿಗೆಗಳನ್ನು ಕೊಡಬೇಕೆಂದು ಮನವಿ ಮಾಡುತ್ತಾ ಜನಸಾಮಾನ್ಯರು ಈ ವಿಷಯದಲ್ಲಿ ತಮ್ಮನ್ನು ಬೆಂಬಲಿಸುತ್ತಾರೆ ಎಂದು ಹೇಳಿದರು

ಕಳೆದ ಕೆಲವು ತಿಂಗಳುಗಳಲ್ಲಿ ೨೨,೦೦೦/– ರೂಪಾಯಿಗಳನ್ನು ಸಂಗ್ರಹಿಸಲಾಗಿದೆ. ಒಂದು ಕಾಲದಲ್ಲಿ ಡಾ: ಅಂಬೇಡ್ಕರ್ ಅವರು ಸಾಲವನ್ನು ಮಾಡಿಯಾದರೂ ಸಭಾಭವನವನ್ನು ಕಟ್ಟ ಬೇಕೆಂದು ಆಲೋಚಿಸಿದ್ದರು. ಆದರೆ ಅವರು ಈಗ ಮನಸ್ಸು ಬದಲಾಯಿಸಿದ್ದಾರೆ; ಸಭಾ ಭವನವನ್ನು ಸದಸ್ಯರುಗಳು ಕೊಟ್ಟ ವಂತಿಗೆಯಿಂದಲೇ ಕಟ್ಟಬೇಕು ಎನ್ನುತ್ತಾರೆ.

## ೧೩೭
## ಆಧುನಿಕ ಪ್ರಪಂಚದ ಅವಶ್ಯಕತೆಗಳನ್ನು ಪೂರೈಸಲು ವಿಶ್ವವಿದ್ಯಾಲಯದ ಶಿಕ್ಷಣವನ್ನು ಮಾನ್ಯ ಮಾಡಿ

೧೬ನೇ ಡಿಸೆಂಬರದ ೧೯೫೨ರಂದು, ಡಾ: ಅಂಬೇಡ್ಕರ್ ಅವರು ಎಲ್ಫಿನ್ ಸ್ಟೋನ್ ಕಾಲೇಜಿನ ವಿದ್ಯಾರ್ಥಿಗಳ ವಾರ್ಷಿಕ ಕೂಟವನ್ನು ಉದ್ದೇಶಿಸಿ 'ಆಧುನಿಕ ವಿದ್ಯಾರ್ಥಿಗಳ ಸಮಸ್ಯೆಗಳು' ಎಂಬ ವಿಷಯದ ಮೇಲೆ ಮಾತನಾಡಿದರು.

ಆಧುನಿಕ ಪ್ರಪಂಚದ ಅವಶ್ಯಕತೆಗಳನ್ನು ಪೂರೈಸಲು ವಿಶ್ವವಿದ್ಯಾಲಯದ ಶಿಕ್ಷಣವನ್ನು ಪುನರ್ವ್ಯವಸ್ಥೆ ಮಾಡಿ ಎಂದು ವಿದ್ಯಾರ್ಥಿಗಳಿಗೆ ಮನವಿ ಮಾಡಿದರು. ವಿಶ್ವವಿದ್ಯಾಲಯವನ್ನು ಒಂದು ಜ್ಞಾನ ದೇಗುಲವನ್ನಾಗಿ ಮಾಡಬೇಕೆ ಹೊರತು ಗುಮಾಸ್ತರುಗಳಿಗೆ, ತರಬೇತಿ ಕೊಡುವ ಒಂದು ಕೇಂದ್ರವನ್ನಾಗಿ ಮಾಡಬಾರದು ಎಂದು ಹೇಳಿದರು.

# ೧೩೮
# ಪ್ರಜಾಪ್ರಭುತ್ವ ಜಯಪ್ರದವಾಗಿ ಕಾರ್ಯ ನಿರ್ವಹಿಸಲು ಇರುವ ಪೂರ್ವಭಾವಿ ನಿಯಮಗಳು

೨೨ನೇ ಡಿಸೆಂಬರ್ ೧೯೫೨ರಂದು ಡಾ: ಅಂಬೇಡ್ಕರ್ ಅವರನ್ನು ಪೂನಾ ಜಿಲ್ಲಾ ಕಾನೂನು ಗ್ರಂಥ ಭಂಡಾರ (i) ದಿವಂಗತ ಶ್ರೀ ಎಲ್.ಆರ್ ಗೋಖಲೆ ಅವರ ಭಾವ ಚಿತ್ರವನ್ನು ಅನಾವರಣವನ್ನು ಮಾಡಲು (ii) ಶ್ರೀ ಎ.ಬಿ. ಸೇಥ್ನ ಮತ್ತು ಶ್ರೀ ಎಚ್.ವಿ. ಟುಲ್ಪುಲೆ, ಈ ಇಬ್ಬರು ಹಿರಿಯ ವಕೀಲರು ದಾನಕೊಟ್ಟಿರುವ ಪುಸ್ತಕ ಸಂಗ್ರಹಗಳನ್ನು ಮತ್ತು ಕಾನೂನು ಗ್ರಂಥ ಭಂಡಾರದಲ್ಲಿ ಪ್ರತ್ಯೇಕವಾದ ಭಾಗಗಳಾಗಿ ಕಾಪಾಡಿ ಇಟ್ಟಿರುವುದನ್ನು ಪ್ರಾರಂಭಿಸುವುದು, ಇದಕ್ಕಾಗಿ ಆಹ್ವಾನಿಸಲಾಗಿತ್ತು.

ಡಾ: ಬಿ.ಆರ್.ಅಂಬೇಡ್ಕರ್ ಮತ್ತು ಶ್ರೀಮತಿ ಎಸ್.ಅಂಬೇಡ್ಕರ್ ಅವರು ದಯಮಾಡಿ ಆಹ್ವಾನವನ್ನು ಒಪ್ಪಿಕೊಂಡಿದ್ದಾರೆ.

ಪೂನಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಪಿ.ಸಿ. ಭಟ್, ಅಧ್ಯಕ್ಷರು, ಪೂನಾ ಜಿಲ್ಲಾ ಕಾನೂನು ಗ್ರಂಥ ಭಂಡಾರ, ಅಧ್ಯಕ್ಷತೆ ವಹಿಸಿದ್ದರು.

ಸಂಗೀತ ಕಲಾನಿಧಿ ಮಾಸ್ಟರ್ ಕೃಷ್ಣರಾವ್ ಫುಲಂಬೀಕರ್ ಅವರು ಡಾ: ಮತ್ತು ಶ್ರೀಮತಿ ಅಂಬೇಡ್ಕರ್ ಅವರ ಗೌರವಾರ್ಥವಾಗಿ ಸ್ವಾಗತ ಗೀತೆಯನ್ನು ಹಾಡಿದರು. ಸ್ವಾಗತ ಗೀತೆಯನ್ನು ಸಹೋದರ ವಕೀಲರಾದ ಶ್ರೀ ಎಸ್.ಜಿ. ಭಟ್ ಅವರು ರಚನೆ ಮಾಡಿದ್ದರು.

ಉಪಾಧ್ಯಕ್ಷರಾದ ಶ್ರೀ ಕೆ.ಸ್. ಚೌಬಾಲ್ ಅವರು ಸ್ವಾಗತ ಭಾಷಣವನ್ನು ಮಾಡಿದರು.

ಗ್ರಂಥ ಭಂಡಾರದ ವರದಿಯನ್ನು ಶೀ ವಿ.ಬಿ.ಗೋಗಟೆಯವರು ಓದಿದರು.ಶ್ರೀ ಡಿ.ಬಿ. ಪಾಲ್ ಅವರು ಡಾ: ಬಿ.ಆರ್.ಅಂಬೇಡ್ಕರ್ ಅವರನ್ನು ದಿವಂಗತ ಶ್ರೀ ಎಲ್.ಆರ್. ಅವರ ಗೋಖಲೆ ಅವರ ಭಾವಚಿತ್ರವನ್ನು ಅನಾವರಣ ಮಾಡುವಂತೆ ಮತ್ತು ಶ್ರೀ ಎ.ಬಿ. ಸೇಥ್ನ ಮತ್ತು ಶ್ರೀ ಎಚ್.ವಿ. ಟುಲ್ಪುಲೆ ಅವರು ದಾನ ಮಾಡಿರುವ ಪುಸ್ತಕಗಳ ವಿಭಾಗಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಾರ್ಥಿಸಿದರು.

ಆ ನಂತರ ಡಾ: ಬಿ.ಆರ್. ಅಂಬೇಡ್ಕರ್ ಅವರು ದಿವಂಗತ ಶ್ರೀ ಎಲ್.ಆರ್.ಗೋಖಲೆ ಅವರ ಭಾವಚಿತ್ರವನ್ನು ಅನಾವರಣ ಮಾಡಿ, ಪುಸ್ತಕಗಳ ವಿಭಾಗಗಳನ್ನು ಪ್ರಾರಂಭಿಸುವದಕ್ಕೆ ಚಾಲನೆ ಕೊಟ್ಟರು.

ಆ ಸಂದರ್ಭದಲ್ಲಿ ಷ್ರೀ ಪಿ.ಸಿ. ಭಟ್ ಅವರು ಮಾತನಾಡಿ ಹೀಗೆ ಹೇಳಿದರು:

ಮಹಿಳೆಯರೇ ಮತ್ತು ಮಹನೀಯರೆ, ನ್ಯಾಯಾಧೀಶರುಗಳೇ ಮತ್ತು ವಕೀಲರೇ,

ನಾನೊಂದು ಸಂತಸ ತರುವ ಕೆಲಸವನ್ನು ಮಾಡಬೇಕಾಗಿದೆ, ಅದೆಂದರೆ ಮುಖ್ಯ ಅತಿಥಿಯವರನ್ನು ಈ ದಿನದ ವಿಷಯದ ಮೇಲೆ ಒಂದೆರಡು ಮಾತುಗಳನ್ನಾಡಬೇಕೆಂದು ಪ್ರಾರ್ಥಿಸುವುದು. ನನ್ನ ಅನಾರೋಗ್ಯದ ಕಾರಣ ನಾನು ಹೆಚ್ಚಿಗೆ ಮಾತನಾಡಲು ಸಾಧ್ಯವಾಗದೇ ಇರುವುದಕ್ಕಾಗಿ ನಿಮ್ಮ ಕ್ಷಮಾಪಣೆಯನ್ನು ಕೋರುತ್ತೇನೆ. ಈಗ ನಾನು ವಿಷಯದ ಮೇಲೆ ಮಾತನಾಡುವಂತೆ ಮುಖ್ಯ ಅತಿಥಿಯವರನ್ನು ಕೇಳಿಕೊಳ್ಳುತ್ತೇನೆ:

**ಡಾ: ಅಂಬೇಡ್ಕರ್ ಅವರ ಭಾಷಣ**

ಅಧ್ಯಕ್ಷರೆ ಮತ್ತು ಮಹನೀಯರೆ,

ನನಗೆ ನಿಮ್ಮ ಆಹ್ವಾನ ಬಂದಾಗ ನಾನು ನಿಮ್ಮ ಕಾರ್ಯದರ್ಶಿಯವರಿಗೆ ಪತ್ರ ಬರೆದು ಈ ಜಿಲ್ಲಾ ಗ್ರಂಥ ಭಂಡಾರದ ಸದಸ್ಯರುಗಳಿಗೆ ಯಾವ ವಿಷಯದ ಮೇಲೆ ಆಸಕ್ತಿ ಇದೆ ಎಂದು ಕೇಳಿದ್ದೆ ಏಕೆಂದರೆ ನಾನು ಇಲ್ಲಿ ಬರಬಹುದು, ಬಂದು ನಾನು ಮಾತನಾಡುವ ವಿಷಯದ ಮೇಲೆ ನಿಮ್ಮ ಸದಸ್ಯರಿಗೆ ಆಸಕ್ತಿ ಇಲ್ಲದೇ ಹೋಗಬಹುದು. ಅವರು ದಯಮಾಡಿ ನಾಲ್ಕು ವಿಷಯಗಳ ಒಂದು ಪಟ್ಟಿಯನ್ನು ಕಳುಹಿಸಿಕೊಟ್ಟರು. ನೀವು ಇದರಲ್ಲಿ ಯಾವುದಾದರೊಂದು ವಿಷಯವನ್ನು ಆರಿಸಿಕೊಳ್ಳಬಹುದು ಎಂದರು. ಅವರಿಗೆ ಉತ್ತರ ಕೊಡುವ ಆತುರದಲ್ಲಿ ನಾನಿದ್ದೆ. ಹಾಗಾಗಿ ನಾನು ಯಾವ ವಿಷಯವನ್ನು ಆಯ್ದುಕೊಳ್ಳುತ್ತಿದ್ದೇನೆ ಎಂಬ ನನ್ನ ತೀರ್ಮಾನವನ್ನು ಅವರಿಗೆ ತಿಳಿಸಲಾಗಲಿಲ್ಲ. ಆದರೆ ಆ ನಾಲ್ಕು ವಿಷಯಗಳಲ್ಲಿ ಒಂದನ್ನು ಆಯ್ದುಕೊಳ್ಳುತ್ತೇನೆ ಎಂದು ಸಾಮಾನ್ಯವಾಗಿ ಹೇಳಿದೆ. ಆದರೆ ಅವರು ಕಳುಹಿಸಿಕೊಟ್ಟ ವಿಷಯಗಳಲ್ಲಿ ಒಂದನ್ನೂ ಆಯ್ದುಕೊಳ್ಳದಿದ್ದರೂ, ಆ ನಾಲ್ಕು ವಿಷಯಗಳ ವ್ಯಾಪ್ತಿಯನ್ನು ಮೀರಿ ಮಾತನಾಡುವುದಿಲ್ಲ ಎಂದು ಹೇಳಿದೆ. ಅವರು ಹೇಳಿದ್ದ ವಿಷಯಗಳಲ್ಲಿ ನನ್ನನ್ನು ಆಕರ್ಷಿಸಿದ್ದು ಸಂಸದೀಯ ಪ್ರಜಾ ಪ್ರಭುತ್ವ ಎಂಬ ವಿಷಯ ಮತ್ತು ಈ ವಿಷಯದ ಮೇಲೆ ನಾನು ಮಾತನಾಡಬಹುದು ಎಂದು ಅಂದುಕೊಂಡೆ. ಆದರೆ ನಾನು ಮಾತನಾಡಬೇಕೆಂದು ಆಯ್ದುಕೊಂಡಿರುವ ವಿಷಯ ಸಂಸದೀಯ ಪ್ರಜಾ ಪ್ರಭುತ್ವ ಅಲ್ಲ. ಆದರೆ ಸಂಸದೀಯ ಪ್ರಜಾ ಪ್ರಭುತ್ವಕ್ಕೆ ಬಹಳ ನಿಕಟವಾಗಿರುವ ವಿಷಯ.

ಆ ವಿಷಯ ನನ್ನ ದೃಷ್ಟಿಯಲ್ಲಿ ಮತ್ತು ದೇಶದ ದೃಷ್ಟಿಯಲ್ಲಿ ಬಹಳ ಪ್ರಾಮುಖ್ಯವಾದ ವಿಷಯ. ಈ ಸಾಯಂಕಾಲ ನಾನು ಮಾತನಾಡುತ್ತಿರುವ ವಿಷಯ, ನನ್ನ ಮಾತುಗಳಲ್ಲೇ ಹೇಳುವುದಾದರೆ, 'ಪ್ರಜಾ ಪ್ರಭುತ್ವ ಜಯಪ್ರದವಾಗಿ ಕಾರ್ಯ ನಿರ್ವಹಿಸಲು ಇರುವ ಪೂರ್ವಭಾವಿ ನಿಯಮಗಳು'. ಯಾವುದೇ ಅಡೆತಡೆಯಿಲ್ಲದೆ ಪ್ರಜಾಪ್ರಭುತ್ವ ಕೆಲಸಮಾಡುವುದನ್ನು ಮುಂದುವರೆಸಿಕೊಂಡು ಹೋಗಲು ಇರಬೇಕಾದ ಆ ಪೂರ್ವಭಾವಿ ನಿಯಮಗಳು ಯಾವುವು? ಈ ವಿಷಯದ ಮೇಲೇ ನಾನು ಒಂದೆರಡು ಅವಲೋಕನೆಗಳನ್ನು ಮಾಡಬೇಕೆಂದು ಅಂದುಕೊಂಡಿದ್ದೇನೆ.

**ವಿಷಯಕ್ಕೊಂದು ಹಂದರ**

ವಿಷಯವನ್ನು ಕುರಿತು ಮಾತನಾಡುವುದಕ್ಕೆ ಮುಂಚೆ ನಾನು ಒಂದೆರಡು ಪೂರ್ವಭಾವಿ ಅವಲೋಕನೆಗಳನ್ನು ಮಾಡಬಯಸುತ್ತೇನೆ; ಅವು ವಿಷಯಕ್ಕೊಂದು ಹಂದರವನ್ನು, ಹಿನ್ನೆಲೆಯನ್ನು, ಕೊಡುತ್ತದೆ.

ಮೊದಲ ಪ್ರಾಥಮಿಕ ಅವಲೋಕನೆಯನ್ನು ನಾನು ಮಾಡಬೇಕೆಂದಿರುವುದು ಏನೆಂದರೆ ಪ್ರಜಾಪ್ರಭುತ್ವ ಸತತವಾಗಿ ತನ್ನ ರೂಪವನ್ನು ಬದಲಾಯಿಸುತ್ತಲೇ ಹೋಗುತ್ತದೆ. ನಾವು ಪ್ರಜಾಭುತ್ವವನ್ನು ಕುರಿತು ಮಾತನಾಡುತ್ತೇವೆ, ಆದರೆ ಪ್ರಜಾಪ್ರಭುತ್ವ ಯಾವಾಗಲೂ ಒಂದೇ ರೀತಿ ಇರುವುದಿಲ್ಲ. ಗ್ರೀಕರು ಅಥೆನಿಯನ್ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದರು. ಆದರೆ ಎಲ್ಲರಿಗೂ ಗೊತ್ತಿರುವ ಹಾಗೆ ಅಥೆನಿಯನ್ ಪ್ರಜಾಪ್ರಭುತ್ವ ಎನ್ನುವುದು ನಮ್ಮ ಆಧುನಿಕ ಪ್ರಜಾಪ್ರಭುತ್ವಕ್ಕೆ ಹೋಲಿಸಿದರೆ, ಸುಣ್ಣಕ್ಕೂ ಬೆಣ್ಣೆಗೂ ಇರುವಷ್ಟು ವ್ಯತ್ಯಾಸ ಇದೆ. ಅಥೆನಿಯನ್ ಪ್ರಜಾಪ್ರಭುತ್ವದಲ್ಲಿ ಶೇಕಡಾ ಐವತ್ತರಷ್ಟು ಗುಲಾಮರಿದ್ದರು. ಕೇವಲ ಶೇಕಡಾ ಐವತ್ತು ಸ್ವತಂತ್ರರಾಗಿದ್ದರು. ಗುಲಾಮರಾಗಿದ್ದ ಶೇಕಡ ೫೦ ಮಂದಿಗೆ ಸರ್ಕಾರದಲ್ಲಿ ಯಾವ ಸ್ಥಾನವೂ ಇರಲಿಲ್ಲ. ಖಂಡಿತವಾಗಿಯೂ, ನಮ್ಮ ಪ್ರಜಾಪ್ರಭುತ್ವ ಅಥೆನಿಯನ್ ಪ್ರಜಾಪ್ರಭುತ್ವಕ್ಕಿಂತ ಬಹಳಷ್ಟು ಬೇರೆಯೇ ಆಗಿದೆ.

ನಿಮ್ಮ ಗಮನವನ್ನು ಪ್ರಾಥಮಿಕ ಅವಲೋಕನೆಯಿಂದ ಸೆಳೆಯ ಬಯಸುವ ಎರಡನೆ ವಿಷಯವೆಂದರೆ, ಒಂದೇ ದೇಶದಲ್ಲಿಯೇ ಪ್ರಜಾಪ್ರಭುತ್ವ ಯಾವಾಗಲೂ ಒಂದೇ ಆಗಿರುವುದಿಲ್ಲ. ನೀವು ಇಂಗ್ಲೆಂಡಿನ ಚರಿತ್ರೆಯನ್ನು ತೆಗೆದುಕೊಳ್ಳಿ. ೧೬೮೮ರ ಇಂಗ್ಲಿಷ್ ಕ್ರಾಂತಿಗೆ ಮುಂಚೆ ಇದ್ದ ಪ್ರಜಾಪ್ರಭುತ್ವ ೧೬೮೮ರ ಕ್ರಾತಿಯ ನಂತರ

ಬಂದ ಪ್ರಜಾ ಪ್ರಭುತ್ವ ಎರಡು ಒಂದೇ ಆಗಿತ್ತೆಂದು ಯಾರೂ ಹೇಳಲಾಗುವುದಿಲ್ಲ. ಹಾಗೆಯೇ ಮೊದಲನೆಯ ಸುಧಾರಣೆ ಮಸೂದೆ ಅನುಮೋದನೆ ಆದಾಗ ೧೬೮೮ ಮತ್ತು ೧೮೩೨ರ ಮಧ್ಯೆ ಇದ್ದ ಇಂಗ್ಲಿಷ್ ಪ್ರಜಾ ಪ್ರಭುತ್ವ, ೧೮೩೨ರ ಅಧಿನಿಯಮ ಅನುಮೋದನೆ ಆದಾಗ ಬಂದ ಪ್ರಜಾಪ್ರಭುತ್ವ ಎರಡೂ ಒಂದೇ ಯಾರೂ ಹೇಳಲು ಸಾಧ್ಯವಿಲ್ಲ. ಪ್ರಜಾ ಪ್ರಭುತ್ವ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಲೇ ಹೋಗುತ್ತದೆ.

ನಿಮ್ಮ ಗಮನವನ್ನು ಸೆಳೆಯ ಬಯಸುವ ಮೂರನೆಯ ವಿಷಯವೆಂದರೆ ಪ್ರಜಾಪ್ರಭುತ್ವದ ಸ್ವರೂಪ ಬದಲಾವಣೆ ಮಾತ್ರ ಆಗುವುದಿಲ್ಲ, ಅದರ ಉದ್ದೇಶಗಳೂ ಬದಾಲಾಯಿಸುತ್ತಾ ಹೋಗುತ್ತದೆ. ನೀವು ಪುರಾತನ ಇಂಗ್ಲಿಷ್ ಪ್ರಜಾಪ್ರಭುತ್ವವನ್ನೇ ತೆಗೆದುಕೊಳ್ಳಿ, ಅದರ ಉದ್ದೇಶವೇನಾಗಿತ್ತು? ಅದು ದೊರೆಯನ್ನು ನಿರ್ಬಂಧ ಮಾಡಲು, ದೊರೆಯನ್ನು ಈಗ ನಾವು ಕಾನೂನಿನ ಭಾಷೆಯಲ್ಲಿ ಕರೆಯುವ ವಿಶೇಷಾಧಿಕಾರವನ್ನು ಚಲಾಯಿಸದ ಹಾಗೆ ತಡೆಯುವುದು ಅದರ ಉದ್ದೇಶವಾಗಿತ್ತು. ದೊರೆ ಎಲ್ಲಿಯವರೆಗೆ ಹೋದನೆಂದರೆ, ಒಂದು ಕಾನೂನನ್ನು ಮಾಡುವ ನಿಕಾಯವಾಗಿ ಪಾರ್ಲಿಮೆಂಟು ಇರಬಹುದು, ಆದರೆ ದೊರೆಯಾದ ನನಗೆ ಕಾನೂನನ್ನು ಮಾಡುವ ವಿಶೇಷಾಧಿಕಾರ ಇದೆ ಮತ್ತು ನಾನು ಮಾಡುವ ಕಾನೂನೇ ಮೇಲುಗೈ ಪಡೆಯುತ್ತದೆ ಎಂದು ಘೋಷಣೆ ಮಾಡಿದ. ದೊರೆಯ ಇಂಥ ನಿರಂಕುಶತ್ವವೇ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರಲು ಕಾರಣವಾಯಿತು.

ಈ ದಿನದಲ್ಲಿ ಪ್ರಜಾಪ್ರಭುತ್ವದ ಉದ್ದೇಶವಾದರೂ ಏನು? ಆಧುನಿಕ ಪ್ರಜಾಪ್ರಭುತ್ವದ ಉದ್ದೇಶ ಒಬ್ಬ ನಿರಂಕುಶ ದೊರೆಗೆ ಕಡಿವಾಣ ಹಾಕುವುದು ಅಲ್ಲ, ಅದು ಜನಗಳಿಗೆ ಕಲ್ಯಾಣವನ್ನು ತಂದು ಕೊಡುವುದಕ್ಕೆ ಇದೆ. ಪ್ರಜಾಪ್ರಭುತ್ವದಲ್ಲಿ ಅದು ಒಂದು ದೂರದ ಬದಲಾವಣೆ. ಆದುದರಿಂದ, ನನ್ನ ಭಾಷಣದ ವಿಷಯಕ್ಕೆ , ನಾನು ಬುದ್ಧಿಪೂರ್ವಕವಾಗಿಯೇ ಕೊಟ್ಟಿರುವ ತಲೆ ಬರಹ 'ಪ್ರಜಾಪ್ರಭುತ್ವ ಜಯಪ್ರದವಾಗಿ ಕಾರ್ಯ ನಿರ್ವಹಿಸಲು ಇರುವ ಪೂರ್ವಭಾವಿ ನಿಯಮಗಳು' ಎಂದು ಏಕೆ ಕೊಟ್ಟಿದ್ದೇನೆ ಎಂದು ನಿಮಗೆ ಗೊತ್ತಾಗುತ್ತದೆ.

**ಪ್ರಜಾ ಪ್ರಭುತ್ವದ ವಿಷದೀಕರಣ**

ಪುನಃ ಪ್ರಜಾಪ್ರಭುತ್ವ ಎಂದರೆ ನಮ್ಮ ಅರ್ಥ ಏನು? ನನ್ನ ವಿಷಯಕ್ಕೆ ಹೋಗುವ ಮುಂಚೆ, ನಾವು ಒಂದು ಸ್ಪಷ್ಟತೆಯನ್ನು ಪಡೆದುಕೊಳ್ಳೋಣ. ನಿಮಗೆ ಗೊತ್ತಿರುವ ಹಾಗೆ ಅನೇಕ ಜನ, ಅಂದರೆ ರಾಜಕೀಯ ವಿಜ್ಞಾನದ ಬರಹಗಾರರು ಮತ್ತು ವೇದಾಂತಿಗಳ್ಳು, ಸಮಾಜ ಶಾಸ್ತ್ರಜ್ಞರು ಇತ್ಯಾದಿಗಳು ಪ್ರಜಾಪ್ರಭುತ್ವ ಎಂಬ ಪದಕ್ಕೆ ಅರ್ಥ ವಿವರಣೆಯನ್ನು ಕೊಟ್ಟಿದ್ದಾರೆ. ನನ್ನ ನಿಲುವು ಏನೆಂದು ದೃಷ್ಟಾಂತಗೊಳಿಸುವುದಕ್ಕೆ ಅವುಗಳಲ್ಲಿ ನಾನು ಎರಡನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ವಾಲ್ಟರ್ ಬಾಗೆಹಾಟ್ ಅವರು ಇಂಗ್ಲಿಷ್ ಸಂವಿಧಾನದ ಮೇಲೆ ಬರೆದಿರುವ ಪ್ರಖ್ಯಾತ ಪುಸ್ತಕವನ್ನು ನಿಮ್ಮಲ್ಲಿ ಯಾರಾದರೂ ನೋಡಿದ್ದೀರ ಎಂದು ನನಗೆ ಗೊತ್ತಿಲ್ಲ. ಆ ಪುಸ್ತಕ ಪ್ರಜಾಪ್ರಭುತ್ವದ ಒಂದು ಸ್ಪಷ್ಟ ಚಿತ್ರಣವನ್ನು ಕೊಡುವ ಒಂದು ಇತ್ತೀಚಿನ ಪ್ರಯತ್ನವಾಗಿದೆ. ವಾಲ್ಟರ್ ಬಾಗೆಹಾಟನ ಆ ಪುಸ್ತಕವನ್ನು ಪರಾಮರ್ಶಿಸಿದರೆ ಪ್ರಜಾ ಪ್ರಭುತ್ವಕ್ಕೆ ಅವನು ಕೊಟ್ಟಿರುವ ವಿಷದೀಕರಣ 'ಚರ್ಚೆಯಿಂದ ಸರ್ಕಾರ' ಎಂದು. ಅವರು ಪ್ರಜಾ ಪ್ರಭುತ್ವಕ್ಕೆ ವಿಷದೀಕರಣ ಕೊಡುವುದು ಹಾಗೆ. ಅಬ್ರಹಾಮ್ ಲಿಂಕನ್ನನ ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ದಕ್ಷಿಣದ ರಾಜ್ಯಗಳನ್ನು ಆಕ್ರಮಣ ಮಾಡಿಕೊಂಡ ಮೇಲೆ ಅವನು ಮಾಡಿದ ಅವನ ಪ್ರಖ್ಯಾತವಾದ ಗೆಟಿಸ್ಬರ್ಗ್ ಭಾಷಣದಲ್ಲಿ ಅವನು ಪ್ರಜಾ ಪ್ರಭುತ್ವವನ್ನು 'ಜನಗಳ ಸರ್ಕಾರ, ಜನಗಳಿಂದ ಸರ್ಕಾರ ಮತ್ತು ಜನಗಳಿಗಾಗಿ ಸರ್ಕಾರ' ಎಂದು ವಿಷದೀಕರಿಸುತ್ತಾನೆ. ಪ್ರಜಾ ಪ್ರಭುತ್ವ ಎಂದರೆ ಜನಗಳು ಏನು ಎಂದು ತಿಳಿದುಕೊಂಡಿದ್ದಾರೆ ಅನ್ನುವುದಕ್ಕೆ ಇನ್ನೂ ಅನೇಕ ವಿಷದೀಕರಣಗಳನ್ನು ಕೊಡಬಹುದು. ವೈಯುಕ್ತಿಕವಾಗಿ ಹೇಳುವುದಾದರೆ, ನಾನು ಪ್ರಜಾ ಪ್ರಭುತ್ವವನ್ನು

ಬೇರೊಂದು ರೀತಿಯಲ್ಲಿ ವಿಷದೀಕರಿಸುತ್ತೇನೆ, ಪ್ರಜಾಪ್ರಭುತ್ವಕ್ಕೆ ನನ್ನ ಇನ್ನೂ ಹೆಚ್ಚು ಗಟ್ಟಿಯಾದ ವಿಷದೀಕರಣ ಹೀಗಿದೆ: 'ರಕ್ತಪಾತವಿಲ್ಲದ್ದೆ, ಪ್ರಜೆಗಳ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಸರ್ಕಾರದ ಒಂದು ಸ್ವರೂಪ ಮತ್ತು ಒಂದು ವಿಧಾನ' –ಇದೇ ಪ್ರಜಾ ಪ್ರಭುತ್ವಕ್ಕೆ ನನ್ನ ವಿಷದೀಕರಣ. ಜನಗಳ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವುದಕ್ಕಾಗಿ ಪ್ರಜಾ ಪ್ರಭುತ್ವವನ್ನು ನಡೆಸುತ್ತಿರುವವರಿಗೆ ಅದರಿಂದ ಸಹಾಯವಾಗುವುದಾದರೆ, ಆ ಬದಲಾವಣೆಯನ್ನು ರಕ್ತಪಾತವಿಲ್ಲದೆ ಜನಗಳು ಒಪ್ಪಿಕೊಳ್ಳುವುದಾದರೆ, ಆಗ ಅದು ಪ್ರಜಾಪ್ರಭುತ್ವ ಎಂದು ನಾನು ಹೇಳುತ್ತೇನೆ. ಅದೇ ನಿಜವಾದ ಪರೀಕ್ಷೆ. ಅದು ಬಹುಶಃ ಅತ್ಯಂತ ಕಠಿಣವಾದ ಪರೀಕ್ಷೆ. ಆದರೆ ನೀವು ಒಂದು ಪದಾರ್ಥದ ಗುಣಮಟ್ಟವನ್ನು ಪರೀಕ್ಷಿಸುವುದಾದರೆ, ಅದನ್ನು ಅತ್ಯಂತ ಕಠಿಣ ಪರೀಕ್ಷೆಗೆ ಒಳಪಡಿಸಬೇಕು. ಈ ದಿನದ ಭಾಷಣದ ಮಟ್ಟಿಗೆ, ನಾನು ಪ್ರಜಾ ಪ್ರಭುತ್ವವನ್ನು ಈ ರೀತಿಯಾಗಿಯೇ ವಿಷದೀಕರಿಸಲಿದ್ದೇನೆ. ಈಗ ಇಂಥದೊಂದು ಪ್ರಜಾಪ್ರಭುತ್ವ ಹೇಗೆ ಜಯಶಾಲಿಯಾಗಬಲ್ಲುದು?

ನನ್ನ ಭಾಷಣದ ಮುಖ್ಯವಾದ ವಿಷಯವೇ ಇದು. ಆದರೆ ದುರದೃಷ್ಟವಶಾತ್, ಪ್ರಜಾಪ್ರಭುತ್ವದ ವಿಷಯದ ಬಗ್ಗೆ ಬರೆದಿರುವ ಯಾವ ಲೇಖಕರೂ ಸಹ ಯಾವುದೇ ಕಡು ಸಿದ್ಧಾಂತವನ್ನು ಮುಂದಿಟ್ಟಿಲ್ಲ. ಅವರ ತೀರ್ಮಾನದ ಪ್ರಕಾರ ಪ್ರಜಾಪ್ರಭುತ್ವವನ್ನು ಸಫಲ ಮಾಡುವುದಕ್ಕೆ ಪೂರ್ವಭಾವಿ ನಿಯಮಗಳು ಯಾವುವು ಎಂದು ಅಂಥ ಸಿದ್ಧಾಂತ ಯಾವುದೇ ಗಟ್ಟಿ ಕಲ್ಪನೆಯನ್ನು ನಮಗೆ ಕೊಡುತ್ತಿತ್ತು. ಚರಿತ್ರೆಯನ್ನು ನಾವು ಓದಬೇಕು, ಹಾಗೆ ಓದಿದ ಫಲಿತಾಂಶವಾಗಿ ನಮಗೆ ಪ್ರಪಂಚದ ಬೇರೆ ಬೇರೆ ಭಾಗದಲ್ಲಿ ಅದು ಚಾಲ್ತಿಯಲ್ಲಿದ್ದು ಮುರಿದು ಬಿದ್ದ ಅವದಿಯ ಬಗ್ಗೆ ನಮಗೆ ಗೊತ್ತಾಗಿ, ನಾವು ನಮ್ಮದೇ ಒಂದು ಅಭಿಪ್ರಾಯಕ್ಕೆ ಬರಬಹುದು.

**ನಿಯಮ ನಂ I**

ಮೊದಲನೆಯ ನಿಯಮ ಪ್ರಜಾಪ್ರಭುತ್ವ ಜಯಪ್ರದವಾಗಿ ಕಾರ್ಯ ನಿರ್ವಹಿಸಲು ಇರುವ ಒಂದು ಪೂರ್ವಭಾವಿ ನಿಯಮ. ಅದೆಂದರೆ ಸಮಾಜದಲ್ಲಿ ಕಣ್ಣಿಗೆ ರಾಚುವ ಅಸಮಾನತೆ ಇರಬಾರದು. ಅಲ್ಲಿ ಒಂದು ತುಳಿಯಲ್ಪಟ್ಟ ವರ್ಗವಿರಬಾರದು. ಎಲ್ಲಾ ಸವಲತ್ತುಗಳೂ ಇರುವ ಒಂದು ವರ್ಗವಾಗಲೀ ಮತ್ತು ಎಲ್ಲಾ ಹೊರೆಗಳನ್ನೂ ಹೊರಬೇಕಾಗಿರುವ ಒಂದು ವರ್ಗವಾಗಲೀ ಇರಬಾರದು. ಇಂಥದೊಂದು ಸನ್ನಿವೇಶ, ಇಂಥದೊಂದು ವಿಭಾಗ, ಒಂದು ಸಮಾಜದ ಇಂಥದೊಂದು ವ್ಯವಸ್ಥೆ ಒಂದು ರಕ್ತ ಕ್ರಾಂತಿಯ ಹುಳಗಳನ್ನು ತನ್ನೊಳಗೆ ಇಟ್ಟುಕೊಂಡಿರುತ್ತದೆ; ಮತ್ತು ಬಹುಶಃ ಪ್ರಜಾಪ್ರಭುತ್ವಕ್ಕೆ ಇದನ್ನು ಚಿಕಿತ್ಸೆ ಮಾಡಲು ಅಸಾಧ್ಯವಾಗುತ್ತದೆ. ಲಿಂಕನ್ ಅವರು ತಮ್ಮ ಅದೇ ಗೆಟ್ಟಿಸ್ಬರ್ಗ್ ಭಾಷಣದಲ್ಲಿ ಹೀಗೆ ಹೇಳಿದ್ದಾರೆ: 'ತನ್ನೊಳಗೆ ತಾನೇ ವಿರುದ್ಧವಾಗಿರುವ ಮನೆ, ನಿಲ್ಲಲು ಸಾಧ್ಯವಿಲ್ಲ' ಹೌದು, ಲಿಂಕನ್ ಅವರು ದಕ್ಷಿಣದ ರಾಜ್ಯಗಳಿಗೂ ಮತ್ತು ಉತ್ತರದ ರಾಜ್ಯಗಳಿಗೂ ನಡುವೆ ಇದ್ದ ಕಲಹದ ಬಗ್ಗೆ ಮಾತನಾಡುತ್ತಿದ್ದರು.. ಮುಂದುವರೆದು ಅವರು ಹೇಳಿದ್ದು: ದಕ್ಷಿಣದ ರಾಜ್ಯಗಳಿಗೆ ಸೇರಿದ ನೀವು ಮತ್ತು ಉತ್ತರದ ರಾಜ್ಯಗಳಿಗೆ ಸೇರಿದ ನಾವು ಇಬ್ಭಾಗವಾದರೆ, ವಿದೇಶದಿಂದ ಬಂದ ಒಬ್ಬ ಶತೃವಿನ ಎದುರು ನಮಗೆ ನಿಲ್ಲಲು ಸಾಧ್ಯವಾಗುವುದಿಲ್ಲ. ಒಡೆದು ಹೋದ ಮನೆ ನಿಲ್ಲಲು ಸಾಧ್ಯವಿಲ್ಲ. ಈ ಅರ್ಥವನ್ನೇ ಅವರು ಮನಸ್ಸಿನಲ್ಲಿ ಇಟ್ಟುಕೊಂಡು ಬಹುಶಃ ಹೀಗೆ ಹೇಳಿರಬೇಕು. ಆದರೆ ನನ್ನ ಅನಿಸಿಕೆಯಲ್ಲಿ ಅವರ ಈ ವಾಕ್ಯ ಭಾಗ ಅಥವಾ ಅವರ ವಾಕ್ಯ ಬಹಳ ಆಳವಾದ ಅರ್ಥಗರ್ಭಿತವಾಗಿದೆ. ನಾನು ಅರ್ಥ ಮಾಡಿಕೊಂಡ ಹಾಗೆ, ವರ್ಗ ವರ್ಗಳ ಮಧ್ಯೆ ಆಳವಾದ ಬಿರುಕುಗಳು ಪ್ರಜಾ ಪ್ರಭುತ್ವ ಜಯಶಾಲಿಯಾಗಲು ಇರುವ ಅತ್ಯಂತ

ದೊಡ್ಡ ಅಡಚಣೆ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಸಂಭವಿಸುವುದಾದರೂ ಏನು? ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಅಂದರೆ ಅದುಮಲ್ಪಟ್ಟವರು, ತುಳಿಯಲ್ಪಟ್ಟವರು, ತಮ್ಮ ಹಕ್ಕುಗಳಿಂದ ವಂಚಿತರಾದವರು, ಹೊರೆಯನ್ನು ಹೊರುತ್ತಿರುವವರು –ಇವರೆಲ್ಲರಿಗೂ ಎಲ್ಲ ಸವಲತ್ತುಗಳನ್ನು ಪಡೆದುಕೊಂಡಿರುವವರಿಗೆ ಇರುವ ಹಾಗೆ ಮತದಾನದ ಹಕ್ಕು ಇರುತ್ತದೆ; ಸವಲತ್ತು ಇರುವವರು ಇಲ್ಲದವರಿಗಿಂತ ಕಡಿಮೆ ಸಂಖ್ಯೆಯಲ್ಲಿ ಇದ್ದು, ಮತ್ತು ನಾವು ಬಹು ಸಂಖ್ಯಾತರ ನಿಲುವನ್ನೇ ನಿರ್ಣಯ ತೆಗೆದುಕೊಳ್ಳಲು ಬೇಕಾದ ಒಂದು ನಿಯಮವೆಂದು ಅಳವಡಿಸಿಕೊಂಡಿರುವುದರಿಂದ, ಸವಲತ್ತು ಇರುವ ಕೆಲವರು ತಮ್ಮ ಸವಲತ್ತುಗಳನ್ನು ಸ್ವಪ್ರೇರಣೆಯಿಂದ, ತಾವೇ ಬಿಟ್ಟುಕೊಡದಿದ್ದರೆ, ಆಗ ಅವರ ಮತ್ತು ಕೆಳಗೆ ಇರುವ ಜನರ ಮಧ್ಯದ ಅಂತರ ಪ್ರಜಾ ಪ್ರಭುತ್ವವನ್ನು ನಾಶಪಡಿಸುತ್ತದೆ; ತೀರ ವಿಭಿನ್ನವಾಗಿರುವುದನ್ನು ಅಸ್ತಿತ್ವಕ್ಕೆ ತರುತ್ತದೆ. ಆದುದರಿಂದ, ನೀವು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿನ ಪ್ರಜಾ ಪ್ರಭುತ್ವದ ಚರಿತ್ರೆಯನ್ನು ಪರೀಕ್ಷೆ ಮಾಡಿದರೆ ನಿಮಗೆ ಕಂಡುಬರುವುದು ಪ್ರಜಾ ಪ್ರಭುತ್ವ ಮುರಿದು ಬಿದ್ದಿರುವುದಕ್ಕೆ ಕಾರಣಗಳಲ್ಲಿ ಒಂದು, ಈ ಸಾಮಾಜಿಕ ಬಿರುಕುಗಳು.

**ನಿಯಮ ನಂ II**

ಒಂದು ಪ್ರಜಾ ಪ್ರಭುತ್ವ ಜಯಪ್ರದವಾಗಿ ಕೆಲಸ ಮಾಡಬೇಕಾದರೆ ವಿರೋಧ ಪಕ್ಷದ ಅಸ್ತಿತ್ವ ಅವಶ್ಯಕವಾಗಿ ಬೇಕಾಗುತ್ತದೆ. ಈ ದೇಶದಲ್ಲಿ ಮಾತ್ರವಲ್ಲ ಇಂಗ್ಲೆಂಡಿನಲ್ಲೂ ಸಹ ಪಕ್ಷ ವ್ಯವಸ್ಥೆಯನ್ನು ಖಂಡಿಸುವ ಅನೇಕ ಜನಗಳನ್ನು ನಾನು ನೋಡಿದ್ದೇನೆ. ನಾನು ಇಲ್ಲಿಗೆ ಬರುವುದಕ್ಕೆ ಸ್ವಲ್ಪ ಮುಂಚೆ, ನಾನು ಒಂದು ಸಣ್ಣ ಪುಸ್ತಕವನ್ನು ಓದುತ್ತಿದ್ದೆ. ಆ ಪುಸ್ತಕವನ್ನು ಹಾನ್ಸಾರ್ಡ್ ಸೊಸೈಟಿ ಪ್ರಕಟಿಸಿದ್ದು ಅದರ ವಿಷಯ ಇಂಗ್ಲೆಂಡಿನಲ್ಲಿ (ರಾಜಕೀಯ) ಪಕ್ಷ ವ್ಯವಸ್ಥೆ. ಆ ಪುಸ್ತಕದಲ್ಲಿನ ಒಂದು ಇಡೀ ಅಧ್ಯಾಯವನ್ನು ಪಕ್ಷ ವ್ಯವಸ್ಥೆ ಅನ್ನುವುದು ಒಂದು ಒಳ್ಳೆಯ ವ್ಯಸ್ಥೆಯೇ ಮತ್ತು ಅದನ್ನು ಸಹಿಸಿಕೊಳ್ಳಲೇಬೇಕೇ ಎಂಬ ಪ್ರಶ್ನೆಗೆ ಮೀಸಲಿಡಲಾಗಿದೆ. ಅಲ್ಲಿ ಅನೇಕ ಬಗೆಯ ಅಭಿಪ್ರಾಯಗಳು ಇವೆ. ಈಗ ನನಗೆ ಅನಿಸುತ್ತಿರುವುದೇನೆಂದರೆ, ರಾಜಕೀಯ ಪಕ್ಷದ ವ್ಯವಸ್ಥೆಗೆ ವಿರೋಧವಾಗಿರುವವರೆಲ್ಲರೂ, ಅದೇ ಕಾರಣಕ್ಕೆ ಅವರನ್ನು ವಿರೋಧಪಕ್ಷ ಬೇಡ ಅನ್ನುವುವರು ಎಂದು ತಿಳಿದು ಕೊಳ್ಳಬಹುದಾಗಿದೆ.

ಜನ ಪ್ರಜಾಪ್ರಭುತ್ವ ಎಂದರೆ ಏನು ಎಂಬುದನ್ನು ಸಂಪೂರ್ಣವಾಗಿ ತಪ್ಪು ತಿಳಿದುಕೊಂಡಿದ್ದಾರೆ. ಪ್ರಜಾಪ್ರಭುತ್ವ ಅಂದರೆ ಏನು? ನಾನು ಅದಕ್ಕೆ ವಿವರಣೆಯನ್ನೇನೂ ಕೊಡುತ್ತಿಲ್ಲ. ನಾನು ಒಂದು ಪ್ರಾಯೋಗಿಕವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನನಗೆ ಅನಿಸುವುದೇನೆಂದರೆ, ಪ್ರಜಾಪ್ರಭುತ್ವ ಅಂದರೆ ನಿಷೇಧ ಮತ (veto) ಚಲಾಯಿಸಬಹುದಾದ ಶಕ್ತಿ. ಪ್ರಜಾ ಪ್ರಭುತ್ವ ಅಂದರೆ ವಂಶಪಾರಂಪರ್ಯ ಅಧಿಕಾರಕ್ಕೂ, ಸರ್ವಾಧಿಕಾರಕ್ಕೂ ಅಸಂಗತವಾದುದು. ಪ್ರಜಾಪ್ರಭುತ್ವ ಅಂದರೆ ದೇಶವನ್ನಾಳುತ್ತಿರುವವರ ಅಧಿಕಾರದ ಮೇಲೆ ಒಂದು ಹಂತದಲ್ಲಿ ಎಲ್ಲೋ ಒಂದು ಕಡೆ ನಿಷೇಧ ಮತ ಅನ್ನುವುದು ಇರಲೇಬೇಕು. ನಿರಂಕುಶತ್ವದಲ್ಲಿ ನಿಷೇಧ ಮತ ಅನ್ನುವುದು ಇರುವುದಿಲ್ಲ. ರಾಜನೊಬ್ಬನನ್ನು ಆರಿಸಿಕೊಂಡ ಮೇಲೆ, ಅವನು ಅಂತರ್ನಿಹಿತ ಅಥವಾ ದೈವದತ್ತವಾದ ಅಧಿಕಾರದಿಂದ ಆಳುವುದಕ್ಕೆ ಅಲ್ಲಿರುತ್ತಾನೆ. ಪ್ರತಿ ಐದು ವರ್ಷಗಳಿಗೊಮ್ಮೆ ಅವನೇನೂ ಪ್ರಜೆಗಳ ಮುಂದೆ ಹೋಗಿ 'ನಾನು ಒಬ್ಬ ಒಳ್ಳೆಯ ಮನುಷ್ಯನೇ' ಎಂದು ಕೇಳಬೇಕಾಗಿಲ್ಲ. ನಾನು ಕಳೆದ ಐದು ವರ್ಷಗಳಲ್ಲಿ ಒಳ್ಳೆಯದನ್ನು ಮಾಡಿದ್ದೇನೆಯೆ? ಎಂದು ಕೇಳಬೇಕಾಗಿಲ್ಲ. 'ಹಾಗಾದರೆ ನೀವು ನನ್ನನ್ನು ಪುನಃ ಚುನಾಯಿಸುತ್ತೀರ' ಎಂದು ಕೇಳಿಕೊಳ್ಳಬೇಕಾಗಿಲ್ಲ. ರಾಜನ ಅಧಿಕಾರದ ಮೇಲೆ ಯಾರಿಗೂ ನಿಷೇಧ ಮತ ಅನ್ನುವುದು ಇರುವುದಿಲ್ಲ. ಆದರೆ ಪ್ರಜಾ ಪ್ರಭುತ್ವದಲ್ಲಾದರೋ, ಪ್ರತಿ ಐದು ವರ್ಷಗಳಿಗೊಮ್ಮೆ ಅಧಿಕಾರದಲ್ಲಿರುವವರು ಜನಗಳ ಮುಂದೆ ಹೋಗಿ ಅವರನ್ನು ಅವರ

ಅಭಿಪ್ರಾಯದಲ್ಲಿ ತಮ್ಮ ಕೈನಲ್ಲಿ ಅಧಿಕಾರವನ್ನು ಕೊಡಬಹುದಾದಂತ ಅರ್ಹತೆಗಳು ತಮಗೆ ಇದೆಯೇ? ನಿಮ್ಮ ಹಿತಾಸಕ್ತಿಗಳನ್ನು ನೋಡಿಕೊಳ್ಳಬಲ್ಲವೇ? ನಿಮ್ಮ ಭವಿಷ್ಯವನ್ನು ರೂಪಿಸಬಲ್ಲವೇ? ನಿಮ್ಮನ್ನು ರಕ್ಷಿಸಬಲ್ಲವೇ? ಎಂದು ಕೇಳ ಬೇಕು. ಇದನ್ನೇ ನಾನು ನಿಷೇಧ ಮತ (veto) ಎಂದು ಕರೆಯುವುದು. ಆದರೆ ಪ್ರಜಾ ಪ್ರಭುತ್ವ ಅಂದರೆ ಇಷ್ಟೇ ಅಲ್ಲ. ಪ್ರತಿ ಐದು ವರ್ಷಗಳಿಗೊಮ್ಮೆ ಸರ್ಕಾರ ಜನಗಳ ಬಳಿ ಹೋಗಲೇಬೇಕೆಂಬ ನಿಷೇಧ ಮತದಿಂದಷ್ಟೇ ಪ್ರಜಾಪ್ರಭುತ್ವ ತೃಪ್ತಿಪಟ್ಟುಕೊಳ್ಳುವುದಿಲ್ಲ; ಏತನ್ಮಧ್ಯೆ ಯಾರಿಗೂ ಸರ್ಕಾರದ ಅಧಿಕಾರವನ್ನು ಪ್ರಶ್ನಿಸುವ ಹಾಗಿಲ್ಲ ಎಂದು ಅರ್ಥವಲ್ಲ. ಸರ್ಕಾರ ಜನಗಳ ಐದು ವರ್ಷಗಳ ದೀರ್ಘಾವಧಿಯ ನಿಷೇಧ ಮತಕ್ಕೆ ಮಾತ್ರ ತಲೆಬಾಗಿದರೆ ಸಾಲದು; ಅವಶ್ಯಕತೆ ಬಿದ್ದಾಗ ತಕ್ಷಣದ ನಿಷೇಧ ಮತಕ್ಕೂ ಅವಕಾಶ ಇರಬೇಕು. ಸರ್ಕಾರಕ್ಕೆ ಸವಾಲನ್ನೆಸೆಯಬಲ್ಲ ಜನಗಳು ಪಾರ್ಲಿಮೆಂಟಿನಲ್ಲಿ ಸಿದ್ಧವಾಗಿರಬೇಕು. ಪ್ರಜಾ ಪ್ರಭುತ್ವವೆಂದರೆ, ಯಾರಿಗೂ ಆಳುವುದಕ್ಕೆ ನಿರಂತರ ಅಧಿಕಾರ ಇರುವುದಿಲ್ಲ, ಆ ಆಳ್ವಿಕೆ ಜನಗಳ ಮಂಜೂರಾತಿಗೆ ಒಳಪಟ್ಟಿರುತ್ತದೆ ಮತ್ತು ಸದನದಲ್ಲೇ ಅದನ್ನು ಪ್ರಶ್ನಿಸಬಹುದಾಗಿದೆ. ವಿರೋಧ ಪಕ್ಷ ಇರಬೇಕಾದುದು ಎಷ್ಟು ಮುಖ್ಯ ಎನ್ನುವುದು ಈಗ ನಿಮಗೆ ಗೊತ್ತಾಗುತ್ತದೆ. ವಿರೋಧ ಪಕ್ಷವಿದ್ದರೆ, ಸರ್ಕಾರ ಯಾವಾಗಲೂ ಬಡಿಗಲ್ಲಿನ ಮೇಲೆಯೇ ಇರುತ್ತದೆ. ತನ್ನ ಪಕ್ಷದವರಲ್ಲದ ಜನರಿಗೆ ತಾನು ಮಾಡಿದ ಕೆಲಸಗಳೆಲ್ಲಕ್ಕೂ ಸರ್ಕಾರ ಸಮರ್ಥನೆ ಕೊಡಬೇಕು. ದುರಾದೃಷ್ಟವಷಾತ್ ನಮ್ಮ ದೇಶದಲ್ಲಿ ನಮ್ಮ ಎಲ್ಲಾ ವರ್ತಮಾನ ಪತ್ರಿಕೆಗಳೂ, ಒಂದಲ್ಲ ಒಂದು ಕಾರಣಕ್ಕೆ, ಬಹುಶಃ ಸರ್ಕಾರದ ಜಾಹಿರಾತುಗಳಿಂದ ಬರುವ ಆದಾಯವಿರಬಹುದು, ವಿರೋಧ ಪಕ್ಷಕ್ಕೆ ಕೊಡುವುದಕ್ಕಿಂತ ಅತೀ ಹೆಚ್ಚಾಗಿ, ಸರ್ಕಾರಕ್ಕೆ ಪ್ರಚಾರ ಕೊಡುತ್ತಿವೆ. ಕಾರಣ ಇಷ್ಟೇ: ನಿಮಗೆ ವಿರೋಧ ಪಕ್ಷದಿಂದ ಯಾವ ಆದಾಯವು ಬರುವುದಿಲ್ಲ. ಅವರಿಗೆ ಸರ್ಕಾರದಿಂದ ಆದಾಯ ಬರುತ್ತದೆ: ಹೀಗಾಗಿ, ಆಳುವ ಪಕ್ಷದ ಸದಸ್ಯರುಗಳು ಪುಂಖಾನುಪುಂಖವಾಗಿ ಮಾಡಿದ ಭಾಷಣಗಳು ಅಂಕಣಗಳಾದ ಮೇಲೆ ಅಂಕಣಗಳಲ್ಲಿ ಕಾಣಿಸಿಕೊಳ್ಳುತ್ತವೆ ಮತ್ತು ವಿರೋಧ ಪಕ್ಷದವರು ಮಾಡಿದ ಭಾಷಣ ಕೊನೆಯ ಪುಟದಲ್ಲಿ, ಕೊನೆಯ ಅಂಕಣದಲ್ಲೆಲ್ಲೋ ಕಾಣಿಸಿಕೊಳ್ಳುತ್ತದೆ ಪ್ರಜಾ ಪ್ರಭುತ್ವ ಏನು ಎಂದು ನಾನು ಟೀಕೆ ಮಾಡುತ್ತಿಲ್ಲ. ಪ್ರಜಾಪ್ರಭುತ್ವಕ್ಕೆ ಪೂರ್ವಭಾವಿ ನಿಯಮ ಯಾವುದು ಎಂದು ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವಕ್ಕೆ ವಿರೋಧ ಪಕ್ಷ ಎನ್ನುವುದು ಪೂರ್ವಭಾವಿ ನಿಯಮ. ಆದರೆ ಇಂಗ್ಲೆಂಡಿನಲ್ಲಿ ವಿರೋಧ ಪಕ್ಷಕ್ಕೆ ಮಾನ್ಯತೆ ಇರುವುದಷ್ಟೇ ಅಲ್ಲ, ವಿರೋಧ ಪಕ್ಷ ಕೆಲಸ ಮಾಡುವುದಕ್ಕೆ ಅದರ ನಾಯಕನಿಗೆ ಸರ್ಕಾರ ವೇತನವನ್ನು ಕೊಡುತ್ತದೆ. ಅವನಿಗೊಬ್ಬ ಕಾರ್ಯದರ್ಶಿ ಇರುತ್ತಾನೆ, ಅಲ್ಲದೆ ಶೀಘ್ರಲಿಪಿಗಾರರ ಮತ್ತು ಬರಹಗಾರರ ಒಂದು ಸಣ್ಣ ಸಿಬ್ಬಂದಿಯೂ ಇರುತ್ತದೆ. ತನ್ನ ಕಲಾಪಗಳನ್ನು ನಡೆಸುವುದಕ್ಕೆ ಅವನಿಗೆ ಕಾಮನ್ಸ್ ಸಭೆಯಲ್ಲಿ ಒಂದು ಕೊಠಡಿಯೂ ಇರುತ್ತದೆ. ಅದೇ ರೀತಿ, ಕೆನಡಾದಲ್ಲೂ ಸಹ ಪ್ರಧಾನ ಮಂತ್ರಿಯವರಿಗೆ ಕೊಡುವ ಹಾಗೆ ವಿರೋಧ ಪಕ್ಷದ ನಾಯಕನಿಗೆ ವೇತನ ಕೊಡಲಾಗುತ್ತದೆ. ಏಕೆಂದರೆ, ಈ ಎರಡೂ ದೇಶಗಳಲ್ಲಿ ಸರ್ಕಾರ ತಪ್ಪು ಮಾಡುತ್ತಿದೆಯೆ ಎಂದು ತೋರಿಸಲು ಯಾರಾದರೊಬ್ಬರು ಇರಲೇಬೇಕೆಂದು ಪ್ರಜಾ ಪ್ರಭುತ್ವ ಭಾವಿಸುತ್ತದೆ. ಇದನ್ನು ಬಿಡದೇ, ನಿರಂತರವಾಗಿ ಮಾಡಲೇ ಬೇಕಾಗಿದ್ದು, ಹೀಗಾಗಿ ವಿರೋಧ ಪಕ್ಷದ ನಾಯಕನ ಮೇಲೆ ಹಣ ಖರ್ಚು ಮಾಡುವುದನ್ನು ಅವರು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ.

**ನಿಯಮ ನಂ III**

ಮೂರನೆಯ ನಿಯಮ ಒಂದು ಇದೆ ಎಂದು ನಾನು ಭಾವಿಸುತ್ತೇನೆ; ಅದನ್ನೂ ಸಹ ಪ್ರಜಾಪ್ರಭುತ್ವ ಜಯಪ್ರದವಾಗುವುದಕ್ಕೆ ಬೇಕಾದ ಪೂರ್ವಭಾವಿ ನಿಯಮ ಎಂದು ಕರೆಯಬಹುದು. ಅದೇ ಕಾನೂನಿನಲ್ಲಿ

ಮತ್ತು ಆಡಳಿತದಲ್ಲಿ ಸಮಾನತೆ. ಅಲ್ಲಿ ಇಲ್ಲಿ ಕಾನೂನಿನಲ್ಲಿ ಸಮಾನತೆ ಇಲ್ಲದೇ ಇದ್ದರೂ ಈ ಹಂತದಲ್ಲಿ ಅದರ ಬಗ್ಗೆ ಹೆಚ್ಚಿಗೆ ಚರ್ಚಿಸುವ ಅಗತ್ಯವಿಲ್ಲ. ಆದರೆ ಪ್ರಾಮುಖ್ಯ ಇರುವುದು ಆಡಳಿತದಲ್ಲಿ ಸಮಾನತೆಯಿಂದ ನಡೆಸಿಕೊಳ್ಳುವುದು. ಒಂದು ನಿರ್ದಿಷ್ಟವಾದ ಪಕ್ಷ ಆಡಳಿತ ನಡೆಸುತ್ತಿರುವಾಗ, ಅದು ಅದೇ ಪಕ್ಷದ ಸದಸ್ಯರ ಪ್ರಯೋಜನಕ್ಕಾಗಿ ಮಾತ್ರ ಆಡಳಿತವನ್ನು ಮಾಡುತ್ತಿರಬಹುದು ಎಂದು ನಿಮ್ಮಲ್ಲಿ ಅನೇಕರಿಗೆ ಊಹಿಸಲು ಸಾಧ್ಯವಾಗಬಹುದು ಅಥವಾ ನೆನಪಿಸಿಕೊಳ್ಳಬಹುದು. ಏನೇ ಆಗಲೀ ನಾನು ಇಂಥ ಅನೇಕವಾದ ಉದಾಹರಣೆಗಳನ್ನು ನೆನಪಿಸಿಕೊಳ್ಳಬಲ್ಲೆ. ಯಾವುದಾದರೂ ಒಂದು ನಿರ್ದಿಷ್ಟ ಸರಕನ್ನು ಲೈಸೆನ್ಸ್ ಇಲ್ಲದೆ ಯಾರೂ ವ್ಯಾಪಾರ ಮಾಡಾಬಾರದು ಎಂದು ಒಂದು ಕಾನೂನು ಇದೆ ಎಂದು ಇಟ್ಟುಕೊಳ್ಳಿ. ಯಾರೂ ಆ ಕಾನೂನನ್ನು ಆಕ್ಷೇಪಿಸುವ ಹಾಗಿಲ್ಲ. ಏಕೆಂದರೆ, ಅದು ಎಲ್ಲರಿಗೂ ಅನ್ವಯವಾಗುತ್ತದೆ. ಈ ನಿರ್ದಿಷ್ಟವಾದ ಕಾನೂನಿನಲ್ಲಿ ಯಾವ ಪಕ್ಷಪಾತವೂ ಇಲ್ಲ. ಆದರೆ ನಾವು ಒಂದು ಹೆಜ್ಜೆ ಮುಂದೆ ಹೋಗೋಣ. ಒಬ್ಬ ವ್ಯಾಪಾರಿ ಒಬ್ಬ ಅಧಿಕಾರಿಯ ಹತ್ತಿರಕ್ಕೋ ಅಥವಾ ಮಂತ್ರಿಯ ಹತ್ತಿರಕ್ಕೋ ಹೋಗಿ ಯಾವುದೋ ಒಂದು ಸರಕನ್ನು ವ್ಯಾಪಾರವನ್ನು ಮಾಡುವುದಕ್ಕೆ ಲೈಸೆನ್ಸ್ ಬೇಕೆಂದು ಅರ್ಜಿಯನ್ನು ಕೊಡುತ್ತಾನೆ ಎಂದು ಇಟ್ಟುಕೊಳ್ಳೋಣ. ಅದು ನನಗೆ ಗೊತ್ತಿಲ್ಲ ಎಂದುಕೊಳ್ಳೋಣ. ಆದರೆ ಅದು ಬಹಳ ಸಂಭವನೀಯವಾಗಿರಬಹುದು. ಮಂತ್ರಿ ಮೊದಲು ಬಂದವನ ಹ್ಯಾಟ್ ಅನ್ನು ನೋಡಬಹುದು. ಯಾವ ಬಣ್ಣದ ಹ್ಯಾಟನ್ನು ಅವನು ಹಾಕಿಕೊಂಡಿದ್ದಾನೆ? ಮಂತ್ರಿಗೆ ಇಷ್ಟವಾಗುವ ಹ್ಯಾಟನ್ನು ಅವನು ಹಾಕಿಕೊಂಡಿದ್ದರೆ, ಅವನು ತಮ್ಮ ಪಕ್ಷದವನೆ ಎಂದು ಅವನಿಗೆ ಖಾತರಿಯಾದರೆ, ಹಾಗೆಯೇ, ಅದೇ ರೀತಿ ಇನ್ನೊಬ್ಬ ಮನುಷ್ಯ ಇನ್ನೊಂದು ರೀತಿಯ ಬಟ್ಟೆಯನ್ನು ಹಾಕಿಕೊಂಡಿದ್ದರೆ, ಅಥವಾ ಇನ್ನೊಂದು ಪಕ್ಷಕ್ಕೆ ಸೇರಿದವನಾಗಿದ್ದರೆ, ಲೈಸನ್ಸ್ ಅನ್ನು ಮೊದಲನೆಯವನಿಗೆ ಕೊಟ್ಟು ಎರಡನೆಯವನಿಗೆ ನಿರಾಕರಿಸಬಹುದು. ಇಲ್ಲಿ ಇಬ್ಬರು ಮನುಷ್ಯರೂ ಲೈಸೆನ್ಸ್ ಪಡೆಯುವುದಕ್ಕೆ ಸಮಾನ ಅರ್ಹತೆ ಇದ್ದವರು. ಇದು ಕಂಡ ಹಾಗೆಯೇ ತಾರತಮ್ಯ. ಇಲ್ಲಿ ಸಮಾನ ನ್ಯಾಯ ಎನ್ನುವುದೇ ಇಲ್ಲ. ಹೌದು, ಲೈಸೆನ್ಸ್ ಕೊಡುವುದು, ಅಥವ ಈ ಸವಲತ್ತನ್ನು ಕೊಡುವುದು ಆ ಸವಲತ್ತನ್ನು ಕೊಡುವುದು. ಒಂದು ಸಣ್ಣ ವಿಷಯ. ಅದು ಒಂದು ಸಣ್ಣ ವರ್ಗದ ಜನರನ್ನು ಮಾತ್ರ ತಟ್ಟಬಹುದು. ಆದರೆ ನಾವು ಇನ್ನೂ ಮುಂದಕ್ಕೆ ಹೋಗೋಣ. ಇಂಥ ತಾರತಮ್ಯದ ಆಡಳಿತದ ಒಳ ಹೊಕ್ಕರೆ ಏನಾಗುತ್ತದೆ ಎಂದು ನೋಡೋಣ. ಒಂದು ನಿರ್ದಿಷ್ಟ ಪಕ್ಷಕ್ಕೆ ಸೇರಿದ ಸದಸ್ಯನೊಬ್ಬನನ್ನು ಒಂದು ನಿರ್ದಿಷ್ಟ ಅಪರಾಧದ ಆಪಾದನೆಯ ಮೇಲೆ ಅಭಿಯೋಜನೆ ಮಾಡಲಾಗುತ್ತಿದೆಯೆಂದು ಇಟ್ಟುಕೊಳ್ಳೋಣ, ಅವನ ವಿರುದ್ಧ ಸಾಕಷ್ಟು ಸಾಕ್ಷ್ಯವಿದೆ. ಆ ನಿರ್ದಿಷ್ಟ ಕ್ಷೇತ್ರದಲ್ಲಿರುವ ಪಕ್ಷದ ಮುಖ್ಯಸ್ಥ ಅಲ್ಲಿಯ ಜಿಲ್ಲಾ ಮ್ಯಾಜಿಸ್ಟ್ರೇಟರ ಬಳಿಗೆ ಹೋಗಿ ತಮ್ಮ ಪಕ್ಷಕ್ಕೆ ಸೇರಿದ ಆ ಮನುಷ್ಯನನ್ನು ಅಭಿಯೋಜನೆ ಮಾಡುವುದು ಸರಿಯಲ್ಲ. ಒಂದು ವೇಳೆ ನೀವು ನಾನು ಹೇಳಿದ ಹಾಗೆ ಕೇಳದಿದ್ದರೆ ನಾನು ಸಂಬಂಧಪಟ್ಟ ಮಂತ್ರಿಯವರ ಬಳಿ ಹೋಗಿ ನಿನ್ನನ್ನು ಇಲ್ಲಿಂದ ವರ್ಗ ಮಾಡಿಸುತ್ತೇನೆ ಎನ್ನುತ್ತಾನೆ ಎಂದು ಇಟ್ಟುಕೊಳ್ಳಿ. ಇದರಿಂದಾಗಿ ಆಡಳಿತದಲ್ಲಿ ಎಷ್ಟು ಕೋಲಾಹಲ ಎಷ್ಟು ಅನ್ಯಾಯ ಆಗುತ್ತದೆ ಎಂಬುದು ನಿಮ್ಮ ಊಹೆಗೆ ಬಿಟ್ಟಿದ್ದು. ಇಂತ ಸಂಗತಿ ಅಮೆರಿಕಾದಲ್ಲಿಯೂ ಸಂಭವಿಸುತ್ತಿತ್ತು. ಇದನ್ನು ಅಲ್ಲಿ ಸ್ಪಾಯಿಲ್ ಸಿಸ್ಟಮ್ (spoil system) ಎಂದು ಕರೆಯಲಾಗುತ್ತದೆ. ಇದರ ಅರ್ಥ ಒಂದು ಪಕ್ಷ ಅಧಿಕಾರಕ್ಕೆ ಬಂದರೆ, ಅದಕ್ಕೆ ಮುಂಚೆ ಅಧಿಕಾರದಲ್ಲಿದ್ದ ಪಕ್ಷ ನೇಮಕ ಮಾಡಿದ ಎಲ್ಲಾ ನೌಕರರನ್ನು ಗುಮಾಸ್ತರುಗಳೂ ಸೇರಿದಂತೆ ತೆಗೆದು ಹಾಕಿ, ಖಾಲಿಯಾದ ಹುದ್ದೆಗಳನ್ನು ತಮ್ಮ ಪಕ್ಷ ಅಧಿಕಾರಕ್ಕೆ ಬರಲು ಸಹಾಯ ಮಾಡಿದ ಮಹನೀಯರುಗಳಿಂದ ಭರ್ತಿ ಮಾಡುತ್ತಿತ್ತು. ಅನೇಕ ವರ್ಷಗಳವರೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಹೇಳಿಕೊಳ್ಳುವಂಥ

ಆಡಳಿತವೇನೂ ಇರಲಿಲ್ಲ. ಆ ನಂತರದಲ್ಲಿ, ಇದು ಪ್ರಜಾಪ್ರಭುತ್ವಕ್ಕೆ ಸಹಕಾರಿಯಲ್ಲ ಎಂದು ಅವರಿಗೇ ಅರ್ಥವಾಯಿತು. ಈ ಸ್ಪಾಯಿಲ್ ಸಿಸ್ಟಮ್ ಅನ್ನು ಅವರು ರದ್ದುಪಡಿಸಿದರು. ಇಂಗ್ಲೆಂಡಿನಲ್ಲಿ ಆಡಳಿತವನ್ನು ಪರಿಶುದ್ಧವಾಗಿ, ಪಕ್ಷಪಾತವಿಲ್ಲದೆ, ರಾಜಕೀಯದಿಂದ ಹಾಗೂ ರಾಜಕೀಯ ನೀತಿಯಿಂದ ದೂರವಿಡಲು ಅವರು ರಾಜಕೀಯ ಅಧಿಕಾರಗಳು ಮತ್ತು ನಾಗರೀಕ ಅಧಿಕಾರಗಳ ಮಧ್ಯೆ ಒಂದು ವ್ಯತ್ಯಾಸವನ್ನು ಗುರುತಿಸಿದ್ದಾರೆ. ನಾಗರಿಕ ಸೇವೆಗಳು ಶಾಶ್ವತ ಸ್ವಭಾವದ ಸೇವೆಗಳು. ಅಧಿಕಾರದಲ್ಲಿರುವ ಎಲ್ಲಾ ಪಕ್ಷಗಳಿಗೂ, ಮಂತ್ರಿಯಿಂದ ಯಾವುದೇ ಮಧ್ಯ ಪ್ರವೇಶವಿಲ್ಲದೆ ಅದು ಸೇವೆಯನ್ನು ಸಲ್ಲಿಸುತ್ತದೆ. ಬ್ರಿಟಿಷರು ಇಲ್ಲಿ ಇದ್ದಾಗ ನಮ್ಮ ದೇಶದಲ್ಲಿ ಇಂಥದೊಂದು ಸನ್ನಿವೇಶ ಅಸ್ತಿತ್ವದಲ್ಲಿ ಇದ್ದಿತು. ನಾನು ಭಾರತ ಸರ್ಕಾರದ ಸೇವೆಯಲ್ಲಿ ಇದ್ದಾಗ ನನ್ನದೇ ವೃತ್ತಿಯಲ್ಲಿ ನಡೆದ ಒಂದು ಸಂಗತಿಯನ್ನು ಚೆನ್ನಾಗಿ ನೆನಪಿಸಿಕೊಳ್ಳುತ್ತೇನೆ. ನಿಮಗೆ ಬಹುಶಃ ನೆನಪಿರುವ ಹಾಗೆ ಪ್ರತಿಯೊಬ್ಬ ವೈಸ್ರಾಯ್ಗೆ ದೆಹಲಿಯಲ್ಲಿ ಒಂದು ರಸ್ತೆಗೋ ಅಥವಾ ಒಂದು ಕ್ಲಬ್ಬಿಗೋ ಅವನ ಹೆಸರು ಇರುತ್ತದೆ. ಅವನ ಹೆಸರು ಯಾವುದೇ ರಸ್ತೆಗಾಗಲೀ ಅಥವಾ ಒಂದು ಸಂಸ್ಥೆಗಾಗಲೀ ಅಂಟಿಕೊಳ್ಳದೇ ಇದ್ದ ಒಬ್ಬನೇ ಗವರ್ನರ್ ಜನರಲ್ ಅಂದರೆ ಲಾರ್ಡ್ ಲಿನ್ಲಿತ್ಗೋ. ಅವರ ಖಾಸಗಿ ಕಾರ್ಯದರ್ಶಿ ನನ್ನ ಸ್ನೇಹಿತರಾಗಿದ್ದರು. ನಾನು ಆಗ ಪಿ.ಡಬ್ಲ್ಯೂ.ಡಿ ಖಾತೆಯನ್ನು ನಿರ್ವಹಿಸುತ್ತಿದ್ದೆ. ಅನೇಕ ಕೆಲಸಗಳು ನನ್ನ ಸುಫರ್ದಿನಲ್ಲಿ ಇದ್ದವು. ಆ ಕಾರ್ಯದರ್ಶಿ ನನ್ನನಲ್ಲಿಗೆ ಸದ್ದಿಲ್ಲದೆ ಬಂದು, ನನ್ನ ಪ್ರಿಯ ಡಾಕ್ಟರ್ ಅವರೇ, ಯಾವುದಾದರೊಂದು ಸಂಸ್ಥೆಗೋ ಅಥವಾ ಕೆಲಸಕ್ಕೋ ಲಾರ್ಡ್ ಲಿನ್ಲಿತ್ಗೋ ಅವರ ಹೆಸರನ್ನಿಡಲು ಏನಾದರೂ ಮಾಡುತ್ತೀರ ಎಂದು ಕೇಳಿದರು. 'ಎಲ್ಲರ ಹೆಸರೂ ಅಲ್ಲಿದೆ, ಆದರೆ ಅವರ ಹೆಸರು ಅಲ್ಲಿ ಇರದೇ ಇರುವುದು ಕಣ್ಣಿಗೆ ರಾಚುವಂತೆ ಇದೆ' ಎಂದು ಹೇಳಿದರು. 'ನಾನು ಪರಿಗಣಿಸುತ್ತೇನೆ' ಎಂದು ನಾನು ಹೇಳಿದೆ. ಬೇಸಿಗೆಯಲ್ಲಿ ದೆಹಲಿ ನೀರಿಲ್ಲದೆ ಒಣಗೆ ಹೋಗುತ್ತದೆ. ಆಗ ಜಮುನ ನದಿಗೆ ಬ್ಯಾರೇಜ್ ಒಂದನ್ನು ಕಟ್ಟಿ ದೆಹಲಿಗೆ ನೀರು ಕೊಡುವ ವಿಷಯವನ್ನು ಚರ್ಚೆ ಮಾಡುತ್ತಿದ್ದೆ. ಆಗ ನನ್ನ ಕಾರ್ಯದರ್ಶಿಯಾಗಿದ್ದವನು ಪ್ರಯರ್ ಎಂಬ ಹೆಸರಿನ ಐರೋಪ್ಯ (ಯೂರೋಪಿಯನ್). ಪ್ರಯರ್ ಅನ್ನು ಕರೆದು ನಾನು ಅವನಿಗೆ ಹೇಳಿದೆ: ಮಿ: ಪ್ರಯರ್ ಇಲ್ಲಿ ನೋಡಿ, ಗವರ್ನರ್ ಜನರಲ್ ಅವರ ಕಾರ್ಯದರ್ಶಿ ನನಗೆ ಹೀಗೆ ಹೇಳಿದ್ದಾರೆ. ನಾವು ಏನನ್ನಾದರೂ ಮಾಡಲು ಸಾಧ್ಯವೇ ಎಂದು ನಿಮಗೆ ಅನಿಸುತ್ತದೆಯೇ 'ಅವನು ಕೊಟ್ಟ ಉತ್ತರ ಏನಾಗಿತ್ತು ಎಂದು ನೀವು ಊಹಿಸಬಲ್ಲಿರಾ' ಅವನ ಉತ್ತರ: 'ಸರ್, ಇಂಥದನ್ನೇನಾದರೂ ನಾವು ಮಾಡಲೇಬಾರದು' ಏನೇ ಆಗಲೀ ಇಂಥದನ್ನೇನಾದರೂ, ಈ ದೇಶದಲ್ಲಿ ಮಾಡಲು ಅಸಾಧ್ಯ. ಮಂತ್ರಿಯವರ ಇಚ್ಚೆಗೆ ವಿರುದ್ಧವಾಗಿ ಒಬ್ಬ ಅಧಿಕಾರಿ ಏನನ್ನಾದರೂ ಹೇಳುವುದು, ನನಗೆ ತೋಚುವಂತೆ ಖಂಡಿತಾ ಅಸಾಧ್ಯ. ಆ ದಿನಗಳಲ್ಲಿ ಅದು ನಿಜವಾಗೂ ಅಸಾಧ್ಯವಾಗಿತ್ತು. ಏಕೆಂದರೆ, ಭಾರತದಲ್ಲಿನ ನಾವೂ ಕೂಡಾಗ್ರೇಟ್ ಬ್ರಿಟನ್ನಿನಂತೆ ಆಡಳಿತದಲ್ಲಿ ಸರ್ಕಾರ ತಲೆಹಾಕಬಾರದು ಎಂಬ ಬುದ್ಧಿವಂತ ತೀರ್ಮಾನವನ್ನು ತೆಗೆದುಕೊಂಡಿದ್ದೆವು; ಸರ್ಕಾರದ ಕೆಲಸವೆಂದರೆ, ನೀತಿಯನ್ನು ಮಾಡುವವದಷ್ಟೇ ಮಾತ್ರ; ಅವರು ಆಡಳಿತದಲ್ಲಿ ತಲೆಹಾಕ ಬಾರದು ಮತ್ತು ಯಾವುದೇ ಪಕ್ಷಪಾತವನ್ನು ಮಾಡಬಾರದು. ಇದು ಒಂದು ಮೂಲಭೂತ ವಿಷಯವಾಗಿತ್ತು, ಆದರೆ ನಾವೀಗ ಅದರಿಂದ ಆಗಲೇ ದೂರ ಸರಿದಿದ್ದೇವೆ. ನಾವು ಪಾಲಿಸುತ್ತಿದ್ದ ಈ ನೀತಿಯನ್ನು ಸಂಪೂರ್ಣವಾಗಿ ರದ್ದು ಮಾಡಿಬಿಟ್ಟಿದ್ದೇವೆ.

**ನಿಯಮ ನಂ: IV**

ನಾಲ್ಕನೆಯ ಪೂರ್ವಭಾವಿ ನಿಯಮವೆಂದರೆ, ನನ್ನ ತೀರ್ಮಾನದಲ್ಲಿ– ಪ್ರಜಾಪ್ರಭುತ್ವ ಜಯಪ್ರದವಾಗಿ ಕೆಲಸ ಮಾಡಬೇಕಾದರೆ ಸಾಂವಿಧಾನಿಕ ನೈತಿಕತೆಯನ್ನು ಆಚರಿಸುವುದೇ ಆಗಿದೆ. ಅನೇಕ ಜನ ಸಂವಿಧಾನದ

ಬಗ್ಗೆ ಬಹಳ ಉತ್ಸಾಹಭರಿತರಾಗಿ ಇರುವುದು ಕಂಡು ಬರುತ್ತಿದೆ. ಸರಿ, ಆದರೆ ನನಗೇನೂ ಹಾಗಿಲ್ಲ. ಸಂವಿಧಾನವನ್ನು ರದ್ದುಪಡಿಸಬೇಕೆಂದು ಬಯಸುವ ಜನಗಳ ಗುಂಪನ್ನು ಸೇರಲು ನಾನೂ ಸಿದ್ಧನಿದ್ದೇನೆ, ಕಡೆಯ ಪಕ್ಷ ಅದನ್ನು ತಿದ್ದಿ ಬರೆಯುವುದಕ್ಕೆ. ಆದರೆ ಕಾನೂನಿನ ಉಪಬಂಧಗಳಿರುವ ನಮ್ಮ ಸಂವಿಧಾನ ಒಂದು ಬರಿಯ ಹಂದರ ಮಾತ್ರ ಎಂದು ನಾವು ಮರೆತಿದ್ದೇವೆ. ಆ ಹಂದರದ ಮೇಲಿರಬೇಕಾದ ಮಾಂಸ ಮಜ್ಜನ, ಸಾಂವಿಧಾನಿಕ ನೈತಿಕತೆ ಎಂದು ಏನನ್ನು ನಾವು ಕರೆಯುತ್ತೇವೆಯೋ ಅದರಲ್ಲಿ ಕಾಣ ಸಿಗುತ್ತದೆ. ಹೇಗಾದರೂ ಇಗ್ಲೆಂಡಿನಲ್ಲಿ ಅದನ್ನು ಸಂವಿಧಾನದ ಸಂಪ್ರದಾಯಗಳೆಂದು ಕರೆಯಲಾಗಿದೆ; ಮತ್ತು ಪ್ರಜೆಗಳು ಆಟದ ನಿಯಮಗಳನ್ನು ಪಾಲಿಸುವುದಕ್ಕೆ ಸಿದ್ಧವಾಗಿರಬೇಕು. ಈ ಕ್ಷಣದಲ್ಲಿ ನನ್ನ ನೆನಪಿಗೆ ಬರುವ ಒಂದೆರಡು ಉದಾಹರಣೆಗಳನ್ನು ನಿಮಗೆ ಕೊಡಬಯಸುತ್ತೇನೆ. ನಿಮಗೆ ನೆನಪಿರುವ ಹಾಗೆ ೧೩ ಅಮೆರಿಕಾದ ವಸಾಹತುಗಳು ದಂಗೆಯೆದ್ದಾಗ, ಅವರ ನಾಯಕನಾಗಿದ್ದವನು ವಾಶಿಂಗ್ಟನ್. ಅಂದಿನ ಅಮೆರಿಕಾದ ಜೀವನದಲ್ಲಿ ಅವನನ್ನು ಕೇವಲ ಒಬ್ಬ ನಾಯಕನೆಂದು ಹೇಳುವುದು ನಿಜವಾಗಿಯೂ ಬಹಳ ಅಸಮರ್ಪಕವಾಗುತ್ತದೆ. ಅಮೆರಿಕಾದ ಜನರಿಗೆ ವಾಶಿಂಗ್‌ಟನ್ ಒಬ್ಬ ದೇವರು. ಅವನ ಜೀವನ ಚರಿತ್ರೆಯನ್ನು ನೀವು ಓದಿ: ಸಂವಿಧಾನದ ರಚನೆಯಾದ ಮೇಲೆ ಅವನನ್ನು ಅಮೆರಿಕಾದ ಮೊದಲನೆ ಅಧ್ಯಕ್ಷನನ್ನಾಗಿ ಮಾಡಲಾಯಿತು. ಅವನ ಅವಧಿ ಮುಗಿದ ಮೇಲೆ ಏನಾಯಿತು? ಅವನು ಎರಡನೆಯ ಬಾರಿಗೆ ನಿಂತುಕೊಳ್ಳಲು ನಿರಾಕರಿಸಿದ. ವಾಶಿಂಗ್ಟನ್ ಏನಾದರೂ ಅಧ್ಯಕ್ಷ ಪದವಿಗೆ ಒಂದಾದ ಮೇಲೆ ಒಂದರಂತೆ ಹತ್ತು ಸಾರಿ ನಿಂತಿದ್ದರೂ ಅವನನ್ನು ಒಬ್ಬ ಪ್ರತಿಸ್ಪರ್ಧಿಯೂ ಇಲ್ಲದೆ ಸರ್ವಾನುಮತದಿಂದ ಚುನಾಯಿಸಲಾಗುತ್ತಿತ್ತೆಂಬುದರಲ್ಲಿ ನನಗೆ ಒಂದು ಚಿಕ್ಕ ಸಂಶಯವೂ ಇಲ್ಲ. ಆದರೆ ಎರಡನೆಯ ಸಲ ಬೇಡ ಎಂದು ಅವರು ಕೆಳಗಿಳಿದು ಬಿಟ್ಟರು. ಏಕೆ ಹೀಗೆ ಎಂದು ಅವರನ್ನು ಕೇಳಿದಾಗ, ಅವರು ಹೇಳಿದರು: 'ನನ್ನ ಪ್ರಿಯ ಜನಗಳೇ, ಸಂವಿಧಾನವನ್ನು ಯಾವ ಉದ್ದೇಶ ಇಟ್ಟುಕೊಂಡು ಮಾಡಿದ್ದೇವೆ ಎಂಬುದನ್ನು ನೀವು ಮರೆತು ಬಿಟ್ಟಿದ್ದೀರಿ. ನಮಗೆ ಒಂದು ವಂಶಪಾರಂಪರ್ಯದ ಚಕ್ರಾಧಿಪತ್ಯವಾಗಲೀ, ಒಬ್ಬ ವಂಶಪಾರಂಪರ್ಯದ ರಾಜನಾಗಲೀ ಅಥವ ಸರ್ವಾಧಿಕಾರಿಯಾಗಲೀ ಬೇಡ ಎನ್ನುವ ಕಾರಣಕ್ಕಾಗಿ. ಇಂಗ್ಲಿಷ್ ದೊರೆಯ ಮೇಲಿದ್ದ ಸ್ವಾಮಿನಿಷ್ಠೆಯನ್ನು ತೊರೆದುಬಿಟ್ಟಮೇಲೆ, ಅದರಿಂದ ದೂರ ಸರಿದ ಮೇಲೆ, ಈ ದೇಶಕ್ಕೆ ನೀವು ಬಂದು, ವರ್ಷ ವರ್ಷವೂ, ಪ್ರತಿ ಅವಧಿಗೂ ನಾನೇ ಇರಬೇಕೆಂದು ನನ್ನನ್ನು ಪೂಜಿಸಿದರೆ. ನಿಮ್ಮ ನೀತಿನಿಯಮಗಳು ಏನಾದವು? ಇಂಗ್ಲಿಷ್ ದೊರೆಯ ಸರ್ವಾಧಿಕಾರದ ವಿರುದ್ಧ ದಂಗೆ ಎದ್ದು, ಅವನಿದ್ದ ಜಾಗಕ್ಕೆ ನನ್ನನ್ನು ತಂದು ಕೂರಿಸುವುದಾದರೆ ನೀವು ಮಾಡಿದ್ದು ಸರಿಯೇ ಎಂದು ನಿಮಗೆ ಅನಿಸುತ್ತದಯೇ? ನನಗೆ ನಿಮ್ಮ ನಿಷ್ಠೆ, ನಿಮ್ಮ ನಂಬಿಕೆ ನಿಮ್ಮನ್ನು ನಾನು ಎರಡನೆಯ ಬಾರಿಗೆ ನಿಲ್ಲಬೇಕೆಂದು ಕೇಳಲು ಒತ್ತಾಯ ಮಾಡಿದರೆ, ನಮಗೆ ವಂಶ ಪಾರಂಪರ್ಯದ ಅಧಿಕಾರ ಬೇಡವೇ ಬೇಡವೆಂಬ ನೀತಿಯನ್ನು ಸ್ಪಷ್ಟವಾಗಿ ಹೇಳಿದ. ನಾನು ನಿಮ್ಮ ಭಾವೋದ್ವೇಗಕ್ಕೆ ಬೇಟೆಯಾಗಬಾರದು. ಕಟ್ಟಕಡೆಗೆ, ಎರಡನೆಯ ಬಾರಿಯಾದರೂ ನಿಲ್ಲಬೇಕೆಂದು ಅವನ ಮನವೊಲಿಸಿದ ಮೇಲೆ, ಅವನು ಒಪ್ಪಿಕೊಂಡ. ಮತ್ತೆ ಮೂರನೆಯ ಬಾರಿಗೆ ಅವರು ಅವನನ್ನು ಸಮೀಪಿಸಿದಾಗ ಅವನು ಅವರನ್ನು ಹಿಂದೆ ಕಳುಹಿಸಿಬಿಟ್ಟ. ನಿಮಗೆ ಇನ್ನೊಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ನಿಮಗೆ VIIIಎಂಟನೆಯ ವಿಂಡ್ಸರ್ ಎಡ್ವರ್ಡ್ ಯಾರು ಎಂದು ಗೊತ್ತಿದೆ. ಅವನ ಕಥೆಯನ್ನು ಸರಣಿಯಾಗಿ ಟೈಮ್ಸ್ ಆಫ್ ಇಂಡಿಯಾ ಪ್ರಕಟಿಸಿದೆ. ನಾನು ದುಂಡು ಮೇಜಿನ ಸಮ್ಮೇಳನಕ್ಕೆ ಹೋದಾಗ ಆಲ್ಲಿ ಒದು ದೊಡ್ಡ ವಿವಾದ ಹತ್ತಿಕೊಂಡಿತ್ತು. ಅದೆಂದರೆ ದೊರೆಯನ್ನು ಅವನು ಮದುವೆಯಾಗಬೇಕೆಂದು ಬಯಸಿದ ಸ್ತ್ರೀಯನ್ನು, ಅದರಲ್ಲೂ ಕೆಳದರ್ಜೆಗೆ ಸೇರಿದ ಸಾಮಾನ್ಯ ಪ್ರಜೆಯನ್ನು

ಮದುವೆಯಾಗಲು ಅನುಮತಿಸಬೇಕೇ ಎಂದು. ಇದರಿಂದ ಅವಳು ರಾಣಿಯಾಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅಥವಾ ಬ್ರಿಟಿಷ್ ಪ್ರಜೆಗಳು ಅವನಿಗೆ ಅವನ ವೈಯುಕ್ತಿಕ ಹಕ್ಕನ್ನೂ ನಿರಾಕರಿಸಿ ಅವನು ಸಿಂಹಾಸನ ತ್ಯಾಗವನ್ನು ಮಾಡುವಂತೆ ಬಲವಂತ ಮಾಡುವುದೇ?. ಮಿ: ಬಾಲ್ಡ್ವಿನ್ ಅವರು ದೊರೆಯ ಮದುವೆಯ ವಿರುದ್ಧವಾಗಿ ಇದ್ದರು. ನಾನು ನಿಮ್ಮನ್ನು ಮದುವೆಯಾಗುವುದಕ್ಕೆ ಬಿಡುವುದಿಲ್ಲ, ನನ್ನ ಮಾತನ್ನು ನೀವು ಕೇಳದಿದ್ದರೆ, ನೀವು ಹೋಗಲೇ ಬೇಕಾಗುತ್ತದೆ. ನಮ್ಮ ಸ್ನೇಹಿತರಾದ ಮಿ: ಚರ್ಚಿಲ್ ಅವರು VIIIನೇ ಎಡ್ವರ್ಡ್ ಅವರ ಸ್ನೇಹಿತರಾಗಿದ್ದರು. ಅವರನ್ನು ಪ್ರೋತ್ಸಾಹಿಸುತ್ತಿದ್ದರು. ಆ ಸಮಯದಲ್ಲಿ ಲೇಬರ್ ಪಕ್ಷ ವಿರೋಧ ಪಕ್ಷವಾಗಿತ್ತು. ಅವರಿಗೆ ಬಹುಮತವಿರಲಿಲ್ಲ ಅವರು ಇದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಬಾಲ್ಡ್ವಿನ್ ಅವರನ್ನು ಏಕೆ ಸೋಲಿಸಬಾರದು ಎಂದು ಯೋಚಿಸುತ್ತಿದ್ದರು.; ಕಾರಣವೆಂದರೆ, ರಾಜನಿಗೆ ನಿಷ್ಠೆಯಿಂದ ಇದ್ದ ಅನೇಕ ಕನ್ಸರ್ವೇಟಿವ್ ಸದಸ್ಯರು ದೊರೆಗೆ ಬೆಂಬಲ ಕೊಡಬೇಕೆಂದು ಬಯಸಿದ್ದರು.; ನನಗೆ ನೆನಪಿರುವ ಹಾಗೆ ದಿವಂಗತ ಪ್ರೊ: ಲಾಸ್ಕಿ ಅವರು 'ಹೆರಾಲ್ಡ್' ಪತ್ರಿಕೆಯಲ್ಲಿ ಒಂದು ಸರಣಿ ಲೇಖನಗಳನ್ನು ಬರೆದು ಲೇಬರ್ ಪಕ್ಷದ ಇಂಥ ಒಂದು ನಡೆಯನ್ನು ಖಂಡಿಸಿದರು. 'ನಮ್ಮ ಸಂಪ್ರದಾಯದಂತೆ, ದೊರೆ ಪ್ರಧಾನ ಮಂತ್ರಿಯವರ ಸಲಹೆಯನ್ನು ಮನ್ನಿಸಲೇಬೇಕೆಂದು ನಾವು ಯಾವಾಗಲೂ ಒಪ್ಪಿಕೊಂಡಿದ್ದೇವೆ.; ಪ್ರಧಾನ ಮಂತ್ರಿಯವರ ಸಲಹೆಯನ್ನು ಒಪ್ಪಿಕೊಳ್ಳದಿದ್ದರೆ, ಆಗ ಪ್ರಧಾನ ಮಂತ್ರಿಯವರು ಅವರನ್ನು ಬಲವಂತವಾಗಿ ಹೊರ ತಳ್ಳುತ್ತಾರೆ. ಸಂಪ್ರದಾಯ ಹೀಗೆ ಇದ್ದು, ದೊರೆಯ ಅಧಿಕಾರವನ್ನು ಹೆಚ್ಚಿಸುವ ವಿವಾದಾಂಶದ ಮೇಲೆ ಬಾಲ್ಡ್ವಿನ್ ಅವರನ್ನು ಸೋಲಿಸುವುದು ತಪ್ಪಾಗುತ್ತದೆ. ಕಡೆಗೆ ಲಾಸ್ಕಿ ಅವರ ಸಲಹೆಗೆ ಮಣಿದು, ಅವರು ಮಾಡಬೇಕೆಂದುಕೊಂಡಿದ್ದನ್ನು ಮಾಡಲಿಲ್ಲ. ಆಟದ ನಿಯಮಗಳನ್ನು ನಾವು ಪಾಲಿಸಲೇಬೇಕೆಂದು ಅವರು ಹೇಳಿದರು. ನೀವು ಇಂಗ್ಲಿಷ್ ಚರಿತ್ರೆಯನ್ನು ಓದಿದರೆ, ಇಂಥ ಅನೇಕ ಉದಾಹರಣೆಗಳು ನಿಮಗೆ ಸಿಗುತ್ತವೆ; ಅಲ್ಲಿ ಪಕ್ಷದ ನಾಯಕರುಗಳಿಗೆ ಅಧಿಕಾರದಲ್ಲಿರುವ ತಮ್ಮ ವಿರೋಧ ಪಕ್ಷ್ವದವರಿಗೆ, ಅಥವಾ ಯಾವುದಾದರೊಂದು ವಿವಾದವನ್ನು ಹಿಡಿದುಕೊಂಡು ವಿರೋಧ ಪಕ್ಷದವರಿಗೆ ಕೆಡಕನ್ನುಂಟು ಮಾಡಲು ಬಹಳಷ್ಟು ಪ್ರಲೋಭನೆ ಇರುತ್ತಿತ್ತು. ಇದು ಅವರಿಗೆ ತಾತ್ಕಾಲಿಕ ಅಧಿಕಾರವನ್ನು ಕೊಟ್ಟರೂ ಸಹ ಅವರು ಅದಕ್ಕೆ ಬೇಟೆಯಾಗಲು ನಿರಾಕರಿಸಿದರು; ಏಕೆಂದರೆ ಅವರು ಹಾಗೆ ಮಾಡಿದ್ದೇ ಆದರೆ ಸಂವಿಧಾನಕ್ಕೂ, ಪ್ರಜಾಪ್ರಭುತ್ವಕ್ಕೂ ನಷ್ಟವನ್ನುಂಟು ಮಾಡಿರುತ್ತಿದ್ದರು.

ಪ್ರಜಾಪ್ರಭುತ್ವ ಸಮರ್ಪಕವಾಗಿ ಕೆಲಸ ಮಾಡಬೇಕಾದರೆ, ಅತ್ಯವಶ್ಯಕವಾದ ಇನ್ನೊಂದು ನಿಯಮವಿದೆ, ಅದೆಂದರೆ, ಪ್ರಜಾ ಪ್ರಭುತ್ವದ ಹೆಸರಿನಲ್ಲಿ ಅಲ್ಪ ಸಂಖ್ಯಾತರ ಮೇಲೆ ಬಹು ಸಂಖ್ಯಾತರ ದಬ್ಬಾಳಿಕೆ ಇರಲೇಬಾರದು. ಬಹು ಸಂಖ್ಯಾತರು ಸರ್ಕಾರವನ್ನು ನಡೆಸುತ್ತಿದ್ದರೂ ಅಲ್ಪಸಂಖ್ಯಾತರಿಗೆ ತಾವು ಕ್ಷತಿಗೊಳಗಾಗುತ್ತಿಲ್ಲ ಅಥವಾ ನಮ್ಮನ್ನು ಮರ್ಮಾಘಾತಕ್ಕೆ ಗುರಿ ಪಡಿಸುತ್ತಿಲ್ಲ ಎಂದು, ನಾವು ಕ್ಷೇಮವಾಗಿದ್ದೇವೆಂಬ ಭಾವನೆ ಬರಲೇಬೇಕು. ಕಾಮನ್ಸ್ ಸಭೆಯಲ್ಲಿ ಇದಕ್ಕೆ ಬಹಳ ಗೌರವ ಕೊಡಲಾಗುತ್ತಿದೆ. ೧೯೩೧ರಲ್ಲಿ ರಾಮ್ಸೆ ಮೆಕ್ಡೊನಾಲ್ಡ್ ಅವರು ಲೇಬರ್ ಪಕ್ಷವನ್ನು ತೊರೆದು ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಿದ್ದು ನಿಮ್ಮಲ್ಲಿ ಬಹಳ ಮಂದಿಗೆ ನೆನಪಿರಬೇಕು.ಚುನಾವಣೆ ಬಂದಾಗ, ೬೫೦ ಸದಸ್ಯರ ಸಂಖ್ಯೆ ಇದ್ದ ಸದನದಲ್ಲಿ, ೧೫೦ ಮಂದಿ ಸದಸ್ಯರಿದ್ದ ಲೇಬರ್ ಪಕ್ಷದಲ್ಲಿ ಕೇವಲ ೫೦ ಜನ ಸದಸ್ಯರು ಉಳಿದುಕೊಂಡಿದ್ದರು. ಆಗ ಮಿ: ಬಾಲ್ಡ್ವಿನ್ ಅವರು ಪ್ರಧಾನ ಮಂತ್ರಿಗಳಾಗಿದ್ದರು. ಆಗ ನಾನು ಅಲ್ಲಿ ಇದ್ದೆ. ಅಗಾಧವಾದ ಸಂಖ್ಯೆಯಲ್ಲಿ ಇದ್ದ ಕನ್ಸರ್ವೇಟಿವ್ ಸದಸ್ಯರ ಕೆಳಗೆ ಲೇಬರ್ ಪಕ್ಷಕ್ಕೆ ಸೇರಿದ ಕೇವಲ ೫೦ ಮಂದಿ ಸದಸ್ಯರು ಇದ್ದರು. ಅವರು ಯಾವತ್ತೂ ತಮ್ಮ ವಾಕ್ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿದೆಯೆಂದಾಗಲೀ,

ವಿರೋಧ ಪಕ್ಷವಾಗಿ ತಮ್ಮ ಹಕ್ಕನ್ನು ನಿರಾಕರಿಸಲಾಗಿದೆಯೆಂದಾಗಲೀ, ಅಥವಾ ಯಾವುದೇ ಪ್ರಸ್ತಾವಗಳನ್ನು ಮಾಡದಂತೆ ತಡೆಯಲಾಗಿದೆಯೆಂದಾಗಲೀ ದೂರು ಮಾಡಲಿಲ್ಲ. ನಿಮ್ಮದೇ ಪಾರ್ಲಿಮೆಂಟನ್ನು ತೆಗೆದುಕೊಳ್ಳಿ. ವಿರೋಧ ಪಕ್ಷದ ಸದಸ್ಯರು ನಿರಂತರವಾಗಿ ಖಂಡನಾ ನಿರ್ಣಯಗಳನ್ನಾಗಲೀ, ನಿಲುವಳಿ ಸೂಚನೆಯ ಪ್ರಸ್ತಾವಗಳನ್ನಾಗಲೀ ತರುತ್ತಿದ್ದಾರೆಂದು ನಾನು ದೋಶಾರೋಪ ಮಾಡುತ್ತಿಲ್ಲ. ಆದರೂ ಸಹ, ಯಾವುದೇ ಪ್ರಸ್ತಾವಗಳನ್ನು, ಅವು ಖಂಡನಾ ನಿರ್ಣಯವಾಗಲೀ ಅಥವಾ ನಿಲುವಳಿ ಸೂಚನೆಯ ಪ್ರಸ್ತಾವಗಳನ್ನಾಗಲೀ, ಚರ್ಚೆ ಮಾಡುವುದಕ್ಕೆ ಸ್ವೀಕರಿಸುತ್ತಿಲ್ಲ. ನನ್ನನ್ನು ಇದು ಬಹಳ ಆಶ್ಚರ್ಯಗೊಳಿಸುತ್ತದೆ. ಇಂಗ್ಲಿಷ್ ಸಂಸದೀಯ ಚರ್ಚೆಗಳನ್ನು ಓದುವಾಗ, ಸಭಾಪತಿಯವರು ಯಾವತ್ತೂ ನಿಲುವಳಿ ಸೂಚನೆ ಪ್ರಸ್ತಾವಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಬೇಡಿಕೆಯನ್ನು ನಿರಾಕರಿಸಿರುವ ಒಂದೇ ಪ್ರಕರಣವನ್ನು, ಅದು ಸರ್ಕಾರದ ಆದೇಶವಾಗಿರುವ ಸಂದರ್ಭವನ್ನು ಬಿಟ್ಟು, ನಾನು ನೋಡಿಲ್ಲ ನಾನು ಬೊಂಬಾಯಿಯ ಶಾಸನ ಸಭೆಯ ಸದಸ್ಯನಾಗಿದ್ದಾಗ ಅಲ್ಲಿ ನಮ್ಮ ಕೆಲವರು ಸ್ನೇಹಿತರು ಇದ್ದರು. ಮಿ: ಮೊರಾರ್ಜಿ, ಮಿ: ಮುನ್ಷಿ, ಮತ್ತು ಮಿ: ಖೇರ್ ಮತ್ತು ಅಧಿಕಾರದಲ್ಲಿದ್ದ ಇನ್ನು ಕೆಲವರು. ಅವರಿಗೆ ಯಾವತ್ತೂ ಒಂದೇ ಒಂದು ನಿಲುವಳಿ ಸೂಚನೆಯನ್ನು ಮಂಡಿಸಲು ಅನುಮತಿ ಕೊಡಲಿಲ್ಲ. ಆಗ ಸ್ಪೀಕರ್ ಆಗಿದ್ದ ಮಿ: ಮಾವಳಂಕರ್ ಅವರೂ ಸಹ ಸಹಾಯ ಮಾಡಲಿಲ್ಲ: ಇಲ್ಲ ಅವರು ಅದನ್ನು ತಳ್ಳಿ ಹಾಕುತ್ತಿದ್ದರು ಅಥವ ಸಚಿವರು ಅದಕ್ಕೆ ಆಕ್ಷೇಪಣೆ ಮಾಡುತ್ತಿದ್ದರು. ಸಚಿವರೊಬ್ಬರು ಅದಕ್ಕೆ ಆಕ್ಷೇಪಿಸಿದಾಗ ಏನಾಗುತ್ತದೆ ಎಂದು ನಿಮಗೆ ಗೊತ್ತಾ? ಮಂತ್ರಿಯೊಬ್ಬರು ನಿಲುವಳಿ ಸೂಚನೆ ಮಂಡಿಸಿದಾಗ ಆಕ್ಷೇಪಣೆ ಮಾಡಿದರೆ ಮಂಡಿಸಿದವರು ಮೂವತ್ತು ಅಥವಾ ನಲವತ್ತು ಮಂದಿ ಜನಗಳನ್ನು ಹಾಜರು ಪಡಿಸಬೇಕು. ಸರ್ಕಾರ ನಿರಂತರವಾಗಿ ನಿಲುವಳಿ ಸೂಚನೆಗೆ ವಿರೋಧವನ್ನು ವ್ಯಕ್ತಪಡಿಸಿದಾಗ ಕೆಲವೇ ಸದಸ್ಯರುಗಳಿಂದ ಪ್ರತಿನಿಧಿಸಲ್ಪಡುತ್ತಿರುವ ಒಂದು ಸಣ್ಣ ಸಮುದಾಯಕ್ಕೆ, ೫ ಅಥವಾ ೬, ಇಂಥ ಸಣ್ಣ ಅಲ್ಪಸಂಖ್ಯಾತರಿಗೆ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಯಾವತ್ತಿಗೂ ಸಿಗುವುದೇ ಇಲ್ಲ. ಆಗ ಏನಾಗುತ್ತದೆಯೆಂದರೆ, ಈ ಅಲ್ಪಸಂಖ್ಯಾತರು ಸಂಸದೀಯ ಜನಗಳ ಬಗ್ಗೆ ತಿರಸ್ಕಾರವನ್ನು ಬೆಳೆಸಿಕೊಳ್ಳುತ್ತಾರೆ, ಒಂದು ಸಾಂವಿಧಾನಿಕವಲ್ಲದ ಕ್ರಾಂತಿಕಾರಕ ಚೇತನವನ್ನು ಬೆಳೆಸಿಕೊಳ್ಳುತ್ತಾರೆ. ಆದುದರಿಂದ ಪ್ರಜಾ ಪ್ರಭುತ್ವ ಚಾಲನೆಯಲ್ಲಿ ಇರುವಾಗ, ಅದಕ್ಕೆ ಆಧಾರವಾಗಿರುವ ಬಹು ಸಂಖ್ಯಾತ ಪಕ್ಷ ದಬ್ಬಾಳಿಕೆಯನ್ನು ಮಾಡಬಾರದು.

ನಾನು ಇನ್ನೂ ಒಂದು ವಿಷಯವನ್ನು ಉಲ್ಲೇಖ ಮಾಡಿ ಮುಗಿಸುತ್ತೇನೆ. ಪ್ರಜಾ ಪ್ರಭುತ್ವಕ್ಕೆ ಸಮಾಜದಲ್ಲಿ ನೈತಿಕ ಶಿಸ್ತು ಕೆಲಸ ಮಾಡುವಂತೆ ಇರಬೇಕು. ಹೇಗೋ ಏನೋ, ನಮ್ಮ ರಾಜಕಿಯ ವಿಜ್ಞಾನಿಗಳು ಪ್ರಜಾಪ್ರಭುತ್ವದ ಈ ಮುಖವನ್ನು ಕುರಿತು ಯೋಚಿಸಿಯೇ ಇಲ್ಲ. ನೈತಿಕತೆ ಎನ್ನುವುದು ರಾಜಕೀಯದಿಂದ ಹೊರತಾಗಿದೆ. ನಿಮಗೆ ರಾಜಕೀಯ ಗೊತ್ತಿರಬಹುದು ಆದರೆ ನಿಮಗೆ ನೈತಿಕತೆ ಅಂದರೆ ಏನೇನೂ ಗೊತ್ತಿಲ್ಲದೇ ಇರಬಹುದು, ಏಕೆಂದರೆ, ನೈತಿಕತೆ ಇಲ್ಲದೆ ರಾಜಕೀಯ ಇರಬಲ್ಲುದು. ಇದು ಒಂದು ದಿಗ್ಭ್ರಮೆಗೊಳಿಸುವ ಪ್ರಸ್ತಾಪ. ಹೇಳಿ ಕೇಳಿ ಪ್ರಜಾ ಪ್ರಭುತ್ವದಲ್ಲಿ ಏನಾಗುತ್ತದೆ? ಮುಕ್ತ ಸರ್ಕಾರವೆಂಬಂತೆ ಪ್ರಜಾಪಭುತ್ವವನ್ನು ಕುರಿತು ಹೇಳಲಾಗುತ್ತದೆ. ಮುಕ್ತ ಸರ್ಕಾರವೆಂದರೆ ಸಾಮಾಜಿಕ ಜೀವನದ ನಾನಾ ಮುಖಗಳಲ್ಲಿ ಕಾನೂನಿನ ತೊಡಕಿಲ್ಲದೆ ಜನಗಳು ಮುಕ್ತವಾಗಿ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗಬಹುದಾಗಿದೆ; ಅಥವಾ ಕಾನೂನನ್ನು ಮಾಡಲೇ ಬೇಕಾಗಿದ್ದರೆ, ಆಗ ಕಾನೂನು ಕರ್ತ ನಿರೀಕ್ಷಿಸುವುದೇನೆಂದರೆ, ಕಾನೂನನ್ನು ಗೆಲ್ಲುವ ಹಾಗೆ ಮಾಡಲು ಸಮಾಜದಲ್ಲಿ ಸಾಕಷ್ಟು ನೀತಿ ಉಳಿದುಕೊಂಡಿರುತ್ತದೆ ಎಂದು. ಪ್ರಜಾ ಪ್ರಭುತ್ವದ ಈ ಮುಖವನ್ನು ಕುರಿತು ಪರಾಮರ್ಶಿಸಿರುವ ಒಬ್ಬನೇ

ವ್ಯಕ್ತಿ ಎಂದರೆ ಲಾಸ್ಕಿ. ಅವನ ಗ್ರಂಥಗಳಲ್ಲೊಂದರಲ್ಲಿ ಅವನು ಕಂಠೋಕ್ತವಾಗಿ ಹೇಳುವುದೇನೆಂದರೆ, ಪ್ರಜಾ ಪ್ರಭುತ್ವದಲ್ಲಿ ನೈತಿಕ ಶಿಸ್ತು ಯಾವಾಗಲೂ ಇದ್ದೇ ಇರುತ್ತದೆ ಎಂದು ಭಾವಿಸಿಕೊಳ್ಳಲಾಗುತ್ತದೆ. ನೈತಿಕ ಶಿಸ್ತು ಇಲ್ಲದಿದ್ದರೆ, ಈಗ ಬಹುಶಃ ನಮ್ಮ ದೇಶದಲ್ಲಿ ಆಗುತ್ತಿರುವ ಹಾಗೆ, ಪ್ರಜಾ ಪ್ರಭುತ್ವ ಚೂರು ಚೂರಾಗಿ ಹೋಗುತ್ತದೆ.

ನಾನು ಪರಾಮರ್ಶಿಸುವ ಕಡೆಯ ವಿಷಯವೆಂದರೆ, ಪ್ರಜಾ ಪ್ರಭುತ್ವಕ್ಕೆ ಜನಗಳ ಆತ್ಮ ಸಾಕ್ಷಿ ಬೇಕಾಗುತ್ತದೆ. ಪ್ರತಿಯೊಂದು ದೇಶದಲ್ಲೂ ಅನ್ಯಾಯವಿರುವುದರಲ್ಲಿ ಯಾವ ಅನುಮಾನವಿಲ್ಲದೇ ಇದ್ದರೂ, ಆ ಅನ್ಯಾಯ ಸಮಾನವಾಗಿ ಹರಡಿಕೊಂಡಿಲ್ಲ. ಕೆಲವು ಕಡೆ ಅನ್ಯಾಯದ ಪ್ರಭಾವ ಬಹಳ ಕಡಿಮೆಯಾಗಿರುತ್ತದೆ. ಮತ್ತೆ ಕೆಲವು ಕಡೆ ಅನ್ಯಾಯದ ಹೊರೆಯಿಂದಾಗಿ ಸಂಪೂರ್ಣವಾಗಿ ಜಜ್ಜಿ ಹೋಗಿರುತ್ತದೆ. ಇಂಗ್ಲೆಂಡಿನ ಜ್ಯೂಗಳ ಪ್ರಕರಣವನ್ನು ಸುಲಭವಾಗಿ ಉದಹರಿಸಬಹುದು. ಸ್ವಲ್ಪ ಮಟ್ಟಿಗೆ ಅನ್ಯಾಯದಿಂದ ನರಳಿದ ಜನಗಳು ಅವರು; ಆದರೆ ಕ್ರಿಶ್ಚಿಯನ್ನರು ಯಾವತ್ತೂ ಹಾಗೆ ನರಳಲಿಲ್ಲ. ಈ ಅನ್ಯಾಯವನ್ನು ತೊಡೆದು ಹಾಕಲು ಜ್ಯೂಗಳು ತಾವೊಬ್ಬರೇ ಹೆಣಗಬೇಕಾಯಿತು. ಆದರೆ ಇಂಗ್ಲಿಷ್ ಕ್ರಿಶ್ಚಿಯನ್ನರು ಎಂದಿಗೂ ಅವರಿಗೆ ಸಹಾಯ ಮಾಡಲಿಲ್ಲ.ವಾಸ್ತವವಾಗಿ ಅದು ಅವರಿಗೆ ಇಷ್ಟವಾಯಿತು. ಇಂಗ್ಲೆಂಡಿನ ಜ್ಯೂಗಳಿಗೆ ಸಹಾಯ ಮಾಡಿದ ಒಬ್ಬ ವ್ಯಕ್ತಿ ಎಂದರೆ, ಇಂಗ್ಲೆಂಡಿನ ರಾಜ. ಇದು ಅಸಾಧಾರಣವಾಗಿರಬಹುದು, ಆದರೆ ಕಾರಣವೂ ಸಹ ಅಸಾಧಾರಣವಾಗಿದೆ. ಕಾರಣ ಹೀಗಿದೆ: ಹಳೆಯ ಕ್ರಿಶ್ಚಿಯನ್ ಕಾನೂನಿನ ಕೆಳಗೆ ಜ್ಯೂಗಳ ಮಕ್ಕಳಿಗೆ ತಮ್ಮ ತಂದೆಯ ಆಸ್ತಿಯ ಮೇಲೆ ವಾರಸಾ ಹಕ್ಕಿರಲಿಲ್ಲ, ಅದಕ್ಕೆ ಬೇರೇನೂ ಕಾರಣವಲ್ಲದೆ, ಒಬ್ಬ ಜ್ಯೂ ಆಗಿದ್ದನೆಂದು, ಕ್ರಿಶ್ಚಿಯನ್ ಆಗಿರಲಿಲ್ಲವೆಂದು. ಹಾಗಾಗಿ ವಾರಸುದಾರರು ಇಲ್ಲದೆ, ನಿಧನ ಹೊಂದಿದ ಜ್ಯೂನ ಆಸ್ತಿ ದೊರೆಗೆ ಸೇರುತ್ತಿತ್ತು. ದೊರೆಗೂ ಇಂತಹುದೇ ಬೇಕಿತ್ತು. ಜ್ಯೂನ ಮಕ್ಕಳು ದೊರೆಯ ಬಳಿಗೆ ತಮ್ಮ ತಂದೆಯ ಆಸ್ತಿಯನ್ನು ಹಿಂದಿರುಗಿಸಬೇಕೆಂದು ಅರ್ಜಿಯನ್ನು ಕೊಟ್ಟಾಗ, ಆ ಅಸ್ತಿಯಲ್ಲಿ ಒಂದು ಚೂರನ್ನು ಮಾತ್ರ ಹಿಂದಿರುಗಿಸಿ ಮಿಕ್ಕದ್ದೆಲ್ಲವನ್ನೂ ದೊರೆಯೇ ಇಟ್ಟುಕೊಳ್ಳುತ್ತಿದ್ದ. ಆದರೆ, ನಾನು ಹೇಳಿದ ಹಾಗೆ ಯಾವ ಇಂಗ್ಲಿಷ್ ಮನುಷ್ಯನೂ ಯಾವತ್ತೂ ಜ್ಯೂಗಳಿಗೆ ಸಹಾಯ ಮಾಡಲಿಲ್ಲ, ಮತ್ತು ಜ್ಯೂಗಳು ತಮ್ಮ ಮುಕ್ತಿಗಾಗಿ ಹೆಣಗಾಟವನ್ನು ಮುಂದುವರಿಸಿದರು. 'ಸಾರ್ವಜನಿಕ ಆತ್ಮಸಾಕ್ಷಿ' ಎಂದು ಕರೆಯಲಾಗುವುದರ ಫಲಿತಾಂಶವೇ ಇದು. ಸಾರ್ವಜನಿಕ ಆತ್ಮ ಸಾಕ್ಷಿ ಎಂದರೆ ಯಾರಿಗೆ ಆಗಲೀ ಅನ್ಯಾಯವಾದರೆ, ಅದಕ್ಕೆ ಮನ ಕದಡುತ್ತಿತ್ತು, ಯಾರಿಗೇ ಆಗಲೀ ಅಂದರೆ ಆ ನಿರ್ದಿಷ್ಟ ಅನ್ಯಾಯದಿಂದ ಅವನಿಗೆ ತೊಂದರೆ ಆಗಿರಲಿ ಬಿಡಲಿ, ಅವನಿಗೆ ಪರಿಹಾರವನ್ನು ಕೊಡಿಸಲು ಅವನೊಂದಿಗೆ ಕೈ ಜೋಡಿಸಿವವನು. ಇತ್ತೀಚಿನ ಉದಾಹರಣೆಯಾಗಿ, ನೀವು ದಕ್ಷಿಣ ಆಫ್ರಿಕದ ಉದಾಹರಣೆಯನ್ನು ತೆಗೆದುಕೊಳ್ಳಿ. ಅಲ್ಲಿ ನರಳುತ್ತಿರುವವರು ಭಾರತೀಯರು, ಅಲ್ಲವೇ? ಬಿಳಿಯರಿಗೆ ಅಲ್ಲಿ ಯಾವ ಕಷ್ಟವೂ ಇಲ್ಲ ಆದರೂ, ಒಬ್ಬ ಬಿಳಿಯವನಾದ ರೆವರೆಂಡ್ ಸ್ಕಾಟ್ ಅವರು ಈ ಅನ್ಯಾಯವನ್ನು ತೆಗೆದು ಹಾಕಲು ತನ್ನ ಕೈಲಾದದ್ದೆನ್ನೆಲ್ಲಾ ಮಾಡುತ್ತಿದ್ದಾರೆ. ಇತ್ತೀಚೆಗೆ ಬಿಳಿಯ ಜನಾಂಗಕ್ಕೆ ಸೇರಿದ ಅನೇಕ ಯುವಕರು ಮತ್ತು ಯುವತಿಯರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಹೋರಾಟದಲ್ಲಿ ಕೈ ಜೋಡಿಸುತ್ತಿದ್ದಾರೆ, ಎಂದು ನಾನು ಓದಿದ್ದೇನೆ, ಇದನ್ನೇ ಸಾರ್ವಜನಿಕ ಆತ್ಮ ಸಾಕ್ಷಿ ಎಂದು ಕರೆಯುವುದು. ನಿಮ್ಮನ್ನು ಆಘಾತ ಪಡಿಸಲು ನನಗೆ ಇಷ್ಟವಿಲ್ಲ. ಆದರೆ ನಾವು ಎಷ್ಟೊಂದು ಮರೆಗುಳಿಗಳಾಗಿದ್ದೇವೆ ಎಂದು ನಾನು ಕೆಲವೊಮ್ಮೆ ಯೋಚಿಸುತ್ತೇನೆ. ನಾವು ದಕ್ಷಿಣ ಆಫ್ರಿಕ ಬಗ್ಗೆ ಮಾತನಾಡುತ್ತಿದ್ದೇವೆ. ಇಷ್ಟೆಲ್ಲಾ ಬಹಿಷ್ಕಾರ, ಅದೂ ಇದು ಎಂಬುದರ ಬಗ್ಗೆ ಮಾತನಾಡುತ್ತಿರುವ ನಾವು ನಮ್ಮ ಪ್ರತಿಯೊಂದು ಹಳ್ಳಿಯಲ್ಲೂ ದಕ್ಷಿಣ ಆಫ್ರಿಕಾ ಇರುವುದನ್ನು ನೋಡಿಲ್ಲವೆ? ಇದೆ. ನಾವು

ಹೋಗಿ ನೋಡಬೇಕಷ್ಟೆ. ಹಳ್ಳಿಯ ಎಲ್ಲೆಲ್ಲಿಯೂ ದಕ್ಷಿಣ ಆಫ್ರಿಕಾ ಇದೆ. ಆದರೂ ಸಹ, ಪರಿಶಿಷ್ಟ ವರ್ಗಗಳಿಗೆ ಸೇರಿಲ್ಲದ ಯಾರೇ ಆಗಲಿ ಅವರ ನಿಮಿತ್ತವನ್ನು ಎತ್ತಿಕೊಂಡು ಹೋರಾಡುತ್ತಿರುವುದನ್ನು ಕಂಡಿರುವುದು ಬಹಳ ಅಪೂರ್ವ. ಹಾಗಾದರೆ ಏಕೆ? ಏಕೆಂದರೆ, ಸಾರ್ವಜನಿಕ ಆತ್ಮ ಸಾಕ್ಷಿ ಅನ್ನುವುದು ಇಲ್ಲ ಅದಕ್ಕೆ. ನಾನು ಮತ್ತು ನನ್ನ ಭಾರತ ಈ ಒಂದೇ ಪ್ರಪಂಚದಲ್ಲಿ ಕಟ್ಟಿ ಹಾಕಲ್ಪಟ್ಟಿದ್ದೇವೆ.. ಇಂಥದ್ದೇನಾದರೂ ಆದರೆ ಅನ್ಯಾಯದಿಂದ ನರಳುತಿರುವ ಅಲ್ಪ ಸಂಖ್ಯಾತರಿಗೆ ಬೇರೆ ಯಾರಿಂದಲೂ ಈ ಅನ್ಯಾಯವನ್ನು ತೊಡೆದು ಹಾಕಲು ಯಾವ ಸಹಾಯವೂ ಸಿಗುವುದಿಲ್ಲ. ಇದು ಒಂದು ಕ್ರಾಂತಿಕಾರಿ ಮನಸ್ಥಿತಿಯನ್ನು ಹುಟ್ಟಿ ಹಾಕುತ್ತದೆ? ಹಾಗೆ ಆದರೆ, ಅದು ಪ್ರಜಾ ಪ್ರಭುತ್ವಕ್ಕೆ ಅಪಾಯಕಾರಿಯಾಗುತ್ತದೆ ಈಗ ನಾನು ಹೇಳಿರುವುದು ಯಾವ ರಾಜಕೀಯ ವಿಜ್ಞಾನಿಗಳಿಂದಲೂ ತಯಾರಿಸಲ್ಪಟ್ಟ ಕಡು ಸಿದ್ಧಾಂತದ ಸರಣಿ ಅಲ್ಲ. ಅದು ವಿವಿಧ ದೇಶಗಳ ರಾಜಕೀಯ ಚರಿತ್ರೆಗಳನ್ನು ಓದಿದ ನನ್ನ ಮೇಲೆ ಪ್ರಭಾವ ಬೀರಿದ ಫಲಿತಾಂಶವಷ್ಟೆ. ನನ್ನ ಧೃಡವಾದ ನಂಬಿಕೆ ಎಂದರೆ ಇವುಗಳು ಪ್ರಜಾ ಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದರೆ ಬೇಕಾದ ಅತ್ಯವಶ್ಯಕ ನಿಯಮಗಳು ಎಂದು.

ಮಹಿಳೆಯರೇ ಮತ್ತು ಮಹನೀಯರೆ, ಈಗ ನನ್ನನ್ನು ಇಲ್ಲಿಗೆ ಅಹ್ವಾನಿಸಿರುವುದರ ಕೆಳಗೆ ಇರುವ ಉದ್ದೇಶ ಏನು ಎಂಬ ಕಲ್ಪನೆ ನನಗೆ ಇಲ್ಲ. ನಿಮ್ಮ ಕಾರ್ಯಸೂಚಿಗೆ ಏನಾದರೊಂದನ್ನು ಸೇರಿಸಬೇಕೆಂಬ ಉದ್ದೇಶವಿರಬಹುದು. ನೀವು ನನಗೆ ಕೊಟ್ಟ ಕೆಲಸವನ್ನು ನಾನು ಮಾಡಿದ್ದೆನೆ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಈ ಸಾಯಂಕಾಲ ಮಾತನಾಡಿದ ವಿಷಯ ದೇಶಕ್ಕೇ ಅತ್ಯಂತ ಪ್ರಾಮುಖ್ಯವಾದ ವಿಷಯ. ನಮಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ನಾವು ಹೇಗೋ ಒಂದು ಕಲ್ಪನೆಯನ್ನು ರೂಢಿಸಿಕೊಂಡಿದ್ದೇವೆ. ಬ್ರಿಟಿಷರು ಹೋಗಿಬಿಟ್ಟಿದ್ದಾರೆ. ನಾವು ಪಡೆದುಕೊಂಡಿರುವ ಸಂವಿಧಾನ ನಮಗೆ ಪ್ರಜಾ ಪ್ರಭುತ್ವವನ್ನು ಕೊಟ್ಟಿದೆ. ಹಾಗಿದ್ದರೆ, ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು? ನಮಗೆ ವಿಶ್ರಾಂತಿ ಬೇಕೆಂದು ನಾವು ಏನನ್ನೂ ಮಾಡದೆ ಇರುವುದಕ್ಕೆ ಆಗುವುದಿಲ್ಲ. ಸಂವಿಧಾನದ ಕೆಲಸ ಮುಗಿದ ಮೇಲೆ ನಮಗೆ ಮಾಡುವುದಕ್ಕೆ ಇನ್ನೇನು ಇಲ್ಲ, ನಮ್ಮ ಕೆಲಸವೆಲ್ಲಾ ಮುಗಿದು ಹೋಗಿದೆ ಎಂದು ಸ್ವಯಂ ತೃಪ್ತಿ ಪಟ್ಟುಕೊಳ್ಳುವ ಹಾಗಿಲ್ಲ. ಅದು ಆಗಿಲ್ಲ, ಈಗಷ್ಟೆ ಅದು ಪ್ರಾರಂಭವಾಗಿದೆ. ಪ್ರಜಾಪ್ರಭುತ್ವ ಎನ್ನುವುದು ಎಲ್ಲೆಲ್ಲೋ ಬೆಳೆಯುವ ಒಂದು ಗಿಡವಲ್ಲ. ಅದು ಅಮೆರಿಕಾದಲ್ಲಿ ಬೆಳೆದಿದೆ. ಅದು ಇಂಗ್ಲೆಂಡಿನಲ್ಲಿ ಬೆಳೆದಿದೆ. ಸ್ವಲ್ಪ ಮಟ್ಟಿಗೆ ಅದು ಫ್ರಾನ್ಸ್‌ನಲ್ಲೂ ಬೆಳೆದಿದೆ. ಈ ಉದಾಹರಣೆಗಳಿಂದ ಬೇರೆಲ್ಲ ಕಡೆ ಏನಾಗಿದೆ ಎಂದು ನೋಡುವುದಕ್ಕೆ ನಮಗೊಂದಿಷ್ಟು ಧೈರ್ಯವನ್ನು ನಾವೇ ತೆಗೆದು ಕೊಳ್ಳಬಹುದು. ಮೊದಲನೆ ಯೂರೋಪಿಯನ್ ಯುದ್ಧವಾದ ಮೇಲೆ, ಆಸ್ಟ್ರಿಯ–ಹಂಗೇರಿಯ ಚಕ್ರಾಧಿಪತ್ಯ ಮುರಿದು ಬಿದ್ದ ಮೇಲೆ ನಿಮಗೆ ನೆನಪಿರಲೇ ಬೇಕಾಗಿರುವ ಹಾಗೆ, ಸ್ವಯಂ ನಿರ್ಧಾರದ ಆಧಾರದ ಮೇಲೆ ವಿಲ್ಸನ್ ಅವರು ಆಸ್ಟ್ರಿಯಾದಿಂದ ಮುಕ್ತವಾದ ಸಣ್ಣ ಸಣ್ಣ ರಾಷ್ಟ್ರೀಯತೆಗಳನ್ನು ಸೃಷ್ಟಿ ಮಾಡಿದರು. ಅವೆಲ್ಲ ಪ್ರಜಾ ಪ್ರಭುತ್ವ ಇರುವ ಸಂವಿಧಾನದಿಂದ ಪ್ರಾರಂಭಿಸಿದವು.. ಮೂಲಭೂತ ಹಕ್ಕುಗಳೂ ಅದರಲ್ಲಿ ಇದ್ದವು. ಈ ಸಂವಿಧಾನದಿಂದ ಅವರು ವರ್ಸೇಲ್ಸ್ ಶಾಂತಿ ಒಪ್ಪಂದವನ್ನು ಒಪ್ಪಿಕೊಳ್ಳಲೇ ಬೇಕಾಯಿತು. ನನ್ನ ಸ್ನೇಹಿತರೆ, ಆ ಪ್ರಜಾ ಪ್ರಭುತ್ರ್ವಕ್ಕೆ ಏನಾಯಿತು? ಅವೆಲ್ಲಾ ಹೋಗಿ ಬಿಟ್ಟಿವೆ, ಅವೆಲ್ಲ ಅದೃಷ್ಯವಾಗಿ ಬಿಟ್ಟಿವೆ. ಅವು ಬಹುಶಃ ಇತರ ದೇಶಗಳ ಪ್ರಭಾವಕ್ಕೊಳಪಟ್ಟಿರಬಹುದು ಅಥವಾ ಕಣ್ಗಾವಲಿನ ಕೆಳಗೆ ಇರಬಹುದು. ಅಲ್ಲಿ ಯಾವ ಪ್ರಜಾಪ್ರಭುತ್ವವೂ ಉಳಿದಿಲ್ಲ. ಇತ್ತಿಚಿನ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳಿ. ಸಿರಿಯಾದಲ್ಲಿ ಒಂದು ಪ್ರಜಾಪ್ರಭುತ್ವದ ಸರ್ಕಾರ ಇತ್ತು. ಕೆಲವು ವರ್ಷಗಳ ನಂತರ ಅಲ್ಲಿ ಸೈನ್ಯ ದಂಗೆ ಎದ್ದಿತು; ಸಿರಿಯಾದ ಮುಖ್ಯ ಸೇನಾಧಿಪತಿ

ತಾನೇ ಸಿರಿಯಾದ ರಾಜನಾಗಿ ಬಿಟ್ಟ; ಪ್ರಜಾ ಪ್ರಭುತ್ವ ಗಾಳಿಯಲ್ಲಿ ಅದೃಷ್ಯವಾಗಿ ಬಿಟ್ಟಿತು. ಇನ್ನೂ ಒಂದು ಉದಾಹರಣೆ ತೆಗೆದುಕೊಳ್ಳಿ. ಈಜಿಪ್ಟಿನಲ್ಲಿ ಏನಾಯಿತು? ಅಲ್ಲಿಯೂ ಸಹ ಪ್ರಜಾಪ್ರಭುತ್ವ ೧೯೨೨ ರಿಂದಲೇ ಪ್ರಾರಂಭವಾಗಿ ೩೦ ವರ್ಷಗಳ ವರೆಗೆ ಇದ್ದಿತು. ಒಂದೇ ರಾತ್ರಿಯಲ್ಲಿ ಫರೂಕ್ ಹೋಗಬೇಕಾಗಿ ಬಂದಿತು; ನಗೀಬ್ ಈಜಿಪ್ಟಿನ ಸರ್ವಾಧಿಕಾರಿಯಾದ, ಸಂವಿಧಾನವನ್ನೇ ರದ್ದು ಮಾಡಿಬಿಟ್ಟ.

ಈ ಎಲ್ಲಾ ಉದಾಹರಣೆಗಳೂ ನಮ್ಮ ಮುಂದೆ ಇವೆ. ನಮ್ಮ ಭವಿಷ್ಯದ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ, ಬಹಳ ಔದಾರ್ಯದಿಂದ ಇರಬೇಕು. ಪ್ರಜಾಪ್ರಭುತ್ವವನ್ನು ಅಪಾಯವಿಲ್ಲದ ಹಾಗೆ ಮಾಡುವುದಕ್ಕೆ ನಮ್ಮ ದಾರಿಯಲ್ಲಿರುವ ಕೆಲವು ಕಲ್ಲುಗಳನ್ನು, ಕೆಲವು ಬಂಡೆಗಳನ್ನು ತೆಗೆಯುವುದಕ್ಕೆ ನಾವು ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಾನು ಮಾಡಿರುವ ಈ ಕೆಲವು ಅವಲೋಕನೆಗಳು, ಇದು ಒಂದು ಸಮಸ್ಯೆ, ಅದರ ಮೇಲೆ ನಾವು ಮಲಗುವುದಕ್ಕೆ ಸಾಧ್ಯವಿಲ್ಲ ಎಂಬ ಅರಿವು ನಿಮ್ಮಲ್ಲಿ ಮೂಡಿದರೆ, ನಾನು ಮಾಡಿರುವ ಕೆಲಸಕ್ಕೆ ನನಗೆ ನಾನೇ ಬೆನ್ನು ತಟ್ಟಿಕೊಳ್ಳುತ್ತೇನೆ. ಈಗ, ಮಹಿಳೆಯರೇ ಮತ್ತು ಮಹನೀಯರೇ, ನಿಮ್ಮನ್ನು ಹೆಚ್ಚಿಗೆ ನಿಲ್ಲಿಸಿಕೊಳ್ಳಲು ನನಗೆ ಇಷ್ಟವಿಲ್ಲ. ನಾನು ಹೇಳಿದ್ದನ್ನು ಗಮನವಿಟ್ಟು ಕೇಳಿದ ನಿಮಗೆಲ್ಲರಿಗೂ ನಾನು ವಂದಿಸುತ್ತೇನೆ.

# ೧೩೯
# ಜ್ಞಾನವೇ ಮನುಷ್ಯ ಜೀವನದ ಬುನಾದಿ

೨೪ನೇ ಡಿಸೆಂಬರ್ ೧೯೫೨ ರಂದು ಡಾ: ಬಿ.ಆರ್.ಅಂಬೇಡ್ಕರ್ ಅವರು ಕೊಲ್ಲಾಪುರದ ರಾಜಾರಾಮ್ ಕಾಲೇಜಿನ ವಿದ್ಯಾರ್ಥಿಗಳ ವಾರ್ಷಿಕ ಕೂಟವನ್ನು ಉದ್ದೇಶಿಸಿ ಮಾತನಾಡಿದರು. ಅವರ ಭಾಷಣದಲ್ಲಿ ಅವರು ಹೀಗೆ ಹೇಳಿದರು:

ಮನುಷ್ಯ ಜೀವನದ ಬುನಾದಿಯೇ ಜ್ಞಾನ; ಒಬ್ಬ ವಿದ್ಯಾರ್ಥಿಯ ಬೌದ್ಧಿಕ ದಾರ್ಢ್ಯವನ್ನು, ಅವನ ಬುದ್ಧಿಮತ್ತೆಯನ್ನು ಎಚ್ಚರಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು. ವಿದ್ಯಾರ್ಥಿಗಳು ತಮ್ಮ ಅಲೋಚನಾ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಂಡು ತಾವು ಪಡೆದುಕೊಂಡ ಜ್ಞಾನವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಹೇಳಿದರು.

# ೧೪೦
# ಮಹಿಳೆಯರ ಸಾಮಾಜಿಕ ಮುನ್ನಡೆಯಲ್ಲಿ ಮಹಿಳಾ ನಾಯಕಿಯರುಗಳಿಗೆ ಆಸಕ್ತಿ ಇಲ್ಲ

೨೫ನೇ ಡಿಸೆಂಬರ್ ೧೯೫೨ರಂದು ಕೊಲ್ಲಾಪುರದ ಮಹಿಳಾ ಸಂಸ್ಥೆಗಳು ಡಾ: ಅಂಬೇಡ್ಕರ್ ಅವರಿಗೆ ಒಂದು ಬಿನ್ನವತ್ತಳೆಯನ್ನು ಸಮರ್ಪಿಸಿದರು. ಕಾರ್ಯಕ್ರಮವನ್ನು ರಾಜಾರಾಮ್ ಚಿತ್ರಮಂದಿರದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಪುರುಷರು ಬಂದಿದ್ದರು. ಶ್ರೀಮತಿ ವಿಮಲಾ ಬಾಯಿ ಬಾಗಲ್ ಅವರು ಒಂದು ಪರಿಚಯ ಭಾಷಣವನ್ನು ಮಾಡಿ, ಬಿನ್ನವತ್ತಳೆಯನ್ನು ಓದಿದರು. ಅನೇಕ ಮಹಿಳಾ ಸಂಸ್ಥೆಗಳು ಡಾ: ಬಿ.ಆರ್. ಅಂಬೇಡ್ಕರ್ ಮತ್ತು ಶ್ರೀಮತಿ ಮಾಯಿ ಸಾಹೆಬ್ ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು; ಮೇಜರ್ ದಾದಾಸಾಹೆಬ್ ನಿಂಬಾಳ್ಕರ್ ಅವರೂ ಸಹ ಡಾ: ಬಿ.ಆರ್. ಅಂಬೇಡ್ಕರ್ ಮತ್ತು ಶ್ರೀಮತಿ ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು.

ಬಿನ್ನವತ್ತಳೆಗೆ ಉತ್ತರಿಸುತ್ತಾ, ಡಾ: ಬಿ.ಆರ್. ಅಂಬೇಡ್ಕರ್ ಹಿಂದೂ ಕೋಡ್ ಮಸೂದೆಯನ್ನು ಪರಾಮರ್ಶಿಸುತ್ತಾ ಹೀಗೆ ಹೇಳಿದರು: ಪ್ರಮುಖ ಭಾರತೀಯ ಮಹಿಳಾ ನಾಯಕಿಯರುಗಳಲ್ಲಿ ಯಾರಿಗೂ ಸಹ ಮಹಿಳೆಯರ ಸಾಮಾಜಿಕ ಪುರೋಭಿವೃದ್ಧಿಯಲ್ಲಿ ಆಸಕ್ತಿ ಇಲ್ಲ.ಅವರ ಪ್ರಕಾರ ಹಿಂದೂ ಕೋಡ್ ಮಸೂದೆ, ಕಹಿಯಾದ ದ್ರಾವಣವನ್ನು ಬೆರಸಿ ಕೆಡಿಸಿ ಬಿಟ್ಟ ಹಾಲಿನಂತಿದೆ ಎಂದು ಹೇಳಿದರು. ಮುಂದುವರೆದು ಅವರು ಹೇಳಿದ್ದೇನೆದರೆ, ಅವರಿಗೆ (ಆ ಮಹಿಳಾ ನಾಯಕಿಯರುಗಳಿಗೆ) ಹಿಂದೂ ಕೋಡ್ ಮಸೂದೆಯನ್ನು ಅನುಮೋದಿಸುವುದು ಬೇಕಾಗಿದ್ದರೆ, ಅವರು ಉಪವಾಸ ಮಾಡುವುದಕ್ಕೆ ಇಬ್ಬರು ದಪ್ಪ ಹೆಂಗಸರನ್ನು ಹುಡುಕಬೇಕು ಎಂದರು.

# ೧೪೧
# ..ನಾನು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ

೨೫ನೇ ಡಿಸೆಂಬರ್ ೧೯೫೨ರಂದು ನಿಪ್ಪಾಣಿಯಲ್ಲಿ ಫೆಡರೇಷನ್ನಿನ ಬೆಳಗಾಂವ್ ಜಿಲ್ಲಾ ಶಾಖೆಯ ಆಶ್ರಯದಲ್ಲಿ ೫೦,೦೦೦ ಜನಗಳ ಒಂದು ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ ಡಾ: ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದು:

ಹಿಂದುಳಿದ ವರ್ಗಗಳವರ ದಯನೀಯ ಸ್ಥಿತಿ, ಹಸಿವು. ಹೊಲಸು–ಇವು ಭಯಾನಕ ಪರಿಣಾಮವನ್ನುಂಟು ಮಾಡುತ್ತವೆಯೆನ್ನುತ್ತ, ಅವರು ಫ್ರೆಂಚ್ ಮತ್ತು ರಷ್ಯಾದ ಕ್ರಾಂತಿಗಳನ್ನು ನೆನಪಿಸಿಕೊಂಡರು.

ಮುಂದಿನ ಚುನಾವಣೆಗಳ ಹೊತ್ತಿಗೆ ಹಿಂದುಳಿದ ವರ್ಗಗಳವರ ಸ್ಥಿತಿಯನ್ನು ಉತ್ತಮಪಡಿಸದಿದ್ದರೆ, ಪರಿಶಿಷ್ಟ ಜಾತಿಗಳ ಫೆಡರೇಷನ್ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಆಳುವ ಪಕ್ಷವನ್ನು ಎಚ್ಚರಿಸಿದರು. ಇದು ಸರ್ಕಾರವನ್ನು ತಲೆಕೆಳಗು ಮಾಡಿ ಅರಾಜಕತೆಯನ್ನು ಸೃಷ್ಟಿಸಬಹುದು ಎಂದು ಹೇಳಿದರು.

ನಾನು ಇನ್ನೆರಡು ವರ್ಷಗಳವರೆಗೆ, ಅಥವಾ ಮುಂದಿನ ಚುನಾವಣೆಗಳವರೆಗೂ ಸಹ ಕಾಯುತ್ತೇನೆ; ಅಷ್ಟರಲ್ಲಿ ನನ್ನ ಜನಗಳ ದಯನೀಯ ಸ್ಥಿತಿಯನ್ನು ಉಪಶಮನ ಮಾಡದಿದ್ದರೆ, ಸಂಧಾನ ಸಮಾಲೋಚನೆಗಳ ಮೂಲಕ ಹೊಸದೊಂದು ಯೋಜನೆಯು ಹೊರಬರದಿದ್ದರೆ ನಾನು ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದರು. ಭಾರತದಲ್ಲಿ ಅಸ್ಪೃಶ್ಯತೆ ಇಲ್ಲ ಎಂಬ ನಾಗಪುರದಲ್ಲಿ ನೆಹರೂ ಅವರು ಕೊಟ್ಟ ಇತ್ತೀಚಿನ ಹೇಳಿಕೆಯನ್ನು ಅವರು ಅಲ್ಲಗಳೆದರು.

### ಚುನಾವಣಾ ನಷ್ಟಗಳು

ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಅಭ್ಯರ್ಥಿಗಳ ಚುನಾವಣಾ ಹಿನ್ನಡೆಗಳು ಸಂಘಟನೆಯಲ್ಲಿನ ನಿರ್ಬಲತೆಯಿಂದ ಅಲ್ಲ, ಆದರೆ ಮಿತ್ರರುಗಳು ಲಭ್ಯವಿಲ್ಲದ್ದರಿಂದ ಎಂದು ಹೇಳಿದರು.

ನಮ್ಮ ಸಂಸ್ಥೆಯಲ್ಲಿ ದೋಷವಿದೆ ಎಂದು ಯಾರಾದರು ತೋರಿಸಿಕೊಟ್ಟರೆ ನಾನು ರಾಜಕೀಯವನ್ನೇ ತೊರೆದು ಬಿಡುತ್ತೇನೆ ಎಂದು ಹೇಳಿದರು. ಅದರ ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಜನಗಳಿಂದ ನೂರಕ್ಕೆ ನೂರು ಮತಗಳನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಇದಕ್ಕೆ ಮುಂಚೆ, ಸಭೆಯ ಅಧ್ಯಕ್ಷತೆ ವಹಿಸಿದ್ದ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿಯವರಾದ ಮಿ: ಪಿ.ಎನ್. ರಾಜ್ಭೋಜ್ ಅವರು ಫೆಡರೇಶನ್ನಿನ ಕಾರ್ಯಕಾರಿ ಸಮಿತಿ ಫೆಬ್ರವರಿಯಲ್ಲಿ ದೆಹಲಿಯಲ್ಲಿ ಸೇರಲಿದೆ ಎಂದು ಪ್ರಕಟಿಸಿದರು.

# ೧೪೨
# ಉಸ್ಮಾನಿಯ ವಿಶ್ವವಿದ್ಯಾಲಯ ಡಾ: ಅಂಬೇಡ್ಕರ್ ಅವರನ್ನು ಗೌರವಿಸಿತು

ಭಾರತ ಸಂವಿಧಾನದ ಮುಖ್ಯ ಶಿಲ್ಪಿಯಾಗಿ ಡಾ: ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ಅಸಾಧಾರಣ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಕೆಲಸವನ್ನು ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯ ಗುರುತಿಸಿತು. ಅದೇ ವಿಶ್ವವಿದ್ಯಾಲಯದಲ್ಲಿ ಅವರು ವಿದ್ಯಾರ್ಥಿ ಆಗಿದ್ದರು. ಒಂದು ವಿಶೇಷ ಘಟಿಕೋತ್ಸವದಲ್ಲಿ ಅವರಿಗೆ LL.D.(ಡಾಕ್ಟರ್ ಆಫ್ ಲಾಸ್) ಪದವಿಯನ್ನು ಕೊಟ್ಟ ಮೊದಲನೆ ವಿಶ್ವವಿದ್ಯಾಲಯವೆಂದರೆ ಕೊಲಂಬಿಯಾ ವಿಶ್ವವಿದ್ಯಾಲಯ. ದೇಶದ ಉದ್ದಗಲಕ್ಕೂ, ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದ ಒಂದೇ ವಿಶ್ವವಿದ್ಯಾಲಯ. (D.Lit ? ಡಾಕ್ಟರ್ ಆಫ್ ಲಿಟರೇಚರ್) ಇದನ್ನು ೧೨ನೇ ಜನವರಿ ೧೯೫೩ರಂದು ಅವರಿಗೆ ಪ್ರದಾನ ಮಾಡಲಾಯಿತು.

ಘಟಿಕೋತ್ಸವದ ಹಿಂದಿನ ದಿನ ಹೈದರಾಬಾದಿನ 'ಡೆಕ್ಕನ್ ಕ್ರಾನಿಕಲ್' ತನ್ನ ೧೩ನೇ ಜನವರಿ ೧೯೫೩ರ ಸಂಚಿಕೆಯಲ್ಲಿ ಈ ರೀತಿ ವರದಿ ಮಾಡಿತು:

ದೇಶದ ಅತ್ಯಂತ ಸಮರ್ಥ ವಕೀಲರುಗಳೆಂದು ಹೇಳಲ್ಪಟ್ಟ, ಹಿಂದುಳಿದ ವರ್ಗಗಳ ನೇತಾರರಾದ, ಭಾರತ ಸಂವಿಧಾನವನ್ನು ರಚಿಸುವಲ್ಲಿ ಹೆಚ್ಚಿನ ಹೊರೆಯನ್ನು ಹೊತ್ತು ಪ್ರಮುಖ ಪಾತ್ರ ವಹಿಸಿದವರು ಡಾ:ಬಿ.ಆರ್. ಅಂಬೇಡ್ಕರ್.

ಘಟಿಕೋತ್ಸವಕ್ಕೆ ವಿಧಿ ವಿಧಾನ –ಉಸ್ಮಾನಿಯಾ ವಿಶ್ವವಿದ್ಯಾಲಯ, ಸೋಮವಾರ, ೧೨ನೇ ಜನವರಿ ೧೯೫೩.

ಚಾನ್ಸಲರ್  ಅವರು ಹೀಗೆ ಹೇಳುತ್ತಾರೆ:

ಈ ಘಟಿಕೋತ್ಸವವನ್ನು, ಗೌರವ ಪದವಿಗಳನ್ನು (೧) ಡಾ: ಎಸ್. ರಾಧಾಕೃಷ್ಣನ್, ಭಾರತದ ಉಪರಾಷ್ಟ್ರಪತಿಯವರು (೨) ಶ್ರೀ ಎಮ್.ಕೆ. ವೆಲ್ಲೋಡಿ (೩) ಡಾ: ಬಿ.ಆರ್. ಅಂಬೇಡ್ಕರ್ ಅವರಿಗೆ ಕೊಡಲು ಹಾಗೂ  ಪದವಿಗಳಿಗೆ ಅರ್ಹರೆಂದು ಪ್ರಮಾಣಿಸಲ್ಪಟ್ಟ ಇತರ ಅಭ್ಯರ್ಥಿಗಳಿಗೂ ಪದವಿಗಳನ್ನು ಪ್ರದಾನ ಮಾಡಲು ಕರೆಯಲಾಗಿದೆ.

(೭) ಉಪಕುಲಪತಿಯವರು ಆ ನಂತರದಲ್ಲಿ ಉದ್ಧರಣವನ್ನು ಓದಿ ಮೇಲಿನ ವ್ಯಕ್ತಿಗಳನ್ನು ಪರಿಚಯಿಸುತ್ತಾರೆ.

(೮) ಪ್ರತಿ ಉದ್ಧರಣದ  ಕೊನೆಯಲ್ಲಿ ಉಪಕುಲಪತಿಯವರು ಪದವೀ ಪ್ರದಾನ ಮಾಡಿ, ಹೀಗೆ ಹೇಳುತ್ತಾರೆ:

ಉಸ್ಮಾನಿಯ ವಿಶ್ವವಿದ್ಯಾಲಯದ ಕುಲಪತಿ ಆಗಿ ನನ್ನಲ್ಲಿ ಪ್ರದತ್ತವಾದ ಅಧಿಕಾರದಿಂದ, ನಾನು ನಿಮ್ಮನ್ನು ನಿಮ್ಮ ಉನ್ನತ ಸ್ಥಾನ ಮತ್ತು ನಿಮ್ಮ ಸಾಧನೆಗಳಿಗಾಗಿ ಗೌರವಾರ್ಥ ....ಪದವಿಗೆ ಪ್ರವೇಶ ಕೊಡುತ್ತಿದ್ದೇನೆ .

ಕಂಡಿಕೆ (೮)ರಲ್ಲಿ ಡಾ: ಅಂಬೇಡ್ಕರ್ ಅವರನ್ನು ಕುರಿತು ಉದ್ಧರಣ ಹೀಗೆ ಇತ್ತು:

ಮಿ: ಚಾನ್ಸಲರ್,

ಗೌರವಾರ್ಥ ಡಾಕ್ಟರ್ ಆಪ್ ಲಿಟರೇಚರ್ ಪದವಿಯನ್ನು ಪ್ರದಾನ ಮಾಡುವುದಕ್ಕೋಸ್ಕರ ಡಾ: ಬಿ.ಆರ್. ಅಂಬೇಡ್ಕರ್ ಅವರನ್ನು ನಿಮಗೆ ಪರಿಚಯಿಸುತ್ತಿದ್ದೇನೆ.

೧೮೯೩ರಲ್ಲಿ ಜನಿಸಿದ ಡಾ: ಅಂಬೇಡ್ಕರ್ ಸತಾರ ಮತ್ತು ಬೊಂಬಾಯಿನಲ್ಲಿ ಶಿಕ್ಷಣ ಪಡೆದರು. ಬೊಂಬಾಯಿ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದ ಮೇಲೆ, ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವರು ಅಮೆರಿಕಾ ದೇಶಕ್ಕೆ ಹೋಗಿ, ಅಲ್ಲಿ ೧೯೧೭ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ಪಡೆದುಕೊಂಡರು. ಆಗ ಅವರ ವಯಸ್ಸು ಇನ್ನೂ ೨೪ ವರ್ಷ. ಭಾರತಕ್ಕೆ ಹಿಂದಿರುಗಿದ ಮೇಲೆ ಅವರು ಕೆಲ ಕಾಲ ಬರೋಡ ರಾಜ್ಯದ ಆರ್ಥಿಕ ಮಂತ್ರಿಯಾಗಿ ಕೆಲಸ ಮಾಡಿದರು. ಆ ನಂತರ ಬೊಂಬಾಯಿಯ ಸೈಡನ್‌ಹ್ಯಾಮ್ ಕಾಲೇಜಿನಲ್ಲಿ ರಾಜಕೀಯ ಅರ್ಥಶಾಸ್ತ್ರದ ಪ್ರಾಚಾರ್ಯರಾಗಿ ಕೆಲಸ ಮಾಡಿದರು. ನಂತರ ವಿದೇಶಕ್ಕೆ ಹೋಗಿ, ಈ ಸಲ ಇಂಗ್ಲೆಂಡಿಗೆ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಗಾಗಿ ಭರ್ತಿಯಾದರು; 'ರೂಪಾಯಿಯ ಸಮಸ್ಯೆ' ಎಂಬ ಅವರ ಸುದೀರ್ಘ ಪ್ರಬಂಧ ವಿಶ್ವದಲ್ಲೆಲ್ಲಾ ಆರ್ಥಿಕ ತಜ್ಞರಿಂದ ಪ್ರಶಂಸೆ ಪಡೆಯಿತು.

ಅವರ ರಾಜಕೀಯ ಜೀವನ ಪಥ ಮುಂಚಿತವಾಗಿ ಪ್ರಾರಂಭವಾಯಿತು, ಆದರೆ ಅವರ ಶಾಸಕಾಂಗ ಜೀವನ ಪಥ ೧೯೨೬ರಲ್ಲಿ ಅವರು ಬೊಂಬಾಯಿಯ ಶಾಸನ ಸಭೆಯನ್ನು ಪ್ರವೇಶ ಮಾಡಿದಾಗ ಪ್ರಾರಂಭವಾಯಿತು. ಭಾರತದ ಮತದಾನ ವ್ಯವಸ್ಥೆಯ ಮೇಲೆ ಅವರು ಲೋಥಿಯನ್ ಸಮಿತಿಯ ಮುಂದೆ ಸಾಕ್ಷ್ಯ ನುಡಿದರು. ಇದಲ್ಲದೆ ಭಾರತೀಯ ಕರೆನ್ಸಿ ಮೇಲೆ, ರಾಯಲ್ ಕಮೀಷನ್ ಮುಂದೆ ಹಾಗೂ ಮತ್ತಿತರ ಮುಖ್ಯವಾದ ಸಮಿತಿಗಳು ಮತ್ತು ಆಯೋಗಗಳ ಮುಂದೆಯೂ ಹಾಜರಾಗಿದ್ದರು. ತಮ್ಮ ಜೀವನ ಪಥದ ಪ್ರಾರಂಭದಿಂದಲೇ ಅವರು ಕೆಳಗೆ ತುಳಿಯಲ್ಪಟ್ಟ ಎಲ್ಲಾ ಜನಗಳ ನಿಷ್ಠ ಬೆಂಬಲಿಗರಾಗಿದ್ದಾರೆ. ಇಂಥ ಜನಗಳು ಅವರ ಅನುಕಂಪವನ್ನು ಹುಟ್ಟಿಹಾಕಿದ್ದು, ಅವರು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಶನ್ನಿನ ಸಂಸ್ಥಾಪಕ ಅಧ್ಯಕ್ಷರಾದರು. ಪರಿಶಿಷ್ಟ ಜಾತಿಗಳನ್ನು ಪ್ರತಿನಿಧಿಸಲು ಅವರು ಲಂಡನ್ನಿನಲ್ಲಿ ನಡೆದ (೧೯೩೦–೧೯೩೨) ದುಂಡು ಮೇಜಿನ ಸಮ್ಮೇಳನಕ್ಕೆ ಆಹ್ವಾನಿಸಲ್ಪಟ್ಟರು.

ಡಾ: ಅಂಬೇಡ್ಕರ್ ಅವರು ೧೯೪೨ರಿಂದ ೧೯೪೬ರ ವರೆಗೆ ವೈಸ್ರಾಯ್ ಅವರ ಕಾರ್ಯಕಾರಿ ಪರಿಷತ್ತಿನಲ್ಲಿ ಕಾರ್ಮಿಕ ಸದಸ್ಯರಾಗಿ ಉನ್ನತ ಅಧಿಕಾರದಲ್ಲಿ ಇದ್ದರು ೧೯೪೭ರಲ್ಲಿ ಭಾರತ ಸ್ವತಂತ್ರವಾದಾಗ ಅವರನ್ನು ಕಾನೂನು ಸದಸ್ಯರಾಗಿ ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಲಾಯಿತು ಭಾರತದ ಸಂವಿಧಾನವನ್ನು ರೂಪಿಸುವ ಹೊಣೆಗಾರಿಕೆ ಅವರ ಮೇಲೆ ಬಿದ್ದಿತು ಮತ್ತು ಈ ವಿಷಯದಲ್ಲಿ ಅವರು ವಹಿಸಿದ ಪಾತ್ರ ಸರ್ವ ವಿದಿತವಾಗಿದೆ.

ಪುಸ್ತಕಗಳೆಂದರೆ ಡಾ: ಅಂಬೇಡ್ಕರ್ ಅವರಿಗೆ ತಣಿಸಲಾರದ ಹಸಿವು. ಅವರಿಗೆ ಏಳು ಭಾಷೆಗಳು ಗೊತ್ತು. ಅವರೊಬ್ಬ ಉನ್ನತ ಮಟ್ಟದ ಗ್ರಂಥಕರ್ತರು. ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. 'ಅಸ್ಪೃಷ್ಯರಿಗೆ ಗಾಂಧಿ ಮತ್ತು ಕಾಂಗ್ರೆಸ್ ಏನು ಮಾಡಿದ್ದಾರೆ', 'ಜಾತಿಯನ್ನು ಮೂಲೋಚ್ಚಾಟನೆ ಮಾಡುವುದು', 'ಫೆಡರೇಷನ್ ವಿರುದ್ಧ ಸ್ವಾತಂತ್ರ್ಯ' 'ಪಾಕಿಸ್ತಾನ ಮತ್ತು ಭಾರತದ ವಿಭಜನೆ' 'ರಾನಡೆ ಮತ್ತು ಗಾಂಧಿ'. ಇವು ಅವುಗಳಲ್ಲಿ ಕೆಲವು.

ಶ್ರೀಯುತ ಕುಲಪತಿಯವರೆ, ಡಾ: ಅಂಬೇಡ್ಕರ್ ಅವರನ್ನು ಪರಿಚಯಿಸುವಲ್ಲಿ ನಾನು ಒಬ್ಬ ಉನ್ನತ ವ್ಯಕ್ತಿಯನ್ನು, ಉನ್ನತ ಸಾಧನೆಗಳನ್ನು, ಪ್ರತಿಷ್ಠಿತ ಸೇವೆಗಳನ್ನು ಮಾಡಿರುವ, ಅತ್ಯಂತ ಸಮರ್ಥ ವಕೀಲರುಗಳಲ್ಲಿ

ಒಬ್ಬರಾದ, ಅದ್ವಿತೀಯ ಶಾಸಕರಾದ, ಹಿಂದುಳಿದ ಮತ್ತು ಕೆಳಗೆ ತುಳಿಯಲ್ಪಟ್ಟವರ ಬೆಂಬಲಿಗರಾದ ಅವರನ್ನು ಪರಿಚಯಿಸುತ್ತಿದ್ದೇನೆ. ಈಗ ಶ್ರೀ ಬಿ.ಆರ್ ಅಂಬೇಡ್ಕರ್ ಅವರಿಗೆ ಡಾಕ್ಟರ್ ಆಫ್ ಲಿಟರೇಚರ್ ಗೌರವ ಪದವಿಯನ್ನು ಪ್ರದಾನ ಮಾಡಬೇಕೆಂದು ನಾನು ನಿಮ್ಮನ್ನು ಪ್ರಾರ್ಥಿಸುತ್ತಿದ್ದೇನೆ.

ಡಾ: ಅಂಬೇಡ್ಕರ್ ಅವರಿಗೆ ಪ್ರದಾನ ಮಾಡಿದ ಗೌರವ ಪದವಿ ಈ ಕೆಳಕಂಡಂತೆ ಇದೆ:

ಉಸ್ಮಾನಿಯಾ ವಿಶ್ವವಿದ್ಯಾಲಯ
ಡಾಕ್ಟರ್ ಆಫ್ ಲಿಟರೇಚರ್ ಗೌರವ ಪದವಿಯನ್ನು
ಘಟಿಕೋತ್ಸವದಲ್ಲಿ
ಡಾ: ಬಿ.ಆರ್ ಅಂಬೇಡ್ಕರ್
ಅವರಿಗೆ ಪ್ರದಾನ ಮಾಡಲಾಗಿದೆ
(ಅವರ ಉನ್ನತ ಸ್ಥಾನ ಮತ್ತು ಸಾಧನೆಗಳನ್ನು ಗುರುತಿಸಿ)

ಹೈದರಾಬಾದ್, ಡೆಕ್ಕನ್ ಕುಲಸಚಿವರು
ಜನವರಿ ೧೨, ೧೯೫೩.

# ೧೪೩
# ಬುದ್ಧನ ಬೋಧನೆಯನ್ನು ಅಳವಡಿಸಿಕೊಳ್ಳದಿದ್ದರೆ ಯೂರೋಪಿನಲ್ಲಿ ನಡೆದ ಸಂಘರ್ಷ ಏಷ್ಯಾದಲ್ಲೂ ಪುನರಾವರ್ತನೆಯಾಗುತ್ತದೆ

೧೫ನೇ ಫೆಬ್ರವರಿ ೧೯೫೩ರಂದು ನವ ದೆಹಲಿಯಲ್ಲಿ, ಜಪಾನಿನಲ್ಲಿರುವ ಭಾರತ–ಜಪಾನ್ ಸಾಂಸ್ಕೃತಿಕ ಅಸೋಸಿಯೇಷನ್‌ನ ಉಪಾಧ್ಯಕ್ಷರಾದ ಶ್ರೀ ಎಮ್.ಆರ್. ಮೂರ್ತಿ ಅವರ ಗೌರವಾರ್ಥವಾಗಿ, ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಮತ್ತು ವಿಶ್ವ ಬೌದ್ಧ ಸಮ್ಮೇಳನಕ್ಕೆ ಡೆಲಿಗೇಟ್ ಆಗಿರುವ ಶ್ರೀ ಪಿ.ಎನ್. ರಾಜ್ ಭೋಜ್ ಅವರು ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಮಾತನಾಡುತ್ತ ಡಾ: ಬಿ..ಆರ್.ಅಂಬೇಡ್ಕರ್ ಅವರು, ಈ ಪೀಳಿಗೆಯಾಗಲೀ ಅಥವಾ ಭವಿಷ್ಯದ ಪೀಳಿಗೆಗಳಾಗಲೀ ಬೌದ್ಧ ತತ್ವನ್ನಾಗಲಿ ಅಥವಾ ಮಾರ್ಕ್ಸ್‌ವಾದ ಇವೆರಡರಲ್ಲಿ ಒಂದನ್ನು ಆಯ್ದುಕೊಳ್ಳಲೇಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಪ್ರಪಂಚದ ಪ್ರಸ್ತುತ ಸ್ಥಿತಿಯಲ್ಲಿನ ಸಂದರ್ಭವನ್ನು ನಾನು ಅಧ್ಯಯನ ಮಾಡಿರುವಷ್ಟರ ಮಟ್ಟಿಗೆ ಸಂಘರ್ಷ–ಅದು ಯಾವುದೇ ರೂಪವನ್ನು ತಳೆಯಲಿ, ಕಟ್ಟ ಕಡೆಯಲ್ಲಿ ಬುದ್ಧನ ಸಿದ್ಧಾಂತ ಮತ್ತು ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತದ ನಡುವೆ ಆಗುತ್ತದೆ.

ಈ ದೃಷ್ಟಿಕೋನದಿಂದಲೇ ನಾನು ಜಪಾನ್, ಚೀನ ಮತ್ತು ಇತರ ಪೌರಾತ್ಯ ದೇಶಗಳೆಡೆಗೆ ಆಕರ್ಷಿತನಾಗಿದ್ದೇನೆ ಎಂದು ಹೇಳಿದರು.

ಮುಂದುವರೆದು ಡಾ: ಅಂಬೇಡ್ಕರ್ ಅವರು ಹೇಳಿದ್ದೇನೆಂದರೆ, ಪಶ್ಚಿಮಕ್ಕಿಂತ ಪೂರ್ವ ಆಗಲೇ ಹೆಚ್ಚು ಪ್ರಾಮುಖ್ಯವನ್ನು ಪಡೆದುಕೊಂಡಿದೆ, ಆದರೆ ಬುದ್ಧನ ಸಿದ್ಧಾಂತವನ್ನು ಅಳವಡಿಸಿಕೊಳ್ಳದಿದ್ದರೆ ಯೂರೋಪಿನ ಸಂಘರ್ಷದ ಚರಿತ್ರೆ ಏಷ್ಯಾದಲ್ಲೂ ಪುನರಾವರ್ತನೆ ಆಗುತ್ತದೆ ಎಂದರು.

ಬೌದ್ಧ ಧರ್ಮ ಅಲ್ಲದ ಇತರ ಧರ್ಮಗಳು ಆತ್ಮ, ಪೂಜೆ ಇಂಥ ಸಮಸ್ಯೆಗಳ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದವು, ಆದರೆ ಮಾನವನನ್ನೇ ಮರೆತುಬಿಟ್ಟವು. ಆತ್ಮಗಳ ಮೇಲೆ ನಿಮ್ಮ ಅಭಿಪ್ರಾಯವೇನೆಂದು ಬುದ್ಧನನ್ನು ಒತ್ತಾಯಿಸಿ ಕೇಳಿದಾಗ, ಅವನು ಹೇಳಿದ್ದು ಇಂಥ ಚರ್ಚೆಗಳಿಂದ ಪ್ರಯೋಜನವಿಲ್ಲ. ಯಾರೂ ಆತ್ಮಗಳ ಅಸ್ತಿತ್ವವನ್ನು ಸ್ಥಾಪಿಸುವುದಕ್ಕೆ ಆಗುವುದಿಲ್ಲ. ನಾನು ಮಾನವನ ಬಗ್ಗೆ ಚಿಂತಿತನಾಗಿದ್ದೇನೆ. ಮನುಷ್ಯ, ಮನುಷ್ಯನ ನಡುವೆ ರಜು ಮಾರ್ಗವನ್ನು ಸ್ಥಾಪಿಸುವ ಬಗ್ಗೆ ನಾನು ಚಿಂತನೆಯನ್ನು ಮಾಡುತ್ತಿದ್ದೇನೆ ಎಂದರು.

# ೧೪೪
# ಮೇಲ್ವರ್ಗದ ಜನಗಳು ತಾವು ಎಂದು ಹೇಳಿಕೊಳ್ಳುವವರ ಅಸ್ತಿತ್ವವನ್ನೇ ಅಳಿಸಿಹಾಕಲಾಗುತ್ತದೆ

ಶನಿವಾರ ೨ನೇ ಮೇ, ೧೯೫೩ರಂದು ಬೊಂಬಾಯಿನಲ್ಲಿ ನಡೆದ ಯುವ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತ, ಪರಿಶಿಷ್ಟ ಜಾತಿಗಳ ನಾಯಕರಾದ ಡಾ: ಅಂಬೇಡ್ಕರ್ ಯುವಕರಿಗೆ ಹೇಳಿದ್ದೇನೆಂದರೆ, ಸಮೂಹಗಳತ್ತ ಹೋಗಿ ಅವರ ಮೂಢ ನಂಬಿಕೆಗಳಿಂದ ಅವರನ್ನು ಮುಕ್ತರನ್ನಾಗಿ ಮಾಡಿ ಎಂದರು.

ಕೇವಲ ವಿದ್ಯಾವಿಷಯಕದಲ್ಲಿ ಪರಿಣಿತಿಯನ್ನು ಪಡೆಯುವುದರ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ಯುವಕರು ಒಂದೆರಡು ಸಮಕಾಲೀನ ಸಮಸ್ಯೆಗಳನ್ನು ಆರಿಸಿಕೊಂಡು ಅದನ್ನು ವೈಚಾರಿಕವಾಗಿ ಎದುರಿಸಬೇಕೆಂದು ಸಲಹೆ ಮಾಡಿದರು.

ವಿದ್ಯಾರ್ಥಿ ಪ್ರಪಂಚದೊಳಕ್ಕೆ ನುಸುಳಿರುವ ಅನೇಕಾನೇಕ ರಾಜಕೀಯ ಗೊಡ್ಡು ಆದರ್ಶಗಳಿಂದ ತಮಗೆ ದಿಗ್ಭ್ರಮೆಯಾಗಿದೆಯೆಂದು, ಬಹುಶಃ ಇದು ವಿದೇಶೀ ಪ್ರಭಾವದಿಂದ ಆಗಿರಬಹುದೆಂದೂ ಅವರು ಹೇಳಿದರು.

ನಿರ್ದಿಷ್ಟ ಉದ್ದೇಶಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಒಂದು ಕಾರ್ಯ ಯೋಜನೆಯನ್ನು ರೂಪಿಸಿಕೊಳ್ಳಬೇಕೆಂದು ಮತ್ತು ವೇದಾಂತ ಮತ್ತು ಐರೋಪ್ಯ ಚರಿತ್ರೆಯ ಮೇಲಿನ ಉಪನ್ಯಾಸಗಳನ್ನು, ಅವು ಸಿದ್ಧ ಫಲಿತಾಂಶಗಳನ್ನು ಬಯಸಿದರೆ ವರ್ಜಿಸಿ ಎಂದು ಹೇಳಿದರು.

ಮೇಲ್ವರ್ಗಗಳವರೆಂದು ಹೇಳಿಕೊಳ್ಳುವ ಜನ, ಪ್ರಸ್ತುತ ಕಾಲದ ತತ್ ಕ್ಷಣದ ಮತ್ತು ಸಮತೋಲನದ ಮೌಲ್ಯ ಮಾಪನವನ್ನು ಮಾಡದಿದ್ದರೆ, ಅವರನ್ನು ಅಸ್ತಿತ್ವದಿಂದಲೇ ಅಳಿಸಿಹಾಕಿ ಬಿಡಲಾಗುತ್ತದೆ ಎಂದು ಎಚ್ಚರಿಸಿದರು.

ವಿದ್ಯಾರ್ಥಿಗಳು ಸಣ್ಣ ಸಣ್ಣ ಗುಂಪುಗಳಾಗಿ ಜನ ಸಮೂಹದತ್ತ ಹೋಗಿ ಅವರಿಗೆ ವೈಚಾರಿಕ ಜೀವನವನ್ನು ನಡೆಸುವುದರ ಬಗ್ಗೆ ಹೇಳಿಕೊಡಬೇಕು ಎಂದು ಅಭಿಪ್ರಾಯಪಟ್ಟರು.

ಆಧುನಿಕ ಸಮಾಜ ತಿರುಚಿ ಹೋಗಿದೆಯೆಂದು ವಿವರಿಸುತ್ತಾ ಅವರು ಪುರಾತನ ಸಮಾಜದ ಆದರ್ಶಗಳನ್ನು ಇಟ್ಟುಕೊಂಡು ಆಧುನಿಕ ಕಾಲದಲ್ಲಿ ಜೀವಿಸುತ್ತಿದ್ದಾರೆಂದು ಹೇಳಿದರು.

ನಾವು ಅಳವಡಿಸಿಕೊಂಡಿರುವ ಸಂವಿಧಾನ, ನಮ್ಮ ಜೀವನದ ನಿಜ ವಿನ್ಯಾಸವನ್ನು ಪಾಲಿಸುವ ನೀತಿ ನಿಯಮಗಳಿಂದ ಸಂಪೂರ್ಣ ಭಿನ್ನವಾಗಿದೆ ಎಂದು ಅವಲೋಕಿಸಿದರು.

ಯುವ ಸಮ್ಮೇಳನದ ಅಧ್ಯಕ್ಷರಾದ, ಡಾ: ಬಿ.ಜಿ. ಗೋಖಲೆಯವರು ಡಾ: ಅಂಬೇಡ್ಕರ್ ಅವರನ್ನು ಸ್ವಾಗತಿಸಿದರು.

## ೧೪೫
## ಜಾತಿರಹಿತ, ವರ್ಗರಹಿತ ಸಮಾಜವನ್ನು ಅಸ್ತಿತ್ವಕ್ಕೆ ತರದ ಹೊರತು ಭಾರತದಲ್ಲಿ ಅಭಿವೃದ್ಧಿ ಇರುವುದಿಲ್ಲ

ಕೇಂದ್ರ ಸರ್ಕಾರದ ಮಾಜಿ ಕಾನೂನು ಸಚಿವರಾದ ಡಾ: ಬಿ.ಆರ್. ಅಂಬೇಡ್ಕರ್ ಅವರು ಬುಧವಾರ, ೨೭ನೇ ಮೇ, ೧೯೫೩ರಂದು ಬೊಂಬಾಯಿಯಲ್ಲಿ ಮಾತನಾಡುತ್ತಾ, ತಮ್ಮ ಮಿಕ್ಕುಳಿದ ಜೀವನವನ್ನು ಬೌದ್ಧ ಧರ್ಮ ಪ್ರಚಾರಕ್ಕಾಗಿ ಮೀಸಲಿಡುತ್ತೇನೆಂದು ಹೇಳಿದರು.

ಭಗವಾನ್ ಬುದ್ಧನ ಜಯಂತಿಯನ್ನು ಆಚರಿಸುವ ಸಲುವಾಗಿ ನಾರೆ ಪಾರ್ಕ್ ಮೈದಾನದಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಷನ್ ವ್ಯವಸ್ಥೆಗೊಳಿಸಿದ್ದ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತ. ಜಾತಿ ಪದ್ಧತಿಯನ್ನು ಖಂಡಿಸಿ, ಜಾತಿ ರಹಿತ ಮತ್ತು ವರ್ಗ ರಹಿತ ಸಮಾಜ ಸೃಷ್ಟಿಯಾಗುವವರೆಗೂ ದೇಶ ಅಭಿವೃದ್ಧಿಯಾಗುವುದಿಲ್ಲ ಎಂದು ಹೇಳಿದರು.

ಸಮಾರಂಭದಲ್ಲಿ ಹಿಂದೂಗಳು ಸಹ ಭಾಗವಹಿಸುತ್ತಿರುವುದು ನನಗೆ ಸಂತೋಷವಾಗಿದೆಯೆಂದು ಹೇಳಿದರು.

ಭಾರತದಲ್ಲಿ ಬೌದ್ಧ ಧರ್ಮ ವೇಗವಾಗಿ ಹರಡುತ್ತದೆ ಎಂಬ ಭರವಸೆ ತಮಗೆ ಇದೆ ಎಂದು ಹೇಳಿದರು.

ಬುದ್ಧಜಯಂತಿಯನ್ನು ಆಚರಿಸಿದ ಇತರ ಸಂಸ್ಥೆಗಳಲ್ಲಿ, ಬುದ್ಧ ಸಂಘ ಮತ್ತು ಬೌದ್ಧ ಧರ್ಮ ಪ್ರಚಾರ ಸಮಿತಿ ಸೇರಿದ್ದವು.

ಭಾರತ ಸರ್ಕಾರದ ಕಚೇರಿಗಳು ಬೊಂಬಾಯಿನಲ್ಲಿ ಬುಧವಾರ ಬುದ್ಧ ಜಯಂತಿ ಪ್ರಯುಕ್ತ ಮುಚ್ಚಿದ್ದವು.

ಅಂಚೆ ಕಚೇರಿಗಳಿಗೂ ಆ ದಿನ ರಜವಾಗಿತ್ತು.

ಸಾರ್ವಜನಿಕ ರಜಾದಿನವಾಗಿಲ್ಲದೆ ಇದ್ದುದರಿಂದ ಬ್ಯಾಂಕುಗಳು ಮತ್ತು ರಾಜ್ಯ ಸರ್ಕಾರದ ಕಚೇರಿಗಳು ಇಂದೂ ಎಂದಿನಂತೆ ಕೆಲಸ ಮಾಡಿದವು.

ಸಭೆಯ ಕುರಿತು ಗುಪ್ತಚಾರ ದಳದ ವರದಿ ಹೀಗಿತ್ತು:

ಡಾ: ಬಿ. ಅರ್. ಅಂಬೇಡ್ಕರ್ ೨೭ನೇ ಮೇ ೧೯೫೩ರಂದು ಬೊಂಬಾಯಿಯ ಪರೇಲ್ ನಾರೆ ಪಾರ್ಕ್ ನಲ್ಲಿ ನಡೆದ ಬೌದ್ಧ ಧರ್ಮ ಪ್ರಚಾರ ಸಮಿತಿಯ ಆಶ್ರಯದಲ್ಲಿ ನಡೆದ ಒಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ೫೦೦೦ ಜನ ಸಭಿಕರನ್ನು ಉದ್ದೇಶಿಸಿ ಮಾತನಾಡುತ್ತಾ, ಹಿಂದೂ ಧರ್ಮಕ್ಕೂ ಮತ್ತು ಬೌದ್ಧ ಧರ್ಮಕ್ಕೂ ಮಧ್ಯೆ ಅನೇಕ ವಿಷಯಗಳು ಭಿನ್ನವಾಗಿದ್ದು, ಹರಿಜನರು ಹಿಂದೂ ಧರ್ಮದಲ್ಲಿ ಉಳಿದುಕೊಂಡರೆ ಅವರು ಉದ್ಧಾರವಾಗುವುದಿಲ್ಲವೆಂದು ಹೇಳಿದರು. ತಾವು ಬೌದ್ಧ ಧರ್ಮದ ಪ್ರಚಾರವನ್ನು ನಡೆಸಿಕೊಂಡು ಹೋಗಲು ನಿರ್ಧರಿಸಿದ್ದೇನೆ ಎಂದು ಘೋಷಣೆ ಮಾಡಿದರು.

# ೧೪೬
# ಟೀಕೆಯಿಂದ ತಪ್ಪುದಾರಿಗೆ ಎಳೆಯಲ್ಪಡಬೇಡಿ

೩ನೇ ಜೂನ್, ೧೯೫೩ರಂದು ಬೊಂಬಾಯಿ,ಸಯಾನಿನ ರಾವ್ಲಿ ಕ್ಯಾಂಪಿನಲ್ಲಿ ಪರಿಶಿಷ್ಟ ಜಾತಿಗಳ ಮಹಿಳಾ ಮಂಡಲದ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಡಾ: ಅಂಬೇಡ್ಕರ್ ಅವರು ಸುಮಾರು ೩೦೦೦ ಜನ ಸಭಿಕರುಗಳನ್ನು ಉದ್ದೇಶಿಸಿ ಮಾತನಾಡಿದರು. ಬುದ್ಧ ಜಯಂತಿ ದಿನ ತಾವು ಮಾಡಿದ ಭಾಷಣಕ್ಕೆ ಬಹಳಷ್ಟು ಟೀಕೆಗಳು ಬಂದಿದ್ದವು, ಆದರೆ ನೀವು ಮಾತ್ರ ಆ ಟೀಕೆಯಿಂದ ತಪ್ಪು ದಾರಿಗೆ ಎಳೆಯಲ್ಪಡಬೇಡಿ ಎಂದು ಹೇಳಿದರು.

೩ನೇ ಜೂನ್, ೧೯೫೩ರಂದು ಬೊಂಬಾಯಿನಲ್ಲಿ ಪರಿಶಿಷ್ಟ ಜಾತಿಗಳ ಮಹಿಳಾ ಮಂಡಲದ ಪರವಾಗಿ ನಡೆದ ಸಾರ್ವಜನಿಕ ಸಭೆಯಲ್ಲಿ ಡಾ: ಅಂಬೇಡ್ಕರ್ ಅವರು ಸುಮಾರು ೩೦೦೦ ಜನ ಸಭಿಕರುಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿಕೂಲ ಟೀಕೆಗಳು ಬಂದರೂ, ನಿಮ್ಮ ವಿಮೋಚನೆಯ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಿ ಎಂದು ಸಲಹೆ ಮಾಡಿದರು. ಫೆಡರೇಷನ್ನಿನ ಕಟ್ಟಡದ ನಿಧಿಗಾಗಿ ತಮ್ಮ ಮೊದಲನೆ ಕಂತಾಗಿ ೪೦೧ ರೂಪಾಯಿಗಳ ದೇಣಿಗೆಯನ್ನು ಮಂಡಲದವರು ಕೊಟ್ಟರು.

## ೧೪೭
## ರಾಜಕೀಯವೆಂಬುದೇ ರಾಷ್ಟ್ರ ಜೀವನದ ಹುಟ್ಟೂ ಅಲ್ಲ ಕೊನೆಯೂ ಅಲ್ಲ

೧೯೫೩ರ ಜೂಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ತಮ್ಮ ಕಾಲೇಜುಗಳ ಕೆಲಸದಲ್ಲಿ ಡಾ: ಅಂಬೇಡ್ಕರ್ ಅವರು ಪೂರ್ತಿಯಾಗಿ ತೊಡಗಿಕೊಂಡಿದ್ದರು. ಜೂಲೈ ಮತ್ತು ಆಗಸ್ಟ್ ತಿಂಗಳುಗಳ ಬಹಳಷ್ಟು ದಿನಗಳಲ್ಲಿ ಅವರು ಔರಂಗಾಬಾದ್ನಲ್ಲಿ ತಂಗಿದ್ದರು. ಅಲ್ಲಿ ಅವರು ಹೈದರಾಬಾದ್ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಕೆಲಸಗಾರರ ಮತ್ತು ನಾಯಕರುಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಅವರು ಹೇಳಿದ್ದು:

ರಾಜಕೀಯವೆಂಬುದು ರಾಷ್ಟ್ರ ಜೀವನದ ಹುಟ್ಟೂ ಅಲ್ಲ ಕೊನೆಯೂ ಅಲ್ಲ. ಅವರನ್ನು (ಸಭಿಕರನ್ನು) ಭಾರತದ ಸಮಸ್ಯೆಯನ್ನು ಅದರ ಎಲ್ಲಾ ಮುಖಗಳಲ್ಲಿ ಅಂದರೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಮುಖಗಳಲ್ಲಿ ಕಾರ್ಯತತ್ಪರತೆಯಿಂದ ಅಧ್ಯಯನ ಮಾಡಿ, ಆ ನಂತರ ಕೆಳಗೆ ತುಳಿಯಲ್ಪಟ್ಟವರ ಉದ್ಧಾರಕ್ಕಾಗಿ ಸ್ವಇಚ್ಛೆಯಿಂದ ಹೋರಾಡಿ. ಅವರು ಯಾರಾದರೂ ಹಿಂದೂ ದೇವಸ್ಥಾನಗಳಿಗೆ ಹೋದರೆ ಅಂಥವರನ್ನು ಬಹಿಷ್ಕರಿಸಲಾಗುವುದು ಎಂದು ಇದೇ ಸಭೆಯಲ್ಲಿ ಎಚ್ಚರಿಕೆ ಕೊಟ್ಟರು.

## ೧೪೮
## ನಾವು ಕೇಂದ್ರ ಸರ್ಕಾರದ ವಿರುದ್ಧವೂ ಸಹ ಭಾರತದ ಭೂ ಸತ್ಯಾಗ್ರಹವನ್ನು ನಡೆಸಿಯೇ ನಡೆಸುತ್ತೇವೆ

ಈ ದಿನ ಅಂದರೆ, ೧೬ನೇ ನವೆಂಬರ್ ೧೯೫೩ರಂದು ನವ ದೆಹಲಿಯಲ್ಲಿ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಅಧ್ಯಕ್ಷ್ಯರಾದ ಡಾ: ಬಿ..ಆರ್. ಅಂಬೇಡ್ಕರ್ ಅವರು ಹೈದರಾಬಾದ್ ರಾಜ್ಯದ ಮರಾಠವಾಡದಲ್ಲಿನ ತಮ್ಮ ಪಕ್ಷದ ಜನರನ್ನು ಔರಂಗಬಾದ್ ಜಿಲ್ಲೆಯಲ್ಲಿ ತಮ್ಮ ಭೂ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಕರೆ ಕೊಟ್ಟರು.

ಸತ್ಯಾಗ್ರಹಿಗಳನ್ನು ಚೆನ್ನಾಗಿ ನಡೆಸಿಕೊಂಡುದಕ್ಕಾಗಿ ಅವರು ಹೈದರಾಬಾದ್ ಸರ್ಕಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಭೂಮಿಯನ್ನು ಹಿಂದಿರುಗಿಸುವುದಕ್ಕೆ ಆದೇಶವನ್ನು ಹೊರಡಿಸಿದ್ದು, ಕಮ್ಯೂನಿಸ್ಟ್ ಚಳುವಳಿಯ ದಿನಗಳ ಅವಧಿಯಲ್ಲಿ ತೆರವು ಮಾಡಿದ್ದ ಅರಣ್ಯ ಪ್ರದೇಶಗಳನ್ನು ಪರಿಶಿಷ್ಟ ಜಾತಿಗಳಿಗೆ ಹಂಚಿಕೆ ಮಾಡಬೇಕೆಂಬ ಪ್ರಸ್ತಾವವನ್ನು ಪರಿಗಣಿಸುತ್ತಿದ್ದಾರೆ.

ನ್ಯಾಯಬದ್ಧವಾದ ಕುಂದು ಕೊರತೆಯ ದೂರಿಗೆ, ಇದು ಒಂದು ಒಳ್ಳೆಯ ಸ್ಪಂದನವಾಗಿದೆ ಎಂದು ಡಾ: ಅಂಬೇಡ್ಕರ್ ಅವರು ಹೇಳಿದರು.

೧೭೦೦ ಸತ್ಯಾಗ್ರಹಿಗಳಲ್ಲಿ ೧೧೦೦ ಜನರನ್ನು ಯಾವ ಷರತ್ತೂ ಇಲ್ಲದೆ, ವಿಚಾರಣೆಯಿಲ್ಲದೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಇದು ಒಂದು ಮಾನವೀಯ ಕ್ರಮವೆಂದು ನಾನು ಹೇಳಲೇಬೇಕು ಎಂದು ಡಾ: ಅಂಬೇಡ್ಕರ್ ಹೇಳಿದರು.

ಕೆಲವು ಸತ್ಯಾಗ್ರಹಿಗಳು ಮರಗಳನ್ನು ಕತ್ತರಿಸಿ ಹಾಕಿದ್ದಾರೆ ಎಂದು ನಾನು ಕೇಳಿದ್ದೇನೆ; ಅದಕ್ಕಾಗಿ ನನ್ನ ವ್ಯಸನವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ಉದ್ದೇಶ ಭೂಮಿಯನ್ನು ಪಡೆದುಕೊಳ್ಳುವುದು ಆಗಿತ್ತೇ ವಿನಾ, ಮರಗಳನ್ನು ಕಡಿಯುವುದಲ್ಲ ಎಂದು ಅವರು ಹೇಳಿದರು.

ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವುದಕ್ಕಾಗಿ ಒಂದು ಹೇಳಿಕೆಯನ್ನು ಬಿಡುಗಡೆ ಮಾಡುತ್ತಿರುವುದಾಗಿ ಹೇಳಿದರು.

ಫೆಡರೇಷನ್ನಿನ ಕೆಲವು ಸದಸ್ಯರುಗಳು ಹೈದರಾಬಾದಿನ ಸತ್ಯಾಗ್ರಹವನ್ನು ನಾನು ಅಧಿಕೃತಗೊಳಿಸಿಲ್ಲ ಎಂದು ಹೇಳಿದ್ದಾರೆ. ಆದರೆ ಇದು ತಪ್ಪು ಹೇಳಿಕೆ. ಸತ್ಯಾಗ್ರಹವನ್ನು ನಾನು ಅಧಿಕೃತಗೊಳಿಸಿದ್ದೆ, ಅದೂ ಸಹ ಒಳ್ಳೆಯ ಕಾರಣಗಳಿಗಾಗಿ ಎಂದರು.

ಭಾರತದಲ್ಲಿ ಎಲ್ಲಾ ಕಡೆ ಪರಿಶಿಷ್ಟ ಜಾತಿಯ ಜನಗಳು ದಟ್ಟ ದಾರಿದ್ರ್ಯದಲ್ಲಿ ವಾಸಿಸುತ್ತಿದ್ದು, ಅವರಿಗೆ ಭೂಮಿಯೂ ಇಲ್ಲ, ಕೆಲಸವೂ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಹೈದರಾಬಾದ್ ಸರ್ಕಾರ ಅವರಿಗೆ ಬೇಸಾಯ ಮಾಡುವುದಕ್ಕಾಗಿ ಕೊಂಚ ಬಂಜರು ಭೂಮಿಯನ್ನು ಮಂಜೂರು ಮಾಡಿ ಅವರು ಅದನ್ನು ಉತ್ತಿ, ಬಿತ್ತಿ, ಬೆಳೆಯನ್ನು ಕೊಯುಲು ಮಾಡುವುದರಲ್ಲಿ ಇದ್ದಾಗ, ಭೂಮಿಯನ್ನು ವಾಪಸ್ ಪಡೆದುಕೊಂದು ಬಿಟ್ಟರು.ನಮಗೆ ಕ್ರಮ ತೆಗೆದು ಕೊಳ್ಳದೆ ಬೇರೆ ದಾರಿಯೇ ಇರಲಿಲ್ಲ ಎಂದರು.

ನಾಯಕರುಗಳ ಆದ್ಯ ಕರ್ತವ್ಯವೆಂದರೆ, ಪರಿಶಿಷ್ಟ ಜಾತಿಗಳ ಹಿತಾಸಕ್ತಿಯನ್ನು ಮುಂದು ಮಾಡುವುದು. ಪರಿಶಿಷ್ಟ ಜಾತಿಗಳ ಹಿತಾಸಕ್ತಿಯನ್ನು ಅಪಾಯಕ್ಕೀಡು ಮಾಡುವ ಪರಿಸ್ಥಿತಿ ಉದ್ಭವವಾದಾಗ, ಅವರ ನಾಯಕ ಏನೂ ಮಾಡದೆ ಸುಮ್ಮನೆ ಕೂರುವುದು ದ್ರೋಹವಾಗುತ್ತದೆ ಎಂದು ಹೇಳಿದರು.

ಡಾ: ಅಂಬೇಡ್ಕರ್ ಹೇಳಿದರು: ನಾವು ನಮ್ಮ ತಾಳ್ಮೆ ಬರಿದಾದಾಗ. ಅಖಿಲ ಭಾರತ ಸತ್ಯಾಗ್ರಹವನ್ನು ಕೆಂದ್ರ ಸರ್ಕಾರದ ವಿರುದ್ಧವೂ ನಡೆಸುತ್ತೇವೆ. ಸಿಖ್ಖರು ಮಾಡಬಹುದಾದರೆ, ಪರಿಶಿಷ್ಟ ಜಾತಿಗಳವರು ಏಕೆ ಮಾಡಬಾರದು?

ಆದುದರಿಂದ ಸತ್ಯಾಗ್ರಹಕ್ಕೆ ಆಕ್ಷೇಪಣೆ ಮಾಡಿದವರು, ಫೆಡರೇಶನ್ನಿನಿಂದ ಹೊರಗೆ ಹೋಗುವುದೇ ಒಳ್ಳೆಯದು ಎಂದರು.

ಎರಡನೆಯ ತಪ್ಪು ತಿಳುವಳಿಕೆ, ಹೈದರಾಬಾದ್ ರಾಜ್ಯದ ಪರಿಶಿಷ್ಟ ಜಾತಿಗಳ ಫೆಡರೇಷನ್ನಿನ ಪುನಾರಚನೆಗೆ ಸಂಬಂಧಿಸಿದ್ದಾಗಿದೆ. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿಯವರಾದ ಮಿ: ಪಿ.ಎನ್. ರಾಜ್ ಭೋಜ್, ಫೆಡರೇಶನ್ನಿನ ಕಾರ್ಯಕಾರಿ ಸಮಿತಿ ಈ ಶಾಖೆಯನ್ನು ನಾಲ್ಕು ಪ್ರತ್ಯೇಕ ಶಾಖೆ ಗಳಾಗಿ ವಿಭಜಿಸಲಾಗುವುದು ಎಂಬ ಅವರ ಹೇಳಿಕೆ ವಾಸ್ತವ ಮತ್ತು ಅದೇ ಅಂತಿಮ ತೀರ್ಮಾನ.

ಈ ಸಂಘಟನೆಯ ವಿನ್ಯಾಸ ಹೈದರಾಬಾದ್ ರಾಜ್ಯಕ್ಕೆ ಮಾತ್ರ ಹೇಳಿ ಮಾಡಿಸಿದ್ದಲ್ಲ, ದೇಶದುದ್ದಕ್ಕೂ ಎಲ್ಲೆಲ್ಲಿ ಫೆಡರೇಷನ್ ಇದೆಯೋ ಅಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಹೇಳಿದರು.ಫೆಡರೇಷನ್ನಿನ ಆದೇಶಗಳನ್ನು ಉಲ್ಲಂಘಿಸುತ್ತಿರುವ ಸದಸ್ಯರುಗಳ ಬಗ್ಗೆ ಸೈರಣೆ ಇಂದ ಇದ್ದೆ. ಆದರೆ ಇನ್ನು ಮೇಲೆ ಆದೇಶಗಳಿಗೆ ವಿರುದ್ಧವಾಗಿ ವರ್ತಿಸುವವರ ಬಗ್ಗೆ ಯಾವ ಕರುಣೆಯನ್ನೂ ತೋರಿಸುವುದಿಲ್ಲ ಎಂದು ಹೇಳಿದರು.

# ೧೪೯
# ಧರ್ಮದ ಹೆಸರಿನಲ್ಲಿ ಹಣಸಂಗ್ರಹ ಮಾಡಿ ಅದನ್ನು ಪೋಲು ಮಾಡುವುದು ಅಪರಾಧಿಕ ಕೃತ್ಯವಾಗುತ್ತದೆ

೨೪ನೇ ಜನವರಿ ೧೯೫೪ ರಂದು ಬೊಂಬಾಯಿಯ ಕ್ಸೇವಿಯರ್ ಕಾಲೇಜಿನ ಮೈದಾನದಲ್ಲಿ ನಡೆದ ಅಖಿಲ ಭಾರತ ಸಾಯಿ ಭಕ್ತರ ಸಮಾವೇಶದ ಉದ್ಘಾಟನಾ ಭಾಷಣವನ್ನು ಡಾ: ಬಿ.ಆರ್ ಅಂಬೇಡ್ಕರ್ ಅವರು ಮಾಡಿದರು:

ಅವರು ಹೇಳಿದ್ದು :

ಈ ಸಂದರ್ಭದಲ್ಲಿ ಕೆಲವು ಮಾತಗಳನ್ನಾಡುವುದಕ್ಕೆ ನನ್ನನ್ನು ಆಹ್ವಾನಿಸಿದುದಕ್ಕೆ ಅನೇಕ ವಂದನೆಗಳು. ನನಗೆ ಇದರ ಮೇಲೆ ಯಾವ ಕ್ಲೇಮೂ ಇಲ್ಲ. ಸಾಯಿ ಬಾಬಾನ ಭಕ್ತರುಗಳೆಂದು ಗುರುತಿಸಲ್ಪಟ್ಟವರಲ್ಲಿ ನಾನು ಒಬ್ಬನಲ್ಲ. ಸಾಯಿ ಬಾಬಾ ಅವರನ್ನು ಭೇಟಿ ಮಾಡಿದ, ಅಥವಾ ನೋಡಿದ ಅದೃಷ್ಟ ನನಗಿಲ್ಲ. ನಾನು ಅವರ ಬಗ್ಗೆ ಕೇಳಿದ್ದೇನೆ ಮಾತ್ರ. ಈ ಸಂದರ್ಭದಲ್ಲಿ ಅವರ ಬಗ್ಗೆ ಗೊತ್ತಿರುವ ಇನ್ನು ಯಾರನ್ನಾದರೂ ಮಾತನಾಡುವುದಕ್ಕೆ ಕರೆದಿದ್ದರೆ ಒಳ್ಳೆಯದಾಗುತ್ತಿತ್ತು. ಆದರೆ ನನ್ನನ್ನು ಆಹ್ವಾನಿಸುವುದಕ್ಕೆ ಬಂದವರು ನನ್ನನ್ನು ಅಹ್ವಾನಿಸಬೇಕೆಂಬ ನಿರ್ಣಯವನ್ನು ಸರ್ವಾನುಮತದಿಂದ ಆಂಗೀಕರಿಸಲಾಯಿತೆಂದು ಹೇಳಿದಾಗ, ಇಲ್ಲ ಎಂದು ಹೇಳುವುದು ಕಷ್ಟವಾಯಿತು. ಆದರೂ, ನನ್ನ ಆರೋಗ್ಯದ ಈ ಪರಿಸ್ಥಿತಿಯಲ್ಲಿ ನಾನು ಸುಲಭವಾಗಿ ಇಲ್ಲ ಎಂದು ಹೇಳಬಹುದಾಗಿತ್ತು.

ನಾನು ಆಗಲೇ ಹೇಳಿದಂತೆ, ಸಾಯಿ ಬಾಬ ಅವರ ಬಗ್ಗೆ ನನ್ನ ತಿಳುವಳಿಕೆ ಸೊನ್ನೆ. ನನಗೆ

ಗೊತ್ತಿರುವುದು ಅವರ ಬಗ್ಗೆ ಕೇಳಿದ್ದಷ್ಟು ಮಾತ್ರ. ಸಾಯಿ ಬಾಬಾ ಅವರು ಕೆಲ ಕಾಲದ ಹಿಂದೆ ನಿಧನ ಹೊಂದಿದ್ದಾರೆ. ಅವರು ಒಂದು ದೊಡ್ಡ ಅನುಯಾಯಿಗಳ ಗುಂಪನ್ನೇ ಬಿಟ್ಟು ಹೋಗಿದ್ದಾರೆಂದೂ, ಅವರು ನಿಧನ ಹೊಂದಿದ್ದರೂ, ಅವರ ಅನುಯಾಯಿಗಳ ಸಂಖ್ಯೆ ಬೆಳೆಯುತ್ತಲೇ ಇದೆಯೆಂದು ನನಗೆ ತಿಳಿದು ಬಂದಿದೆ. ಅನೇಕರು ಅವರನ್ನು ಒಬ್ಬ ಧಾರ್ಮಿಕ ಗುರು ಎಂದು ತಿಳಿದಿದ್ದಾರೆ.

ಭಾರತದಲ್ಲಿ ಧರ್ಮ ಎನ್ನುವುದು ಅನೇಕ ಛಾಯೆಗಳನ್ನು ಪಡೆದುಕೊಂಡಿದೆ. ಅದರ ಮೂಲ ಸ್ವರೂಪದಲ್ಲಿ, ಅದು ಒಬ್ಬ ಮನುಷ್ಯನ ವೈಯುಕ್ತಿಕ ಆತ್ಮ ಸಾಕ್ಷಾತ್ಕಾರದ ವಿಷಯವಾಗಿತ್ತು. ಆ ನಂತರದಲ್ಲಿ, ಧಾರ್ಮಿಕ ಹೊರನೋಟದಲ್ಲಿ ಮತ್ತು ಉದ್ದೇಶದಲ್ಲಿ ಮಹತ್ತರವಾದ ಬದಲಾವಣೆಯಾಯಿತು. ಅದು ಆತ್ಮ ಸಾಕ್ಷಾತ್ಕಾರದ ವಿಷಯವಾಗಿ ಉಳಿಯಲಿಲ್ಲ; ಅದು ಮಾನವ ಜೀವಿಗಳ ಪರಸ್ಪರ ನಡವಳಿಕೆಯನ್ನು ನಿಯಂತ್ರಿಸುವ ನೈತಿಕ ನಿಯಮಗಳ ಮೇಲೆ ಆಧಾರ ಪಟ್ಟ ಮಾನವ ಭ್ರಾತೃತ್ವವನ್ನು ಕಾಪಾಡಿಕೊಡು ಬರುವ ಉದ್ದೇಶವನ್ನು ಪಡೆದುಕೊಂಡಿತು. ಆ ನಂತರ ಮೂರನೆಯ ಹಂತವೊಂದು ಬಂದಿತು; ಅದು ತಮ್ಮ ಜೀವನದ ಅಭಿಲಾಷೆಗಳನ್ನು ತಣಿಸುವ ವ್ಯಕ್ತಿತ್ವಗಳನ್ನು ಪೂಜಿಸುವತ್ತ ಮನುಷ್ಯರನ್ನು ಮುಟ್ಟಿಸಿತು. ಕೆಲವರಿಗೆ ಸಂತಾನ ಭಾಗ್ಯ ಬೇಕಾಗಿತ್ತು, ಕೆಲವರಿಗೆ ಚಿನ್ನ ಬೇಕಾಗಿತ್ತು, ಕೆಲವರಿಗೆ ವಿಪತ್ತಿನಿಂದ ಪಾರಾಗುವುದು ಬೇಕಾಗಿತ್ತು. ವ್ಯಕ್ತಿಯೊಬ್ಬ ಇಂಥ ಆಕಾಂಕ್ಷೆಗಳನ್ನು ಪೂರೈಸಿದರೆ, ಅವನು ಅವರ ದೇವರಾಗಿ ಬಿಡುತ್ತಿದ್ದ ಮತ್ತು ಜನಗಳು ಆ ದೇವರನ್ನು ಪೂಜೆ ಮಾಡುತ್ತಿದ್ದರು. ಆಮೇಲೆ ನಾಲ್ಕನೆಯ ಹಂತ ಒಂದು ಬಂದಿತು:

ಒಂದಲ್ಲ ಒಂದು ರೀತಿಯ ಪವಾಡಗಳನ್ನು ಮಾಡುವ ಒಬ್ಬ ಬಂದ; ಅದು ಸಾಧಾರಣ ಮನುಷ್ಯನ ವ್ಯಾಪ್ತಿಗೆ ಮೀರಿದ ಪವಾಡವಾಗಿದ್ದು, ಅದನ್ನು ಮಾಡಿದವನು ಅವರ ದೇವರಾಗಿ ಬಿಟ್ಟ. ಭಾರತದಲ್ಲಿ ಇವರೆಲ್ಲರೂ ನಮಗೆ ಕಾಣಸಿಗುತ್ತಾರೆ. ಈ ದಿನ ಭಾರತದಲ್ಲಿ ವಿಗ್ರಹಾರಾಧನೆ, ಸಾಧು ಸಂತರ, ಪವಾಡ ಮಾಡುವವರ, ಪೂಜೆ ಇಲ್ಲದ ಧರ್ಮವೇ ಇಲ್ಲ. ನಮ್ಮ ಧರ್ಮದಲ್ಲಿ ಈ ದಿನ ದೇವರೂ ಇಲ್ಲ. ನೈತಿಕತೆಯೂ ಇಲ್ಲ. ಇದು ಮಾನವ ಮನಸ್ಸಿನ ಅತಿ ಹೀನಾಯ ಸ್ಥಿತಿ ಎಂಬುದರಲ್ಲಿ ನನಗೆ ಅನುಮಾನವಿಲ್ಲ ಮತ್ತು ಮುಂದಿನ ಪೀಳಿಗೆಯವರಿಗೆ ಧರ್ಮವನ್ನು ಅದರ ಪರಿಶುದ್ಧವಾದ, ಉದಾತ್ತವಾದ ರೂಪಕ್ಕೆ ತರಲು ಒಂದು ಕಷ್ಟ ಸಾಧ್ಯವಾದ ಕೆಲಸವೇ ಆಗುತ್ತದೆ.

ಈ ಮಧ್ಯದಲ್ಲಿ ವಾಸ್ತವವನ್ನು ಅದು ಇರುವ ಹಾಗೆಯೆ ಗಮನಿಸಬೇಕು. ಧರ್ಮದ ವಿಷಯದಲ್ಲಿ ನಾವು ತಪ್ಪು ದಾರಿಯಲ್ಲಿ ಹೋಗಿರುವುದೂ ಅಲ್ಲದೆ, ಧರ್ಮದ ಹೆಸರಿನಲ್ಲಿ ಹಣವನ್ನು ವಸೂಲು ಮಾಡುವುದು ಒಂದು ದಂಧೆಯೇ ಆಗಿಬಿಟ್ಟಿರುವುದಲ್ಲದೆ ಆ ಹಣವನ್ನು ಯಾವ ಸಾಮಾಜಿಕ ಸಮರ್ಥನೆಯೂ ಇಲ್ಲದ ಉದ್ದೇಶಗಳ ಮೇಲೆ ಪೋಲು ಮಾಡುತ್ತಿದ್ದೇವೆ. ಪ್ರಪಂಚದಲ್ಲಿ ಎಷ್ಟು ಬಡತನ, ದುರವಸ್ಥೆ ಮತ್ತು ಕ್ಲೇಶವಿದೆಯೆಂದರೆ, ಧರ್ಮದ ಹೆಸರಿನಲ್ಲಿ ಹಣವನ್ನು ಸಂಗ್ರಹಿಸಿ ಅದನ್ನು ಬ್ರಾಹ್ಮಣರ ಮತ್ತು ಇತರ ಯಾತ್ರಾರ್ಥಿಗಳ ಆಹಾರಕ್ಕಾಗಿ ಪೋಲು ಮಾಡುವುದು ಅಪರಾಧಿಕ ಕೃತ್ಯವಾಗುತ್ತದೆ.

ಬುದ್ಧ ಈ ಪ್ರಶ್ನೆಯನ್ನು ಚೆನ್ನಾಗಿ ಪರ್ಯಾಲೋಚಿಸಿದ್ದ. ಅವನ ನೈತಿಕ ಸಂಹಿತೆಯಲ್ಲಿ, ಅವನು ಪಂಚ ಶೀಲ, ಅಷ್ಟಾಂಗ ಮಾರ್ಗ ಮತ್ತು ನಿಬ್ಬಣವನ್ನು ಬೋಧಿಸಿದ. ಅದರ ಜೊತೆಗೆ, ಅವನ ಅನುಯಾಯಿಗಳಿಗೆ ಹತ್ತು ಸದ್ಗುಣಗಳನ್ನು ಕಲಿಸಿದ: (೧) ಪ್ರಜ್ಞ (೨) ಶೀಲ (೩) ನೇಖಮ್ಮ (೪) ದಾನ (೫) ವೀರ್ಯ (೬) ಖಾಂತಿ (೭) ಸಚ್ಚ (೮) ಅಧಿತ್ತಾನ್ (೯) ಮೈತ್ರಿ (೧೦) ಉಪೇಖ್ಖ. ಪ್ರಜ್ಞ ಎಂದರೆ ತಿಳುವಳಿಕೆ, ಅವಿದ್ಯೆಯನ್ನು ಹೋಗಲಾಡಿಸುವ ಬೆಳಕು, ಮೋಹ ಎಂದರೆ ನವ ವಿಜ್ಞಾನ, ಶೀಲ ಎಂದರೆ ಮನೋಧರ್ಮ, ಕೆಟ್ಟದ್ದು ಮಾಡಬಾರದೆಂಬ, ಒಳ್ಳೆಯದನ್ನೇ ಮಾಡಬೇಕೆಂಬ ಮನಸ್ಸು, ನೆಖಮ್ಮ ಎಂದರೆ ಇಹ ಲೋಕದ ಸುಖವನ್ನು ವರ್ಜಿಸುವುದು, ದಾನ ಎಂದರೆ ಫಲಾಪೇಕ್ಷೆ ಇಲ್ಲದೆ ತನ್ನದೆಲ್ಲವನ್ನೂ ಅಂದರೆ ರಕ್ತ, ಅಂಗಾಂಗಗಳು ಮತ್ತು ಪ್ರಾಣವನ್ನೂ ಕೂಡ ಕೊಟ್ಟುಬಿಡುವುದು. ವೀರ್ಯ ಎಂದರೆ ನೀವು ಏನನ್ನು ಮಾಡಬೇಕೆಂದು ಹೊರಟಿದ್ದೀರೋ ಅದರಿಂದ ಎಂದಿಗೂ ವಿಮುಖನಾಗದೆ ಹಿಂದೆ ಸರಿಯದೆ, ನಿಮ್ಮ ಪೂರ್ಣ ಶಕ್ತಿಯಿಂದ ಮಾಡುವುದು. ಖಾಂತಿ ಎಂದರೆ ಕ್ಷಮಾ ಗುಣ, ದ್ವೇಶವನ್ನು ದ್ವೇಷದಿಂದ ಎದುರಿಸಬಾರದು, ಸಚ್ಚ ಎಂದರೆ ಸತ್ಯ, ವ್ಯಕ್ತಿಯೊಬ್ಬ ಎಂದೆಂದಿಗೂ ಸುಳ್ಳು ಹೇಳಬಾರದು, ಅವನು ಹೇಳುವುದು ನಿಜವೇ ಆಗಿರಬೇಕು, ನಿಜವಲ್ಲದೆ ಬೇರೇನೂ ಆಗಿರಬಾರದು. ಅಧಿತ್ತಾನ್ ಗುರಿಯನ್ನು ಮುಟ್ಟಲು ಧೃಡ ಸಂಕಲ್ಪ. ಮೈತ್ರಿ ಎಂದರೆ ಎಲ್ಲಾ ಜೀವಿಗಳ ಬಗ್ಗೆ ಸ್ನೇಹಭಾವವನ್ನು ಇಟ್ಟುಕೊಳ್ಳುವುದು. ಉಪೇಕ್ಷೆ ಎಂದರೆ ಉದಾಸೀನ ಇಲ್ಲದ ನಿರ್ಲಿಪ್ತತೆ. ಅದು ಒಂದು ಮನಃ ಸ್ಥಿತಿ ಅದರಲ್ಲಿ ಇಚ್ಚೆಯೂ ಇಲ್ಲ ಅಥವಾ ಅನಿಚ್ಚೆಯೂ ಇಲ್ಲ. ಪ್ರತಿಕೂಲ ಫಲಿತಾಂಶಗಳಿಂದ ಕಂಗೆಡದೆ, ಮಾಡುವುದಕ್ಕೆ ಹೊರಟ ಕೆಲಸವನ್ನು ಬೆಂಬಿಡದೆ ಮುಂದುವರಿಸುವುದು.. ಪ್ರತಿಯೊಬ್ಬ ವ್ಯಕ್ತಿಯೂ ಈ ಸದ್ಗುಣಗಳನ್ನು ಅತ್ಯುನ್ನತ ಮಟ್ಟದಲ್ಲಿ ಆಚರಣೆಗೆ ತರಬೇಕು ಎಂದು ಬುದ್ಧ ಕಟ್ಟು ಮಾಡಿದ್ದ. ಆದುದರಿಂದಲೇ ಅವುಗಳನ್ನು ಪಾಳಿ ಸಾಹಿತ್ಯದಲ್ಲಿ ಪರಿಮಿತಗಳೆಂದು ಕರೆಯಲಾಗುತ್ತದೆ. ಬುದ್ಧ ದಾನ ಪರಿಮಿತವನ್ನು ಬೋಧಿಸಿದರೂ ಅದನ್ನು ಪಾತ್ರರಿಗೆ ಮಾತ್ರ ಕೊಡಬೇಕೆಂಬುದು ಅವನ ಆಗ್ರಹ. ಯಾರು ದಾನವನ್ನು ಕೊಡುತ್ತಾನೋ ಅವನನ್ನು ಅದು ಮೇಲಕ್ಕೆ ಎತ್ತುತ್ತದೆಯಾದರೂ, ಯಾರಿಗೆ ಅದನ್ನು ಕೊಡಲ್ಪಡುತ್ತದೆಯೋ ಅವನನ್ನು ಅದು ಕೀಳು ಮಾಡಬಾರದು. ದಾನ ಧರ್ಮ ಒಂದು

ಸಹಾಯ; ಕೆಳಗೆ ಬಿದ್ದವರಿಗೆ ಅದು ಸಹಾಯ ಮಾಡುತ್ತದೆ; ಹಾಗೊಂದು ದಿನ ಅವರು ಜೀವನ ಪಥದಲ್ಲಿ ತಾವೇ ನಡೆಯಬಹುದು.

ನೀವು ಭಕ್ತಿ ಭಾವವನ್ನು ಇಟ್ಟುಕೊಂಡಿರುವ ಒಬ್ಬ ಸಂತನ ಹೆಸರಿನಲ್ಲಿ ನೀವು ಹಣವನ್ನು ಸಂಗ್ರಹಿಸಿದರೆ, ಆ ಹಣವನ್ನು ಪರಮಿತಗಳಲ್ಲಿ ಸೂಚಿಸಿರುವ ಕೆಲಸಗಳಿಗಾಗಿ ಮಾತ್ರ ಮುಡುಪಿಡುವುದು ಅವಶ್ಯಕವಾಗುತ್ತದೆ. ಪ್ರಪಂಚದಲ್ಲಿ ಎಷ್ಟು ದುರವಸ್ಥೆ, ಎಷ್ಟು ಕ್ಲೇಶ ಇದೆಯೆಂದರೆ, ಎಷ್ಟು ಅಜ್ಞಾನ ಇದೆಯೆಂದರೆ, ಎಷ್ಟು ರೋಗರುಜಿನ ಇದೆಯೆಂದರೆ, ಈ ಆಧುನಿಕ ದಿನಗಳಲ್ಲಿ, ಆ ಹಣವನ್ನು ಬಲ್ಲಿದರ ಬಡಲನ್ನು ತುಂಬುವುದಕ್ಕೆ ಉಪಯೋಗಿಸುವುದು ಕ್ರೌರ್ಯವಾಗುತ್ತದೆ. ಇಂಥ ದಾನ ಧರ್ಮಗಳನ್ನು ಆಸ್ಪತ್ರೆಗಳಿಗೆ, ವಿದ್ಯಾಭ್ಯಾಸಕ್ಕೆ, ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ, ಅಸಹಾಯಕರಿಗೆ ಮತ್ತು ವಿಧವೆಯರಿಗೆ ತರಬೇತಿಯನ್ನು ಕೊಟ್ಟು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಸಹಾಯವಾಗಲು ಉಪಯೋಗಿಸಬೇಕು. ನನ್ನ ಈ ಪ್ರಬಂಧದ ಬಗ್ಗೆ ನಿಮಗೆ ಮನದಟ್ಟಾದರೆ, ನೀವು ಪ್ರಾಯೋಗಿಕ ಉದಾಹರಣೆಗಳಿಗಾಗಿ ನೋಡುವುದಾದರೆ, ಅಂಥ ಅನೇಕ ಉದಾಹರಣೆಗಳು ನಿಮಗೆ ಕಾಣ ಸಿಗುತ್ತವೆ.

ನೀವು ಚಿಂತನ ಮಾಡುವುದಕ್ಕೆ ನಿಮಗೊಂದು ಸಾಮಗ್ರಿಯನ್ನು ಕೊಟ್ಟಿದ್ದೇನೆಂದು ನಾನು ಭಾವಿಸುತ್ತೇನೆ. ನೀವು ಹಣವನ್ನು ಸಂಗ್ರಹಿಸಿದ್ದರೆ, ಅದನ್ನು ನನ್ನ ಸಲಹೆಯ ಪ್ರಕಾರ ಉಪಯೋಗಿಸಿ. ಇದರಿಂದ ನಿಮಗೂ ಒಳ್ಳೆಯದಾಗುವುದಲ್ಲದೆ ಸಾಯಿ ಬಾಬನ ಹೆಸರನ್ನು ಮೇಲಕ್ಕೆ ಎತ್ತುತ್ತದೆ.

# ೧೫೦
# ನನ್ನ ಜೀವನದ ತತ್ತ್ವ

ಪ್ರತಿಯೊಬ್ಬ ಮನುಷ್ಯನಿಗೂ ಜೀವನದಲ್ಲಿ ಒಂದು ತತ್ವ ಇರಲೇಬೇಕು. ಏಕೆಂದರೆ ತನ್ನ ನಡತೆಯನ್ನು ಅಳೆಯುವುದಕ್ಕೆ ಒಂದು ಅಳತೆಗೋಲು ಬೇಕಾಗುತ್ತದೆ. ತತ್ವ ಎಂದರೆ ಅಳತೆ ಮಾಡಲು ಬಳಸುವ ಒಂದು ಸಾಧನವಲ್ಲದೆ ಬೇರೇನೂ ಅಲ್ಲ.

ಋಣಾತ್ಮಕವಾಗಿ, ಭಗವದ್ ಗೀತೆಯಲ್ಲಿ ಮುಂದಿಟ್ಟಿರುವ ಹಿಂದೂ ಸಾಮಾಜಿಕ ತತ್ವವನ್ನು ನಾನು ತಿರಸ್ಕರಿಸುತ್ತೇನೆ; ಅದಾದರೋ ಸಾಂಖ್ಯ ವೇದಾಂತದ 'ತ್ರಿಗುಣ'ದ ಮೇಲೆ ಆಧಾರಿತವಾಗಿದೆ; ಇದು ನನ್ನ ತೌಲನಿಕ ಅಭಿಪ್ರಾಯದಲ್ಲಿ ಕಪಿಲನ ಸಿದ್ಧಾಂತದ ಒಂದು ಕೆಟ್ಟ ತಿರುಗು ಮುರುಗಷ್ಟೆ. ಚಾತುರ್ವರ್ಣವನ್ನು ಮತ್ತು .ಹಂತ ಹಂತವಾದ ಅಸಮಾನತೆಯನ್ನು ಅದು ಹಿಂದೂ ಸಾಮಾಜಿಕ ಜೀವನವನ್ನಾಗಿ ಮಾಡಿತ್ತು.

ಸಕಾರಾತ್ಮಕವಾಗಿ ಹೇಳುವುದಾದರೆ, ನನ್ನ ಸಾಮಾಜಿಕ ಸಿದ್ಧಾಂತ ಮೂರು ಪದಗಳಲ್ಲಿ ಅಡಕವಾಗಿದೆ. : ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ. ನಾನು ನನ್ನ ತತ್ವವನ್ನು ಫ್ರೆಂಚ್ ಕ್ರಾಂತಿಯಿಂದ ಎರವಲು ಪಡೆದಿದ್ದೇನೆಂದು ಯಾರಾದರೂ ಹೇಳಿಯಾರು. ನಾನು ಎರವಲು ಪಡೆದಿಲ್ಲ. ನನ್ನ ತತ್ವದ ಬೇರುಗಳು ಧರ್ಮದಲ್ಲಿದೆ, ರಾಜಕೀಯ ವಿಜ್ಞಾನದಲ್ಲಿ ಅಲ್ಲ. ನನ್ನ ಗುರುವಾದ ಬುದ್ಧನ ಉಪದೇಶಗಳಿಂದ ನಾನು ಅದನ್ನು ತಿಳಿದುಕೊಂಡಿದ್ದೇನೆ. ಅವನ ತತ್ವದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗೆ ಜಾಗ ಇತ್ತು. ಅಪರಿಮಿತ ಸ್ವಾತಂತ್ರ್ಯ ಸಮಾನತೆಯನ್ನು ನಾಶಪಡಿಸಿತು ಎಂದು ಅವರು ಅದಕ್ಕೆ ಸೇರಿಸಿದರು; ಹಾಗೆಯೇ ಸಂಪೂರ್ಣ ಸಮಾನತೆ ಸ್ವಾತಂತ್ರ್ಯಕ್ಕೆ ಜಾಗವನ್ನು ಕೊಡುವುದಿಲ್ಲ. ಅವನ ತತ್ವದಲ್ಲಿ, ಸ್ವಾತಂತ್ರ್ಯ ಮತ್ತು ಸಮಾನತೆಯ ಅತಿಕ್ರಮಣವಾಗದಂತೆ ಕಾನೂನು ಕೇವಲ ಒಂದು ರಕ್ಷಣೋಪಾಯವಾಗಿತ್ತೇ ವಿನಾ ಅವುಗಳ ವಿರುದ್ಧ ಗ್ಯಾರಂಟಿಯೇನಾಗಿರಲಿಲ್ಲ. ಭ್ರಾತೃತ್ವಕ್ಕೆ ಅವರು ಅತ್ಯುನ್ನತ ಸ್ಥಾನವನ್ನು ಕೊಟ್ಟರು. ಕಾರಣ ಅದು ಸ್ವಾತಂತ್ರ್ಯ ಅಥವಾ ಸಮಾನತೆಯನ್ನು ನಿರಾಕರಿಸುವುದರ ವಿರುದ್ಧದ ಒಂದೇ ಗ್ಯಾರಂಟಿಯಾಗಿದ್ದು, ಅದರ ಇನ್ನೊಂದು ಹೆಸರು ಸಹೋದರತ್ವ ಅಥವಾ ಮಾನವೀಯತೆ; ಅದು ಧರ್ಮಕ್ಕೆ ಇನ್ನೊಂದು ಹೆಸರು.

ಕಾನೂನು, ಧರ್ಮ ನಿರ್ಲಿಪ್ತವಾಗಿದೆ; ಅದನ್ನು ಯಾರಾದರೂ ಮುರಿಯಬಹುದು. ಆದರೆ ಭ್ರಾತೃಭಾವ ಅಥವ ಧರ್ಮ ಪವಿತ್ರವಾದುದು, ಅದನ್ನು ಎಲ್ಲರೂ ಗೌರವಿಸಲೇ ಬೇಕು. ನನ್ನ ತತ್ವಕ್ಕೆ ಒಂದು ಧ್ಯೇಯವಿದೆ. ನಾನು ಮತಾಂತರದ ಕೆಲಸವನ್ನು ಮಾಡಬೇಕಾಗಿದೆ; ನಾನು ತ್ರಿಗುಣ ತತ್ವ ಪಾಲಕರನ್ನು ನೀವು ಅದನ್ನು ಬಿಟ್ಟು ನನ್ನದನ್ನು ಒಪ್ಪಿಕೊಳ್ಳಿ ಎಂದು ಮನವೊಲಿಸಬೇಕಾಗಿದೆ. ಇಂದಿನ ದಿನಗಳಲ್ಲಿ ಭಾರತೀಯರು ಎರಡು ಬೇರೆ ಬೇರೆ ಆದರ್ಶಗಳನ್ನು ಅನುಸರಿಸಬೇಕಾಗಿದೆ. ಸಂವಿಧಾನದ ಪೀಠಿಕೆಯಲ್ಲಿ ಕಾಣಿಸಿರುವ ಅವರ ರಾಜಕೀಯ ಆದರ್ಶ ಸ್ವಾತಂತ್ರ್ಯ, ಸಮಾನತ್ರೆ ಮತ್ತು ಭ್ರಾತೃತ್ವದ ಜೀವನವನ್ನು ಧೃಡಪಡಿಸುತ್ತದೆ: ಆದರೆ ಅವರ ಧರ್ಮದಲ್ಲಿ ಅಳವಡಿಸಿದ ಸಾಮಾಜಿಕ ಆದರ್ಶ ಆದನ್ನು ಅವರಿಗೆ ನಿರಾಕರಿಸುತ್ತದೆ.

ಡಾ: ಬಿ.ಆರ್.ಅಂಬೇಡ್ಕರ್

೩ನೇ ಅಕ್ಟೋಬರ್ ೧೯೫೪ರಂದು

ಆಕಾಶವಾಣಿಯಲ್ಲಿ ಮಾಡಿದ ಭಾಷಣ.

# ೧೫೧
# ನಾನೊಬ್ಬ ಗೌತಮ ಬುದ್ಧನ, ಕಬೀರನ, ಮಹಾತ್ಮ ಫುಲೆಯವರ ಭಕ್ತನಾಗಿದ್ದು ಜ್ಞಾನ, ಆತ್ಮ ಗೌರವ ಮತ್ತು ಸಚ್ಚಾರಿತ್ರ್ಯದ ಆರಾಧಕನಾಗಿದ್ದೇನೆ

ಡಾ: ಅಂಬೇಡ್ಕರ್ ಅವರ 'ವಜ್ರ ಮಹೋತ್ಸವ ಸಮಾರಂಭ ಸಮಿತಿ' ಆಶ್ರಯದಲ್ಲಿ ಒಂದು ಸಾರ್ವಜನಿಕ ಸಭೆಯನ್ನು, ಬೊಂಬಾಯಿ ನಯಿಗಾಂವ ಪುರಂದರೆ ಕ್ರೀಡಾಂಗಣದಲ್ಲಿ ೨೮ನೇ ಅಕ್ಟೋಬರ್ ೧೯೫೪ ರಂದು ಸಾಯಂಕಾಲ ಸುಮಾರು ೬-೩೦ಕ್ಕೆ ನಡೆಸಲಾಯಿತು. ಸುಮಾರು ೨೫,೦೦೦ ಜನ ಹಾಜರಿದ್ದರು. ಶ್ರೀ ಆರ್.ಡಿ. ಭಂಡಾರೆ ಅವರು ಅಧ್ಯಕ್ಷತೆ ವಹಿಸಿದ್ದರು.

ನಿಧಿ ಸಂಗ್ರಹದ ಲೆಕ್ಕವನ್ನು ಕೊಡುತ್ತಾ ಶ್ರೀ ಶಂಕರ್ ಆನಂದ್ ಉಪಶಾಮ್ ಅವರು ಡಾ: ಅಂಬೇಡ್ಕರ್ ಅವರಿಗೆ ೧೪.೪.೧೯೫೨ಕ್ಕೆ ೬೦ ವರ್ಷಗಳು ತುಂಬಿದೆಯೆಂದು ಹೇಳಿ, ಅವರ ಜನ್ಮದಿನದ ಸಮಾರಂಭವನ್ನು ಆ ದಿನವೇ ಮಾಡಲಾಗಲಿಲ್ಲವೆಂದು, ಈ ದಿನ ಮಾಡುತ್ತಿದ್ದೇವೆ ಎಂದು ಹೇಳಿದರು. ಇಲ್ಲಿಯವರೆಗೆ ತಮಗೆ ೯೦,೦೦೦/- ರೂಪಾಯಿಗಳನ್ನು ಸಂಗ್ರಹ ಮಾಡಲು ಸಾಧ್ಯವಾಗಿದೆಯೆಂದು, ಖರ್ಚುಗಳನ್ನು ಕಳೆದ ಮೇಲೆ ೮೮,೦೦೦ ರೂಪಾಯಿಗಳು ಮಿಕ್ಕಿದೆಯೆಂದು ಹೇಳಿದರು. ಈ ಸಂಗ್ರಹವನ್ನು ಬೃಹತ್ ಬೊಂಬಾಯಿನಲ್ಲಿರುವ ತಮ್ಮ ಸಮುದಾಯದ ಜನಗಳಿಂದ ಕಟ್ಟಡದ ನಿಧಿಗಾಗಿ ಸಂಗ್ರಹ ಮಾಡಲಾಗಿದೆಯೆಂದು ಹೇಳಿದರು. ಇದಲ್ಲದೆ ಬೊಂಬಾಯಿನ ಹೊರಗಡೆ ಇರುವ ಜನರು ಸುಮಾರು ೩೨,೦೦೦/- ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆಂದು, ಇದನ್ನು ಮೇಲ್ಕಂಡ ಹಣಕ್ಕೆ ಸೇರಿಸಿ ಒಟ್ಟು ಹಣವಾದ ೧,೧೮,೦೦೦/- ರೂಪಾಯಿಗಳನ್ನು ಅವರಿಗೆ ಕೊಡಲಾಗುತ್ತದೆ ಎಂದು ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣವನ್ನು ಮಾಡುತ್ತಾ, ಡಾ: ಅಂಬೇಡ್ಕರ್ ಅವರು ವ್ಯಾಸರಿಗಿಂತ, ಮನುವುಗಿಂತ, ಅಬ್ರಹಾಮ್ ಲಿಂಕನ್ನನಿಗಿಂತ, ಕಡೆಗೆ ಕಾರ್ಲ್ ಮಾರ್ಕ್ಸ್ ಇವರೆಲ್ಲರಿಗಿಂತ ಹೆಚ್ಚು ದೊಡ್ಡವರು ಎಂದು ಹೇಳಿದರು. ಭಾರತದಲ್ಲಿ ಎಲ್ಲಿಯೂ ಅಂಬೇಡ್ಕರ್ ಅವರಿಗೆ ಸರಿಗಟ್ಟುವ ಒಬ್ಬ ಮುಖಂಡನೂ ಇಲ್ಲವೆಂದು ಹೇಳಿದರು. ದೇಶ ಇಬ್ಭಾಗವಾಗುವುದಕ್ಕೆ ಹತ್ತು ವರ್ಷಗಳ ಮುಚೆಯೇ ವಿಭಜನೆ ಆಗುತ್ತದೆ ಎಂದು ಎಲ್ಲರಿಗೂ ಮೊದಲು ಅವರು ಭವಿಷ್ಯ ನುಡಿದಿದ್ದರು. ಅವರು ತಮ್ಮ ಇಡೀ ಜೀವನವನ್ನು ಕೆಳಗೆ ತುಳಿಯಲ್ಪಟ್ಟ ಜನಗಳ ಉತ್ಥಾನಕ್ಕೆ ತ್ಯಾಗ ಮಾಡಿದ್ದಾರೆ ಎಂದು ಹೇಳಿದರು. ಎಲ್ಲ ಜನಗಳ ಪರವಾಗಿ ಸಮರ್ಪಿಸುತ್ತಿರುವ ಒಂದು ಲಕ್ಷದ ಹದಿನೆಂಟು ಸಾವಿರ ರೂಪಾಯಿಗಳನ್ನು ಅವರ ಸ್ವಂತ ಖರ್ಚಿಗೆ ಉಪಯೋಗಿಸಿಕೊಳ್ಳಬೇಕೆಂದು, ಕಟ್ಟಡದ ನಿಧಿಗಾಗಿ ಬೇರೆಯಾಗಿ ಹಣವನ್ನು ಅವರು ಇಚ್ಚಿಸಿದ ಹಾಗೆ ಸಂಗ್ರಹ ಮಾಡಲಾಗುತ್ತದೆಯೆಂದು ಹೇಳಿದರು.

ಉತ್ತರಿಸುತ್ತ ಡಾ: ಅಂಬೇಡ್ಕರ್ ಅವರು ಈಗ ತಮಗೆ ಕೊಡಲಾಗುತ್ತಿರುವ ಹಣವನ್ನು ಒಂದು ಭವನವನ್ನು ಕಟ್ಟುವುದಕ್ಕಾಗಿ ಉಪಯೋಗಿಸಲಾಗುತ್ತದೆ ಎಂದು ಹೇಳಿದರು. ಈ ಉದ್ದೇಶಕ್ಕಾಗಿ ಭೂಮಿಯನ್ನು ಆಗಲೇ ಕೊಂಡು ಕೊಳ್ಳಲಾಗಿದೆಯೆಂದು ಮತ್ತು ಆ ಜಾಗದಲ್ಲಿ ವಾಸ ಮಾಡುತ್ತಿರುವ ಜನಗಳನ್ನು ತೆರವು

ಮಾಡಿಸಲಾಗುತ್ತಿದೆಯೆಂದು ಹೇಳಿದರು. ಮುಂದುವರೆದು, ತಾವು ಮೊದಲಿನಿಂದಲೂ ಒಬ್ಬ ಅತಿ ಬುದ್ಧಿವಂತ ವಿದ್ಯಾರ್ಥಿ ಎಂದು ಅಂದುಕೊಳ್ಳುವುದು ತಪ್ಪು ಎಂದು ಹೇಳಿದರು. ತಮ್ಮ ಸಮುದಾಯದಲ್ಲಿನ ಎಲ್ಲ ಹುಡುಗರಂತೆ ನಾನೂ ಒಬ್ಬ ಸಾಧಾರಣ ಹುಡುಗನಾಗಿದ್ದೆ ಎಂದು ಹೇಳಿದರು. ತಮ್ಮ ತಂದೆಯವರು ತಾವು ಹುಟ್ಟಿದ ತಾರೀಖಿನ ದಾಖಲೆಯನ್ನು ಇಟ್ಟುಕೊಳ್ಳುವುದಕ್ಕೆ ಎಚ್ಚರಿಕೆ ವಹಿಸಲಿಲ್ಲ, ಹೀಗಾಗಿ ತಮ್ಮ ಹುಟ್ಟಿದ ತಾರೀಖು ಕರಾರುವಾಕ್ಕಾಗಿ ಗೊತ್ತಿಲ್ಲ ಎಂದು ಹೇಳಿದರು. 'ನನ್ನ ವಯಸ್ಸು ಅರವತ್ತಕ್ಕಿಂತ ಹೆಚ್ಚಾಗಿರಲೂ ಬಹುದು, ಅಥವಾ ಕಮ್ಮಿಯಾಗಿರಲೂ ಬಹುದು' ಎಂದರು. ತಾವು ಮಧ್ಯರಾತ್ರಿ ಹನ್ನೆರಡು ಗಂಟೆಗೆ ಹುಟ್ಟಿರುವುದು ನಿಜವೆಂದು, ಮತ್ತು ತನ್ನ ತಾಯಿಯವರಿಗೆ ಹೆಚ್ಚಾದ ಹೆರಿಗೆ ನೋವು ಇತ್ತು ಎಂದು ಹೇಳಿದರು. ತಾನು ಹುಟ್ಟಿದಾಗ ಕೆಟ್ಟ ನಕ್ಷತ್ರಗಳು ಇದ್ದವು, ಮತ್ತು ಜ್ಯೋತಿಷಿಯೊಬ್ಬ ತನ್ನ ತಾಯಿ ಬೇಗನೇ ಮರಣ ಹೊಂದುವರೆಂದು ಹೇಳಿದ್ದ. ಆದುದರಿಂದ ತಮ್ಮ ಸಹೋದರ ಸಹೋದರಿಯರು ತಮ್ಮನ್ನು ದ್ವೇಷಿಸುತ್ತಿದ್ದರು. ತಮ್ಮ ತಾಯಿಯ ಮರಣಾನಂತರ, ತನ್ನ ಚಿಕ್ಕಮ್ಮ ತನ್ನನ್ನು ಸಾಕಿ ಬೆಳೆಸಿದರು. ತಾವು ಮಹಾಭಾರತ ಮತ್ತು ಭಗವದ್ ಗೀತೆಯಂಥ ಪುಸ್ತಕಗಳನ್ನು ತಮ್ಮ ಚಿಕ್ಕವಯಸ್ಸಿನಲ್ಲಿ ಓದಿದ್ದಾಗಿಯೂ, ಆದರೆ ತಾವು ಬುದ್ಧನ ಬಗ್ಗೆ ಬರೆದ ಪುಸ್ತಕವನ್ನು ಓದಿದ ಮೇಲೆ, ಅದು ಅವರ ಮೇಲೆ ಬಹಳ ಆಳವಾದ ಪ್ರಭಾವ ಬೀರಿತೆಂದೂ, ಮತ್ತು ಆಗಲಿಂದ ತಾವು ಬುದ್ಧನ ಅನುಯಾಯಿ ಆದೆನೆಂದೂ ಹೇಳಿದರು. ಹಿಂದೂಗಳು ಸಹ ತಮ್ಮ ಒಳಿತಿಗಾಗಿ ಬೌದ್ಧ ಮತವನ್ನು ಸೇರಲೇ ಬೇಕು ಎಂದು ಹೇಳಿದರು. ಮುಂದುವರೆದು ಅವರು ತಾವು ಗೌತಮ ಬುದ್ಧ, ಕಬೀರ್, ಮತ್ತು ಮಹಾತ್ಮ ಫುಲೆ ಯವರ ಭಕ್ತನೆಂದೂ ಹೇಳಿದರು; ಅಲ್ಲದೆ ಜ್ಞಾನ, ಆತ್ಮ ಗೌರವ ಮತ್ತು ಸಚ್ಚಾರಿತ್ರ್ಯದ ಆರಾಧಕನಾಗಿದ್ದೇನೆ ಎಂದು ಹೇಳಿದರು. ತಮಗೆ ಯಾವ ಕೆಟ್ಟ ಅಭ್ಯಾಸವೂ ಇಲ್ಲವೆಂದು ಹೇಳಿ, ಓದುವುದು ತಮಗೆ ಬಹಳ ಇಷ್ಟವಾದುದೆಂದೂ ಹೇಳಿದರು. ತನ್ನ ಜೀವನದಲ್ಲಿ ಒಬ್ಬ ವ್ಯಕ್ತಿ ಪುರೋಭಿವೃದ್ಧಿಯನ್ನು ಕಾಣಬೇಕಾದರೆ, ಜ್ಞಾನವನ್ನು ಪಡೆದುಕೊಳ್ಳುವುದು ಅತ್ಯವಶ್ಯಕವಾದುದು ಎಂದು ಹೇಳಿದರು. ಸಭಿಕರನ್ನು ಜ್ಞಾನ ಸಂಪಾದನೆಯನ್ನು ಮಾಡಿ, ನಿಮ್ಮ ಗಳಿಕೆಗಳ ಕೊಂಚ ಭಾಗವನ್ನು ನಿಮ್ಮ ಸಮುದಾಯಕ್ಕಾಗಿ ತೆಗೆದಿರಿಸಿ, ತುಂಬು ಹೃದಯದಿಂದ ಫೆಡರೇಷನ್ನಿಗಾಗಿ ಕೆಲಸ ಮಾಡಿ; ಫೆಡರೇಷನ್ ಇನ್ನೂ ತನ್ನ ಗುರಿಯನ್ನ ಮುಟ್ಟಿಲ್ಲ ಎಂದು ಹೇಳಿದರು. ಅವರು ತಮ್ಮ ಗುರಿಯತ್ತ ಸಾಗುತ್ತಿದ್ದಾರೆ, ಆದರೆ ಏನಾದರು ಸಡಿಲ ಬಿಟ್ಟರೆ ಅವರು ಬಿದ್ದು ಹೋಗುತ್ತಾರೆ. ಮುಖಂಡತ್ವಕ್ಕಾಗಿ ಜಗಳ ಮಾಡಬೇಡಿ ಎಂದು ಮನವಿ ಮಾಡಿದರು. ತಾವು ತಮ್ಮ ಸಮುದಾಯದ ಸೇವೆ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರಿ ಸೇವೆಯಿಂದ ಹೊರಗಡೆ ಉಳಿದೆ, ತಮ್ಮ ಜೀವನದುದ್ದಕ್ಕೂ ಈ ನೀತಿಗೇ ಅಂಟಿಕೊಂಡಿದ್ದೇನೆ ಎಂದರು. ತಾವೇನಾದರು ಸರ್ಕಾರಿ ಸೇವೆಯನ್ನು ಒಪ್ಪಿಕೊಂಡಿದ್ದರೆ, ಇಷ್ಟು ಹೊತ್ತಿಗೆ ತಮಗೆ ವಿರಾಮ ವೇತನ ಬರುತ್ತಿತ್ತು; ಎಂದರು. ನಾನು ನಿಮಗೆ ಏಳು ಅಥವಾ ಎಂಟು ವರ್ಷಗಳ ಮೇಲೆ ಮಾರ್ಗದರ್ಶನ ಕೊಡುವುದಿಲ್ಲ. ನನ್ನ ಜೀವಿತ ಕಾಲದಲ್ಲಿಯೇ ನನ್ನ ಜಾಗಕ್ಕೆ ಬರಲು ಮುಂದಾಗಬೇಕು ಎಂದರು.

ಸಮಾರಂಭ ರಾತ್ರಿ ಸುಮಾರು ೮-೪೫ಕ್ಕೆ ಮುಗಿಯಿತು.

ಸುಮಾರು ೩೦ ಸಂಸ್ಥೆಗಳು ಮತ್ತು ವ್ಯಕ್ತಿಗಳು ಡಾ: ಅಂಬೇಡ್ಕರ್ ಮತ್ತು ಅವರ ಪತ್ನಿಗೆ ಮಾಲಾರ್ಪಣೆ ಮಾಡಿದರು.

## ೧೫೨
# ಭಾರತದಲ್ಲಿ ಬೌದ್ಧ ಚಳುವಳಿ, ಒಂದು ನೀಲನಕ್ಷೆ

ಬುದ್ಧನಿಗೆ ಪಾಸ್ಪೋರ್ಟ್ ಆಗಲೀ, ವೀಸಾ ಆಗಲೀ ಬೇಕಾಗಿಲ್ಲ

ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ರಂಗೂನಿನಲ್ಲಿ ೪ನೇ ಡಿಸೆಂಬರ್, ೧೯೫೪ರಂದು ನಡೆಸಲಾಯಿತು. ಡಾ: ಅಂಬೇಡ್ಕರ್ ಅವರು ಸಮ್ಮೇಳನದಲ್ಲಿ ಹಾಜರಿದ್ದರು. ಸಮ್ಮೇಳನದಲ್ಲಿ ಒಂದು ಭಾಷಣವನ್ನು ಮಾಡಿದರು. ಅವರು ತಮ್ಮ ಭಾಷಣದ ವಿಸ್ತೃತ ಪಾಠವನ್ನು ಒಂದು ಜ್ಞಾಪನ ಪತ್ರದ ರೂಪದಲ್ಲಿ ತಯಾರು ಮಾಡಿದರು; ಅದು ಎರಡು ಭಾಗಗಳಲ್ಲಿ ಇತ್ತು. ಆ ಪತ್ರದ ಮೊದಲನೆ ಭಾಗದಲ್ಲಿ ಭಾರತದಲ್ಲಿ ಬೌದ್ಧ ಧರ್ಮ ಪ್ರಚಾರದ ಕಾರ್ಯಕ್ರಮವನ್ನು ಒಳಗೊಂಡಿತ್ತು. ಆ ಜ್ಞಾಪನ ಪತ್ರ I ರಲ್ಲಿ ಡಾ: ಅಂಬೇಡ್ಕರ್ ಅವರು ಎತ್ತಿದ ವಿಷಯಗಳಲ್ಲಿ. ತಾವೇ ಎರಡು ಮುಖ್ಯವಾದ ವಿಷಯಗಳಿಗೆ ವಿವರಣೆ ಕೊಟ್ಟಿದ್ದರು: (೧) ಬುದ್ಧನ ಸಿದ್ಧಾಂತವನ್ನು 'ಬುದ್ಧ ಮತ್ತು ಅವನ ಧಮ್ಮ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸುವುದು ಮತ್ತು (೨) ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುವುದಕ್ಕೆ ಒಂದು ಸಮಾರಂಭವನ್ನು ಪರಿಚಯಿಸುವುದು. ಭಾಗ IIರಲ್ಲಿ ದಕ್ಷಿಣ ಭಾರತದಲ್ಲಿ ಭಾರತೀಯ ಬೌದ್ಧರ ಪರಿಸ್ಥಿತಿಗಳ ಕುರಿತಾಗಿ ಮಾಹಿತಿ ಇತ್ತು. – ಸಂಪಾದಕರುಗಳು

**ಜ್ಞಾಪನ ಪತ್ರಗಳು ಹೀಗಿದ್ದವು**

ಜ್ಞಾಪನ ಪತ್ರ – I

ಬರ್ಮಾದ ಬೌದ್ಧ ಶಾಸನ ಪರಿಷತ್ತಿಗೆ ನಾನು ಕೊಟ್ಟ ಭಾಷಣದ

ಪಾಠ – ಒಂದು ವಿಸ್ತೃತ ವರದಿ

೧. ಬರ್ಮಾದ ಹೊರಗಡೆ ಬೌದ್ಧ ಧರ್ಮವನ್ನು ಪ್ರಚಾರ ಮಾಡುವುದು ಶಾಸನ ಪರಿಷತ್ತಿನ ಗುರಿಗಳಲ್ಲಿ ಒಂದಾಗಿರಬೇಕು; ಅವರ ಪ್ರಯತ್ನಕ್ಕೆ ಕೇಂದ್ರವನ್ನು ಮಾಡಿಕೊಳ್ಳುವ ಮೊದಲನೆ ದೇಶ ಭಾರತವಾಗಿರಬೇಕು. ಬೇರೆಯಾವ ದೇಶವೂ ಭಾರತ ಕೊಡುವಷ್ಟು ಕೊಡುವುದಿಲ್ಲ.

೨. ಕಾರಣ, ಸ್ವಯಂ ವೇದ್ಯ. ಭಾರತ ಬೌದ್ಧ ಧರ್ಮದ ಜನ್ಮ ಸ್ಥಳ. ಅದು ಭಾರತದಲ್ಲಿ ಕ್ರಿ.ಪೂ.೫೪೩ರಿಂದ ಕ್ರಿ.ಶ.೧೪೦೦ರ ವರೆಗೆ, ಅಂದರೆ ಸುಮಾರು ೨೦೦೦ ವರ್ಷಗಳವರೆಗೆ, ಉಚ್ಛ್ರಾಯ ಸ್ಥಿತಿಯಲ್ಲಿ ಇತ್ತು,. ಬೌದ್ಧ ಧರ್ಮ ಮಾಯವಾಗಿದ್ದಾಗ್ಯೂ, ಬುದ್ಧನ ಹೆಸರನ್ನು ಇನ್ನೂ ಸಹ ಅತ್ಯಂತ ಪೂಜ್ಯ ಭಾವನೆಯಿಂದ ಕಾಣಲಾಗುತ್ತಿದೆ, ಅವನ ಧರ್ಮದ ನೆನಪು ಇನ್ನೂ ಹಸಿರಾಗಿದೆ. ಭಾರತದಲ್ಲಿ ಅದು ಒಂದು ಒಣಗಿ ಹೋದ ಗಿಡವಾಗಿರಬಹುದು. ಆದರೆ ಯಾರೂ ಸಹ ಅದನ್ನು ಬೇರಿನಲ್ಲೇ ಸತ್ತು ಹೋಗಿದೆ ಎಂದು ಹೇಳಲಾಗುವುದಿಲ್ಲ. ಹಿಂದೂಗಳು ಅವನನ್ನು ವಿಷ್ಣುವಿನ ಅವತಾರ ಎಂದು ಹೇಳುತ್ತಾರೆ.(ಬೇಬಿಲಾನ್ ರಾಜ) ನೆಬು ಚಾಡ್ ನೆಝಾರ್ ಜ್ಯೂಗಳಿಗೆ ತನ್ನ ದೇವರುಗಳಿಗೆ ಇದ್ದ ಪೂಜ್ಯ ಭಾವನೆಯನ್ನು ಮರಳಿ ಸ್ಥಾಪಿಸಿದ ಹಾಗೆ ಭಾರತದಲ್ಲಿ ನಾವು ಒಬ್ಬ ಹೊಸ ಪ್ರವಾದಿಗೆ ಪೂಜ್ಯ ಭಾವನೆಯನ್ನು ಪುನಃ ಹುಟ್ಟು ಹಾಕಬೇಕಾಗಿಲ್ಲ. ಅವನ ಧರ್ಮವನ್ನು ಪುನರುಜ್ಜೀವನಗೊಳಿಸುವುದನ್ನಷ್ಟೇ ನಾವೀಗ ಮಾಡಬೇಕಾಗಿರುವುದು.

ಪ್ರಯತ್ನ ಫಲಪ್ರದವಾಗುವುದಕ್ಕೆ ಇಂಥ ಸುಲಭವಾದ ಪರಿಸ್ಥಿತಿಯನ್ನು ನಾವು ಬೇರೆ ಯಾವ ದೇಶದಲ್ಲೂ ಕಾಣಲಾಗುವುದಿಲ್ಲ. ಬೇರೆ ದೇಶಗಳಲ್ಲಾದರೆ ಬಹು ದೀರ್ಘಕಾಲದಿಂದ ಚೆನ್ನಾಗಿ ಅಸ್ಥಿತ್ವದಲ್ಲಿರುವ ಧರ್ಮಗಳು ಇವೆ; ಹೀಗಾಗಿ ಅಲ್ಲಿ ಬೌದ್ಧ ಧರ್ಮವನ್ನು ಪಾಸ್ಪೋರ್ಟ್ ಇಲ್ಲದೆ ಒಳಗೆ ನುಗ್ಗಿದವನನ್ನು ಕಂಡಹಾಗೆ ಕಾಣಲಾಗುತ್ತದೆ. ಭಾರತ ದೇಶದ ಮಟ್ಟಿಗೆ, ಬುದ್ಧನಿಗೆ ಪಾಸ್ಪೋರ್ಟ್ ಆಗಲೀ ವೀಸಾ ಆಗಲೀ ಬೇಕಾಗಿಲ್ಲ.

೩. ಹಿಂದೂಗಳಲ್ಲಿ ಕೆಲವೊಂದು ಗುಂಪುಗಳು ಹಿಂದುತ್ವವನ್ನು ತ್ಯಜಿಸಿ ಬೌದ್ಧ ಧರ್ಮಕ್ಕೆ ಬರಲು ಕಾತರರಾಗಿದ್ದಾರೆ. ಅವರುಗಳಲ್ಲಿ ಹಿಂದುಳಿದ ವರ್ಗಗಳು ಮತ್ತು ಅಸ್ಪೃಷ್ಯರು ಇದ್ದಾರೆ, ಹಿಂದುತ್ವದಲ್ಲಿ ಹಂತ ಹಂತವಾಗಿ ಅಸಮಾನತೆ ಇರುವುದರಿಂದ ಅವರು ಅದರ ವಿರುದ್ಧ ಇದ್ದಾರೆ. ಬೌದ್ಧಿಕ ಜಾಗೃತಿಯಾಗುತ್ತಿರುವ ಈ ಹಂತದಲ್ಲಿ ಈ ವರ್ಗಗಳು ಹಿಂದುತ್ವದ ವಿರುದ್ಧ ಆಯುಧಗಳನ್ನು ಕೈಗೆತ್ತಿಕೊಂಡಿದ್ದಾರೆ. ಅವರ ಅತೃಪ್ತಿಯನ್ನು ಸದುಪಯೋಗ ಪಡಿಸಿಕೊಳ್ಳಲು ಇದು ಒಳ್ಳೆಯ ಅವಕಾಶ. ಈ ಕೆಳಗಿನ ಕಾರಣಗಳಿಗಾಗಿ ಅವರು ಕ್ರೈಸ್ತ ಧರ್ಮಕ್ಕಿಂತ ಬೌದ್ಧ ಧರ್ಮಕ್ಕೆ ಒಲವು ತೋರಿಸುತ್ತಾರೆ.

೧. ಬೌದ್ಧ ಧರ್ಮ ಭಾರತಕ್ಕೆ ಹೊರಗಿನ ಧರ್ಮವೇನಲ್ಲ

೨. ಬೌದ್ಧ ಧರ್ಮದ ಅತ್ಯವಶ್ಯಕವಾದ ಸಿದ್ಧಾಂತವೆಂದರೆ ಅವರಿಗೆ ಬೇಕಾಗಿರುವ ಸಮಾನತೆ

೩. ಬೌದ್ಧ ಧರ್ಮದಲ್ಲಿ ಮೂಢ ನಂಬಿಕೆಗಳಿಗೆ ಸ್ಥಳವಿಲ್ಲ, ಅದು ಒಂದು ವೈಚಾರಿಕ ಧರ್ಮ

೪. ಪ್ರಾರಂಭಿಕ ಹಂತದಲ್ಲಿ ಬೌದ್ಧ ಧರ್ಮಕ್ಕೆ ಸೇರುತ್ತಿರುವರು ಕೆಳವರ್ಗಗಳಿಗೆ ಸೇರಿದವರೆಂಬ ಬಗ್ಗೆ ಮತ ಪ್ರಚಾರದ ಚಳುವಳಿಯನ್ನು ಪ್ರಾರಂಭಿಸುವುದಕ್ಕೆ ಹಿಂಜರಿಕೆ ಬೇಡ. ಕ್ರಿಶ್ಚಿಯನ್ ಧರ್ಮ ಪ್ರಚಾರಕರು ಭಾರತದಲ್ಲಿ ಮಾಡಿದ ತಪ್ಪುಗಳನ್ನು ಶಾಸನ ಪರಿಷತ್ತು ಮಾಡಲೇಬಾರದು. ಕ್ರಿಶ್ಚಿಯನ್ ಧರ್ಮ ಪ್ರಚಾರಕರು ಮೊದಲು ಬ್ರಾಹ್ಮಣರನ್ನು ಪರಿವರ್ತಿಸುವುದಕ್ಕೆ ಪ್ರಾರಂಭಿಸಿದರು. ಅವರ ವ್ಯೂಹ ಯುಕ್ತಿಯೆಂದರೆ, ಮೊದಲು ಬ್ರಾಹ್ಮಣರನ್ನು ಪರಿವರ್ತಿಸಿದರೆ ಉಳಿದ ಹಿಂದೂಗಳನ್ನು ಪರಿವರ್ತಿಸುವುದು ಕಷ್ಟವಾಗುವುದಿಲ್ಲ ಎಂದು. ಅವರ ತರ್ಕವೇನೆಂದರೆ, ಮೊದಲು ಬ್ರಾಹ್ಮಣರನ್ನು ಪರಿವರ್ತಿಸಿದರೆ, ಆಮೇಲೆ ಬ್ರಾಹ್ಮಣೇತರರ ಬಳಿ ಹೋಗಿ ನಿಮ್ಮ ಧರ್ಮದ ಮುಖಂಡರೇ ಕ್ರಿಶ್ಚಿಯನ್ ಧರ್ಮವನ್ನು ಒಪ್ಪಿಕೊಂಡಿರುವಾಗ, ನೀವೇಕೆ ಒಪ್ಪಿಕೊಳ್ಳಬಾರದು ಎಂದು ಕೇಳಬಹುದು. ಧರ್ಮ ಪ್ರಚಾರಕರ ಈ ಯುಕ್ತಿ ಕೆಲವು ಕ್ರಿಶ್ಚಿಯನ್ನರಿಗೆ ಆಘಾತಕಾರಿಯಾಯಿತು.ಅವರೇಕೆ (ಕ್ರಿಶ್ಚಿಯನ್ ಧರ್ಮವನ್ನು)ಒಪ್ಪಿಕೊಳ್ಳಬೇಕು? ಹಿಂದೂ ಧರ್ಮದ ಕೆಳಗೆ ಅವರಿಗೆ ಎಲ್ಲಾ ಅನುಕೂಲಗಳಿದ್ದವು. ಭಾರತದಲ್ಲಿನ ಕ್ರಿಶ್ಚಿಯನ್ ಧರ್ಮ ಪ್ರಚಾರಕರಿಗೆ ತಮ್ಮ ತಪ್ಪಿನ ಅರಿವಾಯಿತು. ಆಮೇಲೆ ಅವರು ತಮ್ಮ ಗಮನವನ್ನು ಅಸ್ಪೃಷ್ಯರತ್ತ ಹರಿಸಿದರು; ಅಷ್ಟು ಹೊತ್ತಿಗೆ ಬ್ರಾಹ್ಮಣರನ್ನು ಪರಿವರ್ತಿಸುವ ತಮ್ಮ ಪ್ರಯತ್ನದಲ್ಲಿ ನೂರಾರು ವರ್ಷಗಳನ್ನು ನಿರರ್ಥಕ ಮಾಡಿಕೊಂಡಿದ್ದರು. ಅಸ್ಪೃಷ್ಯರತ್ತ ತಮ್ಮ ಗಮನವನ್ನು ಹರಿಸುವಷ್ಟರಲ್ಲಿ ರಾಷ್ಟ್ರೀಯತೆಯ ಚೇತನ ಬೆಳೆದಿತ್ತು, ಕ್ರಿಶ್ಚಿಯನ್ ಧರ್ಮವೂ ಸೇರಿದಂತೆ ಪರಕೀಯವಾದುದೆಲ್ಲವೂ ದೇಶದ ಶತ್ರುವೆಂದು ಪರಿಗಣಿಸಲಾಯಿತು. ಫಲಿತಾಂಶವೆಂದರೆ ಕ್ರಿಶ್ಚಿಯನ್ ಧರ್ಮ ಪ್ರಚಾರಕರಿಗೆ ಕೆಲವೇ ಅಸ್ಪೃಷ್ಯರನ್ನು ಪರಿವರ್ತಿಸಲು ಸಾಧ್ಯವಾಯಿತು. ೪೦೦ ವರ್ಷಗಳ ಕಾಲ ಧರ್ಮ ಪ್ರಚಾರಕರ ಪ್ರಯತ್ನಗಳ ಹೊರತಾಗಿಯೂ ಭಾರತದಲ್ಲಿನ ಕ್ರಿಶ್ಚಿಯನ್ನರ ಸಂಖ್ಯೆ ಅಶ್ಚರ್ಯವೆಂದರೆ ಬಹಳ ಚಿಕ್ಕದು. ಅವರೇನಾದರೂ ಅಸ್ಪೃಷ್ಯರಿಂದ ಮತ್ತು ಹಿಂದುಳಿದ ವರ್ಗಗಳವರಿಂದ ಪ್ರಾರಂಭಿಸಿದ್ದರೆ, ಅವರೆಲ್ಲರನ್ನೂ ಮತ ಪರಿವರ್ತನೆ ಮಾಡಬಹುದಾಗಿತ್ತು.

೫. ರೋಮ್ ನಗರಕ್ಕೆ ಕ್ರಿಶ್ಚಿಯನ್ನರ ಪ್ರವೇಶದತ್ತ ಗಮನವನ್ನು ಹರಿಸೋಣ. ಗಿಬ್ಬನ್ನನ 'ರೋಮ್

ಸಾಮ್ರಾಜ್ಯದ ಅವನತಿ ಮತ್ತು ಪತನ' ಈ ಪುಸ್ತಕದ ಪುಟಗಳಿಂದ ನಮಗೆ ಸ್ಪಷ್ಟವಾಗುವುದೇನೆಂದರೆ, ಕ್ರಿಶ್ಚಿಯನ್ ಧರ್ಮ ಮೊದಲು ಪ್ರಾರಂಭ ಮಾಡಿದ್ದು ಕೆಳಮಟ್ಟದ ವರ್ಗಗಳವರಿಗೆ ಸೇರಿದ್ದ ಜನಗಳಿಂದ; ಗಿಬ್ಬನ್ ಹೇಳುವ ಹಾಗೆ, ಆ ವರ್ಗದ ಜನಗಳು ರೋಮನ್ ಜನ ಸಮೂಹದಲ್ಲಿ ಬಡವರಲ್ಲಿ ಬಡವರಾಗಿದ್ದರು, ತಿರಸ್ಕಾರಕ್ಕೆ ಒಳಪಟ್ಟ ಜನಗಳಾಗಿದ್ದರು. ಉನ್ನತ ವರ್ಗಗಳು ನಂತರ ಬಂದವರಾಗಿದ್ದರು. ಕ್ರಿಸ್ಚಿಯನ್ ಧರ್ಮ ಬಡವರ ಮತ್ತು ಕೆಳಕ್ಕೆ ತುಳಿಯಲ್ಪಟ್ಟವರ ಧರ್ಮವೆಂದು ಗಿಬ್ಬನ್ ಪರಿಹಾಸ್ಯ ಮಾಡುತ್ತಾನೆ. ಈ ಅಭಿಪ್ರಾಯವನ್ನು ತಳೆಯುವುದರಲ್ಲಿ ಗಿಬ್ಬನ್ ಪೂರಾ ಪೂರಾ ತಪ್ಪು ಮಾಡಿದ್ದ. ಬಡವರಿಗೇ ಧರ್ಮದ ಅವಶ್ಯಕತೆ ಇದೆ ಎಂದು ಅವನಿಗೆ ಅರ್ಥವಾಗಲಿಲ್ಲ. ಧರ್ಮ ಎನ್ನುವುದು ನಿಜವಾದ ಧರ್ಮವೇ ಆಗಿದ್ದರೆ ತಾವು ಒಳ್ಳೆಯ ಸ್ಥಿತಿಯನ್ನು ಪಡೆದುಕೊಳ್ಳಬಹುದೆಂಬ ಆಸೆಯನ್ನು ಬಡವರಲ್ಲಿ ಅದು ಮೂಡಿಸುತ್ತದೆ. ಏನನ್ನೂ ಕಳೆದು ಕೊಳ್ಳಬೇಕಾಗಿಲ್ಲದ ಬಡವರಿಗೆ ಅದು ಸಾಂತ್ವನ ತಂದು ಕೊಡುತ್ತದೆ. ಬಲ್ಲಿದರಿಗೆ ಎಲ್ಲವೂ ಇದೆ. ಅವರೇನೂ ಆಶಾ ಗೋಪುರದ ಮೇಲೆ ಬದುಕಬೇಕಾಗಿಲ್ಲ. ಅವರು ತಮ್ಮಲ್ಲಿರುವ ಸಾಧನ ಸಂಪತ್ತಿನ ಮೇಲೆ ಬದುಕುತ್ತಾರೆ. ಎರಡನೆಯದಾಗಿ, ಧರ್ಮ– ಅದು ಸರಿಯಾದ ನಮೂನೆಯ ಧರ್ಮವಾಗಿದ್ದ ಪಕ್ಷದಲ್ಲಿ ಜನಗಳಿಗೆ ಉದಾತ್ತತೆಯನ್ನು ತಂದು ಕೊಡುತ್ತದೆ ಮತ್ತು ಅವರನ್ನು ಔನ್ನತ್ಯದತ್ತ ಕೊಂಡು ಹೋಗುತ್ತದೆ. ಧರ್ಮವನ್ನು ಯಾರೂ ಅವಹೇಳನ ಮಾಡುವುದಿಲ್ಲ.

೬. ಭಾರತದಲ್ಲಿ ಬೌದ್ಧ ಧರ್ಮವನ್ನು ಪುನಃಚೇತನಗೊಳಿಸಬೇಕಾದರೆ ತೆಗೆದು ಕೊಳ್ಳಲೇಬೇಕಾದ ಪ್ರಾರಂಭಿಕ ಕ್ರಮಗಳ ಬಗ್ಗೆ ನಾನೀಗ ತಿರುಗುತ್ತೇನೆ. ನನಗೆ ಸ್ಫುರಿಸುವ ಕೆಲವು ಕ್ರಮಗಳನ್ನು ಕೆಳಗೆ ಪ್ರಸ್ತಾಪಿಸುತ್ತೇನೆ::

(i) ಬೌದ್ಧ ಧರ್ಮದ ಸಿದ್ಧಾಂತ, ಪರಿವರ್ತನೆಯಾದವನಿಗೆ ನಿರಂತರ ಸಂಗಾತಿಯಾಗಬಲ್ಲದು. ಬೌದ್ಧ ಧರ್ಮದ ಪ್ರಚಾರದಲ್ಲಿ ಬುದ್ಧನ ಬೋಧನೆಗಳನ್ನು ಒಳಗೊಂಡ ಒಂದು ಸಣ್ಣ ಕೈಪಿಡಿ ಇಲ್ಲದೇ ಇರುವುದು ಒಂದು ಅನನುಕೂಲ/ಅಡಚಣೆ ಆಗಿದೆ. ಸಾಮಾನ್ಯ ಮನುಷ್ಯನನ್ನು ಪಾಳಿ ಧರ್ಮಶಾಸ್ತ್ರದ ೭೩ ಸಂಪುಟಗಳನ್ನು ಓದಬೇಕೆಂದು ನಿರೀಕ್ಷಿಸುವುದಕ್ಕೆ ಆಗುವುದಿಲ್ಲ.ಬೌದ್ಧ ಧರ್ಮದ ಮೇಲೆ ಕ್ರಿಶ್ಚಿಯನ್ ಧರ್ಮಕ್ಕೆ ಒಂದು ದೊಡ್ಡ ಅನುಕೂಲ ಇದೆ; ಕ್ರಿಸ್ತನ ಸಂದೇಶವನ್ನು ಒಳಗೊಂಡ 'ಬೈಬಲ್' ಹೆಸರಿನ ಒಂದು ಕಿರು ಪುಸ್ತಕ ಅವರಿಗೆ ಇದೆ . ಬೌದ್ಧ ಧರ್ಮವನ್ನು ಪ್ರಚಾರ ಮಾಡುವುದಕ್ಕೆ ಇರುವ ಅಡಚನೆಯನ್ನು ತೆಗೆದು ಹಾಕಬೇಕು. . ಬುದ್ಧನ ಸಿದ್ಧಾಂತವನ್ನು ತಯಾರಿಸುವಲ್ಲಿ ಬಹಳಷ್ಟು ಎಚ್ಚರ ವಹಿಸಬೇಕು: ಅದರಲ್ಲಿ ಬುದ್ಧನ ಸಾಮಾಜಿಕ ಮತ್ತು ನೈತಿಕ ಬೋಧನೆಗಳಿಗೆ ಒತ್ತು ಕೊಡಬೇಕು. ಇದಕ್ಕೆ ನಾನು ಪ್ರಾಧಾನ್ಯ ಕೊಡುವುದು ಏಕೆಂದರೆ, ಅಲ್ಲಿ ಧ್ಯಾನ, ಪರ್ಯಾಲೋಚನೆ ಮತ್ತು ಅಭಿಧಮ್ಮಕ್ಕೆ ಪ್ರಾಶಸ್ತ್ಯ ಕೊಡಲಾಗಿದೆ. ಈ ರೀತಿಯಾಗಿ ಬೌದ್ಧ ಧರ್ಮವನ್ನು ಪರಿಚಯಿಸುವುದು ನಮ್ಮ ಧ್ಯೇಯಕ್ಕೆ ಬಹಳ ಪರಿಣಾಮಕಾರಿಯಾಗುತ್ತದೆ.

(ii) ಕ್ರಿಶ್ಚಿಯನ್ನರಲ್ಲಿ ಬಾಪ್ಟಿಸಮ್ ಇದ್ದ ಹಾಗೆ ಒಂದು ಸಮಾರಂಭವನ್ನು ರೂಢಿಯಲ್ಲಿ ತರುವುದು. ಮತಾಂತರಕ್ಕೆ, ಅಂದರೆ ಬುದ್ಧನ ಸಾಮಾನ್ಯ ಆರಾಧಕನಾಗುವುದಕ್ಕೆ, ನಿಜವಾಗಿಯೂ ಯಾವ ಸಮಾರಂಭವೂ ಇಲ್ಲ.ಸಮಾರಂಭವೇನಾದರೂ ಇದ್ದರೆ ಅದು ಭಿಕ್ಕು ಆಗುವುದಕ್ಕೆ, ಸಂಘಕ್ಕೆ ಪ್ರವೇಶ ಮಾಡುವುದಕ್ಕೆ. ಕ್ರಿಶ್ಚಿಯನ್ನರಲ್ಲಿ ಎರಡು ಸಮಾರಂಭಗಳು ಇವೆ.

(೧) ಕ್ರಿಶ್ಚಿಯನ್ ಧರ್ಮವನ್ನು ಒಪ್ಪಿಕೊಂಡಿದ್ದೇನೆ ಎಂದು ನಿದರ್ಶನಗೊಳಿಸುವುದು

(೨) ಪಾದ್ರಿಯಾಗುವುದಕ್ಕೆ. ಬೌದ್ಧ ಧರ್ಮದಲ್ಲಿ ಬಾಪ್ಟಿಸಮ್ ತರಹದ ಸಮಾರಂಭವಿಲ್ಲ. ಜನಗಳು ಬೌದ್ಧರಾದ ಮೇಲೆ ಅದರಿಂದ ಜಾರಿಕೊಳ್ಳುವುದಕ್ಕೆ ಇದೇ ಮುಖ್ಯವಾದ ಕಾರಣ. ಕ್ರಿಶ್ಚಿಯನ್ನರ ಬಾಪ್ಟಿಸಮ್

ತರಹದ ಸಮಾರಂಭವನ್ನು ನಾವು ಸಹ ಎಲ್ಲರಿಗೂ ಜಾರಿಗೆ ತರಲೇ ಬೇಕು. ಆ ಸಮಾರಂಭ ಮುಗಿದ ಮೇಲಷ್ಟೆ ಅವನನ್ನು ಬೌದ್ಧ ಎಂದು ಕರೆಯಬಹುದು. ಕೇವಲ ಪಂಚಶೀಲವನ್ನು ಉಚ್ಚರಿಸಿದ ಮಾತ್ರಕ್ಕೆ ಸಾಕಾಗುವುದಿಲ್ಲ. ಒಬ್ಬ ಮನುಷ್ಯ ತಾನು ಹಿಂದು ಅಲ್ಲ, ಒಬ್ಬ ಹೊಸ ಮನುಷ್ಯನಾಗಿದ್ದೇನೆಂದು ಭಾವಿಸುವುದಕ್ಕೆ ಇನ್ನೂ ಅನೇಕ ವಿಷಯಗಳನ್ನು ಸಹ ಸೇರಿಸಬೇಕು.

(iii) ಅನೇಕ ಮಂದಿ ಸಾಮಾನ್ಯ ಪ್ರಚಾರಕರನ್ನು ನೇಮಿಸಿಕೊಳ್ಳಬೇಕು; ಬೌದ್ಧರು ಎಷ್ಟರ ಮಟ್ಟಿಗೆ ಬುದ್ಧನ ಧಮ್ಮವನ್ನು ಅನುಸರಿಸುತ್ತಿದ್ದಾರೆಂದು ನೋಡಲು ಈ ಪ್ರಚಾರಕರು ಬೌದ್ಧರಿಗೇ ಪ್ರಚಾರ ಮಾಡಬೇಕು. ಈ ಸಾಮಾನ್ಯ ಪ್ರಚಾರಕರಿಗೆ ವೇತನವನ್ನು ಕೊಡಬೇಕು. ಎರಡನೆಯದಾಗಿ ಅವರು ವಿವಾಹಿತರಾಗಿದ್ದರೆ ಅಡ್ಡಿಯಿಲ್ಲ. ಪ್ರಾರಂಭದಲ್ಲಿ ಅವರು ಅರೆಕಾಲಿಕ ಕೆಲಸಗಾರರಾಗಿರಬಹುದು

(iv) ಬೌದ್ಧ ಧಾರ್ಮಿಕ ಪಾಠಶಾಲೆಯನ್ನು ಸ್ಥಾಪನೆ ಮಾಡುವುದು. ಅಲ್ಲಿ ಪ್ರಚಾರಕರಾಗ ಬಯಸುವವರಿಗೆ ಬೌದ್ಧ ಧರ್ಮವನ್ನು ಕಲಿಸಬಹುದು; ಅಲ್ಲದೆ ಇತರ ಧರ್ಮಗಳ ತುಲನಾತ್ಮಕ ಅಧ್ಯಯನವನ್ನೂ ಸಹ ಮಾಡಬಹುದು.

(v) ಪ್ರತಿ ಭಾನುವಾರ ಭಜನೆಯನ್ನು ಏರ್ಪಡಿಸುವುದು, ನಂತರ ಒಂದು ಪ್ರವಚನವನ್ನು ಕೊಡುವುದು.

೭. ಈ ಪ್ರಾಥಮಿಕ ಕ್ರಮಗಳ ಜೊತೆಗೆ ಇನ್ನೂ ಕೆಲವನ್ನು ಮಾಡುವ ಅವಷ್ಯಕತೆ ಇದೆ. ಇವನ್ನು ನಮ್ಮ ಮತ ಪ್ರಚಾರ ಕಾರ್ಯಕ್ರಮಕ್ಕೆ ಪೂರಕವಾಗಿ ದೊಡ್ಡದಾಗಿಯೇ ಮಾಡಬೇಕಾಗುತ್ತದೆ. ಈ ಸಂಬಂಧದಲ್ಲಿ ನಾನು ಕೆಳಗಿನ ಪ್ರಸ್ತಾವನೆಗಳನ್ನು ಮುಂದಿಡುತ್ತೇನೆ:

I. ನಾಲ್ಕು ಮುಖ್ಯವಾದ ಪಟ್ಟಣಗಳಲ್ಲಿ ದೇವಸ್ಥಾನಗಳನ್ನು ಮತ್ತು ವಿಹಾರಗಳನ್ನು ನಿರ್ಮಿಸುವುದು. (೧) ಮದರಾಸು (೨) ಬೊಂಬಾಯಿ (೩) ನಾಗಪುರ ಮತ್ತು (೪) ದೆಹಲಿ

II ಪ್ರೌಢ ಶಾಲೆಗಳನ್ನು ಮತ್ತು ಕಾಲೇಜುಗಳನ್ನು ಈ ಕೆಳಗಿನ ಪಟ್ಟಣಗಳಲ್ಲಿ ಸ್ಥಾಪಿಸುವುದು:

(೧) ಮದರಾಸು (೨) ನಾಗಪುರ (೩) ಕಲ್ಕತ್ತ ಮತ್ತು (೪) ದೆಹಲಿ

III ಬೌದ್ಧವಿಷಯಗಳ ಮೇಲೆ ಪ್ರಬಂಧಗಳನ್ನು ಆಹ್ವಾನಿಸಿ ಮೊದಲನೆಯ ಮೂರು ಪ್ರಬಂಧಗಳಿಗೆ ಬಹುಮಾನಗಳನ್ನು ಕೊಡುವುದು. ಬಹುಮಾನಗಳ ಮೊತ್ತ ಆಕರ್ಷಕವಾಗಿದ್ದು, ಬೌದ್ಧ ಧರ್ಮದ ಸಾಹಿತ್ಯವನ್ನು ಓದಲು ಹೆಚ್ಚಿನ ಪರಿಶ್ರಮವನ್ನು ಮಾಡುವಂತೆ ಇರಬೇಕು. ಪ್ರಬಂಧಗಳು ಎಲ್ಲರಿಗೂ ಮುಕ್ತವಾಗಿರಬೇಕು, ಅಂದರೆ ಹಿಂದೂಗಳಿಗೆ, ಕ್ರಿಶ್ಚಿಯನ್ನರಿಗೆ, ಮುಸ್ಲಿಮರಿಗೆ, ಪುರುಷರು ಮತ್ತು ಮಹಿಳೆಯರಿಗೆ. ಜನಗಳನ್ನು ಬೌದ್ಧ ಧರ್ಮದ ಅಧ್ಯಯನ ಮಾಡುವಂತೆ ಆಸಕ್ತಿ ತೋರಿಸುವಂತೆ ಮಾಡಲು ಇದು ಅತ್ಯುತ್ತಮ ಮಾರ್ಗ.

೮. ದೇವಸ್ಥಾನಗಳು ದೊಡ್ಡದಾಗಿ ಇರಬೇಕು; ಜನಗಳ ಮನಸ್ಸಿನಲ್ಲಿ ಇಲ್ಲಿ ಏನೋ ಒಂದು ಭಾರಿಯಾದದ್ದು ಆಗುತ್ತಿದೆ ಎಂಬ ಭಾವನೆ ಬರಬೇಕು. ಪ್ರೌಡಶಾಲೆಗಳು ಮತ್ತು ಕಾಲೇಜುಗಳು ಅವಶ್ಯಕವಾದ ಸೇರ್ಪಡೆಗಳು. ಅವುಗಳನ್ನು ಯುವಕರಲ್ಲಿ ಬೌದ್ಧ ವಾತಾವರಣವನ್ನು ತರುವ ಉದ್ದೇಶಕ್ಕಾಗಿ ಯೋಜಿಸಲಾಗಿದೆ. ಅದೂ ಅಲ್ಲದೆ, ಅವರು ತಮ್ಮ ದಾರಿಯನ್ನು ಕಂಡುಕೊಳ್ಳುವುದು ಮಾತ್ರವಲ್ಲ, ಅವರಲ್ಲಿ ಹೆಚ್ಚಿಗೆಯಾಗಿ ಇರುವವರನ್ನು ಇತರ ಪ್ರಚಾರ ಕಾರ್ಯಕ್ಕಾಗಿ ಉಪಯೋಗಿಸಕೊಳ್ಳಬಹುದು. ಅನೇಕ ಕ್ರಿಶ್ಚಿಯನ್ ಮಿಷನ್ನುಗಳು ತಮ್ಮ ಚಟುವಟಿಕೆಗಳಿಗೆ ಬೇಕಾಗುವ ಹಣಕಾಸನ್ನು ಶಾಲೆಗಳು ಮತ್ತು ಕಾಲೇಜುಗಳು ಉತ್ಪತ್ತಿ ಮಾಡುವ ಹೆಚ್ಚುವರಿ ಆದಾಯದಿಂದ ಒದಗಿಸುತ್ತಾರೆ.

೯. ನಾನು ಮೇಲಿನ ಪ್ರಾಥಮಿಕ ಕ್ರಮಗಳನ್ನು ತೆಗೆದುಕೊಳ್ಳಲೇ ಬೇಕೆಂದು ಸೂಚಿಸಿದ್ದೇನೆ.. ಬೌದ್ಧ ಧರ್ಮ ಭಾರತದಲ್ಲಿ ಪುನಃ ಅದೃಷ್ಯವಾಗದೇ ಇರಲು, ಬೌದ್ಧ ಧರ್ಮವನ್ನು ಪುನರುತ್ಥಾನಗೊಳಿಸಲು

ಚಳುವಳಿಯನ್ನು ಪ್ರಾರಂಭಿಸಲು, ಯಾವ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂದು ಸಹ ಸೂಚಿಸಬೇಕಾಗಿದೆಯೆಂದು ನಾನು ಭಾವಿಸುತ್ತೇನೆ.

೧೦. ಅದರ ಸಿದ್ಧಾಂತಗಳು ಸುಳ್ಳೆಂದು ಕಂಡಿದೆಯೆಂದು, ಅಥವಾ ಸುಳ್ಳೆಂದು ತೋರಿಕೊಡಲಾಗಿದೆಯೆಂಬ ಕಾರಣಕ್ಕಾಗಿ ಬೌದ್ಧ ಧರ್ಮ ಭಾರತದಿಂದ ಮಾಯವಾಗಿಲ್ಲ. ಬೌದ್ಧ ಧರ್ಮ ಭಾರತದಿಂದ ಅದೃಶ್ಯವಾಗಿರುವುದಕ್ಕೆ ಕಾರಣಗಳು ಬೇರೆಯೇ ಇವೆ. ಮೊದಲಿಗೆ ಬೌದ್ಧ ಧರ್ಮವನ್ನು ಬ್ರಾಹ್ಮಣರು ಮೇಲೆ ಬಿದ್ದು ಅದುಮಿಬಿಟ್ಟರು, ಚಕ್ರವರ್ತಿ ಅಶೋಕನ ವಂಶದವನಾದ ಕಡೆಯ ಮೌರ್ಯ ಚಕ್ರವರ್ತಿಯನ್ನು ಪುಷ್ಯ ಮಿತ್ರ ಎಂಬ ಬ್ರಾಹ್ಮಣ ಸೇನಾಧಿಪತಿ ಕೊಂದು ಬಿಟ್ಟು ಅವನ ಸಿಂಹಾಸನವನ್ನು ಅಪಹರಿಸಿ, ಬ್ರಾಹ್ಮಣ ಧರ್ಮವನ್ನು ರಾಜ್ಯದ ಧರ್ಮವಾಗಿ ಸ್ಥಾಪಿಸಿದನೆಂದು ಈಗ ನಮಗೆ ಸಾಕಷ್ಟು ಚೆನ್ನಾಗಿ ಗೊತ್ತಾಗಿದೆ. ಇದು ಬೌದ್ಧ ಧರ್ಮವನ್ನು ಭಾರತದಲ್ಲಿ ತುಳಿದು, ಅದರ ಅವನತಿಗೆ ಒಂದು ಕಾರಣವಾಯಿತು. ಭಾರತದಲ್ಲಿ ಬ್ರಾಹ್ಮಣ ಧರ್ಮದ ಏಳಿಗೆ ಆದದ್ದು ಬೌದ್ಧ ಧರ್ಮದ ಅವನತಿಗೆ ಕಾರಣವಾಗಿದ್ದು, ಮುಸ್ಲಿಮರ ಭಾರತದ ಆಕ್ರಮಣ, ಅವರ ಹಿಂಸಾಚಾರದಿಂದಾಗಿ ವಿಹಾರಗಳನ್ನು ನಾಶಪಡಿಸಿ, ಬೌದ್ಧ ಭಿಕ್ಕುಗಳನ್ನು ಕೊಂದು ಹಾಕಿದ್ದರಿಂದ ಆ ಧರ್ಮ ಸಂಪೂರ್ಣವಾಗಿ ನಾಶವಾಗಿ ಹೋಯಿತು.

೧೧. ಬೌದ್ಧ ಧರ್ಮಕ್ಕೆ ಈಗ ಇಸ್ಲಾಮಿನಿಂದ ಯಾವ ಅಪಾಯವೂ ಇಲ್ಲ. ಆದರೆ ಬ್ರಾಹ್ಮಣರಿಂದ ಅಪಾಯ ಇನ್ನೂ ಕಾದಿದೆ. ಅದು ಬೌದ್ಧ ಧರ್ಮದ ಅತ್ಯಂತ ಪ್ರಬಲ ಪ್ರತಿಸ್ಪರ್ಧಿ. ಬ್ರಾಹ್ಮಣ ತಾನು ಯಾವ ಬಣ್ಣವನ್ನು ಹಾಕಿಕೊಂಡರೂ, ಯಾವ ಪಕ್ಷವನ್ನು ಸೇರಿದರೂ, ಬ್ರಾಹ್ಮಣನಾಗಿಯೇ ಉಳಿಯುತ್ತಾನೆ. ಅದಕ್ಕೆ ಕಾರಣವೆಂದರೆ ಬ್ರಾಹ್ಮಣರಿಗೆ ಹಂತ ಹಂತದ ಸಾಮಾಜಿಕ ಅಸಮಾನತೆಯ ವ್ಯವಸ್ಥೆ ಬೇಕಾಗಿದೆ. ಇದೇ ಹಂತ ಹಂತದ ಅಸಮಾನತೆಯಿಂದಾಗಿಯೇ ಎಲ್ಲರಿಗಿಂತ ಮೇಲಾಗಿದ್ದಾರೆ, ಎಲ್ಲರ ಮೇಲೂ ಸವಾರಿ ಮಾಡುತ್ತಾರೆ. ಬೌದ್ಧ ಧರ್ಮಕ್ಕೆ ಸಮಾನತೆಯಲ್ಲಿ ನಂಬಿಕೆ ಇದೆ. ಬೌದ್ಧ ಧರ್ಮ ಅವರ ಗರ್ವ ಮತ್ತು ಅಧಿಕಾರದ ಬುಡಕ್ಕೇ ಏಟು ಹಾಕುತ್ತದೆ. ಆದುದರಿಂದಲೇ ಬ್ರಾಹ್ಮಣರು ಅದನ್ನು ದ್ವೇಷಿಸುತ್ತಾರೆ. ಬ್ರಾಹ್ಮಣರನ್ನು ಬೌದ್ಧ ಧರ್ಮದ ಪುನರುತ್ಥಾನದ ಚಳುವಳಿಯ ನಾಯಕತ್ವವನ್ನು ವಹಿಸಿಕೊಳ್ಳಲು ಬಿಟ್ಟರೆ, ಅವರು ತಮ್ಮ ಶಕ್ತಿಯನ್ನು ಉಪಯೋಗಿಸಿ ಅದನ್ನು ಬುಡಮೇಲು ಮಾಡಬಹುದಾದ, ಅಥವಾ ತಪ್ಪು ದಾರಿಗೆ ತಿರುಗಿಸುವ ಸಾಧ್ಯತೆ ಇದೆ. ಆದುದರಿಂದ ನಮ್ಮ ಚಳುವಳಿಯ ಮೊದಲ ಹಂತಗಳಲ್ಲಿ ಅವರನ್ನು ಅಧಿಕಾರದ ಸ್ಥಾನದಿಂದ ಹೊರಗಿಡುವುದು ಬಹಳ ಅವಶ್ಯಕವಾಗಿದೆ.

೧೨. ಈ ಎಲ್ಲಾ ಪ್ರಸ್ತಾವಗಳು ಹಣದ ಪ್ರಶ್ನೆಯನ್ನು ಎತ್ತುತ್ತವೆ. ಈ ಪ್ರಶ್ನೆಯನ್ನು ಭಾರತ ಉತ್ತರಿಸಲು ಆಗುವುದಿಲ್ಲವೆಂದು ನೇರವಾಗಿ ಒಪ್ಪಿಕೊಳ್ಳಬೇಕು. ಭಾರತದಲ್ಲಿ ಸಹಾಯ ಮಾಡುವ ಒಬ್ಬರೇ ಜನಗಳು ಅಂದರೆ ಬೌದ್ಧರು; ಮೊದ ಮೊದಲಲ್ಲಿ ಅವರ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಆದುದರಿಂದ ಈ ಹೊರೆಯನ್ನು ಭಾರತದಿಂದ ಹೊರಗಿರುವ ಬೌದ್ಧ ದೇಶಗಳು ಹೊರಲೇ ಬೇಕಾಗಿದೆ; ಇದನ್ನು ಅವರು ತಮ್ಮ ದಾನವನ್ನು ಈ ಉದ್ದೇಶಕ್ಕಾಗಿ ತಿರುಗಿಸಿದರೆ ಸುಲಭವಾಗಿ ಮಾಡಬಹುದು.

## ಜ್ಞಾಪನ ಪತ್ರ II

## ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮದ ಪರಿಸ್ಥಿತಿಯ ಮೇಲೆ ಒಂದು ವರದಿ

೧.ದಕ್ಷಿಣ ಭಾರತದ ಬೌದ್ಧರ ಸಮುದಾಯಗಳ ಸ್ಥಿತಿಯನ್ನು ನಾನೇ ನೋಡಲು, ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಂಡೆ. ಅಲ್ಲಿ ನಾನು ೭ನೇ ಜೂಲೈನಿಂದ ೧೪ನೇ ಜೂಲೈ ವರೆಗೆ ಇದ್ದೆ.

೨. ಕೆಳಕಂಡ ಸ್ಥಳಗಳಲ್ಲಿ ಬೌದ್ಧ ಸಮುದಾಯಗಳು ಇರುವುದನ್ನು ನಾನು ಕಂಡೆ:

A. ಮದರಾಸ್ ಪಟ್ಟಣದ ಹತ್ತಿರ ಎರಡು ಕೇಂದ್ರಗಳು ಇವೆ.

(i) ಪೆರಂಬೂರು, ಮತ್ತು

(ii) ಕಾಂಚೀಪುರಮ್ (ಚಿಂಗಲ್ ಪೇಟೆ)

B. ಮದರಾಸ್ ರಾಜ್ಯದ ಒಳಭಾಗದಲ್ಲಿ

(i) ಪಾಲಿಕೊಂಡ (ಉತ್ತರ ಆರ್ಕಾಟ್ ಜಿಲ್ಲೆ)

(ii) ತ್ರಿಪುರಮ್ (ಉತ್ತರ ಆರ್ಕಾಟ್ ಜಿಲ್ಲೆಯಲ್ಲಿ)

(iii) ವೆಲ್ಲತುರೆ (ವೆಲ್ಲೂರು ಜಿಲ್ಲೆಯಲ್ಲಿ)

(iv) ವಾನಿವೇಡ (ಬಾನಿಪೇಟ್ ನಲ್ಲಿ)

c. ಮೈಸೂರು ರಾಜ್ಯದಲ್ಲಿ

(i) ಕೋಲಾರದ ಚಿನ್ನದ ಗಣಿಗಳು

(ii) ಫ್ರೇಜರ್ ಟೌನ್ (ಬೆಂಗಳೂರು ಕಂಟೋನ್ಮೆಂಟ್) ಮತ್ತು

(III) ಸೆಂಟ್ರಲ್ ಜೈಲ್ ಹತ್ತಿರ (ಬೆಂಗಳೂರು ಸಿಟಿ)

೩.ದಕ್ಷಿಣ ಭಾರತದ ಭೌದ್ಧ ಧರ್ಮದ ಈ ಕೇಂದ್ರಗಳು ಸುಮಾರು ೩೦–೪೦ ವರ್ಷಗಳಿಂದ ಅಸ್ತಿತ್ವದಲ್ಲಿ ಇವೆ. ಬೌದ್ಧ ಧರ್ಮಕ್ಕೆ ಅವರು ಪಟ್ಟು ಬಿಡದೆ ಅಂಟಿಕೊಂಡಿರುವುದು, ಅದರಲ್ಲೂ ಬ್ರಾಹ್ಮಣರಿಂದ ಮತ್ತು ಹಿಂದೂಗಳಿಂದ ಸುತ್ತುವರೆಯಲ್ಪಟ್ಟಿದ್ದರೂ, ಗಮನಾರ್ಹವಾಗಿದೆ.

೪. ತಮ್ಮದೇ ಸಂಪನ್ಮೂಲಗಳಿಂದ ಕಟ್ಟಿರುವ ವಿಹಾರಗಳು ಕಳಪೆ ಗುಣಮಟ್ಟದ್ದಾಗಿವೆ. ಅದನ್ನು ನವೀಕರಿಸಲು, ಪುನರ್ನಿರ್ಮಿಸಲು, ದುರಸ್ತಿ ಮಾಡಲು ಸ್ವಲ್ಪ ಸಹಾಯವನ್ನು ಮಾಡಿದರೆ ಅವರನ್ನು ಪ್ರೋತ್ಸಾಹಿಸಿದಂತೆ ಆಗುತ್ತದೆ.

೫. ಮೈಸೂರು ರಾಜ್ಯದ ರಾಜಪ್ರಮುಖರಾದ ಮಹಾರಾಜರನ್ನು ನಾನು ೮ನೇ ಜೂಲೈ

ತಾರೀಖಿನಂದು ಭೇಟಿ ಮಾಡಿದೆ. ಅವರ ಸ್ವಂತ ಆಸ್ತಿಯಾದ ಒಂದು ತುಂಡು ಭೂಮಿಯನ್ನು ನಮ್ಮ ಕೆಲಸಗಳಿಗಾಗಿ ಒಂದು ಕೇಂದ್ರವನ್ನು ನಿರ್ಮಿಸಲು ದಾನವಾಗಿ ಕೊಡಿ ಎಂದು ಪ್ರಾರ್ಥಿಸಿದೆ. ಮಹಾರಾಜರು ದಯೆ ಇಟ್ಟು ೫ ಎಕರೆ ಭೂಮಿಯನ್ನು ದಾನವಾಗಿ ಕೊಡಲು ಒಪ್ಪಿದ್ದಾರೆ, ಮಹಾರಾಜರ ಖಾಸಗಿ ಕಾರ್ಯದರ್ಶಿಯವರಿಂದ ಬಂದ ಪತ್ರದ ನಕಲನ್ನು ಇದರೊಂದಿಗೆ ಇರಿಸಿದ್ದೇನೆ. ಈ ವಿಷಯವನ್ನು ರಹಸ್ಯವಾಗಿ ಇಟ್ಟಿರಿ. ದಾನ ಪತ್ರವನ್ನು ಇನ್ನೂ ಬರೆಯ ಬೇಕಾಗಿದೆ.

೬. ಸುಂದರವಾದ ತಾಣದಲ್ಲಿರುವ ಸುಂದರವಾದ ಭೂಮಿ ಇದಾಗಿದೆ. ಇದು ಬಹಳ ಬೆಲೆ ಬಾಳುವ ಭೂಮಿಯಾಗಿದೆ. ಬೌದ್ಧ ಧಾರ್ಮಿಕ ಪಾಠಶಾಲೆಯನ್ನು ಕಟ್ಟಲು ಈ ಭೂಮಿಯನ್ನು ಉಪಯೋಗಿಸಿಕೊಳ್ಳಬೇಕೆಂದುಕೊಂಡಿದ್ದೇನೆ. ನಮ್ಮ ಪುರೋಹಿತರುಗಳಿಗೆ ಮತ್ತು ನಮ್ಮ ಪ್ರಚಾರಕರುಗಳಿಗೆ ಒಂದು ತರಬೇತಿ ಕೇಂದ್ರವನ್ನಾಗಿ ಉಪಯೋಗಿಸುವ ಸಲುವಾಗಿ ಈ ಧಾರ್ಮಿಕ ಪಾಠಶಾಲೆ ಉಪಯೋಗಕ್ಕೆ ಬರುತ್ತದೆ. ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮ ಪ್ರಚಾರಕ್ಕೆ ಇದು ಒಂದು ಕೇಂದ್ರ ಸಹಾ ಆಗುತ್ತದೆ.

## ೧೫೩
## ಪಾಂಡುರಂಗನು ಬೇರಾರೂ ಅಲ್ಲದೆ ಬುದ್ಧನೇ ಆಗಿದ್ದಾನೆ

೨೫ನೇ ಡಿಸೆಂಬರ್ ೧೯೫೪ರಂದು ಪೂನಾದ ಹತ್ತಿರ ದೇಹು ರಸ್ತೆಯಲ್ಲಿ ಹೊಸದಾಗಿ ನಿರ್ಮಿಸಿದ ಬುದ್ಧ ವಿಹಾರದಲ್ಲಿ ಸ್ಥಾಪಿಸಿರುವ ಒಂದು ಬುದ್ಧ ಪ್ರತಿಮೆಯನ್ನು ಅನಾವರಣಗೊಳಿಸುತ್ತಾ, ಡಾ: ಬಿ.ಆರ್.ಅಂಬೇಡ್ಕರ್ ಅವರು ಅಲ್ಲಿದ್ದ ಸಭಿಕರಿಗೆ, ಪಂಡರಾಪುರದಲ್ಲಿರುವ ವಿಠೋಬ ನಿಜಕ್ಕೂ ಬುದ್ಧನ ವಿಗ್ರಹವೇ ಆಗಿದೆ ಎಂದರು. ಮುಂದುವರೆದು ಅವರು, ಪಾಂಡುರಂಗ ಎಂಬ ಹೆಸರು ಪುಂಡಲೀಕ ಶಬ್ಧದ ನಿಷ್ಪತ್ತಿಯಾಗಿದೆ ಎಂದು ಹೇಳಿದರು. ಪುಂಡಲೀಕ ಅಂದರೆ ಕಮಲ ಮತ್ತು ಪಾಳಿ ಭಾಷೆಯಲ್ಲಿ ಕಮಲವನ್ನು ಪಾಂಡುರಂಗ ಎನ್ನುತ್ತಾರೆ ಎಂದು ಹೇಳಿದರು. ಆದುದರಿಂದ ಪಾಂಡುರಂಗ ಅಂದರೆ ಬುದ್ಧನಲ್ಲದೆ ಬೇರೆ ಯಾರೂ ಅಲ್ಲ. ಅವರ ಪ್ರಕಾರ, ಬೌದ್ಧ ಧರ್ಮ ಭಾರತದಿಂದ ಮರೆಯಾಗುವುದಕ್ಕೆ ಕಾರಣವೆಂದರೆ ಜನ ಸಾಮಾನ್ಯರ ಅಸ್ಥಿರವಾದ ಪ್ರವೃತ್ತಿ; ಅದರಿಂದಾಗಿ ಅವರು ಅನೇಕ ದೇವರುಗಳನ್ನೂ ಮತ್ತು ದೇವಿಯರನ್ನೂ ಪೂಜೆ ಮಾಡುತ್ತಿದ್ದರು; ಹೀಗಾಗಿ ಬೌದ್ಧ ಧರ್ಮ ನಾಶವಾಯಿತು ಎಂದರು.

## ೧೫೪
## ಬೌದ್ಧ ಧರ್ಮ ಬೋಧಿಸುವ ಅಹಿಂಸೆಗೂ ಜೈನ ಧರ್ಮ ಬೋಧಿಸುವ ಅಹಿಂಸೆಗೂ ವ್ಯತ್ಯಾಸವಿದೆ

ನವ ದೆಹಲಿಯ ಭಾರತದ ಮಹಾಬೋಧಿ ಸಂಘದ ಆಶ್ರಯದಲ್ಲಿ ೫ನೇ ಫೆಬ್ರವರಿ ೧೯೫೬ರಂದು ಬುದ್ಧ ವಿಹಾರದಲ್ಲಿ ನಡೆದ ಒಂದು ಸಭೆಯಲ್ಲಿ ಡಾ: ಅಂಬೇಡ್ಕರ್ ಅವರು ಮಾಡಿದ ಭಾಷಣದಿಂದ ಉದ್ಧೃತಿ:

ಯಾವುದೇ ಧರ್ಮವಾಗಲೀ ಕಮ್ಯೂನಿಸಮ್ಮಿಗೆ ಉತ್ತರವನ್ನು ಕೊಡಲಾಗದಿದ್ದರೆ, ಅದು ಬದುಕುವುದೇ ಇಲ್ಲ. ಕಮ್ಯೂನಿಸಮ್ಮಿಗೆ ಪ್ರತಿಹಾರಿಯಾಗಬಲ್ಲ ಒಂದೇ ಧರ್ಮವೆಂದರೆ ನನ್ನ ದೃಷ್ಟಿಯಲ್ಲಿ ಬೌದ್ಧ ಧರ್ಮ.

ಎಲ್ಲಾ ಧರ್ಮದಲ್ಲೂ ನಂಬಿಕೆ ಇರುವವರೊಂದಿಗೆ, ಎಲ್ಲದರಿಂದಲೂ ಒಂದೊಂದು ಚೂರು ತೆಗೆದುಕೊಳ್ಳುವವರೊಂದಿಗೆ, ನನ್ನ ಸಹಮತವಿಲ್ಲ. ಇಂಥದೊಂದು ಮನಃಸ್ಥಿತಿ ಭಾರತದಲ್ಲಿ ಕಂಡುಬರುತ್ತಿದೆ. ಯಾರೇ ಆಗಲೀ ಆಯ್ಕೆಯೊಂದನ್ನು ಮಾಡಿಕೊಂಡು, ಅದಕ್ಕೇ ಅಂಟಿಕೊಂಡಿರಬೇಕು. ಒಂದು ಧರ್ಮ ಇನ್ನೊಂದರಿಂದ ಬೇರೆಯಾಗಿ ಇರಲು ಸಾಧ್ಯ. ಬೌದ್ಧ ಧರ್ಮ ಬೋಧಿಸುವ ಅಹಿಂಸೆಗೂ ಜೈನ ಧರ್ಮ ಬೋಧಿಸುವ ಅಹಿಂಸೆಗೂ ದೊಡ್ಡ ವ್ಯತ್ಯಾಸವೇ ಇದೆ. ಜೈನ ಧರ್ಮ ಅಹಿಂಸೆಯನ್ನು ಅತ್ಯುನ್ನತ ಎತ್ತರಕ್ಕೆ ತೆಗೆದುಕೊಂಡು ಹೋಗಿದೆ.

ಪುನರ್ ಜನ್ಮದಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ. ವಿಜ್ಞಾನಿಗಳಿಗೆ ಪುನರ್ಜನ್ಮ ತಾರ್ಕಿಕವಾದುದು ಎಂದು ಸಾಧಿಸಿ ತೋರಿಸಬಲ್ಲೆ. ನನ್ನ ದೃಷ್ಟಿಯಲ್ಲಿ ಪಂಚಭೂತಗಳು ಬದಲಾವಣೆಯಾಗುತ್ತವೆಯಲ್ಲದೆ, ಮನುಷ್ಯನಲ್ಲ.

೧೫೫

# ನಾನೇಕೆ ಭೌದ್ಧ ಧರ್ಮವನ್ನು ಇಷ್ಟಪಡುತ್ತೇನೆ

ನನಗೆ ಕೊಟ್ಟ ಅಲ್ಪ ಸಮಯದಲ್ಲಿ ನನ್ನನ್ನು ಎರಡು ಪ್ರಶ್ನೆಗಳಿಗೆ ಉತ್ತರಕೊಡುವಂತೆ ಕೇಳಲಾಗಿದೆ. ಮೊದಲನೆಯ ಪ್ರಶ್ನೆ ನಾನೇಕೆ ಬೌದ್ಧ ಧರ್ಮವನ್ನು ಇಷ್ಟಪಡುತ್ತೇನೆ? ಎರಡನೆಯದು, ಪ್ರಸ್ತುತ ಸಂದರ್ಭಗಳಲ್ಲಿ ಪ್ರಪಂಚಕ್ಕೆ ಅದು ಎಷ್ಟರಮಟ್ಟಿಗೆ ಉಪಯೋಗಕಾರಿಯಾಗಿದೆ?

ನಾನು ಬೌದ್ಧ ಧರ್ಮವನ್ನು ಹೆಚ್ಚಿಗೆ ಇಷ್ಟಪಡುವುದಕ್ಕೆ ಕಾರಣವೆಂದರೆ, ಅದು ಒಂದೇ ಸಂಯೋಗದಲ್ಲಿ ಮೂರು ನೀತಿಗಳನ್ನು ಕೊಡುತ್ತದೆ. ಬೇರೆ ಯಾವ ಧರ್ಮವೂ ಹೀಗೆ ಕೊಡುವುದಿಲ್ಲ. ಇತರ ಎಲ್ಲಾ ಧರ್ಮಗಳೂ, ದೇವರು, ಆತ್ಮ ಮತ್ತು ಪುನರ್ ಜನ್ಮ ಎಂದು ತಲೆ ಕೆಡಸಿಕೊಳ್ಳುತ್ತಿವೆ. ಬೌದ್ಧ ಧರ್ಮ ಪ್ರಜ್ಞೆಯನ್ನು ಬೋಧಿಸುತ್ತದೆ, ಮೂಡನಂಬಿಕೆಯನ್ನಾಗಲೀ ಅಥವಾ ಅತೀಂದ್ರಿಯ ಶಕ್ತಿಗಳನ್ನಾಗಲೀ ನಂಬುವುದಿಲ್ಲ. ಅದು ಕರುಣೆಯನ್ನು ಬೋಧಿಸುತ್ತದೆ. ಅದು ಸಮಾನತೆಯನ್ನು ಕಲಿಸುತ್ತದೆ. ಮನುಷ್ಯನಿಗೆ ಭೂಮಿಯ ಮೇಲೆ ಸುಖ ಸಂತೋಷದಿಂದ ಬದುಕುವುದಕ್ಕೆ ಬೇಕಾಗಿರುವುದು ಅದೇನೆ. ಭೌದ್ಧ ಧರ್ಮದ ಈ ನೀತಿಗಳು ನನ್ನ ಮನಸ್ಸಿಗೆ ಹಿಡಿಸುತ್ತವೆ. ಈ ಮೂರು ನೀತಿಗಳು ಇಡೀ ಪ್ರಪಂಚಕ್ಕೇ ಹಿಡಿಸುವಂತಾಗಲೇಬೇಕು. ದೇವರಾಗಲೀ ಆತ್ಮವಾಗಲೀ ಸಮಾಜವನ್ನು ಬದುಕಿಸುವುದಕ್ಕೆ ಆಗುವುದಿಲ್ಲ.

ಮೂರನೆಯದೂ ಒಂದು ಪರಿಗಣನೆ ಇದೆ: ಇದು ಪ್ರಪಂಚಕ್ಕೇ, ಅದರಲ್ಲೂ ಅದರ ಆಗ್ನೇಯ ಏಷ್ಯಾದ ಭಾಗಕ್ಕೆ, ಇನ್ನೂ ಹೆಚ್ಚಾಗಿ ಹಿಡಿಸಬೇಕು. ಪ್ರಪಂಚ ಕಮ್ಯೂನಿಸಮ್ ಮತ್ತು ಅದರ ಪಿತ ಕಾರ್ಲ್ ಮಾರ್ಕ್ಸ್ ಆಕ್ರಮಣವನ್ನು ಎದುರಿಸುತ್ತಿದೆ. ಆ ಸವಾಲು ಬಹಳ ಗಂಭೀರವಾದ ಸವಾಲು. ಅದೇನೆಂದರೆ ಮಾರ್ಕ್ಸ್ ವಾದ ಮತ್ತು ಕಮ್ಯೂನಿಸ್ಟ್ ತತ್ವ ಎರಡೂ ಧರ್ಮ ನಿರ್ಲಿಪ್ತ ವಿಚಾರಗಳೊಂದಿಗೆ ತಳಕು ಹಾಕಿಕೊಂಡಿವೆ ಎಂದು. ಅವು ಎಲ್ಲಾ ದೇಶಗಳ ಧಾರ್ಮಿಕ ವ್ಯವಸ್ಥೆಯ ಬುನಾದಿಯನ್ನೇ ಅಳ್ಳಾಡಿಸಿವೆ: ಈ ದಿನ ಧರ್ಮ ನಿರ್ಲಿಪ್ತ ವ್ಯವಸ್ಥೆಯೊಂದಿಗೆ ಸಂಬಂಧವಿಲ್ಲದೇ ಇದ್ದರೂ, ಒಂದು ಧಾರ್ಮಿಕ ವ್ಯವಸ್ಥೆಗೆ ಇದು ಬಹಳ ಸ್ವಾಭಾವಿಕವಾದದ್ದು; ಆದರೂ ಯಾವುದೇ ಧರ್ಮ ನಿರ್ಲಿಪ್ತತೆ ನಿಂತಿರುವ ಬುನಾದಿಯೇ ಇದಾಗಿದೆ. ಒಂದು ಧಾರ್ಮಿಕ ವ್ಯವಸ್ಥೆ, ಅದರ ಪ್ರಭಾವ ಎಷ್ಟೇ ಪರೋಕ್ಷವಾಗಿದ್ದರೂ ಸಹಾ ಅದರ ಮಂಜುರಾತಿ ಇಲ್ಲದೆ, ಒಂದು ಧರ್ಮ ನಿರ್ಲಿಪ್ತ ವ್ಯವಸ್ಥೆ ಬಹಳ ಕಾಲ ಇರುವುದಿಲ್ಲ.

ಆಗ್ನೇಯ ಏಷ್ಯಾದ ದೇಶಗಳು ಕಮ್ಯೂನಿಸಮ್ಮಿನ ಕಡೆಗೆ ವಾಲಿರುವುದು ನನಗೆ ಅತ್ಯಾಶ್ಚರ್ಯವಾಗಿದೆ. ಅದರ ಅರ್ಥ ಅವರಿಗೆ ಬೌದ್ಧ ಧರ್ಮ ಏನು ಎಂದು ಅರ್ಥವಾಗಿಲ್ಲ ಎಂದು. ನನ್ನ ಪ್ರಕಾರ ಬೌದ್ಧ ಧರ್ಮ ಮಾರ್ಕ್ಸ್ ವಾದಕ್ಕೂ ಮತ್ತು ಕಮ್ಯೂನಿಸಮ್ ವಾದಕ್ಕೂ ಸಂಪೂರ್ಣ ಉತ್ತರವಾಗಿದೆ.

ರಷ್ಯಾ ಮಾದರಿಯ ಕಮ್ಯೂನಿಸಮ್ ವಾದ ರಕ್ತ ಕ್ರಾಂತಿಯ ಮೂಲಕ ಬದಲಾವಣೆಯನ್ನು ತರುವ ಗುರಿಯನ್ನು ಹೊಂದಿದೆ. ಬೌದ್ಧ ಧರ್ಮದ ಕಮ್ಯೂನಿಸಮ್ ಅದೇ ಬದಲಾವಣೆಯನ್ನು ರಕ್ತ ರಹಿತ ಮಾನಸಿಕ ಕ್ರಾಂತಿಯ ಮೂಲಕ ತರುತ್ತದೆ. ಕಮ್ಯೂನಿಸಮ್ ಅನ್ನು ಅಪ್ಪಿಕೊಳ್ಳಲು ಬಯಸುತ್ತಿರುವವರು ಸಂಘ ಒಂದು ಕಮ್ಯೂನಿಸ್ಟ್ ಸಂಘಟನೆ ಎಂದು ಗುರುತು ಹಾಕಿಕೊಳ್ಳಲಿ. ಖಾಸಗಿ ಆಸ್ತಿ ಎನ್ನುವುದೇ ಇಲ್ಲ. ಈ ಬದಲಾವಣೆಯನ್ನು ಹಿಂಸೆಯಿಂದ ತರಲಾಗಿಲ್ಲ. ಇದು ಮಾನಸಿಕ ಬದಲಾವಣೆಯಿಂದ ಆಗಿದೆಯಾದರೂ,

ಅದು ೨೫೦೦ ವರ್ಷಗಳ ಕಾಲ ಅಸ್ತಿತ್ವದಲ್ಲಿ ಇದೆ. ಅದು ಕ್ಷೀಣಿಸಿರಬಹುದು, ಆದರೆ ಆ ಪರಿಕಲ್ಪನೆ ಮಾತ್ರ ಗಟ್ಟಿಯಾಗಿಯೇ ಉಳಿದುಕೊಂದಿದೆ. ರಷ್ಯಾದ ಕಮ್ಯೂನಿಸಮ್ ವಾದ ಈ ಪ್ರಶ್ನೆಯನ್ನು ಉತ್ತರಿಸಲೇ ಬೇಕು. ಇದಲ್ಲದೆ ಅವರು ಇನ್ನೂ ಎರಡು ಪ್ರಶ್ನೆಯನ್ನು ಉತ್ತರಿಸಬೇಕು. ಒಂದು ಪ್ರಶ್ನೆ, ಎಲ್ಲಾ ಕಾಲಕ್ಕೂ ಕಮ್ಯೂನಿಸ್ಟ್ ವ್ಯವಸ್ಥೆಯ ಅವಶ್ಯಕತೆ ಇದೆಯೆ? ಮಾಡಬೇಕಾಗಿದ್ದ ಕೆಲಸವನ್ನು ಅದು ಎಷ್ಟು ಕಷ್ಟ ಸಾಧ್ಯವಾಗಿದ್ದರೂ ಮಾಡಿಯಾಗಿದೆ. ಅಂದಮೇಲೆ, ಜನಗಳಿಗೆ ಬುದ್ಧ ಹೇಳಿದ ಪ್ರೀತಿಯಿಂದ ಒಡಗೂಡಿದ ಸ್ವಾತಂತ್ರ್ಯವನ್ನು ಏಕೆ ಕೊಡಬಾರದು? ಅದುದರಿಂದ ಅಗ್ನೇಯ ಏಷ್ಯಾದ ದೇಶಗಳು ರಷ್ಯಾದ ಬಲೆಯೊಳಕ್ಕೆ ಧುಮುಕುವ ಮುಂಚೆ ಎಚ್ಚರಿಕೆಯಿಂದ ಇರಬೇಕು. ಅವರಿಗೆ ಅದರಿಂದ ಎಂದಿಗೂ ಹೊರಗೆ ಬರಲು ಸಾಧ್ಯವಾಗುವುದಿಲ್ಲ. ಬುದ್ಧನ ಮತ್ತು ಅವನ ಬೋಧನೆಯ ಅಧ್ಯಯನ ಮಾಡುವುದು ಮತ್ತು ಅದಕ್ಕೊಂದು ರಾಜಕೀಯ ರೂಪ ಕೊಡುವುದಷ್ಟೇ ಅವರಿಗೆ ಈಗ ಬೇಕಾಗಿರುವುದು. ರಷ್ಯಾದಲ್ಲೂ ಬಡತನ ಇದೆ, ಇದ್ದೇ ಇರುತ್ತದೆ. ಆದರೆ ಮಾನವನ ಸ್ವಾತಂತ್ರ್ಯವನ್ನು ಬಲಿಕೊಡುವುದಕ್ಕೆ ಅದು ಕಾರಣವಾಗಬಾರದು.

ದುರದೃಷ್ಟವಷಾತ್, ಬುದ್ಧನ ಬೋಧನೆಗಳನ್ನು ಸರಿಯಾಗಿ ವಿಶ್ಲೇಷಿಸಿ ಅರ್ಥಮಾಡಿಕೊಂಡಿಲ್ಲ. ಅವನ ಬೋಧನೆಗಳು, ಸಿದ್ಧಾಂತಗಳ ಮತ್ತು ಸಾಮಾಜಿಕ ಸುಧಾರಣೆಗಳ ಒಂದು ಸಂಕಲನವಾಗಿವೆ ಎಂಬುದನ್ನು ಸಂಪೂರ್ಣವಾಗಿ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ. ಬೌದ್ಧ ತತ್ವ ಒಂದು ಸಾಮಾಜಿಕ ಹಿತವಚನ ಎಂದು ಸಾಕ್ಷಾತ್ಕರಿಸಿಕೊಂಡರೆ ಅದರ ಪುನರುಜ್ಜೀವನ ಒಂದು ಸರ್ವಕಾಲಿಕ ಘಟನೆಯಾಗುತ್ತದೆ ಮತ್ತು ಏತಕ್ಕಾಗಿ ಪ್ರತಿಯೊಬ್ಬರಿಗೂ ಬೌದ್ಧ ಧರ್ಮ ಇಷ್ಟು ಪ್ರಭಾವ ಬೀರುತ್ತದೆ ಎಂದು ಪ್ರಪಂಚಕ್ಕೆ ಅರ್ಥವಾಗುತ್ತದೆ.

೨೬, ಆಲಿಪುರ್ ರಸ್ತೆ, ನವ ದೆಹಲಿ
ತಾ: ೧೨ನೇ ಮೇ, ೧೯೫೬ ಸಹಿ: ಡಾ: ಬಿ.ಆರ್.ಅಂಬೇಡ್ಕರ್

## ೧೫೬
## ಬೌದ್ಧ ಧರ್ಮದ ಅಲೆ ಭಾರತದಲ್ಲಿ ಎಂದಿಗೂ ಹಿಂದೆ ಸರಿಯುವುದಿಲ್ಲ

೧೨ನೇ ಮೇ ೧೯೫೬ನೆ ತಾರೀಖಿನ 'ಪ್ರಬುದ್ಧ ಭಾರತ್' ಪತ್ರಿಕೆಯಲ್ಲಿ ೨೫೦೦ನೇ ಬುದ್ಧ ಜಯಂತಿಯನ್ನು ಭಾರತೀಯ ಬೌದ್ಧ ಪರಿಷತ್ತಿನ ಎಲ್ಲಾ ಶಾಖೆಗಳೂ ಆಚರಿಸಬೇಕೆಂದು ಪ್ರಾರ್ಥಿಸಿ ಪತ್ರವೊಂದು ಪ್ರಕಟವಾಯಿತು. ಅದರಂತೆ, ೨೪ನೇ ಮೇ ೧೯೫೬ರಂದು ಬೊಂಬಾಯಿಯ ನಾರೆ ಪಾರ್ಕ್‌ನಲ್ಲಿ ಒಂದು ಚಾರಿತ್ರಿಕ ಸಭೆಯನ್ನು ವ್ಯವಸ್ಥೆಗೊಳಿಸಲಾಯಿತು. ಈ ಸಭೆಗೆ ಸುಮಾರು ಎಪ್ಪತ್ತೈದು ಸಾವಿರ ಜನಗಳನ್ನು ಸೇರಿಸಲಾಗಿತ್ತು. ಬೊಂಬಾಯಿ ರಾಜ್ಯದ ಪ್ರಧಾನ ಮಂತ್ರಿಯವರಾಗಿದ್ದ ಮಿ: ಬಾಲಾ ಸಾಹೆಬ್ ಖೇರ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಬುದ್ಧ ಮತ್ತು ಅವನ ಧರ್ಮದ ಬಗ್ಗೆ ಮಾತನಾಡಿದರು.

ಅವರ ಭಾಷಣದ ನಂತರ, ಡಾ: ಅಂಬೇಡ್ಕರ್ ಅವರು ತಾವು ೧೯೫೬ರ ಅಕ್ಟೋಬರ್ ನಲ್ಲಿ ಬೌದ್ಧ ಧರ್ಮಕ್ಕೆ ಸೇರುವುದಾಗಿ ಘೋಷಣೆ ಮಾಡಿದರು. ಅವರ ಭಾಷಣದಲ್ಲಿ ಅವರು ಬೌದ್ಧ ಧರ್ಮ ಬೋಧಿಸಿದ ಅಹಿಂಸಾ ತತ್ವದ ಮೇಲೆ ಸರಣಿ ಲೇಖನಗಳನ್ನು ಬರೆದ ವೀರ್ ಸಾವರ್ಕರ್ ಅವರನ್ನು ಕಟು ತೀಕ್ಷ್ಣ ಶಬ್ಧಗಳಿಂದ ಖಂಡನೆ ಮಾಡಿದರು. ಕೋಪದಿಂದ ಕುದಿಯುತ್ತ ಡಾ: ಅಂಬೇಡ್ಕರ್ ಹೇಳಿದ್ದು:

ಸಾವರ್ಕರ್ ಏನು ಹೇಳಬೇಕಾಗಿದೆಯೆಂದು ಸರಿಯಾಗಿ ಗೊತ್ತಾದರೆ ನಾನು ಅವರಿಗೆ ಉತ್ತರ ಕೊಡುತ್ತೇನೆ. ಬೌದ್ಧ ಮತ್ತು ಹಿಂದೂ ಧರ್ಮದ ನಾಯಕರುಗಳ ನಡುವೆ ಒಂದು ಭೀಕರ ಕದನ ಮತ್ತೆ ಶುರುವಾಗಿರುವ ಹಾಗೆ ಕಾಣುತ್ತಿದೆ. ತಮ್ಮ ಉತ್ಥಾನವನ್ನು ಮಾಡುವ ಗುರಿಯಿರುವವರಿಗೆ ಮಾತ್ರ ತಮ್ಮನ್ನು ಟೀಕೆ ಮಾಡುವ ಹಕ್ಕು ಇರುತ್ತದೆ. ತಮ್ಮ ಟೀಕಾಕಾರರರು ತಮ್ಮನ್ನು ತಮ್ಮ ಪಾಡಿಗೆ ಬಿಟ್ಟು ಬಿಡಲಿ; ತಮಗೆ, ತಮ್ಮ ಜನಗಳಿಗೆ, ಗುಂಡಿಗೆ ಬೀಳುವ ಸ್ವಾತಂತ್ರ್ಯ ಇರಲಿ. ತಮ್ಮ ಜನಗಳೇ ತಮ್ಮ ಕುರಿಗಳು ಮತ್ತು ಆ ಕುರಿಗಳನ್ನು ಕಾಯುವವನು ತಾವೇ ಎಂದು ಡಾ: ಅಂಬೇಡ್ಕರ್ ನಿರ್ಭಿಡೆಯಿಂದ ಹೇಳಿದರು. ತಮಗಿಂತ ದೊಡ್ಡವನಾದ ಮತಧರ್ಮಶಾಸ್ತ್ರಿ ಯಾರೂ ಇಲ್ಲ ಎಂದು ಹೇಳಿದರು. ಅವರು ತಮ್ಮನ್ನು ಅನುಸರಿಸಬೇಕು. ಅವರಿಗೆ ಆ ತಿಳುವಳಿಕೆ ಇಷ್ಟರಲ್ಲೇ ಬರುತ್ತದೆ.

ಅವರ ಮಟ್ಟಿಗೆ ಬೌದ್ಧ ಧರ್ಮ ಹಿಂದೂ ಧರ್ಮದಿಂದ ಬೇರೆಯಾದುದು. ಅವರು ಮುಂದುವರೆದು ಹೇಳಿದ್ದೇನೆಂದರೆ, ಹಿಂದೂ ಧರ್ಮಕ್ಕೆ ದೇವರಲ್ಲಿ ನಂಬಿಕೆ ಇದೆ. ಬೌದ್ಧ ಧರ್ಮಕ್ಕೆ ದೇವರು ಇಲ್ಲ. ಹಿಂದೂ ಧರ್ಮಕ್ಕೆ ಆತ್ಮದಲ್ಲಿ ನಂಬಿಕೆ ಇದೆ. ಬೌದ್ಧ ಧರ್ಮದ ಪ್ರಕಾರ ಆತ್ಮ ಎಂಬುದು ಇಲ್ಲ. ಹಿಂದೂ ಧರ್ಮಕ್ಕೆ ಚಾತುರ್ವರ್ಣ್ಯದಲ್ಲಿ ಮತ್ತು ಜಾತಿ ಪದ್ಧತಿಯಲ್ಲಿ ನಂಬಿಕೆ ಇದೆ. ಬೌದ್ಧ ಧರ್ಮದಲ್ಲಿ ಜಾತಿ ಪದ್ಧತಿಗೆ ಮತ್ತು ಚಾತುರ್ವರ್ಣ್ಯಕ್ಕೆ ಜಾಗವೇ ಇಲ್ಲ. ಬೌದ್ಧ ಧರ್ಮದ ಮೇಲಿನ ಪುಸ್ತಕ ಶೀಘ್ರದಲ್ಲಿಯೇ ಪ್ರಕಟನೆ ಆಗಲಿದೆ ಎಂದು ತಮ್ಮ ಅನುಯಾಯಿಗಳಿಗೆ ಹೇಳಿದರು. ಬೌದ್ಧ ಧರ್ಮದ ಸಂಘಟ ತನೆಯಲ್ಲಿರುವ ಎಲ್ಲ ಬಿರುಕುಗಳನ್ನು ಮುಚ್ಚಿದ್ದೇನೆ ಮತ್ತು ಈಗ ಅದನ್ನು ಒಟ್ಟು ಸೇರಿಸುತ್ತೇನೆ ; ಬೌದ್ಧ ಧರ್ಮದ ಅಲೆ ಯಾವಾಗಲೂ ಹಿಂದೆ ಸರಿಯುವುದಿಲ್ಲ ಎಂದರು. ಕಮ್ಯೂನಿಸ್ಟರು ಬೌದ್ಧ ಧರ್ಮವನ್ನು ಅಧ್ಯಯನ ಮಾಡಬೇಕು, ಆಗ ಅವರಿಗೆ ಮಾನವ ಸಮೂಹದಲ್ಲಿ ಇರುವ ಕೆಡಕುಗಳನ್ನು ನಿವಾರಿಸುವುದು ಹೇಗೆ

ಎಂದು ಗೊತ್ತಾಗುತ್ತದೆ. ತಮ್ಮ ಭಾಷಣದಲ್ಲಿ, ಡಾ: ಅಂಬೇಡ್ಕರ್ ಅವರು ತಮ್ಮನ್ನು ತಾವು ಮೋಸೆಸ್ಗೆ ಹೋಲಿಸಿಕೊಂಡರು. ಮೋಸೆಸ್ ತನ್ನ ಜನಗಳನ್ನು ಈಜಿಪ್ಟಿನಿಂದ ಸ್ವಾತಂತ್ರ್ಯದ ನೆಲವಾದ ಪ್ಯಾಲಸ್ಟೈನ್ಗೆ ಕರೆದುಕೊಂಡು ಹೋದ. ಅವರ ಪ್ರಕಾರ ಯಾವುದೇ ಧರ್ಮದ ಅವನತಿಗೆ ಮೂರು ಕಾರಣಗಳು ಇರುತ್ತವೆ: ಅವೆಂದರೆ, ಪಾಲಿಸಲೇ ಬೇಕಾದ ನೀತಿಗಳು ಇಲ್ಲದೇ ಇರುವುದು; ಬಹುಮುಖ ಪ್ರತಿಭೆಯ ಜನಗಳ ಮನಸ್ಸನ್ನು ಸೆರೆ ಹಿಡಿಯುವ ಭಾಷಣಕಾರರು ಇಲ್ಲದೇ ಇರುವುದು; ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾದ ನೀತಿಗಳು ಇಲ್ಲದೇ ಇರುವುದು. ತಾವೊಂದು ವೈಭವೋಪೇತ ಬುದ್ಧ ದೇವಸ್ಥಾನವನ್ನು ಕಟ್ಟಲಿರುವುದಾಗಿ ಹೇಳಿದರು.

ಬೊಂಬಾಯಿಯಲ್ಲಿನ ಅವರ ಕಟ್ಟಕಡೆಯ ಭಾಷಣ ಹೀಗೆ ಕೊನೆಯಾಯಿತು.

# ೧೫೭
# ಭಾರತದಲ್ಲಿ ಪ್ರಜಾಪ್ರಭುತ್ವದ ಭವಿಷ್ಯ

ನನಗೆ ಒಪ್ಪಿಸಿದ ವಿಷಯ: 'ಭಾರತದಲ್ಲಿ ಪ್ರಜಾಪ್ರಭುತ್ವದ ಭವಿಷ್ಯ ಏನು.' ತಮ್ಮ ದೇಶ ಆಗಲೇ ಪ್ರಜಾಪ್ರಭುತ್ವ ಆಗಿಬಿಟ್ಟಿದೆಯೋ ಎನ್ನುವ ಹಾಗೆ ಅನೇಕ ಭಾರತೀಯರು ಹೆಮ್ಮೆಯಿಂದ ಮಾತನಾಡುತ್ತಾರೆ. ವಿದೇಶಿಯರೂ ಸಹ, ಊಟದ ಮೇಜಿನ ಸುತ್ತಲೂ ಕುಳಿತುಕೊಂಡಿದ್ದಾಗ ಭಾರತಕ್ಕೆ ರಾಜತಾಂತ್ರಿಕ ಗೌರವವನ್ನು ಮಾಡಲಿಕ್ಕೆಂದು, ಭಾರತದ ಮಹಾನ್ ಪ್ರಧಾನ ಮಂತ್ರಿ ಮತ್ತು ಭಾರತದ ಮಹಾನ್ ಪ್ರಜಾಪ್ರಭುತ್ವದ ಬಗ್ಗೆಮಾತನಾಡುತ್ತಾರೆ.

ಇದರಿಂದ, ಎಲ್ಲಿ ಗಣರಾಜ್ಯವಿದೆಯೋ ಅಲ್ಲಿ ಪ್ರಜಾಪ್ರಭುತ್ವ ಇರಲೇ ಬೇಕೆಂದು ಯಾವ ಜಿಜ್ಞಾಸೆಯೂ ಇಲ್ಲದೆ ತೀರ್ಮಾನಕ್ಕೆ ಬರಲಾಗುತ್ತದೆ. ಹಾಗೆಯೇ, ವಯಸ್ಕರ ಮತದಾನ ಪದ್ಧತಿಯಂತೆ ಜನಗಳಿಂದ ಚುನಾಯಿತರಾದ ಪಾರ್ಲಿಮೆಂಟ್ ಎಲ್ಲಿ ಇರುತ್ತದೆಯೋ, ಎಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಪ್ರಜೆಗಳು ಚುನಾಯಿಸಿದ ಪ್ರತಿನಿಧಿಗಳಿಂದ ಕಾನೂನುಗಳನ್ನು ಮಾಡಲಾಗುತ್ತದೋ ಅಲ್ಲಿ ಪ್ರಜಾಪ್ರಭುತ್ವ ಇದೆ ಎಂದು ಭಾವಿಸಲಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಎಲ್ಲಿ ಪ್ರಜಾಪ್ರಭುತ್ವವನ್ನು ಒಂದು ರಾಜಕೀಯ ಸಲಕರಣೆ ಎಂದು ಅರ್ಥೈಸಿಕೊಳ್ಳಲಾಗುತ್ತದೆಯೋ, ಎಲ್ಲಿ ಈ ಸಲಕರಣೆ ಇರುತ್ತದೆಯೋ, ಅಲ್ಲಿ ಪ್ರಜಾಪ್ರಭುತ್ವ ಇದೆ ಎಂದು ತಿಳಿಯಲಾಗುತ್ತದೆ.

ಭಾರತದಲ್ಲಿ ಪ್ರಜಾಪ್ರಭುತ್ವ ಇದೆಯೋ, ಅಥವಾ ಪ್ರಜಾಪ್ರಭುತ್ವ ಇಲ್ಲವೋ? ಸತ್ಯ ಏನು?

ಪ್ರಜಾಪ್ರಭುತ್ವವನ್ನು ಗಣರಾಜ್ಯಕ್ಕೆ ಸಮೀಕರಿಸಿ, ಪ್ರಜಾಪ್ರಭುತ್ವವನ್ನು ಸಂಸದೀಯ ಸರ್ಕಾರಕ್ಕೆ ಸಮೀಕರಿಸಿ, ಉಂಟು ಮಾಡಿರುವ ಗೊಂದಲವನ್ನು ನಿವಾರಿಸುವವರೆಗೂ ಯಾವ ಸಕಾರಾತ್ಮಕ ಉತ್ತರವನ್ನು ಕೊಡಲು ಸಾಧ್ಯವಾಗುವುದಿಲ್ಲ.

ಪ್ರಜಾಪ್ರಭುತ್ವ ಎನ್ನುವುದು ಗಣರಾಜ್ಯ ಹಾಗೂ ಸಂಸದೀಯ ಸರ್ಕಾರದಿಂದ ಬಹಳಷ್ಟೇ ಬೇರೆಯಾಗಿದೆ. ಪ್ರಜಾಪ್ರಭುತ್ವದ ಬೇರುಗಳು ಸರ್ಕಾರದ ಸ್ವರೂಪ ಸಂಸದೀಯವಾಗಲೀ ಅಥವಾ ಬೇರೆ ಯಾವುದಾದರೂ ಆಗಲೀ ಇರುವುದಿಲ್ಲ. ಪ್ರಜಾಪ್ರಭುತ್ವ ಅನ್ನುವುದು ಸರ್ಕಾರದ ಸ್ವರೂಪಕ್ಕಿಂತ ಹೆಚ್ಚಿನದು. ಅದು ಪ್ರಾಥಮಿಕವಾಗಿ ಸಾಂಘಿಕ ಜೀವನದ ಒಂದು ರೀತಿ. ಪ್ರಜಾಪ್ರಭುತ್ವದ ಬೇರುಗಳನ್ನು ಸಾಮಾಜಿಕ ಸಂಬಂಧದಲ್ಲಿ, ಸಮಾಜದಲ್ಲಿರುವ ಜನಗಳ ಸಾಂಘಿಕ ಜೀವನದ ಅರ್ಥದಲ್ಲಿ ಹುಡುಕಬೇಕು.

ಸಮಾಜ 'ಅನ್ನುವ ಪದ ಏನನ್ನು ಸೂಚಿಸುತ್ತದೆ' ಹ್ರಸ್ವವಾಗಿ ಹೇಳಬೇಕಾದರೆ, ನಾವು 'ಸಮಾಜದ' ಬಗ್ಗೆ ಮಾತನಾಡುವಾಗ ಅದರ ಸ್ವಭಾವ ಮಾತ್ರದಿಂದಲೇ ಅದನ್ನು ನಾವು ಗ್ರಹಿಸುತ್ತೇವೆ. ಈ ಏಕತೆಯ ಜೊತೆಗೆ ಇರುವ ಗುಣ ವಿಶೇಷಗಳು ಮೆಚ್ಚುಗೆಗೆ ಅರ್ಹವಾದವುಗಳು; ಅವೆಂದರೆ, ಸಾಮುದಾಯಿಕ ಉದ್ದೇಶ, ಸಮಾಜ ಕಲ್ಯಾಣಕ್ಕಾಗಿ ಉತ್ಕಟೇಚ್ಛೆ, ಸಾರ್ವಜನಿಕ ಹಿತಕ್ಕೆ ನಿಷ್ಠೆ, ಅನುಕಂಪ ಮತ್ತು ಸಹಕಾರದಲ್ಲಿ ಪರಸ್ಪರತೆ.

ಭಾರತೀಯ ಸಮಾಜದಲ್ಲಿ ನಾವು ಈ ಆದರ್ಶಗ಼ಳನ್ನು ಕಾಣಬಲ್ಲವೆ?ಭಾರತೀಯ ಸಮಾಜದಲ್ಲಿ ಬಿಡಿ ಬಿಡಿ ವ್ಯಕ್ತಿಗಳು ಇರುವುದಿಲ್ಲ. ಅದರಲ್ಲಿ ಅಸಂಖ್ಯಾತ ಜಾತಿಗಳ ಸಂಗ್ರಹವಿರುತ್ತದೆ; ಅವರ ಜೀವನ

ಅವರಿಗೆ ಪ್ರತ್ಯೇಕವಾಗಿರುತ್ತವೆ; ಹಂಚಿಕೊಳ್ಳಲು ಅವರಿಗೆ ಯಾವ ಸಮಾನ ಅನುಭವವೂ ಇರುವುದಿಲ್ಲ, ಯಾವ ಅನುಕಂಪದ ಬಂಧವೂ ಇರುವುದಿಲ್ಲ. ವಾಸ್ತವ ಹೀಗಿರಬೇಕಾದರೆ, ಅದನ್ನು ಕುರಿತು ವಾದ ಮಾಡುವ ಅವಶ್ಯಕತೆ ಇರುವುದಿಲ್ಲ. ಜಾತಿ ಪದ್ಧತಿಯ ಅಸ್ತಿತ್ವ ಸಮಾಜದ ಆ ಅದರ್ಶಗಳ ಇರುವಿಕೆಯ ಸದಾಕಾಲದ  ನಿರಾಕರಣೆಯಾಗುತ್ತದೆ; ಆದಕ್ಕಾಗಿಯೆ ಅದು ಪ್ರಜಾಪ್ರಭುತ್ವದ ನಿರಾಕರಣೆಯೂ ಆಗುತ್ತದೆ.

ಭಾರತೀಯ ಸಮಾಜದ ಒಳಹೊಕ್ಕು ನೋಡಿದರೆ ಅಲ್ಲಿ ನಿಮಗೆ ಕಾಣಿಸುವುದು ಕಣ್ಣಿಗೆ ಬಡಿಯುವ ಜಾತಿ. ಒಬ್ಬ ಭಾರತೀಯ ಇನ್ನೊಬ್ಬ ಭಾರತೀಯನೊಂದಿಗೆ ಕೇವಲ ಜಾತಿಯ ಕಾರಣಕ್ಕಾಗಿ ವಿವಾಹವಾಗಲೂ ಸಾಧ್ಯವಿಲ್ಲ, ಜೊತೆಗೆ ಕೂತು ಊಟ ಮಾಡಲೂ ಸಾಧ್ಯವಿಲ್ಲ. ಒಬ್ಬ ಭಾರತಿಯ ಇನ್ನೊಬ್ಬನನ್ನು ಅವನ/ಅವಳ ಜಾತಿಯ ಕಾರಣದಿಂದಾಗಿ ಮುಟ್ಟಲಾಗುವುದಿಲ್ಲ. ಇನ್ನಾವುದೇ ರಾಜಕೀಯ ಪಕ್ಷವೂ ಹಾಗೆ ಮಾಡದಿದ್ದರೂ,    ಭಾರತೀಯ ಕಾಂಗ್ರೆಸ್ ಪಕ್ಷ ಜಾತಿಯನ್ನು ತನ್ನ ಚುನಾವಣಾ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುತ್ತದೆ.  ಮತಕ್ಷೇತ್ರಗಳ  ಸಾಮಾಜಿಕ ಸಂಯೋಜನೆಗಳಿಗೆ ಸಂಬಂಧಿಸಿದ ಹಾಗೆ ನೀವು ಅದರ ಅಭ್ಯರ್ಥಿಗಳ ಪಟ್ಟಿಯನ್ನು ಪರೀಕ್ಷಿಸಿದರೆ, ಆ ಅಭ್ಯರ್ತಿಯ ಜಾತಿ  ಆ ಮತಕ್ಷೇತ್ರದಲ್ಲಿರುವ ಅತಿ ಹೆಚ್ಚಿನ ಸಂಖ್ಯೆಯ ಜಾತಿಯಾಗಿರುತ್ತದೆ. ವಾಸ್ತವವಾಗಿ ಕಾಂಗ್ರೆಸ್ ಜಾತಿ ಪದ್ಧತಿಯ ವಿರುದ್ಧ  ಹೊರಗಡೆ ಧ್ವನಿ ಎತ್ತುತ್ತಾ, ಅದೇ ಜಾತಿ  ಪದ್ಧತಿಯನ್ನು ಎತ್ತಿ ಹಿಡಿಯುತ್ತಿದೆ.

ಕೈಗಾರಿಕಾ ಕ್ಷೇತ್ರಕ್ಕೆ ಹೋಗಿ. ಅಲ್ಲಿ ನಿಮಗೆ ಏನು ಕಾಣಿಸುತ್ತದೆ? ಒಂದೆರಡು ವಿನಾಯಿತಿಗಳನ್ನು ಬಿಟ್ಟರೆ, ಅಲ್ಲಿ ಅತಿ ಹೆಚ್ಚು ಸಂಬಳವನ್ನು ಪಡೆಯುತ್ತಿರುವ ಅತ್ಯುನ್ನತ ಹುದ್ದೆಗಳಲ್ಲಿರುವವರು ಆ ಕೈಗಾರಿಕೆಯ ಮಾಲೀಕನಾದ ಕೈಗಾರಿಕೋದ್ಯಮಿಯ ಜಾತಿಗೇ ಸೇರಿದವರಾಗಿರುತ್ತಾರೆ.

ಪಾರ್ಸಿಯೊಬ್ಬ ಸತ್ತರೆ ಅವನ ಹಣವನ್ನು ಪಾರ್ಸಿಗಳಿಗೆ ಬಿಡುತ್ತಾನೆ. ಜೈನನೊಬ್ಬ ಸತ್ತರೆ, ತನ್ನ ಹಣವನ್ನು ಜೈನರಿಗೆ ಬಿಡುತ್ತಾನೆ. ಮಾರ್ವಾಡಿಯೊಬ್ಬ ಸತ್ತರೆ, ಅವನ ಹಣವನ್ನು ಮಾರ್ವಾಡಿಗಳಿಗೇ ಬಿಡುತ್ತಾನೆ.ಬ್ರಾಹ್ಮಣನೊಬ್ಬ ಸತ್ತರೆ  ತನ್ನ ಹಣವನ್ನು ಬ್ರಾಹ್ಮಣರಿಗೆ ಬಿಡುತ್ತಾನೆ. ಹೀಗೆ ರಾಜಕೀಯದಲ್ಲಿಯಾಗಲೀ, ಉದ್ದಿಮೆಯಲ್ಲಿಯಾಗಲೀ, ವಾಣಿಜ್ಯ ಕ್ಷೇತ್ರದಲ್ಲಿಯಾಗಲೀ ಮತ್ತು ಶಿಕ್ಷಣ ಕ್ಷೇತ್ರದಲ್ಲಿಯಾಗಲೀ, ಕೆಳಗೆ ತುಳಿಯಲ್ಪಟ್ಟವರಿಗೆ, ರಾಜಕೀಯದ ಅಸ್ಪೃಷ್ಯರಿಗೆ ಸ್ಥಳವೇ ಇಲ್ಲ.

ಜಾತಿ ಪದ್ಧತಿಯ ಇತರ ವಿಶೇಷ ಸ್ವರೂಪಗಳೂ ಇವೆ. ಅವುಗಳ ದುಷ್ಪರಿಣಾಮಗಳು, ಪ್ರಜಾ ಪ್ರಭುತ್ವದ ವಿರುದ್ಧ ಸಂಘರ್ಷ ಮಾಡುತ್ತವೆ. ಜಾತಿ ಪದ್ಧತಿಯ ಇಂಥ ಒಂದು ವಿಶೇಷ ಸ್ವರೂಪವೆಂದರೆ, ಅದರೊಟ್ಟಿಗೇ ಸಾಗುವ ಹಂತ ಹಂತದ ಅಸಮಾನತೆ. ಜಾತಿಗಳೆಲ್ಲವೂ ಒಂದೇ ಅಂತಸ್ತಿಗೆ ಸೇರಿದವವುಗಳಲ್ಲ. ಅವು ಒಂದರ ಮೇಲೆ ಒಂದು ನಿಂತಿವೆ. ಒಂದರ ಮೇಲೆ ಇನ್ನೊಂದಕ್ಕೆ ಅಸೂಯೆ. ಅದು ಮೇಲಕ್ಕೆ ಹೋಗುತ್ತಿರುವ ದ್ವೇಷ, ಕೆಳಕ್ಕೆ ಇಳಿಯುತ್ತಿರುವ ತಿರಸ್ಕಾರ. ಜಾತಿ ಪದ್ಧತಿಯ ಇಂಥ ಸ್ವರೂಪ ಅತ್ಯಂತ ಹಾನಿಕಾರಕ, ವಿನಾಶಕರ  ಪರಿಣಾಮಗಳನ್ನು  ಒಳಗೊಂಡಿದೆ. ಅದು  ಮನಸ್ಸು ಇರುವ, ಸಹಾಯ ಮಾಡಲು ಸಿದ್ಧವಿರುವ ಸಹಕಾರವನ್ನು ನಾಶಪಡಿಸಿಬಿಡುತ್ತದೆ.

ಜಾತಿ ಮತ್ತು ವರ್ಗ ಇವೆರಡರಲ್ಲಿ ಭಿನ್ನತೆ ಇದೆ; ವರ್ಗ ವ್ಯವಸ್ಥೆಯಲ್ಲಿ ಜಾತಿ  ಪದ್ಧತಿಯಲ್ಲಿ ಇರುವ ಹಾಗೆ ಪೂರ್ಣ ಬೇರ್ಪಡಿಸುವಿಕೆ ಇರುವುದಿಲ್ಲ.  ಜಾತಿ ಪದ್ಧತೆಯಲ್ಲಿ ಇದು, ಇದರ ಜೊತೆಗೆ ಅಸಮಾನತೆ, ಎರಡನೆಯ  ಕೆಟ್ಟ ವ್ಯವಸ್ಥೆ; ಎರಡೂ ಜಾತಿಗಳ ನಡುವಿನ ಉತ್ತೇಜಕ

ಮತ್ತು ಸ್ಪಂದನ ಏಕ ಪಕ್ಷೀಯವಾಗಿರುತ್ತದೆ ಎಂಬ ವಾಸ್ತವದಲ್ಲಿ ಇದು ತನಗೆ ತಾನೇ ವ್ಯಕ್ತವಾಗುತ್ತದೆ. ಉನ್ನತ ಜಾತಿಯವರು ಒಂದು ಗುರುತಿಸಲ್ಪಟ್ಟ ರೀತಿಯಲ್ಲಿ ವರ್ತಿಸಿದರೆ, ಕೆಳಗಿನ ಜಾತಿಯವರು

ಅನೂಚಾನವಾಗಿ ನಡೆದು ಬಂದಿರುವ ಒಂದು ರೀತಿಯಲ್ಲೇ ಸ್ಪಂದಿಸಬೇಕು. ಇದರ ಅರ್ಥವೇನೆಂದರೆ, ಎಲ್ಲಿ ಬೇರೆ ಜಾತಿಯವರಿಂದ ಉತ್ತೇಜಕವನ್ನು ಪಡೆದುಕೊಳ್ಳುವುದಕ್ಕೆ ಮತ್ತು ಸ್ಪಂದನವನ್ನು ಹಿಂದಿರುಗಿಸುವುದಕ್ಕೆ ಯಾವುದೇ ನೀತಿಯುತ ಅವಕಾಶ ಇಲ್ಲದಿರುವಾಗ ಅದರ ಪರಿಣಾಮ ಕೆಲವರನ್ನು ಯಜಮಾನರನ್ನಾಗಿ, ಮತ್ತೆ ಕೆಲವರನ್ನು ಗುಲಾಮರನ್ನಾಗಿ ಮಾಡುವ ಶಿಕ್ಷಣ ಕೊಡುತ್ತದೆ. ಜೀವನಾನುಭವದ ರೀತಿಯನ್ನು ಮುಕ್ತವಾಗಿ ಅದಲು ಬದಲು ಆಗುವುದನ್ನು ತಡೆಗಟ್ಟಿದಾಗ ಪ್ರತಿಯೊಂದು ಪಕ್ಷದ ಅನುಭವ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಒಂದು ವಿಶೇಷ ಹಕ್ಕುಗಳಿರುವ ವರ್ಗ ಇನ್ನೊಂದು ಸಾಮಾನ್ಯ ವರ್ಗ, ಹೀಗೆ ಸಮಾಜದ ಪ್ರತ್ಯೇಕೀಕರಣದಲ್ಲಿ ಪರ್ಯವಸಾನಗೊಳ್ಳುತ್ತದೆ. ಇಂಥ ಪ್ರತ್ಯೇಕೀಕರಣ ಸಾಮಾಜಿಕ ಸೂಕ್ಷ್ಮಾಭಿಸರಣವನ್ನು (ಜಿನುಗುತ್ತ ಮಿಶ್ರವಾಗುವುದು) ತಡೆಗಟ್ಟುತ್ತದೆ.

ಜಾತಿ ಪದ್ಧತಿಯ ಮೂರನೆಯ ಲಕ್ಷಣವೆಂದರೆ, ಪ್ರಜಾಪ್ರಭುತ್ವದ ಬೇರುಗಳನ್ನೇ ಕತ್ತರಿಸಿ ಹಾಕುವ ತನ್ನಲ್ಲಿರುವ ಕೆಡಕುಗಳನ್ನು ಚಿತ್ರಿಸುತ್ತದೆ. ಅದರ ಅರ್ಥವೆಂದರೆ ಒಂದು ಜಾತಿ ಒಂದೇ ಕೆಲಸವನ್ನೇ ಮಾಡಬೇಕು. ಒಬ್ಬ ಮನುಷ್ಯ ತನಗೆ ಸಹಜವಾದ ಪ್ರವೃತ್ತಿಯಿಂದ ಇತರರಿಗೆ ಉಪಯೋಗವಾಗುವಂತೆ ಒಂದು ಕೆಲಸವನ್ನು ಮಾಡಿದರೆ ಆಗ ಸಮಾಜ ನಿಸ್ಸಂಶಯವಾಗಿ ಸಧೃಡವಾಗುತ್ತದೆ. ಒಬ್ಬ ಮನುಷ್ಯರಲ್ಲಿರುವ ನೈಜವಾದ ಪ್ರವೃತ್ತಿಯನ್ನು ಗುರುತಿಸಿ ಸಾಮಾಜಿಕ ಉಪಯೋಗಕ್ಕೆ ಬರುವ ಹಾಗೆ ಅವರಿಗೆ ಹಂತ ಹಂತವಾಗಿ ತರಭೇತಿಯನ್ನು ಕೊಡುವುದು ಸಮಾಜದ ಕರ್ತವ್ಯವಾಗಿರುತ್ತದೆ. ಆದರೆ ಮನುಷ್ಯನಲ್ಲಿ ಅನಿರ್ದಿಷ್ಟವಾದ ಬಹುಮುಖ ಸಾಮರ್ಥ್ಯಗಳು ಮತ್ತು ಚಟುವಟಿಕೆಗಳು ಇದ್ದು ವ್ಯಕ್ತಿಯೊಬ್ಬನನ್ನು ವಿಶಿಷ್ಟವಾಗಿಸುತ್ತವೆ. ಸಮಾಜವೊಂದು ಪ್ರಜಾಹಿತಪರವಾಗಿರಬೇಕಾದರೆ, ಅದು ವ್ಯಕ್ತಿಯೊಬ್ಬ ತನ್ನ ಸಾಮರ್ಥ್ಯಗಳನ್ನು ಉಪಯೋಗಿಸುವುಕೊಳ್ಳುವುದಕ್ಕೆ ದಾರಿಯನ್ನು ತೆರವು ಮಾಡಿಕೊಡಬೇಕು. ಪದರಗಳನ್ನಾಗಿ ಮಾಡುವುದು ವ್ಯಕ್ತಿಯೊಬ್ಬನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ ಮತ್ತು ಬೇಕೆಂತಲೇ ಕುಂಠಿತಗೊಳಿಸುವುದು ಪ್ರಜಾಹಿತವನ್ನು ನಿರಾಕರಿಸಿದಂತೆಯೇ ಆಗುತ್ತದೆ.

ಜಾತಿ ಪದ್ಧತಿಯನ್ನು ಕೊನೆಗಾಣಿಸುವುದು ಹೇಗೆ? ಜಾತಿ ಪದ್ಧತಿಯ ಆತ್ಮವೆಂದರೆ ಹಂತ ಹಂತದ ಅಸಮಾನತೆ. ಇದರಲ್ಲಿಯೇ ಮೊದಲನೆ ಅಡಚಣೆ ಇರುವುದು. ಜನಗಳನ್ನು ವರ್ಗೀಕರಿಸಿ ಉನ್ನತ ಜಾತಿ ಮತ್ತು ಕೆಳ ಜಾತಿ ಎಂದು ಎರಡಾಗಿ ಬೇರೆ ಬೇರೆ ಮಾಡಿದರೆ, ಕೆಳ ಜಾತಿಯವರಿಗೆ ಮೇಲ್ಜಾತಿಯವರೊಂದಿಗೆ ಸೆಣಸುವುದಕ್ಕೆ ಸುಲಭವಾಗುತ್ತದೆ. ಯಾಕೆಂದರೆ ಕೆಳ ಜಾತಿಗಳು ಅನೇಕವಿರುತ್ತವೆ. ಆ ಕೆಳವರ್ಗದಲ್ಲಿ ಅದಕ್ಕಿಂತ ಕೆಳವರ್ಗ ಇದ್ದು ಅವೆರಡೂ ಒಂದಾಗಲು ಸಾಧ್ಯವಿಲ್ಲ. ಕಾರಣವೆಂದರೆ ಕೆಳವರ್ಗದವರು ತಮಗಿಂತ ಕೆಳಗಿರುವವರನ್ನು ಮೇಲಕ್ಕೆ ಎತ್ತಿದರೆ ತನಗೆ ಮತ್ತು ತನ್ನ ಜಾತಿಗೆ ಸಿಕ್ಕಿರುವ ಉನ್ನತ ಸ್ಥಾನವನ್ನು ಕಳೆದುಕೊಳ್ಳಬಹುದಾಗಿರುತ್ತದೆ.

ಎರಡನೆ ಅಡಚಣೆಯೆಂದರೆ ಭಾರತೀಯ ಸಮಾಜದ ನಿರ್ಬಲತೆ ಏನೆಂದರೆ, ಎಲ್ಲರಿಗೂ ಒಳ್ಳೆಯದು ಯಾವುದು ಎಂದು ತಿಳಿದುಕೊಳ್ಳಲಾಗದೆ ಒಂದಾಗಿ ಕಾರ್ಯಪ್ರವೃತ್ತರಾಗುವುದು. ಪ್ಲೇಟೋವಿನ ಪ್ರಕಾರ, ಸಮಾಜದ ಸಂಘಟನೆ ಕಟ್ಟಕಡೆಯಲ್ಲಿ ಅವಲಂಬಿಸಿರುವುದು ಅಸ್ತಿತ್ವಕ್ಕೊಂದು ಕೊನೆ ಇರುತ್ತದೆ ಎಂಬ ತಿಳುವಳಿಕೆ. ನಮಗೆ ಅದರ ಕೊನೆ ಗೊತ್ತಿಲ್ಲದಿದ್ದರೆ, ಅದರ ಒಳ್ಳೆಯದು ಯಾವುದು ಎಂದು ನಮಗೆ ಗೊತ್ತಿಲ್ಲದಿದ್ದರೆ, ಆಗ ನಾವು ಆಕಸ್ಮಿಕಕ್ಕೆ ಮತ್ತು ವಿಚಿತ್ರ ವರ್ತನೆಗೆ ಗುರಿಯಾಗುತ್ತೇವೆ. ಕೊನೆಯಲ್ಲಿರುವ ಒಳ್ಳೆಯದು ಯಾವುದು ಎಂದು ನಮಗೆ ಗೊತ್ತಾಗದಿದ್ದರೆ, ನಾವು ಯಾವ ಸಾಧ್ಯತೆಗಳನ್ನು ಪ್ರಾಯೋಜಿಸಬೇಕೆಂದು ವೈಚಾರಿಕವಾಗಿ ತೀರ್ಮಾನ ಮಾಡುವುದಕ್ಕೆ ನಮಗೆ ಯಾವ ಅಳತೆಗೋಲೂ ಸಿಗುವುದಿಲ್ಲ. ಪ್ರಶ್ನೆಯೆಂದರೆ,

ಭಾರತೀಯ ಸಮಾಜ ತನ್ನ ಜಾತಿಬದ್ಧ ಸ್ಥಿತಿಯಲ್ಲಿ ಯಾವುದನ್ನು ಅಂತಿಮವೆಂದು ಸಾಧಿಸಲಾಗುತ್ತದೆ? ಒಂದು ನ್ಯಾಯಯುತವಾದ, ಸಾಮರಸ್ಯ ಇರುವ ಸಾಮಾಜಿಕ ವರ್ಗವನ್ನು ವಿನಾಯಿಸಿ, ಇಂಥ ಜ್ಞಾನವನ್ನು ಪಡೆಯುವುದಕ್ಕೆ ನಾವು ಒಂದು ದುರ್ಗಮವಾದ ಅಡಚಣೆಯನ್ನು ಎದುರಿಸಬೇಕಾಗುತ್ತದೆ. ಜಾತಿ ಪದ್ಧತಿಯ ಕೆಳಗೆ ಒಂದು ಸಾಮರಸ್ಯವಿರುವ ಸಾಮಾಜಿಕ ವರ್ಗ ಇರಲು ಸಾಧ್ಯವೆ? ಎಲ್ಲೆಲ್ಲಿಯೂ ಭಾರತೀಯರ ಮನಸ್ಸನ್ನು, ಸುಳ್ಳು ಮೌಲ್ಯ ಮಾಪನಗಳಿಂದ, ಸುಳ್ಳು ಹೊರನೋಟದಿಂದ ವಿಕರ್ಷಣೆ ಮಾಡಿ ದಾರಿ ತಪ್ಪಿಸಲಾಗುತ್ತಿದೆ. ಒಂದು ವ್ಯವಸ್ಥಿತವಲ್ಲದ, ಗುಂಪುಗಾರಿಕೆಯ ಸಮಾಜ ಬೇರೆ ಬೇರೆ ಮಾದರಿಗಳನ್ನು ಮತ್ತು ಅಳತೆಗೋಲುಗಳನ್ನು ಮುಂದಿರಿಸುತ್ತದೆ. ಇಂಥ ಪರಿಸ್ಥಿತಿಗಳ ಕೆಳಗೆ ಒಬ್ಬ ಭಾರತೀಯ ವ್ಯಕ್ತಿಗೆ ಜಾತಿಯ ಪ್ರಶ್ನೆಯ ಮೇಲೆ ಮನಸ್ಸನ್ನು ಸ್ಥಿರವಾಗಿಸಲು ಅಸಾಧ್ಯವಾಗುತ್ತದೆ.

ಶಿಕ್ಷಣ ಜಾತಿಯನ್ನು ನಿರ್ನಾಮ ಮಾಡಬಲ್ಲುದೆ 'ಉತ್ತರ' 'ಹೌದು' ಮತ್ತು 'ಇಲ್ಲ' ಎಂದು. ಈ ದಿನಗಳಲ್ಲಿ ಕೊಡುತ್ತಿರುವ ಹಾಗೆಯೇ ಶಿಕ್ಷಣವನ್ನು ಕೊಟ್ಟರೆ, ಶಿಕ್ಷಣ ಜಾತಿಯ ಮೇಲೆ ಪರಿಣಾಮವನ್ನು ಬೀರುವುದಿಲ್ಲ. ಅದು ಇದ್ದ ಹಾಗೆಯೇ ಇರುತ್ತದೆ. ಇದರ ಎದ್ದು ಕಾಣುವ ಉದಾಹರಣೆಯೆಂದರೆ, ಬ್ರಾಹ್ಮಣ ಜಾತಿ. ಅವರಲ್ಲಿ ನೂರಕ್ಕೆ ನೂರು ಜನ ಶಿಕ್ಷಣ ಪಡೆದವರಾಗಿರುತ್ತಾರೆ; ಯಾಕೆ, ಅವರಲ್ಲಿ ಬಹು ಸಂಖ್ಯಾತರು ಉಚ್ಚ ಶಿಕ್ಷಣ ಪಡೆದವರಾಗಿರುತ್ತಾರೆ. ಆದರೂ ಕೂಡ ಒಬ್ಬನೇ ಒಬ್ಬ ಬ್ರಾಹ್ಮಣನೂ ಕೂಡ ತಾನು ಜಾತಿಪದ್ಧತಿಯ ವಿರುದ್ಧವಾಗಿದ್ದೇನೆ ಎಂದು ತೋರಿಸಿಕೊಂಡಿಲ್ಲ. ವಾಸ್ತವವಾಗಿ ಉನ್ನತ ಜಾತಿಗೆ ಸೇರಿದ ಒಬ್ಬ ವಿದ್ಯಾವಂತ ವ್ಯಕ್ತಿಗೆ, ಒಂದು ವೇಳೆ ತಾನು ವಿದ್ಯಾವಂತನಾಗಿಲ್ಲದೆ ಇದ್ದರೆ ಇರುವುದಕ್ಕಿಂತ, ಜಾತಿ ಪದ್ಧತಿಯನ್ನು ಉಳಿಸಿಕೊಳ್ಳುವುದಕ್ಕಾಗಿ, ತನ್ನ ಶಿಕ್ಷಣದ ಬಗ್ಗೆ, ಹೆಚ್ಚಿನ ಕಾಳಜಿ ಇರುತ್ತದೆ. ಕಾರಣ ಶಿಕ್ಷಣ ದೊಡ್ಡ ಹುದ್ದೆಯನ್ನು ಪಡೆಯಲು ಹೆಚ್ಚಿನ ಅವಕಾಶವನ್ನು ಒದಗಿಸಿಕೊಡುತ್ತದೆ.

ಈ ದೃಷ್ಟಿಯಿಂದ ಹೇಳುವುದಾದರೆ, ಜಾತಿಯನ್ನು ಅಳಿಸಿ ಹಾಕುವುದಕ್ಕೆ ಶಿಕ್ಷಣ ಸಹಾಯಕವಾಗಿಲ್ಲ. ಇಲ್ಲಿಯವರೆಗೂ ಇದು ಶಿಕ್ಷಣದ ಋಣಾತ್ಮಕ ಮಗ್ಗುಲು. ಆದರೆ ಭಾರತದ ಕೆಳಸ್ತರದ ಸಮಾಜಕ್ಕೆ ಅನ್ವಯಿಸಿ ಹೇಳುವುದಾದರೆ, ಶಿಕ್ಷಣ ಪ್ರಸ್ತುತವಾಗುತ್ತದೆ. ಅದು ಅವರ ಹೋರಾಟ ಮಾಡುವ ಚೇತನವನ್ನು ಜಾಗೃತಗೊಳಿಸುತ್ತದೆ. ಅವರ ಇಂದಿನ ಮೌಢ್ಯದ ಪರಿಸ್ಥಿತಿಯಲ್ಲಿ ಅವರು ಜಾತಿ ಪದ್ಧತಿಯ ಬೆಂಬಲಿಗರಾಗಿದ್ದಾರೆ. ಅವರ ಕಣ್ಣುಗಳು ಒಮ್ಮೆ ತೆರೆದರೆ, ಅವರು ಜಾತಿ ಪದ್ಧತಿಯ ವಿರುದ್ಧ ಹೋರಾಡಲು ಸಿದ್ಧವಾಗುತ್ತಾರೆ.

ಪ್ರಸ್ತುತ ನೀತಿಯ ದೋಷವೇನೆಂದರೆ, ಶಿಕ್ಷಣವನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಲಾಗುತ್ತಿದ್ದರೂ,

ಅದು ಭಾರತೀಯ ಸಮಾಜದ ಸರಿಯಾದ ಸ್ತರಕ್ಕೆ ತಲುಪುತ್ತಿಲ್ಲ. . ಜಾತಿ ಪದ್ಧತಿಯನ್ನು ಉಳಿಸಿಕೊಂಡು ಹೋಗುವುದರಲ್ಲಿನ ಅನುಕೂಲಗಳಿಗಾಗಿ, ಜಾತಿ ಪದ್ಧತಿಗೆ ಬಲ ಬರುತ್ತದೆ. ಜಾತಿ ಪದ್ಧತಿಯನ್ನು ಅದು ಅವರಿಗೆ ಕೊಡುವ ಅನುಕೂಲಗಳಿಗಾಗಿ, ಉಳಿಸಿಕೊಂಡು ಹೋಗಲು ಪಟ್ಟಭದ್ರ ಹಿತಾಸಕ್ತಿ ಇರುವ ಭಾರತದ ಸಮಾಜದ ಆ ಸ್ತರಕ್ಕೆ ಕೊಟ್ಟರೆ, ಆಗ ಜಾತಿ ಪದ್ಧತಿಗೆ ಇನ್ನೂ ಬಲ ವರ್ಧನೆಯಾಗುತ್ತದೆ. ಅದರ ಬದಲು, ಜಾತಿ ಪದ್ಧತಿಯನ್ನು ಸ್ಫೋಟಗೊಳಿಸಲು ಆಸಕ್ತಿ ಇರುವ ಭಾರತೀಯ ಸಮಾಜದ ಕೆಳಗಿನ ಸ್ತರಗಳಿಗೆ ಶಿಕ್ಷಣವನ್ನು ಕೊಟ್ಟರೆ, ಆಗ ಜಾತಿ ಪದ್ಧತಿ ಸಿಡಿದು ಹೋಗುತ್ತದೆ. ಈ ಕ್ಷಣದಲ್ಲಿ ಭಾರತ ಸರ್ಕಾರ ಮತ್ತು ಅಮೆರಿಕಾದ ಪ್ರತಿಷ್ಠಾನ ಶಿಕ್ಷಣಕ್ಕೆ ಕೊಡುತ್ತಿರುವ ವಿವೇಚನೆ ಇಲ್ಲದ ಸಹಾಯ, ಜಾತಿ ಪದ್ಧತಿಯನ್ನು ಬಲಗೊಳಿಸುತ್ತಿದೆ. ಶ್ರೀಮಂತರನ್ನು ಹೆಚ್ಚು ಶ್ರೀಮಂತರನ್ನಾಗಿ ಮಾಡುವ, ಬಡವರನ್ನು ಹೆಚ್ಚು ಬಡವರನ್ನಾಗಿ ಮಾಡುವ ನೀತಿ ಬಡತನವನ್ನು ಅಳಿಸಿಹಾಕುವ ಮಾರ್ಗವಲ್ಲ. ಜಾತಿ ಪದ್ಧತಿಯನ್ನು ತೊಡೆದುಹಾಕುವುದಕ್ಕಾಗಿ ಶಿಕ್ಷಣವನ್ನು ಒಂದು ಸಾಧನವನ್ನಾಗಿ ಉಪಯೋಗಿಸಿಕೊಳ್ಳುವುದೂ ಸಹ ಇದೇ ಮಾರ್ಗವನ್ನು ಹಿಡಿಯುತ್ತದೆ.

ಜಾತಿ ಪದ್ಧತಿಯನ್ನು ಎತ್ತಿ ಹಿಡಿಯಲು ಬಯಸುವ ಜನಕ್ಕೆ ಶಿಕ್ಷಣವನ್ನು ಕೊಡುವುದು ಭಾರತದಲ್ಲಿ ಪ್ರಜಾಪ್ರಭುತ್ವದ ಪ್ರತೀಕ್ಷೆಯನ್ನು ಉತ್ತಮಗೊಳಿಸುವುದಿಲ್ಲ, ಬದಲಿಗೆ ನಮ್ಮ ಪ್ರಜಾಪ್ರಭುತ್ವವನ್ನು ಇನ್ನೂ ಹೆಚ್ಚಿನ ಅಪಾಯಕ್ಕೆ ಒಡ್ಡುತ್ತದೆ. ಬೌದ್ಧ ಧರ್ಮವೇ ಈ ಜಗತ್ತನ್ನು ಕಾಪಾಡುವುದು.

ಡಾ: ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತೇನೆಂಬ ತಮ್ಮ ಇಚ್ಛೆಯನ್ನು ನವ ದೆಹಲಿಯಿಂದ ಹೊರಡಿಸಿದ ಹೇಳಿಕೆಯ ಮೂಲಕ ಘೋಷಣೆ ಮಾಡಿದರು:

ಆ ಹೇಳಿಕೆ ಈ ಕೆಳಕಂಡಂತೆ ಇದೆ:

೨೬, ಆಲಿಪುರ್ ರಸ್ತೆ
ಸಿವಿಲ್ ಲೈನ್ಸ್, ದೆಹಲಿ
೨೨ನೇ ಸೆಪ್ಟಂಬರ್ ೧೯೫೬

ನಾನು ಬೌದ್ಧ ಧರ್ಮಕ್ಕೆ ಮತಾಂತರವಾಗುವ ತಾರೀಖು ಮತ್ತು ಸ್ಥಳವನ್ನು ಈಗ ಗೊತ್ತು ಪಡಿಸಲಾಗಿದೆ. ಅದು ದಸರಾ ದಿನ, ಅಂದರೆ ೧೪ನೆ ಅಕ್ಟೋಬರ್ ೧೯೫೬ರಂದು ನಾಗಪುರದಲ್ಲಿ ಜರುಗುತ್ತದೆ. ಮತಾಂತರಗೊಳ್ಳುವ ಸಮಾರಂಭ ಬೆಳಗಿನ ೯ರಿಂದ ೧೧ ಗಂಟೆಯ ಒಳಗೆ ಜರುಗುತ್ತದೆ. ಅದೇ ದಿನ ಸಾಯಂಕಾಲ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತೇನೆ.

ಡಾ: ಬಿ.ಆರ್. ಅಂಬೇಡ್ಕರ್
೨೩ನೇ ಸೆಪ್ಟಂಬರ್ ೧೯೫೬

ಕಾರ್ಯಕ್ರಮವನ್ನು 'ಪ್ರಬುದ್ಧ ಭಾರತ' ಸಾಪ್ತಾಹಿಕದಲ್ಲಿ ಸವಿವರವಾಗಿ ಪ್ರಕಟಿಸಲಾಗಿತ್ತು. ಮತಾಂತರಗೊಳ್ಳಬಯಸುವವರು ೧೮ ವರ್ಷಗಳಿಗೆ ಮೇಲ್ಪಟ್ಟು ವಯಸ್ಸಿನವರಾಗಿರಬೇಕು ಎಂದು ತಿಳಿಸಲಾಗಿತ್ತು.

ಮತಾಂತರ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸುವ ಸಂಪೂರ್ಣ ಜವಾಬ್ದಾರಿಯನ್ನು ನಾಗಪುರ ಶಾಖೆಯ 'ಭಾರತೀಯ ಬೌದ್ಧ ಪರಿಷತ್ತಿಗೆ' ವಹಿಸಲಾಗಿತ್ತು. ಅದರಂತೆ ಸಮಿತಿಯ ಕಾರ್ಯದರ್ಶಿಯವರಾದ ಮಿ: W.M. ಗೋಡ್ ಬೋಲೆ, ಕೆಳಕಂಡ ಒಂದು ಕೈಪಿಡಿಯನ್ನು ಹೊರಡಿಸಿದರು:

**ಸಮೂಹ ಮತಾಂತರ**

ಭಾರತದ ಬೌದ್ಧ ಸಂಘದ ಸ್ಥಾಪಕರು ಮತ್ತು ಅಧ್ಯಕ್ಷರೂ ಆದ ಪೂಜನೀಯ ಡಾ: ಬಾಬಾ ಸಾಹೆಬ್ ಅಂಬೇಡ್ಕರ್ ಅವರು ೧೪ನೇ ಅಕ್ಟೋಬರ್ ೧೯೫೬ನೇ ತಾರೀಖು ಭಾನುವಾರ ವಿಜಯದಶಮಿ ದಿವಸ ಬೆಳಗಿನ ೮ಗಂಟೆಗೆ ನಡೆಯುವ ಸಮಾರಂಭದಲ್ಲಿ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಬರ್ಮಾದ ಪೂಜನೀಯ ಭಿಕ್ಕು ಚಂದ್ರಮಣಿ ಮಹಾ ತೇರಾ ಅವರು ಸಮಾರಂಭವನ್ನು ನಡೆಸಿಕೊಡುತ್ತಾರೆ. ಮತಾಂತರವಾಗಬಯಸುವ ಜನಗಳು ಅದೇ ಸಮಾರಂಭದಲ್ಲೇ ಮತಾಂತರವಾಗಬಹುದು. ಅವರು ಶುಭ್ರವಾದ ಬಿಳಿಯ ವಸ್ತ್ರಗಳನ್ನು ಧರಿಸಿ ಬರಬೇಕು.

**ನಿಧಿಗಾಗಿ ಮನವಿ**

ಈ ಧಾರ್ಮಿಕ ಸಮಾರಂಭಕ್ಕೆ ಜನಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಬರುತ್ತಾರೆಂದು ಆಶಿಸಲಾಗಿದೆ.;

ಈ ಮಹಾನ್ ಸಮಾರಂಭವನ್ನು ನಡೆಸಿಕೊಡುವಂತೆ ಪೂಜನೀಯ ಬಾಬಾ ಅವರು

ನಿಯುಕ್ತಗೊಳಿಸಿರುವ ಭಾರತೀಯ ಬೌದ್ಧ ಜನ ಸಮಿತಿಯ ಸ್ಥಳೀಯ ಶಾಖೆಗೆ ಎಲ್ಲ ರೀತಿಯಲ್ಲಿ ಸಹಾಯ ಮಾಡಬೇಕೆಂದು ಕೋರಲಾಗಿದೆ. ಆರ್ಥಿಕ ಸಹಾಯವನ್ನು ಕೊಡುವ ದಾನಿಗಳು, ಸಂಬಂಧಪಟ್ಟ ಸಮಿತಿಯಿಂದ ರಶೀದಿಗಳನ್ನು ಕೇಳಿ ಪಡೆಯಬೇಕು. ಹೊರಗಿನವರು ಮನಿ ಆರ್ಡರ್ ಮೂಲಕ ಹಣವನ್ನು ಕಳುಹಿಸಬೇಕಾಗಿ ಕೋರಿದೆ.

ವ್ಯವಸ್ಥಾಪಕ ವರ್ಗಕ್ಕೆ ಸಮಾರಂಭದ ಕೆಲಸದಲ್ಲಿ ಸಹಾಯ ಮಾಡಬಯಸುವವರು ಕೆಳಗೆ ಸಹಿ ಮಾಡಿರುವವರನ್ನು ೩೦ನೇ ಸೆಪ್ಟಂಬರ್ ೧೯೫೬ ರಂದು ಅಥವಾ ಅದಕ್ಕೆ ಮುಂಚೆ ಕಾಣಬೇಕು.

W.M. ಗೋಡ ಬೋಲೆ
ಕಾರ್ಯದರ್ಶಿ
ಭಾರತೀಯ ಬೌದ್ಧ ಜನ ಸಮಿತಿ
(ನಾಗಪುರ ಶಾಖೆ), ಕೊಥಾರಿ
ಮ್ಯಾನ್ಷನ್. ಸೀತಾಬುಲ್ಡಿ

ತಾ: ೨೧ನೇ ಸೆಪ್ಟಂಬರ್ ೧೯೫೬ ನಾಗಪುರ

ಡಾ: ಬಿ.ಆರ್.ಅಂಬೇಡ್ಕರ್ ಅವರು ಒಂದು ಪತ್ರದ ಮೂಲಕ ಪೂಜನೀಯ ಭಿಕ್ಕು ಚಂದ್ರಮಣಿ ಅವರನ್ನು ಮತಾಂತರ ಸಮಾರಂಭವನ್ನು ನಡೆಸಿಕೊಡುವಂತೆ ಕೇಳಿಕೊಂಡರು. ಪತ್ರ ಹೀಗಿದೆ:

೨೬, ಆಲಿಪುರ್ ರಸ್ತೆ
ದೆಹಲಿ
೨೪ನೇ ಸೆಪ್ಟಂಬರ್ ೧೯೫೬

ಪೂಜನೀಯ ಭಿಕ್ಕು ಚಂದ್ರಮಣಿ
ಕುಶೆನಾರ , ಗೋರಖ್ಪುರ ಜಿಲ್ಲೆ
ಉತ್ತರ ಪ್ರದೇಶ

ಪೂಜನೀಯ ಭಂತೆ,

ನಾನು ಮತ್ತು ನನ್ನ ಪತ್ನಿ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳಬೇಕೆಂದು ತೀರ್ಮಾನಿಸಿದ್ದೇವೆ ಎಂದು ತಿಳಿಸಬಯಸುತ್ತೇನೆ. ಸಮಾರಂಭ ೧೪ನೇ ಅಕ್ಟೋಬರ್ ೧೯೫೬ರಂದು ನಾಗಪುರದಲ್ಲಿ ನಡೆಯಲಿದೆ. ಸಮಾರಂಭದ ಸಮಯವನ್ನು ಬೆಳಗಿನ ೯ ಮತ್ತು ೧೧ರ ನಡುವೆ ನಿಗದಿಪಡಿಸಲಾಗಿದೆ. ನೀವೇ ಸಮಾರಂಭವನ್ನು ನಡೆಸಿಕೊಡಬೇಕೆಂಬುದು ನಮ್ಮ ಮಹಾನ್ ಆಶೆಯಾಗಿದೆ. ಭಾರತದಲ್ಲಿರುವ ಅತ್ಯಂತ ಹಿರಿಯ ಸನ್ಯಾಸಿಗಳಾಗಿರುವ ತಾವು ಈ ಸಮಾರಂಭವನ್ನು ನಡೆಸಿಕೊಡುವುದು ಸೂಕ್ತವಾಗಿರುತ್ತದೆ.

ನಾಗಪುರಕ್ಕೆ ಹೋಗಲು ನಿಮ್ಮ ದೈಹಿಕ ಪರಿಸ್ಥಿತಿಯಲ್ಲಿ ಕಷ್ಟವೆಂದು ನಮಗೆ ಅರಿವಿದೆ, ಆದರೆ ನಿಮಗೆ ಕುಶೇನಾರದಿಂದ ನಾಗಪುರಕ್ಕೆ ಬರಲು ವಿಮಾನದಲ್ಲಿಯಾಗಲೀ ಅಥವ ಟ್ರೇನಿನಲ್ಲಾಗಲೀ ಪ್ರಯಾಣದ ವ್ಯವಸ್ಥೆ, ಹಾಗೂ ನಾಗಪುರದಲ್ಲಿ ನಿಮ್ಮ ವಾಸ್ತವ್ಯಕ್ಕೆ ಇತರ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗುತ್ತದೆ.

ನಿಮ್ಮನ್ನು ಕುಶೇನಾರದಿಂದ ನಾಗಪುರಕ್ಕೆ ಕರೆತರಲು ಯಾರನ್ನಾದರೂ ಕಳುಹಿಸುತ್ತೇವೆ. ನೀವು ನಮ್ಮ ಈ ಆಹ್ವಾನವನ್ನು ಒಪ್ಪಿ ಕೊಂಡಿರುವುದಕ್ಕೆ ದಯವಿಟ್ಟು ತಿಳಿಸಿ.

ಆದರಪೂರ್ವಕವಾಗಿ, ನಿಮ್ಮ ವಿಶ್ವಾಸಿ

(ಸಹಿ) ಬಿ.ಆರ್.ಅಂಬೇಡ್ಕರ್

ಸಮಾರಂಭದ ಹಿಂದಿನ ಸಾಯಂಕಾಲ 'ಪ್ರಬುದ್ಧ ಭಾರತ್' ೧೨ನೇ ಅಕ್ಟೋಬರ್ ೧೯೫೬ರಂದು ಒಂದು ವಿಶೇಷ ಪುರವಣಿಯನ್ನು ಹೊರತಂದಿತು.

ಕಾರ್ಯಕ್ರಮ ಎಲ್ಲರಿಗೂ ಮುಕ್ತವಾಗಿದೆಯೆಂದು ತಿಳಿಸುತ್ತಾ, ಸಮಿತಿ ಎಲ್ಲರನ್ನೂ ಒಂದು ರೂಪಾಯಿನ ಚಂದಾ ಕೊಟ್ಟು ಸದಸ್ಯರಾಗಬೇಕೆಂದು ಪ್ರಾರ್ಥಿಸಿತು. ಖರ್ಚಿನ ಜವಾಬ್ದಾರಿಯನ್ನು ನಾಗಪುರದ ಜನಗಳು ಭರಿಸಬೇಕಾಗಿದೆ. ಸ್ವಾಗತ ಸಮಿತಿಯ ಸದಸ್ಯತ್ವದ ಶುಲ್ಕವನ್ನು ೨೫ ರೂಪಾಯಿಗಳೆಂದು ಗೊತ್ತುಪಡಿಸಲಾಗಿದ್ದು, ಸದಸ್ಯತ್ವ ಎಲ್ಲರಿಗೂ ಮುಕ್ತವಾಗಿದೆ.

ಮತಾಂತರಕ್ಕಾಗಿ ನೋಂದಣಿ ೧೧ನೇ ಅಕ್ಟೋಬರ್ ೧೯೫೬ರಿಂದ ಪ್ರಾರಂಭವಾಗುತ್ತದೆ. ಕಚೇರಿ ಮತಾಂತರ ನಡೆಯುವ ಸ್ಥಳದಲ್ಲೂ ಕೆಲಸ ನಿರ್ವಹಿಸುತ್ತದೆ. ನೋಂದಣಿಯಾದ ಎಲ್ಲಾ ಡೆಲಿಗೇಟುಗಳಿಗೂ ಎರಡು ಟಿಕೆಟ್ಗಳನ್ನು ವಿತರಿಸಲಾಯಿತು; ಇದು ಮತಾಂತರ ನಡೆಯುವ ಸ್ಥಳಕ್ಕೆ ಪ್ರವೇಶ ಪಡೆಯಲು ಉಪಯೋಗವಾಗುತ್ತದೆ.

ಸ್ವಯಂ ಸೇವಕರುಗಳಿಗೆ ಬಿಳಿ ಬಣ್ಣದ ಹಾಫ್ ಪ್ಯಾಂಟ್ ಮತ್ತು ಅದೇ ಬಣ್ಣದ ಶರ್ಟ್ ಧರಿಸಿ ಬರಬೇಕೆಂದು ನಿರ್ದೇಶಿಸಲಾಗಿತ್ತು. ಮಿ: K.V. ಉಮ್ರೆ, ಮಿ: ಸಚ್ಚಿದಾನಂದ್ ಮಂಕೆ ಮತ್ತು ಮಿ: R.R. ಪಾಟೀಲ್ ಇವರುಗಳಿಗೆ, ನಾಗಪುರದ ಹೊರಗಡೆಯಿಂದ ಬರುವ ಸ್ವಯಂ ಸೇವಕರಿಗೆ ಮಾರ್ಗ ದರ್ಶನ ಮಾಡುವ ಹೊಣೆಗಾರಿಕೆಯನ್ನು ಕೊಡಲಾಯಿತು.

ಜನಗಳ ತೀವ್ರವಾದ ಬೇಡಿಕೆಯನ್ನು ಗಮನಿಸಿ, ರೇಲ್ವೆಯವರು ಒಂದು ವಿಶೇಷ ರೈಲನ್ನು ಬೊಂಬಾಯಿನಿಂದ ನಾಗಪುರಕ್ಕೆ ಪ್ರಯಾಣಿಕರ ಅನುಕೂಲಕ್ಕಾಗಿ ವ್ಯವಸ್ಥೆ ಮಾಡಿತ್ತು. ಆ ರೈಲು ಬೊಂಬಾಯಿಯ ವಿಕ್ಟೋರಿಯ ಟರ್ಮಿನಸ್ಸಿಂದ ೧೨ನೇ ಅಕ್ಟೋಬರ್ ೧೯೫೬ ರಂದು ರಾತ್ರಿ ೯.೧೫ಕ್ಕೆ ಹೊರಡುವುದಿತ್ತು. ಅದರಂತೆ, ರೇಲ್ವೆ ಅಧಿಕಾರಿಗಳು ಒಂದು ನೋಟಿಸ್ ಅನ್ನು ಹೊರಡಿಸಿದ್ದರು. ಇಷ್ಟೆಲ್ಲಾ ಆದರೂ ಸಹ, ನಾಗಪುರಕ್ಕೆ ಹೋಗುವ ಎಲ್ಲಾ ಟ್ರೇನುಗಳು ಜನಗಳಿಂದ ತುಂಬಿ ಹೋಗಿದ್ದವು. ಟ್ರೇನುಗಳು ನಿಂತ ಎಲ್ಲ ಕಡೆಯಲ್ಲೂ ಅಧಿಕ ಸಂಖ್ಯೆಯಲ್ಲಿ ಜನಗಳು ಟ್ರೇನನ್ನು ಹತ್ತುತ್ತಲೇ ಇದ್ದರು. ಈ ಎಲ್ಲಾ ಜನಗಳಿಗೂ ನಾಗಪುರದ ಪಾಠಶಾಲೆಗಳಲ್ಲಿ ವಸತಿ ಸೌಕರ್ಯವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು, ನಾಗಪುರದ ದಕ್ಷಿಣ ಆಂಬಝಾರಿ ರಸ್ತೆಯ ವ್ಯಾಕ್ಸೀನ್ ಇನ್ಸ್ಟಿಟ್ಯೂಟ್ ಹತ್ತಿರವಿರುವ ಬಯಲು ಮೈದಾನದಲ್ಲಿ ಏರ್ಪಡಿಸಲಾಗಿತ್ತು. ನೆಲದ ಮೇಲೆ ಬಂಬೂ ಹಾಳೆಗಳನ್ನು ಹಾಸಲಾಗಿತ್ತು. ಸುಮಾರು ೩೦೦೦ ವಿದ್ಯುದ್ದೀಪಗಳನ್ನು ಮೈದಾನದ ಎಲ್ಲೆಡೆಯಲ್ಲಿ ಅಳವಡಿಸಲಾಗಿತ್ತು.

ಶ್ರೀ ರೇವಾರಾಂ ಕಾವಡೆ ಮತ್ತು ಶ್ರೀ ಘ.ಓ.ಗೋಡ್ಬೋಲೆ ಅವರು ಮತಾಂತರ ಸಮಾರಂಭದ ವಿವರಗಳಿರುವ ಬ್ರೋಷರ್ ಅನ್ನು ಹೊರಡಿಸಿದರು:

ಶನಿವಾರ ೧೩-೧೦-೧೯೫೬

ಸಾಯಂಕಾಲ : ೫ ರಿಂದ ೮ : ಪರಿತ್ರಾನ್

೮ ರಿಂದ ೧೦ : ಮಹಾಬೋಧಿ ಸಂಘದ ಪ್ರಧಾನ ಕಾರ್ಯದರ್ಶಿಯವರಾದ
ಶ್ರೀ ಡಿ. ವಾಲಿ ಸಿಂಹ ಅವರಿಂದ ಭಾಷಣ
ಬುದ್ಧನ ಜೀವನದಮೇಲೆ ಮತ್ತು ಭಾರತದಲ್ಲಿನ
ಪ್ರಸಿದ್ಧಿಯಾದ ಬೌದ್ಧ ಸ್ಥಳಗಳು ಇವನ್ನು
ಕುರಿತಾದ ತೋರಿಸುವ ಮ್ಯಾಜಿಕ್ ಲ್ಯಾಂಟರ್ನ್
ಪ್ರದರ್ಶನ

ಭಾನುವಾರ ೧೪–೧೦–೧೯೫೬ (ಅಶೋಕ ವಿಜಯದಶಮಿ)

ಪ್ರಾತಃ: ೮ – ೧೧ ಡಾ: ಅಂಬೇಡ್ಕರ್, ಶ್ರೀಮತಿ ಅಂಬೇಡ್ಕರ್ ಮತ್ತು ಇತರ ಜನಗಳ ಮತಾಂತರ ಸಮಾರಂಭ, ಗೌರವಾನ್ವಿತ ಚಂದ್ರಮಣಿ ಮಹಾಸ್ತವೀರ್ ಅವರಿಂದ

– ೧೧ – ೧೧.೨೫ ಕಲ್ಕತ್ತಾದ ಮಹಾಬೋಧಿ ಸಂಘದಿಂದ ಡಾ: ಅಂಬೇಡ್ಕರ್ ಅವರಿಗೆ ಬುದ್ಧನ ಕೆತ್ತಿದ ವಿಗ್ರಹದ ಕೊಡುಗೆ.

ಸಾಯಂ ೬ – ೭ ಮಹಾಬೋಧಿ ಸಂಘದ ಪ್ರಧಾನ ಕಾರ್ಯದರ್ಶಿ ಅವರಾದ ಶ್ರೀ ಡಿ. ವಾಲಿಸಿಂಹ ಅವರಿಂದ ಭಾಷಣ

– ೮ – ೧೧ 'ಯುಗ ಯಾತ್ರ' 'ಮರಾಠಿ ನಾಟಕ' ಔರಂಗಾ–ಬಾದ್ನ ಮಿಲಿಂದ್ ಕಾಲೇಜಿನವರಿಂದ

ಸೋಮವಾರ ೧೫–೧೦–೧೯೫೬

ಪ್ರಾತಃ : ೮ – ೧೧ ಡಾ: ಅಂಬೇಡ್ಕರ್ ಅವರಿಂದ ಸಾರ್ವಜನಿಕ ಭಾಷಣ

ಸಾಯಂ ೮ – ೧೦ ಮ್ಯಾಜಿಕ್ ಲ್ಯಾಂಟರ್ನ್ ಪ್ರದರ್ಶನ

೧೪ನೇ ಅಕ್ಟೋಬರ್ ೧೯೫೬ :

೧೪ನೇ ಅಕ್ಟೋಬರ್ ನಂದು ಜನಗಳು ಪ್ರಾತಃ ಕಾಲದಲ್ಲಿ ಬೇಗನೇ ಎದ್ದು ಮೆರವಣಿಗೆಯಲ್ಲಿ, ಘೋಷಣೆಗಳನ್ನು ಕೂಗುತ್ತಾ ದೀಕ್ಷಾ ಭೂಮಿಯತ್ತ ಹೊರಟರು. ೨ರಿಂದ ೨.೫ ಲಕ್ಷ ಜನಗಳು ಜಮಾಯಿಸಿದ್ದು, ಪಂಡಾಲಿನ ಅರ್ಧದಷ್ಟು ಬೆಳಗಿನ ೭ ಗಂಟೆಯ ಹೊತ್ತಿಗೇ ತುಂಬಿ ಹೋಗಿತ್ತು. ಈ ಸಮಾರಂಭದ ವ್ಯವಸ್ಥೆಯನ್ನು ನಾಗಪುರದ ಮತ್ತು ಬೊಂಬಾಯಿನ ಸಮತಾ ಸೈನಿಕ ದಳಕ್ಕೆ ವಹಿಸಲಾಗಿತ್ತು. ಸಮಾರಂಭದ ಸ್ಥಳದಲ್ಲಿ ಕೇವಲ೧೦–೧೧ ಜನ ಪೋಲೀಸರು ಮಾತ್ರ ಇದ್ದರು.

ಮಾಧ್ಯಮದವರಿಗಾಗಿ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು. ಭಾರತದಿಂದ ಮತ್ತು ವಿದೇಶದಿಂದ ಸುಮಾರು ೩೦ ಮಂದಿ ಪತ್ರಿಕಾ ವರದಿಗಾರರು ಬಂದಿದ್ದರು. ಮತಾಂತರಕ್ಕೆ ಎಂದು ಬಂದಿದ್ದ ಜನಗಳು ಎಷ್ಟು ಅಗಾಧವಾದ ಸಂಖ್ಯೆಯಲ್ಲಿ ಇದ್ದರೆಂದರೆ, ಪ್ರವೇಶದ ಕಾರ್ಡುಗಳು ಖಾಲಿಯಾಗಿ, ಕಟ್ಟಕಡೆಯಲ್ಲಿ ವ್ಯವಸ್ಥಾಪಕರು ಸಮಾರಂಭವನ್ನು ಎಲ್ಲರಿಗೂ ಮುಕ್ತವೆಂದು ಘೋಷಣೆ ಮಾಡಲೇಬೇಕಾಯಿತು.

**ಮತಾಂತರದ ಸಮಾರಂಭ**

ಡಾ: ಅಂಬೇಡ್ಕರ್ ಅವರು ಮಹಾಸ್ತವೀರ್ ಭಿಕ್ಕು ಚಂದ್ರಮಣಿಯವರೊಂದಿಗೆ ಪ್ರಾತಃ ೯.೩೦ಕ್ಕೆ ಸ್ಥಳಕ್ಕೆ ಆಗಮಿಸಿದರು. ಆ ಹೊತ್ತಿಗೆ, ಆ ಜಾಗದಲ್ಲಿ ಸುಮಾರು ೫–೬ ಲಕ್ಶ ಜನ ಅಲ್ಲಿ ಸೇರಿದ್ದರು. ಸಮಾರಂಬದಲ್ಲಿ ಹಾಜರಿದ್ದ ಇತರ ಭಿಕ್ಕುಗಳು ಎಂದರೆ:

(೧) ತೇರೋ ಪನ್ನಾಟಿಸ್, ಸಾಂಚಿ ವಿಹಾರ್, ಭೂಪಾಲ್
(೨) ಪೂಜ್ಯ ಭಿಕ್ಕು ಎಚ್. ಸಿದ್ಧತಿಸ್ಸಾ, ಪೂರ್ವ ಸಿಲೋನ್
(೩) ಪೂಜ್ಯ ಒ ಸೌಗರತ್ನ, ಸಾರ್ ನಾತ್, ಬನಾರಸ್
(೪) ಭಿಕ್ಕು ಪ್ರಜ್ಞಾನಂದ, ಬುದ್ಧ ವಿಹಾರ್, ಲಕ್ನೋ
(೫) ನೆರ್ ಶ್ರಾಮ್ನರ್, ಧಮ್ಮೋದಯ ವಿಹಾರ್, ಪಶ್ಚಿಮ ಬಂಗಾಳ, ಮತ್ತು
(೬) ಪೂಜ್ಯ ಪರಮ್ಸಂಧಿ

ಕುಮಾರಿ ಇಂದುತಾಯಿ ವರಾಳೆ ಅವರ ಸ್ವಾಗತ ಗೀತೆಯೊಂದಿಗೆ ಸಮಾರಂಭ ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ, ಡಾ: ಅಂಬೇಡ್ಕರ್ ಅವರ ತಂದೆಯವರಾದ ರಾಮ್ಜಿ, ಮಾಲೋಜಿ ಸುಬೇದಾರ್ ಅವರನ್ನು ವಿಶೇಷವಾಗಿ ಶ್ಲಾಘಿಸಲಾಯಿತು. ಆಗ, ಡಾ: ಬಿ..ಆರ್. ಅಂಬೇಡ್ಕರ್ ಮತ್ತು ಮಾಯಿಸಾಬ್ ಭಗವಾನ್ ಬುದ್ಧನ ಮೂರ್ತಿಯ ಮುಂದೆ ಕೈಗಳನ್ನು ಮುಗಿದುಕೊಂಡು ನಿಂತುಕೊಂಡರು. ಮಹಾಸ್ತವೀರ್ ಚಂದ್ರಮಣಿಯವರು ತ್ರಿಶರಣ್ ಮತ್ತು ಪಂಚಶೀಲವನ್ನು ಅವರಿಗೆ ಪಾಳಿ ಭಾಷೆಯಲ್ಲಿ ವಾಚಿಸಿ ಹೇಳಿದರು:

ನಮೋ ತಸ್ಸ ಭಗವತೋ ಆರಾಹತೋ ಸಮ್ಮ ಸಂಬುದ್ಧಸ್ಸ
ನಮೋ ತಸ್ಸ ಭಗವತೋ ಆರಾಹತೋ ಸಮ್ಮ ಸಂಬುದ್ಧಸ್ಸ
ನಮೋ ತಸ್ಸ ಭಗವತೋ ಆರಾಹತೋ ಸಮ್ಮ ಸಂಬುದ್ಧಸ್ಸ

ಅದರ ಅರ್ಥ

ಪವಿತ್ರಾತ್ಮನೆ, ಪೂಜ್ಯನೆ, ಪರಿಪೂರ್ಣ ಜ್ಞಾನಿಯೇ ನಿನಗೆ ಪ್ರಣಾಮಗಳು

ಬುದ್ಧಂ ಶರಣಮ್ ಗಚ್ಚಾಮಿ
ಧಮ್ಮಮ್ ಶರಣಮ್ ಗಚ್ಚಾಮಿ
ಸಂಘಮ್ ಶರಣಮ್ ಗಚ್ಚಾಮಿ
ದುತಿಯಂಪಿ ಬುದ್ಧಂ ಶರಣಮ್ ಗಚ್ಚಾಮಿ
ದುತಿಯಂಪಿ ಧಮ್ಮಮ್ ಶರಣಮ್ ಗಚ್ಚಾಮಿ
ದುತಿಯಂಪಿ ಸಂಘಮ್ ಶರಣಮ್ ಗಚ್ಚಾಮಿ
ತತಿಯಂಪಿ ಬುದ್ಧಂ ಶರಣಮ್ ಗಚ್ಚಾಮಿ
ತತಿಯಂಪಿ ಧಮ್ಮಮ್ ಶರಣಮ್ ಗಚ್ಚಾಮಿ
ತತಿಯಂಪಿ ಸಂಘಮ್ ಶರಣಮ್ ಗಚ್ಚಾಮಿ

ಅದರ ಅರ್ಥ

ನಾನು ಬುದ್ಧನ ಹಿಂದೆ ಹೋಗುತ್ತೇನೆ
ನಾನು ಧಮ್ಮದ ಹಿಂದೆ ಹೋಗುತ್ತೇನೆ
ನಾನು ಸಂಘದ ಹಿಂದೆ ಹೋಗುತ್ತೇನೆ

ಎರಡನೆಯ ಬಾರಿಗೆ ನಾನು ಬುದ್ಧನ ಹಿಂದೆ ಹೋಗುತ್ತೇನೆ
ಎರಡನೆಯ ಬಾರಿಗೆ ನಾನು ಧಮ್ಮದ ಹಿಂದೆ ಹೋಗುತ್ತೇನೆ
ಎರಡನೆಯ ನಾರಿಗೆ ನಾನು ಸಂಘದ ಹಿಂದೆ ಹೋಗುತ್ತೇನೆ

ಮೂರನೆಯ ಬಾರಿಗೆ ನಾನು ಬುದ್ಧನ ಹಿಂದೆ ಹೋಗುತ್ತೇನೆ
ಮೂರನೆಯ ಬಾರಿಗೆ ನಾನು ಧಮ್ಮದ ಹಿಂದೆ ಹೋಗುತ್ತೇನೆ
ಮೂರನೆಯ ಬಾರಿಗೆ ನಾನು ಸಂಘದ ಹಿಂದೆ ಹೋಗುತ್ತೇನೆ

ಪಂಚಶೀಲ

೧. ಪಾನಾತಿಪಾತಾ ವೆರಮಣೀ– ಸಿಖ್ಖಾಪದಮ್ ಸಮಾದಿಯಾಮಿ

೨. ಅದಿನ್ನಾದನಾ ವೆರಮಣೀ– ಸಿಖ್ಖಾಪದಮ್ ಸಮಾದಿಯಾಮಿ

೩. ಕಾಮೆಸು ಮಿಚ್ಚಾಚಾರಾ ವೆರಮಣೀ– ಸಿಖ್ಖಾಪದಮ್ ಸಮಾದಿಯಾಮಿ

೪ ಮುಸಾವಾದ ವೆರಮಣೀ– ಸಿಖ್ಖಾಪದಮ್ ಸಮಾದಿಯಾಮಿ

೫.ಸುರಾಮೆರಯ–ಮಜ್ಜ ಪಮಾದಟ್ಠಾನಾ ವೆರಮಣೀ– ಸಿಖ್ಖಾಪದಮ್ ಸಮಾದಿಯಾಮಿ

ಅದರ ಅರ್ಥ

೧. ಜೀವಿಗಳನ್ನು ಕೊಲ್ಲಬಾರದೆಂಬ ನಿಯಮವನ್ನು ನಾನು ಪರಿಪಾಲಿಸುತ್ತೇನೆಂದು ಮಾತು ಕೊಡುತ್ತೇನೆ

೨. ನನಗೆ ಕೊಟ್ಟಿಲ್ಲದೇ ಇರುವ ವಸ್ತುಗಳನ್ನು ತೆಗೆದುಕೊಳ್ಳಬಾರದೆಂಬ ನಿಯಮವನ್ನು ನಾನು ಪರಿಪಾಲಿಸುತ್ತೇನೆಂದು ಮಾತು ಕೊಡುತ್ತೇನೆ

೩. ಲೈಂಗಿಕ ದುರ್ನಡತೆಯಿಂದ ದೂರ ಇರಬೇಕೆಂಬ ನಿಯಮವನ್ನು ನಾನು ಪರಿಪಾಲಿಸುತ್ತೇನೆಂದು ಮಾತು ಕೊಡುತ್ತೇನೆ

೪. ಸುಳ್ಳು ಮಾತುಗಳಿಂದ ದೂರವಿರಬೇಕೆಂಬ ನಿಯಮವನ್ನು ನಾನು ಪರಿಪಾಲಿಸುತ್ತೇನೆಂದು ಮಾತು ಕೊಡುತ್ತೇನೆ

೫. ಮತ್ತು ಬರಿಸುವ ಪಾನೀಯಗಳಿಂದ ಮತ್ತು ಭ್ರಮಾಜನಕ ವಸ್ತುಗಳಿಂದ (ಡ್ರಗ್ಸ್) ದೂರವಿರಬೇಕೆಂಬ ನಿಯಮವನ್ನು ನಾನು ಪರಿಪಾಲಿಸುತ್ತೇನೆಂದು ಮಾತು ಕೊಡುತ್ತೇನೆ

ಈ ರೀತಿಯಾಗಿ ಮಹಾಸ್ಥವೀರ್ ಚಂದ್ರಮಣಿಯವರು ಡಾ: ಬಾಬಾಸಾಹೆಬ್ ಮತ್ತು ಮಾಯಿ ಸಾಹೆಬ್ ಅಂಬೇಡ್ಕರ್ ಅವರನ್ನು ಬೌದ್ಧ ಧರ್ಮಕ್ಕೆ ಪಾದಾರ್ಪಣೆ ಮಾಡಿಸಿದರು.

ಅದಾದ ನಂತರ ಡಾ: ಬಿ.ಆರ್. ಅಂಬೇಡ್ಕರ್ ಅವರು ಬುದ್ಧನ ವಿಗ್ರಹಕ್ಕೆ ಮಾಲಾರ್ಪಣೆ ಮಾಡಿ ನಮಿಸಿದರು. ಸಮೂಹಗಳ ಮತಾಂತರ ಸಮಾರಂಭ ಬೆಳಗಿನ ೧೦ ಗಂಟೆಗೆ ಪ್ರಾರಂಭವಾಯಿತು.

ಹಿಂದೂ ಧರ್ಮವನ್ನು ಕಳಚಿ, ಬೌದ್ಧ ಧರ್ಮವನ್ನು ಅಪ್ಪಿಕೊಳ್ಳಬಯಸುವವರು ಕೈಮುಗಿದು ನಿಂತುಕೊಂಡು ತ್ರಿಶರಣ ಮತ್ತು ಪಂಚಶೀಲವನ್ನು ತಾವು ಹೇಳಿಕೊಟ್ಟಹಾಗೆ ವಾಚಿಸಬೇಕೆಂದು ಡಾ: ಅಂಬೇಡ್ಕರ್ ಅವರು ಕರೆ ಕೊಟ್ಟರು. ಈ ಕರೆಗೆ ಉತ್ತರವಾಗಿ, ಇಡೀ ಸಭೆಯಲ್ಲಿ ಇದ್ದವರೆಲ್ಲಾ ನಿಂತುಕೊಂಡ ಮೆಲೆ, ಡಾ: ಅಂಬೇಡ್ಕರ್ ಅವರುಗಳನ್ನು ಬೌದ್ಧ ಧರ್ಮಕ್ಕೆ ಪಾದಾರ್ಪಣೆ ಮಾಡಿಸಿದರು.

ಸಮಾರಂಭದ ಭಾಗವಾಗಿ ಡಾ: ಅಂಬೇಡ್ಕರ್ ಅವರು ಈ ಕೆಳಗಿನ ೨೨ ಪ್ರತಿಜ್ಞಾ ವಿಧಿಗಳನ್ನು ಅವರಿಂದ ವಾಚಿಸಿದರು:.

೧. ನಾನು ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ನಂಬಿಕೆ ಇಟ್ಟುಕೊಳ್ಳುವುದಿಲ್ಲ, ಅವರನ್ನು ನಾನು ಪೂಜಿಸುವುದಿಲ್ಲ

೨. ರಾಮ ಮತ್ತು ಕೃಷ್ಣರಲ್ಲಿ ನಾನು ನಂಬಿಕೆ ಇಟ್ಟುಕೊಳ್ಳುವುದಿಲ್ಲ, ಅವರನ್ನು ನಾನು ಪೂಜಿಸುವುದಿಲ್ಲ.

೩. ಗೌರಿ, ಗಣಪತಿ ಮತ್ತು ಇತರ ಹಿಂದೂ ಧರ್ಮದ ದೇವತೆಗಳಲ್ಲಿ, ದೇವಿಯರುಗಳಲ್ಲಿ ನಾನು

ನಂಬಿಕೆ ಇಟ್ಟುಕೊಳ್ಳುವುದಿಲ್ಲ, ಅವರನ್ನು ನಾನು ಪೂಜಿಸುವುದಿಲ್ಲ.

೪. ದೇವತೆಗಳು ಅವತಾರವೆನ್ನೆತ್ತುತ್ತಾರೆಂಬ ಪ್ರಮೇಯವನ್ನು ನಾನು ನಂಬುವುದಿಲ್ಲ.

೫ ಭಗವಾನ್ ಬುದ್ಧ ವಿಷ್ಣುವಿನ ಅವತಾರವೆಂಬುದನ್ನು ನಾನು ನಂಬುವುದಿಲ್ಲ ಮತ್ತು ಇನ್ನು ಮುಂದೆಯೂ ನಂಬುವುದಿಲ್ಲ. ಇದು ಒಂದು ಕುಚೋದ್ಯದ ಮತ್ತು ಸುಳ್ಳು ಪ್ರಚಾರವೆಂದು ನನ್ನ ನಂಬಿಕೆ.

೬.ನಾನು ಶ್ರಾದ್ಧವನ್ನು ಮಾಡುವುದಿಲ್ಲ, ಅಲ್ಲದೆ ಪಿಂಡಪ್ರದಾನವನ್ನು ಮಾಡುವುದಿಲ್ಲ.

೭.ಬುದ್ಧನ ಬೋಧನೆಗಳಿಗೆ, ಮತ್ತು ನೀತಿನಿಯಮಗಳಿಗೆ ವಿರುದ್ಧವಾಗಿ ನಾನು ಯಾವುದೇ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ.

೮.ನಾನು ಬ್ರಾಹ್ಮಣರ ಮೂಲಕ ಯಾವುದೇ ಧಾರ್ಮಿಕ ಸಮಾರಂಭವನ್ನು ಮಾಡುವುದಿಲ್ಲ

೯. ಮಾನವರಲ್ಲಿ ಸಮಾನತೆಯನ್ನು ನಾನು ನಂಬುತ್ತೇನೆ

೧೦.ನಾನು ಸಮಾನತೆಯನ್ನು ತರಲು ಶ್ರಮಿಸುತ್ತೇನೆ

೧೧.ಬುದ್ಧನು ಬೋಧಿಸಿದ ಅಷ್ಟ ಪಥಗಳನ್ನು ನಾನು ಅನುಸರಿಸುತ್ತೇನೆ. .

೧೨.ಬುದ್ಧನು ಸ್ಪಷ್ಟವಾಗಿ ಹೇಳಿದ ದಶ ಪರಮಿತಗಳನ್ನು ಅನುಸರಿಸುತ್ತೇನೆ

೧೩. ಎಲ್ಲ ಜೀವಿಗಳನ್ನು ನಾನು ದಯೆ/ಕರುಣೆಯಿಂದ ಕಾಣುತ್ತೇನೆ ಅವುಗಳನ್ನು ಜತನದಿಂದ ಕಾಪಾಡುತ್ತೇನೆ.

೧೪. ನಾನು ಕಳ್ಳತನವನ್ನು ಮಾಡುವುದಿಲ್ಲ.

೧೫. ನಾನು ಸುಳ್ಳನ್ನು ಹೇಳುವುದಿಲ್ಲ

೧೬. ನಾನು ಲೈಂಗಿಕ ಪಾಪಗಳನ್ನು ಮಾಡುವುದಿಲ್ಲ

೧೭. ನಾನು ಮದ್ಯಪಾನ ಮಾಡುವುದಿಲ್ಲ

೧೮. ಬೌದ್ಧ ಮತದ ಮೂರು ತತ್ವಗಳಾದ, ಪ್ರಜ್ಞ, ಶೀಲ, ಮತ್ತು ಕರುಣ, ಇವುಗಳಿಗೆ ಅನುಸಾರವಾಗಿ ಜೀವನವನ್ನು ಮಾಡಲು ಶ್ರಮಿಸುತ್ತೇನೆ

೧೯. ನಾನು ನನ್ನ ಹಳೆಯ ಹಿಂದೂ ಧರ್ಮವನ್ನು ತ್ಯಜಿಸಿ, ಈ ಮೂಲಕ ಬೌದ್ಧ ಧರ್ಮವನ್ನು ಒಪ್ಪಿಕೊಳ್ಳುತ್ತ್ತೇನೆ. ಹಿಂದೂ ಧರ್ಮ ಮಾನವರ ಪುರೋಭಿವೃದ್ಧಿಗೆ ಹಾನಿಕಾರಕವಾಗಿದ್ದು ಮಾನವ ಜೀವಿಗಳ ಮಧ್ಯೆ ತಾರತಮ್ಯ ಮಾಡುವುದಲ್ಲದೆ ಅವರನ್ನು ಕೀಳಾಗಿ ನಡೆಸಿಕೊಳ್ಳುತ್ತದೆ.

೨೦. ಬುದ್ಧ ಧರ್ಮವೇ ಸದ್ಧರ್ಮವೆಂದು ಧೃಡವಾಗಿ ನಂಬುತ್ತೇನೆ.

೨೧. ನಾನು ನವ ಜೀವನವವನ್ನು ಪ್ರವೇಶಿಸುತ್ತಿದ್ದೇನೆಂದು ನಂಬುತ್ತೇನೆ

೨೨. ಈ ನಂತರದಲ್ಲಿ, ಬುದ್ಧನ ಬೋಧನೆಗಳಿಗೆ ಅನುಸಾರವಾಗಿ ನಡೆದುಕೊಳ್ಳುತ್ತೇನೆ ಎಂದು ಭರವಸೆ ಕೊಡುತ್ತೇನೆ.

ತದನಂತರದಲ್ಲಿ ಅಖಿಲ ಭಾರತ ಮಹಾಬೋಧಿ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ವಾಲಿ ಸಿಂಹರವರು ಡಾ: ಅಂಬೇಡ್ಕರ್ ಅವರಿಗೆ ಬುದ್ಧನ ಪ್ರತಿಮೆಯೊಂದನ್ನು ಉಡುಗೊರೆಯಾಗಿ ಕೊಟ್ಟರು.

ಬೌದ್ಧ ಧರ್ಮವನ್ನು ಸ್ವೀಕರಿಸಿದ ಪ್ರಮುಖರಲ್ಲಿ, ಬ್ಯಾರಿಸ್ಟರ್ ಬಿ.ಡಿ ಉರುಫ್ ರಾಜ್ ಬಾಬು ಖೋಬರ್ಗಡೆ, ಪ್ರಧಾನ ಕಾರ್ಯದರ್ಶಿ, ಪರಿಶಿಶಿಷ್ಟ ಜಾತಿಗಳ ಫೆಡರೇಶನ್: ಬಿ.ಕೆ. ಉರುಫ್ ದಾದಾ ಸಾಹೇಬ್ ಗಾಯಕ್ವಾಡ್, ಅಧ್ಯಕ್ಷರು, ಬೊಂಬಾಯಿ ರಾಜ್ಯದ ಫೆಡರೇಶನ್ ಅಧ್ಯಕ್ಷರು: ಆರ್.ಡಿ ಭಂಡಾರೆ,

ಅಧ್ಯಕ್ಷರು, ಬೊಂಬಾಯಿ ಪ್ರಾದೇಶಿಕ ಫೆಡರೇಶನ್: ಶಾಂತಾ ಬಾಯಿ ದಾನೆ, ಸಿ.ಎನ್. ಮೋಹಿತೆ, ಜಿ.ಟಿ ಪಾರ್ಮಾರ್, ಅಧ್ಯಕ್ಷರು ಗುಜರಾತ್ ಶಾಖೆ, ಫೆಡರೇಷನ್: ಕೆ.ಕೆ. ಪಾರ್ಮಾರ್, ಡಿ.ಜಿ. ಜಾಧವ್, ಸರೋಜಿನಿ ಜಾಧವ್, ವಿ.ಆರ್.ರನ್ಪಿಸೆ, ಪುಣೆ; ಎಮ್.ಎಮ್. ಸಾಸಲೇಕರ್, ಹರಿದಾಸ್ ಅವಾಲೆ, ಸದಾನಂದ್ ಪುರ್ಳ್ಲೀಲೆ, ಅಹೋತೆ, ವಿ.ಎಸ್.ಪಗಾರೆ, ಎಸ್.ಎ. ಉಪ್ಶ್ಯಾಮ್, ಬಿ.ಎಸ್. ಮೋರೆ, ಬಿ.ಎಚ್.ವರಾಳೆ, ಧೋಂಡಿರಾಮ್ ಪಗಾರೆ, ಯಶ್ವಂತ್ ರಾವ್ ಅಂಬೇಡ್ಕರ್, (ಡಾ: ಬಿ. ಆರ್.ಅಂಬೇಡ್ಕರ್ ಅವರ ಮಗ) ಮುಕುಂದ್ ರಾವ್ ಅಂಬೇಡ್ಕರ್, ಬಿ.ಸಿ. ಕಾಂಬ್ಳೆ ಇತ್ಯಾದಿ.

ಇದೇ ಸಂದರ್ಭದಲ್ಲಿ ಉನ್ನತ ಜಾತಿಯ ಹಿಂದೂಗಳಾದ, ನ್ಯಾಯ ಮೂರ್ತಿ ಭವಾನಿ ಶಂಕರ್ ನಿಯೋಗಿ, ಶ್ರೀ ವಿ.ಎಮ್. ಕುಲಕರ್ಣಿ, ಕಾರ್ಯ ದರ್ಶಿ ಬೌದ್ಧ ಸಮಿತಿ; ಶ್ರೀ ಬಿ.ಎಮ್ ಚಿಟ್ನಿಸ್, ಪ್ರಾಂಶುಪಾಲರು, ಮಿಲಿಂಡ್ ಕಾಲೇಜ್, ಔರಂಗಾಬಾದ್: ಶ್ರೀ ಬಿ.ಎಸ್. ಕಬೀರ್, ಇವರೂ ಸಹ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು.

ಮತಾಂತರ ಸಮಾರಂಭ ಮುಗಿದ ಮೇಲೆ, ಡಾ: ಬಿ.ಆರ್. ಅಂಬೇಡ್ಕರ್ ಅವರಿಗೆ ಅನೇಕ ಮೆಚ್ಚುಗೆಯ ಸಂದೇಶಗಳು ಬಂದಿದ್ದವು; ಅವುಗಳನ್ನು ಓದಲಾಯಿತು. ಸಂದೇಶಗಳನ್ನು ಕಳುಹಿಸಿದವರಲ್ಲಿ, ಯು.ಬಿ. ಸ್ವೆ, ಪ್ರಧಾನ ಮಂತ್ರಿಯವರು, ಬರ್ಮ; ಯೂ ನೂ, ಮಾಜಿ ಪ್ರಧಾನಿಗಳು, ಬರ್ಮ, ಎಚ್. ಡಬ್ಲ್ಯು ಅಮರಸೂರಿಯ, ಕೊಲಂಬೋ, ಕಲ್ಕತ್ತಾದಿಂದ ಡಾ: ಅರವಿಂದ್ ಬರುವಾ, ರಂಗೂನಿನಿಂದ ಮಹಾತೆರೋ ಯು–ಪನ್ನಲೋಕ್ ಇತ್ಯಾದಿಗಳವರು ಇದ್ದರು. ಕಾರ್ಯಕ್ರಮ ಬೆಳ್ಗಿನ ೧೧ ಗಂಟೆಗೆ ಮುಗಿಯಿತು.

೧೪ನೇ ಅಕ್ಟೋಬರ್ ಸಾಯಂಕಾಲದಲ್ಲಿ 'ಯುಗ ಯಾತ್ರ' ಎಂಬ ನಾಟಕವನ್ನು ಔರಂಗಾಬಾದಿನ ಮಿಲಿಂದ್ ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸಿದರು.

**ಡಾ: ಅಂಬೇಡ್ಕರ್ ಅವರು ತಮ್ಮ ಮತಾಂತರದ ಸಂದರ್ಭದಲ್ಲಿ ೧೪ನೇ ಅಕ್ಟೋಬರ್ ೧೯೫೬ ನೇಣ ತಾರೀಖು ಮರಾಠಿಯಲ್ಲಿ ಮಾಡಿದ ಭಾಷಣ:**

ಅವರು ಹೇಳಿದ್ದು:

ನನ್ನ ಎಲ್ಲಾ ಬೌದ್ಧ ಸ್ನೇಹಿತರೇ ಮತ್ತು ಉಪಸ್ಥಿತರಿರುವ ಆಹ್ವಾನಿತರೇ,

ನೆನ್ನೆ ಮತ್ತು ಈ ದಿನ ನಡೆದ ಮತಾಂತರದ (ದೀಕ್ಷಾ) ಸಮಾರಂಭ ನಡೆದ ಸ್ಥಳದ ಮಹತ್ವವನ್ನು ತಿಳಿದುಕೊಳ್ಳುವುದಕ್ಕೆ ಚಿಂತಕರಿಗೆ ಬಹುಶಃ ಕಷ್ಟವಾಗಿರಬಹುದು. ಅವರ ಮತ್ತು ನನ್ನ ಅಭಿಪ್ರಾಯದಲ್ಲೂ ಸಹ ನಿನ್ನೆ ನಡೆದ ಸಮಾರಂಭ ಈ ದಿನ ನಡೆಸಬೇಕಾಗಿತ್ತು ಮತ್ತು ಈ ದಿನದ್ದು ನಿನ್ನೆ. ನಾವು ಈ ಹೊಣೆಗಾರಿಕೆಯನ್ನು ಏತಕ್ಕೆ ಹೆಗಲಮೇಲೆ ಹೊತ್ತಿದ್ದೇವೆ, ಅದರ ಅವಶ್ಯಕತೆ ಏನಾಗಿತ್ತು ಮತ್ತು ಅದರ ಫಲಿತಾಂಶ ಏನಾಗುತ್ತದೆ ಎಂದು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ. ಇದನ್ನು ಅರ್ಥ ಮಾಡಿಕೊಳ್ಳುವುದರಿಂದ ನಮ್ಮ ಧ್ಯೇಯದ ಅಡಿಪಾಯ ಬಲವಾಗುತ್ತದೆ. ಈ ಅರ್ಥ ಮಾಡಿಕೊಳ್ಳುವ ವಿಧಾನ ಇದಕ್ಕೆ ಮುಂಚೆಯೇ ಆಗಬೇಕಾಗಿತ್ತು. ಆದರೆ ಕೆಲವು ವಿಷಯಗಳು ಅನಿಶ್ಚಿತತೆಯಾಗಿಯೇ ಉಳಿದುಕೊಂಡಿದ್ದು ತಂತಾನೇ ಸಂಭವಿಸಿಬಿಡುತ್ತವೆ. ಈ ಸಮಾರಂಭದ ಬಗ್ಗೆ ಆಗಬೇಕಾದದ್ದು ಆಗಿ ಹೋಯಿತು. ಆದರೂ ಸಮಾರಂಭದ ದಿನಗಳು ಅದಲು ಬದಲಾಗಿದ್ದರೂ, ಯಾವ ನಷ್ಟವೂ ಆಗಲಿಲ್ಲ.

ಈ ಸಮಾರಂಭವನ್ನು ಆಚರಿಸುವುದಕ್ಕೆ ನೀವೇಕೆ ನಾಗಪುರವನ್ನು ಆಯ್ದುಕೊಂಡಿರಿ ಎಂದು ಅನೇಕರು ಕೇಳಿದರು. ಈ ಸಮಾರಂಭವನ್ನು ಬೇರೆ ಯಾವುದೇ ಸ್ಥಳದಲ್ಲಿ ಏತಕ್ಕೆ ಮಾಡಲಿಲ್ಲ? ನಾಗಪುರದಲ್ಲಿ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದೊಡ್ಡ ದಳ ಇರುವುದರಿಂದ ಅವರಿಗೆ ಮುಜುಗರವನ್ನು ಮಾಡುವುದಕ್ಕೆ ಈ ಸಮಾರಂಭವನ್ನು ಇಲ್ಲಿ ಆಚರಿಸಲಾಯಿತು ಎಂದು ಕೆಲವರು ಹೇಳುತ್ತಾರೆ. ಅದು ಖಂಡಿತ ನಿಜವಲ್ಲ. ಈ ಕಾರಣಕ್ಕಾಗಿ ಈ ಸಮಾರಂಭವನ್ನು ನಾಗಪುರದಲ್ಲಿ ಆಚರಿಸಲಿಲ್ಲ. ನಮ್ಮ ಧ್ಯೇಯ ಎಷ್ಟು ಅಗಾಧವಾಗಿದೆಯೆಂದರೆ, ನಮ್ಮ ಜೀವನದ ಪ್ರತಿ ನಿಮಿಷವೂ ನಮಗೆ ಬೇಕಾಗುತ್ತದೆ.. ಬೇರೊಬ್ಬರಿಗೆ ಅಪಶಕುನ ಮಾಡುವುದಕ್ಕಾಗಿ ನನ್ನ ಮೂಗನ್ನು ಕೆರೆದುಕೊಳ್ಳುವುದಕ್ಕೆ ನನಗೆ ಸಮಯವಿಲ್ಲ.

ಈ ಜಾಗವನ್ನು ಆಯ್ದುಕೊಂಡಿದ್ದರ ಕಾರಣ ಬೇರೆಯೇ ಆಗಿದೆ. ಬೌದ್ಧ ಚರಿತ್ರೆಯನ್ನು ಅಧ್ಯಯನ ಮಾಡಿದವರಿಗೆ ಭಾರತದಲ್ಲಿ ಬೌದ್ಧ ಮತವನ್ನು ಹರಡಿದವರು 'ನಾಗ್' ಜನಗಳು ಎಂದು ತಿಳಿಯುತ್ತದೆ. ನಾಗ್ ಜನಗಳು ಆರ್ಯನ್ನರ ಕಡು ವೈರಿಗಳಾಗಿದ್ದರು. ಆರ್ಯನ್ನರ ಮತ್ತು ಆರ್ಯನ್ನರಲ್ಲದವರ ಮಧ್ಯೆ ಅನೇಕ ಘೋರ ಕಾಳಗಗಳು ನಡೆದವು. ಆರ್ಯನ್ನರು ನಾಗಾಗಳನ್ನು ಸುಟ್ಟು ಹಾಕಿದರು ಎಂಬುದಕ್ಕೆ ಪುರಾಣಗಳಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಅಗಸ್ತ್ಯ ಋಷಿ ಒಬ್ಬನೇ ಒಬ್ಬ ನಾಗನನ್ನು ಕಾಪಾಡಲು ಸಾಧ್ಯವಾಯಿತು. ಆ ನಾಗನ ವಂಶದವರೇ ನಾವು. ದಬ್ಬಾಳಿಕೆಯನ್ನು ಸಹಿಸಿಕೊಂಡ ನಾಗಾಗಳಿಗೆ ತಮ್ಮನ್ನು ಉದ್ಧಾರ ಮಾಡುವುದಕ್ಕೆ ಒಬ್ಬ ಮಹಾನ್ ಪುರುಷ ಬೇಕಾಗಿದ್ದು, ಆ ಮನುಷ್ಯನನ್ನು ಅವರು ಭಗವಾನ್ ಗೌತಮ ಬುದ್ಧನಲ್ಲಿ ಕಂಡರು. ನಾಗಾಗಳು ಗೌತಮ ಬುದ್ಧನ ಬೋಧನೆಗಳನ್ನು ಭಾರತದುದ್ದಕ್ಕೂ ಪ್ರಸಾರ ಮಾಡಿದರು. ಅಂಥ ನಾಗಾಗಳು ನಾವು. ನಾಗಾ ಜನಗಳ ಮುಖ್ಯ ವಾಸಸ್ಥಳ ನಾಗಪುರದಲ್ಲಿ ಮತ್ತು ಸುತ್ತ ಮುತ್ತ ಸ್ಥಳಗಳಲ್ಲಿ ಇದ್ದಿತು. ಆದ್ದರಿಂದಲೇ ಈ ಪಟ್ಟಣವನ್ನು ನಾಗಪುರ ಎಂದು ಕರೆಯಲಾಗಿದೆ.. ಈ ಸ್ಥಳದಿಂದ ಸುಮಾರು ೨೭ ಮೈಲಿ ದೂರದಲ್ಲಿ ನಾಗಾರ್ಜುನ ಬೆಟ್ಟ ಇದೆ. ಹತ್ತಿರದಲ್ಲಿ ಹರಿಯುತ್ತಿರುವ ನದಿ ನಾಗ್ ನದಿ.

ಸ್ವಯಂ ವೇದ್ಯವಾಗುವ ಹಾಗೆ ಆ ನದಿಗೆ ಆ ಹೆಸರು ಬಂದಿದ್ದು ಆ ಜನಗಳು ಅಲ್ಲಿ ವಾಸಿಸುತ್ತಿದ್ದರಿಂದ. ನಾಗಾ ಜನಗಳು ವಾಸಿಸುತ್ತಿರುವ ಸ್ಥಳದ ಮೂಲಕ ಹಾದು ಹೋಗುತಿರುವ ನದಿಯೇ ನಾಗಾ ನದಿ. ಈ ಸ್ಥಳವನ್ನು 'ನಾಗಪುರವನ್ನು' ಆರಿಸಿಕೊಂಡಿದ್ದಕ್ಕೆ ಇದೇ ಮುಖ್ಯವಾದ ಕಾರಣ. ಯಾರನ್ನೂ ರೇಗಿಸುವ ಪ್ರಶ್ನೆಯೇ ಇಲ್ಲ, ಉದ್ದೇಶವೂ ಇಲ್ಲ. R.S.S. ನ ಕಾರಣ ನನ್ನ ಮನಸ್ಸನ್ನು ಮುಟ್ಟಲೇ ಇಲ್ಲ. ಯಾರೇ ಆಗಲೀ ಆ ರೀತಿಯಲ್ಲಿ ಅದನ್ನು ಅರ್ಥೈಸಬಾರದು.

ವಿರೋಧ ಬಹುಶಃ ಬೇರೆ ಕಾರಣಗಳಿಗಾಗಿ ಇರಬಹುದು. ಈ ಸ್ಥಳವನ್ನು ಆರಿಸಿಕೊಂಡಿದ್ದು ವೈರತ್ವದ ಕಾರಣದಿಂದ ಅಲ್ಲ ಎಂದು ಆಗಲೇ ವಿವರಣೆ ಕೊಟ್ಟಿದ್ದೇನೆ. ಆನೇಕ ಜನಗಳು ಮತ್ತು ವರ್ತಮಾನ ಪತ್ರಿಕೆಗಳು ಇದನ್ನು ಇಲ್ಲಿ ಪ್ರಾರಂಭಿಸಿದ್ದಕ್ಕೆ ನನ್ನನ್ನು ಟೀಕೆ ಮಾಡಿದ್ದಾರೆ. ಕೆಲವರ ಟೀಕೆಯಂತೂ ಬಹಳ ಕಟುವಾಗಿದೆ. ನನ್ನ ಬಡ ಅಸ್ಪೃಶ್ಯರನ್ನು ನಾನು ದಾರಿ ತಪ್ಪಿಸುತ್ತಿದ್ದೇನೆಂದು. ಅವರ ಅಭಿಪ್ರಾಯ. ನಮ್ಮಲ್ಲಿ ಕೆಲವರನ್ನು ಅವರು ತಪ್ಪು ದಾರಿಗೆ ಎಳೆಯುತ್ತಿದ್ದಾರೆ; ಈ ದಿನ ಅಸ್ಪೃಶ್ಯರಾಗಿರುವವರು ಅಸ್ಪೃಶ್ಯರಾಗಿಯೇ ಉಳಿಯುತ್ತಾರೆ. ಅವರಿಗೆ ಇರುವ ಹಕ್ಕುಗಳನ್ನು ನೀವು ಕಳೆದುಕೊಳ್ಳುತ್ತೀರೆಂದು ಹೇಳುತ್ತಿದ್ದಾರೆ. ನಮ್ಮಲ್ಲಿ ಕೆಲವರು ಅನಕ್ಷರಸ್ಥರಿಗೆ ಪಾರಂಪರಿಕ ದಾರಿಯಲ್ಲೇ ಹೋಗಬೇಕೆಂದು ಸಲಹೆ ಕೊಡುತ್ತಿದ್ದಾರೆ. ಇದು ನಮ್ಮಲ್ಲಿ ಕೆಲವು ಯುವಕರನ್ನು ಮತ್ತು ಹಿರಿಯರನ್ನು ಪ್ರಭಾವಿತಗೊಳಿಸುತ್ತಿರಬಹುದು.

ಅದರಿಂದಾಗಿ ಜನಗಳ ಮನಸ್ಸಿನಲ್ಲಿ ಸಂಶಯ ಮೂಡಿದ್ದರೆ, ಅದನ್ನು ನಿವಾರಿಸುವುದು ನಮ್ಮ ಕರ್ತವ್ಯವಾಗಿದೆ. ಹಾಗೆ ನಿವಾರಿಸುವುದರಿಂದ ನಮ್ಮ ಚಳುವಳಿಯ ಬುನಾದಿಯನ್ನು ಅದು ಬಲಪಡಿಸುತ್ತದೆ.

ಹಿಂದೆಲ್ಲಾ ಮಾಂಸವನ್ನು ತಿನ್ನಬಾರದೆಂದು ನಮ್ಮದೊಂದು ಚಳುವಳಿಯಿತ್ತು. ಸ್ಪೃಶ್ಯರು ಅದನ್ನು

ತಮಗೆ ಬಡಿದ ಸಿಡಿಲು ಎಂದು ಭಾವಿಸಿದರು. ಅವರು ಬದುಕಿರುವ ಎಮ್ಮೆಯ ಹಾಲನ್ನು ಕುಡಿಯಬೇಕು. ಆದರೆ ನಾವು ಆ ಎಮ್ಮೆ ಸತ್ತರೆ ಅದನ್ನು ಹೊತ್ತುಕೊಂಡು ಹೋಗಬೇಕು ಎನ್ನುವುದು ಒಂದು ವಿಚಿತ್ರವಾದ ಆಚರಣೆಯಲ್ಲವೆ? ನೀವೇಕೆ ನಿಮ್ಮ ಸತ್ತ ತಾಯಿಯನ್ನು ಹೊತ್ತುಕೊಂಡು ಹೋಗುವುದಕ್ಕೆ ಬಿಡುವುದಿಲ್ಲ ಎಂದು ನಾವು ಅವರನ್ನು ಕೇಳುತ್ತೇವೆ. ನಮಗೆ ತಮ್ಮ ಸತ್ತ ಎಮ್ಮೆಯನ್ನು ಕೊಡುವ ಹಾಗೆ ಅವರು ನಮಗೆ ತಮ್ಮ ಸತ್ತ ತಾಯಿಯನ್ನು ಕೊಡಬೇಕು. ಸ್ವಲ್ಪ ಸಮಯದ ಹಿಂದೆ, ಯಾರೋ 'ಕೇಸರಿ' ಪತ್ರಿಕೆಯಲ್ಲಿ ಬರೆದರು: ಕೆಲವು ಹಳ್ಳಿಗಳಲ್ಲಿ ಪ್ರತಿ ವರ್ಷ ೫೦ ದನಗಳು ಸಾಯುತ್ತವೆ. ಅವುಗಳ ಚರ್ಮದಿಂದ, ಕೊಂಬುಗಳಿಂದ, ಗೊರಸುಗಳಿಂದ, ಮಾಂಸದಿಂದ, ಮೂಳೆಗಳಿಂದ, ಮತ್ತು ಬಾಲಗಳಿಂದ ೫೦೦ ರೂಪಾಯಿಗಳನ್ನು ಸಂಪಾದಿಸಬಹುದೆಂದು ಬರೆದರು. ಸತ್ತ ಪ್ರಾಣಿಗಳ ಮಾಂಸದ ವಿಷಯವನ್ನು ಒತ್ತಟ್ಟಿಗಿಡಿ, ಈ ಜನಗಳು ಆ ಲಾಭದಿಂದ ವಂಚಿತರಾಗುತ್ತಾರೆ ಎಂದರು. ಇಂಥ ಪ್ರಚಾರವನ್ನು 'ಕೇಸರಿ' ಪತ್ರಿಕೆಯ ಮೂಲಕ ಮಾಡಲಾಯಿತು. ನಿಜವಾಗಿ ಹೇಳುವುದಾದರೆ, ಇಂಥ ಅಪಪ್ರಚಾರಕ್ಕೆ ಉತ್ತರ ಕೊಡುವ ಅವಶ್ಯಕತೆ ಏನಿದೆ? ಇಂಥ ಪ್ರಚಾರಕ್ಕೆ ಉತ್ತರ ಕೊಡದಿದ್ದರೆ, ನಮ್ಮ ನಾಯಕ ಏನು ಮಾಡುತ್ತಿದ್ದಾನೆಂದು ನಮ್ಮ ಜನ ಭಾವಿಸಿದರು.

ಒಮ್ಮೆ ನಾನು ಸಂಗಮನೇರಿಗೆ ಒಂದು ಮೀಟಿಂಗಿಗಾಗಿ ಹೋಗಿದ್ದೆ. ಭೋಜನಕ್ಕೆ ವ್ಯವಸ್ಥೆಯನ್ನು ಮಾಡಲಾಗಿತ್ತು. ಆಗ 'ಕೇಸರಿ' ಪತ್ರಿಕೆಯ ವರದಿಗಾರನೊಬ್ಬ ನನಗೊಂದು ಚೀಟಿ ಕಳುಹಿಸಿದ: 'ನೀವು ನಿಮ್ಮ ಜನಗಳಿಗೆ ಸತ್ತ ಪ್ರಾಣಿಗಳನ್ನು ಹೊರಬೇಡಿ ಎಂದು ಸಲಹೆ ಕೊಡುತ್ತೀದ್ದೀರ. ಅವರು ಎಷ್ಟು ಬಡವರಾಗಿದ್ದಾರೆ' ಎಂದು ಚೀಟಿಯಲ್ಲಿ ಬರೆದಿದ್ದ. 'ನಿಮ್ಮ ಹೆಂಗಸರಿಗೆ ಉಡುವುದಕ್ಕೆ ಸೀರೆ, ಕುಪ್ಪಸವಿಲ್ಲ, ಆಹಾರವಿಲ್ಲ, ಉಳುವುದಕ್ಕೆ ಹೊಲಗಳಿಲ್ಲ. ಅವರ ಸ್ಥಿತಿ ಇಷ್ಟು ಶೋಚನೀಯವಾಗಿರಬೇಕಾದರೆ, ನೀವು ಅವರಿಗೆ ಚರ್ಮಗಳಿಂದ, ಗೊರಸುಗಳಿಂದ, ಮಾಂಸದಿಂದ ಬರುವ ೫೦೦ ರೂಪಾಯಿಗಳ ಆದಾಯವನ್ನು ಬಿಟ್ಟು ಬಿಡಿ ಎನ್ನುತ್ತೀರಲ್ಲ, ಇದರಿಂದ ನಿಮ್ಮ ಜನಗಳಿಗೆ ನಷ್ಟವಾಗುವುವುದಿಲ್ಲವ" ನಾನು ಅವನನ್ನು ಕೇಳಿದೆ. ನಿನಗೆ ನಾನು ಎಲ್ಲಿ ಉತ್ತರ ಕೊಡಲಿ. ಇಲ್ಲಿ ಈ ಮೊಗಸಾಲೆಯಲ್ಲೋ, ಅಥವಾ ಮೀಟಿಂಗಿನಲ್ಲೋ. ಜನಗಳ ಮುಂದೆಯೇ ಉತ್ತರ ಕೊಡುವುದೇ ಸರಿ. ನಾನು ಆ ಮನುಷ್ಯನನ್ನು ಕೇಳಿದೆ: ನೀನು ಕೇಳಬೇಕಾದದ್ದು ಇಷ್ಟೇನೋ, ಕೇಳುವುದು ಇನ್ನೇನಾದರೂ ಇದೆಯೋ? ಅವನು ಹೇಳಿದ: ನಾನು ಕೇಳುವುದಿಷ್ಟೆ, ಅದಕ್ಕೆ ಉತ್ತರ ಕೊಟ್ಟರೆ ಸಾಕು. ನಾನು ಆ ಮನುಷ್ಯನನ್ನು ಕೇಳಿದೆ: 'ನಿನಗೆ ಎಷ್ಟು ಮಕ್ಕಳಿದ್ದಾರೆ, ನೀವೆಲ್ಲ ಒಟ್ಟು ಎಷ್ಟು ಮಂದಿ ಇದ್ದೀರ' ಅವನು ಹೇಳಿದ: ನನಗೆ ಐವರು ಮಕ್ಕಳು ಇದ್ದಾರೆ, ನನ್ನ ಸಹೋದರನಿಗೆ ಐದರಿಂದ ಏಳು ಮಕ್ಕಳಿದ್ದಾರೆ. ನಾನು ಹೇಳಿದೆ: ಅಂದರೆ, ನಿನ್ನ ಸಂಸಾರ ದೊಡ್ಡದಿದೆ. ಆದ್ದರಿಂದ ನೀನು ನಿನ್ನ ಬಂಧುಗಳು ಆ ಹಳ್ಳಿಯ ಸತ್ತ ಪ್ರಾಣಿಗಳನ್ನು ಹೊರಬೇಕು. ನಿನಗೆ ೫೦೦ ರೂಪಾಯಿಯ ಆದಾಯ ಸಿಗುತ್ತದೆ.ಈ ಪ್ರಯೋಜನವನ್ನು ನೀನು ಪಡೆದುಕೊಳ್ಳಲೇಬೇಕು. ಇದರ ಜೊತೆಗೆ, ನಾನು ನಿನಗೆ ವರ್ಷಕ್ಕೆ ೫೦೦ ರೂಪಾಯಿಗಳನ್ನು ಕೊಡಲು ವ್ಯವಸ್ಥೆ ಮಾಡುತ್ತೇನೆ. ನನ್ನ ಜನಗಳಿಗೆ ಏನಾಗುತ್ತದೆ, ಅವರಿಗೆ ಆಹಾರ, ಬಟ್ಟೆ ದೊರಕುತ್ತದೆಯೋ ಇಲ್ಲವೋ ಅದನ್ನು ನಾನೇ ನೋಡಿಕೊಳ್ಳುತ್ತೇನೆ. ನೀನೇಕೆ ಈ ಪ್ರಯೋಜನವನ್ನು ಬಿಟ್ಟು ಬಿಡುತ್ತಿದ್ದೀಯ? ನಾವು ಅದನ್ನು ಮಾಡಿದರೆ ಅದು ನಮಗೆ ಪ್ರಯೋಜನ ಆಗುತ್ತದೆ, ಮತ್ತೆ ನೀನು ಅದನ್ನು ಮಾಡಿದರೆ ನಿನಗೆ ಪ್ರಯೋಜನವಾಗುವುದಿಲ್ಲವೆ 'ಸತ್ತ ಪ್ರಾಣಿಗಳನ್ನು ಹೊರು'.

ನೆನ್ನೆ ಒಬ್ಬ ಬ್ರಾಹ್ಮಣರ ಹುಡುಗ ನನ್ನ ಬಳಿ ಬಂದು ಹೇಳಿದ: 'ಸಂಸತ್ತಿನಲ್ಲಿ ಮತ್ತು ಶಾಸನ

ಸಭೆಗಳಲ್ಲಿ ನಿಮಗೆ ಮೀಸಲು ಸ್ಥಾನಗಳನ್ನು ಕೊಟ್ಟಿದ್ದಾರೆ', ಅವುಗಳನ್ನು ಏಕೆ ಕಳೆದುಕೊಳ್ಳುತ್ತಿದ್ದೀರ? ನಾನು ಅವನಿಗೆ ಹೇಳಿದೆ: ನೀವೇ ಮಹರ್ ಆಗಿ ಪಾರ್ಲಿಮೆಂಟಿನಲ್ಲಿ, ಶಾಸನ ಸಭೆಗಳಲ್ಲಿ ಆ ಖಾಲಿ ಸ್ಥಾನಗಳನ್ನು ತುಂಬಿ. ಸರ್ಕಾರಿ ಕೆಲಸಗಳೆಲ್ಲ ಭರ್ತಿಯಾಗಿ ಬಿಟ್ಟಿವೆ. ಆ ಕೆಲಸಗಳಿಗೆ ಎಷ್ಟೋ ಬ್ರಾಹ್ಮಣರು ಮತ್ತು ಇತರರು ಅರ್ಜಿ ಹಾಕುತ್ತಾರೆ. ನೀವು ಬ್ರಾಹ್ಮಣರು, ಮಹರ್‌ಗಳಾಗಿ ಬಿಟ್ಟು ಆ ಮೀಸಲಿಟ್ಟ ಸ್ಥಾನಗಳನ್ನುಏಕೆ ಭರ್ತಿ ಮಾಡಬಾರದು?

ಅವರಿಗೆ ನನ್ನ ಪ್ರಶ್ನೆ, ನೀವೇಕೆ ನಮಗೆ ಆಗುವ ನಷ್ಟಗಳಿಗೆ ಅಳುತ್ತೀರ?. ವಾಸ್ತವದಲ್ಲಿ ಒಬ್ಬ

ಮಾನವ ಜೀವಿಗೆ ಆತ್ಮ ಗೌರವ ಮುಖ್ಯವೇ ಹೊರತು, ಪ್ರಾಪಂಚಿಕ ಪ್ರಯೋಜನಗಳಲ್ಲ. ಸೌಶೀಲ್ಯ,,ಸನ್ನಡತೆ ಇರುವ ಒಬ್ಬ ಸ್ತ್ರೀಗೆ, ನೀತಿಯುತ ನಡತೆ ಎಷ್ಟು ಪ್ರಯೋಜನವೆಂದು ಗೊತ್ತು. ನಮ್ಮ ಬೊಂಬಾಯಿಯಲ್ಲಿ, ಸೂಳೆಯರಿಗೇ ಒಂದು ಗೊತ್ತಾದ ನೆಲೆ (locality) ಇದೆ. ಆ ಹೆಂಗಸರು ಬೆಳಗಿನ ೮ ಗಂಟೆಗೆ ಏಳುತ್ತಾರೆ. ಹತ್ತಿರದ ಹೋಟೆಲಿನಿಂದ ಬೆಳಗಿನ ತಿಂಡಿಯನ್ನು ತರಿಸಿಕೊಳ್ಳುತ್ತಾರೆ. (ಬದಲಾದ ಧ್ವನಿಯಲ್ಲಿ, ಡಾ: ಅಂಬೇಡ್ಕರ್) ಏ, ಸುಲೇಮಾನ, ಒಂದು ಪ್ಲೇಟು ಖೀಮ, ಬ್ರೆಡ್ಡು ತಾ. ಸುಲೇಮಾನ ಅದನ್ನು ಚಹಾ, ಕೇಕು ಇತ್ಯಾದಿಗಳೊಂದಿಗೆ ತರುತ್ತಾನೆ. ಆದರೆ ತುಳಿತಕ್ಕೆ ಒಳಗಾದ ನನ್ನ ಸಹೋದರಿಯರಿಗೆ ಒಂದು ಭಕರಿ, ಚಟ್ನಿ ಸಹ ಸಿಗುವುದಿಲ್ಲ. ಆದರೆ ಅವರು ಗೌರವದಿಂದ, ಸನ್ನಡತೆಯಿಂದ ಬಾಳುತ್ತಾರೆ.

ನಾವು ನಮ್ಮ ಮರ್ಯಾದೆಗಾಗಿ, ಆತ್ಮ ಗೌರವಕ್ಕಾಗಿ ಹೊಡೆದಾಡುತ್ತಿದ್ದೇವೆ. ಮಾನವ ಜೀವಿಯನ್ನು ಪರಿಪೂರ್ಣತೆಯತ್ತ ಕೊಂಡುಹೋಗಲು ಸಿದ್ಧರಾಗುತ್ತಿದ್ದೇವೆ. ಅದಕ್ಕಾಗಿ ನಾವು ಯಾವ ತ್ಯಾಗವನ್ನಾದರೂ ಮಾಡಲು ತಯಾರಿದ್ದೇವೆ. ಈ ಪೇಪರಿನವರು ನಲವತ್ತು ವರ್ಷಗಳಿಂದ ನನ್ನ ಬೆನ್ನ ಹಿಂದೆ ಬಿದ್ದಿದ್ದಾರೆ. ನನಗೆ ಆತಂಕ ಆಗುವಂತೆ ಮಾಡುತ್ತಾರೆ. ಇಲ್ಲಿಯವರೆಗೆ ಅವರು ನನ್ನನ್ನು ತೀವ್ರವಾಗಿ ಬೈದು ಅಪಮಾನಗೊಳಿಸಿದ್ದಾರೆ. ಈಗಲಾದರೂ ಸಾವಧಾನವಾಗಿ ಚಿಂತನೆ ಮಾಡಿ, ಚಿಕ್ಕ ಮಕ್ಕಳಂತೆ ವರ್ತಿಸುವುದನ್ನು ಬಿಟ್ಟು ಬಿಡಿ, ಬುದ್ಧಿವಂತರಾಗಿ.

ಬೌದ್ಧ ಮತಕ್ಕೆ ಮತಾಂತರವಾದರೂ ಸಹ, ನನಗೆ ರಾಜಕೀಯ ಹಕ್ಕುಗಳು ಸಿಗುತ್ತದೆ ಎಂಬ ಭರವಸೆ ಇದೆ. (ಬಾಬಾ ಸಾಹೇಬ್ ಅಂಬೇಡ್ಕರ್ ಎಂಬ ಕೂಗುಗಳು ಮತ್ತು ಕಿವಿಗಡಚಿಕ್ಕುವ ಚಪ್ಪಾಳೆ) ನನ್ನ ಮರಣಾಂತರ ಏನಾಗುತ್ತದೆ ಎಂದು ನಾನು ಹೇಳಲಾರೆ. ಈ ಚಳುವಳಿಗಾಗಿ ನಾವು ಇನ್ನೂ ಹೆಚ್ಚಿಗೆ ಹೆಣಗಬೇಕು. ಬೌದ್ಧ ಮತಕ್ಕೆ ಬಂದ ಮೇಲೆ ಏನಾಗುತ್ತದೆ, ಕಷ್ಟಗಳೇನಾದರೂ ಬಂದರೆ, ಅವುಗಳನ್ನು ಹೇಗೆ ನಿವಾರಿಸುವುದು? ಅದಕ್ಕೆ ಹೇಗೆ ವಾದವನ್ನು ಮಾಡಬೇಕು, ಯಾವ ಪರಿಶ್ರಮಗಳನ್ನು ಮಾಡಬೇಕು, ಇವುಗಳನ್ನು ಕುರಿತು ನಾನು ದೀರ್ಘವಾಗಿ ಆಲೋಚನೆ ಮಾಡಿದ್ದೇನೆ. ನನ್ನ ಚೀಲದ ಭರ್ತಿ ಪರಿಹಾರಗಳು ಇವೆ. (ಪ್ರತ್ಯಕ್ಷದರ್ಶಿಗಳ ಪ್ರಕಾರ ಅವರು ಚೀಲ ಎನ್ನಲಿಲ್ಲ: ನನ್ನ ಕೋಟಿನ ಜೇಬುಗಳ ತುಂಬಾ ಎಂದು ಹೇಳಿದರು) ಅವುಗಳು ಏನು ಎಂದು ನನಗೆ ಚೆನ್ನಾಗಿ ಗೊತ್ತು. ಈ ಹಕ್ಕುಗಳನ್ನು ನಾನು ನನ್ನ ಜನಗಳಿಗಾಗಿ ಪಡೆದುಕೊಂಡಿದ್ದೇನೆ. ಈ ಹಕ್ಕುಗಳನ್ನು ಪಡೆದುಕೊಂಡಿದ್ದವನು ಖಂಡಿತವಾಗಿ ಅವನ್ನು ವಾಪಸ್ ಪಡೆಯುತ್ತಾನೆ. ಆದ್ದರಿಂದ, ಈಗಲಾದರೂ ಸಹ ನೀವು ನನ್ನ ಮೇಲೆ ಇಟ್ಟ ನಂಬಿಕೆಯನ್ನು ಮುಂದುವರೆಸಿಕೊಂಡು ಹೋಗಬೇಕು. ಅಪಪ್ರಚಾರದಲ್ಲಿ ಯಾವ ಸತ್ಯವೂ ಇಲ್ಲ.

ಒಂದು ವಿಷಯಕ್ಕೆ ನನಗೆ ಆಶ್ಚರ್ಯವಾಗುತ್ತದೆ. ಎಲ್ಲೆಲ್ಲಿಯೂ ಜೋರಾಗಿ ಚರ್ಚೆ ನಡೆಯುತ್ತಿದೆ. ಆದರೆ ನನ್ನನ್ನು ಬೌದ್ಧ ಮತಕ್ಕೆ ಏತಕ್ಕೆ ಸೇರಿಕೊಂಡೆ ಎಂದು ಕೇಳಿಲ್ಲ. ಈ ಮತಕ್ಕೇ ಏಕೆ ಸೇರಿಕೊಂಡೆ, ಬೇರೆ ಯಾವ ಧರ್ಮಕ್ಕೆ ಏಕೆ ಸೇರಲಿಲ್ಲ ಎಂದು ಕೇಳಲಿಲ್ಲ. ಯಾವುದೇ ಮತಾಂತರ ಮಾಡುವ ಚಳುವಳಿಯಲ್ಲಿ

ಇದೇ ಮೂಲಭೂತವಾದ ಮತ್ತು ಮುಖ್ಯವಾದ ಪ್ರಶ್ನೆ ಮತಾಂತರ ಆಗುವುದಕ್ಕೆ ಮುಂಚೆ ಅದನ್ನು ಪರೀಕ್ಷೆಗೆ ಒಳಪಡಿಸಬೇಕು: ಯಾವ ಧರ್ಮ, ಏತಕ್ಕೆ ಅದನ್ನು ಅಪ್ಪಿಕೊಳ್ಳಬೇಕು ಎಂದು.೧೯೩೫ರಲ್ಲಿ ಯೆವೋಲೆ ಠರಾವಿನಿಂದಲೇ ನಾವು ಹಿಂದೂ ಧರ್ಮವನ್ನು ತ್ಯಜಿಸುವ ಚಳುವಳಿಯನ್ನು ಪ್ರಾರಂಭಿಸಿದೆವು. ಬಹಳ ಹಿಂದೆ, ನಾನು ಪ್ರತಿಜ್ಞಾ ಮಾಡಿದ್ದೆ: ನಾನು ಹಿಂದುವಾಗಿ ಹುಟ್ಟಿದ್ದರೂ ಸಹ, ಹಿಂದುವಾಗಿ ಸಾಯುವುದಿಲ್ಲ ಎಂದು. ಅದನ್ನು ನಾನು ನೆನ್ನೆ ಸಾಧಿಸಿ ತೋರಿಸಿದೆ. ನನಗೆ ಮಹದಾನಂದವಾಗಿದೆ, ನಾನು ಉಚ್ಚನಾಗಿದ್ದೇನೆ. ನರಕದಿಂದ ನನ್ನ ಬಿಡುಗಡೆ ಆಗಿದೆ. ನನಗೆ ಕುರುಡು ಅನುಯಾಯಿಗಳು ಬೇಕಾಗಿಲ್ಲ. ಬೌದ್ಧ ಮತಕ್ಕೆ ಸೇರಬಯಸುವವರು ಅದನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಒಪ್ಪಿಕೊಳ್ಳಬೇಕು. ಅವರ ಆತ್ಮ ಸಾಕ್ಷಿ ಆ ಧರ್ಮವನ್ನು ಒಪ್ಪಿ ಕೊಳ್ಳಬೇಕು. ಮಾನವಕುಲದ ಬೆಳವಣಿಗೆಗಾಗಿ ಧರ್ಮ ಅತ್ಯವಶ್ಯಕವಾಗಿದೆ. ಕಾರ್ಲ್ ಮಾರ್ಕ್ಸ್ ನನ್ನು ಓದಿದ ಮೇಲೆ ಒಂದು ಪಂಥ ಅಸ್ತಿತ್ವಕ್ಕೆ ಬಂದಿತು ಎಂದು ನನಗೆ ಗೊತ್ತು. ಅವರ ಪ್ರಕಾರ ಧರ್ಮ ಎನ್ನುವುದು ನಿರರ್ಥಕ. ಅವರಿಗೆ ಧರ್ಮದ ಪ್ರಾಮುಖ್ಯ ಇಲ್ಲ.ಬೆಳಗಿನ ಹೊತ್ತಿನಲ್ಲಿ ಅವರಿಗೆ, ಬ್ರೆಡ್ಡು, ಕೆನೆ, ಬೆಣ್ಣೆ, ಕೋಳಿಮರಿಯ ಕಾಲು ಎಲ್ಲಾ ಇರುವ ಉಪಾಹಾರ ಸಿಗುತ್ತದೆ.; ಆಮೇಲೆ ಮಲಗುತ್ತಾರೆ, ಸಿನಿಮಾಗೆ ಹೋಗುತ್ತಾರೆ; ಮತ್ತೆ ಅಷ್ಟೇ. ಅದೇ ಅವರ ವೇದಾಂತ, ತತ್ವ. ನನಗೆ ಆ ಅಭಿಪ್ರಾಯ ಇಲ್ಲ. ನನ್ನ ತಂದೆ ಬಡವರಾಗಿದ್ದರು. ಇಂಥ ಐಷಾರಾಮಿ ಬದುಕು ನನಗೆ ಸಿಗಲಿಲ್ಲ. ನನ್ನ ಹಾಗೆ ಕಷ್ಟದ ಜೀವನವನ್ನು ಯಾರೂ ಜೀವಿಸಿಲ್ಲ. ಐಷಾರಾಮ ಇಲ್ಲದಿದ್ದರೆ ಒಬ್ಬ ಮನುಷ್ಯನ ಜೀವನ ಎಷ್ಟು ಕಷ್ಟಕರವಾದದ್ದೆಂದು ನನಗೆ ಸಾಕ್ಷಾತ್ಕಾರ ಆಗಿದೆ. ಆರ್ಥಿಕ ಔನ್ನತ್ಯಕ್ಕೆ ಚಳುವಳಿ ಮಾಡಬೇಕಾದ ಅವಶ್ಯಕತೆ ಇದೆ ಎಂದು ನನಗೆ ಗೊತ್ತು ನಾನೇನೂ ಆ ಚಳುವಳಿಯ ವಿರುದ್ಧ ಇಲ್ಲ. ಮನುಷ್ಯ ಆರ್ಥಿಕವಾಗಿ ಮುಂದುವರೆಯಲೇ ಬೇಕು.

ಆದರೆ ನಾನು ಈ ವಿಷಯದಲ್ಲಿ ಒಂದು ಮುಖ್ಯವಾದ ಭೇದವನ್ನು ಮಾಡುತ್ತೇನೆ. ಎಮ್ಮೆ, ಎತ್ತು ಮತ್ತು ಮನುಷ್ಯನ ಮಧ್ಯೆ ವ್ಯತ್ಯಾಸ ಇದೆ. ಎಮ್ಮೆ ಮತ್ತು ಎತ್ತಿಗೆ ಹುಲ್ಲಿನ ಮೇವು ಪ್ರತಿದಿನ ಬೇಕು. ಮನುಷ್ಯನಿಗೂ ಸಹ ಆಹಾರ ಬೇಕಾಗುತ್ತದೆ. ಆದರೆ ಇವೆರಡರ ಮಧ್ಯೆ ಇರುವ ವ್ಯತ್ಯಾಸವೆಂದರೆ ಎಮ್ಮೆಗೂ ಮತ್ತು ಎತ್ತಿಗೂ ಮನಸ್ಸು ಎಂಬುದಿಲ್ಲ.; ಮನುಷ್ಯನಿಗೆ ಶರೀರ ಮತ್ತು ಮನಸ್ಸು ಎರಡೂ ಇದೆ. ಆದುದರಿಂದ ಎರಡರ ಮೇಲೂ ಪರ್ಯಾಲೋಚಿಸಬೇಕು. ಮನಸ್ಸಿನ ಬೆಳವಣಿಗೆ ಆಗಬೇಕು. ಮನಸ್ಸಿಗೆ ಸಂಸ್ಕಾರ ಆಗಬೇಕು. ಅದನ್ನು ಸಂಸ್ಕಾರವಾಗುವಂತೆ ಮಾಡಲೇಬೇಕು. ಮನುಷ್ಯನ ಮತ್ತು ಸಂಸ್ಕಾರ ಹೊಂದಿದ ಮನಸ್ಸಿನ ನಡುವೆ ಆಹಾರವೊಂದನ್ನು ಬಿಟ್ಟರೆ ಯಾವ ಸಂಬಂಧವೂ ಇಲ್ಲ ಎಂದು ಹೇಳುವ ಜನರೊಂದಿಗಾಗಲೀ ಅಥವ ದೇಶದೊಂದಿಗಾಗಲೀ ಯಾವ ಸಂಬಂಧವನ್ನೂ ಇಟ್ಟುಕೊಳ್ಳಲು ನಾನು ಬಯಸುವುದಿಲ್ಲ. ಜನಗಳೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳಬೇಕಾದರೆ, ಧೃಡವಾದ ಕಾಯ ಇರಬೇಕು; ಶರೀರವನ್ನು ಆರೋಗ್ಯವಾಗಿ ಇಟ್ಟುಕೊಳ್ಳುವ ರೀತಿಯಲ್ಲೇ ಮನಸನ್ನು ಕೂಡ ಸಂಸ್ಕಾರಗೊಳಿಸಬೆಕು. ಇಲ್ಲದಿದ್ದರೆ ಮಾನವಕುಲ ಪುರೋಭಿವೃದ್ಧಿ ಆಗಿದೆ ಎಂದು ಹೇಳಲು ಬರುವುದಿಲ್ಲ.

ಮನುಷ್ಯನ ದೇಹ ಅಥವಾ ಮನಸ್ಸು ಏಕೆ ಕೆಟ್ಟಿದೆ? ಕಾರಣಗಳೇನೆಂದರೆ, ಇಲ್ಲಾ ಅವನ ಶರೀರಕ್ಕೆ ರೋಗ ಬಡಿದಿದೆ, ಇಲ್ಲವೇ ಮನಸ್ಸು ಉತ್ಸಾಹವನ್ನು ಕಳೆದುಕೊಂಡಿದೆ ಎಂದು. ಮನಸ್ಸಿನಲ್ಲಿ ಉತ್ಸಾಹವಿಲ್ಲದಿದ್ದರೆ, ಮುನ್ನಡೆ ಇಲ್ಲ. ಈ ಉತ್ಸಾಹವೇಕೆ ಇಲ್ಲ? ಮೊದಲನೆಯ ಕಾರಣವೆಂದರೆ, ಆ ಮನುಷ್ಯನನ್ನು ಯಾವರೀತಿ ಇಡಲಾಗಿದೆಯೆಂದರೆ ಅವನಿಗೆ ಯಾವ ಅವಕಾಶವೂ ಸಿಗುವುದಿಲ್ಲ ಅಥವಾ ಅವನಿಗೆ ಮೇಲೇಳುವ ಯಾವ ಆಸೆಯೂ ಇಲ್ಲ.ಹಾಗಾದರೆ ಅವನಲ್ಲಿ ಉತ್ಸಾಹ ಹೇಗೆ ಉಳಿಯುತ್ತದೆ?

ಅವನು ರೋಗ ಬಡಿದವನ ಹಾಗೆಯೇ ಇರುತ್ತಾನೆ. ತನ್ನ ಪ್ರಯತ್ನಗಳ ಫಲವನ್ನು ಪಡೆಯುವವನಿಗೆ ಉತ್ಸಾಹ ಇರುತ್ತದೆ. ಶಾಲೆಯಲ್ಲಿ ಉಪಾಧ್ಯಾಯರು ಕೇಳುತ್ತಾರೆ. ಹೇ, ಯಾರಿವನು? ಅವನೊಬ್ಬ ಮಹರ್. ಈ ಹತಭಾಗ್ಯ ಮಹರ್ ಮೊದಲನೆ ದರ್ಜೆಯಲ್ಲಿ ತೇರ್ಗಡೆಯಾಗುತ್ತಾನೆಯೆ? ಅವನಿಗೆ ಮೊದಲನೆ ದರ್ಜೆ ಬೇಕಾಗುವುದಾದರೂ ಏತಕ್ಕೆ? ಮೂರನೆ ದರ್ಜೆಯಲ್ಲಿ ಇರಲಿ. ಮೊದಲನೆ ದರ್ಜೆಯಲ್ಲಿ ತೇರ್ಗಡೆಯಾಗುವುದು ಬ್ರಾಹ್ಮಣನ ಹಕ್ಕು. ಈ ಪರಿಸ್ಥಿತಿಗಳ ಕೆಳಗೆ, ಆ ಹುಡುಗನಿಗೆ ಯಾವ ಉತ್ಸಾಹ ಸಿಗುತ್ತದೆ? ಅವನು ಹೇಗೆ ಮುಂದುವರೆಯಬಲ್ಲ? ಉತ್ಸಾಹವನ್ನು ಸೃಷ್ಟಿಸುವ ಬೇರು ಮನಸ್ಸಿನಲ್ಲಿ ಇದೆ. ಯಾರ ದೇಹ ಮತ್ತು ಮನಸ್ಸು ಆರೋಗ್ಯವಾಗಿದೆಯೋ, ಯಾರು ಧೈರ್ಯಶಾಲಿಯಾಗಿದ್ದಾರೆಯೋ, ಯಾರ ಅತ್ಮ ವಿಶ್ವಾಸ ಎಲ್ಲ ಪ್ರತಿಕೂಲ ಪರಿಸ್ಥಿತಿಗಳನ್ನು ದಾಟಬಲ್ಲದೋ, ಅವನಲ್ಲಿ ಮಾತ್ರ ಉತ್ಸಾಹ ಹುಟ್ಟುತ್ತದೆ, ಅವನು ಮಾತ್ರ ಮುಂದುವರಿಯುತ್ತಾನೆ. ಹಿಂದು ಧರ್ಮದಲ್ಲಿ ಇಂಥ ಒಂದು ವಿಚಿತ್ರವಾದ ತತ್ವವನ್ನು ಅಳವಡಿಸಲಾಗಿದೆಯೆಂದರೆ, ಅದು ಎಂದೆಂದಿಗೂ ಉತ್ಸಾಹವನ್ನು ಉಕ್ಕಿಸುವುದಿಲ್ಲ. ಮನುಷ್ಯನನ್ನು ಅನುತ್ಸಾಹಭರಿತನನ್ನಾಗಿ ಮಾಡುವ ಪರಿಸ್ಥಿತಿಗಳನ್ನು ಹೇಗೆ ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬರಲಾಗಿದೆಯೆಂದರೆ, ಅಬ್ಬಬ್ಬ ಎಂದರೆ ಇಂಥ ಜನಗಳು ಗುಮಾಸ್ತನ ಕೆಲಸವನ್ನು ಮಾಡುತ್ತಾ ಹೊಟ್ಟೆ ಹೊರೆಯುತ್ತಾರೆ. ಬೇರೆ ಇನ್ನೇನು ಆಗಲು ಸಾಧ್ಯ? ಇಂಥ ಗುಮಾಸ್ತರನ್ನು ರಕ್ಷಿಸುವುದಕ್ಕೆ ಒಬ್ಬ ದೊಡ್ಡ ಗುಮಾಸ್ತ ಬೇಕಾಗಿದೆ ಅಷ್ಟೆ.

ಮನುಷ್ಯನ ಉತ್ಸಾಹದ ಹಿಂದೆ ಮನಸ್ಸು ಇದೆ. ಗಿರಣಿಗಳ ಮಾಲಿಕರುಗಳು ನಿಮಗೆ ಗೊತ್ತು. ತಮ್ಮ ಗಿರಣಿಗಳಲ್ಲಿ ಮೇನೇಜರುಗಳನ್ನು ನೆಮಕ ಮಾಡಿ ಅವರ ಮೂಲಕ ಗಿರಣಿಯಲ್ಲಿ ಕೆಲಸ ತೆಗೆಯುತ್ತಾರೆ. ಗಿರಣಿಗಳ ಮಾಲೀಕರುಗಳಿಗೆ ಒಂದಿಲ್ಲೊಂದು ದುರಭ್ಯಾಸಗಳು ಇರುತ್ತವೆ, ಅವರ ಮನಸ್ಸು ಸಾಂಸ್ಕೃತಿಕವಾಗಿ ಬೆಳೆದಿರುವುದಿಲ್ಲ. ನಮ್ಮ ಮನಸ್ಸುಗಳಲ್ಲಿ ಉತ್ಸಾಹವನ್ನು ತುಂಬಿಸಲು ನಾವು ಒಂದು ಚಳುವಳಿಯನ್ನು ಪ್ರಾರಂಭಿಸಿದೆವು; ಆ ನಂತರದಲ್ಲಿ ಶಿಕ್ಷಣವನ್ನು ಪ್ರಾರಂಭಿಸುತ್ತಿದ್ದೆವು. ನಾನು ನನ್ನ ಶಿಕ್ಷಣವನ್ನು ಕೌಪೀನವನ್ನು ಕಟ್ಟಿಕೊಂಡು ಪ್ರಾರಂಭಿಸಿದೆ. ಪಾಠಶಾಲೆಯಲ್ಲಿ ನನಗೆ ಕುಡಿಯಲು ನೀರೂ ಕೂಡ ಸಿಗುತ್ತಿರಲಿಲ್ಲ. ನಾನು ಅನೇಕ ದಿನಗಳನ್ನು ಸ್ಕೂಲಿನಲ್ಲಿ ನೀರಿಲ್ಲದೆ ಕಳೆದೆ. ಇದೇ ಸನ್ನಿವೇಶ ಬೊಂಬಾಯಿನ ಎಲ್ಫಿನ್ಸ್ಟೋನ್ ಕಾಲೇಜಿನಲ್ಲೂ ಸಹ ಇತ್ತು. ಇಂಥ ಸನ್ನಿವೇಶದಲ್ಲಿ ಇನ್ನಾವ ಪರಿಸ್ಥಿತಿಯಿರಲು ಸಾಧ್ಯ? ಗುಮಾಸ್ತರುಗಳು ಮಾತ್ರ ತಯಾರಾಗುತ್ತಾರೆ.

ನಾನು ದೆಹಲಿಯಲ್ಲಿ ಕಾರ್ಯಕಾರಿ ಪರಿಷತ್ತಿನಲ್ಲಿ ಇರುವಾಗ ಲಾರ್ಡ್ ಲಿನ್ಲಿತ್ಗೋ ಅವರು ವೈಸ್ರಾಯ್ ಆಗಿದ್ದರು. ನಾನು ಅವರಿಗೆ ಹೇಳಿದೆ: ಎಂದೂ ಎಂದಿನ ಖರ್ಚಿನ ಜೊತೆಗೆ ನೀವು ವರ್ಷಕ್ಕೆ ಮೂರು ಲಕ್ಷ ರೂಪಾಯಿನಂತೆ ಅಲಿಘರ್ ವಿಶ್ವವಿದ್ಯಾಲಯದ ಮೇಲೆ ಮುಸ್ಲಿಮರ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತೀರಿ. ಅದೇ ರೀತಿ ನೀವು ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ಆದರೆ ನಾವು ಹಿಂದೂಗಳೂ ಅಲ್ಲ, ಮುಸ್ಲಿಮರೂ ಅಲ್ಲ. ನಮಗೆ ಏನಾದರೂ ಮಾಡಬೇಕೆಂಬ ಇರಾದೆ ನಿಮಗೆ ಇದ್ದರೆ ಆಗ ನೀವು ನಮಗೆ ಅವರಿಗೆ ಕೊಡುವದರ ಸಾವಿರ ಪಟ್ಟು ಕೊಡಬೇಕು. ಹೋಗಲಿ, ಕಡೆಯ ಪಕ್ಷ ಮುಸ್ಲಿಮರಿಗೆ ಕೊಡುವಷ್ಟಾದರೂ ನಮಗೆ ಕೊಡಿ. 'ನೀವು ಹೇಳಬೇಕಾದ್ದನ್ನು ನನಗೆ ಬರವಣಿಗೆಯಲ್ಲಿ ಕೊಡಿ' ಎಂದು ಲಿನ್ಲಿತ್ಗೊ ಹೇಳಿದರು. ಆದರಂತೆ ನಾನು ಒಂದು ವಿಜ್ಞಾಪನ ಪತ್ರವನ್ನು ಸಿದ್ಧಪಡಿಸಿದೆ. ಅದರ ಕೈ ಬರಹದ ಪ್ರತಿ ಈಗಲೂ ನನ್ನ ಹತ್ತಿರ ಇದೆ. ಐರೋಪ್ಯರಿಗೆ ಅನುಕಂಪವಿತ್ತು. ನನ್ನ ಪ್ರಸ್ತಾವನೆಯನ್ನು ಅವರು ಒಪ್ಪಿಕೊಂಡರು. ಸಮಸ್ಯೆ ಎಂದರೆ ಯಾವ ಬಾಬತ್ತಿನ ಮೇಲೆ ಹಣವನ್ನು ಖರ್ಚು ಮಾಡಬೇಕು ಎಂದು. ನಮ್ಮ ಬಾಲಕಿಯರಿಗೆ ಶಿಕ್ಷಣವಿಲ್ಲದೇ ಇದ್ದುದರಿಂದ, ಆ ಹಣವನ್ನು ಅವರ

ವಿದ್ಯಾಭ್ಯಾಸಕ್ಕಾಗಿ ಒದಗಿಸಬೇಕೆಂಬುದು ಅವರ ಆಲೋಚನೆ ಆಗಿತ್ತು. ನಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡಿದರೆ, ಅಡಿಗೆ ಮನೆಯಲ್ಲಿ ವಿವಿಧ ತಿನಸುಗಳನ್ನು ಮಾಡಲು ಸಾಮಗ್ರಿಗಳನ್ನು ಎಲ್ಲಿಂದ ತರಬೇಕು 'ಅವರ ಶಿಕ್ಷಣದ ಫಲಿತಾಂಶವೇನು' ಇತರ ಬಾಬುಗಳಿಗೆ ಸರ್ಕಾರ ಹಣವನ್ನು ಖರ್ಚು ಮಾಡಿ ಶಿಕ್ಷಣಕ್ಕೆ ಮಾತ್ರ ಹಣವನ್ನು ತಡೆಹಿಡಿದಿದ್ದಾರೆ. ಆದುದರಿಂದ ಒಂದು ದಿನ ಲಾರ್ಡ್ ಲಿನ್ಲಿತ್ಗೊ ಅವರ ಬಳಿ ಹೋಗಿ ಶಿಕ್ಷಣದ ಬಗ್ಗೆ ಮಾಡ ಬೇಕಾದ ಖರ್ಚಿನ ಬಗ್ಗೆ ಅವರಿಗೆ ಹೇಳಿದೆ: ನೀವು ಕೋಪ ಮಾಡಿಕೊಳ್ಳದಿದ್ದರೆ ನಿಮ್ಮನ್ನೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ನಾನೊಬ್ಬನೇ ಐವತ್ತು ಪದವೀಧರರಿಗೆ ಸಮ ಅಲ್ಲವೆ 'ಅವರು ಅದನ್ನು ಒಪ್ಪಿಕೊಳ್ಳಲೇ ಬೇಕಾಯಿತು. ಪುನಃ ನಾನು ಅವರನ್ನು ಕೇಳಿದೆ: ಅದಕ್ಕೆ ಕಾರಣ ಏನು' ಅವರು ಹೇಳಿದರು: 'ನಮಗೆ ಕಾರಣ ಗೊತ್ತಿಲ್ಲ' ನನ್ನ ಪಾಂಡಿತ್ಯ ಎಷ್ಟು ಉನ್ನತ ಮಟ್ಟದಲ್ಲಿದೆಯೆಂದರೆ ನಾನು ಅರಮನೆಯ ತುಟ್ಟತುದಿಯಲ್ಲಿ ಕುಳಿತುಕೊಳ್ಳಬಹುದು. ನನಗೆ ಇಂಥ ಜನ ಬೇಕಾಗಿದ್ದಾರೆ. ಏಕೆಂದರೆ ಅಲ್ಲಿಂದ ಯಾರೇ ಆಗಲೀ ಕಣ್ಣಾವಲು ಇಡಬಹುದು ನಮ್ಮ ಜನಗಳಿಗೆ ರಕ್ಷಣೆ ಕೊಡಬೇಕಾಗಿದ್ದರೆ, ಆಗ ಇಂಥ ಚುರುಕು ದೃಷ್ಟಿಯ ಜನರನ್ನು ತಯಾರು ಮಾಡಬೇಕು. ಒಬ್ಬ ಸಾಧಾರಣ ಗುಮಾಸ್ತ ಏನು ತಾನೆ ಮಾಡಬಲ್ಲ? ಆಕ್ಷಣದಲ್ಲೇ ಲಾರ್ಡ್ ಲಿನ್ಲಿತ್ಗೊ ಅವರಿಗೆ ನನ್ನ ಮಾತುಗಳಿಂದ ಮನವರಿಕೆ ಆಯಿತು. ಹದಿನಾರು ಜನರನ್ನು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿಕೊಡಲಾಯಿತು. ಹೇಗೆ ಕೆಲವು ಮಡಕೆಗಳು ಅರ್ಧ ಬೆಂದಿರುತ್ತವೆಯೋ ಮತ್ತು ಕೆಲವು ಬೆಂದಿರುತ್ತವೆಯೋ ಹಾಗೆ ಆ ಹದಿನಾರು ಜನರಲ್ಲಿ ಕೆಲವರು ಅರ್ಧ ಬೆಂದವರು, ಮತ್ತು ಕೆಲವರು ಬೆಂದವರು. ಅದು ಬೇರೆಯ ವಿಷಯ. ಆಮೇಲೆ ಸಿ. ರಾಜಗೋಪಾಲಾಚಾರಿಯವರು ಈ ಉನ್ನತ ಶಿಕ್ಷಣದ ಯೋಜನೆಯನ್ನು ರದ್ದುಪಡಿಸಿದರು.

ಈ ದೇಶದಲ್ಲಿ, ಎಂಥ ಪರಿಸ್ಥಿತಿ ಇದೆಯೆಂದರೆ ಅದು ನಮ್ಮನ್ನು ಸಾವಿರಾರು ವರ್ಷಗಳವರೆಗೆ ನಿರುತ್ಸಾಹಿಗಳನ್ನಾಗಿ ಮಾಡಿಬಿಡುತ್ತದೆ. ಈ ಸನ್ನಿವೇಶ ಇರುವವರೆಗೂ, ನಮ್ಮ ಮುನ್ನಡೆಗೆ ಯಾವ ಉತ್ಸಾಹವೂ ಇರುವುದಿಲ್ಲ. ಇದೇ ಧರ್ಮದಲ್ಲೇ ಉಳಿದುಕೊಂಡು ನಮಗೆ ಏನನ್ನೂ ಮಾಡಲೂ ಸಾಧ್ಯವಾಗುವುದಿಲ್ಲ. ಮನು ಸ್ಮೃತಿಯಲ್ಲಿ ಚಾತುರ್ವರ್ಣ ಇದೆ. ಚಾತುರ್ವರ್ಣ ಪದ್ಧತಿ ಮಾನವ ಜನಾಂಗಕ್ಕೆ ಬಹಳ ಹಾನಿಕಾರಕವಾಗಿದೆ. ಶೂದ್ರರು ದಾಸ್ಯ ವೃತ್ತಿಯನ್ನು ಮಾತ್ರ ಮಾಡಬೇಕೆಂದು ಮನುಸ್ಮೃತಿಯಲ್ಲಿ ಹೇಳಲಾಗಿದೆ. ಅವರಿಗೆ ಶಿಕ್ಷಣ ಏಕೆ ಬೇಕು? ಬ್ರಾಹ್ಮಣರು ಶಿಕ್ಷಣವನ್ನು ಪಡೆದುಕೊಳ್ಳಬೇಕು, ಕ್ಷತ್ರಿಯರು ಆಯುಧಗಳನ್ನು ಕೈಗೆತ್ತಿಕೊಳ್ಳಬೇಕು, ವೈಶ್ಯರು ವ್ಯಾಪಾರವನ್ನು ಮಾಡಬೇಕು, ಮತ್ತು ಶೂದ್ರರು ಸೇವೆ ಮಾಡಬೇಕು. ಈ ವ್ಯವಸ್ಥೆಯ ಮಡಿಕೆಯನ್ನು ಯಾರು ಬಿಚ್ಚುತ್ತಾರೆ? ಬ್ರಾಹ್ಮಣನಿಗೆ, ಕ್ಷತ್ರಿಯನಿಗೆ, ವೈಶ್ಯನಿಗೆ ಸ್ವಲ್ಪ ಲಾಭವಿದೆ, ಆದರೆ ಶೂದ್ರನಿಗೆ? ಈ ಮೂರು ವರ್ಣಗಳನ್ನು ಬಿಟ್ಟರೆ, ಬೇರೆ ಜಾತಿಗಳಲ್ಲಿ ಏನಾದರೂ ಉತ್ಸಾಹ ಇರುತ್ತದೆಯೆ? ಈ ಚಾತುರ್ವರ್ಣ ವ್ಯವಸ್ಥೆ ಅವ್ಯವಸ್ಥೆಯಲ್ಲ; ಇದು ಒಂದು ರೂಢಿ: ಇದೇ ಧರ್ಮ.

ಹಿಂದೂಧರ್ಮದಲ್ಲಿ ಸಮಾನತೆ ಇಲ್ಲ ನಾನು ಒಮ್ಮೆ ಗಾಂಧಿಯವರ ಬಳಿಗೆ ಹೋಗಿದ್ದಾಗ, ಅವರು ಹೇಳಿದರು: 'ನನಗೆ ಚಾತುರ್ವರ್ಣದಲ್ಲಿ ನಂಬಿಕೆ ಇದೆ?. ನಾನು ಕೇಳಿದೆ: ನಿಮ್ಮಂಥ ಮಹಾತ್ಮರು ಚಾತುರ್ವರ್ಣವನ್ನು ನಂಬುತ್ತಾರೆಯೆ' ಆದರೆ ಈ ಚಾತುರ್ವರ್ಣ ಅಂದರೆ ಏನು 'ಅದು ಹೇಗಿದೆ' (ಡಾ: ಅಂಬೇಡ್ಕರ್ ಅವರು ತಮ್ಮ ಅಂಗೈ ಯನ್ನು ತೆರೆದು ತಮ್ಮ ಕೈ ಬೆರಳುಗಳನ್ನು ಒಂದರ ಮೇಲೆ ಒಂದಿಟ್ಟು ಇದನ್ನು ತೋರಿಸಿದರು) ಈ ಚಾತುರ್ವರ್ಣ ಮೇಲಿದೆಯೋ ಅಥವ ಸಮತಟ್ಟಾಗಿದೆಯೋ 'ಚಾತುರ್ವರ್ಣ

ಎಲ್ಲಿಂದ ಪ್ರಾರಂಭವಾಗುತ್ತದೆ, ಎಲ್ಲಿ ಕೊನೆಯಾಗುತ್ತದೆ' ಗಾಂಧೀಜಿ ಈ ಪ್ರಶ್ನೆಗೆ ಉತ್ತರಿಸಲಿಲ್ಲ, ಅವರು ಯಾವ ಉತ್ತರವನ್ನು ಕೊಟ್ಟಿರಲು ಸಾಧ್ಯ? ನಾನು ಅನವಶ್ಯಕವಾಗಿ ಈ ಹಿಂದೂ ಧರ್ಮದ ಮೇಲೆ ಆಪಾದನೆ ಮಾಡುವುದಿಲ್ಲ.ಹಿಂದೂ ಧರ್ಮದಿಂದ ಯಾರಿಗೂ ಏಳಿಗೆಯಾಗುವುದಿಲ್ಲ. ಆ ಧರ್ಮವೇ ಹಾಳುಗೆಡವುವ ಧರ್ಮ.

ನಮ್ಮ ದೇಶ ವಿದೇಶೀಯರ ಆಳ್ವಿಕೆಯ ಕೆಳಗೆ ಏಕೆ ಬಂದಿತು? ೧೯೪೫ರವರೆಗೆ ಯೂರೋಪಿನಲ್ಲಿ ಯುದ್ಧ ನಡೆಯುತ್ತಲೇ ಇತ್ತು. ಎಷ್ಟೇ ಸಂಖ್ಯೆಯಲ್ಲಿ ಸೈನಿಕರು ಸತ್ತರೂ, ಅಷ್ಟು ಸಂಖ್ಯೆಯನ್ನು ಹೊಸದಾಗಿ ಭರ್ತಿ ಮಾಡಿಕೊಳ್ಳುವ ಮೂಲಕ ತುಂಬಲಾಯಿತು. ಆ ಸಮಯದಲ್ಲಿ ಯಾರೂ ಕೂಡ ನಾವು ಯುದ್ಧವನ್ನು ಗೆದ್ದೆವೆಂದು ಹೇಳಲಾಗುತ್ತಿರಲಿಲ್ಲ. ನಮ್ಮ ದೇಶದಲ್ಲಿ ಎಲ್ಲವೂ ಬೇರೆಯಾಗಿದೆ. ಕ್ಷತ್ರಿಯರು ಕೊಲ್ಲಲ್ಪಟ್ಟರೆ ನಮ್ಮ ಸರ್ವ ನಾಶ. ನಮಗೆ ಆಯುಧಗಳನ್ನು ಇಟ್ಟುಕೊಳ್ಳುವುದಕ್ಕೆ ಹಕ್ಕಿದ್ದರೆ, ಈ ದೇಶ ದಾಸ್ಯದಲ್ಲಿ ಸಿಕ್ಕಿ ಹಾಕಿ ಕೊಳ್ಳುತ್ತಿರಲಿಲ್ಲ. ಯಾರಿಗೂ ಈ ದೇಶವನ್ನು ಆಕ್ರಮಿಸಲು ಸಾಧ್ಯವಾಗುತ್ತಿರಲಿಲ್ಲ.

ಹಿಂದೂ ಧರ್ಮದಲ್ಲಿ ಉಳಿದುಕೊಂಡರೆ, ಯಾರೂ ಯಾವ ವಿಧದಲ್ಲೂ ಏಳಿಗೆಯಾಗುವುದಿಲ್ಲ. ಹಿಂದೂ ಧರ್ಮದಲ್ಲಿನ ಅಂತಸ್ತುಗಳಿಂದಾಗಿ, ಉನ್ನತ ವರ್ಣಗಳಿಗೆ ಮತ್ತು ಜಾತಿಗಳಿಗೆ ಮಾತ್ರ ಪ್ರಯೋಜನವಾಗಿದೆಯೆಂಬುದು ವಾಸ್ತವ. ಆದರೆ ಇತರರಿಗೆ ಏನು ಪ್ರಯೋಜನ? ಒಬ್ಬ ಬ್ರಾಹ್ಮಣ ಸ್ತ್ರೀ ಒಂದು ಮಗುವಿಗೆ ಜನ್ಮ ಕೊಟ್ಟ ಕ್ಷಣವೇ, ಅವಳ ದೃಷ್ಟಿ ಉಚ್ಚ ನ್ಯಾಯಾಲಯದಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಯ ಮೇಲೆ ಕೇಂದ್ರೀಕೃತವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ಕಸ ಗುಡಿಸುವ ಹೆಂಗಸು ಮಗುವಿಗೆ ಜನ್ಮ ಕೊಟ್ಟರೆ, ಅವಳ ದೃಷ್ಟಿ ಖಾಲಿ ಇರುವ ಕಸ ಗುಡಿಸುವ ಕೆಲಸದ ಮೇಲೆ ಕೇಂದ್ರೀಕೃತವಾಗುತ್ತದೆ. ಹಿಂದೂ ಧರ್ಮದ ವರ್ಣ ವಿಭಾಗ ಇಂಥ ವಿಚಿತ್ರ ಸಾಮಾಜಿಕ ರಚನೆಗೆ ಕಾರಣವಾಗಿದೆ. ಇದರಿಂದ ಯಾವ ಅಭಿವೃದ್ಧಿ ಆಗಲು ಸಾಧ್ಯ? ಬೌದ್ಧ ಧರ್ಮದಲ್ಲಿ ಮಾತ್ರ ಏಳಿಗೆಯನ್ನು ಪಡೆಯಬಹುದು.

ಬೌದ್ಧ ಧರ್ಮದಲ್ಲಿ ನೂರಕ್ಕೆ ೭೫ ಮಂದಿ ಭಿಕ್ಕುಗಳು ಬ್ರಾಹ್ಮಣರಾಗಿದ್ದರು. ನೂರಕ್ಕೆ ೨೫ ಮಂದಿ ಶೂದ್ರರು ಮತ್ತು ಇತರರು ಆಗಿದ್ದರು. ಆದರೆ ಭಗವಾನ್ ಬುದ್ಧ ಹೇಳಿದ: ? ಓ ಭಿಕ್ಕುಗಳೇ, ನೀವು ಬೇರೆ ಬೇರೆ ದೇಶಗಳಿಂದ, ಬೇರೆ ಬೇರೆ ಜಾತಿಗಳಿಂದ ಬಂದಿದ್ದೀರಿ. ನದಿಗಳು ಅವುಗಳ ಪ್ರಾಂತ್ಯಗಳಲ್ಲಿ ಹರಿಯುವಾಗ ಪ್ರತ್ಯೇಕವಾಗಿ ಹರಿಯುತ್ತವೆ. ಆದರೆ ಸಮುದ್ರದಲ್ಲಿ ಸೇರಿದಾಗ ಅವುಗಳು ಒಂದೇ ಆಗಿಬಿಡುತ್ತವೆ. ಬೌದ್ಧ ಸಂಘ ಒಂದು ಸಾಗರವಿದ್ದ ಹಾಗೆ, ಈ ಸಂಘದಲ್ಲಿ ಎಲ್ಲರೂ ಸಮಾನರು. ಸಾಗರದಲ್ಲಿ ಬೆರೆತ ಮೇಲೆ, ಇದು ಗಂಗಾ ನದಿಯ ನೀರು, ಇದು ಮಹಾ ನದಿಯ ನೀರು ಎಂದು ಗುರುತಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ, ನಾವು ಬೌದ್ಧ ಸಂಘವನ್ನು ಸೇರಿದಾಗ. ನಾವು ನಮ್ಮ ಜಾತಿಯನ್ನು ಕಳೆದುಕೊಂಡು ಸಮಾನರಾಗಿಬಿಡುತ್ತೇವೆ. ಇಂಥ ಸಮಾನತೆಯನ್ನು ಬೋಧಿಸಿದ ಒಬ್ಬನೇ ಒಬ್ಬ ಮಹಾ ಪುರುಷನಿದ್ದಾನೆ, ಆ ಮಹಾ ಪುರುಷನೇ ಭಗವಾನ್ ಬುದ್ಧ. (ಜೋರಾದ ಚಪ್ಪಾಳೆ)

ಕೆಲವರು ಹೇಳುತ್ತಾರೆ, ನೀವು ಮತಾಂತರಗೊಳ್ಳುವುದಕ್ಕೆ ಏಕೆ ಇಷ್ಟು ಸಮಯವನ್ನು ತೆಗೆದುಕೊಂಡಿರಿ ಎಂದು. ಇಷ್ಟೂ ದಿನ ನೀವೇನು ಮಾಡುತ್ತಿದ್ದಿರಿ ಎಂದು. ಇದು ಒಂದು ಮುಖ್ಯವಾದ ಪ್ರಶ್ನೆ. ಧರ್ಮವೊಂದನ್ನು ಒಪ್ಪಿಕೊಳ್ಳುವುದು ಸುಲಭ ಸಾಧ್ಯವಾದ ಕೆಲಸವಲ್ಲ. ಧರ್ಮದ ಬಗ್ಗೆ ಆಲೋಚಿಸುವ ಪ್ರತಿಯೊಬ್ಬನಿಗೂ ಇದು ಗೊತ್ತಾಗುತ್ತದೆ. ಪ್ರಪಂಚದಲ್ಲಿ ಯಾರೂ ಕೂಡ ನಾನು ಹೊರುತ್ತಿರುವ ಹೊಣೆಗಾರಿಕೆಯನ್ನು ಹೊರುವುದಕ್ಕೆ ತಯಾರಿಲ್ಲ.. ನನಗೆ ಧೀರ್ಘಾಯುಷ್ಯವಿದ್ದರೆ ನನ್ನ ಯೋಜಿತ ಕೆಲಸವನ್ನು ಪೂರೈಸುತ್ತೇನೆ.

(ಡಾ: ಅಂಬೇಡ್ಕರ್ ದೀರ್ಘಾಯುವಾಗಲಿ ಎಂಬ ಘೋಷಣೆಗಳು)

ಮಹರ್ ಒಬ್ಬನು ಬೌದ್ಧ ಮತಕ್ಕೆ ಸೇರಿದರೆ ಏನಾಗುತ್ತದೆ ಎಂದು ಕೆಲವು ಜನ ಕೇಳಬಹುದು. ಹಾಗೆ ಮಾತನಾಡಬೇಡಿರೆಂದು ನಾನು ಅವರಿಗೆ ಹೇಳುತ್ತೇನೆ. ಅದು ಅವರಿಗೇ ಅಪಾಯಕಾರಿಯಾಗುತ್ತದೆ. ಉನ್ನತ ಜಾತಿಯವರಿಗೆ, ಶ್ರೀಮಂತರಿಗೆ ಧರ್ಮದ ಅವಶ್ಯಕತೆ ಇದೆ ಎಂದು ಅನಿಸುವುದಿಲ್ಲ ಅವರುಗಳಲ್ಲಿ ಅಧಿಕಾರಿಗಳಿಗೆ ವಾಸಕ್ಕೆ ಬಂಗಲೆಗಳು ಇರುತ್ತವೆ, ಸೇವೆ ಮಾಡುವುದಕ್ಕೆ ಆಳುಗಳು ಇರುತ್ತಾರೆ, ಅವರ ಹತ್ತಿರ ಹಣ, ಐಶ್ವರ್ಯ ಇರುತ್ತದೆ ಮತ್ತು ಗೌರವ ಸಿಗುತ್ತದೆ. ಇಂಥ ಜನಗಳು ಧರ್ಮದ ಬಗ್ಗೆ ಚಿಂತಿಸಬೇಕಾದ ಅವಶ್ಯಕತೆ ಇಲ್ಲ ಅಥವಾ ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.

ಬಡವರಿಗೆ ಧರ್ಮದ ಅವಶ್ಯಕತೆ ಇದೆ. ತುಳಿತಕ್ಕೊಳಗಾದವರಿಗೆ ಧರ್ಮದ ಅವಶ್ಯಕತೆ ಇದೆ. ಬಡವ ಆಸೆಯ ಮೇಲೆಯೇ ಬದುಕುಳಿದಿರುತ್ತಾನೆ. ಜೀವನದ ಬೇರುಗಳು ಆಸೆಯಲ್ಲಿರುತ್ತವೆ. ಆಸೆಯನ್ನು ಕಳೆದುಕೊಂಡರೆ, ಜೀವಕ್ಕೆ ಏನಾಗುತ್ತದೆ? ಧರ್ಮ ಆಶಾಭಾವನೆಯನ್ನು ಹುಟ್ಟಿಸುತ್ತದೆ ಮತ್ತು ನಿಮ್ನವರ್ಗದವರಿಗೆ ಮತ್ತು ಬಡವರಿಗೆ ಹೆದರಬೇಡಿ ಜೀವನ ಆಶಾದಾಯಕವಾಗಿರುತ್ತದೆ ಎಂಬ ಸಂದೇಶವನ್ನು ತಲುಪಿಸುತ್ತದೆ. ಆದುದರಿಂದಲೇ, ಬಡವರು ಮತ್ತು ನಿಮ್ನವರ್ಗಕ್ಕೆ ಸೇರಿದ ಮಾನವ ಕುಲ ಧರ್ಮಕ್ಕೆ ಅಂಟಿಕೊಂಡಿರುತ್ತದೆ. ಕ್ರಿಶ್ಚಿಯನ್ ಧರ್ಮ ಐರೋಪ್ಯ ಖಂಡವನ್ನು ಪ್ರವೇಶಿಸಿದಾಗ, ರೋಮ್ ಮತ್ತು ನೆರೆಹೊರೆಯ ದೇಶಗಳಲ್ಲಿ ಪರಿಸ್ಥಿತಿ ಬಹಳ ಯಾತನಾಮಯವಾಗಿತ್ತು. ಜನಗಳಿಗೆ ಸಾಕಷ್ಟು ಆಹಾರ ದೊರಕುತ್ತಿರಲಿಲ್ಲ.ಆ ಸಮಯದಲ್ಲಿ ಕಿಚಡಿಯನ್ನು ಬಡವರಿಗೆ ವಿತರಿಸಲಾಗುತ್ತಿತ್ತು. ಕ್ರಿಸ್ತನ ಹಿಂಬಾಲಕರು ಯಾರು? ಯೂರೋಪಿನ ಬಡವರು ಮತ್ತು ಕೆಳವರ್ಗಕ್ಕೆ ಸೇರಿದ ಜನ ಕ್ರಿಶ್ಚಿಯನ್ನರಾದರು. ಕ್ರಿಶ್ಚಿಯನ್ ಧರ್ಮ ಭಿಕ್ಷುಕರ ಧರ್ಮ ಎಂದು ಗಿಬ್ಬನ್ ಹೇಳಿದ್ದ. ಗಿಬ್ಬನ್ ಈಗ ಬದುಕಿಲ್ಲ. ಬದುಕಿದ್ದರೆ, ಈಗ ಕ್ರಿಶ್ಚಿಯನ್ ಧರ್ಮ ಯೂರೋಪಿನಲ್ಲಿ ಎಲ್ಲರ ಧರ್ಮ ಹೇಗಾಯಿತು ಎಂಬುದನ್ನು ಅವನು ಉತ್ತರಿಸಬೇಕಾಗಿತ್ತು. ಬದುಕಿದ್ದರೆ ಇದಕ್ಕೆ ಅವನು ಉತ್ತರ ಕೊಡಲೇಬೇಕಾಗಿತ್ತು.

ಕೆಲವ ಜನ ಬೌದ್ಧ ಧರ್ಮ ಮಹರ್‌ಗಳ ಮತ್ತು ಮಾಗಾಗಳ ಧರ್ಮವೆಂದು ಹೇಳುತ್ತಾರೆ. ಬ್ರಾಹ್ಮಣರು ಭಗವಾನ್ ಬುದ್ಧನನ್ನು ಭೋ ಗೌತಮ, ಅರೆ ಗೌತಮ, ಎಂದು ಕರೆಯುತ್ತಿದ್ದರು. ಈ ರೀತಿ ಬ್ರಾಹ್ಮಣರು ಭಗವಾನ್ ಬುದ್ಧನನ್ನು ಕೀಟಲೆ ಮಾಡುತ್ತಿದ್ದರು. ರಾಮ, ಕೃಷ್ಣ ಮತ್ತು ಶಂಕರರ ವಿಗ್ರಹಗಳು ಹೊರದೇಶಗಳಲ್ಲಿ ಅವುಗಳನ್ನು ಮಾರಾಟಕ್ಕಿಟ್ಟರೆ ಎಷ್ಟು ಬಿಕರಿಯಾಗುತ್ತದೆಯೆಂದು ಅವರು ನೋಡಬೇಕು. ಇದಕ್ಕೆ ವಿರುದ್ಧವಾಗಿ ಭಗವಾನ್ ಬುದ್ಧನ ವಿಗ್ರಹಗಳನ್ನು ಮಾರಾಟಕ್ಕಿಟ್ಟರೆ, ಒಂದೇ ಒಂದು ವಿಗ್ರಹ ಉಳಿಯದ ಹಾಗೆ ಎಲ್ಲವೂ ಬಿಕರಿಯಾಗಿಬಿಡುತ್ತವೆ. (ಭಾರಿ ಚಪ್ಪಾಳೆ) ಭಾರತದಿಂದ ಹೊರಗಡೆ ಹೋಗಿ ನೋಡಿ. ಪ್ರಪಂಚಕ್ಕೆ ಗೊತ್ತಿರುವುದು ಬುದ್ಧನ ಹೆಸರು. ಹಾಗಾದರೆ ಈ ಧರ್ಮದ ಪ್ರಸಾರವನ್ನು ಹೇಗೆ ತಡೆಯಲಿಕ್ಕಾಗುತ್ತದೆ?

ನಾವು ನಮ್ಮ ದಾರಿಯಲ್ಲಿ ಹೋಗುತ್ತೇವೆ, ನೀವು ನಿಮ್ಮ ದಾರಿಯಲ್ಲಿ ಹೋಗಿ. ಇದು ಉನ್ನತಿಯ, ಮುನ್ನಡೆಯ ಪಥ. ಇದೇನೂ ಹೊಸ ಪಥವಲ್ಲ. ಈ ಪಥವನ್ನು ಎಲ್ಲಿಂದಲೂ ಎರವಲು ತಂದಿಲ್ಲ. ಈ ಪಥ ಇಲ್ಲಿಯದೇ, ಶುದ್ಧಾಂಗವಾಗಿ ಭಾರತೀಯವೇ. ಭಾರತದಲ್ಲಿ ಬೌದ್ಧ ಮತ ೨೦೦೦ ವರ್ಷಗಳ ವರೆಗೆ ಬದುಕುಳಿಯಿತು. ನಿಜವಾಗಿ ಹೇಳುವುದಾದರೆ, ಬೌದ್ಧ ಮತವನ್ನು ಇದಕ್ಕೆ ಮುಂಚೆಯೇ ಏಕೆ ಅಪ್ಪಿಕೊಳ್ಳಲಿಲ್ಲ ಎಂದು ನಮಗೆ ವ್ಯಥೆಯಾಗುತ್ತಿದೆ. ಭಗವಾನ್ ಬುದ್ಧ ಬೋಧಿಸಿದ ನೀತಿಗಳು ಅಮರ. ಆದರೂ ಸಹ ಬುದ್ಧನೇನೂ ಇದು ಹೀಗೆಯೇ ಎನ್ನಲಿಲ್ಲ. ಕಾಲ ಬದಲಾದಂತೆ ಧರ್ಮದಲ್ಲಿ ಬದಲಾವಣೆಯನ್ನು ತರುವುದಕ್ಕೆ

ಅವಕಾಶ ಇದೆ. ಇಂಥ ಔದಾರ್ಯ ಇನ್ನು ಯಾವ ಧರ್ಮದಲ್ಲೂ ಕಾಣ ಸಿಗುವುದಿಲ್ಲ.

ಬೌದ್ಧ ಧರ್ಮ ನಾಶವಾಗುವುದಕ್ಕೆ ಮುಖ್ಯ ಕಾರಣ ಮುಸ್ಲಿಮರ ಆಕ್ರಮಣ. ಮುಸ್ಲಿಮರು ಅವರ ಆಕ್ರಮಣಗಳಲ್ಲಿ ಭಗವಾನ್ ಬುದ್ಧನ ವಿಗ್ರಹಗಳನ್ನು ನಾಶಪಡಿಸಿದರು. ಬೌದ್ಧ ಧರ್ಮದ ಮೇಲೆ ಇದು ಮೊದಲನೆ ಆಕ್ರಮಣ ಅವರ ಆಕ್ರಮಣಗಳ ಹೆದರಿಕೆಯಿಂದಾಗಿ, ಬೌದ್ಧ ಭಿಕ್ಕುಗಳು ಓಡಿಹೋದರು. ಕೆಲವರು ಟಿಬೆಟ್ಗೆ ಹೋದರು, ಕೆಲವರು ಚೈನಾಕ್ಕೆ ಹೋದರು, ಕೆಲವರು ಬೇರೆಲ್ಲಿಗೋ ಹೋದರು. ಧರ್ಮವನ್ನು ರಕ್ಷಿಸಿಕೊಳ್ಳುವುದಕ್ಕೆ ಭಕ್ತ ಸಮೂಹ ಅತ್ಯವಶ್ಯಕ. ಈಶಾನ್ಯದ ಗಡಿಯಲ್ಲಿ ಒಬ್ಬ ಗ್ರೀಕ್ ದೊರೆ ಇದ್ದ. ಅವನ ಹೆಸರು ಮಿಳಿಂದ. ಈ ದೊರೆ ಯಾವಾಗಲೂ ಚರ್ಚೆಯಲ್ಲಿ ಮಗ್ನನಾಗಿರುತ್ತಿದ್ದ. ಚರ್ಚೆಗಳಲ್ಲಿ ಆನಂದವನ್ನು ಉಕ್ಕಿಸುತ್ತಿದ್ದ. ಚರ್ಚೆ ಮಾಡುವವ ಒಬ್ಬ ಮುಂದೆ ಬಂದು ಚರ್ಚೆಯಲ್ಲಿ ಭಾಗವಹಿಸಬೇಕು ಎಂದು ಹಿದೂಗಳಿಗೆ ಹೇಳುತ್ತಿದ್ದ. ಎಷ್ಟೋ ಜನಗಳನ್ನು ನಿರುತ್ತರ ಮಾಡುತ್ತಿದ್ದ.

ಒಮ್ಮೆ ಅವನಿಗೆ ಬೌದ್ಧರೊಂದಿಗೆ ಚರ್ಚೆ ಮಾಡಬೇಕೆಂದು ಅಭಿಲಾಶೆ ಆಯಿತು; ಯಾರಾದರು ಒಬ್ಬ ಬೌದ್ಧ ವಾದಚತುರನನ್ನು ಕರೆದುಕೊಂಡು ಬರುವುದಕ್ಕೆ ಹೇಳಿದ. ಆಗ ಬೌದ್ಧರು ನಾಗಸೇನನ್ನು ತಮ್ಮ ಪರವಾಗಿ ದೊರೆಯೊಂದಿಗೆ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಕೇಳಿಕೊಂಡರು. ನಾಗಸೇನ ಒಬ್ಬ ವಿದ್ವಾಂಸ. ಮೊದಲಿಗೆ ಅವನು ಬ್ರಾಹ್ಮಣನಾಗಿದ್ದ. ನಾಗಸೇನ ಮತ್ತು ಮಿಳಿಂದನ ನಡುವೆ ನಡೆದ ಚರ್ಚೆ ಏನೆಂದು ಒಂದು ಪುಸ್ತಕದ ಮೂಲಕ ತಿಳಿದಿದೆ. ಆ ಪುಸ್ತಕದ ಹೆಸರು 'ಮಿಳಿಂದ ಪನ್ಹ' ಮಿಳಿಂದ ಒಂದು ಪ್ರಶ್ನೆಯನ್ನು ಕೇಳಿದ: 'ಧರ್ಮ ಅವನತಿಯಾಗುವುದು ಏತಕ್ಕೆ'ನಾಗಸೇನ ಆ ಪ್ರಶ್ನೆಗೆ ಮೂರು ಉತ್ತರ ಕೊಟ್ಟ. ಮೊದಲನೆಯ ಕಾರಣವೆಂದರೆ ಆ ನಿರ್ದಿಷ್ಟ ಧರ್ಮವೇ ಅಪರಿಪಕ್ವವಾದುದು. ಆ ಧರ್ಮದ ಮೂಲಭೂತ ನೀತಿಗಳಿಗೆ ಆಳವೇ ಇಲ್ಲ. ಅದು ಪ್ರಾಪಂಚಿಕ ಧರ್ಮ ಆಗಿಬಿಡುತ್ತದೆ; ಅದರ ಆಯುಸ್ಸು ಅಲ್ಪಾವಧಿಯದು.

ಎರಡನೆಯ ಕಾರಣವೆಂದರೆ, ಆ ಧರ್ಮದಲ್ಲಿ ಪಾಂಡಿತ್ಯವಿರುವ ಪ್ರಚಾರಕರಿಲ್ಲದಿದ್ದರೆ, ಆಗಲೂ ಸಹ ಧರ್ಮದ ಅವನತಿಯಾಗುತ್ತದೆ. ಪಾಂಡಿತ್ಯವಿರುವವರು ಆ ಧರ್ಮದ ತತ್ವ ಏನೆಂದು ಬೋಧಿಸಬೇಕು. ಆ ಧರ್ಮದ ಪ್ರಚಾರಕರು ತಮ್ಮ ಎದುರಾಳಿಗಳೊಂದಿಗೆ ಚರ್ಚೆಗೆ ಇಳಿಯಲು ಸಿದ್ಧವಾಗಿಲ್ಲದಿದ್ದರೆ, ಆಗಲೂ ಆ ಧರ್ಮದ ಅವನತಿ ಆಗುತ್ತದೆ.

ಮತ್ತೆ ಮೂರನೆಯ ಕಾರಣವೆಂದರೆ, ಆ ಧರ್ಮ ಮತ್ತು ಅದರ ಧಾರ್ಮಿಕ ನೀತಿಗಳು ಕೇವಲ ಪಂಡಿತರಿಗೆ ಮಾತ್ರ. ಸಾಮಾನ್ಯ ಜನರಿಗೆ ದೇವಸ್ಥಾನಗಳು ಮತ್ತು ಪುಣ್ಯ ಕ್ಷೇತ್ರಗಳು ಇವೆ. ಅವರು ಅಲ್ಲಿಹೋಗಿ ಅತೀಂದ್ರಿಯ ಶಕ್ತಿಗಳನ್ನು ಪೂಜಿಸುತ್ತಾರೆ. ನಾವು ಬೌದ್ಧ ಮತಕ್ಕೆ ಸೇರುವಾಗ ಈ ಮೂರು ನೀತಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಯಾರೂ ಕೂಡ ಬೌದ್ಧ ಧರ್ಮದ ತತ್ವಗಳು ಪ್ರಾಪಂಚಿಕವೆಂದು ಹೇಳಲಾಗುವುದಿಲ್ಲ. ಈ ದಿನದಲ್ಲಿ ಇಡೀ ವಿಶ್ವವೇ ೨೫೦೦ ವರ್ಷಗಳು ಕಳೆದರೂ ಬೌದ್ಧ ಧರ್ಮದ ಎಲ್ಲಾ ನೀತಿಗಳನ್ನೂ ಗೌರವಿಸುತ್ತದೆ. ಅಮೆರಿಕಾದಲ್ಲಿ ೨೦೦೦ ಬೌದ್ಧ ಸಂಸ್ಥೆಗಳು ಇವೆ. ಮೂರು ಲಕ್ಷ ರೂಪಾಯಿಗಳನ್ನು ವ್ಯಯಿಸಿ ಇಂಗ್ಲೆಂಡಿನಲ್ಲಿ ಒಂದು ಬೌದ್ಧ ದೇವಾಲಯವನ್ನು ಕಟ್ಟಲಾಗಿದೆ. ಜರ್ಮನಿಯಲ್ಲಿ ಸಹಾ, ೩ – ೪ ಸಾವಿರ ಬೌದ್ಧ ಸಂಸ್ಥೆಗಳು ಇವೆ. ಬುದ್ಧನ ನೀತಿಗಳು ಅಮರ. ಏನೇ ಆದರೂ, ಬುದ್ಧ ಯಾವತ್ತಿಗೂ ಇದು ದೇವರ ಧರ್ಮ ಎಂದು ಸಾಧಿಸಿರಲಿಲ್ಲ. ಬುದ್ಧ ಹೇಳಿದ್ದೇನೆಂದರೆ ತನ್ನ ತಂದೆ ಒಬ್ಬ ಸಾಮಾನ್ಯ ಮನುಷ್ಯ, ತನ್ನ ತಾಯಿ ಒಬ್ಬಳು ಸಾಮಾನ್ಯ ಸ್ತ್ರೀ. ನಿಮಗೆ ಅನಿಸಿದರೆ, ಈ ಧರ್ಮವನ್ನು ಒಪ್ಪಿಕೊಳ್ಳಿ. ಇಂಥ ಔದಾರ್ಯವನ್ನು ಬೇರೆ ಯಾವ ಧರ್ಮವೂ ತೋರಿಸುವುದಿಲ್ಲ.

ಬೌದ್ಧ ತತ್ವದ ಬುನಾದಿಯೇನು? ಬುದ್ಧನ ಧರ್ಮಕ್ಕೂ ಇತರ ಧರ್ಮಗಳಿಗೂ ಅಗಾಧವಾದ ವ್ಯತ್ಯಾಸವಿದೆ. ಇತರ ಧರ್ಮಗಳಲ್ಲಿ ಬದಲಾವಣೆಯಾಗುವುದು ಸಾಧ್ಯವಿಲ್ಲ. ಏಕೆಂದರೆ, ಆ ಧರ್ಮಗಳು ಮನುಷ್ಯನನ್ನು ದೇವರೊಂದಿಗೆ ಸಂಬಂಧ ಕಲ್ಪಿಸಿವೆ. ಇತರ ಧರ್ಮಗಳು ಪ್ರಕೃತಿಯನ್ನು ದೇವರು ಸೃಷ್ಟಿಸಿದ್ದು ಎಂದು ಬೋಧಿಸುತ್ತವೆ. ದೇವರು, ಎಲ್ಲವನ್ನೂ ಅಂದರೆ, ಆಕಾಶ, ವಾಯು, ಚಂದ್ರ, ಸೂರ್ಯ ಇತ್ಯಾದಿಗಳನ್ನು ಸೃಷ್ಟಿಸಿದ್ದಾನೆ ಎನ್ನುತ್ತವೆ. ಮಾಡುವುದಕ್ಕೆ ನಮಗೆ ದೇವರು ಏನನ್ನೂ ಬಿಟ್ಟಿಲ್ಲ, ಆದುದರಿಂದ ನಾವು ದೇವರನ್ನು ಪೂಜಿಸಲೇಬೇಕು. ಕ್ರಿಶ್ಚಿಯನ್ ಧರ್ಮದ ಪ್ರಕಾರ, ಮರಣಾನಂತರ ಒಂದು ತೀರ್ಪಿನ ದಿನವಿರುತ್ತದೆ, ಎಲ್ಲವೂ ಆ ತೀರ್ಪಿನ ಮೇಲೆ ಅವಲಂಬಿತವಾಗಿರುತ್ತದೆ. ಬೌದ್ಧ ಧರ್ಮದಲ್ಲಿ ದೇವರಿಗಾಗಲೀ ಅಥವಾ ಆತ್ಮಕ್ಕಾಗಲೀ ಜಾಗವಿಲ್ಲ. ವಿಶ್ವದಲ್ಲೆಲ್ಲೆಡೆಯೂ ದುಃಖವಿದೆ, ನೂರಕ್ಕೆ ತೊಂಭತ್ತು ಜನರು ದುಃಖದಿಂದ ನರಳುತ್ತಿದ್ದಾರೆ. ಆ ಶೋಕತಃಪ್ತ ಬಡಜನರನ್ನು ದುಃಖದಿಂದ ವಿಮೋಚನೆ ಮಾಡುವುದೇ ಬೌದ್ಧ ಧರ್ಮದ ಮುಖ್ಯವಾದ ಕೆಲಸ. ಭಗವಾನ್ ಬುದ್ಧ ಹೇಳಿದ್ದಕ್ಕಿಂತ ಬೇರೆಯಾದದ್ದನ್ನು ಕಾರ್ಲ್ ಮಾರ್ಕ್ಸ್ ಏನು ಹೇಳಿದ? ಭಗವಾನ್ ಬುದ್ಧ ಯಾವುದನ್ನೂ ಹಾಗೆ ಹೀಗೆ ಎಂದು ಹೇಳದೆ ನೇರವಾಗಿ ಹೇಳಿದ.

ಸಹೋದರರೆ, ನಾನು ಹೇಳಬೇಕೆಂದುಕೊಂಡಿದ್ದನ್ನೆಲ್ಲ ಹೇಳಿಬಿಟ್ಟಿದ್ದೇನೆ. ಎಲ್ಲ ರೀತಿಯಲ್ಲೂ ಈ ಧರ್ಮ ಪರಿಪೂರ್ಣವಾಗಿದೆ. ಅದಕ್ಕೆ ಯಾವ ಕಳಂಕವೂ ಇಲ್ಲವೇ ಇಲ್ಲ. ಹಿಂದೂ ಧರ್ಮದ ನೀತಿಗಳಿಂದ ಯಾವ ಉತ್ಸಾಹವನ್ನೂ ಪಡೆಯಲಿಕ್ಕಾಗುವುದಿಲ್ಲ. ಸಾವಿರಾರು ವರ್ಷಗಳಿಂದ ಹಿಡಿದು ಮೊನ್ನೆ ಮೊನ್ನೆಯವರೆಗೂ ನಮ್ಮ ಸಮಾಜದಿಂದ ಒಬ್ಬನೇ ಒಬ್ಬ ಪದವೀಧರನಾಗಲೀ ಅಥವಾ ವಿದ್ಯಾವಂತನಾಗಲೀ ಬರಲಿಲ್ಲ. ನನ್ನ ಶಾಲೆಯಲ್ಲಿ ಒಬ್ಬಳು ಕಸ ಗುಡಿಸುವ ಹೆಂಗಸು ಇದ್ದಳೆಂದು ಹೇಳಲು ನನಗೆ ಹಿಂಜರಿಕೆಯೇನೂ ಇಲ್ಲ ; ಅವಳು ಒಬ್ಬ ಮರಾಠ ಹೆಂಗಸು. ಅವಳು ನನ್ನನ್ನು ಮುಟ್ಟುತ್ತಿರಲಿಲ್ಲ. ನನ್ನ ತಾಯಿ ಹಿರಿಯರನ್ನು 'ಮಾಮ' ಎಂದು ಕರೆಯಬೇಕೆಂದು ಹೇಳುತ್ತಿದ್ದರು. ನಾನು ಅಂಚೆ ಪೇದೆಯನ್ನು ಮಾಮ ಎಂದು ಕರೆಯುತ್ತಿದ್ದೆ. (ನಗು) ನನ್ನ ಬಾಲ್ಯದಲ್ಲಿ ನನಗೆ ಪಾಠಶಾಲೆಯಲ್ಲಿ ಬಾಯಾರಿಕೆ ಆಗುತ್ತಿತ್ತು. ಹಾಗೆಂದು ನಾನು ನನ್ನ ಉಪಾಧ್ಯಾಯರಿಗೆ ಹೇಳಿದೆ. ಅವರು ಜವಾನನೊಬ್ಬನನ್ನು ನನ್ನ ರಕ್ಷಣೆಗಾಗಿ ಕರೆದು ನನ್ನನ್ನು ನಲ್ಲಿಯ ಬಳಿಗೆ ಕರೆದುಕೊಂಡು ಹೋಗುವಂತೆ ಹೇಳಿದರು. ನಾವು ನಲ್ಲಿಯ ಬಳಿಗೆ ಹೋದೆವು. ಜವಾನ ನಲ್ಲಿಯನ್ನು ತಿರುಗಿಸಿದ ಮೇಲೆ ನಾನು ನೀರನ್ನು ಕುಡಿಯುತ್ತಿದ್ದೆ. ಸಾಮಾನ್ಯವಾಗಿ ನನಗೆ ಪಾಠಶಾಲೆಯಲ್ಲಿ ಕುಡಿಯಲು ನೀರು ಸಿಗುತ್ತಿರಲಿಲ್ಲ. ಕಾಲಾನಂತರದಲ್ಲಿ ನನಗೆ ಜಿಲ್ಲಾ ನ್ಯಾಯಾಧೀಶರ ಕೆಲಸವನ್ನು ಕೊಡುತ್ತೇವೆಂದರು. ನನಗೆ ಒಂದು ಸಮಸ್ಯೆ ಇದ್ದಿತು – ಅದೆಂದರೆ ನನ್ನ ಸಹೋದರರ ಧ್ಯೇಯವನ್ನು ಯಾರು ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ ಎಂದು. ಹಾಗಾಗಿ ನಾನು ಆ ಜೀತಕ್ಕೆ ಅಂಟಿಕೊಳ್ಳಲಿಲ್ಲ.

ಒಬ್ಬ ವ್ಯಕ್ತಿಯಾಗಿ ಈ ದೇಶದಲ್ಲಿ ನನಗೆ ಅಸಾಧ್ಯವಾಗುವುದು ಯಾವುದೂ ಇಲ್ಲ. (ಚಪ್ಪಾಳೆ). ನಮ್ಮ ತಲೆಯ ಮೇಲಿನ ವೈಶ್ಯರ, ಕ್ಷತ್ರಿಯರ, ಬ್ರಾಹ್ಮಣರ ಸವಾರಿಯನ್ನು ಕೆಳಗೆ ಉರುಳಿಸಿ ನಾಶಪಡಿಸುವುದು ಹೇಗೆ ಎಂಬುದೇ ಈಗ ಇರುವ ನಿಜವಾದ ಪ್ರಶ್ನೆ. ಅದರಿಂದಾಗಿ ಈ ಧರ್ಮದ ಎಲ್ಲಾ ಮುಖಗಳ ಬಗ್ಗೆ ನಿಮಗೆ ತಿಳುವಳಿಕೆಯನ್ನು ಕೊಡುವುದು ನನ್ನ ಕರ್ತವ್ಯವಾಗಿದೆ. ಪುಸ್ತಕಗಳನ್ನು ಬರೆದು ನಿಮ್ಮ ಎಲ್ಲಾ ಸಂದೇಹಗಳನ್ನೂ, ಅನುಮಾನಗಳನ್ನು ನಾನು ನಿವಾರಿಸುತ್ತೇನೆ, ಮತ್ತು ನಿಮ್ಮನ್ನು ಪೂರ್ಣ ಪ್ರಜ್ಞಾಯ ವೇದಿಕೆಗೆ ಕೊಂಡು ಹೋಗಲು ಪ್ರಯತ್ನಿಸುತ್ತೇನೆ. ಸಧ್ಯಕ್ಕೆ ನೀವು ಕಡೆಯ ಪಕ್ಷ ನನ್ನಲ್ಲಿ ನಂಬಿಕೆ ಇಡಬೇಕು.

ಆದರೂ ನಿಮ್ಮ ಹೊಣೆಗಾರಿಕೆಯೂ ಕೂಡ ಮಹತ್ತರವಾಗಿದೆ. ನಿಮ್ಮ ನಡವಳಿಕೆ ಹೇಗೆ ಇರಬೇಕೆಂದರೆ,

ಇತರ ಜನಗಳು ನಿಮಗೆ ಮರ್ಯಾದೆಯನ್ನು ಕೊಟ್ಟು ಗೌರವಿಸುವಂತೆ ಇರಬೇಕು. ಈ ಧರ್ಮವೆಂದರೆ ನಿಮ್ಮ ಕುತ್ತಿಗೆಯಿಂದ ಜೋತು ಬಿದ್ದಿರುವ ಹೆಣವೊಂದು ಎಂದು ಅಂದುಕೊಳ್ಳಬೇಡಿ ಬೌದ್ಧ ಮತದ ಬಗ್ಗೆ ಹೇಳುವುದಾದರೆ ಈ ದೇಶದ ಭೂಮಿ ಲೆಕ್ಕಕ್ಕಿಲ್ಲ. ನಾವು ಬೌದ್ಧ ಮತವನ್ನು ಶ್ರದ್ಧೆಯಿದ ಅನುಸರಿಸಬೇಕೆಂದು ನಿರ್ಧರಿಸಬೇಕು. ಮಹರ್ ಜನಗಳು ಬೌದ್ಧ ಧರ್ಮವನ್ನು ಅವಹೇಳನಕ್ಕೆ ತಂದರೆಂದು ಆಗುವುದು ಬೇಡ; ಆದುದರಿಂದ ನಮಗೆ ಧೃಢ ನಿರ್ಧಾರವಿರಬೇಕು. ಇಷ್ಟನ್ನು ನಾವು ಸಾಧಿಸಿಬಿಟ್ಟರೆ, ಆಗ ನಾವು ನಮ್ಮನ್ನು, ನಮ್ಮ ದೇಶವನ್ನು, ಅಷ್ಟೇ ಏಕೆ ಇಡಿ ವಿಶ್ವವನ್ನೇ ಮುಂದುವರೆಯುವಂತೆ ಮಾಡಬಹುದು. ಏಕೆಂದರೆ ಬೌದ್ಧ ಧರ್ಮ ಮಾತ್ರ ಈ ಪ್ರಪಂಚವನ್ನು ಕಾಪಾಡಬಲ್ಲುದು. ನ್ಯಾಯ ನೆಲಸುವವರೆಗೆ, ಪ್ರಪಂಚದಲ್ಲಿ ಶಾಂತಿ ಎಂಬುದು ಇರುವುದಿಲ್ಲ.

ಈ ಹೊಸ ಪಥದಲ್ಲಿ ಅನೇಕ ಜವಾಬ್ದಾರಿಗಳು ಇರುತ್ತವೆ. ನಾವು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ ಮತ್ತು ಕೆಲವು ಮಹದಾಸೆಗಳನ್ನು ಹೊತ್ತುಕೊಂಡಿದ್ದೇವೆ ಎಂದು ನಮ್ಮ ಯುವಕರು ನೆನಪಿಡಬೇಕು. ಅವರು ಸ್ವಾರ್ಥ ಇರುವ ಸೋಮಾರಿಗಳಾಗಬಾರದು. ಈ ಉದ್ದೇಶಕ್ಕಾಗಿ ಕಡೆಯ ಪಕ್ಷ ನಮ್ಮ ಆದಾಯದಲ್ಲಿ ಶೇಕಡ ೨೦ ರಷ್ಟನ್ನಾದರೂ ಕೊಡಬೇಕು ಎಂದು ನಿರ್ಧರಿಸಬೇಕು. ನಿಮ್ಮೆಲ್ಲರನ್ನೂ ನನ್ನೊಂದಿಗೆ ಕರೆದುಕೊಂಡು ಹೋಗ್ಗಲು ಬಯಸುತ್ತೇನೆ. ಮೊದಲಿಗೆ ತತಾಗಥನು ಕೆಲವರಿಗೆ ದೀಕ್ಷೆಯನ್ನು ಕೊಟ್ಟು, 'ಹೋಗಿ, ಈ ಧರ್ಮವನ್ನು ಹರಡಿ' ಎಂದು ನಿರ್ದೇಶಿಸಿದನು. ಅದಾದ ನಂತರ ಯಶ ಮತ್ತು ಅವನ ನಲವತ್ತು ಮಂದಿ ಸ್ನೇಹಿತರು ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಯಶ ಒಂದು ಶ್ರೀಮಂತ ಕುಟುಂಬದಿಂದ ಬಂದವನು. ಭಗವಾನ್ ಬುದ್ಧ ಅವರನ್ನು ಕೇಳಿದ: 'ಈ ಧರ್ಮ ಹೇಗಿದೆ' ಧರ್ಮ ಬಹುಜನ ಹಿತಾಯ, ಬಹುಜನ ಸುಖಾಯ, ಲೋಕಾನುಕಂಪಯ, ಧಮ್ಮ ಆದಿ ಕಲ್ಯಾಣಮ್, ಮಧ್ಯ ಕಲ್ಯಾಣಮ್, ಪರ್ಯಾವಸಾನ ಕಲ್ಯಾಣಮ್. ಅವನ ಧರ್ಮವನ್ನು ಬೋಧಿಸುವ ಪಥವನ್ನು ಆ ಕಾಲದ ಪರಿಸ್ಥಿತಿಗೆ ಅನುಗುಣವಾಗಿ ಯಾವುದು ಎಂದು ತತಾಗಥನು ನಿರ್ಧರಿಸಿದನು. ಈಗ ನಾವು ಅದನ್ನು ಚಾಲನೆಗೊಳಿಸಬೇಕು. ಇದಾದ ನಂತರ ಪ್ರತಿಯೊಬ್ಬನೂ ಇನ್ನೊಬ್ಬನಿಗೆ ದೀಕ್ಷೆಯನ್ನು ಕೊಡಬೇಕು. ಎಲ್ಲ ಬೌದ್ಧ ಧರ್ಮೀಯರಿಗೂ ದೀಕ್ಷೆ ಕೊಡುವ ಅಧಿಕಾರವಿದೆ ಎಂದು ನಾನು ಘೋಷಿಸುತ್ತೇನೆ. (ಇದು ಪ್ರಬುದ್ಧ ಭಾರತನ್ ವಿಶೇಷ ಸಂಚಿಕೆ 'ಅಂಬೇಡ್ಕರ್ ದೀಕ್ಷಾದಲ್ಲಿ' ಪ್ರಕಟವಾದ ಮಾರಾಠಿ ಭಾಷಣವನ್ನು ಸಂಪಾದಕರುಗಳು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ)

ಹೀಗೆ ಡಾ: ಅಂಬೇಡ್ಕರ್ ಅವರು ಅಲ್ಲಿ ನೆರೆದಿದ್ದ ಬೌದ್ಧರುಗಳು ಮತ್ತು ಆಹ್ವಾನಿತರ ಭಾರಿ ಚಪ್ಪಾಳೆಗಳೊಂದಿಗೆ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

**ಆನಂದ ಭಾಷ್ಪ ಹರಿಯಿತು** ಸಮಾರಂಭವನ್ನು ಅಲಂಕರಿಸುವುದಕ್ಕೆ ಭಾರತದ ಮಹಾ ಬೋಧಿ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಪೂಜನೀಯ ಡಿ. ವಾಲಿಸಿಂಹ ಅವರನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು. ಮತಾಂತರ ಸಮಾರಂಭದ ಅವರ ಪ್ರತ್ಯಕ್ಷದರ್ಶಿ ನಿರೂಪಣೆ, ಬೌದ್ಧ ಧರ್ಮವನ್ನು ಸ್ವೀಕರಿಸುವುದಕ್ಕೆ ಬಾಬಾ ಸಾಹೇಬ್ ಅವರ ಅನುಯಾಯಿಗಳ ಉತ್ಸಾಹಕ್ಕೆ ವಿಪುಲವಾದ ನಿದರ್ಶನವಾಗಿದೆ. ಈ ಚರಿತ್ರಾರ್ಹ ಸಮಾರಂಭದ ಬಗ್ಗೆ ಬರೆಯುತ್ತಾ ಪೂಜನೀಯ ಡಿ. ವಾಲಿಸಿಂಹ ಹೀಗೆ ಹೇಳುತ್ತಾರೆ:

ಆಧುನಿಕ ಭಾರತದ ಚರಿತ್ರೆಯಲ್ಲಿ ೧೪ನೇ ಅಕ್ಟೋಬರ್ ೧೯೫೬ ನೆ ತಾರೀಖು ಒಂದು ಸ್ಮರಣೀಯ ದಿನವಾಗಿತ್ತು. ಆ ದಿನ ಡಾ: ಅಂಬೇಡ್ಕರ್ ಅವರು ತಮ್ಮ ಅನುಯಾಯಿಗಳೊಂದಿಗೆ ತ್ರಿಸರಣ ಮತ್ತು ಪಂಚಶೀಲವನ್ನು ವಾಚಿಸುತ್ತಾ ಸಾರ್ವನಿಕವಾಗಿ ಬೌದ್ಧ ಮತವನ್ನು ಸ್ವೀಕರಿಸಿದರು. ಆ ಮಹಾನ್

ಸಮಾರಂಭ ನಡೆದ ಸ್ಥಳ ಮಹಾರಾಷ್ಟ್ರ ಪ್ರದೇಶದ ನಾಗಪುರ ಪಟ್ಟಣದಲ್ಲಿನ ಹದಿನಾಲ್ಕು ಎಕರೆ ಖಾಲಿ ಭೂಮಿಯಾಗಿದ್ದು, ಅಲ್ಲಿ ಸಮಾರಂಭಕ್ಕೋಸ್ಕರ ಒಂದು ಅಗಾಧವಾದ ಪಂಡಾಲನ್ನು ನಿರ್ಮಿಸಲಾಗಿತ್ತು. ಈ ಸಮಾರಂಭಕ್ಕೆ ನನ್ನನ್ನು ಆಹ್ವಾನಿಸಿದ್ದು ನನಗೆ ಸಂದ ಒಂದು ವಿಶೇಷ ಸವಲತ್ತಾಗಿದ್ದು, ಈ ದಿನದಲ್ಲೂ ಸಹ ಒಂದು ಅತಿ ದೊಡ್ಡ ಮಾನವ ಸಮೂಹ ತ್ರಿಸರಣ ಮತ್ತು ಪಂಚಶೀಲವನ್ನು ಪದಶಹ ಪುನರುಚ್ಚರಿಸುತ್ತಿದ್ದ ಪೂರ್ವನಿದರ್ಶನವಿಲ್ಲದ ದೃಷ್ಯ ನನ್ನ ನೆನಪಿನಂಗಳದಲ್ಲಿ ಕಣ್ಣಿಗೆ ಕಟ್ಟುವ ಹಾಗೆ ಇದೆ. ಹಿಂದಿನ ರಾತ್ರಿಯುದ್ದಕ್ಕೂ ಮತ್ತು ೧೪ನೆ ತಾರೀಖಿನ ಬೆಳಗ್ಗೆ 'ಭಗವಾನ್ ಬುದ್ಧ ಕೀ ಜಯ್' ಎಂಬ ಘೋಷಣೆಗಳು ಆಕಾಶದಲ್ಲಿ ಅನುರಣಿಸುತ್ತಿತ್ತು. ನನ್ನ ಜೀವನದಲ್ಲಿ ಇಂಥದೊಂದು ಉತ್ಸಾಹಭರಿತ ಜನ ಸಂದಣಿಯನ್ನು ನಾನು ಎಂದಿಗೂ ನೋಡಿರಲಿಲ್ಲ. ಪುರುಷರ, ಸ್ತ್ರೀಯರ ಮತ್ತು ಮಕ್ಕಳುಗಳ ದೊಡ್ಡದಾದ ಮತ್ತು ಸಣ್ಣದಾದ ಗುಂಪು. ಕೆಲವರ ತೋಳುಗಳಲ್ಲಿ ಕಂದಮ್ಮಗಳು ಇದ್ದು, ಕೆಲವರ ಕೈಗಳಲ್ಲಿ ಬೌದ್ಧ ಧರ್ಮದ ಬಾವುಟಗಳಿದ್ದು, ದೇಶದ ಎಲ್ಲ ಭಾಗಗಳಿಂದ ಕೊನೆಯಿಲ್ಲದ ಪ್ರವಾಹದಲ್ಲಿ ಸಮಾರಂಭದ ಸ್ಥಳಕ್ಕೆ ಬಂದು ಸೇರುತ್ತಿದ್ದರು. ಸಾವಿರಾರು ಮಂದಿ ರಸ್ತೆಯ ಬದಿಯಲ್ಲಿ ಕುಳಿತು ಕೊಂಡಿದ್ದು, ಸಮಾರಂಭ ಸ್ಥಳದಲ್ಲಿ ತಮ್ಮ ಜಾಗಗಳಲ್ಲಿ ಕುಳಿತುಕೊಳ್ಳುವುದಕ್ಕೆ ಕಾಯುತ್ತಿದ್ದರು. ನಾವು ಪಟ್ಟಣವನ್ನೆಲ್ಲ ಸುತ್ತು ಹಾಕಿದೆವು. ನಾವು ಎಲ್ಲಿಗೆ ಹೋದರೂ, ಮೆರವಣಿಗೆಯ ಮೇಲೆ ಮೆರವಣಿಗೆ ಸಭಾಸ್ಥಳಕ್ಕೆ ನಿಧಾನ ಗತಿಯಲ್ಲಿ ಸಾಗುತ್ತಿದ್ದವು; ಪ್ರಯಾಸದಿಂದ ನಾವು ಸಭಾ ಸ್ಥಳವನ್ನು ತಲುಪಿದಾಗ, ಸ್ವಯಂ ಸೇವಕರ ಒಂದು ದೊಡ್ಡ ದಳ ನಮ್ಮ ಕಾರು ವೇದಿಕೆಯ ಹಿಂಭಾಗಕ್ಕೆ ಹೋಗಲು ದಾರಿ ಮಾಡಿಕೊಟ್ಟಿತು. ವೇದಿಕೆಯ ಮೇಲಿನಿಂದ ಸುತ್ತಲೂ ನಾನು ನೋಡಿದಾಗ, ನನಗೆ ಕಂಡಿದ್ದು ಮಾನವ ತಲೆಗಳ ಒಂದು ಸಮುದ್ರವಷ್ಟೆ; ಆ ದೃಷ್ಯ ಮಾತ್ರ ಹೃದಯ ಸ್ಪರ್ಶಿಯಾಗಿತ್ತು. ಇದು ವಿಶಿಷ್ಟವಾಗಿದ್ದ ಕಾರಣವೆಂದರೆ, ಜೀವಂತ ನೆನಪಿನಲ್ಲಿ ಯಾವತ್ತೂ ಇಂಥ ಸಮೂಹ ಮತಾಂತರ ಜರುಗಿರಲಿಲ್ಲ. ಡಾ: ಅಂಬೇಡ್ಕರ್ ಅವರ ಆರೋಗ್ಯ ಅಷ್ಟೇನೂ ಉತ್ತಮವಾಗಿರಲಿಲ್ಲ, ಆದರೂ ಸಹ ಅವರು ಒಂದು ಗಂಟೆಯ ಕಾಲ ಮಾತನಾಡಿ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದಕ್ಕೆ ತಮ್ಮ ಕಾರಣಗಳನ್ನು ಕೊಟ್ಟರು. ಅಲ್ಲಿ ಸೇರಿದ್ದ ಜನ ಸಮೂಹಕ್ಕೆ ತಾವೇ ಐದು ಬೋಧೆಗಳನ್ನು ಹೇಳಿ ಕೊಟ್ಟುದನ್ನು ಅವರು ಅದನ್ನು ಸಮೂಹದಲ್ಲಿ ಪುನರುಚ್ಚರಿಸಿದ್ದು, ಆ ಶಬ್ದ ಬಹು ದೂರದಲ್ಲೂ ಕೇಳಿಸಿರಬಹುದು. ನಾನು ಮಹಾ ಬೋಧಿ ಸಂಘದ ಪರವಾಗಿ ಡಾ: ಅಂಬೇಡೇಕರ್ ಅವರಿಗೆ ಮಾಲಾರ್ಪಣೆ ಮಾಡಿ, ಬುದ್ಧನ ಮೂರ್ತಿಯೊಂದನ್ನು ಅವರಿಗೆ ಕೊಟ್ಟಾಗ, ೭೦ ವರ್ಷಗಳ ಪರಿಶ್ರಮದ ಸಾರ್ಥಕತೆಯನ್ನು ಅವರಲ್ಲಿ ಕಂಡು ಆನಂದ ಭಾಷ್ಪ ನನ್ನ ಕೆನ್ನೆಯ ಮೆಲೆ ಹರಿಯಿತು. (ವಾಲಿಸಿಂಹ, ಡಿ: ಡಾ: ಅಂಬೇಡ್ಕರ್ ಮತ್ತು ಬೌದ್ಧ ಧರ್ಮಕ್ಕೆ ಅವರ ಕೊಡುಗೆ?. ಡಾ: ಅಂಬೇಡ್ಕರ್ ಮೇಲಿನ ಯೋಚನೆಗಳು?: ಆಗ್ರಾದ, ಸಿದ್ಧಾರ್ಥ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಘದ ಹೋಟಿ ಲಾಯ್ ನಿಮ್ ರವರಿಂದ ಸಂಕಲನ ಮಾಡಲಾಗಿದೆ)

**ಭಾರತದಲ್ಲಿ ಬೌದ್ಧ ಶಾಸನವನ್ನು ಪುನರ್‌ಸ್ಥಾಪಿಸುವತ್ತ**
**ಸಾಗಿದ ಡಾ: ಅಂಬೇಡ್ಕರ್ ಅವರ ಮತಾಂತರ**

ಇದೇ ರೀತಿ ಉ ಚಾನ್ ಹ್ಟೂನ್, ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ ಬರ್ಮಾ ಒಕ್ಕೂಟ, ರಂಗೂನ್. ಅವರು ಡಾ: ಅಂಬೇಡ್ಕರ್ ಅವರಿಗೆ ಅವರ ಚಾರಿತ್ರಿಕ ಮತಾಂತರದ ಸಮಾರಂಭಕ್ಕಾಗಿ ತಮ್ಮ ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು. 'ಬುದ್ಧ ಮತ್ತು ಅವನ ಧಮ್ಮದ' ಪುಸ್ತಕದ ಪ್ರಕಟಣೆಯ ಬಗ್ಗೆ ತಮ್ಮ ಪರಿಶ್ರಮಗಳನ್ನು ಕುರಿತು ಅವರ ಪತ್ರದಲ್ಲಿ ಹೇಳಿದ್ದಾರೆ: ಆ ಪತ್ರದ ಒಕ್ಕಣೆ ಹೀಗಿದೆ:

ಬರ್ಮಾ ಒಕ್ಕೂಟದ ಸರ್ವೋಚ್ಚನ್ಯಾಯಾಲಯ
ತಾ: ೨೨ನೇ ಅಕ್ಟೋಬರ್, ೧೯೫೬

ಪ್ರಿಯ ಡಾ: ಅಂಬೇಡ್ಕರ್,

ಭಾರತದಲ್ಲಿ ಬುದ್ಧ ಶಾಸನವನ್ನು ಪುನರ್ಸ್ಥಾಪಿಸುವ ದಿಕ್ಕಿನಲ್ಲಿ ನಿಮ್ಮ ಮಹಾನ್ ಕೊಡುಗೆಗಾಗಿ ನನ್ನ ಹೃದಯ ಪೂರ್ವಕ ಅಭಿನಂದನೆಗಳನ್ನು ಸ್ವೀಕರಿಸಿ. ಬರ್ಮಾದಲ್ಲಿರುವ ಎಲ್ಲ ಬೌದ್ಧರುಗಳ ಹೃದಯಗಳು, ಈ ಜಯಂತಿ ವರ್ಷದಲ್ಲಿ ನಿಮ್ಮ ಸ್ಮರಣೀಯ ಸಾಧನೆಗಾಗಿ ನಿಮ್ಮನ್ನು ಮುಟ್ಟುತ್ತವೆ. ಬರ್ಮಾದ ಬುದ್ಧ ಶಾಸನ ಪರಿಷತ್ತು ಮತ್ತು ಬೌದ್ಧರಿಗೆ, ಬುದ್ಧನ ದೇಶವಾಸಿಗಳಾದ ಲಕ್ಷಾಂತರ ಜನಗಳು, ನಿಮ್ಮ ನಾಯಕತ್ವದಲ್ಲಿ ಬುದ್ಧ ಹೊತ್ತಿಸಿದ ಬೆಳಕಿನತ್ತ ಹಿಂದಿರುಗಲು ಪ್ರಾರಂಭಿಸುತ್ತಿದ್ದಾರೆಂದು ತಿಳಿದು ಅಪರಿಮಿತ ಸಂತೋಷವಾಗಿದೆ. ಬುದ್ಧ ಶಾಸನ ಭಾರತದಲ್ಲಿನ ಎಲ್ಲಾ ಭಾಗದಲ್ಲಿ ಪುನರ್ ಸ್ಥಾಪನೆಯಾಗುತ್ತದೆ ಎಂದು ನಮಗೆ ಭರವಸೆ ಇದೆ.

ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಮೂರನೆಯ WFB ಸಮ್ಮೇಳನ ಬರ್ಮಾದಲ್ಲಿ ನಡೆಯುತ್ತಿದ್ದಾಗ ನೀವು ಪ್ರಾರಂಭಿಸಿದ್ದನ್ನು ಒಂದು ಸಣ್ಣ ಪ್ರಮಾಣದಲ್ಲಿ ಮುಂದುವರಿಸುವುದಕ್ಕೆ ನನಗೆ ಸಾಧ್ಯವಾಗಿದೆ. ಕಳೆದ ತಿಂಗಳು ೨೮ನೆಯ ತಾರೀಖು ಸುಮಾರು ೫೦೦೦ ತಮಿಳರು ಒಂದು ಗಮನಾರ್ಹವಾದ ಸಮಾರಂಭದಲ್ಲಿ ಬೌದ್ಧ ಧರ್ಮವನ್ನು ಔಪಚಾರಿಕವಾಗಿ ಸ್ವೀಕರಿಸಿದರು; ಸಮಾರಂಭ ಮಹಾತೇರಾಗಳ ಉಪಸ್ಥಿತಿಯಲ್ಲಿ ಚತ್ತ ಸಂಗಾಯಣ ಮಹಾ ಗುಹೆಯಲ್ಲಿ ನಡೆಯಿತು. ಕ್ಯಾಬಿನೆಟ್ ಸಚಿವರುಗಳು, ಬೌದ್ಧ ಮುಖಂಡರುಗಳು ರಂಗೂನಿನಲ್ಲಿ ಮತ್ತು ಬರ್ಮಾದ ಇತರೆಡೆಗಳಲ್ಲಿ ಇರುವ ತಮಿಳರು ನಿಮ್ಮ ಮೇಲ್ಪಂಕ್ತಿಯನ್ನು ಅನುಸರಿಸುವುದಕ್ಕೆ ಎದ್ದೇಳುತ್ತಿದ್ದಾರೆ.

ನಿಮಗೆ ಇದಕ್ಕೆ ಮುಂಚೆ ಬರೆಯಲಾಗದಿದ್ದುದಕ್ಕೆ ನಾನು ನಿಮಗೆ ಬಹುವಾಗಿ ವಿವರಣೆಯನ್ನೂ ಮತ್ತು ಸಾವಿರ ಕ್ಷಮಾಪಣೆಗಳನ್ನು ಸಲ್ಲಿಸಬೇಕಾಗಿದೆ. ಚತ್ತ ಸಂಗಾಯಣದ ಕೆಲಸ ಮತ್ತು ವಿದೇಶದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಜಪಾನಿನಲ್ಲಿ, ಬೌದ್ಧ ಧರ್ಮ ಪ್ರಸಾರದ ಚಟುವಟಿಕೆಗಳಲ್ಲಿ ನಾನು ಬಹಳ ಬಿಡುವಿಲ್ಲದವನಾಗಿದ್ದೇನೆ; ಜಪಾನಿನಲ್ಲಿ ತೇರಾವಾದ ಬೌದ್ಧ ಧರ್ಮವನ್ನು ಸ್ಥಾಪಿಸುವುದಕ್ಕಾಗಿ ಒಂದು ಸಂಘವನ್ನು ಕಟ್ಟುವುದಕ್ಕೆ ದೊಡ್ಡ ಸಂಖ್ಯೆಯಲ್ಲಿ ಜಪಾನಿನ ಪ್ರಭಾವೀ ಮುಖಂಡರುಗಳನ್ನು ಸೇರಿಸುವುದು ನನಗೆ ಸಾಧ್ಯವಾಗಿದೆ ಎಂದು ತಿಳಿಯಲು ಬಹುಶಃ ನಿಮಗೆ ಸಂತೋಷವಾಗಬಹುದು. ೧೯೫೭ರ ಮೇ ತಿಂಗಳ ಹೊತ್ತಿಗೆ ಬರ್ಮಾದ ಸುಮಾರು ೧೫ ಮಹಾತೇರಗಳೊಂದಿಗೆ ಮೂರು ಕೇಂದ್ರಗಳನ್ನು ತೆರೆಯುತ್ತಿದ್ದೇವೆ. ಮೋಜಿ ಮತ್ತು ಇಸೋಶಿರಾದಲ್ಲಿ ಕಟ್ಟಡದ ನಿರ್ಮಾಣಗಳು ಆಗಲೇ ಮುಂದುವರಿಯುತ್ತಿವೆ. ಜಪಾನಿನ ಸಂಘದಿಂದ ಒಂದು ನಿಯೋಗ ಈಗಾಗಲೇ ಬಂದಿದ್ದು, ಕಳೆದ ೨೭ನೇ ತಾರೀಖಿನಿಂದ ದಿನದಿಂದ ದಿನಕ್ಕೆ ಚರ್ಚೆಗಳು ನಡೆಯುತ್ತಾ ಇವೆ.

ಬೌದ್ಧ ಧರ್ಮದ ಮೇಲಿನ ನಿಮ್ಮ ಪುಸ್ತಕವನ್ನು ಪ್ರಕಟಿಸುವ ಖರ್ಚಿನ ಬಗ್ಗೆ, ನಾನು ನಿಮಗೆ ಮುಂಚೆಯೇ ತಿಳಿಸಿದಂತೆ ಏಷ್ಯಾ ಪ್ರತಿಷ್ಠಾನದಿಂದ ಸಹಾಯವನ್ನು ಪಡೆಯುವುದಕ್ಕೆ ನನಗೆ ಸಾಧ್ಯವಾಗಿಲ್ಲ. ನೀವು ಇಲ್ಲಿಗೆ ಬಂದಿದ್ದಾಗ ನಿಮ್ಮೊಡನೆ ಮಾತನಾಡಿದ ಪ್ರತಿನಿಧಿಗೆ ಶೀಘ್ರವೇ ಮನಿಲಾಗೆ ವರ್ಗವಾಯಿತು; ಅವರ ಜಾಗಕ್ಕೆ ಬಂದ ಹೊಸ ಪ್ರತಿನಿಧಿಗೆ ಇಂಥ ವಿಷಯಗಳಲ್ಲಿ ಹೆಚ್ಚು ಅಸಕ್ತಿ ಇರುವ ಹಾಗೆ ಕಂಡು ಬರುತ್ತಿಲ್ಲ. ಈ ವಿಷಯದ ಬಗ್ಗೆ ಏನಾದರೂ ಮಾಡಬಹುದೆಂದು ಆಸೆ ಪಡುತ್ತಿದ್ದೆ, ಆದರೆ ಈಗ ಸಧ್ಯದಲ್ಲಿ ಅದರ ಬಗ್ಗೆ ಯಾವ ಆಸೆಯನ್ನು ಇಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ.

ಪ್ರಬಂಧ ಸ್ಪರ್ಧೆಯಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಕೊಡುವ ಬಗ್ಗೆ, ಈ ಕಲ್ಪನೆಗೆ ಬುದ್ಧ ಶಾಸನ ಪರಿಷತ್ತಿನ ಕೆಲವು ಪ್ರಮುಖ ಸದಸ್ಯರುಗಳ ತತ್ವಶಃ ಒಪ್ಪಿಗೆ ಪಡೆದುಕೊಳ್ಳುವುದಕ್ಕೆ ನನಗೆ ಸಾಧ್ಯವಾಗಿದೆ.

ಭಾರತದ ಜಯಂತಿ ಸಮಾರಂಭಗಳ ಸಮಿತಿಯ ಆಹ್ವಾನದ ಮೇಲೆ, ಊ ನೂ, ಮುಖ್ಯ ನ್ಯಾಯಾಧೀಶರಾದ ಊ ಥಿಇನ್ ಮಾಂಗ್ ಮತ್ತು ನಾನೂ ಸೇರಿದಂತೆ ಒಂಭತ್ತು ಮಂದಿ ನವ ದೆಹಲಿಯಲ್ಲಿ ನಡೆಯುವ ಜಯಂತಿ ಸಮಾರಂಭದಲ್ಲಿ ಪಾಲ್ಗೊಳ್ಳಲು ಬರುತ್ತಿದ್ದೇವೆ. ೪ನೆಯ WFB ಸಮ್ಮೇಳನದಲ್ಲಿ ಭಾಗವಹಿಸಲು ನನ್ನ ಮುಖಂಡತ್ವಲ್ಲಿ ಹತ್ತು ಜನಗಳ ನಿಯೋಗವೊಂದು ಖಟಮಂಡುವಿಗೆ ಹೋಗುತ್ತಲಿದ್ದೇವೆ. ನನ್ನ ಪತ್ನಿ ಕೂಡ ನನ್ನೊಂದಿಗೆ ಬರುತ್ತಲಿದ್ದಾಳೆ. ನಾವು ಲುಂಬಿಣಿಯಿಂದ ನವ ದೆಹಲಿಗೆ ಬರಲಿದ್ದೇವೆ. ನಾವು ನವ ದೆಹಲಿಗೆ ಈ ತಿಂಗಳ ೨೨ನೆಯ ತಾರೀಖಿನ ಸುಮಾರಿಗೆ ಬರುವ ನಿರೀಕ್ಷೆ ಇದೆ.

ನನ್ನ ಗೌರವದ ನೆನಕೆಗಳನ್ನು ಶ್ರೀಮತಿ ಅಂಬೇಡ್ಕರ್ ಅವರಿಗೆ ಹಾಗೂ ನಿಮ್ಮ ಸಹೋದ್ಯೋಗಿಗಳಿಗೂ ತಿಳಿಸಿ.

ಧಮ್ಮದಲ್ಲಿ ನಿಮ್ಮವ

(ಸಹಿ) ಊ ಚಾನ್ ಹ್ಟೂನ್
ನ್ಯಾಯಾಧೀಶ ಸರ್ವೋಚ್ಚ ನ್ಯಾಯಲಯ,
ಬರ್ಮಾ ಒಕ್ಕೂಟ, ರಂಗೂನ್

ಡಾ: ಬಿ.ಆರ್. ಅಂಬೇಡ್ಕರ್
M.A. Ph.D., D.Sc., D.List
ಬ್ಯಾರಿಸ್ಟರ್ ಅಟ್ ಲಾ
ಸದಸ್ಯರು, ರಾಜ್ಯಗಳ ಪರಿಷತ್ತು
೨೬ ಆಲಿಪುರ್ ರಸ್ತೆ, ಸಿವಿಲ್ ಲೈನ್ಸ್
ನವ ದೆಹಲಿ, ಭಾರತ

# ೧೫೫
# ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್

ಖಟಮಂಡುವಿನಲ್ಲಿ ನಡೆದ ವಿಶ್ವ ಬೌದ್ಧ ಪರಿಷತ್ತಿನ ಸಮ್ಮೇಳನದ ಮುಕ್ತಾಯಕ್ಕೆ ಸ್ವಲ್ಪ ಮುಂಚೆ, ೨೦ನೇ ನವೆಂಬರ್ ೧೯೫೬ರಂದು ಡಾ: ಅಂಬೇಡ್ಕರ್ ಅವರಿಂದ ಒಂದು ಭಾಷಣವನ್ನು ನೇಪಾಳದ ರಾಜರ ಅರಮನೆಯಲ್ಲಿ ಏರ್ಪಡಿಸಲಾಗಿತ್ತು. ಮನು ಸ್ಮೃತಿಗಳನ್ನು ಆಧಾರವನ್ನಾಗಿಟ್ಟುಕೊಂಡ ಹಿಂದುತ್ವ ಅಧಿಕೃತವಾಗಿ ಪ್ರಚಲಿತವಿದ್ದ ನೇಪಾಳದಂತ ರಾಜ್ಯದಲ್ಲಿ ಬೌದ್ಧ ತತ್ವವನ್ನು ಪ್ರಚಾರ ಮಾಡುವುದು, ಒಂದು ಕ್ರಾಂತಿಕಾರಿ ಘಟನೆ ಆಗಿತ್ತು. ಡಾ: ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಬೌದ್ಧ ತತ್ವದೆಡೆಗೆ ನೋಡುವ ಮೂಲ ದೃಷ್ಟಿ ಕೋನದತ್ತ ಒತ್ತುಕೊಟ್ಟರು.

ವಿಶ್ವ ಬೌದ್ಧ ಪರಿಷತ್ತಿನ ಅಧ್ಯಕ್ಷರಾದ ಡಾ: ಜಿ.ಪಿ. ಮಲಾಲ್‌ಶೇಕರ್ (ಶ್ರೀ ಲಂಕಾ) ಅವರು ಡಾ: ಅಂಬೇಡ್ಕರ್ ಅವರನ್ನು?ಬೌದ್ಧ ಧರ್ಮದಲ್ಲಿ ಅಹಿಂಸೆ? ಎಂಬ ವಿಷಯದ ಮೇಲೆ ಮಾತನಾಡುವಂತೆ ಕೇಳಿಕೊಂಡರು. ಇದಕ್ಕೆ ಅವರು ಒಪ್ಪಿಕೊಂಡರು. ಸಮ್ಮೇಳನಕ್ಕೆ ಬಂದಿದ್ದ ಹೆಚ್ಚು ಸಂಖ್ಯೆಯ ನಿಯೋಗಿಗಳು ಹೇಗಾದರೂ, 'ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್' ಅನ್ನುವ ವಿಷಯದ ಮೇಲೆ ಮಾತನಾಡುವಂತೆ ಒತ್ತಾಯಿಸಿದರು., ವಿಶ್ವ ಬೌದ್ಧ ಪರಿಷತ್ತಿನ ಮಾಜಿ ಅಧ್ಯಕ್ಷರೂ, ಪ್ರಸ್ತುತದಲ್ಲಿ ಬರ್ಮಾ ಒಕ್ಕೂಟದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಮಿ: ಊ ಚಾನ್ ಹ್ಟೂನ್ ಮತ್ತು ಅವರ ಪತ್ನಿ ಡಾ: ಅಂಬೇಡ್ಕರ್ ಅವರನ್ನು ವೇದಿಕೆಗೆ ಕರೆದುಕೊಂಡು ಬಂದರು. ಸಮ್ಮೇಳನದ ಎಲ್ಲಾ ನಿಯೋಗಿಗಳು ಅವರಿಗೆ ತಮ್ಮ ಗೌರವವನ್ನು ಸೂಚಿಸಿದರು.

ನೇಪಾಳದ ರಾಜರಾದ ಮಹೇಂದ್ರ ವೀರ್ ವಿಕ್ರಮ್ ಸಹದೇವ್ ಅವರು ವೇದಿಕೆಯ ಮೇಲಿನ ಒಂದು ವಿಶೇಷವಾಗಿ ಅಲಂಕರಿಸಲ್ಪಟ್ಟ ಪೀಠದ ಮೇಲೆ ಆಸೀನರಾಗಿದ್ದರು. ವೇದಿಕೆಯ ಮೇಲೆ, ಗೌರವಾನ್ವಿತ ಚಂದ್ರಮಣಿ ಮಹಾಸ್ತವೀರ್, ಗೌರವಾನ್ವಿತ ಅಮೃತಾನಂದ ಮಹಾಸ್ತವೀರ್ ಮತ್ತು ಮಿ: ಊ ಚಾನ್ ಹ್ಟೂನ್ ಅವರೂ ಸಹ ಉಪಸ್ಥಿತರಿದರು. ಪ್ರಾರಂಭದಲ್ಲಿ, ಗೌರವಾನ್ವಿತ ಚಂದ್ರಮಣಿಯವರು ಎಲ್ಲರಿಗೂ ತ್ರಿಸರಣ ಮತ್ತು ಪಂಚಶೀಲವನ್ನು ಕೊಟ್ಟರು. ಡಾ: ಉ.ಕ. ಮಲಾಲ್ ಶೇಕರ್ ಅವರು ಡಾ: ಅಂಬೇಡ್ಕರ್ ಅವರನ್ನು ಪರಿಚಯಿಸಿ, ಅವರಿಗೆ ಮಾಲಾರ್ಪಣೆಯನ್ನು ಮಾಡಿ ಸ್ವಾಗತಿಸಿದರು. ಅವರನ್ನು ಸಭೆಯನ್ನು ಉದ್ದೇಶಿಸಿ ಮಾತನಾಡುವಂತೆ ಕೇಳಿಕೊಂಡರು.

ಡಾ: ಅಂಬೇಡ್ಕರ್ ಹೇಳಿದ್ದು:

ಅಧ್ಯಕ್ಷರೆ, ಪೂಜನೀಯರೆ ಮತ್ತು ಮಹನೀಯರೆ,

ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೆ ನೇಪಾಳಕ್ಕೆ ಬಂದರೂ ಕೂಡ, ಒಬ್ಬ ನಿಯೋಗಿ ಭಾಗವಹಿಸಬೇಕಾದ ರೀತಿಯಲ್ಲಿ ನಾನು ನಡವಳಿಗಳಲ್ಲಿ ಭಾಗವಹಿಸಲು ಆಗದೇ ಇದ್ದುದಕ್ಕೆ ನನಗೆ ವ್ಯಸನವಾಗಿದೆ. ಆದರೂ ನಾನು ಇಲ್ಲಿದ್ದರೂ ಸಹ ನಾನೊಬ್ಬ ದೈಹಿಕವಾಗಿ ಬಹಳ ಅಸ್ವಸ್ಥ ಮನುಷ್ಯನಾಗಿದ್ದು ಸಮ್ಮೇಳನದ ನಡವಳಿಗಳಲ್ಲಿ ಬಾಗವಹಿಸುವ ಒತ್ತಡವನ್ನು ತಡೆಯಿಲು ಆಗದೇ ಇದ್ದುದು ಇಲ್ಲಿರುವ ಬಹಳ ಮಂದಿ ಡೆಲಿಗೇಟುಗಳಿಗೆ ಅರಿವಿದೆಯೆಂದು ನನಗೆ ವಿಶ್ವಾಸ ಇದೆ. ಆದುದರಿಂದ ನಾನು ಭಾಗವಹಿಸದೆ ಇರುವುದು ಸಮ್ಮೇಳನಕ್ಕೆ

ಅಗೌರವದಿಂದ ಅಲ್ಲ, ಆದರೆ ನನ್ನ ದೈಹಿಕ ಸ್ಥಿತಿಯಿಂದಾಗಿ ನನಗೆ ಸಮ್ಮೇಳನದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗಲಿಲ್ಲ. ಬಹುಶಃ ಸಮ್ಮೇಳನಕ್ಕೆ ನಾನು ಗೈರು ಹಾಜರಾದ್ದರಿಂದ ಒಂದು ರೀತಿಯ ಪರಿಹಾರ ರೂಪದಲ್ಲಿ ನನ್ನನ್ನು ಈ ಮಧ್ಯಾನ್ಹ ಭಾಷಣ ಮಾಡಬೇಕೆಂದು ಕೇಳಲಾಗಿದೆ ಎಂದು ಅಂದುಕೊಂಡಿದ್ದೇನೆ. ನಾನು ಅದಕ್ಕೆ ಒಪ್ಪಿಗೆ ಕೊಟ್ಟೆ ಆದರೆ ಅಲ್ಲೂ ಸಹ ನನಗೊಂದು ಅಚ್ಚರಿಯನ್ನು ಕೊಡಲಾಗಿದೆ. ಇಲ್ಲಿ ನಾನು ಮಾತನಾಡಬೇಕೆಂದು ನನಗೆ ಸಾಕಷ್ಟು ಮುನ್ಸೂಚನೆ ಇರಲಿಲ್ಲ. ಯಾವ ವಿಷಯದ ಮೇಲೆ ನಾನು ಮಾತನಾಡುತ್ತೇನೆಂದು ನನ್ನನ್ನು ಕೇಳಿದಾಗ ನಾನು 'ಬೌದ್ಧ ಧರ್ಮದಲ್ಲಿ ಅಹಿಂಸೆ' ಎನ್ನುವ ವಿಷಯದಲ್ಲಿ ಮಾತನಾಡುತ್ತೇನೆಂದು ಪ್ರಸ್ತಾಪಿಸಿದೆ. ಆದರೆ ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಅನೇಕ ಮಂದಿ ನಾನು ಬೌದ್ಧ ಮತ ಮತ್ತು ಕಮ್ಯೂನಿಸ್ಟ್ ತತ್ವದ ಮೇಲೆ ಮಾತನಾಡಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಈ ವಿಷಯದ ಮೇಲೆ ಮೊದಲನೆ ಸರ್ವ ಸದಸ್ಯರ ಸಭೆಯಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡಿದ್ದೆ. ವಿಷಯವನ್ನು ಬದಲಾವಣೆ ಮಾಡಬೇಕೆಂಬ ಸಲಹೆಗೆ ನಾನು ಒಪ್ಪಿಕೊಳ್ಳಲು ಸಿದ್ಧನಾಗಿದ್ದೇನೆ. ಆದರೆ ಇಂಥ ಅಗಾಧವಾದ ಮತ್ತು ಅತೀ ಭಾರವಾದ ವಿಷಯದ ಮೇಲೆ ಈ ಕ್ಷಣದಲ್ಲಿ ಮಾತನಾಡಲು ಸಂಪೂರ್ಣವಾಗಿ ಸಿದ್ಧನಾಗಿಲ್ಲ. ಈ ವಿಷಯ ಅರ್ಧ ಪ್ರಪಂಚವನ್ನೇ ತನ್ನ ಕಪಿ ಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿರುವುದೂ ಅಲ್ಲದೆ, ಬಹು ಸಂಖ್ಯೆಯ ವಿದ್ಯಾರ್ಥಿ ಸಮೂಹವನ್ನು, ಅದರಲ್ಲೂ ಬೌದ್ಧ ಮತ ಇರುವ ದೇಶಗಳ ವಿದ್ಯಾರ್ಥಿಗಳನ್ನೂ ತನ್ನ ಮುಷ್ಟಿಯಲ್ಲಿಟ್ಟುಕೊಂಡಿದೆ. ಈ ಎರಡನೆಯ ವಿಷಯದ ಬಗ್ಗೆ ನನಗೆ ಬಹಳ ಗಂಭೀರವಾದ ವ್ಯಾಕುಲತೆ ಇದೆ. ಬೌದ್ಧ ಮತೀಯ ದೇಶಗಳ ಯುವ ಪೀಳಿಗೆ ಬೌದ್ಧ ಮತ ಕಮ್ಯುನಿಸ್ಟ್ ಜೀವನ ಕ್ರಮಕ್ಕಿಂತ ಉತ್ತಮವಾದ ಜೀವನ ಕ್ರಮವನ್ನು ಕೊಡಬಲ್ಲದೆಂದು ಅರ್ಥ ಮಾಡಿಕೊಳ್ಳಲಾಗದಿದ್ದರೆ, ಬೌದ್ಧ ಮತ ಮುಳುಗಿದಂತೆಯೇ ಸರಿ. ಅದು ಒಂದೆರಡು ಪೀಳಿಗೆಗಳಿಗಿಂತ ಹೆಚ್ಚಿಗೆ ಬಾಳಲಾರದು. ಆದುದರಿಂದ ಬೌದ್ಧ ಮತದಲ್ಲಿ ನಂಬಿಕೆ ಇರುವವರೆಲ್ಲರೂ, ಈ ಯುವ ಜನರನ್ನು ಎದುರು ನಿಲ್ಲಿಸಿಕೊಂಡು ಬೌದ್ಧ ಮತಕ್ಕೆ ಕಮ್ಯುನಿಸಂ ತತ್ವ ಒಂದು ಬದಲಿಯಾಗಲು ಸಾಧ್ಯವೆ ಎಂದು ಕೇಳಬೇಕು. ಆಗಷ್ಟೆ ಬೌದ್ಧ ಮತ ಬದುಕುಳಿಯುತ್ತದೆಂದು ನಿರೀಕ್ಷಿಸಬಹುದು. ನಾವುಗಳೆಲ್ಲ ನೆನಪಿಟ್ಟುಕೊಳ್ಳ ಬೇಕಾದುದು ಏನೆಂದರೆ, ಯೂರೋಪಿನಲ್ಲಿನ ಬಹು ಪಾಲು ಜನರು ಮತ್ತು ಏಷ್ಯಾದಲ್ಲಿನ ಅಧಿಕ ಸಖ್ಯೆಯ ಯುವಜನರು ಕಾರ್ಲ್ ಮಾರ್ಕ್ಸನನ್ನು ಪೂಜಿಸಬೇಕಾದ ಒಬ್ಬನೇ ಒಬ್ಬ ಪ್ರವಾದಿ ಎಂದು ಅಂದು ಕೊಂಡಿದ್ದಾರೆ. ಅಲ್ಲದೆ ಅವರು ಬೌದ್ಧ ಸಂಘದ ಅತಿ ದೊಡ್ಡ ಭಾಗವನ್ನು ಹಳದಿ ಅಪಾಯವಲ್ಲದೇ ಬೇರೇನೂ ಅಲ್ಲ ಎಂದು ತಿಳಿದುಕೊಂಡಿದ್ದಾರೆ. ಈ ಸೂಚನೆಯನ್ನು ಭಿಕ್ಕುಗಳು ಅರಿತುಕೊಳ್ಳಬೇಕು, ಅರ್ಥ ಮಾಡಿಕೊಳ್ಳಬೇಕು, ತಮ್ಮನ್ನು ತಾವು ಸುಧಾರಣೆ ಮಾಡಿಕೊಳ್ಳಬೇಕು, ಆಗ ಅವರನ್ನು ಕಾರ್ಲ್ ಮಾರ್ಕ್ಸ್‌ಗೆ ಹೋಲಿಸಬಹುದು; ಆಗ ಬೌದ್ಧ ಮತ ಅದರೊಂದಿಗೆ ಸ್ಪರ್ಧಿಸಬಹುದು.

ಈಗ ಈ ಪೀಠಿಕೆಯೊಂದಿಗೆ ನಿಮಗೆ ನಾನು ಬೌದ್ಧ ಮತದ ಮತ್ತು ಮಾರ್ಕ್ಸ್ ತತ್ವದ ಅಥವಾ ಕಮ್ಯೂನಿಸಮ್ಮಿನ ಕೆಲವು ಪ್ರಧಾನ ಲಕ್ಷಣಗಳನ್ನು ಕೊಡುತ್ತೇನೆ. ಆಗ ನಿಮಗೆ ಅವರಡರ ಮಧ್ಯೆ ಇರುವ ಆದರ್ಶಗಳ ಹೋಲಿಕೆಗಳು ಎಲ್ಲಿವೆ ಮತ್ತು ಅವರೆಡರ ಮಧ್ಯೆ ಇರುವ ವ್ಯತ್ಯಾಸಗಳು ಎಲ್ಲಿವೆ ಎಂದು ತೋರಿಸುತ್ತೇನೆ. ಮತ್ತೆ ಮೂರನೆಯದಾಗಿ ಗುರಿಯನ್ನು ತಲುಪಲು ಬೌದ್ಧಮತದ ಮಾರ್ಗ ಧೀರ್ಘ ಕಾಲ ಇರುವಂಥದೇ, ಅಥವಾ ಗುರಿ ಮುಟ್ಟಲು ಕಮ್ಯೂನಿಸಮ್ಮಿನ ಮಾರ್ಗ ಧೀರ್ಘ ಕಾಲ ಇರುವಂಥದೇ ಎಂದು ಗೊತ್ತಾಗುತ್ತದೆ. ಏಕೆಂದರೆ ಯಾವುದೇ ಒಂದು ದಾರಿಯನ್ನು ನಾವು ಆಯ್ದುಕೊಂಡರೆ ಆ ದಾರಿ ಶಾಶ್ವತವೇ, ನಮ್ಮನ್ನು ಕಾಡಿನತ್ತ ಕೊಂಡು ಹೋಗುತ್ತದೆಯೇ, ಅರಾಜಕತೆಯತ್ತ ಕೊಂಡು ಹೋಗುತ್ತದೆಯೇ

ಎಂದು ತಿಳಿದುಕೊಳ್ಳದೆ ಆ ದಾರಿಯನ್ನು ಕ್ರಮಿಸುವುದುದರಿಂದ ಉಪಯೋಗವಿಲ್ಲ. ಆದರೆ ನಿಮಗೆ ತೋರಿಸಿದ ದಾರಿ, ನಿಧಾನವಾದ ದಾರಿಯಾಗಿದ್ದರೆ, ನೇರವಲ್ಲದ ದಾರಿಯಾಗಿದ್ದರೆ, ಧೀರ್ಘವಾದ ಸುತ್ತು ಬಳಸಿನ ದಾರಿಯಾಗಿದ್ದರೆ ಪರವಾಗಿಲ್ಲ; ಆದರೆ ಆ ದಾರಿ ಕಟ್ಟಕಡೆಗೆ ಕ್ಷೇಮವಾದ ಸುಬದ್ರವಾದ ಸ್ಥಳಕ್ಕೆ ಮುಟ್ಟಿಸಿ, ಅಲ್ಲಿ ನೀವು ಹುಡುಕಿಕೊಂಡು ಹೋಗುತ್ತಿರುವ ಆದರ್ಶಗಳು ನಿಮ್ಮ ಸಹಾಯಕ್ಕೆ ಬರುವುದಾಗಿದ್ದರೆ, ನಿಮ್ಮ ಜೀವನವನ್ನು ಶಾಶ್ವತವಾಗಿ ರೂಪಿಸುವುದಾದರೆ, ಆಗ ನನ್ನ ತೀರ್ಮಾನದಲ್ಲಿ ನಿಧಾನವಾದ, ನೇರವಲ್ಲದ ದಾರಿಯಲ್ಲಿ ಹೋಗುವುದೇ ಒಳ್ಳೆಯದು; ಅದು ಬಿಟ್ಟು, ಆತುರಾತುರವಾಗಿ ಸೀಳುದಾರಿಯಲ್ಲಿ ನುಗ್ಗಿದರೆ ಅದು ಯಾವಾಗಲೂ ಅಪಾಯಕಾರಿ, ಬಹಳ ಅಪಾಯಕಾರಿ.

ಈಗ ನಾವು ವಿಷಯಕ್ಕೆ ಬರೋಣ. ಕಮ್ಯೂನಿಸಮ್ಮಿನ ತತ್ವ ಏನು? ಅದು ಯಾವುದರಿಂದ ಪ್ರಾರಂಭವಾಗುತ್ತದೆ? ಕಮ್ಯೂನಿಸಮ್ ಪ್ರಾರಂಭವಾಗುವುದು ಪ್ರಪಂಚದಲ್ಲಿ ಶೋಷಣೆ ಇದೆ ಎಂಬ ಕಲ್ಪನೆ, ಅವರ ಹತ್ತಿರ ಇಟ್ಟುಕೊಂಡಿರುವ ಆಸ್ತಿಗಾಗಿ ಬಡವರನ್ನು ಶ್ರೀಮಂತರು ಶೋಷಣೆ ಮಾಡುತ್ತಿದ್ದಾರೆ, ಅವರು ಸಮೂಹಗಳನ್ನು ಗುಲಾಮಗಿರಿಗೆ ತಳ್ಳುತ್ತಿದ್ದಾರೆ ಎಂದು; ಆ ಗುಲಾಮಗಿರಿ ದುಃಖದಲ್ಲಿ ಮತ್ತು ಬಡತನದಲ್ಲಿ ಪರ್ಯವಸಾನವಾಗುತ್ತದೆ ಎಂದು. ಕಾರ್ಲ್ ಮಾರ್ಕ್ಸನ ಪ್ರಾರಂಭಿಕ ಚರ್ಚಾ ವಿಷಯ ಇದೇನೆ. ಅವನು 'ಶೋಷಣೆ' ಎಂಬ ಪದವನ್ನು ಉಪಯೋಗಿಸುತ್ತಾನೆ. ಇದಕ್ಕೆ ಕಾರ್ಲ್ ಮಾರ್ಕ್ಸ್ ನೀಡುವ ಚಿಕಿತ್ಸೆಯೇನು? ಕಾರ್ಲ್ ಮಾರ್ಕ್ಸ್ ಹೇಳುವ ಚಿಕಿತ್ಸೆ ಏನೆಂದರೆ, ಒಂದು ವರ್ಗದ ಬಡತನ, ಮತ್ತು ಬಳಲುವುದನ್ನು ತಡೆಗಟ್ಟುವುದಕ್ಕೆ ಖಾಸಗಿ ಆಸ್ತಿಯನ್ನು ತೆಗೆದು ಬಿಡುವುದು. ಯಾರೂ ಸ್ವಂತವಾಗಿ ಆಸ್ತಿಯನ್ನು ಇಟ್ಟುಕೊಳ್ಳುವ ಹಾಗಿಲ್ಲ, ಏಕೆಂದರೆ, ಖಾಸಗಿ ಮಾಲೀಕರೇ ಉಪಯೋಗವನ್ನೂ ಹಾಗೆಯೇ ದುರುಪಯೋಗವನ್ನೂ ಮಾಡುವವರು. ಕಾರ್ಲ್ ಮಾರ್ಕ್ಸನ ತಾಂತ್ರಿಕವಾದ ಭಾಷೆಯನ್ನೇ ಉಪಯೋಗಿಸುವುದಾದರೆ, ಕಾರ್ಮಿಕರು ಉತ್ಪಾದಿಸುವ ಹೆಚ್ಚಿನ ಮೌಲ್ಯದಲ್ಲಿ, ಕಾರ್ಮಿಕನಿಗೆ ತಾನು ಉತ್ಪಾದಿಸಿದ ಹೆಚ್ಚಿನ ಮೌಲ್ಯ ಸಿಗುವುದಿಲ್ಲ. ಅದನ್ನು ಮಾಲೀಕ ತಾನೇ ಇಟ್ಟುಕೊಂಡು ಬಿಡುತ್ತಾನೆ. ಕಾರ್ಲ್ ಮಾರ್ಕ್ಸನ ಕೇಳುವ ಪ್ರಶ್ನೆ ಏನೆಂದರೆ, ಕಾರ್ಮಿಕ ತನ್ನ ಪರಿಶ್ರಮದಿಂದ ಉತ್ಪಾದಿಸುವ ಹೆಚ್ಚಿನ ಮೌಲ್ಯವನ್ನು ಮಾಲೀಕ ಏತಕ್ಕೆ ದುರುಪಯೋಗಪಡಿಸಿಕೊಳ್ಳಬೇಕು ಎಂದು. ಅವನ ಉತ್ತರವೆಂದರೆ ರಾಜ್ಯ ಮಾತ್ರ ಎಲ್ಲಕ್ಕೂ ಒಂದೇ ಮಾಲೀಕ. ಇದರಿಂದಾಗಿಯೇ ಕಾರ್ಲ್ ಮಾರ್ಕ್ಸ್ ಒಂದು ಪ್ರಮೇಯವನ್ನು ಮುಂದಿಟ್ಟ : ಅದೇನೆಂದರೆ ಆಳಲ್ಪಡುತ್ತಿರುವ ಸಾಮಾನ್ಯ ಜನರೇ ಸರ್ವಾಧಿಕಾರಿಗಳಾಗಬೇಕೆಂದು.

ಮಾರ್ಕ್ಸ್ ಸ್ಪಷ್ಟೀಕರಿಸಿದ ಮೂರನೆಯ ಪ್ರಸ್ತಾಪವೇ ಅದು. ಸರ್ಕಾರವನ್ನು ನಡೆಸುವವರು ಶೋಷಿತವರ್ಗಗಳೇ ಆಗಬೇಕೇ ಹೊರತು ಶೋಷಣೆ ಮಾಡುವ ವರ್ಗ ಅಲ್ಲ ಎಂದು. ಇದನ್ನೇ ಸಾಮಾನ್ಯ ಜನರ ಸರ್ವಾಧಿಕಾರ ಎನ್ನುವುದು. ಕಾರ್ಲ್ ಮಾರ್ಕ್ಸನ ಮೂಲಭೂತ ಪ್ರಸ್ತಾವನೆಗಳು ಇವು; ಇವುಗಳೇ ರಷ್ಯಾದ ಕಮ್ಯೂನಿಸಮ್ಮಿನ ಆಧಾರ. ನಿಸ್ಸಂದೇಹವಾಗಿ ಅವುಗಳನ್ನು ವಿಸ್ತರಿಸಲಾಗಿದೆ, ಅದಕ್ಕೆ ಮತ್ತೊಂದನ್ನು ಸೇರ್ಪಡೆ ಮಾಡಲಾಗಿದೆ. ಆದರೆ ಇವುಗಳೆಲ್ಲ ಮೂಲಭೂತ ಪ್ರಸ್ತಾವನೆಗಳು.

ಈಗ ನಾವು ಒಂದು ಕ್ಷಣ ಬೌದ್ಧ ಮತಕ್ಕೆ ಹಿಂದಿರುಗಿ ಕಾರ್ಲ್ ಮಾರ್ಕ್ಸನ ಎತ್ತಿರುವ ವಿಷಯಗಳಿಗೆ ಬುದ್ಧ ಏನು ಹೇಳುತ್ತಾನೆಂದು ನೋಡೋಣ. ನಾನು ನಿಮಗೆ ಹೇಳಿದ ಹಾಗೆ, ಕಾರ್ಲ್ ಮಾರ್ಕ್ಸನ ತಾನು

---

(ಭಾರತ ಸರ್ಕಾರ. ಮಹಾತ್ಮ ಗಾಂಧಿಯವರ ಬರಹಗಳ ಸಂಕಲನ. ಪ್ರಕಾಶನ ವಿಭಾಗ, ಮಾಹಿತಿ ಮತ್ತು ಪ್ರಸಾರಣ ಸಚಿವಾಲಯ, ನವ ದೆಹಲಿ, ಸಂಪುಟ ಐಫಿಖಖ. ಕ.೨೮೧. ಪುನರ್ ಮುದ್ರಣ: ಠಠ ೩೦೬? ೩೦೮)

ಹೇಳುವ ಹಾಗೆ ಬಡವರ ಶೋಷಣೆಯಿಂದ ಪ್ರಾರಂಭಿಸುತ್ತಾನೆ. ಬುದ್ಧ ಏನು ಹೇಳುತ್ತಾನೆ? ಅವನು ಹೇಗೆ ಪ್ರಾರಂಭಿಸುತ್ತಾನೆ? ತನ್ನ ಧರ್ಮದ ನಿರ್ಮಿತಿಯನ್ನು ಕಟ್ಟಿರುವ ಬುನಾದಿ ಯಾವುದು? ೨೦೦೦ ಅಥವಾ ೨೪೦೦ ವರ್ಷಗಳೆಂದು ಇಟ್ಟು ಕೊಂಡರೂ ಸಹ, ಆಗ ಬುದ್ಧ ಕರಾರುವಾಕ್ಕಾಗಿ ಇದನ್ನೇ ಹೇಳಿದ್ದ. 'ವಿಶ್ವದಲ್ಲಿ ದುಃಖ ಇದೆ' ಎಂದು ಅವನು ಹೇಳಿದ್ದ. ಅವನು 'ಶೋಷಣೆ' ಎಂಬ ಪದವನ್ನು ಉಪಯೋಗಿಸಲಿಲ್ಲ. ಆದರೂ ಸಹ ತನ್ನ ಧರ್ಮದ ಬುನಾದಿಯನ್ನು ತಾನು ದುಃಖವೆಂದು ಕರೆದಿದ್ದರ ಮೇಲೆ ಕಟ್ಟಿದ. ಈ ವಿಶ್ವದಲ್ಲಿ ದುಃಖ ಇದೆ, 'ದುಃಖ' ಎಂಬ ಪದವನ್ನು ನಿಸ್ಸಂಶಯವಾಗಿ ನಾನಾ ರೀತಿಯಲ್ಲಿ ಅರ್ಥೈಸಲಾಗಿದೆ. ಪುನರ್ ಜನ್ಮವೆಂದು, ಜೀವನ ಚಕ್ರವೆಂದು, ಅದೇ ದುಃಖವೆಂದು ಅರ್ಥೈಸಲಾಗಿದೆ. ನಾನು ಅದನ್ನು ಒಪ್ಪುವುದಿಲ್ಲ. ಬೌದ್ಧ ಸಾಹಿತ್ಯದಲ್ಲಿ ಅನೇಕ ಕಡೆಯಲ್ಲಿ ದುಃಖ ಎಂಬ ಪದವನ್ನು 'ಬಡತನ' ಎಂಬ ಅರ್ಥದಲ್ಲಿ ಬುದ್ಧ ಉಪಯೋಗಿಸಿದ್ದಾನೆ. ಆದುದರಿಂದ, ಬುನಾದಿಯ ಮಟ್ಟಿಗೆ ನಿಜವಾಗಿಯೂ ಯಾವ ವ್ಯತ್ಯಾಸವೂ ಇಲ್ಲ.

ಬೌದ್ಧರಿಗೆ ಬುನಾದಿ ಯಾವುದು ಎಂದು ತಿಳಿದುಕೊಳ್ಳುವುದಕ್ಕಾಗಿ ಕಾರ್ಲ್ ಮಾರ್ಕ್ಸನ ಬಳಿಗೆ ಹೋಗುವ ಅವಶ್ಯಕತೆ ಇಲ್ಲ. ಆ ಬುನಾದಿ ಆಗಲೇ ಅಲ್ಲಿದೆ, ಚೆನ್ನಾಗಿ ಕಟ್ಟಲ್ಪಟ್ಟಿದೆ. ಬುದ್ಧ ಅಲ್ಲಿಯೇ ತನ್ನ ಮೊದಲನೆ ಧಾರ್ಮಿಕ ಉಪನ್ಯಾಸವನ್ನು, ಅಂದರೆ ಧರ್ಮಚಕ್ರ ಪ್ರವರ್ತನ ಸುತ್ತವನ್ನು ಪ್ರಾರಂಭಿಸುತ್ತಾನೆ. ಆದುದರಿಂದ ಕಾರ್ಲ್ ಮಾರ್ಕ್ಸನ ಆಕರ್ಷಣೆಗೆ ಒಳಪಟ್ಟವರಿಗೆ, ನಾನು ಹೇಳುವುದೇನೆಂದರೆ ಧರ್ಮಚಕ್ರ ಪ್ರವರ್ತನ ಸುತ್ತವನ್ನು ಅಧ್ಯಯನ ಮಾಡಿ, ಬುದ್ಧ ಏನು ಹೇಳಿದ್ದಾನೆ ಎಂಬುದನ್ನು ಕಂಡುಕೊಳ್ಳಿ ಎಂದು. ಈ ಪ್ರಶ್ನೆಯ ಮೇಲೆ ನಿಮಗೆ ಸಾಕಷ್ಟು ತೃಪ್ತಿ ಸಿಗುತ್ತದೆ. ಬುದ್ಧ ತನ್ನ ಧರ್ಮದ ಬುನಾದಿಯನ್ನು ದೇವರ ಮೇಲಾಗಲೀ, ಆತ್ಮದ ಮೇಲಾಗಲೀ, ಇಂಥ ಯಾವುದೇ ಅತೀಂದ್ರಿಯ ಶಕ್ತಿಗಳ ಮೇಲಾಗಲೀ ಕಟ್ಟಲಿಲ್ಲ. ಜನಗಳು ಬಳಲುತ್ತಾ ಬದುಕಿದ್ದಾರೆ, ಈ ಜೀವನ ಸತ್ಯದ ಮೇಲೆ ತನ್ನ ಬೆರಳನ್ನು ಇಡುತ್ತಾನೆ. ಆದ್ದರಿಂದ ಮಾರ್ಕ್ಸ್ ವಾದವಾಗಲೀ ಅಥವಾ ಕಮ್ಯೂನಿಸ್ಟ್ ವಾದವಾಗಲೀ, ಬೌದ್ಧ ಮತದಲ್ಲೇ ಅದು ಸಾಕಷ್ಟು ಇದೆ. ಮತ್ತೆ ಬುದ್ಧ ಅದನ್ನು ಮಾರ್ಕ್ಸ್ ಹುಟ್ಟುವುದಕ್ಕೆ ೨೦೦೦ ವರ್ಷಗಳ ಮುಂಚೆಯೇ ಹೇಳಿದ್ದಾನೆ.

ಬಡತನದ ಪ್ರಶ್ನೆ ಬಂದಾಗ, ಕಾರ್ಲ್ ಮಾರ್ಕ್ಸ್ ಬೋಧಿಸಿದ ಸಿದ್ಧಾಂತಕ್ಕೂ ಮತ್ತು ಬುದ್ಧನ ಸಿದ್ಧಾಂತಕ್ಕೂ ಬಹಳ ಹತ್ತಿರದ ನಂಟು ಇರುವುದು ಗೊತ್ತಾಗುತ್ತದೆ. ಶೋಷಣೆಯನ್ನು ತಡೆಗಟ್ಟಬೇಕಾದರೆ, ಆಸ್ತಿಯ ಒಡೆತನ ರಾಜ್ಯದಲ್ಲಿಯೇ ಇರಬೇಕು ಎಂದು ಕಾರ್ಲ್ ಮಾರ್ಕ್ಸ್ ಹೇಳಿದ. ಭೂಮಿ ರಾಜ್ಯಕ್ಕೇ ಸೇರಬೇಕು. ಕೈಗಾರಿಕೆ ರಾಷ್ಟ್ರಕ್ಕೇ ಸೇರಬೇಕು. ಆಗ ಯಾವ ಖಾಸಗಿ ಮಾಲೀಕನೂ ಮಧ್ಯ ಪ್ರವೇಶಿಸಿ ಒಬ್ಬ ಕಾರ್ಮಿಕನಿಂದ ಅವನ ದುಡಿಮೆಯ ಲಾಭವನ್ನು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನೇ ಮಾರ್ಕ್ಸ್ ಹೇಳಿದ್ದು.

---

ಸಮತಾ ಸೈನಿಕ ದಳದ ಒಂದು ಸಮ್ಮೇಳನವನ್ನು ಕಾನ್ಪುರದಲ್ಲಿ ೩೦ನೇ ಜನವರಿ ೧೯೪೪ರಂದು ನಡೆಸಲಾಯಿತು. ಮಿ: B. K. ಗಾಯಕ್ವಾಡ್ ಅವರು ಸಮ್ಮೇಳನದ ಅಧ್ಯಕ್ಷರಾಗಿದ್ದರು. ಡಾ: ಬಿ.ಆರ್.ಅಂಬೇಡ್ಕರ್ ಅವರು ಉಪಸ್ಥಿತರಿದ್ದು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಈ ಸಮ್ಮೇಳನದಲ್ಲಿ ಕೆಲವು ನಿರ್ಣಯಗಳನ್ನು ಅನುಮೋದಿಸಲಾಯಿತು. ನಿರ್ಣಯ ನಂ ೬ರ ಪ್ರಕಾರ ಸಮತಾ ಸೈನಿಕ ದಳದ ಅಂಗರಚನೆಯ ಕರಡನ್ನು ರಚಿಸಲು ಒಂದು ಸಮಿತಿಯನ್ನು ಮಿ: B. K. ಅಲಿಯಾಸ್ ದಾದಾ ಸಾಹೆಬ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಮಿ. M.M. ಸಾಸಲೇಕರ್, S,B. ಜಾಧವ್, R,R, ಪಾಟೀಲ್, K.N. ವಾಲ್ಮೀಕಿ, A. ಐ.ಕೊಸಾರೆ, P.L.ಲಾಲಿಂಗ್ಕರ್ ಇವರುಗಳು ಸಮಿತಿಯ ಸದಸ್ಯರಾಗಿದ್ದರು. (ಜನತಾ: ತಾ: ೬ನೆ ಜನವರಿ ೧೯೪೫.)

ಈಗ ನಾವು ಸಂಘಕ್ಕೆ, ಬುದ್ಧ ಸಂಘಕ್ಕೆ, ಹೋಗೋಣ. ಸನ್ಯಾಸಿಗಳಿಗೆ ಬುದ್ಧ ವಿಧಿಸಿರುವ ಜೀವನದ ನಿಯಮಗಳನ್ನು ಪರೀಕ್ಷಿಸೋಣ. ಬುದ್ಧ ವಿಧಿಸಿರುವ ನಿಯಮಗಳಾದರೂ ಯಾವುವು? ಒಳ್ಳೆಯದು, ಯಾವ ಸನ್ಯಾಸಿಗೂ ಸ್ವಂತ ಆಸ್ತಿ ಇರಬಾರದು. ಅದರ್ಶ ಪೂರ್ವಕವಾಗಿ ಹೇಳುವುದಾದರೆ ಯಾವ ಸನ್ಯಾಸಿಯೂ ಆಸ್ತಿಯ ಒಡೆಯನಾಗುವ ಹಾಗಿಲ್ಲ. ಮತ್ತೆ ಅಲ್ಲಿ ಇಲ್ಲಿ ಕೆಲವು ತಪ್ಪುಗಳು ಇರಬಹುದಾದರೂ, ನನ್ನ ಗಮನಕ್ಕೆ ಬಂದಿರುವ ಹಾಗೆ ಕೆಲವು ದೇಶಗಳಲ್ಲಿ ಸನ್ಯಾಸಿಗಳಿಗೆ ಕೊಂಚ ಆಸ್ತಿ ಇದೆ. ಆದರೂ, ಬಹಳ ಹೆಚ್ಚಿನ ಪ್ರಕರಣಗಳಲ್ಲಿ ಸನ್ಯಾಸಿಗಳಿಗೆ ಯಾವುದೇ ಆಸ್ತಿ ಇರುವುದೇ ಇಲ್ಲ.. ವಾಸ್ತವವಾಗಿ ಸಂಘದ ಬೌದ್ಧ ನಿಯಮಗಳು ರಷ್ಯಾದಲ್ಲಿ ಕಮ್ಯೂನಿಸ್ಟರು ಮಾಡಿರುವ ನಿಯಮಗಳಿಗಿಂತ ಬಹಳ ಕಠಿಣವಾಗಿವೆ. ಅದನ್ನು ಒಂದು ಮೂಕ ವಿಷಯವನ್ನಗಿ ನಾನು ತೆಗೆದುಕೊಳ್ಳುತ್ತೇನೆ. ಯಾರೂ ಅದನ್ನು ಚರ್ಚೆ ಮಾಡಿಯೂ ಇಲ್ಲ, ಯಾವ ತೀರ್ಮಾನಕ್ಕೂ ಬಂದೂ ಇಲ್ಲ.

ಸಂಘವನ್ನು ಕಟ್ಟುವಲ್ಲಿ ಬುದ್ಧನಿಗೆ ಇದ್ದ ಉದ್ದೇಶವಾದರೂ ಏನು 'ಅವನು ಅದನ್ನೇಕೆ ಮಾಡಿದ' ಚರಿತ್ರೆಯೊಳಗೆ ಸ್ವಲ್ಪ ಹಿಂದಕ್ಕೆ ಹೋದಾಗ–ಬುದ್ಧ ಈ ಧರ್ಮವನ್ನು ಪ್ರಚಾರ ಮಾಡುವುದರಲ್ಲಿ ತೊಡಗಿದ್ದಾಗ, ಪರಿವ್ರಾಜಾಕರು ಎಂದು ಯಾರನ್ನು ನಾವು ಈ ದಿನದಲ್ಲಿ ಕರೆಯುತ್ತೇವೆಯೋ, ಅವರು ಬುದ್ಧನಿಗೂ ಬಹಳ ಮುಂಚೆ ಅಲ್ಲಿ ಇದ್ದರು. 'ಪರಿವ್ರಾಜಕ' ಎಂದರೆ ನಿರ್ವಸತಿಗೊಳಿಸಲ್ಪಟ್ಟವನು, ತನ್ನ ಮನೆಯನ್ನು ಕಳೆದುಕೊಂಡವನು ಎಂದು ಅರ್ಥ. ಬಹುಶಃ ಆರ್ಯನ್ನರ ಕಾಲದಲ್ಲಿ ಆರ್ಯನ್ನರ ಬೇರೆ ಬೇರೆ ಬುಡಕಟ್ಟುಗಳು, ಎಲ್ಲ ಬುಡಕಟ್ಟು ಜನರೂ ಮಾಡುತ್ತಿದ್ದ ಹಾಗೆ, ತಮ್ಮ ತಮ್ಮಲ್ಲೇ ಬಡಿದಾಡಿಕೊಳ್ಳುತ್ತಿದ್ದರು. ಕೆಲವು ಒಡೆದು ಹೋದ ಬುಡಕಟ್ಟು ಜನರು ತಮ್ಮದೆಲ್ಲವನ್ನೂ ಕಳೆದುಕೊಂಡು ಅಲೆಮಾರಿಗಳಾಗಿದ್ದರು. ಈ ಅಲೆಮಾರಿಗಳನ್ನೇ ಪರಿವ್ರಾಜಕರು ಎಂದು ಕರೆಯಲಾಗುತ್ತಿತ್ತು. ಈ ಪರಿವ್ರಾಜಕರಿಗೆ ಬುದ್ಧ ಮಾಡಿದ ಮಹಾನ್ ಸೇವೆಯೆಂದರೆ, ಅವರನ್ನೆಲ್ಲಾ ಒಂದುಗೂಡಿಸಿ, ಜೀವನದ ಕೆಲವು ನಿಯಮಗಳನ್ನು ಅವರಿಗೆ ಕೊಟ್ಟನು. ಈ ನಿಯಮಗಳೇ ವಿನಯಪೀಟಿಕ ದಲ್ಲಿ ಇವೆ. ನಿಯಮಗಳಲ್ಲಿ ಒಂದು, ಭಿಕ್ಕುಗಳು ಆಸ್ತಿಯನ್ನು ಇಟ್ಟುಕೊಳ್ಳುವ ಹಾಗಿರಲಿಲ್ಲ. ಭಿಕ್ಕು ಏಳು ವಸ್ತುಗಳನ್ನು ಮಾತ್ರ ಇಟ್ಟುಕೊಳ್ಳುವುದಕ್ಕೆ ಅನುಮತಿಸಲಾಗಿತ್ತು. ಅವೆಂದರೆ, ಒಂದು ಕ್ಷೌರದ ಕತ್ತಿ, ನೀರು ತರುವುದಕ್ಕೆ ಒಂದು ಲೋಟ, ಒಂದು ಭಿಕ್ಷಾಪಾತ್ರೆ, ಮೂರು ಚಿವರಗಳು ಮತ್ತು ಹೊಲಿಯುವುದಕ್ಕೆ ಸೂಜಿ, ದಾರ. ಈಗ ನನಗೆ ಗೊತ್ತಾಗಬೇಕಿರುವುದು ಏನೆಂದರೆ, ಕಮ್ಯೂನಿಸಮ್ಮಿನ ಸಾರ ಸರ್ವಸ್ವ ಖಾಸಗಿ ಅಸ್ತಿಯನ್ನು ಇಟ್ಟುಕೊಳ್ಳುವ ಹಾಗಿಲ್ಲ ಎಂದರೆ, ಖಾಸಗಿ ಆಸ್ತಿಯ ಬಗ್ಗೆ ನಿಯಮಗಳು 'ವಿನಯಪೀಟಿಕ' ದಲ್ಲಿರುವುದಕ್ಕಿಂತ ಹೆಚ್ಚಿನ, ಹೆಚ್ಚಿಗೆ ಕಠಿಣವಾದ ನಿಯಮಗಳು, ಇರಲು ಸಾಧ್ಯವೆ? ನನಗೆ ಒಂದು ನಿಯಮವನ್ನೂ ಕಾಣಲಾಗಿಲ್ಲ. ಆದುದರಿಂದ, ಯಾರೇ ಆಗಲೀ ಅಥವಾ ಯಾರೇ ಯುವಜನರಾಗಲೀ, ಖಾಸಗಿ ಆಸ್ತಿ ಇಟ್ಟುಕೊಳ್ಳುವ ಹಾಗಿಲ್ಲ ಎನ್ನುವ ಕಮ್ಯೂನಿಸಮ್ಮಿನ ನಿಯಮಗಳಿಂದ ಆಕರ್ಷಿತರಾದರೆ, ಅವರು ಅವನ್ನು ಇಲ್ಲಿಯೇ ಕಾಣಬಹುದು. ಈಗ ಒಂದೇ ಪ್ರಶ್ನೆಯೆಂದರೆ, ಒಟ್ಟಾರೆ ಸಮಾಜಕ್ಕೆ ಖಾಸಗಿ ಆಸ್ತಿಯನ್ನು ಇಟ್ಟುಕೊಳ್ಳುವ ಹಾಗಿಲ್ಲ ಎಂಬ ನಿಯಮವನ್ನು ಎಷ್ಟರ ತನಕ ಅನ್ವಯಿಸಬಹುದು? ಆದರೆ ಇದು ಅನುಕೂಲ ಸಿಂಧುತ್ವ, ಕಾಲ, ಪರಿಸ್ಥಿತಿಗಳು, ಮಾನವ ಸಮಾಜದ ಬೆಳವಣಿಗೆ ಇವಕ್ಕೆ ಸಂಬಂಧಪಟ್ಟ ವಿಷಯ. ಆದರೆ, ಕೇವಲ ಪ್ರಮೇಯದ ಮಟ್ಟಿಗೆ ಹೇಳುವುದಾದರೆ, ಖಾಸಗಿ ಆಸ್ತಿಯನ್ನು ರದ್ದುಗೊಳಿಸುವುದರಲ್ಲಿ ಏನಾದರೂ ತಪ್ಪಿದೆಯೇ ಎಂದು ಕೇಳಿದರೆ, ಬೌದ್ಧ ಧರ್ಮ ಅದನ್ನು ಮಾಡಲಿಚ್ಚಿಸುವವರ ದಾರಿಗೆ ಅಡ್ಡ ಬರುವುದಿಲ್ಲ? ಏಕೆಂದರೆ ಅದು ಬುದ್ಧ ಸಂಘದ ಸಂಘಟನೆಯಲ್ಲಿ ಈ ರಿಯಾಯಿತಿಯನ್ನು ಆಗಲೇ ಕೊಟ್ಟುಬಿಟ್ಟಿದೆ.

ಈಗ ನಾವು ವಿಷಯದ ಇನ್ನೊಂದು ಮುಖದತ್ತ ಬರುತ್ತೇವೆ; ಆ ಮುಖವೆಂದರೆ, ಕಾರ್ಲ್ ಮಾರ್ಕ್ಸ್ ಅಗಲೀ ಅಥವಾ ಕಮ್ಯೂನಿಸ್ಟರಾಗಲೀ ಕಮ್ಯೂನಿಸಮ್ ಆನ್ನು ತರುವುದಕ್ಕೆ ಅಳವಡಿಸಿಕೊಳ್ಳಲಿಚ್ಛಿಸುವ ಮಾರ್ಗೋಪಾಯಗಳು ಯಾವುವು ಎಂದು. ಇದೇ ಮುಖ್ಯವಾದ ಪ್ರಶ್ನೆ. ಕಮ್ಯೂನಿಸಮ್ ಅನ್ನು ತರುವುದಕ್ಕೆ ಅಂದರೆ ದುಃಖವನ್ನು ಗುರುತಿಸುವುದಕ್ಕೆ, ಕಮ್ಯೂನಿಸ್ಟರು ಅಳವಡಿಸಿಕೊಳ್ಳಲಿಚ್ಛಿಸುವ ಮಾರ್ಗವೆಂದರೆ, ಹಿಂಸೆ ಮತ್ತು ಅದನ್ನು ವಿರೋಧಿಸುವವರ ಹತ್ಯೆ ಮಾಡುವುದು. ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್ ಅವರುಗಳ ನಡುವೆ ಇರುವ ಮೂಲಭೂತ ವ್ಯತ್ಯಾಸ ಇಲ್ಲಿದೆ. ಈ ನೀತಿಗಳನ್ನು ಅಳವಡಿಸಿಕೊಳ್ಳಲು ನೈತಿಕ ಬೋಧನೆಗಳಿಂದ, ಪ್ರೀತಿಯಿಂದ, ಜನಗಳ ಮನವೊಲಿಸುವಿಕೆಯಿಂದ ಮಾಡುವುದೇ ಬುದ್ಧನು ಅನುಸರಿಸಲು ಹೇಳುವ ಮಾರ್ಗ. ಎದುರಾಳಿಯನ್ನು ಗೆಲ್ಲಲು ಅವನು ಉಪಯೋಗಿಸುವ ಮಾರ್ಗವೆಂದರೆ, ಪ್ರೀತಿ (ಶಕ್ತಿಯಲ್ಲ) ಯಾವುದನ್ನೇ ಆಗಲೀ ಗೆಲ್ಲುತ್ತದೆ ಎಂಬ ಸಿದ್ಧಾಂತವನ್ನು ಅವನಲ್ಲಿ ಒತ್ತಿಹೇಳುವುದರ ಮೂಲಕ ಮೂಡಿಸುವುದೇ ಆಗಿದೆ. ಅಲ್ಲೇ ಮೂಲಭೂತ ವ್ಯತ್ಯಾಸ ಇರುವುದು. ಬುದ್ಧ ಯಾವತ್ತೂ ಹಿಂಸಾ ಮಾರ್ಗವನ್ನು ತುಳಿಯುವುದಿಲ್ಲ. ಆದರೆ ಕಮ್ಯೂನಿಸ್ಟರು ಅದನ್ನೇ ಮಾಡುತ್ತಾರೆ. ಕಮ್ಯೂನಿಸ್ಟರಿಗೆ ಶೀಘ್ರ ಫಲಿತಾಂಶಗಳು ಸಿಗುವುದರಲ್ಲಿ ಅನುಮಾನವಿಲ್ಲ; ಏಕೆಂದರೆ ನೀವು ಹಿಂಸಾ ಮಾರ್ಗದಿಂದ ಮನುಷ್ಯರನ್ನು ನಿರ್ನಾಮ ಮಾಡಿದರೆ, ನಿಮ್ಮನ್ನು ವಿರೋಧಿಸುವಕ್ಕೆ ಯಾರೂ ಇರುವುದಿಲ್ಲ.

ನೀವು ನಿಮ್ಮ ಆದರ್ಶಗಳತ್ತ ಸಾಗಿ, ನೀವು ನಡೆಯುವ ದಾರಿಯಲ್ಲೇ ನಡೆಯಿರಿ. ನಾನು ಹೇಳಿದ ಹಾಗೆ ಬುದ್ಧ ಕ್ರಮಿಸುವ ದಾರಿ ದೂರದ ದಾರಿಯಾಗಿರಬಹುದು, ಬಹುಶಃ ಕೆಲವರು ಹೇಳಬಹುದಾದ ಹಾಗೆ ಬಳಲಿಸುವ ದಾರಿಯಾಗಿರಬಹುದು, ಆದರೆ ಅದೇ ನಿಶ್ಚಯವಾಗಿ ಗುರಿಯನ್ನು ಮುಟ್ಟಿಸುವ ದಾರಿ ಎಂಬುದರಲ್ಲಿ ನನಗೆ ಸಂಶಯ ಇಲ್ಲ.

ನನ್ನ ಬಳಿ ಎರಡು ಮೂರು ಪ್ರಶ್ನೆಗಳಿವೆ. ಅವುಗಳನ್ನು ನಾನು ಯಾವಾಗಲೂ ನನ್ನ ಕಮ್ಯುನಿಸ್ಟ್ ಸ್ನೇಹಿತರಿಗೆ ಕೇಳಿದ್ದೇನೆ. ಮುಚ್ಚುಮರೆಯಿಲ್ಲದೆ ಹೇಳುವುದಾದರೆ, ಆ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ಅವರಿಗೆ ಸಾಧ್ಯವಾಗಿಲ್ಲ. ಹಿಂಸಾ ಮಾರ್ಗದಿಂದ ಸ್ಥಾಪಿಸುವುದನ್ನು ಸಾಮಾನ್ಯ ಜನಗಳ ಸರ್ವಾಧಿಕಾರವೆಂದು ಅವರು ಕರೆಯುತ್ತಾರೆ. ಆಸ್ತಿ ಇರುವ ಜನಗಳಿಂದ ಅವರ ಆಸ್ತಿಯನ್ನು, ರಾಜಕೀಯ ಹಕ್ಕುಗಳನ್ನು ಕಿತ್ತುಕೊಳ್ಳುತ್ತಾರೆ, ಶಾಸನ ಸಭೆಯಲ್ಲಿ ಅವರು ಪ್ರಾತಿನಿಧ್ಯವನ್ನು ಪಡೆಯಲು ಸಾಧ್ಯವಿಲ್ಲ. ಅವರಿಗೆ ಮತ ನೀಡುವ ಹಕ್ಕು ಇಲ್ಲ, ಅವರು ರಾಜ್ಯದ ಎರಡನೇ ದರ್ಜೆಯ ಪ್ರಜೆಗಳ ಹಾಗೆ ಉಳಿಯಬೇಕು; ಆಳಲ್ಪಡುವವರಾಗುತ್ತಾರೆಯೇ ಹೊರತು, ಅಧಿಕಾರದಲ್ಲಾಗಲೀ, ಸರ್ಕಾರದಲ್ಲಾಗಲೀ ಅವರಿಗೆ ಪಾಲು ಇಲ್ಲ. ಜನಗಳನ್ನು ಪಾಲಿಸುವದಕ್ಕೆ ಸರ್ವಾಧಿಕಾರವನ್ನು ಚಲಾಯಿಸುವುದೇ ಒಳ್ಳೆಯ ವಿಧಾನವೇ ಎಂದು ನಾನು ಅವರನ್ನು ಕೇಳಿದಾಗ, ಅವರು ಹೇಳುವುದು; ಇಲ್ಲ. ನಾವು ಹಾಗೆ ಮಾಡುವುದಿಲ್ಲ, ನಮಗೆ ಸರ್ವಾಧಿಕಾರ ಎಂದರೆ ಆಗುವುದೇ ಇಲ್ಲ ಎನ್ನುತ್ತಾರೆ. ಹಾಗಾದರೆ ನೀವು ಅದಕ್ಕೆ ಹೇಗೆ ಅನುಮತಿ ಕೊಟ್ಟಿದ್ದೀರಿ ಎಂದು ನಾವು ಕೇಳುತ್ತೀವಿ. ಇದು ಒಂದು ಮಧ್ಯವರ್ತಿ ವ್ಯವಸ್ಥೆಯಷ್ಟೆ. ಅದು ಇರಲೇಬೇಕು ಎನ್ನುತ್ತಾರೆ. ನೀವು ಇನ್ನೂ ಮುಂದಕ್ಕೆ ಹೋಗಿ ಅವರನ್ನು ಕೇಳುತ್ತೀರಿ: 'ಈ ಮಧ್ಯವರ್ತಿ ಅವಧಿ ಎಷ್ಟರವರೆಗೆ ಇರುತ್ತದೆ' ಎಷ್ಟು ಕಾಲ 'ಇಪ್ಪತ್ತು ವರ್ಷ' ನಲವತ್ತು ವರ್ಷ 'ಐವತ್ತು ವರ್ಷ'. ಉತ್ತರವಿಲ್ಲ. ಜನ ಸಾಮಾನ್ಯರ ಸರ್ವಾಧಿಕಾರ ಹೇಗೋ ತಂತಾನೇ ಮಾಯವಾಗುತ್ತದೆ ಎಂದು ಪುನರುಚ್ಚರಿಸುತ್ತಾರೆ.

ಒಳ್ಳೆಯದು, ಸರ್ವಾಧಿಕಾರ ಮಾಯವಾಗುತ್ತದೆ ಎಂದು ಇಟ್ಟುಕೊಳ್ಳೋಣ. ನಾನು ಒಂದು ಪ್ರಶ್ನೆ ಕೇಳುತ್ತೇನೆ: ಸರ್ವಾಧಿಕಾರತ್ವ ಅದೃಷ್ಯವಾದರೆ ಏನಾಗುತ್ತದೆ? ಅದರ ಜಾಗಕ್ಕೆ ಬೇರೆ ಯಾವುದು ಬರುತ್ತದೆ?

ಜನಗಳಿಗೆ ಯಾವುದೋ ಒಂದು ಬಗೆಯ ಸರ್ಕಾರದ ಅವಶ್ಯಕತೆ ಬೀಳುವುದಿಲ್ಲವೆ? ಪ್ರಶ್ನೆಗೆ ಅವರ ಹತ್ತಿರ ಉತ್ತರವಿಲ್ಲ.

ಮತ್ತೆ ನಾವು ಬುದ್ಧನ ಬಳಿಗೆ ಹಿಂದಿರುಗುತ್ತೇವೆ. ಧಮ್ಮಕ್ಕೆ ಸಂಬಂಧಪಟ್ಟ ಹಾಗೆ ಈ ಪ್ರಶ್ನೆಯನ್ನು ಅವನಿಗೆ ಕೇಳುತ್ತೇವೆ. ಅವನೇನು ಹೇಳುತ್ತಾನೆ? ಬುದ್ಧ ಮಾಡಿರುವ ಅತ್ಯುತ್ತಮವಾದ ಕೆಲಸ ಏನೆಂದರೆ ಮಾನವನ ಮನಸ್ಸನ್ನು, ಪ್ರಪಂಚದ ಮನಸ್ಸನ್ನು ಸುಧಾರಣೆ ಮಾಡದ ಹೊರತು ಪ್ರಪಂಚವನ್ನು ಸುಧಾರಣೆ ಮಾಡಲಾಗುವುದಿಲ್ಲ ಎಂದು ಪ್ರಪಂಚಕ್ಕೆ ಹೇಳಿರುವುದು. ಮನಸ್ಸನ್ನು ಬದಲಾಯಿಸಿದರೆ, ಮನಸ್ಸು ಕಮ್ಯೂನಿಸ್ಟ್ ವ್ಯವಸ್ಥೆಯನ್ನು ಒಪ್ಪಿಕೊಂಡರೆ, ಅದನ್ನು ನಿಷ್ಠೆಯಿಂದ ಪ್ರೀತಿಸಿ ಅದರಂತೆ ನಡೆದುಕೊಂಡರೆ, ಅದು ಶಾಶ್ವತವಾಗುತ್ತದೆ; ಆಗ ಅದಕ್ಕೆ ಒಬ್ಬ ಮನುಷ್ಯನನ್ನು ನೇರವಾದ ದಾರಿಯಲ್ಲಿ ಹೋಗುವಂತೆ ಮಾಡಲು ಒಬ್ಬ ಸೈನಿಕನಾಗಲೀ ಅಥವಾ ಪೊಲೀಸ್ ಅಧಿಕಾರಿಯಾಗಲೀ ಬೇಕಾಗುವುದಿಲ್ಲ. ಏತಕ್ಕೆ? ಉತ್ತರವೆಂದರೆ: ಮನುಷ್ಯನ ಆತ್ಮ ಸಾಕ್ಷಿಯನ್ನೇ ಸಂಚಲನಗೊಳಿಸಿ; ಅದು ಅವನನ್ನು ಸರಿಯಾದ ದಾರಿಯಲ್ಲೇ ಸಾಗುವಂತೆ ನೋಡಿಕೊಳ್ಳಲು ಒಬ್ಬ ಕಾವಲುಗಾರನಂತೆ ಕೆಲಸ ಮಾಡುತ್ತದೆ. ಮನಸ್ಸು ಪರಿವರ್ತನೆಯಾದ ಮೇಲೆ ಯಾವ ತೊಂದರೆ ಇರುವುದಿಲ್ಲ, ಅದು ಶಾಶ್ವತ ಆಗಿ ಬಿಡುತ್ತದೆ.

ಕಮ್ಯೂನಿಸ್ಟ್ ವ್ಯವಸ್ಥೆ ಬಲ/ಶಕ್ತಿಯ ಮೇಲೆ ನಿಂತಿದೆ. ಒಂದು ವೇಳೆ ರಷ್ಯಾದಲ್ಲಿ ಸರ್ವಾಧಿಕಾರತ್ವ ಸೋತು ಬಿಟ್ಟರೆ, ಆ ಸೋಲಿನ ಕುರುಹುಗಳು ನಮಗೆ ಕಾಣಿಸಿದರೆ, ಆಗ ಏನಾಗುತ್ತದೆ? ನಾನು ಮನಗಾಣುವ ಹಾಗೆ, ರಾಜ್ಯದ ಆಸ್ತಿಯನ್ನು ತಮ್ಮದು ಮಾಡಿಕೊಳ್ಳುವುದಕ್ಕೆ ಜನರ ಮಧ್ಯೆ ರಕ್ತ ಸಿಕ್ತ ಬಡಿದಾಟ ಆಗುತ್ತದೆ. ಅದರ ಪರಿಣಾಮವೇ ಅದು. ಏತಕ್ಕೆ? ಏಕೆಂದರೆ ಅವರು ಕಮ್ಯೂನಿಸ್ಟ್ ವ್ಯವಸ್ಥೆಯನ್ನು ಸ್ವಸಂತೋಷದಿಂದ ಒಪ್ಪಿಕೊಂಡಿಲ್ಲ ಅದಕ್ಕೆ ಅವರು ವಿಧೇಯತೆಯಿಂದ ಇರುವದಕ್ಕೆ ಕಾರಣವೆಂದರೆ, ಹಾಗಿಲ್ಲದಿದ್ದರೆ ತಮ್ಮನ್ನು ನೇಣಿಗೆ ಹಾಕಲಾಗುತ್ತದೆ ಎಂಬ ಭೀತಿಯಿಂದ. ಇಂಥ ವ್ಯವಸ್ಥೆ ಯಾವತ್ತೂ ಬೇರೂರುವುದಿಲ್ಲ; ಆದ್ದರಿಂದ ನನ್ನ ತೀರ್ಮಾನದಲ್ಲಿ ಕಮ್ಯೂನಿಸ್ಟರು ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುವವರೆಗೂ, ಅವರ ವ್ಯವಸ್ಥೆ ಏತನ್ಮಧ್ಯೆ ಏನಾಗುತ್ತದೆ? ಬಲವೇ ಇಲ್ಲದಿದ್ದರೆ, ಅದರ ಹಿಂದೆ ಓಡಿ ಹೋಗುವುದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಮನಃಪರಿವರ್ತನೆಯಾಗದಿದ್ದರೆ, ಯಾವಾಗಲೂ ಬಲ ಪ್ರಯೋಗದ ಅವಶ್ಯಕತೆ ಇರುತ್ತದೆ: ಮುಕ್ತಾಯದಲ್ಲಿ ನಾನು ಹೇಳಬಯಸುವುದೇನೆಂದರೆ, ನಾನು ಬೌದ್ಧ ಮತದಲ್ಲಿ ಕಾಣುವ ಅತ್ಯಂತ ಮಹತ್ವದ ವಿಷಯವೆಂದರೆ, ಅದರ ಪ್ರಜಾಸತ್ತಾತ್ಮಕ ವ್ಯವಸ್ಥೆ. ರಾಜ ಅಜಾತಶತೃವಿನ ಪ್ರಧಾನ ಮಂತ್ರಿ ಬುದ್ಧನಿಗೆ ಅಜಾತಶತೃ ವಜ್ಜಿಗಳನ್ನು ಆಕ್ರಮಿಸುವುದಕ್ಕೆ ಹೋಗುತ್ತಿದ್ದಾನೆಂದು ಹೇಳುವುದಕ್ಕೆ ಹೋದಾಗ, ಬುದ್ಧನು ವಜ್ಜಿಗಳಿಗೆ ಹೇಳುತ್ತಾನೆ: ವಜ್ಜಿಗಳು ಎಲ್ಲಿಯವರೆಗೆ ತಮ್ಮ ಪುರಾತನವಾದ ವ್ಯವಸ್ಥೆಯನ್ನು ಬಿಡದೆ ಅನುಸರಿಸುತ್ತಾರೋ ಅಲ್ಲಿಯವರೆಗೆ ರಾಜನಿಗೆ ಅವರನ್ನು ಗೆಲ್ಲಲು ಸಾಧ್ಯವಾಗುವುದಿಲ್ಲ ಎಂದು. ಬುದ್ಧ ತಾನು ಏನು ಹೇಳುತ್ತಿದ್ದೇನೆಂದು ಸರಳವಾದ ಭಾಷೆಯಲ್ಲಿ ಏತಕ್ಕೆ ವಿವರಿಸಲಿಲ್ಲ ಎಂಬ ಕಾರಣ ಗೊತ್ತಾಗಲಿಲ್ಲ. ಆದರೆ ವಜ್ಜಿಗಳಿಗೆ ಪ್ರಜಾಸತ್ತಾತ್ಮಕ ಒಕ್ಕೂಟ ವ್ಯವಸ್ಥೆ ಇರುವ ಸರ್ಕಾರ ಇತ್ತೆಂಬುದಕ್ಕೆ ಬುದ್ಧ ಪರಾಮರ್ಶಿಸುತ್ತಿದ್ದನೆಂಬುದರಲ್ಲಿ ಯಾವ ಸಂಶಯವು ಇಲ್ಲ. ಬುದ್ಧ ಹೇಳಿದ: ಎಲ್ಲಿಯವರೆಗೆ ವಜ್ಜಿಗಳು ತಮ್ಮ ವ್ಯವಸ್ತೆಯನ್ನು ಅನುಸರಿಸಿಕೊಂಡು ಹೋಗುತ್ತಾರೋ, ಅವರು ಆಕ್ರಮಣಕ್ಕೆ ಒಳಗಾಗುವುದಿಲ್ಲ. ಬುದ್ಧ ತಾನೇ ಒಬ್ಬ ಮಹಾನ್ ಪ್ರಜಾಸತ್ತಾತ್ಮಕ ವಾದಿಯಾಗಿದ್ದ.

ಆದುದರಿಂದ ಅಧ್ಯಕ್ಷರು ನನಗೆ ಅನುಮತಿಸುವುದಾದರೆ ನಾನು ಒಬ್ಬ ರಾಜಕೀಯ ವಿದ್ಯಾರ್ಥಿಯಾಗಿದ್ದೇನೆ. ನಾನೂನು ಒಬ್ಬ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದೇನೆ ಎಂದು ಹೇಳಬಯಸುತ್ತೇನೆ. ನಾನು ಒಬ್ಬ

ಅರ್ಥಶಾಸ್ತ್ರದ ಪ್ರಾಚಾರ್ಯನಾಗಿದ್ದೆ ನಾನು ಕಾರ್ಲ್ ಮಾರ್ಕ್ಸನ ಅಧ್ಯಯನದಲ್ಲಿ ಬಹಳಷ್ಟು ಸಮಯವನ್ನು ಕಳೆದಿದ್ದೇನೆ, ಮತ್ತೂ ಕೂಡ ಬುದ್ಧನ ಧಮ್ಮವನ್ನು ಅಧ್ಯಯನ ಮಾಡುವುದಕ್ಕಾಗಿ ಬಹಳಷ್ಟು ಸಮಯವನ್ನು ವ್ಯಯ ಮಾಡಿದ್ದೇನೆ. ಎರಡನ್ನೂ ಹೋಲಿಕೆ ಮಾಡಿದ ಮೇಲೆ, ಪ್ರಪಂಚದ ಅತಿ ದೊಡ್ಡ ಸಮಸ್ಯೆಯಾದ ದುಃಖವನ್ನು ನಿವಾರಿಸಬೇಕು. ಎಂಬ ಸಲಹೆ ಎಲ್ಲಕ್ಕಿಂತ ಹೆಚ್ಚು ಅಪಾಯವಿಲ್ಲದ್ದು ಹೆಚ್ಚು ಸುಭದ್ರವಾದದ್ದು ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಹೀಗೆ ನಾನು ಬೌದ್ಧ ಮತಗಳಿರುವ ದೇಶಗಳಲ್ಲಿನ ಯುವ ಪೀಳಿಗೆಗೆ ಕೊಡುವ ಸಲಹೆ ಏನೆಂದರೆ, ಬುದ್ಧನ ಬೋಧನೆಗಳಿಗೆ ಇನ್ನೂ ಹೆಚ್ಚಿನ ಗಮನವನ್ನು ಕೊಡಿ ಎಂದು. ನಾನು ಹಾಗೆ ಹೇಳಬಹುದಾದರೆ, ಬೌದ್ಧ ದೇಶದಲ್ಲಿ ಧಮ್ಮಕ್ಕೆ ಏನಾದರೂ ಅಪಾಯ ಸಂಭವಿಸಿದರೆ, ಭಿಕ್ಕುಗಳನ್ನೇ ದೂಷಿಸಬೇಕಾಗುತ್ತದೆ, ಏಕೆಂದರೆ, ಅವರು ತಮ್ಮ ಮೇಲೆ ಹೊರಿಸಿರುವ ಕರ್ತವ್ಯವನ್ನು ಸಂಪೂರ್ಣವಾಗಿ ನಿಭಾಯಿಸುತ್ತಿಲ್ಲ. ಅವನು ಧರ್ಮ ಪ್ರಚಾರ ಎಲ್ಲಿ ಮಾಡುತ್ತಿದ್ದಾನೆ? ಅವನು ಆಶ್ರಮದ ನೆರಳಿನಲ್ಲಿ ಕುಳಿತುಕೊಂಡು ತನ್ನ ಊಟವನ್ನು, ನಿಸ್ಸಂಶಯವಾಗಿ ಒಂದೇ ಊಟವನ್ನು ಮಾಡಿ ತೆಪ್ಪಗೆ ಕುಳಿತಿದ್ದಾನೆ. ಬಹುಶಃ ಓದುತ್ತಿರಬಹುದು, ಬಹುಶಃ ನಿದ್ದೆ ಮಾಡುತ್ತಿರಬಹುದು, ಮತ್ತು ಸಾಯಂಕಾಲದಲ್ಲಿ ಸ್ವಲ್ಪ ಸಂಗೀತವನ್ನು ಕೇಳುತ್ತಿರಬಹುದು. ಧರ್ಮವನ್ನು ಪ್ರಚಾರ ಮಾಡುವ ರೀತಿ ಇದಲ್ಲ.

ನನ್ನ ಸ್ನೇಹಿತರೆ, ನಾನು ನಿಮಗೆ ಹೇಳಬಯಸುವುದೇನೆಂದರೆ, ನಾನು ಯಾರನ್ನೂ ಟೀಕಿಸ ಬಯಸುವುದಿಲ್ಲ.; ಆದರೆ, ಧರ್ಮವೆಂಬುದು, ಒಂದು ಸಮಾಜದ ಪುನರುಜ್ಜೀವನ ಮಾಡುವ ಒಂದು ನೈತಿಕ ಬಲ ಆಗಬೇಕಾದರೆ, ಅದನ್ನು ನೀವು ಸತತವಾಗಿ ಜನಗಳ ಕಿವಿಯೊಳಕ್ಕೆ ಊದುತ್ತಲೇ ಇರಬೇಕು. ಒಂದು ಮಗು ಪಾಠಶಾಲೆಯಲ್ಲಿ ಎಷ್ಟು ವರ್ಷಗಳನ್ನು ಕಳೆಯಬೇಕು? ನೀವು ಒಂದು ದಿನದ ಮಟ್ಟಿಗೆ ಮಗುವನ್ನು ಪಾಠಶಾಲೆಗೆ ಕಳುಹಿಸಿ ಮನೆಗೆ ವಾಪಸ್ ಕರೆದುಕೊಂಡು ಬರುವುದಿಲ್ಲ; ಹಾಗೆ ಮಾಡಿದರೆ ಮಗು ಬೆಳೆದು ವಿದ್ಯಾವಂತನಾಗಿ ಬಿಡುತ್ತದೆಂದು ನಿರೀಕ್ಷಿಸಲಾಗುವುದಿಲ್ಲ. ಮಗು ಶಾಲೆಗೆ ಪ್ರತಿ ದಿನವೂ ಹೋಗಬೇಕು, ಅಲ್ಲಿ ಐದು ಗಂಟೆಗಳ ಕಾಲ ಕುಳಿತುಕೊಳ್ಳಬೇಕು ಮತ್ತು ನಿರಂತರವಾಗಿ ಓದಬೇಕು. ಆಗ ಆಗ ಮಾತ್ರ ಮಗುವಿಗೆ ಜ್ಞಾನ ಮತ್ತು ಪಾಂಡಿತ್ಯ ದೊರಕಬಹುದು. ಇಲ್ಲಿ ಆಶ್ರಮವೆನ್ನುವುದು ರಾಜ್ಯವಲ್ಲ. ಭಿಕ್ಕುಗಳು ಜನಗಳನ್ನು ಯಾವುದೇ ಒಂದು ದಿನವಾದರೂ ಕರೆದು ಯಾವುದೋ ಒಂದು ವಿಷಯದ ಮೇಲೆ ಅಥವಾ ನೈತಿಕ ಶಿಕ್ಷಣದ ಮೇಲೆ ಪ್ರವಚನವನ್ನು ಕೊಡುವುದಿಲ್ಲ. ಅದನ್ನು ನಾನು ಯಾವತ್ತೂ ನೋಡಿಲ್ಲ.

ಒಮ್ಮೆ ನಾನು ಸಿಲೋನಿಗೆ ಹೋಗಿದ್ದೆ; ಅಲ್ಲಿನ ಜನಗಳಿಗೆ ನಾನು ನಿರ್ದಿಷ್ಟವಾಗಿ ಭಿಕ್ಕುಗಳು ಹೇಗೆ ಮತ ಪ್ರಚಾರ ಮಾಡುತ್ತಾರೆಂದು ತಿಳಿಯಲು ಕಾತರನಾಗಿದ್ದೇನೆಂದು ಹೇಳಿದೆ.ಅವರು ತಮ್ಮ ಹತ್ತಿರ 'ಬನ' ಇದೆಯೆಂದು ಹೇಳಿದರು. 'ಬನ' ಅನ್ನುವ ಒಂದು ಪದದ ಅರ್ಥ 'ವಣಕ' ಎಂದು ನನಗೆ ಆಮೇಲೆ ಗೊತ್ತಾಯಿತು. ನನ್ನನ್ನು ೧೧ ಗಂಟೆಗೆ ಒಂದು ಜಾಗಕ್ಕೆ ಕರೆದುಕೊಂಡು ಹೋದರು; ಅದು ಸಣ್ಣದಾದ ಚೌಕಾಕಾರದ ಒಂದು ಮೇಜಿನಷ್ಟಿತ್ತು. ನಾನು ನೆಲದ ಮೆಲೆ ಕುಳಿತುಕೊಂಡೆ. ಒಬ್ಬ ಭಿಕ್ಕುವನ್ನು ಒಳಗೆ ಕರೆದುಕೊಂಡು ಬಂದರು. ಅನೇಕ ಪುರುಷರು ಮತ್ತು ಸ್ತ್ರೀಯರು ನೀರನ್ನು ತಂದು ಅವನ ಪಾದವನ್ನು ತೊಳೆದರು. ಅವನು ಮೇಲೆ ಬಂದು ಕುಳಿತುಕೊಂಡ. ಅವನ ಹತ್ತಿರ ಒಂದು ಬೀಸಣಿಗೆ ಇತ್ತು, ಅವನು ಏನು ಹೇಳಿದ ಎಂಬುದು ದೇವರಿಗೇ ಗೊತ್ತು; ಹೌದು, ಅವನು ಸಿಂಹಳ ಭಾಷೆಯಲ್ಲಿ ಬೋಧಿಸುತ್ತಿದ್ದ. ಅದು ಎರಡು ನಿಮಿಷಕ್ಕಿಂತ ಹೆಚ್ಚಾಗಿರಲಿಲ್ಲ, ಆಮೇಲೆ ಅವನು ಅಲ್ಲಿಂದ ಹೊರಟು ಬಿಟ್ಟ.

ನೀವು ಕ್ರಿಶ್ಚಿಯನ್ ಚರ್ಚಿಗೆ ಹೋಗುತ್ತೀರಿ. ಅಲ್ಲಿ ಏನಾಗುತ್ತದೆ? ಪ್ರತಿ ವಾರವೂ ಜನಗಳು ಅಲ್ಲಿ

ಸೇರುತ್ತಾರೆ. ಅವರು ಪೂಜೆ ಮಾಡುತ್ತಾರೆ, ಪಾದ್ರಿಯೊಬ್ಬ ಬೈಬಲ್ಲಿನಿಂದ ಯಾವುದೋ ಒಂದು ವಿಷಯದ ಮೇಲೆ ಪ್ರವಚನವನ್ನು ಕೊಡುತ್ತಾನೆ; ಅದು ಜನಗಳಿಗೆ ಅವರು ಏನು ಮಾಡಬೇಕೆಂದು ಜೀಸಸ್ ಹೇಳಿದ ಎಂದು ನೆನಪಿಸಲು. ಬಹುಶಃ ನಿಮಗೆ ಆಶ್ಚರ್ಯವಾಗಬಹುದು, ಕ್ರೈಸ್ತ ಧರ್ಮದ ನೂರಕ್ಕೆ ತೊಂಭತ್ತು ಭಾಗ ಬೌದ್ಧ ಮತದಿಂದ ಸಾರಸರ್ವಸ್ವದಲ್ಲಿ ಮತ್ತು ಸ್ವರೂಪದಲ್ಲಿ ನಕಲು ಮಾಡಲಾಗಿದೆ ಎಂದು; ನೀವು ರೋಮ್ ಪಟ್ಟಣಕ್ಕೆ ಹೋಗಿ. ಅಲ್ಲಿಯ ಪ್ರಮುಖ ಚರ್ಚನ್ನು ನೋಡಿ. ನಿಮಗೆ ಬೇರೂತ್ ನಲ್ಲಿ ಇರುವ 'ವಿಶ್ವ ಕರ್ಮ' ಎಂಬ ಹೆಸರಿನ ಒಂದು ದೊಡ್ಡ ದೇವಸ್ಥಾನ ನೆನಪಿಗೆ ಬರುತ್ತದೆ.

ಬೌದ್ಧ ಧರ್ಮದ ಮೆಲೆ ಒಂದು ಪುಸ್ತಕವನ್ನು ಬರೆದ ವಿಷಬಿಗ್ನೆ ಚೀನಾಕ್ಕೆ ಹೋಗಿದ್ದ. ಅವನು ಒಬ್ಬ ಮತ ಪ್ರಚಾರಕ. ಅವನಿಗೆ ಅಶ್ಚರ್ಯವಾದುದೆಂದರೆ ಬೌದ್ಧ ಧರ್ಮಕ್ಕೂ ಮತ್ತು ಕ್ರಿಶ್ಚಿಯನ್ ಧರ್ಮಕ್ಕೂ ಇರುವ ಸಾಮ್ಯತೆ ಹೇಗೆ ಆಯಿತು ಎಂದು. ಹೊರನೋಟಕ್ಕೆ ಅವನಿಗೆ ಬೌದ್ಧ ಕ್ರಿಶ್ಚಿಯನ್ ನಿಂದ ನಕಲು ಮಾಡಿದ ಎಂದು ಹೇಳುವುದಕ್ಕೆ ಧೈರ್ಯ ಬರಲಿಲ್ಲ, ಆದರೂ ಕ್ರಿಶ್ಚಿಯನ್ನರು ಬೌದ್ಧ ಧರ್ಮದಿಂದ ನಕಲು ಮಾಡಿದರು ಎಂದು ಅವನು ಒಪ್ಪಿಕೊಳ್ಳಲೂ ಇಲ್ಲ. ಬೌದ್ಧ ಧರ್ಮದಲ್ಲಿ ಅದು ಎಷ್ಟೊಂದು ತುಂಬಿದೆಯೆಂದರೆ, ಈಗ ಕಾಲ ಚಕ್ರ ತಿರುಗಿದೆ, ನಾವೀಗ ಕ್ರಿಶ್ಚಿಯನ್ನರ ಕೆಲವು ರೀತಿಗಳನ್ನು ನಕಲು ಮಾಡಿ ಅದನ್ನು ನಮ್ಮ ಜನಗಳ ಮಧ್ಯೆ ಪ್ರಚಾರ ಮಾಡಬೇಕಾಗಿದೆ. ಅವರಿಗೆ ಪ್ರತಿ ನಿತ್ಯ, ಎಲ್ಲಾ ದಿವಸ ಮತ್ತು ಯಾವಾಗಲೂ, ಬುದ್ಧನ ಧಮ್ಮ ಅಲ್ಲಿದೆ, ಅವರ ಬಳಿ ನಿಂತು ಅವರು ತಪ್ಪು ದಾರಿಯಲ್ಲಿ ಹೋಗದಿರಲು ಅವರನ್ನು ಪೋಲೀಸಿನವನಂತೆ ಕಾವಲು ಕಾಯುತ್ತಿದೆ ಎಂದು ಅವರಿಗೆ ಅರಿವನ್ನು ಉಂಟು ಮಾಡಬೇಕು. ಅದು ಮಾಡದಿದ್ದರೆ, ಬಹುಶಃ ಈ ಧರ್ಮ ಕ್ಷೀಣಿಸುತ್ತಿರುವ ಸ್ಥಿತಿಯಲ್ಲೇ ಉಳಿದುಕೊಂಡು ಬಿಡುತ್ತ್ತದೆ. ಈಗಲೂ ಸಹ ನಾನು ಕಂಡಿರುವ ಹಾಗೆ ಕೆಲವು ಬೌದ್ಧ ದೇಶಗಳಲ್ಲಿ ಅದು ಬಹಳ ಕ್ಷೀಣಿಸುತ್ತಿರುವ ಸ್ಥಿತಿಯಲ್ಲೇ ಇದೆ. ಆದರೆ ಅದರ ಪ್ರಭಾವ ಮಾತ್ರ ಅಲ್ಲಿದೆ. ಅದರಲ್ಲಿ ಯಾವ ಸಂಶಯವೂ ಇಲ್ಲ.

ಪರಿಸಮಾಪ್ತಿಯಾಗಿ, ಬರ್ಮದಲ್ಲಿ ನಾನು ನೋಡಿದ ಒಂದು ಸ್ವಾರಸ್ಯಕರ ಘಟನೆಯನ್ನು ನಿಮಗೆ ಹೇಳಬಯಸುತ್ತೇನೆ. ನಾನು ಬರ್ಮಾಕ್ಕೆ ಹೋದೆ. ನನ್ನನ್ನು ಸಮ್ಮೇಳನಕ್ಕಾಗಿ ಕರೆದಿದ್ದರು. ತಮ್ಮ ಹಳ್ಳಿಗಳನ್ನು ಹೇಗೆ ಪುನರ್ನಿರ್ಮಾಣ ಮಾಡುತ್ತಿದ್ದೇವೆಂದು ನನಗೆ ತೋರಿಸಲು ನನ್ನನ್ನು ಕರೆದು ಕೊಂಡು ಹೋದರು. ನನಗೆ ಬಹಳ ಸಂತೋಷವಾಯಿತು. ನಾನು ಅವರೊಂದಿಗೆ ಇದ್ದೆ. ಆ ಸಮಿತಿ ಆ ಹಳ್ಳಿಯನ್ನು ಸುಧಾರಣೆ ಮಾಡಲು ಯೋಜಿಸಿದ್ದರು. ಎಂದಿನ ಹಾಗೆ ಅವರ ಬೀದಿಗಳು ಅಂಕು ಡೊಂಕಾಗಿದ್ದವು., ಅಲ್ಲಿ ಇಲ್ಲಿ ಬಗ್ಗಿದ್ದವು, ಯಾವುದೂ ಒಂದು ವ್ಯವಸ್ಥೆಗೆ ಒಳಪಟ್ಟಿರಲಿಲ್ಲ. ಆದುದರಿಂದ ಸಮಿತಿ ಕಬ್ಬಿಣದ ಕಂಬಗಳನ್ನು ನೆಟ್ಟು ರಸ್ತೆ ಹೇಗೆ ಹೋಗಬೇಕೆಂದು ತೋರಿಸುವುದಕ್ಕೆ ಕಂಬಗಳಿಗೆ ಹಗ್ಗಗಳನ್ನು ಬಿಗಿದಿದ್ದರು. ಅನೇಕ ಕಡೆಗಳಲ್ಲಿ ಸಮಿತಿ ಬಿಗಿದಿದ್ದ ಹಗ್ಗಗಳು ಖಾಸಗಿಯವನ ಜಮೀನಿನ ಮೆಲೆ ಹಾದು ಹೋಗುತ್ತಿದ್ದವು. ನಾನು ಅದನ್ನು ನೋಡಿ ಇದನ್ನು ನೀವು ಹೇಗೆ ನಿಭಾಯಿಸುತ್ತೀರಿ ಎಂದು ಕೇಳಿದೆ. ನೀವು ತೆಗೆದುಕೊಳ್ಳುತ್ತಿರುವ ಜಮೀನಿಗೆ ಹಣ ಕೊಡಲು ನಿಮ್ಮ ಹತ್ತಿರ ಹಣವಿದೆಯೆ ಎಂದು ನಾನು ಅವರನ್ನು ಕೇಳಿದೆ. 'ಯಾರಿಗೂ ಹಣ ಬೇಕಿಲ್ಲ' ಎಂದು ಅವರೆಲ್ಲರೂ ಹೇಳಿದರು. ನಿಮಗೆ ಬೇಕಾದರೆ ಅದನ್ನು ತೆಗೆದುಕೊಳ್ಳಬಹುದು ಎಂದು ಎಲ್ಲರೂ ಹೇಳಿದರು. ಇದು ಏಕೆ ಹೀಗಿದೆ? ನಮ್ಮ ದೇಶದಲ್ಲಾದರೆ ನೀವು ಒಂದು ತುಣುಕು ಭೂಮಿಯನ್ನೂ ಸಹ ಪರಿಹಾರವಿಲ್ಲದೆ ತೆಗೆದುಕೊಂಡರೆ ರಕ್ತಪಾತವಾಗಿಬಿಡುತ್ತದೆ. ಆದರೆ ಇಲ್ಲಿ ಹೀಗಿದೆ. ಏತಕ್ಕೆ? ಬರ್ಮೀಯರು ತಮ್ಮ ಅಸ್ತಿಯ ಬಗ್ಗೆ ಏತಕ್ಕಾಗಿ ಇಷ್ಟು ಉದಾರವಾಗಿದ್ದಾರೆ? ಅದಕ್ಕೆ ಕಾರಣ ಬುದ್ಧ ನಮಗೆ ಹೇಳಿಕೊಟ್ಟಿದ್ದಾನೆ: 'ಸರ್ವಂ ಅನಿತ್ಯಂ' ಎಂದು. ಪ್ರತಿಯೊಂದೂ ನಶ್ವರ. ನಶ್ವರ ವಸ್ತುಗಳಿಗೆ

ಏಕೆ ಹೊಡೆದಾಡಬೇಕು? ಭೂಮಿ ಬೇಕಾದರೆ, ಪರವಾಗಿಲ್ಲ, ತೆಗೆದುಕೊಳ್ಳಿ.

ಈಗ, ಮಹಿಳೆಯರೇ ಮತ್ತು ಮಹನೀಯರೆ ಇನ್ನೂ ಮುಂದುವರಿಸುವುದಕ್ಕೆ ನನಗೆ ಆಗುವುದಿಲ್ಲವೆಂದು ತೋರುತ್ತದೆ. ನಾನು ಅದನ್ನು ಮಾಡುವ ಅವಶ್ಯಕತೆಯೂ ಇಲ್ಲ.

ನಿಮಗೊಂದು ದೃಷ್ಟಿ ಕೋನವನ್ನು ಕೊಟ್ಟೆ. ಕಮ್ಯೂನಿಸ್ಟರ ಜಯಗಳಿಂದ ಆಕರ್ಶಿತರಾಗಬೇಡಿ. ಬುದ್ಧನಿಗೆ ಜ್ಞಾನೋದಯವಾದದ್ದರಲ್ಲಿ ಹತ್ತನೇ ಒಂದು ಭಾಗ ನಮಗೆಲ್ಲಾ ಆದರೆ, ಅದೇ ಫಲಿತಾಂಶಗಳನ್ನು ಪ್ರೀತಿ, ನ್ಯಾಯ ಮತ್ತು ಸಧ್ಭಾವನೆಯಿಂದ.. ನಾವೂ ಸಹ ತರಬಹುದು, ನಿಮಗೆಲ್ಲಾ ಬಹಳ ವಂದನೆಗಳು

# ಅನುಬಂಧ I

## ಡಾ: ಅಂಬೇಡ್ಕರ್ ಅವರ ಮತಾಂತರದ ಘೋಷಣೆಯ ಮೇಲೆ ಗಾಂಧೀಜಿಯವರ ಲೇಖನಗಳು

೨೬ನೇ ಅಕ್ಟೋಬರ್ ೧೯೩೬ರ 'ಹರಿಜನ' ಪತ್ರಿಕೆಯ ಸಂಚಿಕೆಯಲ್ಲಿ 'ಆನ್ ಇಟ್ಸ್ ಲಾಸ್ಟ್ ಲೆಗ್ಸ್' ಎಂಬ ಲೇಖನದಲ್ಲಿ ಬಾಪೂಜಿ ಹೀಗೆ ಬರೆದಿದ್ದಾರೆ:

ತಾವು ಹಿಂದೂ ಆಗಿ ಸಾಯುವುದಕ್ಕಿಂತ ಬೇರೊಂದು ಧರ್ಮಕ್ಕೆ ಮತಾಂತರಗೊಳ್ಳುವುದಾಗಿ ಡಾ: ಅಂಬೇಡ್ಕರ್ ಅವರ ಬೆದರಿಕೆಗೆ ಉತ್ತರವಾಗಿ, 'ಕವಿತ' ಹೊರತಾಗಿಯೂ ಅಸ್ಪೃಷ್ಯತೆ ತನ್ನ ಕಟ್ಟ ಕಡೆಯ ಹೆಜ್ಜೆಯನ್ನು ಇಡುತ್ತಾ ಇದೆ ಎಂಬ ನನ್ನ ಹೇಳಿಕೆಗೆ ಉತ್ತರವಾಗಿ ಕೆಲವು ಟೀಕಾಕಾರರು ನನ್ನ ಹೇಳಿಕೆ ಅಸಂಬದ್ಧ ಎಂದು ಕರೆಯುವುದಕ್ಕೆ ಹಿಂದೆ ಮುಂದೆ ನೋಡಿಲ್ಲ. ವಾಸ್ತವವಾಗಿ, 'ಕವಿತ' ತಾನೇ ನನ್ನ ಹೇಳಿಕೆಯನ್ನು ಬೆಂಬಲಿಸಿದೆ. ತನ್ನ ಹುಟ್ಟಿನಿಂದಲೂ 'ಕವಿತ' ಶಾಂತಿಯುತವಾಗಿ ನಡೆದುಕೊಂಡು ಬಂದಿತ್ತು; ಆದರೆ ಒಬ್ಬ ಅತ್ಯುತ್ಸಾಹಿ ಕೆಲಸಗಾರ, ತನ್ನದೇ ಇತಿಮಿತಿಗಳ ಅರಿವಿಲ್ಲದೇ, ಕವಿತ ಹರಿಜನರನ್ನು ಧೈರ್ಯವಾಗಿ ತಮ್ಮ ಮಕ್ಕಳುಗಳನ್ನು ಸ್ಥಳೀಯ ಶಾಲೆಗೆ ಕಳುಹಿಸುವಂತೆ ತಾಕೀತು ಮಾಡಿದ್ದ. ಆದರೆ ಇದಕ್ಕೆ 'ಕವಿತ' ಸವರ್ಣ ಹಿಂದೂಗಳಿಂದಲೇ ವಿರೋಧ ಇರುವುದು ಅವನಿಗೆ ಗೊತ್ತಿತ್ತು. ಬೇರೆ ಕಡೆಯಲ್ಲಿ ಸಂಭವಿಸಿರುವ ಹಾಗೆ, ಹರಿಜನರು ತಮ್ಮ ಮಕ್ಕಳುಗಳನ್ನು ಸಾರ್ವಜನಿಕ ಶಾಲೆಗೆ ಕಳುಹಿಸುವುದರಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸುವುದರಲ್ಲಿ ಜಯಶಾಲಿಯಾಗುತ್ತಾರೆಂದು ಅವನು ಆಶಿಸಿದ್ದ. ಆದರೆ 'ಕವಿತ' ಸವರ್ಣೀಯರು ತಾವು ಕಾಲ ಬದಲಾಗಿರುವುದನ್ನು ಮಾನ್ಯ ಮಾಡಿಲ್ಲ ಎಂದು ತೋರಿಸಿ ಕೊಟ್ಟರು.

ಕೇವಲ ಕೆಲವು ವರ್ಷಗಳ ಕೆಳಗೆ 'ಕವಿತ' ಘಟನೆ ಯಾರ ಕಣ್ಣಿಗೂ ಬೀಳುತ್ತಿರಲಿಲ್ಲ. ಆಗ ಇದ್ದ ಸುಧಾರಕರು ಅತ್ಯಲ್ಪ. ಆ ಕೆಲವರೂ ಸಹ ಹೆಚ್ಚಾಗಿ ಊರುಗಳಲ್ಲಿ ಮತ್ತು ಪಟ್ಟಣಗಳಲ್ಲಿ ಇದ್ದರು, ಈಗ, ದೇವರ ದಯದಿಂದ, ಅವರ ಸಂಖ್ಯೆ ಹೆಚ್ಚಾಗುತ್ತಿದ್ದು, ಪ್ರಸ್ತುತದಲ್ಲಿ ಎಲ್ಲಾ ಹಳ್ಳಿಗೂ ತನ್ನ ಕೋಟ ಸಿಗುತ್ತದೆ. ಆದರೆ ಕೆಲವು ವರ್ಷಗಳ ಕೆಳಗೆ ಅಸ್ಪೃಷ್ಯತೆಯನ್ನು ವಿರೋಧಿಸುವಂತೆ ಹರಿಜನರ ಮನವೊಲಿಸುವುದಕ್ಕೆ ಯಾವುದೇ ಕಾರಣಕ್ಕೆ ಅವರು ಒಪ್ಪುತ್ತಿರಲಿಲ್ಲ, ಅದು ಸವರ್ಣೀಯರ ಶ್ರದ್ಧೆಯ ಭಾಗವಾಗಿದ್ದಂತೆ ಅವರ ಧರ್ಮ ಶ್ರದ್ಧೆಯ ಭಾಗವೂ ಆಗಿತ್ತು. ಅಸ್ಪೃಷ್ಯತೆಯ ವಿರುದ್ಧದ ಪ್ರಚಾರ ಸಾಧಿಸಿದ ಮುನ್ನಡೆಯ ಕುರಿತು ಈ ಅಂಕಣಗಳಲ್ಲಿ ಸಾಕಷ್ಟು ಪುರಾವೆ ಇದೆ. ಅತಿಶಯವಾದ ಮುನ್ನಡೆ ಆಗಿದ್ದರೂ, ಕವಿತ ಮತ್ತು ಅದೇ ರೀತಿಯ ಸಂಸ್ಥೆಗಳು ಹಾಗೂ ಅನೇಕ ಕಡೆಗಳಲ್ಲಿ ಬಹುಸಂಖ್ಯಾತ ಸವರ್ಣೀಯರನ್ನು ಅದು ಇನ್ನೂ ಬಾಧಿಸಿಲ್ಲವೆಂದು ತೋರಿಸುತ್ತದೆ. ಈ ವಾಸ್ತವ ಸುಧಾರಕರಿಗೆ ಮತ್ತು ಹರಿಜನರಿಗೆ ಒಂದು ಎಚ್ಚರಿಕೆಯ ಗಂಟೆಯಾಗಿದ್ದು, ಸವರ್ಣೀಯರ ಕಲ್ಲು ಹೃದಯ ಕರಗುವುದಕ್ಕೆ ಇನ್ನೂ ಬಹಳಷ್ಟು ಮಾಡಬೇಕಾಗಿದೆಯೆಂದು ತೋರಿಸುತ್ತದೆ. ಕವಿತಾದ ದುರಂತವನ್ನು ಜಾಹೀರು ಮಾಡಿದವರು ಮತ್ತು ಅದಕ್ಕೆ ಒಂದು ಅಖಿಲ ಭಾರತ ಪ್ರಾಮುಖ್ಯವನ್ನು ಕೊಟ್ಟವರು ಸವರ್ಣೀಯ ಸುಧಾರಕರು ಎಂಬುದನ್ನು

ಅವಲೋಕಿಸಬೇಕು. ಕವಿತಾದ ಹರಿಜನರೂ ಕೂಡ ತಮ್ಮ ಹಕ್ಕುಗಳಿಗೆ ಇನ್ನು ಮೇಲೆ ಚಳುವಳಿ ಮಾಡುವುದನ್ನು ಕೈ ಬಿಟ್ಟಿದ್ದಾರೆ ಎಂದು ಕೇಳಿ ನನಗೆ ನಾಚಿಕೆ ಮತ್ತು ದುಃಖವಾಯಿತು. ಅವರು ಸವರ್ಣ ಅವಿವೇಕಕ್ಕೆ ದೈನ್ಯತೆಯಿಂದ ತಲೆಬಾಗಿದ್ದಾರೆ. ಅವರಿಗೆ ಎಲ್ಲಾ ರೀತಿಯ ಸಹಾಯವನ್ನು ಕೊಟ್ಟಿದ್ದರೂ ಸಹ, ಅವರು ಕವಿತಾವನ್ನು ಬಿಡುವುದಿಲ್ಲ. ಅಲ್ಲಿ ಅಲ್ಪ ಸ್ವಲ್ಪ ಉಳಿದುಕೊಂಡಿರುವವರಿಗೆ ಬೇರೆಡೆಯಲ್ಲಿ ಗೌರವದ ದುಡಿಮೆಯಿಂದ ತಮ್ಮ ರೊಟ್ಟಿಯನ್ನು ಸಂಪಾದನೆ ಮಾಡಿಕೊಳ್ಳುವುದು ಸುಲಭ. ಅವರನ್ನು ನಮ್ಮ ರಕ್ಷಣೆಯಲ್ಲಿ ಕವಿತಾದಿಂದ ಹೊರಗೆ ಬನ್ನಿ ಎಂದು ಮನವೊಲಿಸುವ ಪ್ರಯತ್ನಕ್ಕೆ ಜಯ ದೊರಕಲಿಲ್ಲ. ಅದರ ಅಂತರ್ನಿಹಿತ ಅಸಮರ್ಪಕತೆಯಿಂದ ಅಲ್ಲದಿದ್ದರೂ, ಅದರ ಅನೇಕ ಹಿಂಬಾಲಕರ ಕಾರಣವಿಲ್ಲದ ಪುರ್ವಾಗ್ರಹದಿಂದಾಗಿ ಮತ ಪರಿವರ್ತನೆ ನ್ಯಾಯಯುತವಾಗಿದ್ದರೂ ಸಹ ಪ್ರಸ್ತುತ ಸಂದರ್ಭದಲ್ಲಿ ಅದು ಅವರ ಧ್ಯೇಯಕ್ಕೆ ಸಹಾಯಕವಾಗುವುದರ ಬದಲು ಅದನ್ನೇ ವಿಫಲಗೊಳಿಸುತ್ತಿದೆ. ಆಂಬೇಡ್ಕರ್ ಅವರಂಥ ಮುತ್ಸದ್ದಿಗಳೇ ಹೊರನಡೆದರೆ, ಹರಿಜನರ ರಕ್ಷಣೆ ಇನ್ನೂ ಕುಂಠಿತವಾಗುತ್ತದೆ. ವಾಸ್ತವವಾಗಿ, ನಮಗೆ ಗೊತ್ತಿರುವ ಹಾಗೆ, ಹಿಂದೂಯೇತರ ಹರಿಜನರು, ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಸಹ, ಅವರು ಹಿಂದೂ ಹರಿಜನರಿಗೆ ಸಹಾಯ ಮಾಡದವರಾಗಿದ್ದಾರೆ. ವಾಸ್ತವವಾಗಿ ಅವರು ತಾವು ಸೇರಿಕೊಂಡಿರುವ ಧರ್ಮದಲ್ಲಿ ಅವರದ್ದೇ ಒಂದು ವಿಶಿಷ್ಟವಾದ ವರ್ಗ. ಭಾರತದ ಜನತೆಯ ಮೇಲೆ ಭಾರತೀಯ ಮಾದರಿಯ ಅಸ್ಪೃಶ್ಯತೆಯ ಹಿಡಿತ ಹೀಗಿದೆ.

ಡಾ. ಅಂಬೇಡ್ಕರ್ ಅವರ ಸಕಾರಣವಾದ ಕೋಪ, ಸುಧಾರಕರನ್ನು ನಿರುತ್ಸಾಹಗೊಳಿಸದಿರಲಿ. ಅದರ ಬದಲು ಅವರನ್ನು ಇನ್ನು ಹೆಚ್ಚಿನ ಪ್ರಯತ್ನವನ್ನು ಮಾಡುವಂತೆ ಚುರುಕುಗೊಳಿಸಲಿ. ಅಸ್ಪೃಶ್ಯತೆಯ ವಿರುದ್ಧ ಕೆಲಸ ಮಾಡುವವರ ಸಂಖ್ಯೆ ಹೆಚ್ಚಿರುವುದು ನಿಜವಾದರೂ ಯುಗಾಂತರಗಳಿಂದ ಬಂದಿರುವ ಪೂರ್ವಾಗ್ರಹವನ್ನು ನಿವಾರಿಸುವುದಕ್ಕೆ ಬೇಕಾದ ಸಂಖ್ಯೆ ಬಹಳ ಚಿಕ್ಕದಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಹೇಗೇ ಆದರೂ, ಅಸ್ಪೃಶ್ಯತೆಯ ವಿರುದ್ಧದ ಆಂದೋಳನ ಸಾಧಿಸಿರುವ ಪ್ರಮಾಣವನ್ನು ಸಾಧಿಸಿರುವ ಚಳುವಳಿ ಮತ್ತು ಒಂದೇ ಒಂದು ಚಿಕ್ಕ ಘಟನೆ ಪ್ರಪಂಚದ ಗಮನವನ್ನು ಸೆಳೆಯಬಲ್ಲದಾಗಿರುವುದರಿಂದ, ಅಸ್ಪೃಶ್ಯತೆಯ ಕಡೆಗಾಲ ಸಮೀಪಿಸಿದೆ. ಮಾನವೀಯತೆ ಅದನ್ನು ಇನ್ನೂ ಹೆಚ್ಚು ಕಾಲ ಸಹಿಸುವುದಿಲ್ಲ.

## II

೨೧ನೇ ಮಾರ್ಚ್ ೧೯೩೬ ನೆ ತಾರೀಖಿನ ಒಂದು ಲೇಖನದಲ್ಲಿ ಬಾಪೂಜಿ ಹೀಗೆ ಬರೆದಿದ್ದಾರೆ:

ಡಾ: ಅಂಬೇಡ್ಕರ್ ಅವರು ಹಿಂದೂ ಸಮಾಜದ ಮಧ್ಯದಲ್ಲಿ ಮತಾಂತರ ಆಗುತ್ತೇನೆಂಬ ಒಂದು ಸ್ಫೋಟಕವನ್ನು ಎಸೆದಾರಭ್ಯ ಅವರು ತೆಗೆದುಕೊಳ್ಳಬೇಕೆಂದಿರುವ ಕ್ರಮದಿಂದ ಅವರನ್ನು ವಿಮುಖರನ್ನಾಗಿ ಮಾಡಲು ತರಾತುರಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಡಾ: ಅಂಬೇಡ್ಕರ್ ಅವರ ಬೆದರಿಕೆ,ವರ್ತಮಾನ ಪತ್ರಿಕೆಗಳನ್ನು ಓದಬಲ್ಲ ಅಕ್ಷರಸ್ತ ಹರಿಜನರ ಮೇಲೂ ಕೂಡ ತನ್ನ ಪರಿಣಾಮವನ್ನು ಬೀರಿದೆ; ಅವರೀಗ ನೌಕರಿಗಳಿಗಾಗಿ, ವಿದ್ಯಾರ್ಥಿವೇತನ ಮತ್ತಿತರ ಸೌಲಭ್ಯಗಳಿಗಾಗಿ ಹಿಂದೂ ಸಂಸ್ಥೆಗಳನ್ನು. ಸುಧಾರಕರನ್ನು ಸಮೀಪಿಸುತ್ತಿದ್ದಾರೆ. ಆ ಬೇಡಿಕೆಯ ಜೊತೆಗೆ ಒಂದು ಬೆದರಿಕೆಯೂ ಇದೆ, ಏನೆಂದರೆ ತಮ್ಮ ಬೇಡಿಕೆಯನ್ನು ತಿರಸ್ಕರಿಸಿದರೆ ಯಾವ ಧರ್ಮದ ಪ್ರತಿನಿಧಿಗಳು ಸಹಾಯವನ್ನು ಮಾಡುತ್ತೇವೆಂಬ ಪ್ರಸ್ತಾವನೆಯನ್ನು ಕೊಟ್ಟಿದ್ದಾರೋ ಆ ಇನ್ನೊಂದು ಧರ್ಮಕ್ಕೆ ತಾವು ಬದಲಾಯಿಸಿಕೊಳ್ಳಬೇಕಾಗುತ್ತದೆ ಎಂದು.

ಈ ಬೆದರಿಕೆಗಳು ಯಾವ ಅನುಮಾನವಿಲ್ಲದೆ, ಮುನ್ನೆಚ್ಚರಿಕೆಯಾಗಿದ್ದು, ತಮ್ಮ ಪೂರ್ವಿಕರ ಧರ್ಮದ

ಬಗ್ಗೆ ಕಾಳಜಿ ಇರುವ ಎಲ್ಲರಿಗೂ ಒಂದು ಗಂಭೀರವಾದ ವ್ಯಾಕುಲತೆಯನ್ನು ಹುಟ್ಟಿಸುತ್ತದೆ. ಆದರೆ ಆಗಾಲೇ ಹಿಂದೂ ಧರ್ಮದಲ್ಲಿ ಅಥವಾ ಇನ್ನಾವುದೇ ನಂಬಿಕೆಯನ್ನು ಕಳೆದುಕೊಂಡಿರುವವರ ಜೊತೆ ಒಪ್ಪಂದ ಮಾಡಿಕೊಳ್ಳುವುದರಿಂದ ಪ್ರಯೋಜನವಾಗುವುದಿಲ್ಲ. ಧರ್ಮವೆಂದರೆ ಅದಲು ಬದಲು ಮಾಡಿಕೊಳ್ಳುವಂಥಾದ್ದು ಅಲ್ಲ. ತಾನು ಯಾವ ಧರ್ಮಕ್ಕೆ ಸೇರಿದ್ದೇನೆಂದು ಅಥವಾ ಯಾವ ಧರ್ಮಕ್ಕೆ ಸೇರಬೇಕೆಂದಿದ್ದೇನೆಂದು ತೀರ್ಮಾನಿಸುವುದು, ಯಾರೊಬ್ಬರೂ ತಾವೇ ತೀರ್ಮಾನ ತೆಗೆದುಕೊಳ್ಳಬೇಕಾದ ವಿಷಯ. ಅದು ಯಾವ ರೂಪದಲ್ಲಿಯಾದರೂ ಕೊಂಡುಕೊಳ್ಳುವಂತ ವಸ್ತುವಲ್ಲ. ಪಾರಮಾರ್ಥಿಕ ವಿಷಯಗಳ ಸಂಬಂಧದಲ್ಲಿ ಇಂಥದೊಂದು ಅಭಿವ್ಯಕ್ತಿಯನ್ನು ಉಪಯೋಗಿಸಬಹುದಾದರೆ, ಧರ್ಮವನ್ನು ಒಬ್ಬ ತನ್ನದೇ ರಕ್ತದಿಂದ ಕೊಂಡುಕೊಳ್ಳಬಹುದು. ಆದುದರಿಂದ ಹರಿಜನನೊಬ್ಬನು ತನ್ನ ಧರ್ಮವನ್ನು ಬದಲಾಯಿಸಿಕೊಳ್ಳುತ್ತೇನೆಂಬ ಇಂಗಿತವನ್ನು ವ್ಯಕ್ತಪಡಿಸಿದರೆ, ಅವನು ಹಾಗೆ ಮಾಡುವುದಕ್ಕೆ ಸಂಪೂರ್ಣವಾಗಿ ಸ್ವತಂತ್ರನು.

ಸುಧಾರಕ ತನ್ನ ಹೃದಯವನ್ನು ಶೋಧನೆ ಮಾಡಿಕೊಳ್ಳಬೇಕು. ಈ ಪತ್ತೆ ಮಾಡಿದ್ದು ತನ್ನ ಪ್ರಯತ್ನದ್ದೋ ಅಥವಾ ತನ್ನ ನೆರೆಯವನ ಪ್ರಯತ್ನದಿಂದ ಉಂಟಾದದ್ದೋ ಎಂದು ವಿಮರ್ಶೆ ಮಾಡಿಕೊಳ್ಳಬೇಕು. ಅದು ಹಾಗೆ ಆಗಿದ್ದರೆ, ಅದು ಕ್ರಮವಾಗಿಲ್ಲದಿದ್ದರೆ, ಅದನ್ನು ಬದಲಾಯಿಸಕೊಳ್ಳಲೇಬೇಕು.

ಸನಾತನಿಗಳೆಂದು ತಮ್ಮನ್ನು ತಾವು ಕರೆದುಕೊಳ್ಳುವ ಒಂದು ದೊಡ್ಡ ಸಂಖ್ಯೆಯ ಹಿಂದೂಗಳ ನಡತೆ, ಭಾರತದ ಎಲ್ಲೆಡೆಯಲ್ಲಿ ಇರುವ ಹರಿಜನರಿಗೆ ಅನಾನುಕೂಲವನ್ನುಂಟು ಮಾಡಿ ಕೆರಳುವಂತೆ ಮಾಡಿದೆ. ಆಶ್ಚರ್ಯವೆಂದರೆ ಹಿಂದೂ ಧರ್ಮವನ್ನು ಬಿಟ್ಟವರಿಗಿಂತ ಆ ಧರ್ಮದಲ್ಲೇ ಉಳಿದುಕೊಂಡಿರುವವರ ಸಂಖ್ಯೆಯೇ ಬಹಳ ಹೆಚ್ಚು. ಇದು ಧರ್ಮದ ಬಗ್ಗೆ ಇರುವ ಅವರ ನಿಷ್ಠೆಯ ಬಗ್ಗೆ, ಅದರ ಅಂತಸ್ತ ಒಳ್ಳೆಯತನದ ಬಗ್ಗೆ ಪುಟಪುಟಗಳನ್ನೇ ಹೇಳುತ್ತದೆ. ಈ ಕಾರಣಕ್ಕಾಗಿಯೆ ಲಕ್ಷಾಂತರ ಹರಿಜನರು, ಆ ಧರ್ಮದ ಹೆಸರಿನಲ್ಲೇ ಅವರನ್ನು ಅಮಾನವೀಯ ವರ್ತನೆಗೆ ಗುರಿಪಡಿಸಿದ್ದಾಗ್ಯೂ ಅದಕ್ಕೇ ಅಂಟಿಕೊಂಡಿದ್ದಾರೆ.

ಹರಿಜನರ ಈ ಆಶ್ಚರ್ಯಕರ ನಿಷ್ಠೆ ಮತ್ತು ಸಾಟಿಯಿಲ್ಲದ ತಾಳ್ಮೆ, ಪ್ರತಿಯೊಬ್ಬ ಹಿಂದೂ ಕೂಡ ತಾನು ಇನ್ನೊಬ್ಬ ಹಿಂದುವನ್ನು ನೋಡಿಕೊಳ್ಳುವ ಹಾಗೆಯೇ ಹರಿಜನರನ್ನು ನೋಡಿಕೊಳ್ಳಬೇಕು. ತೀರುವಂತೆ ಮಾಡಬೇಕು. ಸವರ್ಣೀಯರ ಮುಂದೆ ಈಗ ಇರುವ ದಾರಿಯೆಂದರೆ ಒಂದು ಹಿಂದು ಧರ್ಮವನ್ನು ಬಿಡಲಿಚ್ಚಿಸುವ ಹರಿಜನರನ್ನು ಅವರಿಗೆ ಉದ್ಯೋಗದ, ವಿದ್ಯಾರ್ಥಿವೇತನದ ರೂಪದಲ್ಲಿ ಲಂಚದ ಪ್ರಲೋಭನೆಯನ್ನು ಒಡ್ಡಿ ಮಧ್ಯ ಪ್ರವೇಶಿಸಬಾರದು; ಇನ್ನೊಂದು ಕಡೆ, ಜೀವನದ ಎಲ್ಲಾ ಮುಖದಲ್ಲೂ ಅವರಿಗೆ ಸಂಪೂರ್ಣ ನ್ಯಾಯವನ್ನು ಕೊಡುವುದಕ್ಕೆ ಒತ್ತಾಯ ಮಾಡಬೇಕು. ವಾಸ್ತವವಾಗಿ ಸುಧಾರಕರು ಹರಿಜನರ ಅವಶ್ಯಕತೆಗಳು ಏನು ಎಂದು ನಿರೀಕ್ಷಣೆ ಮಾಡಬೇಕಲ್ಲದೆ ಅವರು ದೂರುವ ತನಕ ಕಾಯಬಾರದು. ಹರಿಜನ ಸೇವಕ ಸಂಘ ಅಸ್ಪೃಷ್ಯತೆಯನ್ನು ನಿವಾರಿಸಲು ಇರುವ ಅತ್ಯಂತ ದೊಡ್ಡ ಸಂಸ್ಥೆ. ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಕೊಡಲು ಅದು ಅತ್ಯಂತ ಉದಾರವಾದ ನೀತಿಯನ್ನು ಅಳವಡಿಸಿಕೊಂಡಿದೆ. ಅದು ಸಾಧ್ಯವಾದಷ್ಟು ಮಂದಿ ಹರಿಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡಿದೆ. ಆದರೆ ಅದು ಯಾವುದೇ ಅರ್ಥದಲ್ಲಿ ನಿರುದ್ಯೋಗಿ ಹರಿಜನರಿಗೆ ಕೆಲಸಗಳನ್ನು ಹುಡುಕಿಕೊಡುವ ಉದ್ಯೋಗ ವಿನಿಮಯ ಬ್ಯೂರೋ ಅಲ್ಲ. ಸಾಮಾನ್ಯವಾಗಿ ಹೇಳುವುದಾದರೆ, ಕೆಲಸ ಬೇಕೆಂದು ಕೇಳಿಕೊಂಡು ಬರುವ ಹರಿಜನರಿಗೆ ಆ ಕೆಲಸಕ್ಕೆ ಬೇಕಾದ ಅರ್ಹತೆ ಇದ್ದರೆ, ಕೆಲಸಗಳಿಗೇನೂ ಕೊರತೆ ಇಲ್ಲ. ಸಾವಿರಾರು ಹರಿಜನರು ಎದುರಿಸಿತ್ತಿರುವ ಅತ್ಯಂತ ಯಾತನೆಯ ಸಂಗತಿಯೆಂದರೆ, ಕುಡಿಯುವ ಮತ್ತು ಗೃಹ ಬಳಕೆಗೆ

ಬೇಕಾಗುವ ಶುದ್ಧವಾದ ನೀರು ದೊರೆಯದೇ ಇರುವುದು. ಸಾರ್ವಜನಿಕ ಶಾಲೆಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಪ್ರವೇಶವನ್ನು ನಿರಾಕರಿಸಿರುವುದು, ಹಳ್ಳಿಗಳಲ್ಲಿ ಎದುರಿಸಬೇಕಾದ ನಿರಂತರ ಚುಚ್ಚು ಮುಳ್ಳುಗಳು, ಮತ್ತು ಕಡೆಯದಾಗಿ, ಕನಿಷ್ಟವಾಗಿಯೇನೂ ಅಲ್ಲ, ಪೂಜೆ ಮಾಡಲು ದೇವಸ್ಥಾನಗಳಿಗೆ ಪ್ರವೇಶ ನಿರಾಕರಣೆ. ಈ ದೌರ್ಬಲ್ಯಗಳು ಅಗಾಧವಾದ ಹರಿಜನ ಸಮೂಹದ ಜೀವನದಲ್ಲಿ ಅವರು ಎದುರಿಸಬೇಕಾದ ಕಟು ಸತ್ಯಗಳು. ಅವರು ಸಾಮೂಹಿಕವಾಗಿ ಹಿಂದೂ ಧರ್ಮವನ್ನು ಬಿಟ್ಟುಬಿಟ್ಟರೆ ಅದಕ್ಕೆ ಕಾರಣ ಅವರನ್ನು ಈ ನಿರ್ಬಲತೆಗಳಿಂದಾಗಿ ಹಿಂದೂ ಸಮಾಜ ಅವರಿಗೆ ಕುಷ್ಟ ರೋಗಿಗಳು ಎಂಬ ಹಣೆಪಟ್ಟಿ ಕಟ್ಟಿರುವುದು. *ಹಿಂದೂ ಧರ್ಮ ಈಗ ಅಗ್ನಿ ಪರೀಕ್ಷೆಗೆ ಒಳಗಾಗಿದೆ. ಅದು ಒಬ್ಬಿಬ್ಬರು ಮತಾಂತರವಾದರೆ ನಾಶವಾಗುವುದಿಲ್ಲ, ಸಾಮೂಹಿಕವಾಗಿ ಮತಾಂತರವಾದರೂ ನಾಶವಾಗುವುದಿಲ್ಲ, ಆದರೆ ಹರಿಜನರಿಗೆ ಕನಿಷ್ಟ ಪ್ರಾಥಮಿಕ ನ್ಯಾಯವನ್ನು ನಿರಾಕರಿಸುತ್ತಿರುವ ಸವರ್ಣ ಹಿಂದೂಗಳೆಂದು ಕರೆಯಲ್ಪಡುತ್ತಿರುವ ಪಾಪಿಷ್ಟರಿಂದ ನಾಶವಾಗಿ ಬಿಡುತ್ತದೆ. ಆದ್ದರಿಂದ ಮತಾಂತರದ ಪ್ರತಿಯೊಂದು ಬೆದರಿಕೆಯೂ ಸವರ್ಣೀಯರಿಗೊಂದು ಎಚ್ಚರಿಕೆಯ ಗಂಟೆ. ಅವರು ಸಕಾಲದಲ್ಲಿ ಎಚ್ಚರಗೊಳ್ಳದಿದ್ದರೆ ಕಾಲ ಮಿಂಚಿಹೋಗಿರುತ್ತದೆ.*

(ಓರೆ ಅಕ್ಷರಗಳನ್ನು ಬೇಕೆಂದೇ ಬಳಸಲಾಗಿದೆ)

ತಾಳ್ಮೆ ಕಳೆದುಕೊಂಡಿರುವ, ಬಡ ಹರಿಜನರಿಗೊಂದು ಕಿವಿ ಮಾತು. ಅವರು ಹಿಂದೂ ಸಂಸ್ಥೆಗಳನ್ನು ಮತ್ತು ವ್ಯಕ್ತಿಗಳನ್ನು ಯಾವುದೇ ಸಹಾಯ ಬೇಕೆಂದು ಸಮೀಪಿಸುವಾಗ ಬೆದರಿಕೆಯನ್ನು ಒಡ್ಡಬಾರದು. ಅವರು ತಮ್ಮ ನ್ಯಾಯ ಸಮ್ಮತ ಬೇಡಿಕೆಯ ಅರ್ಹತೆಯ ಮೇಲೆ ನಂಬಿಕೆ ಇಡಬೇಕು. ಬಹುಸಂಖ್ಯಾತ ಹರಿಜನರಿಗೆ ಮತಾಂತರವಾದರೆ ಯಾವ ಪರಿಣಾಮ ಆಗುತ್ತದೆ ಎಂದು ಗೊತ್ತಿಲ್ಲ. ಸವರ್ಣೀಯರು ಅವರ ಸ್ವಾರ್ಥಕ್ಕಾಗಿ ತಮ್ಮನ್ನು ತಳ್ಳಿಬಿಟ್ಟಿರುವ ದುರ್ದಶೆಯಿಂದ ಮೂಕರಾಗಿ ನರಳುತ್ತಿದ್ದಾರೆ. ಅವರು ದೂರು ಮಾಡಲಿ ಬಿಡಲಿ, ಅವರು ಹಿಂದೂ ಸುಧಾರಕರ ಪ್ರಾಥಮಿಕ ಆಸಕ್ತಿಯಾಗಬೇಕು. ದುರವಸ್ಥೆಯನ್ನು ಅರಿತುಕೊಳ್ಳುವಷ್ಟು ವಿದ್ಯಾವಂತರಾಗಿರುವವರು, ಮತಾಂತರ ಎಂದರೆ ಏನು ಎಂದು ಗೊತ್ತಿರುವವರು, ತಮ್ಮ ಪೂರ್ವಜರ ಧರ್ಮವನ್ನು ತ್ಯಜಿಸಲಾರದಷ್ಟು ಅತ್ಯಂತ ಒಳ್ಳೆಯ ಹಿಂದೂಗಳಾಗಿದ್ದು ಅವರಿಗೆ ಎಲ್ಲಾ ಸಹಾಯವನ್ನು ಕೊಡಬೇಕು ಅಥವಾ ಧರ್ಮದ ಬಗ್ಗೆ ಉದಾಸೀನವಿದ್ದು ತಾವು ಹಿಂದೂ ಧರ್ಮದಲ್ಲೇ ಉಳಿಯುವುದಕ್ಕೆ ಸಮ್ಮತಿಸಲು ಸವರ್ಣೀಯ ಹಿಂದೂಗಳಿಂದ ಯಾವ ಸಹಾಯವನ್ನೂ ಬೇಡದೆ ಇರುವವರು. ಆದ್ದರಿಂದ ನಾನು ವಿದ್ಯಾವಂತ ಹರಿಜನರುಗಳಿಗೆ ಮನವಿ ಮಾಡುವುದೇನೆಂದರೆ, ತಮ್ಮ ಹಿತದೃಷ್ಟಿಯಿಂದಲೇ ಮತಾಂತರದ ಬೆದರಿಕೆಯನ್ನೊಡ್ಡಿ ಪ್ರಾಪಂಚಿಕ ಪ್ರಯೋಜನವನ್ನು ಕೇಳಬೇಡಿ ಎಂದು. ಅದೇ ಕಾಲಕ್ಕೆ ಸುಧಾರಕರು ಯಾವುದೇ ಕಾರಣಕ್ಕಾಗಿ ಬೆದರಿಕೆಗಳಿಗೆ ಮಣಿಯದೆ, ಸವರ್ಣೀಯ ಹಿಂದೂಗಳಿಂದ ಹರಿಜನರಿಗೆ ನ್ಯಾಯವನ್ನು ದೊರಕಿಸಿಕೊಡುವುದಕ್ಕಾಗಿ ತಡೆಯಿಲ್ಲದೆ ಪರಿಶ್ರಮ ಪಡಬೇಕು.

# ಅನುಬಂಧ II

## ಸಮತಾ ಸೈನಿಕ ದಳದ ಅಂಗರಚನೆ
## ಸೈನಿಕನ ಪ್ರಮಾಣ ವಚನ

ಪರಿಶಿಷ್ಟ ಜಾತಿ ಸಮುದಾಯದ ಸದಸ್ಯನಾದ ನಾನು, ಸಮತಾ ಸೈನಿಕ ದಳದ ಸೈನಿಕನಾಗಿ ಸೇರುತ್ತಿರುವವನು, ಈ ಮೂಲಕ ಪ್ರಮಾಣ ಪೂರ್ವಕ ಪ್ರತಿಜ್ಞಾ ಮಾಡುವುದೇನೆಂದರೆ– ನಾನು ನನ್ನ ಜನರನ್ನು ದಬ್ಬಾಳಿಕೆ, ಶೋಷಣೆ ಮತ್ತು ಗುಲಾಮಗಿರಿಯಿಂದ ಅತಿಶಯ ಕೀರ್ತಿಯ ಧ್ಯೇಯವಾದ ವಿಮೋಚನೆಗಾಗಿ ಒಬ್ಬ ಗೌರವಾನ್ವಿತ, ಧೈರ್ಯವಂತ, ಶಿಸ್ತುಬದ್ಧ ಮತ್ತು ಧೃಡ ನಿರ್ಧಾರದ ಹೋರಾಟಗಾರನಾಗಿರುತ್ತೇನೆ.

ನಾನು S.S.D.ಯ ಆದೇಶವನ್ನು ಅನುಸರಿಸಿ ನನ್ನ ವರ್ಗದ ಮತ್ತು ಸಮುದಾಯದ ಜನಗಳ ಮಾನವ ಹಕ್ಕುಗಳ ರಕ್ಷಣೆಗೆ ಹೋಗುವುದಕ್ಕಾಗಿ ಸದಾ ಸಿದ್ದವಾಗಿರುತ್ತೇನೆ.

ನಾನು ಮನೋ ದೌರ್ಬಲ್ಯದಿಂದಲಾಗಲೀ, ಹೇಡಿತನದಿಂದಾಗಲೀ, ಕೇಡಿಗತನದ ಸಂಚಿನಿಂದಾಗಲೀ, ಪ್ರತಿಜ್ಞೆಯನ್ನು ಮುರಿದರೆ, ನನ್ನ ಜನಗಳ ಹಿತಾಸಕ್ತಿಗೆ ದ್ರೋಹ ಬಗೆದರೆ, ದಳ ನನಗೆ ವಿಧಿಸಬಹುದಾದ ಗರಿಷ್ಠ ಶಿಕ್ಷೆಯನ್ನು ಅನುಭವಿಸಲು ಸಿದ್ಧನಿದ್ದೇನೆ.

ಅದರಂತೆ ಮಿ: B. K. ಗಾಯಕ್ವಾಡ್ ಅವರು ಅಂಗರಚನೆಯ ಕರಡನ್ನು ಡಾ: ಬಿ.ಆರ್ ಅಂಬೇಡ್ಕರ್ ಅವರಿಗೆ ಅನುಮೋದನೆಗಾಗಿ ೮ನೇ ದಿಸೆಂಬರ್ ೧೯೪೪ರಂದು ಕಳುಹಿಸಿಕೊಟ್ಟರು. ಡಾ: ಬಿ.ಆರ್. ಅಂಬೇಡ್ಕರ್ ಅವರು ಕಾಗದ ತಲುಪಿದ್ದಕ್ಕೆ ಈ ರೀತಿ ಉತ್ತರಕೊಟ್ಟರು: ನನಗೆ ನಿಮ್ಮ ಪತ್ರ ಮತ್ತು ಅದರೊಂದಿಗಿದ್ದ ಸಮತಾ ಸೈನಿಕ ದಳದ ಅಂಗರಚನೆಯ ಕರಡು ತಲುಪಿದೆ?

ಸಮತಾ ಸೈನಿಕ ದಳದ ಅಂಗ ರಚನೆ

## I. ಸಂಘಟನೆಯ ಹೆಸರು ಮತ್ತು

**ಸಂಘಟನೆ:**

(೧) ಸಂಘಟನೆಯ ಹೆಸರನ್ನು 'ಸಮತಾ ಸೈನಿಕ ದಳ'ವೆಂದು ಕರೆಯಲಾಗುತ್ತದೆ. ಇನ್ನುಮುಂದೆ ಅದನ್ನು S.S.D. ಎಂದು ಉಲ್ಲೇಖಿಸಲಾಗುತ್ತದೆ.

(೨) ಸಮತಾ ಸೈನಿಕ ದಳ ಅಖಿಲ ಭಾರತ ಅನುಸೂಚಿತ ಜಾತಿಗಳ ಫೆಡರೇಶನ್ನಿನ ಅಂಗ ಸಂಸ್ಥೆ ಯಾಗಿರುತ್ತದೆ. ಫೆಡರೇಶನ್ನಿನ ಅಧ್ಯಕ್ಷರು, ಕಾರ್ಯಕಾರಿ ಪರಿಷತ್ತಿನ ಸಲಹೆಯ ಮೇರೆಗೆ ಸಮತ ಸೈನಿಕ ದಳದ ವ್ಯವಹಾರಗಳ ಮೇಲ್ವಿಚಾರಣೆ ಮಾಡುವುದಕ್ಕೆ ಪ್ರತಿಯೊಂದು ಊರಿನಲ್ಲಿ ಮತ್ತು ಪ್ರಾಂತ್ಯದಲ್ಲಿ ಒಬ್ಬರನ್ನು ನಾಮ ನಿರ್ದೇಶನ ಮಾಡುತ್ತಾರೆ, ಹಾಗೆ ನೇಮಕ ಮಾಡಿದ ಸೂಪರ್‌ವೈಸರ್ ಅವರ ಮಾರ್ಗದರ್ಶನದಂತೆ ಸಮತಾ ಸೈನಿಕ ದಳ ಕೆಲಸ ಮಾಡುತ್ತದೆ.

## II. ಗುರಿಗಳು ಮತ್ತು ಉದ್ದೇಶಗಳು

(೧) ಸಮತಾ ಸೈನಿಕ ದಳದ ಗುರಿಯೆಂದರೆ, ಜನಾಂಗ, ಧರ್ಮ, ಜಾತಿ, ಲಿಂಗ ಅಥವ ವರ್ಗ ಇವುಗಳ ಮೇಲೆ ಆಧಾರಿತ ಎಲ್ಲ ಅಸಮಾನತೆಗಳನ್ನು ನಿವಾರಿಸುವುದು ಮತ್ತು ಪರಿಶಿಷ್ಟ ಜಾತಿಯ ಸಮುದಾಯಗಳ ಎಲ್ಲ ಸದಸ್ಯರನ್ನು ಒಟ್ಟುಗೂಡಿಸುವುದು, ಸ್ವಾತಂತ್ರ್ಯ ಮತ್ತು ಸಮಾನತೆಯ ಆಧಾರದ ಮೇಲೆ ಸಮಾಜವನ್ನು ಕಟ್ಟುವುದಕ್ಕೆ ಶ್ರಮಿಸುವುದು.

(೨) ಈ ಗುರಿಯನ್ನು ಸಾಧಿಸಲು:–

(೧) ಸಮತಾ ಸೈನಿಕ ದಳ ಪರಿಶಿಷ್ಟ ಜಾತಿಯ ಯುವಕರನ್ನು ಒಟ್ಟುಗೂಡಿಸಿ ತನ್ನ ಧ್ವಜದ ಕೆಳಗೆ ಸಂಘಟಿಸಬೇಕು.

(೨) ಸಮತಾ ಸೈನಿಕ ದಳ ಎಲ್ಲಾ ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಚಟುವಟಿಕೆಗಳನ್ನು ಅನುಸೂಚಿತ ಜಾತಿಗಳವರಲ್ಲಿ, ನಿರ್ದಿಷ್ಟವಾಗಿ ಯುವಕರುಗಳ ಮನಸ್ಸಿನಲ್ಲಿ ಆತ್ಮ ಗೌರವ, ಆತ್ಮ ವಿಶ್ವಾಸ ,ಮತ್ತು ತ್ಯಾಗವನ್ನು ಬೆಳಸುವಂತೆ ಪ್ರವರ್ತಿಸಬೇಕು.

(೩) ತನ್ನ ಗುರಿ ಮತ್ತು ಉದ್ದೇಶವನ್ನು ಸಾಧಿಸುವುದಕ್ಕಾಗಿ ಸಹಾಯ ಮಾಡುವ ಎಲ್ಲಾ ಸಂಘಟನೆಗಳೊಡನೆ ಸಹಕರಿಸಬೇಕು.

## III ಸದಸ್ಯತ್ವ

ಪರಿಶಿಷ್ಟ ಜಾತಿಗಳಿಗೆ ಸೇರಿದ ೧೮ ವರ್ಷ ವಯಸ್ಸಿಗೆ ಮೇಲ್ಪಟ್ಟ ಮತ್ತು ಮೇಲ್ಕಂಡ ಗುರಿಗಳು ಮತ್ತು ಉದ್ದೇಶಗಳೊಂದಿಗೆ ಸಹಮತವಿರುವ, ಯಾವುದೇ ವ್ಯಕ್ತಿ ಸಮತಾ ಸೈನಿಕ ದಳವನ್ನು ಸೇರಬಹುದು; ಸೇರುವಾಗ ವಾರ್ಷಿಕ ಚಂದಾ ಹನ್ನೆರಡು ಆಣೆಗಳನ್ನು ಕೊಡಬೇಕು.

## IV ತರಬೇತಿ

(೧) ಸಮತಾ ಸೈನಿಕ ದಳದ ತರಬೇತಿ ದೈಹಿಕ, ಬೌದ್ಧಿಕ ಮತ್ತು ಮಿಲಿಟರಿ ರೀತಿಯ ತರಬೇತಿಯನ್ನು ಒಳಗೊಂಡಿರುತ್ತದೆ.

(೨) ಸಮತಾ ಸೈನಿಕ ದಳ ತರಬೇತಿ ಕ್ಯಾಂಪುಗಳನ್ನು, ಪಾಠಶಾಲೆಗಳನ್ನು, ಭಾಷಣಗಳನ್ನು, ಚರ್ಚೆಗಳನ್ನು, ಲೈಬ್ರರಿಗಳನ್ನು ಇತ್ಯಾದಿಗಳನ್ನು ಹಾಗೂ ತಮಗೆ ಅನುಕೂಲವೆನಿಸಿದ ಮತ್ತಿತರ ರೀತಿಯ ಚಟುವಟಿಕೆಗಳನ್ನು ಆಗಿಂದಾಗ್ಗೆ ವ್ಯವಸ್ಥೆಗೊಳಿಸಬೇಕು.

(೩) ಅಖಿಲ ಭಾರತ ಸಮತಾ ಸೈನಿಕ ದಳದ ಶಾಖೆಗಳು ಭಾರತದ ಎಲ್ಲ ಪ್ರಾಂತ್ಯಗಳಲ್ಲಿ ಕಾರ್ಯ

ನಿರ್ವಹಿಸುತ್ತವೆ, ಭಾರತದ ರಾಜ್ಯಗಳಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಶಾಖೆಗಳನ್ನು ತೆರೆಯಬೇಕು.

(೪) ಒಂದು ಊರಿನ ಅಥವಾ ಗ್ರಾಮದ ಸಮತಾ ಸೈನಿಕ ದಳದ ಸರ್ವ ಸದಸ್ಯರ ಸಭೆ ಅವರವರ ದರ್ಜೆಗಳಿಗನುಗುಣವಾಗಿ ೫ ಮಂದಿ ಸದಸ್ಯರನ್ನು, ಒಬ್ಬ ಅಧ್ಯಕ್ಷರನ್ನು, ಇಬ್ಬರು ಕಾರ್ಯದರ್ಶಿಗಳನ್ನು ಆರಿಸಿಕೊಳ್ಳಬೇಕು. ಅಲ್ಲದೆ ತಮ್ಮ ತಮ್ಮಲ್ಲಿ ಜಿಲ್ಲಾ ಸಮ್ಮೇಳನಕ್ಕೆ ಕೆಳಕಂಡ ರೀತಿಯಲ್ಲಿ ಡೆಲಿಗೇಟುಗಳನ್ನು ಆರಿಸಿಕೊಳ್ಳಬೇಕು:

೧ ರಿಂದ ೨೫ ಸದಸ್ಯರವರೆಗೆ – ಒಬ್ಬ ಡೆಲಿಗೇಟು

೨೫ ರಿಂದ ೫೦ ಸದಸ್ಯರವರೆಗೆ – ಇಬ್ಬರು ಡೆಲಿಗೇಟುಗಳು

ಮತ್ತು ಹೀಗೆಯೇ..

(೫) ಜಿಲ್ಲಾ ಸಮ್ಮೇಳನ ೧೦ ಸದಸ್ಯರು, ಒಬ್ಬ ಅಧ್ಯಕ್ಷರು, ಮತ್ತು ಇಬ್ಬರು ಕಾರ್ಯದರ್ಶಿಗಳನ್ನು ಆರಿಸಿಕೊಳ್ಳಬೇಕು. ಅಲ್ಲದೆ ತಮ್ಮ ದರ್ಜೆಗಳಿಗನುಸಾರವಾಗಿ, ಪ್ರಾಂತೀಯ ಸಮ್ಮೇಳನಕ್ಕೆ ತಮ್ಮ ತಮ್ಮಲ್ಲಿ ಕೆಳಕಂಡ ರೀತಿಯಲ್ಲಿ ಡೆಲಿಗೇಟುಗಳನ್ನು ಆರಿಸಿಕೊಳ್ಳಬೇಕು:

ಜಿಲ್ಲಾ ಸಮ್ಮೇಳನದ ೫ ಡೆಲಿಗೇಟುಗಳಿಗೆ, ಪ್ರಾಂತೀಯ ಸಮ್ಮೇಳನಕ್ಕೆ ಒಬ್ಬ ಡೆಲಿಗೇಟು ಐದರಿಂದ ಹತ್ತು ಜಿಲ್ಲಾ ಡೆಲಿಗೇಟುಗಳವರೆಗೆ, ಪ್ರಾಂತೀಯ ಸಮ್ಮೇಳನಕ್ಕೆ ಇಬ್ಬರು ಡೆಲಿಗೇಟುಗಳು ಮತ್ತು ಹೀಗೆಯೆ..

(೬) ಪ್ರಾಂತೀಯ ಸಮ್ಮೇಳನ ಅವರವರ ದರ್ಜೆಗನುಸಾರವಾಗಿ ೨೦ ಸದಸ್ಯರುಗಳನ್ನು, ಒಬ್ಬ ಅಧ್ಯಕ್ಷರನ್ನು, ಇಬ್ಬರು ಕಾರ್ಯದರ್ಶಿಗಳನ್ನು ಆರಿಸಿಕೊಳ್ಳಬೇಕು, ಅಲ್ಲದೆ, ಅಖಿಲ ಭಾರತ ಸಮ್ಮೇಳನಕ್ಕೆ ಡೆಲಿಗೇಟುಗಳನ್ನು, ಆರಿಸಿಕೊಳ್ಳಬೇಕು. ಅಖಿಲ ಭಾರತ ಸಮ್ಮೇಳನಕ್ಕೆ ಇಂಥ ಡೆಲಿಗೇಟುಗಳ ಸಂಖ್ಯೆ ಪ್ರತಿ ಪ್ರಾಂತ್ಯದ ಒಟ್ಟು ಸದಸ್ಯರ ಸಂಖ್ಯೆಯ ೫% ಅನ್ನು ಮೀರಬಾರದು.

(೭) ಅಖಿಲ ಭಾರತ ಸಮತಾ ಸೈನಿಕ ದಳ, ಒಬ್ಬ ಅಧ್ಯಕ್ಷರು, ಒಬ್ಬ ಉಪಾಧ್ಯಕ್ಷರು, ಒಬ್ಬ ಪ್ರಧಾನ ಕಾರ್ಯದರ್ಶಿ, ಇಬ್ಬರು ಜಂಟಿ ಕಾರ್ಯದರ್ಶಿಗಳು ಮತ್ತು ಪ್ರತಿ ಪ್ರಾಂತ್ಯದಿಂದ, ಅಖಿಲ ಭಾರತ ಕೇಂದ್ರ ಸಮಿತಿ ಆರಿಸಿದ ಒಬ್ಬ ಸದಸ್ಯ ಇವರುಗಳಿರುವ ಒಂದು ಅಖಿಲ ಭಾರತ ಪರಿಷತ್ತನ್ನು ಆರಿಸಿಕೊಳ್ಳಬೇಕು.

(೮) ಅಖಿಲ ಭಾರತ ಸಮತಾ ಸೈನಿಕ ದಳದ ಅಂಗ ಸಂಸ್ಥೆಗಳಾಗಿರುವ ಎಲ್ಲಾ ಪ್ರಾಂತೀಯ ಘಟಕಗಳು ವಾರ್ಷಿಕ ೨೫ ರೂಪಾಯಿಗಳನ ಫೀ ಅನ್ನು ಅಂಗ ಸಂಸ್ಥೆಯಾಗುವುದಕ್ಕೆ ಕೋಡಬೇಕು. ಇದಲ್ಲದೆ ತಮ್ಮ ಒಟ್ಟು ಆದಾಯದ ೫% ಅನ್ನು ಕೊಡಬೇಕು.

(೯) ಸಮತಾ ಸೈನಿಕ ದಳದ ಅಖಿಲ ಭಾರತ ಸಮ್ಮೇಳನವನ್ನು ವರ್ಷಕ್ಕೆ ಒಂದು ಸಲವಾದರೂ ನಡೆಸಬೇಕು.

**V ರಚನೆ :**

೧, (a) ೧೨ (ಹನ್ನೆರಡು) ಸೈನಿಕರ ಒಂದು ವಿಭಾಗ

೧೨ ಸೈನಿಕರ ಒಂದು ಗುಂಪು ಒಂದು ವಿಭಾಗವಾಗುತ್ತದೆ. ಇಂಥ ವಿಭಾಗದ ಚುನಾಯಿತ ನಾಯಕರುಗಳನ್ನು ಮೊದಲನೆಯ ಮತ್ತು ಎರಡನೆಯ ನಾಯಕರಗಳು ಎಂದು ಕರೆಯಲಾಗುತ್ತದೆ.

೨. (b) ೨೪ (೨ ವಿಭಾಗಗಳು – ಒಂದು ಪ್ಲಟೂನ್)

ಇಂಥ ೨ ವಿಭಾಗಗಳು ಒಂದು ಪ್ಲಟೂನ್ ಆಗುತ್ತದೆ. ವಿಭಾಗೀಯ ನಾಯಕರುಗಳಿಂದ ಚುನಾಯಿಸಲ್ಪಟ್ಟ ಒಬ್ಬ ಪ್ಲಟೂನಿನ ನಾಯಕನನ್ನು ಪ್ಲಟೂನ್ ಲೀಡರ್ ಎಂದು ಕರೆಯಲಾಗುತ್ತದೆ.

೩. (c) ೯೬ (ನಾಲ್ಕು ಪ್ಲಟೂನುಗಳು–ಒಂದು ಕಂಪನಿ)

ನಾಲ್ಕು ಇಂಥ ಪ್ಲಟೂನುಗಳು ಒಂದು ಕಂಪನಿ ಆಗುತ್ತವೆ. ಪ್ಲಟೂನ್ ಲೀಡರುಗಳಿಂದ ಚುನಾಯಿಸಲ್ಪಟ್ಟ ಒಬ್ಬ ನಾಯಕನನ್ನು ಕಂಪನಿ ಕಮ್ಯಾಂಡರ್ ಎಂದು ಕರೆಯಲಾಗುತ್ತದೆ.

೪. (d) ೩೮೪ (ನಾಲ್ಕು ಕಂಪನಿ ಕಮ್ಯಾಂಡರುಗಳು – ಒಂದು ಬೆಟಾಲಿಯನ್)

ನಾಲ್ಕು ಇಂಥ ಕಂಪನಿ ಕಮ್ಯಾಂಡರುಗಳು ಒಂದು ಬೆಟಾಲಿಯನ್ ಆಗುತ್ತದೆ. ಬೆಟಾಲಿಯನ್ನಿನ ಕಂಪನಿ ಕಮ್ಯಾಂಡರುಗಳಿಂದ ಚುನಾಯಿಸಲ್ಪಟ್ಟ ಒಬ್ಬ ನಾಯಕನನ್ನು ಲೆಫ್ಟಿನೆಂಟ್ ಎಂದು ಕರೆಯಲಾಗುತ್ತದೆ.

೫. (e) ೧೧೫೨ (ಮೂರು ಬೆಟಾಲಿಯನ್ನುಗಳು – ಒಂದು ರೆಜಿಮೆಂಟ್)

ಮೂರು ಇಂಥ ಬೆಟಾಲಿಯನ್ನುಗಳು ಒಂದು ರೆಜಿಮೆಂಟ್ ಆಗುತ್ತದೆ. ಲೆಫ್ಟಿನೆಂಟುಗಳಿಂದ ಚುನಾಯಿಸಲ್ಪಟ್ಟ ನಾಯಕನನ್ನು ಒಬ್ಬ G.O.C. ಎಂದು ಕರೆಯಲಾಗುತ್ತದೆ.

೬. (f) ಎಲ್ಲಾ ಜಿಲ್ಲೆಗಳಿಂದ ಮತ್ತು ಪ್ರಾಂತ್ಯಗಳಿಂದ ಬಂದ ೨೫೦೦ ಇಂಥಾ G.O.C. ಗಳು ಒಂದು ಡಿವಿಷನ್ ಆಗುತ್ತದೆ. ಈ ಡಿವಿಷನ್ನಿಗೆ ಚುನಾಯಿಸಲ್ಪಟ್ಟ ಒಬ್ಬ ನಾಯಕನನ್ನು ಅಖಿಲ ಭಾರತ ಕಮ್ಯಾಂಡರ್–ಇನ್–ಚೀಫ್ ಎಂದು ಕರೆಯಲಾಗುತ್ತದೆ.

**ದಳದ ಮೀಟಿಂಗ್**

(೧) ಕೋರಮ್ – S.S. ದಳ ಕಡೆಯ ಪಕ್ಷ ಆರು ತಿಂಗಳಿಗೊಮ್ಮೆ ಸಭೆ ಸೇರಿ, ಕಾಲದಿಂದ ಕಾಲಕ್ಕೆ ದಳದ ಆಂಗರಚನೆಗೆ ಸುಸಂಗತವಾದ ನಿಬಂಧನೆಗಳನ್ನು ಮಾಡುತ್ತದೆ.

(೨) ಆರು ತಿಂಗಳುಗಳ ಸಭೆಗಳಿಗೆ ಅಧ್ಯಕ್ಷರು ತಾರೀಖುಗಳನ್ನು ಗೊತ್ತುಪಡಿಸುತ್ತಾರೆ; ಮತ್ತು ಅವರಿಗೆ ಸೂಕ್ತವೆಂದು ತೋರಿದ ಹಾಗೆ, ೧/೩ ರಷ್ಟು ಸದಸ್ಯರ ಲಿಖಿತ ಪ್ರಾರ್ಥನೆಯ ಮೇರೆಗೆ ಮತ್ತು ಅಂಥ ಪ್ರಾರ್ಥನೆ ತಮ್ಮ ಕೈ ಸೇರಿದ ಇಪ್ಪತ್ತು ದಿನಗಳ ಒಳಗೆ ಒಂದು ವಿಶೇಷ ಸಭೆಯನ್ನು ಕರೆಯುತ್ತಾರೆ.

(೩) ಆರು ತಿಂಗಳ ಸಭೆಗೆ ಹದಿನೈದು ದಿನಗಳ, ಮತ್ತು ವಿಶೇಷ ಸಭೆಗೆ ಹತ್ತು ದಿನಗಳ ಸ್ಪಷ್ಟ ನೋಟಿಸನ್ನು, ಅದರಲ್ಲಿ ಅಂಥ ಸಭೆ ಸೇರುವ ಸ್ಥಳ ಮತ್ತು ಸಮಯವನ್ನು ಮತ್ತು ಆ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಕಾಣಿಸಿ ಸದಸ್ಯರುಗಳಿಗೆ ಪರಿಚಲಿಸಬೇಕು.

(೪) ಮೊದಲಿನಿಂದ ಕಡೆಯವರೆಗೆ ಒಂದು ಸಭೆಯಲ್ಲಿ ಒಟ್ಟು ಸದಸ್ಯರ ಸಂಖ್ಯೆಯ ೧/೩ ಕ್ಕಿಂತ ಕಡಿಮೆ ಸದಸ್ಯರು ಹಾಜರಿದ್ದರೆ, ಆಗ ಅಧ್ಯಕ್ಷತೆ ವಹಿಸಿರುವವರು ಸಭೆಯನ್ನು ತಮಗೆ ಸಕಾರಣವಾಗಿ ತೋರಿದ ಮುಂದಿನ ದಿವಸದ ಒಂದು ಗೊತ್ತಾದ ಸಮಯಕ್ಕೆ ಅಥವ ಮುಂದಿನ ಇನ್ನಾವುದೇ ದಿವಸಕ್ಕೆ ಮುಂದಕ್ಕೆ ಹಾಕಬೇಕು; ಮತ್ತು ಮೊದಲಿನ ಸಭೆಯಲ್ಲಿ ಚರ್ಚಿಸಬೇಕೆಂದು ಗೊತ್ತು ಪಡಿಸಿದ ವಿಷಯವನ್ನು, ಮುಂದಕ್ಕೆ ಹಾಕಿದ ಸಭೆಯಲ್ಲಿ ತಂದು, ಅಂಥ ಸಭೆಯಲ್ಲಿ ಅಥವ ಯಾವುದೇ ಇತರ ಮುಂದಿನ ದಿನ ಸಭೆಯಲ್ಲಿ ಕೋರಮ್ ಇರಲಿ ಇಲ್ಲದಿರಲಿ ವಿಲೇ ಮಾಡಬೇಕು.

(೫) ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರು, ಅಥವ ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು, ಅವರೂ ಗೈರು ಹಾಜರಾಗಿದ್ದರೆ, ಹಾಜರಿದ್ದ ಸದಸ್ಯರು ಆ ಮೀಟಿಗೆಗೆಂದು ಚುನಾಯಿಸಲಾದ ಒಬ್ಬರು ಚೇರ್ಮನ್ ಆಗಿರುತ್ತಾರೆ.

(೬) ಎಲ್ಲಾ ವಿಶಯಗಳನ್ನು ಹಾಜರಿದ್ದ ಸದಸ್ಯರ ಬಹುಮತದ ವೋಟಿನಂತೆ ತೀರ್ಮಾನಿಸಬೆಕು; ಒಂದು ವೇಳೆ ಪರ–ವಿರೋಧ ವೋಟುಗಳು ಸಮ ಸಮವಾಗಿದ್ದರೆ, ಆಗ ಅಧ್ಯಕ್ಷರು, ಅಥವಾ ಉಪಾಧ್ಯಕ್ಷರು ಅಥವ ಸಭೆಯ ಚೇರ್ ಮನ್ ಅವರು ತಮ್ಮ ನಿರ್ಣಾಯಕ ಮತವನ್ನು ಚಲಾಯಿಸುತ್ತಾರೆ.

**VII ದಿನ ನಿತ್ಯದ ಕರ್ತವ್ಯಗಳು**

| | | |
|---|---|---|
| ಸೋಮವಾರ | ' ' ' | ನೀತಿ ಪಾಠ |
| ಮಂಗಳವಾರ | ' ' ' | ಆಟಗಳು, ದೈಹಿಕ ಕಸರತ್ತು |
| ಬುಧವಾರ | ' ' ' | ಮಿಲಿಟರಿ ಕವಾಯಿತು |
| ಗುರುವಾರ | ' ' ' | ಆಟಗಳು, ದೈಹಿಕ ಕಸರತ್ತು |
| ಶುಕ್ರವಾರ | ' ' ' | ಪ್ರಥಮ ಚಿಕಿತ್ಸೆ |
| ಶನಿವಾರ | ' ' ' | ಮಿಲಿಟರಿ ಕವಾಯಿತು |
| ಭಾನುವಾರ | ' ' ' | ರಾಜಕೀಯ ಮತ್ತು ಸಾಮಾಜಿಕ |

**VIII ಶಿಸ್ತು**

ದಳದ ಯಾವುದೇ ಸೈನಿಕನಾಗಲೀ ಅಥವ ಅಧಿಕಾರಿಯಾಗಲೀ ಧೂಮ್ರಪಾನ, ಮದ್ಯಪಾನ ಅಥವಾ ಕಾನೂನುಬದ್ಧ ಆದೇಶಗಳಿಗೆ ಅವಿಧೇಯತೆ ಮಾಡಿದ್ದು ಅಥವ ಇತರ ರೀತಿಯಲ್ಲಿ ತುಂಟಾಟವನ್ನು ಮಾಡಿದ್ದು ಅವರ ಮೇಲಿನವರಿಗೆ ಕಂಡುಬಂದರೆ, ಅವರಿಗೆ ಒಮ್ಮೆ ಎಚ್ಚರಿಕೆಯನ್ನು ಕೊಡಲಾಗುತ್ತದೆ. ಎಚ್ಚರಿಕೆಯನ್ನು ಕೊಟ್ಟರೂ ಸಹ, ಇಂಥದ್ದನ್ನು ಮಾಡದೆ ಇರಲು ಯಾವುದೇ ಆಸಕ್ತಿಯನ್ನು ತೋರಿಸದಿದ್ದರೆ, ಅವರ ಸಮವಸ್ತ್ರ ಮತ್ತು ಅಂತಸ್ತನ್ನು ಹಿಂದಕ್ಕೆ ಪಡೆದುಕೊಂಡು ಅವರನ್ನು ದಳದಿಂದ ವಜಾ ಮಾಡಲಾಗುತ್ತದೆ.

**IX ಸಮವಸ್ತ್ರ**

ದಳದ ಸೈನಿಕರು ಮತ್ತು ಅಧಿಕಾರಿಗಳು ವಸ್ತ್ರದ ವಿಷಯವಾಗಿ ಈ ಕೆಳಗೆ ಕಂಡ ನಿಯಮಗಳನ್ನು ಪಾಲಿಸಬೇಕು:

| | | |
|---|---|---|
| ಸೈನಿಕ್ | . . . | ಖಾಕಿ ಅರ್ಧ ಶರಾಯಿ<br>ಖಾಕಿ ಅರ್ಧ ತೋಳಿನ ಅಂಗಿ<br>ಮಡಚುವ ಟೋಪಿ<br>ಕ್ಯಾನ್ವಾಸ್ ಕಂದು ಬಣ್ಣದ<br>ಷೂ ಗಳು ಅಥವಾ ಪಥಾನಿ ಕಾಲು<br>ಚೀಲಗಳು ಮತ್ತು (ಚಪ್ಪಲಿಗಳು) |
| ಅಧಿಕಾರಿಯೇತರ | . . . | ಖಾಕಿ ಅರ್ಧ ಶರಾಯಿ<br>ಖಾಕಿ ಅರ್ಧ ತೋಳಿನ ಅಂಗಿ<br>ಕಂದು ಬಣ್ಣದ ಬೂಟುಗಳು<br>ಉಣ್ಣೆ ಕಾಲು ಚೀಲಗಳು – ಖಾಕಿ<br>ಹ್ಯಾಟ್ – ಖಾಕಿ<br>ಒಂದು ಬೆತ್ತ, ಒಂದು ಸೀಟಿ ಮತ್ತು<br>ಖಾಕಿ ಬ್ಯಾಂಡೇಜ್ ಬಟ್ಟೆ |
| ಮೇಲಿನ ಅಧಿಕಾರಿ | . . . | ಎಲ್ಲವೂ ಮೇಲಿನ ಹಾಗೆಯೆ, ಜೊತೆಗೆ<br>ಬುಷ್ ಕೋಟು |

### X ದಳದ ಹಣಕಾಸು

(೧) ದಳದ ಎಲ್ಲಾ ಹಣ ಕಾಸುಗಳನ್ನು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಷನ್ ಮತ್ತು ದಳದ G.E.O. ಇಬ್ಬರೂ ಅನುಮೋದಿಸಿದ ಒಂದು ಬ್ಯಾಂಕಿನಲ್ಲಿ S.S.D. ಹೆಸರಿನಲ್ಲಿ ಜಮ ಮಾಡಬೇಕು; ಅದನ್ನು G.E.O. ಅವರು ಮತ್ತು ದಳದ ಪ್ರಧಾನ ಕಾರ್ಯದರ್ಶಿಯವರು ಚಲಾವಣೆ ಮಾಡಬೇಕು.

(೨) S.S ದಳದ ಎಲ್ಲಾ ಶಾಖೆಗಳು ಯಾವುದೇ ಒಂದು ಬ್ಯಾಂಕು ಅಥವಾ ಬ್ಯಾಂಕುಗಳ ಕ್ರಮವಾಗಿ ತಮ್ಮ ಪ್ರಾಂತ್ಯಗಳಲ್ಲಿ ಅಥವಾ ಜಿಲ್ಲೆಗಳಲ್ಲಿನ ಮತ್ತು ಅಂಥ ಬ್ಯಾಂಕು ಅಥವಾ ಬ್ಯಾಂಕುಗಳಲ್ಲಿ ಎಲ್ಲಾ ಹಣ ಕಾಸುಗಳನ್ನು S.S ದಳದ ಹೆಸರಿನಲ್ಲಿ ಜಮ ಮಾಡಬೇಕು ಮತ್ತು ಆ ಖಾತೆಯನ್ನು ಸರ್ವ ಸದಸ್ಯರ ಸಭೆ ಈ ಬಗ್ಗೆ ಅಧಿಕಾರ ಕೊಟ್ಟ ಮೂರು ವ್ಯಕ್ತಿಗಳು ಚಲಾಯಿಸಬೇಕು.

### XI ಧ್ವಜ

ಅಖಿಲ ಭಾರತ ಸಮತಾ ಸೈನಿಕ ದಳದ ಧ್ವಜ ನಾಲ್ಕು ಅಡಿ ಉದ್ದ ಮತ್ತು ಎರಡೂವರೆ ಅಡಿ ಅಗಲ ಇರುತ್ತದೆ. ಬಾವುಟವೆಲ್ಲಾ ಕಡು ನೀಲಿ ಬಣ್ಣದ್ದಾಗಿದ್ದು ಮೇಲಿನ ಎಡ ಭಾಗದ ಮೂಲೆಯಲ್ಲಿ ೧೧ ಬಿಳಿಯ ಬಣ್ಣದ ಮೊನಚಾದ ನಕ್ಷತ್ರಗಳು ಇರುತ್ತವೆ. ಅಲ್ಲದೆ ಮಧ್ಯದಲ್ಲಿ ಬಿಳಿಯ ಬಣ್ಣದ ಸೂರ್ಯ ಇರುತ್ತದೆ. S.C.F. ಎಂಬ ಅಕ್ಷರಗಳು ಸೂರ್ಯನ ಕೆಳಗೆ ನೀಲಿ ಬಣ್ಣದಲ್ಲಿ ಎದ್ದು ಕಾಣುವಂತೆ ಬರೆಯಲಾಗಿರುತ್ತದೆ. ಧ್ವಜದ ಕೆಳಗಡೆ ಬಲಭಾಗದ ಮೂಲೆಯಲ್ಲಿ S.S.D. ಎಂಬ ಅಕ್ಷರಗಳು ಬಿಳಿಯ ಬಣ್ಣದಲ್ಲಿ ಇರುತ್ತವೆ.

ಧ್ವಜದ ಅರ್ಥ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಮತ್ತು ನಮ್ಮ ಗುರಿ ಸಾಧನೆಗಾಗಿ ಹೋರಾಟ.

# ಅನುಬಂಧ III

## ಒಂದು ಬಿಚ್ಚು ಮಾತಿನ ಉದ್ಗಾರ

ಕಳೆದ ಸಾಯಂಕಾಲ, ೨೨ನೇ ಸೆಪ್ಟೆಂಬರ್ ೧೯೪೪ರಂದು ಡಾ: ಬಿ.ಆರ್ ಅಂಬೇಡ್ಕರ್ ಅವರಿಗೆ ಒಂದು ನಾಗರಿಕ ಬಿನ್ನವತ್ತಳೆಯನ್ನು ಸಮರ್ಪಿಸಿ ಮದರಾಸ್ ಪಟ್ಟಣ ತನ್ನನ್ನು ತಾನೇ ಗೌರವಿಸಿಕೊಂಡಿತು. ಡಾ: ಅಂಬೇಡ್ಕರ್ ಅವರು ಒಂದು ಮಹಾನ್ ಸಮುದಾಯದ ಅಧಿಪ್ರೇರಿತ ನಾಯಕರಾಗಿದ್ದಾರೆ; ಆ ಸಮುದಾಯದವರು ಶತಮಾನಗಳಿಂದ ಪೌರತ್ವದ ಸಾಧಾರಣ ಹಕ್ಕುಗಳಿಂದಲೂ ವಂಚಿತರಾಗಿದ್ದಾರೆ. ತಮ್ಮ ಉನ್ನತ ಸಾಧನೆಗಳಿಂದ, ಧೈರ್ಯಶಾಲಿ ನಾಯಕತ್ವದಿಂದ ಮತ್ತು ಎದ್ದುಕಾಣುವ ಗುಣಗಳಿಂದ, ಸಣ್ಣ ವಿಷಯಗಳ ಮೇಲೆ ನಗಣ್ಯವಾದ ಭಿನ್ನಾಭಿಪ್ರಾಯಗಳಿದ್ದರೂ ಸಹ, ಅವರು ಎಲ್ಲರ ಗೌರವಕ್ಕೆ ಪಾತ್ರರಾಗಿದ್ದಾರೆ ಹೀಗಿದ್ದರೂ ಒಂದು ರಾಜಕೀಯ ಪಕ್ಷ ಬಿನ್ನವತ್ತಳೆಯನ್ನು ಸಲ್ಲಿಸುವುದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದೂ ಅಲ್ಲದೆ, ಅದರ ಸದಸ್ಯರು ಸಮಾರಂಭಕ್ಕೆ ಗೈರು ಹಾಜರಾಗಿರುವುದು ವ್ಯಸನಕರವಾಗಿದೆ. ಈ ಧೋರಣೆ ಹೊಸದೇನೂ ಅಲ್ಲ, ಆಶ್ಚರ್ಯಕರವೂ ಅಲ್ಲ. ಸರ್ವಾಧಿಕಾರಿ ಧೋರಣೆಯೇ ಮಾರ್ಗದರ್ಶಿಯಾಗಿರುವ ಒಂದು ಪಕ್ಷ, ಸಾರ್ವಜನಿಕ ಜೀವನದಲ್ಲಿ ಸಭ್ಯ ನಡತೆಯಿಲ್ಲದಿರುವ ಮತ್ತು ಸಾರ್ವಜನಿಕವಾಗಿ ಹೇಗೆ ನಡೆದುಕೊಳ್ಳಬೇಕೆಂದು ಗೊತ್ತಿಲ್ಲದಿರುವ ಕಾರಣಕ್ಕಾಗಿ ಎಲ್ಲರ ಕಣ್ಣಿಗೆ ಬಿದ್ದಿರುವ ಪಕ್ಷ, ಇತರ ರಾಜಕೀಯ ಚಿಂತನೆಯ ನಾಯಕರುಗಳು ತಮ್ಮ ಕಡು ವಿರೋಧವನ್ನು ತೋರಿಸುವುದಕ್ಕೆ ಸಿಕ್ಕಿರುವ ಅವಕಾಶವನ್ನು ಕಳೆದುಕೊಳ್ಳಲು ಇಚ್ಛಿಸುತ್ತಾರೆಂದು ನಿರೀಕ್ಷಿಸಬಾರದು. ಆದರೂ ಕೂಡ ಈ ನಾಗರಿಕ ಬಿನ್ನವತ್ತಳೆ ಅವರಲ್ಲಿ (ಅಂಬೇಡ್ಕರ್) ಜನಗಳು ಇಟ್ಟಿರುವ ಅಭಿಮಾನಕ್ಕೆ ಪ್ರಭಾವೀ ಸಾಕ್ಷಿಯಾಗಿತ್ತು; ಏಕೆಂದರೆ ಅದು ನಾಗರಿಕತೆಯ ಸಾಂಪ್ರದಾಯಿಕ ನೀತಿಯಿಂದ ಮುಕ್ತವಾಗಿತ್ತು.

ಬಿನ್ನವತ್ತಳೆಗೆ ಉತ್ತರವಾಗಿ ಡಾ: ಅಂಬೇಡ್ಕರ್ ಅವರು ಮುದ ನೀಡುವ ನಿಷ್ಕಾಪಟ್ಯದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು; ಇದೇ ಅಭಿಪ್ರಾಯ ನಮ್ಮ ದೇಶದ ಬಹಳ ಮಂದಿಗೆ ಕೂಡ ಇದೆ. ರಾಜಕೀಯ ಸುಧಾರಣೆಗಳ ಒಂದು ಸ್ಕೀಮನ್ನು ಪರಿಗಣಿಸುತ್ತಿರುವ ಸಮಯದಲ್ಲಿ, ಸ್ವಾತಂತ್ರ್ಯದ ಗುರಿಯನ್ನು ಒತ್ತಾಯಿಸುತ್ತಿರುವಾಗ ಪರಿಗಣಿಸಬೇಕಾಗಿರುವ ವಿವಿಧ ಅಂಶಗಳ ಒಂದು ಸರಿಯಾದ ಮೌಲ್ಯ ಮಾಪನ ಮಾಡಬೇಕಾಗಿದೆ. ಇಂಥ ಸಂದರ್ಭಗಳಲ್ಲಿ ಹಿಂದಿನ ಪಾಠಗಳನ್ನು – ಅದರಲ್ಲೂ ಇತ್ತೀಚಿನ ಪಾಠಗಳನ್ನು – ಮರೆಯಬಾರದು ಎಂಬುದು ಬಹಳ ಸ್ವಾಭಾವಿಕ. ಈ ಪಾಠಗಳನ್ನು ಪರಾಮರ್ಶಿಸುತ್ತಾ, ಡಾ: ಅಂಬೇಡ್ಕರ್ ಅವರು ಹೀಗೆ ಹೇಳಿದರು: ಈ ದೇಶದಲ್ಲಿ, ಬ್ರಾಹ್ಮಣರು ಏನೇ ಮಾಡಿರಲಿ, ಅವರೇ ಆಳುವ ಸಮುದಾಯವಾಗಿದ್ದರು. ಅವರಲ್ಲದೆ ಬೇರೆ ಯಾರೂ ಮೇಲಕ್ಕೆ ಬರಲೇ ಇಲ್ಲ. ಎಲ್ಲಾ ಏಳು ಪ್ರಾಂತ್ಯಗಳಲ್ಲೂ ಬ್ರಾಹ್ಮಣರೇ ಪ್ರಧಾನ ಮಂತ್ರಿಗಳಾಗಿದ್ದರು, ಅಲ್ಲದೆ ಮಂತ್ರಿಮಂಡಲದಲ್ಲಿ ಅರ್ಧದಷ್ಟು ಮಂದಿ ಬ್ರಾಹ್ಮಣರೇ ಆಗಿದ್ದರು. ಈ ದೇಶದಲ್ಲಿ ನಡೆದ ಚುನಾವಣೆಗಳು ತೋರಿಸುವುದೇನೆಂದರೆ–ಒಂದು ಸಮುದಾಯಕ್ಕೆ ಮಾತ್ರ ಆಳುವ ವರ್ಗ ಆಗುವ ಅದೃಷ್ಟ ಇದೆ. ಆ ಸಮುದಾಯವೇ ಬ್ರಾಹ್ಮಣ ಸಮುದಾಯ. ನನ್ನ ಓದುಗರಿಗೆ ಸ್ವಾರಸ್ಯಕರ ವಿಷಯುವಾಗಬಲ್ಲದು ಯಾವುದೆಂದರೆ ಮಂತ್ರಿ ಮಂಡಲದಲ್ಲಿ

ಬದಲಾವಣೆಯಾದಾಗಲೂ ಸಹ, ಯಾವಾಗಲೂ ಒಬ್ಬ ಬ್ರಾಹ್ಮಣನನ್ನೇ ಪ್ರಧಾನ ಮಂತ್ರಿಯಾಗಿ ಚುನಾಯಿಸಲಾಗುತ್ತಿತ್ತು; ಹೀಗಾಗಿ ಅಮೂರ್ತನೊಬ್ಬನ ಜಾಗಕ್ಕೆ ಅಮೂರ್ತನೇ ಬರಬೇಕೆಂಬ ಸಂಪ್ರದಾಯವನ್ನು ಉಳಿಸಿಕೊಂಡು ಬರಲಾಯಿತು. ಕಾಲಾನುಕಾಲದಿಂದ ಬಂದಿರುವ ಆಳುವ ವರ್ಗದ ಕೈನಲ್ಲೇ ಅಧಿಕಾರ ಮತ್ತು ಹತೋಟಿ ಇರಬೇಕೆಂಬುದನ್ನು ಖಾತರಿ ಮಾಡಿಕೊಳ್ಳುವುದಕ್ಕೆ ಕಾಂಗ್ರೆಸ್ಸಿನ ಸಂಸದೀಯ ಮಂಡಳಿಯನ್ನು ಹುಟ್ಟು ಹಾಕಿದ್ದು ಒಂದು ಚಾಣಾಕ್ಷತನದ ನಡೆಯಾಗಿತ್ತು. ಹೀಗಾಗಿ ಕಾಂಗ್ರೆಸ್ನ ಅಭ್ಯರ್ಥಿಗಳನ್ನು ಆರಿಸುವದರಲ್ಲಿ, ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಅಂತಿಮ ಆಯ್ಕೆ ಇರಲಿಲ್ಲ; ಆ ಅಧಿಕಾರ ಸಂಸದೀಯ ಮಂಡಳಿಯ ಅಧ್ಯಕ್ಷರ ಕೈನಲ್ಲಿ ಇತ್ತು; ಪ್ರಾಂತೀಯ ಸಮಿತಿಗಳ ಅಧ್ಯಕ್ಷರುಗಳ ಮಾತೂ ನಡೆಯುತ್ತಿರಲಿಲ್ಲ, ಆದರೆ ಇದನ್ನು ಮಿ: ರಾಜಗೋಪಾಲಾಚಾರಿಯವರಂಥ ಸದಸ್ಯರಿಗೆ ಶಿಫಾರಸುಗಳನ್ನು ಮಾಡಲು ಬಿಟ್ಟು ಬಿಡಲಾಗಿದ್ದು, ಅವರು ಮಂಡಳಿಯ ಅಂತಿಮ ಅನುಮೋದನೆಯನ್ನು ಪಡೆದುಕೊಳ್ಳುತ್ತಿದ್ದರು. ಹೀಗಿರುವಾಗ, ತಗ್ಗಿ ಬಗ್ಗಿ ನಡೆಯದ ಬ್ರಾಹ್ಮಣೇತರರಿಗೆ ಅಭ್ಯರ್ಥಿಗಳಾಗಿ ನಾಮನಿರ್ದೇಶನ ಆಗುವ ಸಂಭವವೂ ಕೂಡ ಇರಲಿಲ್ಲ. ಆದ್ದರಿಂದ ಹಿಂದಿನ ಶಾಸನ ಸಭೆಯಲ್ಲಿ ಕಾಂಗ್ರೆಸ್ನ ವಿರೋಧ ಪಕ್ಷದಲ್ಲಿದ್ದ ರಾಮಲಿಂಗಾರೆಡ್ಡಿಯವರಂಥವರನ್ನು ಆರಿಸದೆ ಅವರ ಹೆಸರನ್ನು ಶೈತ್ಯಾಗಾರದಲ್ಲಿ ಇಟ್ಟು ಕಾಂಗ್ರೆಸ್ನ ಪತ್ರಾಗಾರದಲ್ಲಿದ್ದ ನೂರಾರು ಪಳೆಯುಳಿಕೆಗಳನ್ನು ಅಭ್ಯರ್ಥಿಗಳಾಗಿ ಆರಿಸಿಕೊಳ್ಳಲಾಯಿತು.

ಅಭ್ಯರ್ಥಿಗಳನ್ನು ಆರಿಸಿಕೊಳ್ಳುವುದರಲ್ಲೂ ಸಹ ಸಂಸದೀಯ ಮಂಡಳಿಗಳಲ್ಲಿ ಅಧಿಕಾರವೆಲ್ಲಾ ಕೇಂದ್ರೀಕೃತವಾಗಿತ್ತು. ಪ್ರಧಾನ ಮಂತ್ರಿಗಳನ್ನು ಆರಿಸುಕೊಳ್ಳುವುದನ್ನು ಕೇವಲ ಒಂದಿಬ್ಬರು ಮೂರು ಜನರ ತೀರ್ಮಾನಕ್ಕೆ ಬಿಡಲಾಗಿತ್ತೆಂಬುದರಲ್ಲಿ ಆಶ್ಚರ್ಯವೇನಿಲ್ಲ. ಸ್ವಾಭಾವಿಕವಾಗಿ, ಎಲ್ಲಾ ಪ್ರಧಾನ ಮಂತ್ರಿಗಳೂ ಬ್ರಾಹ್ಮಣರೇ ಆಗಿದ್ದರು. ಮಿ: ರಾಜಗೋಪಾಲಚಾರಿ, ಮಿ: ಖೇರ್, ಪಂಡಿತ್ ಪಂತ್, ಮಿ: ಬಾರ್ದೊಲಾಯ್, ಪಂಡಿತ್ ಶುಕ್ಲ ಇತ್ಯಾದಿ ಇತ್ಯಾದಿ, ಒಂದೇ ವರ್ಗಕ್ಕೆ ಸೇರಿದವರೆಲ್ಲರೂ ಆಯ್ದ ಜನಾಂಗಕ್ಕೆ ಸೇರಿದವರಾಗಿದ್ದು, ಆ ನಂತರ ಅವರು ತಮ್ಮ ಸರದಿಯಲ್ಲಿ ಆಳುವ ಜನಾಂಗದವರೇ ಮಂತ್ರಿಮಂಡಲದಲ್ಲಿ ಶೇಕಡ ೫೦% ಇರುವ ಹಾಗೆ ನೋಡಿಕೊಂಡರು. ನೀವು ಮತದಾರರ ಸಂಖ್ಯೆಯನ್ನು ಎಷ್ಟು ಬೇಕಾದರೂ ಹೆಚ್ಚಿಸಿ, ನೀವು ವಯಸ್ಕ ಮತದಾನ ಪದ್ಧತಿಯನ್ನು ಜಾರಿಗೆ ತನ್ನಿ, ನೀವು ಹದಿಹರೆಯದವರಿಗೆ ಏಕೆ ಮಕ್ಕಳಿಗೂ ಕೂಡ ಮತದಾನದ ಹಕ್ಕು ಕೊಡಿ, ಆದರೆ ಮೇಲಕ್ಕೆ ಬರುವುದು ಆಳುತ್ತಿರುವ ಜನಾಂಗ ಮಾತ್ರ.. ಮಂತ್ರಿ ಮಂಡಲದಲ್ಲಿ ೫೦% ಬ್ರಾಹ್ಮಣರು ಮಾತ್ರವಲ್ಲ, ಸುತರಾಂ ಎಲ್ಲಾ ಪ್ರಾಮುಖ್ಯವಾದ ಅಧಿಕಾರ ಮತ್ತು ಪ್ರಭಾವ ಇರುವ ಖಾತೆಗಳೆಲ್ಲವೂ ಬ್ರಾಹ್ಮಣರ ಕೈನಲ್ಲೇ, ಅವರ ಹತೋಟಿಯಲ್ಲೇ ಇರಬೇಕು. ಹೀಗೆ ನಮ್ಮದೇ ಪ್ರಾಂತ್ಯದತ್ತ ನೋಡಿದಾಗ ಹಣಕಾಸು, ಪೊಲೀಸ್, ಲೋಕ ಸೇವೆಗಳು, ಕಂದಾಯ, ಔಷಧಿ, ಸಾರ್ವಜನಿಕ ಆರೋಗ್ಯ, ಕೈಗಾರಿಕೆಗಳು, ಧಾರ್ಮಿಕ ದತ್ತಿಗಳು? ವಾಸ್ತವವಾಗಿ ಪ್ರಾಮುಖ್ಯವಾದವುಗಳೆಲ್ಲ ಅವರ ಹತೋಟಿಯಲ್ಲೇ ಇರಬೇಕು. ಇದಕ್ಕೂ ಮಿಗಿಲಾಗಿ, ಅರ್ಹತೆಯಿಲ್ಲದ ಬ್ರಾಹ್ಮಣೇತರರಿಗೆ, ಮುಸ್ಲಿಮರಿಗೆ, ನಿಮ್ನವರ್ಗದ ಮಂತ್ರಿಗಳಿಗೆ ಚೂರು ಪಾರು ಎಂದು ಎಸೆದ ಕೆಲವೇ ಕೆಲವು ಇಲಾಖೆಗಳ ಮೇಲೂ ಸಹ ಪ್ರಧಾನ ಮಂತ್ರಿಯವರು ತಮ್ಮ ಹತೋಟಿಯನ್ನು ಇಟ್ಟುಕೊಂಡು ಪಾಲಿಸುವುದರ ಬಗ್ಗೆ ನಿರ್ದೇಶನಗಳನ್ನು ಕೊಡುತ್ತಿದ್ದರು. ಒಂದು ಸಣ್ಣ ಸಮುದಾಯದ ಪ್ರತಿನಿಧಿಗಳಲ್ಲಿ ಪರಿಣಾಮಕಾರಿಯಾಗಿ ಕೇಂದ್ರೀಕರಿಸುವ ಪ್ರಕ್ರಿಯೆ, ಎಲ್ಲಾ ಇತರ ಆರು ಪ್ರಾಂತ್ಯಗಳಲ್ಲೂ ಸಹ ಅನುಸರಿಸಲಾಗುತ್ತಿದ್ದು, ಹಾಗೆ ಪ್ರಜಾ ಸತ್ತೆಯ ಸರ್ಕಾರ ಎಂಬ ಮುಖವಾಡ ಧರಿಸಿ, ಪೇಷ್ವೆಗಳ ವಾರಸುದಾರರ ಬುದ್ಧಿಮತ್ತೆಯ ಆಳ್ವಿಕೆಯನ್ನು ಮುಂದುವರಿಸಲಾಯಿತು. ಇಂಥ ನೀತಿಯನ್ನು ಅನುಸರಿಸಿದ್ದರ ಅನಿವಾರ್ಯ

ಫಲಿತಾಂಶವೆಂದರೆ, ಇತರ ಸಮುದಾಯಗಳ ಮುಂದುವರಿದ ದಾಸ್ಯ, ಮತ್ತು ಹತೋಟಿ ಕೊಡದ ಬಲ ಮತ್ತು ಅಧಿಕಾರ ಇವುಗಳ ಚಲಾವಣೆ; ಬ್ರಿಟಿಷ್ ಆಡಳಿತಗಾರರ ಮತ್ತು ಗವರ್ನರುಗಳ ಸಹಾಯದಿಂದ, ಇದರ ವಿರುದ್ಧ ಪ್ರತಿಭಟಿಸಿದ ಅಸಹಾಯಕ ಧ್ವನಿಗಳನ್ನು ನಿಶ್ಶಬ್ಧ ಗೊಳಿಸುವುದು., ಈ ಪ್ರೆಸಿಡೆನ್ಸಿಯಲ್ಲಿ ಹಿಂದೀ ಚಳುವಳಿಗಾರರೆಂದು ಹೆಸರಿಸಲಾದವರನ್ನು ಹತ್ತಿಕ್ಕುವುದಕ್ಕೆ ತಂದ ತೀವ್ರ ಟೀಕೆಗೆ ಗುರಿಯಾದ ಅಪರಾಧಿಕ ಕಾನೂನು ತಿದ್ದುಪಡಿ ಅಧಿನಿಯಮದ ದುರ್ಬಳಕೆ, ಕೇಂದ್ರೀಯ ಪ್ರಾಂತ್ಯಗಳಲ್ಲಿ ಮತ್ತು ಬೊಂಬಾಯಿಯಲ್ಲಿ ವಿದ್ಯಾ ಮಂದಿರಗಳ ಸ್ಥಾಪನೆ ಇವು ಯಾರೇ ಆಗಲೀ ನಿರೀಕ್ಷಿಸಬಹುದಾದ ಪ್ರಜಾಸತ್ತೆಯ ಸ್ವಭಾವಕ್ಕೊಂದು ವಾಕ್ಪಟುತ್ವದ ಉದಾಹರಣೆ.

ಡಾ: ಅಂಬೇಡ್ಕರ್ ಅವರು ಕೊಟ್ಟಿರುವ ಎಚ್ಚರಿಕೆ ಸಕಾಲಿಕವೂ ಮತ್ತು ಅವಶ್ಯಕವೂ ಆಗಿದೆ. ಯಾವುದಾದರೊಂದು ನಿರ್ದಿಷ್ಟ ದೇಶದಲ್ಲಿನ ಆಡಳಿತ ವರ್ಗಕ್ಕೆ ತಮ್ಮ ಹೊಣೆಗಾರಿಕೆಯ ಅರಿವು ಏನಾದರೂ ಇದೆಯೆ ಎಂಬ ಪ್ರಶ್ನೆಯನ್ನು ನಾವು ಕೇಳಬೇಕಾಗಿದೆ. ಆ ಅರಿವು ಅವರಿಗೆ ಇದ್ದರೆ ಮಾತ್ರ ಆ ದೇಶದ ಆಡಳಿತವನ್ನು ಅವರಿಗೆ ಕೊಡಬಹುದಾಗಿದೆ. ಆಡಳಿತ ವರ್ಗಕ್ಕೆ ಹೊಣೆಗಾರಿಕೆಯ ಅರಿವು ಇದೆಯೆ ಇಲ್ಲವೆ ಎಂಬುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವರಿಗೆ ಆಳುವ ಹಕ್ಕನ್ನು ಕೊಡಬಹುದೆ ಎನ್ನುವುದನ್ನು ತೀರ್ಮಾನಿಸಬೇಕಾಗಿದೆ ಎನ್ನುವುದನ್ನು ನಾವು ಮರೆತು ಬಿಟ್ಟಿದ್ದೇವೆ. ಆಡಳಿತ ವರ್ಗದ ಹೊರನೋಟವೇನು? ಅದರ ತತ್ವ ಏನು? ಅದಕ್ಕೆ ಯಾವುದರಲ್ಲಿ ನಂಬಿಕೆ ಇದೆ? ಈ ಪ್ರಶ್ನೆಗಳನ್ನು ಉತ್ತರಿಸುತ್ತಾ ಡಾ: ಅಂಬೇಡ್ಕರ್ ಅವರು ತಾಳ್ಮೆಯಿಂದ ಹೀಗೆ ಹೇಳುತ್ತಾರೆ: ?ದರ್ಜೆಗೆ ತಕ್ಕಂತೆ ಏರುವ/ ಇಳಿಯುವ ಅಸಮಾನತೆಯಲ್ಲಿ ಆಳುವ ವರ್ಗಕ್ಕೆ ನಂಬಿಕೆ ಇದ್ದರೆ, ಇನ್ನೊಬ್ಬ ಮಾನವ ಜೀವಿಯನ್ನು ಮುಟ್ಟಬಾರದೆಂದು ನಂಬಿಕೆ ಇದ್ದರೆ, ಒಂದು ನಿರ್ದಿಷ್ಟ ವರ್ಗಕ್ಕೆ ಮಾತ್ರ ಶಿಕ್ಷಣವನ್ನು ಪಡೆಯಲು ಹಕ್ಕಿದೆ, ಬೇರೆಯವರಿಗೆ ಇಲ್ಲ ಎಂಬುದರಲ್ಲಿ ನಂಬಿಕೆ ಇದ್ದರೆ, ಒಂದು ನಿರ್ದಿಷ್ಟ ವರ್ಗಕ್ಕೆ ಮಾತ್ರ ಆಸ್ತಿಯನ್ನು ಇಟ್ಟುಕೊಳ್ಳುವ ಹಕ್ಕಿದೆ, ಇನ್ನೊಂದು ವರ್ಗ ದಾಸ್ಯದಲ್ಲಿ ಹುಟ್ಟಿ ದಾಸ್ಯದಲ್ಲಿ ಸಾಯಬೇಕೆಂಬುದರಲ್ಲಿ ನಂಬಿಕೆ ಇದ್ದರೆ, ಅಸ್ತಿತ್ವಕ್ಕೆ ಬರುವ ರಾಷ್ಟ್ರೀಯ ಸರ್ಕಾರದ ಚುಕ್ಕಾಣಿಯನ್ನು ಇಂಥ ಒಂದು ಆಡಳಿತ ವರ್ಗದ ಕೈನಲ್ಲಿ ಕೊಟ್ಟರೆ, ಅಂಥ ರಾಷ್ಟ್ರೀಯ ಸರ್ಕಾರ ಪ್ರಸ್ತುತದಲ್ಲಿ ಇರುವ ಭಾರತ ಸರ್ಕಾರಕ್ಕಿಂತ ಉತ್ತಮವಾಗಿರುತ್ತದೆ ಎಂಬುದನ್ನು ನೀವು ನಂಬುತ್ತೀರೇನು? ಈ ಅನುಮಾನಗಳು ಕಾಲ್ಪನಿಕವೇನೂ ಅಲ್ಲ. ಅದರ ಬದಲು ಅವುಗಳು ಹಿಂದಿನ ಕಹಿ ಅನುಭವದಮೇಲೆ ಮತ್ತು ಇಂದಿನ ಕರಾಳ ಪ್ರತೀಕ್ಷೆಯ ಮೇಲೆ ಆಧಾರಪಟ್ಟಿವೆ. ಸಮೂಹಗಳ ಬಗ್ಗೆ ಆಡಳಿತವರ್ಗಕ್ಕೆ ಅತ್ಯಲ್ಪ ಅಥವ ಯಾವುದೇ ಅನುಕಂಪವೂ ಇಲ್ಲವೆಂಬ ಸತ್ಯವನ್ನು ಮರೆಮಾಚುವುದರಲ್ಲಿ ಯಾವ ಉಪಯೋಗವೂ ಇಲ್ಲ. ಮಹಾನ್ ಡಾತೋಸನ ಮಾತುಗಳಲ್ಲಿ ಹೇಳುವುದಾದರೆ, ಅವರ ವಾಗ್ಮಿಗಳು ಒಬ್ಬ ಬರ್ಕೆಯ ಅಥವ ಒಬ್ಬ ಕಾಬ್ಡನ್ನಿನ ವಾಕ್ಪಟುತ್ವದಿಂದ ಮಾತನಾಡಬಹುದು. ಆದರೆ ಅವರು ಮಾಡುವುದು ಮಾತ್ರ ಅವರ ವಾಕ್ಪಟುತ್ವದ ನಿರರ್ಗಳತೆಗಳನ್ನು ಸುಳ್ಳಾಗಿಸುತ್ತವೆ. ಶಿಕ್ಷಣದಲ್ಲಿ ಅವರಿಗೆ ಇರುವ ಆಸಕ್ತಿ ತಮ್ಮದೇ ಸಮುದಾಯದವರಿಗೆ ಸೌಲಭ್ಯಗಳು ದೊರಕುವಷ್ಟರ ಮಟ್ಟಿಗೆ ಸೀಮಿತವಾಗಿದೆ. ಕೆಲಸಗಳಿಗಾಗಿ ಅವರ ಹೋರಾಟ ಆ ಕೆಲಸಗಳಿಂದ ತಮ್ಮದೇ ಬಂಧು ಬಳಗದವರಿಗೆ ಉಪಯೋಗಬಹುದಾದರೆ. ಮಾತ್ರ ಬಹಳ ಚುರುಕಾಗಿರುತ್ತದೆ. ಸ್ವಯಾಮಾಡಳಿತ ಬೇಕೆಂಬ ಅವರ ಬೇಡಿಕೆ ತಮ್ಮವರೇ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಸಹಾಯವಾಗುವುದಾದರೆ ಮಾತ್ರ ವೀರ್ಯವತ್ತಾಗಿರುತ್ತದೆ. ಇಂಥ ಫಲಪ್ರದವಾಗುವ ಯಾವ ಸಾಧ್ಯತೆಗಳು ಇಲ್ಲದಿದ್ದರೆ, ಅವರು ಆಗ ತಿಪ್ಪರಲಾಗವನ್ನು ಹಾಕಿ ೯೩ನೇ ಖಂಡ ಜಾರಿಗೆ ಬರಲಿ ಎಂದು ಕೇಳುತ್ತಾರೆ. (ಭಾಷಾಂತರ ಕಾರನ

ಟಿಪ್ಪಣಿ: ೯೩ನೆ ಖಂಡ ಎನ್ನುವಾಗ ಯಾವ ಅಧಿನಿಯಮದ ೯೩ನೆ ಖಂಡವನ್ನು ಕುರಿತು ಪರಾಮರ್ಶೆ ಮಾಡಲಾಗಿದೆ ಎಂಬುದು ಗೊತ್ತಾಗುತ್ತಿಲ್ಲ) ಡಾ: ಶ್ಯಾಮ ಪ್ರಸಾದ ಮುಖರ್ಜೀ ಅವರು ಬ್ರಿಟಿಷ್ ಸರ್ಕಾರವನ್ನು ಪ್ರಸ್ತುತ ಬಂಗಾಳ ಸರ್ಕಾರವನ್ನು ಕಿತ್ತು ಹಾಕಿ ೯೩ನೇ ಖಂಡದ ಕೆಳಗೆ ಸರ್ಕಾರವನ್ನು ಅಸ್ತಿತ್ವಕ್ಕೆ ತನ್ನಿ ಎಂದು ಒತ್ತಾಯಿಸಿದಾಗ, ಅವರು ತಮ್ಮ ವೈಯುಕ್ತಿಕ ಇಚ್ಚೆಯನ್ನಾಗಲೀ ಅಥವಾ ಅಭಿಪ್ರಾಯವನ್ನಾಗಲೀ ಯಾವ ರೀತಿಯಲ್ಲೂ ವ್ಯಕ್ತಪಡಿಸುತ್ತಿರಲಿಲ್ಲ. ಹೀಗೆ ವ್ಯಕ್ತಪಡಿಸಿದವರಲ್ಲಿ ಅವರು ಒಬ್ಬರೇ ಏನಲ್ಲ. ಭವಿಷ್ಯದ ಸಂವಿಧಾನವನ್ನು ರೂಪಿಸುವಾಗ, ಬೇರೆ ಬೇರೆ ಸಮುದಾಯಗಳು ಈ ಸಂಗತಿಗಳನ್ನು ಪರಿಗಣನೆಗೆ ತಂದು ಕೊಳ್ಳಬೇಕು, ಭಾರತದ ರಾಜಕೀಯ ಭವಿಷ್ಯ ದಾಸ್ಯದ ತೊಳಲಾಟದ ಫಲವನ್ನು ಕೊಡದಿರುವ ಹಾಗೆ, ಆಳುವ ವರ್ಗವನ್ನೇ ಇನ್ನೂ ಒಂದು ಬಾರಿ ಅಧಿಕಾರಸ್ಥಾನದ ಸಿಂಹಾಸನದಲ್ಲಿ ಕುಳಿತು ಕೊಳ್ಳದ ಹಾಗೆ ನೋಡಿಕೊಳ್ಳಬೇಕು. ?ಡಾ: ಅಂಬೇಡ್ಕರ್ ಅವರು ಸ್ವಾತಂತ್ರ್ಯಕ್ಕಾಗಿ ಮತ್ತು ಬಾರತದ ಭವಿಷ್ಯಕ್ಕಾಗಿ ತಮ್ಮ ಬಿಚ್ಚುಮಾತಿನ ಉದ್ಗಾರಗಳಿಂದ ಮಹಾನ್ ಸೇವೆಯನ್ನು ಮಾಡಿದ್ದಾರೆ.

# ಗ್ರಂಥ ಋಣ


ಅಹಿರ್, D.C. ಡಾ: ಅಂಬೇಡ್ಕರ್ ಆನ್ ಬುದ್ಧಿಸಮ್ (ಜಸ್ಟಿಸ್ R.R. ಭೋಲೆ, M.P. ಚೇರ್ ಮನ್, ಪೀಪಲ್ಸ್ ಎಜುಕೇಷನ್ ಸೊಸೈಟಿ, ಆನಂದ್ ಭವನ್, ಡಾ: ದಾದಾಭಾಯಿ ನವರೋಜಿ ರಸ್ತೆ, ಫೋರ್ಟ್, ಬೊಂಬಾಯಿ ೪೦೦ ೦೨೩; ೧೯೮೨)

ಭಾರಿಲ್, ಚಂದ್ರ, ಸೋಷಲ್ ಅಂಡ್ ಪೊಲಿಟಿಕಲ್ ಐಡಿಯಾಸ್ ಆಫ್ ಬಿ.ಆರ್.ಅಂಬೇಡ್ಕರ್, (ಆಲೇಖ್ ಪಬ್ಲಿಷರ್ಸ್, ಎಂ.ಜೆ. ರೋಡ್. ಜೈಪುರ್. ೧೯೭೭)

ಬುಸಿ, ಡಾ: ಸುಬ್ರಮಣಿ ಎನ್. ಮಹಾತ್ಮ ಗಾಂಧಿ ಅಂಡ್ ಬಾಬಾ ಸಾಹೆಬ್ ಅಂಬೇಡ್ಕರ್ (ಸರೋಜ ಪಬ್ಲಿಕೇಷನ್ಸ್, ೬ ೦, ಮೇ ಫೇರ್ ಅಪಾರ್ಟ್‌ಮೆಂಟ್ಸ್, ರೋಡ್ ನಂ. ೨, ಬಂಜಾರ ಹಿಲ್ಸ್, ಹೈದರಾಬಾದ್, ಆಂಧ್ರ ಪ್ರದೇಶ್, ೧೯೭೭)

ಡಾ: ಬಾಬಾ ಸಾಹೆಬ್ ಅಂಬೇಡ್ಕರ್, ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂಪುಟ ೧, ೧೯೭೯)

ಗೋಡ್ಬೋಲೆ, ವಾಮನ್ರಾವ್: ಬೋಧಿಸತ್ವ, ಡಾ: ಬಾಬಾಸಾಹೆಬ್ ಅಂಬೇಡ್ಕರಾಚ್ಯ ಧಮ್ಮ ದೀಕ್ಷೇಚ ಅವಿಸ್ಮರಣೀಯ ಇತಿಹಾಸ್ (ಮರಾಠಿ) (ಸುಪ್ರಿಯ ಪ್ರಕಾಶನ್, ಅಲಂಕಾರ್ ಟಾಕೀಸ್. ನಾರ್ತ್ ಅಂಬಾಝಾರಿ ರೋಡ್, ನಾಗಪುರ, ೪೪೦ ೦೧೦, ೧೯೮೮)

ಹಟೋಲೆ, ಶಂಕರ್ ರಾವ್, ಡಾ: ಬಾಬಾ ಸಾಹೆಭ್ ಅಂಬೇಡ್ಕರ್ ಯನ್ನ ಸಮರ್ಪಿತ್ (ಮರಾಠಿ) ಆನಂದ್ ಪ್ರಕಾಶನ, ಜೈಸಿಂಘ್ ಪುರ, ಔರಂಗಾಬಾದ್ ೪೩೧ ೦೦೪, ೧೯೯೨)

ಕಾಂಬ್ಳೆ, B.C.; ಸಮಗ್ರ ಅಂಬೇಡ್ಕರ್ ಚರಿತ್ರ, ಸಂಪುಟ ೧೭ (ಮರಾಠಿ) ೧೧/೧೭೪ ಆದರ್ಶ್ನಗರ್, ಪ್ರಭಾದೇವಿ, ಮುಂಬಯಿ. ೪೦೦ ೦೨೫)

ಕೀರ್, ಧನಂಜಯ್; ಡಾ: ಅಂಬೇಡ್ಕರ್ : ಲೈಫ್ ಅಂಡ್ ಮಿಷನ್ (ಪಾಪ್ಯುಲ್ ಪ್ರಕಾಶನ್, ಬಾಂಬೆ, ೩ನೆ ಮುದ್ರಣ; ೧೯೭೧, ಪುನರ್ಮುದ್ರಣ ೧೯೮೧)

ಖೈರ್‌ಮೋಡೆ, C.M.; ಡಾ: ಭೀಮ್ರಾವ್ ರಾಮ್ಜೀ ಅಂಬೇಡ್ಕರ್ ಚರಿತ್ರ ಗ್ರಂಥ್ (ಮರಾಠಿ) (ಸಂಪುಟ ೬/೭ ? ೧೯೮೫; ೯–೧೯೮೭; ೧೦–೧೯೮೮; ೧೧–೧೧೯೦; ೧೨–೧೯೯೨)

ಕೊಸಾರೆ H.L.; ವಿಧರ್ಬಾತಿಲ್ ದಲಿತ್ ಚಳ್ವಳೀಚ ಇತಿಹಾಸ್ (ಮರಾಠಿ), ಧ್ಯಾನ್ ಪ್ರದೀಪ್ ಪ್ರಕಾಶನ್, ನವಿಶುಕ್ರವಾರಿ; ಶಿರ್ಕೆ ರೋಡ್, ನಾಗಪುರ–೨

ಕುಬೇರ್, W.N. ಬಿ.ಆರ್.ಅಂಬೇಡ್ಕರ್, ಎ ಕ್ರಿಟಿಕಲ್ ಸ್ಟಡಿ (ಪೀಪಲ್ಸ್ ಪಬ್ಲಿಷಿಂಗ್ ಹೌಸ್, ನವ ದೆಹಲಿ, ೧೯೯೧)

ಕುಬೇರ್. W.N.; ಬಿ.ಆರ್. ಅಂಬೇಡ್ಕರ್ (ಪಬ್ಲಿಕೇಷನ್ಸ್ ಡಿವಿಷನ್, ಮಾಹಿತಿ ಮತ್ತು ಪ್ರಸಾರಣ ಸಚಿವಾಲಯ, ಭಾರತ ಸರ್ಕಾರ ೧೯೯೦)

ಸೌರ್ಸ್ ಮೆಟೀರಿಯಲ್ ಆನ್ ಡಾ: ಬಾಬಾ ಸಾಹೆಬ್ ಅಂಬೇಡ್ಕರ್ ಅಂಡ್ ದಿ ಮೂವ್ಮೆಂಟ್ ಆಫ್ ಅನ್ಟಚಬಲ್ಸ್. ಸಂಪುಟ: ೧. (ಡಾ: ಬಾಬಾ ಸಾಹೆಬ್ ಅಂಬೇಡ್ಕರ್ ಸೌರ್ಸ್ ಮೆಟೀರಿಯಲ್ ಪಬ್ಲಿಕೇಷನ್ಸ್ ಕಮಿಟಿ ೧೯೮೨ )

ಸುಮೇಧ್ ಭಿಕ್ಷು, ಮೀ ಪಹಿಲೇಲೆ ಬೋಧಿಸತ್ವ ಡಾ: ಬಾಬಾಸಾಹೆಬ್ ಅಂಬೇಡ್ಕರ್ (ಮರಾಠಿ) ಕಪಿಲವಸ್ತು ಪ್ರಕಾಶನ, ೪೪, ಸಿದ್ಧಾರ್ಥ್ ನಗರ್, ವಡಾಲ, ಮುಂಬಯಿ, ೪೦೦ ೦೩೧, ೧೯೯೪)

ಸುರ್‌ವಾಡೆ, ವಿಜಯ್ ಗಂಗಾರಾಮ್; ಡಾ: ಬಿ.ಆರ್.ಅಂಬೇಡ್ಕರ್ ಥ್ರು ಕರೆಸ್ಪಾಂಡೆನ್ಸ್ (ತತಾಗಥ್ ಪ್ರಕಾಶನ್, ಕಲ್ಯಾಣ್ (ಪೂರ್ವ) ಜಿಲ್ಲಾ ಥಾಣೆ, ೧೯೮೬)

ವಿ. ಲೋಂಗರ್, ಫೋರ್ಫ್ರಂಟ್ ಫಾರ್ ಎವರ್, ದಿ ಹಿಸ್ಟರಿ ಆಫ್ ಮಹರ್ ರೆಜಿಮೆಂಟ್ (ದಿ ಮಹರ್ ರೆಜಿಮೆಂಟಲ್ ಸೆಂಟರ್, ಸೌಗಾರ್ M.P. ೧೯೮೧)

## II ನಿಯತಕಾಲಿಕಗಳ ವಿಶೇಷ ಸಂಚಿಕೆ

ಲೋಕ್‌ರಾಜ್ಯ, ಡಾ: ಬಾಬಾಸಾಹೆಬ್ ಅಂಬೇಡ್ಕರ್ ವಿಶೇಷ ಸಂಚಿಕೆ, ಏಪ್ರಿಲ್ ೧೬, ೧೯೬೧.ಮಹಾರಾಷ್ಟ್ರ ಸರ್ಕಾರ ಪ್ರಬುದ್ಧ ಭಾರತ, ಅಂಬೇಡ್ಕರ್ : ಬುದ್ಧ ದೀಕ್ಷಾ ವಿಶೇಷ ಸಂಚಿಕೆ ೨೭ನೇ ಅಕ್ಟೋಬರ್ ೧೯೫೬

## III ವರದಿಗಳು ಮತ್ತು ನಡವಳಿಗಳು

ಸಿಲೋನ್ ಸಮ್ಮೇಳನದ ವರದಿ ಮತ್ತು ೨೫ನೇ ಮೇ ಯಿಂದ ೬ನೇ ಜೂನ್ ೧೯೫೦ ರ ವರೆಗೆ ನಡೆದ ವಿಶ್ವ ಬೌದ್ಧ ಸಹಭಾಗಿತ್ವದ ಮೊದಲನೆ ಅಧಿವೇಶನದ ನಡವಳಿಗಳು (BE ೨೪೯೪) ನವಂಬರ್ ೧೯೫೬ರಲ್ಲಿ ನಡೆದ ವಿಶ್ವ ಬೌದ್ಧ ಸಹಭಾಗಿತ್ವದ ವರದಿ, ಖಟಮಂಡು (ನೇಪಾಳ್) ಜೂಲೈ ೧೯೪೨ರಲ್ಲಿ ನಾಗಪುರದಲ್ಲಿ ನಡೆದ ನಿಮ್ನವರ್ಗಗಳವರ ಸಮ್ಮೇಳನದ ವರದಿ

## IV ನಿಯತಕಾಲಿಕಗಳು

ಬಹಿಷ್ಕೃತ್ ಭಾರತ್, ಬೊಂಬಾಯಿ: ಸ್ಥಾಪಕರು: ಡಾ: ಬಿ.ಆರ್. ಅಂಬೇಡ್ಕರ್

ಭಾರತ್

ದಿ ಬಾಂಬೆ ಕ್ರಾನಿಕಲ್

ದಿ ಬಾಂಬೆ ಸೆಂಟಿನಲ್, ಬಾಂಬೆ

ದಲಿತ್ ಬಂಧು, ಪುಣೆ: ಸಂಪಾದಕರು: ಪಿ. ಎನ್. ರಾಜ್ ಭೋಜ್

ದಿ ಫ್ರೀ ಪ್ರೆಸ್ ಜರ್ನಲ್

ದಿ ಹಿಂದು, ಮದರಾಸು

ಹೈದರಾಬಾದ್ ಬುಲೆಟಿನ್

ದಿ ಇಂಡಿಯನ್ ಸ್ಟೇಟ್ಸ್, :ಸಂಪಾದಕ: ಪಿ,ಎನ್,.ರಾಜ್ ಭೋಜ್, ಘೋರ್ಪಡೆ ಪೇತ್, ಪುಣೆ

ಜೈ ಭೀಮ್, ಸಂಪಾದಕ: ಎನ್. ಶಿವರಾಜ್, ಮದರಾಸು

ಜನತ, ಬಾಂಬೆ, ಸ್ಥಾಪಕರು: ಡಾ: ಬಿ.ಆರ್. ಅಂಬೇಡ್ಕರ್

ಲಿಬರೇಟರ್, ಮದರಾಸು

ಮಹಾರಾಷ್ಟ್ರ, ದೈನಿಕ, ನಾಗಪುರ

ದಿ ಮೇಲ್, ಮದರಾಸು

ನ್ಯಾಷನಲ್ ಸ್ಟಾಂಡರ್ಡ್

ನವ್ಯುಗ್, ಬಾಂಬೆ

ಪೀಪಲ್ಸ್ ಹೆರಾಲ್ಡ್, ಸಂಪಾದಕ: ಮಿ: ಅಮಲೇಂದು ಬಾಗ್ಚಿ, ೧/೨, ಸೀತಾರಾಮ್ ಘೋಷ್ ಬೀದಿ, ಕಲ್ಕತ್ತ ಪ್ರಬುದ್ಧ ಭಾರತ್, ಬಾಂಬೆ, ಸ್ಥಾಪಕ: ಡಾ: ಬಿ.ಆರ್.ಅಂಬೇಡ್ಕರ್

ದಿ ಸಂಡೆ ಕ್ರಾನಿಕಲ್

ದಿ ಸಂಡೆ ನ್ಯೂಸ್

ದಿ ಸಂಡೆ ಸ್ಟಾಂಡರ್ಡ್

ವಿವಿಧ ವೃತ, ಬಾಂಬೆ

ಇತರ

ಬಾಂಬೆ ಸೀಕ್ರೆಟ್ ಅಬ್ಸ್ಟ್ರಾಕ್ಟ್ . ಸೌರ್ಸ್ ಮೆಟೀರಿಯಲ್, ಭಾಗ ೧ರಲ್ಲಿ ಉಲ್ಲೇಖಿಸಿದ B.S.A.

* * * * *

# ವಿಷಯಸೂಚಿ


## ಅ

ಅಂಕಲಕೊಪ್ಪ ೪೪೨

ಅಂಕೋಲ ೨೬೪, ೨೬೫, ೨೬೬

ಅಂಜನ್‌ಗಾಂವ್ ೨೬೫

ಅಂಬಾಝಾರಿ ೭೨೮

ಅಂಬೇಡ್ಕರ್ ೩, ೪, ೬, ೮, ೧೩, ೧೪, ೧೬, ೧೭, ೧೮, ೧೯, ೨೦, ೨೮, ೨೯, ೩೦, ೩೧, ೩೨, ೩೫, ೩೬, ೩೯, ೪೪, ೪೬, ೪೭, ೪೯, ೫೦, ೫೩, ೫೫, ೫೬, ೫೭, ೫೮, ೫೯, ೬೦, ೬೨, ೬೩, ೬೫, ೬೭, ೬೮, ೬೯, ೭೦, ೮೪, ೮೭, ೮೮, ೮೯, ೯೦, ೯೧, ೯೪, ೯೫, ೯೬, ೧೦೯, ೧೧೪, ೧೧೫, ೧೧೬, ೧೧೭, ೧೨೧, ೧೨೨, ೧೨೩, ೧೨೮, ೧೨೯, ೧೩೩, ೧೩೪, ೧೩೬, ೧೩೯, ೧೪೦, ೧೪೨, ೧೪೩, ೧೫೦, ೧೫೧, ೧೭೧, ೧೭೨, ೧೭೪, ೧೭೬, ೧೯೫, ೨೦೦, ೨೦೧, ೨೦೩, ೨೦೫, ೨೦೮, ೨೧೫, ೨೧೭, ೨೨೦, ೨೨೩, ೨೨೪, ೨೨೯, ೨೩೧, ೨೩೩, ೨೩೫, ೨೪೯, ೨೫೩, ೨೫೪, ೨೫೬, ೨೫೭, ೨೫೮, ೨೫೯, ೨೬೦, ೨೬೧, ೨೬೨, ೨೬೩, ೨೬೫, ೨೬೬, ೨೬೯, ೩೦೦, ೩೦೧, ೩೦೨, ೩೦೩, ೩೦೪, ೩೦೫, ೩೦೬, ೩೦೭, ೩೧೨, ೩೧೪, ೩೧೫, ೩೧೬, ೩೧೭, ೩೧೮, ೩೧೯, ೩೨೦, ೩೨೧, ೩೨೨, ೩೨೩, ೩೨೪, ೩೨೫, ೩೨೬, ೩೨೭, ೩೨೯, ೩೩೦, ೩೩೩, ೩೩೪, ೩೩೫, ೩೩೬, ೩೩೮, ೩೩೯, ೩೪೧, ೩೪೨, ೩೪೩, ೩೪೪, ೩೪೯, ೩೫೦, ೩೮೧, ೩೮೨, ೩೮೩, ೩೮೮, ೩೮೯, ೩೯೧, ೩೯೩, ೩೯೪, ೩೯೫, ೩೯೬, ೩೯೭, ೩೯೮, ೪೦೦, ೪೦೧, ೪೦೨, ೪೦೩, ೪೦೪, ೪೦೫, ೪೨೧, ೪೨೨, ೪೨೩, ೪೨೪, ೪೨೫, ೪೨೬, ೪೨೮, ೪೨೯, ೪೩೦, ೪೩೧, ೪೩೨, ೪೩೩, ೪೩೪, ೪೩೫, ೪೩೬, ೪೩೭, ೪೩೯, ೪೪೦, ೪೪೧, ೪೪೨, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೫೮, ೪೫೯, ೪೬೧, ೪೬೨, ೪೬೬, ೪೭೪, ೪೮೧, ೪೮೪, ೪೮೫, ೪೮೬, ೪೮೭, ೪೮೮, ೪೯೦, ೪೯೪, ೪೯೫, ೪೯೭, ೪೯೮, ೫೦೧, ೫೦೨, ೫೦೩, ೫೦೪, ೫೦೫, ೫೦೬, ೫೦೭, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೪, ೫೧೫, ೫೧೬, ೫೨೦, ೫೨೩, ೫೨೫, ೫೨೮, ೫೩೩, ೫೩೫, ೫೩೬, ೫೩೭, ೫೩೯, ೫೪೦, ೫೪೧, ೫೪೨, ೫೪೪, ೫೪೫, ೫೪೬, ೫೪೭, ೫೪೮, ೫೪೯, ೫೫೦, ೫೫೧, ೫೫೨, ೫೫೩, ೫೫೪, ೫೫೫, ೫೫೬, ೫೫೭, ೫೫೮, ೫೫೯, ೫೬೩, ೫೭೧, ೫೭೨, ೫೭೪, ೫೭೫, ೫೭೭, ೫೮೦, ೫೮೧, ೫೮೨, ೫೮೩, ೫೮೪, ೫೮೫, ೫೮೬, ೫೮೭, ೫೮೮, ೫೯೨, ೫೯೩, ೫೯೪, ೫೯೬, ೬೦೧, ೬೦೮, ೬೧೬, ೬೨೪, ೬೨೫, ೬೨೬, ೬೨೮, ೬೨೯, ೬೩೧, ೬೩೨, ೬೩೩, ೬೩೪, ೬೩೫, ೬೩೬, ೬೩೭, ೬೩೮, ೬೩೯, ೬೪೦, ೬೪೧, ೬೪೨, ೬೫೫, ೬೫೬, ೬೫೭, ೬೫೮, ೬೫೯, ೬೬೦, ೬೬೧, ೬೬೨, ೬೬೩, ೬೬೪, ೬೬೫, ೬೬೮, ೬೬೯, ೬೭೦, ೬೭೧, ೬೭೭, ೬೭೮, ೬೭೯, ೬೮೦, ೬೮೫, ೬೮೬, ೬೮೭, ೬೮೯, ೬೯೦, ೬೯೧, ೬೯೨, ೬೯೫, ೬೯೯, ೭೦೦,

೭೦೩, ೭೦೪, ೭೦೫, ೭೦೬, ೭೦೭, ೭೧೫, ೭೧೬, ೭೧೭, ೭೨೦, ೭೨೪, ೭೨೫, ೭೨೬, ೭೨೭, ೭೨೮, ೭೨೯, ೭೩೦

ಅಂಬೇಡ್ಕರಾಚ್ಯ ೭೨೮

ಅಗರ್‌ಕರ್ ೪೩೪

ಅಗಸ್ತ್ಯ ೬೯೩

ಅಗ್ನೇಯ ೫೮೫, ೬೭೯

ಅಗ್ರಿಪಾದ ೩೧೧

ಅಚ್ಚುತ್ ೫೯೫, ೫೯೬, ೬೧೦, ೬೧೩

ಅಜಮೀರ್ ೧೯೩

ಅಡಾಲ್ಬೀ ಸೊರಾಬಿ ೩೪೬

ಅಡಿಸನ್ ೨೭೫

ಅತ್ರೆ ಪಿ.ಕೆ. ೩೯೬

ಅಥಾವಳ ಆರ್.ಎಸ್. ೫೦೬

ಅಥೆನಿಯನ್ ೬೪೩

ಅಧಿತ್ತಾನ್ ೬೬೬, ೬೬೭

ಅಪ್‌ಶ್ಯಾಮ್ ಎಸ್.ವಿ. ೫೦೬

ಅಬ್ದುಲ್ ಭಾಯಿ ಖಾಕರ್ ೨೬೫

ಅಬ್ರಹಾಮ್ ಲಿಂಕನ್ ೬೪೪, ೬೬೯

ಅಬ್ಸರ್ವರ್ ೯೨, ೫೨೦

ಅಮರಸೂರಿಯ ಎಚ್. ಡಬ್ಲ್ಯು. ೬೯೨

ಅಮರಾವತಿ ೪೬೭

ಅಮಲೇಂದು ಬಾಗ್ಚಿ ೭೩೦

ಅಮೀನಾಬಾದ್ ೨೦೫, ೨೦೬

ಅಮೃತಸರ ೩೪೧

ಅಮೃತಾನಂದ ೭೦೭

ಅಮೃತ್ ರಾವ್ ೩೩೩

ಅಮೃತ್ ರಾವ್ ರಣತುಂಬೆ ೩೩೩

ಅಮೆರಿಕ ೩೩, ೩೬, ೩೭, ೬೭, ೭೬, ೮೫, ೮೯, ೧೧೩, ೨೦೩, ೩೦೩, ೩೪೬, ೩೬೮, ೩೬೯, ೫೦೫, ೫೪೧, ೬೦೨, ೬೩೫, ೬೩೭, ೬೩೮, ೬೩೯, ೬೪೮, ೬೪೯, ೬೫೦, ೬೫೫, ೬೫೭, ೬೫೮, ೬೮೪, ೭೦೧

ಅರವಿಂದ್ ಬರುವಾ ಡಾ. ೬೯೨

ಅರಾಬಿಕ್ ೬೩೮

ಅರುಂಧತೀಯ ೩೧೪

ಅರುಣ್ ಎಂ. ದೊಂಡೆ ಪ್ರೊ. ೧೩೦

ಅಲನ್ ಕ್ಯಾಂಪ್‌ಬೆಲ್ ೬೭, ೬೮

ಅಲಹಾಬಾದ್ ೨೧೮, ೪೦೩, ೪೬೫, ೪೮೧, ೪೮೪

ಅಲಿಫರ್ ೨೦೨, ೨೦೩, ೨೦೫, ೬೯೭

ಅಲಿಪುರ್ ೧೫೧, ೧೭೨

ಅಲೆಗ್ಸಾಂಡರ್ ೧೮೮, ೨೦೦, ೨೧೪, ೨೧೫, ೨೧೬, ೪೦೦

ಅಲ್ಬೇನಿಯನ್ ೨೭೦

ಅಲ್ಮೋರಾ ೪೬೫

ಅಲ್‌ಸ್ಟರ್ ೨೯೩

ಅವಾಲೆ ೬೯೨

ಅಶೋಕ್ ೬೨೫, ೬೩೨, ೬೩೪

ಅಶೋಕ್ ಮೆಹತಾ ೬೨೫, ೬೩೨, ೬೩೪

ಅಸ್ಸಾಂ ೧೯೩

ಅಸ್ಸಾಮಿನ ೫೪೮

ಅಹಮದ್ ೬೩೧

ಅಹಲ್ಯಾಶ್ರಮ ೩೧೯

ಅಹಿಯಾಗಂಜ್ ೨೦೨

ಅಹಿರ್ ೭೨೮

ಅಹೋತೆ ೬೯೨

ಅಹ್ಮದ್ ೪೦೨, ೪೪೦

ಅಹ್ಮದಾಬಾದ್ ೩೧೧, ೪೦೭, ೪೨೪, ೪೬೫, ೪೮೧, ೫೫೩

ಅಹ್ಮದ್‌ನಗರ ೪೫೧, ೪೮೪


## ಆ


ಆಂಧ್ರ ೫೨೩

ಆಗಾ ಖಾನ್ ೧೧೪, ೩೧೨

ಆಟ್ಲೀ ೬೧೮

ಆತ್ಮಾರಾಮ್ ಇಚ್ಚಾ ರಾಮ್ ಸೋಲಂಕಿ ೪೬೫

ಆಥೆ ಎನ್.ಯು. ೨೬೪
ಆದಿದ್ರಾವಿಡರು ೩೩೯
ಆಫ್ಘಾನಿಸ್ತಾನ ೨೫೩
ಆಫ್ರಿಕಾ ೬೧, ೭೧, ೭೩, ೭೭, ೭೮, ೨೫೭, ೫೪೯, ೬೫೪
ಆಮ್ರಪಾಲಿ ೧೮೬
ಆ್ಯನಿಬೆಸೆಂಟ್ ೫೨೮
ಆರ್ದೇಶಿರ್ ಬಾರಿಯ ೩೩೦
ಆರ್ಯ ೩೩೯, ೩೬೭, ೪೨೮, ೫೮೯, ೬೦೯, ೬೯೩, ೭೧೦
ಆಲಿಪುರ್ ೯೦, ೬೩೬, ೬೭೯, ೬೮೫, ೬೮೬, ೭೦೬
ಆಲಿಬಾಗ್ ೩೩೦
ಆಲ್ಫ್ರೆಡ್ ೬೩೭
ಆಲ್ಬೆನ್ ಡಿಸೌಝ ೫೪೮
ಆಸ್ಕರ್ ೫೦೧
ಆಸ್ಕರ್ ಎಚ್. ಬ್ರೌನ್ ೫೦೧
ಆಸ್ಕ್ವಿಥ್ ೩೫
ಆಸ್ಟ್ರಿಯ ೧೮೫, ೬೫೫
ಆಸ್ಟ್ರೇಲಿಯಾ ೬೧, ೭೩, ೭೭, ೨೦೪
ಆಹಿರೆ ೪೦೪, ೪೬೨

ಇ

ಇಂಗ್ಲಿಷ್ ೯, ೧೦, ೩೭, ೯೦, ೨೮೩, ೩೬೯, ೪೬೬, ೪೮೮, ೬೦೩, ೬೧೨, ೬೪೩, ೬೪೪, ೬೫೦, ೬೫೧, ೬೫೩, ೭೦೩
ಇಂಗ್ಲಿಷರಿಗೆ ೬೩
ಇಂಗ್ಲೆಂಡ್೩, ೧೬, ೨೪, ೩೩, ೩೯, ೭೨, ೭೫, ೭೬, ೧೯೯, ೨೮೯, ೩೦೨, ೩೦೩, ೩೪೬, ೪೧೯, ೪೬೮, ೪೮೦, ೫೧೯, ೫೬೩, ೫೯೬, ೬೦೧, ೬೦೨, ೬೧೮, ೬೪೩, ೬೪೬, ೬೪೭, ೬೪೮, ೬೪೯, ೬೫೩, ೬೫೫, ೬೫೮, ೬೯೮, ೭೦೧
ಇಂಡೋ–ಚೈನಾ ೧೮೫
ಇಂದಿರಾಬಾಯಿ ಪಾಟೀಲ ೪೯೦, ೪೯೩
ಇಂದುತಾಯಿ ವರಾಳೆ ೬೮೯
ಇಂದುಲಾಲ್ ಯಾಗ್ನಿಕ್ ೪೦೦
ಇಂದೋರ್ ೧೧೪, ೨೫೭, ೩೪೪
ಇಗತ್‌ಪುರಿ ೪೦೩
ಇಟಾವಾ ೪೬೫
ಇನಾಂದಾರಿ ೪೦೦
ಇಬ್ರಾಹಿಮ್ ೪೦೩
ಇಬ್ರಾಹಿಮ್ ತಾಜ್‌ಭಾಯಿ ಶೇಠ್ ೪೦೩
ಇರ್ವಿನ್ ೨೬, ೨೩೦, ೨೩೨
ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ ೬೩೬, ೬೩೭
ಇಲಾಹಿ ಬಕ್ಷ್ ೨೫೩
ಇಸೋಶಿರಾ ೭೦೫
ಇಸ್ಲಾಂ ೩೩೯, ೩೩೯, ೩೪೨, ೩೬೦, ೬೨೭, ೬೭೫

ಈ

ಈಜಿಪ್ಟ್ ೮೭, ೫೦೨, ೬೫೫, ೬೮೦
ಈವ್ಸ್ ವೀಕ್ಲಿ ೧೮೪

ಉ

ಉ ಚಾನ್ ಹ್ಟೂನ್ ೭೦೪, ೭೦೬, ೭೦೭
ಉತ್ತರ ಆರ್ಕಾಟ್ ೬೭೬
ಉಪಶಾಮ್ ೬೬೯
ಉಪಶ್ಯಾಮ್ ಎಸ್.ಎ. ೬೪೦
ಉಪಶ್ಯಾಮ್ ಕಮಲಾಕಾಂತ್ ಚಿತ್ರೆ ೩೨೭
ಉಪೇಖ್ಖ ೬೬೬
ಉಪ್‌ಶಾಮ್ ೪೫೨
ಉಪ್ಶ್ಯಾಮ್ ಎಸ್.ಎ. ೬೯೨
ಉಮ್ರೆ ಕೆ.ವಿ. ೬೮೭
ಉಸ್ಮಾನಿಯಾ ವಿಶ್ವವಿದ್ಯಾಲಯ ೧೨೫, ೬೫೭, ೬೫೮, ೬೫೯

ಊ

ಊ ಥಿಇನ್ ಮಾಂಗ್ ೭೦೬

**ಎ**

ಎಡುಲ್ಜಿ ಬೈರಾಮ್‌ಜಿ ೬೧
ಎಡ್‌ಬೋರ್ ವಿ.ಎನ್. ೪೭೪
ಎಡ್ಮಂಡ್ ಬರ್ಕ್ ೨೭೬
ಎಡ್ವರ್ಡ್ ಕಾರ್ಸನ್ ೫೨೮, ೫೨೯
ಎಲಿಜಬೆತ್ ೧೮೫
ಎಲ್ಫಿನ್ ೬೪೧
ಎಲ್ಫಿನ್ಸ್ಟೋನ್ ೬೯೭
ಎಸೆಕ್ಸ್ ೧೮೫
ಎಸ್ಕೋನಿಯಾ ೨೭೧
ಎಸ್ತೋನಿಯಾ ೨೭೦
ಎಸ್ಮೋನಿಯಾ ೨೭೦

**ಏ**

ಏಡನ್ ೨೫೨
ಏಷ್ಯಾ ೫೮೫, ೬೬೦, ೬೭೮, ೬೭೯, ೭೦೫, ೭೦೮

**ಐ**

ಐಂಡಳೆ ೪೫೧
ಐರ್ ೭೮
ಐರಿಷ್ ೭೬, ೭೭, ೭೮, ೫೨೮, ೬೩೩
ಐರ್ಲೆಂಡ್ ೬೧, ೭೧, ೭೬, ೭೭, ೭೮, ೭೯, ೮೦, ೨೯೩, ೫೨೮
ಐಸೆನ್ ಹೋವೆರ್ ೬೩೫, ೬೩೭

**ಒ**

ಒರಿಸ್ಸಾ ೫೬, ೧೨೪, ೧೮೯

**ಓ**

ಓಪನ್‌ಹೀಮ್ ೨೨೬
ಓಮ್ಸ್ ೯೩
ಓಮ್ ಸ್ವಾಮಿರಾಗ್‌ಜೀ ೨೫೬

**ಔ**

ಔರಂಗಾಬಾದ್ ೯೦, ೯೦, ೯೫, ೨೩೧, ೨೩೩, ೨೩೪, ೬೬೩, ೬೬೪, ೬೭೮, ೬೯೨, ೭೨೮

**ಕ**

ಕಂಕಾವಳಿ ೪೨೩
ಕಂಬಪೀಠ ೨೭೯
ಕಚೋಲ್ಕರ್ ೩೦೬
ಕಡ್ರೇಕರ್ ಬಿ.ಆರ್. ೨೫೬, ೨೫೮
ಕಣ್ಣನ್ ಇ. ೪೭೪
ಕನೆಕ್ಟಿಕಟ್ ೬೩೯
ಕನ್ಹಯ್ಯಲಾಲ್ ಸೋಂಕರ್ ೫೭೪, ೮೭೪
ಕಪಿಲ ೬೬೮
ಕಪಿಲವಸ್ತು ೭೨೯
ಕಬೀರ್ ೧೭೨, ೬೬೯, ೬೭೦, ೬೯೨
ಕರಂಡೀಕರ್ ೪೯೬
ಕರಂಡೀಕರ್ ಯ.ಎಲ್. ೪೯೬
ಕಲಾರಾಮ್ ೩೩೪
ಕಲ್ಕತ್ತ ೨೮೭, ೪೮೧, ೪೮೪, ೫೩೯, ೫೪೧, ೫೪೨, ೬೭೪, ೬೭೮, ೬೯೨, ೭೩೦
ಕವಶಲ್ಯಾ ನಂದೇಶ್ವರ್ ೪೯೩
ಕವಾಡೆ ಆರ್.ವಿ. ೪೮೨
ಕವಾಸ್ ಜೀ ಜಹಾಂಗೀರ್ ೩೦೪, ೩೨೪, ೪೪೮, ೫೪೮, ೬೩೨
ಕಸಾರಾ ೩೧೬, ೩೨೫
ಕಾಂಗ್ರೆಸ್ ೬, ೮, ೯, ೧೧, ೧೨, ೧೩, ೧೪, ೧೬, ೧೭, ೧೮, ೨೮, ೨೯, ೩೦, ೩೧, ೩೨, ೩೪, ೩೫, ೩೬, ೩೭, ೪೦, ೪೧, ೪೨, ೪೩, ೪೭, ೫೧, ೫೩, ೫೭, ೬೫, ೯೬, ೧೨೧, ೧೨೨, ೧೪೩, ೧೪೪, ೧೯೬, ೧೯೮, ೧೯೯, ೨೦೦, ೨೦೧, ೨೦೨, ೨೦೩, ೨೦೫, ೨೧೪, ೨೧೫, ೨೧೭, ೨೧೯, ೨೨೦, ೨೨೧, ೨೨೨, ೨೩೯, ೨೬೦, ೨೬೧, ೨೬೨, ೨೬೩, ೨೬೬, ೨೬೭,

೨೬೮, ೨೬೯, ೨೭೨, ೨೭೩, ೨೭೪, ೨೭೮,
೨೮೫, ೨೮೭, ೨೯೪, ೨೯೫, ೨೯೬, ೨೯೭,
೩೦೦, ೩೦೩, ೩೦೫, ೩೦೮, ೩೧೨, ೩೧೪,
೩೧೫, ೩೧೬, ೩೧೭, ೩೧೮, ೩೧೯, ೩೩೨,
೩೩೩, ೩೮೩, ೩೮೪, ೩೮೬, ೩೮೭, ೩೮೮,
೩೮೯, ೩೯೩, ೩೯೪, ೩೯೫, ೩೯೮, ೪೧೩,
೪೧೫, ೪೧೬, ೪೧೭, ೪೨೨, ೪೨೩, ೪೨೪,
೪೨೫, ೪೨೬, ೪೨೭, ೪೨೯, ೪೩೨, ೪೩೫,
೪೩೭, ೪೪೧, ೪೪೨, ೪೪೯, ೪೫೫, ೪೬೦,
೪೭೧, ೪೭೮, ೪೮೩, ೪೮೬, ೪೯೮, ೪೯೯,
೫೦೨, ೫೦೩, ೫೦೪, ೫೦೫, ೫೦೬, ೫೦೭,
೫೦೮, ೫೧೧, ೫೧೩, ೫೧೪, ೫೧೫, ೫೧೬,
೫೧೯, ೫೨೨, ೫೨೪, ೫೨೮, ೫೨೯, ೫೩೧,
೫೩೫, ೫೩೬, ೫೩೭, ೫೪೦, ೫೪೨, ೫೪೩,
೫೪೫, ೫೫೨, ೫೫೩, ೫೫೫, ೫೫೬, ೫೫೭,
೫೬೦, ೫೬೧, ೫೬೫, ೫೭೪, ೫೭೫, ೫೭೬,
೫೭೭, ೫೭೮, ೫೭೯, ೫೮೦, ೫೮೨, ೫೮೩,
೫೮೪, ೫೯೩, ೫೯೫, ೫೯೬, ೫೯೭, ೫೯೮,
೫೯೯, ೬೦೦, ೬೦೬, ೬೦೭, ೬೧೧, ೬೧೨,
೬೧೩, ೬೧೪, ೬೧೬, ೬೧೭, ೬೧೮, ೬೧೯,
೬೨೦, ೬೨೨, ೬೨೩, ೬೨೪, ೬೨೬, ೬೨೭,
೬೨೮, ೬೨೯, ೬೩೦, ೬೩೧, ೬೩೨, ೬೩೩,
೬೩೪, ೬೫೯, ೬೮೨, ೭೨೫
ಕಾಂಚೀಪುರಮ್ ೬೭೬
ಕಾಂಬ್ಳೆ ಬಿ.ಸಿ. ೬೯೨, ೭೨೮
ಕಾಕಾ ಸಾಹೆಬ್ ಗಾಡಗೀಳ ೫೮೪
ಕಾಟ್‌ವಾಡಿ ೩೧೦
ಕಾನ್ಪುರ ೪೦೩, ೫೧೦, ೫೪೮
ಕಾಮನ್‌ವೆಲ್ತ್ ೨೪, ೬೮, ೭೦, ೭೧, ೭೨, ೮೭,
೧೮೮, ೨೧೨, ೨೧೫
ಕಾಮಾಟಿಪುರ ೨೬೧, ೩೧೧, ೩೮೨
ಕಾಮೇಶ್ವರ ೫೩೭
ಕಾಯಸ್ತರು ೩೭೨
ಕಾರವಾರ ೯೫, ೩೧೧
ಕಾರ್ಕಮ್ ೩೯೪
ಕಾರ್ಡಕ್ ೩೨೭
ಕಾರ್ಲ್ ಮಾರ್ಕ್ಸ್ ೪೦೮, ೬೬೦, ೬೬೯, ೬೭೮,
೬೯೬, ೭೦೨, ೭೦೬, ೭೦೭, ೭೦೮, ೭೦೯,
೭೧೦, ೭೧೧, ೭೧೩
ಕಾರ್ವೆ ಬಿ.ಜಿ. ೨೫೬
ಕಾಲ್ವಿ ಎಯ್. ೪೪೯
ಕಾಶೀಬಾಯಿ ೨೬೫, ೨೬೬
ಕಾಶೀರಾಂ ೧೭೨
ಕಾಶೀರಾಂ ವಿಶ್ರಮ್ ೧೭೨
ಕಾಶ್ಮೀರ ೮೭, ೧೧೪, ೬೨೪, ೬೩೭
ಕಾಳೆ ಜಿ.ಎಚ್. ೧೯೮
ಕಿರ್ಕೀ ೨೫೦, ೨೫೨
ಕಿಸಾನ್ ಫಾಗು ಬಂಡ್‌ಸೋಡೆ ೨೬೪
ಕೀರ್ತಿ ಬಾಯಿ ಪಾಟೀಲ್ ೪೯೦, ೪೯೫
ಕುಂದುವಾಡಿ ೩೯೪
ಕುಟ್ಟಿರ್ ೩೪೧
ಕುನ್‌ಬಿ ೪೪೩
ಕುಬೇರ್ ಡಬ್ಲ್ಯು. ಎನ್. ೭೨೮
ಕುರಾನ್ ೩೧೨
ಕುರ್ಲಾ ೬೩೨
ಕುಲಕರ್ಣಿ ವಿ.ಎಮ್. ೬೯೨
ಕುಲಾಬಾ ೩೧೦
ಕುಶೇನಾರ ೬೮೬
ಕುಸಿನಾರ ೬೦೩
ಕೂನೂರು ೯೧
ಕೂರ್ಮಯ್ಯ ೪೬೫
ಕೃಷ್ಣರಾವ್ ಫುಲಂಬೀಕರ್ ೬೪೨
ಕೆನಡಾ ೬೧, ೭೨, ೭೩, ೭೪, ೭೬, ೭೭, ೭೮,
೬೩೯, ೬೪೭
ಕೆಲೂಸ್ಕರ್ ೩೦೩
ಕೇರಳ ೩೪೧

ಕೇಲುಸ್ಕರ್ ಕೆ.ಎ. ೨೩೫
ಕೇಶ್ವರ್ ಪಾಸ್ವಾನ್ ೨೧೯
ಕೇಸರ್ ಲಾಲ್ ೨೦೫, ೨೦೬
ಕೇಸರ್‌ವಾಡಿ ೪೫೨
ಕೊಂಕಣ್ ೪೨೩
ಕೊಚ್ಚಿನ್ ೨೨೦
ಕೊಲಂಬಸ್ ೨೧೯
ಕೊಲಂಬಿಯ ೬೩೬, ೬೩೭, ೬೩೯
ಕೊಲಂಬೋ ೬೯೨
ಕೊಲಾಬಾ ೯೫, ೧೨೩, ೩೩೦, ೪೦೦, ೪೧೮, ೪೪೪, ೪೫೧, ೪೫೯, ೬೩೨
ಕೊಲೇಕೊ ಜೆ.ಎ. ೫೦೧
ಕೊಲೊಂಬೋ ೫೮೮
ಕೊಲ್ಕತ್ತಾ ೨೬೪, ೩೧೬, ೫೧೨
ಕೊಲ್ಲಾಪುರ ೯೫, ೩೧೨, ೩೧೯, ೬೫೫, ೬೫೬
ಕೊಸಾರೆ ೪೭೪, ೪೮೧, ೪೮೨, ೪೯೫, ೭೨೮
ಕೊಸಾರ್ ವಿ.ಎಲ್. ೪೯೬
ಕೋನೋನೆ ಜೆ.ಜಿ. ೨೬೪
ಕೋರೆಗಾಂವ್ ೨೪೯, ೨೫೦, ೨೫೧, ೨೫೨, ೪೪೩
ಕೋಲಾರ ೬೭೬
ಕೌಟಿಲ್ಯ ೫೭೪
ಕ್ಯಾಂಡಿ ೫೮೭, ೫೮೮
ಕ್ಯಾಥೊಲಿಕ್ ೨೧೮, ೨೭೦, ೨೭೧
ಕ್ರಿಪ್ಸ್ ೪೦, ೧೮೮, ೧೯೮, ೨೦೦, ೨೧೩, ೨೧೫, ೪೫೫, ೪೬೬, ೪೬೭, ೪೭೨, ೪೭೭, ೪೭೮, ೪೮೦, ೪೮೧, ೫೦೩, ೫೦೪, ೫೦೭, ೫೦೮, ೫೧೩, ೫೩೦, ೫೬೩
ಕ್ರಿಶ್ಚಿಯನ್ ೮೬, ೧೨೬, ೨೧೮, ೨೪೯, ೨೮೫, ೩೧೪, ೩೩೮, ೩೩೯, ೩೪೨, ೩೬೦, ೩೬೧, ೩೬೫, ೩೬೬, ೩೭೦, ೩೭೧, ೩೭೨, ೩೭೩, ೩೭೫, ೩೭೬, ೩೮೩, ೩೯೬, ೫೩೧, ೫೪೮, ೫೬೪, ೬೧೧, ೬೫೩, ೬೭೨, ೬೭೩, ೬೭೪, ೭೦೦, ೭೦೨, ೭೧೪
ಕ್ರಿಸ್ತ ೬೭೩, ೭೦೦
ಕ್ರೋಟರು ೨೭೦
ಕ್ರೋನ್ ಜೆ. ೧೯೭
ಕ್ಲುಂಕ್ಲಕ್ಸ್ ಕ್ಲಾನ್ ೨೦೪
ಕ್ಲೆಮೆಂಟ್ ಅಟ್ಲಿ ೧೯, ೧೯, ೫೮, ೬೪, ೧೮೮

## ಖ

ಖಟಮಂಡು ೭೦೬, ೭೨೯
ಖತ್ರಿ ಆರ್.ಜಿ. ೬೨೬
ಖದ್ದರ್ ೨೯೬
ಖಾಂದೇಶ ೪೫೩, ೪೬೫
ಖಾನ್ ಅಬ್ದುಲ್ ಗಫ್ಫಾರ್ ಖಾನ್ ೩೮
ಖಾನಾಸಾಹೇಬ್ ದೇಸಾಯಿ ೨೫೮
ಖಾನ್ಪುರ ೨೦೨, ೨೦೩, ೨೦೪, ೨೦೫, ೨೦೬
ಖಾನ್ ಸಾಹಿಬ್ ಸರಾಂಗ್ ೫೦೧
ಖಿಲಾಫತ್ ೩೦೫
ಖೇರ್ ಬಿ.ಜಿ. ೧೩, ೯೬, ೧೪೩, ೧೪೪, ೪೨೯, ೬೫೧, ೭೨೬
ಖೈರ್‌ಮೋಡೆ ಸಿ.ಎಂ. ೭೨೮
ಖೋಟ್ ೨೫೬, ೨೫೮, ೩೩೧, ೪೦೦, ೪೨೩, ೪೪೪, ೪೬೧
ಖೋತ್ ಎಸ್.ಎಲ್. ಪ್ರೊ. ೧೩೦
ಖೋತಿ ೧೧೮
ಖೋಸ್ಲಾ ೫೫

## ಗ

ಗಂಗಾ ೬೯೯
ಗಂಗಾಧರ್ ಜಾಧವ್ ೩೯೬
ಗಂಗಾರಾಮ್ ಜಿ. ಧನುಕ್ ೪೬೫
ಗಂಗುರ್ಡೆ ಡಿ.ಜೆ. ೧೩೦
ಗಡ್ಕರಿ ವಿ.ಎ. ೧೨೩
ಗಣಪತ್ ಬುವಾ ಜಾಧವ್ ೩೨೫
ಗಣೇಶ ದತ್ ಸಿಂಗ್ ೨೧೭

ಗಯಾಪ್ರಸಾದ್ ೫೭೪
ಗವಾಯಿ ಜಿ.ಎ. ೩೧೫, ೩೧೭, ೩೨೦
ಗಾಂಧಿ ೩, ೧೦, ೨೪, ೩೧, ೩೨, ೩೩, ೩೪, ೩೯, ೪೦, ೪೧, ೪೨, ೪೩, ೪೪, ೪೭, ೫೦, ೫೧, ೫೩, ೨೦೦, ೨೦೩, ೨೦೮, ೨೦೯, ೨೯೩, ೨೯೫, ೨೯೬, ೨೯೭, ೩೦೪, ೩೦೫, ೩೦೬, ೩೧೨, ೩೧೩, ೩೨೯, ೩೩೬, ೩೩೭, ೩೩೯, ೩೪೨, ೩೪೩, ೩೮೩, ೩೮೫, ೩೮೬, ೩೯೩, ೪೨೪, ೪೩೫, ೪೪೬, ೪೭೦, ೪೭೧, ೫೦೩, ೫೦೪, ೫೦೭, ೫೧೨, ೫೧೩, ೫೧೪, ೫೧೫, ೫೨೨, ೫೨೩, ೫೨೪, ೫೨೫, ೫೨೬, ೫೨೭, ೫೨೮, ೫೩೧, ೫೩೨, ೫೩೫, ೫೩೬, ೫೩೭, ೫೩೮, ೫೪೩, ೫೪೯, ೫೫೨, ೫೫೪, ೫೫೬, ೫೫೭, ೫೯೭, ೫೯೮, ೬೧೦, ೬೨೧, ೬೨೨, ೬೩೮, ೬೯೮, ೬೯೯, ೭೧೫
ಗಾಂಧಿತತ್ವ ೩೯೩
ಗಾಂಧಿವಾದ ೪೭೧
ಗಾಯಕವಾಡ್ ೪೩೬, ೪೬೧
ಗಾಯಕವಾಡ್ ಎಸ್.ಟಿ. ೪೨೨
ಗಾಯಕವಾಡ್ ಬಿ.ಕೆ. ೧೯೬, ೧೯೭, ೧೯೯, ೨೫೪, ೩೨೫, ೪೫೧, ೪೭೭, ೪೮೧, ೪೮೨, ೪೯೭, ೫೫೬, ೬೯೨, ೭೨೦
ಗಾಯಕ್‌ವಾಡ್ ಎಸ್.ಡಿ. ೧೭೨
ಗಾಯಕ್‌ವಾಡ್ ಎಸ್.ಪಿ. ಡಾ. ೧೩೦
ಗಾಯಿಕ್‌ವಾಡ್ ಮೋರೆ ಡಿ. ೨೫೮
ಗಾರ್ಗಿ ೧೮೭
ಗಿಬ್ಬನ್ ೬೭೨, ೬೭೩, ೭೦೦
ಗಿರಿಧರ್‌ಲಾಲ್ ೨೦೫
ಗೀತಾಬಾಯಿ ಗಾಯಕವಾಡ ೧೯೬
ಗುಜರಾತ್ ೧೦೦, ೨೫೨, ೩೦೯, ೩೧೧, ೪೫೨, ೪೮೧, ೬೯೨
ಗುಜರಾತಿ ೫೦, ೯೫, ೯೬, ೩೦೦, ೪೪೯, ೫೪೭
ಗುಣಾಬಾಯಿ ಗಡೇಕರ್ ೨೬೨, ೨೬೫
ಗುಪ್ತೆ ಎಸ್.ಎಸ್. ೨೫೬
ಗೋಖಲೆ ೨೪೯, ೪೩೪, ೫೦೭, ೫೩೯, ೫೫೨, ೫೭೧, ೬೪೧
ಗೋಖಲೆ ಎಲ್.ಆರ್ ೬೪೧, ೬೪೨
ಗೋಗಟೆ ವಿ.ಬಿ. ೬೪೨
ಗೋಡ ಬೋಲೆ ಡಬ್ಲ್ಯು. ಎಂ. ೬೮೬, ೬೮೭
ಗೋಡ್‌ಘಾಟೆ ಎಮ್.ಟಿ. ೨೬೪
ಗೋಡ್ ಬೋಲೆ ಡಬ್ಲ್ಯು. ಎಂ. ೬೮೫, ೬೮೬
ಗೋಡ್ಬೋಲೆ, ವಾಮನ್ರಾವ್ ೭೨೮
ಗೋಪಾಲ್‌ಸಿಂಗ್ ೪೬೨, ೪೬೫, ೪೮೧, ೪೮೨, ೪೯೫, ೪೯೬, ೪೯೭
ಗೋಪಿಚಂದ್ ೨೦೫, ೨೦೬, ೨೦೭, ೫೭೪
ಗೋಪಿಚಂದ್ ಉಪ್ಪಲ್ ೫೭೪
ಗೋಪಿಚಂದ್ ಪಿಪಾಲ್ ೨೦೭
ಗೋಮಾಜಿ ತೆಂಬಾರೆ ೩೪೨
ಗೋರಖ್ಪುರ ೬೮೬
ಗೋರೆಗಾಂವ್ ೩೪೪, ೩೪೫, ೩೪೬
ಗೋಷ್ವಾರೆ ೧೩೬
ಗೌತಮಬುದ್ಧ ೩೧೪
ಗ್ರೀಕ್ ೨೭೦, ೭೦೧
ಗ್ರೇಸನ್ ಕರ್ಕ್ ೬೪೦
ಗ್ಲಾಡ್‌ಸ್ಟೋನ್ ೫೭೦
ಗ್ಲಾಮೇಜ್ ೪೧೯

## ಘ

ಘೋರ್ಪಡೆ ಪೇತ್ ೭೩೦

## ಚ

ಚಂದನ್‌ವಾಡಿ ೩೧೦
ಚಂದ್ರಪ್ರಭಾ ಪಾಟೀಲ್ ೪೯೩
ಚಂದ್ರಮಣಿ ಮಹಾ ತೇರಾ ೬೮೫, ೬೮೬
ಚಂದ್ರಮಣಿ ಮಹಾಸ್ತವೀರ್ ೬೭೮, ೬೮೯, ೬೯೦, ೭೦೭

ಚಂಪಾರಣ್ ೨೧೯
ಚಂಭರ್ ೧೦೦
ಚರ್ಚಿಲ್ ೫೭೧
ಚವಾಣ್ ವಿ.ಪ. ಡಾ. ೯೬
ಚವ್ಹಾನ್ ಎಸ್.ಪಿ. ೪೬೫
ಚಳ್ವಳೀಚ ೭೨೮
ಚಾಂದ್ ಬೀಬಿ ೧೮೫
ಚಾಂದ್ವಾ ಅರಾ ೨೧೯
ಚಾರ್ಜ್‌ಮನ್ ೪೦೭
ಚಾರ್ಟಿಸ್ಟ್ ಚಳವಳಿ ೪೧೯
ಚಿಂಗಲ್ ಪೇಟೆ ೬೭೬
ಚಿಂಚ್‌ಪೋಕ್ಲಿ ೯೭
ಚಿಟ್ನಿಸ್ ಬಿ.ಎಮ್. ೬೯೨
ಚಿತ್ರೆ ಎ.ವಿ. ೪೦೦, ೪೫೧
ಚಿತ್ರೆ ವಿ.ವಿ. ೪೬೧
ಚಿದಂಬರಮ್ ೪೭೪
ಚಿಪ್ಲುನ್ ೨೫೬, ೨೫೮
ಚಿಮನ್‌ಲಾಲ್ ಹರಿಲಾಲ್ ಸೆಟಲ್ವಾಡ್ ೯೬
ಚಿಯಾಂಗ್ ಕೈ-ಷೆಕ್ ೩೫
ಚೀನಾ ೮೯, ೨೫೨, ೫೯೧, ೭೧೪
ಚೀಲಗಳ್ಳಿ ೬೨೬
ಚೆಂಬೂರು ೪೩೬
ಚೈನಾ ೧೮೫, ೬೩೦, ೭೦೧
ಚೊಕ್ಕವೇಲ ೨೫೪
ಚೊಖಮೇಳ ೨೩೪, ೩೬೬
ಚೌಧರಿ ೨೫೪
ಚೌಬಾಲ್ ಕೆ.ಎಸ್. ೬೪೨

### ಛ

ಛೇಂಬರ್ಲಿಯನ್ ೨೦

### ಜ

ಜಗಜ್ಜೀವನ್ ರಾಮ್ ೧೯೫, ೨೧೭, ೨೧೮, ೨೧೯
ಜಗತಾಪ್ ಬಿ.ಜಿ. ೩೦೧
ಜಗ್‌ತುಪ್ ಮಸೂಹರ್ ೨೨೦
ಜಗ್‌ಲಾಲ್ ಚೌಧುರಿ ೨೨೦
ಜಪಾನ್ ೩೭, ೪೩, ೩೦೩, ೫೦೨, ೬೬೦, ೭೦೫
ಜಬಲ್ಪುರ ೪೦೩
ಜಮನ್‌ಲಾಲ್ ಬಜಾಜ್ ೩೪೩, ೩೪೩, ೪೨೨
ಜಮ್ಮು ೮೭, ೬೨೪
ಜಯಪ್ರಕಾಶ್ ನಾರಾಯಣ್ ೪೧೭
ಜರ್ಮನ್ ೨೩, ೨೭೦, ೨೭೧, ೫೫೩
ಜರ್ಮನಿ ೨೦, ೨೦, ೨೧, ೨೩, ೨೫, ೪೩, ೨೦೩, ೨೭೧, ೩೦೩, ೪೦೮, ೪೧೯, ೪೯೭, ೭೦೧
ಜಲಂಧರ್ ೮೭, ೫೯೪, ೬೦೧
ಜಲಂಧರ್ಗೆ ೬೧೩
ಜಲಗಾಂವ್ ೨೫೪, ೪೬೫, ೪೮೨, ೪೯೭
ಜಲ್ಸಾ ಮಂಡಲ ೧೪೭, ೩೦೯
ಜವಹರ ಲಾಲ್ ನೆಹರೂ ೯೪
ಜಾಂಡ್ ೪೦೩
ಜಾಧವ್ ಎನ್. ಟಿ. ೯೬
ಜಾಧವ್ ಎಸ್.ಜಿ. ೨೬೪
ಜಾಧವ್ ಎಸ್.ಬಿ. ೪೯೬, ೫೪೭, ೫೪೮
ಜಾಧವ್ ಜಿ.ಎಮ್. ೪೩೬, ೪೪೯, ೫೫೪
ಜಾಧವ್ ಡಿ.ಜಿ. ೧೩೬, ೧೩೯, ೪೫೧, ೪೬೫, ೪೮೨, ೪೯೭, ೬೯೨
ಜಾಧವ್ ಬಿ.ಜಿ. ೩೫೦
ಜಾಧವ್ ಬಿ.ವಿ. ೫೧೦
ಜಾನ್ಸನ್ ೬೮
ಜಿತೂರಾಮ್ ೨೧೯
ಜಿನಿವಾ ೧೨೧
ಜಿನ್ನಾ ೪, ೬, ೩೧, ೩೭, ೩೮, ೪೪, ೪೬, ೪೭, ೫೦, ೫೧, ೫೨, ೫೩, ೫೮, ೨೦೮, ೨೨೧, ೨೨೨, ೪೭೨, ೫೦೬, ೫೦೭, ೫೧೩, ೫೧೫, ೫೧೬, ೫೨೨, ೫೨೫, ೫೩೧, ೫೩೨, ೫೩೭, ೫೫೪

ಜಿಯಾ ಇನಿ ಜಿ.ಜಿ. ೨೬೫
ಜೀಲ್ಯಾಂಡ್ ೭೩, ೭೮
ಜೀಸಸ್ ೭೧೪
ಜುಡಿಸ್ ೪೨೯
ಜೆಕೊಸ್ಲೋವಾಕಿಯಾ ೨೭೦, ೨೭೧
ಜೆಸ್ಸೂರ್ ೪೮೧
ಜೆಹಾಡೆ ಹೆಚ್.ಡಿ. ೨೫೯
ಜೈನ ೬೮೨
ಜೈನಧರ್ಮ ೩೬೭
ಜೈಪುರ್ ೭೨೮
ಜೈಬಾಯಿ ಚೌಧರಿ ೨೬೫, ೨೬೬, ೪೯೦, ೪೯೨
ಜೈಸಿಂಘ್ ೭೨೮
ಜೈಸ್ವಾಲ್ ೨೧೮, ೪೮೨
ಜೋಗಿಂದರ್ ಸಿಂಗ್ ೩೪೧
ಜೋಗಿನಿ ೩೮೨
ಜೋಗೇಂದ್ರ ಸಿಂಗ್ ೧೨೩
ಜೋಧಾರಾಮ್ ೨೦೬
ಜೋಷಿ ಎನ್. ಎಂ. ೧೪
ಜೋಷಿ ಎಸ್.ಸಿ. ೧೩೪, ೧೩೬, ೧೩೯, ೪೦೦, ೪೪೪
ಜೋಹರಿಲಾಲ್ ೨೦೫
ಜೌರಂಗಾಬಾದ್ ೪೨೮, ೪೬೫
ಜ್ಯೂ ೬೫೩, ೬೭೧
ಝೀಲ್ಯಾಂಡ್ ೭೭
ಝೆಕೋಸ್ಲೋವಾಕಿಯಾ ೨೦, ೨೭೧


## ಝ


ಝೂನ್ಸಿ ೧೮೫, ೨೦೨


## ಟ


ಟನ್ನಾಕ್ ೨೫೨, ೨೫೩
ಟಮ್ಹಾ ೪೬೫
ಟಾನ್ವಾನ್ ೫೪೮
ಟಿಪ್ಪಿಸ್ ಎಸ್.ಜಿ. ೧೨೩
ಟಿಫ್‌ನಿಸ್ ಎಸ್.ಜಿ. ೩೩೦
ಟಿಬೆಟ್ ೧೮೫, ೧೮೬, ೫೯೧, ೭೦೧
ಟುಲ್ಪುಲೆ ಎಚ್.ವಿ. ೬೪೧, ೬೪೨


## ಡ


ಡಾತೋಸ ೭೨೭
ಡಿಖಾಲೆ ಎಸ್.ಎಮ್. ೪೭೪
ಡಿ ವಲೇರಾ ೭೬, ೭೭
ಡಿಸೌಝ ಡಾ: ಆಲ್ಬೆನ್ ೫೪೮
ಡೆಕ್ಕನ್ ಕ್ರಾನಿಕಲ್ ೬೫೮
ಡೆಲ್ಲಿ ೧೫೧, ೧೭೨
ಡೇನಿಯಲ್ ಮಾರ್ನೆಟ್ ೬೩೯
ಡೋಂಗ್ರಿ ೪೬೨
ಡೋಲಾಸ್ ಡಿ. ೩೫೦, ೩೫೧


## ತ


ತಟೆನಿಸ್ ಆರ್. ಕೆ. ೪೨೨
ತಡ್‌ವಾಲ್ ೪೪೬
ತಲಪಾಡೆ ಎಮ್.ಎನ್. ೪೨೨
ತಲ್ವಾಟ್ಕರ್ ಕೆ.ಬಿ. ೧೩೦
ತಲ್ಪಾಡೆ ಎಮ್. ಎನ್. ೪೨೨
ತಾಂಡನ್ ೬೩೧
ತಾಜ್‌ಮಹಲ್ ೫೦೧
ತಾಡವಾಡಿ ೪೨೨
ತಾಲಿಬ್ ಪಿ.ಎಲ್.ಕೆ. ೪೮೪, ೪೯೬, ೪೯೭
ತಿರುವಾಂಕೂರು ೬೦, ೨೨೦, ೨೨೪, ೩೬೦
ತಿರ್‌ನೆಲ್‌ವೇಲಿ ೪೭೪
ತಿಲಕ್‌ಚಂದ್ ೨೦೧, ೨೦೨, ೨೦೩, ೨೦೬, ೪೮೩, ೫೭೪
ತಿಲಕ್ ಚಂದ್ ಕುರಿಲ್ ೨೦೧, ೨೦೨, ೨೦೩, ೨೦೭, ೫೭೪
ತುಕೋಜಿರಾವ್ ಹೋಳ್ಕರ್ ೧೧೪

ತುಲಾರಾಮ್ ಸಖಾರೆ ೩೧೬
ತುಳಸಾಬಾಯಿ ಬಂಡ್ಖೋಡೆ ಪಾಟೀಲ್ ೨೬೫
ತುಳಸಾಬಾಯಿ ಬನಸೋಡೆ ೨೬೬
ತೆಗೂರಿ ೪೦೪
ತೇಜ್ ಬಹಾದೂರ್ ಸಪ್ರು ೫೩, ೫೪, ೫೨೪
ತೇರಾವಾದ ೭೦೫
ತೇರೋ ಪನ್ನಾಟಿಸ್ ೬೮೯
ತೋತಾರಾಮ್ ೨೦೨
ತ್ರಿಪುರಮ್ ೬೭೬
ತ್ರ್ಯಂಬಕ್ ೨೫೪

## ಥ

ಥಕ್ಕರ್ ಎ.ವಿ. ೫೪೯, ೫೫೦
ಥಾಣಾ ೯೫, ೧೨೩, ೩೧೦, ೩೧೧, ೩೨೫, ೩೪೪, ೪೦೦, ೪೦೩, ೪೪೭, ೪೭೪, ೭೨೯
ಥಾಮಸ್ ಪೆಯ್ನ್ ೮೩
ಥಿಯೋಡೊರಾ ೧೮೫
ಥೆರೇಸಾ ೧೮೫
ಥೇರಿಗಾತಾ ೧೮೭
ಥೊರಾಟ್ ೫೬
ಥೋರಟ್ ೨೫೪

## ದ

ದ ಬಾಂಬೆ ಕ್ರಾನಿಕಲ್ ೫೦, ೩೨೦, ೪೫೦, ೫೮೩, ೭೨೯
ದಲಿಪ್ ದುಸದ್ ೨೨೦
ದಲ್ತನ್ಗಂಜ್ ೨೧೯
ದಲ್ಸಿಂಗಸಾರಾಯ್ ೨೧೯
ದಶರತ್ ಲಕ್ಷ್ಮಣ್ ಪಾಟೀಲ್ ೨೫೯, ೨೬೩, ೪೮೬
ದಶರಥ ಪಾಟೀಲ ೨೬೫, ೪೮೬
ದಶರಥ್ ಲಕ್ಷ್ಮಣ್ ಪಾಟೀಲ್ ೨೫೯
ದಹನೂಕರ್ ಎಮ್.ಎಲ್. ೫೧೯
ದಾತಾರ್ ಶಾಸ್ತ್ರಿ ೨೫೪
ದಾದರ್ ೧೭೨, ೨೧೭, ೩೧೧, ೩೪೯, ೩೮೧, ೪೫೨, ೫೦೪, ೫೧೦
ದಾದಾಸಾಹೆಬ್ ನಿಂಬಾಳ್ಕರ್ ೬೫೬
ದಾಧಾಬಾಯಿ ೪೩೪
ದಾಪೊಲಿ ೨೩೧, ೨೩೩
ದಾಮೋದರ್ ಥ್ಯಾಕರ್ಸೆ ೨೨೭, ೩೦೨, ೩೮೨
ದಾಸ್ ಎನ್.ಎನ್. ೪೮೧
ದಿವಾಕರ್ ಪರಾರೆ ೩೨೭
ದಿವಾನ್ ಬಹದೂರ್ ಲತ್ತೆ ೩೧೯, ೩೨೧
ದಿ ಸಂಡೆ ಕ್ರಾನಿಕಲ್ ೭೩೦
ದೆಹಲಿ ೨೮, ೨೮, ೩೯, ೪೪, ೬೩, ೬೭, ೯೧, ೯೪, ೧೯೩, ೪೦೩, ೪೫೮, ೪೬೬, ೪೬೭, ೪೮೧, ೫೦೨, ೫೦೩, ೫೪೭, ೫೫೭, ೫೫೯, ೫೬೨, ೫೭೨, ೫೮೪, ೫೮೫, ೬೦೭, ೬೧೫, ೬೩೫, ೬೩೬, ೬೪೦, ೬೪೮, ೬೪೯, ೬೫೭, ೬೬೦, ೬೬೪, ೬೭೪, ೬೭೭, ೬೭೯, ೬೮೫, ೬೮೬, ೬೯೭, ೭೦೬, ೭೨೮
ದೇವರಾಜ ನಾಯಕ್ ೩೦೩
ದೇವರಾವ್ ನಾಯಕ್ ೨೫೬, ೨೫೮, ೩೨೨, ೩೩೮, ೪೬೧
ದೇವರುಖ್ ಕಾರ್ ಡಾ. ೪೩೬
ದೇವರೂಕರ್ ಬಿ.ಜೆ. ೪೩೮
ದೇಶಪಾಂಡೆ ಸಿ.ಜಿ. ೩೩೦, ೩೩೩
ದೇಶ್ಮುಖ್ ಸಿ.ಡಿ. ೫೪೮
ದೊಡ್ವೆಲ್ ಇ.ಎ. ೧೯೭
ದೋಂಡೆ ಎಮ್.ವಿ. ೧೩೬
ದೌಂಡ್ ೪೭೪
ದೌಲತಾಬಾದ್ ೯೫
ದೌಲತ್ ರಾವ್ ಗುಲಾಜಿ ಜಾಧವ್ ೧೩೩

## ಧ

ಧನಂಜಯ್ ೭೨೮
ಧಮ್ಮ ೬೭೧, ೬೭೪, ೬೮೯, ೬೯೦, ೭೦೩,

೭೦೫, ೭೦೬, ೭೧೨, ೭೧೩, ೭೧೪, ೭೨೮
ಧಮ್ಮದೀಕ್ಷೆ ೧೭೪
ಧರ್ಮಶಾಲಾ ೩೯೫
ಧರ್ಮಶಾಲೆ ೩೪೬
ಧಾರವಾಡ ೩೧೧
ಧಿಯ್ಯಾ ೩೬೦
ಧುತ್ರೆ ಟಿ.ಎಸ್. ೪೭೪
ಧೂಲಿಯ ೩೮೯, ೪೭೪
ಧೂಸಿಯ ಆರ್.ಎಸ್. ೪೮೨
ಧೂಸ್ಯ ಎನ್.ಸಿ. ೪೮೪
ಧೋಂಡಿರಾಮ್ ಪಗಾರೆ ೬೯೨
ಧೋಬಿತಲಾವ್ ೩೦೯

## ನ

ನಂದಗಾಂವ್ ೪೦೩
ನಂದಲಾಲ್ ಜೈಸ್‌ವಾಲ್ ಡಾ. ೪೮೨
ನಗರಾರೆ ಡಿ. ಎಮ್. ೨೬೪
ನಗೀಬ್ ೬೫೫
ನಯಿಗಾಂನ ೬೬೯
ನಯಿಗಾಂವ್ ೩೮೧, ೫೦೬, ೫೦೭
ನವದೆಹಲಿ೪೬, ೫೩, ೫೯, ೬೪, ೬೭, ೬೯, ೭೦, ೯೪, ೯೬, ೧೨೩, ೧೨೮, ೧೩೩, ೧೩೪, ೧೫೦, ೨೩೫, ೩೧೬, ೪೫೮, ೫೫೯, ೬೧೭
ನವಭಾರತ ೨೦೯
ನವಯುಗ ೭೩೦
ನವ್‌ಸಾಜಿ ಜಾಧವ್ ೨೫೪
ನಳಂದ ೫೯೧
ನಳವಾಡಿ ೩೪೨
ನಾಂದೇಡ್ ೨೩೧, ೨೩೩, ೨೩೪
ನಾಂಪಲ್ಲಿ ೫೧೩
ನಾಕ್ ೨೫೧
ನಾಗಪುರ ೧೫೧, ೨೦೦, ೨೦೧, ೨೫೯, ೨೬೦, ೨೬೧, ೨೬೨, ೨೬೩, ೨೬೪, ೨೬೫, ೨೬೬, ೨೬೯, ೩೦೦, ೩೧೬, ೩೭೫, ೪೧೩, ೪೬೧, ೪೬೨, ೪೬೫, ೪೭೩, ೪೮೧, ೪೮೬, ೪೮೭, ೪೮೮, ೪೮೯, ೪೯೦, ೪೯೩, ೪೯೫, ೪೯೬, ೫೪೭, ೬೫೭, ೬೭೪, ೬೭೮, ೬೮೫, ೬೮೬, ೬೮೭, ೬೯೩, ೭೦೪, ೭೨೮, ೭೨೯, ೭೩೦
ನಾಗಸೇನ ೭೦೧
ನಾಗಾ ೬೯೩
ನಾಗಾರ್ಜುನ ೬೯೩
ನಾಜ಼ಿ ೩೬, ೪೧, ೨೦೪, ೪೭೬, ೫೫೧
ನಾಜ಼ಿಸಂ ೪೪, ೪೭೬
ನಾರಂಗ್ ಡಾ. ೩೪೧
ನಾರಾಯಣ ಕಜ್ರೋಲ್‌ಕರ್ ೩೮೬
ನಾರಾಯಣ್ ನಾಗು ಪಾಟೀಲ್ ೪೬೧
ನಾರಿಂಗಿ ೩೩೦
ನಾರಿಮನ್ ಜಿ.ಕೆ. ೯೬
ನಾರ್ಡಿಕ್ ೨೩
ನಾರ್ತ್‌ಬ್ರೂಕ್ ೫೭೦
ನಾಸಿಕ್ ೨೨೭, ೨೫೪, ೩೦೮, ೩೧೦, ೩೧೨, ೩೨೨, ೩೨೫, ೩೨೯, ೩೩೩, ೩೩೫, ೩೩೬, ೩೪೯, ೩೮೫, ೪೦೦, ೪೩೬, ೪೫೦, ೪೫೧, ೪೫೨, ೪೫೩, ೪೫೬, ೪೭೭, ೪೮೧, ೪೯೭
ನಿಗ್ರೋ ೨೦೩, ೨೦೪, ೩೬೯
ನೆಬು ಚಾಡ್ ನೆಝೂರ್ ೬೭೧
ನೆಯೆರ್ ನಿಸ್ಸೀಮ್ ಜೆ.ಪಿ ೯೬
ನೆರ್ ಶ್ರಾಮ್ನರ್ ೬೮೯
ನೆಹರೂ ೬೮, ೮೮, ೯೪, ೨೦೮, ೨೭೬, ೨೭೭, ೩೪೩, ೩೮೮, ೪೧೭, ೫೭೯, ೫೯೮, ೫೯೯, ೬೧೩, ೬೨೭, ೬೨೮, ೬೩೦, ೬೩೧, ೬೩೨, ೬೩೩, ೬೩೪, ೬೫೭
ನೇಪಾಳ ೭೦೬, ೭೦೭, ೭೨೯
ನೇಪಿಯರ್ ೨೫೨
ನೈಗಾಂವ್ ೩೧೦
ನ್ಯೂಯಾರ್ಕ್ ೬೩೭
ನ್ಹಾವಿ ೪೪೦

## ಪ


ಪಂಚಮಹಲ್ ೪೨೩
ಪಂಜಾಬ್ ೫, ೫೨, ೫೩, ೫೯, ೬೪, ೬೫, ೬೬, ೧೨೪, ೧೮೯, ೩೪೧, ೩೫೫, ೪೬೨, ೪೬೫, ೪೬೬, ೪೬೭, ೪೮೧, ೪೮೨, ೪೯೫, ೪೯೬, ೪೯೭, ೫೨೯, ೫೯೪, ೫೯೯, ೬೦೧, ೬೧೫, ೬೧೬, ೬೧೮, ೬೨೦, ೬೨೫
ಪಂಡರಾಪುರ ೨೩೧, ೨೩೩, ೨೩೪, ೩೨೩, ೩೯೫, ೩೯೮, ೬೭೭
ಪಗಾಜಿ ೩೨೫
ಪಗಾರೆ ೪೦೪
ಪಗಾರೆ ವಿ.ಎಸ್. ೬೯೨
ಪಟಂಕರ್ ವಿ.ಎಸ್. ೬೩೭, ೬೩೮
ಪಟೇಲ್ ಎಚ್.ಕೆ. ೧೩೬
ಪತ್ರಾಜೆ ೩೮೨
ಪರುಳೇಕರ್ ಎಸ್. ವಿ. ೧೨೩, ೩೩೦, ೪೦೦
ಪರೇಲ್ ೨೨೭, ೩೦೨, ೩೮೩, ೩೮೮, ೪೦೦, ೪೩೭, ೪೫೩, ೫೦೫
ಪರ್ಷಿಯನ್ ೨೫೨, ೨೭೧, ೩೪೬, ೬೩೮
ಪಲಮಾವ್ ೨೧೯
ಪವಾರ್ ಆರ್.ಆರ್. ೪೦೩, ೪೦೪
ಪಾಕಿಸ್ತಾನ ೩೮, ೩೮, ೪೪, ೪೫, ೪೬, ೪೭, ೫೧, ೫೨, ೫೩, ೬೪, ೬೫, ೬೬, ೭೩, ೮೭, ೮೮, ೮೯, ೧೮೮, ೧೯೫, ೨೨೧, ೨೨೨, ೪೫೪, ೪೭೨, ೪೭೩, ೫೧೧, ೫೨೨, ೫೨೩, ೫೩೫, ೫೩೬, ೫೩೭, ೫೯೯, ೬೧೪, ೬೨೪, ೬೨೭, ೬೫೯
ಪಾಟಿಯಾಲ ೧೧೪, ೬೧೬, ೬೨೦
ಪಾಟೀಲ್ ಆರ್.ಆರ್. ೪೯೬
ಪಾಟೀಲ್ ಎನ್.ಎನ್. ೩೩೦
ಪಾಟೀಲ್ ಎಸ್.ಕೆ ೬೩೩, ೬೮೭
ಪಾಟ್ನಾ ೨೧೭, ೨೧೮, ೨೧೯
ಪಾದ್ರಿ ೫೭೩, ೬೭೩, ೭೧೪
ಪಾನ್‌ವೆಲ್ ೩೧೧
ಪಾರ್ನೆಲ್ ೫೭೦
ಪಾರ್‌ಮಾರ್ ೪೯೭
ಪಾರ್ಮಾರ್ ಜಿ.ಟಿ. ೬೯೨
ಪಾರ್‌ವರಿ ೨೪೯
ಪಾರ್ಸಿ ೮೬, ೩೪೬, ೬೮೨
ಪಾವೇಕರ್ ಕೆ.ಆರ್. ೪೩೮
ಪಿಳ್ಳೈ ಸಿ.ಎಸ್. ೯೨, ೧೭೨, ೧೭೬
ಪೀಪಲ್ಸ್ ಹೆರಾಲ್ಡ್ ೫೪೨, ೫೪೫, ೬೫೦, ೭೩೦
ಪುಂಜಬ್‌ರಾವ್ ೯೫
ಪುಂಜಾಜಿ ೨೫೪
ಪುಂಡಲೀಕ ೬೭೭
ಪುಣೆ ೧೯೬, ೨೩೧, ೨೩೩
ಪುರಂದರೆ ಕ್ರೀಡಾಂಗಣ ೬೬೯
ಪುರುಲಿಯಾ ೨೧೯
ಪುರುಷೋತ್ತಮ್ ಖಪರ್ದೆ ೩೪೨, ೩೪೨, ೬೩೨
ಪುರುಷೋತ್ತಮ್ ತ್ರಿಕಂ ದಾಸ್ ೬೩೨
ಪೂನಾ ೯೦, ೧೯೭, ೨೫೦, ೨೪೯, ೨೬೦, ೨೬೫, ೩೦೧, ೩೧೯, ೩೨೯, ೩೩೯, ೩೯೦, ೪೦೪, ೪೭೪, ೪೮೦, ೫೫೨, ೬೪೧, ೬೭೭
ಪೂನಾಕೌಲು ೪೭೧
ಪೂರ್ನಿಯಾ ೨೨೦
ಪೂರ್ವಖಾನ್೪೨೮
ಪೃಥ್ವೀಸಿಂಗ್ ಆಝಾದ್ ೧೯೫
ಪೆಜಾರಿಯ ೩೩೦
ಪೆರಂಬೂರು ೬೭೬
ಪೋತರಾಜ ೩೬೯
ಪೋಪ್ ೩೩೯, ೫೭೩
ಪೋರ್ಚುಗೀಸ್ ೧೭೨
ಪೋಲೆಂಡ್ ೨೦, ೨೨, ೨೩, ೨೭೦
ಪ್ಯಾರಿಸ್ ೫೬೭
ಪ್ಯಾರೆಲಾಲ್ ತಾಲಿಬ್ ೫೪೮
ಪ್ಯಾಲಸ್ಟೈನ್ ೨೦೩, ೬೮೦

ಪ್ರಭಾಕರ್ ಪಾಧ್ಯೆ ೬೩೭
ಪ್ರಭಾಕರ್ ರೋಹಮ್ ೪೦೨, ೪೦೨, ೪೫೧, ೪೮೪, ೬೩೭
ಪ್ರಭಾತ್ ಟಾಕೀಸ್ ೫೩೩
ಪ್ರಭಾದೇವಿ ೭೨೮
ಪ್ರಭಾವತಿ ಬಾಯಿ ರಾಮ್‌ಟೀಕೆ ೪೯೦
ಪ್ರಾಣ್ ದತ್ ೫೪೮
ಪ್ರೇಮ್ ಕುಮಾರ್ ೫೧೪
ಪ್ರೇಮ್‌ದಾಸ್ ೪೬೫
ಪ್ರೇಮ್‌ಭಾಯಿ ೪೨೪
ಪ್ಲೇಟೋ ೬೮೩

**ಫ**

ಫಗುಣಿ ರಾಮ್ ೨೧೯
ಫರೂಕ್ ೬೫೫
ಫಿರೋಝ್ ಷಾ ಮೆಹ್ತಾ ೪೩೪, ೫೭೧
ಫಿಲಾಸಫಿ ೬೫೮
ಫುಲಿದಾಸ್ ೨೦೬
ಫುಲ್ಲಿದಾಸ್ ೨೦೨
ಫೊಟ್ನಿಸ್ ೩೩೦
ಫ್ರೆಂಚ್ ೩೭, ೩೭೦, ೫೩೪, ೫೮೯, ೬೦೩, ೬೫೭, ೬೬೮
ಫುಲ್ಲೀದಾಸ್‌ಜೀ ೨೦೨
ಫ್ರಾನ್ಸ್ ೨೦, ೨೧, ೪೦೮, ೪೮೯, ೬೦೬, ೬೫೫

**ಬ**

ಬಂಕಿಪುರ ೨೧೭
ಬಂಗಾಳ ೫, ೫೨, ೫೩, ೫೯, ೬೪, ೬೫, ೬೬, ೬೯, ೧೨೪, ೧೯೩, ೪೬೫, ೪೬೬, ೪೬೭, ೪೭೪, ೪೮೧, ೪೮೨, ೫೪೧, ೫೪೨, ೫೫೨, ೫೫೮, ೫೮೨, ೫೯೪, ೬೮೯, ೭೨೭
ಬಂಬೂ ೬೮೭
ಬಣಕಾರ್ ೪೦೪
ಬದರಿ ಪ್ರಸಾದ್ ವಾಲ್ಮೀಕಿ ೪೮೩, ೪೮೪
ಬದಲೂರಾಮ್ ಸೋಂಕರ್ ೨೦೪
ಬನಾರಸ್ ೬೮೯, ೬೯೭
ಬನ್ನೇರಿಯನ್ ೨೭೧
ಬನ್‌ಸ್ಡಿಹ್ ೨೧೯
ಬರೈಲಿ ೪೬೫
ಬರೋಡ ೧೧೪, ೩೪೬, ೪೪೬, ೫೪೮, ೬೫೮
ಬರ್ಕನ್‌ಹೆಡ್ ೨೮೬
ಬರ್ಕೆ ೨೯೫, ೭೨೭
ಬರ್ಮ ೧೮೫, ೧೮೬, ೫೮೭, ೬೭೧, ೬೮೫, ೬೯೨, ೭೦೪, ೭೦೫, ೭೦೬, ೭೦೭, ೭೧೫
ಬಲಗೋವಿಂದ ಭಗತ್ ೨೧೯
ಬಲದೇವ್ ಪ್ರಸಾದ್ ಜೈಸ್ವಾಲ್ ೨೧೮
ಬಲೂಚಿಸ್ತಾನ ೧೯೩
ಬಲ್ಲಾರ್ಡ್ ೩೦೫, ೩೦೬, ೩೨೯
ಬಹದೂರ್ ೩೨೧, ೫೫೭
ಬಹಾದ್ದೂರ್ ೨೧೮, ೩೧೮
ಬಾಂದ್ರಾ ೩೧೦, ೩೧೧, ೩೯೧
ಬಾಂಬೆ ೫, ೮, ೧೩, ೧೪, ೧೬, ೧೯, ೨೮, ೩೧, ೩೨, ೫೦, ೬೮, ೬೯, ೮೮, ೮೯, ೯೧, ೯೪, ೯೫, ೯೭, ೧೦೦, ೧೦೯, ೧೧೧, ೧೧೪, ೧೧೫, ೧೨೧, ೧೨೩, ೧೨೪, ೧೨೭, ೧೨೮, ೧೨೯, ೧೩೦, ೧೩೩, ೧೩೪, ೧೪೦, ೧೪೧, ೧೪೨, ೧೪೩, ೧೪೪, ೧೪೫, ೧೪೭, ೧೪೯, ೧೭೨, ೧೮೯, ೧೯೬, ೨೨೩, ೨೨೯, ೨೩೧, ೨೩೩, ೨೩೫, ೨೫೨, ೩೦೦, ೩೦೮, ೩೧೨, ೩೨೦, ೩೩೦, ೪೫೦, ೫೫೦, ೫೮೩, ೭೨೮, ೭೨೯, ೭೩೦
ಬಾಜೀರಾಯ ೨೫೦
ಬಾದ್ನ ೬೭೮
ಬಾನಿಪೇಟ್ ೬೭೬
ಬಾಪು ಸಾಹೇಬ್ ಸಹಸ್ರ ಬುಧೆ ೩೨೩, ೩೨೭, ೩೩೮

ಬಾಬಾ ಅಡರೇಕರ್ ೨೫೮
ಬಾಬು ತಿಲಕ್ ಚಂದ್ ೪೮೩
ಬಾಬೂಲಾಲ್ ೨೦೬
ಬಾರ್ದೋಲಾಯ್ ೭೨೬
ಬಾರ್ಮನ್ ಎನ್. ೪೭೪
ಬಾರ್ಸೆ ಡಿ.ಬಿ. ೨೬೫
ಬಾಲಗಂಗಾಧರ ತಿಲಕ್ ೩೨೬, ೪೩೪, ೫೦೭, ೫೩೯, ೫೫೩
ಬಾಲಚಂದರ್ ಕೆ ಕಬೀರ್ ೧೭೨
ಬಾಲಸುಬ್ರಮಣ್ಯ ಪಿ. ೫೨೦
ಬಾಲಾ ಸಾಹೇಬ್ ಖೇರ್ ೫೪೮, ೬೭೯
ಬಾಲು ಪಿ. ೩೦೬
ಬಾಲು ವಿ. ೩೮೬
ಬಾಲ್ ಗೋವಿಂದ್ ೫೭೪
ಬಾಲ್ಡ್ವಿನ್ ೬೫೦, ೬೫೧
ಬಾವಾ ತುಲಾ ದಾಸ್ ೬೧೬
ಬಿಕಾನೇರ್ ೧೧೪
ಬಿಜಾಪುರ ೪೩೫, ೪೭೪
ಬಿಜಿಪತ್ ರಾಮ್‌ಜಿ ಬಸ್ತಿ ೨೦೫
ಬಿರಾರ್ ೪೮೨
ಬಿರ್ಲಾ ೪೨೨
ಬಿಷುಚರನ್ ದಾಸ್ ರಬಿದಾಸ್ ೨೧೯
ಬಿಸ್ವಾಸ್ ಆರ್.ಎಲ್. ೪೬೫, ೪೮೨, ೫೪೨
ಬಿಹಾರ ೧೬, ೫೨, ೯೪, ೧೨೪, ೧೮೯, ೨೧೭, ೨೧೮, ೨೧೯, ೪೧೭, ೪೬೬, ೫೨೯, ೫೪೧, ೫೫೮, ೫೯೯, ೬೩೨
ಬಿಹ್ತಾ ೨೧೯
ಬೀರಾರ್ ೩೧೧, ೪೧೮, ೪೯೬
ಬುಚರ್ ೨೦೮
ಬುದ್ಧ ೧೮೬, ೧೮೬, ೫೩೫, ೫೪೭, ೫೮೬, ೫೯೦, ೬೬೦, ೬೭೧, ೬೭೨, ೬೭೭, ೬೯೩, ೭೦೦, ೭೦೧, ೭೧೦, ೭೧೩, ೭೧೫
ಬುದ್ಧಜಯಂತಿ ೬೬೨
ಬುದ್ಧದಾಸ್ ಚೌಧರಿ ೫೭೪
ಬೆಂಗಳೂರು ೨೩೧, ೨೩೩, ೨೩೪, ೫೨೩, ೬೭೬
ಬೆಂಗಾಲ್ ೨೬೨, ೨೬೪, ೫೪೧
ಬೆಟಾಲಿಯನ್ ೨೫೦, ೪೫೩, ೪೯೯, ೭೨೨
ಬೆಟ್ಟಯ್ಯ ೨೧೯
ಬೆನಿಪಟ್ಟಿ ೨೧೯
ಬೆರಾರ್ ೬೩, ೬೪
ಬೆಲಾಸಿನ್ ೩೨೩
ಬೆವನ್ ೮೭
ಬೆಹಾಡೆ ಹೆಚ್.ಡಿ. ೨೬೦, ೨೬೩
ಬೆಳಗಾವಿ ೯೫, ೩೨೧, ೪೪೨, ೫೫೭, ೫೯೨, ೬೫೬
ಬೇಗ್ ಎಮ್.ಆರ್.ಎ. ಡಾ. ೫೦೧
ಬೇಗುಪೇಟೆ ೫೧೩
ಬೇಬಿಲಾನ್ ೬೭೧
ಬೇರೂತ್ ೭೧೪
ಬೇಲಾ ೨೬೩, ೪೮೬
ಬೈಕುಲಾ ೨೨೭, ೩೦೭, ೬೩೨
ಬೈಜ಼ಾಂಟಿಯಂ ೧೮೫
ಬೈರಾಮ್‌ಜಿ ೬೧
ಬೊಂಬಾಯಿ ೨೪೯, ೨೪೯, ೨೫೦, ೨೫೨, ೨೫೮, ೨೮೩, ೩೦೨, ೩೦೭, ೩೧೬, ೩೨೩, ೩೨೫, ೩೨೬, ೩೨೭, ೩೨೯, ೩೩೧, ೩೩೮, ೩೪೧, ೩೪೭, ೩೪೯, ೩೫೧, ೩೮೨, ೩೮೩, ೪೦೦, ೪೧೨, ೪೧೩, ೪೧೭, ೪೨೨, ೪೩೬, ೪೪೭, ೪೪೮, ೪೫೦, ೪೫೪, ೪೫೮, ೪೫೯, ೪೬೦, ೪೯೮, ೪೯೯, ೫೦೧, ೫೦೫, ೫೦೬, ೫೦೭, ೫೧೩, ೫೪೫, ೫೪೬, ೫೫೧, ೫೫೪, ೫೫೫, ೫೫೭, ೫೫೮, ೫೫೯, ೫೬೩, ೫೮೦, ೫೮೩, ೫೮೭, ೫೯೨, ೫೯೩, ೬೦೧, ೬೦೨, ೬೨೫, ೬೨೭, ೬೨೯, ೬೩೦, ೬೩೨, ೬೪೦, ೬೫೧, ೬೫೮, ೬೫೯, ೬೬೧, ೬೬೨, ೬೬೩, ೬೬೫,

೬೬೯, ೬೭೮, ೬೭೯, ೬೮೦, ೬೮೭, ೬೯೫, ೬೯೭, ೭೨೬
ಬೋರಾಲೆ ಪಿ.ಟಿ. ಡಾ. ೧೩೦
ಬೋರ್ಕರ್ ಆರ್.ಎಮ್. ೨೬೫, ೨೬೬
ಬೋಲಿಂಗ್‌ಬ್ರೋಕ್ ೮೩
ಬೋಲೆ ಆರ್.ಆರ್. ೧೯೬, ೧೯೯
ಬೋಲೆ ಎಸ್.ಕೆ. ೧೩೩, ೧೩೬, ೬೨೫
ಬೋಳೆ ಎಸ್.ಕೆ. ೫೦೬
ಬೌದ್ಧ ೧೩೦, ೧೩೧, ೧೩೩, ೧೩೪, ೧೭೧, ೧೭೨, ೧೭೩, ೧೭೪, ೧೮೪, ೧೮೫, ೧೮೬, ೧೮೭, ೩೬೭, ೫೨೩, ೫೩೪, ೫೩೫, ೫೮೫, ೫೮೭, ೫೮೮, ೫೮೯, ೫೯೧, ೬೨೪, ೬೭೧, ೬೭೩, ೬೭೪, ೬೭೫, ೬೯೧, ೭೦೧, ೭೦೩, ೭೦೫, ೭೦೮, ೭೧೦
ಬೌದ್ಧಸಂಘ ೧೭೨
ಬೌದ್ಧಸಾಹಿತ್ಯ ೧೭೧
ಬ್ಯಾನರ್ಜಿ ೪೩೪
ಬ್ರಹ್ಮಪುತ್ರಾ ೯೨
ಬ್ರಾಡ್‌ವೇ ೫೩೩
ಬ್ರಿಟನ್ ೨೦, ೨೦, ೨೧, ೨೪, ೨೫, ೩೦, ೫೭, ೬೨, ೬೪, ೭೭, ೭೮, ೮೭, ೮೮, ೧೯೪, ೨೦೯, ೨೧೩, ೪೭೮, ೫೦೯, ೫೫೨, ೫೭೨, ೬೦೩, ೬೦೫, ೬೦೬, ೬೪೯
ಬ್ರಿಟಿಷ್ ೨೪, ೨೫, ೨೬, ೨೭, ೩೧, ೩೪, ೩೬, ೪೦, ೪೨, ೪೩, ೪೫, ೬೩, ೭೨, ೭೫, ೨೦೮, ೨೧೪, ೨೪೯, ೨೫೦, ೨೫೧, ೨೬೯, ೨೭೧, ೨೮೫, ೨೮೬, ೨೮೭, ೨೮೮, ೨೮೯, ೨೯೦, ೨೯೧, ೨೯೩, ೨೯೪, ೨೯೫, ೩೦೧, ೩೦೨, ೩೦೩, ೩೦೬, ೩೨೫, ೩೨೯, ೩೩೨, ೪೧೬, ೪೪೦, ೪೪೩, ೪೫೦, ೪೫೧, ೪೫೫, ೪೫೭, ೪೭೦, ೪೮೪, ೫೦೨, ೫೦೪, ೫೧೩, ೫೪೩, ೫೪೪, ೫೫೫, ೫೫೭, ೫೫೮, ೫೬೦, ೫೬೩, ೫೭೨, ೫೭೬, ೫೮೨, ೫೮೩, ೫೮೪, ೬೦೨, ೬೦೮, ೬೦೯, ೬೧೭, ೬೨೪, ೬೨೬, ೬೨೭, ೬೪೮, ೬೫೪

## ಭ

ಭಗತ್ ಹನ್ಸರಾಜ್ ೪೬೫
ಭಗವಂತ್ ಸಯ್ಯಾಜಿ ಗಾಯಕ್‌ವಾಡ್ ೧೭೨
ಭಜಂತ್ರಿ ೪೦೪
ಭಟ್ ಆರ್.ಎಂ. ೪೩೭
ಭಟ್ ಎಸ್.ಜಿ. ೬೪೨
ಭಟಂಕರ್ ಜೆ.ಜಿ. ೫೮೨, ೬೨೬, ೬೪೦
ಭಟಕರ್ ಸಿ.ಕೆ. ೨೫೯
ಭಟ್ಕರ್ ಪಿ.ಕೆ. ೨೬೦
ಭಟ್ ಪಿ.ಸಿ. ೬೪೧
ಭವಾನಿ ಶಂಕರ್ ನಿಯೋಗಿ ೬೯೨
ಭಾಂಕೇಡ ೪೮೬
ಭಾಗಲ್ಪುರ್ ೨೧೯
ಭಾನಾಬಾಯಿ ೪೬೫
ಭಾಮಿ ಅನಂತರಾವ್ ಚಿತ್ರೆ ೪೦೪, ೪೫೯
ಭಾಯಿ ಪರಮಾನಂದ್ ೩೪೧
ಭಾಲೇರಾವ್ ೨೫೪
ಭಾವೂಸಾಹೆಬ್ ಗಾಯಕವಾಡ್ ೪೦೨
ಭಿಕ್ಕು ಚಂದ್ರಮಣಿ ಮಹಾ ತೇರಾ ೬೮೫
ಭೀಮಾನದಿ ೨೫೦
ಭೀಮಾಬಾಯಿ ೪೯೧
ಭೀಮಾಬಾಯಿ ಡೋಂಗ್ರೆ ೪೯೧
ಭೂಪಾಲ್ ೬೮೯
ಭೂಲಾಭಾಯಿ ದೇಸಾಯಿ ೯
ಭೂಷಣ್ ೧೧೨
ಭೂಸಾವಲ್ ೪೦೩
ಭೋಧಿಸಂಘ ೫೮೭
ಭೋನೋಡಿಯಾ ಆರ್.ಎಲ್. ೪೬೫
ಭೋಪಾಲ ೧೧೪
ಭೋಯಿವಾಡ ೬೨೬
ಭೋಲೆ ಆರ್.ಆರ್. ೪೮೧, ೭೨೮

## ಮ

ಮಂಗಿಲಾಲ್ ೪೮೧, ೪೮೪
ಮಂಜುಳಾ ಕಾನ್‌ಫಾಡೆ ೪೯೨
ಮಕರಾನ್‌ಪುರ ೪೨೮
ಮಕೇಸರ್ ವಿ.ಡಿ. ೨೬೪
ಮಝಗಾಂವ್ ೩೨೬, ೪೪೪
ಮಡ್ಕೆ ಬುವಾ ೩೨೫
ಮಡ್ಡಿಮನ್ ೨೮೪
ಮಣಿಬೆನ್‌ಕಾರಾ ೫೦೯
ಮಣಿಲಾಲ್ ಪಾರ್‌ಮಾರ್ ೫೪೮
ಮದನ್ ೫೪೮
ಮದನ ಮೋಹನ ಮಾಳವೀಯ ೪, ೬
ಮದರಾಸ್ ೫, ೩೪, ೫೬, ೧೨೪, ೧೩೩, ೧೮೯, ೨೫೦, ೨೫೧, ೨೬೨, ೩೧೪, ೩೩೯, ೩೫೫, ೪೬೫, ೪೬೬, ೪೬೮, ೪೭೪, ೫೦೫, ೫೧೩, ೫೧೬, ೫೧೭, ೫೨೦, ೫೨೧, ೫೨೩, ೫೩೩, ೫೩೬, ೫೪೮, ೫೫೬, ೫೫೭, ೫೬೪, ೬೧೮, ೬೩೨, ೬೭೪, ೬೭೬, ೭೨೪, ೭೨೯, ೭೩೦
ಮನಿಲಾ ೭೦೫
ಮನು ೫೭೨, ೬೬೯
ಮನುಸ್ಮೃತಿ ೪೫೬, ೬೯೮
ಮನುಸ್ವಾಮಿ ಪಿಳ್ಳೆ ೫೬೪
ಮನ್‌ಮಾಡ್ ೪೦೩, ೫೮೦
ಮನ್ಸೂರ್‌ಪುರ್ ೨೧೯
ಮರಾಠ ೯೦, ೯೧, ೨೫೦, ೨೫೧, ೨೫೩, ೩೦೦, ೩೦೧, ೩೩೦, ೩೭೨, ೪೪೦, ೪೫೬, ೭೦೨
ಮರಾಠವಾಡ ೬೬೪
ಮರಾಠಿ ೯೫, ೨೨೯, ೨೩೪, ೩೫೦, ೪೨೨, ೪೬೬, ೪೮೪, ೫೪೪, ೬೭೮, ೬೯೨, ೭೨೮, ೭೨೯
ಮರಾಠೆ ೨೫೪
ಮಲಯಾಳಂ ೩೧೪
ಮಲಾಲ್‌ಶೇಕರ್ ೭೦೭
ಮಲಾಲ್‌ಶೇಕರ್ ಜಿ.ಪಿ. ಡಾ: ೭೦೭
ಮಲ್ಲಿಕ್ ಎಮ್.ಬಿ. ೨೬೨, ೨೬೪
ಮಹಪರಿನಿಬ್ಬನ್ ೩೭೯
ಮಹಮ್ಮದೀಯ ೩೧೩
ಮಹರ್ ೧೦೦, ೨೪೯, ೨೫೧, ೨೫೨, ೨೫೩, ೩೦೯, ೩೧೦, ೩೧೧, ೩೩೮, ೩೪೫, ೩೪೬, ೩೪೯, ೩೫೧, ೩೫೨, ೩೫೫, ೩೫೯, ೩೬೦, ೩೬೪, ೩೬೫, ೩೬೬, ೩೬೭, ೩೭೫, ೩೮೧, ೩೮೨, ೩೮೫, ೩೯೧, ೩೯೨, ೩೯೫, ೩೯೬, ೩೯೭, ೪೨೩, ೪೨೮, ೪೩೭, ೪೪೦, ೪೪೧, ೪೪೨, ೪೪೩, ೪೪೬, ೪೪೭, ೪೫೦, ೪೫೧, ೪೫೨, ೪೫೩, ೪೬೯, ೫೯೯, ೬೨೭, ೬೪೦, ೬೯೫, ೬೯೭, ೭೦೦, ೭೦೩, ೭೨೯
ಮಹರ ೨೨೭
ಮಹರಾಷ್ಟ್ರ ೫೦೯
ಮಹಾತೆರೋ ಯು–ಪನ್ನಲೋಕ್ ೬೯೨
ಮಹಾತ್ಮ ಫುಲೆ ೬೬೯, ೬೭೦
ಮಹಾತ್ಮಹಂಸರಾಜ್ ೩೪೧
ಮಹಾಬೀರ್ ದಾಸ್ ೨೧೯
ಮಹಾಭಾರತ ೧೮೪, ೫೮೬
ಮಹಾರಾಜ್ ಧೀರಜ್ ೧೧೪
ಮಹಾರಾಷ್ಟ್ರ ೬೯, ೯೪, ೫೮೪, ೫೮೫
ಮಹಾಸ್ತವೀರ್ ೬೭೮, ೬೮೯, ೭೦೭
ಮಹಾಸ್ಥವೀರ್ ೬೯೦
ಮಹೇಂದ್ರ ವೀರ್ ವಿಕ್ರಮ್ ಸಹದೇವ್ ೭೦೭
ಮಾಂಗ್ ೧೦೦, ೩೫೫, ೩೬೪, ೩೬೫, ೩೯೭, ೪೪೦, ೪೪೬, ೪೫೦, ೫೮೭, ೭೦೬
ಮಾಂಟ್‌ಫೋರ್ಡ್ ೨೮೧
ಮಾಂಡವಧಾರೆ ೨೬೫
ಮಾಗಾ ೭೦೦
ಮಾಗ್‌ಡಲಾ ೨೫೨
ಮಾಚಿಗ್ನರ್ ೩೧೧
ಮಾಝಗಾಂವ್ ೩೦೯, ೪೨೨
ಮಾಧವ ಜಿ ಮಾಲ್ವಂಕರ್ ೧೭೨, ೧೭೬

ಮಾಮುರ್ಜೊರ್ ೨೧೯
ಮಾಯಿಸಾಬ್ ೬೪೯
ಮಾರ್ಕ್ಸ್‌ವಾದ ೬೬೦
ಮಾರ್ಕ್ಸ್‌ವಾದಿ ೪೧೨
ಮಾರ್ವಾಡಿ ೫೯೭, ೬೦೭, ೬೧೩, ೬೮೨
ಮಾಲಡ್ ೨೫೬
ಮಾಲೋಜಿ ಸುಬೇದಾರ್ ೬೪೯
ಮಾವಳಂಕರ್ ೬೫೨
ಮಾಹಿಮ್ ೩೧೧
ಮಿರ್ಜನ್ ೨೧೯
ಮಿರ್ಜಾ ಎ.ಎಚ್. ೫೦೧
ಮಿಳಿಂದ ೭೦೧
ಮಿಳಿಂದ ಪನ್ಹ ೭೦೧
ಮೀನಂಬಾಳ್ ಶಿವರಾಜ್ ೫೪೮
ಮೀನೀ ಕದನ ೨೫೨
ಮೀರತ್ ೨೦೨
ಮೀರಾಬಾಯಿ ೧೮೭
ಮುಂಬಯಿ ೧೧೨, ೧೨೯, ೧೩೦, ೨೩೧, ೨೩೩, ೨೩೪, ೨೫೮, ೨೫೯, ೪೦೩, ೫೪೭, ೫೪೮, ೫೪೯, ೬೪೦
ಮುಕುಂದ್ ರಾವ್ ಅಂಬೇಡ್ಕರ್ ೬೯೨
ಮುಜಫ಼ರ್‌ಪುರ್ ೨೧೯
ಮುನಿಸ್ವಾಮಿ ಪಿಳ್ಳೈ ೨೬೨, ೨೬೪, ೩೧೭, ೪೭೪
ಮುನ್ಷಿ ೬೨೬, ೬೫೧
ಮುರಳೀಧರ್ ಪಗಾರೆ ೪೨೧
ಮುಲ್ತಾನ್ ೨೫೨, ೩೦೫, ೩೦೬
ಮುಸಲ್ಮಾನ ೪೬, ೨೪೯, ೨೮೩, ೨೯೬, ೩೦೬, ೩೦೭, ೩೭೧, ೩೭೨, ೩೭೬, ೪೦೭, ೪೨೨, ೪೪೦, ೪೫೪, ೪೭೦, ೪೪೯, ೫೦೩, ೫೧೨, ೫೧೩, ೫೧೫, ೫೨೨, ೫೫೦, ೫೬೩
ಮುಸ್ಲಿಂ ೫, ೨೪, ೨೯, ೩೧, ೩೫, ೩೮, ೪೨, ೪೫, ೪೬, ೫೧, ೫೨, ೫೭, ೫೯, ೬೫, ೮೬, ೧೪೯, ೨೧೩, ೨೨೪, ೨೫೭, ೩೧೨, ೩೫೦, ೩೫೫, ೩೬೧, ೩೬೬, ೩೭೧, ೩೭೨, ೪೪೯, ೪೫೪, ೪೫೫, ೪೭೨, ೪೭೩, ೪೮೩, ೪೮೪, ೫೦೩, ೫೦೭, ೫೨೨, ೫೩೨, ೫೩೫, ೫೩೬, ೫೬೦, ೫೬೪, ೫೮೩, ೬೧೪, ೬೨೪
ಮುಸ್ಲಿಮ್‌ಲೀಗ್ ೪೭೨
ಮೂಂಜೆ ಡಾ. ೩೧೭
ಮೆಕ್ಡೊನಾಲ್ಡ್ ೬೫೧
ಮೆನನ್ ವಿ.ಪಿ. ೫೬, ೬೩, ೬೪
ಮೇರಿಯಾ ಥೆರೇಸಾ ೧೮೫
ಮೇವಾಡ ೧೯೩
ಮೇಶ್ ೪೬೫
ಮೇಶರಾಮ್ ಜಿ.ಟಿ. ೧೩೩, ೩೨೭, ೪೬೬, ೪೭೪
ಮೇಶ್‌ರಾಯ್ ಜಿ.ಟಿ. ೪೬೫
ಮೈತ್ರೇಯೀ ೧೮೭
ಮೈನಾಬಾಯಿ ೪೦೪
ಮೈನಾಬಾಯಿ ಶಾಮರಾವ್ ಭೋಲೆ ೪೦೪
ಮೊರಾರ್ಜಿ ೬೫೧
ಮೊಹಗಾಂವ್‌ಕರ್ ಎಸ್.ಕೆ. ೧೩೦
ಮೊಹಮ್ಮದ್ ಯಾಕೂಬ್ ೨೮
ಮೋಜಿ ೭೦೫
ಮೋದಕ್ ೫೪೮
ಮೋಪ್ಲಾಸ್ತಾನ ೨೨೨
ಮೋಸೆಸ್ ೬೮೦
ಮೋಹಿತೆ ಸಿ.ಎನ್. ೬೯೨
ಮೌಂಟ್‌ಬೇಟನ್ ೬೮
ಮೌಲಾನ ಶೌಕತ್ ಆಲಿ ೩೦೫, ೩೦೬
ಮೌಲಾನಾ ಅರ್ಝಾದ್ ೬೩೮
ಮೌಲಾನಾ ಆರ್ಝಾದ್ ೬೩೮
ಮ್ಯಾಗ್ನಾ ಕಾರ್ಟಾ ೪೮೦
ಮ್ಯಾಲ್‌ಕೋಲ್ಮ್ ೨೪೯
ಮ್ಹೋ ೩೪೪

**ಯ**

ಯರವಾಡ ೧೯೮, ೧೯೯

ಯಶ್ವಂತ್ ರಾವ್ ಅಂಬೇಡ್ಕರ್ ೬೯೨
ಯಹೂದಿ ೨೩, ೨೦೩, ೨೦೪, ೨೪೯, ೨೭೦, ೨೭೧
ಯಾಗ್ನವಲ್ಕ್ಯ ೫೭೨, ೫೭೩
ಯುಗೋಸ್ಲೋವಿಯಾ ೨೭೦, ೨೭೧
ಯೂರೋಪ್ ೩೧, ೧೮೪, ೩೮೩, ೪೦೮, ೪೧೧, ೫೪೯, ೫೭೨, ೫೭೩, ೬೬೦, ೬೯೯, ೭೦೦, ೭೦೮
ಯೂಹೂದಿ ೨೫೧
ಯೆರವಾಡ ೨೩೧, ೨೩೩
ಯೆವೊಲಾ೩೩೩, ೩೩೫, ೩೩೬, ೩೩೮, ೩೩೯, ೩೪೯, ೩೫೦, ೩೮೨, ೬೯೬

## ರ

ರಂಗನಾಥ್ ಕೆ.ಎಚ್. ೧೩೦
ರಂಗೂನ್ ೬೭೧, ೬೯೨, ೭೦೪, ೭೦೫, ೭೦೬
ರಘುನಂದನ್ ಡಾ. ೨೧೯
ರಜಪೂತ ೨೪೯, ೨೫೧, ೬೦೯
ರತ್ನಗಿರಿ ೯೫, ೧೨೩, ೨೫೬, ೨೫೮, ೩೦೯, ೪೦೦, ೪೧೮, ೪೨೩, ೪೪೩, ೪೫೯
ರಫಿ ಅಹಮದ್ ಕಿದ್ವಾಯಿ ೬೩೧
ರಮಾಬಾಯಿ ಅಂಬೇಡ್ಕರ್ ೨೩೧, ೨೩೩, ೪೬೨, ೫೪೭
ರಷ್ಯಾ ೩೦೩, ೫೦೨, ೬೦೩, ೬೦೭, ೬೩೦, ೬೫೭, ೬೭೮, ೬೭೯, ೭೦೯, ೭೧೦, ೭೧೨
ರಸಿಕ್ ಲಾಲ್ ಬಿಸ್ವಾಸ್ ೫೪೨
ರಾಘವೇಂದ್ರ ಬೋರ್‌ಕರ್ ೨೬೬
ರಾಜಗೋಪಾಲಚಾರಿ ೬೨೬, ೭೨೬
ರಾಜಗೋಪಾಲಾಚಾರಿ ೯, ೧೦, ೩೪, ೪೬, ೪೭, ೫೦, ೫೧, ೫೨, ೬೯೮, ೭೨೫
ರಾಜಮಣಿ ದೇವಿ ೫೧೪
ರಾಜಮಹೇಂದ್ರಿ ೫೩೭
ರಾಜಾಜಿ ೫೧
ರಾಜಾ ನರೇಂದ್ರನಾಥ್ ೩೪೧
ರಾಜಾರಾಮ್ ೨೦೬, ೬೫೫, ೬೫೬
ರಾಜೆ ೬೧೮
ರಾಜ್ ಬಾಬು ಖೋಬರ್ಗಡೆ ೬೯೧
ರಾಜ್‌ಭೋಜ್ ಪಿ.ಎನ್. ೪೬೫, ೫೫೮, ೫೭೪, ೬೧೬, ೬೬೦, ೬೬೫, ೭೨೯, ೭೩೦
ರಾಜ್ ರಾಮ್ ಭೋಲೆ ೧೩೩
ರಾಧಾಕೃಷ್ಣನ್ ಎಸ್. ಡಾ: ೬೩೬, ೬೫೮
ರಾಧಾನಾಥ್ ದಾಸ್ ೧೯೫, ೨೧೯, ೪೮೧, ೪೮೨, ೬೧೬, ೬೩೨
ರಾಧಾಬಾಯಿ ಕಾಂಬ್ಳೆ ೪೯೦, ೪೯೧, ೪೯೩
ರಾಧೇಲಾಲ್ ವ್ಯಾಸ್ ೪೬೫
ರಾನಡೆ ೪೩೪, ೫೦೭, ೫೩೯, ೫೫೨, ೬೫೯
ರಾಮಕೃಷ್ಣನ್ ವಿ. ೫೩೭
ರಾಮಚಂದ್ರ ೪೬೫
ರಾಮಚಂದ್ರ ಪವಾರ್ ೪೦೪
ರಾಮಚರಣ ೨೬೨
ರಾಮದಾಸಪುರ ೫೯೪
ರಾಮನಾಥನ್ ೫೩೩
ರಾಮರಾವ್ ಎಮ್. ದೇಶ್‌ಮುಖ್ ೯೫
ರಾಮರಾವ್ ದೇಶ್‌ಮುಖ್ ಎಮ್. ೯೫
ರಾಮಲಿಂಗಾರೆಡ್ಡಿ ೭೨೫
ರಾಮಸ್ವಾಮಿ ಅಯ್ಯರ್ ಸಿ.ಪಿ. ೨೨೦
ರಾಮಾನುಜ ೩೧೪
ರಾಮ್‌ಚರಣ ೨೬೪
ರಾಮ್ ಪ್ರಸಾದ್ ೨೧೯
ರಾಮ್ ಬರಸ್ ದಾಸ್ ೨೧೯
ರಾಮ್‌ಬಾಸ್ವಾನ್ ರಬಿದಾಸ್ ೨೧೯
ರಾಮ್ಸೆ ಮೆಕ್ಡೊನಾಲ್ಡ್ ೬೫೧
ರಾಯ್ ೪೧೬
ರಾಯ್ ಎ.ಡಿ. ೪೮೨
ರಾಯಗಡ ೨೩೧, ೨೩೩
ರಾಯಲ್ ಕಮೀಷನ್ ೬೫೯

ರಾಯ್‌ಗಡ ೨೩೪
ರಾಯ್ಪುರ್ ೫೭
ರಾಯ್‌ಪುರ ೨೬೪
ರಾಯ್ ಸಾಹಿಬ್ ಶಾಮಲಾಲ್ ೪೬೫, ೪೮೧, ೪೮೨
ರಾಯ್ ಸಾಹೇಬ್ ರಾಮ್ ಸಹಾಯ್ ೪೮೨
ರಾವುತ್ ಡಿ.ಡಬ್ಲ್ಯೂ. ೪೦೦
ರುಥಿಯನ್ಸ್ ೨೭೦
ರುಮೇನಿಯನ್ ೨೭೦
ರುಮೇನಿಯಾ ೨೭೦, ೨೭೧
ರುಸ್ತುಮ್‌ಜೀ ಜಿನ್‌ವಾಲಾ ೯೬
ರುಸ್ತುಮ್ ಮಸಾನಿ ೫೪೮
ರೆಂವಾಸ್ ೩೩೦
ರೆಡ್‌ಮಾಂಡ್ ೫೨೮
ರೇಗೆ ೧೩೦
ರೇವಾರಾಂ ಕಾವಡೆ ೬೮೭
ರೇವ್ ಜೀ ಡಾಗ್‌ಡು ಜೀ ಡೋಲಾಸ್ ೩೫೧
ರೊಡೀಷಿಯಾ ೭೩
ರೋಚ್ ಎಫ್.ಡಿ. ೧೯೭
ರೋಮ್ ೬೭೨, ೭೦೦, ೭೧೪
ರೋಮನ್ ೮೨, ೮೩, ೨೭೦, ೬೭೩
ರೋರ್ಡ್ ೩೨೫
ರೋಹಾಮ್ ಪಿ.ಎಲ್. ೪೯೭
ರೌಲಾಂಡ್ಸ್ ಒಪ್ಪಂದ ೫೬

**ಲ**

ಲಂಕಾ ೭೦೭
ಲಂಡನ್ ೧೯, ೫೭, ೮೮, ೧೦೯, ೨೧೧, ೨೫೯, ೨೬೦, ೨೬೧, ೨೬೬, ೩೦೪, ೩೦೬, ೩೦೭, ೩೧೨, ೩೧೯, ೩೨೫, ೩೨೯, ೩೪೨, ೫೨೮, ೫೬೭, ೫೬೮, ೬೩೯, ೬೫೮, ೬೫೯
ಲಕಡ್‌ಗಂಜ್ ೨೫೯
ಲಕಪತರಾಯ್ ೨೯೯
ಲಕ್ನೋ ೨೦೧, ೨೦೨, ೨೦೩, ೨೦೪, ೨೦೫, ೨೦೭, ೨೧೮, ೨೬೨, ೨೬೪, ೨೬೬, ೨೮೫, ೪೦೩, ೪೮೪, ೪೯೬, ೪೯೭, ೫೭೪, ೫೭೫, ೫೭೭, ೫೯೬, ೬೨೪, ೬೮೯
ಲಡಾಖ್ ೮೭, ೬೨೪
ಲಾಟವಿಯಾ ೨೭೦, ೨೭೧
ಲಾತಿಕಾ ೪೯೩
ಲಾತಿಕಾ ಗಾಜ್‌ಭಿ ೪೯೩
ಲಾಮಗೋವಿಂದ ೧೮೪
ಲಾಯ್ಡ್ ಟ್ರೈಸ್ಟಿನೊ ೧೨೧
ಲಾಲ್ ೯೪
ಲಾಲಾ ಲಕಪತರಾಯ್ ೨೯೯
ಲಾಸ್ಕಿ ೬೦೩, ೬೫೦, ೬೫೧, ೬೫೩
ಲಾಹೋರ್ ೫೦, ೫೧, ೫೨, ೮೮, ೩೪೧, ೪೬೫
ಲಿಂಕನ್ ೫೩೮, ೫೩೮, ೬೪೪, ೬೪೫, ೬೬೯
ಲಿಂಬಾಜಿ ಭಲೇರಾವ್ ೩೨೫
ಲಿಥುವೇನಿಯನ್ ೨೭೦
ಲಿಥುವೇನಿಯಾ ೨೭೦, ೨೭೧
ಲಿನ್‌ಲಿಥ್‌ಗೋ ೩೮, ೬೪೮, ೬೪೯, ೬೯೭, ೬೯೮
ಲೀಗ್ ೫೨, ೨೧೩, ೨೨೯, ೨೩೦, ೨೩೨, ೩೧೯, ೩೨೩, ೪೪೯, ೪೫೫, ೪೭೨, ೫೦೩, ೫೩೫, ೫೬೦
ಲೀಡರ್ ೭೨೨
ಲೂಧಿಯಾನ ೬೦೮
ಲೂಯಿಸ್ ೫೬, ೫೭
ಲೆನಿನ್ ೪೧೬
ಲೆಸ್ಟರ್ ಬಿ ಪಿಯರ್ಸನ್ ೬೩೯
ಲೇಷಿಗಂಜ್ ೨೧೯
ಲೋಂಗರ್ ವಿ. ೭೨೯
ಲೋಖಾಂಡೆ .ಪಿ.ಎಲ್. ೩೨೯
ಲೋಥಿಯನ್ ಸಮಿತಿ ೧೪, ೫೭೫, ೬೫೯
ಲೋಧಿಯಾನ್ ೩೧೭
ಲ್ಯಾಟಿನ್ ೮೨

## ವ

ವಡಗಾಂವ್ ೨೫೯, ೨೬೩
ವಡಾಲ ೨೩೧, ೨೩೩, ೨೩೪, ೩೧೦, ೭೨೯
ವರಾಡೆ ಬಿ.ಹೆಚ್. ೪೫೧
ವರಾಳೆ ಬಿ.ಹೆಚ್. ೪೮೧, ೬೯೨
ವರ್ಸಲಿಗಂಜ್ ೨೨೦
ವರ್ಸೇಲ್ಸ್ ೨೨, ೬೫೫
ವಲ್ಲಭ ಭಾಯಿ ಪಟೇಲ್ ೬೪, ೩೮೬, ೪೨೯, ೫೬೪, ೫೭೯, ೬೦೦
ವಾಗ್ಮೋರೆ ಬಿ.ಜಿ. ೪೩೮
ವಾಡೇಕರ್ ೨೫೪
ವಾಡ್ಪಾಲ್ಕರ್ ೪೬೧
ವಾನಿವೇಡ ೬೭೬
ವಾಮನ್ರಾವ್ ೭೨೮
ವಾರ್ಧಾ ೩೩೬, ೩೪೨
ವಾಲಿಸಿಂಹ ಡಿ. ೬೭೮, ೬೭೮, ೬೯೧, ೭೦೩, ೭೦೪
ವಾಲ್ಚಂದ್ಜೀ ೨೦೬
ವಾಲ್ಟರ್ ಬಾಗೆಹಾಟ್ ೫೭೦, ೫೭೦, ೬೦೩, ೬೦೪, ೬೪೪
ವಾಶಿಂಗ್ಟನ್ ೬೪೯, ೬೫೦
ವಿಂಚೂರು ೩೩೩
ವಿಂಟರ್ಟನ್ ೨೦೮
ವಿಂಡ್ಸರ್ ಎಡ್ವರ್ಡ್ ೬೫೦
ವಿಕ್ಟೋರಿಯಾ ೫೦, ೨೦೯, ೪೦೦, ೬೨೫, ೬೮೭
ವಿಜಯ್ ಗಂಗಾರಾಮ್ ೭೨೯
ವಿಜಯ್ ಗಂಗಾರಾಮ್ ಸುರ್ವಾಡೆ ೭೨೯
ವಿಟೆ ೩೦೯
ವಿಠೋಬ ೬೭೭
ವಿನಯಪೀಟಿಕ ೫೭೨, ೭೧೧
ವಿನಾಯಕ ರಾವ್ ಬಾರ್ವೆ ೨೫೬, ೨೫೭, ೨೫೮
ವಿನಾಯಕರಾವ್ ಬಾರ್ವೆ ೨೫೮
ವಿನ್ಸ್ಟನ್ ಚರ್ಚಿಲ್ ೫೮
ವಿಮಲಾ ಬಾಯಿ ಬಾಗಲ್ ೬೫೬
ವಿರೇಂದ್ರ ಬಾಯಿ ತೀರ್ಥಂಕರ್ ೪೯೩
ವಿಲಿಯಂ ಕೋವೆ ೨೧೧
ವಿಲ್ಸನ್ ೬೫೫
ವಿಶ್ರಾಮ್ ಗಂಗಾರಾಮ್ ಸಾವಡೆಕರ್ ೪೦೪
ವಿಶ್ರಾಮ್ಜಿ ಸವಾಯಿ ಧೂಲ್ ೨೫೯, ೨೬೦
ವಿಶ್ವನಾಥನ್ ಕೆ.ಎ.ಪಿ. ೫೪೮
ವಿಸ್ಕೌಂಟ್ ವೇವೆಲ್ ೫೫, ೫೬, ೫೭, ೫೩೦
ವೀರಯ್ಯನ್ ಆರ್. ೪೭೪
ವೀರ್ ಸಾವರ್ಕರ್ ೬೮೦
ವುಂಡೋಧರೆ ಅಂಕೋಲ ೨೬೬
ವೂಂಗ್ ೩೮೧, ೩೮೫
ವೆಂಕಟಾದ್ರಿ ಚೌಧರಿ ಕೆ. ೫೩೭
ವೆಂಕಟ್ರಾವ್ ೩೫೦
ವೆಪೋಲ ೩೩೩
ವೆಲ್ಲತುರೆ ೬೭೬
ವೆಲ್ಲೂರು ೬೭೬
ವೆಲ್ಲೆಸ್ಲಿ ೧೯೮
ವೆಲ್ಲೋಡಿ ಎಮ್.ಕೆ. ೬೫೮
ವೆಸ್ಟ್ಮಿನ್ಸ್ಟರ್ ೬೧
ವೇಣುಬಾಯಿ ರವಿಕಾಂತ್ ಜಾಧವ್ ೪೦೪
ವೇಲಂಕರ್ ೫೪೮
ವೋರ್ಲಿ ೩೨೨, ೫೯೨
ವ್ಯಾಲೇಸ್ ಸ್ಟೀವನ್ಸ್ ೬೩೯
ವ್ಹಟ್ಕರ ಪಿ.ಕೆ. ೨೬೩

## ಶ

ಶಂಕರ್ ಆನಂದ್ ಉಪಶಾಮ್ ೬೬೯
ಶಂಕರರಾವ್ ಎಸ್.ಪಾಶ್ ೩೦೩
ಶಂಕರರಾವ್ ಸೋನಾವಣೆ ೩೪೨
ಶಂಕರಾಚಾರ್ಯ ೫೯೧
ಶಂಕರ್ ನಾಥ್ ಬಾರ್ವೆ ೩೨೫
ಶಂಕರ್ ರಾವ್ ೭೨೮
ಶಂಕರ್ ರಾವ್‌ಗುಪ್ತೆ ೨೫೮

ಶಂಕರ್ ರಾವ್ ಸಾಲ್ವೆ ೪೦೪
ಶಂಕರ್‌ವಾಡ್ ವಾಲ್ಕರ್ ೨೫೮
ಶಹರೆ ಎಂ.ಎಲ್. ಡಾ. ೧೩೦
ಶಾಂತಾಬಾಯಿ ದಾನೆ ೧೯೬, ೬೯೨
ಶಾಮರಾವ್ ಜಿ.ರಹಾತೆ ೨೫೯, ೨೬೩
ಶಿಂದೆ ಮಾಸ್ತರ್ ೪೦೨
ಶಿಂಧೆ ೫೦೬
ಶಿವತಾರ್ಕರ್ ೯೬, ೨೫೬, ೨೫೮, ೩೮೬
ಶಿವತಾರ್‌ಕರ್ ಎಸ್.ಎನ್. ೩೨೩, ೩೨೭
ಶಿವದಯಾಳ್ ಸಿಂಗ್ ೨೬೬
ಶಿವನಂದನ್ ರಾಮ್ ೨೧೯
ಶಿವರಾಜ್ ಎನ್. ೧೩೩, ೨೦೦, ೩೩೯, ೪೬೧,
೪೬೨, ೪೬೫, ೪೬೬, ೪೬೭, ೪೭೩, ೪೭೭,
೪೮೧, ೪೮೨, ೪೮೪, ೫೦೫, ೫೧೨, ೫೨೩,
೫೩೬, ೫೪೮, ೭೩೦
ಶಿವರಾಮ್ ಜಾಂಬಾ ಕಾಂಬ್ಲೆ ೨೫೯, ೨೬೦, ೨೬೧
ಶಿವರಾಮ್ ಜಾಧವ್ ೨೫೮
ಶಿವರಾಮ್‌ಜಿ ಕಾಂಬ್ಲೆ ೨೬೧
ಶಿವರಾವ್ ಎನ್. ೪೬೭
ಶಿವಶಂಕರ್ ೩೦೨, ೩೨೫
ಶಿವಸ್ವಾಮಿ ಅಯ್ಯರ್ ೫೩
ಶಿವಾಜಿ ೩೦೧, ೬೩೦, ೬೩೨
ಶೆಂಡ್ರೆ ಕೆ.ಹೆಚ್. ೪೬೫, ೪೮೨
ಶೇತ್ಕಾರಿ ೩೩೦
ಶೇವಂತಬಾಯಿ ೨೬೫
ಶೋಲಾಪುರ ೩೯೬, ೩೯೭, ೩೯೮, ೫೫೪
ಶೌಕತ್ ಆಲಿ ೩೦೬
ಶೌಕತ್ ಆಲಿ ಖಾನ್ ೩೦೭
ಶ್ಯಾಮ್ ಪ್ರಸಾದ್ ಮುಖರ್ಜಿ ಡಾ: ೬೦೭, ೭೨೭
ಶ್ರೀನಿವಾಸನ್ ೨೧೮, ೩೦೭, ೩೧೫, ೩೧೮
ಶ್ರೀನಿವಾಸ ಶಾಸ್ತ್ರಿ ಯು.ಎಸ್. ೫೨೩, ೫೨೬, ೫೨೭,
೫೩೬
ಶ್ರೀಲಂಕಾ ೭೩
ಶ್ಲಾಕ್ಸ್‌ನ್ ೨೭೧

**ಷ**

ಷಿಲ್ಲಾಂಗ್ ೯೨

**ಸ**

ಸಂಡೇ ಅಬ್ಸರ್ವರ್ ೫೨೦
ಸಂತ್‌ರಾಮ್ ೩೪೧
ಸಂಬಲ್‌ಪುರ ೫೫, ೫೬
ಸಚ್ಚಿದಾನಂದ್ ಮಂಕೆ ೬೮೭
ಸತಾರಾ ೩೪೪, ೩೪೫, ೪೭೪
ಸತ್ಯಮೂರ್ತಿ ೪೩೨
ಸದಾನಂದ್ ಪುರ್ಸ್ಲೋಲೆ ೬೯೨
ಸನ್ವಾಲ್ ಬಿ.ಡಿ. ೨೦೭
ಸನ್‌ಸಾರೆ ೪೦೪
ಸಪ್ರು ೫೫೦
ಸಪ್ರೊ ೫೨೫
ಸಮರ್ಥ್ ಎಂ.ಬಿ. ೧೩೪, ೧೩೬
ಸಯ್ಯಾಜಿರಾವ್ ಗಾಯಕ್‌ವಾಡ್ ೨೩೫, ೩೨೫,
೩೪೬
ಸರೋಡೆ ೪೦೪
ಸರ್ವದಾನಂದಜೀ ೨೦೬
ಸರ್ವಪಲ್ಲಿ ರಾಧಾಕೃಷ್ಣ ೬೩೫
ಸವಾಯಿತುಲ್ ಬಿ.ಎಸ್. ೨೬೩
ಸಹಸ್ರ ಬುದೇ ಜಿ.ಎಲ್. ೩೩೦
ಸಹ್ಯಾದ್ರಿ ೯೫
ಸಾಂಗ್ಲಿ ೧೧೪
ಸಾಂಚಿ ೬೮೯
ಸಾಂಟಾ ಕ್ರುಝ್ ೬೩
ಸಾಚಾರ್ ೫೯, ೬೧೮
ಸಾಥೆ ೨೫೮
ಸಾರ್ ನಾತ್ ೬೮೯
ಸಾಲುಂಕೆ ಆರ್.ಎಸ್. ೪೭೪
ಸಾವರ್ಕರ್ ೩೩೦

ಸಾವರ್ಕರ್ ವಿ.ಡಿ. ೨೮, ೩೧, ೩೮೬, ೬೮೦
ಸಾಸಲೇಕರ್ ಎಮ್.ಎಮ್. ೪೯೫, ೪೯೬, ೬೪೦, ೬೯೨
ಸಿಂಧ್ ೫, ೧೮೯, ೨೫೨, ೨೫೭, ೪೯೭
ಸಿಂಧೀ ೩೩೫
ಸಿಂಹಳ ೭೧೪
ಸಿಕಂದರ್ ೪೩೯
ಸಿಕಂದರಾಬಾದ್ ೧೩೩, ೫೧೩, ೫೧೪
ಸಿಕಂದರ್ ಹಯಾತ್ ಖಾನ್ ೪೩೯
ಸಿಖ್ ೧೨೬, ೧೮೯, ೩೩೯, ೩೪೧, ೩೫೦, ೩೬೦, ೩೬೬, ೩೭೩, ೩೭೬, ೫೧೨, ೫೪೮, ೫೬೩, ೫೬೪, ೫೭೫, ೫೭೭, ೫೯೮, ೬೧೪, ೬೬೫
ಸಿಖ್‌ಮತ ೩೭೩
ಸಿನ್ನಾರ್ ೪೫೦
ಸಿ.ಪಿ. ರಾಮಸ್ವಾಮಿ ಅಯ್ಯರ್ ೨೨೦
ಸಿಮ್ಲಾ ೩೧೬
ಸಿರಿಯಾ ೬೫೫
ಸಿರೂರು ೨೫೦
ಸಿಲೋನ್ ೧೮೫, ೬೮೯, ೭೧೪, ೭೨೯
ಸೀತಾರಾಮ್ ಹಡ್ಕೆ ೪೮೬
ಸೀಮೆನ್ಸ್ ೫೦೧
ಸುಂದರ್ ಪಸಿ ೨೧೯
ಸುಖ್‌ಲಾಲ್ ೪೬೫
ಸುಬ್ಬಯ್ಯ ಜೆ.ಎಚ್. ೧೩೩, ೫೧೪, ೫೪೮
ಸುಬ್ರಮಣಿ ಎನ್. ಡಾ. ೭೨೮
ಸುಭಾಷ್ಚಂದ್ರ ಬೋಸ್ ೧೮, ೩೧, ೩೨, ೪೩೫
ಸುಮೇಧ್ ಭಿಕು ೭೨೯
ಸುರೇಂದ್ರನಾಥ್ ೫೩೯
ಸುರೇಂದ್ರನಾಥ ಟಿಪ್ನಿಸ್ ೪೬೧
ಸುರೇಂದ್ರನಾಥ ಟಿಪ್‌ನಿಸ್ ೪೪೪, ೪೬೧
ಸುರ್ಬಾ ಟಿಪ್‌ನಿಸ್ ೩೩೮
ಸುರ್ಬಾಟಿಪ್‌ನಿಸ ೪೪೪
ಸುಲೋಚನಾ ನಾಯಿಕ್ ೪೯೩
ಸುಲೋಚನಾ ಬಾಯಿ ಡೋಂಗ್ರೆ ೪೯೦, ೪೯೩, ೪೯೪
ಸುಲ್ತಾನ್ ಚಿನಾಯ್ ೫೦೧
ಸೂರತ್ ೯೫
ಸೆಡ್ ೬೭
ಸೆನೇಟ್ ೧೨೮
ಸೆರೆಸ್ ಜೆ.ಎಂ. ೩೯೦
ಸೇಗಾಂವ್ ೩೪೨
ಸೇಠ್ ವಾಲ್‌ಚಂದ್ ಹೀರಾಚಂದ್ ೩೪೨
ಸೇಥ್ ಕಿಸನ್ ದಾಸ್ ೪೮೨
ಸೇಥ್ನ ಎ.ಬಿ. ೬೪೧, ೬೪೨
ಸೇವಾಗ್ರಾಮ್ ೩೪೨
ಸೇವಾರಾಮ್ ೨೦೫
ಸೈಡೆನ್‌ಹ್ಯಾಮ್ ೧೨೮, ೫೬೭, ೬೫೮
ಸೈಯದ್ ನಿಜ್ಹಾಮತುಲ್ಲಾ ೫೧೬
ಸೊನ್ನಾಕ್ ಟನ್ನಾಕ್ ೨೫೨, ೨೫೩
ಸೋಮಾ ಭಾಯಿ ಸುಂದರ್‌ಜೀ ೪೬೫
ಸೋಮ್‌ಕುವರ್ ಸಿ.ಎಮ್ ೨೬೪
ಸೋಲಂಕಿ ಪಿ.ಜಿ. ಡಾ॥ ೩೦೨, ೩೦೩, ೩೨೪, ೩೩೯, ೪೨೨
ಸೋಲಂಕಿ ವಿ.ಜಿ. ಡಾ॥ ೩೦೦, ೩೮೮
ಸೋಲಬಾರ ೨೮೦
ಸೋಲಾಪುರ ೨೨೭, ೩೦೯, ೩೧೦, ೪೦೩
ಸ್ಟಾಂಟನ್ ಎಫ್.ಎಫ್. ೨೫೦, ೨೫೧
ಸ್ಟಾನ್ಲಿ ಜೋನ್ಸ್ ೩೫೦
ಸ್ಟಾಫೋರ್ಡ್ ೧೮೮, ೨೦೦, ೨೧೩, ೪೬೬, ೪೬೭, ೪೭೨, ೪೭೮, ೫೦೪, ೫೩೦
ಸ್ಯಾಮುಯಲ್ ಹೋರ್ ೫೨೪, ೫೨೫
ಸ್ಯಾಮ್ಯುಯಲ್ ಹೋಡ್ ೫೨೫, ೫೩೭
ಸ್ಲಾವ್ ೨೭೦
ಸ್ಲೊವಾಕರು ೨೭೦
ಸ್ಲೊವೆನಿಗಳು ೨೭೦
ಸ್ವಾಮಿ ಶ್ರದ್ಧಾನಂದ ೨೯೬

ಸ್ವಾಮಿ ಸಜಾನಂದ ೪೭೪
ಸ್ವಾಮಿ ಸಹಜಾನಂದ ೪೧೭, ೪೨೫, ೪೨೬, ೪೨೭
ಸ್ವಾಮಿ ಹರಿನಂದ್‌ಜಿ ೨೦೬

## ಹ

ಹಂಗೆರಿ ೨೭೦, ೨೭೧, ೬೫೫
ಹಜರತ್‌ಗಂಜ್ ೨೦೬
ಹಜ಼ಾರಿಬಾಗ್ ೨೧೯
ಹನ್ಸ್‌ರಾಜ್ ಪಿ. ಥ್ಯಾಕರೆ ೪೩೯
ಹಮೀರ್‌ಪುರ್ ೨೦೨
ಹರದಾಸ್ ಎಲ್.ಎನ್. ೩೧೫
ಹರಿದಾಸ್ ಅವಾಲೆ ೬೯೨
ಹರಿಬಾಬು ಹನುಮಂತ್ ರೋಕ್ಡೆ ೩೨೯
ಹರೆಗಾಂವ್ ೪೫೦
ಹರ್‌ದಾಸ್ ಎಲ್.ಎನ್ ೨೫೯, ೨೬೦, ೨೬೧, ೨೬೨, ೨೬೩, ೩೧೬, ೩೧೭
ಹರ್ದೋಯಿ ೨೦೨
ಹಾರ್ಟೋಗ್ ಸಮಿತಿ ೧೨೩
ಹಾರ್ಟ್‌ಫೋರ್ಡ್ ೬೩೯
ಹಾಲಂಡ್ ೮೪
ಹಾಲ್ಸ್ ೨೨೬
ಹಾಶಿರ್ವೆ ೩೩೦
ಹಿಂಡ್ಲೇಕರ್ ಎಲ್.ಎಫ್. ೬೪೦
ಹಿಂದು ೪, ೫, ೬, ೩೬, ೩೮, ೫೧, ೮೮, ೧೧೧, ೧೧೨, ೧೧೩, ೧೯೫, ೧೯೮, ೨೦೨, ೨೦೩, ೨೦೬, ೨೦೭, ೨೧೧, ೨೧೨, ೨೩೫, ೨೪೯, ೨೫೩, ೨೫೪, ೨೫೬, ೨೫೭, ೨೬೧, ೩೧೨, ೩೧೯, ೩೨೦, ೩೨೬, ೩೩೩, ೩೩೪, ೩೩೫, ೩೩೬, ೩೩೭, ೩೩೯, ೩೪೬, ೩೪೭, ೩೪೮, ೩೫೧, ೩೫೩, ೩೫೪, ೩೫೫, ೩೫೬, ೩೫೮, ೩೫೯, ೩೬೦, ೩೬೧, ೩೬೩, ೩೬೪, ೩೬೫, ೩೬೬, ೩೬೯, ೩೭೦, ೩೭೧, ೩೭೨, ೩೭೩, ೩೭೬, ೪೦೭, ೪೪೨, ೪೫೦, ೪೫೪, ೪೫೬, ೪೫೭, ೪೬೦, ೪೭೦, ೪೭೧, ೪೭೨, ೪೭೩, ೪೭೪, ೪೭೫, ೪೭೯, ೪೮೦, ೪೮೩, ೪೮೭, ೪೯೮, ೫೦೪, ೫೨೯, ೫೩೦, ೫೩೧, ೫೪೨, ೫೪೩, ೫೪೪, ೫೫೦, ೫೫೫, ೫೫೬, ೫೫೭, ೫೭೫, ೫೭೮, ೫೯೪, ೫೯೭, ೬೦೮, ೬೦೯, ೬೧೦, ೬೧೩, ೬೨೧, ೬೨೭, ೬೭೨, ೬೭೪, ೬೭೬, ೬೯೨, ೬೯೬, ೭೧೬, ೭೧೮, ೭೧೯
ಹಿಂದೂಧರ್ಮ ೩೬, ೩೬, ೧೯೫, ೩೭೮, ೬೯೮
ಹಿಂದೂಸ್ಥಾನ ೪೫, ೩೩೫
ಹಿರಾಕುಡ್ ೫೫
ಹೀರ್‌ಜಿಭಾಯ್ ಕುಶಾಲ್‌ಭಾಯ್ ಪಟೇಲ್ ೧೩೩
ಹುಕುಮ್ ಸಿಂಗ್ ೩೪೧
ಹುಬ್ಬಳ್ಳಿ ೩೧೧
ಹೈದರಾಬಾದ್ ೬೦, ೮೪, ೮೬, ೨೨೧, ೨೨೩, ೨೨೪, ೩೩೩, ೩೫೦, ೪೪೬, ೪೬೫, ೫೧೩, ೫೧೪, ೫೧೬, ೬೫೭, ೬೫೮, ೬೬೦, ೬೬೩, ೬೬೪, ೬೬೫, ೭೨೮, ೭೩೦
ಹೋಮಿ ಪ್ರಸಾದ್ ಟಮ್ಟಾ ೪೬೫
ಹ್ಯಾಮಿಲ್ಟನ್ ೨೯೭
ಹ್ಯಾರಿಸ್ ೬೩೨
ಹ್ಯೂ ಮಾಲ್ಸನ್ ೨೧೫